

ಭಾರತ ಒಕ್ಕೂಟ ನಿರ್ಮಾಪಕ ಉಕ್ಕಿನ ಮನುಷ್ಯ

ಸರ್ದಾರ್ ವಲ್ಲಭಭಾಯ್ ಪಟೇಲ್

(ಜೀವನ ಚರಿತ್ರೆ)

ಮ. ಸು. ಮನ್ನಾರ್ ಕೃಷ್ಣ ರಾವ್

SHOUT
SHARE
IT

RECEIVED

RECEIVED

ಭಾರತ ಒಕ್ಕೂಟ ನಿರ್ಮಾಪಕ ಉಕ್ಕಿನ ಮನುಷ್ಯ

ಸರ್ದಾರ್ ವಲ್ಲಭಭಾಯ್ ಪಟೇಲ್

(ಜೀವನ ಚರಿತ್ರೆ)

ಮ. ಸು. ಮನ್ನಾರ್ ಕೃಷ್ಣ ರಾವ್

ವಿದ್ಯಾಶ್ರೀ ಪ್ರಕಾಶನ
೯೪೪/೧, 'ಮಾತೃಶ್ರೀ', ೧೧ನೇ 'ಎ' ಮುಖ್ಯ ರಸ್ತೆ, ೩ನೇ ವಿಭಾಗ,
ರಾಜಾಜಿ ನಗರ, ಬೆಂಗಳೂರು – ೫೬೦ ೦೧೦.
ಮೊ : ೯೪೪೦೦೨೦೪೪೪

BHARATHA OKKUTA NIRMAPAKA UKKINA MANUSHYA SARDAR VALLABHBHAI PATEL (A biography) written by M.S. Mannar Krishna Rao and Published by himself under 'Vidyashree Prakashana', No. 984/1, 'Mathrushree', 11th 'A' Main, 3rd Block, Rajajinagar, Bangalore-560 010.
Mobile: 9880020888. E mail : mannarmestru@gmail.com

ಮೊದಲ ಮುದ್ರಣ	:	ಜುಲೈ 2018
ಪುನರ್ ಮುದ್ರಣ	:	ನವಂಬರ್ 2018
ಪ್ರತಿಗಳ ಸಂಖ್ಯೆ	:	1000
ಪುಟಗಳು	:	40 + 796 = **836**
ಪುಸ್ತಕದ ಸೈಜ್	:	೧/೮ ಡೆಮ್ಮಿ
ಕಾಗದದ ಗುಣ	:	80 GSM Maplitho
©	:	ಲೇಖಕರದು
ಬೆಲೆ	:	700/–
ಡಿ.ಟಿ.ಪಿ.	:	**ನಾಗಮಣಿ ಉಲ್ಲಾಸ್** ಕುವೈತ್ ನಗರ ಕುವೈತ್
ಮುದ್ರಣ	:	**ಟೆಕ್ ಪ್ರಿಂಟ್ಸ್** ನಂ. 1057, 'ಪಾರ್ಕ್ ವ್ಯೂ' ವಿಷ್ಣುವರ್ಧನ ರಸ್ತೆ, (ಕೋರ್ಟ್ ಮುಂಭಾಗ) ಚಾಮರಾಜಪುರಂ, ಮೈಸೂರು ದೂರವಾಣಿ : 0821–2330380, 4289380, email : print@techprints.in website : techprints.in

ಅರ್ಪಣೆ

ಕಷ್ಟ ನಷ್ಟ ಸುಖದಲ್ಲಿ
ನನ್ನ ಸಹಭಾಗಿ
ಪರರಿಗಾಗಿ ಸ್ವಸುಖದ
ನಿರಂತರ ತ್ಯಾಗಿ

ಬಂಧುಗಳ ಮಕ್ಕಳನೂ
ಸಲಹಿದ ಉದಾರಿ
ಅನ್ನಪೂರ್ಣೆ ಎನಿಸಿರ್ದ
ಆದರ್ಶ ನಾರಿ

ತನ್ನ ಮಕ್ಕಳಿಗೆಂತೊ ಅಂತೆ
ಸೊಸೆಯರಿಗೂ ಮಾತೆ
ಅವರಿವರೆನ್ನದೆ ಸಕಲರಿಗು
ನೆರವಿತ್ತ ದಾತೆ

ನನ್ನ ಪ್ರೀತಿಯ ಪತ್ನಿ
ಉಮಾ
ಸವಿ ನೆನಪಿಗರ್ಪಿತವು
ಈ ಕೃತಿರತ್ನ.

ಮಸುಮ



ಸರ್ದಾರ್ ವಲ್ಲಭಭಾಯ್ ಪಟೇಲ್

ನೀ ಮತ್ತೊಮ್ಮೆ ಜನಿಸಿ ಬಾರಾ

ಭಾರತ ಒಕ್ಕೂಟ ನಿರ್ಮಾಪಕ, ಭಾರತದ ಬಿಸ್ಮಾರ್ಕ್, ಉಕ್ಕಿನ ಮನುಷ್ಯ
ಸರ್ದಾರ್ ವಲ್ಲಭಭಾಯ್ ಪಟೇಲ್‌ರವರ ಜನ್ಮ ಶತಾಬ್ದಿಯ ಸವಿನೆನಪಿಗಾಗಿ
ರಚಿತವಾದ ವಿಶೇಷ ಕವನ.
(ಮಂಡ್ಯ ನಗರದ ಮೈಷುಗರ್ ಪ್ರೌಢಶಾಲೆಯ ಬೆಳ್ಳಿ ಹಬ್ಬದ ನೆನಪಿನ
ಸಂಚಿಕೆಯಲ್ಲಿ ಪ್ರಥಮ ಬಾರಿಗೆ ಮುದ್ರಿತವಾದ ಕವನ)

ನೀ ಕಟ್ಟಿದ ಮನೆ ಏನಾಗಿಹುದು ನೋಡು ಬಾರ
ಬಾರ್ದೋಲಿಯ ವೀರ
ವೀರ ಸರದಾರ.

ಅಂದು ನೀನು
ಗಾಂಧಿ ಜವಹರರ ಜೊತೆಗೂಡಿ ಆಂಗ್ಲರ ಓಡಿಸಿದೆ
ಹರಿದು ಹಂಚಿದ್ದ ರಾಜ್ಯಗಳ ಒಂದುಗೂಡಿಸಿದೆ
ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಒಂದು ನಾಡಾಗಿಸಿದೆ
ಒಂದೇ ಭಾರತವೆಂಬ ಭಾವ ಜನರಲ್ಲಿ ಮೂಡಿಸಿದೆ.

ಆದರೆ ಇಂದು
ರಾಜ್ಯ ರಾಜ್ಯಗಳ ನಡುವೆ ಹೋರಾಟ
ಅಣ್ಣ ತಮ್ಮಂದಿರ ನಡುವೆ ಗುದ್ದಾಟ
ನೆಲಕಾಗಿ ಅಲ್ಲಿ, ಜಲಕಾಗಿ ಇಲ್ಲಿ
ಸ್ವಾರ್ಥಕಾಗಿ – ಎಲ್ಲ ಕಡೆಗಳಲಿ
ಭೂಮಿಯಿಂದ ಆಕಾಶದ ಉದ್ದ

ನಡೆಸಿಹರು ಕುರುಕ್ಷೇತ್ರ ಯುದ್ಧ.

ಸ್ವಾತಂತ್ರ್ಯವಿದ್ದರೂ ದಾಸ್ಯವೆಂಬಂತೆ
ಸಮೃದ್ಧಿ ಇದ್ದರೂ ಬಡತನವೆಂಬಂತೆ
ಬೆಳಕಿದ್ದರೂ ಕತ್ತಲೆ ಎಂಬಂತೆ
ಚೇತನವಿದ್ದರೂ ಅಚೇತನ ಎಂಬಂತೆ
ಜಡವಾಗಿ, ಬಡವಾಗಿ ಸಾಗುತಿಹುದು ನಾಡು
ಕೊರಗಿ, ಸೊರಗಿಹುದು, ನೀ ಬಂದು ನೋಡು.

ಜಡವಾದ ಈ ಜನಕೆ ಚೇತನವ ನೀಡೆ
ಬಡವಾದ ಈ ಜಗಕೆ ಸಿರಿತನವ ಮಾಡೆ
ಅಣ್ಣತಮ್ಮಂದಿರ ಜಗಳಕ್ಕೆ ಮಂಗಳವ ಹಾಡೆ
ಅಶಿಸ್ತು, ಅಜ್ಞಾನ, ಲಂಚ, ಸ್ವಾರ್ಥವ ದೇಶದಿಂದೂಡೆ

ನೀ ಮತ್ತೊಮ್ಮೆ ಜನಿಸಿ ಬಾರ
ಬಾರ್ದೋಲಿಯ ವೀರ
ವೀರ ಸರದಾರ.

೧೯೭೪

ನಿವೇದನೆ

ರಾಷ್ಟ್ರೀಯ ಪ್ರಶಸ್ತಿ, ಸರ್ಕಾರದ ಮನ್ನಣೆ, ಗೌರವ, ಸನ್ಮಾನ ಮತ್ತು ಜನರ ಕೃತಜ್ಞತೆ ಹಾಗೂ ನೆನಪಿಗೆ ಸರ್ದಾರರಿಗಿಂತ ಅರ್ಹರಾದ ನಾಯಕ, ಗಾಂಧೀಜಿಯನ್ನು ಬಿಟ್ಟರೆ, ಮತ್ತಾರೂ ಇಲ್ಲ. ಆದರೆ ಸರ್ದಾರರಿಗೆ ಆಗಿರುವಂತಹ ಅನ್ಯಾಯ ಮತ್ತಾವ ನಾಯಕನಿಗೂ ಆಗಿಲ್ಲ. ಅವರಿಗೆ ನ್ಯಾಯವಾಗಿ ಸಲ್ಲಬೇಕಾದಷ್ಟು ಪ್ರಚಾರ ಸಿಕ್ಕಿಲ್ಲ, ಪ್ರಶಸ್ತಿ ಮತ್ತು ಗೌರವಗಳು ಲಭಿಸಿಲ್ಲ ಮತ್ತು ಗ್ರಂಥಗಳು ಬಂದಿಲ್ಲ. ಈ ಭಾವನೆ ನನಗೆ ಬಂದದ್ದು, 2016ರಲ್ಲಿ ಗಾಂಧೀಜಿ ಮತ್ತು ರಾಜಾಜಿಯವರ ಮೊಮ್ಮಗ ಶ್ರೀ ರಾಜಮೋಹನ ಗಾಂಧಿಯವರು ಬರೆದಿರುವ 'Patel - A Life' ಅನ್ನುವ ಬೃಹತ್ ಗ್ರಂಥವನ್ನು ಓದಿದಾಗ.

2016ರಲ್ಲಿ ನನ್ನ ಹಿರಿಯ ಮಗ ಚಿ॥ ಅನುರಾಗ ಚಂದ್ರ ಮತ್ತು ಸೊಸೆ ಚಿ॥ಸೌ॥ ಲತಾ ಅನುರಾಗ್ ಅಹಮದಾಬಾದ್‌ಗೆ ಹೋಗಿದ್ದರು. ಅಲ್ಲಿಂದ ಬರುವಾಗ ನನಗೊಂದು ಉಡುಗೊರೆ ತಂದರು. ಅದು ರಾಜಮೋಹನ್ ಗಾಂಧಿ ಬರೆದ 'Patel - A Life' ಅನ್ನುವ ಬೃಹತ್ ಗ್ರಂಥ. 1965ರಲ್ಲೇ ನಿವೃತ್ತ ಐ.ಸಿ.ಎಸ್. ಅಧಿಕಾರಿ ಕೆ.ಎಲ್. ಪಂಜಾಬಿಯವರು ಬರೆದು ಭಾರತೀಯ ವಿದ್ಯಾಭವನ ಪ್ರಕಟಿಸಿರುವ 'The Indomitable Sardar' ಕೃತಿಯನ್ನು ಓದಿದ್ದೆ. ಅದು ಈಗಲೂ ನನ್ನ ಬಳಿ ಇದೆ. ನಾಲ್ಕು ವರ್ಷಗಳ ಹಿಂದೆ ಶ್ರೀ ಬಾಲರಾಜ ಕೃಷ್ಣರವರು ಬರೆದಿರುವ 'Sardar Vallabhbai Patel'' ಮತ್ತು 'Sardar – India's Bismark' ಹಾಗೂ ಶ್ರೀಮತಿ ಸೂಸಾನ ಹೆರೆದಿಯ ಬರೆದಿರುವ 'A Patriot for me' ಕೃತಿಗಳನ್ನು ಓದಿದ್ದೆ. ಆದರೆ ರಾಜಮೋಹನ್ ಗಾಂಧಿಯವರ ಕೃತಿಯನ್ನು ಓದಿದಾಗ ಸರ್ದಾರರು ಬದುಕಿದ ಬಗೆ ಪ್ರತಿಯೊಬ್ಬರಿಗೂ ತಿಳಿಯುವುದು ದೇಶದ ಹಿತದೃಷ್ಟಿಯಿಂದ ಅವಶ್ಯಕ ಅನ್ನಿಸಿತು. ಜೊತೆಗೆ, ಕನ್ನಡದಲ್ಲಿ ಅವರ ಜೀವನದ ಬಗೆಗೆ ವಿವರವಾದ ಕೃತಿಗಳು ಬಂದಿಲ್ಲ ಅನ್ನುವುದು ನನ್ನ ಗಮನಕ್ಕೆ ಬಂದಿತು. ಅದರಿಂದ ಈ ಕೃತಿಯನ್ನು ರಚಿಸಿದ್ದೇನೆ.

ಕೃತಿಯ ಗಾತ್ರವನ್ನು ನೋಡಿದ ತಕ್ಷಣ "ಇದು ಬಹಳ ದೊಡ್ಡದು, ಓದುವುದು ಹೇಗೆ?" ಅನ್ನಿಸಬಹುದು. ಆದರೆ ಜೀವನ ಚರಿತ್ರೆಗಳು ವಿವರವಾಗಿ ಇರದೆ ಸಂಕ್ಷಿಪ್ತವಾಗಿದ್ದರೆ, ಆ ಕೃತಿಯ ನಾಯಕನ ಉದಾತ್ತ ಮತ್ತು ಅನುಕರಣೀಯ ವ್ಯಕ್ತಿತ್ವದ ಪ್ರಭಾವ ಓದುಗನ ಮೇಲೆ ಆಗುವುದಿಲ್ಲ. ಆದ್ದರಿಂದ ನಾನು ಕೃತಿಯನ್ನು ವಿವರವಾಗಿ ಬರೆದಿದ್ದೇನೆ. ಓದುಗರು ದಿನಕ್ಕೆ ನಾಲ್ಕಾರು ಪುಟಗಳಂತೆ ಓದಿದರೂ ಸಾಕು, ಅದರಿಂದಾಗುವ ಪ್ರಭಾವ ಮತ್ತು ಲಾಭ ಅಪಾರ ಎಂದು ತಿಳಿಸ ಬಯಸುತ್ತೇನೆ. ಈ ಕೃತಿಯಲ್ಲಿ ಯಾವುದೇ ಅಧ್ಯಾಯವನ್ನು ಸ್ವತಂತ್ರವಾಗಿ ಓದಿದರೂ ಲಾಭ ಉಂಟು. ದೇಶದಲ್ಲಿ ಯೋಗ್ಯರಾದ ಜನನಾಯಕರು ಉದ್ಭವ ಆಗಬೇಕಾದರೆ ಪಟೇಲರಂತಹವರು ಬದುಕಿದ ರೀತಿ ಯುವಕರ ಮೇಲೆ ಪ್ರಭಾವ ಬೀರಲೇಬೇಕು. ದಯಮಾಡಿ ಈ ಕೃತಿಯನ್ನು ಓದಿ, ಮತ್ತೊಬ್ಬರಿಗೂ ಓದಲು ಕೊಡಿ ಮತ್ತು ಸರ್ದಾರರ ಬಗೆಗೆ ಮತ್ತು ದೇಶದ ಆವಶ್ಯಕತೆಯ ಬಗೆಗೆ ಚರ್ಚಿಸಿ – ಎಂದು ಕೋರುತ್ತೇನೆ.

ಮತ್ತೊಂದು ಮಾತು. ಓದುಗರು ದೇಶದ ಯಾವ ನಾಯಕನ ಬಗ್ಗೆಯೂ ಪೂರ್ವಾಗ್ರಹ ಪೀಡಿತ ಅಭಿಪ್ರಾಯ ಅಥವಾ ಭಾವನೆಗಳನ್ನು ಇಟ್ಟುಕೊಳ್ಳದೆ ನಿರ್ಮಲ ಮನಸ್ಸಿನಿಂದ ಓದುವುದು ಉತ್ತಮ ಎಂದು ನನ್ನ ಭಾವನೆ.

ನಾನು ಹಲವಾರು ಗ್ರಂಥಗಳ, ನಿಯತಕಾಲಿಕಗಳ ಮತ್ತು ಸರ್ದಾರರ ಪತ್ರಗಳ ಸಂಪುಟಗಳ ಆಧಾರದ ಮೇಲೆ ಈ ಕೃತಿ ರಚಿಸಿದ್ದೇನೆ. ಇಲ್ಲಿ ನನ್ನ ಸ್ವಂತ ಕಲ್ಪನೆ ಅಥವಾ ಆಲೋಚನೆಯಿಂದ ಏನನ್ನೂ ಸೇರಿಸಿಲ್ಲ. ಇಲ್ಲಿ ಬರುವ ಪ್ರತಿಯೊಂದು ಘಟನೆ ಮತ್ತು ಸಂಗತಿ ಆಧಾರ ಸಹಿತವಾದುದು. ಆದಾಗ್ಯೂ ಕೆಲವು ಘಟನೆಗಳನ್ನು ಬರೆದಾಗ ನನ್ನ ಮನಸ್ಸಿಗೆ ಮೂಡಿದ ನನ್ನ ಸ್ವಂತ ಅಭಿಪ್ರಾಯವನ್ನು ಆವರಣಗಳ ಒಳಗೆ ನಮೂದಿಸಿ, ಕೊನೆಯಲ್ಲಿ 'ಲೇಖಕ' ಎಂದು ಬರೆದಿದ್ದೇನೆ. ಅದು ಮಾತ್ರ ನನ್ನ ಅಭಿಪ್ರಾಯ.

ಮುಖ್ಯವಾಗಿ ಗಾಂಧಿ, ನೆಹರು ಮತ್ತು ಸರ್ದಾರರ ಬಗೆಗೆ ಜನ ನಾನಾ ರೀತಿಯಲ್ಲಿ ಮಾತನಾಡುವುದನ್ನು ಆಲಿಸಿದ್ದೇನೆ. ಅದರಲ್ಲಿ ಬಹಳಷ್ಟು ಕಲ್ಪನೆಗಳು. ಪಟೇಲರ ಮತ್ತು ಇತರ ನಾಯಕರ ಜೀವನ ಚರಿತ್ರೆಗಳನ್ನು ಓದಿದರೆ ಮಾತ್ರ ನಿಜ ಸಂಗತಿ ತಿಳಿಯುತ್ತದೆ. ಉದಾಹರಣೆಗೆ, ದೇಶ ವಿಭಜನೆಗೆ ಗಾಂಧಿ ಕಾರಣ ಎಂದು ಬಹಳಷ್ಟು ಮಂದಿ ಮಾತನಾಡುತ್ತಾರೆ. ಅದು ಅಸತ್ಯ. ಆ ಅಸತ್ಯವನ್ನಾಡುವುದಕ್ಕೆ ಕಾರಣ ಚರಿತ್ರೆಯನ್ನು ತಾವೇ ಓದದೆ, ಗಾಂಧಿ ದ್ವೇಷಿಗಳಾದ ಕೆಲವು ವ್ಯಕ್ತಿಗಳು ಹೇಳಿದ ಅಸತ್ಯವನ್ನೇ ಸತ್ಯವೆಂದು ನಂಬಿ ಮಾತನಾಡುವುದು.

ಈ ಸರ್ದಾರರ ಜೀವನ ಚರಿತ್ರೆ ಓದಿದರೆ ದೇಶ ವಿಭಜನೆಗೆ ನಿಜವಾದ ಕಾರಣ ತಿಳಿಯುತ್ತದೆ. ಅನ್ಯಾಯವಾಗಿ ಯಾರಾರನ್ನೋ ದೂಷಿಸುವುದು ತಪ್ಪುತ್ತದೆ. ತಪ್ಪು ಕಲ್ಪನೆಗಳು ಮಾಯವಾಗುತ್ತವೆ. ಇಲ್ಲದೆ ಹೋದರೆ ಯುವ ಜನತೆಯ ಮನಸ್ಸು ಕೆಡುವುದು ನಿಲ್ಲುವುದಿಲ್ಲ.

ಹಾಗೆಯೇ ದೇಶ ವಿಭಜನೆಗೆ ನೆಹರು ಮತ್ತು ಪಟೇಲರನ್ನು ದೂಷಿಸುವವರೂ ಇದ್ದಾರೆ. ಅದು ಸಹ ಅಪ್ಪಟ ಸುಳ್ಳು. ಹಾಗಾದರೆ ದೇಶ ವಿಭಜನೆಗೆ ಕಾರಣ ಏನು? ಅದನ್ನು ನಾನು ಇಲ್ಲಿ ಹೇಳುವುದೂ ಇಲ್ಲ, ಹೇಳಲೂ ಬಾರದು. ಈ ಕೃತಿಯನ್ನು ಓದಿದರೆ ನಿಜವಾದ ಕಾರಣ ಅರ್ಥವಾಗುತ್ತದೆ. ಓದುಗ ಕೃತಿಯನ್ನು ಓದಿ ತಾನೇ ತೀರ್ಮಾನಕ್ಕೆ ಬರಬೇಕಲ್ಲದೆ, ಲೇಖಕ ತನ್ನ ತೀರ್ಮಾನವನ್ನು ಓದುಗನ ಮೇಲೆ ಹೇರಬಾರದು.

ಈ ಕೃತಿಯನ್ನು ರಚಿಸುವಲ್ಲಿ ಯಾರನ್ನೇ ತೆಗಳುವ ಅಥವಾ ಹೊಗಳುವ ಉದ್ದೇಶ ನನಗಿಲ್ಲ. ಸತ್ಯ ಸಂಗತಿಗಳನ್ನು ಬಿಚ್ಚಿಡುವುದಷ್ಟೇ ಮತ್ತು ಸರ್ದಾರರ ಮಹೋನ್ನತ ಜೀವನ ಮತ್ತು ಸಾಧನೆಗಳನ್ನು ಕನ್ನಡಿಗರ ಗಮನಕ್ಕೆ ತರುವುದಷ್ಟೇ ನನ್ನ ಉದ್ದೇಶ.

ಕನ್ನಡನಾಡಿನ ಖ್ಯಾತ ಕಾದಂಬರಿಕಾರರಾದ ಡಾ॥ ಎಸ್.ಎಲ್. ಭೈರಪ್ಪನವರು ಈ ಕೃತಿಗೆ ಒಂದು ಸುವಿವರವಾದ ಮುನ್ನುಡಿಯನ್ನು ಬರೆದು ಕೊಟ್ಟು ಕೃತಿಯ ಮೌಲ್ಯವನ್ನು ಹೆಚ್ಚಿಸಿದ್ದಾರೆ. ನಾನು ಮುನ್ನುಡಿಯನ್ನು ಬರೆದುಕೊಡುವಂತೆ ಅವರನ್ನು ಕೋರಿದ ತಕ್ಷಣ ಒಪ್ಪಿ ಉಪಯುಕ್ತವಾದ ಮತ್ತು ಕೃತಿಗೆ ಕಿರೀಟಪ್ರಾಯವಾದ ಮುನ್ನುಡಿಯನ್ನು ಬರೆದುಕೊಟ್ಟಿದ್ದೇ ಅಲ್ಲದೆ ಕೃತಿಯನ್ನು ಆಮೂಲಾಗ್ರವಾಗಿ ಓದಿ ಅದರಲ್ಲಿದ್ದ ನಾಮಪದಗಳ ಮತ್ತು ಇತರ ತಪ್ಪುಗಳನ್ನು ತಿದ್ದಿ, ಅನೇಕ ಸಲಹೆಗಳನ್ನು ನೀಡಿ ಕೃತಿಯ ಉಪಯೋಗವನ್ನು ಹೆಚ್ಚಿಸಿದ್ದಾರೆ. ಅವರಿಗೆ ನನ್ನ ಹೃದಯದಾಳದ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ನಾನು ಕೃತಿಯನ್ನು ಬರೆಯಲು ಆರಂಭಿಸಿದಾಗಿನಿಂದಲೂ ಡಾ॥ ಡಿ.ಬಿ. ರಾಮಚಂದ್ರಾಚಾರ್‌ರವರು ಕರಡು ಪ್ರತಿಯನ್ನು ಓದಿ ಅನೇಕ ಅಮೂಲ್ಯ ಸಲಹೆಗಳನ್ನು ನೀಡಿದ್ದಲ್ಲದೆ, ಕೃತಿಗೆ ಒಂದು 'ನಲ್ನುಡಿ'ಯನ್ನು ಬರೆದುಕೊಟ್ಟಿದ್ದಾರೆ. ನನ್ನ ಇತರ ಕೃತಿಗಳ ರಚನೆಯಲ್ಲೂ ಅವರು ನನಗೆ ಬಹಳ ಮಾರ್ಗದರ್ಶನ ನೀಡಿದ್ದಾರೆ. ಅವರಿಗೆ ನಾನು ಬಹಳ ಕೃತಜ್ಞನಾಗಿದ್ದೇನೆ.

ಶಿವಮೊಗ್ಗದ ನಿವೃತ್ತ ಇಂಗ್ಲಿಷ್ ಪ್ರಾಧ್ಯಾಪಕರು ಮತ್ತು ಲೇಖಕರಾದ ಪ್ರೊ॥

ಎಂ.ಎನ್. ಸುಂದರರಾಜ್‌ರವರು, ನವದೆಹಲಿಯ ರಕ್ಷಣಾ ಮಂತ್ರಾಲಯದ ವಿಶ್ರಾಂತ ಉಪ ಮಹಾ ನಿರ್ದೇಶಕರಾದ ಶ್ರೀ ಎ. ಚಂದ್ರಶೇಖರ್‌ರವರು, ಚಿತ್ರದುರ್ಗದ ಇಂಗ್ಲಿಷ್ ಪ್ರಾಧ್ಯಾಪಕರು ಮತ್ತು ಲೇಖಕಿಯವರಾದ ಶ್ರೀಮತಿ ತಾರಿಣಿ ಶುಭದಾಯಿನಿರವರು, ವಿಮಾನ ಹಾರಾಟ ಸುರಕ್ಷತಾ ಸಲಹೆಗಾರರಾದ ಡಾ॥ ಎಮ್. ಎಸ್. ರಾಜಮೂರ್ತಿಯವರು, ಕುವೈತ್‌ನಲ್ಲಿ ಸಂಶೋಧಕ ವಿಜ್ಞಾನಿಯಾಗಿರುವ ಡಾ॥ ಆಜ಼ಾದ್‌ರವರು ಮತ್ತು ಲೆಕ್ಕ ಪರಿಶೋಧಕರಾದ ಶ್ರೀ ದೀಪಕ್ ಕಂಚಿಯವರು ಕೃತಿಯ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಬರೆದುಕೊಟ್ಟಿದ್ದಾರೆ. ಶ್ರೀ ಸುಂದರರಾಜ್ ಮತ್ತು ಶ್ರೀ ಎ. ಚಂದ್ರಶೇಖರ್‌ರವರು ನನ್ನ ಹಿಂದಿನ ಕೃತಿಗಳಿಗೂ ಅಭಿಪ್ರಾಯ ಬರೆದುಕೊಟ್ಟು ಉಪಕರಿಸಿದ್ದಾರೆ. ಅವರೆಲ್ಲರಿಗೂ ನನ್ನ ಕೃತಜ್ಞತಾ ಪೂರ್ವಕ ವಂದನೆಗಳು.

ನಾನು ಅವಲಂಬಿಸಿರುವ ಕೃತಿಗಳ ಪಟ್ಟಿಯನ್ನು ಪಠ್ಯದ ಕೊನೆಯಲ್ಲಿ ನೀಡಿದ್ದೇನೆ. ಅವುಗಳ ಲೇಖಕರು ಮತ್ತು ಪ್ರಕಾಶಕರಿಗೆ ನಾನು ಆಭಾರಿಯಾಗಿದ್ದೇನೆ. ಅವುಗಳ ಪೈಕಿ ಶ್ರೀ ರಾಜಮೋಹನ ಗಾಂಧಿಯವರ 'Patel, A Life' ಕೃತಿಯಿಂದ ಬಹಳ ವಿಷಯಗಳನ್ನು ತೆಗೆದುಕೊಂಡಿದ್ದೇನೆ. ಅದು ಇಂಗ್ಲಿಷ್ ಬಲ್ಲ ಎಲ್ಲರೂ ಓದಲೇಬೇಕಾದ ಬೃಹತ್ ಗ್ರಂಥ. ಅವರ ಗ್ರಂಥವನ್ನು ಉಪಯೋಗಿಸಿಕೊಳ್ಳಲು ಅನುಮತಿಯನ್ನು ಕೋರಿದ ತಕ್ಷಣ ಶ್ರೀ ರಾಜಮೋಹನ ಗಾಂಧಿಯವರು ಅನುಮತಿಯನ್ನು ನೀಡಿದ್ದಾರೆ. ಅವರಿಗೆ ನಾನು ಕೃತಜ್ಞ.

ಶ್ರೀ ಬಾಲರಾಜ್ ಕೃಷ್ಣರವರ ಎರಡು ಕೃತಿಗಳ ಪೈಕಿ 'Sardar Vallabhbhai Patel - India's Iron Man' ಕೃತಿಯಿಂದ ಬಹಳ ಮತ್ತು India's Bismarck ಕೃತಿಯಿಂದ ಅಲ್ಪ ಸಂಗತಿಗಳನ್ನು ಆರಿಸಿಕೊಂಡಿದ್ದೇನೆ. ಕೆ.ಎಲ್. ಪಂಜಾಬಿಯವರು ಬರೆದು 'ಭಾರತೀಯ ವಿದ್ಯಾ ಭವನ' ಪ್ರಕಟಿಸಿರುವ 'The Indomitable Sardar', ನಾನು ಸರ್ದಾರರ ಬಗೆಗೆ ಮೊದಲು ಓದಿದ ಕೃತಿ. ಅದು ಸಣ್ಣ ಕೃತಿಯಾದರು ನನಗೆ ಬಹಳ ಸಂಗತಿಗಳನ್ನು ಒದಗಿಸಿದೆ. ಶ್ರೀಮತಿ ಸೂಸಾನ ಹೆರೆದಿಯಾರವರ 'A Patriot for Me' ಕೃತಿಯೂ ಸಹ ನನಗೆ ಬಹಳ ಸಹಾಯ ಮಾಡಿದೆ. ಹಾಗೆಯೆ ವಿ.ಪಿ. ಮೆನನ್‌ರವರ ಕೃತಿ 'Integration of The Indian States' ಯಿಂದ ಬಹಳ ಉಪಕೃತನಾಗಿದ್ದೇನೆ. ಜೆ.ಬಿ. ಕೃಪಲಾನಿಯವರ 'Gandhi - His Life and Thought' ಮತ್ತು ಲೂಯಿ ಫಿಷರ್‌ರವರ 'The Life of Mahatma Gandhi' ಯಿಂದ ಬಹಳ ಸಂಗತಿಗಳನ್ನು ಪಡೆದುಕೊಂಡಿದ್ದೇನೆ. ಈ ಲೇಖಕರು ಮತ್ತು ಇತರ ಕೃತಿಗಳ ಲೇಖಕರು ಅಥವಾ ಸಂಪಾದಕರಿಗೆ ಮತ್ತು ಪ್ರಕಾಶಕರಿಗೆ ನಾನು ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ನನ್ನ ಅಣ್ಣ 93 ವರ್ಷದ ಶ್ರೀ ಎಂ.ಎಸ್. ವೆಂಕಟರಾಮಯ್ಯನವರು ಈ ಬೃಹತ್ ಕೃತಿಯ ಪುಟ ಪುಟವನ್ನೂ ನಿಧಾನವಾಗಿ ಓದಿ ಬೆರಳಚ್ಚಿನ ಮತ್ತು ಇತರ ನ್ಯೂನತೆಗಳನ್ನು ಪತ್ತೆ ಹಚ್ಚಿ ಸರಿಪಡಿಸಿ ಉಪಕರಿಸಿದ್ದಾರೆ ಮತ್ತು ಈ ಕೃತಿಯ ಅಂದವನ್ನು ಹೆಚ್ಚಿಸಿದ್ದಾರೆ. ಅವರ ಪ್ರೀತಿ ಮತ್ತು ಶ್ರಮಕ್ಕೆ ನಾನು ಬಹಳ ಕೃತಜ್ಞ ಎಂದಷ್ಟು ಮಾತ್ರ ಹೇಳಬಲ್ಲೆ.

ಈ ಕೃತಿಯ ಬೆರಳಚ್ಚನ್ನು ಕುವೈತ್‌ನಲ್ಲಿ ವಾಸಿಸುತ್ತಿರುವ ನನ್ನ ಕಿರಿಯ ಮತ್ತು ನಾಲ್ಕನೆಯ ಸೊಸೆ ಚಿ॥ಸೌ॥ ನಾಗಮಣಿ ಉಲ್ಲಾಸ್ ಅಚ್ಚುಕಟ್ಟಾಗಿ ನೆರವೇರಿಸಿದ್ದಾಳೆ. ಅವಳು ನನ್ನ ಜೊತೆಗೆ ಸಮ ಸಮನಾಗಿ ಶ್ರಮಿಸಿದ್ದಾಳೆ. ಅವಳಿಗೆ ನನ್ನ ಕಿರಿಯ ಮಗ ಚಿ॥ ಉಲ್ಲಾಸ ವದನ ನೆರವು ನೀಡಿದ್ದಾನೆ. ಹಾಗೆಯೆ ನನ್ನ ಎರಡನೆಯ ಮಗ ಡಾ॥ ಎಂ. ಉದಯರವಿ, ಅವನ ಬಿಡುವಿಲ್ಲದಷ್ಟು ಕೆಲಸದ ಮಧ್ಯೆ, ಅತಿ ಶ್ರಮವಹಿಸಿ ನಿದ್ದೆಗೆಟ್ಟು ತಾಳ್ಮೆಯಿಂದ 'ಫ್ರೂಫ್' ತಿದ್ದುವ ಕೆಲಸವನ್ನು ಬಹಳ ಚೆನ್ನಾಗಿ ಮಾಡಿದ್ದಾನೆ. ಕೃತಿಯ ಮುಖಪುಟ ರಚನೆ ನನ್ನ ಹಿರಿಯ ಮಗ ಚಿ॥ ಅನುರಾಗ ಚಂದ್ರನದು. ಈ ಕೃತಿಯ ಹೊರನೋಟದ ಅಂದಕ್ಕೆ ಅವನೇ ಕಾರಣ. ನನ್ನ ಮೂರನೆಯ ಮಗ ಚಿ॥ ತಾರಾ ಕಿರಣ ಪ್ರಚಾರ ಕಾರ್ಯದಲ್ಲಿ ನೆರವಾಗಿದ್ದಾನೆ. ನನ್ನ ಹಿರಿಯ ಸೊಸೆ ಚಿ॥ಸೌ॥ ಲತಾ ಅನುರಾಗ್, ಎರಡನೆಯ ಸೊಸೆ ಚಿ॥ಸೌ॥ ಸುಮನ ರವಿ ಮತ್ತು ನನ್ನ ಮೂರನೆಯ ಸೊಸೆ ಚಿ॥ಸೌ॥ ಪದ್ಮಶ್ರೀ ಕಿರಣ್ ನನ್ನ ಬರವಣಿಗೆಗೆ ಬೇಕಾದ ಶಾಂತವಾತಾವರಣವನ್ನು ಕಲ್ಪಿಸಿ ನಿರಾತಂಕವಾಗಿ ಬರೆಯಲು ನೆರವಾಗಿದ್ದಾರೆ. ಮೊಮ್ಮಕ್ಕಳಂತೂ ಕೃತಿ ಲೋಕಾರ್ಪಣಾ ಸಮಾರಂಭದ ಸಂಪೂರ್ಣ ಜವಾಬ್ದಾರಿ ಹೊತ್ತಿದ್ದಾರೆ. ನನ್ನ ಕೃತಿಗಳ ರಚನೆ, ಮುದ್ರಣ ಮತ್ತು ಲೋಕಾರ್ಪಣೆಯಲ್ಲಿ ನನಗಿಂತ ನನ್ನ ಕುಟುಂಬದವರ ಪಾತ್ರವೇ ಹೆಚ್ಚು. ಅವರ ಪ್ರತ್ಯಕ್ಷ ಮತ್ತು ಪರೋಕ್ಷ ನೆರವಿಲ್ಲದೇ ಹೋಗಿದ್ದರೆ ಈ ಬೃಹತ್ ಕೃತಿಯನ್ನು ರಚಿಸಿ ಪ್ರಕಟಿಸಲು ಸಾಧ್ಯವಾಗುತ್ತಿರಲಿಲ್ಲ. ಅವರೆಲ್ಲರಿಗೂ ನನ್ನ ಶುಭ ಹಾರೈಕೆಗಳು.

ಈ ಕೃತಿಯನ್ನು, ನನ್ನ ಮಕ್ಕಳ ಸಹಕಾರ ಮತ್ತು ಸಹಾಯದಿಂದ ನನ್ನ ವಿದ್ಯಾಶ್ರೀ ಪ್ರಕಾಶನದ ಅಡಿಯಲ್ಲಿ ಪ್ರಕಟಿಸುತ್ತಿದ್ದೇನೆ. ನಾನೇ ಪ್ರಕಾಶಕನಾದುದರಿಂದ ಈ ಕೃತಿಗೆ ಪ್ರತ್ಯೇಕ ಪ್ರಕಾಶಕರ ನುಡಿಯ ಅಗತ್ಯವಿಲ್ಲ.

ಈ ಕೃತಿಯನ್ನು ಮೈಸೂರಿನ ಟೆಕ್ ಪ್ರಿಂಟ್ಸ್ ಮಾಲೀಕರು ಮತ್ತು ನನ್ನ ಬಂಧುವೂ ಆದ ಶ್ರೀ ಹೆಚ್.ಪಿ. ಹರೀಶ್‌ರವರು ಅಂದವಾಗಿ ಮತ್ತು ಶೀಘ್ರವಾಗಿ ಮುದ್ರಿಸಿದ್ದಾರೆ. ಅವರಿಗೆ ಮತ್ತು ಅವರ ಸಿಬ್ಬಂದಿಯವರಿಗೆ ನನ್ನ ವಂದನೆಗಳು.

ಈ ಕೃತಿಯು ಈ ದಿನ ಅಂದರೆ 2018ರ ಜುಲೈ 8ರಂದು ಬೆಂಗಳೂರಿನಲ್ಲಿ ಲೋಕಾರ್ಪಣೆಗೊಳ್ಳುತ್ತಿದೆ. ಕರ್ನಾಟಕ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿಯವರಾದ ಶ್ರೀ. ಎನ್. ಕುಮಾರ್‌ರವರು ಅಧ್ಯಕ್ಷತೆ ವಹಿಸಿ ಕೃತಿಯನ್ನು ಲೋಕಾರ್ಪಣೆ ಮಾಡುತ್ತಾರೆ. ಪ್ರಸಿದ್ಧ ಶಿಕ್ಷಣ ತಜ್ಞರಾದ ಡಾ॥ ಗುರುರಾಜ್ ಕರಜಗಿಯವರು ಕೃತಿಯನ್ನು ಪರಿಚಯಿಸುತ್ತಾರೆ. ಕರ್ನಾಟಕ ಚಲನಚಿತ್ರ ಅಕಾಡೆಮಿಯ ಸಂಸ್ಥಾಪಕ ಅಧ್ಯಕ್ಷರಾದ ಶ್ರೀ. ಟಿ.ಎಸ್. ನಾಗಾಭರಣರವರು ವಿಶೇಷ ಅಥಿತಿಯಾಗಿ ಭಾಗವಹಿಸುತ್ತಾರೆ. ಈ ಮೂವರು ಮಹನೀಯರಿಗೂ ವಂದನೆಗಳನ್ನು ಸಲ್ಲಿಸುತ್ತೇನೆ.

ಮಹಾನ್ ಭಾರತೀಯ ಸರ್ದಾರ್ ವಲ್ಲಭಭಾಯ್ ಪಟೇಲರು ಅದ್ಭುತ ಸಾಧನೆಯ, ತ್ಯಾಗಮಯ ಮತ್ತು ಅನುಕರಣೀಯ ಜೀವನವನ್ನು ನಡೆಸಿದರು. ಶ್ರೀ ರಾಜಮೋಹನ ಗಾಂಧಿ ಮೊದಲಾದವರು ಅವರ ಬಗೆಗೆ ಅಧ್ಯಯನ ಮತ್ತು ಸಂಶೋಧನೆ ನಡೆಸಿ ಅದ್ಭುತ ಕೃತಿಗಳನ್ನು ಆಂಗ್ಲಭಾಷೆಯಲ್ಲಿ ರಚಿಸಿದ್ದಾರೆ. ನಾನು ಅವನ್ನು ಅಧ್ಯಯನ ಮಾಡಿ ನನ್ನ ಮಾತೃಭಾಷೆ ಕನ್ನಡದಲ್ಲಿ ಕನ್ನಡಿಗರ ಅವಗಾಹನೆಗಾಗಿ ಈ ಕೃತಿಯನ್ನು ರಚಿಸಿದ್ದೇನೆ. ಕನ್ನಡದ ವಾಕ್ಯಗಳು ಮಾತ್ರ ನನ್ನವು. ಅದರಿಂದ ಈ ಕೃತಿಯ ಕೀರ್ತಿ (credit) ಪಟೇಲರಿಗೆ ಮತ್ತು ಆಂಗ್ಲ ಭಾಷೆಯಲ್ಲಿ ಕೃತಿಗಳನ್ನು ರಚಿಸಿದ ಆ ಮಹನೀಯರಿಗೇ ಸಲ್ಲಬೇಕು.

ಓದುಗರು ಕೃತಿಯ ಬಗೆಗೆ ತಮ್ಮ ಅಭಿಪ್ರಾಯವನ್ನು ತಿಳಿಸಬೇಕೆಂದು ಕೋರುತ್ತೇನೆ.

ಎಲ್ಲರಿಗೂ ಶುಭವಾಗಲಿ.

ಬೆಂಗಳೂರು
೦೮.೦೭.೨೦೧೮

ಮ.ಸು. ಮನ್ನಾರ್ ಕೃಷ್ಣ ರಾವ್
ಮೊ. ೯೮೪೦೨೦೪೪೪೪
E mail : mannarmestru@gmail.com

ಮುನ್ನುಡಿ

ವಲ್ಲಭಭಾಯ್ ಪಟೇಲ್ ಎಂದರೆ ನೆಹರೂ ಸರ್ಕಾರದಲ್ಲಿ ಗೃಹಮಂತ್ರಿಯಾಗಿದ್ದು ಭಾರತದ ಐನೂರ ಐವತ್ತಕ್ಕೂ ಮೇಲ್ಪಟ್ಟ ಸಣ್ಣ ಪುಟ್ಟ, ಕಿರಿಯ ಹಿರಿಯ ಬ್ರಿಟಿಷ್ ಅಧೀನದಲ್ಲಿದ್ದು ಹೆಸರಿಗೆ ಸ್ವತಂತ್ರವೆನ್ನಿಸಿಕೊಂಡಿದ್ದ ರಾಜ್ಯಗಳನ್ನು ಸ್ವತಂತ್ರ ಭಾರತದಲ್ಲಿ ವಿಲೀನಗೊಳಿಸುವ ಕೆಲಸವನ್ನು ಮಾಡಿ ಮುಗಿಸಿದವರು ಎಂಬಷ್ಟು ಮಾತ್ರ ಭಾರತದ ಜನ ಮಾನಸದಲ್ಲಿ ಇರುವ ಅಥವಾ ಉಳಿದಿರುವ ಚಿತ್ರ. ಅಷ್ಟು ಮಾತ್ರವಲ್ಲ, ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಗಾಂಧೀಜಿಯ ನಂತರದ ಬಹು ದೊಡ್ಡ ಪಾತ್ರಧಾರಿ, ಸ್ವಾತಂತ್ರ್ಯಾನಂತರ ಭಾರತವನ್ನು ಮುನ್ನಡೆಸಿದ ಮಹಾನ್ ನಾಯಕ, ವಿಶ್ವ ಮಟ್ಟದ ಮುತ್ಸದ್ದಿ, ಸ್ವಾತಂತ್ರ್ಯ ಚಳವಳಿಯಲ್ಲಿ ಬೇರಾರೂ ಮಾಡದ ತ್ಯಾಗ, ಬೇರಾರೂ ಅನುಭವಿಸದ ಕಷ್ಟ ಕಾರ್ಪಣ್ಯ ನೋವುಂಡವ, ಚಳವಳಿಯ ಮಹಾ ಹೋಮದಲ್ಲಿ ತನ್ನೆಲ್ಲಾ ವೈಭವದ ರಾಜ್ಯವನ್ನು ಅಗ್ನಿಗೆ ಆಹುತಿ ಕೊಟ್ಟು ಸಿದ್ಧಾರ್ಥ ಬುದ್ಧನಾದ ರಾಜಕುಮಾರ ಎಂಬ ರೀತಿಯ ಸ್ವಪ್ರತಿಮೆಯನ್ನು ಬೆಳಸಿಕೊಂಡ ನೆಹರೂರ ಪ್ರತಿಮೆಯ ಮುಂದೆ ಅವರ ಸಮಕಾಲೀನರಾದ ರಾಜಾಜಿ, ರಾಜೇಂದ್ರ ಪ್ರಸಾದ್, ಲಜಪತ್ ರಾಯ್, ಕೃಪಲಾನಿ, ಶ್ಯಾಮಾಪ್ರಸಾದ್ ಮುಖರ್ಜಿ ಮೊದಲಾದ ಅನೇಕರ ಚಿತ್ರಗಳು ಮಂಕಾಗಿ ಹೋಗಿವೆ. ಜವಹರ ಲಾಲ್ ನೆಹರೂ ಮತ್ತು ಅವರ ಕುಟುಂಬದವರ ಚಿತ್ರಗಳು ಬರೆಯಲ್ಪಟ್ಟಿರುವಷ್ಟು ಢಾಳಾಗಿ ಬೇರೆ ಯಾರ ಚಿತ್ರಗಳೂ ಕಣ್ಣು ಕೋರೈಸುವ ಬಣ್ಣಗಳನ್ನು ಕಂಡಿಲ್ಲ. ಇವರ ಜೀವನದ ವಿವರಗಳ ಬಗೆಗೆ ಉತ್ಪಾದಿಸಿರುವಷ್ಟು ಮಾಹಿತಿಗಳು ಉಳಿದ ಯಾರ ಬಗೆಗೂ ಸೃಷ್ಟಿಯಾಗಿಲ್ಲ.

ನಾನು ಹುಟ್ಟಿದ್ದು 1931ರಲ್ಲಿ. ದೇಶಕ್ಕೆ ಸ್ವಾತಂತ್ರ್ಯ ಬಂದಾಗ ನನಗೆ 16 ವರ್ಷ. ನನ್ನ ಪ್ರಾಂತ್ಯದ ಸುಮಾರು ನೂರು ಹಳ್ಳಿಗಳನ್ನು ತಿರುಗಿದ್ದೆ. ಜಾತಿ, ಸಾಮಾಜಿಕ, ರಾಜಕೀಯ, ಚುನಾವಣೆ ಮೊದಲಾದ ಹಲವು ವಿಚಾರಗಳ ಹರಟೆ, ವಾದ ಪ್ರತಿವಾದಗಳನ್ನು ಕೇಳುತ್ತಿದ್ದೆ. ಹೈಸ್ಕೂಲು ಮೊದಲ ವರ್ಷದಲ್ಲಿ ಓದುವಾಗ

ಜವಹರಲಾಲರ ಕನ್ನಡದಲ್ಲಿ ಬರೆದ ಜೀವನ ಚರಿತ್ರೆಯನ್ನು ಪಠ್ಯವಾಗಿಸಿದ್ದರು. ಮುಂದಿನ ವರ್ಷ ಕಮಲಾ ನೆಹರೂರ ಜೀವನ ಚರಿತ್ರೆ, ಅದರ ಮುಂದಿನ ವರ್ಷ ಮೋತಿಲಾಲರದು. ಇಂಟರ್ ಮೀಡಿಯಟ್ ಮತ್ತು ಬಿ.ಎ.(ಆನರ್ಸ್) ಓದುವಾಗ ಇಂಗ್ಲಿಷ್‌ನಲ್ಲಿ ಡಿಸ್ಕವರಿ ಆಫ್ ಇಂಡಿಯದ ಆಯ್ದ ಭಾಗಗಳು, ಕನ್ನಡದಲ್ಲಿ "ತಂದೆಯು ಮಗಳಿಗೆ ಬರೆದ ಪತ್ರಗಳು", ಹೀಗೆ ಸ್ವಾತಂತ್ರ್ಯ ಬಂದ ತಕ್ಷಣವೇ ಈ ವ್ಯಕ್ತಿಯ ಅಥವಾ ಅವರ ಕುಟುಂಬದ ಹೊಗಳಿಕೆಯ ಕಥೆಗಳನ್ನು ವಿದ್ಯಾರ್ಥಿಗಳ ತಲೆಗೆ ತುಂಬತೊಡಗಿದರು. ಸ್ವಾತಂತ್ರ್ಯಪೂರ್ವದಲ್ಲಿ ಮೈಸೂರು ಸಂಸ್ಥಾನದಲ್ಲಿ 'ಮೈಸೂರಿನ ರಾಜಮಾತೆಯರು' 'ನಮ್ಮನ್ನಾಳಿದ ಮಹಾಸ್ವಾಮಿಗಳು' ಮೊದಲಾದ ಪಠ್ಯಗಳಿಗೆ ಒಗ್ಗಿದ್ದ ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳಿಗೆ ಈ ಹೊಸ ಮಹಾ ಪ್ರಭುಗಳ ಪುಣ್ಯ ಕಥೆಗಳ ಪ್ರವಚನ ಅಧ್ಯಯನಗಳಲ್ಲಿ ವಿಚಿತ್ರವಾದದ್ದೇನೂ ಕಾಣುತ್ತಿರಲಿಲ್ಲ. ಊರು ಪಟ್ಟಣ ಕೆರೆ ಕಟ್ಟೆ ಶಾಲೆ ಕಾಲೇಜು ಆಸ್ಪತ್ರೆ ಮೊದಲಾದ ಸರ್ಕಾರಿ ಕಟ್ಟಡ, ಸಂಸ್ಥೆಗಳನ್ನು ಮಹಾಸ್ವಾಮಿಗಳ, ಅವರ ಕುಟುಂಬ ವರ್ಗದವರ ಹೆಸರುಗಳಿಂದ ಕರೆಯುವುದೇ ಸಹಜವಾಗಿದ್ದ ಜನಗಳಿಗೆ ಹೊಸ ದೊರೆ ಮತ್ತು ಅವರ ಹಿರಿಯರ ಕಿರಿಯರ ಹೆಸರಿಡುವುದೂ ಸಹಜವೇ ಆಯಿತು.

ನೆಹರು ಪ್ರಧಾನಿಯಾದ ಕೆಲವೇ ತಿಂಗಳಲ್ಲಿ ಇನ್ನೊಂದು ಪದ್ಧತಿ ಕಡ್ಡಾಯವಾಯಿತು. ಕೇಂದ್ರ ಸರ್ಕಾರದ ವಾರ್ತಾ ಇಲಾಖೆಯು News Reel ಎಂಬ ಸುಮಾರು ಹದಿನೈದು ನಿಮಿಷಗಳ ಒಂದು ವಾರ್ತಾ ಚಲನಚಿತ್ರವನ್ನು ತಯಾರಿಸುವುದು. ಅದರಲ್ಲಿ ಉದ್ದಕ್ಕೂ ಪ್ರಧಾನಿ ನೆಹರು ಭಾಗವಹಿಸಿದ ಭಾಗಗಳನ್ನು ತೋರಿಸುವುದು. ಅವರು ವಿಮಾನದಿಂದ ಇಳಿಯುವ, ಹತ್ತುವ, ಹಾರ ಹಾಕಿಸಿಕೊಳ್ಳುವ, ಭಾಷಣ ಮಾಡುವ, ನೆಹರೂಗೆ ಸೀಮಿತವಾದ ಚಟುವಟಿಕೆಗಳನ್ನು ಪ್ರತಿವಾರವೂ ಹೊಸ ಹೊಸದಾಗಿ ನಿರ್ಮಿಸಿ ಭಾರತದ ಪ್ರತಿಯೊಂದು ಸಿನಿಮಾ ಟಾಕೀಸಿಗೂ ಸರಬರಾಜು ಮಾಡುವುದು. ಟಾಕೀಸಿನವರು ಅದನ್ನು ಸಿನಿಮಾ ಆರಂಭಿಸುವ ಮೊದಲು ಕಡ್ಡಾಯವಾಗಿ ಪ್ರತಿ ಪ್ರದರ್ಶನಕ್ಕೂ ಮುಂಚೆ ತೋರಿಸುವುದು. ವೃತ್ತ ಪತ್ರಿಕೆಗಳಂತೂ ನೆಹರೂಜಿಯ, ಚಾಚಾಜಿಯ ಫೋಟೋ ಇಲ್ಲದ ಮುಖಪುಟ ಮುದ್ರಿಸಿದರೆ, ಅವರ ಹೇಳಿಕೆ, ಭಾಷಣ, ಅವರ ಜೀವನ ಕುರಿತ ಸ್ವಾರಸ್ಯಕರ ಘಟನೆಗಳ ಚುಟುಕುಗಳಿಂದ ಅಲಂಕರಿಸದಿದ್ದರೆ ತಮ್ಮ ಪತ್ರಿಕೆಗೆ ಆಯುಷ್ಯವೇ ಇಲ್ಲ ಎಂಬಂತೆ ನಡೆದುಕೊಳ್ಳುತ್ತಿದ್ದುವು.

ಸರ್ವಾಧಿಕಾರಿಗಳು ಮಾಧ್ಯಮಗಳನ್ನು ಹತೋಟಿಯಲ್ಲಿಡುತ್ತಾರೆ. ಪ್ರಜಾಪ್ರಭುತ್ವ

ದಲ್ಲಿ ನಿರ್ವಹಿಸುತ್ತಾರೆ. ಇಂಗ್ಲೆಂಡಿನಲ್ಲೇ ಬೆಳೆದು ಓದಿದ ನೆಹರೂಗೆ ಮಾಧ್ಯಮಗಳ ಮಹತ್ತ್ವ ಮತ್ತು ಅದರ ನಿರ್ವಹಣೆಯ ಕಲೆಗಳೆಲ್ಲ ಗೊತ್ತಿತ್ತು. ರಾಷ್ಟ್ರದ ಇತರ ನಾಯಕರಿಗೆ ಈ ಕಲೆ ಗೊತ್ತಿಲ್ಲದ್ದು ಮಾತ್ರವಲ್ಲ, ಅವರು ಅದರ ನಿರ್ವಹಣೆಗೆ ಗಮನ ಕೊಡಲಿಲ್ಲ. ಅಧಿಕಾರಕ್ಕೆ ಬಂದ ಮೇಲೆ ಅದೂ ಆ ಕಾಲದಲ್ಲಿ ಮಾಧ್ಯಮಗಳ ನಿರ್ವಹಣೆ ನಿಯಂತ್ರಣಗಳ ಸೂಕ್ಷ್ಮಗಳನ್ನೆಲ್ಲ ನೆಹರೂ ಪ್ರಯೋಗಿಸಿ ಬಹು ಬೇಗ ರಾಷ್ಟ್ರದ ಏಕಮೇವ ಹಾಗೂ ಅನಿವಾರ್ಯ ನಾಯಕರಾದರು. ಅವರ ಮೇಲೆ ಬಂದಷ್ಟು ಪುಸ್ತಕಗಳು, ಲೇಖನಗಳು, ವಾರ್ತಾ ಲೋಕದ ಪ್ರಸ್ತುತಿ ಬೇರೆ ಯವರಿಗೆ ದೊರೆಯಲಿಲ್ಲ. ಚೂರು ಚೂರಾಗಿ ಹೋಗಬಹುದಾಗಿದ್ದ ಭಾರತವನ್ನು ನಿಜವಾದ ಅರ್ಥದಲ್ಲಿ ಒಂದುಗೂಡಿಸಿ ಕಟ್ಟಿಸಿದ ಹೊಸ ದೇಶದ ನಿರ್ಮಾಪಕ ವಲ್ಲಭಭಾಯ್ ಪಟೇಲರಿಗೂ. ಕನ್ನಡದಲ್ಲಂತೂ ತೀರ ನಗಣ್ಯವಾಗಿ. ಇಂತಹ ಸಂದರ್ಭದಲ್ಲಿ ಶ್ರೀ ಮನ್ನಾರ್ ಕೃಷ್ಣ ರಾವ್‌ರವರು ಪಟೇಲರ 836 ಪುಟಗಳ ವಿಸ್ತಾರದ ಜೀವನ ಚರಿತ್ರೆಯನ್ನು ಬರೆದು ಕನ್ನಡಿಗರ ಪಾಲಿನ ಚರಿತ್ರೆಯ ಋಣ ತೀರಿಸುವ ಪ್ರಮುಖರಾಗಿದ್ದಾರೆ.

ಪಟೇಲರು ಹುಟ್ಟಿದ ಕರಮಸದ್ ಗ್ರಾಮದಲ್ಲಿ ನಾನು ಒಂದು ವರ್ಷ ವಾಸವಾಗಿದ್ದೆ. 1960ರಲ್ಲಿ ಸರ್ದಾರ್ ಪಟೇಲ್ ವಿಶ್ವವಿದ್ಯಾಲಯದ ತತ್ತ್ವಶಾಸ್ತ್ರ ವಿಭಾಗವನ್ನು ಅಧ್ಯಾಪಕನಾಗಿ ಸೇರಿದಾಗ ವಿಶ್ವವಿದ್ಯಾಲಯವು ಅಧ್ಯಾಪಕರ ವಸತಿ ಸಮುಚ್ಚಯವನ್ನು ಇನ್ನೂ ಕಟ್ಟಿ ಮುಗಿಸಿರಲಿಲ್ಲ. ಒಂದು ಮೈಲಿ ದೂರದ ಕರಮಸದ್‌ನಲ್ಲಿ ಅಮೃತಶಿಲೆಯ ದೊಡ್ಡ ಮನೆ ಕೇವಲ ಇಪ್ಪತ್ತೈದು ರೂಪಾಯಿ ಬಾಡಿಗೆಗೆ ಸಿಕ್ಕಿತ್ತು. ನಾನೂ ಸಂಸಾರ ಸಮೇತ ಇದ್ದದ್ದರಿಂದ ನೆರೆಹೊರೆಯವರ ನಿಕಟ ಸಂಪರ್ಕ ಬೆಳೆಯಲು ಅವಕಾಶವಿತ್ತು. ಎಲ್ಲರೂ ಪಟೇಲ ಜನಾಂಗದವರು. ನನ್ನ ವಿದ್ಯಾರ್ಥಿಗಳು ನನ್ನನ್ನು ಅವರ ಊರುಗಳಿಗೆ, ಹಳ್ಳಿಗಳಿಗೆ ಕರೆದೊಯ್ಯುತ್ತಿದ್ದರು. ಹೀಗಾಗಿ ಕೈಡಾ ಜಿಲ್ಲೆಯ ಗ್ರಾಮೀಣ ಜೀವನವನ್ನು ಒಳಹೊಕ್ಕು ನೋಡುವ ಸಂದರ್ಭಗಳು ಒದಗುತ್ತಿದ್ದುವು. ಈ ಪುಸ್ತಕದಲ್ಲಿ ಬರುವ ಆನಂದ್, ಕಪಡವಂಜ್, ಬೋರ್ಸದ್, ಬರ್ದೋಲಿ, ನಡಿಯಾದ್, ಅಹಮದಾಬಾದ್, ವಡೋದರ, ಸೂರತ್‌ಗಳನ್ನೆಲ್ಲ ನೋಡಿದ್ದೆ. ಗೃಹಸಚಿವರಾಗಿದ್ದಾಗ ವಲ್ಲಭಭಾಯ್‌ರವರೊಡನೆ ನಿಕಟವಾಗಿ ಕೆಲಸ ಮಾಡಿದ್ದ ಐ.ಸಿ.ಎಸ್. ಅಧಿಕಾರಿ ಎಚ್. ಎಂ. ಪಟೇಲರು ನಿವೃತ್ತರಾಗಿ ನಮ್ಮ ವಲ್ಲಭ ವಿದ್ಯಾನಗರದಲ್ಲೇ ವಾಸಿಸುತ್ತಿದ್ದರು. ಆಗಲೇ ಇಡೀ ಗುಜರಾತಿನ ಪ್ರತಿಯೊಂದು ಹಳ್ಳಿಗೂ ವಿದ್ಯುತ್ ಸಂಪರ್ಕ ಕಲ್ಪಿಸುವ ಯೋಜನೆಯನ್ನು ಸರ್ಕಾರ ಹಾಕಿಕೊಂಡು ಎಚ್.ಎಂ. ಪಟೇಲರನ್ನು ಈ ಯೋಜನೆಯ ಛೇರ್‌ಮನ್ ಆಗಿ ನೇಮಿಸಿದ್ದರು. ಮೂರು ವರ್ಷದೊಳಗೆ ಇಡೀ

ರಾಜ್ಯಕ್ಕೆ ವಿದ್ಯುತ್ ಕಲ್ಪಿಸುವ ತಂತಿ ಸಂಪರ್ಕ, ಸಿಮೆಂಟ್ ಕಂಬಗಳನ್ನಲ್ಲದೆ ಉಷ್ಣ ವಿದ್ಯುತ್ತನ್ನು ಉತ್ಪಾದಿಸುವ ಜವಾಬ್ದಾರಿಯನ್ನು ಎಚ್.ಎಂ. ಸಾಹೇಬರು ಹೊತ್ತಿದ್ದರು. ಹಿಡಿದ ಕೆಲಸವನ್ನು ಕಾಲಾವಧಿಯಲ್ಲಿ ಮಾಡಿ ಮುಗಿಸುವ ದಕ್ಷ ಅಧಿಕಾರಿ. ಅವರ ಪಿ.ಎ. ನನಗೆ ಪರಿಚಿತ. ತನ್ನ ಸಾಹೇಬರ ಕಾರ್ಯಪಟುತ್ವವನ್ನು ಆತ ನನಗೆ ಹೇಳುತ್ತಿದ್ದ. ಅವನ ಮೂಲಕ ನಾನು ಎಚ್. ಎಂ. ಅವರನ್ನು ಎರಡು ಬಾರಿ ಭೇಟಿಯಾಗಿದ್ದೆ. ಅವರು ಪ್ರತಿಸಲವೂ ಒಂದೂವರೆ ಘಂಟೆಗೂ ಮೀರಿ ವಿರಾಮದಲ್ಲಿ ನನ್ನೊಡನೆ ಮಾತನಾಡಿದ್ದರು. ವಲ್ಲಭ್‌ಭಾಯಿ ಯವರ ದಕ್ಷತೆ ಮತ್ತು ವ್ಯಕ್ತಿತ್ವದ ಬಗೆಗೂ ಹೇಳಿದ್ದರು. ವಿಶ್ವವಿದ್ಯಾಲಯದ ಉಪಕುಲಪತಿ ಬಾಬೂಭಾಯಿ ಜಶಭಾಯಿ ಪಟೇಲರು ಅಚ್ಚ ಗಾಂಧೀ ವಾದಿ. ಅವರ ಬಗೆಗೆ ನಾನು "ಭಿತ್ತಿ"ಯಲ್ಲಿ ಬರೆದಿದ್ದೇನೆ. ಸಂಯುಕ್ತ ಮುಂಬಯಿ ರಾಜ್ಯದ ಮೊರಾರ್ಜಿ ದೇಸಾಯರ ಸರ್ಕಾರದಲ್ಲಿ ಅವರು ವಿದ್ಯಾಮಂತ್ರಿಯಾಗಿದ್ದವರು. ಯಾವ ದೊಡ್ಡ ಪ್ರೊಫೆಸರರಿಗಿಂತಲೂ ಹೆಚ್ಚು ಸ್ಪಷ್ಟವಾಗಿ ವಿಶ್ವವಿದ್ಯಾಲಯದ ಬಗೆಗೆ ಅವರು ದೂರದೃಷ್ಟಿಯುಳ್ಳವರಾಗಿದ್ದರು. ಅವರೊಡನೆ ಒಟ್ಟು ನಾಲ್ಕು ಸಲ ವಿರಾಮದಲ್ಲಿ ಮಾತನಾಡುವ ಅವಕಾಶ ನನಗೆ ದೊರೆತಿತ್ತು. ಅವರಿಂದಲೂ ವಲ್ಲಭಭಾಯಿಯವರ ಬಗೆಗೆ ಕೇಳಿದ್ದೆ. ವಲ್ಲಭಭಾಯಿ ತೀರಿಕೊಂಡದ್ದು 1950ನೆ ಡಿಸೆಂಬರ್ 15ರಂದು. ನಾನು ಕೈಡಾ ಜಿಲ್ಲೆಯ ವಲ್ಲಭಭಾಯಿ ವಿಶ್ವವಿದ್ಯಾಲಯವನ್ನು ಸೇರಿದ್ದು 1960ನೇ ಅಕ್ಟೋಬರ್‌ನಲ್ಲಿ. ಅದು ಪಟೇಲರ ಜಿಲ್ಲೆ. ಅವರು ಬ್ರಿಟಿಷರ ವಿರುದ್ಧ ರೈತರನ್ನು ಸಂಘಟಿಸಿದ ಜಿಲ್ಲೆ. ಅವರು ತೀರಿಕೊಂಡು ಇನ್ನೂ ಹತ್ತು ವರ್ಷವಾಗಿತ್ತು. ಅವರ ನೆನಪು ಎಲ್ಲೆಲ್ಲಿಯೂ ಕಿರಿಯರು ಹಿರಿಯರಲ್ಲೆಲ್ಲ ತಾಜಾ ಆಗಿತ್ತು. ಯಾವುದೋ ಮಾತುಕತೆಗಳಲ್ಲಿ, ಹರಟೆಗಳಲ್ಲಿ, ಉದಾಹರಣೆಗಳಲ್ಲಿ ಅವರ ಮಾತು ಜನಗಳ ಬಾಯಲ್ಲಿ ಬರುತ್ತಿತ್ತು. ನನ್ನ ಮನಸ್ಸಿನಲ್ಲಿ ಅವರು ಎಂಥ ದೊಡ್ಡ ನಾಯಕ! ದೊಡ್ಡ ವ್ಯಕ್ತಿ, ಎಂಬ ಚಿತ್ರ ಮುಂದೆ ಎಂದೂ ಮಾಸದಷ್ಟು ಸ್ಫುಟವಾಯಿತು.

ಗಾಂಧೀಜಿಯೂ ಗುಜರಾತಿಯೇ. ಅವರ ವಿಷಯವಾಗಿ ಜನಗಳಿಗೆ ತುಂಬು ಅಭಿಮಾನವಿತ್ತು. ಆದರೆ ನನ್ನ ಸಹೋದ್ಯೋಗಿಗಳಲ್ಲಿ, ವಿದ್ಯಾರ್ಥಿಗಳಲ್ಲಿ ಮತ್ತು ಸಾಮಾನ್ಯ ಜನರಲ್ಲಿ ಕೆಲವರು ಗಾಂಧೀಜಿಯ ಬಗೆಗೆ ಅಸಮಾಧಾನದ ಮಾತನ್ನಾಡುತ್ತಿದ್ದರು, ಹಾಸ್ಯವನ್ನೂ ಮಾಡುತ್ತಿದ್ದರು. ಆದರೆ ವಲ್ಲಭಭಾಯಿಯನ್ನು ಕುರಿತು ಯಾರ ಬಾಯಿಯಿಂದಲೂ, ಪಟೇಲ ಸಮುದಾಯದವರಿಂದ ಮಾತ್ರವಲ್ಲ, ಯಾವ ಜಾತಿಯವರಿಂದಲೂ, ಗುಜರಾತಿಯಲ್ಲದವರಿಂದಲೂ, ನಾನು ಹಗುರದ ಮಾತನ್ನು ಕೇಳಲಿಲ್ಲ.

ಚಿಂದಿಚಿಂದಿಯಾಗಬಹುದಾಗಿದ್ದ ಭಾರತವನ್ನು ಏಕೀಕರಿಸಿದ, ಸ್ವಾತಂತ್ಯ ಚಳವಳಿಯಲ್ಲಿ ಕಾಂಗ್ರೆಸ್ ಪಕ್ಷದ ಆಂತರಿಕ ವ್ಯವಸ್ಥೆಯಲ್ಲದೆ ಹಣಿಕಾಸುಗಳನ್ನು ನಿಭಾಯಿಸಿದ, ದೇಶದ ಎಲ್ಲ ಸಮಸ್ಯೆಗಳಿಗೂ ದೂರದೃಷ್ಟಿ ಮತ್ತು ಕೆಚ್ಚೆದೆಯಿಂದ ಪರಿಹಾರಗಳನ್ನು ಆಲೋಚಿಸುತ್ತಿದ್ದ ಪಟೇಲರು ಪ್ರಥಮ ಪ್ರಧಾನಿಯಾಗಿದ್ದರೆ ದೇಶವನ್ನು ಬಾಧಿಸುತ್ತಿರುವ ಕಾಶ್ಮೀರ, ಚೀನಾ, ಜಾತೀಯತೆ, ಭ್ರಷ್ಟಾಚಾರ, ರಾಷ್ಟ್ರಕ್ಕೆ ಮಾರಕವಾದ ವಿದೇಶಾಂಗ ನೀತಿ, ವಂಶ ಪಾರಂಪರ್ಯ ರಾಜಕೀಯ ಮೊದಲಾದ ಕ್ಯಾನ್ಸರ್, ಕ್ಷಯ ರೋಗಗಳು ಬಡಿಯುತ್ತಿರಲಿಲ್ಲ ಎಂದು ಹಲವು ಪ್ರಜ್ಞಾವಂತ ಪ್ರಜೆಗಳು ಈಗಲೂ ಚಿಂತಿಸುತ್ತಿದ್ದಾರೆ. ಪಟೇಲರು ಯಾಕೆ ಮತ್ತು ಹೇಗೆ ಪ್ರಥಮ ಪ್ರಧಾನಿಯಾಗಲಿಲ್ಲ ಎಂಬ ವಿವರವನ್ನು ಈ ಪುಸ್ತಕದಲ್ಲಿ ನೋಡಬಹುದು. (ಪುಟ 405–410) ಅದರಲ್ಲಿ ಗಾಂಧೀಜಿಯ ಪಾತ್ರವನ್ನು ಅವರ ಸಹೋದ್ಯೋಗಿಗಳೇ ಅಸಮ್ಮತಿಸಿರುವುದನ್ನು ಖಚಿತವಾಗಿ ದಾಖಲಿಸಿದೆ. ಆದರೆ ಅವರೆಲ್ಲ ಗಾಂಧೀಜಿಯ ಭಕ್ತರೂ, ಅನುಯಾಯಿಗಳೂ ಆಗಿರುವುದರಿಂದ ಸೂಕ್ಷ್ಮವಾಗಿ, ತೇಲಿಸಿ ತಮ್ಮ ಅಸಮ್ಮತಿಯನ್ನು ವ್ಯಕ್ತಪಡಿಸಿದ್ದಾರೆ. ಯಾರ ಬಗೆಗೂ ಭಕ್ತಿ ಅಥವಾ ಹಿಂಬಾಲಕತೆ ಇಲ್ಲದ, ದುರ್ಭಾವನೆಯೂ ಇಲ್ಲದ, ಒಂದು ಸಾಹಿತ್ಯ ಕೃತಿಯ ಪಾತ್ರಗಳನ್ನು ವಸ್ತುನಿಷ್ಠವಾಗಿ ವಿಶ್ಲೇಷಿಸುವ ಮನೋಭಾವದ ನನ್ನಂಥವರಿಗೆ ಈ ಇಡೀ ಕಥಾನಕದ ಪಾತ್ರಧಾರಿಗಳ ಮನಸ್ಸು ಒಳ ಮನಸ್ಸುಗಳನ್ನು ಸ್ವತಂತ್ರವಾಗಿ ನೋಡುವ ಸ್ವಾತಂತ್ರ್ಯವಿದೆ. ಗಾಂಧೀಜಿಗೆ ಪಟೇಲರ ಮೇಲೆ ಪ್ರೀತಿ ಇತ್ತು. ತಮ್ಮ ಬಗೆಗೆ ಅವರಿಗಿದ್ದ ನಿಷ್ಠೆಯ ಮೇಲೆ ಸಂಪೂರ್ಣ ಖಾಚಿತ್ಯವೂ ಇತ್ತು. ಅವರ ಕಾರ್ಯಕ್ಷಮತೆ ಮತ್ತು ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳುವ ಚುರುಕು ಬುದ್ಧಿಯೂ ತಿಳಿದಿತ್ತು. ಆದರೆ ನೆಹರೂರ ಮೇಲೆ ವ್ಯಾಮೋಹವಿತ್ತು. ಪ್ರೀತಿಯಲ್ಲಿ ವಿವೇಚನೆ ಇರಬಹುದು. ಆದರೆ ವಿವೇಚನೆಯೊಳಕ್ಕೆ ನುಸುಳಿಕೊಳ್ಳುವ ಅಂಟನ್ನು ವ್ಯಾಮೋಹವೆಂದು ಕರೆಯುತ್ತಾರೆ. ಮಹಾತ್ಮ ಎಂಬ ಭಕ್ತಿಗೆ ಒಳಗಾಗದೆ ಶುದ್ಧ ವೈಚಾರಿಕತೆಯಿಂದ ಗಾಂಧೀಜಿಯನ್ನು ವಿಮರ್ಶಿಸುವವರೂ ಇದ್ದರು. ಅಂಬೇಡ್ಕರ್ ಅಂಥವರಲ್ಲಿ ಒಬ್ಬರು. ವಿದ್ವಾಂಸರಲ್ಲಿ ಆರ್.ಸಿ. ಮಜುಂದಾರ್ ಒಬ್ಬರು. ವಿಶ್ಲೇಷಣಾ ತತ್ತ್ವಶಾಸ್ತ್ರದಲ್ಲಿ ವಿದ್ವಾಂಸರಾಗಿ ಗಾಂಧೀಜಿಯ ವಿಚಾರಗಳನ್ನು ತಾರ್ಕಿಕವಾಗಿ, ಅವರ ತರ್ಕಬದ್ಧವಲ್ಲದ ಆಲೋಚನೆ ಮತ್ತು ವರ್ತನೆಗಳನ್ನು ಮನೋ ವಿಶ್ಲೇಷಣೆಗೆ ಒಳಪಡಿಸಿರುವ ತಮ್ಮ ಗ್ರಂಥ CRITIQUE OF GANDHI (Critique Publications, Jodhpur)ದಲ್ಲಿ ತತ್ತ್ವಶಾಸ್ತ್ರದ ನಿವೃತ್ತ ಪ್ರಾಧ್ಯಾಪಕರಾದ ಎಂ.ಎಂ. ಕೊಠಾರಿಯವರು ನೆಹರೂ ಬಗೆಗೆ ಗಾಂಧೀಜಿಯ ಕೆಲವು ಪ್ರಶಂಸೋಕ್ತಿಗಳನ್ನು ಹೀಗೆ ಪಟ್ಟಿ ಮಾಡಿದ್ದಾರೆ. (10ನೇ ಅಧ್ಯಾಯ, ಪುಟ 158 ರಿಂದ 165)

1. ಧೈರ್ಯದಲ್ಲಿ ಅವನನ್ನು (ನೆಹರೂನನ್ನು) ಮೀರಿಸುವವರಿಲ್ಲ.

2. ದೇಶಪ್ರೇಮದಲ್ಲಿ ಆತನನ್ನು ಮೀರಿಸಬಲ್ಲವರಾರು?

3. ಅವನು ಸ್ಫಟಿಕದಂತೆ ಶುದ್ಧ; ಸಂಶಯಾತೀತನಾದ ಪ್ರಾಮಾಣಿಕ.

4. ಅವನು ನಿಷ್ಕಳಂಕ ಯೋಧ

5. ಅವನ ಕೈಲಿ ರಾಷ್ಟ್ರವು ಕ್ಷೇಮವಾಗಿರುತ್ತದೆ.

ಮೇಲಿನ ಐದು ಪ್ರಶಂಸೋಕ್ತಿಗಳು 1929ನೇ ಅಕ್ಟೋಬರ್‌ನಲ್ಲಿ ಮುಡಿಸಿದವು. ಜೂನ್ 1947ರಲ್ಲಿ ಇಂಥವೇ ಐದು ಪ್ರಶಂಸನಾ ಪುಷ್ಪಗಳನ್ನು ಅರಳಿಸಿದರು.

1. ಅವನು ಸ್ಫಟಿಕದಂತೆ ಪಾರದರ್ಶಕ.

2. ಅವನ ನಿಯತ್ತು ಮತ್ತು ವಿಶ್ವಾಸವು ತುಲನಾತೀತವಾದುವು.

3. ಅವನು ನನ್ನನ್ನು ತನ್ನ ಪ್ರೇಮದ ಸೆರೆಯಾಳಾಗಿಸಿದ್ದಾನೆ.

4. ಅವನ ಸಾಮರ್ಥ್ಯವು ಜಗತ್ತಿನ ಬೇರೆ ಯಾವುದರೊಡನೆಯೂ ಹೋಲಿಕೆಗೆ ನಿಲ್ಲಬಲ್ಲದು.

5. ಅವನಲ್ಲಿ ವೈರಾಗ್ಯವೂ ಇದೆ. ಅವನು ಅಧಿಕಾರದ ಬಲೆಗಳನ್ನು ಹಾವು ತನ್ನ ಪೊರೆಯನ್ನು ಕಳಚಿಕೊಳ್ಳುವಷ್ಟು ಸುಲಭವಾಗಿ ಕಳಸಿ ಬಿಸಾಕಬಲ್ಲ.

ಇವೆಲ್ಲವೂ ಭಕ್ತನು ಭಗವಂತನಿಗೆ ಸಲ್ಲಿಸುವ ಅಥವಾ ಭಕ್ತಿಪಂಥದಲ್ಲಿ ಪ್ರೇಮಿಯು ತನ್ನ ಆರಾಧ್ಯ ದೈವಕ್ಕೆ ಅರ್ಪಿಸುವ ಸ್ತೋತ್ರಗಳ ಉತ್ಕಟತೆಯನ್ನು ಧ್ವನಿಸುತ್ತವೆ. ಮೇಲೆ ಉದ್ಧರಿಸಿರುವ ಉಕ್ತಿಗಳು ಅಧಿಕೃತ ದಾಖಲೆಗಳಾದ ಪಟ್ಟಾಭಿ ಸೀತಾರಾಮಯ್ಯನವರ History of Indian National Congress ಮತ್ತು ಪ್ಯಾರೆಲಾಲರ Gandhi: The Last Phase ಗ್ರಂಥಗಳಿಂದ ಆಯ್ದವು.

ಕಾಶ್ಮೀರ ಸಮಸ್ಯೆ ಸಂಪೂರ್ಣವಾಗಿ ನೆಹರೂರ ಸೃಷ್ಟಿ. ಉಳಿದ 565 ರಾಜ್ಯಗಳನ್ನು ಒಗ್ಗೂಡಿಸುವ ಜವಾಬ್ದಾರಿಯನ್ನು ಗೃಹ ಸಚಿವ ಪಟೇಲರಿಗೆ ಒಪ್ಪಿಸಿದಂತೆ ಕಾಶ್ಮೀರವನ್ನು ಅವರ ನಿರ್ವಹಣೆಗೆ ಬಿಡದೆ ತಾನೇ ಕೈ ಹಾಕಿ ತಮ್ಮ ಪೂರ್ವಾಗ್ರಹಗಳು, ಅವಿವೇಕ, ಮೌಂಟ್ ಬೇಟನ್ನನ ಒತ್ತಡ, ಅವನ ಹೆಂಡತಿಯ ಪ್ರಭಾವ, ಸೇನಾಧಿಕಾರಿಗಳ ಸಲಹೆಗೆ ಬೆಲೆ ಕೊಡದೆ ವಿಶ್ವಸಂಸ್ಥೆಗೆ ಒಯ್ದು cease fire ತೀರ್ಮಾನಕ್ಕೆ ಸಿಕ್ಕಿಕೊಂಡದ್ದು ಮೊದಲಾದ ಅವಿವೇಕದ ಸರಣಿ, ಕಮ್ಯುನಿಸ್ಟ್ ದೇಶವು ಪರ ರಾಜ್ಯವನ್ನು ಆಕ್ರಮಿಸುವುದಿಲ್ಲ ಎಂಬ ಕುರುಡುನಂಬಿಕೆಯಿಂದ

ಚೀನಾವನ್ನು ನಂಬಿ ಅದರ ಪರವಾಗಿ ವಿಶ್ವಸಂಸ್ಥೆಯಲ್ಲಿ ಗಟ್ಟಿಯಾಗಿ ವಾದಿಸಿ ಅನಂತರ 1962ರಲ್ಲಿ ಅದರಿಂದ ಒದೆಸಿಕೊಂಡದ್ದು, ಸೋವಿಯಟ್ ರಷ್ಯಾದ ಬಾಲಂಗೋಚಿಯಾಗಿ ಅಮೆರಿಕಾ ಮತ್ತು ಇತರ ಪಶ್ಚಿಮ ದೇಶಗಳನ್ನು ಅಹಂಕಾರದಿಂದ ಕಟು ಟೀಕೆ ಮಾಡುವುದನ್ನು ಚಟ ಮಾಡಿಕೊಂಡು ದೇಶಕ್ಕೆ ಹಾನಿ ಮಾಡಿದುದು, ಭಾರತದ ಖಾಸಗಿ ಉದ್ಯಮಗಳನ್ನು ತುಳಿದು ಎಲ್ಲವನ್ನೂ ಸರ್ಕಾರವೇ ಮಾಡಲು ಹೋಗಿ ದೇಶವನ್ನು ದಾರಿದ್ರ್ಯದ ಕೂಪಕ್ಕೆ ತಳ್ಳಿದುದು, ಭ್ರಷ್ಟಾಚಾರವನ್ನು ಬೆಳೆಸಿದುದು, ಬ್ರಿಟಿಷರು ಹುಟ್ಟುಹಾಕಿದ ಹಿಂದೂ ಮುಸ್ಲಿಮರಲ್ಲಿ ಒಡಕನ್ನು ಪ್ರೋತ್ಸಾಹಿಸಿ ಅದನ್ನು ಚುನಾವಣಾ ರಾಜಕೀಯಕ್ಕೆ ಬಳಸಿಕೊಂಡು ಅದನ್ನು ಎಲ್ಲಾ ರಾಜಕೀಯ ಪಕ್ಷಗಳೂ ಅಳವಡಿಸಿಕೊಳ್ಳುವ ಪರಿಸ್ಥಿತಿಯನ್ನುಂಟು ಮಾಡಿದುದು, ಅದೇ ಚುನಾವಣಾ ರಾಜಕೀಯಕ್ಕಾಗಿ ಹಿಂದೂಗಳಲ್ಲಿ ಜಾತಿ ಜಾತಿಗಳ ನಡುವೆ ಒಡಕು ಹುಟ್ಟಿಸಿ ಬೆಳೆಸಿದುದು , ಕಮ್ಯುನಿಸ್ಟರ ವರ್ಗ ಸಂಘರ್ಷವನ್ನು ಭಾರತದ ಜಾತಿ ಸಂಘರ್ಷವಾಗಿ ಪರಿವರ್ತಿಸಿ ದುದು ಮೊದಲಾದುವು ನೆಹರೂಗೆ ಪದೇ ಪದೇ ಪ್ರಶಂಸಾ ಪುಷ್ಪಗಳನ್ನು ಅರ್ಪಿಸಿ ಬೇರೆ ಯಾವ ಕಾಂಗ್ರೆಸ್ಸಿಗರಿಗೂ ಎಟುಕದ ಪ್ರಮಾಣದಲ್ಲಿ ನೆಹರೂರ ರಾಜಕೀಯ ಶಕ್ತಿಯನ್ನು ಬೆಳೆಯುವಂತೆ ಮಾಡಿದ ಗಾಂಧೀಜಿಯು ಮುಂದಾಲೋಚಿಸಲಿಲ್ಲ. 1942ರ ಜನವರಿ 15ರಂದೇ ಗಾಂಧೀಜಿಯು ವಾರ್ಧಾದಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸಭೆಯಲ್ಲೇ 'ಜವಹರಲಾಲ್ ನನ್ನ ಉತ್ತರಾಧಿಕಾರಿ' ಎಂದು ಘೋಷಿಸಿದರು..... "ನನ್ನ ಉತ್ತರಾಧಿಕಾರಿ ರಾಜಾಜಿ ಅಲ್ಲ, ಸರ್ದಾರ್ ವಲ್ಲಭ್‌ಭಾಯಿ ಅಲ್ಲ. ಆದರೆ ಜವಹರಲಾಲ್ ಆಗಿರುತ್ತಾನೆ. ನೀವು ನೀರನ್ನು ಕೋಲಿನಿಂದ ಮತ್ತೆ ಮತ್ತೆ ಬಡಿದು ವಿಭಜಿಸಲು ಸಾಧ್ಯವಿಲ್ಲ. ನಮ್ಮನ್ನು (ನನ್ನನ್ನು ಜವಹರನನ್ನು) ವಿಭಜಿಸುವುದೂ ಸಹ ಅಷ್ಟೇ ಕಷ್ಟ..... ನಾನು ಹೋದ ಮೇಲೆ ನೆಹರು ನನ್ನ ಭಾಷೆಯನ್ನೇ ಆಡುತ್ತಾನೆ."

ಗಾಂಧೀಜಿಯ ಅಹಿಂಸೆ, ಗ್ರಾಮ ಸ್ವರಾಜ್ಯ, ಭಾರಿ ಯಂತ್ರಗಳ ವಿರೋಧಗಳಲ್ಲಿ ನೆಹರೂರ ಅಂತರಂಗ ಎಂದೂ ಶ್ರದ್ಧೆ ಇಟ್ಟಿರಲಿಲ್ಲ. ಅವರ ಆಂತರ್ಯದ ಭಕ್ತಿ ಇದ್ದದ್ದು ಸೋವಿಯಟ್ ಮಾದರಿಯ ಕಮ್ಯುನಿಸಮ್‌ನಲ್ಲಿ. ಅವರು ಆರಾಧಿಸುತ್ತಿದ್ದುದು ಲೆನಿನ್ ಮತ್ತು ಸ್ಟಾಲಿನರನ್ನು. ಅರವತ್ತು ಲಕ್ಷ ಯಹೂದ್ಯರನ್ನು ಕಗ್ಗೊಲೆಗೈದ ಹಿಟ್ಲರನಂತೆ ಸುಮಾರು ಎಂಭತ್ತು ಲಕ್ಷ ಜನರನ್ನು ಸೈಬೀರಿಯಾದ ಚಳಿಯಲ್ಲಿ ಒತ್ತಾಯದ ಶ್ರಮಕ್ಕೆ ತಳ್ಳಿ ಸಾಯಿಸಿದ ಸ್ಟಾಲಿನನ ಸಮೂಹ ಕಗ್ಗೊಲೆಯು ಪ್ರಪಂಚದ ಇತರ ದೇಶಗಳಿಗೆಲ್ಲ ತಿಳಿದಿದ್ದರೂ ನೆಹರೂ ಅದರ ಬಗೆಗೆ ಜಾಣ ಕುರುಡರಾಗಿದ್ದುದು, ರಷ್ಯದಲ್ಲಿ ದಾರಿದ್ರ್ಯವೇ ತಾಂಡವವಾಡುತ್ತಿದ್ದರೂ,

ಸಮೃದ್ಧಿಯು ವಿಜೃಂಭಿಸುತ್ತಿದೆ ಎಂದು ತಮ್ಮ ಪುಸ್ತಕಗಳು, ಲೇಖನಗಳು, ಭಾಷಣಗಳಲ್ಲಿ ಡಂಗುರ ಹೊಡೆಯುತ್ತಿದ್ದುದು, ಕಾಂಗ್ರೆಸ್ ಅಧಿವೇಶನಗಳಲ್ಲಿ ಸೋವಿಯಟ್ ಮಾದರಿಯ ಆರ್ಥಿಕ ವ್ಯವಸ್ಥೆಯನ್ನು ಸ್ತುತಿಸುವ ಠರಾವುಗಳನ್ನು ಮಂಡಿಸಿ ಹೊಗಳುತ್ತಿದ್ದುದು ಮುಚ್ಚುಮರೆಯಾಗಿರಲಿಲ್ಲ. (ಈ ವಿಷಯದಲ್ಲಿ Genesis And Growth of Nehruism - Commitment to Communism - By Sita Ram Goel, Vol. I, Voice of India, New Delhi ಎಂಬ ಪುಸ್ತಕವನ್ನು ಅವಶ್ಯಕವಾಗಿ ಓದಬೇಕು) ಗಾಂಧೀಜಿಗೆ ಇವು ಯಾವುವೂ ತಿಳಿಯದ ಸಂಗತಿ ಗಳಾಗಿರಲಿಲ್ಲ. ಆದರೂ ಅವರು ಜವಹರಲಾಲನೇ ನನ್ನ ಉತ್ತರಾಧಿಕಾರಿ, ಬೇರೆ ಯಾರೂ ಅಲ್ಲ ಎಂದು ಯಾಕೆ ಘೋಷಿಸಿದರು? ಅದು ಕೇವಲ ಮಾತಿನ ಘೋಷಣೆಯಾಗಿರಲಿಲ್ಲ. ಭಾರತದ ಹಣೆಬರಹದ ದಾರಿಯನ್ನೇ ಬದಲಿಸುವ ಕ್ರಿಯೆಯಾಗಿತ್ತು.

ವಲ್ಲಭಭಾಯಿ ಪಟೇಲರು ದೇಶದ ಪ್ರಥಮ ಪ್ರಧಾನಿಯಾಗಬೇಕಿತ್ತು, ಆಗಲಿಲ್ಲ ಎಂದು ಈಗಲೂ ಅನೇಕರು ಮಾತನಾಡುವುದುಂಟು. ಆದರೆ ಅವರು ಯಾಕೆ ಆಗಲಿಲ್ಲ? ಯಾರಿಂದ ಆಗಲಿಲ್ಲ? ಎಂದು ಬಿಚ್ಚಿ ಆಡುವುದಿಲ್ಲ. ನೆಹರೂರಿಂದ ಆಗಲಿಲ್ಲ ಎಂಬ ಧ್ವನಿಯನ್ನು ಕ್ಷೀಣವಾಗಿ ಸೃಷ್ಟಿಸಿ ಮೌನವಾಗಿಬಿಡುತ್ತಾರೆ. ಅಂಥ ಹಲವರಿಗೆ ವಾಸ್ತವದ ವಿವರ ತಿಳಿದಿರುವುದಿಲ್ಲ. ತಿಳಿದಿರುವವರು ಕೂಡ ಧ್ವನಿಯ ಅಸ್ಪಷ್ಟತೆಯನ್ನು ಸ್ಪಷ್ಟಗೊಳಿಸಿ ಯಾರು, ಏಕೆ, ಹೇಗೆ ಎಂಬುದನ್ನು ಖಚಿತವಾಗಿ ಹೇಳಲು ಮುಜುಗರ ಪಟ್ಟು ನುಂಗಿಕೊಳ್ಳುತ್ತಾರೆ. ಕ್ರಿಯಾಪದವನ್ನು ಬಳಸುವಾಗ ಕರ್ತರಿ ಪ್ರಯೋಗ, ಕರ್ಮಣಿ ಪ್ರಯೋಗ ಎಂಬ ವಿಂಗಡಣೆಯುಂಟಷ್ಟೆ. ಇಂಗ್ಲಿಷ್ ಭಾಷೆಯಲ್ಲಿ ಇದನ್ನು active voice, passive voice ಎಂದು ಹೇಳುತ್ತಾರೆ. Otto Jespersen ಎಂಬ ಜರ್ಮನ್ ವೈಯಾಕರಣಿಯು ತನ್ನ Essentials of English Grammar ಎಂಬ ಗ್ರಂಥದಲ್ಲಿ Passive voice ಅನ್ನು ಕರ್ತೃವನ್ನು ಹೇಳಲು ಇಚ್ಛೆ ಇಲ್ಲದಿದ್ದಾಗ, ಮುಚ್ಚಿಡುವ ಉದ್ದೇಶವಿದ್ದಾಗ ಬಳಸುತ್ತಾರೆ. ರಾಜ ತಾಂತ್ರಿಕರು, ಚಾಣಾಕ್ಷರು ಇದನ್ನು ಬಳಸುವುದು ಹೆಚ್ಚು, ಎಂದು ಹೇಳಿದ್ದಾನೆ. ಭಾರತೀಯ ಸಭ್ಯ ಜನರಿಗೆ ಇಂಥ ಚಾಣಾಕ್ಷತೆಯ ಉದ್ದೇಶವಿಲ್ಲದಿದ್ದರೂ ತಾವು ಪೂಜಿಸುವ ವ್ಯಕ್ತಿಯನ್ನು ಬಿಟ್ಟುಕೊಡಲಾರದೆ "ಪಟೇಲರು ಪ್ರಥಮ ಪ್ರಧಾನಿಯಾಗಬೇಕಿತ್ತು" ಎಂಬ ಕರ್ಮಣಿ ಪರಿಣಾಮದ ಮಾತನಾಡಿ ಸುಮ್ಮನಾಗುತ್ತಾರೆ.

ಬ್ರಿಟಿಷರು ಭಾರತದಿಂದ ಕಾಲ್ತೆಗೆಯುವುದು ನಿಶ್ಚಯವಾಗಿತ್ತು. ಮುಸಲ್ಮಾನರಿಗೆ ಪ್ರತ್ಯೇಕ ದೇಶವನ್ನು ಕೊಡುವುದೂ ಖಾತ್ರಿಯಾಗಿತ್ತು. ಭಾರತದ ರಾಜ್ಯಭಾರವನ್ನು

ಕಾಂಗ್ರೆಸ್ಸಿಗೆ ವಹಿಸಿಕೊಡುವುದೂ ಸ್ಪಷ್ಟವಾಗಿತ್ತು. ಅಂದರೆ ಕಾಂಗ್ರೆಸ್ ಅಧ್ಯಕ್ಷರಾದವರು ಪ್ರಧಾನಮಂತ್ರಿಯಾಗುವುದಿತ್ತು. ಆಗ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಅಬುಲ್ ಕಲಮ್ ಆಜ಼ಾದರ ಅವಧಿ ಮುಗಿದಿತ್ತು. ಇನ್ನೊಂದು ವರ್ಷದ ವಿಸ್ತರಣೆಯನ್ನು ಗಿಟ್ಟಿಸಿಕೊಂಡರೆ ತಾನೇ ಭಾರತದ ಪ್ರಧಾನಿಯಾಗುತ್ತೇನೆಂಬ ಹಿಕಮತ್ತಿನಿಂದ ಆಜ಼ಾದರು ಹೊಂಚುಹಾಕತೊಡಗಿದರು. ಅದಕ್ಕೆ ಗಾಂಧೀಜಿ ಒಪ್ಪಲಿಲ್ಲ. ಹೊಸ ಅಧ್ಯಕ್ಷ ಪದವಿಗೆ ಪ್ರಾದೇಶಿಕ ಕಾಂಗ್ರೆಸ್ ಸಮಿತಿಗಳ ಅಭಿಪ್ರಾಯ ಕೇಳಿದಾಗ ಹದಿನೈದು ಸಮಿತಿಗಳಲ್ಲಿ 12 ಪಟೇಲರ ಹೆಸರನ್ನು ಸೂಚಿಸಿದರು. ನೆಹರೂರ ಹೆಸರನ್ನು ಒಂದು ಸಮಿತಿಯೂ ಹೇಳಲಿಲ್ಲ. ನೆಹರೂ ಎಂದೂ ಎಲ್ಲಿಯೂ ಎರಡನೆಯ ಸ್ಥಾನವನ್ನು ಒಪ್ಪಿಕೊಳ್ಳುವವರಲ್ಲ, ನಿನ್ನ ಉಮೇದುವಾರಿಕೆಯನ್ನು ಹಿಂತೆಗೆದುಕೊ ಎಂದು ಗಾಂಧೀಜಿ ಪಟೇಲರಿಗೆ ಸೂಚಿಸಿದರು. ಪಟೇಲರು ಎರಡನೆ ಮಾತಿಲ್ಲದೆ ಹಿಂತೆಗೆದುಕೊಂಡರು. ನೆಹರೂ ಪ್ರಧಾನಿಯಾದರು. 'ಪಟೇಲರಿಗೆ ತಪ್ಪಿದ ಪ್ರಧಾನಿ ಪದವಿ' ಎಂಬ ಶೀರ್ಷಿಕೆಯಡಿಯಲ್ಲಿ ಈ ಪುಸ್ತಕದಲ್ಲಿ ಅದರ ತಕ್ಕ ಮಟ್ಟಿನ ವಿವರಗಳಿವೆ. ಅದನ್ನು ನಾನು ಇಲ್ಲಿ ಬರೆಯುವ ಅಗತ್ಯವಿಲ್ಲ. ಈ ಸಂದರ್ಭದಲ್ಲಿ ಪಟೇಲರ ಮನಸ್ಸು ಹೀಗಿದ್ದಿರಬಹುದು ಎಂಬ ಬಗೆಗೆ ಪಾತ್ರ ವಿಶ್ಲೇಷಣೆಯ ನನ್ನ ತಿಳುವಳಿಕೆಯನ್ನು ಬಳಸಿ ನನ್ನ ಊಹೆಯನ್ನು ಇಲ್ಲಿ ಬರೆಯುತ್ತೇನೆ.

ಇಂಗ್ಲೆಂಡಿಗೆ ಹೋಗಿ ಬಾರ್-ಎಟ್-ಲಾ ಓದಿ ಬರಬೇಕೆಂದು ಕಷ್ಟ ಪಟ್ಟು ದುಡಿದು ವಲ್ಲಭ ಭಾಯಿಯು ಚಿಕ್ಕ ವಯಸ್ಸಿನಲ್ಲೇ ಹಣವನ್ನು ಶೇಖರಿಸಿ ಕೊಂಡಿದ್ದರು. 'ನೀನು ಕಿರಿಯ, ಹಿರಿಯನಾದ ನಾನು ಮೊದಲು ಬಾರ್-ಎಟ್-ಲಾ ಆಗಬೇಕಲ್ಲವೇ?' ಎಂದು ಅಣ್ಣ ವಿಠ್ಠಲಭಾಯಿ ಸೂಚಿಸಿದ ತಕ್ಷಣ ವಲ್ಲಭಭಾಯಿಯು ಹಣವನ್ನೆಲ್ಲ ಅಣ್ಣನಿಗೆ ಒಪ್ಪಿಸಿ ಮತ್ತೆ ದುಡಿಯತೊಡಗಿದರು; ಬಡತನದಲ್ಲೇ ಉಳಿಸಿ ಮೂರು ವರ್ಷಗಳ ನಂತರ ತಾವು ಹೋಗಿ ಬಾರ್-ಎಟ್-ಲಾ ಓದಿದರು. ಆ ಕರ್ಮನಿರತ ದೈತ್ಯನಿಗೆ ಕರ್ಮಫಲವನ್ನು ತ್ಯಾಗ ಮಾಡುವುದು ರಕ್ತಗುಣವೇ ಆಗಿತ್ತು. ಇಂಥ ಎಷ್ಟೋ ಸನ್ನಿವೇಶಗಳು, ಎಷ್ಟೋ ತ್ಯಾಗಗಳನ್ನು ಅವರು ಮಾಡಿದ್ದರು. ಪ್ರಧಾನಮಂತ್ರಿಯಾಗಲು ತನಗೆ ಆಸಕ್ತಿ ಇಲ್ಲ ಎಂಬ ಗಾಂಧೀಜಿಯ ಕಾಗದಕ್ಕೆ ಮರುಮಾತಿಲ್ಲದೆ ರುಜು ಮಾಡಿದರು. ಆದರೆ ಇನ್ನೂ ಒಂದು ಅಸಂಭವವಲ್ಲದ ವಿವರಣೆ ಹಲವಾರು ವರ್ಷಗಳಿಂದ ನನ್ನ ಮನಸ್ಸಿನಲ್ಲಿದೆ. ಗಾಂಧೀಜಿಯ ಬಗೆಗೆ ಪಟೇಲರು ಎಷ್ಟೇ ಭಕ್ತಿ ಇಟ್ಟಿದ್ದರೂ, ತಾವು ಅವರ ನೆಚ್ಚಿನ ಭಂಟನಾಗಿದ್ದರೂ ಅವರನ್ನು ವಾಸ್ತವ ದೃಷ್ಟಿಯಿಂದ ಅರ್ಥ ಮಾಡಿಕೊಳ್ಳಲಾರದ ಮುಗ್ಧ ಭಕ್ತಿ ಯೋಗಿಯಾಗಿರಲಿಲ್ಲ. ಬೇರೆ ಕಾಂಗ್ರೆಸಿಗರಿಗೆ

ಹೊಳೆಯದಿದ್ದ ರಾಜಕೀಯ ಪರಿಹಾರಗಳನ್ನು ಸಹಜವಾಗಿ, ಕ್ಷಣಾರ್ಧದಲ್ಲಿ ಕಂಡುಹಿಡಿಯುವ ನಿಶಿತಮತಿ ಅವರಾಗಿದ್ದರು. ಎಂತೆಂಥ ಕ್ರಿಮಿನಲ್ ಕೇಸುಗಳನ್ನು ಬಿಡಿಸಿ ಗೆದ್ದ ವಕೀಲರಾಗಿದ್ದರು. ಗಾಂಧೀಜಿಯ ವಿರೋಧವಿದ್ದರೂ ಸುಭಾಷ್ ಚಂದ್ರ ಬೋಸರು ಎರಡನೆಯ ಬಾರಿಗೆ ಬಹುಮತದಿಂದ ಗೆದ್ದಾಗ ಅದನ್ನು ತನ್ನ ಸೋಲೆಂದು ಬಗೆದ ಗಾಂಧಿ ಕಾರ್ಯಕಾರಿ ಸಮಿತಿಯ ಸದಸ್ಯರು ಒಬ್ಬೊಬ್ಬರಾಗಿ ರಾಜಿನಾಮೆ ಕೊಟ್ಟು ಬೋಸರು ಪದವಿಗೆ ರಾಜಿನಾಮೆಯಿತ್ತು ಹೊರಟುಹೋಗುವ ತಂತ್ರವನ್ನು ರೂಪಿಸಿ ತಮ್ಮ ಕಾರ್ಯಸಾಧನೆ ಮಾಡಿಕೊಂಡದ್ದು ಪಟೇಲರಿಗೆ ಗೊತ್ತಿತ್ತು. ಈಗ ತಮಗೆ ತಾನಾಗಿಯೇ ಬಂದಿರುವ ಹದಿನೈದಕ್ಕೆ ಹನ್ನೆರಡರ ಬಹುಮತವನ್ನು ಒಂದೂ ಓಟು ಬರದ ನೆಹರೂಗೆ ಒಪ್ಪಿಸುವುದು ನ್ಯಾಯವೇ? ಎಂದು ವಿರೋಧಿಸಿದರೂ ಗಾಂಧೀಜಿಯು ಬೋಸರಿಗೆ ಮಾಡಿದಂಥದ್ದನ್ನು ತನಗೂ ಮಾಡುತ್ತಾರೆಂಬ ಸೂಕ್ಷ್ಮ ಗ್ರಹಿಕೆ ಪಟೇಲರ ಮನಸ್ಸಿನಲ್ಲಿ ಹೊಳೆಯಲಿಲ್ಲ ಎಂದು ಕಲ್ಪಿಸುವುದು ಅವರನ್ನು ವಾಸ್ತವತೆಯ ಸ್ಪರ್ಶವಿಲ್ಲದ ತ್ಯಾಗ ಮೂರ್ತಿ ಎಂದು ಬಾಲಿಶವಾಗಿ ವಿವರಿಸಿದಂತಾಗುತ್ತದೆ.

"ರಾಜೇಂದ್ರ ಪ್ರಸಾದ್ ಮತ್ತಿತರರು 'ಗಾಂಧೀಜಿಯವರು ಆಕರ್ಷಣೀಯನಾದ ನೆಹರೂಗಾಗಿ ತಮ್ಮ ನೆಚ್ಚಿನ ಭಂಟನನ್ನು ಮತ್ತೊಮ್ಮೆ ತ್ಯಾಗ ಮಾಡಿದ್ದಾರೆ' ಎಂದರು. ಆದರೆ ಪಟೇಲರು ತುಟಿ ಬಿಚ್ಚಲೂ ಇಲ್ಲ, ಮಹಾತ್ಮನನ್ನು ವಿರೋಧಿಸಲೂ ಇಲ್ಲ."

ಆಗ ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿಯಾಗಿದ್ದ ಕೃಪಲಾನಿಯವರು "ನಾನು ಪ್ರಧಾನ ಕಾರ್ಯದರ್ಶಿಯಾಗಿ ಗಾಂಧೀಜಿಯ ಅಪೇಕ್ಷೆಗೆ ಅನುಗುಣವಾಗಿ ಜವಹರರ ಹೆಸರನ್ನು ಸೂಚಿಸುವಂತಾಯಿತಲ್ಲ ಎಂದು ಚಿಂತಿಸುತ್ತಿದ್ದೇನೆ..... ಆದರೆ ಮುಂದಾಗುವುದನ್ನು ಯಾರು ಭವಿಷ್ಯ ಹೇಳಲು ಸಾಧ್ಯ? ಅಂತಹ ಸಣ್ಣದು ಎಂದು ಕಂಡು ಬರುವ ಅಪಘಾತಗಳ ಮೇಲೆ ಮನುಜರ ವಿಧಿ ಮತ್ತು ರಾಷ್ಟ್ರಗಳ ವಿಧಿ ಸಹ ಅವಲಂಬಿತವಾಗಿರುತ್ತದೆ" ಎಂದು ಭವಿಷ್ಯ ನುಡಿದರು.

ಅನಂತರ ನೆಹರೂರಿಂದ ಭಾರತಕ್ಕಾದ ಅಪಘಾತಗಳಿಗೆ ಗಾಂಧೀಜಿಯ ಪಾತ್ರವು ನೈತಿಕ ಜವಾಬ್ದಾರಿಯನ್ನು ಹೊರಬೇಕಲ್ಲವೆ? ಒಮ್ಮೆ ಮಹಾತ್ಮ ಎಂಬ ಗುಣ, ಶಕ್ತಿ, ಭೂತ ಭವಿಷ್ಯಗಳನ್ನು ಕಾಣುವ ಜ್ಞಾನಗಳನ್ನು ಅಧ್ಯಾರೋಪಿಸಿದ ಮೇಲೆ ಅವರಿಂದ ಉಂಟಾದ ಅಪಘಾತ ಸರಣಿಗಳ ಜವಾಬ್ದಾರಿಗಳನ್ನು ಅವರ ಹೆಸರಿಗೆ ಹೊರಿಸುವುದು ಭಾರತೀಯರ ಭಕ್ತಿಮಾರ್ಗಕ್ಕೆ ಸಾಧ್ಯವಾಗುವುದಿಲ್ಲ. ಗಾಂಧೀಜಿಯಿಂದ ರಾಜ್ಯವನ್ನು ಪಡೆದ ರಾಜಕುಮಾರನು ಅನಂತರ ತನ್ನ ಉಪಕಾರಿಯ ಹೆಸರನ್ನು ಮುಗಿಲಾಚೆಯ ಎತ್ತರಕ್ಕೆ ಏರಿಸಿ ವಿಸ್ತರಿಸಲು ಕೈಗೆಟಕುವ

ತಂತ್ರಗಳನ್ನೆಲ್ಲ ಉಪಯೋಗಿಸಿದರು. ಆತ ಇಮೇಜ್ ನಿರ್ಮಾಣದ ತಂತ್ರಗಳನ್ನು ಕರಗತ ಮಾಡಿಕೊಂಡಿದ್ದ ನಿಪುಣ. ಅಲ್ಲದೆ ಗೋಡ್ಸೆಯ ಗುಂಡಿನಿಂದಲ್ಲದೆ ಸಹಜ ರೀತಿಯಲ್ಲಿ ಮೃತರಾಗಿದ್ದರೆ ಭಾರತೀಯರ ಮನಸ್ಸು ಗಾಂಧೀಜಿಯನ್ನು ಇಷ್ಟೊಂದು ದೈವದ ಎತ್ತರಕ್ಕೆ ಏರಿಸುತ್ತಿರಲಿಲ್ಲ.

ರಾಮಧಾರೀ ಸಿಂಹ 'ದಿನಕರ್' ಎಂಬ ಹಿಂದೀ ಕವಿಯು ಪ್ರಧಾನಮಂತ್ರಿ ನೆಹರೂರಿಂದ ಉಪಕೃತರಾದವರು. ಅವರಿಂದ ಲೋಕಸಭಾ ಸದಸ್ಯರೂ ಆದವರು. ಪದದ ಅನುಕೂಲದಿಂದ ನಿಯೋಗಗಳ ಸದಸ್ಯರಾಗಿ ವಿವಿಧ ರಾಷ್ಟ್ರಗಳನ್ನು ಸರ್ವಾನುಕೂಲಗಳಿಂದ ನೋಡುವ ಅವಕಾಶವನ್ನೂ ಪಡೆದವರು. ಅವರು ನೆಹರೂರನ್ನು ಕುರಿತು "ಲೋಕದೇವ ನೆಹರೂ" ಎಂಬ ಒಂದು ಪುಸ್ತಕವನ್ನೇ ಬರೆದರು. ತಾವು ಕಂಡಂತೆ, ಆಗಾಗ ಒಡನಾಡಿದಂತೆ ನೆಹರೂರ ವರ್ಣಲೇಪನ ಮಾಡಿದ ವ್ಯಕ್ತಿ ಚಿತ್ರದ ಕಥೆ ಇದು. ಗಾಂಧೀಜಿಯ ಪರಮ ಭಕ್ತ ವಿನೋಬಾ ಭಾವೆಯವರು ಗಾಂಧೀಜಿಯ ಆಯ್ಕೆಯ ಪ್ರಧಾನಿಯನ್ನು ಲೋಕದೇವ ನೆಹರೂ ಎಂದು ಪ್ರಶಂಸಿಸಿದರಂತೆ. 'ಲೋಕದೇವ ನೆಹರು' ಎಂಬುದನ್ನೇ ಕವಿ ದಿನಕರ್ ರವರು ತಮ್ಮ ಈ ಪುಸ್ತಕಕ್ಕೆ ಇಟ್ಟಿದ್ದಾರೆ. ಅದನ್ನು ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯು ಆಯ್ದು ಅನುವಾದ ಮಾಡಿಸಿರುವುದು ಸಹಜವೇ ಆಗಿದೆ. ಕೆಲವು ಕಡೆ ದಿನಕರ್ ಅವರ ವಸ್ತುನಿಷ್ಠೆಯು ಮೇಲುಗೈ ಆಗಿ ನೆಹರೂ ಪಾತ್ರದ ಕೆಲವು ಮುಖಗಳನ್ನು ತೋರಿಸಿದೆ. ನಾನು ಇಲ್ಲಿ ಎರಡನ್ನು ಮಾತ್ರ ಉದ್ಧರಿಸುತ್ತೇನೆ:

1. "ಮೌಂಟ್ ಬೇಟನ್ನರು ತಮಗೆ ಒಪ್ಪಿಸಿದ್ದ ಕೆಲಸವನ್ನು ಅತ್ಯಂತ ಶೀಘ್ರವಾಗಿ ಮುಗಿಸಿ ತಮ್ಮ ಟೊಪ್ಪಿಗೆಯಲ್ಲಿ ಗೆಲುವಿನ ಗರಿಯೊಂದನ್ನು ಸಿಕ್ಕಿಸಿಕೊಳ್ಳ ಬಯಸುತ್ತಿದ್ದರು..... ಅವರಿಗೆ ತಾವು ಯಶಸ್ಸು ಗಳಿಸುವ ಬಗ್ಗೆ ಇದ್ದಷ್ಟು ಚಿಂತೆ ಭಾರತದ ಹಿತದ ಬಗ್ಗೆ ಇರಲಿಲ್ಲ. ಅವರು ತಮ್ಮ ಪತ್ನಿ ಜವಾಹರರನ್ನು ಹಿಂಬಾಲಿಸುವಂತೆ ಮಾಡಿದರು. ತಮ್ಮ ಪುತ್ರಿಯನ್ನು ಗಾಂಧೀಜಿಯವರ ಪ್ರಾರ್ಥನಾ ಸಭೆಯಲ್ಲಿ ಭಾಗವಹಿಸುವಂತೆ ಮಾಡಿದರು. ಮೈತ್ರಿಯ ಜಾಲ ಹರಡಿ ಜವಹರರನ್ನು ಮೆತ್ತಗೆ ಮಾಡಿದರು." (ಪುಟ 161)

2. "ಮೋತಿಲಾಲರಂತಹ ತಂದೆ, ಗಾಂಧೀಜಿಯಂತಹ ಗುರುಗಳನ್ನು ಪಡೆದು ಜವಾಹರರು ಕೃತಕೃತ್ಯರಾದರು. ಅವರ ಅನೇಕ ಕಷ್ಟಗಳನ್ನು ಈ ಇಬ್ಬರು ಹಿರಿಯರು ಸುಲಭ ಮಾಡಿದರು. ಸರದಾರ್ ವಲ್ಲಭಭಾಯಿ ಪಟೇಲರು ಮತ್ತು ಸುಭಾಷ್ ಚಂದ್ರ ಬೋಸರಿಗಿಂತ ಹೆಚ್ಚು ಮುಂದುವರೆಯುವುದರಲ್ಲಿ ಅವರ ವೈಯುಕ್ತಿಕವಾದ ಯೋಗ್ಯತೆ, ನಡತೆ ಸೌಭಾಗ್ಯ ಎಷ್ಟು ಸಹಾಯ ಮಾಡಿದವೋ ಅಷ್ಟೇ ಸಹಾಯ

ಈ ಇಬ್ಬರು ಹಿರಿಯರ ಆಶೀರ್ವಾದದಿಂದಲೂ ಉಂಟಾಯಿತು.

"ಮೋತಿಲಾಲರು 'ನಾನು ಜವಹರಲಾಲನ ತಂದೆ ಎಂಬ ಅಭಿಮಾನ ನನಗಿದೆ' ಎಂದು ಅನೇಕ ಸಲ ಹೇಳಿದ್ದುಂಟು. ಮೋತಿಲಾಲರ ನಿಧನದ ತರುವಾಯ ಆನಂದಭವನದಲ್ಲಿ ಗಾಂಧೀಜಿ ಮತ್ತು ಡಾ. ವಿಧಾನಚಂದ್ರ ರಾಯ್ ಅವರ ನಡುವೆ ಒಂದು ಮಾರ್ಮಿಕವಾದ ಚಿಕ್ಕ ಸಂಭಾಷಣೆ ನಡೆಯಿತು.

"ಮೋತಿಲಾಲರಲ್ಲಿ ಅಲೌಕಿಕ ಗುಣ ಯಾವುದಿತ್ತು?" ವಿಧಾನ ಬಾಬು ಗಾಂಧೀಜಿಯನ್ನು ಪ್ರಶ್ನಿಸಿದರು.

"ಜವಾಹರರ ಮೇಲಿನ ಅತೀವ ಪ್ರೇಮ" ಗಾಂಧೀಜಿ ಉತ್ತರಿಸಿದರು.

"ಹಾಗಾದರೆ ಅವರು ಭಾರತವನ್ನು ಪ್ರೀತಿಸುತ್ತಿರಲಿಲ್ಲವೆ?"

"ಇಲ್ಲ, ಅವರ ದೇಶಪ್ರೇಮ ಅವರ ಪುತ್ರಪ್ರೇಮದಿಂದ ಮಾತ್ರ ಉಂಟಾಗಿತ್ತು. ಜವಹರಲಾಲನಿಗೆ ಜನ್ಮ ಕೊಟ್ಟದ್ದಕ್ಕಾಗಿ ಭಾರತದ ಬಗ್ಗೆ ಅವರಿಗೆ ಅಭಿಮಾನವಿತ್ತು."

"ಪರಿವರ್ತನವಾದಿಗಳು (changers) ಮತ್ತು ಅಪರಿವರ್ತನವಾದಿಗಳ (no changers) ಮಧ್ಯೆ ಕಲಹ ನಡೆಯುತ್ತಿದ್ದ ಸಮಯದಲ್ಲಿ ಮೋತಿಲಾಲರು ಗಾಂಧೀಜಿಗೆ ಒಂದು ಪತ್ರದಲ್ಲಿ ಈ ರೀತಿ ಬರೆದು ತಿಳಿಸಿದ್ದರು: 'ತಾವು ಮಹಾನುಭಾವರು. ಭಾರತಕ್ಕೆ ನಿಮ್ಮಿಂದ ದೊರೆತಿರುವ ಸಿದ್ಧಿಗಳು ಬಹು ದೊಡ್ಡವು. ಆದರೆ ನನ್ನ ಅಭಿಪ್ರಾಯದಲ್ಲಿ ಮುಂದೆ ಜವಹರಲಾಲ್ ಭಾರತಕ್ಕೆ ತಾವು ಸಾಧಿಸಿದ್ದಕ್ಕಿಂತಲೂ ಹೆಚ್ಚಿನ ಸಿದ್ಧಿಗಳನ್ನು ದೊರಕಿಸಿ ಕೊಡುವನು.'" (ಪುಟ 115 – 116)

ನೆಹರೂ ಕುಟುಂಬದಲ್ಲಿ ಮಕ್ಕಳಲ್ಲಿ ಕೇವಲ ಆತ್ಮವಿಶ್ವಾಸ ಮಾತ್ರವಲ್ಲ, ಆತ್ಮ ಗರ್ವವನ್ನು ಬೆಳೆಸುತ್ತಿದ್ದ ರೀತಿ ಇದು. ಜವಹರಲಾಲರು ತಮ್ಮ ಮಗಳು ಇಂದಿರೆಯಲ್ಲೂ ಹೀಗೆಯೇ, ಇಂಥದೇ ಗರ್ವವನ್ನು ಬೆಳೆಸಿದರು. ಆಕೆಯು ತನ್ನ ಮಕ್ಕಳು ರಾಜೀವ, ಸಂಜಯರಲ್ಲಿ ಹೀಗೆಯೇ ಬೆಳೆಸಿದರು. ಈಗ ರಾಜೀವರ ಮಗ ರಾಹುಲರಲ್ಲಿಯೂ ಇಂಥದ್ದನ್ನೇ ಉತ್ಪತ್ತಿ ಮಾಡಲು ಹೆಣಗುತ್ತಿದ್ದಾರೆ.

ಜವಾಹರರು ಇಂದಿರೆಯನ್ನು ತಮ್ಮ ನಂತರ ಭಾರತದ ಪ್ರಧಾನಿಯಾಗುವಂತೆ ಬೆಳೆಸಿದ ರೀತಿಗೂ, ಪಟೇಲರು ಮಗಳು ಮಣಿ ಬೇನಳನ್ನು ಬೆಳೆಸಿದ ರೀತಿಗೂ ಇರುವ ವ್ಯತ್ಯಾಸವನ್ನು ಗಮನಿಸಬೇಕು. ತಾವು ಪ್ರಧಾನಿಯಾಗಿರುವಾಗಲೇ ಮಗಳನ್ನು ಕಾಂಗ್ರೆಸ್ಸಿನ ಅಧ್ಯಕ್ಷಿಣಿಯನ್ನಾಗಿಸಿ ಇಡೀ ಪಕ್ಷವು ಅವಳ ಅಧೀನದಲ್ಲಿರು

ವಂತೆ ಮಾಡಿ, ಆ ಮೂಲಕ ತನ್ನ ನಂತರ ಅವಳು ಪ್ರಧಾನಿಯಾಗುವುದನ್ನು ಅವರು ಖಚಿತಪಡಿಸಿಕೊಂಡಿದ್ದರು. ಅಪ್ಪ ಸತ್ತ ಮೇಲೆ ಮಣಿ ಬೇನ್ ಅಹಮದಾಬಾದಿನಲ್ಲಿ ಒಂದು ಫ್ಲಾಟ್‌ನಲ್ಲಿ ಜೀವಿಸುತ್ತಾ ರಾಜಕೀಯದಿಂದ ದೂರವಾಗಿ ಉಳಿದಳು. ವಂಶಪಾರಂಪರ್ಯ–dynasty–ವನ್ನು ಬೆಳೆಸಿಕೊಳ್ಳುವುದು ನೆಹರು ಕುಟುಂಬದ ರಕ್ತದಲ್ಲಿಯೇ ಇತ್ತು. ಈ ಗರ್ವವೇ ನೆಹರೂ ಮತ್ತು ಪಟೇಲರಿಗಿದ್ದ ಮುಖ್ಯ ವ್ಯತ್ಯಾಸದ ಬೀಜವಾಗಿತ್ತು. ಶತ್ರುವನ್ನು ಕೂಡ ಔದಾರ್ಯದಿಂದ ಕಾಣುವ ಗುಣ ಪಟೇಲರಿಗಿತ್ತು. ಭಾರತದಲ್ಲಿ ಲೀನಗೊಳಿಸಿದ ಚಿಕ್ಕ ದೊಡ್ಡ ರಾಜರುಗಳಿಗೆ ಅವರವರ ಜೀವನಶೈಲಿಗೆ ಕುಂದು ಬಾರದಂತೆ ರಾಜಧನವನ್ನು ಪಟೇಲರು ಖಾತ್ರಿಗೊಳಿಸಿದರು. ಭಾರತದ ವಿರುದ್ಧವಾಗಿ ಪ್ರಚ್ಛನ್ನ ಯುದ್ಧವನ್ನೇ ನಡೆಸಿದ ಹೈದರಾಬಾದಿನ ನಿಜಾಮನಿಗೆ ಕೂಡ ಅವರು ಅವನ ಆರ್ಥಿಕ ಅಂತಸ್ತಿಗೆ ತಕ್ಕ ರಾಜಧನವನ್ನು ಗೊತ್ತುಮಾಡಿದರು. ತಿರುವನಂತಪುರದ ರಾಜನು ವಿಲೀನವಾಗದಂತೆ ತಡೆದ ಸಿ.ಪಿ. ರಾಮಸ್ವಾಮಿಯವರ ಶಕ್ತಿಯನ್ನು ಗುರುತಿಸಿದ ಪಟೇಲರು ಅನಂತರ ಅವರನ್ನು ಅಮೆರಿಕದಲ್ಲಿ ಭಾರತದ ರಾಯಭಾರಿಯಾಗಿ ನೇಮಿಸುವ ಸಲಹೆ ಮಾಡಿದರು. ದೇಶದ ಹಿತವೊಂದೇ ಅವರ ಗುರಿಯಾಗಿತ್ತು. ಅವರು ಹಿಂದಿನ ದ್ವೇಷವನ್ನು ಸಾಧಿಸುತ್ತಿರಲಿಲ್ಲ. ವಿರೋಧಿಯನ್ನೂ ಅವರು ದ್ವೇಷಿಸುತ್ತಿರಲಿಲ್ಲ. ಅವರ ಸಲಹೆಯನ್ನು ನೆಹರು ಮನ್ನಿಸಲಿಲ್ಲ. ವಿಶ್ವಸಂಸ್ಥೆಯಲ್ಲಿ ಪಾಕಿಸ್ತಾನದ ಪರ ವಾದಿಸಿದ ಜಫ಼ರುಲ್ಲಾ ಖಾನ್ ಮಹಾ ಪ್ರಖರನಾದ ವಕೀಲರು. ಅವರನ್ನು ಎದುರಿಸುವ ಶಕ್ತಿ ಇರುವುದು ಅದೇ ಸಿ.ಪಿ. ರಾಮಸ್ವಾಮಿಯವರಿಗೆ ಎಂದು ಗುರುತಿಸಿದ ಪಟೇಲರು ಅವರನ್ನು ಭಾರತದ ವಕೀಲರಾಗಿ ಕಳಿಸುವಂತೆ ಸಲಹೆ ಮಾಡಿದರು. ಹಳೆಯದನ್ನು ಮರೆಯುವ ಶಕ್ತಿ ಇಲ್ಲದ ನೆಹರು ಮನ್ನಿಸಲಿಲ್ಲ. ಗೋಪಾಲಸ್ವಾಮಿ ಅಯ್ಯಂಗಾರರನ್ನು ಭಾರತದ ವಕೀಲರನ್ನಾಗಿ ಕಳುಹಿಸಿದರು. ಅಯ್ಯಂಗಾರರು ಜಫ಼ರುಲ್ಲಾರನ್ನು ಎದುರಿಸಲಾರದೆ ಸೋತರು. ಭಾರತ ಸೋತಿತು.

ನೆಹರೂ Who after Nehru? ಎಂಬ ಪ್ರಶ್ನೆಯನ್ನು ತಮ್ಮ ಚೇಲಾ ಪತ್ರಕರ್ತರ ಮೂಲಕ ಆಗಾಗ ತೇಲಿಬಿಡಿಸುತ್ತಿದ್ದರು. "ಯಾರೂ ಇಲ್ಲ, ಆದ್ದರಿಂದ ನೆಹರು ದೀರ್ಘಾಯುವಾಗಿ ದೇಶವನ್ನು ಆಳಬೇಕು" ಎಂದು ನೂರಾರು ಸಂಪಾದಕೀಯಗಳು ಹುಟ್ಟಿಕೊಳ್ಳುತ್ತಿದ್ದುವು. ನೆಹರೂರ ಜನಪ್ರಿಯತೆ ಮತ್ತೆ ಮತ್ತೆ ಉಕ್ಕುತ್ತಿತ್ತು. ಒಂದು ಎ.ಐ.ಸಿ.ಸಿ. ಸಮ್ಮೇಳನದಲ್ಲಿ ಮೈಸೂರಿನ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯನವರನ್ನು ಒಬ್ಬ ಪತ್ರಕರ್ತ Who after Nehru? ಎಂದು ಕೇಳಿದ. ಈ ಪ್ರಶ್ನೆ ಕೇಳುವುದು ಆಗಿನ ಪತ್ರಕರ್ತರಿಗೆ ಚಟವಾಗಿಬಿಟ್ಟಿತ್ತು. ಹನುಮಂತಯ್ಯನವರು "Why not Hanumanthaiyya?" ಎಂದುಬಿಟ್ಟರು. ಆ ದಿನದಿಂದ ಶನಿಯು

ಅವರ ಹೆಗಲೇರಿತು. ಸೂಕ್ಷ್ಮವನ್ನು ಅರ್ಥಮಾಡಿಕೊಳ್ಳುವುದರಲ್ಲಿ ನಿಪುಣರಾದ ರಾಜ್ಯದ ಕಾಂಗ್ರೆಸ್ ಎಂ.ಎಲ್.ಎ.ಗಳು ಅವರ ವಿರುದ್ಧ ತಿರುಗಿದರು. ಅವರ ಮುಖ್ಯಮಂತ್ರಿಗಿರಿ ಹೋಗಿಬಿಟ್ಟಿತು. ಅಮೆರಿಕದಲ್ಲಿ Who is the next President? ಎಂದು ಕೇಳಿದರೆ ಶಾಲಾ ಬಾಲಕರು Why not I? ಎಂದು ಉತ್ತರಿಸುತ್ತಾರೆಂದು ಹನುಮಂತಯ್ಯನವರು ವೃತ್ತಪತ್ರಿಕೆಗಳಲ್ಲಿ ಓದಿ ಸ್ಫೂರ್ತಿಗೊಂಡಿದ್ದಿರಬಹುದು. ಈ ಸ್ಫೂರ್ತಿಯ ಉತ್ಕರ್ಷದಲ್ಲಿ ಅವರು ಇದು ಭಾರತದಲ್ಲಿರುವ ಪ್ರಜಾಪ್ರಭುತ್ವ ಎಂಬುದನ್ನು ಮರೆತು Why not Hanumanthaiyya? ಎಂಬ ಅಕ್ಷಮ್ಯ ಹೇಳಿಕೆ ನೀಡಿ ತಕ್ಕ ಶಿಕ್ಷೆಗೆ ಒಳಗಾದರು.

1954ರಲ್ಲಿ ಆರಂಭವಾದ ಭಾರತರತ್ನ ಪ್ರಶಸ್ತಿಯನ್ನು ಮರು ವರ್ಷ ನೆಹರು ತಮಗೆ ತಾವೇ ಕೊಟ್ಟುಕೊಂಡರು. ಅನಂತರ ಪ್ರಧಾನಮಂತ್ರಿಯಾದ ಇಂದಿರಾಗಾಂಧಿಯೂ 1971ರಲ್ಲಿ ತಮಗೆ ತಾವೇ ಕೊಟ್ಟುಕೊಂಡರು. ಯಾರಿಗೂ ಪಟೇಲರ ನೆನಪು ಬರಲಿಲ್ಲ. ಒಂಭತ್ತನೆಯ ಪ್ರಧಾನಮಂತ್ರಿಯಾಗಿದ್ದ ಪಿ.ವಿ. ನರಸಿಂಹರಾಯರು ಪಟೇಲರು ಗತಿಸಿದ 41 ವರ್ಷಗಳ ನಂತರ, ಭಾರತರತ್ನ ಪ್ರಶಸ್ತಿಯನ್ನು ಆರಂಭಿಸಿದ 37 ವರ್ಷಗಳ ನಂತರ 1991ರಲ್ಲಿ ಪಟೇಲರಿಗೆ ಕೊಟ್ಟರು. ಆದರೆ ನರಸಿಂಹರಾಯರಿಗೆ ರಾಜಕೀಯ ಒತ್ತಡ ಎಷ್ಟಿತ್ತೆಂದರೆ ಪಟೇಲರ ಜೊತೆಯಲ್ಲಿ ಮರಣೋತ್ತರ ರಾಜೀವಗಾಂಧಿಗೂ ಕೊಡಬೇಕಾಯಿತು. ಜೊತೆಗೆ ಮೊರಾರ್ಜಿ ದೇಸಾಯರ ಹೆಸರನ್ನೂ ಸೇರಿಸಿದರು.

ಇಂಥ ನಾಗರಿಕ ಪ್ರಶಸ್ತಿಗಳಿಂದ ಒಬ್ಬ ವ್ಯಕ್ತಿಯ ಸಾಧನೆಗಳು ಇತಿಹಾಸದಲ್ಲಿ ನಿಲ್ಲುವುದಿಲ್ಲ. ಅನರ್ಹರಿಗೆ ಸಲ್ಲುವ, ಅರ್ಹರಿಗೆ ಸಲ್ಲದಿರುವ ಪ್ರಶಸ್ತಿಗಳನ್ನು ಇತಿಹಾಸವು ಪರಿಗಣಿಸುವುದಿಲ್ಲ ಎನ್ನುವುದು ನಿಜವಾದರೂ ಜಾಣರು ತಮ್ಮ ಹೆಸರನ್ನು ಶಾಶ್ವತ ಗೊಳಿಸುವಂತೆ ಇತಿಹಾಸವನ್ನೇ ಬರೆಯುತ್ತಾರೆ, ಬರೆಸುತ್ತಾರೆ. ದೇಶಕ್ಕೆ ಸ್ವಾತಂತ್ರ್ಯ ಬಂದ ತರುವಾಯದಲ್ಲೇ ನೆಹರೂ ಭಾರತದ ಸ್ವಾತಂತ್ರ್ಯ ಚಳವಳಿಯ ಇತಿಹಾಸವನ್ನು ಬರೆಸಲು ನಿಶ್ಚಯಿಸಿ ಪ್ರಸಿದ್ಧ ಇತಿಹಾಸಕಾರ ಆರ್.ಸಿ. ಮಜುಮ್‌ದಾರರನ್ನು ನೇಮಿಸಿದರು. ಸರ್ಕಾರದ ಕೆಲಸವಾದುದರಿಂದ ತಾವು ಬರೆಯುವ ಗ್ರಂಥದ ಪರಿಜನ್ನು ಒಪ್ಪಿಸುವಂತೆ ಅವರಿಗೆ ನೆಹರೂ ಸರ್ಕಾರ ಸೂಚಿಸಿತು. ಮಜುಮ್‌ದಾರರು ಒಪ್ಪಿಸಿದ ಪರಿಜು ನೆಹರೂ ಬಯಕೆಗೆ ಅನುಗುಣವಾಗಿರಲಿಲ್ಲ. ಭಾರತಕ್ಕೆ ಸ್ವಾತಂತ್ರ್ಯ ತಂದದ್ದು ಕಾಂಗ್ರೆಸ್ ಮಾತ್ರವೇ. ಕಾಂಗ್ರೆಸ್ಸಿನ ಪ್ರಧಾನ ಹಾಗೂ ಕೇಂದ್ರ ಶಕ್ತಿ ಮತ್ತು ತ್ಯಾಗವು ನೆಹರೂ ಕುಟುಂಬ ಎಂದು ಬಿಂಬಿಸಬೇಕೆಂಬುದು ನೆಹರೂರ ಬಯಕೆಯಾಗಿತ್ತು. ಮಜುಮ್‌ದಾರರ

ಪರಿಜು ಹಾಗಿರಲಿಲ್ಲ. ಅವರ ಪ್ರಕಾರ ಗಾಂಧೀಜಿಯ ಅಹಿಂಸಾತ್ಮಕ ಮಾರ್ಗವಲ್ಲದೆ ಚಳವಳಿಯ ಆರಂಭ ಕಾಲದಿಂದ ಕ್ರಿಯಾತ್ಮಕವಾಗಿದ್ದ ಕ್ರಾಂತಿಕಾರರ ಕೊಡಿಗೆ ಇಲ್ಲದಿದ್ದರೆ ಬ್ರಿಟಿಷರು ಕಾಲ್ತೆಗೆಯುತ್ತಿರಲಿಲ್ಲ ಎಂದಾಗಿತ್ತು. ಈ ಅಭಿಪ್ರಾಯಕ್ಕೆ ಕಣ್ಣು ಕುಕ್ಕುವಷ್ಟು ಘಟನೆಗಳಿದ್ದುವು. ನೇತಾಜಿಯ ಐ.ಎನ್.ಎ. ಸೈನ್ಯ, ಮುಂಬಯಿಯ ನೌಕಾಪಡೆಯ ಆಜ್ಞಾ ತಿರಸ್ಕಾರ ಮೊದಲಾದ ಸರಣಿಗಳಿದ್ದುವು. ಭಾರತಕ್ಕೆ ಸ್ವಾತಂತ್ರ್ಯ ಕೊಟ್ಟ ಕ್ಲೆಮೆಂಟ್ ಆಟ್ಲಿಯೇ ಆನಂತರ ಭಾರತಕ್ಕೆ ಭೇಟಿ ಕೊಟ್ಟಾಗ "ನೀವು ಸ್ವಾತಂತ್ರ್ಯ ಕೊಡಲು ಅಹಿಂಸಾ ಚಳವಳಿಯು ಎಷ್ಟರ ಮಟ್ಟಿಗೆ ಕಾರಣವಾಗಿತ್ತು?" ಎಂಬ ಪ್ರಶ್ನೆಗೆ minimal ಎಂದು ಉತ್ತರ ಕೊಟ್ಟದ್ದು ಮೊದಲಾದ ಕ್ರಾಂತಿಕಾರಿ ಕಾರಣಗಳ ಸರಣಿಯೇ ಇತ್ತು. ಆದರೆ ನೆಹರೂಗೆ ತಮ್ಮ ಮತ್ತು ತಮ್ಮ ಕುಟುಂಬದ ವಿಜೃಂಭಣೆಯ ಮೂಲ ಉದ್ದೇಶವಿತ್ತು. ಮಜುಮ್‌ದಾರರಿಗೆ ವಹಿಸಿದ್ದ ಕಾರ್ಯವನ್ನು ಅಲ್ಲಿಗೇ ನಿಲ್ಲಿಸಿ ತಮಗೆ ಬೇಕಾದಂತೆ ಬರೆಯಲು ಸಿದ್ಧರಿದ್ದ ತಾರಾಚಂದ್ ಎಂಬ ಇತಿಹಾಸಕಾರನಿಗೆ ವಹಿಸಿದರು. ತಾರಾಚಂದರು ಬರೆದು ಒಪ್ಪಿಸಿದ ಪುಸ್ತಕವೇ ಸರ್ಕಾರದ ಅಧಿಕೃತ ಸ್ವಾತಂತ್ರ್ಯ ಚಳವಳಿಯ ಇತಿಹಾಸವೆನ್ನಿಸಿ ದೇಶದ ಎಲ್ಲೆಲ್ಲಿಯೂ, ಗ್ರಂಥಾಲಯಗಳಲ್ಲಿಯೂ ವಿಶ್ವವಿದ್ಯಾಲಯಗಳ ಪಠ್ಯವಾಗಿಯೂ ಹಬ್ಬಿಕೊಂಡಿತು.

ಶ್ರೀ ಮನ್ನಾರ್ ಕೃಷ್ಣ ರಾವ್ ಅವರು ಈ ಕೃತಿಯನ್ನು ಬರೆಯಲು ತಮಗಿದ್ದ ಉದ್ದೇಶವನ್ನು ತಮ್ಮ 'ನಿವೇದನೆ'ಯಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ತಮ್ಮ ಆಕರಗಳನ್ನೂ ತಿಳಿಸಿದ್ದಾರೆ. ಪಟೇಲರ ಜೀವನವನ್ನು ಈ ಪುಸ್ತಕದಷ್ಟು ವಿವರವಾಗಿ ನಿಷ್ಪಕ್ಷವಾಗಿ ಕನ್ನಡದಲ್ಲಿ ಬೇರೆ ಯಾರೂ ಬರೆದಿಲ್ಲ. ಅವರ ಜೀವನದ ಎಲ್ಲ ಮುಖಗಳನ್ನು ಇವರು ಸಾಕಷ್ಟು ವಿವರವಾಗಿ ಬರೆದಿದ್ದಾರೆ. ಇದರ ಓದುಗರಿಗೆ ಸ್ವಾತಂತ್ರ್ಯ ಚಳವಳಿಯ ಒಂದು ಮುಖ್ಯ ಹಾಗೂ ಒಳನೋಟವು ದೊರೆಯುತ್ತದೆ. ಇದನ್ನು ಪ್ರತಿಯೊಬ್ಬ ಕನ್ನಡಿಗರೂ ಓದಿ ಪ್ರಯೋಜನ ಪಡೆಯುತ್ತಾರೆಂದು ನಂಬಿದ್ದೇನೆ.

ಮೈಸೂರು
8, ಜುಲೈ, 2018

ಡಾ॥ ಎಸ್. ಎಲ್. ಭೈರಪ್ಪ
ಖ್ಯಾತ ಕಾದಂಬರಿಕಾರರು.

ನಲ್‌ನುಡಿ

ಸನ್ಮಾನ್ಯ ಮಿತ್ರರಾದ ಶ್ರೀ ಮನ್ನಾರ್ ಕೃಷ್ಣ ರಾಯರು ಅನುಭವ, ವಯಸ್ಸು, ಸಾಧನೆಗಳಲ್ಲಿ ನನಗಿಂತ ದೊಡ್ಡವರು. ಈಗಾಗಲೇ ಸುಮಾರು ಇಪ್ಪತ್ತೇಳು ಕೃತಿಗಳು ಅವರ ಲೇಖನಿಯಿಂದ ಹೊರಬಂದಿವೆ.

ಸರ್ವಶ್ರೀ ಜಿ.ಡಿ. ಬಿರ್ಲಾ, ಜೆ.ಎನ್. ಟಾಟಾ, ಜೆ.ಆರ್.ಡಿ. ಟಾಟಾ ಎಂಬ ದೇಶಸೇವಕರನ್ನು ಕುರಿತು ಬೃಹತ್ ಮತ್ತು ಮಹತ್‌ಗಳ ಸಂಗಮವಾದ ಕೃತಿಗಳನ್ನು ರಚಿಸಿ, ಜೀವನ ಚಿತ್ರಣದ ಪ್ರಕಾರದಲ್ಲಿ ಎತ್ತರದ ಸ್ಥಾನ – ಮಾನಗಳನ್ನು ಗಳಿಸಿಕೊಂಡಿದ್ದಾರೆ. ಪ್ರಸ್ತುತ ಕೃತಿ 'ಸರ್ದಾರ ವಲ್ಲಭಭಾಯ್ ಪಟೇಲ್' ಮನ್ನಾರ್‌ರ ಕೃತಿ ಶ್ರೇಣಿಯಲ್ಲೇ, ಗಾತ್ರದಿಂದ, ಗುಣದಿಂದ, ಸಮಗ್ರತೆಯಿಂದ ಹಿರಿಯ ಸ್ಥಾನದಲ್ಲಿ ನಿಲ್ಲತಕ್ಕದ್ದು.

ಭಾರತ ಎನ್ನುವ ಈ ದುರದೃಷ್ಟದ ನಾಡು, ತಾನು ಯಾರ ಮೇಲೂ ಕೈ ಎತ್ತದಿದ್ದರೂ, ಯಾರ ನಾಡನ್ನು ಆಕ್ರಮಿಸಲು ಬಯಸದಿದ್ದರೂ, ಪದೇ ಪದೇ ಪರರ ದಾಳಿಗೆ ಒಳಗಾಗಿ, ತನ್ನೆಲ್ಲಾ ಲೌಕಿಕ ಐಶ್ವರ್ಯವನ್ನು, ಮಾನ – ಪ್ರಾಣಗಳನ್ನು ಕಳೆದುಕೊಂಡೂ, ದೋಚಲಾಗದ ಪಾರಲೌಕಿಕ ಚಿಂತನ ಸಂಪತ್ತನ್ನು, ಅಮೂಲ್ಯ ಸಾಂಸ್ಕೃತಿಕ ಸಂಪತ್ತನ್ನು ಉಳಿಸಿಕೊಳ್ಳಲು ಯತ್ನಿಸುತ್ತಲೇ ಇದೆ.

ಬೇರೆ ಬೇರೆಯವರು ಬಂದರು, ದೋಚಿಕೊಂಡು ಹೋದರು. ಆದರೆ ಇಸ್ಲಾಂ ಮತ್ತು ಕ್ರೈಸ್ತ ಮತದವರು ಇಲ್ಲೇ ತಳವೂರಿ, ಮತಾಂತರ ಮಂತ್ರ ಹಾಗೂ ಆಮಿಷ ತಂತ್ರದಿಂದ ನಮ್ಮನ್ನು ಬಲಹೀನರನ್ನಾಗಿಸಲು ಯತ್ನಿಸುತ್ತಿರುವ ಈ ದಿನಗಳಲ್ಲಿ ಸರ್ದಾರ್ ಅಂತಹ ಉಕ್ಕಿನ ಮನುಷ್ಯನ ನೆನಪು ನಮ್ಮ ನರಗಳಿಗೆ ಹೊಸ ಚೇತನವನ್ನು ನೀಡುವಂತದ್ದು.

ಆದರೆ ಬದಲಾದ ಕಾಲಮಾನದಲ್ಲಿ, ಬದಲಾದ ಆಶೋತ್ತರಗಳ ಸನ್ನಿವೇಶದಲ್ಲಿ

ನಮ್ಮ ಯುವ ಪೀಳಿಗೆಯ ಸರ್ವಕಾಲವೂ "ಗಳಿಕೆ"ಯಲ್ಲೇ ಕೇಂದ್ರಿತವಾಗಿರುವಾಗ ಇಂತಹ ಗ್ರಂಥಗಳನ್ನು ಓದುವ, ಗತಕಾಲದ ವಿಚಾರಗಳನ್ನು ಮೆಲುಕು ಹಾಕುವ ವ್ಯವಧಾನ ಅವರಿಗೆ ಇದೆಯೆ ಎಂಬುದು ನನ್ನೊಳಗಿನ ಸಂದೇಹ.

ಭಾರತ ತನ್ನ ಸ್ವಾತಂತ್ರಕ್ಕಾಗಿ 1770ರ ಅಂದರೆ ವಾರನ್ ಹೇಸ್ಟಿಂಗ್ ಕಾಲದಿಂದಲೇ ಯತ್ನಿಸಿದೆ. ಆಗ ಬಂಗಾಲದಲ್ಲಿ ಸನ್ಯಾಸಿ ದಂಗೆ ಆಮೇಲೆ 1857ರ ಸಿಪಾಯಿ ದಂಗೆ, ನಂತರದ ಕಾಲದಲ್ಲಿ ಬಿಡಿ ಬಿಡಿಯಾಗಿ ನಡೆದ ಭಗತ್ ಸಿಂಗ್, ರಾಜಗುರು, ಸುಭಾಷ್ ಚಂದ್ರ ಬೋಸ್ ಮುಂತಾದ ಧೀರ ಜೀವಗಳು ನಡೆಸಿದ ಬಿಡುಗಡೆಯ ಪ್ರಯತ್ನಗಳನ್ನೆಲ್ಲಾ ಕೂಲಂಕುಷವಾಗಿ ಪರಿಶೀಲಿಸಿ, ಸೂರ್ಯ ಮುಳುಗದ ಮಹಾ ಸಾಮ್ರಾಜ್ಯದ ಸಿಡಿಮದ್ದು ತುಪಾಕಿಗಳನ್ನು ನಮ್ಮ ದೊಣ್ಣೆ, ಮಚ್ಚು, ಕೊಡಲಿ, ಕತ್ತಿ ಗುರಾಣಿಗಳು ಎದುರಿಸಲಾರವು, ಕೇವಲ ವೀರಾವೇಷದಿಂದ ಪ್ರಯೋಜನವಾಗದು ಎಂಬುದನ್ನು ಮನಗಂಡು, ಶಸ್ತ್ರ ಎತ್ತದೆ, ಅಸ್ತ್ರ ಬಳಸದೆ, ಹಿಂಸೆಗೆ ದಾರಿ ಮಾಡದೆ, ನಮ್ಮ ಪುರಾತನ ಮೌಲ್ಯಗಳಾದ ಸತ್ಯ, ಅಹಿಂಸೆ, ಶ್ರದ್ಧೆಗಳ ದಾರಿಯಲ್ಲೇ ನಾವು ನಡೆದು, 'ಅಸಹಕಾರ'ವೆಂಬ ಅಸ್ತ್ರದಿಂದ ಶತ್ರುವನ್ನು ಹಣ್ಣು ಮಾಡಿ, ಅವನೇ ಅನ್ಯ ಮಾರ್ಗವಿಲ್ಲದೆ ದೇಶ ಬಿಡುವಂತೆ ಮಾಡಬಹುದೆಂಬ ಯೋಚನೆ ಹೊಳೆದದ್ದು ಒಬ್ಬ ಫಕೀರನಿಗೆ. ಆತನ ಹೆಸರು ಗಾಂಧಿ. ಈ ಹೆಸರಿನವರು ಈಗ ಬಹಳ, ಮಹಾತ್ಮನೆಂದೆನಿಸಿದವ ಒಬ್ಬನೇ.

ನೂರಾರು ವರುಷಗಳ ಪಾರತಂತ್ರಕ್ಕೆ ಒಗ್ಗಿ ಹೋಗಿ, ಬಗ್ಗಿ ಹೋಗಿದ್ದ ಮೂವತ್ತ ಮೂರು ಕೋಟಿ ನೆರಳುಗಳಿಗೆ ಆತ್ಮಗೌರವ, ಧೀಶಕ್ತಿಗಳನ್ನು ಪ್ರಚೋದಿಸಿ, ಸಮಸ್ತ ಸಮುದಾಯವನ್ನು ತ್ಯಾಗ – ಬಲಿದಾನದ ಹಾದಿಯಲ್ಲಿ ನಡೆಸಿ, ಗುರಿ ಮುಟ್ಟಿಸಿದ ಶ್ರೀಚೇತನ ಪ್ರಯೋಗಿಸಿದ ಅಸ್ತ್ರ ಒಂದೇ 'ಅಹಿಂಸೆ', ಶಸ್ತ್ರ ಒಂದೇ 'ಸತ್ಯಾಗ್ರಹ'. ಆ ಶ್ರೀಚೇತನದ ಸೂಚನೆಗೆ ದೇಶಕ್ಕೆ ದೇಶವೇ ಸೈನಿಕ ಶಿಸ್ತಿನಿಂದ ನಿಲ್ಲುತ್ತಿತ್ತು, ನಡೆಯುತ್ತಿತ್ತು. ಹಿಂದೆಂದೂ ಲೋಕ ಕಾಣದ, ಕನವರಿಸದ ಅಂತಹ ಮಹಾತ್ಮನ ಬಲ ಕೈ ಸರ್ದಾರ್ ವಲ್ಲಭಭಾಯ್ ಪಟೇಲ್. ಸರ್ದಾರ್ ಅವರ ಜನನದಿಂದ – ನಿರ್ವಾಣದ ತನಕದ ಕಾಲಮಾನದಲ್ಲಿ, ವ್ಯಕ್ತಿಯಾಗಿ ಬೆಳೆದು, ಶಕ್ತಿಯಾಗಿ ವಿಕಾಸ ಹೊಂದಿದ, ದೇಶಭಕ್ತಿಯ ಪ್ರತೀಕವಾದ ಆ ವಿರಾಟ್ ಚೈತನ್ಯದ ನಾನಾ ರೀತಿಯ ಹೋರಾಟ, ಸಮಾಜಮುಖಿಯಾದ ಅದರ ಕ್ರಿಯಾಶೀಲತೆ, ಪ್ರತಿ ಹಂತದಲ್ಲೂ ಆ ವ್ಯಕ್ತಿ ಶಕ್ತಿ ಪ್ರದರ್ಶಿಸಿದ ವಿವೇಕ, ಎದುರಾದ ಪ್ರತಿ ಸಮಸ್ಯೆಗೂ ತೋರಿದ ಧೈರ್ಯ, ಸಮಸ್ಯೆಗಳ ಪರಿಹಾರಕ್ಕೆ ಬಳಸಿದ ಚಾತುರ್ಯ, ಸ್ವಾತಂತ್ರ್ಯ ಪಡೆದ ನಂತರ ಉದ್ಭವಿಸಿದ ಘನ ಘೋರ ದೇಶ ವಿಭಜನೆ, ಹರಿದ ಮುಗ್ಧರ ರಕ್ತದ

ಕಾಲುವೆ, ತೊಡೆ ತಟ್ಟಿ ನಿಂತ ಐನೂರಕ್ಕೂ ಹೆಚ್ಚಿನ ದೇಶೀ ರಾಜರ ಪ್ರತಾಪಗಳ ನಡುವೆ, ಕುಸಿಯುತ್ತಿದ್ದ ಆರೋಗ್ಯವನ್ನು ಲೆಕ್ಕಿಸದೆ, ಸಮ ಚಿತ್ತದಿಂದ, ದೈವದತ್ತ ಪ್ರತಿಭೆಯಿಂದ, ಹರಿದು ಹಂಚಿ ಹೋಗಿದ್ದ ಬ್ರಿಟಿಷರ ನರಿಬುದ್ಧಿಯ ಕುಹಕಕ್ಕೆ ಬೆದರದೆ, ಭಾರತವೆಂಬ ಪುರಾತನ ಪ್ರದೇಶವನ್ನು ಒಗ್ಗೂಡಿಸಿದ ಘಟನೆಗಳನ್ನು ಮನೋಜ್ಞ ಭಾಷೆಯಲ್ಲಿ, ಏಳನೂರು ಪುಟಗಳ ವ್ಯಾಪ್ತಿಯಲ್ಲಿ ವಿವರಿಸುತ್ತಾ, ಸರ್ದಾರ್ ಪಟೇಲ್ ಎಂಬ ನವಭಾರತ ಶಿಲ್ಪಿಯ ಮಹೋನ್ನತ ವ್ಯಕ್ತಿತ್ವವನ್ನು ನಮ್ಮ ಮನೋನೇತ್ರಗಳ ಮುಂದೆ ಕಡೆದು ನಿಲ್ಲಿಸುತ್ತದೆ ಈ ಕೃತಿ.

ಸ್ವಾತಂತ್ರ್ಯ ಹೋರಾಟಗಾರರ ಬದುಕಿನ ಚಿತ್ರವೆಂದರೆ ಸತ್ಯಾಗ್ರಹಗಳ ಸರಮಾಲೆ. ವೈಯುಕ್ತಿಕವೆನ್ನುವುದೊಂದು ಚುಕ್ಕೆಯಷ್ಟು. ಸದಾ ದೇಶ ಕ್ಷೇಮದ ಚಿಂತನೆ. ದೇಶವೆಂದರೆ ಇಂದಿನವರು ಹಂಬಲಿಸುವ ಬೆಟ್ಟಗುಡ್ಡಗಳಲ್ಲ. ದೇಶವೆಂದರೆ ಅದರ ಉಸಿರಾದ ಜನ. ಅವರ ಬುದ್ಧಿಯ ಹಾಗೂ ಬಾಳ್ವೆಯ ಬಡತನವನ್ನು ಹೋಗಲಾಡಿಸಿ, ಬದುಕಿಗೆ ಸಂತಸವನ್ನು ಸಿಂಪಡಿಸುವ ಪ್ರಯತ್ನ. ಈ ಕೃತಿಯಲ್ಲೂ ಹತ್ತಾರು ಸತ್ಯಾಗ್ರಹಗಳ, ನೂರಾರು ಸಮಸ್ಯೆಗಳ ಚಿತ್ರಣವಿದೆ. ಆದರೆ ನನಗೆ ಮುಖ್ಯವೆನಿಸಿದ್ದು, ಬಾರ್ಡೋಲಿ ಎಂಬ ಸ್ಥಳದಲ್ಲಿ ಸುಮಾರು 87,000 ರೈತಾಪಿ ಜನ ಸುಮಾರು ಒಂದು ವರುಷ ಕಾಲ ನಡೆಸಿದ ಕಂದಾಯ ನಿರಾಕರಣೆಯ ಹೋರಾಟ. ಬರಗಾಲದ ಸತತ ಹೊಡೆತದಿಂದ ನಿರ್ಗತಿಕರಾಗಿದ್ದ ರೈತರಿಗೆ 3% ಇದ್ದ ಕಂದಾಯವನ್ನು 30%ಕ್ಕೆ ಏರಿಸಿ, ಸರ್ಕಾರ ನಿಗದಿ ಪಡಿಸಿದ ಕಾಲದೊಳಗೆ ಕೊಡಬೇಕೆಂದು, ಇಲ್ಲದಿದ್ದರೆ ಚರ ಮತ್ತು ಸ್ಥಿರ ಆಸ್ತಿಗಳನ್ನು ಜಪ್ತಿ ಮಾಡಿ ಹರಾಜು ಹಾಕಲಾಗುತ್ತದೆ ಎಂದು ಸರ್ಕಾರ ತಿಳಿಸಿದಾಗ, ಜನತೆ ವಲ್ಲಭಭಾಯ್‌ರವರ ನೆರವು ಬೇಡುತ್ತದೆ. ಕಡೆಯತನಕ ಶಿಸ್ತು ಸಡಿಲಿಸದೆ ಅಹಿಂಸಾ ಮಾರ್ಗದಲ್ಲೇ ಪ್ರತಿಭಟನೆ ನಡೆಸುವ ಆಶ್ವಾಸನೆ ದೊರೆತ ಹಿನ್ನಲೆಯಲ್ಲಿ ಗಾಂಧೀಜಿಯವರ ಸಹಮತದ ಬೆಂಬಲದಲ್ಲಿ ಪಟೇಲರು ನಾಯಕತ್ವ ವಹಿಸಿಕೊಂಡು ಜಯಶೀಲರಾದ ಸಂಗತಿ – ಪುಸ್ತಕದಲ್ಲಿ ಬಹು ವಿವರವಾಗಿಯೇ ಇದೆ. ಯಾರೋ ಅನಾಮಿಕ ರೈತ ಪಟೇಲರನ್ನು ನಮ್ಮ ಸರ್ದಾರರು ಎಂದು ಕರೆದ. ಆ ಗುಣವಾಚಕ ಅವರ ಹೆಸರಿನ ಶಾಶ್ವತ ಭಾಗವಾಯಿತು. "ಗಾಂಧೀಜಿಯ ತತ್ವಗಳನ್ನು ಕಾರ್ಯಸಾಧ್ಯ, ಚೈತನ್ಯಶೀಲಕ್ರಿಯೆಯನ್ನಾಗಿ ಪಟೇಲರು ಪರಿವರ್ತಿಸಿದ್ದಾರೆ. ವಿಸ್ಮಯಕಾರಿ ಸಂಘಟನಾ ಶಕ್ತಿಯನ್ನು ತೋರಿದ್ದಾರೆ" ಎಂಬ ಸರೋಜಿನಿ ನಾಯ್ಡು ಅವರ ಮಾತು "ಉಜ್ವಲ ವಿಜಯ", "ಅಸಮಾನ ದಂಡನಾಯಕ" ಎಂಬ ಮೋತಿಲಾಲರ ಉದ್ಗಾರ ಬಾರ್ಡೋಲಿಯ ಹೋರಾಟದ ಮಹತ್ವವನ್ನು ಎತ್ತಿಹಿಡಿಯುತ್ತವೆ. ಶ್ರೀಮಾನ್ ಕೆ.ಎಂ. ಮುನ್ಷಿಯವರು ಬಾಂಬೆ ಗೌರ್ನರ್‌ಗೆ ಬರೆದ ಪತ್ರದಲ್ಲಿ ಚಳವಳಿ

ನಿರತ ಜನರ ದುಸ್ಥಿತಿಯನ್ನು ವಿವರಿಸಿದ್ದಾರೆ.

ಇದೊಂದು ಭಾವನಾತ್ಮಕ ಸನ್ನಿವೇಶ. ಸಮುದಾಯದಲ್ಲಿ ನೈತಿಕ ಶಕ್ತಿಯ ಉನ್ಮೀಲನ ಪವಾಡ, ತಮ್ಮ ಅಸಹ್ಯವೂ ದಾರುಣವೂ ಆದ ಸ್ಥಿತಿಗತಿಗಳನ್ನು ಮೆಟ್ಟಿ ನಾಯಕನಲ್ಲಿನ ಶ್ರದ್ಧೆ ಕುಂದದಂತೆ ತಮ್ಮನ್ನು ತಾವು ಕಾಪಿಟ್ಟುಕೊಂಡ ಹಳ್ಳಿಗಾಡಿನ ಅವಿದ್ಯಾವಂತ ಸಮುದಾಯದ ಅಚಲ ನಿಷ್ಠೆಯ ಅಮೋಘ ಪ್ರದರ್ಶನ.

ಲೇಖಕರು ಸರ್ದಾರರ ಯುಕ್ತಿ – ಶಕ್ತಿಗಳ ಬಗ್ಗೆ ಹೆಚ್ಚಿನ ಗಮನ ಹರಿಸಿದ್ದಾರೆ. ಸಾಮಾನ್ಯರಲ್ಲಿ ಉಂಟಾದ ಮಹಾ ಪರಿವರ್ತನೆಯ ಬಗ್ಗೆ ಸೂಚಿಸಿದ್ದಾರೆ.

ಕವಿ ಮನದ ಭವ್ಯ ಕಲ್ಪನಾ ಶಕ್ತಿಗೆ ಇಲ್ಲೊಂದು ಮಹಾ ಕಾದಂಬರಿಯ ವಸ್ತು ಕಾದು ಕುಳಿತಿದೆ. (ಗುಜರಾತಿನಲ್ಲಿ ಈಗಾಗಲೇ ಕೃತಿ ರಚನೆಯಾಗಿರಬಹುದು.) ನಮ್ಮೆಲ್ಲಾ ರೈತ ಚಳವಳಿಯ ನಾಯಕರು ಈ ಭಾಗವನ್ನು ಓದಿ ಮನನ ಮಾಡಿಕೊಂಡರೆ ಉತ್ತಮ ಮಾರ್ಪಾಡಿಗೆ ಬಾಗಿಲು ತೆರೆಯುತ್ತದೆ.

ಪಟೇಲರ ಕೀರ್ತಿ, ಅವರು ಬಿಡಿ ಬಿಡಿ ಭಾಗಗಳಂತೆ ಆಗಿದ್ದ ದೇಶವನ್ನು ಮತ್ತೆ ಭಾರತವನ್ನಾಗಿ ಪುನರ್ ಸೃಷ್ಟಿಸಿದ ಚಾತುರ್ಯಕ್ಕೆ ಮೀಸಲಾದುದು. ಬ್ರಿಟಿಷರು ಹೊರಟಾಗ ದೇಶವನ್ನು ಇಬ್ಭಾಗಗೊಳಿಸಿದ್ದಲ್ಲದೆ, ದೇಶೀಯ ರಾಜರಿಗೆ ಅವರವರ ರಾಜ್ಯವನ್ನು ಹಿಂದಿರುಗಿಸಿ, ಅವರನ್ನು ತಮ್ಮ ಮುಷ್ಟಿಯಿಂದ ಬಿಡುಗಡೆ ಗೊಳಿಸಿ, ದೇಶವನ್ನು ಐನೂರಕ್ಕೂ ಹೆಚ್ಚಿನ ಸಂಸ್ಥಾನಗಳನ್ನಾಗಿಸಿ ಬಿಟ್ಟಿದ್ದರು. ಈ ರಾಜರಲ್ಲಿ ಬೆರಳೆಣಿಕೆಯಷ್ಟು ಮಂದಿ ಪ್ರಜಾವತ್ಸಲರೂ, ಸಂಸ್ಕೃತಿ ಪ್ರಿಯರೂ, ಪ್ರಗತಿಶೀಲರೂ ಆಗಿದ್ದರು. ಉಳಿದವರಲ್ಲಿ ಬಹಳ ಜನ ಡಂಭಾಚಾರಿಗಳು, ತಿಕ್ಕಲುಗಳು, ಪಾಶ್ಚಾತ್ಯ ಅನುಕರಣಾ ಶೀಲರು, ಮಹಾಸ್ವಾರ್ಥಿಗಳು ಮತ್ತು ಕುಡುಕರು. ಇವರನ್ನು ಒಟ್ಟುಗೂಡಿಸಿ, ಒಕ್ಕೂಟ ವ್ಯವಸ್ಥೆಗೆ ತರುವ ಕೆಲಸ ಕಪ್ಪೆಗಳನ್ನು ತಕ್ಕಡಿಯಲ್ಲಿ ತೂಗಿದಂತೆಯೇ. ಇಂತಹ ಅಸಾಧ್ಯ ಕಾರ್ಯವನ್ನು ಸಾಂಗಗೊಳಿಸಿ ನವಭಾರತ ನಿರ್ಮಾತೃವೆಂದೆನಿಸಿದರು, ಸರ್ದಾರ್ ಪಟೇಲರು.

ಈ ಕೃತಿಯ 27.2 ಮತ್ತು 27.3ನೆ ಉಪ ಅಧ್ಯಾಯಗಳು ಸರ್ದಾರರ ಇನ್ನೊಂದು ಮುಖವನ್ನು ಚಿತ್ರಿಸಿ, ಅವರನ್ನು ನಮಗೆ ಮತ್ತಷ್ಟು ಹತ್ತಿರವಾಗಿಸುತ್ತವೆ.

ಸತ್ಯಾಗ್ರಹಗಳ ವಸ್ತುನಿಷ್ಠ ವರದಿ ಹಾಗೂ ಅವುಗಳ ಪ್ರಭಾವದ ಬಗ್ಗೆ ಇರುವ ಈ ಬರವಣಿಗೆಯಲ್ಲಿ ಎಲ್ಲೂ ಲೇಖಕರ ಹಾರಿಕೆಯ ಮಾತಿಲ್ಲ. ಪ್ರತಿ ಮಾತಿಗೂ ಖಚಿತ ಆಧಾರ ಇದ್ದೇ ಇದೆ. ಇದೊಂದು ವಸ್ತುನಿಷ್ಠ ಬರವಣಿಗೆಯ ಉತ್ತಮ ಮಾದರಿ.

ಶ್ರೀ ಮನ್ನಾರ್‌ರ ಇಡೀ ಕುಟುಂಬ ಗ್ರಂಥ ರಚನಾ ಸಂಭ್ರಮದಲ್ಲಿ ಭಾಗವಹಿಸುತ್ತದೆ. ಮನ್ನಾರ್ ದೇಶ ಕಟ್ಟಿದ ಮಹನೀಯರಿಗೆ ಮನಸ್ಸು ಅರ್ಪಿಸಿಬಿಟ್ಟಿದ್ದಾರೆ. ಬರವಣಿಗೆ ವ್ರತವಾಗಿದೆ. ಸೊಸೆಯಂದಿರು, ಮೊಮ್ಮಕ್ಕಳು ಬರಹವನ್ನು ಡಿ.ಟಿ.ಪಿ. ಮಾಡುತ್ತಾರೆ. ಮಕ್ಕಳು ಮುದ್ರಣ ವೆಚ್ಚ ಹಾಗೂ ಸಮಾರಂಭಕ್ಕೆ ಹೆಗಲು ಕೊಡುತ್ತಾರೆ. ಬಂಧುಗಳು ಮಿತ್ರರು ಬಿಡುಗಡೆಯನ್ನು ಹಬ್ಬವಾಗಿಸುತ್ತಾರೆ. ಸಹಧರ್ಮಚಾರಿಣಿ ರಾಯರ ಮನ ಮಂಟಪದಲ್ಲಿ ವಿರಾಜಮಾನರಾಗಿ, ರಾಯರು ಸದಾ ಹರ್ಷಚಿತ್ತರು, ಕಾರ್ಯಶೀಲರೂ ಆಗಿರುವಂತೆ ಪ್ರಚೋದಿಸುತ್ತಾರೆ. ಇಂದಿನ ಒಂಟಿ ಕುಟುಂಬಗಳ ಜಾತ್ರೆಯಲ್ಲಿ ಮನ್ನಾರ್ ಕೂಡ ಕುಟುಂಬದ ತೇರು ಎಳೆಯುತ್ತಾರೆ.

ಮೈಸೂರು
5–4–2018

ಡಾ॥ ಡಿ.ಬಿ. ರಾಮಚಂದ್ರಾಚಾರ್
ನಿವೃತ್ತ ಪ್ರಾಂಶುಪಾಲರು ಮತ್ತು ಕನ್ನಡ ಪ್ರಾಧ್ಯಾಪಕರು
ಕಾವೇರಿ ಪ್ರಥಮ ದರ್ಜೆ ಮಹಿಳಾ ಕಾಲೇಜು
ವಿರಾಜಪೇಟೆ, ಕೊಡಗು ಜಿಲ್ಲೆ.

ಪರಿವಿಡಿ

ಅರ್ಪಣೆ ೫

ನೀ ಮತ್ತೊಮ್ಮೆ ಜನಿಸಿ ಬಾರಾ (ಕವನ) ೯

ನಿವೇದನೆ ೧೧

ಮುನ್ನುಡಿ ೧೭

ನಲ್‌ನುಡಿ ೩೨

ಭಾಗ ೧ – ಜನನ ಮತ್ತು ವಿಕಸನ

೦೧. ಬೆಳೆಯುವ ಪೈರು ಮೊಳಕೆಯಲ್ಲೆ ೩

೦೨. ಧನ ಸಂಪಾದನೆಯ ಹಾದಿಯಲ್ಲಿ ೧೪

೦೩. ಸಾರ್ವಜನಿಕ ರಂಗ ಪ್ರವೇಶ ೩೪

ಭಾಗ ೨ – ರೈತ ನಾಯಕ

೦೪. ಹೋರಾಟದ ಬದುಕಿನ ಆರಂಭ ೫೫

೦೫. ನಾಗಪುರದ ಧ್ವಜ ಸತ್ಯಾಗ್ರಹ ೧೧೭

೦೬. ದೆಹಲಿ ಕಾಂಗ್ರೆಸ್ ಅಧಿವೇಶನ ೧೨೭

೦೭. ಬೋರ್ಸದ್ ದೊರೆ ೧೩೦

೦೮. ಅಹಮದಾಬಾದ್ ಪುರಸಭೆಯ ಅಧ್ಯಕ್ಷ ೧೩೮
೦೯. ಮಹಾ ಹೋರಾಟ – ಬಾರ್ಡೋಲಿಯ ಸತ್ಯಾಗ್ರಹ ೧೪೯

ಭಾಗ ೩ – ರಾಷ್ಟ್ರನಾಯಕ

೧೦. ರಾಷ್ಟ್ರ ರಂಗಕ್ಕೆ ಜಿಗಿತ ೧೮೧
೧೧. ಸೆರೆಮನೆಗಳ ಆತಿಥ್ಯ ೧೯೩
೧೨. ಪ್ರಜಾಪ್ರಭುತ್ವ ರಂಗದಲ್ಲಿ ಕಾಯಕ ೨೫೨
೧೩. ಸ್ವಾತಂತ್ರ್ಯಕ್ಕಾಗಿ ಮತ್ತೆ ಹೋರಾಟ ೩೦೭
೧೪. ಸ್ವಾತಂತ್ರ್ಯಕ್ಕೆ ಕ್ಷಣಗಣನೆ ೩೬೯
೧೫. ನೆಹರು ಜೊತೆ ಸಿಹಿ ಕಹಿ ಸಂಬಂಧ ೪೫೬
೧೬. ಅಪಘಾತಗಳ ಸುಳಿಯಲ್ಲಿ ೫೦೫
೧೭. ಮಹಾನ್ ಆಡಳಿತಗಾರ ೫೧೩

ಭಾಗ ೪ – ಒಕ್ಕೂಟ ನಿರ್ಮಾಪಕ

೧೮. ಭಾರತ ಒಕ್ಕೂಟದ ಅಸ್ತಿಭಾರ ೫೨೭
೧೯. ತಕರಾರು ತೆಗೆದ ರಾಜ್ಯಗಳು ೫೪೪
೨೦. ಸುಭದ್ರ ಭಾರತ ಸೌಧದ ನಿರ್ಮಾಣ ೫೬೮
೨೧. ಜಮ್ಮು ಮತ್ತು ಕಾಶ್ಮೀರ ಸೇರ್ಪಡೆ ೬೨೧
೨೨. ಸಂವಿಧಾನ ರಚನೆಯಲ್ಲಿ ಸರ್ದಾರರ ಪಾತ್ರ ೬೪೪
೨೩. ಪ್ರಥಮ ರಾಷ್ಟ್ರಾಧ್ಯಕ್ಷರ ಆಯ್ಕೆ ೬೫೫

ಭಾಗ ೫ – ಸಾರ್ಥಕ ಜೀವನ

೨೪. ನೆಹರು ಬೆಂಬಲಕ್ಕೆ ಧಾವಿಸಿದ ಪಟೇಲ್ ೬೬೧

೨೫. ಟಿಬೆಟ್ ಮತ್ತು ಚೀನಾ ಪ್ರಸಂಗ ೬೬೭
೨೬. ಎಡ ಮತ್ತು ಬಲ ಪಂಥದೊಡನೆ ಸಂಬಂಧ ೬೭೫
೨೭. ವಿವಿಧ ಸಂದರ್ಭಗಳಲ್ಲಿ ಸರ್ದಾರರು ೬೯೨
೨೮. ಜೀವನ ಸಂಧ್ಯಾ ೭೨೨
೨೯. ಗೌರವಾರ್ಪಣೆ ಮತ್ತು ಸ್ಮಾರಕ ೭೩೨
೩೦. ಪರಿಸಮಾಪ್ತಿ ೭೪೧

ಅನುಬಂಧ

ಲೇಖಕನ ಅನಿಸಿಕೆ ೭೪೩
ಅಭಿಪ್ರಾಯಗಳು ೭೫೦
ಆಧಾರ ಕೃತಿಗಳು ೭೬೪
ಆಧಾರ ಸೂಚಿಗಳು ೭೬೫
ಮ.ಸು. ಮನ್ನಾರ್ ಕೃಷ್ಣ ರಾವ್‌ರವರ ಇತರ ಕೃತಿಗಳು ೭೯೫



ಭಾಗ – ಒಂದು

ಜನನ ಮತ್ತು ವಿಕಸನ

೦೧. ಬೆಳೆಯುವ ಪೈರು ಮೊಳಕೆಯಲ್ಲೆ

೧.೧ ಭೂಮಿಕೆ

ಭಾರತದ ಬಿಸ್ಮಾರ್ಕ, ಉಕ್ಕಿನ ಮನುಷ್ಯ, ಭಾರತ ಒಕ್ಕೂಟ ನಿರ್ಮಾಪಕ ಮತ್ತು ಸರ್ದಾರ ಎಂಬ ಬಿರುದುಗಳನ್ನು ಜನರಿಂದ ಪಡೆದಿದ್ದ ಭಾರತದ ತ್ರಿಮೂರ್ತಿಗಳ ಪೈಕಿ ಒಬ್ಬರಾಗಿದ್ದ (ಇನ್ನಿಬ್ಬರು ಗಾಂಧೀಜಿ ಮತ್ತು ನೆಹರು) ಮತ್ತು ಈಗಲೂ ಗೌರವದಿಂದ ನೆನೆಯಲ್ಪಡುತ್ತಿರುವ ಮಹಾ ಜನನಾಯಕ ಸರ್ದಾರ್ ಪಟೇಲರ ಪೂರ್ಣ ಹೆಸರು ವಲ್ಲಭಭಾಯ್ ಜವೇರ್‌ಭಾಯ್ ಪಟೇಲ್. ಅವರ ತಂದೆ ಜವೇರ್‌ಭಾಯ್ ಪಟೇಲ್ ಒಬ್ಬ ರೈತ, ತಾಯಿ ಲಾಡ್‌ಬಾಯ್ ಒಬ್ಬ ಸರಳ ಸಜ್ಜನಿಕೆಯ ಗೃಹಿಣಿ. ಅವರ ವಾಸಸ್ಥಳ ಈಗಿನ ಗುಜರಾತ್ ಪ್ರಾಂತ್ಯದ ಕೈಡಾ (ಖೇಡ ಎಂದೂ ಕರೆಯುತ್ತಾರೆ) ಜಿಲ್ಲೆಯ ಕರಮ್‌ಸದ್ ಎಂಬ ಹಳ್ಳಿ. ಆದರೆ ವಲ್ಲಭಭಾಯ್ ಪಟೇಲ್ ಜನಿಸಿದ್ದು, ಹಿಂದೂಗಳ ಪದ್ಧತಿಯಂತೆ, ಕರಮ್‌ಸದ್ ಸಮೀಪದ ನಡಿಯಾದ್ ಪಟ್ಟಣದಲ್ಲಿದ್ದ ಸೋದರಮಾವ (ತಾಯಿ ಲಾಡ್‌ಬಾಯ್ ರವರ ಅಣ್ಣ) ದೂಂಗರ್‌ಭಾಯ್ ದೇಸಾಯಿಯ ಮನೆಯಲ್ಲಿ. ಅವರ ಜನ್ಮ ದಿನಾಂಕ ಖಚಿತವಾಗಿ ತಿಳಿದಿಲ್ಲ. ಅವರು ಮೆಟ್ರಿಕ್ಯುಲೇಷನ್ ಪರೀಕ್ಷೆಯ ಸಮಯದಲ್ಲಿ ಜನ್ಮ ದಿನಾಂಕವನ್ನು ಕೊಡಬೇಕಾದಾಗ, ಖಚಿತವಾದ ದಿನಾಂಕ ಗೊತ್ತಿಲ್ಲದೆ ಇದ್ದುದರಿಂದ, ಅವರ ಮನಸ್ಸಿಗೆ ಹೊಳೆದ ಒಂದು ದಿನಾಂಕವನ್ನು ನೀಡಿದರು. ಅದೇ ಅಕ್ಟೋಬರ್ ೩೧, ೧೮೭೫. ಆ ದಿನಾಂಕವನ್ನೇ ಮುಂದೆ ಎಲ್ಲರೂ ಬಳಸಿದ್ದಾರೆ. ಆದರೆ ಆ ಕಾಲದಲ್ಲಿ ಲಭ್ಯವಿದ್ದ ಒಂದು ದಾಖಲೆಯ ಪ್ರಕಾರ ಅವರ ಜನ್ಮ ದಿನಾಂಕ ೩೦.೦೪.೧೮೭೬ ಅಥವಾ ೦೭.೦೫.೧೮೭೬ ಎಂದು ಕಂಡುಬರುತ್ತದೆ.[೧]

ಸರ್ದಾರರದು ಪಾಟಿದಾರರ ಕುಟುಂಬ. ಪಾಟಿದಾರ ಎಂದರೆ 'ಪಟ್ಟಿ' ಅಥವಾ ಭೂಮಿಯ ಮಾಲೀಕ. ಈ ಪಾಟಿದಾರರು ಮೂಲತಃ ಪಂಜಾಬ್ ಪ್ರಾಂತ್ಯದವರು. ದಕ್ಷಿಣ ಪಂಜಾಬ್‌ನ ಒಂದು ಜಿಲ್ಲೆಯಲ್ಲಿ ಗುಜ್ಜಾರರು ಎಂಬ ಸಮರೋತ್ಸಾಹಿ ಜನಾಂಗದವರಿದ್ದರು. ಅವರು ಕ್ರಿ.ಶ. ೧೧ನೆ ಶತಮಾನದಲ್ಲಿ ದಕ್ಷಿಣಕ್ಕೆ ವಲಸೆ ಬಂದು ಈಗಿನ ಗುಜರಾತ್ ರಾಜ್ಯದ ಸಬರಮತಿ ಮತ್ತು ಮಾಹಿ ನದಿಗಳ ನಡುವಣ ಪ್ರದೇಶದಲ್ಲಿ ನೆಲೆಸಿದರು. ಅಲ್ಲಿ ತಮ್ಮ ಸಮರೋತ್ಸಾಹವನ್ನು ತ್ಯಜಿಸಿ, ಸ್ಥಳೀಯ ರಾಜರಿಂದ ಭೂಮಿಯನ್ನು ಪಡೆದು, ವ್ಯವಸಾಯದಲ್ಲಿ ತೊಡಗಿ ಶಾಂತಿಯುತ ಜೀವನವನ್ನು ಅಳವಡಿಸಿಕೊಂಡರು. ಆದರೂ ಅವರ ಪೂರ್ವ ಗುಣಗಳಾದ ಧೈರ್ಯ, ಕೆಚ್ಚು, ದೃಢ ಮನಸ್ಸು, ಹೋರಾಟ ಮನೋಭಾವ, ಸಿಟ್ಟಿನ ಸ್ವಭಾವ ಮುಂತಾದವು ಅವರಿಂದ ಸಂಪೂರ್ಣ ದೂರವಾಗಲಿಲ್ಲ. ಆದರೆ ಅವು ಉದ್ಯಮ ಶೀಲತೆಯಾಗಿ ಮಾರ್ಪಾಟಾದುವು.

ಕಾಲ ಕ್ರಮೇಣ ಪಾಟಿದಾರರಲ್ಲಿ ಕೆಲವರು ವ್ಯಾಪಾರದಲ್ಲಿ ತೊಡಗಿದರು. ಅದರಿಂದ ಅವರಲ್ಲಿ ಲೇವಾ ಪಾಟಿದಾರರು ಮತ್ತು ಕುದ್ವ ಪಾಟಿದಾರರು ಎಂದು ಎರಡು ಪಂಗಡಗಳು ಉದ್ಭವಿಸಿದುವು. ವ್ಯವಸಾಯದಲ್ಲಿ ನಿರತರಾದವರು ಲೇವಾ ಪಾಟಿದಾರರು. ವ್ಯಾಪಾರದಲ್ಲಿ ನಿರತರಾದವರು ಕುದ್ವ ಪಾಟಿದಾರರು.

ಮುಂದೆ ಪಾಟಿದಾರರಲ್ಲಿ ಇತರ ಗುಣಗಳೂ ಅರಳಿದುವು. ಕೆಲವರು ರಾಜತಾಂತ್ರಿಕ ನೈಪುಣ್ಯತೆಯನ್ನು ಬೆಳೆಸಿಕೊಂಡರು. ಅವರು ಸ್ಥಳೀಯ ರಾಜರುಗಳ ನಡುವೆ ಸಂಧಾನ ಮುಂತಾದ ಕಾರ್ಯಗಳಲ್ಲಿ ತೊಡಗಿದರು. ಕೆಲವು ಸಾಹಸಿಗಳು ಭಾರತದ ಇತರ ಸ್ಥಳಗಳಿಗೆ ಹಾಗೂ ಪೂರ್ವ ಆಫ್ರಿಕಕ್ಕೆ ಪ್ರಯಾಣಿಸಿ, ಅಲ್ಲಿ ವ್ಯಾಪಾರದಲ್ಲಿ ತೊಡಗಿ ಬಹಳ ಸಂಪತ್ತನ್ನು ಗಳಿಸಿದರು ಮತ್ತು ತಮ್ಮವರಿಗೆ ಹಣ ಕಳುಹಿಸಿದರು. ಒಟ್ಟಿನಲ್ಲಿ ಪಾಟಿದಾರರು ತಾವು ಪ್ರವೇಶಿಸಿದ ಕ್ಷೇತ್ರದಲ್ಲಿ ಸಾಹಸ, ದುಡಿಮೆ ಮತ್ತು ಬುದ್ಧಿವಂತಿಕೆಯಿಂದ ಮುಂದೆ ಬರುವ ಸ್ವಭಾವದವರು.[೨]

ವಲ್ಲಭಭಾಯ್ ಪಟೇಲರ ವಂಶಸ್ಥರು ಲೇವಾ ಪಾಟಿದಾರರು. ಸಹಜವಾಗಿಯೆ ವಲ್ಲಭಭಾಯ್ ಪಟೇಲರಲ್ಲಿ ಪಾಟಿದಾರರ ಎಲ್ಲಾ ಉತ್ತಮ ಗುಣಗಳು ಮನೆಮಾಡಿದ್ದುವು.

೧.೨ ತಂದೆ ಮತ್ತು ತಾಯಿ

ವಲ್ಲಭಭಾಯ್ ಪಟೇಲರ ತಂದೆ ಜವೇರ್‌ಭಾಯ್ ಪಟೇಲ್ ೧೦ ಎಕರೆ ಒಡೆತನದ ಸಾಮಾನ್ಯ ರೈತ, ಶ್ರಮಜೀವಿ, ನೇರ ವ್ಯವಹಾರಸ್ಥ, ಧೈರ್ಯಶಾಲಿ,

ಸಾಹಸಿ ಮತ್ತು ಧರ್ಮಭೀರು. ಅವರು ೧೮೫೭ರಲ್ಲಿ ತಮ್ಮ ಇಪ್ಪತ್ತರ ಪ್ರಾಯದಲ್ಲಿ ಝಾನ್ಸಿಯ ರಾಣಿ ಲಕ್ಷ್ಮೀಬಾಯಿಯ ಪರವಾಗಿ ಬ್ರಿಟಿಷರ ವಿರುದ್ಧ ಯುದ್ಧ ಮಾಡಲು ಗುಜರಾತಿನಿಂದ ಮಧ್ಯ ಭಾರತಕ್ಕೆ ಪ್ರಯಾಣ ಮಾಡಿದವರು. ಆ ಸಮಯದಲ್ಲಿ ಅವರು ಇಂದೋರ್‌ನ ರಾಜ ಮಲ್ಹಾರ್‌ರಾವ್ ಹೋಳ್ಕರ್‌ಗೆ ಸೆರೆ ಸಿಕ್ಕಿದರು. ಹೋಳ್ಕರ್‌ಗೆ ಚದುರಂಗದ ಆಟದಲ್ಲಿ ಬಹಳ ಆಸಕ್ತಿ. ಜವೇರ್‌ಭಾಯ್‌ಗೂ ಆ ಆಟದಲ್ಲಿ ಆಸಕ್ತಿ ಎಂಬ ವಿಷಯ ಹೋಳ್ಕರ್‌ಗೆ ತಿಳಿದದ್ದರಿಂದ ಅವರು ತಾವು ಆಟ ಆಡುವಾಗ ಜವೇರ್‌ಭಾಯ್ ತಮ್ಮ ಬಳಿ ಇರಲು ಅವಕಾಶ ಕೊಟ್ಟರು. ಕ್ರಮೇಣ ಹೋಳ್ಕರ್ ತಪ್ಪು ನಡೆ ನಡೆಸಿದಾಗ ಜವೇರ್‌ಭಾಯ್ ಅದನ್ನು ಸರಿಪಡಿಸಿ ಅವರು ಗೆಲ್ಲಲು ಅನುವು ಮಾಡಲಾರಂಭಿಸಿದರು. ಅದರಿಂದ ಸಂತೋಷಗೊಂಡ ಹೋಳ್ಕರ್ ಅವರನ್ನು ಸೆರೆಯಿಂದ ಬಿಡುಗಡೆ ಮಾಡಿದರು ಮತ್ತು ತಮ್ಮಲ್ಲೇ ಇರಲು ಆಹ್ವಾನಿಸಿದರು. ಆದರೆ ಜವೇರ್‌ಭಾಯ್ ಅಲ್ಲೇ ಇರಲು ಇಷ್ಟಪಡದೆ ಕರಮ್‌ಸದ್‌ಗೆ ಹಿಂತಿರುಗಿದರು.[೩]

ವಾಪಸ್ಸು ಬಂದ ಮೇಲೆ ಅವರು ಸ್ವಾಮಿ ನಾರಾಯಣ ಪಂಥದ ಅನುಯಾಯಿಯಾದರು. ಆ ಪಂಥವನ್ನು ಗುಜರಾತಿನಲ್ಲಿ ಸ್ವಾಮಿ ಸಹಜಾನಂದರು ಆರಂಭಿಸಿ ಭಕ್ತಿ ಮಾರ್ಗವನ್ನು ಪ್ರಚಾರ ಮಾಡಿದ್ದರು. ವ್ಯಕ್ತಿಯು ತನ್ನ ಕರ್ತವ್ಯವನ್ನು ಯಾವ ಫಲಾಪೇಕ್ಷೆಯು ಇಲ್ಲದೆ ನೆರವೇರಿಸಬೇಕು. ಶುದ್ಧ ಆಲೋಚನೆಗಳಿಂದ ಕೂಡಿದ ಸರಳ ಜೀವನವನ್ನು ನಡೆಸಬೇಕು – ಎನ್ನುವುದು ಸ್ವಾಮಿ ಸಹಜಾನಂದರ ಬೋಧನೆಯಾಗಿತ್ತು. ೧೮೫೭ರ ಸಮರದ ವೈಫಲ್ಯತೆಯಿಂದ ನೊಂದಿದ್ದ ಜವೇರ್‌ಭಾಯ್ ಮನಸ್ಸಿಗೆ ಸ್ವಾಮಿ ಸಹಜಾನಂದರ ಬೋಧನೆ ಸಮಾಧಾನವನ್ನು ತಂದಿತು. ಅವರು ಆ ಪಂಥದ ಮಾರ್ಗದಲ್ಲಿ ನಡೆದು ಹೆಚ್ಚು ಕಾಲವನ್ನು ಸ್ವಾಮಿ ನಾರಾಯಣ ದೇವಾಲಯದಲ್ಲಿ ಕಳೆಯಲು ಆರಂಭಿಸಿದರು. ಅದರಿಂದ ಹಳ್ಳಿಯವರ ಗೌರವಕ್ಕೆ ಪಾತ್ರರಾದರು. ಎಲ್ಲರೂ ಅವರನ್ನು 'ಮೋಟಾ ಕಾಕಾ' (ದೊಡ್ಡಪ್ಪ) ಎಂದು ಕರೆಯುತ್ತಿದ್ದರು ಮತ್ತು ತಮ್ಮ ಸಮಸ್ಯೆಗಳ ಮತ್ತು ವಿವಾದಗಳ ಪರಿಹಾರಕ್ಕೆ ಅವರ ಬಳಿಗೆ ಹೋಗುತ್ತಿದ್ದರು.[೪]

ವಲ್ಲಭಭಾಯ್ ಪಟೇಲರ ತಾಯಿ ಲಾಡ್‌ಬಾಯ್ ತಮ್ಮ ಪತಿಗಿಂತ ೧೮ ವರ್ಷ ಚಿಕ್ಕವರು. ಅವರು ನಡಿಯಾದ್‌ನ ಒಂದು ಅನುಕೂಲಸ್ಥ ಕುಟುಂಬದಿಂದ ಬಂದವರು. ಅವರು ಬಹಳ ಮುಗ್ಧೆ ಮತ್ತು ದೈವಭಕ್ತೆ. ಅವರದು ದೊಡ್ಡ ಕುಟುಂಬವಾದರೂ ತಮ್ಮ ಜಮೀನಿನಿಂದ ಬರುವ ಆದಾಯ ಅಲ್ಪವಾದರೂ ಅಷ್ಟರಿಂದಲೇ ಸಂಸಾರವನ್ನು ಅಚ್ಚುಕಟ್ಟಾಗಿ ನಡೆಸುತ್ತಿದ್ದರು ಮತ್ತು ಅತಿಥಿಗಳನ್ನು ಪ್ರೀತಿಯಿಂದ ಸತ್ಕರಿಸುತ್ತಿದ್ದರು.

ಜವೇರ್‌ಭಾಯ್ ದಂಪತಿಗಳಿಗೆ ಆರು ಜನ ಮಕ್ಕಳು: ಅವರು ಸೋಮಭಾಯ್, ನರಸೀಭಾಯ್, ವಿಠ್ಠಲ್‌ಭಾಯ್, ವಲ್ಲಭಭಾಯ್ ಮತ್ತು ಕಾಶಿಭಾಯ್. ಕೊನೆಯ ಸಂತಾನ ಮಗಳು. ಅವಳ ಹೆಸರು ದಹಿ/ ದಹಿಬಾ.

ಬಾಲಕ ವಲ್ಲಭಭಾಯ್ ಅವರಿಗೆ ದೇಶಭಕ್ತಿ, ಧೈರ್ಯ, ಮುಂದಾಳತ್ವ ಇತ್ಯಾದಿ ಗುಣಗಳು ತಂದೆಯಿಂದ ಬಂದುವು. ದೈವಭಕ್ತಿ, ಸೇವಾ ಮನೋಭಾವ, ಶುಚಿತ್ವ, ಕ್ರಮಬದ್ಧತೆಯ ಗುಣಗಳು ತಾಯಿಯಿಂದ ಬಂದುವು.

ತಾಯಿ ಲಾಡ್‌ಬಾಯ್ ಮಕ್ಕಳಿಗೆ ರಾಮಾಯಣ, ಮಹಾಭಾರತ ಮತ್ತು ಇತರ ಪುರಾಣಗಳ ಕಥೆಗಳನ್ನು ಹೇಳುತ್ತಿದ್ದರು. ಅದರಿಂದ ವಲ್ಲಭಭಾಯ್ ಪಟೇಲರಲ್ಲಿ ನ್ಯಾಯ ಅನ್ಯಾಯದ ಅರಿವುಂಟಾಯಿತು. ಅವರಲ್ಲಿ ಅನ್ಯಾಯದ ವಿರುದ್ಧ ಹೋರಾಡುವ ಮನೋಭಾವ ಬಾಲ್ಯದಿಂದಲೇ ಬೆಳೆಯಿತು.[೫]

೧.೩ ಬಾಲ್ಯ ಮತ್ತು ವಿದ್ಯಾಭ್ಯಾಸ

ವಲ್ಲಭಭಾಯ್‌ರವರ ಬಾಲ್ಯ ಕರಮ್‌ಸದ್‌ನಲ್ಲಿ ಕಳೆಯಿತು. ಅವರು ಆರು ಮಕ್ಕಳಲ್ಲಿ ನಾಲ್ಕನೆಯವನಾಗಿ ಮಧ್ಯಮನಾದದ್ದು ಪ್ರತಿಕೂಲತೆಯನ್ನುಂಟುಮಾಡಿತ್ತು. ಬಟ್ಟೆ ಅಥವಾ ಸಿಹಿ ತಿಂಡಿಗಳನ್ನು ಹಂಚುವಾಗ ಕೊನೆಯಲ್ಲಿ ನೆನಪಿಗೆ ಬರುತ್ತಿದ್ದ, ಆದರೆ ಏನಾದರು ಕೆಲಸ ಆಗಬೇಕಾದಾಗ ಮೊದಲು ನೆನಪಿಗೆ ಬರುತ್ತಿದ್ದ. ತಂದೆ ಮತ್ತು ತಾಯಿಯ ಆಸೆ, ಆಕಾಂಕ್ಷೆ ಮತ್ತು ಭರವಸೆ ಮೊದಲ ಇಬ್ಬರು ಮಕ್ಕಳು ಸೋಮ ಮತ್ತು ನಾರ್ಸಿಯ ಮೇಲೆ ಕೇಂದ್ರೀಕೃತವಾಗಿರುತ್ತಿತ್ತು. ಅವರ ಪ್ರೀತಿ ಕೊನೆಯ ಇಬ್ಬರು ಮಕ್ಕಳು ಕಾಶಿ ಮತ್ತು ದಹಿ ಮೇಲೆ ಹರಿಯುತ್ತಿತ್ತು. ಮಧ್ಯದ ವಲ್ಲಭ ಎರಡರಿಂದಲೂ ವಂಚಿತನಾಗುತ್ತಿದ್ದ. ಆದಾಗ್ಯೂ ತಾಯಿ ಎಲ್ಲರ ಮೇಲೂ ಗಮನ ಹರಿಸುತ್ತಿದ್ದರು.[೬] ಈ ಬಗೆಗೆ ವಲ್ಲಭಭಾಯ್ ಹೀಗೆ ಹೇಳಿದ್ದಾರೆ:

> "ಮಗುವಾಗಿ ಅತ್ಯಂತ ಹಿರಿಯ ಅಥವಾ ಅತ್ಯಂತ ಕಿರಿಯ ಆಗಿದ್ದರೆ ಅನುಕೂಲ. ಅತ್ಯಂತ ಹಿರಿಯನಾಗಿದ್ದರೆ ತಂದೆ ತಾಯಿಯ ಆಸೆ ಆಕಾಂಕ್ಷೆಗಳ ಕೇಂದ್ರವಾಗುತ್ತಾನೆ. ಅತ್ಯಂತ ಕಿರಿಯನಾದರೆ ಅವರ ಪ್ರೀತಿಯ ವಸ್ತುವಾಗುತ್ತಾನೆ. ಕಿರಿಯ ಸಹೋದರರು ಮತ್ತು ಸಹೋದರಿಯರಿಗೆ ಆದೇಶ ನೀಡುವುದು ಅತ್ಯಂತ ಹಿರಿಯನ ಸವಲತ್ತು. ಅತ್ಯಂತ ಕಿರಿಯನು ತನ್ನ ಮೇಲಿನ ಎಲ್ಲರ ಆಜ್ಞೆಗಳನ್ನು ಪಾಲಿಸುವ ಹೊಣೆಯನ್ನು ಹೊರಬೇಕು, ಆದರೆ ಅದೇ ಸಮಯದಲ್ಲಿ, ಒಟ್ಟು ಗೂಡಿದ ಆಶೀರ್ವಾದಗಳು ಮತ್ತು

ಪ್ರೀತಿಯನ್ನು, ದುರಾದೃಷ್ಟವಂತನಲ್ಲದಿದ್ದರೆ, ಪಡೆಯುತ್ತಾನೆ. ಈ ಎರಡು ಎಲ್ಲೆಗಳ ನಡುವೆ ಹುಟ್ಟಿದ ನಾನು ಸಹಜವಾಗಿಯೆ ಒಬ್ಬ ಮಧ್ಯಮನಿಗಿರುವ ಮಾಮೂಲಿ ಸ್ವಾತಂತ್ರ್ಯ, ಕ್ರಿಯಾರಂಭ ಶಕ್ತಿ ಮತ್ತು ಕೌಶಲ್ಯವನ್ನು ಹೊಂದಿದ್ದೆ."[೭]

ತಂದೆ ಹೆಚ್ಚು ಕಾಲವನ್ನು ದೇವಾಲಯದಲ್ಲೇ ಕಳೆಯುತ್ತಿದ್ದುದರಿಂದ ಮತ್ತು ತಾಯಿಯು ಆರು ಮಕ್ಕಳ ಭಾರಿ ಸಂಸಾರವನ್ನು ತೂಗಿಸಬೇಕಾಗಿದ್ದುದರಿಂದ, ವಲ್ಲಭನು ತನ್ನ ಯೋಗಕ್ಷೇಮವನ್ನು ತಾನೇ ನೋಡಿಕೊಳ್ಳಬೇಕಾಗಿತ್ತು.

ಬಾಲಕ ವಲ್ಲಭಭಾಯ್ ಮೇಲೆ ಅವನ ಮೂವರು ಅಣ್ಣಂದಿರು ಅಧಿಕಾರ ಚಲಾಯಿಸಲು ಪ್ರಯತ್ನಿಸುತ್ತಿದ್ದರು. ವಲ್ಲಭ ಈ ದಬ್ಬಾಳಿಕೆಯನ್ನು ವಿರೋಧಿಸುತ್ತಿದ್ದನು ಮತ್ತು ತನ್ನ ಸ್ವಾತಂತ್ರ್ಯ ರಕ್ಷಣೆಗಾಗಿ ಅವರ ಮೇಲೆ ತಿರುಗಿಬೀಳುತ್ತಿದ್ದನು. ಅವರು ಅವನನ್ನು 'ಹುಚ್ಚು ಗೂಳಿ' ಎಂದು ಕರೆಯುತ್ತಿದ್ದರು. ವಲ್ಲಭ ತನಗೆ ಇಷ್ಟ ಬಂದ ಹಾಗೆ ಮಾಡುವ ತನ್ನ ಹಕ್ಕನ್ನು ಪ್ರತಿಪಾದಿಸುತ್ತಿದ್ದನು. ಅವನ ಸ್ವತಂತ್ರ ಮನೋಭಾವ ಮತ್ತು ಆಕ್ರಮಣ ಸ್ವಭಾವ ಬೆಳೆಯಿತು ಮತ್ತು ಜೀವನ ಪೂರ್ತ ಉಳಿಯಿತು.[೮]

ಬಾಲಕ ವಲ್ಲಭನ ವಿದ್ಯಾಭ್ಯಾಸ ಅವನ ಹಳ್ಳಿ ಕರಮ್‌ಸದ್‌ನಲ್ಲಿ ಆರಂಭವಾಯಿತು. ಕರಮ್‌ಸದ್‌ನ ಶಾಲೆಯ ಮುಖ್ಯೋಪಾಧ್ಯಾಯ ಕಹನ್‌ದಾಸ್ ಪಟೇಲ್ ರವರು ಒಳ್ಳೆಯ ಹೆಸರನ್ನು ಗಳಿಸಿದ್ದರು. ಅವರು ಬಹಳ ಮೃದು ಆದರೆ ಅಷ್ಟೇ ಶಿಸ್ತಿನ ವ್ಯಕ್ತಿ. ಬಾಲಕ ವಲ್ಲಭ ಅವರ ಶಾಲೆಯನ್ನು ತನ್ನ ೭ ಅಥವಾ ೮ನೇ ವಯಸ್ಸಿನಲ್ಲಿ ಸೇರಿದನು. ಅಲ್ಲಿ ಗುಜರಾತಿ ಭಾಷೆ ಮತ್ತು ಗಣಿತವನ್ನು ಕಲಿಸಲಾಗುತ್ತಿತ್ತು. ಅವನಿಗೆ ಓದಿನಲ್ಲಿ ಆಸಕ್ತಿ ಇರಲಿಲ್ಲ, ಶಾಲಾ ಶಿಸ್ತಿನ ಪಾಲನೆಯಲ್ಲೂ ಆಸಕ್ತಿ ಇರಲಿಲ್ಲ. ಅವನು ಉಪಾಧ್ಯಾಯರಿಗೆ ತಲೆನೋವಾಗಿದ್ದನು. ಆದರೂ ೧೩ನೆ ವಯಸ್ಸಿನಲ್ಲಿ ಅಂತಿಮ ಪರೀಕ್ಷೆಯಲ್ಲಿ ಸಲೀಸಾಗಿ ತೇರ್ಗಡೆ ಹೊಂದಿದನು. ಅಷ್ಟು ಹೊತ್ತಿಗೆ ಇಂಗ್ಲಿಷ್ ಭಾಷೆಯನ್ನು ಕಲಿಸುವ ಆಂಗ್ಲೊ – ವರ್ನಾಕ್ಯುಲರ್ ಶಾಲೆ ಕರಮ್‌ಸದ್‌ನಲ್ಲಿ ಆರಂಭವಾಯಿತು. ವಲ್ಲಭ ಅದನ್ನು ಸೇರಿದನು.

ವಿದ್ಯಾಭ್ಯಾಸದ ಜೊತೆಗೆ ಅವನು ತಂದೆಗೆ ವ್ಯವಸಾಯದಲ್ಲಿ ಮತ್ತು ದನ ಸಾಕುವುದರಲ್ಲಿ ಸಹಾಯ ಮಾಡುತ್ತಿದ್ದ. ಜಮೀನಿನಲ್ಲಿ ಆಳವಾಗಿ, ನೇರವಾಗಿ ಉಳುತ್ತಿದ್ದ. ತಂದೆಗೆ ಬಹು ಉಪಯುಕ್ತನಾಗಿದ್ದ. ಜಮೀನಿನಲ್ಲಿ ಉಳುವಾಗ ಆಗಾಗ್ಗೆ ತಂದೆ ಜವೇರ್‌ಭಾಯ್‌ರವರು ಮಗ ವಲ್ಲಭನಿಗೆ ಇಂಗ್ಲೀಷರನ್ನು ಆಚೆಗೆ ಅಟ್ಟುವ ತಮ್ಮ ಹಳೆಯ ಬಯಕೆ, ಅದಕ್ಕಾಗಿ ತಾವು ೧೮೫೭ರಲ್ಲಿ ಝಾನ್ಸಿಗೆ ಹೋದದ್ದು, ಆದರೆ ಅದು ರಾಜರುಗಳ ಅನೈಕ್ಯಮತ್ಯ ಮತ್ತು ದೌಲತ್ತಿನ ಫಲವಾಗಿ ಹಾಗೂ

ಜನರ ಅಜ್ಞಾನ ಮತ್ತು ನಿರಾಸಕ್ತಿಯ ಫಲವಾಗಿ ವಿಫಲವಾದದ್ದು ಮುಂತಾದ ವಿಷಯಗಳನ್ನು ಹೇಳುತ್ತಿದ್ದರು.[೯]

ವಲ್ಲಭಭಾಯ್‌ಗೆ ೧೬ನೆ ವಯಸ್ಸಿನಲ್ಲಿ ಮದುವೆಯಾಯಿತು. ಕನ್ಯೆ ಕರಮ್‌ಸದ್‌ಗೆ ಮೂರು ಮೈಲಿ ದೂರದಲ್ಲಿದ್ದ ಗಾಣ ಹಳ್ಳಿಯ ದೇಸಾಯ್‌ಭಾಯ್ ಪಂಜಾಬ್‌ಭಾಯ್ ಪಟೇಲ್ ಎನ್ನುವವರ ಮಗಳು ಜವೇರ್‌ಬಾ. ಮದುವೆಯಾದಾಗ ಅವಳ ವಯಸ್ಸು ೧೨ ಅಥವಾ ೧೩ ವರ್ಷ. ಅವಳು ತೆಳು ಶರೀರದ ಸುಂದರ ಹುಡುಗಿ. ಮದುವೆಯ ನಂತರ ಅವಳು ಗಾಣದಲ್ಲಿ ತನ್ನ ತಂದೆಯ ಮನೆಯಲ್ಲೆ ಉಳಿದಳು. ವಲ್ಲಭ ತನ್ನ ವಿದ್ಯಾಭ್ಯಾಸವನ್ನು ಮುಂದುವರೆಸಿದನು.

ಕರಮ್‌ಸದ್‌ನ ಶಾಲೆಯಲ್ಲಿ ವಲ್ಲಭಭಾಯ್ ಒಮ್ಮೆ ಉಪಾಧ್ಯಾಯರನ್ನು ಒಂದು ಪ್ರಶ್ನೆ ಕೇಳಿದನು. ಉಪಾಧ್ಯಾಯರು ಆ ಪ್ರಶ್ನೆಗೆ ಉತ್ತರ ಕೊಡುವುದಕ್ಕೆ ಬದಲಾಗಿ "ನನ್ನನ್ನೇಕೆ ಕೇಳುತ್ತೀಯ? ನೀನೇ ಓದಿ ಕಲಿತುಕೊ" ಎಂದರು. ಆ ಅನುಭವದ ನಂತರ ವಲ್ಲಭ 'ಸ್ವತಃ ತಾನೇ ಓದಿ ಕಲಿಯಬೇಕೆಂದು' ತೀರ್ಮಾನಿಸಿದನು.[೧೦]

ಕರಮ್‌ಸದ್‌ನ ಆಂಗ್ಲೊ – ವರ್ನಾಕ್ಯುಲರ್ ಶಾಲೆ ಇಂಗ್ಲಿಷ್ ಭಾಷೆಯಲ್ಲಿ ೩ನೆ ತರಗತಿಯವರೆಗೆ ಮಾತ್ರ ಕಲಿಸುತ್ತಿತ್ತು. ಅಲ್ಲಿ ಓದು ಮುಗಿದ ಮೇಲೆ ವಲ್ಲಭನು ಇನ್ನೂ ಹೆಚ್ಚು ಇಂಗ್ಲಿಷ್ ಭಾಷೆ ಕಲಿಯಲು ಬಯಸಿದನು. ಅದಕ್ಕಾಗಿ ಅವನು ಕರಮ್‌ಸದ್‌ನಿಂದ ೭ ಮೈಲಿ ದೂರದಲ್ಲಿರುವ ಮತ್ತು ಬರೋಡ ಪ್ರಾಂತ್ಯಕ್ಕೆ ಸೇರಿದ ಪೆಟ್‌ಲಾದ್ ಪಟ್ಟಣಕ್ಕೆ ಹೋಗಬೇಕಾಗಿತ್ತು. ಅಲ್ಲಿ ಇಂಗ್ಲಿಷ್ ಭಾಷೆಯನ್ನು ೫ನೆ ಸ್ಟಾಂಡರ್ಡ್‌ವರೆಗೆ ಕಲಿಸುವ ಶಾಲೆಯಿತ್ತು. ಪೆಟ್‌ಲಾದ್‌ನಲ್ಲಿ ವ್ಯಾಸಂಗ ಮಾಡಲು ಬೇಕಾಗುವಷ್ಟು ಹಣ ವಲ್ಲಭನಲ್ಲಿ ಇರಲಿಲ್ಲ. ಆದರೆ ಅವನದು ಪಾಟಿದಾರರ ದೃಢ ಚಿತ್ತ. ಅವನು ಕರಮ್‌ಸದ್‌ನ ಇನ್ನೂ ಆರು ವಿದ್ಯಾರ್ಥಿಗಳನ್ನು ಕಲೆಹಾಕಿ, ಪೆಟ್‌ಲಾದ್‌ಗೆ ನಡೆದು ಹೋಗಿ, ಅಲ್ಲಿಯ ಶಾಲೆಯನ್ನು ಸೇರಿದನು. ಅವರು ಒಂದು ಮನೆಯನ್ನು ಬಾಡಿಗೆಗೆ ಪಡೆದು ತಾವೇ ಅಡುಗೆ ಮಾಡಿಕೊಂಡು ವ್ಯಾಸಂಗ ಮಾಡಿದರು. ಪ್ರತಿ ವಾರಾಂತ್ಯದಲ್ಲಿ ಅವರು ಕರಮ್‌ಸದ್‌ಗೆ ನಡೆದು ಬಂದು ಮುಂದಿನ ವಾರಕ್ಕೆ ಬೇಕಾದ ಅಡುಗೆ ಪದಾರ್ಥಗಳನ್ನು ತೆಗೆದುಕೊಂಡು ಹೋಗುತ್ತಿದ್ದರು. ವಲ್ಲಭ ಆ ಹುಡುಗರಿಗೆ ನಾಯಕ. ಅವರು ಮನೆಯನ್ನು ಚೊಕ್ಕಟವಾಗಿ ಇಟ್ಟುಕೊಂಡಿದ್ದರು. ಗೋಡೆಯ ಮೇಲೆ 'ಒಗ್ಗಟ್ಟಿನಲ್ಲಿ ಬಲವಿದೆ' ಎಂಬ ಘೋಷಣೆಯನ್ನು ಬರೆದಿದ್ದರು.[೧೧]

ಒಂದು ವಾರಾಂತ್ಯ ಆ ಹುಡುಗರು ಕರಮ್‌ಸದ್‌ಗೆ ನಡೆದು ಬರುವಾಗ

ವಲ್ಲಭನು ಜೊತೆಯಲ್ಲಿ ಇಲ್ಲದಿರುವುದನ್ನು ಗಮನಿಸಿದ ಇತರರು ಹಿಂತಿರುಗಿ ನೋಡಿದರೆ ಕಿರುದಾರಿಗೆ ಅಡ್ಡಲಾಗಿದ್ದ ಒಂದು ದೊಡ್ಡ ಕಲ್ಲನ್ನು ಬಾಗಿ ಕೀಳುತ್ತಿದ್ದಾನೆ! ಬಾಲ್ಯದಿಂದಲೂ ವಲ್ಲಭ ಸಮಾಜಮುಖಿ.

೧.೪ ವಿದ್ಯಾರ್ಥಿ ನಾಯಕ

ಪೆಟ್‌ಲಾದ್‌ನಲ್ಲಿ ವ್ಯಾಸಂಗ ಮುಗಿದ ಮೇಲೆ ವಲ್ಲಭಭಾಯ್ ನಡಿಯಾದ್ ಪಟ್ಟಣದ ಪ್ರೌಢಶಾಲೆಯನ್ನು ಸೇರಿದ. ಅಲ್ಲಿ ಸೋದರ ಮಾವ (ತಾಯಿಯ ಅಣ್ಣ) ದೂಂಗರ್‌ಭಾಯ್ ಮನೆಯಲ್ಲಿ ವಾಸ ಮಾಡಿದ.

ಅನ್ಯಾಯದ ವಿರುದ್ಧ ತಿರುಗಿ ಬೀಳುವ ವಲ್ಲಭಭಾಯ್‌ನ ಗುಣ ನಡಿಯಾದ್‌ನ ಶಾಲೆಯ ವಿದ್ಯಾರ್ಥಿದೆಸೆಯಲ್ಲೆ ಪ್ರಕಟವಾಯಿತು.

ಒಂದು ದಿನ ಶ್ರೀ ಅಗರವಾಲ ಎಂಬ ಉಪಾಧ್ಯಾಯರು ಸಕಾಲಕ್ಕೆ ತರಗತಿಗೆ ಬರದೆ ಸಹೋದ್ಯೋಗಿಯೊಡನೆ ಹರಟೆ ಹೊಡೆಯುತ್ತಾ ನಿಂತಿದ್ದರು. ಆಗ ಒಬ್ಬ ವಿದ್ಯಾರ್ಥಿ ಹಾಡು ಹಾಡಲು ಆರಂಭಿಸಿದನು. ಇತರ ಅನೇಕ ವಿದ್ಯಾರ್ಥಿಗಳು ಅವನ ಜೊತೆಗೆ ಸೇರಿಕೊಂಡರು. ಶಬ್ದವನ್ನು ಕೇಳಿ ಶಿಕ್ಷಕ ಅಗರವಾಲರು ತರಗತಿಯ ಒಳಕ್ಕೆ ನುಗ್ಗಿ ಹಾಡುವವರ ನಾಯಕನನ್ನು ಬಯ್ಯಲು ಆರಂಭಿಸಿದರು. ಅವರ ಬಯ್ಗಳವನ್ನು ಸ್ವಲ್ಪ ಹೊತ್ತು ಕೇಳಿಸಿಕೊಂಡು ವಲ್ಲಭಭಾಯ್ ಎದ್ದು ನಿಂತು ಹೇಳಿದನು, "ನೀವೇಕೆ ಅವನನ್ನು ಬಯ್ಯುತ್ತಿದ್ದೀರಿ? ನೀವು ಸಮಯಕ್ಕೆ ಸರಿಯಾಗಿ ಬರದೆ ಹೋದದ್ದರಿಂದ ನಾವು ಹಾಡಲು ತೊಡಗಿದೆವು. ನಾವು ಅಳಲು ತೊಡಗಿದ್ದರೆ ನೀವು ಇಷ್ಟ ಪಡುತ್ತಿದ್ದಿರ?" ಕೋಪಗೊಂಡ ಉಪಾಧ್ಯಾಯರು ಹೊರಗೆ ಹೋಗುವಂತೆ ವಲ್ಲಭನಿಗೆ ಆಜ್ಞಾಪಿಸಿದರು. ವಲ್ಲಭಭಾಯ್ ಒಮ್ಮೆ ತರಗತಿಯ ಕಡೆಗೆ ದೃಷ್ಟಿ ಬೀರಿ ಹೊರನಡೆದನು. ಎಲ್ಲಾ ವಿದ್ಯಾರ್ಥಿಗಳು ಅವನನ್ನು ಹಿಂಬಾಲಿಸಿದರು. ಅಗರವಾಲರು ವಲ್ಲಭನ ವಿರುದ್ಧ ಮುಖ್ಯೋಪಾಧ್ಯಾಯ ಶ್ರೀ ಬರೂಚರವರಿಗೆ ದೂರು ಸಲ್ಲಿಸಿದರು. ಮುಖ್ಯೋಪಾಧ್ಯಾಯರು ವಲ್ಲಭನನ್ನು ಕರೆಯಿಸಿ ಶ್ರೀ ಅಗರವಾಲರ ಕ್ಷಮೆ ಕೋರುವಂತೆ ಸೂಚಿಸಿದರು. ವಲ್ಲಭ ಉತ್ತರಿಸಿದನು, "ಸರ್, ನೀವು ಕ್ಷಮೆ ಕೋರುವಂತೆ ತಪ್ಪು ಮಾಡದವನಿಗೆ ಹೇಳುತ್ತಿದ್ದೀರಿ. ಸ್ವಲ್ಪ ಹೊತ್ತು ಕಾಯ್ದ ಮೇಲೆ ನಾವು ಮಾಡಿದ್ದೇನು? ನಾವೇನು ಗಲಭೆ ಮಾಡಿದ್ದೇವೆಯೆ? ನಾವು ಹಾಡಿದೆವು, ಅಷ್ಟೆ." ಮುಖ್ಯೋಪಾಧ್ಯಾಯರು ಸುಮ್ಮನಾದರು. ವಲ್ಲಭನ ಕ್ಷಮೆ ಇಲ್ಲದೆಯೇ ಅಗರವಾಲರು ತರಗತಿಯನ್ನು ತೆಗೆದುಕೊಳ್ಳಬೇಕಾಯಿತು.[೧೨]

ವಲ್ಲಭಭಾಯ್ ೬ನೆ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾಗ ಒಬ್ಬ ದರ್ಪದ

ಶಿಕ್ಷಕರಿದ್ದರು. ಅವರು, ಹಿಂದಿನ ದಿನ ತಾವು ವಿಧಿಸಿದ್ದ ದಂಡದ ಹಣವನ್ನು ತರಲಿಲ್ಲವೆಂದು ಒಬ್ಬ ವಿದ್ಯಾರ್ಥಿಯನ್ನು ತರಗತಿಯಿಂದ ಹೊರಗೆ ಅಟ್ಟಿ ಅವಮಾನಿಸಿದರು. ಹೀಗೆ ಆ ಪುಟ್ಟ ಹುಡುಗನಿಗೆ ಆತ್ಮಘಾತ ಮಾಡಿದ್ದು ಅನ್ಯಾಯವೆಂದು ವಲ್ಲಭಗೆ ಅನ್ನಿಸಿತು. 'ಆ ಶಿಕ್ಷಕರು ಇನ್ನೊಂದೆರಡು ದಿನ ಕಾಯಬಹುದಾಗಿತ್ತು. ಈ ರೀತಿ ಅವಮಾನ ಮಾಡಬೇಕಿರಲಿಲ್ಲ ಮತ್ತು ಈ ಅನ್ಯಾಯವನ್ನು ಸುಮ್ಮನೆ ಸಹಿಸಬಾರದು' – ಅನ್ನಿಸಿತು ವಲ್ಲಭಗೆ. ಅವನ ಕರೆಯ ಮೇಲೆ ಇಡೀ ತರಗತಿಯ ವಿದ್ಯಾರ್ಥಿಗಳು ಹೊರ ಬಂದು ಮುಷ್ಕರ ಹೂಡಿದರು. ಕೊನೆಗೆ ಇಡೀ ಶಾಲೆಯ ವಿದ್ಯಾರ್ಥಿಗಳು ಮುಷ್ಕರದಲ್ಲಿ ಭಾಗಿಯಾದರು. ಮೂರು ದಿನ ಕಳೆಯುವ ಹೊತ್ತಿಗೆ ಮುಖ್ಯೋಪಾಧ್ಯಾಯರು ಅಧೀರರಾಗಿ ವಿದ್ಯಾರ್ಥಿಗಳೊಡನೆ ಒಪ್ಪಂದ ಮಾಡಿಕೊಂಡು ಅನ್ಯಾಯದ ಶಿಕ್ಷೆಗಳನ್ನು ನೀಡುವುದಿಲ್ಲವೆಂದು ಆಶ್ವಾಸನೆ ನೀಡಿದರು. ನಂತರ ವಿದ್ಯಾರ್ಥಿಗಳು ತರಗತಿಗೆ ಹಿಂದಿರುಗಿದರು.[೧೩]

ವಲ್ಲಭಭಾಯ್ ಪಟೇಲರ ಶಾಲೆಯ ಒಬ್ಬ ಉಪಾಧ್ಯಾಯರು ನಡಿಯಾದ್ ಪಟ್ಟಣದ ಪುರಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದ್ದರು. ಅವರ ಎದುರಾಳಿಯು ಶ್ರೀಮಂತ ಮತ್ತು ಪ್ರಭಾವಶಾಲಿ ಪಾಟಿದಾರ ಕುಟುಂಬಕ್ಕೆ ಸೇರಿದವನು. ಅವನು ತಾನು ಸೋತರೆ ತನ್ನ ಮೀಸೆಯನ್ನು ಬೋಳಿಸುವುದಾಗಿ ಅಹಂಕಾರದಿಂದ ಪ್ರಕಟಿಸಿದನು. ವಲ್ಲಭಭಾಯ್ ಐವತ್ತು ವಿದ್ಯಾರ್ಥಿಗಳ ಒಂದು ತಂಡವನ್ನು ಕಟ್ಟಿ ಮನೆ ಮನೆಗೆ ಹೋಗಿ ಶಿಕ್ಷಕನ ಪರ ಪ್ರಚಾರ ಮಾಡಿದನು. ಚುನಾವಣೆಯಲ್ಲಿ ಶಿಕ್ಷಕ ಗೆದ್ದರು. ಶ್ರೀಮಂತ ಪಾಟಿದಾರ ಸೋತನು. ಮಾರನೆಯ ದಿವಸ ವಲ್ಲಭಭಾಯ್ ಮುಂದಾಳತ್ವದಲ್ಲಿ ಐವತ್ತು ವಿದ್ಯಾರ್ಥಿಗಳು ಒಬ್ಬ ಕ್ಷೌರಿಕನನ್ನು ಕರೆದುಕೊಂಡು ಸೋತ ಪಾಟಿದಾರನ ಮನೆಗೆ ಮೆರವಣಿಗೆಯಲ್ಲಿ ಹೋಗಿ, ಪ್ರಕಟಿಸಿದ್ದಂತೆ ಮೀಸೆಯನ್ನು ಬೋಳಿಸುವಂತೆ ಆಗ್ರಹಿಸಿದರು.[೧೪]

(ಮುಂದೆ ಏನಾಯಿತೆಂಬುದು ಯಾವ ಕೃತಿಯಲ್ಲೂ ಇಲ್ಲ – ಲೇಖಕ)

ನಡಿಯಾದ್‌ನಲ್ಲಿ ಮತ್ತೊಬ್ಬ ಉಪಾಧ್ಯಾಯರು ಬರೆಯುವ ಪುಸ್ತಕಗಳು ಮತ್ತು ಪೆನ್ಸಿಲ್‌ಗಳನ್ನು ನಿಷಿದ್ಧವಾದ ರೀತಿಯಲ್ಲಿ ಮಾರುತ್ತಿದ್ದರು. ವಲ್ಲಭಭಾಯ್ ಆ ಮಾರಾಟದ ವಿರುದ್ಧ ಪ್ರತಿಭಟನೆ ಸಂಘಟಿಸಿದರು. ಆ ಉಪಾಧ್ಯಾಯರು ಮಾರಾಟವನ್ನು ನಿಲ್ಲಿಸಬೇಕಾಯಿತು.

ವಲ್ಲಭಭಾಯ್ ಸ್ವಲ್ಪ ಕಾಲ ಬರೋಡಾದ ಸರ್ಕಾರಿ ಪ್ರೌಢಶಾಲೆಯಲ್ಲಿ, ಒಂದು ದೇವಾಲಯಕ್ಕೆ ಸೇರಿದ ಹಾಸ್ಟೆಲ್‌ನಲ್ಲಿ ಇದ್ದುಕೊಂಡು, ವ್ಯಾಸಂಗ ಮಾಡಿದರು. ಆ ಶಾಲೆಯಲ್ಲಿ ಅವರು ಸಂಸ್ಕೃತ ಮತ್ತು ಹೆಚ್ಚುವರಿ ಗುಜರಾತಿ

ಪೈಕಿ ಒಂದನ್ನು ಆರಿಸಿಕೊಳ್ಳಬೇಕಾಗಿತ್ತು. ಅವರು ಹೆಚ್ಚುವರಿ ಗುಜರಾತಿಯನ್ನು ಆರಿಸಿಕೊಂಡಿದ್ದರು. ಅದರ ಪಾಠವನ್ನು ಚೋಟಾಲಾಲ್ ಮಾಸ್ಟರ್ ಎಂಬ ಶಿಕ್ಷಕರು ಮಾಡುತ್ತಿದ್ದರು. ವಲ್ಲಭಭಾಯ್‌ರನ್ನು ತಮ್ಮ ತರಗತಿಯಲ್ಲಿ ಕಂಡ ಚೋಟಾಲಾಲ್ ಮಾಸ್ಟರ್ ಈ ರೀತಿ ನುಡಿದರು:

"ಸುಸ್ವಾಗತ, ನೀನು ಗುಜರಾತಿ ಭಾಷೆಗಾಗಿ ಸಂಸ್ಕೃತವನ್ನು ಬಿಟ್ಟಿದ್ದೀಯೆ. ಆದರೆ ಸಂಸ್ಕೃತದಲ್ಲಿ ದುರ್ಬಲನಾದವನು ಗುಜರಾತಿ ಭಾಷೆಯಲ್ಲಿ ಉತ್ತಮನಾಗಿರಲು ಎಂದಿಗೂ ಸಾಧ್ಯವಿಲ್ಲ ಎನ್ನುವುದು ನಿನಗೆ ಗೊತ್ತೆ? ಈ ದೇಶದಲ್ಲಿ ಪ್ರತಿಯೊಬ್ಬ ಹಿಂದೂ ವಿದ್ಯಾರ್ಥಿ ಸಂಸ್ಕೃತವನ್ನು ಕಲಿಯಲೇಬೇಕು."

ಚೋಟಾಲಾಲ್ ಮಾಸ್ಟರ್ ಸದುದ್ದೇಶದಿಂದಲೇ ಆ ಮಾತನ್ನು ಆಡಿದ್ದರು. ಆದರೆ ಅವರ ಮಾತು ವಲ್ಲಭಗೆ ಒಪ್ಪಿಗೆ ಆಗಲಿಲ್ಲ. ಅವರೆಂದರು, "ಸರ್, ಎಲ್ಲಾ ವಿದ್ಯಾರ್ಥಿಗಳು ಸಂಸ್ಕೃತವನ್ನೇ ತೆಗೆದುಕೊಂಡಿದ್ದರೆ ನೀವು ಮನೆಯಲ್ಲಿ ಕುಳಿತಿರಬೇಕಾಗುತ್ತಿತ್ತು." ವಲ್ಲಭಭಾಯ್‌ರವರ ತರ್ಕವೇನೋ ಸರಿಯಾಗಿತ್ತು. ಆದರೆ ಅದರಲ್ಲಿ ಉದ್ಧಟತನವಿತ್ತು. ಶಿಕ್ಷಕರು ಬೆಂಚಿನ ಮೇಲೆ ನಿಲ್ಲುವಂತೆ ವಲ್ಲಭಗೆ ಆದೇಶಿಸಿದರು. ವಲ್ಲಭ ವಿಧೇಯನಾಗಿ ಬೆಂಚಿನ ಮೇಲೆ ನಿಂತನು. ನಂತರ ಶಿಕ್ಷಕರು ಒಂದರಿಂದ ಹತ್ತರವರೆಗೆ ಮಗ್ಗಿ ಬರೆದು ಮಾರನೆಯ ದಿನ ತೋರಿಸುವಂತೆ ಸೂಚಿಸಿದರು. ಆದರೆ ವಲ್ಲಭ ಅವರ ಸೂಚನೆಯನ್ನು ಪಾಲಿಸಲಿಲ್ಲ. ಮಾರನೆಯ ದಿನ ಶಿಕ್ಷಕರು 'ಒಂದರಿಂದ ಹತ್ತರವರೆಗೆ ಮಗ್ಗಿಯನ್ನು ಎರಡು ಸಲ ಬರೆದುಕೊಂಡು ಬಾ' ಎಂದರು. ಮಾರನೆಯ ದಿನವೂ ವಲ್ಲಭ ಬರೆದುಕೊಂಡು ಹೋಗಲಿಲ್ಲ. ಹೀಗೆ ಶಿಕ್ಷಕ ಚೋಟಾಲಾಲ್ ಶಿಕ್ಷೆಯನ್ನು ಹೆಚ್ಚಿಸುತ್ತಲೇ ಹೋಗಿ ಅದು ೨೦೦ ಸಲ ಬರೆಯುವ ಮಟ್ಟಕ್ಕೆ ಬಂದಿತು. ಆದರೆ ವಲ್ಲಭ ಜಗ್ಗಲಿಲ್ಲ. ಶಿಕ್ಷಕ ಚೋಟಾಲಾಲ್ ವಲ್ಲಭಭಾಯ್‌ನನ್ನು ಸೂಕ್ತ ಕ್ರಮಕ್ಕಾಗಿ ಪ್ರಾಂಶುಪಾಲ ನರ್ವಾನೆ ಬಳಿಗೆ ಕಳುಹಿಸಿದರು. ವಲ್ಲಭಭಾಯ್ ತಮ್ಮ ನಡತೆಯನ್ನು ಸಮರ್ಥಿಸಿಕೊಂಡು ಪ್ರಾಂಶುಪಾಲರಿಗೆ ಈ ರೀತಿ ಹೇಳಿದರು:

"ಸರ್, ಒರಟುತನಕ್ಕಾಗಿ ನನಗೆ ನೀಡಿದ ಶಿಕ್ಷೆಯನ್ನು ಮರುಮಾತಾಡದೆ ಒಪ್ಪಿದೆ ಮತ್ತು ಬೆಂಚಿನ ಮೇಲೆ ನಿಂತುಕೊಂಡೆ. ಆದರೆ ಯಾವ ಹೊಸ ತಪ್ಪನ್ನೂ ನಾನು ಮಾಡದಿರುವಾಗ ಈ ಹೆಚ್ಚಿನ ಶಿಕ್ಷೆಯು ಒಂದು ಅನ್ಯಾಯ. ಜೊತೆಗೆ, ಆರು ಅಥವಾ ಏಳನೆ ವಯಸ್ಸಿನ ಮಕ್ಕಳಿಗೆ ಬರೆಯಲು ಹೇಳುವ ಮಗ್ಗಿಯನ್ನು

ಬರೆಯಲು ನನಗೆ ಹೇಳಿದರೆ ಅದು ನನಗೆ ಅಪಮಾನ. ಅಂದಿನ ಪಾಠದ ವಿಷಯವಾಗಿ ಪ್ರಬಂಧ ಬರೆಯಲು ಹೇಳಿದ್ದರೆ, ಅದರಲ್ಲಿ ಅರ್ಥವಿರುತ್ತಿತ್ತು. ಆದರೆ ಮಗ್ಗಿ! ಶಿಕ್ಷಕರು ಖಂಡಿತವಾಗಿಯು ನನಗೆ ಅಪಮಾನ ಮಾಡಲು ಮತ್ತು ನನ್ನ ತೇಜೋವಧೆ ಮಾಡಲು ಹಾಗೆ ಮಾಡಿದ್ದು."[೧೫]

ಒಂದು ದಿನ ಒಬ್ಬ ಉಪಾಧ್ಯಾಯರು ಒಂದು ಬೀಜಗಣಿತದ ಲೆಕ್ಕವನ್ನು ಕಪ್ಪು ಹಲಗೆಯ ಮೇಲೆ ಬಿಡಿಸುವಾಗ ಅರ್ಧದಲ್ಲೇ ನಿಲ್ಲಿಸಿಬಿಟ್ಟರು. ವಲ್ಲಭಭಾಯ್ ಹಿಂದು ಮುಂದು ಆಲೋಚಿಸದೆ, "ಸರ್, ಅದನ್ನು ಬಿಡಿಸುವುದು ನಿಮಗೆ ತಿಳಿಯದು" ಎಂದು ಒದರಿದ. ಕ್ರೋಧಗೊಂಡ ಉಪಾಧ್ಯಾಯರು, "ಅದನ್ನು ನೀನೇ ಬಿಡಿಸು, ಉಪಾಧ್ಯಾಯನಾಗು," ಎಂದರು. ವಲ್ಲಭಭಾಯ್ ಕಪ್ಪು ಹಲಗೆಯ ಬಳಿ ಹೋಗಿ ಆ ಲೆಕ್ಕವನ್ನು ಬಿಡಿಸಿದನು ಮತ್ತು ಉಪಾಧ್ಯಾಯರ ಕುರ್ಚಿಯಲ್ಲಿ ಕುಳಿತನು! ಪ್ರಾಂಶುಪಾಲ ನರ್ವಾನೆ ವಲ್ಲಭರನ್ನು ಕರೆಯಿಸಿ ವಿಚಾರಿಸಿದಾಗ ವಲ್ಲಭಭಾಯ್ ತಾವು ಉಪಾಧ್ಯಾಯರ ಸೂಚನೆಯಂತೆ ಮಾತ್ರ ನಡೆದುದಾಗಿ ಸಮಜಾಯಿಷಿ ನೀಡಿದನು. ಆದರೆ ನರ್ವಾನೆಯವರು ಆ ಸಮಜಾಯಿಷಿಯನ್ನು ಒಪ್ಪಲಿಲ್ಲ. ಅವರೆಂದರು, "ನೀನು ಸರಿಯಾಗಿ ನಡೆದುಕೊಳ್ಳದಿದ್ದರೆ ನಿನ್ನನ್ನು ಶಾಲೆಯಿಂದ ಹೊರದೂಡುವೆ." ತಕ್ಷಣ ವಲ್ಲಭಭಾಯ್ ಆ ಶಾಲೆಯಿಂದ ಹೊರ ನಡೆದನು ಮತ್ತು ನಡಿಯಾದ್‌ಗೆ ಹಿಂತಿರುಗಿದನು.[೧೬]

ಹೀಗೆ ವಲ್ಲಭ ತನ್ನ ವಿದ್ಯಾರ್ಥಿದೆಸೆಯಲ್ಲೆ, ನೇರ ನುಡಿಯ, ಭಯರಹಿತ ಮತ್ತು ನ್ಯಾಯಕ್ಕಾಗಿ ಹೋರಾಡುವ, ಆದರೆ ಒರಟನಾದ ವಿದ್ಯಾರ್ಥಿ ನಾಯಕ ನಾಗಿದ್ದನು.

ಶಾಲೆಯಲ್ಲಿದ್ದಾಗ ವಲ್ಲಭಗೆ ಪಾಠಕ್ಕಿಂತ ಆಟದಲ್ಲೇ ಆಸಕ್ತಿ ಜಾಸ್ತಿ. ಜನರೊಡನೆ ಸಲೀಸಾಗಿ ಬೆರೆತು, ಅವರ ನಡೆನುಡಿಯನ್ನು ವೀಕ್ಷಿಸಿ ಕಲಿಯಲು ಇಷ್ಟಪಡುತ್ತಿದ್ದನು. ದೇಶದ ಸಂಪ್ರದಾಯ ಮತ್ತು ಸಂಸ್ಕೃತಿಯ ಮೇಲೆ ವಿದೇಶಿಯರ ಪ್ರಭಾವವನ್ನು ಗಮನಿಸಿದ್ದನು. ಆ ವೇಳೆಗೆ ಇಂಗ್ಲಿಷರು ವಿಶ್ವನಾಯಕರಾಗಿ ಬೆಳೆದಿದ್ದರು. ಪಟ್ಟಣದ ಜನ ಅವರನ್ನು ಉಡುಪು, ಜೀವನ ಕ್ರಮ, ನಡವಳಿಕೆ, ಭಾಷೆ ಮುಂತಾದ ವಿಷಯಗಳಲ್ಲಿ ಅನುಕರಣೆ ಮಾಡುತ್ತಿದ್ದರು. ಇಂಗ್ಲಿಷರ ಈ ಶಕ್ತಿಯ ಮೂಲವೇನು? – ಎಂದು ವಲ್ಲಭ ಚಿಂತಿಸುತ್ತಿದ್ದನು ಮತ್ತು ವಿಸ್ಮಯ ಪಡುತ್ತಿದ್ದನು. ಸಹನಶೀಲತೆ, ಕೂಟ ಮನೋಭಾವ, ಶಿಸ್ತು ಮುಂತಾದ ಗುಣಗಳನ್ನು ಕ್ರೀಡೆಗಳು ಬೆಳೆಸುವುದರಿಂದ ಇಂಗ್ಲೀಷರು ಕ್ರೀಡೆಗಳಿಗೆ ಹೆಚ್ಚು ಕಾಲವನ್ನು ವಿನಿಯೋಗಿಸುತ್ತಾರೆಂದು ಯಾರೊ

ಅವನಿಗೆ ಹೇಳಿದ್ದರು. ವಾಟರ್‌ಲೂ ಕದನವು ಈಟನ್‌ನ ಕ್ರಿಕೆಟ್ ಮೈದಾನದಲ್ಲಿ ಗೆಲ್ಲಲ್ಪಟ್ಟಿತು – ಎಂಬ ನಾಣ್ಣುಡಿಯೂ ಅವನ ಗಮನಕ್ಕೆ ಬಂದಿತ್ತು. ಅದರಿಂದ ವಲ್ಲಭ ತನ್ನ ಬಿಡುವಿನ ಕಾಲವನ್ನೆಲ್ಲಾ ಕ್ರೀಡೆಗೆ ವಿನಿಯೋಗಿಸುತ್ತಿದ್ದನು. ಮುಂದೆ ಸಾಕಷ್ಟು ಹಣವನ್ನು ಉಳಿಸಿ, ಇಂಗ್ಲೆಂಡ್‌ಗೆ ಹೋಗಿ, ಆ ಜನರನ್ನು ಸ್ವತಃ ಸಂಧಿಸಿ ಅವರ ಯಶಸ್ಸಿನ ಗುಟ್ಟನ್ನು ತಿಳಿಯಬೇಕೆಂದು ಅವನು ವಿದ್ಯಾರ್ಥಿದೆಸೆಯಲ್ಲೇ ನಿರ್ಧರಿಸಿದನು.[೧೭]

❖ ◆ ❖

ವಿದ್ಯಾರ್ಥಿನಾಯಕ

ಗೋದ್ರಾದಲ್ಲಿ ವಕೀಲ

೦೨. ಧನ ಸಂಪಾದನೆಯ ಹಾದಿಯಲ್ಲಿ

೨.೧ ವಕೀಲಿಗೆ ವ್ಯಾಸಂಗ

ವಲ್ಲಭಭಾಯ್ ಪಟೇಲ್ ನಡಿಯಾದ್ ಶಾಲೆಯಲ್ಲಿ ೧೮೯೭ರಲ್ಲಿ ತಮ್ಮ ೨೨ನೆ ವಯಸ್ಸಿನಲ್ಲಿ ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದರು. ಮುಂದೇನು? – ಎನ್ನುವ ಪ್ರಶ್ನೆ ಎದುರಾಯಿತು.

ನಡಿಯಾದ್‌ನ ಅವರ ಸೋದರಮಾವ ದೂಂಗರ್‌ಭಾಯ್ ಮತ್ತು ಕರಮ್‌ಸದ್‌ನ ಮುಖ್ಯೋಪಾಧ್ಯಾಯರು ಶಿಕ್ಷಕನಾಗುವಂತೆ ಒತ್ತಾಯಿಸಿದರು. ಆದರೆ ವಲ್ಲಭನ ಆಲೋಚನೆಗಳೇ ಬೇರೆ ಇದ್ದುವು. ಇಂಗ್ಲೆಂಡಿನಲ್ಲಿ ವ್ಯಾಸಂಗ ಮಾಡಿದ ಬ್ಯಾರಿಸ್ಟರ್‌ಗಳಿಗೆ ಕೀರ್ತಿ ಮತ್ತು ಹಣ ಶೀಘ್ರವಾಗಿ ಬರುವುದು ಎಂಬುದನ್ನು ತಿಳಿದಿದ್ದ ವಲ್ಲಭ ಮೊದಲು ಸಾಧಾರಣ ವಕೀಲನಾಗಿ, ಹಣ ಗಳಿಸಿ ಉಳಿಸಿ ನಂತರ ಲಂಡನ್‌ಗೆ ಹೋಗಿ ತಮ್ಮ ಗುರಿಯನ್ನು ಮುಟ್ಟುವ ಯೋಚನೆಯನ್ನು ಇಟ್ಟುಕೊಂಡಿದ್ದರು. ಆದರೆ ಕಾಲೇಜನ್ನು ಸೇರಿ ಎಲ್.ಎಲ್.ಬಿ. ಪರೀಕ್ಷೆ ಪಾಸು ಮಾಡಲು ಆರು ವರ್ಷಗಳ ಕಾಲ ಬೇಕಾಗುತ್ತಿತ್ತು. ಅಷ್ಟು ವರ್ಷ ವ್ಯಾಸಂಗ ಮಾಡಲು ಅವರಲ್ಲಿ ಹಣವಿರಲಿಲ್ಲ. ಅದರಿಂದ ಕಡಿಮೆ ವರ್ಷ ತೆಗೆದುಕೊಳ್ಳುವ ಜಿಲ್ಲಾ ಪ್ಲೀಡರ್ ಪರೀಕ್ಷೆಗೆ ಕುಳಿತುಕೊಳ್ಳಲು ತೀರ್ಮಾನಿಸಿದರು. ಆ ಪರೀಕ್ಷೆಯನ್ನು ಮನೆಯಲ್ಲೇ ವ್ಯಾಸಂಗ ಮಾಡಿ ತೆಗೆದುಕೊಳ್ಳಬಹುದಾಗಿತ್ತು.

ಆ ವೇಳೆಗೆ ವಲ್ಲಭರವರ ಮೂರನೆಯ ಅಣ್ಣ ವಿಠ್ಠಲ್‌ಭಾಯ್ ಪಟೇಲ್‌ರವರು ಪ್ಲೀಡರ್ ಪರೀಕ್ಷೆ ಪಾಸು ಮಾಡಿ ಗೋದ್ರದಲ್ಲಿ ವಕೀಲರಾಗಿ ಚೆನ್ನಾಗಿ

ಮುಂದುವರೆಯುತ್ತಿದ್ದರು. ಅವರ ಉದಾಹರಣೆಯು ವಲ್ಲಭರವರ ಕಣ್ಣಿನ ಮುಂದಿತ್ತು. ಹಿಂದೆ ವಿಠ್ಠಲ್‌ಭಾಯ್ ತಮ್ಮ ಪ್ಲೀಡರ್ ಪರೀಕ್ಷೆಗಾಗಿ ಬೊಂಬಾಯಿಯಲ್ಲಿ ಖಾಸಗಿ ಕೋಚಿಂಗ್ ತರಗತಿಯನ್ನು ಸೇರಿದ್ದರು. ವಲ್ಲಭಭಾಯ್ ಹಾಗೆ ಮಾಡಲಿಲ್ಲ. ಅವರು ನಡಿಯಾದ್‌ನಲ್ಲಿ ಸೋದರಮಾವ ದೂಂಗರ್‌ಭಾಯ್ ಮನೆಯಲ್ಲಿದ್ದು ಕೊಂಡು ವಕೀಲರಿಂದ ಗ್ರಂಥಗಳನ್ನು ಪಡೆದು ಶ್ರದ್ಧೆಯಿಂದ ವ್ಯಾಸಂಗ ಮಾಡಿದರು. ನ್ಯಾಯವನ್ನು ನೀಡುವ ವಿಧಾನಗಳನ್ನು ತಿಳಿಯಲು ನ್ಯಾಯಾಲಯಗಳಿಗೆ ಭೇಟಿ ಕೊಡುತ್ತಿದ್ದರು ಮತ್ತು ಪ್ಲೀಡರ್ ಪರೀಕ್ಷೆಯನ್ನು ೩ ವರ್ಷಗಳಲ್ಲಿ ಪಾಸು ಮಾಡಿದರು (ವಿಠ್ಠಲ್‌ಭಾಯ್ ೪ ವರ್ಷ ತೆಗೆದುಕೊಂಡಿದ್ದರು)

ತಮ್ಮ ಗುರಿಯ ಬಗ್ಗೆ ವಲ್ಲಭಭಾಯ್ ಹೀಗೆ ಹೇಳಿದ್ದಾರೆ:

> "ಏಳು ಸಾವಿರ ಮೈಲಿಗಳ ದೂರದಲ್ಲಿರುವ ಆಂಗ್ಲರು ನಮ್ಮನ್ನು ಅಷ್ಟು ಕಾಲ ಆಳಲು ಹೇಗೆ ಶಕ್ತರಾದರು ಎಂಬುದನ್ನು ನೋಡುವುದಕ್ಕಾಗಿ ಸಾಗರೋತ್ತರ ದೇಶಗಳಿಗೆ ಹೋಗಲು ನನಗೆ ಉತ್ಕಟ ಬಯಕೆ ಇತ್ತು. ಆದರೆ ನನ್ನ ಬಯಕೆಗಳನ್ನು ಪೂರೈಸುವ ಶಕ್ತಿ ನನ್ನ ತಂದೆಗೆ ಇರಲಿಲ್ಲ. ೭,೦೦೦ ರೂಪಾಯಿಯಿಂದ ೧೦,೦೦೦ ರೂಪಾಯಿಗಳನ್ನು ಜಮಾಯಿಸಿದರೆ ನಾನು ಇಂಗ್ಲೆಂಡಿಗೆ ಪ್ರಯಾಣ ಬೆಳೆಸಬಹುದೆಂದು ತಿಳಿಯಿತು..... ಅದರಿಂದ ನಾನು ಪರೀಕ್ಷೆಗಳಿಗೆ ಬಹಳ ತೀವ್ರಾಸಕ್ತಿಯಿಂದ ವ್ಯಾಸಂಗ ಮಾಡಿದೆ ಮತ್ತು ಇಂಗ್ಲೆಂಡ್‌ಗೆ ಭೇಟಿ ಕೊಡಲು ಬೇಕಾಗುವಷ್ಟು ಹಣವನ್ನು ಉಳಿಸಲು ದೃಢ ಸಂಕಲ್ಪ ಮಾಡಿದೆ.[೧೮]"

೨.೨. ವಕೀಲಿ ವೃತ್ತಿ

ವಲ್ಲಭಭಾಯ್ ೧೯೦೦ರಲ್ಲಿ ತಮ್ಮ ೨೫ನೆ ವಯಸ್ಸಿನಲ್ಲಿ ಜಿಲ್ಲಾ ಪ್ಲೀಡರ್ ಪರೀಕ್ಷೆ ಪಾಸುಮಾಡಿ ಕೆಳ ನ್ಯಾಯಾಲಯಗಳಲ್ಲಿ ವಕೀಲಿ ನಡೆಸಲು ಅರ್ಹತೆ ಪಡೆದರು. ಆ ವೇಳೆಗೆ ಅವರ ಅಣ್ಣ ವಿಠ್ಠಲ್‌ಭಾಯ್ ೧೮೯೫ರಲ್ಲಿ ಗೋದ್ರವನ್ನು ಬಿಟ್ಟು ಬೋರ್ಸದ್‌ನಲ್ಲಿ ವಕೀಲಿ ವೃತ್ತಿ ನಡೆಸುತ್ತಿದ್ದರು. ಅವರು ತಮ್ಮೊಡನೆ ವಕೀಲಿ ನಡೆಸುವಂತೆ ಬೋರ್ಸದ್‌ಗೆ ವಲ್ಲಭಭಾಯ್‌ರವರನ್ನು ಆಹ್ವಾನಿಸಿದರು. ಆದರೆ ಸ್ವತಂತ್ರವಾಗಿರಲು ಮತ್ತು ಸ್ವಪ್ರಯತ್ನದಿಂದಲೇ ಮೇಲೆ ಬರಲು ಬಯಸಿದ ವಲ್ಲಭ ಗೋದ್ರದಲ್ಲಿ ನೆಲೆಸಿ ವಕೀಲಿ ಆರಂಭಿಸಿದರು.

ಅವರಲ್ಲಿ ಹಣವಿಲ್ಲದ್ದರಿಂದ ಒಬ್ಬ ಸ್ನೇಹಿತನಿಂದ ಹಣ ಸಾಲ ಪಡೆದು ಬಾಡಿಗೆ ಮನೆ ಮಾಡಿ ಬೇಕಾದ ಸಲಕರಣಗಳನ್ನು ಹೊಂದಿಸಿಕೊಂಡರು. ತಮ್ಮ ಹೆಂಡತಿಯನ್ನು ಕರೆಸಿಕೊಂಡು ಸಂಸಾರ ಜೀವನವನ್ನು ಮದುವೆಯಾದ ೯ ವರ್ಷಗಳ ನಂತರ ಆರಂಭಿಸಿದರು. ತಮ್ಮ ಕಿರಿಯ ಸಹೋದರ ಕಾಶಿಭಾಯ್ ರವರನ್ನು ತಮ್ಮ ಜೊತೆಯಲ್ಲಿ ಇಟ್ಟುಕೊಂಡರು. ಶೀಘ್ರವಾಗಿ ವಕೀಲಿ ವೃತ್ತಿಯಲ್ಲಿ ಯಶಸ್ಸು ಗಳಿಸಿದರು.

ಆದರೆ ಅವರು ವಕೀಲಿ ಆರಂಭಿಸಿದ ಕೆಲವೇ ತಿಂಗಳಲ್ಲಿ ಪ್ಲೇಗ್ ಗೋದ್ರದಲ್ಲಿ ಹರಡಲು ಆರಂಭವಾಯಿತು. ಆ ಸಮಯದಲ್ಲಿ ಅವರು ತಮ್ಮ ಎರಡನೆಯ ಅಣ್ಣ ನರಸೀಭಾಯ್‌ಗೆ ೧೬.೦೩.೧೯೦೧ ರಂದು ಬರೆದ ಪತ್ರ ಹೀಗಿದೆ:

> ಗೌರವಾನ್ವಿತ ನರಸೀಭಾಯ್, ಇಲ್ಲಿ ಪ್ಲೇಗು ಹರಡುತ್ತಿದೆ. ದಿನಕ್ಕೆ ಹತ್ತು ಜನರಿಗೆ ರೋಗ ತಗುಲುತ್ತಿದೆ ಮತ್ತು ಬಹಳ ಇಲಿಗಳು ಸಾಯುತ್ತಿವೆ. ನ್ಯಾಯಾಲಯದಲ್ಲಿ ಕೆಲಸ ನಿಂತುಹೋಗಿದೆ. ಇನ್ನೂ ಎರಡು ಅಥವಾ ಮೂರು ತಿಂಗಳು ಅದು ಆರಂಭವಾಗುವುದಿಲ್ಲ. ಅದರಿಂದ ಸಧ್ಯದಲ್ಲಿ, ಮನೆಯಲ್ಲಿ ಏನಿದೆಯೋ ಅದರಿಂದ ಬದುಕುತ್ತಿದ್ದೇವೆ. ಆದರೆ ಅದರ ಬಗೆಗೆ ನೀವು ಚಿಂತಿಸಬೇಡಿ.....
>
> ನಿಮಗೆ ಸಹಾಯ ಮಾಡುವುದು ಹೇಗೆ ಎಂದು ಹಗಲು ರಾತ್ರಿ ಚಿಂತಿಸುತ್ತಿದ್ದೇನೆ. ಈ ಕ್ಷಣದಲ್ಲಿ ನಾನು ನಿಸ್ಸಹಾಯಕ, ಆದರೆ ನನ್ನ ಪರಿಸ್ಥಿತಿ ಉತ್ತಮಗೊಂಡಾಗ ನೀವು ನನ್ನ ಸಹಾಯದ ಮೇಲೆ ಭರವಸೆ ಇಡಬಹುದು. ಪ್ಲೇಗು ಜಾಸ್ತಿಯಾದರೆ ಕಾಶಿಭಾಯ್‌ನನ್ನು ಕರಮ್‌ಸದ್‌ಗೆ ಕಳುಹಿಸುತ್ತೇನೆ.
>
> ಅಲ್ಲಿಂದ ಒಳ್ಳೆಯ ಸುದ್ದಿಯನ್ನು ಕಳುಹಿಸುತ್ತಾ ಇರಿ. ಗೌರವಾನ್ವಿತ ತಂದೆಗೆ ನನ್ನನ್ನು ನೆನಪಿಸಿ. ಮಾಡುವುದು ಏನಾದರು ಇದ್ದರೆ ತಿಳಿಸಿ. ವಲ್ಲಭಭಾಯ್‌ಯಿಂದ ಪ್ರಣಾಮಗಳು.[೧೯]

ಪ್ಲೇಗು ಹೆಚ್ಚು ಹೆಚ್ಚು ಹರಡಿತು. ವಲ್ಲಭರವರ ಒಬ್ಬ ಬ್ರಹ್ಮಚಾರಿ ಸ್ನೇಹಿತ, ರಾಮ್ಜಿಭಾಯ್, ಒಬ್ಬನೇ ಇದ್ದ. ಅವನಿಗೆ ಪ್ಲೇಗು ತಗುಲಿತು. ವಲ್ಲಭ ಅವನ ಮನೆಗೆ ಹೋಗಿ ಉಪಚರಿಸಿದರು. ಆದರೆ ಪ್ರಯೋಜನವಾಗಲಿಲ್ಲ. ಅವನ ಶವ ಸಂಸ್ಕಾರವನ್ನು ಮುಗಿಸಿ ಹಿಂತಿರುಗುವ ಹೊತ್ತಿಗೆ ಆ ರೋಗ ಅವರಿಗೇ ತಗುಲಿತು. ವಲ್ಲಭ ಗಾಬರಿಗೊಳ್ಳಲಿಲ್ಲ. ಶಾಂತವಾಗಿ ಹೆಂಡತಿ ಜವೇರ್‌ಬಾನನ್ನು ಕಾಶಿಭಾಯ್

ಒಡನೆ ಕರಮ್‌ಸದ್‌ಗೆ ಬಲಾತ್ಕಾರವಾಗಿ ಕಳುಹಿಸಿದರು. ನಂತರ ನಡಿಯಾದ್ ಗೆ ಹೋದರು. ಅದೃಷ್ಟವಶಾತ್ ಅವರಿಗೆ ಅಲ್ಲಿ ವಾಸಿಯಾಯಿತು. ಒಂದು ವರದಿಯ ಪ್ರಕಾರ ಅಲ್ಲಿ ಅವರು ಒಂದು ಭಗ್ನ ದೇವಾಲಯದಲ್ಲಿ ಇದ್ದರು.[೨೦]

ಪ್ಲೇಗ್ ರೋಗ ಹೋದ ಮೇಲೆ ವಲ್ಲಭರವರು ಬಹಳ ವೇಗವಾಗಿ ಬೆಳೆದರು. ಹೆಂಡತಿಯನ್ನೂ ವಾಪಸ್ಸು ಕರೆಯಿಸಿಕೊಂಡರು. ಹಣ ಸಂಪಾದಿಸಬೇಕೆಂದು ಕ್ರಿಮಿನಲ್ ದಾವೆಗಳನ್ನು ಮಾತ್ರ ತೆಗೆದುಕೊಳ್ಳುತ್ತಿದ್ದರು. ಎರಡು ವರ್ಷಗಳ ಹೊತ್ತಿಗೆ ಅವರು ಸಾಕಷ್ಟು ಅನುಭವ ಮತ್ತು ವಿಶ್ವಾಸವನ್ನು ಗಳಿಸಿದರು. ಆದರೆ ಅವರ ಚಟುವಟಿಕೆಗಳಿಗೆ ಗೋದ್ರ ಚಿಕ್ಕದಾಯಿತು. ಆ ವೇಳೆಗೆ ೧೯೦೨ರಲ್ಲಿ ಬೋರ್ಸದ್‌ನಲ್ಲಿದ್ದ ವಿಠ್ಠಲ್‌ಭಾಯ್‌ಯಿಂದ ಕರೆ ಬಂದಿತು.

ಬೋರ್ಸದ್‌ನಲ್ಲಿ ವಿಠ್ಠಲ್‌ಭಾಯ್‌ರವರು ಒಬ್ಬ ಉಪ–ನ್ಯಾಯಾಧೀಶನ ಭ್ರಷ್ಟಾಚಾರದ ವಿರುದ್ಧ ಹೋರಾಟ ಆರಂಭಿಸಿದ್ದರು. ಅದರ ಫಲವಾಗಿ ಆ ಉಪ–ನ್ಯಾಯಾಧೀಶನ ಭ್ರಷ್ಟಾಚಾರದ ಬಗೆಗೆ ಸರ್ಕಾರ ತನಿಖೆಗೆ ಆದೇಶ ನೀಡಿತ್ತು. ಒಬ್ಬ ರೆಸಿಡೆಂಟ್ ಮ್ಯಾಜಿಸ್ಟ್ರೇಟ್, ಒಬ್ಬ ಉಪ–ನ್ಯಾಯಾಧೀಶ ಮತ್ತು ಒಬ್ಬ ಮಾಮಲದಾರ (ತಾಲ್ಲೂಕಿನ ಮುಖ್ಯಾಧಿಕಾರಿ) ಆ ಭ್ರಷ್ಟಾಚಾರ ಆಪಾದಿತ ನ್ಯಾಯಾಧೀಶನ ಸ್ನೇಹಿತರಾಗಿದ್ದರು. ಆ ತ್ರಿಮೂರ್ತಿಗಳು ವಿಠ್ಠಲ್‌ಭಾಯ್‌ಗೆ ತೊಂದರೆ ಕೊಡಲು ಹೊರಟರು. ಅದರಿಂದ ವಿಠ್ಠಲ್‌ಭಾಯ್‌ನ ಸಮೀಪದಲ್ಲಿರುವುದು ಸೂಕ್ತವೆಂದು ವಲ್ಲಭಭಾಯ್ ಪತ್ನಿಯೊಡನೆ ಬೋರ್ಸದ್‌ಗೆ ಹೋದರು. ಅಲ್ಲಿ ಪ್ರತ್ಯೇಕ ಮನೆಯಲ್ಲಿ ವಾಸಿಸುತ್ತಾ ಸ್ವತಂತ್ರವಾಗಿ ವಕೀಲಿ ನಡೆಸಿದರು.

ಅಲ್ಲಿಯೂ ಸಹ ಅವರು ಯಶಸ್ವಿಯಾದರು. ಅವರು ಸಾಮಾನ್ಯವಾಗಿ ಪೊಲೀಸರು ಹೂಡಿದ ಕೇಸುಗಳಲ್ಲಿ ಅಪರಾಧಿಗಳ ಪರ ವಕೀಲರಾಗಿ ನ್ಯಾಯಾಲಯದಲ್ಲಿ ಹಾಜರಾಗುತ್ತಿದ್ದರು. ಅವರಿಗಿದ್ದ ವ್ಯವಹಾರ ಜ್ಞಾನ, ಪಾಟಿ ಸವಾಲಿನ ನೈಪುಣ್ಯ ಮತ್ತು ಪೊಲೀಸರ ಅಪ್ರಾಮಾಣಿಕ ಮಾರ್ಗಗಳ ಅರಿವಿನ ಫಲವಾಗಿ ನ್ಯಾಯಾಲಯ ದಲ್ಲಿ ಅವರ ಕಕ್ಷಿದಾರರಿಗೆ ಬಿಡುಗಡೆ ಸಾಮಾನ್ಯವಾಗಿ ದೊರಕುತ್ತಿತ್ತು. ಪೊಲೀಸರ ಪರವಾದ ಸಾಕ್ಷಿಗಳ ಮೇಲೆ ಅವರು ಆಕ್ರಮಣ ಮಾಡುತ್ತಿದ್ದ ರೀತಿ ಅದ್ಭುತವಾಗಿರು ತ್ತಿತ್ತು. ಅವರು ಕರಿಯ ಕೋಟು ಮತ್ತು ಟೋಪಿಯನ್ನು ಧರಿಸಿ ತಮ್ಮ ಮೀಸೆಯನ್ನು ತಿರುವುತ್ತಾ ಚಾಕಚಕ್ಯತೆಯಿಂದ ಪ್ರಶ್ನೆಗಳನ್ನು ಕೇಳಿದಾಗ ಪೊಲೀಸರ ಸುಳ್ಳು ಸಾಕ್ಷಿಗಳು ಕುಸಿದು ಸತ್ಯವನ್ನು ಹೇಳಿಬಿಡುತ್ತಿದ್ದರು. ವಲ್ಲಭರ ಕಕ್ಷಿದಾರ ಬಿಡುಗಡೆಯಾಗುತ್ತಿದ್ದನು. ಸಹಜವಾಗಿಯೆ ವಲ್ಲಭಭಾಯ್ ಬಹಳ ಹಣ ಸಂಪಾದಿಸುತ್ತಿದ್ದರು.[೨೧]

ಬೋರ್ಸದ್‌ನಲ್ಲಿ ವಲ್ಲಭ ಬೆಳಗಿನ ವೇಳೆ ದಾವೆಗಳ ವ್ಯಾಸಂಗ ಮತ್ತು ಕಕ್ಷಿದಾರರ ಭೇಟಿ, ಮಧ್ಯಾಹ್ನ ನ್ಯಾಯಾಲಯದಲ್ಲಿ ಹಾಜರಿ, ಸಂಜೆ ಬೇಗನೆ ಊಟ ಮುಗಿಸಿ ಕ್ಲಬ್‌ಗೆ ಹೋಗಿ ಸ್ವಲ್ಪ ವೇಳೆ ಬ್ರಿಜ್ ಅಥವಾ ಚದುರಂಗದಾಟ ಆಡಿ, ನಂತರ ಮನೆಗೆ ಬಂದು, ಬೇಗನೆ ಮಲಗುವುದು ಅವರ ನಿತ್ಯದ ಕಾರ್ಯಕ್ರಮವಾಗಿತ್ತು.

೧೯೦೪ರ ಏಪ್ರಿಲ್‌ನಲ್ಲಿ ಅವರ ಮೊದಲನೆಯ ಮಗುವಿನ ಜನನವಾಯಿತು. ಅದು ಹೆಣ್ಣು ಮಗು. ಅವಳನ್ನು 'ಮಣಿ' ಎಂದು ಕರೆದರು. ೧೯೦೫ರಲ್ಲಿ ಅವರ ಎರಡನೆಯ ಮಗು ಗಂಡು ಮಗು ಜನಿಸಿತು. ಅವನನ್ನು ದಹ್ಯಾ ಎಂದು ಕರೆದರು. ಎರಡೂ ಮಕ್ಕಳ ಜನನವಾದದ್ದು ಗಾಣ ಗ್ರಾಮದಲ್ಲಿ.

ಕರಮ್‌ಸದ್ ಗ್ರಾಮ ಬೋರ್ಸದ್‌ನಿಂದ ೧೦ ಮೈಲಿಗಳ ದೂರದಲ್ಲಿತ್ತು. ಅಲ್ಲಿಗೆ ಎತ್ತಿನ ಗಾಡಿಯಲ್ಲಿ ಹೋಗಬೇಕಾಗಿತ್ತು. ವಲ್ಲಭಭಾಯ್ ಅಲ್ಲಿಗೆ ಆಗಾಗ್ಗೆ ಹೋಗದೆ ಇದ್ದರೂ ಅಲ್ಲಿದ್ದ ತಮ್ಮ ಹಿರಿಯರಿಗೆ ಹಣವನ್ನು ಕಳುಹಿಸುತ್ತಿದ್ದರು. ಅವರು ತಮ್ಮ ಅಣ್ಣ ನರಸೀಭಾಯ್‌ಗೆ ೧೪.೦೧.೧೯೦೪ ಬರೆದ ಪತ್ರ ಅದಕ್ಕೆ ಸಾಕ್ಷಿ:

> ಬಡ್ಡಿ ಸಮೇತ ಹಣವನ್ನು ನಾರಾಯಣ್‌ಭಾಯ್‌ಗೆ ನೀಡಬೇಕೆಂಬ ಸೂಚನೆಗಳನ್ನು ನಾನು ಕಳುಹಿಸಿದ್ದೇನೆ. ಇನ್ನು ಮೇಲೆ ಅದರ ಬಗ್ಗೆ ನೀವು ಚಿಂತಿಸಬೇಕಾಗಿಲ್ಲ. ..... ಸಹೋದರಿಯ ಒಡವೆಗಳನ್ನು ಅಡವು ಇಡುವುದು ನಿಮಗೆ ತಕ್ಕದಲ್ಲ.
>
> ನನ್ನ ಅಭಿಪ್ರಾಯದಲ್ಲಿ ನಿಮ್ಮ ಸಾಲವು ನನ್ನ ಸಾಲ. ನೀವು ಯಾರಿಗೆ ಎಷ್ಟು ಸಾಲ ತೀರಿಸಬೇಕು ಎಂಬ ವಿವರಣೆಯನ್ನು ನೀಡಿದರೆ ಆ ಭಾರದಿಂದ ನಿಮ್ಮನ್ನು ಮುಕ್ತಗೊಳಿಸುತ್ತೇನೆ.
>
> ಕಾಶಿಭಾಯ್ ನಡಿಯಾದ್ ಬಿಟ್ಟು ಕರಮ್‌ಸದ್‌ನಲ್ಲಿ ನಿಮ್ಮ ಬಳಿಗೆ ಏಕೆ ಬಂದಿದ್ದಾನೆ? ಅವನನ್ನು ಮುಂದಿನ ವಿದ್ಯಾಭ್ಯಾಸಕ್ಕಾಗಿ ಬೊಂಬಾಯಿಗೆ ಕಳುಹಿಸಬೇಕೆಂಬುದು ನನ್ನ ಆಲೋಚನೆ. ದಯವಿಟ್ಟು ಅವನನ್ನು ಇಲ್ಲಿಗೆ ಕಳುಹಿಸಿ.
>
> ತೀ॥ ಸೋಮಭಾಯ್‌ರವರ ಜ್ವರ ಕಡಿಮೆ ಆಗಿಲ್ಲದಿದ್ದರೆ, ಅವರು ಇಲ್ಲಿಗೆ ಬರಲಿ. ಔಷಧಿ ಮುಂತಾದುವನ್ನು ಇಲ್ಲಿ ಏರ್ಪಡಿಸ ಬಹುದು. ಜ್ವರ ಬಿಟ್ಟಿದ್ದರೂ ಅವರು ಇಲ್ಲಿ ವಿಶ್ರಾಂತಿ ಪಡೆಯ

ಒಹುದು. ಅವರನ್ನು ಇಲ್ಲಿಗೆ ಕಳುಹಿಸಿ. ಏನು ಮಾಡಬೇಕು ಎಂಬುದಕ್ಕೆ ಪತ್ರ ಬರೆಯಿರಿ. ಅಷ್ಟೇ. ನಿಮ್ಮ ಸೇವಕ, ವಲ್ಲಭಭಾಯ್.[೨೨]

ಹೀಗೆ ವಲ್ಲಭಭಾಯ್ ತಮ್ಮ ಹಿರಿಯರ ಕುಟುಂಬಕ್ಕೆ ಬೆಂಬಲವಾಗಿದ್ದರು. ಆದರೆ ಅವರ ಅಣ್ಣ ವಿಠ್ಠಲ್‌ಭಾಯ್ ಉತ್ತಮ ಸ್ಥಿತಿಯಲ್ಲಿದ್ದರೂ ಹಾಗೆ ಇರಲಿಲ್ಲ ವೆಂದು ಕಾಣುತ್ತದೆ. ಅವರ ತಂದೆ 'ವಿಠ್ಠಲ್‌ಭಾಯ್ ತನ್ನ ಕುಟುಂಬದ ಬಗೆಗೆ ತನ್ನ ಜವಾಬ್ದಾರಿಯನ್ನು ನೆರವೇರಿಸುವವರೆಗೆ ಬೋರ್ಸದ್‌ನಲ್ಲಿನ ಅವನ ಮನೆ ಯನ್ನು ಪ್ರವೇಶಿಸುವುದಿಲ್ಲ,' ಎಂದು ಪ್ರಕಟಿಸಿದ್ದರೆಂದು ವಿಠ್ಠಲ್‌ಭಾಯ್‌ರವರ ಚರಿತ್ರೆಕಾರ ದಾಖಲಿಸಿರುವುದನ್ನು ರಾಜ್‌ಮೋಹನ್ ಗಾಂಧಿ ಉದ್ಧರಿಸಿದ್ದಾರೆ.[೨೩]

ವಲ್ಲಭಭಾಯ್ ಇಂಗ್ಲೆಂಡ್‌ಗೆ ಹೋಗಿ ವ್ಯಾಸಂಗ ಮಾಡಿ ಬ್ಯಾರಿಸ್ಟರ್ ಪದವಿ ಪಡೆಯುವುದಕ್ಕಾಗಿ ಹಣವನ್ನು ಉಳಿಸುತ್ತಿದ್ದರು. ಅದು ಅವರ ಜೀವನದ ಒಂದು ದೊಡ್ಡ ಕನಸು ಮತ್ತು ಗುರಿಯಾಗಿತ್ತು. ಜೊತೆಗೆ ಇಂಗ್ಲೆಂಡಿನ ಜನರ ಅದ್ಭುತ ಯಶಸ್ಸಿನ ಗುಟ್ಟನ್ನು ತಿಳಿಯುವ ತವಕ ಅವರಿಗಿತ್ತು. ಸರಳ ಜೀವನವನ್ನು ನಡೆಸಿ ಮೂರು ವರ್ಷಗಳಲ್ಲಿ ರೂ. ೧೦,೦೦೦ ಉಳಿತಾಯ ಮಾಡಿದರು. ನಂತರ ಅವರು ಥಾಮಸ್ ಕುಕ್ ಅಂಡ್ ಸನ್ ಕಂಪೆನಿಗೆ ಸೇರಿದೆ 'ಎಸ್ ಎಸ್ ಮಲೋಜ' ಹಡಗಿನಲ್ಲಿ ಇಂಗ್ಲೆಂಡಿಗೆ ಒಂದು ಸೀಟ್ ಬುಕ್ ಮಾಡಲು ಹಣವನ್ನು 'ಡ್ರಾಫ್ಟ್' ಮೂಲಕ ಕಳುಹಿಸಿದರು. ವಲ್ಲಭ ತಮ್ಮ ವಿಳಾಸವನ್ನು 'ವಿ.ಜೆ. ಪಟೇಲ್, ಪ್ಲೀಡರ್, ಬೋರ್ಸದ್' ಎಂದು ನೀಡಿದ್ದರು. ಥಾಮಸ್ ಕುಕ್ ಕಂಪೆನಿಯವರು ಆ ವಿಳಾಸಕ್ಕೆ ಪ್ರಯಾಣದ ಟಿಕೆಟ್ ಕಳುಹಿಸಿದರು. ಆದರೆ ಅದು ವಿಠ್ಠಲ್‌ಭಾಯ್ ಕೈಗೆ ಹೋಯಿತು. ಏಕೆಂದರೆ ಬೋರ್ಸದ್‌ನಲ್ಲಿ ಅವರನ್ನೂ ಸಹ 'ವಿ.ಜೆ. ಪಟೇಲ್' ಎಂದೇ ಕರೆಯು ತ್ತಿದ್ದರು. ಟಿಕೆಟನ್ನು ನೋಡಿ ವಿಠ್ಠಲ್‌ಭಾಯ್‌ಗೆ ಖುಷಿಯಾಯಿತು. ಅವರು ತಮ್ಮನಿಗೆ ಹೇಳಿದರು, "ನಾನು ನಿನಗಿಂತ ದೊಡ್ಡವನು. ನಾನು ಇಂಗ್ಲೆಂಡಿಗೆ ಹೋಗಲು ಬಿಡು. ನಾನು ಇಂಗ್ಲೆಂಡಿನಿಂದ ಬಂದ ಮೇಲೆ ನೀನು ಹೋಗಬಹುದು. ಇಂಗ್ಲೆಂಡಿಗೆ ನಿನ್ನ ನಂತರ ಹೋಗುವುದಕ್ಕೆ ನನಗೆ ಆಗುವುದಿಲ್ಲ." ವಲ್ಲಭಭಾಯ್ ಮರುಮಾತ ನಾಡದೆ ಆ ಟಿಕೆಟನ್ನು ಅಣ್ಣನಿಗೆ ಕೊಟ್ಟುಬಿಟ್ಟರು. ಅತ್ಯಂತ ಆಸ್ಥೆಯಿಂದ ಮತ್ತು ಶ್ರಮದಿಂದ ಹಣವನ್ನು ಗಳಿಸಿ ಉಳಿಸಿ ಸಂಪಾದಿಸಿದ್ದ ಅವಕಾಶವನ್ನು ಅಣ್ಣನಿಗೆ ಮುಕ್ತವಾಗಿ ಬಿಟ್ಟುಕೊಟ್ಟರು. ಅಷ್ಟೇ ಅಲ್ಲ, ತಮ್ಮ ಉತ್ಕಟ ಆಸೆ ಆಕಾಂಕ್ಷೆಗಳನ್ನು ಅದುಮಿ ಹೇಳಿದರು, "ಈ ಹಣ ಮತ್ತು ಟಿಕೆಟ್ಟನ್ನು ನಿಮಗೆ ನೀಡುತ್ತಿದ್ದೇನೆ. ತೆಗೆದುಕೊಳ್ಳಿ. ಇಂಗ್ಲೆಂಡಿನಲ್ಲಿ ಇನ್ನೂ ಹೆಚ್ಚು ಹಣ ಬೇಕಾದರೆ ತಿಳಿಸಿ, ಕಳುಹಿಸಿ ಕೊಡುತ್ತೇನೆ." ಎಂತಹ ಹೃದಯ ವೈಶಾಲ್ಯತೆ ಮತ್ತು ಸಹೋದರ ಪ್ರೀತಿ![೨೪]

ಅಣ್ಣ ಮತ್ತು ತಮ್ಮ ಈ ವಿಷಯವನ್ನು ಗೋಪ್ಯವಾಗಿಟ್ಟಿದ್ದರು. ವಿಠ್ಠಲ್‌ಭಾಯ್‌ಗೆ ತಮ್ಮ ಪತ್ನಿ ದಿವಾಲಿಬಾ ಬಗ್ಗೆ ಭಯ ಅಥವಾ ಚಿಂತೆಯಿತ್ತು. ಆಕೆ ಒಬ್ಬ ಅನನುಕೂಲ ಪತ್ನಿ. ಅದಕ್ಕೇ ಆ ಗೌಪ್ಯತೆ. ೧೫ ದಿನಗಳ ನಂತರ ಒಂದು ದಿನ ಅಣ್ಣ ಮತ್ತು ತಮ್ಮ ಬೊಂಬಾಯಿಗೆ ಹೊರಟರು. ವಿಠ್ಠಲ್‌ಭಾಯ್ ತಮ್ಮ ಹೆಂಡತಿಗೆ ಒಂದಷ್ಟು ಹಣ ನೀಡಿ ಯಾವುದೋ ದಾವೆಯ ಬಗೆಗೆ ಬೊಂಬಾಯಿಗೆ ಹೋಗಿ ಬರುವುದಾಗಿ ಹೇಳಿದರು. ಬೊಂಬಾಯಿಯಲ್ಲಿ ಹಡಗು ಏರಿ ಅವರು ಇಂಗ್ಲೆಂಡಿಗೆ ಪ್ರಯಾಣ ಮಾಡಿದರು.

ವಲ್ಲಭಭಾಯ್ ಬೊಂಬಾಯಿಯಿಂದ ಹಿಂತಿರುಗಿದ ಮೇಲೆ ತಮ್ಮ ಅಣ್ಣ ಇಂಗ್ಲೆಂಡಿಗೆ ಹೋದುದನ್ನು ಹೊರಗೆಡಹಿದರು. ದಿವಾಲಿಬಾ ಒಂದು ಬಿರುಗಾಳಿಯನ್ನೇ ಎಬ್ಬಿಸಿದರು. ಅವರು ಜೋರಿನ ಹೆಂಗಸು. ತನ್ನನ್ನು ತನ್ನ ಗಂಡನಿಂದ ಬೇರೆ ಮಾಡಲು ವಲ್ಲಭ ಪಿತೂರಿ ಮಾಡಿದ್ದಾರೆಂದು ಆಪಾದಿಸಿ ಆಕೆ ಕೇಳಿದರು, "ಈಗ ನನ್ನನ್ನು ನೋಡಿಕೊಳ್ಳುವವರು ಯಾರು?" ಸ್ವಲ್ಪವೂ ತಡಮಾಡದೆ ವಲ್ಲಭ ಹೇಳಿದರು, "ಅತ್ತಿಗೆ, ನನ್ನ ಮನೆ ನಿಮ್ಮದು. ನಮ್ಮಣ್ಣ ಬರುವವರೆಗೆ ನೀವು ಬಂದು ನನ್ನ ಮನೆಯಲ್ಲಿ ಇರಿ." ದಿವಾಲಿಬಾ ಒಪ್ಪಿದಳು. ಆದರೆ ಆಗ ಮತ್ತೊಂದು ಸಮಸ್ಯೆ ಉದ್ಭವಿಸಿತು. ಆ ಕೋಪಿಷ್ಠೆ, ಹಠಮಾರಿ ಮತ್ತು ಮೊಂಡಿ ದಿವಾಲಿಬಾ ಮತ್ತು ವಲ್ಲಭ ಪತ್ನಿ ಜವೇರ್‌ಬಾ ನಡುಬೆ ಹೊಂದಾಣಿಕೆ ಬರಲಿಲ್ಲ. ಇಬ್ಬರೂ ಒಂದೇ ಮನೆಯಲ್ಲಿ ಬದುಕುವುದು ಅಸಾಧ್ಯವಾಯಿತು. ಆದರೆ ವಲ್ಲಭಭಾಯ್ ತಮ್ಮ ಅತ್ತಿಗೆಯನ್ನು ಹೊರಗೆ ಕಳುಹಿಸುವಹಾಗಿರಲಿಲ್ಲ. ಅಣ್ಣ ವಿಠ್ಠಲ್‌ಭಾಯ್ ಬರುವವರೆಗೆ ಅವರನ್ನು ಸಾಕುವುದು ಅವರ ಒಂದು ಜವಾಬ್ದಾರಿಯಾಗಿತ್ತು. ಅದರಿಂದ ಅವರ ಪತ್ನಿಯೇ ಮಕ್ಕಳೊಡನೆ ತನ್ನ ತೌರು ಮನೆಗೆ ಹೋದಳು. (ಉದಾತ್ತ ಗುಣದವರ ಹೆಂಡತಿ ಮಕ್ಕಳಿಗೆ ಸುಖವಿಲ್ಲವೆಂಬುದಕ್ಕೆ ಇದು ಒಂದು ಉದಾಹರಣೆ! – ಲೇಖಕ)

ವಿಠ್ಠಲ್‌ಭಾಯ್ ಪಟೇಲ್ ಇಂಗ್ಲೆಂಡಿನಲ್ಲಿ ಬ್ಯಾರಿಸ್ಟರ್ ಪರೀಕ್ಷೆಯನ್ನು ಪ್ರಥಮ ಶ್ರೇಣಿಯಲ್ಲಿ ಪಾಸು ಮಾಡಿ ಭಾರತಕ್ಕೆ ೧೯೦೮ರ ಆಗಸ್ಟ್‌ನಲ್ಲಿ ಹಿಂತಿರುಗಿದರು ಮತ್ತು ಬೊಂಬಾಯಿಯಲ್ಲಿ ಆಗ ಪ್ರಸಿದ್ಧ ವಕೀಲರಾಗಿದ್ದ ಮಿಸ್ಟರ್ ಇನ್‌ವೆರಾರಿಟಿಯವರ ಚೇಂಬರನ್ನು ಸೇರಿದರು.

ನಂತರ ಜವೇರ್‌ಬಾ ಹಿಂತಿರುಗಿ ಬಂದು ಗಂಡನನ್ನು ಸೇರಿಕೊಂಡರು. ಆದರೆ ಅಷ್ಟರಲ್ಲೇ ಅವರ ಸಣ್ಣ ಕರುಳಿನಲ್ಲಿ ಏನೋ ರೋಗ ಕಾಣಿಸಿತು. ವಲ್ಲಭ ಭಾಯ್ ಅವರನ್ನು ಬೊಂಬಾಯಿಗೆ ಕರೆದುಕೊಂಡು ಹೋಗಿ ಕಾಮ (Cama

Hospital) ಆಸ್ಪತ್ರೆಗೆ ಸೇರಿಸಿದರು. ಆಕೆಗೆ ಶಸ್ತ್ರ ಚಿಕಿತ್ಸೆ ಆಗಬೇಕೆಂದರು, ವೈದ್ಯರು. ಆದರೆ ಆಕೆ ಶಕ್ತಿಹೀನಳಾಗಿದ್ದುದರಿಂದ ಶಸ್ತ್ರ ಚಿಕಿತ್ಸೆಯನ್ನು ಆಕೆ ಚೇತರಿಸಿಕೊಳ್ಳುವವರೆಗೆ ಮುಂದೂಡಿದರು. ವಲ್ಲಭ ಸ್ವಲ್ಪ ದಿನ ಹೆಂಡತಿಯ ಬಳಿ ಇದ್ದು, ಶಸ್ತ್ರ ಚಿಕಿತ್ಸೆಯ ದಿನ ನಿಗದಿಯಾದಾಗ ತಿಳಿಸಬೇಕೆಂದು ಹೇಳಿ ಆನಂದ್‌ಗೆ ಬಂದರು. ಅಲ್ಲಿ ಅವರು ಒಬ್ಬ ಕೊಲೆ ಆಪಾದಿತನ ದಾವೆಯನ್ನು ತುರ್ತಾಗಿ ನಡೆಸಬೇಕಾಗಿತ್ತು. ವಲ್ಲಭ ಹೊರಡುತ್ತಾ ಇದ್ದಹಾಗೆ ಜವೇರ್‌ಬಾಯ್‌ಯ ಆರೋಗ್ಯ ಹದಗೆಟ್ಟು ತುರ್ತಾಗಿ ಶಸ್ತ್ರ ಚಿಕಿತ್ಸೆ ಮಾಡಬೇಕಾಯಿತು. ಶಸ್ತ್ರ ಚಿಕಿತ್ಸೆಯ ನಂತರ ಚೇತರಿಕೆ ಕಂಡುಬಂತು ಮತ್ತು ಆ ವಿಷಯವನ್ನು ವಲ್ಲಭಗೆ ತಾರಿನ ಮೂಲಕ ತಿಳಿಸಿದರು. ಸಂತೋಷಗೊಂಡ ವಲ್ಲಭಭಾಯ್ ಕೊಲೆ ಆಪಾದಿತನ ಕೇಸು ನಡೆಸಲು ಶುರು ಮಾಡಿದರು. ಅವರು ಒಬ್ಬ ಮುಖ್ಯ ಸಾಕ್ಷಿಯ ಪಾಟಿ ಸವಾಲು ನಡೆಸುತ್ತಿದ್ದಾಗ ಸುಮಾರು ೨ ಘಂಟೆ ಸಮಯದಲ್ಲಿ ಮತ್ತೊಂದು ತಾರು ಅವರ ಕೈಗೆ ಬಂದಿತು. ಅದು ಅವರ ಪತ್ನಿಯ ಸಾವಿನ ಸುದ್ದಿಯನ್ನು ತಂದಿತ್ತು. ತಾರನ್ನು ಓದಿಕೊಂಡು ಮುಖದಲ್ಲಿ ಯಾವ ಭಾವವನ್ನು ತೋರ್ಪಡಿಸದೆ ಅವರು ಪಾಟಿ ಸವಾಲನ್ನು ಮುಂದುವರೆಸಿದರು. ಆ ಪಾಟಿ ಸವಾಲು ಅವರ ಕೊಲೆ ಆಪಾದಿತ ಕಕ್ಷಿದಾರನ ಜೀವನ – ಮರಣದ ಪ್ರಶ್ನೆಯಾಗಿತ್ತು. ಕೊನೆಗೆ ಆ ಸಾಕ್ಷಿ ಸತ್ಯವನ್ನು ನುಡಿಯುವಂತೆ ಮಾಡಲು ವಲ್ಲಭ ಸಫಲರಾದರು. ಅವರ ಕಕ್ಷಿದಾರನ ಜೀವ ಉಳಿಯಿತು. ಆದರೆ ಅವರ ೨೯ ವರ್ಷದ ಪತ್ನಿ ಪಕ್ಕದಲ್ಲಿ ಪತಿಯಾಗಲಿ, ತಂದೆ ತಾಯಿಯಾಗಲಿ ಇಲ್ಲದೆ ಗತಿಸಿದ್ದಳು. ಸಾಯಂಕಾಲಕ್ಕೆ ಕೇಸು ಮುಗಿದ ಮೇಲೆಯೇ ತಾರಿನಲ್ಲಿದ್ದ ಆಸ್ಫೋಟಕ ಸುದ್ದಿ ಎಲ್ಲರಿಗೂ ತಿಳಿದದ್ದು. ಅಂದು ೧೯೦೯ರ ಜನವರಿ ೧೧ರ ದಿನಾಂಕ.[೨೫]

ವಲ್ಲಭ ತಮ್ಮ ಪ್ರಿಯ ಪತ್ನಿಯ ಸಾವಿನ ದುಃಖವನ್ನು ಮೌನವಾಗಿ ಗುಪ್ತವಾಗಿ ಅನುಭವಿಸಿದರು. ಮುಖದಲ್ಲಿ ಹೊರಗೆ ಪ್ರಕಟಿಸಲಿಲ್ಲ. ಕಣ್ಣೀರು ಹರಿಸಲಿಲ್ಲ. ಆದರೆ ಮನದೊಳಗೇ ಲಾವಾರಸ ಕುದಿಯುತ್ತಿತ್ತು. ಅವರ ಅಂದಿನ ಸ್ಥಿತಿಯನ್ನು 'ಹಿಮದೊಳಗಿನ ಜ್ವಾಲಾಮುಖಿ' ಎಂದು ಮೌಲಾನಾ ಶೌಕತ್ ಆಲಿ, ೧೯ ವರ್ಷಗಳ ನಂತರ, ವರ್ಣಿಸಿದ್ದಾರೆ.[೨೬]

ಮಕ್ಕಳಿಗೆ ಮಲತಾಯಿಯಿಂದ ಆಗಬಹುದಾದ ತೊಂದರೆಯನ್ನು ಗಮನಿಸಿ ೩೪ ವರ್ಷದ ವಲ್ಲಭಭಾಯ್ ಮತ್ತೆ ವಿವಾಹ ಆಗಬಾರದೆಂದು ನಿರ್ಧರಿಸಿದರು. ಪತ್ನಿ ಮೇಲಿನ ಪ್ರೀತಿಯೂ ಆ ನಿರ್ಧಾರಕ್ಕೆ ಕಾರಣವಾಗಿರಬಹುದು – ಎನ್ನುತ್ತಾರೆ ರಾಜ್‌ಮೋಹನ್ ಗಾಂಧಿ.

ಸ್ವಲ್ಪ ದಿನ ಕಳೆದ ನಂತರ ಅವರ ಇಂಗ್ಲೆಂಡಿನ ಗುರಿ ಮತ್ತೆ ಮರುಕಳಿಸಿತು. ತಮ್ಮ ಮಕ್ಕಳು – ಮಣಿ ಮತ್ತು ದಹ್ಯ – ಸ್ವಲ್ಪ ದೊಡ್ಡವರಾದ ಮೇಲೆ ಇಂಗ್ಲೆಂಡಿನ ಶಾಲೆಗಳಲ್ಲಿ ವ್ಯಾಸಂಗ ಮಾಡಬೇಕು ಎಂದೂ ಸಹ ಅವರು ಅಂದುಕೊಂಡರು. ಅಷ್ಟು ಹೊತ್ತಿಗೆ ಬೊಂಬಾಯಿಯಲ್ಲಿ ವಿಠ್ಠಲ್‌ಭಾಯ್ ಜೊತೆಗೆ ಸೇರಿದ್ದ ದಿವಾಲಿಬಾ ತೀವ್ರ ಅಸ್ವಸ್ಥಳಾದಳು. ಅದರಿಂದ ವಲ್ಲಭ ತಮ್ಮ ಇಂಗ್ಲೆಂಡಿನ ಪಯಣವನ್ನು ಸ್ವಲ್ಪ ಮುಂದೂಡಿದರು. ಜವೇರ್‌ಬಾ ಗತಿಸಿದ ಒಂದು ವರ್ಷದ ಒಳಗೆ ದಿವಾಲಿಬಾ ಸಹ ಗತಿಸಿದಳು.

ಆ ವೇಳೆಗೆ ವಲ್ಲಭಭಾಯ್‌ಯ ತಮ್ಮ ಕಾಶಿಭಾಯ್ ಜಿಲ್ಲಾ ಪ್ಲೀಡರ್ ಪರೀಕ್ಷೆಯನ್ನು ಪಾಸುಮಾಡಿದ್ದರು. ಅವರಿಗೆ ತಮ್ಮ ಮನೆ ಮತ್ತು ದಾವೆಗಳನ್ನು ವಹಿಸಿ, ಮಕ್ಕಳನ್ನು ಬೊಂಬಾಯಿಯ ಗ್ರಾಂಟ್ ರಸ್ತೆಯ ಕ್ವೀನ್ಸ್ ಮೇರಿ ಶಾಲೆಯ ಮಿಸ್. ವಿಲ್ಸನ್‌ರವರ ಬಳಿ ಬಿಟ್ಟು, ಜುಲೈ ೧೯೧೦ರಲ್ಲಿ ಹಡಗಿನಲ್ಲಿ ಇಂಗ್ಲೆಂಡಿಗೆ ಹೊರಟರು.

ಅವರ ಅಣ್ಣ ಮಾಡಿದ ಹಾಗೆ ವಲ್ಲಭ ಸಹ ಯಾರಿಗೂ ಹೇಳದೆ ಗುಪ್ತವಾಗಿ ಹೊರಟರು. ಅವರ ಪ್ರಯಾಣದ ವಿಷಯ ವಿಠ್ಠಲ್‌ಭಾಯ್, ಕಾಶಿಭಾಯ್ ಮತ್ತು ಇಬ್ಬರು ಮಕ್ಕಳಿಗೆ ಮಾತ್ರ ಗೊತ್ತಿತ್ತು. ಈ ಗೋಪ್ಯಕ್ಕೆ ಕಾರಣವನ್ನು ಕರಮ್‌ಸದ್‌ನ ತಮ್ಮ ಮನೆಯವರಿಗೆ ಇಂಗ್ಲೆಂಡಿನಿಂದ ತಿಳಿಸಿದರು. ಎಲ್.ಎಲ್.ಬಿ. ಪದವೀಧರರಲ್ಲದವರಿಗೆ ಬಾರ್–ಅಟ್–ಲಾ ಗೆ ಪ್ರವೇಶವನ್ನು ನಿಷೇಧಿಸುವ ನಿಯಮ ಶೀಘ್ರದಲ್ಲೇ ಬರಲಿದ್ದುದು ಅವರು ತರಾತುರಿಯಿಂದ ಇಂಗ್ಲೆಂಡಿಗೆ ಹೊರಡುವಂತೆ ಮಾಡಿತ್ತು. ಜೊತೆಗೆ ಯಾವುದೇ ಅಡೆತಡೆಗಳು ಬಾರದಿರಲಿ ಎನ್ನುವುದೂ ಕಾರಣವಾಗಿರಬಹುದು.

೨.೩ ಇಂಗ್ಲೆಂಡಿನಲ್ಲಿ ವ್ಯಾಸಂಗ

ವಲ್ಲಭಭಾಯ್ ಪಟೇಲರ ಇಂಗ್ಲೆಂಡಿನ ಪ್ರಯಾಣದ ಉದ್ದೇಶ ಎರಡು: ಮೊದಲನೆಯದು ವಕೀಲಿ ವೃತ್ತಿಯಲ್ಲಿ ತಮ್ಮ ಘನತೆ ಮತ್ತು ಸ್ಥಾನವನ್ನು ಹೆಚ್ಚಿಸಿಕೊಳ್ಳುವುದಕ್ಕಾಗಿ ಬ್ಯಾರಿಸ್ಟರ್ ಪದವಿಗೆ ವ್ಯಾಸಂಗ ಮಾಡುವುದು. ಜಿಲ್ಲಾ ಪ್ಲೀಡರ್ ಆಗಿ ಅವರು ಕೆಳ ದರ್ಜೆಯ ನ್ಯಾಯಾಲಯಗಳಲ್ಲಿ ದಾವೆಗಳನ್ನು ನಡೆಸಬಹುದಾಗಿತ್ತೇ ಹೊರತು ಉಚ್ಚ ನ್ಯಾಯಾಲಯಗಳಲ್ಲಿ ವಕೀಲಿ ನಡೆಸುವ ಹಾಗಿರಲಿಲ್ಲ. ಬ್ಯಾರಿಸ್ಟರ್ ಆದರೆ ಎಲ್ಲಾ ನ್ಯಾಯಾಲಯಗಳಲ್ಲೂ ಹಾಜರಾಗ ಬಹುದಾಗಿತ್ತು. ಎರಡನೆಯದು ಇಂಗ್ಲೆಂಡಿನ ಜನ ಮತ್ತು ಸಂಸ್ಥೆಗಳನ್ನು ಹತ್ತಿರದಿಂದ ನೋಡಿ ಅವರು 'ರವಿ ಮುಳುಗದ ಸಾಮ್ರಾಜ್ಯ'ವನ್ನು ನಿರ್ಮಿಸಲು ಸಾಧ್ಯವಾದ ಅವರ ಶಕ್ತಿಯ ರಹಸ್ಯವನ್ನು ತಿಳಿಯುವುದು.[೨೭]

ವಲ್ಲಭಭಾಯ್‌ರವರು ತಮ್ಮ ಮೊದಲನೆ ಉದ್ದೇಶ ಸಾಧನೆಯಲ್ಲಿ ಎಷ್ಟು ಶ್ರದ್ಧಾವಂತರಾಗಿದ್ದರೆಂದರೆ ಹಡಗಿನಲ್ಲಿ ಪ್ರಯಾಣಿಸುತ್ತಿದ್ದ ಕಾಲದಲ್ಲೇ ಕಾನೂನು ಗ್ರಂಥಗಳ ವ್ಯಾಸಂಗವನ್ನು ಆರಂಭಿಸಿಬಿಟ್ಟರು. ಬೊಂಬಾಯಿಯಿಂದ ಹಡಗು ಹೊರಟ ಮೊದಲ ಮೂರು ದಿನ ಅವರು ಕಡಲಬೇನೆಯಿಂದ ಬಹಳ ಸಂಕಟ ಅನುಭವಿಸಿದರು. ತಲೆ ಸುತ್ತು ಮತ್ತು ವಾಂತಿಗೆ ಸಿಕ್ಕಿ, ತಮ್ಮ ಕೊಠಡಿಯಿಂದ ಬೇರೆ ಯಾವುದೋ ಕೊಠಡಿಯಲ್ಲಿ ಏಳಲಾರದೆ ಬಿದ್ದು ಹೋಗಿದ್ದರು. ಹಡಗಿನ ಕಪ್ತಾನ ಅವರನ್ನು ಹುಡುಕಲು ಆಜ್ಞಾಪಿಸಿದನು. ಮೂರು ದಿನಗಳ ನಂತರ ಅವರು ಪತ್ತೆ ಆದರು. ಕಪ್ತಾನ ಅವರಿಗೆ ಹೇಳಿದ "ಇದು ನಿಮ್ಮ ಕ್ಯಾಬಿನ್ ಅಲ್ಲ. ನೀವು ಹೆಚ್ಚಿನ ಹಣ ತೆರಬೇಕು." ವಲ್ಲಭಭಾಯ್ ಉತ್ತರಿಸಿದರು, "ನನ್ನ ಠೇವಣಿಯಿಂದ ಮುರಿದುಕೊಳ್ಳಿ. ಈಗ ನಾನು ಮೇಲಕ್ಕೆ ಏಳಲಾರೆ." "ಚಿಂತಿಸಬೇಡಿ. ನೀವು ಮೊದಲೇ ಹೇಳಿದ್ದರೆ ನಾವು ನಿಮಗೆ ಸಹಾಯ ಮಾಡಬಹುದಿತ್ತು, ಏನಾದರು ಔಷಧಿ ಕೊಡಬಹುದಿತ್ತು. ಬೇರೆಯವರೂ ಸಹ ಕಡಲಬೇನೆಯಿಂದ ನರಳುತ್ತಿದ್ದಾರೆ. ಆದರೆ ಸ್ವಲ್ಪ ದಿನಗಳಲ್ಲಿ ಅದು ಶಮನವಾಗುತ್ತದೆ."[೨೮]

ಕಡಲಬೇನೆಯು ಶಮನವಾದ ನಂತರ ವಲ್ಲಭಭಾಯ್ 'ಜಸ್ಟೀನಿಯನ್'ನ 'ರೋಮನ್ ಲಾ' ಗ್ರಂಥವನ್ನು ಓದಲು ಆರಂಭಿಸಿದರು. ಅದನ್ನು ತದೇಕಚಿತ್ತದಿಂದ ಓದಿ ಹಡಗು ಫ್ರಾನ್ಸಿನ ಮಾರ್ಸೈಲ್ಸ್ ಬಂದರನ್ನು ತಲುಪುವ ಹೊತ್ತಿಗೆ ಸಂಪೂರ್ಣವಾಗಿ ಅಧ್ಯಯನ ಮಾಡಿದ್ದರು. ಅಲ್ಲಿಂದ ಕಾಲೈಸ್‌ಗೆ ರೈಲಿನಲ್ಲಿ ಪ್ರಯಾಣ ಮಾಡಿ, ನಂತರ ಡೊವರ್ ಮೂಲಕ ಲಂಡನ್ ತಲುಪಿದರು.

ಲಂಡನ್‌ನಲ್ಲಿ ಅವರು ಬ್ಯಾರಿಸ್ಟರ್ ಪದವಿಯ ವ್ಯಾಸಂಗಕ್ಕಾಗಿ 'ಮಿಡ್ಲ್ ಟೆಂಪಲ್' ಅನ್ನುವ ಕಾಲೇಜನ್ನು ಸೇರಿದರು. ಲಂಡನ್‌ನಲ್ಲಿ 'ಇನ್ಸ್ ಆಫ್ ಕೋರ್ಟ್' ಎಂದು ಕರೆಯಲ್ಪಡುವ ನಾಲ್ಕು ಕಾನೂನು ಸಂಸ್ಥೆಗಳಿವೆ. ಅವು ಮಿಡ್ಲ್ ಟೆಂಪಲ್, ಇನ್ನರ್ ಟೆಂಪಲ್, ಲಿಂಕನ್ಸ್ ಇನ್ ಮತ್ತು ಗ್ರೇಸ್ ಇನ್. ಇವು ಕಾನೂನು ವಿದ್ಯಾರ್ಥಿಗಳಿಗೆ ತರಬೇತಿ, ಪುಸ್ತಕ ಭಂಡಾರ, ಊಟ, ವಸತಿ, ಬಹುಮಾನ ಮುಂತಾದ ಸೌಲಭ್ಯಗಳನ್ನು ಒದಗಿಸುತ್ತವೆ.

ವಲ್ಲಭಭಾಯ್ ೧೯೧೦ರಲ್ಲಿ ಮಿಡ್ಲ್ ಟೆಂಪಲ್ ಅನ್ನು ಸೇರಿದರು. (ಅದೇ ವರ್ಷ ಜವಹರ್ ಲಾಲ್ ನೆಹರು ಇನ್ನರ್ ಟೆಂಪಲ್ ಅನ್ನು, ಹ್ಯಾರೊ ಮತ್ತು ಕೇಂಬ್ರಿಜ್‌ನಲ್ಲಿ ವ್ಯಾಸಂಗ ಮುಗಿಸಿ, ಸೇರಿದರು. ಆದರೆ, ಲಂಡನ್‌ನಲ್ಲಿ ಜವಹರ್ ಮತ್ತು ವಲ್ಲಭಭಾಯ್ ಭೇಟಿಯಾಗಲಿಲ್ಲ.)

ಬ್ಯಾರಿಸ್ಟರ್ ಪದವಿಯ ವ್ಯಾಸಂಗದ ಅವಧಿ ಸಾಮಾನ್ಯವಾಗಿ ಮೂರು

ವರ್ಷ. ಪ್ರತಿ ವರ್ಷವೂ ನಾಲ್ಕು ಟರ್ಮ್‌ಗಳಾಗಿ ವಿಭಾಗವಾಗಿರುತ್ತದೆ. ಒಬ್ಬ ವಿದ್ಯಾರ್ಥಿಯು, ತಾನು ಬಯಸಿದರೆ, ಆರು ಟರ್ಮ್‌ಗಳ ನಂತರ ಅಂದರೆ ೧೮ ತಿಂಗಳುಗಳ ನಂತರ ಪರೀಕ್ಷೆಯನ್ನು ತೆಗೆದುಕೊಳ್ಳಬಹುದು. ಒಬ್ಬ ವಿದ್ಯಾರ್ಥಿ ಪರೀಕ್ಷೆಗಳನ್ನು 'ಗೌರವಗಳೊಡನೆ' ತೇರ್ಗಡೆ ಹೊಂದಿದರೆ ಅವನಿಗೆ ಎರಡು ಟರ್ಮ್‌ಗಳ ವಿನಾಯಿತಿ ದೊರಕುತ್ತದೆ.

ವಲ್ಲಭಭಾಯ್‌ರವರು ಗೌರವ ಮತ್ತು ವಿನಾಯಿತಿ ಎರಡನ್ನೂ ಪಡೆಯಲು ತೀರ್ಮಾನಿಸಿದರು. ಅವರು ಆದಷ್ಟೂ ಜಾಗ್ರತೆಯಾಗಿ ಆದಷ್ಟೂ ಕಡಿಮೆ ವೆಚ್ಚದಲ್ಲಿ ಬ್ಯಾರಿಸ್ಟರ್ ಪದವಿಗಳಿಸಿ ಭಾರತಕ್ಕೆ ತಮ್ಮ ಪುಟ್ಟ ಮಕ್ಕಳ ಬಳಿಗೆ ಹಿಂತಿರುಗಬೇಕಾಗಿತ್ತು. ಅದರಿಂದ ಅವರು ಮಿಡ್ಲ್ ಟೆಂಪಲ್‌ನ ವಸತಿಗೃಹದಲ್ಲಿ ವಾಸಿಸದೆ ಹ್ಯಾಂಪ್‌ಸ್ಟೆಡ್‌ನಲ್ಲಿ 'ಡಿಗ್' ಎಂದು ಕರೆಯಲ್ಪಡುವ ಅಗ್ಗದ ವಸತಿಗಳಲ್ಲಿ ವಾಸಿಸಿದರು. ಅಲ್ಲಿಂದ ಮಿಡ್ಲ್ ಟೆಂಪಲ್‌ಗೆ ಸುಮಾರು ೬–೭ ಕಿ.ಮೀ. ದೂರ. ಅವರು ಪ್ರತಿ ದಿನ ಬೆಳಗ್ಗೆ ಬೇಗನೆ ಹೊರಟು ಅಷ್ಟು ದೂರ ನಡೆದು ಬಂದು ಮಿಡ್ಲ್ ಟೆಂಪಲ್‌ನ ಪುಸ್ತಕ ಭಂಡಾರ ತೆರೆಯುವುದಕ್ಕೆ ಮುಂಚೆಯೆ ಅದನ್ನು ತಲುಪಿ ಕಾಯುತ್ತಿದ್ದರು ಮತ್ತು ಅದು ಮುಚ್ಚುವವರೆಗೆ ಅಂದರೆ ಸಂಜೆ ೬ ಘಂಟೆವರೆಗೆ ಓದಿ ಮತ್ತೆ ನಡೆದುಕೊಂಡು ತಮ್ಮ ವಸತಿಗೆ ಹಿಂತಿರುಗುತ್ತಿದ್ದರು. ದುಬಾರಿ ಕಾನೂನು ಗ್ರಂಥಗಳನ್ನು ಕೊಂಡು ಕೊಳ್ಳಲು ಅವರಿಗೆ ಸಾಧ್ಯವಿಲ್ಲವಾದ್ದರಿಂದ ಈ ರೀತಿ ಓದುತ್ತಿದ್ದರು. ರಾತ್ರಿ ಕೊಠಡಿಗೆ ಹಿಂತಿರುಗಿದ ಮೇಲೆ ಮತ್ತೆ ತಮ್ಮ ಓದನ್ನು ಮುಂದುವರೆಸುತ್ತಿದ್ದರು. ಹೀಗೆ ಅವರು ದಿನಕ್ಕೆ ೧೬ ಘಂಟೆಗಳ ಕಾಲ ಓದುತ್ತಿದ್ದರು. ಇಡೀ ಹಗಲನ್ನು ಬ್ರೆಡ್ ತಿಂದು, ಹಾಲು ಮತ್ತು ಟೀ ಕುಡಿದು ಕಳೆಯುತ್ತಿದ್ದರು. ಅವರು ಲಂಡನ್‌ನಲ್ಲಿದ್ದ ಸುಮಾರು ಮೂರು ವರ್ಷಗಳಲ್ಲಿ ಎಂದೂ ಒಳ್ಳೆಯ ಹೊಟೆಲ್‌ಗೆ ಹೋಗಿ ಪೂರ್ಣ ಊಟ ಮಾಡಲಿಲ್ಲ. ಅವರ ರೈತಾಪಿ ಜೀವನದ ಹಿನ್ನಲೆ, ಅವರು ದೈಹಿಕ ಶ್ರಮವನ್ನು ಸಹಿಸಲು ಶಕ್ತರನ್ನಾಗಿಸಿತ್ತು.

ವಲ್ಲಭಭಾಯ್‌ರವರು ತಮ್ಮ ಗುರಿಯಿಂದ ಸ್ವಲ್ಪವೂ ಆಚೆ ಈಚೆ ಸರಿಯಲಿಲ್ಲ. ತಮ್ಮೆಲ್ಲಾ ಕಾಲವನ್ನು ಓದುವುದಕ್ಕೇ ಮೀಸಲಾಗಿಟ್ಟಿದ್ದರು. ನಾಟಕ ನೋಡುತ್ತಿರಲಿಲ್ಲ, ಪ್ರೇಕ್ಷಣೀಯ ಸ್ಥಳಗಳಿಗೆ ಹೋಗುತ್ತಿರಲಿಲ್ಲ ಮತ್ತು ಸಂತೋಷ ಕೂಟಗಳಲ್ಲಿ ಭಾಗವಹಿಸುತ್ತಿರಲಿಲ್ಲ. ಇಂಗ್ಲೆಂಡಿನ ಜನರ ಯಶಸ್ಸಿನ ರಹಸ್ಯವನ್ನು ಭೇದಿಸುವುದು ಅವರ ಒಂದು ಉದ್ದೇಶ್ಯವಾಗಿದ್ದರೂ, ಅದಕ್ಕಾಗಿ ವಿಶೇಷ ಕಾಲವನ್ನು ವ್ಯಯ ಮಾಡಲಿಲ್ಲ. ಅವರು ನಡೆದಾಡುವಾಗ ಏನನ್ನು ವೀಕ್ಷಿಸಲು ಅಥವಾ ಗ್ರಹಿಸಲು ಸಾಧ್ಯವಾಯಿತೋ ಅಷ್ಟಕ್ಕೇ ತೃಪ್ತರಾದರು.

೧೯೧೧ರ ಜನವರಿಯಲ್ಲಿ ವಲ್ಲಭಭಾಯ್ ತಮ್ಮ ಪ್ರಥಮ ಪರೀಕ್ಷೆಯನ್ನು ಎದುರಿಸಿದರು. ಆ ಪರೀಕ್ಷೆಯಲ್ಲಿ 'ಈಕ್ವಿಟಿ' ಎನ್ನುವ ವಿಷಯದಲ್ಲಿ ಪ್ರಥಮ ರ್‍ಯಾಂಕ್ ಗಳಿಸಿ, ಐದು ಪೌಂಡ್ ಸ್ಟರ್ಲಿಂಗ್ ಬಹುಮಾನ ಪಡೆದರು. ಗಾಡ್‌ಫ್ರೇ ಡೇವಿಸ್ ಎಂಬ ಮತ್ತೊಬ್ಬ ವಿದ್ಯಾರ್ಥಿಯೂ ಐದು ಪೌಂಡ್ ಸ್ಟರ್ಲಿಂಗ್ ಬಹುಮಾನ ಗಳಿಸಿದ್ದನು. ಆ ಸಂದರ್ಭದಲ್ಲಿ ವಲ್ಲಭಭಾಯ್ ತಮ್ಮ ಅಣ್ಣ ನರಸೀಭಾಯ್‌ಗೆ ಬರೆದ ಪತ್ರ ಹೀಗಿದೆ:

> ಗೌರವಾನ್ವಿತ ಅಣ್ಣ ನರಸೀಭಾಯ್, ನಾನು ಒಂದು ಪರೀಕ್ಷೆಯನ್ನು ಬರೆದಿದ್ದೇನೆ. ನಾನು ಪ್ರಥಮ ರ್‍ಯಾಂಕ್‌ನಲ್ಲಿ ತೇರ್ಗಡೆ ಹೊಂದಿದ್ದೇನೆ. ತಂದೆ ಮತ್ತು ತಾಯಿಯವರಿಗೆ ನನ್ನ ನಮಸ್ಕಾರಗಳನ್ನು ತಿಳಿಸಿ ಮತ್ತು ಅಲ್ಲಿಯ ಸುದ್ದಿಗಳನ್ನು ಕಳುಹಿಸುತ್ತಿರಿ. ಕಾಶಿಭಾಯ್ ಬರೆಯುವುದೇ ಇಲ್ಲ..... ದೈವೇಚ್ಛೆ ಇದ್ದರೆ ಎರಡು ವರ್ಷ ಬೇಗನೆ ಕಳೆಯುತ್ತದೆ ಮತ್ತು ನಾನು ನಿಮ್ಮೆಲ್ಲರನ್ನು ನೋಡಲು ಸಾಧ್ಯವಾಗುತ್ತದೆ. ನಿಮ್ಮ ಸೇವಕ ವಲ್ಲಭಭಾಯ್[೨೯]

ವಲ್ಲಭಭಾಯ್ ಅಂತಿಮ ಪರೀಕ್ಷೆಯನ್ನು ಜೂನ್ ೧೯೧೨ರಲ್ಲಿ ತೆಗೆದುಕೊಂಡರು. ಅದರಲ್ಲೂ ಸಹ ಪ್ರಥಮ ರ್‍ಯಾಂಕ್ ಜೊತೆಗೆ ಪ್ರಥಮ ದರ್ಜೆ ಗಳಿಸಿ ಐವತ್ತು ಪೌಂಡ್ ಸ್ಟರ್ಲಿಂಗ್ ಬಹುಮಾನ ಪಡೆದರು. ಅದರಿಂದ ಅವರಿಗೆ ಎರಡು ಟರ್ಮ್‌ಗಳ ವಿನಾಯಿತಿ ದೊರೆಯಿತು. ಅವರಿಗೆ ಇನ್ನು ಉಳಿದದ್ದು ೬ ತಿಂಗಳ ಆಲಸ್ಯದ ಕಾಲ, ಅಂದರೆ ಸೆಪ್ಟೆಂಬರ್‌ವರೆಗಿನ ಮೂರು ತಿಂಗಳ ಬೇಸಿಗೆ ರಜೆ ಮತ್ತು ಆ ನಂತರ ೩ ತಿಂಗಳ ಆಲಸ್ಯದ ಟರ್ಮ್. ಆ ಟರ್ಮ್‌ನಲ್ಲಿ ಅವರು ನಿಗದಿಯಾದಷ್ಟು ಭೋಜನಗಳಲ್ಲಿ ಭಾಗವಹಿಸಬೇಕು, ಅಷ್ಟೆ. ಆ ನಂತರ ಪದವಿ ಪ್ರದಾನ.

ವಲ್ಲಭಗೆ ಆರು ತಿಂಗಳನ್ನು ವ್ಯರ್ಥವಾಗಿ ಕಳೆಯಲು ಇಷ್ಟವಿರಲಿಲ್ಲ. ಅದರಿಂದ ಆ ಎರಡು ಟರ್ಮ್‌ಗಳ ವಿನಾಯಿತಿಗಾಗಿ ಅರ್ಜಿ ಸಲ್ಲಿಸಿದರು. ಅಂದರೆ ಅವರಿಗೆ ಒಟ್ಟು ನಾಲ್ಕು ಟರ್ಮ್‌ಗಳ ವಿನಾಯಿತಿ ಕೊಡಬೇಕಾಯಿತು. ಇವರ ಅರ್ಜಿಯನ್ನು ಪರಿಶೀಲಿಸಿ ಚರ್ಚಿಸಿದ ಸಂವಿಧಾನ ಸಮಿತಿ, ಮುಂದೆ ಕಡಿಮೆ ಅರ್ಹತೆಯವರಿಗೂ ವಿನಾಯಿತಿ ಕೊಡಬೇಕಾಗುವ ಪರಿಸ್ಥಿತಿ ಉಂಟಾಗಬಹುದೆಂಬ ಕಾರಣ ಒಡ್ಡಿ ವಲ್ಲಭಭಾಯ್‌ರವರ ಬೇಡಿಕೆಯನ್ನು ನಿರಾಕರಿಸಿತು.

ವಲ್ಲಭಭಾಯ್ ೧೯೧೨ರ ಬೇಸಿಗೆಯಲ್ಲಿ ಇಂಗ್ಲೆಂಡ್, ಸ್ಕಾಟ್ಲೆಂಡ್ ಮತ್ತು ಐರ್ಲೆಂಡ್‌ನಲ್ಲಿ ಸುತ್ತಾಡಿದರು. ಈ ನಡುವೆ ಕಾಲಿನಲ್ಲಿ ಹೊಪ್ಪಳೆಗಳು ಬಂದು ಅವರು ಎರಡುವರೆ ತಿಂಗಳು ಆಸ್ಪತ್ರೆಯಲ್ಲಿ ಇರಬೇಕಾಯಿತು.

ಆಲಸ್ಯದ ಟರ್ಮ್‌ನ ಕಾಲವನ್ನು ವಲ್ಲಭಭಾಯ್ ವ್ಯರ್ಥವಾಗಿ ಕಳೆಯಲಿಲ್ಲ. ಆ ಕಾಲದಲ್ಲಿ ಅವರು ಲಂಡನ್ನಿನ ನ್ಯಾಯಾಲಯಗಳಿಗೆ ಹೋಗಿ ಅಲ್ಲಿಯ ನ್ಯಾಯ ನೀಡುವ ವಿಧಾನವನ್ನು ವೀಕ್ಷಿಸುತ್ತಿದ್ದರು. ಅಲ್ಲಿಯ ಜನರ ವೈಯುಕ್ತಿಕ ಸ್ವಾತಂತ್ರ್ಯದ ರಕ್ಷಣೆ, ಅಲಿಖಿತ ಮೂಲಭೂತ ಹಕ್ಕುಗಳ ರಕ್ಷಣೆ ಮತ್ತು ಕಾನೂನನ್ನು ಗೌರವಿಸುವ ಸ್ವಭಾವ ಮುಂತಾದುವನ್ನು ಗಮನಿಸಿದರು. ಅಲ್ಲಿಯ ಜನ ಒಗ್ಗಟ್ಟಿನಿಂದಿರುತ್ತಾರೆ, ತಮ್ಮ ಸಂಸ್ಕೃತಿ ಮತ್ತು ಸಂಪ್ರದಾಯಗಳ ಬಗೆಗೆ ಅವರಿಗೆ ಬಹಳ ಹೆಮ್ಮೆ, ಅವರು ಸ್ವಭಾವತಃ ಸೌಜನ್ಯತೆಯ ಮತ್ತು ಸ್ನೇಹಪರ ಜನ, ಅವರಿಗೆ ರಾಜಕೀಯದಲ್ಲಿ ಮಾರ್ಗದರ್ಶನ ನೀಡುವ ಅನೇಕ ಪ್ರಜಾಸತ್ತಾತ್ಮಕ ಸಂಸ್ಥೆಗಳಿವೆ. ಆದರೆ ಭಾರತಕ್ಕೆ ಬಂದಾಕ್ಷಣ ಅವರ ಬಣ್ಣ ಸಂಪೂರ್ಣವಾಗಿ ಬದಲಾಗುತ್ತದೆ – ಎಂಬುದನ್ನು ವಲ್ಲಭಭಾಯ್ ಗಮನಿಸಿದರು.[೩೦]

ಆಲಸ್ಯದ ಟರ್ಮ್ ೧೯೧೨ರ ಡಿಸೆಂಬರ್‌ನಲ್ಲಿ ಮುಗಿಯಿತು. ಜನವರಿ ೧೯೧೩ರಲ್ಲಿ ಅವರ ಪದವಿ ಪ್ರದಾನ ಅಥವಾ 'ವಕೀಲಿ ವೃತ್ತಿಗೆ ಕರೆ.' ಅದಕ್ಕೆ ಮುಂಚೆ ಅವರ ಹೆಸರನ್ನು ಸೂಚಿಸಲು ಒಬ್ಬ 'ಬೆಂಚರ್' ಮತ್ತು ಆ ಸೂಚನೆಯನ್ನು ಅನುಮೋದಿಸಲು ಮತ್ತೊಬ್ಬ 'ಬೆಂಚರ್'ನನ್ನು ಅವರು ಕಂಡುಕೊಳ್ಳಬೇಕಾಗಿತ್ತು. 'ಬೆಂಚರ್' ಎಂದರೆ ಒಬ್ಬ ಚುನಾಯಿತನಾದ ಕಾನೂನು ತಜ್ಞ. ಆದರೆ ವಲ್ಲಭಭಾಯ್‌ಗೆ ಯಾವ 'ಬೆಂಚರ್'ನ ಪರಿಚಯವೂ ಇರಲಿಲ್ಲ. ಅವರು ಬೆಂಚರ್‌ಗಳ ಪಟ್ಟಿಯಿಂದ ಸುಮ್ಮನೆ ಒಂದು ಹೆಸರನ್ನು ಆರಿಸಿಕೊಂಡು ಅವರನ್ನು ಸಂಧಿಸಿದರು. ಅದೃಷ್ಟವಶಾತ್ ಆ ವ್ಯಕ್ತಿ ಅವರನ್ನು ಪದವಿಗೆ 'ಪ್ರಪೋಸ್' ಮಾಡಲು ಒಪ್ಪಿದರು. ಅನಂತರ ವಲ್ಲಭಭಾಯ್‌ಗೆ ತಿಳಿಯಿತು ಅವರು ಬೊಂಬಾಯಿಯ ಮುಖ್ಯ ನ್ಯಾಯಮೂರ್ತಿ ಸರ್ ಬೇಸಿಲ್ ಸ್ಕಾಟ್‌ರವರ 'ಕಸಿನ್' ಎಂಬುದು. ಒಬ್ಬ ಅನುಮೋದಕ ಬೆಂಚರ್‌ನನ್ನು ಅವರೇ ಗೊತ್ತು ಮಾಡಿಕೊಟ್ಟರು.

'ವಕೀಲಿಗೆ ಕರೆಯುವ' ಸಮಾರಂಭ ೨೭ ಜನವರಿ ೧೯೧೩ರಂದು ಗಾಂಭೀರ್ಯ ಮತ್ತು ವೈಭವದಿಂದ ನಡೆಯಿತು. ಎಲ್ಲ ಸದಸ್ಯರು ಮೆರವಣಿಗೆಯಲ್ಲಿ ನಡೆದರು. ವಲ್ಲಭಭಾಯ್ ಪ್ರಥಮ ರ್‍ಯಾಂಕ್ ಪಡೆದಿದ್ದುದರಿಂದ ಅವರಿಗೆ ಹೊಸ ಬ್ಯಾರಿಸ್ಟರ್‌ಗಳ ಮೆರವಣಿಗೆಯಲ್ಲಿ ಗೌರವದ ಸ್ಥಾನ ನೀಡಿದ್ದರು. ಕರಮ್‌ಸದ್‌ನ ರೈತನ ಮಗ ತನ್ನ ಉದಾತ್ತ ಮತ್ತು ಉನ್ನತ ಗುರಿಯನ್ನು ಅತ್ಯಂತ ಉತ್ತಮ ರೀತಿಯಲ್ಲಿ ಸಾಧಿಸಿದ್ದನು.

ವಲ್ಲಭಭಾಯ್ ಪಟೇಲರ ಹೆಸರನ್ನು ಸೂಚಿಸಿದ್ದ ಬೆಂಚರ್ ಅವರನ್ನು ಮಾರನೆಯ ದಿನ ತಮ್ಮೊಡನೆ ಭೋಜನ ಮಾಡಬೇಕೆಂದು ಅಹ್ವಾನಿಸಿದರು. ಆದರೆ ವಲ್ಲಭಭಾಯ್ ಮಾರನೆ ಬೆಳಗ್ಗೆಯೆ ಭಾರತಕ್ಕೆ ಪ್ರಯಾಣ ಬೆಳೆಸಬೇಕಾಗಿತ್ತು. ಅದರಿಂದ ಅವರು ಆ ಆಹ್ವಾನವನ್ನು ವಿನಯಪೂರ್ವಕವಾಗಿ ನಿರಾಕರಿಸಿದರು. ಆ ಬೆಂಚರ್ ವಲ್ಲಭಭಾಯ್‌ಗೆ ಭೋಜನ ನೀಡಲು ಆಗದೆ ಹೋದರೂ ಬೇರೆ ಒಂದು ಅಮೂಲ್ಯ ಸಹಾಯ ನೀಡಿದರು. ಅವರು ತಮ್ಮ ಕಸಿನ್ ಮುಖ್ಯ ನ್ಯಾಯ ಮೂರ್ತಿ ಸರ್ ಬೇಸಿಲ್ ಸ್ಕಾಟ್‌ರವರಿಗೆ ಒಂದು ಪರಿಚಯ ಪತ್ರವನ್ನು ನೀಡಿದರು. ವಲ್ಲಭಭಾಯ್ ಆ ಪರಿಚಯ ಪತ್ರವನ್ನು ತಮ್ಮ ಜೋಬಿನಲ್ಲಿ ಜೋಪಾನವಾಗಿ ಇಟ್ಟುಕೊಂಡು ಆ ಬೆಂಚರ್‌ಗೆ ವಂದಿಸಿ, ತಮ್ಮ ವಸತಿಯ ಕಡೆಗೆ ನಡೆದರು.[೩೧]

ಮಾರನೆಯ ಬೆಳಗ್ಗೆ ಅವರು ಭಾರತಕ್ಕೆ ಹಡಗಿನಲ್ಲಿ ಹೊರಟರು. ತಮ್ಮ ಜೊತೆಯಲ್ಲಿ ಪಾಶ್ಚಿಮಾತ್ಯ ಶೈಲಿಯ ಉಡುಪುಗಳು ಹಾಗೂ ಹ್ಯಾಟುಗಳು, ಫ್ರಾನ್ಸಿನ ಬ್ರಾಂಡಿಯ ರುಚಿ ಮತ್ತು ನಿರಂತರ ಧೂಮಪಾನದ ಹವ್ಯಾಸವನ್ನು ಕೊಂಡೊಯ್ದರು.[೩೨]

೨.೪. ಯಶಸ್ವಿ ಬ್ಯಾರಿಸ್ಟರ್

ವಲ್ಲಭಭಾಯ್ ಪಟೇಲರು ೧೩, ಫೆಬ್ರುವರಿ ೧೯೧೩ರಂದು ಬೊಂಬಾಯಿಯನ್ನು ತಲುಪಿದರು. ಅವರನ್ನು ಸ್ವಾಗತಿಸಲು ಅವರ ಮಕ್ಕಳು, ಒಂಬತ್ತು ವರ್ಷದ ಮಣಿ ಮತ್ತು ಏಳುವರೆ ವರ್ಷದ ದಹ್ಯ, ಹಾಗೂ ಅವರ ಅಣ್ಣ ವಿಠ್ಠಲ್‌ಭಾಯ್ ಬಂದಿದ್ದರು. ವಿಠ್ಠಲ್‌ಭಾಯ್ ಮುಂಬಯಿಯಲ್ಲಿ ವಕೀಲರಾಗಿದ್ದರು ಮತ್ತು ಬಾಂಬೆ ಕೌನ್ಸಿಲ್‌ನ ಸದಸ್ಯ ಆಗಿದ್ದರು. ಅದೇ ದಿನ ಮುಖ್ಯ ನ್ಯಾಯಾಧೀಶ ಸರ್ ಬೇಸಿಲ್ ಸ್ಕಾಟ್‌ರವರನ್ನು ಭೇಟಿ ಮಾಡಿ ಅವರ ಕಸಿನ್ ನೀಡಿದ್ದ ಪತ್ರವನ್ನು ವಲ್ಲಭಭಾಯ್ ತಲುಪಿಸಿದರು. ಸ್ಕಾಟ್‌ರವರು ವಲ್ಲಭರವರನ್ನು ಬಹಳ ಸೌಜನ್ಯತೆಯಿಂದ ಮಾತನಾಡಿಸಿದರು. ಅವರು ಇಂಗ್ಲೆಂಡಿನಲ್ಲಿ ವಲ್ಲಭರವರ ಅದ್ಭುತ ಸಾಧನೆಗಳನ್ನು ಗಮನಿಸಿ ಅವರಿಗೆ ಜಡ್ಜ್ ಪದವಿಯನ್ನು ನೀಡುವುದಾಗಿ ಹೇಳಿದರು. ಆದರೆ ವಲ್ಲಭರವರಿಗೆ ಸರ್ಕಾರಿ ಸೇವಾವೃತ್ತಿ ಇಷ್ಟವಿರಲಿಲ್ಲ. ಬಹು ವಿನಯದಿಂದ ಅದನ್ನು ನಿರಾಕರಿಸಿದರು. ನಂತರ ಸ್ಕಾಟ್‌ರವರು ಬೊಂಬಾಯಿಯಲ್ಲೇ ವಕೀಲಿ ವೃತ್ತಿ ನಡೆಸುವಂತೆ ಸಲಹೆ ನೀಡಿದರು ಮತ್ತು ಸಂಜೆ ಕಾನೂನು ಕಾಲೇಜಿನಲ್ಲಿ ಅರೆಕಾಲಿಕ ಉಪನ್ಯಾಸಕ ವೃತ್ತಿ ಕೊಡಿಸುವುದಾಗಿ ಹೇಳಿದರು. ಆದರೆ ತಾವು ತಮ್ಮ ಗುಜರಾತಿ ಜನಗಳ ನಡುವೆ ಅಹಮದಾಬಾದ್‌ನಲ್ಲಿ ನೆಲೆಸಿ ವಕೀಲಿ ವೃತ್ತಿ ನಡೆಸಬೇಕೆಂದು ವಲ್ಲಭಭಾಯ್ ಈಗಾಗಲೇ ತೀರ್ಮಾನಿಸಿದ್ದರು. ಅದರಿಂದ ಸ್ಕಾಟ್‌ರವರ

ಸಲಹೆಗಳಿಗೆ ವಂದನೆಗಳನ್ನು ಸಲ್ಲಿಸಿ ಹಿಂತಿರುಗಿದರು.

ಮಾರನೆಯ ದಿನ ವಲ್ಲಭ ತಮ್ಮ ಮಕ್ಕಳನ್ನು ಅಣ್ಣ ವಿಠ್ಠಲ್‌ಭಾಯ್ ಪಟೇಲರ ಮನೆಯಲ್ಲಿ ಬಿಟ್ಟು ಅಹಮದಾಬಾದ್‌ಗೆ ಹೊರಟರು. ಅವರು ಲಂಡನ್‌ನಲ್ಲಿದ್ದಾಗ ಮಕ್ಕಳು ಎರಡು ವರ್ಷಗಳ ಕಾಲ ಮಿಸ್ ವಿಲ್‌ಸನ್‌ರವರ ಬಳಿ ಇದ್ದರು. ದಹ್ಯಗೆ ನಾಯಿಗೆಮ್ಮುಲು ಬಂದದ್ದರಿಂದ ಮಕ್ಕಳು ಬಾಂದ್ರದಲ್ಲಿದ್ದ ವಿಠ್ಠಲ್‌ಭಾಯ್ ಮನೆಗೆ ಬಂದಿದ್ದರು. ಅಲ್ಲಿಂದಲೇ ಶಾಲೆಗೆ ಹೋಗುತ್ತಿದ್ದರು. ರಜಾ ಕಾಲದಲ್ಲಿ ನಡಿಯಾದ್‌ನಲ್ಲಿದ್ದ ಸೋದರತ್ತೆ (ವಲ್ಲಭರವರ ತಂಗಿ) ದಹಿಬಾ ಮನೆಗೆ ಹೋಗುತ್ತಿದ್ದರು.

ವಲ್ಲಭಭಾಯ್ ಅಹಮದಾಬಾದ್‌ನಲ್ಲಿ ಒಂದು ಬಾಡಿಗೆ ಮನೆಯನ್ನು ಗೊತ್ತು ಮಾಡಿಕೊಂಡು ವಕೀಲಿಯನ್ನು ಆರಂಭಿಸಿದರು. ಈಗ ಅವರು ಬ್ಯಾರಿಸ್ಟರ್ ಆಗಿದ್ದು ದರಿಂದ ಅವರ ಸ್ಥಾನ ಮತ್ತು ವರ್ಚಸ್ಸು ಏರಿತ್ತು. ಅವರ ಜಿಲ್ಲೆಯಲ್ಲಿ ಅನೇಕ ಕಕ್ಷಿದಾರರು ಅವರ ಬರುವಿಕೆಗಾಗಿ ಕಾಯುತ್ತಿದ್ದರು. ಹೀಗಾಗಿ ಅವರು ಆರಂಭ ದಿಂದಲೇ ಯಶಸ್ಸು ಗಳಿಸಿದರು ಮತ್ತು ಶೀಘ್ರವಾಗಿ ಪ್ರಸಿದ್ಧ ಕ್ರಿಮಿನಲ್ ಅಡ್ವೊಕೇಟ್ ಆದರು. ಅವರ ಪ್ರಚಂಡ ಧೈರ್ಯ, ಬುದ್ಧಿವಂತಿಕೆ, ಪಾಟಿ ಸವಾಲಿನ ನೈಪುಣ್ಯತೆ ಮತ್ತು ಒಬ್ಬ ಸಾಕ್ಷಿಯನ್ನು ನೋಡಿದ ತಕ್ಷಣ ಅವನ ಸ್ವಭಾವವನ್ನು ಗ್ರಹಿಸುವ ಶಕ್ತಿ ಅವರಿಗೆ ಅದ್ಭುತ ಯಶಸ್ಸನ್ನು ತಂದಿತು.

ಆ ಸಮಯದಲ್ಲಿ ಅಹಮದಾಬಾದ್‌ನಲ್ಲಿ ವಕೀಲರಾಗಿದ್ದ, ವಲ್ಲಭಭಾಯ್‌ರವರ ನೆರೆಯವರೂ ಜೊತೆಗಾರರೂ ಆಗಿದ್ದ, ಸ್ವಾತಂತ್ರ್ಯ ಬಂದ ಮೇಲೆ ಸಂಸತ್ತಿನ ಪ್ರಥಮ ಸ್ಪೀಕರ್ ಆದ ಗಣೇಶ್ ವಾಸುದೇವ್ ಮಾವಲಂಕರ್ (ಜಿ.ವಿ. ಮಾವಲಂಕರ್)ರವರು ಈ ನವ ಬ್ಯಾರಿಸ್ಟರ್ ಬಗೆಗೆ ಹೀಗೆ ದಾಖಲಿಸಿದ್ದಾರೆ:

> ಲಕ್ಷಣವಾದ ಹೊಲಿಗೆಯ ಬಟ್ಟೆ ಧರಿಸಿದ, ಫ್ಲೆಲ್ಟ್ ಹ್ಯಾಟನ್ನು ಸ್ವಲ್ಪ ಓರೆಯಾಗಿ ಧರಿಸಿದ, ಗಂಭೀರತೆಯ ಮತ್ತು ಮಿತ ಮಾತಿನ, ಚುಚ್ಚುವ ಮತ್ತು ಪ್ರಕಾಶಿಸುವ ಕಣ್ಗಳ, ಸಂದರ್ಶಕರನ್ನು ಸರಳ ನಗುವಿನಿಂದ ಸ್ವಾಗತಿಸುವ ಆದರೆ ಸಂಭಾಷಣೆಗೆ ಇಳಿಯದ ಒಬ್ಬ ಆಕರ್ಷಕ ಯುವಕ..... ಅವನು ಪ್ರಪಂಚವನ್ನು ಒಂದು ವಿಧವಾದ ಮೇಲರಿಮೆಯಿಂದ ನೋಡುತ್ತಿದ್ದನು.
>
> ನವ ಬ್ಯಾರಿಸ್ಟರನು ಸಹಜವಾಗಿಯೆ ಕಿರಿಯ ವಕೀಲರ ಗಮನದ ಕೇಂದ್ರಬಿಂದುವಾಗಿದ್ದನು. ಆತನ ವ್ಯಕ್ತಿತ್ವ ಮತ್ತು ವರ್ತನೆ

> ಅವರನ್ನು ಆಕರ್ಷಿಸಿತ್ತು. ಆದರೆ ಅವರು ಅವನ ಬಗೆಗೆ ಗೌರವ, ವಿಸ್ಮಯ ಮತ್ತು ಅವನು ಇತರರನ್ನು ನೋಡುವ ವಿಧಾನದ ಬಗ್ಗೆ ಬಹುಶಃ ಒಳಗೇ ಅಡಗಿದ ಅಸಮಾಧಾನದ ಮಿಶ್ರಣ ಭಾವಗಳನ್ನು ಹೊಂದಿದ್ದರು.[೩೩]

ವಲ್ಲಭಭಾಯ್‌ರವರ ಮೇಲರಿಮೆ ಮತ್ತು ದೂರ ಉಳಿಯುವ ಸ್ವಭಾವದಿಂದ ಇತರ ವಕೀಲರಿಗೆ ಅವರ ಬಗ್ಗೆ ಅಸೂಯೆ ಮತ್ತು ಅಸಮಾಧಾನ ಉಂಟಾದರೂ ಅವರು ವಲ್ಲಭಭಾಯ್‌ನನ್ನು ಬಹಳ ಗೌರವಿಸುತ್ತಿದ್ದರು. ಏಕೆಂದರೆ ಪ್ರತಿವಾದಿಯ ವಕೀಲರಾಗಿ ವಲ್ಲಭಭಾಯ್‌ರವರು ತೋರುತ್ತಿದ್ದ ಅಸಾಧಾರಣ ಧೈರ್ಯ ವಕೀಲರ ವೃಂದದ ಘನತೆಯನ್ನು ಹೆಚ್ಚಿಸಿತ್ತು. ಅದುವರೆವಿಗೆ ವಕೀಲರು ನ್ಯಾಯಾಧೀಶರ ಬಗೆಗೆ, ಅನುಕೂಲಕರ ತೀರ್ಪನ್ನು ಪಡೆಯುವುದಕ್ಕಾಗಿ, ಗುಲಾಮಿ ಭಾವನೆಯನ್ನು ತೋರುತ್ತಿದ್ದರು ಮತ್ತು ಅವಮಾನಗಳನ್ನು ಸಹಿಸುತ್ತಿದ್ದರು. ಉದಾಹರಣೆಗೆ, ಒಬ್ಬ ಆಂಗ್ಲ ನ್ಯಾಯಾಧೀಶನ ಮುಂದೆ ಹಾಜರಾಗುವಾಗ ವಕೀಲರು ತಮ್ಮ ಪಾದರಕ್ಷೆಗಳನ್ನು ಕಳಚಬೇಕಾಗಿತ್ತು. ವಲ್ಲಭಭಾಯ್ ಈ ಅವಮಾನಕರ ಪದ್ಧತಿಯ ವಿರುದ್ಧ ಸಿಡಿದೆದ್ದರು ಮತ್ತು ಅದನ್ನು ತೆಗೆಯಿಸಿದರು. ಅಪರಾಧಿಗಳು ಒಂದು ಕನ್ನಡಿಯಲ್ಲಿ ನೋಡುತ್ತಾ ಹೇಳಿಕೆ ನೀಡುವ ಅನಿಷ್ಟ ಪದ್ಧತಿಯನ್ನು ಒಬ್ಬ ನ್ಯಾಯಾಧೀಶ ಜಾರಿಗೊಳಿಸಿದ್ದನು. ವಲ್ಲಭಭಾಯ್ ಅದನ್ನೂ ವಿರೋಧಿಸಿ ಅದು ನಿಲ್ಲುವಂತೆ ಮಾಡಿದರು. ಮುಂದೆ ಆ ನ್ಯಾಯಾಧೀಶನಿಗೆ ಎಚ್ಚರಿಕೆ ಜಾರಿಯಾಯಿತು. ಒಬ್ಬ ನ್ಯಾಯಾಧೀಶ ಅಥವಾ ಮ್ಯಾಜಿಸ್ಟ್ರೇಟ್ ಸಭ್ಯತೆಯ ಅಥವಾ ನಡವಳಿಕೆಯ ಎಲ್ಲೆಯನ್ನು ಮೀರುವುದಕ್ಕೆ ವಲ್ಲಭಭಾಯ್ ಯಾವತ್ತೂ ಬಿಡುತ್ತಿರಲಿಲ್ಲ. ಯಾರಾದರು ನ್ಯಾಯಾಧೀಶ ಅವರಿಗೆ ಮುಖಭಂಗ ಮಾಡಲು ಯತ್ನಿಸಿದರೆ ಅವರಿಗೆ ಆ ಕ್ಷಣವೇ ಬಿಸಿ ಮುಟ್ಟಿಸುತ್ತಿದ್ದರು. ಸ್ವಲ್ಪವೂ ಹೆದರುತ್ತಲೂ ಇರಲಿಲ್ಲ, ಹಿಂಜರಿಯುತ್ತಲೂ ಇರಲಿಲ್ಲ. ಅದರಿಂದ ಎಲ್ಲರೂ, ಅವರನ್ನು ಟೀಕಿಸುತ್ತಿದ್ದವರೂ ಸಹ, ಬಹಳ ಗೌರವದಿಂದ ಕಾಣುತ್ತಿದ್ದರು.[೩೪]

ಒಮ್ಮೆ ವಲ್ಲಭಭಾಯ್‌ರವರು ಕೈರಾ ಜಿಲ್ಲೆಯ ಇಬ್ಬರು ಕೊಲೆ ಆಪಾದಿತರ ಪರವಾಗಿ ವಕಾಲತ್ತು ವಹಿಸಿದ್ದಾಗ, ಆ ಆಪಾದಿತರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡುವಂತೆ ನ್ಯಾಯಾಲಯವನ್ನು ಕೋರಿದರು. ಪೊಲೀಸರು ಆ ಜಾಮೀನು ಅರ್ಜಿಯನ್ನು ವಿರೋಧಿಸುತ್ತಾ, "ಕೈರಾ ಜಿಲ್ಲೆಯ ಜನ ಸ್ವಭಾವತಃ ಕ್ರಿಮಿನಲ್‌ಗಳು ಮತ್ತು ಆಪಾದಿತರನ್ನು ಬಿಡುಗಡೆ ಮಾಡಿದರೆ ಅವರು ಸಾಕ್ಷಿಗಳನ್ನು ಕೆಡಿಸುವರು" ಎಂದರು. ವಲ್ಲಭಭಾಯ್ ಸಹ ಕೈರಾ ಜಿಲ್ಲೆಯವರು ತಾನೆ! ಇಡೀ ಜಿಲ್ಲೆಯವರನ್ನು ದೂಷಿಸಿದ್ದು ಅವರನ್ನು ಕೆರಳಿಸಿತು. ಅವರು ನ್ಯಾಯಾಲಯಕ್ಕೆ

ತಮ್ಮ ಹರಿತವಾದ ನಾಲಗೆಯ ರುಚಿಯನ್ನು ತೋರುತ್ತಾ ನೇರವಾಗಿ ಸ್ಪಷ್ಟವಾಗಿ ಹೇಳಿದರು, "ಕೈರಾ ಜಿಲ್ಲೆಯ ಯಾವ ಆಪಾದಿತನೂ ಈ ನ್ಯಾಯಾಲಯದಲ್ಲಿ ನ್ಯಾಯವನ್ನು ಪಡೆಯಲಾರ ಎನ್ನುವುದನ್ನು ಗಮನಿಸುವುದಕ್ಕೆ ನಾನು ಬಹಳ ವಿಷಾಧಿಸುತ್ತೇನೆ. ..... ಇಡೀ ಜಿಲ್ಲೆಯು ಕ್ರಿಮಿನಲ್ ಜಿಲ್ಲೆ ಎಂದು ಪರಿಗಣಿಸಲ್ಪಟ್ಟಿರುವುದರಿಂದ, ರುಜುವಾತು ಇರಲಿ ಅಥವಾ ಇಲ್ಲದಿರಲಿ, ಆಪಾದಿತನು ಅಪರಾಧಿ ಆಗಿರಲೇ ಬೇಕು ಎಂದು ಯೋಚಿಸಲಾಗುವುದು. ಇದು ಈ ನ್ಯಾಯಾಲಯದ ತೀರ್ಮಾನದ ರೀತಿಯಂತೆ ಕಾಣುತ್ತದೆ. ಹಾಗಲ್ಲದೆ ಹೋದರೆ, ಮೊದಲ ನೋಟಕ್ಕೆ ಯಾವ ರುಜುವಾತು ಸಹ ಇಲ್ಲದಿರುವ ಈ ಮೊಕದ್ದಮೆಯಲ್ಲಿ ಜಾಮೀನನ್ನು ಏಕೆ ಕೊಡಬಾರದು ಎನ್ನುವುದು ನನಗೆ ಅರ್ಥವಾಗುತ್ತಿಲ್ಲ." ಈ ನೇರ ಗುದ್ದು ಯಶಸ್ವಿಯಾಯಿತು. ವಲ್ಲಭಭಾಯ್‌ರವರ ಕಕ್ಷಿದಾರನಿಗೆ ಜಾಮೀನು ಸಿಕ್ಕಿತು. ಅಷ್ಟೇ ಅಲ್ಲ, ವಿಚಾರಣೆ ಮುಗಿದ ಮೇಲೆ ಅವನಿಗೆ ಬಿಡುಗಡೆಯೂ ಆಯಿತು. ಜನ ಅಧಿಕಾರಸ್ಥರಿಗೆ ಹೆದರುತ್ತಿದ್ದ ಮತ್ತು ಅವರ ಮುಂದೆ ಗುಲಾಮಿ ಭಾವ ತೋರುತ್ತಿದ್ದ ಆ ಕಾಲದಲ್ಲಿ ವಲ್ಲಭಭಾಯ್‌ರವರ ನಿರ್ಭೀತ ವರ್ತನೆ ಎಲ್ಲರಲ್ಲಿ ಅವರ ಮೇಲಿನ ಗೌರವವನ್ನು ಹೆಚ್ಚಿಸಿತು. ಮತ್ತೊಂದು ಮೊಕದ್ದಮೆಯಲ್ಲಿ ಅವರು ಪೊಲೀಸ್ ಪಟೇಲನನ್ನು ಎಷ್ಟರ ಮಟ್ಟಿಗೆ ಪಾಟಿ ಸವಾಲು ನಡೆಸಿದರೆಂದರೆ ಅವನು, ಆಪಾದಿತನನ್ನು ಸಿಕ್ಕಿಸುವುದಕ್ಕಾಗಿ ವಿಷಯದ ಮೊದಲ ವರದಿಯನ್ನು ತಿದ್ದಿದ್ದನೆಂದು ಒಪ್ಪಿಕೊಂಡನು.[೩೫]

ವಲ್ಲಭಭಾಯ್ ಸಂಜೆಯ ವೇಳೆ ಗುಜರಾತ್ ಕ್ಲಬ್‌ನಲ್ಲಿ ತಮ್ಮ ಕಾಲವನ್ನು ಕಳೆಯುತ್ತಿದ್ದರು. ಅಲ್ಲಿಗೆ ಇತರ ವಕೀಲರು ಮತ್ತು ವಾಣಿಜ್ಯೋದ್ಯಮಿಗಳು ಬರುತ್ತಿದ್ದರು. ಅಲ್ಲಿ ವಲ್ಲಭಭಾಯ್ 'ಬ್ರಿಜ್ – ಇಸ್ಪೇಟು ಆಟ' ಆಡುತ್ತಿದ್ದರು. ಅವರಿಗೆ ಆ ಆಟದಲ್ಲಿ ಭಾರಿ ನೈಪುಣ್ಯತೆಯಿತ್ತು. ಒಮ್ಮೆ ಆ ಆಟದಲ್ಲಿ ತಾನು ಬಹಳ ಬುದ್ಧಿವಂತನೆಂದು ಭಾವಿಸಿದ್ದ ವಾಡಿಯ ಎಂಬ ಹಿರಿಯ ಬ್ಯಾರಿಸ್ಟರನು ತನ್ನ ವಿರುದ್ಧ ಆಡುವಂತೆ ವಲ್ಲಭಭಾಯ್‌ರವರಿಗೆ ಸವಾಲು ಹೂಡಿದನು. ವಲ್ಲಭಭಾಯ್‌ರವರು ಆಟದಲ್ಲಿ ಒಡ್ಡುವ ಬಾಜಿ ಹಣವನ್ನು ಎರಡು ಆಣೆಗಳಿಂದ ೫ ಪೌಂಡ್ ಸ್ಟರ್ಲಿಂಗ್‌ಗೆ ಏರಿಸುವುದಾದರೆ ಅವನೊಡನೆ ಆಡುವುದಾಗಿ ಹೇಳಿದರು. ಸವಾಲು ಇಬ್ಬರಿಗೂ ಒಪ್ಪಿಗೆಯಾಯಿತು ಮತ್ತು ಆಟ ಆರಂಭವಾಯಿತು. ಮೊದಲ ದಿನ ಹಿರಿಯ ಬ್ಯಾರಿಸ್ಟರ್ ಮತ್ತು ಅವನ ಸಂಗಾತಿ ಬ್ರೋಕರ್ ೧೫ರಿಂದ ೨೦ ಪೌಂಡ್ ಸ್ಟರ್ಲಿಂಗ್ ಹಣ ಕಳೆದುಕೊಂಡರು. ಮಾರನೆಯ ದಿನ ವಲ್ಲಭಭಾಯ್ ೩೦ ಪೌಂಡ್ ಸ್ಟರ್ಲಿಂಗ್ ಗೆದ್ದರು. ಮಾರನೆಯ ದಿನ ಶ್ರೀಮತಿ ವಾಡಿಯ ತಮ್ಮ ಗಂಡ ಕ್ಲಬ್‌ಗೆ ಹೋಗದಂತೆ ತಡೆದರು ಮತ್ತು ಸವಾಲನ್ನು ಮುಂದುವರಿಸದಂತೆ ವಲ್ಲಭಭಾಯ್

ರವರನ್ನು ಕೇಳಿಕೊಂಡರು. ವಲ್ಲಭಭಾಯ್ ತಕ್ಷಣವೇ ಒಪ್ಪಿದರು. ಅವರೇನು ಹಣ ಸಂಪಾದನೆಗಾಗಿ ಅಥವಾ ಜೂಜಿಗಾಗಿ ಆ ಆಟ ಆಡುತ್ತಿರಲಿಲ್ಲ.[೩೬]

ವಲ್ಲಭಭಾಯ್‌ರವರ 'ಬ್ರಿಜ್ ಟೇಬಲ್' ಎಲ್ಲರಿಗೂ ಆಕರ್ಷಣೆಯ ಕೇಂದ್ರ ವಾಗಿತ್ತು. ಆಟ ಆಡುವಾಗ ಅವರು ಆಡುತ್ತಿದ್ದ ಹರಿತ ಹಾಸ್ಯದ ಹಾಗೂ ವ್ಯಂಗ್ಯದ ಮಾತುಗಳನ್ನು ಕೇಳಲು ಎಲ್ಲರೂ ಮುತ್ತಿಕೊಳ್ಳುತ್ತಿದ್ದರು. ಲಂಚಕೋರ ಅಧಿಕಾರಿಗಳು, ಅಧಿಕಾರಿಗಳ ಹೊಗಳುಬಟ್ಟರು, ಪೊಲೀಸರ ರಕ್ಷಣೆಯಲ್ಲಿರುವ ಗೂಂಡಾಗಳು, ಷೇರು ಮಾರುಕಟ್ಟೆಯಲ್ಲಿ ಜೂಜಾಡಿ ಪಾಪರ್ ಆದವರು, ಹೀಗೆ ನಾನಾ ವ್ಯಕ್ತಿಗಳ ಮತ್ತು ಸಂಗತಿಗಳ ಬಗೆಗೆ ವಲ್ಲಭಭಾಯ್‌ರವರಿಂದ ಚಾವಟಿಯ ಏಟಿನಂತಹ ಹರಿತವಾದ ಮಾತಿನ ಟೀಕೆಗಳನ್ನು ಕೇಳಲು ಎಲ್ಲರೂ ಕಾತುರರಾಗಿರುತ್ತಿದ್ದರು. ಈ ರೀತಿ ೧೯೧೩ರ ಆದಿ ಭಾಗದಿಂದ ೧೯೧೬ರ ಅಂತ್ಯಭಾಗದವರೆಗೆ ನಾಲ್ಕು ವರ್ಷಗಳು ಕಳೆದುವು.

ಈ ನಡುವೆ ವಲ್ಲಭಭಾಯ್‌ರವರ ದೈವಭಕ್ತ ತಂದೆ ಜವೇರ್‌ಭಾಯ್‌ರವರು ೧೯೧೬ರ ಮಾರ್ಚ್‌ನಲ್ಲಿ ತಮ್ಮ ೮೫ನೆ ವಯಸ್ಸಿನಲ್ಲಿ ಗತಿಸಿದರು. ಸರಿಸುಮಾರು ಅದೇ ಸಮಯದಲ್ಲಿ ವಲ್ಲಭಭಾಯ್‌ರವರ ಒಬ್ಬಳೇ ತಂಗಿ ದಹಿಬಾ ವ್ಯಾಧಿಗ್ರಸ್ತ ಳಾದಳು. ವಲ್ಲಭಭಾಯ್ ಅವಳನ್ನು ನಡಿಯಾದ್ ನಿಂದ ಅಹಮದಾಬಾದ್‌ನ ತಮ್ಮ ಮನೆಗೆ ಕರೆ ತಂದು ಔಷಧೋಪಚಾರಕ್ಕೆ ಏರ್ಪಡಿಸಿದರು. ಆದರೆ ಏನೂ ಪ್ರಯೋಜನವಾಗಲಿಲ್ಲ. ಅವಳೂ ಗತಿಸಿದಳು. ವಲ್ಲಭಭಾಯ್‌ಗೆ ಅಪಾರ ದುಃಖ ವಾಯಿತು. ಅವಳು ಹೆಸರಿಗೆ ತಕ್ಕ ಹಾಗೆ (ದಹಿ ಎಂದರೆ ಒಳ್ಳೆಯ) ಇದ್ದಳು ಎಂದು ಅವರು ಯಾವಾಗಲೂ ಹೇಳುತ್ತಿದ್ದರು.

ವಲ್ಲಭಭಾಯ್ ಲಂಡನ್‌ನಿಂದ ಹಿಂತಿರುಗಿದ ಆರಂಭದಲ್ಲೆ ಅವರು ಮತ್ತು ಅವರ ಅಣ್ಣ ವಿಠ್ಠಲ್‌ಭಾಯ್ ಒಂದು ಒಪ್ಪಂದ ಮಾಡಿಕೊಂಡಿದ್ದರು. "ಇಬ್ಬರ ಪೈಕಿ ಒಬ್ಬರು ದೇಶಸೇವೆ ಮಾಡಬೇಕು, ಮತ್ತೊಬ್ಬರು ಕುಟುಂಬಕ್ಕೆ ಸಹಾಯಕ ರಾಗಿರಬೇಕು" ಎನ್ನುವುದು ಆ ಒಪ್ಪಂದ. ವಿಠ್ಠಲ್‌ಭಾಯ್ ಈಗಾಗಲೇ ಬೊಂಬಾಯಿ ಕೌನ್ಸಿಲ್‌ನ ಸದಸ್ಯರಾಗಿದ್ದುದರಿಂದ ಅವರು ಸಮಾಜ ಸೇವೆಯಲ್ಲಿ ಮುಂದುವರೆದರು. ಅಹಮದಾಬಾದ್‌ನಲ್ಲಿ ನೆಲೆಸಿದ ವಲ್ಲಭಭಾಯ್‌ರವರು ಕುಟುಂಬವನ್ನು ನೋಡಿ ಕೊಂಡರು. ವಿಠ್ಠಲ್‌ಭಾಯ್‌ರವರು ಅಹಮದಾಬಾದ್‌ಗೆ ಬಂದಾಗಲೆಲ್ಲ ತಮ್ಮನ ಮನೆಯಲ್ಲೇ ತಂಗುತ್ತಿದ್ದರು. ಅವರು ವಾಪಸ್ಸು ಹೊರಟಾಗ ವಲ್ಲಭಭಾಯ್ ಅವರ ಜೋಬನ್ನು ಕರೆನ್ಸಿಯಿಂದ ತುಂಬುತ್ತಿದ್ದರು, ಆದರೆ ಆ ಬಗ್ಗೆ ಒಂದು ಮಾತನ್ನೂ ಆಡುತ್ತಿರಲಿಲ್ಲ. ೧೯೨೧ರಲ್ಲಿ ವಲ್ಲಭಭಾಯ್ ಹೀಗೆ ಹೇಳಿದ್ದಾರೆ:

> ನನ್ನ ಅಣ್ಣ ಚೆನ್ನಾಗಿ ನಡೆಯುತ್ತಿದ್ದ ವಕೀಲಿ ವೃತ್ತಿಯನ್ನು ನಿಲ್ಲಿಸಿಬಿಟ್ಟು ಸಾರ್ವಜನಿಕ ಸೇವೆಯ ಜೀವನವನ್ನು ಆರಂಭಿಸಿದರು. ನಾನು ಕುಟುಂಬವನ್ನು ನಿರ್ವಹಿಸುವ ಭಾರವನ್ನು ಹೊತ್ತೆ. ಪಾಪಗಳನ್ನು ನಾನು ಮಾಡಿದೆ. ಒಳ್ಳೆಯ ಕಾರ್ಯಗಳನ್ನು ಅವರು ಮಾಡಿದರು.[೩೭]

(ಹಣ ಸಂಪಾದಿಸುವುದು, ಅದರಲ್ಲೂ ಕ್ರಿಮಿನಲ್ ವಕೀಲರಾಗಿ ಹಣ ಸಂಪಾದಿಸುವುದು, ಪಾಪ ಕಾರ್ಯ. ಸಾರ್ವಜನಿಕ ಸೇವೆ ಮಾಡುವುದು ಪುಣ್ಯ ಕಾರ್ಯ – ಎನ್ನುವುದು ವಲ್ಲಭಭಾಯ್‌ರವರ ಮಾತಿನ ಅಭಿಪ್ರಾಯ ಎಂದು ಕಾಣುತ್ತದೆ – ಲೇಖಕ)

ವಲ್ಲಭಭಾಯ್ ಎರಡು ಅಂತಸ್ತಿನ ಮತ್ತು ಆರು ಕೊಠಡಿಗಳ ಮನೆಯನ್ನು ಬಾಡಿಗೆಗೆ ತೆಗೆದುಕೊಂಡಿದ್ದರು. ಅದು ಅಹಮದಾಬಾದ್‌ನ ಕೇಂದ್ರಸ್ಥಾನದಲ್ಲಿ ಭದ್ರ ಬಡಾವಣೆಯಲ್ಲಿ ಇತ್ತು. ಅವರ ಮನೆಯ ಸಮೀಪದಲ್ಲೆ ಪಕ್ಕದ ಒಂದು ರಸ್ತೆಯಲ್ಲಿ ಜಿ.ವಿ. ಮಾವಲಂಕರ್ ವಾಸವಾಗಿದ್ದರು. ಆಗ ಅವರು ಒಬ್ಬ ಕಿರಿಯ ವಕೀಲ, ವಲ್ಲಭಭಾಯ್‌ಗಿಂತ ೧೨ ವರ್ಷ ಚಿಕ್ಕವರು. ಅವರು ವಲ್ಲಭಭಾಯ್‌ಗೆ ಒಳ್ಳೆಯ ಸ್ನೇಹಿತರಾಗಿದ್ದರು. ಆದರೆ ಅವರಿಗೆ ಅತ್ಯಂತ ಆಪ್ತರಾಗಿದ್ದವರು ಡಾ॥ ಬಲವಂತರಾಯ್ ಕನುಗ ಮತ್ತು ಅವರ ಪತ್ನಿ ವಿಜಯ ಗೌರಿ ಅಥವಾ ನಂದೂ ಬೆಹೆನ್. ವಲ್ಲಭಭಾಯ್‌ರವರು ಅವರ ಮನೆಗೆ ಆಗಾಗ್ಗೆ ಭೇಟಿ ಕೊಡುತ್ತಿದ್ದರು ಮತ್ತು ಅಲ್ಲೇ ಊಟ ಮಾಡುತ್ತಿದ್ದರು. ಅವರು ಕನುಗ ದಂಪತಿಗಳೊಡನೆ ಮನಸ್ಸು ಬಿಚ್ಚಿ ಮಾತನಾಡುತ್ತಿದ್ದರು. ಆ ಸ್ನೇಹ ಅವರು ಸಾಯುವವರೆಗೂ ಇತ್ತು.

ಬೊಂಬಾಯಿಯಲ್ಲಿ ವ್ಯಾಸಂಗ ಮಾಡುತ್ತಿದ್ದ ಮಕ್ಕಳು, ಮಣಿ ಮತ್ತು ದಹ್ಯ, ಅಹಮದಾಬಾದ್‌ಗೆ ಬರುವುದು ಅಥವಾ ವಲ್ಲಭಭಾಯ್ ಬೊಂಬಾಯಿಗೆ ಹೋಗಿ ಅವರನ್ನು ನೋಡುವುದು ಅಪರೂಪವಾಗಿತ್ತು.

ಬೋರ್ಸದ್‌ನಲ್ಲಿ ಪ್ಲೀಡರ್ ಆಗಿದ್ದಾಗ ಪಂಚೆ ಉಡುತ್ತಿದ್ದ ವಲ್ಲಭಭಾಯ್ ಅಹಮದಾಬಾದ್‌ನಲ್ಲಿ ಆಧುನಿಕ ಫ್ಯಾಷನ್ನಿನ ಸೂಟು ಧರಿಸುತ್ತಿದ್ದರು. ಅವರೇ ಹೇಳಿರುವ ಹಾಗೆ, 'ಆಗ ವಿದೇಶಿಯರನ್ನು ಭಾಷೆಯಲ್ಲಿ, ಉಡುಪಿನಲ್ಲಿ, ಪ್ರಾಧಾನ್ಯವಿರುವ ಎಲ್ಲಾ ಸಂಗತಿಗಳಲ್ಲಿ ಅನುಕರಿಸುವುದು' – ಅವರ ಜೀವನದ ಪರಮ ಭಾಗ್ಯ ಅನ್ನುವ ಆಲೋಚನೆಯನ್ನು ಅವರು ಮಾಡಿದ್ದರು. ಅವರು ಇಂಗ್ಲಿಷ್ ಭಾಷೆಯನ್ನು ಮೆಚ್ಚಿ ಅದಕ್ಕೆ ಪರಿವರ್ತಿತರಾಗಿದ್ದರು. ನ್ಯಾಯಾಲಯದಲ್ಲಂತೂ ಇಂಗ್ಲಿಷ್ ಭಾಷೆ ಬೇರೂರಿತ್ತು. ಸ್ನೇಹಿತರೊಡನೆಯೂ ಅವರು ಇಂಗ್ಲಿಷ್‌ನಲ್ಲೇ

ಮಾತನಾಡುತ್ತಿದ್ದರು. "ನಾನು ಗುಜರಾತಿಯನ್ನು ಚೆನ್ನಾಗಿ ಮಾತಾಡುತ್ತಲೂ ಇರಲಿಲ್ಲ" ಎಂದು ಅವರೇ ಹೇಳಿದ್ದಾರೆ.[೩೮]

❖ ◆ ❖

ಬ್ಯಾರಿಸ್ಟರ್ ಸಹೋದರರು

ವಿಠ್ಠಲ್‌ಭಾಯ್ ಪಟೇಲ್ ಮತ್ತು ವಲ್ಲಭಭಾಯ್ ಪಟೇಲ್

೦೩. ಸಾರ್ವಜನಿಕ ರಂಗ ಪ್ರವೇಶ

೩.೧ ಗಾಂಧೀಜಿಯ ಆಗಮನ

೧೯೧೬ರ ಬೇಸಿಗೆಯಲ್ಲಿ ಒಂದು ಸಂಜೆ ವಲ್ಲಭಭಾಯ್ ಪಟೇಲ್‌ರವರು ಕ್ಲಬ್‌ನಲ್ಲಿ ಬ್ರಿಜ್ ಆಟ ಆಡುತ್ತಿದ್ದರು. ಇತರರು ಅವರ ಸುತ್ತ ಸೇರಿ ಆ ಆಟ ನೋಡುತ್ತಿದ್ದರು. ಆಗ ಅಲ್ಲಿಗೆ ಒಬ್ಬ ತೆಳು ಶರೀರಿ ಬಂದರು. ಅವರೇ ಗಾಂಧಿ – ಮೋಹನ್‌ದಾಸ್ ಕರಮ್‌ಚಂದ್ ಗಾಂಧಿ.

ಆ ಗಾಂಧಿಯವರು ವಲ್ಲಭಭಾಯ್ ಪಟೇಲರ ಹಾಗೆ ಲಂಡನ್‌ನಲ್ಲಿ ಬಾರ್–ಅಟ್–ಲಾ ಪದವಿ ಪಡೆದ ಬ್ಯಾರಿಸ್ಟರ್. ಅವರು ೧೮೯೩ರಲ್ಲಿ ದಕ್ಷಿಣ ಆಫ್ರಿಕಕ್ಕೆ ಹೋಗಿ ವಕೀಲಿ ವೃತ್ತಿ ನಡೆಸಿದರು. ದಕ್ಷಿಣ ಆಫ್ರಿಕದ ಬಿಳಿಯರ ದಬ್ಬಾಳಿಕೆಯ ಸರ್ಕಾರ ಅಲ್ಲಿದ್ದ ಭಾರತೀಯರ ಮೇಲೆ ಹೇರಿದ ೩ ಪೌಂಡ್ ವಾರ್ಷಿಕ ತಲೆ ಗಂದಾಯ ಮತ್ತು ಇತರ ಅನ್ಯಾಯ ಮತ್ತು ಅವಮಾನಗಳ ವಿರುದ್ಧ ಭಾರತೀಯರನ್ನು ಹುರಿದುಂಬಿಸಿ ಹೋರಾಟ ಮಾಡಿ ಯಶಸ್ವಿಯಾಗಿ ಭಾರತಕ್ಕೆ ಹಿಂದಿರುಗಿದ್ದರು. ಅವರು 'ಸತ್ಯಾಗ್ರಹ' ಅನ್ನುವ ಅಹಿಂಸಾತ್ಮಕ ಹೋರಾಟದ ಮೂಲಕ ಪ್ರಬಲ ಬಿಳಿಯರ ಸರ್ಕಾರವನ್ನು ಮಣಿಸಿದ್ದರು. ಸತ್ಯ ಮತ್ತು ಅಹಿಂಸೆ ಅವರ ಎರಡು ಕಣ್ಣುಗಳಾಗಿದ್ದುವು. ಅವರ ಅಹಿಂಸಾತ್ಮಕ ಸತ್ಯಾಗ್ರಹ ಹೊಸ ಬಗೆಯ ಪರಿಣಾಮಕಾರಿ ಹೋರಾಟವಾಗಿತ್ತು. ಅದರಿಂದ ಅವರನ್ನು ಇಡೀ ವಿಶ್ವವೇ ಬೆರಗುಗಣ್ಣುಗಳಿಂದ ನೋಡುತ್ತಿತ್ತು. ದಕ್ಷಿಣ ಆಫ್ರಿಕದಲ್ಲಿ ಅವರ ಕಾರ್ಯ ಸಫಲವಾದ ಮೇಲೆ ತಮ್ಮ ಮಾತೃ ಭೂಮಿ ಭಾರತದ ಸೇವೆಗಾಗಿ ಅವರು ಹಿಂದಿರುಗಿದ್ದರು.

ಗಾಂಧೀಜಿಯವರು ಜನವರಿ ೯, ೧೯೧೫ರಂದು ಭಾರತಕ್ಕೆ ಬಂದ ಮೇಲೆ ಅಹಮದಾಬಾದ್‌ನ ಹೊರ ವಲಯದಲ್ಲಿ ಸಬರಮತಿ ನದಿಯ ದಡದಲ್ಲಿ ಒಂದು ಆಶ್ರಮ ತೆರೆದಿದ್ದರು. ಅದನ್ನು ಅವರು 'ಸತ್ಯಾಗ್ರಹ ಆಶ್ರಮ' ಎಂದು ಕರೆದಿದ್ದರು. ಗುಜರಾತ್ ಕ್ಲಬ್‌ನ ಅನೇಕ ಸದಸ್ಯರು ಕುತೂಹಲದಿಂದ ಆ ಆಶ್ರಮಕ್ಕೆ ಭೇಟಿ ನೀಡಿ ಬಂದು ಗಾಂಧೀಜಿಗೆ ಸತ್ಯಾಗ್ರಹದಲ್ಲಿರುವ ನಂಬಿಕೆ, ಅವರ ಸರಳತೆ ಮುಂತಾದುವುಗಳ ಬಗ್ಗೆ ಮಾತನಾಡುತ್ತಿದ್ದರು. ಆದರೆ ಗಾಂಧೀಜಿಯ ಧ್ಯೇಯ ಧೋರಣೆಗಳು ವಲ್ಲಭಭಾಯ್ ಅವರನ್ನು ಆಕರ್ಷಿಸಲಿಲ್ಲ. ವಲ್ಲಭಭಾಯ್‌ರವರು ಗಾಂಧೀಜಿಯನ್ನು ಒಬ್ಬ ವಿಲಕ್ಷಣ ಮನುಷ್ಯ ಎಂದು ಪರಿಗಣಿಸಿದ್ದರು ಮತ್ತು ಗಾಂಧಿಯ ಬಗೆಗೆ ವ್ಯಂಗ್ಯ ನುಡಿಗಳನ್ನು ಆಡುತ್ತಿದ್ದರು. ಜನ ಗಾಂಧೀಜಿಯನ್ನು 'ಮಹಾತ್ಮ' ಎಂದರೆ, ವಲ್ಲಭಭಾಯ್, 'ನಮ್ಮಲ್ಲಿ ಅನೇಕ ಮಹಾತ್ಮರಿದ್ದಾರೆ' ಎನ್ನುತ್ತಿದ್ದರು.

ಅಂದು ಗಾಂಧೀಜಿ ತಾವು ಯೋಚಿಸಿದ್ದ ರಾಷ್ಟ್ರೀಯ ಶಾಲೆಗಳ ಬಗೆಗೆ ಬೆಂಬಲವನ್ನು ಕೋರುವುದಕ್ಕಾಗಿ ಗುಜರಾತ್ ಕ್ಲಬ್‌ಗೆ ಬಂದಿದ್ದರು. ತಕ್ಷಣ ಕ್ಲಬ್‌ನಲ್ಲಿದ್ದವರು ಗಾಂಧೀಜಿಯ ಭಾಷಣ ಏರ್ಪಾಟಾಗಿದ್ದ ಹುಲ್ಲುಗಾವಲಿನ ಕಡೆಗೆ ಚಲಿಸಲು ಆರಂಭಿಸಿದರು. ಆದರೆ ವಲ್ಲಭಭಾಯ್ ಹೋಗಲೂ ಇಲ್ಲ, ತಮ್ಮ ಆಟವನ್ನು ನಿಲ್ಲಿಸಲೂ ಇಲ್ಲ. ನಿಜ ಹೇಳುವುದಾದರೆ, ಇತರರು ಹೋಗುತ್ತಿರುವುದಕ್ಕೆ ಅಸಮಾಧಾನವನ್ನು ವ್ಯಕ್ತಪಡಿಸಿದರು.

ಗಾಂಧೀಜಿ ಬರುತ್ತಿರುವುದನ್ನು ಕಂಡ ತಕ್ಷಣ, ಆಟವನ್ನು ನೋಡುತ್ತಾ ಕುಳಿತಿದ್ದ ಮಾವಲಂಕರ್ ಎದ್ದರು.

ಪಟೇಲ್ : ಮಾವಲಂಕರ್, ಏಕೆ ಎದ್ದೆ? ಎಲ್ಲಿಗೆ ಹೋಗುತ್ತಿದ್ದೀಯ?

ಮಾವಲಂಕರ್ : ನೋಡಿ, ಗಾಂಧೀಜಿ ಬರುತ್ತಿದ್ದಾರೆ.

ಪಟೇಲ್ : ಅದಕ್ಕೇನು? ನಮ್ಮ ಆಟವನ್ನು ನೋಡಿದರೆ ನೀನು ಹೆಚ್ಚು ಕಲಿಯುತ್ತೀಯ. ಅವರು (ಗಾಂಧೀಜಿ) ಏನು ಹೇಳುತ್ತಾರೆ ಎನ್ನುವುದನ್ನು ನಾನು ನಿನಗೆ ಹೇಳಬಲ್ಲೆ. ಗೋಧಿಯಲ್ಲಿ ಕಲ್ಲನ್ನು ಆರಿಸುವುದು ಹೇಗೆ ಎನ್ನುವುದು ನಿನಗೆ ಗೊತ್ತೆ ಎಂದು ಅವರು ನಿನ್ನನ್ನು ಕೇಳುವರು. ಅದು ಸ್ವಾತಂತ್ರ್ಯವನ್ನು ತರುತ್ತದಂತೆ.

ಆ ಮಾತಿಗೆ ಅಲ್ಲಿದ್ದವರೆಲ್ಲ ಜೋರಾಗಿ ನಕ್ಕರು. ಆದರೂ ಸಹ ಮಾವಲಂಕರ್ ಗಾಂಧೀಜಿಯ ಭಾಷಣ ಕೇಳಲು ಹೊರಟರು.[೩೯]

೩.೨ ಚಂಪಾರಣ್ಯ ಘಟನೆಯ ಪ್ರಭಾವ

ಚಂಪಾರಣ್ಯವು ಬಿಹಾರ ಪ್ರಾಂತ್ಯದ ಒಂದು ಜಿಲ್ಲೆ. ಅಲ್ಲಿಯ ರೈತರು ಪ್ಲಾಂಟೇಷನ್‌ಗಳ (ವಿಶಾಲ ತೋಟಗಳ) ಆಂಗ್ಲ ಮಾಲೀಕರ ದಬ್ಬಾಳಿಕೆ ಮತ್ತು ಕ್ರೌರ್ಯಕ್ಕೆ ಒಳಗಾಗಿ ನರಳುತ್ತಿದ್ದರು.

ಬಿಹಾರವು ಲಾರ್ಡ್ ಕಾರನ್‌ವಾಲೀಸ್ ಜಾರಿಗೆ ತಂದ ಜಮೀನ್ದಾರಿ ಪದ್ಧತಿಗೆ ಒಳಪಟ್ಟಿತ್ತು. ಚಂಪಾರಣ್ಯದ ಬಹುಪಾಲು ಜಮೀನು ರಾಜ ಬೆಟ್ಟಯ್ಯನ ಜಮೀನ್ದಾರಿಗೆ ಸೇರಿತ್ತು. ಕೆಲವು ಇಂಗ್ಲಿಷರು ಆ ಜಮೀನ್ದಾರನು ತನ್ನ ಜಮೀನುಗಳನ್ನು ಕಡಿಮೆ ಗುತ್ತಿಗೆಯ ಮೇರೆ ತಮಗೆ ದೀರ್ಘಕಾಲದ ಗುತ್ತಿಗೆಗೆ ನೀಡುವಂತೆ ಮಾಡಿದ್ದರು. ಹೀಗೆ ಪಡೆದ ಜಮೀನುಗಳನ್ನು ಆ ಆಂಗ್ಲರು ರೈತರಿಗೆ ನಿಗದಿಯಾದ ಗುತ್ತಿಗೆ ಮತ್ತು ಜಮೀನಿನ ೩/೨೦ ಭಾಗದಲ್ಲಿ ನೀಲಿಯನ್ನು ಕಡ್ಡಾಯವಾಗಿ ಬೆಳೆಯಬೇಕೆಂಬ ಶರತ್ತಿನ ಮೇಲೆ ನೀಡಿದ್ದರು. ನೀಲಿಯನ್ನು ಬೆಳೆಯುವುದು ಬಹಳ ಶ್ರಮದ ಕೆಲಸ. ಜೊತೆಗೆ ಅದು ಭೂಮಿಯ ಸಾರವನ್ನು ನಾಶಪಡಿಸುತ್ತಿತ್ತು. ಅಲ್ಲದೆ ರೈತರು ನೀಲಿಯನ್ನು ಕಡಿಮೆ ದರದಲ್ಲಿ ಆ ಪ್ಲಾಂಟರ್‌ಗಳಿಗೆ ಮಾರಬೇಕಿತ್ತು. ಜೊತೆಗೆ ಅವರು ಕೆಲವು ಸಂದರ್ಭಗಳಲ್ಲಿ 'ಅಬ್ವಾಬ್' ಎಂಬ ಸಾಂಪ್ರದಾಯಿಕ ಕಾಣಿಕೆಗಳನ್ನು ಪ್ಲಾಂಟರ್‌ಗಳಿಗೆ ಒಪ್ಪಿಸಬೇಕಾಗಿತ್ತು. ಒಬ್ಬ ರೈತ ಗತಿಸಿದರೆ ಅವನ ಉತ್ತರಾಧಿಕಾರಿಯು ಒಂದು ತರಹದ ಮರಣ ಸುಂಕವನ್ನು ನೀಡಬೇಕಾಗಿತ್ತು. ಪ್ಲಾಂಟರನು ಒಂದು ಕುದುರೆಯನ್ನೊ ಅಥವಾ ಆನೆಯನ್ನೊ ಕೊಂಡುಕೊಂಡರೆ ಅದರ ಬೆಲೆಯ ಕಡೆಗೆ ಪ್ರತಿಯೊಬ್ಬ ರೈತನೂ ಹಣ ಕೊಡಬೇಕಾಗಿತ್ತು. ಪ್ಲಾಂಟರನು ಬೇಸಿಗೆಯಲ್ಲಿ ಗಿರಿಧಾಮಕ್ಕೆ ಹೋದರೆ ಆ ಖರ್ಚಿಗೂ ಪ್ರತಿಯೊಬ್ಬ ರೈತನೂ ಹಣ ಕೊಡಬೇಕಾಗಿತ್ತು. ಹೀಗೆ ಪ್ಲಾಂಟರರು ನಾನಾ ವಿಧದಲ್ಲಿ ರೈತರ ಸುಲಿಗೆ ಮಾಡುತ್ತಿದ್ದರು. ಅಷ್ಟು ಸಾಲದೆಂಬಂತೆ, ಪ್ಲಾಂಟರರು ರೈತರಿಗೆ ನೀಡದೆ ಇರುವ ಭೂಮಿಯಲ್ಲೂ ಸಹ ರೈತರು ಉಚಿತವಾಗಿ ಕೆಲಸ ಮಾಡಬೇಕಾಗಿತ್ತು. ರೈತರ ಮೇಲೆ ಕೋಪ ಬಂದಾಗ, ಪ್ಲಾಂಟರರ ಜನರು ಹಳ್ಳಿಗಳ ಮೇಲೆ ಆಕ್ರಮಣ ಮಾಡಿ ಲೂಟಿ ಮಾಡುತ್ತಿದ್ದರು, ರೈತರ ಮನೆಗಳಿಗೆ ನುಗ್ಗಿ ಹೆಂಗಸರಿಗೆ ಅವಮಾನ ಮಾಡುತ್ತಿದ್ದರು ಮತ್ತು ಬೆಳೆದು ನಿಂತ ಫಸಲನ್ನು ಧ್ವಂಸ ಮಾಡುತ್ತಿದ್ದರು. ಯಾವುದೇ ಭಾರತೀಯನು, ಅವನು ಎಷ್ಟೇ ಉನ್ನತ ಸ್ಥಾನದಲ್ಲಿರಲಿ, ಒಬ್ಬ ಪ್ಲಾಂಟರನ ಮುಂದೆ ಕುದುರೆಯ ಮೇಲೆ ಹೋಗುವಹಾಗಿರಲಿಲ್ಲ ಮತ್ತು ಕೊಡೆಯನ್ನು ಬಿಚ್ಚಿ ಹಿಡಿದುಕೊಳ್ಳುವ ಹಾಗಿರಲಿಲ್ಲ. ಗಾಂಧೀಜಿಯವರು ಭಾರತಕ್ಕೆ ಹಿಂತಿರುಗಿದ ಮೇಲೆ ಪ್ರಪ್ರಥಮ ಹೋರಾಟ ನಡೆಸಿದ್ದು ಚಂಪಾರಣ್ಯದ ಪ್ಲಾಂಟರರ ಈ ದಬ್ಬಾಳಿಕೆ ಮತ್ತು ದುರ್ವರ್ತನೆಯ ವಿರುದ್ಧ.

ಮೋಹನ್‌ದಾಸ್ ಕರಮ್‌ಚಂದ್ ಗಾಂಧಿಯವರು ದಕ್ಷಿಣ ಆಫ್ರಿಕದಲ್ಲಿನ ತಮ್ಮ ಕೆಲಸಗಳನ್ನು ಮುಗಿಸಿ, ಇನ್ನು ತಮ್ಮ ತಾಯ್ನಾಡಿನ ಸೇವೆ ಮಾಡಬೇಕೆಂದು ೧೯೧೫ರ ಜನವರಿ ೯ ರಂದು ಭಾರತಕ್ಕೆ ಬಂದು ತಲುಪಿದರು. ಅಂದು ಅವರು ಬೊಂಬಾಯಿಯನ್ನು ತಲುಪಿದಾಗ ಅವರಿಗೆ ಅಭೂತಪೂರ್ವ ಸ್ವಾಗತವು ದೊರೆಯಿತು. ಆದರೂ ಅವರು ದಕ್ಷಿಣ ಆಫ್ರಿಕದಲ್ಲಿ ರೂಢಿಗೆ ತಂದ ಅಹಿಂಸಾತ್ಮಕ ಚಳವಳಿ ಮತ್ತು ಅದರ ಯಶಸ್ಸಿನ ಕಥೆ ವಿದ್ಯಾವಂತರಿಗೆ ತಿಳಿದಿತ್ತೇ ಹೊರತು ಜನಸಾಮಾನ್ಯರನ್ನು ಇನ್ನೂ ಮುಟ್ಟಿರಲಿಲ್ಲ. ಅವರನ್ನು ಜನ ಇನ್ನೂ ಮಹಾತ್ಮ ಎಂದು ಕರೆದಿರಲಿಲ್ಲ.

ಅವರು ೧೯೧೫ ಮತ್ತು ೧೯೧೬ರಲ್ಲಿ ಕ್ರಮವಾಗಿ ಬೊಂಬಾಯಿ ಮತ್ತು ಲಕ್ನೊದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನಗಳಲ್ಲಿ ಭಾಗವಹಿಸಿದರು. ಲಕ್ನೊ ಕಾಂಗ್ರೆಸ್ ಅಧಿವೇಶನದಲ್ಲಿ ರಾಜ್ ಕುಮಾರ್ ಶುಕ್ಲ ಎಂಬ ಬಿಹಾರದ ಚಂಪಾರಣ್ಯ ಪ್ರದೇಶದ ಒಬ್ಬ ರೈತ ಅವರನ್ನು ಭೇಟಿ ಮಾಡಿ ಇಂಡಿಗೊ ಪ್ಲಾಂಟೇಷನ್‌ಗಳ ಆಂಗ್ಲ ಮಾಲೀಕರು ರೈತರ ಮೇಲೆ ನಡೆಸುತ್ತಿರುವ ದಬ್ಬಾಳಿಕೆ ಮತ್ತು ಅದರಿಂದ ರೈತರಿಗೆ ಉಂಟಾಗಿರುವ ಸಂಕಷ್ಟಗಳನ್ನು ತಿಳಿಸಿ, ಗಾಂಧೀಜಿಯವರು ಚಂಪಾರಣ್ಯಕ್ಕೆ ಬಂದು ಸ್ವತಃ ವಿಷಯವನ್ನು ಗ್ರಹಿಸಬೇಕೆಂದು ಒತ್ತಾಯ ಪೂರ್ವಕವಾಗಿ ಕೋರಿದನು. ಗಾಂಧೀಜಿಯವರು, ತಾವು ಏಪ್ರಿಲ್ ತಿಂಗಳಲ್ಲಿ ಕಲ್ಕತ್ತ ಅಧಿವೇಶನಕ್ಕೆ ಬರುವುದಾಗಿಯು, ರಾಜ್‌ಕುಮಾರ್ ಶುಕ್ಲ ಅವರನ್ನು ಅಲ್ಲಿ ಭೇಟಿ ಮಾಡಿದರೆ ತಾವು ಚಂಪಾರಣ್ಯಕ್ಕೆ ಅವನೊಡನೆ ಬರುವುದಾಗಿಯು ತಿಳಿಸಿದರು. ಅದರಂತೆ ಶುಕ್ಲ ಏಪ್ರಿಲ್ ತಿಂಗಳಲ್ಲಿ ಕಲ್ಕತ್ತಕ್ಕೆ ಹೋಗಿ ಗಾಂಧೀಜಿಯನ್ನು ಕರೆದುಕೊಂಡು ರೈಲಿನಲ್ಲಿ ಚಂಪಾರಣ್ಯಕ್ಕೆ ಪ್ರಯಾಣ ಮಾಡಿದನು. ಗಾಂಧೀಜಿಯವರು ಚಂಪಾರಣ್ಯದಲ್ಲಿ ರೂಢಿಯಲ್ಲಿರುವ ಭೂ ಹಿಡುವಳಿ ಮತ್ತು ಅದರ ಕಾನೂನು ತೊಡಕಿನ ಬಗೆಗೆ ಶುಕ್ಲನನ್ನು ವಿಚಾರಿಸಿದರು. ಆದರೆ ಸೂಕ್ತ ವಿವರಣೆ ಕೊಡಲು ಅವನಿಗೆ ಸಾಧ್ಯವಾಗಲಿಲ್ಲ. ಪ್ಲಾಂಟರ್‌ಗಳ ಕೇಂದ್ರ ಕಛೇರಿ ಮುಜಫ್ಫರ್‌ಪುರ್‌ನಲ್ಲಿ ಇದ್ದುದರಿಂದ ಗಾಂಧೀಜಿ ಅಲ್ಲಿಗೆ ಹೊರಟರು. ಮುಜಫ್ಫರ್‌ಪುರ್‌ನ ಕಾಲೇಜೊಂದರಲ್ಲಿ ಪ್ರಾಧ್ಯಾಪಕರಾಗಿದ್ದ ಜೆ.ಬಿ. ಕೃಪಲಾನಿ ಈ ಮುಂಚೆ ಅವರನ್ನು ಶಾಂತಿನಿಕೇತನದಲ್ಲಿ ಭೇಟಿ ಮಾಡಿದ್ದರು. ಗಾಂಧೀಜಿಯವರು ತಾವು ಬರುತ್ತಿರುವ ವಿಷಯವನ್ನು ತಿಳಿಸಿ ಕೃಪಲಾನಿಗೆ ಟೆಲಿಗ್ರಾಂ ಕಳುಹಿಸಿದರು. ಕೃಪಲಾನಿ ಮತ್ತು ಅವರ ವಿದ್ಯಾರ್ಥಿಗಳು ರೈಲು ನಿಲ್ದಾಣಕ್ಕೆ ಹೋಗಿ ಗಾಂಧೀಜಿಯವರಿಗೆ ಅದ್ಭುತ ಸ್ವಾಗತವನ್ನು ನೀಡಿದರು. ಗಾಂಧೀಜಿಯವರು ಕೃಪಲಾನಿಯವರ ಅತಿಥಿಯಾಗಿ ಉಳಿದರು ಮತ್ತು ಅವರ ಪ್ರಭಾವದಿಂದ ಕೆಲವು ವಕೀಲರಿಂದ ಚಂಪಾರಣ್ಯದ

ಪ್ಲಾಂಟರ್‌ಗಳು ಮತ್ತು ರೈತರ ನಡುವಣ ಸಂಬಂಧದ ಬಗೆಗೆ ವಿಷಯ ಸಂಗ್ರಹಿಸಿದರು.

ನಂತರ ಗಾಂಧೀಜಿಯವರು ಪ್ಲಾಂಟರರ ಸಂಘದ ಕಾರ್ಯದರ್ಶಿಯನ್ನು ಸಂಧಿಸಿ ತಮ್ಮ ಕಾರ್ಯದಲ್ಲಿ ಅವನ ಸಹಕಾರವನ್ನು ಕೋರಿದರು. ಆ ಕಾರ್ಯದರ್ಶಿಯು, "ನೀವು ಹೊರಗಿನವರು. ನೀವು ಇಲ್ಲಿದ್ದರೆ ಗಲಾಟೆಗೆ ಕಾರಣವಾಗುವುದು" ಎಂದನು. ಗಾಂಧೀಜಿ, "ನಾನೊಬ್ಬ ಭಾರತೀಯ, ಹೊರಗಿನವನಲ್ಲ. ರೈತರ ಸ್ಥಿತಿಯನ್ನು ನಾನೇ ನೋಡುವವರೆಗೆ ಇಲ್ಲಿಂದ ಹೋಗುವುದಿಲ್ಲ" ಎಂದರು. ನಂತರ ಅವರು ತಿರುಹುತ್ ವಿಭಾಗದ ಕಮಿಷನರನನ್ನು ಸಂಧಿಸಿದರು. ಚಂಪಾರಣ್ಯ ಜಿಲ್ಲೆಯು ತಿರುಹುತ್ ವಿಭಾಗಕ್ಕೆ ಸೇರಿತ್ತು. ಆ ಕಮಿಷನರನು ಗಾಂಧೀಜಿಯನ್ನು ಬೆದರಿಸಲು ನೋಡಿದನು. ಅವನೆಂದನು, "ನೀವು ಮುಜಫ್ಫರ್‌ಪುರ್‌ವನ್ನು ಈ ತಕ್ಷಣ ಬಿಡಬೇಕು. ನೀವು ಇಲ್ಲಿದ್ದರೆ ಗಲಾಟೆ ಉದ್ಭವವಾಗುವುದು." "ನಾನು ಅಂತಹುದೇನನ್ನು ಮಾಡುವುದಿಲ್ಲ. ಇಲ್ಲಿಂದ ಚಂಪಾರಣ್ಯಕ್ಕೆ ಪ್ರಯಾಣ ಮಾಡುತ್ತೇನೆ," ಎಂದರು ಗಾಂಧೀಜಿ.

ಚಂಪಾರಣ್ಯ ಜಿಲ್ಲೆಯ ಕೇಂದ್ರವಾದ ಮೋತಿಹಾರಿಯನ್ನು ತಲುಪಿದ ತಕ್ಷಣ ಗಾಂಧೀಜಿ ಒಳನಾಡನ್ನು ಪ್ರವೇಶಿಸಿ ಹಳ್ಳಿಯವರ ಪರಿಸ್ಥಿತಿಯನ್ನು ತಿಳಿಯಲು ಬಯಸಿದರು. ಮಾರ್ಗ ಮಧ್ಯದಲ್ಲಿ ಸರ್ಕಾರವು '೨೪ ಘಂಟೆಗಳ ಒಳಗೆ ಚಂಪಾರಣ್ಯವನ್ನು ಬಿಟ್ಟು ಹೋಗಬೇಕೆಂಬ' ನೋಟೀಸನ್ನು ಅವರಿಗೆ ಜಾರಿ ಮಾಡಿತು. ಗಾಂಧೀಜಿ ನೋಟೀಸನ್ನು ಸ್ವೀಕರಿಸಿದರು. ಅವರು ಜಿಲ್ಲಾ ದಂಡಾಧಿಕಾರಿಗೆ ಒಂದು ಪತ್ರವನ್ನು ಕಳುಹಿಸಿ, 'ಯಾವ ಉದ್ದೇಶಕ್ಕಾಗಿ ನಾನು ಇಲ್ಲಿಗೆ ಬಂದಿದ್ದೇನೋ ಅದು ಪೂರ್ಣ ಆಗುವವರೆಗೆ ಇಲ್ಲಿಂದ ಹೊರಡುವ ಉದ್ದೇಶವಿಲ್ಲ' ಎಂದು ತಿಳಿಸಿದರು. ವಿಚಾರಣೆಗೆ ಜಿಲ್ಲಾ ದಂಡಾಧಿಕಾರಿಯ ಮುಂದೆ ಮಾರನೆಯ ದಿನ ಹಾಜರಾಗುವಂತೆ ಪೊಲೀಸರು ಅವರಿಗೆ ತಿಳಿಸಿದರು. ಮಾರನೆಯ ದಿನ ವಿಚಾರಣೆ ಆರಂಭವಾಯಿತು. ಗಾಂಧೀಜಿ ಕಾನೂನಿನ ಉಲ್ಲಂಘನೆ ಮಾಡಿದ್ದಾರೆಂದು ಸಾಬೀತು ಮಾಡಲು ಪಬ್ಲಿಕ್ ಪ್ರಾಸಿಕ್ಯೂಟರನು ಅನೇಕ ವಾದಗಳನ್ನು ಸಿದ್ಧಪಡಿಸಿಕೊಂಡು ಬಂದಿದ್ದನು. ಗಾಂಧೀಜಿ, ತಾವು ಕಾನೂನು ಮುರಿದಿಲ್ಲ ಎಂದು ಹೇಳುತ್ತಾರೆ ಮತ್ತು ಅನೇಕ ದೊಡ್ಡ ದೊಡ್ಡ ವಕೀಲರನ್ನು ತಮ್ಮ ಪರವಾಗಿ ವಾದ ಮಾಡಲು ಕರೆತಂದಿರುತ್ತಾರೆ, ಅವರ ವಿರುದ್ಧ ತಾನು ಭಾರಿ ವಾದಮಾಡಬೇಕಾಗುತ್ತದೆಂದು ಅವನು ಸಿದ್ಧವಾಗಿ ಬಂದಿದ್ದನು. ಆದರೆ ಗಾಂಧೀಜಿ ಅಂತಹದ್ದೇನನ್ನು ಮಾಡಲಿಲ್ಲ. ತಮ್ಮ ಮೇಲೆ ಹೊರೆಸಿರುವ ಆಪಾದನೆ ನಿಜವೆಂದು ನೇರವಾಗಿ ಒಪ್ಪಿಕೊಂಡರು. ಅವರು ತಮ್ಮ ಹೇಳಿಕೆಯಲ್ಲಿ ಹೀಗೆ ಹೇಳಿದರು:

"ಮಾನವೀಯ ಮತ್ತು ರಾಷ್ಟ್ರೀಯ ಸೇವೆ ಸಲ್ಲಿಸುವ ಉದ್ದೇಶದಿಂದ ನಾನು ಬಂದಿದ್ದೇನೆ..... ಸಮಸ್ಯೆಯನ್ನು ಅಧ್ಯಯನ ಮಾಡದೆ ನಾನು ಯಾವ ಸಹಾಯವನ್ನೂ ಮಾಡಲಾರೆ..... ಕಾನೂನು ಪಾಲಿಸುವ ನಾಗರಿಕನಾಗಿ, ನನಗೆ ನೀಡಿರುವ ಆದೇಶವನ್ನು ಪಾಲಿಸುವುದು ನನ್ನ ಮೊದಲ ಪ್ರವೃತ್ತಿ. ಆದರೆ, ಯಾರಿಗಾಗಿ ನಾನು ಇಲ್ಲಿಗೆ ಬಂದಿದ್ದೇನೊ ಅವರ ಬಗೆಗೆ ನನ್ನ ಕರ್ತವ್ಯ ಪ್ರಜ್ಞೆಯನ್ನು ನಾಶಪಡಿಸದೆ ನಾನು ಆದೇಶಪಾಲನೆ ಮಾಡುವ ಹಾಗಿರಲಿಲ್ಲ. ನಾನು ಈಗ ಅವರ ಮಧ್ಯೆ ಉಳಿಯುವುದರಿಂದ ಮಾತ್ರ ಅವರ ಸೇವೆ ಮಾಡಲು ಸಾಧ್ಯ ಎಂದು ಭಾವಿಸಿದ್ದೇನೆ. ನನಗೆ ನೀಡಬಹುದಾದ ಶಿಕ್ಷೆಯನ್ನು ಕಡಿಮೆ ಮಾಡಿಸುವುದಕ್ಕಾಗಿ ನಾನು ಹೇಳಿಕೆಯನ್ನು ನೀಡುತ್ತಿಲ್ಲ, ಕಾನೂನು ಬದ್ಧ ಅಧಿಕಾರದ ಬಗೆಗೆ ಗೌರವ ಇಲ್ಲದೆ ನನಗೆ ನೀಡಿದ ಆದೇಶವನ್ನು ನಾನು ಕಡೆಗಣಿಸಿಲ್ಲ, ಆದರೆ ನಮ್ಮ ಬದುಕಿನ ಮೇಲ್ಮಟ್ಟದ ಕಾನೂನಿಗೆ ಅಂದರೆ ಆತ್ಮ ಸಾಕ್ಷಿಯ ಧ್ವನಿಗೆ, ವಿಧೇಯನಾಗಿ ಈ ಹೇಳಿಕೆಯನ್ನು ನೀಡಿದ್ದೇನೆ."

ಜಿಲ್ಲಾ ದಂಡಾಧಿಕಾರಿ ಗೊಂದಲಕ್ಕೆ ಸಿಲುಕಿದನು. ಪಬ್ಲಿಕ್ ಪ್ರಾಸಕ್ಯೂಟರ್, ಪೊಲೀಸ್ ಮತ್ತು ಜಿಲ್ಲಾ ದಂಡಾಧಿಕಾರಿಯ ಲೆಕ್ಕಾಚಾರವನ್ನು ಗಾಂಧೀಜಿ ತಲೆಕೆಳಗು ಮಾಡಿದ್ದರು. ಗಾಂಧೀಜಿಯವರಿಗೆ ಜಿಲ್ಲಾ ಆಡಳಿತ ನೀಡಿದ ಆದೇಶ, ಅದನ್ನು ಪಾಲಿಸಲು ಅವರ ನಿರಾಕರಣೆ ಮತ್ತು ಕೋರ್ಟಿನಲ್ಲಿ ಅವರು ನೀಡಿದ ಮಾಮೂಲಿಯಲ್ಲದ ಹೇಳಿಕೆಯ ಸುದ್ದಿ ಚಂಪಾರಣ್ಯವಲ್ಲದೆ ಇಡೀ ದೇಶದಲ್ಲಿ ಹರಡಿತು. ಸುದ್ದಿಯನ್ನು ಕೇಳಿದ ಜನ ಚಕಿತರಾದರು. ಗಾಂಧೀಜಿಯ ಧೈರ್ಯ ಮತ್ತು ಅವರು ಸಾರ್ವಭೌಮ ಸರ್ಕಾರಕ್ಕೇ ಸಡ್ಡು ಹೊಡೆದದ್ದು ಜನರಲ್ಲಿ ವಿದ್ಯುತ್ ಸಂಚಾರವನ್ನುಂಟು ಮಾಡಿತು. ಚಂಪಾರಣ್ಯದ ರೈತರಂತೂ ಪ್ಲಾಂಟರ್‌ಗಳು ಮತ್ತು ಪೊಲೀಸರ ಬಗೆಗೆ ತಮಗಿದ್ದ ಭಯವನ್ನು ಕಳಚಿಕೊಂಡರು. ತಮಗಾಗಿ ಸರ್ಕಾರವನ್ನು ಎದುರಿಸಿದ ಮತ್ತು ತಮಗಾಗಿ ಸೆರೆಮನೆಗೆ ಹೋಗಲೂ ಸಿದ್ಧವಾಗಿದ್ದ ಗಾಂಧೀಜಿಯನ್ನು ನೋಡಲು ಮೋತಿಹಾರಿಗೆ ಧಾವಿಸಿದರು.[೪೦]

ಚಂಪಾರಣ್ಯ ಜಿಲ್ಲೆಯ ಅಧಿಕಾರಿಗಳು ವೈಸ್‌ರಾಯ್ ಸರ್ಕಾರಕ್ಕೆ ಎಲ್ಲವನ್ನೂ ವರದಿ ಮಾಡಿದ್ದರು. ಗಾಂಧೀಜಿಯೂ ಸಹ ವೈಸ್‌ರಾಯ್, ಮದನ್ ಮೋಹನ್ ಮಾಳವೀಯಾ ಮತ್ತು ಪಾಟ್ನಾದಲ್ಲಿರುವ ತಮ್ಮ ಸ್ನೇಹಿತರಿಗೆ ಟೆಲಿಗ್ರಾಂ ಮೂಲಕ ಸಮಾಚಾರವನ್ನು ರವಾನಿಸಿದ್ದರು.

ಆಗಿನ್ನೂ ಪ್ರಥಮ ವಿಶ್ವ ಸಮರ ಮುಗಿದಿರಲಿಲ್ಲ. ಅದರಿಂದ ದೇಶದ ಯಾವ ಭಾಗದಲ್ಲೂ ರಾಜಕೀಯ ಗೊಂದಲದ ಬೆಳವಣಿಗೆ ಸರ್ಕಾರಕ್ಕೆ ಇಷ್ಟವಿರಲಿಲ್ಲ. ಗಾಂಧೀಜಿಯ ದಸ್ತಗಿರಿ ಮತ್ತು ವಿಚಾರಣೆಗೆ ದೇಶದ ಜನರು ತೋರಿದ ಪ್ರತಿಕ್ರಿಯೆಯನ್ನು ಗಮನಿಸಿದ ಸರ್ಕಾರ ಅಶಾಂತಿ ಹರಡಬಹುದೆಂದು ಯೋಚಿಸಿ ಗಾಂಧೀಜಿಯ ಮೇಲಿನ ಆಪಾದನೆಯನ್ನು ಕೈಬಿಟ್ಟಿತು. ತಮ್ಮ ಅಧ್ಯಯನವನ್ನು ಮುಂದುವರೆಸಲು ಗಾಂಧೀಜಿಗೆ ಅವಕಾಶ ನೀಡಿತು.

ಗಾಂಧೀಜಿಯವರ ಈ ಅಧ್ಯಯನದ ಫಲವಾಗಿ ಸರ್ಕಾರವು ಒಂದು ವಿಚಾರಣಾ ಸಮಿತಿಯನ್ನು ನಿಯಮಿಸಿತು. ಗಾಂಧೀಜಿಯವರೂ ಆ ಸಮಿತಿಯ ಒಬ್ಬ ಸದಸ್ಯರಾಗಿದ್ದರು. ಸಮಿತಿಯ ವರದಿಯ ಆಧಾರದ ಮೇಲೆ ಸರ್ಕಾರವು ಕಾನೂನು ಮಾಡಿತು. ಅದರಿಂದ ಚಂಪಾರಣ್ಯದ ರೈತರಿಗೆ ಪೂರ್ಣವಾಗಿ ಅಲ್ಲದೇ ಹೋದರೂ, ಸ್ವಲ್ಪ ಮಟ್ಟಿಗೆ ಪರಿಹಾರ ದೊರೆಯಿತು.[೪೦]

೩.೩ ಗುಜರಾತ್ ಸಭಾ

ಆ ಕಾಲದಲ್ಲಿ ಗುಜರಾತ್‌ನಲ್ಲಿ 'ಗುಜರಾತ್ ಸಭಾ' ಎಂಬ ಸಂಸ್ಥೆ ಇತ್ತು. ಅದೊಂದು ೧೮೮೪ರಲ್ಲಿ ಸ್ಥಾಪಿಸಲ್ಪಟ್ಟ ಸಾಮಾಜಿಕ ಸಂಸ್ಥೆ. ಜನರ ಕುಂದು ಕೊರತೆಗಳ ಪರಿಹಾರಕ್ಕೆ ಯತ್ನಿಸುವುದು ಅದರ ಗುರಿಯಾಗಿತ್ತು. ಆದರೆ ಆ ದಿಕ್ಕಿನಲ್ಲಿ ಆ ಸಂಸ್ಥೆಯು ಪರಿಣಾಮಕಾರಿಯಾದ ಯಾವ ಕೆಲಸವನ್ನೂ ಮಾಡಿರಲಿಲ್ಲ. ಅದು ಒಂದಷ್ಟು ಸೌಮ್ಯ ಠರಾವುಗಳನ್ನು ಅಂಗೀಕರಿಸಿ ಸರ್ಕಾರಕ್ಕೆ ಸಲ್ಲಿಸುವುದನ್ನು ಬಿಟ್ಟು ಬೇರೆ ಏನೂ ಮಾಡಿರಲಿಲ್ಲ. ಅದರ ನಾಯಕರುಗಳು ಒಂದು ಕಡೆ ಸರ್ಕಾರ ನೀಡುವ ಬಿರುದುಗಳ ಮೇಲೆ ಕಣ್ಣಿಟ್ಟು ಮತ್ತೊಂದು ಕಡೆ ಜನರ ಮುಂದೆ ದೇಶಭಕ್ತರಂತೆ ನಟಿಸುತ್ತಾ ದ್ವಂದ್ವ ರೀತಿಯಲ್ಲಿ ವರ್ತಿಸುತ್ತಿದ್ದರು.[೪೧] ಆದರೆ ೧೯೧೭ರಲ್ಲಿ ಅದರಲ್ಲಿ ಅದ್ಭುತ ಬದಲಾವಣೆ ಉಂಟಾಯಿತು. ನಿದ್ರಿಸುತ್ತಿದ್ದ 'ಗುಜರಾತ್ ಸಭಾ' ಎದ್ದು ಗುಡುಗಲಾರಂಭಿಸಿತು.

೧೯೧೭ರಲ್ಲಿ ಚಂಪಾರಣ್ಯದಲ್ಲಿ ಗಾಂಧೀಜಿಯವರು ಬ್ರಿಟಿಷ್ ಸರ್ಕಾರಕ್ಕೆ ಸಡ್ಡು ಹೊಡೆದ ಸುದ್ದಿ 'ಗುಜರಾತ್ ಸಭಾ'ಗೆ ಬಂದ ತಕ್ಷಣ ರಾವ್ ಸಾಹೇಬ್ ಹರಿಲಾಲ್‌ಭಾಯ್‌ರವರು ತಮ್ಮ ಕುರ್ಚಿಯಿಂದ ನೆಗೆದು ನಿಂತು ಹೇಳಿದರು, "ಮಾವಲಂಕರ್, ಇಲ್ಲಿದ್ದಾನೆ ಒಬ್ಬ ವ್ಯಕ್ತಿ, ಒಬ್ಬ ನಾಯಕ, ಒಬ್ಬ ಧೈರ್ಯಶಾಲಿ. ಅವನನ್ನು ನಾವು ನಮ್ಮ (ಗುಜರಾತ್ ಸಭಾದ) ಅಧ್ಯಕ್ಷನನ್ನಾಗಿ ಮಾಡಿಕೊಳ್ಳಬೇಕು." ತಕ್ಷಣವೇ ವಲ್ಲಭಭಾಯ್ ಪಟೇಲ್ ಹರಿಲಾಲ್‌ರವರ ಮಾತನ್ನು ಅನುಮೋದಿಸಿ

ದರು. ಚಂಪಾರಣ್ಯದ ಘಟನೆ ಗಾಂಧೀಜಿಯವರ ಬಗೆಗಿನ ವಲ್ಲಭಭಾಯ್‌ರವರ ಅಭಿಪ್ರಾಯವನ್ನು ಬದಲಾಯಿಸಿಬಿಟ್ಟಿತ್ತು.[೪೨]

ರಾವ್ ಬಹದ್ದೂರ್ ಹರಿಲಾಲ್ ಭಾಯ್‌ರವರ ಸೂಚನೆಯಂತೆ, 'ಗುಜರಾತ್ ಸಭಾ'ದ ಮುಖ್ಯಸ್ಥರು ತಮ್ಮ ಸಭಾದ ಅಧ್ಯಕ್ಷರಾಗುವಂತೆ ಗಾಂಧೀಜಿಯನ್ನು ಕೋರಿದರು. ಗಾಂಧೀಜಿ ಒಪ್ಪಿದರು. ವಲ್ಲಭಭಾಯ್ ಪಟೇಲರು ಕಾರ್ಯದರ್ಶಿಯಾಗಿ ಚುನಾಯಿಸಲ್ಪಟ್ಟರು.

೧೯೧೭ರ ನವೆಂಬರ್ ತಿಂಗಳಲ್ಲಿ ಪಂಚಮಹಲ್ ಜಿಲ್ಲೆಯ ಗೋದ್ರದಲ್ಲಿ ಗುಜರಾತ್ ರಾಜಕೀಯ ಸಮ್ಮೇಳನ ನಡೆಯಿತು. 'ಗುಜರಾತ್ ಸಭಾ' ಅದನ್ನು ಏರ್ಪಡಿಸಿತ್ತು. ಗಾಂಧೀಜಿ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ಅಲ್ಲಿ ವಲ್ಲಭಭಾಯ್ ಪಟೇಲ್‌ರವರು ಪ್ರಥಮ ಬಾರಿಗೆ ಗಾಂಧೀಜಿಯ ನೇರ ಸಂಪರ್ಕಕ್ಕೆ ಬಂದರು. ಅಧ್ಯಕ್ಷ ಗಾಂಧೀಜಿಯವರು ಅಲ್ಲಿ ಕೆಲವು ಮಾಮೂಲಿಯಲ್ಲದ ಕಾರ್ಯಗಳನ್ನು ಮಾಡಿದರು. ಆ ಕಾಲದಲ್ಲಿ ಒಂದು ಕೊಳಕು ಪದ್ಧತಿ ಇತ್ತು: ಅಂತಹ ರಾಜಕೀಯ ಸಮ್ಮೇಳನಗಳಲ್ಲಿ ಮೊಟ್ಟ ಮೊದಲು ಬ್ರಿಟಿಷ್ ಸಾರ್ವಭೌಮತ್ವಕ್ಕೆ ನಿಷ್ಠೆಯನ್ನು ತೋರುವ ಒಂದು ಠರಾವನ್ನು ಅಂಗೀಕರಿಸಲಾಗುತ್ತಿತ್ತು. ಗಾಂಧೀಜಿಯವರು ಆ ಗುಲಾಮಿ ಭಾವನಾ ಪದ್ಧತಿಗೆ ಇತಿಶ್ರೀ ಹಾಡಿದರು. ಅಂತಹ ನಿಷ್ಠೆಯ ಠರಾವು ಇಲ್ಲದೆ ಇಂಗ್ಲೆಂಡಿನಲ್ಲಿ ರಾಜಕೀಯ ಸಮ್ಮೇಳನಗಳು ನಡೆಯುತ್ತವೆ ಎಂದು ಹೇಳಿ ಆವರು ಆ ಠರಾವಿನ ಕರಡನ್ನು ಹರಿದು ಎಸೆದರು. ಗಾಂಧೀಜಿಯ ಈ ವರ್ತನೆ ವಲ್ಲಭಭಾಯ್‌ಗೆ ಮೆಚ್ಚುಗೆಯಾಯಿತು. ನಂತರ ಗಾಂಧೀಜಿಯವರು ಸ್ವರಾಜ್ಯದ ಸಂಪಾದನೆಯು ರೈತರ ಅಧಿಕ ಬೆಂಬಲದ ಮೇಲೆ ನಿಂತಿದೆ ಎಂದು ಹೇಳಿ ಅವರನ್ನು ಮುಟ್ಟುವುದಕ್ಕಾಗಿ ಎಲ್ಲಾ ಭಾಷಣಕಾರರು ಭಾರತೀಯ ಭಾಷೆಗಳಲ್ಲೇ ಭಾಷಣ ಮಾಡಬೇಕೆಂದು ಮನವಿ ಮಾಡಿದರು. ಅದುವರೆವಿಗೆ ಸಮ್ಮೇಳನಗಳು ಇಂಗ್ಲಿಷ್ ಭಾಷೆಯಲ್ಲಿ ನಡೆಯುತ್ತಿದ್ದುವು. ಅದರಿಂದ ಸಾಮಾನ್ಯ ಜನತೆಗೆ ಏನೂ ಅರ್ಥವಾಗುತ್ತಿರಲಿಲ್ಲ. ಈ ಸಮ್ಮೇಳನದಲ್ಲಿ ಎಲ್ಲರೂ ಗುಜರಾತಿ ಭಾಷೆಯಲ್ಲಿ ಭಾಷಣ ಮಾಡಿದರು. ಬೊಂಬಾಯಿಯಿಂದ ಬಂದಿದ್ದ ಆಧುನಿಕ ಪೋಷಾಕಿನ ಇಂಗ್ಲಿಷ್ ವಾಗ್ಮಿ ಪ್ರಸಿದ್ಧ ವಕೀಲ ಮಹಮ್ಮದಾಲಿ ಜಿನ್ನಾ ಕೂಡ ಗುಜರಾತಿಯಲ್ಲಿ ತಡವರಿಸುತ್ತಲೇ ಭಾಷಣ ಮಾಡಿದರು. ಲೋಕಮಾನ್ಯ ಬಾಲಗಂಗಾಧರ ತಿಲಕರು ಮರಾಠಿ ಭಾಷೆಯಲ್ಲಿ ಭಾಷಣ ಮಾಡಿದರು.[೪೩] ಗುಜರಾತಿ ಭಾಷೆಯಲ್ಲಿ ಕಲಾಪಗಳು ನಡೆದದ್ದರಿಂದ ಅಧಿಕ ಸಂಖ್ಯೆಯಲ್ಲಿ ಸಾಮಾನ್ಯ ಜನರು ಭಾಗವಹಿಸಿದರು.

'ಗುಜರಾತ್ ಸಭಾ'ದ ಹೊಸ ಅಧ್ಯಕ್ಷ ಮತ್ತು ಹೊಸ ಕಾರ್ಯದರ್ಶಿಯಾಗಿ

ಗಾಂಧೀಜಿ ಮತ್ತು ವಲ್ಲಭಭಾಯ್ ಪಟೇಲರ ಬಲಶಾಲಿ ಜೋಡಿ ಆ ಸಭಾಗೆ ಹೊಸ ಉತ್ಸಾಹ ಮತ್ತು ಹೊಸ ವಾತಾವರಣವನ್ನು ತಂದಿತು. 'ಗುಜರಾತ್ ಸಭಾ' ಸಂಸ್ಥೆಯು ಮೂಕ ಜನತೆಯ ಧೈರ್ಯಶಾಲಿ ವಕ್ತಾರ ಆಯಿತು. ಸರ್ಕಾರದ ಮುಂದೆ ಕೈಕಟ್ಟಿ ನಿಂತು ಗೋಗರೆಯುತ್ತಿದ್ದ ಸಭಾ, ಸರ್ಕಾರದಿಂದ ಜನರಿಗೆ ಬರಬೇಕಾದದ್ದನ್ನು ಜಬರ್ದಸ್ತಿನಿಂದ ಮತ್ತು ಧೈರ್ಯದಿಂದ ಕೇಳುವ ಸಂಸ್ಥೆಯಾಯಿತು. ವಲ್ಲಭಭಾಯ್ ಪಟೇಲರ ಪ್ರಕಾರ ಮಾತುಗಾರರ ಅಂಗಡಿಯಾಗಿದ್ದದ್ದು ಜೀವಂತ ಕ್ರಿಯಾಶೀಲ ಸಂಸ್ಥೆಯಾಯಿತು.[೪೪]

ಗಾಂಧೀಜಿಯವರು 'ಗುಜರಾತ್ ಸಭಾ'ದಲ್ಲಿ ಅನೇಕ ಬದಲಾವಣೆ ಮತ್ತು ಸುಧಾರಣೆಗಳನ್ನು ತಂದರು. ಅದುವರೆವಿಗೆ ಅದು ವಿದ್ಯಾವಂತರ ಕೂಟವಾಗಿತ್ತು. ಅದರ ಕಲಾಪಗಳು ಇಂಗ್ಲಿಷ್ ಭಾಷೆಯಲ್ಲಿ ನಡೆಯುತ್ತಿದ್ದುವು. ಗಾಂಧೀಜಿ ಅದನ್ನು ಗುಜರಾತಿ ಭಾಷೆಗೆ ಬದಲಾಯಿಸಿದರು. ಗುಜರಾತ್ ಸಭಾ ವಿಸ್ತಾರಗೊಂಡು ಗ್ರಾಮಾಂತರ ಪ್ರದೇಶಗಳ ಜನರನ್ನು ತಲುಪುವಂತೆ ಮಾಡುವುದಕ್ಕಾಗಿ ಗಾಂಧೀಜಿ ಆ ಬದಲಾವಣೆಯನ್ನು ತಂದರು. ಹಿಂದೆಯೇ ಹೇಳಿದ ಹಾಗೆ, ಸಮ್ಮೇಳನಗಳ ಆರಂಭದಲ್ಲಿ 'ಬ್ರಿಟಿಷ್ ಸಾರ್ವಭೌಮತ್ವ' ನಿಷ್ಠಾ ಠರಾವನ್ನು ಅಂಗೀಕರಿಸುವ ಅನಿಷ್ಟ ಪದ್ಧತಿಯನ್ನು ಕಿತ್ತು ಒಗೆದರು. ಗುಜರಾತ್ ಸಭಾ ವಾರ್ಷಿಕ ಸಮ್ಮೇಳನವನ್ನು ಮಾತ್ರ ನಡೆಸುತ್ತಿತ್ತು. ಗಾಂಧೀಜಿಯವರು ಅದರ ಚಟುವಟಿಕೆಗಳು ಇಡೀ ವರ್ಷ ನಡೆಯಬೇಕೆಂದು ಆಲೋಚಿಸಿ ಆ ಕಾರ್ಯಕ್ರಮಗಳ ಯೋಜನೆ ಮತ್ತು ನಿರ್ವಹಣೆಗಾಗಿ ಒಂದು ಕಾರ್ಯಕಾರಿ ಸಮಿತಿಯನ್ನು ರಚಿಸಿದರು. ಸ್ವತಃ ತಾವೇ (ಗಾಂಧೀಜಿಯೇ) ಅದರ ಛೇರ್‌ಮನ್ ಆದರು ಮತ್ತು ವಲ್ಲಭ ಭಾಯ್ ಪಟೇಲ್‌ರವರನ್ನು ಅದರ ಕಾರ್ಯದರ್ಶಿಯಾಗಿ ಮಾಡಿದರು.

ಆಗ ಗ್ರಾಮಾಂತರ ಪ್ರದೇಶಗಳಲ್ಲಿ ಒಂದು ಕೊಳಕು ಪದ್ಧತಿ ಜಾರಿಯಲ್ಲಿತ್ತು. ಒಬ್ಬ ಸರ್ಕಾರಿ ಅಧಿಕಾರಿ ಒಂದು ಹಳ್ಳಿಗೆ ಭೇಟಿ ಕೊಟ್ಟಾಗ ಆ ಹಳ್ಳಿಯ ಬಡಗಿ ಗೂಟವನ್ನು ಹೊಡೆದು ಅವನ ಬಿಡಾರವನ್ನು ನಿರ್ಮಿಸಬೇಕಾಗಿತ್ತು, ಕುಂಬಾರ ನೀರು ತರಲು ಮಡಕೆಗಳನ್ನು ಕೊಡುವುದಲ್ಲದೆ ನೀರನ್ನೂ ಹೊತ್ತು ತರಬೇಕಾಗಿತ್ತು, ಕ್ಷೌರಿಕ ಲ್ಯಾಂಪ್‌ಗಳನ್ನು ಶುಚಿಗೊಳಿಸಬೇಕಾಗಿತ್ತು, ಜಲಗಾರ ಸುತ್ತ ನೆಲವನ್ನು ಗುಡಿಸಬೇಕಾಗಿತ್ತು, ಅಂಗಡಿ ಮಾಲೀಕ ಅಹಾರ ಧಾನ್ಯಗಳನ್ನು ಒದಗಿಸಬೇಕಾಗಿತ್ತು. ಗಾಡಿಯ ಮಾಲೀಕ ಅಧಿಕಾರಿಯ ವಸ್ತುಗಳನ್ನು ಮುಂದಿನ ಹಳ್ಳಿಗೆ ಸಾಗಿಸಬೇಕಾಗಿತ್ತು. ಈ ಸೇವೆಗಳನ್ನು ಗ್ರಾಮವಾಸಿಗಳು ಅಧಿಕಾರಿಗಳಿಗೆ ಕಡ್ಡಾಯವಾಗಿ ಒದಗಿಸ ಬೇಕಾಗಿತ್ತು. ಆದರೆ ಈ ಸೇವೆಗಳಿಗೆ ಅವರು ಹಣವನ್ನು ನಿರೀಕ್ಷಿಸುವ ಹಾಗಿರಲಿಲ್ಲ. ಕೆಲವು ಅಧಿಕಾರಿಗಳು ಮಾತ್ರ ಪಡೆದ ಸೇವೆಗೆ ಹಣವನ್ನು ನೀಡುತ್ತಿದ್ದರು, ಆದರೆ

ಬಹುತೇಕ ಅಧಿಕಾರಿಗಳು ನೀಡುತ್ತಿರಲಿಲ್ಲ. ಈ ಸೇವಾ ಪದ್ಧತಿಯನ್ನು 'ವೇತ್' ಎಂದು ಕರೆಯುತ್ತಿದ್ದರು. 'ಗುಜರಾತ್ ಸಭಾ'ದ ಕಾರ್ಯಕಾರಿ ಸಮಿತಿಯು ಹಿರಿಯ ಅಧಿಕಾರಿಗಳನ್ನು ಭೇಟಿ ಮಾಡಿ ಈ ಅನ್ಯಾಯದ ಮತ್ತು ದುಷ್ಟತನದ ಪದ್ಧತಿಯನ್ನು ಶೀಘ್ರವಾಗಿ ಕೊನೆಗಾಣಿಸಲು ಪ್ರಯತ್ನಿಸಬೇಕೆಂದು ಗೋದ್ರ ಸಮ್ಮೇಳನವು ಸೂಚಿಸಿತ್ತು.

ಸಮ್ಮೇಳನ ಮುಗಿದ ನಂತರ ಕಾರ್ಯದರ್ಶಿ ವಲ್ಲಭಭಾಯ್ ಪಟೇಲ್‌ರವರು ಬೊಂಬಾಯಿ ಪ್ರಾಂತ್ಯದ ಉತ್ತರ ವಿಭಾಗದ ಕಮಿಷನರ್ ಫ್ರೆಡರಿಕ್ ಪ್ರಾಟ್‌ರವರಿಗೆ ವೇತ್ ಬಗ್ಗೆ ಪತ್ರ ಬರೆದರು. ಪ್ರಾಟ್‌ರವರು ಗುಜರಾತ್ ಪ್ರದೇಶದಲ್ಲಿ ಸರ್ಕಾರದ ಪ್ರಧಾನ ಅಧಿಕಾರಿಯಾಗಿದ್ದರು. ಪಟೇಲ್‌ರವರು ತಮ್ಮ ಪತ್ರದಲ್ಲಿ ವೇತ್ ಪದ್ಧತಿಯು ಕಾನೂನು ಬಾಹಿರವೆಂದು ಗುಜರಾತ್ ಸಭಾ ಭಾವಿಸಿರುವುದರಿಂದ ಅದನ್ನು ನಿಲ್ಲಿಸುವಂತೆ ಜನರನ್ನು ಒತ್ತಾಯಿಸಲು ಸಭಾ ಬಯಸಿದೆಯೆಂದೂ, ಆದರೆ ಹಾಗೆ ಮಾಡುವುದಕ್ಕೆ ಮುಂಚೆ ಸರ್ಕಾರವು ಅದನ್ನು ಕಾನೂನು ಬಾಹಿರವೆಂದು ಭಾವಿಸಿದೆಯೋ ಅಥವಾ ಇಲ್ಲವೋ ಅನ್ನುವುದನ್ನು ತಿಳಿಯಲು ಬಯಸಿದೆಯೆಂದೂ, ವೇತ್ ಅನ್ನು ಸರ್ಕಾರವು ಕಾನೂನು ಬದ್ಧ ಎಂದು ಭಾವಿಸಿದ್ದರೆ, ಅದು ಹೇಗೆ ಎಂಬುದನ್ನು ತಿಳಿಸಬೇಕೆಂದೂ, ಬರೆದಿದ್ದರು. ಆ ಪತ್ರದ ಕರಡನ್ನು ಗಾಂಧೀಜಿಯವರೇ ರಚಿಸಿದ್ದರು.

ಆ ಪತ್ರವನ್ನು ಓದಿದ ತಕ್ಷಣ ಪ್ರಾಟ್‌ನು ಕೋಪಾವಿಷ್ಟನಾಗಿ ಅದನ್ನು ಕಸದ ಬುಟ್ಟಿಗೆ ಎಸೆದನೆಂಬ ವಿಷಯ ನಂಬಲರ್ಹವಾದ ಮೂಲಗಳಿಂದ ವಲ್ಲಭಭಾಯ್‌ಗೆ ಬಂದಿತು. ಆದರೆ ಪ್ರಾಟ್‌ನಿಂದ ಅವರಿಗೆ ಯಾವ ಜವಾಬು ಬರಲಿಲ್ಲ. ಆ ವೇಳೆಗೆ ಗಾಂಧೀಜಿ ಗುಜರಾತ್‌ನಲ್ಲಿ ಇರಲಿಲ್ಲ. ಅವರು ಬಿಹಾರದ ಚಂಪಾರಣ್ಯಕ್ಕೆ ವಾಪಸ್ಸು ಹೋಗಿ ಶಿಕ್ಷಣ, ಶುಚಿತ್ವ, ನೈರ್ಮಲ್ಯ ಮುಂತಾದುವನ್ನು ಜನರಲ್ಲಿ ಹರಡಲು ಪ್ರಯತ್ನಿಸುತ್ತಿದ್ದರು. ವಲ್ಲಭಭಾಯ್‌ರವರು ಅವರಿಗೆ ವಿಷಯವನ್ನು ಮುಟ್ಟಿಸಿದರು. ನಂತರ ಗಾಂಧೀಜಿಯ ಸೂಚನೆಯಂತೆ ಪ್ರಾಟ್‌ಗೆ ಒಂದು ಜ್ಞಾಪನಾ ಪತ್ರವನ್ನು ಕಳುಹಿಸಿದರು. ಅದನ್ನೂ ಸಹ ಪ್ರಾಟ್ ಕಡೆಗಣಿಸಿದನು. ಕೆಲವು ದಿನ ಕಾಯ್ದು, ಮತ್ತೆ ಗಾಂಧೀಜಿಯವರ ಸೂಚನೆಯಂತೆ ವಲ್ಲಭಭಾಯ್‌ರವರು ಮತ್ತೊಂದು ಜ್ಞಾಪನಾ ಪತ್ರವನ್ನು ಕಳುಹಿಸಿದರು. ಆ ಪತ್ರದಲ್ಲಿ ಅವರು ಹಿಂದಿನ ಪತ್ರಗಳ ಅಂಶಗಳನ್ನು ಮತ್ತೆ ಬರೆದು ನಂತರ, ೧೦ ದಿನಗಳ ಒಳಗೆ ಪ್ರಾಟ್‌ನಿಂದ ಉತ್ತರ ಬರದೆ ಹೋದರೆ, ವೇತ್ ಪದ್ಧತಿಯು ಕಾನೂನು ಬಾಹಿರ ಮತ್ತು ಯಾವ ಕಾರಣಕ್ಕೂ ಜನರು ಅದಕ್ಕೆ ಶರಣಾಗಬಾರದು ಎಂದು ಜನರಲ್ಲಿ ಗುಜರಾತ್ ಸಭಾ ಪ್ರಚಾರ ಮಾಡುವುದೆಂದೂ, ಸೇರಿಸಿದರು.

ಈಗ ಪ್ರಾಟ್ ಆ ಪತ್ರಕ್ಕೆ ಸ್ಪಂದಿಸಲೇ ಬೇಕಾಯಿತು. ಅವನು ಪಟೇಲ್‌ಗೆ ಪತ್ರ ಬರೆದು ಅವರು ತನ್ನನ್ನು ತನ್ನ ಕಛೇರಿಯಲ್ಲಿ ಭೇಟಿ ಮಾಡಬೇಕೆಂದು ಸೂಚಿಸಿದನು. ಅವರು ಅವನನ್ನು ಭೇಟಿ ಮಾಡಬೇಕಾದ ದಿನಾಂಕ ಮತ್ತು ಕಾಲವನ್ನೂ ಸಹ ಸೂಚಿಸಿದ್ದನು. ಬೇರೆ ಯಾರಾದರು ಆಗಿದ್ದರೆ ಸಾಹೇಬನ ಭೇಟಿಗೆ ಓಡಿಹೋಗುತ್ತಿದ್ದರೇನೊ. ಆದರೆ ವಲ್ಲಭಭಾಯ್‌ರವರ ಧೀರತ್ವವೇ ಬೇರೆ. ಅವರು ಗಾಂಧೀಜಿಯ ಒಡನೆಯೂ ಸಮಾಲೋಚಿಸದೆ ತಾವೇ ಪ್ರಾಟ್‌ಗೆ ಜವಾಬು ಬರೆದರು. ತಮ್ಮ ಮಟ್ಟಿಗೆ ಹೇಳುವುದಾದರೆ ಚರ್ಚಿಸಬೇಕಾದ ಯಾವ ಅಂಶವೂ ಇಲ್ಲವೆಂದೂ, ಆದರೆ ವೇತ್ ಪದ್ಧತಿಯು ಕಾನೂನು ಬದ್ಧ ಎನ್ನುವುದಕ್ಕೆ ಯಾವುದಾದರು ಕಾನೂನು ಪುರಾವೆಗಳಿದ್ದರೆ ತಮಗೆ ತಿಳಿಸಬೇಕೆಂದೂ, ಆದಾಗ್ಯೂ ಕಮಿಷನರನು ವಲ್ಲಭಭಾಯ್‌ರವರನ್ನು ಭೇಟಿ ಮಾಡಲು ಬಯಸಿದರೆ ಗುಜರಾತ್ ಸಭಾ ಕಛೇರಿಯಲ್ಲಿ ಅವನನ್ನು ಸಂತೋಷವಾಗಿ ಭೇಟಿಮಾಡುವುದಾಗಿ ವಲ್ಲಭ ಭಾಯ್‌ರವರು ಪ್ರಾಟ್‌ಗೆ ಬರೆದ ಪತ್ರದಲ್ಲಿ ತಿಳಿಸಿದ್ದರು. ಅಂದರೆ ವಲ್ಲಭ ಭಾಯ್‌ರವರು ಕಮಿಷನರನ ಭೇಟಿಗೆ ಅವನ ಕಛೇರಿಗೆ ಹೋಗದೆ, ಅವನೇ ಬೇಕಾದರೆ ತಮ್ಮ ಗುಜರಾತ್ ಸಭಾಗೆ ಬರಬಹುದೆಂದು ತಿಳಿಸಿದ್ದರು. ಎಂತಹ ಅದ್ಭುತ ಸ್ವಾಭಿಮಾನ ಮತ್ತು ಧೈರ್ಯದ ಪ್ರದರ್ಶನ! ಅವರು ಆ ಜವಾಬನ್ನು ಆ ಕ್ಷಣದ ಆವೇಶದಿಂದ ಬರೆದಿರಲಿಲ್ಲ. ಲೆಕ್ಕಾಚಾರ ಹಾಕಿ ತಮ್ಮ ಪತ್ರವನ್ನು ಕಸದ ಬುಟ್ಟಿಗೆ ಎಸೆದ ಕಮಿಷನರನ ಅಹಂಕಾರಕ್ಕೆ ಬಿಸಿ ಮುಟ್ಟಿಸಬೇಕೆಂದೇ ಆ ರೀತಿ ಬರೆದಿದ್ದರು. ಅದಕ್ಕಾಗಿಯೇ ಅವರು ಗಾಂಧೀಜಿಯ ಒಡನೆಯೂ ಆ ಪತ್ರದ ಬಗೆಗೆ ಸಮಾಲೋಚಿಸಿರಲಿಲ್ಲ. ಗಾಂಧೀಜಿಯವರಾಗಿದ್ದರೆ ಸೌಮ್ಯವಾಗಿ ಬರೆಯುತ್ತಿದ್ದರೇನೊ.

ವಲ್ಲಭಭಾಯ್‌ರವರು ಹತ್ತು ದಿನಗಳ ಕಾಲ ಕಾದು, ನಂತರ ಜನರು ವೇತ್ ಪದ್ಧತಿಯನ್ನು ಅನುಸರಿಸಬಾರದೆಂಬ ಸೂಚನೆ ನೀಡುವ ಕರಪತ್ರಗಳನ್ನು ಮುದ್ರಿಸಿ, ಗುಜರಾತ್‌ನ ಎಲ್ಲಾ ಹಳ್ಳಿಗಳಲ್ಲಿ ಹಂಚಿಸಿದರು. ಗುಜರಾತ್ ಸಭಾದ ಸ್ವಯಂ ಸೇವಕರು ಹಳ್ಳಿ ಹಳ್ಳಿಗಳಿಗೆ ಹೋಗಿ ಈ ಬಗೆಗೆ ಪ್ರಚಾರ ಮಾಡಿದರು. ವೇತ್ ಪದ್ಧತಿ ತಕ್ಷಣವೇ ಸಂಪೂರ್ಣವಾಗಿ ನಿಂತು ಹೋಗಲಿಲ್ಲ. ಆದರೆ ಅದಕ್ಕೆ ಬಲವಾದ ಪೆಟ್ಟು ಬಿದ್ದದ್ದಂತೂ ವಾಸ್ತವ.[೪೫]

೩.೪ ಅಹಮದಾಬಾದ್ ಪುರಸಭೆಯಲ್ಲಿ

ಇಂಗ್ಲೆಂಡಿನಲ್ಲಿ ಪ್ರಧಾನಮಂತ್ರಿ ಗ್ಲಾಡ್‌ಸ್ಟನ್‌ನ ಸರ್ಕಾರವಿದ್ದಾಗ ೧೮೮೦-೮೪ರವರೆಗೆ ಭಾರತದಲ್ಲಿ ವೈಸ್‌ರಾಯ್ ಆಗಿದ್ದ ಉದಾರಿ ಲಾರ್ಡ್ ರಿಪ್ಪನ್

೧೮೮೨ರಲ್ಲಿ ಒಂದು ಮಸೂದೆಯ ಮೂಲಕ ಸ್ವಯಂ ಆಡಳಿತದ ಪುರಸಭೆ ಮತ್ತು ಇತರ ಸ್ಥಳೀಯ ಸಂಸ್ಥೆಗಳನ್ನು ಸ್ಥಾಪಿಸಿದ್ದನು. ಅವು ಭಾರತೀಯರಿಗೆ (ಆಧುನಿಕ) ಪ್ರಜಾಪ್ರಭುತ್ವ ತರಬೇತಿ ಕ್ಷೇತ್ರವಾಗಲಿ ಅನ್ನುವುದು ಲಾರ್ಡ್ ರಿಪ್ಪನ್‌ನ ಉದ್ದೇಶವಾಗಿತ್ತು. ಅದರಿಂದ ಈ ಪುರಸಭೆಗಳಿಗೆ ತಪ್ಪು ಮಾಡುವ ಮತ್ತು ಆ ತಪ್ಪಿನಿಂದ ತಾವೇ ಪಾಠ ಕಲಿಯುವ ಸ್ವಾತಂತ್ರ್ಯವು ದೊರಕಿತ್ತು. ಆದರೆ ವೈಸ್‌ರಾಯ್‌ನ ಈ ಉದಾರತೆ ಬ್ರಿಟಿಷ್ ಅಧಿಕಾರಿ ವರ್ಗಕ್ಕೆ ಒಪ್ಪಿತವಾಗಿರಲಿಲ್ಲ. ಅವರು ಈ ಪುರಸಭೆಗಳ ಸ್ವಯಂ ಆಡಳಿತ ಅಧಿಕಾರವನ್ನು ಮೊಟಕುಗೊಳಿಸಲು ಪ್ರಯತ್ನಿಸುತ್ತಿದ್ದರು. ಜೊತೆಗೆ ಮುಂದೆ ಬಂದ ವೈಸ್‌ರಾಯ್‌ಗಳು ಲಾರ್ಡ್ ರಿಪ್ಪನ್‌ನಂತೆ ಉದಾರಿಗಳಾಗಿರಲಿಲ್ಲ ಮತ್ತು ಪುರಸಭೆಗಳ ಸ್ವಯಂ ಆಡಳಿತಕ್ಕೆ ಕತ್ತರಿ ಹಾಕಲು ಆರಂಭಿಸಿದರು.

ಬೊಂಬಾಯಿ ಪ್ರಾಂತ್ಯದ ಸರ್ಕಾರವು ೧೯೧೪ರಲ್ಲಿ ಕಾನೂನಿಗೆ ತಿದ್ದುಪಡಿ ತಂದು ಪುರಸಭೆಗಳಿಗೆ 'ಮುನಿಸಿಪಲ್ ಕಮಿಷನರ್' ಎಂಬ ಐ.ಸಿ.ಎಸ್. ಅಧಿಕಾರಿಯನ್ನು ನಿಯಮಿಸುವುದನ್ನು ಜಾರಿಗೆ ತಂದಿತು. ೧೯೧೫ರಲ್ಲಿ ಅಹಮದಾಬಾದ್ ಪುರಸಭೆಗೆ ಜೆ.ಎ. ಶಿಲ್ಲಡಿ ಎಂಬ ಐ.ಸಿ.ಎಸ್. ಅಧಿಕಾರಿಯು ಮುನಿಸಿಪಲ್ ಕಮಿಷನರ್ ಆಗಿ ನಿಯಮಿಸಲ್ಪಟ್ಟನು. ಅವನೊಬ್ಬ ಮಹಾ ಅಹಂಕಾರಿ ಮತ್ತು ದರ್ಪಿಷ್ಠ ಅಧಿಕಾರಿ. ಅದರಿಂದ ಪುರಸಭಾ ಸದಸ್ಯರು ಪುರಸಭೆಗೆ ಇರುವ ಅಲ್ಪ ಸ್ವಯಂ ಆಡಳಿತವೂ ಸಹ ಹೊರಟುಹೋಗಬಹುದೆಂದು ಚಿಂತಿಸಲಾರಂಭಿಸಿದರು. ಆರಂಭದಿಂದಲೇ ಪುರಸಭಾ ಸದಸ್ಯರು ಮತ್ತು ಅವನ ನಡುವೆ ತಿಕ್ಕಾಟ ಶುರುವಾಯಿತು. ಅವನು ಪುರಸಭೆಯನ್ನು ಕೇಳದೆಯೇ ತನಗೆ ಇಷ್ಟ ಬಂದಂತೆ ಹಣ ವೆಚ್ಚಮಾಡುತ್ತಿದ್ದನು. ಸರ್ಕಾರಕ್ಕೆ ಪತ್ರ ಬರೆಯುವ ಪುರಸಭಾಧ್ಯಕ್ಷರ ಅಧಿಕಾರವನ್ನು ಕಿತ್ತುಕೊಂಡನು. ತನಗೆ ಇಷ್ಟ ಬಂದವರನ್ನು, ಅಧ್ಯಕ್ಷರಿಗೂ ತಿಳಿಸದೆ, ಕೆಲಸಕ್ಕೆ ನಿಯಮಿಸುತ್ತಿದ್ದನು. ಅಧ್ಯಕ್ಷರಿಗೆ ಹೇಳದೆ ಗೈರು ಹಾಜರಾಗುತ್ತಿದ್ದನು. ಒಂದು ರೀತಿಯಲ್ಲಿ ಅವನು ಸರ್ವಾಧಿಕಾರಿಯೇ ಆಗಿದ್ದನು.[೪೬]

ಅದರಿಂದ ವಲ್ಲಭಭಾಯ್‌ರವರ ಕೆಲವು ಸ್ನೇಹಿತರು – ಚಿಮನ್‌ಲಾಲ್ ಥಾಕೋರ್, ಹೆಚ್.ವಿ. ದ್ವಿವೇದಿಯ, ಹರಿಲಾಲ್ ದೇಸಾಯಿ ಮೊದಲಾದವರು – ಪುರಸಭೆಯನ್ನು ಪ್ರವೇಶಿಸುವಂತೆ ಪಟೇಲರನ್ನು ವಿನಂತಿಸಿದರು. ಶಿಲ್ಲಡಿಯನ್ನು ನಿಯಂತ್ರಿಸಲು ಅಥವಾ ಎದುರಿಸಲು ನೇರಮಾತಿನ ಧೈರ್ಯಶಾಲಿ ವಲ್ಲಭಭಾಯ್‌ಗೆ ಮಾತ್ರ ಸಾಧ್ಯ ಎಂದು ಅವರು ತೀರ್ಮಾನಿಸಿದ್ದರು. ವಲ್ಲಭಭಾಯ್ ಅದನ್ನು ಒಂದು ಸವಾಲೆಂದು ಸ್ವೀಕರಿಸಿ, ಒಪ್ಪಿದರು. ಅವರು ೧೯೧೭ರಲ್ಲಿ ಪುರಸಭೆಗೆ ಅವಿರೋಧವಾಗಿ ಚುನಾಯಿತರಾದರು.[೪೭]

ಅವರು ಮುನಿಸಿಪಲ್ ಕಮಿಷನರ್ ಶಿಲ್ಲಡಿ ತನಗೆ ತಾನೇ ವಹಿಸಿಕೊಂಡಿದ್ದ ಅಧಿಕಾರಗಳನ್ನು ಕಿತ್ತುಹಾಕಬೇಕಾಗಿತ್ತು. ಪಟೇಲರು ಪುರಸಭಾ ಸದಸ್ಯರಲ್ಲಿ ಧೈರ್ಯ ಮತ್ತು ಉತ್ಸಾಹವನ್ನು ತುಂಬಿ ಅವರು ಶಿಲ್ಲಡಿ ವಿರುದ್ಧ ನಿಲ್ಲುವಂತೆ ಪ್ರೇರೇಪಿಸಿದರು. ಶಿಲ್ಲಡಿ ಎಂದರೆ ಪುರಸಭಾ ಸದಸ್ಯರು ಹೆದರುತ್ತಿದ್ದರು. ಅವನಿಗೆ ಅಸಮಾಧಾನವುಂಟು ಮಾಡುವುದಕ್ಕೆ ಹಿಂಜರಿಯುತ್ತಿದ್ದರು. ವಲ್ಲಭಭಾಯ್‌ರವರು ಅವರಿಗೆ ಹೇಳಿದರು, "ನಿಮ್ಮ ಗುಲಾಮಿ ಭಾವನೆಯು ನಿಮ್ಮ ಮೇಲೆ ಸವಾರಿ ಮಾಡಲು ಮತ್ತು ನಿಮ್ಮನ್ನು ಅವಮಾನಿಸಲು ಮುನಿಸಿಪಲ್ ಕಮಿಷನರ್‌ಗೆ ಪ್ರೋತ್ಸಾಹ ನೀಡುತ್ತಿದೆ. ನೀವು ನಿಮ್ಮ ಹೆದರಿಕೆಯನ್ನು ಬಿಡುವ ತನಕ ಏನನ್ನೂ ಸಾಧಿಸಲಾರಿರಿ." ಕಾಕತಾಳೀಯವಾಗಿ ಗಾಂಧೀಜಿಯವರೂ ಸಹ ಅಹಮದಾಬಾದ್‌ನಿಂದ ಜನರಿಗೆ ಆತ್ಮಾಭಿಮಾನದ ಮೊದಲ ಪಾಠಗಳನ್ನು ಹೇಳಲು ಆರಂಭಿಸಿದ್ದರು.

ವಲ್ಲಭಭಾಯ್‌ರವರು ಶಿಲ್ಲಡಿಯನ್ನು ಮಣಿಸಲು ಎರಡು ಸಾಂವಿಧಾನಿಕ ಕ್ರಮಗಳನ್ನು ಕೈಗೊಂಡರು. ಮೊದಲನೆಯದು, ಕಮಿಷನರನು ಮಾಡಬಹುದಾದ ಖರೀದಿಯ ಹಣಕ್ಕೆ ಒಂದು ಗರಿಷ್ಠ ಮಿತಿಯನ್ನು ನಿಗದಿಪಡಿಸುವಂತೆ ಮಾಡಿದರು. ಸಾಮಾನ್ಯ ಸಭೆ ಮಂಜೂರು ಮಾಡಿರುವ ವೆಚ್ಚವನ್ನು ಮಾತ್ರ ಕಮಿಷನರ್ ಮಾಡಬಹುದೆಂಬ ನಿಯಮವನ್ನು ಜಾರಿಗೆ ತಂದರು. ಎರಡನೆಯದು, ಸಾಮಾನ್ಯ ಸಭೆ ಒಪ್ಪಿರುವ ಟೆಂಡರುಗಳ ಪೈಕಿ ಮಾತ್ರ ಒಂದನ್ನು ಕಮಿಷನರ್ ಆರಿಸಿಕೊಳ್ಳುವಂತೆ ಮಾಡಿದರು. ಇಷ್ಟರ ಜೊತೆಗೆ, ೧೯೧೪–೧೫ರಿಂದ ಕಮಿಷನರ್ ಮಾಡಿರುವ ಖರೀದಿಗಳ ಪಟ್ಟಿಯನ್ನು ಕೊಡುವಂತೆ, ಅದನ್ನು ಸಾಮಾನ್ಯ ಸಭೆಯ ಮುಂದೆ ಇಡುವ ಮುಂಚೆ 'ನಿರ್ವಹಣಾ ಸಮಿತಿ' ಅದನ್ನು ಪರಿಶೀಲಿಸುವಂತೆ ಮಾಡಿದರು. ಮುನಿಸಿಪಲ್ ಕಮಿಷನರನ ಮೇಲೆ ಸಾಮಾನ್ಯ ಸಭೆಗೆ ಇರುವ ಅಧಿಕಾರವನ್ನು ಸ್ಥಾಪಿಸಲೋಸುಗ ಈ ಕ್ರಮಗಳನ್ನು ವಲ್ಲಭಭಾಯ್ ತೆಗೆದುಕೊಂಡರು.

ಪುರಸಭೆಯು ಬ್ರಿಟಿಷ್ ಅಧಿಕಾರಿಗಳು ವಾಸ ಮಾಡುತ್ತಿದ್ದ ಕಂಟೋನ್ಮೆಂಟ್ ಪ್ರದೇಶಕ್ಕೆ ನೀರನ್ನು ೧೦೦೦ ಗ್ಯಾಲನ್‌ಗೆ ಎರಡುವರೆ ಆಣೆಯಂತೆ ಒದಗಿಸುತ್ತಿತ್ತು. ಆದರೆ ಇತರ ನಾಗರಿಕರಿಂದ ೧೦೦೦ ಗ್ಯಾಲನ್ ನೀರಿಗೆ ಎಂಟು ಆಣೆ ವಸೂಲಿ ಮಾಡುತ್ತಿತ್ತು. ಈ ಅನ್ಯಾಯವು ಸಾಲದೆಂಬಂತೆ, ಕಂಟೋನ್ಮೆಂಟ್ ಅಧಿಕಾರಿಗಳು ಮೀಟರ್ ಅನ್ನು ಹದೆಗೆಡಿಸಿ ನೀರನ್ನು ಕದಿಯುತ್ತಿದ್ದರು. ಬೇಸಿಗೆಕಾಲದಲ್ಲಿ ಅಭಾವ ಇರುವಾಗ ನೀರನ್ನು ವ್ಯರ್ಥಮಾಡುತ್ತಿದ್ದರು. ನಲ್ಲಿಯಲ್ಲಿ ಬರುವ ನೀರು ಅನೇಕ ಸಲ ಮಣ್ಣು ಬೆರೆತು ಅಶುದ್ಧವಾಗಿರುತ್ತಿತ್ತು. ಅದಕ್ಕೆ ಕಾರಣ ಮುನಿಸಿಪಲ್ ಇಂಜಿನಿಯರ್ ವಿ.ಎಂ. ಮೆಕಾಸೆಯ ಅದಕ್ಷತೆ. ಆ ಅದಕ್ಷ ಇಂಜಿನಿಯರನನ್ನು ಶಿಲ್ಲಡಿ ಮತ್ತು ಪ್ರಾಟ್ ಹಿಂಬಾಗಿಲಿನಿಂದ ತಂದಿದ್ದರು. ಆದರೆ ಅದನ್ನು ಅದುವರೆವಿಗೆ

ಯಾರೂ ಪ್ರಶ್ನಿಸಿರಲಿಲ್ಲ, ಪ್ರಶ್ನಿಸುವ ತಾಕತ್ತು ಯಾರಿಗೂ ಇರಲಿಲ್ಲ. ಆದರೆ ಈಗ ಪಟೇಲರಿಗೆ ಅದನ್ನು ಪ್ರಶ್ನಿಸುವ ತಾಕತ್ತು ಇತ್ತು ಮತ್ತು ಅವರು ಅದನ್ನು ಪ್ರಶ್ನಿಸಿದರು. ಆ ಸಮಸ್ಯೆಯನ್ನು 'ನೈರ್ಮಲ್ಯ ಸಮಿತಿ'ಗೆ ವರ್ಗಾಯಿಸುವಂತೆ ಮಾಡಿ ಅದನ್ನು ನಾಗರಿಕರಿಗೆ ತೃಪ್ತಿಯಾಗುವಂತೆ ಸರಿಪಡಿಸಿದರು. ಅವರು 'ನೈರ್ಮಲ್ಯ ಸಮಿತಿ'ಯ ಛೇರ್‌ಮನ್ ಆಗಿದ್ದರು.

ಮುನಿಸಿಪಲ್ ಕಮಿಷನರ್ ಶಿಲ್ಲಡಿಯನ್ನು ಓಡಿಸುವುದಕ್ಕೆ ಸೂಕ್ತ ಅವಕಾಶಕ್ಕಾಗಿ ವಲ್ಲಭಭಾಯ್ ಕಾಯುತ್ತಿದ್ದರು. ಅಂತಹ ಅವಕಾಶ ಅಷ್ಟರಲ್ಲೇ ಸಿಕ್ಕಿತು.

ಅಹಮದಾಬಾದ್‌ನ ರೈಲು ನಿಲ್ದಾಣದ ಬಳಿ ಒಂದು ಚಿಕ್ಕ ಕೆರೆ ಇತ್ತು. ಅದು ಸೊಳ್ಳೆಗಳ ಉತ್ಪತ್ತಿ ಸ್ಥಾನವಾಗಿತ್ತು ಮತ್ತು ಕೆಟ್ಟ ವಾಸನೆಯನ್ನು ಹೊರಹೊಮ್ಮಿಸುತ್ತಿತ್ತು. ಆ ಕೆರೆಯನ್ನು ಮುಚ್ಚಲಿ ಎನ್ನುವ ಉದ್ದೇಶದಿಂದ ಸರ್ಕಾರವು ಅದನ್ನು ಅಹಮದಾಬಾದ್ ಪುರಸಭೆಗೆ ೧೯೧೪ರಲ್ಲಿ ವರ್ಗಾಯಿಸಿತು. ಆದರೆ ಅದನ್ನು ಮುಚ್ಚಲು ಶಿಲ್ಲಡಿ ಕ್ರಮ ತೆಗೆದುಕೊಳ್ಳಲಿಲ್ಲ. ಅದಕ್ಕೆ ಬದಲಾಗಿ ಅದನ್ನು ಫ಼ತೇ ಮಹಮ್ಮದ್ ಮುನ್ಷಿ ಎಂಬ ಪುರಸಭಾ ಸದಸ್ಯನಿಗೆ ಕೊಡಲು ಹೊರಟನು. ಆ ಕೆರೆಯ ಬಳಿ ಫ಼ತೇ ಮಹಮ್ಮದ್‌ನ ಬೆಂಕಿಪೊಟ್ಟಣ ತಯಾರಿಸುವ ಕಾರ್ಖಾನೆ ಇತ್ತು. ಅವನು ತನ್ನ ಮರದ ದಿಮ್ಮಿಗಳನ್ನು ಹದಗೊಳಿಸುವುದಕ್ಕಾಗಿ ಆ ಕೆರೆಯನ್ನು ಬಳಸುತ್ತಿದ್ದನು. ಅವನು ಆ ಕೆರೆಯ ಮಾಲೀಕ ತಾನು ಎಂದು ಪ್ರತಿಪಾದಿಸುತ್ತಿದ್ದನು. ಆದರೆ ಕೆಳಗಿನ ನ್ಯಾಯಾಲಯಗಳು ಮತ್ತು ಬಾಂಬೆ ಉಚ್ಚ ನ್ಯಾಯಾಲಯ ಅವನಿಗೆ ವಿರುದ್ಧವಾಗಿ ತೀರ್ಪಿತ್ತಿದ್ದವು. ಆದರೂ ಸಹ ಶಿಲ್ಲಡಿ ಕೆರೆಯನ್ನು ಅವನು ಉಪಯೋಗಿಸಲು ಬಿಟ್ಟಿದ್ದನು, ಏಕೆಂದರೆ ಫ಼ತೇ ಮಹಮ್ಮದ್ದನು ಅವನ ಆಪ್ತನಾಗಿದ್ದನು ಮತ್ತು ಸರ್ಕಾರದ ಸಮರ-ಸಾಲಕ್ಕೆ ಹಣ ನೀಡಿದ್ದನು. ಉತ್ತರ ವಿಭಾಗದ ಕಮಿಷನರ್ ಫ್ರೆಡರಿಕ್ ಪ್ರಾಟ್ ಈ ವಿವಾದದ ಮಧ್ಯೆ ಪ್ರವೇಶಿಸಿ ಕೆರೆಯ ಮೇಲಿನ ಪುರಸಭೆಯ ಮಾಲೀಕತ್ವವನ್ನು ಎತ್ತಿ ಹಿಡಿದನು. ಆದರೂ ಸಹ, ಶಿಲ್ಲಡಿಯು ಪುರಸಭೆಯ ಸದಸ್ಯರ ಅಭಿಪ್ರಾಯವನ್ನು ಬದಿಗೊತ್ತಿ, ಆ ಕೆರೆಯನ್ನು ಫ಼ತೇ ಮಹಮ್ಮದ್‌ಗೆ ಶಾಶ್ವತ ಗುತ್ತಿಗೆಯ ಮೇಲೆ ನೀಡುವಂತೆ ಶಿಫ಼ಾರಸ್ಸು ಮಾಡಿ ಸರ್ಕಾರಕ್ಕೆ ಕಳುಹಿಸಿದನು.

ಇಂತಹ ಅವಕಾಶಕ್ಕಾಗಿಯೇ ವಲ್ಲಭಭಾಯ್ ಕಾಯುತ್ತಿದ್ದರು. ಅವರು ಜೂನ್ ೧೭ರಲ್ಲಿ ಶಿಲ್ಲಡಿಯ ಮೇಲೆ 'ಉದ್ದೇಶ ಪೂರ್ವಕ ಅವಿಧೇಯತೆ'ಯ ಆಪಾದನೆ ಹೊರಿಸಿದರು ಮತ್ತು ಅವನನ್ನು ತೆಗೆಯುವುದಕ್ಕೆ ಆಗ್ರಹ ಪಡಿಸಿದರು. ಶಿಲ್ಲಡಿ ಇನ್ನೂ ಒಂದು ತಪ್ಪು ಮಾಡಿದ್ದನು. ಸಾಮಾನ್ಯ ಸಭೆ ಒಪ್ಪಿದ್ದ ಒಂದು

ಪತ್ರವನ್ನು ಸರ್ಕಾರಕ್ಕೆ ಕಳುಹಿಸುವಾಗ ಹದಿಮೂರು ಮುಖ್ಯವಾದ ಪದಗಳನ್ನು ತೆಗೆದುಹಾಕಿದ್ದನು. ಅದನ್ನು ವಲ್ಲಭಭಾಯ್‌ರವರು 'ಆಡಳಿತಾತ್ಮಕ ಕ್ರೈಂ' ಎಂದೂ, ಅದು ಅಕ್ಷಮ್ಯ ಅಪರಾಧ ಎಂದೂ ಪರಿಗಣಿಸಿದರು. ಸಾಮಾನ್ಯ ಸಭೆಯು ಮುನಿಸಿಪಲ್ ಕಮಿಷನರ್‌ನನ್ನು ತೆಗೆದುಹಾಕುವಂತೆ ಆಗ್ರಹಿಸುವ ಠರಾವನ್ನು ಅಂಗೀಕರಿಸುವಂತೆ ಪಟೇಲ್ ಮಾಡಿದರು. ಎಲ್ಲಾ ಸಂಗತಿಗಳು ಶಿಲ್ಲಡಿಗೆ ವಿರುದ್ಧವಾಗಿ ಇದ್ದುದರಿಂದ ಸರ್ಕಾರವು ಪುರಸಭಾ ಸದಸ್ಯರ ಕೋರಿಕೆಯನ್ನು ತಿರಸ್ಕರಿಸಲು ಸಾಧ್ಯವೇ ಇರಲಿಲ್ಲ. ಅದು ಶಿಲ್ಲಡಿಯನ್ನು ಅಹಮದಾಬಾದ್ ಮುನಿಸಿಪಲ್ ಕಮಿಷನರ್ ಹುದ್ದೆಯಿಂದ ತೆಗೆದು ಬೇರೆಡೆಗೆ ಕಳುಹಿಸಿತು. ಬಹುಷಃ ಬ್ರಿಟಿಷ್ ಆಡಳಿತದಲ್ಲಿ ಒಬ್ಬ ಐ.ಸಿ.ಎಸ್. ಅಧಿಕಾರಿಯ ಮೇಲೆ ಕ್ರಮ ಜರುಗಿಸಿದ ಘಟನೆ ಇದೊಂದೇ ಎಂದು ಕಾಣುತ್ತದೆ.[೪೮]

ಶಿಲ್ಲಡಿಯ ಸ್ಥಾನಕ್ಕೆ 'ಆಲ್ಫ್ರಡ್ ಮಾಸ್ಟರ್' ಎಂಬುವನು ಬಂದನು. ಈ ಹೊಸ ಮುನಿಸಿಪಲ್ ಕಮಿಷನರನ ಗಮನವೆಲ್ಲ ಅವನ ಸಂಬಳ ಮತ್ತು ಭತ್ಯೆಗಳ ಕಡೆಗೆ ಇತ್ತೇ ಹೊರತು, ಪುರಸಭೆಯಲ್ಲಿ ಆಗಬೇಕಾದ ಕೆಲಸಗಳ ಕಡೆಗೆ ಇರಲಿಲ್ಲ. ಅವನ ಸಂಬಳ ಮತ್ತು ಭತ್ಯೆಗಳನ್ನು ಸರ್ಕಾರವೇ, ಅವನನ್ನು ನಿಯಮಿಸುವಾಗಲೇ, ಗೊತ್ತುಪಡಿಸಿತ್ತು. ಆದಾಗ್ಯೂ ಅವನು ಹೆಚ್ಚಿನ ಭತ್ಯವನ್ನು ಕೋರಿ ಪುರಸಭೆಗೆ ಅರ್ಜಿ ಸಲ್ಲಿಸಿದನು. ಅದು 'ನೈರ್ಮಲ್ಯ ಸಮಿತಿ'ಯ ಛೇರ್‌ಮನ್ ವಲ್ಲಭಭಾಯ್ ರವರ ಬಳಿ ಬಂದಿತು. ಅವರು ಅದನ್ನು ಕಡತಕ್ಕೆ ಸೇರಿಸುವಂತೆ ಆದೇಶಿಸಿದರು. ಕಮಿಷನರನು ಒಂದು ಜ್ಞಾಪನಾ ಪತ್ರವನ್ನು ಕಳುಹಿಸಿದನು. 'ಭತ್ಯೆ ಕಡಿಮೆ ಎನಿಸಿದರೆ ಮನೆಗೆ ಹೋಗುವಂತೆ' ಸೂಚಿಸಿದರು ಪಟೇಲ್. ಅವನು ಮುನಿಸಿಪಲ್ ಸೇವೆಯಿಂದ ಬೇರೆಡೆಗೆ ನಡೆದನು.[೪೯]

ರೆವೆನ್ಯೂ ಕಮಿಷನರ್ ಫ್ರೆಡರಿಕ್ ಪ್ರಾಟ್‌ನು ಅಹಮದಾಬಾದ್ ಪುರಸಭೆಯ ಪುರಸಭಾ ಇಂಜಿನಿಯರ್ ಮತ್ತು ಆರೋಗ್ಯಾಧಿಕಾರಿ ಹುದ್ದೆಗಳಿಗೆ ಇಬ್ಬರು ಬ್ರಿಟಿಷರನ್ನು ಅಧಿಕಾರಿಗಳನ್ನಾಗಿ ಹೇರಿದ್ದನು. ಅವರಿಬ್ಬರು ಭಾರತೀಯ ಅಭ್ಯರ್ಥಿಗಳಿಗಿಂತ ಉತ್ತಮರೇನೂ ಆಗಿರಲಿಲ್ಲ. ಆದರೆ ಪ್ರಾಟನು ಪುರಸಭಾ ಸದಸ್ಯರ ಮೇಲೆ ಪ್ರಭಾವ ಬೀರಿ ಅವರ ನೇಮಕವನ್ನು ಮಾಡಿಸಿದ್ದನು. ಪುರಸಭಾ ಇಂಜಿನಿಯರ್ ಆಗಿ ನೇಮಕವಾದವನು ಒಬ್ಬ ನಿವೃತ್ತ ರೈಲ್ವೆ ಇಂಜಿನಿಯರ್. ಅದರಿಂದ ಅವನಿಗೆ ನಗರ ನೀರು ಸರಬರಾಜಿನ ಅನುಭವವೇ ಇರಲಿಲ್ಲ. ಅವನು ಸಮರ್ಪಕವಾಗಿ ಕೆಲಸ ಮಾಡಲಾಗಲಿಲ್ಲ. ಅದರಿಂದ ಅವನು ತೊಂದರೆಗೆ ಸಿಲುಕಿದನು. ೧೯೧೭ರ ಉತ್ತರಾರ್ಧದಲ್ಲಿ ನಗರದ ಕೆಲವು ಭಾಗಗಳಲ್ಲಿ ನೀರಿನ ತೀವ್ರ ಕೊರತೆ ಉಂಟಾಯಿತು. ಈ ಕೊರತೆಯ ವಿರುದ್ಧ ಗುಜರಾತ್ ಸಭಾ

ಗಾಂಧೀಜಿಯ ಅಧ್ಯಕ್ಷತೆಯಲ್ಲಿ ಒಂದು ಪ್ರತಿಭಟನಾ ಸಭೆಯನ್ನು ಜನವರಿ ೧, ೧೯೧೮ರಂದು ನಡೆಸಿ ಒಂದು ಠರಾವನ್ನು ಅಂಗೀಕರಿಸಿ, ಅದರ ಪ್ರತಿಗಳನ್ನು ಪುರಸಭೆಯ ಅಧ್ಯಕ್ಷರಿಗೆ, ಜಿಲ್ಲಾಧಿಕಾರಿಗೆ ಮತ್ತು ರೆವೆನ್ಯೂ ಕಮಿಷನರ್ ಪ್ರಾಟ್‌ಗೆ ಕಳುಹಿಸಿತು.

ಠರಾವಿನ ಪ್ರತಿ ಕೈ ಸೇರಿದಾಗ, ಪ್ರಾಟ್‌ನು ಗುಜರಾತ್ ಸಭಾದ ಇಬ್ಬರು ಕಾರ್ಯದರ್ಶಿಗಳನ್ನು ಬರಮಾಡಿಕೊಂಡು, "ಠರಾವನ್ನು ನನಗೆ ಏಕೆ ಕಳುಹಿಸಿದ್ದೀರಿ? ಮುನಿಸಿಪಾಲಿಟಿಗು ನನಗು ಏನು ಸಂಬಂಧ?" ಎಂದು ಪ್ರಶ್ನಿಸಿದನು. ಒಬ್ಬ ಕಾರ್ಯದರ್ಶಿಯು, "ನಿಮ್ಮ ಅಧಿಕಾರದ ಪ್ರಭಾವವನ್ನು ಮುನಿಸಿಪಾಲಿಟಿಯ ಮೇಲೆ ಉಪಯೋಗಿಸಬಹುದು" ಎಂದು ಹೇಳಿದನು. ಆ ಮಾತನ್ನು ಪ್ರಾಟನು, ತಾನು ಪ್ರಭಾವ ಬೀರಿ ಮುನಿಸಿಪಲ್ ಇಂಜನಿಯರನ ಹುದ್ದೆಗೆ ಒಬ್ಬ ಬ್ರಿಟಿಷನನ್ನು ನೇಮಕ ಮಾಡಿಸಿರುವುದಕ್ಕೆ ಪರೋಕ್ಷ ಸೂಚನೆ ಎಂದು ಭಾವಿಸಿ ಕೋಪಾವಿಷ್ಟ ನಾದನು. ಕೋಪದ ಆವೇಶದಲ್ಲಿ ಅವನು, "ನಿಮಗೇನಾದರು ಕುಂದುಕೊರತೆಯಿದ್ದರೆ ಪುರಸಭಾ ಕಟ್ಟಡಕ್ಕೆ ಹೋಗಿ, ನಿಮಗೆ ಬೇಕಾದದ್ದು ಸಿಗುವವರೆಗೆ ಪುರಸಭಾ ಸದಸ್ಯರ ಕಿವಿ ಒಡೆಯುವ ಹಾಗೆ ತಮಟೆ ಬಾರಿಸಿ. ಆದಾಗ್ಯೂ ನಿಮಗೆ ನೀರು ಸಿಗದಿದ್ದರೆ ಅವರ ಮನೆಗಳಿಗೆ ಹೋಗಿ ಬೆಂಕಿ ಹಚ್ಚಿ," ಎಂದನು.

ಪ್ರಾಟನ ಈ ಆರ್ಭಟ ಪಟೇಲರಿಗೆ ಹರಿತವಾದ ಆಯುಧವನ್ನು ಒದಗಿಸಿತು. ಅಷ್ಟರಲ್ಲಿ ಪ್ರಾಟನು ಎಚ್ಚೆತ್ತುಕೊಂಡನು. ತನ್ನ ಮಾತನ್ನು ಪಟೇಲರು ತಮ್ಮ ಅನುಕೂಲಕ್ಕೆ ಉಪಯೋಗಿಸಿಕೊಳ್ಳುವರೆಂದು ಹೆದರಿ ಅವನು ಅದರ ಶಮನಕ್ಕೆ ಮುಂದಾಗಿ, ಬೊಂಬಾಯಿ ಸರ್ಕಾರದ ಕನ್ಸಲ್ಟಿಂಗ್ ಇಂಜಿನಿಯರನು ಅಹಮದಾಬಾದ್‌ಗೆ ಭೇಟಿ ನೀಡುವಂತೆ ಮಾಡಿದನು. ಆ ಕನ್ಸಲ್ಟಿಂಗ್ ಇಂಜಿನಿಯರ್ ಡಯಲ್, ಪ್ರಾಟ್, ಮುನಿಸಿಪಲ್ ಇಂಜಿನಿಯರ್ ಮೆಕಾಸೆ ಮತ್ತು ನೈರ್ಮಲ್ಯ ಸಮಿತಿಯ ಛೇರ್‌ಮನ್ ಪಟೇಲ್ ನಾಲ್ವರು ಒಟ್ಟಿಗೆ ನಗರ ವೀಕ್ಷಣೆಗೆ ಹೋದರು. ಆ ಸಮಯದಲ್ಲಿ ಚರ್ಚೆ ನಡೆಯುತ್ತಿದ್ದಾಗ ಪಟೇಲರು, "ಪರಿಸ್ಥಿತಿಯನ್ನು ಸುಧಾರಿಸಲು ನನ್ನ ಮನಸ್ಸಿನಲ್ಲಿರುವ ಅತ್ಯಂತ ಉತ್ತಮ ಮಾರ್ಗ....." ಎಂದು ಹೇಳಲು ಆರಂಭಿಸುತ್ತಿದ್ದಂತೆ ಪ್ರಾಟ್‌ನು ಅವರ ಮಾತಿಗೆ ಅಡ್ಡ ಬಾಯಿ ಹಾಕಿ, "ಮಿ. ಪಟೇಲ್, ಅತ್ಯಂತ ಉತ್ತಮವಾದ ಮಾರ್ಗ ಏನೆಂದರೆ ನಿಮ್ಮ ಸಮಿತಿಯು ಮುನಿಸಿಪಲ್ ಇಂಜಿನಿಯರೊಡನೆ ಸಹಕರಿಸುವುದು ಮತ್ತು ಅಸಹಕಾರವನ್ನು ತೋರದಿರುವುದು," ಎಂದನು. ಪಟೇಲರು ಅಂತಹ ಉದ್ಧಟತನವನ್ನು ಸಹಿಸುವ ವ್ಯಕ್ತಿಯಲ್ಲ. ಒಡನೆ ಅವರು ಗುಡುಗಿದರು, "ಅತ್ಯಂತ ಉತ್ತಮವಾದ ಮಾರ್ಗವೆಂದರೆ ನೀವು ಪುರಸಭೆಯ ಮೇಲೆ ಹೇರಿರುವ ಈ ಅದಕ್ಷ ಅಧಿಕಾರಿಯನ್ನು ಕಿತ್ತುಹಾಕುವುದು. ಅವನು

ಕೇಳಿದ ಏನನ್ನು ನಾವು ಅವನಿಗೆ ಕೊಟ್ಟಿಲ್ಲ, ಕೇಳಿ. ಆದಾಗ್ಯೂ ಗುಜರಾತ್ ಸಭಾದ ಕಾರ್ಯದರ್ಶಿಗಳು ನಿಮ್ಮನ್ನು ಭೇಟಿ ಮಾಡಿದಾಗ ನಮ್ಮ ಮನೆಗಳಿಗೆ ಬೆಂಕಿ ಹಚ್ಚುವ ಸಲಹೆಯನ್ನು ನೀಡುವ ದುರಹಂಕಾರವನ್ನು ನೀವು ತೋರಿದಿರಿ! ನಮ್ಮ ಮನೆಯನ್ನು ಏಕೆ ಸುಡಬೇಕು? ಎಲ್ಲಾ ತೊಂದರೆಗಳಿಗೆ ಮೂಲ ಪುರುಷನಾದ ಈ ಅಧಿಕಾರಿಯ ಬಂಗಲೆಯನ್ನು ಏಕೆ ಸುಡಬಾರದು?"

ಪ್ರಾಟನು ಸ್ತಂಭೀಭೂತನಾದನು ಮತ್ತು ಮೂಕನಾದನು. ಒಬ್ಬ ಭಾರತೀಯ ನಿಂದ ಇಂತಹ ಮಾತಿನ ಒತ್ತವನ್ನು ಅವನೆಂದೂ ನಿರೀಕ್ಷಿಸಿರಲಿಲ್ಲ. ಪ್ರಾಟನು ಒಬ್ಬ ಜಂಬಗಾರ ಆಂಗ್ಲ ಅಧಿಕಾರಿ. ಅಲ್ಲಿದ್ದ ನಾಲ್ವರ ಪೈಕಿ ಹಿರಿಯ ಮತ್ತು ಉತ್ತರ ವಿಭಾಗದ ಶಕ್ತಿಶಾಲಿ ರೆವೆನ್ಯೂ ಕಮಿಷನರ್. ಆದರೂ ಸಹ ತಾನಾಡಿದ ಮಾತುಗಳು ಎಲ್ಲೆ ಮೀರಿದವು ಎಂದು ಗ್ರಹಿಸಿದನು. ಸಂದರ್ಭವನ್ನು ತಿಳಿಗೊಳಿಸಲು ಅವನೆಂದನು, "ಮಿ. ಪಟೇಲ್, ಚರ್ಚೆಯನ್ನು ಮುಂದುವರೆಸುವ ಮನೋಭಾವದಲ್ಲಿ ನೀವಿಲ್ಲವೆಂದು ಕಾಣುತ್ತದೆ." ಪಟೇಲರು, "ನಾನು ಆ ಮನೋಭಾವದಲ್ಲಿರಬೇಕೆಂದು ನೀವು ಹೇಗೆ ನಿರೀಕ್ಷಿಸುತ್ತೀರಿ?" ಎಂದು ಮತ್ತೆ ಗುಡುಗಿದರು.

ಅಲ್ಲಿಗೆ ಚರ್ಚೆಯೂ ನಿಂತು ಹೋಯಿತು. ಕನ್ಸಲ್ಟಿಂಗ್ ಇಂಜಿನಿಯರನ ತಪಾಸಣೆಯೂ ನಿಂತು ಹೋಯಿತು. ಪ್ರಾಟನ ಸಲಹೆಯ ಮೇಲೆ ಮುನಿಸಿಪಲ್ ಇಂಜಿನಿಯರನು ತನ್ನ ಹುದ್ದೆಗೆ ರಾಜಿನಾಮೆ ಇತ್ತು ಹೊರ ನಡೆದನು.[೫೦]

ಪಟೇಲ್‌ರವರು ೧೯೧೭ರಲ್ಲಿ ಅಹಮದಾಬಾದ್ ಪುರಸಭೆಯನ್ನು ಪ್ರವೇಶಿಸಿದಾಗ ನಾಗರಿಕ ಅವಶ್ಯಕತೆಗಳನ್ನು ಉತ್ತಮ ರೀತಿಯಲ್ಲಿ ಒದಗಿಸುವುದಕ್ಕಾಗಿ ಆಡಳಿತ ವ್ಯವಸ್ಥೆಯನ್ನು ಉತ್ತಮಗೊಳಿಸಲು ನಿರ್ಧರಿಸಿದರು. ಪುರಸಭೆಯಲ್ಲಿ ಅನೇಕ ತೆರಿಗೆ ಬಾಕಿದಾರರು ಇದ್ದರು. ಅವರಲ್ಲಿ ಸರ್ಕಾರಿ ಅಧಿಕಾರಿಗಳು, ಪುರ ಪ್ರಮುಖರು ಮತ್ತು ಸಾರ್ವಜನಿಕ ಸಂಸ್ಥೆಗಳು ಇದ್ದುವು. ಉದಾಹರಣೆಗೆ ಖಾನ್ ಬಹದ್ದೂರ್ ಎಂಬುವನು ಬಾಕಿದಾರನಾಗಿದ್ದನು. ಅವನನ್ನು ಸರ್ಕಾರವು ಪ್ರಥಮ ದರ್ಜೆ ಗೌರವ ಮ್ಯಾಜಿಸ್ಟ್ರೇಟ್ ಆಗಿ ಮಾಡಿತ್ತು. ಇಂತಹವರು ಬಹಳ ಶಕ್ತಿವಂತ ರಾಗಿದ್ದು ಪುರಸಭೆಯು ಅವರಿಂದ ತೆರಿಗೆ ವಸೂಲಿ ಮಾಡಲು ಅಶಕ್ತವಾಗಿತ್ತು. ಆದರೆ ಬಡವರಿಂದ ಮತ್ತು ಸಾಮಾನ್ಯರಿಂದ ಬಿಡದೆ ವಸೂಲಿ ಮಾಡುತ್ತಿತ್ತು. ತೆರಿಗೆ ನೀಡಲು ಶಕ್ತಿ ಇರುವವರನ್ನು ಬಿಟ್ಟು ಶಕ್ತಿ ಇಲ್ಲದವರಿಂದ ವಸೂಲಿ ಮಾಡುತ್ತಿತ್ತು. ಈ ಅಸಮಾನತೆ ಮತ್ತು ಅನ್ಯಾಯವನ್ನು ಹೋಗಲಾಡಿಸಬೇಕೆಂದು ಪಟೇಲರು ನಿರ್ಧರಿಸಿದರು. ಅವರು ಬಾಕಿದಾರರ ಪಟ್ಟಿಯನ್ನು ಸಾರ್ವಜನಿಕವಾಗಿ ಪ್ರಕಟಿಸಿದರು. ಖಾನ್ ಬಹದ್ದೂರರ ಹೆಸರನ್ನೂ ಬಿಡಲಿಲ್ಲ. ಈ ಪ್ರಕಟಣೆಯಿಂದ

ತೆರಿಗೆ ವಸೂಲಿಯಾಗಿ ಪುರಸಭೆಯ ಹಣಕಾಸಿನ ಸ್ಥಿತಿ ಉತ್ತಮಗೊಂಡಿತು.[೫೧]

೧೯೧೭ರ ಅಂತ್ಯಭಾಗದಲ್ಲಿ ಪ್ಲೇಗ್ ಸಾಂಕ್ರಮಿಕ ರೋಗ ಅಹಮದಾಬಾದ್‌ನಲ್ಲಿ ಹರಡಿತು. ಶಾಲೆಗಳು ಮತ್ತು ನ್ಯಾಯಾಲಯಗಳು ಮುಚ್ಚಲ್ಪಟ್ಟವು. ಅನೇಕರು ನಗರವನ್ನು ಬಿಟ್ಟು ಹೋದರು. ಆದರೆ ಪಟೇಲರು ಹಾಗೆ ಮಾಡಲಿಲ್ಲ. ತಮ್ಮ ಸ್ವಂತ ಸುರಕ್ಷತೆಗಾಗಿ ಓಡಿಹೋಗಲಿಲ್ಲ. ಅದಕ್ಕೆ ಬದಲಾಗಿ 'ಭದ್ರ' ಬಡಾವಣೆಯ ತಮ್ಮ ಮನೆಯಲ್ಲೆ ಉಳಿದು ಜನರಿಗೆ ಧೈರ್ಯ ಹೇಳಲು ಆರಂಭಿಸಿದರು. ಬಡಾವಣೆಯಿಂದ ಬಡಾವಣೆಗೆ ನಡೆದು ಜನರಿಗೆ ಧೈರ್ಯ ತುಂಬಿದರು, ರೋಗವನ್ನು ತಡೆಗಟ್ಟುವ ವಿಧಾನಗಳನ್ನು ಪ್ರಚಾರ ಮಾಡಿದರು ಮತ್ತು ರಸ್ತೆಗಳನ್ನು ಶುಚಿಯಾಗಿಡಲು ಕ್ರಮ ಕೈಗೊಂಡರು. ಅವರು ನೈರ್ಮಲ್ಯ ಸಮಿತಿಯ ಅಧ್ಯಕ್ಷರಾಗಿದ್ದುದು ಈ ಕೆಲಸದಲ್ಲಿ ನೆರವು ನೀಡಿತು.

ಪಟೇಲರ ಆಗಿನ ಕೆಲಸದ ಬಗೆಗೆ ಜಿ.ವಿ. ಮಾವಲಂಕರ್ ಹೀಗೆ ಬರೆದಿದ್ದಾರೆ:

> ಅವರು ರಸ್ತೆಗಳಲ್ಲಿ ಓಡಾಡುತ್ತಾ, ಚರಂಡಿಗಳನ್ನು ಶುಚಿಗೊಳಿಸುತ್ತಾ ಮತ್ತು ಪ್ಲೇಗು ತಾಕಿದ ಸ್ಥಳಗಳಲ್ಲಿ ಕ್ರಿಮಿ ನಾಶಕಗಳನ್ನು ಸಿಂಪಡಿಸುಸುತ್ತಾ ಇದ್ದ ಪರಿಚಿತ ವ್ಯಕ್ತಿಯಾಗಿದ್ದರು. ಸ್ನೇಹಿತರು ವಾದ ಮಾಡಿದರೆ ಸುಮ್ಮನೆ ದುರುಗುಟ್ಟಿ ನೋಡುತ್ತಿದ್ದರು. ಅವರ ಮೌನ ಅವರ ಮಾತಿಗಿಂತ ಹೆಚ್ಚು ನುಡಿಯುತ್ತಿತ್ತು. 'ನಾನು ನೈರ್ಮಲ್ಯ ಸಮಿತಿಯ ಛೇರ್‌ಮನ್‌ನ ಕರ್ತವ್ಯವನ್ನು ವಹಿಸಿಕೊಂಡಿದ್ದೇನೆ, ಅದರಿಂದ ಹೇಗೆ ನನ್ನ ಸುರಕ್ಷತೆಯನ್ನು ಮಾತ್ರ ಬಯಸಲಿ? ನಾನು ನನ್ನ ಕರ್ತವ್ಯದ ಕೆಲಸವನ್ನು ಬಿಟ್ಟುಹೋದರೆ ಜನರ ವಿಶ್ವಾಸಕ್ಕೆ ದ್ರೋಹ ಬಗೆದಂತೆ ಅಲ್ಲವೆ? ಅಲ್ಲದೆ, ಶುಚಿಗೊಳಿಸುವ ನೌಕರರನ್ನು ಪ್ಲೇಗಿನ ಸಂಭವಕ್ಕೆ ಗುರಿಮಾಡಿ ನಾನು ಹೇಗೆ ಹೊರಟು ಹೋಗಲಿ? ನನ್ನ ಸುರಕ್ಷತೆಯನ್ನು ಮಾತ್ರ ನೋಡಿಕೊಳ್ಳಲಿ?' ಎಂದು ಕೇಳುವಂತೆ ಇರುತ್ತಿತ್ತು ಅವರ ಮುಖಭಾವ.[೫೨]

ಪ್ಲೇಗು ಶಮನವಾಗುತ್ತಿದ್ದಂತೆ ಸುತ್ತಲ ಹಳ್ಳಿಗಳಲ್ಲಿ ಬರಗಾಲ ಶುರುವಾಯಿತು. ಗುಜರಾತ್ ಸಭಾ ಪರಿಹಾರ ಕಾರ್ಯವನ್ನು ಕೈಗೆತ್ತಿಕೊಂಡಿತು. ಪಟೇಲರು ಪುರಸಭೆಯ ಕೆಲಸದ ಜೊತೆಗೆ ಆ ಹಳ್ಳಿಯವರ ಸಂಕಟ ಪರಿಹಾರಕ್ಕೂ ಗಮನ ಕೊಟ್ಟರು.

❖ ◆ ❖

ಕಾಯಿ ಮಹಿ ಮಹಿಳೆ

ಭಾಗ – ಎರಡು

ರೈತ ನಾಯಕ

೦೪. ಹೋರಾಟದ ಬದುಕಿನ ಆರಂಭ

೪.೧ ಕೈಡಾ ಚಳವಳಿ

೧೯೧೭ರ ಅಕ್ಟೋಬರ್ ತಿಂಗಳಲ್ಲಿ ಕೈಡಾ ಜಿಲ್ಲೆಯಲ್ಲಿ ಹುಚ್ಚು ಹುಚ್ಚು ಮಳೆ ಸುರಿಯಿತು. ಸಾಮಾನ್ಯವಾಗಿ ಬೀಳುವ ೩೦ ಅಂಗುಲ ಮಳೆಗೆ ಬದಲಾಗಿ ೭೦ ಅಂಗುಲ ಮಳೆ ಬಿದ್ದಿತು. ಅದರಿಂದ ಕಟಾವು ಮಾಡಿ ಒಣಗಲು ಬಿಟ್ಟಿದ್ದ ಬೆಳೆಯೆಲ್ಲ ಕೊಳೆತು ಹೋಯಿತು. ಅದಕ್ಕೆ ಹಿಂದೆ ೧೯೧೫ ಮತ್ತು ೧೯೧೬ರಲ್ಲಿ ಮಳೆ ಬಹಳ ಕಡಿಮೆಯಾಗಿ ಬೆಳೆ ಬಂದಿರಲಿಲ್ಲ. ೧೯೧೭ರಲ್ಲಿ ಮಳೆ ಅತಿಯಾಗಿ ಸುರಿದು ಎಲ್ಲಾ ಬೆಳೆಯು ನಾಶವಾಗಿತ್ತು.[೧] ಹೀಗಾಗಿ ರೈತರು ಜೀವನ ಸಾಗಿಸುವುದೇ ಕಷ್ಟವಾಯಿತು. ಜೊತೆಗೆ, ಜಮೀನಿನ ಕಂದಾಯವನ್ನು ಪಾವತಿ ಮಾಡುವ ಕಾಲ ಡಿಸೆಂಬರ್ ತಿಂಗಳಲ್ಲಿ ಆರಂಭವಾಗುತ್ತಿತ್ತು. ಊಟಕ್ಕೇ ಸಂಚಕಾರ ಬಂದಿರುವಾಗ ಕಂದಾಯವನ್ನು ಕಟ್ಟಲು ಹಣವನ್ನು ಎಲ್ಲಿಂದ ತರುವುದು? ಅದರಿಂದ, ಕಂದಾಯ ವಸೂಲಿಯನ್ನು ಸರ್ಕಾರವು ಒಂದು ವರ್ಷ ಮುಂದೂಡಲಿ ಎಂದು ರೈತರು ಬಯಸಿದರು. ಕಾನೂನು ಸಹ ಅವರ ಪರವಾಗಿತ್ತು. ಒಂದು ವರ್ಷದಲ್ಲಿ ಫಸಲು ಮಾಮೂಲಿಗಿಂತ ಶೇ. ೨೫ಕ್ಕಿಂತ ಕಡಿಮೆ ಇದ್ದರೆ ಕಂದಾಯ ವಸೂಲಿಯನ್ನು ಮುಂದಕ್ಕೆ ಹಾಕಬೇಕೆಂದೂ, ಮಾರನೇ ವರ್ಷವೂ ಬೆಳೆ ನಾಶವಾದರೆ ಕಂದಾಯವನ್ನು ಪೂರ್ಣ ಮನ್ನಾ ಮಾಡಬೇಕೆಂದೂ, ಸರ್ಕಾರವೇ ವಿಧಿಸಿರುವ ಕಾನೂನು ಹೇಳುತ್ತಿತ್ತು.[೨]

ಈ ಸನ್ನಿವೇಶದಲ್ಲಿ ಮೋಹನ್‌ಲಾಲ್ ಪಾಂಡ್ಯ ಮತ್ತು ಶಂಕರ್‌ಲಾಲ್ ಪರೇಖ್ ಎಂಬ ಇಬ್ಬರು ಸಮಾಜ ಸೇವಕರು ರೈತರ ನೆರವಿಗೆ ಬಂದರು.

ಅವರು ಕಂದಾಯ ವಸೂಲಿಯನ್ನು ಸ್ಥಗಿತಗೊಳಿಸಲು ಸರ್ಕಾರಕ್ಕೆ ಒಂದು ಮನವಿ ಯನ್ನು ಬರೆದು ಮುದ್ರಿಸಿ ಕೈಡಾ ಜಿಲ್ಲೆಯ ೨೨,೦೦೦ ಮಂದಿ ರೈತರಿಂದ ಸಹಿ ಮಾಡಿಸಿ ಬೊಂಬಾಯಿಯ ಸರ್ಕಾರಕ್ಕೆ ನವೆಂಬರ್ ೨೦ರಂದು ಕಳುಹಿಸಿದರು. ಬೊಂಬಾಯಿಯ ಗೌರ್ನರ್ ಕಛೇರಿಯು ಈ ವಿಷಯವನ್ನು ಕಲೆಕ್ಟರ್ ವಿಲೇವಾರಿ ಮಾಡುವರೆಂದು ತಿಳಿಸಿತು. ಆಗ ಲಾರ್ಡ್ ವಿಲ್ಲಿಂಗ್ಡನ್ ಬೊಂಬಾಯಿ ಪ್ರಾಂತ್ಯದ ಗೌರ್ನರ್ ಆಗಿದ್ದರು ಮತ್ತು ವಿ.ಕೆ. ನಾಮ ಜೋಶಿ ಕೈಡಾ ಜಿಲ್ಲೆಯ ಕಲೆಕ್ಟರ್ ಆಗಿದ್ದರು.

ಪಾಂಡ್ಯ ಮತ್ತು ಪರೇಖ್‌ರವರು ಕಲೆಕ್ಟರನನ್ನು ಭೇಟಿ ಮಾಡಿದರು. ಆಗ ಚಂಪಾರಣ್ಯದಲ್ಲಿದ್ದ ಗಾಂಧೀಜಿಯವರಿಗೂ ವಿಷಯವನ್ನು ತಲುಪಿಸಿದರು. ರೈತರಿಗೆ ಪರಿಹಾರ ದೊರಕಿಸಿ ಕೊಡುವಂತೆ ಕೈಡಾ ಜಿಲ್ಲೆಯಿಂದ ಬೊಂಬಾಯಿಯ ಶಾಸನ ಸಭೆಗೆ ಚುನಾಯಿತರಾಗಿದ್ದ ವಿಠ್ಠಲ್‌ಭಾಯ್ ಪಟೇಲ್ (ವಲ್ಲಭಭಾಯ್ ಪಟೇಲರ ಅಣ್ಣ) ಮತ್ತು ಗೋಕುಲ್‌ದಾಸ್ ಪರೇಖ್‌ರವರನ್ನು ಒತ್ತಾಯಿಸಿದರು. ವಿಠ್ಠಲ್‌ಭಾಯ್ ಮತ್ತು ಗೋಕುಲ್‌ದಾಸ್ ೪೦೯ ಹಳ್ಳಿಗಳಿಂದ ಸಾಕ್ಷ್ಯ ಸಂಗ್ರಹಿಸಿ ಹಾಗೂ ರೈತರ ಸಂಕಟಗಳ ಹೇಳಿಕೆಗಳನ್ನು ಆಲಿಸಿ, ಕಲೆಕ್ಟರ್‌ನನ್ನು ಡಿಸೆಂಬರ್ ೧೫ರಂದು ಭೇಟಿ ಮಾಡಿದರು. ಕಲೆಕ್ಟರ್ ನಾಮ ಜೋಶಿಯವರು ಡಿಸೆಂಬರ್ ೨೨ರಂದು, ನಾಲ್ಕು ತಾಲ್ಲೂಕುಗಳ ೧೦೪ ಹಳ್ಳಿಗಳಲ್ಲಿ ಕಂದಾಯದ ಅರ್ಧಭಾಗದ ವಸೂಲಿಯನ್ನು ಮುಂದೂಡುವಂತೆ ಆದೇಶ ಹೊರಡಿಸಿದರು ಮತ್ತು ತಮ್ಮ ಆದೇಶವನ್ನು ನಾಲ್ವರು ಮಾಮಲದಾರರಿಗೆ (ತಾಲ್ಲೂಕು ಮಟ್ಟದ ಕಂದಾಯ ವಸೂಲಿ ಅಧಿಕಾರಿ) ಕಳುಹಿಸಿದರು. ಆ ಪರಿಹಾರ ಅತ್ಯಲ್ಪವಾಗಿದ್ದು ಅದು ಜಿಲ್ಲೆಯ ಒಟ್ಟು ಕಂದಾಯದ ಕೇವಲ ಶೇ. ೭.೪ ಭಾಗವಾಗಿತ್ತು. ಈ ಅಲ್ಪ ಪರಿಹಾರವೂ ರೈತರಿಗೆ ಸಿಗದಂತೆ ಮಾಡಿದರು ಕೆಳಗಿನ ಅಧಿಕಾರಿಗಳು. ಉದಾಹರಣೆಗೆ ಕಪಡವಂಜ್ ತಾಲ್ಲೂಕಿನ ಮಾಮಲದಾರ ವಾಲಿ ಭಕ್ಷ್ ಆಡಮ್ ಪಟೇಲನು, ಕಲೆಕ್ಟರ್‌ನ ಆದೇಶವನ್ನು ಮುಚ್ಚಿಟ್ಟು, ೧೯೧೮ರ ಜನವರಿ ೧ ರಂದು ತಲಾಟಿಗಳಿಗೆ (ಹಳ್ಳಿಯಲ್ಲಿ ಕಂದಾಯ ವಸೂಲಿಗಾರರು) ಕೆಳಕಂಡಂತೆ ಸುತ್ತೋಲೆ ಕಳುಹಿಸಿದನು:

೧. ರೈತರು ೭ ದಿವಸಗಳ ಒಳಗೆ ಕಂದಾಯವನ್ನು ಪಾವತಿಸದೇ ಹೋದರೆ ಆ ವಿಷಯವನ್ನು ತಲಾತಿಗಳು ಗ್ರಾಮದ ಮುಖ್ಯಸ್ಥ (ಮುಖಿ)ನಿಗೆ ತಿಳಿಸಬೇಕು.

೨. ಕಂದಾಯ ನೀಡಲು ನಿರಾಕರಿಸುವ ರೈತರ ಮೇಲೆ ದಂಡ ಹೇರಲಾಗುವುದು.

೩. ಕಂದಾಯ ಪಾವತಿಸದವರ ಸ್ಥಿರಾಸ್ತಿಗಳನ್ನು ತಕ್ಷಣವೇ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

೪. ಕಂದಾಯ ವಸೂಲಿಯಲ್ಲಿ ತಲಾತಿಗಳು ಬಹಳ ಬಿಗಿಯಾಗಿರ ಬೇಕು. ವಸೂಲಿ ಮಾಡಲು ವಿಫಲರಾದವರನ್ನು ಶಿಕ್ಷಿಸ ಲಾಗುವುದು.

ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿಯ ಅಮೃತಲಾಲಾ ಠಕ್ಕರ್‌ರವರು 'ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆಗೆ ಬರೆದ ಪತ್ರದಿಂದ ಮಾಮಲದಾರರ ಮತ್ತು ತಲಾಟಿಗಳ ದುರ್ವರ್ತನೆಗಳ ಪರಿಣಾಮವು ತಿಳಿದುಬರುತ್ತದೆ. ಠಕ್ಕರ್‌ರವರನ್ನು ಪಾಂಡ್ಯ ಮತ್ತು ಪರೇಖ್‌ರವರು ಕವಡವಂಜ್ ತಾಲ್ಲೂಕಿಗೆ ಆಹ್ವಾನಿಸಿದ್ದರು. ಠಕ್ಕರ್‌ರವರ ಪತ್ರ ಹೀಗೆ ಹೇಳುತ್ತದೆ:

> ನಾನು ಸುಮಾರು ೧೦ ಹಳ್ಳಿಗಳಿಗೆ ಭೇಟಿ ನೀಡಿದೆ. ಎಲ್ಲಾ ಕಡೆ ತಲಾತಿಗಳ ವಿರುದ್ಧದ ದೂರುಗಳ ಬಗೆಗೆ ವಿಚಾರಿಸಿದೆ. ಒಬ್ಬ ರೈತ ಕಂದಾಯವನ್ನು ಪಾವತಿಸುವುದಕ್ಕಾಗಿ ತನ್ನ ಜಮೀನನ್ನು ಮಾರಬೇಕಾಯಿತು. ಮತ್ತೊಬ್ಬ ರೈತ ಶೇ. ೭೫ರ ಬಡ್ಡಿದರದಲ್ಲಿ ಹಣ ಸಾಲ ಮಾಡಬೇಕಾಯಿತು. ತಮ್ಮ ಕಾಲಿನ ಹೆಬ್ಬೆರಳನ್ನು ಹಿಡಿದುಕೊಂಡು ಎರಡು ಘಂಟೆಗಳ ಕಾಲ ನಿಲ್ಲುವಂತೆ ಇಬ್ಬರು ಅಸ್ಪೃಶ್ಯರನ್ನು ನಿಲ್ಲಿಸಲಾಯಿತು ಮತ್ತು ಕಂದಾಯ ಪಾವತಿಸುವ ವಚನ ನೀಡಿದ ಮೇಲೆ ಅವರನ್ನು ಬಿಡುಗಡೆ ಮಾಡಲಾಯಿತು. ಇವರು ಶೇಕಡ ಮೂವತ್ತೇಳುವರೆ ರೂಪಾಯಿ ಬಡ್ಡಿ ದರದಲ್ಲಿ ಸಾಲ ತೆಗೆದುಕೊಳ್ಳಬೇಕಾಯಿತು. ಒಬ್ಬ ಮುಸ್ಲಿಂ ರೈತನು ತನ್ನ ೧೦ ವರ್ಷದ ಮಗಳನ್ನು ಮದುವೆ ಮಾಡಿಕೊಡಬೇಕಾಯಿತು, ಕಂದಾಯ ಪಾವತಿಸಲು ತನ್ನ ಅಳಿಯನಿಂದ ೧೫೫ ರೂಪಾಯಿ ಸಾಲ ಪಡೆಯುವುದಕ್ಕಾಗಿ.[೩]

ತಲಾತಿಗಳ ಈ ಆರ್ಭಟಕ್ಕೆ ಬಹುತೇಕ ರೈತರು ಹೆದರಲಿಲ್ಲ.

ಗಾಂಧೀಜಿಯವರು ಜನವರಿ ೧೮ ವೇಳೆಗೆ ಚಂಪಾರಣ್ಯದಿಂದ ಅಹಮದಾ ಬಾದ್‌ನ ಸಬರಮತಿ ನದಿ ದಡದ ತಮ್ಮ ಸತ್ಯಾಗ್ರಹ ಆಶ್ರಮಕ್ಕೆ ಹಿಂತಿರುಗಿದರು. ಪಾಂಡ್ಯ ಮತ್ತು ಪರೇಖ್ ಮತ್ತು ಕೈಡಾ ಜಿಲ್ಲೆಯ ಕೆಲವು ರೈತರು ಅವರನ್ನು ಭೇಟಿ ಮಾಡಿದರು. ಅವರಿಂದ ವಿಷಯ ಸಂಗ್ರಹಿಸಿದ ಗಾಂಧೀಜಿಗೆ ರೈತರ ಬೇಡಿಕೆ ನ್ಯಾಯಯುತವಾದುದೆಂದು ಅರಿವಾಯಿತು. ರೈತರು ಆ ವರ್ಷದ ಬೆಳೆ

ಮಾಮೂಲಿ ಬೆಳೆಗಿಂತ ಶೇ. ೨೫ಕ್ಕೂ ಕಡಿಮೆ ಇದೆ ಎಂದು ಹೇಳಿದರೆ ಅಧಿಕಾರಿಗಳು ಅದನ್ನು ಒಪ್ಪದೆ ಕಂದಾಯದ ವಸೂಲಿಗೆ ಮುಂದಾಗಿದ್ದರು. ಕೆಲವು ಪ್ರಸಂಗಗಳಲ್ಲಿ ಕಂದಾಯವನ್ನು ಮನ್ನಾ ಮಾಡುವಂತೆ ಮತ್ತು ಇನ್ನು ಕೆಲವು ಪ್ರಸಂಗಗಳಲ್ಲಿ ಅದರ ವಸೂಲಿಯನ್ನು ಮುಂದೂಡುವಂತೆ ಬೊಂಬಾಯಿ ಸರ್ಕಾರವನ್ನು ಆಗ್ರಹಿಸಬೇಕೆಂದೂ ಮತ್ತು ಸಭಾದ ಕೆಲವರು ರೆವೆನ್ಯೂ ಕಮಿಷನರ್ ಫ್ರೆಡರಿಕ್ ಪ್ರಾಟ್‌ರವರನ್ನು ಭೇಟಿ ಮಾಡಿ ಸಭಾದ ನಿಲುವನ್ನು ಅವರಿಗೆ ತಿಳಿಸಬೇಕೆಂದೂ ಬೊಂಬಾಯಿ ಸರ್ಕಾರದಿಂದ ಜವಾಬು ಬರುವವರೆಗೆ ಕಂದಾಯ ಪಾವತಿಯನ್ನು ನಿಲ್ಲಿಸುವಂತೆ ರೈತರಿಗೆ ಸೂಚಿಸಬೇಕೆಂದೂ ಸಭಾಗೆ ಗಾಂಧೀಜಿ ಸೂಚಿಸಿದರು.

ವಲ್ಲಭಭಾಯ್‌ರವರು ಭದ್ರಾ ಬಡಾವಣೆಯ ತಮ್ಮ ಮನೆಯಲ್ಲಿ ಗುಜರಾತ್ ಸಭಾದ ಕಾರ್ಯಕಾರಿ ಸಮಿತಿಯ ಸಭೆಯನ್ನು ಕರೆದರು. ಸಮಿತಿಯು ಗಾಂಧೀಜಿಯವರ ಸೂಚನೆಗಳನ್ನು ಎಂಟು ದಿನ ಸತತವಾಗಿ ಚರ್ಚಿಸಿತು. ಕಂದಾಯವನ್ನು ಪಾವತಿಸದಂತೆ ರೈತರಿಗೆ ಗುಜರಾತ್ ಸಭಾ ಸೂಚಿಸಬೇಕಾದರೆ, ಸಭಾದ ಕಾರ್ಯಕಾರಿ ಸಮಿತಿಯು ಆ ತೀರ್ಮಾನವನ್ನು ಒಮ್ಮತದಿಂದ, ಬಹುಮತ ದಿಂದ ಅಲ್ಲ, ತೀರ್ಮಾನಿಸಬೇಕೆಂಬ ಶರತ್ತನ್ನು ಗಾಂಧೀಜಿ ವಿಧಿಸಿದ್ದರು. ಅದರಿಂದಲೇ ಚರ್ಚೆ ಎಂಟು ದಿನಗಳ ಕಾಲ ನಡೆಯಿತು. ಕೆಲವು ಸದಸ್ಯರು ಕಾನೂನಿನ ತೊಡಕುಗಳನ್ನು ಎತ್ತಿದರು. ಸರ್ಕಾರವನ್ನು ಎದುರಿಸುವುದರ ಪರಿಣಾಮಗಳ ಬಗೆಗೆ ಕೆಲವರಿಗೆ ಭಯ ಅಥವಾ ದಿಗಿಲು ಇತ್ತು. ಕೊನೆಗೆ ಒಬ್ಬರು ಹೊರತಾಗಿ ಎಲ್ಲಾ ಸದಸ್ಯರು ಗಾಂಧೀಜಿಯ ಸೂಚನೆಗೆ ಒಪ್ಪಿದರು. ಆ ಒಬ್ಬ ಸದಸ್ಯರು ಅದಕ್ಕೆ ವಿರೋಧವಾಗಿ ಮತ ಹಾಕಲಿಲ್ಲ, ತಟಸ್ಥರಾಗಿ ಉಳಿದರು.

ಗಾಂಧೀಜಿ ಚಳವಳಿಯ ನಾಯಕತ್ವವನ್ನು ವಹಿಸಿಕೊಳ್ಳಲು ಸಿದ್ಧವಾಗಿದ್ದರು, ಆದರೆ ತಾವು ನಾಯಕತ್ವವನ್ನು ವಹಿಸಿಕೊಳ್ಳಬೇಕಾದರೆ ಸಭಾದ ಸದಸ್ಯರ ಪೈಕಿ ಕೊನೆಯ ಪಕ್ಷ ಒಬ್ಬನಾದರೂ, ಚಳವಳಿಯು ಮುಗಿಯುವವರೆಗೆ ತನ್ನೆಲ್ಲ ಕಾಲವನ್ನು ಅದಕ್ಕೇ ಉಪಯೋಗಿಸಬೇಕು – ಎನ್ನುವ ಶರತ್ತನ್ನು ಇಟ್ಟಿದ್ದರು. ಗಾಂಧೀಜಿ ಬೇರೆ ಕಡೆಗೆ ಹೋಗಬೇಕಾದಾಗ ಆ ವ್ಯಕ್ತಿ ಅವರ ಸ್ಥಾನವನ್ನು ವಹಿಸಿಕೊಳ್ಳಬೇಕಾಗಿತ್ತು. ಗಾಂಧೀಜಿಯ ಈ ಸೂಚನೆಯನ್ನು ಒಪ್ಪಿದರೆ ತ್ಯಾಗ ಮತ್ತು ಕಷ್ಟವನ್ನು ಅಪ್ಪಿದಂತೆ. ಅದರಿಂದ ಯಾವ ಸದಸ್ಯನೂ ಮುಂದೆ ಬರಲಿಲ್ಲ. ಆದರೆ ವಲ್ಲಭಭಾಯ್ ಪಟೇಲರು ಯಾವ ಯೋಚನೆಗೂ ಕಾಲ ತೆಗೆದುಕೊಳ್ಳದೆ, ಕ್ಷಣಾರ್ಧದಲ್ಲಿ ಒಪ್ಪಿದರು.[೪] ವಲ್ಲಭಭಾಯ್‌ರವರ ತೀರ್ಮಾನದಿಂದ ಗಾಂಧೀಜಿಗೆ ಸಂತಸವಾಯಿತು.

ಸರ್ಕಾರಕ್ಕೆ ಕಂದಾಯ ಪಾವತಿಸದಂತೆ ಕೈಡಾ ರೈತರಿಗೆ ಗುಜರಾತ್ ಸಭಾ

೧೯೧೮ರ ಜನವರಿ ೧೦ರಂದು ಸೂಚಿಸಿತು. ಅಂದೇ ಗಾಂಧೀಜಿ ಬಿಹಾರಕ್ಕೆ ಪ್ರಯಾಣ ಬೆಳೆಸಿದರು. ಮಾರನೆಯ ದಿನ ಸಭಾ ಕಾರ್ಯದರ್ಶಿಗಳಾದ ಮಾವಲಂಕರ್ ಮತ್ತು ಕೃಷ್ಣಲಾಲ್ ದೇಸಾಯಿಯವರು ರೆವೆನ್ಯೂ ಕಮಿಷನರ್ ಪ್ರಾಟ್‌ನನ್ನು ಭೇಟಿ ಮಾಡಿದರು. ಆಗ ನಡೆದ ಸಂಭಾಷಣೆ:

ಪ್ರಾಟ್ : ನೀವು ಯುವ ರಾಜಕಾರಣಿಗಳು ಈ ನೋಟೀಸನ್ನು ಪ್ರಕಟಿಸಿದ್ದೀರಿ. ಅದರಿಂದ ಏನಾಗಬಹುದೆಂಬುದು ನಿಮಗೆ ಗೊತ್ತೆ?

ದೇಸಾಯಿ : ಹೌದು, ಅದು, ಅದು ನಮಗೆ ಚೆನ್ನಾಗಿ ಗೊತ್ತಿದೆ.

ಪ್ರಾಟ್ : ನೀವು ಅದನ್ನು ಹಂಚಿದ್ದೀರ?

ಮಾವ್‌ಲಂಕರ್ : ಹೌದು, ನಿನ್ನೆಯ ದಿನ ಅವು ಜಿಲ್ಲೆಯಲ್ಲಿ ಹಂಚಲ್ಪಟ್ಟವು.

ಪ್ರಾಟ್ : ನಿಮ್ಮ ವಯಸ್ಸು ಎಷ್ಟೆಂದು ನಾನು ಕೇಳಬಹುದೇ?

ಮಾವ್‌ಲಂಕರ್ : ೩೦ ವರ್ಷ

ಪ್ರಾಟ್ : ನೀವು ಇನ್ನೂ ಅಪಕ್ವರು ಮತ್ತು ಅನನುಭವಿಗಳು. ಬಹುಷಃ ನೀವು ಇದನ್ನು ನಿಮ್ಮ ಅಧ್ಯಕ್ಷ (ಗಾಂಧೀಜಿ)ರ ಅರಿವಿಗೆ ಬಾರದೆ ಪ್ರಕಟಿಸಿದ್ದೀರಿ.

ಮಾವ್‌ಲಂಕರ್ : ಅವರ ಸೂಚನೆಯ ಮೇರೆ ಅದು ಪ್ರಕಟಿಸಲ್ಪಟ್ಟಿದೆ.

ದೇಸಾಯಿ : ಅದರ ಕರಡನ್ನು ಅವರೇ ರಚಿಸಿದ್ದು.

ಪ್ರಾಟ್ : ಅದನ್ನು ಕೇಳಲು ನನಗೆ ವ್ಯಸನವಾಗುತ್ತಿದೆ.

ಇದೇ ಧಾಟಿಯಲ್ಲಿ ಇನ್ನಷ್ಟು ಸಂಭಾಷಣೆ ಸಡೆದ ಮೇಲೆ ಪ್ರಾಟನು 'ರೈತರಿಗೆ ಗುಜರಾತ್ ಸಭಾ ನೀಡಿರುವ ಸೂಚನೆಗಳ ಪರಿಣಾಮಗಳ ಬಗೆಗೆ ಆಲೋಚಿಸ ಬೇಕೆಂದು ಮತ್ತು ಅವರ ಅಂತಿಮ ಉತ್ತರವನ್ನು ಮಾರನೆಯ ದಿನ ತಿಳಿಸಬೇಕೆಂದು' ಮಾವ್‌ಲಂಕರ್ ಮತ್ತು ದೇಸಾಯಿಗೆ ಹೇಳಿದನು.

ದೇಸಾಯಿ : ಮತ್ತಷ್ಟು ಆಲೋಚಿಸುವ ಅಗತ್ಯವಿಲ್ಲ. ಹಾಗೆ ಆಲೋಚಿಸಲು ನಾವು ಸಿದ್ಧವಿದ್ದರೂ ಸಹ ನೀವು ನಮಗೆ ಕಾಲಾವಕಾಶವನ್ನು ಕೊಡುವುದಿಲ್ಲ. ನಮ್ಮ ಅಧ್ಯಕ್ಷರು ಈ ಕ್ಷಣದಲ್ಲಿ ಬಿಹಾರದಲ್ಲಿದ್ದಾರೆ.

ಪ್ರಾಟ್ : ನಿಮ್ಮ ನಾಯಕ ಭಾರತದೊಳಗೆಲ್ಲಾ ಅಡ್ಡಾಡುತ್ತಿದ್ದಾರೆಂದು ನನಗೆ ಗೊತ್ತಿರಲಿಲ್ಲ. ಆದಾಗ್ಯೂ ಅದು ನನಗೆ ಸಂಬಂಧಪಟ್ಟ ವಿಷಯವಲ್ಲ.

ಮಾವ್‌ಲಂಕರ್ : ಈ ವಿಷಯವನ್ನು ಪರಿಗಣಿಸಲು ನಮ್ಮ ಕಾರ್ಯಕಾರಿ ಸಮಿತಿಯ ಸಭೆಯನ್ನು ಕರೆಯಬೇಕಾಗುತ್ತದೆ ಮತ್ತು ಅದನ್ನು ಕಡಿಮೆ ಕಾಲದಲ್ಲಿ ಕರೆಯಲು ಸಾಧ್ಯವಿಲ್ಲ.

ಪ್ರಾಟ್ : ಅದು ನನಗೆ ಸಂಬಂಧಪಟ್ಟ ವಿಷಯವಲ್ಲ. ನಾಳೆ ಬೆಳಗ್ಗೆಯ ಹೊತ್ತಿಗೆ ನಿಮ್ಮಿಂದ ಉತ್ತರ ಬರದೆ ಹೋದರೆ, ನಿಮ್ಮ ಸಭೆಯು ಕಾನೂನು ಬಾಹಿರವಾದುದೆಂದು ಘೋಷಿಸುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತೇನೆ.[೫]

ಪ್ರಾಟ್‌ನ ಬೆದರಿಕೆಗೆ ಹೆದರಿ ಗುಜರಾತ್ ಸಭಾ ತನ್ನ ನಿಲುವನ್ನು ಬದಲಾಯಿಸಲಿಲ್ಲ.

ಗಾಂಧೀಜಿಯವರು ೧೯೧೫ರಲ್ಲಿ ಭಾರತಕ್ಕೆ ಹಿಂದಿರುಗಿದ ಆರಂಭದಲ್ಲೇ, ಅವರ ರಾಜಕೀಯ ಗುರು ಗೋಪಾಲಕೃಷ್ಣ ಗೋಖಲೆಯವರ ಸೂಚನೆಯ ಮೇರೆ, ಬೊಂಬಾಯಿ ಪ್ರಾಂತ್ಯದ ಗೌರ್ನರ್ ಲಾರ್ಡ್ ವೆಲ್ಲಿಂಗ್‌ಡನ್‌ರವರನ್ನು ಭೇಟಿ ಮಾಡಿದ್ದರು. ಅದು ಒಂದು ಸೌಹಾರ್ದತೆಯ ಭೇಟಿ. ಆ ಸಮಯದಲ್ಲಿ ಗೌರ್ನರನು ಗಾಂಧೀಜಿಗೆ 'ನಿಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಕ್ರಮಗಳನ್ನು ಕೈಗೊಳ್ಳುವುದಕ್ಕೆ ಮುನ್ನ ಆ ಸಮಸ್ಯೆಗಳನ್ನು ನನಗೆ ತಿಳಿಸಿ' ಎಂದು ಹೇಳಿದ್ದನು. ಅದರಿಂದ ಗಾಂಧೀಜಿಯವರು ಗೌರ್ನರನನ್ನು ಭೇಟಿ ಮಾಡಲು ಬೊಂಬಾಯಿ ತಲುಪಿದರು. ಅವರು ಫೆಬ್ರುವರಿ ೪, ೧೯೧೫ರಂದು ಬೊಂಬಾಯಿಯಲ್ಲಿ ಒಂದು ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಭಾಷಣ ಮಾಡಿ ಕೈಡಾ ಸಮಸ್ಯೆಯನ್ನು ವಿವರಿಸಿದರು. ಕೈಡಾ ರೈತರ ಸಂಕಷ್ಟಗಳು ತನಿಖೆಗೆ ಯೋಗ್ಯವಾದುವು ಎಂದೂ, ಅದರ ನಿಷ್ಪಕ್ಷಪಾತ ತನಿಖೆಗಾಗಿ ವಿಚಾರಣಾ ಸಮಿತಿಯನ್ನು ರಚಿಸಬೇಕೆಂದೂ, ಸರ್ಕಾರವು ಅದಕ್ಕೆ ಸ್ಪಂದಿಸಲು ವಿಫಲವಾದರೆ, ಜನರು ಅನುಸರಿಸಬೇಕಾದ ಸರಿಯಾದ ಕ್ರಮವೆಂದರೆ ಸತ್ಯಾಗ್ರಹ – ಎಂದೂ ಗಾಂಧೀಜಿ ವಿವರಿಸಿದರು.[೬] "ಕಮಿಷನರ್‌ರವರು ಸರ್ಕಾರಕ್ಕೆ ಸರಿಯಾದ ಸಲಹೆಯನ್ನು ನೀಡಿದ್ದರೆ ಎಲ್ಲವೂ ಸರಿಹೋಗುತ್ತಿತ್ತು. ಒಂದು ಸ್ವತಂತ್ರ ವಿಚಾರಣಾ ಸಮಿತಿಯನ್ನು ನಿಯಮಿಸುವುದು ಸರಿಯಾದಂತಹ ಉತ್ತರ..... ಜನರಿಗೆ ಎರಡು ಅಸ್ತ್ರಗಳು ಮಾತ್ರ ಇವೆ: ಅವರು ದಂಗೆ ಏಳಬಹುದು ಅಥವಾ ಸತ್ಯಾಗ್ರಹವನ್ನು ಅಂದರೆ ಅಹಿಂಸಾತ್ಮಕ

ಅಸಹಕಾರವನ್ನು ಅನುಸರಿಸಬಹುದು" ಎಂದು ಗಾಂಧೀಜಿ ವಿವರಿಸಿದರು. ಅವರು ಮೊದಲನೆಯ ವಿಧಾನಕ್ಕೆ ವಿರೋಧಿಯಾಗಿದ್ದರು. ಎರಡನೆ ವಿಧಾನದಲ್ಲಿ ಯಶಸ್ವಿಯಾಗಲು ಕಾತರರಾಗಿದ್ದರು.[೭]

ಮಾರನೆಯ ದಿನ ಅಂದರೆ ಫ಼ೆಬ್ರುವರಿ ೫ರಂದು ಗಾಂಧೀಜಿಯವರು ದಿನ್‌ಷಾ ವಾಚಾ, ಪರೇಖ್ ಮತ್ತು ವಿಠ್ಠಲ್‌ಭಾಯ್ ಒಡನೆ ಗೌರ್ನರ್‌ಅನ್ನು ಭೇಟಿ ಮಾಡಿದರು. ಆದರೆ ಗೌರ್ನರ್ ವಿಚಾರಣಾ ಸಮಿತಿಯನ್ನು ರಚಿಸಲು ನಿರಾಕರಿಸಿದನು.

ಸರ್ಕಾರದ ಈ ಕಠಿಣ ನೀತಿಗೆ ಸತ್ಯಾಗ್ರಹ ಒಂದೇ ಸರಿಯಾದ ಉತ್ತರ ಎಂದು ಗಾಂಧೀಜಿಗೆ ತಿಳಿದಿತ್ತು. ಅದನ್ನು ಆರಂಭಿಸುವುದಕ್ಕೆ ಮುನ್ನ ಆ ವರ್ಷದ ಫಸಲಿನ ಪ್ರಮಾಣದ ಬಗ್ಗೆ ಮತ್ತೊಮ್ಮೆ ಖಚಿತ ಪಡಿಸಿಕೊಳ್ಳಲು ಯೋಚಿಸಿದರು. ಈಗಾಗಲೇ ನಂಬಿಕಸ್ಥ ಕೆಲಸಗಾರರು ಬೆಳೆಯ ನಷ್ಟದ ಪ್ರಮಾಣವನ್ನು ಅಂದಾಜು ಮಾಡಿದ್ದರು. ಆದರೂ ಮತ್ತೊಮ್ಮೆ ವಿವರವಾಗಿ ಮತ್ತು ಅದೇ ಸ್ಥಳದಲ್ಲಿ ವಿಚಾರಣೆ ಮಾಡಬೇಕೆಂದು ಗಾಂಧೀಜಿ ತೀರ್ಮಾನಿಸಿದರು. ಗುಜರಾತ್ ಸಭಾದ ಕಾರ್ಯಕಾರಿ ಸಮಿತಿಯು ಫ಼ೆಬ್ರುವರಿ ೧೬ರಂದು ವಲ್ಲಭಭಾಯ್ ಪಟೇಲರ ಮನೆಯಲ್ಲಿ ಸಭೆ ನಡೆಸಿ ಆ ಬಗೆಗೆ ತೀರ್ಮಾನಿಸಿತು.

ಫ಼ೆಬ್ರುವರಿ ೧೬ರರಂದೇ ಗಾಂಧೀಜಿ, ಪಟೇಲ್ ಮತ್ತು ಇತರ ಸುಮಾರು ಇಪ್ಪತ್ತು ಮಂದಿ ಅಹಮದಾಬಾದ್‌ನಿಂದ ಕೈಡಾ ಜಿಲ್ಲೆಯ ನಡಿಯಾದ್‌ಗೆ ಪ್ರಯಾಣ ಮಾಡಿದರು. ವಲ್ಲಭಭಾಯ್‌ರವರು ತಮ್ಮ ಮಾಮೂಲಿ ಸೂಟು, ಬೂಟು ಮತ್ತು ಹ್ಯಾಟನ್ನು ತ್ಯಜಿಸಿ ದೋತಿ, ಅಂಗಿ, ವೈಸ್ಟ್ ಕೋಟು ಮತ್ತು ಗಾಂಧಿ ಟೋಪಿಯನ್ನು ಧರಿಸಿ ಬಂದಿದ್ದರು. ಅಹಮದಾಬಾದ್‌ನಿಂದ ಹೊರಡುವ ಮುನ್ನ ಸರ್ಕಾರದೊಡನೆ ಸಂಘರ್ಷವನ್ನು ಆದಷ್ಟೂ ತಡೆಯುವುದು ಸತ್ಯಾಗ್ರಹಿಯ ಕರ್ತವ್ಯ ಎಂದು ಗಾಂಧೀಜಿ ಭಾವಿಸಿದ್ದರು. ಅವರು ಕಮಿಷನರ್‌ಗೆ ಒಂದು ಪತ್ರವನ್ನು ಬರೆದು "ಬರೆ ಒಂದು ಚಳವಳಿಯನ್ನು ಆರಂಭಿಸುವುದು ಅಥವಾ ಒಂದು ವ್ಯರ್ಥ ಚಳವಳಿಗೆ ಪ್ರೋತ್ಸಾಹಿಸುವುದು ನನ್ನ ಉದ್ದೇಶವಲ್ಲ ಎಂದು ನಿಮಗೆ ಆಶ್ವಾಸನೆ ನೀಡಲು ಬಯಸುತ್ತೇನೆ. ನಾನು ಸತ್ಯವನ್ನು ಅರಸಿಕೊಂಡು ಕೈಡಾ ಜಿಲ್ಲೆಗೆ ಹೋಗುತ್ತಿದ್ದೇನೆ..... ಜಿಲ್ಲೆಯ ಗೌರವಾನ್ವಿತ ನಾಯಕರ ಸಂಪೂರ್ಣ ಆಶ್ವಾಸನೆ ನನಗೆ ಇದ್ದರೂ, ನಿಜ ಸ್ಥಿತಿಯನ್ನು ನಾನೇ ಪರಿಶೀಲಿಸುವುದು ನನ್ನ ಕರ್ತವ್ಯ ಎಂದು ಭಾವಿಸಿದ್ದೇನೆ. ನನ್ನ ವಿಚಾರಣೆ ಮುಗಿಯುವವರೆಗೆ ಕಂದಾಯದ ವಸೂಲಿಯನ್ನು ನೀವು ಮುಂದೂಡಿದರೆ, ಈಗ ಜನರಲ್ಲಿ ಹರಡಿರುವ ಅತೃಪ್ತಿಯನ್ನು ಶಮನಗೊಳಿಸಲು ಬಹಳ

ಸಹಾಯವಾಗುತ್ತದೆ" ಎಂದು ತಿಳಿಸಿದರು. ಆದರೆ ಗಾಂಧೀಜಿಯ ಮನವಿಯನ್ನು ಕಮಿಷನರನು ತಿರಸ್ಕರಿಸಿದನು.[೮]

ಗಾಂಧೀಜಿ ತಮ್ಮ ಸಹಾಯಕರನ್ನು ಅನೇಕ ಗುಂಪುಗಳಾಗಿ ವಿಂಗಡಿಸಿ ಪ್ರತಿ ಗುಂಪು ನಿಗದಿಯಾದ ಹಳ್ಳಿಗಳಿಗೆ ಹೋಗಿ ಬೆಳೆಯ ನಷ್ಟದ ಪ್ರಮಾಣವನ್ನು ಪರಿಶೀಲಿಸುವಂತೆ ಸೂಚಿಸಿದರು. ಸ್ವತಃ ಗಾಂಧೀಜಿ ಮತ್ತು ಪಟೇಲ್ ಸುಮಾರು ೬೦ ಹಳ್ಳಿಗಳಲ್ಲಿ ಪರಿಶೀಲಿಸಿದರು. ಒಂದು ವಾರ ಮುಗಿಯುವುದರೊಳಗೆ, ಜಿಲ್ಲೆಯ ೬೦೦ ಹಳ್ಳಿಗಳ ಪೈಕಿ ೪೨೫ ಹಳ್ಳಿಗಳಲ್ಲಿ, ಪರಿಶೀಲನೆ ಮುಗಿದಿತ್ತು. ಈ ಪರಿಶೀಲನೆಗಳಿಂದ ರೈತರ ಬೇಡಿಕೆ ನ್ಯಾಯಯುತವಾದುದೆಂದು ಗಾಂಧೀಜಿಗೆ ಮನವರಿಕೆಯಾಯಿತು.

ಆದರೆ ಸರ್ಕಾರಿ ಅಧಿಕಾರಿಗಳು ತಮ್ಮ ನಿಲುವನ್ನು ಬದಲಾಯಿಸಲಿಲ್ಲ. ಪ್ರಾಟ್ ಮತ್ತು ಅವನಂತಹ ಇತರ ಅಧಿಕಾರಿಗಳು, 'ಜನರು ಕಂದಾಯ ಪಾವತಿಸಲು ಸಿದ್ಧವಿದ್ದಾರೆ, ಆದರೆ ಗಾಂಧಿ, ಪಟೇಲ್ ಮತ್ತಿತರ ಕೈಡಾ ಜಿಲ್ಲೆಯ ಹೊರಗಿನ ರಾಜಕಾರಣಿಗಳು ಕಂದಾಯ ಪಾವತಿಸದಂತೆ ರೈತರಿಗೆ ಚಿತಾವಣೆ ಮಾಡುತ್ತಿದ್ದಾರೆ' ಎಂದು ಭಾವಿಸಿದ್ದರು. ಇಂಗ್ಲೆಂಡಿನಿಂದ ಬಂದ ತಾವು ಹೊರಗಿನವರಲ್ಲ! ಭಾರತೀಯರಾದ ಗಾಂಧಿ ಮತ್ತು ಇತರರು ಕೈಡಾ ಜಿಲ್ಲೆಗೆ ಹೊರಗಿನವರಂತೆ! ಎಂತಹ ವಿಪರೀತ ಬುದ್ಧಿ ಅವರದು. ಜೊತೆಗೆ ಕೈಡಾ ಪಟೇಲರ ಸ್ವಂತ ಜಿಲ್ಲೆ. ಆ ಜಿಲ್ಲೆಯ ಕರಮ್‌ಸದ್ ಅವರ ಹಳ್ಳಿ. ಗುಜರಾತ್ ಸಭಾದ ಕಾರ್ಯಕಾರಿ ಸಮಿತಿಯ ಸದಸ್ಯರ ಪೈಕಿ ೯ ಮಂದಿ ಕೈಡಾ ಜಿಲ್ಲೆಯವರು. ಕೆಳಗಿನ ಅಧಿಕಾರಿಗಳ ವರದಿಯಂತೆ ಬೊಂಬಾಯಿ ಸರ್ಕಾರ ಕುಣಿಯುತ್ತಿತ್ತು. ಅದರಿಂದ ಸತ್ಯಾಗ್ರಹ ಅನಿವಾರ್ಯವಾಯಿತು.

ಗಾಂಧೀಜಿಯವರು ಸತ್ಯಾಗ್ರಹವನ್ನು ಮಾರ್ಚ್ ೨೨, ೧೯೧೮ರಂದು ಕೈಡಾ ಜಿಲ್ಲೆಯ ನಡಿಯಾದ್‌ನಲ್ಲಿ ಆರಂಭಿಸಿದರು. ಅವರು ಅಂದು ಅಲ್ಲಿ ರೈತರ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಹೀಗೆ ನುಡಿದರು:

> ಈ ಜಿಲ್ಲೆಯ ರೈತರು ಜಾಣರು ಮತ್ತು ಶ್ರಮ ಜೀವಿಗಳು. ಅವರು ತಮಗಾಗಿ ಸುಂದರವಾದ ಹಣ್ಣಿನ ತೋಟಗಳನ್ನು ಬೆಳೆಸಿದ್ದಾರೆ. ಅವರ ಬೆಳೆ ನಾಶವಾಗಿದ್ದರೂ ಸಹ ಅವರು ಕಂದಾಯವನ್ನು ಪಾವತಿಸಬೇಕೆಂದು ಹೇಳಲು ಸಾಧ್ಯವಿಲ್ಲ. ಬೆಳೆ ವಿಫಲವಾದಾಗ ಸರ್ಕಾರವು ರೈತರಿಂದ ಬಲಾತ್ಕಾರವಾಗಿ ಕಂದಾಯ ವಸೂಲಿ ಮಾಡುವುದನ್ನು ಸಹಿಸಲು ಸಾಧ್ಯವಿಲ್ಲ. ಆದರೆ ಅದು ನಮ್ಮ ದೇಶದಲ್ಲಿ ಮಾಮೂಲಿ ಆಗಿಬಿಟ್ಟಿದೆ. ಜನರು ಎಷ್ಟೇ ಪ್ರಾಮಾಣಿಕ

ರಾಗಿರಲಿ, ಅವರ ವಾದ ಎಷ್ಟೇ ನ್ಯಾಯವಾಗಿರಲಿ, ಸರ್ಕಾರವು ಅವರನ್ನು ನಂಬಲು ನಿರಾಕರಿಸುತ್ತದೆ ಮತ್ತು ತನ್ನದೇ ಆದ ಮಾರ್ಗದಲ್ಲಿ ನಡೆಯುತ್ತದೆ. ನ್ಯಾಯ ಇರಬೇಕು ಮತ್ತು ಅನ್ಯಾಯ ಕೊನೆಗೊಳ್ಳಬೇಕು. ಅಬ್ಬಬ್ಬ ಅಂದರೆ ಒಂದು ವರ್ಷದ ಬಡ್ಡಿಯನ್ನು ಉಳಿಸುವುದಕ್ಕೋಸ್ಕರ ಜನರು ಸುಳ್ಳು ಹೇಳುತ್ತಾರೆ ಅನ್ನುವುದು ಊಹಿಸಲಾಗದ್ದು. ಸರ್ಕಾರವು ಈ ಆಪಾದನೆ ಮಾಡುವ ಧೈರ್ಯವನ್ನು ತಳೆಯುವುದು ನಮ್ಮೆಲ್ಲರಿಗೆ ಅಪಮಾನ. ಆದ್ದರಿಂದ ಸರ್ಕಾರವು ನಮ್ಮ ಕೋರಿಕೆಯನ್ನು ಒಪ್ಪದೇ ಹೋದರೆ ನಾವು ಭೂ ಕಂದಾಯವನ್ನು ಪಾವತಿಸುವುದಿಲ್ಲ ಮತ್ತು ಅದರ ಪರಿಣಾಮಗಳನ್ನು ಎದುರಿಸಲು ಸಿದ್ಧ ಎಂದು ಸರಳವಾಗಿ ಘೋಷಿಸಬೇಕು. ಎಂದು ನಾನು ನಿಮಗೆ ಹೇಳುತ್ತೇನೆ. ಸರ್ಕಾರವು ನಮ್ಮ ಜಾನುವಾರು ಮತ್ತು ಚಿರಾಸ್ತಿಗಳನ್ನು ಮಾರುವುದರ ಮೂಲಕ ಕಂದಾಯವನ್ನು ತೆಗೆದುಕೊಳ್ಳಬಹುದು, ಜಹಗೀರಿಗಳನ್ನು ವಶಪಡಿಸಿಕೊಳ್ಳಬಹುದು ಮತ್ತು ಕಾನೂನು ಪಾಲಿಸುತ್ತಿಲ್ಲವೆಂದು ಜನರನ್ನು ಸೆರೆಮನೆಗೂ ನೂಕಬಹುದು. ಜನರು ಪ್ರತಿಜ್ಞೆಯನ್ನು ಮಾಡಿದ ಮೇಲೆ ಅವರು ಅದನ್ನು ಮುರಿಯುವರೆಂದು ನಾನು ಯೋಚಿಸಲಾರೆ. ನೀವು ಪಾಲಿಸಲು ಇಷ್ಟವಿಲ್ಲದ ಪ್ರತಿಜ್ಞೆ ಮಾಡಿದರೆ ನನಗೆ ಬಹಳ ನೋವಾಗುತ್ತದೆ.[೯]

ತಮ್ಮ ಕಷ್ಟಗಳನ್ನು ಸಹಿಸಲು ಸಿದ್ಧವಾಗಿರುವರೇ ಎಂದು ರೈತರನ್ನು ಗಾಂಧೀಜಿ ಕೇಳಿದರು. ಒಂದು ದೀರ್ಘ ಮೌನ ಆವರಿಸಿತು. ನಂತರ 'ಹೌದು' 'ಹೌದು' ಎಂದು ಧ್ವನಿಗಳು ಮೊಳಗಿದುವು. ಗಾಂಧೀಜಿ ಒಂದು ಪ್ರತಿಜ್ಞೆಯನ್ನು ಓದಿದರು ಮತ್ತು ನಿಜವಾಗಿಯೂ ಆಸಕ್ತರಾದವರು ಮಾತ್ರ ಆ ಪ್ರತಿಜ್ಞೆಗೆ ಸಹಿ ಮಾಡಬೇಕು ಎಂದರು. ಕಂದಾಯ ಪಾವತಿಯನ್ನು ಸರ್ಕಾರವು ಮುಂದೂಡಿದರೆ ಪಾವತಿಸಲು ಶಕ್ತರಾದವರು ಈಗಲೇ ಪಾವತಿಸುವರೆಂದೂ – ಆ ಪ್ರತಿಜ್ಞೆಯಲ್ಲಿ ಅಳವಡಿಸಲಾಗಿತ್ತು. 'ಶಕ್ತರಾದವರು ಈಗಲೇ ಪಾವತಿಸಿದರೆ, ಅಶಕ್ತರು ಹೆದರಿಕೆಯಿಂದ ಪಾತ್ರೆ ಪರಟೆಗಳನ್ನು ಮಾರಿ, ಅಥವಾ ಸಾಲ ಮಾಡಿ ಕಂದಾಯ ಪಾವತಿಸಿ ತೊಂದರೆಗೆ ಸಿಕ್ಕಿಕೊಳ್ಳುವರು' ಎಂದು ಗಾಂಧಿ ವಿವರಿಸಿದರು. 'ರೈತರು ಒಂದು ತತ್ವಕ್ಕಾಗಿ ಹೋರಾಡುತ್ತಿದ್ದಾರೆ, ಆದರೆ ಅಧಿಕಾರಿಗಳು ಪ್ರತಿಷ್ಠೆಯ ಮೇಲೆ ನಿಂತಿದ್ದಾರೆ. ಕೈಡಾ ರೈತರು ನ್ಯಾಯ ಮತ್ತು ಸತ್ಯಕ್ಕಾಗಿ ಹೋರಾಟಕ್ಕೆ ಇಳಿದಿದ್ದಾರೆ' ಎಂದು ಗಾಂಧೀಜಿ ವಿವರಿಸಿದರು.

ಅಂದು ೨೦೦ ಮಂದಿ ರೈತರು ಪ್ರತಿಜ್ಞೆಗೆ ಸಹಿ ಮಾಡಿದರು. ಅಂದು ವಲ್ಲಭಭಾಯ್ ಭಾಷಣ ಮಾಡಲಿಲ್ಲ. ಅವರು ಗಾಂಧಿ ಬಳಿ ಶಾಂತವಾಗಿ ಕುಳಿತಿದ್ದರು. ಗಾಂಧಿ ಇಲ್ಲದ ಸಭೆಯಲ್ಲಿ ಮಾತ್ರ ಅವರು ಭಾಷಣ ಮಾಡುತ್ತಿದ್ದರು. ಆಗ ಬೇರೆ ಯಾರೂ ಮಾತಾಡುತ್ತಿರಲಿಲ್ಲ.

ಮಾರ್ಚ್ ೩೦ರಂದು ನಡಿಯಾದ್‌ನಲ್ಲಿ ಮತ್ತೆ ರೈತರ ಬೃಹತ್ ಸಭೆ ನಡೆಯಿತು. ಅಂದು ಗಾಂಧೀಜಿ ಇಂದೋರ್‌ಗೆ ಒಂದು ಸಮ್ಮೇಳನಕ್ಕಾಗಿ ಹೋಗಿದ್ದರು. ಅದರಿಂದ ವಲ್ಲಭಭಾಯ್ ಭಾಷಣ ಮಾಡಿದರು. ಅವರೆಂದರು:

> ಈ ಹೋರಾಟದ ಕಿಡಿ ಇಡೀ ದೇಶದಲ್ಲಿ ಬೆಂಕಿಯ ಜ್ವಾಲೆಯನ್ನು ಹಬ್ಬಿಸುವುದು. ಸತ್ವ ಪರೀಕ್ಷೆ ಮತ್ತು ಸಂಕಟ ಸಹಿಷ್ಣುತೆ ಇಲ್ಲದೆ ಸಂತೋಷವನ್ನು ಪಡೆಯಲಾಗುವುದಿಲ್ಲ. ಅಕಸ್ಮಾತ್ ನಿಮಗೆ ಸಂತೋಷವು ಸುಲಭವಾಗಿ ಸಿಕ್ಕಿದರೆ, ಅದು ಹೆಚ್ಚು ಕಾಲ ಉಳಿಯುವುದಿಲ್ಲ.
>
> ಒಟ್ಟು ೨೩ ಲಕ್ಷ ರೂಪಾಯಿಗಳ ಪೈಕಿ ಒಂದು ಮುಕ್ಕಾಲು ಲಕ್ಷ ರೂಪಾಯಿಗಳ ಕಂದಾಯದ ವಸೂಲಿಯನ್ನು ಸರ್ಕಾರವು ಮುಂದೂಡಿದೆ. ಉಳಿದ ಕಂದಾಯದ ಪೈಕಿ ಮೊದಲನೆ ಕಂತು ಹೆಚ್ಚು ಕಡಿಮೆ ಪೂರ್ತ ಪಾವತಿ ಆಗಿದೆ. ಉಳಿದದ್ದನ್ನು ಬೊಂಬಾಯಿ ಅಥವಾ ಗುಜರಾತ್‌ನಿಂದ ಪಡೆದು ಸರ್ಕಾರಕ್ಕೆ ಪಾವತಿ ಮಾಡಿದರೆ ಜನರಿಗೆ ಬಹಳ ತೊಂದರೆ ತಪ್ಪುತ್ತದೆ.
>
> ಈ ಹೋರಾಟಕ್ಕೆ ಸ್ಫೂರ್ತಿದಾಯಕನಾದ ಧೈರ್ಯಶಾಲಿಯು (ಗಾಂಧೀಜಿ) ಹೇಡಿಗಳನ್ನು ಅತ್ಯಂತ ಧೈರ್ಯಶಾಲಿಗಳನ್ನಾಗಿ ಪರಿವರ್ತಿಸುವ ಶಕ್ತಿಯನ್ನು ಹೊಂದಿದ್ದಾನೆ. ಆದರೆ ಧೈರ್ಯಶಾಲಿಗಳಿರುವ ಕೈಡಾ ಎಂಬ ಜಿಲ್ಲೆ ಭಾರತದಲ್ಲಿದೆ. ಆ ಜಿಲ್ಲೆಯವರು ಈ ರೀತಿಯಲ್ಲಿ ಸಹಾಯವನ್ನು ಸ್ವೀಕರಿಸಲು ಬಯಸುವುದಿಲ್ಲ.[೧೦]

ಪ್ರಾಟ್ ಮತ್ತು ಅವನ ಅಧಿಕಾರಿಗಳು ಸುಮ್ಮನಿರಲಿಲ್ಲ. ಗಾಂಧೀಜಿ ಇಂದೋರ್‌ಗೆ ಹೋಗಿದ್ದಾಗ ಅವರು ವಡತಳ ಗ್ರಾಮದ ಕೆಲವು ಕಂದಾಯ ಪಾವತಿಸದ ರೈತರ ಜಮೀನುಗಳನ್ನು ಮುಟ್ಟುಗೋಲು ಹಾಕಿದರು ಮತ್ತು ಕೆಲವರ ಚರ ಸ್ವತ್ತುಗಳನ್ನು ವಶಪಡಿಸಿಕೊಂಡು ಮಾರಿದರು. ಗಾಂಧೀಜಿ ಹಿಂತಿರುಗಿದ ಮೇಲೆ ಅವರು ಮತ್ತು ವಲ್ಲಭಭಾಯ್ ಒಟ್ಟಿಗೆ ಅನೇಕ ಹಳ್ಳಿಗಳಿಗೆ ಭೇಟಿ ನೀಡಿದರು.

ಅವರು ಭೇಟಿ ಮಾಡಿದ ಹಳ್ಳಿಗಳಲ್ಲಿ ಕರಮ್‌ಸದ್ ಸಹ ಒಂದು. ಅದು ಪಟೇಲರ ಸ್ವಂತ ಊರು.

ಗಾಂಧೀಜಿ ಇಲ್ಲದಿದ್ದಾಗ ಪಟೇಲರು ತಮ್ಮ ಭಾಷಣಗಳಿಂದ ರೈತರನ್ನು ಗಾಂಧೀಜಿಯ ಮಾರ್ಗದಲ್ಲಿ ನಡೆಯುವಂತೆ ಉತ್ತೇಜಿಸುತ್ತಿದ್ದರು. ಏಪ್ರಿಲ್ ೧೮ರಂದು ರಾಸ್‌ನಲ್ಲಿ ನಡೆದ ರೈತರ ಸಭೆಯಲ್ಲಿ ಅವರು ಈ ರೀತಿ ನುಡಿದರು:

> ಮಹಾತ್ಮನು ನಿಮಗೆ ತೋರಿರುವ ಮಾರ್ಗಕ್ಕೆ ಅಂಟಿಕೊಳ್ಳಿ. ಹಿಂಸೆಯ ಅಥವಾ ಲೂಟಿಯ ಅಥವಾ ಅಪ್ರಮಾಣಿಕ ವಿಧಾನದ ಯಾವುದೇ ಆಲೋಚನೆಯನ್ನು ನೀವು ಬಿಡಬೇಕು. ನೀವು ಧರ್ಮದ ಮಾರ್ಗವನ್ನು – ಸತ್ಯ ಮತ್ತು ನ್ಯಾಯದ ಮಾರ್ಗವನ್ನು – ಹಿಡಿಯಬೇಕು. ನಿಮ್ಮ ಶೌರ್ಯದ ದುರುಪಯೋಗ ಮಾಡಬೇಡಿ. ಒಗ್ಗಟ್ಟಿನಿಂದ ಇರಿ. ವಿನಯದಿಂದ, ಆದರೆ ನೀವು ಎದುರಿಸುವ ಸಂದರ್ಭದ ಸಂಪೂರ್ಣ ಅರಿವಿನೊಡನೆ, ನಿಮ್ಮ ಹಕ್ಕುಗಳಿಗೆ ದೃಢತೆಯಿಂದ ಆಗ್ರಹಿಸುತ್ತಾ ಮುಂದುವರೆಯಿರಿ. ತಹಸೀಲ್ದಾರನಿಗೆ ಹೆದರಬೇಡಿ.

ಆ ಭಾಷಣದಲ್ಲಿ ಪಟೇಲ್ ಒಂದು ಕತ್ತೆಯ ಕಥೆಯನ್ನು ಹೇಳಿದರು:

ಒಂದು ಕತ್ತೆಯ ಮಾಲೀಕ ಮೊದಲು ಅದರ ಬೆನ್ನಿನ ಮೇಲೆ ಒಂದು ಮಣ ತೂಕದ ಹೊರೆಯನ್ನು ಹೇರುತ್ತಾನೆ. ಕತ್ತೆಯು ಅಸಮಧಾನವನ್ನು ತೋರಿಸಿಕೊಳ್ಳದೆ ಅದನ್ನು ಹೊತ್ತರೆ ಮಾಲೀಕನು ಆ ಹೊರೆಯನ್ನು ಅರ್ಧ ಮಣದಷ್ಟು ಏರಿಸುತ್ತಾನೆ, ಅಂತಿಮವಾಗಿ ಅದನ್ನು ಎರಡು ಮಣಕ್ಕೇ ಏರಿಸುತ್ತಾನೆ. ಅದೇ ತರಹ, ಹೊರೆ ಹೊರುವುದರಲ್ಲಿ ನೀವು ಸರ್ಕಾರಕ್ಕೆ ವಿಧೇಯರಾಗಿದ್ದರೆ, ನೀವು ಸಹ ಹೆಚ್ಚು ಹೆಚ್ಚು ಹೊರೆಯನ್ನು ಹೊರುವಂತೆ ಮಾಡಲಾಗುತ್ತದೆ. ಇಲ್ಲಿಯವರೆಗೆ ನೀವು ತಾಳ್ಮೆಯಿಂದ ಹೊರೆಯನ್ನು ಹೊತ್ತಿದ್ದೀರಿ. ಈಗ ಅದನ್ನು ಆಚೆಗೆ ಎಸೆಯಿರಿ. ಭಯವನ್ನೂ ಸಹ ಬಿಡಿ. ಸತ್ಯವನ್ನು ಅನುಸರಿಸಿ. ಆಗ ಮಾತ್ರ ಸರ್ಕಾರವು ಕೈಡಾ ಜಿಲ್ಲೆಯ ಜನರಿಗೆ ಗಂಡಸುತನ ಇದೆ ಎಂದು ಹೇಳುತ್ತದೆ.

ಆಕಾಶವೇ ಕಳಚಿ ಬೀಳಲಿ. ನೀವು ನಿಮ್ಮ ಪ್ರತಿಜ್ಞೆಯನ್ನು ಕೈಬಿಡಬಾರದು. ನೀವು ಅದನ್ನು ಯಶಸ್ಸಿನವರೆಗೆ ಕೊಂಡೊಯ್ದರೆ, ಭಾರತದ ಸ್ವಾತಂತ್ರ್ಯ ಹೋರಾಟದ ಚರಿತ್ರೆಯಲ್ಲಿ ಕೈಡಾ ಜಿಲ್ಲೆಯದು ಮೊದಲನೆ ಹೆಸರಾಗುತ್ತದೆ. ಇಡೀ ಭಾರತದ ಕಣ್ಣು ನಿಮ್ಮ ಮೇಲೆ ಕೇಂದ್ರೀಕೃತವಾಗಿದೆ. ರೈತರ ಬೇಡಿಕೆಗೆ ಸರ್ಕಾರವು ನ್ಯಾಯವನ್ನು

ದೊರಕಿಸಲೇಬೇಕು. ಅದು ಒಗ್ಗಟ್ಟಿನ ಜನರನ್ನು ಎದುರಿಸಲು ಸಾಧ್ಯವಿಲ್ಲ. ನಿಮ್ಮ ಪ್ರತಿಜ್ಞೆಯನ್ನು ಪೂರ್ಣಗೊಳಿಸುವುದರಲ್ಲಿದೆ ನಿಮ್ಮ ಮತ್ತು ಮುಂದಿನ ಪೀಳಿಗೆಯ ಅಭಿವೃದ್ಧಿ. [೧೧]

ರೈತರಿಗೆ ಪ್ರಿಯವಾದ ದನಗಳನ್ನು ವಶಪಡಿಸಿಕೊಂಡರೆ ಸಾಕು ಅವರು ಬಗ್ಗಿ ಕಂದಾಯವನ್ನು ಪಾವತಿಸುತ್ತಾರೆ ಎಂದು ಸರ್ಕಾರ ಯೋಚಿಸಿತ್ತು. ಆದರೆ ಹಾಗೆ ಆಗಲಿಲ್ಲ. ಅದರಿಂದ ಸರ್ಕಾರವು ಜಮೀನುಗಳನ್ನು ಜಪ್ತಿ ಮಾಡಿ ಹರಾಜು ಹಾಕಲು ಆರಂಭಿಸಿತು. ಈ ಒತ್ತಡದ ಫಲವಾಗಿ ರೈತರ ನೈತಿಕತೆ ಕುಸಿಯಬಹುದೆಂದು ಆಲೋಚಿಸಿ, ಗಾಂಧೀಜಿ, ಪಟೇಲ್ ಮತ್ತು ಇತರ ಸಹಚರರು ಹಳ್ಳಿಯಿಂದ ಹಳ್ಳಿಗೆ ಹೋಗಿ ರೈತರಲ್ಲಿ ಹೊಸ ಉತ್ಸಾಹವನ್ನು ಪ್ರೇರೇಪಿಸಲು ತೊಡಗಿದರು ಮತ್ತು ಅವರು ತೆಗೆದುಕೊಂಡಿರುವ ಪ್ರತಿಜ್ಞೆಯನ್ನು ಗೌರವಿಸಬೇಕೆಂದು ಬೋಧಿಸಿದರು. ಅಲ್ಲಿ ಏಪ್ರಿಲ್ ೪ರಂದು ಗಾಂಧೀಜಿಯವರು ತಮ್ಮ ಅನುಚರರಿಗೆ ಹೀಗೆ ಹೇಳಿದರು:

> ಇದು ವಲ್ಲಭಬಾಯ್‌ಯ ನೆಲ. ಅವನು ಅಗ್ನಿ ಪರೀಕ್ಷೆಗಳನ್ನು ಹಾದು ಬಂದಿದ್ದಾನೆ. ಆದರೆ ಇನ್ನೂ ಪರೀಕ್ಷೆಗಳು ಅವನಿಗೆ ಕಾದಿವೆ. ಕೊನೆಯಲ್ಲಿ ನಾವು ಪರಿಶುದ್ಧವಾದ ಬಂಗಾರವನ್ನು ಕಾಣುತ್ತೇವೆ ಎನ್ನುವುದರಲ್ಲಿ ನನಗೆ ಯಾವ ಅನುಮಾನವೂ ಇಲ್ಲ.

ಆ ವೇಳೆಗೆ ಜ್ಯೋತ್ಸನಾಥ್ ಘೋಷಾಲ್ ಎಂಬುವನು ಕೈಡಾ ಜಿಲ್ಲೆಯ ಕಲೆಕ್ಟರ್ ಆಗಿ ನಿಯಮಿತನಾದನು. ಅವನು ಈ ಹಿಂದೆ ೧೯೧೩–೧೭ರ ವರೆಗೆ ಕೈಡಾ ಜಿಲ್ಲೆಯ ಕಲೆಕ್ಟರ್ ಆಗಿದ್ದನು. ಅದರಿಂದ ಅವನು ಅನುಭವಶಾಲಿ ಅನ್ನುವ ಕಾರಣಕ್ಕಾಗಿ ಸರ್ಕಾರವು ಅವನನ್ನು ಮತ್ತೆ ಕೈಡಾ ಜಿಲ್ಲೆಯ ಕಲೆಕ್ಟರನನ್ನಾಗಿ ಮಾಡಿತು. ಜಮೀನು ಮುಟ್ಟುಗೋಲು ಮುಂತಾದ ಕ್ರಮಗಳು ರೈತರ ಚಳವಳಿಯನ್ನು ಬಗ್ಗು ಬಡಿದಿವೆ ಎಂದು ಅವನು ಭಾವಿಸಿದನು. ಆದರೆ ಏಪ್ರಿಲ್ ತಿಂಗಳ ಮಧ್ಯಭಾಗದ ವೇಳೆಗೆ ಪ್ರತಿಜ್ಞೆಗೆ ಸಹಿ ಹಾಕಿದವರ ಸಂಖ್ಯೆ ೨,೩೩೭ ಮಂದಿಗೆ ಏರಿತು ಮತ್ತು ಕಲೆಕ್ಟರ್ ಘೋಷಾಲ್‌ನು 'ಬಾಂಬೆ ಕ್ರಾನಿಕಲ್' ಪತ್ರಿಕೆಯ ವರದಿಗಾರನಿಗೆ, 'ಇಂತಹ ಒಗ್ಗಟ್ಟನ್ನು ನಾನೆಂದೂ ನೋಡಿರಲಿಲ್ಲ' ಎಂದು ಹೇಳಿದನು. [೧೨]

ಈ ನಡುವೆ ಪ್ಯಾಟ್‌ನು ಕೈಡಾ ಜಿಲ್ಲೆಯ ಜನರ ಸಭೆಯನ್ನು ಸೇರಿಸಿ ಅವರನ್ನು ಉದ್ದೇಶಿಸಿ ಭಾಷಣ ಮಾಡಲು ಬಯಸಿ, ಆ ಕಾರ್ಯದಲ್ಲಿ ಗಾಂಧೀಜಿಯವರ ಸಹಾಯವನ್ನು ಕೋರಿದನು. ತಕ್ಷಣ ಗಾಂಧೀಜಿಯವರು ಒಂದು ಕರಪತ್ರ

ವನ್ನು ಹೊರಡಿಸಿ ಕೈಡಾ ಜಿಲ್ಲೆಯ ಜನರು ಪ್ರಾಟ್‌ನ ಮಾತುಗಳನ್ನು ಆಲಿಸಬೇಕೆಂದು ಕೋರಿದರು. ಪ್ರಾಟ್‌ನ ಆ ಸಭೆ ಏಪ್ರಿಲ್ ೧೨ರಂದು ನಡಿಯಾದ್‌ನಲ್ಲಿ ನಡೆಯಿತು. ಸುಮಾರು ೨೦೦೦ ಮಂದಿ ನೆರೆದಿದ್ದರು. ಅವರಲ್ಲಿ ಬಹುಪಾಲು ಜನ ಕೊಂಚ ಉತ್ತಮ ಸ್ಥಿತಿಯಲ್ಲಿ ಇರುವವರೆ. ಗಾಂಧೀಜಿ ಆ ಸಭೆಯಲ್ಲಿ ಹಾಜರಿರಲಿಲ್ಲ. ಆದರೆ ವಲ್ಲಭಭಾಯ್ ಹಾಜರಿದ್ದರು. ಪ್ರಾಟ್‌ನು ಗುಜರಾತಿ ಭಾಷೆಯಲ್ಲಿ ಚೆನ್ನಾಗಿ ಮಾತನಾಡಬಲ್ಲವನಾಗಿದ್ದನು. ಅವನು ತನ್ನ ಭಾಷಣದಲ್ಲಿ ಗಾಂಧೀಜಿಯನ್ನು 'ಮಹಾತ್ಮ' ಎಂದೂ, ಪಟೇಲರನ್ನು 'ಸಾಹೇಬ್' ಎಂದೂ ಕರೆದನು.

ಅವನ ಭಾಷಣ:

ನೀವು ನನ್ನ ಮಾತುಗಳನ್ನು ಲಕ್ಷ್ಯವಿಟ್ಟು ಆಲಿಸಬೇಕು ಮತ್ತು ನಾನು ಹೇಳಿದ್ದನ್ನು ಪ್ರತಿಯೊಬ್ಬರಿಗೂ ಮುಟ್ಟಿಸಬೇಕು ಎಂದು ಬಯಸುತ್ತೇನೆ. ಮಹಾತ್ಮ ಗಾಂಧೀಜಿ ಮತ್ತು ವಲ್ಲಭಭಾಯ್ ಸಾಹೇಬ್ ನಿಮಗೆ ಬಹಳ ಬುದ್ಧಿವಾದವನ್ನು ನೀಡಿದ್ದಾರೆ. ಅವರು ಹಳ್ಳಿಯಿಂದ ಹಳ್ಳಿಗೆ ಹೋಗಿ ಭಾಷಣ ಮಾಡಿದ್ದಾರೆ. ಆದರೆ ಇಂದು ನೀವು ನನ್ನ ಮಾತುಗಳನ್ನು ಆಲಿಸಬೇಕೆಂದು ಕೋರುತ್ತೇನೆ.

ಕಂದಾಯದ ವಸೂಲಿಯನ್ನು ಮುಂದೂಡುವಂತೆ ಕೇಳಲು ಕಾನೂನಿನ ಯಾವ ಹಕ್ಕೂ ರೈತರಿಗಿಲ್ಲ. ಅದು ಸಂಪೂರ್ಣವಾಗಿ ನಮ್ಮ ಕೊಡುಗೆಗೆ ಒಳಪಟ್ಟಿದ್ದು. ನಿಮ್ಮ ಹೋರಾಟ ವ್ಯರ್ಥವಾದುದು. ಇದು ಬರೇ ನನ್ನ ಆದೇಶವಲ್ಲ, ಅದು ಲಾರ್ಡ್ ವಿಲ್ಲಿಂಗ್‌ಡನ್ ರವರದೂ ಆಗಿದೆ. ನಾನು ಹೊರಡಿಸುವ ಯಾವುದೇ ಆದೇಶವನ್ನು ಅವರು ಒಪ್ಪುವುದಾಗಿ ಹೇಳುವ ಅವರ ಪತ್ರ ನನ್ನ ಬಳಿ ಇದೆ. (ಇಲ್ಲಿ ಪ್ರಾಟ್ ಒಂದು ದಾಖಲೆಯನ್ನು ಪ್ರದರ್ಶಿಸಿದನು)

ಸರ್ಕಾರದ ವಿರುದ್ಧದ ಈ ಹೋರಾಟವನ್ನು ನೀವು ಮುಂದುವರೆಸಿದರೆ ಅದರ ಪರಿಣಾಮಗಳನ್ನು ನೀವೇ ಹೊರಬೇಕಾಗುತ್ತದೆ. ಈ ಸಭ್ಯರು (ಇಲ್ಲಿ ಪ್ರಾಟ್‌ನು ಕೈಡಾಗೆ ಬಂದಿದ್ದ ಸ್ವಯಂ ಸೇವಕರ ಕಡೆಗೆ ಬೆರಳು ತೋರಿಸಿದನು) ಸೆರೆಮನೆಗೆ ಹೋಗುವುದಿಲ್ಲ.

ಭೂಕಂದಾಯದ ಕಾನೂನಿನಲ್ಲಿ ನನಗೆ ೨೮ ವರ್ಷಗಳ ಅನುಭವವಿದೆ. ಗಾಂಧಿ ನನ್ನ ಸ್ನೇಹಿತ (ಆದರೆ) ಅವನು ತನ್ನ ಜೀವನದ ಹೆಚ್ಚು ಕಾಲವನ್ನು ಆಫ್ರಿಕದಲ್ಲಿ ಕಳೆದಿದ್ದಾನೆ. ಅವನು

ಧರ್ಮದ ವಿಷಯದಲ್ಲಿ ಬಹು ನಿಪುಣ, ಆದರೆ ಭೂಮಿ ಮತ್ತು ಭೂ ಕಂದಾಯದ ವಿಷಯ ಅವನಿಗೆ ಏನೂ ತಿಳಿಯದು. ನನಗೆ ಬಹಳ ಗೊತ್ತು.

ಒಳ್ಳೆಯ ಪಟಿದಾರರ ಜಮೀನುಗಳು ಜಪ್ತಿಯಾಗುತ್ತಿರುವುದರಿಂದ ನನಗೆ ವ್ಯಸನವಾಗಿದೆ. ದಯಾವಂತ ಸರ್ಕಾರವು ನಿಮಗೆ ಈ ಅಂತಿಮ ಅವಕಾಶವನ್ನು ನೀಡುತ್ತಿದೆ.

ನಮ್ಮ ಮಾಮಲದಾರರು ಮತ್ತು ತಲಾಟಿಗಳು ನಿಮ್ಮ ಚರಾಸ್ತಿಗಳನ್ನು ವಶಪಡಿಸಿಕೊಳ್ಳುವ ಮತ್ತು ಮಾರುವ ಮೂಲಕ (ಕಂದಾಯದ) ಹಣ ಸಂಗ್ರಹಿಸುತ್ತಾರೆ ಎಂದು ಭಾವಿಸಬೇಡಿ. ಅವರು ಅಷ್ಟೊಂದು ತೊಂದರೆಯನ್ನು ತೆಗೆದುಕೊಳ್ಳುವುದಿಲ್ಲ. ಅವರ ಕಾಲ ಬಹಳ ಅಮೂಲ್ಯವಾದುದು. ಅವರು ಹಣ ಸಂಗ್ರಹಿಸಲು ಯಾರ ಮನೆಗೂ ಹೋಗುವುದಿಲ್ಲ. ನಿಮ್ಮ ಜಮೀನು ಜಪ್ತಿಯಾಗುತ್ತದೆ.

ಮುಕ್ತಾಯ ಮಾಡುತ್ತಾ ನಿಮಗೆ ಒಂದು ಮಾತನ್ನು ಹೇಳುತ್ತೇನೆ. ನೀವು ತಪ್ಪಾಗಿ ಮಾಡಿದ ಪ್ರತಿಜ್ಞೆಯನ್ನು ಭಂಗ ಮಾಡಿದರೆ ನೀವು ಪಾಪ ಮಾಡಿದಿರೆಂದು ಯಾರೂ ಹೇಳಲು ಸಾಧ್ಯವಿಲ್ಲ. ಅಹಮದಾಬಾದ್‌ನಲ್ಲಿ ಏನಾಯಿತೆಂಬುದನ್ನು ನಾನು ನಿಮಗೆ ಹೇಳುತ್ತೇನೆ. ಇತ್ತೀಚೆಗೆ ಗಿರಣಿ ಮಾಲೀಕರು ಮತ್ತು ಕಾರ್ಮಿಕರ ನಡುವೆ ಒಂದು ಹೋರಾಟ ನಡೆಯಿತು. ಕಾರ್ಮಿಕರು ತಮಗೆ ಶೇ. ೩೫ ಸಂಬಳ ಜಾಸ್ತಿ ಆದ ಹೊರತೂ ಕೆಲಸಕ್ಕೆ ಹಿಂದಿರುಗುವುದಿಲ್ಲ ಎಂದು ಪ್ರತಿಜ್ಞೆ ಮಾಡಿದ್ದರು. ಆದರೆ ಕೊನೆಯಲ್ಲಿ ಏನಾಯಿತು? ತಮ್ಮ ಪ್ರತಿಜ್ಞೆ ತಾರ್ಕಿಕವಲ್ಲ ಮತ್ತು ಅದಕ್ಕೆ ಅಂಟಿಕೊಳ್ಳಲು ಸಾಧ್ಯವಿಲ್ಲ ಎನ್ನುವುದು ಅರಿವಾದಾಗ ಅವರು ಅದನ್ನು ಮುರಿದರು ಮತ್ತು ಶೇಖಡ ಇಪ್ಪತ್ತೇಳುವರೆ ಹೆಚ್ಚಳವನ್ನು ಒಪ್ಪಿಕೊಂಡರು ಮತ್ತು ಕೆಲಸಕ್ಕೆ ಹಾಜರಾದರು.

ನಾನು ಹೇಳಬೇಕಾದುದನ್ನೆಲ್ಲಾ ಹೇಳಿದ್ದೇನೆ. ಈಗ ಅಂತಿಮ ತೀರ್ಮಾನ ನಿಮ್ಮ ಕೈಯಲ್ಲಿ ಇದೆ. ತನ್ನ ಆಸ್ತಿಗೆ ಏನಾಗುತ್ತಿದೆ ಎನ್ನುವುದು ಒಬ್ಬ ಸನ್ಯಾಸಿಗೆ ಲೆಕ್ಕಕ್ಕಿಲ್ಲ, ಆದರೆ ನೀವು ಸನ್ಯಾಸಿಗಳಲ್ಲ ಎನ್ನುವುದನ್ನು ದಯಮಾಡಿ ನೆನಪಿಡಿ. [೧೩]

ಅದು ರೈತರನ್ನು ಬೆರಗುಗೊಳಿಸಲು ಮಾಡಿದ ಜಾಣತನದ ಭಾಷಣವಾಗಿತ್ತು. ಕೈಡಾ ಕಲೆಕ್ಟರ್ ಮತ್ತು ಇತರ ಅಧಿಕಾರಿಗಳು ಉಪಸ್ಥಿತರಿದ್ದರು. ಕರಮ್‌ಸದ್‌ನ ನರಸಿಂಹಧಾಮ್ ಎಂಬ ಒಬ್ಬ ರೈತ ಎದ್ದು ನಿಂತು ಹೇಳಿದ, "ಈ ಚಳವಳಿಯು ಸರ್ಕಾರಕ್ಕೆ ತೊಂದರೆ ಕೊಡುವುದಕ್ಕಾಗಿ ರೂಪಿಸಿದ್ದಲ್ಲ. ಆದರೆ ಶ್ರೀಮಂತರಾಗಿರುವ ನಾವು ಕಂದಾಯವನ್ನು ಪಾವತಿಸಿದರೆ, ಬಡವರು ಪಾವತಿಸಲು ಸಾಲ ಮಾಡ ಬೇಕಾದ ಪರಿಸ್ಥಿತಿಗೆ ದೂಡಲ್ಪಡುತ್ತಾರೆ." ಪ್ರಾಟ್‌ನು ಕೇಳಿದ, "ಅಂದರೆ ನೀವು ಸರ್ಕಾರದೊಡನೆ ಹೋರಾಟ ಮಾಡುತ್ತಿದ್ದೀರಿ ಎಂದು ಅರ್ಥವಲ್ಲವೇ." ಆ ರೈತನು ಅದು ಒಂದು ಹೋರಾಟ ಅನ್ನುವುದನ್ನು ಒಪ್ಪಿದನು ಮತ್ತು ಗಾಂಧೀಜಿ ಹಾಗೆಂದು ವಿವರಿಸಿದ್ದಾರೆ, ಎಂದನು. ನಂತರ ಅವನು ವಲ್ಲಭಭಾಯ್ ಕಡೆಗೆ ನೋಡಿದನು.

ವಲ್ಲಭಭಾಯ್ ಎದ್ದು ನಿಂತು ಹೇಳಿದರು, 'ಈ ರೈತನು ಇದು ತನ್ನ ಹೋರಾಟ ಎಂದೂ ಸಹ ಹೇಳುತ್ತಿದ್ದಾನೆ. ಆದರೆ ಅವನು ಸರ್ಕಾರಕ್ಕೆ ಕಿರುಕುಳ ಕೊಡಲು ಹೋರಾಡುತ್ತಿದ್ದಾನೆ ಎಂದು ಅರ್ಥವಲ್ಲ.' ಪ್ರಾಟನು ವಲ್ಲಭಭಾಯ್ ರವರನ್ನು ಕೇಳಿದನು, "ನೀವೊಂದು ಭಾಷಣ ಮಾಡಲು ಉದ್ದೇಶಿಸಿದ್ದೀರ?" "ಹಾಗೇನಿಲ್ಲ." ಆದರೆ ಅಹಮದಾಬಾದ್‌ನ ಕಾರ್ಮಿಕರ ಬಗೆಗೆ ನೀವು ಹೇಳಿದ್ದರ ಬಗೆಗೆ ಹೇಳಲು ಬಯಸುತ್ತೇನೆ," ಎಂದು ಉತ್ತರಿಸಿದರು ಪಟೇಲ್. "ಖಂಡಿತವಾಗಿ, ನೀವು ಮಾತನಾಡಬಹುದು, ಆದರೆ ಈ ದಿನ ನನ್ನ ಮಾತು. ಅದರಿಂದ ನನ್ನ ಪರವಾಗಿ ಮಾತನಾಡಿ."

ವಲ್ಲಭಭಾಯ್ ಪಟೇಲ್ ಸಭೆಯನ್ನು ಕುರಿತು ಈ ರೀತಿ ನುಡಿದರು:

ಅಹಮದಾಬಾದ್‌ನ ಕಾರ್ಮಿಕರು ತೆಗೆದುಕೊಂಡ ಪ್ರತಿಜ್ಞೆಯ ಬಗೆಗೆ ಕಮಿಷನರ್‌ರವರು ನಿಮಗೆ ಹೇಳಿದ್ದಾರೆ. ಆ ವಿವಾದದಲ್ಲಿ ಮಧ್ಯೆ ಪ್ರವೇಶಿಸಿದವರ ಪೈಕಿ ನಾನೂ ಒಬ್ಬ. ಕಾರ್ಮಿಕರು ಪ್ರತಿಜ್ಞೆಯನ್ನು ಮುರಿಯಲು ಬಲಾತ್ಕರಿಸಲ್ಪಟ್ಟರು ಎಂದು ಹೇಳುವುದು ಸರಿಯಲ್ಲ. ಗಿರಣಿ ಮಾಲೀಕರು ಪಂಚಾಯಿತಿಗೆ ಒಪ್ಪಿದರೆ, ಆ ಪಂಚಾಯಿತಿದಾರರು ಯಾವ ಹೆಚ್ಚಳವನ್ನು ನ್ಯಾಯಯುತವಾದುದು ಎಂದು ತೀರ್ಮಾನಿಸುತ್ತಾರೋ ಅದನ್ನು ಕಾರ್ಮಿಕರು ಒಪ್ಪುವರು ಮತ್ತು ಕೆಲಸಕ್ಕೆ ಹಾಜರಾಗುವರು ಎಂದು ಆರಂಭದಲ್ಲೇ ತೀರ್ಮಾನವಾಗಿತ್ತು.

ಪಂಚಾಯಿತಿದಾರರು ನಿಯಮಿಸಲ್ಪಟ್ಟರು. ಮೊದಲನೆಯ ದಿನ ಕಾರ್ಮಿಕರು ಶೇ. ೩೫ನ್ನು ಸ್ವೀಕರಿಸಿದರು. ಅದಾದ ಮೇಲೆ ಅವರು ಪಂಚಾಯಿತಿದಾರರ ತೀರ್ಪಿನ ಆಧಾರದ ಮೇಲೆ ಮುಂದೆ ಹೊಂದಾಣಿಕೆ ಮಾಡಿಕೊಳ್ಳುವ ತಿಳುವಳಿಕೆ ಯಂತೆ ಶೇಖಡ ಇಪ್ಪತ್ತೇಳುವರೆ ಹೆಚ್ಚಳವನ್ನು ಒಪ್ಪಿಕೊಂಡರು.

ಈ ಇತ್ಯರ್ಥದ ಸಮಯದಲ್ಲಿ ನಮ್ಮ ಕಮಿಷನರರು ಸಹ ಹಾಜರಿದ್ದರು. ಆ ಸಭೆಯಲ್ಲಿ ನಮ್ಮ ಕಮಿಷನರರು ಕಾರ್ಮಿಕರಿಗೆ 'ಗಾಂಧೀಜಿ ನಿಮಗೆ ಸರಿಯಾದ ಬುದ್ಧಿವಾದವನ್ನು ನೀಡುತ್ತಾರೆ. ನೀವು ಅದನ್ನು ಅನುಸರಿಸಿದರೆ ನೀವು ಚೆನ್ನಾಗಿರುವಿರಿ ಮತ್ತು ನ್ಯಾಯವನ್ನು ಪಡೆಯುವಿರಿ,' ಎಂದು ಹೇಳಿದರು. ನಾನು ನಿಮಗೆ ಅದನ್ನೇ ಹೇಳುತ್ತಿದ್ದೇನೆ.[೧೪] ಅವರಿಗೆ (ಪ್ರಾಟ್‌ಗೆ) ಗಾಂಧೀಜಿಯ ಬಗೆಗೆ ಬಹಳ ಗೌರವವಿದೆ, ನನಗೂ ಇದೆ. ಗಿರಣಿ ಕಾರ್ಮಿಕರು ಸದಾ ಗಾಂಧೀಜಿಯ ಬುದ್ಧಿವಾದವನ್ನು ಪಾಲಿಸಬೇಕು ಮತ್ತು ಹಾಗೆ ಮಾಡಿದರೆ ಅವರು ನ್ಯಾಯವನ್ನು ಪಡೆಯುವರು ಎಂದು ಆ ಸಮಯದಲ್ಲಿ ಹೇಳಿದವರು ಶ್ರೀ ಪ್ರಾಟ್. ಅದೇ ರೀತಿಯಲ್ಲಿ ಈಗ ನೀವು ಗಾಂಧೀಜಿಯ ಬುದ್ಧಿವಾದವನ್ನು ಪಾಲಿಸಿದರೆ ಶ್ರೀ ಪ್ರಾಟ್‌ರವರಿಂದ ನ್ಯಾಯವನ್ನು ಪಡೆಯುವುದು ಖಾತರಿ ಎಂದು ನಾನು ಹೇಳುತ್ತೇನೆ. ಇಲ್ಲೂ ಸಹ, ಕಮಿಷನರ್‌ರವರು ಇಷ್ಟ ಪಟ್ಟರೆ ಮತ್ತು ಒಂದು ಸಮಿತಿಯನ್ನು ರಚನೆ ಮಾಡಿಸಿದರೆ, ಆ ಸಮಿತಿಯ ತೀರ್ಮಾನವನ್ನು ಇಷ್ಟ ಪಟ್ಟು ಒಪ್ಪುತ್ತೇವೆ.[೧೫]

ಒಬ್ಬ ರೈತ ಎದ್ದು ನಿಂತು ಹೇಳಿದನು, "ಸರ್ಕಾರವು ನಮ್ಮ ತಂದೆ – ತಾಯಿ ಸರ್. ಈ ದಿನ ನಿಮ್ಮನ್ನು ನೋಡುವ ಮಹಾ ಭಾಗ್ಯ ನಮಗೆ ದೊರಕಿದೆ ಸರ್. ತಂದೆ ತಾಯಿಯ ಪ್ರತಿನಿಧಿಯಾದ ನೀವು ನಮ್ಮ ಬೆಳೆಯ ಸ್ಥಿತಿಯನ್ನು ತಿಳಿಯುವುದಕ್ಕೆ ನಮ್ಮ ಹಳ್ಳಿಗಳಿಗೆ ಭೇಟಿ ನೀಡಬೇಕೆಂದು ಪ್ರಾರ್ಥಿಸುತ್ತೇನೆ. ನಮ್ಮ ಮನೆಗಳಲ್ಲಿ ಧಾನ್ಯವಿಲ್ಲ. ಪ್ಲೇಗಿನ ಪೀಡೆ ನಮ್ಮ ಮೇಲೆ ಎರಗಿದೆ....."

ಪ್ರಾಟನು ಅಹಂಕಾರದಿಂದ ನುಡಿದನು, "ಬೇರೆ ವಿಷಯಗಳ ಬಗೆಗೆ ಯಾವ ಪ್ರಶ್ನೆಗೂ ಉತ್ತರ ಕೊಡಲು ನಾನು ಬಯಸುವುದಿಲ್ಲ. ಹೇಳಿ, ನೀವು ಕಂದಾಯ ಪಾವತಿಸುತ್ತೀರೊ ಅಥವಾ ಇಲ್ಲವೊ?" ಆಗ ಮತ್ತೊಬ್ಬ ರೈತ ಎದ್ದು ನಿಂತು ಹೇಳಿದನು, "ಯಾವುದು ಸಹಿಸಲಾಗದ್ದು ಎಂದರೆ, ಒಬ್ಬ ಸಾಮಾನ್ಯ ತಲಾಟಿ ಹೇಳಿದ್ದನ್ನು ಸತ್ಯವೆಂದು ಒಪ್ಪುವುದು, ಆದರೆ ಒಬ್ಬ ಗೌರವಾನ್ವಿತ ರೈತ ಹೇಳಿದ್ದನ್ನು ಸುಳ್ಳೆಂದು ನಿರಾಕರಿಸುವುದು. ಹರಿಶ್ಚಂದ್ರ ಮಹಾರಾಜನು ಸತ್ಯಕ್ಕಾಗಿ ತನ್ನ ಇಡೀ ರಾಜ್ಯವನ್ನು ಪರಿತ್ಯಾಗ ಮಾಡಿದನೆಂದು ಹಿಂದೂ ಪುರಾಣಗಳಿಂದ ನಾವು ತಿಳಿದಿದ್ದೇವೆ. ಅದರಿಂದ ಸತ್ಯಕ್ಕಾಗಿ ಒಂದು ತುಂಡು ಜಾಗವನ್ನು ಬಿಟ್ಟುಕೊಡುವುದು ಹೆಚ್ಚಲ್ಲ. ಸಂಪೂರ್ಣ ಪರಾಮರ್ಶೆ ಮತ್ತು ತಿಳುವಳಿಕೆಯ ನಂತರ ನಾವು ಪ್ರತಿಜ್ಞೆಯನ್ನು ತೆಗೆದುಕೊಂಡಿದ್ದೇವೆ ಮತ್ತು ಸೂರ್ಯ ತನ್ನ ಪಥವನ್ನು ಬದಲಾಯಿಸಿದರೂ ನಾವು ನಮ್ಮ ಪ್ರತಿಜ್ಞೆಯಿಂದ ಹಿಂದೆ ಸರಿಯುವುದಿಲ್ಲ. ಆದಾಗ್ಯೂ ತಂದೆ ತಾಯಿಯಾದ ಸರ್ಕಾರ ನಮಗೆ ಸಾವನ್ನು ನೀಡಿದರೆ, ನಾವು ವಿಫಲರಾಗುವುದಿಲ್ಲ."

ಮತ್ತೊಬ್ಬ ರೈತ ಹೀಗೆಂದ "ನಾನು ಕಮಿಷನರರನ್ನು ಪ್ರಥಮ ಬಾರಿಗೆ ಈ ದಿನ ನೋಡಿದ್ದೇನೆ. ಅವರು ಬಹಳ ಒಳ್ಳೆಯ ಮನುಷ್ಯ. ನಾವು ಹಣವನ್ನು ಪಾವತಿಸಬೇಕು. ಆದರೆ ಸ್ವತಃ ಕಮಿಷನರ್‌ರವರೇ ಹೇಳಿರುವ ಹಾಗೆ ಕಂದಾಯದ ಶೇ.೮೦ ಭಾಗ ಪಾವತಿಯಾಗಿದೆ. ಉಳಿದ ಅಲ್ಪ ಬಾಕಿಯ ಮೇಲಣ ೯ ತಿಂಗಳ ಬಡ್ಡಿಯದೇ ಈಗಿರುವ ಪ್ರಶ್ನೆ. ವಿಷಯ ಹೀಗಿದ್ದರೆ ಮತ್ತು ಆಳುವವರ ಮತ್ತು ಆಳಿಸಿಕೊಳ್ಳುವವರ ನಡುವೆ ಐಕ್ಯತೆಯನ್ನು ತರಬಹುದಾದರೆ ಸರ್ಕಾರಕ್ಕೆ ಉಂಟಾಗುವ ಬಡ್ಡಿಯ ನಷ್ಟದ ಕಡೆಗೆ ನಾನು ಒಂದು ಸಾವಿರ ರೂಪಾಯಿಗಳನ್ನು ಸರ್ಕಾರಕ್ಕೆ ನೀಡುತ್ತೇನೆ."

ಕೆರಳಿದ ಪ್ರಾಟ್ ಹೇಳಿದ, "ಸರ್ಕಾರ ಹಣದ ಮುಗ್ಗಟ್ಟಿಗೆ ಸಿಕ್ಕಿಲ್ಲ. ನೀವು ಪಾವತಿಸಬೇಕಾದುದಕ್ಕಿಂತ ಹೆಚ್ಚಿಗೆ ಒಂದು ರೂಪಾಯಿಯನ್ನೂ ಕೊಡಬೇಕಾಗಿಲ್ಲ." ಅನಂತರ ಮತ್ತೊಬ್ಬ ರೈತ ಕೇಳಿದ, "ನಾಲ್ಕು ರೂಪಾಯಿ ಕಂದಾಯ ವಸೂಲಿಗೋಸ್ಕರ ನಾನ್ನೂರು ರೂಪಾಯಿ ಬೆಲೆಯ ಜಮೀನನ್ನು ವಶಪಡಿಸಿ ಕೊಳ್ಳುವುದು ನ್ಯಾಯವೇ?" ಪ್ರಾಟ್ ಉತ್ತರಿಸಿದ, "ಹೌದು, ಅದು ಸರ್ಕಾರದ ವಿವೇಚನೆಗೆ ಬಿಟ್ಟ ವಿಷಯ. ಅದು ರೂ ೪ರ ಪ್ರಶ್ನೆಯಲ್ಲ, ಆದರೆ ಅದು ೩೬ ಕೋಟಿ ಜನರ ಮೇಲೆ ಪ್ರಭಾವ ಬೀರುತ್ತದೆ. ಇಷ್ಟ ಬಂದ ಹಾಗೆ ಮಾಡಲು ನಿಮಗೆ ಅವಕಾಶ ಕೊಟ್ಟರೆ, ಇಡೀ ದೇಶ ಅದನ್ನೇ ಮಾಡುತ್ತದೆ."

ಪ್ರಾಟನು ರೈತರೊಡನೆಯ ತನ್ನ ಸಂಭಾಷಣೆಯನ್ನು ಈ ಮಾತುಗಳೊಡನೆ ಇದ್ದಕ್ಕಿದ್ದ ಹಾಗೆ ಮುಕ್ತಾಯ ಮಾಡಿದನು, "ನನ್ನ ಮಾತು ಮುಗಿಯಿತು. ಅಂತಿಮ ತೀರ್ಮಾನ ನಿಮ್ಮ ಕೈಯಲ್ಲಿದೆ. ಒಬ್ಬ ಸನ್ಯಾಸಿಗೆ ಆಸ್ತಿಯ ನಷ್ಟ ಲೆಕ್ಕಕ್ಕೆ ಇಲ್ಲದಿರ ಬಹುದು, ಆದರೆ ನೀವು ಸನ್ಯಾಸಿಗಳಲ್ಲ."[೧೬]

ಅದು ಪ್ರಾಟನು ಗಾಂಧೀಜಿಯ ಬಗೆಗೆ ಆಡಿದ ಕುಚೋದ್ಯದ ಮಾತು. ಗಾಂಧೀಜಿಯ ಸಹಾಯದಿಂದ ಏರ್ಪಡಿಸಿಕೊಂಡ ಸಭೆಯಲ್ಲಿ ಗಾಂಧೀಜಿಯ ಬಗೆಗೇ ಪ್ರಾಟನು ಕುಚೋದ್ಯದಿಂದ ಮಾತನಾಡಿದ್ದು ಅವನ ಹತಾಶೆಯನ್ನು ಸೂಚಿಸಿತು. ಅವನು ತನ್ನ ೨೮ ವರ್ಷಗಳ ಅನುಭವದಲ್ಲಿ ರೈತರಿಂದ ಇಂತಹ ಧೈರ್ಯದ ಮಾತುಗಳನ್ನು ಎಂದೂ ಕೇಳಿರಲಿಲ್ಲ. ಅವನು ಸಂಪೂರ್ಣವಾಗಿ ಆಶ್ಚರ್ಯ ಚಕಿತನಾಗಿ ಹೊರಟು ಹೋದನು.

ಹೋರಾಟ ಮುಂದುವರೆಯಿತು. ಸಾಮಾನ್ಯವಾಗಿ ನಾಚುವ ಮತ್ತು ಹೊರ ಬರಲು ಇಷ್ಟ ಪಡದ ಮಹಿಳೆಯರನ್ನೂ ಸಹ ಅದು ಸೆಳೆಯಿತು. ಹಳ್ಳಿಗಳಿಂದ ಮಹಿಳೆಯರು ಅಧಿಕ ಸಂಖ್ಯೆಯಲ್ಲಿ ಬಂದು ಗಂಡಸರೊಡನೆ ಹೆಗಲಿಗೆ ಹೆಗಲು

ಕೊಟ್ಟು ಹೋರಾಟಕ್ಕೆ ಇಳಿದರು. ಅವರಲ್ಲಿ ಕೆಲವರು, "ನಮ್ಮ ರಾಸುಗಳನ್ನು ಮತ್ತು ಆಭರಣಗಳನ್ನು ತೆಗೆದುಕೊಂಡು ಹೋಗಲಿ ಮತ್ತು ನಮ್ಮ ಜಮೀನುಗಳನ್ನು ಜಪ್ತಿ ಮಾಡಲಿ. ಆದರೆ ನಮ್ಮ ಗಂಡಸರು ತಮ್ಮ ಪ್ರತಿಜ್ಞೆಯನ್ನು ಮುರಿಯುವುದಿಲ್ಲ," ಎಂದರು. ಅದು ಗಂಡಸರಿಗೆ ಹೆಚ್ಚಿನ ಸ್ಫೂರ್ತಿಯನ್ನು ನೀಡಿತು.[೧೭]

ಅಷ್ಟು ಹೊತ್ತಿಗೆ ಕೈಡಾ ಚಳವಳಿ ಇಡೀ ದೇಶದ ಗಮನವನ್ನು ಸೆಳೆದಿತ್ತು. ಏಪ್ರಿಲ್ ೨೩ರಂದು ಬೊಂಬಾಯಿಯಲ್ಲಿ ವಿಠ್ಠಲ್‌ಭಾಯ್ ಪಟೇಲರ ಅಧ್ಯಕ್ಷತೆಯಲ್ಲಿ ಒಂದು ಸಾರ್ವಜನಿಕ ಸಭೆ ಏರ್ಪಾಟಾಯಿತು. ಆ ಸಭೆಯನ್ನು ಉದ್ದೇಶಿಸಿ ಭಾಷಣ ಮಾಡುತ್ತಾ ಗಾಂಧೀಜಿಯವರು ಪ್ರಾಟ್‌ನ ಆಧಾರ ರಹಿತ ಆಪಾದನೆಗಳ ಬಗೆಗೆ ಹೀಗೆ ಹೇಳಿದರು, "ಈ ಹೋರಾಟದ ಹಿಂದಿರುವವರು ಬ್ಯಾರಿಸ್ಟರು ಮತ್ತು ವಕೀಲರು ಅಲ್ಲ ಆದರೆ ಸ್ವತಃ ರೈತರೇ ಹೋರಾಟ ನಡೆಸುತ್ತಿದ್ದಾರೆ. ಗೋದ್ರಾ ಸಮ್ಮೇಳನದ ನಂತರ ಕೆಲವು ರೈತರು, ತಮ್ಮ ಪ್ರಯತ್ನದ ಮೂಲಕ ತಮ್ಮ ಹಿತವನ್ನು ರಕ್ಷಿಸಿಕೊಳ್ಳಬೇಕೆಂದು ಆಲೋಚಿಸಿದರು. ಅವರು ನನಗೆ ಪತ್ರ ಬರೆದರು. ತಾವು ಸರ್ಕಾರದಿಂದ ನ್ಯಾಯವನ್ನು ಕೇಳಲು ಬಯಸಿರುವುದಾಗಿ ತಿಳಿಸಿ, ನಾನು ಅವರಿಗೆ ಸಹಾಯ ಮಾಡಲು ಸಾಧ್ಯವೇ ಎಂದು ವಿಚಾರಿಸಿದರು. ಹೀಗೆ ಹೋರಾಟವು ಹೊರಗಿನ ಸಹಾಯದ ಫಲವಾಗಿ ಪ್ರಾಮುಖ್ಯತೆಯನ್ನು ಗಳಿಸಿದ್ದರೂ ಸಹ, ಹೊರಗಿನ ಚಳವಳಿಗಾರರಿಂದ ಆರಂಭವಾಗಲಿಲ್ಲ." ಆ ಸಭೆಯಲ್ಲಿ ಲೋಕಮಾನ್ಯ ಬಾಲಗಂಗಾಧರ ತಿಲಕರೂ ಸಹ ಭಾಗವಹಿಸಿ ಭಾಷಣ ಮಾಡಿದರು.

ಗಾಂಧೀಜಿಯವರು ವೈಸ್‌ರಾಯ್‌ರವರ ಒಂದು ತುರ್ತು ಕರೆಯ ಮೇರೆ, ಬೊಂಬಾಯಿಯಿಂದ ದೆಹಲಿಗೆ ತೆರಳಿದರು. ಅಲ್ಲಿಂದ ಅವರು ಬಿಹಾರಕ್ಕೆ ಹೋದರು. ಅವರ ಗೈರು ಹಾಜರಿಯಲ್ಲಿ ಪಟೇಲರು ಎರಡನೆಯ ಬಾರಿಗೆ ಹೋರಾಟದ ಮುಂದಾಳತ್ವವನ್ನು ವಹಿಸಿಕೊಂಡರು. ಅವರು ತಮ್ಮ ಸ್ಫೂರ್ತಿದಾಯಕ ಮಾತು ಮತ್ತು ಕರಪತ್ರಗಳ ಮೂಲಕ ಗಾಂಧೀಜಿ ಹಚ್ಚಿದ ಕಿಡಿಯನ್ನು ಮತ್ತಷ್ಟು ಹರಡಿದರು. ಅವರು ರೈತರಿಗೆ ಹೇಳಿದರು:

> "ಒಂದು ತೀವ್ರ ಧರ್ಮಯುದ್ಧವು ಜನರು ಮತ್ತು ಕುರುಡು ಅಧಿಕಾರಿಶಾಹಿಯ ನಡುವೆ ನಡೆಯುತ್ತಿದೆ. ಕೆಲವು ಪ್ರಮುಖ ವ್ಯಕ್ತಿಗಳ ಜಪ್ತಿಗೆ ನೋಟೀಸು ನೀಡಿದ್ದಾರೆ. ದಂಡವನ್ನು ವಿಧಿಸಿದ್ದಾರೆ ಮತ್ತು ಬೆಳೆದು ನಿಂತಿರುವ ಫಸಲನ್ನು ವಶಪಡಿಸಿಕೊಂಡಿದ್ದಾರೆ. ಆದರೂ ಜನರು ನಿರ್ಭಯವಾಗಿ ನಿಂತಿದ್ದಾರೆ. ಅಧಿಕಾರಿಗಳು ತಮ್ಮ ವಿಫಲತೆಗೆ ಅಸಹಾಯಕತೆಯನ್ನು ವ್ಯಕ್ತಪಡಿಸುತ್ತಿದ್ದಾರೆ.

ಅಂತಹ ಸಮಯದಲ್ಲಿ ಕಮಿಷನರನು ಪ್ರವೇಶಿಸಿ ನಡಿಯಾದ್‌ನಲ್ಲಿ ರೈತರನ್ನು ಕುರಿತು ಭಾಷಣ ಮಾಡಿದ್ದು, ಅವನು ರೈತರಿಗೆ ಗಂಭೀರ ವಾದ ಬೆದರಿಕೆಗಳನ್ನು ಒಡ್ಡಿದನು. ಕ್ರಮ ಕೈಗೊಳ್ಳಲು ತನಗಿರುವ ಅಧಿಕಾರದ ಬಗೆಗೆ ಜನರ ಮೇಲೆ ಪ್ರಭಾವ ಬೀರಲು ಗೌರ್ನರ್‌ನ ಪತ್ರವನ್ನೂ ತೋರಿಸಿದನು. ಆದರೆ ರೈತರು ಅವನ ಬೆದರಿಕೆಗಳಿಗೆ ಉತ್ತರಿಸುವುದರಲ್ಲಿ ಅಪರೂಪದ ಧೈರ್ಯವನ್ನು ಪ್ರದರ್ಶಿಸಿದರು. ಅವನ ೨೮ ವರ್ಷಗಳ ಅಧಿಕಾರದ ಅನುಭವದಲ್ಲಿ ಮೊದಲನೆಯ ಬಾರಿಗೆ ಅಂತಹ ನಿರ್ಭಯತೆಯನ್ನು ಕಂಡು ಅವನು ಆಶ್ಚರ್ಯ ಗೊಂಡನು ಮತ್ತು ಭಾರಿ ಹತಾಶೆಯಿಂದ ಸಭೆಯಿಂದ ಹೋದುದರಲ್ಲಿ ಏನೂ ಆಶ್ಚರ್ಯವಿಲ್ಲ.

"ರೈತರು ಇದೆಲ್ಲವನ್ನು ಸಂತೋಷದಿಂದಲೇ ಸ್ವೀಕರಿಸಿದರು. ಸರ್ಕಾರವು ಯಾವ ಹಣವನ್ನೂ ವಸೂಲಿ ಮಾಡಲು ಆಗಲಿಲ್ಲ. ಅದರಿಂದ ಅದು (ಜಮೀನು) ಜಪ್ತಿಯನ್ನು ನಿಲ್ಲಿಸಿತು ಮತ್ತು ಚರಾಸ್ತಿಗಳ ಹರಾಜನ್ನು ಮತ್ತೆ ಆರಂಭಿಸಿತು. ಅಧಿಕಾರಿಗಳು ರೈತರಿಗೆ ಆದಷ್ಟೂ ತೊಂದರೆ ಕೊಡುವುದಕ್ಕಾಗಿ, ಹರಾಜು ಹಾಕಲು ಬೇರೆ ಆಸ್ತಿಗಳಿದ್ದರೂ ಸಹ, ಹಾಲು ಕರೆಯುವ ಎಮ್ಮೆಗಳನ್ನು ವಶಪಡಿಸಿ ಕೊಂಡು ಬಿಸಿಲಲ್ಲಿ ನಿಲ್ಲಿಸಿದರು ಮತ್ತು ಎಮ್ಮೆಗಳನ್ನು ಅವುಗಳ ಕರುಗಳಿಂದ ಬೇರ್ಪಡಿಸಿದರು. ಅದರಿಂದ ಎಮ್ಮೆಗಳ ಬೆಲೆ ಅರ್ಧದಷ್ಟು ಕಡಿಮೆಯಾಯಿತು. ಆದಾಗ್ಯೂ ರೈತರು ತಾಳ್ಮೆಯಿಂದ ತಮ್ಮ ಪ್ರತಿಜ್ಞೆಗೇ ಅಂಟಿಕೊಂಡರು ಮತ್ತು ಬಂದ ಕಷ್ಟಗಳನ್ನೆಲ್ಲ ಸಹಿಸಿದರು."

ಪಟೇಲರ ಭಾಷಣ ಅಲ್ಲಿಗೆ ನಿಲ್ಲಲಿಲ್ಲ. ಅದು ಮುಂದುವರೆಯಿತು:

"ಹೋರಾಟವು ದೀರ್ಘಕಾಲ ಮುಂದುವರಿದಷ್ಟೂ ಸಾರ್ವಜನಿಕರು ಅನುಭವಿಸಬೇಕಾದ ಸಂಕಟಗಳು ಹೆಚ್ಚು ಹೆಚ್ಚು ಕಠಿಣವಾಗುತ್ತವೆ. ಆದರೆ ಕಷ್ಟ ಅನುಭವಿಸದೆ ಅವರು ಈ ವಿಶಿಷ್ಟ ಅನುಭವವನ್ನು ಪಡೆಯಲಾರರು. ಸರ್ಕಾರವು ತನ್ನ ಎಲ್ಲೆಯನ್ನು ಮೀರಿದರೆ, ಅದೇ ಕೋಪಿಸಿಕೊಂಡರೆ ಮತ್ತು ನಮಗೆ ಕಿರುಕಳ ಕೊಟ್ಟರೆ, ನಾವು ಅದರಂತೆಯೆ ನಡೆದುಕೊಳ್ಳಬಾರದು, ಎಂದೂ ಅವಿನಯವನ್ನು ತೋರಬಾರದು ಅಥವಾ ಕೋಪಗೊಳ್ಳ

ಬಾರದು..... ಯಾವಾಗಲೂ ಶಾಂತವಾಗಿರಬೇಕು. ಕಠಿಣದಲ್ಲಿ ಕಠಿಣವಾದ ಹೃದಯಗಳನ್ನೂ ಸಹ ಪ್ರೀತಿಯಿಂದ ಗೆಲ್ಲಬಹುದು. ಎದುರಾಳಿ ಕಠಿಣವಾದಷ್ಟೂ ಅವನ ಕಡೆಗೆ ನಮ್ಮ ಪ್ರೀತಿ ಹೆಚ್ಚು ಹರಿಯಬೇಕು, ಆಗ ಮಾತ್ರ ನಾವು ಗೆಲ್ಲಲು ಸಾಧ್ಯ. ಅದು ಸತ್ಯಾಗ್ರಹದ ಅರ್ಥ.[೧೮]

ಪಟೇಲರು ಗಾಂಧೀಜಿಯವರ ಸತ್ಯಾಗ್ರಹ ಮಾರ್ಗವನ್ನು ಒಪ್ಪಿದರೂ ಅದರ ಆಚರಣೆಯ ವಿಧಾನದಲ್ಲಿ ಗಾಂಧೀಜಿಯನ್ನು ಸಂಪೂರ್ಣವಾಗಿ ಒಪ್ಪುತ್ತಿರಲಿಲ್ಲ. ಅವರದು ಕುರುಡು ಪಾಲನೆಯಾಗಿರಲಿಲ್ಲ. ರೈತರು ತಾವಾಗೇ ತಮ್ಮ ದನಗಳನ್ನು ಅಧಿಕಾರಿಗಳಿಗೆ ಒಪ್ಪಿಸುವ ಮೂಲಕ ಕಷ್ಟವನ್ನು ಇಷ್ಟದಿಂದಲೇ ಸ್ವೀಕರಿಸಬೇಕು ಎಂದು ಗಾಂಧೀಜಿ ರೈತರಿಗೆ ಬೋಧಿಸುತ್ತಿದ್ದರು. ಆದರೆ ಪಟೇಲರು, ರೈತರು ಬೇಕೆಂದೇ ತಮ್ಮ ದನಗಳನ್ನು ಮನೆಯ ಸಮೀಪ ಇಡದೆ ಅವನ್ನು ಅಧಿಕಾರಿಗಳು ವಶಪಡಿಸಿಕೊಳ್ಳದಂತೆ ಮಾಡಿ ತಮ್ಮ ದನಗಳನ್ನು ಉಳಿಸಿಕೊಳ್ಳಬೇಕು ಎಂದು ಹೇಳುತ್ತಿದ್ದರು. ರೈತರು ಮಾಡಿದ್ದೂ ಅದನ್ನೇ.[೧೯]

ಚಳವಳಿ ಮುಂದುವರೆಯಿತು. ಮಾರ್ಚ್, ಏಪ್ರಿಲ್, ಮೇ ಕಳೆದು ಜೂನ್ ತಿಂಗಳು ಬಂದಿತು. ರೈತರು ದೃಢವಾಗಿ ಯಾವುದೇ ಕಷ್ಟ ಮತ್ತು ನಷ್ಟವನ್ನು ಎದುರಿಸಲು ಮತ್ತು ಅನುಭವಿಸಲು ಸಿದ್ಧವಾಗಿದ್ದರು. ಇಡೀ ೬೦೦ ಹಳ್ಳಿಗಳು ವಿಶಿಷ್ಟವಾದ ಒಗ್ಗಟ್ಟನ್ನು ಪ್ರದರ್ಶಿಸಿದ್ದುವು. ಹೊರಗಡೆಯಿಂದ ಬಂದ ಅನೇಕರು ಅದನ್ನು ಕಂಡು ವಿಸ್ಮಿತರಾದರು. ಬೊಂಬಾಯಿಯ ಪತ್ರಿಕೆಗಳವರು ಕೈಡಾಗೆ ಭೇಟಿ ಕೊಟ್ಟು ಪ್ರತ್ಯಕ್ಷ ದರ್ಶನದ ವಿವರಣೆಗಳನ್ನು ಪ್ರಕಟಿಸಿ ರೈತರ ಸ್ಥೈರ್ಯ ಮತ್ತು ತ್ಯಾಗವನ್ನು ಮುಕ್ತಕಂಠದಿಂದ ಹೊಗಳಿದರು.

ಗಾಂಧೀಜಿಯವರ ಚಳವಳಿ ಪಾರದರ್ಶಕವಾಗಿದ್ದು, ಅದರಲ್ಲಿ ದ್ವೇಷ, ಮೋಸ, ಹಿಂಸೆ ಯಾವುದೂ ಇರಲಿಲ್ಲ. ಅವರು ಮತ್ತು ಅವರ ಸಹಚರರು ಏಪ್ರಿಲ್ ತಿಂಗಳಲ್ಲಿನ ಬಿಸಿಲ ಬೇಗೆಯಲ್ಲಿ ೪೦೦ ಹಳ್ಳಿಗಳಲ್ಲಿ ಸಂಚರಿಸಿ ಸುಮಾರು ೨,೫೦೦ ಮಂದಿ ಪ್ರತಿಜ್ಞೆಗೆ ಸಹಿ ಹಾಕುವಂತೆ ಮಾಡಿದ್ದರು. ಗಾಂಧೀಜಿಯ ಧರ್ಮ ಮತ್ತು ಪ್ರಾಮಾಣಿಕತೆ ಅನೇಕ ಅಧಿಕಾರಿಗಳ ಮನವನ್ನೂ ತಟ್ಟಿತು.

ಜೂನ್ ೩ರಂದು ಗಾಂಧೀಜಿ ಮತ್ತು ಪಟೇಲ್ ನಡಿಯಾದ್‌ನಿಂದ ೩ ಮೈಲಿ ದೂರದಲ್ಲಿರುವ ಉತ್ತರ್‌ಸಂದ ಹಳ್ಳಿಗೆ ಒಂದು ರೈತರ ಸಭೆಯಲ್ಲಿ ಭಾಗವಹಿಸಲು ಹೋದರು. ಅವರು ರೈಲಿನಿಂದ ಇಳಿದಾಗ ಅವರನ್ನು ಭೇಟಿ ಮಾಡಲು ಮಾಮಲೆದಾರ ಬಯಸುತ್ತಾನೆ ಎಂಬ ಸಂದೇಶ ಅವರಿಗೆ ಬಂದಿತು.

ಗಾಂಧೀಜಿ ಮತ್ತು ಪಟೇಲರು ಮಾಮಲೆದಾರನನ್ನು ಭೇಟಿ ಮಾಡಿದಾಗ ಅವನು 'ಸರ್ಕಾರವು ಕಂದಾಯ ವಸೂಲಿಯನ್ನು ಮುಂದಿನ ವರ್ಷದವರೆಗೆ ಮುಂದೂಡಿದೆ' ಎಂದು ತಿಳಿಸಿದನು. ಅಂದರೆ ರೈತರ ಬೇಡಿಕೆಯನ್ನು ಸರ್ಕಾರ ಒಪ್ಪಿತು ಎಂದಾಯಿತು. ರೈತರಿಗೆ ಜಯ ದೊರಕಿತ್ತು.

ಅಂದಿನ ರೈತರ ಸಭೆಯಲ್ಲಿ ಗಾಂಧೀಜಿ ಈ ರೀತಿ ನುಡಿದರು:

"ಕೆಲವು ದಿವಸಗಳ ಹಿಂದೆ ನಾನು ಕಲೆಕ್ಟರನನ್ನು ಸಂಧಿಸಿದ್ದೆ. ನನ್ನ ಸಲಹೆಯಂತೆ ಕಲೆಕ್ಟರನು ಆದೇಶ ಹೊರಡಿಸಿದರೆ ಶೀಘ್ರವೇ ಹೋರಾಟವು ಮುಕ್ತಾಯವಾಗುವುದು – ಎಂದು ನಾನು ಅವರಿಗೆ ಹೇಳಿದ್ದೆ. ಈಗ ಅಂತಹ ಆದೇಶವನ್ನು ಮಾಮಲೆದಾರ ಹೊರಡಿಸಿದ್ದಾರೆ. ಬಡವರಿಂದ ಕಂದಾಯ ವಸೂಲಿಯನ್ನು ಮುಂದೂಡಿದರೆ, ಕಂದಾಯ ಪಾವತಿಸಲು ಶಕ್ತರಾದವರು ತಕ್ಷಣವೇ ಅದನ್ನು ಪಾವತಿಸಬೇಕು ಎನ್ನುವುದು ನಮ್ಮ ಮೊದಲನೆಯ ಶರತ್ತಾಗಿತ್ತು..... ನಾವು ಈ ಆದೇಶಕ್ಕಾಗಿ ಮಾಮಲೆದಾರನಿಗೆ ವಂದನೆಗಳನ್ನು ಸಲ್ಲಿಸಬೇಕು..... ಸರ್ಕಾರವು ತನ್ನ ನಿಲುವು ಸರಿ ಮತ್ತು ನಮ್ಮದು ತಪ್ಪು ಎಂದಾಗ ನಮಗೆ ಎಷ್ಟೊಂದು ಹಿಂಸೆಯಾಗಿತ್ತು. ಈಗ, ಕಂದಾಯವನ್ನು ಪಾವತಿಸುವುದು ಅಥವಾ ಬಿಡುವುದು ನಮಗೆ ಸೇರಿದ್ದು – ಎಂದು ಸರ್ಕಾರ ಹೇಳುತ್ತಿದೆ."

ಸರ್ಕಾರವು ಪರಿಸ್ಥಿತಿಯ ಮೇಲೆ ತನ್ನ ಹಿಡಿತವನ್ನು ಕಳೆದುಕೊಂಡಿತ್ತು. ಅದು ಈಗ ಅದರ ಅರಿವಿಗೆ ಬಂದಿತ್ತು. ಅದರಿಂದಲೇ ಈ ಹೊಸ ಆದೇಶ ಬಂದಿತ್ತು. ಗಾಂಧಿ ಮತ್ತು ಪಟೇಲ್ ಜೂನ್ ೬ರಂದು ಸತ್ಯಾಗ್ರಹವನ್ನು ಹಿಂತೆಗೆದು ಕೊಂಡರು. ಅಂದು ಅವರು ಒಂದು ಹೇಳಿಕೆಯನ್ನು ಹೊರಡಿಸಿ "ಇಂದಿನವರೆಗೆ ಕಂದಾಯವನ್ನು ಪಾವತಿಸದೆ ಇರುವುದು ಗೌರವದ ಸಂಗತಿಯಾಗಿತ್ತು. ಈಗ, ಕಂದಾಯವನ್ನು ಪಾವತಿಸುವುದು ಗೌರವದ ಸಂಗತಿಯಾಗಿದೆ. ಯಾರಿಗೆ ಪಾವತಿಸಲು ಶಕ್ತಿ ಇದೆಯೋ ಅವರು ಪಾವತಿಸಬೇಕು..... ಕೈಡಾದ ರೈತರು, ತಮ್ಮ ಧೈರ್ಯದ ಮೂಲಕ ಇಡೀ ಭಾರತದ ಗಮನವನ್ನು ತಮ್ಮ ಕಡೆಗೆ ಸೆಳೆದುಕೊಂಡಿದ್ದಾರೆ. ಕಳೆದ ಆರು ತಿಂಗಳಿಂದ ಅವರು ಸತ್ಯ, ನಿರ್ಭಯತೆ, ಐಕ್ಯತೆ, ದೃಢತೆ ಮತ್ತು ಸ್ವಾರ್ಥತ್ಯಾಗವನ್ನು ತೋರಿದ್ದಾರೆ. ..... ಕೈಡಾದ ಸಾರ್ವಜನಿಕರು ತಮಗೆ, ಸ್ವಾತಂತ್ರ್ಯದ ಹೋರಾಟಕ್ಕೆ ಮತ್ತು ದೇಶಕ್ಕೆ ಭಾರಿ ಸೇವೆಯನ್ನು ಸಲ್ಲಿಸಿದ್ದಾರೆ."[೨೦]

ಕೈಡಾ ಸತ್ಯಾಗ್ರಹದ ಯಶಸ್ಸು ಇಡೀ ಜಿಲ್ಲೆಯಲ್ಲಿ ಸಂತಸ ಮತ್ತು ಸಂಭ್ರಮದ ಅಲೆಗಳನ್ನು ಎಬ್ಬಿಸಿತು. ಹಳ್ಳಿಗಳು ಒಂದಾದ ಮೇಲೆ ಒಂದರಂತೆ ವಿಜಯೋತ್ಸವವನ್ನು ಏರ್ಪಡಿಸಿದುವು.

ಗಾಂಧೀಜಿಯನ್ನು ಸನ್ಮಾನಿಸಲು ನಡಿಯಾದ್‌ನಲ್ಲಿ ಸಭೆ ಏರ್ಪಾಟಾಯಿತು. ಆ ಸಭೆಯಲ್ಲಿ ಗಾಂಧೀಜಿಯವರು ತಮ್ಮ ಉಪ ದಂಡನಾಯಕನಾಗಿ (ಡೆಪ್ಯುಟಿ ಕಮಾಂಡರ್) ವಲ್ಲಭಭಾಯ್ ಪಟೇಲ್‌ರವರು ಸಲ್ಲಿಸಿದ ಅಮೋಘ ಸೇವೆಯನ್ನು ಮುಕ್ತ ಕಂಠದಿಂದ ಪ್ರಶಂಸೆ ಮಾಡಿದರು. ಅವರೆಂದರು, "ಅದರಲ್ಲೂ ನನ್ನ ಉಪ ದಂಡನಾಯಕನ ಆಯ್ಕೆ ಬಹಳ ಸಂತೋಷಕರವಾಗಿತ್ತು. .... ವಲ್ಲಭಭಾಯ್‌ರವರ ಸಹಾಯವಿಲ್ಲದೆ ಹೋಗಿದ್ದರೆ ನಾವು ಚಳವಳಿಯಲ್ಲಿ ಗೆಲ್ಲಲು ಆಗುತ್ತಿರಲಿಲ್ಲ. ಅವರಿಗೆ ಅದ್ಭುತವಾದ ವಕೀಲಿ ವೃತ್ತಿ ಇತ್ತು. ಅವರಿಗೆ ಪುರಸಭೆಯಲ್ಲಿ ಮಾಡಬೇಕಾದ ಕೆಲಸಗಳಿದ್ದುವು. ಆದರೆ ಅವರು ಅವೆಲ್ಲವನ್ನು ತ್ಯಾಗ ಮಾಡಿ ಚಳವಳಿಗೆ ಧುಮುಕಿದರು."[೨೧]

ವಲ್ಲಭಭಾಯ್ ಪಟೇಲರು ತಮ್ಮ ಭಾಷಣದಲ್ಲಿ ಇಂತೆಂದರು:

> ಭಾರತದಲ್ಲಿ ದೇವರುಗಳು ಮತ್ತು ಮಹಾತ್ಮರು ತಮಗೆ ನೀಡಲ್ಪಟ್ಟ ಅರ್ಪಣೆಗಳನ್ನು ತಾವೇ ಇಟ್ಟುಕೊಳ್ಳದೆ ತಮ್ಮ ಭಕ್ತರ ನಡುವೆ ಹಂಚುವುದು ಸಂಪ್ರದಾಯ. ಅದೇ ತರಹ ಮಹಾತ್ಮಾಜಿಯವರು ತಮಗೆ ಕೊಡಲ್ಪಟ್ಟಿದ್ದನ್ನೆಲ್ಲ, ನಾನು ಹೆಚ್ಚು ಮಾಡಿಲ್ಲದೇ ಇದ್ದರೂ, ನನಗೆ ಕೊಟ್ಟಿದ್ದಾರೆ. ..... ಕೈಡಾ ಜಿಲ್ಲೆಯ ಜನರು ಸ್ಥೈರ್ಯ ಮತ್ತು ಸಹನೆಯನ್ನು ತೋರದೆ ಹೋಗಿದ್ದರೆ ಹೋರಾಟದಲ್ಲಿ ನಾವು ಏನನ್ನೂ ಸಾಧಿಸಲು ಸಾಧ್ಯವಾಗುತ್ತಿರಲಿಲ್ಲ ಎಂದು ನನ್ನ ಮತ್ತು ನನ್ನ ಸಹ ಕೆಲಸಗಾರರ ಪರವಾಗಿ ಹೇಳಲು ಬಯಸುತ್ತೇನೆ. ಆದದ್ದರಿಂದ ನನ್ನ ಮೇಲೆ ಹೊರಿಸಿರುವ ಗೌರವಗಳನ್ನು ಅದಕ್ಕೆ ನಿಜವಾಗಿಯೂ ಅರ್ಹರಾದ ಕೈಡಾ ಜಿಲ್ಲೆಯ ಜನರಿಗೆ ವರ್ಗಾಯಿಸುತ್ತೇನೆ.

ಮುಂದುವರೆದು ಪಟೇಲ್‌ರವರು ಹೀಗೆ ಹೇಳಿದರು:

> ಭಾರತವು ನೂರಾರು ವರ್ಷಗಳಿಂದ ಒಂದು ತೀವ್ರವಾದ ಕಾಯಿಲೆ (ಗುಲಾಮಗಿರಿ)ಯಿಂದ ನರಳುತ್ತಿದೆ. ಅದನ್ನು ವಾಸಿ ಮಾಡಲು ಇದುವರೆವಿಗೆ ಯಾವ ವೈದ್ಯನಿಗೂ ಸಾಧ್ಯವಾಗಿಲ್ಲ. ಇಲ್ಲಿಯವರೆಗೆ ಪ್ರಯತ್ನ ಮಾಡಿದವರೆಲ್ಲ ಪರಿಣಾಮಕಾರಿಯಾಗಲು

ವಿಫಲವಾದ ಸಿಹಿ ಔಷಧಿಯನ್ನು ಮಾತ್ರ ಕೊಟ್ಟಿದ್ದಾರೆ. ....ಆದರೆ ಈ ವೈದ್ಯನ (ಗಾಂಧೀಜಿಯ) ಮನಸ್ಸು ಮತ್ತು ಹೃದಯ ಜನರ ಸೇವೆಯನ್ನು ಮಾಡುವ ತೀವ್ರ ಬಯಕೆಯಿಂದ ತುಂಬಿದೆ ಎನ್ನುವುದನ್ನು ನೀವು ಎಂದೂ ಮರೆಯಬೇಡಿ. ....ಕೈಡಾ ಜಿಲ್ಲೆಯನ್ನು ಭಾರತದ ಸ್ವಾತಂತ್ರ್ಯ ಸಮರದ ಮುಂಚೂಣಿಗೆ ತಂದ ದ್ದಕ್ಕಾಗಿ ಮಹಾತ್ಮಾಜಿಯವರನ್ನು ನಾನು ಅಭಿನಂದಿಸುತ್ತೇನೆ."[೨೨]

ಹೀಗೆ ಕೈಡಾ ಜಿಲ್ಲೆಯಲ್ಲಿ ಸತ್ಯಾಗ್ರಹ ಬಾವುಟ ಹಾರಿಸಲ್ಪಟ್ಟಿತು. ಅದು ಭಾರತ ಸ್ವಾತಂತ್ರ್ಯ ಸಮರದ ಹೊಸ ಯುಗವನ್ನು ಆರಂಭಿಸಿತು ಮತ್ತು ಇಬ್ಬರು ಮಹಾ ನಾಯಕರನ್ನು ಅಂದರೆ ಗಾಂಧೀಜಿ ಮತ್ತು ಪಟೇಲರನ್ನು ಒಟ್ಟಿಗೆ ಸೇರಿಸಿತು. ಅವರಿಬ್ಬರೂ ಕ್ರಮವಾಗಿ ಸಂತ ಮತ್ತು ಮಣ್ಣಿನ ಮಗನಾಗಿ ಹೊರಹೊಮ್ಮಿದರು.

ಕೈಡಾ ಚಳವಳಿಯ ಕಾಲದಲ್ಲಿ ವಲ್ಲಭಭಾಯ್‌ರವರು ಗಾಂಧೀಜಿಯವರಿಂದ ಬಹಳ ಪ್ರಭಾವಿತರಾದರು. ಗಾಂಧೀಜಿಯವರ ಧೈರ್ಯ, ಸಹನೆ, ಶಿಸ್ತು, ಆತ್ಮ ನಿಗ್ರಹ, ತ್ಯಾಗ, ಪ್ರೀತಿ, ಮೃದು ಆದರೆ ದೃಢ ಮಾತು, ಸಂಕಟ ಅನುಭವಿಸಲು ಸಿದ್ಧವಾದ ಮನೋಭಾವ, ಹಾಸ್ಯ ಸ್ವಭಾವ ಮತ್ತು ಸೌಜನ್ಯತೆ ಪಟೇಲರ ಮೇಲೆ ಭಾರಿ ಪ್ರಭಾವವನ್ನು ಬೀರಿದುವು. ಪಟೇಲರು ಗಾಂಧೀಜಿಯವರ ಪಕ್ಕಾ ಅನುಯಾಯಿಯಾದರು. ಹಾಗೆಂದಾಕ್ಷಣಕ್ಕೆ ಅವರು ಗಾಂಧೀಜಿಯ ಎಲ್ಲಾ ತತ್ವಗಳನ್ನು ಕುರುಡಾಗಿ ಅನುಸರಿಸಲು ಸಿದ್ಧರಾದರೆಂದು ಅರ್ಥವಲ್ಲ. ಆದರೆ ಗಾಂಧೀಜಿಯ ಸತ್ಯಾಗ್ರಹ ಅವರಿಗೆ ಬಹಳ ಒಪ್ಪಿಗೆಯಾಯಿತು ಮತ್ತು ಭಾರತ ಸ್ವಾತಂತ್ರ್ಯದ ಸಮಸ್ಯೆಗೆ ಅದು ಸೂಕ್ತ ಪರಿಹಾರ ಎನ್ನಿಸಿತು. (ಬ್ರಿಟಿಷ್ ಸರ್ಕಾರವನ್ನು ಧೈರ್ಯವಾಗಿ ಎದುರಿಸುವಂತೆ ರೈತರಿಗೆ ಅದುವರೆವಿಗೆ ಯಾವ ನಾಯಕನೂ ಹೇಳಿರಲಿಲ್ಲ. ಯಾವ ನಾಯಕನೂ ತನ್ನ ಅನುಯಾಯಿಗಳು ಶತ್ರುವಿಗೆ ಸೌಜನ್ಯತೆಯನ್ನು ತೋರಿಸ ಬೇಕೆಂದೂ, ಶಾಂತಿಯಿಂದಿರಬೇಕೆಂದೂ ಹೇಳಿರಲಿಲ್ಲ.) ಕೈಡಾದಲ್ಲಿ ಗಾಂಧೀಜಿಯವರು ಆ ಮಾರ್ಗವನ್ನು ಅನುಸರಿಸಿದ್ದರು. ಗಾಂಧೀಜಿಯವರ ಈ ವ್ಯಕ್ತಿತ್ವವು ಪಟೇಲರ ಜೀವನದ ದಿಕ್ಕನ್ನೇ ಬದಲಾಯಿಸಿತು.

ಕೈಡಾ ಚಳವಳಿ ನಡೆಯುತ್ತಿರುವಾಗಲೇ ಮೊದಲನೇ ವಿಶ್ವ ಸಮರವು ವಿಷಮ ಘಟ್ಟವನ್ನು ಮುಟ್ಟಿತು. ವೈಸ್‌ರಾಯ್‌ರವರು ಭಾರತೀಯ ನಾಯಕರನ್ನು ದೆಹಲಿಗೆ ಆಹ್ವಾನಿಸಿ ಸಮರ ಸಿದ್ಧತೆಯಲ್ಲಿ ಅವರ ಸಹಾಯವನ್ನು ಕೋರಿದರು. ಗಾಂಧೀಜಿಯವರು ಆ ಸಭೆಯಲ್ಲಿ ಭಾಗವಹಿಸಿದರು. ವೈಸ್‌ರಾಯ್‌ರವರು ಲೋಕಮಾನ್ಯ ಬಾಲಗಂಗಾಧರ ತಿಲಕರನ್ನು ಆ ಸಭೆಗೆ ಆಹ್ವಾನಿಸದೇ ಇದ್ದುದಕ್ಕೆ ಮತ್ತು ಆಲಿ

ಸಹೋದರರನ್ನು ಸೆರೆಮನೆಯಿಂದ ಬಿಡುಗಡೆ ಮಾಡದಿರುವುದಕ್ಕೆ ಸಭೆಯಲ್ಲಿ ಗಾಂಧೀಜಿಯವರು ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದರು. ಆದರೂ ಸಹ ಸಮರ ಸಿದ್ಧತೆಯಲ್ಲಿ ಸರ್ಕಾರಕ್ಕೆ ಸಹಾಯ ಮಾಡಲು ಒಪ್ಪಿದರು.

ಗಾಂಧೀಜಿಯವರು ಗುಜರಾತ್‌ಗೆ ಹಿಂತಿರುಗಿದ ನಂತರ ಸೈನ್ಯಕ್ಕೆ ಯುವಕರನ್ನು ಸೇರಿಸಲು ಮುಂದಾದರು ಮತ್ತು ಆ ಕಾರ್ಯದಲ್ಲಿ ಪಟೇಲರ ಸಹಾಯವನ್ನು ಕೋರಿದರು. ಪಟೇಲರು ಎರಡು ಕಾರಣಗಳಿಗಾಗಿ ಒಪ್ಪಿದರು. ಅವರಿಗೆ ಗಾಂಧೀಜಿಯ ಬಗ್ಗೆ ಇದ್ದ ವಿಧೇಯತೆಯು ಮೊದಲನೆಯ ಕಾರಣ. 'ಆದೇಶವನ್ನು ಪಾಲಿಸುವ ಪ್ರಶ್ನೆ ಬಂದಾಗ ನನ್ನಂತಹ ಸೈನಿಕ ಬೇರೊಬ್ಬನಿಲ್ಲ' ಎಂದು ಅವರು ಹೇಳಿದ್ದಾರೆ. ಸೈನಿಕರನ್ನು ಜಮಾಯಿಸಲು ಅವರ ಎರಡನೆಯ ಕಾರಣ, ಗುಜರಾತಿಗಳು ಶಸ್ತ್ರ ಪ್ರಯೋಗವನ್ನು ಕಲಿಯಲಿ, ಎನ್ನುವುದು.[೨೩]

ಗಾಂಧೀಜಿಯವರು ಪಟೇಲ್, ಮಹದೇವ್ ದೇಸಾಯಿ, ಇಂದುಲಾಲ್ ಯಾಜ್ಞಿಕ್, ಮಾವಲಂಕರ್, ಪಾಂಡ್ಯ ಮತ್ತು ರಾವ್‌ಜಿ ಭಾಯ್ ಮುಂತಾದವರ ಸಮೇತ ಹಳ್ಳಿಯಿಂದ ಹಳ್ಳಿಗೆ ಹೋಗಿ ಸೈನಿಕರನ್ನು ಜಮಾಯಿಸಲು ಪ್ರಯತ್ನಿಸಿದರು. ಆದರೆ, ಕೈಡಾದ ರೈತರು ಸೈನ್ಯಕ್ಕೆ ಸೇರಲು ಉತ್ಸಾಹವನ್ನು ತೋರಲಿಲ್ಲ. ಎಲ್ಲೋ ಒಂದೆರಡು ಹಳ್ಳಿಗಳಲ್ಲಿ ಮಾತ್ರ ಗಾಂಧೀಜಿಯವರ ಭಾಷಣವನ್ನು ಕೇಳಲು ಸ್ವಲ್ಪ ಜನ ಬಂದರು, ಅಷ್ಟೆ. ಗಾಂಧೀಜಿ ಮತ್ತು ಅವರ ತಂಡ ಆ ಉರಿ ಬಿಸಿಲಲ್ಲಿ ಸುತ್ತಿ, ರೈಲು ನಿಲ್ದಾಣಗಳ ಪ್ಲಾಟ್‌ಫಾರಂಗಳಲ್ಲಿ ಮಲಗಿ ಭಂಗ ಪಟ್ಟಿದ್ದಷ್ಟೇ ಆದ ಲಾಭ. ಸ್ವಲ್ಪ ಕಾಲದಲ್ಲೇ ವಿಶ್ವ ಸಮರ ಮುಕ್ತಾಯವಾಗಿ ಸೈನಿಕರ ಜಮಾವಣೆ ಅನವಶ್ಯಕವಾಯಿತು. ಉರಿ ಬಿಸಿಲಲ್ಲಿ ಅಷ್ಟೊಂದು ಸುತ್ತಾಡಿದ್ದರಿಂದ ಗಾಂಧೀಜಿಯ ಆರೋಗ್ಯ ತೀವ್ರವಾಗಿ ಕೆಟ್ಟಿತು. ಒಂದು ದಿನ ಕಮಿಷನರ್ ಪ್ರಾಟ್ ಜೊತೆ ಅವರು ಸಂಭಾಷಿಸುತ್ತಿದ್ದಾಗ ಕುಸಿದು ಹೋದರು. ಅಂಬಾಲಾಲ್ ಮತ್ತು ಅವರ ಪತ್ನಿ ಸರಳದೇವಿಯವರು ಅಹಮದಾಬಾದ್‌ನ ತಮ್ಮ ಮನೆಯಲ್ಲಿ ಗಾಂಧೀಜಿಯವರನ್ನು ಒಂದು ತಿಂಗಳ ಕಾಲ ಇಟ್ಟು ಕೊಂಡು ಉಪಚರಿಸಿದರು. ಅನಂತರ ಗಾಂಧೀಜಿಯವರು ತಮ್ಮ ಸತ್ಯಾಗ್ರಹ ಆಶ್ರಮದಲ್ಲಿ ಒಂದು ತಿಂಗಳ ಕಾಲ ವಿಶ್ರಾಂತಿ ಪಡೆದ ನಂತರವೇ ಅವರು ಪೂರ್ಣ ಗುಣಮುಖರಾದದ್ದು.

ಆ ವೇಳೆಗೆ ಪಟೇಲರು ಅಹಮದಾಬಾದ್‌ನ ತಮ್ಮ ಮನೆಗೆ ಹಿಂತಿರುಗಿದ್ದರು. ಅವರು ಹೆಚ್ಚು ಕಡಿಮೆ ಪ್ರತಿ ದಿನ ಆಶ್ರಮಕ್ಕೆ ನಡೆದುಕೊಂಡು ಹೋಗಿ ಗಾಂಧೀಜಿಯವರನ್ನು ಭೇಟಿ ಮಾಡುತ್ತಿದ್ದರು. ಅಷ್ಟರ ಮಟ್ಟಿಗೆ ಅವರಿಬ್ಬರ ನಡುವಣ ಸಂಬಂಧ ಬೆಸೆದುಹೋಗಿತ್ತು.

೪.೨ ರೌಲತ್ ಕಾಯಿದೆಗಳಿಗೆ ವಿರೋಧ

ಗಾಂಧೀಜಿಯವರು ತಮ್ಮ ಆಶ್ರಮದಲ್ಲಿ ತಮ್ಮ ಇತ್ತೀಚಿನ ಅನಾರೋಗ್ಯದಿಂದ ಚೇತರಿಸಿಕೊಳ್ಳುತ್ತಿರುವ ಸಮಯದಲ್ಲಿ, ೧೯೧೮ರ ನವೆಂಬರ್‌ನಲ್ಲಿ, ಮೊದಲನೆ ವಿಶ್ವ ಸಮರವು ಮುಕ್ತಾಯವಾಯಿತು. ಬ್ರಿಟನ್ ಮತ್ತು ಅದರ ಸಂಗಡಿಗರಿಗೆ ಸಮರದಲ್ಲಿ ಜಯ ಲಭಿಸಿತು. ಭಾರತೀಯರು ಈ ಸಮರದಲ್ಲಿ ಅಪಾರ ಸಹಾಯ ಮಾಡಿದ್ದರು. ಅವರು ಸೈನಿಕರು ಮತ್ತು ಸಾಮಗ್ರಿ ಎರಡನ್ನೂ ಒದಗಿಸಿದ್ದರು. ಸ್ವತಃ ಗಾಂಧೀಜಿಯವರೇ ಸೈನಿಕರ ನೇಮಕಾತಿಗೆ ಶ್ರಮಿಸಿದ್ದರು. ಅದರಿಂದ, ಯುದ್ಧದ ನಂತರ ಭಾರತಕ್ಕೆ ಸ್ವರಾಜ್ಯ ನೀಡುವುದರ ಕಡೆಗೆ ಬ್ರಿಟಿಷ್ ಸರ್ಕಾರವು ಕ್ರಮಗಳನ್ನು ಚುರುಕುಗೊಳಿಸುವುದೆಂದು ಭಾರತೀಯರು ಸ್ವಾಭಾವಿಕವಾಗಿಯೇ ನಿರೀಕ್ಷಿಸಿದ್ದರು. ಆದರೆ ಬ್ರಿಟಿಷರು ಹಾಗೆ ಮಾಡಲಿಲ್ಲ.

ಭಾರತದಲ್ಲಿ ಏರುತ್ತಿದ್ದ ರಾಷ್ಟ್ರೀಯತೆಯ ಲಕ್ಷಣ ಮತ್ತು ಅದರಿಂದ ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಎದುರಾಗಬಹುದಾದ ಅಪಾಯಗಳನ್ನು ತಡೆಗಟ್ಟಲು ತೆಗೆದು ಕೊಳ್ಳಬೇಕಾದ ಕ್ರಮಗಳನ್ನು ಸೂಚಿಸಲು ಸರ್ಕಾರವು ಇಂಗ್ಲೆಂಡಿನ ಒಬ್ಬ ನ್ಯಾಯಾಧೀಶ ಎಸ್.ಎ.ಟಿ. ರೌಲತ್ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿತು. ಈ ರೌಲತ್ ಸಮಿತಿಯು ಯುದ್ಧ ಕಾಲದಲ್ಲಿ ಜಾರಿಗೆ ತಂದಿದ್ದ 'ಭಾರತ ರಕ್ಷಣಾ ಕಾಯಿದೆ' (ಡಿಫೆನ್ಸ್ ಆಫ್ ಇಂಡಿಯಾ ಆಕ್ಟ್)ಯ ಕಠೋರ ಮತ್ತು ದಮನಕಾರಿ ನಿಯಮಗಳನ್ನು ಕಾನೂನುಗಳಲ್ಲಿ ಶಾಶ್ವತವಾಗಿ ಉಳಿಸಿಕೊಳ್ಳಬೇಕೆಂದು ಸಲಹೆ ಮಾಡಿತು. ಈ ಸಲಹೆ ಇಡೀ ದೇಶವನ್ನು ದಿಗ್ಭ್ರಮೆಗೊಳಿಸಿತು. ಯುದ್ಧಾನಂತರ ಜನರಿಗೆ ಹೆಚ್ಚು ಸ್ವಾತಂತ್ರ್ಯ ದೊರಕುವುದೆಂದು ಭಾರತೀಯರು ನಿರೀಕ್ಷಿಸಿದ್ದರೆ ರೌಲತ್ ಸಲಹೆಯು ಇದ್ದ ಅಲ್ಪ ಸ್ವಲ್ಪ ಸ್ವಾತಂತ್ರ್ಯವನ್ನೂ ಕಸಿದುಕೊಂಡಿತ್ತು. ತಮ್ಮ ಆಶ್ರಮದಲ್ಲಿ ಚೇತರಿಸಿಕೊಳ್ಳುತ್ತಿದ್ದ ಗಾಂಧೀಜಿಯವರು ಈ ಸಲಹೆಗಳು ಕಾನೂನು ಆಗದಂತೆ ತಡೆಗಟ್ಟಬೇಕೆಂದು ಯೋಚಿಸಿದರು. ಕೋಪಗೊಂಡ ಮತ್ತು ನಿಶ್ಯಕ್ತರಾಗಿದ್ದ ಗಾಂಧೀಜಿಯವರು ಪಟೇಲರಿಗೆ, "ಏನನ್ನಾದರೂ ಮಾಡಲೇಬೇಕು. ನೀನು ಸಹಾಯವನ್ನು ಮಾಡದಿದ್ದರೆ ನಾನು ಏನೂ ಮಾಡಲಾರೆ", ಎಂದು ಹೇಳಿದರು. ಪಟೇಲರು "ನಿಮ್ಮ ಮನಸ್ಸಿನಲ್ಲಿ ಏನಿದೆ?" ಎಂದರು. "ಸತ್ಯಾಗ್ರಹ" ಎಂದರು ಗಾಂಧೀಜಿ.[೨೪] ಅವರು ತಮ್ಮ ಆಶ್ರಮದಲ್ಲಿ ತಮ್ಮ ಸಹಚರರ ಒಂದು ಸಭೆಯನ್ನು ನಡೆಸಿದರು. ಆ ಸಭೆಯಲ್ಲಿ ವಲ್ಲಭಭಾಯ್ ಪಟೇಲ್, ಕವಿಯಿತ್ರಿ ಸರೋಜಿನಿ ನಾಯ್ಡು, ಶಂಕರಲಾಲ್ ಬ್ಯಾಂಕರ್, ಉಮರ್ ಶೋಭಾನಿ, ಬೊಂಬಾಯಿಯ ಕೈಗಾರಿಕೋದ್ಯಮಿ ಇಂದುಲಾಲ್ ಯಾಜ್ಞಿಕ್, 'ಬಾಂಬೆ ಕ್ರಾನಿಕಲ್' ಪತ್ರಿಕೆಯ ಸಂಪಾದಕ ಬಿ.ಜಿ. ಹಾರ್ನಿಮನ್ ಸೇರಿ ಸುಮಾರು ೨೦ ಮಂದಿ

ಭಾಗವಹಿಸಿದ್ದರು. ಆ ಸಭೆಯಲ್ಲಿ ಒಂದು 'ಸತ್ಯಾಗ್ರಹ ಸಭಾ'ವನ್ನು ರಚಿಸಬೇಕೆಂದು ಮತ್ತು ಗಾಂಧೀಜಿ ಅದರ ಅಧ್ಯಕ್ಷರಾಗಿರಬೇಕೆಂದು ತೀರ್ಮಾನಿಸಲಾಯಿತು. ಗಾಂಧೀಜಿ ರಚಿಸಿದ್ದ ಒಂದು ಪ್ರತಿಜ್ಞೆಗೆ ಎಲ್ಲರೂ ಸಹಿ ಹಾಕಿದರು. ಆ ರೌಲತ್ ಸಲಹೆಗಳು ಕಾನೂನಾದರೆ ಅದನ್ನು ಸರ್ಕಾರವು ವಾಪಸ್ ಪಡೆಯುವವರೆಗೆ ಅದನ್ನೂ ಮತ್ತು ಮುಂದೆ ರಚಿಸಲ್ಪಡುವ ಒಂದು ಸಮಿತಿಯು ಸೂಚಿಸುವ ಇತರ ಕಾನೂನುಗಳನ್ನೂ ಪಾಲಿಸಲು ವಿನಯದಿಂದ ನಿರಾಕರಿಸುವರೆಂದೂ, ತಾವು ಸತ್ಯಕ್ಕೆ ಬದ್ಧರಾಗಿದ್ದು ಪ್ರಾಣ, ವ್ಯಕ್ತಿ ಮತ್ತು ಆಸ್ತಿಯ ನಾಶದಿಂದ ದೂರವಿರುವರೆಂದು ಹೇಳುತ್ತಿತ್ತು ಆ ಪ್ರತಿಜ್ಞೆ.[೨೫]

ಸರ್ಕಾರವು ರೌಲತ್ ಸಲಹೆಗಳನ್ನು ಅಳವಡಿಸಿ ಎರಡು ಮಸೂದೆಗಳನ್ನು ೧೯೧೯ರ ಫೆಬ್ರುವರಿ ೬ ಮತ್ತು ೧೦ರಂದು ಇಂಪೀರಿಯಲ್ ಲೆಜಿಸ್ಲೆಟಿವ್ ಕೌನ್ಸಿಲ್‌ನಲ್ಲಿ ಮಂಡಿಸಿತು. ಗಾಂಧೀಜಿಯವರು ದೆಹಲಿಗೆ ಹೋಗಿ ವೈಸ್‌ರಾಯ್ ರವರನ್ನು ಭೇಟಿ ಮಾಡಿ ಆ ಮಸೂದೆಗಳನ್ನು ಅಂಗೀಕರಿಸದಂತೆ ಒತ್ತಾಯಿಸಿದರು. ಸೌಮ್ಯವಾದಿಗಳೂ ಸೇರಿ ಅನೇಕ ನಾಯಕರು ಆ ಮಸೂದೆಗಳನ್ನು ಕಾನೂನು ಮಾಡಬಾರದೆಂದು ಸರ್ಕಾರವನ್ನು ಆಗ್ರಹಿಸಿದರು. ಆದರೆ ಸರ್ಕಾರವು ಅವರ ಮಾತಿಗೆ ಬೆಲೆ ಕೊಡಲಿಲ್ಲ. ನಾಮಕರಣಗೊಂಡ ಮತ್ತು ಅಧಿಕಾರಿ ಸದಸ್ಯರುಗಳ ಸಹಕಾರದಿಂದ ಆ ಮಸೂದೆಗಳನ್ನು ಇಂಪೀರಿಯಲ್ ಲೆಜಿಸ್ಲೆಟಿವ್ ಕೌನ್ಸಿಲ್ ಮಾರ್ಚ್ ೧೮ರಂದು ಅಂಗೀಕರಿಸಿತು. ನಾಲ್ಕು ದಿನಗಳ ನಂತರ ವೈಸ್‌ರಾಯ್ ಅದಕ್ಕೆ ಅಂಕಿತವನ್ನು ಹಾಕಿದರು.

ಈ ಸುದ್ದಿ ಬಂದಾಗ ಗಾಂಧೀಜಿಯವರು ಮದ್ರಾಸ್‌ನಲ್ಲಿ ಪ್ರಸಿದ್ಧ ವಕೀಲರಾಗಿದ್ದ ಸಿ. ರಾಜಗೋಪಾಲಾಚಾರಿಯವರ ಮನೆಯಲ್ಲಿ ತಂಗಿದ್ದರು. (ಮುಂದೆ ರಾಜಾಗೋಪಾಲಾಚಾರಿಯವರು ರಾಜಾಜಿ ಎಂದು ಪ್ರಸಿದ್ಧರಾದರು) ಅದು ಅವರಿಬ್ಬರ ಪ್ರಥಮ ಭೇಟಿ. ತಮ್ಮ ಸಂಭಾಷಣೆಯಲ್ಲಿ ಗಾಂಧೀಜಿಯವರು ರಾಜಗೋಪಾಲಾಚಾರಿಯವರಿಗೆ ಹೇಳಿದರು, "ನೀವು ವಲ್ಲಭಭಾಯ್ ಪಟೇಲರನ್ನು ನೋಡಿದ್ದೀರ? ಅವರಲ್ಲಿ ನನಗೊಬ್ಬ ಅತ್ಯಂತ ನಂಬಿಕಸ್ಥ, ನಿಷ್ಠಾವಂತ, ಧೈರ್ಯಶಾಲಿ ಸಿಕ್ಕಿದ್ದಾನೆ."[೨೬]

ರೌಲತ್ ಮಸೂದೆಗಳು ಕಾನೂನಾಗದಂತೆ ತಡೆಗಟ್ಟಲು ಕೈಗೊಳ್ಳಬೇಕಾದ ಕ್ರಮಗಳನ್ನು ಚರ್ಚಿಸಲು ಕರೆದಿದ್ದ ಒಂದು ಸಭೆಯಲ್ಲಿ ಭಾಗವಹಿಸುವುದಕ್ಕಾಗಿ ಗಾಂಧೀಜಿಯವರು ಮದ್ರಾಸ್ ನಗರಕ್ಕೆ ಬಂದಿದ್ದರು. ಈ ಮಸೂದೆಗಳನ್ನು ವಿರೋಧಿಸುವ ಮಾರ್ಗವನ್ನು ಗಾಂಧೀಜಿಯವರು ತೋರಿಸುವರೆಂದು ಜನತೆ

ನಿರೀಕ್ಷಿಸುತ್ತಿತ್ತು. ಗಾಂಧೀಜಿ ಪೂರ್ಣ ಗುಣಮುಖರಾಗಿಲ್ಲದಿದ್ದರೂ ಸಹ ಮದ್ರಾಸ್‌ಗೆ ಬಂದಿದ್ದರು. ಅವರು, ತಾವು ಜನರಿಗೆ ತೋರಬೇಕಾದ ಕಾರ್ಯಕ್ರಮದ ಬಗ್ಗೆ ಇನ್ನೂ ಯಾವ ತೀರ್ಮಾನಕ್ಕೂ ಬಂದಿರಲಿಲ್ಲ. ಅಷ್ಟರಲ್ಲೇ ಅದು ಕಾನೂನು ಆಗಿಬಿಟ್ಟಿತ್ತು. ಈಗ ಅವರು ಆ ರೌಲತ್ ಕಾಯಿದೆಯ ವಿರುದ್ಧ ಕಾರ್ಯಕ್ರಮ ರೂಪಿಸಬೇಕಾಗಿತ್ತು. ಅಂದು ರಾತ್ರಿ ಅವರು ಅದರ ಬಗೆಗೆ ಯೋಚಿಸುತ್ತಲೇ ನಿದ್ರೆ ಹೋದರು. ಬೆಳಗಿನ ಜಾವ ಅವರಿಗೆ ಎಚ್ಚರವಾದಾಗ ಇದ್ದಕ್ಕಿದ್ದ ಹಾಗೆ ಒಂದು ಮಾರ್ಗ ಹೊಳೆಯಿತು. ಅವರು ರೌಲತ್ ಕಾಯಿದೆಯನ್ನು ಎದುರಿಸುವುದಕ್ಕಾಗಿ ಜನರು ಒಂದು ದಿನ ತಮ್ಮ ಕೆಲಸವನ್ನು ನಿಲ್ಲಿಸಿ ಪ್ರಾರ್ಥನೆ ಮತ್ತು ಉಪವಾಸದ ದಿನವನ್ನಾಗಿ ಆಚರಿಸಬೇಕು ಮತ್ತು ಮುಂದೆ ನಡೆಯಲಿರುವ ಹೋರಾಟಕ್ಕಾಗಿ ತಮ್ಮನ್ನು ಪರಿಶುದ್ಧಗೊಳಿಸಿಕೊಳ್ಳಬೇಕು – ಎಂದು ಕರೆಕೊಟ್ಟರು. ಅವರು ಆ ಕಾರ್ಯಕ್ಕಾಗಿ ೧೯೧೯ರ ಮಾರ್ಚ್ ೩೦ರ ದಿನವನ್ನು ಮೊದಲು ಗೊತ್ತುಪಡಿಸಿದರು. ಅನಂತರ ಅದು ಹೆಚ್ಚು ಜನರನ್ನು ತಲುಪುವುದಕ್ಕಾಗಿ ಆ ದಿನವನ್ನು ಏಪ್ರಿಲ್ ೬ಕ್ಕೆ ಮುಂದೂಡಿದರು.[೨೭] ಆದರೆ ಈ ಮುಂದೂಡುವಿಕೆಯ ವಿಷಯ ದೆಹಲಿಗೆ ತಲುಪದೆ ಇದ್ದುದರಿಂದ ಅಲ್ಲಿಯ ಜನರು ಮಾರ್ಚ್ ೩೦ರಂದೇ ಉಪವಾಸ ಮತ್ತು ಹರತಾಳವನ್ನು ಆಚರಿಸಿದರು. ಉಳಿದ ಕಡೆಯವರು ಏಪ್ರಿಲ್ ೬ರಂದು ಆಚರಿಸಿದರು.

ದೆಹಲಿಯಲ್ಲಿ ಮಾರ್ಚ್ ೩೦ರಂದು ನಡೆದ ಹರತಾಳವು ಸಂಪೂರ್ಣವಾಗಿ ಯಶಸ್ವಿಯಾಯಿತು. ಅಂದು ಈ ಕಪ್ಪು ಕಾಯಿದೆಗಳ ವಿರುದ್ಧದ ಭಾರಿ ಮೆರವಣಿಗೆ ದೆಹಲಿಯ ಮುಖ್ಯ ರಸ್ತೆಗಳಲ್ಲಿ ಹಾದು ಹೋಯಿತು. ಆ ಮೆರವಣಿಗೆಯಲ್ಲಿ ಹಿಂದುಗಳು ಮತ್ತು ಮುಸ್ಲಿಮರು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಆರ್ಯ ಸಮಾಜದ ಸ್ವಾಮಿ ಶ್ರದ್ಧಾನಂದರವರು ಮೆರವಣಿಗೆಯ ನಾಯಕತ್ವವನ್ನು ವಹಿಸಿದ್ದರು. ಅವರು ಜುಮ್ಮ ಮಸೀದಿಯ ಆವರಣದಲ್ಲಿ ರೌಲತ್ ಕಾಯಿದೆಗಳನ್ನು ಖಂಡಿಸಿ ಭಾಷಣ ಮಾಡಿದರು. ಒಬ್ಬ ಹಿಂದು ನಾಯಕ ಜುಮ್ಮಾ ಮಸೀದಿಯಲ್ಲಿ ಭಾಷಣ ಮಾಡಿದ್ದು ಅದೇ ಪ್ರಥಮ. ಮೆರವಣಿಗೆಯು ಮಸೀದಿಯ ಕಡೆಗೆ ಬರುವಾಗ ಮೆರವಣಿಗೆಯನ್ನು ನಿಲ್ಲಿಸುವಂತೆ ಪೊಲೀಸರು ಆಜ್ಞಾಪಿಸಿದರು. ಆದರೆ ಅವರ ಆಜ್ಞೆಯನ್ನು ಧಿಕ್ಕರಿಸಿ ಮೆರವಣಿಗೆಯು ಮುಂದುವರೆಯಿತು. ಪೊಲೀಸರು ಮೆರವಣಿಗೆಕಾರರ ಮೇಲೆ ಗುಂಡು ಹಾರಿಸಿದರು. ಪೊಲೀಸರ ಗುಂಡಿಗೆ ಅನೇಕರು ಬಲಿಯಾದರು. ಪೊಲೀಸರ ಈ ಅಪ್ರಚೋದಿತ ಹಿಂಸೆ ಎಲ್ಲೆಡೆ ಜನರನ್ನು ಕೆರಳಿಸಿತು.[೨೮]

ಏಪ್ರಿಲ್ ೬ರಂದು ಅಹಮದಾಬಾದ್‌ನಲ್ಲಿ ಹಿಂದುಗಳು ಮತ್ತು ಮುಸ್ಲಿಮರು ಅಧಿಕ ಸಂಖ್ಯೆಯಲ್ಲಿ ಉಪವಾಸ ಆಚರಿಸಿದರು. ಸಂಜೆಗೆ ವಲ್ಲಭಭಾಯ್ ಪಟೇಲರ ಮುಂದಾಳತ್ವದಲ್ಲಿ ಒಂದು ಭಾರಿ ಮೆರವಣಿಗೆಯು ರೈಲ್ವೆ ನಿಲ್ದಾಣದಿಂದ ಸಬರಮತಿ ನದಿಯ ದಡದವರೆಗೆ ಚಲಿಸಿತು. ನದಿಯ ದಡದಲ್ಲಿ ಎಲ್ಲಾ ಮತ ಧರ್ಮದವರು ಭಾಗವಹಿಸಿದ್ದ ಒಂದು ಬೃಹತ್ ಸಭೆ ನಡೆಯಿತು. ಆ ಸಮಯದಲ್ಲಿ ಪಟೇಲರು, ಸರ್ಕಾರವು ಬಹಿಷ್ಕರಿಸಿದ್ದ ಗಾಂಧೀಜಿಯ ಎರಡು ಕೃತಿಗಳಾದ 'ಹಿಂದ್ ಸ್ವರಾಜ್' ಮತ್ತು 'ಸರ್ವೋದಯ' ಕೃತಿಗಳನ್ನು ಮಾರಾಟ ಮಾಡಿದರು. ಆದರೂ ಸಹ ಪೊಲೀಸರು ಪಟೇಲರ ಮೇಲೆ ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ. ಪಟೇಲರನ್ನು ಮುಟ್ಟುವುದಕ್ಕೆ ಪೊಲೀಸರಿಗೆ ಅಷ್ಟೊಂದು ಭಯವಿತ್ತು! ಪಟೇಲರು 'ಸತ್ಯಾಗ್ರಹ ಪತ್ರಿಕೆ' ಎಂಬ ದೈನಂದಿನ ಸುದ್ದಿ ಪತ್ರಿಕೆಯನ್ನು ತಮ್ಮ ಮನೆಯಲ್ಲೇ ಕಾನೂನು ಬಾಹಿರವಾಗಿ ಅಚ್ಚು ಮಾಡಿ (ಸೈಕ್ಲೊಸ್ಟೈಲ್) ಹಂಚಲು ಆರಂಭಿಸಿದರು ಮತ್ತು ಆ ರೀತಿ ಮುದ್ರಣ ಕಾನೂನನ್ನೂ ಸಹ ಮುರಿದರು. ಆಗಲೂ ಸಹ ಪೊಲೀಸರು ಅವರ ಮೇಲೆ ಕ್ರಮ ಜರುಗಿಸಲಿಲ್ಲ.[೨೯]

ಮಾರ್ಚ್ ೩೦ರಂದು ದೆಹಲಿಯಲ್ಲಿ ಪೊಲೀಸರ ಗುಂಡಿಗೆ ಅನೇಕರು ಬಲಿಯಾದದ್ದರಿಂದ ಸ್ವಾಮಿ ಶ್ರದ್ಧಾನಂದರು ಗಾಂಧೀಜಿಯನ್ನು ಅಲ್ಲಿಗೆ ಬರುವಂತೆ ಆಹ್ವಾನಿಸಿದರು. ಅದೇ ಸಮಯದಲ್ಲಿ ಪಂಜಾಬ್ ಪ್ರಾಂತ್ಯದಲ್ಲಿ ಅಶಾಂತ ಪರಿಸ್ಥಿತಿ ಇದ್ದುದರಿಂದ ಅಲ್ಲಿಗೆ ಬಂದು ಶಾಂತಿ ನೆಲೆಸುವಂತೆ ಮಾಡಬೇಕೆಂದು ಡಾ॥ ಸತ್ಯಪಾಲ್ (ಒಬ್ಬ ಹಿಂದು) ಮತ್ತು ಡಾ॥ ಕಿಚ್ಲು (ಒಬ್ಬ ಮುಸ್ಲಿಂ) ಗಾಂಧೀಜಿಯನ್ನು ಆಹ್ವಾನಿಸಿದರು. ಗಾಂಧೀಜಿ ಬೊಂಬಾಯಿಯಿಂದ ದೆಹಲಿ ಮತ್ತು ಪಂಜಾಬ್‌ಗೆ ಪ್ರಯಾಣ ಮಾಡಿದರು. ಆದರೆ ಅವರು ಪಂಜಾಬನ್ನು ತಲುಪಲು ಪೊಲೀಸರು ಬಿಡಲಿಲ್ಲ. ಪಂಜಾಬ್‌ನ ಲೆಫ್ಟಿನೆಂಟ್ ಗೌರ್ನರ್ ಮೈಖೇಲ್ ಓ ಡ್ವೈರ್‌ನ ಆದೇಶದ ಮೇರೆ ಪೊಲೀಸರು ಏಪ್ರಿಲ್ ೮ರಂದು ಪಂಜಾಬಿನ ಗಡಿಯ ಪಟ್ ಪಟ್ ಎಂಬಲ್ಲಿ ಗಾಂಧೀಜಿಯನ್ನು ರೈಲಿನಿಂದ ಬಲಾತ್ಕಾರವಾಗಿ ಇಳಿಸಿ ಬೊಂಬಾಯಿಗೆ ವಾಪಸ್ಸು ಕಳುಹಿಸಿದರು. ಈ ಪ್ರಯಾಣದಲ್ಲಿ ಪೊಲೀಸರು ಗಾಂಧೀಜಿಯನ್ನು ಸ್ವಲ್ಪ ದೂರ 'ಗೂಡ್ಸ್ ಟ್ರೈನ್'ನಲ್ಲಿ ಇಟ್ಟಿದ್ದರು. ಡಾ॥ ಸತ್ಯಪಾಲ್ ಮತ್ತು ಡಾ॥ ಕಿಚ್ಲುರವರನ್ನೂ ಸಹ ಪೊಲೀಸರು ದಸ್ತಗಿರಿ ಮಾಡಿ ಅಮೃತಸರದಿಂದ ಹೊರಗೆ ಕಳುಹಿಸಿದರು.

ಗಾಂಧೀಜಿಯವರ ದಸ್ತಗಿರಿಯ ಸುದ್ದಿ ಅನೇಕ ಕಡೆ ಗಲಭೆಯ ಕಿಡಿಯನ್ನು ಹಚ್ಚಿತು. ಗುಜರಾತಿನ ಅಹಮದಾಬಾದ್ ಮತ್ತು ವಿರಾಮ್ ಗಾಮ್‌ನಲ್ಲಿ ಪರಿಸ್ಥಿತಿ ಬಹಳ ವಿಕೋಪಕ್ಕೆ ಹೋಯಿತು. ಅಹಮದಾಬಾದ್‌ನಲ್ಲಿ ಏಪ್ರಿಲ್ ೧೦ರಂದು

ಉದ್ರಿಕ್ತರ ಗುಂಪು ಪೊಲೀಸ್ ಠಾಣೆ, ತಂತಿ ಕಛೇರಿ ಮತ್ತು ಕಲೆಕ್ಟರನ ಕಛೇರಿಗೆ ಬೆಂಕಿ ಹಚ್ಚಿತು. ವಿರಾಮ್ ಗಾಮ್‌ನಲ್ಲಿ ಒಬ್ಬ ಮಾಮಲೆದಾರನು ಜೀವ ಸಹಿತ ಸುಡಲ್ಪಟ್ಟನು. ಬೊಂಬಾಯಿಯಿಂದ ಅಹಮದಾಬಾದ್‌ಗೆ ಸೈನಿಕರನ್ನು ತರುತ್ತಿದ್ದ ಒಂದು ರೈಲನ್ನು ಉರುಳಿಸಲು ನಡಿಯಾದ್‌ನಲ್ಲಿ ಪಟಿದಾರರ ಒಂದು ಗುಂಪು ಕಂಬಿಯನ್ನು ಕಿತ್ತು ಎಸೆಯಿತು. ಅದೃಷ್ಟವಶಾತ್ ರೈಲು ಅಲ್ಲಿಗೆ ಬಂದು ಹಳಿಯ ಮೇಲೆಯೇ ನಿಂತಿತು. ಅದರಿಂದ ಪ್ರಾಣಾಪಾಯವಾಗಲಿಲ್ಲ. ಉದ್ರಿಕ್ತರ ಮೇಲೆ ಪೊಲೀಸರು ಅಥವಾ ಸೈನಿಕರು ಹಾರಿಸಿದ ಗುಂಡಿನಿಂದ ಅಹಮದಾಬಾದ್‌ನಲ್ಲಿ ಸರ್ಕಾರದ ವರದಿ ಪ್ರಕಾರವೇ ೨೪ ಮಂದಿ ಸತ್ತರು ಮತ್ತು ನೂರಕ್ಕೂ ಅಧಿಕ ಮಂದಿ ಗಾಯಗೊಂಡರು. ವಿರಾಮ್ ಗಾಮ್‌ನಲ್ಲಿ ಆರು ಮಂದಿ ಸತ್ತು ೧೮ ಮಂದಿ ಗಾಯಗೊಂಡರು.[೩೦]

ಉದ್ರಿಕ್ತರ ಈ ಹಿಂಸಾಚಾರದಿಂದ ವಲ್ಲಭಭಾಯ್‌ರವರ ಮನಸ್ಸಿಗೆ ಭಾರಿ ನೋವಾಯಿತು. ಅವರು ತಮ್ಮ ಸಂಗಡಿಗರೊಡನೆ ಅಹಮದಾಬಾದ್‌ನ ಒಂದು ಬಡಾವಣೆಯಿಂದ ಮತ್ತೊಂದು ಬಡಾವಣೆಗೆ ಸತತವಾಗಿ ಚಲಿಸಿ ಶಾಂತಿಯನ್ನು ನೆಲೆಸಲು ಪ್ರಯತ್ನಿಸಿದರು. ಅವರು ತಮ್ಮ ಆರೋಗ್ಯ ಅಥವಾ ಸುರಕ್ಷತೆಯನ್ನು ಗಮನಿಸದೆ ಅವಿಶ್ರಾಂತವಾಗಿ ಶ್ರಮಿಸಿದರು. ಜನರು ಶಾಂತಿಯಿಂದಿರಬೇಕೆಂದೂ, ತಮ್ಮ ತಮ್ಮ ಉದ್ಯೋಗಗಳಿಗೆ ಹಿಂತಿರುಗಬೇಕೆಂದೂ ಮನವಿ ಮಾಡಿದರು. ಶಾಂತಿ ಸ್ಥಾಪನೆಗೆ ಅವರ ಪ್ರಯತ್ನವು ಅಹಮದಾಬಾದ್‌ನ ಪೊಲೀಸ್ ಸೂಪರಿನ್‌ಟೆನ್‌ಡೆಂಟ್ 'ಹೀಲೆ'ಯ ಗಮನವನ್ನು ಸೆಳೆಯಿತು. ಅವನು, "ವಲ್ಲಭಭಾಯ್ ಪಟೇಲ್ ಇಲ್ಲದೆ ಶಾಂತಿ ಮತ್ತು ಸುವ್ಯವಸ್ಥೆಯನ್ನು ನಿರ್ವಹಿಸುವುದು ಅಸಾಧ್ಯ," ಎಂದು ಉದ್ಗರಿಸಿದನು. ಆದಾಗ್ಯೂ ಪುರಸಭೆಯಲ್ಲಿ ವಲ್ಲಭಭಾಯ್ ಪಟೇಲರಿಗೆ ವಿರೋಧಿಯಾಗಿದ್ದ ಒಬ್ಬ ಸದಸ್ಯನು 'ವಲ್ಲಭಭಾಯ್ ತಂತಿ ಕಛೇರಿಗೆ ಬೆಂಕಿ ಹಚ್ಚುವುದನ್ನು ನಾನು ನೋಡಿದೆ' ಎಂದು ಅಧಿಕಾರಿಗಳ ಮುಂದೆ ಆಪಾದಿಸಿದನು. ಆ ಆಪಾದನೆಯ ತನಿಖೆಗೆ ಒಬ್ಬ ವಿಶೇಷ ಗುಪ್ತಚರ ಅಧಿಕಾರಿಯು ಪೂನಾದಿಂದ ಕಳುಹಿಸಲ್ಪಟ್ಟನು. 'ವಲ್ಲಭಭಾಯ್‌ರವರು ತಂತಿ ಕಛೇರಿಗೆ ಬೆಂಕಿ ಹಚ್ಚಿದರು ಅನ್ನುವ ಸಮಯದಲ್ಲಿ ಅವರು ನನ್ನೊಡನೆ ಶಾಂತಿ ಸ್ಥಾಪಿಸುವ ವಿಧಾನದ ಬಗೆಗೆ ಚರ್ಚಿಸುತ್ತಿದ್ದರು' ಎಂದು ಸ್ವತಃ ಕಲೆಕ್ಟರ್ ಚಾಟ್ ಫ್ಲೀಲ್ಡ್‌ರವರು ಆ ತನಿಖಾಧಿಕಾರಿಗೆ ತಿಳಿಸಿದರು.[೩೧]

ಪೊಲೀಸರು ಪಂಜಾಬ್‌ನ ಗಡಿಯಲ್ಲಿ ದಸ್ತಗಿರಿ ಮಾಡಿ ಹಿಂದಕ್ಕೆ ಕಳುಹಿಸಲ್ಪಟ್ಟ ಗಾಂಧೀಜಿಯವರು ಬೊಂಬಾಯಿಯನ್ನು ಏಪ್ರಿಲ್ ೧೦ರಂದು ತಲುಪಿದರು. ಅಂದು ಅಲ್ಲಿ ಅವರನ್ನು ಪೊಲೀಸರು ಬಿಡುಗಡೆ ಮಾಡಿದರು. ಅಲ್ಲಿ ಅವರಿಗೆ ಅಹಮದಾಬಾದ್‌ನ ಗಲಭೆಯ ವಿಷಯ ತಿಳಿಯಿತು. ತಕ್ಷಣ ಅವರು

ಅಹಮದಾಬಾದ್‌ಗೆ ಹೊರಟು ಏಪ್ರಿಲ್ ೧೩ರಂದು ತಲುಪಿ ಕಮಿಷನರ್ ಫ್ರೆಡರಿಕ್ ಪ್ರಾಟನನ್ನು ಭೇಟಿ ಮಾಡಿದರು. ಅವರು ಕಮಿಷನರನ ಅನುಮತಿಯನ್ನು ಪಡೆದು ಮಾರನೆಯ ದಿನ ತಮ್ಮ ಆಶ್ರಮದಲ್ಲಿ ಒಂದು ಸಾರ್ವಜನಿಕ ಸಭೆಯನ್ನು ಕರೆದರು. ಆ ಸಭೆಯಲ್ಲಿ ಸುಮಾರು ೨೦೦೦ ಮಂದಿ ಭಾಗವಹಿಸಿದರು. ಗಾಂಧೀಜಿಯವರು ಬಹಳ ನಿಶ್ಯಕ್ತರಾಗಿದ್ದುದರಿಂದ ಅವರ ಭಾಷಣವನ್ನು ವಲ್ಲಭಭಾಯ್ ಓದಿದರು. ಅದು ಹೀಗಿತ್ತು:

> ಕಳೆದ ಕೆಲವು ದಿನಗಳ ಘಟನೆಗಳಿಂದ ನನಗೆ ನಾಚಿಕೆಯಾಗಿದೆ. ಆ ಘಟನೆಗಳಿಗೆ ಜವಾಬ್ದಾರರಾದವರು ನನಗೆ ಅವಮಾನ ಮಾಡಿದ್ದಾರೆ. ನಾವು ಸತ್ಯಾಗ್ರಹದ ಹೆಸರಿನಲ್ಲಿ ಕಟ್ಟಡಗಳನ್ನು ಸುಟ್ಟಿದ್ದೇವೆ, ಆಯುಧಗಳನ್ನು ಬಲಾತ್ಕಾರವಾಗಿ ವಶಪಡಿಸಿಕೊಂಡಿದ್ದೇವೆ, ಒತ್ತಾಯದಿಂದ ಹಣ ವಸೂಲಿ ಮಾಡಿದ್ದೇವೆ, ರೈಲುಗಳನ್ನು ನಿಲ್ಲಿಸಿದ್ದೇವೆ, ಟೆಲಿಗ್ರಾಫ್ ತಂತಿಗಳನ್ನು ಕತ್ತರಿಸಿದ್ದೇವೆ, ಅಮಾಯಕರನ್ನು ಕೊಂದಿದ್ದೇವೆ ಮತ್ತು ಅಂಗಡಿಗಳು ಹಾಗೂ ಮನೆಗಳನ್ನು ಲೂಟಿ ಮಾಡಿದ್ದೇವೆ.
>
> ಅನುಸೂಯ ಬೆಹನ್ ದಸ್ತಗಿರಿ ಆಗಿದ್ದಾರೆಂಬ ಅತ್ಯಂತ ಕ್ರೂರ ವದಂತಿಯನ್ನು ಹಬ್ಬಿಸಿ ಅವರಿಗೆ ನೀವು ಕಳಂಕವನ್ನು ತಂದಿದ್ದೀರಿ. ಅವರ ದಸ್ತಗಿರಿ ನೆಪದಲ್ಲಿ ಘೋರ ಕೃತ್ಯಗಳು ಎಸಗಲ್ಪಟ್ಟಿವೆ.
>
> ನಾವು ಪಶ್ಚಾತ್ತಾಪ ಪಡಬೇಕು ಮತ್ತು ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು. ನಿಮಗೆ ಸಾಧ್ಯವಿದ್ದರೆ, ಈ ಪಾಪಗಳಿಗೆ ಸಣ್ಣ ಪ್ರಾಯಶ್ಚಿತ್ತವಾಗಿ ೨೪ ಘಂಟೆಗಳ ಕಾಲ ಉಪವಾಸ ಮಾಡಿ ಎಂದು ನಾನು ನಿಮಗೆ ಸಲಹೆ ನೀಡುತ್ತೇನೆ. ಯಾರು ಏನು ಬೇಕಾದರೂ ಹೇಳಬಹುದು, ಆದರೆ ಸತ್ಯಾಗ್ರಹ ಚಳವಳಿ ಇಲ್ಲದಿದ್ದರೆ ಖಂಡಿತವಾಗಿ ಈ ಹಿಂಸಾಚಾರ ನಡೆಯುತ್ತಿರಲಿಲ್ಲ. ನಿಮ್ಮದಕ್ಕಿಂತ ನನ್ನ ಜವಾಬ್ದಾರಿ ಮಿಲಿಯನ್ ಬಾರಿ ದೊಡ್ಡದು..... ಆದದ್ದರಿಂದ ನಾನು ೭೨ ಘಂಟೆಗಳ ಕಾಲ ಉಪವಾಸ ಮಾಡುತ್ತೇನೆ. ಆಂಗ್ಲರ ಬಗೆಗೆ ದ್ವೇಷ ಮತ್ತು ಅವರ ಕೊಲೆಯಿಂದ ಮಾತ್ರ ನಮ್ಮ ಸಂಕಟದ ಪರಿಹಾರ ಅನ್ನುವುದಾದರೆ ನನಗೆ ಸ್ವರಾಜ್ಯವೂ ಬೇಡ ಮತ್ತು ಸಂಕಟದ ಪರಿಹಾರವೂ ಬೇಡ.[೩೨]

ನಾಲ್ಕು ದಿನಗಳ ನಂತರ ಗಾಂಧೀಜಿಯವರು ಸತ್ಯಾಗ್ರಹವನ್ನು ನಿಲ್ಲಿಸಲು ಕರೆ ಕೊಟ್ಟರು ಮತ್ತು ಬೊಂಬಾಯಿಗೆ ಹಿಂತಿರುಗಿದರು. ಅಲ್ಲಿ ಅವರನ್ನು ಪೊಲೀಸ್ ಕಮೀಷನರನು, "ಅಹಮದಾಬಾದ್‌ನ ಗಲಭೆಯಲ್ಲಿ ವಲ್ಲಭಭಾಯ್ ಪಾತ್ರ ಏನಿಲ್ಲವೆ?" ಎಂದು ಕೇಳಿದನು. ಗಾಂಧೀಜಿಯವರು, "ಯಾವ ತರಹದ್ದೂ ಇಲ್ಲ ಏನೂ ಇಲ್ಲ. ಶಾಂತಿ ಸ್ಥಾಪನೆಗೆ ಅವರು ಪಟ್ಟ ಶ್ರಮದ ಕಲ್ಪನೆ ನಿಮಗಿಲ್ಲ," ಎಂದು ಉತ್ತರಿಸಿದರು.

ಪೊಲೀಸರು ಗಲಭೆ ಮತ್ತು ವಿಧ್ವಂಸಕ ಕೃತ್ಯಗಳ ಆಪಾದನೆಯ ಮೇಲೆ ಅನೇಕರನ್ನು ದಸ್ತಗಿರಿ ಮಾಡಿದ್ದರು. ಅವರ ವಿಚಾರಣೆಗಾಗಿ ಒಂದು ವಿಶೇಷ ನ್ಯಾಯಾಲಯವು ರಚಿತವಾಗಿತ್ತು. ವಲ್ಲಭಭಾಯ್ ಪಟೇಲ್ ಹೆಚ್ಚು ಕಡಿಮೆ ವಕೀಲಿ ವೃತ್ತಿಯನ್ನು ನಿಲ್ಲಿಸಿಬಿಟ್ಟಿದ್ದರು. ಆದರೂ ಸಹ ಅವರು ಆ ಆಪಾದಿತರ ಪರವಾಗಿ ನ್ಯಾಯಾಲಯಕ್ಕೆ ಹಾಜರಾದರು. ಅವರ ವಾದಗಳ ಜಾಣ್ಮೆಯ ಫಲವಾಗಿ ಎಲ್ಲಾ ಆಪಾದಿತರು ಬಿಡುಗಡೆಯಾದರು. ಆ ದಾವೆಗಳ ಪೈಕಿ ಒಂದು ದಾವೆ ತಮಾಷೆಯಾಗಿತ್ತು. ನಡಿಯಾದ್‌ನ ಒಬ್ಬ ಪಟಿದಾರನ ಮೇಲೆ ರೈಲು ಕಂಬಿಯನ್ನು ಕಿತ್ತು ಹಾಕಿದ ಆಪಾದನೆ ಇತ್ತು. ಅದಕ್ಕೆ ಪೊಲೀಸರು ನೀಡಿದ್ದ ಸಾಕ್ಷಿ, ಆ ಪಟಿದಾರನ ಮನೆಯಲ್ಲಿ ಅವರಿಗೆ ಸಿಕ್ಕಿದ್ದ ಉಪಕರಣಗಳು ಇದ್ದ ಒಂದು ಚೀಲ. ಆ ಪಟಿದಾರನು ಕಿತ್ತಿದ್ದಾನೆ ಎಂದು ಆಪಾದಿಸಲ್ಪಟ್ಟ ಕಂಬಿಯ ಸ್ಥಳಕ್ಕೆ ನ್ಯಾಯಾಧೀಶರೇ ಆ ಉಪಕರಣಗಳ ಸಮೇತ ಹೋಗಿ ಸ್ಥಳ ಪರೀಕ್ಷೆ ಮಾಡಬೇಕೆಂದು ಸರ್ದಾರರು ಒತ್ತಾಯಿಸಿದರು. ನ್ಯಾಯಾಧೀಶರು ಆ ಸ್ಥಳಕ್ಕೆ ಹೋದಾಗ, ಆ ಉಪಕರಣಗಳಿಂದ ರೈಲು ಕಂಬಿಯನ್ನು ಕೀಳಲು ಸಾಧ್ಯವಿಲ್ಲ ಎಂಬುದನ್ನು ಪ್ರದರ್ಶನದ ಮೂಲಕ ಪಟೇಲರು ತೋರಿಸಿದರು. ಆ ಅಪರಾಧಿ ಬಿಡುಗಡೆಯಾದನು. ಅವನು ಆ ಉಪಕರಣಗಳನ್ನು ತನ್ನ ಪಂಪ್ ಸೆಟ್ ರಿಪೇರಿಗಾಗಿ ಇಟ್ಟುಕೊಂಡಿದ್ದನು.[೩೩] ನಡಿಯಾದ್ ಸಮೀಪದ ನಾರಸಂದ್ರದ ೪೮ ಮಂದಿ ಪ್ರಮುಖರ ಮೇಲೆ ಟೆಲಿಗ್ರಾಫ್ ತಂತಿಗಳನ್ನು ಕತ್ತರಿಸಿದ ಆಪಾದನೆಯನ್ನು ಪೊಲೀಸರು ಹೊರೆಸಿದ್ದರು. ಅವರನ್ನೂ ಸಹ ವಲ್ಲಭಭಾಯ್ ಬಿಡುಗಡೆಗೊಳಿಸಿದರು.

ಸರ್ಕಾರವು ಅಹಮದಾಬಾದ್ ಜನರ ಮೇಲೆ ಒಂಬತ್ತು ಲಕ್ಷ ರೂಪಾಯಿಗಳ ದಂಡವನ್ನು ವಿಧಿಸಿ, ದಂಡ ಪಾವತಿಯಿಂದ ವಿನಾಯಿತಿ ನೀಡುವ ಅಧಿಕಾರವನ್ನು ಕಲೆಕ್ಟರನಿಗೆ ನೀಡಿತ್ತು. ಆ ವೇಳೆಗೆ ಕಲೆಕ್ಟರ್ ಚಾಟ್ ಫೀಲ್ಡ್‌ಗೆ ವರ್ಗವಾಗಿ ಹೊಸಬ ಬಂದಿದ್ದನು. ಪಟೇಲ್‌ರವರು ಶಾಂತಿ ಸ್ಥಾಪನೆಗೆ ಸತತ ಪ್ರಯತ್ನ ಮಾಡಿದ್ದರೂ ದಂಡ ಪಾವತಿಯಿಂದ ಅವರಿಗೆ ವಿನಾಯಿತಿ ದೊರಕಲಿಲ್ಲ. ಆದರೆ ದಂಡ ತೆರಲು

ಪಟೇಲ್ ಸಿದ್ಧರಿರಲಿಲ್ಲ. ಆ ಅನ್ಯಾಯದ ದಂಡವನ್ನು ತೆರಲು ಅವರು ನಿರಾಕರಿಸಿದರು. ಪೊಲೀಸರು ಅವರ ಮನೆಯ ಪೀಠೋಪಕರಣಗಳನ್ನು ಹರಾಜು ಹಾಕಿ ಹಣ ಪಡೆದುಕೊಂಡರು.

ಗಲಭೆಯ ಸಮಯದಲ್ಲಿ ವಲ್ಲಭಭಾಯ್‌ರವರು ಶಾಂತಿ ಸ್ಥಾಪನೆಗೆ ಏನೇ ಎಷ್ಟೇ ಸೇವೆ ಸಲ್ಲಿಸಿದ್ದರೂ ಸಹ, ಅಧಿಕಾರಿಗಳ ದೃಷ್ಟಿಯಲ್ಲಿ ಅವರೊಬ್ಬ ರಾಷ್ಟ್ರೀಯವಾದಿಯಾಗಿದ್ದರು ಮತ್ತು ಆ ಕಾರಣಕ್ಕಾಗಿ ಅವರೊಬ್ಬ ಅಪರಾಧಿಯಾಗಿದ್ದರು. ವಲ್ಲಭಭಾಯ್ ಮತ್ತು ಇನ್ನೂ ಕೆಲವು ವಕೀಲರು ಸತ್ಯಾಗ್ರಹ ಪ್ರತಿಜ್ಞೆ ಮಾಡಿದ್ದರಿಂದ ಅವರು ವಕೀಲಿ ವೃತ್ತಿ ನಡೆಸದಂತೆ ತಡೆಯಾಜ್ಞೆ ನೀಡ ಬೇಕೆಂದು ಸರ್ಕಾರವು ಉಚ್ಚ ನ್ಯಾಯಾಲಯಕ್ಕೆ ಮನವಿ ಸಲ್ಲಿಸಿತು. ವಲ್ಲಭಭಾಯ್ ಮತ್ತು ಇತರ ವಕೀಲರ ಪರವಾಗಿ ಸರ್ ಚಿಮನ್‌ಲಾಲ್ ಸೆಟಲ್‌ವಾಡ್ ವಾದ ಮಾಡಿದರು. ಸೆಟಲ್‌ವಾಡ್‌ರವರ ವಾದ ಎಷ್ಟು ಸಮರ್ಪಕವಾಗಿತ್ತೆಂದರೆ ನ್ಯಾಯಾಧೀಶರು ನುಣುಚಿಕೊಳ್ಳುವ ಮಾರ್ಗವನ್ನು ಹಿಡಿದು ತೀರ್ಪು ನೀಡಿ ಶಿಕ್ಷೆ ವಿಧಿಸುವುದನ್ನೇ ಮುಂದೂಡಿದರು!

ಈ ನಡುವೆ ಏಪ್ರಿಲ್ ೧೩ರಂದು ದೂರದ ಅಮೃತಸರದಲ್ಲಿ ಒಂದು ಭಾರಿ ಮಾರಣಹೋಮವನ್ನು ಕಟುಕ ಸರ್ಕಾರ ನಡೆಸಿತು. ಅಂದು ಅಮೃತಸರದ ಜಲಿಯನ್‌ವಾಲಾಭಾಗ್‌ನಲ್ಲಿ ಸಭೆ ಸೇರಿದ್ದ ಸುಮಾರು ೧೦,೦೦೦ ಮಂದಿ ಶಾಂತಿಯುತ ಜನರ ಮೇಲೆ ಜನರಲ್ ರೆಜಿನಾಲ್ಡ್ ಡೈರ್‌ನು ಗುಂಡಿನ ಮಳೆಯನ್ನು ಸುರಿಸಿ ಸುಮಾರು ೩೭೯ ಮಂದಿಯನ್ನು ಕೊಂದನು ಮತ್ತು ೧೦೦ ಮಂದಿಯನ್ನು ಗಾಯಗೊಳಿಸಿದನು. ಇದು ಸರ್ಕಾರ ನೀಡಿದ ಸಂಖ್ಯೆ. ನಿಜವಾಗಿ ಸಾವು ನೋವಿಗೆ ತುತ್ತಾದವರ ಸಂಖ್ಯೆ ಅದಕ್ಕಿಂತಲೂ ಬಹಳ ಅಧಿಕ. ಈ ಕಗ್ಗೊಲೆಯ ನಂತರ ಪಂಜಾಬಿನ ಲೆಫ್ಟಿನೆಂಟ್ ಗೌರ್ನರನು ಪ್ರಾಂತ್ಯದ ಮೇಲೆ 'ಮಾರ್ಷಿಯಲ್ ಲಾ' ಹೇರಿ ಜನರನ್ನು ಭಯಂಕರವಾಗಿ ಹಿಂಸಿಸಿದನು. ಅವನು ಜನರು ರಸ್ತೆಯಲ್ಲಿ ತೆವಳುವಂತೆ ಮಾಡಿದನು. ಸಾರ್ವಜನಿಕರಿಗೆ ಚಾವಟಿಯಿಂದ ಹೊಡೆಸಿದನು ಮತ್ತು ಸಣ್ಣ ತಪ್ಪಿಗೂ ಗುಂಡಿಟ್ಟು ಕೊಲ್ಲಿಸಿದನು. ವೈಸ್‌ರಾಯ್‌ನು ಈ ಅಧಿಕಾರಿಗಳನ್ನು ಶಿಕ್ಷಿಸುವುದಕ್ಕೆ ಬದಲಾಗಿ, ಸುಗ್ರೀವಾಜ್ಞೆ ಹೊರಡಿಸಿ ಅವರಿಗೆ ಶಿಕ್ಷೆ ಆಗದಂತೆ ಮಾಡಿದನು. ಅವನು ಕೊಲೆಗಡುಕರನ್ನು ಧೀರರನ್ನಾಗಿ ಮಾಡಿದ್ದನು!

ಅಷ್ಟು ಹೊತ್ತಿಗೆ ಬ್ರಿಟಿಷ್ ಸರ್ಕಾರ ಮುಸ್ಲಿಮರಿಗೆ ಒಂದು ಅನ್ಯಾಯ ಮಾಡಿತು. ಅದು (ಬ್ರಿಟಿಷ್ ಸರ್ಕಾರ) ಟರ್ಕಿಯ ಸುಲ್ತಾನನನ್ನು ಪದಚ್ಯುತನನ್ನಾಗಿ ಮಾಡಿ ಮುಸ್ಲಿಮರಿಗೆ ತಾನು ನೀಡಿದ್ದ ವಾಗ್ದಾನವನ್ನು ಮುರಿಯಿತು. ಅದರ ಜೊತೆಗೆ

ರೌಲತ್ ಕಾಯಿದೆಯನ್ನು ತಂದು ದೇಶದ ಜನರಿಗೆ ಇದ್ದ ಅಲ್ಪ ಸ್ವಲ್ಪ ಸ್ವಾತಂತ್ರ್ಯವನ್ನೂ ಕಸಿದುಕೊಂಡಿತು. ಪಟೇಲರು ಇದೆಲ್ಲದರ ಬಗೆಗೆ ತೀವ್ರವಾಗಿ ಆಲೋಚಿಸಿದರು ಮತ್ತು ಭಾರತವು ಬಂಧಮುಕ್ತ ದೇಶವಾಗುವುದಕ್ಕೆ ಹಾತೊರೆದರು. ಅವರೆಂದರು:

> ಮುಂದಿನ ಪೀಳಿಗೆಯವರಿಗೆ, ಅವರ ಟ್ರಸ್ಟಿಗಳಾದ ನಮ್ಮ ಮೇಲೆ, ಒಂದು ಹಕ್ಕು ಇದೆ. ನಾವು ಅವರಿಗೆ ಅಪಮಾನ ಮತ್ತು ಅಗೌರವಗಳ ಪರಂಪರೆಯನ್ನು ಮಾತ್ರ ಬಿಟ್ಟರೆ ಅವರಿಗೆ ನಾವು ಬಿಡಬಹುದಾದ ಸಂಪತ್ತು ಮತ್ತು ಸೌಲಭ್ಯಗಳ ಪ್ರಯೋಜನ ವಾದರೂ ಏನು? ನಾವು ಈ ಅವಮಾನಗಳನ್ನು ಸಹಿಸಿಕೊಂಡರೆ ಮುಂಬರುವ ಎಲ್ಲಾ ಕಾಲಗಳಲ್ಲಿ ನಾಗರಿಕ ರಾಷ್ಟ್ರಗಳು ನಮ್ಮನ್ನು ತುಚ್ಛೀಕರಿಸಿದರೆ ಆಶ್ಚರ್ಯವಿಲ್ಲ.[೩೪]

ಹೀಗೆ ಆಲೋಚಿಸಿದಷ್ಟೂ, ದೇಶದ ಈ ಅಸಹ್ಯಕರ ಪರಿಸ್ಥಿತಿಯನ್ನು ಹೋಗಲಾಡಿಸಲು ಗಾಂಧೀಜಿಯವರ ಅಸಹಕಾರ ಮಾರ್ಗ ಒಂದೇ ಸಾಧನ ಎಂಬ ಭಾವನೆ ಪಟೇಲರಲ್ಲಿ ಗಟ್ಟಿಯಾಗುತ್ತಾ ಹೋಯಿತು.

೪.೩ ಅಮೃತಸರ ಕಾಂಗ್ರೆಸ್ ಅಧಿವೇಶನ ಮತ್ತು ನಂತರ

೧೯೧೯ರ ಡಿಸೆಂಬರ್‌ನಲ್ಲಿ ಕಾಂಗ್ರೆಸ್ಸಿನ ವಾರ್ಷಿಕ ಅಧಿವೇಶನ ಅಮೃತಸರದಲ್ಲಿ ನಡೆಯಿತು. ಏಪ್ರಿಲ್ ತಿಂಗಳಲ್ಲಿ ಅಮೃತಸರದಲ್ಲಿ ಅಮಾನವೀಯ ಜಲಿಯನ್‌ವಾಲಾ ಬಾಗ್ ಹತ್ಯಾಕಾಂಡ ನಡೆದಿದ್ದುದರಿಂದ ಕಾಂಗ್ರೆಸ್ಸು ತನ್ನ ಅಧಿವೇಶನಕ್ಕೆ ಆ ನಗರವನ್ನೇ ಆರಿಸಿಕೊಂಡಿತ್ತು. ಪಂಡಿತ್ ಮೋತಿಲಾಲ್ ನೆಹರು ಆ ಅಧಿವೇಶನದ ಅಧ್ಯಕ್ಷ ರಾಗಿದ್ದರು. ಆ ಅಧಿವೇಶನದಲ್ಲಿ ಲೋಕಮಾನ್ಯ ತಿಲಕ್, ಅನಿಬೆಸೆಂಟ್, ಬಿಪಿನ್ ಚಂದ್ರ ಪಾಲ್, ಪಂಡಿತ್ ಮದನ್ ಮೋಹನ್ ಮಾಳವೀಯ ಮೊದಲಾದ ನಾಯಕರು ಭಾಗವಹಿಸಿದ್ದರು. ಮಹಾತ್ಮ ಗಾಂಧೀಜಿಯೂ ಸಹ ಭಾಗವಹಿಸಿದ್ದರು. ಅವರೊಡನೆ ವಲ್ಲಭಭಾಯ್ ಸಹ ಅಲ್ಲಿಗೆ ಹೋಗಿದ್ದರು. ಆದರೆ ಅವರು ಅಲ್ಲಿ ಯಾವ ಭಾಷಣವನ್ನೂ ಮಾಡಲಿಲ್ಲ. ಅದಕ್ಕೆ ಬದಲಾಗಿ ಇತರ ವ್ಯಕ್ತಿಗಳೊಡನೆ ತಮ್ಮ ಸ್ನೇಹ ಸಂಬಂಧವನ್ನು ಬೆಳೆಸಲು ಯತ್ನಿಸಿದರು. ರಾಜೇಂದ್ರ ಪ್ರಸಾದ್ ಮತ್ತು ಕೃಪಲಾನಿ ಜೊತೆಯ ತಮ್ಮ ಸ್ನೇಹವನ್ನು ಮುಂದುವರೆಸಿದರು. ರಾಜಗೋಪಾಲಾಚಾರಿಯವರೊಡನೆ ಹೊಸದಾಗಿ ಸ್ನೇಹ ಬೆಳೆಸಿದರು. ಮೋತಿಲಾಲ್ ಮತ್ತು ಜವಹರ ಲಾಲ್ ನೆಹರುರವರ ಪರಿಚಯ ಮಾಡಿಕೊಂಡರು.

ಜಲಿಯನ್ ವಾಲಾ ಬಾಗ್ ಹತ್ಯಾಕಾಂಡ ಮತ್ತು ಮಾಂಟೆಗೊ –

ಚಲ್ಮ್ಸ್‌ಫ್ಲರ್ಡ್ ಸುಧಾರಣೆಗಳು (೧೯೧೯ರ ಗೌರ್ನಮೆಂಟ್ ಆಫ್ ಇಂಡಿಯಾ ಆಕ್ಟ್) ಅಮೃತಸರದ ಕಾಂಗ್ರೆಸ್ ಅಧಿವೇಶನದಲ್ಲಿ ಚರ್ಚಿತವಾದ ಎರಡು ವಿಷಯಗಳು.

ಎಡ್ವರ್ಡ್ ಸ್ಯಾಮ್ಯುಯಲ್ ಮಾಂಟೆಗೊರವರು ಜೂನ್ ೧೯೧೭ರಲ್ಲಿ 'ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ಇಂಡಿಯಾ' ಆದರು. ಆ ಸಮಯದಲ್ಲಿ ಲಾರ್ಡ್ ಚಲ್ಮ್ಸ್‌ಫ್ಲರ್ಡ್ ಭಾರತದ ವೈಸ್‌ರಾಯ್ (೧೯೧೬–೧೯೨೧) ಆಗಿದ್ದರು. ಇಬ್ಬರೂ ಸೇರಿ ೧೯೧೮ರಲ್ಲಿ ಭಾರತೀಯರಿಗೆ ಸ್ವಯಂ ಆಡಳಿತ ನೀಡುವ ದಿಕ್ಕಿನಲ್ಲಿ ಕೆಲವು ಸುಧಾರಣೆಗಳನ್ನು ಪ್ರಕಟಿಸಿದ್ದರು. ಅವಕ್ಕೆ ಮಾಂಟೆಗೊ – ಚಲ್ಮ್ಸ್‌ಫ್ಲರ್ಡ್ ಸುಧಾರಣೆಗಳು ಎಂದು ಹೆಸರು. ಅಮೃತಸರದ ಅಧಿವೇಶನದ ಹೊತ್ತಿಗೆ ಆ ಸುಧಾರಣೆಗಳು ಕಾನೂನು ಆಗಿದ್ದುವು. ಆದರೆ ಅವು ಭಾರತೀಯರಿಗೆ ಹೆಚ್ಚಿನ ಅಧಿಕಾರ ಅಥವಾ ಸ್ವಾತಂತ್ರ್ಯವನ್ನು ನೀಡಲಿಲ್ಲ. ಕಾಂಗ್ರೆಸ್ ಅಧಿವೇಶನದಲ್ಲಿ ಈ ಸುಧಾರಣೆಗಳ ಬಗೆಗೆ ಭಿನ್ನಾಭಿಪ್ರಾಯ ಮೂಡಿತು. ಚಿತ್ತರಂಜನ ದಾಸ್, ಬಿಪಿನ್ ಚಂದ್ರಪಾಲ್ ಮತ್ತು ಬಾಲ ಗಂಗಾಧರ ತಿಲಕರ ಗುಂಪು ಸುಧಾರಣೆಗಳು ನಿರಾಶಾದಾಯಕವಾಗಿರುವುದರಿಂದ ಅವನ್ನು ತಿರಸ್ಕರಿಸಬೇಕೆಂದಿತು. ಆದರೆ ಮಾಳವೀಯ, ಆನಿಬೆಸೆಂಟ್ ಮತ್ತು ಮೋತಿಲಾಲ್ ನೆಹರುರವರ ಗುಂಪು ಆ ಸುಧಾರಣೆಗಳನ್ನು ಒಪ್ಪಬೇಕೆಂದಿತು. ತೀವ್ರ ಚರ್ಚೆ ನಡೆದು ಎರಡು ಗುಂಪುಗಳ ನಡುವೆ ಒಮ್ಮತ ಸಾಧ್ಯವಿಲ್ಲ ಅನ್ನುವ ಮಟ್ಟಕ್ಕೆ ಬಂದಿತು. ಕೊನೆಗೆ ಗಾಂಧೀಜಿ ಸೂಚಿಸಿದ ಮತ್ತು ಮಹಮ್ಮದ್ ಆಲಿ ಜಿನ್ನಾ ಅನುಮೋದಿಸಿದ ಒಂದು ಸೂತ್ರ ಎಲ್ಲರಿಗೂ ಒಪ್ಪಿಗೆಯಾಯಿತು. 'ಸುಧಾರಣಾ ಕಾಯಿದೆಯು ಅಸಮರ್ಪಕ ಮತ್ತು ನಿರಾಶಾದಾಯಕವಾಗಿದ್ದರೂ ಸಹ ಅದನ್ನು ಕಾಂಗ್ರೆಸ್ ಕಾರ್ಯಗತ ಗೊಳಿಸುವುದು' ಎಂದಿತು ಆ ಸೂತ್ರ.[೩೫]

ಈ ನಡುವೆ ಭಾರತೀಯ ಮುಸ್ಲಿಮರು ಬ್ರಿಟಿಷ್ ಸರ್ಕಾರದ ವಿರುದ್ಧ ತಿರುಗಿ ಬಿದ್ದಿದ್ದರು. ವಿಶ್ವ ಸಮರ ನಡೆಯುತ್ತಿದ್ದಾಗ ಬ್ರಿಟಿಷ್ ಪ್ರಧಾನಿ ಲಾರ್ಡ್ ಜಾರ್ಜ್‌ನು ಟರ್ಕಿಯ ಸುಲ್ತಾನನ ಬಗೆಗೆ ಒಂದು ವಚನವನ್ನು ಮುಸ್ಲಿಮರಿಗೆ ನೀಡಿದ್ದನು. ಆದರೆ ಅವನು ಯುದ್ಧಾನಂತರ ಆ ವಚನವನ್ನು ಮುರಿದಿದ್ದನು. ಟರ್ಕಿಯ ಸುಲ್ತಾನನು ಟರ್ಕಿಯ ಸುಲ್ತಾನನಷ್ಟೇ ಆಗಿರಲಿಲ್ಲ. ಅವನು ಇಡೀ ಮುಸ್ಲಿಮ್ ಸಮುದಾಯದ ಖಲೀಫನಾಗಿದ್ದನು ಮತ್ತು ಮುಸ್ಲಿಮರ ಪವಿತ್ರ ಸ್ಥಳಗಳ ರಕ್ಷಣೆ ಅವನ ಕರ್ತವ್ಯವಾಗಿತ್ತು. ಆದರೆ ಯುದ್ಧಾ ನಂತರ ಬ್ರಿಟಿಷ್ ಸರ್ಕಾರವು ಟರ್ಕಿಯ ಎಲ್ಲಾ ವಸಾಹತುಗಳನ್ನು ಅವರಿಂದ ಮುಕ್ತಗೊಳಿಸಿತು ಮತ್ತು ಸೌದಿ

ಅರೇಬಿಯಾವನ್ನು ಒಂದು ಸ್ವತಂತ್ರ ರಾಷ್ಟ್ರ ಎಂದು ಗುರುತಿಸಿ, ಒಬ್ಬ ಬ್ರಿಟನ್ನಿನ ಪರನಾದವನನ್ನು ಅದರ ಸುಲ್ತಾನನನ್ನಾಗಿ ಮಾಡಿ, ಮುಸ್ಲಿಮರ ಪವಿತ್ರ ಸ್ಥಳವಾದ ಮೆಕ್ಕಾ ಮತ್ತು ಮದೀನಾವನ್ನು ಅವನ ರಕ್ಷಣೆಗೆ ವಹಿಸಿತು. ಈ ವಚನ ಭಂಗ ಭಾರತೀಯ ಮುಸ್ಲಿಮರನ್ನು ಕೆರಳಿಸಿತು. ಅವರು ಈ ತೀರ್ಮಾನಗಳ ವಿರುದ್ಧ ಖಿಲಾಫ಼ತ್ ಚಳವಳಿಯನ್ನು ಆರಂಭಿಸಿದರು. ಗಾಂಧೀಜಿಯವರು ಆ ಚಳವಳಿಗೆ ಬೆಂಬಲವನ್ನು ಸೂಚಿಸಿದರು ಮತ್ತು ಹಿಂದೂಗಳೂ ಸಹ ಆ ಚಳವಳಿಯಲ್ಲಿ ಭಾಗವಹಿಸಲು ಕರೆ ಕೊಟ್ಟರು. ಹಿಂದೂ – ಮುಸ್ಲಿಮ್ ಮೈತ್ರಿ ಗಾಂಧೀಜಿಯವರ ಒಂದು ಪ್ರಮುಖ ಬಯಕೆ.[೩೬]

ಗಾಂಧೀಜಿಯವರು ಅಹಿಂಸಾತ್ಮಕ ಅಸಹಕಾರ ಚಳವಳಿಯನ್ನು ನಡೆಸುವಂತೆ ಭಾರತದ ಕೆರಳಿದ ಮುಸ್ಲಿಮರಿಗೆ ಸೂಚಿಸಿದರು. ಅವರು, ಅಮೃತಸರದ ಅಧಿವೇಶನಕ್ಕೆ ಒಂದು ತಿಂಗಳ ಮುಂಚೆ ೧೯೧೯ರ ನವೆಂಬರ್‌ನಲ್ಲಿ ದೆಹಲಿಯಲ್ಲಿ ನಡೆದ ಖಿಲಾಫ಼ತ್ ಸಮಾವೇಶದಲ್ಲಿ ಪ್ರಥಮ ಬಾರಿಗೆ ಅಸಹಕಾರ ಮಾರ್ಗವನ್ನು ಪ್ರಸ್ತಾಪಿಸಿದ್ದರು.[೩೭] ಸರ್ಕಾರದ ವಿರುದ್ಧ ಆಯುಧಗಳ ಬಳಕೆ ಅಸಾಧ್ಯ ಮತ್ತು ಅನಪೇಕ್ಷಣೀಯ, ಆದರೆ ಭಾರತೀಯರು ತಮ್ಮ ಸಹಕಾರವನ್ನು ಹಿಂತೆಗೆದುಕೊಂಡರೆ ಸರ್ಕಾರವು ವಿಫಲವಾಗುತ್ತದೆ. ಅದರಿಂದ ಹಿಂದೂಗಳು ಮುಸ್ಲಿಮರ ಬೆಂಬಲಕ್ಕೆ ನಿಲ್ಲಬೇಕು – ಎನ್ನುವುದು ಗಾಂಧೀಜಿಯವರ ಅಭಿಪ್ರಾಯವಾಗಿತ್ತು. ಆಗ ಟರ್ಕಿಯ ಬಗೆಗೆ ಬ್ರಿಟಿಷ್ ಸರ್ಕಾರದ ತೀರ್ಮಾನ ಇನ್ನೂ ಪ್ರಕಟವಾಗಿರಲಿಲ್ಲ, ಆದರೆ ಬ್ರಿಟಿಷ್ ಸರ್ಕಾರದ ಇಂಗಿತ ಎಲ್ಲರಿಗೂ ತಿಳಿದಿತ್ತು.

ಈ ವಿಷಯವಾಗಿ ವಲ್ಲಭಭಾಯ್ ಪಟೇಲ್‌ರವರು ಆಗಸ್ಟ್ ೧೯೨೦ರಲ್ಲಿ ಒಂದು ಹೇಳಿಕೆಯನ್ನು ನೀಡಿದರು:

> ಬ್ರಿಟನ್ ವಾಗ್ದಾನ ಮಾಡಿದ್ದರೂ ಸಹ ಟರ್ಕಿ ಸಾಮ್ರಾಜ್ಯವು ವಿಭಜಿಸಲ್ಪಟ್ಟಿತು. ಟರ್ಕಿಯ ಸುಲ್ತಾನನು ಕಾನ್‌ಸ್ಟಾಂಟಿನೋಪಲ್‌ನಲ್ಲಿ ಸೆರೆಮನೆಯಲ್ಲಿ ಇಡಲ್ಪಟ್ಟನು. ಸಿರಿಯಾವನ್ನು ಫ್ರಾನ್ಸ್ ದೇಶವು ವಶಪಡಿಸಿಕೊಂಡಿತು. ಸ್ಮಿರ್ನ ಮತ್ತು ಕ್ರೆಸನ್‌ನನ್ನು ಗ್ರೀಸ್ ನುಂಗಿತು. ಮೆಸಪಟೊಮಿಯ ಮತ್ತು ಪ್ಯಾಲೆಸ್ಟೈನ್‌ನನ್ನು ಬ್ರಿಟನ್ ತನ್ನ ವಶಕ್ಕೆ ತೆಗೆದುಕೊಂಡಿತು. ಅರೇಬಿಯಾದಲ್ಲೂ ಸಹ ಬ್ರಿಟನ್‌ನನ್ನು ಬೆಂಬಲಿಸುವ ಸುಲ್ತಾನ ಗದ್ದುಗೆಗೆ ಏರಿಸಲ್ಪಟ್ಟನು. ಶಾಂತಿ ಒಪ್ಪಂದದ ಕೆಲವು ಶರತ್ತುಗಳು ಮುಸ್ಲಿಮ್ ಸಮುದಾಯದ ಮನಸ್ಸನ್ನು ನೋಯಿಸದೆ ಇರುವುದಿಲ್ಲ ಎಂದು ವೈಸ್‌ರಾಯ್ ಸಹ ಹೇಳಿದ್ದಾರೆ.

ಅದು ಭಾರತೀಯ ಮುಸ್ಲಿಮರಿಗೆ ಹೃದಯಭೇದಕ ಸಂಗತಿಯಾಗಿದೆ.
ತಮ್ಮ ಸಹದೇಶಬಾಂಧವರು ಹೀಗೆ ತೊಂದರೆಗೆ ಸಿಲುಕಿದಾಗ
ಹಿಂದೂಗಳು ಅದು ಹೇಗೆ ಸುಮ್ಮನೆ ಇರಲು ಸಾಧ್ಯ?[೩೮]

ಹಿಂದೂ ಮುಸ್ಲಿಂ ಸಂಯುಕ್ತ ಹೋರಾಟವು ಬ್ರಿಟಿಷರಿಂದ ಅಧಿಕಾರವನ್ನು ಕಿತ್ತುಕೊಳ್ಳುವುದಕ್ಕೆ ಅವಕಾಶವನ್ನು ನೀಡುತ್ತದೆಂದು ಪಟೇಲ್ ಮತ್ತು ಇತರ ಅನೇಕ ಹಿಂದೂ ನಾಯಕರು ರೋಮಾಂಚನಗೊಂಡರು. ತಿಲಕರು ೧೯೨೦ರ ಮೇ ಅಂತ್ಯದಲ್ಲಿ 'ಖಿಲಾಫ಼ತ್ ಬಗೆಗೆ ಮುಸ್ಲಿಮರ ತೀರ್ಮಾನವನ್ನು ಹಿಂದೂಗಳೂ ಬೆಂಬಲಿಸುವರು' ಎಂದರು.[೩೯]

ಜಲಿಯನ್‌ವಾಲಾ ಬಾಗ್ ಹತ್ಯಾಕಾಂಡದ ಬಗ್ಗೆ ಸರ್ಕಾರವು ಲಾರ್ಡ್ ವಿಲಿಯಮ್ ಹಂಟರ್ ನೇತೃತ್ವದಲ್ಲಿ ಒಂದು ಸಮಿತಿಯನ್ನು ನಿಯಮಿಸಿತ್ತು. ಆ ಸಮಿತಿ ೧೯೨೦ರ ಮೇ ೨೫ರಂದು ತನ್ನ ವರದಿಯನ್ನು ನೀಡಿತು. ಆ ವರದಿ ಮತ್ತು ಆ ನಂತರ ಸರ್ಕಾರ ಕೈಗೊಂಡ ಕ್ರಮಗಳು ಭಾರತೀಯರನ್ನು ಕೆರಳಿಸಿದುವು. ಗಾಂಧೀಜಿಗೆ ಆಂಗ್ಲರ ನ್ಯಾಯ ಬುದ್ಧಿಯ ಬಗೆಗೆ ಇದ್ದ ನಂಬಿಕೆ ಸಂಪೂರ್ಣವಾಗಿ ಕರಗಿಹೋಯಿತು. ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಬನಾರಸ್‌ನಲ್ಲಿ ಸಭೆ ಸೇರಿ ಹಂಟರ್ ಸಮಿತಿಯ ವರದಿ ಮತ್ತು ಖಿಲಾಫ಼ತ್ ಪ್ರಶ್ನೆಯ ಬಗ್ಗೆ ಚರ್ಚಿಸಲು ಕಾಂಗ್ರೆಸ್ಸಿನ ಒಂದು ವಿಶೇಷ ಅಧಿವೇಶನವನ್ನು ಕಲ್ಕತ್ತದಲ್ಲಿ ನಡೆಸಬೇಕೆಂದು ತೀರ್ಮಾನಿಸಿತು. ನಂತರ ಅಲಹಾಬಾದ್, ಮದ್ರಾಸ್ ಮತ್ತು ಇತರ ಅನೇಕ ನಗರಗಳಲ್ಲಿ ಖಿಲಾಫ಼ತ್ ಸಮಾವೇಶಗಳು ನಡೆದು ಅಸಹಕಾರ ಚಳವಳಿಯನ್ನು ಆರಂಭಿಸುವ ಬಗೆಗೆ ಮತ್ತೆ ಮತ್ತೆ ವಿವರಿಸಲಾಯಿತು. ಆಗಸ್ಟ್ ೧೯೨೦ರಲ್ಲಿ ಗಾಂಧೀಜಿಯವರು ಅಸಹಕಾರ ಚಳವಳಿಯ ರೂಪ ರೇಷೆಗಳನ್ನು ಪ್ರಕಟಿಸಿದರು. ಅವರು ಮತ್ತು ಆಲಿ ಸಹೋದರರು ದೇಶಾದ್ಯಂತ ಸಂಚಾರ ಮಾಡಿ ಚಳವಳಿಯ ಬಗೆಗೆ ಜನರಿಗೆ ತಿಳುವಳಿಕೆ ನೀಡಲು ಪ್ರಯತ್ನಿಸಿದರು.

ಗಾಂಧೀಜಿಯವರು ಅಹಿಂಸಾತ್ಮಕ ಅಸಹಕಾರ ಚಳವಳಿಯನ್ನು ೧೯೨೦ರ ಆಗಸ್ಟ್ ೧ರಂದು ಆರಂಭಿಸುವುದಾಗಿ ಪ್ರಕಟಿಸಿದ್ದರು. ಆದರೆ ಅಂದು ಅವರಿಗೆ ಮತ್ತು ದೇಶಕ್ಕೆ ಒಂದು ಭಾರಿ ಆಘಾತ ಎರಗಿತು. ಅಂದು ಬೆಳಗ್ಗೆ ಮಹಾ ಹೋರಾಟಗಾರ, ಅದ್ವಿತೀಯ ದೇಶಪ್ರೇಮಿ, ಉಗ್ರ ಪಂಥದ ಮಹಾ ನಾಯಕ ೬೪ ವರ್ಷದ ಲೋಕಮಾನ್ಯ ಬಾಲಗಂಗಾಧರ ತಿಲಕರು ಬೊಂಬಾಯಿಯಲ್ಲಿ ಗತಿಸಿದರು. ಅಂದು ಗಾಂಧೀಜಿಯವರು ತಿಲಕರ ಪಾರ್ಥಿವ ಶರೀರಕ್ಕೆ ಚೌಪಾತಿ ಸಮುದ್ರ ತೀರದಲ್ಲಿ ಅಗ್ನಿ ಸ್ಪರ್ಶ ಮಾಡಿಸಿದ ಮೇಲೆ ವೈಸ್‌ರಾಯ್‌ಗೆ ಒಂದು

ಪತ್ರವನ್ನು ಬರೆದರು. ಅವರು ತಮ್ಮ ಪತ್ರದಲ್ಲಿ 'ಖಿಲಾಫ಼ತ್ ಮತ್ತು ಪಂಜಾಬ್ ಬಗೆಗೆ ಉಂಟಾದ ಎರಡು ಆಶಾ ಭಂಗಗಳ ನಂತರ ಸರ್ಕಾರದ ಬಗೆಗೆ ಗೌರವ ಅಥವಾ ಪ್ರೀತಿಯನ್ನು ಇಟ್ಟುಕೊಳ್ಳಲು ಸಾಧ್ಯವಿಲ್ಲ' ಎಂದು ತಿಳಿಸಿ, ದಕ್ಷಿಣ ಆಫ್ರಿಕದಲ್ಲಿ ತಾವು ಸಲ್ಲಿಸಿದ ಸೇವೆಗಾಗಿ ಬ್ರಿಟನ್ ಸರ್ಕಾರವು ನೀಡಿದ್ದ ಪದಕಗಳನ್ನು ಹಿಂತಿರುಗಿಸಿದರು.

ಕಾಂಗ್ರೆಸ್ಸಿನ ವಿಶೇಷ ಅಧಿವೇಶನವು ಕಲ್ಕತ್ತದಲ್ಲಿ ೧೯೨೦ರ ಸೆಪ್ಟೆಂಬರ್ ೪ ರಿಂದ ೯ನೇ ದಿನಾಂಕದವರೆಗೆ ನಡೆಯಿತು. ಲಾಲಾ ಲಜಪತ್ ರಾಯ್ ಅದರ ಅಧ್ಯಕ್ಷರಾಗಿದ್ದರು. ಗಾಂಧೀಜಿಯವರು ಮುಖ್ಯ ಠರಾವನ್ನು ಮಂಡಿಸಿ ಖಿಲಾಫ಼ತ್ ಅನ್ಯಾಯಗಳನ್ನು ಸರಿ ಪಡಿಸುವವರೆಗೆ ಮತ್ತು ಸ್ವರಾಜ್ಯ ದೊರಕುವವರೆಗೆ ಅಹಿಂಸಾತ್ಮಕ ಅಸಹಕಾರ ನೀತಿಯನ್ನು ಅನುಸರಿಸಬೇಕೆಂದು ದೇಶದ ಜನತೆಗೆ ಕರೆಕೊಟ್ಟರು. ತೀವ್ರ ಚರ್ಚೆಯ ನಂತರ ಕಾಂಗ್ರೆಸ್ ಆ ಠರಾವನ್ನು ಅಂಗೀಕರಿಸಿತು. ಭಾರತೀಯರು ಸರ್ಕಾರ ನೀಡಿರುವ ಬಿರುದುಗಳನ್ನು ಹಿಂತಿರುಗಿಸುವಿಕೆ, ಸ್ಥಳೀಯ ಸಂಸ್ಥೆಗಳ ನಾಮಕರಣ ಸದಸ್ಯರ ರಾಜಿನಾಮೆ, ಸರ್ಕಾರಿ ಸಮಾರಂಭಗಳ ಬಹಿಷ್ಕಾರ, ವಿದ್ಯಾರ್ಥಿಗಳಿಂದ ಸರ್ಕಾರಿ ಮತ್ತು ಅನುದಾನಿತ ವಿದ್ಯಾ ಸಂಸ್ಥೆಗಳ ಬಹಿಷ್ಕಾರ, ವಕೀಲರು ಮತ್ತು ದಾವೇದಾರರಿಂದ ನ್ಯಾಯಾಲಯಗಳ ಬಹಿಷ್ಕಾರ, ಜನರಿಂದ ವಿದೇಶಿ ವಸ್ತುಗಳ ಬಹಿಷ್ಕಾರ ಮತ್ತು ಸ್ವದೇಶಿ ವಸ್ತುಗಳಿಗೆ ಪ್ರೋತ್ಸಾಹ – ಇವು ಆ ಠರಾವು ಸೂಚಿಸಿದ ಕಾರ್ಯಕ್ರಮಗಳು.

ಈ ತೀರ್ಮಾನವು ಕಾಂಗ್ರೆಸ್ಸಿನ ಇತಿಹಾಸದಲ್ಲಿ ಒಂದು ಹೊಸ ಅಧ್ಯಾಯವನ್ನು ಆರಂಭಿಸಿತು. ಪ್ರಾರ್ಥನೆ ಮತ್ತು ಮನವಿಯ ಕಾಲ ಮುಗಿದು ಸರ್ಕಾರದ ವಿರುದ್ಧ ನೇರ ನಿರ್ಧಾಯ ಸಾಮೂಹಿಕ ಕಾರ್ಯಕ್ರಮಗಳನ್ನು ಕೈಗೊಳ್ಳಲು ಜನರು ಉತ್ಸುಕರಾದರು. ಗಾಂಧೀಜಿಯವರು, ಅಸಹಕಾರ ಚಳವಳಿ ಎಂದರೆ ಬರೇ ನ್ಯಾಯಾಲಯಗಳ ವಿದ್ಯಾಲಯಗಳ ಬಹಿಷ್ಕಾರವಷ್ಟೇ ಅಲ್ಲ, ನಾಗರಿಕ ಮತ್ತು ಸೈನಿಕ ಆಡಳಿತಕ್ಕೆ ನೆರವು ನಿರಾಕರಣೆ ಮತ್ತು ಕರ ನಿರಾಕರಣೆ ಅದರಲ್ಲಿ ಸೇರಿದೆ ಎಂದು ಸ್ಪಷ್ಟಪಡಿಸಿದರು. ಅಷ್ಟೇ ಅಲ್ಲ, ಆರ್ಥಿಕ ಮತ್ತು ಸಾಮಾಜಿಕ ನ್ಯಾಯ ದೊರಕದ ಹೊರತು ರಾಜಕೀಯ ಸ್ವಾತಂತ್ರ್ಯವು ಅರ್ಥಹೀನ ಎಂದರು ಗಾಂಧೀಜಿ. ಆ ದಿಕ್ಕಿನಲ್ಲಿ ಅವರು ಮತೀಯ ಏಕತೆ, ಅಸ್ಪೃಶ್ಯತೆಯ ನಿರ್ಮೂಲನೆ, ಖಾದಿ ಧಾರಣೆ, ಸ್ವದೇಶಿ ಚಳವಳಿ, ಗ್ರಾಮ ಕೈಗಾರಿಕೆಗಳು, ಗ್ರಾಮಗಳ ಏಳಿಗೆ, ರಾಷ್ಟ್ರೀಯ ಶಿಕ್ಷಣ, ಮದ್ಯಪಾನ ನಿಷೇಧ, ಗ್ರಾಮ ಪಂಚಾಯತಿಗಳ ರಚನೆ ಮುಂತಾದ ರಚನಾತ್ಮಕ ಕಾರ್ಯಗಳನ್ನು ಜನರು ಕೈಗೊಳ್ಳಬೇಕೆಂದು ಮನವಿ ಮಾಡಿದರು.

ಕಲ್ಕತ್ತ ವಿಶೇಷ ಅಧಿವೇಶನವಾದ ಮೂರು ತಿಂಗಳ ನಂತರ ಕಾಂಗ್ರೆಸ್ಸಿನ ವಾರ್ಷಿಕ ಅಧಿವೇಶನವು ನಾಗಪುರದಲ್ಲಿ ೧೯೨೦ರ ಡಿಸೆಂಬರ್ ತಿಂಗಳಲ್ಲಿ ನಡೆಯಿತು. ಸೇಲಂ ವಿಜಯ ರಾಘವಾಚಾರ್ಯರ್ ಅದರ ಅಧ್ಯಕ್ಷರಾಗಿದ್ದರು. ಅಸಹಕಾರ ಮತ್ತು ರಚನಾತ್ಮಕ ಕಾರ್ಯಕ್ರಮಗಳ ಬಗೆಗೆ ಆ ಅಧಿವೇಶನದಲ್ಲೂ ತೀವ್ರವಾದ ಚರ್ಚೆ ನಡೆಯಿತು. ಆ ಕಾರ್ಯಕ್ರಮಗಳ ಬಗೆಗೆ ಠರಾವು ಸಿ.ಆರ್. ದಾಸ್‌ರವರಿಂದ ಮಂಡಿಸಲ್ಪಟ್ಟು, ಲಾಲಾ ಲಜಪತ್‌ರಾಯ್‌ರವರಿಂದ ಅನುಮೋದಿಸ ಲ್ಪಟ್ಟಿತು. ಅನೇಕ ನಾಯಕರು ಕಾಂಗ್ರೆಸ್ಸಿನ ಆ ಕಾರ್ಯಕ್ರಮವನ್ನು ತೀವ್ರವಾಗಿ ವಿರೋಧಿಸಿದರೂ ಸಹ ಅಂತಿಮವಾಗಿ ಅದು ಅಂಗೀಕಾರವಾಯಿತು. ಗಾಂಧೀಜಿ ಯವರು ಕಾಂಗ್ರೆಸ್ಸಿನ ಪ್ರಶ್ನಾತೀತ ನಾಯಕನಾಗಿ ಹೊರಹೊಮ್ಮಿದರು.[೪೦]

ಗಾಂಧೀಜಿ ಮತ್ತು ಕಾಂಗ್ರೆಸ್ಸಿನ ಈ ಕಾರ್ಯಕ್ರಮಗಳ ಬಗೆಗೆ ವಲ್ಲಭಭಾಯ್ ವ್ಯಕ್ತ ಪಡಿಸಿದ ಅಭಿಪ್ರಾಯ ಹೀಗಿತ್ತು:

> ಯುದ್ಧ ಮುಗಿದ ನಂತರ ನಮಗೆ ರೌಲತ್ ಕಾಯಿದೆಯು ಕೊಡಲ್ಪಟ್ಟಿತು. ಅದು ನಮ್ಮ ಚಟುವಟಿಕಾ ಸ್ವಾತಂತ್ರ್ಯವನ್ನು ಕಸಿದು ಕೊಂಡಿತು. ಈ ದಬ್ಬಾಳಿಕೆಯ ಕಾನೂನಿನ ವಿರುದ್ಧ ಜನರು ಪ್ರತಿಭಟಿಸಿದಾಗ ಸರ್ಕಾರವು ಬಲ ಪ್ರಯೋಗದಿಂದ ಎಲ್ಲ ವಿರೋಧ ವನ್ನೂ ಹತ್ತಿಕ್ಕುವ ನೀತಿಯನ್ನು ಅನುಸರಿಸಲು ತೀರ್ಮಾನಿಸಿತು. ತಮಗೆ ಅನ್ಯಾಯವಾಗಿದೆ ಎಂದು ಆಲೋಚಿಸಿದ ನಮ್ಮ ಜನರ ಒಂದು ವರ್ಗವು ತಾತ್ಕಾಲಿಕ ಹುಚ್ಚಾಟದಲ್ಲಿ ಘೋರ ಕೃತ್ಯಗಳನ್ನು ಎಸಗಿತು.
>
> ನಮ್ಮ ಜನರ ಈ ಹುಚ್ಚು ಕಾರ್ಯಗಳನ್ನು ನಾವು ಸಮರ್ಥಿಸಲು ಸಾಧ್ಯವಿಲ್ಲ..... ಆದರೆ (ಸರ್ಕಾರದ ಪ್ರತಿಕ್ರಿಯೆಯು) ಎಲ್ಲಾ ತಾರ್ಕಿಕತೆಯ ಎಲ್ಲೆಯನ್ನು ಮೀರಿತ್ತು. ಸರ್ಕಾರವು ಅಂತಿಮವಾಗಿ ಒಂದು ಸಮಿತಿಯನ್ನು ಮೇಲ್ನೋಟಕ್ಕೆ ಜಲಿಯನ್‌ವಾಲಾ ಬಾಗ್ ಮತ್ತು ಲಾಹೋರಿನ ಘಟನೆಗಳ ವಿಚಾರಣೆಗಾಗಿ, ಆದರೆ ವಾಸ್ತವದಲ್ಲಿ ಸತ್ಯ ಹೊರಹೊಮ್ಮದಂತೆ ಎಲ್ಲವನ್ನೂ ಮುಚ್ಚಿಡುವುದಕ್ಕಾಗಿ, ರಚಿಸಿತು.
>
> ಇಂಗ್ಲೆಂಡಿನ ಹೌಸ್ ಆಫ್ ಲಾರ್ಡ್ಸ್‌ನಲ್ಲಿ ಅದರ ಸದಸ್ಯರು ತಮ್ಮ ಉದಾತ್ತತೆಯನ್ನು ಪ್ರದರ್ಶಿಸಿದರು! ಅವರಿಗೆ ಅಷ್ಟೊಂದು ಮಂದಿ ಮುಗ್ಧ ಗಂಡಸರು ಮತ್ತು ಹೆಂಗಸರ ಕೊಲೆ ಆದದ್ದು,

> ಒಬ್ಬ ನಿರ್ದಯಿ ಆಂಗ್ಲನ ಗೌರವಕ್ಕೆ ಹೋಲಿಸಿದರೆ, ಏನೂ ಆಗಿರಲಿಲ್ಲ. ಅವರು ಆ ಅಧಿಕಾರಿಯನ್ನು ಶೂರನೆಂದೂ, ಕೊಲ್ಲಲ್ಪಟ್ಟ ಮುಗ್ಧ ಜನರನ್ನು ದಂಗೆಕೋರರೆಂದೂ ಪರಿಗಣಿಸಿದರು.[೪೧]

ಮಾಂಟೆಗೊ – ಚಲ್ಮ್ಸ್‌ಫ಼ರ್ಡ್ ಸುಧಾರಣೆಗಳ ಅಳವಡಿಕೆಯಂತೆ ಪ್ರಥಮ ಚುನಾವಣೆಯು ೧೯೨೦ರ ನವೆಂಬರ್‌ನಲ್ಲಿ ನಡೆಯುವುದಿತ್ತು. ಆ ಕಾಯಿದೆಯು ಪ್ರಾಂತ್ಯಗಳಿಗೆ ಭಾಗಶಃ ಸ್ವಯಂ ಆಡಳಿತವನ್ನು ನೀಡಿತ್ತು, ಆದರೆ ಕೇಂದ್ರದಲ್ಲಿ ಯಾವ ಬದಲಾವಣೆಯೂ ಇರಲಿಲ್ಲ. ಅದು ಪ್ರಾಂತ್ಯಗಳಲ್ಲಿ ದ್ವಿಮುಖ ಸರ್ಕಾರವನ್ನು ತಂದಿತ್ತು. ಅದರ ಪ್ರಕಾರ, ಸಾರ್ವಜನಿಕ ಮತದಾನವಲ್ಲದಿದ್ದರೂ, ಸುಧಾರಿತ ವಿಶಾಲ ಮತದಾನದಿಂದ ಚುನಾಯಿತವಾದ ಶಾಸನ ಸಭೆಗೆ ಮಂತ್ರಿ ಮಂಡಲವು ಜವಾಬ್ದಾರಿಯಾಗಿರುವುದು. ವ್ಯವಸಾಯ, ಶಿಕ್ಷಣ, ಆರೋಗ್ಯ ಮುಂತಾದ ರಾಷ್ಟ್ರ ನಿರ್ಮಾಣದ ಇಲಾಖೆಗಳನ್ನು ಚುನಾಯಿತ ಮಂತ್ರಿಗಳು, ಹಣಕಾಸು, ಕಂದಾಯ, ಒಳಾಡಳಿತ ಮುಂತಾದ ಪ್ರಮುಖ ಇಲಾಖೆಗಳನ್ನು ಗೌರ್ನರನಿಂದ ನಾಮಕರಣಗೊಂಡ ಮಂತ್ರಿಗಳು ನಿರ್ವಹಿಸುವರು. ಬಹಳ ಮಂದಿ ಭಾರತೀಯ ನಾಯಕರು ಈ ಸುಧಾರಣೆಗಳನ್ನು ಒಪ್ಪಲಿಲ್ಲ. ಆದರೆ ಗಾಂಧಿ ಮತ್ತು ವಲ್ಲಭಭಾಯ್ ಪಟೇಲ್‌ರವರು ಈ ಸುಧಾರಣೆಗಳು ಕೆಲವು ವರ್ಷಗಳಲ್ಲಿ ಸ್ವಯಂ ಆಡಳಿತಕ್ಕೆ ದಾರಿ ಮಾಡುತ್ತವೆ ಎಂದು ಭಾವಿಸಿದ್ದರು. ಅದರಿಂದ ಬೊಂಬಾಯಿಯ ಶಾಸನ ಪರಿಷತ್ತಿನ ಚುನಾವಣೆಯಲ್ಲಿ ಖೇಡ ಜಿಲ್ಲೆಯಿಂದ ಸ್ಪರ್ಧಿಸಬೇಕೆಂದು ವಲ್ಲಭಭಾಯ್ ಆಲೋಚಿಸಿದರು. ಆದರೆ ಅವರು ಆ ಆಲೋಚನೆಯನ್ನು ಕಾರ್ಯರೂಪಕ್ಕೆ ತರಲಿಲ್ಲ. ಸರ್ಕಾರವು ಜನರಲ್ ಡೈರ್‌ನ ಬಗ್ಗೆ ಮೃದು ಧೋರಣೆಯನ್ನು ತೋರಿದ ಫಲವಾಗಿ ಮತ್ತು ಟರ್ಕಿಯ ವಿಷಯದಲ್ಲಿ ತೆಗೆದುಕೊಂಡ ತೀರ್ಮಾನದ ಫಲವಾಗಿ ಅವರು ಚುನಾವಣೆಯಲ್ಲಿ ಸ್ಪರ್ಧಿಸುವ ಆಲೋಚನೆಯನ್ನು ಕೈ ಬಿಟ್ಟರು, ಏಕೆಂದರೆ ಮಾಂಟೆಗೊ – ಚಲ್ಮ್ಸ್‌ಫ಼ರ್ಡ್ ಸುಧಾರಣೆಗಳು ಒಂದು ಕಪಟ ತಂತ್ರ ಮತ್ತು ಆ ಸುಧಾರಣೆಗಳ ಪ್ರಕಾರ ನಡೆಯುವ ಚುನಾವಣೆಯು ಅರ್ಥಹೀನ ಎಂದು ಅವರು ಭಾವಿಸಿದರು. ಅವರೆಂದರು:

> ಕೆಲವು ವಿದೇಶಿ ಅಧಿಕಾರಿಗಳ ಜಾಗದಲ್ಲಿ ಭಾರತೀಯ ಅಧಿಕಾರಿಗಳನ್ನು ಕೂರಿಸಿದರೆ ಆಗುವ ವ್ಯತ್ಯಾಸವೇನು? ಒಬ್ಬ ಆಂಗ್ಲ ಗೌರ್ನರನಿಗೆ ಬದಲಾಗಿ ಒಬ್ಬ ಭಾರತೀಯ ಗೌರ್ನರನಿಂದ ನಮಗೆ ಹೇಗೆ ಪ್ರಯೋಜನವಾಗುವುದು? ಬ್ರಿಟಿಷ್ ಗೌರ್ನರ್‌ಗಳ ಪೈಕಿ ಉದಾತ್ತ ಗುಣ ಮತ್ತು ಬಹಳ ದಕ್ಷತೆ ಇರುವವರು ಇಲ್ಲವೇ?

> ಚಾಂದ್ನಿ ಚೌಕ್‌ನಲ್ಲಿ ೧೯೧೨ರಲ್ಲಿ ಲಾರ್ಡ್ ಹಾರ್ಡಿಂಜ್‌ನ ಮೇಲೆ ಪ್ರಾಣ ಹೋಗುವಂತಹ ಹಲ್ಲೆ ನಡೆದರೂ ಸಹ ಅವನು ಯಾವುದೇ ಪ್ರತೀಕಾರದ ಅಥವಾ ದಮನ ಮಾಡುವ ಕ್ರಮಗಳನ್ನು ತೆಗೆದುಕೊಳ್ಳಲಿಲ್ಲ. ಆಮೂಲಾಗ್ರ ಬದಲಾವಣೆ ಆಗಬೇಕು ಮತ್ತು ಭಾರತ ಸರ್ಕಾರವು ಭಾರತದ ಜನರಿಗಾಗಿ ನಡೆಸಲ್ಪಡಬೇಕು.[೪೨]

೪.೪. ಗುಜರಾತ್ ಪ್ರದೇಶ್ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ

ಕಾಂಗ್ರೆಸ್ ಸಂಸ್ಥೆಗೆ ಒಂದು ಹೊಸ ಸಂವಿಧಾನವನ್ನು ರಚಿಸುವಂತೆ ಗಾಂಧೀಜಿಯನ್ನು ಅಮೃತಸರದ ಕಾಂಗ್ರೆಸ್ ಅಧಿವೇಶನವು ಕೇಳಿಕೊಂಡಿತ್ತು. ಅದರ ಪ್ರಕಾರ ಗಾಂಧೀಜಿ ರಚಿಸಿದ ಸಂವಿಧಾನದ ಕರಡನ್ನು ನಾಗಪುರ ಕಾಂಗ್ರೆಸ್ ಅಧಿವೇಶನವು ಅಂಗೀಕರಿಸಿತು. ಈ ಹೊಸ ಸಂವಿಧಾನದ ಪ್ರಕಾರ ಯಾವನೇ ವಯಸ್ಕ ವ್ಯಕ್ತಿ ಕಾಂಗ್ರೆಸ್ಸಿನ ಗುರಿಯನ್ನು ಒಪ್ಪಿ ವರ್ಷಕ್ಕೆ ನಾಲ್ಕಾಣೆ ಶುಲ್ಕ ಪಾವತಿಸಿದರೆ ಅವನು ಕಾಂಗ್ರೆಸ್ ಪಕ್ಷದ ಸದಸ್ಯನಾಗಬಹುದೆಂದಾಯಿತು. ಗ್ರಾಮ, ನಗರ, ತಾಲ್ಲೂಕು, ಜಿಲ್ಲೆ, ಪ್ರಾಂತ್ಯ ಮತ್ತು ಅಖಿಲ ಭಾರತ ಮಟ್ಟದಲ್ಲಿ ಪ್ರಜಾಸತ್ತೆಯ ಪ್ರಕಾರ ವಿವಿಧ ಚುನಾಯಿತ ಸಮಿತಿಗಳು ಇರಬೇಕೆಂದಾಯಿತು. ಗಾಂಧೀಜಿಯವರು ಭಾಷಾವಾರು ಪ್ರಾಂತ್ಯ ವಿಭಾಗಗಳನ್ನು ಸೂಚಿಸಿದ್ದರೇ ಹೊರತು ಬ್ರಿಟಿಷ್ ಸರ್ಕಾರ ರಚಿಸಿದ್ದ ಪ್ರಾಂತ್ಯಗಳ ವಿಭಾಗಗಳನಲ್ಲ. ಅದರಿಂದ ೧೯೨೦ರ ಅಂತ್ಯಭಾಗದಿಂದ ಗುಜರಾತ್ ಪ್ರದೇಶವು ಒಂದು ಪ್ರದೇಶ ಕಾಂಗ್ರೆಸ್ ಸಮಿತಿಯನ್ನು ಪಡೆಯಿತು. ಅದೇ ರೀತಿ ಮಹಾರಾಷ್ಟ್ರ, ಆಂಧ್ರ, ತಮಿಳುನಾಡು, ಕರ್ನಾಟಕ ಮತ್ತು ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿಗಳು ರಚನೆಯಾದುವು. ಕಾಂಗ್ರೆಸ್ ಅಧ್ಯಕ್ಷರನ್ನು ವಾರ್ಷಿಕವಾಗಿ ಪ್ರದೇಶ ಘಟಕಗಳು ಚುನಾಯಿಸುವ ಮತ್ತು ಕಾಂಗ್ರೆಸ್ ಅಧ್ಯಕ್ಷರು ೧೫ ಮಂದಿಯ ಕಾರ್ಯಕಾರಿ ಸಮಿತಿಯನ್ನು ನಾಮಕರಣ ಮಾಡುವ ವ್ಯವಸ್ಥೆ ಜಾರಿಗೆ ಬಂದಿತು.[೪೩]

೧೯೨೦ರಲ್ಲಿ ಈ ಹೊಸ ಸಂವಿಧಾನ ಜಾರಿಗೆ ಬಂದಾಗ ಗುಜರಾತ್ ಸಭಾ ಸಂಸ್ಥೆಯು ಗುಜರಾತ್ ಪ್ರದೇಶ್ ಕಾಂಗ್ರೆಸ್ ಸಮಿತಿಯಾಗಿ ಪರಿವರ್ತನೆಯಾಯಿತು. ವಲ್ಲಭಭಾಯ್ ಪಟೇಲ್ ಅದರ ಅಧ್ಯಕ್ಷರಾದರು (ಅವರು ಆ ಸ್ಥಾನದಲ್ಲಿ ೧೯೪೬ರವರೆಗೂ ಇದ್ದರು). ಅವರು ತಮ್ಮ ಅಧಿಕ ಸಂಪಾದನೆಯ ವಕೀಲಿ ವೃತ್ತಿಯನ್ನು ಈಗಾಗಲೇ ನಿಲ್ಲಿಸಿದ್ದರು. ಈಗ ಪೂರ್ಣ ಕಾಲದ ಸಾಮಾಜಿಕ ಕೆಲಸಗಾರರಾದರು. ಗುಜರಾತ್‌ನ ಆದಷ್ಟೂ ಹಳ್ಳಿ ಮತ್ತು ಪಟ್ಟಣಗಳನ್ನು ಭೇಟಿ ಮಾಡಿ ಪರಿಚಯ ಮಾಡಿಕೊಳ್ಳುವುದು ಅವರ ಗುರಿಯಾಯಿತು. ಅದರಿಂದ ಅವರು ಎಲ್ಲಿ ಏನು ಸಿಕ್ಕಿದರೆ ಅಲ್ಲಿ ಅದನ್ನು ತಿನ್ನುತ್ತಾ ಯಾವಾಗ ಎಲ್ಲಿ ಸಾಧ್ಯವಾದರೆ

ಆಗ ಅಲ್ಲಿ ಮಲಗುತ್ತಾ ಸತತವಾಗಿ ಗುಜರಾತ್ ಪೂರಾ ಸಂಚರಿಸಿದರು ಮತ್ತು ಗಾಂಧೀಜಿಯವರ ಅಹಿಂಸಾ ಚಳವಳಿಯನ್ನು ಪ್ರಚಾರ ಮಾಡಿದರು.[೪೪]

ಅದೇ ಸಮಯದಲ್ಲಿ ದೇಶಾದ್ಯಂತ ಅಹಿಂಸಾತ್ಮಕ ಅಸಹಕಾರ ಚಳವಳಿ ಹರಡಿತು. ಕಲ್ಕತ್ತದಲ್ಲಿ ಚಿತ್ತರಂಜನದಾಸ್, ಅಲಹಾಬಾದ್‌ನಲ್ಲಿ ಮೋತಿಲಾಲ್ ನೆಹರು ಮತ್ತು ಅವರ ಮಗ ಜವಹರಲಾಲ್ ನೆಹರು, ಮದ್ರಾಸ್‌ನಲ್ಲಿ ಸಿ. ರಾಜಗೋಪಾಲಾಚಾರಿ ಮತ್ತು ಟಿ. ಪ್ರಕಾಶಂ ಮತ್ತು ಪಾಟ್ನಾದಲ್ಲಿ ರಾಜೇಂದ್ರ ಪ್ರಸಾದ್ ಬಹು ಸಂಪಾದನೆಯ ವಕೀಲಿ ವೃತ್ತಿ ಮತ್ತು ಅನುಕೂಲದ ಜೀವನವನ್ನು ಕಿತ್ತೊಗೆದು ಅಸಹಕಾರ ಚಳವಳಿಗೆ ಧುಮುಕಿದ ಪ್ರಮುಖರ ಪೈಕಿ ಕೆಲವರು. ಅವರಂತೆ ಸಾವಿರಾರು ವಕೀಲರು ತಮ್ಮ ವೃತ್ತಿಯನ್ನು ತೊರೆದು ಚಳವಳಿಯಲ್ಲಿ ಭಾಗವಹಿಸಿದರು. ಸಾವಿರಾರು ವಿದ್ಯಾರ್ಥಿಗಳು ಸರ್ಕಾರಿ ಶಾಲಾ ಕಾಲೇಜುಗಳನ್ನು ತೊರೆದು ದೇಶ ಭಕ್ತರಿಂದ ಹೊಸದಾಗಿ ತೆರೆಯಲ್ಪಟ್ಟ ಶಾಲೆ ಮತ್ತು ಕಾಲೇಜುಗಳನ್ನು ಸೇರಿದರು. ಹಾಗೆಯೇ ಸತ್ಯಾಗ್ರಹಿಗಳು ಖಾದಿ ಪ್ರಚಾರ, ಅಸ್ಪೃಶ್ಯತಾ ನಿವಾರಣೆ, ಮದ್ಯದ ಅಂಗಡಿಗಳ ಪಿಕೆಟಿಂಗ್, ಹಿಂದೂ ಮುಸ್ಲಿಂ ಮೈತ್ರಿ, ಗುಡ್ಡಗಾಡು ಜನರ ಅಭಿವೃದ್ಧಿ ಮುಂತಾದ ಚಟುವಟಿಕೆಗಳಲ್ಲಿ ತೊಡಗಿದರು.

ನಾಗಪುರದ ಅಧಿವೇಶನದ ನಂತರ ಬೆಜವಾಡದಲ್ಲಿ ಸಭೆ ಸೇರಿದ ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಗಾಂಧೀಜಿಯವರ ಸೂಚನೆಯ ಮೇರೆ ರಚನಾತ್ಮಕ ಕಾರ್ಯಗಳಿಗಾಗಿ 'ತಿಲಕ್ ಸ್ವರಾಜ್ ನಿಧಿ'ಗೆ ಒಂದು ಕೋಟಿ ರೂಪಾಯಿಗಳನ್ನು ಸಂಗ್ರಹಿಸಬೇಕೆಂದೂ, ಕಾಂಗ್ರೆಸ್ ಪಕ್ಷಕ್ಕೆ ಒಂದು ಕೋಟಿ ಸದಸ್ಯರನ್ನು ಸೇರಿಸ ಬೇಕೆಂದೂ, ಆಸಕ್ತರಿಗೆ ಇಪ್ಪತ್ತು ಲಕ್ಷ ಚರಕಗಳನ್ನು ಒದಗಿಸಬೇಕೆಂದೂ ನಿರ್ಧರಿಸಿತು. ಈ ಕಾರ್ಯಕ್ರಮಗಳಿಗೆ ಜನರಿಂದ ದೊರೆತ ಉತ್ಸಾಹದ ಪ್ರತಿಕ್ರಿಯೆಯನ್ನು ಕಂಡು ಸರ್ಕಾರವು ಗಾಬರಿಗೊಂಡಿತು ಮತ್ತು ತೀವ್ರ ದಮನಕಾರಿ ಕ್ರಮಗಳನ್ನು ತೆಗೆದುಕೊಳ್ಳಲು ಆರಂಭಿಸಿತು.

ಸಂಯುಕ್ತವಾಗಿ ಗುಜರಾತ್ – ಕಾಥ್ಯೆವಾಡ ಪ್ರದೇಶಕ್ಕೆ ಕೊಡಲ್ಪಟ್ಟಿದ್ದ ಸಂಗ್ರಹದ ಗುರಿ ಮೂರು ಲಕ್ಷ ಸದಸ್ಯರು, ಹತ್ತು ಲಕ್ಷ ರೂಪಾಯಿಗಳು ಮತ್ತು ಒಂದು ಲಕ್ಷ ಚರಕಗಳು. ಪಟೇಲರು ಈ ಗುರಿಯನ್ನು ತಲುಪಲು ದೃಢ ನಿರ್ಧಾರ ಮಾಡಿ ಕಾರ್ಯಪ್ರವೃತ್ತರಾದರು. ಅವರ ನಾಯಕತ್ವ, ಕಾರ್ಯಕರ್ತರ ಶ್ರಮ ಮತ್ತು ಜನರ ಉತ್ಸಾಹದ ಫಲವಾಗಿ ಹತ್ತು ಲಕ್ಷ ರೂಪಾಯಿಗಳಿಗೆ ಬದಲಾಗಿ ಹದಿನೈದು ಲಕ್ಷದ ಐವತ್ತು ಸಾವಿರ ರೂಪಾಯಿಗಳು ಸಂಗ್ರಹವಾದುವು. ಸದಸ್ಯರು ಮತ್ತು ಚರಕಗಳ ವಿಷಯದಲ್ಲೂ ಗುರಿಯನ್ನು ಮುಟ್ಟಲಾಯಿತು.[೪೫]

ಆಗ ಒಂದು ಸ್ವಾರಸ್ಯಕರವಾದ ಘಟನೆ ನಡೆಯಿತು. 'ಏಳಿಗೆ ಮತ್ತು ಅಸಹಕಾರದ ಅದೃಷ್ಟ' ಎಂಬ ವಿಷಯದ ಬಗೆಗೆ ಒಂದು ಸಾರ್ವಜನಿಕ ಸಭೆ ಅಹಮದಾಬಾದ್‌ನಲ್ಲಿ ಏರ್ಪಾಟಾಯಿತು. ಪಟೇಲರು ಆ ಸಭೆಗೆ ಹೋದರು. ಅಹಮದಾಬಾದ್ ಸಭಾಂಗಣದಲ್ಲಿ ಕಲೆಕ್ಟರ್, ಪೊಲೀಸ್ ಅಧಿಕಾರಿಗಳು, ನ್ಯಾಯಾಧೀಶರು ಮತ್ತು ಮಾಮಲದಾರರು ಉಪಸ್ಥಿತರಿದ್ದರು. ಮೊದಲು ಒಬ್ಬ ಭಾಷಣಕಾರನು ತಾನು ಇಂಗ್ಲಿಷ್ ಭಾಷೆಯಲ್ಲಿ ಬರೆದು ತಂದಿದ್ದ ಭಾಷಣವನ್ನು ಓದಿದನು. ನಂತರ ಪಟೇಲರು ಸಭಾಧ್ಯಕ್ಷರ ಅನುಮತಿ ಪಡೆದು ಗುಜರಾತಿಯಲ್ಲಿ ಭಾಷಣ ಆರಂಭಿಸಿದರು. ಅಧ್ಯಕ್ಷರು ಗುಜರಾತಿ ಭಾಷೆಗೆ ಬದಲಾಗಿ ಇಂಗ್ಲಿಷ್ ಭಾಷೆಯಲ್ಲಿ ಭಾಷಣ ಮಾಡುವಂತೆ ಸೂಚಿಸಿದರು. ಪಟೇಲರು, 'ಅಧ್ಯಕ್ಷರ ಬೇಡಿಕೆ ಸೂಕ್ತವಲ್ಲವೆಂದೂ, ಕಲೆಕ್ಟರನಿಗೆ ಗುಜರಾತಿ ಭಾಷೆಯ ಜ್ಞಾನ ಬಹಳ ಉತ್ತಮವಾಗಿದೆ ಎಂದೂ ಮತ್ತು ಇತರ ಅಧಿಕಾರಿಗಳೂ ಸಹ ಗುಜರಾತಿಯನ್ನು ಚೆನ್ನಾಗಿ ಅರ್ಥಮಾಡಿಕೊಳ್ಳುವರೆಂದು ಭಾವಿಸಬಹುದೆಂದೂ' ಹೇಳಿ ಗುಜರಾತಿಯಲ್ಲಿಯೇ ಭಾಷಣವನ್ನು ಮುಂದುವರೆಸಿದರು. ಅಧ್ಯಕ್ಷರು ಸುಮ್ಮನಾದರು. ಆಗ ಕಲೆಕ್ಟರನು ಎದ್ದು ಹೊರ ನಡೆದನು. ಇತರ ಆಂಗ್ಲ ಅಧಿಕಾರಿಗಳು ಹೊರ ನಡೆದರು. ಪಟೇಲರ ಭಾಷಣದ ನಂತರ ಅಧ್ಯಕ್ಷನು, 'ಸಹಕಾರಿಗಳು ಅಸಹಕಾರಿಗಳಿಂದ ಕಲಿಯಬೇಕಾದದ್ದು ಬಹಳವಿದೆ. ಅಸಹಕಾರಿಗಳು ಜನರೊಡನೆ ಬೆರೆಯುತ್ತಾರೆ, ಅವರ ಜೊತೆ ಮಾತನಾಡುತ್ತಾರೆ ಮತ್ತು ಅವರ ನಡುವೆ ಕೆಲಸ ಮಾಡಿ ಅವರ ಹೃದಯವನ್ನು ಗೆಲ್ಲುತ್ತಾರೆ,' ಎಂದನು. ಅಲ್ಲಿಗೆ ಸಭೆ ಮುಗಿಯಿತು.[೪೬]

ಅಸಹಕಾರ ಚಳವಳಿಯ ವಿರುದ್ಧ ಪ್ರಚಾರ ಮಾಡಲು ಸರ್ಕಾರದ ಬೆಂಬಲದಿಂದ 'ಶಾಂತಿ ಮತ್ತು ಸುವ್ಯವಸ್ಥಾ ಕೂಟ'ಗಳು ಅಲ್ಲಲ್ಲಿ ಸ್ಥಾಪಿಸಲ್ಪಟ್ಟಿದ್ದುವು. ಆ ಕೂಟಗಳ ಕೆಲವರು ಗುಜರಾತಿಗೂ ಬಂದಾಗ ಪಟೇಲರು ಹೀಗೆ ಹಾಸ್ಯ ಮಾಡಿದರು:

> ಈ ಬೂಟಾಟಿಕೆಯು ಗುಜರಾತನ್ನು ಪ್ರವೇಶಿಸುವುದಿಲ್ಲವೆಂದು ಆಶಿಸಿದ್ದೆ. ಈ ಕೂಟಗಳು ಅಧಿಕಾರಿಗಳ ಸಹಾಯದಿಂದ ಸ್ಥಾಪಿತವಾದರೆ ಅವು ಶಾಂತಿಗೆ ಬದಲಾಗಿ ಅಶಾಂತಿಗೆ ಎಡೆ ಮಾಡಬಹುದು.
>
> ಅವುಗಳ ವ್ಯವಸ್ಥಾಪಕರು ಯಾರು? ಅವರು ಇದುವರೆವಿಗೆ ಅಶಾಂತಿಯ ಬೆಂಬಲಿಗರಾಗಿದ್ದರೇ? ತಮ್ಮ ಪ್ರಯತ್ನಗಳ ಫಲವಾಗಿ ಶಾಂತಿ ಮತ್ತು ಸುವ್ಯವಸ್ಥೆ ಕಾಪಾಡಲ್ಪಡುತ್ತಿವೆ ಎಂಬ ಈ ಕೂಟಗಳ ಹೇಳಿಕೆಯನ್ನು ಎತ್ತಿನ ಗಾಡಿಯ ಕೆಳಗೆ ನಡೆಯುತ್ತಿರುವ ನಾಯಿಯು

ತಾನೇ ಗಾಡಿಯನ್ನು ಎಳೆಯುತ್ತಿದ್ದೇನೆ ಎಂದು ಹೇಳಿದ್ದಕ್ಕೆ ಹೋಲಿಸಬಹುದು.[೪೭]

೧೯೨೧ರ ಆಗಸ್ಟ್ ೧ರಂದು ಬಾಲಗಂಗಾಧರ ತಿಲಕರ ಪ್ರಥಮ ಪುಣ್ಯ ತಿಥಿ. ಅಂದು ವಿದೇಶಿ ವಸ್ತುಗಳ ದಹನದ ಕ್ರಿಯೆ ಆರಂಭವಾಯಿತು. ರವೀಂದ್ರನಾಥ ಟಾಗೂರರು ಅದನ್ನು ಅಲ್ಲಗಳೆದರು. ಗಾಂಧೀಜಿಯವರ ಆಪ್ತಮಿತ್ರ ಖಾದಿಧಾರಿ ಸಿ.ಎಫ್. ಆಂಡ್ರೂಸ್‌ರವರೂ ಸಹ ಅದನ್ನು ವಿರೋಧಿಸಿದರು. ಅವರು, 'ಬೆಂಕಿಯ ಜ್ವಾಲೆಗಳು ಉಪಯುಕ್ತ ಮತ್ತು ಸುಂದರ ವಸ್ತುಗಳನ್ನು ನಾಶಪಡಿಸುತ್ತಿವೆ,' ಎಂದರು. ಅದಕ್ಕೆ ಗಾಂಧೀಜಿಯವರು, 'ವಿದೇಶಿ ಗಿರಣಿಗಳಲ್ಲಿ ತಯಾರಾದ ಬಟ್ಟೆಗಳ ಬಳಕೆಯು ನೂಲುವುದು ಮತ್ತು ನೇಯುವುದರ ಮೂಲಕ ಭಾರತೀಯ ನಿರ್ಗತಿಕರು ಹಣ ಸಂಪಾದಿಸುವ ಅವಕಾಶವನ್ನು ನಾಶ ಮಾಡುತ್ತಿದೆ,' ಎಂದು ಉತ್ತರಿಸಿದರು. 'ವಸ್ತ್ರ ದಹನವು ಭಾರತೀಯರ ದ್ವೇಷವನ್ನು ಬ್ರಿಟನ್ನಿನ ವ್ಯಕ್ತಿಗಳ ಮೇಲಿನಿಂದ ನಿರ್ಜೀವ ವಸ್ತುಗಳ ಕಡೆಗೆ ತಿರುಗಿಸಿದೆ' ಎಂದೂ ಸಹ ಗಾಂಧೀಜಿ ಸೇರಿಸಿದರು.

ವಲ್ಲಭಭಾಯ್ ಪಟೇಲರು ಈ ವಿಷಯದಲ್ಲಿ ಗಾಂಧೀಜಿಯನ್ನು ಅನುಸರಿಸಿದರು. ಅವರು ಅಹಮದಾಬಾದ್‌ನಲ್ಲಿ ಏರ್ಪಡಿಸಿದ ವಸ್ತ್ರ ದಹನದಲ್ಲಿ ತಮ್ಮೆಲ್ಲಾ ಸೂಟುಗಳು, ಶರ್ಟುಗಳು, ಕಾಲರ್‌ಗಳು, ಟೈಗಳು ಮತ್ತು ಗೌನ್‌ಗಳನ್ನು ಅಗ್ನಿಗೆ ಅರ್ಪಿಸಿದರು. ಅವರನ್ನು ಅನುಸರಿಸಿ ಅನೇಕರು ತಮ್ಮ ಗಿರಣಿ ತಯಾರಿಕೆಯ ನಾನಾ ವಸ್ತ್ರಗಳನ್ನು ಅಗ್ನಿಗೆ ಅರ್ಪಿಸಿದರು. ಜಲಪಾತದಲ್ಲಿ ನೀರು ಸುರಿಯುವಂತೆ ಬೆಂಕಿಯ ಜ್ವಾಲೆಯ ಒಳಕ್ಕೆ ಗಿರಣಿ ಬಟ್ಟೆಗಳು ಮೇಲಿನಿಂದ ಅವಿರತವಾಗಿ ಸುರಿದುವು. ಇಡೀ ದೇಶದಲ್ಲಿ ನಡೆದ ವಸ್ತ್ರ ದಹನಗಳ ಪೈಕಿ ಅಹಮದಾಬಾದ್ ಮತ್ತು ಬೊಂಬಾಯಿಯಲ್ಲಿ ನಡೆದ ದಹನಗಳು ಅತ್ಯಂತ ದೊಡ್ಡದಾದುವು. ಅದಾದ ಕೆಲವು ದಿನಗಳ ನಂತರ ವಲ್ಲಭಭಾಯ್ ಪಟೇಲರು ಖಾದಿ ಬಟ್ಟೆಯನ್ನು ಧರಿಸಲು ಆರಂಭಿಸಿದರು ಮತ್ತು ಗಿರಣಿ ಬಟ್ಟೆಯನ್ನು ಮತ್ತೆ ಎಂದೂ ಮುಟ್ಟಲಿಲ್ಲ.[೪೮]

ಪಟೇಲರ ಮಕ್ಕಳಾದ ಮಣಿ ಮತ್ತು ದಹ್ಯ ಅವರಿಗಿಂತ ಮೊದಲೇ ಗಿರಣಿ ಬಟ್ಟೆಯನ್ನು ತ್ಯಜಿಸಿ ಖಾದಿ ಬಟ್ಟೆಯನ್ನು ಧರಿಸಲು ಆರಂಭಿಸಿದ್ದರು. ಅಷ್ಟೇ ಅಲ್ಲ, ಅದಕ್ಕಿಂತ ಮುಂಚೆ ೧೬ನೆ ವಯಸ್ಸಿನಲ್ಲೇ ಮಗಳು ಮಣಿ ಗಾಂಧೀಜಿಯ ಪ್ರಭಾವಕ್ಕೆ ಒಳಗಾಗಿ ಸರ್ಕಾರಿ ಶಾಲೆಯನ್ನು ಬಿಟ್ಟು ಖಾಸಗಿ ಶಾಲೆಯನ್ನು ಸೇರಿದ್ದಳು. ಅವಳು ಮತ್ತು ದಹ್ಯ ಮಾರ್ಚ್ ೧೯೨೧ರ ಮೆಟ್ರಿಕ್ ಪರೀಕ್ಷೆಯಲ್ಲಿ ತೇರ್ಗಡೆ ಪಡೆದು ಗಾಂಧೀಜಿಯವರು ಸ್ಥಾಪಿಸಿದ್ದ ಗುಜರಾತ್ ವಿದ್ಯಾಪೀಠವನ್ನು ಸೇರಿದ್ದರು. ಗಾಂಧೀಜಿಯವರ ಅಪ್ಪಟ ಅನುಯಾಯಿಯಾದ ತಮ್ಮ ತಂದೆ ಖಾದಿ ಬಟ್ಟೆಯನ್ನು

ಅದೇಕೆ ಧರಿಸುತ್ತಿಲ್ಲ? – ಎಂದು ಮಣಿ ಮನಸ್ಸಿನಲ್ಲೇ ಆಶ್ಚರ್ಯ ಪಡುತ್ತಿದ್ದಳು. ಆದರೆ ತಂದೆಯನ್ನು ಕೇಳಿರಲಿಲ್ಲ. ಆದರೂ ಸಹ ತನ್ನ ತಂದೆಯ ಪಂಚೆಗಳಿಗೆಂದು ಹತ್ತಿಯಿಂದ ನೂಲನ್ನು ತೆಗೆದು ಇಡುತ್ತಿದ್ದಳು. ೧೯೨೧ರ ಪಟೇಲ್‌ರವರ ಬಹುತೇಕ ಧೋತಿ ಮತ್ತು ಕುರ್ತಾಗಳು ಮಣಿಬೆನ್ ತೆಗೆದ ನೂಲಿನಿಂದ ತಯಾರಾದ ಬಟ್ಟೆಗಳು. ಅವಳ ತಂದೆ ಖಾದಿ ಧರಿಸಲು ಆರಂಭಿಸಿದ್ದು ಅವಳಿಗೆ ಬಹಳ ಸಂತಸವನ್ನು ತಂದಿತು. ಅದೇ ವರ್ಷ ಅಂದರೆ ೧೯೨೧ರಲ್ಲಿ ಅವಳು ತನ್ನೆಲ್ಲಾ ಒಡವೆಗಳನ್ನು ಒಂದು ಬಟ್ಟೆಯಲ್ಲಿ ಗಂಟು ಕಟ್ಟಿ ಅವನ್ನು ಗಾಂಧೀಜಿಗೆ ಕೊಡುವುದಾಗಿ ತನ್ನ ತಂದೆಗೆ ತೋರಿಸಿದಳು. ಪಟೇಲರು ಒಪ್ಪಿದರು. ಹೀಗೆ ಅವಳ ಸೋದರತ್ತೆ ದಹಿಬಾ ಕೊಟ್ಟಿದ್ದ ಒಂದು ಜೊತೆ ಚಿನ್ನದ ಬಳೆಗಳು, ಅವಳ ದೊಡ್ಡಪ್ಪ ವಿಠ್ಠಲ್‌ಭಾಯ್ ಪಟೇಲರು ಇಂಗ್ಲೆಂಡಿನಿಂದ ತಂದುಕೊಟ್ಟಿದ್ದ ಒಂದು ಚಿನ್ನದ ಕೈಗಡಿಯಾರ, ಒಂದು ಜೊತೆ ಕಿವಿಯ ಉಂಗುರ ಮತ್ತು ನಾಲ್ಕು ಚಿನ್ನದ ಬಳೆಗಳನ್ನು ಅವಳು ದೇಶದ ಸ್ವಾತಂತ್ರ್ಯಕ್ಕಾಗಿ ಅರ್ಪಿಸಿಬಿಟ್ಟಳು.[೪೯]

೧೯೨೧ರ ಅಕ್ಟೋಬರ್ ೫ರಂದು ವಲ್ಲಭಭಾಯ್‌ರವರು ಮಹಾತ್ಮ ಗಾಂಧೀಜಿ, ಸಿ.ಆರ್. ದಾಸ್, ಮೋತಿಲಾಲ್ ನೆಹರು, ಜವಹರ್‌ಲಾಲ್ ನೆಹರು, ಲಾಲಾ ಲಜಪತರಾಯ್, ರಾಜಗೋಪಾಲಾಚಾರಿ ಮತ್ತು ಸರೋಜಿನಿ ನಾಯ್ಡು ರವರೊಡನೆ ಸೇರಿ 'ಸರ್ಕಾರದೊಡನೆ ತನ್ನ ಸಂಬಂಧವನ್ನು ಕಡಿದುಕೊಳ್ಳುವುದು ಭಾರತದ ಪ್ರತಿಯೊಬ್ಬ ಸೈನಿಕ ಮತ್ತು ನಾಗರಿಕನ ಕರ್ತವ್ಯ' ಎಂದು ಸಾರ್ವಜನಿಕ ಪ್ರಕಟಣೆಯಲ್ಲಿ ಘೋಷಿಸಿದರು.[೫೦]

ಜುಲೈ ೧೯೨೧ರಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಗಾಂಧೀಜಿಯವರ ಸೂಚನೆಯಂತೆ ರಾಜಕುಮಾರ ವೇಲ್ಸ್‌ನ ಭಾರತದ ಭೇಟಿಯನ್ನು ಬಹಿಷ್ಕರಿಸಬೇಕೆಂದು ತೀರ್ಮಾನಿಸಿತು. ವೇಲ್ಸ್‌ನ ರಾಜಕುಮಾರನು ೧೯೨೧ರ ನವೆಂಬರ್ ೧೭ರಂದು ಬೊಂಬಾಯಿಗೆ ಬಂದನು. ಅವನು ಹೋದ ಕಡೆಯಲ್ಲೆಲ್ಲಾ ಮುಚ್ಚಿದ ಕಿಟಕಿ ಬಾಗಿಲುಗಳು ಮತ್ತು ಜನರಹಿತ ರಸ್ತೆಗಳು ಅವನನ್ನು ಸ್ವಾಗತಿಸಿದುವು. ಕೋಪಗೊಂಡ ಸರ್ಕಾರವು ಇಡೀ ದೇಶದಲ್ಲಿ ಸಭೆಗಳನ್ನು ನಿಷೇಧಿಸಿತು ಮತ್ತು ಅಸಹಕಾರಿ ಸತ್ಯಾಗ್ರಹಿಗಳನ್ನು ಬಂಧಿಸಿತು. ೧೯೨೧ರ ಅಂತ್ಯದ ಹೊತ್ತಿಗೆ ಚಿತ್ತರಂಜನ ದಾಸ್, ಲಜಪತ ರಾಯ್, ಮೋತಿಲಾಲ್ ನೆಹರು, ಜವಹರ ಲಾಲ್ ನೆಹರು, ರಾಜಗೋಪಾಲಾಚಾರಿ, ಅಬುಲ್ ಕಲಮ್ ಆಜ಼ಾದ್, ಸುಭಾಷ್ ಚಂದ್ರ ಬೋಸ್ ಸೇರಿ ಸುಮಾರು ೩೦,೦೦೦ ಮಂದಿ ಸೆರೆಮನೆಗೆ ದೂಡಲ್ಪಟ್ಟರು. ಆದರೆ ಸರ್ಕಾರವು ಗಾಂಧೀಜಿಯನ್ನು ದಸ್ತಗಿರಿ ಮಾಡಲಿಲ್ಲ. ಗಾಂಧೀಜಿಯ ದಸ್ತಗಿರಿಯ ಪರಿಣಾಮದ ಬಗೆಗೆ ಸರ್ಕಾರಕ್ಕೆ ಭಾರಿ ಭಯವಿತ್ತು.

ಗಾಂಧೀಜಿಯವರ ಈ ಅಖಿಲ ಭಾರತ ಚಟುವಟಿಕೆಗಳ ಸಮಯದಲ್ಲಿ ವಲ್ಲಭಭಾಯ್‌ರವರು ಗುಜರಾತ್‌ನಲ್ಲೇ ಉಳಿದು ನಿಧಿ ಸಂಗ್ರಹಣೆ, ಹೋರಾಟಗಾರರ ದಾಖಲೆ, ಸಭೆಗಳ ಏರ್ಪಾಟು ಮುಂತಾದ ಕಾರ್ಯಗಳಲ್ಲಿ ತೊಡಗಿಕೊಂಡರು. ಅಕ್ಟೋಬರ್ ೨೧ರಲ್ಲಿ ಸೂರತ್‌ನ ಹೊರಗೆ ಒಂದು ಹಳ್ಳಿಯಲ್ಲಿ ನಡೆದ ಸಭೆಯನ್ನು ಒಬ್ಬ ವೀಕ್ಷಕ ಈ ರೀತಿ ವರ್ಣಿಸಿದ್ದಾನೆ:

> ಅದು ಸುಮಾರು ೫೦,೦೦೦ ಮಂದಿ ನೆರೆದಿದ್ದ ಬೃಹತ್ ಸಭೆ. ಯಾವ ದಿಕ್ಕಿನಲ್ಲೇ ನಾನು ಕಣ್ಣು ಹಾಯಿಸಿದರೂ ಖಾದಿ ಟೋಪಿಗಳು ಮತ್ತು ಖಾದಿ ಅಂಗಿಗಳೇ ಕಣ್ಣಿಗೆ ಬೀಳುತ್ತಿದ್ದುವು. ಇಂತಹ ಖಾದಿ ಧರಿಸಿದ ಭಾರಿ ಜನ ಸಮೂಹವನ್ನು ನಾನು ಹಿಂದೆಂದೂ ನೋಡಿರಲಿಲ್ಲ.[೫೧]

ಆ ಸಮಯದಲ್ಲಿ ನಡೆದ ಒಂದು ಘಟನೆ ಪಟೇಲರ ವರ್ಚಸ್ಸಿಗೆ ಸಾಕ್ಷಿ: ಚಾರ್ಕೋಲಿ ತಾಲ್ಲೂಕಿನ ವರದ್ ಹಳ್ಳಿಯ ರಾಷ್ಟ್ರೀಯ ಶಾಲಾ ಉಪಾಧ್ಯಾಯನಾಗಿದ್ದ ಮತ್ತು ಮದ್ಯಪಾನದ ವಿರುದ್ಧ ಪ್ರಚಾರ ಮಾಡುತ್ತಿದ್ದ ಮಕನ್ಜಿಭಾಯ್ ಎನ್ನುವವರ ಮೇಲೆ ಹೆಂಡದಂಗಡಿಯ ಮಾಲೀಕ ಜಹಂಗೀರನು ಒಂದು ಸಂಜೆ ಹಲ್ಲೆ ನಡೆಸಿದನು. ಇದು ತಿಳಿದು ವರದ್ ಹಳ್ಳಿಯವರು ಜಹಂಗೀರನ ಮನೆಯ ಕಡೆಗೆ ಧಾವಿಸಿದರು. ಜಹಂಗೀರನ ಮನೆಯನ್ನು ಸುಡುವುದು ಅವರ ಉದ್ದೇಶವಾಗಿತ್ತು. ಮಾರ್ಗ ಮಧ್ಯದಲ್ಲಿ ಒಬ್ಬ ವೃದ್ಧೆ ಅವರನ್ನು ತಡೆದು 'ಮಹಾತ್ಮಾಜಿಗೆ ಇದು ತಿಳಿದಾಗ ನಿಮಗೆ ಹೇಗೆ ಅನ್ನಿಸುತ್ತದೆ?' ಎಂದು ಕಿರುಚಿದಳು. ಅಷ್ಟು ಹೊತ್ತಿಗೆ ವಿಷಯ ತಿಳಿದ ಬಾರ್ಡೋಲಿಯ ಒಬ್ಬ ಪ್ರಮುಖ ಪಟಿದಾರ್ ಚಳವಳಿಗಾರ ಕನ್ವರ್ಜಿ ಮೆಹ್ತ ಅಲ್ಲಿಗೆ ಧಾವಿಸಿ ಬಂದರು. ಅವರು ವಲ್ಲಭಭಾಯ್ ಬರುವವರೆಗೆ ಜಹಂಗೀರನಿಗೆ ಏನೂ ಮಾಡಬಾರದೆಂದು ಒತ್ತಾಯಿಸಿದರು. ಹಳ್ಳಿಯವರು ಒಪ್ಪಿದರು.

ಕನ್ವರ್ಜಿಭಾಯ್‌ರವರು ಎರಡು ದಿನಗಳ ನಂತರ ಒಂದು ಸಭೆಯನ್ನು ಉದ್ದೇಶಿಸಿ ವಲ್ಲಭಭಾಯ್‌ರವರು ಭಾಷಣ ಮಾಡುವರೆಂದು ಕರ ಪತ್ರವನ್ನು, ವಲ್ಲಭಭಾಯ್‌ರವರ ಅನುಮತಿ ಇಲ್ಲದೆಯೆ ಮುದ್ರಿಸಿ ಹಂಚಿದರು ಮತ್ತು ಅದನ್ನು ಹಾಗೂ ಸಂದರ್ಭವನ್ನು ವಿವರಿಸುವ ಒಂದು ಪತ್ರವನ್ನು ವಲ್ಲಭಭಾಯ್‌ರವರಿಗೆ ಕಳುಹಿಸಿದರು. ಅವರು ಆ ಕರಪತ್ರದಲ್ಲಿ ವಲ್ಲಭಭಾಯ್‌ರವರನ್ನು 'ಗುಜರಾತ್‌ನ ಸುಬ' ಎಂದು ಕರೆದಿದ್ದರು. ಅಂದಿನಿಂದ ಬಹಳ ಜನ ಪಟೇಲರನ್ನು 'ಗುಜರಾತ್‌ನ ಸುಬ' (ಆಡಳಿತಗಾರ ಅಥವಾ ರಾಜ) ಎಂದು ಕರೆಯಲಾರಂಭಿಸಿದರು.

ಕನ್ವರ್ಜಿ ಕರೆದಿದ್ದ ಸಭೆಗೆ ವಲ್ಲಭಭಾಯ್ ಬಂದರು. ಅವರು ಜಹಂಗೀರನನ್ನು ಕರೆಯಿಸಿ ಅವನು ಗಾಯದ ಪಟ್ಟಿಗಳಿಂದ ಆವೃತನಾಗಿದ್ದ ಮಕನ್ಜಿಭಾಯ್ ಪಕ್ಕದಲ್ಲಿ ಕುಳಿತುಕೊಳ್ಳುವಂತೆ ಮಾಡಿದರು ಮತ್ತು ಮಕನ್ಜಿಭಾಯ್‌ಯ ಕ್ಷಮೆ ಕೋರುವಂತೆ ಸೂಚಿಸಿದರು. ಜಹಂಗೀರನು ಕ್ಷಮೆ ಕೋರಿದನು. ಅನಂತರ ವಲ್ಲಭಭಾಯ್‌ರವರು ಜಹಂಗೀರನನ್ನು ಕ್ಷಮಿಸುವಂತೆ ಅಲ್ಲಿ ಸೇರಿದ್ದ ಹಳ್ಳಿಯವರಿಗೆ ಹೇಳಿದರು. ಹಳ್ಳಿಯವರು ಇಷ್ಟಪಟ್ಟೋ ಅಥವಾ ಇಷ್ಟವಿಲ್ಲದ ಮನಸ್ಸಿನಿಂದಲೋ ಒಪ್ಪಿದರು. 'ಹೀಗೆ ಹಳಿ ತಪ್ಪುತ್ತಿದ್ದ ರೈಲನ್ನು ಹಳಿಯ ಮೇಲಕ್ಕೆ ವಾಪಸ್ಸು ತಂದರು ವಲ್ಲಭಭಾಯ್‌ರವರು', ಎಂದಿದ್ದಾರೆ ಕನ್ವರ್ಜಿ.[೫೨]

೪.೫. ಮತ್ತೆ ಅಹಮದಾಬಾದ್ ಪುರಸಭೆಯಲ್ಲಿ

೧೯೧೮ರಲ್ಲಿ ಕೈಡಾ ಚಳವಳಿ ಮುಕ್ತಾಯವಾದ ನಂತರ ಪಟೇಲರು ಅಹಮದಾಬಾದ್‌ನ ತಮ್ಮ ಮನೆಗೆ ಹಾಗೂ ಪುರಸಭೆಗೆ ಹಿಂತಿರುಗಿದ್ದರು. ಅವರು ಕೈಡಾ ಹೋರಾಟದಲ್ಲಿ ಸಕ್ರಿಯವಾಗಿದ್ದಾಗ ಅವರ ಮಗಳು ಮಣಿ ಮತ್ತು ಮಗ ದಹ್ಯನನ್ನು ಮಾವಲಂಕರ್ ದಂಪತಿ ನೋಡಿಕೊಳ್ಳುತ್ತಿದ್ದರು.

೧೯೧೯ರಲ್ಲಿ ಮತ್ತೆ ಪುರಸಭಾ ಚುನಾವಣೆ ನಡೆದು ಪಟೇಲರ ಬೆಂಬಲಿಗರು ಹೆಚ್ಚು ಸಂಖ್ಯೆಯಲ್ಲಿ ಚುನಾಯಿತರಾದರು. ಅದರಿಂದ ಪುರಸಭೆಯಲ್ಲಿ ಅವರ ಕೆಲಸ ಹೆಚ್ಚು ಸುಗಮವಾಯಿತು. ಆ ವೇಳೆಗೆ ಅವರು ರಾಜಕೀಯ ಕ್ಷೇತ್ರವನ್ನು ಪ್ರವೇಶಿಸಿ ರೌಲತ್ ಕಾಯಿದೆಗಳ ವಿರುದ್ಧದ ಹೋರಾಟದಲ್ಲಿಯೂ ಭಾಗವಹಿಸುತ್ತಿದ್ದರು. ಆದರೆ ಪುರಸಭಾ ಚಟುವಟಿಕೆಗಳನ್ನು ರಾಷ್ಟ್ರೀಯ ರಾಜಕೀಯದಿಂದ ದೂರವಿಟ್ಟಿದ್ದರು. ಆದಾಗ್ಯೂ ೧೯೨೦ರಲ್ಲಿ ಗಾಂಧೀಜಿಯವರು ಅಹಿಂಸಾತ್ಮಕ ಅಸಹಕಾರ ಚಳವಳಿಯನ್ನು ಘೋಷಿಸಿ, ಅದರ ಅಂಗವಾಗಿ ಸರ್ಕಾರಿ ಶಾಲೆಗಳ ಬಹಿಷ್ಕಾರ ಮತ್ತು ರಾಷ್ಟ್ರೀಯ ಶಾಲೆಗಳ ಸ್ಥಾಪನೆಗೆ ಕರೆ ಕೊಟ್ಟ ಮೇಲೆ ಪುರಸಭೆ ನಡೆಸುತ್ತಿದ್ದ ಶಾಲೆಗಳನ್ನು ಸರ್ಕಾರದ ಹತೋಟಿ ಮತ್ತು ಮೇಲ್ವಿಚಾರಣೆಯಿಂದ ಮುಕ್ತಗೊಳಿಸಲು ಹೋರಾಡುವಂತೆ ಪಟೇಲರು ಪುರಸಭೆಯನ್ನು ಒತ್ತಾಯಿಸಿದರು. ಹಾಗೆ ಮಾಡುವುದರಿಂದ ಪುರಸಭೆಯು ಸರ್ಕಾರ ನೀಡುತ್ತಿದ್ದ ಸಹಾಯ ಧನವನ್ನು ಕಳೆದುಕೊಳ್ಳುತ್ತಿತ್ತು. ಆದಾಗ್ಯೂ ಆ ತ್ಯಾಗಕ್ಕೆ ಪುರಸಭೆಯು ಸಿದ್ಧವಾಗಿತ್ತು. ಆದರೆ ಪುರಸಭಾ ಶಾಲೆಗಳ ಮೇಲಿನ ತನ್ನ ಹಿಡಿತವನ್ನು ಬಿಟ್ಟುಕೊಡಲು ಸರ್ಕಾರವೇ ಸಿದ್ಧವಿರಲಿಲ್ಲ. ವಲ್ಲಭಭಾಯ್‌ರವರಂತಹ ಸರ್ಕಾರದ ವಿರೋಧಿಗಳ ಪ್ರಭಾವಕ್ಕೆ ಎಳೆಯ ಮಕ್ಕಳು ಒಳಗಾಗಬಹುದೆಂಬ ಭಯ ಸರ್ಕಾರಕ್ಕೆ ಇತ್ತು. ಅದರಿಂದ ಅದು ಪುರಸಭೆಯ ಯತ್ನವನ್ನು ವಿರೋಧಿಸಿತು. ಕಮಿಷನರನು ಪುರಸಭೆಯ

ಠರಾವನ್ನು ಅದರ ಅಧಿಕಾರ ವ್ಯಾಪ್ತಿಗೆ ಮೀರಿದ್ದು ಎಂದು ಪ್ರಕಟಿಸಿದನು. ಪುರಸಭೆಯು ಅವನ ಪ್ರಕಟಣೆಗೆ ಸೊಪ್ಪು ಹಾಕದೆ, ತಮ್ಮ ಶಾಲೆಗಳನ್ನು ಸರ್ಕಾರಿ ಅಧಿಕಾರಿಗಳು ತನಿಖೆ ಮಾಡಲು ಅವಕಾಶವನ್ನು ನಿರಾಕರಿಸಿತು. ಸರ್ಕಾರವು ಪುರಸಭೆಯ ಶಾಲೆಗಳಿಗೆ ತನ್ನ ಉಪಾಧ್ಯಾಯರನ್ನು ಎರವಲು ನೀಡಿತ್ತು. ಅಂತಹ ಎರವಲು ಶಿಕ್ಷಕರನ್ನು ಸರ್ಕಾರವು ಹಿಂದಕ್ಕೆ ಕರೆಯಿಸಿಕೊಳ್ಳಬೇಕೆಂದು ಪುರಸಭೆಯು ಆಗ್ರಹಿಸಿತು. ಆದರೆ ಅಷ್ಟೊಂದು ಸಂಖ್ಯೆಯ ಶಿಕ್ಷಕರನ್ನು (ಸುಮಾರು ೪೦೦ ಮಂದಿ ಶಿಕ್ಷಕರನ್ನು) ವಾಪಸ್ಸು ಕರೆಯಿಸಿಕೊಂಡು ಅವರನ್ನು ಬೇರೆ ಕಡೆಗೆ ನಿಯೋಜಿಸಲು ಸರ್ಕಾರಕ್ಕೆ ಸಾಧ್ಯವಿರಲಿಲ್ಲ. ಅದರಿಂದ ಅದು ಅವರನ್ನು ಸೇವೆಯಿಂದ ಕೈ ಬಿಡಬೇಕಾಗುತ್ತಿತ್ತು. ಆ ಕಾರಣಕ್ಕಾಗಿ ಶಿಕ್ಷಕರು ಆತಂಕಕ್ಕೆ ಒಳಗಾದರು. ಆದರೆ ವಲ್ಲಭಭಾಯ್‌ರವರು ಅಂತಹ ಶಿಕ್ಷಕರನ್ನು ಪುರಸಭೆಯೇ ಉಳಿಸಿಕೊಂಡು ಅವರಿಗೆ ಸಂಬಳ ಮತ್ತು ವಿಶ್ರಾಂತಿ ವೇತನವನ್ನು ಪುರಸಭೆಯೇ ನೀಡುವುದಾಗಿ ಆಶ್ವಾಸನೆ ನೀಡಿದರು.[೫೩]

ಪುರಸಭೆಯು ಜಗ್ಗದೇ ಹೋದಾಗ ಬೊಂಬಾಯಿ ಪ್ರಾಂತ್ಯದ ಶಿಕ್ಷಣ ಮಂತ್ರಿ ಸರ್. ರಘುನಾಥ್ ಪರಾಂಜಪೆಯವರು ವಿಷಯದ ಚರ್ಚೆಗಾಗಿ ಅಹಮದಾಬಾದ್‌ಗೆ ಬಂದರು. ಆದರೆ ಪುರಸಭೆಯು ಅವರ ಮಾತಿಗೂ ಬಗ್ಗಲಿಲ್ಲ. ವಲ್ಲಭಭಾಯ್‌ರವರು ಅವರನ್ನು ನೇರವಾಗಿ ಕೇಳಿದರು, "ನಿಮ್ಮೊಡನೆ ಒಪ್ಪಂದಕ್ಕೆ ಬರಲು ನಮಗೆ ಪುರಸಭೆಯಿಂದ ಅಧಿಕಾರ ದೊರಕಿದೆ. ಆದರೆ ಗೌರ್ನರ್‌ರವರ ಅನುಮತಿ ಇಲ್ಲದೆ ಈ ವಿಷಯದಲ್ಲಿ ನೀವು ತೀರ್ಮಾನಿಸಲು ಸಾಧ್ಯವೇ?" ಈ ನೇರ ಮತ್ತು ಒರಟು ಪ್ರಶ್ನೆಗೆ ಮಂತ್ರಿ ಪರಾಂಜಪೆಯವರು ಉತ್ತರ ನೀಡಲಾಗಲಿಲ್ಲ. ಅವರ ಸಂಧಾನ ವಿಫಲವಾಯಿತು. ನಂತರ, ಶಾಲೆಗಳನ್ನು ಮತ್ತು ಬಜೆಟ್‌ನಲ್ಲಿ ನೀಡಿರುವ ೭೫,೦೦೦ ರೂಪಾಯಿಗಳನ್ನು ಸರ್ಕಾರಕ್ಕೆ ಹಸ್ತಾಂತರಿಸುವಂತೆ ಕಮಿಷನರನು ಪುರಸಭೆಗೆ ಆದೇಶಿಸಿದನು. ಅದಕ್ಕೆ ಉತ್ತರವಾಗಿ ಪುರಸಭೆಯು ಶಾಲೆಗಳಿಗೆ ಒಂದು ತಿಂಗಳ ರಜೆಯನ್ನು ಘೋಷಿಸಿತು. ಕಮಿಷನರನು ಸರ್ಕಾರವು ಪುರಸಭೆಯನ್ನೇ ರದ್ದು ಮಾಡುವಂತೆ ಮತ್ತು ಅದರ ನಿರ್ವಹಣೆಗೆ ಒಂದು ಸಮಿತಿಯನ್ನು ರಚಿಸುವಂತೆ ಮಾಡಿದನು. ವಲ್ಲಭಭಾಯ್‌ರವರು ಸರ್ಕಾರದ ಈ ಕ್ರಮವನ್ನು ಖಂಡಿಸಿದರು ಮತ್ತು ಸರ್ಕಾರಕ್ಕೆ ಪ್ರತಿ ಸ್ಪರ್ಧಿಯಾಗಿ ಶಾಲೆಗಳನ್ನು ನಡೆಸಲು 'ಜನತಾ ಶಿಕ್ಷಣ ಮಂಡಳಿ'ಯನ್ನು ರಚಿಸಿದರು ಮತ್ತು ಧನ ಸಹಾಯಕ್ಕಾಗಿ ಸಾರ್ವಜನಿಕರಿಗೆ ವಿನಂತಿ ಸಲ್ಲಿಸಿದರು. ಅವರ ಮನವಿಗೆ ಜನರು ಉತ್ಸಾಹದಿಂದ ಪ್ರತಿಕ್ರಯಿಸಿದರು. ಅಲ್ಪ ಕಾಲದಲ್ಲಿಯೇ ಒಂದೂಕಾಲು ಲಕ್ಷ ರೂಪಾಯಿ ಸಂಗ್ರಹವಾಯಿತು. ಜನತಾ ಶಿಕ್ಷಣ ಮಂಡಳಿಯು ೮,೪೦೦ ವಿದ್ಯಾರ್ಥಿಗಳಿರುವ ೪೩

ಶಾಲೆಗಳನ್ನು ನಡೆಸಿತು. ಸರ್ಕಾರ ರಚಿಸಿದ ಮಂಡಳಿಯ ೫೩ ಶಾಲೆಗಳಲ್ಲಿ ಕೇವಲ ೨೦೦೦ ವಿದ್ಯಾರ್ಥಿಗಳು ಮಾತ್ರ ಇದ್ದರು. ಈ ರೀತಿಯಲ್ಲಿ ಎರಡು ವರ್ಷಗಳು ನಡೆದುವು. ಅಷ್ಟು ಹೊತ್ತಿಗೆ ಸರ್ಕಾರವು ಪುರಸಭೆಯ ರದ್ದತಿಯನ್ನು ವಾಪಸ್ಸು ತೆಗೆದುಕೊಂಡಿತು ಮತ್ತು ಪುರಸಭೆಯು ಪೂರ್ಣ ಅಧಿಕಾರದೊಡನೆ ಕಾರ್ಯಾರಂಭ ಮಾಡಿತು. ಜನತಾ ಶಿಕ್ಷಣ ಮಂಡಳಿಯ ಶಾಲೆಗಳನ್ನು ಹೊಸ ಪುರಸಭೆ ವಹಿಸಿಕೊಂಡಿತು. ಅಲ್ಲಿಗೆ ಸರ್ಕಾರ ಮತ್ತು ಪುರಸಭೆಯ ನಡುವಣ ಹೋರಾಟ ನಿಂತಿತು. ಈ ಹೋರಾಟದಲ್ಲಿ ವಲ್ಲಭಭಾಯ್‌ರವರ ಚತುರತೆ, ನಿರ್ಭಯತೆ ಮತ್ತು ಗಟ್ಟಿತನ ಪ್ರಕಟವಾಯಿತು.[೫೪]

೪.೬ ಅಹಮದಾಬಾದ್ ಕಾಂಗ್ರೆಸ್ ಅಧಿವೇಶನ

ಕಾಂಗ್ರೆಸ್ಸಿನ ೩೬ನೆ ವಾರ್ಷಿಕ ಅಧಿವೇಶನವು ೧೯೨೧ರ ಡಿಸೆಂಬರ್ ತಿಂಗಳಲ್ಲಿ ಅಹಮದಾಬಾದ್‌ನಲ್ಲಿ ನಡೆಯಿತು. ವಲ್ಲಭಭಾಯ್ ಪಟೇಲರು ಅದರ ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದರು. ಆ ವೇಳೆಗೆ ಕಾಂಗ್ರೆಸ್ ಸಂಪೂರ್ಣವಾಗಿ ಗಾಂಧೀಜಿಯ ಹಿಡಿತಕ್ಕೆ ಬಂದಿತ್ತು.

ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ವಲ್ಲಭಭಾಯ್ ಪಟೇಲರು ಕಾಂಗ್ರೆಸ್ ಇತಿಹಾಸದಲ್ಲೇ ಅತ್ಯಂತ ಚಿಕ್ಕದಾದ ಸ್ವಾಗತ ಭಾಷಣವನ್ನು ಮಾಡಿದರು. ಅವರು, "ಸ್ವರಾಜ್ಯ ಸ್ಥಾಪನೆಯ ಮಹೋತ್ಸವವನ್ನು ಆಚರಿಸಲು ನಾವು ಇಲ್ಲಿ ಸೇರುತ್ತೇವೆ ಮತ್ತು ಅಂತಹ ಉತ್ಸವಕ್ಕೆ ತಕ್ಕದಾದ ಸ್ವಾಗತವನ್ನು ಏರ್ಪಡಿಸುತ್ತೇವೆ ಎಂದು ಆಶಿಸಿದ್ದೆವು. ಆದರೆ ಅಂತಹ ಸಂತೋಷದ ಸಂಗತಿಗಾಗಿ ನಾವಿಲ್ಲಿ ಸೇರದಿದ್ದರೂ, ದಯಾಮಯನಾದ ಭಗವಂತನು ನಾವು ಅಂತಹ ಅಮೂಲ್ಯ ವರಕ್ಕೆ ಯೋಗ್ಯರಾಗುವಂತೆ ಮಾಡುವುದಕ್ಕಾಗಿ ನಮಗೆ ಯಾತನೆಗಳನ್ನು ಕಳುಹಿಸಿದ್ದಾನೆ," ಎಂದರು. ಸರ್ಕಾರವು ಮಾಡಿದ ಇತ್ತೀಚಿನ ದಸ್ತಗಿರಿಗಳು, ಆಕ್ರಮಣಗಳು, ಕಾಂಗ್ರೆಸ್ ಕಛೇರಿಗಳು ಹಾಗೂ ರಾಷ್ಟ್ರೀಯ ಶಾಲೆಗಳ ಬಲಾತ್ಕಾರದ ಪ್ರವೇಶ ಮತ್ತು ಶೋಧನೆಗಳು ಸ್ವರಾಜ್ಯವು ಹತ್ತಿರ ಹತ್ತಿರವಾಗುತ್ತಿರುವುದಕ್ಕೆ ಖಚಿತವಾದ ಸೂಚನೆಗಳು ಎಂದು ಅವರು ಅಭಿಪ್ರಾಯ ಪಟ್ಟರು. ಈ ಸ್ವರಾಜ್ಯವು ನಮ್ಮ ಮುಸ್ಲಿಂ ಮತ್ತು ಪಂಜಾಬಿ ಸಹೋದರರಿಗೆ ಉಂಟಾಗಿರುವ ಗಾಯಕ್ಕೆ ಹಚ್ಚಲು ಮುಲಾಮಿನಂತೆ ಬರುತ್ತಿದೆ – ಎಂದೂ ಸಹ ಅವರು ತಮ್ಮ ಸ್ವಾಗತ ಭಾಷಣದಲ್ಲಿ ಹೇಳಿದರು. ಮುಂದುವರೆದು ಅವರು, "ನಾವು ಆಲೋಚನೆ, ಮಾತು ಮತ್ತು ಕಾರ್ಯಗಳಲ್ಲಿ ಅಹಿಂಸಾತ್ಮಕವಾಗಿರಲು ಶ್ರಮಿಸುತ್ತಿದ್ದೇವೆಂದು ನಾನು ಪ್ರಾಮಾಣಿಕವಾಗಿ ಹೇಳುತ್ತೇನೆ..... ಅದಕ್ಕೆ ಅತ್ಯಂತ ಉತ್ತಮವಾದ ಸಾಕ್ಷಿ ಹಿಂದೂ – ಮುಸ್ಲಿಂ ಐಕ್ಯತೆ..... ನಮ್ಮ

ಮೈತ್ರಿ ಹೃದಯದಿಂದ ಬಂದದ್ದು ಮತ್ತು ನಾವು ರಾಷ್ಟ್ರೀಯ ಕಾರಣಗಳಿಗಾಗಿ ಒಟ್ಟಿಗೆ ಕೆಲಸ ಮಾಡುತ್ತಿದ್ದೇವೆ ಎಂದು ನಾನು ಹೆಮ್ಮೆಯಿಂದ ಹೇಳುತ್ತೇನೆ. ಅದೇ ರೀತಿಯಲ್ಲಿ ನಾವು ಪಾರ್ಸಿಗಳು, ಕ್ರೈಸ್ತರು ಮತ್ತು ಇತರ ಸಮುದಾಯ ದವರೊಡನೆಯೂ ಸ್ನೇಹವನ್ನು ಸ್ಥಾಪಿಸಿದ್ದೇವೆ," ಎಂದರು.[೫೫]

ಅಧಿವೇಶನ ನಡೆಯುವ ಸ್ಥಳಕ್ಕೆ 'ಖಾದಿ ನಗರ' ಎಂದು ಹೆಸರಿಟ್ಟಿದ್ದರು. ವಿವಿಧ ಸಭಾಂಗಣಗಳನ್ನು ಖಾದಿಯಲ್ಲಿ ನಿರ್ಮಿಸಿದ್ದರು. ಪಟೇಲರು ತಮ್ಮ ಸ್ವಾಗತ ಭಾಷಣದಲ್ಲಿ ಈ ಖಾದಿ ಬಳಕೆಯನ್ನು ಪ್ರಸ್ತಾಪಿಸಿ 'ಇದು ಸ್ವದೇಶಿಯ ಕಡೆಗೆ ನಮ್ಮ ವಿಶಿಷ್ಟ ಹೆಜ್ಜೆ' ಎಂದರು. ಈ ಸ್ವದೇಶಿ ಪರಿಕಲ್ಪನೆಯನ್ನು ಮೊದಲು ಬಿತ್ತಿ ಹರಡಿದವರು ಲೋಕಮಾನ್ಯ ಬಾಲಗಂಗಾಧರ ತಿಲಕರು. ಅದನ್ನು ಗಾಂಧೀಜಿಯವರು ಸ್ವಾತಂತ್ರ್ಯ ಹೋರಾಟದ ಒಂದು ಅವಿಭಾಜ್ಯ ಅಂಗವನ್ನಾಗಿ ಮಾಡಿದ್ದರು ಮತ್ತು ತಮ್ಮ ರಚನಾತ್ಮಕ ಕಾರ್ಯಕ್ರಮಗಳ, ಅದರಲ್ಲೂ ಗ್ರಾಮೋದ್ಧಾರ ಕಾರ್ಯಕ್ರಮಗಳ, ಒಂದು ಪ್ರಧಾನ ತತ್ವವನ್ನಾಗಿ ಅಳವಡಿಸಿದ್ದರು. ಪಟೇಲರು ತಮ್ಮ ಸ್ವಾಗತ ಭಾಷಣದಲ್ಲಿ ಪ್ರಸ್ತಾಪಿಸಿದ ಮತ್ತೊಂದು ಪ್ರಮುಖ ವಿಷಯ 'ಅಸ್ಪೃಶ್ಯತೆ'. ಅವರು ಹೆಮ್ಮೆಯಿಂದ ಹೀಗೆ ಹೇಳಿದರು:

> ನಾವು ಅತ್ಯಂತ ಹೆಚ್ಚಿನ ಪ್ರಗತಿ ಸಾಧಿಸಿರುವುದು ಅಸ್ಪೃಶ್ಯತೆಯ ವಿಷಯದಲ್ಲಿ. ತುಳಿಯಲ್ಪಟ್ಟಿದ್ದ ನಮ್ಮ ದೇಶ ಬಾಂಧವರು ಈಗ ನಮ್ಮ ಸಭೆಗಳಲ್ಲಿ ಸಲೀಸಾಗಿ ಭಾಗವಹಿಸುತ್ತಿದ್ದಾರೆ.

ಅಹಮದಾಬಾದ್ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆಯನ್ನು ದೇಶಬಂಧು ಚಿತ್ತರಂಜನ ದಾಸ್‌ರವರು ವಹಿಸಬೇಕಾಗಿತ್ತು. ಆದರೆ ಅವರು ಸೆರೆಮನೆಯಲ್ಲಿದ್ದರು. ವೇಲ್ಸ್ ರಾಜಕುಮಾರನ ಭೇಟಿಯ ವಿರುದ್ಧ ಕಲ್ಕತ್ತದಲ್ಲಿ ಪ್ರತಿಭಟನೆಯನ್ನು ಹೂಡಿದ್ದರ ಸಂಬಂಧವಾಗಿ ಸರ್ಕಾರವು ಅವರನ್ನು ದಸ್ತಗಿರಿ ಮಾಡಿತ್ತು. ಅವರ ಅನುಪಸ್ಥಿತಿಯಲ್ಲಿ ದೆಹಲಿಯ ಹಕೀಮ್ ಅಜ್ಮಲ್ ಖಾನ್‌ರವರು ಅಧ್ಯಕ್ಷತೆಯನ್ನು ವಹಿಸಿದ್ದರು. ತಮ್ಮ ಸ್ವಾಗತ ಭಾಷಣದಲ್ಲಿ ಅದರ ಬಗ್ಗೆ ಪಟೇಲರು ಹೀಗೆ ನುಡಿದರು:

> "ದೇಶಬಂಧುರವರು ಶಾರೀರಕವಾಗಿ ನಮ್ಮ ನಡುವೆ ಇಲ್ಲದಿದ್ದರೂ ಅವರ ಶುದ್ಧ ದೇಶಭಕ್ತಿಯ ಮತ್ತು ಸ್ವಾರ್ಥ ತ್ಯಾಗದ ಭಾವ ನಮ್ಮೊಡನೆ ಇದೆ. ಹಿಂದೂ ಮುಸ್ಲಿಂ ಮೈತ್ರಿಯ ಪ್ರತೀಕವಾದ ಹಕೀಂ ಅಜ್ಮಲ್ ಖಾನ್‌ರವರು ಅತ್ಯಂತ ಶ್ರೇಷ್ಠ ಮತ್ತು ಉದಾತ್ತ ದೇಶ ಬಾಂಧವರ ಪೈಕಿ ಒಬ್ಬರು."[೫೬]

ದೇಶಬಂಧುರವರ ಲಿಖಿತ ಭಾಷಣವನ್ನು ಅಜ್ಮಲ್ ಖಾನ್‌ರವರು ಅಧಿವೇಶನದಲ್ಲಿ ಓದಿದರು.

ಒಂದು ವರ್ಷದೊಳಗೆ ಸ್ವಾತಂತ್ರ್ಯವನ್ನು ತರುವುದಾಗಿ ಗಾಂಧೀಜಿಯವರು ವಾಗ್ದಾನ ಮಾಡಿದ್ದರು. ಅದನ್ನು ತಮ್ಮ ಸ್ವಾಗತ ಭಾಷಣದಲ್ಲಿ ಪ್ರಸ್ತಾಪಿಸಿದ ಪಟೇಲರು ಹೀಗೆ ನುಡಿದರು:

> "ಗಾಂಧೀಜಿಯವರ ವಾಗ್ದಾನವು ಶರತ್ತುಗಳಿಂದ ಕೂಡಿತ್ತು. ಜನರು ತಮ್ಮ ಉತ್ಸಾಹದಲ್ಲಿ ಆ ಶರತ್ತುಗಳನ್ನು ಮುರಿದಿದ್ದಾರೆ. ಆ ಶರತ್ತುಗಳನ್ನು ಅಷ್ಟು ಜಾಗ್ರತೆ ಯಾಗಿ ನೆರವೇರಿಸಲು ಸಾಧ್ಯವಿಲ್ಲ. ..... ಕಹಿ ಮತ್ತು ಕಷ್ಟದ ಹೋರಾಟದ ನಂತರ ಮಾತ್ರ ಸ್ವರಾಜ್ಯವನ್ನು ಪಡೆಯಲು ಸಾಧ್ಯ. ಜನರು ಅದಕ್ಕೆ ಸಿದ್ಧರಾಗಿರಬೇಕು."[೫೭]

ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ಪಟೇಲರು ಬಹಳ ಅಚ್ಚುಕಟ್ಟಾದ ಏರ್ಪಾಟುಗಳನ್ನು ಮಾಡಿದ್ದರು. ಅವರಿಗೆ ಪ್ರದರ್ಶನ ಮತ್ತು ಆಡಂಬರದಲ್ಲಿ ಆಸಕ್ತಿ ಇರಲಿಲ್ಲ. ಎಲ್ಲವನ್ನೂ ಸರಳವಾಗಿ, ಆದರೂ ಅಂದವಾಗಿ, ಏರ್ಪಡಿಸಿದ್ದರು. ಅನೇಕ ನವೀನತೆಗಳನ್ನು ಅಳವಡಿಸಿದ್ದರು. ಪ್ರತಿನಿಧಿಗಳು ಮತ್ತು ಸಭಿಕರು ಕುಳಿತುಕೊಳ್ಳಲು ಕುರ್ಚಿ ಮತ್ತು ಬೆಂಚುಗಳನ್ನು ಒದಗಿಸುವ ಪದ್ಧತಿಯನ್ನು ಕೈ ಬಿಟ್ಟು, ಅದಕ್ಕೆ ಬದಲಾಗಿ ಸಬರಮತಿ ನದಿಯ ದಡದ ಮರಳನ್ನು ನೆಲದ ಮೇಲೆ ಹರವಿ ಅದರ ಮೇಲೆ ಜಮಖಾನೆ ಮತ್ತು ಮೆತ್ತೆಗಳನ್ನು ಹಾಸಿದ್ದರು. ಅದರಿಂದ ಅಪಾರ ಹಣವೂ ಉಳಿಯಿತು; ಹೆಚ್ಚು ಮಂದಿ ಕುಳಿತುಕೊಳ್ಳಲು ಅನುಕೂಲವೂ ಆಯಿತು. ಬಂದವರೆಲ್ಲ ತಮ್ಮ ಪಾದರಕ್ಷೆಗಳನ್ನು ಜೋಪಾನವಾಗಿ ಇಟ್ಟುಕೊಳ್ಳುವುದಕ್ಕಾಗಿ ಅವರಿಗೆ ಒಂದು ಸಣ್ಣ ಖಾದಿ ಚೀಲವನ್ನು ನೀಡುವ ಏರ್ಪಾಟನ್ನು ಪಟೇಲರು ಮಾಡಿದ್ದರು. ಪಟೇಲರ ಈ ನಾವೀನ್ಯತೆಯಂತೂ ಬಹಳ ಅನುಕೂಲವಾಗಿತ್ತು. ಸಭಿಕರು ತಮ್ಮ ಪಾದರಕ್ಷೆಗಳ ಬಗೆಗೆ ಆತಂಕ ಪಡುವುದು ಮತ್ತು ಕೊನೆಯಲ್ಲಿ ಪಾದರಕ್ಷೆಗಳಿಗಾಗಿ ಹುಡುಕಾಡುವುದು ತಪ್ಪಿತು. ಊಟ, ವಸತಿ ಮತ್ತು ನೈರ್ಮಲ್ಯದ ಏರ್ಪಾಟುಗಳನ್ನೂ ಸಹ ಪಟೇಲರು ಬಹಳ ಚೆನ್ನಾಗಿ ಮಾಡಿದ್ದರು.[೫೮]

ಅಹಮದಾಬಾದ್‌ನಲ್ಲಿ ೧೯ ವರ್ಷಗಳ ನಂತರ ಕಾಂಗ್ರೆಸ್ ಅಧಿವೇಶನ ನಡೆಯುತ್ತಿತ್ತು. ಅಧಿವೇಶನವು ಬಹಳ ಸ್ಫೂರ್ತಿದಾಯಕ ನೋಟವಾಗಿತ್ತು. ಅಧಿಕ ಸಂಖ್ಯೆಯಲ್ಲಿ ಪುರುಷರು ಮತ್ತು ಮಹಿಳೆಯರು ಅಧಿವೇಶನದಲ್ಲಿ ಭಾಗವಹಿಸಿದ್ದರು. ಇಡೀ ವಾತಾವರಣ ದೇಶಪ್ರೇಮ, ಉತ್ಸಾಹ ಮತ್ತು ಸಂಭ್ರಮದಿಂದ ತುಂಬಿ

ತುಳುಕುತ್ತಿತ್ತು. ಅಧಿವೇಶನವು ಕ್ರಾಂತಿಕಾರಿಯಾಗಿತ್ತು. ಏಕೆಂದರೆ ಅದು ಜನರ ದೃಷ್ಟಿಕೋನವನ್ನೇ ಬದಲಾಯಿಸಿಬಿಟ್ಟಿತು.

ಅಧಿವೇಶನದ ಬಗೆಗೆ ಒಬ್ಬ ಪ್ರತ್ಯಕ್ಷದರ್ಶಿ ಹೀಗೆ ಹೇಳಿದ್ದಾನೆ:

> ಭಯವು ಜನರಿಂದ ಕಿತ್ತೆಸೆಯಲ್ಪಟ್ಟಿತು. ಜನರಲ್ಲಿ ಆತ್ಮ ಗೌರವ ಬೆಳೆಯಿತು. ಸೇವೆ ಮತ್ತು ಸ್ವಾರ್ಥತ್ಯಾಗ ಮಾತ್ರ ಜನರ ವಿಶ್ವಾಸವನ್ನು ಗಳಿಸುವ ಮಾರ್ಗ ಎನ್ನುವುದನ್ನು ಕಾಂಗ್ರೆಸ್ಸಿನವರು ಅರಿತರು. (ಬ್ರಿಟಿಷ್) ಸರ್ಕಾರದ ಗೌರವ ಅಲುಗಾಡಿತು ಮತ್ತು ಸ್ವರಾಜ್ಯದ ಪರಿಕಲ್ಪನೆಯ ಬಗೆಗೆ ಜನರು ಒಳ್ಳೆಯ ಪಾಠವನ್ನು ಕಲಿತರು.[೫೯]

ಬಂಗಾಳ ಕಾಂಗ್ರೆಸ್ ಸಮಿತಿಯು ದೇಶಬಂಧು ಚಿತ್ತರಂಜನ್ ದಾಸ್‌ರವರನ್ನು ಪ್ರಾಂತ್ಯದ ಸರ್ವಾಧಿಕಾರಿ ಎಂದು ಘೋಷಿಸಿತ್ತು. ಅದನ್ನು ಅನುಕರಿಸಿ ಅಹಮದಾಬಾದ್ ಕಾಂಗ್ರೆಸ್ ಅಧಿವೇಶನವು ಗಾಂಧೀಜಿಯವರನ್ನು ಇಡೀ ದೇಶದ ಸರ್ವಾಧಿಕಾರಿ ಎಂದು ಘೋಷಿಸಿತು. ಆ ಸ್ಥಾನದಿಂದ ಗಾಂಧೀಜಿಯವರು ಕಾಂಗ್ರೆಸ್‌ಗೆ ಒಂದು ಹೊಸ ದೃಷ್ಟಿ ಮತ್ತು ಹೊಸ ರಚನೆಯನ್ನು ನೀಡಿದರು. ಅದರ ಫಲವಾಗಿ ಕಾಂಗ್ರೆಸ್ ಕ್ರಾಂತಿಕಾರಿ ಮನೋಭಾವದ ಪಕ್ಷವಾಯಿತು. ಚುನಾಯಿತ ಪ್ರತಿನಿಧಿಗಳ ಒಂದು ಉತ್ತಮ ರಚನೆಯ ಸಂಸ್ಥೆಯೂ ಆಯಿತು.

ಅಹಮದಾಬಾದ್ ಅಧಿವೇಶನಕ್ಕೆ ಮುಂಚೆ ಕಾಂಗ್ರೆಸ್ ಒಂದು ಸಾಂವಿಧಾನಿಕ ಪಕ್ಷವಾಗಿತ್ತು ಮತ್ತು ಪ್ರಮುಖವಾಗಿ ಮಾತುಗಾರರ ಮಂಟಪವಾಗಿತ್ತು. ಅದು ಕೆಲವೇ ಮಂದಿ ವಿದ್ಯಾವಂತರ, ಬುದ್ಧಿವಂತರ ಮತ್ತು ದೇಶಪ್ರೇಮಿಗಳ ಸಂಸ್ಥೆಯಾಗಿತ್ತು. ಈಗ ಗಾಂಧೀಜಿಯವರು ಅದನ್ನು ಒಂದು ಜನ ಸಮೂಹದ ಸಂಸ್ಥೆಯನ್ನಾಗಿ ಪರಿವರ್ತಿಸಿದರು. ಅವರು ಕಾಂಗ್ರೆಸ್ ಸಂಸ್ಥೆಗೆ ಒಂದು ಬದಲಾದ ಸಂವಿಧಾನವನ್ನು ಕೊಟ್ಟು, ಆ ಮೂಲಕ ಅದಕ್ಕೆ ರಾಷ್ಟ್ರವ್ಯಾಪಿ ಬುನಾದಿಯನ್ನು, ಹೊಸ ತತ್ವಗಳನ್ನು, ಹೊಸ ಆಶಯಗಳನ್ನು ಮತ್ತು ಬೃಹತ್ತತೆಯನ್ನು ತಂದು, ಅದರಲ್ಲಿ ಮೂಲಭೂತ ಬದಲಾವಣೆಗಳನ್ನು ತಂದರು. ಅವರು ಕಾಂಗ್ರೆಸ್ಸಿಗೆ ತ್ರಿವರ್ಣ ಧ್ವಜವನ್ನು ನೀಡಿ ಅದನ್ನು ರಾಷ್ಟ್ರೀಯ ಬಾವುಟ ಎಂದು ಕರೆದರು. ಅವರು ಹಿಂದಿ ಭಾಷೆಯನ್ನು ಸರ್ವ ಸಾಮಾನ್ಯ ಭಾಷೆ ಎಂದರು. ಖಾದಿಯನ್ನು, ಅನುಕೂಲಕ್ಕಿಂತ ಹೆಮ್ಮೆಯ ವಸ್ತ್ರವಾಗಿ, ಕಾಂಗ್ರೆಸ್ಸಿನ ಎಲ್ಲಾ ಸದಸ್ಯರು ಧರಿಸಬೇಕೆಂದರು. ಒಟ್ಟಿನಲ್ಲಿ ಬ್ರಿಟಿಷ್ ಸರ್ಕಾರದ ವಿರುದ್ಧ ಯೋಜಿತವಾಗಿ ಹೋರಾಡಲು ಕಾಂಗ್ರೆಸ್ಸನ್ನು ಗಾಂಧೀಜಿ ಸಜ್ಜುಗೊಳಿಸಿದರು. ಕಾಂಗ್ರೆಸ್ಸು ರಾಷ್ಟ್ರೀಯ ರಾಜಕೀಯ ಪಕ್ಷವಾಯಿತು.[೬೦]

ಅಹಮದಾಬಾದ್ ಅಧಿವೇಶನದ ಮತ್ತೊಂದು ವಿಶೇಷತೆ ಎಂದರೆ ಅದು ಅತ್ಯಂತ ಕಡಿಮೆ ಸಂಖ್ಯೆಯ ಠರಾವುಗಳನ್ನು ಅಂದರೆ ಕೇವಲ ಒಂಬತ್ತು ಠರಾವು ಗಳನ್ನು ಅಂಗೀಕರಿಸಿದ್ದು.

ಕಾಂಗ್ರೆಸ್ಸು ಸಿವಿಲ್ ಶಾಸನ ಭಂಗ ಚಳವಳಿಯನ್ನು ಆರಂಭಿಸಬೇಕೆಂದು ತೀರ್ಮಾನಿಸಿತು ಮತ್ತು ಅದನ್ನು ಎಲ್ಲಿ ಯಾವಾಗ ಆರಂಭಿಸಬೇಕು ಎನ್ನುವುದನ್ನು ಗಾಂಧೀಜಿಯವರ ತೀರ್ಮಾನಕ್ಕೆ ಬಿಟ್ಟಿತು.[೬೧]

೪.೭ ಅಸಹಕಾರ ಚಳವಳಿ ಮತ್ತು ನಂತರ

೧೯೨೦ರ ಸೆಪ್ಟೆಂಬರ್‌ನಲ್ಲಿ ಆರಂಭವಾದ ಅಸಹಕಾರ ಚಳವಳಿಯು ದೇಶ ದಾದ್ಯಂತ ಬಹಳ ಭರಾಟೆಯಿಂದ ನಡೆಯಿತು. ಎಲ್ಲೆಲ್ಲೂ ಮೆರವಣಿಗೆಗಳು ಮತ್ತು ಸಭೆಗಳು ನಡೆದುವು. ಜಯಕಾರಗಳಂತೂ ನಭವನ್ನು ಮುಟ್ಟಿದುವು. ಸರ್ಕಾರವು ಈ ಚಳವಳಿಯನ್ನು ಹತ್ತಿಕ್ಕಲು ಬಲ ಪ್ರಯೋಗ ಮಾಡಿತು. ಪೊಲೀಸರು ಶಾಂತಿಯುತ ಸತ್ಯಾಗ್ರಹಿಗಳ ಮೇಲೆ ಲಾಠಿ ಪ್ರಹಾರ ಮಾಡಿದರು, ಗುಂಡು ಹಾರಿಸಿದರು ಮತ್ತು ಅವರನ್ನು ಸೆರೆಮನೆಗೆ ದೂಡಿದರು. ಎಷ್ಟು ಮಂದಿಯನ್ನು ಸೆರೆಮನೆಗೆ ದೂಡಿದರೂ ಸತ್ಯಾಗ್ರಹಿಗಳ ಸಂಖ್ಯೆ ಕಡಿಮೆಯಾಗಲಿಲ್ಲ. ಅದು ದಿನದಿನಕ್ಕೆ ಹೆಚ್ಚುತ್ತಲೇ ಹೋಯಿತು. ಸಾವಿರಾರು ಮಂದಿ ಸೆರೆಮನೆ ಸೇರಿದರು. ಗಾಂಧೀಜಿ ಬಿಟ್ಟು ಇತರ ಬಹುತೇಕ ನಾಯಕರು ದಸ್ತಗಿರಿಯಾದರು. ಜನರ ಈ ಉತ್ಸಾಹ ಮತ್ತು ಬೆಂಬಲವನ್ನು ಕಂಡು ಸರ್ಕಾರವು ದಿಗ್ಭ್ರಮೆಗೊಂಡಿತು. ತಾವು ಭಾರತದ ನೆಲದಿಂದ ಕಾಲ್ತೆಗೆಯುವ ಕಾಲ ಸಮೀಪವಾಯಿತೆಂದು ಅನೇಕ ಆಂಗ್ಲ ಅಧಿಕಾರಿಗಳು ಭಾವಿಸುವ ಮಟ್ಟವನ್ನು ಅಸಹಕಾರ ಚಳವಳಿ ಮುಟ್ಟಿತು. ಆದರೆ ಅಷ್ಟರಲ್ಲೇ ಒಂದು ಅಚಾತುರ್ಯ ನಡೆದುಹೋಯಿತು.

ಗಾಂಧೀಜಿಯವರು ಅಸಹಕಾರ ಚಳುವಳಿಯನ್ನು ಸಂಪೂರ್ಣವಾಗಿ ಅಹಿಂಸಾತ್ಮಕ ರೀತಿಯಲ್ಲಿ ನಡೆಸಬೇಕೆಂದು ಸೂಚಿಸಿದ್ದರು. ಬಹುತೇಕ ಸತ್ಯಾಗ್ರಹಿಗಳು ಹಾಗೆಯೇ ನಡೆದುಕೊಳ್ಳುತ್ತಿದ್ದರು. ಆದರೆ ೧೯೨೨ರ ಫೆಬ್ರುವರಿ ೫ರಂದು ಒಂದು ದುರ್ಘಟನೆ ನಡೆಯಿತು. ಅಂದು ಉತ್ತರ ಪ್ರಾಂತ್ಯದ ಚೌರಿಚೌರ ಎಂಬಲ್ಲಿ ಶಾಂತಿ ಯುತವಾಗಿ ತೆರಳುತ್ತಿದ್ದ ಮೆರವಣಿಗೆಕಾರರ ಮೇಲೆ ಪೊಲೀಸರು ವಿನಾ ಕಾರಣ ಗುಂಡು ಹಾರಿಸಿದರು. ಅದರಿಂದ ಕುಪಿತರಾದ ಸುಮಾರು ೩೦೦೦ ಮಂದಿ ಪೊಲೀಸ್ ಠಾಣೆಗೆ ಮುತ್ತಿಗೆ ಹಾಕಿ, ಅದಕ್ಕೆ ಬೆಂಕಿ ಹಚ್ಚಿ ಒಳಗಿದ್ದ ೨೨ ಮಂದಿ ಪೊಲೀಸರನ್ನು ಜೀವಸಹಿತ ಸುಟ್ಟರು. ಈ ಸುದ್ದಿ ಇಡೀ ದೇಶವನ್ನು ದಿಗ್ಭ್ರಮೆ

ಗೊಳಿಸಿತು. ಈ ಹಿಂಸಾಚಾರದಿಂದ ಮನನೊಂದ ಗಾಂಧೀಜಿಯವರು ಅಸಹಕಾರ ಚಳವಳಿಯನ್ನು ಹಿಂತೆಗೆದುಕೊಂಡರು. ಅವರು ಜನರನ್ನು ಹಿಂಸಾ ಮಾರ್ಗದಲ್ಲಿ ನಡೆಸಲು ಸಿದ್ಧರಿರಲಿಲ್ಲ. ಅವರಿಗೆ ಸ್ವರಾಜ್ಯವು ಅಹಿಂಸೆಯ ಮೂಲಕವೇ ಬರಬೇಕಾಗಿತ್ತು.

ಗಾಂಧೀಜಿಯ ತೀರ್ಮಾನ ಇಡೀ ದೇಶವನ್ನು ದಂಗು ಬಡಿಸಿತು. ಇನ್ನೇನು ಚಳವಳಿ ಯಶಸ್ವಿಯಾಯಿತು, ಸ್ವರಾಜ್ಯವು ಬಂದು ಬಿಟ್ಟಿತು – ಎನ್ನುವಾಗ ಅವರು ಹೋರಾಟವನ್ನೇ, ಅದು ಒಂದೇ ಒಂದು ಘಟನೆಗಾಗಿ, ಹಿಂತೆಗೆದುಕೊಂಡಿದ್ದು ಲಾಲಾ ಲಜಪತರಾಯ್, ಮೋತಿಲಾಲ್ ನೆಹರು, ಜವಹರಲಾಲ್ ನೆಹರು, ವಿಠ್ಠಲ್‌ಭಾಯ್ ಪಟೇಲ್, ಡಾ॥ ಬಿ.ಎಸ್. ಮುಂಜಿ ಮುಂತಾದ ಅನೇಕ ನಾಯಕರಿಗೆ ಹಾಗೂ ಸೆರೆಮನೆಯಲ್ಲಿದ್ದ ಸಾವಿರಾರು ಮಂದಿ ಸತ್ಯಾಗ್ರಹಿಗಳಿಗೆ ಒಪ್ಪಿಗೆಯಾಗಲಿಲ್ಲ. ಅನೇಕ ನಾಯಕರು ಕೋಪದಿಂದ ಗಾಂಧೀಜಿಗೆ ಪತ್ರ ಬರೆದರು. ಆದರೆ ಗಾಂಧೀಜಿ ತಮ್ಮ ನಿಲುವನ್ನು ಬದಲಾಯಿಸಲಿಲ್ಲ.[೬೨] ಅವರು ಜನರ ಹಿಂಸಾಚಾರಕ್ಕೆ ಪ್ರಾಯಶ್ಚಿತ್ತವಾಗಿ ಐದು ದಿನಗಳ ಕಾಲ ಉಪವಾಸ ಮಾಡಿದರು.

ಗಾಂಧೀಜಿಯವರ ಈ ತೀರ್ಮಾನವನ್ನು ಪ್ರಶ್ನಿಸದೆ ಇದ್ದವರು ಇಬ್ಬರು. ಅವರು ವಲ್ಲಭಭಾಯ್ ಪಟೇಲ್ ಮತ್ತು ಡಾ॥ ರಾಜೇಂದ್ರ ಪ್ರಸಾದ್ – ಎನ್ನುತ್ತಾರೆ ಪಟೇಲರ ಚರಿತ್ರೆಕಾರ ನರಹರಿ ಪಾರೀಖ್.[೬೩]

ಗಾಂಧೀಜಿಯವರು ಚಳವಳಿಯನ್ನು ಹಿಂತೆಗೆದುಕೊಂಡದ್ದರ ಬಗೆಗೆ ಸಂತಸಗೊಂಡ ಬೊಂಬಾಯಿಯ ಗೌರ್ನರ್ ಲಾರ್ಡ್ ಲಾಯ್ಡ್‌ರವರು ಒಬ್ಬ ಬ್ರಿಟಿಷ್ ಪತ್ರಿಕೋದ್ಯಮಿಗೆ ಹೀಗೆ ಹೇಳಿದರು:

> ಗಾಂಧೀಜಿ ನಮಗೆ ಭಯವನ್ನು ಉಂಟುಮಾಡಿದ್ದರು. ಅವರ ಕಾರ್ಯಕ್ರಮ ನಮ್ಮ ಸೆರೆಮನೆಗಳನ್ನು ಭರ್ತಿ ಮಾಡಿತ್ತು. ನಾವು ಜನರನ್ನು ನಿರಂತರ ದಸ್ತಗಿರಿ ಮಾಡುತ್ತಾ ಇರಲು ಸಾಧ್ಯವಿಲ್ಲ, ಅದರಲ್ಲೂ ೩೨೦ ಮಿಲಿಯನ್ ಜನರಿದ್ದಾಗ ಸಾಧ್ಯವಿಲ್ಲ. ಅವರು ಮುಂದಿನ ಕ್ರಮವನ್ನು ತೆಗೆದುಕೊಂಡಿದ್ದರೆ ಮತ್ತು ತೆರಿಗೆಗಳನ್ನು ಕೊಡಲು ನಿರಾಕರಿಸಿದ್ದರೆ ನಮ್ಮ ಗತಿ ಏನಾಗುತ್ತಿತ್ತೋ, ಆ ದೇವರೇ ಬಲ್ಲ. ಗಾಂಧೀಜಿಯದು ವಿಶ್ವ ಇತಿಹಾಸದಲ್ಲಿ ಅತ್ಯಂತ ಭಾರಿ ಪ್ರಯೋಗ. ಅದು ಯಶಸ್ಸಿನ ಅಂಚಿಗೆ ಬಂದುಬಿಟ್ಟಿತ್ತು. ಆದರೆ ಅವರು ಜನರ ಭಾವಾವೇಷವನ್ನು ನಿಯಂತ್ರಿಸಲು ಆಗಲಿಲ್ಲ. ಜನರು ಹಿಂಸಾಚಾರಕ್ಕೆ ಇಳಿದರು. ಗಾಂಧೀಜಿ ಕಾರ್ಯಕ್ರಮವನ್ನು ಹಿಂತೆಗೆದುಕೊಂಡರು.[೬೪]

ಸರ್ಕಾರವು ಕಾಂಗ್ರೆಸ್ಸಿನ ಇತರ ನಾಯಕರನ್ನು ದಸ್ತಗಿರಿ ಮಾಡಿದ್ದರೂ ಸಹ ಗಾಂಧೀಜಿಯವರನ್ನು ಮುಟ್ಟಿರಲಿಲ್ಲ. ಗಾಂಧೀಜಿಯವರ ದಸ್ತಗಿರಿಯು ಚಳವಳಿಯನ್ನು ಉಲ್ಬಣಗೊಳಿಸಬಹುದೆಂದು ಸರ್ಕಾರವು ಹೆದರಿತ್ತು. ಗಾಂಧೀಜಿಯವರು ಚಳವಳಿಯನ್ನೇ ಹಿಂತೆಗೆದುಕೊಂಡದ್ದರಿಂದ ಸರ್ಕಾರದ ಆತಂಕ ದೂರವಾಯಿತು. ಅದು ಅವರನ್ನು ದಸ್ತಗಿರಿ ಮಾಡಲು ಮುಂದಾಯಿತು. ಪೊಲೀಸ್ ಸೂಪರಿನ್‌ಟೆನ್‌ಡೆಂಟ್ ಡ್ಯಾನ್ ಹೀಲಿಯವರು ಮಾರ್ಚ್ ೧೦ರ ರಾತ್ರಿ ಗಾಂಧೀಜಿಯವರ ಆಶ್ರಮಕ್ಕೆ ಬಂದು ಅವರನ್ನು ದಸ್ತಗಿರಿ ಮಾಡಿ ಕರೆದುಕೊಂಡು ಹೋದರು. ಸರ್ಕಾರವು ಗಾಂಧೀಜಿಯ ಮೇಲೆ ರಾಜದ್ರೋಹದ ಅಂದರೆ ಸರ್ಕಾರದ ವಿರುದ್ಧ ಬಂಡಾಯವನ್ನು ಪ್ರಚೋದಿಸಿದ ಆಪಾದನೆಯನ್ನು ಹೊರೆಸಿತು. 'ಯಂಗ್ ಇಂಡಿಯ' ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಗಾಂಧೀಜಿಯವರ ನಾಲ್ಕು ಲೇಖನಗಳ ಆಧಾರದ ಮೇಲೆ ಸರ್ಕಾರವು ಆ ಆಪಾದನೆಯನ್ನು ಮಾಡಿತ್ತು. ಗಾಂಧೀಜಿಯವರ ಜೊತೆಯಲ್ಲಿ ಆ ಪತ್ರಿಕೆಯ ಮುದ್ರಕ ಮತ್ತು ಪ್ರಕಾಶಕ ಶಂಕರ ಲಾಲ್ ಬ್ಯಾಂಕರ್‌ರವರನ್ನೂ ಸಹ ಸರ್ಕಾರವು ದಸ್ತಗಿರಿ ಮಾಡಿ ಅವರ ಮೇಲೂ ಅದೇ ಆಪಾದನೆಗಳನ್ನು ಹೊರೆಸಿತ್ತು.

ಮಾರ್ಚ್ ೧೮ರಂದು ಅಹಮದಾಬಾದ್‌ನ ಜಿಲ್ಲಾ ಮತ್ತು ಸೆಸೆನ್ಸ್ ನ್ಯಾಯಾಧೀಶ ಸಿ.ಎನ್. ಬ್ರೂಮ್‌ಫೀಲ್ಡ್‌ರವರ ನ್ಯಾಯಾಲಯದಲ್ಲಿ ಗಾಂಧೀಜಿಯವರ ವಿಚಾರಣೆ ನಡೆಯಿತು. ಅದೊಂದು ಅತಿ ಪ್ರಸಿದ್ಧವಾದ ಮತ್ತು ಚರಿತ್ರಾರ್ಹವಾದ ವಿಚಾರಣೆ. ನೂರು ನಿಮಿಷಗಳ ಆ ವಿಚಾರಣೆಯಲ್ಲಿ ಗಾಂಧೀಜಿಯವರು ಒಂದು ಲಿಖಿತ ಹೇಳಿಕೆಯನ್ನು ಓದಿದರು. ತಾವು ಹೇಗೆ ಬ್ರಿಟಿಷ್ ಸಾಮ್ರಾಜ್ಯದ ಒಬ್ಬ ನಿಷ್ಠಾವಂತ ಪ್ರಜೆಯಾಗಿ ತಮ್ಮ ರಾಜಕೀಯ ಜೀವನವನ್ನು ಆರಂಭಿಸಿದರೆಂಬುದನ್ನು ವಿವರಿಸಿ, ದಕ್ಷಿಣ ಆಫ್ರಿಕ ಮತ್ತು ಭಾರತದಲ್ಲಿನ ಅನೇಕ ಭ್ರಮನಿರಸನಗಳ ಫಲವಾಗಿ ತಾವು ಹೇಗೆ ಬಂಡಾಯಗಾರನಾಗಲೇ ಬೇಕಾಯಿತು ಎಂಬುದನ್ನು ಅವರು ತಮ್ಮ ಹೇಳಿಕೆಯಲ್ಲಿ ವಿವರಿಸಿದರು. ನಂತರ, 'ಯಾವುದು ಕಾನೂನಿನ ಪ್ರಕಾರ ಉದ್ದೇಶ ಪೂರ್ವಕ ಅಪರಾಧವೊ ಮತ್ತು ಯಾವುದು ಒಬ್ಬ ಪ್ರಜೆಯ ಅತ್ಯಂತ ಹೆಚ್ಚಿನ ಕರ್ತವ್ಯವೆಂದು ನನಗೆ ಕಾಣುತ್ತದೆಯೊ ಆ ನನ್ನ ಚಟುವಟಿಕೆಗಳಿಗೆ ಅತ್ಯಂತ ಹೆಚ್ಚಿನ ಶಿಕ್ಷೆಯನ್ನು ವಿಧಿಸಿ', ಎಂದು ಗಾಂಧೀಜಿಯವರು ನ್ಯಾಯಾಧೀಶರನ್ನು ಕೋರಿದರು.

ನ್ಯಾಯಾಧೀಶ ಬ್ರೂಮ್‌ಫೀಲ್ಡ್‌ರವರು ಒಬ್ಬ ಸಂಭಾವಿತ ವ್ಯಕ್ತಿ. ಅವರಿಗೆ ಗಾಂಧೀಜಿಯ ಬಗೆಗೆ ಅಪಾರ ಗೌರವವಿತ್ತು. ಈ ವಿಶ್ವ ಪ್ರಸಿದ್ಧ ಅಹಿಂಸಾ ಪಾಲಕನನ್ನು ತಾವು ವಿಚಾರಣೆ ಮಾಡುತ್ತಿರುವುದರಿಂದ, ತಾವೂ ಸಹ ಐತಿಹಾಸಿಕ

ವ್ಯಕ್ತಿ ಆಗುತ್ತೇನೆಂದು ಅವರಿಗೆ ತಿಳಿದಿತ್ತು. ೧೨ ವರ್ಷಗಳ ಹಿಂದೆ ಲೋಕಮಾನ್ಯ ಬಾಲಗಂಗಾಧರ ತಿಲಕರಿಗೆ ಯಾವ ರೀತಿ ಇಂಡಿಯನ್ ಪೀನಲ್ ಕೋಡ್ ಸೆಕ್ಷನ್ ೧೨೪ 'ಎ' ಅಡಿಯಲ್ಲಿ ರಾಜದ್ರೋಹದ ಅಪರಾಧವನ್ನು ಹೊರಿಸಿ ಅವರಿಗೆ ೬ ವರ್ಷಗಳ ಸಾಧಾರಣ ಸೆರೆವಾಸವನ್ನು ವಿಧಿಸಿದ್ದರೊ ಅದೇ ತರಹ ಈಗ ಗಾಂಧೀಜಿಗೆ ಅದೇ ಸೆಕ್ಷನ್ ಪ್ರಕಾರ ೬ ವರ್ಷಗಳ ಸಾಧಾರಣ ಸೆರೆವಾಸದ ಶಿಕ್ಷೆಯನ್ನು ಬ್ರೂಮ್‌ಫೀಲ್ಡ್ ವಿಧಿಸಿದರು. ಕೊನೆಯಲ್ಲಿ ಅವರು ಗಾಂಧೀಜಿಗೆ ಹೀಗೆ ಹೇಳಿದರು, "ಇಂಡಿಯಾ ದೇಶದ ಘಟನೆಗಳ ಸರಣಿ ಈ ಅವಧಿಯನ್ನು ಕಡಮೆಯಾಗುವಂತೆ ಮಾಡಿದರೆ ಮತ್ತು ನಿಮ್ಮನ್ನು ಸರ್ಕಾರವು ಬಿಡುಗಡೆ ಮಾಡಿದರೆ ನನಗಿಂತ ಹೆಚ್ಚು ಸಂತೋಷ ಪಡುವ ವ್ಯಕ್ತಿ ಯಾರೂ ಇಲ್ಲ."[೬೫]

ಗಾಂಧೀಜಿಯವರ ವಿಚಾರಣಾ ಸಮಯದಲ್ಲಿ ವಲ್ಲಭಭಾಯ್ ಪಟೇಲ್ ಮತ್ತು ಅವರ ಮಗಳು ಮಣಿ ನ್ಯಾಯಾಲಯದಲ್ಲಿ ಉಪಸ್ಥಿತರಿದ್ದರು. ಗಾಂಧೀಜಿಗೆ ೬ ವರ್ಷಗಳ ಸೆರೆವಾಸದ ಶಿಕ್ಷೆಯನ್ನು ನ್ಯಾಯಾಧೀಶರು ವಿಧಿಸಿದಾಗ ಅವರಿಗೆ ದಿಗ್ಭ್ರಮೆಯಾಯಿತು. ಅವರು ಆ ಶಿಕ್ಷೆಯನ್ನು ನಿರೀಕ್ಷಿಸಿರಲಿಲ್ಲ.

೪.೮ ಗುಜರಾತ್ ಸುಬಾ

ನ್ಯಾಯಾಲಯವು ಗಾಂಧೀಜಿಯವರಿಗೆ ನೀಡಿದ ೬ ವರ್ಷಗಳ ಸೆರೆವಾಸದ ಶಿಕ್ಷೆಯಿಂದ ಇಡೀ ದೇಶ ಆಘಾತಗೊಂಡಿತು. ಪ್ರೇಮ ಮತ್ತು ಅಹಿಂಸೆಯ ಪಾಲಕನಾದ ಮಹಾತ್ಮನನ್ನು ಸೆರೆಮನೆಗೆ ಕಳುಹಿಸಿದ ಸರ್ಕಾರದ ಆಡಳಿತದಲ್ಲಿ ಯಾವ ವ್ಯಕ್ತಿಯೂ ಸುರಕ್ಷಿತನಲ್ಲ. ಅದರಿಂದ ಈ ವಿದೇಶಿ ಸರ್ಕಾರದ ದಬ್ಬಾಳಿಕೆಯನ್ನು ಕೊನೆಗಾಣಿಸಲೇ ಬೇಕು. ಅದಕ್ಕಾಗಿ ಕಾಂಗ್ರೆಸ್ಸನ್ನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಬೆಂಬಲಿಸಬೇಕು, ಎಂದು ಜನ ಭಾವಿಸಿದರು.

ವಲ್ಲಭಭಾಯ್‌ರವರಿಗಂತೂ ಗಾಂಧೀಜಿಯವರ ಸೆರೆವಾಸ ಒಂಟಿತನವನ್ನು ತಂದಿತ್ತು. ಕಳೆದ ಐದು ವರ್ಷಗಳಿಂದ ಪಟೇಲರ ಜೀವನವು ಗಾಂಧೀಜಿಯವರ ಸುತ್ತಾ ಸುತ್ತುತ್ತಿತ್ತು. ಅವರು ಪ್ರತಿ ಬೆಳಗ್ಗೆ ಗಾಂಧೀಜಿಯವರನ್ನು ಭೇಟಿ ಮಾಡಿದ ನಂತರವೇ ತಮ್ಮ ಇತರ ಕೆಲಸಗಳಿಗೆ ಉಲ್ಲಾಸದಿಂದ ಹೋಗುತ್ತಿದ್ದುದು. ಅವರು ಗಾಂಧೀಜಿಯನ್ನು 'ಬಾಪು' (ತಂದೆ) ಎಂದು ಕರೆಯುತ್ತಿದ್ದರು. ಗಾಂಧೀಜಿಯವರ ನಿಷ್ಠಾವಂತ ಶಿಷ್ಯನಾಗಿ ಅವರ ಜೀವನದ ಧ್ಯೇಯಗಳನ್ನು ಪೂರ್ಣಗೊಳಿಸಬೇಕು ಮತ್ತು ಅವರು ತೋರಿದ ಹಾದಿಯಲ್ಲಿ ನಡೆಯಬೇಕು – ಎಂದು ಪಟೇಲರು ನಿರ್ಧರಿಸಿದ್ದರು.

ಜೊತೆಗೆ, ಸರ್ಕಾರವು ಗಾಂಧೀಜಿಯವರನ್ನು ಹೆಚ್ಚು ದಿನ ಹಿಡಿದಿಡಲು ಸಾಧ್ಯವಿಲ್ಲ ಮತ್ತು ಅವರನ್ನು ಶೀಘ್ರವಾಗಿ ಬಿಡುಗಡೆ ಮಾಡುತ್ತದೆ ಎಂದು, ಅದು ಹೇಗೊ ಪಟೇಲರಿಗೆ ಅನ್ನಿಸಿತು. ಅವರು ಜನರಿಗೆ ಹೀಗೆ ಹೇಳಿದರು:

> ಭಾರತವು ಆಂಗ್ಲ ಸಿಂಹಕ್ಕೆ ಅನೇಕ ಬಲಿಗಳನ್ನು ಸಮರ್ಪಿಸಿದೆ. ಆದರೆ ಇಂತಹ ಪವಿತ್ರ ಬೇಟೆಯನ್ನು ಪಡೆಯುವ ಒಳ್ಳೆಯ ಅದೃಷ್ಟ ಆಂಗ್ಲ ಸಿಂಹಕ್ಕೆ ಹಿಂದೆ ಎಂದೂ ಬಂದಿರಲಿಲ್ಲ. ಆದರೆ ಆಂಗ್ಲ ಸಿಂಹವು ಅಂತಹ ಬೇಟೆಯನ್ನು ಅರಗಿಸಿಕೊಳ್ಳುವುದು ಸುಲಭವಲ್ಲ. ..... ಭಾರತದ ಋಷಿಗಳು ಮತ್ತು ಮುನಿಗಳು ಹಿಂದೆ ಯೋಗದ ನೆರವಿನಿಂದ ಭಯಂಕರ ಸಿಂಹಗಳನ್ನು ಕುರಿಮರಿಗಳಿಗಿಂತಲೂ ಸಾಧುವಾದ ಪ್ರಾಣಿಗಳನ್ನಾಗಿ ಪರಿವರ್ತಿಸಿದ್ದಾರೆ. ಈಗಿನ ಸಂದರ್ಭದಲ್ಲೂ ಸಹ ನಮ್ಮ ಮಹಾತ್ಮನ ಮಹಾ ಆಧ್ಯಾತ್ಮಿಕ ಶಕ್ತಿಯು ಆರ್ಭಟಿಸುತ್ತಿರುವ ಸಿಂಹವನ್ನು ಸಾಧುವಾದ ಒಂದು ಕುರಿಮರಿಯನ್ನಾಗಿ ಪರಿವರ್ತಿಸುವುದು.[೬೬]

(ಗಾಂಧೀಜಿಯವರ ಬಿಡುಗಡೆ ಶೀಘ್ರ ಆಗುವುದು ಎನ್ನುವ ವಲ್ಲಭಭಾಯ್ ರವರ ಭಾವನೆ ನಿಜವೇ ಆಯಿತು. ಪೂನಾ ಸೆರೆಮನೆಯಲ್ಲಿದ್ದ ಗಾಂಧೀಜಿಗೆ ಅಪೆಂಡಿಸೈಟಿಸ್ ಶಸ್ತ್ರ ಚಿಕಿತ್ಸೆಯನ್ನು ಕರ್ನಲ್ ಮದ್ದೋಕ್‌ರವರು ೧೯೨೪ರ ಜನವರಿ ೧೨ರಂದು ಸಸ್ಸೂನ್ ಆಸ್ಪತ್ರೆಯಲ್ಲಿ ನಡೆಸಿದ್ದರಿಂದ ಸರ್ಕಾರವು ಗಾಂಧೀಜಿಯನ್ನು ಅವಧಿಗೆ ಮುನ್ನ ಫೆಬ್ರುವರಿ ೫ರಂದು ಬಿಡುಗಡೆ ಮಾಡಿತು.)

ಕ್ರಮೇಣ ಪಟೇಲರು ಆರಂಭಿಕ ದಿಗ್ಭ್ರಮೆಯಿಂದ ಹೊರಬಂದು ಗಾಂಧೀಜಿಯ ಕಾರ್ಯಕ್ರಮಗಳನ್ನು ಪೂರ್ಣಗೊಳಿಸಲು ನಿರ್ಧರಿಸಿದರು. 'ನವ ಜೀವನ್' ಪತ್ರಿಕೆಯಲ್ಲಿ ಬರೆದ ಒಂದು ಲೇಖನದಲ್ಲಿ ಅವರು 'ಈಗ ಗಾಂಧೀಜಿ ರಂಗದಲ್ಲಿ ಇಲ್ಲದೇ ಇದ್ದರೂ ಅವರ ಜೊತೆಗಾರರು ಮತ್ತು ಶಿಷ್ಯರು ಮಾಡಬೇಕಾದದ್ದು ಏನು' – ಎಂಬುದನ್ನು ಬರೆದರು:

> ಒಬ್ಬ ಕಲ್ಲು ಕೆಲಸದವನು ತನಗೆ ವಾಸ್ತುಶಿಲ್ಪಿಯ ವಿನ್ಯಾಸ ಶಕ್ತಿ ಇದೆ ಎಂದು ಪ್ರತಿಪಾದಿಸುವುದಿಲ್ಲ. ಆದಾಗ್ಯೂ ವಾಸ್ತುಶಿಲ್ಪಿಯ ವಿನ್ಯಾಸದ ಪ್ರಕಾರ ಕಟ್ಟಡವನ್ನು ಪೂರ್ಣಗೊಳಿಸಲು ಅವನಿಗೆ ಕಷ್ಟವಾಗುವುದಿಲ್ಲ.[೬೭]

ಗುಜರಾತ್ ಪ್ರದೇಶವು ಗಾಂಧೀಜಿಗೆ ಮಾತೃ ಪ್ರಾಂತ್ಯ. ಗುಜರಾತಿಗಳು

ಗಾಂಧೀಜಿಯ ಕೈ ಬಿಡಬಾರದು ಮತ್ತು ಅವರ ರಚನಾತ್ಮಕ ಕಾರ್ಯಗಳನ್ನು ಪೂರ್ಣಗೊಳಿಸಬೇಕು, ಎಂದು ಪಟೇಲರು ನಿರ್ಧರಿಸಿದರು. ಜೊತೆಗೆ, ಗಾಂಧೀಜಿಯ ಅನುಪಸ್ಥಿತಿಯಲ್ಲಿ ಗುಜರಾತಿನವರು ಮಾರ್ಗದರ್ಶನಕ್ಕಾಗಿ ವಲ್ಲಭಭಾಯ್ ಕಡೆಗೆ ದೃಷ್ಟಿ ಬೀರಿದರು. ಅವರು ವಲ್ಲಭಭಾಯ್‌ರವರನ್ನು 'ಗುಜರಾತ್‌ನ ಸುಬಾ' ಎಂದು ಕರೆಯುತ್ತಿದ್ದರು.[೬೮]

ವಲ್ಲಭಭಾಯ್ ಪಟೇಲ್‌ರವರು ಮೊದಲು ಗುಜರಾತ್ ವಿದ್ಯಾಪೀಠದ ಕಡೆಗೆ ಗಮನ ಹರಿಸಿದರು. ಆ ವಿದ್ಯಾಪೀಠಕ್ಕೆ ಸ್ವಂತ ಕಟ್ಟಡವಿರಲಿಲ್ಲ. ಅದರ ಅಭಿವೃದ್ಧಿಗಾಗಿ ಅಕ್ಟೋಬರ್ ೨ನೆ ದಿನಾಂಕದ ಒಳಗೆ ೧೦ ಲಕ್ಷ ರೂಪಾಯಿಗಳನ್ನು ಸಂಗ್ರಹಿಸುವ ಸಂಕಲ್ಪ ಮಾಡಿದರು. ಅಕ್ಟೋಬರ್ ೨ ಗಾಂಧೀಜಿಯವರ ಹುಟ್ಟುಹಬ್ಬದ ದಿನ. ಕರಾರುವಾಕ್ಕಾಗಿ ಅಂದಿಗೆ ೧೦ ಲಕ್ಷ ರೂಪಾಯಿಗಳ ಸಂಗ್ರಹ ಪೂರ್ಣವಾಯಿತು. ಅನಂತರ ಅವರು ವಿದೇಶಿ ಬಟ್ಟೆಯ ವಿರುದ್ಧ ಆಂದೋಲನ ಆರಂಭಿಸಿದರು. ಇಡೀ ಗುಜರಾತ್‌ನ ಪಟ್ಟಣ ಮತ್ತು ಹಳ್ಳಿಗಳಲ್ಲಿ ವಿದೇಶಿ ಬಟ್ಟೆ ಮಾರುವ ಅಂಗಡಿಗಳ ಮುಂದೆ ಸ್ವಯಂ ಸೇವಕರು ಮತ್ತು ಸ್ವಯಂ ಸೇವಕಿಯರು 'ಪಿಕೆಟಿಂಗ್' ನಡೆಸಲು (ಅಂಗಡಿಯ ಒಳಗೆ ಹೋಗುವವರನ್ನು ತಡೆಯುವುದು) ಆರಂಭಿಸಿದರು. ಅಹಮದಾಬಾದ್, ಸೂರತ್, ನಡಿಯಾದ್ ಮತ್ತು ಬರೂಚ್‌ನ ವರ್ತಕರು ವಿದೇಶಿ ಬಟ್ಟೆಯ ಹೊಸ ದಾಸ್ತಾನು ತರಿಸುವುದಿಲ್ಲವೆಂದು ಶಪಥ ಮಾಡಿದರು. ಆದರೆ ಈ ಶಪಥಗಳು ೧೨, ೯ ಅಥವಾ ೬ ತಿಂಗಳುಗಳಿಗೆ ಸೀಮಿತವಾಗಿರುತ್ತಿದ್ದುವು. ಅದರಿಂದ ಕೆಲವು ಸ್ವಯಂ ಸೇವಕರು ಈ ವರ್ತಕರನ್ನು ಅವರ ಅಲ್ಪಕಾಲದ ಶಪಥಗಳಿಗಾಗಿ ನೀತಿಗೆಟ್ಟವರು, ಅಪ್ರಮಾಣಿಕರು ಮತ್ತು ಕಳ್ಳರು ಎಂದು ಜರಿಯುತ್ತಿದ್ದರು. ಆದರೆ ವಸ್ತುನಿಷ್ಠ ಪಟೇಲರು ಆ ಸ್ವಯಂಸೇವಕರಿಗೆ ಹೀಗೆ ಹೇಳಿದರು:

> ..... ವರ್ತಕರಿಗೆ ಅದು ಅವರ ಏಕಮಾತ್ರ ಅಥವಾ ಪ್ರಧಾನ ಜೀವನೋಪಾಯವನ್ನು ಬಿಟ್ಟುಬಿಡುವ ಪ್ರಶ್ನೆ. ..... ಈ ಮಧ್ಯೆ ನಾವೆಲ್ಲರೂ ನಮ್ಮ ಬಟ್ಟೆಯನ್ನು ಭಾರತೀಯ ಉಡುಪಿಗೆ ಬದಲಾಯಿಸಿಕೊಂಡರೆ ಅವರೇಕೆ ವಿದೇಶಿ ಬಟ್ಟೆಯನ್ನು ಆಮದು ಮಾಡಿಕೊಳ್ಳಲು ಬಯಸುತ್ತಾರೆ?[೬೯]

ಅದಾದ ನಂತರ ಪಟೇಲರು ಅಸ್ಪೃಶ್ಯತಾ ಸಮಸ್ಯೆಯ ಕಡೆಗೆ ತಮ್ಮ ಗಮನವನ್ನು ಹರಿಸಿದರು. ೧೯೨೨ರ ನವೆಂಬರ್ ತಿಂಗಳಲ್ಲಿ ಕಾಥೈವಾಡದಲ್ಲಿ ರಾಜಕೀಯ ಸಮ್ಮೇಳನವು ನಡೆಯಿತು. ಆ ಸಮ್ಮೇಳನವು ಅಸ್ಪೃಶ್ಯತಾ ನಿವಾರಣೆಗೆ

ಕರೆ ಕೊಟ್ಟಿತು. ಅನೇಕ ಅಸ್ಪೃಶ್ಯರು ಆ ಸಮ್ಮೇಳನದಲ್ಲಿ ಭಾಗವಹಿಸುವಂತೆ ಪಟೇಲರು ಮಾಡಿದ್ದರು. ಆದರೆ ಅವರೆಲ್ಲ ಒಂದು ಗುಂಪಾಗಿ ಕುಳಿತಿದ್ದರು. ಪಟೇಲರು ಭಾಷಣ ಮಾಡುವ ಸಮಯ ಬಂದಾಗ ಅಸ್ಪೃಶ್ಯರು ಕುಳಿತಿದ್ದ ಸ್ಥಳಕ್ಕೆ ಹೋಗಿ ನಿಂತು ಅಲ್ಲಿಂದಲೇ ಭಾಷಣ ಮಾಡಿ ಆ ಸ್ಥಳವನ್ನು ಕೇಂದ್ರಬಿಂದುವಾಗಿ ಮಾಡಿದರು. ಅದರಿಂದ ಅವರು ತಾವು ಕೇವಲ ಪಟಿದಾರರಿಗೆ ಮಾತ್ರ ನಾಯಕನಲ್ಲ, ಇಡೀ ಗುಜರಾತ್‌ಗೆ ನಾಯಕನೆಂಬುದನ್ನು ತೋರಿಸಿದರು.[೭೦]

ಈ ನಡುವೆ ಕೆಲವು ಪ್ರದೇಶಗಳಲ್ಲಿ, ಅದರಲ್ಲೂ ಮಹಾರಾಷ್ಟ್ರ, ಮಧ್ಯ ಪ್ರದೇಶ ಮತ್ತು ಬಂಗಾಳಗಳಲ್ಲಿ, ಗಾಂಧೀಜಿಯ ಕಾರ್ಯಕ್ರಮಗಳ ಬಗ್ಗೆ ಟೀಕೆಗಳು ಆರಂಭವಾದುವು. ಅವರು ಶಾಸನ ಸಭೆಗಳ ಪ್ರವೇಶಕ್ಕೆ ಕಾಂಗ್ರೆಸ್ ವಿಧಿಸಿರುವ ತಡೆಯನ್ನು ತೆಗೆಯಬೇಕೆಂದರು. ದೇಶವು ಸಿವಿಲ್ ಶಾಸನ ಭಂಗ ಚಳವಳಿಗೆ ಇನ್ನೂ ಸಿದ್ಧವಾಗಿಲ್ಲವೆಂದು ಅನೇಕರು ವಾದಿಸಿದರು. ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಈ ವಿಷಯದ ನೈಜ ಸ್ಥಿತಿಯನ್ನು ಅರಿಯಲು ವಲ್ಲಭಭಾಯ್ ಪಟೇಲರ ಅಣ್ಣ ವಿಠ್ಠಲ್‌ಭಾಯ್ ಪಟೇಲರ ಅಧ್ಯಕ್ಷತೆಯಲ್ಲಿ ಒಂದು ಉಪ ಸಮಿತಿಯನ್ನು ರಚಿಸಿತು. ಪ್ರಚಾರ ಮತ್ತು ಸಂಸದೀಯ ಚಟುವಟಿಕೆಗಳ ಮೂಲಕ ಒತ್ತಡವನ್ನು ತಂದರೆ ಮಾತ್ರ ಬ್ರಿಟಿಷರು ಭಾರತಕ್ಕೆ ಸ್ವಾತಂತ್ರ್ಯವನ್ನು ನೀಡುತ್ತಾರೆ, ಎಂದು ವಿಠ್ಠಲ್‌ಭಾಯ್ ಪಟೇಲ್ ದೃಢವಾಗಿ ನಂಬಿದ್ದರು. ಅದರಿಂದ ಅವರು ಶಾಸನ ಸಭೆಗಳ ಪ್ರವೇಶದ ಬಹಿಷ್ಕಾರವನ್ನು ತೆಗೆಯುವುದರ ಪರವಾಗಿದ್ದರು. ಆ ವೇಳೆಗೆ ೧೯೨೨ರ ಜೂನ್‌ನಲ್ಲಿ ಮೋತಿಲಾಲ್ ನೆಹರು ಮತ್ತು ಆಗಸ್ಟ್‌ನಲ್ಲಿ ಕಾಂಗ್ರೆಸ್ ಅಧ್ಯಕ್ಷ ದೇಶಬಂಧು ಚಿತ್ತರಂಜನ ದಾಸ್ ಸೆರೆಮನೆಯಿಂದ ಬಿಡುಗಡೆಯಾದರು. ಅದರಿಂದ ಶಾಸಕಾಂಗವನ್ನು ಪ್ರವೇಶಿಸಬೇಕೆನ್ನುವವರ ಬಲ ಹೆಚ್ಚಿತು. 'ಶಾಸನ ಸಭೆಗಳನ್ನು ಒಳಗಿನಿಂದ ನಾಶ ಪಡಿಸಿ' ಎನ್ನುವುದು ಅವರ ಘೋಷಣೆಯಾಯಿತು. ಅವರು, 'ಶಾಸನ ಸಭೆಗಳ ಪ್ರವೇಶವು ಶತ್ರು ಕೋಟೆಯನ್ನು ಆಕ್ರಮಿಸಿಕೊಳ್ಳುವುದಕ್ಕಾಗಿ ಅದರ ಒಳಕ್ಕೆ ಕದ್ದು ನುಸುಳಿದಂತೆ' ಎಂದರು. ಅದಕ್ಕೆ ಉತ್ತರವಾಗಿ ವಲ್ಲಭಭಾಯ್‌ರವರು, 'ಶತ್ರು ಕೋಟೆಯು ಶಾಸನ ಪರಿಷತ್ತಿನಲ್ಲಿ ನಿರ್ಮಿತವಾಗಿಲ್ಲ ಎನ್ನುವುದನ್ನು ಅರ್ಥಮಾಡಿಕೊಳ್ಳಬೇಕು. ಶಾಸನ ಪರಿಷತ್ತು ಏನನ್ನೇ ಹೇಳಲಿ ಅಥವಾ ಮಾಡಲಿ ಗೌರ್ನರ್‌ಗಳು ಮತ್ತು ವೈಸ್‌ರಾಯ್‌ರವರು ಸುಗ್ರೀವಾಜ್ಞೆಗಳ ಮೂಲಕ ಆಡಳಿತ ನಡೆಸಬಹುದು,' ಎಂದರು. ಶಾಸನ ಪರಿಷತ್ತಿನಲ್ಲಿ ಗುಡುಗುವುದಷ್ಟೇ ಅದರ ವಿರುದ್ಧದ ಮುಖ್ಯ ಅಸ್ತ್ರವಾದರೆ (ಬ್ರಿಟಿಷ್) ಸರ್ಕಾರವು ನೂರು ವರ್ಷಗಳ ನಂತರವೂ ಭಾರತದಲ್ಲಿ ಆಡಳಿತ ಮಾಡುತ್ತಿರುತ್ತದೆ – ಎನ್ನುವುದು ವಲ್ಲಭಭಾಯ್ ಪಟೇಲರ ಅಭಿಪ್ರಾಯವಾಗಿತ್ತು. ಅನಂತರ ಪ್ರಚಾರಕ್ಕಾಗಿ

ವಿಠ್ಠಲ್‌ಭಾಯ್ ಅಹಮದಾಬಾದ್‌ಗೆ ಹೋಗಕೂಡದು ಮತ್ತು ವಲ್ಲಭಭಾಯ್ ಬೊಂಬಾಯಿಗೆ ಹೋಗಕೂಡದು ಎಂದೂ, ಗುಜರಾತ್ ಅಥವಾ ಬಾಂಬೆಯಲ್ಲಿ ಸಾರ್ವಜನಿಕವಾಗಿ ಭಿನ್ನಾಭಿಪ್ರಾಯಗಳನ್ನು ವ್ಯಕ್ತಪಡಿಸಬಾರದೆಂದೂ ಅಣ್ಣ – ತಮ್ಮ ಒಪ್ಪಂದ ಮಾಡಿಕೊಂಡರು ಮತ್ತು ಪಾಲಿಸಿದರು.[೭೧]

೧೯೨೨ರ ಡಿಸೆಂಬರ್ ೨೬ರಿಂದ ೩೧ರ ವರೆಗೆ ಕಾಂಗ್ರೆಸ್ಸಿನ ೩೭ನೆ ವಾರ್ಷಿಕ ಅಧಿವೇಶನವು ಚಿತ್ತರಂಜನ್ ದಾಸ್‌ರವರ ಅಧ್ಯಕ್ಷತೆಯಲ್ಲಿ ಗಯಾದಲ್ಲಿ ನಡೆಯಿತು. ಸಿ.ಆರ್. ದಾಸ್‌ರವರು 'ಶಾಸನ ಪರಿಷತ್ತುಗಳಲ್ಲಿ ಸುಧಾರಣೆ ತರುವುದು ಅಥವಾ ಅವನ್ನು ನಾಶ ಪಡಿಸುವುದು ಕಾಂಗ್ರೆಸ್ಸಿನ ಕರ್ತವ್ಯ. ಶಾಸನ ಪರಿಷತ್ತುಗಳನ್ನು ಕಾಂಗ್ರೆಸ್ ಬಹಿಷ್ಕರಿಸಿದ್ದರೂ ಅವು ಕಾರ್ಯ ನಿರ್ವಹಿಸುತ್ತಲೇ ಇವೆ. ಅವು ಅಧಿಕಾರ ಶಾಹಿಯ ಶಕ್ತಿ ಕೇಂದ್ರ. ಈ ಶಕ್ತಿ ಕೇಂದ್ರವನ್ನು ಪ್ರವೇಶಿಸಿ ಅದನ್ನು ಒಳಗಿನಿಂದ ವಶಪಡಿಸಿಕೊಳ್ಳುವುದು ಕಾಂಗ್ರೆಸ್ಸಿನ ಕರ್ತವ್ಯ' ಎಂದು ಒತ್ತಾಯಿಸಿದರು. ಕಾಂಗ್ರೆಸ್‌ನ ಅಧಿವೇಶನಗಳಲ್ಲಿ ಸಾಮಾನ್ಯವಾಗಿ ಮೌನವಾಗಿರುತ್ತಿದ್ದ ವಲ್ಲಭಭಾಯ್ ಪಟೇಲ್‌ರವರು ಈ ಬಾರಿ ಹಾಗೆ ಮಾಡಲಿಲ್ಲ. ಅವರು ತಮ್ಮ ಭಾಷಣದಲ್ಲಿ ಹೀಗೆ ನುಡಿದರು:

> ನಾನೊಬ್ಬ ನಾಯಕನಲ್ಲ. ನಾನೊಬ್ಬ ಸೈನಿಕ. ನಾನೊಬ್ಬ ರೈತನ ಮಗ. ಸ್ವಾತಂತ್ರ್ಯವನ್ನು ಮಾತನಾಡುವುದರಿಂದ ಮಾತ್ರ ಗಳಿಸಬಹುದು ಎನ್ನುವುದನ್ನು ನಾನು ನಂಬುವುದಿಲ್ಲ. ನಾವು ಸರ್ಕಾರದ ವಿರುದ್ಧ ಅದರದೇ ನೆಲೆಯಲ್ಲಿ ಹೋರಾಡಲು ಸಾಧ್ಯವಿಲ್ಲ. ನಾವು ಶಾಸನ ಪರಿಷತ್ತುಗಳನ್ನು ಪ್ರವೇಶಿಸಿದ ತಕ್ಷಣ ಜನರು ಸ್ವಾತಂತ್ರ್ಯದ ಬಗೆಗೆ ತಮಗಿರುವ ಉತ್ಸಾಹವನ್ನು ಕಳೆದುಕೊಳ್ಳುತ್ತಾರೆ. ಕಾಂಗ್ರೆಸ್ ಪಕ್ಷವು ಜನರ ವಿಶ್ವಾಸವನ್ನು ಕಳೆದುಕೊಳ್ಳುತ್ತದೆ. ಇದು ಕಾಂಗ್ರೆಸ್ಸಿಗೆ ನಿಜವಾಗಿಯೂ ವಿನಾಶಕಾರಿ. ಕಾಂಗ್ರೆಸ್ಸು ತನ್ನ ಅಸಹಕಾರ ನೀತಿಯನ್ನು ಪ್ರಕಟಿಸಿದ ಮೇಲೆ ಮಾತ್ರ ಅದು ವ್ಯವಸಾಯಗಾರರ, ಕಾರ್ಮಿಕರ ಮತ್ತು ಮಹಿಳೆಯರ ಬೆಂಬಲವನ್ನು ಗಳಿಸಿತು. ಅದಕ್ಕೆ ಕಾರಣವೇನೆಂದರೆ ಅಂತಹ ಚಟುವಟಿಕೆಗಳು ಮಾತ್ರ ರಾಷ್ಟ್ರೀಯ ಹೋರಾಟದಲ್ಲಿ ಭಾಗವಹಿಸಲು ಮತ್ತು ತ್ಯಾಗ ಮಾಡಲು ಜನರಿಗೆ ಅವಕಾಶಗಳನ್ನು ಕೊಡುತ್ತವೆ. ಸುಧಾರಣೆಗಳನ್ನು ತರುವುದಕ್ಕೆ ಮುಂಚೆಯೇ ಸರ್ಕಾರಕ್ಕೆ ತಾನು ವ್ಯವಹರಿಸಬೇಕಾದ ಜನರ ರೀತಿ ಚೆನ್ನಾಗಿ ಗೊತ್ತಿತ್ತು. ಅವರ ಪ್ರಬಲ ಮತ್ತು ದುರ್ಬಲ ಅಂಶಗಳನ್ನು ಗಮನದಲ್ಲಿಟ್ಟು ಸುಧಾರಣೆಗಳನ್ನು ರಚಿಸಲಾಗಿದೆ.

ನೀವು ಶಾಸನ ಪರಿಷತ್ತುಗಳ ಮೂಲಕ ನೂರು ವರ್ಷಗಳ ಕಾಲ
ಆಂದೋಲನ ನಡೆಸಿದರೂ ಸ್ವಾತಂತ್ರ್ಯವನ್ನು ಗಳಿಸಲಾರಿರಿ.[೨೨]

ಆ ಅಧಿವೇಶನದಲ್ಲಿ ಕಾಂಗ್ರೆಸ್‌ನಲ್ಲಿ 'ಬದಲಾವಣೆ ಪರರು' ಮತ್ತು 'ಬದಲಾವಣೆ ವಿರೋಧಿಗಳು' ಎಂದು ಎರಡು ಬಣಗಳು ಸೃಷ್ಟಿಯಾದುವು. ಕಾಂಗ್ರೆಸ್ಸಿನ ಅಂದಿನ ಅಧ್ಯಕ್ಷ ಚಿತ್ತರಂಜನ ದಾಸ್, ಮೋತಿಲಾಲ್ ನೆಹರು ಮತ್ತು ವಿಠ್ಠಲ್‌ಭಾಯ್ ಪಟೇಲರು ಮೊದಲನೆ ಬಣದ ಪ್ರಮುಖರು. ಸಿ. ರಾಜಗೋಪಾಲಾಚಾರಿ, ರಾಜೇಂದ್ರ ಪ್ರಸಾದ್ ಮತ್ತು ವಲ್ಲಭಭಾಯ್ ಪಟೇಲ್ ಎರಡನೆ ಬಣದ ಪ್ರಮುಖರು. ಎರಡನೆ ಬಣದ ನಾಯಕ ರಾಜಗೋಪಾಲಾಚಾರಿಯವರು ಮೊದಲನೆ ಬಣದ ಪ್ರತಿಯೊಂದು ಆಕ್ಷೇಪಣೆ ಮತ್ತು ಅಂಶಗಳಿಗೆ ಅತಿ ಸಮರ್ಪಕವಾದ ಉತ್ತರಗಳನ್ನು ನೀಡಿದರು. ವಿಷಯವನ್ನು ಮತಕ್ಕೆ ಹಾಕಿದಾಗ ಶಾಸನ ಸಭೆಯ ಪ್ರವೇಶದ ಪರವಾದವರಿಗೆ ೮೯೦ ಮತಗಳು ಮತ್ತು ವಿರೋಧಿಗಳಿಗೆ ೧೭೪೦ ಮತಗಳು ಬಂದು ಕಾಂಗ್ರೆಸ್ಸು ಶಾಸನ ಪರಿಷತ್ತುಗಳ ಬಹಿಷ್ಕಾರವನ್ನು ಮುಂದುವರೆಸುವಂತೆ ಅಧಿವೇಶನವು ತೀರ್ಮಾನಿಸಿತು. ಜೊತೆಗೆ ವಲ್ಲಭಭಾಯ್ ಪಟೇಲ್, ರಾಜಗೋಪಾಲಾಚಾರಿ ಮತ್ತು ರಾಜೇಂದ್ರ ಪ್ರಸಾದ್‌ರವರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಚುನಾಯಿತರಾದರು. ಚಿತ್ತರಂಜನ ದಾಸ್‌ರವರು ಕಾಂಗ್ರೆಸ್‌ನ ತಮ್ಮ ಅಧ್ಯಕ್ಷ ಪದವಿಗೆ ರಾಜಿನಾಮೆ ಇತ್ತು, 'ಸ್ವರಾಜ್ಯ ಪಕ್ಷ'ವನ್ನು ಸ್ಥಾಪಿಸಿ ಅದರ ಅಧ್ಯಕ್ಷರಾದರು. ಮೋತಿಲಾಲ್ ನೆಹರು ಅದರ ಕಾರ್ಯದರ್ಶಿಯಾದರು. 'ಸ್ವರಾಜ್ಯ ಪಕ್ಷವು ಕಾಂಗ್ರೆಸ್ ಪಕ್ಷದ ಒಳಗೆ ಇರುವುದೆಂದೂ, ಡಿಸೆಂಬರ್ ೧೯೨೩ರಲ್ಲಿ ನಡೆಯುವ ಶಾಸನ ಪರಿಷತ್ತಿನ ಚುನಾವಣೆಯಲ್ಲಿ ಸ್ಪರ್ಧಿಸಿ ಪರಿಷತ್ತನ್ನು ವಶಪಡಿಸಿಕೊಳ್ಳುವುದೆಂದೂ' ಚಿತ್ತರಂಜನದಾಸ್ ಘೋಷಿಸಿದರು.[೨೩]

ಕಾಂಗ್ರೆಸ್ಸಿನ ಎರಡು ಬಣಗಳ ನಡುವೆ ಒಮ್ಮತ ಸಾಧ್ಯವಿಲ್ಲವಾದುದರಿಂದ ಅವುಗಳ ನಡುವೆ ಕಹಿ ಭಾವನೆ ಇರಬಾರದೆಂದೂ, ಎರಡೂ ಬಣಗಳು ತಮ್ಮ ತಮ್ಮ ನಂಬಿಕೆಯ ಪ್ರಕಾರ ನಡೆಯಬೇಕೆಂದೂ ವಲ್ಲಭಭಾಯ್ ಒತ್ತಾಯಿಸಿದರು. ಆದರೆ ಮೇ ೨೫ನೆ ತಾರೀಖು ಬೊಂಬಾಯಿಯಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸಭೆಯು ಶಾಸನ ಪರಿಷತ್ತಿನ ಪ್ರವೇಶದ ವಿರುದ್ಧದ ಪ್ರಚಾರವನ್ನು ನಿಷೇಧಿಸುವ ತೀರ್ಮಾನವನ್ನು ಅಲ್ಪ ಬಹುಮತದೊಡನೆ ಮಾಡಿತು. ಇದು ಗಯಾ ಅಧಿವೇಶನದ ತೀರ್ಮಾನಕ್ಕೆ ವಿರುದ್ಧವಾಗಿದ್ದುದರಿಂದ ವಲ್ಲಭಭಾಯ್, ರಾಜಾಜಿ ಮತ್ತು ರಾಜೇಂದ್ರ ಪ್ರಸಾದ್‌ರವರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯ ಸ್ಥಾನಕ್ಕೆ ರಾಜಿನಾಮೆ ಕೊಟ್ಟರು.

ಈ ಬಾಂಬೆ ಠರಾವನ್ನು ಪುರುಷೋತ್ತಮದಾಸ್ ಟಂಡನ್ ಸೂಚಿಸಿ ಜವಹರ ಲಾಲ್ ನೆಹರು ಅನುಮೋದಿಸಿದ್ದರು. ಅಬುಲ್ ಕಲಾಮ್ ಅಜ಼ಾದ್ ಅದನ್ನು ಬೆಂಬಲಿಸಿದ್ದರು. ಜವಹರ್ ಮತ್ತು ಅಜ಼ಾದ್ ಆ ವರ್ಷದ ಆರಂಭದಲ್ಲಿ ಸೆರೆಮನೆ ಯಿಂದ ಬಿಡುಗಡೆಯಾಗಿದ್ದರು. ಅವರಿಬ್ಬರು, ಕಾಂಗ್ರೆಸ್‌ನಲ್ಲಿ ಒಗ್ಗಟ್ಟು ಮೂಡಿಸು ವುದಕ್ಕಾಗಿ ತಾವು ಆ ಠರಾವನ್ನು ಬೆಂಬಲಿಸಿದ್ದಾಗಿ ಹೇಳಿದ್ದರು. ಆ ಠರಾವು ಐಕ್ಯತೆಯ ಕಡೆಗಿನ ಹೆಜ್ಜೆ – ಎನ್ನುವುದನ್ನು ವಲ್ಲಭಭಾಯ್ ಒಪ್ಪಲಿಲ್ಲ. ಅವರು ಜವಹರ್‌ಗೆ ಒಂದು ಪತ್ರವನ್ನು ಬರೆದು, 'ನೀವೇಕೆ ಸರಿಯಾದ ಮಾರ್ಗದಲ್ಲಿ ಹೋಗುತ್ತಿರುವವರು ಅದೇ ಮಾರ್ಗದಲ್ಲಿ ಮುಂದುವರಿಯಲು ಬಿಡುವುದಿಲ್ಲ ಮತ್ತು ತಪ್ಪು ಮಾರ್ಗ ಹಿಡಿದವರನ್ನು ತಪ್ಪು ಮಾರ್ಗದಲ್ಲೇ ಹೋಗಲು ಬೆಂಬಲಿಸುತ್ತಿದ್ದೀರಿ?' ಎಂದು ಪ್ರಶ್ನಿಸಿದರು.[೭೪]

ವಲ್ಲಭಭಾಯ್ ಮತ್ತು ರಾಜಾಜಿಯವರು ಬಾಂಬೆ ಠರಾವನ್ನು ಸಂವಿಧಾನ ಬಾಹಿರವೆಂದು ತಿರಸ್ಕರಿಸಿ, ಶಾಸನ ಪರಿಷತ್ತಿನ ಪ್ರವೇಶದ ವಿರುದ್ಧ ಪ್ರಚಾರವನ್ನು ಮುಂದುವರೆಸಿದರು. ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯು ೧೯೨೩ರ ಜುಲೈನಲ್ಲಿ ನಾಗಪುರದಲ್ಲಿ ನಡೆಯಿತು. ಅಲ್ಲಿ ಜವಹರಲಾಲ್ ನೆಹರುರವರು ಗುಜರಾತ್ ಮತ್ತು ತಮಿಳುನಾಡು ಕಾಂಗ್ರೆಸ್ ಸಮಿತಿಗಳ ಮೇಲೆ ಶಿಸ್ತು ಕ್ರಮ ತೆಗೆದುಕೊಳ್ಳಬೇಕೆಂದು ಠರಾವು ಮಂಡಿಸಿದರು. ಅಂದರೆ ಅವರು ವಲ್ಲಭಭಾಯ್ ಮತ್ತು ರಾಜಾಜಿಯವರ ಮೇಲೆ ಶಿಸ್ತು ಕ್ರಮ ತೆಗೆದುಕೊಳ್ಳಬೇಕೆಂದು ಠರಾವು ಮಂಡಿಸಿದಂತಾಯಿತು. ವಲ್ಲಭಭಾಯ್ ಮತ್ತು ರಾಜಾಜಿಯವರು ಆ ಸಭೆಯಲ್ಲಿ ಗಯಾ ಅಧಿವೇಶನದ ತೀರ್ಮಾನವನ್ನು ನೆನಪಿಸಿದರು. ಅದರಿಂದ ಜವಹರಲಾಲ್ ನೆಹರುರವರ ಠರಾವು ಎರಡು ಮತಗಳಿಂದ ಬಿದ್ದುಹೋಯಿತು ಮತ್ತು ಜವಹರ ಲಾಲ್ ಕಾರ್ಯಕಾರಿ ಸಮಿತಿ ಸದಸ್ಯ ಸ್ಥಾನಕ್ಕೆ ರಾಜಿನಾಮೆ ನೀಡಿದರು. ಹೀಗೆ ವಲ್ಲಭಭಾಯ್ – ಜವಹರಲಾಲ್ ಸ್ನೇಹ ಸಂಬಂಧದ ಸಂಗೀತವು ಅಪಸ್ವರದಲ್ಲಿ ಆರಂಭವಾಯಿತೆನ್ನಿಸುತ್ತದೆ.[೭೫]

ವಲ್ಲಭಭಾಯ್ ಪಟೇಲ್ ಅನಂತರ ತಮ್ಮ ಗಮನವನ್ನು ಸಂಪೂರ್ಣವಾಗಿ ಗಾಂಧೀಜಿಯವರ ರಚನಾತ್ಮಕ ಕಾರ್ಯಗಳ ಕಡೆಗೆ ಹರಿಸಿದರು. ಅದಕ್ಕಾಗಿ, ಗುಜರಾತ್‌ಗೆ ನಿಗದಿಯಾಗಿದ್ದ ಮೂರು ಲಕ್ಷ ರೂಪಾಯಿಗಳನ್ನು ಸಂಗ್ರಹಿಸಿದರು ಮತ್ತು ೮೦೦ ಮಂದಿ ಸ್ವಯಂ ಸೇವಕರನ್ನು ಜಮಾಯಿಸಿದರು. ಅನೇಕರು ವೈಯುಕ್ತಿಕ ಸತ್ಯಾಗ್ರಹ ನೀಡಿ ಸೆರೆಮನೆಗೆ ಹೋಗಲು ಉತ್ಸುಕರಾಗಿದ್ದರು. ಆದರೆ ವಲ್ಲಭಭಾಯ್ ಅವರಿಗೆ ಅನುಮತಿ ನೀಡಲಿಲ್ಲ. ಗಾಂಧೀಜಿಯವರ ರಚನಾತ್ಮಕ

ಕಾರ್ಯಗಳು ಸೆರೆಮನೆಗೆ ಹೋಗುವುದಕ್ಕಿಂತಲೂ ಮುಖ್ಯ ಮತ್ತು ಯಾವ ಕಾರಣಕ್ಕೂ ಅವನ್ನು ಕಡೆಗಣಿಸುವಹಾಗಿಲ್ಲ – ಎಂದರು ವಲ್ಲಭಭಾಯ್.[೭೬]

ಗಾಂಧೀಜಿಯವರ ದಸ್ತಗಿರಿ ಮತ್ತು ಸೆರೆವಾಸದ ನಂತರ ಬರೆದ ಒಂದು ಲೇಖನದಲ್ಲಿ ವಲ್ಲಭಭಾಯ್‌ರವರು ಹೀಗೆ ವ್ಯಕ್ತ ಪಡಿಸಿದರು:

> ಅವರು (ಮಹಾತ್ಮನ ಜೊತೆಗಾರರು) ಗಾಂಧೀಜಿಯ ತತ್ವವಾದ ಅಹಿಂಸೆ, ಅವರ ಅಪರಿಮಿತ ಪ್ರೀತಿ ಮತ್ತು ಪ್ರೇಮ, ಅವರ ಕುಗ್ಗದ ಶಕ್ತಿ ಮತ್ತು ಸ್ವಾತಂತ್ರ್ಯದಾಹವನ್ನು ನೆನಪಿನಲ್ಲಿಡ ಬೇಕು. ಅವರೂ ಸಹ ಗಾಂಧೀಜಿಯಂತೆ ಶ್ರಮವಹಿಸಿ ಕೆಲಸ ಮಾಡಿದರೆ ಅವರು ಗಾಂಧೀಜಿಗೆ ತಮ್ಮ ವಿಧೇಯತೆಯನ್ನು ತೋರಲು ಮತ್ತು ಸ್ವಾತಂತ್ರ್ಯ ಸಂಪಾದನೆಗೆ ಗಾಂಧೀಜಿಯ ಕಾರ್ಯಕ್ರಮಗಳನ್ನು ನೆರವೇರಿಸಲು ಶಕ್ತರಾಗುತ್ತಾರೆ.

ವಲ್ಲಭಭಾಯ್‌ರವರು ತಮ್ಮ ಪ್ರಾಂತ್ಯದಲ್ಲಿ ಗಾಂಧೀಜಿಯವರ ರಚನಾತ್ಮಕ ಕಾರ್ಯಗಳು ಸರಿಯಾಗಿ ನಡೆಯುತ್ತಿವೆಯೆ ಎನ್ನುವುದನ್ನು ಖಚಿತ ಪಡಿಸಿಕೊಳ್ಳಲು ಬಹಳ ಶ್ರಮಿಸುತ್ತಿದ್ದರು, ಸದಾ ಸಂಚರಿಸುತ್ತಿದ್ದರು ಮತ್ತು ಜನರೊಡನೆ ಆತ್ಮೀಯ ಸಂಪರ್ಕವನ್ನು ಇಟ್ಟುಕೊಂಡಿರುತ್ತಿದ್ದರು.[೭೭]

ಅಷ್ಟರಲ್ಲಿ ಮತ್ತೊಂದು ಸತ್ಯಾಗ್ರಹದಲ್ಲಿ ನಾಯಕತ್ವ ವಹಿಸಲು ಅವರಿಗೆ ಕರೆ ಬಂದಿತು.

೦೫. ನಾಗಪುರ ಧ್ವಜ ಸತ್ಯಾಗ್ರಹ

ಗಾಂಧೀಜಿಯವರು ಸೆರೆಮನೆಗೆ ಹೋಗುವಾಗ ಕಾಂಗ್ರೆಸ್ಸಿಗರು ಗ್ರಾಮಗಳಲ್ಲಿ ರಚನಾತ್ಮಕ ಕಾರ್ಯಗಳನ್ನು ನಡೆಸಬೇಕು ಮತ್ತು ಶಾಸನ ಭಂಗ ಚಳವಳಿಯಲ್ಲಿ ತೊಡಗಬಾರದು ಎಂದು ಹೇಳಿದ್ದರೂ ಸಹ ಕೆಲವು ಉತ್ಸಾಹಿ ಕಾಂಗ್ರೆಸ್ಸಿಗರು ಚಳವಳಿಯನ್ನು ನಡೆಸಲು ಉತ್ಸುಕರಾಗಿದ್ದರು ಮತ್ತು ಅಂತಹ ಸಂದರ್ಭಕ್ಕಾಗಿ ಸಮಯ ಕಾಯುತ್ತಿದ್ದರು. ನಾಗಪುರ ದ ಆಂಗ್ಲ ಅಧಿಕಾರಿಗಳು ಅವರಿಗೆ ಅಂತಹ ಒಂದು ಅವಕಾಶವನ್ನು ಒದಗಿಸಿದರು.

ಕಾಂಗ್ರೆಸ್ ಪಕ್ಷವು ಚರಕ ಸಹಿತವಾದ ತ್ರಿವರ್ಣ ಧ್ವಜವನ್ನು ರಾಷ್ಟ್ರೀಯ ಬಾವುಟ ಎಂದು ೧೯೨೦ರಲ್ಲಿ ತೀರ್ಮಾನಿಸಿತ್ತು. ಆ ತ್ರಿವರ್ಣ ಧ್ವಜವು ಭಾರತೀಯರ ಆಸೆ ಆಶೋತ್ತರಗಳ, ದೇಶ ಪ್ರೇಮದ ಮತ್ತು ದೃಢ ನಿಶ್ಚಯದ ಸಂಕೇತವಾಗಿತ್ತು. ಆದರೆ ಬ್ರಿಟಿಷರು ಅದನ್ನು ಬಂಡಾಯದ ಸಂಕೇತ ಎಂದು ಭಾವಿಸಿದ್ದರು. ದೇಶದಲ್ಲಿ ಒಂದು ಹೊಸ ಗಾಳಿ ಬೀಸುತ್ತಿರುವುದನ್ನು ಅವರು ಅರ್ಥಮಾಡಿಕೊಳ್ಳಲಿಲ್ಲ. ಅದರ ಫಲವಾಗಿ ನಾಗಪುರ ದಲ್ಲಿ ಧ್ವಜ ಸತ್ಯಾಗ್ರಹ ೧೯೨೩ರಲ್ಲಿ ನಡೆಯಿತು.

ಈ ಸತ್ಯಾಗ್ರಹ ವಾಸ್ತವವಾಗಿ ಆರಂಭವಾದದ್ದು ಜಬ್ಬಲ್‌ಪುರದಲ್ಲಿ ೧೯೨೨ರಲ್ಲಿ. ಜಬ್ಬಲ್‌ಪುರವು ಮಧ್ಯ ಪ್ರಾಂತ್ಯದ ಒಂದು ಪಟ್ಟಣ. ೧೯೨೨ರ ಆಗಸ್ಟ್‌ನಲ್ಲಿ ಕಾಂಗ್ರೆಸ್ ಅಧ್ಯಕ್ಷ ಹಕೀಮ್ ಅಜ್ಮಲ್ ಖಾನ್ ಆ ಪಟ್ಟಣಕ್ಕೆ ಭೇಟಿ ಕೊಟ್ಟರು. ಅಲ್ಲಿ ಶಾಸನ ಭಂಗ ಚಳವಳಿಯನ್ನು ಆರಂಭಿಸುವ ಸಾಧ್ಯತೆಯ ಬಗೆಗೆ ಪರಿಶೀಲಿಸುವುದು ಅವರ ಭೇಟಿಯ ಉದ್ದೇಶವಾಗಿತ್ತು. ಅವರನ್ನು ಭವ್ಯವಾಗಿ ಸ್ವಾಗತಿಸುವುದಕ್ಕಾಗಿ ಜಬ್ಬಲ್‌ಪುರದ ಪುರಸಭೆಯ ಕಾಂಗ್ರೆಸ್ ಸದಸ್ಯರು ಪುರಸಭಾ ಕಟ್ಟಡದ ಮೇಲೆ

ಕಾಂಗ್ರೆಸ್ಸಿನ ತ್ರಿವರ್ಣ ಧ್ವಜವನ್ನು ಹಾರಿಸಿದರು. ಆದರೆ ಅದರ ಜೊತೆಯಲ್ಲಿ ಇಂಗ್ಲೆಂಡಿನ 'ಯೂನಿಯನ್ ಜಾಕ್' ಬಾವುಟವನ್ನೂ ಸಹ ಹಾರಿಸಲು ನಿರಾಕರಿಸಿದರು. ಬ್ರಿಟನ್ ಬಾವುಟಕ್ಕಾದ ಈ ಅವಮಾನದ ಸುದ್ದಿ ಇಂಗ್ಲೆಂಡನ್ನು ಮುಟ್ಟಿತು. ಅಲ್ಲಿಯ ಪಾರ್ಲಿಮೆಂಟ್‌ನಲ್ಲಿ ಭಾರಿ ಗಲಾಟೆಯಾಯಿತು. ಇಂತಹ ಘಟನೆ ಮರುಕಳಿಸದಂತೆ ಎಚ್ಚರಿಕೆ ವಹಿಸಬೇಕೆಂದು ಇಂಡಿಯಾದ ವೈಸ್‌ರಾಯ್ ಸರ್ಕಾರಕ್ಕೆ ಸೂಚನೆ ನೀಡಿರುವುದಾಗಿ ಆಕ್ರೋಶಗೊಂಡ ಪಾರ್ಲಿಮೆಂಟ್ ಸದಸ್ಯರಿಗೆ ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ಇಂಡಿಯ ಆಗಿದ್ದ ವಿಸ್ಕೌಂಟ್ ಪೀಲ್ ತಿಳಿಸಿದರು.[೭೮]

೧೯೨೩ರ ಮಾರ್ಚ್‌ನಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆ ಜಬ್ಬಲ್‌ಪುರದಲ್ಲಿ ಏರ್ಪಾಡಾಯಿತು. ಆ ಸಂದರ್ಭದಲ್ಲಿ ಪುರಸಭೆಯ ಕಟ್ಟಡದ ಮೇಲೆ ತ್ರಿವರ್ಣ ಧ್ವಜವನ್ನು ಹಾರಿಸಲು ಪುರಸಭೆಯು ಒಂದು ಠರಾವನ್ನು ಅಂಗೀಕರಿಸಿತು. ಆದರೆ ಜಿಲ್ಲಾ ಮ್ಯಾಜಿಸ್ಟ್ರೇಟನು ಅದಕ್ಕೆ ಅನುಮತಿಯನ್ನು ನಿರಾಕರಿಸಿದನು. ಅಷ್ಟೇ ಅಲ್ಲದೆ ಪುರಸಭೆಯ ಮುಂದೆ ಒಂದು ಸಾರ್ವಜನಿಕ ಸಭೆಯನ್ನು ನಡೆಸಲು ಸಹ ಅವನು ಒಪ್ಪಿಗೆ ನೀಡಲಿಲ್ಲ. ಅದರಿಂದ ಮಾರ್ಚ್ ೧೮ರಂದು ಒಂದು ಚಳವಳಿ ಆರಂಭವಾಯಿತು ಮತ್ತು ಪುರಸಭೆಯ ಕಾಂಗ್ರೆಸ್ ಸದಸ್ಯರು ರಾಷ್ಟ್ರೀಯ ಬಾವುಟವನ್ನು ಹಾರಿಸಿದರು. ಆ ಧ್ವಜವನ್ನು ಇಳಿಸುವಂತೆ ಮ್ಯಾಜಿಸ್ಟ್ರೇಟನು ಪೊಲೀಸರಿಗೆ ಆಜ್ಞಾಪಿಸಿದನು. ಪೊಲೀಸರು ಧ್ವಜವನ್ನು ಕಿತ್ತು ಕಾಲಿನಲ್ಲಿ ತುಳಿದರು. ಪೊಲೀಸರು ಧ್ವಜಕ್ಕೆ ಮಾಡಿದ ಈ ಘೋರ ಅಪಮಾನದ ವಿರುದ್ಧ ಪ್ರತಿಭಟನೆ ಆರಂಭವಾಯಿತು. ಪುರಸಭೆಯ ಕಾಂಗ್ರೆಸ್ ಸದಸ್ಯರು ತಮ್ಮ ಸದಸ್ಯ ಸ್ಥಾನಗಳಿಗೆ ರಾಜಿನಾಮೆ ಕೊಟ್ಟರು ಮತ್ತು ಜಬ್ಬಲ್‌ಪುರ ಜಿಲ್ಲಾ ಕಾಂಗ್ರೆಸ್ ಸಮಿತಿಯು ತಕ್ಷಣ ಸತ್ಯಾಗ್ರಹವನ್ನು ಆರಂಭಿಸಿತು. ಸರ್ಕಾರವು ನಿಷೇಧಾಜ್ಞೆಯನ್ನು ಹೇರಿತು. ಕಾಂಗ್ರೆಸ್ಸಿನ ಸ್ವಯಂಸೇವಕರು ನಿಷೇಧಾಜ್ಞೆಯನ್ನು ಧಿಕ್ಕರಿಸಿ ತ್ರಿವರ್ಣ ಧ್ವಜವನ್ನು ಎತ್ತಿ ಹಿಡಿದು ಮೆರವಣಿಗೆ ಹೊರಟರು. ಹೆಸರಾಂತ ಕ್ರಾಂತಿಕಾರಿ ಪಂಡಿತ್ ಸುಂದರ್‌ಲಾಲ್ ಮತ್ತು ಹಿಂದಿ ಭಾಷೆಯ ಪ್ರಸಿದ್ಧ ಕವಿಯಿತ್ರಿ ಸುಭದ್ರ ಕುಮಾರಿ ಚೌಹಾನ್‌ರವರು ಆ ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ಅವರಿಬ್ಬರೂ ದಸ್ತಗಿರಿ ಮಾಡಲ್ಪಟ್ಟರು. ಪಂಡಿತ್ ಸುಂದರ್‌ಲಾಲ್‌ಗೆ ಆರು ತಿಂಗಳ ಸೆರೆಯಾಯಿತು.[೭೯]

ಆ ಸಮಯಕ್ಕೆ ನಾಗಪುರ ಜಿಲ್ಲಾ ಕಾಂಗ್ರೆಸ್ ತ್ರಿವರ್ಣ ಧ್ವಜದ ಗೌರವದ ರಕ್ಷಣೆಗಾಗಿ ಹೋರಾಟಕ್ಕೆ ಇಳಿಯಿತು. ಆಗ ನಾಗಪುರ ವು ಮಧ್ಯ ಪ್ರಾಂತ್ಯದ ರಾಜಧಾನಿಯಾಗಿತ್ತು. ಅಲ್ಲಿ ಜಲಿಯನ್ ವಾಲಾಬಾಗ್ ಹತ್ಯಾಕಾಂಡದ ವಾರ್ಷಿಕ ದಿನವಾದ ಏಪ್ರಿಲ್ ೧೩ರಂದು ಕಾಂಗ್ರೆಸ್ ಒಂದು ಮೆರವಣಿಗೆಯನ್ನು

ಆಯೋಜಿಸಿತು. ಮೆರವಣಿಗೆಕಾರರು ತ್ರಿವರ್ಣ ಧ್ವಜವನ್ನು ಹಿಡಿದು ಹೊರಟರು. ಅವರು ಸಿವಿಲ್ ಲೈನ್ ಮೂಲಕ ಹಾದು ಸದರ್ ಬಜ಼ಾರ್ ತಲುಪಿ ಅಲ್ಲಿ ಒಂದು ಸಾರ್ವಜನಿಕ ಸಭೆ ನಡೆಸುವವರಿದ್ದರು. ಆದರೆ ಅವರು ಪಟ್ಟಣದ 'ಸಿವಿಲ್ ಲೈನ್' ಪ್ರವೇಶಿಸಲು ಮುಂದಾದಾಗ ಪೊಲೀಸರು ತಡೆದರು. ಸಿವಿಲ್ ಲೈನ್ ಯೂರೋಪಿಯನ್ನರು ವಾಸಿಸುವ ಬಡಾವಣೆ. ಅಲ್ಲಿ ತ್ರಿವರ್ಣ ಧ್ವಜವು ಹಾದು ಹೋಗುವುದು ಅವರಿಗೆ ಮತ್ತು ಸರ್ಕಾರಕ್ಕೆ ಇಷ್ಟವಿರಲಿಲ್ಲ. ಮೆರವಣಿಗೆಕಾರರು ಮುಂದುವರೆಯಲು ಪ್ರಯತ್ನಿಸಿದಾಗ ಪೊಲೀಸರು ಅವರ ಮೇಲೆ ಲಾಠಿ ಪ್ರಹಾರ ಮಾಡಿದರು, ಅವರನ್ನು ಎಳೆದಾಡಿದರು ಮತ್ತು ಎತ್ತಿ ಹರಿಯುವ ಮೋರಿಗೆ ಎಸೆದರು.

ನಾಗಪುರ ಜಿಲ್ಲಾ ಕಾಂಗ್ರೆಸ್ ಗಾಂಧೀಜಿಯ ಸ್ನೇಹಿತ ಮತ್ತು ಬೆಂಬಲಿಗ ಜಮನ್ ಲಾಲ್ ಬಜಾಜ್ ನೇತೃತ್ವದಲ್ಲಿ ಮೇ ೧ರಿಂದ ಸರ್ಕಾರದ ನಿರ್ಬಂಧವನ್ನು ಮುರಿಯಲು ತೀರ್ಮಾನಿಸಿತು. ಅಂದಿನಿಂದ ಪ್ರತಿದಿನ (ರಜಾ ದಿನಗಳು ಬಿಟ್ಟು) ಹತ್ತು ಮಂದಿ ಸ್ವಯಂಸೇವಕರ ತಂಡವು ತ್ರಿವರ್ಣ ಧ್ವಜವನ್ನು ಎತ್ತಿ ಹಿಡಿದು ಸಿವಿಲ್ ಲೈನ್ ಕಡೆಗೆ ಮೆರವಣಿಗೆ ಹೊರಡುವುದು. ಪೊಲೀಸರು ಅವರನ್ನು ದಸ್ತಗಿರಿ ಮಾಡಿ ಸೆರೆಮನೆಗೆ ದೂಡುವರು. ಮಾರನೆಯ ದಿನ ಮತ್ತೊಂದು ಹತ್ತು ಮಂದಿ ಸ್ವಯಂ ಸೇವಕರ ತಂಡವು ತ್ರಿವರ್ಣ ಧ್ವಜವನ್ನು ಹಿಡಿದು ಮೆರವಣಿಗೆ ಹೊರಡುವುದು. ಅವರನ್ನೂ ಪೊಲೀಸರು ದಸ್ತಗಿರಿ ಮಾಡಿ ಸೆರೆಮನೆಗೆ ದೂಡುವರು. ಹೀಗೆ ಪ್ರತಿದಿನ ನಡೆಯುತ್ತಾ ಹೋಯಿತು. ಮೇ, ಜೂನ್ ಮತ್ತು ಜುಲೈ ಕಳೆದು ಆಗಸ್ಟ್ ೧೫ನೆ ತಾರೀಖು ಬಂದಿತು. ನಾಗಪುರ ದ ಸೆರೆಮನೆಯು ಭರ್ತಿಯಾಗಿ ಅಕೋಲಾ ಸೆರೆಮನೆಯಲ್ಲಿ ದಸ್ತಗಿರಿ ಆದವರನ್ನು ಇಡಲು ಸರ್ಕಾರವು ಆರಂಭಿಸಿತು. ವಲ್ಲಭಭಾಯ್ ಪಟೇಲರು ಸ್ವಯಂಸೇವಕರನ್ನು ಗುಜರಾತ್‌ನಿಂದ ನಾಗಪುರ ಕ್ಕೆ ಕಳುಹಿಸಲು ಜೂನ್ ತಿಂಗಳಲ್ಲೇ ಆರಂಭಿಸಿದ್ದರು. ರಾಜಾಜಿಯವರೂ ಸಹ ತಮಿಳುನಾಡಿನಿಂದ ಸ್ವಯಂ ಸೇವಕರನ್ನು ಕಳುಹಿಸುತ್ತಿದ್ದರು. ಕರ್ನಾಟಕ ಪ್ರದೇಶದಿಂದಲೂ ಒಂದು ತಂಡ ಬಂದಿತು. ಕ್ರಮೇಣ ದೇಶದ ಎಲ್ಲಾ ಕಡೆಗಳಿಂದಲೂ ಸ್ವಯಂ ಸೇವಕರ ತಂಡಗಳು ಬರಲಾರಂಭಿಸಿದುವು.[೮೦]

ಐರೋಪ್ಯರಿಗೆ ಹಿಂಸೆ ಕೊಡುವುದಕ್ಕಾಗಿಯೇ ಕಾಂಗ್ರೆಸ್ ಪಕ್ಷವು ಮೆರವಣಿಗೆಯನ್ನು ಸಿವಿಲ್ ಲೈನ್ ಮೂಲಕ ನಡೆಸಲು ಯತ್ನಿಸುತ್ತಿದೆ ಎಂದು ಭಾವಿಸಿ ಸರ್ಕಾರವು ಧ್ವಜದ ಮೆರವಣಿಗೆಯನ್ನು ನಿಷೇಧಿಸಿತ್ತು. ಕಾಂಗ್ರೆಸ್, ಲಂಡನ್ ನಗರದಲ್ಲಿ ಕಮ್ಯುನಿಸ್ಟರು ತಮ್ಮ ಕೆಂಪು ಬಾವುಟವನ್ನು ಹಿಡಿದು ಯಾವ ಅಡ್ಡಿ ಅಡಚಣೆಯೂ

ಇಲ್ಲದೆ ಪಾರ್ಲಿಮೆಂಟ್ ಭವನದ ಹೊರಗೆ ಹಾದು ಹೋಗುವುದನ್ನು ಮತ್ತು ಭಾರತದ ಇತರ ನಗರಗಳಲ್ಲಿ ತ್ರಿವರ್ಣ ಧ್ವಜದ ಮೆರವಣಿಗೆಯು ಯಾವ ಅಡ್ಡಿಯೂ ಇಲ್ಲದೆ ನಡೆದಿರುವುದನ್ನು ಎತ್ತಿ ತೋರಿಸಿತು. ಆದರೆ ಏನೂ ಪ್ರಯೋಜನವಾಗಲಿಲ್ಲ. ನಾಗಪುರ ದ ಕಮಿಷನರ್ ಒಬ್ಬ ಯೂರೊಪಿಯನ್. ತ್ರಿವರ್ಣ ಧ್ವಜವನ್ನು ಕಂಡರೆ ಸಾಕು ಅವನಿಗೆ ಪಿತ್ತ ನೆತ್ತಿಗೆ ಏರುತ್ತಿತ್ತು. ಐರೋಪ್ಯರಿಗೆ ಹಿಂಸೆ ಕೊಡುವುದಕ್ಕಾಗಿಯೇ ಮೆರವಣಿಗೆ ನಡೆಸುತ್ತಿದ್ದಾರೆಂದು ಅವನು ಅಚಲವಾಗಿ ನಂಬಿದ್ದನು. ಅದರಿಂದ ಮೆರವಣಿಗೆಕಾರರನ್ನು ದಸ್ತಗಿರಿ ಮಾಡಿಸುತ್ತಿದ್ದನು.[೮೧]

ದಸ್ತಗಿರಿ ಆದವರನ್ನು ಸೆರೆಮನೆಯಲ್ಲಿ ಬಹಳ ಕ್ರೂರವಾಗಿ ಹಿಂಸಿಸುತ್ತಿದ್ದರು. ಸೆರೆಯಾದವರ ಪೈಕಿ ವಕೀಲರು, ಉಪನ್ಯಾಸಕರು, ಜಮೀನ್ದಾರರು, ವರ್ತಕರು, ಪದವೀಧರರು ಅಲ್ಲದೆ ವಿನೋಬ ಭಾವೆ ಮತ್ತು ರವಿಶಂಕರ ಮಹಾರಾಜ್ ಅಂತಹ ಗಾಂಧೀಜಿ ಭಕ್ತರೂ ಇದ್ದರು. ವಿನೋಬ ಭಾವೆಯವರು ಪ್ರತಿ ದಿನ ಅನೇಕ ಘಂಟೆಗಳ ಕಾಲ ಬಿಸಿಲಿನಲ್ಲಿ ಕಲ್ಲುಗಳನ್ನು ಒಡೆಯಬೇಕಾಗಿತ್ತು. ೧೯೧೯ರಿಂದಲೂ ಗಾಂಧೀಜಿಯ ಶಿಷ್ಯ ಆಗಿದ್ದ ರವಿಶಂಕರ್ ಬೀಸುವ ಕಲ್ಲಿನಲ್ಲಿ ಧಾನ್ಯವನ್ನು ಬೀಸಿ ಹಿಟ್ಟುಮಾಡಬೇಕಾಗಿತ್ತು. ನಿತ್ಯ ತಮ್ಮ ಪಾಲಿನ ಕೆಲಸಗಳನ್ನು ಮುಗಿಸದ ಕೈದಿಗಳನ್ನು 'ಫ್ಲೆಟರ್ಸ್'ನಲ್ಲಿ ಇಡುತ್ತಿದ್ದರು ಅಥವಾ ಕೋಣೆಯಲ್ಲಿ ಒಂಟಿ ಇಡುತ್ತಿದ್ದರು. ಖೈದಿಗಳಿಗೆ ಕೊಡುವ ಊಟ ಅಸಹ್ಯವಾಗಿರುತ್ತಿತ್ತು. ಚಪಾತಿಯಲ್ಲಿ ಕಲ್ಲಿನ ಚೂರುಗಳು ಇರುತ್ತಿದ್ದುವು. ಈ ಹಿಂಸೆಯನ್ನು ತಡೆಯಲಾರದೆ ಅನೇಕ ಮಂದಿ ಕ್ಷಮಾಪಣಾ ಪತ್ರವನ್ನು ಬರೆದು ಕೊಟ್ಟು ಬಿಡುಗಡೆ ಪಡೆಯುತ್ತಿದ್ದರು.[೮೨] ಆದರೆ ಹೆಚ್ಚಿನ ಮಂದಿ ಈ ಶಿಕ್ಷೆಗಳನ್ನು ಸಂತೋಷದಿಂದಲೇ ಅನುಭವಿಸುತ್ತಿದ್ದರು.

ನಾಗಪುರದ ಕಮಿಷನರ್ ಚಾರ್ಲ್ಸ್ ಎ ಕ್ಲಾರ್ಕ್ ಸಿವಿಲ್ ಲೈನ್‌ನಲ್ಲಿ ವಾಸಿಸುತ್ತಿದ್ದನು. ಅವನು ತನ್ನ ಮನೆಯ ಮುಂದೆ ತ್ರಿವರ್ಣ ಧ್ವಜವು ಹಾದುಹೋಗ ಬಾರದೆಂದು ದ್ವೇಷದಿಂದಲೋ ಅಥವಾ ಭಯದಿಂದಲೋ ಅಥವಾ ಅವೆರಡರಿಂದಲೋ ನಿರ್ಧರಿಸಿದ್ದನು. ಧ್ವಜ ಹಿಡಿದವರೇನಾದರೂ ತನ್ನ ಮನೆಯ ಮುಂದೆ ಹಾದು ಹೋದರೆ ಗುಂಡಿಟ್ಟು ಕೊಲ್ಲುವುದಾಗಿ ಘೋಷಿಸಿದ್ದನು.[೮೩]

ಜೂನ್ ತಿಂಗಳ ಕೊನೆಯಲ್ಲಿ ಜಮನ್ ಲಾಲ್ ಬಜಾಜ್‌ರವರು ದಸ್ತಗಿರಿಯಾಗಿ ೧೮ ತಿಂಗಳ ಸೆರೆವಾಸ ವಿಧಿಸಲ್ಪಟ್ಟರು. ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಜುಲೈ ಆರಂಭದಲ್ಲಿ ನಾಗಪುರ ದಲ್ಲಿ ಸಭೆ ಸೇರಿ ಬಜಾಜ್‌ರವರ ಸ್ಥಾನದಲ್ಲಿ ಧ್ವಜ ಸತ್ಯಾಗ್ರಹದ ನಾಯಕತ್ವವನ್ನು ವಹಿಸಿಕೊಳ್ಳುವಂತೆ ವಲ್ಲಭಭಾಯ್ ಪಟೇಲರನ್ನು ಕೋರಿತು. ವಲ್ಲಭಭಾಯ್ ಪಟೇಲರು ಜುಲೈ ೨೨ರಂದು ನಾಗಪುರ

ವನ್ನು ತಲುಪಿದರು. ಅಲ್ಲಿಯ ಪರಿಸ್ಥಿತಿ ಬಹಳ ಬಿಗಡಾಯಿಸಿತ್ತು. ಸ್ವರಾಜ್ಯ ಪಕ್ಷವು ಸತ್ಯಾಗ್ರಹದ ವಿರೋಧವಾಗಿತ್ತು. ಸ್ಥಳೀಯ ಕಾಂಗ್ರೆಸ್ಸಿಗರಲ್ಲಿ ಒಮ್ಮತವಿರಲಿಲ್ಲ. ಸ್ವಯಂಸೇವಕರನ್ನು ಸಂಪೂರ್ಣವಾಗಿ ಹೊರಗಿನಿಂದ ಕರೆಸಿಕೊಳ್ಳಬೇಕಾಗಿತ್ತು. ಪ್ರತಿಯೊಬ್ಬ ಸದಸ್ಯನೂ ತನ್ನದೇ ಆದ ಪ್ರತ್ಯೇಕ ರಾಗವನ್ನು ನುಡಿಸುವ ವಾದ್ಯ ಘೋಷ್ಠಿಯನ್ನು ನಾನು ನಡೆಸಬೇಕಾಗಿದೆ – ಎಂದು ವಲ್ಲಭಭಾಯ್ ಒಬ್ಬ ಸ್ನೇಹಿತನಿಗೆ ಬರೆದ ಪತ್ರದಲ್ಲಿ ತಿಳಿಸಿದರು.[೮೪]

ವಲ್ಲಭಭಾಯ್ ಪಟೇಲರು ಮೊದಲು ವಿವಿಧ ಪ್ರಾಂತ್ಯಗಳಿಂದ ಕೊನೆಯ ಪಕ್ಷ ೫೦ ಮಂದಿ ಸ್ವಯಂಸೇವಕರು ನಾಗಪುರ ವನ್ನು ಪ್ರತಿ ದಿನ ತಲುಪುವಂತೆ ಏರ್ಪಡಿಸಿದರು. ವಿವಿಧ ಪ್ರಾಂತ್ಯದವರು ಕಳುಹಿಸಬೇಕಾದ ಸ್ವಯಂಸೇವಕರ ಸಂಖ್ಯೆ ಮತ್ತು ತಾರೀಖನ್ನು ನಿಗದಿಪಡಿಸಿದರು. ಅದರಿಂದ ಸತ್ಯಾಗ್ರಹ ಸತತವಾಗಿ ನಡೆಯಲು ಅನುಕೂಲವಾಯಿತು. ನಾಗಪುರ ಕ್ಕೆ ಟಿಕೆಟ್ ಕೊಡುವುದನ್ನು ತಡೆಯಲು ರೈಲಿನ ಅಧಿಕಾರಿಗಳು ಪ್ರಯತ್ನಿಸಿದರು. ಆದರೆ ಅವರು ಯಶಸ್ವಿಯಾಗಲಿಲ್ಲ. ಪ್ರತಿ ದಿನ ಸ್ವಯಂಸೇವಕರು ನಾಗಪುರ ರೈಲ್ವೆ ನಿಲ್ದಾಣಕ್ಕೆ ಬಂದಿಳಿದರು. ಸೆರೆಮನೆಗಳು ಮತ್ತೆ ಭರ್ತಿಯಾಗತೊಡಗಿದುವು.

ವಲ್ಲಭಭಾಯ್‌ರವರು ಮಹಿಳೆಯರನ್ನೂ ಸಹ ಸತ್ಯಾಗ್ರಹದಲ್ಲಿ ಭಾಗವಹಿಸುವಂತೆ ಮಾಡುವುದಾಗಿ ಪ್ರಕಟಿಸಿದರು. ಗಾಂಧೀಜಿಯವರ ಪತ್ನಿ ಕಸ್ತೂರ್‌ಬಾರವರನ್ನೂ ಸಹ ಕರೆಸಲು ಯೋಚಿಸಿದರು. ಕಸ್ತೂರ್‌ಬಾರವರಿಗೆ 'ಸೆರೆಮನೆಗೆ ಹೋಗಲು ಸಿದ್ಧವಾಗಿರಿ' ಎಂಬ ಸಂದೇಶವನ್ನು ಅವರು ಕಳುಹಿಸಿದರು. ಮಹಿಳೆಯರ ಪಾಲ್ಗೊಳ್ಳುವಿಕೆ ಇಡೀ ದೇಶವನ್ನು ಉದ್ರೇಕಿಸುವುದೆಂದು ಪಟೇಲರು ಯೋಚಿಸಿದ್ದರು.[೮೫]

ಅಷ್ಟು ಹೊತ್ತಿಗೆ ವಿಠ್ಠಲ್‌ಭಾಯ್ ಪಟೇಲ್‌ರವರು ತಮ್ಮನ ನೆರವಿಗಾಗಿ ನಾಗಪುರ ಕ್ಕೆ ಬಂದರು. ಶಾಸನ ಪರಿಷತ್ತಿನ ಪ್ರವೇಶದ ವಿಷಯದಲ್ಲಿ ಇಬ್ಬರು ಸಹೋದರರು ವಿರುದ್ಧ ಬಣಗಳಲ್ಲಿ ಗುರುತಿಸಿಕೊಂಡಿದ್ದರೂ ಸಹ ವೈಯುಕ್ತಿಕವಾಗಿ ಅವರಿಬ್ಬರ ನಡುವಣ ಪ್ರೀತಿಗೆ ಯಾವ ಧಕ್ಕೆಯೂ ಉಂಟಾಗಿರಲಿಲ್ಲ. ಜೊತೆಗೆ, ಮಧ್ಯ ಪ್ರಾಂತ್ಯಗಳ ಗೌರ್ನರ್ ಫ್ರಾಂಕ್‌ಸ್ಲೈ ಮತ್ತು ವಿಠ್ಠಲ್‌ಭಾಯ್ ಲಂಡನ್ನಿನ ಇನ್ಸ್ ಆಫ್ ಕೋರ್ಟ್‌ನಲ್ಲಿ ಸಹಪಾಠಿಗಳಾಗಿದ್ದವರು. ಮಧ್ಯಪ್ರಾಂತ್ಯದ ಗೌರ್ನರ್ ಕೌನ್ಸಿಲ್‌ನ ಗೃಹ ಸದಸ್ಯ (ಗೃಹ ಮಂತ್ರಿ) ಮೋರೋ ಪಂತ್ ಜೋಶಿ ಮತ್ತು ವಿಠ್ಠಲ್‌ಭಾಯ್ ನಡುವೆ ಸ್ನೇಹವಿತ್ತು. ಅದರಿಂದ ವಿಠ್ಠಲ್‌ಭಾಯ್ ರವರ ಬರುವಿಕೆಯನ್ನು ಅಧಿಕಾರಿ ವರ್ಗದವರೂ ಸಹ ಸ್ವಾಗತಿಸಿದರು. ವಲ್ಲಭಭಾಯ್

ನಾಯಕತ್ವದಲ್ಲಿ ಚಳವಳಿಯು ಬೃಹತ್ ಆಗಿ ಬೆಳೆದೀತೆಂಬ ಭಯ ಅಧಿಕಾರಿ ವರ್ಗದವರಿಗೆ ಇತ್ತು. ಅದರಿಂದ ಅದರ ಶೀಘ್ರ ಮುಕ್ತಾಯವನ್ನು ಅವರು ಬಯಸುತ್ತಿದ್ದರು.

ಸರ್ಕಾರವು ಒಂದು ಒಡಂಬಡಿಕೆಗೆ ಬರಲು ಸಿದ್ಧವಿದೆ ಎಂಬ ಇಂಗಿತವನ್ನು ಗೃಹ ಸದಸ್ಯ ಮೋರೋ ಪಂತ್‌ರವರು ಪ್ರಾಂತ್ಯ ಶಾಸನ ಸಭೆಯಲ್ಲಿ ಹೊರಗೆಡಹಿದರು. ಅವರು, ರಾಷ್ಟ್ರಧ್ವಜವನ್ನು ಹಿಡಿದು ಮೆರವಣಿಗೆಯಲ್ಲಿ ಸಾಗುವುದಕ್ಕೆ ಯಾರ ಅಡ್ಡಿಯು ಇಲ್ಲವೆಂದೂ, ಹಾಗೆ ಮಾಡಲು ಕಾನೂನು ಪ್ರಕಾರ ಸರ್ಕಾರಕ್ಕೆ ಅರ್ಜಿ ಸಲ್ಲಿಸಿದರೆ ಪರವಾನಗಿ ನೀಡಲಾಗುವುದೆಂದೂ ಶಾಸನ ಸಭೆಯಲ್ಲಿ ಪ್ರಕಟಿಸಿದರು. ಆ ಪ್ರಕಟಣೆ ನಾಗಪುರ ದಲ್ಲಿದ್ದ ಐರೋಪ್ಯರಿಗೆ ಒಪ್ಪಿಗೆ ಆಗಲಿಲ್ಲ. ಆದರೆ ಸರ್ಕಾರವು ಮೆರವಣಿಗೆಗೆ ಅವಕಾಶ ಕೊಡದೆ ಇರಲು ಸಾಧ್ಯವಿರಲಿಲ್ಲ, ಏಕೆಂದರೆ ಲಂಡನ್ ನಗರದಲ್ಲಿ ಬ್ರಿಟಿಷ್ ಬೋಲ್ಷೆವಿಕ್ ಪಕ್ಷದವರು ಕೆಂಪು ಬಾವುಟವನ್ನು ಹಿಡಿದು ನಗರದ ರಸ್ತೆಗಳಲ್ಲಿ ಮೆರವಣಿಗೆ ಹೋದಾಗ ಮತ್ತು ಪಾರ್ಲಿಮೆಂಟ್ ಮುಂದೆ ಘೋಷಣೆಗಳನ್ನು ಕೂಗಿದಾಗ ಸರ್ಕಾರವು ಅವರ ಮೇಲೆ ಯಾವ ಕ್ರಮವನ್ನೂ ತೆಗೆದುಕೊಂಡಿರಲಿಲ್ಲ. ಅದರಿಂದ ಭಾರತದಲ್ಲಿ ಭಿನ್ನ ರೀತಿಯಲ್ಲಿ ನಡೆಯಲು ಸಾಧ್ಯವಿರಲಿಲ್ಲ.[೮೬]

ಸರ್ಕಾರವು ಹೇರಿದ್ದ ನಿಷೇದಾಜ್ಞೆಯು ಆಗಸ್ಟ್ ೧೭ರಂದು ಮುಕ್ತಾಯ ವಾಗುವುದಿತ್ತು. ಅದರ ಮುಂದುವರಿಕೆಗೆ ಸರ್ಕಾರ ಹೊಸ ಆಜ್ಞೆಯನ್ನು ಹೊರಡಿಸುವುದಕ್ಕೆ ಮುನ್ನ, ಆಗಸ್ಟ್ ೧೬ರಂದು ವಲ್ಲಭಭಾಯ್‌ರವರು ಒಂದು ಲಿಖಿತ ಹೇಳಿಕೆಯನ್ನು ನೀಡಿ ಸತ್ಯಾಗ್ರಹದ ಬಗ್ಗೆ ಸರ್ಕಾರ ಮಾಡುತ್ತಿದ್ದ ಸುಳ್ಳು ಪ್ರಚಾರಗಳನ್ನು ಅಲ್ಲಗಳೆದರು. ಅವರೆಂದರು:

> ಸಾರ್ವಜನಿಕ ರಸ್ತೆಗಳನ್ನು ಮೆರವಣಿಗೆಗೆ ಉಪಯೋಗಿಸುವುದು ನಮ್ಮ ಸಂಪೂರ್ಣ ಮತ್ತು ನಿರ್ಬಂಧರಹಿತ ಹಕ್ಕೆಂದು ನಾವು ಪ್ರತಿಪಾದಿಸುತ್ತಿರುವುದಾಗಿ ಮಧ್ಯ ಪ್ರಾಂತ್ಯದ ಗೌರ್ನರ್ ಆಪಾದಿಸಿದ್ದಾರೆ. ..... ಅದು ಹಾಗಲ್ಲ. ..... ನಿರಂಕುಶ ಮತ್ತು ಅನ್ಯಾಯದ ಹಸ್ತಕ್ಷೇಪ ಮತ್ತು ಕಾನೂನಿನ ದುರುಪಯೋಗದ ವಿರುದ್ಧ ನಮ್ಮ ಪ್ರಾಥಮಿಕ ಹಕ್ಕನ್ನು ಸ್ಥಾಪಿಸುವುದಕ್ಕಾಗಿ ನಾಗಪುರ ಸತ್ಯಾಗ್ರಹವು ಆರಂಭಿಸಲ್ಪಟ್ಟಿದೆ. ..... ಸಮಾಜದ ಯಾವುದೇ ವರ್ಗಕ್ಕೆ ಕಿರಿಕಿರಿಯನ್ನು ಉಂಟು ಮಾಡುವುದು ಎಂದೂ ಮೆರವಣಿಗೆ ಪ್ರವರ್ತಕರ ಉದ್ದೇಶ

ವಾಗಿರಲಿಲ್ಲ. 'ಯೂನಿಯನ್ ಜಾಕ್' ಬಾವುಟವನ್ನು ಅವಮಾನಿಸುವುದಕ್ಕಾಗಿಯೇ ರಾಷ್ಟ್ರಧ್ವಜದ ಮೆರವಣಿಗೆಗಳನ್ನು ಏರ್ಪಡಿಸುತ್ತಿದ್ದಾರೆ ಎಂದು ಗೃಹ ಸದಸ್ಯರು ತಮ್ಮ ಭಾಷಣದಲ್ಲಿ ಆಪಾದಿಸಿರುವುದನ್ನು ಖಡಾಖಂಡಿತವಾಗಿ ನಿರಾಕರಿಸಬೇಕೆಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ನನಗೆ ಸೂಚಿಸಿದೆ.

ವಲ್ಲಭಭಾಯ್ ಪಟೇಲರು ತಮ್ಮ ಹೇಳಿಕೆಯಲ್ಲಿ ೧೭ನೆ ತಾರೀಖಿನಂದು ಮೂರು ಸ್ವಯಂ ಸೇವಕರಿಗೆ ಬದಲಾಗಿ ಐದು ಸ್ವಯಂ ಸೇವಕರ ತಂಡವು ಸಾದರ್ ಬಜ಼ಾರ್‌ನಿಂದ ಹೊರಟು ಸಿವಿಲ್ ಲೈನ್ ಮೂಲಕ ಮೆರವಣಿಗೆ ನಡೆಸುವುದೆಂದು ಅದನ್ನು ಅಧಿಕಾರಿಗಳು ತಡೆದರೆ ಹೋರಾಟವು ಹೊಸ ಹಂತವನ್ನು ತಲುಪುವುದೆಂದೂ ಸಹ ಪ್ರಕಟಿಸಿದರು. ಆ ಹೇಳಿಕೆಯು ವಲ್ಲಭಭಾಯ್ ಪಟೇಲರ ಒಂದು ಅದ್ಭುತ ನಡೆಯಾಗಿತ್ತು. ಸರ್ಕಾರವು ಪೇಚಿಗೆ ಸಿಲುಕಿತು. ೧೭ರಂದು ಮುಕ್ತಾಯವಾಗುತ್ತಿರುವ ನಿಷೇಧಾಜ್ಞೆಯನ್ನು ಮುಂದುವರೆಸಿದರೆ ಪಟೇಲರು ಹೋರಾಟವನ್ನು ತೀವ್ರಗೊಳಿಸುವರು. ಮುಂದುವರೆಸದೆ ಇದ್ದರೆ ಸರ್ಕಾರವು ಸೋಲನ್ನು ಒಪ್ಪಿಕೊಂಡಂತಾಗುವುದು. ಅದರಿಂದ ಸರ್ಕಾರ ಒಡಂಬಡಿಕೆಗೆ ಮುಂದಾಯಿತು. ಗೃಹ ಸದಸ್ಯನು ಗೌರ್ನರ್ ಫ್ರಾಂಕ್‌ಸ್ಟೈ ಜೊತೆ ವಲ್ಲಭಭಾಯ್‌ರವರ ಭೇಟಿಯನ್ನು ಏರ್ಪಡಿಸಿದನು. ವಿಠ್ಠಲ್‌ಭಾಯ್ ಪಟೇಲ್ ಸಹ ವಲ್ಲಭಭಾಯ್ ಜೊತೆ ಹೋದರು. ಆಗ ನಡೆದ ಮಾತು ಮತ್ತು ಚರ್ಚೆ ಫಲಪ್ರದವಾಗಿ ಅವರು ಒಂದು ಒಪ್ಪಂದಕ್ಕೆ ಬಂದರು. ಆಗಸ್ಟ್ ೧೮ರಂದು ಮಧ್ಯಾಹ್ನ ಸಿವಿಲ್ ಲೈನ್ ಮೂಲಕ ರಾಷ್ಟ್ರಧ್ವಜದ ಮೆರವಣಿಗೆ ಸಾಗಲು ಸರ್ಕಾರವು ಅವಕಾಶ ನೀಡುವ ಮತ್ತು ಅನಂತರ ಅಂದು ಸಂಜೆಗೆ ವಲ್ಲಭಭಾಯ್ ಪಟೇಲರು ಹೋರಾಟವನ್ನು ಹಿಂತೆಗೆದುಕೊಂಡಿರುವುದಾಗಿ ಪ್ರಕಟಿಸುವ ಮತ್ತು ಸರ್ಕಾರವು ಎಲ್ಲ ಖೈದಿಗಳನ್ನು ಬಿಡುಗಡೆ ಮಾಡುವ ಒಪ್ಪಂದಕ್ಕೆ ಸರ್ಕಾರ ಮತ್ತು ವಲ್ಲಭಭಾಯ್ ಬಂದರು. ವಲ್ಲಭಭಾಯ್‌ರವರು ಎಚ್ಚರಿಕೆ ವಹಿಸಿ ಖೈದಿಗಳ ಬಿಡುಗಡೆಯ ಬಗೆಗೆ ಗೃಹ ಸದಸ್ಯ ಮೋರೋ ಪಂತ್‌ರವರಿಂದ ಒಂದು ಲಿಖಿತ ಹೇಳಿಕೆಯನ್ನು ಪಡೆದುಕೊಂಡರು.

ವಲ್ಲಭಭಾಯ್‌ರವರು ಪೊಲೀಸ್ ಸೂಪರಿನ್‌ಟೆಂಡೆಂಟ್‌ರವರಿಗೆ ಒಂದು ಪತ್ರವನ್ನು ಬರೆದು ಆಗಸ್ಟ್ ೧೮ರಂದು ಮೆರವಣಿಗೆ ಸಿವಿಲ್ ಲೈನ್ ಮೂಲಕ ಹಾದುಹೋಗುವುದೆಂದು ತಿಳಿಸಿದರು. ಅವರು ಮೆರವಣಿಗೆ ಸಾಗುವ ಮಾರ್ಗ ಮತ್ತು ಕಾಲವನ್ನೂ ಸಹ ಪತ್ರದಲ್ಲಿ ತಿಳಿಸಿದ್ದರು.

೧೮ನೆ ತಾರೀಖು ಮಧ್ಯಾಹ್ನ ನೂರು ಮಂದಿ ಸ್ವಯಂಸೇವಕರು ತ್ರಿವರ್ಣ ಧ್ವಜವನ್ನು ಎತ್ತಿ ಹಿಡಿದು ಮೆರವಣಿಗೆ ಹೊರಟರು. ಪೊಲೀಸ್ ಸೂಪರಿನ್‌ಟೆಂಡೆಂಟನು ತನ್ನ ವಾಹನದಲ್ಲಿ ಮೆರವಣಿಗೆಯನ್ನು ಹಿಂಬಾಲಿಸಿದನು. ದಾರಿಯ ಉದ್ದಕ್ಕೂ ಪೊಲೀಸರು ನಿಂತಿದ್ದರು. ಮೆರವಣಿಗೆಯ ಉದ್ದಕ್ಕೂ ಮೆರವಣಿಗೆಕಾರರ ಜೈಕಾರ ಮತ್ತು ಘೋಷಣೆಗಳು ಗಗನವನ್ನು ಮುಟ್ಟುತ್ತಿದ್ದುವು. ಆದರೆ ಸಿವಿಲ್ ಲೈನ್‌ನ ಚರ್ಚನ್ನು ಸಮೀಪಿಸಿದಾಗ ಸಂಪೂರ್ಣ ನಿಶಬ್ದವನ್ನು ಪಾಲಿಸಿದರು. ಮೆರವಣಿಗೆಯು ಯಾವ ಅಡ್ಡಿಯೂ ಇಲ್ಲದೆ ತನ್ನ ಗುರಿಯನ್ನು ತಲುಪಿತು. ಆಗ ಪಟೇಲರು ಹೀಗೆ ನುಡಿದರು:

> ರಾಷ್ಟ್ರಧ್ವಜದ ಗೌರವವು ಎತ್ತಿ ಹಿಡಿಯಲ್ಪಟ್ಟಿದೆ. ಸಾರ್ವಜನಿಕ ರಸ್ತೆಗಳಲ್ಲಿ ಶಾಂತಿಯುತವಾಗಿ ಮತ್ತು ವ್ಯವಸ್ಥಿತವಾಗಿ ಮೆರವಣಿಗೆಗಳನ್ನು ನಡೆಸುವ ನಮ್ಮ ಹಕ್ಕು ಪುನರ್ಸ್ಥಾಪಿಸಲ್ಪಟ್ಟಿದೆ. ಇದನ್ನು ನಾನು ಸತ್ಯ, ಅಹಿಂಸೆ ಮತ್ತು ಕಷ್ಟ ಸಹಿಷ್ಣುತೆಗೆ ದೇವರ ದಯೆಯಿಂದ ದೊರೆತ ವಿಜಯವೆಂದು ಭಾವಿಸುತ್ತೇನೆ. ನಾಗಪುರ ಸತ್ಯಾಗ್ರಹವು ಮಹಾತ್ಮ ಗಾಂಧೀಜಿಯವರ ತತ್ವಗಳ ಮನೋಭಾವಕ್ಕೆ ಸಂಪೂರ್ಣ ಅನುಸಾರವಾದ ರೀತಿಯಲ್ಲಿ ನಡೆದು, ಪವಿತ್ರವಾದ ಗಾಂಧೀಜಿ ಜಯಂತಿಯಂದು ಮುಕ್ತಾಯವಾಗುತ್ತದೆ ಎಂದು ಪ್ರಕಟಿಸುವ ಸ್ಥಿತಿಯಲ್ಲಿ ನಾನು ಇದ್ದೇನೆ. [೮೭]

ನಾಗಪುರ ಸತ್ಯಾಗ್ರಹವೇನೊ ಯಶಸ್ವಿಯಾಗಿ ಮುಕ್ತಾಯವಾಯಿತು. ಆದರೆ ಸರ್ಕಾರವು ಒಪ್ಪಿದಂತೆ ಖೈದಿಗಳನ್ನು ಬಿಡುಗಡೆ ಮಾಡಲಿಲ್ಲ. ಅಧಿಕಾರಿಗಳು ಪ್ರಾಂತ್ಯ ಸರ್ಕಾರವು ಮೆರವಣಿಗೆಗೆ ಅವಕಾಶ ನೀಡಿದ್ದು ಯೂರೊಪಿಯನ್ ಐಸಿಎಸ್ ಅಧಿಕಾರಿಗಳಿಗೆ, ಅದರಲ್ಲೂ ನಾಗಪುರ ವಿಭಾಗದ ಕಮಿಷನರ್ ಮತ್ತು ಜಿಲ್ಲೆಗಳ ಡೆಪ್ಯುಟಿ ಕಮಿಷನರುಗಳಿಗೆ, ಒಪ್ಪಿಗೆ ಆಗಿರಲಿಲ್ಲ. ಅವರು ಗೌರ್ನರನನ್ನೂ ಬದಿಗೊತ್ತಿ ಲಂಡನ್ನಿನಲ್ಲಿರುವ ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ಇಂಡಿಯಾನನ್ನು ನೇರ ಸಂಪರ್ಕಿಸುವಷ್ಟು ಬಲಿಷ್ಠರಾಗಿದ್ದರು. ಅವರು ಖೈದಿಗಳ ಬಿಡುಗಡೆಗೆ ಪ್ರತಿರೋಧವನ್ನು ಒಡ್ಡಿದರು ಮತ್ತು ತಮ್ಮ ಮತ್ತು ಪ್ರಾಂತ್ಯ ಸರ್ಕಾರದ ನಡುವಣ ಈ ವಿವಾದವನ್ನು ಪರಿಹರಿಸುವಂತೆ ವೈಸ್‌ರಾಯ್‌ನನ್ನು ಕೋರಿದರು. ಅದರಿಂದ ಗೃಹ ಸದಸ್ಯ ಮೋರೋ ಪಂತರು ಖೈದಿಗಳ ಬಿಡುಗಡೆಯಿಂದ ನುಣುಚಿಕೊಳ್ಳುವುದಕ್ಕೆ ಮಾರ್ಗಗಳನ್ನು ಹುಡುಕಲಾರಂಭಿಸಿದರು. ವಿಠ್ಠಲ್‌ಭಾಯ್ ರವರು ಅಂತಹ ಒಂದು ಅವಕಾಶವನ್ನು ತಮಗೇ ಅರಿವಿಲ್ಲದಂತೆ ಕಲ್ಪಿಸಿಬಿಟ್ಟರು. ಅವರು ಸತ್ಯಾಗ್ರಹದ

ಯಶಸ್ಸನ್ನು ಕಾಂಗ್ರೆಸ್ಸಿನ ವಿಜಯ ಎಂದು ಹೇಳಿಕೆ ನೀಡಿದರು. ಆದರೆ ಪೊಲೀಸರು ಆ ಹೇಳಿಕೆಯನ್ನು ವಿರೋಧಿಸಿದರು. ಮೆರವಣಿಗೆಯು ತಮ್ಮ ಅನುಮತಿಯ ಮೇಲೆ ನಡೆಯಿತೆಂದು ಅದರಿಂದ ವಿಜಯದ ಪ್ರಶ್ನೆಯೇ ಉದ್ಭವಿಸುವುದಿಲ್ಲವೆಂದು ಪೊಲೀಸರು ಹೇಳಿದರು. ವಿಠ್ಠಲ್‌ಭಾಯ್ ರವರ ಹೇಳಿಕೆಯನ್ನು ಒಪ್ಪಂದದ ಉಲ್ಲಂಘನೆ ಎಂದು ಪರಿಗಣಿಸಿದ ಗೌರ್ನರನು ಖೈದಿಗಳನ್ನು ಬಿಡುಗಡೆ ಮಾಡಲಿಲ್ಲ. ಆದರೆ ಪಟೇಲರು ಪಟ್ಟು ಬಿಡಲಿಲ್ಲ. ಅವರು, ಸತ್ಯಾಗ್ರಹಕ್ಕೂ ವಿಠ್ಠಲ್‌ಭಾಯ್ ಗೂ ಸಂಬಂಧವಿಲ್ಲವೆಂದೂ, ವಿಠ್ಠಲ್‌ಭಾಯ್ ರವರು ಸ್ವರಾಜ್ಯ ಪಕ್ಷದವರಾಗಿ ನಾಗಪುರ ಕ್ಕೆ ಬಂದಿದ್ದರೆಂದೂ ಅದರಿಂದ ಸರ್ಕಾರವು ಒಪ್ಪಂದವನ್ನು ಪಾಲಿಸಲೇಬೇಕೆಂದು ಒತ್ತಾಯಿಸಿದರು.

ಗೌರ್ನರ್ ಮತ್ತು ಗೃಹ ಸದಸ್ಯ ತಾವು ಒಪ್ಪಿದಂತೆ ಖೈದಿಗಳ ಬಿಡುಗಡೆಯನ್ನು ಮಾಡದೇ ಇರಲು ಸಾಧ್ಯವಿರಲಿಲ್ಲ. ಅವರು ಖೈದಿಗಳ ಬಿಡುಗಡೆಗೆ ತಮಗೆ ಅಧಿಕಾರವನ್ನು ನೀಡುವಂತೆ ವೈಸ್‌ರಾಯ್‌ನನ್ನು ಕೋರಿದರು. ಆದರೆ ಐಸಿಎಸ್ ಅಧಿಕಾರಿಗಳು ಗೌರ್ನರ್ ವಿರುದ್ಧ ಲಂಡನ್‌ನ ಸೆಕ್ರೆಟರಿ ಆಫ್ ಸ್ಟೇಟ್‌ಗೆ ದೂರು ನೀಡಿದರು. ಹೀಗಾಗಿ ಖೈದಿಗಳ ಬಿಡುಗಡೆ ಆಗಲಿಲ್ಲ. ಅನೇಕ ಪತ್ರಿಕೆಗಳು ಪಟೇಲರನ್ನು ದೂರಲು ಆರಂಭಿಸಿದುವು ಮತ್ತು ಕಾಂಗ್ರೆಸ್ಸಿನ ಘನತೆಗೆ ಪಟೇಲರು ಧಕ್ಕೆ ತಂದರೆಂದು ಆಪಾದಿಸಿದುವು. ಆದರೆ ಪಟೇಲರು ಇದಾವುದಕ್ಕೂ ಗಮನವನ್ನು ಕೊಡಲಿಲ್ಲ. ಪ್ರತಿಕ್ರಿಯೆಯನ್ನೂ ನೀಡಲಿಲ್ಲ. ಅವರು ಸಂಪೂರ್ಣ ಮೌನವನ್ನು ತಾಳಿದರು.

ಪಟೇಲರ ಬಳಿ 'ರಾಮಬಾಣ'ವಿತ್ತು. ಅವರು ಎಚ್ಚರಿಕೆ ವಹಿಸಿ ಖೈದಿಗಳ ಬಿಡುಗಡೆಯ ಬಗೆಗೆ ಗೃಹ ಸದಸ್ಯರಿಂದ ಲಿಖಿತ ಒಪ್ಪಿಗೆಯನ್ನು ಒಡಂಬಡಿಕೆಯ ಸಮಯದಲ್ಲೇ ಪಡೆದುಕೊಂಡಿದ್ದರು. ಅವರು ತಮ್ಮ ಮೌನವನ್ನು ಮುರಿದು ಸರ್ಕಾರದ ಮೇಲೆ ರಾಮಬಾಣವನ್ನು ಪ್ರಯೋಗಿಸಿದರು. ಅವರು, '೨೪ ಘಂಟೆಗಳ ಒಳಗೆ ಖೈದಿಗಳನ್ನು ಬಿಡುಗಡೆ ಮಾಡದೇ ಹೋದರೆ ತಮ್ಮ ಬಳಿ ಇರುವ ತಾವು ಗೌರ್ನರ್ ಒಡನೆ ನಡೆಸಿರುವ ಪತ್ರ ವ್ಯವಹಾರಗಳನ್ನು ಬಹಿರಂಗಗೊಳಿಸುವುದಾಗಿ ಮತ್ತು ಸತ್ಯಾಗ್ರಹವನ್ನು ಮತ್ತೆ ಆರಂಭಿಸುವುದಾಗಿ' ಗುಡುಗಿದರು. ಪಟೇಲರು ಆ ಪತ್ರವನ್ನು ಪ್ರಕಟಿಸಿದರೆ ಗೌರ್ನರನ ಮತ್ತು ಗೃಹ ಸದಸ್ಯನ ಸ್ಥಾನಗಳ ಗೌರವ ಮತ್ತು ಪ್ರತಿಷ್ಠೆಗೆ ಧಕ್ಕೆ ಉಂಟಾಗುತ್ತಿತ್ತು. ಅವರು, ಖೈದಿಗಳ ಬಿಡುಗಡೆಗೆ ಅನುಮತಿಯು ನಿಗದಿಯಾದ ಸಮಯದೊಳಗೆ ಬರದೇ ಹೋದರೆ ತಾವು ತಮ್ಮ ಸ್ಥಾನಗಳಿಗೆ ರಾಜಿನಾಮೆ ನೀಡುವುದಾಗಿ ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ಇಂಡಿಯಾಗೆ ತಿಳಿಸಿದರು. ತಕ್ಷಣವೇ ಖೈದಿಗಳ ಬಿಡುಗಡೆಗೆ ಅನುಮತಿ ನೀಡುವ ಕೇಬಲ್ ಲಂಡನ್‌ನಿಂದ ಬಂದಿತು. [೮೮]

ಸೆಪ್ಟೆಂಬರ್ ೩ರಂದು ಎಲ್ಲಾ ಖೈದಿಗಳ ಬಿಡುಗಡೆಯಾಯಿತು. ಅವರು ರಾಷ್ಟ್ರಧ್ವಜವನ್ನು ಹಿಡಿದು ಸಿವಿಲ್ ಲೈನ್ ಮೂಲಕ ಮೆರವಣಿಗೆ ನಡೆಸಿ ವಿಜಯೋತ್ಸವವನ್ನು ಆಚರಿಸಿದರು. ಅಂದು ಸಂಜೆ ಪಟೇಲರು ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡಿ ಹೀಗೆ ನುಡಿದರು:

> ಹೋರಾಟಕ್ಕೆ ಒಂದು ಗೌರವಯುತ ಮುಕ್ತಾಯವನ್ನು ತರುವ ಅಭಿಲಾಷೆ ಸರ್ಕಾರಕ್ಕೆ ಇತ್ತೆಂಬುದು ನನಗೆ ಖಚಿತವಾಗಿದೆ..... ನಮ್ಮ ವಿಜಯದಿಂದ ನಾನು ಸ್ವಲ್ಪವೂ ಉಬ್ಬಿಹೋಗಿಲ್ಲ ಎಂದು ನಾನು ಪ್ರಾಮಾಣಿಕವಾಗಿ ಹೇಳುತ್ತೇನೆ. ಅದರ ಎಲ್ಲ ಗೌರವವು ಸೆರೆಮನೆಗೆ ಹೋಗಿ ಎಲ್ಲಾ ವಿಧದ ಕಷ್ಟಗಳನ್ನು ಅನುಭವಿಸಿದವರಿಗೆ ಸಲ್ಲುತ್ತದೆ. ಎಲ್ಲಾ ಗೌರವವು ಅದ್ಭುತ ನಿರ್ವಹಣಾ ಶಕ್ತಿ ಪ್ರದರ್ಶಿಸಿದ ಮತ್ತು ಅವಿರತವಾಗಿ ಶ್ರಮಿಸಿದ ನಾಗಪುರ ದ ಕಾಂಗ್ರೆಸ್ ಸಮಿತಿಗೆ ಸಲ್ಲುತ್ತದೆ. ಅವರೆಲ್ಲರೂ ಪರಿಶುದ್ಧ ಮತ್ತು ನಿರ್ಭೀತ ಆಯುಧಗಳಿಂದ ನಡೆಸಿದ ಈ ಹೋರಾಟವನ್ನು ಸದಾ ನೆನಪಿನಲ್ಲಿ ಇಟ್ಟುಕೊಳ್ಳುತ್ತಾರೆ. ಅದು ಸತ್ಯ, ಅಹಿಂಸೆ ಮತ್ತು ಸ್ವಾರ್ಥ ತ್ಯಾಗದ ಅಸ್ತ್ರಗಳ ಶ್ರೇಷ್ಠತೆಯ ಬಗೆಗೆ ಜನರಲ್ಲಿ ನಂಬಿಕೆಯನ್ನು ತುಂಬುತ್ತದೆ.[೬೯]

ವಲ್ಲಭಭಾಯ್‌ರವರು ಸತ್ಯಾಗ್ರಹದ ಯಶಸ್ಸಿಗೆ ಯಾವ 'ಕ್ರೆಡಿಟ್'ನ್ನು ತೆಗೆದುಕೊಳ್ಳದೆ ಎಲ್ಲವನ್ನೂ ಗಾಂಧೀಜಿಯವರ ತತ್ವಗಳಿಗೆ ಮತ್ತು ಸತ್ಯಾಗ್ರಹಿಗಳಿಗೆ ನಿಸ್ವಾರ್ಥತೆಯಿಂದ ಅರ್ಪಿಸಿಬಿಟ್ಟರು.

೦೬. ದೆಹಲಿ ಕಾಂಗ್ರೆಸ್ ಅಧಿವೇಶನ

೧೯೨೩ರ ನವೆಂಬರ್‌ನಲ್ಲಿ ಚುನಾವಣೆ ನಡೆಯುವುದಿತ್ತು. ಅಷ್ಟರೊಳಗೆ ಶಾಸನ ಪರಿಷತ್ತುಗಳ ಪ್ರವೇಶದ ಪರ ಮತ್ತು ವಿರೋಧದ ಕಾಂಗ್ರೆಸ್ ಬಣಗಳ ನಡುವಣ ಭಿನ್ನಾಭಿಪ್ರಾಯ ಶಮನವಾಗದೇ ಹೋದರೆ ಚುನಾವಣೆಯಲ್ಲಿ ಸ್ವರಾಜ್ಯ ಪಕ್ಷದವರಿಗೆ ತೊಂದರೆಯಾಗುವ ಸಂಭವವಿತ್ತು. ಅದರಿಂದ ೧೯೨೩ರ ಸೆಪ್ಟೆಂಬರ್ ತಿಂಗಳಲ್ಲಿ ವಿಶೇಷ ಕಾಂಗ್ರೆಸ್ ಅಧಿವೇಶನವು ದೆಹಲಿಯಲ್ಲಿ ೩೫ ವರ್ಷದ ಅಬುಲ್ ಕಲಮ್ ಅಜ಼ಾದ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು. ಆ ವೇಳೆಗೆ, ಒಬ್ಬ ಪ್ರಭಾವಿ ನಾಯಕನನ್ನು ಬಿಟ್ಟು, ಉಳಿದ ಯಾವ ಪ್ರಭಾವಿ ನಾಯಕರೂ ತಮ್ಮ ತಮ್ಮ ನಿಲುವನ್ನು ಬದಲಾಯಿಸಿರಲಿಲ್ಲ. ಆ ಒಬ್ಬರು ಮೌಲಾನಾ ಮಹಮ್ಮದ್ ಅಲಿ. ಆ ಕಾಲದಲ್ಲಿ ಅವರು ಭಾರತೀಯ ಮುಸ್ಲಿಮರ ಪ್ರಮುಖ ನಾಯಕರಾಗಿದ್ದರು. ಶಾಸನ ಪರಿಷತ್ತುಗಳ ಪ್ರವೇಶವನ್ನು ಕಟುವಾಗಿ ವಿರೋಧಿಸುತ್ತಿದ್ದ ಮಹಮ್ಮದ್ ಅಲಿಯವರು ತಮ್ಮ ನಿಲುವನ್ನು ದೆಹಲಿ ಅಧಿವೇಶನದಲ್ಲಿ ಬದಲಾಯಿಸಿ, 'ಶಾಸನ ಪರಿಷತ್ತನ್ನು ಪ್ರವೇಶಿಸಲು ಬಯಸುವವರಿಗೆ ಹಾಗೆ ಮಾಡಲು ಅನುಮತಿಯನ್ನು ಕಾಂಗ್ರೆಸ್ ನೀಡಬೇಕು' ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಇದು ವಲ್ಲಭಭಾಯ್ ಮತ್ತು ರಾಜೇಂದ್ರ ಪ್ರಸಾದ್‌ಗೆ ನಿರಾಸೆಯನ್ನು ಉಂಟುಮಾಡಿತು. ಆದಾಗ್ಯೂ ಅವರು (ಪಟೇಲ್ ಮತ್ತು ಪ್ರಸಾದ್) ಮಹಮ್ಮದ್ ಅಲಿಯನ್ನು ದೂರಮಾಡದಿರುವುದಕ್ಕಾಗಿ ಮತ್ತು ಕಾಂಗ್ರೆಸ್ ಇಬ್ಭಾಗ ಆಗುವುದನ್ನು ತಡೆಗಟ್ಟುವುದಕ್ಕಾಗಿ ತಾವೂ ಸಹ ಒಪ್ಪಲು ಮನಸ್ಸು ಮಾಡಿದರು.

ಅಧಿವೇಶನದಲ್ಲಿ ಮೊದಲು ಮಾತನಾಡಿದ ರಾಜೇಂದ್ರ ಪ್ರಸಾದ್, "ಶಾಸನ

ಪರಿಷತ್ತಿಗೆ ಹೋಗುವ ಮೂಲಕ ನಾವು ಅಸಹಕಾರ ತತ್ವವನ್ನು ಕೈಬಿಟ್ಟಿದ್ದೇವೆಂದು ನನಗೆ ಮನದಟ್ಟಾಗಿದೆ..... ಆದಾಗ್ಯೂ ಕಾಂಗ್ರೆಸ್‌ನ ವಿಭಜನೆಯ ಜವಾಬ್ದಾರಿಯನ್ನು ಹೊರುವಷ್ಟು ನನ್ನ ಭುಜಗಳು ದೊಡ್ಡವಾಗಿಲ್ಲ" ಎಂದರು.[೯೦]

ವಲ್ಲಭಭಾಯ್ ಪಟೇಲ್ ಭಾಷಣ ಮಾಡಲು ಏಳುವ ಹೊತ್ತಿಗೆ ಅವರ ಕೈಗೆ ಒಂದು ಟೆಲಿಗ್ರಾಂ ಬಂದಿತು. ಅನಾರೋಗ್ಯದ ಪ್ರಯುಕ್ತ ರಾಜಾಜಿಯವರು ಆ ಅಧಿವೇಶನಕ್ಕೆ ಬಂದಿರಲಿಲ್ಲ. ಮೌಲಾನ ಮಹಮ್ಮದ್ ಅಲಿಯವರ ಬದಲಾದ ಅಭಿಪ್ರಾಯವನ್ನು ಮಹದೇವ್ ಮತ್ತು ದೇವದಾಸ್ ಟೆಲಿಗ್ರಾಂ ಮೂಲಕ ರಾಜಾಜಿಯವರಿಗೆ ತಿಳಿಸಿ, ಅವರ ಸಲಹೆಯನ್ನು ಕೇಳಿದ್ದರು. ಅದಕ್ಕೆ ಉತ್ತರವಾಗಿ ರಾಜಾಜಿ ಕಳುಹಿಸಿದ ಟೆಲಿಗ್ರಾಂ ಈಗ ಪಟೇಲರ ಕೈಗೆ ಬಂದಿತ್ತು. ಪಟೇಲ್‌ರವರು ಭಾರವಾದ ಧ್ವನಿಯಲ್ಲಿ ಹೀಗೆ ಹೇಳಿದರು:

> ನಾವು ಇದುವರೆವಿಗೆ ಈ ಹೋರಾಟವನ್ನು ನಮ್ಮ ಶಕ್ತಿ ಮತ್ತು ಸಾಮರ್ಥ್ಯಕ್ಕೆ ಅನುಸಾರವಾಗಿ ನಡೆಸಿದೆವು ಮತ್ತು ಅಸಹಕಾರದ ಬಾವುಟವು ಹಾರಾಡುತ್ತಿರುವಂತೆ ಮಾಡಿದೆವು. ಆದಾಗ್ಯೂ ನಾವೆಲ್ಲಾ ಸೈನಿಕರು ಮಾತ್ರ. ಚುರುಕಾದ ಮೆದುಳು ಇರುವ ಮತ್ತು ಸ್ಪಷ್ಟವಾಗಿ ಆಲೋಚಿಸುವ ಒಬ್ಬ ವ್ಯಕ್ತಿಯ ಹೊರತು ಬೇರೆ ನಾಯಕ ನಮ್ಮಲ್ಲಿ ಇಲ್ಲ. ವ್ಯಾಧಿ ಶಯ್ಯೆಯಲ್ಲಿರುವ ಅವನು ಕಳುಹಿಸಿರುವ ಸಂದೇಶ ನನಗೆ ಈಗ ತಾನೇ ಬಂದಿದೆ. ಅವನು 'ಸಂಪೂರ್ಣ ಜವಾಬ್ದಾರಿಯನ್ನು ಮೌಲಾನ ಮಹಮ್ಮದ್ ಅಲಿಗೆ ಹೊರೆಸಿ ಎಂದು ಸಲಹೆ ನೀಡಿದ್ದಾನೆ..... ಅವನು (ಮಹಮ್ಮದ್ ಅಲಿ) ಒಂದು ಒಪ್ಪಂದಕ್ಕೆ ತೀವ್ರ ಆಸಕ್ತನಾಗಿದ್ದರೆ, ನೀವು ಅದನ್ನು ಒಪ್ಪಿ..... ಜನರು ತಾವು ಇಷ್ಟ ಪಟ್ಟಿದ್ದನ್ನು ಮಾಡುವುದನ್ನು ತಡೆಗಟ್ಟುವುದರಲ್ಲಿ ಏನೂ ಅರ್ಥವಿಲ್ಲ' ಎಂದು ಹೇಳಿದ್ದಾನೆ. ನಾನು ಆ ಸೂಚನೆಯನ್ನು ಒಪ್ಪುತ್ತೇನೆ.
>
> ಈಗ ನಾವು ಪರಸ್ಪರ ಅನುಮಾನದಿಂದ ಮತ್ತು ಪ್ರೀತಿ ರಹಿತ ದೃಷ್ಟಿಯಿಂದ ನೋಡುತ್ತಿದ್ದೇವೆ. ಇದು (ಒಪ್ಪುವುದು) ಪ್ರೀತಿಯನ್ನು ಮತ್ತೆ ಸ್ಥಾಪಿಸುವ ಒಂದು ಪ್ರಯತ್ನ.
>
> ಈ ಅವಧಿಯಲ್ಲಿ ದೇಶದ ಶ್ರೇಷ್ಠ ನಾಯಕರನ್ನು ವಿರೋಧಿಸುವುದು ನೋವಿನ ಸಂಗತಿ. ವಿರೋಧಿಸದೆ ಇರುವುದೂ ಸಹ ಅಷ್ಟೇ ಕಷ್ಟದ ಕೆಲಸ. ಆದಾಗ್ಯೂ ಬದಲಾವಣಾ ವಿರೋಧಿಗಳೆಲ್ಲರೂ

> ನಮ್ಮ ಈಗಿನ ನಿಲುವನ್ನು ಮನಃಪೂರ್ವಕವಾಗಿ ಒಪ್ಪಬೇಕೆಂದು ನಾನು ಕೋರುತ್ತೇನೆ. ಅದರ ಸಂಪೂರ್ಣ ಜವಾಬ್ದಾರಿಯನ್ನು ನಾನು ಮೌಲಾನ ಮಹಮ್ಮದ್ ಅಲಿಯ ಮೇಲೆ ಹೊರಸುತ್ತೇನೆ.[೯೧]

ವಲ್ಲಭಭಾಯ್ ಪಟೇಲ್‌ರವರು ತಮ್ಮ ಪುಟ್ಟ ಭಾಷಣದ ನಂತರ, ಮತದಾನಕ್ಕೂ ಕಾಯದೆ, ಅಧಿವೇಶನದಿಂದ ನಿರ್ಗಮಿಸಿದರು. ಅವರಿಗೆ ದೆಹಲಿ ಅಧಿವೇಶನದ ವಿದ್ಯಮಾನಗಳು ನಿರಾಸೆ ಮತ್ತು ಬೇಸರವನ್ನು ತಂದಿದ್ದುವು. ಶಾಸನ ಪರಿಷತ್ತಿನ ಪ್ರವೇಶದಿಂದ ಅಸಹಕಾರ ಚಳವಳಿಗೆ ಚ್ಯುತಿ ಬರುತ್ತದೆಂದು ಅವರು ಅಚಲವಾಗಿ ನಂಬಿದ್ದರು.

ಅವರು ಗುಜರಾತ್‌ಗೆ ವಾಪಸ್ಸು ಬಂದ ನಂತರ ಚುನಾವಣೆಯಿಂದ ದೂರ ಇರುವಂತೆ ಅಲ್ಲಿಯ ಕಾಂಗ್ರೆಸ್ಸಿಗರಿಗೆ ಸೂಚಿಸಿದರು. ಕಾಂಗ್ರೆಸ್ಸಿಗರು ಅವರ ಸೂಚನೆಯಂತೆ ನಡೆದರು. ಆದರೂ ಕೆಲವರು ಚುನಾವಣೆಯಲ್ಲಿ ಭಾಗವಹಿಸಿದರು. ವಲ್ಲಭಭಾಯ್‌ರವರ ಆಪ್ತ ಮಾವಲಂಕರ್‌ರವರು ಸ್ವರಾಜ್ಯ ಪಕ್ಷವನ್ನು ಸೇರಿದರು. ನಡಿಯಾಡ್‌ನ ಇಬ್ಬರು ಅನುಯಾಯಿಗಳು, ಗೋಕುಲ್‌ದಾಸ್ ತಲಾತಿ ಮತ್ತು ಫೂಲ್ ಚಂದ್ ಬಾಪೂಜಿ ಷಾ, ಬೊಂಬಾಯಿ ಶಾಸನ ಪರಿಷತ್ತಿಗೆ ಒಬ್ಬ ಸ್ಪರ್ಧಿಯನ್ನು ನಿಲ್ಲಿಸಿದರು. ಆದರೆ ಬಹುತೇಕ ಕಾಂಗ್ರೆಸ್ಸಿಗರು ವಲ್ಲಭಭಾಯ್‌ರವರ ಸೂಚನೆಯನ್ನು ಪಾಲಿಸಿದರು. (ವಲ್ಲಭಭಾಯ್‌ರವರ ಅಣ್ಣ ವಿಠ್ಠಲ್‌ಭಾಯ್ ಪಟೇಲ್‌ರವರು ಬೊಂಬಾಯಿಯಿಂದ ಕೇಂದ್ರ ಶಾಸನ ಪರಿಷತ್ತಿಗೆ ಸ್ಪರ್ಧಿಸಿ ಚುನಾಯಿತರಾದರು. ಆದರೆ ಅವರು ಗುಜರಾತ್ ಪ್ರದೇಶ ಕಾಂಗ್ರೆಸ್ಸಿಗೆ ಸೇರಿದವರಾಗಿರಲಿಲ್ಲ.)[೯೨]

೦೭. ಬೋರ್ಸದ್ ದೊರೆ

ವಲ್ಲಭಭಾಯ್ ಪಟೇಲ್‌ರವರು ದೆಹಲಿಯ ವಿಶೇಷ ಕಾಂಗ್ರೆಸ್ ಅಧಿವೇಶನ ದಿಂದ ಗುಜರಾತ್‌ಗೆ ಹಿಂತಿರುಗುವ ಹೊತ್ತಿಗೆ ಅವರಿಗೆ ಒಂದು ಹೋರಾಟ ಕಾದಿತ್ತು. ಅವರ ಮಾತೃ ತಾಲ್ಲೂಕು ಬೋರ್ಸಾದ್ ಡಕಾಯಿತರ ಹಾವಳಿಯಿಂದ ಸಂಕಟಕ್ಕೆ ಗುರಿಯಾಗಿತ್ತು. ಡಕಾಯಿತರು ಪೊಲೀಸರ ಬೆಂಬಲದಿಂದಲೇ ಡಕಾಯಿತಿ ಮತ್ತು ಕೊಲೆಗಳನ್ನು ಮಾಡುತ್ತಿದ್ದಾರೆಂದು ಜನರು ನಂಬಿದ್ದರು. ಈ ಡಕಾಯಿತರ ಹಾವಳಿಯಿಂದ ಜನರನ್ನು ರಕ್ಷಿಸುವುದಕ್ಕಾಗಿ ಸರ್ಕಾರವು ಪ್ರತಿ ಹಳ್ಳಿಯಲ್ಲಿ ವಿಶೇಷ ಪೊಲೀಸರನ್ನು ನಿಯೋಜಿಸಿತ್ತು. ಆದರೆ ಡಕಾಯಿತರನ್ನು ಹಿಡಿಯಲು ಜನರು ಸಹಕರಿಸುತ್ತಿಲ್ಲ ಎಂದು ಆಪಾದಿಸಿ, ವಿಶೇಷ ಪೊಲೀಸರ ವೆಚ್ಚದ ಕಡೆಗೆ ಇಪ್ಪತ್ತನಾಲ್ಕು ಲಕ್ಷದ ಎಪ್ಪತ್ತನಾಲ್ಕು ರೂಪಾಯಿ ದಂಡವನ್ನು ಜನರ ಮೇಲೆ ಸರ್ಕಾರವು ಹೇರಿತ್ತು. ಅಂದರೆ ೧೬ ವರ್ಷ ಆಗಿರುವ ಪ್ರತಿ ವ್ಯಕ್ತಿಯು ವರ್ಷಕ್ಕೆ ಎರಡು ರೂಪಾಯಿ ಏಳು ಆಣೆ ದಂಡ ಕೊಡಬೇಕಾಗಿತ್ತು.[೧೩] ಅಂದರೆ ಜನರು ಡಕಾಯಿತರಿಗೆ ಬೆಂಬಲ ವಾಗಿದ್ದಾರೆಂಬ ಕಳಂಕವನ್ನು ಸರ್ಕಾರವು ಜನರ ಮೇಲೆ ಹೊರೆಸಿತ್ತು. ಆದರೆ ನಿಜಸ್ಥಿತಿಯೇ ಬೇರೆ ಆಗಿತ್ತು. ಡಕಾಯಿತರ ಚಲನವಲನದ ಬಗೆಗೆ ಯಾರಾದರೂ ಪೊಲೀಸರಿಗೆ ವಿಷಯ ಮುಟ್ಟಿಸಿದರೆ ಡಕಾಯಿತರಿಂದ ಅವರು ಕೊಲ್ಲಲ್ಪಡುತ್ತಿದ್ದರು ಅಥವಾ ಅವರ ಮೂಗು ಕತ್ತರಿಸಲ್ಪಡುತ್ತಿತ್ತು ಅಥವಾ ಅವರು ಮರಕ್ಕೆ ಮೊಳೆಯಿಂದ ಹೊಡೆಯಲ್ಪಡುತ್ತಿದ್ದರು. ಅಂದರೆ ಪೊಲೀಸರು ಡಕಾಯಿತರನ್ನು ಹಿಡಿಯುವುದಕ್ಕೆ ಬದಲಾಗಿ ವಿಷಯ ಕೊಟ್ಟವರು ಯಾರೆಂಬುದನ್ನು ಹಣ ಪಡೆದು ಡಕಾಯಿತರಿಗೆ ತಿಳಿಸುತ್ತಿದ್ದರು. ಸರ್ಕಾರ ಮಾತ್ರ ಜನರು ಸಹಕರಿಸುತ್ತಿಲ್ಲವೆಂದು ಅವರ ಮೇಲೆ

ದಂಡ ಹೇರಿತ್ತು ಮತ್ತು ಅವರ ಹೆಸರಿಗೆ ಕಳಂಕ ಬರುವಂತೆ ಮಾಡಿತ್ತು. ಆದರೆ ಆ ದಂಡವನ್ನು ಪಾವತಿಸುವ ಆರ್ಥಿಕ ಶಕ್ತಿ ಜನರಿಗಿರಲಿಲ್ಲ. ಅವರು ತಮ್ಮ ರಕ್ಷಣೆಗೆ ಬರಬೇಕೆಂದು ಪಟೇಲರನ್ನು ಕೋರಿದರು.[೯೪]

ಪಟೇಲರು ಮೊದಲು ವಿಷಯದ ಸತ್ಯಾಸತ್ಯತೆಯನ್ನು ತಿಳಿಯಲು ಬಯಸಿ ಆ ಕೆಲಸವನ್ನು ತಮ್ಮ ಇಬ್ಬರು ಆಪ್ತರಾದ ರವಿಶಂಕರ್ ಮಹರಾಜ್ ಮತ್ತು ಮೋಹನ್‌ಲಾಲ್ ಪಾಂಡ್ಯ ಎಂಬುವವರಿಗೆ ವಹಿಸಿದರು. ಅವರಿಬ್ಬರೂ ಹಳ್ಳಿಗಳಿಗೆ ಭೇಟಿ ನೀಡಿ ವಿಷಯ ಸಂಗ್ರಹಿಸಿದರು ಮತ್ತು ಪೊಲೀಸರು ಅನೇಕ ಡಕಾಯಿತರೊಡನೆ, ಅದರಲ್ಲೂ ಅಲಿಯ ಎಂಬ ಡಕಾಯಿತನೊಡನೆ ಅಪವಿತ್ರ ಸಂಬಂಧ ಹೊಂದಿರುವುದನ್ನು ಪಟೇಲರಿಗೆ ತಿಳಿಸಿದರು. ಅಷ್ಟರಿಂದಲೇ ಪಟೇಲರು ಮುಂದು ವರಿಯುವ ಹಾಗಿರಲಿಲ್ಲ. ಅವರಿಗೆ ಪುರಾವೆಗಳು ಬೇಕಾಗಿದ್ದುವು. ಪಟೇಲರ ಕಿರಿಯ ಸಹೋದರ ವಕೀಲ ಕಾಶೀಭಾಯ್ ಪಟೇಲ್ ಮಾಮಲೆದಾರನ ಕಛೇರಿಗೆ ಹೋದರು. ಅಲ್ಲಿ ಅವರಿಗೆ ಅದೃಷ್ಟ ಕಾದಿತ್ತು. ಕಾಂಗ್ರೆಸ್ ಬಗೆಗೆ ಅನುಕಂಪ ಹೊಂದಿದ್ದ ಒಬ್ಬ ಗುಮಾಸ್ತನು ಕೆಲವು ದಾಖಲೆಗಳನ್ನು ಅವರಿಗೆ ತೋರಿಸಿದನು ಮತ್ತು ಅವನ್ನು ಪ್ರತಿ ಮಾಡಿಕೊಳ್ಳಲು ಅವರಿಗೆ ಅವಕಾಶ ನೀಡಿದನು. ಮುಂದೆ ಅವನು ಹುದ್ದೆಯಿಂದ ವಜಾ ಮಾಡಲ್ಪಟ್ಟನು, ಆದರೆ ಅವನು ವಲ್ಲಭಭಾಯ್‌ಗೆ ಎರಡು ಅಮೂಲ್ಯ ಪುರಾವೆಗಳನ್ನು ಒದಗಿಸಿದ್ದನು. ಮೊದಲನೆಯದು, ಖೇಡಾ ಜಿಲ್ಲಾ ಕಲೆಕ್ಟರ್ ಹೀರಾನಂದ್ ಕೃಪಲಾನಿಯವರು ದಂಡ ವಿಧಿಸುವುದನ್ನು ವಿರೋಧಿಸಿದ್ದರು ಎಂಬ ದಾಖಲೆ. ಎರಡನೆಯದು, ಬಾಬರ್ ದೇವ ಎಂಬ ಡಕಾಯಿತನನ್ನು ಹಿಡಿಯಲು ಸಹಾಯ ಮಾಡುತ್ತಾನೆಂದು ಮತ್ತೊಬ್ಬ ಡಕಾಯಿತ ಅಲಿಯ ಜೊತೆ ಪೊಲೀಸರು ಸಂಬಂಧ ಬೆಳೆಸಿದ ಮತ್ತು ಅವನಿಗೆ ಬಂದೂಕಗಳನ್ನು ಒದಗಿಸಿದ ದಾಖಲೆ. ಈ ಎರಡನೆಯ ದಾಖಲೆ ಪಟೇಲರ ಕೈಯನ್ನು ಬಹಳ ಬಲಪಡಿಸಿತು.[೯೫] ಅವರು ಹೋರಾಟಕ್ಕೆ ಸಿದ್ಧವಾದರು.

ಗುಜರಾತ್ ಪ್ರದೇಶ ಕಾಂಗ್ರೆಸ್ ಸಮಿತಿಯು ಡಿಸೆಂಬರ್ ೧೦ರಂದು ಸಭೆ ಸೇರಿ ಜನರು ದಂಡವನ್ನು ಕೊಡಬಾರದೆಂದು ಘೋಷಿಸಿತು. ಅಂದು ಸಂಜೆ ವಲ್ಲಭಭಾಯ್‌ರವರು ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುತ್ತಾ ಹೀಗೆ ನುಡಿದರು:

> ನಾವು ಎರಡು ಅಥವಾ ಮೂರು ರೂಪಾಯಿಗಳನ್ನು ಎಸೆಯಲು ಶಕ್ತಿಯಿಲ್ಲದ ಭಿಕ್ಷುಕರಲ್ಲ. ಆದರೆ ಸರ್ಕಾರವು ನಮ್ಮನ್ನು ಡಕಾಯಿತರ ಸಹವರ್ತಿಗಳು ಎಂದು ಕರೆದು ದಂಡದ ಹಣವನ್ನು

ವಸೂಲಿ ಮಾಡಲು ಬಯಸುತ್ತಿದೆ. ಸರ್ಕಾರವು ತನ್ನ ಅಧಿಕಾರವು ಮಾಯವಾಗಿದೆ ಎಂದೂ, ಹಣಕಾಸಿನ ಸ್ಥಿತಿಯಲ್ಲಿ ಬಡವಾಗಿದೆ ಎಂದೂ ಒಪ್ಪಿಕೊಂಡರೆ ಅಧಿಕಾರವನ್ನು ನಾವೇ ವಹಿಸಿಕೊಳ್ಳಲು ಸಂಪೂರ್ಣವಾಗಿ ಸಿದ್ಧರಾಗಿದ್ದೇವೆ.

ಮಾರನೆಯ ದಿನ ಒಂದು ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕಾಗಿ ತಾಲ್ಲೂಕಿನ ಸುಮಾರು ೬,೦೦೦ ಜನ ಬೋರ್ಸದ್‌ನಲ್ಲಿ ಸಭೆ ಸೇರಿದರು. ಆ ಸಭೆಯಲ್ಲಿ ವಲ್ಲಭಭಾಯ್‌ರವರು ತಮ್ಮಲ್ಲಿರುವ ಪುರಾವೆಗಳನ್ನು ಪ್ರಸ್ತಾಪಿಸಿ ಹೀಗೆ ನುಡಿದರು:

ಅಲಿಯ ಎಂಬ ದರೋಡೆಗಾರನಿದ್ದಾನೆ. ಪೊಲೀಸರು ದರೋಡೆಗಾರ ಬಾಬರ್ ದೇವನನ್ನು ಹಿಡಿಯಲಾಗದೆ ಹೋದಾಗ ಅವರು ಈ ಹೊಸ ಪ್ರತಿಭೆಯ (ಅಲಿಯ) ಜೊತೆ ಸ್ನೇಹ ಬೆಳೆಸಿ, ಒಬ್ಬ ದರೋಡೆಗಾರನ ಕಾಟವನ್ನು ಇನ್ನೊಬ್ಬ ದರೋಡೆಗಾರನ ಸಹಾಯದಿಂದ ಪರಿಹರಿಸಲು ಬಯಸಿದರು ಮತ್ತು ಅವನಿಗೆ ಬಂದೂಕು ಮತ್ತು ಮದ್ದು ಗುಂಡುಗಳನ್ನು ಒದಗಿಸಿದರು. ಎಂತಹ ನಾಚಿಕೆಗೆಟ್ಟ ಕೆಲಸ!

ದಂಡ ವಿಧಿಸಲು ಸರ್ಕಾರವು ನೀಡಿರುವ ಸಮಜಾಯಿಷಿಯನ್ನು ಕುರಿತು ವಲ್ಲಭಭಾಯ್ ಹೀಗೆಂದರು:

ಸರ್ಕಾರವು ಕೊಟ್ಟಿರುವ ಕಾರಣವೇನೆಂದರೆ ಜನರು ವಿಷಯ ಅಥವಾ ಪುರಾವೆಯನ್ನು ಕೊಡುತ್ತಿಲ್ಲ ಎನ್ನುವುದು. ಇದು ಎಷ್ಟು ಸತ್ಯ ಎಂಬುದನ್ನು ಪರಿಶೀಲಿಸೋಣ. ಬಾಬರನು ೨೨ ಕೊಲೆಗಳನ್ನು ಮಾಡಿದ್ದಾನೆ, ಆದರೆ ಅವನ ಬಲಿಪಶುಗಳ ಪೈಕಿ ಒಬ್ಬ ಶ್ರೀಮಂತನೂ ಇಲ್ಲ. ಅವನು ಬರೇ ವಿನೋದಕ್ಕಾಗಿ ಆ ಕೊಲೆ ಗಳನ್ನು ಮಾಡಿಲ್ಲ. ಅವರೆಲ್ಲ ಪೊಲೀಸರಿಗೆ ವಿಷಯವಾಹಕ ರಾಗಿದ್ದರು. ಅಂತಹ ೨೨ ವಿಷಯವಾಹಕರ ಕೊಲೆ ಆಗಿರುವಾಗ ಸರ್ಕಾರವು ಜನರು ವಿಷಯ ನೀಡುತ್ತಿಲ್ಲವೆಂದು ಗಂಭೀರವಾಗಿ ವಾದ ಮಾಡಿದರೆ, ಎಷ್ಟು ಜನ ಪೊಲೀಸರ ಕೊಲೆ ಆಗಿದೆ ಎಂದು ನಾವು ಪ್ರಶ್ನಿಸಬಹುದಲ್ಲವೆ?

ಗುಣವಂತರಾದ ಗೌರವಾನ್ವಿತರಾದ ವ್ಯಕ್ತಿಗಳು ನಾವು ಎಂದು ಸರ್ಕಾರಕ್ಕೆ ಸ್ಪಷ್ಟವಾಗಿ ಹೇಳೋಣ. ನಮ್ಮ ಕೆಟ್ಟ ಗುಣದ ಸರ್ಟಿ

ಫಿಕೇಟಿಗೆ ನಮ್ಮ ಕೈಗಳಿಂದ ನಾವೇ ಸಹಿ ಮಾಡುವುದು ಬೇಡ. ನಾವು ದಂಡ ಕೊಡಲು ನಿರಾಕರಿಸೋಣ. ಅನಂತರ ಗಾಂಧೀಜಿಯ ಅನುಯಾಯಿಗಳಂತೆ ಹೋರಾಡೋಣ. ನಮಗೆ ಕೋಲು ಅಥವಾ ಕುಡುಗೋಲು ಬೇಕಿಲ್ಲ. ನಮಗೆ ಬೇಕಾದದ್ದು ಒತ್ತಗಳನ್ನು ಸಹಿಸುವುದಕ್ಕೆ ಬಲಿಷ್ಠವಾದ ಬೆನ್ನು. ಕೋಪಕ್ಕೆ ಆಕರ್ಷಿತರಾಗಬೇಡಿ. ಹಿಂಸೆಗೆ ತೊಡಗಬೇಡಿ. ಹೀಗೆ ನೀವು ಹೋರಾಡಲು ಸಿದ್ಧವಾಗಿದ್ದರೆ ಕೈಗಳನ್ನು ಎತ್ತಿ.[೬೭]

ಎಲ್ಲರೂ ಕೈ ಎತ್ತಿದರು. ಬೋರ್ಸದ್ ಸತ್ಯಾಗ್ರಹ ಆರಂಭವಾಯಿತು. ಜನರು ದಂಡವನ್ನು ಕೊಡಲು ನಿರಾಕರಿಸಿದರು. ವಲ್ಲಭಭಾಯ್ ಸತ್ಯಾಗ್ರಹವನ್ನು ವ್ಯವಸ್ಥಿತವಾಗಿ ಸಂಘಟಿಸಿದರು. ದರ್ಬಾರ್ ಗೋಪಾಲ್‌ದಾಸ್ ನಾಯಕತ್ವದಲ್ಲಿ ಬೋರ್ಸದ್ ಪಟ್ಟಣದಲ್ಲಿ ಒಂದು ಕೇಂದ್ರ ಕಛೇರಿ ರಚಿತವಾಯಿತು. ವಲ್ಲಭಭಾಯ್ ರವರು ಒಂದು ಸ್ವಯಂ ಸೇವಕ ದಳವನ್ನು ರಚಿಸಿ, ಅವರನ್ನು ಪಂಗಡಗಳಾಗಿ ವಿಭಜಿಸಿ, ಪ್ರತಿ ಪಂಗಡಕ್ಕೂ ಕೆಲವು ಹಳ್ಳಿಗಳನ್ನು ವಹಿಸಿದರು. ಆ ಪಂಗಡಗಳು ತಮಗೆ ವಹಿಸಲ್ಪಟ್ಟ ಹಳ್ಳಿಗಳನ್ನು ಡಕಾಯಿತರಿಂದ ಅಹಿಂಸಾತ್ಮಕವಾಗಿ ರಕ್ಷಿಸ ಬೇಕಾಗಿತ್ತು. ಪಟೇಲರು ಕ್ರಮಬದ್ಧವಾಗಿ ಕರಪತ್ರಗಳನ್ನು ಹೊರಡಿಸಿ, ಸೂಚನೆಗಳನ್ನು ನೀಡಿ ಸ್ವಯಂಸೇವಕರಲ್ಲಿ ಮತ್ತು ಜನರಲ್ಲಿ ನವೋತ್ಸಾಹ ಮತ್ತು ಶಿಸ್ತನ್ನು ಪ್ರಚೋದಿಸಿದರು. ದಂಡವನ್ನು ಪಾವತಿಸದವರ ದನಗಳು ಮುಂತಾದ ಚರಾಸ್ತಿಗಳನ್ನು ವಶಪಡಿಸಿ ಕೊಂಡು ಹರಾಜು ಹಾಕಲು ಅಧಿಕಾರಿಗಳಿಗೆ ಸರ್ಕಾರವು ಅಧಿಕಾರವನ್ನು ನೀಡಿತು. ಹಳ್ಳಿಯವರು ಅದಕ್ಕೆ ವಿರುದ್ಧವಾಗಿ ಕೆಲವು ಉಪಾಯ ಹೂಡಿದರು. ಒಬ್ಬ ವ್ಯಕ್ತಿ ಹಳ್ಳಿಯ ಪ್ರವೇಶದಲ್ಲಿರುವ ಒಂದು ಎತ್ತರವಾದ ಮರದ ಮೇಲೆ ಕುಳಿತುಕೊಂಡು ದೂರದಲ್ಲಿ ಅಧಿಕಾರಿಗಳು ಬರುವುದನ್ನು ಕಂಡ ತಕ್ಷಣ ನಗಾರಿ ಬಾರಿಸುವನು. ತಕ್ಷಣ ಹಳ್ಳಿಯ ಗಂಡಸರು ಹೆಂಗಸರನ್ನು ಮನೆಯ ಒಳಗೆ ಇಟ್ಟು ಹೊರಗೆ ಬೀಗ ಹಾಕಿ ದನ ಕರು ಎಮ್ಮೆಗಳನ್ನು ಹುಲ್ಲು ಮೇಯಿಸಲು ಹಳ್ಳಿಯಿಂದ ಹೊರಕ್ಕೆ ಹೊಡೆದುಕೊಂಡು ಹೋಗುವರು. ಅಧಿಕಾರಿಗಳು ಹಳ್ಳಿಯನ್ನು ಪ್ರವೇಶಿಸಿದರೆ ರಸ್ತೆಯಲ್ಲಿ ಆಟವಾಡುತ್ತಿರುವ ಚಿಕ್ಕ ಪುಟ್ಟ ಹುಡುಗರು ಮಾತ್ರ ಇರುವರು. ಹಳ್ಳಿಯಿಂದ ಹೊರಗೆ ಹೋದ ಗಂಡಸರು ಸೂರ್ಯ ಮುಳುಗಿದ ಮೇಲೆ ತಮ್ಮ ಜಾನುವಾರು ಗಳೊಡನೆ ಹಿಂತಿರುಗುವರು. ಆದರೆ ಕಾನೂನು ಪ್ರಕಾರ ರಾತ್ರಿಯಾದ ಮೇಲೆ ಅಧಿಕಾರಿಗಳು ಏನನ್ನೂ ಜಪ್ತಿ ಮಾಡುವ ಹಾಗಿರಲಿಲ್ಲ. ಹಳ್ಳಿಯವರ ಧೈರ್ಯ, ಒಗ್ಗಟ್ಟು ಮತ್ತು ಬುದ್ಧಿವಂತಿಕೆಯ ಮುಂದೆ ಅಧಿಕಾರಿಗಳು ಏನೂ ಮಾಡಲಾಗಲಿಲ್ಲ.[೬೭]

ಸತ್ಯಾಗ್ರಹ ನಡೆಯುತ್ತಿರುವಾಗಲೇ ವಲ್ಲಭಭಾಯ್‌ರವರು ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸುವುದಕ್ಕಾಗಿ ಕಾಕಿನಾಡಕ್ಕೆ ಹೋಗಬೇಕಾಯಿತು. ಅವರು ಮಾರ್ಗ ಮಧ್ಯದಲ್ಲಿ ಬೊಂಬಾಯಿಯಲ್ಲಿ ಒಂದು ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಭಾಷಣ ಮಾಡುತ್ತಾ ಈ ರೀತಿ ನುಡಿದರು:

> ಕೆಲವು ಸರ್ಕಾರಿ ಪತ್ರಗಳ ಪ್ರತಿಯನ್ನು ಪಡೆದುಕೊಳ್ಳಲು ನನಗೆ ಸಾಧ್ಯವಾಗಿದೆ. ಈ ಪತ್ರಗಳ ಸಹಾಯದಿಂದ ಸರ್ಕಾರದ ಅವಮಾನಕಾರಿ ನೀತಿಯನ್ನು ಬಹಿರಂಗ ಪಡಿಸಿದ್ದೇನೆ. ಅದನ್ನು ಕಾನೂನು ಪ್ರಕಾರ ಅಪರಾಧ ಎಂದು ಭಾವಿಸಿದರೆ ಸರ್ಕಾರವು ನನ್ನ ಮೇಲೆ ಕ್ರಮ ಜರುಗಿಸಲಿ. ..... ಒಬ್ಬ ದರೋಡೆಗಾರನನ್ನು ಹಿಡಿಯುವುದಕ್ಕಾಗಿ ಮತ್ತೊಬ್ಬ ದರೋಡೆಗಾರನ ಸಹಾಯವನ್ನು ಪಡೆದುಕೊಳ್ಳುವುದು, ಅವನಿಗೆ ಬಂದೂಕು ಮತ್ತು ಮದ್ದುಗುಂಡುಗಳನ್ನು ಒದಗಿಸುವುದು ಮತ್ತು ಅವನು ತನಗೆ ಇಷ್ಟ ಬಂದ ಹಾಗೆ ದರೋಡೆ ಮತ್ತು ಕೊಲೆಗಳನ್ನು ಮಾಡಲು ಅವಕಾಶ ನೀಡುವುದು ಬುದ್ಧಿವಂತಿಕೆ ಎಂದು ಸರ್ಕಾರಿ ಅಧಿಕಾರಿಗಳು ಯೋಚಿಸಿದ್ದಾರೆ. ನಾನು ಮಾಡುತ್ತಿರುವ ಈ ಸಾರ್ವಜನಿಕ ಆಪಾದನೆಗೆ ಸರ್ಕಾರವು ಯಾವ ಉತ್ತರವನ್ನು ಹೊಂದಿದೆ? ನನಗೆ ತಿಳಿದ ಮಟ್ಟಿಗೆ ಯಾವುದೂ ಇಲ್ಲ. ನಿಜವಾಗಿ ಸರ್ಕಾರವು ಜನರಿಗೆ ಮೋಸ ಮಾಡಿದೆ. ಅದಕ್ಕಾಗಿ ಯಾರು ಸರ್ಕಾರದ ಮೇಲೆ ಕಾನೂನು ಕ್ರಮ ಜರುಗಿಸಲು ಸಾಧ್ಯ? ಸರ್ಕಾರವೇ ದರೋಡೆಗಾರರ ಜೊತೆಗಾರನಾಗಿದೆ. ಆದರೂ ಅದೇ ಸರ್ಕಾರ ಮುಗ್ಧ ಜನರಿಂದ ಪುಂಡುಗಂದಾಯವನ್ನು ವಸೂಲಿ ಮಾಡಲು ಮುಂದಾಗಿದೆ. ಒಬ್ಬ ಕಳ್ಳನು ಮ್ಯಾಜಿಸ್ಟ್ರೇಟರನಿಗೇ ಶಿಕ್ಷೆ ವಿಧಿಸುವ ಘಟನೆಗೆ ಇದಕ್ಕಿಂತ ಉತ್ತಮವಾದ ಉದಾಹರಣೆ ಬೇರೆ ಇದೆಯೆ?[೪೮]

ಅಷ್ಟು ಹೊತ್ತಿಗೆ ಬೊಂಬಾಯಿ ಪ್ರಾಂತ್ಯದ ಹೊಸ ಗೌರ್ನರ್ ಲೆಸ್ಲಿ ವಿಲ್ಸನ್ ಅಧಿಕಾರವನ್ನು ವಹಿಸಿಕೊಂಡಿದ್ದರು. ಪಟೇಲರು ಸಾರ್ವಜನಿಕರ ಮುಂದೆ ಸರ್ಕಾರದ ವಿರುದ್ಧ ಮಾಡಿದ ಆ ಗಂಭೀರ ಆಪಾದನೆಗಳಿಂದ ಅವರಿಗೆ ಆಘಾತವಾಯಿತು. ಅವರು ಬೋರ್ಸಾದ್‌ಗೆ ಹೋಗಿ ಅದೇ ಸ್ಥಳದಲ್ಲಿ ವಿಚಾರಣೆ ನಡೆಸುವಂತೆ ಗೃಹ ಸದಸ್ಯ ಮಾರಿಸ್ ಹೇವರ್ಡ್‌ಗೆ ಸೂಚಿಸಿದರು. ಹೇವರ್ಡ್ ಬೋರ್ಸದ್ ಪಟ್ಟಣವನ್ನು ೧೯೨೪ರ ಜನವರಿ ೪ರಂದು ತಲುಪಿದರು. ಮೊದಲು ಕಮಿಷನರ್,

ಕಲೆಕ್ಟರ್ ಮತ್ತು ಇತರ ಅಧಿಕಾರಿಗಳಿಂದ ಸತ್ಯಾಗ್ರದ ಹಿನ್ನಲೆಯ ಬಗೆಗೆ ವಿಷಯ ಸಂಗ್ರಹಿಸಿದರು. ಅನಂತರ ಒಂದು ಸಾರ್ವಜನಿಕ ವಿಚಾರಣೆಯನ್ನು ಏರ್ಪಡಿಸಿ ಆಯ್ದ ೧೫೦ ಮಂದಿಯನ್ನು ಅಲ್ಲಿಗೆ ಆಹ್ವಾನಿಸಿದರು. ಆ ೧೫೦ ಮಂದಿ ರಾಮಭಾಯ್ ಎನ್ನುವವನನ್ನು ತಮ್ಮ ವಕ್ತಾರನನ್ನಾಗಿ ಆರಿಸಿಕೊಂಡರು. ಹೇವರ್ಡ್‌ನು ನಿಷ್ಪಕ್ಷಪಾತವಾಗಿ ತೀರ್ಮಾನಿಸಲು ಅನುಕೂಲವಾಗಲೆಂದು ಪಟೇಲ್ ಮತ್ತು ಅವರ ಪ್ರಮುಖ ಸಹಚರರು ಆ ವಿಚಾರಣಾ ಸಭೆಯಲ್ಲಿ ಭಾಗವಹಿಸಲಿಲ್ಲ.

ರಾಮಭಾಯ್ ಧೈರ್ಯವಾಗಿ ಮತ್ತು ಸ್ವತಂತ್ರವಾಗಿ ಮಾತನಾಡಿದನು. ಅವನು 'ಜನರು ಸರ್ಕಾರಕ್ಕೆ ದೂರನ್ನು ಏಕೆ ಸಲ್ಲಿಸುವುದಿಲ್ಲ ಎಂದರೆ ಅವರಿಗೆ ಅಧಿಕಾರಿಗಳಲ್ಲಿ ನಂಬಿಕೆ ಹೊರಟುಹೋಗಿದೆ' ಎಂದನು. ಅವನು ಅಲ್ಲಿ ಕುಳಿತಿದ್ದ ಪೊಲೀಸ್ ಡೆಪ್ಯುಟಿ ಸೂಪರಿನ್‌ಟೆಂಡೆಂಟ್ ಕಡೆಗೆ ಬೆರಳು ತೋರಿಸಿ, 'ಕೇವಲ ಎರಡು ದಿನಗಳ ಹಿಂದೆ ಈ ಅಧಿಕಾರಿಯು ನಿಸ್ರಯ ಗ್ರಾಮಕ್ಕೆ ಬಂದು ಪುಂಡು ಗಂದಾಯವನ್ನು ನೀಡದೇ ಹೋದರೆ ಜಾಲೂಂದ್ ಗ್ರಾಮಕ್ಕೆ ನುಗ್ಗಿದ್ದ ದರೋಡೆಗಾರರನ್ನು ಆ ಗ್ರಾಮಕ್ಕೆ ಕಳುಹಿಸುವುದಾಗಿ ಬೆದರಿಸಿದನು,' ಎಂದನು. ಡೆಪ್ಯುಟಿ ಸೂಪರಿನ್‌ಟೆಂಡೆಂಟನು ಅದು ಸುಳ್ಳು ಎಂದು ಹೇಳಿದಾಗ, ನಿಸ್ರಯ ಗ್ರಾಮದ ಒಬ್ಬ ವ್ಯಕ್ತಿ ಎದ್ದು ನಿಂತು 'ಅವರು ಸುಳ್ಳು ಹೇಳುತ್ತಿದ್ದಾರೆ' ಎಂದನು. ಗೃಹ ಸದಸ್ಯ ಹೇವರ್ಡ್‌ನು, 'ದರೋಡೆಗಾರರನ್ನು ಶೀಘ್ರ ಬಂಧಿಸುವ ಮಾರ್ಗವೇನು?' ಎಂದು ಪ್ರಶ್ನಿಸಿದಾಗ ರಾಮಭಾಯ್, 'ಪೊಲೀಸ್ ಇಲಾಖೆ ಈಗಿರುವಂತೆಯೇ ಮುಂದುವರೆದರೆ ಈಗಿರುವ ದರೋಡೆಗಾರರನ್ನು ಹಿಡಿಯುವುದು ಸಾಧ್ಯವಷ್ಟೇ ಅಲ್ಲ, ಹೊಸ ದರೋಡೆಗಾರರು ಸೃಷ್ಟಿಯಾಗುತ್ತಾರೆ..... ಇಲ್ಲಿ ಕುಳಿತಿರುವ ಇನ್‌ಸ್ಪೆಕ್ಟರ್ ಮಗನ್‌ಲಾಲ್‌ನು ದರೋಡೆಗಾರ ಅಲಿಯಾಗೆ ವೈಯುಕ್ತಿಕ ಸ್ನೇಹಿತ. ..... ನಿಮ್ಮ ಅಧಿಕಾರಿಗಳು ದರೋಡೆಗಾರರನ್ನು ಬಂಧಿಸುವುದಕ್ಕೆ ಬದಲಾಗಿ ಅವರಿಗೆ ಈ ರೀತಿ ಪ್ರೋತ್ಸಾಹವನ್ನು ನೀಡಿದರೆ ಅದು ಹೇಗೆ ನೀವು ದಂಡ ಪಾವತಿಸಿ ಎಂದು ನಮಗೆ ಹೇಳಲು ಸಾಧ್ಯ? ಇಂತಹ ಭ್ರಷ್ಟ ಅಧಿಕಾರಿಗಳನ್ನು ತೆಗೆದರೆ ಮಾತ್ರ ನೀವು ದರೋಡೆಗಾರರನ್ನು ಕಾನೂನಿನ ಕ್ರಮಕ್ಕೆ ಒಳಪಡಿಸಬಹುದು.'[೯೯]

ಪಟೇಲರ ಹೋರಾಟದ ಸತ್ಯಾಂಶವು ಗೃಹ ಸದಸ್ಯನಿಗೆ ಅರಿವಾಯಿತು. ಅವನು ಆಸ್ತಿಗಳನ್ನು ವಶಪಡಿಸಿಕೊಳ್ಳುವುದನ್ನು ನಿಲ್ಲಿಸುವಂತೆ ಅಧಿಕಾರಿಗಳಿಗೆ ಆದೇಶ ನೀಡಿದನು. ಬೊಂಬಾಯಿಗೆ ಅವನು ಹಿಂತಿರುಗಿದ ನಂತರ ಜನವರಿ ೮ರಂದು ಸರ್ಕಾರವು ಒಂದು ಪ್ರಕಟಣೆಯನ್ನು ಹೊರಡಿಸಿ, 'ಅದುವರೆವಿಗೆ ನಿಯೋಜಿತರಾಗಿರುವ ವಿಶೇಷ ಪೊಲೀಸರ ವೆಚ್ಚವನ್ನು ಸರ್ಕಾರವೇ ಭರಿಸುವುದು'

ಎಂದಿತು. ಅದರಿಂದ ಜನರು ದಂಡ ಪಾವತಿಸುವುದು ನಿಂತಿತು. ಸರ್ಕಾರಿ ಪ್ರಕಟಣೆಯು, 'ಸರ್ಕಾರದ ಈ ಉದಾರತೆಗೆ ಬೋರ್ಸದ್‌ನ ಜನರು ಸ್ಪಂದಿಸುವರೆಂದೂ, ಅವರ ತಾಲ್ಲೂಕು ದೀರ್ಘಕಾಲದಿಂದ ಗುರಿಯಾಗಿರುವ ಹಿಂಸಾತ್ಮಕ ಅಪರಾಧಗಳ ತಡೆಗೆ ಅವಶ್ಯಕವಾದ ಕ್ರಮಗಳಿಗೆ ಸಹಕಾರ ನೀಡುವರೆಂದೂ ಸರ್ಕಾರವು ನಂಬಿರುವುದಾಗಿ' ಹೇಳಿತು.[೧೦೦]

ಪಟೇಲರ ಹೋರಾಟಕ್ಕೆ ಜಯ ಲಭಿಸಿತು. ಅವರು ತಕ್ಷಣವೇ ಸತ್ಯಾಗ್ರಹವನ್ನು ಹಿಂತೆಗೆದುಕೊಂಡರು. ಅವರೊಂದು ಹೇಳಿಕೆಯನ್ನು ನೀಡಿ, 'ಸತ್ಯ, ಅಹಿಂಸೆ ಮತ್ತು ದೇಹ ದಂಡನೆಗೆ ಮತ್ತೆ ಜಯ ಲಭಿಸಿದೆ. ಈ ವಿಜಯವು ಎಷ್ಟು ನ್ಯಾಯವೋ ಅಷ್ಟೇ ವೇಗವಾಗಿ ಲಭಿಸಿದೆ. ಇದು ಅದ್ವಿತೀಯವಾದುದು ಏಕೆಂದರೆ ಇದರ ಎರಡು ಪಕ್ಷಗಳೂ ಜಯಗಳಿಸಿವೆ. ಅದು (ಸರ್ಕಾರ) ತನ್ನ ತಪ್ಪನ್ನು ಸಾರ್ವಜನಿಕವಾಗಿ ಮತ್ತು ಧೈರ್ಯವಾಗಿ ಒಪ್ಪಿಕೊಂಡಿದೆ. ಸರ್ಕಾರವು ತನ್ನ ಪ್ರತಿಷ್ಠೆಗೆ ಭಂಗ ಬರುವುದೆಂದು ಹೆದರಿ ತನ್ನ ತಪ್ಪನ್ನು ಒಪ್ಪಿಕೊಳ್ಳದಿರುವ ಮಾಮೂಲಿ ಪದ್ಧತಿಯನ್ನು ಅನುಸರಿಸದೆ ಸತ್ಯವನ್ನು ಒಪ್ಪಿಕೊಳ್ಳುವುದರ ಮೂಲಕ ಜಯವನ್ನು ಗಳಿಸಿದೆ. ಬೊಂಬಾಯಿಯ ಗೌರ್ನರ್ ಗೌರವಾನ್ವಿತ ಲೆಸ್ಲಿ ವಿಲ್ಸನ್‌ರವರನ್ನು ನಾನು ಹೃದಯ ಪೂರ್ವಕವಾಗಿ ಅಭಿನಂದಿಸುತ್ತೇನೆ.'

ಜನವರಿ ೧೨ರಂದು ಬೋರ್ಸದ್‌ನಲ್ಲಿ ವಿಜಯೋತ್ಸವವು ಅತ್ಯಂತ ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಸುಮಾರು ೩೦,೦೦೦ ಮಂದಿ ಭಾಗವಹಿಸಿದ್ದರು. ದೂರದ ಅಹಮದಾಬಾದ್ ಮತ್ತು ಬೊಂಬಾಯಿಯಿಂದಲೂ ಜನ ಬಂದಿದ್ದರು. ಅಧಿಕ ಸಂಖ್ಯೆಯಲ್ಲಿ ಹೆಂಗಸರೂ ಭಾಗವಹಿಸಿದ್ದರು. ಅದು ಬರೆ ಜನರ ಸಮೂಹವಾಗಿರಲಿಲ್ಲ, ಪಟೇಲರ ಹೆಮ್ಮೆಯ ಶಿಸ್ತಿನ ಸೈನಿಕರ ಸಭೆಯಾಗಿತ್ತು. ಆ ಬೃಹತ್ ಸಭೆಯನ್ನು ಉದ್ದೇಶಿಸಿ ವಲ್ಲಭಭಾಯ್ ಪಟೇಲ್ ಹೀಗೆ ನುಡಿದರು:

> ಸರ್ಕಾರದೊಡನೆಯ ನಿಮ್ಮ ಸಣ್ಣ ಜಗಳ ಮುಕ್ತಾಯಗೊಂಡಿದೆ. ಆದರೆ ನಮ್ಮ ಪ್ರಧಾನ ಮತ್ತು ದೊಡ್ಡ ಜಗಳ (ಸ್ವಾತಂತ್ರ್ಯಕ್ಕಾಗಿ) ಇನ್ನೂ ಉಳಿದಿದೆ..... ಈ ಅಲ್ಪ ಕಾಲದ ಹೋರಾಟದಲ್ಲಿ ನೀವು ಎಂತಹ ತ್ಯಾಗಗಳನ್ನು ಮಾಡಿದ್ದೀರಿ, ಎಂತಹ ಧೈರ್ಯವನ್ನು ಪ್ರದರ್ಶಿಸಿದ್ದೀರಿ, ಎಂತಹ ಒಗ್ಗಟ್ಟನ್ನು ತೋರಿದ್ದೀರಿ ಮತ್ತು ಎಂತಹ ಉತ್ಸಾಹವನ್ನು ಪ್ರದರ್ಶಿಸಿದ್ದೀರಿ ಎಂಬುದನ್ನು ಪರಿಗಣಿಸಿ. ಇವನ್ನೆಲ್ಲಾ ಪ್ರದರ್ಶಿಸುವ ಶಕ್ತಿಯನ್ನು ನೀವು ಹೊಂದಿದ್ದರಿಂದಲೇ ಬಯಸಿದ್ದನ್ನು ಪಡೆಯಲು ಸಾಧ್ಯವಾಯಿತು. ನನ್ನ ಕೌಶಲ್ಯ

ಅಥವಾ ಜಾಣ್ಮೆಯಿಂದ ನೀವು ಯಶಸ್ವಿ ಯಾಗಿಲ್ಲ. ಈ ದಿನ ನೀವು ಯಶಸ್ವಿಯಾಗಿರುವುದು ಏಕೆಂದರೆ ಈಗ ಸೆರೆಮನೆಯಲ್ಲಿರುವ ಆ ಮಹಾ ಸಂತ ತೋರಿದ ಮಾರ್ಗದಲ್ಲಿ ನಡೆದದ್ದರಿಂದ.

ಇನ್ನು ಮುಂದೆ ಮಧುರತೆ ಮತ್ತು ಸ್ನೇಹ ನಿಮ್ಮನ್ನು ಮುನ್ನಡೆಸಲಿ. ತಲಾತಿ, ಮುಖಿ, ರವಾನಿಯಾ ಮತ್ತು ಪೊಲೀಸ ರೊಡನೆ ಸ್ನೇಹವನ್ನು ಬೆಳೆಸಿ. ಅವರು ಸ್ವಾಧೀನಪಡಿಸಿ ಕೊಂಡಿದ್ದ ನೆಲ್ಲಾ ಮರೆಯಿರಿ..... ದರೋಡೆಗಾರರಿಗೆ ಒಂದು ಮಾತು ಹೇಳುತ್ತೇನೆ. ಆತ್ಮ ರಕ್ಷಣೆ ಮಾಡಿಕೊಳ್ಳಲಾಗದವರನ್ನು ಯಾರು ಪೀಡಿಸುತ್ತಾರೊ ಅಥವಾ ದರೋಡೆ ಮಾಡುತ್ತಾರೊ ಅಥವಾ ಮುಗ್ಧರ ಕೊಲೆ ಮಾಡುತ್ತಾರೊ ಅವರು ಸಮಾಜಕ್ಕೊಂದು ಕಳಂಕ.

ಈ ವಿಜಯೋತ್ಸವ ನಡೆದ ದಿನ ಪೂಣೆಯ ಸಸೂನ್ ಆಸ್ಪತ್ರೆಯಲ್ಲಿ ಗಾಂಧೀಜಿಗೆ ಅಪೆಂಡಿಸೈಟಿಸ್ ಶಸ್ತ್ರಚಿಕಿತ್ಸೆ ನಡೆಯಿತು. ಗಾಂಧೀಜಿಯವರು ತಮ್ಮ ವ್ಯಾಧಿ ಹಾಸಿಗೆಯಿಂದಲೇ ಪಟೇಲರನ್ನು ಅಭಿನಂದಿಸಿ ನುಡಿದರು, 'ಬೋರ್ಸದ್‌ನ ದೊರೆಗೆ ಸ್ವಾಗತ.'[೧೦೧]

(ಪಟೇಲರ ಹೋರಾಟದ ಫಲವಾಗಿ ದರೋಡೆಗಾರರಾದ ಮತ್ತು ಕೊಲೆಗಡುಕರಾದ ಅಲಿಯಾ ಮತ್ತು ಬಾಬರ್ ದಸ್ತಗಿರಿಯಾಗಿ ಮರಣದಂಡನೆಗೆ ಗುರಿಯಾದರು.)

❖ ◆ ❖

೦೮. ಅಹಮದಾಬಾದ್ ಪುರಸಭೆಯ ಅಧ್ಯಕ್ಷ

ಬೋರ್ಸದ್ ವಿಜಯದ ಮೂರು ವಾರಗಳ ನಂತರ ೧೯೨೪ರ ಜನವರಿ ೩೦ರಂದು ಅಹಮದಾಬಾದ್ ಪುರಸಭೆಗೆ ಚುನಾವಣೆ ನಡೆಯಿತು. ವಲ್ಲಭಭಾಯ್ ನಾಯಕತ್ವದಲ್ಲಿ ಕಾಂಗ್ರೆಸ್ಸು ಚುನಾವಣೆಯಲ್ಲಿ ಸ್ಪರ್ಧಿಸಿ ೪೮ ಸ್ಥಾನಗಳ ಪೈಕಿ ೩೫ ಸ್ಥಾನಗಳನ್ನು ಗಳಿಸಿತು. ವಲ್ಲಭಭಾಯ್ ಪುರಸಭೆಯ ಅಧ್ಯಕ್ಷರಾಗಿ ಚುನಾಯಿತ ರಾದರು. ಪುರಸಭೆಯಲ್ಲಿ ೪೮ ಚುನಾಯಿತ ಸದಸ್ಯರಲ್ಲದೆ ೧೨ ಮಂದಿ ಸರ್ಕಾರ ದಿಂದ ನಾಮಕರಣಗೊಂಡ ಸದಸ್ಯರು ಇದ್ದರೂ ಸಹ ವಲ್ಲಭಭಾಯ್‌ರವರಿಗೆ ಉತ್ತಮ ಬಹುಮತವಿತ್ತು.

ಹೆಚ್ಚು ಕಡಿಮೆ ಅದೇ ಸಮಯದಲ್ಲಿ ಭಾರತದ ಇತರ ನಗರಗಳಲ್ಲೂ ಕಾಂಗ್ರೆಸ್ ನಾಯಕರು ಆಯಾ ಪುರಸಭೆಯ ಅಧ್ಯಕ್ಷರಾದರು. ಅಲಹಾಬಾದ್ ನಗರದಲ್ಲಿ ಜವಹರಲಾಲ್ ನೆಹರು, ಕಲ್ಕತ್ತ ನಗರದಲ್ಲಿ ಚಿತ್ತರಂಜನ್ ದಾಸ್ ಮತ್ತು ಪಾಟ್ನದಲ್ಲಿ ರಾಜೇಂದ್ರ ಪ್ರಸಾದ್ ಪುರಸಭೆಗಳ ಅಧ್ಯಕ್ಷರಾದರು.

ವಲ್ಲಭಭಾಯ್‌ರವರು ಪುರಸಭೆಯ ಅಧ್ಯಕ್ಷರಾಗಿದ್ದಾಗ ತಮ್ಮೆಲ್ಲ ಕಾಲವನ್ನು ಅದರ ಕೆಲಸಕ್ಕಾಗಿ ವಿನಿಯೋಗಿಸುತ್ತಿದ್ದರು. ಬೆಳಗಿನ ವೇಳೆ ಪುರಸಭಾ ಅಧಿಕಾರಿಗಳ ಒಡನೆ ನಗರ ಪ್ರದಕ್ಷಿಣೆ ಮಾಡಿ ಬಡಾವಣೆಯಿಂದ ಬಡಾವಣೆಗೆ ಹೋಗಿ ಆಗ ಬೇಕಾದ ಅಭಿವೃದ್ಧಿ ಕಾರ್ಯಗಳ ಬಗೆಗೆ ಯೋಚಿಸುವರು, ನಡೆಯುತ್ತಿರುವ ಕಾಮಗಾರಿಗಳನ್ನು ವೀಕ್ಷಿಸುವರು, ಜನರನ್ನು ಸಂಧಿಸುವರು ಮತ್ತು ಅವರ ಸಂಕಟ ಹಾಗೂ ಸಮಸ್ಯೆಗಳನ್ನು ಆಲಿಸುವರು. ಮಧ್ಯಾಹ್ನದ ವೇಳೆ ಅವರು ಕಛೇರಿ ಕೆಲಸಗಳಿಗೆ ಗಮನ ಕೊಡುವರು, ಸಭೆಗಳನ್ನು ನಡೆಸುವರು ಮತ್ತು ಸಂದರ್ಶಕರನ್ನು

ಭೇಟಿಯಾಗುವರು. ಅಹಮದಾಬಾದ್ ನಗರವನ್ನು ಅಗಲವಾದ ರಸ್ತೆಗಳು ಮತ್ತು ಉದ್ಯಾನವನಗಳು ಇರುವ ಸುಂದರ ನಗರವನ್ನಾಗಿ ಮಾಡುವುದು ಅವರ ಕನಸಾಗಿತ್ತು. ಅದಕ್ಕೆ ಬೇಕಾದ ಕ್ರಮಗಳನ್ನು ತೆಗೆದುಕೊಂಡರು. ಅವರು ಅಧ್ಯಕ್ಷರಾದಾಗ ನಗರದ ೧/೩ ಭಾಗದಲ್ಲಿ ಮಾತ್ರ ಚರಂಡಿ ವ್ಯವಸ್ಥೆಯಿತ್ತು. ಅವರ ಅಧಿಕಾರ ಮುಗಿಯುವ ಹೊತ್ತಿಗೆ ಇಡೀ ನಗರಕ್ಕೆ ಚರಂಡಿ ವ್ಯವಸ್ಥೆಯನ್ನು ಪೂರ್ಣವಾಗಿ ಅಳವಡಿಸಿದ್ದರು ಮತ್ತು ಕುಡಿಯುವ ನೀರಿನ ಸರಬರಾಜನ್ನು ಹೆಚ್ಚಿಸಿದ್ದರು. ನಗರ ಬಹಳ ಕಿಷ್ಕಿಂದವಾಗಿತ್ತು. ಈ ಜನಸಂದಣಿಯನ್ನು ಸುಧಾರಿಸುವುದಕ್ಕಾಗಿ ನಗರದ ಹೊರಗೆ ಎರಡು ಬಡಾವಣೆಗಳ ನಿರ್ಮಾಣವನ್ನು, ಎಲಿಸ್ ಬ್ರಿಜ್ ಮತ್ತು ಕಂಕಾರಿಯ ನಗರ ಯೋಜನೆಗಳನ್ನು, ಆರಂಭಿಸಿದರು. ಅವರು ೧೯೨೧ರಲ್ಲಿ ಕಾಂಗ್ರೆಸ್ ಅಧಿವೇಶನವನ್ನು ನಡೆಸಿದ ಸಬರಮತಿ ನದಿಯ ದಡದ ೨೧ ಎಕರೆ ಪ್ರದೇಶವನ್ನು ವಶಪಡಿಸಿಕೊಂಡು ಅಲ್ಲಿ ಬೃಹತ್ ಆಸ್ಪತ್ರೆಯ ನಿರ್ಮಾಣಕ್ಕೆ ಹಣ ಸಂಗ್ರಹಿಸಿದರು. ಮುಂದೆ ಅಲ್ಲಿ ಆಸ್ಪತ್ರೆ ನಿರ್ಮಾಣವಾಯಿತು. ನೀರಿನ ವ್ಯವಸ್ಥೆಯನ್ನು ಮಾಡುವಾಗ, ಬಾಂಬೆ ಸರ್ಕಾರದ ಮುಖ್ಯ ಇಂಜಿನಿಯರನ ಸಲಹೆಯನ್ನು ತೆಗೆದುಕೊಂಡರು. ಅವನೊಬ್ಬ ಆಂಗ್ಲ. ಅದರಿಂದ ಸರ್ಕಾರದಿಂದ ಅಡ್ಡಿ ಆತಂಕಗಳು ಬರುವುದು ತಪ್ಪಿತು. ಅವರು ಅಹಮದಾಬಾದ್ ನಗರದ ಅರ್ಧ ಭಾಗ ಪ್ರದೇಶಕ್ಕೆ ವಿದ್ಯುತ್ ಸರಬರಾಜನ್ನು ಪೂರೈಸಿದರು. [೧೦೨]

ಆಂಗ್ಲರು ವಾಸಿಸುತ್ತಿದ್ದ ಕಂಟೋನ್‌ಮೆಂಟ್ ಪ್ರದೇಶದಲ್ಲಿರುವವರಿಗೆ ಪುರಸಭೆಯು ನೀರನ್ನು ೧೦೦೦ ಗ್ಯಾಲನ್‌ಗೆ ಎರಡುವರೆ ಆಣೆಯಂತೆ ಒದಗಿಸುತ್ತಿತ್ತು. ಆದರೆ ಇತರ ಬಡಾವಣೆಗಳ ವಾಸಿಗಳಿಂದ ೧೦೦೦ ಗ್ಯಾಲನ್ ನೀರಿಗೆ ಎಂಟು ಆಣೆ ವಸೂಲಿ ಮಾಡುತ್ತಿತ್ತು. ಈ ವ್ಯತ್ಯಾಸ ಮತ್ತು ಅನ್ಯಾಯವನ್ನು ಸರಿಪಡಿಸಲು ಕಂಟೋನ್‌ಮೆಂಟ್‌ನವರೂ ಸಹ ೧೦೦೦ ಗ್ಯಾಲನ್ ನೀರಿಗೆ ೮ ಆಣೆ ಕೊಡುವಂತೆ ಮಾಡಲು ಪಟೇಲರು ೧೯೨೦ರಲ್ಲೇ ಪ್ರಯತ್ನಿಸಿದ್ದರು. ಆದರೆ ಅದು ಫಲಕಾರಿ ಆಗಿರಲಿಲ್ಲ. ಈಗ ಆ ವಿಷಯವನ್ನು ಅವರು ಮತ್ತೆ ಕೈಗೆತ್ತಿಕೊಂಡರು. ಅವರ ಸೂಚನೆಯ ಮೇಲೆ ಪುರಸಭೆಯು ಕಂಟೋನ್‌ಮೆಂಟ್ ವಾಸಿಗಳಿಂದ ೧೯೨೦–೨೧ರಿಂದ ಬಾಕಿ ಹಣವನ್ನು ವಸೂಲಿ ಮಾಡಲು ಕ್ರಮ ಕೈಗೊಂಡಿತು. ಕಲೆಕ್ಟರನು ಅದನ್ನು ತಡೆಯಲು ಯತ್ನಿಸಿದನು. ಆದರೆ ಪಟೇಲ್ ಜಗ್ಗಲಿಲ್ಲ. ಬಾಕಿ ಪಾವತಿಸದಿದ್ದರೆ ನೀರಿನ ಸರಬರಾಜನ್ನು ನಿಲ್ಲಿಸುವುದಾಗಿ ಪಟೇಲರು ಸೂಚಿಸಿದರು. ಕೊನೆಗೆ ಪಟೇಲರೇ ಗೆದ್ದರು. ಕಂಟೋನ್‌ಮೆಂಟಿನವರು ಆರು ತಿಂಗಳ ಒಳಗೆ ಬಾಕಿ ಪಾವತಿಸಿದರು. ಅಷ್ಟೇ ಅಲ್ಲ, ಮೇ ೧೯೨೫ರ ಒಳಗೆ ತಮ್ಮದೇ ನೀರು ಸರಬರಾಜು ವ್ಯವಸ್ಥೆ ಮಾಡಿಕೊಳ್ಳಲು ಅವರು ಒಪ್ಪಿದರು.[೧೦೩]

ಪಟೇಲರು ಪುರಸಭೆಯ ಅಧ್ಯಕ್ಷರಾಗಿದ್ದುದ್ದಲ್ಲದೆ, ಪುರಸಭಾ ನಿರ್ವಹಣಾ ಸಮಿತಿಯ ಮತ್ತು ನಗರ ಯೋಜನಾ ಬೋರ್ಡ್‌ನ ಅಧ್ಯಕ್ಷರೂ ಆಗಿದ್ದರು. ಅದರಿಂದ 'ಅವರು ಎಲ್ಲಾ ಅಧಿಕಾರವನ್ನು ಕೇಂದ್ರೀಕರಿಸಿಕೊಂಡಿದ್ದಾರೆ ಮತ್ತು ಸರ್ವಾಧಿಕಾರಿಯಂತೆ ವರ್ತಿಸುತ್ತಿದ್ದಾರೆ' ಎಂದು ಕೆಲವರು ಅವರನ್ನು ಟೀಕಿಸಿದರು. ಪಟೇಲರು ಆ ಟೀಕೆಗಳಿಗೆ ಸೊಪ್ಪು ಹಾಕಲಿಲ್ಲ. ಅವರು ಕೆಲಸ ಮಾಡುವುದಕ್ಕಾಗಿ ಮತ್ತು ಜನ ಸೇವೆ ಮಾಡುವುದಕ್ಕಾಗಿ ಪುರಸಭೆಯನ್ನು ಪ್ರವೇಶಿಸಿದ್ದರೇ ಹೊರತು ತಾವು ಒಬ್ಬ ಪ್ರಜಾಪ್ರಭುತ್ವ ಮನಸ್ಸಿನವರು ಎಂದು ಹೊಗಳಿಸಿಕೊಳ್ಳುವುದಕ್ಕಾಗಿ ಅಲ್ಲ. ಜೊತೆಗೆ, ಪಟೇಲರ ಜೊತೆ ಪುರಸಭಾ ಸದಸ್ಯರಾಗಿದ್ದ ಆನಂತರ ಅವರ ಟೀಕಾಕಾರರಾದ ಕುಬೇರ್‌ದಾಸ್ ಮೋದಿಯವರು 'ಪಟೇಲರು ಪ್ರತಿಯೊಬ್ಬ ಸದಸ್ಯನ ಅಭಿಪ್ರಾಯವನ್ನು ಕೇಳುತ್ತಿದ್ದರು ಮತ್ತು ಒಮ್ಮತಾಭಿಪ್ರಾಯಕ್ಕೆ ಯತ್ನಿಸುತ್ತಿದ್ದರು' ಎಂದು ಹೇಳಿದ್ದಾರೆ. ನೈರ್ಮಲ್ಯ ಸಮಿತಿಯ ಛೇರ್‌ಮನ್ ಆಗಿದ್ದ ಡಾ॥ ಕನುಗ ಮತ್ತು ಶಾಲಾ ಸಮಿತಿಯ ಅಧ್ಯಕ್ಷರಾಗಿದ್ದ ಥಾಕೋರೆ ಅವರು ವಲ್ಲಭಭಾಯ್‌ರವರಿಗೆ ಬಹಳ ಹತ್ತಿರದವರಾಗಿದ್ದರು. ಅದರಿಂದ ಪಟೇಲರು ತಮ್ಮ ಸ್ನೇಹಿತರ ಪರ ಪಕ್ಷಪಾತ ಮಾಡುತ್ತಾರೆಂಬ ಟೀಕೆಯೂ ಬಂದಿತು. ಆ ಟೀಕೆಗೂ ಪಟೇಲರು ಗಮನ ಕೊಡಲಿಲ್ಲ. ಡಾ॥ ಕನುಗ ಮತ್ತು ಥಾಕೋರೆಯವರು ಶಕ್ತರಾಗಿದ್ದರು. ಅದರಿಂದ ಪಟೇಲರು ಅವರನ್ನು ಉಪಯೋಗಿಸಿಕೊಂಡರು, ಅಷ್ಟೆ. [೧೦೪]

ಪಟೇಲರು ನಗರದ ಒಳಭಾಗದ ವಸತಿ ದಟ್ಟಣೆಯನ್ನು ತಗ್ಗಿಸುವುದಕ್ಕಾಗಿ, ನಗರದ ಹೊರಗೆ ಬಡಾವಣೆ ನಿರ್ಮಿಸಲು ಹೊರಟಾಗ ಅವರನ್ನು ಕೆಲವರು 'ರೈತ ವಿರೋಧಿ' ಎಂದು ಕರೆದರು. ಹಿಂದಿನ ಮುಸ್ಲಿಂ ಸುಲ್ತಾನರು ಕಟ್ಟಿಸಿದ್ದ ಕೋಟೆಯ ಗೋಡೆ ನಗರವನ್ನು ಬಳಸಿತ್ತು. ನಗರದ ವಿಸ್ತರಣೆಗೆ ಅಡ್ಡಿಯಾಗಿದ್ದ ಅದರ ಒಂದು ಭಾಗವನ್ನು ಒಡೆಯುವ ಯೋಜನೆ ಹಿಂದೆಯೇ ಬಂದಿತ್ತು. ಪಟೇಲರು ಆ ಯೋಜನೆಗೆ ಬೆಂಬಲ ಕೊಟ್ಟಿದ್ದರಿಂದ ಅವರನ್ನು 'ಮುಸ್ಲಿಂ – ವಿರೋಧಿ' ಎಂದರು. ಕೋಟೆ ಗೋಡೆಯ ಧ್ವಂಸದ ವಿರುದ್ಧ ಅನೇಕ ಮುಸ್ಲಿಮೇತರರೂ ಪ್ರತಿಭಟಿಸಿದರು. ಪಟೇಲರು, 'ಹಾಗಾದರೆ ಪರ್ಯಾಯ ಯೋಜನೆಯನ್ನು ನೀಡಿ,' ಎಂದು ಸವಾಲು ಹಾಕಿದರು. ಎಲ್ಲರೂ ಮೌನ ತಾಳಿದರು. ಪಟೇಲರು ಕೋಟೆಯ ಸ್ವಲ್ಪ ಭಾಗದ ಧ್ವಂಸವನ್ನು ಆರಂಭಿಸಿದರು. ಅವರು, 'ರಸ್ತೆಯಲ್ಲಿ ಕಾನೂನು ಬಾಹಿರವಾಗಿ ನಿರ್ಮಿತವಾಗಿರುವ ಗೋರಿಗಳನ್ನು ಬೇರೆಡೆಗೆ ಸ್ಥಳಾಂತರಿಸಲಾಗುವುದು' ಎಂದಾಗಲೂ ಸಹ ಅವರಿಗೆ 'ಮುಸ್ಲಿಂ – ವಿರೋಧಿ' ಅನ್ನುವ ಹಣೆಪಟ್ಟಿ ಬಂದಿತು. ಪಟೇಲರು ಇಲಿಗಳು ಮತ್ತು ಬೀದಿ ನಾಯಿಗಳ ವಿರುದ್ಧ ಕಾರ್ಯಕ್ರಮ ಕೈಗೊಂಡಾಗ ಜೈನರು ಮತ್ತು ಹಿಂದುಗಳು ಅದನ್ನು

ವಿರೋಧಿಸಿದರು. ಬೀದಿನಾಯಿಗಳನ್ನು ಹಿಡಿಯುವುದನ್ನು ಜೈನರು ವಿರೋಧಿಸಿದಾಗ ಅವರಿಗೆ ಪಟೇಲರು 'ಆ ನಾಯಿಗಳನ್ನು ನಿಮ್ಮ ಮನೆಗಳಲ್ಲಿ ಇಟ್ಟುಕೊಂಡು ಮರುಕ ತೋರಿಸಿ' ಎಂದರು. ಮುಸ್ಲಿಮರು ದನಗಳನ್ನು ಕಡಿಯುವುದನ್ನು ನಿಲ್ಲಿಸುವಂತೆ ಮಾಡಬೇಕೆಂದು ಹಿಂದೂಗಳು ಒತ್ತಾಯಿಸಿದಾಗ ಪಟೇಲರು, 'ಮುಸ್ಲಿಂ ಕಟುಕರಿಗೆ ದನಗಳನ್ನು ಮಾರುವವರು ಯಾರು?' ಎಂದು ಪ್ರಶ್ನಿಸಿದರು. ಮುಸ್ಲಿಮರಿಗೆ ದನ ಗಳನ್ನು ಹಿಂದೂಗಳೇ ಮಾರುತ್ತಾರೆಂಬುದು ಎಲ್ಲರಿಗೂ ತಿಳಿದ ವಿಷಯವಾಗಿತ್ತು.[೧೦೫]

ಪಟೇಲರು ಎಲೀಸ್ ಬ್ರಿಜ್ ಬಡಾವಣೆಯ ನಿರ್ಮಾಣಕ್ಕೆ ಹೊರಟಾಗ ಆ ಬಡಾವಣೆಯ ವಿರೋಧಿಗಳು ಅವರನ್ನು 'ರೈತ – ವಿರೋಧಿ' ಎಂದರು. ಪಟೇಲರಿಗೆ ತಾವು ಒಬ್ಬ ರೈತ ಕುಟುಂಬದವನು ಎನ್ನುವುದರ ಬಗೆಗೆ ಬಹಳ ಹೆಮ್ಮೆ ಇತ್ತು. ಅವರೆಂದರು, 'ಅದನ್ನು (ಎಲಿಸ್ ಬ್ರಿಜ್ ಯೋಜನೆಯನ್ನು) ರೈತರ ಹಿತ ದೃಷ್ಟಿಯಿಂದ ಮಾಡಿದೆ – ಎಂದು ಯಾರೂ ಹೇಳುವುದಿಲ್ಲ. ಅದನ್ನು ನಗರದ ಹಿತ ದೃಷ್ಟಿಯಿಂದ ಮಾಡಿದೆ.' ಅವರು ಜಮೀನು ಕಳೆದುಕೊಂಡ ರೈತರಿಗೆ ನ್ಯಾಯವಾದ ಬೆಲೆಯನ್ನು ನೀಡಲು ಮುಂದಾದರು. ಆದರೆ ಆ ಅವಕಾಶದ ದುರ್ಲಾಭ ಪಡೆಯಲೆತ್ನಿಸುವವರಿಗೆ ಸಹಾಯ ಮಾಡಲು ಅವರು ಸಿದ್ಧರಿರಲಿಲ್ಲ. ಅವರೆಂದರು, 'ರೈತರ ಜಮೀನನ್ನು ಬಾಚುವ ರಣಹದ್ದುಗಳ ಜೊತೆ ಮತ್ತು ಹೆಸರಿಗೆ ಮಾತ್ರ ರೈತರಾಗಿರುವವರ ಜೊತೆ ಕೈ ಜೋಡಿಸುವುದಿಲ್ಲ. ನಗರದ ವೆಚ್ಚದಲ್ಲಿ ನಕಲಿ ರೈತರು ಲಾಭ ಮಾಡಲು ಬಿಡುವುದಿಲ್ಲ.'

ಅವರು ತಮ್ಮ ಶತ್ರುಗಳನ್ನು ಭೇಟಿ ಮಾಡಲು ಹಿಂಜರಿಯುತ್ತಲೂ ಇರಲಿಲ್ಲ, ಅಂಜುತ್ತಲೂ ಇರಲಿಲ್ಲ. ಬಡಾವಣೆಯ ವಿರೋಧಿಗಳ ಮೂರು ಸಭೆಗಳಿಗೆ ಅವರು ಹೋದರು. ಅಂತಹ ಧೈರ್ಯಶಾಲಿ ಮತ್ತು ತೆರೆದ ಮನದ ವ್ಯಕ್ತಿಯಾಗಿದ್ದರು ಪಟೇಲರು! ಆದರೆ ಒಮ್ಮೊಮ್ಮೆ ಅವರು ಅಸಹನೆಯ, ಬೆದರಿಸುವ ಮತ್ತು ಜಂಬದ ವ್ಯಕ್ತಿ ಅನ್ನಬಹುದಾದ ರೀತಿ ವರ್ತಿಸುತ್ತಿದ್ದರು. ವಿರೋಧಿಗಳ ಒಂದು ಸಭೆಯಲ್ಲಿ ೧೯೨೫ರ ಸೆಪ್ಟೆಂಬರ್‌ನಲ್ಲಿ, "ನನಗೆ ನಿಮ್ಮ ಸಹಿಗಳು ಬೇಕಿಲ್ಲ, ನೀವು ನಿಮ್ಮ ಮೆದುಳನ್ನು ಉಪಯೋಗಿಸಲು ಬಯಸಿದರೆ, ಉಪಯೋಗಿಸಿ," ಎಂದರು. ಮತ್ತೊಂದು ಸಭೆಯಲ್ಲಿ "ದಯವಿಟ್ಟು ನೀವು ಈ ತಂತ್ರಗಳನ್ನು ನನ್ನ ಮೇಲೆ ಪ್ರಯೋಗಿಸಲು ಯತ್ನಿಸಬೇಡಿ. ನಾನು ಸೋಲುವುದಿಲ್ಲ ಎನ್ನುವುದನ್ನು ಖಚಿತವಾಗಿ ತಿಳಿದುಕೊಳ್ಳಿ. ನಾನು ಕಹಿ ಮಾತುಗಳನ್ನಾಡಿದರೆ ನೀವು ಅದನ್ನು ಸಹಿಸಲಾರಿರಿ. ಒಳ್ಳೆಯವನಂತೆ ಕಾಣಲು ಯತ್ನಿಸುವುದು ನನ್ನ ಜಾಯಮಾನವಲ್ಲ," ಎಂದು ನುಡಿದರು.[೧೦೬]

ಸಾಮಾನ್ಯವಾಗಿ ಪಟೇಲರು ಇಂತಹ ಬೆದರಿಕೆಯ ಮಾತುಗಳನ್ನು ಕೋರಿಕೆ ಮತ್ತು ವಿನಂತಿಗಳು ವಿಫಲವಾದ ನಂತರ ಆಡುತ್ತಿದ್ದರು. ಒಮ್ಮೆ ಅವರು ಹೀಗೆ ಹೇಳಿದರು, "ನನಗೆ ನಿಮ್ಮ ಒಪ್ಪಿಗೆ ಈಗಲೇ ಬೇಕಿಲ್ಲ. ಅದರ ಬಗೆಗೆ ಆಲೋಚಿಸಿ, ಅನಂತರ ನನ್ನ ಬಳಿಗೆ ಬನ್ನಿ. ನಿಮಗೆ ನನ್ನ ಬಾಗಿಲುಗಳು ಸದಾ ತೆರೆದಿರುತ್ತವೆ." ಮತ್ತೊಮ್ಮೆ ಅವರು ಹೀಗೆ ಹೇಳಿದರು, "ಒಂದು ನಿರ್ದಿಷ್ಟ ಕೆಲಸ ಮಾಡುವಾಗ ಅದರಲ್ಲಿ ಜನರ ಹಿತ ಇದೆ ಎಂದು ನನಗೆ ಭಾಸವಾದರೆ, ಅದನ್ನು ಮಾಡುವುದನ್ನು ಮುಂದುವರೆಸುತ್ತೇನೆ."

ಸಮಗ್ರವಾಗಿ ನೋಡಿದರೆ, ಎಲಿಸ್ ಬ್ರಿಜ್ ಯೋಜನೆಯ ಘಟನೆಯು 'ಪಟೇಲರು, ಪುರಸಭೆಯಲ್ಲಿ ಭಾರಿ ಬಹುಮತವನ್ನು ಹೊಂದಿದ್ದರೂ ಸಹ ಟೀಕಾಕಾರರನ್ನು ಎದುರಿಸಲು ಮತ್ತು ಆಲಿಸಲು ಬಯಸುವ ಒಬ್ಬ ಪ್ರಜಾತಂತ್ರವಾದಿ ಆಗಿದ್ದರು' ಎನ್ನುವುದನ್ನು ಪ್ರತಿಷ್ಠಾಪಿಸುತ್ತದೆ – ಎಂದು ಹೇಳಬಹುದು. ಈ ಪ್ರಜಾತಂತ್ರವಾದಿಯು, ತನ್ನ ಅಭಿಪ್ರಾಯಗಳಲ್ಲಿ ನಂಬಿಕೆ ಇಟ್ಟಿರುವ, ನೇರ ಮಾತಿನ ಒಬ್ಬ ಪಟಿದಾರನೂ ಆಗಿದ್ದಾನೆ" – ಎನ್ನುತ್ತಾರೆ ಪಟೇಲರ ಜೀವನ ಚರಿತ್ರೆಯನ್ನು ಬರೆದಿರುವ, ಗಾಂಧೀಜಿ ಮತ್ತು ರಾಜಾಜಿಯ ಮೊಮ್ಮಗ, ರಾಜಮೋಹನ ಗಾಂಧಿ.[೧೦೭]

ಪಟೇಲ್‌ರವರ ಕೆಲವು ಕೆಲಸಗಳು ಭವಿಷ್ಯತ್ತಿನ ಬದಲಾವಣೆಗಳಿಗೆ ಸೂಚಕವಾಗಿದ್ದುವು. ಅವರು ಅಹಮದಾಬಾದ್‌ನ 'ರಿಪ್ಪನ್ ಹಾಲ್' ಅನ್ನು 'ಗಾಂಧೀಜಿ ಹಾಲ್' ಎಂದು ಮರು ನಾಮಕರಣ ಮಾಡಿದರು ಮತ್ತು ವಿದ್ಯಾಪೀಠದ ಪದವಿಗಳನ್ನು ಪುರಸಭೆಯ ಹುದ್ದೆಗಳಿಗೆ ಮಾನ್ಯ ಮಾಡಿದರು. ಪುರಸಭೆಯ ಶಾಲೆಗಳಲ್ಲಿ ನೂಲು ತೆಗೆಯುವ ಕಲಿಕೆ ಆರಂಭವಾಯಿತು. ಪುರಸಭೆಯ ನೌಕರರ ಸಮವಸ್ತ್ರಗಳಿಗೆ ಗಿರಣಿ ಬಟ್ಟೆಗಳಿಗೆ ಬದಲಾಗಿ ಖಾದಿ ಬಟ್ಟೆಯ ಬಳಕೆ ಜಾರಿಗೆ ಬಂದಿತು. ಈ ಬದಲಾವಣೆಗಳು ಸರ್ಕಾರಕ್ಕೆ ಚುಚ್ಚಿದಂತಾಯಿತು. ಆದರೂ ಅನೇಕ ಸರ್ಕಾರಿ ಅಧಿಕಾರಿಗಳು ಪಟೇಲರ ಶ್ರಮ ಮತ್ತು ಉತ್ಸಾಹವನ್ನು ಗುರುತಿಸಿದರು. ೧೯೨೫ರಲ್ಲಿ ಕಲೆಕ್ಟರ್ ಜೆ.ಹೆಚ್. ಗ್ಯಾರೆಟ್‌ರವರು, 'ಈಗಿನ ಪುರಸಭಾ ಮಂಡಳಿ ಮತ್ತು ಅದರ ಅಧ್ಯಕ್ಷರು ಪುರಸಭಾ ಆಡಳಿತಕ್ಕೆ ನವಚೈತನ್ಯವನ್ನು ಮೂಡಿಸಿದ್ದರಿಂದ ತನ್ನ ಕೆಲಸಗಳ ವಿಲೇವಾರಿಯಲ್ಲಿ ಪುರಸಭೆಯು ಬಹಳ ಚುರುಕಾಗಿದೆ,' ಎಂದು ಬಾಂಬೆ ಸರ್ಕಾರಕ್ಕೆ ತಿಳಿಸಿದರು. ಎರಡು ವರ್ಷಗಳ ನಂತರ ಉತ್ತರ ವಿಭಾಗದ ಕಮಿಷನರ್ ಡಬ್ಲು.ಡಬ್ಲು. ಸ್ಮಾರ್ಟ್‌ರವರು, 'ಪುರಸಭೆಯ ವಿವಿಧ ಇಲಾಖೆಗಳು ಉತ್ಸಾಹದಿಂದ ಕೆಲಸ ನಿರ್ವಹಿಸುತ್ತಿವೆ' ಎಂದರು.

ಆದಾಗ್ಯೂ ಪುರಸಭಾಧ್ಯಕ್ಷ ಪಟೇಲರಿಗೆ ಸರ್ಕಾರದ ಕಡೆಯಿಂದ ಸೂಕ್ತ ಸಹಕಾರ ದೊರಕಲಿಲ್ಲ. ಉದಾಹರಣೆಗೆ, ಕಡ್ಡಾಯ ಶಿಕ್ಷಣದ ಬಗೆಗೆ ಪುರಸಭೆ ಮಂಡಿಸಿದ ಯೋಜನೆಗೆ ಮೂರು ವರ್ಷ ಕಳೆದರೂ ಮಂಜೂರಾತಿ ಸಿಗಲಿಲ್ಲ. ಅದನ್ನು ಸರ್ಕಾರವು ಭದ್ರವಾಗಿ ಕಪಾಟಿನಲ್ಲಿಟ್ಟು ಬೀಗ ಹಾಕಿಬಿಟ್ಟಿತು. ಇಂತಹ ಅಡಚಣೆಗಳ ನಡುವೆಯೂ ಪಟೇಲರು ಉತ್ಸಾಹದಿಂದಲೇ ಕೆಲಸ ಮಾಡಿದರು. ಆದರೆ ತಮ್ಮ ಸಹ ಕೆಲಸಗಾರರಲ್ಲಿ ಕೆಲವರು ಜನರ ಕುಂದು ಕೊರತೆಗಳ ದೂರಿಗೆ ಮೂರು ತಿಂಗಳಾದರೂ ಸ್ಪಂದಿಸದೇ ಇದ್ದಾಗ ಅವರು ಆ ಅನಾದರವನ್ನು ಸಹಿಸದೆ ಅಧ್ಯಕ್ಷ ಸ್ಥಾನಕ್ಕೆ ರಾಜಿನಾಮೆ ಇತ್ತರು. ಕೊನೆಗೆ ಎಲ್ಲರ ಒತ್ತಡಕ್ಕೆ ಮಣಿದು ಅವರು ತಮ್ಮ ರಾಜಿನಾಮೆಯನ್ನು ವಾಪಸ್ಸು ತೆಗೆದುಕೊಂಡರು.[೧೦೮]

೧೯೨೭, ಜುಲೈ ೨೩ರ ಶನಿವಾರ ಸಂಜೆ ಅಹಮದಾಬಾದ್‌ನಲ್ಲಿ ಮಳೆ ಸುರಿಯಲು ಆರಂಭವಾಯಿತು. ಇಡೀ ಭಾನುವಾರ ಮಳೆ ಸುರಿಯುತ್ತಲಿತ್ತು. ಅಂದು ರಾತ್ರಿ ಮಳೆಯ ಜೊತೆಗೆ ಚಂಡಮಾರುತವೂ ಸೇರಿಕೊಂಡಿತು. ಪಟೇಲರು ಮನೆಯಲ್ಲಿ ಒಬ್ಬರೇ ಇದ್ದರು. ಮಗಳು ಮಣಿಯು ಗಾಂಧೀಜಿ ಮತ್ತು ಕಸ್ತೂರ್‌ಬಾ ಜೊತೆ ಮೈಸೂರು ರಾಜ್ಯದ ನಂದಿ ಬೆಟ್ಟದಲ್ಲಿ ಇದ್ದಳು. ಮಗ ದಹ್ಯ ಕೂಡ ಊರಲ್ಲಿ ಇರಲಿಲ್ಲ. ಪಟೇಲರಿಗೆ ನಗರದ ಜನರ ಬಗೆಗೆ ಆತಂಕ ಹೆಚ್ಚಿತು. ಅವರು ಮಲಗಲಾಗಲಿಲ್ಲ. ನಗರದ ಪರಿಸ್ಥಿತಿಯನ್ನು ವೀಕ್ಷಿಸುವುದಕ್ಕಾಗಿ ಅರ್ಧ ರಾತ್ರಿಯಲ್ಲಿ ಮನೆಯಿಂದ ಹೊರಟರು. ಆ ವೇಳೆಗೆ ಮಳೆ ಮತ್ತು ಗಾಳಿಯ ಜೊತೆಗೆ ಗುಡುಗು ಸಹ ಶುರುವಾಯಿತು. ಜೊತೆಯಲ್ಲಿ ಮತ್ತೊಬ್ಬರಿದ್ದರೆ ಉತ್ತಮ ಅನ್ನಿಸಿತು ಪಟೇಲರಿಗೆ. ತಮ್ಮ ವರ್ತಕ ಮಿತ್ರ ಹರಿಲಾಲ್ ಕಪಾಡಿಯ ಮನೆಗೆ ಹೋಗಿ ಬಾಗಿಲು ತಟ್ಟಿದರು. ಅಷ್ಟು ಹೊತ್ತಿಗೆ ಅವರು ಸಂಪೂರ್ಣವಾಗಿ ಮಳೆಯಲ್ಲಿ ತೊಯ್ದುಹೋಗಿದ್ದರು. ಕಪಾಡಿಯರವರು ಅವರಿಗೆ ಬೇರೆ ಬಟ್ಟೆಯನ್ನೂ ಒಂದು ಲೋಟ ಟೀಯನ್ನು ನೀಡಿದರು. ಅನಂತರ ಇಬ್ಬರೂ ಹೊರಟು ನಗರದ ಅನೇಕ ಭಾಗಗಳನ್ನು ವೀಕ್ಷಿಸಿದರು ಮತ್ತು ಬೆಳಗಾಗುವ ಹೊತ್ತಿಗೆ ಮುನಿಸಿಪಲ್ ಇಂಜಿನಿಯರ್ ಗೋರೆಯವರ ಮನೆಗೆ ಹೋಗಿ ಅವರನ್ನು ಎಬ್ಬಿಸಿ ಪುರಸಭಾ ಕಛೇರಿಗೆ ಕರೆದುಕೊಂಡು ಹೋದರು ಮತ್ತು ಇತರ ಪುರಸಭಾ ನೌಕರರನ್ನು ಕರೆಸಿಕೊಂಡರು. ಮೊದಲು, ನೀರು ಕಟ್ಟಿಕೊಳ್ಳದೆ ಹರಿದು ಹೋಗುವಂತೆ ಮಾಡಬೇಕಾಗಿತ್ತು. ಪಟೇಲರು ಆ ನೌಕರರಿಗೆಲ್ಲ ಮಾಡಬೇಕಾದ ಕೆಲಸಗಳ ಬಗೆಗೆ ಸೂಚನೆಗಳನ್ನು ಕೊಟ್ಟು ಕೆಲಸಕ್ಕೆ ಹಚ್ಚಿದರು ಮತ್ತು ಮಳೆಯ ನೀರು ಸಬರಮತಿ ನದಿಗೆ ಹರಿದುಹೋಗಲು ವ್ಯವಸ್ಥೆ ಮಾಡಿದರು.

ಇಡೀ ದಿನ ಮಳೆ ಹುಯ್ಯುತ್ತಲೇ ಇತ್ತು. ಸಂಜೆಗೆ ಮನೆಗಳು ಕುಸಿದು ಬೀಳಲು ಆರಂಭವಾದುವು. ದಿನಾಂಕ ಜುಲೈ ೨೯ರಂದು ಇಡೀ ದಿನ ಮಳೆ ಹುಯ್ದಿತು. ವರ್ಷಕ್ಕೆ ಸುಮಾರು ೩೦ ಅಂಗುಲ ಮಳೆ ಬೀಳುತ್ತಿದ್ದ ಪ್ರದೇಶದಲ್ಲಿ ಕೇವಲ ಆರು ದಿವಸಗಳಲ್ಲಿ ೫೨ ಅಂಗುಲ ಮಳೆ ಬಿದ್ದಿತು. ಪಟೇಲ್ ಮತ್ತು ಘೋರೆಯವರು ಮಳೆಯ ನೀರು ಹರಿದು ಹೋಗುವಂತೆ ಮಾಡಲು, ಕಸದ ರಾಶಿಯನ್ನೆಲ್ಲ ಹೊರಹಾಕಲು ಮತ್ತು ತೊಂದರೆಗೆ ಒಳಗಾದವರನ್ನು ಸುರಕ್ಷಿತ ಸ್ಥಳಕ್ಕೆ ಸಾಗಿಸಲು ಸತತ ಶ್ರಮಿಸಿದರು.

ಅಹಮದಾಬಾದ್ ನಗರವಲ್ಲದೆ, ಅದರ ಹೊರಗೆ ಕೈಡಾ ಜಿಲ್ಲೆಯಲ್ಲಿ ಜನ ಅಪಾರ ಸಂಕಟಕ್ಕೆ ತುತ್ತಾಗಿದ್ದರು. ಅಲ್ಲಿಯ ವತ್ರಕ್ ನದಿಯಲ್ಲಿ ಪ್ರವಾಹ ಬಂದು ಎಲ್ಲೆಲ್ಲೂ ನೀರು ಆವರಿಸಿತ್ತು. ಕೈರಾ ಪಟ್ಟಣದ ಬಹುಭಾಗದಲ್ಲಿ ಮೂರು ಅಡಿ ನೀರು ನಿಂತಿತ್ತು. ಜನರು ಮನೆಗಳನ್ನು ತೊರೆದು ಕಲೆಕ್ಟರನ ಬಂಗಲೆ ಇದ್ದ ಎತ್ತರವಾದ ಸ್ಥಳದಲ್ಲಿ ಜಮಾಯಿಸಿದ್ದರು. ಆದರೆ ಆಹಾರವಿಲ್ಲದೆ ಅವರು ಸಂಕಟಕ್ಕೆ ಸಿಲುಕಿದ್ದರು. ಕೈರಾ ಜಿಲ್ಲೆಯ ಕಲೆಕ್ಟರನು ವಲ್ಲಭಭಾಯ್‌ರವರ ನೆರವನ್ನು ಕೋರಿದನು. ತಕ್ಷಣ ವಲ್ಲಭಭಾಯ್ ಸ್ವಯಂ ಸೇವಕರನ್ನು ಸಂಘಟಿಸಿ, ಅವರ ಮೂಲಕ ಬೇಯಿಸಿದ ಆಹಾರ, ಅಕ್ಕಿ, ಗೋದಿ, ಸಕ್ಕರೆ, ಸೀಮೆ ಎಣ್ಣೆ ಮೊದಲಾದುವನ್ನು ಸಂಗ್ರಹಿಸಿ ಕಳುಹಿಸಿದರು. ಕಲೆಕ್ಟರ್ ರೆಜಿನಾಲ್ಡ್ ಮ್ಯಾಕ್ಸ್‌ವೆಲ್‌ನು ಆ ಸಹಾಯವನ್ನು 'ದೇವರೇ ಕಳುಹಿಸಿದ ವರ' ಎಂದು ಕರೆದನು.

ಮಳೆಯೇನೊ ನಿಂತಿತು. ಆದರೆ ಮಳೆಯಿಂದ ಉಂಟಾದ ಭಾರಿ ಹಾನಿಯನ್ನು ಎದುರಿಸಬೇಕಾಗಿತ್ತು. ಪಟೇಲರು ಅಹಮದಾಬಾದ್ ಪುರಸಭೆಯ ಅಧ್ಯಕ್ಷ ರಾಗಿದ್ದುದಲ್ಲದೆ ಗುಜರಾತ್ ಪ್ರದೇಶ್ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರೂ ಆಗಿದ್ದರು. ಅವರು ಇಡೀ ಜಿಲ್ಲೆಯಲ್ಲಿ ಪರಿಹಾರ ಕಾರ್ಯ ಕೈಗೊಳ್ಳಬೇಕಾಯಿತು. ಬೆಳೆಗಳು ಮತ್ತು ಜಾನುವಾರುಗಳು ಕೊಚ್ಚಿ ಹೋಗಿದ್ದುವು. ೭೫,೦೦೦ ಮನೆಗಳು ಉರುಳಿ ಹೋಗಿದ್ದುವು. ಅವರಿಗೆ ವಸತಿ ಒದಗಿಸಬೇಕಾಗಿತ್ತು. ಆಹಾರದ ಸಮಸ್ಯೆ ಬಹಳ ಕಠಿಣವಾಗಿತ್ತು. ಪಟೇಲರು ತಕ್ಷಣ ಸಮರೋಪಾದಿಯಲ್ಲಿ ಪರಿಹಾರ ಕಾರ್ಯವನ್ನು ಕೈಗೊಂಡರು. ತೊಂದರೆಗೆ ಒಳಗಾದವರಿಗೆ ನೆರವು ಮತ್ತು ಪರಿಹಾರವನ್ನು ಒದಗಿಸಲು ಸಹಾಯ ಮಾಡುವಂತೆ ಗುಜರಾತ್ ಮತ್ತು ದೇಶದ ವಿವಿಧ ಭಾಗ ದವರನ್ನು ಅವರು ಕೋರಿದರು. ಅವರ ಕೋರಿಕೆಗೆ ದೇಶದ ಜನ ಭರ್ಜರಿಯಾಗಿ ಸ್ಪಂದಿಸಿದರು. ಅಹಮದಾಬಾದ್ ನಗರದ ಶ್ರೀಮಂತರು ಹಣ ಅಲ್ಲದೆ ಕಬ್ಬಿಣದ ಸರಳುಗಳು, ಸಿಮೆಂಟ್ ಮೂಟೆಗಳು, ಛಾವಣಿ ಶೀಟುಗಳು, ಮರ ಮುಂತಾದುವನ್ನು ನೀಡಿದರು. ಪುರುಷೋತ್ತಮದಾಸ್ ಠಾಕೂರ್‌ದಾಸ್ ತಮ್ಮ ಸಂಸ್ಥೆಯಾದ 'ಈಸ್ಟ್

ಇಂಡಿಯಾ ಕಾಟನ್ ಅಸೋಸಿಯೇಶನ್' ಮೂಲಕ ಬೊಂಬಾಯಿ ಮತ್ತಿತರ ಪ್ರದೇಶಗಳಿಂದ ಹಣ ಸಂಗ್ರಹಿಸಿ ಕಳುಹಿಸಿದರು. ರಾಮಕೃಷ್ಣ ಮಿಷನ್‌ನವರೂ ಹಣ ಸಂಗ್ರಹಿಸಿದರು.

ಪಟೇಲರು ವಿವಿಧ ಪರಿಹಾರ ಕೇಂದ್ರಗಳನ್ನು ನಿಗದಿ ಪಡಿಸಿ ಅಲ್ಲಿಗೆ ಸ್ವಯಂ ಸೇವಕರನ್ನು ಕಳುಹಿಸಿದರು. ಆ ಸ್ವಯಂಸೇವಕರು ತಮಗೆ ಸಾಧ್ಯವಾದ ರೀತಿಯಲ್ಲೆಲ್ಲಾ ಅಂದರೆ ನೀರಿನಲ್ಲಿ ನಡೆದು, ಈಜಿ, ದೋಣಿಗಳಲ್ಲಿ ಸಾಗಿ ಮತ್ತು ವಾಹನಗಳಲ್ಲಿ ಚಲಿಸಿ ಜಾಗ್ರತೆಯಾಗಿ ತಮಗೆ ನಿಗದಿಯಾದ ಸ್ಥಳಗಳನ್ನು ತಲುಪಿ ಸಂತ್ರಸ್ತರಿಗೆ ಪರಿಹಾರದ ವಸ್ತುಗಳನ್ನು ವಿತರಿಸಿದರು. ಅವರು ಜನರ ಅವಶ್ಯಕತೆಗಳನ್ನು ಗಮನಿಸಿ ಬೇಕಾದ ವಸ್ತುಗಳನ್ನು ಪಟೇಲರಿಗೆ ತಿಳಿಸುತ್ತಿದ್ದರು. ಪಟೇಲರು ಆ ವಸ್ತುಗಳನ್ನು ಸಂಗ್ರಹಿಸಿ ಜಾಗ್ರತೆಯಾಗಿ ಕಳುಹಿಸುತ್ತಿದ್ದರು. ಹೀಗೆ ಆಹಾರ ಧಾನ್ಯಗಳು, ಬಟ್ಟೆ ಮತ್ತು ಔಷಧಿಗಳ ವಿತರಣೆ ಅಲ್ಲದೆ ಬಿತ್ತನೆ ಬೀಜ, ವ್ಯವಸಾಯದ ಉಪಕರಣಗಳು, ಮನೆ ನಿರ್ಮಾಣದ ವಸ್ತುಗಳು ಮುಂತಾದುವನ್ನು ಸ್ವಯಂಸೇವಕರು ವಿತರಿಸಿದರು. ಪಟೇಲರು ಜನರಿಗೆ ಪರಿಹಾರ ಕಾರ್ಯವನ್ನು ಏರ್ಪಡಿಸಿದ ವೇಗವನ್ನು ಕಂಡು ಸರ್ಕಾರವು ಬೆರಗಾಯಿತು.

ವಲ್ಲಭಭಾಯ್ ಪಟೇಲರ ಅಣ್ಣ ವಿಠ್ಠಲ್‌ಭಾಯ್ ಪಟೇಲ್‌ರವರು ಆ ವೇಳೆಗೆ ಕೇಂದ್ರ ಶಾಸನ ಸಭೆಯ ಸ್ಪೀಕರ್ ಆಗಿದ್ದರು. ವಲ್ಲಭಭಾಯ್ ಅವರಿಗೆ ಪತ್ರ ಬರೆದು ಪ್ರವಾಹದ ಹಾವಳಿಯಿಂದ ಆಗಿರುವ ಕಷ್ಟ ನಷ್ಟಗಳನ್ನು ವಿವರವಾಗಿ ತಿಳಿಸಿದರು. ತಕ್ಷಣ ವಿಠಲ್‌ಭಾಯ್‌ರವರು ವೈಸ್‌ರಾಯ್ ಲಾರ್ಡ್ ಇರ್ವಿನ್‌ರನ್ನು ಸ್ಥಳ ವೀಕ್ಷಣೆಗೆ ಕರೆದುಕೊಂಡು ಬಂದರು. ವಲ್ಲಭಭಾಯ್ ಪಟೇಲ್ ಕೈಗೊಂಡಿದ್ದ ಪರಿಹಾರ ಮತ್ತು ಪುನರ್ವಸತಿ ಕಾರ್ಯಗಳನ್ನು ನೋಡಿ ಪ್ರಭಾವಿತ ರಾದ ವೈಸ್‌ರಾಯ್‌ರವರು ೧೦ ಮಿಲಿಯನ್ ರೂಪಾಯಿಗಳನ್ನು ಪರಿಹಾರ ಕಾರ್ಯಕ್ಕೆ ಬಿಡುಗಡೆ ಮಾಡಿದರು. ಅಷ್ಟೇ ಅಲ್ಲ, ಅವರ ಗೌರವಾರ್ಥ ವಿಠಲ್‌ಭಾಯ್ ಏರ್ಪಡಿಸಿದ ಒಂದು ಔತಣಕೂಟದಲ್ಲಿ ಮಾತನಾಡುತ್ತ ಅವರು ವಲ್ಲಭಭಾಯ್‌ರವರ ಕೆಲಸವನ್ನು ಶ್ಲಾಘಿಸಿದರು. ಅವರೆಂದರು, "ಗುಜರಾತ್ ಪ್ರದೇಶ್ ಕಾಂಗ್ರೆಸ್ ಸಮಿತಿಯ ಸ್ವಯಂ ಸೇವಕರು ಪ್ರವಾಹ ಪೀಡಿತ ಪ್ರದೇಶಕ್ಕೆ ಸಕಾಲದಲ್ಲಿ ಬರದೇ ಹೋಗಿದ್ದರೆ ಜನರ ಸಾವಿನ ಸಂಖ್ಯೆ ಈಗಿರುವಂತೆ ನಗಣ್ಯವಾಗಿರದೆ ಬಹು ಭಾರಿ ಆಗಿರುತ್ತಿತ್ತು.'

ಸರ್ಕಾರವು ಅಹಮದಾಬಾದ್‌ನ ಹಿಂದಿನ ಕಲೆಕ್ಟರ್ ಜೋಸೆಫ್ ಗ್ಯಾರೆಟ್‌ರವರನ್ನು ಪ್ರವಾಹ ಪರಿಹಾರದ ವಿಶೇಷ ಅಧಿಕಾರಿಯನ್ನಾಗಿ ನೇಮಿಸಿತ್ತು.

ಅವರು ಪಟೇಲ್ ಮತ್ತು ಅವರ ಕೆಲವು ಸಹಚರರ ಹೆಸರುಗಳನ್ನು ಸೂಕ್ತ ಗೌರವಗಳಿಗೆ ಸರ್ಕಾರಕ್ಕೆ ಶಿಫಾರಸ್ಸು ಮಾಡಲು ಪಟೇಲರ ಒಪ್ಪಿಗೆಯನ್ನು ಕೋರಿದರು. ಪಟೇಲರು ಜೋರಾಗಿ ನಕ್ಕುಬಿಟ್ಟರು.

೧೯೨೭ರಷ್ಟು ಹಿಂದೆಯೇ ಪಟೇಲರು ಭಾರಿ ಮಳೆಯ ವಿಷಮ ಸನ್ನಿವೇಶದಲ್ಲಿ ಕೆಲಸಗಾರರು, ಅಧಿಕಾರಿಗಳು, ಸ್ವಯಂಸೇವಕರು ಮತ್ತು ಜನರನ್ನು ಹುರಿದುಂಬಿಸಿ ನಡೆಸಿದ ಪರಿಹಾರ ಮತ್ತು ಪುನರ್ವಸತಿ ಕಾರ್ಯ ಒಂದು ಮಾದರಿಯಾಯಿತು. ಅಂತಹ ಕಾರ್ಯವನ್ನು ಅದುವರೆವಿಗೆ ಯಾವ ವ್ಯಕ್ತಿ ಅಥವಾ ಸಂಸ್ಥೆ ಅಥವಾ ಸರ್ಕಾರವು ಮಾಡಿರಲಿಲ್ಲ.[೧೦೯]

೧೯೨೭ರಲ್ಲಿ ಪುರಸಭೆಗೆ ಮತ್ತೆ ಚುನಾವಣೆ ನಡೆದು ವಲ್ಲಭಭಾಯ್ ಪಟೇಲರು ಮತ್ತೆ ಅಧ್ಯಕ್ಷರಾಗಿ ಚುನಾಯಿತರಾದರು. ಆದರೆ ಅವರ ಬೆಂಬಲಿಗರ ಸಂಖ್ಯೆ ಕಡಿಮೆಯಾಗಿತ್ತು. ಹೊಸ ಸದಸ್ಯರ ಪೈಕಿ ಅಹಮದಾಬಾದ್‌ನ ಭಾರಿ ಕೈಗಾರಿಕಾ ಮಾಲೀಕರಾದ ಅಂಬಾಲಾಲ್ ಸಾರಾಭಾಯ್ ಮತ್ತು ಕಸ್ತೂರ್‌ಭಾಯ್ ಲಾಲ್‌ಭಾಯ್ ಮತ್ತು ಜವಳಿ ಗಿರಣಿ ಕಾರ್ಮಿಕರ ನಾಯಕರಾದ ಗುಲ್ಜಾರಿ ಲಾಲ್ ನಂದಾ ಇದ್ದರು. (ಗುಲ್ಜಾರಿ ಲಾಲ್ ನಂದಾರವರು ಸ್ವಾತಂತ್ರ್ಯ ಬಂದ ಮೇಲೆ ಕೇಂದ್ರ ಮಂತ್ರಿಯಾದರು. ೧೯೬೪ರಲ್ಲಿ ಜವಹರಲಾಲ್ ನೆಹರು ಮತ್ತು ೧೯೬೬ರಲ್ಲಿ ಲಾಲ್ ಬಹದ್ದೂರ್ ಶಾಸ್ತ್ರಿ ಗತಿಸಿದಾಗ ಹೊಸ ಪ್ರಧಾನಮಂತ್ರಿ ಆಯ್ಕೆಯಾಗುವವರೆಗೆ ಎರಡು ಬಾರಿ ತಾತ್ಕಾಲಿಕ ಪ್ರಧಾನಮಂತ್ರಿಯಾದರು.) ಈ ಮೂವರು ಮತ್ತು ವಲ್ಲಭಭಾಯ್ ನಡುವೆ ಒಬ್ಬ ಹೊಸ ಚೀಫ್ ಆಫೀಸರನ ನೇಮಕದ ವಿಷಯದಲ್ಲಿ ಭಿನ್ನಾಭಿಪ್ರಾಯ ಮೂಡಿತು. ಆ ಹುದ್ದೆಗೆ ಭಗತ್, ಮೊರಾರ್ಜಿ ದೇಸಾಯಿ ಮತ್ತು ದಿವಾನ್ ಎಂಬ ಮೂವರು ಆಕಾಂಕ್ಷಿಗಳು ಇದ್ದರು. ಅವರ ಪೈಕಿ ಭಗತ್ ೧೯೨೫ರಲ್ಲಿ ಪ್ರೊಬೆಷನರಿ ಚೀಫ್ ಆಫೀಸರ್ ಆಗಿದ್ದನು. ಅದರಿಂದ ಪುರಸಭೆಯ ಸದಸ್ಯರಲ್ಲಿ ಕೆಲವರು ಅವನ ಸ್ನೇಹಿತರಾಗಿದ್ದರು. ಆದರೆ ಪಟೇಲರು ಅವನ ಪರವಾಗಿರಲಿಲ್ಲ. ಭಗತ್ ೧೯೨೫ರಲ್ಲಿ ಮುನಿಸಿಪಲ್ ಇಂಜಿನಿಯರ್ ಘೋರೆಯವರ ಮೇಲೆ ಕೆಲವು ಗಂಭೀರ ಆಪಾದನೆಗಳನ್ನು ಮಾಡಿದ್ದನು. ವಿಚಾರಣೆ ಮತ್ತು ತನಿಖೆ ನಡೆದು ಆ ಆಪಾದನೆಗಳು ಆಧಾರರಹಿತ ವಾದುವು ಎಂದು ಗೊತ್ತಾಯಿತು. ಜೊತೆಗೆ ಹಿಂದಿನ ಕಲೆಕ್ಟರ್ ಚಾಟ್ ಫೀಲ್ಡ್‌ನು ಭಗತ್ ಬಗೆಗೆ ಮಾಡಿದ್ದ ಟೀಕೆಗಳ ದಾಖಲೆಗಳು ಪತ್ರಾಗಾರದಿಂದ ಮಾಯವಾಗಿದ್ದುವು. ಅಷ್ಟೇ ಅಲ್ಲದೆ ಅವನು ಪುರಸಭಾ ಸದಸ್ಯರಲ್ಲಿ ಬಿರುಕು ಉಂಟು ಮಾಡಲು ಯತ್ನಿಸಿದ್ದನು. ಅದರಿಂದ ಅವನಿಗೆ ಹಿಂಬಡ್ತಿ ನೀಡಿ ಅವನನ್ನು ಚೀಫ್ ಆಫೀಸರನ

ವೈಯುಕ್ತಿಕ ಸಹಾಯಕನನ್ನಾಗಿ ಮಾಡಲಾಗಿತ್ತು. ಈ ಕಾರಣಗಳಿಗಾಗಿ ಪಟೇಲರು ಅವನ ಪರವಾಗಿ ಇರಲಿಲ್ಲ. ಅವರು ದಿವಾನ್‌ನನ್ನು ಬೆಂಬಲಿಸಿದ್ದರು. ಅಂಬಾಲಾಲ್, ಕಸ್ತೂರ್‌ಭಾಯ್ ಮತ್ತು ಗುಲ್ಜಾರಿ ಲಾಲ್ ನಂದಾ ಮೊರಾರ್ಜಿ ದೇಸಾಯಿಯ ಪರವಾಗಿ ಇದ್ದರು. ಮೊರಾರ್ಜಿ ದೇಸಾಯಿ ಆಗ ಒಬ್ಬ ಸರ್ಕಾರಿ ನೌಕರನಾಗಿದ್ದರು. (ಮುಂದೆ ಅವರು ಸ್ವಾತಂತ್ರ್ಯ ಬಂದ ಮೇಲೆ ಬೊಂಬಾಯಿ ಪ್ರಾಂತ್ಯದ ಮುಖ್ಯ ಮಂತ್ರಿ, ಕೇಂದ್ರ ಮಂತ್ರಿ, ಉಪ ಪ್ರಧಾನ ಮಂತ್ರಿ ಮತ್ತು ೧೯೭೭ರಿಂದ ೧೯೭೯ರ ವರೆಗೆ ಪ್ರಧಾನಮಂತ್ರಿ ಆದರು.) ಪಟೇಲರು ತಮ್ಮ ಬೆಂಬಲದ ಆಶ್ವಾಸನೆಯನ್ನು ದಿವಾನ್‌ಗೆ ನೀಡಿದ್ದರು. ಅಷ್ಟೇ ಅಲ್ಲ, ಭಗತ್ ಆರಿಸಲ್ಪಟ್ಟರೆ ತಾವು ಅಧ್ಯಕ್ಷ ಸ್ಥಾನಕ್ಕೆ ರಾಜಿನಾಮೆ ನೀಡುವುದಾಗಿ ಅಂಬಾಲಾಲ್ ಮತ್ತು ಇತರರಿಗೆ ತಿಳಿಸಿದ್ದರು.

ಏಪ್ರಿಲ್ ೧೩ರಂದು ಮತ ಚಲಾವಣೆ ನಡೆಯಿತು. ಭಗತ್ ಅತಿ ಹೆಚ್ಚು ಮತ ಪಡೆದು ಆ ಹುದ್ದೆಗೆ ಚುನಾಯಿತನಾದನು. ದಿವಾನ್ ಮೂರನೇ ಸ್ಥಾನದಲ್ಲಿದ್ದನು. ಈ ಫಲಿತಾಂಶ ತಿಳಿದ ತಕ್ಷಣ ಪಟೇಲರು ರಾಜಿನಾಮೆ ಬರೆದು ಅಲ್ಲಿಂದ ಹೊರಟೇ ಬಿಟ್ಟರು. ತಮ್ಮ ರಾಜಿನಾಮೆ ಪತ್ರದಲ್ಲಿ ಅವರು, 'ನಗರದ ಆಡಳಿತವನ್ನು ಚೆನ್ನಾಗಿ ಮತ್ತು ದಕ್ಷತೆಯಿಂದ ನಡೆಸಲು ಆವಶ್ಯಕವಾದ ಪುರಸಭಾ ಮಂಡಳಿಯ ವಿಶ್ವಾಸವನ್ನು ಗಳಿಸಲು ನಾನು ಶಕ್ತನಲ್ಲ ಎನ್ನುವುದು ನನಗೆ ಮನವರಿಕೆಯಾಗಿರುವುದರಿಂದ, ನಾನು ಅಧ್ಯಕ್ಷ ಸ್ಥಾನಕ್ಕೆ ರಾಜಿನಾಮೆ ಕೊಡುವುದು ನನ್ನ ಕರ್ತವ್ಯ ಎಂದು ಭಾವಿಸಿದ್ದೇನೆ,' ಎಂದು ಬರೆದಿದ್ದರು. ತಕ್ಷಣವೇ ಅಂಬಾಲಾಲ್‌ರವರು 'ಭಗತ್‌ನ ನೇಮಕವನ್ನು ಪಟೇಲರು ತಮ್ಮ ವಿರುದ್ಧದ ಮತವೆಂದು ಭಾವಿಸಬಾರದೆಂದು' ಕೋರಿ ಸಂದೇಶವನ್ನು ಪಟೇಲರಿಗೆ ಕಳುಹಿಸಿದರು. ಅಲ್ಲದೆ, 'ವಲ್ಲಭಭಾಯ್‌ರವರು ತಮ್ಮ ತೀರ್ಮಾನವನ್ನು ಬದಲಾಯಿಸಬೇಕೆಂದು ಕೋರುವ' ಠರಾವನ್ನು ಪುರಸಭಾ ಮಂಡಳಿಯು ತಕ್ಷಣವೇ ೪೪-೨ ಮತಗಳಿಂದ ಅಂಗೀಕರಿಸಿತು. ಆದರೆ ಅಷ್ಟು ಹೊತ್ತಿಗೆ ಪಟೇಲರು ಬಾರ್ಡೋಲಿಗೆ ಹೋಗಲು ರೈಲು ಹತ್ತಿದ್ದರು. ಅವರ ಪುರಸಭಾ ಅಧ್ಯಾಯ ಮುಕ್ತಾಯವಾಗಿತ್ತು.

ಈ ಘಟನೆಯ ಬಗೆಗೆ ಮಾವಲಂಕರ್‌ರವರು 'ಇದರ ಫಲವಾಗಿ ಪಟೇಲರು ಬಾವಿಯಿಂದ ಸಾಗರಕ್ಕೆ ಹಾರಿದರು' ಎಂದು ಬರೆದಿದ್ದಾರೆ. 'ಆ ಮಾತು ಸತ್ಯವಾದರೂ ಸಹ ಭಾರಿ ಭಾರಿ ಸಮರಗಳನ್ನು ಗೆದ್ದ ವೀರ ಒಂದು ಸಣ್ಣದನ್ನು ಕಳೆದುಕೊಂಡ ಎನ್ನುವುದೂ ಸಹ ಸತ್ಯ' – ಎನ್ನುತ್ತಾರೆ ರಾಜಮೋಹನ ಗಾಂಧಿ.[೧೧೦]

ಆದಾಗ್ಯೂ ಪಟೇಲರು ಈ ಘಟನೆಯ ಬಗೆಗೆ ಕಹಿ ಭಾವನೆಯನ್ನು ಉಳಿಸಿಕೊಳ್ಳಲಿಲ್ಲ. ೧೯೪೮ರ ಜನವರಿ ೧೬ರಂದು ಬೊಂಬಾಯಿಯ ಪುರಸಭಾ ಸನ್ಮಾನದಲ್ಲಿ ಮಾತನಾಡುತ್ತಾ ಅವರು ಹೀಗೆ ನುಡಿದರು:

> ನಾನು ಸಾಧಿಸಿರುವ ಮತ್ತು ಸಾಧಿಸದಿರುವ ಅನೇಕ ವಿಷಯಗಳನ್ನು ನೀವು ಪ್ರಸ್ತಾಪಿಸಿದ್ದೀರಿ. ಆದರೆ ನಾನು ಯಾವ ಸಂಕೋಚವೂ ಇಲ್ಲದೆ ಒಪ್ಪಿಕೊಳ್ಳುವ ಒಂದು ವಿಷಯವಿದೆ. ಅಹಮದಾಬಾದ್ ಪುರಸಭೆಯಲ್ಲಿ ನಾನು ನನ್ನ ಶಕ್ತಿಗೆ ಅನುಗುಣವಾಗಿ ಸೇವೆ ಸಲ್ಲಿಸಿದೆ. ನಾನು ಆಗ ಎಸಗಿದ ಕಾರ್ಯಗಳಿಂದ ಕುಂದಿಲ್ಲದ ಸಂತೋಷವನ್ನು ಪಡೆದೆ. ನಮ್ಮ ನಗರಕ್ಕೆ ನಾವು ಸಲ್ಲಿಸುವ ಸೇವೆ ನಮಗೆ ಅಮಿತ ಸಂತೋಷವನ್ನು ಮತ್ತು ಮಾನಸಿಕ ತೃಪ್ತಿಯನ್ನು ನೀಡಲೇಬೇಕು. ನಾನು ಅದನ್ನು ಬೇರೆ ಯಾವ ಕ್ಷೇತ್ರದಲ್ಲೂ ಪಡೆಯಲಾರೆ.

❖ ◆ ❖

ಖೈಡಾ ಸತ್ಯಾಗ್ರಹದ ನಾಯಕ

೦೯. ಮಹಾ ಹೋರಾಟ : ಬಾರ್ಡೋಲಿಯ ಸತ್ಯಾಗ್ರಹ

ಬಾರ್ಡೋಲಿ, ಆಗಿನ ಬೊಂಬಾಯಿ ಪ್ರಾಂತ್ಯದ ಗುಜರಾತ್ ಪ್ರದೇಶದಲ್ಲಿನ ಸೂರತ್ ಜಿಲ್ಲೆಯ ಒಂದು ತಾಲ್ಲೂಕು. ಅಲ್ಲಿಯ ರೈತರು ವಲ್ಲಭಭಾಯ್ ಪಟೇಲರ ನಾಯಕತ್ವದಲ್ಲಿ ಸರ್ಕಾರದ ವಿರುದ್ಧ ಒಂದು ಅಹಿಂಸಾತ್ಮಕ ಸತ್ಯಾಗ್ರಹ ಸಮರವನ್ನು ೧೯೨೮ರಲ್ಲಿ ನಡೆಸಿದರು. ಪಟೇಲರಿಗೆ ಆ ಸಮರವು ಜನರಿಂದ 'ಸರ್ದಾರ್' ಬಿರುದನ್ನು ತಂದಿತು. ಆ ಸತ್ಯಾಗ್ರಹ ಸಮರಕ್ಕೆ ಕಾರಣ ಪ್ರಾಂತ್ಯ ಸರ್ಕಾರವು ನಿರಂಕುಶ ರೀತಿಯಲ್ಲಿ ಯದ್ವಾ ತದ್ವಾ ಭೂ ಕಂದಾಯವನ್ನು ಏರಿಸಿದ್ದು.

ಮೂವತ್ತು ವರ್ಷಕ್ಕೆ ಒಮ್ಮೆ ರೈತರ ಆರ್ಥಿಕ ಸರ್ವೇಕ್ಷಣೆಯನ್ನು ನಡೆಸಿ ಭೂ ಕಂದಾಯವನ್ನು ಪುನರ್ ನಿಗದಿ ಮಾಡುವ ಪದ್ಧತಿ ಬೊಂಬಾಯಿ ಸರ್ಕಾರದಲ್ಲಿತ್ತು. ಬಾರ್ಡೋಲಿ ತಾಲ್ಲೂಕಿನಲ್ಲಿ ಹಿಂದಿನ ಆರ್ಥಿಕ ಸರ್ವೇಕ್ಷಣೆ ಮತ್ತು ಕಂದಾಯದ ನಿಗದಿ ೧೮೯೬ರಲ್ಲಿ ನಡೆದಿದ್ದು ಮತ್ತೆ ೧೯೨೬ರಲ್ಲಿ ನಡೆಯಬೇಕಾಗಿತ್ತು. ಸರ್ಕಾರವು ೧೯೨೫ರಲ್ಲಿ ಆ ಕೆಲಸವನ್ನು ಎಂ.ಎಸ್. ಜಯಕರ್ ಎಂಬ ಅಧಿಕಾರಿಗೆ ವಹಿಸಿತು. ಆ ಅಧಿಕಾರಿಗೆ ಕಂದಾಯ ನಿಗದಿಯ ಕೆಲಸದಲ್ಲಿ ಸರಿಯಾದ ಅನುಭವ ಇರಲಿಲ್ಲವೆಂದು ಕಾಣುತ್ತದೆ. ಅವನು ಹಳ್ಳಿಗಳಿಗೆ ಸ್ವತಃ ಭೇಟಿ ನೀಡದೆ, ತಲಾತಿ ಮತ್ತಿತರ ಗ್ರಾಮ ನೌಕರರು ನೀಡಿದ ವಿಷಯ ಹಾಗೂ ಅಂಕಿ ಅಂಶಗಳ ಆಧಾರದ ಮೇಲೆ ಮಾತ್ರ ಅವಲಂಬಿಸಿ ಐದು ತಿಂಗಳಲ್ಲಿ ವರದಿಯನ್ನು ತಯಾರಿಸಿ ಶೇ. ೩೦ ಕಂದಾಯದ ಹೆಚ್ಚಳಕ್ಕೆ ಶಿಫಾರಸ್ಸು ಮಾಡಿದನು.

ಅದರಿಂದ ಬಾರ್ಡೋಲಿ ತಾಲ್ಲೂಕಿನ ರೈತರು ನೀಡಬೇಕಾದ ಒಟ್ಟು ಕಂದಾಯವು ರೂ. ೧೪,೭೬೨ ಇದ್ದದ್ದು ರೂ. ೬,೭೨,೨೭೩ ಆಯಿತು. ಇದು ಅವಾಸ್ತವಿಕ ಹೆಚ್ಚಳವಾಗಿತ್ತು. ಸೆಟಲ್‌ಮೆಂಟ್ ಕಮಿಷನರ್ ಆಂಡರ್‌ಸನ್ ಸಹ ಸ್ವತಃ ವೀಕ್ಷಣೆ ನಡೆಸದೆ ಶೇ. ೨೯ ಹೆಚ್ಚಳಕ್ಕೆ ಶಿಫಾರಸ್ಸು ಮಾಡಿದ್ದನು. ಸರ್ಕಾರವು ಎರಡು ಶಿಫಾರಸ್ಸುಗಳನ್ನೂ ಬದಿಗೊತ್ತಿ ಶೇ. ೨೨ರಷ್ಟು ಕಂದಾಯವನ್ನು ಹೆಚ್ಚಿಸಿ ಆದೇಶವನ್ನು ೧೯೨೭ರಲ್ಲಿ ಹೊರಡಿಸಿತು. ಅದೂ ಸಹ ಅವಾಸ್ತವಿಕ ಹೆಚ್ಚಳವಾಗಿತ್ತು, ವರ್ಷ ವರ್ಷಕ್ಕೂ ರೈತರ ಆದಾಯ ಕುಸಿಯುತ್ತಿತ್ತೇ ವಿನಃ ಸರ್ಕಾರ ಭಾವಿಸಿದಂತೆ ಹೆಚ್ಚುತ್ತಾ ಇರಲಿಲ್ಲ. ರೈತರು ಹೆಚ್ಚಿನ ಕಂದಾಯ ಕೊಡುವ ಸ್ಥಿತಿಯಲ್ಲಿರಲಿಲ್ಲ.

ಈ ನಿರಂಕುಶ ಮನಸ್ವೀ ಹೆಚ್ಚಳಕ್ಕೆ ತಲೆ ಬಾಗಲು ಬಾರ್ಡೋಲಿಯ ರೈತರು ಸಿದ್ಧರಿರಲಿಲ್ಲ. ಆದರೆ ಅವರು ಈ ಅನ್ಯಾಯದ ಹೆಚ್ಚಳದ ವಿರುದ್ಧ ನ್ಯಾಯಾಲಯಕ್ಕೆ ಹೋಗುವಹಾಗಿರಲಿಲ್ಲ. ಬಾಂಬೇ ರೆವೆನ್ಯೂ ವ್ಯಾಪ್ತಿ ಕಾಯಿದೆ ಕಂದಾಯದ ಹೆಚ್ಚಳವನ್ನು ನ್ಯಾಯಾಲಯದ ಪರಿಧಿಯಿಂದ ಆಚೆಗೆ ಇಟ್ಟಿತ್ತು. ಅದರಿಂದ ರೈತರಿಗೆ ನ್ಯಾಯಾಲಯದ ಬಾಗಿಲು ಮುಚ್ಚಿತ್ತು. ಬಾಂಬೆ ಶಾಸನ ಪರಿಷತ್ತಿನ ಸದಸ್ಯರಾದ ಭೀಮ್‌ಭಾಯ್ ನಾಯಕ್ ಮತ್ತು ಶಿವದಾಸಿನಿ (ನಿವೃತ್ತ ಐ.ಸಿ.ಎಸ್. ಅಧಿಕಾರಿ ಮತ್ತು ರೆವೆನ್ಯೂ ಕಮಿಷನರ್) ರೈತರ ಪರವಾಗಿ ಮಾಡಿದ ಪ್ರಯತ್ನ ವಿಫಲವಾಯಿತು.[೧೧೧]

೧೯೨೭ರ ಸೆಪ್ಟೆಂಬರ್‌ನಲ್ಲಿ ಶಾಸನ ಪರಿಷತ್ತಿನ ಸದಸ್ಯ ದಾದುಭಾಯ್ ದೇಸಾಯಿಯವರ ಅಧ್ಯಕ್ಷತೆಯಲ್ಲಿ ಬಾರ್ಡೋಲಿಯಲ್ಲಿ ಒಂದು ರೈತರ ಸಮ್ಮೇಳನ ನಡೆಯಿತು. ಹಲವು ಸಾವಿರ ಮಂದಿ ರೈತರು ಭಾಗವಹಿಸಿದ ಆ ಸಭೆಯಲ್ಲಿ ಹೆಚ್ಚಿಸಲ್ಪಟ್ಟ ಕಂದಾಯವನ್ನು ಸರ್ಕಾರಕ್ಕೆ ಕೊಡಬಾರದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಆದರೆ ಸರ್ಕಾರವು ಶಾಸನ ಪರಿಷತ್ತಿನಲ್ಲಿ ವ್ಯಕ್ತವಾದ ಅಭಿಪ್ರಾಯಕ್ಕಾಗಲೀ ಅದರ ಹೊರಗಿನ ಜನಾಭಿಪ್ರಾಯಕ್ಕಾಗಲೀ ಮನ್ನಣೆ ಕೊಡದೆ ಹೆಚ್ಚಿಸಿದ ಕಂದಾಯವನ್ನು ಫೆಬ್ರುವರಿ ೫, ೧೯೨೮ನೆ ದಿನಾಂಕದಿಂದ ಪಾವತಿ ಆಗಬೇಕೆಂದು ಆದೇಶ ಹೊರಡಿಸಿತು. ಈ ಆದೇಶದಿಂದ ಬೇಗುದಿ ಮತ್ತು ನಿರಾಸೆಗೆ ಒಳಗಾದ ರೈತರು ತಮ್ಮ ಸಂಕಟದ ಪರಿಹಾರಕ್ಕೆ ವಲ್ಲಭಭಾಯ್ ಪಟೇಲರ ಮೊರೆಹೊಕ್ಕರು.

ಇಂತಹ ಒಂದು ಸಂದರ್ಭ ಬರಬಹುದೆಂದು ಆಲೋಚಿಸಿದ್ದ ವಲ್ಲಭಭಾಯ್ ರವರು ಅದಕ್ಕಾಗಿ ಕೆಲವು ಸಿದ್ಧತೆಗಳನ್ನು ಮಾಡಿಕೊಂಡಿದ್ದರು. ಅವರು, ಆ ತಾಲ್ಲೂಕಿನ ಸಾರ್‌ಬೋನ್, ವೆಂಕನರ್, ವರದ್ ಮತ್ತು ಬಾರ್ಡೋಲಿಯಲ್ಲಿ

ಸ್ಥಾಪಿತವಾಗಿದ್ದ ನಾಲ್ಕು ಆಶ್ರಮಗಳ ಒಕ್ಕೂಟಕ್ಕೆ ಅಧ್ಯಕ್ಷರಾಗಿರಲು ಒಪ್ಪಿದ್ದರು. ಗಾಂಧೀಜಿ ಮತ್ತು ವಲ್ಲಭಭಾಯ್‌ರವರ ಸಹಚರರು ಆ ನಾಲ್ಕು ಆಶ್ರಮಗಳ ಮೂಲಕ ಹಳ್ಳಿಯವರೊಡನೆ ತಮ್ಮ ಸಂಬಂಧವನ್ನು ಬಲಪಡಿಸಿಕೊಂಡಿದ್ದರು. ಅವರು ಎಲ್ಲ ಜಾತಿಯವರಿಗೂ ನೂಲು ತೆಗೆಯುವಿಕೆ ಮತ್ತು ನೆಯ್ಗೆಯನ್ನು ಕಲಿಸುತ್ತಿದ್ದರು, ಹಿಂದುಳಿದವರು ಮತ್ತು ಗುಡ್ಡಗಾಡು ಜನರಿಗೆ ಓದಿ ಬರೆಯುವುದನ್ನು ಕಲಿಸುತ್ತಿದ್ದರು ಮತ್ತು ಕುಡಿತದ ದುಶ್ಚಟದಿಂದ ಅವರನ್ನು ರಕ್ಷಿಸುತ್ತಿದ್ದರು. ಸರ್ಕಾರದ ವಿರುದ್ಧದ ಹೋರಾಟಕ್ಕೆ ಈ ಸಂಬಂಧವನ್ನು ಒಂದಲ್ಲ ಒಂದು ದಿವಸ ಉಪಯೋಗಿಸಿಕೊಳ್ಳಬಹುದೆಂದು ವಲ್ಲಭಭಾಯ್ ಆಲೋಚಿಸಿದ್ದರು.[೧೧೨] ಆ ಸಂದರ್ಭ ಈಗ ಬಂದಿತ್ತು.

ಸೂರತ್ ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ದಯಾಲ್ಜಿಭಾಯ್ ಪಟೇಲ್, ಹಿಂದೆ ೧೯೧೩ರಲ್ಲಿ ದಕ್ಷಿಣ ಆಫ್ರಿಕದಲ್ಲಿ ಗಾಂಧೀಜಿಯೊಡನೆ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದ ಮತ್ತು ಈಗ ೧೯೨೮ರಲ್ಲಿ ಸ್ವರಾಜ್ ಆಶ್ರಮದಲ್ಲಿ ಕಾರ್ಯದರ್ಶಿಯಾಗಿದ್ದ ಕುಶಾಲ್‌ಭಾಯ್, ಮೊರಾರ್ಜಿ ಪಟೇಲ್ ಮತ್ತು ಇತರ ಅನೇಕರು ವಲ್ಲಭಭಾಯ್ ಪಟೇಲರನ್ನು ಭೇಟಿಯಾಗಿ ರೈತರ ಹೋರಾಟದ ನಾಯಕತ್ವವನ್ನು ವಹಿಸಬೇಕೆಂದು ಕೋರಿದರು. ಆದರೆ ಹೋರಾಟಕ್ಕೆ ಬಾರ್ಡೋಲಿಯ ಜನರು ಸಿದ್ಧರಾಗಿದ್ದಾರೆ ಅನ್ನುವುದರ ಬಗೆಗೆ ವಲ್ಲಭಭಾಯ್‌ಗೆ ಖಚಿತತೆ ಇರಲಿಲ್ಲ. ಅದರ ಜೊತೆಗೆ ಅವರು ಆಗ ಅಹಮದಾಬಾದ್ ಪುರಸಭೆಯ ಅಧ್ಯಕ್ಷ ಮತ್ತು ಗುಜರಾತ್ ಪ್ರದೇಶ್ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿ ಭಾರಿ ಮಳೆ ಮತ್ತು ಪ್ರವಾಹದ ಸಂತ್ರಸ್ತರ ನೆರವು ಮತ್ತು ಪುನರ್ವಸತಿ ಕಾರ್ಯದಲ್ಲಿ ಮುಳುಗಿದ್ದರು. ಆ ಕಾರ್ಯದಲ್ಲಿ ಸರ್ಕಾರಿ ಅಧಿಕಾರಿಗಳೂ ಸಹ ಅವರ ಜೊತೆ ಕೈಜೋಡಿಸಿದ್ದರು. ಅದರಿಂದ ಪಟೇಲರು ಬಾರ್ಡೋಲಿ ರೈತರ ಹೋರಾಟದ ನಾಯಕತ್ವಕ್ಕೆ ಒಪ್ಪಲಿಲ್ಲ.

ಎರಡು ತಿಂಗಳ ನಂತರ ಬಾರ್ಡೋಲಿಯ ಮತ್ತೊಂದು ತಂಡ ಪಟೇಲರನ್ನು ಭೇಟಿ ಮಾಡಿತು. ಆ ತಂಡದಲ್ಲಿ ಮೋಹನ್‌ಲಾಲ್ ಪಾಂಡ್ಯ, ಕುಶಾಲ್‌ಭಾಯ್, ಕಲ್ಯಾಣ್‌ಜಿ ಕುವರ್‌ಜಿ ಮೊದಲಾದವರು ಇದ್ದರು. ಅವರು ವಲ್ಲಭಭಾಯ್‌ರವರನ್ನು ಅಹಮದಾಬಾದ್‌ನಲ್ಲಿ ಭೇಟಿ ಮಾಡಿ, 'ಬಾರ್ಡೋಲಿಯ ಜನ ಸಂಪೂರ್ಣವಾಗಿ ಸಿದ್ಧವಾಗಿದ್ದಾರೆ. ನೀವು ಹೋರಾಟದ ನಾಯಕತ್ವವನ್ನು ವಹಿಸಬೇಕು' ಎಂದು ಮನವಿ ಮಾಡಿದರು. ಅವರ ಮಾತು ಪಟೇಲರ ಮನಸ್ಸಿಗೆ ನಾಟಿತು. ಆದರೆ ಪ್ರವಾಹ ಪರಿಹಾರಕ್ಕೆ ಒಂದು ಕೋಟಿ ರೂಪಾಯಿಗಳನ್ನು ಬೊಂಬಾಯಿಯ ಗೌರ್ನರ್ ಮಂಜೂರು ಮಾಡಿದ್ದಾರೆ ಎಂಬ ಸುದ್ದಿ ಅಂದು ಬೆಳಗ್ಗೆ ಪಟೇಲರಿಗೆ

ಬಂದಿತ್ತು. ಅದನ್ನು ಕಳೆದುಕೊಳ್ಳಲು ಅವರು ಇಷ್ಟಪಡಲಿಲ್ಲ. ಅವರು ತಮ್ಮನ್ನು ಭೇಟಿಯಾದವರಿಗೆ, "ನೀವು ಬಾರ್ಡೋಲಿಗೆ ವಾಪಸ್ಸು ಹೋಗಿ ಹೆಚ್ಚಿದ ಕಂದಾಯ ಮಾತ್ರವಲ್ಲದೆ ಪೂರ್ತಿ ಕಂದಾಯವನ್ನು ಪಾವತಿಸದೆ ಇರಲು ರೈತರು ಸಿದ್ಧವಿದ್ದಾರೆಯೆ ಮತ್ತು ಮುಂದೆ ಬರಬಹುದಾದ ಘೋರ ಪರಿಣಾಮಗಳನ್ನು ಎದುರಿಸಲು ಅವರು ಸಿದ್ಧವಿದ್ದಾರೆಯೆ ಎನ್ನುವುದನ್ನು ತಿಳಿದು ಬನ್ನಿ. ಅವರು ಸಿದ್ಧವಿದ್ದರೆ ನಾನು ಬರುತ್ತೇನೆ. ತಾಲ್ಲೂಕಿನಲ್ಲಿ ಎಲ್ಲಾ ಕಡೆಗೂ ಹೋಗಿ ಜನರು ಏನು ಹೇಳುತ್ತಾರೆ ಮತ್ತು ಎಷ್ಟು ಜನರು ಸಿದ್ಧವಾಗಿದ್ದಾರೆ ಎಂಬುದನ್ನು ತಿಳಿದುಬನ್ನಿ," ಎಂದು ಹೇಳಿದರು. ಪಾಂಡ್ಯಾರವರು ಅದಕ್ಕೆ ಒಪ್ಪಿ 'ಗುಜರಾತ್ ಪ್ರದೇಶ್ ಕಾಂಗ್ರೆಸ್ ಸಮಿತಿಯನ್ನು ಹೋರಾಟದಲ್ಲಿ ಭಾಗಿ ಮಾಡಬೇಕು' ಎಂದು ಸಲಹೆ ಮಾಡಿದರು. ಆದರೆ ಆ ಸಲಹೆಯನ್ನು ಪಟೇಲರು ನಿರಾಕರಿಸಿದರು. ಏಕೆಂದರೆ ಪ್ರವಾಹ ಪರಿಹಾರಕ್ಕೆ ಸರ್ಕಾರ ಮಂಜೂರು ಮಾಡಿದ್ದ ಒಂದು ಕೋಟಿ ರೂಪಾಯಿಗಳನ್ನು ಕಳೆದುಕೊಳ್ಳಲು ಅವರು ಇಷ್ಟ ಪಡಲಿಲ್ಲ.

ಮೆಹ್ತ ಸಹೋದರರು ಎಂದು ಕರೆಯಲ್ಪಡುತ್ತಿದ್ದ ಕುನ್‌ವರ್ಜಿ ಮೆಹ್ತ ಮತ್ತು ಕಲ್ಯಾಣ್‌ಜಿ ಮೆಹ್ತ, ಕುಶಾಲ್‌ಭಾಯ್ ಪಟೇಲ್ ಮತ್ತು ಕೇಶವ್‌ಜಿ ಗಣೇಶ್‌ಜಿ (ಅವರನ್ನು ನಾಲ್ವರು 'ಕೆ' ಎಂದು ಕರೆಯುತ್ತಿದ್ದರು) ೬೦ ಹಳ್ಳಿಗಳಿಗೆ ಭೇಟಿ ನೀಡಿ ಪರಿವೀಕ್ಷಣೆ ನಡೆಸಿ ರೈತರ ಅಭಿಪ್ರಾಯವನ್ನು ಸಂಗ್ರಹಿಸಿದರು. ಅವರು ಕಂಡು ಹಿಡಿದ ವಿಷಯ ಪಾಂಡ್ಯರವರ ಅಭಿಪ್ರಾಯವನ್ನು ಪುಷ್ಟೀಕರಿಸಿತು. ನಂತರ ನಾಲ್ವರು 'ಕೆ', ಮೋಹನ್‌ಲಾಲ್ ಪಾಂಡ್ಯ, ದರ್ಬಾರ್ ಗೋಪಾಲ್ ದಾಸ್ ಮತ್ತು ರವಿಶಂಕರ್‌ರವರು ವಲ್ಲಭಭಾಯ್‌ರವರನ್ನು ಭೇಟಿ ಮಾಡಿ, ವರದಿಯನ್ನು ಸಲ್ಲಿಸಿದರು. ಸತ್ಯಾಗ್ರಹದ ನಾಯಕತ್ವವನ್ನು ವಲ್ಲಭಭಾಯ್ ವಹಿಸಿದರೆ ತಾವೂ ಸಹ ಅದರಲ್ಲಿ ಭಾಗಿಯಾಗುವುದಾಗಿ ಪಾಂಡ್ಯ, ಗೋಪಾಲ್ ದಾಸ್ ಮತ್ತು ರವಿಶಂಕರ್ ತಿಳಿಸಿದರು. ಅವರೆಲ್ಲರು ಪಟೇಲರ ಹಿಂದಿನ ಹೋರಾಟಗಳಲ್ಲಿ ಭುಜಕ್ಕೆ ಭುಜ ಕೊಟ್ಟು ಹೋರಾಡಿದವರು. ಅವರ ಆಶ್ವಾಸನೆ ಮತ್ತು ರೈತರ ದೃಢ ನಿಶ್ಚಯ ಪಟೇಲರ ತೀರ್ಮಾನಕ್ಕೆ ದಾರಿ ಮಾಡಿದುವು. ಇನ್ನು ಉಳಿದದ್ದು ಗಾಂಧೀಜಿಯ ಒಪ್ಪಿಗೆ. ಪಟೇಲರು ಆ ಏಳು ಮಂದಿಗೆ ಹೇಳಿದರು, "ನೀವು ಹೋಗಿ ಬಾಪುವನ್ನು ನೋಡಿ. ನಾನು ನಿಮ್ಮನ್ನು ಹಿಂಬಾಲಿಸುತ್ತೇನೆ."

ಅವರು ಆಶ್ರಮಕ್ಕೆ ಹೋಗಿ ಗಾಂಧೀಜಿಯನ್ನು ಭೇಟಿ ಮಾಡಿ ಎಲ್ಲವನ್ನು ವಿವರಿಸಿದರು. ದೀರ್ಘ ಚರ್ಚೆಯ ನಂತರ ಗಾಂಧೀಜಿ ಕೇಳಿದರು, "ವಲ್ಲಭಭಾಯ್ ಮತ್ತು ಇತರ ಕಾರ್ಯಕರ್ತರ ದಸ್ತಗಿರಿಯಾದ ಮೇಲೂ ರೈತರು ದೃಢವಾಗಿ ನಿಲ್ಲುವರೆ?" "ಅದನ್ನು ನಾನು ಹೇಳಲಾರೆ," ಎಂದರು ಕಲ್ಯಾಣ್‌ಜಿ. ಅಷ್ಟು ಹೊತ್ತಿಗೆ

ಪಟೇಲರು ಅಲ್ಲಿಗೆ ಬಂದರು. ಗಾಂಧೀಜಿ ಕೇಳಿದರು, "ಆದರೆ ವಲ್ಲಭಭಾಯ್ ಏನು ಹೇಳುತ್ತಾರೆ?" "ನಾನು ಈ ವಿಷಯವನ್ನು ಪರಿಶೀಲಿಸಿದ್ದೇನೆ. ರೈತರ ಬೇಡಿಕೆ ನ್ಯಾಯಯುತವಾಗಿದೆ ಅನ್ನುವುದರಲ್ಲಿ ನನಗೆ ಅನುಮಾನವಿಲ್ಲ," ಎಂದರು ವಲ್ಲಭಭಾಯ್. "ಸರಿ, ಹಾಗಾದರೆ, ಪರಿಗಣಿಸಬೇಕಾದದ್ದು ಇನ್ನು ಏನೂ ಇಲ್ಲ. ಗುಜರಾತ್‌ಗೆ ಜಯವಾಗಲಿ," ಎಂದರು ಗಾಂಧೀಜಿ. ಹೀಗೆ ನಾಯಕರು ದಸ್ತಗಿರಿಯಾದ ಮೇಲೆ ರೈತರ ಸ್ಥೈರ್ಯ ದೃಢವಾಗಿರುವುದರ ಬಗೆಗೆ ಅನುಮಾನವನ್ನು ಕಲ್ಯಾಣ್‌ಜಿ ವ್ಯಕ್ತ ಪಡಿಸಿದರೂ ಸಹ, ಸತ್ಯಾಗ್ರಹವನ್ನು ನಡೆಸಲು ಗಾಂಧೀಜಿ ಹಸಿರು ನಿಶಾನೆ ತೋರಿದರು.[೧೧೩]

ವಲ್ಲಭಭಾಯ್‌ರವರು ಸ್ವತಃ ಪರೀಕ್ಷಿಸದೆ ಅನ್ಯರ ಅಭಿಪ್ರಾಯದ ಮೇಲೆ ತೀರ್ಮಾನಿಸುವವರಲ್ಲ. ಅವರು ಫೆಬ್ರುವರಿ ೪ರಂದು, ಅಂದರೆ ಹೆಚ್ಚುವರಿ ಕಂದಾಯ ಪಾವತಿ ಆರಂಭವಾಗುವ ಹಿಂದಿನ ದಿನ, ಬಾರ್ಡೋಲಿಗೆ ಹೋಗಿ ಅಲ್ಲಿಯ ಆಶ್ರಮದಲ್ಲಿ ೭೯ ಹಳ್ಳಿಗಳ ಪ್ರತಿನಿಧಿಗಳೊಡನೆ, ನಾಲ್ಕು ಗೋಡೆಗಳ ನಡುವೆ, ಖಾಸಗಿ ಸಭೆಯನ್ನು ನಡೆಸಿದರು. ಅಲ್ಲಿ ಸಮಾಧಾನವಾದ ಮೇಲೆ ಸುಮಾರು ೧೦,೦೦೦ ರೈತರು ಸೇರಿದ್ದ ಬೃಹತ್ ಸಭೆಯನ್ನು ಉದ್ದೇಶಿಸಿ ಭಾಷಣ ಮಾಡಿದರು. ಅವರೆಂದರು:

> "ಅಪಾಯಗಳನ್ನು ಎದುರಿಸಲು ಸಿದ್ಧವಾಗಿರುವ ಯಾವುದೇ ವ್ಯಕ್ತಿಯ ಬೆಂಬಲಕ್ಕೆ ನಿಲ್ಲಲು ನಾನು ಸಿದ್ಧ. ೧೯೨೧ರಲ್ಲಿ ನಾವು ಪರೀಕ್ಷೆಯ ಅಂಚಿನಲ್ಲಿದ್ದೆವು, ಆದರೆ ಅನಿರೀಕ್ಷಿತ ಸಂದರ್ಭಗಳು ಮಧ್ಯೆ ಪ್ರವೇಶಿಸಿದುವು. ನಾವು ನಮ್ಮ ಶಕ್ತಿಯನ್ನು ಪ್ರದರ್ಶಿಸುವ ಅವಕಾಶ ತಪ್ಪಿಹೋಯಿತು. ಈಗ ಕಾಲ ಸನ್ನಿಹಿತವಾಗಿದೆ. ನೀವು ನಿಜವಾಗಿಯೂ ಸಿದ್ಧವಾಗಿದ್ದೀರ?"

ರೈತರು ಆತುರದಲ್ಲಿ ತೀರ್ಮಾನ ಮಾಡದೆ ಯೋಚಿಸಿ ನಿರ್ಧಾರಕ್ಕೆ ಬರಲೆಂದು ಪಟೇಲರು ಅವರಿಗೆ ಏಳು ದಿನಗಳ ಅವಕಾಶವನ್ನು ನೀಡಿದರು. ಆ ಸಭೆಯ ನಂತರ ಅವರು ಪಕ್ಕದ ಒಂದು ಹಳ್ಳಿಗೆ ಹೋದರು. ಅಲ್ಲಿ ಇಬ್ಬರು ಮಹಿಳೆಯರನ್ನು, "ನಿಮ್ಮ ಗಂಡ ಕಂದಾಯವನ್ನು ಪಾವತಿಸಿದರೆ ಏನು ಮಾಡುತ್ತೀರಿ?" ಎಂದು ಪ್ರಶ್ನಿಸಿದರು. "ಅವರನ್ನು ಮನೆಗೆ ಸೇರಿಸುವುದಿಲ್ಲ", ಎಂದರವರು. "ನಿಮ್ಮ ಎಮ್ಮೆಗಳನ್ನು ಹೊಡೆದುಕೊಂಡು ಹೋದರೆ ಹೇಗೆ?" ಪಟೇಲರ ಮರು ಪ್ರಶ್ನೆ. "ನಾವು ಚಿಂತಿಸುವುದಿಲ್ಲ," ಅವರ ಉತ್ತರ. ಅಲ್ಲಿಗೆ ಪಟೇಲರ ಪರೀಕ್ಷೆ ಮುಗಿಯಿತು.

ಅವರು ಫೆಬ್ರುವರಿ ೫ರಂದು ಅಹಮದಾಬಾದ್‌ಗೆ ಹಿಂತಿರುಗಿದರು. ೬ನೇ ತಾರೀಖಿನಂದು ರೈತರಿಗೆ ಆಗಿರುವ ಘೋರ ಅನ್ಯಾಯವನ್ನು ಕುರಿತು ಗೌರ್ನರ್‌ಗೆ ಒಂದು ಪತ್ರವನ್ನು ಬರೆದು, ಕಂದಾಯದ ಹೆಚ್ಚಳದ ಬಗೆಗೆ ಒಂದು ನಿಸ್ಪಕ್ಷಪಾತ ನ್ಯಾಯಾಧಿಕರಣವನ್ನು ರಚಿಸಬೇಕೆಂದು ಆಗ್ರಹಿಸಿದರು. 'ನ್ಯಾಯಾಧಿಕರಣವನ್ನು ರಚಿಸದೆ ಹೋದರೆ ಕಂದಾಯವನ್ನು ಪಾವತಿಸಲು ನಿರಾಕರಿಸುವಂತೆ ಮತ್ತು ಅದರ ಪರಿಣಾಮಗಳನ್ನು ಶಾಂತವಾಗಿ ಮತ್ತು ಮೌನವಾಗಿ ಅನುಭವಿಸುವಂತೆ ತಾವು ರೈತರಿಗೆ ಹೇಳದೆ ಬೇರೆ ಮಾರ್ಗವೇ ಇಲ್ಲ,' ಎಂದು ಅವರು ತಮ್ಮ ಪತ್ರದಲ್ಲಿ ಬರೆದಿದ್ದರು. ಆವಶ್ಯಕ ಎಂದು ಗೌರ್ನರ್‌ರವರು ಭಾವಿಸಿದರೆ ತಾವು ಅವರ ಭೇಟಿಗೆ ಬರುವುದಾಗಿಯೂ ಪಟೇಲರು ತಮ್ಮ ಪತ್ರದಲ್ಲಿ ಬರೆದಿದ್ದರು. ಗೌರ್ನರ್‌ರವರು ಪಟೇಲರನ್ನು ಭೇಟಿಗೆ ಕರೆಯಲಿಲ್ಲ. ಅದಕ್ಕೆ ಬದಲಾಗಿ ಅವರ ಕಾರ್ಯದರ್ಶಿ ಪಟೇಲರಿಗೆ ಒಂದು ವಾಕ್ಯದ ಜವಾಬನ್ನು ಬರೆದು ಅವರ ಪತ್ರವನ್ನು ಕಂದಾಯ ಇಲಾಖೆಗೆ 'ಪರಿಗಣನೆ ಮತ್ತು ವಿಲೇವಾರಿಗಾಗಿ' ಕಳುಹಿಸಲಾಗಿದೆ ಎಂದು ತಿಳಿಸಿದನು. ಅಷ್ಟೇ ಅಲ್ಲದೆ ಹೆಚ್ಚಿಸಿದ ಕಂದಾಯದ ಮೊದಲನೆಯ ಕಂತನ್ನು ಪಾವತಿಸಲು ಫೆಬ್ರುವರಿ ೧೫ ಅಂತಿಮ ದಿನವೆಂದು ಸರ್ಕಾರವು ಪ್ರಕಟಿಸಿತು.

ಫೆಬ್ರುವರಿ ೧೨ ರಂದು ಪಟೇಲರು ಮತ್ತೆ ರೈತ ಪ್ರತಿನಿಧಿಗಳೊಡನೆ ಖಾಸಗಿ ಸಭೆಯನ್ನು ನಡೆಸಿದರು. ವಿವಿಧ ಹಳ್ಳಿಯ ಪ್ರತಿನಿಧಿಗಳು ತಮ್ಮ ತಮ್ಮ ಹಳ್ಳಿಯಲ್ಲಿ ಕಂದಾಯ ಪಾವತಿ ನಿರಾಕರಣ ಪ್ರತಿಜ್ಞೆಗೆ ಸಹಿ ಮಾಡಿರುವವರ ಸಂಖ್ಯೆಯ ವಿವರಗಳನ್ನು ನೀಡಿದರು. ಪಟೇಲರು, ಕಂದಾಯ ಪಾವತಿ ನಿರಾಕರಣೆಯ ತೀರ್ಮಾನವು ರೈತರದ್ದೇ ಹೊರತು ತಮ್ಮದಲ್ಲವೆಂದು ಆ ಪ್ರತಿನಿಧಿಗಳಿಗೆ ಸ್ಪಷ್ಟಪಡಿಸಿದರು. ಅವರೆಂದರು:

> ನೀವು ಪ್ರತಿಜ್ಞೆಯನ್ನು ಮಾಡುವುದಕ್ಕಿಂತ ಮುಂಚೆ ಎರೆಡೆರಡು ಬಾರಿ ಯೋಚಿಸಿ, ಎಂದು ನಾನು ಈಗಲೂ ಹೇಳುತ್ತಿದ್ದೇನೆ. ನಿಮ್ಮ ನಾಯಕನಾಗಿ ನನ್ನಂತಹ ಹೋರಾಟಗಾರ ಇದ್ದಾನೆಂಬ ಭಾವನೆಯಲ್ಲಿ ಆರಾಮವಾಗಿರಬೇಡಿ. ನನ್ನನ್ನು ಮರೆಯಿರಿ ಮತ್ತು ನನ್ನ ಜೊತೆಗಾರರನ್ನು ಮರೆಯಿರಿ. ನಿಮಗೆ ದಬ್ಬಾಳಿಕೆ ಮತ್ತು ಅನ್ಯಾಯವನ್ನು ವಿರೋಧಿಸಲೇಬೇಕೆನ್ನಿಸಿದರೆ ಹೋರಾಡಿ. ನೀವು ಶೋಚನೀಯವಾಗಿ ವಿಫಲರಾದರೆ ಅನೇಕ ವರ್ಷಗಳ ಕಾಲ ಮತ್ತೆ ಮೇಲೆ ಏಳಲಾರಿರಿ, ಯಶಸ್ವಿಯಾದರೆ ಸ್ವರಾಜ್ಯಕ್ಕೆ ಬುನಾದಿ ಹಾಕಲು ಬಹಳ ಕೆಲಸ ಮಾಡಿರುತ್ತೀರಿ. ಠರಾವನ್ನು ನೀವು

ಮಂಡಿಸಬೇಕು, ಅನುಮೋದಿಸಬೇಕು ಮತ್ತು ಬೆಂಬಲಿಸಬೇಕು. ಅದರ ಬಗೆಗೆ ನಾವು ಯಾರೂ ಮಾತನಾಡುವುದಿಲ್ಲ. ಅದು ನಿಮ್ಮ ಸ್ವತಂತ್ರ ಅಪೇಕ್ಷೆ ಮತ್ತು ಆಯ್ಕೆಯ ಅಭಿವ್ಯಕ್ತಿಯಾಗಿರುತ್ತದೆ.

ಪಟೇಲರ ಭಾಷಣದ ಇತರ ಅಂಶಗಳು:

ನಮಗೆ ಸಾಧ್ಯವಾದುದನ್ನೆಲ್ಲ ಮಾಡಿದ್ದೇವೆ. ಈಗ ಉಳಿದಿರುವುದು ಒಂದೇ ಒಂದು ದಾರಿ: ಬಲ ಪ್ರಯೋಗವನ್ನು ಬಲ ಪ್ರಯೋಗದಿಂದ ಎದುರಿಸುವುದು. ಸರ್ಕಾರಕ್ಕೆ ಅಧಿಕಾರದ ಎಲ್ಲಾ ಸಲಕರಣೆಗಳು ಇವೆ ಮತ್ತು ಸೈನ್ಯದ ಶಕ್ತಿ ಇದೆ. ನಿಮಗೆ ಸತ್ಯದ ಶಕ್ತಿ ಮತ್ತು ನೋವನ್ನು ಸಹಿಸುವ ಶಕ್ತಿ ಇದೆ. ಇವೆರಡು ಒಂದಕ್ಕೊಂದು ವಿರುದ್ಧದ ಶಕ್ತಿಗಳು. ಸರ್ಕಾರದ ನಿಲುವು ಅನ್ಯಾಯವಾದದ್ದು. ಅದನ್ನು ವಿರೋಧಿಸುವುದು ನಿಮ್ಮ ಕರ್ತವ್ಯ. ಸರ್ಕಾರ ಏನೇ ಮಾಡಲಿ, ಅದು ಎಷ್ಟೇ ಆಸ್ತಿಗಳನ್ನು ವಶಪಡಿಸಿಕೊಳ್ಳಲಿ, ಎಷ್ಟೇ ಜಮೀನುಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಿ ನೀವು ಒಂದು ಪೈಸೆಯನ್ನೂ ಪಾವತಿಸುವುದಿಲ್ಲ ಎಂದು ಮನಸ್ಸಿನಲ್ಲಿ ದೃಢ ನಿರ್ಧಾರ ಮಾಡಿದರೆ, ನೀವು ಪಾವತಿಸಲು ಇಷ್ಟ ಪಡದಿರುವ ಹೆಚ್ಚಿದ ಕಂದಾಯವನ್ನು ವಸೂಲಿ ಮಾಡಲು ಸರ್ಕಾರವು ಶಕ್ತವಾಗುವುದಿಲ್ಲ. ..... ಇದು ಬರೆ ಒಂದು ವರ್ಷಕ್ಕೆ ಒಂದು ಲಕ್ಷ ರೂಪಾಯಿ ಅಥವಾ ೩೦ ವರ್ಷಕ್ಕೆ ೩೦ ಲಕ್ಷ ರೂಪಾಯಿಗಳ ಹೆಚ್ಚಳದ ಪ್ರಶ್ನೆಯಲ್ಲ, ಸತ್ಯ ಮತ್ತು ಸುಳ್ಳಿನ ಪ್ರಶ್ನೆ – ನಿಮ್ಮ ಆತ್ಮ ಗೌರವದ ಪ್ರಶ್ನೆ.[೧೧೪]

ಬಾರ್ಡೋಲಿಯ ಹೋರಾಟವು ರೈತರ ಸಂಕಷ್ಟದ ಪರಿಹಾರಕ್ಕಾಗಿ ನಡೆಯುವ ಹೋರಾಟವಾಗಿತ್ತೇ ಹೊರತು ಸ್ವರಾಜ್ಯ ಸಂಪಾದನೆಗಾಗಿ ನಡೆಯುವ ಹೋರಾಟವಾಗಿರಲಿಲ್ಲ. ಆದರೂ, ಆ ಹೋರಾಟದ ಗೆಲುವು ಸ್ವರಾಜ್ಯದ ಹೋರಾಟಕ್ಕೆ ಹೆಚ್ಚಿನ ಶಕ್ತಿಯನ್ನು ನೀಡುತ್ತಿತ್ತು.

ಪಟೇಲರು, ಸರ್ಕಾರದ ಆದೇಶದ ವಿರುದ್ಧ ಹೋರಾಡುವುದರ ಪರಿಣಾಮಗಳ ಬಗೆಗೆ ರೈತರನ್ನು ಮತ್ತೊಮ್ಮೆ ಎಚ್ಚರಿಸಿದರು. ಅವರೆಂದರು:

ನೀವು ಏನು ಮಾಡುತ್ತೀರೋ ಅದನ್ನು ಪೂರ್ಣ ಕಣ್ಣು ತೆರೆದು, ದೇವರನ್ನು ಸಾಕ್ಷಿಮಾಡಿ, ಪರಿಣಾಮವನ್ನು ಪೂರ್ಣ

> ಆಲೋಚಿಸಿ, ಮಾಡಿ. ಸರ್ಕಾರವು ನಿಮ್ಮಲ್ಲಿಯ ಮುಂದಾಳುಗಳನ್ನು ಮೊದಲು ದಸ್ತಗಿರಿ ಮಾಡಬಹುದು. ಉದಾಹರಣೆಗಾಗಿ, ಈ ದಿನ ಯಾರು ಠರಾವನ್ನು ಮಂಡಿಸುತ್ತಾರೋ ಅವರ ಜಮೀನನ್ನು ಸರ್ಕಾರವು ಮೊದಲು ವಶಪಡಿಸಿಕೊಳ್ಳಬಹುದು. ಈ ಘಟನೆಗಳು ನಿಮ್ಮ ನಿರ್ಧಾರವನ್ನು ಅಲುಗಾಡಿಸಲಾರವು ಎಂದು ನಿಮಗೆ ಖಚಿತವಾಗಿದ್ದರೆ ಮಾತ್ರ ಹೋರಾಟವನ್ನು ಕೈಗೆತ್ತಿಕೊಳ್ಳಿ, ಒಳ್ಳೆಯ ಹೋರಾಟವನ್ನು ನಡೆಸಿ.

ಆಗ, ಒಬ್ಬ ರೈತನು ಎದ್ದು ನಿಂತು ಠರಾವನ್ನು ಮಂಡಿಸಿದನು ಮತ್ತು ಸರ್ಕಾರವು ಹೆಚ್ಚಿಸಿದ ಕಂದಾಯವನ್ನು ವಾಪಸ್ಸು ತೆಗೆದುಕೊಳ್ಳುವವರೆಗೆ ಅಥವಾ ನಿಸ್ಪಕ್ಷಪಾತ ನ್ಯಾಯಾಧಿಕರಣವನ್ನು ರಚಿಸುವವರೆಗೆ ಕಂದಾಯದ ಪಾವತಿಯನ್ನು ನಿರಾಕರಿಸುವಂತೆ ಎಲ್ಲರನ್ನು ಕೋರಿದನು. ಅನಂತರ ಅನೇಕ ಪಟಿದಾರರು, ಅನವಿಲ್ ಬ್ರಾಹ್ಮಣರು, ಬನಿಯರು, ಮುಸ್ಲಿಮರು ಮತ್ತು ಪಾರ್ಸಿಗಳು ಒಬ್ಬೊಬ್ಬರಾಗಿ ಎದ್ದು ನಿಂತು ಠರಾವಿಗೆ ಬೆಂಬಲವನ್ನು ಸೂಚಿಸಿದರು. ಯಾರೂ ಭಾಷಣ ಮಾಡಲಿಲ್ಲ ಆದರೆ ಒಂದು ಹಿಂದೂ ಶ್ಲೋಕ ಮತ್ತು ಕುರಾನಿನ ಉಲ್ಲೇಖವನ್ನು ಪಠಿಸಲಾಯಿತು. ಠರಾವು ಒಮ್ಮತದಿಂದ ಶಾಂತ ಸನ್ನಿವೇಶದಲ್ಲಿ ಅಂಗೀಕೃತವಾಯಿತು. [೧೧೫]

ಅಷ್ಟು ಹೊತ್ತಿಗೆ ಪಟೇಲರ ನೆಚ್ಚಿನ ಸಹಚರ ಪಾಂಡ್ಯರವರು ಬಾರ್ಡೋಲಿ ತಾಲ್ಲೂಕಿನಲ್ಲಿ ಸಂಚರಿಸಿ ತಮ್ಮ ಅನುಮಾನವನ್ನು ವ್ಯಕ್ತಪಡಿಸಿ ಪತ್ರ ಬರೆದಿದ್ದರು. ಅದು ಹೀಗಿತ್ತು:

> ಇಲ್ಲಿಯ ವಾತಾವರಣ ನನಗೆ ಅನುಮಾನ ಮತ್ತು ಆಶ್ಚರ್ಯವನ್ನು ಉಂಟುಮಾಡಿದೆ..... ಯಾವನೂ ಹೋರಾಟದ ಮನೋಭಾವದಲ್ಲಿ ಇದ್ದಂತೆ ಕಾಣುತ್ತಿಲ್ಲ..... ಮದುವೆಯ ಕಾಲದ ಚಟುವಟಿಕೆಗಳು ಭರ್ಜರಿಯಾಗಿ ನಡೆಯುತ್ತಿವೆ. ಸುಂದರ ಪೋಷಾಕು ಧರಿಸಿದ ಜನ ಗಾಡಿಗಳಲ್ಲಿ ಕುಳಿತು ಹಳ್ಳಿಯಿಂದ ಹಳ್ಳಿಗೆ ಪಯಣಿಸುತ್ತಿದ್ದಾರೆ..... ಬಲಿಷ್ಠ ಸರ್ಕಾರದ ವಿರುದ್ಧ ಸಮರಕ್ಕೆ ಹೊರಟಿರುವ ಜನರು ಇವರೇ?

ಪಾಂಡ್ಯನ ಈ ಅಭಿಪ್ರಾಯದಿಂದ ಪಟೇಲರು ವಿಚಲಿತರಾಗಲಿಲ್ಲ. ಠರಾವು ಅಂಗೀಕೃತವಾದ ಎರಡು ಘಂಟೆಗಳ ನಂತರ ಅವರು ಪಟಿದಾರರು ಹೆಚ್ಚು ಇರುವ ಗ್ರಾಮ ವೆಂಕನರ್‌ಗೆ ಹೋದರು. ಅಲ್ಲಿಯ ಜನರಿಗೆ, "ನಿಮ್ಮ ಮದುವೆಯ

ಸಮಾರಂಭಗಳನ್ನು ಬೇಗ ಮುಗಿಸಿ. ಬಲಿಷ್ಠ ಸರ್ಕಾರದ ವಿರುದ್ಧ ಸಮರಕ್ಕೆ ನಿಂತವರು ಇಂತಹ ಮನರಂಜನೆಯಲ್ಲಿ ಮುಳುಗಿದ್ದರೆ ಆಗದು," ಎಂದರು. ಅವರು ಅಲ್ಲಿಯ ರೈತರಿಗೆ, ಒಬ್ಬ ದಳಪತಿ ತನ್ನ ಸೈನಿಕರಿಗೆ ತರಬೇತಿ ನೀಡುವಂತೆ, ತರಬೇತಿ ನೀಡಿದರು. ರೈತರಿಗೆ ಅವರೆಂದರು, "ನಿಮ್ಮ ಮನೆಯ ಬಾಗಿಲುಗಳನ್ನು ಮುಚ್ಚಿ ಬೀಗ ಹಾಕಿ ಜಮೀನಿಗೆ ಹೋಗಿ. ಸಂಜೆಯಾದ ಮೇಲೆ ಹಿಂತಿರುಗಿ." ನಂತರ, "ನಿಮ್ಮ ಅತ್ಯಂತ ಕೆಟ್ಟ ಶತ್ರುವಿನೊಡನೆಯೂ ಸ್ನೇಹ ಬೆಳೆಸಿ. ಆ ತರಹ ಮಾತ್ರ ಐಕ್ಯತೆಯನ್ನು ಪ್ರದರ್ಶಿಸಲು ಸಾಧ್ಯ," ಎಂದರು. "ಗಂಡಸರಂತೆ ಹೆಂಗಸರೂ ಸಹ ಸಭೆಗಳಲ್ಲಿ ಭಾಗವಹಿಸಲಿ" ಎಂದರು. ಏಕೆಂದರೆ ಅವರ ರಾಸುಗಳನ್ನು ಅಧಿಕಾರಿಗಳು ವಶಪಡಿಸಿಕೊಳ್ಳಲು ಬಂದಾಗ ಅಥವಾ ವಶಪಡಿಸಿಕೊಂಡಾಗ ಹೇಗೆ ವರ್ತಿಸಬೇಕು ಎಂಬುದು ಅವರಿಗೆ ತಿಳಿದಿರಬೇಕು. ಅಂತಿಮವಾಗಿ ಪಟೇಲರು ಹೇಳಿದರು:

> ನಿಮ್ಮಲ್ಲಿ ಕೆಲವರಿಗೆ, ಸರ್ಕಾರವು ನಿಮ್ಮ ಜಮೀನನ್ನು ವಶಪಡಿಸಿಕೊಳ್ಳಬಹುದು, ಎನ್ನುವ ಭಯ ಇದೆ ಎನ್ನುವುದು ನನಗೆ ಗೊತ್ತು. ..... ಅವರೇನು ಜಮೀನನ್ನು ಇಂಗ್ಲೆಂಡಿಗೆ ಹೊತ್ತುಕೊಂಡು ಹೋಗುವರೆ? ಅತಿ ಹೆಚ್ಚಿನ ಕೆಟ್ಟದ್ದು ಅಂದರೆ ಜಮೀನು ಸರ್ಕಾರಿ ದಾಖಲೆಗಳಲ್ಲಿ ವರ್ಗಾವಣೆ ಆಗಬಹುದು, ಅಷ್ಟೆ. ಆದರೆ ನೀವು ಒಟ್ಟಾಗಿದ್ದರೆ ಆ ಜಮೀನುಗಳ ಬಳಿಗೆ ಆರಂಬ ಮಾಡಲು ಬೇರೆ ಯಾರೇ ಬರುವುದನ್ನು ತಡೆಯಬಹುದು. ಸರ್ಕಾರದ ಬಳಿ ಒಂದು ಹಳ್ಳಿಗೆ ಒಬ್ಬ ತಲಾತಿ ಮತ್ತು ಒಬ್ಬ ಮುಖ್ಯಸ್ಥ ಇರಬಹುದು. ಆದರೆ ನಮ್ಮ ಬಳಿ ಎಷ್ಟೊಂದು ಜನ ವಯಸ್ಕರಿದ್ದಾರೆ.[೧೧೬]

ಪಟೇಲರು ಬಾರ್ಡೋಲಿ ಸತ್ಯಾಗ್ರಹವನ್ನು ರಕ್ಷಣಾ ದಳದ ಮಾದರಿಯಲ್ಲಿ ರೂಪಿಸಿದರು. ಸ್ವತಃ ಅವರೇ ಸೇನಾಪತಿ. ನೇರವಾಗಿ ಅವರ ಕೈ ಕೆಳಗೆ ವಿಭಾಪತಿಗಳು, ಪ್ರತಿ ವಿಭಾಪತಿಯ ಕೆಳಗೆ ಸೈನಿಕರು. ಸ್ವಯಂಸೇವಕರೇ ಸೈನಿಕರು. ರಣರಂಗ ೯೨ ಹಳ್ಳಿಗಳನ್ನು ಒಳಗೊಂಡಿತ್ತು. ದೂರ, ಅತಿದೂರದ ಸ್ಥಳಗಳಿಂದಲೂ ಸಮಾಚಾರವನ್ನು ವೇಗವಾಗಿ ತರುವುದಕ್ಕೆ ಕುದುರೆ ಸವಾರರಿದ್ದರು. ಸಮರದಲ್ಲಿ ಸುಮಾರು ೮೭,೦೦೦ ಮಂದಿ ರೈತರು ಭಾಗಿಗಳಾಗಿದ್ದರು. ಇಡೀ ಪ್ರದೇಶವನ್ನು ೧೮ ವಲಯಗಳಾಗಿ ವಿಭಾಗಿಸಲಾಗಿತ್ತು. ಅವುಗಳ ಕೇಂದ್ರ ಕಾರ್ಯಸ್ಥಾನ ಬಾರ್ಡೋಲಿ. ಅಲ್ಲಿ ಕಲ್ಯಾಣ್‌ಜಿ ಮೆಹ್ತರವರು ಪಟೇಲರ ಕಾರ್ಯಕ್ರಮಗಳನ್ನು

ಯೋಜಿಸುತ್ತಿದ್ದರು. ಮಣಿಲಾಲ್ ಕೊಥಾರಿಯವರು ಒಬ್ಬ ರಾಯಭಾರಿಯ ತರಹ ಭಾರತದಲ್ಲಿ ಸುತ್ತಿ ತೇಜ್ ಬಹದ್ದೂರ್ ಸಪ್ರು, ಎಂ.ಆರ್. ಜಯಕರ್, ರೈಟ್ ಆನರಬಲ್ ಶ್ರೀನಿವಾಸ ಶಾಸ್ತ್ರಿ ಮುಂತಾದ ರಾಷ್ಟ್ರ ಪ್ರಮುಖರನ್ನು ಭೇಟಿ ಮಾಡಿ ಅವರಿಗೆ ಸತ್ಯಾಗ್ರಹದ ವಿವರಗಳನ್ನು ನೀಡುತ್ತಿದ್ದರು. ಜಗತ್‌ರಾಮ್ 'ಪತ್ರಿಕಾಪತಿ'. ಅವರು 'ಸತ್ಯಾಗ್ರಹ ಪ್ರಕಾಶನ್ ವಿಭಾಗ್' ಎಂದು ಕರೆಯಲ್ಪಟ್ಟ ಪ್ರಕಾಶನ ವಿಭಾಗದ ಮುಖ್ಯಸ್ಥ ಮತ್ತು ಎಲ್ಲಾ ಪ್ರಕಟಣೆಗಳ ಸಂಪಾದಕ. ಆ ವಿಭಾಗದ ಮುಖ್ಯ ಪ್ರಕಟಣೆ 'ಲರತ್–ಕಿ–ಪತ್ರಿಕಾ' (ಸಮರ ಸುದ್ದಿಯ ಪತ್ರಿಕೆ). ಆ ಪತ್ರಿಕೆಯು ಸತ್ಯಾಗ್ರಹದ ಸುದ್ದಿಗಳು ಮತ್ತು ಪಟೇಲರ ಸ್ಫೂರ್ತಿ ಪ್ರಚೋದಕ ಭಾಷಣಗಳನ್ನು ಒಳಗೊಂಡಿರುತ್ತಿತ್ತು. ಪ್ರತಿ ದಿನ ಪ್ರತಿ ಹಳ್ಳಿಯಿಂದ ಸುದ್ದಿಯು ಕರಾರುವಕ್ಕಾಗಿ ಸೂರತ್ ಅನ್ನು ಮಧ್ಯರಾತ್ರಿಗೆ ತಲುಪುವಂತೆ ವಲ್ಲಭಭಾಯ್ ಏರ್ಪಡಿಸಿದ್ದರು. ಅದರಿಂದ ಯಾವುದಾದರು ಹಳ್ಳಿಯಲ್ಲಿ ಯಾರಾದರು ಪ್ರತಿಜ್ಞಾ ಭಂಗ ಮಾಡಿ ಕಂದಾಯ ಪಾವತಿ ಮಾಡಿದರೆ ಅದು ಇಡೀ ತಾಲ್ಲೂಕಿಗೆ ಗೊತ್ತಾಗಿಬಿಡುತ್ತಿತ್ತು. ಸತ್ಯಾಗ್ರಹ ಸುದ್ದಿ ಮತ್ತು ಪಟೇಲರ ಭಾಷಣಗಳನ್ನು ಒಳಗೊಂಡ ಬುಲೆಟಿನ್ ಅಥವಾ ಪತ್ರಿಕೆಗಳನ್ನು ಸೂರತ್‌ನಲ್ಲಿ ಮುದ್ರಿಸಿ, ಬೆಳಗಿನ ತಪ್ಪಿ ವ್ಯಾಲಿ ರೈಲ್ವೆ ಮೂಲಕ ಕಳುಹಿಸಲಾಗುತ್ತಿತ್ತು. ವಿವಿಧ ರೈಲ್ವೆ ನಿಲ್ದಾಣಗಳಲ್ಲಿ ಸ್ವಯಂಸೇವಕರು ಆ ಪತ್ರಿಕೆಗಳ ಕಟ್ಟುಗಳನ್ನು ಪಡೆದುಕೊಂಡು ಕಾತುರದಿಂದ ಕಾಯುತ್ತಿರುವ ರೈತರಿಗೆ ಶೀಘ್ರವಾಗಿ ತಲುಪಿಸುತ್ತಿದ್ದರು. ಆರಂಭದಲ್ಲಿ ೫೦೦೦ ಪ್ರತಿಗಳು ಮುದ್ರಿತವಾಗುತ್ತಿದ್ದುದು ಕ್ರಮೇಣ ೧೫,೦೦೦ ಪ್ರತಿಗಳಿಗೆ ಏರಿತು. ಆ ಪತ್ರಿಕೆಗಳು ಗುಜರಾತ್ ಮತ್ತು ಹೊರಗಿನ ಇಂಗ್ಲಿಷ್ ಪತ್ರಿಕೆಗಳಿಗೆ ಸುದ್ದಿಯನ್ನು ಒದಗಿಸುತ್ತಿದ್ದುವು.

ರೈತರ ಉತ್ಸಾಹವು ತಗ್ಗದಂತೆ ಇರುವುದಕ್ಕಾಗಿ ಪಟೇಲರು ಭಜನ ಮಂಡಳಿಗಳನ್ನು ವ್ಯವಸ್ಥೆಗೊಳಿಸಿದ್ದರು. ಈ ಮಂಡಳಿಗಳು ರಾತ್ರಿಯ ವೇಳೆ ಹಳ್ಳಿಗಳಲ್ಲಿ ಸಂಚರಿಸಿ ತಮ್ಮ ರಾಷ್ಟ್ರೀಯ ಮತ್ತು ಧಾರ್ಮಿಕ ಹಾಡುಗಳಿಂದ ಸ್ಫೂರ್ತಿದಾಯಕ ಕಥೆಗಳಿಂದ ಮತ್ತು ವ್ಯಂಗ್ಯ ನುಡಿಗಳಿಂದ ಜನರನ್ನು ರಂಜಿಸುವುದರ ಜೊತೆಗೆ ಉತ್ತೇಜನವನ್ನು ನೀಡುತ್ತಿದ್ದರು. ಇದರ ಜೊತೆಗೆ, ಮಹಿಳಾ ಘಟಕದವರೂ ಸಹ ಹಳ್ಳಿಗಳಲ್ಲಿ ಸಂಚರಿಸಿ ಮಹಿಳೆಯರನ್ನು ಪ್ರೇರೇಪಿಸುತ್ತಿದ್ದರು.[೧೧೭]

ಸತ್ಯಾಗ್ರಹವು ಫೆಬ್ರುವರಿ ೧೨ರಿಂದಲೇ ವ್ಯವಸ್ಥಿತವಾಗಿ ಆರಂಭವಾಯಿತು. ಅಂದಿನಿಂದಲೇ ನುರಿತ ಸ್ವಯಂಸೇವಕರು ವಿವಿಧ ಹಳ್ಳಿಗಳಿಗೆ ಹೋಗಿ ಶಿಬಿರಗಳನ್ನು ತೆರೆದರು. ಅವರೆಲ್ಲ ಪಟೇಲರ ಅಭಿಮಾನಿ ಗಳು. ಸದ್ಬಾನ್ ಶಿಬಿರದ ರವಿಶಂಕರ್ ಮಹರಾಜ್, ಬಾಮ್ನಿ ಶಿಬಿರದ ದರ್ಬಾರ್ ಸಾಹೇಬ್ ಗೋಪಾಲ್‌ದಾಸ್, ವರಾದ್ ಶಿಬಿರದ ಮೋಹನ್‌ಲಾಲ್ ಪಾಂಡ್ಯ, ವೇದ್ಚಿ ಶಿಬಿರದ ಡಾ॥ ಚುನಿಲಾಲ್ ಮೆಹ್ತ

ಹಾಗೂ ಅವರ ಪತ್ನಿ, ಮಧಿ ಶಿಬಿರದ ಮಕನ್ಜಿ ದೇಸಾಯಿ, ವಲೋದ್ ಶಿಬಿರದ ಡಾ॥ ಚಂದುಲಾಲ್, ಬಾಲ್ದ ಶಿಬಿರದ ಅಂಬಾಲಾಲ್ ಪಟೇಲ್ ಮತ್ತು ಬುಹಾರಿ ಶಿಬಿರದ ನರನ್‌ಭಾಯ್ ಆ ಸ್ವಯಂಸೇವಕರಲ್ಲಿದ್ದವರು. ಅಲ್ಲದೆ ಪಟೇಲರ ಮಗಳು ಮಣಿಬೆನ್ ಪಟೇಲ್, ದರ್ಬಾರ್ ಗೋಪಾಲ್‌ದಾಸ್‌ರವರ ಪತ್ನಿ ಭಕ್ತಿಬಾ, ಮುಂದೆ ಗುಜರಾತಿನ ಮುಖ್ಯಮಂತ್ರಿಯಾದ ಬಲವಂತರಾಯ್ ಮೆಹ್ತ, ಬರೋಡದ ಮಾಜಿ ಸ್ಯಾನಿಟರಿ ಕಮಿಷನರ್ ಡಾ॥ ಸುಮಂತ್ ಮತ್ತು ಅವರ ಪತ್ನಿ ಶಾರದ ಬೆಹೆನ್, ಬೊಂಬಾಯಿಯ ಒಂದು ಶ್ರೀಮಂತ ಪಾರ್ಸಿ ಕುಟುಂಬದ ಮಹಿಳೆ ಮಿಥು ಬೆಹೆನ್ ಪೆಟಿಟ್‌ರವರು ಸಹ ಸ್ವಯಂಸೇವಕರಾಗಿ ಅದ್ಭುತ ಸೇವೆ ಸಲ್ಲಿಸಿದರು. ೭೩ ವರ್ಷದ ಅಬ್ಬಾಸ್ ತ್ಯಾಬ್ಜಿ ಮತ್ತು ದಕ್ಷಿಣ ಆಫ್ರಿಕದಲ್ಲಿ ಗಾಂಧೀಜಿ ಒಡನೆ ಇದ್ದ ಇಮಾಮ್ ಸಾಹೇಬ್ ಅಬ್ದುಲ್ ಖಾದರ್ ಬಾವಾಜಿರ್‌ರವರು ಬೊಂಬಾಯಿಯಿಂದ ಬಾರ್ಡೋಲಿಗೆ ಬಂದು ಅಲ್ಲಿಯ ಮುಸ್ಲಿಮರನ್ನು ಪ್ರೋತ್ಸಾಹಿಸುವ ಕೆಲಸವನ್ನು ಮಾಡಿದರು.[೧೧೮]

ಭಾಷಣಗಳನ್ನು ಪಟೇಲರು ಮಾತ್ರ ಮಾಡುತ್ತಿದ್ದರು ಮತ್ತು ಬೇರೆಯವರು ಮಾಡುತ್ತಿರಲಿಲ್ಲ. ಏಕೆಂದರೆ ಯಾರಾದರು ಆಡಿದ ಎಚ್ಚರಿಕೆ ತಪ್ಪಿದ ಮಾತಿನಿಂದ ಸರ್ಕಾರವು ಮುಕ್ತ ಭಾಷಣವನ್ನು ನಿಷೇಧಿಸುವ ಸಾಧ್ಯತೆ ಇತ್ತು. ಪತ್ರಿಕೆಯ ಸುಮಾರು ೧೫,೦೦೦ ಪ್ರತಿಗಳಿಗೆ ಬೇಡಿಕೆ ಇತ್ತು. ಪತ್ರಿಕೆಯ ಜವಾಬ್ದಾರಿಯನ್ನು ಕವಿ ಮತ್ತು ಬರಹಗಾರ ಜಗತ್‌ರಾಂ ದವೆ ಹೊತ್ತಿದ್ದರು. ಕಾಥ್ಯೆವಾಡದ ಒಂದು ತಂಡ ಹಾಡುಗಳನ್ನು ರಚಿಸಿ ಪ್ರಸಾರ ಮಾಡುತ್ತಿತ್ತು. ಜನ ಅವನ್ನು ಕಲಿತು ಜಮೀನುಗಳಲ್ಲಿ ಮತ್ತು ಪೇಟೆಗಳಲ್ಲಿ ಹಾಡುತ್ತಿದ್ದರು. ವಲ್ಲಭಭಾಯ್‌ರವರು ಬಾರ್ಡೋಲಿಯ ಸ್ವರಾಜ್ಯ ಆಶ್ರಮದಲ್ಲಿ ತಂಗಿದ್ದರು ಮತ್ತು ಅಲ್ಲಿಂದ ಸತ್ಯಾಗ್ರಹವನ್ನು ನಿರ್ದೇಶಿಸುತ್ತಿದ್ದರು. ಗಾಂಧೀಜಿಯ ಒಬ್ಬ ಮಗ ರಾಮ್‌ದಾಸ್‌ರವರು ಆ ಆಶ್ರಮದ ಊಟದ ಮನೆಯ ವ್ಯವಸ್ಥೆ ನೋಡಿಕೊಳ್ಳುತ್ತಿದ್ದರು. ಒಂದು ದಿನ ಸ್ವಾಮಿ ಆನಂದರು ಆಶ್ರಮದಲ್ಲಿ ಪ್ರತ್ಯಕ್ಷರಾದರು. ಅವರು ಹಲವು ವರ್ಷ 'ನವಜೀವನ್' ಪತ್ರಿಕೆಯಲ್ಲಿ ಗಾಂಧೀಜಿಗೆ ಸಹಾಯಕರಾಗಿದ್ದು ಅದರಲ್ಲಿ ಲೇಖನಗಳನ್ನು ಬರೆಯುತ್ತಿದ್ದು ಇದ್ದಕ್ಕಿದ್ದ ಹಾಗೆ ಮಾಯವಾಗಿಬಿಟ್ಟಿದ್ದರು. ಈಗ ಮತ್ತೆ ಪ್ರತ್ಯಕ್ಷರಾದರು ಮತ್ತು ವಲ್ಲಭಭಾಯ್‌ರವರ ಪತ್ರಗಳ ಕರಡು ತಯಾರಿಕೆ ಮೊದಲಾದ ಕೆಲಸಗಳನ್ನು ವಹಿಸಿಕೊಂಡರು.[೧೧೯]

ಫೆಬ್ರುವರಿ ೧೭ರಂದು ಬೊಂಬಾಯಿ ಸರ್ಕಾರದ ಕಂದಾಯ ಕಾರ್ಯದರ್ಶಿ ಜೆ.ಡಬ್ಲು. ಸ್ಮಿತ್‌ರವರಿಂದ ಒಂದು ಪತ್ರ ಬಂದಿತು. ಅದರ ಒಕ್ಕಣೆ ಹೀಗಿತ್ತು:

> ಕಂದಾಯದ ತೀರ್ಮಾನವನ್ನು ತಡೆಹಿಡಿಯಲು ಅಥವಾ ಪುನರ್ವಿಮರ್ಶಿಸಲು ಅಥವಾ ಯಾವುದೇ ವಿಧವಾದ ಮತ್ತಷ್ಟು ರಿಯಾಯಿತಿಯನ್ನು ತೋರಿಸಲು ಸರ್ಕಾರ ಸಿದ್ಧವಿಲ್ಲವೆಂದು ತಿಳಿಸುತ್ತೇನೆ. ಈ ಪ್ರಕಟಣೆಯ ನಂತರವೂ ಬಾರ್ಡೋಲಿಯ ಜನರು ಸ್ವಂತ ಇರಾದೆಯ ಮೇಲೆ ಅಥವಾ ಹೊರಗಿನ ವ್ಯಕ್ತಿಗಳ ಬುದ್ಧಿವಾದಕ್ಕೆ ಶರಣಾಗಿ ಕಂದಾಯ ಪಾವತಿಯಲ್ಲಿ ತಪ್ಪಿದರೆ ಗೌರ್ನರ್ ರವರು ಕಾನೂನಿನ ಕ್ರಮ ಜರುಗಿಸಲು ಹಿಂಜರಿಯುವುದಿಲ್ಲ.

ಸ್ಮಿತ್‌ರವರು ತಮ್ಮ ಪತ್ರದಲ್ಲಿ ಉಪಯೋಗಿಸಿದ್ದ 'ಹೊರಗಿನ ವ್ಯಕ್ತಿಗಳು' ಅನ್ನುವ ಪದ ವಲ್ಲಭಭಾಯ್‌ರವರನ್ನು ಕೆರಳಿಸಿತು. ಅವರು ಫೆಬ್ರುವರಿ ೨೧ರಂದು ಸ್ಮಿತ್‌ಗೆ ಬರೆದ ಜವಾಬು ಹೀಗಿತ್ತು:

> ನೀವು, ನಾನು ಮತ್ತು ನನ್ನ ಕಾರ್ಯಕರ್ತರನ್ನು ಹೊರಗಿನವರೆಂದು ಭಾವಿಸಿರುವಂತೆ ಕಾಣುತ್ತದೆ. ಅಂದರೆ, ನೀವು ಪ್ರತಿನಿಧಿಸುತ್ತಿರುವ ಸರ್ಕಾರವು ವಾಸ್ತವವಾಗಿ 'ಹೊರಗಿನಿಂದ ಬಂದ ಜನರಿಂದ' ತುಂಬಿದೆ ಅನ್ನುವ ವಿಷಯವನ್ನು ಕಾಣದೆ ಹೋಗಿದ್ದೀರಿ. ನಾನು ಬಾರ್ಡೋಲಿಗೆ ಎಷ್ಟರ ಮಟ್ಟಿಗೆ ಸೇರಿದವನೊ ಅಷ್ಟರ ಮಟ್ಟಿಗೆ ಭಾರತದ ಯಾವುದೇ ಭಾಗಕ್ಕಾದರೂ ಸೇರಿದವನೆಂದು ಪ್ರತಿಪಾದಿಸಿದರೂ, ಬಾರ್ಡೋಲಿಗೆ ನಾನು ಅಲ್ಲಿಯ ಬೇಗುದಿಗೆ ಸಿಲುಕಿದ ಜನರ ಕೋರಿಕೆಯ ಮೇರೆ ಹೋಗಿದ್ದೇನೆ. ನನ್ನ ಸೇವೆಯನ್ನು ಯಾವ ಕ್ಷಣ ಬೇಕಾದರೂ ಸುಲಭವಾಗಿ ಕೊನೆಗಾಣಿಸುವುದು ಅವರಿಗೆ ಬಿಟ್ಟದ್ದು. ಬಲ ಪ್ರಯೋಗದಿಂದ ಹೇರಲ್ಪಟ್ಟಿರುವ ಹೊರಗಿನ ಆಡಳಿತವನ್ನು ಅಷ್ಟೇ ಸುಲಭವಾಗಿ ಕೊನೆಗಾಣಿಸಲು ಸಾಧ್ಯವಾಗಲೆಂದು ನಾನು ಬಯಸುತ್ತೇನೆ. [೧೨೦]

ಲಿಖಿತ ನೋಟೀಸ್ ತಲುಪಿದ ೧೦ ದಿನಗಳ ಒಳಗೆ ಕಂದಾಯವನ್ನು ಪಾವತಿಸದ ರೈತರಿಗೆ ಸರ್ಕಾರವು ಶೇ. ೨೫ ದಂಡವನ್ನು ವಿಧಿಸುವುದೆಂದೂ, ಹಾಗೂ ರೈತರು ಕಂದಾಯವನ್ನು ಪಾವತಿಸದಿದ್ದರೆ ಅವರ ಚರ ವಸ್ತುಗಳನ್ನು ಮತ್ತು ಎಮ್ಮೆಗಳನ್ನು ಅಥವಾ ಜಮೀನುಗಳನ್ನು ವಶಪಡಿಸಿಕೊಳ್ಳುವುದೆಂದು ಪ್ರಕಟಿಸಿತು. ಸರ್ಕಾರವು ಮೊದಲು ೧೧೦ ಮಂದಿ ಬನಿಯರಿಗೆ (ವನಿಯರ್‌ಗೆ) ನೋಟೀಸ್ ಜಾರಿ ಮಾಡಿತು. ಬನಿಯರ ಬಳಿ ಜಮೀನು ಜಾಸ್ತಿ ಇರುವುದರಿಂದ

ಅವರು ಹೆದರಿ ಕಂದಾಯ ಪಾವತಿಸುವರೆಂದು ಸರ್ಕಾರ ಲೆಕ್ಕ ಹಾಕಿತ್ತು. ಆದರೆ ಬಹುತೇಕ ಮಂದಿ ಬನಿಯರು ಸತ್ಯಾಗ್ರಹ ಪ್ರತಿಜ್ಞೆಗೆ ಸಹಿ ಹಾಕಿದರೇ ಹೊರತು ಕಂದಾಯ ಪಾವತಿಸಲಿಲ್ಲ. ಅಷ್ಟೇ ಅಲ್ಲ, ವಲೋದ್ ಹಳ್ಳಿಯ ಒಬ್ಬ ಬನಿಯ ತನಗೆ ನೋಟೀಸ್ ನೀಡಲು ಬಂದ ಮಹಲ್‌ಕಾರಿಗೆ ಹೇಳಿದ, "ಜಮೀನು ವಶಪಡಿಸಿಕೊಳ್ಳುವ ನೋಟೀಸ್ ಜಾರಿ ಮಾಡುವುದಕ್ಕಿಂತ ನಿನ್ನ ಕೆಲಸಕ್ಕೇ ರಾಜಿನಾಮೆ ನೀಡು." ೧೨೧

ವಲ್ಲಭಭಾಯ್‌ರವರ ಪ್ರಭಾವ ಅಷ್ಟರ ಮಟ್ಟಿಗಿತ್ತು. ಅವರು ಹಳ್ಳಿಗಳಲ್ಲಿ ಸಂಚರಿಸಿ ಭಾಷಣ ಮಾಡಿ ರೈತರ ಉತ್ಸಾಹವನ್ನು ಹೆಚ್ಚಿಸುತ್ತಿದ್ದರು. ಅವರ ಭಾಷಣ ಕೇಳಲು ಅಥವಾ ಪತ್ರಿಕೆಯಲ್ಲಿ ಓದಲು ರೈತರು ಪ್ರತಿ ದಿನ ಕಾತರರಾಗಿರುತ್ತಿದ್ದರು.

೧೯೨೮ರ ಏಪ್ರಿಲ್ ತಿಂಗಳಲ್ಲಿ ಯಾರೋ ಒಬ್ಬರು, ಯಾರೆಂದು ತಿಳಿಯದು, ವಲ್ಲಭಭಾಯ್‌ರವರನ್ನು 'ರೈತರ ಸರ್ದಾರ್' ಎಂದು ಕರೆದರು. ಈ ಚಿಕ್ಕ ಚೊಕ್ಕ ಮತ್ತು ಯುಕ್ತ ಅಂಕಿತ ಜನರ ಮನಸ್ಸನ್ನು ನಾಟಿತು. ಜನರು ಪಟೇಲರನ್ನು 'ಸರ್ದಾರ್' ಎಂದು ಕರೆಯಲು ಆರಂಭಿಸಿದರು. ಆ ಅಂಕಿತ ಶಾಶ್ವತವಾಗಿ ಅವರ ಹೆಸರಿನ ಒಂದು ಅವಿಭಾಜ್ಯ ಭಾಗವಾಯಿತು. "ಸರ್ದಾರರ ಭಾಷಣ ಕೇಳಿದೆಯ?" "ಸರ್ದಾರರಿಗೆ ತಿಳಿಸಬೇಕು," "ಸರ್ದಾರರು ನೀಡಿದರು" ಮುಂತಾದ ಹೇಳಿಕೆಗಳು ಜನಜನಿತವಾದುವು.೧೨೨

"ಸರ್ದಾರರ ಭಾಷಣಗಳಲ್ಲಿ ಅಂತಹ ಪ್ರಭೆಯನ್ನು ಹಿಂದೆ ನಾನೆಂದೂ ಕಂಡಿರಲಿಲ್ಲ" ಎಂದು ಹೇಳಿದ್ದಾರೆ ಮಹದೇವ ದೇಸಾಯಿ. "ವಲ್ಲಭಭಾಯ್‌ರವರ ಬಾರ್ಡೋಲಿ ಭಾಷಣಗಳಿಂದ ತಮ್ಮ ಭಾಷೆ ಎಷ್ಟು ಶ್ರೀಮಂತ ಎನ್ನುವುದನ್ನು ಗುಜರಾತಿ ಭಾಷಾ ಪ್ರೇಮಿಗಳು ಅರಿತರು," ಎನ್ನುತ್ತಾರೆ ನರಹರಿ ಪರೀಖ್. ೧೨೩

ಪಟೇಲರು ೧೬ ಶಿಬಿರಗಳನ್ನು ಸ್ಥಾಪಿಸಿದ್ದರು. ಅವುಗಳಲ್ಲಿ ೨೫೦ ಮಂದಿ ಇದ್ದರು. ಅವರು ಪತ್ರಿಕೆಗಳನ್ನು ತಲುಪಿಸುವುದು, ಸರ್ಕಾರಿ ಅಧಿಕಾರಿಗಳ ಬರುವಿಕೆಯ ಬಗ್ಗೆ ಹಳ್ಳಿಯವರನ್ನು ಎಚ್ಚರಿಸುವುದು, ಅನುಮಾನಿಸುತ್ತಿರುವ ರೈತರು ನಿರ್ಧಾರಕ್ಕೆ ಬರುವಂತೆ ಮಾಡುವುದು, ಬಾವಿಯಿಂದ ನೀರು ಸೇದುವುದು, ಶಿಬಿರ – ಶಿಬಿರಗಳ ನಡುವೆ ಮತ್ತು ಶಿಬಿರ – ಮುಖ್ಯ ಕಾರ್ಯಾಲಯದ ನಡುವೆ ಸಂದೇಶಗಳನ್ನು ಒಯ್ಯುವುದು ಮುಂತಾದ ಕೆಲಸಗಳನ್ನು ಮಾಡುತ್ತಿದ್ದರು. ಹೀನಾಯ ಎನ್ನಬಹುದಾದ ಕೆಲಸಗಳನ್ನೂ ಸಹ ಸಂತಸದಿಂದ ಮಾಡುತ್ತಿದ್ದರು, ಬೆಳಗಿನ ಜಾವ ೩ ಘಂಟೆಯಿಂದ ಮಧ್ಯರಾತ್ರಿಯವರೆಗೂ ಶ್ರಮಿಸುತ್ತಿದ್ದರು. ಅನಂತರ

ಒಂದು ತೆಳು ಚಾಪೆಯ ಮೇಲೆ ಮಲಗಿ ನಿದ್ರಿಸುತ್ತಿದ್ದರು.

ಸರ್ದಾರ್ ಪಟೇಲರು ಸ್ವಯಂಸೇವಕರ ಯೋಗಕ್ಷೇಮದ ಬಗೆಗೆ ಬಹಳ ಕಾಳಜಿ ವಹಿಸುತ್ತಿದ್ದರು. ಪುಣೆ ಹಳ್ಳಿಯ ಚೋಟುಭಾಯ್ ದೇಸಾಯಿ ಎಂಬುವನು ಸರ್‌ಬೋನ್ ಶಿಬಿರಕ್ಕೆ ನಿಯೋಜಿತನಾಗಿದ್ದನು. ಅವನು ಹಳ್ಳಿಯಿಂದ ಹಳ್ಳಿಗೆ ಸತತವಾಗಿ ನಡೆಯಬೇಕಾಗಿತ್ತು. ಒಂದು ದಿನ ಅವನ ಕಾಲು ಊದಿಕೊಂಡಿತು ಮತ್ತು ನಡೆಯುವುದಿರಲಿ ನಿಲ್ಲಲೂ ಸಹ ಆಗಲಿಲ್ಲ. ಈ ವಿಷಯ ಸರ್ದಾರ್ ಪಟೇಲರಿಗೆ ತಲುಪಿತು. ತಕ್ಷಣ ಅವರು ಅವನನ್ನು ಬೊಂಬಾಯಿಗೆ ಕಳುಹಿಸಿದರು ಮತ್ತು ಅಲ್ಲಿ ಮಣಿಲಾಲ್ ಕೊಥಾರಿ ಅನ್ನುವವರು ಅವರನ್ನು ನೋಡಿಕೊಳ್ಳುವಂತೆ ಏರ್ಪಡಿಸಿದರು. ಕೊಥಾರಿಯವರು ತಕ್ಷಣ ಅವನನ್ನು ಹರಿಕಿಷನ್ ದಾಸ್ ಆಸ್ಪತ್ರೆಗೆ ದಾಖಲು ಮಾಡಿದರು. ಅಲ್ಲಿಯ ವೈದ್ಯರೆಂದರು, "ನೀವು ಇನ್ನು ಅರ್ಧ ಘಂಟೆ ತಡವಾಗಿ ಬಂದಿದ್ದರೆ, ತೊಂದರೆಯಾಗುತ್ತಿತ್ತು." [೧೨೪]

"ಅನೇಕ ಒಳ್ಳೆಯ ಹೋರಾಟಗಳನ್ನು ನಡೆಸುವುದಕ್ಕಾಗಿ ಸರ್ದಾರರು ದೀರ್ಘಕಾಲ ಬದುಕಲಿ," ಎಂದು ತಮ್ಮ ಒಂದು ಪತ್ರದಲ್ಲಿ ಗಾಂಧೀಜಿ 'ಸರ್ದಾರ್' ಅಂಕಿತವನ್ನು ಉಪಯೋಗಿಸಿ, ಬರೆದರು. ಗಾಂಧೀಜಿಯವರು ಬಾರ್ದೋಲಿ ಸತ್ಯಾಗ್ರಹದಲ್ಲಿ ಭಾಗವಹಿಸದೆ ದೂರ ಉಳಿಯಬೇಕೆಂದು ಗಾಂಧೀಜಿ ಮತ್ತು ಸರ್ದಾರರು ತೀರ್ಮಾನಿಸಿದ್ದರು. ಗಾಂಧೀಜಿ ಪ್ರವೇಶಿಸಿದರೆ ಅದು ರೈತರ ಹೋರಾಟವಾಗಿ ಮಾತ್ರ ಉಳಿಯದೆ, ಸ್ವರಾಜ್ಯದ ಹೋರಾಟವೂ ಆಗುತ್ತಿತ್ತು. ಅದಕ್ಕೆ ಗಾಂಧೀಜಿ ಮತ್ತು ಪಟೇಲ್ ಇಬ್ಬರೂ ಸಿದ್ಧರಾಗಿರಲಿಲ್ಲ. ಆಗ ಸರ್ಕಾರದ ಧೋರಣೆ ಮತ್ತು ಕ್ರಮಗಳು ಭಿನ್ನವಾಗುತ್ತಿದ್ದುವು. ಜೊತೆಗೆ, ಅನೇಕ ತಲೆಮಾರುಗಳ ರೈತ ರಕ್ತ ಸರ್ದಾರರಲ್ಲಿ ಹರಿಯುತ್ತಿರುವುದರಿಂದ, ಅವರು ಗಾಂಧೀಜಿಗಿಂತ ಉತ್ತಮ ರೀತಿಯಲ್ಲಿ ಬಾರ್ದೋಲಿ ರೈತರ ಸತ್ಯಾಗ್ರಹವನ್ನು ಮುನ್ನಡೆಸಬಲ್ಲರು, ಎನ್ನುವುದು ಇಬ್ಬರಿಗೂ ತಿಳಿದಿತ್ತು. [೧೨೫]

ಜಿಲ್ಲಾ ಕಲೆಕ್ಟರ್ ಹಾರ್ಟ್‌ಶೋರನ್ ಏಪ್ರಿಲ್ ಕೊನೆಯ ಭಾಗದಲ್ಲಿ ಬಾರ್ದೋಲಿಗೆ ಭೇಟಿ ನೀಡಿದನು. ಅವನು ಬಂದಾಗ ಎಲ್ಲಾ ಅಂಗಡಿಗಳು ಬಾಗಿಲು ಹಚ್ಚಿದ್ದುವು. ಯಾವ ಟ್ಯಾಕ್ಸಿ ಚಾಲಕನು ಅವರನ್ನು ಕರೆದೊಯ್ಯಲು ಒಪ್ಪಲಿಲ್ಲ. ಇಬ್ಬರು ಟ್ಯಾಕ್ಸಿ ಚಾಲಕರ ಲೈಸೆನ್ಸ್‌ಗಳು ರದ್ದು ಪಡಿಸಲ್ಪಟ್ಟುವು. ಆದಾಗ್ಯೂ ಟ್ಯಾಕ್ಸಿ ಚಾಲಕರು ಒಪ್ಪಲಿಲ್ಲ. ಕಲೆಕ್ಟರನು ಸಾರ್‌ಬಾನ್‌ಗೆ ನಡೆದುಕೊಂಡೇ ಹೋಗಬೇಕಾಯಿತು. ಅಲ್ಲಿ ಗ್ರಾಮಮುಖಿಯು ತಾನಾಗಲಿ ಅಥವಾ ಗ್ರಾಮದ ಇತರರಾಗಲಿ ಕಂದಾಯವನ್ನು ಪಾವತಿಸುವುದಿಲ್ಲವೆಂದು ಕಲೆಕ್ಟರನಿಗೆ ತಿಳಿಸಿದನು.

ಮೇಲಿನ ಘಟನೆಗಳಿಗೆ ಪ್ರತೀಕಾರವಾಗಿ ಸರ್ಕಾರವು ಮಾಮಲದಾರನನ್ನು ಬದಲಾಯಿಸಿ ರೈತರ ಚಿರ – ಸ್ಥಿರ ಆಸ್ತಿಗಳನ್ನು ವಶಪಡಿಸಿಕೊಳ್ಳುವುದಕ್ಕಾಗಿ ಮೂವರು ವಿಶೇಷ ಅಧಿಕಾರಿಗಳನ್ನು ನಿಯಮಿಸಿತು. ಅವರಿಗೆ ಸಹಾಯ ಮಾಡುವುದಕ್ಕಾಗಿ ೪೦ ಮಂದಿ ಅನಕ್ಷರಸ್ಥ ಪಠಾನರನ್ನು ಬೊಂಬಾಯಿಯಿಂದ ಕಳುಹಿಸಿತು. ಪಠಾನರದು ಬಹು ಭಾರಿ ಶರೀರ ಮತ್ತು ಭಯಂಕರ ನೋಟ. ಅವರು ವಶಪಡಿಸಿಕೊಳ್ಳುವುದರಲ್ಲಿ ತಲಾತಿಗಳಿಗಿಂತ ಬಹಳ ಒರಟು. ಅದರಿಂದ ಸರ್ಕಾರ ಅವರನ್ನು ಕಳುಹಿಸಿತು. ಆದರೆ, ಬಾರ್ಡೋಲಿಯ ಜನ ಅವರ ನಡತೆಯನ್ನು ಪ್ರತಿಭಟಿಸಿದರು. ಪಠಾನರ ವಿರುದ್ಧ ಮುಸ್ಲಿಮರು ಮಾತ್ರ ದೂರು ಕೊಡುವಂತೆ ಪಟೇಲರು ನೋಡಿಕೊಂಡರು. ಇಲ್ಲದೆ ಹೋಗಿದ್ದರೆ ಸರ್ಕಾರವು ಅದಕ್ಕೆ ಹಿಂದು – ಮುಸ್ಲಿಂ ಬಣ್ಣವನ್ನು ಕಟ್ಟುತ್ತಿತ್ತು. ಮೇ ಅಂತ್ಯದ ಹೊತ್ತಿಗೆ ಶೌಕತ್ ಅಲಿ ಬಂದರು. ಅವರು ಹಳ್ಳಿಯವರ ವಿರುದ್ಧ ಪಠಾನರ ಬಳಕೆಯನ್ನು ಖಂಡಿಸಿದರು. ಈ ಒತ್ತಡಗಳಿಗೆ ಮಣಿದು ಸರ್ಕಾರವು ಪಠಾನರನ್ನು ವಾಪಸ್ಸು ಕರೆಯಿಸಿಕೊಂಡಿತು. ಆದರೆ ಅಷ್ಟು ಹೊತ್ತಿಗೆ ಸರ್ಕಾರಕ್ಕೆ ಕೆಟ್ಟ ಹೆಸರು ಬಂದಿತ್ತು.[೧೨೬]

ಸರ್ಕಾರವು ನಾನಾ ರೀತಿಯಲ್ಲಿ ಜನರಿಗೆ ಕಿರುಕುಳ ಕೊಡಲಾರಂಭಿಸಿತು. ಒಂದು ಸಣ್ಣ ಚೂರು ಜಮೀನನ್ನೂ ಹೊಂದಿಲ್ಲದಿದ್ದ ದರ್ಜಿಗಳು ಮತ್ತು ಅಗಸರ ಎಮ್ಮೆಗಳನ್ನೂ ಸಹ ವಶಪಡಿಸಿಕೊಂಡಿತು. ವಲಾದ್ ಗ್ರಾಮದ ದೊರಾಬ್ಜಿ ಎಂಬ ಮದ್ಯದ ಅಂಗಡಿ ನಡೆಸುತ್ತಿದ್ದ ಪಾರ್ಸಿಯು ಸತ್ಯಾಗ್ರಹವನ್ನು ಸೇರಿದ್ದನು. ಅವನು ಕೊಡಬೇಕಾಗಿದ್ದ ೨೪೩ ರೂಪಾಯಿ ಕಂದಾಯಕ್ಕಾಗಿ ೨೦೦೦ ರೂಪಾಯಿ ಬೆಲೆಯ ಲಿಕ್ಕರನ್ನು ವಶಪಡಿಸಿಕೊಂಡು ಕೇವಲ ೯೮ ರೂಪಾಯಿಗಳಿಗೆ ಮತ್ತೊಬ್ಬ ವ್ಯಾಪಾರಿಗೆ ಮಾರಿತು, ಮತ್ತೊಬ್ಬನಿಂದ ೧೪೪ ರೂಪಾಯಿಗಳಿಗಾಗಿ ಅವನ ೩೦,೦೦೦ ರೂಪಾಯಿ ಬೆಲೆಯ ಜಮೀನನ್ನು ವಶಪಡಿಸಿಕೊಂಡಿತು. ಹಾಗೆಯೆ ಕೆಲವು ವನಿಯರ ಜಮೀನನ್ನು ವಶಪಡಿಸಿಕೊಂಡು ಅವರ ಮಕ್ಕಳನ್ನು ದಸ್ತಗಿರಿ ಮಾಡಿತು. ಆದರೂ ಸಹ ರೈತರು ಜಗ್ಗಲಿಲ್ಲ. ಮುಸ್ಲಿಮರು ಸಹ ರೈತರ ಬೆಂಬಲಕ್ಕೆ ನಿಂತರು. ಅಬ್ಬಾಸ್ ತ್ಯಾಬ್ಜಿ ಮತ್ತು ಇಮಾಮ್ ಸಾಹೇಬರ ಪ್ರಯತ್ನದ ಫಲವಾಗಿ ಅನೇಕ ಮುಸ್ಲಿಮರು ಸತ್ಯಾಗ್ರಹ ಪ್ರತಿಜ್ಞೆಗೆ ಸಹಿ ಹಾಕಿದರು. ಸರ್ಕಾರವು ವಶಪಡಿಸಿಕೊಂಡ ಭೂಮಿಯನ್ನು ಕೊಂಡುಕೊಳ್ಳದಂತೆ ಫತ್ವಾವನ್ನು ಕೆಲವು ಮೌಲ್ವಿಗಳು ಹೊರಡಿಸಿದರು. ಬಾರ್ಡೋಲಿಯ ಇಬ್ರಾಹಿಂ ಪಟೇಲರ ಸಾವಿರಾರು ರೂಪಾಯಿ ಬೆಲೆಯ ಜಮೀನನ್ನು ಸರ್ಕಾರವು ವಶಪಡಿಸಿಕೊಂಡರೂ ಅವರು ಸ್ವಲ್ಪವು ವಿಚಲಿತರಾಗಲಿಲ್ಲ.[೧೨೭]

ಬಾರ್ಡೋಲಿಯ ಮಹಿಳೆಯರೂ ಸಹ ಅಷ್ಟೇ ಉತ್ಸಾಹ, ಧೈರ್ಯ ಮತ್ತು

ತ್ಯಾಗವನ್ನು ಪ್ರದರ್ಶಿಸಿದರು. ಸರ್ದಾರ್ ಪಟೇಲರ ಸಭೆಗಳಲ್ಲಿ ಹೆಂಗಸರು ಗಂಡಸರಿಗಿಂತ ಹೆಚ್ಚಾಗಿ ಭಾಗವಹಿಸುತ್ತಿದ್ದರು. ಅವರು ಸರ್ದಾರರ ಹಣೆಗೆ ಕುಂಕುಮವಿಟ್ಟು ಪಾದಗಳಿಗೆ ನಮಸ್ಕರಿಸಿ ಒಂದೋ ಎರಡೋ ರೂಪಾಯಿಯನ್ನು ಅರ್ಪಿಸುತ್ತಿದ್ದರು. ಅವೆಲ್ಲ ಅವರು ಕಷ್ಟಪಟ್ಟು ಸಂಪಾದಿಸಿದ ಹಣ. ಅವರು ಸರ್ಕಾರದ ಕೆಟ್ಟ ಕೆಲಸಗಳನ್ನು ಕುರಿತು ಗ್ರಾಮೀಣ ಜನರ ಸಹಜ ರೀತಿಯಲ್ಲಿ ಹಾಡುಗಳನ್ನು ಹಾಡುತ್ತಿದ್ದರು. ಒಂದು ದಿನ ಒಬ್ಬ ೭೫ ವರ್ಷದ ನಿವೃತ್ತಿದಾರನ ಒಳಗಿನಿಂದ ಚಿಲಕ ಹಾಕಿದ್ದ ಮನೆಯ ಮುಂದೆ ಒಬ್ಬ ಬಂದೂಕುಧಾರಿ ಪೊಲೀಸಿನವನು, ಒಬ್ಬ ಸರ್ಕಲ್ ಇನ್‌ಸ್ಪೆಕ್ಟರ್ ಮತ್ತು ಇಬ್ಬರು ಪಠಾನರು ನಿಂತಿದ್ದರು. ಮನೆಯ ಯಾವುದಾದರು ಬಾಗಿಲು ತೆರೆದ ತಕ್ಷಣ ಒಳಕ್ಕೆ ನುಗ್ಗಿ ಸಿಕ್ಕಿದ್ದನ್ನು ಬಾಚಿ ವಶಪಡಿಸಿಕೊಳ್ಳಲು ಅವರು ಸಿದ್ಧವಾಗಿದ್ದರು. ಆದರೆ ಆ ವೃದ್ಧ ಬಾಗಿಲು ತೆಗೆಯದೆ ಅವರನ್ನು ಸತಾಯಿಸುತ್ತಿದ್ದನು. ಈ ಪರಿಸ್ಥಿತಿಯು ಸರ್ದಾರರಿಗೆ ತಿಳಿಯಿತು. ತಕ್ಷಣ ಅವರು ಆ ವೃದ್ಧನ ಮನೆಯ ಕಡೆಗೆ ನಡೆದರು. ಆ ವೃದ್ಧನ ಪತ್ನಿ ಕೈಲೊಂದು ಹೂವಿನ ಹಾರವನ್ನು ಹಿಡಿದು ಮಹಡಿ ಮೇಲಿನ ಒಂದು ಕಿಟಕಿಯಲ್ಲಿ ನಿಂತಿದ್ದಳು.

ಪಟೇಲರು ರಸ್ತೆಯಿಂದಲೇ ಕೂಗಿ ಕೇಳಿದರು, "ಅಜ್ಜೀ, ನಿಮಗೇನು ಭಯವಿಲ್ಲ ತಾನೆ?" "ನಾನೇಕೆ ಭಯಪಡಲಿ ನಮ್ಮ ರಕ್ಷಣೆಗೆ ನೀನು ಇರುವಾಗ," ಉತ್ತರಿಸಿದಳು ವೃದ್ಧೆ. "ನಾನಲ್ಲ, ರಕ್ಷಿಸುವವನು ರಾಮ," ಎಂದರು ಪಟೇಲ್. "ನಿಜವಾಗಿ ರಾಮ ದಯಾವಂತ," ಅಂದಳು ಆ ವೃದ್ಧೆ. ಸರ್ದಾರರ ಒಬ್ಬ ಜೊತೆಗಾರ ಕೇಳಿದನು, "ಅಜ್ಜೀ, ಈ ಪಠಾಣರು ಮತ್ತು ಪೊಲೀಸರು ನಿಮ್ಮ ಮನೆಯ ಮುಂದೆ ನಿಂತಿರುವುದು ನಿಮಗೆ ಹೇಗೆ ಅನ್ನಿಸುತ್ತದೆ?" ಆಕೆ ಉತ್ತರಿಸಿದಳು, "ನಾನು ಅವರನ್ನು ಸ್ವಾಗತಿಸುತ್ತೇನೆ. ಅವರು ಬರದೇ ಇದ್ದರೆ ಸರ್ದಾರ ನನ್ನ ಮನೆಗೆ ಬರುತ್ತಿರಲಿಲ್ಲ." [೧೨೮]

ವಶಪಡಿಸುವ ಅಧಿಕಾರಿಯು ಒಳಗೆ ಬಾರದಂತೆ ಜೋರಾಗಿ ಬಾಗಿಲು ಹಚ್ಚಿ ಗಾಯಗೊಳಿಸಿದ ಆಪಾದನೆಯನ್ನು ನಾನಿ ಘರೋದ್ ಗ್ರಾಮದ ಭವಾನ್‌ಭಾಯ್ ಹೀರಾಭಾಯ್ ಪಟೇಲನ ವಿರುದ್ಧ ಪೊಲೀಸರು ಹೊರೆಸಿದ್ದರು. ಹಾಗೆ ಬಾಗಿಲು ಹಚ್ಚಿದ್ದು ನಿಜವಾಗಿ ಅವನ ಹೆಂಡತಿ. ಆ ಘಟನೆ ನಡೆದಾಗ ಭವಾನ್‌ಭಾಯ್ ಮನೆಯಲ್ಲೇ ಇರಲಿಲ್ಲ. ಆದಾಗ್ಯೂ ಪೊಲೀಸರು ಹೆಂಡತಿಯನ್ನು ಬಿಟ್ಟು ಗಂಡನ ಮೇಲೆ ಆಪಾದನೆ ಹೊರೆಸಿದ್ದರು. ನ್ಯಾಯಾಲಯದಲ್ಲಿ ವಿಚಾರಣೆಯ ದಿನ ಆಕೆ ತನ್ನ ಗಂಡನನ್ನು ಸ್ವರಾಜ್ ಆಶ್ರಮಕ್ಕೆ ಕರೆದುಕೊಂಡು ಬಂದಳು. ಅಲ್ಲಿ ಸರ್ದಾರ್ ಪಟೇಲರ ಮುಂದೆ ತನ್ನ ಗಂಡನಿಗೆ ಹೇಳಿದಳು:

"ಈಗ ನೋಡು, ಮ್ಯಾಜಿಸ್ಟ್ರೇಟರ ಮುಂದೆ ನಡುಗುತ್ತಾ ಯಾವ ಅಂಜುಬುರುಕ ಮಾತುಗಳನ್ನು ಆಡುವಹಾಗಿಲ್ಲ. ಅವನಿಗೆ (ಮ್ಯಾಜಿಸ್ಟ್ರೇಟನಿಗೆ) ಇಷ್ಟ ಬಂದಷ್ಟು ಕಠಿಣವಾದ ಶಿಕ್ಷೆಯನ್ನು ಕೊಡುವಂತೆ ಹೇಳು. ನನ್ನ ಮತ್ತು ಮಕ್ಕಳ ಬಗ್ಗೆ ಚಿಂತಿಸಬೇಡ. ಉಲ್ಲಾಸವಾಗಿರು ಮತ್ತು ಎಲ್ಲಾ ಪ್ರಶ್ನೆಗಳಿಗೂ ದೃಢತೆ ಮತ್ತು ಗಂಡಸುತನದ ಧ್ವನಿಯಿಂದ ಉತ್ತರಿಸು."

ಅನಂತರ ಅವಳು ಸರ್ದಾರ್ ಪಟೇಲರ ಕಡೆಗೆ ತಿರುಗಿ ಹೇಳಿದಳು:

ಏನು ಅನ್ಯಾಯ! ಅವರು ನನ್ನನ್ನು ವಿಚಾರಣೆಗೇ ಗುರಿಪಡಿಸಲಿಲ್ಲವಲ್ಲ! ಸೆರೆಮನೆಗೆ ಹೋಗುವುದರಲ್ಲೇನಿದೆ? ಒಂದು ಮಣ (೪೦ ಕಿಲೊ) ಧಾನ್ಯವನ್ನು ಬೀಸುವುದರಲ್ಲಿ ಏನೂ ಕಷ್ಟವಿಲ್ಲ. ನಾನು ಒಂದೂವರೆ ಮಣ ಧಾನ್ಯ ಬೀಸುತ್ತಿದ್ದೆ.

ಇದಾದ ಮೇಲೆ ಇಬ್ಬರೂ ನ್ಯಾಯಾಲಯಕ್ಕೆ ಹೋದರು. ನ್ಯಾಯಾಧೀಶರು ಆರು ತಿಂಗಳ ಸೆರೆವಾಸವನ್ನು ಪ್ರಕಟಿಸಿದ ತಕ್ಷಣ ಅವಳು ಗಂಡನಿಗೆ ಹೇಳಿದಳು:

"ಜೈಲಿಗೆ ಧೈರ್ಯದಿಂದ ಹೋಗು. ಅಂತಹ ಅವಕಾಶ ಸುಲಭವಾಗಿ ಸಿಕ್ಕುವುದಿಲ್ಲ. ನನ್ನ ಬಗ್ಗೆಯಾಗಲಿ ಮಕ್ಕಳ ಬಗ್ಗೆಯಾಗಲಿ ಚಿಂತಿಸಬೇಡ. ಭಗವಂತನು ನಿನಗೆ ಶಕ್ತಿಯನ್ನು ಧೈರ್ಯವನ್ನು ನೀಡಲಿ."

ಅವನನ್ನು ಕಳುಹಿಸಿ ಅವಳು ವಾಪಸ್ಸು ಸ್ವರಾಜ್ ಆಶ್ರಮಕ್ಕೆ ಬಂದಳು. ಅವಳ ಗಂಡನ ಸ್ನೇಹಿತರು ಅವಳಿಗೆ ಕೊಟ್ಟಿದ್ದ ೯ ರೂಪಾಯಿಗಳನ್ನು ಸರ್ದಾರರ ಪಾದಗಳ ಮುಂದೆ ಇಟ್ಟಳು.[೧೨೯]

ಪಟೇಲರ ಸೈನಿಕರ ಹೋರಾಟದ ವಿಧಾನ ಬಹಳ ಸರಳವಾಗಿತ್ತು. ಬೋರ್ಸದ್ ಸತ್ಯಾಗ್ರಹದಲ್ಲಿ ಮಾಡಿದಂತೆ ಈಗಲೂ ಊರ ಹೊರಗಿನ ಮರದ ಮೇಲೆ ಕುಳಿತು ಒಬ್ಬನು ಕಾಯುವನು. ದೂರದಲ್ಲಿ ಅಧಿಕಾರಿಗಳು ಬರುವುದನ್ನು ಕಂಡಾಕ್ಷಣ ಅವನು ನಗಾರಿಯನ್ನು ಬಾರಿಸುವನು. ರೈತರು ತಮ್ಮ ಕುಟುಂಬ ಮತ್ತು ಎಮ್ಮೆಗಳನ್ನು ಒಳಗಿಟ್ಟು ಮನೆಗೆ ಬೀಗ ಹಾಕುವರು. ಅವರು ವಾಪಸ್ಸು ಹಿಂತಿರುಗುತ್ತಿದ್ದುದು ಸೂರ್ಯ ಮುಳುಗಿದ ಮೇಲೆಯೆ. ಅದರಿಂದ ಅಧಿಕಾರಿಗಳು ಏನನ್ನೂ ವಶಪಡಿಸಿಕೊಳ್ಳಲು ಆಗುತ್ತಿರಲಿಲ್ಲ. ಸಂಜೆಯ ನಂತರ ಪಟೇಲರ ಚಟುವಟಿಕೆಗಳೂ ಆರಂಭವಾಗುತ್ತಿದ್ದುವು. ಅವರು ರಾತ್ರಿಯ ವೇಳೆ ಹಳ್ಳಿಯಿಂದ

ಹಳ್ಳಿಗೆ ಹೋಗಿ ರೈತರನ್ನು ಉದ್ದೇಶಿಸಿ ಭಾಷಣ ಮಾಡುವರು ಅಥವಾ ಸ್ವಯಂಸೇವಕ ರೊಡನೆ ಸಮಾಲೋಚಿಸುವರು ಮತ್ತು ಅವರಿಗೆ ಸೂಕ್ತ ಸಲಹೆಗಳನ್ನು ನೀಡುವರು. ಅವರು ಪ್ರತಿ ರಾತ್ರಿ ಸುಮಾರು ೧೫೫ ಮೈಲಿಗಳನ್ನು ಕ್ರಮಿಸುವರು. ಒಬ್ಬ ಸ್ನೇಹಿತ ಅವರಿಗೊಂದು ಹಳೆಯ ಫ್ಲೋರ್ಡ್ ಕಾರನ್ನು ಕೊಟ್ಟಿದ್ದನು. ಆದರೆ ರಸ್ತೆಗಳು ಮಣ್ಣಿನ ರಸ್ತೆಗಳಾದ್ದರಿಂದ ಸ್ವಲ್ಪ ಮಳೆ ಬಂದರೂ ಸಾಕು, ಕಾರಿನ ಚಕ್ರಗಳು ಕೊಚ್ಚೆಯಲ್ಲಿ ಹೂತುಹೋಗುತ್ತಿದ್ದುವು. ಪಟೇಲರು ಇತರರೊಡನೆ ಕಾರಿನಿಂದ ಇಳಿದು ಅದನ್ನು ನೂಕುವರು. ಆಗ ಅವರ ವಯಸ್ಸು ೫೩ ವರ್ಷ. ಕಾರು ಮತ್ತೆ ಹೊರಡದೆಹೋದರೆ, ಹತ್ತಿರದ ಹಳ್ಳಿಗೆ ನಡೆದುಕೊಂಡೇ ಹೋಗುವರು. ಅಲ್ಲಿ ತಮ್ಮ ಕೆಲಸ ಮುಗಿಸಿ ಸೂರ್ಯೋದಯದ ಹೊತ್ತಿಗೆ ಬಾರ್ಡೋಲಿಗೆ ಹಿಂತಿರುಗಿ, ಬಂದಿದ್ದ ವರದಿಗಳು ಮತ್ತು ಪತ್ರಗಳನ್ನು ವಿಲೇವಾರಿ ಮಾಡಿ, ಆನಂತರ ಮಲಗಿ ನಿದ್ರಿಸುವರು.[೧೩೦]

ದಿನದಿನಕ್ಕೆ ಪಟೇಲರ ಭಾಷಣ ತೀಕ್ಷ್ಣವಾಗುತ್ತಾ ಹೋಯಿತು. ಒಮ್ಮೆ ಅವರು ಹೇಳಿದರು, 'ಕೋಟ್ಯಾಂತರ ಜನರು ರೈತರ ಮೇಲೆ ಅವಲಂಬಿತರಾಗಿದ್ದಾರೆ, (ಆದರೆ) ರೈತ ಯಾರ ಮೇಲೂ ಅವಲಂಬಿತನಾಗಿಲ್ಲ..... ಈ ಪ್ರಪಂಚದಲ್ಲಿ ನಿಜವಾದ ಉತ್ಪಾದಕರೆಂದರೆ ರೈತರು ಮತ್ತು ಕಾರ್ಮಿಕರು. ಮಿಕ್ಕವರೆಲ್ಲ ಅವರನ್ನು ಅವಲಂಬಿಸುವ ಪರಾವಲಂಬಿಗಳು.' ಪಟೇಲರದು ಕ್ರಾಂತಿಕಾರಿ ಭಾಷೆಯಾಗಿತ್ತು. ಅವರು ರೈತರಲ್ಲಿ ಮುಕ್ತ ಬಂಡಾಯವನ್ನು ಪ್ರಚೋದಿಸುತ್ತಿದ್ದರು, ಆದರೆ ಅದು ಗಾಂಧೀಜಿ ಮಾದರಿಯದ್ದಾಗಿತ್ತು. ಅವರ ಸೈನಿಕರ ಬಳಿ ಯಾವ ಶಸ್ತ್ರಾಸ್ತ್ರವೂ ಇರಲಿಲ್ಲ. ಕೊನೆಯ ಪಕ್ಷ ಒಂದು ದೊಣ್ಣೆಯೂ ಇರಲಿಲ್ಲ. ಪಟೇಲರು ಮಾತ್ರ ಸತ್ಯಾಗ್ರಹದ ನಾಯಕನಾಗಿ, ತಮ್ಮ ಸ್ಥಾನದ ಸಂಕೇತವಾಗಿ, ಒಂದು ದೊಣ್ಣೆಯನ್ನು ಹಿಡಿದಿರುತ್ತಿದ್ದರು.

ಸರ್ಕಾರ ಗಲಿಬಿಲಿಗೊಂಡಿತು. ಅದರ ಅಧಿಕಾರಿಗಳು, "ಪಟೇಲರು ಲೆನಿನ್ನನ ಭಾಷೆಯಲ್ಲಿ ಮಾತನಾಡುತ್ತಿದ್ದಾರೆ" ಎಂದರು. 'ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆಯು 'ಬಾರ್ಡೋಲಿಯಲ್ಲಿ ಬೊಲ್ಶೆವಿಕ್ ಆಳ್ವಿಕೆ,' 'ಲೆನಿನ್‌ನ ಪಾತ್ರದಲ್ಲಿ ಮಿ. ವಲ್ಲಭಭಾಯ್ ಪಟೇಲ್' ಮುಂತಾದ ತಲೆಬರಹಗಳನ್ನು ತನ್ನ ಮುಖಪುಟದಲ್ಲಿ ಪ್ರಕಟಿಸಿತು. ಆ ಪತ್ರಿಕೆಯ ವರದಿಗಾರ, ಒಬ್ಬ ಆಂಗ್ಲ, ಈ ರೀತಿ ಬರೆದನು, "ಬಾರ್ಡೋಲಿಯಲ್ಲಿ ಕಠಿಣವಾದ ಶಿಸ್ತು ಮನೆಮಾಡಿದೆ. ಮಿ. ಪಟೇಲರು ಅಲ್ಲಿ ಒಂದು ಬೊಲ್ಶೆವಿಕ್ ಆಳ್ವಿಕೆಯನ್ನು ತಂದಿದ್ದಾರೆ. ಅದರಲ್ಲಿ ಅವರು ಲೆನಿನ್‌ನ ಪಾತ್ರವನ್ನು ನಡೆಸುತ್ತಿದ್ದಾರೆ. ಜನಗಳ ಮೇಲೆ ಅವರದು ಸಂಪೂರ್ಣ ಹಿಡಿತ. ಬಾರ್ಡೋಲಿಯ ಮಹಿಳೆಯರಿಗೆ ಸರ್ಕಾರಿ ವಿರೋಧಿ ಹಾಡುಗಳನ್ನು ಕಲಿಸಲಾಗುತ್ತಿದೆ. ಆ ಹಾಡುಗಳ ಮೂಲಕ

ಜನರು ಸರ್ಕಾರವನ್ನು ದ್ವೇಷಿಸುವಂತೆ, ತಮ್ಮ ದಂಡನಾಯಕ ಪಟೇಲರಿಗೆ ನಿಷ್ಠರಾಗಿರುವಂತೆ ಮತ್ತು ತಮ್ಮ ಹಕ್ಕುಗಳ ರಕ್ಷಣೆಗೆ ಆವಶ್ಯಕತೆ ಬಿದ್ದರೆ ಸಾಯಲು ಸಿದ್ಧರಾಗಿರುವಂತೆ ಪ್ರಚೋದಿಸುತ್ತಿದ್ದಾರೆ."

ರ್ಯೂಟರ್ ಸುದ್ದಿ ಸಂಸ್ಥೆಯ ವರದಿ ಲಂಡನ್‌ನಲ್ಲಿ ಸಂಚಲನವನ್ನು ಮೂಡಿಸಿತು. ಅಲ್ಲಿಯ ಸಂಸತ್ತಿನ ಕೆಳ ಸದನ 'ಹೌಸ್ ಆಫ್ ಕಾಮನ್ಸ್'ನಲ್ಲಿ ಲಾರ್ಡ್ ವಿಂಟರ್‌ಟನ್‌ನು 'ಬಾರ್ಡೋಲಿಯ ಕರನಿರಾಕರಣೆ ಸತ್ಯಾಗ್ರಹದಲ್ಲಿ ಪಟೇಲ್ ಒಂದಷ್ಟು ಯಶಸ್ಸು ಗಳಿಸಿದ್ದಾರೆ' ಎಂದು ಒಪ್ಪಿಕೊಂಡನು. ೧೯೧೯ರಲ್ಲಿ ಪಂಜಾಬಿನ ಗೌರ್ನರ್ ಆಗಿದ್ದು ಜಲಿಯನ್‌ವಾಲಾ ಬಾಗ್ ಹತ್ಯಾಕಾಂಡಕ್ಕೆ ಕಾರಣನಾಗಿದ್ದ, ಕನ್‌ಸರ್‌ವೆಟಿವ್ ಪಕ್ಷದ ಹಠಮಾರಿ ಸದಸ್ಯ ಮೈಖೇಲ್ ಓಡ್ವೈರನು ಕೋಪದ ಕಿಡಿಕಾರಿ, ಪಿತೂರಿಯ ಕಾನೂನನ್ನು ಒಡನೆಯೆ ಚಲಾಯಿಸಬೇಕು' ಎಂದು ಆಗ್ರಹಿಸಿದನು. ಈ ಆಕ್ರೋಷ ಬ್ರಿಟಿಷರ ಭಯದ ಪ್ರತೀಕ.[೧೩೧]

ಮೇ ಅಂತ್ಯದ ವೇಳೆಗೆ ಬಾರ್ಡೋಲಿಯು ಇಡೀ ಭಾರತದ ಸುದ್ದಿಯಾಯಿತು. ಅನೇಕ ಕಾಂಗ್ರೆಸ್ ಮತ್ತು ಇತರ ಮುಖಂಡರು ಬಾರ್ಡೋಲಿಯಲ್ಲಿ ಸರ್ದಾರರು ಸೃಷ್ಟಿಸಿದ ಏಕತೆಯನ್ನು ನೋಡಲು ಬರತೊಡಗಿದರು. ಮೌಲಾನ ಶೌಕತ್ ಅಲಿ ಮತ್ತು ಮೌಲ್ವಿ ಮೊಹಮ್ಮದ್ ಬಲೋಚ್‌ರವರು 'ಬಾರ್ಡೋಲಿಯ ಆಶ್ಚರ್ಯಕರ ಏಕತೆ ಮತ್ತು ಒಗ್ಗಟ್ಟಿನ ಸನ್ನಿವೇಶದ ಬಗೆಗೆ ಸಂತಸವನ್ನೂ' ವ್ಯಕ್ತಪಡಿಸಿದರು. ಬೊಂಬಾಯಿ ಶಾಸನ ಪರಿಷತ್ತಿನ ಕಾಂಗ್ರೆಸ್ ಪಕ್ಷಕ್ಕೆ ಸೇರಿಲ್ಲದಿದ್ದ (ಅನ್ಯ ಪಕ್ಷದ) ಸದಸ್ಯರಾದ ಜೋಶಿ ಮತ್ತು ಪಟಾಸ್ಕರ್‌ರವರು ಟೀಕೆ ಮಾಡುವ ಉದ್ದೇಶದಿಂದ ಬಾರ್ಡೋಲಿಗೆ ಬಂದರು. ಆದರೆ ಅಲ್ಲಿಯ ದೃಶ್ಯವನ್ನು ನೋಡಿ ಹೀಗೆ ನುಡಿದರು, "ನಾವು ಮೂದಲಿಸಲು ಬಂದೆವು, ಆದರೆ ಹೊಗಳಲು ನಿಂತಿದ್ದೇವೆ." ಬೊಂಬಾಯಿಯ ಶಾಸನ ಪರಿಷತ್ತಿನ ಒಂಬತ್ತು ಸದಸ್ಯರು ತಮ್ಮ ಸ್ಥಾನಕ್ಕೆ ರಾಜಿನಾಮೆ ಕೊಟ್ಟರು. ಅವರು ತಮ್ಮ ರಾಜಿನಾಮೆ ಪತ್ರದಲ್ಲಿ, "ಸರ್ಕಾರವು ತನ್ನ ಹೊಣೆಯನ್ನು ಮರೆತು ಗಂಭೀರ ಉಲ್ಲಂಘನೆ ಮಾಡಿದಾಗ ಮತ್ತು ಉದಾತ್ತ ಹಾಗೂ ಕಾನೂನು ಪಾಲನಾ ಜನರನ್ನು ಕಾಲಿನ ಅಡಿಯಲ್ಲಿ ನಿರ್ದಯವಾಗಿ ಹೊಸಕಿಹಾಕಲು ಪ್ರಯತ್ನಿಸಿದಾಗ ಸರ್ಕಾರದ ದಬ್ಬಾಳಿಕೆಯ ನೀತಿಯ ವಿರುದ್ಧ ಪ್ರತಿಭಟನೆಗಾಗಿ ಬಾಂಬೆ ಶಾಸನ ಪರಿಷತ್ತಿನ ನಮ್ಮ ಸದಸ್ಯತ್ವಕ್ಕೆ ರಾಜಿನಾಮೆ ನೀಡುವುದು ನ್ಯಾಯ ಮತ್ತು ಸರಿ" ಎಂದು ಬರೆದರು. ಸರ್ದಾರರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಭಾಗವಹಿಸುವುದಕ್ಕಾಗಿ ಒಂದು ದಿನದ ಮಟ್ಟಿಗೆ ಬೊಂಬಾಯಿಗೆ ಬಂದರು. ಅಲ್ಲಿ ಮೋತಿಲಾಲ್ ನೆಹರುರವರು ಅವರನ್ನು ಮೆಚ್ಚಿ ಮಾತನಾಡಿದರು.[೧೩೨]

ದಿನಗಳು ಉರುಳಿದಂತೆ ಸತ್ಯಾಗ್ರಹದ ತೀವ್ರತೆ ಹೆಚ್ಚುತ್ತಾ ಹೋಯಿತು. ಜೂನ್ ಮಧ್ಯಭಾಗದ ಹೊತ್ತಿಗೆ ಅದು ತುತ್ತತುದಿಯನ್ನು ಮುಟ್ಟಿತು. ಬಾರ್ದೋಲಿ ತಾಲ್ಲೂಕಿನ ೬೩ ಮಂದಿ ಪಟೇಲರು ಮತ್ತು ೧೧ ಮಂದಿ ತಲಾತಿಗಳು ತಮ್ಮ ಕೆಲಸಕ್ಕೆ ರಾಜಿನಾಮೆ ಕೊಟ್ಟರು. ಗಾಂಧೀಜಿಯವರು ಅವರನ್ನು ಅಭಿನಂದಿಸಿ, "ಅಂತಿಮ ಫಲಿತಾಂಶದಲ್ಲಿ, ಇಂತಹ ತ್ಯಾಗಗಳೇ ಸ್ವಾತಂತ್ರ್ಯವನ್ನು ತರುವುದು" ಎಂದರು. ಈ ರಾಜಿನಾಮೆಗಳು ಸರ್ಕಾರಕ್ಕೆ ಭಾರಿ ಹೊಡೆತ ನೀಡಿದುವು. ಅವು ಸತ್ಯಾಗ್ರಹಿಗಳ ಉತ್ಸಾಹವನ್ನು ಹೆಚ್ಚಿಸಿ ಸರ್ಕಾರಿ ಅಧಿಕಾರಿಗಳ ಮನೋಭಾವಕ್ಕೆ ತಣ್ಣೀರು ಎರೆಚಿದುವು.

ಅಷ್ಟು ಹೊತ್ತಿಗೆ ದೇಶದ ಅನೇಕ ನಾಯಕರು ಮಧ್ಯೆ ಪ್ರವೇಶಿಸಿ ಸರ್ಕಾರದ ಮೇಲೆ ಒತ್ತಡ ತರಲು ಆರಂಭಿಸಿದರು. ಆ ಸಮಯದಲ್ಲಿ ಕೇಂದ್ರ ಶಾಸನ ಸಭೆಯ ಅಧ್ಯಕ್ಷರಾಗಿದ್ದ ವಿಠ್ಠಲ್‌ಭಾಯ್ ಪಟೇಲ್‌ರವರು ಬಾರ್ದೋಲಿಯ ಸಮಸ್ಯೆಯನ್ನು ವೈಸ್‌ರಾಯ್‌ಗೆ ವಿವರಿಸಿದರು. ಬೊಂಬಾಯಿಯ ಪ್ರಸಿದ್ಧ ವಕೀಲ ಕೆ.ಎಂ. ಮುನ್ಷಿಯವರು ಬೊಂಬಾಯಿಯ ಗೌರ್ನರ್‌ಗೆ ಪತ್ರ ಬರೆದು ಈ ರೀತಿ ತಿಳಿಸಿದರು:

> "ರಸ್ತೆಯ ಎರಡು ಕೊನೆಗಳಲ್ಲಿ ಕಾವಲುಗಾರರು ಮಾತ್ರ ಇರುವ ನಿಶ್ಯಬ್ದವಾದ, ಖಾಲಿ ಮತ್ತು ಜನರಹಿತವಾದ ಹಳ್ಳಿಗಳಲ್ಲಿ ನಾನು ಹಾದುಹೋದ ಹಾಗೆ ಹೆಂಗಸರು ಕಿಟಕಿಯ ಕಂಬಿಗಳ ಮೂಲಕ ಇಣುಕುವುದನ್ನು ಕಂಡೆ. ನಾನು ಆಶ್ವಾಸನೆಯನ್ನು ನೀಡಿದ ಮೇಲೆ ಅವರು ಬಾಗಿಲನ್ನು ತೆರೆದರು. ಒಳಗೆ ಹೋದೆ ಮತ್ತು ಕತ್ತಲು, ದುರ್ವಾಸನೆ ಹಾಗೂ ಗಲೀಜನ್ನು ಕಂಡೆ. ಗಂಡಸರು, ಹೆಂಗಸರು ಮತ್ತು ಮಕ್ಕಳು ತಮ್ಮ ಪ್ರೀತಿಯ ದನಗಳೊಡನೆ ಒಂದೇ ಕೊಠಡಿಯಲ್ಲಿ ಅನೇಕ ತಿಂಗಳುಗಳಿಂದ ಒಟ್ಟಿಗೆ ಅಡಗಿ ಕಾಯಿಲೆಯಿಂದ ಬಿಳುಚಿಕೊಂಡು ಸಂಕಟದ ನಿಕೃಷ್ಟ ಜೀವನವನ್ನು ನಡೆಸುತ್ತಿದ್ದರು. ತಮ್ಮ ದನಗಳನ್ನು ಜಪ್ತಿ ಅಧಿಕಾರಿಗಳ ಕರುಣೆಗೆ ಒಳಪಡಿಸುವುದಕ್ಕೆ ಬದಲಾಗಿ ತಿಂಗಳುಗಳ ಕಾಲ ಅದೇ ಸ್ಥಿತಿಯಲ್ಲಿರುವ ಅವರ ದೃಢ ನಿರ್ಧಾರವನ್ನು ಆಲಿಸಿದಾಗ ಜಪ್ತಿ ಪದ್ಧತಿಯನ್ನು ಜಾರಿಗೆ ತಂದವನ ಕಲ್ಪನೆ, ಅದನ್ನು ಚಲಾಯಿಸಿದ ಕಠೋರತೆ ಮತ್ತು ಅದು ಪ್ರತಿನಿಧಿಸುವ ಅಮಾನವೀಯ ನೀತಿಯನ್ನು ಮಧ್ಯಯುಗದ ಚರಿತ್ರೆಯ ಪುಟಗಳಲ್ಲಿ ಮಾತ್ರ ನಾವು ಕಾಣಬಹುದು ಎಂದು ಆಲೋಚಿಸದಿರಲು ನನಗೆ ಸಾಧ್ಯವಾಗಲಿಲ್ಲ.

.....ದೊಡ್ಡ ಅಧಿಕಾರಿಗಳ ಅಗ್ಗದ ಅವಹೇಳನ, ತಾಂತ್ರಿಕ ಅಪರಾಧಗಳಿಗೂ ಸರಿ ಪ್ರಮಾಣವಲ್ಲದ ಕಠಿಣ ಶಿಕ್ಷೆ, ದುರಹಂಕಾರಿ ಘೋಷಣೆಗಳ ಗುಡುಗು ಮತ್ತು ಅಧಿಕಾರಶಾಹಿಯ ಬೆದರಿಕೆ ರೈತರಲ್ಲಿ ತಿರಸ್ಕಾರವನ್ನಲ್ಲದೆ ಬೇರೇನನ್ನೂ ಪ್ರಚೋದಿಸುತ್ತಿಲ್ಲ.

.....ನಿಮ್ಮ ಜಪ್ತಿ ಅಧಿಕಾರಿ ಮುಖಕ್ಕೌರವನ್ನು ಪಡೆಯಲು ಬಹಳ ದೂರ ನಡೆಯಬೇಕು. 'ಬಾರ್ಡೋಲಿಯಲ್ಲಿ ವಾಸಿಸುವ ಚಳವಳಿಕಾರ' ಎಂದು ಅಧಿಕಾರಶಾಹಿಯಿಂದ ಕರೆಯಲ್ಪಟ್ಟಿರುವ ವಲ್ಲಭಭಾಯ್ ಸಹಾಯ ಮಾಡದೆ ಹೋಗಿದ್ದರೆ ನಿಮ್ಮ ಅಧಿಕಾರಿಯ ಕಾರು ಮಣ್ಣಿನಲ್ಲೇ ಇರಬೇಕಾಗುತ್ತಿತ್ತು. ವಲ್ಲಭಭಾಯ್ ರವರ ಅನುಮತಿ ಇಲ್ಲದೆ ನಿಮ್ಮ ಕಲೆಕ್ಟರ್ ರೈಲು ನಿಲ್ದಾಣದಲ್ಲಿ ಯಾವ ಸಾರಿಗೆ ಸೌಲಭ್ಯವನ್ನೂ ಪಡೆಯಲಾರ. ನಾನು ಭೇಟಿ ಕೊಟ್ಟ ಕೆಲವು ಹಳ್ಳಿಗಳಲ್ಲಿ ಒಬ್ಬ ಗಂಡಸು ಅಥವಾ ಒಬ್ಬಳು ಹೆಂಗಸಾಗಲಿ ತಾವು ತೆಗೆದುಕೊಂಡ ಕ್ರಮಕ್ಕೆ ವ್ಯಥೆ ಪಡಲೂ ಇಲ್ಲ ಅಥವಾ ತಮ್ಮ ನಂಬಿಕೆಯನ್ನು ಸ್ವಲ್ಪವೂ ಅಲುಗಾಡಿಸಲಿಲ್ಲ. ವಲ್ಲಭಭಾಯ್ ಹಳ್ಳಿಗಳ ಮೂಲಕ ಹಾದು ಹೋದಾಗ ಅವರಿಗೆ ಸ್ವಯಂಪ್ರೇರಿತ ಗೌರವ ಸಲ್ಲಿಸಲು ಗಂಡಸರು, ಹೆಂಗಸರು ಮತ್ತು ಮಕ್ಕಳು ಹೊರಗೆ ಬರುವುದನ್ನು ಕಂಡೆ. ಹರಕು ಬಟ್ಟೆ ಧರಿಸಿದ ಅನಕ್ಷರಸ್ಥ ವೃದ್ಧೆಯರು ಮತ್ತು ಯುವತಿಯರು, ಪಟೇಲರ ಹಣೆಯ ಮೇಲೆ ಶುಭಕಾರಕ ಕುಂಕುಮ ಇಡುವುದನ್ನು, ತಾವು ಕಷ್ಟಪಟ್ಟು ಸಂಪಾದಿಸಿದ ಒಂದು ಅಥವಾ ಎರಡು ರೂಪಾಯಿಯನ್ನು ತಮ್ಮ ಪವಿತ್ರ ಕಾರ್ಯಕ್ಕಾಗಿ ಅವರ (ವಲ್ಲಭಭಾಯ್‌ರವರ) ಪಾದಗಳ ಮೇಲೆ ಇಡುವುದನ್ನು ಮತ್ತು ಅಸಂತೋಷಿ ಸರ್ಕಾರದ ದುರ್ನಡತೆಗಳ ಹಾಡುಗಳನ್ನು ತಮ್ಮ ಗ್ರಾಮ್ಯ ಧ್ವನಿಯಲ್ಲಿ ಹಾಡುವುದನ್ನು ಕಂಡೆ." [೧೩೩]

ಪುರುಷೋತ್ತಮದಾಸ್ ಥಾಕೂರ್‌ದಾಸ್, ಪಂಡಿತ್ ಹೃದಯನಾಥ್ ಕುಂಜ್ರು, ಮೋತಿಲಾಲ್ ನೆಹರು ಮತ್ತು ತೇಜ್ ಬಹದ್ದೂರ್ ಸಪ್ರು ಮೊದಲಾದ ನಾಯಕರು ಚಳವಳಿಗೆ ಬೆಂಬಲ ನೀಡಿದರು.

ರಾಜಗೋಪಾಲಾಚಾರಿ ಮತ್ತು ಅನೇಕ ಕಾಂಗ್ರೆಸ್ ನಾಯಕರು ಬಾರ್ಡೋಲಿಗೆ ಬರಲು ಮತ್ತು ಸತ್ಯಾಗ್ರಹದಲ್ಲಿ ಭಾಗವಹಿಸದಿದ್ದರೂ ಅದನ್ನು ವೀಕ್ಷಿಸಲು

ಬಯಸಿದರು. ಆದರೆ ಪಟೇಲರು ಅವರೆಲ್ಲರನ್ನು ತಡೆದರು. ಅವರೆಲ್ಲ ಬಂದರೆ ಅದು ರೈತರ ಚಳವಳಿಯಾಗಿ ಉಳಿಯದೆ ಅದು ಕಾಂಗ್ರೆಸ್ ಚಳವಳಿ ಅಥವಾ ರಾಷ್ಟ್ರೀಯ ಚಳವಳಿಯೆಂದು ಸರ್ಕಾರ ಭಾವಿಸುವ ಸಾಧ್ಯತೆ ಇತ್ತು. ಆ ಕಾರಣ ಕ್ಕಾಗಿಯೇ ಗಾಂಧೀಜಿಯವರೂ ಸಹ ದೂರದ ಆಶ್ರಮದಲ್ಲಿ ಉಳಿದಿದ್ದರೇ ಹೊರತು ಬಾರ್ಡೋಲಿಗೆ ಬಂದಿರಲಿಲ್ಲ.

ಸರ್ಕಾರವು ಮೇ. ೩೧ರಂದು ರೈತರಿಗೆ ಒಂದು ಎಚ್ಚರಿಕೆಯನ್ನು ನೀಡಿತು. ಸರ್ಕಾರವು ಸ್ವಾಧೀನ ಪಡಿಸಿಕೊಂಡ ಜಮೀನುಗಳು ರೈತರಿಗೆ ಮತ್ತೆಂದೂ ವಾಪಸ್ಸು ಸಿಗುವುದಿಲ್ಲವೆಂದೂ ಸರ್ಕಾರವು ಈಗಾಗಲೇ ೧೪೦೦ ಎಕರೆ ಭೂಮಿಯನ್ನು ಏಲೇವಾರಿ ಮಾಡಿದೆಯೆಂದೂ, ಇನ್ನೂ ೫,೦೦೦ ಎಕರೆ ಭೂಮಿಯನ್ನು ಏಲೇವಾರಿ ಮಾಡುವುದೆಂದೂ ಪ್ರಕಟಿಸಿ ರೈತರನ್ನು ಹೆದರಿಸಲು ಪ್ರಯತ್ನಿಸಿತು. ವಲ್ಲಭಭಾಯ್ ಪಟೇಲರು 'ಸರ್ಕಾರವು ತನ್ನ ಈ ಬೆದರಿಕೆಯನ್ನು ಕಾರ್ಯರೂಪಕ್ಕೆ ತರಲು ಸಾಧ್ಯವಿಲ್ಲ' ಎಂದರು ಮತ್ತು 'ನಿಮ್ಮ ಜಮೀನು ನಿಮ್ಮನ್ನು ಹುಡುಕಿಕೊಂಡು ನಿಮ್ಮ ಮನೆಯ ಬಾಗಿಲಿಗೇ ಬರುತ್ತದೆ' ಎಂದು ರೈತರಿಗೆ ಆಶ್ವಾಸನೆ ನೀಡಿದರು. ಜೊತೆಗೆ, ಅವರು ಕೆಲವು ವಾಸ್ತವಿಕ ಕ್ರಮಗಳನ್ನು ತೆಗೆದುಕೊಂಡರು. ಹೊರಗಿನವರು ಕೊಂಡುಕೊಂಡಿದ್ದ ಕೆಲವು ಜಮೀನುಗಳಲ್ಲಿನ ಗುಡಿಸಲುಗಳಲ್ಲಿ ತಂಗುವಂತೆ ತಮ್ಮ ಮಗಳು ಮಣಿಬೆನ್ ಪಟೇಲ್, ಮಿಥುಬೆಹೆನ್ ಪೆಟಿಟ್ ಮತ್ತು ಭಕ್ತಿಬಾ ದೇಸಾಯಿಯವರಿಗೆ ಸೂಚಿಸಿದರು. ಬಾರ್ಡೋಲಿಯ ಯಾವ ವ್ಯಕ್ತಿಯೂ ಸ್ವಾಧೀನವಾದ ಜಮೀನನ್ನು ಕೊಂಡುಕೊಳ್ಳಲು ಸಿದ್ಧವಿಲ್ಲದ್ದರಿಂದ ಸರ್ಕಾರವು ಹೊರಗಿನವರಿಗೆ ಬಹಳ ಬಹಳ ಅಗ್ಗವಾಗಿ ಮಾರಿತ್ತು. ಬರೂಚ್‌ನ ಒಬ್ಬ ಸೀಮೆ ಎಣ್ಣೆ ವ್ಯಾಪಾರಿ ಒಂದು ದೊಡ್ಡ ಜಮೀನನ್ನು ಖರೀದಿಸಿದ್ದನು. ಅವನಿಗೆ ಪಟೇಲರು 'ಸತ್ತ ಮೇಲೆ ದೇವರು ನಿನಗೆ ಕೊಡುವ ಶಿಕ್ಷೆಯ ಬಗೆಗೆ ಯೋಚಿಸು' ಎಂದರು. ಅಂತಹ ಜಮೀನುಗಳನ್ನು ಕೆಲವು ಪಾರ್ಸಿಗಳೂ ಸಹ ಖರೀದಿಸಿದ್ದರು. ಆ ಪಾರ್ಸಿಗಳು ತಮ್ಮ ಸಹೋದರಿ ಮತ್ತು ಸಹೋದರರಿಗೆ ಗುಂಡಿಕ್ಕಿ ಅವರ ಮೂಳೆಗಳ ಗೊಬ್ಬರವನ್ನು ಜಮೀನಿಗೆ ಹಾಕಿ ಉಳಬೇಕಾಗುತ್ತದೆ. ಮುಸ್ಲಿಮರು ಮತ್ತು ಹಿಂದೂಗಳಿಗೂ ಸಹ ಅದೇ ಹಣೆಬರಹ ಕಾದಿರುತ್ತದೆ – ಎಂದರು ಸರ್ದಾರರು.

ಆ ವೇಳೆಗೆ (ಮೇ ಅಂತ್ಯ) ಸರ್ದಾರರ ದಸ್ತಗಿರಿ ಆಗುವುದೆಂಬ ವದಂತಿ ಹಬ್ಬಿತು. ಆದರೆ ವಿಚಲಿತರಾಗದ ಸರ್ದಾರರು ನಕ್ಕು ಹೇಳಿದರು: "ನಾನೇಕೆ ದಸ್ತಗಿರಿ ಆಗಬೇಕು? ಅದಕ್ಕೆ ಅವಕಾಶವೇ ಇಲ್ಲ. ಒಂದು ಬಡ ಎಮ್ಮೆ ಹತ್ತು ರೂಪಾಯಿಯನ್ನಾದರೂ ತರುತ್ತದೆ. ನನ್ನನ್ನು ವಶಪಡಿಸಿಕೊಂಡು ಮಾರಿದರೆ ಏನೂ ಸಿಗುವುದಿಲ್ಲ."

ಸರ್ಕಾರದ ಬೆದರಿಕೆಗೆ ಬಗ್ಗದ ಎಲ್ಲ ಕಡೆಯಿಂದ ಬಂದ ಬೆಂಬಲದಿಂದ ಹರ್ಷಿತರಾದ ಸರ್ದಾರರು ತಮ್ಮ ಧ್ವನಿಯನ್ನು ಮತ್ತಷ್ಟು ಏರಿಸಿದರು. ನಡಿಯಾಡ್, ಬರೂಚ್, ಸೂರತ್ ಮತ್ತು ಅಹಮದಾಬಾದ್‌ನಲ್ಲಿ ನಡೆದ ಜಿಲ್ಲಾ ರೈತ ಸಮ್ಮೇಳನ ಗಳಲ್ಲಿ ಭಾಗವಹಿಸಿ ಉಗ್ರ ನುಡಿಗಳನ್ನು ಆಡಿದರು. ಬರೂಚ್‌ನಲ್ಲಿ ಸರ್ಕಾರಕ್ಕೆ ಎಚ್ಚರಿಕೆಯನ್ನು ನೀಡುತ್ತ ಹೀಗೆ ಹೇಳಿದರು, "ಸರ್ಕಾರವು ಜಮೀನುಗಳನ್ನು ನುಂಗಿಹಾಕಲು ಹೊರಟರೆ (ಸತ್ಯಾಗ್ರಹದ) ಮಹಾಜ್ವಾಲೆಯು ಇಡೀ ಗುಜರಾತನ್ನು ಆವರಿಸುವುದು ಮತ್ತು ಮುಂದಿನ ವರ್ಷ ಸರ್ಕಾರವು ಗುಜರಾತ್‌ನಲ್ಲಿ ಒಂದು ಪೈಸೆ ಕಂದಾಯವನ್ನೂ ವಸೂಲಿ ಮಾಡಲಾರದು..... ಸರ್ಕಾರವು ರಾವಣನಿಗಿದ್ದು ದಕ್ಕಿಂತಲೂ ಹೆಚ್ಚಿನ ಶಕ್ತಿ ತನಗೆ ಇದೆಯೆಂದು ಭಾವಿಸಿರಬಹುದು. ಆದರೆ ಅದು ವ್ಯವಹರಿಸಬೇಕಾದುದು ಒಬ್ಬ ಸೀತೆಯೊಡನೆ ಅಲ್ಲ, ೮೭,೦೦೦ ಮಂದಿ ಸತ್ಯಾಗ್ರಹಿಗಳ ಒಡನೆ ಅನ್ನುವುದನ್ನು ಬಲಶಾಲಿ ಸರ್ಕಾರವು ನೆನಪಿಡಲಿ." ಅವರು ಬಾರ್ಡೋಲಿಯ ರೈತರಿಗೆ ನೀಡಿದ ಸಂದೇಶ: "ಸಕಾಲಕ್ಕೆ ಮುಂಚಿನ ರಾಜಿಗೆ ಆತುರ ಪಡಬೇಡಿ. ನೀವು ಮಾಗದಿರುವ ಮಾವಿನ ಹಣ್ಣನ್ನು ಕಿತ್ತು ತಿಂದರೆ ನಿಮ್ಮ ಹಲ್ಲುಗಳು ಹುಳಿಯಾಗುತ್ತವೆ. ಅದಕ್ಕೆ ಬದಲಾಗಿ ಅದನ್ನು ನೀವು ಮಾಗಿದ ಹಣ್ಣಾಗಲು ಬಿಟ್ಟರೆ, ಅದು ಕ್ರಮೇಣ ಹಣ್ಣಾಗಿ ನೆಲಕ್ಕೆ ಬೀಳುವುದು. ಆಗ ನಿಮಗೆ ರುಚಿಕರವಾದ ಸಿಹಿಯಾದ ರಸವು ದೊರಕಿ ನಿಮ್ಮ ತಾಳ್ಮೆಗೆ ಫಲ ದೊರೆಯುವುದು. .....ರಾಜಿಗೆ ಕಾಲ ಪಕ್ವವಾದಾಗ ಯಾರೂ ಹೇಳದೆ, ನಮಗೆ ಅದು ತಾನಾಗೇ ತಿಳಿಯುವುದು."

ಜುಲೈ ೧೩ರಂದು ವೈಸ್‌ರಾಯ್ ಲಾರ್ಡ್ ಇರ್ವಿನ್ ಸಿಮ್ಲಾದಲ್ಲಿ ಬೊಂಬಾಯಿ ಪ್ರಾಂತ್ಯದ ಗೌರ್ನರ್ ಲೆಸ್ಲಿ ವಿಲ್ಸನ್ ಒಡನೆ ಸಮಾಲೋಚಿಸಿದರು. ಅನಂತರ ಬೊಂಬಾಯಿ ಸರ್ಕಾರವು ಒಂದು ಪ್ರಕಟಣೆಯನ್ನು ಹೊರಡಿಸಿ, "ಕಾನೂನಿನ ಪರಮಾಧಿಕಾರವನ್ನು ಎತ್ತಿ ಹಿಡಿಯುವುದು ವೈಸ್‌ರಾಯ್‌ರವರ ನಿಸ್ಸಂದಿಗ್ಧ ಕರ್ತವ್ಯ. ಆದರೆ, ಚಕ್ರವರ್ತಿಯ ಪ್ರತಿನಿಧಿಯಾಗಿ ಬಹು ಸಂಖ್ಯಾತ ಜನರ ಮೇಲೆ ಕಷ್ಟ ಮತ್ತು ಸಂಕಟವನ್ನು ಹೇರದಂತೆ ನೋಡಿಕೊಳ್ಳುವುದೂ ಸಹ ಅವರ ಕರ್ತವ್ಯ" ಎಂದು ಹೇಳಿತು. ಅಲ್ಲಿಗೆ ಸರ್ಕಾರ ತನ್ನ ಕಪಿಮುಷ್ಟಿಯನ್ನು ಕೊಂಚ ಸಡಲಿಸಿದಂತಾಯಿತು. ತದನಂತರ ಕಮಿಷನರನು ಸರ್ದಾರರಿಗೆ ಒಂದು ಸಂದೇಶವನ್ನು ಕಳುಹಿಸಿ, 'ಗೌರ್ನರನು ೧೮ನೆ ದಿನಾಂಕದಂದು ಸೂರತ್‌ಗೆ ಬರುತ್ತಿದ್ದಾರೆ ಮತ್ತು ನಿಮ್ಮನ್ನು ಭೇಟಿ ಮಾಡಲು ಬಯಸುತ್ತಾರೆ' ಎಂದು ತಿಳಿಸಿದನು. ಹಿಂದೆ, ವಲ್ಲಭಭಾಯ್ ಪಟೇಲರ ಪತ್ರಕ್ಕೆ ತಾನೇ ಜವಾಬು ಬರೆಯದೆ, ತನ್ನ ಕಾರ್ಯದರ್ಶಿ ಮೂಲಕ ಕೇವಲ ಒಂದು ಸಾಲಿನ ಉತ್ತರ ಕಳುಹಿಸಿದ್ದ ಗೌರ್ನರ್

ಲೆಸ್ಲಿ ವಿಲ್ಸನ್ ಸಾಹೇಬನು ಈಗ ಸರ್ದಾರರನ್ನು ಹುಡುಕಿಕೊಂಡು ತಾನೇ ಅವರ ಬಳಿಗೆ ಬರಲು ಸಿದ್ಧವಾಗಿದ್ದನು! ಅಷ್ಟು ಅಗಾಧವಾಗಿ ಬೆಳೆದಿತ್ತು ಸರ್ದಾರರ ವರ್ಚಸ್ಸು. ನಿಗದಿಯಾದ ದಿನ ಸರ್ದಾರರು ಗೌರ್ನರ್‌ರವರನ್ನು ಅಬ್ಬಾಸ್ ತ್ಯಾಬ್ಜಿ, ಕಲ್ಯಾಣ್‌ಜಿ ಮೆಹ್ತ, ಶ್ರೀಮತಿ ಶಾರದ ಬೆಹೆನ್ ಮೆಹ್ತ, ಶ್ರೀಮತಿ ಭಕ್ತಿಬಾ ದೇಸಾಯಿ ಮತ್ತು ಮಿಥುಬೆಹೆನ್ ಪೆಟಿಟ್ ಒಡನೆ ಭೇಟಿ ಮಾಡಿದರು. ಚರ್ಚೆ ಅಥವಾ ಸಮಾಲೋಚನೆ ಆರು ಘಂಟೆಗಳ ಕಾಲ ನಡೆಯಿತು. ಆದರೆ ಯಾವ ಒಪ್ಪಂದಕ್ಕೂ ಅವರು ಬರಲಾಗಲಿಲ್ಲ. ರೈತರು ಹೆಚ್ಚಿಸಿದ ಕಂದಾಯವನ್ನು ಪಾವತಿಸಬೇಕು ಅಥವಾ ಬಾರ್ಡೋಲಿಯ ರೈತರ ಪರವಾಗಿ ಯಾರಾದರು ಮೂರನೆ ವ್ಯಕ್ತಿ ಅಷ್ಟು ಹಣವನ್ನು ಠೇವಣಿ ಇಡಬೇಕು ಎಂದು ಗೌರ್ನರನು ಹಟ ಹಿಡಿದನು. ಸರ್ದಾರರು ಅದನ್ನು ಒಪ್ಪಲಿಲ್ಲ. ಸರ್ದಾರರ ಸಲಹೆಗಳನ್ನು ಗೌರ್ನರ್ ಒಪ್ಪಲಿಲ್ಲ. ಹೀಗಾಗಿ ಅವರ ಮಾತುಕತೆ ಮುರಿದುಬಿತ್ತು.[೧೩೪]

ಪತ್ರಿಕಾ ವಲಯದವರು ಗೌರ್ನರ್‌ನ ನಿಲುವನ್ನು ಕಟುವಾಗಿ ಟೀಕಿಸಿದರು. ಆಂಗ್ಲ ಒಡೆತನದ 'ದಿ ಸ್ಟೇಟ್ಸ್‌ಮನ್' ಪತ್ರಿಕೆಯು 'ಗೌರ್ನರ್‌ನ ಶರತ್ತುಗಳು ಅಸಮಂಜಸವಾದುವು' ಎಂದಿತು. ಆಂಗ್ಲ ಒಡೆತನದ ಮತ್ತೊಂದು ಪತ್ರಿಕೆ 'ದಿ ಪಯನೀರ್' 'ಎತ್ತಿ ಹಿಡಿಯಬೇಕಾದ ಮತ್ತು ತಡಮಾಡದೆ ಎತ್ತಿ ಹಿಡಿಯಬೇಕಾದ ಅಂಶವೇನೆಂದರೆ ಬಾರ್ಡೋಲಿ ಸಮಸ್ಯೆಯ ವಾಸ್ತವಾಂಶಗಳನ್ನು ಹೊಂದಿರುವ ನಿಸ್ಪಕ್ಷಪಾತಿಯಾದ ವೀಕ್ಷಕನು ನ್ಯಾಯವು ರೈತರ ಪರವಾಗಿದೆ ಮತ್ತು ಹೆಚ್ಚಿಸಿದ ಕಂದಾಯವನ್ನು ನಿಸ್ಪಕ್ಷಪಾತಿಯಾದ ನ್ಯಾಯ ಮಂಡಳಿಯಿಂದ ಪರೀಕ್ಷಿಸಬೇಕೆಂಬ ರೈತರ ಮನವಿ ನ್ಯಾಯಯುತವಾದುದು, ಸಮಂಜಸವಾದುದು ಮತ್ತು ಯುಕ್ತವಾದುದು ಎನ್ನುವ ತೀರ್ಮಾನಕ್ಕೆ ಬಂದೇ ಬರುವನು' ಎಂದು ಬರೆಯಿತು. ಆ ಪತ್ರಿಕೆಯು 'ಸರ್ಕಾರದ ಶರತ್ತುಗಳು ಕುದುರೆಯ ಮುಂದೆ ಗಾಡಿಯನ್ನು ಇಟ್ಟಂತಿದೆ' ಎಂದೂ ಸಹ ಬರೆಯಿತು. 'ದಿ ಲೀಡರ್' ಪತ್ರಿಕೆಯು 'ಸರ್ಕಾರದ ಶರತ್ತುಗಳು ಬಾರ್ಡೋಲಿಯ ರೈತರು ಸಂಪೂರ್ಣವಾಗಿ ಶರಣಾಗತರಾಗಬೇಕೆಂಬ ಆಗ್ರಹಕ್ಕೆ ಸಮನಾಗಿದೆ' ಎಂದಿತು. ಶ್ರೀಮತಿ ಆನಿಬೆಸೆಂಟ್‌ರವರ 'ನ್ಯೂ ಇಂಡಿಯಾ' ಪತ್ರಿಕೆಯು 'ಗೌರ್ನರನು ಮೊಂಡು ಹಿಡಿದರೆ ಅವನ ಮನಸ್ಸನ್ನು ಬದಲಾಯಿಸು ವುದಕ್ಕಾಗಿ ಸಂಸತ್ತಿನಲ್ಲಿ ಚಳವಳಿಯನ್ನು ಆರಂಭಿಸಬೇಕು' ಎಂದಿತು. 'ದಿ ಹಿಂದೂ' ಪತ್ರಿಕೆಯು, 'ತೃಪ್ತಿಕರವಾದ ಇತ್ಯರ್ಥವನ್ನು ಪಡೆಯಲು ಒಂದು ಸೊಗಸಾದ ಅವಕಾಶವನ್ನು ಗೌರ್ನರನು ಬಿಟ್ಟುಕೊಟ್ಟಿದ್ದಾನೆ' ಎಂದು ಬರೆಯಿತು. [೧೩೫]

ಗೌರ್ನರನು ಪತ್ರಿಕಾ ವಲಯದ ಈ ಟೀಕೆಗಳನ್ನು ಕಡೆಗಣಿಸಿ ಜುಲೈ ೨೩ರಂದು ಶಾಸನ ಪರಿಷತ್ತಿನಲ್ಲಿ ಮಾಡಿದ ಆರಂಭಿಕ ಭಾಷಣದಲ್ಲಿ "ಪುನರ್ನಿಗದಿಯಾದ

ಕಂದಾಯವು ನ್ಯಾಯಯುತವೆ ಅಥವಾ ಅನ್ಯಾಯಯುತವೆ ಎನ್ನುವುದು ಬಾರ್ಡೋಲಿ ಸಮಸ್ಯೆಯ ಮುಖ್ಯ ಅಂಶವಲ್ಲ; ಚಕ್ರವರ್ತಿಯವರ ಅಧಿಕಾರವು ಸಾಮ್ರಾಜ್ಯದ ಒಂದು ಭಾಗದಲ್ಲಿ ಮಾತ್ರ ಊರ್ಜಿತವೆ? – ಎನ್ನುವುದು ಮುಖ್ಯ ಅಂಶ. ಅದರಿಂದ ಸರ್ಕಾರವು ತನಗಿರುವ ಎಲ್ಲಾ ಶಕ್ತಿಯನ್ನು ಪ್ರಯೋಗಿಸಿ ಸಮಸ್ಯೆಯನ್ನು ಎದುರಿಸಲು ಸಿದ್ಧವಾಗಿದೆ," ಎಂದು ನುಡಿದನು. ಸರ್ದಾರರು ಶೀಘ್ರವೇ ಅದಕ್ಕೆ ಪ್ರತ್ಯುತ್ತರ ನೀಡಿದರು. ಅವರು "ಗೌರ್ನರ್‌ರವರ ಬೆದರಿಕೆಯ ಭಾಷಣವನ್ನು ನಾನು ನಿರೀಕ್ಷಿಸಿರಲಿಲ್ಲ..... ಬಾರ್ಡೋಲಿಯ ರೈತರು ಸಿವಿಲ್ ಶಾಸನಭಂಗ ಚಳವಳಿಯ ಹಕ್ಕನ್ನು ಪ್ರತಿಪಾದಿಸುವುದಕ್ಕಾಗಿ ಹೋರಾಡುತ್ತಿಲ್ಲ. ಅವರು ಶಾಸನಭಂಗ ಚಳವಳಿಯ ಮೂಲಕ, ಸರ್ಕಾರವು ಹೆಚ್ಚಿಸಿರುವ ಕಂದಾಯವನ್ನು ಮನ್ನಾ ಮಾಡುವಂತೆ, ಅದು ಆಗದಿದ್ದರೆ ಹೆಚ್ಚಿಸಿದ ಕಂದಾಯ ನ್ಯಾಯಯುತವೇ ಅಥವಾ ಅಲ್ಲವೇ ಅನ್ನುವುದರ ಪರೀಕ್ಷೆಗಾಗಿ ಒಂದು ಸ್ವತಂತ್ರ ಮತ್ತು ನಿಸ್ಪಕ್ಷಪಾತ ವಿಚಾರಣೆಯನ್ನು ಏರ್ಪಡಿಸುವಂತೆ ಒತ್ತಾಯಿಸುವುದಕ್ಕಾಗಿ ಹೋರಾಡುತ್ತಿದ್ದಾರೆ. ಆದದ್ದರಿಂದ ಸಮಸ್ಯೆಯ ಏಕಮಾತ್ರ ಮುಖ್ಯ ಅಂಶವು ಏನೆಂದರೆ ಪುನರ್ನಿರ್ಧಾರವಾದ ಕಂದಾಯವು ನ್ಯಾಯಯುತವಾದುದೇ ಅಥವಾ ಅಲ್ಲವೇ ಎನ್ನುವುದು. ಸರ್ಕಾರವು ಒಂದು ಪೂರ್ಣ, ತೆರೆದ ಮನಸ್ಸಿನ ಮತ್ತು ಸ್ವತಂತ್ರ ವಿಚಾರಣೆಯಿಂದ ಸಮಸ್ಯೆಯನ್ನು ಪರೀಕ್ಷಿಸಲು ಸಿದ್ಧವಿದ್ದರೆ, ಅದರಿಂದ ಬರಬಹುದಾದ ತಾರ್ಕಿಕ ಪರಿಣಾಮಗಳನ್ನು ಅಂದರೆ ವಿವಾದದಲ್ಲಿರುವ ಹೆಚ್ಚಿನ ಕಂದಾಯವನ್ನು ಪಾವತಿ ಮಾಡಲೇಬೇಕೆಂದು ಹಟ ಹಿಡಿಯುವುದನ್ನು ಮತ್ತು ಜನರಿಂದ ವಶಪಡಿಸಿಕೊಂಡಿರುವ ಭೂಮಿಗಳನ್ನು ಅವುಗಳ ಮೊದಲ ಮಾಲೀಕರಿಗೆ ವಾಪಸ್ಸು ನೀಡಬೇಕು ಎಂಬುದನ್ನು ಸರ್ಕಾರವು ಒಪ್ಪಲೇಬೇಕು," ಎಂದರು.[೧೩೬]

ಸರ್ದಾರ್ ಪಟೇಲರು ದಸ್ತಗಿರಿಯಾದರೆ, ಅವರ ಸ್ಥಾನವನ್ನು ತುಂಬುವುದಕ್ಕಾಗಿ ಆಗಸ್ಟ್ ೨ರಂದು ಗಾಂಧೀಜಿ ಬಾರ್ಡೋಲಿಗೆ ಬಂದರು. ರೈತರು ಬಹು ಸಂಖ್ಯೆಯಲ್ಲಿ ನೆರೆದು ಅವರನ್ನು ಸ್ವಾಗತಿಸಿದರು. ಆ ರೈತರಿಗೆ ಗಾಂಧೀಜಿ ಹೇಳಿದರು:

> ವಲ್ಲಭಭಾಯ್ ನಿಮ್ಮನ್ನು ಇಡೀ ಭಾರತದಲ್ಲಿ ಪ್ರಖ್ಯಾತರನ್ನಾಗಿ ಮಾಡಿದ್ದಾರೆ.... ಅವರ ಅನುಮತಿ ಇಲ್ಲದೆ ನಾನು ಮಾತನಾಡಲಾರೆ. ನಾನು ವಲ್ಲಭಭಾಯ್‌ರವರ ಹಿರಿಯ ಸಹೋದರ ಎನ್ನುವುದನ್ನು ಒಪ್ಪುತ್ತೇನೆ. ಆದರೆ ಸಾರ್ವಜನಿಕ ಜೀವನದಲ್ಲಿ ಒಬ್ಬ ವ್ಯಕ್ತಿಯು ಯಾರ ಕೈ ಕೆಳಗೆ ಸೇವೆ ಸಲ್ಲಿಸುತ್ತಿರುತ್ತಾನೊ ಆ ವ್ಯಕ್ತಿಗೆ ತಂದೆಯಾಗಿರಲಿ ಅಥವಾ ಅಣ್ಣನಾಗಿರಲಿ, ಅವನು ಆ ವ್ಯಕ್ತಿಯ ಸೂಚನೆಗಳನ್ನು ಪಾಲಿಸಲೇಬೇಕು.

ಈ ಮಧ್ಯೆ ಸೂರತ್ ಜಿಲ್ಲೆಯ ಶಾಸನ ಪರಿಷತ್ತಿನ ಸದಸ್ಯರು ಮತ್ತು ಕೆ.ಎಂ. ಮುನ್ಷಿ ಮೊದಲಾದವರು ಸಮಸ್ಯೆಯ ಪರಿಹಾರಕ್ಕೆ ಪ್ರಯತ್ನಿಸುತ್ತಿದ್ದರು. ಅವರ ಪ್ರಕಾರ ಸರ್ಕಾರವು ಕಂದಾಯದ ಹೆಚ್ಚಳವನ್ನು ಮತ್ತೆ ಪರಿಶೀಲಿಸುವುದಕ್ಕೆ ಖೈದಿಗಳನ್ನು ಬಿಡುಗಡೆ ಮಾಡುವುದಕ್ಕೆ, ರಾಜಿನಾಮೆ ನೀಡಿದ್ದ ತಲಾತಿಗಳು ಮತ್ತು ಪಟೇಲರನ್ನು ಮತ್ತೆ ಕೆಲಸಕ್ಕೆ ತೆಗೆದುಕೊಳ್ಳುವುದಕ್ಕೆ ವಶಪಡಿಸಿಕೊಂಡು ಇನ್ನೂ ಮಾರಾಟ ವಾಗದಿರುವ ಜಮೀನುಗಳನ್ನು ವಾಪಸ್ಸು ಕೊಡುವುದಕ್ಕೆ ಸಿದ್ಧವಿತ್ತು. ಆದರೆ ಆ ಕೆಲಸಗಳಾಗಬೇಕಾದರೆ ಮೊದಲು ಹಳೆಯ ಮತ್ತು ಹೊಸ ಕಂದಾಯದ ನಡುವಿನ ವ್ಯತ್ಯಾಸದ ಹಣವನ್ನು ಸರ್ಕಾರಿ ಖಜಾನೆಯಲ್ಲಿ ಠೇವಣಿ ಇಡಬೇಕಾಗಿತ್ತು. ಸರ್ಕಾರವು ಕಂದಾಯದ ಹೆಚ್ಚಳವನ್ನು ವಾಪಸ್ಸು ತೆಗೆದುಕೊಂಡರೆ ಆ ಹಣವನ್ನು ಹಿಂತಿರುಗಿಸಲಾಗುವುದು. ಆದರೆ ಪಟೇಲರು ಎಲ್ಲಾ ಜಮೀನುಗಳನ್ನು ವಾಪಾಸು ಮಾಡಬೇಕೆಂದರು, ಹೆಚ್ಚಿನ ಕಂದಾಯದ ಠೇವಣಿಯನ್ನೂ ಅವರು ಒಪ್ಪಲಿಲ್ಲ.

ಆಗಸ್ಟ್ ೬ರಂದು ಪುಣೆಯಲ್ಲಿ ವಲ್ಲಭಭಾಯ್ ಪಟೇಲ್ ಮತ್ತು ಬೊಂಬಾಯಿ ಪ್ರಾಂತ್ಯದ ಆರ್ಥಿಕ ಸದಸ್ಯ (ಅರ್ಥ ಮಂತ್ರಿ) ಸರ್ ಚುನಿಲಾಲ್ ಮೆಹ್ತ ನಡುವೆ ದೀರ್ಘ ಮಾತುಕತೆ ನಡೆಯಿತು. ಸರ್ ಚುನಿಲಾಲ್ ಮೆಹ್ತರವರು ಗೌರ್ನರ್ ಲೆಸ್ಲಿ ವಿಲ್ಸನ್‌ರವರ ಪರವಾಗಿ ಭಾಗವಹಿಸಿದ್ದರು. ಸರ್ ಚುನಿಲಾಲ್ ಮೆಹ್ತ ರೈತರಿಗೆ ಎಲ್ಲಾ ಜಮೀನನ್ನು ಹಿಂತಿರುಗಿಸಲು, ಮಾರಾಟವಾಗಿರುವ ಭೂಮಿಯನ್ನು ವಾಪಸ್ಸು ಖರೀದಿಸಿ ರೈತರಿಗೆ ಹಿಂತಿರುಗಿಸಲು ಒಪ್ಪಿದರು. ಆದರೆ ಠೇವಣಿಯ ಪ್ರಶ್ನೆ ಹಾಗೆಯೆ ಉಳಿಯಿತು. ಆಗ ವಿಠ್ಠಲ್‌ಭಾಯ್ ಪಟೇಲರು ಒಂದು ತಂತ್ರ ಹೂಡಿದರು. ಅವರು ತಮ್ಮ ಸ್ನೇಹಿತ ಮತ್ತು ಬೊಂಬಾಯಿಯ ವರ್ತಕ ರಾಮಚಂದ್ರ ಭಟ್‌ರವರು ಠೇವಣಿಯನ್ನು ಇಡುವಂತೆ ಪ್ರೇರೇಪಿಸಿದರು. ರಾಮಚಂದ್ರ ಭಟ್ ಬಾರ್ಡೋಲಿ ತಾಲ್ಲೂಕಿನ ಮೋಟ ಗ್ರಾಮದವರು. ವಲ್ಲಭಭಾಯ್ ಆ ಏರ್ಪಾಟನ್ನು ತಿರಸ್ಕರಿಸಿದರು. ಆದರೆ ಅವರ ಜೊತೆಗೆ ಬಂದಿದ್ದ ಮಹದೇವ ದೇಸಾಯಿಯವರು 'ರಾಮಚಂದ್ರ ಭಟ್ ಠೇವಣಿ ಇಟ್ಟರೆ, ಸರ್ದಾರರು ಅಥವಾ ರೈತರು ಠೇವಣಿಗೆ ಒಪ್ಪಿದಂತೆ ಆಗುವುದಿಲ್ಲವೆಂದು' ವಾದ ಮಾಡಿದರು. ಕೊನೆಗೆ ಸರ್ದಾರರು ಸಮ್ಮತಿಸಿದರು, ಒಪ್ಪಂದ ಆಯಿತು.

ಒಪ್ಪಂದವನ್ನು ಜಾರಿಗೆ ತರಲು ಸರ್ಕಾರವು ಶೀಘ್ರ ಕ್ರಮಗಳನ್ನು ತೆಗೆದು ಕೊಂಡಿತು. ಖೈದಿಗಳು ಬಿಡುಗಡೆ ಮಾಡಲ್ಪಟ್ಟರು. ತಲಾತಿಗಳು ಮತ್ತು ಪಟೇಲರು ತಮ್ಮ ತಮ್ಮ ಪೂರ್ವ ಹುದ್ದೆಗಳಿಗೆ ನಿಯಮಿಸಲ್ಪಟ್ಟರು. ವಶಪಡಿಸಿಕೊಂಡಿದ್ದ ಜಮೀನುಗಳನ್ನು ಆಯಾ ರೈತರಿಗೆ ವಾಪಸ್ಸು ಮಾಡುವ ಆದೇಶಗಳು ಹೊರಟವು. ಅಗ್ಗವಾಗಿ ಜಮೀನುಗಳನ್ನು ಪಡೆದಿದ್ದವರು ಸರ್ಕಾರದ ಮತ್ತು ರೈತರ ಒತ್ತಡಕ್ಕೆ

ತಲೆಬಾಗಿ ಜಮೀನುಗಳನ್ನು ಬಿಟ್ಟು ಹೋದರು. ಸರ್ದಾರರು 'ಹಳೆಯ ದರದ ಪ್ರಕಾರ ಕಂದಾಯವನ್ನು ಪಾವತಿಸುವಂತೆ' ರೈತರಿಗೆ ಸೂಚನೆ ನೀಡಿದರು.

ಮಾರಾಟವಾದ ಜಮೀನುಗಳನ್ನು ಎಂದಿಗೂ ರೈತರಿಗೆ ಹಿಂತಿರುಗಿಸುವುದಿಲ್ಲ ವೆಂದು ಪದೇ ಪದೇ ಹೇಳುತ್ತಿದ್ದ ಕಲೆಕ್ಟರ್ ಹಾರ್ಟ್‌ಶೋರನ್ ವರ್ಗಾಯಿಸಲ್ಪಟ್ಟು ಅವನ ಸ್ಥಾನಕ್ಕೆ ಜೋಸೆಫ್ ಗ್ಯಾರೆಟ್ ನೇಮಕವಾದರು. ಅವರು ಕೈರಾ ಜಿಲ್ಲೆಯ ಪ್ರವಾಹ ಕಾಲದಲ್ಲಿ ಪಟೇಲರು ಸಲ್ಲಿಸಿದ ಅಮೋಘ ಸೇವೆಗೆ ಅವರ ಹೆಸರನ್ನು ಗೌರವಾನ್ವಿತರ ಪಟ್ಟಿಗೆ ಸೇರಿಸಲು ಬಯಸಿದ್ದ ಅಧಿಕಾರಿ. ಗಾಂಧೀಜಿಯ ವಿಚಾರಣೆಯನ್ನು ನಡೆಸಿದ ನ್ಯಾಯಾಧೀಶ ಬ್ರೂಮ್‌ಫೀಲ್ಡ್ ಮತ್ತು ಪ್ರವಾಹ ಬಂದಾಗ ಪಟೇಲರ ನೆರವು ಕೋರಿದ್ದ ಕೈರಾ ಜಿಲ್ಲೆಯ ಕಲೆಕ್ಟರ್ ಮಾಕ್ಸ್‌ವೆಲ್ ಕಂದಾಯದ ಹೆಚ್ಚಳದ ಪ್ರಶ್ನೆಯನ್ನು ಪರೀಕ್ಷಿಸಲು ನಿಯಮಿಸಲ್ಪಟ್ಟರು.[೧೩೭]

ಅಲ್ಲಿಗೆ ಬಾರ್ಡೋಲಿಯ ಸತ್ಯಾಗ್ರಹ ಮುಕ್ತಾಯವಾಯಿತು. ಸರ್ದಾರರ ನಾಯಕತ್ವದಲ್ಲಿ ಬಾರ್ಡೋಲಿಯ ರೈತರು ಜಯಶಾಲಿಗಳಾದರು. ಸತ್ಯ ಮತ್ತು ಅಹಿಂಸೆಯನ್ನು ಎಂತಹ ಬಲಿಷ್ಠಶಕ್ತಿಯು ಅಡಗಿಸಲಾರದು ಎನ್ನುವುದು ಸಾಬೀತಾಯಿತು. ಬಾರ್ಡೋಲಿ ಭಾರತವಲ್ಲದೆ ಅಂತರರಾಷ್ಟ್ರೀಯ ಗಮನವನ್ನು ಸೆಳೆಯಿತು. ಎಲ್ಲಕ್ಕಿಂತಲೂ ಮಿಗಿಲಾಗಿ ವಲ್ಲಭಭಾಯ್ ಪಟೇಲರು 'ಸರ್ದಾರ್ ಪಟೇಲ್' ಆದರು. ಅಷ್ಟೇ ಅಲ್ಲ, ಬಾರ್ಡೋಲಿಯ ಸರ್ದಾರ 'ಭಾರತದ ಸರ್ದಾರ' ಆದರು.

ಹೊಗಳಿಕೆ ಮತ್ತು ಅಭಿನಂದನೆಗಳ ಮಹಾ ಪ್ರವಾಹವೇ ಸರ್ದಾರರ ಕಡೆಗೆ ಹರಿದು ಬಂದಿತು. 'ಪಟೇಲರ ಅಚಲತೆ ಮತ್ತು ಮೃದುತ್ವ ಇಲ್ಲದೆ ಇದ್ದಿದ್ದರೆ (ಸಮಸ್ಯೆಯ) ಇತ್ಯರ್ಥ ಅಸಾಧ್ಯವಾಗುತ್ತಿತ್ತು' ಎಂದರು ಗಾಂಧೀಜಿ. ಚಕ್ರವರ್ತಿ ರಾಜಗೋಪಾಲಾಚಾರಿಯವರು 'ಭಾರತದ ಇತಿಹಾಸದಲ್ಲಿ ವಲ್ಲಭಭಾಯ್‌ರವರದು ಮಹಾ ಪಾತ್ರ' ಎಂದರು. ಸರೋಜಿನಿ ನಾಯ್ಡುರವರು 'ಪಟೇಲರು ವಿಸ್ಮಯಕಾರಿ ಸಂಘಟನಾ ಶಕ್ತಿಯನ್ನು ತೋರಿದ್ದಾರೆ..... ಒಂದು ವರ್ಷದಲ್ಲಿ ಎರಡು ಬಾರಿ' ಎಂದರು ಮತ್ತು 'ಗಾಂಧೀಜಿಯ ತತ್ವಗಳನ್ನು ಕಾರ್ಯಸಾಧ್ಯ ಚೈತನ್ಯಶೀಲ ಕ್ರಿಯೆ ಯನ್ನಾಗಿ ಪಟೇಲರು ಪರಿವರ್ತಿಸಿದ್ದಾರೆ' ಎಂದರು. ಮೋತಿಲಾಲ್ ನೆಹರುರವರು ಬಾರ್ಡೋಲಿಯ ಯಶಸ್ಸನ್ನು 'ಉಜ್ವಲ ವಿಜಯ' ಎಂದೂ ಮತ್ತು ಪಟೇಲರನ್ನು 'ಅಸಮಾನ ದಂಡನಾಯಕ' ಎಂದೂ ಬಣ್ಣಿಸಿದರು. ರೈಟ್ ಆನರಬಲ್ ವಿ.ಎಸ್. ಶ್ರೀನಿವಾಸ ಶಾಸ್ತ್ರಿಯವರು ದಕ್ಷಿಣ ಆಫ್ರಿಕದ ಜೋಹಾನ್ಸ್‌ಬರ್ಗ್‌ನಿಂದ ಪತ್ರ ಬರೆದು, 'ವಲ್ಲಭಭಾಯ್ ಅತ್ಯಂತ ಉನ್ನತ ಸ್ಥಾನಕ್ಕೆ ಏರಿದ್ದಾರೆ. ಅವರಿಗೆ ನಾನು ಗೌರವದಿಂದ

ತಲೆಬಾಗಿಸುತ್ತೇನೆ' ಎಂದರು. ಮದನ್ ಮೋಹನ್ ಮಾಳವೀಯರವರು ಪಟೇಲರಿಗೆ ಪತ್ರ ಬರೆದು, "ಸತ್ಯಾಗ್ರಹದ ಮೊದಲನೆಯ ಗಮನಾರ್ಹ ಗೆಲುವು ಚಂಪಾರಣ್ಯದಲ್ಲಿ. ಎರಡನೆಯ ಮತ್ತು ಅಷ್ಟೇ ಶ್ರೇಷ್ಠ ಗೆಲುವು ಬಾರ್ಡೋಲಿಯಲ್ಲಾಗಿದೆ," ಎಂದು ತಿಳಿಸಿದರು. ಸುಭಾಷ್ ಚಂದ್ರ ಬೋಸ್‌ರವರು ಒಂದು ಟೆಲಿಗ್ರಾಂ ಕಳುಹಿಸಿ, 'ನಿಮ್ಮ ಭರ್ಜರಿ ವಿಜಯಕ್ಕಾಗಿ ಇಡೀ ಭಾರತ ನಿಮ್ಮೊಡನೆ ಸಂತೋಷಪಡುತ್ತಿದೆ. ಸತ್ಯಾಗ್ರಹಿಗಳು ಮತ್ತು ಅವರ ನಾಯಕನಿಗೆ ನಮ್ಮ ಗೌರವಗಳು,' ಎಂದರು. ಮುಸ್ಲಿಂ ನಾಯಕರಾದ ಮೌಲಾನ ಶೌಕತ್ ಅಲಿ ಮತ್ತು ಶುಹಿಬ್ ಕುರೇಶಿ, 'ನಮ್ಮ ಧೈರ್ಯಶಾಲಿ ಸಹೋದರರು, ಅವರ ಸರ್ದಾರ ಮತ್ತು ಜೊತೆಯ ಕೆಲಸಗಾರರಿಗೆ ಅಭಿನಂದನೆಗಳು' ಎಂದು ಟೆಲಿಗ್ರಾಂ ಕಳುಹಿಸಿದರು. ರಿಚರ್ಡ್ ಗ್ರೆಗ್‌ರವರು ಗಾಂಧೀಜಿಗೆ ಪತ್ರ ಬರೆದು, 'ಬಾರ್ಡೋಲಿ ರೈತರಿಗೆ, ನಿಮಗೆ ಮತ್ತು ವಲ್ಲಭಭಾಯ್ ಪಟೇಲ್‌ಗೆ ಹೃದಯಪೂರ್ವಕ ಅಭಿನಂದನೆಗಳು. ಅದು ಒಂದು ಅದ್ಭುತ ಹೋರಾಟ, ಕ್ರಮಗಳು ಮತ್ತು ತಂತ್ರಗಳಲ್ಲಿ ಇಡೀ ದೇಶಕ್ಕೆ ಅದೊಂದು ಪ್ರಭಾವಪೂರ್ಣ ಉದಾಹರಣೆಯಾಗುತ್ತದೆ,' ಎಂದರು.[೧೩೮]

ಬಾರ್ಡೋಲಿ, ಸೂರತ್ ಮತ್ತು ಅಹಮದಾಬಾದ್‌ನಲ್ಲಿ ವಿಜಯೋತ್ಸವಗಳು ನಡೆದುವು. ಅವುಗಳಲ್ಲಿ ಭಾಗವಹಿಸಲು ಗಾಂಧೀಜಿ ಹಟಮಾಡಿ ಬಂದರು. ಒಂದು ಸಭೆಯಲ್ಲಿ ಅವರು ಸರ್ದಾರರಿಗೆ ಒಂದು ಮಾನಪತ್ರವನ್ನೂ ಸಹ ಅರ್ಪಿಸಿದರು. ಅದರಿಂದ ೫೩ ವರ್ಷದ ಸರ್ದಾರರಿಗೆ ಬಹಳ ಮುಜುಗರವಾಯಿತು. ಆ ಸಭೆಗಳಲ್ಲಿ ಅವರು ಮಾಡಿದ ಭಾಷಣಗಳ ಮುಖ್ಯಾಂಶಗಳು:

> ಬಾರ್ಡೋಲಿಗಾಗಿ ನೀವು ನನಗೆ ನೀಡುತ್ತಿರುವ ಗೌರವಕ್ಕೆ ನಾನು ಅರ್ಹನಲ್ಲ. ನಾನು ಪವಾಡ ಸದೃಶ ಔಷಧಿಯನ್ನು ರೋಗಿಗೆ–ಭಾರತೀಯ ರೈತನಿಗೆ–ಕೊಡುವ ಬರೇ ಸಾಧನ..... ಯಾರಾದರು ಗೌರವಕ್ಕೆ ಅರ್ಹರಾಗಿದ್ದರೆ ಅವರು ಆ ಔಷಧಿಯನ್ನು ಸೃಷ್ಟಿಸಿದವರು.
>
> ಗೌರವವು ರೋಗಿಗೂ ಸಹ ಸಲ್ಲುತ್ತದೆ, ಏಕೆಂದರೆ ಅವನು ಆತ್ಮ ಸಂಯಮವನ್ನು ಪ್ರದರ್ಶಿಸದೇ ಹೋಗಿದ್ದರೆ ಔಷಧಿ ಕೆಲಸಮಾಡುತ್ತಿರಲಿಲ್ಲ.
>
> ಅಹಮದಾಬಾದ್‌ನ ನಾಗರಿಕರು ನನ್ನನ್ನು ಗಾಂಧೀಜಿಯ ಮುಖ್ಯ ಅನುಯಾಯಿ ಎಂದು ಕರೆದಿದ್ದಾರೆ. ಆ ವಿವರಣೆಗೆ ನಾನು ಅರ್ಹನಾಗಿದ್ದರೆ ಚೆನ್ನಾಗಿತ್ತೆಂದು ನಾನು ಬಯಸುತ್ತೇನೆ.

ಆದಾಗ್ಯೂ ನಾನು ಅರ್ಹನಲ್ಲ ಎನ್ನುವುದು ನನಗೆ ಗೊತ್ತು.

ಗಾಂಧೀಜಿ ಹೊರಟುಹೋದಮೇಲೆ ಏನಾಗುವುದು ಎಂದು ಜನರು ಆಗಾಗ್ಗೆ ಕೇಳುತ್ತಾರೆ. ಆ ವಿಷಯವಾಗಿ ನನಗೆ ಯಾವ ಭಯವೂ ಇಲ್ಲ..... ಅವರು ನಮಗೆ ಏನು ಕೊಡಬೇಕಾಗಿತ್ತೋ ಅದನ್ನೆಲ್ಲ ಕೊಟ್ಟಿದ್ದಾರೆ. ನಮ್ಮ ಕರ್ತವ್ಯವನ್ನು ನೆರವೇರಿಸುವುದು (ಈಗ) ನಮಗೆ ಬಿಟ್ಟದ್ದು.[೧೩೯]

ಬ್ರೂಮ್‌ಫೀಲ್ಡ್ ಮತ್ತು ಮ್ಯಾಕ್ಸ್ ವೆಲ್‌ರವರು ಆರು ತಿಂಗಳುಗಳ ಕಾಲ ದಾಖಲೆಗಳನ್ನು ಪರೀಕ್ಷಿಸಿ, ರೈತರು ಮತ್ತು ಅಧಿಕಾರಿಗಳನ್ನು ಸಂಧಿಸಿ, ೧೯೨೯ರ ಮೇನಲ್ಲಿ ಶೇ. ೫.೭ರಷ್ಟು ಕಂದಾಯದ ಹೆಚ್ಚಳಕ್ಕೆ (ಶೇ.೨೨ಕ್ಕೆ ವಿರುದ್ಧವಾಗಿ) ಶಿಫಾರಸ್ಸು ಮಾಡಿದರು. ಸರ್ಕಾರವು ಆ ತೀರ್ಪನ್ನು ಒಪ್ಪಿಕೊಂಡು ಅದರಂತೆ ಆದೇಶವನ್ನು ಹೊರಡಿಸಿತು. ಸರ್ದಾರ್ ಪಟೇಲ್ ಮತ್ತು ಬಾರ್ಡೋಲಿಯ ರೈತರ ನಿಲವು ಸರಿಯಾಗಿತ್ತು ಎನ್ನುವುದು ರುಜುವಾತಾಯಿತು.

ಅದರಿಂದ ಹುರುಪುಗೊಂಡ ಸರ್ದಾರರು ಬ್ರೂಮ್‌ಫೀಲ್ಡ್ – ಮ್ಯಾಕ್ಸ್‌ವೆಲ್ ವರದಿಯು ಬಾರ್ಡೋಲಿ ತಾಲ್ಲೂಕಿಗೆ ಮಾತ್ರ ಸೀಮಿತವಾಗಬಾರದು, ಎಂದರು ಮತ್ತು ಸತ್ಯಾಗ್ರಹದ ಜ್ವಾಲೆ ಇಡೀ ಪ್ರಾಂತ್ಯಕ್ಕೆ ಹರಡುವುದು ಎಂದು ಸರ್ಕಾರವನ್ನು ಎಚ್ಚರಿಸಿದರು. ಕಂದಾಯವನ್ನು ನಿಗದಿ ಮಾಡುವ ಅಧಿಕಾರವು ಶಾಸನ ಸಭೆಗೆ ಇರಬೇಕೆ ಹೊರತು, ಅಧಿಕಾರಿಗಳಿಗೆ ಇರಬಾರದೆಂದೂ ಸಹ ಪಟೇಲರು ಆಗ್ರಹಿಸಿದರು. ಸರ್ಕಾರದ ಕಂದಾಯ ನೀತಿಯ ವಿರುದ್ಧ ಹೋರಾಟಕ್ಕಾಗಿ ಗುಜರಾತ್ ಮತ್ತು ಮಹಾರಾಷ್ಟ್ರ ಪ್ರದೇಶಗಳನ್ನು ಒಂದುಗೂಡಿಸಲು ಯತ್ನಿಸಿ 'ಬಾಂಬೆ ಪ್ರೆಸಿಡೆನ್ಸಿ ಲ್ಯಾಂಡ್ ಲೀಗ್' ಸಂಸ್ಥೆಯನ್ನು ಸ್ಥಾಪಿಸಿದರು. ಬಾಂಬೆ ಸರ್ಕಾರವು ಮತ್ತೆ ತಗ್ಗಿತು. ಸೈಮನ್ ಕಮಿಷನ್ ಸಾಂವಿಧಾನಿಕ ಸುಧಾರಣೆಗಳ ಬಗೆಗೆ ತನ್ನ ಸಲಹೆಗಳನ್ನು ಸೂಚಿಸುವವರೆಗೆ ಕಂದಾಯದ ಹೆಚ್ಚಳವು ಇಲ್ಲ ಎಂದು ಪ್ರಕಟಿಸಿತು. ಪ್ರಾಂತ್ಯದ ಇತರ ಜಿಲ್ಲೆಗಳಲ್ಲಿನ ಕಂದಾಯ ಪುನರ್ನಿಗದಿಯ ಯೋಜನೆಯನ್ನು ಕೈ ಬಿಟ್ಟಿತು.[೧೪೦]



ಬಾರ್ಡೋಲಿಯ ವೀರ

ಭಾಗ – ಮೂರು

ರಾಷ್ಟ್ರ ನಾಯಕ

೧೦. ರಾಷ್ಟ್ರ ರಂಗಕ್ಕೆ ಜಿಗಿತ

೧೦.೧ ಕಲ್ಕತ್ತ ಕಾಂಗ್ರೆಸ್‌ನಲ್ಲಿ ಸರ್ದಾರ್ ಪಟೇಲ್

ಬಾರ್ದೋಲಿಯ ವಿಜಯ ಸರ್ದಾರ್ ಪಟೇಲರಿಗೆ ಅಖಿಲ ಭಾರತ ಕೀರ್ತಿ ಮತ್ತು ಮಾನ್ಯತೆಯನ್ನು ತಂದಿತು. ಆ ವರ್ಷ (೧೯೨೮) ಡಿಸೆಂಬರ್ ಅಂತ್ಯದಲ್ಲಿ ಕಾಂಗ್ರೆಸ್ಸಿನ ಳಳನೆ ವಾರ್ಷಿಕ ಅಧಿವೇಶನವು ನಡೆಯುವುದಿತ್ತು. ಕೆಲವು ಪ್ರಾಂತೀಯ ಕಾಂಗ್ರೆಸ್ ಸಮಿತಿಗಳು ಆ ವರ್ಷದ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಸರ್ದಾರರ ಹೆಸರನ್ನು ಸೂಚಿಸಿದುವು. ಕಾಂಗ್ರೆಸ್ಸಿನ ಪ್ರಭಾವಿ ಮತ್ತು ಹಿರಿಯ ನಾಯಕ ಮೋತಿಲಾಲ್ ನೆಹರುರವರು ಬಾರ್ದೋಲಿ ಸತ್ಯಾಗ್ರಹ ಮುಕ್ತಾಯವಾಗುವ ಮುನ್ನವೇ ಕಾಂಗ್ರೆಸ್‌ನ ಅಧ್ಯಕ್ಷ ಸ್ಥಾನಕ್ಕೆ ಸರ್ದಾರರ ಹೆಸರನ್ನು ಪ್ರಸ್ತಾಪಿಸಿದ್ದರು. ಅವರು ೧೯೨೮ರ ಜುಲೈ ೧೧ರಂದು (ಸತ್ಯಾಗ್ರಹ ಮುಕ್ತಾಯವಾದದ್ದು ಆಗಸ್ಟ್‌ನಲ್ಲಿ) ಗಾಂಧೀಜಿಗೆ ಪತ್ರ ಬರೆದು ಈ ರೀತಿ ತಿಳಿಸಿದ್ದರು:

> ಈ ಹೊತ್ತಿನ ವೀರ ಅಂದರೆ ವಲ್ಲಭಭಾಯ್ ಎನ್ನುವುದು ನನಗೆ ಸ್ಪಷ್ಟವಾಗಿದೆ. ನಾವು ಮಾಡಬಹುದಾದ ಕನಿಷ್ಠ ಕೆಲಸವೆಂದರೆ ಅವರಿಗೆ ಕಿರೀಟವನ್ನು ನೀಡುವುದು. ಅವರನ್ನು ಅಧ್ಯಕ್ಷರನ್ನಾಗಿ ಮಾಡಲು ಆಗದಿದ್ದರೆ, ಎಲ್ಲಾ ಸಂಗತಿಗಳನ್ನು ಪರಿಶೀಲಿಸಿದರೆ, ಜವಹರ್ ಅತ್ಯಂತ ಉತ್ತಮವಾದ ಆಯ್ಕೆ ಎಂದು ನಾನು ಭಾವಿಸಿದ್ದೇನೆ.[೧]

(ಮೋತಿಲಾಲರ ಈ ಪುತ್ರ ವ್ಯಾಮೋಹ ಅವರ ವಂಶದಲ್ಲಿ ಹರಿದು ಬಂದಿದೆ ಎಂದು ಕಾಣುತ್ತದೆ. – ಲೇಖಕ)

ಹೀಗೆ ಮೋತಿಲಾಲ್ ನೆಹರುರವರು ವಲ್ಲಭಭಾಯ್‌ರವರಿಗೆ ನ್ಯಾಯವಾಗಿ ಸಲ್ಲಬೇಕಾದ ಸ್ಥಾನ ಮತ್ತು ಗೌರವವನ್ನು ನೀಡಲು ಸೂಚಿಸಿದರೂ, ಬಹಳ ಜಾಣ್ಮೆಯಿಂದ ತಮ್ಮ ಮಗ ಜವಹರನ ಹೆಸರನ್ನೂ ಮುಂದಿಟ್ಟರು. ಇದು ಮಗನ ಬಗೆಗೆ ತಂದೆಯ ವಾಂಛಲ್ಯ ಎಂದು ಕಾಣುತ್ತದೆ. ನಿಜ, ಜವಹರ್ ಒಬ್ಬ ಆಕರ್ಷಕ ಯುವ ನಾಯಕರಾಗಿದ್ದರು. ಯುವಕರನ್ನು ಅಯಸ್ಕಾಂತದಂತೆ ಸೆಳೆಯುತ್ತಿದ್ದರು. ಆದರೆ ವಲ್ಲಭಭಾಯ್‌ರವರು ತಾಳ್ಮೆ, ಧೈರ್ಯ, ಸಾಹಸ ಮತ್ತು ಚತುರತೆಯಿಂದ ಬಾರ್ದೋಲಿಯ ಸುಮಾರು ೮೭,೦೦೦ ಮಂದಿ ರೈತರನ್ನು ಅಹಿಂಸಾ ಸತ್ಯಾಗ್ರಹದಲ್ಲಿ ಮುನ್ನಡೆಸಿ, ಪ್ರಚಂಡ ವಿಜಯವನ್ನು ಸಾಧಿಸಿ, ಭಾರತೀಯರು ಯಶಸ್ವಿಯಾಗಿ ಹೋರಾಡಬಲ್ಲರು ಎಂಬುದನ್ನು ತೋರಿಸಿದ್ದರು ಮತ್ತು ಅಹಿಂಸಾತ್ಮಕ ಸತ್ಯಾಗ್ರಹದ ಬೃಹತ್ ಶಕ್ತಿಯನ್ನು ಸಾಬೀತು ಮಾಡಿದ್ದರು, ಬಲಿಷ್ಠ ಬ್ರಿಟಿಷ್ ಸರ್ಕಾರಕ್ಕೆ ಮಣ್ಣು ಮುಕ್ಕಿಸಿದ್ದರು.

ಗಾಂಧೀಜಿಯವರು ಈ ಇಬ್ಬರನ್ನೂ ಬಿಟ್ಟು ಮೋತಿಲಾಲ್ ನೆಹರುರವರನ್ನೇ ಅಧ್ಯಕ್ಷರನ್ನಾಗಿ ಆರಿಸಿದರು. ಅದಕ್ಕೆ ಒಂದು ಕಾರಣವೂ ಇತ್ತು:

ಆಗ ಲಂಡನ್ ಸರ್ಕಾರದಲ್ಲಿ 'ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ಇಂಡಿಯ' ಆಗಿದ್ದ ಲಾರ್ಡ್ ಬರ್ಕನ್‌ಹೆಡ್ 'ಬಹುಜನ ಒಪ್ಪುವಂತಹ ಸಾಂವಿಧಾನಿಕ ಸುಧಾರಣೆಗಳನ್ನು ರಚಿಸುವ ಶಕ್ತಿ ಭಾರತೀಯರಿಗೆ ಇಲ್ಲ' ಎಂದು ಪದೇ ಪದೇ ಹೇಳುತ್ತಿದ್ದನು. ಸೈಮನ್ ಸಮಿತಿಯಲ್ಲಿ ಭಾರತೀಯರನ್ನು ಸೇರಿಸದಿದ್ದುದಕ್ಕೆ ಅವನ ಈ ಧೋರಣೆಯೆ ಕಾರಣವಾಗಿತ್ತು.[೨] ಅವನ ಈ ಸವಾಲನ್ನು ಎದುರಿಸಲು ಒಂದು ಸರ್ವಪಕ್ಷ ಸಮ್ಮೇಳನವನ್ನು ಕರೆಯಬೇಕೆಂದು ೧೯೨೭ರಲ್ಲಿ ಮದ್ರಾಸ್‌ನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನವು ತೀರ್ಮಾನಿಸಿ, ಅಂತಹ ಸಮ್ಮೇಳನವನ್ನು ೧೯೨೮ರ ಫೆಬ್ರುವರಿ ಮತ್ತು ಮೇ ತಿಂಗಳಲ್ಲಿ ನಡೆಸಿತು. ಸಂವಿಧಾನದ ಒಂದು ಕರಡನ್ನು ತಯಾರಿಸುವುದಕ್ಕಾಗಿ ಮೋತಿಲಾಲ್ ನೆಹರುರವರ ನಾಯಕತ್ವದಲ್ಲಿ ಒಂದು ಸಮಿತಿಯನ್ನು ಸರ್ವಪಕ್ಷ ಸಮ್ಮೇಳನವು ರಚಿಸಿತು. ಮೋತಿಲಾಲ್ ನೆಹರುರವರು ಆಗಸ್ಟ್ ವೇಳೆಗೆ ಕರಡು ಸಂವಿಧಾನವನ್ನು ರಚಿಸಿದರು. ಅದು 'ನೆಹರು ವರದಿ' ಎಂದು ಪ್ರಸಿದ್ಧಿಯಾಯಿತು. ಮುಸ್ಲಿಂ ಲೀಗ್ ಹೊರತಾಗಿ ಮಿಕ್ಕ ಎಲ್ಲಾ ಪಕ್ಷಗಳು ಆ ವರದಿಯನ್ನು ಮೆಚ್ಚಿದುವು. ಆದಾಗ್ಯೂ ಆ ವರದಿ ಸೂಚಿಸಿದ್ದ 'ಡೊಮಿನಿಯನ್ ಸ್ಟೇಟಸ್' ಅನ್ನು ಜವಹರಲಾಲ್ ಮತ್ತು ಸುಭಾಷ್ ಚಂದ್ರ ಬೋಸ್ ಮತ್ತು ಅವರ ಬೆಂಬಲಿಗರು

ವಿರೋಧಿಸಿದರು ಮತ್ತು ಪೂರ್ಣ ಸ್ವಾತಂತ್ರ್ಯವೇ ಕಾಂಗ್ರೆಸ್ಸಿನ ಗುರಿ ಆಗಬೇಕೆಂದು ಆಗ್ರಹಿಸಿದರು.[೩] ಒಟ್ಟಿನಲ್ಲಿ ಮೋತಿಲಾಲ್ ನೆಹರುರವರ ಶ್ಲಾಘನೀಯ ಕೆಲಸಕ್ಕಾಗಿ ಅವರನ್ನು ಗಾಂಧೀಜಿಯವರು ಕಲ್ಕತ್ತ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರನ್ನಾಗಿ ಆರಿಸಿದರು.

ಕಲ್ಕತ್ತ ಕಾಂಗ್ರೆಸ್ ಅಧಿವೇಶನದಲ್ಲಿ ಅಧ್ಯಕ್ಷ ಮೋತಿಲಾಲ್ ನೆಹರುರವರು ಬಾರ್ಡೋಲಿ ಸತ್ಯಾಗ್ರಹದ ಯಶಸ್ಸಿಗೆ ಕಾರಣರಾದ ಸರ್ದಾರ್ ವಲ್ಲಭಭಾಯ್ ಪಟೇಲ್ ಮತ್ತು ಇತರ ಎಲ್ಲರನ್ನು ಅಭಿನಂದಿಸುವ ಮಸೂದೆಯನ್ನು ಮಂಡಿಸಿದರು. 'ಪೂರ್ಣ ಸ್ವಾತಂತ್ರ್ಯ'ದ ಬೆಂಬಲಿಗರು ಬಿರುದುಗಳನ್ನು ಉಪಯೋಗಿಸುವುದು ಊಳಿಗ ಮಾನ್ಯ ಪದ್ಧತಿಯ ಪ್ರತೀಕವೆಂದೂ, 'ಸರ್ದಾರ್' ಪದವನ್ನು ಮಸೂದೆಯಿಂದ ತೆಗೆಯಬೇಕೆಂದೂ ಆಗ್ರಹಿಸಿದರು. ಅದರಿಂದ 'ಸರ್ದಾರ್' ಪದವನ್ನು ಮಸೂದೆಯಿಂದ ತೆಗೆಯಲಾಯಿತು. ಆ ಸಮಯದಲ್ಲಿ ವಲ್ಲಭಭಾಯ್ ಪಟೇಲ್ ರವರು ಸಭೆಯಲ್ಲಿ ಇರಲಿಲ್ಲ. ಆನಂತರ ಪಟೇಲರು, "ಕಾಂಗ್ರೆಸ್ಸು ನನಗೆ ಸರ್ದಾರ್ ತನ ಇಲ್ಲದಂತೆ ಮಾಡಿದ್ದು ಸರಿ" ಎಂದರು. ಆದರೆ ಪ್ರತಿನಿಧಿಗಳು ಬಿಡಬೇಕಲ್ಲ! ಅಲ್ಲಿ ನೆರೆದಿದ್ದ ಜನ "ಸರ್ದಾರರು ಎಲ್ಲಿ?" ಎಂದು (ವಲ್ಲಭಭಾಯ್ ಎಲ್ಲಿ – ಅಂದಲ್ಲ) ಕೂಗಲಾರಂಭಿಸಿದರು. ಪಟೇಲರು ಗುಜರಾತಿನ ಪ್ರತಿನಿಧಿಗಳ ನಡುವೆ ನೆಲದ ಮೇಲೆ ಚೆಕ್ಕಳ ಬಕ್ಕಳ ಹಾಕಿಕೊಂಡು ಕುಳಿತಿದ್ದರು. "ಸರ್ದಾರರು ಎದ್ದು ನಿಲ್ಲಬೇಕು ಮತ್ತು ಮುಖ ತೋರಿಸಬೇಕು" ಎಂದು ಜನ ಕೂಗಿದರು. ಪಟೇಲರು ಎದ್ದು ನಿಂತು ಕೈ ಮುಗಿದು ಸಭೆಗೆ ನಮಸ್ಕರಿಸಿದರು. "ವೇದಿಕೆಗೆ ಬನ್ನಿ" ಎಂದು ಎಲ್ಲರೂ ಕಿರುಚಿದರು. ಪಟೇಲರು 'ಬೇಡ' ಎಂದು ಕೈ ಸನ್ನೆ ಮಾಡಿದರು ಮತ್ತು ಕುಳಿತುಕೊಳ್ಳಲು ಹೊರಟರು. ಆದರೆ ಜನ ಬಿಡಲಿಲ್ಲ! ಅವರು ಅಷ್ಟು ಜನಪ್ರಿಯರಾಗಿ ಬಿಟ್ಟಿದ್ದರು! ಜನ ಅವರನ್ನು ವೇದಿಕೆಯ ಕಡೆಗೆ ನೂಕಿದರು. ಪಟೇಲರು ಇಷ್ಟವಿಲ್ಲದ ಮನಸ್ಸಿನಿಂದ ವೇದಿಕೆಯನ್ನು ಏರಿ ಎಲ್ಲರಿಗೂ ನಮಸ್ಕರಿಸಿದರು. ಚಪ್ಪಾಳೆಯ ಧಾರಾಕಾರ ಮಳೆಯೇ ಸುರಿಯಿತು. ಚಪ್ಪಾಳೆ ನಿಂತ ಮೇಲೆ ಅವರು ವಂದನೆಗಳನ್ನು ಸಲ್ಲಿಸುವ ಎರಡೇ ಎರಡು ಬಹು ಅರ್ಥಗರ್ಭಿತ ವಾಕ್ಯಗಳನ್ನು ಹಿಂದಿ ಭಾಷೆಯಲ್ಲಿ ಆಡಿದರು. ಅವರೆಂದರು:

> "ನೀವು ಬಾರ್ಡೋಲಿಯ ರೈತರನ್ನು ಅಭಿನಂದಿಸಿದ್ದಕ್ಕೆ ನಾನು ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಅವರು ಮಾಡಿದ್ದನ್ನು ನೀವು ನಿಜವಾಗಿಯು ಮೆಚ್ಚುವುದಾದರೆ ನೀವೂ ಸಹ ಅವರ ಹೆಜ್ಜೆಯ ಜಾಡನ್ನು ಹಿಡಿಯುವಿರೆಂದು ಆಶಿಸುತ್ತೇನೆ."[೪]

('ಸರ್ದಾರ್' ಬಿರುದು ಅವರಿಗೆ ಈಗಲೂ ಭದ್ರವಾಗಿ ಅಂಟಿಕೊಂಡಿದೆ. ಮುಂದೆಯೂ ಹಾಗೇ ಇರುತ್ತದೆ. ಸರ್ದಾರರ ಸರ್ದಾರತನ ಮತ್ತು ಸರ್ದಾರ್ ಬಿರುದು ಅಮರ – ಲೇಖಕ)

೧೦.೨ ರಾಜಕೀಯ ಸಮ್ಮೇಳನಗಳಲ್ಲಿ ಭಾಷಣ

ಬಾರ್ಡೋಲಿಯ ಸತ್ಯಾಗ್ರಹದ ಯಶಸ್ಸಿನ ಫಲವಾಗಿ ಸರ್ದಾರ್ ಪಟೇಲರು ಪ್ರಾಂತ್ಯ ವಲಯದಿಂದ ರಾಷ್ಟ್ರ ವಲಯಕ್ಕೆ ಜಿಗಿದರು ಮತ್ತು ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ರಾಷ್ಟ್ರ ಮಟ್ಟದ ನಾಯಕರ ಪಂಕ್ತಿಯನ್ನು ಸೇರಿದರು. ಕಾಂಗ್ರೆಸ್ಸಿನ ಕಲ್ಕತ್ತ ಅಧಿವೇಶನದ ನಂತರ ರಾಜಕೀಯ ಸಮ್ಮೇಳನಗಳ ಅಧ್ಯಕ್ಷತೆ ವಹಿಸಲು ದೇಶದ ನಾನಾ ಕಡೆಗಳಿಂದ ಆಹ್ವಾನಗಳು ಅವರಿಗೆ ಬರಲಾರಂಭಿಸಿದುವು. ಸರ್ದಾರರು ಕಾರ್ಯಸಾಧಕರೇ ಹೊರತು ಭಾಷಣ ಪ್ರಿಯರಲ್ಲ. ಆದರೆ ಅಂತಹ ಸಮ್ಮೇಳನಗಳು ಭಾಷಣಗಳಿಂದ ಹಳಸಿದ ಸತ್ವಹೀನ ಮಾತುಗಳಿಂದ ಸಾಧಿಸಲಾಗದ ಘೋಷಣೆಗಳಿಂದ ತುಂಬಿರುತ್ತಿದ್ದುವು. ಅದರಿಂದ ಸರ್ದಾರರು ಒಂದಲ್ಲ ಒಂದು ನೆಪ ಹೇಳಿ ಆಹ್ವಾನವನ್ನು ಒಪ್ಪಿಕೊಳ್ಳುತ್ತಿರಲಿಲ್ಲ. ಆದರೆ ಗಾಂಧೀಜಿಯವರ ಒತ್ತಾಯದಿಂದ ಕೆಲವು ಸಲ ಅಂತಹ ಆಹ್ವಾನವನ್ನು ಒಪ್ಪಿಕೊಳ್ಳಲೇ ಬೇಕಾಗುತ್ತಿತ್ತು.

ಅಂತಹ ಸಮ್ಮೇಳನಗಳಲ್ಲಿ ಮೊದಲನೆಯದು ಕಾಥ್ಯೆವಾಡದ ರಾಜಕೀಯ ಸಮ್ಮೇಳನ. ಅಲ್ಲಿ ಅವರು ಇಂತು ನುಡಿದರು:

> "ನೀವು ಏನನ್ನಾದರೂ ಆಡಿದಾಗ ಅದರ ಹಿಂದೆ ಶಕ್ತಿಯಿರಬೇಕು..... ನೀವು ನನ್ನಿಂದ ಬಹಳ ನಿರೀಕ್ಷಿಸುತ್ತಿದ್ದೀರಿ, ಏಕೆಂದರೆ ಸ್ವಲ್ಪ ದಿನಗಳ ಹಿಂದೆ ಬಾರ್ಡೋಲಿಯಲ್ಲಿ ನಾನು ಮಾಡಿದ ಅಲ್ಪ ಕೆಲಸವನ್ನು ನೀವು ಸ್ಫೂರ್ತಿದಾಯಕ ಮತ್ತು ಫಲದಾಯಕ ಎಂದು ಭಾವಿಸಿದ್ದೀರಿ. ಆದರೆ ನಾನು ನೇರವಾಗಿ ಮಾತನಾಡಲೆ? ನಾನು ಇರುವುದು ಭಾಷಣಗಳ ಮೇಲೆ ನಿರ್ಬಂಧಗಳು ಕಾಥ್ಯೆವಾಡದಲ್ಲಿ ಇರುವುದಕ್ಕಿಂತ ಕಡಿಮೆ ಇರುವ ಬ್ರಿಟಿಷ್ ಭಾರತದಲ್ಲಿ. ಆದರೂ ಸಹ ನಾನು ಸಾರ್ವಜನಿಕ ಭಾಷಣಗಳನ್ನು ಮಾಡಲು ಇಷ್ಟ ಪಡುವುದಿಲ್ಲ. ವಾಸ್ತವವಾಗಿ, ವಿಪರೀತ ಮಾತು ಒಳಿತಿಗಿಂತ ಕೆಡುಕನ್ನೇ ಉಂಟುಮಾಡುತ್ತದೆ. ಇಂದು ಕಾಥ್ಯೆವಾಡಕ್ಕೆ ಅವಶ್ಯಕವಾದುದು ಏನೆಂದರೆ ಮಾತನ್ನು ಕಡಿಮೆ ಆಡುವುದು ಮತ್ತು ಮಾತನಾಡಲೇ ಬೇಕಾದರೆ ಹಾಗೆ ಆಡುವುದಕ್ಕೆ ಮುಂಚೆ ಏನನ್ನು

ಆಡಬೇಕು ಎನ್ನುವುದನ್ನು ಸ್ಪಷ್ಟವಾಗಿ ತಿಳಿದಿರುವುದು. ನೀವು ನಿಮ್ಮನ್ನು ಉತ್ತಮಗೊಳಿಸಿಕೊಳ್ಳಲು ನಿರ್ಧರಿಸಿದರೆ (ಮಾತ್ರ) ಒಬ್ಬ ವ್ಯಕ್ತಿ ನಿಮ್ಮ ಸೇವೆ ಮಾಡಲು ಸಾಧ್ಯ. ಆ ಕಾರಣಕ್ಕಾಗಿ, ನಾನು ಸಾಧ್ಯವಾದಷ್ಟೂ ಸ್ನೇಹ ಭಾವದಲ್ಲಿ, ನಿಮ್ಮ ಪ್ರಧಾನ ನ್ಯೂನತೆ ಏನು ಎಂಬುದನ್ನು ಹೇಳಲೇಬೇಕು. ನಿಮಗಿರುವ ಹಾಗೆ ನನಗೆ ಮಧುರ ಭಾಷೆ ಇದ್ದಿದ್ದರೆ ಆ ಕೆಲಸವನ್ನು ಬಹಳ ಉತ್ತಮವಾಗಿ ಮಾಡಬಹುದಾಗಿತ್ತು. ಆದರೆ ನಾನೊಬ್ಬ ರೈತ. ನಿರ್ದಾಕ್ಷಿಣ್ಯವಾಗಿ ಮಾತನಾಡುವುದು ನನಗೆ ಹುಟ್ಟಿನಿಂದ ಬಂದ ಅಭ್ಯಾಸ. ಎಲ್ಲಕ್ಕೂ ಮೊದಲು, ವಿನಯ ಮತ್ತು ಹೊಗಳಿಕೆಯ ನಡುವಣ ವ್ಯತ್ಯಾಸವನ್ನು ಗುರುತಿಸುವುದನ್ನು ಕಲಿಯಿರಿ ಎಂದು ನಾನು ನಿಮಗೆ ಹೇಳಲೇ ಬೇಕು. ನಾನು ವೃದ್ಧನೂ ಅಲ್ಲ ಯುವಕನೂ ಅಲ್ಲ. ಆದರೆ ಯೌವನ ಮತ್ತು ವೃದ್ಧಾಪ್ಯ ಸಂಧಿಸುವ ಘಟ್ಟವನ್ನು ತಲುಪಿದ್ದೇನೆ. ಆದಾಗ್ಯೂ ಯುವಕರ ರಭಸದಿಂದ ಆಕರ್ಷಿತ ನಾಗುತ್ತೇನೆ. ಆದರೆ ವಯಸ್ಸಿನೊಡನೆ ಬರುವ ಅನುಭವವು ನನಗೆ ಸಂಯಮವನ್ನು ಕಲಿಸಿದೆ. ಯೌವನದ ಉತ್ಸಾಹದಿಂದ ನಾನು ಪಡೆಯುವ ಸ್ಫೂರ್ತಿಯನ್ನು ವಯಸ್ಸಿನಿಂದ ಬರುವ ಅನುಭವದಿಂದ ಮೃದುಗೊಳಿಸಲು ಪ್ರಯತ್ನಿಸುತ್ತೇನೆ.....

.....ನಾನು ಭಾರತದಲ್ಲಿ ಎಲ್ಲೇ ಹೋಗಲಿ ಬಂಡಾಯದ ಕೂಗು ಕಿವಿಗೆ ಬೀಳುತ್ತದೆ. ಆದರೆ ಬರೆ ಕೂಗುವವರಿಂದ, ಅವರೆಷ್ಟೇ ಜೋರಾಗಿ ಕೂಗಲಿ, ಬಂಡಾಯ ಆರಂಭಿಸಲ್ಪಟ್ಟಿದ್ದನ್ನು ಎಂದೂ ಕೇಳಿಲ್ಲ..... ಕ್ರಾಂತಿಗಳು ನಡೆಯುತ್ತಿರುವುದು ಮೌನ ಕೆಲಸಗಾರ ರಿಂದ. ಅವರು ತಮ್ಮ ಉತ್ಸಾಹವನ್ನು ಒಡಿತದಲ್ಲಿಟ್ಟು ಕೊಳ್ಳುತ್ತಾರೆ ಮತ್ತು ಅವಶ್ಯಕತೆ ಬಿದ್ದಾಗ ಮಾತ್ರ ಅದನ್ನು ಹರಿಬಿಡುತ್ತಾರೆ.

ಅನೇಕರು ನನ್ನನ್ನು ಗಾಂಧೀಜಿಯ ಕುರುಡು ಅನುಯಾಯಿ ಎಂದು ಕರೆಯುತ್ತಾರೆ. ಅವರ ಕುರುಡು ಅನುಯಾಯಿಯಾಗುವ ಶಕ್ತಿ ವಾಸ್ತವವಾಗಿ ನನಗಿರಬೇಕಿತ್ತೆಂದು ಆಶಿಸುತ್ತೇನೆ. ಆದರೆ ಹಾಗೆ ಆಗಿಲ್ಲವೆಂದು ವಿಷಾದಿಸುತ್ತೇನೆ. ನನಗೆ ಸಾಧಾರಣ ಬುದ್ಧಿವಂತಿಕೆ ಮತ್ತು ತಿಳವಳಿಕೆ ಇದೆ ಎಂದು ಭಾವಿಸಿದ್ದೇನೆ, ಸ್ವಲ್ಪ ಪ್ರಪಂಚವನ್ನೂ ನೋಡಿದ್ದೇನೆ. ಅದರಿಂದ ನಾನು ಒಬ್ಬ ಹುಚ್ಚನಂತೆ ಅಥವಾ

ತಿಳವಳಿಕೆ ಇಲ್ಲದವನಂತೆ ಈ ಅರೆನಗ್ನರನ್ನು ಅನುಸರಿಸುವ ಸಾಧ್ಯತೆ ಇಲ್ಲ. ನಾನೊಂದು ವೃತ್ತಿಯಲ್ಲಿದ್ದೆ. ಆ ವೃತ್ತಿಯಲ್ಲಿ ಬಹುಶಃ ನಾನು ಅನೇಕರನ್ನು ಹಾದಿ ತಪ್ಪಿಸಿ ಶ್ರೀಮಂತನಾಗಬಹುದಿತ್ತು. ಆದರೆ, ಆ ವೃತ್ತಿಯನ್ನು ಬಿಟ್ಟು ಬಿಟ್ಟೆ, ಏಕೆಂದರೆ ನಾನು ರೈತರಿಗೆ ಒಳ್ಳೆಯದನ್ನು ಮಾಡುವ ಮಾರ್ಗ ಅದಲ್ಲ ಎಂಬುದನ್ನು ಗಾಂಧೀಜಿಯಿಂದ ಕಲಿತೆ. ಹೆಚ್ಚು ಕಡಿಮೆ ಭಾರತಕ್ಕೆ ಅವರು ಬಂದಾಗಿನಿಂದಲೂ ನಾನು ಅವರೊಡನೆ ಇದ್ದೇನೆ. ಎಲ್ಲಿಯವರೆಗೆ ನಾನು ಬದುಕಿರುತ್ತೇನೊ ಮತ್ತು ಅವರು ಬದುಕಿರುತ್ತಾರೊ ಅಲ್ಲಿಯವರೆಗೆ ಈ ಸಂಬಂಧ ಮುಂದುವರೆಯುತ್ತದೆ. ಆದಾಗ್ಯೂ ಅವರನ್ನು ನನ್ನ ಕೆಲಸದಿಂದ ದೂರವಿಡುತ್ತೇನೆ. ನಾವು ಬರೇ ಅವರ ನಾಯಕತ್ವಕ್ಕೆ ಜೋತುಬಿದ್ದರೆ ಮತ್ತು ಅವರ ಮಾರ್ಗದರ್ಶನಕ್ಕೆ ಕಾದರೆ, ಪ್ರವರ್ತನ ಶಕ್ತಿ ಮತ್ತು ಸ್ವತಂತ್ರ ಕಾರ್ಯಾಚರಣಾ ಶಕ್ತಿಯನ್ನು ಮತ್ತೆ ಪಡೆಯಲು ಸಾಧ್ಯವಿಲ್ಲ. ನಾವು ಸದಾ ಮತ್ತೊಬ್ಬರ ಸಹಾಯದ ಮೇಲೆ ಅವಲಂಬಿತರಾಗಿದ್ದರೆ ಏನನ್ನಾದರು ಸಾಧಿಸುವುದು ಹೇಗೆ ಸಾಧ್ಯ?.....

ನಮ್ಮ ಅತಿ ಮುಖ್ಯ ನ್ಯೂನತೆ ಏನೆಂದರೆ ಶಿಸ್ತು ಮತ್ತು ಸಂಘಟನೆಯ ಕೊರತೆ. ಸೈನಿಕರಾಗಿರುವುದು ಹೇಗೆ ಎನ್ನುವುದು ನಮಗೆ ತಿಳಿಯದು. ಆಜ್ಞೆಗಳನ್ನು ಪಾಲಿಸುವುದನ್ನು ನಾವು ರೂಢಿ ಮಾಡಿಕೊಂಡಿಲ್ಲ. ವೈಯುಕ್ತಿಕ ಸ್ವಾತಂತ್ರ್ಯದ ಈ ಯುಗದಲ್ಲಿ ನಾವು ಸ್ವಾತಂತ್ರ್ಯವನ್ನು ಲೈಸೆನ್ಸ್ ಎಂದು ತಪ್ಪಾಗಿ ಭಾವಿಸಿದ್ದೇವೆ.

ಕೆಲಸ ಹೆಚ್ಚು ಮಾಡಿ ಮಾತು ಕಡಿಮೆ ಆಡಿ ಎನ್ನುವುದು ನಾನು ನಿಮಗೆ ನೀಡುವ ಬುದ್ಧಿವಾದ. ಭಾರತದಲ್ಲಿ ನಾಯಕರ ಕೊರತೆ ಇಲ್ಲ. ನಮಗೆ ಬೇಕಾಗಿರುವವರು ಸೈನಿಕರು. ಕಾಥೈವಾಡದ ಯುವಕರಾದ ನೀವು ಒಳ್ಳೆಯ ಸೈನಿಕರಾಗಿರಲು ನೈತಿಕ ಶಕ್ತಿಯನ್ನು ಭಗವಂತನು ನಿಮಗೆ ನೀಡಲಿ."[೫]

ಅಷ್ಟರಲ್ಲಿ ಮಹಾರಾಷ್ಟ್ರ ಪ್ರದೇಶದ ಕೆಲವು ಜಿಲ್ಲೆಗಳಲ್ಲಿ ಕಂದಾಯ ಜಾಸ್ತಿಯಾಗುವ ಭೀತಿಯನ್ನು ರೈತರು ಎದುರಿಸಬೇಕಾಯಿತು. ಅಲ್ಲಿಯ ಮುಖಂಡರು ಸರ್ದಾರರ ಸಲಹೆಗಳನ್ನು ಅಪೇಕ್ಷಿಸಿದರು ಮತ್ತು ಅವರನ್ನು ಪದಾಧಿಕಾರಿಗಳ ಒಂದು ಸಮ್ಮೇಳನಕ್ಕೆ ಆಹ್ವಾನಿಸಿದರು. ಆ ಸಮ್ಮೇಳನದಲ್ಲಿ ಮಹಾರಾಷ್ಟ್ರ ನಾಯಕರಲ್ಲಿ

ಒಮ್ಮತದ ಕೊರತೆಯನ್ನು ಕಂಡು ಮತ್ತು ಅವರು ಕಾರ್ಯಸಾಧಕ ತೀರ್ಮಾನಗಳಿಗೆ ಬದಲಾಗಿ ಶಬ್ದಾರ್ಥಗಳ ಚರ್ಚೆಯಲ್ಲಿ ಹೆಚ್ಚು ಕಾಲ ಕಳೆಯುವುದನ್ನು ಕಂಡು ಸರ್ದಾರರಿಗೆ ಅಚ್ಚರಿಯಾಯಿತು. ಅವರು ಕಾರ್ಯಸಾಧ್ಯತೆಯ ಅವಶ್ಯಕತೆಯ ಬಗೆಗೆ ಮಹಾರಾಷ್ಟ್ರ ನಾಯಕರಿಗೆ ಬುದ್ಧಿವಾದ ಹೇಳಿದರು. ಅವರೆಂದರು, "ಮಾಡ ಬೇಕಾದ ಕೆಲಸವನ್ನು ದೃಷ್ಟಿಯಲ್ಲಿಟ್ಟಿರಬೇಕು..... ನಾವು ಒಬ್ಬರನ್ನೊಬ್ಬರು ಕೆಳಕ್ಕೆ ಎಳೆಯುತ್ತಿದ್ದರೆ ಇದ್ದಲ್ಲೇ ಇರುತ್ತೇವೆ." ರೈತರು ತಮ್ಮ ಹಕ್ಕುಗಳನ್ನು ಪ್ರತಿಷ್ಠಾಪಿಸ ಬೇಕಾದರೆ ತ್ಯಾಗ ಮತ್ತು ಕಷ್ಟ ಸಹಿಷ್ಣುತೆಗೆ ಸಿದ್ಧವಾಗಿರಬೇಕೆಂದೂ ಸಹ ಸರ್ದಾರರು ಅವರಿಗೆ ಹೇಳಿದರು.[೬]

ಅನಂತರ ಸರ್ದಾರರು ಸಿ. ರಾಜಗೋಪಾಲಾಚಾರಿಯವರ ಆಹ್ವಾನದ ಮೇಲೆ ಮದ್ರಾಸ್ ಪ್ರಾಂತ್ಯಕ್ಕೆ (ಈಗಿನ ತಮಿಳುನಾಡು) ಹೋದರು. ಅಲ್ಲಿ ಬ್ರಾಹ್ಮಣರು ಮತ್ತು ಬ್ರಾಹ್ಮಣೇತರರು ಅಧಿಕಾರ ಮತ್ತು ಪ್ರತಿಷ್ಠೆಯ ಹಂಚಿಕೆಗಾಗಿ ಕಚ್ಚಾಡಿ ತಮ್ಮ ಶಕ್ತಿಯನ್ನು ವ್ಯರ್ಥಮಾಡುತ್ತಿರುವುದನ್ನು ಗಮನಿಸಿ ಹೀಗೆ ಹೇಳಿದರು:

> "ನೀವು ಅಧಿಕಾರದ ಹಂಚಿಕೆಗಾಗಿ ಕಾದಾಡುತ್ತಿದ್ದೀರಿ, ಆದರೆ ಇಂಗ್ಲೆಂಡಿನಿಂದ ಬಂದ ಸೂಪರ್ – ಬ್ರಾಹ್ಮಣನು ನಿಮ್ಮ ದೆಸೆಯಿಂದ ಅಭಿವೃದ್ಧಿ ಹೊಂದುತ್ತಿದ್ದಾನೆಂಬುದನ್ನು ಮರೆತಿದ್ದೀರಿ. ಸ್ವಾತಂತ್ರ್ಯವನ್ನು ಸಂಪಾದಿಸುವುದಕ್ಕೆ ಮುಂಚೆ ಹಂಚಿಕೊಳ್ಳಲು ಏನಿದೆ?"

ನಂತರ ಅವರು ಎರಡು ಬೆಕ್ಕುಗಳ ನಡುವೆ ಚಪಾತಿ ಹಂಚಿಕೆಯಲ್ಲಿ ಕೋತಿ ವಹಿಸಿದ ಮಧ್ಯಸ್ಥಿಕೆಯ ಕತೆಯನ್ನು ಹೇಳಿದರು. ಎರಡು ಬೆಕ್ಕುಗಳು ಜಗಳವಾಡುತ್ತಿದ್ದಾಗ ಕೋತಿಯು ಇಡೀ ಚಪಾತಿಯನ್ನು ತಿಂದುಹಾಕಿತ್ತು! ಭಾರತೀಯರ ತಕ್ಷಣದ ಮತ್ತು ಪ್ರಧಾನ ಗುರಿ ಸ್ವಾತಂತ್ರ್ಯಗಳಿಕೆಯ ಮೂಲಕ ಅಧಿಕಾರವನ್ನು ಸಂಪಾದಿಸು ವುದು, ಮಿಕ್ಕೆಲ್ಲವೂ ಅದಕ್ಕೆ ಅಧೀನ ಎನ್ನುವುದನ್ನು ಸರ್ದಾರರು ಅವರಿಗೆ ಒತ್ತಿ ಹೇಳಿದರು.[೭]

ನಂತರ ಸರ್ದಾರರು ಕರ್ನಾಟಕ ಪ್ರದೇಶಕ್ಕೆ ತೆರಳಿದರು. ಅಲ್ಲಿ ಅವರ ಮೊದಲನೆಯ ಸಭೆಯಲ್ಲಿ ಅವರಲ್ಲದೆ ಒಂಬತ್ತು ಮಂದಿ ವೇದಿಕೆಯನ್ನು ಏರಿದರು. ಒಬ್ಬರು ಅಧ್ಯಕ್ಷರಾಗಲು, ಇನ್ನೊಬ್ಬರು ಅಧ್ಯಕ್ಷರ ಹೆಸರನ್ನು ಸೂಚಿಸಲು, ಮತ್ತೊಬ್ಬರು ಅದನ್ನು ಅನುಮೋದಿಸಲು, ಇನ್ನಿಬ್ಬರು ಸರ್ದಾರರನ್ನು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಸ್ವಾಗತಿಸಲು, ಇನ್ನಿಬ್ಬರು ವಂದನೆಯನ್ನು ಸೂಚಿಸಲು ಮತ್ತು ಅನುಮೋದಿಸಲು, ಮತ್ತಿಬ್ಬರು ಹಾರವನ್ನು ಅರ್ಪಿಸಲು ವೇದಿಕೆಯನ್ನು ಏರಿದರು. ಸರ್ದಾರರ ಸೂಚನೆಯ ಮೇಲೆ ಈ ವಿಧಾನವನ್ನು ಮುಂದಿನ ಸಭೆಗಳಲ್ಲಿ ಕೈ ಬಿಡಲಾಯಿತು.

ಕರ್ನಾಟಕದಲ್ಲಿ ಸರ್ದಾರರ ಆತಿಥೇಯ ಆಗಿದ್ದವರು ಗಂಗಾಧರ್‌ರಾವ್ ದೇಶ ಪಾಂಡೆ. ಅವರು ತಿಲಕರ ಆತ್ಮೀಯ ಅನುಯಾಯಿಯಾಗಿದ್ದು ಈಗ ಗಾಂಧೀಜಿಯ ಅನುಯಾಯಿಯಾಗಿದ್ದರು. ಅವರು ಸರ್ದಾರರ ನೇರ ಮಾತಿನಲ್ಲಿ ತಿಲಕರ ಮಾತಿನ ಪ್ರತಿಧ್ವನಿಯನ್ನು ಕಂಡರು. ಅವರೆಂದರು:

> ಅವರ (ಸರ್ದಾರರ) ಮಾತಿನ ಧಾಟಿ, ಅವರ ನಸುನಗೆ ಮತ್ತು ಜೋರುನಗೆ, ಅವರ ಕೋಪ ಮತ್ತು ಅವರ ಅಸಹನೆಯನ್ನು ವೀಕ್ಷಿಸಿದ ಮೇಲೆ ತಿಲಕ್ ಮಹಾರಾಜರ ನೆನಪು ಬರದಿರಲು ಸಾಧ್ಯವೇ ಇಲ್ಲ. ಇಬ್ಬರೂ ಮೊದಲ ನೋಟಕ್ಕೆ ಅಹಂಕಾರಿ ಮತ್ತು ಜನರೊಡನೆ ಬೆರೆಯದವರಂತೆ ಕಾಣುತ್ತಿದ್ದರು. ಆದರೆ ಅವರು ನಮ್ರರು ಮತ್ತು ಸೌಮ್ಯರು ಆಗಿದ್ದರು.[೮]

೧೯೨೯ರ ಡಿಸೆಂಬರ್‌ನಲ್ಲಿ ಸರ್ದಾರರು ಬಿಹಾರ ಪ್ರಾಂತ್ಯ ಪ್ರವಾಸ ಕೈಗೊಂಡರು. ಅಲ್ಲಿ ಅವರು ಗುಜರಾತಿ ಮಿಶ್ರಿತ ಹಿಂದಿಯಲ್ಲಿ ಹೆಚ್ಚು ನೇರವಾಗಿ ಮತ್ತು ಕಟುವಾಗಿ ಮಾತನಾಡಿದರು. ಅವರೆಂದರು:

> ನಾನು ನಿಮ್ಮನ್ನು ಹರಸಲು ಬಂದಿಲ್ಲ, ಶಪಿಸಲು ಬಂದಿದ್ದೇನೆ. ಇತರ ಯಾವುದೇ ಪ್ರಾಂತ್ಯಕ್ಕಿಂತ ಮುಂಚೆ ಮಹಾತ್ಮಾಜಿಯವರನ್ನು ನಿಮ್ಮ ನಡುವೆ ಹೊಂದುವ ಗೌರವವನ್ನು ನೀವು ಪಡೆದಿದ್ದಿರಿ. ಆದರೆ ನೀವು ಆ ಗೌರವಕ್ಕೆ ಅರ್ಹರಲ್ಲ ಎಂದು ಕಾಣುತ್ತದೆ. ನಿಮ್ಮನ್ನು ಘಾತಿಸಿ ಮೂಕರನ್ನಾಗಿ ಮಾಡಲು ಈಗ ಪ್ಲಾಂಟರರ ದಬ್ಬಾಳಿಕೆಯ ಕೈಗಳು ಇಲ್ಲ. ಆದಾಗ್ಯೂ ನೀವು ನೂಕಲ್ಪಟ್ಟ ಮೂಕ ಪಶುಗಳಂತೆ ಇದ್ದೀರಿ.
>
> ನೀವು ಜಮೀನ್ದಾರರ ವಿರುದ್ಧ ಹಗಲೂ ರಾತ್ರಿ ದೂರು ನೀಡುತ್ತೀರಿ, ಆದರೆ ಅವರಿಗೆ ಒಂದು ಸರಿಯಾದ ಒತ್ತ ನೀಡಲು ಯತ್ನಿಸುವುದಿಲ್ಲ..... ಜಮೀನ್ದಾರರು ನಿಮ್ಮೊಡನೆ ಒಂದು ಒಪ್ಪಂದಕ್ಕೆ ಬರದೆ ಹೋದರೆ ಅವರ ಜಮೀನಿನಲ್ಲಿ ಬೇಸಾಯ ಮಾಡಲು ನಿರಾಕರಿಸಿ.
>
> ನಿಮ್ಮ ಹೆಂಗಸರನ್ನು ಪರ್ದಾ ಒಳಗೆ ಇಡಲು ನಿಮಗೆ ನಾಚಿಕೆ ಆಗುವುದಿಲ್ಲವೆ? ಈ ಹೆಂಗಸರು ಯಾರು? ನಿಮ್ಮ ತಾಯಂದಿರು, ಸಹೋದರಿಯರು, ಮಡದಿಯರು. ಅವರು

ಹೊರಗೆ ಬಂದರೆ ನಿಮ್ಮ ಗುಲಾಮಗಿರಿಯನ್ನು ನೋಡಿ, ನಿಮ್ಮಿಂದ ದೂರವಾಗುತ್ತಾರೆ ಅನ್ನುವ ಭಯವೆ?

ಅಂತಹ ಹೇಡಿ ಗಂಡಂದಿರಿಗೆ ಹೆಂಡತಿಯರಾಗುವ ಬದಲು, ಅವರನ್ನು ವಿಚ್ಛೇದನ ಮಾಡಿ ಎಂದು ಆ ಹೆಂಗಸರಿಗೆ ನನಗೆ ಸಾಧ್ಯವಿದ್ದರೆ ಹೇಳುತ್ತಿದ್ದೆ.

ಧರ್ಮದ ಹೆಸರಿನಲ್ಲಿ ಎಳೆಯ ವಯಸ್ಸಿನ ಮಕ್ಕಳಿಗೆ ವಿವಾಹ ಮಾಡಿಸುವ ಬ್ರಾಹ್ಮಣನು ಬ್ರಾಹ್ಮಣನೇ ಅಲ್ಲ. ಅವನೊಬ್ಬ ರಾಕ್ಷಸ. ಜಮೀನ್ದಾರರ ಮತ್ತು ಬ್ರಾಹ್ಮಣರ ದಬ್ಬಾಳಿಕೆಗೆ ಇಷ್ಟ ಪಟ್ಟೇ ಬಲಿಪಶುಗಳಾಗಿರುವ ನೀವು ರೈತರೆನ್ನುವ ಹೆಸರಿಗೆ ಅರ್ಹರಲ್ಲ.[೯]

ಭೂ ಕಂದಾಯದ ಅನ್ಯಾಯದ ಪ್ರಮಾಣ ಸರ್ದಾರರ ೧೯೨೯ನೆ ಇಸವಿಯ ಭಾಷಣದ ಮುಖ್ಯ ವಿಷಯವಾಗಿತ್ತು. ಈ ಕಂದಾಯದ ಸಮಸ್ಯೆಯು ಆಂಗ್ಲ ಸರ್ಕಾರದ ವಿರುದ್ಧ ಇಡೀ ಭಾರತವನ್ನು ಒಂದುಗೂಡಿಸುತ್ತದೆ ಎಂದು ಅವರು ನಂಬಿದ್ದರು. ಆದರೆ ಗಾಂಧೀಜಿಗೆ ಆ ನಂಬಿಕೆ ಇರಲಿಲ್ಲ. ಸೆಪ್ಟೆಂಬರ್ ೧೯೨೯ರ 'ಯಂಗ್ ಇಂಡಿಯ' ಸಂಚಿಕೆಯಲ್ಲಿ ಗಾಂಧೀಜಿಯವರು ಈ ವಿಷಯವನ್ನು ಚರ್ಚಿಸಿದರು. ಆ ಸಂಚಿಕೆಯಲ್ಲಿ ಅವರು, 'ತಮ್ಮ ನಾಯಕತ್ವದ ಪ್ರದರ್ಶನಕ್ಕೆ ಸರ್ದಾರರಿಗೆ ಒಂದು ಬಾರ್ಡೋಲಿ ಬೇಕಾಯಿತು. ಈಗ ದೇಶದಲ್ಲಿ ಸಿದ್ಧವಾಗಿರುವ ಎಷ್ಟು ಬಾರ್ಡೋಲಿಗಳಿವೆ? ಸಿದ್ಧಗೊಂಡಿದ್ದ ಬಾರ್ಡೋಲಿಯ ರೈತರು ಮತ್ತು ನುರಿತ ನಾಯಕ ಅಹಿಂಸಾತ್ಮಕ ಯುದ್ಧದಲ್ಲಿ ಜಯಗಳಿಸಿದರು. ಆದರೆ ಬೇರೆ ಕಡೆ ಇರುವ ಸಿದ್ಧರಲ್ಲದ ಮತ್ತು ಸಹಾಯ ರಹಿತ ರೈತರು ಆತ್ಮ ಸಂಯಮ ಮತ್ತು ಸಮರ ಎರಡನ್ನೂ ಕಳೆದುಕೊಳ್ಳುತ್ತಾರೆ,' ಎಂದು ಬರೆದಿದ್ದರು.[೧೦]

೧೦.೩ ಕೈತಪ್ಪಿದ ಕಾಂಗ್ರೆಸ್ ಗಾದಿ

ಕಾಂಗ್ರೆಸ್ಸಿನ ೪೫ನೆ ವಾರ್ಷಿಕ ಅಧಿವೇಶನದ ಸಮಯ ಬಂದಿತು. ಅದು ೧೯೨೯ರ ಡಿಸೆಂಬರ್ ತಿಂಗಳ ಅಂತ್ಯದಲ್ಲಿ ಲಾಹೋರ್‌ನಲ್ಲಿ ನಡೆಯಿತು. 'ಸರ್ದಾರ್ ಪಟೇಲ್‌ರವರು ಆ ಅಧಿವೇಶನದ ಅಧ್ಯಕ್ಷರಾಗಬೇಕೆಂಬುದು ಕಾಂಗ್ರೆಸ್ ವಲಯದಲ್ಲಿನ ಸಾಮಾನ್ಯ ಅಭಿಪ್ರಾಯವಾಗಿತ್ತು,' ಎಂದು ಸುಭಾಷ್ ಚಂದ್ರ ಬೋಸ್ ಬರೆದಿದ್ದಾರೆ.[೧೧] ಆದಾಗ್ಯೂ ಮಹಾತ್ಮ ಗಾಂಧಿಯವರೇ ಅಧ್ಯಕ್ಷರಾಗಬೇಕೆಂಬುದು ಅನೇಕ ಕಾಂಗ್ರೆಸ್ಸಿಗರ ಅಭಿಪ್ರಾಯವಾಗಿತ್ತು. ಅದಕ್ಕೆ ಒಂದು ಪ್ರಮುಖ ಕಾರಣವಿತ್ತು. ೧೯೨೮ರಲ್ಲಿ ಕಲ್ಕತ್ತದಲ್ಲಿ ಮೋತಿಲಾಲ್ ನೆಹರುರವರ ಅಧ್ಯಕ್ಷತೆಯಲ್ಲಿ ನಡೆದ

ಕಾಂಗ್ರೆಸ್ ಅಧಿವೇಶನವು 'ಬ್ರಿಟಿಷ್ ಸರ್ಕಾರವು ಭಾರತಕ್ಕೆ ಡೊಮಿನಿಯನ್ ಸ್ಟೇಟಸ್ಸನ್ನು ೧೯೨೯ರ ಡಿಸೆಂಬರ್ ೩೧ರ ಒಳಗೆ ನೀಡಬೇಕು. ಬ್ರಿಟಿಷ್ ಸರ್ಕಾರ ಡೊಮಿನಿಯನ್ ಸ್ಟೇಟಸ್ಸನ್ನು ಆ ಅವಧಿಯ ಒಳಗೆ ನೀಡದೆ ಹೋದರೆ, ಪೂರ್ಣ ಸ್ವರಾಜ್ಯ ಸಂಪಾದನೆ ಕಾಂಗ್ರೆಸ್ಸಿನ ಗುರಿ ಎಂದು ಮುಂದಿನ ಅಧಿವೇಶನದಲ್ಲಿ ತೀರ್ಮಾನಿಸಿ ನೇರ ಕ್ರಮವನ್ನು ತೆಗೆದುಕೊಳ್ಳಬೇಕು' ಎಂದು ತೀರ್ಮಾನಿಸಿತ್ತು. ಅದರಿಂದ ಮುಂದೆ ಹೋರಾಟ ಅನಿವಾರ್ಯವಾದದ್ದರಿಂದ ಗಾಂಧೀಜಿಯವರೇ ಅಧ್ಯಕ್ಷರಾಗಲಿ ಎನ್ನುವುದು ಬಹುತೇಕರ ಅಭಿಪ್ರಾಯವಾಗಿತ್ತು. ಹತ್ತು ಪ್ರದೇಶ ಕಾಂಗ್ರೆಸ್ ಸಮಿತಿಗಳು ಅವರ ಹೆಸರನ್ನು ಅಧ್ಯಕ್ಷ ಸ್ಥಾನಕ್ಕೆ ಸೂಚಿಸಿದ್ದುವು. ಐದು ಪ್ರದೇಶಿ ಕಾಂಗ್ರೆಸ್ ಸಮಿತಿಗಳು ವಲ್ಲಭಭಾಯ್ ಪಟೇಲರನ್ನು, ಮೂರು ಪ್ರದೇಶ ಕಾಂಗ್ರೆಸ್ ಸಮಿತಿಗಳು ಜವಹರಲಾಲ್ ನೆಹರು ಹೆಸರನ್ನು ಆ ಸ್ಥಾನಕ್ಕೆ ಸೂಚಿಸಿದ್ದುವು. ಗಾಂಧೀಜಿಯವರು ಮುಂದಿನ ಅಧ್ಯಕ್ಷರು ಎಂದು ಪ್ರಕಟಣೆಯೂ ಆಗಿತ್ತು. ಆದರೆ ಗಾಂಧೀಜಿ ಒಪ್ಪಲಿಲ್ಲ. ಅದರಿಂದ ಉಳಿದದ್ದು ಸರ್ದಾರ್ ಮತ್ತು ಜವಹರ್. ನ್ಯಾಯವಾಗಿ ಸರ್ದಾರರು ಚುನಾಯಿತರಾಗಬೇಕಾಗಿತ್ತು, ಏಕೆಂದರೆ ಅವರ ಹೆಸರನ್ನು ೫ ಪ್ರದೇಶ ಕಾಂಗ್ರೆಸ್ ಸಮಿತಿಗಳು ಸೂಚಿಸಿದ್ದುವು. ಜವಹರರ ಹೆಸರನ್ನು ಮೂರು ಪ್ರದೇಶ ಕಾಂಗ್ರೆಸ್ ಸಮಿತಿಗಳು ಸೂಚಿಸಿದ್ದುವು. ಆದರೆ ಆಗ ಆದದ್ದೇ ಬೇರೆ.

ಸೆಪ್ಟೆಂಬರ್ ತಿಂಗಳ ಅಂತ್ಯ ಭಾಗದಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಲಕ್ನೊದಲ್ಲಿ ಸಭೆ ಸೇರಿ ಗಾಂಧೀಜಿಯವರು ತಮ್ಮ ತೀರ್ಮಾನವನ್ನು ಬದಲಾಯಿಸಬೇಕೆಂದು ಒತ್ತಾಯಿಸಿತು. ಆದರೆ ಗಾಂಧೀಜಿ ಒಪ್ಪಲಿಲ್ಲ. ಅನಂತರ ಜವಹರಲಾಲ್ ನೆಹರುರವರ ಇಬ್ಬರು ಯುವ ಬೆಂಬಲಿಗರಾದ ಉತ್ತರ ಪ್ರದೇಶದ ನರೇಂದ್ರ ದೇವ್ ಮತ್ತು ಬಾಲಕೃಷ್ಣ ಶರ್ಮರವರು ಸರ್ದಾರ್ ಪಟೇಲರ ಮೇಲೆ ಒತ್ತಡ ತಂದು 'ಸರ್ದಾರರು ಏನು ಹೇಳುತ್ತಾರೆ? ಸರ್ದಾರ್ ಏನು ಮಾಡುತ್ತಾರೆ?' ಎಂದು ಮತ್ತೆ ಮತ್ತೆ ಕೇಳಲು ಆರಂಭಿಸಿದರು. ಅವರ ಈ ಸತತ ಪ್ರಶ್ನೆ ಕೇಳುವಿಕೆಯಿಂದ ಸರ್ದಾರರಿಗೆ ತೀವ್ರ ಅಸಮಾಧಾನವಾಯಿತೆಂದು ತೋರುತ್ತದೆ. ಏಕೆಂದರೆ ಮುಂದೆ, ೧೯ ವರ್ಷಗಳ ನಂತರ ಸರ್ದಾರರು ಅವರನ್ನು ಜವಹರಲಾಲ್ ನೆಹರುರವರ 'ಆ ಸಮಯದ ಬೇಟೆ ನಾಯಿಗಳು' ಎಂದು ವರ್ಣಿಸಿದರು.[೧೨] ಆದಾಗ್ಯೂ ಗಾಂಧೀಜಿ ಹೇಳಿದ ತಕ್ಷಣ ಪಟೇಲರು ತಮ್ಮ ಹೆಸರನ್ನು ವಾಪಸ್ಸು ತೆಗೆದುಕೊಂಡಿದ್ದರಿಂದ ನೆಹರು ಅಧ್ಯಕ್ಷರಾದರು ಮತ್ತು ಚರಿತ್ರಾರ್ಹ 'ಪೂರ್ಣ ಸ್ವರಾಜ್ಯ'ದ ಠರಾವನ್ನು ಮಂಡಿಸಿ 'ಹೀರೊ' ಎನಿಸಿಕೊಂಡರು.

(ಗಾಂಧೀಜಿ ಹೀಗೇಕೆ ಮಾಡಿದರು? ತಮ್ಮ ನೆಚ್ಚಿನ ಅನುಯಾಯಿಗೆ, ತಮ್ಮ ಭಂಟನಿಗೆ, ತಮ್ಮ ದಂಡನಾಯಕನಿಗೆ ಒಂದು ಚರಿತ್ರಾರ್ಹವಾದ ಅವಕಾಶವನ್ನು

ಏಕೆ ತಪ್ಪಿಸಿದರು? ಗಾಂಧೀಜಿಯವರ ಮನಸ್ಸಿನಲ್ಲಿ ಏನಿತ್ತೋ ಅದು ನಮಗೆ ತಿಳಿಯದು. ಈ ಬಗೆಗೆ ಅವರು ಏನನ್ನೂ ಹೇಳಿಲ್ಲ. ಅದರಿಂದ ಅವರ ಕಾರಣಗಳನ್ನು ನಾವು ಊಹೆ ಮಾಡಬಹುದು ಅಷ್ಟೆ.

ಬಹುಷಃ ಗಾಂಧೀಜಿಯವರಿಗೆ ಅನೇಕ ಕಾರಣಗಳಿದ್ದಿರಬಹುದು. ಮೊದಲನೆಯದಾಗಿ, ಮೋತಿಲಾಲ್ ನೆಹರುರವರ ಆಸೆ ಮತ್ತು ಬೇಡಿಕೆ. ಮೋತಿಲಾಲ್‌ರವರು ತಮ್ಮ ಮಗನನ್ನು ಕಾಂಗ್ರೆಸ್ ಅಧ್ಯಕ್ಷನನ್ನಾಗಿ ಮಾಡುವಂತೆ ೧೯೨೭ರಿಂದಲೇ ಗಾಂಧೀಜಿಯನ್ನು ಕೇಳುತ್ತಿದ್ದರು. ಆದರೆ ೧೯೨೭ರಲ್ಲಿ ಡಾ॥ ಎಂ.ಎ. ಅನ್ಸಾರಿಯವರು ಕಾಂಗ್ರೆಸ್ ಅಧ್ಯಕ್ಷರಾದರು. ೧೯೨೮ರಲ್ಲಿ ಮೋತಿಲಾಲ್ ನೆಹರೂರವರೇ ಅಧ್ಯಕ್ಷರಾದರು. ೧೯೨೯ರ ಹೊತ್ತಿಗೆ ಅವರಿಗೆ ೭೦ ವರ್ಷ ದಾಟಿತ್ತು ಮತ್ತು ರೋಗಿಯಾಗಿದ್ದರು. ಅವರಿಗೆ ತಮ್ಮ ಮಗ ತಾವು ಬದುಕಿರುವಾಗಲೇ ಕಾಂಗ್ರೆಸ್ ಅಧ್ಯಕ್ಷ ಆಗುವುದನ್ನು ನೋಡುವ ಬಯಕೆ ಇತ್ತು. ಗಾಂಧೀಜಿಯವರು ಅವರ ಆಸೆ ಪೂರೈಸಲೆಂದು ಜವಹರ್‌ರವರನ್ನು ಗಾದಿಗೆ ಏರಿಸಿರಬಹುದು.

ಎರಡನೆಯದಾಗಿ, ಜವಹರ್‌ಲಾಲ್ ನೆಹರು ೧೯೨೭ರಲ್ಲಿ ಸೋವಿಯತ್ ರಷ್ಯಾಕ್ಕೆ ಹೋಗಿ ಬಂದ ಮೇಲೆ ಅವರು ಹೆಚ್ಚು ಹೆಚ್ಚು ತೀವ್ರಗಾಮಿಯಾಗುತ್ತಿದ್ದರು ಮತ್ತು ಕಮ್ಯುನಿಸಂ ಕಡೆಗೆ ವಾಲುತ್ತಿದ್ದರು. ಅದನ್ನು ತಡೆಯುವುದಕ್ಕಾಗಿ ಅವರಿಗೆ ಗಾಂಧೀಜಿಯವರು ಪಟ್ಟಕಟ್ಟಿರಬಹುದು.

ಮೂರನೆಯದಾಗಿ, ದೇಶದಲ್ಲಿ ಯುವಕರ ಮೇಲೆ ಎಡಪಂಥದ ಪ್ರಭಾವ ಹೆಚ್ಚುತ್ತಿತ್ತು. ಜವಹರ್‌ರವರು ಯುವಕರಿಗೆ ಭಾರಿ ಆಕರ್ಷಣೆಯಾಗಿದ್ದರು. ಅವರು ಯುವಕರನ್ನು ಅಯಸ್ಕಾಂತದಂತೆ ಸೆಳೆಯುತ್ತಿದ್ದರು. ಅದರಿಂದ ನೆಹರುರವರಿಗೆ ಅಧ್ಯಕ್ಷ ಸ್ಥಾನ ನೀಡಿದರೆ ಯುವಕರನ್ನು ಕಾಂಗ್ರೆಸ್ ಕಡೆಗೆ ಸೆಳೆಯುತ್ತಾರೆ ಎಂದು ಗಾಂಧೀಜಿ ಭಾವಿಸಿರಬಹುದು. ಜೊತೆಗೆ ಯುವಕರನ್ನು ಸೆಳೆಯಲು ಸರ್ದಾರರಿಗಿಂತ ಜವಹರ್‌ರವರು ಹೆಚ್ಚು ಸೂಕ್ತ ಎನಿಸಿರಬಹುದು ಗಾಂಧೀಜಿಯವರಿಗೆ.

ನಾಲ್ಕನೆಯದಾಗಿ, ಕಲ್ಕತ್ತದಲ್ಲಿ ನಡೆದ ೪೪ನೆ ಕಾಂಗ್ರೆಸ್ ಅಧಿವೇಶನದಲ್ಲಿ ಯುವ ನಾಯಕರಾದ ಜವಹರ್ ಮತ್ತು ಸುಭಾಷ್ ಒಂದುಗೂಡಿ, ಡೊಮಿನಿಯನ್ ಸ್ಟೇಟುಸ್ ಅನ್ನು ವಿರೋಧಿಸಿ, ಹಿರಿಯ ನಾಯಕರಿಗೆ ಸಡ್ಡು ಹೊಡೆದು ನಿಂತರು. ಅದರಿಂದ, ನೆಹರುರವರನ್ನು ಸುಭಾಷ್‌ರಿಂದ ಬೇರ್ಪಡಿಸಿ ತಮ್ಮ ತೆಕ್ಕೆಗೆ ಮತ್ತೆ ತೆಗೆದುಕೊಳ್ಳಲು ಗಾಂಧೀಜಿ ಈ ಉಪಾಯ ಹೂಡಿರಬಹುದು. ಸರ್ದಾರರು ಎಂದೂ ತಮ್ಮನ್ನು ತೊರೆಯುವುದಿಲ್ಲ ಎನ್ನುವುದು ಗಾಂಧೀಜಿಗೆ ಖಚಿತವಾಗಿತ್ತು. ಅದರಿಂದಲೂ ಗಾಂಧೀಜಿ ನೆಹರುವನ್ನು ಓಲೈಸಿರಬಹುದು.

ರಾಜಮೋಹನ ಗಾಂಧಿಯವರು ಒಂದು ಕಾರಣ ನೀಡಿದ್ದಾರೆ: ಡಿಸೆಂಬರ್ ೧೯೨೮ರಲ್ಲಿ ಮಹಮ್ಮದಾಲಿ ಜಿನ್ನಾ 'ಹೊರ ಹೋಗುವ' ಮಾತನಾಡಿದ ಮೇಲೆ ಅನೇಕ ಮುಸ್ಲಿಮರು ಕಾಂಗ್ರೆಸ್ಸಿನ ಸಂಬಂಧದಿಂದ ಕಳಚಿಕೊಳ್ಳಲು ತೊಡಗಿದ್ದರು. ಅವರನ್ನು ಮತ್ತೆ ಕಾಂಗ್ರೆಸ್ಸಿಗೆ ಸೆಳೆಯಲು ಸರ್ದಾರರಿಗಿಂತ ಜವಹರ್ ಹೆಚ್ಚು ಶಕ್ತಿವಂತರು ಎನಿಸಿರಬಹುದು ಗಾಂಧೀಜಿಗೆ.[೧೩]

ಜವಹರ್‌ರವರನ್ನು ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಏರಿಸುವುದಕ್ಕೆ ಗಾಂಧೀಜಿಯವರ ಕಾರಣ 'ವೈಯುಕ್ತಿಕವಾದುದು, ರಾಜಕೀಯವಾದುದಲ್ಲ' ಎನ್ನುತ್ತಾರೆ ಜೆ.ಬಿ. ಕೃಪಲಾನಿ.[೧೪]

ಕಿಶೋರ್‌ಲಾಲ್ ಮಶ್ರುವಾಲ ಕೊಟ್ಟಿರುವ ಕಾರಣ ಹೀಗಿದೆ: ಗಾಂಧೀಜಿ ಮತ್ತು ಪಟೇಲರ ಸಂಬಂಧ ಅಣ್ಣ – ತಮ್ಮನ ಸಂಬಂಧದ ತರಹ. ಆದರೆ ಗಾಂಧೀಜಿ – ನೆಹರು ಸಂಬಂಧ ತಂದೆ – ಮಗನ ಸಂಬಂಧದ ತರಹ. ಕಿರಿಯ ತಮ್ಮ ಪ್ರತಿನಿಧಿಯಾಗಬಹುದೇ ಹೊರತು ಉತ್ತರಾಧಿಕಾರಿ ಆಗಲಾರ. ಆದರೆ ಮಗ ಉತ್ತರಾಧಿಕಾರಿಯಾಗುತ್ತಾನೆ. ಪಟೇಲರು ಗಾಂಧೀಜಿಯ ಜೀವಿತ ಕಾಲದಲ್ಲೇ, ಅವರ ಜೊತೆ ಜೊತೆಯಲ್ಲೇ ನಾಯಕನಾಗಿದ್ದವರು. ಆದರೆ ನೆಹರುರವರು ಗಾಂಧಿಯವರ ನಂತರ ದೇಶವನ್ನು ಮುನ್ನಡೆಸುವವರು. [೧೫]

ಹೀಗೆ ನಾನಾ ಕಾರಣಗಳನ್ನು ಊಹಿಸಿ ಪ್ರತಿಪಾದಿಸಬಹುದು. ಕಾರಣವೇನೇ ಇರಲಿ, ಸರ್ದಾರ್ ಪಟೇಲರಿಗೆ ಅನ್ಯಾಯವಾಯಿತು ಎಂಬ ಭಾವನೆ ಜನರಿಗೆ ಬರುವುದು ಅಸಂಭವವಲ್ಲ, ಅಸಹಜವೂ ಅಲ್ಲ. ತಾವು ಅಧ್ಯಕ್ಷ ಕಣದಿಂದ ಹಿಂದಕ್ಕೆ ಸರಿಯುವಂತೆ ಒತ್ತಾಯ ಮಾಡಿದ ಇಬ್ಬರನ್ನು ಪಟೇಲರು 'ಜವಹರನ ಬೇಟೆ ನಾಯಿಗಳು' ಎಂದು ವರ್ಣಿಸಿರುವುದನ್ನು ನೋಡಿದರೆ ಅಧ್ಯಕ್ಷಗಿರಿ ಕೈತಪ್ಪಿದ್ದು ಅವರಿಗೆ ಅಸಮಾಧಾನವನ್ನು ಉಂಟು ಮಾಡಿತ್ತು ಎಂದು ಹೇಳಬಹುದು. – ಲೇಖಕ)

ಲಾಹೋರ್ ಅಧಿವೇಶನವು 'ಪೂರ್ಣ ಸ್ವರಾಜ್ಯ' ಅಂದರೆ ಸಂಪೂರ್ಣ ಸ್ವಾತಂತ್ರ್ಯವು ಕಾಂಗ್ರೆಸ್ಸಿನ ಗುರಿಯೆಂದೂ, ಶಾಸನ ಸಭೆಗಳ ಸದಸ್ಯರು ತಮ್ಮ ಸ್ಥಾನಗಳಿಗೆ ರಾಜಿನಾಮೆ ನೀಡಬೇಕೆಂದೂ, ಗಾಂಧೀಜಿಯ ನಾಯಕತ್ವದಲ್ಲಿ ಸತ್ಯಾಗ್ರಹ ಚಳವಳಿಯನ್ನು ಅಂದರೆ ಸಿವಿಲ್ ಕಾನೂನು ಭಂಗ ಚಳವಳಿಯನ್ನು ನಡೆಸ ಬೇಕೆಂದೂ ಜೊತೆಗೆ ಪ್ರತಿವರ್ಷ ಜನವರಿ ೨೬ರಂದು ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಬೇಕೆಂದೂ ತೀರ್ಮಾನಿಸಿತು ಮತ್ತು ಸತ್ಯಾಗ್ರಹದ ಸ್ವರೂಪ, ವ್ಯಾಪ್ತಿ ಮತ್ತು ಆರಂಭದ ದಿನವನ್ನು ನಿರ್ಧರಿಸುವ ಅಧಿಕಾರವನ್ನು ಗಾಂಧೀಜಿಗೆ ನೀಡಿತು.[೧೬]

❖ ◆ ❖

೧೧. ಸೆರೆಮನೆಗಳ ಆತಿಥ್ಯ

೧೧.೧. ಪ್ರಥಮ ಸೆರೆವಾಸ

ಗಾಂಧೀಜಿಯವರು ಯಾವ ಸಿವಿಲ್ ಶಾಸನವನ್ನು ಮುರಿಯುವುದರ ಮೂಲಕ ಸಿವಿಲ್ ಶಾಸನ ಭಂಗ ಚಳವಳಿಯನ್ನು ಆರಂಭಿಸಬೇಕೆಂದು ಬಹಳ ದೀರ್ಘವಾಗಿ ಆಲೋಚಿಸಿ, ಸರ್ಕಾರಕ್ಕೆ ತೆರಿಗೆ ಕೊಡದೆ ಉಪ್ಪನ್ನು ತಯಾರಿಸಿ ಉಪ್ಪಿನ ಕಾಯಿದೆಯನ್ನು ಮುರಿಯಬೇಕೆಂದು ಫೆಬ್ರುವರಿಯಲ್ಲಿ ತೀರ್ಮಾನಿಸಿದರು. ಉಪ್ಪು ಎಲ್ಲರಿಗೂ ಬೇಕಾದ ಆಹಾರ ಪದಾರ್ಥ. ಅತ್ಯಂತ ಕಡು ಬಡವನಿಂದ ಹಿಡಿದು ಅತ್ಯಂತ ಶ್ರೀಮಂತನವರೆಗೆ ಅದು ಎಲ್ಲರಿಗೂ ಆವಶ್ಯಕ. ಮನುಷ್ಯರು ಬದುಕುವುದಕ್ಕೆ ಅದು ಅತ್ಯಾವಶ್ಯಕ. ಜೊತೆಗೆ ಅದು ಪ್ರಕೃತಿಯಲ್ಲಿ ಸಹಜವಾಗಿ ಸಿಗುವ ವಸ್ತು. ಅಂತಹ ಆವಶ್ಯಕ ವಸ್ತುವಿನ ಮೇಲೆ ಕೊಳಕು ಬ್ರಿಟಿಷ್ ಸರ್ಕಾರವು ತೆರಿಗೆಯನ್ನು ಹೇರಿತ್ತು. ಗಾಂಧೀಜಿಯವರು ಸಮುದ್ರದ ತಡಿಗೆ ನಡೆದು ಹೋಗಿ ತೆರಿಗೆಯನ್ನು ಕೊಡದೆ ಉಪ್ಪನ್ನು ತಯಾರಿಸಿ ಸಿವಿಲ್ ಶಾಸನ ಭಂಗ ಮಾಡಲು ತೀರ್ಮಾನಿಸಿದರು. ಅದರಿಂದ ಆ ಚಳವಳಿಯು 'ಉಪ್ಪಿನ ಸತ್ಯಾಗ್ರಹ' ಎಂದು ಪ್ರಸಿದ್ಧವಾಯಿತು.

ಗುಜರಾತ್‌ನ ಸಮುದ್ರ ತೀರದಲ್ಲಿ ಉಪ್ಪಿನ ಕಾಯಿದೆಯನ್ನು ಮುರಿಯುವ ಸ್ಥಳ ಮತ್ತು ಅಲ್ಲಿಗೆ ತಲುಪುವ ಮಾರ್ಗವನ್ನು ನಿರ್ಧರಿಸುವ ಕೆಲಸವನ್ನು ಗಾಂಧೀಜಿಯವರು ಸರ್ದಾರರಿಗೆ ವಹಿಸಿದರು. ಸರ್ದಾರರು ತಮ್ಮ ಭಂಟರಾದ ಮೋಹನ್‌ಲಾಲ್ ಪಾಂಡ್ಯ ಮತ್ತು ರವಿಶಂಕರ್ ಮಹರಾಜ್‌ರವರೊಡನೆ

ಸಮಾಲೋಚಿಸಿ, ಸೂರತ್ ಜಿಲ್ಲೆಯ ಸಮುದ್ರ ತೀರದ ಹಳ್ಳಿ ದಂಡಿಯನ್ನು ಆರಿಸಿದರು ಮತ್ತು ಖೇಡ, ಬರೂಚ್ ಮತ್ತು ಸೂರತ್ ಜಿಲ್ಲೆಗಳ ಅನೇಕ ಹಳ್ಳಿಗಳ ಮೂಲಕ ನಡೆದು ೩೮೫ ಕಿ.ಮೀ ದೂರವನ್ನು ಕ್ರಮಿಸಿ ದಂಡಿಯನ್ನು ತಲುಪ ಬೇಕೆಂದು ನಿರ್ಧರಿಸಿದರು. ೧೯೩೦ರ ಮಾರ್ಚ್ ೧೨ರಂದು ೭೮ ಮಂದಿ ಅನುಯಾಯಿಗಳೊಡನೆ ಸಬರಮತಿ ಆಶ್ರಮದಿಂದ ತಮ್ಮ ಕಾಲ್ನಡಿಗೆಯ ಪಯಣ ವನ್ನು ಆರಂಭಿಸಬೇಕೆಂದು ಗಾಂಧೀಜಿ ತೀರ್ಮಾನಿಸಿದರು ಮತ್ತು ತಮ್ಮ ಯೋಜನೆ ಯನ್ನು ಪತ್ರ ಮುಖೇನ ವೈಸ್‌ರಾಯ್ ಲಾರ್ಡ್ ಇರ್ವಿನ್‌ಗೆ ಮುಂಚಿತವಾಗಿ ತಿಳಿಸಿದರು. ತಾವು ದಂಡಿಯಲ್ಲಿ ಉಪ್ಪನ್ನು ತಯಾರಿಸಿದ ನಂತರ ಯಾರ್ಯಾರಿಗೆ ಎಲ್ಲೆಲ್ಲಿ ಉಪ್ಪು ತಯಾರಿಸಲು ಸಾಧ್ಯವೋ ಅವರು ಅಲ್ಲಲ್ಲಿ ಕರ ಕೊಡದೆ ಉಪ್ಪು ತಯಾರಿಸಿ ಶಾಸನ ಭಂಗ ಚಳವಳಿ ನಡೆಸಬೇಕೆಂದು ಗಾಂಧೀಜಿ ಜನರಿಗೆ ಕರೆ ಕೊಟ್ಟರು.[೧೭] ದಂಡಿ ಯಾತ್ರೆಯ ಆರಂಭವನ್ನು ಜನರು ಕಾತರದಿಂದ ಕಾಯಲಾರಂಭಿಸಿದರು.

ಸಬರಮತಿ ಆಶ್ರಮದಿಂದ ಗಾಂಧೀಜಿಯೊಡನೆ ದಂಡಿಗೆ ಹೊರಡುವ ೭೮ ಮಂದಿ ಸತ್ಯಾಗ್ರಹಿಗಳನ್ನು ಪಟೇಲರೇ ಆರಿಸಿದರು. ಅವರೆಲ್ಲ ಹಿಂದಿನ ಅನೇಕ ಸತ್ಯಾಗ್ರಹಗಳಲ್ಲಿ ಭಾಗವಹಿಸಿದ್ದವರು ಮತ್ತು ಪಕ್ಕಾ ಅಹಿಂಸಾಪಾಲಕರು.

ಗಾಂಧೀಜಿಯವರು ತಮ್ಮ ಪಯಣವನ್ನು ಆರಂಭಿಸುವುದಕ್ಕೆ ಮುಂಚೆ ಅವರ ಮಾರ್ಗವನ್ನು ಸುಗಮಗೊಳಿಸುವುದಕ್ಕಾಗಿ ಮತ್ತು ಮುಂದೆ ಬರಬಹುದಾದ ಸಂಕಟಗಳಿಗೆ ಹಳ್ಳಿಯವರನ್ನು ಸಿದ್ಧಗೊಳಿಸುವುದಕ್ಕಾಗಿ ಸರ್ದಾರ್ ಪಟೇಲರು ಹರಿಕಾರನಂತೆ ಮುಂದೆ ಹೊರಟರು.

ಸರ್ದಾರರು ಫೆಬ್ರುವರಿ ೧೧ರಂದು ಬ್ರೋಚ್‌ನಲ್ಲಿ ಒಂದು ಸ್ಫೂರ್ತಿದಾಯಕ ಭಾಷಣ ಮಾಡಿದರು. ಅವರೆಂದರು:

> ಮುಂದಿನ ೮ ಅಥವಾ ೧೦ ಅಥವಾ ೧೫ ದಿನಗಳಲ್ಲಿ ಸಿವಿಲ್ ಶಾಸನ ಭಂಗ ಚಳವಳಿ ಆರಂಭವಾಗಿರುತ್ತದೆ. ಅಹಿಂಸಾತ್ಮಕ ಶಾಸನ ಭಂಗವು ನಡೆಯುತ್ತದೆ. ಅಂತಹ ಶಾಸನ ಭಂಗವು, ಯಾರು ಕೋಪ ರಹಿತರೊ, ಮತ್ಸರ ರಹಿತರೊ ಮತ್ತು ಯಾರ ಶುದ್ಧತೆ ಹಾಗೂ ಒಳ್ಳೆಯತನದ ಬಗೆಗೆ ಅನುಮಾನವಿಲ್ಲವೊ ಅಂತಹ ಅಹಿಂಸಾ ಭಕ್ತರಿಂದ ಜರಗುತ್ತದೆ.

ಸ್ವಲ್ಪ ಸಮಯಕ್ಕೆ ಮುಂಚೆ ಒಬ್ಬ ಬ್ರಿಟಿಷ್ ರಾಜಕಾರಣಿಯು '೧೯೨೨ರಲ್ಲಿ

ಗಾಂಧೀಜಿಯ ದಸ್ತಗಿರಿಯಾದಾಗ ಒಂದು ನಾಯಿಯೂ ಬೊಗಳಲಿಲ್ಲ' ಎಂದಿದ್ದ. ಅದನ್ನು ಪ್ರಸ್ತಾಪಿಸಿ, ಸರ್ದಾರರು ಹೀಗೆ ಹೇಳಿದರು:

> ಅದು ಸುಳ್ಳು. ಅದು ಹಾಗಲ್ಲ. ಆ ಸಮಯದಲ್ಲಿ ನಾವು ಬಾರ್ಡೋಲಿಯಲ್ಲಿ ಹೋರಾಟವನ್ನು ಆರಂಭಿಸಲು ಯೋಜಿಸಿದ್ದೆವು. ಆದರೆ ಗಾಂಧೀಜಿ ಅದನ್ನು ಮುಂದೂಡಲು ಸೂಚಿಸಿದರು..... ಹೋರಾಟವನ್ನು ಮುಂದುವರಿಸದಂತೆ ಮತ್ತು ದಸ್ತಗಿರಿ ಆಗುವಂತಹ ಏನನ್ನೂ ಮಾಡದಂತೆ ಗಾಂಧೀಜಿಯವರು ತಮ್ಮ ಅನುಯಾಯಿಗಳಿಗೆ ಸೂಚಿಸಿದರು. ಈ ಆತ್ಮ ಸಂಯಮವನ್ನು ತಪ್ಪಾಗಿ ಅರ್ಥೈಸಲಾಗಿದೆ.

ಅನಂತರ ಸರ್ದಾರರು ಬ್ರಿಟಿಷರು ಹರಡುತ್ತಿದ್ದ ಅನೇಕ ಕಾಲ್ಪನಿಕ ಸಂಗತಿಗಳನ್ನು ಪ್ರಸ್ತಾಪಿಸಿ, ಅವನ್ನು ಅಲ್ಲಗಳೆದರು. ಅವುಗಳ ಪೈಕಿ ಒಂದು, ಬ್ರಿಟಿಷರು ತಾವು 'ಭಾರತದ ಟ್ರಸ್ಟಿಗಳು' ಎಂದು ಹೇಳಿಕೊಳ್ಳುತ್ತಿದ್ದುದು. ಅದರ ಬಗೆಗೆ ಸರ್ದಾರರು ವ್ಯಂಗ್ಯವಾಗಿ ನುಡಿದರು:

> ಆದರೆ ಯಾರ ಟ್ರಸ್ಟಿಗಳು ಅವರು? ಅವರಿಗೆ ಕಿರೀಟ ತೊಡಿಸಿ ಇಲ್ಲಿಗೆ ಆಹ್ವಾನಿಸುವುದಕ್ಕೆ ಯಾರು ಇಂಗ್ಲೆಂಡಿಗೆ ಹೋಗಿದ್ದರು? ಇಂತಹ ಮಾತುಗಳನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಅವರ ಬೆದರಿಕೆಗಳಿಗೆ ಯಾರೂ ಬಗ್ಗುವುದಿಲ್ಲ..... ನಮಗೆ ಶಾಂತಿಯನ್ನು ನೀಡಿದ್ದೇವೆ ಎಂದು ಸರ್ಕಾರ ಹೇಳುತ್ತಿದೆ. ಆದರೆ ಈ ಶಾಂತಿಯಿಂದ ನಮಗೇನು ಪ್ರಯೋಜನ? ಜನ ಹಸಿವೆಯಿಂದ ನರಳುತ್ತಿದ್ದಾರೆ. ಅವರ ರಕ್ತನಾಳಗಳಲ್ಲಿ ರಕ್ತವಿಲ್ಲ, ಕಣ್ಣುಗಳಲ್ಲಿ ಕಾಂತಿಯಿಲ್ಲ, ದೇಹದಲ್ಲಿ ಹಿಡಿಮೂಳೆ ಹೊಂದಿರುವ ಸಬರಮತಿಯ ಆ ಸಂತನು ತನ್ನ ಚರಕದಿಂದ ಸಾಮ್ರಾಜ್ಯವನ್ನು ನಡುಗಿಸಿದ್ದಾನೆ. ಅದು ಒಂದು ನೈಜ ವಿಸ್ಮಯ. ಅವನು ನಮ್ಮಲ್ಲಿ ಭರವಸೆಯನ್ನು ತುಂಬಿದ್ದಾನೆ. .....ಅವನ್ನು ನೀವು ಈಡೇರಿಸುವುದಿಲ್ಲವೆ? ಸೂರ್ಯೋದಯವನ್ನು ಬೆಳಕು ಹಿಂಬಾಲಿಸುವಂತೆ ಜನರಲ್ಲಿ ವಿವೇಕ ಉದಯಿಸುತ್ತದೆ. .....ಸ್ವಾತಂತ್ರ್ಯದ ಮೊದಲ ಪುಟ ಗುಜರಾತ್‌ನ ಚರಿತ್ರೆಯಲ್ಲಿ ಬರೆಯಲ್ಪಡುತ್ತಿದೆ.[೧೮]

ಆ ಸಮಯದಲ್ಲಿ ಖೇಡಾ ಜಿಲ್ಲೆಯ ಕಲೆಕ್ಟರನಾಗಿದ್ದ ಆಲ್‌ಫ್ರಡ್ ಮಾಸ್ಟರನು ಪಟೇಲರನ್ನು ದಸ್ತಗಿರಿ ಮಾಡಬೇಕೆಂದು ಯೋಚಿಸಿದನು. ೧೯೨೧ರ ಚಳವಳಿಯಲ್ಲಿ

ಗಾಂಧೀಜಿ ಮತ್ತು ಇತರ ಅನೇಕ ನಾಯಕರು ದಸ್ತಗಿರಿಯಾಗಿದ್ದರೂ, ಪಟೇಲರು ಮಾತ್ರ ದಸ್ತಗಿರಿಯಾಗಿರಲಿಲ್ಲ. ಅದರಿಂದ ಹೇಗಾದರೂ ಅವರನ್ನು ದಸ್ತಗಿರಿ ಮಾಡಿ ಅವರು ಭಾಷಣ ಮಾಡದಂತೆ ತಡೆಯಬೇಕೆಂದು ಕಲೆಕ್ಟರನು ನಿರ್ಧರಿಸಿದ್ದನು. ಅವನ ಈ ಆಲೋಚನೆಗಳ ಅರಿವಿಲ್ಲದ ಪಟೇಲರು ಬೋರ್ಸದ್ ತಾಲ್ಲೂಕಿನ ಕಂಕಪುರ ಹಳ್ಳಿಯಲ್ಲಿ ಒಂದು ಸಭೆಯನ್ನು ಉದ್ದೇಶಿಸಿ ಭಾಷಣ ಮಾಡುವುದಾಗಿ ಪ್ರಕಟಿಸಿದರು ಮತ್ತು ಮಾರ್ಚ್ ೭ರಂದು ಅಲ್ಲಿಗೆ ಹೊರಟರು. ದಾರಿಯಲ್ಲಿ ರಾಸ್ ಎಂಬ ಹಳ್ಳಿಯಲ್ಲಿ ಊಟಕ್ಕಾಗಿ ನಿಂತರು. ಆ ಹಳ್ಳಿಯ ಜನ ಭಾಷಣ ಮಾಡುವಂತೆ ಪಟೇಲರನ್ನು ಒತ್ತಾಯಿಸಿದರು. ಅವರೆಂದರು, "ನಾವು ಖೇಡಾ ಹೋರಾಟದಲ್ಲಿ ಭಾಗವಹಿಸಿದ್ದೇವೆ. ಖಾದಿ ಉತ್ಪಾದನೆಯಲ್ಲಿ ಮುಂಚೂಣಿಯಲ್ಲಿದ್ದೇವೆ. ಸತ್ಯಾಗ್ರಹದ ಎಲ್ಲ ನಿಯಮಗಳನ್ನು ಪಾಲಿಸಲು ಸಿದ್ಧರಿದ್ದೇವೆ. ನಮ್ಮ ಹಳ್ಳಿಯ ಮೂಲಕ ಹಾದು ಹೋದರೂ ಭಾಷಣ ಮಾಡದಿರುವುದಕ್ಕೆ ನಾವೇನಾದರು ಅಪರಾಧ ಮಾಡಿದ್ದೇವೆಯೆ?" "ನಿಮ್ಮಲ್ಲಿ ಎಷ್ಟು ಜನ ಸೆರೆಮನೆಗೆ ಹೋಗಲು ಸಿದ್ಧವಿದ್ದೀರಿ?" ಪ್ರಶ್ನಿಸಿದರು ಪಟೇಲ್. ಸ್ವಲ್ಪ ಹೊತ್ತಿನಲ್ಲಿ ಸುಮಾರು ೨೦೦ ಮಂದಿ ಅವರ ಬಳಿ ಬಂದು ತಾವು ಸೆರೆಮನೆಗೆ ಹೋಗಲು ಸಿದ್ಧ ಎಂದು ತಿಳಿಸಿದರು. "ಹೆಂಗಸರೂ ಸಿದ್ಧವೇ?" ಪಟೇಲರ ಮರು ಪ್ರಶ್ನೆ. ಯುವತಿಯರು ಮತ್ತು ವೃದ್ಧೆಯರು ಇದ್ದ ಒಂದು ಗುಂಪಿನ ಹೆಂಗಸರು 'ತಾವೂ ಸಹ ಸಿದ್ಧ' ಎಂದರು. "ಸರಿ, ಹಾಗಾದರೆ ಊಟವಾದ ನಂತರ ಎರಡು ಘಂಟೆಗೆ ಭಾಷಣ ಮಾಡುತ್ತೇನೆ. ನಂತರ ಕಂಕಪುರಕ್ಕೆ ಹೊರಡುತ್ತೇನೆ," ಎಂದರು ಪಟೇಲರು.

೨ ಘಂಟೆಗೆ ಸಾವಿರಾರು ಮಂದಿ ಅಲ್ಲಿಯ ಆಲದ ಮರದ ಮುಂದೆ ನೆರೆದರು. ಪಟೇಲರು ಭಾಷಣವನ್ನು ಆರಂಭಿಸುವ ಹೊತ್ತಿಗೆ ಬೋರ್ಸದ್‌ನ ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟ್ ಮತ್ತು ಕೆಲವು ಅಧಿಕಾರಿಗಳು ಅಲ್ಲಿಗೆ ಬಂದರು. ಮ್ಯಾಜಿಸ್ಟ್ರೇಟನು ಪಟೇಲರಿಗೆ ಒಂದು ನೋಟೀಸನ್ನು ಜಾರಿ ಮಾಡಿ, 'ಭಾಷಣ ಮಾಡಕೂಡದು' ಎಂದನು. ಪಟೇಲರು ನೋಟೀಸನ್ನು ಓದಿಕೊಂಡರು. ಮ್ಯಾಜಿಸ್ಟ್ರೇಟ್ ಕೇಳಿದನು, "ಈಗೇನು ಮಾಡುತ್ತೀರಿ?" "ನೋಟೀಸನ್ನು ಕಡೆಗಣಿಸುತ್ತೇನೆ ಮತ್ತು ಭಾಷಣ ಮಾಡುತ್ತೇನೆ," ಎಂದರು ಪಟೇಲ್. "ನಿಮ್ಮನ್ನು ದಸ್ತಗಿರಿ ಮಾಡಲು ಆಜ್ಞಾಪಿಸುತ್ತೇನೆ," ಎಂದನು ಮ್ಯಾಜಿಸ್ಟ್ರೇಟ್. "ಹೀಗೆ ಬನ್ನಿ" ಎಂದರು ಪೊಲೀಸ್ ಸೂಪರಿಂಟೆಂಡೆಂಟ್ ಬಿಲ್ಲಿ ಮೋರಿಯ ಪಟೇಲರಿಗೆ.

ಸರ್ದಾರ್ ಪಟೇಲರು ತಮ್ಮ ಆಸನದಿಂದ ಎದ್ದು, ನೆರೆದಿದ್ದ ಜನರಿಗೆ ಕೈ ಮುಗಿದು ವಂದಿಸಿ, ನಗುತ್ತಾ ಹೋಗಿ ಪೊಲೀಸರ ಕಾರಿನಲ್ಲಿ ಕುಳಿತರು. ಪೊಲೀಸರು ಅವರನ್ನು ಬೋರ್ಸದ್‌ನ ಒಂದು ನ್ಯಾಯಾಲಯದ ಕೊಠಡಿಗೆ ಕರೆದೊಯ್ದರು.

ಅಲ್ಲಿ ಸ್ವತಃ ಆಲ್‌ಫ್ರಡ್ ಮಾಸ್ಟರ್ ಅವರ ವಿಚಾರಣೆ ನಡೆಸಿದನು. ಅಲ್ಲಿದ್ದ ಎಲ್ಲಾ ವಕೀಲರು ಹೊರಗೆ ಕಳುಹಿಸಲ್ಪಟ್ಟರು. ಆಲ್‌ಫ್ರಡ್ ಮಾಸ್ಟರ್, ವಲ್ಲಭಭಾಯ್ ಪಟೇಲ್ ಮತ್ತು ಅವರನ್ನು ದಸ್ತಗಿರಿ ಮಾಡಿದ ಇಬ್ಬರು ಅಧಿಕಾರಿಗಳು ಮಾತ್ರ ಅಲ್ಲಿ ಉಳಿದರು. ವಿಚಾರಣೆ ಶುರುವಾಯಿತು. ವಲ್ಲಭಭಾಯ್ ತಪ್ಪು ಒಪ್ಪಿಕೊಂಡರು. ಯಾವ ಸಾಕ್ಷಿಯನ್ನು ವಿಚಾರಿಸದೆ ಮಾಸ್ಟರನು ತೀರ್ಪಿತ್ತನು. ಅವನು ಎಂಟು ಸಾಲುಗಳ ತೀರ್ಪನ್ನು ಬರೆಯಲು ಒಂದು ಘಂಟೆ ೩೦ ನಿಮಿಷ ತೆಗೆದುಕೊಂಡನು. ಪಟೇಲರ ಮೇಲಿನ ಭಯ ಮತ್ತು ಕೋಪದಿಂದ ಅವನ ಬುದ್ಧಿಗೆ ಜೋಮು ಹಿಡಿದಿತ್ತೆಂದು ಕಾಣುತ್ತದೆ! ಆ ಎಂಟು ಸಾಲಿನ ತೀರ್ಪನ್ನೂ ಸಹ ಅವನು ಓದಲಿಲ್ಲ. ಅದಕ್ಕೆ ಬದಲಾಗಿ ಬಾಯಿಮಾತಿನಲ್ಲಿ, 'ಪಟೇಲರಿಗೆ ಕಾನೂನಿನ ಅಡಿಯಲ್ಲಿ ಗರಿಷ್ಟ ಶಿಕ್ಷೆ ಮೂರು ತಿಂಗಳ ಸಾದಾ ಸೆರೆವಾಸ ಮತ್ತು ೫೦೦ ರೂ ದಂಡ ಅಥವಾ ಮೂರು ವಾರಗಳ ಹೆಚ್ಚಿನ ಸೆರೆವಾಸವನ್ನು ವಿಧಿಸಲಾಗಿದೆ,' ಎಂದನು.[೧೯]

ನಂತರ ಸರ್ದಾರ್ ಪಟೇಲರು, ಪೊಲೀಸರ ಕಾರನ್ನು ಹಿಂಬಾಲಿಸಿ ಬಂದಿದ್ದ, ತಮ್ಮ ಆಪ್ತ ಮೋಹನ್ ಲಾಲ್ ಪಾಂಡ್ಯರವರಿಗೆ ತಮ್ಮಲ್ಲಿದ್ದ ಹಣ ಮತ್ತು ಕಾಗದ ಗಳನ್ನು ನೀಡಿದರು. "ಎಷ್ಟು ಹಣ ಕೊಡುತ್ತಿದ್ದೀರಿ?" ಎಂದನು ಮಾಸ್ಟರ್. ಆ ಹಣವನ್ನು ದಂಡದ ಸ್ವಲ್ಪ ಭಾಗವಾಗಿ ಕಸಿಯುವ ಹಂಚಿಕೆ ಮಾಸ್ಟರನದು ಎಂದು ಗ್ರಹಿಸಿದ ಪಟೇಲರು, "ಅದು ಸಾರ್ವಜನಿಕರ ಹಣ. ನೀವು ಅದರ ತಂಟೆಗೆ ಹೋಗದಿರುವುದು ಒಳ್ಳೆಯದು," ಎಂದರು. ಮಾಸ್ಟರ್ ತೆಪ್ಪಗಾದನು.

ಪೊಲೀಸ್ ಸೂಪರಿಂಟೆಂಡೆಂಟ್ ಬಿಲ್ಲಿ ಮೋರಿಯ ಪಟೇಲರನ್ನು ಸಬರಮತಿ ಸೆರೆಮನೆಗೆ ಕರೆದೊಯ್ದನು. ಅವನು ಮಾರ್ಗ ಮಧ್ಯದಲ್ಲಿ ಅವರನ್ನು ಗಾಂಧೀಜಿಯ ಸಬರಮತಿ ಆಶ್ರಮಕ್ಕೆ, ಗಾಂಧೀಜಿಯ ಭೇಟಿಗೆ ಕರೆದೊಯ್ಯುವ ಸೌಜನ್ಯತೆಯನ್ನು ತೋರಿದನು. ಗಾಂಧೀಜಿಯವರು ರಾಸ್ ಮತ್ತು ಬೋರ್ಸದ್‌ನಲ್ಲಿ ನಡೆದ ಘಟನೆಗಳನ್ನು ತದೇಕಚಿತ್ತದಿಂದ ಆಲಿಸಿದರು.

ಸಬರಮತಿ ಸೆರೆಮನೆ ದ್ವಾರದಲ್ಲಿ ಪೊಲೀಸ್ ಸೂಪರಿಂಟೆಂಡೆಂಟ್ ಬಿಲ್ಲಿ ಮೋರಿಯ ವಲ್ಲಭಭಾಯ್ ಪಟೇಲರಿಗೆ ಒಂದು ಸಿಗರೇಟನ್ನು ನೀಡಿದನು. ಅದನ್ನು ತೆಗೆದುಕೊಳ್ಳಲು ಕೈ ಚಾಚಿದ ಪಟೇಲರು ತಮ್ಮ ಮನಸ್ಸನ್ನು ಬದಲಾಯಿಸಿ ಅದನ್ನು ನಿರಾಕರಿಸಿದರು. "ನೀವು ಧೂಮಪಾನ ಮಾಡುತ್ತೀರಲ್ಲವೆ?" ಎಂದನು ಬಿಲ್ಲಿ ಮೋರಿಯ. "ಧೂಮಪಾನ ಮಾಡುತ್ತೇನೆ. ಆದರೆ ಸೆರೆಮನೆಯೊಳಗೆ ಧೂಮಪಾನ ಮಾಡಲು ಅವಕಾಶ ಕೊಡುತ್ತೀರ?" ಎಂದರು ಪಟೇಲರು. ಹಾಗೆ ಹೇಳಿ ಅವರು ಧೂಮಪಾನ ಮಾಡುವುದನ್ನೇ ನಿಲ್ಲಿಸಿಬಿಟ್ಟರು. ತಮ್ಮ ಬದುಕಿನಲ್ಲಿ ಅವರು ಮತ್ತೆಂದೂ

ಧೂಮಪಾನ ಮಾಡಲೇ ಇಲ್ಲ.[೨೦]

ವಲ್ಲಭಭಾಯ್ ಪಟೇಲರ ದಸ್ತಗಿರಿ ಮತ್ತು ಸೆರೆವಾಸದ ಶಿಕ್ಷೆಗೆ ಭಾರಿ ವಿರೋಧ ಮತ್ತು ಪ್ರತಿಭಟನೆ ವ್ಯಕ್ತವಾಯಿತು. ಇಡೀ ಗುಜರಾತು ಏಕ ವ್ಯಕ್ತಿಯಂತೆ ಸರ್ಕಾರಕ್ಕೆ ತಿರುಗಿಬಿದ್ದಿತು. ಸಬರಮತಿ ದಡದಲ್ಲಿ ಅಹಮದಾಬಾದ್‌ನ ೭೫,೦೦೦ ಮಂದಿ ಸೇರಿ 'ಅಹಮದಾಬಾದ್‌ನ ನಾಗರಿಕರಾದ ನಾವು ಸರ್ದಾರ್ ವಲ್ಲಭ ಭಾಯ್‌ರವರನ್ನು ಹಿಂಬಾಲಿಸಿ ಸೆರೆಮನೆಗೆ ಹೋಗುತ್ತೇವೆ. ನಾವೂ ನೆಮ್ಮದಿಯಿಂದ ಇರುವುದಿಲ್ಲ, ನೆಮ್ಮದಿಯಿಂದ ಇರುವುದಕ್ಕೆ ಸರ್ಕಾರವನ್ನೂ ಬಿಡುವುದಿಲ್ಲ' ಎಂದು ಗುಡುಗಿದರು. ಗಿರಣಿ ಮಾಲೀಕರ ಸಂಘವು ಪಟೇಲರ ದಸ್ತಗಿರಿಯನ್ನು ಖಂಡಿಸಿ ಠರಾವನ್ನು ಅಂಗೀಕರಿಸಿತು. ಅಹಮದಾಬಾದ್‌ನ ಎಲ್ಲ ಗಿರಣಿಗಳು ಮುಚ್ಚಿದುವು. ಪುರಸಭೆಯು ತನ್ನ ಆಡಳಿತದ ಕಛೇರಿಯನ್ನು ಮುಚ್ಚುವುದರ ಮೂಲಕ ಪ್ರತಿಭಟಿಸಿತು. ಹಾಗೆಯೆ ನಗರದ ಶಾಲೆಗಳು ಮುಚ್ಚಿದುವು. ಅಹಮದಾಬಾದ್ ಮತ್ತು ಇತರ ಪಟ್ಟಣಗಳಲ್ಲಿ ವರ್ತಕರು ತಮ್ಮ ಅಂಗಡಿಗಳ ಬಾಗಿಲು ಹಚ್ಚಿ ಪ್ರತಿಭಟಿಸಿದರು. ರಾಸ್‌ನಲ್ಲಿ ನಡೆದ ಪ್ರತಿರೋಧ ಬಹಳ ಜೋರಾಗಿತ್ತು. ಅಲ್ಲಿ ಗ್ರಾಮಾಧಿಕಾರಿಗಳು ರಾಜಿನಾಮೆ ನೀಡಿದರು. ಜಮೀನ್ದಾರರು ತಮ್ಮ ವಿಶೇಷ ಹಕ್ಕುಗಳನ್ನು ಸರ್ಕಾರಕ್ಕೆ ಹಿಂತಿರುಗಿಸಿದರು. ರಾಸ್‌ನ ಸುಮಾರು ೫೦೦ ಮಂದಿ ಹೆಂಗಸರು ಮತ್ತು ಗಂಡಸರು ಸತ್ಯಾಗ್ರಹಿಗಳಾಗಿ ತಮ್ಮ ಹೆಸರನ್ನು ನೊಂದಣಿ ಮಾಡಿಸಿದರು. ಬೋರ್ಸದ್ ಮತ್ತು ಬಾರ್ದೋಲಿ ತಾಲ್ಲೂಕುಗಳ ಅನೇಕ ಹಳ್ಳಿಯವರು ಸಹ ಹಾಗೆಯೆ ಮಾಡಿದರು.[೨೧]

ದೂರದ ದೆಹಲಿಯಲ್ಲಿ ಮದನ್ ಮೋಹನ್ ಮಾಳವೀಯರು ಕೇಂದ್ರ ಶಾಸನ ಸಭೆಯಲ್ಲಿ ವಿಚಾರಣೆಯಿಲ್ಲದೆ ಪಟೇಲರನ್ನು ಸೆರೆಮನೆಗೆ ದೂಡಿದ್ದಕ್ಕೆ ಸರಕಾರವನ್ನು ಖಂಡಿಸುವ ಠರಾವನ್ನು ಮಂಡಿಸಿದರು. ಆ ಠರಾವು ೩೦ ಪರ, ೫೫ ವಿರುದ್ಧ ಮತಗಳಿಂದ ಬಿದ್ದುಹೋಯಿತು. ಆದರೆ ಅದರ ಮೇಲಿನ ಚರ್ಚೆಯ ಕಾಲದಲ್ಲಿ ಅನೇಕ ಸದಸ್ಯರು ಸರ್ಕಾರದ ನಡವಳಿಕೆಯನ್ನು ಖಂಡಿಸಿದರು. ಆ ಚರ್ಚೆಯಲ್ಲಿ ಭಾಗವಹಿಸಿ ಮಹಮ್ಮದಾಲಿ ಜಿನ್ನಾರವರು ಹೀಗೆಂದರು:

> ಗೃಹ ಸದಸ್ಯರ (ಗೃಹಮಂತ್ರಿಯ) ಪ್ರಕಾರ ಸರ್ದಾರ್ ವಲ್ಲಭ ಭಾಯ್ ಪಟೇಲ್‌ರವರು ತಮ್ಮ ದಸ್ತಗಿರಿಗೆ ಮುಂಚೆ ಅನೇಕ ಭಾಷಣಗಳನ್ನು ಮಾಡಿದ್ದರು..... ಆ ಭಾಷಣಗಳು ಕಾನೂನಿಗೆ ವಿರುದ್ಧವಾಗಿದ್ದುವೆ? ಚರ್ಚೆಯಲ್ಲಿರುವ ಅಂಶವೇನೆಂದರೆ ಸರ್ದಾರರು ಕಾನೂನು ಭಂಗ ಮಾಡಿದ್ದರೆ ಅಥವಾ ಇಲ್ಲವೆ? –

ಅನ್ನುವುದು. ಆ ಅಂಶದ ಮೇಲೆ ನಮಗೆ ಯಾವ ಮಾಹಿತಿಯನ್ನೂ ಸರಕಾರ ನೀಡಿಲ್ಲ. ಆ ಭಾಷಣಕ್ಕಿಂತ ಮುಂಚೆ ಪಟೇಲರು ಕಾನೂನು ಭಂಗವಾಗುವಂತಹ ಭಾಷಣಗಳನ್ನು ಮಾಡಿದ್ದರೆ ಮತ್ತು ಅಂತಹದೇ ಮತ್ತೊಂದು ಭಾಷಣವನ್ನು ಆಗ ಮಾಡುವವರಿದ್ದಿದ್ದರೆ, ಆ ಮುಂಚಿನ ಭಾಷಣಗಳಿಗಾಗಿ ಸರ್ದಾರರ ಮೇಲೆ ಕ್ರಮ ಜರುಗಿಸುವುದು ಜಿಲ್ಲಾಡಳಿತಕ್ಕೆ ಸರಿಯಾದ ಮಾರ್ಗವಾಗಿರುತ್ತಿತ್ತು. ಸರ್ಕಾರವು ವಾಕ್ ಸ್ವಾತಂತ್ರ್ಯದ ಬುಡಕ್ಕೇ ಹೊಡೆತ ನೀಡುವುದು ಅಕ್ರಮ. ಇಂಡಿಯಾ ಸರ್ಕಾರವು ಗಂಭೀರ ಪರಿಣಾಮ ಉಂಟುಮಾಡುವಂತಹ ಪದ್ಧತಿಯನ್ನು ಹುಟ್ಟುಹಾಕುತ್ತಿದೆ.[೨೨]

ಅನೇಕ ಪ್ರಜ್ಞಾವಂತ ವಕೀಲರು ತಮ್ಮ ವಿರೋಧದ ಧ್ವನಿ ಎತ್ತಿ ಅನೇಕ ಪ್ರಶ್ನೆಗಳನ್ನು ಮುಂದಿಟ್ಟರು. ಸಾಕ್ಷಿಗಳಿಲ್ಲದೆ ವಿಚಾರಣೆಯನ್ನು ನಡೆಸಬಹುದೆ? ಒಂದು ಅಪರಾಧವನ್ನು ಎಸಗುವ ಉದ್ದೇಶ ಹೊಂದಿದ್ದ, ಆದರೆ ಆ ಅಪರಾಧವನ್ನು ಎಸಗದ ವ್ಯಕ್ತಿಗೆ ಶಿಕ್ಷೆ ವಿಧಿಸುವುದು ಕಾನೂನುಬದ್ಧವೆ? ರಾಸ್‌ನಲ್ಲಿ ಸರ್ದಾರರಿಗೆ ನೋಟೀಸು ಜಾರಿ ಮಾಡಿದ ಮೇಲೆ ಅವರ ವಾಕ್ ಸ್ವಾತಂತ್ರ್ಯ ಎಲ್ಲಿದೆ? – ಮುಂತಾದ ಪ್ರಶ್ನೆಗಳನ್ನು ವಕೀಲರು ಎತ್ತಿದರು. ಸರ್ಕಾರಕ್ಕೂ ಆಲ್ಫ್ರೆಡ್ ಮಾಸ್ಟರ್ ಮಾಡಿದ್ದು ಸರಿಯಲ್ಲ ಎನ್ನುವುದು ಅರ್ಥವಾಯಿತು. ಆದರೆ ಅದು ತನ್ನ ಅಧಿಕಾರಿಯನ್ನು ಬಿಟ್ಟು ಕೊಡಲು ಸಿದ್ಧವಿರಲಿಲ್ಲ. ಅದರಿಂದ ಅದು ಶಾಸನ ಸಭೆಯಲ್ಲಿ ಸರ್ದಾರರ ದಸ್ತಗಿರಿಯನ್ನು ಸಮರ್ಥಿಸಿಕೊಂಡಿತು ಮತ್ತು ಅಧಿಕಾರಿಗಳು ಹಾಗೂ ನಾಮಕರಣ ಸದಸ್ಯರ ಸಹಾಯದಿಂದ ಮಾಳವೀಯರವರ ಠರಾವನ್ನು ಬೀಳಿಸಿತು.[೨೩]

ಮಾರ್ಚ್ ೭ರಂದು ಪೊಲೀಸರು ಸರ್ದಾರ್ ಪಟೇಲರನ್ನು ಅಹಮದಾಬಾದ್ ನಗರದ ಸಬರಮತಿ ಸೆರೆಮನೆಗೆ ದೂಡಿದರು. ಅವರನ್ನು ಸೆರೆಮನೆಗೆ ಒಪ್ಪಿಸಿ ವಾಪಸ್ಸು ಹೊರಟಾಗ ಪೊಲೀಸ್ ಸೂಪರಿಂಟೆಂಡೆಂಟ್ ಬಿಲ್ಲಿ ಮೋರಿಯ ತುಂಬಾ ಅತ್ತರು – ಎಂದು ರವಿಶಂಕರ್ ಮಹರಾಜ್‌ರವರು ತಮ್ಮ ದಿನಚರಿಯಲ್ಲಿ ಬರೆದಿದ್ದಾರೆ.[೨೪]

ಸೆರೆಮನೆಯಲ್ಲಿ ಪಟೇಲರು ಒಂದು ಕಿರು ಕೊಠಡಿಯಲ್ಲಿ ಮರಣ ದಂಡನೆಗೆ ಗುರಿಯಾದ ಖೈದಿಗಳೊಡನೆ ಇಡಲ್ಪಟ್ಟರು. ರಾತ್ರಿಯ ವೇಳೆ ಅವರ ಕೊಠಡಿಗೆ ಬೀಗ ಹಾಕುತ್ತಿದ್ದರು. ಅವರು ನೆಲದ ಮೇಲೆ ಹಾಸುಗಂಬಳಿಯ ಮೇಲೆ ಮಲಗಬೇಕಾಗಿತ್ತು. ಅವರಿಗೆ ಜೋಳದ ರೊಟ್ಟಿಯನ್ನು ಕೊಡುತ್ತಿದ್ದರು. ಅದನ್ನು ನೀರಿನಲ್ಲಿ ನೆನೆಸಿ ತಿನ್ನಬೇಕಾಗಿತ್ತು. ಅದನ್ನು ಕಂಡು ಬಹು ನೊಂದ ಒಬ್ಬ ಖೈದಿಗಳ

ಮೇಲ್ವಿಚಾರಕನು ಅವರ ಜೋಳದ ರೊಟ್ಟಿಯೊಡನೆ ತನ್ನ ಗೋದಿ ರೊಟ್ಟಿಯನ್ನು ವಿನಿಮಯ ಮಾಡಿಕೊಳ್ಳುವಂತೆ ಒತ್ತಾಯಿಸಿದನು. 'ಆ ದಯಾಳು ವಾರ್ಡರನಿಗೆ ವಂದಿಸಿದೆ, ಆದರೆ ಅವನ ನೀಡಿಕೆಯನ್ನು ನಿರಾಕರಿಸಿದೆ' ಎಂದು ಪಟೇಲರು ದಾಖಲಿಸಿದ್ದಾರೆ.[೨೫]

ಮಹದೇವ ದೇಸಾಯಿ ಮತ್ತು ಕೃಪಲಾನಿ ಮಾರ್ಚ್ ೧೦ರ ಮಧ್ಯಾಹ್ನ ಪಟೇಲರನ್ನು ಸೆರೆಮನೆಯಲ್ಲಿ ಜೈಲು ಅಧಿಕಾರಿಗಳ ಸಮ್ಮುಖದಲ್ಲಿ ಭೇಟಿ ಮಾಡಿದರು. ಪಟೇಲರು ಅವರಿಗೆ ಹೇಳಿದರು, "ಮೊದಲ ರಾತ್ರಿ ನಿದ್ರೆ ಬರುವುದಿಲ್ಲವೇನೋ ಎಂದು ಹೆದರಿದ್ದೆ. ಆದರೆ ಅದೃಷ್ಟವಶಾತ್ ಏನೂ ತೊಂದರೆಯಾಗಲಿಲ್ಲ. ನಾನು ಒಂದು ಕೊರಡಿನಂತೆ ಮಲಗಿದೆ." ಅವರು ಹಾಸಿಗೆ ಇಲ್ಲದೆ ನೆಲದ ಮೇಲಿನ ಹಾಸುಗಂಬಳಿಯ ಮೇಲೆ ಆ ಸೆಕೆಯಲ್ಲಿ ಮಲಗಬೇಕಾಗಿತ್ತು. ಕೃಪಲಾನಿಯವರು ಸರ್ದಾರರ ಆಹಾರದ ಬಗೆಗೆ ವಿಚಾರಿಸಿದಾಗ ಸರ್ದಾರರು, "ಅದರ ಬಗೆಗೆ ಚಿಂತಿಸಬೇಡಿ. ಮೂರು ತಿಂಗಳ ಕಾಲ ಬರೇ ಗಾಳಿ ಕುಡಿದು ಬದುಕಬಲ್ಲೆ" ಎಂದು ನುಡಿದು ಜೋರಾಗಿ ನಕ್ಕರು. ಒಂದು ಸೋಪಿನ ಬಿಲ್ಲೆ ಮತ್ತು ತಮ್ಮ ಮುಖಕ್ಷೌರದ ಸಾಮಾನುಗಳನ್ನು ಕಳುಹಿಸಿಕೊಡುವಂತೆ ಮಹದೇವ್‌ಗೆ ಪಟೇಲರು ಹೇಳಿದಾಗ ಸೂಪರಿಂಟೆಂಡೆಂಟನು, "ಕ್ಷೌರದ ಕತ್ತಿ ಇಟ್ಟುಕೊಳ್ಳಲು ಅವಕಾಶವಿಲ್ಲ. ಆದರೆ ನಿಮ್ಮ ಮುಖ ಕ್ಷೌರಕ್ಕೆ ನಾವೇ ಸೌಕರ್ಯ ಕಲ್ಪಿಸುತ್ತೇವೆ" ಎಂದನು. "ನೀವು ಎಂತಹ ಮುಖ ಕ್ಷೌರ ಒದಗಿಸುತ್ತೀರಿ ಎನ್ನುವುದು ನನಗೆ ಗೊತ್ತು" ಎಂದು ಗುಡುಗಿದರು ಪಟೇಲರು. ಆಗ ಸೂಪರಿಂಟೆಂಡೆಂಟನ ಅಧೀನಾಧಿಕಾರಿಯಾದ ಜೈಲರನು ಧೈರ್ಯಮಾಡಿ ಒಂದು ಸಲಹೆ ನೀಡಿದನು. ಅವನೆಂದನು, "ಸರ್, ಅವರು (ಪಟೇಲರು) ರೇಜ಼ರನ್ನು ತಮ್ಮ ಬಳಿ ಇಟ್ಟುಕೊಳ್ಳದೆ (ನಮ್ಮ ಬಳಿ ಇಡುವುದಾದರೆ) ನಾವು ಅವರ ರೇಜ಼ರಿಗೆ ಅವಕಾಶ ನೀಡಬಹುದು. ಅವರಿಗೆ ಬೇಕಾದಾಗ ನಾವು ರೇಜ಼ರನ್ನು ನೀಡಬಹುದು." ಸಾಬೂನಿನ ವಿಷಯವಾಗಿ ಜೈಲರನು 'ನೀವು ಸಾಬೂನು ಇಟ್ಟುಕೊಳ್ಳಬಹುದು. ಆದರೆ ಅದು ಸುವಾಸನಾಯುಕ್ತ ಸಾಬೂನು ಆಗಬಾರದು' ಎಂದನು.[೨೬]

ದೇಸಾಯಿ ಮತ್ತು ಕೃಪಲಾನಿ ಹೊರಟಾಗ ವಲ್ಲಭಭಾಯ್‌ರವರು, "ನನ್ನ ಬಗ್ಗೆ ಚಿಂತಿಸಬೇಡಿ. ನಾನು ಒಂದು ಹಕ್ಕಿಯಂತೆ ಹಾಯಾಗಿ ಇದ್ದೇನೆ. ಆದರೆ ನಾನು ವ್ಯಸನ ಪಡುವ ಒಂದೇ ಒಂದು ಸಂಗತಿ ಇದೆ," ಎಂದು ಹೇಳಿ ತಮ್ಮ ಮಾತನ್ನು ನಿಲ್ಲಿಸಿ, ಎಲ್ಲರ ಕುತೂಹಲವನ್ನು ಕೆರಳಿಸಿದರು. ಸೂಪರಿಂಟೆಂಡೆಂಟ್ ಮತ್ತು ಜೈಲರ್ ಕುತೂಹಲದಿಂದ ಪರಸ್ಪರ ಮುಖ ನೋಡಿದರು. 'ಅದೇನು

ಹೇಳಿ' ಎಂಬ ಒತ್ತಡ ಬಂದಿತು. "ಅದನ್ನು ಹೇಳಲಾಗದು" ಎಂದರು ವಲ್ಲಭಭಾಯ್. ಕೊನೆಗೆ ಒತ್ತಡ ಹೆಚ್ಚಾದಾಗ ಅವರು ನಿಧಾನವಾಗಿ ಹೇಳಿದರು, "ನನ್ನನ್ನು ಚಿಂತೆಗೆ ಈಡು ಮಾಡಿರುವ ಒಂದು ವಿಷಯ, ಒಂದೇ ಒಂದು ವಿಷಯ, ಏನೆಂದರೆ ಸೆರೆಮನೆಯ ಅಧಿಕಾರಿಗಳೆಲ್ಲಾ ಭಾರತೀಯರೇ ಆಗಿದ್ದಾರೆ! ಈ ಭಾರತೀಯರ ಮೂಲಕವೇ ಬ್ರಿಟಿಷರು ಈ ಅಮಾನವೀಯ ಪದ್ಧತಿಯನ್ನು ನಡೆಸುತ್ತಿದ್ದಾರೆ, ಎನ್ನುವುದು."[೨೭]

ಮಹದೇವ ದೇಸಾಯಿಯವರು ಸೆರೆಮನೆಯಲ್ಲಿನ ಸರ್ದಾರರ ಜೀವನದ ಬಗೆಗೆ ಒಂದು ಲೇಖನವನ್ನು 'ಯಂಗ್ ಇಂಡಿಯ' ಪತ್ರಿಕೆಯಲ್ಲಿ ಪ್ರಕಟಿಸಿದರು. ಸೆರೆಮನೆಯಲ್ಲಿ ಸರ್ದಾರರನ್ನು ನಡೆಸಿಕೊಳ್ಳುತ್ತಿದ್ದ ಅಮಾನವೀಯ ರೀತಿ ತಿಳಿದ ತಕ್ಷಣ ಜನರಲ್ಲಿ ಆಕ್ರೋಶ ಹರಡತೊಡಗಿತು. ಜನರ ಆಕ್ರೋಶಕ್ಕೆ ಹೆದರಿದ ಸರ್ಕಾರ ತಕ್ಷಣ ಅವರನ್ನು ರಾಜಕೀಯ ಖೈದಿಗಳ ವರ್ಗಕ್ಕೆ ಸೇರಿಸಿ ಅವರಿಗೆ ಸೌಕರ್ಯಗಳನ್ನು ಹೆಚ್ಚಿಸಿತು. ರಾತ್ರಿ ವೇಳೆ ಅವರ ಕೊಠಡಿಗೆ ಬೀಗ ಹಾಕುವುದು ನಿಂತಿತು. ಪುಸ್ತಕಗಳು, ಹಾಸಿಗೆ, ಬೆಡ್‌ಶೀಟ್, ಲ್ಯಾಂಟರ್ನ್, ಚರಕ ಮತ್ತು ಅಡುಗೆಯ ಸಾಧನಗಳನ್ನು ಹೊರಗಿನಿಂದ ತರಿಸಿಕೊಳ್ಳಲು ಅವಕಾಶ ನೀಡಲಾಯಿತು. ಹಾಗೆಯೆ ಅಂಬಾಲಾಲ್ ಸಾರಾಭಾಯ್ ಕಳುಹಿಸಿದ ಕುರ್ಚಿಗೂ ಒಪ್ಪಿಗೆ ದೊರೆಯಿತು. ಅವರ ಆಹಾರದ ಜೊತೆಗೆ ಟೀ, ಹಾಲು, ತುಪ್ಪ ಮತ್ತು ಮೊಸರನ್ನು ಸೇರಿಸಲಾಯಿತು. ಕನುಗಾ ದಂಪತಿಗಳು ಅವರಿಗೆ ಹಣ್ಣುಗಳನ್ನೂ ಕಳುಹಿಸಿದರು.

ಬೆಳಗಿನ ಜಾವ ೪ ಘಂಟೆಯಿಂದ ೫ ಘಂಟೆಯ ನಡುವೆ ಪಟೇಲರು ಏಳುತ್ತಿದ್ದರು. ಎದ್ದ ಸ್ವಲ್ಪ ಹೊತ್ತು ಧ್ಯಾನ ಮಾಡುತ್ತಿದ್ದರು. ಧ್ಯಾನ ಮಾಡುವುದನ್ನು ಸೆರೆಮನೆಯಲ್ಲಿ ಆರಂಭಿಸಿದ್ದರು. ರಾಮಾಯಣ, ಗೀತ ಮತ್ತು ಭಜನಾವಳಿ ಕೃತಿಯನ್ನು ತರಿಸಿಕೊಂಡಿದ್ದರು. ಬೆಳಗ್ಗೆ ಮತ್ತು ಸಂಜೆ ಭಜನಾವಳಿಯಿಂದ ಭಜನೆಗಳನ್ನು ಹಾಡುತ್ತಿದ್ದರು. ಚರಕದಿಂದ ನೂಲು ತೆಗೆಯುವುದು, ಓದುವುದು, ಜೊತೆಯ ಜೈಲು ವಾಸಿಗಳೊಡನೆ ಮಾತನಾಡುವುದು, ಅಲ್ಲಿದ್ದ ಮೂರು ಬೇವಿನ ಮರಗಳ ಕೆಳಗೆ ಅಡ್ಡಾಡುವುದು ಅವರ ದೈನಂದಿನ ಚಟುವಟಿಕೆಗಳಾಗಿದ್ದುವು.

ಪಟೇಲರು ಸೆರೆಮನೆ ಸೇರಿದ ಹತ್ತು ದಿನಕ್ಕೆ ಕನುಗ ದಂಪತಿಗಳು, ಅದಾದ ಒಂದು ವಾರದ ನಂತರ ಮಗಳು ಮಣಿಬೆನ್, ಅದಾದ ಒಂದು ತಿಂಗಳಿಗೆ ಮಗ ಮತ್ತು ಸೊಸೆ ದಹ್ಯಾಭಾಯ್ ಮತ್ತು ಯಶೋಧ ಅವರ ಭೇಟಿಗೆ ಬಂದರು. ಕಸ್ತೂರ್‌ಬಾ ಗಾಂಧಿಯೂ ಬಂದರು. ಲಂಡನ್‌ನಲ್ಲಿ ಪಟೇಲರ ಸಹಪಾಠಿ, ಈಗ ಅಹಮದಾಬಾದ್‌ನ ಜಿಲ್ಲಾ ನ್ಯಾಯಾಧೀಶ ಗಾಡ್‌ಫ್ರೇ ಡೇವಿಸ್ ಪಟೇಲರನ್ನು

ಭೇಟಿ ಮಾಡಿ ಲಂಡನ್‌ನಲ್ಲಿ ನಡೆಯುವ ದುಂಡು ಮೇಜಿನ ಸಮ್ಮೇಳನದಲ್ಲಿ ಕಾಂಗ್ರೆಸ್ ಪಕ್ಷ ಭಾಗವಹಿಸಬೇಕೆಂದು ಒತ್ತಾಯಿಸಿದರು. ಅಹಮದಾಬಾದ್‌ನ ಕಲೆಕ್ಟರ್ ಟೇಲರ್ ಭೇಟಿಗೆ ಬಂದಾಗ ಪಟೇಲರು "ಆಲ್ಫ್ರೆಡ್ ಮಾಸ್ಟರ್ ಸರಿಯಲ್ಲದ ನಡತೆಯನ್ನು ಎಸಗಿದ್ದಾನೆ" ಎಂದು ಕಟುವಾಗಿ ಹೇಳಿದರು.[೨೮]

ಪಟೇಲರು ಸೆರೆಮನೆಯಲ್ಲಿದ್ದಾಗ, ಉತ್ತರ ವಿಭಾಗದ ಕಮಿಷನರ್ ಗ್ಯಾರೆಟ್ ಅಲ್ಲಿಗೆ ಭೇಟಿ ನೀಡಿದರು. ಗ್ಯಾರೆಟ್ ಬಂದಾಗ ಎಲ್ಲ ಖೈದಿಗಳು ತಮ್ಮ ತಮ್ಮ ಕೊಠಡಿಯ ಮುಂದೆ ನಿಂತಿರಬೇಕೆಂದು ಜೈಲ್ ಸೂಪರಿಂಟೆಂಡೆಂಟನು ಆದೇಶಿಸಿದನು. ಆದರೆ ಪಟೇಲರು ಆ ಆದೇಶವನ್ನು ನಿರ್ಲಕ್ಷಿಸಿದರು. ಗ್ಯಾರೆಟ್‌ನು ಪಟೇಲರ ಬಳಿ 'ಜನರು ಜಮೀನು ಕಂದಾಯವನ್ನು ನೀಡುತ್ತಿಲ್ಲ' ಎಂದು ದೂರಿದನು. ಪಟೇಲರು, "ಹೌದು, ಅವರು ಕಂದಾಯವನ್ನು ಪಾವತಿಸುವುದಿಲ್ಲ. ಕೆಲವು ನಾಯಕರನ್ನು ಸೆರೆಮನೆಗೆ ದೂಡುವುದರ ಮೂಲಕ ಜಮೀನು ಕಂದಾಯವನ್ನು ವಸೂಲಿ ಮಾಡಬಹುದೆಂದು ನಿರೀಕ್ಷಿಸಿದ್ದು ನಿಮ್ಮ ತಪ್ಪು" ಎಂದರು.[೨೯]

೧೯೩೦ರ ಮಾರ್ಚ್ ೧೨ರಂದು ಗಾಂಧೀಜಿಯವರು ತಮ್ಮ ಸಬರಮತಿ ಆಶ್ರಮದಿಂದ ೭೮ ಮಂದಿ ವಿಶೇಷವಾಗಿ ಆಯ್ಕೆ ಮಾಡಲ್ಪಟ್ಟ ಮತ್ತು ಅಹಿಂಸಾ ತರಬೇತಿ ಪಡೆದ ಅನುಯಾಯಿಗಳೊಡನೆ ೩೮೫ ಕಿ.ಮಿ. ದೂರದಲ್ಲಿ ಸಮುದ್ರ ತೀರದಲ್ಲಿದ್ದ ದಂಡಿಗೆ ಕಾಲ್ನಡಿಗೆಯಲ್ಲಿ ಹೊರಟರು. ಮುಂದೆ ಅವರು, ಹಿಂದೆ ಅವರ ಅನುಯಾಯಿಗಳು. ಮಾರ್ಗದಲ್ಲಿ ಹಳ್ಳಿಗಳ ಜನ ಹಾರ ಮತ್ತು ಬಾವುಟ ಹಿಡಿದು ಉತ್ಸಾಹದಿಂದ ಸ್ವಾಗತಿಸುತ್ತಿದ್ದರು. ಗಾಂಧೀಜಿಯವರು ಹಳ್ಳಿಯಲ್ಲಿ ಭಾಷಣ ಮಾಡಿ, ಮುಂದೆ ಹೊರಟರೆ ಆ ಹಳ್ಳಿಯವರು ಅವರನ್ನು ಹಿಂಬಾಲಿಸುತ್ತಿದ್ದರು. ಗಾಂಧಿ ದಂಡಿಯಾತ್ರೆ ಆರಂಭಿಸಿದಾಗ ಅವರ ಹಿಂದೆ ಇದ್ದದ್ದು ೭೮ ಮಂದಿಯಾದರೆ ಅವರು ದಂಡಿಯನ್ನು ಏಪ್ರಿಲ್ ೫ರಂದು ತಲುಪಿದಾಗ ಅವರ ಹಿಂದೆ ಇದ್ದ ಅನುಯಾಯಿಗಳು ಅಗಣಿತ. ಅವರ ಮುಂದೆ ಜಲ ಸಾಗರ, ಅವರ ಹಿಂದೆ ಜನ ಸಾಗರ. ಸಮುದ್ರದಿಂದ ಅಲ್ಲಿ ಅವರು ಕರ ಕೊಡದೆ ಉಪ್ಪು ತೆಗೆದು ಸಿವಿಲ್ ಶಾಸನ ಭಂಗ ಚಳವಳಿಯನ್ನು ಆರಂಭಿಸಿದರು.

ಅದಕ್ಕಿಂತ ಮುಂಚೆ ಅವರು ದಂಡಿಯಾತ್ರೆಯ ಉದ್ದಕ್ಕೂ ಭಾಷಣ ಮಾಡುವಾಗ ಅವರ ಭಾಷಣದ ಪ್ರಧಾನ ಅಂಶ ಸರ್ದಾರ್ ಪಟೇಲರ ದಸ್ತಗಿರಿಯ ವಿಷಯವಾಗಿತ್ತು. ವಾಸ್ನದಲ್ಲಿ ಜನರನ್ನು ಕುರಿತು ಹೀಗೆ ಹೇಳಿದರು, "ವಲ್ಲಭಭಾಯ್ ದಸ್ತಗಿರಿಯಾಗುವ ಅಪರಾಧ ಮಾಡಿರಲಿಲ್ಲ. ಅವರು ಸರ್ಕಾರದಿಂದ

ಗೌರವಿಸಲ್ಪಡಬೇಕಾಗಿತ್ತು. ಅವರು ಬಾರ್ಡೋಲಿಯಲ್ಲಿ ಏನು ತಪ್ಪು ಮಾಡಿದ್ದರು? ಅವರು ಜನರ ಸ್ನೇಹಿತನಾಗಿದ್ದರು. ಅವರನ್ನು ಗೌರವಿಸುವ ಕೆಲಸವನ್ನು ಸರ್ಕಾರವೇ ಮಾಡಬೇಕಾಗಿತ್ತು. ಅವರು ಅಹಮದಾಬಾದ್‌ನ ಆಡಳಿತವನ್ನು ನಿರ್ವಹಿಸಿದರು. ಅವರ ಕೆಲಸವನ್ನು ನೋಡಿ ಕಲೆಕ್ಟರ್ ಮತ್ತು ಕಮಿಷನರ್ ವಿಸ್ಮಯಗೊಂಡರು. ವಲ್ಲಭಭಾಯ್ ದೆಸೆಯಿಂದ ನಾನು ಖೇಡದಲ್ಲಿ ಯಶಸ್ವಿಯಾಗಲು ಸಾಧ್ಯವಾಯಿತು ಮತ್ತು ಅವರ ಕಾರಣದಿಂದಲೇ ನಾನು ಈಗ ಇಲ್ಲಿ ಇದ್ದೇನೆ." ನಡಿಯಾಡ್‌ನಲ್ಲಿ ಅವರು, "ವಲ್ಲಭಭಾಯ್‌ರವರನ್ನು ಸೆರೆಮನೆಯಲ್ಲಿಡುವುದು ಇಡೀ ಖೇಡಾ ಜಿಲ್ಲೆಯನ್ನು ಸೆರೆಮನೆಯಲ್ಲಿಟ್ಟಿದ್ದಕ್ಕೆ ಸಮ," ಎಂದರು.[೩೦]

ನವ್‌ಗಾನ್‌ನಲ್ಲಿ ಗಾಂಧೀಜಿ ಹೀಗೆ ಹೇಳಿದರು, "ಸರ್ಕಾರವು ಪಟೇಲರನ್ನು ದಸ್ತಗಿರಿ ಮಾಡಿದ್ದು ಏಕೆಂದರೆ ಅವರು ಸ್ವತಂತ್ರವಾಗಿದ್ದರೆ ಜಿಲ್ಲೆಯ ಆಡಳಿತ ನಡೆಸುವವರು ಪಟೇಲರೇ ಹೊರತು ತಾವಲ್ಲ ಎಂದು ಸರ್ಕಾರಕ್ಕೆ ಹೆದರಿಕೆಯಾಯಿತು" [೩೧]

ಮಾರ್ಚ್ ೧೯ರಂದು ಗಾಂಧೀಜಿ ರಾಸ್ ತಲುಪಿದರು. ಪಟೇಲರ ದಸ್ತಗಿರಿಯಾಗಿದ್ದದ್ದು ರಾಸ್‌ನಲ್ಲೆ. ತಮ್ಮ ಊರಿನಲ್ಲಿ ಪಟೇಲರ ದಸ್ತಗಿರಿಯಾಗಿದ್ದಕ್ಕೆ ಅಲ್ಲಿಯ ಜನರಿಗೆ ಹೆಮ್ಮೆಯಾಗಿತ್ತು. ಪೊಲೀಸರು ಪಟೇಲರನ್ನು ಕರೆದುಕೊಂಡು ಹೋದ ನಂತರ ಅಲ್ಲಿ ಸೇರಿದ್ದ ಜನ ಅಹಿಂಸಾತ್ಮಕ ಅಸಹಕಾರ ಚಳವಳಿಯನ್ನು ಹೂಡಲು ತೀರ್ಮಾನಿಸಿದ್ದರು. ಆ ಚಳವಳಿಯು ಕಂದಾಯ ಪಾವತಿಯ ನಿರಾಕರಣೆ, ಹಳ್ಳಿಯಲ್ಲಿ ಹಾಲಿನ ಡೈರಿಗಳನ್ನು ಮತ್ತು ಲಿಕ್ಕರ್ ಅಂಗಡಿಗಳನ್ನು ಮುಚ್ಚುವುದು ಮತ್ತು ಸರ್ಕಾರಿ ಅಧಿಕಾರಿಗಳನ್ನು ಬಹಿಷ್ಕರಿಸುವುದನ್ನು ಒಳಗೊಂಡಿತ್ತು. ದಂಡಿಗೆ ಹೋಗುವ ಮಾರ್ಗದಲ್ಲಿ ಗಾಂಧೀಜಿಯವರು ಮಾರ್ಚ್ ೧೯ರಂದು ಅಲ್ಲಿಗೆ ಬಂದಾಗ ಪೊಲೀಸ್ ಪಟೇಲ್ (ಮುಖಿ), ರೆವೆನ್ಯೂ ಪಟೇಲ್, ಮಾಮಲದಾರ, ಕಾವಲುಗಾರರು ಮತ್ತು ರಸ್ತೆ ಗುಡಿಸುವವರು ತಮ್ಮ ತಮ್ಮ ಹುದ್ದೆಗಳಿಗೆ ರಾಜಿನಾಮೆ ಕೊಟ್ಟು ಗಾಂಧೀಜಿಯ ಆಗಮನವನ್ನು ಅರ್ಥವತ್ತಾಗಿ ಆಚರಿಸಿದರು. ಒಂದು ರಾತ್ರಿ, ಹಳ್ಳಿಯನ್ನು ಸುತ್ತುವರಿದು ಅಸಹಕಾರ ಚಳವಳಿ ನಡೆಸುವವರ ವಸ್ತುಗಳನ್ನು ಮುಟ್ಟು ಗೋಲು ಹಾಕಿಕೊಳ್ಳಲು ಸರ್ಕಾರಿ ಅಧಿಕಾರಿಗಳು ಬರುತ್ತಿದ್ದಾರೆ ಎನ್ನುವ ಸುದ್ದಿ ಹಳ್ಳಿಗೆ ಬಂದಿತು. ತಕ್ಷಣ ರಾಸ್‌ನ ಜನ ಹಳ್ಳಿಯನ್ನೇ ತ್ಯಜಿಸುವ ಅಪರೂಪದ ನಿರ್ಧಾರ ಕೈಗೊಂಡರು. ಅವರು ಅರ್ಧ ಘಂಟೆಯ ಒಳಗೆ ತಮಗೆ ಸಾಧ್ಯವಾದ ಸರಕುಗಳನ್ನು ಗಂಟುಮೂಟೆ ಕಟ್ಟಿ ಹೆಗಲ ಮೇಲೆ ಹೊತ್ತು, ಮನೆಗಳಿಗೆ ಬೀಗ ಹಾಕಿ ಕಾಲು ಮೈಲಿ ದೂರದಲ್ಲಿದ್ದ ಗಡಿಯನ್ನು ದಾಟಿ ಬರೋಡ ರಾಜ್ಯಕ್ಕೆ

ಹೋಗಿ, ಜ಼ರೋಲ ಮತ್ತು ವಾಸ್ನ ಹಳ್ಳಿಗಳ ಸಮೀಪ ತಾತ್ಕಾಲಿಕ ಷೆಡ್ಡುಗಳನ್ನು ನಿರ್ಮಿಸಿ ವಾಸಿಸಲಾರಂಭಿಸಿದರು. ಸಂತಸದಿಂದ ಅವರು ತಮ್ಮ ಪಯಣವನ್ನು 'ಹಿಜರತ್' ಎಂದು ಕರೆದರು. ಅಲ್ಲಿ ಅವರು ಎಲ್ಲ ತರಹದ ಸಂಕಟಗಳನ್ನು ಧೈರ್ಯದಿಂದ ಅನುಭವಿಸಿಕೊಂಡು ೫–೬ ತಿಂಗಳು ವಾಸವಾಗಿದ್ದರು. ಅವರ ನಾಯಕರಲ್ಲಿ ಒಬ್ಬ, ಆಶಾಭಾಯ್ ಪಟೇಲ್, "ನಾವು ಗಾಂಧೀಜಿ ಮತ್ತು ನಮ್ಮ ಸರ್ದಾರರಿಗಾಗಿ ಬದುಕುತ್ತಿದ್ದೇವೆ,". ಎಂದನು.[೩೨]

ಅಧಿಕಾರಿಗಳು ರಾಸ್‌ಅನ್ನು ಪ್ರವೇಶಿಸಿದಾಗ ಅದು ಸಂಪೂರ್ಣ ನಿರ್ಜನವಾಗಿತ್ತು. ಇಡೀ ಹಳ್ಳಿ ಬಿಕೋ ಎನ್ನುತ್ತಿತ್ತು. ಅಧಿಕಾರಿಗಳು ಮನೆಗಳ ಬಾಗಿಲುಗಳನ್ನು ಒಡೆದು, ಗ್ರಾಮಸ್ಥರು ತೆಗೆದುಕೊಂಡು ಹೋಗಲಾರದೆ ಬಿಟ್ಟಿದ್ದ ವಸ್ತುಗಳನ್ನು ಲೂಟಿ ಮಾಡಿದರು. ರೈತರ ಜಮೀನಿನ ಫಸಲುಗಳನ್ನು ಕೊಯ್ದು ಒಕ್ಕಣೆ ಮಾಡಿ ತೆಗೆದುಕೊಂಡು ಹೋದರು. ಜಮೀನುಗಳನ್ನು ವಶಪಡಿಸಿಕೊಂಡು ಮಾರಿದರು. ಆದರೆ ಜನ ಈ ಯಾವ ಕಷ್ಟ ನಷ್ಟಗಳಿಗೂ ಬಗ್ಗಲಿಲ್ಲ. ತಮ್ಮ ಹಳ್ಳಿಗೆ ಹಿಂದಿರುಗಲಿಲ್ಲ. ಗಾಂಧಿ – ಇರ್ವಿನ್ ಒಪ್ಪಂದ ಆದ ನಂತರವೇ ಅವರು ತಮ್ಮ ಹಳ್ಳಿಗೆ ಹಿಂತಿರುಗಿದ್ದು. ಹಿಂತಿರುಗಿದಾಗ ಬ್ಯಾಂಡ್ ಬಾರಿಸುತ್ತಾ ಮೆರವಣಿಗೆಯಲ್ಲಿ ಬಂದರು. ಆದರೆ ಗಾಂಧಿ – ಇರ್ವಿನ್ ಒಪ್ಪಂದದಲ್ಲಿ ರೈತರ ಜಮೀನುಗಳನ್ನು ವಾಪಸ್ಸು ಮಾಡುವ ಅಂಶ ಇಲ್ಲದ್ದು ಸರ್ದಾರ್ ಪಟೇಲರಿಗೆ ಬಹಳ ನಿರಾಸೆಯನ್ನು ಉಂಟುಮಾಡಿತು.[೩೩] ಅವರು, "ನಿಮ್ಮ ಜಮೀನಿನ ಬಗೆಗೆ ಚಿಂತಿಸಬೇಡಿ. ಅದು ನಿಮ್ಮನ್ನು ಹುಡುಕಿಕೊಂಡು ನಿಮ್ಮ ಮನೆ ಬಾಗಿಲಿಗೇ ಬರುತ್ತದೆ" ಎಂದು ಹೇಳಿ ರೈತರನ್ನು ಸಮಾಧಾನ ಪಡಿಸಿದರು.

(ಪಟೇಲರ ವಾಗ್ದಾನ ೧೯೩೯ರಲ್ಲಿ ನೆರವೇರಿತು. ೧೯೩೭ರಲ್ಲಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರವು ರೈತರಿಗೆ ಅವರ ಜಮೀನುಗಳನ್ನು ಹಿಂತಿರುಗಿಸಿತು.)

ಏಪ್ರಿಲ್ ೫ರಂದು ಗಾಂಧೀಜಿಯವರು ದಂಡಿಯನ್ನು ತಲುಪಿದರು. ಏಪ್ರಿಲ್ ೬ರಂದು ಬೆಳಗ್ಗೆ ಅವರು ಸಮುದ್ರ ತೀರಕ್ಕೆ ನಡೆದು ಅಲ್ಲಿ ರಾಶಿಯಾಗಿ ಬಿದ್ದಿದ್ದ ಉಪ್ಪನ್ನು ಕೈಲಿ ಹಿಡಿದು ಎಲ್ಲರಿಗೂ ಕಾಣುವಂತೆ ಕೈಯನ್ನು ಎತ್ತಿ ಹಿಡಿದರು ಮತ್ತು ಅವರು ಕರವನ್ನು ನೀಡದೆ ಉಪ್ಪನ್ನು ತಯಾರಿಸಿದರು. ಅನಂತರ ನಾಡಿನೆಲ್ಲೆಡೆ ಸತ್ಯಾಗ್ರಹಿಗಳು ಕರ ಕೊಡದೆ ಉಪ್ಪನ್ನು ತಯಾರಿಸಿ ಸಿವಿಲ್ ಶಾಸನ ಭಂಗ ಚಳವಳಿಯನ್ನು ಆರಂಭಿಸಿದರು ಮತ್ತು ದಸ್ತಗಿರಿಯಾದರು.

ಮಹಾತ್ಮ ಗಾಂಧೀಜಿಯವರು ಮೇ ೪ರಂದು ಸೂರತ್ ಜಿಲ್ಲೆಯ ದರಸನದಲ್ಲಿದ್ದ ಉಪ್ಪಿನ ಡಿಪೋ ಮೇಲೆ ಎರಗುವುದಾಗಿ ವೈಸ್‌ರಾಯ್ ಲಾರ್ಡ್

ಇರ್ವಿನ್‌ಗೆ ಪತ್ರ ಬರೆದು ತಿಳಿಸಿದರು. ಸರ್ಕಾರ ಅವರನ್ನು ಶಿರಂದು ರಾತ್ರಿ ದಸ್ತಗಿರಿ ಮಾಡಿ ಯರವಾಡ ಜೈಲಿನಲ್ಲಿಟ್ಟಿತು. ಆದರೆ ದರಸನದ ಮೇಲಿನ ಆಕ್ರಮಣ ನಿಲ್ಲಲಿಲ್ಲ. ಗಾಂಧೀಜಿಯವರ ೭೮ ಮಂದಿ ಅನುಯಾಯಿಗಳು ಆ ಆಕ್ರಮಣವನ್ನು ಅಹಿಂಸಾಯುತವಾಗಿ ಕೈಗೊಂಡರು. ಅವರ ಜೊತೆಗೆ ಸಾವಿರಾರು ಮಂದಿ ಇತರರೂ ಸೇರಿಕೊಂಡರು. ೬ ಮಂದಿ ಬ್ರಿಟಿಷ್ ಅಧಿಕಾರಿಗಳ ನಾಯಕತ್ವದಲ್ಲಿ ೪೦೦ ಮಂದಿ ಭಾರತೀಯ ಪೊಲೀಸ್ ಪೇದೆಗಳು ಸತ್ಯಾಗ್ರಹಿಗಳ ತಲೆಗಳ ಮೇಲೆ ಅಮಾನುಷವಾಗಿ ಲಾಠಿ ಪ್ರಹಾರ ಮಾಡಿದರು ಮತ್ತು ಬೂಟು ಕಾಲಿನಿಂದ ಒದ್ದರು ಮತ್ತು ತುಳಿದರು. ಆದರೆ ಸತ್ಯಾಗ್ರಹಿಗಳು ಪೊಲೀಸರ ಅಹಿಂಸಾತ್ಮಕವಾಗಿ ವರ್ತಿಸಿ ಲಾಠಿ ಏಟುಗಳನ್ನು ಸ್ವೀಕರಿಸಿದರೇ ಹೊರತು ತಿರುಗಿ ಬೀಳಲಿಲ್ಲ. ಏಟುಗಳನ್ನು ತಡೆಗಟ್ಟಲು ಕೈಗಳನ್ನು ಎತ್ತಲೂ ಇಲ್ಲ. ಅಷ್ಟರ ಮಟ್ಟಿಗೆ ಅವರು ಶಾಂತಿ ಮತ್ತು ಅಹಿಂಸಾ ಪಾಲಕರಾಗಿದ್ದರು. ಸತ್ಯಾಗ್ರಹಿಗಳು, ಸಮುದ್ರದ ಅಲೆಗಳಂತೆ, ತಂಡ ತಂಡವಾಗಿ ಮುನ್ನುಗ್ಗುತ್ತಿದ್ದರು. ಒಂದು ತಂಡ, ಪೊಲೀಸರ ಏಟಿಗೆ ನೆಲಕ್ಕೆ ಉರುಳಿದರೆ, ಇನ್ನೊಂದು ತಂಡ ಮುಂದೆ ಬರುತ್ತಿತ್ತು. ಅವರು ಉರುಳಿದಾಗ ಮತ್ತೊಂದು ತಂಡ ಅವರನ್ನು ಹಿಂಬಾಲಿಸುತ್ತಿತ್ತು, ಶಾಂತಿಯುತವಾಗಿ ಮತ್ತು ಅಹಿಂಸಾತ್ಮಕವಾಗಿ. ದ್ರೌಪದಿಯ ಸೀರೆ ಅಕ್ಷಯವಾಗುತ್ತಿತ್ತಲ್ಲ ಹಾಗೆ ಸತ್ಯಾಗ್ರಹಿಗಳು ಅಕ್ಷಯವಾಗುತ್ತಿದ್ದರು.

ಆ ಸನ್ನಿವೇಶದ ಬಗೆಗೆ ಅಮೆರಿಕದ 'ಯುನೈಟೆಡ್ ಪ್ರೆಸ್'ನ ಪ್ರಸಿದ್ಧ ವರದಿಗಾರ ವೆಬ್ ಮಿಲ್ಲರ್‌ನ ವರದಿ ಹೀಗಿತ್ತು:

> "ಇದ್ದಕ್ಕಿದ್ದ ಹಾಗೆ, ಆದೇಶ ನೀಡಲ್ಪಟ್ಟ ತಕ್ಷಣ, ಅನೇಕ ಸ್ಥಳೀಯ ಪೊಲೀಸರು, ಸಾಗಿ ಬರುತ್ತಿದ್ದ ಸತ್ಯಾಗ್ರಹಿಗಳ ತಂಡದ ಮೇಲೆ ಎರಗಿದರು ಮತ್ತು ತಮ್ಮ ಉಕ್ಕಿನ ಕವಚ ತೊಡಿಸಿದ್ದ ಲಾಠಿಗಳಿಂದ ಅವರ ತಲೆಗಳ ಮೇಲೆ ಪ್ರಹಾರಗಳ ಮಳೆಯನ್ನು ಸುರಿಸಿದರು. ಆ ಸತ್ಯಾಗ್ರಹಿಗಳ ಪೈಕಿ ಒಬ್ಬನೂ ಸಹ ಆ ಏಟುಗಳನ್ನು ತಡೆಗಟ್ಟಲು ಕೈ ಎತ್ತಲಿಲ್ಲ. ಅವರು ಟೆನ್‌ಪಿನ್‌ಗಳ ತರಹ ನೆಲಕ್ಕೆ ಉರುಳಿದರು. ಆ ಅರಕ್ಷಿತ ತಲೆ ಬುರುಡೆಗಳ ಮೇಲೆ ಬಿದ್ದ ಏಟಿನ ಅಸಹ್ಯಕಾರಕ ಶಬ್ದ ನಾನು ನಿಂತಿದ್ದ ಜಾಗದಲ್ಲೆ ನನ್ನ ಕಿವಿಗೆ ಬಿತ್ತು. ಕಾಯುತ್ತ ನಿಂತಿದ್ದ ಸತ್ಯಾಗ್ರಹಿಗಳು ಒಂದೊಂದು ಏಟಿಗೂ ಮುಲುಕುತ್ತಿದ್ದರು ಮತ್ತು ಮರುಕದಿಂದ ನಿಟ್ಟುಸಿರು ಬಿಡುತ್ತಿದ್ದರು. ಏಟಿನಿಂದ ನೆಲಕ್ಕೆ ಉರುಳಿದವರು ಪ್ರಜ್ಞೆ ತಪ್ಪಿ ಕೈ

> ಕಾಲು ಚಾಚಿ ಬಿದ್ದಿರುತ್ತಿದ್ದರು ಅಥವಾ ಒಡೆದ ತಲೆಬುರುಡೆ ಅಥವಾ ಮುರಿದ ಭುಜಗಳ ನೋವಿನಿಂದ ವಿಲಿ ವಿಲಿ ಒದ್ದಾಡುತ್ತಿದ್ದರು. ಬೀಳದವರು, ತಂಡದಿಂದ ಬೇರ್ಪಡದೆ, ಜಗ್ಗದೆ ಕುಗ್ಗದೆ ಮೌನವಾಗಿ ಮುಂದೆ ಮುಂದೆ ಸಾಗುತ್ತಿದ್ದರು, ಏಟು ಬಿದ್ದು ನೆಲಕ್ಕೆ ಉರುಳುವವರೆಗು. .....ಅವರು ತಲೆ ಎತ್ತಿ ಒಂದೇ ಗತಿಯಲ್ಲಿ ಸಾಗುತ್ತಿದ್ದರು, ... ಪೊಲೀಸರು ವ್ಯವಸ್ಥಿತವಾಗಿ ಮತ್ತು ಯಾಂತ್ರಿಕವಾಗಿ ಎರಡನೆ ತಂಡದ ಮೇಲೆ ಎರಗಿ ಹೊಡೆದು ಉರುಳಿಸುತ್ತಿದ್ದರು. ಅಲ್ಲಿ ಹೋರಾಟವಾಗಲಿ, ತಪ್ಪಿಸಿಕೊಳ್ಳುವ ಯತ್ನವಾಗಲಿ ಇರಲಿಲ್ಲ. ಸತ್ಯಾಗ್ರಹಿಗಳು ಪೊಲೀಸರ ಏಟಿಗೆ ಉರುಳುವವರೆಗೆ ಮುಂದು ಮುಂದಕ್ಕೆ ಸಾಗುತ್ತಿದ್ದರು. .....ಪೊಲೀಸರು ಉರುಳಿರುವವರ ಹೊಟ್ಟೆ ಮತ್ತು ವೃಷಣಗಳ ಮೇಲೆ ಒದೆಯಲು ಆರಂಭಿಸುತ್ತಿದ್ದರು. ನಂತರ ಅವರ ಕೈ ಮತ್ತು ಕಾಲುಗಳನ್ನು ಹಿಡಿದು ಎಳೆದುಕೊಂಡು ಹೋಗಿ ಹಳ್ಳಗಳ ಒಳಕ್ಕೆ ಎಸೆಯುತ್ತಿದ್ದರು.

ಅಮೆರಿಕದ 'ನ್ಯೂ ಫ್ರೀಮನ್' ಪತ್ರಿಕೆಗೆ ಕಳುಹಿಸಿದ ಮತ್ತೊಂದು ವರದಿಯಲ್ಲಿ ವೆಬ್ ಮಿಲ್ಲರ್‌ರವರು ಈ ರೀತಿ ಬರೆದಿದ್ದಾರೆ:

> ಹದಿನೆಂಟು ವರ್ಷಗಳ ಇಪ್ಪತೆರಡು ದೇಶಗಳ ವರದಿಗಾರನ ವೃತ್ತಿಯಲ್ಲಿ ದರಸನದಲ್ಲಿ ಕಂಡಂತಹ ತೀವ್ರ ಆಘಾತಕಾರಿ ದೃಶ್ಯಗಳನ್ನು ನಾನು ಎಂದೂ ಕಂಡಿರಲಿಲ್ಲ. ಕೆಲವೊಮ್ಮೆ ಆ ದೃಶ್ಯಗಳು ಎಷ್ಟು ಸಂಕಟಕರವಾಗಿದ್ದುವೆಂದರೆ ನಾನು ಕಣ್ಣುಗಳನ್ನು ಬೇರೆ ಕಡೆಗೆ ತಾತ್ಕಾಲಿಕವಾಗಿ ಹೊರಳಿಸುತ್ತಿದ್ದೆ. ಒಂದು ಆಶ್ಚರ್ಯಕರ ಸಂಗತಿ ಏನೆಂದರೆ ಸತ್ಯಾಗ್ರಹಿಗಳ ಶಿಸ್ತು. ಅವರು ಗಾಂಧೀಜಿಯವರ ಅಹಿಂಸಾ ತತ್ವದಿಂದ ಸಂಪೂರ್ಣವಾಗಿ ಸ್ಫೂರ್ತಿಗೊಂಡಂತೆ ಕಾಣುತ್ತಿದ್ದರು.[೩೪]

ಈ ತರಹ ಸತ್ಯಾಗ್ರಹಿಗಳು ದರಸನದ ಉಪ್ಪಿನ ಡಿಪೋ ಮೇಲೆ ಅಹಿಂಸಾತ್ಮಕ ಆಕ್ರಮಣ ಮಾಡಿದರು. ಮೇ ೨೧ರಂದು ಸರೋಜಿನಿ ನಾಯ್ಡು ಹಾಗೂ ಗಾಂಧಿಯವರ ಎರಡನೆಯ ಮಗ ಮಣಿಲಾಲ್ ಗಾಂಧಿ ನಾಯಕತ್ವದಲ್ಲಿ ೨೫೦೦ ಮಂದಿ ಸತ್ಯಾಗ್ರಹಿಗಳು ದರಸನದ ಮೇಲೆ ಎರಗಿದರು ಮತ್ತು ಲಾಠಿ ಏಟು ತಿಂದು ಸೆರೆಮನೆ ಸೇರಿದರು. ದರಸನದ ಮುತ್ತಿಗೆಗೆ ಖೇಡಾ ಜಿಲ್ಲೆಯು ಭಾರಿ

ತಂಡವನ್ನು ಕಳುಹಿಸಿತು. ದರಸನಕ್ಕೆ ಹೊರಟ ಸ್ವಯಂಸೇವಕರನ್ನು ಬೀಳ್ಕೊಡುವುದಕ್ಕೆ ಹಳ್ಳಿಯ ಇತರರು ಹಳ್ಳಿಯ ಗಡಿಯವರೆಗೂ ಬರುತ್ತಿದ್ದರು. ಜೂನ್ ಮಧ್ಯಭಾಗದ ಹೊತ್ತಿಗೆ ಖೇಡಾ ಜಿಲ್ಲೆಯ ಅರ್ಧಭಾಗದ ಹಳ್ಳಿಯ ಪೊಲೀಸ್ ಪಟೇಲರು (ಮುಖಿಗಳು) ರಾಜಿನಾಮೆ ಕೊಟ್ಟಿದ್ದರು.

ಗಾಂಧೀಜಿಯವರ ದಸ್ತಗಿರಿಯ ನಂತರ ಕಂದಾಯ ಪಾವತಿಯ ನಿರಾಕರಣೆ ತಾಲ್ಲೂಕಿನಿಂದ ತಾಲ್ಲೂಕಿಗೆ ಹರಡುತ್ತಾ ಹೋಯಿತು. ಮೇ ೩೧ರಂದು ನಡಿಯಾಡ್‌ನಲ್ಲಿ ನಡೆದ ಒಂದು ಸಮಾವೇಶದಲ್ಲಿ ಖೇಡಾ ರೈತರು ವಲ್ಲಭಭಾಯ್ ಮತ್ತು ಗಾಂಧೀಜಿಯವರ ಬಿಡುಗಡೆ ಆಗುವವರೆಗೆ ಕಂದಾಯ ಪಾವತಿಸಬಾರದೆಂದು ತೀರ್ಮಾನಿಸಿದರು.[೩೫]

ವಲ್ಲಭಭಾಯ್‌ರವರು ಜೂನ್ ೨೬ರಂದು ಸೆರೆಮನೆಯಿಂದ ಬಿಡುಗಡೆ ಮಾಡಲ್ಪಟ್ಟರು. ಆ ವೇಳೆಗೆ ಗಾಂಧೀಜಿ ಮತ್ತು ಕಾಂಗ್ರೆಸ್ಸಿನ ಆ ವರ್ಷದ ಅಧ್ಯಕ್ಷ ಜವಹರಲಾಲ್ ನೆಹರು ಮತ್ತಿತರ ಅನೇಕ ನಾಯಕರು ದಸ್ತಗಿರಿಯಾಗಿದ್ದರು. ಸೆರೆಮನೆಗೆ ಹೋಗುವ ಮುನ್ನ ಜವಹರಲಾಲರು ತಮ್ಮ ತಂದೆ ಮೋತಿಲಾಲರನ್ನು ಹಂಗಾಮಿ ಅಧ್ಯಕ್ಷರನ್ನಾಗಿ ಹೆಸರಿಸಿದ್ದರು. ಆದರೆ ಜೂನ್ ೧೩ರಂದು ಮೋತಿಲಾಲ್‌ರವರು ದಸ್ತಗಿರಿಯಾದರು. ಆಗ ಅವರು ಕಾಂಗ್ರೆಸ್ ಅಧ್ಯಕ್ಷ ಸ್ಥಾನದ ಜವಾಬ್ದಾರಿಯನ್ನು ಪಟೇಲರಿಗೆ ವರ್ಗಾಯಿಸಿದ್ದರು. ಸೆರೆಮನೆಯಿಂದ ಹೊರ ಬಂದಾಗ ತಾವು ಕಾಂಗ್ರೆಸ್ಸಿನ ಹಂಗಾಮಿ ಅಧ್ಯಕ್ಷರಾಗಿರುವ ವಿಷಯ ಪಟೇಲರಿಗೆ ತಿಳಿಯಿತು.[೩೬]

೧೧.೨ ಮತ್ತೆ ಮತ್ತೆ ಸೆರೆಮನೆಗೆ

ವಲ್ಲಭಭಾಯ್ ಸೆರೆಮನೆಯಿಂದ ಬಿಡುಗಡೆಯಾಗಿ ಬಂದದ್ದು ಗುಜರಾತ್‌ನ ಜನರಿಗೆ ಸಂತಸ ಮತ್ತು ಸ್ಫೂರ್ತಿಯನ್ನು ತಂದಿತು. ಮೂರುವರೆ ತಿಂಗಳ ಹಿಂದೆ ಆರಂಭವಾದ ಸತ್ಯಾಗ್ರಹದಲ್ಲಿನ ತಮ್ಮ ಪಾತ್ರದ ಬಗ್ಗೆ ಮತ್ತು ಸತ್ಯಾಗ್ರಹಿಗಳು ಎಂದೂ ಹಿಂಸೆಗೆ ಅಥವಾ ಪ್ರತೀಕಾರಕ್ಕೆ ಇಳಿಯದಿದ್ದುದರ ಬಗ್ಗೆ ಆ ಜನರಿಗೆ ಬಹಳ ಹೆಮ್ಮೆಯಿತ್ತು. ಹಾಗೆಯೆ ಸತ್ಯಾಗ್ರಹಿಗಳ ಮೇಲಿನ ಪೊಲೀಸರ ಲಾಠಿ ಪ್ರಹಾರಕ್ಕೆ ಕೋಪವೂ, ಸತ್ಯಾಗ್ರಹಿಗಳ ಬಗೆಗೆ ಮರುಕವೂ ಇತ್ತು.

ಸರ್ದಾರ್ ಪಟೇಲರು ಸೆರೆಮನೆಯಿಂದ ಬಿಡುಗಡೆಯಾದ ಸ್ವಲ್ಪ ದಿನಗಳಲ್ಲಿ ಅಹಮದಾಬಾದ್‌ನಲ್ಲಿ ನಡೆದ ಒಂದು ಸಾರ್ವಜನಿಕ ಸಭೆಯಲ್ಲಿ ಹೀಗೆ ಹೇಳಿದರು:

> ಸೆರೆಮನೆಯ ಜೀವನದ ಬಗ್ಗೆ ನಾನು ಏನು ಹೇಳಲಿ? ಅಲ್ಲಿ ತಲೆಗಳು ಒಡೆಯಲಿಲ್ಲ (ಅಷ್ಟೆ)------ ಸೆರೆಮನೆಯ ಹೊರಗೆ ಸೆರೆಮನೆಯ ಒಳಗಿನಷ್ಟು ಸಂತೋಷ ಪಡಲು ಸಾಧ್ಯವಿಲ್ಲ. ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಅಧ್ಯಕ್ಷ, ಜನನಾಯಕ ಜವಹರಲಾಲ್ ನೆಹರು, ಸೆರೆಮನೆಯ ಗೋಡೆಗಳ ಹಿಂದೆ ಇಡಲ್ಪಟ್ಟಿರುವಾಗ ಮತ್ತು ಭೂಮಿಯ ಮೇಲಿನ ಅತ್ಯಂತ ಶ್ರೇಷ್ಠ ವ್ಯಕ್ತಿ, ಮಹಾತ್ಮ ಗಾಂಧಿ, ಯರವಾಡ ಜೈಲಿನ 'ಸೆಲ್'ನಲ್ಲಿ ಇಡಲ್ಪಟ್ಟಿರುವಾಗ ಒಬ್ಬ ವ್ಯಕ್ತಿ ರುಚಿಕರ ಊಟ ಮಾಡಲು ಮತ್ತು ಸೌಖ್ಯವಾಗಿ ಮಲಗಲು ಹೇಗೆ ಸಾಧ್ಯ? ಅನೇಕರು ನಾನು ಭಾಷಣ ಮಾಡಬಾರದೆಂದು, ಮಾಡಿದರೆ ಮತ್ತೆ ದಸ್ತಗಿರಿ ಆಗಬಹುದೆಂದು ಸಲಹೆ ನೀಡಿದರು. ನಾವು ಸರ್ಕಾರದ ಸೆರೆಮನೆಗಳ ಬಗೆಗೆ ಏಕೆ ಚಿಂತಿಸಬೇಕು? ನಮ್ಮ ಆತ್ಮಗಳು ತೀವ್ರ ಮೋಹ ಮತ್ತು ಭ್ರಮೆಯ, ಬಯಕೆ ಮತ್ತು ಕೋಪದ ಬಂಧಿಗಳಾಗಿವೆ. ನಾವು ಬಹಳ ಹೆದರಬೇಕಾದದ್ದು ಆ ಸೆರೆಮನೆಯ ಬಗೆಗೆ. ಭ್ರಮೆಯ ಬಂಧನವನ್ನು ಯಾರು ಸ್ವಯಂ ಸಮ್ಮತಿಯಿಂದ ಮುರಿದಿದ್ದಾರೊ ಅವರನ್ನು ಭೂಮಿಯ ಮೇಲಿನ ಯಾವ ಸಾಮ್ರಾಜ್ಯವು, ಅದು ಎಷ್ಟೇ ಬಲಿಷ್ಠವಾಗಿರಲಿ, ದಾಸ್ಯದಲ್ಲಿ ಇಡಲಾರದು.[೩೭]

ಸರ್ದಾರ್ ಪಟೇಲರ ಬಿಡುಗಡೆಯಾದ ಸ್ವಲ್ಪ ದಿನಗಳಲ್ಲಿ ಸರ್ಕಾರವು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯನ್ನು ಕಾನೂನು ಬಾಹಿರ ಎಂದು ಘೋಷಿಸಿತು ಮತ್ತು ಅದರ ಕಛೇರಿಯನ್ನು ವಶಪಡಿಸಿಕೊಂಡಿತು. ಕಾಂಗ್ರೆಸ್‌ನ ಆಕ್ಟಿಂಗ್ ಅಧ್ಯಕ್ಷರಾಗಿದ್ದ ಸರ್ದಾರ್ ಪಟೇಲರು 'ದೇಶದಲ್ಲಿರುವ ಪ್ರತಿ ಮನೆಯೂ ಕಾಂಗ್ರೆಸ್ ಸಮಿತಿಯ ಕಛೇರಿಯಾಗಲಿ ಮತ್ತು ಪ್ರತಿ ವ್ಯಕ್ತಿಯೂ ತಾನೇ ಕಾಂಗ್ರೆಸ್ ಸಂಸ್ಥೆಯಾಗಲಿ' ಎಂದು ಕರೆಕೊಟ್ಟರು. ಮದನ್ ಮೋಹನ್ ಮಾಳವೀಯರು, 'ಕಾನೂನು ಬಾಹಿರ' ಕಾರ್ಯಕಾರಿ ಸಮಿತಿಯ ಸದಸ್ಯನಾಗಲು ಬಯಸಿದರು. ವಲ್ಲಭಭಾಯ್‌ರು ಅವರನ್ನು ಕಾರ್ಯಕಾರಿ ಸಮಿತಿಗೆ ನಾಮಕರಣ ಮಾಡಿದರು. ಅದಕ್ಕೆ ಮುಂಚೆ ಮಾಳವೀಯರವರು ಕೇಂದ್ರ ಶಾಸನ ಸಭೆಯ ಸದಸ್ಯತ್ವಕ್ಕೆ ರಾಜಿನಾಮೆ ಕೊಟ್ಟಿದ್ದರು. ಕೇಂದ್ರ ಶಾಸನ ಸಭೆಯ ಯಶಸ್ವಿ ಅಧ್ಯಕ್ಷರಾಗಿದ್ದ ವಿಠ್ಠಲ್‌ಭಾಯ್ ಪಟೇಲವರು ಸಹ ತಮ್ಮ ಅಧ್ಯಕ್ಷ ಸ್ಥಾನ ಮತ್ತು ಸದಸ್ಯ ಸ್ಥಾನಗಳಿಗೆ ವಲ್ಲಭಭಾಯ್‌ರು ಸೆರೆಮನೆಯಲ್ಲಿ ಇದ್ದಾಗಲೇ ರಾಜಿನಾಮೆ ಇತ್ತಿದ್ದರು. ಅವರನ್ನೂ ಸಹ ವಲ್ಲಭಭಾಯ್‌ರು ಕಾರ್ಯಕಾರಿ ಸಮಿತಿಗೆ ನಾಮಕರಣ ಮಾಡಿದರು.[೩೮]

ಜುಲೈ ೩೧ರಂದು ವಲ್ಲಭಭಾಯ್, ಮಾಳವೀಯ ಮತ್ತು ಇತರ ಕೆಲವು ಕಾರ್ಯಕಾರಿ ಸಮಿತಿಯ ಸದಸ್ಯರು ಬೊಂಬಾಯಿಯಲ್ಲಿ ತಿಲಕರ ವಾರ್ಷಿಕ ಪುಣ್ಯತಿಥಿಯ ಮೆರವಣಿಗೆಯ ಮುಂದಾಳತ್ವ ವಹಿಸಿದ್ದರು. ಪಟೇಲರ ಮಗಳು ಮಣಿಬೆನ್ ಸಹ ಜೊತೆಯಲ್ಲಿ ಇದ್ದರು. ಪೊಲೀಸರು ವಿಕ್ಟೋರಿಯ ಟರ್ಮಿನಸ್‌ನಲ್ಲಿ ಮೆರವಣಿಗೆಕಾರರನ್ನು ತಡೆದರು ಮತ್ತು ಬರಖಾಸ್ತು ಆಗುವಂತೆ ಆದೇಶಿಸಿದರು. ಮೆರವಣಿಗೆಕಾರರು ಮೆರವಣಿಗೆ ನಡೆಸುವ ತಮ್ಮ ಹಕ್ಕನ್ನು ಪ್ರತಿಪಾದಿಸಿ ಅಲ್ಲೇ ಕುಳಿತರು. ರಾತ್ರಿಗೆ ಭಾರಿ ಮಳೆ ಬಿದ್ದಿತು. ಆದರೂ ಸಹ ಅವರು ಇಡೀ ರಾತ್ರಿ ಅಲ್ಲೇ ಕುಳಿತಿದ್ದರು. ಮಾರನೆಯ ಬೆಳಗ್ಗೆ ಪೊಲೀಸರು ವಲ್ಲಭಭಾಯ್, ಮಾಳವೀಯ, ಶ್ರೀಮತಿ ಹಂಸ ಮೆಹತ, ಶ್ರೀಮತಿ ಮಣಿಬೆನ್ ಮತ್ತು ಇತರ ಅನೇಕರನ್ನು ದಸ್ತಗಿರಿ ಮಾಡಿದರು. ಲಾಠಿ ಪ್ರಹಾರ ಮಾಡಿ ಇತರ ಮೆರವಣಿಗೆಕಾರರನ್ನು ಚದುರಿಸಿದರು.

ಪೊಲೀಸರು ದಸ್ತಗಿರಿ ಆದವರನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದರು. ಪಟೇಲರು ಯಾವುದೇ ಹೇಳಿಕೆಯನ್ನು ನೀಡಲು ನಿರಾಕರಿಸಿದರು. ಆದರೆ ವಾಚಾಳಿ ಮಾಳವೀಯರವರು ಒಂದು ದೀರ್ಘ ಭಾಷಣ ಮತ್ತು ನಿರೂಪಣೆಯನ್ನೇ ಆರಂಭಿಸಿಬಿಟ್ಟರು. ಪಟೇಲರು ಅವರನ್ನು ತಡೆದು, "ಕೋಣನ ಮುಂದೆ ಯಾರಾದರು ಭಾಗವತವನ್ನು ಓದುತ್ತಾರೆಯೆ?" ಎಂದರು. "ಏನದು, ನೀವು ಹೇಳುತ್ತಿರುವುದು?" ಎಂದು ಪ್ರಶ್ನಿಸಿದನು ಆ ಆಂಗ್ಲ ನ್ಯಾಯಾಧೀಶ. "ವಿಕ್ಟೋರಿಯ ಟರ್ಮಿನಸ್‌ನ ಛಾವಣಿಯಿಂದ ಮೆರವಣಿಗೆಯನ್ನು ವೀಕ್ಷಿಸುತ್ತಿದ್ದ ಗೃಹಮಂತ್ರಿಯು ಲಾಠಿ ಪ್ರಹಾರವನ್ನು ಆದೇಶಿಸಿದನು – ಎಂದು ಅವರಿಗೆ ಹೇಳುತ್ತಿದ್ದೆ," ಎಂದರು ಪಟೇಲ್.[೩೯]

ಪಟೇಲ್‌ರವರು ಬೊಂಬಾಯಿಯಲ್ಲಿ ದಸ್ತಗಿರಿಯಾದದ್ದರಿಂದ ಈ ಬಾರಿ ಸಬರಮತಿ ಸೆರೆಮನೆಗೆ ಕಳುಹಿಸಲ್ಪಡಲಿಲ್ಲ ಅದಕ್ಕೆ ಬದಲಾಗಿ, ಗಾಂಧೀಜಿಯವರು ಇದ್ದ, ಯರವಾಡ ಸೆರೆಮನೆಗೆ ಕಳುಹಿಸಲ್ಪಟ್ಟರು.

ಈ ನಡುವೆ, ರೈತರು ಕಂದಾಯ ಪಾವತಿಸುವಂತೆ ಮಾಡಲು ಕಲೆಕ್ಟರ್ ಆಲ್‌ಫ್ರೆಡ್ ಮಾಸ್ಟರ್‌ನು ಅನೇಕ ಕಠಿಣ ಮತ್ತು ದುಷ್ಟ ಕ್ರಮಗಳನ್ನು ಕೈಗೊಂಡನು. ಕಂದಾಯ ವಸೂಲಿಯ ಆರಂಭದ ದಿನಾಂಕವನ್ನು ಮಾಮೂಲಿ ದಿನಾಂಕಕ್ಕೆ ಬದಲಾಗಿ ಅಕ್ಟೋಬರ್ ೫ಕ್ಕೆ ಹಿಂದೂಡಿ, ಸರ್ಕಾರ ವಶಪಡಿಸಿಕೊಳ್ಳುವ ಜಮೀನಿನಲ್ಲಿದ್ದ ಫಸಲನ್ನು ರೈತರು ಕಟಾವು ಮಾಡಿ, ಧಾನ್ಯವನ್ನು ಮಾರಿ, ಹಣವನ್ನು ಬರೋಡಾಗೆ ರವಾನಿಸುವುದನ್ನು ತಪ್ಪಿಸಿದನು. ಬೋರ್ಸದ್‌ನ ಹೊಸ ಮಾಮಲದಾರ ಮೋಹನ್‌ಲಾಲ್ ಷಾಗೆ ಕ್ರಮಗಳನ್ನು ಕೈಗೊಳ್ಳಲು ಮುಕ್ತ ಅಧಿಕಾರ ನೀಡಿದನು.

ಮೋಹನ್‌ಲಾಲ್ ಷಾ ಒಂದು ಲಾರಿ ಭರ್ತಿ ಪೊಲೀಸರನ್ನು ಕರೆದುಕೊಂಡು ತಾಲ್ಲೂಕಿನಲ್ಲೆಲ್ಲ ಸಂಚರಿಸಿ ಮನೆಗಳ ಒಳಗೆ ನುಗ್ಗಿ ಬಿಳಿ ಟೋಪಿ ಧರಿಸಿದವರನ್ನೆಲ್ಲ ಥಳಿಸುವಂತೆ ಆದೇಶಿಸುತ್ತಿದ್ದನು ಮತ್ತು ಮನೆಯವರ ವಸ್ತುಗಳನ್ನೆಲ್ಲ ವಶಪಡಿಸಿಕೊಳ್ಳುತ್ತಿದ್ದನು. ಅವನು ಬೆಳಗಿನ ಜಾವ ಇದ್ದಕ್ಕಿದ್ದ ಹಾಗೆ ಹಳ್ಳಿಗಳಿಗೆ ನುಗ್ಗಿ, ಸ್ಥಳೀಯ ನಾಯಕರೆನ್ನುವ ಅನುಮಾನ ಬಂದವರನ್ನೆಲ್ಲ ದಸ್ತಗಿರಿ ಮಾಡುತ್ತಿದ್ದನು.

ಕರಮ್‌ಸದ್ ಗ್ರಾಮದಲ್ಲಿ ವಲ್ಲಭಭಾಯ್‌ರವರ ಪೂರ್ವಿಕರ ಮನೆಯಿತ್ತು. ಅದರಲ್ಲಿ ಅವರ ತಾಯಿ ಲಾಡ್‌ಬಾ ಮತ್ತು ಸಹೋದರರಾದ ಸೋಮಭಾಯ್ ಮತ್ತು ಕಾಶಿಭಾಯ್ ಇದ್ದರು. ಪೊಲೀಸರು ಕಂದಾಯ ವಸೂಲಿಗಾಗಿ ಅವರ ಮನೆಗೆ ನುಗ್ಗಿ ಅಡುಗೆ ಮಾಡುತ್ತಿದ್ದ ೮೩ ವರ್ಷದ ಲಾಡ್‌ಬಾರವರ ಅಡುಗೆಯ ಪಾತ್ರೆಗಳಿಗೆ ಮರಳು ಮತ್ತು ಕಲ್ಲುಗಳನ್ನು ತುಂಬಿದರು ಹಾಗೂ ಕಾಶಿಭಾಯ್‌ರವರನ್ನು ದಸ್ತಗಿರಿ ಮಾಡಿದರು. ಗ್ರಾಮದ ಯುವಕರು ಕೋಪದಿಂದ ಪೊಲೀಸರ ಮೇಲೆ ಎರಗುವವರಿದ್ದರು. ಆದರೆ ಗ್ರಾಮದ ಹಿರಿಯರು ಅವರು ಹಿಂಸೆಗೆ ಇಳಿಯದಂತೆ ತಡೆದರು.

ಈ ಸಮಾಚಾರ ಸೆರೆಮನೆಯಲ್ಲಿದ್ದ ವಲ್ಲಭಭಾಯ್‌ಗೆ ತಿಳಿಯಿತು. ಅವರು ತಮ್ಮ ಮಗಳು ಮಣಿಗೆ ೬.೯.೩೦ರಂದು ಈ ರೀತಿ ಪತ್ರ ಬರೆದರು:

> ನೀನು ಖೇಡಾ ಜಿಲ್ಲೆಯಲ್ಲಿ ಹಳ್ಳಿಯಿಂದ ಹಳ್ಳಿಗೆ ಹೋಗಿ ಜನರನ್ನು ಪ್ರೋತ್ಸಾಹಿಸಬೇಕೆಂದು ಬಯಸುತ್ತೇನೆ..... ಕಾಶಿಕಾಕನನ್ನು ಪೊಲೀಸರು ಸೆರೆಮನೆಗೆ ಎಳೆದುಕೊಂಡು ಹೋಗಿದ್ದು ಒಳ್ಳೆಯದು. ಅವನಿಗೆ ಅಂತಹ ಅನುಭವ ಮೌಲಿಕವಾದದ್ದು. ನೀನು ಬಾ (ಲಾಡ್‌ಬಾ) ಬಳಿಗೆ ಮತ್ತೆ ಹೋಗಬೇಕು.

ಸ್ವಲ್ಪ ದಿನಗಳಲ್ಲಿ ಮಣಿಬೆನ್ ದಸ್ತಗಿರಿಯಾಗಿ ಸಬರಮತಿ ಸೆರೆಮನೆಯಲ್ಲಿ ಇಡಲ್ಪಟ್ಟರು. ಅವರಿಗೆ ವಲ್ಲಭಭಾಯ್ ೧೩.೧೦.೩೦ರಂದು ಮತ್ತೆ ಪತ್ರ ಬರೆದರು:

> ಇತರ ಎಲ್ಲಾ ಮಹಿಳಾ ಖೈದಿಗಳನ್ನು ಚೆನ್ನಾಗಿ ನೋಡಿಕೊ. ಅವರು ಅಲ್ಲಿಂದ ತೆರಳುವಾಗ, ಅಲ್ಲಿಗೆ ಬಂದಾಗ ಇದ್ದುದಕ್ಕಿಂತ ಹೆಚ್ಚು ಧೈರ್ಯಶಾಲಿಗಳಾಗಿರುವಂತೆ ನೋಡಿಕೊ..... ನಾನು ಉತ್ಸಾಹದಿಂದ ನೂಲು ತೆಗೆಯುತ್ತಿದ್ದೇನೆ. ಪ್ರತಿ ದಿನ ೨೦೦೦ ಗಜ ನೂಲು ತೆಗೆಯುತ್ತೇನೆ.

ನವೆಂಬರ್‌ನ ಆದಿಭಾಗದಲ್ಲಿ ಯರವಾಡ ಸೆರೆಮನೆಯಿಂದ ಪಟೇಲರ ಬಿಡುಗಡೆಯಾಯಿತು. ತಕ್ಷಣ ಅವರು ಉಗ್ರ ಭಾಷಣಗಳನ್ನು ಮಾಡಲು ಆರಂಭಿಸಿದರು. ಅವರ ಭಾಷಣಗಳು ಉದ್ರೇಕಕಾರಿಯಾಗಿದ್ದುವು. ಅಂತಹ ಭಾಷಣಗಳನ್ನು ಮಾಡದಂತೆ ಸರ್ಕಾರವು ಅವರಿಗೆ ಆದೇಶ ನೀಡಿತು. ವಲ್ಲಭಭಾಯ್‌ರವರು ಸ್ವಲ್ಪ ಕಾಲ ಮೌನವಾಗಿದ್ದು ರೈತರೊಡನೆ ಕಾಲ ಕಳೆಯಬೇಕೆಂದು ಯೋಚಿಸಿದರು. ಆದರೆ ಹೆಚ್ಚು ಕಾಲ ಮೌನವಾಗಿರಲು ಅವರಿಗೆ ಸಾಧ್ಯವಾಗಲಿಲ್ಲ. ಬೊಂಬಾಯಿಯಲ್ಲಿ ಒಂದು ಹೊಸ ಖಾದಿ ಅಂಗಡಿಯ ಆರಂಭೋತ್ಸವದಲ್ಲಿ ಹೀಗೆ ಹೇಳಿದರು:

> ನಾನು ಗುಜರಾತಿನ ರೈತರನ್ನು ಹಾಳು ಮಾಡುತ್ತಿದ್ದೇನೆಂದು ಕೆಲವರು ಹೇಳುತ್ತಿದ್ದಾರೆ. ಈ ಹೋರಾಟದ ಸಮಯದಲ್ಲಿ ರೈತರು ತಮ್ಮನ್ನು ನಾಶಪಡಿಸಲು ಅವಕಾಶ ನೀಡಿದರೆ ದೇಶದ ಸ್ವಾತಂತ್ರ್ಯಕ್ಕಾಗಿ ಹಚ್ಚಲ್ಪಟ್ಟಿರುವ ಮಹಾತ್ಯಾಗದ ಬೆಂಕಿಗೆ ಸೂಕ್ತವಾದ ಕೊಡುಗೆಯನ್ನು ಅವರು ನೀಡಿದಂತಾಗುತ್ತದೆ ಎಂದು ನಾನು ಹೇಳುತ್ತೇನೆ.

ಬಾಂಬೆ ಪ್ರಾಂತ್ಯದ ಕರ್ನಾಟಕ ಭಾಗದ ರೈತರೂ ಸಹ ಕಂದಾಯ ಪಾವತಿಸಲು ನಿರಾಕರಿಸುತ್ತಿದ್ದರು. ಅದನ್ನು ಕುರಿತು ಖಾದಿ ಅಂಗಡಿಯ ಆರಂಭೋತ್ಸವದ ಭಾಷಣದಲ್ಲಿ ಪಟೇಲರು ಇಂತೆಂದರು:

> ಕರ್ನಾಟಕದಲ್ಲೂ ಸಹ ಆಸ್ತಿ ವಶಪಡಿಸಿಕೊಳ್ಳುವುದು ಆರಂಭವಾಗಿದೆ ಮತ್ತು ಅನೇಕ ರೈತರು ಸೆರೆಮನೆ ಸೇರಿದ್ದಾರೆ..... ಅನೇಕರು ಸಂಪೂರ್ಣವಾಗಿ ನಾಶವಾಗಿದ್ದಾರೆ. ಅವರ ಧೈರ್ಯ ಮತ್ತು ತ್ಯಾಗದ ಕತೆಗಳನ್ನು ಆಲಿಸಿದಾಗ ಅವರನ್ನು ಹೃದಯದಾಳದಿಂದ ಹೊಗಳದೆ ಇರಲು ಸಾಧ್ಯವಿಲ್ಲ.

ತನ್ನ ಆದೇಶವನ್ನು ಪಟೇಲರು ಮುರಿದಿರುವುದನ್ನು ಸರ್ಕಾರವು ಗಮನಿಸಿತು. ಆದರೂ ಸಹ ಅವರ ಮೇಲೆ ಏನೂ ಕ್ರಮ ಜರುಗಿಸಲಿಲ್ಲ. ಪಟೇಲ್‌ರವರು ಬೊಂಬಾಯಿಯಿಂದ ಅಹಮದಾಬಾದ್‌ಗೆ ಹಿಂತಿರುಗಿ, ತಮ್ಮ ಬಾಡಿಗೆಮನೆಯನ್ನು ಖಾಲಿ ಮಾಡಿ, ಡಾ॥ ಕನುಗ ದಂಪತಿಗಳ ಜೊತೆ ವಾಸಿಸಲು ಆರಂಭಿಸಿದರು ಮತ್ತು ರೈತರನ್ನು ಭೇಟಿ ಮಾಡಿ ಹೆಂಡ ಮತ್ತು ವಿದೇಶಿ ಬಟ್ಟೆ ಅಂಗಡಿಗಳ ಪಿಕೆಟಿಂಗ್‌ಗೆ ಪ್ರೋತ್ಸಾಹ ಕೊಡಲು ಆರಂಭಿಸಿದರು. ಆಗ ಸರ್ಕಾರ ಅವರನ್ನು ದಸ್ತಗಿರಿ ಮಾಡಿ, ಒಂಬತ್ತು ತಿಂಗಳ ಸೆರೆವಾಸವನ್ನು ವಿಧಿಸಿ ಮತ್ತೆ ಯರವಾಡ

ಜೈಲಿನಲ್ಲಿ ಇಟ್ಟಿತು. ಪಟೇಲರು ಜೈಲು ಸೇರುವ ಮುನ್ನ, ಕಾಂಗ್ರೆಸ್ಸಿನ ಆಕ್ಟಿಂಗ್ ಅಧ್ಯಕ್ಷರಾಗಿ ತಮಗಿರುವ ಅಧಿಕಾರವನ್ನು ಚಲಾಯಿಸಿ ರಾಜೇಂದ್ರ ಪ್ರಸಾದ್ ಅವರನ್ನು ಕಾಂಗ್ರೆಸ್ಸಿನ ಆಕ್ಟಿಂಗ್ ಅಧ್ಯಕ್ಷರನ್ನಾಗಿ ನಾಮಕರಣ ಮಾಡಿದರು.[೪೦]

ಆ ವೇಳೆಗೆ ದಸ್ತಗಿರಿ ಆಗುವ ಸತ್ಯಾಗ್ರಹಿಗಳ ಸಂಖ್ಯೆ ತಿಂಗಳಿಗೆ ಒಂದು ಲಕ್ಷಕ್ಕೆ ಏರಿತ್ತು. ಭಾರತೀಯರ ಸತ್ಯಾಗ್ರಹ ಹುಡುಗಾಟದ ಕ್ರೀಡೆಯಲ್ಲ, ಅದೊಂದು ಗಂಭೀರ ಸಮರ ಎಂದು ವೈಸ್‌ರಾಯ್ ಲಾರ್ಡ್ ಇರ್ವಿನ್‌ರವರಿಗೆ ಜ್ಞಾನೋದಯವಾಯಿತು. ಅವರ ಅಧಿಕಾರದ ಅವಧಿಯೂ ಮುಗಿಯುವ ಹೊತ್ತು ಬಂದಿತ್ತು. ಅದರಿಂದ ಅವರು ಗಾಂಧೀಜಿಯೊಡನೆ ರಾಜಿ ಮಾಡಿಕೊಳ್ಳಲು ಬಯಸಿದರು. ಗಾಂಧೀಜಿಯೊಡನೆ ಜೈಲಿನಲ್ಲಿ ಸಂದರ್ಶನಕ್ಕೆ ಹೊರಟಿದ್ದ ಡೈಲಿ ಹೆರಾಲ್ಡ್ ಪತ್ರಿಕೆಯ ಸ್ಲೋಕೋಂಬೆಯವರ ಮೂಲಕ ಗಾಂಧಿಯವರನ್ನು ಮುಟ್ಟಲು ಯತ್ನಿಸಿದರು. ಸ್ಲೋಕೋಂಬೆಯವರು ಗಾಂಧೀಜಿಯವರನ್ನು ಮೇ ೧೯ ಮತ್ತು ೨೦ರಂದು ಸೆರೆಮನೆಯಲ್ಲಿ ಸಂದರ್ಶಿಸಿದರು. ಅದೇ ಸಮಯದಲ್ಲಿ ಸೌಮ್ಯ ನಾಯಕರಾದ ತೇಜ್ ಬಹದ್ದೂರ್ ಸಪ್ರು ಮತ್ತು ಎಂ.ಆರ್. ಜಯಕರ್‌ರವರೂ ಸಹ ವೈಸ್‌ರಾಯ್ ಮತ್ತು ಗಾಂಧೀಜಿಯ ನಡುವೆ ಸಂಧಾನ ಏರ್ಪಡಿಸಲು ಜುಲೈನಲ್ಲಿ ಸೆರೆಮನೆಗೆ ಬಂದರು. ಕಾರ್ಯಕಾರಿ ಸಮಿತಿಯ ಸದಸ್ಯರೊಡನೆ ಸಮಾಲೋಚಿಸದೆ ತಾವು ಏನು ಮಾಡಲೂ ಸಾಧ್ಯವಿಲ್ಲವೆಂದು ಗಾಂಧೀಜಿಯವರು ಅವರಿಗೆ ಹೇಳಿದರು. ಕಾರ್ಯಕಾರಿ ಸಮಿತಿಯ ಸದಸ್ಯರಾದ ವಲ್ಲಭಭಾಯ್, ಸರೋಜಿನಿ ನಾಯ್ಡು ಮತ್ತು ಜಯ್‌ರಾಮ್‌ದಾಸ್‌ರವರು ಯರವಾಡ ಸೆರೆಮನೆಯಲ್ಲೇ ಇದ್ದರು. ಮೋತಿಲಾಲ್ ನೆಹರು ಮತ್ತು ಜವಹರಲಾಲ್ ನೆಹರೂರವರನ್ನು ಸಂಯುಕ್ತ ಪ್ರಾಂತ್ಯದ ಸೆರೆಮನೆಯಿಂದ ಯರವಾಡ ಸೆರೆಮನೆಗೆ ಕರೆತರಲಾಯಿತು. ಅಲ್ಲಿ ಕಾರ್ಯಕಾರಿ ಸಮಿತಿಯ ಸಭೆ ನಡೆಯಿತು. ಆದರೆ ದಸ್ತಗಿರಿ ಆಗದೆ ಸೆರೆಮನೆಯ ಹೊರಗಿದ್ದ ಕಾರ್ಯಕಾರಿ ಸಮಿತಿಯ ಇತರ ಸದಸ್ಯರು ಅದರಲ್ಲಿ ಭಾಗವಹಿಸಲು ಅವಕಾಶವನ್ನು ಸರ್ಕಾರವು ಕೊಡಲಿಲ್ಲ.[೪೧]

ಸೆರೆಮನೆಯಲ್ಲಿ ನಾಯಕರುಗಳು ಆಗಸ್ಟ್ ೧೪ ಮತ್ತು ೧೫ರಂದು ಚರ್ಚಿಸಿ, ವೈಸ್‌ರಾಯ್‌ಗೆ ಒಂದು ಪತ್ರವನ್ನು ಕಳುಹಿಸಿದರು. ಆ ಪತ್ರದಲ್ಲಿ ಅಧಿಕಾರದ ಹಸ್ತಾಂತರಕ್ಕೆ ಮತ್ತು ಸಾಮ್ರಾಜ್ಯದಿಂದ ಹೊರಬರುವ ಹಕ್ಕಿನ ಬಗ್ಗೆ ಕೆಲವು ಶರತ್ತುಗಳನ್ನು ಸೂಚಿಸಿದರು.[೪೨] ಒಟ್ಟಿನಲ್ಲಿ ಈ ಕಾರ್ಯಕ್ರಮಗಳಿಂದ ಏನೂ ಪ್ರಯೋಜನವಾಗಲಿಲ್ಲ.

ಮೊದಲನೆ ದುಂಡು ಮೇಜಿನ ಸಮ್ಮೇಳನವು ಲಂಡನ್‌ನಲ್ಲಿ ನವೆಂಬರ್

೧೨ರಂದು ಆರಂಭವಾಯಿತು. ಅದರಲ್ಲಿ ಕಾಂಗ್ರೆಸ್ ಭಾಗವಹಿಸಲಿಲ್ಲ. ಆದರೆ ಮೊಹಮ್ಮದಾಲಿ ಜಿನ್ನ, ಬಿಕನೀರ್ ಮಹಾರಾಜ, ಶ್ರೀನಿವಾಸ ಶಾಸ್ತ್ರಿ, ಎಂ.ಆರ್. ಜಯಕರ್, ತೇಜ್ ಬಹದ್ದೂರ್ ಸಪ್ರು ಮತ್ತು ಇತರ ಕೆಲವರು ಅದರಲ್ಲಿ ಭಾಗವಹಿಸಿದ್ದರು. ಆ ಸಮ್ಮೇಳನ ಏನನ್ನೂ ಸಾಧಿಸಲಿಲ್ಲ. ಆಗ ಬ್ರಿಟನ್ ಪ್ರಧಾನಿ ಆಗಿದ್ದವರು ಲೇಬರ್ ಪಕ್ಷದ ರಾಮ್ಸೆ ಮ್ಯಾಕ್ಡೊನಾಲ್ಡ್. ಅವರು ೧೯೩೧ ಜನವರಿ ೧೯ರಂದು ನಡೆದ ದುಂಡು ಮೇಜಿನ ಸಮ್ಮೇಳನದ ಅಂತಿಮ ಸಭೆಯಲ್ಲಿ 'ಮುಂದಿನ ಸಮ್ಮೇಳನಕ್ಕೆ ಕಾಂಗ್ರೆಸ್ಸು ತನ್ನ ಪ್ರತಿನಿಧಿಗಳನ್ನು ಕಳುಹಿಸುವ' ಆಶಾಭಾವವನ್ನು ವ್ಯಕ್ತ ಪಡಿಸಿದರು. ಪ್ರಧಾನಿಯ ಮಾತಿನ ಅರ್ಥವನ್ನು ಗ್ರಹಿಸಿದ ವೈಸ್‌ರಾಯ್ ಲಾರ್ಡ್ ಇರ್ವಿನ್ ೧೯೩೧ರ ಜನವರಿ ೨೬ರಂದು, ಅಂದರೆ ಸ್ವಾತಂತ್ರ್ಯ ದಿನಾಚರಣೆಯಂದು, ಗಾಂಧೀಜಿ, ಪಟೇಲ್, ಮೋತಿಲಾಲ್, ಜವಹರ್ ಮತ್ತಿತರ ಕಾಂಗ್ರೆಸ್ ನಾಯಕರನ್ನು ಯಾವ ಶರತ್ತು ಇಲ್ಲದೆ ಬಿಡುಗಡೆ ಮಾಡಿದನು.

ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಅಲಹಬಾದ್‌ನಲ್ಲಿ ಸಭೆ ಸೇರಿ ಚಳವಳಿಯನ್ನು ಸ್ಥಗಿತಗೊಳಿಸದೆ ವೈಸ್‌ರಾಯ್ ಜೊತೆ ಮಾತುಕತೆ ನಡೆಸಬೇಕೆಂದು ತೀರ್ಮಾನಿಸಿತು. ಗಾಂಧೀಜಿಯವರು 'ಹೃದಯ ಹೃದಯಗಳ ನಡುವೆ ಸಂಭಾಷಣೆ ನಡೆಯಬೇಕು' ಎಂದರು. ಲಾರ್ಡ್ ಇರ್ವಿನ್ ಒಪ್ಪಿದರು. ಗಾಂಧಿ ಮತ್ತು ಇರ್ವಿನ್ ನಡುವೆ ವೈಸ್‌ರಾಯ್ ಅರಮನೆಯಲ್ಲಿ ಸಂವಾದವು ಫೆಬ್ರುವರಿ ೧೭ರಂದು ಆರಂಭವಾಯಿತು. ಇಬ್ಬರ ನಡುವೆ ಅನೇಕ ಬಾರಿ ಅನೇಕ ದಿನ ಚರ್ಚೆ ನಡೆದು ಮಾರ್ಚ್ ೫ರಂದು ಗಾಂಧಿ – ಇರ್ವಿನ್ ಒಪ್ಪಂದಕ್ಕೆ ಸಹಿ ಬಿದ್ದಿತು.

ಇವರಿಬ್ಬರ ಸಂಭಾಷಣೆಯು ಸಾಮಾನ್ಯವಾದ ಭೇಟಿಯಾಗಿರಲಿಲ್ಲ. ಪ್ರಥಮ ಬಾರಿಗೆ, ಭಾರತೀಯರ ನಾಯಕ ಗಾಂಧೀಜಿಯವರು ಇಡೀ ಭಾರತದ ಪರವಾಗಿ 'ರವಿ ಮುಳುಗದ ಸಾಮ್ರಾಜ್ಯದ ಸಾಮ್ರಾಟನ ಪ್ರತಿನಿಧಿಯ' ಜೊತೆ ಸಮಾನನಂತೆ ಮಾತುಕತೆ ನಡೆಸಿದರು. ಮಾತು ಕತೆಯ ಕಾಲದಲ್ಲಿ ದೆಹಲಿಯಲ್ಲಿ ಗಾಂಧೀಜಿಯವರು ಡಾ॥ ಮುಕ್ತಾರ್ ಅಹಮದ್ ಅನ್ಸಾರಿಯವರ ಮನೆಯಲ್ಲಿ ತಂಗಿದ್ದರು. ಅಲ್ಲಿಂದ ೫ ಮೈಲಿಗಳ ದೂರ ನಡೆದುಕೊಂಡು ವೈಸ್‌ರಾಯ್ ಅರಮನೆಗೆ ಹೋಗುತ್ತಿದ್ದರು ಮತ್ತು ೫ ಮೈಲಿ ನಡೆದುಕೊಂಡು ಹಿಂತಿರುಗುತ್ತಿದ್ದರು. ವೈಸ್‌ರಾಯ್‌ರವರ ಕಾರನ್ನು ಉಪಯೋಗಿಸುತ್ತಿರಲಿಲ್ಲ. ಪ್ರತಿ ಸಭೆಯ ನಂತರ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ನೆಹರು, ಪಟೇಲ್ ಮತ್ತು ಇತರ ಸದಸ್ಯರಿಗೆ ತಮ್ಮ ಮಾತಿನ ವಿವರಣೆ ನೀಡುತ್ತಿದ್ದರು ಮತ್ತು ಅವರೊಡನೆ ಸಮಾಲೋಚಿಸುತ್ತಿದ್ದರು. ಅದಕ್ಕಾಗಿ ಕಾರ್ಯಕಾರಿ ಸಮಿತಿಯ ಸದಸ್ಯರು ದೆಹಲಿಯಲ್ಲಿ ತಂಗಿದ್ದರು. ಸಪ್ರು, ಜಯಕರ್ ಮತ್ತು

ಶಾಸ್ತ್ರಿಯವರೂ ಸಹ ಅಲ್ಲೆ ಇದ್ದರು. ಆದರೆ ಪಟೇಲರು ಸ್ವಲ್ಪ ಕಾಲ ಅಲ್ಲಿ ಗೈರು ಹಾಜರಾಗಬೇಕಾಯಿತು. ಗುಜರಾತ್‌ನ ರೈತರು ಅವರು ತಮ್ಮ ನಡುವೆ ಇರಲು ಬಯಸಿದ್ದರು.

ಗಾಂಧಿ – ಇರ್ವಿನ್ ಒಪ್ಪಂದದ ಪ್ರಕಾರ ಸಿವಿಲ್ ಶಾಸನ ಭಂಗ ಚಳವಳಿಯನ್ನು ಹಿಂತೆಗೆದುಕೊಳ್ಳಲು ಮತ್ತು ಮುಂದಿನ ದುಂಡು ಮೇಜಿನ ಸಮ್ಮೇಳನದಲ್ಲಿ ಕಾಂಗ್ರೆಸ್ ಭಾಗವಹಿಸಲು ಗಾಂಧೀಜಿ ಒಪ್ಪಿದರು. ಲಾರ್ಡ್ ಇರ್ವಿನ್‌ರವರು ಸತ್ಯಾಗ್ರಹಿ ಸೆರೆವಾಸಿಗಳನ್ನು ಬಿಡುಗಡೆ ಮಾಡಲು, ವಶಪಡಿಸಿಕೊಂಡ ಆದರೆ ಇನ್ನೂ ಮಾರಾಟವಾಗದ ಜಮೀನುಗಳನ್ನು ಆಯಾ ರೈತರಿಗೆ ಹಿಂತಿರುಗಿಸಲು, ಸಮುದ್ರ ತೀರದಲ್ಲಿರುವವರು ತಮಗೆ ಬೇಕಾದ ಉಪ್ಪು ತಯಾರಿಸಿಕೊಳ್ಳಲು ಅವಕಾಶ ನೀಡಲು ಮತ್ತು ಹೆಂಡದಂಗಡಿಗಳ ಮುಂದೆ ಅಹಿಂಸಾತ್ಮಕ ಪಿಕೆಟಿಂಗ್ ನಡೆಸಲು ಒಪ್ಪಿದರು. ಸಂಪೂರ್ಣ ಸ್ವಾತಂತ್ರ್ಯಕ್ಕೆ ಒಪ್ಪಿಗೆ ಸಿಗಲಿಲ್ಲ. ಡೊಮಿನಿಯನ್ ಸ್ಟೇಟಸ್‌ಗೂ ಒಪ್ಪಿಗೆ ಸಿಗಲಿಲ್ಲ.

ಈ ಒಪ್ಪಂದದಿಂದ ಭಾರತೀಯರಿಗೆ ಹೆಚ್ಚಿನ ಅಧಿಕಾರ ಅಥವಾ ಸೌಕರ್ಯವೇನೂ ಸಿಗಲಿಲ್ಲ. ಆದರೂ ಸಹ ಈ ಒಪ್ಪಂದವು ಭಾರತದ ಇತಿಹಾಸದಲ್ಲಿ ಒಂದು ಮೈಲಿಗಲ್ಲು, ಏಕೆಂದರೆ ಗಾಂಧೀಜಿಯೊಡನೆ ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ವೈಸ್‌ರಾಯ್‌ರವರು ಕಾಂಗ್ರೆಸ್ಸನ್ನು ಭಾರತೀಯರ ಪ್ರತಿನಿಧಿ ಎಂದು ಒಪ್ಪಿದ್ದರು.

ಆದಾಗ್ಯೂ ಈ ಒಪ್ಪಂದವು ಪಟೇಲರಿಗೆ ನಿರಾಸೆಯನ್ನುಂಟು ಮಾಡಿತು, ಏಕೆಂದರೆ ಸರ್ಕಾರವು ವಶಪಡಿಸಿಕೊಂಡಿದ್ದ ಎಲ್ಲಾ ಜಮೀನುಗಳನ್ನು ರೈತರಿಗೆ ವಾಪಸ್ಸು ಕೊಡಿಸಲು ಅದು ವಿಫಲವಾಗಿತ್ತು. ಮಾತುಕತೆಯ ಸಮಯದಲ್ಲಿ ಗಾಂಧೀಜಿಯವರು ಮಾರಾಟವಾಗಿರುವ ಜಮೀನುಗಳನ್ನು ರೈತರಿಗೆ ವಾಪಸ್ಸು ಕೊಡಿಸಲು ಒಪ್ಪದಿದ್ದರೆ ಮಾತುಕತೆ ಮುರಿದು ಬೀಳುವುದೆಂದು ವೈಸ್‌ರಾಯ್‌ಗೆ ತಿಳಿಸಿದ್ದರು. ವೈಸ್‌ರಾಯ್‌ರವರು ಜಮೀನನ್ನು ವಾಪಸ್ಸು ಕೊಡಿಸುವುದರ ವಿರುದ್ಧವಾಗಿ ತಾವು ಬೊಂಬಾಯಿ ಸರ್ಕಾರಕ್ಕೆ ವಾಗ್ದಾನ ಮಾಡಿರುವುದಾಗಿ ತಿಳಿಸಿದ್ದರು. ಪಟೇಲರೂ ಸಹ ರೈತರಿಗೆ ವಾಗ್ದಾನ ಮಾಡಿದ್ದರು. ಅವರು ರೈತರಿಗೆ, 'ಹೆದರಬೇಡಿ, ನಿಮ್ಮ ಜಮೀನು ನಿಮ್ಮನ್ನು ಹುಡುಕಿಕೊಂಡು ನಿಮ್ಮ ಮನೆಯ ಬಾಗಿಲಿಗೇ ಬರುತ್ತದೆ' ಎಂದಿದ್ದರು. ಅದರಿಂದ ರೈತರು ನಿರ್ಭಯವಾಗಿ ಚಳವಳಿಯಲ್ಲಿ ಭಾಗವಹಿಸಿದ್ದರು, ಸೆರೆಮನೆ ಸೇರಿದ್ದರು ಮತ್ತು ಅಪಾರ ಕಷ್ಟ ನಷ್ಟ ಅನುಭವಿಸಿದ್ದರು. ಗಾಂಧೀಜಿಯವರು ವೈಸ್‌ರಾಯ್‌ಗೆ, "ಜಮೀನಿನ ಬಗೆಗೆ

ಪಟೇಲರಿಗೆ ಒಪ್ಪಿಗೆ ಆಗದ ಯಾವುದೇ ಒಪ್ಪಂದವು ನನಗೂ ಒಪ್ಪಿಗೆ ಆಗುವುದಿಲ್ಲ" ಎಂದು ಹೇಳಿದ್ದರು. ಅದರಿಂದ ಮಾತುಕತೆ ನಿಂತು ಹೋಗಿತ್ತು. ಆಗ, ಒಂದು ರಾಜಿಸೂತ್ರದ ಮೂಲಕ ಆ ಬಿಕ್ಕಟ್ಟನ್ನು ಪರಿಹರಿಸಲಾಗಿತ್ತು. 'ಸ್ಥಿರಾಸ್ತಿಗಳು ಮಾರಲ್ಪಟ್ಟಿರುವ ಸಂದರ್ಭದಲ್ಲಿ, ಸರ್ಕಾರಕ್ಕೆ ಸಂಬಂಧ ಪಟ್ಟಂತೆ, ಆ ವ್ಯವಹಾರವು ಅಂತಿಮ' ಎನ್ನುವುದು ಆ ರಾಜಿ ಸೂತ್ರ. ಅಂದರೆ ಆ ಸ್ಥಿರಾಸ್ತಿಗಳನ್ನು ವಾಪಸ್ಸು ಕೊಡಿಸಲು ಸರ್ಕಾರೇತರ ಪ್ರಯತ್ನಗಳನ್ನು ನಡೆಸಬಹುದು ಎಂದು ಅರ್ಥ. ಅಂತಹ ಪ್ರಯತ್ನಕ್ಕೆ ಸಹಕರಿಸುವಂತೆ ಬೊಂಬಾಯಿ ಸರ್ಕಾರವನ್ನು ಒತ್ತಾಯಿಸುವುದಾಗಿ ಇರ್ವಿನ್ ಹೇಳಿದರು.

ಈ ರಿಯಾಯಿತಿ ಪಟೇಲರಿಗೆ ಒಪ್ಪಿಗೆ ಆಗಲಿಲ್ಲ. ಆದರೂ ಸಹ ಗಾಂಧೀಜಿಯ ವಿಧೇಯ ಅನುಯಾಯಿಯಾಗಿ ಅದನ್ನು ವಿರೋಧಿಸಲಿಲ್ಲ. ಆದರೆ ಜಮೀನು ಕಳೆದುಕೊಂಡ ರೈತರಿಗೆ ಬಹಳ ಸಂಕಟವಾಯಿತು.

ಹಾಗೆಯೆ, ಖೈದಿಗಳ ಬಿಡುಗಡೆಯ ವಿಷಯದ ಒಪ್ಪಂದ ಇಡೀ ದೇಶದಲ್ಲಿ ಯುವಕರಿಗೆ ಅಸಮಾಧಾನವನ್ನು ಉಂಟುಮಾಡಿತು. ಒಪ್ಪಂದವು ಸತ್ಯಾಗ್ರಹಿ ಖೈದಿಗಳ ತಕ್ಷಣದ ಬಿಡುಗಡೆಗೆ ಅವಕಾಶ ಮಾಡಿತ್ತು. ಆದರೆ ಬಂಗಾಳದಲ್ಲಿ ಬಹಳ ಯುವಕರು ಗಾಂಧೀಜಿಯವರು ಸತ್ಯಾಗ್ರಹ ಆರಂಭಿಸುವುದಕ್ಕೆ ಮುನ್ನವೇ ದಸ್ತಗಿರಿಯಾಗಿದ್ದರು. ಅವರ ಬಿಡುಗಡೆಗೆ ಒಪ್ಪಂದದಲ್ಲಿ ಅವಕಾಶವಿರಲಿಲ್ಲ. ಜೊತೆಗೆ ಪಂಜಾಬಿನಲ್ಲಿ ಆಂಗ್ಲ ಅಧಿಕಾರಿಗಳ ಕೊಲೆ ನಿಮಿತ್ತ ಮರಣದಂಡನೆಗೆ ಗುರಿಯಾಗಿದ್ದ ಮೂವರು ಯುವ ದೇಶಭಕ್ತರಾದ ಭಗತ್ ಸಿಂಗ್, ಸುಖ್ ದೇವ್ ಮತ್ತು ರಾಜ್‌ಗುರುರವರ ಶಿಕ್ಷೆಯ ಬದಲಾವಣೆಗೂ ಗಾಂಧಿ – ಇರ್ವಿನ್ ಒಪ್ಪಂದ ಅವಕಾಶ ಮಾಡಿರಲಿಲ್ಲ. ಇದು ತರುಣರಿಗೆ ಭಾರಿ ನಿರಾಸೆಯನ್ನು ಉಂಟುಮಾಡಿತು.

ಆದಾಗ್ಯೂ ಸಮಗ್ರವಾಗಿ ನೋಡಿದಾಗ, ಗಾಂಧಿ – ಇರ್ವಿನ್ ಒಪ್ಪಂದ ಭಾರತೀಯರಿಗೆ ರೋಮಾಂಚನವನ್ನು ಉಂಟುಮಾಡಿತು, ಏಕೆಂದರೆ ಬ್ರಿಟನ್ ಒಡನೆ ಭಾರತದ ಸಮಾನತೆಯನ್ನು ಅದು ಸಾಬೀತು ಮಾಡಿತ್ತು ಮತ್ತು ಸಂಧಾನದ ಮೂಲಕ ಸ್ವರಾಜ್ಯವನ್ನು ಪಡೆಯುವ ಸಾಧ್ಯತೆಯನ್ನು ಅನಾವರಣ ಮಾಡಿತ್ತು.[೪೩]

೧೧.೩. ಕರಾಚಿ ಕಾಂಗ್ರೆಸ್ಸಿನ ಅಧ್ಯಕ್ಷ

ಕಾಂಗ್ರೆಸ್ಸಿನ ೪೫ನೆ ವಾರ್ಷಿಕ ಅಧಿವೇಶನವು ಕರಾಚಿಯಲ್ಲಿ ೧೯೩೧ರ ಮಾರ್ಚ್ ೨೯ರಿಂದ ೩೧ರ ವರೆಗೆ ನಡೆಯಿತು. ವಲ್ಲಭಭಾಯ್ ಪಟೇಲರು ಅದರ ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದರು.

ಆ ಅಧಿವೇಶನವು ಬಹಳ ಸಂದಿಗ್ಧ ಸಮಯದಲ್ಲಿ ನಡೆಯಿತು. ಅಧಿವೇಶನ ಆರಂಭ ಆಗುವುದಕ್ಕೆ ಕೆಲವು ದಿನಗಳ ಮುಂಚೆ ಸರ್ಕಾರವು ದೇಶಭಕ್ತ ತರುಣರಾದ ಭಗತ್ ಸಿಂಗ್, ಸುಖ್‌ದೇವ್ ಮತ್ತು ರಾಜ್‌ಗುರುರವರನ್ನು ಕೊಲೆಯ ಆಪಾದನೆಯ ಮೇಲೆ ನೇಣುಗಂಬಕ್ಕೆ ಏರಿಸಿತ್ತು. ಅದರಿಂದ ದೇಶದ ತರುಣರಿಗೆ ಬಹಳ ಆಕ್ರೋಶ ಉಂಟಾಗಿತ್ತು. ಗಾಂಧೀಜಿಯವರು ಲಾರ್ಡ್ ಇರ್ವಿನ್ ಜೊತೆ ಸಂಧಾನ ನಡೆಸುವಾಗ ಆ ದೇಶಭಕ್ತ ಯುವಕರ ಮರಣದಂಡನೆ ಶಿಕ್ಷೆಯನ್ನು ಬದಲಾಯಿಸುವಂತೆ ಮಾಡಲು ಬಹಳ ಪ್ರಯತ್ನಿಸಿದ್ದರು. ಆದರೆ ಲಾರ್ಡ್ ಇರ್ವಿನ್ ಒಪ್ಪಿರಲಿಲ್ಲ. ತರುಣರು ಗಾಂಧೀಜಿಯ ಪ್ರಯತ್ನದಿಂದ ತೃಪ್ತರಾಗಲಿಲ್ಲವೆಂದು ಕಾಣುತ್ತದೆ. ಅದರಿಂದ ಗಾಂಧಿ – ಇರ್ವಿನ್ ಒಪ್ಪಂದವು ಅವರಿಗೆ ನಿರಾಸೆಯನ್ನು ಉಂಟು ಮಾಡಿತ್ತು. ಗಾಂಧೀಜಿ ಮತ್ತು ಚುನಾಯಿತ ಅಧ್ಯಕ್ಷ ವಲ್ಲಭಭಾಯ್ ಪಟೇಲ್‌ರವರು ರೈಲಿನಲ್ಲಿ ಒಟ್ಟಿಗೇ ಪ್ರಯಾಣ ಮಾಡಿ ಕರಾಚಿ ರೈಲು ನಿಲ್ದಾಣದಲ್ಲಿ ಇಳಿದಾಗ ಯುವಕರ ಒಂದು ಭಾರಿ ಗುಂಪು ಕಪ್ಪು ಬಾವುಟವನ್ನು ಪ್ರದರ್ಶಿಸಿತು ಮತ್ತು ಗಾಂಧೀಜಿಗೆ ಕಪ್ಪು ಪುಷ್ಪಗಳನ್ನು ನೀಡಿ ಭಾರಿ ಆಕ್ರೋಶವನ್ನು ವ್ಯಕ್ತಪಡಿಸಿ ಉಗ್ರ ಪ್ರದರ್ಶನವನ್ನು ನಡೆಸಿತು. ಆ ಸಮಯದಲ್ಲಿ ಪಟೇಲರು ಗಾಂಧೀಜಿಯ ಬೆಂಗಾವಲಾಗಿ ಹಿಂದೆಯೇ ಇದ್ದರು. ಗಾಂಧೀಜಿಯವರು ಬಹಳ ಚಾಕಚಕ್ಯತೆಯಿಂದ ಆ ಯುವಕರು ಆ ಕಪ್ಪು ಹೂವುಗಳನ್ನು ಅವರ ಮೇಲೆ ಎಸೆಯದೆ ಅವರ ಕೈಗೆ ಅರ್ಪಿಸಿದ್ದಕ್ಕೆ ವಂದನೆಗಳನ್ನು ಸಲ್ಲಿಸಿ, ಅವರ ಕೋಪವನ್ನು ಶಮನ ಮಾಡಿದರು. ಆ ಯುವಕರದು ಭಾವನಾತ್ಮಕ ಆಕ್ರೋಶವಾಗಿತ್ತೇ ಹೊರತು ಗಾಂಧಿ ವಿರುದ್ಧದ ದಂಗೆ ಆಗಿರಲಿಲ್ಲ. ಅವರಿಗೆ ಗಾಂಧೀಜಿ ಬಗೆಗೆ ಗೌರವವಿತ್ತು.[೪೪]

(ಲಾರ್ಡ್ ಇರ್ವಿನ್ನನು ಭಗತ್ ಸಿಂಗ್ ಮತ್ತು ಇತರರನ್ನು ನೇಣುಗಂಬದಿಂದ ಉಳಿಸಲು ನಿರಾಕರಿಸಿದಾಗ ಅವನಿಗೆ ಗಾಂಧೀಜಿಯವರು ಹೀಗೆ ಹೇಳಿದ್ದರು, "ನಾನು ನಿಮ್ಮನ್ನು ಒತ್ತಾಯಿಸಲು ಅವಕಾಶ ಕೊಡದೆ ಇರುವುದರ ಮೂಲಕ ದೇಶದ ಯುವಕರ ಹೃದಯಗಳನ್ನು ಗೆಲ್ಲುವ ಒಂದು ಒಳ್ಳೆಯ ಅವಕಾಶವನ್ನು ಕಳೆದುಕೊಳ್ಳುತ್ತಿದ್ದೀರಿ. ನೀವು ಈ ವ್ಯಕ್ತಿಗಳನ್ನು ನೇಣು ಹಾಕಬೇಕೆಂದು ನಿರ್ಧರಿಸಿದ್ದರೆ, ಆಯ್ತು, ಹಾಗೆಯೇ ಮಾಡಿ, ಆದರೆ ಕಾಂಗ್ರೆಸ್ ಅಧಿವೇಶನವು ನಡೆಯುವುದಕ್ಕೆ ಮುಂಚೆ ಮಾಡಿ. ಅದರಿಂದ ಅಧಿವೇಶನದಲ್ಲಿ ನಮ್ಮ ತರುಣರು ಕೋಪದಲ್ಲಿ ಏನೇನು ಹೇಳುತ್ತಾರೊ ಅದನ್ನು ಸರ್ದಾರ್ ಪಟೇಲ್ ಮತ್ತು ನಾನು ಎದುರಿಸುತ್ತೇವೆ. ಅವರ ಕೋಪದಿಂದ ದೂರ ಓಡಿ ಹೋಗಲು ನಾವು ಬಯಸುವುದಿಲ್ಲ.")[೪೫]

ಅಧಿವೇಶನದಲ್ಲಿ ಸರ್ದಾರ್ ಪಟೇಲರು ಕಾಂಗ್ರೆಸ್ ಇತಿಹಾಸದಲ್ಲೇ ಅತ್ಯಂತ

ಚಿಕ್ಕದಾದ ಭಾಷಣವನ್ನು ಮಾಡಿದರು. ಜನರ ಅಸಮಾಧಾನದ ಹೊಗೆಯನ್ನು ಹೆಚ್ಚಿಸದೆ ಇರುವುದಕ್ಕಾಗಿ ಅವರು ಹಾಗೆ ಮಾಡಿದರು. ಅದರಿಂದ ಅವರ ಭಾಷಣ ಮಾಮೂಲಿ ಅಲಂಕಾರದ ಪದಗಳು ಇಲ್ಲದ, ಗಮನ ಸೆಳೆಯುವ ಪದಪುಂಜ ಗಳಿಲ್ಲದ ನೇರವಾದ ಮತ್ತು ವ್ಯಾವಹಾರಿಕವಾದ ಭಾಷಣವಾಗಿತ್ತು.

ತಮ್ಮ ಅಧ್ಯಕ್ಷ ಭಾಷಣದಲ್ಲಿ ಸರ್ದಾರ್ ಪಟೇಲರು ಯುವಕರ ವ್ಯಗ್ರ ಮನಸ್ಸನ್ನು ಶಾಂತಗೊಳಿಸುವುದಕ್ಕಾಗಿ ಇಂತೆಂದರು:

> "ತರುಣ ಭಗತ್ ಸಿಂಗ್, ಸುಖ್‌ದೇವ್ ಮತ್ತು ರಾಜ್‌ಗುರು ಕೆಲವು ದಿನಗಳ ಹಿಂದೆ ಗಲ್ಲಿಗೇರಿಸಲ್ಪಟ್ಟರು. ಅದು ದೇಶದೆಲ್ಲೆಡೆ ಭಾರಿ ಆಕ್ರೋಶವನ್ನು ಎಬ್ಬಿಸಿತು. ನಾನು ನನ್ನನ್ನು ಅವರ ಪಂಥ ದೊಡನೆ ಗುರುತಿಸಿಕೊಂಡಿಲ್ಲ ಎನ್ನುವುದು ಸತ್ಯ. ಇತರ ಕೊಲೆ ಗಳಿಗಿಂತ ರಾಜಕೀಯ ಕೊಲೆಗಳು ಕಡಿಮೆ ಖಂಡನೀಯ ಎನ್ನುವುದನ್ನು ನಾನು ನಂಬುವುದಿಲ್ಲ. ಆದಾಗ್ಯೂ ಭಗತ್ ಸಿಂಗ್ ಮತ್ತು ಅವರ ಸಹಚರರ ಮುಂದೆ ಅವರ ದೇಶಭಕ್ತಿ, ಅಸಾಧಾರಣ ಧೈರ್ಯ ಮತ್ತು ತ್ಯಾಗಕ್ಕಾಗಿ ತಲೆಯನ್ನು ಬಗ್ಗಿಸುತ್ತೇನೆ. ಅವರ ವಧೆಯು ಭಾರಿ ವಿರೋಧದ ನಡುವೆ ನಡೆದಿದೆ. ಇದು ಸರ್ಕಾರವು ಎಷ್ಟು ಹೃದಯ ಶೂನ್ಯ ಎಂಬುದನ್ನು ಸಾಬೀತು ಮಾಡುತ್ತದೆ."

ಮುಂದುವರೆದು ಪಟೇಲರು 'ಪ್ರಚೋದನೆ ಮತ್ತು ರೋಷಾವೇಶವು ನಮ್ಮ ತತ್ವಗಳನ್ನು ನಾವು ಬಿಡುವಂತೆ ಮಾಡಬಾರದು' ಎಂದರು. ಸರ್ಕಾರವು ದಮನಕಾರಿ ನೀತಿಯನ್ನು ಅನುಸರಿಸುತ್ತಿರುವುದರಿಂದ ಅದು ಹೃದಯರಹಿತವಾಗಿದೆ. ಆದಾಗ್ಯೂ ಅದರ ವಿರುದ್ಧದ ಹೋರಾಟದಲ್ಲಿ ಆಯುಧಗಳಿಗೆ ಯಾವ ಸ್ಥಾನವೂ ಇಲ್ಲ. ಸ್ವಾತಂತ್ರ್ಯ ಪಡೆಯಲು ಅಹಿಂಸಾ ಮಾರ್ಗದಲ್ಲಿ ಭದ್ರವಾಗಿ ನಿಲ್ಲುವುದರ ಮೂಲಕ ಜನ ತಮ್ಮ ಶಕ್ತಿಯನ್ನು ಬಹಳವಾಗಿ ಸಮರ್ಥಿಸಿದ್ದಾರೆ. ಈ ಶೂರ ದೇಶಭಕ್ತರ ಆತ್ಮಗಳಿಗೆ ದೇವರು ಶಾಂತಿಯನ್ನು ಕರುಣಿಸಲಿ. ಅವರ ಕುಟುಂಬದವರು ತಮ್ಮ ದುಃಖದಲ್ಲಿ ಇಡೀ ದೇಶವು ಭಾಗಿಯಾಗಿದೆ ಅನ್ನುವ ವಿಷಯದಿಂದ ಸಮಾಧಾನ ತಂದುಕೊಳ್ಳಬೇಕು – ಎಂದರು ಪಟೇಲರು.

ಬಾರ್ಡೋಲಿ ಮತ್ತು ಉಪ್ಪಿನ ಸತ್ಯಾಗ್ರಹದ ಯಶಸ್ಸನ್ನು ಪರೋಕ್ಷವಾಗಿ ಪ್ರಸ್ತಾಪ ಮಾಡಿ ಪಟೇಲರು ಹೀಗೆ ಹೇಳಿದರು:

> "ಬೃಹತ್ ಪ್ರಮಾಣದಲ್ಲಿ ಅಹಿಂಸೆಯನ್ನು ಬಳಸುವುದು

ಇನ್ನು ಮುಂದೆ ಕನಸುಗಾರರ ಕನಸೂ ಅಲ್ಲ, ಅಸಹಜ ಪರಿಕಲ್ಪನೆಯೂ ಅಲ್ಲ, ಆದರೆ ಸಾಬೀತಾದ ಸತ್ಯ ಎಂಬುದನ್ನು ಭಾರತವು ಜಗತ್ತಿಗೆ ತೋರಿಸಿದೆ. ಇದುವರೆವಿಗೆ ಮಾನವ ಜನಾಂಗವು ಹಿಂಸೆಯನ್ನು ದೇವರಂತೆ ಕಾಣುತ್ತಿತ್ತು. ಅದು ಹಿಂಸೆಯ ಪೀಡೆಗೆ ತುತ್ತಾಗಿದ್ದರೂ ಸಹ, ಅಹಿಂಸೆಯ ಯಶಸ್ಸಿನಲ್ಲಿ ನಂಬಿಕೆ ಇಟ್ಟಿರಲಿಲ್ಲ. ನಮ್ಮ ಅಹಿಂಸೆಯ ಯಶಸ್ವಿ ಬಳಕೆಯು ಭವಿಷ್ಯತ್ತಿಗೆ ಹೊಸ ಭರವಸೆಯನ್ನು ಮೂಡಿಸಿದೆ. ಅಹಿಂಸಾತ್ಮಕ ಹೋರಾಟದಲ್ಲಿ ಭಾಗವಹಿಸಲು ರೈತರ ಶಕ್ತಿಯ ಬಗ್ಗೆ ಅನೇಕರು ಅನುಮಾನ ವ್ಯಕ್ತಪಡಿಸಿದ್ದರು. ಭಾರಿ ಪ್ರಮಾಣದ ಹಿಂಸಾಚಾರ ಉಂಟಾಗುವುದೆಂದೂ ಸಹ ಅನೇಕರು ಭಯ ಪಟ್ಟಿದ್ದರು. ಆದರೆ, ಜನರ ಧೈರ್ಯ ಮತ್ತು ಹಿಂದೆ ಕೇಳಿಲ್ಲದ ತ್ಯಾಗದ ಮನೋಭಾವ ದಿಂದ ಆ ಅನುಮಾನಗಳು ಮತ್ತು ಭಯಗಳು ನಿರಾಧಾರ ಎಂಬುದನ್ನು ನಾವು ಸಾಬೀತು ಮಾಡಿದ್ದೇವೆ. ಅಹಿಂಸಾತ್ಮಕ ಹೋರಾಟದಲ್ಲಿ ಭಾಗವಹಿಸಲು ಹೆಂಗಸರು ಮತ್ತು ಮಕ್ಕಳಿಗೆ ಕರೆ ಕೊಡುವುದರ ಮೂಲಕ ಗಾಂಧೀಜಿಯವರು ತಮ್ಮ ಹೋರಾಟದ ವಿಶೇಷತೆಯನ್ನು ಪ್ರದರ್ಶಿಸಿದ್ದಾರೆ. .....ಅಹಿಂಸೆಯ ದೃಷ್ಟಿಯಿಂದ ನಮ್ಮದು ಪ್ರಪಂಚದಲ್ಲಿ ದೊಡ್ಡ ಹೋರಾಟ. ಅನೇಕ ರಾಷ್ಟ್ರಗಳವರು, ಮುಖ್ಯವಾಗಿ ಅಮೆರಿಕದವರು, ತಮ್ಮ ಅನುಕಂಪವನ್ನು ವ್ಯಕ್ತಪಡಿಸಿರುವುದು ಮತ್ತು ಉತ್ತೇಜನವನ್ನು ನೀಡಿರುವುದು ನಮಗೆ ಭಾರಿ ಸಮಾಧಾನದ ವಿಷಯವಾಗಿದೆ."[೪೬]

ಕರಾಚಿ ಅಧಿವೇಶನದ ಮುಖ್ಯ ವಿಷಯ 'ಗಾಂಧಿ – ಇರ್ವಿನ್ ಒಪ್ಪಂದ'ವನ್ನು ಒಪ್ಪುವುದಾಗಿತ್ತು. ಆದರೆ ಆ ಒಪ್ಪಂದ ತೃಪ್ತಿಕರವಾಗಿರಲಿಲ್ಲ. ವಿಶೇಷವಾಗಿ ಪೂರ್ಣ ಸ್ವಾತಂತ್ರ್ಯದ ಗುರಿ ಅದರಲ್ಲಿ ಇಲ್ಲದ್ದರಿಂದ ಮತ್ತು ಎರಡನೆ ದುಂಡು ಮೇಜಿನ ಪರಿಷತ್ತಿನಲ್ಲಿ ಭಾಗವಹಿಸಲು ಒಪ್ಪಿದ್ದರಿಂದ ಜವಹರ್‌ಲಾಲ್ ನೆಹರು ಮತ್ತು ಸುಭಾಷ್ ಚಂದ್ರ ಬೋಸ್‌ಗೆ ಆ ಒಪ್ಪಂದ ಒಪ್ಪಿಗೆ ಆಗಿರಲಿಲ್ಲ. ಆದಾಗ್ಯೂ ಗಾಂಧೀಜಿಯ ನಿರ್ಧಾರಗಳಲ್ಲಿ ಅವರಿಗೆ ಎಷ್ಟೊಂದು ನಂಬಿಕೆ ಇತ್ತೆಂದರೆ ಅವರೂ ಸಹ ಆ ಒಪ್ಪಂದಕ್ಕೆ ಬೆಂಬಲ ನೀಡಿದರು.[೪೭]

ಬಾರ್ಡೋಲಿ ಸತ್ಯಾಗ್ರಹ ಮತ್ತು ಉಪ್ಪಿನ ಸತ್ಯಾಗ್ರಹಗಳಲ್ಲಿ ಸರ್ಕಾರವು ವಶಪಡಿಸಿಕೊಂಡ ಜಮೀನುಗಳನ್ನು ರೈತರಿಗೆ ವಾಪಸ್ಸು ಕೊಡಿಸಲು ಗಾಂಧಿ – ಇರ್ವಿನ್ ಒಪ್ಪಂದವು ವಿಫಲವಾಗಿತ್ತು. ಗಾಂಧೀಜಿಯ ಹಲವು ತೀರ್ಮಾನಗಳಿಗೆ

ಪಟೇಲರ ತೀವ್ರ ವಿರೋಧವಿತ್ತು. ಆದರೂ ಅವರ ವಿಧೇಯ ಅನುಯಾಯಿಯಾಗಿ ಒಪ್ಪಿಕೊಳ್ಳುತ್ತಿದ್ದರು. ಅದರಿಂದ ಅವರು ಆ ಒಪ್ಪಂದವನ್ನು ಅಂಗೀಕರಿಸಬೇಕೆಂದು ಅಧಿವೇಶನದಲ್ಲಿದ್ದ ಪ್ರತಿನಿಧಿಗಳಿಗೆ ಮನವಿ ಮಾಡಿದರು. ಅವರೆಂದರು:

"ಕಾರ್ಯಕಾರಿ ಸಮಿತಿಯ ಸದಸ್ಯರು ನಿಮ್ಮ ನಂಬಿಕಸ್ಥ ಪ್ರತಿನಿಧಿಗಳು. ಅವರು ಒಪ್ಪಿಗೆಯನ್ನು ನೀಡಿರುವ ಒಪ್ಪಂದವನ್ನು ನೀವು ತಿರಸ್ಕರಿಸಬಾರದು. ಆದರೆ ನೀವು ಸಮಿತಿಯ ವಿರುದ್ಧ ನಿಮ್ಮ ಅವಿಶ್ವಾಸವನ್ನು ವ್ಯಕ್ತಪಡಿಸಬಹುದು ಮತ್ತು ಹೆಚ್ಚು ವಿಶ್ವಾಸಾರ್ಹ ಸಮಿತಿಯನ್ನು ತರಬಹುದು. ನಾವು ಒಪ್ಪಂದವನ್ನು ಒಪ್ಪದೆ ಹೋದರೆ, ಅದರ ವಿಫಲತೆಗೆ ನಾವು ಜವಾಬ್ದಾರರಾಗುತ್ತೇವೆ ಮತ್ತು ಕಳೆದ ವರ್ಷದ ಶ್ರಮವೆಲ್ಲ ವ್ಯರ್ಥವಾಗುತ್ತದೆ. ಸತ್ಯಾಗ್ರಹಿಗಳಾಗಿ ನಾವು ಯಾವಾಗಲೂ ರಾಜಿಗೆ ಸಿದ್ಧವಾಗಿರಬೇಕು ಮತ್ತು ರಾಜಿಗಾಗಿ ಕೆಲಸ ಮಾಡಲು ಉತ್ಸಾಹಿಗಳಾಗಿರಬೇಕು. ಆದದ್ದರಿಂದ, ಶಾಂತಿಯ ಬಾಗಿಲು ತೆರೆಯಲ್ಪಟ್ಟಿತು ಎಂದು ನಮಗೆ ಅನ್ನಿಸಿದಾಗ ಬ್ರಿಟಿಷ್ ಸರ್ಕಾರದ ಪರವಾಗಿ ಇರ್ವಿನ್‌ನೀಡಿದ ಆಶ್ವಾಸನೆಯನ್ನು ಮತ್ತು ದುಂಡು ಮೇಜಿನ ಪರಿಷತ್ತಿನಲ್ಲಿ ಸೃಷ್ಟಿಯಾದ ಭರವಸೆಯನ್ನು ನಾವು ಆರಿಸಿಕೊಂಡೆವು. (ಆಗ) ನಾವು ಹೀಗೆ ಹೇಳಿಕೊಂಡೆವು, 'ಒಂದನೆ ದುಂಡು ಮೇಜಿನ ಪರಿಷತ್ತಿನಲ್ಲಿ ಭಾಗವಹಿಸುತ್ತಿರುವ ನಮ್ಮ ಕಾಂಗ್ರೆಸ್ಸೇತರ ದೇಶ ಬಾಂಧವರು ಸಂಪೂರ್ಣ ಜವಾಬ್ದಾರಿ ಸರ್ಕಾರಕ್ಕಾಗಿ ಆಗ್ರಹಿಸಿದ್ದಾರೆ. ಬ್ರಿಟಿಷ್ ಪ್ರತಿನಿಧಿಗಳು ಅಂತಹ ಬೇಡಿಕೆಗೆ ಮಾನ್ಯತೆ ನೀಡದ್ದರಿಂದ ಪ್ರಧಾನಮಂತ್ರಿ, ವೈಸ್‌ರಾಯ್ ಮತ್ತು ದುಂಡು ಮೇಜಿನ ಪರಿಷತ್ತಿನಲ್ಲಿದ್ದ ನಮ್ಮ ಕೆಲವು ಪ್ರತಿನಿಧಿಗಳು ಕಾಂಗ್ರೆಸ್ಸಿನ ಬೆಂಬಲವನ್ನು ಕೋರಿದರು. ಇದರಿಂದ ಒಂದು ಗೌರವಾನ್ವಿತ ಒಪ್ಪಂದಕ್ಕೆ ಬರಲು ಮತ್ತು ಸಂಪೂರ್ಣ ಸ್ವಾತಂತ್ರ್ಯವನ್ನು ಪಡೆಯಲು ಸಾಧ್ಯ ಆಗುವುದಾದರೆ, ಕಾಂಗ್ರೆಸ್ಸು ದುಂಡು ಮೇಜಿನ ಪರಿಷತ್ತಿನಲ್ಲಿ ಭಾಗವಹಿಸುವ ಆಹ್ವಾನವನ್ನು ಒಪ್ಪಬೇಕು ಮತ್ತು ರಾಜ್ಯಾಂಗ ರಚನೆಯಲ್ಲಿ ಇತರ ಗುಂಪುಗಳಿಗೆ ಬೆಂಬಲ ನೀಡಬೇಕು ಎಂದು ಕಾಂಗ್ರೆಸ್ಸು ಆಲೋಚಿಸಿತು.

ಇಷ್ಟು ಹೇಳಿ ಪಟೇಲರು, "ನಾವು ಯಶಸ್ಸು ಗಳಿಸದೆ ಹೋದರೆ, ನಮ್ಮ ಈಗಿನ ಹೋರಾಟ ಮತ್ತು ತ್ಯಾಗದ ಮಾರ್ಗಕ್ಕೆ ಹಿಂತಿರುಗಲು ಯಾವ ಅಡ್ಡಿಯೂ

ಇಲ್ಲ," ಎಂದರು.[೪೮] ಗಾಂಧಿ – ಇರ್ವಿನ್ ಒಪ್ಪಂದವು ಬಹುಮತದಿಂದ ಅಂಗೀಕೃತವಾಯಿತು.

ಪಟೇಲರು ತಮ್ಮ ಭಾಷಣದಲ್ಲಿ 'ಸ್ವಾತಂತ್ರ್ಯಾನಂತರ ಇಂಡೋ – ಬ್ರಿಟಿಷ್ ಸಂಬಂಧ'ದ ಬಗ್ಗೆಯೂ ಪ್ರಸ್ತಾಪಿಸಿದರು. ಸ್ವಾತಂತ್ರ್ಯಾನಂತರ ಬ್ರಿಟಿಷರ ಸಂಬಂಧವನ್ನು ಪೂರ್ಣವಾಗಿ ಕಳಚಿಕೊಳ್ಳುವುದರಲ್ಲಿ ಗಾಂಧೀಜಿಗೆ ನಂಬಿಕೆ ಇರಲಿಲ್ಲ. ಆದರೆ ನೆಹರು ಮತ್ತು ಬೋಸ್ ಮುಂತಾದ ತೀವ್ರಗಾಮಿಗಳು ಗಾಂಧೀಜಿಯವರ ಅಭಿಪ್ರಾಯವನ್ನು ಒಪ್ಪಿರಲಿಲ್ಲ. ಈ ವಿಷಯದಲ್ಲಿ ಸರ್ದಾರರು ಗಾಂಧೀಜಿಗೆ ಪೂರ್ಣ ಬೆಂಬಲ ನೀಡಿ ಹೀಗೆಂದರು:

> "ಸುಮಾರು ೨೦೦ ವರ್ಷಗಳಿಂದ ಭಾರತದ ಸಂಪತ್ತು ಹೊರಕ್ಕೆ ಹರಿದು ಹೋಗಿರುವುದರಿಂದ, ಅನೇಕ ವಿಷಯಗಳಲ್ಲಿ ಹೊರಗಿನ ಸಹಾಯದ ಅವಶ್ಯಕತೆ ನಮಗೆ ಇರುತ್ತದೆ. ಅಂತಹ ಸಹಾಯವನ್ನು ಬ್ರಿಟಿಷರಿಂದ, ಅವರ ಉದ್ದೇಶ ಸ್ಪಷ್ಟ ವಾಗಿದ್ದರೆ ಮತ್ತು ನ್ಯಾಯವಾದದ್ದಾಗಿದ್ದರೆ, ಖಂಡಿತ ತೆಗೆದುಕೊಳ್ಳುತ್ತೇವೆ. ಉದಾಹರಣೆಗೆ, ಮಿಲಿಟರಿ ಜ್ಞಾನ ಹೊಂದಿರುವವರ ಸೇವೆ ನಮಗೆ ಬೇಕಾಗುತ್ತದೆ. ಅದರಿಂದ, ಬ್ರಿಟಿಷ್ ಅಧಿಕಾರಿಗಳನ್ನು ಅಥವಾ ಒಂದು ಸಣ್ಣ ಬ್ರಿಟಿಷ್ ಪಡೆಯನ್ನು ದೇಶದ ಅನುಕೂಲಕ್ಕಾಗಿ ಉಳಿಸಿಕೊಳ್ಳಬೇಕಾಗುತ್ತದೆ. ಆದರೆ ಸೈನ್ಯದ ಮೇಲಿನ ಹಿಡಿತ, ಅದರ ಸೇವೆಯಲ್ಲಿರುವವರು ಭಾರತೀಯರಾಗಿರಲಿ ಅಥವಾ ಬಿಳಿಯರಾಗಿರಲಿ, ನಮ್ಮ ಕೈಯಲ್ಲೇ ಇರಬೇಕಾಗುತ್ತದೆ..... ಅವರ ಸೇವೆಯನ್ನು ಕೃತಜ್ಞತೆಯಿಂದ ಒಪ್ಪಿಕೊಳ್ಳುತ್ತೇವೆ ಆದರೆ ಅವರ ನಾಯಕತ್ವವನ್ನು ಒಪ್ಪಿಕೊಳ್ಳುವುದಿಲ್ಲ.[೪೯]

ಲಾಹೋರ್ ಕಾಂಗ್ರೆಸ್‌ನಲ್ಲಿ ಅಂಗೀಕಾರವಾದ ಪೂರ್ಣ ಸ್ವಾತಂತ್ರ್ಯ ಠರಾವಿನ ಬಗೆಗೆ ಪಟೇಲರು ಹೀಗೆ ಹೇಳಿ ಉದ್ರೇಕಗೊಂಡಿದ್ದ ತರುಣರನ್ನು ಶಾಂತಗೊಳಿಸಿದರು:

> ನಾವು ನಮ್ಮ ನಿರ್ಧಾರದಿಂದ ಹೆಜ್ಜೆಗಳನ್ನು ಹಿಂದಕ್ಕೆ ಇಡುತ್ತಿಲ್ಲ. ಆದರೆ ಸಂಪೂರ್ಣ ಸ್ವಾತಂತ್ರ್ಯವೆಂದರೆ ಬ್ರಿಟನ್ ಒಡನೆ ಅಥವಾ ಬೇರೆ ಯಾವುದೇ ರಾಷ್ಟ್ರದೊಡನೆ ನಾವು ಯಾವ ಸಂಬಂಧವನ್ನೂ ಹೊಂದಿರುವುದಿಲ್ಲ ಎಂದು ಅರ್ಥವಲ್ಲ. ನಮ್ಮ ಪರಸ್ಪರ ಹಿತಾಸಕ್ತಿಗಾಗಿ ಬೇರೆ ದೇಶಗಳೊಡನೆಯ ಸಹಕಾರವನ್ನು

ನಿರೀಕ್ಷಿಸಬೇಕು. ಚರ್ಚೆ ಮತ್ತು ಒಪ್ಪಂದದ ಮೂಲಕ ಸ್ವಾತ್ರಂತ್ರ್ಯವನ್ನು ಪಡೆಯಬೇಕಾದರೆ ನಾವು ಬ್ರಿಟನ್ ಒಡನೆ ಸಂಬಂಧವನ್ನು ಇಟ್ಟುಕೊಳ್ಳಬೇಕು ಎಂಬುದನ್ನು ಒಪ್ಪುವುದು ಸರಿಯಾದುದು. ಅಂತಹ ಸಹಕಾರವನ್ನು ಪರಿಗಣಿಸುವುದಕ್ಕೆ ಮುನ್ನ ಮೊದಲು ನಮ್ಮ ಸಂಬಂಧವನ್ನು ಸಂಪೂರ್ಣವಾಗಿ ಕಡಿದುಕೊಳ್ಳಬೇಕು ಅನ್ನುವವರ ಒಂದು ಶಕ್ತಿಯುತ ವಿಭಾಗ ದೇಶದಲ್ಲಿ ಇದೆ ಎನ್ನುವುದು ನನಗೆ ಗೊತ್ತು. ನಾನು ಅವರ ಪರವಾಗಿ ಇಲ್ಲ, ಏಕೆಂದರೆ ಆ ತರಹದ ಆಲೋಚನೆಗಳು ದೌರ್ಬಲ್ಯ ಮತ್ತು ಅಪನಂಬಿಕೆಯಿಂದ ಪ್ರಭಾವಿತವಾಗಿರುತ್ತವೆ.[೫೦]

ತಮ್ಮ ಭಾಷಣದಲ್ಲಿ ಪಟೇಲರು 'ಒಕ್ಕೂಟ' ಮತ್ತು 'ಧಾರ್ಮಿಕ ಐಕ್ಯತೆ' ಬಗ್ಗೆಯೂ ಪ್ರಸ್ತಾಪಿಸಿದರು. ಒಕ್ಕೂಟದ ಬಗೆಗೆ ಹೀಗೆ ಹೇಳಿದರು:

'ಒಕ್ಕೂಟ'ವು ಸ್ವಾಗತಿಸಲ್ಪಡಬೇಕಾದ ಆಲೋಚನೆ. ಆದರೆ ಅದರಲ್ಲಿ ಅನೇಕ ಜಟಿಲತೆಗಳಿವೆ. ಅದಕ್ಕೆ ಸೇರುವ ರಾಜರು ಬ್ರಿಟನ್ ಜೊತೆ ತಮ್ಮ ಸಂಬಂಧವನ್ನು ಕಡಿದುಕೊಳ್ಳಲು ಒಪ್ಪುವುದಿಲ್ಲ. ಆದರೆ ಅವರು ಪೂರ್ಣ ಪ್ರಾಮಾಣಿಕತೆಯಿಂದ ಸೇರಿದರೆ ಪ್ರಸ್ತಾಪಿತ ಒಕ್ಕೂಟವು ಒಂದು ವಾಸ್ತವ ಲಾಭವಾಗುತ್ತದೆ. ಅವರ ಸೇರ್ಪಡೆಯು ಪ್ರಜಾಪ್ರಭುತ್ವದ ಕಡೆಗೆ ಇರುವ ನಮ್ಮ ನಡೆಗೆಗೆ ಯಾವ ರೀತಿಯಲ್ಲೂ ಅಡಚಣೆ ಆಗಬಾರದು. ನಮ್ಮ ಸ್ವಾತಂತ್ರ್ಯದ ಪರಿಕಲ್ಪನೆಗೆ ವಿರುದ್ಧವಾದ ಯಾವ ಪೂರ್ವ ಶರತ್ತುಗಳನ್ನು ರಾಜರು ಮುಂದಿಡುವುದಿಲ್ಲವೆಂದು ನಾನು ಆಶಿಸುತ್ತೇನೆ. ಇಂದಿನ ಕಾಲದೊಡನೆ ಹೆಜ್ಜೆ ಇಡುವ ಘೋಷಣೆ ಮಾಡುವಂತೆ ನಾವು ಅವರನ್ನು ಒತ್ತಾಯಿಸಬೇಕಾಗಿಲ್ಲ. ಆದಾಗ್ಯೂ, ಭಾರತದ ಉಳಿದ ಭಾಗಗಳಲ್ಲಿ ಜನರಿಗೆ ನೀಡಿರುವಂತಹ ಮೂಲಭೂತ ಹಕ್ಕುಗಳನ್ನು ಅವರು ತಮ್ಮ ಪ್ರಜೆಗಳಿಗೆ ನೀಡಬೇಕಾಗುತ್ತದೆ. ಒಕ್ಕೂಟದ ಎಲ್ಲ ಭಾಗದ ಜನರು ಅಂತಹ ಹಕ್ಕುಗಳನ್ನು ಸರ್ವಾನ್ವಯ ನ್ಯಾಯಾಲಯದಿಂದ ರಕ್ಷಿಸಲ್ಪಟ್ಟು ಅನುಭವಿಸಬೇಕು. ಒಕ್ಕೂಟದ ಶಾಸನ ಸಭೆಯಲ್ಲಿ ರಾಜ್ಯಗಳ ಪ್ರಜೆಗಳು ಪ್ರತಿನಿಧಿಸುವ ಹಕ್ಕನ್ನು ಹೊಂದಿರಬೇಕೆಂದು ಆಶಿಸುವುದು ಹೆಚ್ಚಲ್ಲ.

ಧಾರ್ಮಿಕ ಐಕ್ಯತೆಯ ಬಗೆಗೆ ಪಟೇಲರ ಮಾತುಗಳು ಇಂತಿದ್ದುವು:

"ಧಾರ್ಮಿಕ ಐಕ್ಯತೆಯು ಅತ್ಯಂತ ಮುಖ್ಯವಾದ ವಿಷಯ. ಅದರ ಕಡೆಗೆ ತನ್ನ ನಿಲುವನ್ನು ಕಾಂಗ್ರೆಸ್ಸು ಲಾಹೋರ್ ಅಧಿವೇಶನದಲ್ಲಿ ಅಪರಿಮಿತವಾಗಿ ಸ್ಪಷ್ಟಪಡಿಸಿದೆ. ನಮ್ಮ ಹಿಂದಿನ ಅಧ್ಯಕ್ಷರು ಸೂಚಿಸಿರುವ ನೀತಿಯನ್ನು ಒಬ್ಬ ಹಿಂದುವಾಗಿ ನಾನು ಒಪ್ಪುತ್ತೇನೆ. ಅದೇನೆಂದರೆ ಅಲ್ಪ ಸಂಖ್ಯಾತರಿಗೆ ಲೇಖನಿ, ಕಾಗದ ಮತ್ತು ಶಾಯಿಯನ್ನು ಕೊಟ್ಟು ಅವರ 'ಡಿಮಾಂಡು'ಗಳನ್ನು ಬರೆಯುವಂತೆ ಹೇಳುವುದು. ಆದರೆ ಈ ವಿಧಾನದಲ್ಲಿ ಕಾರ್ಯ ಎಸಗುವಾಗ ಭಾರಿ ಆತುರವಿದ್ದಂತೆ ಕಾಣುತ್ತದೆ. ಅದು ಒಂದು ಹತ್ತಿರದ ದಾರಿ ಇರಬಹುದು. ಅದಕ್ಕಾಗಿ ಹಿಂದುಗಳು ಭಾರಿ ಶೌರ್ಯ ಮತ್ತು ವಿಶಾಲ ಹೃದಯವನ್ನು ಹೊಂದಿರಬೇಕಾಗುತ್ತದೆ. ಆದರೆ ಅತ್ಯಂತ ಸಣ್ಣ ಒತ್ತಡಕ್ಕೇ ಒಡೆದುಹೋಗುವಂತಹ ಸೂಕ್ಷ್ಮವಾದ (ನಾಜೂಕಾದ) ಐಕಮತ್ಯವನ್ನು ಹೊಂದಬಾರದು. ನಮಗೆ ಆವಶ್ಯಕವಾದದ್ದು ಹೃದಯಗಳ ಐಕಮತ್ಯ.[೫೧]

ಅಧಿವೇಶನದ ಅಂತ್ಯದಲ್ಲಿ ಸಮಾರೋಪ ಭಾಷಣವನ್ನು ಮಾಡುತ್ತ ಸರ್ದಾರ್ ಪಟೇಲರು ಹೀಗೆ ನುಡಿದರು:

"ಈಗ ಗಾಂಧೀಜಿಯವರಿಗೆ ೬೩ ವರ್ಷ. ನನಗೆ ೫೬ ವರ್ಷ. ಸ್ವಾತಂತ್ರ್ಯಕ್ಕಾಗಿ ವೃದ್ಧರಾದ ನಾವು ಯುವಕರಾದ ನಿಮಗಿಂತ ಹೆಚ್ಚು ಕಾತುರರಾಗಿರಬೇಡವೆ? ಏಕೆಂದರೆ, ಸಾಯುವುದಕ್ಕೆ ಮುನ್ನ ಭಾರತದ ಸ್ವಾತಂತ್ರ್ಯವನ್ನು ನೋಡಲು ನಮಗೆ ಆಸಕ್ತಿಯಿದೆ. ನಿಮಗಿಂತ ಬಹಳ ಹೆಚ್ಚು ಕುತೂಹಲದಲ್ಲಿ ಮತ್ತು ಆತುರದಲ್ಲಿ ಇರುವವರು ನಾವು. ಕಾರ್ಮಿಕರು ಮತ್ತು ರೈತರ ಬಗೆಗೆ ನೀವು ಮಾತನಾಡುತ್ತೀರಿ. ಆದರೆ ನಾನು ರೈತರ ಸೇವೆಯಲ್ಲಿ ವೃದ್ಧನಾಗಿದ್ದೇನೆ. ರೈತರು ತಮ್ಮನ್ನು ಮತ್ತು ತಮ್ಮ ಆಸ್ತಿಯನ್ನು ತ್ಯಾಗಮಾಡುವಂತೆ ನಾನು ಪ್ರೇರೇಪಿಸಿರುವಷ್ಟು ನೀವು ಯಾರೂ ಮಾಡಲಾರಿರಿ. ನೀವೇಕೆ ಅನವಶ್ಯಕವಾಗಿ ತಳಮಳ ಗೊಳ್ಳುತ್ತಿದ್ದೀರಿ? ನೀವು ಶೀಘ್ರದಲ್ಲೇ ಮುದುಕರಾಗುವುದಿಲ್ಲ. ನಿಮ್ಮ ಶಕ್ತಿಯನ್ನು ವ್ಯರ್ಥವಾಗಲು ಬಿಡಬೇಡಿ. ನಿಮ್ಮ ಆಯುಧಗಳನ್ನು ಹರಿತ ಮತ್ತು ಹೊಳಪಾಗಿರುವಂತೆ ಇಡಿ. ನಿಮಗೆ ನಿಮ್ಮ ಮುಂದೆ

ಬೇಕಾದಷ್ಟು ಕೆಲಸಗಳು ಇವೆ – ಮದ್ಯಪಾನದ ನಿಷೇಧ, ಖಾದಿಯ ಬಳಕೆ, ಸ್ವಯಂ ಶುದ್ಧತೆಯ ಅಭ್ಯಾಸ ಇತ್ಯಾದಿ. ಈ ಎಲ್ಲಾ ಚಟುವಟಿಕೆಗಳು ಜನರಿಗೆ ಅಪಾರ ಶಕ್ತಿಯನ್ನು ಕೊಡುತ್ತವೆ."

ನಂತರ ಪಟೇಲರು ಹಿಂದಿನ ಅಧ್ಯಕ್ಷ ಜವಹರಲಾಲ್ ನೆಹರುರವರನ್ನು ಈ ರೀತಿ ಪ್ರಶಂಸಿಸಿದರು:

"ಪಂಡಿತ್ ಜವಹರಲಾಲ್‌ರವರು ಚಟುವಟಿಕೆಗಳ ಒಂದು ಕಾರ್ಯಕ್ರಮವನ್ನು ಮುಂದಿಟ್ಟಾಗ ಅನೇಕರು ಆಘಾತ ಪಡುತ್ತಾರೆ. ಅವರಿಗೇಕೆ ಜವಹರರ ಬಗೆಗೆ ಭಯ? ಅವರಿಗೆ (ನೆಹರುಗೆ) ಬಡವರ ಬಗೆಗೆ ಪ್ರೀತಿಯಲ್ಲದೆ ಬೇರೇನೂ ಇಲ್ಲ ಮತ್ತು ಯಾರ ಬಗೆಗೂ ದ್ವೇಷವಿಲ್ಲ."

ನಂತರ ಪಟೇಲರು ಜಮೀನ್ದಾರರ ಬಗ್ಗೆ ಮಾತನಾಡಿದರು:

"ನೀವು ನಿಮ್ಮ ಜಮೀನುಗಳನ್ನು ಕಳೆದುಕೊಳ್ಳುವಂತೆ ಜಮೀನ್ದಾರರು ಮಾಡುತ್ತಾರೆ ಎಂದು ಹೇಳಿ ಜನರನ್ನೇಕೆ ನಾವು ಹೆದರಿಸಬೇಕು? ಸ್ವತಃ ಜಮೀನ್ದಾರರು ಸಂಕಟಕ್ಕೆ ಈಡಾದವರು. ಸರ್ಕಾರದ ಒಬ್ಬನೇ ಒಬ್ಬ ಸಿಪಾಯಿ ಬೇಕಾದರೂ ಅವರನ್ನು ಹೆದರಿಸಬಹುದು. ಆದರೆ ಅವರ ಹೃದಯದಲ್ಲೂ ದೇವರು ವಾಸವಾಗಿದ್ದಾನೆ. ಅವರೂ ಸಹ ಅದನ್ನು ಅರಿಯುವಂತೆ ಮತ್ತು ಜನರ ಒಳಿತಿಗಾಗಿ ತಮ್ಮನ್ನು ತೊಡಗಿಸಿಕೊಳ್ಳುವಂತೆ ನಾವು ಕೆಲಸ ಮಾಡೋಣ."[೫೨]

ಕರಾಚಿ ಕಾಂಗ್ರೆಸ್ ಅನೇಕ ಗಮನಾರ್ಹ ಸಂಗತಿಗಳಿಗೆ ಎಡೆಮಾಡಿತು. ಮೊದಲನೆಯದು, ಗಡಿನಾಡು ಎಂದು ಪ್ರಸಿದ್ಧವಾದ ವಾಯುವ್ಯ ಸರಹದ್ದಿನ ಪ್ರಾಂತ್ಯದಿಂದ ಖಾನ್ ಅಬ್ದುಲ್ ಗಫ್ಫಾರ್ ಖಾನ್ ಮತ್ತು ಅವರ ನೆಚ್ಚಿನ ಅಹಿಂಸಾತ್ಮಕ ಹೋರಾಟಗಾರರಾದ ಖುದೈ ಖಿದ್ಮತ್‌ಗಾರರು ಅಧಿಕ ಸಂಖ್ಯೆಯಲ್ಲಿ ಬಂದಿದ್ದರು. ಅವರು ಕೆಂಪು ಸಮವಸ್ತ್ರ ಧರಿಸುತ್ತಿದ್ದುದರಿಂದ ಅವರನ್ನು ಕೆಂಪು ಅಂಗಿಯವರು ಎಂದು ಕರೆಯುತ್ತಿದ್ದರು. ಮುಂದೆ ಅವರು ಕಾಂಗ್ರೆಸ್ಸಿನ ಒಂದು ಅವಿಭಾಜ್ಯ ಅಂಗವಾದರು. ಅವರ ನಾಯಕ ಖಾನ್ ಅಬ್ದುಲ್ ಗಫ್ಫಾರ್ ಖಾನ್‌ರವರು 'ಗಡಿನಾಡಿನ ಗಾಂಧಿ' ಎಂದು ಪ್ರಸಿದ್ಧರಾದರು.

ಸರ್ದಾರ್ ಪಟೇಲರು ಅಧಿವೇಶನದ ಎಲ್ಲಾ ಕಾರ್ಯಕ್ರಮಗಳು ಹಿಂದಿಯಲ್ಲೇ

(ಸ್ವಾತಂತ್ರ್ಯ ನಂತರ ರಾಷ್ಟ್ರಭಾಷೆ ಆಗಬೇಕಾದ ಹಿಂದಿಯಲ್ಲೇ) ನಡೆಯಬೇಕೆಂದು ಒತ್ತಾಯಿಸಿದರು. ಇದು ಆ ಅಧಿವೇಶನದ ಎರಡನೆಯ ಗಮನಾರ್ಹ ಅಂಶ. ಇದು ೧೯೨೧ರ ಅಹಮದಾಬಾದ್ ಕಾಂಗ್ರೆಸ್ಸಿನಲ್ಲಿ, ಕಾಂಗ್ರೆಸನ್ನು ಭಾರತೀಕರಣ ಗೊಳಿಸಬೇಕೆಂದು ತೆಗೆದುಕೊಂಡಿದ್ದ ತೀರ್ಮಾನಕ್ಕೆ ಅನುಗುಣವಾಗಿತ್ತು.

ಮೂರನೆಯದಾಗಿ, ಲಾಹೋರ್ ಕಾಂಗ್ರೆಸ್‌ನಲ್ಲಿ ಯುವಕರದು ಮೇಲುಗೈ ಆಗಿತ್ತು. ಕರಾಚಿ ಕಾಂಗ್ರೆಸ್‌ನಲ್ಲಿ ಸರ್ದಾರ್ ಪಟೇಲರ ನಾಯಕತ್ವದಲ್ಲಿ ಹಳೆಯ ನಾಯಕರು ತಮ್ಮ ನಾಯಕತ್ವವನ್ನು ಪುನರ್ಸ್ಥಾಪಿಸಿದರು. ಹೀಗಾಗಿ ಕಾಂಗ್ರೆಸ್ಸಿನಲ್ಲಿ ಒಂದು ರೀತಿಯ ಸಮತೋಲನ ಏರ್ಪಟ್ಟಿತು ಎಂದು ಹೇಳಬಹುದು.

ನಾಲ್ಕನೆಯದಾಗಿ, ಆ ಅಧಿವೇಶನವು ಮೂಲಭೂತ ಹಕ್ಕುಗಳ ಒಂದು ಠರಾವನ್ನು ಅಂಗೀಕರಿಸಿತು. ಜವಹರಲಾಲ್ ನೆಹರು ತಯಾರಿಸಿದ್ದ ಅದರ ಕರಡು ಪ್ರತಿಗೆ ಗಾಂಧೀಜಿ ಅನೇಕ ಬದಲಾವಣೆಗಳನ್ನು ಸೂಚಿಸಿದ್ದರು. ಸ್ವಾತಂತ್ರ್ಯ ಬಂದ ಮೇಲೆ ಕೆಲವು ನಿರ್ದಿಷ್ಟ ಸುಧಾರಣೆಗಳಿಗೆ ಕಾಂಗ್ರೆಸ್ಸು ಬದ್ಧವಾಗುವಂತೆ ಮಾಡುವುದು ಆ ಠರಾವಿನ ಉದ್ದೇಶವಾಗಿತ್ತು. ಆ ಠರಾವು ವಾಕ್ ಸ್ವಾತಂತ್ರ್ಯ, ಧಾರ್ಮಿಕ ಸ್ವಾತಂತ್ರ್ಯ, ಆಲೋಚನಾ ಸ್ವಾತಂತ್ರ್ಯ, ಸಮಾನತೆ, ಜಾತ್ಯಾತೀತ ರಾಷ್ಟ್ರ, ಅಸ್ಪೃಶ್ಯತಾ ನಿವಾರಣೆ, ಪ್ರಮುಖ ಕೈಗಾರಿಕೆ ಮತ್ತು ಸೇವೆಗಳ ಮೇಲೆ ಸರ್ಕಾರದ ಹಿಡಿತ ಮೊದಲಾದ ಅಂಶಗಳನ್ನು ಒಳಗೊಂಡಿತ್ತು. ಅಧ್ಯಕ್ಷ ಪಟೇಲರು ಆ ಠರಾವಿನ ಕೆಲವು ಪದಗಳು ಅಸ್ಪಷ್ಟ ಎಂದು ಅಭಿಪ್ರಾಯ ಪಟ್ಟಿದ್ದರಿಂದ ಆ ಪದಗಳನ್ನು ಬದಲಾಯಿಸುವ ಅಧಿಕಾರವನ್ನು ಅಖಿಲ ಭಾರತ ಕಾಂಗ್ರೆಸ್ ಸಮಿತಿಗೆ ನೀಡಲಾಯಿತು.

ಕರಾಚಿಯಲ್ಲಿ ಪಟೇಲರು ಒಂದು ಹೊಸ ಸ್ಥಾನಮಾನವನ್ನು ಗಳಿಸಿದರು. ಕಾಂಗ್ರೆಸ್ಸಿನಲ್ಲಿ, ಗಾಂಧೀಜಿಯನ್ನು ಬಿಟ್ಟರೆ, ಅವರೇ ಅಧಿನಾಯಕರಾದರು. ಕರಾಚಿ ಅಧಿವೇಶನವನ್ನು ವೀಕ್ಷಿಸಿ ವರದಿ ಮಾಡಿದ ಅಮೆರಿಕದ ಪತ್ರಕರ್ತ ವಿಲಿಯಂ ಶಿರರ್, "ಕರಾಚಿಯಲ್ಲಿ ಒಬ್ಬ ವ್ಯಕ್ತಿ ಇದ್ದನು, ಪಶ್ಚಿಮ ರಾಷ್ಟ್ರಗಳಲ್ಲಿ ಪರಿಚಿತನಲ್ಲದ, ಆದರೆ ಇಂಡಿಯದಲ್ಲಿ ಬಲಿಷ್ಠನಾದ, ಹೆಸರಿಸಲ್ಪಡುವುದಕ್ಕೆ ಅರ್ಹನಾದ ವ್ಯಕ್ತಿ. ಗಾಂಧೀಜಿಯ ನಂತರ, ...ಅಧಿವೇಶನವನ್ನು ನಡೆಸಿದವರು ವಲ್ಲಭಭಾಯ್ ಪಟೇಲ್. ಗಾಂಧೀಜಿಯ ನಾಯಕತ್ವದಲ್ಲಿ ಕಾಂಗ್ರೆಸ್ಸನ್ನು ಬಲಿಷ್ಠ ರಾಷ್ಟ್ರೀಯ ರಾಜಕೀಯ ಪಕ್ಷವನ್ನಾಗಿ ಕಟ್ಟಿದ, ಬಕ್ಕ ತಲೆಯ, ವಾಲ್‌ರಸ್ ಮೀಸೆಯ, ಗಟ್ಟಿ ಮನಸ್ಸಿನ, ವ್ಯಾವಹಾರಿಕ ದೃಷ್ಟಿಯ ರೈತ – ವಕೀಲ ವಲ್ಲಭಭಾಯ್ ಪಟೇಲ್, ಭಾರತದಲ್ಲಿದ್ದ ಆ ಏಕಮಾತ್ರ ವ್ಯಕ್ತಿ. ಅವರು ಸಂಸ್ಥೆಯ 'ಬಾಸ್'.[೫೩]

೧೧.೪. ದುಂಡು ಮೇಜಿನ ಪರಿಷತ್ತು

ಕರಾಚಿ ಕಾಂಗ್ರೆಸ್‌ನಲ್ಲಿ ಗಾಂಧಿ – ಇರ್ವಿನ್ ಒಪ್ಪಂದಕ್ಕೆ ಒಪ್ಪಿಗೆ ಸಿಕ್ಕಿತು. ಆ ಒಪ್ಪಂದವನ್ನು ಚಾಚೂ ತಪ್ಪದೆ ಪಾಲಿಸಲು ಗಾಂಧೀಜಿ ನಿರ್ಧರಿಸಿದರು. ಆದರೆ ಆ ಒಪ್ಪಂದದ ಪಾಲನೆಗೆ ಬ್ರಿಟಿಷರಿಂದಲೇ ಅಡಚಣೆ ಉಂಟಾಗಿ ಗಾಂಧೀಜಿ ಮತ್ತು ಪಟೇಲರಿಗೆ ಭಾರಿ ನಿರಾಸೆ ಉಂಟಾಯಿತು.

ಗಾಂಧಿ – ಇರ್ವಿನ್ ಒಪ್ಪಂದವು ಗ್ಯಾರೆಟ್ ಮತ್ತು ಆಲ್‌ಫ್ರೆಡ್ ಮಾಸ್ಟರ್‌ನಂತಹ ಅನೇಕ ಅಧಿಕಾರಿಗಳಿಗೆ ಒಪ್ಪಿಗೆ ಆಗಿರಲಿಲ್ಲ. ಆ ಒಪ್ಪಂದವು ಗಾಂಧೀಜಿಗೆ ಹೆಚ್ಚಿನ ರಿಯಾಯಿತಿ ಅಥವಾ ಲಾಭವನ್ನು ನೀಡಿದೆಯೆಂದು ಅವರು ಕುದಿಯುತ್ತಿದ್ದರು. ಅಷ್ಟರಲ್ಲಿ ಅವರು ಆ ಒಪ್ಪಂದವನ್ನು ಮುರಿಯಲು ಅಥವಾ ಪಾಲಿಸದಿರಲು ಅನುಕೂಲವಾದ ಎರಡು ಸಂಗತಿಗಳು ನಡೆದುವು. ಮೊದಲನೆಯದಾಗಿ ೧೯೩೧ರಲ್ಲಿ ಇಂಗ್ಲೆಂಡ್‌ನಲ್ಲಿ ರಾಮ್ಸೆ ಮ್ಯಾಕ್ಡೊನಾಲ್ಡ್‌ನ ಲೇಬರ್ ಮಂತ್ರಿ ಮಂಡಲವು ಉರುಳಿ, ಮತ್ತೆ ಅವರ ನಾಯಕತ್ವದಲ್ಲೇ ಆದರೆ ಕನ್‌ಸರ್‌ವೇಟಿವ್ ಪಕ್ಷ ಮೇಲುಗೈ ಪಡೆದಿರುವ ಸಮ್ಮಿಶ್ರ ಸರ್ಕಾರವು ಅಧಿಕಾರಕ್ಕೆ ಬಂದಿತು. ಆ ಕನ್‌ಸರ್‌ವೇಟಿವ್ ಪಕ್ಷವು ಭಾರತೀಯರ ಹಿತಕ್ಕೆ ವಿರುದ್ಧವಾಗಿತ್ತು. ಎರಡನೆಯದಾಗಿ, ವೈಸ್‌ರಾಯ್ ಲಾರ್ಡ್ ಇರ್ವಿನ್ನನ್ನು ನಿರ್ಗಮಿಸಿ, ೧೯೩೧ರ ಏಪ್ರಿಲ್ ೧೮ರಂದು ಲಾರ್ಡ್ ವಿಲ್ಲಿಂಗ್‌ಡನ್ನನ್ನು ಹೊಸ ವೈಸ್‌ರಾಯ್ ಆಗಿ ಅಧಿಕಾರ ವಹಿಸಿಕೊಂಡನು. ಅದಕ್ಕೆ ಮುಂಚೆ ಅವನು ಬೊಂಬಾಯಿ ಮತ್ತು ಮದರಾಸ್ ಪ್ರಾಂತ್ಯಗಳಲ್ಲಿ ಗೌರ್ನರ್ ಆಗಿದ್ದನು. ಕಾಂಗ್ರೆಸ್ ಬಗೆಗೆ ಅವನ ಹಗೆತನ ಎಲ್ಲರಿಗೂ ತಿಳಿದ ವಿಷಯವಾಗಿತ್ತು. ಅವನು 'ಇರ್ವಿನ್ ಒಬ್ಬ ಸರಳ ವ್ಯಕ್ತಿಯಾಗಿದ್ದ. ಅವನು ಈ ಪಿತೂರಿಗಾರ ಬನಿಯ(ಗಾಂಧೀಜಿ)ನಿಂದ ವಂಚಿಸಲ್ಪಟ್ಟಿದ್ದ. ಅವನ ಅಭಿಪ್ರಾಯಗಳಿಗೆ ನಾನು ಸ್ವಲ್ಪವೂ ಗಮನ ಕೊಡುವುದಿಲ್ಲ' ಎಂದು ಹೇಳಿದ್ದ. ಅವನಿಗೆ ಗಾಂಧೀಜಿಯ ಬಗೆಗೆ ಅಪನಂಬಿಕೆ. ಅವನು, "ಈ ಕುಯುಕ್ತಿಯ ವ್ಯಕ್ತಿ ನನ್ನನ್ನು ತಪ್ಪಿನಲ್ಲಿ ಸಿಕ್ಕಿಸುವುದರಲ್ಲಿ ಯಾವಾಗಲೂ ಯಶಸ್ವಿಯಾಗುತ್ತಾನೆ" ಎಂದಿದ್ದನು.[೫೪] ಅಲ್ಲದೆ ಅಧಿಕಾರಕ್ಕೆ ಬಂದ ಆರು ವಾರಗಳಲ್ಲಿ ಕಾಂಗ್ರೆಸ್ಸನ್ನು ನಜ್ಜುಗುಜ್ಜು ಮಾಡುವುದಾಗಿ ಘೋಷಿಸಿದ್ದನು.

ವೃದ್ಧಿಯಾಗುತ್ತಿದ್ದ ಕಾಂಗ್ರೆಸ್ಸಿನ ಜನಪ್ರಿಯತೆ ಮತ್ತು ಶಕ್ತಿಯನ್ನು ಕಂಡು ದಿಗಿಲು ಬಿದ್ದಿದ್ದ ಭಾರತದಲ್ಲಿದ್ದ ಬ್ರಿಟಿಷ್ ಅಧಿಕಾರಿಗಳಿಗೆ ಈ ಬದಲಾವಣೆಗಳಿಂದ ಖುಷಿಯಾಯಿತು. ಅವರು ಗಾಂಧಿ – ಇರ್ವಿನ್ ಒಪ್ಪಂದವನ್ನು ಮುರಿಯಲು ಸಾಧ್ಯವಾದುದನ್ನೆಲ್ಲಾ ಮಾಡಲು ತೊಡಗಿದರು.

ಕರಾಚಿ ಕಾಂಗ್ರೆಸ್ಸಿನ ನಂತರ ಗಾಂಧೀಜಿ ಮತ್ತು ಪಟೇಲ್ ಗುಜರಾತಿಗೆ ಹಿಂತಿರುಗಿದರು. ಅವರು ಹಿಂತಿರುಗುವ ಹೊತ್ತಿಗೆ ಅಧಿಕಾರಿಗಳು ರೈತರಿಂದ ಕಂದಾಯವನ್ನು ವಸೂಲಿ ಮಾಡಲು ತಮ್ಮೆಲ್ಲ ಅಧಿಕಾರವನ್ನು ಬಳಸಲು ಆರಂಭಿಸಿದ್ದರು ಮತ್ತು 'ಪೊಲೀಸ್ ರಾಜ್ಯ'ವನ್ನು ಜನರ ಮೇಲೆ ಹೇರಿದ್ದರು. ಜನರು ಭಯಭೀತರಾಗಿದ್ದರು. ಅವರು ಸರ್ಕಾರದ ಮೇಲೆ ಪ್ರತಿರೋಧವನ್ನು ವ್ಯಕ್ತಪಡಿಸುವ ಹಾಗಿರಲಿಲ್ಲ. ಏಕೆಂದರೆ ಗಾಂಧೀಜಿ ಅದನ್ನು ನಿಷೇಧಿಸಿದ್ದರು. ಗಾಂಧೀಜಿ, "ಸ್ಥಳೀಯ ಅಧಿಕಾರಿಗಳು ಏನೇ ಮಾಡಿದರೂ ಒಪ್ಪಂದದ ಷರತ್ತುಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದು ನಮ್ಮ ಜವಾಬ್ದಾರಿ" ಎಂದು ಸೂಚಿಸಿದ್ದರು. ಸರ್ದಾರರು ನಿಸ್ಸಹಾಯಕರಾಗಿ, ರೈತರಿಗೆ ಏನೂ ಸಹಾಯ ಮಾಡಲು ಸಾಧ್ಯವಿಲ್ಲವಾಗಿತ್ತು. ಅಷ್ಟು ಹೊತ್ತಿಗೆ ಗಾಂಧೀಜಿಯವರು ವೈಸ್‌ರಾಯ್ ವಿಲ್ಲಿಂಗ್‌ಡನ್‌ನ ಭೇಟಿಗಾಗಿ ಸಿಮ್ಲಾಕ್ಕೆ ಹೋಗಿದ್ದರು. ಪಟೇಲರು ಗಾಂಧೀಜಿಗೆ ಎರಡು ಟೆಲಿಗ್ರಾಂ ಕಳುಹಿಸಿದರು. 'ಕಂದಾಯದ ಬಲಾತ್ಕಾರ ವಸೂಲಿಗಾಗಿ ಪೊಲೀಸರ ಧಾಳಿ ಹೆಚ್ಚಾಗುತ್ತಿದೆ. ರೈತರು ಅತ್ತ ಸಾಗರ ಇತ್ತ ಪಿಶಾಚಿಯ ನಡುವೆ ಸಿಕ್ಕಿ ನರಳುತ್ತಿದ್ದಾರೆ. ಒಂದಲ್ಲ ಒಂದು ರೀತಿಯ ಪರಿಹಾರ ಅನಿವಾರ್ಯ' ಎಂದು ಮೊದಲನೆಯ ಟೆಲಿಗ್ರಾಂನಲ್ಲಿ ಹೇಳಿದ್ದರು. ಮುಂದಿನ ಟೆಲಿಗ್ರಾಂನಲ್ಲಿ 'ಪೊಲೀಸರ ಕಿರುಕುಳ ಸಹಿಸಲ ಸಾಧ್ಯವಾಗುತ್ತಿದೆ. ಗಂಡಸರು ಮತ್ತು ಹೆಂಗಸರು ಕೊಳಕು ಬೈಗುಳಗಳನ್ನು ಕೇಳಬೇಕಾಗಿದೆ ಮತ್ತು ಹಿಂಸೆಯನ್ನು ಅನುಭವಿಸಬೇಕಾಗಿದೆ. ಇದನ್ನು ನಿಲ್ಲಿಸಲು ಸಾಧ್ಯವಿಲ್ಲವಾದರೆ, ಹೋರಾಡಲು ಅನುಮತಿ ಕೊಡಿ,' ಎಂದು ಕೇಳಿದ್ದರು. ವೈಯುಕ್ತಿಕವಾಗಿ ಪರಿಶೀಲಿಸಲು ಗಾಂಧೀಜಿ ಜುಲೈ ೨೪ರಂದು ಬಾರ್ಡೋಲಿಗೆ ಹಿಂತಿರುಗಿದರು. ಒಪ್ಪಂದವು ಅಧಿಕಾರಿಗಳ ಕಡೆಯಿಂದ ಮುರಿಯಲ್ಪಟ್ಟಿರುವುದು ಅವರಿಗೆ ಅರಿವಾಯಿತು. ಆದರೆ, ಅದನ್ನು ಬೊಂಬಾಯಿ ಸರ್ಕಾರವು ಒಪ್ಪಲಿಲ್ಲ ಮತ್ತು 'ಕಾಂಗ್ರೆಸ್ಸು ಈ ವಿಷಯಗಳಲ್ಲಿ ತಲೆ ಹಾಕಬಾರದು' ಎಂದಿತು. ಅದೇ ತರಹದ ದಬ್ಬಾಳಿಕೆ ಸಂಯುಕ್ತ ಪ್ರಾಂತ್ಯದಲ್ಲೂ ನಡೆಯಿತು. ಅಲ್ಲಿ ಬರ ಎರಗಿದ್ದರ ಫಲವಾಗಿ ರೈತರು ಕಂದಾಯ ಪಾವತಿಸಲು ಅಶಕ್ತರಾಗಿ ಪಾವತಿಸಿರಲಿಲ್ಲ. ಆದರೆ ಸರ್ಕಾರವು 'ಸಿವಿಲ್ ಶಾಸನ ಭಂಗ ಚಳವಳಿ'ಯ ಅಂಗವಾಗಿ ರೈತರು ಕಂದಾಯವನ್ನು ಪಾವತಿಸುತ್ತಾ ಇಲ್ಲ ಎಂದು ಭಾವಿಸಿ, ರೈತರಿಂದ ಕಂದಾಯವನ್ನು ಬಲತ್ಕಾರವಾಗಿ ವಸೂಲಿ ಮಾಡಲು ಕ್ರಮ ತೆಗೆದುಕೊಳ್ಳುತ್ತಿತ್ತು.

ಗಾಂಧಿ – ಇರ್ವಿನ್ ಒಪ್ಪಂದವು ಹೆಂಡದಂಗಡಿಗಳ ಮುಂದೆ ಶಾಂತಿಯುತವಾಗಿ ಪಿಕೆಟಿಂಗ್ ಮಾಡುವ ಮತ್ತು ಜನರು ಸ್ವಂತ ಉಪಯೋಗಕ್ಕೆ ಕರ ನೀಡದೆ ಉಪ್ಪು ತಯಾರಿಸುವ ಹಕ್ಕನ್ನು ನೀಡಿತ್ತು. ಆದರೆ ಪ್ರಾಂತೀಯ

ಸರ್ಕಾರಗಳು ಈ ಹಕ್ಕನ್ನು ನಿರಾಕರಿಸಿ ಒಪ್ಪಂದವನ್ನು ಮುರಿದುವು. ಇದೇ ಕತೆ ಮದ್ರಾಸ್ ಪ್ರಾಂತ್ಯದಲ್ಲೂ ನಡೆಯಿತು.

ಪ್ರಾಂತ್ಯ ಸರ್ಕಾರಗಳು ಈ ದಬ್ಬಾಳಿಕೆಯನ್ನು ನಿಲ್ಲಿಸುವಂತೆ ಮಾಡಲು ವೈಸ್‌ರಾಯ್‌ರವರ ಸಹಾಯವನ್ನು ಗಾಂಧೀಜಿ ಕೋರಿದರು. ಆದರೆ ವೈಸ್‌ರಾಯ್ ಬೊಂಬಾಯಿ ಮತ್ತು ಸಂಯುಕ್ತ ಪ್ರಾಂತ್ಯ ಸರ್ಕಾರಗಳ ಕಾರ್ಯಾಚರಣೆಗೇ ಬೆಂಬಲ ನೀಡಿದನು. ಇದರಿಂದ ಬೇಸರಗೊಂಡ ಗಾಂಧೀಜಿ ಆಗಸ್ಟ್ ೧೩ರಂದು ವೈಸ್‌ರಾಯ್‌ಗೆ ಪತ್ರ ಬರೆದು, ದುಂಡು ಮೇಜಿನ ಪರಿಷತ್ತಿನಲ್ಲಿ ಭಾಗವಹಿಸಲು ತಾವು ಲಂಡನ್‌ಗೆ ಹೋಗುವುದಿಲ್ಲವೆಂದು ತಿಳಿಸಿದರು. ಆದರೆ ವೈಸ್‌ರಾಯ್‌ನು, ದುಂಡು ಮೇಜಿನ ಪರಿಷತ್ತಿನಲ್ಲಿ ಕಾಂಗ್ರೆಸ್ ಭಾಗವಹಿಸದೇ ಹೋದರೆ ಅದು ಒಪ್ಪಂದದ ಉಲ್ಲಂಘನೆಯಾಗುವುದೆಂದೂ, ಆಗ ಆವಶ್ಯಕ ಅನ್ನಿಸಿದ ಕ್ರಮ ತೆಗೆದುಕೊಳ್ಳಲು ಸರ್ಕಾರಕ್ಕೆ ಹಕ್ಕು ಇರುವುದೆಂದು ತಿಳಿಸಿದನು. ವೈಸ್‌ರಾಯ್‌ನು ಮನಸ್ಸನ್ನು ಬದಲಾಯಿಸುವಂತೆ ಮಾಡಬಹುದೆಂದು ಆಶಿಸಿದ ಗಾಂಧೀಜಿಯವರು ಸಿಮ್ಲಾಕ್ಕೆ ಹೋಗಿ ಅವರನ್ನು ಭೇಟಿ ಮಾಡಿದರು. ಅದರ ಫಲವಾಗಿ, ಬಾರ್ಡೋಲಿಯ ರೈತರ ಮೇಲಿನ ದೌರ್ಜನ್ಯಗಳ ದೂರುಗಳ ವಿಚಾರಣೆಗೆ ಒಬ್ಬ ಅಧಿಕಾರಿಯನ್ನು ವೈಸ್‌ರಾಯ್‌ನು ನಿಯಮಿಸಿದನು. ಆ ಕ್ರಮದಿಂದ ಅಲ್ಪಮಟ್ಟಿಗೆ ಸಮಾಧಾನಗೊಂಡ ಗಾಂಧೀಜಿ ಲಂಡನ್‌ಗೆ ಹೋಗಲು ಒಪ್ಪಿದರು. ಪಟೇಲ್, ನೆಹರು ಮತ್ತು ಗಫ್ಫಾರ್‌ಖಾನ್ ಸಹ ಲಂಡನ್‌ಗೆ ಹೋಗುವಂತೆ ಗಾಂಧೀಜಿಯನ್ನು ಒತ್ತಾಯಿಸಿದರು. ಗಾಂಧೀಜಿಯವರು ಆಗಸ್ಟ್ ೨೯ರಂದು ಹಡಗಿನಲ್ಲಿ ಲಂಡನ್‌ಗೆ ಹೊರಟರು.[೫೫]

ಲಂಡನ್‌ನಲ್ಲಿ ೧೯೩೧ರ ಸೆಪ್ಟೆಂಬರ್ ೭ರಿಂದ ಡಿಸೆಂಬರ್ ೧ರ ವರೆಗೆ ನಡೆದ ಎರಡನೆ ದುಂಡು ಮೇಜಿನ ಪರಿಷತ್ತು, ನಿರೀಕ್ಷಿಸಿದ್ದಂತೆ ವಿಫಲವಾಯಿತು. ಗಾಂಧೀಜಿಯವರು ಆ ಪರಿಷತ್ತಿನ ಬಗೆಗೆ ಕರಾಚಿ ಕಾಂಗ್ರೆಸ್ ಅಧಿವೇಶನದಲ್ಲಿ ಈ ರೀತಿ ಹೇಳಿದ್ದರು:

> "ದುಂಡು ಮೇಜಿನ ಪರಿಷತ್ತಿನಲ್ಲಿ ಭಾಗವಹಿಸುವುದರಿಂದ ನಾವು ಸಂಪೂರ್ಣ ಸ್ವಾತಂತ್ರ್ಯವನ್ನು ಗಳಿಸುತ್ತೇವೆ – ಅನ್ನುವ ಭ್ರಮೆ ನನಗಿಲ್ಲ. ನನಗೂ ಸಹ ನನ್ನದೇ ಆದ ಅನುಮಾನಗಳಿವೆ. ಅದರಲ್ಲಿ ಭಾಗವಹಿಸುವುದರಿಂದ ನಾವು ಏನು ಗಳಿಸಲು ಶಕ್ತರಾಗುತ್ತೇವೆ ಎಂದು ಆಗಾಗ್ಗೆ ಚಿಂತಿಸಿದ್ದೇನೆ.

ಆದರೆ..... ಸಂವಾದದ ಮೂಲಕ ನಮ್ಮ ವಿರೋಧಿಗಳಿಗೆ ಮನವರಿಕೆ ಮಾಡುವ ಅವಕಾಶ ಯಾವುದೇ ಸತ್ಯಾಗ್ರಹದಲ್ಲಿ ದೊರೆತರೆ ಆ ಅವಕಾಶವನ್ನು ಉಪಯೋಗಿಸಿಕೊಳ್ಳಲೇಬೇಕಾದ್ದು ಅತ್ಯವಶ್ಯಕ."[೫೬]

ಬ್ರಿಟಿಷ್ ಪತ್ರಿಕಾ ವಲಯವು ಗಾಂಧೀಜಿಯನ್ನು ಹಿಂದೂಗಳ ನಾಯಕನಂತೆ ಮತ್ತು ಕಾಂಗ್ರೆಸ್ಸನ್ನು ಭಾರತದ ಅನೇಕ ಒಳಗುಂಪುಗಳ ಪೈಕಿ ಒಂದು ಎಂಬಂತೆ ಬಿಂಬಿಸಿತು. ದುಂಡು ಮೇಜಿನ ಪರಿಷತ್ತಿನಲ್ಲಿ ಭಾಗವಹಿಸಲು ಅವಕಾಶ ಪಡೆದಿದ್ದ ಮುಸ್ಲಿಮರು ಮುಸ್ಲಿಮರ ಪರವಾಗಿ ಗಾಂಧೀಜಿ ಮಾತನಾಡುವ ಹಾಗಿಲ್ಲ ಎಂದರು. ಅಸ್ಪೃಶ್ಯರ ನಾಯಕ ಅಂಬೇಡ್ಕರ್ ಸಹ ಗಾಂಧೀಜಿಯವರು ಅಸ್ಪೃಶ್ಯರ ಪ್ರತಿನಿಧಿ ಅಲ್ಲ – ಎಂದರು. ಅವರು ಅಸ್ಪೃಶ್ಯರಿಗೆ ಪ್ರತ್ಯೇಕ ಮತದಾನ ಕ್ಷೇತ್ರವನ್ನು ನೀಡ ಬೇಕೆಂದು ಕೋರಿದರು. ಆ ಬೇಡಿಕೆ ಬ್ರಿಟಿಷ್ ಕಿವಿಗಳಿಗೆ ಆಪ್ಯಾಯಮಾನವಾಗಿತ್ತು. ಗಾಂಧೀಜಿಯವರು ಅದನ್ನು (ಅಸ್ಪೃಶ್ಯರಿಗೆ ಪ್ರತ್ಯೇಕ ಎಲೆಕ್ಟೊರೇಟನ್ನು) ತಮ್ಮ ಪ್ರಾಣ ಕೊಟ್ಟಾದರೂ ವಿರೋಧಿಸುವುದಾಗಿ ಹೇಳಿದರು.[೫೭]

ಬ್ರಿಟನ್‌ನಲ್ಲಿ ಅಧಿಕಾರಕ್ಕೆ ಬಂದಿದ್ದ ಕನ್‌ಸರ್‌ವೇಟಿವ್ ಪಕ್ಷವು ಗಾಂಧಿ – ಇರ್ವಿನ್ ಒಪ್ಪಂದವನ್ನು ನಿರ್ಲಕ್ಷಿಸಿತು. ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ಇಂಡಿಯಾ ಆಗಿದ್ದ ಸರ್ ಸಾಮ್ಯೂಯಲ್ ಹೋರ್ ಗಾಂಧೀಜಿಗೆ ಹೇಳಿದನು, "ಕಾಂಗ್ರೆಸ್ಸನ್ನು ಜೆಜ್ಜೆ ಹಾಕಲು ನಾವು ಸಿದ್ಧರಾಗುತ್ತೇವೆ. ನೀವು ಅದಕ್ಕೆ ಸಿದ್ಧವಾಗಿ. ಕಾಂಗ್ರೆಸ್ಸು ಕ್ರಾಂತಿಗೆ ಮತ್ತೊಂದು ಸಮಾನಾರ್ಥಕ ಪದ ಎನ್ನುವುದನ್ನು ನಿಮ್ಮ ಮಾತಿನಿಂದ ಅರಿತಿದ್ದೇವೆ."[೫೮]

ಭ್ರಮ ನಿರಸನರಾದ ಗಾಂಧೀಜಿ ಭಾರತಕ್ಕೆ ಪಿಲ್‌ಸ್ನ ಹಡಗಿನಲ್ಲಿ ಹೊರಟು ಬೊಂಬಾಯಿ ನಗರವನ್ನು ೧೯೩೧ರ ಡಿಸೆಂಬರ್ ೨೮ರಂದು ತಲುಪಿದರು. ಅವರು ಬರುವ ಹೊತ್ತಿಗೆ ಸರ್ಕಾರವು ಕಾಂಗ್ರೆಸ್ಸಿನ ಪ್ರಮುಖ ನಾಯಕರನ್ನೆಲ್ಲ ದಸ್ತಗಿರಿ ಮಾಡಿ ಸೆರೆಮನೆಯಲ್ಲಿ ಕೂಡಿಹಾಕಿತ್ತು. ಆದರೆ, ಪಟೇಲರ ದಸ್ತಗಿರಿ ಆಗಿರಲಿಲ್ಲ. ಅದಕ್ಕೆ ಕಾರಣ ಬಹುಶಃ ಅವರು, ಸರ್ಕಾರದ ದಬ್ಬಾಳಿಕೆಯ ನಡುವೆಯೂ, ಗಾಂಧಿ – ಇರ್ವಿನ್ ಒಪ್ಪಂದವನ್ನು ಪಾಲಿಸುವಂತೆ ಮತ್ತು ಅಹಿಂಸೆಯನ್ನು ಆಚರಿಸುವಂತೆ ರೈತರಿಗೆ ಬೋಧಿಸುತ್ತಿದ್ದುದು ಇರಬಹುದು. ಗಾಂಧೀಜಿಯನ್ನು ಸ್ವಾಗತಿಸಲು ಬೊಂಬಾಯಿ ಬಂದರಿಗೆ ಪಟೇಲ್ ಮತ್ತು ಕಸ್ತೂರ್‌ಬಾ ಗಾಂಧಿ ಹೋಗಿದ್ದರು.

ತಾವು ಇಲ್ಲದಿದ್ದಾಗ ಸರ್ಕಾರ ಕೈಗೊಂಡ ದಮನಕಾರಿ ಕ್ರಮಗಳಿಗೆ ಪ್ರತಿಭಟಿಸಿ, ಗಾಂಧೀಜಿಯವರು ವೈಸ್‌ರಾಯ್‌ಗೆ ಪತ್ರ ಬರೆದರು. ವೈಸ್‌ರಾಯ್‌ನು, ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡಲು ಮತ್ತು ಒಳ್ಳೆಯ ಸರ್ಕಾರವನ್ನು ನಡೆಸಲು ಅವು ಅತ್ಯವಶ್ಯಕ ಎಂದು ಉತ್ತರಿಸಿದನು.

ಎರಡು ದಿನಗಳ ನಂತರ ೧೯೩೨ರ ಜನವರಿ ೪ರಂದು ಸರ್ಕಾರವು ಗಾಂಧೀಜಿ ಮತ್ತು ಪಟೇಲರನ್ನು ಬೊಂಬಾಯಿಯಲ್ಲಿ ದಸ್ತಗಿರಿ ಮಾಡಿ, ಯರವಾಡ ಸೆರೆಮನೆಯಲ್ಲಿ ಇಟ್ಟಿತು. ಜೊತೆಗೆ ಸುಗ್ರೀವಾಜ್ಞೆಗಳನ್ನು ಹೊರಡಿಸಿ, ಸಾರ್ವಜನಿಕ ಸಭೆಗಳನ್ನು ಮತ್ತು ಮೆರವಣಿಗೆಗಳನ್ನು ಬಹಿಷ್ಕರಿಸಿತು ಮತ್ತು ಕಾಂಗ್ರೆಸ್ ಕಛೇರಿಗಳ ಮತ್ತು ಆಶ್ರಮಗಳ ಮೇಲೆ ಧಾಳಿ ಮಾಡಿ, ಮೊಹರು ಹಾಕಿ ಮುಚ್ಚಿತು.[೫೯]

೧೧.೫. ಸೆರೆಮನೆಯಲ್ಲಿ ಗಾಂಧೀಜಿಯ ಜೊತೆ

ಯರವಾಡ ಸೆರೆಮನೆಯಲ್ಲಿ ಗಾಂಧೀಜಿ ಮತ್ತು ಪಟೇಲ್‌ರವರು ಜನವರಿ ೪, ೧೯೩೨ರಿಂದ ಮೇ ೮, ೧೯೩೩ರ ವರೆಗೆ ೧೬ ತಿಂಗಳುಗಳ ಕಾಲ ಒಟ್ಟಿಗೇ ಇದ್ದರು. ಅದೇ ಪ್ರಥಮ ಮತ್ತು ಕೊನೆ ಅವರಿಬ್ಬರು ಅಷ್ಟು ದೀರ್ಘಕಾಲ ಒಟ್ಟಿಗೇ ಇದ್ದದ್ದು. ಸ್ವಲ್ಪ ದಿನಗಳ ನಂತರ ಗಾಂಧೀಜಿಯವರ ಕಾರ್ಯದರ್ಶಿ ಮಹದೇವ್ ದೇಸಾಯಿಯವರನ್ನೂ ಸಹ ಪೊಲೀಸರು ಅದೇ ಸೆರೆಮನೆಗೆ ತಂದಿಟ್ಟರು. ದೇಸಾಯಿಯವರು ಬರೆದಿರುವ ದಿನಚರಿಯಿಂದ ಯರವಾಡ ಸೆರೆಮನೆಯಲ್ಲಿನ ಗಾಂಧೀಜಿ ಮತ್ತು ಪಟೇಲರ ಜೀವನದ ಬಗೆಗೆ ಅನೇಕ ಸಂಗತಿಗಳು ತಿಳಿಯುತ್ತವೆ.

ಪಟೇಲರಿಗೆ ಗಾಂಧೀಜಿಯ ಬಗೆಗೆ ಅಪಾರ ಪ್ರೇಮ, ಭಕ್ತಿ, ನಿಷ್ಠೆ ಮತ್ತು ವಿಧೇಯತೆ ಇತ್ತು. ಅದರಿಂದ ಅವರು ಸೆರೆಮನೆಯಲ್ಲಿ ಗಾಂಧೀಜಿಯವರ ಎಲ್ಲಾ ಆವಶ್ಯಕತೆಗಳನ್ನು, ಒಬ್ಬ ತಾಯಿ ತನ್ನ ಮಗುವನ್ನು ಜತನದಿಂದ ನೋಡಿಕೊಳ್ಳುವಂತೆ, ಎಚ್ಚರಿಕೆಯಿಂದ ನೋಡಿಕೊಳ್ಳುತ್ತಿದ್ದರು. ಗಾಂಧೀಜಿ ಹಲ್ಲು ಉಜ್ಜಲು ಬೇವಿನ ಕಡ್ಡಿಯನ್ನು ಸಿದ್ಧ ಪಡಿಸುವುದು, ಕುಡಿಯಲು ಸೋಡಾ ಪಾನೀಯ ಮತ್ತು ನಿಂಬೆ ರಸ ಹಿಂಡಿದ ಉಗುರು ಬೆಚ್ಚಗಿನ ಬಿಸಿನೀರು ಸಿದ್ಧಪಡಿಸುವುದು, ಊಟಕ್ಕೆ ಜೇನುತುಪ್ಪ ಮತ್ತು ಬಾದಾಮಿಗಳನ್ನು ಸಿದ್ಧಪಡಿಸುವುದು, ಅವರಿಗೆ ಸಮಾಚಾರ ಪತ್ರಿಕೆ ಓದುವುದು, ಅವರ ಬಾಯಲ್ಲಿ ಹೇಳುವ ಪತ್ರಗಳನ್ನು ಬರೆದುಕೊಳ್ಳುವುದು ಮುಂತಾದ ಕಾರ್ಯಗಳನ್ನು ಪಟೇಲರು ಆಸ್ಥೆಯಿಂದ ಮಾಡುತ್ತಿದ್ದರು. ಅಷ್ಟೇ ಅಲ್ಲದೆ ದಿನವಿಡೀ ಹಾಸ್ಯ ಚಟಾಕಿಗಳನ್ನು ಹಾರಿಸುತ್ತಿದ್ದರು ಮತ್ತು ಗಾಂಧೀಜಿಯವರ ಅನೇಕ ಖಯಾಲಿಗಳನ್ನು ಮತ್ತು ತಾರ್ಕಿಕವಲ್ಲದ ರಾಜಕೀಯ ಅಭಿಪ್ರಾಯಗಳನ್ನು

ಗೇಲಿ ಮಾಡುತ್ತಿದ್ದರು. ಆ ಗೇಲಿಯ ಹಿಂದೆ ಅಪಹಾಸ್ಯವಿರುತ್ತಿರಲಿಲ್ಲ, ಅನುರಾಗ ಪೂರ್ಣ ಹೃದಯವಿರುತ್ತಿತ್ತು, ಮಾತೃ ಹೃದಯವಿರುತ್ತಿತ್ತು. ಅವರ ಹಾಸ್ಯ ಮತ್ತು ಗೇಲಿಯನ್ನು ಗಾಂಧೀಜಿ ತೆರೆದ ಹೃದಯದಿಂದ ಸ್ವೀಕರಿಸುತ್ತಿದ್ದರು ಮತ್ತು ಅವನ್ನು ಸವಿಯುತ್ತಿದ್ದರು. ಗಾಂಧೀಜಿಯವರ ಆರೋಗ್ಯವನ್ನು ವಿಚಾರಿಸಿ ಬರೆದ ರೈಟ್ ಆನರಬಲ್ ವಿ.ಎಸ್. ಶ್ರೀನಿವಾಸ ಶಾಸ್ತ್ರಿಯವರ ಪತ್ರಕ್ಕೆ ಗಾಂಧೀಜಿಯವರು ಈ ರೀತಿ ಉತ್ತರಿಸಿದರು, "ಸರ್ದಾರ್ ವಲ್ಲಭಭಾಯ್ ನನ್ನೊಡನೆ ಇದ್ದಾರೆ. ಅವರ ಹಾಸ್ಯ ಚಟಾಕಿಗಳು ಇನ್ನು ನಗದೆ ಇರಲು ಸಾಧ್ಯವೇ ಇಲ್ಲ ಅನ್ನುವಷ್ಟರ ಮಟ್ಟಿಗೆ, ದಿನದಲ್ಲಿ ಒಂದು ಸಲವಲ್ಲ, ಅನೇಕ ಸಲ ನನ್ನನ್ನು ನಗಿಸುತ್ತವೆ."

ಒಂದು ದಿನ ಪಟೇಲರು ಮಹದೇವ ದೇಸಾಯಿಗೆ ವಿನೋದದಿಂದ ಹೇಳಿದರು, "ಬಾಪುವಿನೊಡನೆ ಇರುವ ಅವಕಾಶ ನನಗೆ ಬರುವುದೆಂದು ಹೇಗೆ ಊಹಿಸಲಿ? ಅದು ನನಗೆ ಗೊತ್ತಿದ್ದರೆ, ಅವರ ಅವಶ್ಯತೆಗಳ ಬಗೆಗೆ ಕಾಕಾ (ಕಾಲೇಲ್ಕರ್)ರವರಿಂದ ತಿಳಿದುಕೊಳ್ಳುತ್ತಿದ್ದೆ. ಬಾಪು ತಮ್ಮ ಅವಶ್ಯಕತೆಗಳ ಬಗೆಗೆ ಏನೂ ಹೇಳುವುದಿಲ್ಲ. ಅವರ ಬಟ್ಟೆಗಳನ್ನು ಒಗೆಯುವುದಕ್ಕೂ ಬೇರೆಯವರಿಗೆ ಅವಕಾಶ ಕೊಡುವುದಿಲ್ಲ. ತಾವು ಧರಿಸಿರುವ ವಸ್ತ್ರವನ್ನು ಸ್ನಾನಕ್ಕೆ ಹೋದಾಗಲೇ ಒಗೆದುಕೊಂಡು ಹೊರಬರುತ್ತಾರೆ."

ಒಂದು ದಿನ ಪಟೇಲರು ಗಾಂಧೀಜಿಯವರನ್ನು ಕೀಟಲೆ ಮಾಡುವುದಕ್ಕಾಗಿ ಕೇಳಿದರು,

"ನಾನು ಎಷ್ಟು ಬಾದಾಮಿಗಳನ್ನು ತೊಳೆಯಬೇಕು?"

"ಹದಿನೈದು," ಬಾಪುವಿನ ಉತ್ತರ.

"ಹದಿನೈದಕ್ಕೂ ಇಪ್ಪತ್ತಕ್ಕೂ ಏನು ವ್ಯತ್ಯಾಸ?"

"ಹಾಗಿದ್ದರೆ ಹತ್ತೇ ಸಾಕು, ಹತ್ತಕ್ಕೂ ಹದಿನೈದಕ್ಕೂ ವ್ಯತ್ಯಾಸ ಇರುವುದಿಲ್ಲವಲ್ಲ," ಎಂದರು ಬಾಪು.[೬೦]

ಗಾಂಧೀಜಿಯವರು ತಮ್ಮ ಹಲ್ಲುಗಳನ್ನು ಪ್ರತಿದಿನ ಬೇವಿನಕಡ್ಡಿಯಿಂದ ಎರಡು ಘಂಟೆಗಳ ಕಾಲ ಉಜ್ಜುತ್ತಿದ್ದರು. ಒಂದು ದಿನ ಪಟೇಲರು, "ಬಾಪುವಿಗೆ ಕೆಲವೇ ಹಲ್ಲುಗಳು ಉಳಿದಿವೆ. ಆದಾಗ್ಯೂ ಅವುಗಳನ್ನು ಅವರು ಉಜ್ಜುತ್ತಲೇ ಇರುತ್ತಾರೆ," ಎಂದರು. ಗಾಂಧೀಜಿಯವರು ತಮ್ಮ ಅವಶ್ಯಕತೆಗಳನ್ನು ಅತ್ಯಂತ ಕಡಿಮೆ ಮಟ್ಟಕ್ಕೆ ಇಳಿಸಿದ್ದರು. ಅದನ್ನು ಕಂಡು ಪಟೇಲರಿಗೆ ಆಶ್ಚರ್ಯವಾಯಿತು. ತಾವೂ ಸಹ ಗಾಂಧೀಜಿಯಂತೆಯೇ ತಿನ್ನಬೇಕು ಮತ್ತು ಬದುಕಬೇಕು ಎಂದು ನಿರ್ಧರಿಸಿದರು.

ಅವರಿಗೆ ಚಹ ಎಂದರೆ ಬಹಳ ಇಷ್ಟ ಮತ್ತು ಅದನ್ನು ದಿನವಿಡೀ ಕುಡಿಯುತ್ತಿದ್ದರು. ಆದರೆ ಗಾಂಧೀಜಿ ಚಹ ಕುಡಿಯುತ್ತಿರಲಿಲ್ಲ. ಅದರಿಂದ ಪಟೇಲರೂ ಸಹ ಚಹ ಕುಡಿಯುವುದನ್ನು ನಿಲ್ಲಿಸಿಬಿಟ್ಟರು. ಅವರು ತಮಗೆ ಇಷ್ಟವಾದ ಅನ್ನ ಊಟ ಮಾಡುವುದನ್ನು ನಿಲ್ಲಿಸಿದರು ಏಕೆಂದರೆ ಗಾಂಧೀಜಿ ಅನ್ನ ಊಟ ಮಾಡುವುದನ್ನು ಬಿಟ್ಟಿದ್ದರು. ಸರ್ದಾರರು ಬೇಯಿಸಿದ ತರಕಾರಿ, ಹಾಲು ಮತ್ತು ಬ್ರೆಡ್ಡನ್ನು ದಿನಕ್ಕೆ ಮೂರು ಸಲ ತೆಗೆದುಕೊಳ್ಳಲು ಆರಂಭಿಸಿದರು.

ಪಟೇಲರು ಒಬ್ಬ ಕಾರ್ಯ ಪ್ರವೃತ್ತಿಯ ವ್ಯಕ್ತಿಯಾಗಿದ್ದುದರಿಂದ ಅವರಲ್ಲಿ ಗಾಂಧೀಜಿಗೆ ಇದ್ದ ಸೌಮ್ಯತೆಯಾಗಲಿ ಮಾತಿನ ನಾಜೂಕಾಗಲಿ ಇರಲಿಲ್ಲ. ಅವರು ತಮಗೆ ಅನಿಸಿದ್ದನ್ನು ನೇರ ಮಾತುಗಳಲ್ಲಿ ಅದು ಒರಟಾಗಿದ್ದರೂ ಸರಿ, ಹೇಳಿಬಿಡುತ್ತಿದ್ದರು. ಗಾಂಧೀಜಿಗೆ ಹಣ್ಣುಗಳನ್ನು ಬಿಡಿಸಿಕೊಡುವ ಕಾರ್ಯವನ್ನು ಮಹದೇವ ದೇಸಾಯಿ ಮಾಡುತ್ತಿದ್ದರು. ಆ ಕೆಲಸಕ್ಕೆ ಅವರಿಗೆ ೪೫ ನಿಮಿಷಗಳು ಬೇಕಾಗುತ್ತಿದ್ದುವು. ದೇಸಾಯಿಯವರು ಅಷ್ಟು ಕಾಲ ವ್ಯಯ ಮಾಡುವುದು ಗಾಂಧೀಜಿಗೆ ಒಪ್ಪಿಗೆಯಾಗಲಿಲ್ಲ. ಅದರಿಂದ ತಾವು ಮತ್ತು ಪಟೇಲರು ಆ ಕಾರ್ಯದಲ್ಲಿ ದೇಸಾಯಿಯವರಿಗೆ ಸಹಾಯ ಮಾಡುವುದಾಗಿ ಹೇಳಿದರು. ಗಾಂಧೀಜಿ ಆ ಕೆಲಸ ಮಾಡುವುದನ್ನು ದೇಸಾಯಿ ಒಪ್ಪಲಿಲ್ಲ. 'ನಿಮ್ಮ ಕಾಲ ಬಹಳ ಅಮೂಲ್ಯವಾದದ್ದು. ಅದನ್ನು ಈ ಶುಷ್ಕ ಕಾರ್ಯಕ್ಕೆ ವಿನಿಯೋಗಿಸುವುದು ಬೇಡ,' ಎಂದರು ದೇಸಾಯಿ. ಇಬ್ಬರ ನಡುವೆ ವಾದ ಆರಂಭವಾಯಿತು. ಸರ್ದಾರರು ಮಧ್ಯ ಪ್ರವೇಶಿಸಿ ದೇಸಾಯಿಗೆ ಹೇಳಿದರು, "ನೀವು ಅವರನ್ನು (ಗಾಂಧೀಜಿಯನ್ನು) ವಾದದಲ್ಲಿ ಗೆಲ್ಲಲು ಸಾಧ್ಯವಿಲ್ಲ. ಅವರು ಎಂದಾದರು ಯಾರ ಮಾತನ್ನಾದರೂ ಕೇಳಿದ್ದಾರೆಯೆ?" ಗಾಂಧೀಜಿ ಹೇಳಿದರು, "ವಲ್ಲಭಭಾಯ್, ನನ್ನ ಅನುಭವ ಏನೆಂದರೆ ನಿಮ್ಮ ನಾಲಿಗೆ ನನ್ನ ನಾಲಿಗೆಗಿಂತ ಉದ್ದವಾದುದು." "ಅದಕ್ಕೇನು?" ಎಂದರು ಪಟೇಲ್.

ಗಾಂಧೀಜಿಯವರಿಗೆ ನಾನಾ ತರಹದ ವ್ಯಕ್ತಿಗಳಿಂದ ನಾನಾ ತರಹದ ಚಿತ್ರ ವಿಚಿತ್ರವಾದ ಪತ್ರಗಳು ಬರುತ್ತಿದ್ದುವು. ಅವರು ಅವೆಲ್ಲಕ್ಕೂ ತಪ್ಪದೆ ಉತ್ತರ ಬರೆಯುತ್ತಿದ್ದರು. ಉತ್ತರ ಬರೆಯುವ ಮುನ್ನ ಪಟೇಲ್ ಮತ್ತು ಮಹದೇವ ದೇಸಾಯಿಯವರೊಡನೆ ಸಮಾಲೋಚಿಸುತ್ತಿದ್ದರು. ಒಂದು ದಿನ ಒಬ್ಬ ತನ್ನ ಪತ್ರದಲ್ಲಿ 'ಕುರೂಪಿಯಾದ ಹೆಂಡತಿಯೊಡನೆ ಸುಖವಾಗಿರುವ ಬಗೆ ಹೇಗೆ?' ಎಂದು ಕೇಳಿದ್ದನು. "ಕಣ್ಣುಗಳನ್ನು ಮುಚ್ಚಿಕೊಂಡಿರು – ಎಂದು ಅವನಿಗೆ ಬರೆಯಿರಿ. ಆಗ ಅವನು ಸುಖವಾಗಿರಬಹುದು," ಎಂದರು ಪಟೇಲರು. ಮತ್ತೊಬ್ಬ ತನ್ನ

ಪತ್ರದಲ್ಲಿ, ತನ್ನದು ಭಾರಿ ಶರೀರವೆಂದು ತಿಳಿಸಿ, ತನ್ನ ಕಾಲಿಗೆ ಇರುವೆಗಳು ಸಿಕ್ಕಿ ಸಾಯದಂತೆ ನಡೆಯುವುದು ಹೇಗೆ? – ಎಂದು ಕೇಳಿದ್ದನು. "ಅವನ ಕಾಲುಗಳನ್ನು ತಲೆಯ ಮೇಲಿಟ್ಟುಕೊಂಡು ನಡೆಯುವಂತೆ ತಿಳಿಸಿ," ಎಂದರು ಪಟೇಲರು.

ಗಾಂಧೀಜಿಗೆ ಪತ್ರ ಬರೆದ ಮತ್ತೊಬ್ಬ ವ್ಯಕ್ತಿ, "ನಾನೇನು ಮಾಡಲಿ? ನಿಮ್ಮ ಸಮಕಾಲೀನನಾಗುವ ದೌರ್ಭಾಗ್ಯ ನನಗೆ ಬಂದಿದೆಯಲ್ಲ?" ಎಂದು ಬರೆದಿದ್ದನು. ಕುಪಿತರಾದ ಸರ್ದಾರರು, "ಅವನಿಗೆ ವಿಷ ಕುಡಿಯುವಂತೆ ಬರೆಯಿರಿ," ಎಂದರು. ಗಾಂಧೀಜಿಯವರು, "ಹಾಗೆ ಬರೆಯಲು ಸಾಧ್ಯವಿಲ್ಲ. ಅದಕ್ಕೆ ಬದಲಾಗಿ ನನಗೇ ವಿಷ ಕೊಡುವಂತೆ ಬರೆಯುವುದು ಉತ್ತಮವಲ್ಲವೆ?" ಎಂದರು. ಅದನ್ನು ಒಪ್ಪದ ಸರ್ದಾರರು, "ಅದು ಸರಿಯಾದ ಪರಿಹಾರವಲ್ಲ. ನಿಮಗೆ ವಿಷ ಕೊಡುವುದರಲ್ಲಿ ಅವನು ಯಶಸ್ವಿಯಾದರೆ ಅವನಿಗೆ ಮರಣ ದಂಡನೆಯಾಗುತ್ತದೆ. ಅದರಿಂದ ಅವನೇ ವಿಷ ಕುಡಿಯುವುದು ಉತ್ತಮ," ಎಂದರು.

ಒಮ್ಮೆ ಲಾರ್ಡ್ ಸ್ಯಾಂಕೆಯವರ ಒಂದು ಲೇಖನ 'ನ್ಯೂಸ್ ಲೆಟರ್' ಪತ್ರಿಕೆಯಲ್ಲಿ ಪ್ರಕಟವಾಯಿತು. ಆ ಲೇಖನದಲ್ಲಿ ಅಸತ್ಯಗಳು ಮತ್ತು ಅರೆ ಸತ್ಯಗಳು ತುಂಬಿದ್ದುವು. ಗಾಂಧೀಜಿಯವರು ಆ ಅಸತ್ಯಗಳನ್ನು ಎತ್ತಿ ತೋರಿಸುವ ಒಂದು ದೀರ್ಘ ಪತ್ರವನ್ನು ಲಾರ್ಡ್ ಸ್ಯಾಂಕ್‌ಗೆ ಬರೆಯಿಸಿದರು. ಪತ್ರದ ಉಕ್ತಲೇಖನ ಮುಗಿದ ಮೇಲೆ ವಲ್ಲಭಭಾಯ್ ಹೇಳಿದರು, "ಅಷ್ಟೊಂದು ದೀರ್ಘವಾದ ಪತ್ರವನ್ನು ಏಕೆ ಬರೆಯಿಸಬೇಕು? ನೀನೊಬ್ಬ ಪಕ್ಕಾ ಸುಳ್ಳುಗಾರ ಎಂದು ಅವರಿಗೆ ನೇರವಾಗಿ ಏಕೆ ಹೇಳುವುದಿಲ್ಲ?"[೬೧]

ಸರ್ದಾರರಿಗೆ ಹಾಸ್ಯ ಪ್ರಜ್ಞೆ ಬಹಳ ಚೆನ್ನಾಗಿತ್ತು. ಆ ವಿಷಯದಲ್ಲಿ ಅವರು ಯಾರಿಗೂ ವಿನಾಯಿತಿ ನೀಡುತ್ತಿರಲಿಲ್ಲ, ಗಾಂಧೀಜಿಗೂ ಸಹ. ಗಾಂಧೀಜಿಯವರು ಸರ್ಕಾರಕ್ಕೆ ಆಗಾಗ್ಗೆ ಪತ್ರಗಳನ್ನು ಬರೆಯುತ್ತಿದ್ದರು ಮತ್ತು ದೂರುಗಳನ್ನು ಸಲ್ಲಿಸುತ್ತಿದ್ದರು. ಒಂದು ದಿನ ಗಾಂಧೀಜಿಯವರು ಸರ್ಕಾರಕ್ಕೆ ಕಾಗದ ಬರೆಯಿಸುತ್ತಿದ್ದಾಗ ಸರ್ದಾರರು, "ಬಾಪು ಪ್ರತಿ ಕೆಲವು ದಿವಸಗಳಿಗೆ ಒಮ್ಮೆ ದೂರು ಅಥವಾ ಬೇರೆ ಏನನ್ನಾದರು ಸರ್ಕಾರಕ್ಕೆ ಕಳುಹಿಸಲೇ ಬೇಕು. ಹಾಗೆ ಮಾಡದೆ ಹೋದರೆ ಸರ್ಕಾರವು ತಮ್ಮನ್ನು ಸಾಮರ್ಥ್ಯ ಕಳೆದುಕೊಂಡವ ಎಂದು ತಿಳಿಯಬಹುದೆಂದು ಅವರು ಹಾಗೆ ಮಾಡುತ್ತಾರೆ ಅನ್ನಿಸುತ್ತದೆ ನನಗೆ," ಎಂದರು.[೬೨]

ಸರ್ಕಾರವು ಬಾರ್ಡೋಲಿಯ ಆಶ್ರಮವನ್ನು ಮಾರಾಟಕ್ಕಿಟ್ಟಿದೆ ಎಂಬ ಸುದ್ದಿಯನ್ನು ಪತ್ರಿಕೆಯಲ್ಲಿ ಓದಿದಾಗ ಸರ್ದಾರರು ಬಹಳ ಖಿನ್ನರಾದರು. ಆದರೆ ಕೆಲವೇ ಕ್ಷಣಗಳಲ್ಲಿ ಅವರ ಹಾಸ್ಯ ಪ್ರಜ್ಞೆ ತಲೆಯೆತ್ತಿತು. ಅವರೆಂದರು, "ಅದು

ಮಾರಾಟವಾದರೆ ಚಿಂತೆಯಿಲ್ಲ. ಸ್ವರಾಜ್ಯ ಬಂದ ಮೇಲೆ ನಾವು ಅದನ್ನು ವಾಪಸ್ಸು ಪಡೆಯಬಹುದು. ಅಲ್ಲಿಯವರೆಗೆ ನ್ಯಾಯಯುತ ವಿನಿಮಯ ಆಗಿರುತ್ತದೆ. ಅವರ ಸೆರೆಮನೆಗಳ ಸ್ವಾಧೀನವನ್ನು ನಾವು ತೆಗೆದುಕೊಂಡಿಲ್ಲವೆ?"

ವಾಸ್ತವಿಕತೆ ಸರ್ದಾರರ ಪ್ರಧಾನ ಗುಣ. ಅವರು ಗಾಂಧೀಜಿಗೆ ಪದೇ ಪದೇ ಹೇಳುತ್ತಿದ್ದರು, "ನೀವು ಎಲ್ಲರಲ್ಲೂ ಒಳ್ಳೆಯದನ್ನು ಕಾಣುತ್ತೀರಿ. ವಾಸ್ತವವಾಗಿ, ಒಳ್ಳೆಯದು ಇಲ್ಲದ ಕಡೆಯೂ ನೀವು ಒಳ್ಳೆಯದನ್ನು ಕಾಣುತ್ತೀರಿ." ಗಾಂಧೀಜಿಯವರು ಮುಸ್ಲಿಮರಿಗೆ ಒಂದು ಮನವಿ ಮಾಡಲು ಹೊರಟಾಗ ಸರ್ದಾರರು ಛೇಡಿಸುತ್ತಾ ಪ್ರಶ್ನಿಸಿದರು, "ನಿಮ್ಮ ಮಾತನ್ನು ಆಲಿಸುವ ಮುಸ್ಲಿಮರು ಯಾರಾದರೂ ಇದ್ದಾರೆಯೇ?" ಗಾಂಧೀಜಿಯವರು ಹರಿಜನ ಆಂದೋಲನ ಕೈಗೊಂಡಾಗ ಅವರು ಸಂಪ್ರದಾಯವಾದಿ ಹಿಂದೂಗಳನ್ನಾಗಲಿ ಅಥವಾ ಅಂಬೇಡ್ಕರ್‌ರವರ ಅನುಯಾಯಿಗಳನ್ನಾಗಲಿ ಸಂತೋಷ ಪಡಿಸಲು ಆಗಲಿಲ್ಲ. ತಮ್ಮ ಅದ್ಭುತ ವ್ಯವಹಾರಜ್ಞಾನದಿಂದ ಪಟೇಲರು ಗಾಂಧೀಜಿಗೆ ಹೇಳಿದರು, "ಏಕೆ ನಿಮ್ಮನ್ನು ಎರಡು ಬಂಡೆಗಳ ನಡುವೆ ಇಟ್ಟುಕೊಂಡಿದ್ದೀರಿ? ಹಾಗೆ ಮಾಡಬೇಡಿರೆಂದು ನಾನು ನಿಮಗೆ ಹೇಳುತ್ತಲೇ ಇದ್ದೇನೆ. ಎರಡು ಬಂಡೆಗಳು ಪರಸ್ಪರ ಉಜ್ಜಾಡಲಿ. ಅವರ ನಡುವೆ ನೀವೇಕೆ ಬರಬೇಕು?"[೬೩]

ಸೆರೆಮನೆಯಲ್ಲಿ ಪಟೇಲರು ಲಕೋಟೆಗಳನ್ನು ತಯಾರಿಸುತ್ತಿದ್ದರು. ಒಂದು ದಿನ ಅವರು ಲಕೋಟೆಗಳನ್ನು ತಯಾರಿಸುತ್ತಿದ್ದಾಗ ಗಾಂಧೀಜಿಯವರು ಇದ್ದಕ್ಕಿದ್ದ ಹಾಗೆ ಕೇಳಿದರು, "ಸ್ವರಾಜ್ಯ ಮಂತ್ರಿಮಂಡಲದಲ್ಲಿ ಯಾವ ಖಾತೆಯನ್ನು ನಿಮಗೆ ಕಾಯ್ದಿರಿಸಬೇಕು ಎಂದು ನೀವು ಬಯಸುತ್ತೀರಿ?" "ನಾನು ಭಿಕ್ಷುಕನ ಬೋಗುಣೆಯನ್ನು ತೆಗೆದುಕೊಳ್ಳುತ್ತೇನೆ," ಎಂದರು ಪಟೇಲ್. ಗಾಂಧೀಜಿ ತಮ್ಮ ಮಾತನ್ನು ಮುಂದುವರಿಸಿ ಹೇಳಿದರು, "ದಾಸ್ ಮತ್ತು ಮೋತಿಲಾಲ್ ಸ್ವಾತಂತ್ರ್ಯ ಬಂದ ಮೇಲೆ ತಾವು ಯಾವ ಹುದ್ದೆಯನ್ನು ಅಲಂಕರಿಸಬೇಕೆಂದು ಚರ್ಚಿಸುತ್ತಿದ್ದರು. ಮಹಮ್ಮದಾಲಿ ಜಿನ್ನಾ ತಾನು ವಿದ್ಯಾಮಂತ್ರಿ ಆಗುತ್ತೇನೆಂದು ಮತ್ತು ಶೌಕತ್ ಆಲಿ ತಾನು ಸೈನ್ಯದ ದಂಡನಾಯಕ ಆಗುತ್ತೇನೆಂದು ಹೇಳುತ್ತಿದ್ದರು. ಸರಿ, ಸ್ವರಾಜ್ಯ ಬರಲು ಇನ್ನೂ ಕಾಲವಿದೆ."[೬೪]

(ಗಾಂಧೀಜಿಯವರು ಪಟೇಲರನ್ನು ಕೇಳಿದ ಈ ಪ್ರಶ್ನೆ ಬಹಳ ಅರ್ಥಪೂರ್ಣವಾಗಿದೆ. ಅದು ಅವರ ಮನಸ್ಸಿನಲ್ಲಿದ್ದ ಲೆಕ್ಕಾಚಾರವನ್ನು ಹೊರಗೆಡಹುತ್ತದೆ ಅನ್ನಿಸುತ್ತದೆ. 'ಪಟೇಲರಿಗೆ ಯಾವ ಖಾತೆಯನ್ನು ಕಾಯ್ದಿರಿಸಬೇಕು?' ಅನ್ನುವ ಪ್ರಶ್ನೆ ಗಾಂಧೀಜಿಯವರ ಆಗಿನ ಮನಸ್ಸಿನಲ್ಲಿ ಪಟೇಲರಿಗೆ ಪ್ರಧಾನಮಂತ್ರಿ ಪದವಿ

ನೀಡುವ ಅಭಿಪ್ರಾಯವಿಲ್ಲ – ಎಂದು ತೋರಿಸುತ್ತದೆ, ಎನ್ನಿಸುತ್ತದೆ ನನಗೆ. ಆದರೆ ಅಭಿಪ್ರಾಯಗಳು ಯಾವಾಗ ಬೇಕಾದರೂ ಬದಲಾಗಬಹುದು. – ಲೇಖಕ)

ಈ ನಡುವೆ ಜನವರಿ ೧೯೩೨ರ ಅಂತ್ಯಭಾಗದಲ್ಲಿ ಮಣಿಬೆನ್ ಮತ್ತು ಕಸ್ತೂರ್‌ಬಾರವರು ಸಭೆಗಳ ನಿಷೇಧವನ್ನು ಮೀರಿದ್ದಕ್ಕಾಗಿ ಬಾರ್ಡೋಲಿಯಲ್ಲಿ ದಸ್ತಗಿರಿ ಮಾಡಲ್ಪಟ್ಟರು. ಅವರು ಮೊದಲು ಸೂರತ್, ನಂತರ ಬೆಳಗಾಂ, ಆನಂತರ ಸಬರಮತಿ ಸೆರೆಮನೆಯಲ್ಲಿ ಇಡಲ್ಪಟ್ಟರು. ದಸ್ತಗಿರಿಯಾದ ಎಷ್ಟೋ ವಾರಗಳ ನಂತರವೇ ಪಟೇಲರಿಗೆ ಅದು ತಿಳಿದದ್ದು. ತಕ್ಷಣ ಅವರು ಮಣಿಬೆನ್‌ಗೆ ಪತ್ರ ಬರೆದು ಸಬರಮತಿ ಸೆರೆಮನೆಗೆ ಕಳುಹಿಸಿದರು.

ಪಟೇಲರನ್ನು ನೋಡಲು ಅವರ ಮಗ ದಹ್ಯಾಭಾಯ್ ಎರಡು ವಾರಗಳಿಗೆ ಒಮ್ಮೆ ಬರುತ್ತಿದ್ದನು. ಅವನ ಹೆಂಡತಿ ಯಶೋಧ ಮತ್ತು ಮಗ ಬಿಪಿನ್ ಒಮ್ಮೆ ಬಂದಿದ್ದರು. ಮೇ ತಿಂಗಳಲ್ಲಿ ಯಶೋಧ ಗತಿಸಿದಳು. ಆಗ ಅವಳ ಮಗನಿಗೆ ೫ ವರ್ಷ ವಯಸ್ಸು. ತನ್ನ ಮುಂದಿನ ಭೇಟಿಗೆ ಬಂದಾಗ ದಹ್ಯಾಭಾಯ್ ಅಪ್ಪನ ಮುಂದೆ ಅತ್ತನು. ಆದರೆ ಮಗುವಿಗೆ ಅದೆಲ್ಲ ಅರ್ಥವಾಗದ ವಯಸ್ಸು. ಮೇ ತಿಂಗಳ ಅಂತ್ಯ ಭಾಗದಲ್ಲಿ ಮಣಿಬೆನ್ ಬಿಡುಗಡೆಯಾದಳು, ಆದರೆ ಜುಲೈ ತಿಂಗಳಲ್ಲಿ ಮತ್ತೆ ದಸ್ತಗಿರಿಯಾದಳು, ಈ ಬಾರಿ ಖೇಡಾದಲ್ಲಿ ನಿಷೇದಾಜ್ಞೆಯನ್ನು ಮುರಿದಿದ್ದಕ್ಕೆ. ೧೫ ತಿಂಗಳ ಸೆರೆವಾಸ ವಿಧಿಸಲ್ಪಟ್ಟ ಮಣಿಬೆನ್ ಬೆಳಗಾಂ ಸೆರೆಮನೆಯಲ್ಲಿ ಇಡಲ್ಪಟ್ಟಳು. ಅವಳು ಎರಡನೇ ಬಾರಿಗೆ ದಸ್ತಗಿರಿ ಆಗುವುದಕ್ಕೆ ಮುನ್ನ ಸ್ವತಂತ್ರಳಾಗಿದ್ದಾಗ ಕರಮ್‌ಸದ್‌ನಲ್ಲಿ ಅಜ್ಜಿಯನ್ನು ಭೇಟಿ ಮಾಡಿದ್ದಳು. ಪಟೇಲರ ವಯಸ್ಸಾದ ತಾಯಿ, ಆ ಇಳಿ ವಯಸ್ಸಿನಲ್ಲೂ ತಾವೇ ಅಡುಗೆ ಮಾಡುತ್ತಿದ್ದರು. ಅವರ ಕಿರಿಯ ಮಗ ಕಾಶಿಭಾಯ್ ಅಡುಗೆಯ ಸಾಮಾನುಗಳನ್ನು ತಾಯಿಯ ಬಳಿಗೆ ತಂದುಕೊಡುತ್ತಿದ್ದನು. ಅವರು ಅಡುಗೆ ಮಾಡುತ್ತಿದ್ದರು. ಅವರು ಅಕ್ಟೋಬರ್ ತಿಂಗಳಲ್ಲಿ ಗತಿಸಿದರು. ಆಗ ಅವರ ವಯಸ್ಸು ೮೫. ಆ ವೇಳಗೆ ಮಣಿಬೆನ್ ಸೆರೆಮನೆ ಸೇರಿದ್ದಳು.

೧೯೩೨ರ ಅಕ್ಟೋಬರ್ ೨೭ರಂದು ಪಟೇಲರು ಯರವಾಡ ಸೆರೆಮನೆಯಿಂದ ಮಗಳಿಗೆ ಈ ರೀತಿ ಪತ್ರ ಬರೆದರು, "ಈ ದಿನ ಕರಮ್‌ಸದ್‌ನಲ್ಲಿರುವ ಕಾಶಿಕಾಕನಿಂದ ಒಂದು ಪತ್ರ ಬಂದಿತು. ನಮ್ಮ ವಯಸ್ಸಾದ ಮಾತೃಶ್ರೀಯವರು ಅಕ್ಟೋಬರ್ ೧೧ರ ಬುಧವಾರ ಬೆಳಗ್ಗೆ ೯ ಘಂಟೆಗೆ ದೇವಲೋಕವನ್ನು ಸೇರಿದರು. ಅವರು ಯಾವ ನೋವು ಇಲ್ಲದೆ ಶಾಂತವಾಗಿ ಗತಿಸಿದರು. ಅವರು ಬದುಕಿದ್ದಿದ್ದರೆ ಸಂಕಟ ಅನುಭವಿಸಬೇಕಾಗುತ್ತಿತ್ತು. ಅದರಿಂದ ಅವರು ಹೋದದ್ದೇ ಒಳಿತು.

ಕಳೆದ ಬಾರಿ ನೀನು ಹೋಗಿ ಅವರನ್ನು ನೋಡಲು ಸಾಧ್ಯವಾದದ್ದು ಒಳ್ಳೆಯದಾಯಿತು."

ಪಟೇಲರ ತಾಯಿ ಗತಿಸಿದ ಸುದ್ದಿಯ ಹಿಂದೆಯೇ ಅವರ ಮಗನ ತೀವ್ರ ಕಾಯಿಲೆಯ ಸುದ್ದಿಯು ಬಂದಿತು. ದಹ್ಯಾಭಾಯ್‌ಗೆ ಟೈಫಾಯ್ಡ್ ಕಾಯಿಲೆಯಾಗಿ ಅವನು ಸಾವಿನ ಸಮೀಪ ತಲುಪಿದ್ದನು. ಮಣಿಬೆನ್ 'ಪೆರೋಲ್'ಗೆ ಅರ್ಜಿ ಸಲ್ಲಿಸಲಿ ಎಂದು ಸ್ನೇಹಿತರು ಸಲಹೆ ಮಾಡಿದರು. ಆದರೆ ಪಟೇಲರು ಒಪ್ಪಲಿಲ್ಲ. ದಹ್ಯಾಭಾಯ್‌ಯ ಜ್ವರ ೭ ವಾರಗಳು ಇತ್ತು. ಅದೃಷ್ಟವಶಾತ್ ಅವನು ಉಳಿದನು. ಅವನು ಕಾಯಿಲೆ ಮಲಗಿದ್ದಾಗ ಅವನು ಬಾಡಿಗೆಗೆ ಪಡೆದಿದ್ದ 'ಫ್ಲಾಟ್' ಅನ್ನು ಬಿಡಬೇಕಾಯಿತು. ಅವನು ಇತರರೊಡನೆ ಬಹಳ ಕಠಿಣ ಮತ್ತು ಬಿಗಿಯಾಗಿ ವ್ಯವಹರಿಸುತ್ತಾನೆ – ಎನ್ನುವ ದೂರು ಪಟೇಲರಿಗೆ ಬಂದಿತು. ಪಟೇಲರು ಅವನಿಗೆ ಒಂದು ಪತ್ರ ಬರೆದು ವಿವೇಕವನ್ನು ಹೇಳಿದರು. ಅವರು ಈ ರೀತಿ ಬರೆದರು:

> ವಲ್ಲಭಭಾಯ್‌ಯಿಂದ ದಹ್ಯಾಭಾಯ್‌ಗೆ, ೬–೧೨–೧೯೩೨: ಒಂದೆರಡು ವಿಷಯವಾಗಿ ನಾನು ನಿನಗೆ ಪತ್ರ ಬರೆಯಬೇಕೆಂದು ಯೋಚಿಸಿದ್ದೆ. ಆದರೆ ನೀನು ಹಾಸಿಗೆ ಹಿಡಿದಿದ್ದುದರಿಂದ ಬರೆಯಲಿಲ್ಲ. ಈಗ ನೀನು ಸ್ವಲ್ಪ ಚೇತರಿಸಿ ಕೊಂಡಿರುವುದರಿಂದ ಬರೆಯುತ್ತಿದ್ದೇನೆ. ನೊಂದುಕೊಳ್ಳಬೇಡ..... ಒರಟಾಗಿ ಅಥವಾ ಆಕ್ರಮಣಕಾರಿ ರೀತಿಯಲ್ಲಿ ಮಾತನಾಡುವುದರಿಂದ ಏನೂ ಲಾಭವಿಲ್ಲ. .....ವೈರಿಗಳನ್ನು ಸೃಷ್ಟಿಸಿಕೊಳ್ಳಬೇಡ..... ಒಂದು ಕಾಲದಲ್ಲಿ ನನ್ನ ಸ್ವಭಾವವೂ ಸಹ ಒರಟಾಗಿತ್ತು. ಆದರೆ ಅದಕ್ಕೆ ನಾನು ಬಹಳ ಪಶ್ಚಾತ್ತಾಪ ಪಟ್ಟಿದ್ದೇನೆ. ನಾನು ನಿನಗೆ ಅನುಭವದಿಂದ ಬರೆಯುತ್ತಿದ್ದೇನೆ.[೬೫]

ಸೆರೆಮನೆಯಲ್ಲಿ ಪಟೇಲರು ಕಾಲವನ್ನು ಸ್ವಲ್ಪವೂ ವ್ಯರ್ಥಮಾಡುತ್ತಿರಲಿಲ್ಲ. ಬೆಳಗಿನ ಜಾವ ಮತ್ತು ಸಂಜೆ ಗಾಂಧೀಜಿಯೊಡನೆ 'ವಾಕಿಂಗ್' ಮತ್ತು ಪ್ರಾರ್ಥನೆ ಮಾಡುತ್ತಿದ್ದರು. ಉಳಿದ ವೇಳೆಯಲ್ಲಿ ಲಕೋಟೆ ತಯಾರಿಸುತ್ತಿದ್ದರು. ಪುಸ್ತಕಗಳಿಗೆ 'ಬೈಂಡ್' ಹಾಕುತ್ತಿದ್ದರು, ಪುಸ್ತಕಗಳನ್ನು ಓದುತ್ತಿದ್ದರು ಮತ್ತು ಸಂಸ್ಕೃತವನ್ನು ಗಾಂಧೀಜಿಯಿಂದ ಕಲಿಯುತ್ತಿದ್ದರು. ಮಹದೇವ ದೇಸಾಯಿ ಸೆರೆಮನೆಗೆ ಬಂದ ಮೇಲೆ ಅವರಿಂದ ಕಲಿಯಲು ಆರಂಭಿಸಿದರು. ಅವರು ಸಂಸ್ಕೃತವನ್ನು ಎಷ್ಟು ವೇಗವಾಗಿ ಕಲಿಯುತ್ತಿದ್ದರೆಂದರೆ ಗಾಂಧೀಜಿಯವರು ಪಟೇಲರು ಸಂಸ್ಕೃತವನ್ನು 'ಅರಬ್ ಕುದುರೆಯ ವೇಗದಲ್ಲಿ ಕಲಿಯುತ್ತಿದ್ದಾರೆ' ಎನ್ನುತ್ತಿದ್ದರು.

ಗಾಂಧಿ ಮತ್ತು ಪಟೇಲ್ ಇಬ್ಬರೂ ಆತ್ಮೀಯವಾಗಿ, ಮುಂದೆ ದೇಶವನ್ನು ಕಾಡಬಹುದಾದ ನಾನಾ ವಿಷಯ ಮತ್ತು ಸಮಸ್ಯೆಗಳ ಬಗೆಗೆ ಚರ್ಚಿಸುತ್ತಿದ್ದರು. ಚರ್ಚೆಗಳಲ್ಲಿ ಪಟೇಲರ ಸ್ವತಂತ್ರ ಮನೋಭಾವ, ವಾಸ್ತವಿಕ ಪ್ರಜ್ಞೆ ಮತ್ತು ಅಭಿಪ್ರಾಯಗಳ ದೃಢತೆ ವ್ಯಕ್ತವಾಗುತ್ತಿದ್ದುವು. ಗಾಂಧೀಜಿಯವರಲ್ಲಿ ಅವರಿಗೆ ಅನನ್ಯ ಭಕ್ತಿಯಿದ್ದರೂ, ಕೆಲವೊಮ್ಮೆ ಅವರ ಅಭಿಪ್ರಾಯವನ್ನು ವಿರೋಧಿಸುವುದಕ್ಕೆ ಅಥವಾ ಅವರನ್ನು ಟೀಕಿಸುವುದಕ್ಕೆ ಹಿಂಜರಿಯುತ್ತಿರಲಿಲ್ಲ. ಆ ಟೀಕೆಯಿಂದ ಅವರಿಬ್ಬರ ನಡುವಣ ಪ್ರೀತಿ ಮತ್ತು ಮಮತೆಗೆ ಯಾವ ಧಕ್ಕೆಯೂ ಇರಲಿಲ್ಲ. ಇಬ್ಬರೂ ಒಬ್ಬರನ್ನೊಬ್ಬರು ಚೆನ್ನಾಗಿ ಅರಿತಿದ್ದರು. ಪಟೇಲರಿಗೆ ಆಂಗ್ಲ ರಾಜಕಾರಣಿಗಳು ಕನ್ಸರ್ವೇಟಿವ್ ಪಕ್ಷದವರಾಗಿರಲಿ, ಲಿಬರೆಲ್ ಪಕ್ಷದವರಾಗಿರಲಿ ಅಥವಾ ಲೇಬರ್ ಪಕ್ಷದವರಾಗಿರಲಿ – ಅವರೆಲ್ಲ ಒಂದೇ ಕುಂಚದಿಂದ ಬಣ್ಣ ಬಳಿಯಲ್ಪಟ್ಟವರು,..... ಹೋರ್, ಮ್ಯಾಕ್ಡೊನಾಲ್ಡ್, ವಿಲ್ಲಿಂಗ್‌ಡನ್ ಮತ್ತು ಇರ್ವಿನ್ ಸಹ ಒಂದೇ ಪುಕ್ಕದ ಪಕ್ಷಿಗಳು. ಅವರು ರಾಜಿಗೆ ಒಪ್ಪದವರಷ್ಟೇ ಅಲ್ಲ, ಭಾರತದ ಆಸೆ ಆಕಾಂಕ್ಷೆಗಳ ಕಡೆಗೆ ಗಮನವೇ ಇಲ್ಲದವರು. ಆದರೆ ಭಾರತೀಯರ ಅಭಿಪ್ರಾಯವನ್ನು ಒಡೆಯಲು ಮತ್ತು ಆ ಮೂಲಕ ತಮ್ಮ ಆಡಳಿತವನ್ನು ಭದ್ರ ಪಡಿಸಲು ದೃಢ ನಿರತರು. ಒಂದು ದಿನ ಪಟೇಲರು, "ಇಂಗ್ಲೆಂಡಿನ ಜನ ಭಾರತದ ವಿರುದ್ಧ ಈಗ ಒಗ್ಗೂಡಿರುವಷ್ಟು ಹಿಂದೆ ಯಾವಾಗಲೂ ಒಗ್ಗೂಡಿರಲಿಲ್ಲ," ಎಂದರು. ಆಗ ಗಾಂಧೀಜಿ, "ಭಾರತದ ಪ್ರಶ್ನೆ ಬಂದಾಗ ಇಂಗ್ಲೆಂಡಿನ ಜನ ಯಾವಾಗಲೂ ಒಗ್ಗೂಡಿದ್ದಾರೆ. ಅವರು ಭಾರತವನ್ನು ಬಿಟ್ಟುಬಿಟ್ಟರೆ ಭಿಕ್ಷುಕರಾಗಿಬಿಡುತ್ತಾರೆ. ಭಾರತಕ್ಕೆ ಅಂಟಿಕೊಳ್ಳುವುದು ಅವರಿಗೆ ಸ್ವಹಿತದ ವಿಷಯ," ಎಂದು ವಿವರಿಸಿದರು.[೬೬]

ಒಂದು ದಿನ ಗಾಂಧೀಜಿಯವರು ಒಬ್ಬ ಆಂಗ್ಲ ಲೇಖಕನ ಪುಸ್ತಕವನ್ನು ಓದುತ್ತಿದ್ದಾಗ, ತಲೆಯೆತ್ತಿ ಪಟೇಲರನ್ನು, "ಆಂಗ್ಲರ ಬೈಬಲ್ ಯಾವುದಿರಬಹುದು?" ಎಂದು ಪ್ರಶ್ನಿಸಿದರು. ತಕ್ಷಣ ಪಟೇಲರು, "ಪೌಂಡ್, ಷಿಲ್ಲಿಂಗ್, ಪೆನ್ನಿ" ಎಂದರು.

೧೯೩೨ರ ಆಗಸ್ಟ್ ೧೬ರಂದು ಬ್ರಿಟಿಷ್ ಪ್ರಧಾನಮಂತ್ರಿ ರಾಮ್ಸೆ ಮ್ಯಾಕ್ಡೊನಾಲ್ಡ್‌ನು ಮತೀಯ ಪ್ರಶಸ್ತಿಯನ್ನು ಪ್ರಕಟಿಸಿದನು. ಈ ಮತೀಯ ಪ್ರಶಸ್ತಿಯು ಮುಸ್ಲಿಮರು, ಸಿಕ್ಖರು ಮತ್ತು ಅಸ್ಪೃಶ್ಯರಿಗೆ ಪ್ರತ್ಯೇಕ ಮತದಾನ ಸಮುದಾಯತೆಯನ್ನು (seperate electorate) ನೀಡಿತು. ಅಸ್ಪೃಶ್ಯರಿಗೆ ನೀಡಿದ ಪ್ರತ್ಯೇಕ ಮತದಾನ ಸಮುದಾಯತೆಯು ಹಿಂದೂ ಸಮಾಜವನ್ನು ಒಡೆಯುತ್ತಿತ್ತು ಏಕೆಂದರೆ ಅದು ಅಸ್ಪೃಶ್ಯರು ಹಿಂದೂಗಳಿಂದ ಬೇರೆಯಾದವರು ಎಂದು ಸೂಚಿಸುತ್ತಿತ್ತು. ಬ್ರಿಟಿಷರ ಈ ಒಡೆದು ಆಳುವ ನೀತಿಯ ವಿರುದ್ಧ ಗಾಂಧೀಜಿಯವರು ಆಮರಣಾಂತ ಉಪವಾಸ ಕೈಗೊಳ್ಳಲು ತೀರ್ಮಾನಿಸಿ ತಮ್ಮ ನಿರ್ಧಾರವನ್ನು ಆಗಸ್ಟ್ ೧೭ರಂದು

ಪತ್ರ ಮುಖೇನ ಬ್ರಿಟಿಷ್ ಪ್ರಧಾನ ಮಂತ್ರಿಗೆ ತಿಳಿಸಿದರು. ಬ್ರಿಟಿಷ್ ಪ್ರಧಾನಮಂತ್ರಿ ರಾಮ್ಸೆ ಮ್ಯಾಕ್ಡೊನಾಲ್ಡ್‌ನು ಎರಡನೆ ದುಂಡು ಮೇಜಿನ ಪರಿಷತ್ತಿನಲ್ಲಿ ಭಾರತದ ಅಸ್ಪೃಶ್ಯರಿಗೆ ಮತದಾನ ಸಮುದಾಯತೆಯನ್ನು ಪ್ರಥಮ ಬಾರಿಗೆ ಸೂಚಿಸಿದಾಗಲೇ ಗಾಂಧೀಜಿ ಅದನ್ನು ವಿರೋಧಿಸಿದ್ದರು ಮತ್ತು ಆಮರಣಾಂತ ಉಪವಾಸದ ಸೂಚನೆಯನ್ನು ನೀಡಿದ್ದರು. ತಾವು ದಸ್ತಗಿರಿಯಾದ ಮೇಲೆ ಮಾರ್ಚ್ ೧೯೩೩ರಲ್ಲಿ ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ಇಂಡಿಯ ಸಾಮ್ಯುಯಲ್ ಹೋರ್‌ಗೆ ಪತ್ರ ಬರೆದು ಮತೀಯ ಪ್ರಶಸ್ತಿಯ ವಿರುದ್ಧ ಎಚ್ಚರಿಕೆಯನ್ನು ಮತ್ತೆ ನೀಡಿದ್ದರು. ಆದಾಗ್ಯೂ ಬ್ರಿಟಿಷ್ ಸರ್ಕಾರವು ಮತೀಯ ಪ್ರಶಸ್ತಿಯ ಪರವಾಗಿ ತೀರ್ಮಾನಿಸಿ ಪ್ರಕಟಿಸಿತ್ತು. ಅದಕ್ಕೆ ಪ್ರತಿಕ್ರಿಯೆಯಾಗಿ ಗಾಂಧೀಜಿ ಆಮರಣಾಂತ ಉಪವಾಸದ ನಿರ್ಧಾರ ಕೈಗೊಂಡರು.

ಸರ್ದಾರ್ ಪಟೇಲರು ಗಾಂಧೀಜಿಯ ಉಪವಾಸದ ತೀರ್ಮಾನವನ್ನು ವಿರೋಧಿಸಿದರು. ಬ್ರಿಟಿಷ್ ಸರ್ಕಾರವು ಗಾಂಧೀಜಿಯು ಸಾಯಲು ಬಿಡುವುದು ಎಂದು ಅವರು ವಾದಿಸಿದರು. ಆದರೆ ಗಾಂಧೀಜಿ ತಮ್ಮ ನಿರ್ಧಾರವನ್ನು ಬದಲಾಯಿಸಲಿಲ್ಲ. ಅಷ್ಟೇ ಅಲ್ಲ ತಮ್ಮ ಉದ್ದೇಶಿತ ಉಪವಾಸದ ವಿಷಯವನ್ನು ಹೊರಗಿನ ಯಾರಿಗೂ ತಿಳಿಸಬಾರದೆಂದು ಪಟೇಲ್ ಮತ್ತು ಮಹದೇವ ದೇಸಾಯ್‌ಗೆ ತಾಕೀತು ಮಾಡಿದರು. ಜೊತೆಗೆ, ಅವರು ಮ್ಯಾಕ್ಡೊನಾಲ್ಡ್ ಮತ್ತು ಹೋರ್‌ಗೆ ಬರೆದ ಪತ್ರಗಳಲ್ಲಿ 'ತಮ್ಮ ಆಮರಣಾಂತ ಉಪವಾಸದ ವಿಷಯವು ತಮ್ಮಿಬ್ಬರು ಜೊತೆಗಾರರು ವಿನಹ ಬೇರೆ ಯಾರಿಗೂ ತಿಳಿಯದು' ಎಂದು ಬರೆದಿದ್ದರು.

ಗಾಂಧೀಜಿಯ ಉದ್ದೇಶಿತ ಉಪವಾಸದ ವಿಷಯವನ್ನು ಒಂದಲ್ಲ ಒಂದು ರೀತಿಯಲ್ಲಿ ಹೊರಗಿನ ಜನರಿಗೆ ತಲುಪಿಸಬೇಕು, ಹಾಗೆ ತಿಳಿಸದೆ ಹೋದರೆ ಜನರು, 'ನೀವು ಬಾಪುವಿನೊಡನೆ ಇದ್ದಿರಿ, ಬಾಪುವಿನ ನಿರ್ಧಾರವನ್ನು ನೀವು ನಮಗೆ ತಿಳಿಸಬೇಕಾಗಿತ್ತು. ಪ್ರತಿ ಎರಡು ವಾರಗಳಿಗೊಮ್ಮೆ ನಿಮ್ಮನ್ನು ನೋಡಲು ದಹ್ಯಾಭಾಯ್ ಬರುತ್ತಿದ್ದನಲ್ಲಾ ಅವನ ಮೂಲಕ ನೀವು ವಿಷಯ ಕಳುಹಿಸಬಹುದಾಗಿತ್ತು' ಎನ್ನುವರು ಎಂದು ಪಟೇಲ್ ಮತ್ತು ಮಹದೇವ್ ದೇಸಾಯಿ ಯೋಚಿಸಿದರು. ಆದರೆ, ಈ ಸುದ್ದಿ ಹೊರಗೆ ಹೋಗುವುದಿಲ್ಲವೆಂದು ಗಾಂಧೀಜಿಯವರು ಮ್ಯಾಕ್ಡೊನಾಲ್ಡ್ ಮತ್ತು ಹೋರ್‌ಗೆ ಪತ್ರ ಬರೆದಿದ್ದರು. ಅದನ್ನು ಮುರಿಯುವುದು ಎಂತು ಸರಿ? ಆದರೆ ಜನರಿಗೆ ವಿಷಯ ತಿಳಿದರೆ ಅವರು ಬ್ರಿಟಿಷ್ ಸರ್ಕಾರವು ನಿರ್ಧಾರವನ್ನು ಬದಲಾಯಿಸುವಂತೆ ಮಾಡಲು ಪ್ರಯತ್ನಿಸುತ್ತಾರೆ – ಹೀಗೆ ಪಟೇಲರು ಪೀಕಲಾಟಕ್ಕೆ ಸಿಲುಕಿದರು.

ಪಟೇಲರು ತಮ್ಮ ವಾದವನ್ನು ಗಾಂಧೀಜಿಯ ಮುಂದಿಟ್ಟರು. ಗಾಂಧೀಜಿ ಒಪ್ಪಲಿಲ್ಲ. ಅವರೆಂದರು, "ನಾವು ವಿಷಯವನ್ನು ಹೊರಕ್ಕೆ ಕಳುಹಿಸಲು ಹೇಗೆ ಸಾಧ್ಯ? ಅದು ಸೆರೆಮನೆಯ ನಿಯಮಗಳಿಗೆ ಮತ್ತು ಹೋರ್ ಹಾಗೂ ಮ್ಯಾಕ್ಡೊನಾಲ್ಡ್‌ಗೆ ನಾನು ನೀಡಿರುವ ಮಾತಿಗೆ ವಿರುದ್ಧ. ಅದು ಎಲ್ಲರಿಗು ಇದ್ದಕ್ಕಿದ್ದ ಹಾಗೆ ಧಡಕ್ಕನೆ ತಿಳಿದರೆ ಒಳ್ಳೆಯದು. ಎಲ್ಲರಿಗೂ ಒಂದು ಆಘಾತ ನೀಡುವುದು, ಮಾಳವೀಯಾಜಿ ಮತ್ತು ರಾಜಾಜಿಗೂ ಸಹ ಆಘಾತ ನೀಡುವುದು ಆವಶ್ಯಕ."

ಆ ವೇಳೆಗೆ ಮಾಳವೀಯಾಜಿ ಮತ್ತು ರಾಜಾಜಿ ಸೆರೆಮನೆಯಿಂದ ಬಿಡುಗಡೆಯಾಗಿದ್ದರು. ರಾಜಾಜಿಯವರು ಕಾಂಗ್ರೆಸ್ಸಿನ ಹಂಗಾಮಿ ಅಧ್ಯಕ್ಷರಾಗಿದ್ದರು. ಅವರಿಬ್ಬರಿಗೆ ವಿಷಯ ತಿಳಿದರೆ, ಸರ್ಕಾರದ ಒಡನೆ ಅಲ್ಲದಿದ್ದರೂ ದೇಶದ ಜನರೊಡನೆ ಶ್ರಮಿಸಿ ಸಮಸ್ಯೆಗೆ ಪರಿಹಾರ ಕಂಡುಹಿಡಿಯುವರು. ಅಸ್ಪೃಶ್ಯರಿಗೆ ಪ್ರತ್ಯೇಕ ಚುನಾವಣಾ ಸಮುದಾಯತೆಗೆ ಪರ್ಯಾಯವಾಗಿ ಬೇರೆ ಯೋಜನೆಗೆ ಅಸ್ಪೃಶ್ಯರು ಮತ್ತು ಮೇಲ್ಜಾತಿ ಹಿಂದೂಗಳು ಒಪ್ಪಂದಕ್ಕೆ ಬಂದರೆ, ಅದನ್ನು ತಾವೂ ಒಪ್ಪುವುದಾಗಿ ಮ್ಯಾಕ್ಡೊನಾಲ್ಡ್ ಹೇಳಿದ್ದನು.[೬೭]

ಗಾಂಧೀಜಿ ಹೇಳಿದರು, "ವಲ್ಲಭಭಾಯ್, ಪೂರ್ವ ಪ್ರಕಟಣೆ ಕೆಡುಕನ್ನು ಉಂಟುಮಾಡುತ್ತದೆ. ಈಗ ಅಗತ್ಯವಾದುದು ಹಠಾತ್ (ಅನಿರೀಕ್ಷಿತ) ಆಘಾತ."

ಗಾಂಧೀಜಿಯವರು ಆಮರಣಾಂತ ಉಪವಾಸವನ್ನು ಸೆಪ್ಟೆಂಬರ್ ೧೬ರಂದು ಪುಣೆಯ ಯರವಾಡ ಸೆರೆಮನೆಯಲ್ಲಿ ಆರಂಭಿಸಿದರು. ಅವರು ಉಪವಾಸ ಆರಂಭಿಸುವ ಸುದ್ದಿ ಸೆಪ್ಟೆಂಬರ್ ೧೩ನೆ ತಾರೀಖು ಹೊರಗಿನ ಪ್ರಪಂಚಕ್ಕೆ ಸಿಡಿಲಿನಂತೆ ಬಡಿಯಿತು. ಗಾಂಧೀಜಿಯ ಲೆಕ್ಕಾಚಾರ ಸರಿಯಾಗಿತ್ತು. ಆ ಸುದ್ದಿ ದೇಶದ ಒಳಗೆ ಮತ್ತು ಹೊರಗೆ ಭಾರಿ ಸಂಚಲನವನ್ನು ಉಂಟುಮಾಡಿತು. ಮಾಳವೀಯ, ರಾಜಾಜಿ, ಟಾಗೋರ್, ರಾಜೇಂದ್ರ ಪ್ರಸಾದ್, ಸಪ್ರು ಮೊದಲಾದ ನಾಯಕರು ತಕ್ಷಣ ಕಾರ್ಯಪ್ರವೃತ್ತರಾದರು ಮತ್ತು ಪುಣೆಗೆ ದೌಡಾಯಿಸಿದರು. ಗಾಂಧೀಜಿಯ ಪ್ರಾಣವನ್ನು ಉಳಿಸುವುದಕ್ಕಾಗಿ ಹಿಂದೂ ನಾಯಕರು ಸನಾತನ ಪದ್ಧತಿಗಳಲ್ಲಿ ಬದಲಾವಣೆ ಆಗಬೇಕು ಎಂದರು. ಹರಿಜನರಿಗೆ ದೇವಾಲಯದ ಬಾಗಿಲುಗಳು ತೆರೆಯಲ್ಪಟ್ಟುವು. ಬ್ರಾಹ್ಮಣರು ಹರಿಜನರೊಡನೆ ಊಟ ಮಾಡಿದರು. ಅಸ್ಪೃಷ್ಯತಾ ನಿವಾರಣಾ ಲೀಗ್ ಸ್ಥಾಪಿತವಾಯಿತು. ರಾಷ್ಟ್ರ ನಾಯಕರು ಅಂಬೇಡ್ಕರ್ ಮತ್ತು ಇತರ ಹರಿಜನ ನಾಯಕರೊಡನೆ ಸಂಧಾನ ಆರಂಭಿಸಿದರು. ಸರ್ಕಾರವು ಅಂಬೇಡ್ಕರ್, ರಾಜಾಜಿ, ಮಾಳವೀಯ ಮೊದಲಾದವರು ಗಾಂಧೀಜಿಯೊಡನೆ ಮಾತುಕತೆಗಾಗಿ ಯರವಾಡ ಸೆರೆಮನೆಯನ್ನು ಪ್ರವೇಶಿಸಲು ಅವಕಾಶ ನೀಡಿತು.

ಗಾಂಧೀಜಿಯವರು ಸೆರೆಮನೆಯ ಆವರಣದಲ್ಲಿ ಒಂದು ಮಾವಿನ ಮರದ ಕೆಳಗೆ ಆಸ್ಪತ್ರೆಯ ಬಿಳಿ ಮಂಚದ ಮೇಲೆ ಮಲಗಿದ್ದರು. ಸರ್ಕಾರವು ಕಸ್ತೂರ್‌ಬಾರವರನ್ನು ಸಬರಮತಿ ಸೆರೆಮನೆಯಿಂದ ಯರವಾಡ ಸೆರೆಮನೆಗೆ ಕರೆತಂದಿತು. ಟಾಗೋರ್ ಸಹ ಅಲ್ಲಿಗೆ ಬಂದರು.

ಇಡೀ ದೇಶ ಕಾತರದಿಂದ ಕಾಯುತ್ತಿತ್ತು. ರಾಷ್ಟ್ರನಾಯಕರು ಮತ್ತು ಅಂಬೇಡ್ಕರ್ ನಡುವೆ ದೀರ್ಘ ಚರ್ಚೆ ಮತ್ತು ಸಂಧಾನ ನಡೆಯಿತು. ಪ್ರತ್ಯೇಕ ಚುನಾವಣಾ ಸಮುದಾಯಕ್ಕೆ ಬದಲಾಗಿ ಶಾಸನಸಭೆಗಳಲ್ಲಿ ಬ್ರಿಟಿಷ್ ಸರ್ಕಾರ ನಿಗದಿಪಡಿಸಿದ್ದಕ್ಕಿಂತ ಹೆಚ್ಚಿನ ಸ್ಥಾನಗಳ ಮೀಸಲಾತಿಯ ಸೂತ್ರವನ್ನು ಅಂಬೇಡ್ಕರ್ ಮತ್ತು ಇತರ ಪರಿಶಿಷ್ಟ ವರ್ಗದ ನಾಯಕರ ಮುಂದೆ ಇಡಲಾಯಿತು. ಕೊನೆಗೆ ಅಂಬೇಡ್ಕರ್ ಒಪ್ಪಿದರು. ಯರವಾಡ ಒಪ್ಪಂದಕ್ಕೆ ಸಹಿ ಬಿದ್ದಿತು. ಒಪ್ಪಂದದ ಪಠ್ಯವನ್ನು ಮ್ಯಾಕ್ಡೊನಾಲ್ಡ್‌ಗೆ ಕೇಬಲ್ ಮೂಲಕ ಕಳುಹಿಸಲಾಯಿತು. ಮ್ಯಾಕ್ಡೊನಾಲ್ಡ್ ತಮ್ಮ ಒಪ್ಪಿಗೆ ಸೂಚಿಸಿ ಕೇಬಲ್ ಕಳುಹಿಸಿದರು.

ಉಪವಾಸ ಆರಂಭವಾದ ಏಳನೆಯ ದಿನ ಸರ್ಕಾರ ಒಪ್ಪಿರುವ ದಾಖಲೆಯನ್ನು ಸೆರೆಮನೆಗಳ ಇನ್‌ಸ್ಪೆಕ್ಟರ್ ಜನರಲ್ ಡಾಯರ್‌ರವರು ಗಾಂಧೀಜಿಗೆ ತೋರಿಸಿದರು. ಗಾಂಧೀಜಿ ತಮ್ಮ ಕತ್ತು ಆಡಿಸಿ ಒಪ್ಪಿಗೆ ಸೂಚಿಸಿದರು. ಕಸ್ತೂರ್‌ಬಾ ನೀಡಿದ ಕಿತ್ತಳೆ ರಸವನ್ನು ಕುಡಿದು ಅವರು ತಮ್ಮ ಉಪವಾಸವನ್ನು ಮುಕ್ತಾಯ ಮಾಡಿದರು. ದೇಶದ ಜನತೆ ಸಮಾಧಾನದ ಉಸಿರು ಬಿಟ್ಟಿತು.[೬೮]

ಗಾಂಧೀಜಿಯವರ ಉಪವಾಸ ಆರಂಭವಾಗಿ ಅವರ ಆರೋಗ್ಯ ಆತಂಕಕಾರಿಯಾಗಿದ್ದ ಸಮಯದಲ್ಲಿ ವಲ್ಲಭಭಾಯ್‌ರವರು ಭಾರಿ ಆತಂಕದಲ್ಲಿದ್ದರು ಮತ್ತು ಅವರನ್ನು ಜತನದಿಂದ ಉಪಚರಿಸುತ್ತಿದ್ದರು. ಗಾಂಧೀಜಿ ಉಪವಾಸವನ್ನು ಮುಕ್ತಾಯ ಮಾಡಿದ ಮೇಲೆ ಅವರ ಮನಸ್ಸಿಗೆ ನೆಮ್ಮದಿಯಾಯಿತು. ಅದರ ಜೊತೆಗೆ, ಸತ್ತು ಹೋಗಿದ್ದ ಅವರ ಹಾಸ್ಯ ಪ್ರಜ್ಞೆ ಮತ್ತೆ ಚಿಗುರಿತು. ಗಾಂಧೀಜಿಯವರ ಉಪವಾಸದ ಸಮಯದಲ್ಲಿ ಅವರಿಗೆ ಸ್ಪಾಂಜ್ ಸ್ನಾನ ನೀಡುವುದಕ್ಕಾಗಿ ಬಹಳ ಸಂಖ್ಯೆಯ ಟವಲ್‌ಗಳನ್ನು ಬೀರುವಿನಿಂದ ತೆಗೆಯಲಾಗಿತ್ತು. ಚೇತರಿಸಿಕೊಂಡ ನಂತರ ಗಾಂಧೀಜಿ ಆ ಟವಲ್‌ಗಳ ಲೆಕ್ಕವನ್ನು ಕೇಳಿದಾಗ, ವಲ್ಲಭ ಉತ್ತರಿಸಿದರು, "ನಾವೇಕೆ ಲೆಕ್ಕವನ್ನು ಕೊಡಬೇಕು? ನಾವು ನಿಮ್ಮನ್ನು ಕಳೆದುಕೊಂಡೆವು ಎಂದು ಭಾವಿಸಿದ್ದೆವು. ನೀವು ಬದುಕಿ ಬಂದು ಎಲ್ಲದರ ಲೆಕ್ಕ ಕೇಳುತ್ತೀರೆಂದು ನಮಗೆ ಗೊತ್ತಿರಲಿಲ್ಲ."[೬೯]

೧೯೩೩ರ ಮೇ ೧ರ ಬೆಳಗ್ಗೆ ಪಟೇಲರು ಎದ್ದಾಗ ಗಾಂಧೀಜಿ ಅವರಿಗೊಂದು ಲಿಖಿತ ಹೇಳಿಕೆಯನ್ನು ನೀಡಿದರು. ಅವರು ಅದನ್ನು ರಾತ್ರಿ ೧.೩೦ರಲ್ಲಿ ಬರೆದಿದ್ದರು. ಆ ಹೇಳಿಕೆಯಲ್ಲಿ ಗಾಧೀಜಿಯವರು ತಾವು ಮೇ ೮ನೆ ದಿನಾಂಕದಿಂದ ಮೂರು ವಾರಗಳ ಕಾಲ 'ಆತ್ಮ ಶುದ್ಧಿ'ಗಾಗಿ ಉಪವಾಸ ಮಾಡುವುದಾಗಿ ಬರೆದಿದ್ದರು. ಆತ್ಮ ಶುದ್ಧೀಕರಣವು ತಮ್ಮ ಹರಿಜನ ಆಂದೋಲನಕ್ಕೆ ಸಹಕಾರಿ – ಎಂದೂ ಸಹ ಗಾಂಧೀಜಿ ಬರೆದಿದ್ದರು. ಅದನ್ನು ಓದಿ ಪಟೇಲರು ಕೇಳಿದರು, "ಇದರಲ್ಲಿ ಸ್ವಲ್ಪ ಬದಲಾವಣೆಗೂ ಅವಕಾಶವಿಲ್ಲ ಎಂದು ನಾನು ತಿಳಿಯಬಹುದೆ?" "ನೀವು ಹೇಳಿದ್ದು ಸರಿ" ಗಾಂಧೀಜಿಯ ಉತ್ತರ. "ದೇವರ ಇಚ್ಛೆಯಂತಾಗುತ್ತದೆ" ಎಂದರು ಪಟೇಲ್. ಪಟೇಲರ ಮುಖದಲ್ಲಿ ಭಾರಿ ಸಂಕಟವನ್ನು ಕಂಡ ಮಹದೇವ್ ಅದನ್ನು ಗಾಂಧೀಜಿಗೆ ತಿಳಿಸಿದರು. ಮಾರನೆಯ ದಿನ ಗಾಂಧೀಜಿಯವರು ಮಹದೇವ್ ದೇಸಾಯಿಯನ್ನು "ನನ್ನ ಮೇಲೆ ಪಟೇಲರಿಗೆ ಇನ್ನೂ ಕೋಪವಿದೆಯೆ?" ಎಂದು ಕೇಳಿದರು. "ಕೋಪವಿಲ್ಲ, ಹಾಗೆಂದರೆ ನಿಮ್ಮ ನಿರ್ಧಾರಕ್ಕೆ ಅವರ ಒಪ್ಪಿಗೆ ಇದೆ ಎಂದು ಅರ್ಥವಲ್ಲ. ಅವರು ಭಾರಿ ಮಾನಸಿಕ ಸಂಕಟವನ್ನು ಅನುಭವಿಸುತ್ತಿದ್ದಾರೆ," ಎಂದು ಉತ್ತರಿಸಿದರು ದೇಸಾಯಿ. ಗಾಂಧಿ ಹೇಳಿದರು, "ಅದು ನನಗೆ ಅರ್ಥವಾಗುತ್ತದೆ. ವಲ್ಲಭಭಾಯ್‌ನಂತಹ ವಿಶೇಷ ವ್ಯಕ್ತಿಯ ಜೊತೆಯನ್ನು ನನಗೆ ಒದಗಿಸುವುದರಲ್ಲಿ ಭಗವಂತನ ಕರುಣೆ ಎಷ್ಟೊಂದು ಅಧಿಕ ಎನ್ನುವುದನ್ನು ನಾನು ಅರಿತಿಲ್ಲವೆ?"

ಯರವಾಡ ಒಪ್ಪಂದದ ನಂತರ ಸಂಪ್ರದಾಯಸ್ಥ ಹಿಂದೂಗಳು ಕೆಲವರು ಮಾಡಿದ ಟೀಕೆಗಳ ಫಲವಾಗಿ ಗಾಂಧೀಜಿ ಮೂರು ವಾರಗಳ ಶುದ್ಧೀಕರಣ ಉಪವಾಸ ಮಾಡಲು ನಿರ್ಧರಿಸಿದ್ದರು. ಆ ಟೀಕೆಗಳು ಅವರ ಮನಸ್ಸನ್ನು ನೋಯಿಸಿರುವುದನ್ನು ಪಟೇಲರು ಗಮನಿಸಿದ್ದರು. ಅದರಿಂದ ಗಾಂಧೀಜಿ ಉಪವಾಸ ಕೈಗೊಳ್ಳುವರೆಂದು ಪಟೇಲರು ಊಹಿಸಿದರು. ಆದಾಗ್ಯೂ ಗಾಂಧೀಜಿಯವರ ವಯಸ್ಸು ಮತ್ತು ಆರೋಗ್ಯದ ಸ್ಥಿತಿಯನ್ನು ಗಮನಿಸಿದಾಗ ೨೧ ದಿನಗಳ ಉಪವಾಸ ಪಟೇಲರು ದಿಗಿಲುಬೀಳುವಂತೆ ಮಾಡಿತ್ತು. ಆದರೆ ಗಾಂಧೀಜಿಯವರು ತಮ್ಮ ನಿರ್ಧಾರವನ್ನು ಬದಲಾಯಿಸುವಂತೆ ಮಾಡಲು ಸಾಧ್ಯವೇ ಇಲ್ಲ ಮತ್ತು ಅದು ಅವರ ಅಂತಿಮ ತೀರ್ಮಾನ ಎಂಬುದೂ ಅವರಿಗೆ ತಿಳಿದಿತ್ತು.

೧೯೩೩ರ ಮೇ ೩ರಂದು ಪಟೇಲರಿಗೆ ರಾಜಾಜಿಯವರಿಂದ ಒಂದು ಟೆಲಿಗ್ರಾಂ ಬಂದಿತು. 'ಈ ಅಗ್ನಿ ಪರೀಕ್ಷೆಯಲ್ಲಿ ಬಾಪು ಯಾವ ತೊಂದರೆಯೂ ಇಲ್ಲದೆ ಗೆದ್ದು ಬರುತ್ತಾರೆ ಎಂದು ನಿರೀಕ್ಷಿಸುವುದು ಶುದ್ಧ ದಡ್ಡತನ. ಆ

ಉಪವಾಸವನ್ನು ಅವರು ಕೈಗೊಳ್ಳದಂತೆ ಮಾಡಲು ನಿಮಗೆ ಮಾತ್ರ ಸಾಧ್ಯ' ಎಂದು ರಾಜಾಜಿಯವರು ತಮ್ಮ ಟೆಲಿಗ್ರಾಂನಲ್ಲಿ ಹೇಳಿದ್ದರು. ಪಟೇಲರು ಮಾರನೆ ದಿನ (೪-೫-೩೩) ಈ ರೀತಿ ಜವಾಬು ಕಳಿಸಿದರು, 'ಬಾಪು ಈ ಅಗ್ನಿ ಪರೀಕ್ಷೆಯನ್ನು ಯಶಸ್ವಿಯಾಗಿ ನಿಭಾಯಿಸುತ್ತಾರೆ ಅನ್ನುವುದು ದಡ್ಡತನ ಅನ್ನುವುದು ನಿಜ. ಆದಾಗ್ಯೂ ಅವರು ತಮ್ಮ ನಿರ್ಧಾರವನ್ನು ಕೈ ಬಿಡುವಂತೆ ಒತ್ತಾಯಿಸುವ ನಮ್ಮ ಯತ್ನ ಯಶಸ್ವಿಯಾಗುತ್ತದೆ ಅನ್ನುವುದು ಅದಕ್ಕಿಂತಲೂ ಹೆಚ್ಚಿನ ದಡ್ಡತನ."[೭೦]

ಗಾಂಧೀಜಿಯವರು ಸೆರೆಮನೆಯಲ್ಲಿ ಸಾಯುವುದು ಸರ್ಕಾರಕ್ಕೆ ಇಷ್ಟವಿರಲಿಲ್ಲ. ಜೊತೆಗೆ ಗಾಂಧೀಜಿಯವರು ಹರಿಜನ ಆಂದೋಲನದಲ್ಲಿ ಹೆಚ್ಚು ಹೆಚ್ಚು ತೊಡಗಿಕೊಳ್ಳುತ್ತಿರುವುದರಿಂದ ಅಸಹಕಾರ ಚಳವಳಿ ದುರ್ಬಲವಾಗುತ್ತಿರುವುದನ್ನು ಸರ್ಕಾರ ಗಮನಿಸಿತ್ತು. ಅದರಿಂದ ಗಾಂಧೀಜಿ ಉಪವಾಸವನ್ನು ಆರಂಭಿಸಿದ ದಿನವೆ ಅವರನ್ನು ಬಿಡುಗಡೆ ಮಾಡಿತು. ಅವರ ಹಿಂದೆ ದೇಸಾಯಿಯವರನ್ನೂ ಸರ್ಕಾರ ಬಿಡುಗಡೆ ಮಾಡಿತು, ಆದರೆ ಸರ್ದಾರರನ್ನು ಬಿಡುಗಡೆ ಮಾಡಲಿಲ್ಲ. ಅದರಿಂದ ಪಟೇಲರು ಗಾಂಧೀಜಿಯನ್ನು ಅಗಲಬೇಕಾಯಿತು.

ಬಿಡುಗಡೆಯಾದಾಗ ಜನರಿಗೆ ನೀಡಿದ ತಮ್ಮ ಮೊದಲನೆ ಹೇಳಿಕೆಯಲ್ಲಿ ಪಟೇಲರ ಬಗೆಗೆ ಗಾಂಧೀಜಿಯವರು ಈ ರೀತಿ ನುಡಿದರು:

> ನನ್ನ ಜೀವನದ ಅತ್ಯಂತ ಹೆಚ್ಚಿನ ಸಂತಸಗಳ ಪೈಕಿ ಒಂದು ಯಾವುದಾಗಿತ್ತೆಂದರೆ ಸೆರೆಮನೆಯಲ್ಲಿ ಸರ್ದಾರರೊಡನೆ ಇರಲು ಸಿಕ್ಕಿದ ಅವಕಾಶ. ಅವರ ಅಜೇಯ ಧೈರ್ಯ ಮತ್ತು ಜ್ವಲಂತ ದೇಶಪ್ರೇಮ ನನಗೆ ತಿಳಿದಿತ್ತು, ಆದರೆ ಕಳೆದ ೧೬ ತಿಂಗಳುಗಳ ದೀರ್ಘಕಾಲ ಅವರೊಡನೆ ಕಳೆಯುವ ಒಳ್ಳೆಯ ಅದೃಷ್ಟ ಇದಕ್ಕಿಂತ ಮುಂಚೆ ದೊರೆತಿರಲಿಲ್ಲ. ಅವರ ಮಮತೆ ಮತ್ತು ಪ್ರೀತಿ ನನ್ನನ್ನು ಭಾವಪರವಶಗೊಳಿಸಿತು ಮತ್ತು ನನ್ನ ಪ್ರೀತಿಯ ತಾಯಿಯನ್ನು ನೆನಪಿಗೆ ತಂದಿತು.

ಗಾಂಧೀಜಿಯವರು ಪುಣೆಯ ಬೆಟ್ಟದ ಮೇಲಿನ ಲೇಡಿ ಪ್ರೇಮ್‌ಲೀಲ ಥ್ಯಾಕರ್‌ಸೆ ಅವರ 'ಪರ್ಣಕುಟಿ'ಯಲ್ಲಿ ತಂಗಿ ತಮ್ಮ ಉಪವಾಸವನ್ನು ಮುಂದುವರೆಸಿದರು. ಒಂಟಿಯಾದ ಪಟೇಲರು ಗಾಂಧೀಜಿಯವರ ಉಪವಾಸದ ಮೂರು ವಾರಗಳು ಮುಗಿಯುವುದನ್ನೇ ನಿರೀಕ್ಷಿಸುತ್ತಾ ಸೆರೆಮನೆಯಲ್ಲಿದ್ದರು. ಸ್ವಲ್ಪ ದಿನಗಳ ನಂತರ ಮತ್ತೊಬ್ಬ ಸತ್ಯಾಗ್ರಹಿ ಚಗನ್‌ಲಾಲ್ ಜೋಶಿ ಅವರನ್ನು ಸೇರಿಕೊಂಡರು.

ಉಪವಾಸದ ಹತ್ತನೆಯ ದಿನ ರಾಜಾಜಿಯವರು 'ಬಾಪುರವರು ವಿಸ್ಮಯಕಾರಿಯಾಗಿ ಒಳ್ಳೆಯ ಸ್ಥಿತಿಯಲ್ಲಿದ್ದಾರೆ. ಎಲ್ಲವೂ ಒಳ್ಳೆಯದಾಗುವುದು ಎಂದು ಭಾವಿಸಿದ್ದೇನೆ' ಎಂದು ಸೆರೆಮನೆಯಲ್ಲಿದ್ದ ಪಟೇಲರಿಗೆ ಸಮಾಚಾರ ಕಳುಹಿಸಿದರು. ಕೊನೆಗೆ ಮೇ ೨೯ನೇ ದಿನ ಬಂದಿತು. ಗಾಂಧೀಜಿಯವರ ೨೧ ದಿನಗಳ ಉಪವಾಸ ಯಶಸ್ವಿಯಾಗಿ ಮುಕ್ತಾಯವಾಯಿತು. ನೆಮ್ಮದಿಗೊಂಡ ವಲ್ಲಭಭಾಯ್, ಗಾಂಧೀಜಿ, ಮಹದೇವ್ ಮತ್ತು ದೇವ್‌ದಾಸ್ ಗಾಂಧಿಗೆ ಪತ್ರಗಳನ್ನು ಬರೆದರು. ಅವರು ಗಾಂಧೀಜಿಗೆ, 'ವಾಸ್ತವವಾಗಿ ಭಗವಂತ ಬಹಳ ಕರುಣೆಯನ್ನು ತೋರಿದ್ದಾನೆ, ಆದರೆ ಈಗ ನೀವು ನಮಗೆ ಕರುಣೆ ತೋರಿಸಿ ಎಂದು ಬೇಡುತ್ತೇನೆ' ಎಂದು, ಮಹದೇವ್‌ಗೆ, 'ಈ ದಿನ ನಮ್ಮ ಕಣ್ಣುಗಳು ಆನಂದಭಾಷ್ಪದಿಂದ ತುಂಬಿವೆ ಮತ್ತು ನಾವು ಭಗವಂತನಿಗೆ ಕೃತಜ್ಞರಾಗಿದ್ದೇವೆ. ಈ ಸಂಜೆ ನಾನು ನಿಮ್ಮ ಪತ್ರಕ್ಕಾಗಿ ಕಾಯುತ್ತಿರುತ್ತೇನೆ,' ಎಂದು, ದೇವ್‌ದಾಸ್‌ರವರಿಗೆ, 'ದಯವಿಟ್ಟು ಬಾ ರವರಿಗೆ ನಮ್ಮ ನಮಸ್ಕಾರಗಳನ್ನು ತಿಳಿಸಿ ಮತ್ತು ಆಶೀರ್ವಾದಗಳನ್ನು ಕಳುಹಿಸುವಂತೆ ಅವರಿಗೆ ತಿಳಿಸಿ. ನಾವು ಯಾವ ರೀತಿಯೂ ಉಪಯೋಗಕ್ಕೆ ಬರಲಿಲ್ಲ,' ಎಂದು ಬರೆದರು.

ಉಪವಾಸ ಮುಕ್ತಾಯವಾದ ೫–೬ ದಿನಗಳ ನಂತರ ಗಾಂಧೀಜಿಯವರು ಪಟೇಲರಿಗೆ ಒಂದು ಪತ್ರ ಕಳುಹಿಸಿದರು. ಜೊತೆಯಲ್ಲಿ ಕೆಲವು ಮಾವಿನ ಹಣ್ಣುಗಳನ್ನು ಕಳುಹಿಸಿದರು. ಪಟೇಲರು ೫–೬–೩೩ರಂದು ಈ ರೀತಿ ಜವಾಬು ಬರೆದರು:

> ಹತ್ತಿರ ಹತ್ತಿರ ಒಂದು ತಿಂಗಳ ನಂತರ ನಾನು ನಿಮ್ಮ ಕೈ ಬರಹವನ್ನು ನೋಡುತ್ತಿದ್ದೇನೆ..... ನನಗೆ ಮಾವಿನ ಹಣ್ಣುಗಳನ್ನು ಏಕೆ ಕಳುಹಿಸಿದಿರಿ? ಈ ದಿನ ನನ್ನನ್ನು ಮುದ್ದು ಮಾಡುತ್ತೀರಿ ಆದರೆ ನಾಳೆ ನೀವು ಏನು ಮಾಡುತ್ತೀರೋ ಭಗವಂತನೇ ಬಲ್ಲ. ನಿಮ್ಮ ದಯೆ ಮತ್ತು ಅಹಿಂಸೆಯಲ್ಲಿ ಎಷ್ಟೊಂದು ಕ್ರೌರ್ಯ ಮತ್ತು ಹಿಂಸೆ ಇದೆ! ನನ್ನ ಮಾತಿನಲ್ಲಿ ನಿಮಗೆ ನಂಬಿಕೆ ಇಲ್ಲದೇ ಇದ್ದರೆ ಬಾರವರನ್ನು ಕೇಳಿ. ನನ್ನ ಮಾತನ್ನು ಅವರು ಸಂಪೂರ್ಣವಾಗಿ ಅನುಮೋದಿಸುತ್ತಾರೆ![೨೧]

೧೯೩೩ರ ಮಾರ್ಚ್‌ನಲ್ಲಿ ಗಾಂಧೀಜಿ ಸೆರೆಮನೆಯಲ್ಲಿದ್ದಾಗಲೇ ಬ್ರಿಟಿಷ್ ಸರ್ಕಾರವು ಭಾರತಕ್ಕೆ ಒಂದು ರಾಜ್ಯಾಂಗ ಯೋಜನೆ ಪ್ರಕಟಿಸಿತ್ತು. ಅದು ಬ್ರಿಟಿಷ್ ಪ್ರಾಂತ್ಯಗಳಲ್ಲಿ ಚುನಾಯಿತ ಶಾಸನ ಸಭೆ ಮತ್ತು ಮಂತ್ರಿ ಮಂಡಲಕ್ಕೆ ಅವಕಾಶ ಮಾಡಿತ್ತು. ಆದರೆ ಮಂತ್ರಿಮಂಡಲದ ತೀರ್ಮಾನವನ್ನು ನಿರಾಕರಿಸುವ ಅಧಿಕಾರ

ಗೌರ್ನರ್‌ಗೆ ಕೊಡಲ್ಪಟ್ಟಿತ್ತು. ಕೇಂದ್ರದಲ್ಲಿ ಒಂದು ಒಕ್ಕೂಟ ಶಾಸನ ಸಭೆಗೆ ಅವಕಾಶವಿತ್ತು. ಅದರ ಮೂರನೆ ಒಂದು ಭಾಗವನ್ನು ರಾಜರುಗಳು ಅಥವಾ ಅವರಿಂದ ನಾಮಕರಣಗೊಂಡವರು ತುಂಬುವುದಾಗಿತ್ತು. ಮಿಲಿಟರಿ, ಹಣಕಾಸು, ವಿದೇಶಿ ವ್ಯವಹಾರ ಮುಂತಾದ ಮುಖ್ಯ ಇಲಾಖೆಗಳು ಬ್ರಿಟಿಷ್ ಅಧಿಕಾರಿಗಳ ಕೈಯಲ್ಲೇ ಇರುತ್ತಿದ್ದುವು.

ಈ ಸುಧಾರಣೆ ಗಾಂಧೀಜಿ ಮತ್ತು ಕಾಂಗ್ರೆಸ್ಸಿಗೆ ಸಮಾಧಾನವನ್ನು ತರಲಿಲ್ಲ. ಪ್ರಾಂತ್ಯಗಳಲ್ಲಿ ಅಲ್ಪ ಸ್ವಲ್ಪ ಅಧಿಕಾರ ಭಾರತೀಯರಿಗೆ ದೊರಕಿದರೂ ಕೇಂದ್ರದಲ್ಲಿ ಏನೇನೂ ಅಧಿಕಾರ ದೊರಕಲಿಲ್ಲ. ಅದರಿಂದ ಗಾಂಧೀಜಿ ತಮ್ಮ ಹೋರಾಟವನ್ನು ಮತ್ತೆ ಶುರುಮಾಡಲು ಯೋಚಿಸಿದರು. ಈ ಬಾರಿ ಸಾಮೂಹಿಕ ಶಾಸನ ಭಂಗ ಚಳವಳಿಗೆ ಬದಲಾಗಿ ಕೆಲವೇ ಮಂದಿ ಸತ್ಯಾಗ್ರಹಿಗಳು ಆಯ್ದ ಸಂದರ್ಭಗಳಲ್ಲಿ ಶಾಸನ ಭಂಗ ಚಳವಳಿ ನಡೆಸಬೇಕೆಂದು ಗಾಂಧಿ ಹೇಳಿದರು. ಅದರಂತೆ ಜುಲೈ ಮಧ್ಯಭಾಗದಲ್ಲಿ ೩೦೦ ಮಂದಿ ಪೂನಾದಲ್ಲಿ ಸೇರಿ ಗಾಂಧೀಜಿಯ ಹೊಸ ವಿಧಾನವನ್ನು ಒಪ್ಪಿದರು ಮತ್ತು ಗಾಂಧೀಜಿಯವರು ವೈಸ್‌ರಾಯ್‌ನನ್ನು ಭೇಟಿ ಮಾಡಬೇಕೆಂದು ತೀರ್ಮಾನಿಸಿದರು. ಆದರೆ ವೈಸ್‌ರಾಯ್ ಗಾಂಧೀಜಿಯನ್ನು ಭೇಟಿ ಮಾಡಲು ನಿರಾಕರಿಸಿದನು. ಅದರಿಂದ ಗಾಂಧೀಜಿ ಪ್ರತಿಭಟನೆಗೆ ಇಳಿದರು. ಅವರು ತಾವು ಕಸ್ತೂರ್ ಬಾ, ಮಹದೇವ್ ಮತ್ತು ಇತರ ೩೦ ಮಂದಿಯೊಡನೆ ಜುಲೈ ೩೧ರಂದು ಸಬರಮತಿಯಿಂದ ರಾಸ್ ಗ್ರಾಮಕ್ಕೆ ನಡೆದು ಹೋಗುವುದಾಗಿ ಸರ್ಕಾರಕ್ಕೆ ತಿಳಿಸಿದರು. ಅಂದು ಸಂಜೆ ಪೊಲೀಸರು ಅವರನ್ನು ದಸ್ತಗಿರಿ ಮಾಡಿ ಸಬರಮತಿ ಸೆರೆಮನೆಯಲ್ಲಿ ಇಟ್ಟರು ಮತ್ತು ಆಗಸ್ಟ್ ೨ರಂದು ಅವರನ್ನು ಪುಣೆಯ ಯರವಾಡ ಸೆರೆಮನೆಗೆ ವರ್ಗಾಯಿಸಿದರು. ಈ ವರ್ಗಾವಣೆ ಗಾಂಧೀಜಿಗೆ ಸಂತಸವನ್ನುಂಟು ಮಾಡಿತು. ಅಲ್ಲಿ ತಾವು ವಲ್ಲಭಭಾಯ್‌ರವರನ್ನು ಮತ್ತೆ ಸೇರಿಕೊಳ್ಳಬಹುದೆಂಬುದು ಅವರ ಸಂತಸಕ್ಕೆ ಕಾರಣ. ಆದರೆ ಯರವಾಡ ಸೆರೆಮನೆಯಲ್ಲಿ ಅವರಿಗೆ ಭಾರಿ ನಿರಾಸೆ ಕಾದಿತ್ತು. ಹಿಂದಿನ ಸಂಜೆ ಪಟೇಲರನ್ನು ಅಲ್ಲಿಂದ ಬೊಂಬಾಯಿಗೆ ಅವರ ಮೂಗಿನ ತೊಂದರೆಗೆ ಶಸ್ತ್ರ ಚಿಕಿತ್ಸೆಗಾಗಿ ಕಳುಹಿಸಿದ್ದಾರೆಂಬುದು ತಿಳಿಯಿತು. ಅದು ಸುಳ್ಳು, ಪಟೇಲರನ್ನು ನಾಸಿಕ್ ಸೆರೆಮನೆಗೆ ಕಳುಹಿಸಿದ್ದರು, ಗಾಂಧೀಜಿಯಿಂದ ಬೇರ್ಪಡಿಸುವ ಉದ್ದೇಶದಿಂದ.

ಗಾಂಧೀಜಿಗೆ ಆದ ನಿರಾಸೆ ಅಷ್ಟಿಷ್ಟಲ್ಲ. "ಗೂಡು ಇದೆ ಆದರೆ ಹಕ್ಕಿ ಹಾರಿಹೋಗಿದೆ" ಎಂದರು ಅವರು. ಅಂದು ರಾತ್ರಿ ಮಲಗುವಾಗಲೂ ಅವರು ವಲ್ಲಭಭಾಯ್ ಇಲ್ಲದಿರುವುದರ ಬಗೆಗೇ ಚಿಂತಿಸುತ್ತಿದ್ದರು. ಮಲಗುವಾಗ

ಅವರೆಂದರು, "ಭಗವಂತ, ಈ ಗಾಯವು ಯೋಗದಿಂದಲೂ ವಾಸಿಯಾಗುವುದಿಲ್ಲ." ಅದು ಸಂಸ್ಕೃತ ನಾಟಕಕಾರ ಭರ್ತೃಹರಿಯ ಒಂದು ನುಡಿ. ಕೆಲವು ದಿನಗಳ ನಂತರ ಸರ್ಕಾರದ ನಿಜವಾದ ಉದ್ದೇಶ ಅವರಿಗೆ ತಿಳಿದಾಗ, ಅವರೆಂದರು, "ಅಂದರೆ ಅವರು ವಲ್ಲಭಭಾಯ್‌ಗೂ ಸಹ ಮೋಸ ಮಾಡಿದ್ದಾರೆ. ಅವರು (ವಲ್ಲಭಭಾಯ್) ತಮ್ಮನ್ನು ಶಸ್ತ್ರ ಚಿಕಿತ್ಸೆಗೆ ಕರೆದೊಯ್ಯುತ್ತಿದ್ದಾರೆ ಎಂದು ತಿಳಿದಿರಬೇಕು. ಎಂತಹ ಸಣ್ಣತನ! ಈ ಗಾಯ ಬೇಗನೆ ವಾಸಿಯಾಗುವುದಿಲ್ಲ!"[೭]

ಸೆರೆಮನೆಯಲ್ಲಿ ಅಧಿಕಾರಿಗಳು ತಮ್ಮ ಹರಿಜನ ಕೆಲಸಕ್ಕೆ ಅವಕಾಶವನ್ನು ನೀಡದ್ದರಿಂದ ಗಾಂಧೀಜಿಯವರು ಆಗಸ್ಟ್ ೧೬ರಂದು ಮತ್ತೆ ಉಪವಾಸವನ್ನು ಆರಂಭಿಸಿದರು. ಆಗಸ್ಟ್ ೧೮ರಂದು ಸರ್ಕಾರವು ಅವರಿಗೆ ಶರತ್ತು ಬದ್ಧ ಬಿಡುಗಡೆಯನ್ನು ನೀಡಲು ಮುಂದಾಯಿತು. ಆದರೆ ಗಾಂಧೀಜಿ ಅದನ್ನು ನಿರಾಕರಿಸಿದರು. ಅವರ ಆರೋಗ್ಯ ಬಹಳ ಕ್ಷೀಣಿಸಿದ್ದರಿಂದ ಎರಡು ದಿನಗಳ ನಂತರ ಅವರನ್ನು ಸಸ್ಸೂನ್ ಆಸ್ಪತ್ರೆಗೆ ಸೇರಿಸಲಾಯಿತು. ಮತ್ತೆರಡು ದಿನಗಳು ಕಳೆದುವು. ಅವರ ಸ್ಥಿತಿ ಅಪಾಯಕಾರಿ ಮಟ್ಟವನ್ನು ಮುಟ್ಟಿತು. ಸರ್ಕಾರ ಅವರನ್ನು ಆಗಸ್ಟ್ ೨೩ರಂದು ಯಾವ ಶರತ್ತು ಇಲ್ಲದೆ ಬಿಡುಗಡೆ ಮಾಡಿತು. ಆಗಸ್ಟ್ ೨೪ರಂದು ಗಾಂಧೀಜಿಯವರು ಪಟೇಲರಿಗೆ ಒಂದು ಪತ್ರ ಬರೆದು, "ಯರವಾಡ ಸೆರೆಮನೆಯಲ್ಲಿ ನಾನು ಸದಾ ನಿಮ್ಮ ಬಗ್ಗೆಯೇ ಯೋಚಿಸುತ್ತಿದ್ದೆ. ನನ್ನನ್ನು ಅಲ್ಲಿಗೆ ಕಳುಹಿಸುವುದಕ್ಕೆ ಒಂದು ದಿನ ಮುಂಚೆ ನಿಮ್ಮನ್ನು ನಾಸಿಕ್‌ಗೆ ಕಳುಹಿಸುವರೆಂದು ನಾನು ನಿರೀಕ್ಷಿಸಿರಲಿಲ್ಲ," ಎಂದು ತಿಳಿಸಿದರು.

ಸರ್ಕಾರವು ಗಾಂಧೀಜಿಯನ್ನು ಅವರಿಗೆ ನ್ಯಾಯಾಲಯ ನೀಡಿದ್ದ ೧೨ ತಿಂಗಳ ಸೆರೆವಾಸವನ್ನು ೧೧ ತಿಂಗಳು ಮುಂಚಿತವಾಗಿ ಆರೋಗ್ಯದ ಕಾರಣಕ್ಕಾಗಿ ಬಿಡುಗಡೆ ಮಾಡಿತ್ತು. ಅದರಿಂದ ಗಾಂಧೀಜಿಯವರು ೧೧ ತಿಂಗಳು ಕಳೆಯುವವರೆಗೆ ಅಂದರೆ ೧೯೩೪ರ ಆಗಸ್ಟ್‌ವರೆಗೆ ಸರ್ಕಾರದ ವಿರುದ್ಧ ಹೋರಾಟದಲ್ಲಿ ಭಾಗವಹಿಸುವುದಿಲ್ಲವೆಂದೂ, ತಾವು ಹರಿಜನ ಕಾರ್ಯದಲ್ಲಿ ತೊಡಗಿರುವರೆಂದೂ ಪ್ರಕಟಿಸಿದರು.

ಇತ್ತ ನಾಸಿಕ್ ಸೆರೆಮನೆಯಲ್ಲಿ ಸರ್ಕಾರವು ಪಟೇಲರನ್ನು ಬಹಳ ಕೆಟ್ಟ ರೀತಿಯಲ್ಲಿ ನಡೆಸಿಕೊಳ್ಳುತ್ತಿತ್ತು. ಅದರ ಅಂಗವಾಗಿ ಪಟೇಲರ ಕೊಠಡಿ ಮತ್ತು ಇತರ ಖೈದಿಗಳ ಕೊಠಡಿಯ ನಡುವಣ ಗೋಡೆಯನ್ನು ಮೂರು ಅಡಿ ಎತ್ತರಿಸಲಾಯಿತು. ಪಟೇಲರು ಸೆರೆಮನೆಯ ಸೂಪರಿಂಟೆಂಡೆಂಟ್‌ಗೆ, "ನೀವು ಏನು ಮಾಡಿದರೂ ನಾವು ಹೆದರುವುದಿಲ್ಲ. ಬೇಕಿದ್ದರೆ ನಮ್ಮನ್ನು ಕತ್ತಲ ಕೋಣೆಯಲ್ಲಿ

ಇಡಿ," ಎಂದರು. ಆ ಸೆರೆಮನೆಯಲ್ಲಿ ಅವರಿಗೆ ಓದಲು ಸಮಾಚಾರ ಪತ್ರಿಕೆಯನ್ನು ಕೊಡುತ್ತಿರಲಿಲ್ಲ. ಅವರು ಬರೆದ ಪತ್ರಗಳ ಕೆಲವು ವಾಕ್ಯಗಳನ್ನು ಹೊಡೆದು ಹಾಕಲಾಗುತ್ತಿತ್ತು. ಸ್ವಲ್ಪ ದಿನ ಒಬ್ಬ ಕ್ರಿಮಿನಲ್ ಖೈದಿಯನ್ನು ಮಾತ್ರ ಅವರ ಜೊತೆಯಲ್ಲಿ ಇಟ್ಟಿದ್ದರು. ಅವರ ಮೂಗಿನ ನೋವು ಉಲ್ಬಣಿಸಿತು. ರಾತ್ರಿಯ ವೇಳೆ ನೋವಿನಿಂದ ನಿದ್ರೆ ಮಾಡಲಾಗುತ್ತಿರಲಿಲ್ಲ. ಅಕ್ಟೋಬರ್ ವೇಳೆಗೆ ಪರಿಸ್ಥಿತಿ ಸ್ವಲ್ಪ ಸುಧಾರಿಸಿತು. ಬಾರ್ದೋಲಿ ಸತ್ಯಾಗ್ರಹದಲ್ಲಿ ಪಟೇಲರ ಜೊತೆಯಿದ್ದ ಡಾ॥ ಚಂದೂಲಾಲ್ ದೇಸಾಯಿಯೆಂಬ ರಾಜಕೀಯ ಖೈದಿಯನ್ನು ಅವರ ಜೊತೆಗೆ ಸೇರಿಸಿದರು.

ಈ ಮಧ್ಯೆ ಪಟೇಲರಿಗೆ ಮತ್ತೊಂದು ಸಂಕಟ ಎರಗಿತು. ಅವರ ಅಣ್ಣ ವಿಠ್ಠಲ್‌ಭಾಯ್ ಪಟೇಲ್‌ರವರು ೧೯೩೨ರ ಜನವರಿಯಲ್ಲಿ ಆರೋಗ್ಯ ಸುಧಾರಣೆಗಾಗಿ ವಿದೇಶಕ್ಕೆ ಹೋದವರು ಭಾರತಕ್ಕೆ ವಾಪಸ್ಸು ಬಂದೇ ಇರಲಿಲ್ಲ. ಅವರು ಅಮೆರಿಕ ಸಂಯುಕ್ತ ಸಂಸ್ಥಾನ, ಆಸ್ಟ್ರಿಯದಲ್ಲಿದ್ದು ಈಗ ಸ್ವಿಟ್ಜರ್‌ಲ್ಯಾಂಡ್‌ನ ಜಿನಿವದ ಆಸ್ಪತ್ರೆಯಲ್ಲಿ ಗಂಭೀರ ಸ್ಥಿತಿಯಲ್ಲಿದ್ದರು. ಅವರನ್ನು ಸುಭಾಷ್ ಚಂದ್ರ ಬೋಸ್ ಮತ್ತು ಕೆಲವು ಪರಿಚಿತರು ನೋಡಿಕೊಳ್ಳುತ್ತಿದ್ದರು. ವಿಷಯ ತಿಳಿದ ತಕ್ಷಣ ಸರ್ದಾರ್ ಪಟೇಲರು ತಮ್ಮ ಅಣ್ಣನಿಗೆ ಪತ್ರಗಳನ್ನು ಬರೆದರು. ಆದರೆ ಅವು ವಿಠ್ಠಲ್‌ಭಾಯ್ ಯನ್ನು ತಲುಪಲೇ ಇಲ್ಲ. ಸೆಪ್ಟೆಂಬರ್ ತಿಂಗಳಲ್ಲಿ ವಿಠ್ಠಲ್‌ಭಾಯ್ ಗತಿಸಿದರು. ಅವರ ಪಾರ್ಥಿವ ಶರೀರವನ್ನು ವಿಮಾನದ ಮೂಲಕ ಬೊಂಬಾಯಿಗೆ ತರಲಾಯಿತು. ತಮ್ಮ ಅಣ್ಣ ಸಾಯುವಾಗ ಅವರ ಬಳಿ ತಾವೂ ಇರಲಾಗಲಿಲ್ಲ ಬೇರೆ ಯಾರೂ ಬಂಧುಗಳು ಇರಲಿಲ್ಲವಲ್ಲ ಎಂದು ಪಟೇಲರು ಬಹಳ ದುಃಖಪಟ್ಟರು. ಸುಭಾಷ್ ಚಂದ್ರ ಬೋಸ್‌ರವರು ಗಾಂಧೀಜಿಗೆ ಒಂದು ಕೇಬಲ್ ಕಳುಹಿಸಿ, "ವಿಠ್ಠಲ್‌ಭಾಯ್ ರವರ ಅಂತ್ಯ ಸಂಸ್ಕಾರವನ್ನು ವಲ್ಲಭಭಾಯ್ ನೆರವೇರಿಸಬೇಕೆಂದೂ, ಅದನ್ನು ಗಾಂಧೀಜಿ ಏರ್ಪಡಿಸಬೇಕೆಂದೂ" ತಿಳಿಸಿದ್ದರು. ಅದು ವಿಠ್ಠಲ್‌ಭಾಯ್ ರವರ ಅಪೇಕ್ಷೆಯಾಗಿತ್ತು ಎಂದು ಕಾಣುತ್ತದೆ. ಸಾಯುವುದಕ್ಕೆ ಮುನ್ನ ವಿಠ್ಠಲ್‌ಭಾಯ್ ತಮ್ಮ ಅಪೇಕ್ಷೆಯನ್ನು ಸುಭಾಷ್‌ರವರಿಗೆ ತಿಳಿಸಿದ್ದರೆಂದು ಕಾಣುತ್ತದೆ. ವಲ್ಲಭಭಾಯ್ ತಮ್ಮನ್ನು ಪೆರೋಲ್ ಮೇಲೆ ಬಿಡುವಂತೆ ಸರ್ಕಾರಕ್ಕೆ ಮನವಿ ಸಲ್ಲಿಸಲಿಲ್ಲ. ಆದರೆ ಅವರ ಕೆಲವು ಸ್ನೇಹಿತರು ಆ ಕೆಲಸ ಮಾಡಿದರು. ಸರ್ಕಾರವು ೪೮ ಘಂಟೆಗಳ ಕಾಲ ಪೆರೋಲ್ ನೀಡಲು ಒಪ್ಪಿತು. ಆದರೆ ಯಾವ ರಾಜಕೀಯ ಭಾಷಣವನ್ನು ಮಾಡುವುದಿಲ್ಲ ಮತ್ತು ಪೂರ್ವ ನಿಗಧಿತ ಸ್ಥಳ ಮತ್ತು ಕಾಲದಲ್ಲಿ ಮರು ದಸ್ತಗಿರಿಗೆ ಹಾಜರಾಗುವುದಾಗಿ ಪಟೇಲರು ಬರೆದುಕೊಡಬೇಕೆಂದು, ತಿಳಿಸಿತು. ಪಟೇಲರು ನಿರಾಕರಿಸಿದರು. ಅವರು, "ನನ್ನ

ಪ್ರಾಮಾಣಿಕತೆ ಮತ್ತು ಆತ್ಮಗೌರವವನ್ನು ಬಲಿಗೊಟ್ಟು ಸ್ವಾತಂತ್ರ್ಯವನ್ನು ಪಡೆಯಲಾರೆ," ಎಂದರು. ಸರ್ದಾರರ ಮಗ ದಹ್ಯಾಭಾಯ್ ವಿಠ್ಠಲ್‌ಭಾಯ್ ರವರ ಅಂತ್ಯಸಂಸ್ಕಾರವನ್ನು ನೆರವೇರಿಸಿದರು. ವಿಠ್ಠಲ್‌ಭಾಯ್ ರವರಿಗೆ ಮಕ್ಕಳಿರಲಿಲ್ಲ.

ವಿಠ್ಠಲ್‌ಭಾಯ್‌ರವರ ಸಾವಿಗೆ ಸಂತಾಪ ಸೂಚಕ ಪತ್ರಗಳು ಮತ್ತು ಟೆಲಿಗ್ರಾಂಗಳು ಅನೇಕರಿಂದ ವಲ್ಲಭಭಾಯ್‌ರವರಿಗೆ ಬಂದುವು. ಅವೆಲ್ಲವನ್ನು ಸರ್ದಾರ ಪಟೇಲ್‌ರವರಿಗೆ ನೀಡಿತು. ಅವರೆಲ್ಲರಿಗೂ ವೈಯುಕ್ತಿಕ ವಂದನೆ ಸಲ್ಲಿಸಲು ಪಟೇಲರಿಗೆ ಸಾಧ್ಯವಿರಲಿಲ್ಲ. ಅದರಿಂದ ಅವರು ಸರ್ದಾರಕ್ಕೆ ಒಂದು ಮನವಿ ಸಲ್ಲಿಸಿ, "ನನ್ನೊಡನೆ ದುಃಖವನ್ನು ಹಂಚಿಕೊಂಡ ಎಲ್ಲರಿಗೂ ನನ್ನ ಕೃತಜ್ಞತೆಗಳು. ಪ್ರತಿಯೊಬ್ಬರಿಗೂ ವೈಯುಕ್ತಿಕ ಜವಾಬನ್ನು ಇಲ್ಲಿಂದ ಕಳುಹಿಸಲು ಸಾಧ್ಯವಿಲ್ಲ," ಎಂಬ ತಮ್ಮ ಪತ್ರಿಕಾ ಪ್ರಕಟಣೆಯನ್ನು ಪ್ರಕಟಿಸುವಂತೆ ಕೋರಿದರು. ಸರ್ದಾರವು ಒಪ್ಪಿತು ಆದರೆ ಆ ಪ್ರಕಟಣೆಯಿಂದ 'ಇಲ್ಲಿಂದ' ಅನ್ನುವ ಪದವನ್ನು ತೆಗೆಯಬೇಕೆಂದು ಶರತ್ತು ಹಾಕಿತು. ವಲ್ಲಭಭಾಯ್ ಒಪ್ಪಲಿಲ್ಲ, ಸರ್ದಾರ ಆ ಹೇಳಿಕೆಯನ್ನು ಪ್ರಕಟಿಸಲಿಲ್ಲ.[೭೩]

ಸಾಯುವ ಮುನ್ನ ವಿಠ್ಠಲ್‌ಭಾಯ್ ಒಂದು ಉಯಿಲನ್ನು ಬರೆದಿದ್ದರು. ಆ ಉಯಿಲಿನಲ್ಲಿ ಅವರು ತಮ್ಮ ಆಸ್ತಿಯ ನಾಲ್ಕನೇ ಮೂರು ಭಾಗಕ್ಕಿಂತಲೂ ಹೆಚ್ಚಿನ ಭಾಗವನ್ನು ಸುಭಾಷ್ ಚಂದ್ರ ಬೋಸ್‌ರವರಿಗೆ ಬಿಟ್ಟಿದ್ದರು. ಸುಭಾಷ್‌ರವರು ಆ ಹಣವನ್ನು ಭಾರತದ ರಾಜಕೀಯ ಏಳ್ಗೆಗೆ ಮತ್ತು ವಿದೇಶಗಳಲ್ಲಿ ಭಾರತದ ಸಮಸ್ಯೆಯನ್ನು ಪ್ರಚಾರ ಮಾಡುವುದಕ್ಕೆ ವೆಚ್ಚ ಮಾಡಬೇಕೆಂದು ವಿಠ್ಠಲ್‌ಭಾಯ್ ತಮ್ಮ ಉಯಿಲಿನಲ್ಲಿ ಸೂಚಿಸಿದ್ದರು. ಪಿ.ಟಿ. ಪಟೇಲ್‌ಭಾಯ್ ಮತ್ತು ಗೋವರ್ಧನ್‌ಭಾಯ್ ಪಟೇಲ್‌ರನ್ನು ತಮ್ಮ ಉಯಿಲಿನ ಎಕ್ಸೆಕ್ಯೂಟರನ್ನಾಗಿ ನಿಯಮಿಸಿದ್ದರು. ಅದಾದ ಕೆಲವೇ ದಿನಗಳಲ್ಲಿ ಪಿ.ಟಿ. ಪಟೇಲ್ ಗತಿಸಿದ್ದರಿಂದ ಗೋವರ್ಧನ್‌ಭಾಯ್ ಪಟೇಲ್‌ರವರು ಏಕಮಾತ್ರ ಎಕ್ಸೆಕ್ಯೂಟರ್ ಆದರು. ಅವರಿಗೆ ಸುಭಾಷ್‌ರವರು ಉಯಿಲಿನ ಪ್ರತಿಯನ್ನು ಕಳುಹಿಸಿದರು. ಮೂಲ ದಾಖಲೆ ಕಳುಹಿಸಲಿಲ್ಲ. ಗೋವರ್ಧನ್‌ರವರು ಅದರ ಸಮೇತ ನಾಸಿಕ ಸೆರೆಮನೆಯಲ್ಲಿ ವಲ್ಲಭಭಾಯ್‌ರವರನ್ನು ಭೇಟಿ ಮಾಡಿದರು.

ವಲ್ಲಭಭಾಯ್‌ರವರು ಅನೇಕ ತೀಕ್ಷ್ಣವಾದ ಪ್ರಶ್ನೆಗಳನ್ನು ಎತ್ತಿ ಅವುಗಳಿಗೆ ಉತ್ತರ ಪಡೆಯುವಂತೆ ಸೂಚಿಸಿದರು. ಅದೇ ಪ್ರಕಾರ ಗೋವರ್ಧನ್‌ರವರು ಸುಭಾಷ್‌ರವರಿಗೆ ಪತ್ರ ಬರೆದು, ಆ ಪ್ರಶ್ನೆಗಳ ಬಗೆಗೆ ಬೆಳಕು ಚೆಲ್ಲುವಂತೆ ಕೋರಿದರು. ಅವರು ಎಷ್ಟು ಪತ್ರಗಳನ್ನು ಬರೆದರೂ ಸುಭಾಷ್‌ರಿಂದ ಉತ್ತರ ಬರಲಿಲ್ಲ. ಹಲವು

ತಿಂಗಳುಗಳ ನಂತರ ಸುಭಾಷರ ವಕೀಲರಿಂದ ಗೋವರ್ಧನ್‌ಗೆ, ವಿಠ್ಠಲ್‌ಭಾಯ್ ರವರ ಹಣವನ್ನು ಸುಭಾಷ್‌ಗೆ ಕಳುಹಿಸುವಂತೆ, ಸೂಚನೆ ಬಂದಿತು. ಉಯಿಲಿನ ಅರ್ಥ ವ್ಯಾಖ್ಯಾನದ ಬಗೆಗೆ ಒಮ್ಮತ ಮೂಡುವವರೆಗೆ ಹಣವನ್ನು ಕಳುಹಿಸಲು ಸಾಧ್ಯವಿಲ್ಲವೆಂದು ಗೋವರ್ಧನ್ ಉತ್ತರಿಸಿದರು. ಹೀಗೆ ವಿವಾದ ಮುಂದುವರೆಯಿತು, ಆದರೆ ಯಾರೂ ನ್ಯಾಯಾಲಯಕ್ಕೆ ಹೋಗಲಿಲ್ಲ.

ಈ ಮಧ್ಯೆ ಜುಲೈ ೧೯೩೪ರಲ್ಲಿ ವಲ್ಲಭಭಾಯ್ ನಾಸಿಕ್ ಸೆರೆಮನೆಯಿಂದ ಬಿಡುಗಡೆಯಾದರು. ಅವರು, ಕಾನೂನಿನ ಪ್ರಕಾರ ವಿಠ್ಠಲ್‌ಭಾಯ್ ರವರ ಉತ್ತರಾಧಿಕಾರಿಗಳಾಗಬಹುದಾದ ಎಲ್ಲಾ ನೆಂಟರಿಂದ 'ವಿಠ್ಠಲ್‌ಭಾಯ್ ರವರ ಆಸ್ತಿಯಲ್ಲಿ ನಮಗೆ ಒಂದು ಪೈಸೆಯೂ ಬೇಡ' ಎನ್ನುವ ವಾಗ್ದಾನವನ್ನು ಪಡೆದುಕೊಂಡರು. ೧೯೩೫ರಲ್ಲಿ ಸುಭಾಷ್‌ರವರು ಕಾಂಗ್ರೆಸ್ಸಿನ ಅಧ್ಯಕ್ಷರಾದರು. ಆಗ ಸರ್ದಾರರು 'ವಿವಾದಿತ ಹಣ ಕಾಂಗ್ರೆಸ್ಸಿನ ಒಂದು ವಿಶೇಷ ಸಮಿತಿಗೆ ಹೋಗಲಿ' ಎಂಬ ಪ್ರಸ್ತಾವನೆಯನ್ನು ಮುಂದಿಟ್ಟರು. ಸುಭಾಷರು ಒಪ್ಪಿದರು. ಆದರೆ ಸಮಿತಿಯ ಸದಸ್ಯರ ಬಗೆಗೆ ಇಬ್ಬರೂ ಒಮ್ಮತಕ್ಕೆ ಬರಲಿಲ್ಲ.

೧೯೩೯ರಲ್ಲಿ ಗೋವರ್ಧನ್‌ಭಾಯ್ ಪಟೇಲ್‌ರವರು ಬಾಂಬೆ ಉಚ್ಚ ನ್ಯಾಯಾಲಯಕ್ಕೆ ಮನವಿ ಸಲ್ಲಿಸಿದರು. ನ್ಯಾಯಾಧೀಶ ಬಿ.ಜೆ. ವಾಡಿಯರವರು, 'ಸುಭಾಷ್‌ರವರು ಯಾವ ಉದ್ದೇಶಗಳಿಗೆ ಹಣವನ್ನು ವೆಚ್ಚ ಮಾಡಬೇಕು ಎನ್ನುವುದು ವಿಠ್ಠಲ್‌ಭಾಯ್ ರವರ ಉಯಿಲಿನಲ್ಲಿ ಅಸ್ಪಷ್ಟವಾಗಿದೆ ಅದರಿಂದ ಅದು ಅಸಿಂಧು' ಎಂದು ಹೇಳಿ, ವಿಠ್ಠಲ್‌ಭಾಯ್ ರವರ ಆಸ್ತಿ ಅವರ ಉತ್ತರಾಧಿಕಾರಿಗಳಿಗೆ ಸೇರಿದ್ದು ಎಂದು ತೀರ್ಪಿತ್ತರು. ಎರಡು ದಿನಗಳ ನಂತರ ವಲ್ಲಭಭಾಯ್‌ರವರು 'ಆ ಹಣವು ವಿಠ್ಠಲ್‌ಭಾಯ್ ಸ್ಮಾರಕ ಟ್ರಸ್ಟ್‌ಗೆ ಹೋಗುವುದು' ಎಂದು ಪ್ರಕಟಿಸಿದರು. ಸುಭಾಷ್‌ರವರು ಉಚ್ಚ ನ್ಯಾಯಾಲಯದ ತೀರ್ಪಿನ ವಿರುದ್ಧ ಸರ್ವೋಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿದರು. ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶ ಸರ್ ಜಾನ್ ಬ್ಯೂಮಾಂಟ್ ಮತ್ತು ನ್ಯಾಯಾಧೀಶ ಕಾನಿಯರವರು ಸೆಪ್ಟೆಂಬರ್ ೧೯೩೯ರಲ್ಲಿ ನ್ಯಾಯಾಧೀಶ ವಾಡಿಯರವರ ತೀರ್ಪನ್ನು ಎತ್ತಿ ಹಿಡಿದರು. ಒಂದು ವರ್ಷದ ನಂತರ ವಲ್ಲಭಭಾಯ್ ಪಟೇಲರು ವಿಠ್ಠಲ್‌ಭಾಯ್ ರವರ ಉತರಾಧಿಕಾರಿಗಳ ಪರವಾಗಿ ಒಂದು ಲಕ್ಷದ ಇಪ್ಪತ್ತು ಸಾವಿರ ರೂಪಾಯಿಗಳನ್ನು ವಿಠ್ಠಲ್‌ಭಾಯ್ ಸ್ಮಾರಕ ಟ್ರಸ್ಟ್‌ಗೆ ನೀಡಿದರು.[೭೪]

ನಾವು ಸ್ವಲ್ಪ ಹಿಂದಕ್ಕೆ, ನಾಸಿಕ್ ಸೆರೆಮನೆಗೆ ಮತ್ತೆ ಹೋಗಬೇಕು, ಪಟೇಲರು ಅಲ್ಲಿದ್ದಾಗ ಇನ್ನೂ ಕೆಲವು ಮುಖ್ಯ ಘಟನೆಗಳು ನಡೆದುವು.

೧೯೩೪ರ ಆರಂಭದಲ್ಲಿ ಪ್ಯಾರೆಲಾಲ್‌ರವರು (ಮುಂದೆ ಗಾಂಧೀಜಿಯವರ ಜೀವನ ಚರಿತ್ರೆ ಬರೆದವರು) ವಲ್ಲಭಭಾಯ್‌ರವರ ಭೇಟಿಗೆ ನಾಸಿಕ್ ಸೆರೆಮನೆಗೆ ಹೋದರು. ಅವರಿಗೆ ೫೩ ವರ್ಷದ ಪಟೇಲರು ಬಹಳ ವಯಸ್ಸಾದವರಂತೆ ಕಂಡರು. ಅವರು ಸೆರೆಮನೆಯ ಜೀವನ ಅದಕ್ಕೆ ಕಾರಣ ಅಂದುಕೊಂಡರೆಂದು ಕಾಣುತ್ತದೆ. ಅವರು ಗಾಂಧೀಜಿಯವರ ಮೂರನೆಯ ಮಗ ರಾಮದಾಸ್‌ಗೆ ಪಟೇಲರ ರೂಪದ ಬಗೆಗೆ ಹೇಳಿದರು. ಆತಂಕಗೊಂಡ ರಾಮದಾಸ್ ಪಟೇಲರಿಗೆ ಪತ್ರ ಬರೆದರು. ಆದರೆ ಪಟೇಲರು ಶಾಂತವಾಗಿ ಜವಾಬು ಬರೆದರು:

> ನಾನು ದಸ್ತಗಿರಿ ಆಗಿದ್ದಕ್ಕಿಂತ ಈಗ ಎರಡೂ ಕಾಲು ವರ್ಷ ದೊಡ್ಡವನಾಗಿದ್ದೇನೆ. ಪ್ಯಾರೆಲಾಲ್‌ರವರು ನಾನು ವೃದ್ಧಾಪ್ಯವನ್ನು ಪ್ರವೇಶಿಸುತ್ತಿದ್ದೇನೆಂದು ಭಾವಿಸಿದ್ದರಲ್ಲಿ ಆಶ್ಚರ್ಯವಿಲ್ಲ. ಆದರೆ ನನ್ನ ಸೆರೆವಾಸದ ಬಗ್ಗೆ ಸ್ವಲ್ಪವೂ ಚಿಂತಿಸಬೇಡ. ಅದನ್ನು ನಾವೇ ಸ್ವಇಚ್ಛೆಯಿಂದ ಕೇಳಿದೆವು ಮತ್ತು ಸಂತೋಷದಿಂದ ಒಪ್ಪಿದ್ದೇವೆ.[೭೫]

ಒಂದು ದಿನ ಪಟೇಲರ ಒಬ್ಬ ಹಳೆಯ ಸಹಚರ ನಡಿಯಾಡ್‌ನ ಫೂಲ್‌ಚಂದ್ ಬಾಪೂಜಿ ಷಾ ರವರ ಮರಣವಾರ್ತೆ ಬಂದಿತು. ಬೆಳಗಾಂನ ಸೆರೆಮನೆಯಲ್ಲಿದ್ದ ತಮ್ಮ ಮಗಳು ಮಣಿಬೆನ್‌ಗೆ ಪತ್ರ ಬರೆದು ಫೂಲ್‌ಚಂದ್‌ರವರ ಒಳ್ಳೆಯತನ ಮತ್ತು ದೀರ್ಘ ಸೇವೆಯನ್ನು ಸ್ಮರಿಸಿದರು. ಫೂಲ್‌ಚಂದ್‌ರವರು ತಮ್ಮ ಪತ್ನಿ, ಮಕ್ಕಳು ಅಥವಾ ನೆಂಟರು ಯಾರೂ ಬಳಿ ಇಲ್ಲದಿದ್ದಾಗ ಅರ್ಧ ರಾತ್ರಿಯಲ್ಲಿ ಇದ್ದಕ್ಕಿದ್ದ ಹಾಗೆ ಗತಿಸಿದ್ದರು. ಆ ವಿಷಯವನ್ನು ಮಣಿ ಬೆನ್‌ಗೆ ಬರೆದ ನಂತರ ಬಾಂಧವ್ಯದ ಹೆಮ್ಮೆಯ ಬಗೆಗೆ ಒಂದು ಪದ್ಯವನ್ನು ಉದ್ಧರಿಸಿದರು:

> ಯಾರ ಮಗ? ಯಾರ ಕರು? ಯಾರ ತಂದೆ? ಯಾರ ತಾಯಿ? ವ್ಯರ್ಥ ಪ್ರಶ್ನೆಗಳು! ಅಂತ್ಯದಲ್ಲಿ ಪ್ರತಿಯೊರ್ವನು ತೆರಳುವುದು ಒಂಟಿ. ತಮ್ಮೊಡನೆ ಒಯ್ಯುವುದು ಬದುಕಿನ ತಮ್ಮ ಪಾಪ ಮತ್ತು ಪುಣ್ಯಗಳನ್ನು ಮಾತ್ರ.
>
> ಇಂತಹ ನಿರ್ಲಿಪ್ತ ಭಾವದ ನಡುವೆಯೂ ಜವಾಬ್ದಾರಿಗಳನ್ನು ಹೊರುವ ಮತ್ತು ನೊಂದವರ ಸೇವೆ ಮಾಡುವ ಉತ್ಕಟ ಬಯಕೆ ಅವರಲ್ಲಿ ಹಾಗೆಯೆ ಉಳಿಯಿತು. ೧೯೩೪ರ ಜನವರಿಯಲ್ಲಿ ಬಿಹಾರದಲ್ಲಿ ಒಂದು ಭಾರಿ ಭೂಕಂಪ ಸಂಭವಿಸಿತು. ಇಡೀ ಪಟ್ಟಣಗಳೇ ನಾಶವಾದುವು. ಸಾವಿರಾರು ಮಂದಿ ಅಸುನೀಗಿದರು ಇಲ್ಲಾ ನಿರಾಶ್ರಿತರಾದರು. ವಲ್ಲಭಭಾಯ್‌ಗೆ ತಕ್ಷಣ ಬಿಹಾರ್‌ಗೆ

ಧಾವಿಸುವ ಮತ್ತು ಪರಿಹಾರ ಕಾರ್ಯಗಳನ್ನು ಕೈಗೊಳ್ಳುವ ತೀವ್ರ ಬಯಕೆ ಉಂಟಾಯಿತು. ಹಿಂದೆ ಖೇಡಾ ಜಿಲ್ಲೆಯಲ್ಲಿ ಪ್ರವಾಹ ಬಂದಾಗ ತಾವು ಕೈಗೊಂಡ ಕಾರ್ಯಗಳು ನೆನಪಿಗೆ ಬಂದುವು. ಬಿಹಾರಿನ ಭೂಕಂಪದ ಪರಿಣಾಮ ಖೇಡಾ ಪ್ರವಾಹದ ಪರಿಣಾಮಕ್ಕಿಂತಲೂ ಭೀಕರವಾದುದು. ಆದರೆ ಪಟೇಲರು ಏನೂ ಮಾಡುವ ಹಾಗಿರಲಿಲ್ಲ. ಸೆರೆಮನೆಯ ನಾಲ್ಕು ಗೋಡೆಗಳ ನಡುವೆ ಸಿಕ್ಕಿ ವಿಲಿ ವಿಲಿ ಒದ್ದಾಡಿದರು. ಪ್ರಥಮ ಬಾರಿಗೆ ಸೆರೆಮನೆ ಕೆಟ್ಟದ್ದು ಅನ್ನಿಸಿತು ಅವರಿಗೆ!

೧೯೩೪ರ ಏಪ್ರಿಲ್‌ನಲ್ಲಿ ಗಾಂಧೀಜಿಯವರು ಆಯ್ದ ಸತ್ಯಾಗ್ರಹಿಗಳ ಶಾಸನ ಭಂಗ ಚಳವಳಿಯನ್ನು ನಿಲ್ಲಿಸುತ್ತಿರುವುದಾಗಿಯೂ, ತಾವೊಬ್ಬರಿಗೆ ಮಾತ್ರ ಆ ಚಳವಳಿ ಹೂಡುವ ಅಧಿಕಾರ ಉಳಿಸಿಕೊಳ್ಳುವುದಾಗಿಯೂ ಮತ್ತು ಶಾಸನ ಸಭೆಗಳ ಪ್ರವೇಶಕ್ಕೆ ಅನುಮತಿ ನೀಡುವುದಾಗಿಯೂ ಪ್ರಕಟಿಸಿದರು. ಅವರು ಜುಲೈ ೧೯೩೩ರ ಸಾಮೂಹಿಕ ಶಾಸನ ಭಂಗವನ್ನು ನಿಲ್ಲಿಸಿ ಆಯ್ಕೆಯ ಶಾಸನ ಭಂಗಕ್ಕೆ ಅವಕಾಶ ನೀಡಿದ್ದರು. ಈಗ ಅದನ್ನೂ ಸಹ ಸ್ಥಗಿತಗೊಳಿಸಿ ಶಾಸನ ಸಭಾ ಪ್ರವೇಶಕ್ಕೆ ಮತ್ತೆ ಅವಕಾಶ ಮಾಡಿದರು. ಅದರಿಂದ ಪಟೇಲರಿಗೆ ಭಾರಿ ಆಘಾತವಾಯಿತು. ಅದನ್ನು 'ಬಾಪು ಬಾಂಬಿನ ಸಿಡಿತ' ಎಂದು ಮಣಿಬೆನ್‌ಗೆ ಬರೆದ ಪತ್ರದಲ್ಲಿ ಕರೆದರು. ಬಾಪುವಿಗೇ ಪತ್ರ ಬರೆದು, 'ನಿಮ್ಮ ತೀರ್ಮಾನದಿಂದ ನನಗೆ ಗೊಂದಲ ಮತ್ತು ಸಂಕಟವಾಗಿದೆ,' 'ನೀವು ಜನರಿಗೆ ನೀಡಿದ್ದ ಆಯುಧವನ್ನು ವಾಪಸ್ಸು ಕಿತ್ತುಕೊಂಡಿದ್ದೀರಿ' ಮತ್ತು 'ಸ್ವರಾಜ್ಯ ಪಕ್ಷಕ್ಕೆ ಆಶ್ಚರ್ಯಕರ ಮರುಜೀವನ ನೀಡಿದ್ದೀರಿ' ಎಂದು ತಮ್ಮ ಭಾವನೆಗಳನ್ನು ತೋಡಿಕೊಂಡರು. ಉತ್ತರ ಭಾರತದಲ್ಲಿ ಸೆರೆಮನೆಯಲ್ಲಿದ್ದ ಜವಹರಲಾಲ್ ನೆಹರು ಮೊದಲಾದ ಅನೇಕ ಕಾಂಗ್ರೆಸ್ ನಾಯಕರು ಗಾಂಧೀಜಿಯವರ ತೀರ್ಮಾನಕ್ಕೆ ಆಘಾತ ವ್ಯಕ್ತ ಪಡಿಸಿದರು. ಆದರೆ, ಗಾಂಧೀಜಿಯವರ ತೀರ್ಮಾನವು ಸತ್ಯಾಗ್ರಹಿಗಳಿಗೆ ಅವಶ್ಯಕವಾಗಿದ್ದ ವಿಶ್ರಾಂತಿಯನ್ನು ಒದಗಿಸುತ್ತಿದ್ದುದರಿಂದ, ಸಾಮಾನ್ಯ ಜನರು ಗಾಂಧೀಜಿಯ ಪರವಾಗಿದ್ದರು.

ಗಾಂಧೀಜಿಯವರು ೧೯೩೪ರ ಏಪ್ರಿಲ್ ೧೮ರಂದು ಸರ್ದಾರರಿಗೆ ಪತ್ರ ಬರೆದು ಸಮಾಧಾನಗೊಳಿಸಲೆತ್ನಿಸಿದರು:

"ನಿನಗಾಗುತ್ತಿರುವ ನೋವನ್ನು ನಿನ್ನ ಪತ್ರಗಳಿಂದ ನಾನು ಅರಿಯಬಲ್ಲೆ..... ಸ್ವಲ್ಪ ತಾಳ್ಮೆಯಿಂದಿರು. ಅಂತ್ಯದಲ್ಲಿ ಎಲ್ಲವೂ ಒಳ್ಳೆಯ ರೀತಿಯಲ್ಲಿ ಮುಕ್ತಾಯವಾಗುತ್ತದೆ..... ಸ್ವರಾಜ್ಯ ಪಕ್ಷದ

ಪುನರುಜ್ಜೀವನವನ್ನು ಅರ್ಥಮಾಡಿಕೊಳ್ಳುವುದು ಸುಲಭವಾಗುತ್ತದೆ. ಜಿಲೇಬಿಯನ್ನು ತಿನ್ನಬೇಕೆಂದು ಸದಾ ಕನಸು ಕಾಣುತ್ತಿರುವ ವ್ಯಕ್ತಿ, ಅದರ ರುಚಿಯನ್ನು ಅವನೇ ಕಂಡುಕೊಳ್ಳುವುದು ಉತ್ತಮವಲ್ಲವೆ? ಪ್ರತಿ ದಿನ ಶಾಸನ ಪರಿಷತ್ತಿಗೆ ಉತ್ಸಾಹದಿಂದ ಹೋಗುವವರಿಗೆ ಅಲ್ಲಿಗೆ ಹೋಗಲು ಅನುಮತಿಸಬೇಕು. ನಾನು ಆಯುಧವನ್ನು ಕಿತ್ತುಕೊಂಡಿಲ್ಲ. ಅದರ ಸಾಮರ್ಥ್ಯವನ್ನು ಸಾಬೀತು ಮಾಡುವುದಕ್ಕಾಗಿ ಅದರ ಉಪಯೋಗವನ್ನು ಮುಂದೂಡಿದ್ದೇನೆ."

ಯರವಾಡ ಸೆರೆಮನೆಯಲ್ಲಿದ್ದಾಗ ಪಟೇಲರು ಸಹ ಗಾಂಧೀಜಿಯವರ 'ಶಾಸನ ಪರಿಷತ್ತುಗಳನ್ನು ವಶಪಡಿಸಿಕೊಳ್ಳಬಹುದು' ಎನ್ನುವ ಅಭಿಪ್ರಾಯವನ್ನು ಒಪ್ಪಿದ್ದರು. ಆದರೆ ಅದು ಈಗ ಒಪ್ಪಿಗೆ ಆಗಿರಲಿಲ್ಲ. ಏಕೆ? ಸ್ವರಾಜ್ಯ ಪಕ್ಷಿಗಳು ಶಾಸನ ಪರಿಷತ್ತಿನಲ್ಲಿ ಅಧಿಕಾರವನ್ನು ಅನುಭವಿಸುತ್ತಾರೆ. ಆದರೆ ಶಾಸನ ಭಂಗ ಚಳವಳಿ ಮಾಡಿದವರು ತಮ್ಮ ನೆನಪುಗಳನ್ನು ಮಾತ್ರ ಮೆಲಕು ಹಾಕುತ್ತಾ ಕುಳಿತುಕೊಳ್ಳಬೇಕಾಗುತ್ತದೆ – ಅನ್ನುವುದು ಪಟೇಲರ ವಿರೋಧಕ್ಕೆ ಕಾರಣವಾಗಿತ್ತು. ಆದರೆ ಆಗ ಅವರಿಗೆ ಒಂದು ವಿಷಯ ಅರ್ಥವಾಗಿರಲಿಲ್ಲ ಅಥವಾ ಗೊತ್ತಿರಲಿಲ್ಲ. ಅದೇನೆಂದರೆ, ಶಾಸನ ಪರಿಷತ್ತುಗಳನ್ನು ಪ್ರವೇಶಿಸುವುದು ಕಾಂಗ್ರೆಸ್ ಪಕ್ಷವೇ ಹೊರತು, ಅದರ ಪರವಾಗಿ ಸ್ವತಂತ್ರ ಪಕ್ಷದವರು ಅಲ್ಲ ಎನ್ನುವುದು. ಈ ವಿವರಣೆಯನ್ನು ಗಾಂಧೀಜಿಯವರು ಸೆರೆಮನೆಯಿಂದ ಬಿಡುಗಡೆಯಾದ ರಾಜಾಜಿ ಮೊದಲಾದವರಿಗೆ ನೀಡಿದರು. ಆಗ ಪಟೇಲರಿಗೆ ಸಮಾಧಾನವಾಯಿತು.

ಸರ್ಕಾರವು ಕಾಂಗ್ರೆಸ್ ಪಕ್ಷ ಮತ್ತು ಅದರ ಅಂಗ ಸಂಸ್ಥೆಗಳನ್ನು ನಿಷೇಧಿಸಿದ್ದರೂ ಸಹ, ಅದೇಕೊ ಅಖಿಲ ಭಾರತ ಕಾಂಗ್ರೆಸ್ ಸಮಿತಿಯನ್ನು ಮಾತ್ರ ನಿಷೇಧಿಸಿರಲಿಲ್ಲ. ಆ ಸಮಿತಿಯವರು (ಅಧ್ಯಕ್ಷ ಪಟೇಲ್‌ರನ್ನು ಬಿಟ್ಟು ಉಳಿದವರು) ಮೇ ತಿಂಗಳ ೩ನೆ ವಾರದಲ್ಲಿ ಪಾಟ್ನಾದಲ್ಲಿ ಸಭೆ ಸೇರಿ ಕಾಂಗ್ರೆಸ್ಸು ನೇರವಾಗಿ ಶಾಸನ ಪರಿಷತ್ತುಗಳನ್ನು ಪ್ರವೇಶಿಸುವುದು ಎಂದು ಪ್ರಕಟಿಸಿದರು.

ರಾಜಗೋಪಾಲಾಚಾರಿಯವರು ಒಂದು ಪ್ರಕಟಣೆಯಲ್ಲಿ ಎಲ್ಲವನ್ನೂ ಸ್ಪಷ್ಟಪಡಿಸಿದರು. ಅವರೆಂದರು:

ತ್ಯಾಗಸಹಿತವಾದ ಚಳವಳಿಯನ್ನು ಹಿಂದಕ್ಕೆ ತೆಗೆದುಕೊಳ್ಳುವುದು ಕೆಲವೊಮ್ಮೆ ಅವಶ್ಯಕ. ಅದನ್ನು ಅವಮಾನ ಎಂದು ಭಾವಿಸಬಾರದು. ೧೯೨೨ರಲ್ಲಿ ಇದ್ದ ಪರಿಸ್ಥಿತಿಗಿಂತ ಈಗ ಇರುವ ಪರಿಸ್ಥಿತಿ ಭಿನ್ನವಾಗಿದೆ. ಈಗ ನಾವು ಕಾಂಗ್ರೆಸ್ ಪರವಾಗಿ

> ಚುನಾವಣೆಗೆ ಇಳಿಯಬೇಕು. ಭವಿಷ್ಯತ್ತಿನಲ್ಲಿ ಕಾಂಗ್ರೆಸ್ಸು ಶಾಸನ ಭಂಗ ಚಳವಳಿಯನ್ನು ಅಳವಡಿಸಿಕೊಳ್ಳುವುದನ್ನು ಯಾರೂ ತಡೆಯಲು ಸಾಧ್ಯವಿಲ್ಲ.

ಈ ವಾಸ್ತವತೆ ಅರಿವಾದ ಹಾಗೆ ಪಟೇಲರ ಉತ್ಸಾಹ ಮರುಕಳಿಸಿತು. ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ನಿರ್ಧಾರದ ಫಲವಾಗಿ ಸರ್ಕಾರವು ಸಹ ಕಾಂಗ್ರೆಸ್ಸು ಮತ್ತು ಅದರ ಸಂಸ್ಥೆಗಳ ಮೇಲಣ ನಿಷೇಧವನ್ನು ಹಿಂತೆಗೆದುಕೊಂಡಿತು ಮತ್ತು ರಾಜಕೀಯ ಖೈದಿಗಳನ್ನು ಬಿಡುಗಡೆ ಮಾಡಲು ಆರಂಭಿಸಿತು. ವಲ್ಲಭಭಾಯ್‌ರವರು ಜುಲೈ ೧೪ರಂದು ಬಿಡುಗಡೆ ಮಾಡಲ್ಪಟ್ಟರು. ಅವರು ಯರವಾಡ ಮತ್ತು ನಾಸಿಕ್ ಸೆರೆಮನೆಗಳಲ್ಲಿ ಒಟ್ಟು ೩೦ ತಿಂಗಳು ಮತ್ತು ೧೦ ದಿವಸ ಕಳೆದಿದ್ದರು.[೭೬]

❖ ◆ ❖

ಬಾರ್ಡೋಲಿಯ ಸರ್ದಾರ

೧೨. ಪ್ರಜಾಪ್ರಭುತ್ವ ರಂಗದಲ್ಲಿ ಕಾಯಕ

೧೨.೧. ಚುನಾವಣೆಯ ಸಾರಥ್ಯ

ವಲ್ಲಭಭಾಯ್‌ರವರನ್ನು ಜೈಲಿನಿಂದ ಬಿಡುಗಡೆ ಮಾಡುವುದನ್ನು ಬಾಂಬೆ ಪ್ರಾಂತ್ಯ ಸರ್ಕಾರವು ವಿರೋಧಿಸಿತ್ತು. ಬಿಡುಗಡೆಯಾದರೆ ಪಟೇಲರು ಗುಜರಾತ್‌ಗೆ ಹೋಗಿ ರೈತರನ್ನು ಸರ್ಕಾರದ ವಿರುದ್ಧ ಪ್ರಚೋದಿಸುತ್ತಾರೆ ಎಂದು ಬಾಂಬೆ ಸರ್ಕಾರವು ಹೆದರಿತ್ತು. ಆದಾಗ್ಯೂ ದೆಹಲಿಯ ಗೃಹ ಮಂತ್ರಿ ಹ್ಯಾಲೆಟ್‌ರವರು ಪಟೇಲರ ಬಿಡುಗಡೆಗೆ ಆದೇಶಿಸಿದ್ದರು, ಏಕೆಂದರೆ ಪಟೇಲರ ಮೂಗಿನ ತೊಂದರೆಗೆ ತುರ್ತು ಶಸ್ತ್ರ ಚಿಕಿತ್ಸೆ ಆಗಬೇಕಾಗಿತ್ತು. ಆದರೆ ಬಿಡುಗಡೆಯಾದ ನಂತರ ಪಟೇಲರು ಗುಜರಾತ್‌ಗೂ ಹೋಗಲಿಲ್ಲ. ಮೂಗಿನ ತೊಂದರೆಗೆ ಶಸ್ತ್ರ ಚಿಕಿತ್ಸೆಯನ್ನೂ ಮಾಡಿಸಿ ಕೊಳ್ಳಲಿಲ್ಲ. ಶಸ್ತ್ರ ಚಿಕಿತ್ಸೆಯನ್ನು ಮುಂದೂಡಿದರು. ಅವರು ತುರ್ತಾಗಿ ಮಾಡ ಬೇಕಾದ ಎರಡು ಕೆಲಸಗಳಿದ್ದುವು. ಮೊದಲನೆಯದು ಸಂಕಷ್ಟಕ್ಕೆ ಸಿಲುಕಿದ್ದ ರೈತರಿಗೆ ಸಹಾಯ ಒದಗಿಸುವುದು. ಸರ್ಕಾರದ ದಬ್ಬಾಳಿಕೆಯ ಫಲವಾಗಿ ಅನೇಕ ರೈತರು ತಮ್ಮ ರಾಸುಗಳು, ಜಮೀನು ಉಪಕರಣಗಳು, ಬೆಳೆ, ಮನೆಯ ಪದಾರ್ಥ ಗಳನ್ನು ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿದ್ದರು. ಎರಡನೆಯದು, ಕಾಂಗ್ರೆಸ್ ಸಮಿತಿಗಳಿಗೆ ಮರು ಜೀವವನ್ನು ಕೊಡುವುದು. ಸರ್ಕಾರವು ನಾಲ್ಕು ವರ್ಷಗಳಿಂದ ಕಾಂಗ್ರೆಸ್ ಪಕ್ಷ ಮತ್ತು ಅದರ ಸಮಿತಿಗಳನ್ನು ನಿಷೇಧಿಸಿ ಅದರ ಕಛೇರಿಗಳನ್ನು ಮುಟ್ಟುಗೋಲು ಹಾಕಿಕೊಂಡಿದ್ದರಿಂದ ಕಾಂಗ್ರೆಸ್ ಪಕ್ಷ ಮತ್ತು ಜನರ ನಡುವಣ ಸಂಪರ್ಕ ಕಡಿದು ಹೋಗಿತ್ತು. ಈಗ ಪಕ್ಷ ಮತ್ತು ಅದರ ಸಮಿತಿಗಳನ್ನು ಪುನರು ಜ್ಜೀವನಗೊಳಿಸುವುದು ಆ ಪಕ್ಷದ ಅಂದಿನ ಅಧ್ಯಕ್ಷರಾಗಿ ಅವರ ಆದ್ಯತೆಯಾಗಿತ್ತು.

ಪಟೇಲರು ನಾಸಿಕ್ ಸೆರೆಮನೆಯಿಂದ ಬೊಂಬಾಯಿಗೆ ಹೋಗಿ ಸಾಂಧರ್ಸ್ಟ್ ರಸ್ತೆಯಲ್ಲಿದ್ದ ಮಗನ ಮನೆಯಲ್ಲಿ ತಂಗಿ, ಗುಜರಾತ್‌ನ ರೈತರಿಗಾಗಿ ೧೦ ಲಕ್ಷ ರೂಪಾಯಿಯನ್ನು ನೀಡುವಂತೆ ಆ ನಗರದ ವರ್ತಕರಿಗೆ ಮನವಿ ಮಾಡಿದರು. ಸರ್ದಾರರು ಬಯಸಿದಾಗಲೆಲ್ಲ ಹಣ ಸಲೀಸಾಗಿ ಬರುತ್ತಿತ್ತು. ಈಗಲೂ ಹಣ ಪ್ರವಾಹದಂತೆ ಹರಿದು ಬಂದಿತು. ತಕ್ಷಣವೇ ರೈತರಿಗೆ ಪರಿಹಾರ ಒದಗಿಸಲು ಏರ್ಪಡಿಸಿದರು.

ಪಟೇಲರು ಮಗ, ಮಗಳು ಮತ್ತು ಮೊಮ್ಮಗನೊಡನೆ ಎರಡು ವಾರಗಳಿದ್ದು ಬನಾರಸ್‌ಗೆ, ಅಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಯ ಅಧ್ಯಕ್ಷತೆ ವಹಿಸಲು, ಹೊರಟರು. ಬೆನಾರಸ್‌ನಲ್ಲಿ ಗಾಂಧೀಜಿ ಮತ್ತು ಮಹದೇವ್ ದೇಸಾಯಿ ಒಡನೆ ಭೇಟಿಯಾಯಿತು. ಆಚಾರ್ಯ ನರೇಂದ್ರ ದೇವ್‌ರವರು ಕೆಲವು ತಿಂಗಳುಗಳ ಮುಂಚೆ ಕಾಂಗ್ರೆಸ್ ಪಕ್ಷದ ಒಳಗೆ 'ಕಾಂಗ್ರೆಸ್ ಸಮಾಜವಾದಿ ಪಕ್ಷ'ವನ್ನು ಸ್ಥಾಪಿಸಿ, ಅವರೇ ಅದರ ಅಧ್ಯಕ್ಷರಾಗಿದ್ದರು. ಜಯಪ್ರಕಾಶ್ ನಾರಾಯಣ್‌ರವರು ಅದರ ಕಾರ್ಯದರ್ಶಿಯಾಗಿದ್ದರು. ಆ ಬೆಳವಣಿಗೆಯನ್ನು ಪಟೇಲರು ಒಪ್ಪಿರಲಿಲ್ಲ. ಆ ಸಮಾಜವಾದಿಗಳನ್ನು ವಾಸ್ತವಿಕತೆ ಇಲ್ಲದ ಪೊಳ್ಳು ಮಾತಿನ, ಆಕರ್ಷಕ ಪದಗಳ ಬಳಕೆಯ ಮತ್ತು ಬರೆ ವಿದ್ವತ್ ಮಾತಿನ ಜನ ಎಂದು ಅವರು ಭಾವಿಸಿದ್ದರು. ಅವರು ಈಗ ತಮ್ಮ ಅಭಿಪ್ರಾಯವನ್ನು ನೇರ ಮತ್ತು ಕಠಿಣ ಮಾತುಗಳಲ್ಲಿ ನರೇಂದ್ರದೇವ್‌ಗೆ ಮುಟ್ಟಿಸಿದರು. ಅವರ ಮಾತು ನರೇಂದ್ರದೇವ್‌ರವರನ್ನು ತಟ್ಟಿತು ಎಂದು ಕಾಣುತ್ತದೆ. ಅವರು ಬಾಪುವನ್ನು ಭೇಟಿ ಮಾಡಿ, 'ದಯವಿಟ್ಟು ನಮ್ಮ ತಪ್ಪುಗಳನ್ನು ತಿದ್ದಿ, ನಮ್ಮಿಂದ ಕೆಲಸವನ್ನು ತೆಗೆದುಕೊಳ್ಳಿ. ನಮ್ಮನ್ನು ಬೇರೆಯವರೆಂದು ಭಾವಿಸಬೇಡಿ," ಎಂದರು.[೨೭]

ಆ ವರ್ಷ (೧೯೩೪) ಅಕ್ಟೋಬರ್ ೨೬ರಿಂದ ೨೮ರವರೆಗೆ ಕಾಂಗ್ರೆಸ್ ಅಧಿವೇಶನವು ಬೊಂಬಾಯಿಯಲ್ಲಿ ನಡೆಯಿತು. ಅದು ಒಂದು ಗಮನಾರ್ಹ ಅಧಿವೇಶನ. ಏಕೆಂದರೆ ಸರ್ಕಾರವು ಕಾಂಗ್ರೆಸ್ಸನ್ನು ನಿಷೇಧಿಸಿದ್ದುದರಿಂದ ಹಿಂದಿನ ನಾಲ್ಕು ವರ್ಷಗಳಲ್ಲಿ ಅಧಿವೇಶನಗಳು ಕ್ರಮಬದ್ಧವಾಗಿ ನಡೆದಿರಲಿಲ್ಲ. ಡಾ॥ ಬಾಬು ರಾಜೇಂದ್ರ ಪ್ರಸಾದ್‌ರವರು ೧೯೩೪ರ ಅಧಿವೇಶನದ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಅಲ್ಲಿಗೆ ಪಟೇಲರ ಅಧ್ಯಕ್ಷಗಿರಿ ಮುಕ್ತಾಯವಾಯಿತು, ಆದರೆ ಅವರ ಪ್ರಭಾವ ಮತ್ತು ಜವಾಬ್ದಾರಿ ಮುಕ್ತಾಯವಾಗಲೂ ಇಲ್ಲ, ಕಡಿಮೆಯಾಗಲೂ ಇಲ್ಲ, ಏಕೆಂದರೆ ಅವರು ಕಾಂಗ್ರೆಸ್ ಪಾರ್ಲಿಮೆಂಟ್ ಬೋರ್ಡ್‌ನ ಛೇರ್‌ಮನ್ ಆಗಿ ನಿಯಮಿತರಾದರು. ೧೯೩೫ರ ಭಾರತ ಸರ್ಕಾರದ ಕಾನೂನಿನ ಪ್ರಕಾರ ಭಾರತವು 'ಪಾರ್ಲಿಮೆಂಟರಿ' ವಿಧಾನದ ಆಡಳಿತಕ್ಕೆ ಪಾದಾರ್ಪಣೆ ಮಾಡುತ್ತಿತ್ತು ಮತ್ತು

ಪ್ರಾಂತ್ಯಗಳ ಶಾಸನ ಪರಿಷತ್ತುಗಳಿಗೆ ಚುನಾವಣೆಯು ೧೯೩೭ರಲ್ಲಿ ನಡೆಯುವುದಿತ್ತು. ಆ ಚುನಾವಣೆ ಮತ್ತು ಆನಂತರ ನಡೆಯುವ ಚುನಾವಣೆಗಳ ನಿರ್ವಹಣೆಗಾಗಿ 'ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡ್' ರಚಿತವಾಗಿತ್ತು. ಅದರ ಛೇರ್‌ಮನ್ ಆಗಿ ಚುನಾವಣೆಗೆ ಹಣ ಸಂಗ್ರಹಣೆ, ಸ್ಪರ್ಧಿಗಳ ಆಯ್ಕೆ, ಇತರ ಪಕ್ಷಗಳ ಬಗೆಗೆ ಕಾಂಗ್ರೆಸ್ ಪಕ್ಷದ ಧೋರಣೆ ಅಥವಾ ನೀತಿಯ ನಿರ್ಧಾರ, ಚುನಾವಣೆಯ ನಂತರ ಗೆದ್ದ ಕಾಂಗ್ರೆಸ್ ತಂಡದ ನಾಯಕನ ಆಯ್ಕೆಯಲ್ಲಿ ಮಾರ್ಗದರ್ಶನ, ಕಾಂಗ್ರೆಸ್ ಮಂತ್ರಿಗಳ ಉಸ್ತುವಾರಿ ಮುಂತಾದುವು ಪಟೇಲರ ಜವಾಬ್ದಾರಿಯಾಗಿದ್ದುವು. ಪಟೇಲರ ಈ ಜವಾಬ್ದಾರಿ ೧೯೩೪ರ ಅಂತ್ಯ ಭಾಗದಲ್ಲಿ ನಡೆದ ಕೇಂದ್ರ ಶಾಸನ ಸಭೆಯ ಚುನಾವಣೆಯಿಂದ ಆರಂಭವಾಯಿತು. ವರ್ಷ ವರ್ಷಕ್ಕೆ ಅಧ್ಯಕ್ಷರ ಬದಲಾವಣೆಯಾದರೂ ಸಹ ಅವರು ಸಾಯುವವರೆಗೂ ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನ ಛೇರ್‌ಮನ್ ಆಗಿದ್ದರು ಮತ್ತು ತಮ್ಮ ಜವಾಬ್ದಾರಿಗಳನ್ನು ಅತಿ ವಿವೇಚನೆಯಿಂದ, ಪ್ರಜಾಸತ್ತಾತ್ಮಕವಾಗಿ ಮತ್ತು ಸ್ವಲ್ಪವೂ ವಿಳಂಬವಿಲ್ಲದೆ ನೆರವೇರಿಸುತ್ತಿದ್ದುದರಿಂದ ಕಾಂಗ್ರೆಸ್ ಪಕ್ಷದಲ್ಲಿ ಅತ್ಯಂತ ಬಲಿಷ್ಠ ಮತ್ತು ಪ್ರಭಾವಿ ನಾಯಕನಾಗಿ ಬೆಳೆದರು.[೭೮]

೧೯೩೪ರ ಅಧಿವೇಶನಕ್ಕೆ ಕೆಲವು ದಿವಸ ಮುಂಚೆ ಗಾಂಧೀಜಿಯವರು ಒಂದು ಭಾರಿ ಬಾಂಬನ್ನು ಸಿಡಿಸಿದ್ದರು. ಅವರು ಕಾಂಗ್ರೆಸ್ಸನ್ನು ತ್ಯಜಿಸುವುದಾಗಿ ಪ್ರಕಟಿಸಿ ಭಾರಿ ಆಘಾತವನ್ನು ಉಂಟುಮಾಡಿದ್ದರು. ಅವರ ಈ ತೀರ್ಮಾನಕ್ಕೆ ಕೆಲವು ಕಾರಣಗಳಿದ್ದುವು. ಅವರು ದೀರ್ಘ ಆಲೋಚನೆ ಮಾಡಿ ಆ ತೀರ್ಮಾನಕ್ಕೆ ಬಂದಿದ್ದರು. ಅಹಿಂಸೆಯು ಅವರಿಗೆ ಮೂಲಭೂತ ಸಿದ್ಧಾಂತವಾಗಿತ್ತು. ಆದರೆ ಬಹುತೇಕ ಕಾಂಗ್ರೆಸ್ಸಿಗರಿಗೆ ಅದರಲ್ಲಿ ಅಚಲ ನಂಬಿಕೆ ಇರಲಿಲ್ಲ. ಕಾಂಗ್ರೆಸ್ಸಿನಲ್ಲಿ ಬಹಳಷ್ಟು ಮಂದಿ ಗಾಂಧೀಜಿಯವರ 'ಗುರಿಯಷ್ಟೇ ಮಾರ್ಗವೂ ಶ್ರೇಷ್ಠವಾಗಿರಬೇಕೆಂಬ' ತತ್ವವನ್ನು ನಂಬಿರಲಿಲ್ಲ. ಅಂತಹವರೊಡನೆ ತಾವು ಕೆಲಸ ಮಾಡಲು ಸಾಧ್ಯವಿಲ್ಲ. ಅವರಿಂದ ಬಿಡುಗಡೆ ಪಡೆದು ಒಂಟಿಯಾಗಿ ಸ್ವತಂತ್ರವಾಗಿ ತಮ್ಮ ಸತ್ಯಾನ್ವೇಷಣೆಯ ಮಾರ್ಗದಲ್ಲಿ ನಡೆಯಬೇಕು ಮತ್ತು ತಮ್ಮ ರಚನಾತ್ಮಕ ಕಾರ್ಯಗಳಲ್ಲಿ ತೊಡಗಬೇಕು ಎನ್ನುವುದು ಒಂದು ಕಾರಣ. ಕಾಂಗ್ರೆಸ್ ಪಕ್ಷದ ಸಹಜ ಬೆಳವಣಿಗೆಗೆ ತಾವೊಂದು ಅಡಚಣೆ. ಕಾಂಗ್ರೆಸ್ ಒಂದು ಅತ್ಯಂತ ಪ್ರಜಾಸತ್ತಾತ್ಮಕ ಪಕ್ಷವಾಗಿ ಇರುವುದಕ್ಕೆ ಬದಲಾಗಿ, ತಮ್ಮ ವ್ಯಕ್ತಿತ್ವದ ಪ್ರಭಾವಕ್ಕೆ ಒಳಗಾಗಿದೆ.ಅದು ಸರಿಯಲ್ಲ. ಅದು ಮತ್ತೊಂದು ಕಾರಣ. ಖಾದಿ ಬಳಕೆ, ಶಾಸನ ಭಂಗ ಚಳವಳಿ, ಶಾಸನ ಸಭೆಗಳ ಪ್ರವೇಶ, ಅಸ್ಪೃಶ್ಯತಾ ನಿವಾರಣೆ, ಅಹಿಂಸೆ ಮುಂತಾದ ವಿಷಯಗಳ ಬಗೆಗೆ ಗಾಂಧೀಜಿಯ ಮತ್ತು ಕೆಲವು ಕಾಂಗ್ರೆಸ್ ನಾಯಕರ

ನಡುವಣ ದೃಷ್ಟಿಕೋನದಲ್ಲಿ ಭೇದವಿತ್ತು. ಭಿನ್ನಾಭಿಪ್ರಾಯಗಳನ್ನು ಇಟ್ಟುಕೊಂಡು ಅವರೊಡನೆ ಕೆಲಸ ಮಾಡಲು ಸಾಧ್ಯವಿಲ್ಲ. ಈ ಕಾರಣಗಳಿಗಾಗಿ ಅವರು ಕಾಂಗ್ರೆಸ್‌ನಿಂದ ಹೊರಹೋಗಲು ನಿರ್ಧರಿಸಿದ್ದರು. ಆ ಬಗೆಗೆ ಸೆಪ್ಟೆಂಬರ್ ೧೭, ೧೯೩೪ರಂದು ವಾರ್ಧ ಆಶ್ರಮದಿಂದ ಒಂದು ಹೇಳಿಕೆಯನ್ನು ಪ್ರಕಟಿಸಿದ್ದರು.[೭೯]

ಗಾಂಧೀಜಿಯ ತೀರ್ಮಾನದಿಂದ ರಾಜಗೋಪಾಲಾಚಾರಿ, ಅಬುಲ್ ಕಲಾಂ ಆಜ಼ಾದ್ ಮತ್ತಿತರ ನಾಯಕರು ಆಘಾತಗೊಂಡರು ಮತ್ತು ಗಾಂಧೀಜಿಯವರು ತಮ್ಮ ನಿರ್ಧಾರವನ್ನು ಬದಲಾಯಿಸಬೇಕೆಂದು ಕೋರಿದರು. ರಾಜಾಜಿಯವರು ಗಾಂಧೀಜಿಗೆ ಒಂದು ಟೆಲಿಗ್ರಾಂ ಕಳುಹಿಸಿ, "ನಿಮ್ಮ ಆತ್ಮ ನಿರ್ಧಾರವನ್ನು ಕಾರ್ಯರೂಪಕ್ಕೆ ತಂದರೆ ಕಾಂಗ್ರೆಸ್ಸಿನ ಚುನಾವಣಾ ಕಾರ್ಯಕ್ರಮಗಳು ಚೂರು ಚೂರಾಗಿ ಒಡೆದು ಬೀಳುತ್ತವೆ,' ಎಂದರು. ಗಾಂಧೀಜಿಯವರು, 'ನಾನು ಒಂದು ಗುಹೆಯ ಒಳಕ್ಕೆ ಹೊರಟು ಹೋಗುತ್ತಿಲ್ಲ. ಕಾಂಗ್ರೆಸ್‌ನಿಂದ ಓಡಿ ಹೋಗುತ್ತಿಲ್ಲ. ನನ್ನ ವ್ಯಕ್ತಿತ್ವದ ಬಿಗಿತದಿಂದ ಬಿಡುಗಡೆಯಾದ ಕಾಂಗ್ರೆಸ್‌ನಲ್ಲಿ ಸಮಾಜವಾದಿ, ಬಲ ಪಂಥೀಯ, ಎಡ ಪಂಥೀಯ ಮುಂತಾದ ವಿಧ ವಿಧವಾದ ಸಿದ್ಧಾಂತಗಳು ತಮ್ಮ ತಮ್ಮ ಸಮರ್ಥನೆ ಮಾಡಿಕೊಳ್ಳಲು ಮುಕ್ತ ಅವಕಾಶ ದೊರಕುತ್ತದೆ ಮತ್ತು ಪ್ರತಿ ಸಿದ್ಧಾಂತವು ತನ್ನ ತನ್ನ ಮಟ್ಟವನ್ನು ಕಂಡುಕೊಳ್ಳುತ್ತದೆ." ಎರಡನೆಯದಾಗಿ, 'ಕಾಂಗ್ರೆಸ್ ಮತ್ತು ಸರ್ಕಾರ ಒಂದು ಒಪ್ಪಂದಕ್ಕೆ ಬರಲು ಸಾಧ್ಯವಾಗುತ್ತದೆ. ಅದು ಆಗದೆ ಹೋದರೆ, ಹೋರಾಟವು ಅನಿವಾರ್ಯವಾದರೆ ಆ ಹೋರಾಟದ ನಾಯಕತ್ವ ವಹಿಸಲು ನೀವು ನನ್ನನ್ನು ಕರೆಯಬಹುದು' ಎಂದು ರಾಜಾಜಿಗೆ ವಿವರಿಸಿದರು.

ಕಾಂಗ್ರೆಸ್‌ನಿಂದ ಹೊರ ಹೋಗುವ ಗಾಂಧೀಜಿಯವರ ನಿರ್ಧಾರವನ್ನು ಇತರ ಕಾಂಗ್ರೆಸ್ ನಾಯಕರು ವಿರೋಧಿಸಿದರೂ ಸಹ ಪಟೇಲರು ಸ್ವಾಗತಿಸಿದರು. ಅವರ ಮತ್ತು ಗಾಂಧೀಜಿಯ ಅಭಿಪ್ರಾಯಗಳು ಒಂದೇ ಆಗಿದ್ದು, ಗಾಂಧೀಜಿಯ ರಾಜಿನಾಮೆಯು ಕಾಂಗ್ರೆಸ್ ಸಂಸ್ಥೆಯ ಬೆಳವಣಿಗೆಗೆ ಹಿತಕಾರಿ ಎಂದು ಪಟೇಲರು ಭಾವಿಸಿದ್ದರು. ರಾಜಗೋಪಾಲಾಚಾರಿಯವರು ಪಟೇಲರ ನಡವಳಿಕೆಯ ಬಗೆಗೆ ಈ ರೀತಿ ಟೀಕೆ ಮಾಡಿದರು:

> ಗಾಂಧೀಜಿಗೆ ಅನೇಕ ಅಂಧ ಅನುಯಾಯಿಗಳು ಇದ್ದಾರೆ. ಅವರು ಏನನ್ನೂ ತಮ್ಮ ಕಣ್ಣುಗಳಿಂದ ನೋಡುವುದಿಲ್ಲ. ಗಾಂಧೀಜಿಯ ಕಣ್ಣುಗಳಿಂದಲೇ ನೋಡುತ್ತಾರೆ. ಆದರೆ ಗಾಂಧೀಜಿಯವರ ಅಂಧ ಅನುಯಾಯಿಯಾಗಿ ಸರ್ದಾರರೊಬ್ಬರೇ ಒಂದು ವಿಧ. ಅವರ ಕಣ್ಣುಗಳು ಸ್ವಚ್ಛ ಮತ್ತು ಪ್ರಕಾಶ. ಅವರು

> ಪ್ರತಿಯೊಂದನ್ನೂ ಕಾಣಬಲ್ಲರು. ಆದರೆ ಅವರು ಬೇಕೆಂದೇ ತಮ್ಮ ಕಣ್ಣುಗಳಿಗೆ ಪಟ್ಟಿ ಕಟ್ಟಿಕೊಳ್ಳುತ್ತಾರೆ ಮತ್ತು ಗಾಂಧೀಜಿಯ ಕಣ್ಣುಗಳಿಂದ ಮಾತ್ರ ನೋಡುತ್ತಾರೆ.[೮೦]

ಬಾಂಬೆ ಕಾಂಗ್ರೆಸ್ ಅಧಿವೇಶನವು ಗಾಂಧೀಜಿಯವರ ನಿವೃತ್ತಿಯ ನಿರ್ಧಾರವನ್ನು 'ಅವರು ದೇಶಕ್ಕೆ ಸಲ್ಲಿಸಿರುವ ಅದ್ವಿತೀಯ ಸೇವೆಗಳಿಗೆ ಭಾರಿ ಕೃತಜ್ಞತಾ ಭಾವನೆಗಳೊಡನೆ ಮತ್ತು ಅವರ ನಾಯಕತ್ವದಲ್ಲಿ ವಿಶ್ವಾಸವನ್ನು ಪುನರುಚ್ಚರಿಸುತ್ತಾ' ಅಂಗೀಕರಿಸಿತು.

ಆದರೆ, ವಾಸ್ತವದಲ್ಲಿ ಕಾಂಗ್ರೆಸ್‌ನಿಂದ ಗಾಂಧೀಜಿ ಹೊರಹೋಗಲೇ ಇಲ್ಲ, ಅವರು ಕಾಂಗ್ರೆಸ್‌ಗೆ ರಾಜಿನಾಮೆ ಕೊಟ್ಟರೂ ಅದರ ನಾಯಕರಾಗೇ ಉಳಿದರು. ಕಾಂಗ್ರೆಸ್ಸು ಅವರನ್ನು ಬಿಟ್ಟು ಸ್ವತಂತ್ರವಾಗಿ ವರ್ತಿಸಲಿಲ್ಲ.

ಆ ಅಧಿವೇಶನದಲ್ಲಿ ಪಟೇಲರು ಬ್ರಿಟಿಷ್ ಸರ್ಕಾರ ಪ್ರಕಟಿಸಿದ್ದ ಸಾಂವಿಧಾನಿಕ ಸುಧಾರಣೆಗಳನ್ನು ತಿರಸ್ಕರಿಸುವ ಅಭಿಪ್ರಾಯಕ್ಕೆ ಬೆಂಬಲ ಸೂಚಿಸಿ ಆ ಸುಧಾರಣೆಗಳನ್ನು 'ನಕಲಿ ನಾಣ್ಯ' ಎಂದು ಕರೆದರು.

ಅವರು ಆ ಅಧಿವೇಶನದಲ್ಲಿ ಕಾಂಗ್ರೆಸ್ ಸಮಾಜವಾದಿಗಳನ್ನು ಎದುರಿಸಬೇಕಾಯಿತು. ಸಮಾಜವಾದಿಗಳು ತಮ್ಮ ಆರ್ಥಿಕ ಕಾರ್ಯಕ್ರಮಗಳನ್ನು ಕಾಂಗ್ರೆಸ್ಸು ಒಪ್ಪಿಕೊಳ್ಳುವಂತೆ ಮಾಡಲು ಬಹಳ ಪ್ರಯತ್ನಿಸಿದರು. ಆದರೆ ಸರ್ದಾರರು ಬಲಪಂಥೀಯರನ್ನು ಒಂದುಗೂಡಿಸಿ ಕಾಂಗ್ರೆಸ್ಸು ಸಮಾಜವಾದಿ ಕಾರ್ಯಕ್ರಮಗಳನ್ನು ತಿರಸ್ಕರಿಸುವಂತೆ ಮಾಡಿದರು. ನಿರಾಶರಾದ ಆಚಾರ್ಯ ನರೇಂದ್ರ ದೇವ್, ಜಯ ಪ್ರಕಾಶ್ ನಾರಾಯಣ್ ಮೊದಲಾದ ಸಮಾಜವಾದಿಗಳು ಕಾಂಗ್ರೆಸ್ ಸಮಾಜವಾದಿ ಪಕ್ಷವನ್ನು ಸ್ಥಾಪಿಸಿಕೊಂಡರು.

ಸಮಾಜವಾದಿಗಳ ಬಗೆಗೆ ಪಟೇಲರ ಅಸಮಧಾನಕ್ಕೆ ಕಾರಣಗಳಾದರು ಏನು? ಅವು ಅನೇಕ, ಮೊದಲನೆಯದಾಗಿ, ಸಮಾಜವಾದಿಗಳಲ್ಲಿ 'ಸಮಾಜವಾದ ಪದದ ಅರ್ಥ ವಿವರಣೆ ಬಗೆಗೇ ಒಮ್ಮತವಿಲ್ಲ. ಎರಡನೆಯದಾಗಿ, ಸ್ವಾತಂತ್ರ್ಯವನ್ನು ಸಂಪಾದಿಸುವುದು ಇಂದಿನ ಆದ್ಯ ಕರ್ತವ್ಯವಾಗಿರುವಾಗ ಅವರು ಸ್ವಾತಂತ್ರ್ಯ ನಂತರದ ಭವಿಷ್ಯದ ಭಾರತದಲ್ಲಿ ಇರಬೇಕಾದ ಸಾಮಾಜಿಕ ಮತ್ತು ರಾಜಕೀಯ ಸಂಘಟನೆಗಳ ಬಗೆಗೆ ಚಿಂತಿಸುತ್ತಾ ಕಾಲಹರಣ ಮಾಡುತ್ತಿದ್ದಾರೆ. ಮೂರನೆಯದಾಗಿ, ಕೆಲವು ಸಮಾಜವಾದಿಗಳು ಬರೇ ಮಾತನಾಡುತ್ತಾರೆ. ಅಂತಿಮವಾಗಿ ಕಾಂಗ್ರೆಸ್ ಒಳಗೆ ಮತ್ತೊಂದು ಸಂಘಟಿತ ಗುಂಪು ಇರುವುದು ಸರಿಯಲ್ಲ ಎನ್ನುವುದು

ಸಮಾಜವಾದಿಗಳ ಬಗೆಗೆ ಪಟೇಲರಿಗೆ ಇದ್ದ ಅಸಮಾಧಾನಗಳು.[೮೧] ನವೆಂಬರ್ ೧೯೩೪ರಲ್ಲಿ ನಡೆದ ಕೇಂದ್ರ ಶಾಸನ ಸಭೆಯ ಚುನಾವಣೆಯಲ್ಲಿ ಭಾಗವಹಿಸಲು ಕಾಂಗ್ರೆಸ್ ತೀರ್ಮಾನಿಸಿತು. ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡ್‌ನ ಛೇರ್‌ಮನ್ ಆಗಿ ಚುನಾವಣೆಗೆ ಬೇಕಾದ ಹಣವನ್ನು ಸಂಗ್ರಹಿಸುವುದು ಪಟೇಲರ ಜವಾಬ್ದಾರಿಯಾಯಿತು. ಅವರ ಪ್ರಾಮಾಣಿಕತೆ ಮತ್ತು ಮಿತವ್ಯಯದ ಗುಣ ಎಲ್ಲರಿಗೂ ತಿಳಿದಿದ್ದುದರಿಂದ ಸುಲಭವಾಗಿ ಹಣ ಸಂಗ್ರಹಣೆಯಾಯಿತು. ಗುಜರಾತ್ ಪ್ರದೇಶದ ಮತಗಳು ಕಾಂಗ್ರೆಸ್ ಪಕ್ಷಕ್ಕೆ ಬೀಳುವುದು ಖಾತರಿಯಾಗಿದ್ದು ದರಿಂದ ಪಟೇಲರು ಸಂಯುಕ್ತ ಪ್ರಾಂತ್ಯ, ಬಿಹಾರ್, ಮದರಾಸ್, ಪಂಜಾಬ್ ಮತ್ತು ದೆಹಲಿಯಲ್ಲಿ ತಮ್ಮ ಚುನಾವಣಾ ಪ್ರಚಾರವನ್ನು ಕೇಂದ್ರೀಕರಿಸಿದರು. ಅವರಿಗೆ ಕಾಂಗ್ರೆಸ್ಸನ್ನು ಗೆಲ್ಲಿಸುವ ಆಸೆ ಇತ್ತೇ ಹೊರತು ತಾವು ಶಾಸಕನಾಗಬೇಕೆಂಬ ಆಸೆ ಇರಲಿಲ್ಲ. ಅದರಿಂದ ಅವರು ಚುನಾವಣೆಯಲ್ಲಿ ಸ್ಪರ್ಧಿಸಲಿಲ್ಲ. ರಾಜೇಂದ್ರ ಪ್ರಸಾದ್ ಮತ್ತು ರಾಜಗೋಪಾಲಚಾರಿಯವರೂ ಸಹ ಸ್ಪರ್ಧಿಸಲಿಲ್ಲ.

ಹಿಂದಿನ ನಾಲ್ಕು ವರ್ಷಗಳಲ್ಲಿ ಕಾಂಗ್ರೆಸ್ ಪಕ್ಷವು ಸರ್ಕಾರದಿಂದ ನಿಷೇಧಿಸಲ್ಪಟ್ಟು, ಅದರ ಚಟುವಟಿಕೆಗಳು ಸ್ಥಗಿತವಾಗಿದ್ದುದರಿಂದ ಅದರ ಜನಪ್ರಿಯತೆ ನಾಶವಾಗಿರುತ್ತದೆ ಮತ್ತು ಅದು ಸೋತುಹೋಗುತ್ತದೆ ಎಂದು ಬ್ರಿಟಿಷ್ ಸರ್ಕಾರ ಭಾವಿಸಿತ್ತು. ಆದರೆ ಕಾಂಗ್ರೆಸ್ ಪಕ್ಷವು ಚುನಾವಣೆಯಲ್ಲಿ ಭರ್ಜರಿ ಜಯವನ್ನು ಸಾಧಿಸಿತು. ಅದು ೪೯ ಸಾಮಾನ್ಯ ಸ್ಥಾನಗಳ ಪೈಕಿ ೪೪ ಸ್ಥಾನಗಳನ್ನು ಗಳಿಸಿ, ಒಟ್ಟು ೧೦೪ ಚುನಾಯಿತ ಸ್ಥಾನಗಳಲ್ಲಿ ೬೧ ಸ್ಥಾನಗಳಲ್ಲಿ ಜಯಗಳಿಸಿತು. ಮಾಳವಿಯರವರ ಕಾಂಗ್ರೆಸ್ ನ್ಯಾಷನಲಿಸ್ಟ್ ಪಕ್ಷವು ೧೨ ಸ್ಥಾನಗಳನ್ನು ಗಳಿಸಿತು. ಪಕ್ಷೇತರರು ೨೨ ಸ್ಥಾನಗಳನ್ನು ಪಡೆದರು. ಭೂಲಾಭಾಯ್ ದೇಸಾಯಿ ಕಾಂಗ್ರೆಸ್ ಪಾರ್ಲಿಮೆಂಟ್ ಪಕ್ಷದ ನಾಯಕರಾಗಿ ಆಯ್ಕೆಯಾದರು. ಆದರೆ ೪೧ ಮಂದಿ ಸರ್ಕಾರಿ ಅಥವಾ ಸರ್ಕಾರ ನಾಮಕರಣ ಮಾಡಿದ ಸದಸ್ಯರಿದ್ದುದರಿಂದ ಕಾಂಗ್ರೆಸ್‌ಗೆ ಬಹುಮತ ದೊರಕಲಿಲ್ಲ. ಆದಾಗ್ಯೂ ರಾಷ್ಟ್ರೀಯ ಪಕ್ಷಗಳ ಸಂಯುಕ್ತ ಬಲದಿಂದ ಸರ್ಕಾರಿ ಠರಾವುಗಳನ್ನು ಸೋಲಿಸಬಹುದಾಗಿತ್ತು. ಅನೇಕ ಬಾರಿ ಹಾಗಾಯಿತು. ಅಂತಹ ಸಂದರ್ಭಗಳಲ್ಲಿ ವೈಸ್‌ರಾಯ್‌ನು ತನ್ನ ವಿಶೇಷ ಅಧಿಕಾರವನ್ನು ಬಳಸಿ ಸರ್ಕಾರಿ ಠರಾವಿಗೆ ಅಂಗೀಕಾರದ ಮುದ್ರೆ ಒತ್ತುತ್ತಿದ್ದನು.[೮೨]

೧೨.೨ ಮತ್ತೆ ಗುಜರಾತ್‌ನಲ್ಲಿ

ಚುನಾವಣೆಯ ನಂತರ ಪಟೇಲರು ಗುಜರಾತ್‌ಗೆ ಹಿಂತಿರುಗಿ ಬಹಳ ಕಾಲದಿಂದ ಉಳಿದು ಹೋಗಿದ್ದ ಒಂದು ಕಾರ್ಯದಲ್ಲಿ ತೊಡಗಿದರು. ಅವರು

ಸೆರೆಮನೆಯಲ್ಲಿದ್ದಾಗ ಸರ್ಕಾರದ ಅಧಿಕಾರಿಗಳು ಕರ ವಸೂಲಿಗಾಗಿ ರೈತರನ್ನು ಬಹಳ ಹಿಂಸಿಸಿದ್ದರು. ಸೆರೆಮನೆಯಿಂದ ಬಿಡುಗಡೆಯಾದ ತಕ್ಷಣ ಸರ್ದಾರರು ರೈತರಿಗೆ ಸಾಂತ್ವಾನ ಹೇಳಲು ಹೋಗಬೇಕಾಗಿತ್ತು. ಆದರೆ, ಹಿಂದೆಯೇ ಹೇಳಿದ ಹಾಗೆ, ಕಾಂಗ್ರೆಸ್ಸು ಮತ್ತು ಅದರ ಸಮಿತಿಗಳಿಗೆ ಮರು ಜೀವ ಕೊಡಿಸಬೇಕಾಗಿದ್ದು ದರಿಂದ ರೈತರನ್ನು ಭೇಟಿ ಮಾಡಲು ಆಗಿರಲಿಲ್ಲ. ಈಗ ಆ ಕೆಲಸವನ್ನು ಮಾಡಿದರು. ಅವರು ೧೦ ದಿನಗಳ ಕಾಲ ಗುಜರಾತ್ ಪ್ರದೇಶದಲ್ಲಿ ದಕ್ಷಿಣದಿಂದ ಉತ್ತರಕ್ಕೆ, ಬಲ್ಸಾರ್‌ನಿಂದ ಖೇಡಾವರೆಗೆ ಸಂಚರಿಸಿ ರೈತರು ಎದುರಿಸಿದ ಕಷ್ಟಗಳನ್ನು ವಿಚಾರಿಸಿದರು ಮತ್ತು ರೈತರ ಸಭೆಗಳನ್ನು ಉದ್ದೇಶಿಸಿ ಭಾಷಣ ಮಾಡಿದರು. ಅವರು ಹೋದಕಡೆಯಲ್ಲೆಲ್ಲಾ ಒಂದು ಮಾತನ್ನು ಹೇಳುತ್ತಲೇ ಇದ್ದರು:

ನಿಮ್ಮ ಹಣೆಬರಹವನ್ನು ನನ್ನದರೊಡನೆ ಸೇರಿಸುವುದು ತಮಾಷೆಯಲ್ಲ ಎಂದು ನಾನು ನಿಮಗೆ ಯಾವಾಗಲೂ ಹೇಳುತ್ತಲೇ ಇದ್ದೇನೆ. ನಿಮ್ಮನ್ನು ವಿಪತ್ಕಾರಕ ಹಾದಿಗೆ ಕಳುಹಿಸಲು ನಾನು ಹಿಂಜರಿದಿಲ್ಲ, ಏಕೆಂದರೆ ನಾವು ಕಷ್ಟಗಳನ್ನು ಸಹಿಸಲು ಸಿದ್ಧವಿದ್ದರೆ ಮಾತ್ರ ದೀರ್ಘಕಾಲದಲ್ಲಿ ಶಾಂತಿ ಮತ್ತು ಸಂತಸವನ್ನು ಪಡೆಯಲು ಸಾಧ್ಯ.

ಬಾರ್ಡೋಲಿಯಲ್ಲಿ ಅವರನ್ನು ಸ್ವಾಗತಿಸಲು ಸೇರಿದ್ದ ಬೃಹತ್ ಸಭೆಯನ್ನು ಕಂಡು ಪಟೇಲರಿಗೆ ಹೃದಯ ತುಂಬಿ ಬಂದಿತು. ಅವರನ್ನು ಕುರಿತು ನುಡಿದರು:

ನಾನು ನಿಮ್ಮ ತೊಂದರೆಗಳನ್ನು, ನಿಮ್ಮ ಸಂಕಟಗಳನ್ನು ಮತ್ತು ನಿಮ್ಮ ಸಂಕಷ್ಟಗಳನ್ನು ನೆನೆಯದ ಒಂದು ದಿನವೂ ಇಲ್ಲ ಎಂದು ಯಾವ ಉತ್ಪ್ರೇಕ್ಷೆಯೂ ಇಲ್ಲದೆ ಹೇಳ ಬಯಸುತ್ತೇನೆ.[೮೩]

ರೈತರ ಭೇಟಿಯ ನಂತರ ಸರ್ದಾರರು ಬೊಂಬಾಯಿಯಲ್ಲಿದ್ದ ಮಗನ ಮನೆಗೆ ಹಿಂತಿರುಗಿದರು. ಆದರೆ ಅವರು ಮತ್ತೆ ಖೇಡಾಕ್ಕೆ ಓಡಬೇಕಾಯಿತು. ೧೯೩೭ರ ಮಾರ್ಚ್ ಅಂತ್ಯದಲ್ಲಿ ಪ್ಲೇಗ್ ರೋಗ ಕಾಣಿಸಿಕೊಂಡಿತು. ಬೋರ್ಸದ್ ತಾಲ್ಲೂಕಿನಲ್ಲಿ ಸತತವಾಗಿ ನಾಲ್ಕನೆ ವರ್ಷ ಪ್ಲೇಗ್ ಹಾವಳಿ ಶುರುವಾಗಿತ್ತು. ಪಟೇಲರು ಬೋರ್ಸದ್‌ನಲ್ಲಿ ಎರಡು ತಿಂಗಳು ವಾಸ ಮಾಡಿ ಪ್ಲೇಗ್ ನಿಯಂತ್ರಣಕ್ಕೆ ಕ್ರಮಗಳನ್ನು ಕೈಗೊಂಡರು. ಬೋರ್ಸದ್‌ನ ಕಾಂಗ್ರೆಸ್ ಕಛೇರಿಯನ್ನು ತಾತ್ಕಾಲಿಕ ಆಸ್ಪತ್ರೆಯಾಗಿ ಪರಿವರ್ತಿಸಿದರು. ಬೊಂಬಾಯಿಯ ವೈದ್ಯ ಭಾಸ್ಕರ್ ಪಟೇಲ್ ಮತ್ತು ಸ್ಥಳೀಯ ವೈದ್ಯ ಜೀವನ್‌ಜಿ ದೇಸಾಯಿ ಆ ಆಸ್ಪತ್ರೆಯಲ್ಲಿ ಹಗಲಿರುಳು ದುಡಿದರು. ಪಟೇಲರ ಮಗಳು ಮಣಿಬೆನ್, ದರ್ಬಾರ್ ಗೋಪಾಲದಾಸ್ ಗಾಂಧಿಯವರ ಪತ್ನಿ, ನಾಲ್ವರು ಗಂಡು ಮಕ್ಕಳು ಮತ್ತು ಒಬ್ಬ ಸೊಸೆ ಸೇರಿ ೬೫

ಮಂದಿ ಸ್ವಯಂ ಸೇವಕರು ಆ ಆಸ್ಪತ್ರೆಯಲ್ಲಿ ರೋಗಿಗಳ ಸೇವೆ ಮಾಡಿದರು. ಪಟೇಲರು ಪ್ರತಿದಿನ ರೋಗ ತಗುಲಿರುವ ಸ್ಥಳಗಳಿಗೆ ಭೇಟಿ ನೀಡಿ, ಸೂಕ್ತ ಸೂಚನೆಗಳನ್ನು ನೀಡುತ್ತಿರುವ ಪತ್ರಿಕೆಯನ್ನು ಪ್ರಕಟಿಸುತ್ತಿದ್ದರು. ಸ್ವಯಂ ಸೇವಕರು ಹಳ್ಳಿಗಳಿಗೆ ಹೋಗಿ ಸ್ವಚ್ಛಗೊಳಿಸಿ ಔಷಧಿ ಸಿಂಪಡಿಸುತ್ತಿದ್ದರು, ನೊಣಗಳನ್ನು ಸಾಯಿಸುತ್ತಿದ್ದರು ಮತ್ತು ಇಲಿಗಳನ್ನು ಹಿಡಿಯುತ್ತಿದ್ದರು. ಆದರೆ ಜನರು ಮೂಢ ನಂಬಿಕೆಯಿಂದ ಪ್ಲೇಗ್ ದೇವತೆಗೆ ಮೇಕೆಯ ಬಲಿ ಕೊಡಬೇಕು ಎನ್ನುತ್ತಿದ್ದರು. ಸ್ವಯಂ ಸೇವಕರು ೫೩ ದಿನಗಳಲ್ಲಿ ೨೩ ಹಳ್ಳಿಗಳನ್ನು ಸ್ವಚ್ಛಗೊಳಿಸಿದರು. ಅದರಿಂದ ಬಹಳಷ್ಟು ಪ್ರಾಣ ಹಾನಿ ಉಳಿಯಿತು. ಪ್ಲೇಗ್ ರೋಗ ಬೋರ್ಸದ್ ತಾಲ್ಲೂಕಿಗೆ ಮತ್ತೆ ಬರಲಿಲ್ಲ.[೮೪]

೧೨.೩. ಗಾಂಧೀಜಿಯ ಆರೈಕೆ

ಆರೋಗ್ಯ ದೃಷ್ಟಿಯಿಂದ ೧೯೩೫ ಪಟೇಲರಿಗೆ ಹಿನ್ನಡೆಯ ವರ್ಷ. ಅವರ ಮೂಗಿನ ತೊಂದರೆಯೇನೋ ಬೊಂಬಾಯಿಯಲ್ಲಿ ಚಿಕಿತ್ಸೆ ಪಡೆದ ನಂತರ ವಾಸಿಯಾಗಿತ್ತು. ಆದರೆ ನಿಶ್ಶಕ್ತಿ ಅವರನ್ನು ಕಾಡುತ್ತಿತ್ತು. ಆದಾಗ್ಯೂ, ವೈದ್ಯರ ಮತ್ತು ಮಣಿಬೆನ್‌ಳ ಸಲಹೆಯನ್ನು ಕಡೆಗಣಿಸಿ ವಿಶ್ರಾಂತಿ ತೆಗೆದುಕೊಳ್ಳದೆ ಕೆಲಸದಲ್ಲೇ ಮುಳುಗಿದರು. ರಾಷ್ಟ್ರದ ಕೆಲಸ ಮಾಡಬೇಕಾದಾಗ ತಮ್ಮ ವೈಯುಕ್ತಿಕ ತೊಂದರೆಗಳನ್ನೆಲ್ಲ ಬದಿಗಿಟ್ಟು ಆ ಕೆಲಸದಲ್ಲಿ ನಿರತರಾಗುತ್ತಿದ್ದರು. ಆದರೆ ಶರೀರ ಎಷ್ಟು ಹೊರೆಯನ್ನು ಹೊರಲು ಸಾಧ್ಯ? ಅವರು ಕಾಮಾಲೆ ರೋಗಕ್ಕೆ ಸಿಲುಕಿ ಜೂನ್ ೧೯೩೫ರಲ್ಲಿ ಒಂದು ತಿಂಗಳು ಹಾಸಿಗೆ ಹಿಡಿಯಬೇಕಾಯಿತು. ಸ್ವಲ್ಪ ಶಕ್ತಿ ಬಂದ ತಕ್ಷಣ ಹಳ್ಳಿಗಳಿಗೆ ಭೇಟಿ ನೀಡುವ ತಮ್ಮ ಕೆಲಸವನ್ನು ಮತ್ತೆ ಆರಂಭಿಸಿದರು. ಅದರ ಫಲವಾಗಿ ನವೆಂಬರ್‌ನಲ್ಲಿ ಆರೋಗ್ಯ ಕೆಟ್ಟಿತು. ಒಂದು ಸಣ್ಣ ಶಸ್ತ್ರಚಿಕಿತ್ಸೆಗೂ ಒಳಗಾಗಬೇಕಾಯಿತು.

೧೯೩೬ರ ಜನವರಿಯಲ್ಲಿ ಗಾಂಧೀಜಿಯ ಅನಾರೋಗ್ಯದ ಸುದ್ದಿ ಬಂದಿತು. ಗಾಂಧೀಜಿ ಆಗ ವಾರ್ಧ ಆಶ್ರಮದಲ್ಲಿದ್ದರು. ಅವರು ಉಪ್ಪಿನ ಸತ್ಯಾಗ್ರಹಕ್ಕಾಗಿ ಅಹಮದಾಬಾದ್‌ನ ಸಬರಮತಿ ಆಶ್ರಮದಿಂದ ೭೮ ಮಂದಿ ಅನುಯಾಯಿಗಳೊಡನೆ ಹೊರಟಾಗ ದೇಶಕ್ಕೆ ಸ್ವಾತಂತ್ರ್ಯ ಬಂದ ಹೊರತು ಸಬರಮತಿ ಆಶ್ರಮಕ್ಕೆ ವಾಪಸ್ಸು ಬರುವುದಿಲ್ಲ ಎಂದು ತೀರ್ಮಾನಿಸಿದ್ದರು. ಅದರಿಂದ ಅವರು ಸೆರೆಮನೆಯಿಂದ ಹೊರ ಬಂದ ಮೇಲೆ ಮತ್ತು ಸಂಚಾರಗಳನ್ನು ಮುಗಿಸಿದ ಮೇಲೆ ಜಮನ್ ಲಾಲ್ ಬಜಾಜ್‌ರವರು ಮಧ್ಯ ಪ್ರಾಂತ್ಯದ ವಾರ್ಧ ಪಟ್ಟಣದಲ್ಲಿದ್ದ ತಮ್ಮ ಒಂದು ಭವನವನ್ನು ಗಾಂಧೀಜಿಗೆ ನೀಡಿದರು. ಆ ಭವನದಲ್ಲಿ ಒಂದು

ವಿಸ್ತಾರವಾದ ಕಾಂಪೌಂಡ್ ಮತ್ತು ಹುಲ್ಲುಗಾವಲು ಇತ್ತು. ಗಾಂಧೀಜಿ ೧೯೩೪ರಲ್ಲಿ ಅಲ್ಲಿ ವಾಸ ಮಾಡಲಾರಂಭಿಸಿದರು. ಗಾಂಧೀಜಿ ವಾರ್ಧದಲ್ಲಿ ನೆಲೆಸಿದ್ದು ಪಟೇಲರಿಗೆ ಇಷ್ಟವಾಗಲಿಲ್ಲ. ಏಕೆಂದರೆ ಪಟೇಲರ ಸ್ಥಳದಿಂದ ಅದು ದೂರದಲ್ಲಿತ್ತು. ೧೯೩೬ರಲ್ಲಿ ಗಾಂಧೀಜಿಯವರು ವಾರ್ಧದಿಂದ ಇನ್ನೂ ಸುಮಾರು ೧೦ ಮೈಲಿ ದೂರದಲ್ಲಿರುವ ಸೇಗಾನ್ ಹಳ್ಳಿಯಲ್ಲಿ ಆಶ್ರಮ ಸ್ಥಾಪಿಸಿ ನೆಲೆಸಿದರು. ಸೇಗಾನ್ ಹಳ್ಳಿಯನ್ನು ಬಜಾಜ್‌ರವರು ಗಾಂಧೀಜಿಗೆ ನೀಡಿದ್ದರು. ಆ ಹಳ್ಳಿಯ ಹೆಸರನ್ನು ಗಾಂಧೀಜಿಯವರು ಸೇವಾಗ್ರಾಮ ಎಂದು ಮರು ನಾಮಕರಣ ಮಾಡಿದರು. ಅಲ್ಲಿಗೆ ದೂರವಾಣಿಯಾಗಲಿ, ಅಂಚೆ ಸಂಪರ್ಕವಾಗಲಿ, ರಸ್ತೆಯಾಗಲಿ ಇರಲಿಲ್ಲ. ಗಾಂಧೀಜಿಯ ವಾಸಸ್ಥಳ ಪಟೇಲರಿಗೆ ಇನ್ನಷ್ಟು ದೂರವಾಯಿತು. ಆದರೆ ಅವರಿಬ್ಬರ ಆತ್ಮೀಯತೆಗೆ ಕುಂದು ತರಲಿಲ್ಲ. ಅಂತಹದು ಅವರ ಸಂಬಂಧ!

ಡಿಸೆಂಬರ್ ೧೯೩೫ರಲ್ಲಿ ಗಾಂಧೀಜಿಗೆ ಕಾಯಿಲೆಯಾದಾಗ ಅವರು ಪತ್ರಗಳನ್ನು ಬರೆಯಬಾರದೆಂದು ವೈದ್ಯರು ಕಟ್ಟು ನಿಟ್ಟಾಗಿ ಹೇಳಿದರು. ನಾಲ್ಕು ದಿನಗಳ ನಂತರ ಪಟೇಲರಿಂದ ಬಂದ ಒಂದು ಪತ್ರವನ್ನು ಮಹದೇವ ದೇಸಾಯಿ ಓದಿದಾಗ, ಅವರಿಗೆ ಎಷ್ಟು ಖುಷಿಯಾಯಿತೆಂದರೆ, ಹಠ ಮಾಡಿ ಎದ್ದು ಕುಳಿತು ಆ ಪತ್ರಕ್ಕೆ ಜವಾಬನ್ನು ತಾವೇ ಬರೆದರು. ಗಾಂಧೀಜಿಯವರು ೧೯೩೬ರಲ್ಲಿ ಗುಜರಾತ್‌ನಲ್ಲಿ ಸಂಚರಿಸಿ ತಮ್ಮ ಹರಿಜನ ಕಾರ್ಯಕ್ಕೆ ಹಣ ಸಂಗ್ರಹಿಸಬೇಕೆಂದು ಯೋಜಿಸಿದ್ದರು. ಅವರ ಅಧಿಕ ರಕ್ತದೊತ್ತಡ ವಾಸಿ ಆಗಿಲ್ಲದಿದ್ದರೂ ಅವರು ಗುಜರಾತ್‌ಗೆ ಹೊರಡುವ ವಿಷಯ ಪಟೇಲರಿಗೆ ತಿಳಿಯಿತು. ಅವರು ಎರಡು ದಿನಗಳಲ್ಲಿ ತಾವೇ ಹಣ ಸಂಗ್ರಹಿಸಿ ವಾರ್ಧಕ್ಕೆ ಹೋಗಿ ನೀಡಿದರು. ಗಾಂಧೀಜಿಯನ್ನು ಬೊಂಬಾಯಿಗೆ ಕರೆತಂದು ವೈದ್ಯ ಪರೀಕ್ಷೆ ಮಾಡಿಸಿದರು. ನಂತರ ಒಂದು ತಿಂಗಳ ಸಂಪೂರ್ಣ ವಿಶ್ರಾಂತಿಗಾಗಿ ಅಹಮದಾಬಾದ್‌ನ ವಿದ್ಯಾಪೀಠಕ್ಕೆ ಕರೆದುಕೊಂಡು ಹೋದರು. ಅಲ್ಲಿ ಬಾಗಿಲ ಹೊರಗೆ ಅವರೇ ಕಾವಲುಗಾರನಾಗಿ ಕುಳಿತು ಯಾರೂ ಗಾಂಧೀಜಿಯನ್ನು ಭೇಟಿ ಮಾಡದಂತೆ ತಡೆಯುತ್ತಿದ್ದರು. ಅವರು ಸಂಪೂರ್ಣ ಗುಣಮುಖರಾದ ಮೇಲೆಯೇ ವಾರ್ಧಕ್ಕೆ ಹೋಗಲು ಬಿಟ್ಟಿದ್ದು. ಅದಾದ ಕೆಲವು ದಿವಸಗಳಲ್ಲಿ ಸರ್ದಾರರಿಗೆ ಶೀತವಾಗಿ ಶ್ವಾಸಕೋಶಗಳಿಗೆ ತೊಂದರೆಯಾಯಿತು. ಅದು ವಾಸಿಯಾಗುತ್ತಿದ್ದ ಹಾಗೆ ಅವರು ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಲು ಲಕ್ನೋಗೆ ಹೋದರು. ಅಲ್ಲಿ ಅವರ ಶ್ವಾಸಕೋಶದ ತೊಂದರೆ ಮರುಕಳಿಸಿತು. ಗಾಂಧೀಜಿ ಅವರನ್ನು ನಂದಿ ಬೆಟ್ಟಕ್ಕೆ ಕರೆದುಕೊಂಡು ಹೋಗಿ ಒಂದು ತಿಂಗಳ ವಿಶ್ರಾಂತಿ ಕೊಡಿಸಿದರು.[೬೫]

(ಪಟೇಲರಿಗೆ ವಾಲ್‌ಚಂದ್ ಹೀರಾಚಂದ್, ಬಿರ್ಲಾ ಸಹೋದರರು ಮುಂತಾದ ಶ್ರೀಮಂತ ಸ್ನೇಹಿತರಿದ್ದರು. ಕಾಂಗ್ರೆಸ್ ಅಥವಾ ಗಾಂಧೀಜಿಗೆ ಹಣ ಬೇಕಾದಾಗಲೆಲ್ಲ ಅವರು ನೀಡುತ್ತಿದ್ದರು. ಆದರೆ ಪಟೇಲರು ಸ್ವಂತಕ್ಕಾಗಿ ಯಾವಾಗಲೂ ಹಣ ಪಡೆಯುತ್ತಿರಲಿಲ್ಲ. ಅದು ಆ ಸ್ನೇಹಿತರಿಗೂ ತಿಳಿದಿತ್ತು. ಪಟೇಲರಿಗೆ ಬೇಕಾದ ಅಲ್ಪ ಹಣವನ್ನು ಮಗ ದಹ್ಯಾಭಾಯ್ ಒದಗಿಸುತ್ತಿದ್ದನು. ಅವರ ಉಡುಪಿಗೆ ಬೇಕಾದ ನೂಲನ್ನು ಮಗಳು ಮಣಿಬೆನ್ ಚರಕದಿಂದ ತೆಗೆಯುತ್ತಿದ್ದಳು.)

೧೨.೪ ರಾಜೀನಾಮೆ ಪ್ರಕರಣ

೧೯೩೬ರ ಏಪ್ರಿಲ್‌ನಲ್ಲಿ ಲಕ್ನೋದಲ್ಲಿ ಮುಂದಿನ ಕಾಂಗ್ರೆಸ್ ಅಧಿವೇಶನ ನಡೆಯುವುದಿತ್ತು. ಜವಹರಲಾಲ್ ನೆಹರುರವರನ್ನು ಅಧ್ಯಕ್ಷರನ್ನಾಗಿ ಮಾಡಲು ಗಾಂಧೀಜಿ ಆಲೋಚಿಸಿದರು. ಆದರೆ ಪಟೇಲರು ರಾಜಗೋಪಾಲಾಚಾರಿಯವರನ್ನು ಕಾಂಗ್ರೆಸ್ ಅಧ್ಯಕ್ಷಗಿರಿಗೆ ಆರಿಸುವಂತೆ ಗಾಂಧೀಜಿಗೆ ತಿಳಿಸಿದರು. ಆ ಗೌರವವನ್ನು ಪಡೆಯುವುದು ರಾಜಾಜಿಯವರ ಸರದಿ ಎನ್ನುವುದು ಪಟೇಲರ ಅಭಿಪ್ರಾಯವಾಗಿತ್ತು. ಜೊತೆಗೆ, ಜವಹರ್‌ರವರು ಒಮ್ಮೆ ಅಧ್ಯಕ್ಷರಾಗಿದ್ದರು. ರಾಜಾಜಿ ವಾರ್ಧಕ್ಕೆ ಬಂದಾಗ, ಗಾಂಧೀಜಿ ಆ ವಿಷಯವನ್ನು ಅವರೊಡನೆ ಪ್ರಸ್ತಾಪಿಸಿದರು. ರಾಜಾಜಿ ಅಧ್ಯಕ್ಷ ಪದವಿಯನ್ನು ನಿರಾಕರಿಸಿದರು. ೧೯೩೫ರ ಅಕ್ಟೋಬರ್‌ನಲ್ಲಿ ಗಾಂಧೀಜಿ ನೆಹರುಗೆ ಪತ್ರ ಬರೆದು ಕಾಂಗ್ರೆಸ್ ಅಧ್ಯಕ್ಷ ಪದವಿಯನ್ನು ಒಪ್ಪುವಂತೆ ಕೋರಿದರು. ಆಗ ನೆಹರು, ಅವರ ಪತ್ನಿ ಕಮಲಾ ನೆಹರುಗೆ ಕ್ಷಯರೋಗದ ಚಿಕಿತ್ಸೆ ಕೊಡಿಸುವುದಕ್ಕಾಗಿ, ಜರ್ಮನಿಯಲ್ಲಿದ್ದರು. ನೆಹರು ಅಧ್ಯಕ್ಷರಾಗಲು ಒಪ್ಪಿ ಗಾಂಧೀಜಿಯವರಿಗೆ ಪತ್ರ ಬರೆದರು. ನೆಹರು ಅಧ್ಯಕ್ಷರಾದದ್ದು ಸಮಾಜವಾದಿಗಳಿಗೆ ಬಹಳ ಸಂತೋಷವಾಯಿತು. ಅವರು ನೆಹರು ಮೂಲಕ ಕಾಂಗ್ರೆಸ್ಸನ್ನು ವಶಪಡಿಸಿಕೊಳ್ಳುವ ಕನಸು ಕಾಣಲು ಆರಂಭಿಸಿದರು.[೮೬]

ಜರ್ಮನಿಯಲ್ಲಿದ್ದ ಜವಹರಲಾಲ್ ನೆಹರು ೧೯೩೬ರ ಮಾರ್ಚ್‌ನಲ್ಲಿ ಭಾರತಕ್ಕೆ ವಾಪಸ್ಸು ಬಂದರು. ಬರುವಾಗ ಸಮಾಜವಾದದ ಅಭಿಪ್ರಾಯಗಳನ್ನು ತಲೆಯಲ್ಲಿ ತುಂಬಿಕೊಂಡು, ಅವನ್ನು ಭಾರತದಲ್ಲಿ ಅಳವಡಿಸುವ ಆಸೆ ಹೊತ್ತು ಬಂದರು. ಅವರಿಗೆ 'ಹಳೆಯ ನಾಯಕತ್ವ'ದ ಬಗೆಗೆ ತೃಪ್ತಿ ಇರಲಿಲ್ಲ. 'ಹಳೆಯ ನಾಯಕತ್ವ' ಎಂದರೆ ಗಾಂಧೀಜಿಯ ನಾಯಕತ್ವವನ್ನು ಸಂಪೂರ್ಣವಾಗಿ ಒಪ್ಪಿದ್ದ ಪಟೇಲ್, ರಾಜೇಂದ್ರ ಪ್ರಸಾದ್, ರಾಜಾಜಿ, ಜಮನ್‌ಲಾಲ್ ಬಜಾಜ್ ಮುಂತಾದವರು ಗಾಂಧೀಜಿಯ ರಚನಾತ್ಮಕ ಕಾರ್ಯಕ್ರಮಗಳನ್ನು ನೆಹರು

ಒಪ್ಪಿರಲಿಲ್ಲ. ಚರಕವನ್ನು ಒಬ್ಬ ಹಳೆಯ ಮುದುಕಿಯ ಕೆಲಸ ಎಂದು ಕರೆದಿದ್ದರು. ಅವರು ಎಡ ಪಂಥದ ಕಡೆಗೆ ವಾಲಿದ್ದರು. ಹಿಂದೆಯೇ ಹೇಳಿದ ಹಾಗೆ 'ಸಮಾಜವಾದಿ ಪಕ್ಷ' ಎನ್ನುವ ಯುವಕರ ಒಂದು ಗುಂಪು ಕಾಂಗ್ರೆಸ್ ಪಕ್ಷದೊಳಗೇ ಸೃಷ್ಟಿಯಾಗಿತ್ತು. ಆಚಾರ್ಯ ನರೇಂದ್ರ ದೇವ್, ಜಯಪ್ರಕಾಶ್ ನಾರಾಯಣ್, ಮಿನೂ ಮಸಾನಿ ಮೊದಲಾದವರು ಆ ಗುಂಪಿನಲ್ಲಿದ್ದರು. ಅವರು ನೆಹರುವನ್ನು ತಮ್ಮ ನಾಯಕ ಎಂದು ಕರೆದಿದ್ದರೂ, ನೆಹರು ಅವರ ಗುಂಪಿನ ನಾಯಕನಾಗಲು ಒಪ್ಪಿರಲಿಲ್ಲ. ಆದರೆ ಅವರ ಅಭಿಪ್ರಾಯಗಳನ್ನೇ ಬರವಣಿಗೆ ಮತ್ತು ಭಾಷಣಗಳಲ್ಲಿ ಬಿತ್ತುತ್ತಿದ್ದರು. ಆದಾಗ್ಯೂ ಗಾಂಧೀಜಿ ಅಥವಾ ಹಳೆಯ ನಾಯಕತ್ವದಿಂದ ದೂರವಾಗಲೂ ಅವರಿಗೆ ಇಷ್ಟವಿರಲಿಲ್ಲ.[೮೭]

ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ನೆಹರುರವರು ಕಾರ್ಯಕಾರಿ ಸಮಿತಿಯನ್ನು ರಚಿಸುವಾಗ ಗಾಂಧೀಜಿಯ ಸಲಹೆಯನ್ನು ಕೇಳಿದರು. ಗಾಂಧೀಜಿಯವರು ವಲ್ಲಭಭಾಯ್ ಮತ್ತು ರಾಜೇಂದ್ರ ಪ್ರಸಾದ್ ಜೊತೆ ಸಮಾಲೋಚಿಸುವಂತೆ ಸೂಚಿಸಿದರು. ನೆಹರು ಹಾಗೆಯೇ ಮಾಡಿ ತಮ್ಮ ಕಾರ್ಯಕಾರಿ ಸಮಿತಿಯನ್ನು ರಚಿಸಿದರು. ಅದರಲ್ಲಿ ಪಟೇಲ್, ಪ್ರಸಾದ್, ರಾಜಾಜಿ ಮತ್ತು ಇತರರು ಇದ್ದರು. ಮೂವರು ಸಮಾಜವಾದಿಗಳು, ನರೇಂದ್ರ ದೇವ್, ಅಚ್ಯುತ ಪಟವರ್ಧನ್ ಮತ್ತು ಜಯಪ್ರಕಾಶ್ ನಾರಾಯಣ್ ಸಹ ಇದ್ದರು. ನೆಹರುರವರು ಕೃಪಲಾನಿಯನ್ನೇ ಕಾರ್ಯದರ್ಶಿಯನ್ನಾಗಿ ಮುಂದುವರೆಸಿದರು.

ಸ್ವಲ್ಪ ಕಾಲದಲ್ಲಿ ಒಂದು ಘರ್ಷಣೆ ಉದ್ಭವವಾಯಿತು. ನೆಹರು ತಮ್ಮ ಭಾಷಣಗಳಲ್ಲಿ ಸಮಾಜವಾದವನ್ನು ಪ್ರಚಾರ ಮಾಡುವುದನ್ನು ಮುಂದುವರೆಸಿದ್ದರು. ಕಾಂಗ್ರೆಸ್ಸಿನ ಅಧ್ಯಕ್ಷರು, ಕಾಂಗ್ರೆಸ್ಸು ಒಪ್ಪಿಲ್ಲದೇ ಇರುವ ಸಿದ್ಧಾಂತವನ್ನು ಪ್ರಚಾರ ಮಾಡುವುದು ಸರಿಯಲ್ಲ ಎಂದು ಪಟೇಲರು ಆಕ್ಷೇಪಿಸಿದರು. ಜೊತೆಗೆ, ನೆಹರುರವರು 'ಕಾರ್ಯಕಾರಿ ಸಮಿತಿಯನ್ನು ನನ್ನ ವಿವೇಚನೆಗೆ ವಿರುದ್ಧವಾಗಿ ರಚಿಸಿದ್ದೇನೆ,' ಎಂಬ ಮಾತನ್ನು ಆಡಿದ್ದರು. ಈ ಟೀಕೆಗೆ ತೀಕ್ಷ್ಣವಾಗಿ ಪ್ರತಿಕ್ರಿಯಿಸಿ ಪಟೇಲ್, ಪ್ರಸಾದ್, ರಾಜಾಜಿ, ಜೈರಾಮ್ ದಾಸ್, ಜಮನ್‌ಲಾಲ್ ಬಜಾಜ್ ಮತ್ತು ಶಂಕರ್ ರಾವ್ ತಮ್ಮ ಕಾರ್ಯಕಾರಿ ಸದಸ್ಯತ್ವಕ್ಕೆ ರಾಜಿನಾಮೆ ನೀಡಿದರು. ಅವರ ರಾಜಿನಾಮೆಗೆ ಪ್ರತಿಕ್ರಿಯೆಯಾಗಿ ನೆಹರು ತಾವೇ ರಾಜಿನಾಮೆ ಕೊಡುವುದಾಗಿ ಹೇಳಿದರು. ಆದರೆ ಗಾಂಧೀಜಿ ಮಧ್ಯೆ ಪ್ರವೇಶಿಸಿ ಎಲ್ಲರೂ ರಾಜಿನಾಮೆ ಹಿಂತೆಗೆದುಕೊಳ್ಳುವಂತೆ ಮಾಡಿದರು. ಅವರು ನೆಹರುಗೆ ಪತ್ರ ಬರೆದು "ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ನೀವು ಮತ್ತು ನಿಮ್ಮ ಕಾರ್ಯಕಾರಿ ಸಮಿತಿ ಸದಸ್ಯರ ಪೈಕಿ ಒಬ್ಬರನ್ನು

ಆರಿಸಿಕೊಳ್ಳುವಂತೆ ಬಲಾತ್ಕರಿಸಬೇಡಿ. ಅವರು (ಸದಸ್ಯರು) ಅಸಹಿಷ್ಣುಗಳಾದರೆ ನೀವು ಅವರಿಗಿಂತಲೂ ಹೆಚ್ಚಿನ ಅಸಹಿಷ್ಣು. ನಿಮ್ಮ ಪರಸ್ಪರ ಅಸಹಿಷ್ಣುತೆಯಿಂದ ದೇಶವು ನರಳುವಂತೆ ಮಾಡಬಾರದು" ಎಂದು ತಿಳಿಸಿದರು.[೮೮]

ಗಾಂಧೀಜಿಯವರು ನೆಹರುಗೆ ೧೯೩೬ ಮೇ ೨೯ರಂದು ಪತ್ರ ಬರೆದು, "ನಿಮ್ಮ ಹೇಳಿಕೆಯು ರಾಜೇನ್ ಬಾಬು, ರಾಜಾಜಿ ಮತ್ತು ವಲ್ಲಭಭಾಯ್‌ಗೆ ನೋವನ್ನುಂಟು ಮಾಡಿದೆ. ಅವರು ಸಹಕಾರ್ಯಕರ್ತರಾಗಿ ನಿಮ್ಮ ಬಗೆಗೆ ಗೌರವದಿಂದ ಮತ್ತು ಪರಿಪೂರ್ಣ ನಿಷ್ಠೆಯಿಂದ ನಡೆದುಕೊಳ್ಳಲು ಪ್ರಯತ್ನಿಸಿರುವುದಾಗಿ ಭಾವಿಸಿದ್ದಾರೆ. ನಾನು ಅದನ್ನು ಅನುಮೋದಿಸುತ್ತೇನೆ. ಆದರೆ, ನೋವಿಗೆ ಈಡಾದವರು ನೀವು ಎಂದು ನಿಮ್ಮ ಹೇಳಿಕೆಯು ತೋರಿಸುತ್ತದೆ," ಎಂದು ತಿಳಿಸಿದರು. ಆನಂತರ ಜುಲೈ ೧೫ರಂದು ಗಾಂಧೀಜಿ ಮತ್ತೆ ಪತ್ರ ಬರೆದು, "ನಿಮ್ಮ ನಿಂದನೆಗಳು ಮತ್ತು ಠೀಪಿಯಿಂದ ಮತ್ತು ಅವಕ್ಕಿಂತಲೂ ಮುಖ್ಯವಾಗಿ, ಅವರಿಗೆ ಕಾಣಿಸಿರುವ ಹಾಗೆ, ನೀವು ತಪ್ಪು ಮಾಡುವುದೇ ಇಲ್ಲ ಮತ್ತು ನಿಮಗೆ ಹೆಚ್ಚಿನ ಜ್ಞಾನ ಇದೆಯೆಂಬ ನಿಮ್ಮ ತಪ್ಪು ಧೋರಣೆಯಿಂದ ಅವರು ಆಘಾತಗೊಂಡಿದ್ದಾರೆ. ನೀವು ಅವರಿಗೆ ಅಸೌಜನ್ಯತೆಯನ್ನು ತೋರುತ್ತಿದ್ದೀರಿ. ಸಮಾಜವಾದಿಗಳು ಅವರನ್ನು ಅವಹೇಳನ ಮಾಡಿದಾಗ ಮತ್ತು ತಪ್ಪಾಗಿ ಬಿಂಬಿಸಿದಾಗ ಎಂದೂ ಅವರನ್ನು (ಹಳೆ ನಾಯಕತ್ವದವರನ್ನು) ಸಮರ್ಥಿಸಿಲ್ಲ ಎಂದು ಅವರು ಭಾವಿಸಿದ್ದಾರೆ," ಎಂದು ಬರೆದರು. ಮುಂದುವರಿದು ಗಾಂಧೀಜಿ ನೇರವಾಗಿ ಮತ್ತು ಸ್ಪಷ್ಟವಾಗಿ "ಅವರ ಅವಿರೋಧತೆಯಿಂದ ನೀವು ಅಧಿಕಾರದಲ್ಲಿದ್ದೀರಿ," ಎಂದು ನೆಹರುಗೆ ತಿಳಿಸಿದರು.

ಗಾಂಧೀಜಿಯ ಮಾತುಗಳಿಂದ ನೆಹರು ಮೆತ್ತಗಾದರು. ಅದರ ಫಲವಾಗಿ ಹಳೆಯ ನಾಯಕರು ತಮ್ಮ ರಾಜಿನಾಮೆಯನ್ನು ಹಿಂದಕ್ಕೆ ಪಡೆದರು. ಆದಾಗ್ಯೂ ಅವರು ಈ ರೀತಿ ಹೇಳಿದರು.

> ಕಾರ್ಯಕಾರಿ ಸಮಿತಿಯ ಅಧ್ಯಕ್ಷರು ಮತ್ತು ಇತರ ಸಮಾಜವಾದಿ ಸದಸ್ಯರು ಸಮಾಜವಾದವನ್ನು ಬೋಧಿಸುವುದು ಮತ್ತು ಅದಕ್ಕೆ ಒತ್ತು ಕೊಡುವುದು, ಅದರಲ್ಲೂ ಕಾಂಗ್ರೆಸ್ಸು ಅದನ್ನು ಅಂಗೀಕರಿಸಿಲ್ಲದೇ ಇರುವಾಗ, ದೇಶದ ಹಿತಕ್ಕೆ ಮತ್ತು ಸ್ವಾತಂತ್ರ್ಯಕ್ಕಾಗಿ ನಡೆಯುತ್ತಿರುವ ರಾಷ್ಟ್ರೀಯ ಹೋರಾಟಕ್ಕೆ ಪ್ರತಿಕೂಲವಾದದ್ದು ಎನ್ನುವುದು ನಮ್ಮ ಭಾವನೆ..... ಕಾಂಗ್ರೆಸ್ಸು ತಾನು ೧೯೨೦ರಿಂದಲೂ ಅನುಸರಿಸುತ್ತಿರುವ ಧ್ಯೇಯಗಳು,

> ಹೋರಾಟದ ವಿಧಾನ ಮತ್ತು ನೀತಿಗಳನ್ನು ಈಗಲೂ ಅನುಸರಿಸಬೇಕೆಂದು ಭಾವಿಸಿದ್ದೇವೆ.

ಅವನ್ನು ಸ್ವತಃ ಗಾಂಧೀಜಿಯವರೇ ರೂಪಿಸಿದ್ದರು. ಹಳೆಯ ನಾಯಕರ ಈ ಭಾವನೆಗಳಿಗೆ ಕಾರಣವೂ ಇತ್ತು. ನೆಹರುರವರು ಕಾರ್ಯಕಾರಿ ಸಮಿತಿಗೆ ಮೂವರು ಸಮಾಜವಾದಿಗಳನ್ನು ಸೇರಿಸಿಕೊಂಡಿದ್ದರು. ಆ ಮೂವರು ಕಮ್ಯುನಿಸ್ಟರ ನೆರಳಾಗುವ ಸಂಭವವಿತ್ತು.[೮೯]

ಪಟೇಲರು ಕಾಂಗ್ರೆಸ್ ಸಮಾಜವಾದಿಗಳ ನಡೆ ನುಡಿಯನ್ನು ಎಚ್ಚರಿಕೆಯಿಂದ ಗಮನಿಸುತ್ತಿದ್ದರು. ಅವರು ಕಾಂಗ್ರೆಸ್ ಸಮಾಜವಾದಿಗಳನ್ನು ಕಮ್ಯುನಿಸ್ಟ್ ಪಕ್ಷದ 'ಸ್ಯಾಪರ್ಸ್ ಮತ್ತು ಮೈನರ್ಸ್' (ಅಂದರೆ ಸೇತುವೆ ನಿರ್ಮಿಸುವ ಮತ್ತು ಸುರಂಗ ತೋಡುವ ಸೈನಿಕರು) ಎಂದು ತೀರ್ಮಾನಿಸಿದ್ದರು. ಕಮ್ಯುನಿಸ್ಟರು ಈ ಸಮಾಜವಾದಿಗಳ ಮೂಲಕ ಕಾಂಗ್ರೆಸ್ ಪಕ್ಷವನ್ನು ಪ್ರವೇಶಿಸಲು ಹವಣಿಸುತ್ತಿದ್ದರು. ಸರ್ಕಾರವು ಕಮ್ಯುನಿಸ್ಟ್ ಪಕ್ಷವನ್ನು ನಿಷೇಧಿಸಿತ್ತು. ಕಮ್ಯುನಿಸ್ಟರು ಮತ್ತು ಸಮಾಜವಾದಿಗಳು ಸೇರಿ 'ಯುನೈಟೆಡ್ ಫ್ರಂಟ್' ಅನ್ನು ಸ್ಥಾಪಿಸಿಕೊಂಡಿದ್ದರು. ಆ ಫ್ರಂಟ್ ಮೂಲಕ ಕಮ್ಯುನಿಸ್ಟರು ಭಾರತ ರಾಜಕೀಯದಲ್ಲಿ ಸ್ವಲ್ಪ ಜಾಗ ಗಿಟ್ಟಿಸಿಕೊಂಡಿದ್ದರು.

ಕಾಂಗ್ರೆಸ್ ಸಮಾಜವಾದಿಗಳ ಪೈಕಿ ಒಬ್ಬರಾಗಿದ್ದ ಮಿನೂ ಮಸಾನಿಯವರು ಪಟೇಲರ ಬಗೆಗೆ ತಮ್ಮ ಅಭಿಪ್ರಾಯವನ್ನು ಹೀಗೆ ಹೇಳಿದ್ದಾರೆ:

> ಕಾಂಗ್ರೆಸ್ ಸಮಾಜವಾದಿ ಪಕ್ಷದ ವಿರುದ್ಧ ಸರ್ದಾರ್ ಪಟೇಲರ ಆಕ್ರಮಣದಿಂದ ನಾನು ಆ ಕಾಲದಲ್ಲಿ ಅಸಮಾಧಾನ ಗೊಳ್ಳುತ್ತಿದ್ದರೂ, ಈಗ ಹಿಂದಕ್ಕೆ ನೋಡಿದರೆ, ಪಟೇಲರು ಸಮಾಜವಾದಿಗಳನ್ನು ಕಮ್ಯುನಿಸ್ಟ್ ಪಕ್ಷದ 'ಸ್ಯಾಪರ್ಸ್ ಮತ್ತು ಮೈನರ್ಸ್' ಎಂದು ಕರೆದದ್ದು ನ್ಯಾಯಯುತವಾಗಿತ್ತು ಎಂದು ಭಾವಿಸುತ್ತೇನೆ. ಸ್ವತಃ ನಾನು ೧೯೩೯ರಲ್ಲಿ ಕಮ್ಯುನಿಸ್ಟರೊಡನೆಯ ಮೈತ್ರಿಯ ವಿಷಯವಾಗಿ ಕಾಂಗ್ರೆಸ್ ಸಮಾಜವಾದಿಗಳ ಪಕ್ಷಕ್ಕೇ ರಾಜೀನಾಮೆ ಕೊಟ್ಟೆ. ೧೯೪೧ರಲ್ಲಿ ಜಯಪ್ರಕಾಶ್ ನಾರಾಯಣ್ ರವರೂ ಸಹ ಅದೇ ನಿರ್ಧಾರಕ್ಕೆ ಬಂದರು.[೯೦]

ಬದಲಾದ ನೆಹರು ಹಳೆಯ ನಾಯಕರ ಹಾದಿಗೇ ಬಂದರು ಮತ್ತು ಚುನಾವಣಾ ಕಾರ್ಯದಲ್ಲಿ ಬಹಳ ಶ್ರಮಿಸಿದರು. ಇಬ್ಬರೂ ಒಟ್ಟಿಗೆ ಕೆಲಸ ಮಾಡಲು

ಆರಂಭಿಸಿದರು. ೧೯೩೬ ಆಗಸ್ಟ್ ೨೬ರಂದು ಪಟೇಲರು ಗಾಂಧೀಜಿಗೆ ಪತ್ರ ಬರೆದು, "ಈಗ ನಾವು ಬಹಳ ಚೆನ್ನಾಗಿ ಕೆಲಸ ಮಾಡಿಕೊಂಡು ಹೋಗುತ್ತಿದ್ದೇವೆ. ..... ಒಂದು ಕುಟುಂಬದ ಸದಸ್ಯರಂತೆ ಹೋಗುತ್ತಿದ್ದೇವೆ..... ಚುನಾವಣಾ ಪ್ರಣಾಳಿಕೆಯನ್ನು ತಯಾರಿಸಿ ಹೆಚ್ಚು ಕಡಿಮೆ ಅವಿರೋಧವಾಗಿ ಅಂಗೀಕರಿಸಿದ್ದೇವೆ..... ನಾನು ಜವಹರರ ಬಗೆಗೆ ಮೆಚ್ಚಿಗೆಯಿಂದ ಮಾತಾಡದೆ ಇರಲಾರೆ..... ಅವರೊಡನೆ ಸಹಕರಿಸಲು ನಮಗೆ ಸ್ವಲ್ಪವೂ ಕಷ್ಟವಾಗುತ್ತಿಲ್ಲ," ಎಂದು ತಿಳಿಸಿದರು.[೯೧]

೧೯೩೬ರ ಮಾರ್ಚ್‌ನಲ್ಲಿ ಪಟೇಲರಿಗೆ ವಿಷಮ ಶೀತ ಜ್ವರ (ನ್ಯೂಮೊನಿಯ) ತಗುಲಿ ದೆಹಲಿಯಲ್ಲಿ ಬಿರ್ಲಾ ಸದನದಲ್ಲಿ ಎರಡು ವಾರಗಳು ತಂಗಿದ್ದರು. ಲಕ್ನೊ ಅಧಿವೇಶನವಾದ ನಂತರ ಅದು ಮತ್ತೆ ಬಂದಿತು. ಗಾಂಧೀಜಿಯವರು ಮೇ ತಿಂಗಳಲ್ಲಿ ಪಟೇಲರನ್ನು ಬೆಂಗಳೂರು ಸಮೀಪದ ನಂದಿ ಬೆಟ್ಟಕ್ಕೆ ಕರೆದುಕೊಂಡು ಹೋಗಿ ಒಂದು ತಿಂಗಳು ವಿಶ್ರಾಂತಿ ಪಡೆಯುವಂತೆ ಮಾಡಿದರು. ಪೂರ್ಣ ಗುಣವಾದ ಮೇಲೆ ಪಟೇಲರು ತಮ್ಮ ಮೂಗಿನ ತೊಂದರೆಗೆ ಬೊಂಬಾಯಿಯ ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆ ಮಾಡಿಸಿಕೊಂಡರು. ಅಂತೂ ಅವರಿಗೆ ಮೂಗಿನ ತೊಂದರೆಯಿಂದ ಬಿಡುಗಡೆ ದೊರೆಯಿತು. ಆದರೆ ಅವರ ಮುಖದ ಲಕ್ಷಣವೇ ಬದಲಾವಣೆಯಾಗಿ ಹೋಯಿತು. ಶಸ್ತ್ರಚಿಕಿತ್ಸೆಗಾಗಿ ಅವರು ತಮ್ಮ ದಪ್ಪ ಇಳಿಮುಖದ ಮೀಸೆಯನ್ನು ತೆಗೆಸಬೇಕಾಯಿತು. ಅವರು ಮತ್ತೆ ಮೀಸೆ ಬಿಡಲಿಲ್ಲ.[೯೨]

ನೆಹರು ಮತ್ತು ಹಳೆಯ ನಾಯಕರ ನಡುವಣ ಭಿನ್ನಾಭಿಪ್ರಾಯಕ್ಕೆ ಕಾರಣವಾಗಿದ್ದುದೇನೆಂದರೆ ನೆಹರುರವರು ಸಮಾಜವಾದವನ್ನು ಅತಿಯಾಗಿ ಪ್ರತಿಪಾದಿಸುತ್ತಿದ್ದುದು ಮತ್ತು ಕಾಂಗ್ರೆಸ್ಸು ಅಧಿಕಾರವನ್ನು ವಹಿಸಿಕೊಳ್ಳುವುದನ್ನು ಬಲವಾಗಿ ವಿರೋಧಿಸುತ್ತಿದ್ದುದು. ಈ ಭಿನ್ನಾಭಿಪ್ರಾಯವನ್ನು ತೊಡೆದು ಹಾಕಲು ಪಟೇಲರು ಪ್ರಯತ್ನಿಸಿದರು. ಅವರು ಅಧಿಕಾರ ವಹಿಸಿಕೊಳ್ಳುವುದರ ಬಗೆಗೆ ನೆಹರುಗೆ ವಿವರಣೆ ನೀಡಿದರು. ಅವರೆಂದರು:

> ಗುರಿಯ ಬಗ್ಗೆ ಯಾವ ಭಿನ್ನಾಭಿಪ್ರಾಯವೂ ಇಲ್ಲ. ಬ್ರಿಟಿಷರು ಹೊರೆಸಿರುವ ಈ ಸಂವಿಧಾನವನ್ನು ನಾಶಪಡಿಸುವುದು ನಮ್ಮೆಲ್ಲರ ಬಯಕೆ. ಶಾಸನ ಸಭೆಗಳ ಒಳಗಿನಿಂದ ಅದನ್ನು ನಾಶಪಡಿಸುವುದು ಹೇಗೆ ಎನ್ನುವುದು ಪ್ರಶ್ನೆ..... ಅಧಿಕಾರವನ್ನು ವಹಿಸಿಕೊಳ್ಳುವ ಪ್ರಶ್ನೆ ಇಂದಿನ ಜೀವಂತ ವಿಚಾರ ಅಲ್ಲ. ಆದರೆ ನಮ್ಮೆಲ್ಲರ ಗುರಿಗಾಗಿ 'ಅಧಿಕಾರ ವಹಿಸುವುದು' ಅಪೇಕ್ಷಣೀಯವಾಗುವ ಸಂದರ್ಭವನ್ನು ನಾನು ಊಹಿಸಬಲ್ಲೆ..... ನಾನು ಪಾರ್ಲಿಮೆಂಟರಿ

> ಕಾರ್ಯಕ್ರಮಕ್ಕೂ ಅಂಟುಕೊಂಡಿಲ್ಲ, ಅಧಿಕಾರ ವಹಿಸುವಿಕೆಗೂ ಅಂಟುಕೊಂಡಿಲ್ಲ..... ಮುಂದಿನ ಘಟನೆಗಳಿಂದ ನಾವು ಅಧಿಕಾರ ವಹಿಸಿಕೊಳ್ಳುವ ಕಡೆಗೆ ನೂಕಲ್ಪಡಬಹುದು. ಆದರೆ ಅದು ಆತ್ಮಗೌರವವನ್ನು ಬಲಿಕೊಡುವುದರ ಅಥವಾ ನಮ್ಮ ಗುರಿಯನ್ನು ರಾಜಿ ಮಾಡಿಕೊಳ್ಳುವುದರ ಮೂಲಕ ಅಲ್ಲ.

ಸಮಾಧಾನಗೊಂಡ ನೆಹರು ಈ ರೀತಿ ಉತ್ತರಿಸಿದರು:

> ಈ ಅಧ್ಯಕ್ಷ ಚುನಾವಣೆಯನ್ನು ಸಮಾಜವಾದದ ಪರವಾದ ಮತ ಅಥವಾ ಅಧಿಕಾರ ವಹಿಸುವಿಕೆಗೆ ವಿರುದ್ಧದ ಮತ ಎಂದು ನಾನು ತಿಳಿದರೆ ಅದು ನನ್ನ ಮೂರ್ಖತನವಾಗುತ್ತದೆ. ರಾಜಕೀಯ ಸ್ವಾತಂತ್ರ್ಯವು ದೇಶದ ಮುಂದೆ ಇರುವ ಅತ್ಯಂತ ಪ್ರಮುಖ ವಿಷಯ ಎಂದು ನಾನೂ ನಂಬಿದ್ದೇನೆ. ಅದರ ಸಾಧನೆಗಾಗಿ ಒಟ್ಟುಗೂಡಿದ ಮತ್ತು ಐಕ್ಯಮತ್ಯದ ಕಾರ್ಯವನ್ನು ನಾವೆಲ್ಲರೂ ಮಾಡಬೇಕಾದ ಅವಶ್ಯಕತೆಯಿದೆ.[೯೩]

ಅಲ್ಲಿಂದ ಮುಂದೆ ನೆಹರು ದೇಶ ಸಂಚಾರ ಮಾಡಿ ಭಾಷಣ ಮಾಡಿ ಪ್ರಚಾರ ಮಾಡುವ ಕಾರ್ಯದಲ್ಲಿ ತೊಡಗಿದರು. ಅವರು ಹೋದಡೆಯಲ್ಲೆಲ್ಲ ಜನರನ್ನು ಆಕರ್ಷಿಸುತ್ತಿದ್ದರು. ಜನರ ಓಲೈಕೆ ಅವರಿಗೆ ತೃಪ್ತಿ ಮತ್ತು ಸಂತೋಷವನ್ನು ತರುತ್ತಿತ್ತು. ಪಟೇಲರು ಪಕ್ಷವನ್ನು ಬೆಳೆಸಿ ನಿಯಂತ್ರಿಸುವ ಕಾರ್ಯದಲ್ಲಿ ತೊಡಗಿದರು. ಅವರು ಪಕ್ಷದ ಪ್ರಶ್ನಾತೀತ ಯಜಮಾನನಾದರು.

೧೨.೫ ಮತ್ತೆ ತಪ್ಪಿದ ಕಾಂಗ್ರೆಸ್ ಗಾದಿ

ಮುಂದಿನ ಕಾಂಗ್ರೆಸ್ ಅಧಿವೇಶನ ೧೯೫೬ರ ಡಿಸೆಂಬರ್‌ನಲ್ಲಿ ಮಹಾರಾಷ್ಟ್ರದ ಫ್ಲೈಚಾಪುರ್‌ನಲ್ಲಿ ಏರ್ಪಾಡಾಯಿತು. ನೆಹರು ಮತ್ತೆ ಕಾಂಗ್ರೆಸ್ಸಿನ ಅಧ್ಯಕ್ಷರಾಗುವ ತಮ್ಮ ಬಯಕೆಯನ್ನು ಎಲ್ಲರಿಗೂ ತಿಳಿಯುವಂತೆ ಮಾಡಿದರು. ಆದರೂ, ಬೇರೆ ಯಾರಾದರೂ ಅಧ್ಯಕ್ಷರಾಗಿ ಚುನಾಯಿತರಾದರೆ ಅವರೊಡನೆ ಸಹಕರಿಸುವುದಾಗಿ ಹೇಳಿದರು. ಸರ್ದಾರರು ರಾಜಾಜಿಯವರ ಹೆಸರನ್ನು ಮತ್ತೆ ಸೂಚಿಸಿದರು. ಅವರ ಒತ್ತಾಯದ ಮೇಲೆ ಗಾಂಧೀಜಿಯವರು ರಾಜಾಜಿಗೆ ಪತ್ರ ಬರೆದರು. ಆದರೆ ರಾಜಾಜಿ ಒಪ್ಪಲಿಲ್ಲ. ನಂತರ ಪಟೇಲರು ಗೋವಿಂದ ವಲ್ಲಭ ಪಂತ್‌ರವರ ಹೆಸರನ್ನು ಸೂಚಿಸಿದರು. ಈ ಮಧ್ಯೆ ಅನೇಕ ಕಾಂಗ್ರೆಸ್ ಸದಸ್ಯರು ಪಟೇಲರ ಹೆಸರನ್ನು ಅಧ್ಯಕ್ಷ ಪದವಿಗೆ ಸೂಚಿಸಿದರು. ಏಕೆಂದರೆ ನೆಹರುರವರು, 'ತಮ್ಮನ್ನು

ಮತ್ತೊಂದು ಅವಧಿಗೆ ಬಯಸುವವರು ತಾವು ಒಬ್ಬ ಸಮಾಜವಾದಿ ಎನ್ನುವುದನ್ನು ಮನಸ್ಸಿನಲ್ಲಿ ಇಟ್ಟಿರಬೇಕು' ಎಂದು ಹೇಳಿದ್ದರು. ನೆಹರು ವಿರುದ್ಧ ಸ್ಪರ್ಧಿಸಲು ಸಿದ್ಧವಿದ್ದರೂ, ಚುನಾವಣೆಗೆ ಮೂರು ತಿಂಗಳ ಮುಂಚೆ ಕಾಂಗ್ರೆಸ್ಸನ್ನು ಒಡೆಯಲು ಪಟೇಲರು ಇಷ್ಟ ಪಡಲಿಲ್ಲ. ನೆಹರುರವರು ಗಾಂಧೀಜಿ ಬಳಿಗೆ ಹೋಗಿ 'ಕಾಂಗ್ರೆಸ್ಸನ್ನು ಪುನರುಜ್ಜೀವನಗೊಳಿಸಲು ನನಗೆ ೮ ತಿಂಗಳು ಸಾಲದು, ಅದರಿಂದ ಎರಡನೇ ಅವಧಿಯನ್ನು ಬಯಸುತ್ತೇನೆ' ಎಂದು ಹೇಳಿದರು. ಸ್ವಲ್ಪ ಹೊತ್ತು ಯೋಚಿಸಿ, 'ಏನು ಮಾಡಲು ಸಾಧ್ಯವೋ ನೋಡುತ್ತೇನೆ,' ಎಂದರು ಗಾಂಧೀಜಿ. ಈ ಸಂಭಾಷಣೆ ನಡೆದಾಗ ಕೃಪಲಾನಿಯೂ ಅಲ್ಲಿದ್ದರು. ಗಾಂಧೀಜಿಯವರು 'ಸ್ಪರ್ಧೆಯಿಂದ ಹಿಂದೆ ಸರಿಯುವಂತೆ' ಪಟೇಲರಿಗೆ ಸೂಚಿಸಿದರು. ಪಟೇಲರು ಹಾಗೆಯೆ ಮಾಡಿದರು. ನಂತರ ಪಟೇಲರು ಒಂದು ಹೇಳಿಕೆಯನ್ನು ಬಿಡುಗಡೆ ಮಾಡಿದರು:

> ಸ್ನೇಹಿತರೊಡನೆ ಸಮಾಲೋಚಿಸಿದ ಮೇಲೆ ನಾನು ಸ್ಪರ್ಧೆಯಿಂದ ಹಿಂದೆ ಸರಿಯಬೇಕು ಎನ್ನುವ ತೀರ್ಮಾನಕ್ಕೆ ಬಂದಿದ್ದೇನೆ..... ಈ ವಿಷಮ ಸನ್ನಿವೇಶದಲ್ಲಿ ಅವಿರೋಧ ಆಯ್ಕೆಯು ಅಪೇಕ್ಷಣೀಯ.
>
> ನನ್ನ ಹಿಂದೆ ಸರಿಯುವಿಕೆಯಿಂದ ನಾನು ಜವಹರರ ಎಲ್ಲಾ ಅಭಿಪ್ರಾಯಗಳನ್ನು ಒಪ್ಪಿದ್ದೇನೆ ಎಂದು ಭಾವಿಸಬಾರದು. ವಾಸ್ತವವಾಗಿ ಕೆಲವು ಬಹು ಮುಖ್ಯ ವಿಷಯಗಳ ಬಗೆಗೆ ನನ್ನ ಮತ್ತು ಜವಹರರ ನಡುವೆ ತೀವ್ರ ಭಿನ್ನಾಭಿಪ್ರಾಯವಿದೆ ಎಂಬುದು ಕಾಂಗ್ರೆಸ್ಸಿಗರಿಗೆ ಗೊತ್ತು. ಉದಾಹರಣೆಗೆ ವರ್ಗ ಸಮರದ ಅನಿವಾರ್ಯತೆಯ ಬಗೆಗೆ ನನಗೆ ನಂಬಿಕೆ ಇಲ್ಲ.
>
> ನಮ್ಮೆಲ್ಲರ ಗುರಿಯು ಸಾಧ್ಯವಾಗಿ ಅಧಿಕಾರ ವಹಿಸಿಕೊಳ್ಳುವಿಕೆಯು ಅಪೇಕ್ಷಣೀಯವಾಗುವ ಸಂದರ್ಭವನ್ನು ನಾನು ಊಹಿಸಬಲ್ಲೆ. ಆಗ ನನ್ನ ಮತ್ತು ಜವಹರರ ನಡುವೆ ತೀಕ್ಷ್ಣ ಭಿನ್ನಾಭಿಪ್ರಾಯ ಉಂಟಾಗಬಹುದು.
>
> ಜವಹರಲಾಲ್‌ರವರು ಬಹುಮತದ ತೀರ್ಮಾನವನ್ನು ಕಡೆಗಣಿಸದೆ ಇರುವಷ್ಟು ಕಾಂಗ್ರೆಸ್ಸಿಗೆ ನಿಷ್ಠರಾಗಿದ್ದಾರೆಂಬುದು ನಮಗೆ ಗೊತ್ತು.
>
> ಕಾಂಗ್ರೆಸ್ಸಿನ ಅಧ್ಯಕ್ಷರಿಗೆ ಸರ್ವಾಧಿಕಾರಿಯ ಅಧಿಕಾರವಿಲ್ಲ.

> ಅವರು ಒಂದು ಬಿಗಿ ಬಂಧದ ಸಂಘಟನೆಯ ಛೇರ್‌ಮನ್. ಯಾವ ವ್ಯಕ್ತಿಯನ್ನು ಅಧ್ಯಕ್ಷರನ್ನಾಗಿ ಆರಿಸಿದರೂ, ಅವರು ಯಾರೇ ಆಗಿದ್ದರೂ, ಕಾಂಗ್ರೆಸ್ಸು ತನ್ನ ಅಧಿಕಾರವನ್ನು ಬಿಟ್ಟುಕೊಡುವುದಿಲ್ಲ.[೯೪]

ಜವಹರಲಾಲ್ ನೆಹರು ಫೈಜಾಪುರದ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರಾದರು. ಪಟೇಲರು ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡ್‌ನ ಛೇರ್‌ಮನ್ ಆಗಿ ಮುಂದುವರೆದರು. ದೇಶದಲ್ಲಿ ಸಂಚಾರ ಮತ್ತು ಪ್ರಚಾರ ಮಾಡುವುದು ಹಾಗೂ ಮತ ಗಳಿಸುವುದು ನೆಹರುರವರ ಜವಾಬ್ದಾರಿಯಾಯಿತು. ಚುನಾವಣೆಗಳನ್ನು ನಡೆಸುವುದು, ಸ್ಪರ್ಧಿಗಳನ್ನು ಆರಿಸುವುದು. ಆನಂತರ ಮಂತ್ರಿಗಳನ್ನು ನಿಯಂತ್ರಿಸುವುದು ಮತ್ತು ಅವರಿಗೆ ಮಾರ್ಗದರ್ಶನ ನೀಡುವುದು ಪಟೇಲರ ಜವಾಬ್ದಾರಿಯಾಯಿತು. ಜವಹರರ ಮರುಚುನಾವಣೆಯು ಸಮಾಜವಾದವನ್ನು ಕಾಂಗ್ರೆಸ್ ಒಪ್ಪುತ್ತದೆ ಎನ್ನುವ ಮತ್ತು ಪ್ರಾಂತ್ಯಗಳಲ್ಲಿ ಅಧಿಕಾರ ವಹಿಸಿಕೊಳ್ಳುವುದನ್ನು ವಿರೋಧಿಸುತ್ತದೆ ಎನ್ನುವ ಅರ್ಥವಲ್ಲ ಎನ್ನುವುದನ್ನೂ ಸ್ಪಷ್ಟ ಪಡಿಸಲಾಯಿತು. ಪಟೇಲರು ವಾಸ್ತವವಾಗಿ ಕಾಂಗ್ರೆಸ್ಸಿನ ಅತಿ ಬಲಿಷ್ಠ ಯಜಮಾನರಾದರು. ಗಾಂಧೀಜಿಯವರು "ನನ್ನೆಲ್ಲ ಜವಾಬ್ದಾರಿಗಳನ್ನು ಜವಹರಲಾಲ್ ಮತ್ತು ಸರ್ದಾರರ ವಿಶಾಲ ಭುಜಗಳ ಮೇಲೆ ಹೊರೆಸಿದ್ದೇನೆ," ಎಂದರು.[೯೫]

೧೨.೬ ಚುನಾವಣೆಯಲ್ಲಿ ಜಯಭೇರಿ

ಬ್ರಿಟಿಷ್ ಪಾರ್ಲಿಮೆಂಟು ೧೯೩೫ರ ಆಗಸ್ಟ್ ತಿಂಗಳಲ್ಲಿ ೧೯೩೫ರ ಭಾರತ ಸರ್ಕಾರದ ಕಾನೂನನ್ನು ಅಂಗೀಕರಿಸಿತು. ಆ ಕಾನೂನು ಕೇಂದ್ರದಲ್ಲಿ ಬ್ರಿಟಿಷ್ ಭಾರತೀಯ ಪ್ರಾಂತ್ಯಗಳು ಮತ್ತು ಸ್ಥಳೀಯ ರಾಜರಾಡಳಿತದ ರಾಜ್ಯಗಳು ಸೇರಿದ ಒಂದು ಒಕ್ಕೂಟ ರಚನೆಗೆ ಅವಕಾಶ ಮಾಡಿತು. ಪ್ರಾಂತ್ಯಗಳಲ್ಲಿ ಜನರಿಂದ ಚುನಾಯಿತ ಶಾಸನಸಭೆ ಮತ್ತು ಮಂತ್ರಿಮಂಡಲ ರಚನೆಗೆ ಮತ್ತು ಪ್ರಾಂತ್ಯಗಳ ಎಲ್ಲಾ ಇಲಾಖೆಗಳನ್ನು ಆ ಮಂತ್ರಿಗಳೇ ನಿರ್ವಹಿಸುವುದಕ್ಕೆ ಅವಕಾಶ ಮಾಡಿತು. ಆದರೆ ಮಂತ್ರಿಮಂಡಲ ಮತ್ತು ಪ್ರಾಂತ್ಯ ಶಾಸನ ಸಭೆಗಳ ತೀರ್ಮಾನವನ್ನು ರದ್ದು ಗೊಳಿಸುವ ಮತ್ತು ಪ್ರಾಂತ್ಯದ ಆಡಳಿತವನ್ನು ತಾನೇ ವಹಿಸಿಕೊಳ್ಳುವ ವಿಶೇಷ ಅಧಿಕಾರವು ಗೌರ್ನರ್‌ಗಳಿಗೆ ಕೊಡಲ್ಪಟ್ಟಿತ್ತು. ಅದರಿಂದ ಕಾಂಗ್ರೆಸ್‌ನ ಎಲ್ಲಾ ನಾಯಕರೂ ಈ ಸುಧಾರಣೆಗಳನ್ನು ತಿರಸ್ಕರಿಸಿದರು. ಅದಕ್ಕೆ ಬದಲಾಗಿ, ಸ್ವತಂತ್ರ ಭಾರತ ಸರ್ಕಾರ ನಿರ್ವಹಣೆಗೆ ಒಂದು ಸಂವಿಧಾನವನ್ನು ರಚಿಸುವುದಕ್ಕಾಗಿ ವಯಸ್ಕ ಮತದಾನ ಪದ್ಧತಿಯ ಮೇಲೆ ಚುನಾಯಿತವಾದ ಸಂವಿಧಾನ ಸಭೆಯನ್ನು ರಚಿಸಬೇಕೆಂದು ಕಾಂಗ್ರೆಸ್ಸಿಗರು ಆಗ್ರಹಿಸಿದರು.[೯೬]

ಸರ್ಕಾರವು ೧೯೩೫ರ ಕಾನೂನಿನ ಕೇಂದ್ರ ಒಕ್ಕೂಟದ ಭಾಗವನ್ನು ತಾತ್ಕಾಲಿಕವಾಗಿ ತಡೆ ಹಿಡಿದು, ಪ್ರಾಂತ್ಯಗಳ ಸ್ವಯಂ ಆಡಳಿತ ಭಾಗವನ್ನು ಜಾರಿಗೆ ತರಲು ನಿರ್ಧರಿಸಿ ೧೯೩೭ರ ಫೆಬ್ರುವರಿಯಲ್ಲಿ ಚುನಾವಣೆಯನ್ನು ನಡೆಸಿತು. ಗೌರ್ನರರಿಗೆ ವಿಶೇಷ ಅಧಿಕಾರ ಇರುವುದರ ನಿಮಿತ್ತ ಚುನಾವಣೆಯಲ್ಲಿ ಭಾಗವಹಿಸಬೇಕೇ ಅಥವಾ ಬೇಡವೇ ಅನ್ನುವುದರ ಬಗೆಗೆ ಕಾಂಗ್ರೆಸ್ ಪಕ್ಷದಲ್ಲಿ ಬಹಳ ಬಹಳ ಚರ್ಚೆ ನಡೆದು, ಕೊನೆಗೆ ಚುನಾವಣೆಯಲ್ಲಿ ಭಾಗವಹಿಸುವುದೆಂದು ತೀರ್ಮಾನಿಸಲಾಯಿತು.

ಪಂಡಿತ್ ಜವಹರಲಾಲ್ ನೆಹರುರವರು ದೇಶದಾದ್ಯಂತ ಬಾಣದಂತೆ ವೇಗವಾಗಿ ಸಂಚರಿಸಿ ಜನರ ಮತಗಳನ್ನು ಕೋರಿದರು. ಅವರದು ಪ್ರಸಿದ್ಧಿ ಪಡೆಯುವ ಪಾತ್ರ. ಪಟೇಲರು ಸಹ ವಿಪುಲವಾಗಿ ಸಂಚರಿಸಿ ಚುನಾವಣಾ ಭಾಷಣಗಳನ್ನು ಮಾಡಿದರು. ಆದರೆ ಅವರ ಪ್ರಮುಖ ಪಾತ್ರವಿದ್ದದ್ದು ಧನ ಸಂಗ್ರಹಣೆ, ಅದರ ವಿತರಣೆ ಸ್ಪರ್ಧಿಗಳ ಆಯ್ಕೆ ಮತ್ತು ವಿವಾದಗಳಲ್ಲಿ ಮಧ್ಯಸ್ತಿಕೆ ವಹಿಸುವುದಾಗಿತ್ತು.

ಪ್ರಾಂತ್ಯ ಶಾಸನ ಸಭೆಗಳಿಗೆ ಚುನಾವಣೆಯು ಫೆಬ್ರುವರಿ ೧೯೩೭ರಲ್ಲಿ ನಡೆದು ಕಾಂಗ್ರೆಸ್ಸು ಭರ್ಜರಿ ಜಯವನ್ನು ಗಳಿಸಿತು. ಅದು, ಹನ್ನೊಂದು ಬ್ರಿಟಿಷ್ ಪ್ರಾಂತ್ಯಗಳ ಪೈಕಿ ಐದು ಪ್ರಾಂತ್ಯಗಳಲ್ಲಿ ಅಂದರೆ ಉತ್ತರ ಪ್ರದೇಶ, ಬಿಹಾರ, ಮದರಾಸ್, ಮಧ್ಯ ಪ್ರಾಂತ್ಯ ಮತ್ತು ಒರಿಸ್ಸಗಳಲ್ಲಿ ಬಹುಮತವನ್ನು ಗಳಿಸಿತು. ನಾಲ್ಕು ಪ್ರಾಂತ್ಯಗಳಲ್ಲಿ – ಬಾಂಬೆ, ಬೆಂಗಾಳ, ಅಸ್ಸಾಂ ಮತ್ತು ವಾಯುವ್ಯ ಪ್ರಾಂತ್ಯಗಳಲ್ಲಿ – ಅತ್ಯಂತ ದೊಡ್ಡ ಪಕ್ಷವಾಗಿ ಹೊರಹೊಮ್ಮಿತು. ಬಾಂಬೆಯಲ್ಲಿ ಹತ್ತಿರ ಹತ್ತಿರ ಶೇ ೫೦ ಸ್ಥಾನಗಳನ್ನು ಗಳಿಸಿತು. ಕೆಲವು ಸದಸ್ಯರ ಸಹಾಯದಿಂದ ಬಹುಮತವನ್ನು ಗಳಿಸಬಹುದಾಗಿತ್ತು. ಆದರೆ ಆಗ ಮಂತ್ರಿಮಂಡಲವನ್ನು ರಚಿಸಬೇಕೇ ಅಥವಾ ಬೇಡವೇ ಎನ್ನುವ ಪ್ರಶ್ನೆ ಮೊದಲು ತೀರ್ಮಾನವಾಗಬೇಕಿತ್ತು. ಜವಹರಲಾಲ್ ಮಂತ್ರಿಮಂಡಲ ರಚಿಸುವುದನ್ನು ತೀವ್ರವಾಗಿ ವಿರೋಧಿಸುತ್ತಿದ್ದರು. ಅವರು ಉತ್ತರ ಪ್ರದೇಶ ಕಾಂಗ್ರೆಸ್ ಸಮಿತಿಯು ಮಂತ್ರಿ ಮಂಡಲ ರಚಿಸುವುದರ ವಿರುದ್ಧ ಒಂದು ಠರಾವನ್ನು ಅಂಗೀಕರಿಸುವಂತೆ ಮಾಡಿದ್ದರು. ಆದರೆ ಪಟೇಲರು ಮಂತ್ರಿ ಮಂಡಲ ರಚನೆಯ ಪರವಾಗಿದ್ದರು. ಹೊಸ ಸಂವಿಧಾನವು ತೃಪ್ತಿಕರವಾಗಿಲ್ಲದಿದ್ದರೂ ಅದು ನೀಡುತ್ತಿರುವ ಸಾಕಷ್ಟು ಅಧಿಕಾರವನ್ನು ಕಾಂಗ್ರೆಸ್ಸು ಸ್ವಾಧೀನ ಪಡಿಸಿಕೊಳ್ಳಬೇಕೆಂಬುದು ಅವರ ಅಭಿಮತವಾಗಿತ್ತು. ಅನೇಕ ಪ್ರಾಂತ್ಯ ಕಾಂಗ್ರೆಸ್ ಸಮಿತಿಗಳೂ ಮಂತ್ರಿ ಮಂಡಲ ರಚನೆಯ ಪರವಾಗಿದ್ದರು. ಈ ಪರ – ವಿರೋಧದ ಸಮಸ್ಯೆಯ

ಪರಿಹಾರಕ್ಕಾಗಿ ೧೯೩೭ರ ಮಾರ್ಚ್‌ನಲ್ಲಿ ದೆಹಲಿಯಲ್ಲಿ ಚುನಾಯಿತ ಕಾಂಗ್ರೆಸ್ ಶಾಸಕರ ಮತ್ತು ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸದಸ್ಯರ ಸಭೆಯನ್ನು ಕರೆಯಲಾಯಿತು. ಜವಹರಲಾಲ್ ತಮ್ಮ ವಿರೋಧವನ್ನು ಮತ್ತೆ ವ್ಯಕ್ತ ಪಡಿಸಿದರು. ಅವರು ಕಾಂಗ್ರೆಸ್ ಅಧ್ಯಕ್ಷರಾಗಿದ್ದರು. ಆದರೆ ಅಲ್ಲಿದ್ದವರಲ್ಲಿ ಬಹಳ ಮಂದಿ ಮಂತ್ರಿಮಂಡಲ ರಚನೆಯ ಪರವಾಗಿರುವುದು ವ್ಯಕ್ತವಾಯಿತು. ಗಾಂಧೀಜಿಯವರು ಎರಡು ಬಣಗಳ ನಡುವೆ ಮಧ್ಯಸ್ಥಿಕೆ ವಹಿಸಿ, 'ಮಂತ್ರಿಗಳ ತೀರ್ಮಾನಗಳನ್ನು ಕಡೆಗಣಿಸಲು ತಮಗಿರುವ ವಿಶೇಷ ಅಧಿಕಾರಗಳನ್ನು ಬಳಸುವುದಿಲ್ಲವೆಂದು ಗೌರ್ನರ್‌ಗಳು ಆಶ್ವಾಸನೆಯನ್ನು ಕೊಟ್ಟರೆ ಮಂತ್ರಿ ಮಂಡಲವನ್ನು ರಚಿಸಬಹುದು' ಎಂದು ಸಲಹೆ ಇತ್ತರು. ಗಾಂಧೀಜಿಯವರ ಸಲಹೆಯನ್ನು ಆ ಸಭೆ ಒಪ್ಪಿತು.

ಅಂದಿನ ವೈಸ್‌ರಾಯ್ ಲಾರ್ಡ್ ಲಿನ್‌ಲಿತ್‌ಗೊ 'ಗೌರ್ನರ್‌ಗೆ ಕೊಟ್ಟಿರುವುದು ಮಿತಿಗೆ ಒಳಪಟ್ಟ ವಿಶೇಷ ಜವಾಬ್ದಾರಿ, ಅದರ ಹೊರಗೆ ಅವನು ಪ್ರಾಂತ್ಯದ ದೈನಂದಿನ ಆಡಳಿತದಲ್ಲಿ ಮಧ್ಯೆ ಪ್ರವೇಶಿಸಲು ಸ್ವಾತಂತ್ರ್ಯ ಅಥವಾ ಅಧಿಕಾರವನ್ನು ಹೊಂದಿಲ್ಲವೆಂದು' ಪ್ರಕಟಿಸಿದನು.

ವೈಸ್‌ರಾಯ್‌ನ ಈ ಹೇಳಿಕೆಯನ್ನು 'ಬ್ರಿಟನ್ ಸರ್ಕಾರವು ಪ್ರಾಂತ್ಯ ಸರ್ಕಾರಗಳೊಡನೆ ಸಹಕರಿಸುವ ಸಂಕೇತ' ಎಂದು ಪರಿಗಣಿಸಿ, ಮಂತ್ರಿ ಮಂಡಲಗಳನ್ನು ರಚಿಸಿ ಅಧಿಕಾರ ಸ್ವೀಕರಿಸುವಂತೆ ಗಾಂಧೀಜಿ ಸೂಚಿಸಿದರು. ಜುಲೈ ಮೊದಲ ವಾರದಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ ಸೇರಿ ಗಾಂಧೀಜಿಯವರ ಸಲಹೆಯನ್ನು ಒಪ್ಪಿತು. ನೆಹರು ವಿರೋಧಿಸಲಿಲ್ಲ. ಜುಲೈ ಮಧ್ಯ ಭಾಗದ ಹೊತ್ತಿಗೆ ಏಳು ಪ್ರಾಂತ್ಯಗಳಲ್ಲಿ ಕಾಂಗ್ರೆಸ್ಸು ಮಂತ್ರಿ ಮಂಡಲ ರಚಿಸಿತು. ವಲ್ಲಭಭಾಯ್, ಜವಹರ್ ಮತ್ತು ರಾಜೇಂದ್ರ ಪ್ರಸಾದ್ ಅಧಿಕಾರದಿಂದ ಹೊರಗುಳಿದರು. ಉತ್ತರ ಪ್ರದೇಶದಲ್ಲಿ ಗೋವಿಂದ ವಲ್ಲಭ ಪಂತ್, ಬಿಹಾರದಲ್ಲಿ ಶ್ರೀ ಕೃಷ್ಣ ಸಿನ್ಹ, ಮಧ್ಯ ಪ್ರಾಂತ್ಯದಲ್ಲಿ ಎನ್.ಬಿ. ಖೇರ್, ವಾಯುವ್ಯ ಗಡಿನಾಡಿನಲ್ಲಿ ಡಾ॥ ಖಾನ್ ಸಾಹಿಬ್, ಒರಿಸ್ಸದಲ್ಲಿ ವಿಶ್ವನಾಥ್ ದಾಸ್, ಅಸ್ಸಾಂನಲ್ಲಿ ಗೋಪಿನಾಥ್ ಬಾರ್ದೋಲೈ, ಬಾಂಬೆಯಲ್ಲಿ ಬಿ.ಜಿ. ಖೇರ್ ಮತ್ತು ಮದರಾಸ್‌ನಲ್ಲಿ ಸಿ. ರಾಜಗೋಪಾಲಾಚಾರಿ ಪ್ರಧಾನಮಂತ್ರಿಗಳಾಗಿ ಅಧಿಕಾರ ಸ್ವೀಕರಿಸಿದರು.[೯೭]

೧೨.೭ ನಾರಿಮನ್ ಪ್ರಕರಣ

ಬೊಂಬಾಯಿಯಲ್ಲಿ ಕೆ.ಎಫ್. ನಾರಿಮನ್ ಪ್ರಧಾನಮಂತ್ರಿ ಸ್ಥಾನದ ಆಕಾಂಕ್ಷಿಯಾಗಿದ್ದರು. ಅವರೊಬ್ಬ ಪ್ರಸಿದ್ಧ ಪಾರ್ಸಿ ವಕೀಲ. ಸ್ಥಳೀಯ ಕಾಂಗ್ರೆಸ್ಸಿನ

ನಾಯಕ. ಬೊಂಬಾಯಿ ನಗರಸಭೆಯ ಮೇಯರ್ ಆಗಿ ಒಳ್ಳೆಯ ಕೆಲಸ ಮಾಡಿ ಜನಪ್ರಿಯರಾಗಿದ್ದರು. ಬೊಂಬಾಯಿ ಪ್ರಾಂತ್ಯ ಪಾರ್ಲಿಮೆಂಟರಿ ಬೋರ್ಡ್‌ನ ಛೇರ್‌ಮನ್ ಆಗಿದ್ದರು. ಅವರನ್ನು ವೀರ ನಾರಿಮನ್ ಎಂದು ಕರೆಯುತ್ತಿದ್ದರು. ಅದರಿಂದ ಅವರೇ ಬೊಂಬಾಯಿಯ ಕಾಂಗ್ರೆಸ್ ಪಾರ್ಲಿಮೆಂಟರಿ ಪಕ್ಷದ ನಾಯಕರಾಗಿ ಚುನಾಯಿತರಾಗುತ್ತಾರೆ ಮತ್ತು ಪ್ರಧಾನ ಮಂತ್ರಿಯಾಗುತ್ತಾರೆ ಅನ್ನುವ ನಿರೀಕ್ಷೆಯಿತ್ತು. ಆದರೆ ಪಾರ್ಲಿಮೆಂಟರಿ ಪಕ್ಷದ ಸದಸ್ಯರು ಅವರನ್ನು ನಾಯಕನನ್ನಾಗಿ ಆರಿಸದೆ ಬಿ.ಜಿ. ಖೇರ್‌ರವರನ್ನು ಆರಿಸಿದರು. ಬಿ.ಜಿ ಖೇರ್ ಬೊಂಬಾಯಿ ಪ್ರಾಂತ್ಯದ ಪ್ರಧಾನಮಂತ್ರಿ ಆದರು.

ನಾರಿಮನ್ ಒಬ್ಬ ಪಾರ್ಸಿ. ಬಿ.ಜಿ. ಖೇರ್ ಒಬ್ಬ ಹಿಂದು. ಅದರಿಂದ ಪಾರ್ಸಿ ಮಾಲೀಕತ್ವದ ಗುಜರಾತಿ ಸಮಾಚಾರ ಪತ್ರಿಕೆಗಳು ಮತ್ತು ಪಾರ್ಸಿ ಮಾಲೀಕತ್ವದ 'ಬಾಂಬೆ ಸೆಂಟಿನೆಲ್' ಸಮಾಚಾರ ಪತ್ರಿಕೆ ಪಟೇಲರ ವಿರುದ್ಧ ಹರಿಹಾಯಲು ಆರಂಭಿಸಿ, ನಾರಿಮನ್‌ರವರು ಒಬ್ಬ ಪಾರ್ಸಿಯಾದದ್ದರಿಂದ ಪಟೇಲರು ಶಾಸಕರ ಮೇಲೆ ಅನುಚಿತ ಒತ್ತಡ ತಂದು ಅವರಿಗೆ ಪ್ರಧಾನಮಂತ್ರಿ ಪದವಿ ತಪ್ಪಿಸಿದ್ದಾರೆ ಎಂದು ದೂರಲಾರಂಭಿಸಿದುವು.

ಪಟೇಲರಿಗೆ ನಾರಿಮನ್ ಬಗೆಗೆ ಒಲವು ಇರಲಿಲ್ಲ ಅನ್ನುವುದು ನಿಜ. ಅದಕ್ಕೆ ಕಾರಣವೂ ಇತ್ತು. ೧೯೩೪ರಲ್ಲಿ ಕೇಂದ್ರ ಶಾಸನ ಸಭೆಯ ಚುನಾವಣೆ ನಡೆದಾಗ ಬಾಂಬೆ ಕ್ಷೇತ್ರದಿಂದ ಸ್ಪರ್ಧಿಸಲು ಕಾಂಗ್ರೆಸ್ಸು ನಾರಿಮನ್‌ರವರನ್ನು ಆರಿಸಿತ್ತು. ಮತದಾರರ ಪಟ್ಟಿ ಜುಲೈನಲ್ಲಿ ಪ್ರಕಟವಾಗಿ ಅಕ್ಟೋಬರ್ ೧೧ರ ವರೆಗೆ ಪರಿಶೀಲನೆಗೆ ಅವಕಾಶವಿತ್ತು. ಅದರಿಂದ ತಮ್ಮ ಹೆಸರು ಮತದಾರರ ಪಟ್ಟಿಯಲ್ಲಿ ಇದೆಯೇ ಇಲ್ಲವೇ ಎನ್ನುವುದನ್ನು ಖಚಿತಪಡಿಸಿಕೊಳ್ಳಲು ನಾರಿಮನ್‌ರವರಿಗೆ ಬಹಳಷ್ಟು ಕಾಲವಿತ್ತು. ಜೊತೆಗೆ, ಮತ್ತೊಬ್ಬ ಸ್ಪರ್ಧಿ ಡಾ॥ ಜಿ.ವಿ. ದೇಶ್‌ಮುಖ್‌ರವರು, ನಾರಿಮನ್ ಮತ್ತು ಅವರ ಸಹೋದರನ 'ಇನಿಷಿಯಲ್ಸ್' ಒಂದೇ ಆಗಿರುವುದರಿಂದ ಸ್ಪರ್ಧಿಸಲು ತಮ್ಮ ಅರ್ಹತೆಯ ಬಗೆಗೆ ಖಚಿತಪಡಿಸಿಕೊಳ್ಳುವಂತೆ ಅಕ್ಟೋಬರ್ ೬ರಂದು ನಾರಿಮನ್‌ಗೆ ಸಲಹೆ ನೀಡಿದ್ದರು. ನಾರಿಮನ್‌ರವರು ತಮ್ಮ ಹೆಸರಿನ ಬಗೆಗೆ ಎಲ್ಲವೂ ಸರಿಯಾಗಿದೆ ಎಂದು ಉತ್ತರಿಸಿದ್ದರು. ಆದರೆ ನಾಮಪತ್ರ ಸಲ್ಲಿಕೆ ಮುಕ್ತಾಯದ ಹಿಂದಿನ ದಿನ, ಅಕ್ಟೋಬರ್ ೧೦ರಂದು ನಾರಿಮನ್‌ರವರು, ಮತದಾರರ ಪಟ್ಟಿಯಲ್ಲಿರುವುದು ತಮ್ಮ ಸಹೋದರನ ಹೆಸರೆಂದೂ, ಅದರಿಂದ ಸ್ಪರ್ಧಿಸಲು ತಾವು ಅರ್ಹರಲ್ಲವೆಂದೂ ತಿಳಿಸಿ ಸರ್ದಾರ್ ಮತ್ತು ಕಾಂಗ್ರೆಸ್ ಪಕ್ಷಕ್ಕೆ ಆಘಾತ ಉಂಟುಮಾಡಿದ್ದರು. ನಾಮಪತ್ರ ಸಲ್ಲಿಕೆಗೆ ಉಳಿದಿದ್ದುದು ಕೇವಲ

೨೪ ಘಂಟೆಗಳು. ಸರ್ದಾರರು ನಾಮಪತ್ರ ಸಲ್ಲಿಸುವಂತೆ ಕೆ.ಎಂ. ಮುನ್ಷಿಯವರಿಗೆ ಸೂಚಿಸಿದರು. ಕೆ.ಎಂ. ಮುನ್ಷಿಯವರು ಸ್ಪರ್ಧಿಸಲು ಈ ಹಿಂದೆಯೇ ನಿರಾಕರಿಸಿದ್ದರು. ಅವರಿಗೆ ಸ್ಪರ್ಧಿಸಲು ಮನಸ್ಸಿರಲಿಲ್ಲ. ಆದರೆ ಪರಿಸ್ಥಿತಿಯನ್ನು ಗಮನಿಸಿ ನಾಮಪತ್ರ ಸಲ್ಲಿಸಿದರು ಮತ್ತು ಚುನಾವಣೆಯಲ್ಲಿ ಸೋತರು.[೯೮]

ನಾರಿಮನ್‌ರವರು ಹೀಗೇಕೆ ಮಾಡಿದರು? ಅದೇಕೆ ಕೊನೆ ಘಳಿಗೆಯಲ್ಲಿ ತಮ್ಮ ಅನರ್ಹತೆಯನ್ನು ಪ್ರಕಟಿಸಿದರು? ಬಹಳ ಕಾಲವಿದ್ದರೂ, ಮುಂಚೆಯೇ ಏಕೆ ಹೇಳಲಿಲ್ಲ? ಅವರ ಪ್ರತಿಸ್ಪರ್ಧಿ ಸರ್ ಕೊವಾಸ್ಜಿ ಜೆಹಂಗೀರ್ ಅವರ ಸ್ನೇಹಿತ. ಅವರನ್ನು ಸೋಲಿಸುವುದು ನಾರಿಮನ್‌ಗೆ ಇಷ್ಟವಿರಲಿಲ್ಲ. ಅವರ ಈ ಬೇಜವಾಬ್ದಾರಿ ವರ್ತನೆಯಿಂದ ಸರ್ದಾರರಿಗೆ ಅವರ ಬಗೆಗೆ ವಿಶ್ವಾಸವಿರಲಿಲ್ಲ. *(ಅದು ಸಹಜವೆ. ನಾರಿಮನ್‌ರವರು ತಮ್ಮ ಸ್ನೇಹಿತನ ವಿರುದ್ಧ ಸ್ಪರ್ಧಿಸಲು ತಮಗೆ ಇಷ್ಟವಿಲ್ಲ ಎಂದು ಮೊದಲೇ ಹೇಳಬಹುದಾಗಿತ್ತು, ಹೇಳಬೇಕಾಗಿತ್ತು. ಆದರೆ ಅವರು ಹಾಗೆ ಮಾಡಲಿಲ್ಲ. ಕೊನೆ ಘಳಿಗೆಯಲ್ಲಿ ತಮ್ಮ ಅನರ್ಹತೆಯನ್ನು ಹೊರಗೆಡಹಿದರು. ಅದರಿಂದ ತರಾತುರಿಯಲ್ಲಿ ಸ್ಪರ್ಧೆಗೆ ಇಳಿದ ಕಾಂಗ್ರೆಸ್ ಅಭ್ಯರ್ಥಿ ಸೋಲ ಬೇಕಾಯಿತು. ಅದು ತಮ್ಮ ಸ್ನೇಹಿತ ಗೆಲ್ಲಲಿ ಎಂದೇ – ಕಾಂಗ್ರೆಸ್ ಅಭ್ಯರ್ಥಿಯ ವಿರುದ್ಧ – ಅವರು ಹೂಡಿದ ಹುನ್ನಾರ ಎಂದು ಭಾವಿಸಿದರೆ ತಪ್ಪಲ್ಲ – ಲೇಖಕ)*

ನಾರಿಮನ್‌ರವರು ಮಾರ್ಚ್ ೪ರಂದು ಸರ್ದಾರ್ ಪಟೇಲರನ್ನು ಭೇಟಿ ಮಾಡಿ ತಮ್ಮ ಆಯ್ಕೆಗೆ ಅವರ ಬೆಂಬಲವನ್ನು ಕೋರಿದರು. ಪಟೇಲರು ೧೯೩೪ರ ಘಟನೆಯನ್ನು ನೆನಪಿಸಿ ತಾವು ಅವರನ್ನು ಬೆಂಬಲಿಸಲು ಸಾಧ್ಯವಿಲ್ಲ ಎಂದು ತಿಳಿಸಿದರು. 'ಆದಾಗ್ಯೂ ಅವರ ವಿರುದ್ಧ ಕ್ರಿಯಾಶೀಲವಾಗಿ ಕೆಲಸ ಮಾಡುವ ಉದ್ದೇಶವಿಲ್ಲ' ಎಂದೂ ಸಹ ತಿಳಿಸಿದರು.[೯೯]

ನಾರಿಮನ್‌ರವರು ತಮ್ಮ ಪರವಾಗಿ ಶಾಸಕರ ಬೆಂಬಲವನ್ನು ಕ್ರೋಡೀಕರಿಸಲು ಯತ್ನಿಸಿದರು. ಅದರ ಫಲವಾಗಿ ಮಾರ್ಚ್ ೮ರಂದು ಮರಾಟ ಭಾಗದ ಜಿಲ್ಲೆಗಳ ೩೦ ಮಂದಿ ಶಾಸಕರು ಪೂನಾದಲ್ಲಿ ಸಭೆ ಸೇರಿ ಕಾಂಗ್ರೆಸ್ಸು ಮಂತ್ರಿಮಂಡಲ ರಚಿಸಬೇಕು, ನಾರಿಮನ್‌ರವರನ್ನು ಪ್ರಧಾನಮಂತ್ರಿಯಾಗಿ ಆರಿಸುವುದಾಗಿ ತೀರ್ಮಾನಿಸಿದರು. ಆದರೆ ಮೂರು ದಿನಗಳ ನಂತರ ಪ್ರಧಾನಮಂತ್ರಿ ಪದವಿಗೆ ವಲ್ಲಭಭಾಯ್ ಪಟೇಲರ ಒಲವು ನಾರಿಮನ್‌ಗಿಂತ ಬೇರೆ ಕಡೆಗೆ ಇದೆ ಎನ್ನುವ ವಿಷಯ ಮೂವರು ಪ್ರಮುಖ ಕಾಂಗ್ರೆಸ್ ನಾಯಕರಿಂದ ಆ ಶಾಸಕರಿಗೆ ತಿಳಿಯಿತು. ಬೊಂಬಾಯಿ ಪ್ರಾಂತ್ಯದ ಕನ್ನಡ ಜಿಲ್ಲೆಗಳ ನಾಯಕ ಗಂಗಾಧರರಾವ್ ದೇಶ್‌ಪಾಂಡೆ, ಮಹಾರಾಷ್ಟ್ರ ಕಾಂಗ್ರೆಸ್ಸಿನ ಅಧ್ಯಕ್ಷ ಶಂಕರ್‌ರಾವ್ ಡಿಯೊ ಮತ್ತು ಕಾಂಗ್ರೆಸ್

ಸಮಾಜವಾದಿ ಅಚ್ಯುತ ಪಟವರ್ಧನ್ ಆ ಮೂವರು ಕಾಂಗ್ರೆಸ್ ನಾಯಕರು. ಅದರಿಂದ ಮಾರ್ಚ್ ೧೨ರಂದು ಶಾಸಕಾಂಗ ಪಕ್ಷದ ನಾಯಕನ ಆಯ್ಕೆಯಾದಾಗ ಕಾಂಗ್ರೆಸ್ ಶಾಸಕರು ಒಮ್ಮತದಿಂದ ಖೇರ್‌ರವರನ್ನು ನಾಯಕನನ್ನಾಗಿ ಆರಿಸಿದರು.[೧೦೦]

ಆರಂಭದಲ್ಲಿ ಆ ಆಯ್ಕೆಯನ್ನು ನಾರಿಮನ್‌ರವರು ಸಮಾಧಾನವಾಗಿಯೇ ಸ್ವೀಕರಿಸಿ, ಖೇರ್‌ರವರಿಗೆ ತಮ್ಮ ಸಹಕಾರದ ಆಶ್ವಾಸನೆಯನ್ನು ನೀಡಿದರು. ಮಾರ್ಚ್ ೧೫ರಂದು ಒಂದು ಪತ್ರಿಕಾ ಹೇಳಿಕೆಯಲ್ಲಿ ಅವರು ಈ ರೀತಿ ಪ್ರಕಟಿಸಿದರು:

> ಒಬ್ಬ ವ್ಯಕ್ತಿಗೆ ಏನೇ ಅರ್ಹತೆಗಳು ಅಥವಾ ದೂರಲು ಕಾರಣಗಳಿರಲಿ ಅನಿರ್ಬಂಧಿತವಾಗಿ ಮತ್ತು ಕ್ರಮಬದ್ಧವಾಗಿ ಪಡೆದು ಕೊಂಡ ಬಹುಮತದ ತೀರ್ಪನ್ನು ಆ ವ್ಯಕ್ತಿಯು ಸಂತೋಷವಾಗಿ ಮತ್ತು ದ್ವೇಷಾಸೂಯೆ ಇಲ್ಲದೆ ಒಪ್ಪಿಕೊಳ್ಳಲೇ ಬೇಕು. ಕಳೆದ ಶುಕ್ರವಾರ ನಡೆದಂತಹ ಘಟನೆಯಿಂದ ನನಗೆ ನೋವಾಗಿಲ್ಲ ಎಂದು ನಾನು ಹೇಳಿದರೆ ಅದು ಅಪ್ರಾಮಾಣಿಕತೆಯಾಗುತ್ತದೆ. ಶ್ರೀ ಬಾಬಾಸಾಹೇಬ್ ಖೇರ್‌ರವರು ನಮ್ಮ ಪಕ್ಷದ ಚುನಾಯಿತ ನಾಯಕನಾಗಿರುವವರೆಗೂ, ಅವರ ಮುಂದಿರುವ ಕಷ್ಟದ ಕೆಲಸದಲ್ಲಿ ನಾವು ಅವರಿಗೆ ನಮ್ಮ ಹೃದಯಪೂರ್ವಕ ಮತ್ತು ನಿಷ್ಠಾವಂತ ಸಹಕಾರವನ್ನು ನೀಡುವ ಪ್ರಮಾಣ ಮಾಡಬೇಕು.[೧೦೧]

ಆದರೆ ಪತ್ರಿಕೆಗಳು ಸುಮ್ಮನಿರಬೇಕಲ್ಲ? ಅವು ಪಟೇಲರ ವಿರುದ್ಧ ಟೀಕೆಗಳ ಚಳವಳಿಯನ್ನೇ ಆರಂಭಿಸಿ ಅವರ ಮೇಲೆ ಮತೀಯ ಪಕ್ಷಪಾತ ಮತ್ತು ಶಾಸಕರ ಮೇಲೆ ಅನುಚಿತ ಒತ್ತಡವನ್ನು ತಂದ ಆಪಾದನೆಯನ್ನು ಹೊರೆಸಿದುವು.

ಬಾರ್ಡೋಲಿ ಸತ್ಯಾಗ್ರಹದಲ್ಲಿ ಸರ್ದಾರರೊಡನೆ ಕೆಲ ಕಾಲವಿದ್ದ ನಾರಿಮನ್ ರವರು ಮತೀಯ ಪಕ್ಷಪಾತದ ಆಪಾದನೆಯನ್ನು ತಳ್ಳಿಹಾಕಿದರು. ಆದರೆ ಶಾಸಕರ ಮೇಲೆ ಅನುಚಿತ ಒತ್ತಡವನ್ನು ತಂದ ಆಪಾದನೆಯನ್ನು ಪುನರುಚ್ಚರಿಸಿದರು. ವಲ್ಲಭಭಾಯ್ ಪಟೇಲರ ಮೇಲಣ ನಾರಿಮನ್ ಮತ್ತು ಅವರ ಪರ ಪತ್ರಿಕೆಗಳ ಆಕ್ರಮಣ ಅನೇಕ ತಿಂಗಳುಗಳ ಕಾಲ ಮುಂದುವರೆಯಿತು. ಅದು ಪಟೇಲರ ಮನಸ್ಸಿಗೆ ನೋವನ್ನು ಉಂಟುಮಾಡಿತು, ಅವರಿಗೆ ಕೋಪವನ್ನೂ ಬರಿಸಿತು. ಆದರೆ ಗಾಂಧೀಜಿಯವರು 'ತಾಳ್ಮೆಯನ್ನಾಗಲಿ ಅಥವಾ ಮಾನಸಿಕ ಶಾಂತಿಯನ್ನಾಗಲಿ ಕಳೆದುಕೊಳ್ಳಬೇಡ' ಎಂದು ಹೇಳಿದರು. ಪಟೇಲರ ಮನಸ್ಸಿನ ಶಾಂತಿ ಮಾಯವಾದರೂ ತಾಳ್ಮೆಯಿಂದ ಮೌನವಾಗಿದ್ದರು. ಕೊನೆಗೆ ಗಾಂಧೀಜಿಯವರ

ಒತ್ತಾಯದ ಮೇಲೆ ಲಾಹೋರಿನ 'ಟ್ರಿಬ್ಯೂನ್' ಪತ್ರಿಕೆಯ ವರದಿಗಾರನಿಗೆ ಒಂದು ಹೇಳಿಕೆ ನೀಡಿದರು. ಅವರೆಂದರು, "ನಾರಿಮನ್‌ರವರು ಒಂದು ಸಣ್ಣ ಮತ್ತು ಭಾವ ಪ್ರಧಾನ ಅಲ್ಪ ಮತೀಯ ಪಂಗಡಕ್ಕೆ ಸೇರಿದವರು. ಪಾರ್ಸಿಗಳ ಅಸಂತೋಷಕ್ಕೆ ಮತ್ತಷ್ಟು ಸೇರಿಸಲು ನಾನು ಇಷ್ಟ ಪಡುವುದಿಲ್ಲ."[೧೦೨]

ನಾರಿಮನ್‌ರವರು ಕಾಂಗ್ರೆಸ್ ಅಧ್ಯಕ್ಷ ಜವಹರಲಾಲ್ ನೆಹರುಗೆ ಪತ್ರ ಬರೆದು ಪಟೇಲರ ಮೇಲೆ ಆಪಾದನೆ ಹೊರೆಸಿದರು. ಪಟೇಲರ ಜೊತೆಗೆ ಶಂಕರ್‌ರಾವ್ ಡಿಯೊ, ಗಂಗಾಧರರಾವ್ ದೇಶ್‌ಪಾಂಡೆ ಮತ್ತು ಅಚ್ಯುತ ಪಟವರ್ಧನ್ ಮೇಲೂ ಅವರು ಆಪಾದನೆಗಳನ್ನು ಹೊರೆಸಿದರು. ಆ ಮೂವರು, "ನಾರಿಮನ್ ವಿರುದ್ಧ ಕೆಲಸ ಮಾಡುವಂತೆ ನಮಗೆ ಹೇಳುವುದು ಖಂಡಿತವಾಗಿಯೂ ಪಟೇಲರ ಉದ್ದೇಶವಾಗಿರಲಿಲ್ಲ" ಎಂದು ಒಂದು ಹೇಳಿಕೆಯನ್ನು ನೀಡಿದರು. ನೆಹರು ಮತ್ತು ನಾರಿಮನ್ ನಡುವೆ ಒಂದು ತಿಂಗಳುಗಳ ಕಾಲ ಪತ್ರಗಳ ವಿನಿಮಯ ನಡೆಯಿತು. ಕೊನೆಗೆ, ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಮುಂದೆ ತಮ್ಮ ಅಭಿಪ್ರಾಯಗಳನ್ನು ವಿವರಿಸಲು ನಾರಿಮನ್‌ರವರಿಗೆ ಅವಕಾಶ ನೀಡಲಾಯಿತು. ಸಮಿತಿಯ ಮುಂದೆ ಅವರ ಅಭಿಪ್ರಾಯಗಳು ಸ್ಪಷ್ಟವಾಗಿಯೂ ಇರಲಿಲ್ಲ, ಮುಂಚಿನ ತೀರ್ಮಾನವನ್ನು ಬದಲಿಸುವುದೂ ನಾರಿಮನ್‌ಗೆ ಇಷ್ಟವಿರಲಿಲ್ಲ. ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಈ ವಿಷಯವನ್ನು ಪರಿಶೀಲಿಸಿ ಬಾಂಬೆ ಶಾಸಕಾಂಗ ಪಕ್ಷದ ಒಮ್ಮತದ ತೀರ್ಮಾನದ ಮಧ್ಯೆ ಪ್ರವೇಶಿಸಲು ನಿರಾಕರಿಸಿತು. ಈ ಅತ್ಯಂತ ದೊಡ್ಡ ರಾಷ್ಟ್ರೀಯ ನ್ಯಾಯಾಧೀಕರಣದ ತೀರ್ಮಾನವನ್ನು ಯಾವ ಹಿಂಜರಿಕೆಯೂ ಇಲ್ಲದೆ ಒಪ್ಪುವುದಾಗಿ ನಾರಿಮನ್ ಮಾರ್ಚ್ ೨೩ರಂದು ಪ್ರಕಟಿಸಿದರು. ಆದರೂ ಪತ್ರಿಕೆಗಳ ಆಕ್ರಮಣ ನಿಲ್ಲಲಿಲ್ಲ.

ಗೊಂದಲಗೊಂಡ ನೆಹರುರವರು ನಾರಿಮನ್‌ಗೆ ಪತ್ರ ಬರೆದು ಹೇಳಿದರು:

> ನಿಮ್ಮ ಪತ್ರಗಳು ಸ್ಪಷ್ಟವಾಗಿಲ್ಲ. ಅದರಿಂದ ನಿಮಗೆ ಏನು ಬೇಕು ಮತ್ತು ನಿಮ್ಮ ಆಪಾದನೆಗಳು ಏನು ಎನ್ನುವುದನ್ನು ಅರ್ಥ ಮಾಡಿಕೊಳ್ಳುವುದು ಕಷ್ಟವಾಗಿದೆ. ನೀವು, 'ಪೀಡಿಸಲ್ಪಡುತ್ತಿದ್ದೇನೆ ಮತ್ತು ಆ ಪೀಡನೆಯಿಂದ ರಕ್ಷಣೆ ಬೇಕೆಂದು' ಪದೇ ಪದೇ ಬರೆಯುತ್ತಿದ್ದೀರಿ. ಅದೇ ಸಮಯದಲ್ಲಿ ನೀವು ವಿಷಯವನ್ನು ಮತ್ತೆ ತೆರೆಯುವುದು ಬೇಡ ಎನ್ನುತ್ತೀರಿ. ಆಮೇಲೆ, ತೆರೆಯುವುದಾದರೆ ಪೂರ್ಣ ತನಿಖೆ ಆಗಬೇಕು ಎನ್ನುತ್ತೀರಿ. ಇವೆಲ್ಲ ಗೊಂದಲಮಯವಾಗಿದೆ.[೧೦೩]

ಅದುವರೆವಿಗೆ ಮೌನವಾಗಿದ್ದ ಪಟೇಲರು ಒಂದು ಸಾರ್ವಜನಿಕ ಹೇಳಿಕೆಯಲ್ಲಿ, 'ನಾನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಚುನಾವಣೆಯ ಮೇಲೆ ಎಂದೂ ಪ್ರಭಾವ ಬೀರಿಲ್ಲ' ಎಂದು ಪ್ರಕಟಿಸಿದರು. ನಾರಿಮನ್ ಅದಕ್ಕೆ ವಿರುದ್ಧವಾಗಿ ಅನೇಕ ಹೇಳಿಕೆಗಳನ್ನು ನೀಡಿದರು. ಅಸಮಾಧಾನಗೊಂಡ ನೆಹರುರವರು ನಾರಿಮನ್‌ಗೆ "ನೀವು ಮತ್ತೆ ಉಗ್ರ ಹೋರಾಟವನ್ನು ಆರಂಭಿಸಿದ್ದೀರಿ ಮತ್ತು ಪತ್ರಿಕೆಗಳಲ್ಲಿ ನಿಮ್ಮ ಪರವಾದವರು ಎಲ್ಲರ ರಕ್ತಕ್ಕಾಗಿ ಹಾತೊರೆಯುತ್ತಿದ್ದಾರೆ..... ನಿಮಗೆ ದುರಾದೃಷ್ಟವಶಾತ್ ಕಾರ್ಯಕಾರಿ ಸಮಿತಿಯಲ್ಲಿ ವಿಶ್ವಾಸವಿಲ್ಲದಿರುವುದರಿಂದ ನೀವು ಪ್ರೈವಿ ಕೌನ್ಸಿಲ್ ಅಥವಾ ಲೀಗ್ ಆಫ್ ನೇಷನ್ಸ್ ಅಥವಾ ನಿಮಗೆ ವಿಶ್ವಾಸವಿರುವ ಯಾವುದಾದರೂ ಟ್ರಿಬ್ಯುನಲ್‌ಗೆ ಹೋಗಿ" ಎಂದು ಹೇಳಿದರು.

ಮೂರು ವಾರಗಳ ನಂತರ ನಾರಿಮನ್‌ರವರು ತಮಗೆ ಹೊಸ ಸಾಕ್ಷ್ಯಾಧಾರಗಳು ಸಿಕ್ಕಿವೆಯೆಂದೂ, ಅದರಿಂದ ಶಾಸಕರ ಮೇಲಿನ ಒತ್ತಡದ ಆಪಾದನೆಯನ್ನು ಮತ್ತೆ ಪರಿಶೀಲಿಸಬೇಕೆಂದೂ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯನ್ನು ಕೋರಿದರು. ಹೊಸ ಸಾಕ್ಷ್ಯಾಧಾರಗಳಾಗಿ ಪಟೇಲರು ಮಾರ್ಚ್ ೯ರಂದು ಕಳುಹಿಸಿದ್ದ ಎರಡು ಟೆಲಿಗ್ರಾಂಗಳನ್ನು ಸೂಚಿಸಿದರು. ಮೊದಲನೆಯದು ಶಂಕರ್‌ರಾವ್ ಡಿಯೊಗೆ ಕಳುಹಿಸಿದ್ದು. ಅದು ಹೀಗಿತ್ತು:

ಪೂನಾ ವರದಿಗಳು ಆತಂಕ ಉಂಟುಮಾಡಿವೆ. ಅಚ್ಯುತ ನೀವು ನನ್ನನ್ನ ಭೇಟಿ ಮಾಡಬೇಕು. ಬಾಂಬೆ ಗುರುವಾರ.

ಎರಡನೆಯ ಟೆಲಿಗ್ರಾಂ ಗಂಗಾಧರ್‌ರಾವ್‌ಗೆ ಕಳುಹಿಸಿದ್ದು ಹೀಗಿತ್ತು:

ದಯವಿಟ್ಟು ನನ್ನನ್ನು ಭೇಟಿ ಮಾಡಿ. ಬಾಂಬೆ ಗುರುವಾರ. – ವಲ್ಲಭಭಾಯ್.

ನಾರಿಮನ್‌ರವರು 'ಪೂನಾ ವರದಿಗಳು' ಅಂದರೆ ಮಾರ್ಚ್ ೮ರಂದು ಮಹಾರಾಷ್ಟ್ರ ಜಿಲ್ಲೆಗಳ ೩೦ ಶಾಸಕರು ನಾರಿಮನ್‌ರವರನ್ನು ಪ್ರಧಾನಮಂತ್ರಿ ಮಾಡಬೇಕೆಂದು ತೀರ್ಮಾನಿಸಿದ್ದ ವಿಷಯ ಎಂದು ಪ್ರತಿಪಾದಿಸಿದರು. ಸರ್ದಾರರ ಚಿತಾವಣೆಯ ಮೇಲೆ ಇಬ್ಬರು ಮಹಾರಾಷ್ಟ್ರ ಮತ್ತು ಒಬ್ಬರು ಕರ್ನಾಟಕ ನಾಯಕರು ತಮ್ಮ ವಿರುದ್ಧ, ತಾವು ೧೯೩೪ರಲ್ಲಿ ಕಾಂಗ್ರೆಸ್‌ಗೆ ಮೋಸ ಮಾಡಿದ್ದೀರೆಂದು ಪ್ರಚಾರ ಮಾಡಿದ್ದಾರೆ – ಎಂದು ವಾದಿಸಿದರು. ಪತ್ರಿಕೆಗಳವರು ಉಗ್ರ ಆಕ್ರಮಣವನ್ನು ಮತ್ತೆ ಆರಂಭಿಸಿದರು. ಶಂಕರ್‌ರಾವ್ ಡಿಯೊ ಮತ್ತು ಅಚ್ಯುತ ಪಟವರ್ಧನ್‌ರವರು ಜೂನ್ ೯ರಂದು ಒಂದು ಪತ್ರಿಕಾ ಹೇಳಿಕೆಯನ್ನು ನೀಡಿ 'ಪೂನಾ ವರದಿ' ಅಂದರೆ ಏನು ಅನ್ನುವುದನ್ನು ವಿವರಿಸಿದರು. ಅವರು, 'ಮಾರ್ಚ್ ೮ರಂದು

ಮಹಾರಾಷ್ಟ್ರ ಶಾಸಕರು ಕಾಂಗ್ರೆಸ್ಸು ಅಧಿಕಾರ ವಹಿಸಿಕೊಳ್ಳಬೇಕು ಮತ್ತು ಪ್ರಧಾನ ಮಂತ್ರಿ ಪದವಿಗೆ ನಾರಿಮನ್ ನಮ್ಮ ಆಯ್ಕೆ ಎಂದೂ, ಮಂತ್ರಿ ಪದವಿಗಳನ್ನು ಪ್ರಾಂತ್ಯದ ವಿವಿಧ ಭಾಗಗಳಿಂದ ಆಯ್ಕೆ ಮಾಡಿ ಶಾಸಕರ ಸಂಖ್ಯೆಯ ಆಧಾರದ ಮೇಲೆ ಹಂಚಬೇಕೆಂದೂ ತೀರ್ಮಾನಿಸಿದರು. ಪಟೇಲರು, ಪ್ರಾಂತೀಯ ಸಮಿತಿಯು ಅಧಿಕಾರವನ್ನು ವಹಿಸಿಕೊಳ್ಳುವುದರ ವಿರುದ್ಧವಾಗಿ ತೀರ್ಮಾನಿಸಿದ ಮಾರನೆಯ ದಿನವೇ, ಮತ್ತು ಅಖಿಲ ಭಾರತ ಕಾಂಗ್ರೆಸ್ ಸಮಿತಿ ತೀರ್ಮಾನಕ್ಕೆ ಬರುವ ಮುನ್ನವೇ, ಶಾಸಕರು ಅಧಿಕಾರವನ್ನು ಹಂಚಿಕೊಳ್ಳಲು ಹೊರಟದ್ದು ಭಾರಿ ತಪ್ಪು ಎಂದು ಭಾವಿಸಿದರು. ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡ್‌ನ ಛೇರ್ಮನ್ ಆಗಿ ಅಂತಹ ಹಗುರ ಮಾತುಗಳ ಬಗೆಗೆ ಅವು ಅಂತರ ವಿಭಾಗೀಯ ಸ್ಪರ್ಧೆಗೆ ಅವಕಾಶ ಮಾಡುವುದರಿಂದ, ವಿವರಣೆ ಕೇಳುವುದು ತಮ್ಮ ಕರ್ತವ್ಯ ಎಂದು ಪಟೇಲರು ಭಾವಿಸಿದರೇ ಹೊರತು ನಾರಿಮನ್ ವಿರುದ್ಧವಾಗಿ ಕೆಲಸ ಮಾಡುವಂತೆ ನಮ್ಮನ್ನು ಕೇಳುವುದು ಅವರ ಉದ್ದೇಶವಾಗಿರಲಿಲ್ಲ," ಎಂದು ವಿವರಿಸಿದರು.[೧೦೪]

ಅದಕ್ಕೆ ಬಹಳ ಮುಂಚೆ ಈ ಜಿಜ್ಞಾಸೆ ಆರಂಭವಾದಾಗಲೇ ಬೊಂಬಾಯಿಯಿಂದ ೪೭ ಮಂದಿ ಕಾಂಗ್ರೆಸ್ ಶಾಸಕರು ದೆಹಲಿಯಲ್ಲಿ ಸಭೆ ಸೇರಿ ತಮ್ಮ ನಾಯಕನ ಆಯ್ಕೆಯ ವಿಷಯದಲ್ಲಿ ಪಟೇಲರು ಯಾವ ಆಸಕ್ತಿಯನ್ನು ತೋರಿಸಿಲ್ಲ – ಎಂದು ಘಂಟಾಘೋಷವಾಗಿ ಪ್ರಕಟಿಸಿದ್ದರು.

ಇಷ್ಟಾದರೂ ನಾರಿಮನ್‌ರವರು ಅಸ್ಪಷ್ಟ ಆಪಾದನೆಗಳನ್ನು ಮಾಡುವುದನ್ನು ಮುಂದುವರೆಸಿದರು. ಸಾರ್ವಜನಿಕರಿಗಾಗಿ ಸತ್ಯಾಂಶಗಳನ್ನು ಪ್ರಕಟಿಸುವುದು ಸೂಕ್ತ ಎಂದು ಭಾವಿಸಿದ ಪಟೇಲರು ಒಂದು ಹೇಳಿಕೆಯನ್ನೇ ನೀಡಿದರು:

> ನಾನು ಸಮರ್ಥಿಸಲಾಗದ ರೀತಿಯಲ್ಲಿ ಮಧ್ಯೆ ಪ್ರವೇಶಿಸಿದ್ದೇನೆಂದು ಶ್ರೀ ನಾರಿಮನ್‌ರವರು ಸೂಚಿಸಿದ್ದಾರೆ. ಇದಕ್ಕೆ ಸಂಬಂಧಪಟ್ಟ ಇಬ್ಬರು ವ್ಯಕ್ತಿಗಳಾದ ಗಂಗಾಧರ್‌ರಾವ್ ದೇಶ್‌ಪಾಂಡೆ ಮತ್ತು ಶಂಕರ್‌ರಾವ್ ಡಿಯೊರವರು ಆ ಆಪಾದನೆಯನ್ನು ಖಡಾಖಂಡಿತವಾಗಿ ನಿರಾಕರಿಸಿದ್ದರೂ ಸಹ ನಾರಿಮನ್‌ರವರು ಈ ಆಪಾದನೆಯನ್ನು ಸತತವಾಗಿ ಮಾಡುತ್ತಲೇ ಇದ್ದಾರೆ. ಎಲ್ಲರಿಗೂ ಚೆನ್ನಾಗಿ ತಿಳಿದಿರುವ ಹಾಗೆ ಶಾಸಕರಲ್ಲಿ ಬಹುತೇಕ ಮಂದಿಯೂ ಸಹ ಲಿಖಿತ ರೂಪದಲ್ಲಿ ನಿರಾಕರಿಸಿದ್ದಾರೆ. ನಾನು ಪ್ರತ್ಯಕ್ಷವಾಗಿ ಆಗಲಿ ಪರೋಕ್ಷವಾಗಿ ಆಗಲಿ ಚುನಾವಣೆಯ ಮೇಲೆ ಪ್ರಭಾವ ಬೀರಿಲ್ಲ ಎಂದು ಜವಾಬ್ದಾರಿಯ ಸಂಪೂರ್ಣ

ಮನೋಭಾವದಿಂದ ಹೇಳುತ್ತೇನೆ. ಮಾರ್ಚ್ ೪ರಂದು ನಾರಿಮನ್‌ರವರು ಚುನಾವಣೆಯಲ್ಲಿ ಸಹಾಯ ಮಾಡುವಂತೆ ನನ್ನನ್ನು ಕೇಳಿದರು. ಆಗಲೇ ನಾನು ಅವರಿಗೆ ಸೂಚಿಸಿದ್ದ ಕಾರಣಗಳಿಗಾಗಿ ಹಾಗೆ ಮಾಡಲಾರೆ ಎಂದು ಅವರಿಗೆ ತಿಳಿಸಿದೆ. ಅವರ ವಿರುದ್ಧ ಯಾವ ಪ್ರಭಾವವನ್ನು ಬೀರುವುದಿಲ್ಲವೆಂದೂ, ಬೇರೆ ಯಾರನ್ನೂ ಬೆಂಬಲಿಸುವುದಿಲ್ಲವೆಂದೂ ಸಹ ಅದೇ ಸಮಯದಲ್ಲಿ ನಾನು ಅವರಿಗೆ ಹೇಳಿದ್ದೆ. ಅವರ ವಿರುದ್ಧ ನನಗೆ ಯಾವ ದ್ವೇಷವೂ ಇಲ್ಲ.

ನಾರಿಮನ್‌ರವರು ಒಂದು ಅಲ್ಪ ಸಂಖ್ಯಾತ ಸಮಾಜಕ್ಕೆ ಸೇರಿದವರಾದ್ದರಿಂದ ಅವರು ಚುನಾಯಿತರಾಗಲಿಲ್ಲ ಅನ್ನುವ ಮಾತು ಸುಳ್ಳು ಮತ್ತು ಹಗೆತನದಿಂದ ಕೂಡಿದ್ದು. ಸ್ವತಃ ನಾರಿಮನ್ ರವರೇ ಈ ವಿಷಯದಲ್ಲಿ ಯಾವ ಮತೀಯತೆಯು ಇಲ್ಲವೆಂದು ಹೇಳಿರುವುದು ನನಗೆ ಸಂತಸವನ್ನು ತಂದಿದೆ. ಈ ಆಪಾದನೆಗಳನ್ನು ಒಂದು ನ್ಯಾಯಾಧೀಕರಣದಿಂದ ತನಿಖೆ ಮಾಡಿಸುವುದಾದರೆ ಅದರ ತೀರ್ಪಿಗೆ ನಾನು ಬದ್ಧನಾಗಿರುತ್ತೇನೆ.[೧೦೫]

ಇಷ್ಟಾದರೂ ನಾರಿಮನ್‌ರವರು ಆಪಾದನೆಯನ್ನು ಕೈಬಿಡಲಿಲ್ಲ. ಪತ್ರಿಕೆಗಳಲ್ಲಿ ಆ ವಿಷಯವನ್ನು ಆಗಾಗ್ಗೆ ಎತ್ತುತ್ತಲೇ ಇದ್ದರು. ಇದಕ್ಕೊಂದು ಇತಿಶ್ರೀ ಹಾಡದೇ ಹೋದರೆ ಕಾಂಗ್ರೆಸ್ಸು ಅವಹೇಳನಕ್ಕೆ ಗುರಿಯಾಗುತ್ತದೆ ಎಂದು ಗಾಂಧೀಜಿ ಯೋಚಿಸಿ, ನಾರಿಮನ್‌ರವರಿಗೆ ವಿಷಯವನ್ನು ಕೈಬಿಡಿ ಅಥವಾ ಒಂದು ಸ್ವತಂತ್ರ ನ್ಯಾಯಾಧಿಕರಣದಿಂದ ತನಿಖೆಗೆ ಕೇಳಿ ಎಂದು ತಿಳಿಸಿದರು. ಆದರೆ ನಾರಿಮನ್ ಹಾರಿಕೆಯ ಉತ್ತರ ನೀಡಿದರು. ಗಾಂಧೀಜಿಯವರು ಆಗಸ್ಟ್ ೨ರಂದು ಸ್ವಂತ ಇರಾದೆಯ ಮೇಲೆ ಬಹದ್ದೂರ್ಜಿ ಮತ್ತು ತಾವು (ಗಾಂಧೀಜಿ) ಎರಡು ಪ್ರಶ್ನೆಗಳ ಬಗೆಗೆ ಪಂಚಾಯಿತಿದಾರರಾಗುವುದಾಗಿ ನಾರಿಮನ್‌ಗೆ ತಿಳಿಸಿದರು. ಆ ಎರಡು ಪ್ರಶ್ನೆಗಳು ಹೀಗಿದ್ದುವು:

೧. ೧೯೩೪ರ ಕೇಂದ್ರ ಶಾಸನ ಸಭಾ ಚುನಾವಣೆಯಲ್ಲಿ ನಾರಿಮನ್‌ರವರು ತಮ್ಮ ನಡವಳಿಕೆಯಿಂದ ಕಾಂಗ್ರೆಸ್ಸಿನ ಹಿತಕ್ಕೆ ದ್ರೋಹ ಮಾಡಿದರೆ?

೨. ಬಾಂಬೆ ಪ್ರಾಂತ್ಯ ಕಾಂಗ್ರೆಸ್ ಪಕ್ಷದ ನಾಯಕನ

ಚುನಾವಣೆಯಲ್ಲಿ ಸರ್ದಾರರು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಪ್ರಭಾವ ಬೀರಿದರೆ?

ಡಿ.ಎನ್. ಬಹದ್ದೂರ್ಜಿಯವರು ಒಬ್ಬ ಖ್ಯಾತ ಪಾರ್ಸಿ ವಕೀಲ ಮತ್ತು ಬೊಂಬಾಯಿಯ ಮಾಜಿ ಅಡ್ವೋಕೇಟ್ ಜನರಲ್. ಅವರು ಪ್ರಾಮಾಣಿಕತೆ ಮತ್ತು ನಿಸ್ಪಕ್ಷಪಾತತನಕ್ಕೆ ಹೆಸರಾಗಿದ್ದರು. ಅವರ ಮುಂದೆ ನಾರಿಮನ್ ಹಾಜರಾಗಿ ತಮ್ಮ ಪರ ವಾದವನ್ನು ತಾವೇ ಮಂಡಿಸಿದರು. ಪಟೇಲ್ ಹಾಜರಾಗಲಿಲ್ಲ. ಬಹದ್ದೂರ್ಜಿಯವರು ಅವರಿಗೆ ಸಲ್ಲಿಸಲ್ಪಟ್ಟ ಹೇಳಿಕೆಗಳು ಮತ್ತು ಪ್ರತಿ ಹೇಳಿಕೆಗಳನ್ನು ಪರೀಕ್ಷಿಸಿ, ನಾರಿಮನ್‌ರವರು ೧೯೩೪ರ ತಮ್ಮ ನಡವಳಿಕೆಯಿಂದ ಕಾಂಗ್ರೆಸ್ಸಿನ ಹಿತಕ್ಕೆ ಧಕ್ಕೆ ತಂದರು ಎಂದೂ, ಖೇರ್‌ರವರ ಆಯ್ಕೆಯು ವಲ್ಲಭಭಾಯ್‌ರವರ ಯಾವ ಅನುಚಿತ ಒತ್ತಡದಿಂದ ಆಗಿಲ್ಲ ಎಂದೂ ತೀರ್ಪಿತ್ತರು. ಗಾಂಧೀಜಿಯವರು ಆ ತೀರ್ಪಿಗೆ ತಮ್ಮ ಸಮ್ಮತಿಯನ್ನು ನೀಡಿದರು. ನಾರಿಮನ್ ಸಹ ತೀರ್ಪನ್ನು ಒಪ್ಪಿಕೊಂಡರು. ಆದರೆ ಒಂದು ವಾರದ ನಂತರ ಉಲ್ಟ ಹೊಡೆದರು. ತಾವು ಒಪ್ಪಿಗೆಯನ್ನು ಒಂದು ಮಾನಸಿಕ ಕ್ಷೋಭೆಯ ಸಮಯದಲ್ಲಿ ನೀಡಿದ್ದಾಗಿ ಪ್ರಕಟಿಸಿ, ಮತ್ತೆ ತಮ್ಮ ಹಾರಾಟ ಮತ್ತು ಹೋರಾಟವನ್ನು ಮುಂದುವರೆಸಿದರು. ಗಾಂಧೀಜಿ, ಬಹದ್ದೂರ್‌ಜಿ ಹಾಗೂ ನೆಹರು ಮೇಲೆ ಪಕ್ಷಪಾತದ ಆರೋಪ ಹೊರೆಸಿದರು. ಅದರ ಫಲವಾಗಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು 'ನಾರಿಮನ್‌ರವರು ಕಾಂಗ್ರೆಸ್‌ನಲ್ಲಿ ಯಾವುದೇ ನಂಬಿಕೆ ಮತ್ತು ಜವಾಬ್ದಾರಿಯ ಸ್ಥಾನವನ್ನು ವಹಿಸಿಕೊಳ್ಳಲು ಅರ್ಹರಲ್ಲ' ಎಂದು ತೀರ್ಮಾನಿಸಿತು. ನಾರಿಮನ್‌ರವರು ಬಾಂಬೆ ನಗರ ಕಾಂಗ್ರೆಸ್ ಅಧ್ಯಕ್ಷ ಸ್ಥಾನವನ್ನು ತೆರವು ಮಾಡಬೇಕಾಯಿತು.[೧೦೬]

(ಹತ್ತು ವರ್ಷಗಳ ನಂತರ ನಾರಿಮನ್‌ರವರು ಪಟೇಲರ ಕ್ಷಮೆ ಕೇಳಿ ಕಾಂಗ್ರೆಸ್ಸನ್ನು ಮತ್ತೆ ಸೇರಿ, ಬೊಂಬಾಯಿ ಕಾರ್ಪೋರೇಷನ್‌ನಲ್ಲಿ ಕಾಂಗ್ರೆಸ್ ಪಕ್ಷದ ನಾಯಕನಾದರು. ಆದರೆ ಸ್ವಲ್ಪ ದಿನಗಳಲ್ಲೇ ೧೯೪೮ರ ಅಕ್ಟೋಬರ್ ೪ರಂದು ಒಂದು ದಾವೆ ನಡೆಸಲು ದೆಹಲಿಗೆ ಹೋಗಿದ್ದಾಗ 'ಮೈಡನ್ ಹೊಟೆಲ್' ನಲ್ಲಿ ಇದ್ದಕ್ಕಿದ್ದ ಹಾಗೆ ಹೃದಯಘಾತದಿಂದ ಅಸುನೀಗಿದರು. ಆ ವೇಳೆಗೆ ಪಟೇಲರು ಉಪಪ್ರಧಾನಿಯಾಗಿದ್ದರು. ನಾರಿಮನ್‌ರವರ ಬಂಧುಗಳ ಕೋರಿಕೆಯ ಮೇಲೆ ಅವರು ಕಳೇಬರವನ್ನು ಒಂದು ವಿಶೇಷ ವಿಮಾನದಲ್ಲಿ ಬೊಂಬಾಯಿಗೆ ಕಳುಹಿಸಿಕೊಟ್ಟರು. 'ಒಂದು ಕಾಲದಲ್ಲಿ ಅವರು ಬೊಂಬಾಯಿಯ ಅನಭಿಷಿಕ್ತ ದೊರೆ ಆಗಿದ್ದರು' ಎಂದು ಸ್ಮರಿಸಿದರು. ಅವರು ನಾರಿಮನ್ ಬಗೆಗೆ ಯಾವ ಕಹಿ ಭಾವನೆಯನ್ನು ಉಳಿಸಿಕೊಂಡಿರಲಿಲ್ಲ.)[೧೦೭]

೧೨.೮ ಸಂಸತ್ ಸಮಿತಿಯ ಮುಖ್ಯಸ್ಥ

ಕಾಂಗ್ರೆಸ್ ಪಕ್ಷವು ತಾನು ಗೆದ್ದ ಪ್ರಾಂತ್ಯಗಳಲ್ಲಿ ಮಂತ್ರಿ ಮಂಡಲಗಳನ್ನು ರಚಿಸಲು ತೀರ್ಮಾನಿಸಿದಾಗ ಆ ಮಂತ್ರಿ ಮಂಡಲಗಳ ಮೇಲೆ ತಾನು ಹಿಡಿತವನ್ನು ಇಟ್ಟುಕೊಳ್ಳುವ ಅವಶ್ಯಕತೆ ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ಕಂಡುಬಂದಿತ್ತು. ಅಂತಹ ಹಿಡಿತ ಅವಶ್ಯಕವಾಗಿತ್ತು. ಏಕೆಂದರೆ ಅದೇ ಪ್ರಥಮ ಬಾರಿಗೆ ಕಾಂಗ್ರೆಸ್ಸಿಗರು ಮಂತ್ರಿ ಪದವಿಯ ಜವಾಬ್ದಾರಿಯನ್ನು ವಹಿಸಿಕೊಳ್ಳುತ್ತಿದ್ದರು. ಅವರಲ್ಲಿ ಅನೇಕರಲ್ಲಿ ಪಾರ್ಲಿಮೆಂಟರಿ ಸಂಪ್ರದಾಯಗಳ ಬಗೆಗೆ ಏನೂ ಅನುಭವವಿರಲಿಲ್ಲ. ಆಡಳಿತದ ಬಗೆಗಂತೂ ಯಾರಿಗೂ ಅನುಭವವಿರಲಿಲ್ಲ. ಅಧಿಕಾರ ಅವರನ್ನು ತಪ್ಪು ಹಾದಿಗೆ ಸೆಳೆಯುವ ಸಂಭವವಿತ್ತು. ಶಾಸಕರು ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡು ಕಾಂಗ್ರೆಸ್ ಪಕ್ಷಕ್ಕೆ ಕೆಟ್ಟ ಹೆಸರು ತರುವ ಸಂಭವವೂ ಇತ್ತು. ಮಂತ್ರಿಗಳು ಸರಿಯಾದ ರೀತಿಯಲ್ಲಿ ಕೆಲಸ ಮಾಡುವುದನ್ನು ಖಚಿತಗೊಳಿಸುವುದಕ್ಕಾಗಿ ಕಾರ್ಯಕಾರಿ ಸಮಿತಿಯು ೧೯೩೭ರ ಮಾರ್ಚ್‌ನಲ್ಲಿ ದೆಹಲಿಯಲ್ಲಿ ಕಾಂಗ್ರೆಸ್ ಶಾಸಕರ ಸಭೆಯನ್ನು ಏರ್ಪಡಿಸಿತು. ಆ ಸಭೆಯಲ್ಲಿ ಎಲ್ಲಾ ಶಾಸಕರು ಕಾಂಗ್ರೆಸ್ಸಿನ ಧ್ಯೇಯ ಮತ್ತು ಗುರಿಗಳ ಸಾಧನೆಗಾಗಿ ಕಾಂಗ್ರೆಸ್ಸಿನ ಶಿಸ್ತಿನ ಪ್ರಕಾರ ಕೆಲಸ ಮಾಡುವುದಾಗಿ ಪ್ರತಿಜ್ಞೆ ಮಾಡಿದರು. ಅವರು ಶಿಸ್ತು ಪಾಲಿಸುವುದನ್ನು ನಿಯಂತ್ರಿಸುವ ಕೆಲಸವನ್ನು ಪಾರ್ಲಿಮೆಂಟರಿ ಉಪಸಮಿತಿಗೆ ವಹಿಸಲಾಯಿತು. ಉಪಸಮಿತಿಯನ್ನು ಸರ್ದಾರರ ಅಧ್ಯಕ್ಷತೆಯಲ್ಲಿ ಹಿಂದೆಯೇ ಚುನಾವಣೆಗೆ ಮುನ್ನವೇ ರಚಿಸಲಾಗಿತ್ತು. ಬಾಬು ರಾಜೇಂದ್ರ ಪ್ರಸಾದ್ ಮತ್ತು ಮೌಲಾನ ಅಬುಲ್ ಕಲಾಂ ಆಜ಼ಾದ್ ಆ ಸಮಿತಿಯ ಸದಸ್ಯರಾಗಿದ್ದರು. ಚುನಾವಣೆಗೆ ಅಭ್ಯರ್ಥಿಗಳನ್ನು ಆರಿಸುವ ಹೊಣೆಯನ್ನು ಆ ಉಪಸಮಿತಿಗೆ ವಹಿಸಿದ್ದರು. ಈಗ ಚುನಾಯಿತ ಸದಸ್ಯರು ಮತ್ತು ಮಂತ್ರಿ ಮಂಡಲದ ಮೇಲುಸ್ತುವಾರಿ ಮತ್ತು ಅವರಿಗೆ ಮಾರ್ಗದರ್ಶನ ನೀಡುವ ಜವಾಬ್ದಾರಿಯೂ ಅವರಿಗೆ ವಹಿಸಲ್ಪಟ್ಟಿತು. 'ಪ್ರಾಂತ್ಯಗಳ ಎಲ್ಲಾ ಶಾಸನ ಸಭಾ ಕಾಂಗ್ರೆಸ್ ಸದಸ್ಯರೊಡನೆ ಸಾಮಿಪ್ಯ ಮತ್ತು ಸತತ ಸಂಪರ್ಕವನ್ನು ಇಟ್ಟುಕೊಂಡಿರಬೇಕೆಂದೂ, ಅವರ ಎಲ್ಲಾ ಚಟುವಟಿಕೆಗಳಲ್ಲಿ ಸಲಹೆಗಳನ್ನು ನೀಡಬೇಕೆಂದೂ ಮತ್ತು ತುರ್ತು ಸಮಯದಲ್ಲಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕೆಂದೂ' ನಿರ್ದೇಶನವನ್ನು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಪಾರ್ಲಿಮೆಂಟರಿ ಉಪ ಸಮಿತಿಗೆ ನೀಡಿತ್ತು.[೧೦೮]

ಗೌರ್ನರ್‌ಗಳ ಒಡೆದು ಆಳುವ ನೀತಿಯನ್ನು ತಡೆಗಟ್ಟುವುದಕ್ಕಾಗಿ ಸರ್ದಾರರು ಕೆಲವು ನಿರ್ದೇಶನಗಳನ್ನು ಮಂತ್ರಿಗಳಿಗೆ ನೀಡಿದ್ದರು. ಪ್ರಧಾನಮಂತ್ರಿ ಮಾತ್ರ ಗೌರ್ನರನೊಡನೆ ವ್ಯವಹರಿಸಬೇಕು, ಇತರ ಮಂತ್ರಿಗಳು ಪ್ರಧಾನಮಂತ್ರಿಯ ಒಪ್ಪಿಗೆ

ಪಡೆದು ಗೌರ್ನರನನ್ನು ಭೇಟಿಯಾಗಬೇಕು, ಯಾವ ಮಂತ್ರಿಯೂ ತಿಂಗಳಿಗೆ ೫೦೦ ರೂಪಾಯಿ ಸಂಬಳ ಮತ್ತು ೨೫೦ ರೂಪಾಯಿ ಭತ್ಯೆಗಿಂತ ಜಾಸ್ತಿ ತೆಗೆದುಕೊಳ್ಳಬಾರದು ಎನ್ನುವುದು ಆ ನಿರ್ದೇಶನಗಳಲ್ಲಿ ಕೆಲವು.

ಸರ್ದಾರ್ ಪಟೇಲರು ಮಂತ್ರಿ ಮಂಡಲ ರಚನೆಯ ಪ್ರಯೋಗವನ್ನು ಯಶಸ್ವಿಗೊಳಿಸುವುದಕ್ಕಾಗಿ ಮತ್ತು ಕಾಂಗ್ರೆಸ್ಸಿನ ವರ್ಚಸ್ಸನ್ನು ಹೆಚ್ಚಿಸುವುದಕ್ಕಾಗಿ ಎಲ್ಲಾ ಪ್ರಾಂತ್ಯಗಳ ಕಾರ್ಯ ವೈಖರಿಯನ್ನು, ಆಗು ಹೋಗುಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದರು ಮತ್ತು ಅವಶ್ಯಕತೆ ಬಿದ್ದಾಗ ಸೂಕ್ತ ಕ್ರಮಗಳನ್ನು ತಕ್ಷಣ ತೆಗೆದುಕೊಳ್ಳುತ್ತಿದ್ದರು.

ಒರಿಸ್ಸದ ಗೌರ್ನರ್ ಹಬಕ್ ರಜದ ಮೇಲೆ ಹೋದಾಗ ದೆಹಲಿ ಸರ್ಕಾರವು ರೆವೆನ್ಯೂ ಕಮಿಷನರ್ ಜೆ.ಆರ್. ಡೈನ್ ಅವರನ್ನು ಹಂಗಾಮಿ ಗೌರ್ನರನನ್ನಾಗಿ ನಿಯಮಿಸಿತು. ಈ ನೇಮಕವನ್ನು ಪಟೇಲರು ವಿರೋಧಿಸಿದರು. ರೆವೆನ್ಯೂ ಕಮಿಷನರನು ಮಂತ್ರಿ ಮಂಡಲಕ್ಕೆ ಅಧೀನನಾದ ಅಧಿಕಾರಿ. ಅವನು ಇದ್ದಕ್ಕಿದ್ದ ಹಾಗೆ ಮಂತ್ರಿ ಮಂಡಲದ ಮೇಲೆ ಹಂಗಾಮಿ ಗೌರ್ನರನಾಗುವುದು ಮಂತ್ರಿಗಳಿಗೆ ಅವಮಾನ ಮತ್ತು ಅದನ್ನು ಒಪ್ಪಲು ಸಾಧ್ಯವಿಲ್ಲ ಅನ್ನುವುದು ಪಟೇಲರ ನಿಲುವು. ಜೆ.ಆರ್. ಡೈನನು ಗೌರ್ನರನಾಗಿ ಅಧಿಕಾರ ವಹಿಸಿಕೊಂಡ ತಕ್ಷಣ ಮಂತ್ರಿ ಪದವಿಗೆ ರಾಜಿನಾಮೆ ಕೊಡುವಂತೆ ಪಟೇಲರು ಕಾಂಗ್ರೆಸ್ ಮಂತ್ರಿಗಳಿಗೆ ಸೂಚಿಸಿದರು. ಸರ್ಕಾರ ತಮ್ಮ ನಿರ್ಧಾರದಿಂದ ಹಿಂದೆ ಸರಿಯಿತು. ಹಬಕ್ ರಜದ ಮೇಲೆ ಹೋಗುವುದನ್ನು ರದ್ದು ಮಾಡಿದನು.[೧೦೯]

ಉತ್ತರ ಪ್ರದೇಶ ಮತ್ತು ಬಿಹಾರದ ರಾಜಕೀಯ ಹಿಂಸಾಚಾರದ ಶಿಕ್ಷೆಗೆ ಒಳಗಾಗಿದ್ದ ಖೈದಿಗಳ ಒಂದು ತಂಡ ತಾವು ಹಿಂಸಾಚಾರದ ಮೇಲಿನ ನಂಬಿಕೆಯನ್ನು ಬಿಟ್ಟಿದ್ದೇವೆ ಎಂದು ಒಪ್ಪಿದ್ದರಿಂದ ಅವರ ಬಿಡುಗಡೆಗೆ ಆ ಎರಡು ಪ್ರಾಂತ್ಯಗಳ ಮಂತ್ರಿಮಂಡಲಗಳು ೧೯೩೭ರ ಕೊನೆಯ ಭಾಗದಲ್ಲಿ ಆದೇಶ ನೀಡಿದುವು. ಆದರೆ ಗೌರ್ನರರು ಅದಕ್ಕೆ ಅಡ್ಡಗಾಲು ಹಾಕಿದರು. "ನಮ್ಮ ಮಂತ್ರಿಗಳ ವಿವೇಚನಾ ಹಕ್ಕಿನ ವಿಷಯದಲ್ಲಿ ಹಸ್ತಕ್ಷೇಪ ಮಾಡಲು ಗೌರ್ನರನಿಗೆ ಎಷ್ಟು ಧೈರ್ಯ?" ಎಂದು ಗುಡುಗಿದರು ಸರ್ದಾರರು. "ಅದು ನಮ್ಮ ಆತ್ಮಗೌರವದ ಪ್ರಶ್ನೆ" ಎಂದೂ ಸಹ ಅವರು ಹೇಳಿದರು. ತಮ್ಮ ಅಧಿಕಾರದ ಮೊಟಕಿನ ಬಗೆಗೆ ಉತ್ತರ ಪ್ರದೇಶದ ಪ್ರಧಾನಿ ಜಿ.ಬಿ. ಪಂತ್‌ರವರು ಮೃದು ಧೋರಣೆಯನ್ನು ತಾಳಿದ್ದರು. ಅವರನ್ನು ಹುರಿದುಂಬಿಸುವುದಕ್ಕಾಗಿ ಪಟೇಲರು, "ಪಂತರು ಏಕೆ ಗೌರ್ನರನ ಹಸ್ತಕ್ಷೇಪಕ್ಕೆ ಪ್ರತಿಭಟಿಸುತ್ತಿಲ್ಲ? ಧೈರ್ಯದ ಹೆಜ್ಜೆ ಇಡುತ್ತಿಲ್ಲ?" ಎಂದು

ಪ್ರಶ್ನಿಸಿದರು. ಗಾಂಧೀಜಿಯವರೂ ಸಹ ಅದೇ ತರಹದ ಸೂಚನೆ ನೀಡಿದರು. ಪಂತ್‌ರವರು ತಮ್ಮ ಮಂತ್ರಿಮಂಡಲದ ರಾಜಿನಾಮೆಯನ್ನು ಗೌರ್ನರನಿಗೆ ಕಳುಹಿಸಿದರು. ಬಿಹಾರದ ಪ್ರಧಾನಮಂತ್ರಿ ಶ್ರೀ ಕೃಷ್ಣ ಸಿನ್ಹ ಸಹ ಹಾಗೆಯೇ ಮಾಡಿದರು.

ಗೌರ್ನರ್‌ಗಳು ಆ ರಾಜಿನಾಮೆಗಳನ್ನು ತಕ್ಷಣ ಒಪ್ಪಿಕೊಳ್ಳಲಿಲ್ಲ. ಬ್ರಿಟಿಷ್ ಸರ್ಕಾರಕ್ಕೆ ಕಾಂಗ್ರೆಸ್ ಜೊತೆ ಸಂಬಂಧವನ್ನು ಕಡಿದುಕೊಳ್ಳಲೂ ಇಷ್ಟವಿರಲಿಲ್ಲ, ಕಾಂಗ್ರೆಸ್‌ಗೆ ತಲೆಬಾಗಲೂ ಇಷ್ಟವಿರಲಿಲ್ಲ. ಗೌರ್ನರರು, ವೈಸ್‌ರಾಯ್ ಮತ್ತು ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ಇಂಡಿಯಾ ನಡುವೆ ಟೆಲಿಗ್ರಾಂಗಳು ಹರಿದಾಡಿದುವು. ಕೊನೆಗೆ ಗೌರ್ನರರು, ಗಾಂಧೀಜಿಯ ಸಲಹೆಯ ಮೇಲೆ, ಮಂತ್ರಿಗಳ ಅಧಿಕಾರವನ್ನು ಕಬಳಿಸುವ ಉದ್ದೇಶ ತಮಗಿಲ್ಲ ಎನ್ನುವ ಆಶ್ವಾಸನೆಯನ್ನು ನೀಡಿದರು. ಪಂತ್ ಮತ್ತು ಸಿನ್ಹ ತಮ್ಮ ರಾಜಿನಾಮೆಯನ್ನು ವಾಪಸ್ಸು ಪಡೆದರು. ಮಾರನೆಯ ದಿನ ಖೈದಿಗಳ ಬಿಡುಗಡೆ ಆಯಿತು.[೧೧೦]

ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡ್‌ನ ಛೇರ್‌ಮನ್ ಮತ್ತು ಸದಸ್ಯರಿಗೆ ವಿವಿಧ ಪ್ರಾಂತ್ಯಗಳ ನೇರ ಉಸ್ತುವಾರಿಯನ್ನು ವಹಿಸಲಾಗಿತ್ತು. ಛೇರ್‌ಮನ್ ಪಟೇಲರು ಬಾಂಬೆ, ಮದ್ರಾಸ್, ಮಧ್ಯ ಪ್ರದೇಶ್ ಮತ್ತು ಸಿಂದ್ ಪ್ರಾಂತ್ಯಗಳ ಮೇಲುಸ್ತುವಾರಿಯನ್ನು ರಾಜೇಂದ್ರ ಪ್ರಸಾದ್‌ರವರು ಬಿಹಾರ್, ಒರಿಸ್ಸ ಮತ್ತು ಅಸ್ಸಾಂ ಪ್ರಾಂತ್ಯಗಳ ಮೇಲುಸ್ತುವಾರಿಯನ್ನು ಮತ್ತು ಮೌಲಾನ ಆಜ಼ಾದ್‌ರವರು ಉತ್ತರ ಪ್ರದೇಶ, ಬಂಗಾಳ, ಪಂಜಾಬ್ ಮತ್ತು ವಾಯುವ್ಯ ಪ್ರಾಂತ್ಯಗಳ ಮೇಲುಸ್ತುವಾರಿಯನ್ನು ವಹಿಸಿಕೊಂಡಿದ್ದರು. ಮದ್ರಾಸ್ ಪ್ರಾಂತ್ಯದಲ್ಲಿ ರಾಜಾಜಿಯವರಿಗೆ ತಮಗೆ ಸರಿ ತೋರಿದಂತೆ ಆಡಳಿತವನ್ನು ನಡೆಸಲು ಸ್ವಾತಂತ್ರ್ಯ ನೀಡಲಾಗಿತ್ತು. ಪಟೇಲರು ಮಧ್ಯೆ ಪ್ರವೇಶಿಸುತ್ತಿರಲಿಲ್ಲ. "ಬೊಂಬಾಯಿ ಪ್ರಾಂತ್ಯದಲ್ಲಿ ಪಟೇಲರು ನೀತಿಗಳು ಮತ್ತು ಕಾರ್ಯವಿಧಾನಗಳಲ್ಲಿ ಮಾರ್ಗದರ್ಶನ ಮಾಡುತ್ತಿದ್ದರೇ ಹೊರತು, ದಿನ ನಿತ್ಯದ ಕೆಲಸದಲ್ಲಿ ಮಧ್ಯೆ ಪ್ರವೇಶಿಸುತ್ತಿರಲಿಲ್ಲ" ಎಂದು ಕಂದಾಯ ಮಂತ್ರಿಯಾಗಿದ್ದ ಮೊರಾರ್ಜಿ ದೇಸಾಯಿಯವರು ಹೇಳಿದ್ದಾರೆ.[೧೧೧]

೩೦ರ ದಶಕದ ಆದಿ ಭಾಗದಲ್ಲಿ ನಡೆದ ಸಿವಿಲ್ ಶಾಸನ ಭಂಗ ಚಳವಳಿಯ ಸಮಯದಲ್ಲಿ ಗುಜರಾತ್‌ನ ಅನೇಕ ರೈತರ ಜಮೀನುಗಳನ್ನು ಸರ್ಕಾರವು ವಶಪಡಿಸಿಕೊಂಡಿತ್ತು ಮತ್ತು ಕೆಲವನ್ನು ಮಾರಿಬಿಟ್ಟಿತ್ತು. ಜಮೀನುಗಳನ್ನು ಕಳೆದುಕೊಂಡ ರೈತರಿಗೆ ಸರ್ದಾರರು, ಕಾಂಗ್ರೆಸ್ಸಿನ ಪರವಾಗಿ, 'ನಿಮ್ಮ ಜಮೀನು ವಾಪಸ್ಸು ನಿಮಗೇ ಬರುವುದು' ಎಂದು ಆಶ್ವಾಸನೆಯನ್ನು ನೀಡಿದ್ದರು. ಗಾಂಧಿ

– ಇರ್ವಿನ್ ಒಪ್ಪಂದದ ಸಮಯದಲ್ಲಿ ಆ ಆಶ್ವಾಸನೆಯನ್ನು ಪೂರೈಸಲು ಆಗಿರಲಿಲ್ಲ. ಆ ವೈಫಲ್ಯತೆ ಸರ್ದಾರರಿಗೆ ಬಹಳ ನೋವನ್ನುಂಟುಮಾಡಿತ್ತು. ಈಗ ನಮ್ಮದೇ ಸರ್ಕಾರ ಸ್ಥಾಪನೆಯಾದದ್ದರಿಂದ ಸರ್ದಾರರು ಆ ಆಶ್ವಾಸನೆಯನ್ನು ಪೂರೈಸಲು ಕ್ರಮ ಕೈಗೊಂಡರು. ಸರ್ಕಾರ ವಶಪಡಿಸಿಕೊಂಡಿದ್ದ ಜಮೀನುಗಳ ಪೈಕಿ ಮೂರನೆಯವರಿಗೆ ಮಾರಾಟವಾಗದೇ ಇದ್ದ ಜಮೀನುಗಳನ್ನು ಹಿಂದಿನ ಮಾಲೀಕ ರೈತರಿಗೆ ಹಿಂತಿರುಗಿಸುವುದು ಕಷ್ಟವಾಗಲಿಲ್ಲ. ಆದರೆ ಮೂರನೆ ವ್ಯಕ್ತಿಗಳಿಗೆ ಮಾರಾಟ ವಾಗಿದ್ದ ಜಮೀನುಗಳನ್ನು ಹಿಂತಿರುಗಿಸುವುದು ಕಷ್ಟವಾಗಿತ್ತು. ಬ್ರಿಟಿಷ್ ಸರ್ಕಾರಿ ಅಧಿಕಾರಿಗಳು ಕೆಲವು ಮೂರನೆ ವ್ಯಕ್ತಿಗಳಿಗೆ ನಾಮಕಾವಸ್ತೆ ಕಡಿಮೆ ದರದಲ್ಲಿ ಜಮೀನುಗಳನ್ನು ಕೊಂಡುಕೊಳ್ಳುವಂತೆ ಪುಸಲಾಯಿಸಿ ಮಾರಿದ್ದರು. ಮುಂದೆ ಆ ಜಮೀನುಗಳನ್ನು ಅವರಿಂದ ವಾಪಸ್ಸು ತೆಗೆದುಕೊಳ್ಳುವುದಿಲ್ಲ ಎಂಬ ಆಶ್ವಾಸನೆ ಯನ್ನು ಸಹ ನೀಡಿದ್ದರು. ಅದರಿಂದ ಆ ಅಧಿಕಾರಿಗಳು ಸರ್ಕಾರದ ಆಜ್ಞೆಯನ್ನು ಜಾರಿಗೊಳಿಸದೆ ಇದ್ದರು. ಸರ್ದಾರರು, ಶಾಸನ ಸಭೆಯಲ್ಲಿ ಮಸೂದೆಯನ್ನು ಅಂಗೀಕರಿಸಿ ಕಾನೂನು ಮಾಡಿ ಆ ಜಮೀನುಗಳನ್ನು ಸರ್ಕಾರವು ವಶಪಡಿಸಿಕೊಂಡು ರೈತರಿಗೆ ಹಿಂತಿರುಗಿಸುವಂತೆ ಮತ್ತು ಈಗ ಜಮೀನುಗಳನ್ನು ಕಳೆದುಕೊಂಡವರಿಗೆ ಶೇ. ೪ ಬಡ್ಡಿ ಸಮೇತ ಪರಿಹಾರ ಧನವನ್ನು ಸರ್ಕಾರವೇ ನೀಡುವಂತೆ, ಮಾಡಿದರು. ಹೀಗೆ ರೈತರಿಗೆ ಕಾಂಗ್ರೆಸ್ಸು ನೀಡಿದ್ದ ಆಶ್ವಾಸನೆ ನೆರವೇರಿತು.[೧೧೨]

೧೨.೯ ಸರ್ದಾರರ ಕಾರ್ಯ ವಿಧಾನ

ಹೊರ್ಮುಸ್ಜಿ ಪೆಟಿಟ್‌ರವರ ತಮ್ಮ ಫರೆದೂನ್ಜಿ ಪೆಟಿಟ್, ಅಡೆನ್‌ವಾಲಾ ಮತ್ತು ಸರ್ ಜಮ್ಷಡ್ಜಿ ಜೀಜಿಭಾಯ್ ಸೇರಿ ಪಾಲುಗಾರಿಕೆಯಲ್ಲಿ ಒಂದು ವಿದ್ಯುಚ್ಛಕ್ತಿ ಉತ್ಪಾದನಾ ಘಟಕವನ್ನು ಮಹಾಬಲೇಶ್ವರದಲ್ಲಿ ನಡೆಸುತ್ತಿದ್ದರು. ಅದಕ್ಕೆ ಅವರು ಬೊಂಬಾಯಿ ಸರ್ಕಾರದಿಂದ ಪರವಾನಗಿಯನ್ನು ಪಡೆದಿದ್ದರು.

ಆದರೆ ೧೯೩೭ರಲ್ಲಿ ಪ್ರಥಮ ಬಾರಿಗೆ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರವು ಅವರ ಲೈಸೆನ್ಸನ್ನು ರದ್ದುಮಾಡಿತು. ಅಷ್ಟೇ ಅಲ್ಲ, ಅವರ ಕೇಬಲ್ ಮತ್ತು ಕಂಬಗಳನ್ನು ಮಹಾಬಲೇಶ್ವರದಿಂದ ಸಾಗಿಸಿತು. ಅದರಿಂದ ಪಾಲುದಾರರಿಗೆ ಬಹಳ ಅಸಮಾಧಾನ ಉಂಟಾಯಿತು.

ಅಡೆನ್‌ವಾಲ ಹೇಳಿದ, "ಸರ್ ಜಮ್‌ಷಡ್ಜಿ, ಈ ವಿಷಯವನ್ನು ಹಗುರವಾಗಿ ತೆಗೆದುಕೊಳ್ಳುವ ಹಾಗಿಲ್ಲ. ಬೊಂಬಾಯಿಯ ಒಂದಿಬ್ಬರು ಮಂತ್ರಿಗಳು ವಿಚಿತ್ರವಾಗಿ ವರ್ತಿಸುತ್ತಿದ್ದಾರೆ."

ಫರದೂನ್ಜಿ ಹೇಳಿದ, "ಅವರು ನಮ್ಮ ಪವರ್‌ಹೌಸ್‌ನ ಲೈಸೆನ್ಸನ್ನು ರದ್ದುಪಡಿಸಿದ್ದಾರೆ. ಅದು ಅನ್ಯಾಯ, ಅನುಭವವಿಲ್ಲದ ಹೊಸ ಮಂತ್ರಿಗಳಿಂದ ಅಂತಹ ಅನ್ಯಾಯಗಳು ಆಗುತ್ತವೆ. ಆ ರೀತಿಯಲ್ಲೇ ಅವರು ಕಲಿಯುವುದು. ಆದರೆ ನಮ್ಮ ಕೇಬಲ್ ಮತ್ತು ಕಂಬಗಳನ್ನು ಸಾಗಿಸಿದ್ದಾರೆ. ಅಂತಹ ಆದೇಶವನ್ನು ಯಾವ ಮೂರ್ಖನೂ ನೀಡುವುದಿಲ್ಲ. ಅಂತಹ ಆದೇಶವನ್ನು ನೀಡಿರುವುದು ಖಂಡಿತವಾಗಿಯೂ ವೈಯುಕ್ತಿಕ ಸೇಡಿನಿಂದ." ಫರೆದೂನ್ಜಿ ಮುಖದಲ್ಲಿ ಬೇಸರ ತುಂಬಿತ್ತು.

ಅವರೆಲ್ಲ ಭಾರಿ ಶ್ರೀಮಂತರು. ಅವರಾರೂ ಆ ಪವರ್‌ಹೌಸ್‌ನ ಆದಾಯದ ಮೇಲೆ ಅವಲಂಬಿತವಾಗಿರಲಿಲ್ಲ. ಆದರೆ, ತಮ್ಮವರೇ ಲೈಸೆನ್ಸನ್ನು ರದ್ದು ಪಡಿಸಿದ್ದಲ್ಲದೆ, ಕೇಬಲ್ ಮತ್ತು ಕಂಬಗಳನ್ನು ಸಾಗಿಸಲು ಆದೇಶ ನೀಡಿದ್ದು ಅವರಿಗೆ ನೋವುಂಟು ಮಾಡಿತ್ತು. ಏಕೆಂದರೆ ಲೈಸೆನ್ಸ್ ರದ್ದಾದಾಗ ಹೊಸ ಲೈಸೆನ್ಸ್‌ದಾರ ಹಳಬನಿಂದ ಎಲ್ಲಾ ವಸ್ತುಗಳನ್ನು ಖರೀದಿಸುವುದು ಹಿಂದಿನಿಂದಲೂ ಬಂದ ಸಂಪ್ರದಾಯವಾಗಿತ್ತು.

"ಆದರೆ ವೈಯುಕ್ತಿಕ ಸೇಡಿಗೆ ಏನು ಕಾರಣ ಇರಬಹುದು? ನಾವು ಯಾವ ಮಂತ್ರಿಯ ಅಪ್ಪನನ್ನೂ ಕೊಂದಿಲ್ಲ." ತನ್ನ ಕೋಪವನ್ನು ಹಾಸ್ಯದಲ್ಲಿ ಮುಚ್ಚಿಡುತ್ತಾ ಹೇಳಿದ ಸರ್ ಜಮ್‌ಷೆಡ್ಜಿ.

"ಕಾರಣ ಸ್ಪಷ್ಟವಾಗಿದೆ." ಅನ್ನುತ್ತ ದಿನ್‌ಷಾಜಿ ಮಾತಿಗೆ ಸೇರಿದ. ದಿನ್‌ಷಾಜಿ ಹೊರ್ಮುಸ್ಜಿ ಪೆಟಿಟ್‌ರವರ ಮಗ.

"ನಿನಗೆ ಗೊತ್ತಿದ್ದ ಮೇಲೆ ಅದನ್ನು ಹೊರಗೆಡಹು."

"ನನಗೆ ಅವನ ಹೆಸರನ್ನು ಹೇಳಲು ಇಷ್ಟವಿಲ್ಲ." ಷಾಜಿ ಹೇಳಿದ.

ದಿನ್‌ಷಾಜಿ ಹೇಳಿದ ಕಾರಣ ಹೀಗಿತ್ತು:

ಹೊರ್ಮುಸ್ಜಿ ಪೆಟಿಟ್ ತನ್ನ ಗಿರಣಿಯಿಂದ ಹಣವನ್ನು ಲಪಟಾಯಿಸಿದ್ದಕ್ಕಾಗಿ ಒಬ್ಬ ಪಾರ್ಸಿಯನ್ನು ವಜಾ ಮಾಡಿದ್ದರು. ಆ ಪಾರ್ಸಿ ಇವರ ಪಾಲುಗಾರಿಕೆಯ ಮೇಲೆ ಅಪಪ್ರಚಾರ ಮಾಡುತ್ತಿದ್ದ. ಆ ಸಮಯದಲ್ಲಿ ಜಮ್‌ಷಡ್ಜಿ ಅನ್ನುವ ಬೇರೆ ಒಬ್ಬ ವ್ಯಕ್ತಿ ಸಾರ್ವಜನಿಕ ಭಾಷಣ ಮಾಡಿ ಸರ್ಕಾರದ ಪಾನನಿರೋಧ ನೀತಿಯ ವಿರುದ್ಧ ಜನರನ್ನು ಪ್ರಚೋದಿಸುತ್ತಿದ್ದ. ಅದು ಪತ್ರಿಕೆಗಳಲ್ಲೂ ಪ್ರಕಟವಾಗುತ್ತಿತ್ತು. ಹಾಗೆ ಪ್ರಚೋದಿಸುತ್ತಿರುವುದು ಈ ಪಾಲುಗಾರರಲ್ಲಿ ಒಬ್ಬರಾದ ಸರ್ ಜೆಮ್‌ಷೆಡ್ಜಿ ಎಂದು ಆ ವಜಾ ಮಾಡಲ್ಪಟ್ಟ ಪಾರ್ಸಿ ಸಂಬಂಧಪಟ್ಟ ಮಂತ್ರಿಗೆ ಹೇಳಿದ.

ಅದನ್ನು ನಂಬಿದ ಮಂತ್ರಿ ಅವರ ಲೈಸೆನ್ಸನ್ನು ರದ್ದುಪಡಿಸಿ, ಆ ಪಾರ್ಸಿಗೇ ಹೊಸ ಲೈಸೆನ್ಸ್ ನೀಡಿದ್ದ.

ಈಗ ಅವರಿಗೆ ಸಮಸ್ಯೆಯ ಕಾರಣ ಅರಿವಾಯಿತು. ಅಡೆನ್‌ವಾಲಾ ಮಹಾತ್ಮ ಗಾಂಧೀಜಿಯ ಪಟ್ಟ ಶಿಷ್ಯ. ಅವನಿಗೆ ಸರ್ ಜಮ್‌ಷಡ್ಜಿ ಹೇಳಿದ, "ಮಹಾತ್ಮ ಗಾಂಧೀಜಿಗೆ ವಿಷಯವನ್ನು ತಿಳಿಸಿ. ಅನ್ಯಾಯವನ್ನು ಸರಿಪಡಿಸಲು ಸಹಾಯವನ್ನು ಕೇಳು." ಅಡೆನ್‌ವಾಲ ಕಟುವಾಗಿ ನಿರಾಕರಿಸಿದ. ಅವನೆಂದ, "ನಾನು ಮಹಾತ್ಮನ ಅನುಯಾಯಿಯಾಗಿರುವುದು ಆತ್ಮ ಸಂತೋಷಕ್ಕಾಗಿ. ಸ್ವಾರ್ಥ ಹಿತಾಸಕ್ತಿಗಾಗಿ ನಾನು ಅವರ ಬಳಿಗೆ ಎಂದೂ ಹೋಗುವುದಿಲ್ಲ, ನಮ್ಮ ಪವರ್‌ಹೌಸ್ ಹೋದರೆ ಹೋಗಲಿ."

ಆ ವೇಳೆಗೆ ಕನ್‌ವರ್ಜಿ ಭಾಯ್ ಮೆಹ್ತ ಅಲ್ಲಿಗೆ ಬಂದ. ಅವನೊಬ್ಬ ಬಾರ್ಡೋಲಿ ಸತ್ಯಾಗ್ರಹದ ವೀರ. ಸರ್ದಾರ್ ಪಟೇಲರಿಗೆ ಬಹಳ ಹತ್ತಿರವಾದವನು. ಅವನಿಗೆ ಅವರು ವಿಷಯವನ್ನು ತಿಳಿಸಿ, ಕಾಂಗ್ರೆಸ್ ಆಡಳಿತವನ್ನು ಅಪಹಾಸ್ಯ ಮಾಡಿದರು. ಸರ್ದಾರ್ ಪಟೇಲರನ್ನು ಭೇಟಿ ಮಾಡಿ ವಿಷಯವನ್ನು ತಿಳಿಸುವಂತೆ ಸಲಹೆ ನೀಡಿದ ಕನ್‌ವರ್ಜಿ ಭಾಯ್. ಆದರೆ ಸರ್ ಜಮ್‌ಷಡ್ಜಿ ಒಪ್ಪಲಿಲ್ಲ. ಸರ್ದಾರರು ಬಹಳ ಬಿಗಿ, ರಷ್ಯದ ಮಾಲಟೋವ್‌ನಂತೆ, ಆ ಉಕ್ಕಿನ ಮನುಷ್ಯನನ್ನು ಎದುರಿಸಿದರೆ ತಮಗೇ ನೋವಾಗುವುದು ಖಚಿತ. ಅದರಿಂದ ಮಹಾಬಲೇಶ್ವರ ಪವರ್ ಹೌಸ್ ಹೋದರೆ ಹೋಗಲಿ, ಮತ್ತಷ್ಟು ಅವಮಾನಕ್ಕೆ ಗುರಿಯಾಗುವುದು ಬೇಡ ಎನ್ನುವುದು – ಸರ್ ಜಮ್‌ಷಡ್ಜಿಯ ಅಭಿಮತ. ಕನ್‌ವರ್ಜಿ ಭಾಯ್ ಹೇಳಿದ, "ಸರ್ದಾರ್ ಪಟೇಲ್ ಹೊರ ನೋಟಕ್ಕೆ ಉಕ್ಕಿನ ಮನುಷ್ಯ, ಆದರೆ ಅವರ ಹೃದಯ ಹೂವಿನಂತೆ ಮೃದು." ಆದರೂ ಸರ್ ಜಮ್‌ಷಡ್ಜಿ ಸರ್ದಾರರನ್ನು ಭೇಟಿ ಮಾಡಲು ಒಪ್ಪಲಿಲ್ಲ. ಅವರ ಹಿಂಜರಿಕೆಗೆ ಮತ್ತೊಂದು ಕಾರಣವಿತ್ತು. ಅವರು ಹೇಳಿದರು, "ಬ್ರಿಟಿಷ್ ಸರ್ಕಾರ ನನಗೆ 'ಸರ್' ಬಿರುದನ್ನು ನೀಡಿದೆ. ಅಂತಹವರನ್ನು ಸರ್ದಾರರು ದ್ವೇಷಿಸುತ್ತಾರೆ. ಅದರಿಂದ ನಾನು ಅವರ ಭೇಟಿಗೆ ಹೋಗುವುದಿಲ್ಲ." "ನಮ್ಮ ದೇಶವನ್ನು ಆಳುತ್ತಿರುವ ವಿದೇಶಿ ಸರ್ಕಾರ ನೀಡಿದ ಅಂತಹ ಬಿರುದುಗಳಿಗೆ ಸರ್ದಾರರ ತಿರಸ್ಕಾರವಿದೆ. ಹಾಗಂದಾಕ್ಷಣ ಅಂತಹ ಬಿರುದು ಪಡೆದವರನ್ನೆಲ್ಲಾ ಅವರು ದ್ವೇಷಿಸುವುದಿಲ್ಲ. ಹಾಗೆ ಮಾಡಿದ್ದರೆ, ಇಂತಹ ದೊಡ್ಡ ದೇಶದ ನಾಯಕರಾಗಲು ಸಾಧ್ಯವಿರಲಿಲ್ಲ," ಎಂದು ಕನ್ವರ್ಜಿ ಸಮಜಾಯಿಸಿ ನೀಡಿದರು. ಆದರೂ ಸರ್ ಜಮ್‌ಷಡ್ಜಿ ಸರ್ದಾರರ ಭೇಟಿಗೆ ಒಪ್ಪಲಿಲ್ಲ.

ಅದರಿಂದ, ಮಹಾಬಲೇಶ್ವರ ಪವರ್‌ಹೌಸ್‌ಗೆ ಸಂಬಂಧಪಟ್ಟ ದಾಖಲೆಗಳನ್ನೆಲ್ಲ

ಅವರಿಂದ ಪಡೆದುಕೊಂಡು ಕನ್‌ವರ್ಜಿಭಾಯ್ ತಾವೇ ಸರ್ದಾರರನ್ನು ಭೇಟಿ ಮಾಡಿ ಆಗಿರುವ ತಪ್ಪು ತೀರ್ಮಾನವನ್ನು ವಿವರಿಸಿದರು. ಸರ್ದಾರರು ಆ ವಿವರಣೆಯನ್ನು ತಾಳ್ಮೆಯಿಂದ ಕೇಳಿ, "ಒಮ್ಮೊಮ್ಮೆ ಇಂತಹ ಪ್ರಮಾದಗಳು ಆಗುತ್ತವೆ," ಎಂದರು. ತಕ್ಷಣವೇ ಸಂಬಂಧಪಟ್ಟ ಮಂತ್ರಿ "ನೂರಿ" ಒಡನೆ ದೂರವಾಣಿಯ ಮೂಲಕ ಮಾತನಾಡಿದರು. ಕನ್‌ವರ್ಜಿಗೆ ಹೇಳಿದರು, "ಈ ದಾಖಲೆಗಳೆಲ್ಲ ಇಲ್ಲೇ ಇರಲಿ, ನೀನು ನಾಳೆ ಸಂಜೆ ಬಾ."

ಮಾರನೆಯ ಸಂಜೆ ಕನ್‌ವರ್ಜಿ ಹೋದಾಗ, ಅವರು ಮಾತು ಆಡುವುದಕ್ಕೆ ಮೊದಲೇ ಸರ್ದಾರರು ಹೇಳಿದರು, "ನಾನು ಎಲ್ಲಾ ದಾಖಲೆಗಳನ್ನು ಓದಿದೆ. ಆ ಪಾರ್ಸಿಗಳ ಕೇಸು ಬಲವಾಗಿದೆ. ಅವರಿಗೆ ನ್ಯಾಯವನ್ನು ಒದಗಿಸಬೇಕು. ದಿನ್‌ಷಾಗೆ ಹೇಳು. ಮೂವರು ಪಾಲುದಾರರನ್ನು ಕರೆದುಕೊಂಡು ಬಂದು ನನ್ನನ್ನು ಭೇಟಿ ಮಾಡಲಿ."

ಕನ್‌ವರ್ಜಿಭಾಯ್ ಆ ಮೂವರಿಗೆ ಸರ್ದಾರರ ಸಂದೇಶವನ್ನು ತಿಳಿಸಿದರು. ಆಗಲೂ ಸಹ ಸರ್ ಜಮ್‌ಷಡ್ಜಿ ಸರ್ದಾರರನ್ನು ಭೇಟಿ ಮಾಡಲು ಹಿಂಜರಿದರು. ಕೊನೆಗೆ ಅವರ ಜೊತೆ ಕನ್‌ವರ್ಜಿಯೂ ಕೂಡ ಬಂದರೆ ತಾವು ಬರುವುದಾಗಿ ಒಪ್ಪಿದರು. ಅದರಂತೆ ಎಲ್ಲರೂ ಸರ್ದಾರರ ಮನೆಗೆ ಹೋಗಿ ಬಾಗಿಲು ತಟ್ಟಿದರು. ಸ್ವತಃ ಸರ್ದಾರರೇ ಬಾಗಿಲನ್ನು ತೆರೆದರು ಮತ್ತು ಗೌರವದಿಂದ ಅವರನ್ನು ಸ್ವಾಗತಿಸಿ ಆಸನಗಳಲ್ಲಿ ಕುಳ್ಳಿರಿಸಿದರು. ನಂತರ ಹೇಳಿದರು, "ಕನ್‌ವರ್ಜಿಭಾಯ್‌ಯು ನಿಮಗೆ ಆಗಿರುವ ಅನ್ಯಾಯವನ್ನು ನನ್ನ ಗಮನಕ್ಕೆ ತಂದನು. ಅದು ಒಳ್ಳೆಯದಾಯಿತು. ನಮ್ಮ ಮಂತ್ರಿಗಳು ತಪ್ಪು ಎಸಗಿದರೆ ಅದನ್ನು ಸರಿಪಡಿಸಲು ನಾವು ಸಿದ್ಧರಿದ್ದೇವೆ. ಯಾವ ವ್ಯಕ್ತಿಯೂ ತಪ್ಪು ಮಾಡಬಹುದು. ಆದರೆ ಅದನ್ನು ಸರಿಪಡಿಸಲು ಸಿದ್ಧವಾಗಿರುವುದು ನಮ್ಮ ಪ್ರಜಾಪ್ರಭುತ್ವದ ವಿಶೇಷ ಗುಣ."

"ಅಷ್ಟು ನಡೆದರೆ ತಾವು ಸ್ವಾತಂತ್ರ್ಯವನ್ನು ಪಡೆದೆವೆಂದು ಜನ ಭಾವಿಸುತ್ತಾರೆ" ಎಂದರು ಅಡೆನ್‌ವಾಲಾ.

"ಸರ್ದಾರ್ ಸಾಹೇಬ್, ನಾವು ಕೇಳಿದ್ದಕ್ಕಿಂತ ಭಿನ್ನವಾದುದನ್ನು ಇಲ್ಲಿ ನೋಡುತ್ತಿದ್ದೇವೆ" ಎಂದರು ಸರ್ ಜಮ್‌ಷಡ್ಜಿ.

"ನೀವು ಏನು ಕೇಳಿದ್ದಿರಿ?" ನಗುತ್ತಾ ಕೇಳಿದರು ಸರ್ದಾರ್.

"ನೀವು ಬಹಳ ಕಠಿಣ. ಯಾರ ಮಾತನ್ನು ಆಲಿಸುವುದಿಲ್ಲ ಎಂದು."

"ಸರ್ ಜಮ್‌ಷಡ್ಜಿ, ಭಾರತದಂತಹ ವೈವಿಧ್ಯತೆಯ ಮತ್ತು ವಿಶಾಲ ದೇಶವನ್ನು ಸ್ವಾತಂತ್ರ್ಯದೆಡೆಗೆ ಮುನ್ನೆಡೆಸಬೇಕಾದರೆ, ಒಬ್ಬ ವ್ಯಕ್ತಿ ಮೃದುವಾಗಿರಲು ಅದೆಂತು ಸಾಧ್ಯ? ನಾನು ಖಂಡಿತವಾಗಿಯೂ ಕಠಿಣ, ಅನ್ಯಾಯದ ವಿರುದ್ಧ ಹೋರಾಡುವಾಗ, ಆದರೆ ಒಬ್ಬ ಜನ ಸೇವಕ ಜನರ ಮಾತನ್ನು ಆಲಿಸುವುದನ್ನು ನಿಲ್ಲಿಸಿದರೆ ಅವನು ಶೀಘ್ರದಲ್ಲಿ ಸರ್ವಾಧಿಕಾರಿಯಾಗುತ್ತಾನೆ. ನಮ್ಮ ದೇಶದ ಅದೃಷ್ಟಕ್ಕೆ, ನಮ್ಮ ಮಹಾ ದಂಡನಾಯಕ ಗಾಂಧೀಜಿ ಮೊದಲು 'ಜನ ಸೇವಕ' ನಂತರ ಮಾತ್ರ 'ಜನ ನಾಯಕ.'

"ಮಹಾತ್ಮಾಜಿ ನಮ್ಮ ಭಾರತಕ್ಕಷ್ಟೇ ಅಲ್ಲ ಇಡೀ ಪ್ರಪಂಚದ ನಾಯಕ" ಎಂದರು ಅಡೆನ್‌ವಾಲಾ.

"ಸ್ವತಃ ಗಾಂಧೀಜಿಯೆ ನನ್ನನ್ನು ಸರ್ದಾರರನ್ನಾಗಿ ಮಾಡಿದ್ದಾರೆ. ನಾನು ನಿಮ್ಮನ್ನು ಈ ದಿನ ಏಕೆ ಕರೆಸಿಕೊಂಡೆ ಎಂಬುದು ಗೊತ್ತೆ?"

"ಇಲ್ಲ"

"ಮಹಾಬಲೇಶ್ವರ ಪವರ್‌ಹೌಸ್‌ನ ಸಂಬಂಧವಾಗಿ ನೀವು ಅನುಭವಿಸಬೇಕಾಗಿ ಬಂದ ತೊಂದರೆಗಳಿಗೆ ಕ್ಷಮೆ ಕೋರುವುದಕ್ಕೆ."

"ನೀವೇಕೆ ಕ್ಷಮೆ ಕೋರಬೇಕು?" ಎಂದರು ಸರ್ ಜಮ್‌ಷೆಡ್ಜಿ ಆತುರವಾಗಿ, ತಕ್ಷಣ.

"ಕಾಂಗ್ರೆಸ್ ಮಂತ್ರಿ ಮಂಡಲ ಒಳ್ಳೆಯ ಕೆಲಸ ಮಾಡಿದರೆ ಅದರ ಗೌರವವನ್ನು ನಾವು ಪಡೆಯುವುದಿಲ್ಲವೆ? ಅದೇ ತರಹ, ಅವರ ಪ್ರಮಾದಗಳಿಗೂ ಸಹ ನಾಯಕರಾದ ನಾವು ಕ್ಷಮೆ ಕೋರಲು ಸಿದ್ಧವಾಗಿರಬೇಕು. ಕಾಂಗ್ರೆಸ್ ಆಡಳಿತದಲ್ಲಿ ಏನಾದರೂ ಅನ್ಯಾಯ ನಡೆದರೆ ದೂರು ಸಲ್ಲಿಸುವ ಹಕ್ಕು ಎಲ್ಲರಿಗೂ ಇದೆ ಎಂಬುದನ್ನು ನಿಮ್ಮ ಮೂಲಕ ಇಡೀ ಜನತೆಗೆ ಆಶ್ವಾಸನೆ ನೀಡಲು ಬಯಸುತ್ತೇನೆ. ಗಾಂಧೀಜಿಯಿಂದ ತಯಾರಾದ ನಾಯಕರು ಜನರ ನ್ಯಾಯವಾದ ದೂರುಗಳನ್ನು ಪರಿಹರಿಸಲು ಸಿದ್ಧವಾಗಿರಬೇಕು. ನಾವು ಸ್ವರಾಜ್ಯವನ್ನು ರಾಮರಾಜ್ಯ ಎಂದು ಕರೆದಾಗ ಅದೊಂದು ಬರೇ ಅಲಂಕಾರದ ಪದವಲ್ಲ. ಆಡಳಿತಗಾರರು ಅಂದರೆ ಜನಸೇವಕರು, ಶ್ರೀಮಂತರು ಮತ್ತು ಬಡವರ ಅಹವಾಲುಗಳನ್ನು ಆಲಿಸುವಂತಹ ನಿಜವಾದ ರಾಮರಾಜ್ಯವನ್ನು ಸ್ಥಾಪಿಸುವುದು ನಮ್ಮ ಗುರಿ."

"ನಿಮ್ಮ ಈ ಭಾವನೆಗಳಿಗೆ ನಾವು ಕೃತಜ್ಞರಾಗಿದ್ದೇವೆ," ಅಂದರು ಫರದೂನ್ಜಿ ಪೆಟಿಟ್.

"ಬರೆ ವಂದನೆಗಳನ್ನು ಸಲ್ಲಿಸಿದರೆ ಸಾಲದು, ನೀವೆಲ್ಲ ಬುದ್ಧಿವಂತ ಮತ್ತು ಸಾಹಸಿ ಮನೋಭಾವದ ಜನ. ನೀವು ನಮ್ಮನ್ನು ಬೆಂಬಲಿಸಬೇಕು. ಬ್ರಿಟಿಷರು ನಮ್ಮ ದೇಶದಿಂದ ಶೀಘ್ರದಲ್ಲೇ ಹೊರಟು ಹೋಗುತ್ತಾರೆ, ಇದು ಖಂಡಿತ. ಸ್ವಾತಂತ್ರ್ಯಕ್ಕಾಗಿ ಹೋರಾಡಿದವರು ತಮಗೆ ಸಾಧ್ಯವಾದುದನ್ನು ಮಾಡಿದ್ದಾರೆ. ಮುಂದೆ ಇನ್ನೂ ಮಾಡುತ್ತಾರೆ. ಆದರೆ ಸ್ವಾತಂತ್ರ್ಯ ಬಂದ ಮೇಲೆ ಒಳ್ಳೆಯ ರಾಷ್ಟ್ರವನ್ನು ನಿರ್ಮಿಸಲು ನಮ್ಮ ಸಮಾಜದ ಪ್ರತಿ ವರ್ಗದವರೂ ಶ್ರಮಿಸಬೇಕು. ಭಾರತವನ್ನು ಪ್ರಪಂಚದಲ್ಲೇ ಶಿಖರಪ್ರಾಯ ರಾಷ್ಟ್ರವನ್ನಾಗಿ ಮಾಡುವುದು ನಮ್ಮ ಬಯಕೆ. ನಿಮ್ಮೆಲ್ಲರ ಸಹಾಯ ಮತ್ತು ಸಹಕಾರವಿಲ್ಲದೆ ಅದೆಂತು ಸಾಧ್ಯ? ಈ ರಾಷ್ಟ್ರವನ್ನು ಶ್ರೇಷ್ಠ ರಾಷ್ಟ್ರವನ್ನಾಗಿ ಮಾಡಲು ನಿಮ್ಮ ಬೆಂಬಲವನ್ನು ನಾನು ಕೋರುತ್ತೇನೆ."

"ಸರ್ದಾರ್ ಸಾಹೇಬ್! ನಮಗೆ ಏನು ಕೌಶಲ ಮತ್ತು ಶಕ್ತಿ ಇದೆಯೊ ಅದೆಲ್ಲವನ್ನು ನಿಮ್ಮ ಪದತಲದಲ್ಲಿ ಅರ್ಪಿಸುತ್ತೇವೆ," ಎಂದರು ಸರ್ ಜಮ್‌ಷಡ್ಜಿ ಅತಿ ಉತ್ಸಾಹದಿಂದ. ಸರ್ದಾರರನ್ನು ಕಂಡರೆ ಅವರಿಗಿದ್ದ ಭಯ ಹಾರಿಹೋಗಿತ್ತು. ಅವರ ಬಗೆಗೆ ಪೂಜ್ಯ ಭಾವನೆ ಬಂದಿತ್ತು. ಅವರುಗಳು ಮತ್ತು ಸರ್ದಾರರು ಸುಮಾರು ಒಂದು ಘಂಟೆ ಕಾಲ ರಾಷ್ಟ್ರ ನಿರ್ಮಾಣದ ಬಗೆಗೆ ಚರ್ಚಿಸಿದರು. ನಂತರ ಹೊರಟ ಅವರನ್ನು ಬೀಳ್ಕೊಡುತ್ತ ಸರ್ದಾರರು ಹೇಳಿದರು, "ನಿಮ್ಮ ಪವರ್‌ಹೌಸ್ ಬಗ್ಗೆ ಸ್ವಲ್ಪವೂ ಚಿಂತಿಸಬೇಡಿ. ನಿಮ್ಮ ಲೈಸೆನ್ಸನ್ನು ಮುಂದುವರಿಸಿದ ಆದೇಶ ನಿಮ್ಮ ಮನೆಗೇ ಬರುತ್ತದೆ."

ಅಂಜುತ್ತ ಬಂದ ಪಾರ್ಸಿಗಳು ನಗುತ್ತಾ ತೆರಳಿದರು.[೧೧೩]

೧೨.೧೦ ಹರಿಹರಪುರ ಕಾಂಗ್ರೆಸ್ ಅಧಿವೇಶನ

ಈ ಮಧ್ಯೆ ಕಾಂಗ್ರೆಸ್ಸಿನ ೫೧ನೆ ವಾರ್ಷಿಕ ಅಧಿವೇಶನವು ೧೯೩೮ರ ಫೆಬ್ರುವರಿಯಲ್ಲಿ ಗುಜರಾತಿನ ಹರಿಹರಪುರದಲ್ಲಿ ನಡೆಯಿತು. ನೇತಾಜಿ ಸುಭಾಷ್ ಚಂದ್ರ ಬೋಸ್ ಅದರ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು. ಆ ಅಧಿವೇಶನದ ಏರ್ಪಾಟಿನ ಸಂಪೂರ್ಣ ಜವಾಬ್ದಾರಿಯು ಸರ್ದಾರರದಾಗಿತ್ತು. ಹರಿಹರಪುರವು ಬಾರ್ದೋಲಿ ತಾಲ್ಲೂಕಿನಲ್ಲಿ ತಪತಿ ನದಿಯ ದಡದಲ್ಲಿ ಇರುವ ಒಂದು ಹಳ್ಳಿ. ಗಾಂಧೀಜಿಯವರು ಕಾಂಗ್ರೆಸ್ಸಿನ ಅಧಿವೇಶನಗಳನ್ನು ಹಳ್ಳಿಗಳಲ್ಲಿ ನಡೆಸಬೇಕೆಂದು ಹೇಳಿದ್ದರಿಂದ ೫೦ನೆ ಕಾಂಗ್ರೆಸ್ ಅಧಿವೇಶನವನ್ನು ಮಹಾರಾಷ್ಟ್ರ ಪ್ರದೇಶದ ಫೈಜಾಪುರ್‌ನಲ್ಲಿ ನಡೆಸಲಾಗಿತ್ತು. ಈಗ ೫೧ನೇ ಅಧಿವೇಶನಕ್ಕೆ ಪಟೇಲರು

ಗುಜರಾತ್‌ನ ಹಳ್ಳಿ ಹರಿಹರಪುರವನ್ನು ಆರಿಸಿದ್ದರು. ಅಲ್ಲಿ ಹಿಂದೂ ಮತ್ತು ಮುಸ್ಲಿಂ ನಿವಾಸಿಗಳು ನೀಡಿದ ಸುಮಾರು ೫೦೦ ಎಕರೆ ವಿಶಾಲ ಪ್ರದೇಶದಲ್ಲಿ ಅಧಿವೇಶನವನ್ನು ಏರ್ಪಡಿಸಿದ್ದರು. ಅದಕ್ಕಾಗಿ ಟ್ರಾಕ್ಟರ್‌ಗಳಿಂದ ನೆಲಸಮ ಮಾಡಿಸಿದರು. ರಸ್ತೆಗಳನ್ನು ನಿರ್ಮಿಸಿದರು ಮತ್ತು ಒಂದು ದೋಣಿಗಳ ಸೇತುವೆಯನ್ನು ಏರ್ಪಡಿಸಿದರು. ಸಾಂದ್ರ ಕ್ಷೀರ ಮತ್ತು ತುಪ್ಪದ ತಯಾರಿಕೆಗಾಗಿ ಅಧಿವೇಶನಕ್ಕೆ ಒಂದು ತಿಂಗಳ ಮುಂಚೆಯೆ ಸುಮಾರು ೫೦೦ ಕರೆಯುವ ಹಸುಗಳನ್ನು ಅಧಿವೇಶನದ ಸ್ಥಳಕ್ಕೆ ಕರೆತರಲಾಯಿತು. ಒಂದು ನೀರು ಸರಬರಾಜು ಕೇಂದ್ರ, ಮುಕ್ತ ಶೌಚಾಲಯ, ಆಸ್ಪತ್ರೆ, ಅಂಚೆ ಮತ್ತು ತಂತಿ ಕಛೇರಿ, ಬ್ಯಾಂಕು, ದೂರವಾಣಿ ವಿನಿಮಯ ಕೇಂದ್ರ ಮತ್ತು ಅಗ್ನಿಶಾಮಕ ದಳ ಅಲ್ಲಿ ಸ್ಥಾಪಿತವಾದುವು. ಒಂದು ಉದ್ಯಾನ ವನವೂ ತಲೆ ಎತ್ತಿತು. ಪಟೇಲರು ತಮ್ಮ ಅಣ್ಣ ವಿಠ್ಠಲ್‌ಭಾಯ್ ಪಟೇಲರ ನೆನಪಿನಲ್ಲಿ ಆ ತಾತ್ಕಾಲಿಕ ನಗರಕ್ಕೆ 'ವಿಠಲ್ ನಗರ' ಎಂದು ಹೆಸರು ಕೊಟ್ಟರು. ಶಾಂತಿನಿಕೇತನದಿಂದ ಪ್ರಸಿದ್ಧ ಚಿತ್ರಕಾರ ನಂದಲಾಲ್ ಬೋಸ್ ಬಂದು ೨೦೦ ವರ್ಣಚಿತ್ರಗಳನ್ನು ರಚಿಸಿದರು. ಸ್ಥಳೀಯ ಚಿತ್ರಕಾರರಾದ ರವಿಶಂಕರ್ ರಾವಲ್ ಮತ್ತು ಕನೂ ದೇಸಾಯಿ ತಮ್ಮ ವರ್ಣ ಚಿತ್ರಗಳನ್ನು ನೀಡಿದರು. ಅಧ್ಯಕ್ಷ ಸುಭಾಷ್ ಚಂದ್ರ ಬೋಸ್‌ರ ಕೊಠಡಿಯನ್ನು ನದಿಯ ಕಡೆಗೆ ಇಳಿಜಾರಾಗಿರುವ ನೆಲದ ಮೇಲೆ ನಿರ್ಮಿಸಲಾಗಿತ್ತು. ಸುಭಾಷರು ತಮ್ಮ ಕೊಠಡಿಯಿಂದ ಹರಿಯುವ ನದಿಯ ಮತ್ತು ಅದರ ಆಚಿನ ಮರಗಳ ಸುಂದರ ದೃಶ್ಯವನ್ನು ವೀಕ್ಷಿಸಿ ಆನಂದಿಸಬಹುದಾಗಿತ್ತು. ಆ ಕೊಠಡಿಯ ಅಕ್ಕ ಪಕ್ಕದಲ್ಲಿ ಗಾಂಧೀಜಿ ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರಿಗೆ ಕೊಠಡಿಗಳನ್ನು ನಿರ್ಮಿಸಲಾಗಿತ್ತು. ೨೦೦೦ ಮಂದಿ ಸ್ವಯಂಸೇವಕರು ಅಡುಗೆ, ಊಟ ಮತ್ತು ನೈರ್ಮಲ್ಯದ ವ್ಯವಸ್ಥೆಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿದರು. ಈ ಎಲ್ಲವನ್ನು ಮೆಚ್ಚಿದ ಜವಹರ ಲಾಲ್ ನೆಹರು 'ಸರ್ದಾರರು ಒಂದು ಭವ್ಯವಾದ ಪಟ್ಟಣವನ್ನು ನಿರ್ಮಿಸಿದ್ದಾರೆ' ಎಂದರು.

ಅಧಿವೇಶನದಲ್ಲಿ ಸುಮಾರು ೨೫,೦೦೦ ಮಂದಿ ಭಾಗವಹಿಸಿದರು. ಎಲ್ಲರೂ ಖಾದಿ ದರಿಸಿದ್ದರು. ಅಧಿವೇಶನವು ಸುಲಲಿತವಾಗಿ ಸಾಮರಸ್ಯದಿಂದ ನಡೆಯಿತು. ಅಧಿವೇಶನದ ಅಧ್ಯಕ್ಷ ಸುಭಾಷ್ ಚಂದ್ರ ಬೋಸ್ ಮತ್ತು ಅಧಿವೇಶನದ ವ್ಯವಸ್ಥಾಪಕ ವಲ್ಲಭಭಾಯ್ ನಡುವೆ ಕಿರಿಕಿರಿ ಇರಲಿಲ್ಲ. ಅಧಿವೇಶನದ ತೀರ್ಮಾನಗಳೆಲ್ಲ ಸಾಮರಸ್ಯದಿಂದ ನಡೆದುವು. ದೇಶೀಯ ರಾಜ್ಯಗಳ ಅರಸರಿಗೆ ಅವರು ಬದುಕಿರುವ ಕಾಲಕ್ಕೆ ತಕ್ಕ ಹಾಗೆ ಅರ್ಥಮಾಡಿಕೊಂಡು ನಡೆಯಬೇಕೆಂದು ಸಲಹೆ ನೀಡಲಾಯಿತು. ಹಾಗೆಯೇ, ಕಾಂಗ್ರೆಸ್ಸಿನವರು ಅರಸರ ಪ್ರಜೆಗಳಿಗೆ ವೈಯುಕ್ತಿಕವಾಗಿ ಮಾರ್ಗದರ್ಶನ ನೀಡುವರೆಂದು ತಿಳಿಸಲಾಯಿತು. ಆದಾಗ್ಯೂ ಕಾಂಗ್ರೆಸ್ ಮತ್ತು ಅರಸರ ನಡುವೆ

ನೇರ ಘರ್ಷಣೆಯನ್ನು ತಡೆಗಟ್ಟಬೇಕೆಂಬ ಕಾಂಗ್ರೆಸ್‌ನ ನೀತಿಯನ್ನು ಮತ್ತೆ ಒಪ್ಪಲಾಯಿತು. ಹಾಗೆಯೆ, ಬ್ರಿಟಿಷ್ ಆಡಳಿತದ ಬಗೆಗೆ ಕಾಂಗ್ರೆಸ್ ನೀತಿಯನ್ನು ಮತ್ತೆ ಸ್ಪಷ್ಟಪಡಿಸಲಾಯಿತು. ಅಲ್ಲಿ ಮಾಡಿದ ಒಂದು ಭಾಷಣದಲ್ಲಿ ಸರ್ದಾರರು ಈ ರೀತಿ ನುಡಿದರು:

> ಕೆಲವು ಸುಧಾರಣೆಗಳನ್ನು ಕಾರ್ಯರೂಪಕ್ಕೆ ತರುವುದಕ್ಕಾಗಿ ಮಾತ್ರ ನಾವು ಅಧಿಕಾರವನ್ನು (ಮಂತ್ರಿ ಪದವಿಗಳನ್ನು) ಒಪ್ಪಿಕೊಂಡಿಲ್ಲ. ಅದಕ್ಕಿಂತಲೂ ಬಹಳ ದೊಡ್ಡದಾದುದರ ಕಡೆಗೆ, ಸಂಪೂರ್ಣ ಸ್ವಾತಂತ್ರ್ಯದ ಕಡೆಗೆ, ಚಲಿಸುವ ಉದ್ದೇಶದಿಂದ ನಾವು ಅಧಿಕಾರವನ್ನು ಒಪ್ಪಿಕೊಂಡಿದ್ದೇವೆ. ಆ ಗುರಿಯ ಕಡೆಗೆ ಚಲಿಸುವ ನಮ್ಮ ಶಕ್ತಿಯು ಅಧಿಕಾರವನ್ನು ಒಪ್ಪಿಕೊಳ್ಳುವುದರಿಂದ ಹೆಚ್ಚಾದರೆ ಒಳ್ಳೆಯದು. ಹಾಗಾಗದೆ ನಮ್ಮ ಗುರಿಗೆ ಧಕ್ಕೆ ಬಂದರೆ, ತಕ್ಷಣವೇ ನಾವು ಅಧಿಕಾರವನ್ನು ಬಿಡಬೇಕು.

ಅಧಿವೇಶನದಲ್ಲಿ ವಿರೋಧಿಗಳಿಂದ ಗಲಾಟೆ ಉಂಟಾಗದಂತೆ ಸರ್ದಾರರು ಎಚ್ಚರಿಕೆ ವಹಿಸಿದ್ದರು. ಅಧಿವೇಶನಕ್ಕೆ ಎರಡು ತಿಂಗಳು ಮುಂಚೆ ಅವರು ರಾಜೇಂದ್ರ ಪ್ರಸಾದರಿಗೆ ಹೀಗೆ ಬರೆದಿದ್ದರು, "ನಾರಿಮನ್‌ರವರು ಬಹಿರಂಗವಾಗಿ ಅಲ್ಲದಿದ್ದರೂ ಬೊಂಬಾಯಿಯಲ್ಲಿ ಕಮ್ಯುನಿಸ್ಟ್‌ರೊಡನೆ ಕೈ ಜೋಡಿಸಿದ್ದಾರೆ. ಸಮಾಜವಾದಿಗಳು ಸಜ್ಜುಗೊಳ್ಳುತ್ತಿದ್ದಾರೆ. ಪ್ರತಿನಿಧಿಗಳ ಆಯ್ಕೆಯಲ್ಲಿ ಗಾಂಧಿ ವಿರೋಧಿಗಳನ್ನು ದಯವಿಟ್ಟು ಕೈ ಬಿಡಿ."

ಅಧಿವೇಶನದಲ್ಲಿ ಯಾವ ಘರ್ಷಣೆಯೂ ನಡೆಯಲಿಲ್ಲ. ಅದಕ್ಕೆ ಸಂಬಂಧ ಪಡದ ಒಂದು ಅವಘಡ ನಡೆಯಿತು. ಭಾರಿ ಬಿರುಗಾಳಿ ಮತ್ತು ಮಳೆ ಬಂದರೂ ಹಾಕಿದ್ದ ಚಪ್ಪರ ಏನೂ ಆಗಲಿಲ್ಲ. ಅದಕ್ಕೆ ನೆಟ್ಟಿದ್ದ ಬೊಂಬುಗಳೂ ಭದ್ರವಾಗಿ ನಿಂತಿದ್ದುವು. ಆದರೆ ಒಬ್ಬ ಸ್ವಯಂಸೇವಕನು ತಪತಿ ನದಿಯಲ್ಲಿ ಮುಳುಗಿ ಅಸುನೀಗಿದನು. ಅದು ಪಟೇಲರಿಗೆ ಬಹಳ ನೋವನ್ನುಂಟುಮಾಡಿತು. ಆ ಸ್ವಯಂಸೇವಕನ ಅಂತ್ಯ ಸಂಸ್ಕಾರದಲ್ಲಿ ಪಂಡಿತ್ ನಾರಾಯಣ್ ಮೋರೇಶ್ವರ್ ಖರೆಯವರು ಹಾಡಿದ ಒಂದು ಭಜನೆ ಅವರ ಮನಸ್ಸನ್ನು ಮತ್ತೆ ಕಲಕಿತು. (ಆ ಭಜನೆಯ ಆರಂಭದ ಸಾಲು – 'ಮಂಗಲ್ ಮಂದಿರ್ ಖೋಲೊ' – ಪಟೇಲರ ಕೊನೆಯ ದಿನಗಳಲ್ಲಿ ಅವರ ತುಟಿಯ ಮೇಲಿತ್ತು ಎಂದು ರಾಜಮೋಹನ ಗಾಂಧಿ ಬರೆದಿದ್ದಾರೆ.)[೧೧೪]

೧೨.೧೧ ರಾಜ್ಯಗಳಲ್ಲಿ ಪ್ರಜಾಪ್ರಭುತ್ವದ ಸ್ಥಾಪನೆಗೆ ಯತ್ನ

ಕಾಂಗ್ರೆಸ್ಸಿನ ಹರಿಹರಪುರ ಅಧಿವೇಶನದ ನಂತರ ಅನೇಕ ರಾಜರಾಡಳಿತದ ರಾಜ್ಯಗಳಲ್ಲಿ ಪ್ರಜಾಮಂಡಲಗಳು (ಅಥವಾ ಪ್ರಜೆಗಳ ಸಂಘ) ಹುಟ್ಟುಕೊಂಡಿದ್ದುವು. ಅವುಗಳ ಕೆಲವು ಸಭೆಗಳಲ್ಲಿ ಸರ್ದಾರರು ಅಧ್ಯಕ್ಷತೆಯನ್ನು ವಹಿಸಿದ್ದರು. ರಾಜರುಗಳ ಒಡನೆ ಘರ್ಷಣೆಯನ್ನು ತಡೆಗಟ್ಟಬೇಕೆಂಬುದು ಕಾಂಗ್ರೆಸ್ಸಿನ ನೀತಿಯಾಗಿದ್ದರೂ ಸಹ ಪಟೇಲರು ರಾಜ – ಪ್ರಜಾ ತಿಕ್ಕಾಟದ ನಡುವೆ ತೆಪ್ಪಗಿರಲು ಸಾಧ್ಯವಾಗಿರಲಿಲ್ಲ.

ಆ ಸಮಯದಲ್ಲಿ ರಾಜ್‌ಕೋಟ್‌ನ ರಾಜ ಥಾಕೋರ್ ಧರ್ಮೇಂದ್ರ ಸಿಂಗ್ ದುರ್ಬಲನಾಗಿದ್ದ. ಆದರೆ ಅವನ ದಿವಾನ ವೀರವಲ ಪ್ರಬಲನಾಗಿದ್ದ. ರಾಜ ಥಾಕೋರನು ರಾಜ್ಯದ ಖಜಾನೆಯ ಹಣವನ್ನು ಖಾಲಿ ಮಾಡಿ ಅದನ್ನು ಭರ್ತಿ ಮಾಡಲು ತನ್ನ ದಿವಾನನನ್ನು ಕೋರಿದನು. ದಿವಾನ ವೀರವಲನು ಅಕ್ಕಿ, ಬೆಂಕಿ ಪೊಟ್ಟಣ, ಸಕ್ಕರೆ ಮತ್ತು ಸಿನಿಮಾ ಟಿಕೆಟ್ಟುಗಳ ಮಾರಾಟಕ್ಕೆ ಏಕಸ್ವಾಮ್ಯ ಅಥವಾ 'ಮನೊಪಲಿ'ಗಳನ್ನು ಮಾರಿ ಖಜಾನೆ ಭರ್ತಿ ಮಾಡಲು ಹೊರಟನು, ಸರ್ಕಾರಿ ಒಡೆತನದ ಬಟ್ಟೆ ಗಿರಣಿಗಳಲ್ಲಿ ಕಾರ್ಮಿಕರು ದಿನದಲ್ಲಿ ೧೪ ಘಂಟೆಗಳ ಕಾಲ ಕೆಲಸ ಮಾಡುವಂತೆ ಆದೇಶಿಸಿದನು, ಜೂಜಿನ ಏಕಸ್ವಾಮ್ಯವನ್ನು ಮಾರಿದನು ಮತ್ತು ರಾಜ್‌ಕೋಟ್ ವಿದ್ಯುಚ್ಛಕ್ತಿ ಉತ್ಪಾದನಾ ಘಟಕವನ್ನು ಆಧಾರವಿಟ್ಟು ಸಾಲ ತೆಗೆಯಲು ಹೊರಟನು. ರಾಜ್‌ಕೋಟ್‌ನ ಪ್ರಜೆಗಳು ಯು.ಎನ್. ದೇಬರ್ ಎಂಬ ಯುವಕನ ನೇತೃತ್ವದಲ್ಲಿ ವೀರವಲನ ಈ ಕ್ರಮಗಳ ವಿರುದ್ಧ ಪ್ರತಿಭಟನೆ ಆರಂಭಿಸಿದರು. ಅವರು ಏಕಸ್ವಾಮ್ಯಗಳ ಸೃಷ್ಟಿಯನ್ನು ವಿರೋಧಿಸಿದರು. ಜೂಜಿನ ಅಂಗಡಿಗಳನ್ನು ಧಾರ್ಮಿಕ ಹಬ್ಬಗಳಂದು ಮುಚ್ಚಬೇಕೆಂದು ಆಗ್ರಹಿಸಿದರು. ದೇಬರ್ ಸೇರಿ ಅನೇಕರು ದಸ್ತಗಿರಿ ಮಾಡಲ್ಪಟ್ಟರು ಮತ್ತು ಅನೇಕರು ಲಾಟಿ ಏಟು ತಿಂದರು.

ವಲ್ಲಭಭಾಯ್ ಪಟೇಲರು ೧೯೩೮ರ ಸೆಪ್ಟೆಂಬರ್‌ನಲ್ಲಿ ರಾಜ್‌ಕೋಟ್‌ಗೆ ಹೋದರು. ಅಲ್ಲಿ ರಾಜ್‌ಕೋಟ್ ರಾಜ್ಯ ಪ್ರಜೆಗಳ ಸಮಾವೇಶದಲ್ಲಿ ಭಾಷಣ ಮಾಡುತ್ತ ಹೀಗೆ ನುಡಿದರು:

> ರಾಜನನ್ನು ಸಿಂಹಾಸನದಿಂದ ಇಳಿಸುವ ಬಯಕೆ ನಮಗಿಲ್ಲ. ಆದರೆ ಅವನ ಅಧಿಕಾರವನ್ನು ಮೊಟಕು ಮಾಡಲು ಬಯಸುತ್ತೇವೆ. ರೈತರು ಹಸಿವೆಯಿಂದ ಸಾಯುತ್ತಿರುವಾಗ, ಅಪಾರ ಹಣವನ್ನು ನರ್ತನ ಇತ್ಯಾದಿಗಳ ಮೇಲೆ ವ್ಯರ್ಥ ಮಾಡುವ ರಾಜನಿರುವ ರಾಜ್ಯವು ಉಳಿಯಲಾರದು..... ನೀವು ದೃಢ ಮನಸ್ಕರಾಗಿದ್ದರೆ,

> ನಿಮ್ಮ ಅಭಿವೃದ್ಧಿಯನ್ನು ಯಾರೂ, ಎಲ್ಲಾ ರಾಜರು ಒಟ್ಟುಗೂಡಿದರೂ ಸಹ, ತಡೆಯಲಾರರು.[೧೧೫]

ದಿವಾನ್ ವೀರವಲ ಪಟೇಲರನ್ನು 'ಟೀ'ಗೆ ಆಹ್ವಾನಿಸಿ ಬಹಳ ಸೌಹಾರ್ದತೆಯಿಂದ ಮಾತನಾಡಿದನು. ಆದರೆ ಒಳಗೇ ಬ್ರಿಟಿಷ್ ಸರ್ಕಾರದ ಸಹಾಯವನ್ನು ಕೋರಿದನು. ಬ್ರಿಟಿಷ್ ಸರ್ಕಾರ ಸರ್ ಪ್ಯಾಟ್ರಿಕ್ ಕ್ಯಾಡೆಲ್ ಎಂಬುವವನನ್ನು ಹೊಸ ದಿವಾನನನ್ನಾಗಿ ಕಳುಹಿಸಿತು. ವೀರವಲನು ದಿವಾನಗಿರಿಯಿಂದ ನಿವೃತ್ತನಾಗಿ ಥಾಕೋರ್‌ನ ಆಪ್ತ ಸಲಹೆಗಾರನಾದನು. ಹೊಸ ದಿವಾನನು ಅಧಿಕಾರ ವಹಿಸಿಕೊಂಡ ಮೂರು ವಾರಗಳಲ್ಲಿ ಅವನಿಗೆ ಅಸಮಾಧಾನ ಉಂಟಾಗುವಂತಹ ಘಟನೆ ನಡೆಯಿತು.

ದಿವಾನನು ಕೆಲವು ಮುಖ್ಯ ವಿಷಯಗಳ ಬಗೆಗೆ ರಾಜ ಧರ್ಮೇಂದ್ರ ಸಿಂಗ್ ಒಡನೆ ಮಾತನಾಡಬೇಕಾಗಿತ್ತು. ಅವನು ರಾಜನನ್ನು ಭೇಟಿ ಮಾಡಲು ರಾತ್ರಿ ೮ ಘಂಟೆ ಒಳಗೆ ಕಾಲಾವಕಾಶವನ್ನು ಕೋರಿದನು. ಆದರೆ ರಾಜನು ದಿವಾನನನ್ನು ರಾತ್ರಿ ೮.೩೦ ಘಂಟೆಗೆ ಭೇಟಿ ಮಾಡುವುದಾಗಿ ಆಪ್ತ ಕಾರ್ಯದರ್ಶಿಯ ಮೂಲಕ ತಿಳಿಸಿದನು. ದಿವಾನನು ರಾತ್ರಿ ೮.೩೦ಕ್ಕೆ ಭೇಟಿಗೆ ಹೋದಾಗ ರಾಜನು ಸ್ನಾನ ಮಾಡುತ್ತಿರುವುದಾಗಿ ತಿಳಿಸಲಾಯಿತು. ದಿವಾನನು ಕಾಯುತ್ತಾ ಕುಳಿತನು. ೯ ಘಂಟೆಯಲ್ಲಿ ರಾಜನನ್ನು ಭೇಟಿ ಮಾಡಲು ಇನ್ನೂ ಕಾಲು ಘಂಟೆ ಅಥವಾ ಅರ್ಧ ಘಂಟೆ ಬೇಕು ಎಂದು ತಿಳಿಸಲಾಯಿತು. ದಿವಾನ ಇನ್ನು ಕಾಯದೆ ಹೊರಟುಹೋದನು.

ಮಾರನೆಯ ದಿನ ದಿವಾನನು ರಾಜನಿಗೆ ಒಂದು ಪತ್ರ ಕಳುಹಿಸಿದನು. ಹಿಂದಿನ ರಾತ್ರಿ ರಾಜನು ಅವನನ್ನು ನಡೆಸಿಕೊಂಡ ಅಸೌಜನ್ಯತೆಯ ರೀತಿಗೆ ತೀವ್ರ ಅಸಮಾಧಾನವನ್ನು ವ್ಯಕ್ತ ಪಡಿಸಿ, ಹೀಗೆ ತಿಳಿಸಿದನು:

> ಮಹಾರಾಜರು ನನ್ನನ್ನು ಇಂತಹ ಒರಟು ಅಸೌಜನ್ಯತೆಯ ರೀತಿಯಲ್ಲಿ ನಡೆಸಿಕೊಳ್ಳಲು ಮುಂದೆ ಬಿಡುವುದಿಲ್ಲ..... ರಾಜ್ಯದಲ್ಲಿ ಪರಿಸ್ಥಿತಿ ಬಹಳ ಗಂಭೀರವಾಗಿದೆ. ನೀವು ವೆಚ್ಚ ಮಾಡುವ ಹಣದ ಮೊತ್ತದ ಬಗೆಗಾಗಲಿ ಅಥವಾ ಅದನ್ನು ನೀವು ವೆಚ್ಚ ಮಾಡುವ ವಿಧಾನದ ಬಗೆಗಾಗಲಿ ಈಗ ನಾನು ಹೋಗುವುದಿಲ್ಲ. ಆದರೆ ನೀವು ಆಡಳಿತದಲ್ಲಿ ಏನೂ ಪಾತ್ರ ವಹಿಸುತ್ತಿಲ್ಲ ಮತ್ತು ನಿಮ್ಮ ಪ್ರಜೆಗಳ ಯೋಗಕ್ಷೇಮದ ಬಗೆಗೆ ಏನೂ ಆಸಕ್ತಿಯನ್ನು ತೋರಿಸುತ್ತಿಲ್ಲ ಅನ್ನುವುದು ಖಂಡಿತವಾಗಿಯೂ ಸತ್ಯ.[೧೧೬]

ದಿವಾನ ಕ್ಯಾಡೆಲ್ಲನು ದೇಬರ್‌ರವರನ್ನು ಸೆರೆಮನೆಯಿಂದ ಬಿಡುಗಡೆ ಮಾಡಿದನು. ಅದರಿಂದ ಥಾಕೋರ್ ಮತ್ತು ವೀರವಲ ಇಬ್ಬರೂ ಕ್ಯಾಡೆಲ್ ಬಗೆಗೆ ಅಸಮಾಧಾನಗೊಂಡರು. ಥಾಕೋರನು, ರಾಜ್‌ಕೋಟ್‌ನಲ್ಲಿರುವ ಪಶ್ಚಿಮ ಭಾರತ ರಾಜ್ಯಗಳ ಬ್ರಿಟಿಷ್ ರೆಸಿಡೆಂಟ್ ಈ.ಸಿ. ಗಿಬ್ಸನ್‌ಗೆ ಪತ್ರ ಬರೆದು ಕ್ಯಾಡೆಲ್ ಬಗೆಗೆ ದೂರಿದನು. ಕ್ಯಾಡೆಲ್ಲನು ಬಿಡುಗಡೆ ಮಾಡಿದ ದೇಬರ್‌ನನ್ನು ಸ್ವಾಗತಿಸಲು ಸುಮಾರು ಹತ್ತು ಸಾವಿರ ಜನ ಸಭೆ ಸೇರಿದ್ದರು ಎಂದು ವಿಷಾದಿಸಿದನು ಮತ್ತು ಕ್ಯಾಡೆಲ್‌ನನ್ನು ವಾಪಸ್ಸು ಕರೆಯಿಸಿಕೊಳ್ಳುವಂತೆ ಕೋರಿದನು. ಸರ್ಕಾರವು ಕ್ಯಾಡೆಲ್‌ನನ್ನು ವಾಪಸ್ಸು ಕರೆಯಿಸಿಕೊಳ್ಳುವುದಕ್ಕೆ ಬದಲಾಗಿ ವೀರವಲನನ್ನೇ ಥಾಕೋರ್‌ನ ಸೇವೆಯಿಂದ ತೆಗೆಯಬೇಕೆಂದು ಸೂಚಿಸಿತು. ಥಾಕೋರನಿಗೆ ಮಾರ್ಗ ದರ್ಶನ ನೀಡುತ್ತಿರುವುದು ಮತ್ತು ಅವನ ಪತ್ರಗಳ ಕರಡು ಬರೆಯುತ್ತಿರುವುದು ವೀರವಲ ಎನ್ನುವುದು ಸರ್ಕಾರಕ್ಕೆ ತಿಳಿದಿತ್ತು.

ದೇಬರ್ ನಾಯಕತ್ವದಲ್ಲಿ ಪ್ರಜಾ ಆಂದೋಲನ ಮುಂದುವರಿಯಿತು. ದೇಬರ್ ಮತ್ತೆ ದಸ್ತಗಿರಿ ಮಾಡಲ್ಪಟ್ಟರು. ಪಟೇಲರು ನವೆಂಬರ್ ೧೧ರಂದು ಮಗಳು ಮಣಿಬೆನ್‌ರನ್ನು ರಾಜ್‌ಕೋಟ್‌ಗೆ ಕಳುಹಿಸಿದರು. ಮಣಿಬೆನ್ ಹಳ್ಳಿ ಹಳ್ಳಿಗೆ ಭೇಟಿ ನೀಡಿ ಹಳ್ಳಿಯವರ ಉತ್ಸಾಹ ಹೆಚ್ಚುವಂತೆ ಪ್ರಚಾರ ಕಾರ್ಯ ಕೈಗೊಂಡರು. ಅವರ ಕಾರ್ಯವನ್ನು ಪಟೇಲ್ ಅಲ್ಲದೆ ಗಾಂಧೀಜಿಯು ಸಹ ಮೆಚ್ಚಿದರು. ಮಣಿಬೆನ್ ಡಿಸೆಂಬರ್ ೫ರಂದು ದಸ್ತಗಿರಿ ಮಾಡಲ್ಪಟ್ಟರು.

ವೀರವಲನ ಸಲಹೆಯ ಮೇರೆ ಥಾಕೋರನು ಒಬ್ಬ ಮಧ್ಯಸ್ಥಿಕೆದಾರನ ಮೂಲಕ ಪಟೇಲರಿಗೆ ಒಂದು ಪತ್ರವನ್ನು ಕಳುಹಿಸಿದನು ಮತ್ತು 'ಕ್ಯಾಡೆಲ್ಲನಿಗೆ ತಿಳಿಯದಂತೆ ನಾವು ಒಂದು ಒಪ್ಪಂದಕ್ಕೆ ಬರೋಣ' ಎಂದು ಬಾಯಿಮಾತಿನಲ್ಲಿ ಹೇಳಿ ಕಳುಹಿಸಿದನು. ಪಟೇಲರು ತಮ್ಮ ಉತ್ತರದಲ್ಲಿ, 'ಯಾವ ವಿದೇಶಿಯನೂ ನಮ್ಮ ತರಹ ನಿಮ್ಮ ಮತ್ತು ನಿಮ್ಮ ಪ್ರಜೆಗಳ ಹಿತಚಿಂತಕ ಆಗಿರಲು ಸಾಧ್ಯವಿಲ್ಲ' ಎಂದು ಬರೆದರು. ಥಾಕೋರ್‌ನ ಆಹ್ವಾನದ ಮೇಲೆ ಪಟೇಲರು ರಾಜ್‌ಕೋಟ್‌ಗೆ ಹೋದರು. ಥಾಕೋರ್ ಮತ್ತು ಪಟೇಲರ ನಡುವೆ ಎಂಟು ಘಂಟೆಗಳ ಚರ್ಚೆ ನಡೆದು ಡಿಸೆಂಬರ್ ೨೬ರಂದು ಮಧ್ಯಾಹ್ನ ೨ ಘಂಟೆಯಲ್ಲಿ ಥಾಕೋರನು ಒಂದು ಒಪ್ಪಂದಕ್ಕೆ ಸಹಿ ಹಾಕಿದನು. ರಾಜ್ಯದಲ್ಲಿ ಆಗಬೇಕಾದ ಸುಧಾರಣೆಗಳ ಪಟ್ಟಿಯನ್ನು ತಯಾರಿಸಲು ಒಂದು ಸಮಿತಿಯನ್ನು ರಚಿಸಲು ಒಪ್ಪಿದನು. ಆ ಸಮಿತಿಯಲ್ಲಿ ಪಟೇಲರು ಸೂಚಿಸಿದ ಏಳು ಮಂದಿ ಮತ್ತು ಥಾಕೋರ್‌ನ ಮೂವರು ಅಧಿಕಾರಿಗಳು ಇರಬೇಕೆಂದು ತೀರ್ಮಾನವಾಯಿತು. ಥಾಕೋರನು ಮಣಿಬೆನ್

ಸೇರಿ ಎಲ್ಲಾ ಸೆರೆವಾಸಿಗಳನ್ನು ಬಿಡುಗಡೆ ಮಾಡಿದನು. ವಲ್ಲಭಭಾಯ್‌ರವರು ಪ್ರಜಾ ಆಂದೋಲನವನ್ನು ಸ್ಥಗಿತಗೊಳಿಸಿದರು. ಗಾಂಧೀಜಿಯವರು 'ಬ್ರಿಟಿಷ್ ರೆಸಿಡೆಂಟ್ ಗಿಬ್ಸನ್ ಒಡನೆಯೂ ಸ್ಪಷ್ಟವಾಗಿ ಮಾತನಾಡುವಂತೆ ಪಟೇಲರಿಗೆ ಹೇಳಿದ್ದರು. ಆದರೆ ಪಟೇಲರು ಗಿಬ್ಸನ್‌ನನ್ನು ಭೇಟಿ ಮಾಡಲೇ ಇಲ್ಲ. ಈ ಶೀಘ್ರ ಒಪ್ಪಂದ ರೆಸಿಡೆಂಟ್ ಗಿಬ್ಸನ್‌ಗೆ ಆಶ್ಚರ್ಯವನ್ನು ಉಂಟುಮಾಡಿರುತ್ತದೆಂದು ಖುಷಿ ಪಟ್ಟರು, ಸರ್ದಾರರು.[೧೧೭]

ಆದರೆ ಆ ಒಪ್ಪಂದವು ವೀರವಲ ಹೂಡಿದ ಒಂದು ಕಪಟ ನಾಟಕವಾಗಿತ್ತು. ಅದು ಪಟೇಲರಿಗೆ ಆಗ ಅರ್ಥವಾಗಿರಲಿಲ್ಲ. ತನಗರಿವಿಲ್ಲದಂತೆ ನಡೆದ ಈ ಒಪ್ಪಂದದ ಬಗೆಗೆ ಗಿಬ್ಸನ್‌ಗೆ ಅಸಮಾಧಾನ ಉಂಟಾಗಿರಬೇಕು. ಅವರು ಥಾಕೋರನನ್ನು ಭೇಟಿ ಮಾಡಿದಾಗ ಪಟೇಲರ ಬಗೆಗೆ ಲಘುವಾಗಿ ಮಾತನಾಡಿದರು. ಅದನ್ನು ವೀರವಲನು ರಹಸ್ಯವಾಗಿಡದೆ ರಟ್ಟಾಗುವಂತೆ ಮಾಡಿದನು. ಅಷ್ಟೇ ಅಲ್ಲ, ಅದನ್ನು ಉತ್ಪ್ರೇಕ್ಷೆ ಮಾಡಿ ಪಟೇಲರ ಕಿವಿ ಮುಟ್ಟುವಂತೆ ಮಾಡಿದನು. ಹೀಗೆ ಸರ್ದಾರರು ಮತ್ತು ಬ್ರಿಟಿಷ್ ಅಧಿಕಾರಿಗಳ ನಡುವೆ ಬಿರುಕು ಉಂಟಾಗುವಂತೆ ಮಾಡಿದ ನಂತರ, ಪಟೇಲರೊಡನೆ ಮಾಡಿಕೊಂಡಿದ್ದ ಒಪ್ಪಂದದಿಂದ ಹಿಂದೆಸರಿಯುವಂತೆ ಥಾಕೋರನನ್ನು ವೀರವಲನು ಪ್ರೋತ್ಸಾಹಿಸಿದನು. ೧೯೩೯ರ ಜನವರಿಯಲ್ಲಿ ಥಾಕೋರನು ಸರ್ಕಾರದಿಂದ ಒಪ್ಪಿಗೆ ಪಡೆದು ಕ್ಯಾಡೆಲ್ಲನನ್ನು ತೆಗೆದು ವೀರವಲನನ್ನು ಮತ್ತೆ ದಿವಾನನನ್ನಾಗಿ ನಿಯಮಿಸಿದನು.

ಸಹಿ ಹಾಕಿದ ಮೂರು ವಾರಗಳ ನಂತರ ಥಾಕೋರ್ ಧರ್ಮೇಂದ್ರ ಸಿಂಗ್‌ನು ಒಪ್ಪಂದದಿಂದ ಹಿಂದೆ ಸರಿದನು. ತೀವ್ರ ಕೋಪಗೊಂಡ ಪಟೇಲರು ಧರ್ಮೇಂದ್ರ ಸಿಂಗ್‌ನನ್ನು 'ನಾಮಾಕಾವಾಸ್ತ ಥಾಕೋರ್' ಎಂದು ವ್ಯಂಗವಾಡಿದರು ಮತ್ತು ಈ ನಂಬಿಕೆ ದ್ರೋಹದ ವಿರುದ್ಧ ಜನರಿಗೆ ತೆರೆದಿರುವ ಏಕಮಾತ್ರ ಮಾರ್ಗ – ಹೋರಾಟ ಎಂದರು. ಮತ್ತೆ ಆರಂಭವಾದ ಜನರ ಹೋರಾಟವನ್ನು ದಿವಾನ ವೀರವಲ ಮತ್ತು ಪೊಲೀಸ್ ಅಧಿಕಾರಿ ಫತೇ ಮಹಮದ್ ಖಾನ್ ಸೇರಿ ಬರ್ಬರವಾಗಿ ಹತ್ತಿಕ್ಕಲು ಹೊರಟರು. ಅವರು ಸಭೆಗಳನ್ನು ಮತ್ತು ಸಮಾಚಾರ ಪತ್ರಿಕೆಗಳನ್ನು ನಿಷೇಧಿಸಿದರು. ನಿಷೇಧ ಭಂಗ ಮಾಡಿದವರನ್ನು ದಸ್ತಗಿರಿ ಮಾಡಿ ಬಡಿದರು, ಸೆರೆಗೆ ದೂಡಿದರು ಮತ್ತು ಅವರ ಆಸ್ತಿಯನ್ನು ವಶಪಡಿಸಿಕೊಂಡರು.[೧೧೮]

ಗಾಂಧೀಜಿಯವರ ಪತ್ನಿ ಕಸ್ತೂರ್‌ಬಾರವರು ಹೋರಾಟದಲ್ಲಿ ಭಾಗವಹಿಸಲು ರಾಜ್‌ಕೋಟ್‌ಗೆ ಹೋಗಲು ಬಯಸಿದರು. ಅವರ ಮಾವ ಕರಮ್‌ಚಂದ್ ಗಾಂಧಿ ದಿವಾನರಾಗಿದ್ದ ರಾಜ್ಯ ರಾಜ್‌ಕೋಟ್. ಧರ್ಮೇಂದ್ರ ಸಿಂಗ್‌ನ ತಂದೆ ಮಹಾತ್ಮ

ಗಾಂಧಿಯನ್ನು ಬಹಳ ಗೌರವಿಸುತ್ತಿದ್ದರು ಮತ್ತು ಅವರಿಗೆ ಸನ್ಮಾನ ಮಾಡಿದ್ದರು. ಅದರಿಂದ ಕಸ್ತೂರ್‌ಬಾ ಅಲ್ಲಿಗೆ ಹೊರಟರು. ಪಟೇಲರು ಮೊದಲು ಒಪ್ಪಲಿಲ್ಲ. ಆದರೆ ಕಸ್ತೂರ್‌ಬಾರ ಒತ್ತಾಯಕ್ಕೆ ಮಣಿದು ಅವರೊಡನೆ ಮಣಿಬೆನ್ ಮತ್ತು ಮೃದುಲಾ ಸಾರಾಭಾಯ್‌ರವರನ್ನು ಕಳುಹಿಸಿದರು. ಆ ಮೂವರು ಫ಼ೆಬ್ರುವರಿ ಪ್ರಾರಂಭದಲ್ಲಿ ದಸ್ತಗಿರಿಯಾಗಿ ಒಂದು ಕೊಳಕು ಸ್ಥಳದಲ್ಲಿ ಇಡಲ್ಪಟ್ಟರು. ಫ಼ೆಬ್ರುವರಿ ಅಂತ್ಯಭಾಗದಲ್ಲಿ ಗಾಂಧೀಜಿಯವರೇ ರಾಜ್‌ಕೋಟ್‌ಗೆ ಬಂದರು. ಅವರನ್ನು ರೈಲು ನಿಲ್ದಾಣದಲ್ಲಿ ಭೇಟಿ ಮಾಡಿದ ಫತೇ ಮಹಮದ್ ಖಾನನು ಥಾಕೋರ್‌ನ ಸ್ವಾಗತ ಪತ್ರವನ್ನು ನೀಡಿದನು. ಆ ನಂತರ ವೀರವಲನು ಗಾಂಧೀಜಿಯನ್ನು ಭೇಟಿ ಮಾಡಿ ಅವರ ಪಾದಗಳಿಗೆ ಅಡ್ಡಬಿದ್ದು ಮೂರುವರೆ ಘಂಟೆಗಳ ಕಾಲ ಚರ್ಚಿಸಿದನು. ಆದರೆ ಜನರ ಬೇಡಿಕೆಯನ್ನು ಈಡೇರಿಸಲೂ ಒಪ್ಪಲಿಲ್ಲ, ಗಾಂಧೀಜಿಯವರು ಥಾಕೋರ್‌ನನ್ನು ಭೇಟಿ ಮಾಡಲೂ ಅವಕಾಶ ಕೊಡಲಿಲ್ಲ. ಗಾಂಧೀಜಿಯವರು ಗಿಬ್ಸನ್‌ಗೆ ಪತ್ರ ಬರೆದು 'ವೀರವಲನು ರಾಜ್‌ಕೋಟ್‌ನ ನಿಜವಾದ ಥಾಕೋರ್' ಎಂದು ವರ್ಣಿಸಿದರು.

ರಾಜ್‌ಕೋಟ್‌ನ ಜನರಿಗೆ ನ್ಯಾಯ ದೊರಕಿಸುವುದಕ್ಕಾಗಿ ಗಾಂಧೀಜಿ ಮಾರ್ಚ್ ೩ರಂದು ಉಪವಾಸ ಆರಂಭಿಸಿದರು. ಅವರು ವೈಸ್‌ರಾಯ್ ಲಿನ್‌ಲಿತ್‌ಗೊಗೆ ಪತ್ರ ಬರೆದು, "ನೀಡಿರುವ ವಾಗ್ದಾನವನ್ನು ಥಾಕೋರನು ನೆರವೇರಿಸುವಂತೆ ಅವನನ್ನು ಒತ್ತಾಯಿಸಬೇಕೆಂದು," ಕೋರಿದರು. ವೈಸ್‌ರಾಯ್‌ನು 'ವಾಗ್ದಾನಭಂಗ ಆಗಿದೆಯೆ ಅಥವಾ ಇಲ್ಲವೆ' ಅನ್ನುವುದನ್ನು ನಿರ್ಧರಿಸುವಂತೆ ಮುಖ್ಯ ನ್ಯಾಯಾಧೀಶ ಸರ್ ಮಾರಿಸ್ ಗ್ವೆಯರ್ ಅವರನ್ನು ಕೋರಿದನು. ಗಾಂಧೀಜಿ ಉಪವಾಸವನ್ನು ನಿಲ್ಲಿಸಿದರು. ಮಾರ್ಚ್ ೭ರಂದು ಕಸ್ತೂರ್‌ಬಾ, ಮಣಿಬೆನ್ ಮತ್ತು ಮೃದುಲಾ ಬಿಡುಗಡೆ ಮಾಡಲ್ಪಟ್ಟರು.[೧೧೯]

ಮುಖ್ಯ ನ್ಯಾಯಾಧೀಶರ ಮುಂದೆ ಪಟೇಲರು ತಮ್ಮ ವಾದವನ್ನು ಮತ್ತು ವೀರವಲನು ಥಾಕೋರ್‌ನ ಪರವಾದ ವಾದವನ್ನು ಮಂಡಿಸಿದರು. ತೀರ್ಪು ಏಪ್ರಿಲ್ ೩ರಂದು ಕೊಡಲ್ಪಟ್ಟಿತು. ಮುಖ್ಯ ನ್ಯಾಯಾಧೀಶರು ಪಟೇಲರ ವಾದವನ್ನು ಎತ್ತಿ ಹಿಡಿದರು. ಮೂರು ದಿನಗಳ ನಂತರ, ಥಾಕೋರ್‌ನು ವಾಗ್ದಾನದಂತೆ ನಡೆಯುವಂತೆ ಮಾಡುವುದಾಗಿ ವೈಸ್‌ರಾಯ್ ಪ್ರಕಟಿಸಿದನು.

ವೀರವಲನು ಮುಸ್ಲಿಮರನ್ನು ಮತ್ತು ಥಾಕೋರ್‌ನ ಜನಾಂಗದವರಾದ ಭಾಯತ್‌ರನ್ನು ಮತ್ತು ಜಮೀನ್ದಾರರನ್ನು ಗಾಂಧೀಜಿ ಮತ್ತು ಪಟೇಲ್ ವಿರುದ್ಧ ಎತ್ತಿಕಟ್ಟಿದನು. ಪಟೇಲರಿಂದ ನೇಮಿಸಲ್ಪಟ್ಟ ಸಮಿತಿಯ ಸದಸ್ಯರು ಮುಸ್ಲಿಮರ,

ಭಾಯತರ ಮತ್ತು ಜಮೀನ್ದಾರರ ಹಿತಕ್ಕೆ ಧಕ್ಕೆ ತರುವರು ಎಂದು ಅವರನ್ನು ಪ್ರಚೋದಿಸಿದನು. ಏಪ್ರಿಲ್ ೧೬ರಂದು ರಾಜ್‌ಕೋಟ್‌ನಲ್ಲಿ ಗಾಂಧೀಜಿ ಪ್ರಾರ್ಥನಾ ಸಭೆಯನ್ನು ನಡೆಸುತ್ತಿದ್ದಾಗ ಕೆಲವು ಮುಸ್ಲಿಮರು ಮತ್ತು ಒರೆಯಿಂದ ತೆಗೆದ ಕತ್ತಿಯನ್ನು ಹಿಡಿದ ಭಾಯತರು ಅವರ ಕಡೆಗೆ ಬಂದರು. ಗಾಂಧಿ ವಿಚಲಿತರಾಗದೆ ತಮ್ಮ ಪ್ರಾರ್ಥನೆಯನ್ನು ಮುಗಿಸಿ ಅವರ ಕಡೆಗೆ ಹೊರಟರು. ಕೆಲವರು ಅನುಯಾಯಿಗಳು ಅವರ ಜೊತೆಗೆ ಹೊರಟರು. ಗಾಂಧಿ ಅವರನ್ನು ತಡೆದು ಒಬ್ಬರೇ ಶಾಂತವಾಗಿ ನಿರ್ಭಯವಾಗಿ ಆ ಗುಂಪಿನ ಬಳಿಗೆ ಹೋದರು. ಒಬ್ಬ ಯುವ ಭಾಯತ ಮುಂದೆ ಬಂದು ಕೈ ನೀಡಿದನು. ಗಾಂಧೀಜಿ ಅವನ ಕೈ ಹಿಡಿದು ತಾವು ತಂಗಿದ್ದ ನಿವಾಸದ ಕಡೆಗೆ ನಡೆದರು. ಅವರಿಗೆ ಯಾವ ಅಪಾಯವೂ ಆಗಲಿಲ್ಲ. ಭಾಯತರು ಕತ್ತಿ ಹಿಡಿದು ಬಂದಿದ್ದದ್ದು ಪಟೇಲರಿಗಾಗಿ. ಆದರೆ ಅಂದು ಪಟೇಲರು ಅಕಸ್ಮಾತಾಗಿ ೭೮ ಮೈಲಿಗಳ ದೂರದ ಅಮ್ರೇಲಿಗೆ ಹೋಗಿದ್ದರು. ಅವರು ಬಚಾವಾದರು. ಆದರೆ ಅವರು ವಾಪಸ್ಸು ಬರುವ ಮಾರ್ಗದಲ್ಲಿ ಅವರನ್ನು ಕೊಲೆ ಮಾಡುವ ಸಂಚನ್ನು ನೆರೆಯ ಒಬ್ಬ ರಾಜ ಹೂಡಿದ್ದ ಅನ್ನುವ ಅನುಮಾನ ವ್ಯಕ್ತವಾಯಿತು.[೧೨೦]

ರಾಜ್‌ಕೋಟ್‌ನಲ್ಲಿ ಪ್ರಜಾಪ್ರಭುತ್ವ ಸ್ಥಾಪನೆಗೆ ಮಾಡಿದ ಪ್ರಯತ್ನದ ಫಲವಾಗಿ ಮುಸ್ಲಿಮರು ತಮ್ಮಿಂದ ದೂರ ಸರಿದರು ಎಂದು ನಿರ್ಧರಿಸಿದರು, ಗಾಂಧೀಜಿ. ಅದರಿಂದ ಅವರು ಮುಖ್ಯ ನ್ಯಾಯಾಧೀಶ ಮಾರಿಷ್ ಗ್ವಯರ್ ನೀಡಿದ್ದ ತೀರ್ಪನ್ನು ತ್ಯಜಿಸಿ ಬಿಟ್ಟರು. ಅಂದರೆ ಥಾಕೋರ್ ಮತ್ತು ಪಟೇಲರ ನಡುವಣ ಒಪ್ಪಂದವನ್ನು ತಾವೇ ರದ್ದು ಪಡಿಸಿದರು. ಅವರೆಂದರು, "ಆ ತೀರ್ಪು, ನನ್ನ ಹಾದಿಯನ್ನು ಸುಗಮಗೊಳಿಸುವುದಕ್ಕೆ ಬದಲಾಗಿ ಮುಸ್ಲಿಮರು ಮತ್ತು ಭಾಯತರು ನನ್ನ ವಿರುದ್ಧ ಕೋಪಗೊಳ್ಳುವಂತೆ ಮಾಡಿತು." ಪ್ರಜಾಪ್ರಭುತ್ವವು ಜನಾಂಗಗಳ ನಡುವೆ ತಿಕ್ಕಾಟಕ್ಕೆ ಎಡೆಮಾಡಿತ್ತು. ಜನ ಇನ್ನೂ ಪ್ರಜಾಪ್ರಭುತ್ವಕ್ಕೆ ಸಿದ್ಧರಾಗಿರಲಿಲ್ಲ.

ಪಟೇಲರು ಗಾಂಧೀಜಿಯ ತೀರ್ಮಾನವನ್ನು ಮರು ಮಾತಾಡದೆ ಒಪ್ಪಿಕೊಂಡರು. ವೀರವಲ ವಿಜಯಿಯಾದನು, ಅವನ ಏಕಮಾತ್ರ ಗುರಿ ತನ್ನ ಅಧಿಕಾರವನ್ನು ಉಳಿಸಿಕೊಳ್ಳುವುದು. ಅವನಿಗೆ ಇದ್ದ ಶತ್ರು ಕೇವಲ ಒಂದು ವರ್ಗ : ಗಾಂಧಿ ಮತ್ತು ಪಟೇಲ್ ಅನುಯಾಯಿಗಳು. ಆದರೆ ಗಾಂಧಿ ಮತ್ತು ಪಟೇಲರಿಗೆ ಅನೇಕ ಶತ್ರುಗಳು. ಅವರು ರಾಜರನ್ನು, ಬ್ರಿಟಿಷ್ ಸರ್ಕಾರವನ್ನು ಮತ್ತು ಮತೀಯ ಉಗ್ರತೆಯನ್ನು ಎದುರಿಸಬೇಕಾಗಿತ್ತು.

ಗಾಂಧಿ ಮತ್ತು ಪಟೇಲರಿಗೆ ಆದ ಮುಜಗರದಿಂದ ಅನೇಕ ರಾಜರಿಗೆ

ಖುಷಿಯಾಯಿತು. ಅವರ ಪೈಕಿ ನವನಗರದ ಜಾಮ್ ಸಾಹೇಬ್ ಒಬ್ಬರು. ಅವರು ವೀರವಲನಿಗೆ ಪಟೇಲರ ವಿರುದ್ಧ ಪ್ರೋತ್ಸಾಹ ಮತ್ತು ನೆರವು ನೀಡಿದ್ದರು. ಆದಾಗ್ಯೂ ಪಟೇಲರು ಜಾಮ್ ಸಾಹೇಬನ ಮೇಲಾಗಲಿ ಅಥವಾ ವೀರವಲನ ಮೇಲಾಗಲಿ ದ್ವೇಷ ಭಾವನೆ ತೋರಲಿಲ್ಲ. ರಾಜ್‌ಕೋಟ್‌ನಲ್ಲಿ ಪ್ರಜಾಮಂಡಲದ ಒಬ್ಬ ಕಾರ್ಯಕರ್ತ ವೀರವಲನನ್ನು ಒಬ್ಬ ರಾಕ್ಷಸನಿಗೆ ಹೋಲಿಸಿದಾಗ ಅವನ ಬಾಯಿಗೆ ತಮ್ಮ ಹಸ್ತವಿಟ್ಟು ಹೇಳಿದರು, 'ನಾನು ಬಾಪುವನ್ನು ಸಂಧಿಸದೆ ಹೋಗಿದ್ದರೆ, ವೀರವಲನಂತೆಯೇ ಇರುತ್ತಿದ್ದೆ.'[೧೨೧]

ರಾಜ್‌ಕೋಟ್‌ನ ಘಟನೆಗಳು ಇತರ ಅನೇಕ ರಾಜ್ಯಗಳ ಮೇಲೆ ಪ್ರಭಾವ ಬೀರಿದುವು. ೧೯೩೯ರ ಮೇ ನಲ್ಲಿ ಭಾವನಗರದ ಪ್ರಜಾಮಂಡಲದವರು ಪಟೇಲರನ್ನು ಮೆರವಣಿಗೆಯಲ್ಲಿ ಕರೆದೊಯ್ಯುತ್ತಿದ್ದಾಗ ಲಾಠಿ, ಚಾಕು, ಕೊಡಲಿ ಹಿಡಿದ ಸುಮಾರು ೩೦ ಮಂದಿ ಮುಸ್ಲಿಮರ ಗುಂಪು ಪಟೇಲರ ಮೇಲೆ ಆಕ್ರಮಣ ಮಾಡಿತು. ಪ್ರಜಾಮಂಡಲದವರು ಆ ಗುಂಪನ್ನು ಎದುರಿಸಿ ಏಟುಗಳನ್ನು ತಿಂದದ್ದರಿಂದ ಸರ್ದಾರರು ಬಚಾವಾದರು, ಆದರೆ ಪ್ರಜಾಮಂಡಲದ ಒಬ್ಬ ಕಾರ್ಯಕರ್ತ ಪ್ರಾಣ ಕಳೆದುಕೊಂಡನು, ಪ್ರಜಾಮಂಡಲದ ನಾಯಕ ನಾನಾಭಾಯ್ ಭಟ್‌ನ ತಲೆ ಒಡೆಯಿತು.[೧೨೨]

ಬರೋಡಾದಲ್ಲಿ ಮರಾಠಿ ಭಾಷಿಕ ಅರಸನಿದ್ದನು. ಆದರೆ, ಮರಾಠಿ ಭಾಷಿಕ ಜನ ಅಲ್ಪ ಸಂಖ್ಯಾತರಾಗಿದ್ದರು. ಪಟೇಲರ ವಿರೋಧಿಗಳು 'ಪ್ರಜಾಪ್ರಭುತ್ವ ಬಂದರೆ ಗುಜರಾತಿಗಳು ಮಹಾರಾಷ್ಟ್ರಿಯನ್ನರನ್ನು ತುಳಿದುಬಿಡುತ್ತಾರೆ' ಎಂದು ಗದ್ದಲ ಆರಂಭಿಸಿದರು. ೧೯೩೯ರ ಫೆಬ್ರುವರಿಯಲ್ಲಿ ಗೂಂಡಾಗಳು ಪಟೇಲರು ಭಾಗವಹಿಸಬೇಕಾಗಿದ್ದ ಸಭೆಯ ಚಪ್ಪರವನ್ನು ಧ್ವಂಸ ಮಾಡಿದರು, ವೇದಿಕೆಯನ್ನು ಸುಟ್ಟರು ಮತ್ತು ಪಟೇಲರ ಕಾರಿನ ಮೇಲೆ ಕಲ್ಲು ತೂರಿದರು. ಸುಮಾರು ೪೦,೦೦೦ ಪ್ರಜಾ ಸಂಖ್ಯೆಯಿರುವ ಪುಟ್ಟ ರಾಜ್ಯ ಲಿಂಬ್ಡಿಯ ಪ್ರಜಾಮಂಡಲದಲ್ಲಿ ಅನೇಕ ವನಿಯರು ಚುರುಕಾಗಿ ಕೆಲಸ ಮಾಡುತ್ತಿದ್ದರಿಂದ ಅದನ್ನು 'ಬನಿಯ ಮಂಡಲ್' ಎಂದು ವ್ಯಂಗ್ಯವಾಡುತ್ತಿದ್ದರು.[೧೨೩]

ಅದಕ್ಕೆ ವಿರುದ್ಧವಾಗಿ ಒಂದು ದೊಡ್ಡ ರಾಜ್ಯವಾದ ಮೈಸೂರು ರಾಜ್ಯದಲ್ಲಿ ಕೃಪಲಾನಿಯವರ ಸಹಾಯದಿಂದ ಕಾಂಗ್ರೆಸ್ಸು ಮತ್ತು ರಾಜನ ನಡುವೆ ಒಂದು ಒಪ್ಪಂದ ತರಲು ಪಟೇಲರಿಗೆ ಸಾಧ್ಯವಾಯಿತು. ಮಹಾರಾಷ್ಟ್ರದ ಔಂದ್‌ನಲ್ಲಿ ಅರಸನು ಸ್ವಯಂಪ್ರೇರಿತನಾಗಿ ಜನರ ಆಡಳಿತವನ್ನು ಜಾರಿಗೆ ತಂದನು. ಆದಾಗ್ಯೂ ಮೂವತ್ತರ ದಶಕದ ಅಂತ್ಯ ಭಾಗದಲ್ಲಿ ರಾಜರ ರಾಜ್ಯಗಳಲ್ಲಿ ಪ್ರಜಾಪ್ರಭುತ್ವ

ಸ್ಥಾಪಿಸಲು ಪಟೇಲರು ಮಾಡಿದ ಪ್ರಯತ್ನ ವಿಫಲವಾಯಿತೆಂದೇ ಹೇಳಬೇಕು. ಆದರೆ ಆ ಪ್ರಯತ್ನ ಅವರಿಗೆ ಅಮೂಲ್ಯ ಅನುಭವವನ್ನು ತಂದುಕೊಟ್ಟಿತು. ಆ ಅನುಭವ ಸ್ವಾತಂತ್ರ್ಯ ನಂತರ ಒಕ್ಕೂಟ ನಿರ್ಮಾಣದಲ್ಲಿ ಸಹಾಯ ಮಾಡಿತು.೧೨೪

೧೨.೧೨ ಎನ್.ಬಿ. ಖರೆ ಪ್ರಕರಣ

ಪಟೇಲರ ನೇರ ಉಸ್ತುವಾರಿಗೆ ಸೇರಿದ್ದ ಪ್ರಾಂತ್ಯಗಳ ಪೈಕಿ ಮಧ್ಯ ಪ್ರಾಂತ್ಯವೂ ಒಂದು. ಅದು ಹಿಂದಿ ಭಾಷಿಕರ ಮತ್ತು ಮರಾಟ ಭಾಷಿಕರ ಪ್ರದೇಶಗಳನ್ನು ಒಳಗೊಂಡಿತ್ತು. ೧೯೩೭ರ ಚುನಾವಣೆಯಲ್ಲಿ ೪೩ ಮಂದಿ ಹಿಂದಿ ಭಾಷಿಕ ಶಾಸಕರು, ೨೭ ಮಂದಿ ಮರಾಟಿ ಭಾಷಿಕ ಶಾಸಕರು ಚುನಾಯಿತರಾಗಿದ್ದರು. ಆದಾಗ್ಯೂ, ಹಿಂದಿ ಭಾಷಾ ಪ್ರದೇಶದ ಇಬ್ಬರು ನಾಯಕರಾದ ರವಿ ಶಂಕರ್ ಶುಕ್ಲ ಮತ್ತು ದ್ವಾರಕ ಪ್ರಸಾದ್ ಮಿಶ್ರರವರ ನಡುವಣ ಪೈಪೋಟಿಯ ಫಲವಾಗಿ ಮರಾಟಿ ಭಾಷಾ ಪ್ರದೇಶದ ಡಾ॥ ನಾರಾಯಣ್ ಭಾಸ್ಕರ್ ಖರೆ (ಎನ್.ಬಿ. ಖರೆ) ರವರು ಪ್ರಧಾನಮಂತ್ರಿಯಾಗಿ ಆಯ್ಕೆಯಾಗಿದ್ದರು. ಎನ್.ಬಿ. ಖರೆಯವರ ಆಯ್ಕೆಗೆ ಪಟೇಲರ ಪ್ರತಿರೋಧವಿರಲಿಲ್ಲ. ಅದಕ್ಕೆ ಬದಲಾಗಿ ಅವರು ಖರೆಯವರಿಗೆ ಪೂರ್ಣ ಬೆಂಬಲದ ಆಶ್ವಾಸನೆಯನ್ನು ನೀಡಿ ಶುಭಾಶಯವನ್ನು ಕೋರಿದ್ದರು. ಡಾ॥ ಖರೆಯವರು ಸಹ 'ನೀವು ನೀಡುವ ಯಾವುದೇ ಸೂಚನೆಗಳನ್ನು ನಮ್ರತೆಯಿಂದ ಕಾರ್ಯಗತವಾಡಲಾಗುವುದು' ಎಂದು ಪಟೇಲರಿಗೆ ಆಶ್ವಾಸನೆಯನ್ನು ನೀಡಿದ್ದರು. ಅವರು, ಪಟೇಲರ ಸೂಚನೆಯ ಮೇಲೆ ಶುಕ್ಲ ಮತ್ತು ಮಿಶ್ರರವರನ್ನು ಮಂತ್ರಿಮಂಡಲಕ್ಕೆ ಸೇರಿಸಿಕೊಂಡಿದ್ದರು.

ಸ್ವಲ್ಪ ದಿನಗಳಲ್ಲೇ ಹಿಂದಿ ಭಾಷಿಕ ಶಾಸಕರು ಮತ್ತು ಮರಾಟಿ ಭಾಷಿಕ ಶಾಸಕರು ಅನ್ನುವ ವಿಭಜನೆ ಕಂಡು ಬಂದಿತು. ಅಷ್ಟು ಹೊತ್ತಿಗೆ ಖರೆ ಮತ್ತು ಶುಕ್ಲ ನಡುವೆ ಮುನಿಸು ಉಂಟಾಗಿತ್ತು. ಅದರಿಂದ ತನ್ನ ಸ್ಥಾನ ಅಭದ್ರ ಎಂದು ಭಾವಿಸಿದ ಡಾ॥ ಖರೆಯವರು ಗೌರ್ನರ್ ಸರ್ ಹೈಡ್ ಗವಾನ್‌ಗೆ ಹತ್ತಿರವಾಗಲು ಹೊರಟರು.

೧೯೩೮ರ ಮಾರ್ಚ್‌ನಲ್ಲಿ ಡಾ॥ ಖರೆಯವರ ಮಂತ್ರಿಮಂಡಲದಲ್ಲಿ ಕಾನೂನು ಮಂತ್ರಿಯಾಗಿದ್ದ ಮಹಮ್ಮದ್ ಯೂಸೂಫ್ ಷರೀಫ್ ಒಂದು ಅನುಚಿತ ಕೆಲಸ ಮಾಡಿದನು. ಒಬ್ಬ ೧೩ ವರ್ಷದ ಹರಿಜನ ಹುಡುಗಿಯ ಮಾನಭಂಗ ಮಾಡಿದ್ದಕ್ಕೆ ಸೆರೆಮನೆ ಶಿಕ್ಷೆ ವಿಧಿಸಲ್ಪಟ್ಟಿದ್ದ ಇಬ್ಬರು ಮುಸ್ಲಿಮರನ್ನು ಅವಧಿಗೆ ಮುನ್ನ ಬಿಡುಗಡೆಗೆ ಷರೀಫ್ ಆದೇಶಿಸಿದನು. ತಕ್ಷಣ ದೊಡ್ಡ ಗಲಾಟೆ ಆರಂಭವಾಯಿತು. ಷರೀಫ್‌ನ ಏವರಣೆಯನ್ನು ಪಡೆದು ತಮಗೆ ಕಳುಹಿಸುವಂತೆ ಪಟೇಲರು ಡಾ॥ ಖರೆಗೆ

ತಿಳಿಸಿದರು. ಪಟೇಲರ ಮಧ್ಯ ಪ್ರವೇಶವನ್ನು ಡಾ॥ ಖರೆ ಇಷ್ಟಪಡಲಿಲ್ಲ. ಅವರು, ಕಾಂಗ್ರೆಸ್ ಶಾಸಕಾಂಗ ಪಕ್ಷವು ಷರೀಫ್ಗರನ್ನು ಕ್ಷಮಿಸುವಂತೆ ಮಾಡಿ, ಆನಂತರ 'ವಿಷಯ ಸಮಾಪ್ತಿಯಾಗಿದೆ' ಎಂದು ಪಟೇಲರಿಗೆ ತಿಳಿಸಿದರು. ಡಾ॥ ಖರೆಯವರ ಈ ಕ್ರಮದಿಂದ ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡ್ನ ಛೇರ್ಮನ್ ಪಟೇಲರಿಗೆ ಸಮಾಧಾನವಾಗಲಿಲ್ಲ. ಅವರ ಕೋರಿಕೆಯ ಮೇಲೆ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಷರೀಫ್ಗರವರ ಕ್ರಮವನ್ನು ಪರಿಶೀಲಿಸುವಂತೆ ಕಲ್ಕತ್ತ ಶ್ರೇಷ್ಠ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶ ಸರ್ ಮನ್ಮಥನಾಥ ಮುಖರ್ಜಿಯವರನ್ನು ಕೋರಿತು.

ಮುಖರ್ಜಿಯವರು ಮೇ ೭ರಂದು ತಮ್ಮ ಅಭಿಪ್ರಾಯವನ್ನು ಪ್ರಕಟಿಸಿ, 'ಷರೀಫ್ಗರವರು ತೀರ್ಮಾನಕ್ಕೆ ಬರುವುದರಲ್ಲಿ ಗಂಭೀರ ತಪ್ಪನ್ನು ಮಾಡಿದ್ದಾರೆ, ಅದು ನ್ಯಾಯಾಘಾತವನ್ನುಂಟು ಮಾಡಿದೆ' ಎಂದರು. ಮಾರನೆಯ ದಿನ ಮಂತ್ರಿಗಳಾದ ಶುಕ್ಲ, ಮಿಶ್ರ, ಡಿ.ಕೆ. ಮೆಹ್ತ ಮತ್ತು ಪಿ.ಬಿ. ಗೋರೆ ತಮ್ಮ ಮಂತ್ರಿಪದವಿಗೆ ರಾಜಿನಾಮೆ ನೀಡಿದರು. ಡಾ॥ ಖರೆಯವರ ಗಾದಿ ಅಲುಗಾಡಲು ಆರಂಭವಾಯಿತು.

ಆಗ ಪಟೇಲರು ಎಲ್ಲಾ ಕಾಂಗ್ರೆಸ್ ಶಾಸಕರ ಸಭೆಯನ್ನು ಪಂಚಮರಾಹಿಯಲ್ಲಿ ಕರೆದರು. ಪಟೇಲರ ಅಧ್ಯಕ್ಷತೆಯಲ್ಲಿ ಮೇ ೨೫ರಂದು ನಡೆದ ಆ ಸಭೆಯಲ್ಲಿ ಖರೆಯವರೇ ಪ್ರಧಾನಮಂತ್ರಿಯಾಗಿ ಮುಂದುವರಿಯಬೇಕೆಂದೂ, ಆದರೆ ಅವರ ಖಾತೆಗಳನ್ನು ಬೇರೆ ಮಂತ್ರಿಗಳಿಗೆ ಹಂಚಬೇಕೆಂದೂ, ಖರೆಯವರು ಮಂತ್ರಿಗಳ ನಡುವಣ ಸಮನ್ವಯದ ಕೆಲಸವನ್ನು ಮಾತ್ರ ಮಾಡಬೇಕೆಂದು ತೀರ್ಮಾನಿಸ ಲಾಯಿತು. ರಾಜಿನಾಮೆ ಇತ್ತಿದ್ದ ಮಂತ್ರಿಗಳು ಅದನ್ನು ವಾಪಸ್ಸು ಪಡೆದರು. ಈ ತೀರ್ಮಾನವನ್ನು ಡಾ॥ ಖರೆಯವರೂ ಒಪ್ಪಿದರು. ಆದರೆ ಅದನ್ನು ಕಾರ್ಯಗತ ಗೊಳಿಸಲು ಕ್ರಮಗಳನ್ನು ತೆಗೆದುಕೊಳ್ಳಲಿಲ್ಲ. ಅದಕ್ಕೆ ಬದಲಾಗಿ ಗೌರ್ನರ್ ಫ್ರಾನ್ಸಿಸ್ ವರ್ನರ್ ವೈಲಿ ನೆರವಿನಿಂದ ಅಧಿಕಾರದಲ್ಲಿ ಮುಂದುವರಿಯಲು ಒಂದು ಯೋಜನೆಯನ್ನು ಸಿದ್ಧ ಪಡಿಸಿದರು. ಅದರಂತೆ ಜುಲೈ ೧೩ರಂದು ಖರೆಯವರು ಇಬ್ಬರು ಮಂತ್ರಿಗಳು ಆರ್.ಎಂ. ದೇಶ್ಮುಖ್ ಮತ್ತು ಗೋಳೆಯವರ, ರಾಜಿನಾಮೆ ಯನ್ನು ಪಡೆದುಕೊಂಡು ಗೌರ್ನರನಿಗೆ ಕಳುಹಿಸಿದರು. ಆದರೆ ಜುಲೈ ೧೫ರಂದು ಪಟೇಲರಿಗೆ ಬರೆದ ಪತ್ರದಲ್ಲಿ ಆ ವಿಷಯವನ್ನು ಮತ್ತು ಗೌರ್ನರ್ ಜೊತೆ ಮಾತನಾಡಿದ ವಿಷಯವನ್ನು ತಿಳಿಸದೆ ಮುಚ್ಚಿಟ್ಟರು. ಅವರು ತಮ್ಮ ಪತ್ರದಲ್ಲಿ 'ಘಟನೆಗಳು ನಡೆದಂತೆ ಪಟೇಲರಿಗೆ ತಿಳಿಸುವುದಾಗಿ ಮತ್ತು ಅಂತಿಮ ತೀರ್ಮಾನವನ್ನು ಪಟೇಲರಿಗೆ ಬಿಡುವುದಾಗಿ' ಬರೆದಿದ್ದರು.

ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಯು ವಾರ್ಧದಲ್ಲಿ ಜುಲೈ ೨೩ರಂದು ನಡೆಯುವುದಿತ್ತು. ಅದಕ್ಕಿಂತ ಮುಂಚೆ ತಮ್ಮ ಯೋಜನೆಯನ್ನು ಪೂರ್ಣಗೊಳಿಸಬೇಕೆಂದು ಡಾ॥ ಖರೆ ನಿರ್ಧರಿಸಿದರು. ಅವರಿಗೆ ಗೌರ್ನರ್ ವೈಲಿ ನೆರವು ನೀಡಿದರು. ಗೌರ್ನರ್ ವೈಲಿ, ದೇಶ್‌ಮುಖ್ ಮತ್ತು ಗೋಳೆಯವರ ರಾಜಿನಾಮೆಗಳನ್ನು ಜುಲೈ ೨೦ರ ರಾತ್ರಿ ೨ ಘಂಟೆಯಲ್ಲಿ ಅಂಗೀಕರಿಸಿ ಸಹಿ ಮಾಡಿದರು ಮತ್ತು ಜುಲೈ ೨೧ರಂದು ಶುಕ್ಲ, ಮಿಶ್ರ ಮತ್ತು ಮೆಹ್ತರವರಿಗೆ ರಾಜಿನಾಮೆ ನೀಡುವಂತೆ ಸೂಚಿಸಿದರು. ಆ ಮೂವರು ಜುಲೈ ೨೩ರವರೆಗೆ ಕಾಯುವಂತೆ ಗೌರ್ನರನನ್ನು ಕೋರಿದರು. ಆದರೆ ಅದನ್ನು ಒಪ್ಪದೆ ಗೌರ್ನರನು ಅವರನ್ನು ಜುಲೈ ೨೧ರ ಬೆಳಗಿನ ಜಾವ ೫ ಘಂಟೆಗೆ ವಜ ಮಾಡಿ, ಅದೇ ದಿನ ಡಾ॥ಖರೆಯವರ ನೇತೃತ್ವದಲ್ಲಿ ಹೊಸ ಮಂತ್ರಿಮಂಡಲವನ್ನು ಅಧಿಕಾರಕ್ಕೆ ತಂದನು. ಆ ಮಂತ್ರಿಮಂಡಲದಲ್ಲಿ ಶುಕ್ಲ, ಮಿಶ್ರ ಮತ್ತು ಮೆಹ್ತ ಇರಲಿಲ್ಲ.

ಈ ನಡವಳಿಕೆಗಳಿಂದ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಆಘಾತಗೊಂಡಿತು. ಅದು ಡಾ॥ ಖರೆಯವರನ್ನು ವಾರ್ಧಕ್ಕೆ ಕರೆಸಿತು. ಮಧ್ಯ ಪ್ರಾಂತ್ಯಗಳ ರಾಜಧಾನಿ ನಾಗಪುರದಿಂದ ವಾರ್ಧಕ್ಕೆ ೪೯ ಮೈಲಿಗಳು. ಖರೆ ತಮ್ಮ ತಪ್ಪನ್ನು ಒಪ್ಪಿಕೊಂಡು ಪ್ರಧಾನಮಂತ್ರಿ ಸ್ಥಾನಕ್ಕೆ ರಾಜಿನಾಮೆ ಕೊಡುವುದಾಗಿ ಹೇಳಿದರು. ಕಾಂಗ್ರೆಸ್ ಅಧ್ಯಕ್ಷ ಸುಭಾಷ್ ಚಂದ್ರ ಬೋಸ್‌ರವರು ಆ ನಿರ್ಧಾರವನ್ನು ಗೌರ್ನರನಿಗೆ ಅಲ್ಲಿಂದಲೇ ಆಗಲೇ ದೂರವಾಣಿ ಮೂಲಕ ತಿಳಿಸುವಂತೆ ಖರೆಯವರಿಗೆ ಸೂಚಿಸಿದರು. ಆಗ ರಾತ್ರಿ ೧೦ ಘಂಟೆ. ಡಾ॥ ಖರೆ 'ಅವರು ಮಲಗಿರಬಹುದು' ಎಂದರು. ಪಟೇಲರಿಗೆ ಸಿಟ್ಟು ಬಂದಿತು. ಅವರು, "ನಿಮ್ಮ ಗೌರ್ನರ್ ತಡವಾಗಿ ಮಲಗುತ್ತಾರೆ ಎನ್ನುವುದನ್ನು ಮರೆಯಬೇಡಿ, ಡಾಕ್ಟರ್. ಅವರು ನಿಮ್ಮ ಮಂತ್ರಿಗಳನ್ನು ರಾತ್ರಿ ೧೧.೫೦ರಲ್ಲಿ ಕರೆಸಿ, ರಾಜಿನಾಮೆ ಕೊಡುವಂತೆ ಕೇಳಲಿಲ್ಲವೆ?" ಎಂದು ಗುಡುಗಿದರು. ಡಾ॥ ಖರೆ ಮರು ಮಾತಾಡದೆ ಗೌರ್ನರ್‌ಗೆ ದೂರವಾಣಿ ಕರೆ ಮಾಡಿ ರಾಜಿನಾಮೆ ವಿಷಯವನ್ನು ತಿಳಿಸಿದರು.[೧೨೫]

ಮುಂದೆ ಶುಕ್ಲರವರು ಪ್ರಧಾನ ಮಂತ್ರಿಯಾಗಿ ಮಂತ್ರಿಮಂಡಲ ರಚಿಸಿದರು.

ಡಾ॥ ಖರೆಯವರ ನಡವಳಿಕೆಯಿಂದ ಕಾಂಗ್ರೆಸ್ಸಿನ ಘನತೆಗೆ ಧಕ್ಕೆ ಬಂದಿತು. ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಒಂದು ಠರಾವನ್ನು ಅಂಗೀಕರಿಸಿ, 'ಡಾ॥ ಖರೆಯವರು ಕಾಂಗ್ರೆಸ್‌ನಲ್ಲಿ ಯಾವುದೇ ಸ್ಥಾನವನ್ನು ಪಡೆಯಲು ಅರ್ಹರಲ್ಲ' ಎಂದು ತೀರ್ಮಾನಿಸಿತು. ಅದು ಗೌರ್ನರನ ಅನುಚಿತ ನಡವಳಿಕೆಯನ್ನೂ ಸಹ ಖಂಡಿಸಿತು.

ನಂತರ ಡಾ॥ ಖರೆ ಹಿಂದೂ ಮಹಾ ಸಭಾವನ್ನು ಸೇರಿದರು. ಪಟೇಲರ ವಿರುದ್ಧ ಅಪಪ್ರಚಾರದ ಆಂದೋಲನವನ್ನೇ ನಡೆಸಿದರು. ಅದಕ್ಕೆಲ್ಲ ಅಂಜುವವರಲ್ಲ ಪಟೇಲರು. ಅವರು ಆಗಸ್ಟ್ ೫ರಂದು ಒಂದು ಸಾರ್ವತ್ರಿಕ ಪ್ರಕಟಣೆ ಹೊರಡಿಸಿ ತಮ್ಮ ಮೇಲಿನ ಆಪಾದನೆಗಳಿಗೆ ಸೂಕ್ತ ಉತ್ತರವನ್ನು ನೀಡಿದರು. ಸುಭಾಷ್ ಮತ್ತು ಗಾಂಧೀಜಿಯೂ ಪಟೇಲರ ಕಾರ್ಯವನ್ನು ಸಮರ್ಥಿಸಿದರು.

ಸುಭಾಷ್‌ರವರು ೧೯೩೮ರಲ್ಲಿ ಒಂದು ಹೇಳಿಕೆಯಲ್ಲಿ ಇಂತೆಂದರು. ಡಾ॥ ಖರೆಯವರಿಗೆ ಏನು ಅನ್ಯಾಯವನ್ನೂ ಮಾಡಿಲ್ಲ. ಅವರನ್ನು ಕಠಿಣವಾಗಿ ನಡೆಸಿಕೊಂಡೂ ಇಲ್ಲ.

ಮುಂದೆ ಸ್ವತಃ ಗೌರ್ನರ್ ವೈಲಿಯವರು ತಮ್ಮ ತಪ್ಪನ್ನು ಅರ್ಥಮಾಡಿಕೊಂಡು, "ಡಾ॥ ಖರೆ ಒಬ್ಬ ಮೂರ್ಖ, ಆದರೆ ನಾನು ಅವರಿಗಿಂತ ದೊಡ್ಡ ಮೂರ್ಖ" ಎಂದರು.[೧೨೬]

೧೨.೧೩ ನೆಹರು ಒಡನೆ ಚಕಮಕಿ

೧೯೩೭ರ ಸೆಪ್ಟೆಂಬರ್‌ನಲ್ಲಿ ವಲ್ಲಭಭಾಯ್‌ರವರು ನೆಹರುರವರನ್ನು ಗುಜರಾತ್‌ಗೆ ಆಹ್ವಾನಿಸಿ ಗತಿಸಿದ ಕಮಲ ನೆಹರು ಹೆಸರಿನಲ್ಲಿ ಒಂದು ಆಸ್ಪತ್ರೆಯನ್ನು ನಿರ್ಮಿಸಲು ಒಂದು ದೊಡ್ಡ ಮೊತ್ತದ ಹಣ ಸಂಗ್ರಹಿಸಿ ನೀಡಿದರು. ಆ ಕಾರ್ಯಕ್ಕಾಗಿ ಪಟೇಲ್ ಮತ್ತು ನೆಹರು ೫ ದಿನಗಳ ಕಾಲ ಅವಿಶ್ರಾಂತವಾಗಿ ಗುಜರಾತ್‌ನಲ್ಲಿ ಸಂಚರಿಸಿದರು.

ಆದಾಗ್ಯೂ ಆ ವರ್ಷದ ಅಂತ್ಯದ ಹೊತ್ತಿಗೆ ಪಟೇಲ್ ಮತ್ತು ನೆಹರು ನಡುವೆ ಕೆಲವು ಬಿರುಕುಗಳು ಉಂಟಾದುವು.

ಬೊಂಬಾಯಿ ಪ್ರಾಂತ್ಯದಲ್ಲಿ ಹಿಂದಿನ ಬ್ರಿಟಿಷ್ ಆಡಳಿತವು ಕೆಲವು ಕಮ್ಯುನಿಸ್ಟ್ ನಾಯಕರನ್ನು ಬಂಧಿಸಿತ್ತು. ಆ ನಾಯಕರನ್ನು ತಕ್ಷಣ ಬಿಡುಗಡೆ ಮಾಡುವಂತೆ ಹೊಸ ಮಂತ್ರಿ ಮಂಡಲದಲ್ಲಿ ಗೃಹ ಮಂತ್ರಿಯಾಗಿದ್ದ ಕೆ.ಎಂ. ಮುನ್ಷಿಯವರಿಗೆ ಜವಹರಲಾಲ್ ನೆಹರು ಸೂಚಿಸಿದರು. ಆದರೆ ಮುನ್ಷಿಯವರು ಅವರನ್ನು ತಕ್ಷಣ ಬಿಡುಗಡೆ ಮಾಡಲು ಆಗಲಿಲ್ಲ. ಏಕೆಂದರೆ ಗೌರ್ನರ್ ಲಾರ್ಡ್ ಬ್ರಬೋರ್ನ್‌ರವರು, "ಅವರುಗಳ ಬಿಡುಗಡೆಯನ್ನು ನೀನು ನನ್ನ ಹೆಣದ ಮೇಲೆ ಮಾಡಬೇಕು," ಎಂದಿದ್ದರು. ಅದರಿಂದ ಮುನ್ಷಿಯವರು ಆ ವಿಷಯವನ್ನು ಪರಿಶೀಲಿಸಲು ನೆಹರು ಬಳಿ ಸ್ವಲ್ಪ ಕಾಲಾವಕಾಶವನ್ನು ಕೋರಿದರು. ಆದರೆ ನೆಹರು, "ನೀನು ಈಗಾಗಲೇ

ಪೊಲೀಸ್ ಅಧಿಕಾರಿಯಾಗಿಬಿಟ್ಟಿದ್ದೀಯೆ," ಎಂದು ಕಪಾಳಕ್ಕೆ ಹೊಡೆದ ಹಾಗೆ ಹೇಳಿದರು. ಇದು ಮುನ್ಷಿಯವರಿಗೆ ಅಸಮಾಧಾನವನ್ನುಂಟು ಮಾಡಿತು. ಬೊಂಬಾಯಿ ಜನರ ಜೀವನದ ಮೇಲೆ ತೀವ್ರ ಪರಿಣಾಮವನ್ನು ಬೀರುವ ವಿಷಯಗಳ ಬಗೆಗೆ ತಮ್ಮ ಮನಸ್ಸಿಗೆ ವಿರುದ್ಧವಾದ ಕ್ರಮ ಕೈಗೊಳ್ಳಲು ಅವರು ಸಿದ್ಧವಿರಲಿಲ್ಲ.

ಅವರು ವಾರಾಂತ್ಯದಲ್ಲಿ ವಾರ್ಧಾಕ್ಕೆ ಹೋಗಿ ಗಾಂಧೀಜಿಯವರಿಗೆ ವಿಷಯವನ್ನು ವಿವರವಾಗಿ ತಿಳಿಸಿದರು. ಗಾಂಧೀಜಿಯವರು ಯೋಚಿಸಲು ಒಂದು ಕ್ಷಣವನ್ನೂ ತೆಗೆದುಕೊಳ್ಳದೆ, ಹೇಳಿದರು, "ಬೊಂಬಾಯಿಯ ಕಾನೂನು ಮತ್ತು ಶಾಂತಿ ಪಾಲನೆಯ ಕೆಲಸವನ್ನು ನಿನಗೆ ವಹಿಸಿದ್ದೇವೆ. ಅದಕ್ಕಾಗಿ ಕೆಲಸ ಮಾಡುವುದು ನಿನ್ನ ಕರ್ತವ್ಯ. ವಿಷಯ ಪರಿಶೀಲನೆಗೆ ನಿನಗೆ ಬೇಕಾದಷ್ಟು ಕಾಲವನ್ನು ತೆಗೆದುಕೋ. ನಿನಗೆ ಸರಿ ಅನ್ನಿಸಿದ ತೀರ್ಮಾನವನ್ನು ತೆಗೆದುಕೋ. ನಿನ್ನ ಸಲಹೆಯನ್ನು ಒಪ್ಪಲು ಬ್ರಬೋರ್ನ್ ನಿರಾಕರಿಸಿದರೆ ನಿನಗೆ ಒಪ್ಪಿಗೆ ಆಗದ ಆದೇಶವನ್ನು ನೀಡುವಂತೆ ಜವಹರ ಒತ್ತಾಯಿಸಿದರೆ ರಾಜಿನಾಮೆಯನ್ನು ನೀಡಲು ನನ್ನ ಅನುಮತಿ ಇದೆ." ನಂತರ ಮುನ್ಷಿಯವರು ಸರ್ದಾರರಿಗೆ ವಿಷಯ ತಿಳಿಸಿದರು. ಸರ್ದಾರರು, 'ನಿನ್ನ ಆತ್ಮಸಾಕ್ಷಿಯಂತೆ ಮಾಡು, ಜವಹರನ ಆದೇಶದಂತೆ ಮಾಡಬೇಡ' ಎಂದರು.[೧೨೭] ಕಮ್ಯುನಿಸ್ಟ್ ಪಕ್ಷವು ಮಿಂಚಿನ ಮುಷ್ಕರ ನಡೆಸುವಂತೆ ಗಿರಣಿಗಳ ಕಾರ್ಮಿಕರಿಗೆ ಕರೆ ಕೊಟ್ಟಾಗ, ಆ ಮುಷ್ಕರದಲ್ಲಿ ಭಾಗವಹಿಸಲು ಇಷ್ಟ ಪಡದ ಕೆಲಸಗಾರರಿಗೆ ಬೊಂಬಾಯಿ ಸರ್ಕಾರವು ರಕ್ಷಣೆಯನ್ನು ನೀಡಿತು. ಅದೂ ಸಹ ನೆಹರುಗೆ ಒಪ್ಪಿಗೆ ಆಗಲಿಲ್ಲ.

ಎಸ್.ಎಸ್. ಬಾಟ್ಲಿವಾಲ ಒಬ್ಬ ಬೊಂಬಾಯಿಯ ಸಮಾಜವಾದಿ. ಹಿಂಸೆಗೆ ಪ್ರಚೋದಿಸಿದ್ದಕ್ಕಾಗಿ ಅವನನ್ನು ಮದ್ರಾಸ್ ಪ್ರಾಂತ್ಯ ಸರ್ಕಾರವು ವೆಲ್ಲೂರಿನಲ್ಲಿ ದಸ್ತಗಿರಿ ಮಾಡಿತು. ಅದು ನೆಹರುಗೆ ಒಪ್ಪಿಗೆ ಆಗಲಿಲ್ಲ. ಪ್ರಾಂತೀಯ ಸರ್ಕಾರಗಳ ಅಧಿಕಾರಕ್ಕೆ ಒಂದು ಎಲ್ಲೆಯನ್ನು ತರಬೇಕು ಅನ್ನಿಸಿತು ಅವರಿಗೆ. ಬಾಟ್ಲಿವಾಲನಂತಹವರನ್ನು ದಸ್ತಗಿರಿ ಮಾಡುವ ಮುಂಚೆ ಪ್ರಾಂತ್ಯ ಸರ್ಕಾರಗಳು ಕಾರ್ಯಕಾರಿ ಸಮಿತಿಯೊಡನೆ ಸಮಾಲೋಚಿಸಬೇಕು ಅನ್ನುವ ನಿಯಮವನ್ನು ತರಬೇಕು, ಎನ್ನುವ ಸಲಹೆಯನ್ನು ನೆಹರು ನೀಡಿದರು. ಸಿ. ರಾಜಗೋಪಾಲಾಚಾರಿಯವರು ಆ ಸಲಹೆಯನ್ನು ವಿರೋಧಿಸಿದರು. ಗಾಂಧೀಜಿಯು ಸಹ ಆ ನಿಯಮವನ್ನು ಒಪ್ಪಲಿಲ್ಲ. ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ನೆಹರುರವರ ಸೂಚನೆಯನ್ನು ತಳ್ಳಿಹಾಕಿತು. ಅದೇ ತರಹ ಮತ್ತೊಂದು ಸಂಗತಿ ನಡೆಯಿತು.

ರಾಜರಾಡಳಿತದ ರಾಜ್ಯಗಳಲ್ಲಿನ ವಿಷಯಗಳಲ್ಲಿ ಕಾಂಗ್ರೆಸ್ಸು ಪ್ರವೇಶಿಸಬೇಕೆಂಬುದು ನೆಹರುರವರ ಅಭಿಪ್ರಾಯವಾಗಿತ್ತು. ಆದರೆ ಗಾಂಧಿ ಮತ್ತು ಪಟೇಲ್ ಅದನ್ನು ಒಪ್ಪಲಿಲ್ಲ. ಆ ರಾಜ್ಯಗಳ ವ್ಯವಹಾರಗಳಲ್ಲಿ ಕಾಂಗ್ರೆಸ್ಸು ಮಧ್ಯೆ ಪ್ರವೇಶಿಸಿದರೆ ಆ ರಾಜರುಗಳನ್ನು ಬ್ರಿಟಿಷ್ ಸರ್ಕಾರದ ತೆಕ್ಕೆಗೆ ನೂಕಿದಂತಾಗುತ್ತದೆ. ಒಂದು ರಾಜ್ಯದಲ್ಲಿನ ಅಧಿಪತಿಯ ವಿಧಾನಗಳ ವಿರುದ್ಧ ಹೋರಾಟದ ಅವಶ್ಯಕತೆ ಉದ್ಭವವಾದರೆ, ಆ ಹೋರಾಟವನ್ನು ಅಲ್ಲಿಯ ಜನರು ನಡೆಸಬೇಕೇ ಹೊರತು, ಕಾಂಗ್ರೆಸ್ ಅಲ್ಲ ಅನ್ನುವುದು ಕಾಂಗ್ರೆಸ್ಸಿನ ನೀತಿಯಾಗಿತ್ತು. ಆದರೆ ಬದಲಾವಣೆಯನ್ನು ನೆಹರು ಬಯಸಿದ್ದರು. ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ನೆಹರು ಬಯಸಿದ ಬದಲಾವಣೆಯನ್ನು ತಳ್ಳಿಹಾಕಿತು.[೧೨೮]

೧೨.೧೪ ತ್ರಿಪುರಿ ಕಾಂಗ್ರೆಸ್ ಅಧಿವೇಶನ

೧೯೩೯ರ ಮಾರ್ಚ್‌ನಲ್ಲಿ ಕಾಂಗ್ರೆಸ್ಸಿನ ೫೨ನೆ ವಾರ್ಷಿಕ ಅಧಿವೇಶನವು ಮಧ್ಯ ಪ್ರಾಂತ್ಯದ ಜಬ್ಬಲ್‌ಪುರ ಜಿಲ್ಲೆಯ ತ್ರಿಪುರಿಯಲ್ಲಿ ನಡೆಯಿತು. ೧೯೩೮ರ ಅಂತ್ಯಭಾಗದಲ್ಲಿಯೆ ಸುಭಾಷ್‌ರವರು ಎರಡನೆ ಬಾರಿಗೆ ಕಾಂಗ್ರೆಸ್ ಅಧ್ಯಕ್ಷನಾಗ ಬೇಕೆಂಬ ತಮ್ಮ ಇಂಗಿತವನ್ನು ಗಾಂಧೀಜಿಗೆ ತಿಳಿಸಿದರು. ಆದರೆ ಗಾಂಧೀಜಿ ಒಪ್ಪಲಿಲ್ಲ. ತಾವು ಸುಭಾಷ್‌ರಿಗೆ ಬೆಂಬಲ ನೀಡಲು ಸಾಧ್ಯವಿಲ್ಲ, ಎಂದು ಅವರು ತಿಳಿಸಿದರು. ಆದರೂ ಸುಭಾಷರು ತಮ್ಮ ಸ್ವಂತ ಇರಾದೆಯ ಮೇಲೆ ಚುನಾವಣೆಯಲ್ಲಿ ಸ್ಪರ್ಧಿಸಿದರು.

ಆ ವರ್ಷ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ವಿವಿಧ ಪ್ರಾಂತ್ಯ ಕಾಂಗ್ರೆಸ್ ಸಮಿತಿಗಳಿಂದ ನಾಲ್ವರು ಸೂಚಿಸಲ್ಪಟ್ಟಿದ್ದರು. ಅವರು ಸುಭಾಷ್, ಸರ್ದಾರ್, ಮೌಲಾನಾ ಆಜ಼ಾದ್ ಮತ್ತು ಪಟ್ಟಾಭಿ ಸೀತಾರಾಮಯ್ಯ. ಬಾರ್ಡೋಲಿಯಲ್ಲಿ ಸಭೆ ಸೇರಿದ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಅಧ್ಯಕ್ಷ ಸ್ಥಾನಕ್ಕೆ ಆಜ಼ಾದ್‌ರನ್ನು ಆರಿಸಿತು. ಮೊದಲು ಆಜ಼ಾದರು ಒಪ್ಪಲಿಲ್ಲವಾದರೂ ಕೊನೆಯಲ್ಲಿ ಒಪ್ಪಿದರು. ಅವರು ಒಪ್ಪಿದ್ದರಿಂದ ಸರ್ದಾರರು ತಮ್ಮ ಹೆಸರನ್ನು ವಾಪಸ್ಸು ತೆಗೆದುಕೊಂಡರು. ಬೊಂಬಾಯಿಗೆ ಪ್ರಯಾಣ ಮಾಡಿದ ಆಜ಼ಾದರು ನಾಲ್ಕು ದಿನಗಳ ನಂತರ ತಮ್ಮ ಒಪ್ಪಿಗೆಯನ್ನು ವಾಪಸ್ಸು ಪಡೆದ ಪತ್ರವನ್ನು ಕಳುಹಿಸಿದರು. ಹೀಗಾಗಿ ಕಣದಲ್ಲಿ ಇಬ್ಬರು ಉಳಿದರು. ಗಾಂಧೀಜಿಯವರು ಕಾಂಗ್ರೆಸ್ಸಿನ ನಾಯಕತ್ವ ವಹಿಸಿಕೊಂಡಾಗಿನಿಂದಲೂ ಅಧ್ಯಕ್ಷರನ್ನು ಅವಿರೋಧವಾಗಿ ಆರಿಸುವ ಪದ್ಧತಿ ಬೆಳೆದು ಬಂದಿತ್ತು. ಅದರಿಂದ ಗಾಂಧೀಜಿ ಮತ್ತು ನೆಹರು ಸ್ಪರ್ಧೆಯಿಂದ ಹಿಂದೆ ಸರಿಯುವಂತೆ ಸುಭಾಷರಿಗೆ ಸೂಚಿಸಿದರು. ಆದರೆ ಸುಭಾಷರು ಒಪ್ಪಲಿಲ್ಲ. ೧೯೩೯ರ ಜನವರಿ ೨೯ರಂದು ಚುನಾವಣೆ

ನಡೆದು ಸುಭಾಷರು ೯೫ ಮತಗಳು ಹೆಚ್ಚು ಪಡೆದು ಚುನಾಯಿತರಾದರು. ಪಟ್ಟಾಭಿ ಸೀತಾರಾಮಯ್ಯನವರು ತಮ್ಮ ಅಭ್ಯರ್ಥಿ ಎಂದು ಗಾಂಧೀಜಿ ಬಿಂಬಿಸಿದ್ದುದರಿಂದ ಅದು ಗಾಂಧೀಜಿಯ ಸೋಲು ಎಂದೇ ಪರಿಗಣಿತವಾಯಿತು.

ಸುಭಾಷರು ಮತ್ತೆ ಕಾಂಗ್ರೆಸ್ ಅಧ್ಯಕ್ಷರಾಗುವುದು ಪಟೇಲರಿಗೆ ಒಪ್ಪಿಗೆ ಆಗಲಿಲ್ಲ. ವಾಸ್ತವವಾಗಿ ಮೊದಲನೆ ಬಾರಿಗೆ ಅವರನ್ನು ಅಧ್ಯಕ್ಷರನ್ನಾಗಿ ಮಾಡಲು ಗಾಂಧೀಜಿ ಸೂಚಿಸಿದಾಗಲೇ ಪಟೇಲರು ವಿರೋಧಿಸಿದ್ದರು. ಆದರೆ ಗಾಂಧೀಜಿ "ಈ ಬಾರಿ ಸುಭಾಷರೇ ಅಧ್ಯಕ್ಷರಾಗಬೇಕು" ಎಂದಿದ್ದರು. ಪಟೇಲರು ಸುಮ್ಮನಾಗಿದ್ದರು. ಈಗ ಅವರು ಸುಭಾಷರನ್ನು ಒಪ್ಪದಿರುವುದಕ್ಕೆ ಕೆಲವು ಕಾರಣಗಳಿದ್ದುವು.

ಆಗ ಇಂಗ್ಲೆಂಡ್ ಮತ್ತು ಜರ್ಮನಿ ನಡುವೆ ಯುದ್ಧ ಆರಂಭವಾಗುವ ಸೂಚನೆಗಳಿದ್ದುವು. ಇಂಗ್ಲೆಂಡು ಜರ್ಮನಿಯನ್ನು ಎದುರಿಸುವ ಸ್ಥಿತಿಯಲ್ಲಿರಲಿಲ್ಲ. ಅದು ದುರ್ಬಲವಾಗಿತ್ತು. ಇಂಗ್ಲೆಂಡಿನ ಆ ದುಸ್ಥಿತಿಯಿಂದ ಪ್ರಯೋಜನ ಪಡೆಯಲು ಸುಭಾಷರು ಆತುರವಾಗಿದ್ದರು, ಆದರೆ ಸರ್ದಾರರು ಆತುರರಾಗಿರಲಿಲ್ಲ. ಬ್ರಿಟಿಷರ ವಿರುದ್ಧ ರಾಷ್ಟ್ರ ವ್ಯಾಪಿ ಸಿವಿಲ್ ಶಾಸನ ಭಂಗ ಚಳವಳಿಯನ್ನು ಆರಂಭಿಸಲು ಅದು ಸಕಾಲ ಎಂದು ಸುಭಾಷರು ನಂಬಿದ್ದರು. ಆದರೆ ಪಟೇಲರು ಆ ಸಮಯದಲ್ಲಿ (೧೯೩೯ರಲ್ಲಿ) ಪ್ರಾಂತ್ಯಗಳಲ್ಲಿ ಅಧಿಕಾರವನ್ನು ಬಲ ಪಡಿಸುವುದು ಕಾಂಗ್ರೆಸ್ಸಿನ ಪ್ರಮುಖ ಕಾರ್ಯ ಎಂದು ಭಾವಿಸಿದ್ದರು. ಎಲ್ಲಾ ಕಾಂಗ್ರೆಸ್ ಮಂತ್ರಿ ಮಂಡಲಗಳನ್ನು ವಾಪಸ್ಸು ಕರೆಸಿ ಇಂಗ್ಲಿಷ್ ಸರ್ಕಾರದ ವಿರುದ್ಧ ಸಮರ ಹೂಡಲು ಸುಭಾಷರು ಸಿದ್ಧವಾಗಿರುವಂತೆ ಕಂಡುಬರುತ್ತಿತ್ತು. ಆಗ ಅದು ಅನವಶ್ಯಕವಾದ ಮತ್ತು ಅವಿವೇಕದ ಕ್ರಮ ಎಂದು ಪಟೇಲರು ಪರಿಗಣಿಸಿದ್ದರು. ಸರ್ದಾರ್ ಮತ್ತು ಇತರ ಎಲ್ಲಾ ಹಳೆಯ ನಾಯಕರು ಕಾಂಗ್ರೆಸ್ಸಿಗೆ ಗಾಂಧೀಜಿ ಅವಶ್ಯಕ ಮತ್ತು ಅನಿವಾರ್ಯ ಎಂದು ನಂಬಿದ್ದರೆ, ಸುಭಾಷರು ಹಾಗೆ ಭಾವಿಸಿರಲಿಲ್ಲ. ಕಾಂಗ್ರೆಸ್ ಅಧ್ಯಕ್ಷರು ಒಬ್ಬ ಪ್ರಧಾನಮಂತ್ರಿಯ ತರಹ ಅಧಿಕಾರಗಳನ್ನು ಹೊಂದಿರಲಿಲ್ಲ. ಅವರು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಮತ್ತು ಅಖಿಲ ಭಾರತ ಕಾಂಗ್ರೆಸ್ ಸಮಿತಿ ತೆಗೆದುಕೊಂಡ ತೀರ್ಮಾನಗಳಿಗೆ ಬದ್ಧರಾಗಿರಬೇಕಾಗಿತ್ತು. ಆದರೆ ಸುಭಾಷರು ಅದನ್ನು ಬದಲಾಯಿಸಲು ಬಯಸಿದ್ದರು ಮತ್ತು ಅಧ್ಯಕ್ಷ ಸ್ಥಾನವನ್ನು ಹೆಚ್ಚು ಶಕ್ತಿಯುತವನ್ನಾಗಿ ಮಾಡಲು ಮತ್ತು ಮುಂದಿನ ಹೋರಾಟಕ್ಕೆ ಕಾಂಗ್ರೆಸ್ಸನ್ನು ಸಿದ್ಧಗೊಳಿಸುತ್ತಿದ್ದುದಕ್ಕಾಗಿ ಮತ್ತೆ ತಾವು ಅಧ್ಯಕ್ಷರಾಗಬೇಕೆಂದು ಬಯಸಿದ್ದರು. ಬ್ರಿಟಿಷ್ ಸರ್ಕಾರವು ೧೯೩೫ರ ಕಾನೂನಿನಲ್ಲಿ ಸ್ಥಳೀಯ ಅರಸರನ್ನು ಒಳಗೊಂಡ ಒಂದು ಒಕ್ಕೂಟ ಸ್ಥಾಪನೆಗೆ ಅವಕಾಶ ಮಾಡಿತ್ತು. ಅದನ್ನು ಪಟೇಲ್ ಮೊದಲಾಗಿ ಕಾಂಗ್ರೆಸ್ಸಿಗರು ತಿರಸ್ಕರಿಸಿದ್ದರು.

ಆದರೂ ಸಹ, ಕಾಂಗ್ರೆಸ್ಸಿನ ಬಲ ಪಂಥೀಯರು ಸರ್ಕಾರದೊಡನೆ ರಾಜಿ ಮಾಡಿಕೊಂಡು ಒಕ್ಕೂಟ ಸ್ಥಾಪನೆಗೆ ಒಪ್ಪಿಬಿಡುತ್ತಾರೆ ಎನ್ನುವ ಭಯವನ್ನು ಬಿತ್ತಿ, ಅದನ್ನು ತಡೆಯುವುದಕ್ಕಾಗಿ ತಾವು ಇನ್ನೂ ಒಂದು ವರ್ಷ ಕಾಂಗ್ರೆಸ್ಸಿನ ಅಧ್ಯಕ್ಷರಾಗಿರಬೇಕೆಂದು ಸುಭಾಷರು ಹೇಳುತ್ತಿದ್ದರು. ಜೊತೆಗೆ ಸುಭಾಷರು ಕಾರ್ಯಕಾರಿ ಸಮಿತಿಯ ಸದಸ್ಯರಲ್ಲಿ ಅವಿಶ್ವಾಸವನ್ನು ವ್ಯಕ್ತಪಡಿಸಿದ್ದರು. ಈ ಎಲ್ಲಾ ಕಾರಣಗಳಿಂದ, ಸುಭಾಷರು ತಮ್ಮ ಸ್ವಂತ ವರ್ಚಸ್ಸನ್ನು ಬೆಳೆಸಿಕೊಳ್ಳಲು ಯತ್ನಿಸುತ್ತಿದ್ದಾರೆ ಎಂದು ಸರ್ದಾರರು ಮತ್ತು ಇತರರು ಭಾವಿಸಿದ್ದರು. ಸುಭಾಷರು ಎರಡನೆಯ ಬಾರಿಗೆ ಚುನಾಯಿತರಾದ ತಕ್ಷಣ ಕಾರ್ಯಕಾರಿ ಸಮಿತಿಯ ೧೫ ಸದಸ್ಯರ ಪೈಕಿ ೧೨ ಸದಸ್ಯರು ರಾಜಿನಾಮೆ ಇತ್ತರು.

ಮಾರ್ಚ್‌ನಲ್ಲಿ ಅಧಿವೇಶನಕ್ಕೆ ತ್ರಿಪುರಿಗೆ ಅಧ್ಯಕ್ಷರು ಬಂದಾಗ, ಅದು ೫೨ನೆ ಅಧಿವೇಶನವಾದದ್ದರಿಂದ, ೫೨ ಆನೆಗಳು ಎಳೆಯುವ ರಥದಲ್ಲಿ ಅವರನ್ನು ಕರೆತರಲು ಏರ್ಪಾಟಾಗಿತ್ತು. ಆದರೆ ಆಗ ಸುಭಾಷರು ತೀವ್ರ ಜ್ವರದಿಂದ ನರಳುತ್ತಿದ್ದರು. ಆ ರಥದಲ್ಲಿ ಅವರ ಭಾವಚಿತ್ರವನ್ನು ಇಟ್ಟು ಮೆರವಣಿಗೆ ನಡೆಸಲಾಯ್ತು. ಅಧ್ಯಕ್ಷರ ಆಸನದಲ್ಲಿ ಮೌಲಾನ ಆಜ಼ಾದ್ ಕುಳಿತರು. ಸುಭಾಷರ ಅಧ್ಯಕ್ಷ ಭಾಷಣವನ್ನು ಅವರ ಅಣ್ಣ ಶರತ್ ಚಂದ್ರ ಬೋಸ್ ಓದಿದರು.[೧೨೯]

ಆ ಅಧಿವೇಶನದಲ್ಲಿ ಎರಡು ಠರಾವುಗಳು ಚರ್ಚಿಸಲ್ಪಟ್ಟವು. ಮೊದಲನೆಯದು, ಸರ್ಕಾರಕ್ಕೆ ಕೊನೆಯ ಎಚ್ಚರಿಕೆಯನ್ನು ನೀಡಿದ ನಂತರ ಬೃಹತ್ ಸಾಮೂಹಿಕ ಸಿವಿಲ್ ಶಾಸನ ಭಂಗ ಚಳವಳಿಯನ್ನು ಆರಂಭಿಸಬೇಕೆನ್ನುವ ಅಧ್ಯಕ್ಷರ ಠರಾವು. ಎರಡನೆಯದು, ಕಾರ್ಯಕಾರಿ ಸಮಿತಿ ಮಂಡಿಸಿದ ಠರಾವು. ಅದು ಅಧ್ಯಕ್ಷರ ತೀವ್ರ ಟೀಕೆಗೆ ಗುರಿಯಾಗಿದ್ದ ಕಾರ್ಯಕಾರಿ ಸಮಿತಿಯಲ್ಲಿ ಪೂರ್ಣ ವಿಶ್ವಾಸ ಇದೆ ಎನ್ನುವ ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರನ್ನು ಗಾಂಧೀಜಿಯವರ ಅಪೇಕ್ಷೆಯ ಪ್ರಕಾರ ನಾಮಕರಣ ಮಾಡುವಂತೆ ಅಧ್ಯಕ್ಷರನ್ನು ಕೋರುವ ಠರಾವು.[೧೩೦]

ಈ ಎರಡೂ ಠರಾವುಗಳನ್ನು ಆರಂಭದ ದಿನ ಚರ್ಚಿಸಿ ಮಾರನೆಯ ದಿನ ಮತಕ್ಕೆ ಹಾಕಲಾಯಿತು. ಮೊದಲನೆಯ ಠರಾವು ಬಿದ್ದು ಹೋಯಿತು. ಎರಡನೆಯ ಠರಾವು ಅಂಗೀಕೃತವಾಯಿತು. ಈ ಎರಡನೆಯ ಠರಾವು ಅಧ್ಯಕ್ಷರ ಅಧಿಕಾರವನ್ನು ಮೊಟಕುಗೊಳಿಸಿತು. ಸುಭಾಷರ ಮತ್ತು ಗಾಂಧೀಜಿಯ ಅಭಿಪ್ರಾಯಗಳಿಗೆ ಹೊಂದಾಣಿಕೆ ಇರಲಿಲ್ಲ. ಅದರಿಂದ ಸುಭಾಷರು ಕಾರ್ಯಕಾರಿ ಸಮಿತಿ ಸದಸ್ಯರ ನಾಮಕರಣವನ್ನು ಮುಂದೂಡಿದರು. ಜೊತೆಗೆ, ಗಾಂಧೀಜಿಯವರು ತ್ರಿಪುರಿಯ ಅಧಿವೇಶನದಲ್ಲಿ ಭಾಗವಹಿಸಿರಲಿಲ್ಲ. ಆ ಸಮಯದಲ್ಲಿ ಅವರು ರಾಜ್‌ಕೋಟ್‌ನಲ್ಲಿ

ಅಲ್ಲಿಯ ವಿದ್ಯಮಾನಗಳ ವಿರುದ್ಧ ಉಪವಾಸ ಕೈಗೊಂಡಿದ್ದರು. ಸುಭಾಷ ಮತ್ತು ಅವರ ನಡುವೆ ಪತ್ರಗಳ ಮತ್ತು ತಂತಿಗಳ ವಿನಿಮಯ ನಡೆಯಿತು. ಅಂತಿಮವಾಗಿ ಗಾಂಧೀಜಿಯವರು ಸುಭಾಷರಿಗೆ, "ನಿಮ್ಮ ಅಭಿಪ್ರಾಯಗಳು ನನಗೆ ಗೊತ್ತಿರುವುದರಿಂದ ಮತ್ತು ನಿಮ್ಮ ಹಾಗೂ (ಕಾರ್ಯಕಾರಿ ಸಮಿತಿಯ) ಸದಸ್ಯರ ನಡುವೆ ಮೂಲಭೂತ ವಿಷಯಗಳಲ್ಲಿ ಭಿನ್ನಾಭಿಪ್ರಾಯವಿರುವುದರಿಂದ, ಹೆಸರುಗಳನ್ನು ನಾನು ಸೂಚಿಸಿದರೆ ಅದು ನಿಮ್ಮ ಮೇಲೆ ಹೇರಿಕೆ ಆಗುತ್ತದೆ ಎಂದು ನನಗೆ ಅನ್ನಿಸುತ್ತದೆ," ಎಂದು ಬರೆದರು.

ತ್ರಿಪುರಿ ಅಧಿವೇಶನದಲ್ಲಿ ತಮ್ಮೆಲ್ಲ ವೈಫಲ್ಯತೆಗೆ ಪಟೇಲರು ಕಾರಣ ಎಂದು ಸುಭಾಷ್ ಮತ್ತು ಅವರ ಬೆಂಬಲಿಗರು ಭಾವಿಸಿ ಅವರ ಮೇಲೆ ಟೀಕೆಗಳನ್ನು ಮಾಡಿದರು ಮತ್ತು ಅವರನ್ನು ದೂಷಿಸಿದರು. ಸುಭಾಷರ ಅಣ್ಣ ಶರತ್‌ರವರು ಪಟೇಲರನ್ನು 'ಆಡಳಿತ ಕೂಟದ ಬೆಳಗುವ ದೀಪ' ಎಂದು ಕರೆದರು. ಸುಭಾಷರು ಆ ಸಮಯದಲ್ಲಿ ದೇಶಕ್ಕೆ ಬೇಕಾದ ವ್ಯಕ್ತಿ ತಾವೇ ಎಂದು ದೃಢವಾಗಿ ನಂಬಿದ್ದರು. ಅಷ್ಟೇ ದೃಢವಾಗಿ, ದೇಶಕ್ಕೆ ಸುಭಾಷರಿಗಿಂತ ಗಾಂಧೀಜಿಯೇ ಅಗತ್ಯ ಎಂದು ಪಟೇಲರು ನಂಬಿದ್ದರು. ಜೊತೆಗೆ, ಅಧ್ಯಕ್ಷರಾಗಿ ಸುಭಾಷರ ಅಧಿಕಾರ ಮೊಟಕು ಗೊಂಡಿತ್ತು. ಆದರೆ ಪಾರ್ಲಿಮೆಂಟರಿ ಬೋರ್ಡ್‌ನ ಛೇರ್‌ಮನ್ ಆಗಿ ಪಟೇಲರು ಬಹಳ ಅಧಿಕಾರವನ್ನು ಹೊಂದಿದ್ದರು – ಇದು ಸುಭಾಷರ ಬೆಂಬಲಿಗರಿಗೆ ಪಟೇಲರ ಮೇಲೆ ಆಕ್ರೋಷವನ್ನುಂಟುಮಾಡಿತ್ತು – ಎನ್ನುತ್ತಾರೆ ರಾಜ ಮೋಹನ ಗಾಂಧಿ.

ಸುಭಾಷರು ಏಪ್ರಿಲ್ ತಿಂಗಳಲ್ಲಿ ಕಲ್ಕತ್ತದಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸಭೆಯನ್ನು ಕರೆದರು. ಅವರ ಒತ್ತಾಯದ ಮೇಲೆ ಗಾಂಧೀಜಿ ಕಲ್ಕತ್ತಕ್ಕೆ ಹೋಗಿ ಸುಭಾಷರ ಜೊತೆ ಅನೇಕ ಸುತ್ತು ಮಾತು ನಡೆಸಿದರು. ಆದರೆ ಇಬ್ಬರ ನಡುವೆ ಒಮ್ಮತ ಬರಲಿಲ್ಲ. ಅಧಿವೇಶನದಲ್ಲಿ ಗಾಂಧೀಜಿ ಭಾಗವಹಿಸಲಿಲ್ಲ. ಪಟೇಲರು ಕಲ್ಕತ್ತಕ್ಕೆ ಹೋಗಲೇ ಇಲ್ಲ. ಅಧಿವೇಶನ ಶಾಂತಿಯುತವಾಗಿ ನಡೆಯಲಿಲ್ಲ. ಪಂಡಿತ್ ವಲ್ಲಭಭಾಯ್ ಪಂತ್, ಬೂಲಾಭಾಯ್ ದೇಸಾಯಿ ಮತ್ತು ಕೃಪಲಾನಿ ಮೇಲೆ ಹಲ್ಲೆ ನಡೆದುವು. ಸಂಯುಕ್ತ ಪ್ರಾಂತ್ಯದ ಪ್ರತಿನಿಧಿಗಳು ಹಿಂತಿರುಗಿ ಹಲ್ಲೆ ನಡೆಸಲು ಉದ್ಯುಕ್ತರಾದರು. ಅವರನ್ನು ಪ್ರಯಾಸದಿಂದ ಶಾಂತಗೊಳಿಸಲಾಯಿತು. ಸುಭಾಷರು ಕಾರ್ಯಕಾರಿ ಸಮಿತಿ ರಚಿಸಲು ಆಗಲೇ ಇಲ್ಲ. ಗಾಂಧೀಜಿ ಮತ್ತು ಇತರ ನಾಯಕರನ್ನು ದೂರಮಾಡಿ ತಾವು ಕಾಂಗ್ರೆಸ್ಸನ್ನು ನಡೆಸುವುದು ಸಾಧ್ಯವಿಲ್ಲವೆಂಬುದು ಅವರಿಗೆ ಅರ್ಥವಾಯಿತು. ಅವರು ಅಧ್ಯಕ್ಷ ಪದವಿಗೆ ರಾಜಿನಾಮೆ ಕೊಟ್ಟರು.

ಅವರ ಸ್ಥಳದಲ್ಲಿ ರಾಜೇಂದ್ರ ಪ್ರಸಾದ್‌ರವರು ಅಧ್ಯಕ್ಷರಾಗಿ ಆರಿಸಲ್ಪಟ್ಟರು.

ಸುಭಾಷರು ಅಷ್ಟಕ್ಕೇ ಸುಮ್ಮನಾಗಲಿಲ್ಲ. ಕಾಂಗ್ರೆಸ್ ಮಂತ್ರಿ ಮಂಡಲಗಳನ್ನು ಟೀಕಿಸಲು ಆರಂಭಿಸಿದರು. ಕಾಂಗ್ರೆಸ್ ಮಂತ್ರಿಗಳು ತಮ್ಮ ಸ್ಥಾನದ ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆಂದು ಆರೋಪಿಸುವ ಒಂದು ಆಂದೋಲನವನ್ನೇ ಆರಂಭಿಸಿದರು. ಅಂತಹ ಪ್ರಚಾರವನ್ನು ನಿಲ್ಲಿಸಬೇಕೆಂಬ ಠರಾವನ್ನು ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಅಂಗೀಕರಿಸಿತು. ಆಗಲೂ ಸುಭಾಷರು ಸುಮ್ಮನಾಗಲಿಲ್ಲ. ಆ ಠರಾವಿಗೆ ವಿರುದ್ಧವಾಗಿ ಜುಲೈ ೯ರಂದು 'ಪ್ರತಿಭಟನಾ ದಿವಸ'ವನ್ನು ಆಚರಿಸಬೇಕೆಂದು ಅವರು ಜನರಿಗೆ ಕರೆ ಕೊಟ್ಟರು. ಅಧ್ಯಕ್ಷ ರಾಜೇಂದ್ರ ಪ್ರಸಾದ್‌ರವರು ಸುಭಾಷರಿಂದ ವಿವರಣೆ ಕೇಳಿದರು. ಸುಭಾಷರು ತಮ್ಮ ಕಾರ್ಯವನ್ನು ಸಮರ್ಥಿಸಿಕೊಂಡರು. ಕಾರ್ಯಕಾರಿ ಸಮಿತಿಯು 'ಸುಭಾಷರು ಶಿಸ್ತು ಉಲ್ಲಂಘನೆ ಮಾಡಿದ್ದಾರೆಂದು ಬಹಳ ನೋವಿನಿಂದ ತೀರ್ಮಾನಿಸಿ ಅವರು ಕಾಂಗ್ರೆಸ್ಸಿನಲ್ಲಿ ಮೂರು ವರ್ಷಗಳ ಕಾಲ ಯಾವುದೇ ಚುನಾಯಿತ ಸ್ಥಾನವನ್ನು ವಹಿಸಿಕೊಳ್ಳುವುದನ್ನು ಬಹಿಷ್ಕರಿಸಿತು. ಆ ಸಂದರ್ಭದಲ್ಲಿ ಪಟೇಲರು ರಾಜೇಂದ್ರ ಪ್ರಸಾದ್‌ರವರಿಗೆ ಬರೆದ ಪತ್ರದಲ್ಲಿ, "ಕೆಲವು ವ್ಯಕ್ತಿಗಳು ಕೆಳಗಿಳಿಸಲಾಗದಷ್ಟು ಮುಖ್ಯವಾದವರು ಎಂದು ನಾವು ಏನನ್ನೂ ಮಾಡದಿದ್ದರೆ ನಾವು ಹೇಡಿತನದ ತಪ್ಪನ್ನು ಹೊರಬೇಕಾಗುತ್ತದೆ," ಎಂದು ಬರೆದಿದ್ದರು.[೧೩೧]

ಸುಭಾಷರು ಕಾಂಗ್ರೆಸ್ ಪಕ್ಷಕ್ಕೆ ರಾಜಿನಾಮೆ ಕೊಟ್ಟು "ಫಾರ್ವರ್ಡ್ ಬ್ಲಾಕ್" ಎಂಬ ಪಕ್ಷವನ್ನು ಕಟ್ಟಿದರು. ಆನಂತರ ಗೃಹ ಸೆರೆಮನೆಯಿಂದ ತಪ್ಪಿಸಿಕೊಂಡು ಗುಪ್ತವಾಗಿ ದೇಶದಿಂದ ಹೊರಗೆ ಹೋಗಿ ಬ್ರಿಟಿಷ್ ಸರ್ಕಾರಕ್ಕೆ ಚಳ್ಳೇ ಹಣ್ಣು ತಿನ್ನಿಸಿದರು. ಆದರೆ ಅದು ಪ್ರತ್ಯೇಕ ಸಾಹಸದ ಕಥೆ. ಸರ್ದಾರರ ಜೀವನ ಚರಿತ್ರೆಗೆ ಸಂಬಂಧಿಸಿದ್ದಲ್ಲ.

❖ ◆ ❖

೧೩. ಸ್ವಾತಂತ್ರ್ಯಕ್ಕಾಗಿ ಮತ್ತೆ ಹೋರಾಟ

೧೩.೧ ಯುದ್ಧ ತಂದ ಗೊಂದಲ

೧೯೩೯ರ ಆದಿ ಭಾಗದಿಂದಲೂ ಅಥವಾ ಅದಕ್ಕಿಂತ ಮುಂಚಿನಿಂದಲೂ ಯುದ್ಧದ ಕಾರ್ಮೋಡ ಯೂರೋಪಿನ ಗಗನದಲ್ಲಿ ಕವಿದಿತ್ತು. ಜರ್ಮನಿಯಲ್ಲಿ ಹಿಟ್ಲರನ ಸಿದ್ಧತೆಗಳನ್ನು ಮತ್ತು ಅವನ ಆಕ್ರಮಣಕಾರಿ ನೀತಿಯನ್ನು ಕಂಡು ಯೂರೋಪಿನ ರಾಷ್ಟ್ರಗಳು ಭೀತಿಗೆ ಒಳಗಾಗಿದ್ದುವು. ಹಿಟ್ಲರನು ಮಾರ್ಚ್ ೧೯೩೮ರಲ್ಲಿ ಆಸ್ಟ್ರಿಯವನ್ನು ಮತ್ತು ಮಾರ್ಚ್ ೧೯೩೯ರಲ್ಲಿ ಜೆಕೊಸ್ಲೊವೇಕಿಯವನ್ನು ಅಕ್ರಮಿಸಿಕೊಂಡಿದ್ದನು. ನಂತರ ೧೯೩೯ರ ಸೆಪ್ಟೆಂಬರ್ ೧ರಂದು ಪೋಲೆಂಡ್ ಮೇಲೆ ಆಕ್ರಮಣ ಮಾಡಿದನು. ಹಿಂದಿನ ಏಪ್ರಿಲ್ ತಿಂಗಳಲ್ಲಿ ಬ್ರಿಟನ್ ಮತ್ತು ಫ್ರಾನ್ಸ್ ದೇಶಗಳು ಪೋಲೆಂಡ್ ಜೊತೆ ಒಪ್ಪಂದ ಮಾಡಿಕೊಂಡಿದ್ದುವು. ಅದರಿಂದ ಸೆಪ್ಟೆಂಬರ್ ೩ರಂದು ಬ್ರಿಟನ್ ದೇಶವು ಜರ್ಮನಿಯ ವಿರುದ್ಧ ಯುದ್ಧವನ್ನು ಘೋಷಿಸಿತು. ಎರಡನೆ ವಿಶ್ವ ಯುದ್ಧ ಆರಂಭವಾಯಿತು. ಬ್ರಿಟನ್‌ನ ಘೋಷಣೆಯಾದ ಕೆಲವೇ ಘಂಟೆಗಳಲ್ಲಿ ವೈಸ್‌ರಾಯ್ ಲಿನ್‌ಲಿತ್‌ಗೊ 'ಭಾರತವು ಯುದ್ಧದಲ್ಲಿ ಭಾಗಿ' ಎಂದು ಪ್ರಕಟಿಸಿದನು. ಕಾಂಗ್ರೆಸ್ ಒಡನೆ ಅಥವಾ ಬೇರೆ ಯಾರೊಡನೆಯೂ ಸಮಾಲೋಚಿಸದೆ, ಕೊನೆಯ ಪಕ್ಷ ಕೇಂದ್ರ ಶಾಸನ ಸಭಾ ಚುನಾಯಿತ ಸದಸ್ಯರೊಡನೆಯೂ ಸಮಾಲೋಚಿಸದೆ ಅಥವಾ ಅವರಿಗೆ ವಿಷಯವನ್ನು ತಿಳಿಸದೆ ವೈಸ್‌ರಾಯ್ ಏಕಾಏಕಿ ಮಾಡಿದ ಆ ಪ್ರಕಟಣೆ ಕಾಂಗ್ರೆಸ್ಸಿನ ನಾಯಕರಿಗೆ ಕೋಪವನ್ನು ಬರಿಸಿತು.

ಒಂದು ವರ್ಷಕ್ಕೆ ಮುಂಚೆಯೆ, ಯುದ್ಧ ಸಂಘಟಿಸಬಹುದು ಎನ್ನುವ

ಅನುಮಾನ ಬಂದಾಗಲೇ 'ಸರ್ಕಾರವು ಕಾಂಗ್ರೆಸ್ ಒಡನೆ ಸಮಾಲೋಚಿಸುತ್ತದೆ ಮತ್ತು ಸಮರದಲ್ಲಿ ಭಾಗವಹಿಸುವುದನ್ನು ಒಪ್ಪುವಂತೆ ತಮ್ಮನ್ನು ಕೇಳುತ್ತದೆ ಎಂದು ಕಾಂಗ್ರೆಸ್ಸು ನಿರೀಕ್ಷಿಸುತ್ತಿದೆ' ಎಂದು ಸರ್ದಾರರು ಬಾಂಬೆ ಪ್ರಾಂತ್ಯದ ಗೌರ್ನರ್ ಲುಮ್ಲೆಗೆ ತಿಳಿಸಿದ್ದರು. ಗೌರ್ನರ್ ಲುಮ್ಲೆಯವರು ಆ ಸಮಾಚಾರವನ್ನು ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ಇಂಡಿಯಾ ಜೆಟ್‌ಲ್ಯಾಂಡ್‌ರವರಿಗೆ ರವಾನಿಸಿದ್ದರು. ಜೆಟ್‌ಲ್ಯಾಂಡ್‌ರವರು ಅದನ್ನು ಬ್ರಿಟಿಷ್ ಮಂತ್ರಿ ಮಂಡಲದ ಎಲ್ಲಾ ಸದಸ್ಯರಿಗೆ ತಿಳಿಸಿದ್ದರು. ಅಲ್ಲಿಂದಾಚೆಗೆ, ಸರ್ಕಾರವು ತಮ್ಮೊಡನೆ ಸಮಾಲೋಚಿಸಬೇಕೆಂಬ ಆಶಯವನ್ನು ಕಾಂಗ್ರೆಸ್ ಅನೇಕ ಬಾರಿ ವ್ಯಕ್ತ ಪಡಿಸಿತ್ತು. ಮೇ ೧೯೩೯ರಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿಯು 'ಭಾರತದ ಪ್ರಜೆಗಳ ಸಮ್ಮತಿ ಇಲ್ಲದೆ ಸಮರವನ್ನು ಹೇರುವ ಎಲ್ಲಾ ಪ್ರಯತ್ನಗಳನ್ನು ವಿರೋಧಿಸಲಾಗುವುದು,' ಎಂದು ಘೋಷಿಸಿತ್ತು. ಬ್ರಿಟಿಷ್ ಸರ್ಕಾರವು ಕೆನಡ ಮತ್ತು ಆಸ್ಟ್ರೇಲಿಯವನ್ನು ಆ ರಾಷ್ಟ್ರಗಳು ಯುದ್ಧದಲ್ಲಿ ಸೇರಲು ಇಷ್ಟಪಡುತ್ತವೆಯೆ? – ಎಂದು ವಿಚಾರಿಸಿತ್ತು. ಆದರೆ ಭಾರತೀಯರನ್ನು ಕೇಳದೆ ಭಾರತವನ್ನು ಯುದ್ಧಕ್ಕೆ ನೂಕಿತ್ತು. ಆದರೂ ಸಹ ಗಾಂಧೀಜಿಯವರು ವೈಸ್‌ರಾಯ್ ಲಿನ್‌ಲಿತ್‌ಗೊರವರನ್ನು ಭೇಟಿ ಮಾಡಿ ತಮ್ಮ ವೈಯುಕ್ತಿಕ ಬೆಂಬಲವನ್ನು ಸೂಚಿಸಿದರು ಮತ್ತು ಬ್ರಿಟಿಷರಿಗೆ ಶರತ್ತು ರಹಿತ ಸಂಪೂರ್ಣ ಸಹಕಾರವನ್ನು ನೀಡಬೇಕೆಂದು ಜನರಿಗೆ ಕರೆ ಕೊಟ್ಟರು. ಅವರದು ಭಾವನಾತ್ಮಕ ಪ್ರತಿಕ್ರಿಯೆಯಾಗಿತ್ತು. ಗಾಂಧೀಜಿಯ ಈ ನಡೆಯನ್ನು ಕುರಿತು ಸರ್ದಾರರು, "ಗಾಂಧೀಜಿಯದು ಮಿತಿಮೀರಿದ ಔದಾರ್ಯ" ಎಂದರು.[೧೩೨] ಇಂತಹ ಸದ್ಭಾವನೆಯನ್ನು ಬ್ರಿಟಿಷರು ಮೆಚ್ಚುವರೆ? ಅದಕ್ಕೆ ಪ್ರತಿಯಾಗಿ ಅವರೂ ಸಹ ಸದ್ಭಾವನೆಯನ್ನು ತೋರುವರೆ? ಹಿಂದಿನ ಅನುಭವಗಳನ್ನು ಗಮನಿಸಿದರೆ ಅವರಿಂದ ಸದ್ಭಾವವನ್ನು ನಿರೀಕ್ಷಿಸಲು ಸಾಧ್ಯವಿಲ್ಲ – ಎನ್ನಿಸಿತು ಪಟೇಲರಿಗೆ.

ಈ ಯುದ್ಧದ ಬಗೆಗೆ ಪ್ರತಿಕ್ರಿಯೆ ಏನಿರಬೇಕು? ಬ್ರಿಟಿಷರ ಬೆಂಬಲಕ್ಕೆ ಹೋಗಬೇಕೆ? ಬೇಡವೆ? ಮುಂತಾದ ಪ್ರಶ್ನೆಗಳು ಉದ್ಭವವಾದುವು. ಆ ಬಗೆಗೆ ಕಾಂಗ್ರೆಸ್ ನಾಯಕರಲ್ಲಿ ಭಿನ್ನಾಭಿಪ್ರಾಯಗಳು ಮೂಡಿದುವು. ಈ ವಿಷಯಗಳನ್ನು ತೀರ್ಮಾನಿಸುವುದಕ್ಕಾಗಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಯು ಸೆಪ್ಟೆಂಬರ್ ೯ ರಿಂದ ೧೫ರ ವರೆಗೆ ವಾರ್ಧಾದಲ್ಲಿ ನಡೆಯಿತು. ಸುಭಾಷ್, ಜಿನ್ನಾ ಮತ್ತು ಜಯಪ್ರಕಾಶ್‌ರವರನ್ನು ಆ ಸಭೆಗೆ ಆಹ್ವಾನಿಸಿದ್ದರು. ಆದರೆ ಜಿನ್ನಾ ಬರಲಿಲ್ಲ. ಗಾಂಧೀಜಿಯವರು, 'ಬ್ರಿಟಿಷ್ ಸರ್ಕಾರಕ್ಕೆ ಶರತ್ತು ರಹಿತ ಅಹಿಂಸಾತ್ಮಕ ಬೆಂಬಲ ನೀಡಬೇಕು ಎನ್ನುವ ತಮ್ಮ ಅಭಿಪ್ರಾಯವನ್ನು ಒಪ್ಪಿಸಲು ಪ್ರಯತ್ನಿಸಿದರು. ಆದರೆ ಪಟೇಲರೂ ಸೇರಿ ಒಬ್ಬರೂ ಒಪ್ಪಲಿಲ್ಲ. ಇಂಗ್ಲಿಷರು ಕಷ್ಟದಲ್ಲಿ ಸಿಲುಕಿರುವಾಗ

ಅವರಿಗೆ ನೈತಿಕ ಬೆಂಬಲವನ್ನು ನೀಡಬೇಕೆಂಬುದು ಗಾಂಧೀಜಿಯ ಅಭಿಪ್ರಾಯ ವಾಗಿತ್ತು. ಕಾರ್ಯಕಾರಿ ಸಮಿತಿ ಸದಸ್ಯರೂ ಸಹ ಫ್ಲಾಸಿಸಂ ಮತ್ತು ನಾಸಿಸಂ ವಿರುದ್ಧ ಹೋರಾಡುತ್ತಿದ್ದ ಇಂಗ್ಲೆಂಡಿನ ಬಗೆಗೆ ಸಹಾನುಭೂತಿ ಹೊಂದಿದ್ದರು ಮತ್ತು ಇಂಗ್ಲೆಂಡಿಗೆ ಸಹಾಯ ಮಾಡಲು ಸಿದ್ಧವಿದ್ದರು, ಆದರೆ ಅವರು ಬೇಷರತ್ತಿನ ಸಹಾಯವನ್ನು ನೀಡಲು ಸಿದ್ಧರಿರಲಿಲ್ಲ. ಯುದ್ಧ ಮುಗಿದ ನಂತರ ಭಾರತಕ್ಕೆ ನಿಜವಾದ ಪ್ರಜಾಪ್ರಭುತ್ವವನ್ನು ನೀಡುವುದಾಗಿ ಬ್ರಿಟಿಷ್ ಸರ್ಕಾರವು ಈಗಲೇ ಪ್ರಕಟಿಸಿದರೆ ಮತ್ತು ಈ ಮಧ್ಯೆ ಈಗಲೇ ಭಾರತೀಯ ಪ್ರತಿನಿಧಿಗಳೊಡನೆ ಕೇಂದ್ರದಲ್ಲಿ ಅಧಿಕಾರವನ್ನು ಹಂಚಿಕೊಂಡರೆ ಮಾತ್ರ ಇಂಗ್ಲೆಂಡಿಗೆ ಯುದ್ಧದಲ್ಲಿ ಸಹಾಯ ಮಾಡಬೇಕು ಎನ್ನುವುದು ಕಾಂಗ್ರೆಸ್ ನಾಯಕರ ಅಭಿಮತವಾಗಿತ್ತು. 'ಭಾರತ ಮತ್ತು ಇಂಗ್ಲೆಂಡ್ ನಡುವೆ ಸ್ನೇಹವು ಸಾಧ್ಯ. ಆದರೆ ಅದು ಸಮಾನತೆಯ ಆಧಾರದ ಮೇಲೆ ಮಾತ್ರ ಸಾಧ್ಯ. ತನಗೇ ಸ್ವಾತಂತ್ರ್ಯವಿಲ್ಲದ ಭಾರತವು ಪೋಲೆಂಡಿನ ಸ್ವಾತಂತ್ರ್ಯಕ್ಕಾಗಿ ಹೋರಾಡುವುದು ಹೇಗೆ ಸಾಧ್ಯ?' ಎನ್ನುವುದು ನೆಹರು ವಾದವಾಗಿತ್ತು. ಅದನ್ನು ಪಟೇಲರೂ ಒಪ್ಪಿದ್ದರು.

ಸೆಪ್ಟೆಂಬರ್ ತಿಂಗಳ ಆ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ದೀರ್ಘ ಚರ್ಚೆ ನಡೆದು ಕೊನೆಗೆ "ಇಂಗ್ಲೆಂಡ್ ತನ್ನ ಯುದ್ಧದ ಗುರಿಗಳನ್ನು ಪ್ರಕಟಿಸಬೇಕು ಮತ್ತು ಆ ಗುರಿಗಳು ಭಾರತಕ್ಕೆ ಹೇಗೆ ಅನ್ವಯಿಸುತ್ತವೆ ಎನ್ನುವುದನ್ನು ತಿಳಿಸಬೇಕು" ಎಂದು ಕೇಳುವ ಠರಾವನ್ನು ಅಂಗೀಕರಿಸಲಾಯಿತು.[೧೩೩]

ಅನೇಕ ಇಂಗ್ಲಿಷರು ಸಹ ದೂರದೃಷ್ಟಿಯ ನೀತಿಯನ್ನು ಅನುಸರಿಸುವಂತೆ ಬ್ರಿಟಿಷ್ ಸರ್ಕಾರವನ್ನು ಒತ್ತಾಯಿಸಿದರು. 'ದಿ ಮ್ಯಾಂಚೆಸ್ಟರ್ ಗಾರ್ಡಿಯನ್' ಪತ್ರಿಕೆಯು 'ಭಾರತೀಯರ ಬೆಂಬಲವನ್ನು ಪಡೆಯುವುದಕ್ಕೆ ಇದು ಚರಿತ್ರಾರ್ಹ ಅವಕಾಶ' ಎಂದು ಬರೆಯಿತು. ಲೇಬರ್ ಪಕ್ಷದ ನಾಯಕ ಕ್ಲೆಮೆಂಟ್ ಆಟ್ಲಿ 'ಕಲ್ಪನಾತ್ಮಕ ಒಳನೋಟ'ವನ್ನು ಬಳಸಿ ಎಂದರು. ಪಂಜಾಬಿನ ಕೆಲವರು ಆಂಗ್ಲ ಅಧಿಕಾರಿಗಳು ಖಾಸಗಿಯಾಗಿ ವೈಸ್‌ರಾಯ್‌ಗೆ ಸಲಹೆ ನೀಡಿ ಕೆಲವು ಆಕರ್ಷಣೀಯ ಪದಗಳಲ್ಲಿ 'ಭಾರತಕ್ಕೆ ಸ್ವಾತಂತ್ರ್ಯದ ಘೋಷಣೆ'ಯನ್ನು ಮಾಡಿ ಎಂದು ಸಲಹೆ ಮಾಡಿದರು. ಆದರೆ ಬ್ರಿಟಿಷ್ ಸರ್ಕಾರವು ಹಾಗೆ ಮಾಡಲಿಲ್ಲ. ಅದು (ಬ್ರಿಟಿಷ್ ಸರ್ಕಾರ) ಸಾವು ಬದುಕಿನ ಹೋರಾಟದಲ್ಲಿರುವುದರಿಂದ ಮತ್ತು ಭಾರಿ ಕಷ್ಟದಲ್ಲಿರುವುದರಿಂದ ಕಾಂಗ್ರೆಸ್ಸು ಶರತ್ತುಗಳನ್ನು ಒಡ್ಡುತ್ತಿದೆ ಮತ್ತು ಬೆದರಿಕೆಯ ಒತ್ತಡವನ್ನು ಮಾಡುತ್ತಿದೆ ಎಂದು ಭಾವಿಸಿತು. ಕಾಂಗ್ರೆಸ್ಸಿನ ಬೇಡಿಕೆಗೆ ಉತ್ತರವಾಗಿ ಅಕ್ಟೋಬರ್ ೧೭ರಂದು ವೈಸ್‌ರಾಯ್ ಒಂದು ಹೇಳಿಕೆಯನ್ನು ನೀಡಿ, ಯುದ್ಧ

ಮುಕ್ತಾಯವಾದ ನಂತರ ಭಾರತೀಯರೊಡನೆ ಸಂವಿಧಾನ ರಚನೆಯ ಬಗೆಗೆ ಸಂವಾದ ನಡೆಸಲಾಗುವುದು, ಆದರೆ ಸ್ವಾತಂತ್ರ್ಯವನ್ನು ನೀಡಲಾಗುವುದಿಲ್ಲ, ಯುದ್ಧ ನಡೆಯುವ ಕಾಲದಲ್ಲಿ ಭಾರತೀಯರನ್ನು ಒಳಗೊಂಡ ಒಂದು ಸಲಹಾ ಸಮಿತಿಯನ್ನು ರಚಿಸಲಾಗುವುದು. ಆದರೆ ಅದರ ಸಲಹೆಗಳನ್ನು ನಿರಾಕರಿಸುವ ಅಧಿಕಾರ ವೈಸ್‌ರಾಯ್‌ಗೆ ಇರುವುದು ಎಂದು ಪ್ರಕಟಿಸಿದನು. ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಕೇಳಿದ್ದ ಸಮರದ ಗುರಿಗಳು ಮತ್ತು ಭಾರತಕ್ಕೆ ಅವುಗಳ ಅನ್ವಯದ ಬಗೆಗೆ ವೈಸ್‌ರಾಯ್, 'ಸಮರದ ಗುರಿಗಳ ಬಗೆಗೆ ಸ್ವತಃ ಬ್ರಿಟಿಷ್ ಸರ್ಕಾರವೇ ಖಚಿತವಾದ ನಿರ್ಧಾರಗಳನ್ನು ತೆಗೆದುಕೊಂಡಿಲ್ಲ' ಎಂದು ತಿಳಿಸಿದನು.[೧೩೪]

ಯುದ್ಧದಲ್ಲಿ ಇಂಗ್ಲೆಂಡಿಗೆ ಬೆಂಬಲ ನೀಡುವ ಬಗೆಗೆ ಗಾಂಧೀಜಿ ತಳೆದ ನಿಲುವಿನಿಂದ ಸರ್ದಾರರು ಗೊಂದಲಕ್ಕೆ ಸಿಲುಕಿದರು. ಗಾಂಧೀಜಿಯ ನಿಲುವು ಅವರಿಗೆ ಒಪ್ಪಿಗೆಯಾಗಿರಲಿಲ್ಲ. ಅದು ಜನಾಭಿಪ್ರಾಯಕ್ಕೂ ವಿರುದ್ಧವಾಗಿತ್ತು. ಗಾಂಧೀಜಿಯ ಪಕ್ಕಾ ಶಿಷ್ಯ ಮತ್ತು ಸೈನಿಕನಾಗಿ ಅವರ ಸೂಚನೆಗಳನ್ನು ತಪ್ಪದೆ ಪಾಲಿಸುವುದು ಅವರ ಪದ್ಧತಿಯಾಗಿತ್ತು. ಆದರೆ ಈಗ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಗಾಂಧೀಜಿಯ ನಿಲುವನ್ನು ವಿರೋಧಿಸಿದ್ದರು. 'ನಾನು ಒಬ್ಬೊಂಟಿಗ ನಾದುದನ್ನು ನೋಡಿ, ಮನಸ್ಸಿಗೆ ನೋವಾಯಿತು,' ಎಂದು ಗಾಂಧೀಜಿ ಹೇಳಿದ್ದರು. ಬಹುಷಃ ಗಾಂಧೀಜಿಯ ಆ ಮಾತು ಪಟೇಲರಿಗೆ ನೋವುಂಟು ಮಾಡಿರಬಹುದು. ಅವರು ೧೯೩೯ರ ಅಕ್ಟೋಬರ್ ೨೬ರಂದು ಬೊಂಬಾಯಿಯಲ್ಲಿ ಒಂದು ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುತ್ತ ತಮ್ಮ ಮನದ ತೊಳಲಾಟವನ್ನು ಹೇಳಿಕೊಂಡರು:

> ಶತ್ರುವು ಕಷ್ಟಗಳಲ್ಲಿ ಆಳವಾಗಿ ಸಿಕ್ಕಿಹಾಕಿಕೊಂಡಾಗ, ನಾವು ಅವನೊಡನೆ ಸಹಕರಿಸಬೇಕು ಎಂದು ಗಾಂಧೀಜಿ ಹೇಳುತ್ತಾರೆ. ಆದರೆ, ಆನಂತರ ನಮ್ಮ ಕತ್ತನ್ನೇ ಹಿಸುಕುವ ಶತ್ರುವಿನ ಬಗೆಗೆ ಏನು ಹೇಳುತ್ತೀರಿ? – ಎಂದು ನಾವು ಕೇಳುತ್ತೇವೆ. ೧೯೧೪ರ ಯುದ್ಧದಲ್ಲಿ (ಕೇಂದ್ರ) ಶಾಸನ ಸಭೆಯಲ್ಲಿ ಒಂದು ಠರಾವನ್ನು ಅಂಗೀಕರಿಸುವುದರ ಮೂಲಕ ೧೦೦ ಕೋಟಿ ರೂಪಾಯಿಗಳನ್ನು ಇಂಗ್ಲೆಂಡಿಗೆ ನೀಡಲಾಯಿತು. ಯುದ್ಧ ಮುಗಿದ ಮೇಲೆ ನಮಗೆ ಸಿಕ್ಕಿದ್ದು ಜಲಿಯನ್‌ವಾಲಾ ಬಾಗ್..... ಆದ್ದರಿಂದ ನಾವು ಅವರನ್ನು (ಬ್ರಿಟಿಷರನ್ನು) 'ಯುದ್ಧದಲ್ಲಿ ನಿಮ್ಮ ಗುರಿಗಳು ಏನು?' ಎಂದು ಕೇಳುತ್ತೇವೆ. 'ಅದನ್ನೇಕೆ ಕೇಳುತ್ತೀರಿ ನಾವು ಕಷ್ಟದಲ್ಲಿರುವಾಗ?'

ಎನ್ನುತ್ತಾರೆ ಅವರು. ಅವರು ತಮ್ಮ ಕಷ್ಟದಲ್ಲಿ ಸತ್ಯವನ್ನು ನುಡಿಯುತ್ತಾರೆ, ಎಂದು ನಾವು ಯೋಚಿಸಿದೆವು. ಆದರೆ ಅವರು, 'ನಾವೇಕೆ ಹೋರಾಡುತ್ತಿದ್ದೇವೆ ಎನ್ನುವುದು ನಮಗೇ ತಿಳಿಯದು,' ಎನ್ನುತ್ತಾರೆ..... 'ನಾವು ಹೊರಟುಹೋದರೆ ಈ ಜಾಗಕ್ಕೆ ಯಾರು ಬರುತ್ತಾರೆ ಗೊತ್ತಾ' ಎಂದು ಕೇಳಿ ನಮ್ಮನ್ನು ಹೆದರಿಸುತ್ತಾರೆ. ನಾವು, 'ಗೊತ್ತು, ಬಹುಶಃ ಜರ್ಮನರು ಮತ್ತು ಹಿಟ್ಲರ್. ಅವರ ಕೈಕೋಳಗಳು ಕಬ್ಬಿಣದವು ಎಂದು ನೀವು (ಬ್ರಿಟಿಷರು) ಹೇಳಿದರೆ, ನಿಮ್ಮದು ಬೆಳ್ಳಿಯ ಕೈಕೋಳಗಳಾಗಿದ್ದರೂ ಸಹ ನಿಮ್ಮ ಕೈಕೋಳಗಳೇ ಹೆಚ್ಚು ಭಾರ ಎಂದು ನಾವು ಭಾವಿಸುತ್ತೇವೆ. ನೀವು ಅವರಿಗಿಂತ ಉತ್ತಮ ಇರಬಹುದು, ಆದರೆ ನೀವು ಆ ನಂತರ ನಮ್ಮ ಕುತ್ತಿಗೆಯನ್ನು ಹಿಸುಕುವುದಾದರೆ, ನೀವಿಬ್ಬರೂ ನಾಶವಾಗಿ. ಆಮೇಲೆ ನಮಗೆ ಏನು ಆಗುತ್ತದೊ ಅದನ್ನು ನಾವು ನೋಡಿ ಕೊಳ್ಳುತ್ತೇವೆ' ಎಂದು ಹೇಳುತ್ತೇವೆ.

ಮುಂದುವರೆದು ಪಟೇಲರು ಸರ್ಕಾರಕ್ಕೆ ಒಂದು ಎಚ್ಚರಿಕೆಯನ್ನು ನೀಡಿದರು:

ಭಾರತವು ಸಹಕರಿಸದೆ ಹೋದರೆ ಅವರ ಮೇಲೆ ಬಲಾತ್ಕಾರವನ್ನು ಹೇರಬಹುದು ಎಂದು ಬ್ರಿಟಿಷ್ ಸರ್ಕಾರ ಭಾವಿಸಿದ್ದರೆ, ಅವರಿಗೆ ನಾನು ಈಗಲೇ ಈ ಮುನ್ನೆಚ್ಚರಿಕೆಯನ್ನು ನೀಡುತ್ತೇನೆ: ೧೯೧೪–೧೮ರ ಕಾಲ ಆಗಲೇ ಆಗಿಹೋಯಿತು. ಯೂರೋಪಿನಲ್ಲಿ ನೀವು ಯುದ್ಧದಲ್ಲಿ ತೊಡಗಿರುತ್ತೀರಿ. ಅದೇ ಸಮಯದಲ್ಲಿ ನೀವು ಇಂಡಿಯಾದಲ್ಲಿ ಸೈನ್ಯಾಡಳಿತವನ್ನು ಹೇರಬೇಕಾಗುತ್ತದೆ. ನಿಮಗೆ ಸಹಾಯ ಬೇಕಿದ್ದರೆ ಗಾಂಧೀಜಿಯ ಮಾತನ್ನು ಕೇಳಿ.[೧೩೫]

ನವೆಂಬರ್ ೫ರಂದು ಗುಜರಾತ್ ಪ್ರದೇಶ್ ಕಾಂಗ್ರೆಸ್ ಸಮಿತಿಯನ್ನುದ್ದೇಶಿಸಿ ಪಟೇಲರು ಹೀಗೆ ನುಡಿದರು:

ಯುದ್ಧ ನಡೆಯುತ್ತಿರುವುದು ಎರಡು ಶಕ್ತಿ ಕೂಟಗಳ ನಡುವೆ – ಒಂದು ಜರ್ಮನಿಯ ನಾಯಕತ್ವದ ನಾಸಿಸಂ ಬಣ. ಮತ್ತೊಂದು ಫ್ರಾನ್ಸ್ ಮತ್ತು ಬ್ರಿಟನ್ನಿನ ನಾಯಕತ್ವದ ಸಾಮ್ರಾಜ್ಯಶಾಹಿ ಬಣ. ಭಾರತದ ಒಪ್ಪಿಗೆಯನ್ನು ಪಡೆಯದೆ ಅದನ್ನು ಯುದ್ಧಕ್ಕೆ

ಎಳೆಯಲಾಗಿದೆ. ಅದು ಸ್ವತಂತ್ರವಾಗಿದ್ದಿದ್ದರೆ ಅಮೆರಿಕದ ಹಾಗೆ ಯುದ್ಧದಿಂದ ದೂರವಿರುವ ತೀರ್ಮಾನವನ್ನು ತೆಗೆದುಕೊಳ್ಳ ಬಹುದಿತ್ತು. ಭಾರತಕ್ಕೆ ಬ್ರಿಟನ್ನಿನ ಸಾಮ್ರಾಜ್ಯಶಾಹಿ ಮತ್ತು ಜರ್ಮನಿಯ ನಾಸಿಸಂ ನಡುವೆ ಏನೂ ವ್ಯತ್ಯಾಸವಿಲ್ಲ. ಈ ಎರಡು ಬಣಗಳು ತಮ್ಮ ಸಾಮ್ರಾಜ್ಯಗಳ ಅಡಿಪಾಯಗಳನ್ನು ಭದ್ರಪಡಿಸಿ ಕೊಳ್ಳುವುದಕ್ಕಾಗಿ ಮತ್ತು ಆ ಮೂಲಕ ಭಾರತದ ಗುಲಾಮಗಿರಿ ಯನ್ನು ಶಾಶ್ವತಗೊಳಿಸುವುದಕ್ಕಾಗಿ ಹೋರಾಡುತ್ತಿದ್ದರೆ, ಅವರಿಗೆ ಬೆಂಬಲ ನೀಡಲು ನಮಗೆ ಯಾವ ಕಾರಣವೂ ಇಲ್ಲ. .....ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ಇಂಡಿಯಾರವರು, 'ನಮ್ಮ ಗಂಟಲು ಬಿಗಿಯುತ್ತಿರುವ ಈ ಸಮಯದಲ್ಲಿ ಇಂತಹ ಕಷ್ಟದ ಸಮಸ್ಯೆಗಳನ್ನು ಎತ್ತಬೇಡಿ' – ಎನ್ನುತ್ತಾರೆ. ಅವರು ಸತ್ಯವನ್ನೇ ಆಡಿದ್ದಾರೆ, ಆದರೆ ಅವರು ಕಷ್ಟದಲ್ಲಿ ಇಲ್ಲದೇ ಇರುವಾಗ ನಾವು ಈ ಸಮಸ್ಯೆಯನ್ನು ಎತ್ತಿದರೆ ಅವರು ನಮ್ಮ ಮೇಲೆ ಎರಗಿ ಬೀಳುತ್ತಾರೆ..... ಈ ಯುದ್ಧವು ದೀರ್ಘಕಾಲ ನಡೆಯುವ ಯುದ್ಧ. ಈ ನಾಟಕದ ಎಲ್ಲಾ ಪರದೆಗಳನ್ನು ಇನ್ನೂ ಎತ್ತಿಲ್ಲ. ರಷ್ಯ – ಜರ್ಮನಿ ಒಪ್ಪಂದ ದಲ್ಲಿ ಏನೇನಿದೆ ಎಂಬುದು ನಮಗೆ ತಿಳಿದಿಲ್ಲ. ಸತ್ಯಾಂಶಗಳು ಹೊರಬರುವ ತನಕ ನಾವು ಬ್ರಿಟನ್ ಸರ್ಕಾರದ ವಿರುದ್ಧ ಹೋರಾಟ ಆರಂಭಿಸಲು ನುಗ್ಗಬೇಕಾಗಿಲ್ಲ. ಕಾಂಗ್ರೆಸ್ಸು ಪ್ರತಿ ಹೆಜ್ಜೆಯನ್ನು ಪೂರ್ಣ ಪರಿಗಣನೆಯ ನಂತರ ಇಡಬೇಕು. .....ಹೋರಾಟಕ್ಕೆ ಆತುರ ಪಡಬೇಡಿ. ಯಾವುದೇ ತೀರ್ಮಾನ ತೆಗೆದುಕೊಳ್ಳುವಾಗ, ಸತ್ಯಾಗ್ರಹದ ನಮ್ಮ ಹಿಂದಿನ ಅನುಭವಗಳನ್ನು ಪರಿಗಣಿಸಬೇಕು. ಭಾರತದಲ್ಲಿ ಗಾಂಧೀಜಿಯನ್ನು ಹೊರಗಿಟ್ಟು ಯಾರೂ ಹೋರಾಟ ಆರಂಭಿಸಲು ಸಾಧ್ಯವಿಲ್ಲ.[೧೩೬]

ಈ ಭಾಷಣಗಳಿಂದ ಸರ್ದಾರರ ನಿಲುವು ಸ್ಪಷ್ಟವಾಯಿತು.

೧೩.೨ ಕಾಂಗ್ರೆಸ್ಸಿನಲ್ಲಿ ವಿಫಲ ಚರ್ಚೆ

ಕಾಂಗ್ರೆಸ್ ಮಂತ್ರಿ ಮಂಡಲಗಳು ವಲ್ಲಭಭಾಯ್‌ರವರ ಎಚ್ಚರಿಕೆ ಮತ್ತು ಮಾರ್ಗದರ್ಶನದ ಫಲವಾಗಿ ಚೆನ್ನಾಗಿಯೇ ಕೆಲಸ ಮಾಡುತ್ತಿದ್ದುವು. ಆದರೂ ಕಾಂಗ್ರೆಸ್ಸಿನ 'ಡಿಮಾಂಡ್'ಗಳನ್ನು ಬ್ರಿಟಿಷ್ ಸರ್ಕಾರ ನಿರಾಕರಿಸಿದ್ದರಿಂದ, ನೆಹರುರವರು ಕಾಂಗ್ರೆಸ್ ಮಂತ್ರಿ ಮಂಡಲಗಳು ರಾಜಿನಾಮೆ ಕೊಡಲೇಬೇಕೆಂದು ಕಾಂಗ್ರೆಸ್

ಕಾರ್ಯಕಾರಿ ಸಮಿತಿಯಲ್ಲಿ ಬಲವಾಗಿ ಒತ್ತಾಯ ಮಾಡಿದ್ದರಿಂದ, ಆ ಸಮಿತಿಯು ಅದರಂತೆ ತೀರ್ಮಾನ ಮಾಡಿತು. ಎಲ್ಲಾ ಕಾಂಗ್ರೆಸ್ ಮಂತ್ರಿ ಮಂಡಲಗಳು ರಾಜಿನಾಮೆ ನೀಡಿದುವು. ಇದು ಆತುರದ ಮತ್ತು ಅನವಶ್ಯಕವಾದ ಕ್ರಮ ಎಂದು ಅನೇಕರು ಭಾವಿಸಿದರು. ಈ ಕ್ರಮದಿಂದ ಭಾರತಕ್ಕೆ ಲಾಭಕ್ಕಿಂತ ನಷ್ಟವೇ ಹೆಚ್ಚಾಯಿತೆನ್ನುವುದನ್ನು ಮುಂದಿನ ಘಟನೆಗಳು ಸಾಬೀತು ಮಾಡಿದುವು. ಈ ರಾಜಿನಾಮೆಯಿಂದ ಜಿನ್ನಾಗೆ ಬಹಳ ಖುಷಿಯಾಯಿತು. ಕಾಂಗ್ರೆಸ್ಸು ಮಂತ್ರಿಗಳಿಗೆ ದೊರೆತ ಅಧಿಕಾರ ಅವನಿಗೆ ಅಸಮಧಾನವನ್ನು ತಂದಿತ್ತು. ಅಸೂಯೆಯೇ ಇತ್ತೆಂದು ಹೇಳಬಹುದೇನೊ. ಈಗ ಅವರ ರಾಜಿನಾಮೆಯಿಂದ ಬಹಳ ಹರ್ಷಗೊಂಡನು. ಅವನು ಮುಸ್ಲಿಮರಿಗೆ 'ನಿಮಗೆ ಈಗ ಬಿಡುಗಡೆ ದೊರೆಯಿತು' ಎಂದನು.

ಮುಸ್ಲಿಂ ಲೀಗ್ ಸಮಿತಿಯ ಮುಖ್ಯಸ್ಥನಾಗಿದ್ದ ಪೀರ್‌ಪುರ್‌ನ ಆಡಳಿತಗಾರನು ಜನವರಿ ೧೯೩೯ರಲ್ಲಿ ಕಾಂಗ್ರೆಸ್ ಮಂತ್ರಿ ಮಂಡಲಗಳು ಮುಸ್ಲಿಮರಿಗೆ ಸರ್ಕಾರಿ ಕೆಲಸಗಳು ದೊರಕದಂತೆ ಮಾಡುತ್ತಿವೆ ಮತ್ತು ಮುಸ್ಲಿಮರನ್ನು ಹಿಂದೂಗಳನ್ನಾಗಿ ಪರಿವರ್ತಿಸಲು ಯತ್ನಿಸುತ್ತಿವೆ ಎಂದು ಆಪಾದಿಸಿದ್ದನು. ಅದನ್ನು ಪಟೇಲರು ನಿರಾಕರಿಸಿದ್ದರು. ಸಂಬಂಧ ಪಟ್ಟ ರಾಜ್ಯಗಳ ಗೌರ್ನರರು, ಮುಸ್ಲಿಮರಿಗೆ ಅನ್ಯಾಯವಾದ ಯಾವ ದೂರುಗಳು ತಮಗೆ ಬಂದಿಲ್ಲ ಎಂದಿದ್ದರು. ೧೯೩೫ರ ಕಾನೂನಿನ ಪ್ರಕಾರ ಗೌರ್ನರ್‌ಗಳು ಅಲ್ಪ ಸಂಖ್ಯಾತರ ಹಿತರಕ್ಷರಾಗಿದ್ದರು. ಅದರಿಂದ, ಮುಸ್ಲಿಮರಿಗೆ ಮಂತ್ರಿ ಮಂಡಲ ಅನ್ಯಾಯ ಮಾಡಿದ್ದರೆ ಮೊದಲು ಅವರಿಗೆ ದೂರು ಬರುತ್ತಿತ್ತು. ಆದಾಗ್ಯೂ ಮಂತ್ರಿ ಮಂಡಲಗಳು ರಾಜಿನಾಮೆ ಕೊಟ್ಟಿದ್ದಕ್ಕೆ ಜಿನ್ನಾ ನೀಡಿದ ಕರೆಗೆ ಬೆಂಬಲ ಕೊಟ್ಟು ಬಹು ಸಂಖ್ಯೆಯ ಮುಸ್ಲಿಮರು ಡಿಸೆಂಬರ್ ೨೨ರಂದು 'ವಿಮೋಚನಾ ದಿನ'ವನ್ನು ಆಚರಿಸಿದರು.[೧೩೭]

ಸರ್ಕಾರಕ್ಕೆ ಸತ್ಯಾಂಶ ಗೊತ್ತಿದ್ದರೂ ಮುಸ್ಲಿಂ ಲೀಗ್‌ನ ಆಪಾದನೆಗೇ ಬೆಲೆ ಕೊಟ್ಟಿತು. ಫ಼ೆಟ್ ಲ್ಯಾಂಡನು, "ಕಾಂಗ್ರೆಸ್ಸು ಒಂದು ಹಿಂದೂ ಸಂಸ್ಥೆ, ಅದು ಮುಸ್ಲಿಂ ಲೀಗ್ ಒಡನೆ ಒಂದು ಇತ್ಯರ್ಥಕ್ಕೆ ಬರಬೇಕು" ಎಂದನು. ಪಟೇಲರ ಅದುಮಿಟ್ಟಿದ್ದ ಆಕ್ರೋಶ ಬುಗಿಲೆದ್ದಿತು. ಅವರು ಗುಡುಗಿದರು:

> ಯುದ್ಧದ ಉದ್ದೇಶಗಳು ಏನು? – ಎಂದು ನಾವು ವೈಸ್‌ರಾಯ್‌ನನ್ನು ಕೇಳಿದೆವು. ನಮಗೆ ಯಾವ ನೇರ ಉತ್ತರವೂ ಸಿಗಲಿಲ್ಲ. ಆದರೆ ಈಗ, ಮುಸ್ಲಿಂ ಲೀಗ್ ಬಳಿಗೆ ಹೋಗಿ ಅವರೊಡನೆ ಇತ್ಯರ್ಥ ಮಾಡಿಕೊಳ್ಳಿ ಎಂದು ಹೇಳುತ್ತಿದ್ದಾರೆ. ನಾವು ಅವರೊಡನೆ ಒಪ್ಪಂದ ಮಾಡಿಕೊಳ್ಳಲು ಯಶಸ್ವಿಯಾದರೆ

> 'ಭಾರತೀಯ ಅರಸರ ಬಳಿಗೆ ಹೋಗಿ ಇತ್ಯರ್ಥ ಮಾಡಿಕೊಳ್ಳಿ' ಎಂದು ಹೇಳುತ್ತಾರೆ. ಅದೂ ಸಹ ಸಾಧ್ಯವಾದಾಗ, ಭಾರತದಲ್ಲಿ ಅಷ್ಟೊಂದು ಹಿತಾಸಕ್ತಿ ಹೊಂದಿರುವ ಮತ್ತು ಅಷ್ಟೊಂದು ಹಣ ತೊಡಗಿಸಿರುವ ಐರೋಪ್ಯರ ಗತಿ ಏನು? ಎಂದು ಅವರು ಕೇಳುವುದರಲ್ಲಿ ಅನುಮಾನವೇ ಇಲ್ಲ. ಹೀಗೆ ಅವರು ದೇಶದಲ್ಲಿ ಭೇದಗಳನ್ನು ವಿಸ್ತರಿಸುತ್ತಾ ಹೋಗುತ್ತಾರೆ. ಎರಡು ಬೆಕ್ಕುಗಳು ತಮ್ಮ ವಿವಾದವನ್ನು ಕೋತಿಗೆ ಒಪ್ಪಿಸಿದ ಕಥೆಯಲ್ಲಿ ಕೋತಿ ಮಾಡುವ ಹಾಗೆ..... ನಮ್ಮ ಜಗಳಕ್ಕೆ ನೀವು ಬ್ರಿಟಿಷರೇ ನಿಜವಾದ ಕಾರಣ. ಮತೀಯ ಮತದಾನದ ಸಮುದಾಯಗಳನ್ನು ಜಾರಿಗೆ ತಂದವರು ನೀವು.....[೧೩೮]

ಕಾಂಗ್ರೆಸ್ಸು ತನ್ನ ವಾರ್ಷಿಕ ಅಧಿವೇಶನವನ್ನು ೧೯೪೦ರ ಮಾರ್ಚ್‌ನಲ್ಲಿ ಬಿಹಾರದ ರಾಮ್‌ಘರ್‌ನಲ್ಲಿ ನಡೆಸಿತು. ಆ ಅಧಿವೇಶನಕ್ಕೆ ಪಟೇಲರನ್ನು ಎರಡನೆ ಬಾರಿಗೆ ಅಧ್ಯಕ್ಷರನ್ನಾಗಿ ಮಾಡಬೇಕೆಂದು ಮಹದೇವ ದೇಸಾಯಿ ಗಾಂಧೀಜಿಯ ಮುಂದಿಟ್ಟರು. ಆದರೆ, ಕಾಂಗ್ರೆಸ್ಸು ಮುಸ್ಲಿಮರ ಶತೃ ಎಂದು ಮುಸ್ಲಿಂ ಲೀಗ್ ಭಾವಿಸಿದ್ದುದರ ಹಿನ್ನಲೆಯಲ್ಲಿ ಗಾಂಧೀಜಿಯವರು ಮೌಲಾನ ಆಜ಼ಾದ್‌ರವರನ್ನು ಅಧ್ಯಕ್ಷರನ್ನಾಗಿ ಮಾಡಿದರು. ಆಜ಼ಾದ್‌ರವರು ಅಧ್ಯಕ್ಷ ಪೀಠದಿಂದ 'ಮುಸ್ಲಿಮರು ಭಾರತೀಯ ರಾಷ್ಟ್ರೀಯತೆ ಅನ್ನುವ ವಿಭಜಿಸಲಾಗದ ಏಕತೆಯ ಭಾಗ' ಎಂದು ನುಡಿದರು. ಆದರೆ ಅದು ಮುಸ್ಲಿಮರ ಮೇಲೆ ಪ್ರಭಾವ ಬೀರಲಿಲ್ಲ

ಅದಕ್ಕೆ ಮುಂಚೆ ಮತ್ತೊಂದು ಬೆಳವಣಿಗೆ ನಡೆದಿತ್ತು. 'ಯುದ್ಧ ಮುಗಿದ ನಂತರ ಭಾರತಕ್ಕೆ ಸ್ವಾತಂತ್ರ್ಯವನ್ನು ನೀಡುವುದಾಗಿ ಬ್ರಿಟಿಷ್ ಸರ್ಕಾರ ಈಗಲೇ ಪ್ರಕಟಿಸದ ಹೊರತು, ಅದರ ಯುದ್ಧ ತಯಾರಿಗೆ ಸಹಕರಿಸುವುದಿಲ್ಲ' ಎಂದು ಕಾಂಗ್ರೆಸ್ ಖಡಾಖಂಡಿತವಾಗಿ ತೀರ್ಮಾನಿಸಿದ್ದರಿಂದ ಮತ್ತು ಕಾಂಗ್ರೆಸ್ ಮಂತ್ರಿ ಮಂಡಲಗಳು ರಾಜಿನಾಮೆ ನೀಡಿದ್ದರಿಂದ ವೈಸ್‌ರಾಯನು ಕಾಂಗ್ರೆಸ್ಸಿನ ವಿರೋಧಿಗಳ ಕಡೆಗೆ ತಿರುಗಿದನು. ಸರ್ದಾರ್ ಪಟೇಲರು ಅಕ್ಟೋಬರ್ ೧೯೩೯ರಲ್ಲಿ ವೈಸ್‌ರಾಯ್ ಲಿನ್‌ಲಿತ್‌ಗೊನನ್ನು ಭೇಟಿ ಮಾಡಿದಾಗ, ವೈಸ್‌ರಾಯ್, 'ಕಾಂಗ್ರೆಸ್ಸು ನನಗೆ ಬೆಂಬಲ ನೀಡದೆ ಹೋದರೆ ನಾನು ಮುಸ್ಲಿಮರ ಸಹಾಯವನ್ನು ತೆಗೆದುಕೊಳ್ಳಬೇಕಾಗುತ್ತದೆ' ಎಂದು ಹೇಳಿದ್ದನು.[೧೩೯]

ವೈಸ್‌ರಾಯನು ಕಾಂಗ್ರೆಸ್ಸಿನ ವಿರೋಧಿಗಳನ್ನು ಬಲ ಪಡಿಸಲು ಕ್ರಮ ತೆಗೆದುಕೊಂಡನು. ಮುಸ್ಲಿಂ ಲೀಗ್‌ನ ಮಹಮ್ಮದಾಲಿ ಜಿನ್ನಾ, ದೇಶೀಯ ರಾಜರುಗಳ

ಕೂಟದ ಚಾನ್ಸಲರ್ ಅಲ್ಲದೆ ಇನ್ನೂ ಅನೇಕ ಸಮುದಾಯಗಳ ಪ್ರತಿನಿಧಿಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಕರೆಯಿಸಿ ಮಾತನಾಡಿದನು. ಅವನು ಒಡೆದು ಆಳುವ ನೀತಿಯನ್ನು ಅನುಸರಿಸಲು ಹೊರಟಿದ್ದನು.

ಮುಸ್ಲಿಂ ಲೀಗ್‌ನ ಚಟುವಟಿಕೆಗಳನ್ನು ಪಟೇಲರು ಹಿಂದಿನಿಂದಲೂ ಗಮನಿಸುತ್ತಿದ್ದರು. ೧೯೩೭ರ ಚುನಾವಣೆಯಲ್ಲಿ ಚಲಾಯಿಸಲ್ಪಟ್ಟ ಮುಸ್ಲಿಂ ಮತಗಳ ಪೈಕಿ ಕೇವಲ ಶೇ. ೫ರಷ್ಟು ಮತಗಳನ್ನು ಮಾತ್ರ ಮುಸ್ಲಿಂ ಲೀಗ್ ಪಡೆದಿತ್ತು. ಆಗ 'ದೇಶದಲ್ಲಿರುವುದು ಎರಡು ಪಕ್ಷಗಳು ಮಾತ್ರ – ಕಾಂಗ್ರೆಸ್ಸು ಮತ್ತು ಬ್ರಿಟಿಷ್' ಎಂದು ಜವಹರಲಾಲ್ ನೆಹರು ಆನಂದದಿಂದ ಘೋಷಿಸಿದ್ದರು. ಈ ಕುಟುಕಿನಿಂದ ರೋಷಗೊಂಡ ಜಿನ್ನಾ ಮೂರನೆ ಪಕ್ಷವನ್ನು ಕಟ್ಟಲು ಹೊರಟನು. ಅವನು ೧೯೩೮ರಲ್ಲಿ ಲಕ್ನೋದಲ್ಲಿ ಮಾಡಿದ ಭಾಷಣದಲ್ಲಿ "ಬಹುಸಂಖ್ಯಾತ ಜನಾಂಗವು 'ಹಿಂದೂ ಸ್ಥಾನವು ಹಿಂದೂಗಳಿಗೆ' ಎನ್ನುವುದನ್ನು ಸ್ಪಷ್ಟವಾಗಿ ತೋರಿಸಿದೆ," ಎಂದನು. ಮುಸ್ಲಿಂ ಲೀಗ್‌ನವರು ತಮ್ಮ ಜನಾಂಗದ ಸಾಮಾನ್ಯ ಜನರ ಬಳಿಗೆ ಹೋಗಿ ನಿರಂತರ ಹಿಂಸೆಯ ಫಲವಾಗಿ ೮೦ ಮಿಲಿಯನ್ ಮುಸ್ಲಿಮರ ರಾಷ್ಟ್ರವು ಹೊರಹೊಮ್ಮುವಂತೆ ಮಾಡಬೇಕೆಂದು ಒತ್ತಾಯಿಸಿದನು. 'ಹಿಂದೂಗಳು ಮತ್ತು ಮುಸ್ಲಿಮರು ಎರಡು ವಿಶಿಷ್ಟ ಮತ್ತು ಪ್ರತ್ಯೇಕ ನಾಗರಿಕತೆಗಳನ್ನು ಪ್ರತಿನಿಧಿಸುತ್ತಾರೆ' ಎಂದು ಒಂದು ಸಂಸದೀಯ ಸಮಿತಿ ನೀಡಿದ್ದ ವರದಿಯನ್ನು ಜಿನ್ನಾ ಅವಲಂಬಿಸಿದ್ದನು. ಅವನು 'ಪ್ರಜಾಪ್ರಭುತ್ವ ಎಂದರೆ ಇಡೀ ಇಂಡಿಯಾದಲ್ಲಿ ಹಿಂದೂ ಆಡಳಿತ. ದೇಶದಲ್ಲಿ ಇತರ ಎಲ್ಲಾ ಸಂಸ್ಥೆಗಳನ್ನು ನಾಶ ಪಡಿಸುವುದು ಕಾಂಗ್ರೆಸ್ಸಿನ ಏಕಮಾತ್ರ ಗುರಿ' ಎಂದು ಹೇಳುತ್ತಿದ್ದನು. ಕಾಂಗ್ರೆಸ್ಸಿನ ವಿರುದ್ಧ ಕಹಿ ಭಾವನೆಯನ್ನು ಮುಸ್ಲಿಮರಲ್ಲಿ ಕೆರಳಿಸುವ ಅವನ ಆಂದೋಲನದ ಫಲವಾಗಿ ಮುಸ್ಲಿಮರು ಡಿಸೆಂಬರ್ ೨೨ರಂದು ಕಾಂಗ್ರೆಸ್ ಆಡಳಿತದಿಂದ ಬಿಡುಗಡೆ ದೊರೆಯಿತೆಂದು (ಹಿಂದೆಯೆ ಹೇಳಿದ ಹಾಗೆ) 'ವಿಮೋಚನಾ ದಿನ' ಮತ್ತು 'ವಂದನಾರ್ಪಣೆಯ ದಿನ'ವನ್ನು ಆಚರಿಸಿದರು. ೧೯೪೦ರ ಮಾರ್ಚ್‌ನಲ್ಲಿ ಕಾಂಗ್ರೆಸ್ಸು ರಾಮ್‌ಘರ್‌ನಲ್ಲಿ ವಾರ್ಷಿಕ ಅಧಿವೇಶನ ನಡೆಸಿದಾಗ, ಅಖಿಲ ಭಾರತ ಮುಸ್ಲಿಂ ಲೀಗ್ ಲಾಹೋರಿನ ಇಕ್ಬಾಲ್ ಪಾರ್ಕ್‌ನಲ್ಲಿ ಮಾರ್ಚ್ ೨೨ರಿಂದ ೨೪ರ ವರೆಗೆ ಅಧಿವೇಶನ ನಡೆಸಿ ಒಂದು ಠರಾವಿನ ಮೂಲಕ ಹಿಂದೂ ಇಂಡಿಯ ಮತ್ತು ಮುಸ್ಲಿಂ ಇಂಡಿಯಾ ಎಂದು ವಿಭಾಗಿಸಬೇಕೆಂದು ಕೇಳಿತು(ಮುಂದೆ ಮುಸ್ಲಿಂ ಇಂಡಿಯಾವನ್ನು ಪಾಕಿಸ್ತಾನ ಎಂದು ಕರೆಯಿತು). ಮುಸ್ಲಿಮರು ಬಹು ಸಂಖ್ಯಾತರಾಗಿರುವ ಪ್ರದೇಶಗಳನ್ನು ಒಂದುಗೂಡಿಸಿ ಒಂದು ಸ್ವತಂತ್ರ ರಾಷ್ಟ್ರವನ್ನು ರಚಿಸಬೇಕೆಂದು ಅದು ಹೇಳಿತು.[೧೪೦]

ಜಿನ್ನಾ ಒಂದು ಕಾಲದಲ್ಲಿ ಹಿಂದೂ – ಮುಸ್ಲಿಂ ಐಕ್ಯತೆಯ ಪ್ರತಿಪಾದಕರಾಗಿದ್ದರು. ಈಗ ಅವರು ಭಾರತ ವಿಭಜನೆಯ ಪ್ರತಿಪಾದಕರಾಗಿ ಬದಲಾವಣೆಯಾಗಿದ್ದರು. ಈಗ ಅವರಿಗೆ ಬ್ರಿಟಿಷ್ ಸರ್ಕಾರದ ಸಖ್ಯ ದೊರೆತಿತ್ತು. ಬ್ರಿಟಿಷ್ ಸರ್ಕಾರವು ಜಿನ್ನಾ ಕಡೆಗೆ ಹೆಚ್ಚು ಹೆಚ್ಚು ವಾಲುವುದಕ್ಕೆ ಆರಂಭಿಸಿತ್ತು. *(ಅವರಿಬ್ಬರನ್ನು ಒಟ್ಟಾಗುವುದಕ್ಕೆ ಬಿಟ್ಟಿದ್ದೇ ಕಾಂಗ್ರೆಸ್‌ನ ದೊಡ್ಡ ತಪ್ಪಾಯಿತು – ಲೇಖಕ)*

ತಮ್ಮ ಬ್ರಿಟಿಷರ ಮೇಲಿನ ಹೊಸ ಪ್ರೀತಿಯ ಬಗೆಗೆ ಜಿನ್ನಾ ಹೀಗೆ ಹೇಳಿದ್ದಾರೆ: "ಯುದ್ಧ ಆರಂಭವಾದ ಮೇಲೆ ನನ್ನ ಬಗೆಗೆ ಅವರ ಮನೋಭಾವದಲ್ಲಿ ಬದಲಾವಣೆ ಉಂಟಾಯಿತು. ಗಾಂಧೀಜಿಯನ್ನು ಯಾವ ಆಧಾರದಲ್ಲಿ ನೋಡುತ್ತಿದ್ದರೊ ಅದೇ ಆಧಾರದಲ್ಲಿ ನನ್ನನ್ನೂ ನೋಡಿದರು. ಏಕೆ ಇದ್ದಕ್ಕಿದ್ದ ಹಾಗೆ ನನ್ನನ್ನು ಮೇಲಕ್ಕೆ ಏರಿಸಿದ್ದಾರೆ ಮತ್ತು ಗಾಂಧೀಜಿಯೊಡನೆ ಸಮಾನ ಸ್ಥಾನ ಕೊಟ್ಟಿದ್ದಾರೆ? – ಎಂದು ನನಗೆ ಆಶ್ಚರ್ಯವಾಯಿತು." ಮುಸ್ಲಿಂ ಲೀಗ್ ಶರತ್ತುಗಳನ್ನು ವಿಧಿಸಿತು ಮತ್ತು 'ಮುಸ್ಲಿಮರ ಒಪ್ಪಿಗೆ ಇಲ್ಲದೆ ಯಾವ ಸಾಂವಿಧಾನಿಕ ಬದಲಾವಣೆಯನ್ನೂ ಮಾಡುವುದಿಲ್ಲ' ಎನ್ನುವ ಆಶ್ವಾಸನೆಯನ್ನು ಪಡೆದುಕೊಂಡಿತು.[೧೪೧]

ಇಂತಹ ಸನ್ನಿವೇಶದಲ್ಲಿ ರಾಮ್‌ಘರ್‌ನಲ್ಲಿ ಕಾಂಗ್ರೆಸ್ ಅಧಿವೇಶನ ಸೇರಿತ್ತು. ಅಧಿವೇಶನದಲ್ಲಿ ಸೇರಿದ್ದ ಪ್ರತಿನಿಧಿಗಳು ಶಾಸನ ಭಂಗ ಚಳವಳಿಯನ್ನು ಮತ್ತೆ ಆರಂಭಿಸುವುದರ ಪರವಾಗಿದ್ದರು. ಆದರೆ ಸಾಮೂಹಿಕ ಸತ್ಯಾಗ್ರಹವನ್ನು ಆರಂಭಿಸುವುದಕ್ಕೆ ಮೂರು ತೊಡಕುಗಳು ಇದ್ದುವು. ಮೊದಲನೆಯದು, ಮಿತ್ರ ಪಂಗಡಗಳಾಗಿ ಬ್ರಿಟನ್ ಮತ್ತು ಫ್ರಾನ್ಸ್ ಪ್ರಜಾಪ್ರಭುತ್ವದ ಉಳಿವಿಗಾಗಿ ಹೋರಾಡುತ್ತಿದ್ದರು. ಅವರ ಕಾರಣ ನ್ಯಾಯವಾದದ್ದರಿಂದ ಯುದ್ಧದ ಸಮಯದಲ್ಲಿ ಅವರಿಗೆ ಮುಜಗರ ಉಂಟಾಗಬಾರದು. ಎರಡನೆಯದು, ಹಿಂದೂ – ಮುಸ್ಲಿಂ ಮೈತ್ರಿ ಇಲ್ಲದ್ದು. ಅಂದಿನ ಸನ್ನಿವೇಶದಲ್ಲಿ ಶಾಸನ ಭಂಗ ಚಳವಳಿಯು ಮತೀಯ ಗಲಭೆಯಾಗಿ ಪರಿವರ್ತನೆಯಾಗುವ ಸಂಭವವಿತ್ತು. ಅದು ಅಂತರ್ಯುದ್ಧವಾಗುವ ಸಂಭವವೂ ಇತ್ತು. ಮೂರನೆಯದು, ಸಾಮೂಹಿಕ ಚಳವಳಿಗೆ ಜನ ಸಾಮಾನ್ಯರು ಸಿದ್ಧವಾಗಿರಲಿಲ್ಲ. ಕಾಂಗ್ರೆಸ್ ಪಕ್ಷವು ಅದನ್ನು ಆರಂಭಿಸುವ ಸ್ಥಿತಿಯಲ್ಲಿರಲಿಲ್ಲ. ಆ ಸಂಸ್ಥೆಯು ದುರ್ಬಲವಾಗಿತ್ತು ಮತ್ತು ೧೯೩೮–೩೯ರ ಕಾಲದಲ್ಲಿ ಬ್ರಷ್ಟವಾಗಿಬಿಟ್ಟಿತ್ತು. ಅದರ ಸದಸ್ಯರಲ್ಲಿ ಅಶಿಸ್ತು, ಅನೈಕ್ಯಮತ್ಯ ಆವರಿಸಿತ್ತು. ಅವರು ಸರ್ಕಾರದ ದಮನಾತ್ಮಕ ಹಿಂಸಾಚಾರಗಳನ್ನು ಸಹಿಸಿಕೊಳ್ಳುವ ಸ್ಥಿತಿಯಲ್ಲಿ ಇರಲಿಲ್ಲ. ಈ ಮೂರು ಕಾರಣಗಳನ್ನು ಗಾಂಧೀಜಿ, ಪಟೇಲ್ ಮತ್ತು ಇತರ ಕೆಲವು ಹಿರಿಯ ನಾಯಕರು ಮುಂದಿಟ್ಟರು.[೧೪೨]

ಆದರೆ ಕಾಂಗ್ರೆಸ್ಸು ಏನೂ ಮಾಡದೆ ಸುಮ್ಮನಿರಲು ಸಾಧ್ಯವಿರಲಿಲ್ಲ. ಪಟೇಲರು ಆರಿಸಲ್ಪಟ್ಟ ವ್ಯಕ್ತಿಗಳಿಂದ ಶಿಸ್ತುಬದ್ಧ ಶಾಸನ ಭಂಗ ಚಳವಳಿಯನ್ನು ನಡೆಸುವ ಸಲಹೆಯನ್ನು ಮಂಡಿಸಿದರು. ಗಾಂಧೀಜಿಯವರು ಪಟೇಲರ ಸಲಹೆಯನ್ನು ಒಪ್ಪಿದರು. ಇನ್ನೇನು ಆ ಚಳವಳಿಯನ್ನು ಆರಂಭಿಸಬೇಕೆನ್ನುವಷ್ಟರಲ್ಲಿ ಮತ್ತೊಂದು ಬೆಳವಣಿಗೆ ಉಂಟಾಗಿ, ಅದರ ಆರಂಭ ನಿಂತುಹೋಯಿತು.

೧೯೪೦ರ ಮೇನಲ್ಲಿ ಹಿಟ್ಲರನು ಬಿರುಸಿನ (ಕ್ಷಿಪ್ರ) ಧಾಳಿ ನಡೆಸಿ ತನ್ನ ನೆರೆಯ ನಾರ್ವೆ, ಡೆನ್ಮಾರ್ಕ್, ಹಾಲೆಂಡ್ ಮತ್ತು ಬೆಲ್ಜಿಯಂ ಅನ್ನು ಆಕ್ರಮಿಸಿಕೊಂಡನು. ಫ್ರಾನ್ಸ್ ಸಹ ಅವನಿಗೆ ಶರಣಾಗತವಾಯಿತು. ನಂತರ ಹಿಟ್ಲರ್ ಇಂಗ್ಲಿಷ್ ಚಾನಲ್ ಬಂದರುಗಳನ್ನು ಆಕ್ರಮಿಸಿಕೊಂಡು ಇಂಗ್ಲೆಂಡಿನ ಮೇಲೆ ಧಾಳಿ ಮಾಡಲು ಸಿದ್ಧನಾದನು. ಇಂಗ್ಲೆಂಡು ವಿಷಮ ಸ್ಥಿತಿಗೆ ಸಿಲುಕಿತು.

ಬ್ರಿಟನ್ನಿನ ಪ್ರಧಾನಮಂತ್ರಿ ಕನ್‌ಸರ್‌ವೆಟಿವ್ ಪಕ್ಷದ ಚೇಂಬರ್‌ಲೈನ್‌ನು ರಾಜಿನಾಮೆ ಇತ್ತು ವಿನ್‌ಸ್ಟನ್ ಚರ್ಚಿಲ್ ಪ್ರಧಾನಮಂತ್ರಿಯಾಗಿ ಲೇಬರ್ ಪಕ್ಷದೊಡನೆ ಸಮ್ಮಿಶ್ರ ಸರ್ಕಾರ ರಚಿಸಿದನು. ಲೇಬರ್ ಪಕ್ಷದ ಕ್ಲೆಮೆಂಟ್ ಆಟ್ಲಿ ಉಪ ಪ್ರಧಾನಮಂತ್ರಿಯಾದನು.

'ಈಗ ಹೋರಾಟ ಆರಂಭಿಸೋಣ' ಎಂದರು ಕೆಲವು ಭಾರತೀಯರು. ಆದರೆ ಗಾಂಧೀಜಿಯವರು ತಮ್ಮ 'ಹರಿಜನ' ಪತ್ರಿಕೆಯ ಜೂ ೧೮ರ ಸಂಚಿಕೆಯಲ್ಲಿ 'ಮಿತ್ರ ರಾಷ್ಟ್ರಗಳ ಮಧ್ಯ ಭಾಗದಲ್ಲಿ ನಡೆಯುತ್ತಿರುವ ಯುದ್ಧವು ನಿಲ್ಲುವ ತನಕ ನಾವು ಕಾಯಬೇಕು ಮತ್ತು ಪರಿಸ್ಥಿತಿ ಈಗಿರುವುದಕ್ಕಿಂತ ಮುಂದೆ ಸ್ಪಷ್ಟವಾಗುತ್ತದೆ ಎನ್ನುವುದು ನನ್ನ ಅಭಿಪ್ರಾಯ. ನಾವು ನಮ್ಮ ಸ್ವಾತಂತ್ರ್ಯವನ್ನು ಬ್ರಿಟನ್ನಿನ ಸರ್ವನಾಶದಲ್ಲಿ ಪಡೆಯಲು ಯತ್ನಿಸುವುದಿಲ್ಲ. ಅದು ಅಹಿಂಸೆಯ ವಿಧಾನವಲ್ಲ' ಎಂದು ಬರೆದರು.[೧೪೩]

ಕಾಂಗ್ರೆಸ್ಸಿನವರು ಹೊಸ ರೀತಿಯಲ್ಲಿ ಆಲೋಚಿಸಲು ಆರಂಭಿಸಿದರು. ಆದರೆ ಅವರಲ್ಲಿ ಒಮ್ಮತವಿರಲಿಲ್ಲ. ರಾಜಾಜಿ ಮತ್ತು ಇನ್ನು ಕೆಲವರು ಇಂಗ್ಲೆಂಡಿನ ದುಸ್ಥಿತಿಗೆ ಸಹಾನುಭೂತಿ ವ್ಯಕ್ತಪಡಿಸಿದರು. ಈಗ ಕಾಂಗ್ರೆಸ್ಸು ಇಂಗ್ಲೆಂಡಿಗೆ ಸಹಾಯ ನೀಡಿದರೆ ಅವರು ಅಧಿಕಾರವನ್ನು ಹಸ್ತಾಂತರಿಸಬಹುದು ಎಂದು ಯೋಚಿಸಿದ ರಾಜಾಜಿಯವರು, 'ಯುದ್ಧದ ಅಂತ್ಯದಲ್ಲಿ ಸ್ವಾತಂತ್ರ್ಯವನ್ನು ಕೊಡುವುದಾಗಿ ಬ್ರಿಟನ್ ವಾಗ್ದಾನ ಮಾಡಿದರೆ ಮತ್ತು ಈಗಲೇ ದೆಹಲಿಯಲ್ಲಿ ಪ್ರಾತಿನಿಧಿಕ ಸರ್ಕಾರವನ್ನು ರಚಿಸಿದರೆ ಕಾಂಗ್ರೆಸ್ಸು ಜೊತೆಗಾರನಂತೆ ಯುದ್ಧಕ್ಕೆ ಸೇರುವ' ಪ್ರಸ್ತಾವನೆಯನ್ನು ಮಂಡಿಸಿದರು. ಸುಭಾಷ್, ಜಯಪ್ರಕಾಶ್ ಮತ್ತು ಅವರಂತವರು ಇಂಗ್ಲೆಂಡಿಗೆ

ಸಹಾನುಭೂತಿ ತೋರುವುದು ವ್ಯರ್ಥ. ಅವರಿಂದ ರಾಜನೀತಿಜ್ಞತೆಯನ್ನು ನಿರೀಕ್ಷಿಸಕೂಡದು ಎಂದರು. ಗಾಂಧೀಜಿಯವರು 'ರಾಜಗೋಪಾಲಾಚಾರಿಯವರ ಮಾರ್ಗವು ನನ್ನ ಮಾರ್ಗವಲ್ಲ' ಎಂದರು. ಅಂಹಿಂಸಾವಾದಿಯಾದ ಅವರು, ಇಂಗ್ಲೆಂಡ್ ಬಗೆಗೆ ಅತ್ಯಂತ ಸಹಾನುಭೂತಿ ಹೊಂದಿದ್ದರೂ ಸಹ ಕಾಂಗ್ರೆಸ್ಸು ಹಿಂಸಾತ್ಮಕ ಯುದ್ಧದಲ್ಲಿ ಭಾಗವಹಿಸುವುದನ್ನು ಒಪ್ಪಲು ಸಾಧ್ಯವಿರಲಿಲ್ಲ. ಅದರ ಜೊತೆಗೆ, ಕಾಂಗ್ರೆಸ್ಸನ್ನು ವಿಫಲಗೊಳಿಸಲು ಸರ್ಕಾರ ಮತ್ತು ಲೀಗ್ ಒಂದುಗೂಡಿರುವ ವಿಷಯ. ಅವರು ವೈಸ್‌ರಾಯ್ ಒಡನೆ ನಡೆಸಿದ ಮಾತುಕತೆಯಿಂದ, ತಿಳಿದಿತ್ತು. ಅದರಿಂದ ಸರ್ಕಾರವು ಕಾಂಗ್ರೆಸ್ ಜೊತೆ ಸರಿಯಾಗಿ ನಡೆದುಕೊಳ್ಳುವುದಿಲ್ಲ ಎಂದು ಗಾಂಧೀಜಿ ಅಭಿಪ್ರಾಯ ಪಟ್ಟರು.

ಸರ್ದಾರ್ ಪಟೇಲರು ಸಂಧಿಗ್ದತೆಗೆ ಸಿಲುಕಿದರು. ರಾಜಾಜಿಯವರ ಸಲಹೆ ಸಾಧ್ಯವಾದುದು – ಎಂದು ಅವರಿಗೆ ಅನ್ನಿಸಿತು. ಆದರೆ, ಅವರ ಸಲಹೆಗೆ ಬೆಂಬಲ ನೀಡಿದರೆ ಗಾಂಧೀಜಿಯನ್ನು ವಿರೋಧಿಸಿದಂತೆ, ಅವರಿಂದ ದೂರ ಸರಿದಂತೆ ಆಗುತ್ತದೆ. ಅದು ಅವರಿಗೆ ಇಷ್ಟವಿಲ್ಲದ ಕಾರ್ಯ. ಗಾಂಧೀಜಿಯವರ ಅಹಿಂಸೆಯನ್ನು ಸರ್ದಾರರು ಒಪ್ಪಿದ್ದರೂ, ಅದನ್ನು ಅವರು ಪಾಲಿಸುತ್ತಿದ್ದರೂ, ದೇಶ ರಕ್ಷಣೆಗೆ ಮತ್ತು ದೇಶದೊಳಗೆ ಶಾಂತಿ ಪಾಲನೆಗೆ (ಸೈನ್ಯ ಮತ್ತು ಪೊಲೀಸ್ ಬಳಸಲೇಬೇಕಾದ್ದರಿಂದ) ಸ್ವಲ್ಪ ಮಟ್ಟಿನ ಹಿಂಸೆ ಅನಿವಾರ್ಯ ಎನ್ನುವುದು ಪಟೇಲರಿಗೆ ತಿಳಿದಿತ್ತು. ಪ್ರಾಂತ್ಯಗಳಲ್ಲಿ ಕಾಂಗ್ರೆಸ್ ಮಂತ್ರಿಮಂಡಲಗಳು ಇದ್ದಾಗ, ಮತೀಯ ಗಲಭೆ ಮುಂತಾದ ಸಮಯಗಳಲ್ಲಿ ಸ್ವಲ್ಪ ಹಿಂಸೆಯನ್ನು ಬಳಸಲಾಗಿತ್ತು. ಆದರೆ ಗಾಂಧೀಜಿಯವರು ಅಹಿಂಸೆಯಲ್ಲಿ ಅಚಲವಾದ ನಂಬಿಕೆಯನ್ನು ಇಟ್ಟಿದ್ದರು. ಎಲ್ಲ ಸಮಸ್ಯೆಗಳಿಗೂ ಅದೇ ಪರಿಹಾರ, ಅದೇ ಸಂಜೀವಿನಿ. ಶತೃ ಸೈನ್ಯದ ಆಕ್ರಮಣದ ವಿರುದ್ಧವೂ ಅದೇ ಪರಿಹಾರ ಎಂದು ನಂಬಿದ್ದರು. ಆದರೆ ಅದು ವಾಸ್ತವಿಕವಲ್ಲ ಎನ್ನುವುದು ಪಟೇಲರಿಗೆ ಗೊತ್ತಿತ್ತು. ಅದರಿಂದ ರಾಜಾಜಿಯವರ ಸಲಹೆಯನ್ನು ಬೆಂಬಲಿಸಿ ಗಾಂಧೀಜಿಯನ್ನು ದೂರ ಮಾಡಬೇಕೆ ಅಥವಾ ಗಾಂಧೀಜಿಯನ್ನು ಬೆಂಬಲಿಸಿ ವಾಸ್ತವಿಕತೆಯಿಂದ ದೂರ ಸರಿಯಬೇಕೆ ಎನ್ನುವುದನ್ನು ನಿರ್ಧರಿಸಲಾರದೆ ಪಟೇಲರು ಚಿಂತೆಗೆ ಒಳಗಾದರು. ಅವರು ಗಾಂಧೀಜಿಗೆ, "ನೀವು ನನಗೆ ಆಜ್ಞಾಪಿಸಿದರೆ ಕಣ್ಣಿಗೆ ಬಟ್ಟೆ ಕಟ್ಟಿಕೊಂಡು ನಿಮ್ಮನ್ನು ಹಿಂಬಾಲಿಸುತ್ತೇನೆ" ಎಂದರು. ಆದರೆ ಗಾಂಧೀಜಿ ಆಜ್ಞಾಪಿಸಲು ಒಪ್ಪಲಿಲ್ಲ. ಆದರೂ ಪಟೇಲರಿಗೆ ದಾರಿ ತೋರಿದರು. ಅವರೆಂದರು, "ನಿನ್ನ ಆತ್ಮಸಾಕ್ಷಿ ಹೇಳಿದಂತೆ ಮಾಡು. ನಾನು ಹೇಳುವುದು ಸರಿ ಅನ್ನಿಸಿದರೆ ನನ್ನನ್ನು ಹಿಂಬಾಲಿಸಿ, ಕಾಂಗ್ರೆಸ್ಸನ್ನು ಬಿಡು. ಇಲ್ಲದೇ ಹೋದರೆ ಕಾಂಗ್ರೆಸ್‌ನಲ್ಲೇ ಉಳಿ."[೧೪೪]

ಪಟೇಲರು ರಾಜಾಜಿಯವರ ಸಲಹೆಯನ್ನು ಬೆಂಬಲಿಸಿದರು. ಅದರ ಫಲವಾಗಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ರಾಜಾಜಿಯವರ ಪ್ರಸ್ತಾವನೆಯನ್ನು ಅಂಗೀಕರಿಸಿತು. ಗಾಂಧೀಜಿ ಕಾಂಗ್ರೆಸ್‌ನಿಂದ ದೂರವಾದರು. ೨೨ ವರ್ಷಗಳ ಸಂಬಂಧದಲ್ಲಿ ಪ್ರಥಮ ಬಾರಿಗೆ ಪಟೇಲರು ಗಾಂಧೀಜಿಯಿಂದ ಇಷ್ಟವಿಲ್ಲದ ಮನಸ್ಸಿನಿಂದ ದೂರ ಸರಿದಿದ್ದರು. ಗಾಂಧೀಜಿ ಹೇಳಿದರು:

> ಸರ್ದಾರರಿಗೆ ಎಲ್ಲಾ ಗೌರವಗಳು ಸಲ್ಲಬೇಕು. ಏಕೆಂದರೆ ಅವರು ತಮ್ಮ ನಂಬಿಕೆಯಂತೆ ನಡೆದಿದ್ದಾರೆ. ಸರ್ದಾರರು ನೂತನ ವ್ಯಕ್ತಿಯಲ್ಲ. ಅವರು ಕಾರ್ಯಶೀಲ ವ್ಯಕ್ತಿ. ಅವರು ಒಂದು ಕಾರ್ಯದ ಮಾರ್ಗವನ್ನು ತೀರ್ಮಾನಿಸಿದ ಮೇಲೆ ತಮ್ಮ ಸುತ್ತ ಮುತ್ತ ನೋಡುವುದಿಲ್ಲ ಅಥವಾ ತನ್ನ ಬಗೆಗೆ ಯೋಚಿಸುವುದಿಲ್ಲ. ಅವರು ಸುಮ್ಮನೆ ಮುನ್ನಡೆಯುತ್ತಾರೆ. ಅವರು ಸದಾ ಹಾಗೆಯೆ ಇರಲಿ.[೧೪೫]

ಜುಲೈ ತಿಂಗಳಲ್ಲಿ ಸುಭಾಷ್ ಮತ್ತು ಜಯಪ್ರಕಾಶ್ ನಾರಾಯಣ್ ಸೆರೆಮನೆಗೆ ದೂಡಲ್ಪಟ್ಟರು. ಮುಂದೆ ಸುಭಾಷರು ಕಲ್ಕತ್ತದಲ್ಲಿ ಗೃಹ ಬಂಧನದಲ್ಲಿ ಇಡಲ್ಪಟ್ಟರು.

ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಜುಲೈ ಅಂತ್ಯದಲ್ಲಿ ಪೂನಾದಲ್ಲಿ ಸಭೆ ಸೇರಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ತೀರ್ಮಾನವನ್ನು ಅನುಮೋದಿಸಿತು. ಆದಾಗ್ಯೂ ತಾವು ಹಿಡಿದ ಹಾದಿ ಸರಿಯೆ ಅನ್ನುವುದರ ಬಗೆಗೆ ಸರ್ದಾರರಿಗೆ ಸಂದೇಹ ಆರಂಭವಾಯಿತು. ಗಾಂಧೀಜಿಯನ್ನು ವಿರೋಧಿಸಿದ್ದು ಅವರ ಮನಸ್ಸಿನ ಶಾಂತಿಯನ್ನು ಕದಡಿತ್ತು. ಆಗಸ್ಟ್ ಆದಿ ಭಾಗದಲ್ಲಿ ವೈಸ್‌ರಾಯ್‌ನು ಕಾಂಗ್ರೆಸ್ಸಿನ ಪ್ರಸ್ತಾವನೆಗೆ ಉತ್ತರವನ್ನು ನೀಡಿದನು. ಅವನು ಒಂದು ಪ್ರಕಟಣೆಯಲ್ಲಿ, ಸರ್ಕಾರ, ಕಾಂಗ್ರೆಸ್ಸು, ಲೀಗ್ ಮತ್ತು ದೇಶೀಯ ಅರಸರು ಒಂದು ಒಪ್ಪಂದಕ್ಕೆ ಬಂದರೆ ಒಂದು ಗೊತ್ತಾದ ಸಂಖ್ಯೆಯ ರಾಜಕಾರಣಿಗಳನ್ನು ವೈಸ್‌ರಾಯ್‌ನ ಆಡಳಿತ ಮಂಡಳಿಗೆ ಸೇರಿಸಿಕೊಳ್ಳಬಹುದೆಂದೂ, ಆದಾಗ್ಯೂ ವೈಸ್‌ರಾಯ್‌ನ ಪರಮಾಧಿಕಾರ ಅವನಿಗೇ ಇರುವುದೆಂದೂ, ಯುದ್ಧದ ಅಂತ್ಯದಲ್ಲಿ ಭಾರತಕ್ಕೆ ಸ್ವಾತಂತ್ರ್ಯವನ್ನು ನೀಡುವುದಿಲ್ಲವೆಂದೂ ಆದರೆ ಹೊಸ ಸಂವಿಧಾನದ ಚೌಕಟ್ಟನ್ನು ನಿರ್ಧರಿಸುವುದಕ್ಕಾಗಿ ಒಂದು ವ್ಯವಸ್ಥೆಯನ್ನು ರೂಪಿಸಬಹುದೆಂದೂ ತಿಳಿಸಿದನು. ಅಷ್ಟೇ ಅಲ್ಲದೆ, ಭಾರತದ ರಾಷ್ಟ್ರೀಯ ಜೀವನದಲ್ಲಿರುವ ಲೀಗ್ ಮತ್ತು ಇತರ ಕಾಂಗ್ರೆಸ್ಸೇತರ ಪಂಗಡಗಳು ಕಾಂಗ್ರೆಸ್ ಹಿಡಿತದ ಸರ್ಕಾರದ ದಬ್ಬಾಳಿಕೆಗೆ ಶರಣಾಗುವಂತೆ ಎಂದಿಗೂ ಮಾಡುವುದಿಲ್ಲವೆಂಬ ಆಶ್ವಾಸನೆಯನ್ನು ವೈಸ್‌ರಾಯ್ ನೀಡಿದನು.

ವೈಸ್‌ರಾಯ್‌ನ ಪ್ರಕಟಣೆ ಕಾಂಗ್ರೆಸ್ಸಿಗರಿಗೆ ಬಾರಿ ನಿರಾಶೆಯನ್ನುಂಟುಮಾಡಿತು. ಸರ್ದಾರರ ಮನಸ್ಸಿಗೆ ನೆಮ್ಮದಿಯನ್ನು ತಂದಿತು. ಏಕೆಂದರೆ ಅವರು ಗಾಂಧಿಯ ಬಳಿಗೆ ಸಂತಸದಿಂದ ಹಿಂತಿರುಗಿದರು. ರಾಜಾಜಿ ಮತ್ತು ಇತರರೂ ಹಾಗೆಯೇ ಮಾಡಿದರು. ಪಟೇಲ್‌ರವರು ಗಾಂಧೀಜಿಗೆ ಹೇಳಿದರು, "ಇದು ನಮ್ಮ ಜೀವನದಲ್ಲಿ ಮತ್ತೆ ಆಗದಿರಲಿ."

ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ವಾರ್ಧದಲ್ಲಿ ಸಭೆ ಸೇರಿ ವೈಸ್‌ರಾಯ್‌ನ ಹೊಸ ನೀಡಿಕೆಯನ್ನು ತಿರಸ್ಕರಿಸಿತು. ಗಾಂಧೀಜಿ ಮತ್ತೆ ಕಾಂಗ್ರೆಸ್ ಪಕ್ಷದ ನಾಯಕತ್ವವನ್ನು ವಹಿಸಿಕೊಂಡರು.

ಮುಂದೇನು? ಮುಂದೇನು? – ಈ ಪ್ರಶ್ನೆ ಎಲ್ಲರನ್ನು ಕಾಡಲಾರಂಭಿಸಿತು.

ಕಾಂಗ್ರೆಸ್ಸು ಶಾಸನ ಭಂಗ ಚಳವಳಿಯನ್ನು ಮತ್ತೆ ಆರಂಭಿಸಬೇಕಾಗುತ್ತದೆ ಎಂದು ಯೋಚಿಸಿದ ಸರ್ದಾರರು, ಅದಕ್ಕಾಗಿ ಜನರನ್ನು ಸಿದ್ಧಪಡಿಸಲು ಗುಜರಾತ್ ಮತ್ತು ಸೌರಾಷ್ಟ್ರ ಪ್ರದೇಶಗಳಲ್ಲಿ ಪ್ರವಾಸ ನಡೆಸಿ ಅಲ್ಲಿಯ ಜನರಿಗೆ ಹೀಗೆ ಹೇಳಿದರು:

> ನಮ್ಮ ರಾಷ್ಟ್ರೀಯ ಮನೋಭಾವವನ್ನು ಯಾವ ಶಕ್ತಿಯೂ ನಾಶಪಡಿಸಲಾರದು. ಬ್ರಿಟಿಷ್ ಸರ್ಕಾರವು ತಾವು ಹೊರಟುಹೋದರೆ ಭಾರತದವರ ಗತಿ ಏನು? – ಎಂದು ಕೇಳುತ್ತದೆ. ಖಂಡಿತವಾಗಿಯೂ ಇದು ಒಂದು ವಿಚಿತ್ರವಾದ ಪ್ರಶ್ನೆ. ಒಬ್ಬ ಕಾವಲುಗಾರನು ತನ್ನ ಯಜಮಾನನನ್ನು ತಾನು ಹೊರಟುಹೋದರೆ ಗತಿ ಏನು? – ಎಂದು ಕೇಳಿದಂತಿದೆ. ಅದಕ್ಕೆ ಉತ್ತರ: "ನೀನು ಹೋಗು. ನಾನು ಬೇರೆ ಕಾವಲುಗಾರನನ್ನು ತರುತ್ತೇನೆ ಅಥವಾ ನಾನೇ ಕಾವಲು ಕಾಯುತ್ತೇನೆ" – ಎನ್ನುವುದು. ಆದರೆ ಈ ನಮ್ಮ ಕಾವಲುಗಾರ ಹೋಗುವುದಿಲ್ಲ. ತನ್ನ ಯಜಮಾನನನ್ನು ಹೆದರಿಸುತ್ತಾ ಇರುತ್ತಾನೆ. ವಾಪಸ್ಸು ಕಾಂಗ್ರೆಸ್ಸಿಗೆ ಬಂದು ಬಿಡಿ ಎಂದು ನಾವು ಮಹಾತ್ಮಾಜಿಗೆ ಹೇಳಿದ್ದೇವೆ. ಅವರು ಏನು ಹೇಳುತ್ತಾರೋ ಅದರಂತೆ ಮಾಡುತ್ತೇವೆ. ಇದು ನಮ್ಮ ಕೊನೆಯ ಹೋರಾಟ. ನಾವು ಹಿಂಸೆಗೆ ತೊಡಗಬಾರದು. ಈ ಹೋರಾಟದಲ್ಲಿ ಭಾಗಿಯಾಗುವುದು ಪ್ರತಿಯೊಬ್ಬನ ಕರ್ತವ್ಯ. ನಾವು ಮತ್ತೆ ಭೇಟಿಯಾಗಬಹುದು ಅಥವಾ ಆಗದಿರಬಹುದು. ಆದರೆ ಭಾರತದ ಹಣೆಬರಹವನ್ನು ರೂಪಿಸುವುದರಲ್ಲಿ ಪ್ರತಿಯೊಬ್ಬನೂ ತನ್ನ ಪಾತ್ರವನ್ನು ನಿರ್ವಹಿಸುವುದು ಅವನ ಕರ್ತವ್ಯ.[೧೪೬]

೧೩.೩ ವೈಯುಕ್ತಿಕ ಸತ್ಯಾಗ್ರಹಿ

ಮುಂದೇನು? ಮುಂದೇನು? ಇದು ಎಲ್ಲರ ಮುಂದಿದ್ದ ಪ್ರಶ್ನೆ.

ಸಾಮೂಹಿಕ ಸತ್ಯಾಗ್ರಹವನ್ನು ಆರಂಭಿಸಿದರೆ ಸಾವು – ಬದುಕಿನ ವಿಷಮ ಹೋರಾಟದಲ್ಲಿ ತೊಡಗಿರುವ ಬ್ರಿಟಿಷ್ ಜನರಿಗೆ ಹೊಡೆತ ಬೀಳುತ್ತದೆ. ಹಾಗೆ ಮಾಡಲು ಕಾಂಗ್ರೆಸ್ಸಿಗೆ ಮನಸ್ಸು ಬರಲಿಲ್ಲ. ಅವರಿಗೆ ಬ್ರಿಟಿಷ್ ಆಡಳಿತಗಾರರ ಮೇಲೆ ಅಸಮಾಧಾನವಿತ್ತೇ ಹೊರತು ಬ್ರಿಟಿಷ್ ಜನಗಳ ಮೇಲಲ್ಲ. ಅವರ ಬಗೆಗೆ ಸಹಾನುಭೂತಿಯೇ ಇತ್ತು. ಅದರಿಂದ ಅವರ ಸಮರ ಸಿದ್ಧತೆಗೆ ತೊಂದರೆ ಕೊಡುವ ಹಾಗಿರಲಿಲ್ಲ. ಆದರೆ ಹೋರಾಟಕ್ಕೆ ಇಳಿಯದೇ ಹೋದರೆ ಕಾಂಗ್ರೆಸ್ಸಿನ ಗೌರವಕ್ಕೇ ಧಕ್ಕೆ. ಈಗಾಗಲೇ ಕಾಂಗ್ರೆಸ್ಸು ಜನರ ವಿಶ್ವಾಸವನ್ನು ಕಳೆದುಕೊಳ್ಳುತ್ತಿತ್ತು. ಹೀಗಾಗಿ, ಗಾಂಧೀಜಿಯವರು ಸಾಮೂಹಿಕ ಸತ್ಯಾಗ್ರಹವನ್ನು ಆರಿಸಿಕೊಳ್ಳದೆ, ಏಪ್ರಿಲ್ ತಿಂಗಳಲ್ಲಿ ಸರ್ದಾರರು ಸೂಚಿಸಿದ್ದ 'ಆಯ್ದ ಕಾಂಗ್ರೆಸ್ಸಿಗರ ಶಾಸನ ಭಂಗ ಚಳವಳಿ'ಯನ್ನು ಆರಿಸಿಕೊಂಡು ಅದನ್ನು ವೈಯುಕ್ತಿಕ ಸತ್ಯಾಗ್ರಹ ಎಂದು ಕರೆದರು. (ಹಾವು ಸಾಯಬಾರದು, ಕೋಲು ಮುರಿಯಬಾರದು – ಅನ್ನುವ ನೀತಿಯನ್ನು ಅನುಸರಿಸಿದರು – ಲೇಖಕ) ಜೊತೆಗೆ ಸಾಮೂಹಿಕ ಸತ್ಯಾಗ್ರಹವು ಕೋಮು ಗಲಭೆಯಾಗಿ ಪರಿವರ್ತನೆಯಾಗುವ ಭಯವೂ ಇತ್ತು.

ವೈಯುಕ್ತಿಕ ಸತ್ಯಾಗ್ರಹ ನಡೆಸಲು ಬಯಸುವವರ ಪಟ್ಟಿಯನ್ನು ತಯಾರಿಸಿ ಪ್ರಾದೇಶಿಕ ಕಾಂಗ್ರೆಸ್ ಸಮಿತಿಗಳು ಗಾಂಧೀಜಿಗೆ ಕಳುಹಿಸುವರು. ಸತ್ಯಾಗ್ರಹಿಯನ್ನು ಗಾಂಧೀಜಿ ಆರಿಸುವರು. ಆರಿಸಲ್ಪಟ್ಟ ಸತ್ಯಾಗ್ರಹಿಯು ಸರ್ಕಾರಕ್ಕೆ ಪತ್ರ ಬರೆದು ತಾನು ವೈಯುಕ್ತಿಕ ಸತ್ಯಾಗ್ರಹ ನಡೆಸುವ ಸ್ಥಳ, ದಿವಸ ಮತ್ತು ಸಮಯವನ್ನು ತಿಳಿಸಿ, ಆ ಸ್ಥಳಕ್ಕೆ ಆ ದಿವಸ ಮತ್ತು ಸಮಯದಲ್ಲಿ ಒಂದು ಕಾನೂನು ಬಾಹಿರ ಘೋಷಣೆಯನ್ನು ಪಠಿಸಿ, ಯುದ್ಧ ಕಾರ್ಯದಲ್ಲಿ ಸರ್ಕಾರಕ್ಕೆ ಸಹಾಯ ನೀಡಬೇಡಿ ಎಂದು ಜನರಿಗೆ ಹೇಳುವನು. ಅವನು ಓದುವ ಘೋಷಣೆಯು 'ಬ್ರಿಟಿಷರ ಸಮರ ಯತ್ನಕ್ಕೆ ಜನ ಅಥವಾ ಹಣದ ಸಹಾಯ ಮಾಡುವುದು ತಪ್ಪು' ಎಂದಿರುತ್ತಿತ್ತು.

ವೈಯುಕ್ತಿಕ ಸತ್ಯಾಗ್ರಹವು ೧೯೪೦ರ ಅಕ್ಟೋಬರ್ ೧೭ರಂದು ಆರಂಭವಾಯಿತು. ಗಾಂಧೀಜಿಯಿಂದ ಆರಿಸಲ್ಪಟ್ಟ ಮೊದಲ ಸತ್ಯಾಗ್ರಹಿ ವಿನೋಬಾ ಭಾವೆ. ಅವರು ಅಕ್ಟೋಬರ್ ೨೧ರಂದು ದಸ್ತಗಿರಿಯಾಗಿ ಮೂರು ತಿಂಗಳ ಸೆರೆವಾಸ ವಿಧಿಸಲ್ಪಟ್ಟರು. ಗಾಂಧೀಜಿಯವರು ಎರಡನೆ ವೈಯುಕ್ತಿಕ ಸತ್ಯಾಗ್ರಹಿಯನ್ನಾಗಿ ಜವಹರಲಾಲ್ ನೆಹರುವನ್ನು ಆರಿಸಿದರು. ಆದರೆ ನೆಹರು

ಕಾನೂನು ಬಾಹಿರ ಘೋಷಣೆಯನ್ನು ಪಠಿಸುವ ಮೊದಲೇ ದಸ್ತಗಿರಿ ಮಾಡಲ್ಪಟ್ಟರು. ಅದಕ್ಕೆ ಮೊದಲು ಅವರು ಮಾಡಿದ್ದ ಭಾಷಣಗಳನ್ನು ದೇಶದ್ರೋಹ ಎಂದು ನ್ಯಾಯಾಲಯವು ಅವರಿಗೆ ಮೂರು ವರ್ಷಗಳ ಸೆರೆವಾಸವನ್ನು ವಿಧಿಸಿತು. ಸರ್ದಾರ್ ಪಟೇಲ್ ಮೂರನೆಯ ವೈಯುಕ್ತಿಕ ಸತ್ಯಾಗ್ರಹಿಯಾದರು. ಆಗ ಅವರಿಗೆ ೬೫ ವರ್ಷ. ಬಹಳ ಬಳಲಿದ್ದರು. ಆದರೂ ಸತ್ಯಾಗ್ರಹ ನೀಡಲು ಮುಂದೆ ಬಂದರು. ಅವರು ಆ ಸತ್ಯಾಗ್ರಹಕ್ಕೆ ಬೊಂಬಾಯಿಗೆ ಬದಲಾಗಿ ಅಹಮದಾಬಾದ್ ನಗರವನ್ನು ಆರಿಸಿಕೊಂಡರು.[೧೪೭]

ಪಟೇಲರು ಅಹಮದಾಬಾದ್ ನಗರವನ್ನು ನವೆಂಬರ್ ೧೦ರಂದು ತಲುಪಿ, ತಮ್ಮ ಸ್ನೇಹಿತ ಡಾ॥ ಕನುಗಾರವರ ಮನೆಯಲ್ಲಿ ತಂಗಿದರು. ೧೫ರಂದು ಜಿಲ್ಲಾ ಆಡಳಿತಕ್ಕೆ ಪತ್ರವನ್ನು ಬರೆದು ನವೆಂಬರ್ ೧೮ರಂದು ಸಾರ್ವಜನಿಕ ಸಭೆಯಲ್ಲಿ ಕಾನೂನು ಬಾಹಿರ ಘೋಷಣೆಯನ್ನು ಪಠಿಸಿ ವೈಯುಕ್ತಿಕ ಸತ್ಯಾಗ್ರಹವನ್ನು ಆರಂಭಿಸುವುದಾಗಿ ತಿಳಿಸಿದರು. ಆದರೆ ಪೊಲೀಸರು ನವೆಂಬರ್ ೧೭ನೆ ತಾರೀಖು ರಾತ್ರಿಯೇ ಕನುಗಾರವರ ಮನೆಗೆ ಹೋಗಿ ಪಟೇಲರನ್ನು ದಸ್ತಗಿರಿ ಮಾಡಿದರು. ಆಗ ಪಟೇಲರಿಗೆ ಜ್ವರವಿತ್ತು. ಅದರ ಬಗ್ಗೆ ಅವರು ಚಿಂತಿಸಲಿಲ್ಲ. ಅವರು ಪೊಲೀಸರನ್ನು ಕೇಳಿದರು, "ನಾನು ಸಿದ್ಧವಾಗಲು ಎಷ್ಟು ಕಾಲ ಅವಕಾಶ ಕೊಡುವಿರಿ?" "ಸುಮಾರು ಅರ್ಧ ಘಂಟೆ ಅಥವಾ ೪೫ ನಿಮಿಷ." ಆಗ ತಾನೆ ವಾರ್ಧ ಆಶ್ರಮದಿಂದ ಬಂದಿದ್ದ ಮಹದೇವ ದೇಸಾಯಿಯ ಜೊತೆ ತುರ್ತು ವಿಷಯಗಳನ್ನು ಮಾತನಾಡಿ ಮತ್ತು ಅಹಮದಾಬಾದ್ ಜನರಿಗೆ ಒಂದು ಚಿಕ್ಕ ಸಂದೇಶವನ್ನು ಬರೆದು ಹೊರಟರು. ಆ ಸಂದೇಶ ಹೀಗಿತ್ತು:

> ನಾಳೆ ನಡೆಯಬೇಕಿದ್ದ ಸಾರ್ವಜನಿಕ ಸಭೆಯ ಬಗೆಗೆ ಸರ್ಕಾರಕ್ಕೆ ಭಯ. ಅದರಿಂದ ರಾತ್ರಿಯೇ ನನ್ನನ್ನು ಸಬರಮತಿ ಸೆರೆಮನೆಗೆ ಒಯ್ಯುತ್ತಿದೆ. ಅಹಮದಾಬಾದ್‌ನ ನನ್ನ ಸಹೋದರ – ಸಹೋದರಿಯರಿಗೆ ವಿದಾಯ ಹೇಳಲು ಸಾಧ್ಯವಾಗದುದಕ್ಕೆ ವಿಷಾದಿಸುತ್ತೇನೆ.
>
> ಆದರೆ ನಾನು ನಿಮಗೆ ಯಾವ ಹೊಸ ಸಂದೇಶವನ್ನೂ ಕೊಡಲಾರೆ. ಗೋರಕ್‌ಪುರ್ ನ್ಯಾಯಾಧೀಶರ ಮುಂದೆ ನೆಹರು ನೀಡಿದ ಹೇಳಿಕೆಯ ಪ್ರತಿ ಪದವನ್ನು ನಾನು ಬೆಂಬಲಿಸುತ್ತೇನೆ. ಅದನ್ನೇ ನನ್ನ ಸಂದೇಶ ಎಂದು ತೆಗೆದುಕೊಳ್ಳಿ. ಸ್ವತಂತ್ರ ಭಾರತದಲ್ಲಿ ಮತ್ತೆ ಭೇಟಿಯಾಗೋಣ.[೧೪೮]

ಪೊಲೀಸರ ವಾಹನಕ್ಕೆ ಛಾವಣಿ ಇರಲಿಲ್ಲ. ಅದರಿಂದ ಜ್ವರ ಪೀಡಿತ ಪಟೇಲರನ್ನು ಡಾ॥ ಕನುಗಾರವರ ಕಾರಿನಲ್ಲಿ ಸಬರಮತಿ ಸೆರೆಮನೆಗೆ ಕರೆದುಕೊಂಡು ಹೋದರು. ನಂದು ಬೆಹೆನ್, ಕನುಗಾ ಮತ್ತು ಮಣಿಬೆನ್ ಪಟೇಲ್‌ರವರು ಅವರೊಡನೆ ಸೆರೆಮನೆಯ ದ್ವಾರದವರೆಗೆ ಹೋದರು. ಮಾರ್ಗ ಮಧ್ಯದಲ್ಲಿ ಸಬರಮತಿ ಆಶ್ರಮದಲ್ಲಿ ಕಾರು ನಿಲ್ಲಿಸಿ ರವಿಶಂಕರ್ ಶುಕ್ಲ ಮತ್ತು ನರಹರಿಯವರನ್ನು ಭೇಟಿಮಾಡಿದರು. ಅವರು ಸಬರಮತಿ ಸೆರೆಮನೆಯನ್ನು ಪ್ರವೇಶಿಸಿದಾಗ ಕರಾರುವಕ್ಕಾಗಿ ರಾತ್ರಿ ೧೧ ಘಂಟೆ.

ಕೆಲವೇ ದಿನಗಳ ನಂತರ ಪಟೇಲರನ್ನು ಅವರು ಹಿಂದೆ ಇದ್ದ ಯರವಾಡ ಸೆರೆಮನೆಗೆ ವರ್ಗಾಯಿಸಿದರು. ಅಲ್ಲಿ ಅವರಿಗೆ ಬೂಲಾಭಾಯ್ ದೇಸಾಯಿ, ಬಿ.ಜಿ. ಖೇರ್, ಮಾವಲಂಕರ್, ಕೆ.ಎಂ. ಮುನ್ಷಿ, ಮೊರಾರ್ಜಿ ದೇಸಾಯಿ ಮತ್ತು ಪಕ್ವಾಸರವರ ಸಹವಾಸ ದೊರಕಿತು. ಇಷ್ಟೊಂದು ಆತ್ಮೀಯರ ಒಡನಾಟ ದೊರಕಿದ್ದು ಮತ್ತು ಅಲ್ಲಿಯ ಹಳೆಯ ನೆನಪುಗಳು ಅವರಿಗೆ ಸಂತಸವನ್ನು ತಂದುವು. ಅವರು ಮಹದೇವ ದೇಸಾಯಿಗೆ ಬರೆದ ಒಂದು ಪತ್ರ ಹೀಗಿದೆ:

> ಆ ಚರಿತ್ರಾರ್ಹ ಮಾವಿನ ಮರದ ಕೆಳಗೆ ಬಾಪುರವರ ಮಂಚ ಇರುತ್ತಿದ್ದ ಸ್ಥಳದಲ್ಲಿ ನಾನು ಒಂದು ಮಂಚದ ಮೇಲೆ ವಿಶ್ರಾಂತಿ ಪಡೆಯುತ್ತೇನೆ, ರಾತ್ರಿ ವೇಳೆ ನಕ್ಷತ್ರಗಳನ್ನು ವೀಕ್ಷಿಸುತ್ತೇನೆ ಮತ್ತು ಯಾವ ಸ್ಥಳವನ್ನು ಬಾಪು ದೇವಾಲಯವನ್ನಾಗಿ ಪರಿವರ್ತಿಸಿದರೋ, ಎಲ್ಲಿ ತಮ್ಮ ಉಪವಾಸವನ್ನು ಮುಕ್ತಾಯ ಮಾಡಿದರೋ ಮತ್ತು ಎಲ್ಲಿ ಪೂನಾ ಒಪ್ಪಂದಕ್ಕೆ ಸಹಿ ಹಾಕಲ್ಪಟ್ಟಿತೋ ಅಲ್ಲಿಗೆ ನಾನು ಮತ್ತೆ ಬಂದಿದ್ದೇನೆ ಎಂದು ನನಗೆ ನಾನೇ ಹೇಳಿಕೊಳ್ಳುತ್ತೇನೆ. ..... ಈ ಪವಿತ್ರ ಸ್ಥಳಕ್ಕೆ ನಾನು ಮತ್ತೆ ಬರುತ್ತೇನೆ ಎನ್ನುವ ಕನಸನ್ನು ಎಂದೂ ಕಂಡಿರಲಿಲ್ಲ. ಭಗವಂತನ ಯೋಜನೆಗಳು ಆಶ್ಚರ್ಯಕರ.[೧೪೯]

ಪಟೇಲರಿಗೆ ಮಗಳು ಮಣಿಬೆನ್ ಆರೋಗ್ಯದ ಬಗ್ಗೆ ಸ್ವಲ್ಪ ಚಿಂತೆಯಿತ್ತು. ಅವಳು ಇತ್ತೀಚೆಗೆ ನಿಶ್ಯಕ್ತಳಾಗಿದ್ದಳು. ಆದಾಗ್ಯೂ ಪಟೇಲರು ಸೆರೆಮನೆಗೆ ಸೇರಿದ ಮೂರು ವಾರಗಳಲ್ಲಿ ಸತ್ಯಾಗ್ರಹದಲ್ಲಿ ಭಾಗವಹಿಸಿ, ದಸ್ತಗಿರಿಯಾಗಿ ಬೆಳಗಾಂ ಸೆರೆಮನೆಯಲ್ಲಿ ಇಡಲ್ಪಟ್ಟಳು. ಅವಳಿಗೆ ಪಟೇಲರು ಹೀಗೆ ಬರೆದರು:

> ಇಲ್ಲಿ ನನಗೆ ಇರುವ ಸೌಕರ್ಯಗಳು ಅಲ್ಲಿ ನಿನಗೆ ಇಲ್ಲ ಆದರೆ ನಿನಗೆ ನನಗಿಂತ ಹೆಚ್ಚು ಸಹನಾಶಕ್ತಿ ಇದೆ. ನೀನು ನಿನ್ನ

ಆರೋಗ್ಯದ ಬಗೆಗೆ ಎಚ್ಚರಿಕೆ ವಹಿಸುತ್ತೀಯೆಂದು ನಂಬಿದ್ದೇನೆ.

ಸೆರೆಮನೆಯಲ್ಲಿ ಪಟೇಲರನ್ನು ನೋಡಲು ಮಹದೇವ ದೇಸಾಯಿಗೆ ಅನುಮತಿ ದೊರಕಲಿಲ್ಲ. ಆದರೆ ಪಟೇಲರ ಮಗ ದಹ್ಯಭಾಯ್ ಮತ್ತು ಮೊಮ್ಮಗ ಬಿಪಿನ್‌ಗೆ ದೊರಕಿ ಅವರು ಪಟೇಲರನ್ನು ನೋಡಲು ಅನೇಕ ಬಾರಿ ಬಂದರು. ಮಗನ ಹೊಸ ಹೆಂಡತಿ ಭಾನುಮತಿಯೂ ಒಂದೆರಡು ಸಲ ಬಂದಳು. ಅವರ ಮದುವೆ ಹಿಂದಿನ ಮೇ ತಿಂಗಳಲ್ಲಿ ಬರೋಡದಲ್ಲಿ ನಡೆದಿತ್ತು. ಆ ವಿವಾಹದಲ್ಲಿ ಪಟೇಲ್ ಮತ್ತು ಮಣಿಬೆನ್ ಭಾಗವಹಿಸಿದ್ದರು.

ತಿಂಗಳುಗಳು ಉರುಳಿದಂತೆ ಪಟೇಲರ ಕರುಳಿನ ಬೇನೆ ಉಲ್ಬಣವಾಯಿತು. ಅವರು ಬಹಳ ನೋವನ್ನು ಅನುಭವಿಸಬೇಕಾಯಿತು. ಆದರೆ ಅದನ್ನು ಜೊತೆಯವರಿಗೆ ತೋರಿಸಿಕೊಳ್ಳದೆ, ಆ ನೋವಿಗೆ ಗಮನವನ್ನು ಕೊಡದೆ ಟೀ ತಯಾರಿಸಿ ಎಲ್ಲರಿಗೂ ಕೊಡುತ್ತಿದ್ದರು. ಆ ಬಗೆಗೆ ಕೆ.ಎಂ. ಮುನ್ಷಿಯವರು ಹೀಗೆ ಬರೆದಿದ್ದಾರೆ:

> ಯರವಾಡ ಸೆರೆಮನೆಯಲ್ಲಿ ಸರ್ದಾರರ ತೀವ್ರ ಮಾನವೀಯ ಮುಖವನ್ನು ಕಂಡೆ. ಅವರು ನಗುತ್ತಿದ್ದರು. 'ಜೋಕ್ಸ್' ಹೇಳುತ್ತಿದ್ದರು. ತಮಾಷೆಯ ಕತೆಗಳನ್ನು ಹೇಳುತ್ತಿದ್ದರು. ಅವರು ನಮ್ಮ ಗೃಹಕೃತ್ಯ ನಿರ್ವಾಹಕ ಆಗಿದ್ದರು, ನಮಗೆ ಟೀ ತಯಾರಿಸಿ ಕೊಡುತ್ತಿದ್ದರು. ನಮ್ಮ ಆಹಾರದ ವ್ಯವಸ್ಥೆಯ ಜವಾಬ್ದಾರಿ ಹೊತ್ತಿದ್ದರು. ನನಗೆ ತೀವ್ರ ಕಾಯಿಲೆಯಾಗಿ ನನ್ನನ್ನು 'ಸ್ಟ್ರೆಚರ್'ನಲ್ಲಿ ಮಲಗಿಸಿ ಒಯ್ದಾಗ, ಈ ಬಗ್ಗದ ಜಗ್ಗದ ಮನುಷ್ಯನ ಕಣ್ಣುಗಳು ತೇವವಾದುದನ್ನು ಕಂಡೆ.....[೧೫೦]

ಆಗಸ್ಟ್ ತಿಂಗಳಲ್ಲಿ ಪಟೇಲರನ್ನು ಪರೀಕ್ಷಿಸಿದ ಸೆರೆಮನೆಯ ವೈದ್ಯರು ಅವರಿಗೆ ಗುದನಾಳದ (ದೊಡ್ಡ ಕರುಳಿನ ತುದಿಯ ಭಾಗದ) ಕ್ಯಾನ್ಸರ್ ಆಗಿರಬಹುದೆಂದು ಅಭಿಪ್ರಾಯಪಟ್ಟರು. ಆ ಅನುಮಾನದ ಬಗೆಗೆ ಪಟೇಲರ ಪ್ರತಿಕ್ರಿಯೆ ಎಲ್ಲೂ ದಾಖಲಾಗಿಲ್ಲ. ಆದರೆ ಗಾಂಧೀಜಿಯ ಹೃದಯ ಭಾರವಾದುದನ್ನು ಅವರು ಎಲ್ಲರೊಡನೆಯೂ ಹಂಚಿಕೊಂಡರು. ಕೆಲವೇ ದಿನಗಳಲ್ಲಿ ಪಟೇಲರ ತೊಂದರೆಯು ಕ್ಯಾನ್ಸರ್ ಅಲ್ಲವೆಂದು ಖಚಿತವಾಯಿತು. ಆಗ ಎಲ್ಲರಿಗೂ ಉಂಟಾದ ನೆಮ್ಮದಿ ಅಷ್ಟಿಷ್ಟಲ್ಲ. ಆದರೂ ಪಟೇಲರ ದೈಹಿಕ ಆರೋಗ್ಯ ಚೆನ್ನಾಗಿರಲಿಲ್ಲ. ಸರ್ಕಾರವು ಅವರನ್ನು ಆಗಸ್ಟ್ ೨೦ರಂದು ಬಿಡುಗಡೆ ಮಾಡಿತು. ಅಲ್ಲಿಗೆ ಅವರ ದಸ್ತಗಿರಿಯಾಗಿ ೯ ತಿಂಗಳಾಗಿತ್ತು.

೧೩.೪ ಮುಂದುವರೆದ ಅನಾರೋಗ್ಯ

ಸರ್ದಾರ್ ಪಟೇಲರು ಸೆರೆಮನೆಯಿಂದ ಬಿಡುಗಡೆಯಾದಾಗ ದೈಹಿಕವಾಗಿ ಕೃಶವಾಗಿದ್ದರು. ಧ್ವನಿ ತಗ್ಗಿಹೋಗಿತ್ತು. ಸೆರೆಮನೆಯಲ್ಲಿದ್ದ ಕಾಲದಲ್ಲಿ ೨೦ ಪೌಂಡ್ ತೂಕ ಕಡಿಮೆಯಾಗಿತ್ತು. ರಾತ್ರಿಯ ವೇಳೆ ನಿದ್ರೆ ಕಡಿಮೆಯಾಗಿತ್ತು. ಹಗಲಿನಲ್ಲಿ ಚಡಪಡಿಸುತ್ತಿದ್ದರು, ನಡೆಯಲು ಮತ್ತು ಉಸಿರಾಡಲು ಕಷ್ಟ ಪಡುತ್ತಿದ್ದರು.

ಪಟೇಲರು ಸೆರೆಮನೆಯಿಂದ ಹೊರಬಂದ ಮಾರನೆಯ ದಿನವೇ ದೂರವಾಣಿ ಮೂಲಕ ಗಾಂಧೀಜಿ ಒಡನೆ ಮಾತನಾಡಿದರು. ಆರು ವಾರಗಳ ಕಾಲ ಬೊಂಬಾಯಿಯಲ್ಲೆ ಉಳಿದು ಅಲೋಪತಿ ಮತ್ತು ಹೋಮಿಯೋಪತಿ ಔಷದಿಗಳನ್ನು ತೆಗೆದುಕೊಂಡರು. ನಂತರ ಅಕ್ಟೋಬರ್‌ನಲ್ಲಿ ಸಮುದ್ರದಿಂದ ಹೆಚ್ಚು ಎತ್ತರದ ಪ್ರದೇಶಗಳಿಂದ ನಾಸಿಕ್ ಮತ್ತು ದಿಯೊಲಾಲಿಯಲ್ಲಿ ತಂಗಿ ಆಯುರ್ವೇದ ಔಷಧಿಯನ್ನು ಪ್ರಯತ್ನಿಸಿದರು. ಅಲ್ಲಿ ಅವರ ವಾಸ್ತವ್ಯಕ್ಕೆ ಸಕಲ ಏರ್ಪಾಟುಗಳನ್ನು ಬಿರ್ಲಾ ಸಹೋದರರು ಮತ್ತು ವಾಲ್‌ಚಂದ್ ಮಾಡಿದ್ದರು. ಅಲ್ಲಿ ಪಟೇಲರು ಸ್ವಲ್ಪವೂ ಆರಾಮವಾಗಿರಲಿಲ್ಲ. ಸದಾ ಬರುವವರು ಮತ್ತು ಹೋಗುವವರು ಇದ್ದೇ ಇದ್ದರು. ಅವರೊಡನೆ ಮಾತು, ಸಮಾಲೋಚನೆ ಸದಾ ಇರುತ್ತಿತ್ತು. ಜೊತೆಗೆ, ಪತ್ರಗಳ ಬರವಣಿಗೆ ಮತ್ತು ದೂರವಾಣಿ ಸಂಭಾಷಣೆಯು ವಿಪುಲವಾಗಿತ್ತು. ಇವರ ಆರೋಗ್ಯದ ಬಗ್ಗೆ ಕಾತುರಗೊಂಡ ಹಿತೈಶಿಗಳು ಪತ್ರ ಬರೆಯುತ್ತಿದ್ದರು. ಅವರಿಗೆಲ್ಲ ಪಟೇಲರು ಉತ್ಸಾಹ ಪೂರ್ಣ ಜವಾಬು ಬರೆಯುತ್ತಿದ್ದರು.

ಸಬರಮತಿ ಆಶ್ರಮದ ಗುಲಾಮ್ ರಸೂಲ್ ಖುರೇಶಿ ಅವರು ಒಬ್ಬ ಸ್ನೇಹಿತ. ಅವನಿಗೆ ಅವರು ಬರೆದ ಜವಾಬು ಹೀಗಿತ್ತು:

> ನನ್ನ ಆರೋಗ್ಯದ ಬಗೆಗೆ ಚಿಂತಿಸಬೇಡ. ಅದರ ಬಗೆಗೆ ಸರಿಯಾದ ಎಚ್ಚರಿಕೆಯನ್ನು ತೆಗೆದುಕೊಳ್ಳುತ್ತಿದ್ದೇನೆ. ಈ ಪ್ರಪಂಚದಲ್ಲಿ ನಾನು ಮಾಡಬೇಕಾದದ್ದು ಇನ್ನೂ ಉಳಿದಿದೆ. ನಾನು ಕೈಗೊಂಡಿರುವ ಕೆಲಸಗಳನ್ನು ಮುಗಿಸುತ್ತೇನೆಂಬ ನಂಬಿಕೆ ನನಗಿದೆ. .....ಈಶ್ವರ, ಖುದ ನಮಗೆ ಸಹಾಯ ಮಾಡುತ್ತಿದ್ದಾನೆ.[೧೫೧]

ಗಾಂಧೀಜಿ ಒತ್ತಾಯ ಮಾಡಿ ಸೇವಾಗ್ರಾಮಕ್ಕೆ ಕರೆಯಿಸಿಕೊಂಡು ಹೊಟ್ಟೆಗೆ ಮಣ್ಣಿನ ಪಟ್ಟಿ ಕಟ್ಟುವ ಚಿಕಿತ್ಸೆ, ಕಟಿ ಸ್ನಾನದ ಚಿಕಿತ್ಸೆ ಮತ್ತು ಆಹಾರ ನಿಯಂತ್ರಣದ ಚಿಕಿತ್ಸೆ ನೀಡಿದರು. ಈ ಚಿಕಿತ್ಸೆ ೪೦ ದಿನಗಳ ಕಾಲ ನಡೆಯಿತು. ಬೆಳಗ್ಗೆ ಮತ್ತು ಸಂಜೆ ಇಬ್ಬರೂ ಒಟ್ಟಿಗೆ 'ವಾಕಿಂಗ್'ಗೆ ಹೋಗುತ್ತಿದ್ದರು. ಆ ಸಮಯದಲ್ಲಿ ಇತ್ತೀಚಿನ

ಸಂಗತಿಗಳ ಬಗೆಗೆ ಚರ್ಚಿಸುತ್ತಿದ್ದರು. ಜೂನ್‌ನಲ್ಲಿ ಜರ್ಮನಿಯು ರಷ್ಯ ಮೇಲೆ ಆಕ್ರಮಣ ಮಾಡಿದ್ದು, ಸುಭಾಷರು ಗೃಹಬಂಧನದಿಂದ ತಪ್ಪಿಸಿಕೊಂಡು ಯಾರಿಗೂ ಗೊತ್ತಾಗದಂತೆ ದೇಶದ ಆಚೆಗೆ ಪರಾರಿಯಾದ ಸಾಹಸ, ಆಗಸ್ಟ್‌ನಲ್ಲಿ ಠಾಗೂರರ ಮರಣ, ಸೆಪ್ಟೆಂಬರ್‌ನಲ್ಲಿ ಘೋಷಣೆಯಾದ ಅಟ್ಲಾಂಟಿಕ್ ಚಾರ್ಟರ್ ಮುಂತಾದುವೆಲ್ಲ ಅವರ ಚರ್ಚೆಯ ವಿಷಯಗಳಾಗಿದ್ದುವು.

ಪ್ರೆಸ್ ಸೆನ್ಸಾರ್ ಮತ್ತಿತರ ಕಾರಣಗಳ ಫಲವಾಗಿ ವೈಯುಕ್ತಿಕ ಶಾಸನ ಭಂಗ ಚಳವಳಿಯು ಹೆಚ್ಚು ಜನಪ್ರಿಯವಾಗಲೂ ಇಲ್ಲ, ಅದರ ಪ್ರಭಾವ ಪರಿಣಾಮಕಾರಿಯೂ ಆಗಲಿಲ್ಲ. ರಾಜಾಜಿ ಮುಂತಾದ ಅನೇಕ ನಾಯಕರು ಅದನ್ನು ನಿಲ್ಲಿಸಿಬಿಡುವಂತೆ ಗಾಂಧೀಜಿಯನ್ನು ಒತ್ತಾಯಿಸಿದರು. ಮೊದಲು ಗಾಂಧೀಜಿ ಒಪ್ಪದಿದ್ದರೂ ಕೊನೆಗೆ ಒಪ್ಪಿದರು. ಸತ್ಯಾಗ್ರಹವು ತಾನೇ ತಾನಾಗಿ ನಿಂತು ಹೋಗುವ ಸ್ಥಿತಿಯನ್ನು ತಲುಪಿತು. ಡಿಸೆಂಬರ್ ೩ರಂದು ಗಾಂಧೀಜಿಯವರು ವೈಯುಕ್ತಿಕ ಸತ್ಯಾಗ್ರಹವನ್ನು ಹಿಂತೆಗೆದುಕೊಂಡರು. ಸರ್ಕಾರವು ೩೦,೦೦೦ ಸೆರೆವಾಸಿಗಳನ್ನು ಬಿಡುಗಡೆ ಮಾಡಿತು.

ಸರ್ದಾರರ ಅನಾರೋಗ್ಯ ಮುಂದುವರೆಯಿತು. ಅವರು ಸೂರತ್ ಸಮೀಪದ ಹಜೀರ ಎಂಬ ಸಮುದ್ರ ತೀರದ ಸ್ಥಳಕ್ಕೆ ಹೋದರು. ಆದರೆ ಅಲ್ಲೂ ಏನೂ ಪ್ರಯೋಜನವಾಗಲಿಲ್ಲ. ಸಂಪೂರ್ಣ ವಿಶ್ರಾಂತಿ ಪಡೆಯುವಂತೆ ಸಲಹೆ ಮಾಡಿದರು ಗಾಂಧೀಜಿ. "ಶರೀರವನ್ನು ಉಳಿಸಿಕೊಳ್ಳುವುದಕ್ಕಾಗಿ ದೀರ್ಘಕಾಲ ವಿಶ್ರಾಂತಿ ಪಡೆಯುವುದರಲ್ಲಿ ಏನು ಅರ್ಥವಿದೆ? ಒಬ್ಬ ವ್ಯಕ್ತಿ ಕೆಲವು ಕಾಲ ಮುಂಚಿತವಾಗಿ ಗತಿಸಿದರೆ ತೊಂದರೆಯೇನು? ಬದುಕಿದ್ದಾಗ ಸದಾ ಕೆಲಸ ಮಾಡುತ್ತಿರುವುದು ಉತ್ತಮವಲ್ಲವೆ?" ಎಂದು ಉತ್ತರಿಸಿದರು ಸರ್ದಾರರು.[೧೫೨]

(ಎಂತಹ ಕರ್ಮಯೋಗಿ! ಕಾಯಿಲೆಯಾಗಲಿ ನೋವಾಗಲಿ ಅವರನ್ನು ಕಾರ್ಯಕದಿಂದ ವಿಮುಖರನ್ನಾಗಿ ಮಾಡಲಿಲ್ಲ. ಅವರ ಅನುಕರಣೆಯಿಂದ ವ್ಯಕ್ತಿಯ ಮತ್ತು ದೇಶದ ಉದ್ಧಾರ ಖಂಡಿತ – ಲೇಖಕ)

೧೩.೫ ಏರಿದ ಯುದ್ಧದ ಕಾವು

೭, ಡಿಸೆಂಬರ್ ೧೯೪೧ರಂದು ಜಪಾನ್ ಪೆಸಿಫಿಕ್ ಸಾಗರದಲ್ಲಿದ್ದ ಅಮೆರಿಕ ಸಂಯುಕ್ತ ಸಂಸ್ಥಾನಕ್ಕೆ ಸೇರಿದ ಪರ್ಲ್ ಹಾರ್ಬರ್ ದ್ವೀಪದ ಮೇಲೆ ಹಠಾತ್ತಾಗಿ ವೈಮಾನಿಕ ಧಾಳಿ ನಡೆಸಿ ಅಪಾರ ಸಾವು ನೋವು ಮತ್ತು ನಷ್ಟವನ್ನುಂಟುಮಾಡಿತು. ಸುಮಾರು ೨೪೦೦ ಸೈನಿಕರು ಹತರಾದರು. ಅಪಾರ ಸಂಖ್ಯೆಯ ಯುದ್ಧ ನೌಕೆಗಳು

ನಾಶವಾದುವು. ಮಾರನೆಯ ದಿನ ಅಮೆರಿಕ ಸಂಯುಕ್ತ ಸಂಸ್ಥಾನದ ಅಧ್ಯಕ್ಷ ಎಫ್.ಡಿ. ರೂಸ್‌ವೆಲ್ಟ್‌ರವರು ಜಪಾನಿನ ಮೇಲೆ ಯುದ್ಧವನ್ನು ಘೋಷಿಸಿ ವಿಶ್ವ ಸಮರದಲ್ಲಿ ಮಿತ್ರ ಪಕ್ಷಗಳೊಡನೆ ಕೈ ಜೋಡಿಸಿದರು. ಜಪಾನಿನ ಸೈನಿಕರು ತಮ್ಮ ಆಕ್ರಮಣವನ್ನು ಮುಂದುವರೆಸಿ ಫಿಲಿಫೈನ್ಸ್, ಹಾಂಗ್‌ಕಾಂಗ್, ಮಲಯ, ಬೋರ್ನಿಯಾ, ಬರ್ಮ, ಸಿಂಗಪುರಗಳನ್ನು ಆಕ್ರಮಿಸಿಕೊಂಡು ಭಾರತದ ಗಡಿಯ ಕಡೆಗೆ ಮುಖಮಾಡಿದರು.

ಈ ಬೆಳವಣಿಗೆಯ ಫಲವಾಗಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಬಾರ್ದೋಲಿಯಲ್ಲಿ ಸಭೆ ಸೇರಿ, ಯುದ್ಧ ಮುಗಿದ ನಂತರ ಪೂರ್ಣ ಸ್ವಾತಂತ್ರ್ಯ ನೀಡಲು ಬ್ರಿಟನ್ ಒಪ್ಪಿದರೆ ಯುದ್ಧದಲ್ಲಿ ಜೊತೆಗೂಡುವ ತಮ್ಮ ಪ್ರಸ್ತಾವನೆಯನ್ನು ಮತ್ತೆ ಸರ್ಕಾರಕ್ಕೆ ನೀಡುವ ತೀರ್ಮಾನವನ್ನು ಕೈಗೊಂಡಿತು. ಹಿಂಸಾತ್ಮಕ ಯುದ್ಧದಲ್ಲಿ ಕೈ ಜೋಡಿಸುವುದು ಅವರ ತತ್ವಕ್ಕೆ ವಿರುದ್ಧವಾದುದರಿಂದ ಗಾಂಧೀಜಿ ಕಾಂಗ್ರೆಸ್ಸಿನ ನಾಯಕತ್ವದಿಂದ ಹೊರಬಂದರು. ಸರ್ದಾರರೂ ಅವರೊಡನೆ ಉಳಿದರು. ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ವಾರ್ಧದಲ್ಲಿ ಸಭೆ ಸೇರಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ತೀರ್ಮಾನವನ್ನು ಚರ್ಚಿಸಿತು. ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರಲ್ಲಿ ಭಾರಿ ಭಿನ್ನಾಭಿಪ್ರಾಯ ತಲೆದೋರಿತು. ಕಾಂಗ್ರೆಸ್ಸಿನಲ್ಲಿ ಐಕಮತ್ಯವನ್ನು ಕಾಪಾಡಬೇಕು ಮತ್ತು ಅಹಿಂಸಾ ತತ್ವದ ದೆಸೆಯಿಂದ ಸಂಧಾನದ ಬಾಗಿಲನ್ನು ಕಾಂಗ್ರೆಸ್ಸು ಮುಚ್ಚಿಬಿಟ್ಟಿತು ಎಂದು ಹೇಳುವುದಕ್ಕೆ ಸರ್ಕಾರಕ್ಕೆ ಅವಕಾಶ ಕೊಡಬಾರದು ಅನ್ನುವ ದೃಷ್ಟಿಯಿಂದ ಗಾಂಧೀಜಿಯವರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ತೀರ್ಮಾನವನ್ನು ಒಪ್ಪುವಂತೆ ಅಖಿಲ ಭಾರತ ಕಾಂಗ್ರೆಸ್ ಸಮಿತಿಗೆ ಸೂಚಿಸಿದರು. ಅದರಂತೆಯೆ ತೀರ್ಮಾನವಾಯಿತು.[೧೫೩]

ವಾರ್ಧದಲ್ಲಿ ನಡೆದ ಈ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸಭೆಯಲ್ಲಿ ಮತ್ತೊಂದು ವಿಶೇಷ ನಡೆಯಿತು. ಜನವರಿ ೧೫, ೧೯೪೨ರಂದು ಆ ಸಭೆಯಲ್ಲಿ ಗಾಂಧೀಜಿಯವರು 'ಜವಹರಲಾಲ್ ನನ್ನ ಉತ್ತರಾಧಿಕಾರಿ' ಎಂದು ಘೋಷಿಸಿದರು. ಅವರೆಂದರು:

> "ನಾವು ಸಹ ಕೆಲಸಗಾರರಾಗಿ ಕೆಲಸ ಮಾಡಲು ಆರಂಭಿಸಿದ ಕ್ಷಣದಿಂದಲೂ, ಪಂಡಿತ ಜವಹರಲಾಲ್ ಮತ್ತು ನಾನು, ಭಿನ್ನಾಭಿಪ್ರಾಯಗಳನ್ನು ಹೊಂದಿದ್ದೇವೆ. ಆದಾಗ್ಯೂ ಕೆಲವು ವರ್ಷಗಳಿಂದ ನಾನು ಹೇಳುತ್ತಿದ್ದೇನೆ ಮತ್ತು ಈಗಲೂ ಅದನ್ನು ಹೇಳುತ್ತೇನೆ. ಏನೆಂದರೆ ನನ್ನ ಉತ್ತರಾಧಿಕಾರಿ ರಾಜಾಜಿ ಅಲ್ಲ, ಸರ್ದಾರ್

> ವಲ್ಲಭಭಾಯ್ ಅಲ್ಲ, ಆದರೆ ಜವಹರಲಾಲ್ ಆಗಿರುತ್ತಾನೆ. ನೀವು ನೀರನ್ನು ಕೋಲಿನಿಂದ ಮತ್ತೆ ಮತ್ತೆ ಬಡಿದು ವಿಭಜಿಸಲು ಸಾಧ್ಯವಿಲ್ಲ. ನಮ್ಮನ್ನು ವಿಭಜಿಸುವುದೂ ಸಹ ಅಷ್ಟೇ ಕಷ್ಟ. .....ನಾನು ಹೋದ ಮೇಲೆ ನೆಹರು ನನ್ನ ಭಾಷೆಯನ್ನೇ ಆಡುತ್ತಾನೆ."[೧೫೪]

ಬ್ರಿಟನ್ನಿನ ಪ್ರಧಾನ ಮಂತ್ರಿ ಚರ್ಚಿಲ್ಲನು ಕಾಂಗ್ರೆಸ್ ನೀಡಿದ ಸಹಾಯದ ಹಸ್ತವನ್ನು ತಿರಸ್ಕರಿಸಿದನು. ಕಾಂಗ್ರೆಸ್ಸಿನ ಸಹಾಯ ಮತ್ತು ಸಹಕಾರ ಇಲ್ಲದೆಯೇ ಬ್ರಿಟನ್ನಿಗೆ ಭಾರತದಿಂದ ಯುದ್ಧ ಕಾರ್ಯಕ್ಕೆ ಹಣ, ಜನ, ಸಾಮಾಗ್ರಿಗಳ ನೆರವು ಸಿಕ್ಕುತ್ತಿತ್ತು. ಅವನೇಕೆ ಭಾರತಕ್ಕೆ ಅಧಿಕಾರ ನೀಡಿ ಕಾಂಗ್ರೆಸ್ಸಿನ ಸಹಾಯ ಪಡೆಯುತ್ತಾನೆ? ಅವನು ಭಾರತವು ಬ್ರಿಟನ್ನಿನ ಆಸ್ತಿ ಎಂದು ಭಾವಿಸಿದ್ದನು. 'ಬ್ರಿಟಿಷ್ ಸಾಮ್ರಾಜ್ಯದ ಮುಕ್ತಾಯದ ಅಧ್ಯಕ್ಷತೆ ವಹಿಸುವುದಕ್ಕಾಗಿ ನಾನು ಅರಸನ ಪ್ರಥಮ ಮಂತ್ರಿಯಾಗಿಲ್ಲ' ಎಂದು ಹಿಂದೆಯೆ ಹೇಳಿದ್ದ ವ್ಯಕ್ತಿ ಅವನು. ಅಂತಹವನು ಭಾರತೀಯರಿಗೆ ಅಧಿಕಾರ ಕೊಡಲು ಒಪ್ಪಿ ಅವರ ಸಹಾಯ ಪಡೆದುಕೊಳ್ಳುತ್ತಾನೆಯೆ? ಅವನು ಕಾಂಗ್ರೆಸ್ಸಿನ ಪ್ರಸ್ತಾವನೆಯನ್ನು ಸಾರಾಸಗಟಾಗಿ ತಿರಸ್ಕರಿಸಿದನು.

ಆ ವೇಳೆಗೆ ಜಪಾನು ಭಾರತದ ಮೇಲೆ ಆಕ್ರಮಣ ಮಾಡುವುದು ಖಚಿತ ಎನ್ನುವ ಸೂಚನೆಗಳು ಕಂಡುಬಂದುವು. ಈ ಬೆಳವಣಿಗೆ ಅಮೆರಿಕದ ಸಾರ್ವಜನಿಕರಲ್ಲಿ ಭಾರತದ ಬಗೆಗೆ ಕಾಳಜಿಯನ್ನು ಕೆರಳಿಸಿತು. ಅಧ್ಯಕ್ಷ ರೂಸ್‌ವೆಲ್ಟ್‌ನು ಕರ್ನಲ್ ಲೂಯಿ ಜಾನ್‌ಸನ್‌ನನ್ನು ತನ್ನ ವೈಯುಕ್ತಿಕ ರಾಯಭಾರಿಯಾಗಿ ಭಾರತಕ್ಕೆ ಕಳುಹಿಸಿದನು. ಭಾರತವು ಸ್ವತಂತ್ರ ರಾಷ್ಟ್ರವಲ್ಲದ್ದರಿಂದ ರೂಸ್‌ವೆಲ್ಟ್‌ನ ಈ ಕ್ರಮ ವಿಶೇಷ ಗಮನವನ್ನು ಸೆಳೆಯಿತು. ಭಾರತದ ಬಗೆಗೆ ತಮ್ಮ ಆಸಕ್ತಿಯನ್ನು ಲಂಡನ್‌ಗೆ ತೋರಿಸುವುದಕ್ಕಾಗಿ ರೂಸ್‌ವೆಲ್ಟ್ ಆ ರಾಯಭಾರಿಯನ್ನು ಕಳುಹಿಸಿದ್ದರು. ಅವರು ಚರ್ಚಿಲ್ ಅಮೆರಿಕಕ್ಕೆ ಭೇಟಿ ಕೊಟ್ಟಾಗ ಮತ್ತು ದೂರವಾಣಿ ಮೂಲಕ ಚರ್ಚಿಲ್ ಒಡನೆ ಭಾರತದ ಸಮಸ್ಯೆಯನ್ನು ಚರ್ಚಿಸಿ ಭಾರತೀಯರಿಗೆ ಅವರು ಒಪ್ಪ ಬಹುದಾದಂತಹ ಪ್ರಸ್ತಾಪವನ್ನು ನೀಡಬೇಕೆಂದು ಒತ್ತಾಯಿಸಿದರು. ಅದೇ ವೇಳೆಗೆ ಚೀನದ ಚಿಯಾಂಗ್ ಕೈ-ಷೇಕ್ ಭಾರತದ ಸ್ವಾತಂತ್ರ್ಯದ ಪರವಾಗಿ ರೂಸ್‌ವೆಲ್ಟ್ ಮತ್ತು ಬ್ರಿಟಿಷ್ ಸರ್ಕಾರಕ್ಕೆ ಮನವಿ ಮಾಡಿದರು. ಚರ್ಚಿಲ್ಲನ ಮಂತ್ರಿ ಮಂಡಲದಲ್ಲಿದ್ದ ಲೇಬರ್ ಪಕ್ಷದ ಮಂತ್ರಿಗಳು ಸಹ ಆ ಬಗೆಗೆ ಮಂತ್ರಿಮಂಡಲದ ಸಭೆಗಳಲ್ಲಿ ಪ್ರಸ್ತಾಪಿಸಿದರು.[೧೫೫]

ನಾನಾ ಕಡೆಗಳಿಂದ ಒತ್ತಾಯ ಬಂದರೂ ಚರ್ಚಿಲ್ಲನು ತನ್ನ ಮೊಂಡುತನ

ವನ್ನು ಬಿಡಲಿಲ್ಲ. ಆದರೆ ಮಾರ್ಚ್ ೭ರಂದು ಜಪಾನ್ ಸೈನ್ಯವು ರಂಗೂನ್ ನಗರವನ್ನು ಆಕ್ರಮಿಸಿಕೊಂಡಾಗ ಅವನು ಅದೇ ರೀತಿ ಮುಂದುವರೆಯಲಾಗಲಿಲ್ಲ. ರಂಗೂನ್ ಪತನವಾದ ನಾಲ್ಕು ದಿನಗಳಲ್ಲಿ ಅವನು ತನ್ನ ಒಬ್ಬ ಮಂತ್ರಿ ಸರ್ ಸ್ಟಾಫರ್ಡ್ ಕ್ರಿಪ್ಸ್‌ನು ಹೊಸ ಪ್ರಸ್ತಾವನೆಯೊಡನೆ ಭಾರತಕ್ಕೆ ಹೋಗುವನು – ಎಂದು ಪ್ರಕಟಿಸಿದನು.

ಕ್ರಿಪ್ಸ್ ಬ್ರಿಟನ್ನಿನ ಮಂತ್ರಿಮಂಡಲದಲ್ಲಿ ಲೇಬರ್ ಪಕ್ಷದ ಎಡ ಪಂಥಕ್ಕೆ ಸೇರಿದ ಸದಸ್ಯ. ಅವನೊಬ್ಬ ಮೇಧಾವಿ ವಕೀಲ. ಮಂತ್ರಿಯಾಗುವುದಕ್ಕೆ ಮುಂಚೆ ರಷ್ಯದಲ್ಲಿ ಬ್ರಿಟನ್ನಿನ ರಾಯಭಾರಿಯಾಗಿದ್ದನು. ಅವನು ಜವಹರಲಾಲ್ ನೆಹರುಗೆ ಸ್ನೇಹಿತನಾಗಿದ್ದನು.[೧೫೬]

೧೩.೬. ಕೈಕೊಟ್ಟ ಕ್ರಿಪ್ಸ್

ಸರ್ ಸ್ಟಾಫರ್ಡ್ ಕ್ರಿಪ್ಸ್‌ನು ೧೯೪೨ರ ಮಾರ್ಚ್ ೨೨ರಂದು ಭಾರತಕ್ಕೆ ಆಗಮಿಸಿದನು. ಬ್ರಿಟನ್ ಸರ್ಕಾರದಿಂದ ಅವನು ತಂದ ಪ್ರಸ್ತಾವನೆ ಹೀಗಿತ್ತು:

> ಯುದ್ಧ ಮುಗಿದ ನಂತರ ಭಾರತಕ್ಕೆ ಪೂರ್ಣ 'ಡೊಮಿನಿಯನ್ ಸ್ಟೇಟಸ್' ಅನ್ನು, ಕಾಮನ್ ವೆಲ್ತ್‌ನಿಂದ ಹೊರ ನಡೆಯುವ ಹಕ್ಕಿನೊಡನೆ, ನೀಡಲಾಗುವುದು ಮತ್ತು ಒಂದು ಸಂವಿಧಾನ ರಚನ ಸಭೆಯನ್ನು ರಚಿಸಲಾಗುವುದು. ಅದು ಸಂವಿಧಾನವನ್ನು ರಚಿಸುವುದು. ಅದರ ಎಲ್ಲಾ ಸದಸ್ಯರು ಭಾರತೀಯರಾಗಿರುವರು. ಆ ಸಭೆಗೆ ಸದಸ್ಯರು ಬ್ರಿಟಿಷ್ ಪ್ರಾಂತ್ಯಗಳಲ್ಲಿ ಚುನಾವಣೆ ಮೂಲಕ ಆರಿಸಲ್ಪಡುವರು. ಆದರೆ ಅದರ ಮೂರನೆ ಒಂದು ಭಾಗ ಸದಸ್ಯರನ್ನು ದೇಶೀಯ ರಾಜ್ಯಗಳ ಅರಸರು, ತಮ್ಮ ರಾಜ್ಯಗಳ ಪ್ರಜಾ ಸಂಖ್ಯೆಗೆ ಅನುಗುಣವಾಗಿ, ನಾಮಕರಣ ಮಾಡುವರು. ಯುದ್ಧ ಮುಗಿದು ಡೊಮಿನಿಯನ್ ರಚನೆಯಾದ ಮೇಲೆ, ಆ ಸಭೆ ರಚಿಸಿದ ಸಂವಿಧಾನವು ಯಾವುದಾದರು ಪ್ರಾಂತ್ಯ ಅಥವಾ ರಾಜ್ಯಕ್ಕೆ ಒಪ್ಪಿಗೆ ಆಗದೆ ಹೋದರೆ ಆ ಪ್ರಾಂತ್ಯ ಅಥವಾ ರಾಜ್ಯವು ಡೊಮಿನಿಯನ್‌ನಿಂದ ಹೊರಗೆ ಹೋಗಬಹುದು ಮತ್ತು ಪ್ರತ್ಯೇಕ ಸಂವಿಧಾನವನ್ನು ರಚಿಸಿ ಕೊಳ್ಳಬಹುದು. ಆ ರಾಜ್ಯಗಳಿಗೆ ಬ್ರಿಟಿಷ್ ಸರ್ಕಾರವು ಭಾರತೀಯ ಡೊಮಿನಿಯನ್‌ಗೆ ನೀಡಿದ ಸ್ಥಾನವನ್ನೇ ನೀಡುವುದು.[೧೫೭]

ಕ್ರಿಪ್ಸ್‌ನ ಈ ಪ್ರಸ್ತಾವನೆಯು ಅಪಾಯಕಾರಿ ಮತ್ತು ಒಪ್ಪಲಾಗದ ಅಂಶಗಳನ್ನು ಒಳಗೊಂಡಿತ್ತು. ಬ್ರಿಟನ್ನಿಗೆ ದೇಶೀಯ ರಾಜ್ಯದ ಅರಸರ ಮೇಲೆ ಪ್ರತ್ಯಕ್ಷ ಮತ್ತು ಪರೋಕ್ಷ ಹಿಡಿತವಿತ್ತು. ಅದರಿಂದ ಸರ್ಕಾರವು ಅವರ ಮೇಲೆ ಪ್ರಭಾವ ಬೀರಿ ಸಂವಿಧಾನ ರಚನಾ ಸಭೆಯ ತೀರ್ಮಾನಗಳ ಮೇಲೆ ಪ್ರಭಾವ ಬೀರಬಹುದಾಗಿತ್ತು. ಅದಕ್ಕಿಂತಲೂ ಮುಖ್ಯವಾಗಿ ಯಾವುದೇ ಪ್ರಾಂತ್ಯ ಅಥವಾ ರಾಜ್ಯವು ಡೊಮಿನಿಯನ್‌ನಿಂದ ಹೊರಹೋಗಲು ಅವಕಾಶವಿದ್ದುದರಿಂದ ದೇಶವು ಅನೇಕ ಡೊಮಿನಿಯನ್‌ಗಳಾಗಿ ಒಡೆದು ಚೂರಾಗುವ ಅಪಾಯವಿತ್ತು.

ಕ್ರಿಪ್ಸ್‌ನು ಎರಡು ವರ್ಷಗಳಿಗೆ ಮುಂಚೆ, ಮಂತ್ರಿಯಾಗುವುದಕ್ಕೆ ಮುನ್ನ ಇಂಗ್ಲೆಂಡಿನ ಹೌಸ್ ಆಫ್ ಕಾಮನ್ಸ್ ಸಭೆಯಲ್ಲಿ ನಡೆದ ಇಂಡಿಯಾದ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ 'ಅಲ್ಪ ಸಂಖ್ಯಾತರಿಗೆ ರಕ್ಷಣೆ ಕೊಡುವ ಬಯಕೆ ಇದೆಯೆಂದು ಹೇಳುವ ಮೂಲಕ ಬಹು ಸಂಖ್ಯಾತರ ಹಕ್ಕುಗಳನ್ನು ನೀವು ಕಸಿಯುವುದು ನ್ಯಾಯವಲ್ಲ. ರಷ್ಯನ್ನರು, ಯಹೂದ್ಯರು ಮತ್ತು ಪೋಲರು ಇರುವ ಪೋಲಂಡ್ ಅಥವಾ ಸುಡಂಟನ್ನರು, ಜೆಕ್ಕರು ಮತ್ತು ಸ್ಲೊವಾಕರು ಇರುವ ಜೆಕೊಸ್ಲೋವೇಕಿಯಗಿಂತ ಇಂಡಿಯಾವು ಭಿನ್ನವಲ್ಲ' ಎಂದು ಹೇಳಿದ್ದನು. ಈಗ ಅದೇ ಕ್ರಿಪ್ಸ್‌ನು ಇಂಡಿಯಾವನ್ನು ಹಿಂದೂ ಇಂಡಿಯಾ, ಮುಸ್ಲಿಂ ಇಂಡಿಯ, ದೇಶೀಯ ಅರಸರ ಇಂಡಿಯ, ಸಿಕ್ಕರ ಇಂಡಿಯಾ ಮುಂತಾಗಿ ಒಡೆಯುವಂತಹ ಪ್ರಸ್ತಾವನೆಯನ್ನು ತಂದಿದ್ದನು.[೧೫೮]

ಆ ಪ್ರಸ್ತಾವನೆಯನ್ನು ಓದಿದ ಗಾಂಧೀಜಿಯವರು ಕ್ರಿಪ್ಸ್‌ನಿಗೆ, "ನೀವು ನಮಗೆ ನೀಡಲಿರುವುದು ಇದಾದರೆ, ನೀವೇಕೆ ಬಂದಿರಿ? ನಿಮ್ಮ ಪೂರ್ಣ ಪ್ರಸ್ತಾವನೆ ಇದೇ ಆದರೆ ಮುಂದಿನ ವಿಮಾನವನ್ನು ಹಿಡಿದು ವಾಪಸ್ಸು ಹೋಗಿ" ಎಂದರು. ಕ್ರಿಪ್ಸ್‌ನು, 'ಯೋಚಿಸುತ್ತೇನೆ' ಎಂದು ಉತ್ತರಿಸಿದನು.[೧೫೯]

ಕ್ರಿಪ್ಸ್‌ನ ಪ್ರಸ್ತಾವನೆಗಳನ್ನು ಓದಿದ ಸರ್ದಾರ್ ಪಟೇಲರು, "ನೀರನ್ನು ಕಡೆದು ಬೆಣ್ಣೆಯನ್ನು ಪಡೆಯಲು ಸಾಧ್ಯವಿಲ್ಲ" ಎಂದರು. ಎಲ್ಲಾ ರಾಜಕೀಯ ಪಕ್ಷಗಳು ಕ್ರಿಪ್ಸ್‌ನ ಪ್ರಸ್ತಾವನೆಗಳನ್ನು ತಿರಸ್ಕರಿಸಿದುವು. ಮುಂದೆ, ಪಟೇಲರು ಅದುವರೆವಿಗೆ ಅದಕ್ಕಿಂತ ಹೆಚ್ಚು ಕುಚೋದ್ಯದ ಸಂಚು ಯೋಜಿಸಲ್ಪಟ್ಟಿರಲಿಲ್ಲ. ಯುದ್ಧ ಮುಗಿದ ಮೇಲೂ ಸಹ ಭಾರತದ ಮೇಲೆ ಬ್ರಿಟಿಷರ ಅಧಿಕಾರವನ್ನು ಭದ್ರಪಡಿಸುವುದಕ್ಕಾಗಿ ಅದು ವಿನ್ಯಾಸಗೊಂಡಿತ್ತು. "ಬ್ರಿಟಿಷರೇ ಭಾರತ ಬಿಟ್ಟು ತೊಲಗಿ" ಎಂದು ಕಾಂಗ್ರೆಸ್ ಹೇಳುವುದಕ್ಕೆ ಆ ಸಂಚೇ ಕಾರಣವಾಯಿತು' ಎಂದರು.[೧೬೦]

ಕ್ರಿಪ್ಸ್‌ನ ಭೇಟಿಗಾಗಿ ದೆಹಲಿಗೆ ಬಂದಿದ್ದ ಗಾಂಧೀಜಿ ತಮ್ಮ ಅಭಿಪ್ರಾಯವನ್ನು ಸೂಚಿಸಿ ವಾರ್ಧ ಆಶ್ರಮಕ್ಕೆ ಹಿಂತಿರುಗಿದರು. ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರಾದ ನೆಹರು, ರಾಜಾಜಿ ಮತ್ತು ಸರ್ದಾರ್ ಹಾಗೂ ಅಧ್ಯಕ್ಷರಾದ ಮೌಲಾನ ಆಜ಼ಾದ್ ದೆಹಲಿಯಲ್ಲೇ ಉಳಿದು ಕ್ರಿಪ್ಸ್‌ನೊಡನೆ ಚರ್ಚೆ ಮುಂದುವರೆಸಿ ರಾಷ್ಟ್ರೀಯ ಸರ್ಕಾರವನ್ನು ರಚಿಸಬೇಕೆಂಬ ಸಲಹೆಯನ್ನು ಮುಂದಿಟ್ಟರು. ಅದಕ್ಕೆ ಒಪ್ಪಿಗೆ ದೊರೆಯಲಿಲ್ಲ. ಕ್ರಿಪ್ಸ್‌ನು ತನ್ನ ಪ್ರಸ್ತಾವನೆಗಳನ್ನು ಅನೇಕ ಬಾರಿ ಬದಲಾಯಿಸಿದನು. ಆದರೆ ಯಾವುದೂ ಭಾರತೀಯರಿಗೆ ನಿಜವಾದ ಅಧಿಕಾರವನ್ನು ನೀಡುತ್ತಿರಲಿಲ್ಲ ವಾದದ್ದರಿಂದ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಎಲ್ಲವನ್ನೂ ತಿರಸ್ಕರಿಸಿತು. ಕೆಲವು ಸಲಹೆಗಳನ್ನು ವೈಸ್‌ರಾಯ್ ತಿರಸ್ಕರಿಸಿದನು. ಒಟ್ಟಿನಲ್ಲಿ ಕ್ರಿಪ್ಸ್‌ನ ಸಂಧಾನ ಪೂರ್ಣ ವಿಫಲವಾಯಿತು. ಅವನು ೧೨, ಏಪ್ರಿಲ್ ೧೯೪೨ರಂದು ಹಿಂತಿರುಗಿದನು.

೧೩.೭ ಸಮರ ಬಂತು ಗಡಿಯ ಬಳಿಗೆ

ಕ್ರಿಪ್ಸ್‌ನು ಭಾರತದಲ್ಲಿ ಇದ್ದಾಗಲೇ ಏಪ್ರಿಲ್ ೬, ೧೯೪೨ರಂದು ಜಪಾನಿನ ವಿಮಾನಗಳು ಭಾರತದ ಪೂರ್ವ ತೀರದ ಕಾಕಿನಾಡ ಮತ್ತು ವಿಶಾಖಪಟ್ಟಣದ ಮೇಲೆ ಬಾಂಬ್ ಹಾಕಿದುವು. ಕೆಲವು ಜಪಾನಿ ಯುದ್ಧ ನೌಕೆಗಳು ಬಂಗಾಳ ಕೊಲ್ಲಿಯಲ್ಲಿ ಕಾಣಿಸಿಕೊಂಡವು. ಜಪಾನ್ ಆಕ್ರಮಣ ಮಾಡಿದರೆ ಭಾರತೀಯರು ಏನು ಮಾಡಬೇಕು? – ಎನ್ನುವ ಪ್ರಶ್ನೆ ಉದ್ಭವವಾಯಿತು. ಜವಹರಲಾಲ್ ನೆಹರು, 'ಜಪಾನೀಯರು ಭಾರತದ ಮೇಲೆ ಎರಗಿದರೆ ಜನರು ಗೊರಿಲ್ಲಾ ಯುದ್ಧ ಮಾಡಬೇಕು' ಎಂದರು. ಅದನ್ನು ಕೇಳಿ ಗಾಂಧೀಜಿಗೆ ದಿಗ್ಭ್ರಮೆಯಾಯಿತು. ಅವರು ಪಟೇಲರಿಗೆ, "ಜವಹರ್ ಅಹಿಂಸೆಯನ್ನು ಸಂಪೂರ್ಣವಾಗಿ ತೊರೆದಂತೆ ಕಾಣುತ್ತದೆ..... ಇಂದಿನ ಅವರ ಭಾಷಣ ಭಯಂಕರವಾದುದು. ಅವರಿಗೆ ಪತ್ರ ಬರೆಯಲು ಉದ್ದೇಶಿಸಿದ್ದೇನೆ" ಎಂದು ಬರೆದರು.[೧೬೧]

ಸಮರವು ಭಾರತದ ಗಡಿಯ ಸಮೀಪ ಬರುತ್ತಿದ್ದುದರಿಂದ ದೇಶದಲ್ಲಿ ಆತಂಕ ಹೆಚ್ಚಿತು. ಕ್ರಿಪ್ಸ್‌ನ ಭೇಟಿಯ ವೈಫಲ್ಯತೆ ಜನರಲ್ಲಿ ಬ್ರಿಟಿಷ್ ಸರ್ಕಾರದ ಬಗೆಗೆ ಅಸಮಧಾನವನ್ನು ಹೆಚ್ಚಿಸಿತು. ಬ್ರಿಟಿಷ್ ಸರ್ಕಾರವು ಕ್ರಿಪ್ಸ್‌ನನ್ನು ಕಳುಹಿಸಿದ್ದು ಒಂದು ಮೋಸದ ಯೋಜನೆ. ತಾವು ನ್ಯಾಯವಾಗಿದ್ದೇವೆ ಆದರೆ ಭಾರತೀಯರಲ್ಲೇ ವಿಪರೀತ ಒಡಕು ಇದೆ – ಎಂದು ಪ್ರಪಂಚಕ್ಕೆ ಸಾರಲು ಮಾಡಿದ ಒಂದು ಕುತಂತ್ರ ಎಂದು ಜನ ಭಾವಿಸಿದರು. ಮಲಯ, ಬರ್ಮ ಮತ್ತು ಸಿಂಗಪುರವನ್ನು ಜಪಾನ್ ಸೈನ್ಯ ಪ್ರವೇಶಿಸಿದಾಗ ಅಲ್ಲಿದ್ದ ಐರೋಪ್ಯರು, ಆಂಗ್ಲೊ-ಬರ್ಮನ್ನರು ಮತ್ತು ಭಾರತೀಯರು ತಮ್ಮ ಸಂಪತ್ತನ್ನೆಲ್ಲ ತೊರೆದು ಭಾರತಕ್ಕೆ ನಿರಾಶ್ರಿತರಾಗಿ

ಓಡಿ ಬಂದರು. ಆಗ ಸರ್ಕಾರವು ಐರೋಪ್ಯರು ಮತ್ತು ಆಂಗ್ಲೊ-ಬರ್ಮನ್ನರಿಗೆ ವಿಶೇಷ ಸೌಲಭ್ಯಗಳನ್ನು ಕಲ್ಪಿಸಿತು. ಆದರೆ ಭಾರತೀಯರನ್ನು ಹೆಚ್ಚು ಕಡಿಮೆ ಸಂಪೂರ್ಣವಾಗಿ ಕಡೆಗಣಿಸಿತು. ಆಂಗ್ಲರಿಗೆ ಹತ್ತಿರದ ಸುರಕ್ಷತಾ ಮಾರ್ಗವನ್ನು, ಭಾರತೀಯರು ಮತ್ತು ಇತರ ಏಷ್ಯನ್ನರಿಗೆ ಹೆಚ್ಚು ದೂರದ, ಸುರಕ್ಷಿತವಲ್ಲದ ಮಾರ್ಗವನ್ನು ಗೊತ್ತುಮಾಡಿತು. ಈ ಮತೀಯ ತಾರತಮ್ಯ ಭಾರತೀಯರನ್ನು ಕೆರಳಿಸಿತು. ಜಪಾನ್‌ನ ಆಕ್ರಮಣದ ಭೀತಿಯಿಂದ ಭಾರತದೊಳಗೆ ಜನಜೀವನ ಅಸ್ತವ್ಯಸ್ತವಾಗಿತ್ತು. ಬಂಗಾಳ, ಅಸ್ಸಾಂ ಮತ್ತು ಪೂರ್ವ ಗಡಿಯಲ್ಲಿ 'ಸುಡು ನೆಲದ ಧೋರಣೆ' ನೆಪದಲ್ಲಿ ಸಾವಿರಾರು ದೋಣಿಗಳು, ಎತ್ತಿನ ಗಾಡಿಗಳು ಮತ್ತು ಸೈಕಲ್‌ಗಳನ್ನೂ ಸಹ ವಶಪಡಿಸಿಕೊಂಡು ಸುಡಲಾಗಿತ್ತು. ಹೊಲ ಗದ್ದೆಯಲ್ಲಿ ಬೆಳೆದು ನಿಂತಿದ್ದ ಫಸಲನ್ನೂ ಸುಡಲಾಗಿತ್ತು. ಅದರಿಂದ ಜನರು ಸಂಕಟಕ್ಕೆ ಈಡಾದರು. ಪದಾರ್ಥಗಳ ಬೆಲೆ ಗಗನದ ಕಡೆಗೆ ಜಿಗಿಯಿತು. ಆದರೆ ಜನರ ಸಂಕಟದ ಪರಿಹಾರಕ್ಕೆ ಸರ್ಕಾರ ಏನೂ ಕ್ರಮ ಕೈಗೊಳ್ಳಲಿಲ್ಲ.

ಬ್ರಿಟಿಷ್ ಸೈನ್ಯ ಇಡೀ ಭಾರತವನ್ನು ರಕ್ಷಿಸಲು ಶಕ್ತವಾಗಿರಲಿಲ್ಲ. ಆದರೂ ಸಹ, ಸ್ವರಕ್ಷಣೆಗೆ ಜನರಿಗೆ ಶಸ್ತ್ರಾಸ್ತ್ರ ನೀಡಲು ಅಧಿಕಾರಿಗಳು ನಿರಾಕರಿಸಿದರು. ಸ್ವಯಂಸೇವಕ ದಳವನ್ನು ರಚಿಸಲೂ ಅವಕಾಶ ಕೊಡಲಿಲ್ಲ. ಬ್ರಿಟನ್ನು ಭಾರತವನ್ನು ಜಪಾನಿಯರಿಗೆ ಒಪ್ಪಿಸಲು ಸಿದ್ಧವಾಗಿತ್ತೇ ಹೊರತು ಭಾರತೀಯರಿಗೆ ವಾಪಸ್ಸು ಕೊಡಲು ಸಿದ್ಧವಾಗಿರಲಿಲ್ಲ.[೧೬೨]

ಜಪಾನ್ ಸೈನಿಕರು ಬರ್ಮದ ಮೇಲೆ ಆಕ್ರಮಣ ಮಾಡಿದಾಗ, ಬ್ರಿಟಿಷರು ಬರ್ಮೀಯರನ್ನು ಜಪಾನಿನ ದಯೆಗೆ ಸಿಲುಕಿಸಿ ಓಡಿ ಬಂದಿದ್ದರು. ಅಂತಹದೇ ಗತಿ ಭಾರತಕ್ಕೂ ಬರಬಹುದು ಎನ್ನುವ ಭಯ ಎಲ್ಲರಲ್ಲೂ ಆವರಿಸಿತ್ತು. ಅದರಿಂದ ಭಾರತವು ಆಕ್ರಮಣಕಾರರ ವಿರುದ್ಧ ತನ್ನ ರಕ್ಷಣೆಯನ್ನು ತಾನೇ ಮಾಡಿಕೊಳ್ಳಬೇಕು ಎನ್ನುವುದು ಎಲ್ಲರಿಗೂ ಅರಿವಾಗಿತ್ತು.[೧೬೩]

ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಮುಂದೇನು ಮಾಡಬೇಕು ಎನ್ನುವುದನ್ನು ಚರ್ಚಿಸುವುದಕ್ಕಾಗಿ ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ೧೯೪೨ರ ಏಪ್ರಿಲ್ ೨೭ರಂದು ಅಲಹಬಾದ್‌ನಲ್ಲಿ ಸಭೆ ಸೇರಿತು.

೧೩.೮. ಭಾರತ ಬಿಟ್ಟು ತೊಲಗಿ

ಅಲಹಾಬಾದ್‌ನಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಸಭೆ ಸೇರುವುದಕ್ಕೆ ಮುನ್ನ ಗಾಂಧೀಜಿಯವರು ಪಟೇಲರಿಗೆ ಪತ್ರ ಬರೆದು ಈ ರೀತಿ ತಿಳಿಸಿದರು.

> ನಿಮ್ಮ ಆರೋಗ್ಯ ಚೆನ್ನಾಗಿಲ್ಲದಿದ್ದರೆ ಅಲಹಾಬಾದ್‌ಗೆ ಹೋಗಬೇಡಿ. ನೀವು ಹೋಗದೆ ಇದ್ದರೆ ನಿಮ್ಮ ಅಭಿಪ್ರಾಯವನ್ನು ಬರೆದು ತಿಳಿಸಿ. ಕಾಂಗ್ರೆಸ್ಸು ಹಿಂಸಾತ್ಮಕ ನೀತಿಯನ್ನು ಅನುಸರಿಸಲು ತೀರ್ಮಾನಿಸಿದರೆ ನೀವು ಕಾಂಗ್ರೆಸ್ಸನ್ನು ತೊರೆಯಬೇಕು ಎನ್ನುವುದು ನನ್ನ ಅಭಿಪ್ರಾಯ. ಒಬ್ಬ ವ್ಯಕ್ತಿ ತನ್ನ ಅಭಿಪ್ರಾಯಗಳನ್ನು ಮುಚ್ಚಿಡುವ ಕಾಲ ಅಲ್ಲ ಇದು. ಮೌಲಾನರವರ ಒತ್ತಾಯ ಪೂರ್ವಕ ಬಯಕೆಯಿಂದ ನೀವು ಅಲಹಾಬಾದ್‌ಗೆ ಹೋಗಬೇಕಾಗುತ್ತದೆ, ಆದರೆ ಅಲ್ಲಿ ನಿಮ್ಮ ಅಭಿಪ್ರಾಯಕ್ಕೇ ಭದ್ರವಾಗಿ ಅಂಟಿಕೊಳ್ಳಿ. ಕಾಂಗ್ರೆಸ್ಸು ಅಹಿಂಸಾತ್ಮಕ ಅಸಹಕಾರದ ನೀತಿಯನ್ನು ಸ್ಪಷ್ಟವಾಗಿ ಒಪ್ಪಿಕೊಳ್ಳದೆ ಹೋದರೆ ಕಾಂಗ್ರೆಸ್ಸನ್ನು ತೊರೆಯುವುದು ನಿಮ್ಮ ಕರ್ತವ್ಯ. ಹೊರಗಿನಿಂದ ಸೈನ್ಯವನ್ನು ತರುವುದಕ್ಕೆ ಅಥವಾ ಆಕ್ರಮಣಕ್ಕೆ ಒಳಗಾಗಬಹುದಾದ ಪ್ರದೇಶಗಳಲ್ಲಿ ಎಲ್ಲವನ್ನು ನಾಶಪಡಿಸುವುದಕ್ಕೆ ಅತ್ಯಂತ ಶಕ್ತಿಯುತ ವಿರೋಧ ಇರಲೇಬೇಕು.[೧೬೪]

ಪಟೇಲರ ಆರೋಗ್ಯ ಉತ್ತಮವಾಗಿಲ್ಲದಿದ್ದರೂ ಅವರು ಅಲಹಾಬಾದ್‌ನ ಸಭೆಯಲ್ಲಿ ಭಾಗವಹಿಸಿದರು. ಆ ಸಭೆಯಲ್ಲಿ ಎರಡು ಠರಾವುಗಳು ಚರ್ಚಿಸಲ್ಪಟ್ಟವು. ಒಂದನ್ನು ಸಿ. ರಾಜಗೋಪಾಲಾಚಾರಿಯವರು ಮಂಡಿಸಿದ್ದರು. ಮತ್ತೊಂದನ್ನು ಗಾಂಧೀಜಿ ಪರವಾಗಿ ರಾಜೇಂದ್ರ ಪ್ರಸಾದ್ ಮಂಡಿಸಿದರು. ಗಾಂಧೀಜಿಯವರು ಸಭೆಗೆ ಬಂದಿರಲಿಲ್ಲ. ಅವರು ಒಂದು ಕರಡು ಠರಾವನ್ನು ಬರೆದು ಮಣಿಬೆನ್ ಮೂಲಕ ಕಳುಹಿಸಿ, ಅದರಲ್ಲಿ ಸೂಕ್ತ ಬದಲಾವಣೆಯನ್ನು ಮಾಡುವ ಅಧಿಕಾರವನ್ನು ರಾಜೇಂದ್ರ ಪ್ರಸಾದ್‌ಗೆ ನೀಡಿದ್ದರು.

ರಾಜಗೋಪಾಲಾಚಾರಿಯವರ ಅಭಿಪ್ರಾಯ ಹೀಗಿತ್ತು: ಭಾರತಕ್ಕೆ ಮೂವರು ಶತ್ರುಗಳಿದ್ದಾರೆ. ಅವರ ಪೈಕಿ ಜಪಾನ್ ಒಂದನೇ ಸಂಖ್ಯೆಯ ಶತ್ರು, ಬ್ರಿಟನ್ ಮತ್ತು ಮುಸ್ಲಿಂ ಲೀಗ್ ಇತರ ಎರಡು ಶತ್ರುಗಳು. ಕಾಂಗ್ರೆಸ್ಸು ಪಾಕಿಸ್ತಾನದ ರಚನೆಗೆ ಒಪ್ಪಿ ಮುಸ್ಲಿಂ ಲೀಗ್ ಒಡನೆ ಶಾಂತಿ ಏರ್ಪಡಿಸಿಕೊಂಡರೆ, ಬ್ರಿಟನ್ ಭಾರತಕ್ಕೆ ಸ್ವಾತಂತ್ರ್ಯವನ್ನು ಕೊಡಲೇಬೇಕಾಗುತ್ತದೆ. ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್‌ನ ಸಯುಕ್ತ ಆಗ್ರಹವನ್ನು ಬ್ರಿಟನ್ ತಿರಸ್ಕರಿಸಲು ಸಾಧ್ಯವಿಲ್ಲ. ನಂತರ ಭಾರತವು ಮಿತ್ರ ರಾಷ್ಟ್ರಗಳೊಡನೆ ಸೇರಿ ಹೋರಾಡಿ, ಜಪಾನಿನ ಆಕ್ರಮಣವನ್ನು ತಡೆಗಟ್ಟಬಹುದು. ರಾಜಾಜಿಯವರ ಈ ಠರಾವಿನ ಪರವಾಗಿ ೧೬ ಸದಸ್ಯರು, ವಿರುದ್ಧವಾಗಿ ೧೨೪ ಸದಸ್ಯರು ಮತ ನೀಡಿ ಅದು ಬಿದ್ದುಹೋಯಿತು.

ಗಾಂಧೀಜಿಯವರ ಮಂಡನೆ ಹೀಗಿತ್ತು:

> ಭಾರತವನ್ನು ಬಿಟ್ಟುಹೋಗುವುದಕ್ಕೆ ಬ್ರಿಟನ್ ಒಪ್ಪುತ್ತಿಲ್ಲ. ಅದು ಭಾರತವನ್ನು ವಿಭಜಿಸಲು ಸಿದ್ಧತೆ ಮಾಡಿಕೊಳ್ಳುತ್ತಿದೆ. ಮಲಯ, ಸಿಂಗಪುರ ಮತ್ತು ಬರ್ಮಾದಲ್ಲಿ ಅದು ಮಾಡಿದಂತೆ ಭಾರತದಲ್ಲೂ ಜಾಗ ಖಾಲಿ ಮಾಡಲು ಸಿದ್ಧವಾಗಿರುವಂತೆ ಕಾಣುತ್ತಿದೆ. ಈ ಮೂರು ಕಾರಣಗಳಿಗಾಗಿ ಭಾರತೀಯರ ದ್ವೇಷವನ್ನು ಬ್ರಿಟನ್ ಗಳಿಸಿಕೊಂಡಿದೆ. ಈ ದ್ವೇಷವನ್ನು ಪ್ರೀತಿಯನ್ನಾಗಿ ಪರಿವರ್ತಿಸಲು ಬ್ರಿಟನ್‌ಗೆ ಇರುವುದು ಒಂದೇ ಮಾರ್ಗ. ಅದು 'ಬ್ರಿಟಿಷರ ವ್ಯವಸ್ಥಿತ ಹಿಂತೆಗೆತ' ಅಥವಾ 'ಭಾರತ ಬಿಟ್ಟು ತೊಲಗುವುದು'. ಒಮ್ಮೆ ಬ್ರಿಟನ್ ಹಿಂದೆ ಸರಿಯಿತೆಂದರೆ ಹಿಂದೂ ಗಳು ಮತ್ತು ಮುಸ್ಲಿಮರು ತಮ್ಮ ವಿವಾದವನ್ನು ಪರಿಹರಿಸಿ ಕೊಳ್ಳುವರು. ಹಿಂತೆಗೆತ ಎಂದರೆ ಪ್ರತಿಯೊಬ್ಬ ಆಂಗ್ಲನ ದೈಹಿಕ ಹಿಂತೆಗೆತ ಅಲ್ಲ, 'ಬ್ರಿಟಿಷ್ ಅಧಿಕಾರದ ಹಿಂತೆಗೆತ! ಆ ಮೂಲಕ ಪ್ರತಿಯೊಬ್ಬ ಆಂಗ್ಲನು ಸ್ನೇಹಿತನಾಗಿ ಪರಿವರ್ತನೆಯಾಗ ಬಹುದು.[೧೬೫]

ಗಾಂಧೀಜಿಯವರ 'ಭಾರತದಿಂದ ಹಿಂದೆ ಸರಿಯಿರಿ' ಎನ್ನುವ ಕರೆ, ಅದನ್ನು ಜಾರಿಗೆ ತರುವುದಕ್ಕಾಗಿ ಹೋರಾಟವನ್ನು ಆರಂಭಿಸಲಾಗುವುದು – ಅನ್ನುವ ಎಚ್ಚರಿಕೆಯನ್ನೂ ಒಳಗೊಂಡಿತ್ತು.

ಗಾಂಧೀಜಿಯವರ ಕರಡು ಮೊದಲು ಅಲಹಾಬಾದ್‌ನಲ್ಲಿ ನಡೆದ ಕಾರ್ಯಕಾರಿ ಸಮಿತಿಯಲ್ಲಿ ಚರ್ಚಿಸಲ್ಪಟ್ಟಿತು. ಆ ಸಭೆ ೫ ದಿನಗಳ ಕಾಲ ನಡೆಯಿತು. ಅಲ್ಲಿ ಸರ್ದಾರ್ ಪಟೇಲರು ಯಾವ ಸಂದೇಹವೂ ಇಲ್ಲದೆ ಗಾಂಧೀಜಿಯವರ ಕರಡನ್ನು ಸಲೀಸಾಗಿ ಒಪ್ಪಿದರು. ಆದರೆ ಜವಹರಲಾಲ್ ನೆಹರು ಆ ಕರಡನ್ನು ವಿರೋಧಿಸಿದರು. ಗಾಂಧೀಜಿಯವರ ಕರಡು 'ಜಪಾನ್‌ಗೆ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತದೆ ಮತ್ತು ಶತ್ರು ರಾಷ್ಟ್ರಗಳು ಗೆಲ್ಲುತ್ತವೆ ಅನ್ನುವ ಅಭಿಪ್ರಾಯವನ್ನು ಸೂಚಿಸುತ್ತದೆ' ಎನ್ನುವುದು ನೆಹರುರವರ ಆಕ್ಷೇಪಣೆಯಾಗಿತ್ತು. ವಾಸ್ತವವಾಗಿ ಗಾಂಧೀಜಿಯವರ ಕರಡು ಆ ರೀತಿ ಇರಲಿಲ್ಲ. ಅದು ಹೇಗೋ ನೆಹರು ಹಾಗೆ ಭಾವಿಸಿದರು. ಕ್ರಿಪ್ಸ್‌ನು ಅವರಿಗೆ ವೈಯುಕ್ತಿಕ ಮನವಿ ಮಾಡಿಕೊಂಡಿದ್ದು ಅವರ ಮೇಲೆ ಪ್ರಭಾವ ಬೀರಿರಬಹುದು. ಬ್ರಿಟಿಷರ ಯುದ್ಧ ಕಾರ್ಯಕ್ಕೆ ಅಡಚಣೆ ಉಂಟುಮಾಡಬಾರದು ಎನ್ನುವುದು ನೆಹರುರವರ ಅಭಿಪ್ರಾಯವಾಗಿತ್ತು. ಅದರಿಂದ ಅವರು ಗಾಂಧೀಜಿಯ ಕರಡನ್ನು ಒಪ್ಪಲಿಲ್ಲ.[೧೬೬]

ಸಿ. ರಾಜಗೋಪಾಲಾಚಾರಿಯವರು ನೆಹರುಗೇ ಬೆಂಬಲವಿತ್ತರು. ಅವರೆಂದರು, 'ಭಾರತದಿಂದ ಹಿಂದೆ ಸರಿಯಿರಿ' ಎನ್ನುವ ಬೇಡಿಕೆಯು ತಪ್ಪು ಬೇಡಿಕೆ. ನನ್ನ ಅಭಿಪ್ರಾಯದಲ್ಲಿ, "ದೇಶವನ್ನು ವಿದೇಶಿಯರ ಆಸೆಗೆ ಬಲಿಯಾಗುವಂತೆ ಅರಾಜಕತೆಯಲ್ಲಿ ಸಿಲುಕಿಸಿ, ಬ್ರಿಟನ್ನು ಹಿಂದೆ ಸರಿದರೆ ತಾನು ಮಾಡಿರುವ ಅಪರಾಧಗಳ ಜೊತೆಗೆ ಮತ್ತೊಂದು ಕಿರೀಟಪ್ರಾಯವಾದ ಅಪರಾಧವನ್ನು ಮಾಡಿದಂತಾಗುತ್ತದೆ." ಗಾಂಧೀಜಿಯವರ ಕರಡಿಗೆ, ಕಾರ್ಯಕಾರಿ ಸಮಿತಿಯ ಸದಸ್ಯರ ಪೈಕಿ ಪಟೇಲರು ಅತ್ಯಂತ ಬಲವಾದ ಬೆಂಬಲವನ್ನು ನೀಡಿದರು. ಅವರೆಂದರು:

> ಕ್ರಿಪ್ಸ್ ಒಬ್ಬ ಜಾಣ..... ಅವನ ಪ್ರಚಾರಕ್ಕೆ ಈ ಕರಡು ಸರಿಯಾದ ಉತ್ತರ..... ನಾನು ನನ್ನನ್ನು ಗಾಂಧೀಜಿಯವರ ಕೈಯಲ್ಲಿ ಇಟ್ಟಿದ್ದೇನೆ. ಎಲ್ಲಾ ಸಂದಿಗ್ಧ ಸನ್ನಿವೇಶಗಳಲ್ಲಿ ಅವರು ಸಹಜ ಪ್ರವೃತ್ತಿಯಿಂದ ನೀಡುವ ಮಾರ್ಗ ಸರಿಯಾಗಿರುತ್ತದೆ.
>
> ಬಾಗಿಲು ಇನ್ನೂ ತೆರೆದಿದೆ ಮತ್ತು ನಮ್ಮ ಸಹಾನುಭೂತಿ ಮಿತ್ರ ರಾಷ್ಟ್ರಗಳ ಕಡೆಗಿದೆ ಎನ್ನುವುದು ಬಾರ್ಡೋಲಿಯಲ್ಲಿ ಸ್ಪಷ್ಟವಾಗಿತ್ತು. (ಆದರೆ) ಬ್ರಿಟನ್ನು ನಮ್ಮ ಮೇಲೆ ನಿಂದನೆಗಳನ್ನು ಮತ್ತೆ ಮತ್ತೆ ಹೊರೆಸುತ್ತಿರುವುದರಿಂದ ಬಾಗಿಲನ್ನು ಅಂತಿಮವಾಗಿ ಮುಚ್ಚುವ ಕಾಲ ಬಂದಿದೆ. ನಮ್ಮ ಮುಂದಿರುವ ಕರಡನ್ನು ನಾನು ಒಪ್ಪುತ್ತೇನೆ. ಅದರಲ್ಲಿ ಏನಾದರೂ ಫ಼ಾಸಿಸಂ ಪರವಾದ ಅಂಶಗಳಿದ್ದರೆ ಅವನ್ನು ತೆಗೆದುಹಾಕೋಣ.[೧೬೭]

ರಾಜೇಂದ್ರ ಪ್ರಸಾದರು, ಗಾಂಧೀಜಿಯ ಕರಡಿನಲ್ಲಿದ್ದ 'ಫ಼ಾಸಿಸಂ ಪರ' ಎಂದು ತಪ್ಪಾಗಿ ತಿಳಿಯಬಹುದಾದ ಪದಗಳನ್ನು ಬದಲಾಯಿಸಿದರು. ನೆಹರು ಸಹ ಒಂದು ಕರಡನ್ನು ತಯಾರಿಸಿ ಮಂಡಿಸಿದರು. ಏಪ್ರಿಲ್ ೩೦ರ ಬೆಳಗ್ಗೆ ಗಾಂಧಿ – ಪ್ರಸಾದರ ಕರಡು ಅವಿರೋಧವಾಗಿ ಅಂಗೀಕಾರವಾಯಿತು. ಮಧ್ಯಾಹ್ನದ ವೇಳೆಗೆ ಕಾಂಗ್ರೆಸ್ ಅಧ್ಯಕ್ಷ ಆಜ಼ಾದರು ತಕರಾರು ತೆಗೆದರು. ಗಾಂಧೀಜಿ – ಪ್ರಸಾದರ ಕರಡನ್ನು ಬದಲಾಯಿಸದಿದ್ದರೆ ಅಧ್ಯಕ್ಷ ಸ್ಥಾನಕ್ಕೆ ರಾಜಿನಾಮೆ ಕೊಡುವುದಾಗಿ ಹೇಳಿದರು. ಅಂದು ಬೆಳಗ್ಗೆ ಠರಾವನ್ನು ಅವರು ವಿರೋಧಿಸದೆ, ಅವಿರೋಧವಾಗಿ ಅಂಗೀಕಾರವಾಗಿರುವುದನ್ನು ಜ್ಞಾಪಿಸಿದರೂ ಸಹ ಅವರು ಒಪ್ಪಲಿಲ್ಲ. ಕಾಂಗ್ರೆಸ್ ಪಕ್ಷದ ಹಿತದೃಷ್ಟಿಯಿಂದ ಪ್ರಸಾದರು ಅಂಗೀಕಾರವಾಗಿದ್ದ ಠರಾವನ್ನು ವಾಪಸ್ಸು ಪಡೆಯಲು ಒಪ್ಪಿದರು. ನಂತರ ನೆಹರು ತಯಾರಿಸಿದ ಕರಡು ಅವಿರೋಧವಾಗಿ

ಅಂಗೀಕಾರವಾಯಿತು. ಸರ್ದಾರರ ಮನಸ್ಸಿಗೆ ನೋವಾದರೂ ನೆಹರು ಕರಡಿನ ವಿರುದ್ಧ ಮತ ಹಾಕಲಿಲ್ಲ.[೧೬೮]

ನೆಹರುರವರ ಕರಡು ಹೆಚ್ಚು ಕಡಿಮೆ ಗಾಂಧೀಜಿಯ ಕರಡನ್ನು ಪ್ರತಿಧ್ವನಿಸುತ್ತಿತ್ತು. ತಮ್ಮ ಕರಡಿನಲ್ಲಿ ಗಾಂಧೀಜಿಯವರು 'ಬ್ರಿಟಿಷರು ಭಾರತ ಬಿಟ್ಟು ಹೋಗಬೇಕು' ಎಂದು ಹೇಳಿದ್ದರು. ನೆಹರು ಕರಡಿನಲ್ಲಿ 'ಭಾರತದ ಮೇಲೆ ಬ್ರಿಟಿಷರ ಹಿಡಿತವನ್ನು ಭಾಗಶಃವಾದರೂ ಉಳಿಸುವ, ಯಾವುದೇ ಕಾರ್ಯಯೋಜನೆಯನ್ನು ಪರಿಶೀಲಿಸುವುದು ಕಾಂಗ್ರೆಸ್ಸಿಗೆ ಅಸಾಧ್ಯವಾಗುತ್ತದೆ' ಎಂದಿತ್ತು. ಅದರಿಂದ ಗಾಂಧೀಜಿಯವರು ತಮ್ಮ ಕಾರ್ಯವನ್ನು ಮುಂದುವರೆಸುವುದಕ್ಕೆ ಯಾವ ಅಡ್ಡಿಯೂ ಇರಲಿಲ್ಲ.

ಹಿಂದೆ, ಗಾಂಧೀಜಿಯವರ ನೈತಿಕ ಬೆಂಬಲ ಸಂಪೂರ್ಣವಾಗಿ ಬ್ರಿಟನ್ ಕಡೆಗಿತ್ತು. ಆದರೆ ಈಗ ಬ್ರಿಟನ್‌ಗೆ ನೈತಿಕ ಬೆಂಬಲ ನೀಡಲು ಅವರ ಮನಸ್ಸು ಒಪ್ಪುತ್ತಿರಲಿಲ್ಲ. ಏಕೆಂದರೆ ಭಾರತದ ಬಗೆಗೆ ಬ್ರಿಟಿಷರ ವರ್ತನೆ ಅವರ ಮನಸ್ಸಿಗೆ ಬಹಳ ನೋವನ್ನುಂಟುಮಾಡಿತ್ತು. ಭಾರತವನ್ನು ವಿಭಜಿಸಿ ಹೊರಟು ಹೋಗುವ ಬ್ರಿಟಿಷರ ಹವಣಿಕೆಯ ಜೊತೆಗೆ ಬರ್ಮದಿಂದ ಹಿಂತಿರುಗುತ್ತಿದ್ದವರಲ್ಲಿ ಅವರು ತೋರುತ್ತಿದ್ದ ತಾರತಮ್ಯ ಅಂದರೆ ಬಿಳಿಯರಿಗೆ ಒಂದು ಮಾರ್ಗ ಕರಿಯರಿಗೆ ಮತ್ತೊಂದು ಮಾರ್ಗ, ಬಿಳಿಯರಿಗೆ ಆಹಾರ ಮತ್ತು ವಸತಿಯ ನೆರವು, ಕರಿಯರಿಗೆ ಏನೂ ಇಲ್ಲ ಎನ್ನುವ ವರ್ತನೆಯಿದ ಬ್ರಿಟಿಷರು ಭಾರತದಲ್ಲಿರುವುದು ತಮ್ಮ ಹಿತರಕ್ಷಣೆಗಾಗಿಯೇ ಹೊರತು ಭಾರತೀಯರ ಹಿತಕ್ಕಾಗಿ ಅಲ್ಲ, ಎನ್ನುವುದು ಗಾಂಧೀಜಿಗೆ ಖಚಿತವಾಗಿ, ಬ್ರಿಟಿಷರು ಭಾರತ ಬಿಟ್ಟು ಹೊರಡಬೇಕು ಎಂದು ಹೇಳಿದ್ದರು. ಆದರೂ ಸಹ ಬ್ರಿಟನ್ ಸೋಲಬೇಕು ಮತ್ತು ಅವರಿಗೆ ಅವಮಾನವಾಗಬೇಕು ಎಂದು ಗಾಂಧೀಜಿ ಬಯಸಿರಲಿಲ್ಲ.

ಜಪಾನ್ ದೇಶವು ಬಾನುಲಿಯ ಮೂಲಕ 'ಭಾರತದ ಯಾವ ಭಾಗವನ್ನೂ ಆಕ್ರಮಿಸಿಕೊಳ್ಳುವ ಅಪೇಕ್ಷೆ ತಮಗೆ ಇಲ್ಲವೆಂದೂ, ಬ್ರಿಟಿಷರನ್ನು ಓಡಿಸುವುದಕ್ಕಾಗಿ ತಾವು ಹೋರಾಟ ಮಾಡುತ್ತಿರುವರೆಂದೂ' ಪ್ರತಿದಿನ ಬಿತ್ತರಿಸುತ್ತಿತ್ತು. ಅದರ ಬಗೆಗೆ ಜುಲೈ ಅಂತ್ಯದಲ್ಲಿ ಸರ್ದಾರರು ಹೀಗೆ ನುಡಿದರು, "ನಮ್ಮಲ್ಲಿ ಕೆಲವರು ಈ ಜಪಾನಿನ ಆಮಿಷಕ್ಕೆ ಒಳಗಾಗಿದ್ದಾರೆ..... ಸುಭಾಷ್ ಬೋಸರು ಈಗಾಗಲೇ ಜಪಾನಿನಲ್ಲಿ ಇದ್ದಾರೆ. ಆದರೆ ಜಪಾನೀಯರ ಅಥವಾ ರಷ್ಯನ್ನರ ಪ್ರಚಾರವನ್ನು ನಂಬುವಂತಹ ಗಾವಿಲರು ನಾವಲ್ಲ. ಅವರು ಬಂದು ನಮ್ಮನ್ನು ಬಿಡುಗಡೆ ಮಾಡುತ್ತಾರೆಂಬುದನ್ನು ನಾವು ನಂಬಲು ಸಾಧ್ಯವಿಲ್ಲ."

ಸರ್ದಾರರಿಗೆ ಜಪಾನೀಯರಲ್ಲಿ ನಂಬಿಕೆ ಇರಲಿಲ್ಲ. ಆದರೆ ಬ್ರಿಟಿಷರ ಬಗೆಗೆ ಒಲವೂ ಸಹ ಇರಲಿಲ್ಲ. ಬ್ರಿಟಿಷರ ನಡವಳಿಕೆ ಅವರಲ್ಲಿ ಕಹಿ ಭಾವನೆಯನ್ನು ಎಷ್ಟರ ಮಟ್ಟಿಗೆ ಕೆರಳಿಸಿತ್ತೆಂದರೆ, ಸಮರದಲ್ಲಿ ಬ್ರಿಟನ್‌ಗೆ ಹಿನ್ನಡೆ ಉಂಟಾದಾಗ ಅವರ ಬಗೆಗೆ ಸಹಾನುಭೂತಿಯನ್ನಾಗಲಿ, ವಿಷಾದವನ್ನಾಗಲಿ ವ್ಯಕ್ತಪಡಿಸುವುದು ಅವರ ಪ್ರಥಮ ಪ್ರತಿಕ್ರಿಯೆ ಆಗುತ್ತಿರಲಿಲ್ಲ.

ಆಗ್ನೇಯ ಏಷ್ಯಾದಲ್ಲಿ ಬ್ರಿಟನ್‌ಗೆ ಹಿನ್ನಡೆ ಉಂಟಾದಾಗ ಸರ್ದಾರರು ಹೀಗೆ ನುಡಿದರು:

> ಸಿಂಗಪುರ ಉರುಳಿತು. ಮಲಯವು ಹೋಯಿತು. ಸುಮಾತ್ರ ಮತ್ತು ಜಾವ ಶತ್ರು ವಶವಾಗಿವೆ. ಇನ್ನು ಕೆಲವು ದಿವಸಗಳಲ್ಲಿ ರಂಗೂನ್ ಸಹ ಪತನವಾಗಬಹುದು. ಈಗ ಬ್ರಿಟಿಷರು 'ನಮಗೆ ಸಹಾಯಮಾಡಿ' ಎನ್ನುತ್ತಾರೆ. ಏನು ಸಹಾಯವನ್ನು ನಾವು ನೀಡ ಬಹುದು? ಅವರು ನಮ್ಮನ್ನು ಶವವಾಹಕರಾಗಿ ಬಯಸುತ್ತಾರೆಯೆ?[೧೬೯]

ಇಂತಹ ಖಾರದ ಮಾತುಗಳನ್ನು ಆಡದಿರಲು ಅವರಿಗೆ ಆಗುತ್ತಿರಲಿಲ್ಲವೆಂದು ಕಾಣುತ್ತದೆ. ಅಷ್ಟರ ಮಟ್ಟಿಗೆ ಅವರಲ್ಲಿ ಬ್ರಿಟಿಷರ ಬಗೆಗೆ ವಿರೋಧ ಬೆಳೆದಿತ್ತು. ಯಾರು ಇಲ್ಲಿ ಬಂದರೂ ಸರಿಯೆ ಬ್ರಿಟಿಷರು ಹೊರಟು ಹೋಗಲಿ. ನಾವು ಸ್ವತಂತ್ರರಾದರೆ ಜಪಾನೀಯರನ್ನು ತಡೆಗಟ್ಟುವುದಕ್ಕೆ ಒಂದು ಅವಕಾಶ ಇದೆ – ಎಂದು ಅವರು ಭಾವಿಸಿದ್ದರು.

ಕಾಂಗ್ರೆಸ್ಸಿನ 'ಭಾರತ ಬಿಟ್ಟು ತೊಲಗಿ' ಅನ್ನುವ ಸರಳ ಘೋಷಣೆಗೆ ಪ್ರತಿಕ್ರಿಯಿಸಿ ಬ್ರಿಟಿಷರು ಭಾರತ ಬಿಟ್ಟು ಹೋಗುವ ಸಾಧ್ಯತೆಯು ಕಡಿಮೆ ಎನ್ನುವುದು ಗಾಂಧೀಜಿ ಮತ್ತು ಪಟೇಲ್‌ಗೆ ಗೊತ್ತಿತ್ತು ಅದರಿಂದ ಅವರು ಹೋರಾಟವನ್ನು ಆಲೋಚಿಸಿದ್ದರು. ಅದರ ಗೆಲುವು ಸಹ ಗ್ಯಾರಂಟಿ ಇರಲಿಲ್ಲ, ಏಕೆಂದರೆ ಬ್ರಿಟಿಷರಿಗೆ ಸರ್ಕಾರದ ಬಲ ಮತ್ತು ಬಂದೂಕಿನ ಬಲವಿತ್ತು. ಆದರೆ ಸರ್ಕಾರದ ವಿರುದ್ಧದ ಹೋರಾಟವೇ ಸ್ವಾತಂತ್ರ್ಯ ಎನ್ನುವ ಭಾವನೆ ಗಾಂಧಿ ಮತ್ತು ಸರ್ದಾರರದಾಗಿತ್ತು. ಕಾಂಗ್ರೆಸ್ಸು ಶಾಂತಿ ಅಥವಾ ಸಹನೆಯನ್ನು ಬೋಧಿಸಿದರೆ ಜನರು ಕಾಂಗ್ರೆಸ್ಸನ್ನು ತಿರಸ್ಕರಿಸುವ ಸಂಭವವಿತ್ತು. ಹಿಂಸೆ ಮತ್ತು ಶತ್ರು ರಾಷ್ಟ್ರಗಳ ಪರವಾದವರು ಮತ್ತು ಸುಭಾಷ್ ಬೋಸ್ ಜನರ ಮನಸ್ಸನ್ನು ಸೆಳೆಯುವ ಸಂಭವವೂ ಇತ್ತು. ಅದರಿಂದ ಬ್ರಿಟಿಷರ ವಿರುದ್ಧ ಹೋರಾಟ ರೂಪಿಸುವುದು ಅನಿವಾರ್ಯವಾಗಿತ್ತು.[೧೭೦]

ಆದರೆ ಗಾಂಧೀಜಿಯ ಉತ್ತರಾಧಿಕಾರಿಯಾಗಿ ನಿಯೋಜಿತರಾದ ಜವಹರ ಲಾಲ್ ನೆಹರು ಮತ್ತು ಕಾಂಗ್ರೆಸ್ ಅಧ್ಯಕ್ಷರಾದ ಆಜ಼ಾದ್ 'ಭಾರತ ಬಿಟ್ಟು ತೊಲಗಿ' ಚಳವಳಿಯನ್ನು ವಿರೋಧಿಸಿದರು. ಪಟೇಲ್ ಮತ್ತು ಪ್ರಸಾದ್ ಮೇ ತಿಂಗಳಲ್ಲಿ ಆಜ಼ಾದ್‌ರಿಗೆ ಪತ್ರ ಬರೆದು ತೀವ್ರ ಭಿನ್ನಾಭಿಪ್ರಾಯ ಇರುವುದರಿಂದ ತಾವು ಮತ್ತು ಇನ್ನು ಕೆಲವರು ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ರಾಜಿನಾಮೆ ಕೊಡುವುದಾಗಿ ತಿಳಿಸಿದರು. ಕಾಂಗ್ರೆಸ್ಸು ಗಾಂಧೀಜಿಯ ಪರವಾಗಿ ಇರುವುದು ನೆಹರು ಮತ್ತು ಆಜ಼ಾದರಿಗೆ ಗೊತ್ತಿದ್ದುದರಿಂದ ಆಜ಼ಾದರು ಆ ರಾಜಿನಾಮೆಗಳನ್ನು ಒಪ್ಪಲಿಲ್ಲ.

ಕಾಂಗ್ರೆಸ್ ಸಮಾಜವಾದಿಗಳು ಚಳವಳಿಗೆ ಬೆಂಬಲ ನೀಡಿ ಜವಹರರ ನಿಲುವನ್ನು ಟೀಕಿಸಿದರು. ಪ್ರಥಮ ಬಾರಿಗೆ ಅವರು ಸರ್ದಾರರನ್ನು ಬೆಂಬಲಿಸಿದರು. ಸರ್ದಾರರೂ ಸಹ ಅದಕ್ಕೆ ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದರು ಮತ್ತು ಅವರಿಗೆ ಸಹಕಾರ ನೀಡಿದರು. ಒಬ್ಬ ಸಮಾಜವಾದಿ ಯುಸುಫ್ ಮೆಹರಲಿಯವರು ಬೊಂಬಾಯಿ ನಗರದ ಮೇಯರ್ ಆಗುವುದಕ್ಕೆ ಮತ್ತು ಮತ್ತೊಬ್ಬ ಸಮಾಜವಾದಿ ಅಶೋಕ ಮೆಹ್ತರವರು ಬೊಂಬಾಯಿ ನಗರದ ಕಾಂಗ್ರೆಸ್ ಸ್ವಯಂ ಸೇವಕ ವಿಭಾಗಕ್ಕೆ ಮುಖ್ಯಸ್ಥರಾಗಲು ಸರ್ದಾರರು ಸಹಾಯಮಾಡಿದರು.

ಸ್ಥಳೀಯ ಪರಿಸ್ಥಿತಿಯನ್ನು ಗಮನಿಸಿ ಗಾಂಧೀಜಿಯವರು ಜೂನ್ ತಿಂಗಳಲ್ಲಿ ತಮ್ಮ ಅಹಿಂಸಾಮಾರ್ಗದಲ್ಲಿ ಸ್ವಲ್ಪ ರಿಯಾಯಿತಿ ತೋರಿದರು: ಮಿತ್ರ ರಾಷ್ಟ್ರಗಳ ಸೈನ್ಯವನ್ನು ಭಾರತದಿಂದ ಹಿಂತೆಗೆದು ಕೊಂಡರೆ ಜಪಾನೀಯರು ಭಾರತವನ್ನು ಆಕ್ರಮಿಸಿಕೊಳ್ಳಲು ಅನುಕೂಲವಾಗುವುದರಿಂದ ಬ್ರಿಟಿಷ್ ಆಡಳಿತ ಮುಕ್ತಾಯವಾದ ಮೇಲೂ ಮಿತ್ರ ಸೈನ್ಯ ಭಾರತದಲ್ಲಿ ಇರಬಹುದು, ಎಂದರು.

ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆ ೧೯೪೨ರ ಜುಲೈ ತಿಂಗಳಲ್ಲಿ ವಾರ್ಧದಲ್ಲಿ ೯ ದಿನಗಳ ಕಾಲ ನಡೆಯಿತು. 'ಭಾರತ ಬಿಟ್ಟು ತೊಲಗಿ' ಚಳವಳಿಯ ಬಗೆಗೆ ಚರ್ಚಿಸುವುದಕ್ಕಿಂತ ಅದನ್ನು ಶೀಘ್ರವಾಗಿ ಕಾರ್ಯರೂಪಕ್ಕೆ ತರುವುದು ಮುಖ್ಯ ಅನ್ನುವುದು ಸರ್ದಾರರ ಅಭಿಪ್ರಾಯವಾಗಿತ್ತು. ಅವರು ಕಾರ್ಯಕಾರಿ ಸಮಿತಿಗೆ, 'ನಾನು ತಡಮಾಡುವುದನ್ನು ವಿರೋಧಿಸುತ್ತೇನೆ. ಕ್ರಿಪ್ಸ್ ಹಿಂತಿರುಗಿದ ತಕ್ಷಣವೇ ಚಳವಳಿಯನ್ನು ಆರಂಭಿಸಬೇಕಾಗಿತ್ತು" ಎಂದು ಹೇಳಿದರು. ಚಳವಳಿಯನ್ನು ವಿರೋಧಿಸುತ್ತಿದ್ದ ಆಜ಼ಾದ್ ಮತ್ತು ಜವಹರಲಾಲ್‌ಗೆ ಗಾಂಧೀಜಿಯವರು, 'ನಿಮಗೆ ಇಷ್ಟ ಬಂದ ಹಾಗೆ ಮಾಡಲು ನೀವು ಸ್ವತಂತ್ರರು. ರಾಜಿನಾಮೆಯನ್ನು ಕೊಡಬೇಕಿದ್ದರೆ ಕೊಡಿ,' ಎಂದು ನಿರ್ಧಾರಿತವಾಗಿ ಹೇಳಿದರು. 'ಚಳವಳಿ ಹೂಡಲು ತಮಗೆ ಕಾಂಗ್ರೆಸ್ಸಿನ ಆವಶ್ಯಕತೆ ಇಲ್ಲವೆಂದೂ, ಭಾರತದ ನೆಲ ಕಾಂಗ್ರೆಸ್ಸಿಗಿಂತ ದೊಡ್ಡದಾದ

ಚಳವಳಿಯನ್ನು ಹೊರತರುವುದೆಂದೂ' ಸಹ ಗಾಂಧೀಜಿ ಅವರಿಗೆ ಹೇಳಿದರು. ಆಗ ಆಜ಼ಾದ್ ಮತ್ತು ನೆಹರುರವರು ಗಾಂಧೀಜಿಯ ಮಾರ್ಗಕ್ಕೆ ಹಿಂತಿರುಗಿದರು.[೧೧೭]

ನಂತರ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಜುಲೈ ೧೪ರಂದು 'ಭಾರತ ಬಿಟ್ಟು ತೊಲಗಿ' ಠರಾವನ್ನು ಅಂಗೀಕರಿಸಿತು. ಆ ಠರಾವಿನಲ್ಲಿ 'ಬ್ರಿಟನ್ನು ಭಾರತದ ಮನವಿಯನ್ನು ಒಪ್ಪದೆ ಹೋದರೆ ಕಾಂಗ್ರೆಸ್ಸು ತನ್ನೆಲ್ಲ ಅಹಿಂಸಾತ್ಮಕ ಶಕ್ತಿಯನ್ನು ಉಪಯೋಗಿಸಬೇಕಾಗುತ್ತದೆ' ಎಂದೂ ಸಹ ನಮೂದಿಸಲಾಗಿತ್ತು. ಈ ವಾರ್ಧ ಠರಾವನ್ನು ಅನುಮೋದಿಸುವುದಕ್ಕೆ ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಬೊಂಬಾಯಿಯಲ್ಲಿ ಆಗಸ್ಟ್ ೭ರಂದು ಸಭೆ ಸೇರಲು ನಿರ್ಧರಿಸಲಾಯಿತು.

ರೈಲಿನಲ್ಲಿ ಅತಿ ಪ್ರಯಾಸದಿಂದ ಮಗಳೊಡನೆ ವಾರ್ಧದಿಂದ ಬೊಂಬಾಯಿಗೆ ಜುಲೈ ೧೫ ರಂದು ಹಿಂತಿರುಗಿದ ಪಟೇಲರು ಜನರನ್ನು ಹುರಿದುಂಬಿಸುವ ಕಾರ್ಯವನ್ನು ಆರಂಭಿಸಿದರು. ಅವರು ಬೊಂಬಾಯಿಯಲ್ಲಿ, ಅನೇಕ ರಾಜಕೀಯ ಕಾರ್ಯಕರ್ತರನ್ನು ಭೇಟಿ ಮಾಡಿದರು. ಕಾಂಗ್ರೆಸ್ ಭವನದಲ್ಲಿ ಪಕ್ಷದ ಕಾರ್ಯಕರ್ತರೊಡನೆ ಚರ್ಚಿಸಿದರು. ಗುಜರಾತ್‌ನ ಜನರಿಗೆ ಟಿಪ್ಪಣಿಗಳನ್ನು ಬರೆದರು, ವಾಲ್‌ಚಂದ್, ರಾಮೇಶ್ವರ್ ಬಿರ್ಲಾ ಮತ್ತು ಬ್ರಿಜ್ ಮೋಹನ್ ಬಿರ್ಲಾರವರಿಂದ ಹಣ ಪಡೆದುಕೊಂಡರು ಮತ್ತು ಪತ್ರಕರ್ತರೊಡನೆ ಖಾಸಗಿಯಾಗಿ ಚರ್ಚಿಸಿದರು. ೨೧ರ ಬೆಳಗ್ಗೆ ಅವರು ಅಹಮದಾಬಾದ್ ತಲುಪಿದರು. ಮುಂದಿನ ೧೦ ದಿನಗಳ ಕಾಲ ಗುಜರಾತ್‌ನ ವಿವಿಧ ಭಾಗಗಳಿಂದ ಬಂದ ಕಾಂಗ್ರೆಸ್ ಕಾರ್ಯಕರ್ತರೊಡನೆ ಅವಿರತವಾಗಿ ಚರ್ಚಿಸಿದರು. ಬಿಡುವು ದೊರಕಿದಾಗ ಭಾವಿ ಹೋರಾಟಗಾರರಿಗೆ ಪತ್ರಗಳನ್ನು ಬರೆದರು.[೧೧೮]

ಜುಲೈ ೨೬ರಂದು ಪಟೇಲರು ಅಹಮದಾಬಾದ್‌ನಲ್ಲಿ ಲೋಕಲ್ ಬೋರ್ಡ್ ಮೈದಾನದಲ್ಲಿ ಒಂದು ಭಾರಿ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಭಾಷಣ ಮಾಡಿದರು. ಜುಲೈ ೨೭ರಂದು ಅಹಮದಾಬಾದ್ ನಗರದ ಕಾರ್ಯಕರ್ತರ ಗುಂಪನ್ನು ಭೇಟಿ ಮಾಡಿ, ಅವರಿಗೆ ಹೀಗೆ ಹೇಳಿದರು:

> ಎಲ್ಲಾ ನಾಯಕರು ನಾಳೆಯ ದಿನ ದಸ್ತಗಿರಿ ಮಾಡಲ್ಪಟ್ಟರೆ ಮತ್ತು ಮತ್ತೆ ಭೇಟಿ ಮಾಡಲು ಸಮಯ ಸಿಗದೆ ಹೋದರೆ ಗಾಂಧೀಜಿಯವರು ೧೯೧೯ರಿಂದ ಇಲ್ಲಿಯವರೆಗೆ ನಿಮ್ಮ ಮುಂದಿಟ್ಟಿರುವ ಕಾರ್ಯಕ್ರಮವನ್ನು ಮುಂದುವರೆಸಿ. ಸಾವನ್ನು ಅಪ್ಪಿರಿ ಆದರೆ ಹಿಮ್ಮೆಟ್ಟಬೇಡಿ. ಒಂದು ರೈಲು ಕಂಬಿಯನ್ನು ಕಿತ್ತು ಹಾಕಿದರೆ ಅಥವಾ ಒಬ್ಬ ಆಂಗ್ಲನನ್ನು ಕೊಂದರೆ, ಈ ಸಲ

ಹೋರಾಟವು ನಿಲ್ಲದು.....

ಈ ಸಂದೇಶವನ್ನು ಗುಜರಾತ್‌ನ ಮೂಲೆ ಮೂಲೆಗೂ ಕೊಂಡೊಯ್ಯಿರಿ..... ರಚನಾತ್ಮಕ ಕಾರ್ಯಕ್ರಮಗಳನ್ನು ಈಗ ಪಕ್ಕಕ್ಕೆ ಇಡಿ, ಗಾಂಧೀಜಿಯ ಆದೇಶಗಳನ್ನು ಪಾಲಿಸಲು ಸಿದ್ಧರಾಗಿರಿ. ಅಖಿಲ ಭಾರತ ಕಾಂಗ್ರೆಸ್ ಸಮಿತಿ ಸಭೆಗೆ ಮುನ್ನ ಗಾಂಧೀಜಿ ಮತ್ತು ಇತರ ನಾಯಕರು ದಸ್ತಗಿರಿಯಾದರೂ ಸಹ ಕಾಂಗ್ರೆಸ್ಸಿನವರು ಅಹಿಂಸೆಯ ಪರಿಧಿಯ ಒಳಗೆ ಕಟ್ಟುನಿಟ್ಟಾಗಿ ಕೆಲಸ ಮಾಡಬೇಕು.[೧೭೩]

ಪಟೇಲರಿಗೆ ಅವರ ಹೊಟ್ಟೆ ನೋವು ತೊಂದರೆ ಕೊಡುತ್ತಿತ್ತು. ಅವರಿಗೆ ರಾತ್ರಿ ವೇಳೆ ಸರಿಯಾಗಿ ನಿದ್ರೆ ಬರುತ್ತಿರಲಿಲ್ಲ. ಅದನ್ನೆಲ್ಲ ಕಡೆಗಣಿಸಿ ಅವರು ಕೆಲಸ ಮಾಡಿದರು. ಕೈಗಾರಿಕೋದ್ಯಮಿ ಕಸ್ತೂರ್‌ಭಾಯ್ ಲಾಲ್‌ಭಾಯ್‌ರವರನ್ನು ಅನೇಕ ಬಾರಿ ಭೇಟಿ ಮಾಡಿದರು. ರವಿಶಂಕರ್, ನರಹರಿ, ರಾಸ್‌ನ ಆಶಾಭಾಯ್, ದರ್ಬಾರ್ ಗೋಪಾಲ್‌ದಾಸ್, ರಾವ್‌ಜಿ ಭಾಯ್, ಭದ್ರನ್‌ನ ಶಿವಭಾಯ್, ರಾಜ್‌ಕೋಟ್‌ನ ದೇಬರ್ ಮುಂತಾದ ಅನೇಕ ನಾಯಕರನ್ನು ಭೇಟಿ ಮಾಡಿದರು. ಜುಲೈ ೨೮ನೆ ತಾರೀಖು ಪತ್ರಕರ್ತರೊಡನೆ ಮತ್ತು ಎರಡು ಕಾಲೇಜುಗಳ ವಿದ್ಯಾರ್ಥಿಗಳೊಡನೆ ಮಾತನಾಡಿದರು. ಮಾರನೆಯ ಸಂಜೆ ವಿದ್ಯಾರ್ಥಿಗಳ ಬೃಹತ್ ಸಭೆಯನ್ನು ಉದ್ದೇಶಿಸಿ ಭಾಷಣ ಮಾಡಿದರು.

ಜುಲೈ ೩೦ರಂದು ಅಹಮದಾಬಾದ್ ಜಿಲ್ಲೆಯ ಕಾಂಗ್ರೆಸ್ ಕಾರ್ಯಕರ್ತರು ಅವರನ್ನು ಭೇಟಿಮಾಡಿದರು. ೩೧ರಂದು ಪಟೇಲರು ನಡಿಯಾಡ್‌ಗೆ ಹೋದರು. ಅಲ್ಲಿ ಖೇಡಾ ಜಿಲ್ಲೆಯ ಕಾರ್ಯಕರ್ತರು, ನಡಿಯಾಡ್ ಪಟ್ಟಣದ ಜನರು ಮತ್ತು ಕರಮ್‌ಸದ್ ಹಾಗೂ ಬೋಚ್‌ಸನ್‌ನ ಜನರೊಡನೆ ಮಾತುಕತೆ ನಡೆಸಿದರು ಮತ್ತು ಒಂದು ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಭಾಷಣ ಮಾಡಿದರು. ಅಲ್ಲಿಂದ ಅವರು ರೈಲಿನಲ್ಲಿ ಬರೋಡಕ್ಕೆ ಹೊರಟರು. ಪ್ರತಿ ರೈಲು ನಿಲ್ದಾಣದಲ್ಲಿ ಅವರನ್ನು ನೋಡಲು ಭಾರಿ ಜನ ಸಮೂಹ ಕಾದಿರುತ್ತಿತ್ತು. ಆಗಸ್ಟ್ ೧, ಬೆಳಗ್ಗೆ ಬರೋಡದಲ್ಲಿ ಪ್ರಜಾ ಮಂಡಲ್ ಕಾರ್ಯಕರ್ತರು ಅವರೊಡನೆ ಸಮಾಲೋಚಿಸಿದರು. ಅಲ್ಲಿಂದ ಸೂರತ್‌ಗೆ ಪ್ರಯಾಣ ಮಾಡಿ, ಅಲ್ಲಿ ಒಂದು ಸಾರ್ವಜನಿಕ ಸಭೆಯೂ ಸೇರಿ ಅನೇಕ ಸಭೆಗಳಲ್ಲಿ ಭಾಗವಹಿಸಿದರು. ಅಲ್ಲಿಂದ ಹೊರಟು ಆಗಸ್ಟ್ ೨ರ ಬೆಳಗಿನ ಜಾವ ೫.೩೦ಕ್ಕೆ ಬೊಂಬಾಯಿ ಸೆಂಟ್ರಲ್ ರೈಲು ನಿಲ್ದಾಣವನ್ನು ಪಟೇಲರು ತಲುಪಿದರು.

ಅವರು ಗುಜರಾತ್‌ನಲ್ಲಿ ಮಾಡಿದ ಭಾಷಣಗಳ ಸಾರಾಂಶ ಇಷ್ಟು:

ಕಾಂಗ್ರೆಸ್ಸು ಬ್ರಿಟನ್ನಿನ ಬೆನ್ನಿಗೆ ಚೂರಿ ಹಾಕಿದೆ – ಎನ್ನುವ ಆಪಾದನೆಯನ್ನು ಮಾಡಲಾಗಿದೆ. ವಾಸ್ತವವಾಗಿ ಅದು ಅವರನ್ನು ನಮ್ಮ ಎದೆಯಿಂದ ಆಚೆಗೆ ಎಸೆಯುವ ಪ್ರಶ್ನೆ. ಸ್ವತಂತ್ರವಾಗಿರ ಬೇಕೆಂದು ಬಯಸುವ ಒಂದು ದೇಶದ ಜನರಿಗೆ ಒಂದೇ ಒಂದು ಉತ್ಕಟ ಬಯಕೆ ಇರಲು ಸಾಧ್ಯ. ಅದೇನೆಂದರೆ ಈಗಿರುವ ಆಡಳಿತಗಾರರನ್ನು ಹೊರಕ್ಕೆ ಓಡಿಸುವುದು ಮತ್ತು ಅವರ ಜಾಗವನ್ನು ಬೇರೆಯವರು ಆಕ್ರಮಿಸಿಕೊಳ್ಳದಂತೆ ತಡೆಗಟ್ಟಲು ಸಾಧ್ಯವಿರುವ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುವುದು.

ಈ ಹೋರಾಟ ಎಲ್ಲವನ್ನೂ ಒಳಗೊಂಡಿರುತ್ತದೆ. .....ಕರ ನಿರಾಕರಣೆ, ಸಿವಿಲ್ ಕಾನೂನು ಭಂಗದಂತಹ ಸರ್ಕಾರಕ್ಕೆ ಅಡಚಣೆ ಒಡ್ಡುವ ನೇರ ಕ್ರಮಗಳನ್ನು ಕಾಂಗ್ರೆಸ್ಸು ಸ್ವಾಗತಿಸುತ್ತದೆ.

ರೈಲ್ವೆ ಕೆಲಸಗಾರರು ಕೆಲಸ ಮಾಡಲು ನಿರಾಕರಿಸಲಿ, ಅಂಚೆ ಮತ್ತು ತಂತಿ ಇಲಾಖೆಯ ಕೆಲಸಗಾರರು ಮುಷ್ಕರ ಹೂಡಲಿ, ಸರ್ಕಾರಿ ಸೇವಕರು ತಮ್ಮ ಸೇವೆಯನ್ನು ಬಿಡಲಿ ಮತ್ತು ಶಿಕ್ಷಕರು ಮತ್ತು ವಿದ್ಯಾರ್ಥಿಗಳು ತಮ್ಮ ಶಾಲಾ ಕಾಲೇಜುಗಳಿಂದ ದೂರ ಉಳಿಯಲಿ ಹೀಗೆ ಆಡಳಿತ ಯಂತ್ರವನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಲು ಸಹಕರಿಸಲಿ.

ನಿಮ್ಮ ಹೃದಯ ಪೂರ್ವಕ ಬೆಂಬಲವಿದ್ದರೆ ಹೋರಾಟವು ಕೆಲವೇ ದಿವಸಗಳಲ್ಲಿ ಮುಕ್ತಾಯವಾಗುತ್ತದೆ. ಬ್ರಿಟಿಷರು ತೊಲಗಬೇಕಾಗುತ್ತದೆ.

ಆಗಸ್ಟ್ ೨ರ ಸಂಜೆ ಪಟೇಲರು ಬೊಂಬಾಯಿಯ ಚೌಪಾತಿ ಸಮುದ್ರ ತೀರದಲ್ಲಿ ಒಂದು ಬೃಹತ್ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡಿ ಎಲ್ಲಾ ಘಟಕ ಮತ್ತು ಸೇವೆಗಳಲ್ಲಿ ಕೆಲಸಗಳನ್ನು ನಿಲ್ಲಿಸಿ, ಸರ್ಕಾರಿ ಆಡಳಿತವನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಲು ಮತ್ತು ಗಾಂಧೀಜಿಯವರ 'ಮಾಡು ಅಥವಾ ಮಡಿ' ಕರೆಯ ಅಡಿಯಲ್ಲಿ ಗುಲಾಮಗಿರಿಯ ಸರಪಳಿಯನ್ನು ಮುರಿಯಲು ಕರೆ ನೀಡಿದರು. ಅವರೆಂದರು:

"ಕಾಂಗ್ರೆಸ್ಸಿನ ಠರಾವು ಜಪಾನ್ ಮತ್ತು ಜರ್ಮನಿಗೆ ನೀಡಿದ

ಆಮಂತ್ರಣ. ಆದ್ದರಿಂದ ಭಾರತವನ್ನು ಸದೆಬಡಿಯಲು ಬ್ರಿಟನ್ನಿಗೆ ಅಮೆರಿಕವು ಸಹಾಯ ಮಾಡಬೇಕೆಂದು ಕ್ರಿಪ್ಸ್‌ನು ಅಮೆರಿಕಕ್ಕೆ ಹೇಳಿದ್ದಾನೆ. ಬ್ರಿಟನ್ನು ಅಮೆರಿಕದ ಸಹಾಯವನ್ನು ಕೋರುತ್ತಿದ್ದರೆ ಭಾರತವು ದೇವರ ಸಹಾಯವನ್ನು ಕೋರುತ್ತಿದೆ. ವಿಚಿತ್ರ. ಸಂಪೂರ್ಣ ಶಸ್ತ್ರ ಸಜ್ಜಿತ ರಾಷ್ಟ್ರವು, ೪೦ ಕೋಟಿ ನಿರಾಯುಧರಾದ ಭಾರತೀಯರನ್ನು ಅಡಗಿಸಲು ಅಮೆರಿಕದ ಸಹಾಯವನ್ನು ಕೋರುತ್ತಿದೆ. ಬ್ರಿಟಿಷ್ ಆಡಳಿತ ಕಾಲವು ಭಾರತದ ಇತಿಹಾಸದಲ್ಲಿ ಕರಾಳ ಕಾಲ. ಭಾರತವು ರಣರಂಗವಾಗಿದೆ. ಈಗ ನಾವು ಹೋರಾಡದೆ ಹೋದರೆ ೨೦೦ ವರ್ಷಗಳಿಂದಿರುವ ಬ್ರಿಟಿಷರ ಜಾಗವನ್ನು ಮತ್ತಾರಾದರು ಆಕ್ರಮಿಸಬಹುದು. ಬರ್ಮ ಮತ್ತು ಮಲಯದ ಗತಿ ನಮಗೆ ಬರದಿರುವುದಕ್ಕಾಗಿ ನಾವು ಹೋರಾಡಬೇಕು."[೧೭೪]

ಸರ್ಕಾರವು ಕಮ್ಯುನಿಸ್ಟ್ ಪಕ್ಷದ ಮೇಲಣ ನಿಷೇದಾಜ್ಞೆಯನ್ನು ಹಿಂತೆಗೆದು ಕೊಂಡಿರುವುದಾಗಿ ಪ್ರಕಟಿಸಿತ್ತು. ಅದರ ಬಗೆಗೆ ಪಟೇಲರು ಹೀಗೆ ನುಡಿದರು:

ಬಹುಶಃ ಕಾಂಗ್ರೆಸ್ಸಿನ ವಿರುದ್ಧ ಕಮ್ಯುನಿಸ್ಟರನ್ನು ಬಳಸಿಕೊಳ್ಳುವುದಕ್ಕಾಗಿ ಸರ್ಕಾರವು ಕಮ್ಯುನಿಸ್ಟ್ ಪಕ್ಷದ ಮೇಲಣ ನಿಷೇದಾಜ್ಞೆಯನ್ನು ತೆಗೆದು ಹಾಕಿದೆ. ಆದರೆ, ಅಂತಹ ಯೋಜನೆ ಗಳಿಗೆ ಬಲಿಯಾಗದಿರುವಷ್ಟು ರಾಷ್ಟ್ರಪ್ರೇಮವು ನಮ್ಮ ಕಮ್ಯುನಿಸ್ಟ್ ಸ್ನೇಹಿತರಿಗೆ ಇದೆ ಎಂಬುದು ನನಗೆ ಖಚಿತವಿದೆ.

ಚಳವಳಿ ಆರಂಭವಾದಾಗ ಬೊಂಬಾಯಿಯ ಜನ ಉತ್ತಮ ರೀತಿಯಲ್ಲಿ ತಮ್ಮ ಕಾರ್ಯವನ್ನು ಪ್ರದರ್ಶಿಸುವರೆಂದು ಆಶಿಸುತ್ತೇನೆ. ಇದು ಗಾಂಧೀಜಿಯ ನಾಯಕತ್ವದ ಕೊನೆಯ ಚಳವಳಿ. ಅವರು ತಮ್ಮ ಇಳಿ ವಯಸ್ಸಿನಲ್ಲಿ, ಅದರ ಪರಿಣಾಮಗಳನ್ನು ಚೆನ್ನಾಗಿ ತಿಳಿದೂ, ನಾಯಕತ್ವವನ್ನು ವಹಿಸಿಕೊಂಡಿದ್ದಾರೆ.

ಚಳವಳಿಯು ಸಂಪೂರ್ಣವಾಗಿ ಅಹಿಂಸೆಯ ಆಧಾರದ ಮೇಲೆ ನಡೆಯುತ್ತದೆ. ಯಾರೂ ಬಂದೂಕು ಅಥವಾ ಕೋಲನ್ನೂ ಸಹ ತರುವ ಅವಶ್ಯಕತೆ ಇಲ್ಲ.[೧೭೫]

ಆಗಸ್ಟ್ ೩ರಂದು ಬೆಳಗ್ಗೆ ೧೧ ಘಂಟೆಗೆ ವಾರ್ಧದಿಂದ ಬಂದ ಗಾಂಧೀಜಿಯವರನ್ನು ದಾದರ್ ರೈಲ್ವೆ ನಿಲ್ದಾಣದಲ್ಲಿ ಪಟೇಲರು ಭೇಟಿಯಾಗಿ ಕರೆದುಕೊಂಡು

ಹೋದರು. ಅದೇ ದಿನ ನೆಹರು, ತಮ್ಮ ಮಗಳು ಇಂದಿರ ಮತ್ತು ಅಳಿಯ ಫೆರೋಜ್ ಒಡನೆ, ಬೊಂಬಾಯಿಗೆ ಬಂದರು. ಅಷ್ಟು ಹೊತ್ತಿಗೆ ಅವರ ಅನುಮಾನಗಳೆಲ್ಲ ಪರಿಹಾರವಾಗಿ ಚಳವಳಿಯ ಬಗೆಗೆ ಉತ್ಸುಕರಾಗಿದ್ದರು. ಅವರು 'ಹೇಮ ಪ್ರಭ'ಗೆ ಹೋಗಿ ಪಟೇಲರನ್ನು ಭೇಟಿ ಮಾಡಿದರು. ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ೪,೫,೬,೭ ಮತ್ತು ೮ರಂದು ಸಭೆ ನಡೆಸಿತು. ೭ ಮತ್ತು ೮ರಂದು ಅಖಿಲ ಭಾರತ ಕಾಂಗ್ರೆಸ್ ಸಮಿತಿ ಸಭೆ ನಡೆಯಿತು. ಸಭೆಗಳ ನಡುವೆ ಮತ್ತು ರಾತ್ರಿಯ ವೇಳೆ ನಾಯಕರು ಪರಸ್ಪರ ಭೇಟಿ ಮಾಡಿ ಚರ್ಚಿಸುತ್ತಿದ್ದರು. ಗಾಂಧೀಜಿ ಮತ್ತು ಪಟೇಲ್ ಗಾಂಧೀಜಿ ತಂಗಿದ್ದ ಬಿರ್ಲಾ ಸದನದಲ್ಲಿ ಆಗಾಗ್ಗೆ ಒಟ್ಟಿಗೆ ಊಟ ಮಾಡುತ್ತಿದ್ದರು. ಇಷ್ಟು ಬಿಡುವಿಲ್ಲದ ಚಟುವಟಿಕೆಗಳ ನಡುವೆ ಪಟೇಲರು ಕಾಯಿಲೆಯಿಂದ ನರಳುತ್ತಿದ್ದ ತಮ್ಮ ಹಳೆಯ ಸ್ನೇಹಿತ ಮಥುರಾದಾಸ್ ತ್ರಿಕರ್ಮ್‌ಜಿಯವರನ್ನು ಪರೀಕ್ಷಿಸಲು ಅವರ ಮನೆಗೆ ಡಾ॥ ಜೀವರಾಜ್ ಮೆಹ್ತರವರನ್ನು ೪ರಂದು ಕರೆದುಕೊಂಡು ಹೋದರು.

ಆಗಸ್ಟ್ ೭ರಂದು ಗೋವಾಲಿಯ ಟ್ಯಾಂಕ್ ಮೈದಾನದಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸಭೆ ನಡೆಯಿತು. ಅದು ಒಂದು ಬೃಹತ್ ಸಭೆ. ಜನ ಉತ್ಸಾಹದಿಂದ ಅಧಿಕ ಸಂಖ್ಯೆಯಲ್ಲಿ ಜಮಾಯಿಸಿದ್ದರು. ಮಧ್ಯಾಹ್ನ ೨.೩೦ಕ್ಕೆ ಪಟೇಲರು ಗಾಂಧೀಜಿಯನ್ನು ಕರೆದುಕೊಂಡು ಸಭೆಗೆ ಹೋದರು. ಅವರು ಒಳ ಹೋಗಲು ಕಷ್ಟ ಪಡಬೇಕಾಯಿತು. ಜನ ಹಾಗೆ ಕಿಕ್ಕಿರಿದಿದ್ದರು. ೭.೩೦ಕ್ಕೆ ಜವಹರಲಾಲ್ ಠರಾವನ್ನು ಮಂಡಿಸಿದರು. ಸರ್ದಾರರು ಅದನ್ನು ಅನುಮೋದಿಸಿದರು. ಅನುಮೋದಿಸುತ್ತಾ ಅವರೊಂದು ಪ್ರಭಾವಶಾಲಿ ಭಾಷಣ ಮಾಡಿದರು:

> ನೀವು (ಬ್ರಿಟಿಷರನ್ನು ಕುರಿತು) ಜಪಾನೀಯರು ಬರಲಿ ಎಂದು ಕಾಂಗ್ರೆಸ್ಸು ಬಯಸುತ್ತದೆ ಎಂದು ಹೇಳುತ್ತೀರಿ. ಅದು ಒಂದು ಅಸಹ್ಯಕರ ಸುಳ್ಳು.
>
> ಸಿಂಗಪುರವು ಅತ್ಯಂತ ದುರ್ಗಮ ಹೊರ ರಕ್ಷಣಾ ತಾಣ ಎಂದು ಇಡೀ ಪ್ರಪಂಚದಲ್ಲಿ ಡಂಗುರ ಸಾರಿದಿರಿ..... ನಿಮ್ಮ ಸರ್ವಶಕ್ತಿಯ ಗುಳ್ಳೆ ಒಡೆದು ಹೋಗಿದೆ. ಎಲ್ಲವನ್ನು ಬೂದಿ ಮಾಡಿದ ಮೇಲೆಯೇ ಬರ್ಮವನ್ನು ಬಿಟ್ಟು ಬಂದದ್ದು ಎಂದು ಬರ್ಮದ ಗೌರ್ನರ್‌ನು ಲಂಡನ್‌ನಲ್ಲಿ ಜಂಬಕೊಚ್ಚುತ್ತಿದ್ದಾನೆ. ಅಂದರೆ, ಭಾರತಕ್ಕೂ ಅದನ್ನೇ ನೀವು ಮಾಡುತ್ತೀರಿ ಎಂದು ಭಾಷೆ ಕೊಡುತ್ತಿದ್ದೀರಿ?

ಬರ್ಮಾದಲ್ಲಿ ಜಪಾನ್ ರಚಿಸಿರುವುದು ಒಂದು ಕೈಗೊಂಬೆ ಸರ್ಕಾರ ಎಂದು ನಿಮ್ಮ ಬಾನುಲಿ ಪ್ರಸಾರಗಳಲ್ಲಿ ಮತ್ತು ಸಮಾಚಾರ ಪತ್ರಿಕೆಗಳಲ್ಲಿ ಹೇಳುತ್ತೀರಿ. ನೀವು ಈಗ ದೆಹಲಿಯಲ್ಲಿ ಎಂತಹ ಸರ್ಕಾರವನ್ನು ಹೊಂದಿದ್ದೀರಿ?

ನಾವು ಮೂರು ವರ್ಷಗಳ ಕಾಲ ಕಾದಿದ್ದೇವೆ. ಬ್ರಿಟನ್ನಿನ ಕಷ್ಟಕಾಲದಲ್ಲಿ ಬ್ರಿಟನ್ನನ್ನು ಪೇಚಿಗೆ ಸಿಕ್ಕಿಸುವುದು ಬೇಡ – ಎಂದು ಗಾಂಧೀಜಿ ಹೇಳಿದರು.... ಈಗ ಅವರ ತಾಳ್ಮೆಯೂ ಮುಗಿದು ಹೋಗಿದೆ ಮತ್ತು ಯುದ್ಧವು ಭಾರತದ ಬಾಗಿಲನ್ನು ತಟ್ಟುತ್ತಿದೆ..... ಭಾರತವು ಜಪಾನೀಯರ ವಶವಾಗದಂತೆ ತಡೆಯುವುದಕ್ಕಾಗಿ ನಮ್ಮ ಹೋರಾಟ. ಬ್ರಿಟಿಷರನ್ನು ಯಾರು ನಂಬುತ್ತಾರೆ? ಎಷ್ಟು ಬಾರಿ ಅವರು ಭಾರತದ ಸುರಕ್ಷತೆ ಮತ್ತು ರಕ್ಷಣೆಯ ಬಗೆಗೆ ಮಾತನಾಡಿಲ್ಲ. ಅವರು ಮಲಯದಲ್ಲಿ ಸೋಲುತ್ತಿದ್ದಾಗ, "ಸಿಂಗಪುರಕ್ಕೆ ಬರಲಿ, ಸೇಡು ತೀರಿಸಿಕೊಳ್ಳುತ್ತೇವೆ," ಎಂದರು. ಸಿಂಗಪುರವು ಅಭೇದ್ಯ ಕೋಟೆ ಎಂದು ಜಂಬ ಕೊಚ್ಚಿದರು. ..... ಆದರೆ ಅಂತಹ ಕೋಟೆಯು ರಟ್ಟಿನ ಮನೆಯಂತೆ ಉರುಳಿ ಹೋಯಿತು! ಈಗ ಕಣ್ಣು ಮಿಟುಕಿಸುವಷ್ಟರಲ್ಲಿ ಬರ್ಮವೂ ಹೊರಟು ಹೋಗಿದೆ. ಶತ್ರುವಿನ ಸೈನ್ಯ ಭಾರತದ ಗಡಿಗೆ ಬಂದಿದೆ..... ಬ್ರಿಟಿಷರಿಗೆ ಅಂತಹದೇ ಸೋಲು ಸಂಭವಿಸಿದರೆ ಭಾರತದಲ್ಲಿರುವ ನಮ್ಮ ಗತಿಯೇನು? ಅಂತಹ ದುರವಸ್ಥೆಯನ್ನು ತಪ್ಪಿಸಿಕೊಳ್ಳುವುದಕ್ಕಾಗಿ ನಾವು ಹೋರಾಡಬೇಕು. ನಾವು ನಮ್ಮ ಕಾಲ ಮೇಲೆ ನಿಲ್ಲಬೇಕು.

ಮುಂದುವರೆದು ಪಟೇಲರು ವ್ಯಂಗ್ಯವಾಗಿ ನುಡಿದರು:

ಯುದ್ಧ ಮುಗಿದ ನಂತರ ಸ್ವಾತಂತ್ರ್ಯವನ್ನು ನೀಡುವ ಆಶ್ವಾಸನೆ ಕೊಡುತ್ತಾರೆ. ಆದರೆ ನಾವು ಅವರನ್ನು ನಂಬುವುದು ಹೇಗೆ? ಆ ಕೆಲಸ ಮಾಡಲು ಅವರು ಇರುತ್ತಾರೊ ಅಥವಾ ಇಲ್ಲವೊ ಯಾರಿಗೆ ಗೊತ್ತು? ಅಥವಾ ಅದನ್ನು ನಮಗೆ ನೀಡುವ ಅಧಿಕಾರ ಅವರಿಗೆ ಇರುತ್ತದೊ ಇಲ್ಲವೊ? ಯಾರಿಗೆ ಗೊತ್ತು? ಸಮರದ ಅಂತ್ಯದಲ್ಲಿ ನಾವು ಮತ್ತೊಂದು ಶಕ್ತಿಗೆ ವಶವಾಗಿದ್ದರೆ ಬ್ರಿಟನ್ನು ನಮಗೆ ಸ್ವಾತಂತ್ರ್ಯವನ್ನು ಹೇಗೆ ಕೊಡುತ್ತದೆ? ಆಗ ನಾವು ಚರ್ಚಿಲ್ಲನನ್ನು ಎಲ್ಲಿ ಕಾಣೋಣ? ಕ್ರಿಪ್ಸ್‌ನು ಭರವಸೆಯನ್ನು

ಮೂಡಿಸಿದ್ದನು. ಆದರೆ ಭಾರಿ ನಿರಾಶೆಯನ್ನುಂಟುಮಾಡಿದನು. ನಾವು ಸ್ವತಂತ್ರರಾದರೂ ಸಹ, ಭಾರತವು ಅನೇಕ ವಿಭಜನೆಗಳನ್ನು ಪಡೆದಿರುತ್ತದೆ ಮತ್ತು ವಿದೇಶಿ ಸೈನ್ಯವು ನಮ್ಮ ದೇಶದಲ್ಲಿ ಉಳಿದಿರುತ್ತದೆ ಅನ್ನುವುದು ಕ್ರಿಪ್ಸ್‌ನ ಪ್ರಸ್ತಾವನೆಯ ಅರ್ಥವಾಗಿತ್ತು. .....ಈಗ ಸಮಾಜವಾದಿ ಕ್ರಿಪ್ಸ್‌ನು ಸಾಮ್ರಾಜ್ಯಶಾಹಿ ಕ್ರಿಪ್ಸ್‌ನಾಗಿ ಪರಿವರ್ತನೆಯಾಗಿದ್ದಾನೆ..... "ಅಟ್ಲಾಂಟಿಕ್ ಚಾರ್ಟರ್‌ನಲ್ಲಿ ಭಾರತದ ಸ್ಥಾನ ಎಲ್ಲಿದೆ?" ಎಂದು ಯಾರೊ ಚರ್ಚಿಲ್ಲನನ್ನು ಕೇಳಿದರು. ಚರ್ಚಿಲ್ಲನು, "ಚಾರ್ಟರ್ ಯೂರೋಪಿಗಾಗಿ ಮಾತ್ರ ಇರುವುದರಿಂದ ಅದರಲ್ಲಿ ಭಾರತಕ್ಕೆ ಸ್ಥಾನವಿಲ್ಲ. ಭಾರತದ ಸಮಸ್ಯೆ ಆಂತರಿಕ ವಿಷಯಕ್ಕೆ ಸಂಬಂಧಿಸಿದ್ದು," ಎಂದು ಉತ್ತರಿಸಿದನು. ನಾನು ನೀಡಿದ ಒಂದು ಹೇಳಿಕೆಯ ಸಂಬಂಧವಾಗಿ, 'ಬ್ರಿಟಿಷರು ಭಾರತದಲ್ಲಿ ಅಧಿಕಾರವನ್ನು ಯಾರಿಗೆ ಕೊಡಬೇಕು? ಎನ್ನುವ ಪ್ರಶ್ನೆಯು, ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಕೇಳಲ್ಪಟ್ಟಿತು. "ಪಟೇಲರು, ಕಾಂಗ್ರೆಸ್ ಅಧಿಕಾರವನ್ನು ಬಯಸುವುದಿಲ್ಲ. ಯಾರಿಗಾದರೂ ಕೊಡಿ – ಆದರೆ ಭಾರತೀಯರಿಗೆ ಕೊಡಿ ಅನ್ನುತ್ತಾರೆ ಎಂದು (ಆಗ ಪಾರ್ಲಿಮೆಂಟಿನಲ್ಲಿ) ಯಾರೋ ಹೇಳಿದರು. ನಾನು ಹೇಳುತ್ತೇನೆ, "ನೀವು ಅಧಿಕಾರವನ್ನು ಡಕಾಯಿತರಿಗೇ ಕೊಡಿ, ಆದರೆ ಹೊರಟು ಹೋಗಿ. ಆಮೇಲೆ ನಾವು ನಮ್ಮ ನಮ್ಮಲ್ಲಿ ಇತ್ಯರ್ಥ ಮಾಡಿಕೊಳ್ಳುತ್ತೇವೆ ಅಧಿಕಾರವನ್ನು ಭಾರತೀಯರಿಗೆ ಕೊಟ್ಟುಬಿಡಿ. ಈ ದೇಶಬಿಟ್ಟು ಹೊರಡಿ. ಇಲ್ಲದೆ ಹೋದರೆ ನಾವು ನಿಮ್ಮೊಡನೆ ಹೋರಾಡಬೇಕಾಗುತ್ತದೆ." ಭಾರತಕ್ಕೆ ಶಾಂತಿಯನ್ನು ಕೊಟ್ಟಿದ್ದೇವೆ – ಎಂದು ನೀವು ಹೇಳುತ್ತೀರಿ. ಆದರೆ ಸತ್ಯಾಂಶ ವೇನೆಂದರೆ ನೀವು ಭಾರತವನ್ನು ಒಂದು ಸ್ಮಶಾನವನ್ನಾಗಿ ಮಾರ್ಪಡಿಸಿದ್ದೀರಿ. ಸಂಪೂರ್ಣ ಯುದ್ಧದ ಮಧ್ಯೆ, ನಾಜಿ ಆಕ್ರಮಣಕ್ಕೆ ಫ್ರಾನ್ಸ್ ಸೋತು ಉರುಳಿದಾಗ ಚರ್ಚಿಲ್ಲನು ಇಂಗ್ಲೆಂಡ್ ಒಡನೆ ಒಂದಾಗುವುದಕ್ಕೆ ಫ್ರೆಂಚರಿಗೆ ಅಹ್ವಾನ ನೀಡಿದನು. ಅದು ನಿಜವಾಗಿಯೂ ಒಂದು ಸ್ಫೂರ್ತಿಗೊಂಡ ರಾಜನೀತಿ.

ಆದರೆ ಭಾರತದ ವಿಷಯಕ್ಕೆ ಬಂದಾಗ? ಓ ಇಲ್ಲ! ಯುದ್ಧದ ಮಧ್ಯೆ ಸಾಂವಿಧಾನಿಕ ಬದಲಾವಣೆ ಸಾಧ್ಯವಿಲ್ಲ? ಅದು ಯೋಚಿಸಲೂ ಆಗದ್ದು?

ನಾವು ಹೆಂಗಸಿನ ಮೊಂಡುತನದ ಬಗ್ಗೆ, ಮಕ್ಕಳ ಮೊಂಡುತನದ ಬಗ್ಗೆ ಕೇಳಿದ್ದೇವೆ. ಆದರೆ ಬ್ರಿಟಿಷರು ನಾಲ್ಕನೆ ಮೊಂಡುತನವನ್ನು ಕಂಡುಹಿಡಿದಿದ್ದಾರೆ. ಅದು ಹಿಮ್ಮೆಟ್ಟುವ ಮೊಂಡುತನ.

(ಭಾರತೀಯರನ್ನು ಕುರಿತು) ಜಪಾನ್ ಹೇಳುವುದನ್ನು ನಂಬಬೇಡಿ. ಅದು ಮಂಚೂರಿಯ, ಚೀನಾ ಮತ್ತು ಇತರ ಕಡೆ ನಡೆಸಿರುವ ಕೃತ್ಯಗಳಿಂದ ಇಂಗ್ಲೆಂಡಿನ ಹಾಗೆ ಜಪಾನ್ ಸಹ ಸಾಮ್ರಾಜ್ಯ ನಿರ್ಮಾಣದ ಅಸೆಯನ್ನು ಹೊಂದಿದೆ ಎನ್ನುವುದು ಸ್ಪಷ್ಟವಾಗಿದೆ. ಅದು ಇಂಗ್ಲೆಂಡನ್ನೂ ಮೀರಿಸುತ್ತದೆ. ಈಗ ನಮ್ಮ ಗುರಿ ಏನೆಂದರೆ ಜಪಾನೀಯರು ಬಂದರೆ ಅವರನ್ನು ಎದುರಿಸಲು ಸಿದ್ಧವಾಗಿರುವುದು.

ಪೊಲೀಸರು ನಾಯಕರನ್ನು, ಎಲ್ಲ ನಾಯಕರನ್ನು ದಸ್ತಗಿರಿ ಮಾಡುತ್ತಾರೆ. ಆಗ, ಅಹಿಂಸೆಯ ಪರಿಧಿಯ ಒಳಗೆ ತನ್ನ ಅತ್ಯಂತ ಹೆಚ್ಚಿನ ಪ್ರಯತ್ನವನ್ನು ಪ್ರಯೋಗಿಸುವುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯ. ಯಾವ ಮೂಲವನ್ನೂ ಶೋಧಿಸದೆ ಬಿಡಬಾರದು, ಯಾವ ಆಯುಧವನ್ನೂ ಬಳಸದೆ ಇರಬಾರದು. ಅದು ಜೀವನದಲ್ಲಿ ಒಮ್ಮೆ ಮಾತ್ರ ಬರುವ ಅವಕಾಶ.[೧೮]

ನಾವು ಗಾಂಧೀಜಿಗೆ ವಿಧೇಯರಾಗಿರೋಣ ಮತ್ತು ಸೈನಿಕರಂತೆ ನಡೆಯೋಣ..... ಸರ್ಕಾರವು ಗಾಂಧೀಜಿಯನ್ನು ದಸ್ತಗಿರಿ ಮಾಡಿದರೆ..... ಆಗ ಯಾವುದೇ ಮಾರ್ಗದಲ್ಲಾದರೂ ಸ್ವಾತಂತ್ರ್ಯವನ್ನು ಪಡೆಯುವುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯವಾಗುತ್ತದೆ..... ಹೋರಾಟವು ಮೊಟಕು ಮತ್ತು ಕ್ಷಿಪ್ರವಾಗಿರಬೇಕು. ಜಪಾನೀಯರು ಬರುವುದಕ್ಕೆ ಮುನ್ನ ನಾವು ಸ್ವತಂತ್ರರಾಗಬೇಕು ಮತ್ತು ಅವರೊಡನೆ ಹೋರಾಡಲು ಸಿದ್ಧವಾಗಿರಬೇಕು. ..... ಗಾಂಧೀಜಿ ಇರುವವರೆಗೆ ಅವರೇ ನಮ್ಮ ದಂಡನಾಯಕ. ಅವರ ದಸ್ತಗಿರಿ ಆದಮೇಲೆ ತನ್ನಿಷ್ಟದಂತೆ ಹೋರಾಡಲು ಪ್ರತಿಯೊಬ್ಬನೂ ಸ್ವತಂತ್ರ. ಅದಕ್ಕೆ ಹೊಣೆ ಬ್ರಿಟಿಷರು. ಅರಾಜಕತೆಗೂ ಅವರೇ ಹೊಣೆ. ಅರಾಜಕತೆಗೆ ಹೆದರಿ ನಾವು ಸುಮ್ಮನಿರಲು ಸಾಧ್ಯವಿಲ್ಲ. ನಮಗೆ ಬೇರೆ ಯಾವ ಮಾರ್ಗವೂ ಇಲ್ಲ. ನಾವು ಸ್ವತಂತ್ರರಾಗಲೇ ಬೇಕು. ಗುಲಾಮಗಿರಿಯನ್ನು ಇನ್ನು ಸಹಿಸಲು ಸಾಧ್ಯವಿಲ್ಲ.[೧೭]

ಪಟೇಲರ ಭಾಷಣಕ್ಕೆ ಸಂದ ಚಪ್ಪಾಳೆ ಬಹಳ ಜೋರಾಗಿತ್ತು ಮತ್ತು ದೀರ್ಘವಾಗಿತ್ತು. ಜವಹರಲಾಲ್ ಮತ್ತು ಕೃಪಲಾನಿ ಎದ್ದು ಬಂದು ಅವರನ್ನು ಅಭಿನಂದಿಸಿದರು. ನಂತರ ಇತರ ನಾಯಕರು ಠರಾವನ್ನು ಬೆಂಬಲಿಸಿ ಮಾತನಾಡಿದರು.

ಮಾರನೆಯ ದಿನ ೮ನೆ ತಾರೀಖು ಬೆಳಗ್ಗೆ ಪಟೇಲರು ಕರ್ನಾಟಕದ ರಂಗನಾಥ ರಾಮಚಂದ್ರ ದಿವಾಕರ್, ಜಮಷಡ್‌ಪುರದ ಬ್ಯಾರಿ, ಸಂಯುಕ್ತ ಪ್ರಾಂತ್ಯಗಳ ಜಗತ್ ನಾರಾಯಣ್ ಲಾಲ್‌ರವರನ್ನು ಭೇಟಿ ಮಾಡಿದರು ಮತ್ತು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಭಾಗವಹಿಸಿದರು. ಅಪರಾಹ್ನದಲ್ಲಿ ಗಾಂಧೀಜಿಯನ್ನು ಹಿಂದಿನ ದಿನದಂತೆ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಸಭೆಗೆ ಕರೆದುಕೊಂಡು ಹೋದರು. ಆ ಸಭೆಯಲ್ಲಿ 'ಭಾರತ ಬಿಟ್ಟು ತೊಲಗಿ' ಚಳವಳಿಯನ್ನು ಘೋಷಿಸಲಾಯಿತು ಮತ್ತು 'ಅತ್ಯಂತ ದೊಡ್ಡ ಪ್ರಮಾಣದಲ್ಲಿ ಅಹಿಂಸಾ ರೀತಿಯಲ್ಲಿ ಒಂದು ಸಾಮೂಹಿಕ ಹೋರಾಟವನ್ನು ಆರಂಭಿಸಲು ಗಾಂಧೀಜಿಯವರಿಗೆ ಅಧಿಕಾರ ಕೊಡಲಾಯಿತು. ಕೇವಲ ೧೩ ಮಂದಿ ಮಾತ್ರ ಠರಾವಿನ ವಿರುದ್ಧ ಮತ ಚಲಾಯಿಸಿದರು.

ಗಾಂಧೀಜಿಯವರು ತಮ್ಮ ಅಂತಿಮ ಭಾಷಣದಲ್ಲಿ ಇತರ ವಿಷಯಗಳ ಜೊತೆಗೆ ಹೀಗೆ ಹೇಳಿದರು:

> ಭಗವಂತನು ಅಮೂಲ್ಯ ವರವಾದ ಅಹಿಂಸಾ ಅಸ್ತ್ರವನ್ನು ನನಗೆ ದಯಪಾಲಿಸಿದ್ದಾನೆ, ... ಇಂದು ನಾನು, ಇಡೀ ಪ್ರಪಂಚವನ್ನೇ ಆವರಿಸುತ್ತಿರುವ ಮಹಾ ಜ್ವಾಲೆಯ ನಡುವೆ ಸುಮ್ಮನೆ ಕುಳಿತರೆ..... ದೇವರು ನನ್ನನ್ನು ಕ್ಷಮಿಸುವುದಿಲ್ಲ. ನಾನು ಜಪಾನೀಯರಿಗೆ ಸ್ವಲ್ಪ ತಡೆಯಿರಿ ಎಂದು ಹೇಳಲೆ? ಚೈನಾ ದೇಶವು ಆಕ್ರಮಿತವಾಗುವುದಕ್ಕೆ ಬಿಡಬೇಕೆ? ಪ್ರಪಂಚದ ಎಲ್ಲಾ ದೇಶಗಳು ನನ್ನನ್ನು ವಿರೋಧಿಸಿದರೂ, ಇಡೀ ಭಾರತ ನಾನು ಮಾಡುತ್ತಿರುವುದು ತಪ್ಪು ಎಂದು ನನಗೆ ತೋರಿಸಲು ಯತ್ನಿಸಿದರೂ, ನಾನು ಮುಂದುವರೆಯುತ್ತೇನೆ, ಭಾರತಕ್ಕೋಸ್ಕರ ಮಾತ್ರವಲ್ಲ, ಜಗತ್ತಿಗೋಸ್ಕರವಾಗಿ..... ವಾಸ್ತವ ಹೋರಾಟ ಈ ಕ್ಷಣದಲ್ಲೇ ಆರಂಭವಾಗುವುದಿಲ್ಲ. ನೀವು ಕೆಲವು ಅಧಿಕಾರಗಳನ್ನು ನನ್ನ ಕೈಯಲ್ಲಿ ಇಟ್ಟಿದ್ದೀರಿ. ನನ್ನ ಮೊದಲ ಕಾರ್ಯ ವೈಸ್‌ರಾಯನ್ನು ಭೇಟಿ ಮಾಡುವುದು ಮತ್ತು ಕಾಂಗ್ರೆಸ್ಸಿನ ಬೇಡಿಕೆಯನ್ನು ಒಪ್ಪುವಂತೆ

ಮನವಿಮಾಡುವುದು. ಅದು ಎರಡು ಅಥವಾ ಮೂರು ವಾರಗಳನ್ನು ತೆಗೆದುಕೊಳ್ಳಬಹುದು. ಅಲ್ಲಿಯವರೆಗೆ ನೀವೇನು ಮಾಡಬೇಕು? ಅದನ್ನು ನಾನು ನಿಮಗೆ ಹೇಳುತ್ತೇನೆ. ಚರಕವಿದೆ. ಅಹಿಂಸಾತ್ಮಕ ಹೋರಾಟದಲ್ಲಿ ಅದಕ್ಕೊಂದು ಭದ್ರವಾದ ಸ್ಥಾನವಿದೆ ಎನ್ನುವುದನ್ನು ಮೌಲಾನ ಸಾಹೇಬರಿಗೆ ಅರಿವಾಗುವಂತೆ ಮಾಡಬೇಕಾದರೆ ನಾನು ಅವರೊಡನೆ ಹೋರಾಡಬೇಕಾಯಿತು. ನೀವು ನಡೆಸಲು ೧೪ ತರಹದ ರಚನಾತ್ಮಕ ಕಾರ್ಯಕ್ರಮಗಳಿವೆ. ಆದರೆ ನೀವು ನಡೆಸಲು ಅದಕ್ಕಿಂತ ಹೆಚ್ಚಿನದು ಇದೆ. ಅದು ಆ ಕಾರ್ಯಕ್ರಮಕ್ಕೆ ಜೀವವನ್ನು ಕೊಡುತ್ತದೆ. ನಿಮ್ಮಲ್ಲಿ ಪ್ರತಿಯೊಬ್ಬರೂ ಈ ಕ್ಷಣದಿಂದ ನೀವು ಒಬ್ಬ ಸ್ವತಂತ್ರ ಪುರುಷ ಅಥವಾ ಮಹಿಳೆಯೆಂದು ಭಾವಿಸಬೇಕು. ನೀವು ಸ್ವತಂತ್ರರು ಮತ್ತು ಸಾಮ್ರಾಜ್ಯ ಶಾಹಿ ಅಧೀನದಲ್ಲಿ ಇಲ್ಲ ಅನ್ನುವ ಹಾಗೆ ನಡೆದುಕೊಳ್ಳಬೇಕು. ಇದು ನಟನೆಯಲ್ಲ. ದೈಹಿಕವಾಗಿ ಸ್ವಾತಂತ್ರ್ಯ ಬರುವುದಕ್ಕೆ ಮುಂಚೆ ಸ್ವಾತಂತ್ರ್ಯದ ಮನೋಭಾವವನ್ನು ಅಭ್ಯಾಸ ಮಾಡಿಕೊಳ್ಳಬೇಕು. ಒಬ್ಬ ಗುಲಾಮನ ಸರಪಳಿಗಳು, ಅವನು ತಾನು ಸ್ವತಂತ್ರ ಮನುಷ್ಯ ಎಂದು ಭಾವಿಸಿದ ತಕ್ಷಣ, ಮುರಿದು ಬೀಳುತ್ತವೆ..... ನಾಯಕರ ದಸ್ತಗಿರಿ ಆದ ಮೇಲೆ ಪ್ರತಿಯೊಬ್ಬ ವ್ಯಕ್ತಿಯು ತನಗೆ ತಾನೆ ದಂಡನಾಯಕ. ಅವನು ಭಾರತ ಬಿಟ್ಟು ತೊಲಗಿ ಠರಾವನ್ನು ಅಹಿಂಸೆಯ ನಾಲ್ಕು ಮೂಲೆಗಳ ಒಳಗೆ ಕಾರ್ಯಗತ ಮಾಡುವಾಗ 'ಮಾಡು ಅಥವಾ ಮಡಿ'ಯಬೇಕು.[೧೭೭]

ಸರ್ದಾರರು ಅಂದು ರಾತ್ರಿ ೭.೩೦ರಿಂದ ೯.೩೦ರ ವರೆಗೆ ಬಿರ್ಲಾ ಸದನದಲ್ಲಿ ಗಾಂಧೀಜಿಯ ಜೊತೆ ಸಮಾಲೋಚಿಸಿದರು. ಧ್ಯಾನ ಮಾಡಿದರು ಮತ್ತು ಊಟ ಮಾಡಿದರು. ರಾತ್ರಿ ೧೧ ಘಂಟೆಗೆ ಅವರು ಮತ್ತು ಮಗಳು ಮಣಿಬೆನ್ ತಮ್ಮ ವಸತಿಗೆ ಹಿಂತಿರುಗಿದರು.

೯ನೆ ತಾರೀಖು ಬೆಳಗಿನ ಜಾವ ೫ ಘಂಟೆಗೆ ಸರ್ದಾರರು ತಂಗಿದ್ದ 'ಹೇಮ ಪ್ರಭಾ'ಕ್ಕೆ ಪೊಲೀಸರು ಬಂದು, ಅವರನ್ನು ಅವರೊಡನೆ ತಂಗಿದ್ದ ಜೆ.ಬಿ. ಕೃಪಲಾನಿಯವರನ್ನು ದಸ್ತಗಿರಿ ಮಾಡಿ ವಿಕ್ಟೋರಿಯ ಟರ್ಮಿನಸ್ ರೈಲ್ವೆ ನಿಲ್ದಾಣಕ್ಕೆ ಕರೆದುಕೊಂಡು ಹೋಗಿ, ಅಲ್ಲಿ ಸಿದ್ಧವಾಗಿ ನಿಂತಿದ್ದ ಒಂದು ವಿಶೇಷ ರೈಲಿನಲ್ಲಿ ಕೂರಿಸಿದರು. ಪೊಲೀಸರು, ಮಹಾತ್ಮ ಗಾಂಧಿ, ಮಹದೇವ ದೇಸಾಯಿ, ಸರೋಜಿನಿ

ನಾಯ್ಡು, ಮೀರಾ ಬೆಹೆನ್, ಆಜ಼ಾದ್, ನೆಹರು, ಇತರ ಕಾರ್ಯಕಾರಿ ಸದಸ್ಯರು ಬೊಂಬಾಯಿಯ ಕಾಂಗ್ರೆಸ್ ನಾಯಕರಾದ ಯೂಸುಫ್ ಮೆಹರಲಿ, ಅಶೋಕ್ ಮೆಹ್ತ ಮೊದಲಾದವರನ್ನು ವಿವಿಧ ಸ್ಥಳಗಳಲ್ಲಿ ದಸ್ತಗಿರಿ ಮಾಡಿ ಅಲ್ಲಿಗೆ ಕರೆತಂದು ವಿವಿಧ ಡಬ್ಬಿಗಳಲ್ಲಿ ತುಂಬಿದರು. ಸರ್ದಾರರು ಮತ್ತು ಅಜ಼ಾದರು ಗಾಂಧಿ ಇದ್ದ ಡಬ್ಬಿಗೆ ಹೋಗಿ ಅವರೊಡನೆ ಮಾತನಾಡಲು ಯತ್ನಿಸಿದರು. ಆದರೆ ಪೊಲೀಸರು ಅವಕಾಶ ಕೊಡಲಿಲ್ಲ. ಅವರನ್ನು ಹಿಂದಕ್ಕೆ ಅವರ ಡಬ್ಬಿಗೆ ಕಳುಹಿಸಿದರು. ಮಹಾತ್ಮ ಮತ್ತು ಮಹದೇವರನ್ನು ಬೀಳ್ಕೊಡುತ್ತಾ ಸರ್ದಾರರು, 'ನಾನು ನಿಮ್ಮನ್ನು ಮತ್ತೆ ನೋಡುವುದಿಲ್ಲ ಎಂದು ಕಾಣುತ್ತದೆ' ಎಂದರು.

ರೈಲು ಪೂನಾ ಕಡೆಗೆ ಹೊರಟಿತು. ರೈಲನ್ನು ಚಿಂಚ್‌ವಾಡ್‌ನಲ್ಲಿ ನಿಲ್ಲಿಸಿ ಪೊಲೀಸರು ಗಾಂಧೀಜಿ, ಮಹದೇವ್, ಸರೋಜಿನಿ ನಾಯ್ಡು ಮತ್ತು ಮೀರಬೆಹೆನ್‌ರನ್ನು ಪೂನಾದ ಆಗಾಖಾನ್ ಭವನಕ್ಕೂ, ಕರ್ಕಿಯಲ್ಲಿ ನಿಲ್ಲಿಸಿ ಬೊಂಬಾಯಿಯ ಕಾಂಗ್ರೆಸ್ ನಾಯಕರನ್ನು ಯರವಾಡ ಸೆರೆಮನೆಗೂ ಮತ್ತು ಪೂನಾ ನಗರದಲ್ಲಿ ನಿಲ್ಲಿಸಿ ಪಟೇಲ್, ಆಜ಼ಾದ್, ನೆಹರು ಮತ್ತು ಇತರ ಕಾರ್ಯಕಾರಿ ಸಮಿತಿ ಸದಸ್ಯರನ್ನು ನಗರದ ಕೋಟೆಗೂ ಕರೆದುಕೊಂಡು ಹೋಗಿ ಸೆರೆಯಲ್ಲಿಟ್ಟರು.

ಮಾರನೆಯ ಬೆಳಗ್ಗೆ ಅಂದರೆ ೯ನೆ ತಾರೀಖಿನ ಬೆಳಗ್ಗೆ ನೂರಾರು ಮಂದಿ ಕಾಂಗ್ರೆಸ್ ಸದಸ್ಯರು, (ಗಂಡಸರು ಮತ್ತು ಹೆಂಗಸರು) ಗಾಂಧೀಜಿ ತಂಗಿದ್ದ ಬಿರ್ಲಾ ಸದನಕ್ಕೆ ಬಂದರು. ಅವರಿಗೆ ಗಾಂಧೀಜಿ ದಸ್ತಗಿರಿ ಆಗಿರುವ ವಿಷಯ ತಿಳಿದಿರಲಿಲ್ಲ. ಅವರನ್ನು ಕುರಿತು ಗಾಂಧೀಜಿ ಭಾಷಣ ಮಾಡಿ ಮುಂದಿನ ಕಾರ್ಯಕ್ರಮಗಳನ್ನು ತಿಳಿಸುವ ಕಾರ್ಯಕ್ರಮ ನಿಗದಿಯಾಗಿತ್ತು. ಅಲ್ಲಿದ್ದ, ಆದರೆ ದಸ್ತಗಿರಿ ಆಗಿಲ್ಲದಿದ್ದ ಪ್ಯಾರೆಲಾಲ್‌ರವರು, ಅಲ್ಲಿ ಸಭೆ ನಡೆದರೆ ಅತಿಥೇಯ ಬಿರ್ಲಾರವರಿಗೆ ಮುಜುಗರ ಉಂಟಾಗುವುದನ್ನು ತಪ್ಪಿಸುವುದಕ್ಕಾಗಿ, ಕೆಲವೇ ಮಾತುಗಳಲ್ಲಿ ಗಾಂಧೀಜಿಯವರ ಕೊನೆಯ ಸಂದೇಶವನ್ನು ಅವರಿಗೆ ತಿಳಿಸಿದರು. 'ಹಿಂಸೆಯನ್ನು ಮತ್ತು ಹೇಡಿತನದ ಶರಣಾಗತಿಯನ್ನು ತಡೆಗಟ್ಟಿ' ಎನ್ನುವುದು ಮತ್ತು 'ಅಹಿಂಸಾತ್ಮಕ ಅಸಹಕಾರ ಚಳವಳಿಯನ್ನು ನಡೆಸಬೇಕು' ಎನ್ನುವುದು ಆ ಸಂದೇಶವಾಗಿತ್ತು.[೧೭೮]

ಆದರೆ ಕಾರಣವಿಲ್ಲದೆ ಇದ್ದಕ್ಕಿದ್ದ ಹಾಗೆ ಎಲ್ಲಾ ಕಾಂಗ್ರೆಸ್ ನಾಯಕರನ್ನು ಸರ್ಕಾರವು ದಸ್ತಗಿರಿ ಮಾಡಿದ್ದು ಇಡೀ ದೇಶದಲ್ಲಿ ಜನರ ಆಕ್ರೋಶಕ್ಕೆ ಎಡೆಮಾಡಿತು. ೮ನೆ ತಾರೀಖಿನ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಸಭೆಯು ಅಹಿಂಸಾತ್ಮಕ 'ಭಾರತ ಬಿಟ್ಟು ತೊಲಗಿ' ಚಳವಳಿಯನ್ನು ಆರಂಭಿಸಲು ಗಾಂಧೀಜಿಗೆ ಅನುಮತಿ

ನೀಡಿತ್ತೇ ಹೊರತು, ಗಾಂಧೀಜಿ ಚಳವಳಿಯನ್ನು ಆರಂಭಿಸಿಯೇ ಇರಲಿಲ್ಲ. ಸ್ವತಃ ಗಾಂಧೀಜಿಯವರು ಚಳವಳಿಯನ್ನು ತಕ್ಷಣ ಆರಂಭಿಸುವುದಿಲ್ಲವೆಂದೂ, ತಾವು ಮೊದಲು ವೈಸ್‌ರಾಯ್‌ನನ್ನು ಭೇಟಿ ಮಾಡುವರೆಂದೂ, ತಿಳಿಸಿದ್ದರು. ವೈಸ್‌ರಾಯ್ ಭೇಟಿ ಮಾಡಿದಾಗ ತೀರ್ಮಾನ ಏನಾಗುತ್ತಿತ್ತೆಂಬುದನ್ನು ಹೇಳಲಾಗದು. ಚಳವಳಿ ನಡೆಯದೇ ಇರುವ ಸಂಭವವೂ ಇತ್ತು. ಆದರೆ ಸರ್ಕಾರ ಆತುರ ಪಟ್ಟು ಎಲ್ಲಾ ನಾಯಕರನ್ನು ದಸ್ತಗಿರಿ ಮಾಡಿತ್ತು. ಅವರನ್ನು ಸರ್ಕಾರ ದಸ್ತಗಿರಿ ಮಾಡಿರುವ ರೀತಿಯನ್ನು ನೋಡಿದರೆ, ನಾಯಕರನ್ನು ದಸ್ತಗಿರಿ ಮಾಡುವ ತೀರ್ಮಾನವನ್ನು ಸರ್ಕಾರವು ಎ.ಐ.ಸಿ.ಸಿ. ಸಭೆಗೆ ಮುನ್ನವೇ ಮಾಡಿತ್ತೆಂದು ಕಾಣುತ್ತದೆ.

ಅದರಿಂದ ಆಕ್ರೋಶಗೊಂಡ ಜನ ಯಾವ ಪ್ರಚೋದನೆಯೂ ಇಲ್ಲದೆ ತಾವೇತಾವಾಗಿ ಸರ್ಕಾರಕ್ಕೆ ತಿರುಗಿ ಬಿದ್ದರು. ಬೊಂಬಾಯಿ, ಅಹಮದಾಬಾದ್, ದೆಹಲಿ, ಬೆಂಗಳೂರು, ಕಲ್ಕತ್ತ ಮತ್ತು ಇನ್ನೂ ಅನೇಕ ನಗರಗಳಲ್ಲಿ ಒಂದು ವಾರಗಳ ಕಾಲ ಎಲ್ಲಾ ವಾಣಿಜ್ಯ ಮತ್ತು ಕೈಗಾರಿಕಾ ಚಟುವಟಿಕೆಗಳು ಸ್ಥಗಿತಗೊಂಡುವು. ಜನ ರೈಲು ನಿಲ್ದಾಣಗಳು, ಅಂಚೆ ಕಛೇರಿಗಳು, ಪೊಲೀಸ್ ಠಾಣೆಗಳು ಮತ್ತು ಇತರ ಸರ್ಕಾರಿ ಕಟ್ಟಡಗಳ ಮೇಲೆ ಆಕ್ರಮಣ ಮಾಡಿದರು. ಅವರು ರೈಲು ಕಂಬಿಗಳನ್ನು ಕಿತ್ತರು, ಟೆಲಿಫೋನ್ ಮತ್ತು ಟೆಲಿಗ್ರಾಫ್ ತಂತಿಗಳನ್ನು ಕತ್ತರಿಸಿದರು, ಟೆಲಿಗ್ರಾಫ್ ಕಂಬಗಳನ್ನು ಉರುಳಿಸಿದರು. ಅನೇಕ ಯುವಕರು ಮತ್ತು ಜಯಪ್ರಕಾಶ್ ನಾರಾಯಣ್ ಮೊದಲಾದ ಕಾಂಗ್ರೆಸ್ ಸಮಾಜವಾದಿಗಳು ಭೂಗತರಾಗಿ ಸರ್ಕಾರಕ್ಕೆ ಸಿಂಹಸ್ವಪ್ನರಾದರು. ಗಾಂಧೀಜಿಯ ಅಹಿಂಸೆ ಎತ್ತಲೋ ಹಾರಿಹೋಯಿತು. ನಾಯಕರಿದ್ದಿದ್ದರೆ ಜನರನ್ನು ಹತೋಟಿಯಲ್ಲಿಟ್ಟುಕೊಂಡು ಅಹಿಂಸಾ ಮಾರ್ಗದಲ್ಲೇ ನಡೆಸಬಹುದಾಗಿತ್ತೇನೊ! ಆದರೆ ನಾಯಕರಿಲ್ಲದ ಜನತೆ ವ್ಯಾಪಕ ಹಿಂಸಾಚಾರಕ್ಕೇ ಇಳಿಯಿತು.

ಆಗಿದ್ದ ಸರ್ಕಾರ ಮೊದಲೇ ಕ್ರೂರಿ. ಇನ್ನು ಜನ ಇಷ್ಟೊಂದು ದಾಂಧಲೆ ಮಾಡಿದರೆ ಸುಮ್ಮನಿದ್ದೀತೆ. ಉಗ್ರ ರೀತಿಯಲ್ಲಿ ಸದೆ ಬಡಿಯಲು ಆರಂಭಿಸಿತು. ಲಾಠಿ ಪ್ರಹಾರ, ಅಶ್ರುವಾಯು ಪ್ರಯೋಗಗಳ ಜೊತೆಗೆ ವಿಪುಲವಾಗಿ ಗುಂಡಿನ ವರ್ಷಧಾರೆ ನಡೆಸಿತು.

ಪೊಲೀಸರು ದೆಹಲಿಯಲ್ಲಿ ಆಗಸ್ಟ್ ೧೧ ಮತ್ತು ೧೨ರಂದು ೪೭ ಬಾರಿ ಗುಂಡು ಹಾರಿಸಿದರು, ಸಂಯುಕ್ತ ಪ್ರಾಂತ್ಯದಲ್ಲಿ ಆಗಸ್ಟ್ ೯ರಿಂದ ೧೧ರ ವರೆಗೆ ೨೯ ಬಾರಿ ಗುಂಡು ಹಾರಿಸಿದರು. ಅಲ್ಲಿ ೭೯ಮಂದಿ ಹತರಾಗಿ ೧೧೪ ಮಂದಿ ಗಾಯಗೊಂಡರು. ಮಧ್ಯ ಪ್ರಾಂತ್ಯಗಳಲ್ಲಿ ಪೊಲೀಸರು ಮೊದಲ ಮೂರು ವಾರಗಳಲ್ಲಿ

೬೪ ಮಂದಿಯನ್ನು ಕೊಂದರು, ೧೦೨ ಮಂದಿಯನ್ನು ಗಾಯಗೊಳಿಸಿದರು ಮತ್ತು ೧೧,೦೪೪ ಮಂದಿಯನ್ನು ಸೆರೆಮನೆಗೆ ನೂಕಿದರು. ಮೈಸೂರು ರಾಜ್ಯದಲ್ಲಿ ಸುಮಾರು ೬೦೦ ಮಂದಿ ಪೊಲೀಸರ ಗುಂಡಿಗೆ ಬಲಿಯಾದರು. ಕಲ್ಕತ್ತದಲ್ಲಿ ಅನೇಕ ಬಾರಿ ಗುಂಡು ಹಾರಿಸಲ್ಪಟ್ಟು ಬಹಳ ಮಂದಿ ಸತ್ತರು. ಪಟಿಯಾಲದಲ್ಲಿ ರಾಷ್ಟ್ರೀಯ ಬಾವುಟ ಹಾರಿಸಲು ಯತ್ನಿಸುತ್ತಿದ್ದ ೮ ವಿದ್ಯಾರ್ಥಿಗಳು ಪೊಲೀಸರ ಗುಂಡಿಗೆ ಬಲಿಯಾದರು. ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ಇಂಡಿಯಾ ಪ್ರಕಾರ ೧೯೪೨ರ ಆಗಸ್ಟ್ ೯ ರಿಂದ ನವೆಂಬರ್ ೩೦ರ ವರೆಗೆ ೧೦೦೮ ಮಂದಿ ಕೊಲ್ಲಲ್ಪಟ್ಟರು, ೩೨೭೫ ಮಂದಿ ತೀವ್ರವಾಗಿ ಗಾಯಗೊಂಡರು ಮತ್ತು ಒಂದು ಲಕ್ಷಕ್ಕೂ ಹೆಚ್ಚು ಮಂದಿ ಸೆರೆಮನೆಗೆ ದೂಡಲ್ಪಟ್ಟರು. ಇದು ಸರ್ಕಾರ ನೀಡಿದ ಅಂಕಿ ಅಂಶ. ವಾಸ್ತವವಾಗಿ ಅದು ಇನ್ನೂ ಜಾಸ್ತಿ ಇರುತ್ತದೆ.[೧೭೯]

ಸರ್ಕಾರದ ಈ ಕ್ರೂರ ದಮನ ಕಾರ್ಯಗಳ ಫಲವಾಗಿ ಜನರ ಹೋರಾಟ ನಿಧಾನವಾಗಿ ಅಂತ್ಯವಾಯಿತು. ಅನೇಕ ಚರಿತ್ರೆಕಾರರು 'ಭಾರತ ಬಿಟ್ಟು ತೊಲಗಿ' ಚಳವಳಿ ವಿಫಲವಾಯಿತು ಎಂದು ಅಭಿಪ್ರಾಯ ಪಟ್ಟಿದ್ದಾರೆ. ಆದರೆ ನಿರಾಯುಧರಾದ ಜನತೆ ಮದ್ದುಗುಂಡಿನ ಬಲ ಇರುವ ಸರ್ಕಾರದ ವಿರುದ್ಧ ಗೆಲ್ಲಲು ಸಾಧ್ಯವಿಲ್ಲ. ಜನ ಈ ಪ್ರಮಾಣದಲ್ಲಿ ದೇಶದಾದ್ಯಂತ ಹೋರಾಟ ನಡೆಸಿದ್ದೇ ಒಂದು ವಿಜಯ ಎಂದು ಹೇಳಬಹುದು.

೧೩.೯. ಸೆರೆಮನೆಯಲ್ಲಿ ಇತರ ನಾಯಕರೊಡನೆ

ಅಹಮದ್ ನಗರ ಕೋಟೆಯು ೧೬ನೆ ಶತಮಾನದಲ್ಲಿ ಹುಸೇನ್ ನೈಜಾಮ್ ಷಾ ನಿಂದ ನಿರ್ಮಿಸಲ್ಪಟ್ಟಿತ್ತು. ಅದು ೧೮೦೩ರಲ್ಲಿ ಬ್ರಿಟಿಷರ ವಶವಾಗಿತ್ತು. ಸರ್ಕಾರವು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರನ್ನು ಇಡುವುದಕ್ಕಾಗಿ ಆ ಕೋಟೆಯನ್ನು ಸೆರೆಮನೆಯಾಗಿ ಪರಿವರ್ತಿಸಿತ್ತು.

ಸರ್ದಾರರು ಅಹಮದ್‌ನಗರ ಕೋಟೆ ಸೆರೆಮನೆಯಲ್ಲಿ ಮೂರು ವರ್ಷ ಕಳೆಯಬೇಕಾಯಿತು. ಅವರ ಜೊತೆಯಲ್ಲಿ ಇತರ ೧೧ ಮಂದಿ ಕಾರ್ಯಕಾರಿ ಸಮಿತಿಯ ಸದಸ್ಯರಿದ್ದರು. ಹನ್ನೆರಡು ನಾಯಕರ ಪೈಕಿ ೬೭ ವರ್ಷದ ಪಟೇಲರು ಹಿರಿಯರು ಮತ್ತು ೪೨ ವರ್ಷದ ಹರೇ ಕೃಷ್ಣ ಮೆಹ್ತಾಬ್ ಕಿರಿಯರು. ಮೌಲಾನಾ ಅಬುಲ್ ಕಲಾಂ ಆಜ಼ಾದ್ (೫೪), ಪಟ್ಟಾಭಿ ಸೀತಾರಾಮಯ್ಯ (೬೨), ಜವಹರಲಾಲ್ (೫೩), ಸೈಯದ್ ಮೊಹಮದ್ (೫೩), ಶಂಕರರಾವ್ ದಿಯೊ (೪೭), ಪ್ರಫುಲ್ಲ ಚಂದ್ರ ಘೋಷ್ (೫೧), ಕೃಪಲಾನಿ (೫೪), ಗೋವಿಂದ

ವಲ್ಲಭ ಪಂತ್ (೫೫), ನರೇಂದ್ರ ದೇವ್ (೫೩) ಮತ್ತು ಅಸಫ್ ಆಲಿ (೫೪) ಅಲ್ಲಿದ್ದ ಇತರ ಕಾರ್ಯಕಾರಿ ಸಮಿತಿಯ ಸದಸ್ಯರು. ೬೧ ವರ್ಷದ ರಾಜೇಂದ್ರ ಪ್ರಸಾದರು ಅನಾರೋಗ್ಯದ ದೆಸೆಯಿಂದ ಬೊಂಬಾಯಿಯ ಅಧಿವೇಶನಕ್ಕೆ ಬಂದಿರ ಲಿಲ್ಲ. ಅವರು ಆನಂತರ ದಸ್ತಗಿರಿಯಾಗಿ ಬಿಹಾರದ ಸೆರೆಮನೆಯಲ್ಲಿ ಇಡಲ್ಪಟ್ಟರು. ೬೪ ವರ್ಷದ ರಾಜಗೋಪಾಲಾಚಾರಿಯವರನ್ನು ಸರ್ಕಾರ ದಸ್ತಗಿರಿ ಮಾಡಲಿಲ್ಲ. ಏಕೆಂದರೆ ಅವರು ಜುಲೈ ತಿಂಗಳಲ್ಲಿ ಕಾಂಗ್ರೆಸ್ಸಿನಿಂದ ಹೊರಬಂದು 'ಭಾರತ ಬಿಟ್ಟು ತೊಲಗಿ' ಚಳವಳಿಯಿಂದ ದೂರ ಉಳಿದಿದ್ದರು. ಸರ್ಕಾರವು ಬೂಲಾಭಾಯ್ ದೇಸಾಯಿಯವರನ್ನು ದಸ್ತಗಿರಿ ಮಾಡಲಿಲ್ಲ. ಅವರು ಅನಾರೋಗ್ಯದ ನಿಮಿತ್ತ ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ಜುಲೈನಲ್ಲಿ ರಾಜಿನಾಮೆ ಕೊಟ್ಟಿದ್ದರು.[೧೮೦]

ಮೊದಲ ೨೦ ದಿವಸ ಈ ಖೈದಿಗಳ ಪಾಲಿಗೆ ಜಗತ್ತು ಮುಚ್ಚಿ ಹೋಗಿತ್ತು. ಅವರಿಗೆ ಸಮಾಚಾರ ಪತ್ರಿಕೆಗಳನ್ನಾಗಲಿ, ಪತ್ರಗಳನ್ನಾಗಲಿ ಕೊಡಲಿಲ್ಲ. ಅವರು ಎಲ್ಲಿ ಇಡಲ್ಪಟ್ಟಿದ್ದಾರೆ ಎನ್ನುವುದೂ ಹೊರಗಿನ ಜಗತ್ತಿಗೆ ಗೊತ್ತಾಗಿರಲಿಲ್ಲ. ಎಲ್ಲವನ್ನೂ ಸರ್ಕಾರ ಬಹಿಷ್ಕರಿಸಿತ್ತು. ಸರ್ದಾರರು ದಸ್ತಗಿರಿಯಾದ ಕೆಲವು ದಿವಸಗಳ ನಂತರ ಅವರ ಮಗ ದಹ್ಯಭಾಯ್ ಬೊಂಬಾಯಿಯ ಗೃಹ ಕಾರ್ಯದರ್ಶಿ ಜೆ.ಎಂ. ಸ್ಲೇಡನ್‌ನನ್ನು ಭೇಟಿ ಮಾಡಿ ತಮ್ಮ ತಂದೆಯ ಬಗೆಗೆ ವಿಚಾರಿಸಿದರೆ, ಆ ಗೃಹ ಕಾರ್ಯದರ್ಶಿಯು 'ಅವರನ್ನು ಎಲ್ಲಿಗೆ ಕರೆದೊಯ್ಯಲಾಗಿದೆ ಅಥವಾ ಎಲ್ಲಿ ಇಡಲಾಗಿದೆ ಅಥವಾ ಅವರೊಡನೆ ಯಾರು ಯಾರು ಇದ್ದಾರೆ ಎಂಬುದನ್ನು ಸರ್ಕಾರವು ತಿಳಿಸಲು ಸಾಧ್ಯವಿಲ್ಲ' ಎಂದು ಉತ್ತರಿಸಿದನು.

೨೦ ದಿನಗಳ ನಂತರ ಆಗಸ್ಟ್ ೨೮ರಂದು ಮೊದಲ ಬಾರಿಗೆ 'ಟೈಮ್ಸ್ ಆಫ್ ಇಂಡಿಯ' ಸಮಾಚಾರ ಪತ್ರಿಕೆಯನ್ನು ಅವರಿಗೆ ಒದಗಿಸಲಾಯಿತು. ಆ ಪತ್ರಿಕೆಯಿಂದ ಗಾಂಧೀಜಿಯ ಕಾರ್ಯದರ್ಶಿ ಮಹದೇವ ದೇಸಾಯಿಯವರು ಆಗಸ್ಟ್ ೧೫ರಂದೇ ಗತಿಸಿದ್ದ ವಿಷಯ ತಿಳಿಯಿತು. ಮಹದೇವ ದೇಸಾಯಿಯವರು ಗಾಂಧೀಜಿಯೊಡನೆ ಆಗಾ ಖಾನ್ ಭವನದಲ್ಲಿ ಇಡಲ್ಪಟ್ಟಿದ್ದರು. ಅವರು ಸೆರೆಮನೆ ಸೇರಿದ ೬ ದಿನಗಳ ನಂತರ ಹೃದಯಾಘಾತದಿಂದ ಅಸುನೀಗಿದ್ದರು. ಆ ಸುದ್ದಿ ಎಲ್ಲರನ್ನು ದುಃಖ ಸಾಗರದಲ್ಲಿ ಮುಳುಗಿಸಿತು. ಅಂದು ರಾತ್ರಿ ಪಟೇಲರು ಉಪವಾಸ ಮಾಡಿದರು. ಆಹಾರವನ್ನು ತೆಗೆದುಕೊಳ್ಳಲು ಅವರಿಗೆ ಆಗಲಿಲ್ಲ. ಅವರು ತೀವ್ರ ಆಘಾತಕ್ಕೆ ಈಡಾಗಿದ್ದರು. ಅದು ಅಂತಹ ಕಹಿ ಸುದ್ದಿಯಾಗಿತ್ತು.

ಸ್ವಲ್ಪ ದಿನಗಳ ನಂತರ ಸರ್ಕಾರವು ಪತ್ರಗಳನ್ನು ಬರೆಯಲು ಆ ಖೈದಿಗಳಿಗೆ ಅವಕಾಶ ನೀಡಿತು. ಆದರೆ ಸರ್ಕಾರ ಒಪ್ಪಿದ ಸಂಬಂಧಿಕರಿಗೆ ಮಾತ್ರ ಬರೆಯ

ಬೇಕೆಂದಿತು. ಸರ್ದಾರರು ಮತ್ತು ಇತರ ಕೆಲವರು ಸರ್ಕಾರದ ಒಪ್ಪಿಗೆಗೆ ಹೆಸರುಗಳನ್ನು ಕಳುಹಿಸಲು ನಿರಾಕರಿಸಿದರು. ಆ ಶರತ್ತನ್ನು ಸರ್ಕಾರ ಸ್ವಲ್ಪ ದಿನಗಳ ನಂತರ ಹಿಂತೆಗೆದುಕೊಂಡಿತು. ಆಗ ಸರ್ದಾರರು ಒಂದು ಪತ್ರ ಬರೆದರು. ಅದು ಅವರ ಮಗ ಅಥವಾ ಮಗಳಿಗಲ್ಲ, ಗಾಂಧೀಜಿಗೆ, ಭಾರವಾದ ಹೃದಯದಿಂದ ಬರೆದರು:

> ಮಹದೇವ್ ಗತಿಸಿದ್ದಾರೆ ಎನ್ನುವ ಮಾತು ನನ್ನ ಮನಸ್ಸಿನಿಂದ ಹೊರಗೆ ಹೋಗಲು ನಿರಾಕರಿಸುತ್ತಿದೆ, ಏಕೆಂದರೆ ಮಹದೇವ ಹೀಗೆ ಇದ್ದಕ್ಕಿದ್ದ ಹಾಗೆ ಮತ್ತು ಎಲ್ಲರನ್ನೂ ಹಿಂದೆ ಬಿಟ್ಟು ಶೀಘ್ರವಾಗಿ ಜಾರಿಕೊಂಡಿದ್ದು ದೇವರ ಆಕ್ರೋಶವನ್ನು ತೋರಿಸುತ್ತದೆ.
>
> ಅಂತಹ ನೋವನ್ನು ಮರೆಯುವಂತೆ ನಮ್ಮನ್ನು ಪ್ರೋತ್ಸಾಹಿಸುತ್ತಿದ್ದ ನಿಮಗೆ ನಾವು ಅನುಕಂಪದ ಯಾವ ಸಂದೇಶವನ್ನು ಕಳುಹಿಸೋಣ?
>
> ಆದರೂ ಸಮಾಧಾನದ ಈ ಪುಟ್ಟ ಸಂದೇಶವನ್ನು ಕಳುಹಿಸುವ ಬಯಕೆಯನ್ನು ತಡೆಯಲು ನಾನು ಅಶಕ್ತನಾಗಿದ್ದೇನೆ, ಏಕೆಂದರೆ ಇಷ್ಟು ತೀವ್ರವಾದ ನೋವನ್ನು ನೀವು ಎಂದೂ ಎದುರಿಸಿರಲಿಲ್ಲ. ಈ ದಿನ ಸಮಾಚಾರ ಪತ್ರಿಕೆಯಲ್ಲಿ ದುರ್ಗಾ ಬೆಹೆನ್ (ಮಹದೇವ್‌ರ ಪತ್ನಿ)ಗೆ ನಿಮ್ಮ ಸಂದೇಶವನ್ನು ನಾವು ನೋಡಿದೆವು ಮತ್ತು ನಿಮ್ಮ ಸಂಕಟವನ್ನು ಗುರುತಿಸಿದೆವು.[೧೮೧]

ಸೆರೆಮನೆಯಲ್ಲಿ ಮೊದಲು ಒಂದು ವಾರ ಊಟ ಚೆನ್ನಾಗಿರಲಿಲ್ಲ. ಆ ನಂತರ ಒಬ್ಬ ಒಳ್ಳೆಯ ಬಾಣಸಿಗ ದೊರಕಿದ. ಹೊಸ ಸೊಳ್ಳೆ ಪರದೆಗಳು ಬಂದುವು.

ವಲ್ಲಭಭಾಯ್ ತಮ್ಮ ಮಾತಿನಿಂದ ಎಲ್ಲರನ್ನೂ ನಗಿಸುತ್ತಿದ್ದರು. ಆಗಸ್ಟ್ ತಿಂಗಳ ಅಂತ್ಯಭಾಗದಲ್ಲಿ ಬೊಂಬಾಯಿಯ ಸರ್ಜನ್ – ಜೆನರಲ್ ಮೇಜರ್ ಜೆನರಲ್ ಕ್ಯಾಂಡಿಯವರು ಖೈದಿಗಳ ಅರೋಗ್ಯ ವಿಚಾರಣೆಗಾಗಿ ಬಂದರು. ಅವರು ಪಟೇಲ್‌ಗೆ ಪರಿಚಿತರು. ಹದಿನೆಂಟು ವರ್ಷಗಳ ಹಿಂದೆ ಪಟೇಲರು ಅಹಮದಾಬಾದ್ ಪುರಸಭೆಯ ಅಧ್ಯಕ್ಷರಾಗಿದ್ದಾಗ ಕ್ಯಾಂಡಿಯವರು ಪುರಸಭೆಯಲ್ಲಿ ಆರೋಗ್ಯಾಧಿಕಾರಿಯಾಗಿದ್ದರು. ಅವರಿಬ್ಬರ ನಡುವಣ ಸಂಭಾಷಣೆ:

ಕ್ಯಾಂಡಿ : ನನಗೆ ವಯಸ್ಸಾಗುತ್ತಿದೆ. ಬೇಗನೆ ರೇಗಾಡುತ್ತೇನೆ.

ಪಟೇಲ್ : ೫೬ನೆ ವಯಸ್ಸಿಗೇ ನೀವು ವೃದ್ಧ ಮತ್ತು ರೇಗಾಡುವವನಾದರೆ ನಾನೇನಾಗಿರಬೇಕು?

ಕ್ಯಾಂಡಿ : ನಿಮಗೆಸ್ಟು ವಯಸ್ಸು? ೫೮?

ಪಟೇಲ್ : ೬೭. ಇನ್ನೂ ೩೩ ವರ್ಷಗಳನ್ನು ಎದುರುನೋಡುತ್ತಿದ್ದೇನೆ.[೧೮೨]

ಕೆಲವು ತಿಂಗಳುಗಳ ನಂತರ 'ಟೈಮ್ಸ್ ಆಫ್ ಇಂಡಿಯ' ಪತ್ರಿಕೆ ಜೊತೆಗೆ ಇನ್ನೂ ಕೆಲವು ಸಮಾಚಾರ ಪತ್ರಿಕೆಗಳ ಸರಬರಾಜಿಗೆ ಅನುಮತಿ ಸಿಕ್ಕಿತು. ದಹ್ಯಾಭಾಯ್ ಕಳುಹಿಸಿದ ಒಂದು ಕಂಬಳಿ, ನಾಲ್ಕು ಕುರ್ತಾಗಳು ಮತ್ತು ಒಂದು ಜೊತೆ ಶಾಲುಗಳು ಪಟೇಲರನ್ನು ತಲುಪಿದುವು.

ಅಲ್ಲಿಯ ಸೆರೆವಾಸಿಗಳ ಪೈಕಿ ನೆಹರು, ಆಜ಼ಾದ್, ಪಟ್ಟಾಭಿ, ಕೃಪಲಾನಿ ಮತ್ತು ನರೇಂದ್ರ ದೇವ್ ಬರಹಗಾರರಾಗಿದ್ದರು. ನೆಹರು ತಮ್ಮ 'ಡಿಸ್ಕವರಿ ಆಫ್ ಇಂಡಿಯ' ಬರೆದದ್ದು ಅಲ್ಲಿಯೆ. ಪಟೇಲರು ಬರೆಯುತ್ತಿರಲಿಲ್ಲ. ಆದರೆ ಓದುತ್ತಿದ್ದರು. ಅವರೊಬ್ಬ ನಿರಂತರ ಓದುಗ, ಜ್ಞಾನದಾಹದ ಓದುಗ. ಅವರು ಸದಾ ಓದುತ್ತಿದ್ದರು' ಎಂದು ಕೃಪಲಾನಿ ಬರೆದಿದ್ದಾರೆ. 'ಅವರು ಒಂದಾದ ಮೇಲೆ ಒಂದರಂತೆ ಪುಸ್ತಕಗಳನ್ನು ಓದಿ ಮುಗಿಸುತ್ತಿದ್ದರು. ಅವರಿಗೆ ಪುಸ್ತಕಗಳನ್ನು ಒದಗಿಸುವುದು ಕಷ್ಟವಾಗಿತ್ತು' ಎಂದು ಮೆಹ್ತಾಬ್ ಬರೆದಿದ್ದಾರೆ.

ಪಟೇಲರು ಬೆಳಗಿನ ನಸುಕಿನಲ್ಲಿ ಮತ್ತೆ ಸಂಜೆಯ ವೇಳೆ ಕೋಟೆಯ ಆವರಣದಲ್ಲಿ ವೇಗವಾಗಿ ನಡೆಯುತ್ತಿದ್ದರು. ಪ್ರತಿದಿನ ಸುಮಾರು ನಾಲ್ಕು ಮೈಲಿಗಳಷ್ಟು ನಡೆಯುತ್ತಿದ್ದರು. ಹೂವಿನ ಗಿಡಗಳನ್ನು ಬೆಳೆಯುವುದು, ಚರಕದಲ್ಲಿ ನೂಲು ತೆಗೆಯುವುದು ಮತ್ತು 'ಬ್ರಿಜ್ – ಇಸ್ಪೇಟ್ ಆಟ' ಆಡುವುದು ಅವರ ಇತರ ಹವ್ಯಾಸಗಳಾಗಿದ್ದುವು. ಅವರು ತಮ್ಮ ವರಾಂಡದ ಮುಂಭಾಗದಲ್ಲಿ ನೀಲಿ ಬಣ್ಣದ ಹೂವುಗಳನ್ನು ಬಿಡುವ ಒಂದು ಬಳ್ಳಿಯನ್ನು ಬೆಳೆಸಿದ್ದರು. ಅದು ಕಮಾನಿನಂತೆ ಬೆಳೆದಿತ್ತು. ಅದರ ಎರಡು ತುದಿಗಳಲ್ಲಿ ನೆಲದ ಮೇಲೆ ಸುಂದರವಾದ ಗುಲಾಬಿ ಹೂಗಳು ಅರಳಿರುವ ಎರಡು ಕುಂಡಗಳಿದ್ದುವು. ಆ ಸುಂದರ ಬಳ್ಳಿ ಮತ್ತು ಹೂವುಗಳ ಬಗೆಗೆ ಪಟೇಲರಿಗೆ ಬಹಳ ಹೆಮ್ಮೆ ಇತ್ತು. ಅದನ್ನು ಅವರು 'ಶಕುಂತಲೆಯ ಲತಾ ಕುಂಜ' ಎಂದು ಕರೆಯುತ್ತಿದ್ದರು.

ಜವಹರಲಾಲ್ ನೆಹರು ಸಹ ಒಣ ಆವರಣವನ್ನು ಹಸುರಾಗಿಸಿದರು. ಅವರ ಈ ಕಾರ್ಯದಲ್ಲಿ ಪಟೇಲರೂ ಸಹಾಯ ಮಾಡುತ್ತಿದ್ದರು. ಪಟೇಲರು

ನೂಲು ತೆಗೆಯುವ ಕಾರ್ಯವನ್ನು ಆಗಾಗ್ಗೆ ಮಾಡುತ್ತಿದ್ದರೇ ಹೊರತು ನಿತ್ಯವೂ ಮಾಡುತ್ತಿರಲಿಲ್ಲ. ಆದರೆ ಅವರು ಬ್ರಿಜ್ ಆಟದಲ್ಲಿ ಬಹಳ ನಿಪುಣರಾಗಿದ್ದರು ಮತ್ತು ಎಲ್ಲರನ್ನೂ ಮೀರಿಸುತ್ತಿದ್ದರು. ಆ ಆಟವನ್ನು ಮಧ್ಯಾಹ್ನದ ಊಟದ ನಂತರ ಆಡುತ್ತಿದ್ದರು.

೧೯೪೩ರ ಮೇ ತಿಂಗಳ ಅಂತ್ಯಭಾಗದಲ್ಲಿ ಒಂದು ದಿನ ಪಟೇಲರು 'ಸೂಪ್' ಕುಡಿದ ನಂತರ ಜ್ಞಾನತಪ್ಪಿ ಬಿದ್ದರು. ಜ್ಞಾನ ಬಂದಮೇಲೂ ಬಹಳ ನೋವಿನಿಂದ ಸಂಕಟಪಡುತ್ತಿದ್ದರು. ಅವರ ಸಣ್ಣ ಕರುಳಿನ ಬಾಧೆ ಉದ್ರೇಕಗೊಂಡಿತ್ತು. ದಹ್ಯಭಾಯ್ ಮತ್ತು ಮಣಿಬೆನ್‌ರವರನ್ನು ಕರೆಸುವಂತೆ ಆಜ್ಞಾದರು ಸಲಹೆ ನೀಡಿದರು. ಅವರನ್ನು ಕರೆಸಬೇಕಾದರೆ ಸರ್ಕಾರವನ್ನು ಕೋರಬೇಕು. ಅದರಿಂದ ಆ ಸಲಹೆಯನ್ನು ಸರ್ದಾರರು ಸ್ವಲ್ಪವೂ ಆಲೋಚಿಸದೆ ತಳ್ಳಿಹಾಕಿದರು. ಅವರಿಗೆ ಪ್ರಾಣಾಪಾಯ ವಿರಲಿಲ್ಲ. ಆದರೆ ನೋವನ್ನು ಬಹಳ ದಿನಗಳ ಕಾಲ ಅನುಭವಿಸಬೇಕಾಯಿತು. ಅವರ ಈ ತೊಂದರೆ ಪೂರ್ಣವಾಗಿ ಹೋಗಲಿಲ್ಲ. ಮೂರು ತಿಂಗಳಿಗೊಮ್ಮೆ ಆ ನೋವು ಮರುಕಳಿಸುತ್ತಿತ್ತು. ಸರ್ದಾರರು ಅದರೊಡನೆ ಬದುಕುವುದನ್ನು ಅಭ್ಯಾಸ ಮಾಡಿಕೊಂಡರು.

೧೯೪೩ರ ಜುಲೈ ೧ರಂದು ಅವರು ತಮ್ಮ ಸೊಸೆಗೆ ಬರೆದ ಪತ್ರದಲ್ಲಿ ಹೀಗೆ ಹೇಳಿದರು:

> ಕಾಯಿಲೆಯ ಬಗೆಗೆ ನಾನು ಬರೆಯಲಿಲ್ಲ. ಏಕೆಂದರೆ ಅದರ ಬಗೆಗೆ ನೀವು ಏನು ಮಾಡುವುದಕ್ಕೂ ಆಗದೆ ಸುಮ್ಮನೆ ಚಿಂತಿಸುವುದು ಬೇಡ ಎಂದು.
>
> ದೇವರು ಬಯಸುವವರೆಗೆ ದೇಹ ಇರುತ್ತದೆ. ಕರೆ ಬಂದರೆ ನಾನು ಪೂರ್ಣ ಸಿದ್ಧವಾಗಿದ್ದೇನೆ. ತನ್ನ ಕೆಲಸ ಮುಗಿದಿದೆ ಅಥವಾ ಇಲ್ಲ ಎನ್ನುವುದನ್ನು ಯಾರು ಹೇಳಲು ಸಾಧ್ಯ? ಬಹುಮಟ್ಟಿಗೆ ನನಗೀಗ ೭೮ ವರ್ಷ. ನನಗೆ ಏನು ಸಾಧ್ಯವಿತ್ತೋ ಅದನ್ನು ಮಾಡಿದ್ದೇನೆ. ಯಾವುದನ್ನು ನಾನು ನನ್ನ ಧರ್ಮ ಎಂದು ಒಪ್ಪಿದ್ದೆನೊ ಅದನ್ನು ಮಾಡುತ್ತಿರುವಾಗ ಬಿಡುಗಡೆ ಪಡೆಯುವುದಕ್ಕಿಂತ ಉತ್ತಮವಾದುದು ಬೇರೆ ಏನಿರಲು ಸಾಧ್ಯ?[೧೮೩]

ಸೆಪ್ಟೆಂಬರ್‌ನಲ್ಲಿ ಪಟೇಲರು ಮಗಳಿಗೆ ಹೀಗೆ ಬರೆದರು:

ನನ್ನನ್ನು ಯಾವಾಗ ನೋಡುತ್ತೇನೋ ಅಥವಾ

ನೋಡುವುದೇ ಇಲ್ಲವೊ ಎಂದು ಚಿಂತಿಸುತ್ತಿರಬೇಡ..... ಒಂದು ಎಲೆ ಹಣ್ಣಾದಾಗ, ಬೀಳುತ್ತದೆ. ನಾನು ಅದೇ ರೀತಿಯಲ್ಲಿ ಹೋಗುತ್ತೇನೆ. ನನ್ನ ನಿರ್ಗಮನದಿಂದ ನೀನು ಸ್ವಲ್ಪವೂ ಖೇದಗೊಳ್ಳಬಾರದು. ಅದು ಈಗ ಆಗುವುದೆಂದಲ್ಲಾ.....

ಪಟೇಲರು ೧೯೪೩ರ ಆಗಸ್ಟ್ ೨೭ರಂದು ಸೆರೆಮನೆಯಲ್ಲಿದ್ದ ಮಗ ದಹ್ಯಾಭಾಯ್‌ಗೆ ಈ ರೀತಿ ಬರೆದರು:

ಸೆರೆಮನೆ ವಾಸವು ನಿನ್ನ ಒಳನೋಟದ ಬೆಳವಣಿಗೆಗೆ ಒಳ್ಳೆಯ ಅವಕಾಶವನ್ನು ನೀಡುತ್ತದೆ. ಸೆರೆಮನೆಯ ಒಂಟಿತನವು ಒಬ್ಬ ವ್ಯಕ್ತಿಯ ಹೊರಗೆ ಬದಲಾವಣೆ ಸಾಧ್ಯವಿಲ್ಲದಂತಹ ಸ್ವಭಾವದ ಬದಲಾವಣೆಗೆ ಪ್ರೋತ್ಸಾಹ ನೀಡುತ್ತದೆ. ಈ ಕಷ್ಟದ ಕಾಲದಲ್ಲಿ ಹೊರಗಿರುವ ಜನರು ಮಿತಿಯಿಲ್ಲದ ದುಃಖಗಳನ್ನು ಸಹಿಸುತ್ತಿದ್ದಾರೆ. ಅಂತಹ ನೋವುಗಳಿಗೆ ನಾವು ಒಳಗಾಗದಿರುವುದು ದೇವರ ದಯೆ.[೧೮೪]

೧೯೪೩ರ ನವೆಂಬರ್‌ನಲ್ಲಿ ಆಜ಼ಾದರು ಒಂದು ಪ್ರಸ್ತಾವನೆ ನೀಡಿದರು. ಜಪಾನ್‌ನ ಪೀಡೆ ಮತ್ತು ಬಂಗಾಳದ ಭಯಂಕರ ಕ್ಷಾಮದ ಬಗೆಗೆ ಪತ್ರಿಕೆಗಳಲ್ಲಿ ಓದಿರುವುದನ್ನು ನಮೂದಿಸಿ ಶಾಸನಭಂಗ ಚಳವಳಿಯನ್ನು ಹಿಂತೆಗೆದುಕೊಳ್ಳುವ ಸಂದೇಶವನ್ನು ಕಾರ್ಯಕಾರಿ ಸಮಿತಿಯು ವೈಸ್‌ರಾಯ್‌ಗೆ ಕಳುಹಿಸಬೇಕು – ಎನ್ನುವುದು ಆ ಪ್ರಸ್ತಾವನೆ. ನೆಹರುಗೆ ಅದು ಒಪ್ಪಿಗೆ ಆದಂತೆ ಕಾಣುತ್ತದೆ, ಏಕೆಂದರೆ ಅವರು ಅದನ್ನು ಪಟೇಲರಿಗೆ ತಿಳಿಸಿದರು, ಆದರೆ ಪಟೇಲರು ಅದನ್ನು ನಿರಾಕರಿಸಿದರು. ಆನಂತರ ಅವರು ಪಂತರ ಕೊಠಡಿಯಲ್ಲಿ ನೆಹರು, ಆಜ಼ಾದ್ ಮತ್ತು ಇತರರಿಗೆ, "ಇದು ಅಪಾಯಕಾರಿ. ನಾವು ಆತುರದಲ್ಲಿ ಏನನ್ನೂ ಮಾಡುವುದು ಬೇಡ. ಬಾಪು ಏನಾದರು ಕ್ರಮಗಳನ್ನು ಖಂಡಿತ ತೆಗೆದುಕೊಳ್ಳುತ್ತಾರೆ. ಅವರು ತೆಪ್ಪಗೆ ಮತ್ತು ಮೌನವಾಗಿ ಇರಲು ಸಾಧ್ಯವಿಲ್ಲ. ನಾವು ಕಾಯಬೇಕು" ಎಂದರು. ಆಜ಼ಾದರು, "ಗಾಂಧೀಜಿ ಒಪ್ಪುವುದರಲ್ಲಿ ನನಗೆ ಖಚಿತವಿದೆ" ಎಂದು ಉತ್ತರಿಸಿದರು. ಆದರೆ ಘೋಷ್ ಮತ್ತು ದಿಯೋರವರು ಆಜ಼ಾದರ ಪ್ರಸ್ತಾವನೆಯನ್ನು ಬಲವಾಗಿ ತಿರಸ್ಕರಿಸಿದರು. ಶಂಕರ್‌ರಾವ್ ದಿಯೋರವರು ಆಜ಼ಾದರಿಗೆ, "ನಿಮ್ಮ ಅಭಿಪ್ರಾಯವನ್ನು ನಿಮ್ಮ ತಲೆಯಿಂದ ಬುಡಸಮೇತ ಕಿತ್ತು ಹಾಕಿ" ಎಂದರು. ವಿಜ್ಞಾನಿ ಘೋಷ್, "ನಾನು ಅಂತಹ ಯಾವುದೇ ಅಪಮಾನಕಾರಕ ಕಾರ್ಯಕ್ರಮಕ್ಕೆ ಒಪ್ಪುವುದಕ್ಕೆ ಬದಲಾಗಿ ಪೊಟಾಸಿಯಂ ಸಯ್‌ನೈಡನ್ನು ತೆಗೆದುಕೊಳ್ಳುತ್ತೇನೆ ಮತ್ತು

ನೀವೂ ಕೂಡ ಹಾಗೆ ಮಾಡಿ ಎಂದು ಹೇಳುತ್ತೇನೆ," ಎಂದರು. ಚರ್ಚೆಯು ಇದೇ ರೀತಿ ೫ ದಿನಗಳ ಕಾಲ ನಡೆಯಿತು. ಎಲ್ಲರ ಮನಸ್ಸಲ್ಲೂ ಅಸಮಧಾನವನ್ನು ತುಂಬಿತು. ಪಟೇಲರು ಕೋಪಗೊಂಡರೂ ಶಾಂತವಾಗಿಯೇ ಇದ್ದರು. ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಗಾಂಧೀಜಿಯ ಬೆನ್ನ ಹಿಂದೆ ಸರ್ಕಾರಕ್ಕೆ ಮಣಿಯುವುದು ಪಟೇಲರಿಗೆ ಒಪ್ಪಿಗೆ ಇರಲಿಲ್ಲ. ಆಜ಼ಾದರ ಸಲಹೆ ತಣ್ಣಗಾಯಿತು.[೧೮೫]

ಗಾಂಧೀಜಿಯವರ ದಸ್ತಗಿರಿಯಾದ ಮಾರನೆಯ ದಿನ ಅವರ ಪತ್ನಿ ಕಸ್ತೂರ್ ಬಾ ಮತ್ತು ಪಟೇಲರ ಮಗಳು ಮಣಿಬೆನ್, ಸರ್ಕಾರಿ ಆಜ್ಞೆಯನ್ನು ಮೀರಿ ಸಭೆ ನಡೆಸಲು ಪ್ರಯತ್ನಿಸಿದ್ದಕ್ಕಾಗಿ ದಸ್ತಗಿರಿಯಾಗಿದ್ದರು. ಅವರಿಬ್ಬರನ್ನೂ ಪೊಲೀಸರು ಅಗಾಖಾನ್‌ರವರ ಅರಮನೆಯಲ್ಲಿ ಗಾಂಧೀಜಿಯೊಡನೆ ಸೆರೆಯಲ್ಲಿ ಇಟ್ಟಿದ್ದರು. ಕಸ್ತೂರ್ ಬಾರವರು ೧೯೪೪ರ ಫ಼ೆಬ್ರುವರಿ ೨೨ರಂದು ಆ ಸೆರೆಮನೆಯಲ್ಲಿ ಗತಿಸಿದರು. ಏಪ್ರಿಲ್ – ಮೇ ತಿಂಗಳಲ್ಲಿ ಗಾಂಧೀಜಿ ಮಲೇರಿಯ ಮತ್ತು ಆಮಶಂಕೆಯಿಂದ ತೀರ ಅಸ್ವಸ್ಥರಾದರು. ಅವರನ್ನು ಸರ್ಕಾರವು ಮೇ ೬, ೧೯೪೪ರಂದು ಇದ್ದಕ್ಕಿದ್ದ ಹಾಗೆ ಬಿಡುಗಡೆ ಮಾಡಿತು. ಗಾಂಧೀಜಿಯವರು ಸೆರೆಮನೆಯಲ್ಲಿ ಸಾಯುವುದು ಸರ್ಕಾರಕ್ಕೆ ಇಷ್ಟವಿರಲಿಲ್ಲವೆಂದು ಕಾಣುತ್ತದೆ. ಅವರು ಸಾಯಬಹುದು ಅನ್ನುವ ಹೆದರಿಕೆಯಿಂದ ಅವರನ್ನು ಸರ್ಕಾರ ಬಿಡುಗಡೆ ಮಾಡಿರಬಹುದು. ಆದರೆ, ಸರ್ಕಾರ ನಿರೀಕ್ಷಿಸಿದಂತೆ ಅಥವಾ ಚರ್ಚಿಲ್ ಬಯಸಿದಂತೆ, ಗಾಂಧೀಜಿ ಸಾಯಲಿಲ್ಲ. ಪೂನಾ, ಜುಹು ಮತ್ತು ಪಂಚಗಣಿ ಗಿರಿಧಾಮದಲ್ಲಿ ವಿಶ್ರಾಂತಿ ಪಡೆದು ತಮ್ಮ ಆರೋಗ್ಯವನ್ನು ಸುಧಾರಿಸಿಕೊಂಡರು. ಪಟೇಲರಿಗೆ ಅದರಿಂದ ಸಂತಸವಾಯಿತು. ಆದರೆ ಬ್ರಿಟನ್ ಪ್ರಧಾನಿ ಚರ್ಚಿಲ್‌ಗೆ ನಿರಾಸೆಯಾಯಿತೆಂದು ಕಾಣುತ್ತದೆ. ಅವನು, ಗಾಂಧೀಜಿ ಬಿಡುಗಡೆಯಾದ ಎಂಟು ವಾರಗಳ ನಂತರ, 'ಗಾಂಧಿ ಏಕೆ ಇನ್ನೂ ಸತ್ತಿಲ್ಲ?' ಎಂದು ವೈಸ್‌ರಾಯ್ ವೇವೆಲ್‌ಗೆ ಟೆಲಿಗ್ರಾಂ ಕಳುಹಿಸಿದನು.[೧೮೬] ಆ ವೇಳೆಗೆ ವೈಸ್‌ರಾಯ್ ಲಿನ್‌ಲಿತ್‌ಗೋನ ಅಧಿಕಾರಾವಧಿ ಮುಗಿದು ಲಾರ್ಡ್ ವೇವೆಲ್ ೧೯೪೩ರ ಅಕ್ಟೋಬರ್‌ನಲ್ಲಿ ವೈಸ್‌ರಾಯ್‌ಆಗಿ ಅಧಿಕಾರ ವಹಿಸಿಕೊಂಡಿದ್ದನು.

ಗಾಂಧೀಜಿಯ ಬಿಡುಗಡೆ ಪಟೇಲರಿಗೆ ಸಂತಸವನ್ನು ಉಂಟು ಮಾಡಿದರೂ, ಬಿಡುಗಡೆಯಾದ ಗಾಂಧೀಜಿ ಕೈಗೊಂಡ ಒಂದು ಕ್ರಮ ಅವರಿಗೆ ಒಪ್ಪಿಗೆ ಆಗಲಿಲ್ಲ: ದೇಶ ವಿಭಜನೆಯನ್ನು ತಡೆಯಲು ಮುಸ್ಲಿಂ ಲೀಗ್ ಒಡನೆ ಒಂದು ಒಪ್ಪಂದಕ್ಕೆ ಬರುವ ಉದ್ದೇಶದಿಂದ ಗಾಂಧೀಜಿಯವರು ಬೊಂಬಾಯಿಯಲ್ಲಿ ಜಿನ್ನಾ ಮನೆಗೆ ೧೪ ಬಾರಿ ಹೋಗಿ ಮಾತುಕತೆ ನಡೆಸಿದರು. ಆದರೆ ಅದು ವಿಫಲವಾಯಿತು.

* * * *

ಸೆರೆಮನೆಯಲ್ಲಿ ಪತ್ರಗಳನ್ನು ಬರೆಯಲು ಅವಕಾಶ ದೊರೆತ ಮೇಲೆ ಪಟೇಲರು ತಮ್ಮ ಮಕ್ಕಳಿಗೆ ಆಗಾಗ್ಗೆ ಪತ್ರ ಬರೆಯುತ್ತಿದ್ದರು. ಮಕ್ಕಳು ಸಹ ಅವರಿಗೆ ಪತ್ರಗಳನ್ನು ಬರೆಯುತ್ತಿದ್ದರು. ಆದರೆ ಅವುಗಳ ವಿಲೇವಾರಿ ತಡವಾಗುತ್ತಿತ್ತು. ಗುಜರಾತಿ ಭಾಷೆಯಲ್ಲಿ ಬರೆದ ಪತ್ರಗಳು ಬಹಳ ತಡವಾಗಿ ತಲುಪುತ್ತಿದ್ದುವು. ಅನೇಕ ವೇಳೆ ಪತ್ರಗಳ ಬಹು ಭಾಗವನ್ನು ಪೊಲೀಸರು ಕಪ್ಪುಗೆರೆ ಎಳೆದು ಓದಲಾಗದಂತೆ ಮಾಡಿರುತ್ತಿದ್ದರು. ಅದರಿಂದ ಸರ್ದಾರರಿಗೆ ಬೇಸರವಾಗುತ್ತಿತ್ತು.

ಪಟೇಲರ ಮಗ ದಹ್ಯಾಭಾಯ್, ಬೊಂಬಾಯಿಯ ಆರ್ಥರ್ ರಸ್ತೆಯ ಸೆರೆಮನೆ, ಯರವಾಡ ಸೆರೆಮನೆ ಮತ್ತು ನಾಸಿಕ್ ಸೆರೆಮನೆಗಳಲ್ಲಿ ಒಟ್ಟು ೧೫ ತಿಂಗಳ ಸೆರೆವಾಸದ ನಂತರ ಮಾರ್ಚ್ ೧೯ಳಳರಲ್ಲಿ ಬಿಡುಗಡೆ ಮಾಡಲ್ಪಟ್ಟನು. ಅದೇ ಸಮಯದಲ್ಲಿ ಮಣಿಬೆನ್ ಸಹ ಬಿಡುಗಡೆಯಾದಳು. ಆದರೆ ೬ ವಾರಗಳ ನಂತರ ಮತ್ತೆ ಬಾರ್ಡೋಲಿಯಲ್ಲಿ ದಸ್ತಗಿರಿಯಾಗಿ ಸೂರತ್ ಸೆರೆಮನೆಯಲ್ಲಿ ಇಡಲ್ಪಟ್ಟಳು. ಸೂರತ್ ಸೆರೆಮನೆಯು ಕೊಳಕು ಮತ್ತು ಸೊಳ್ಳೆಗಳಿಗೆ ಪ್ರಸಿದ್ಧಿಯಾಗಿತ್ತು. ಅದರಿಂದ ಮಗಳು ಸೂರತ್ ಸೆರೆಮನೆಯಲ್ಲಿರುವ ಸುದ್ದಿ ತಿಳಿದಾಗ ಪಟೇಲರಿಗೆ ಬಹಳ ಸಂಕಟವಾಯಿತು. ಆದರೆ ಅವರು ಏನೂ ಮಾಡುವ ಹಾಗಿರಲಿಲ್ಲ. ಅವರು ಮಗಳಿಗೆ ಪತ್ರ ಬರೆದು, "ಏನು ಬರುತ್ತದೊ, ಯಾವಾಗ ಬರುತ್ತದೊ ಅದರಲ್ಲಿ ಸಂತೋಷವನ್ನು ಕಾಣುವಂತೆ" ಬುದ್ಧಿ ಹೇಳಿದರು. ಮಗ ದಹ್ಯಾಭಾಯ್‌ಗೆ ಬರೆದ ಒಂದು ಪತ್ರದಲ್ಲಿ ಮಗಳ ದುರಾದೃಷ್ಟವನ್ನು ಪ್ರಸ್ತಾಪಿಸಿ ಹೀಗೆ ಬರೆದರು:

> ತೆರೆದ ಮನಸ್ಸಿನಿಂದ ನಿನ್ನೊಡನೆ ಮಾತನಾಡಲು ಅವಳಿಗೆ ಭಯ. ನೀನು ಅವಳೊಡನೆ ಖಾರವಾಗಿರುತ್ತೀಯೆಂದು ಅವಳಿಗೆ ಹೆದರಿಕೆ.....ಈ ಜಗತ್ತಿನ ಎಲ್ಲಾ ಸಂತಸ ಮತ್ತು ಆನಂದಗಳನ್ನು ಪರಿತ್ಯಜಿಸಿ ಮತ್ತು ಬಿಳಿಯ ಖಾದಿಯನ್ನು ಮಾತ್ರ ಧರಿಸಿ..... ಅವಳೆಂದೂ ಬಣ್ಣದ ಉಡುಪನ್ನು ತೊಟ್ಟಿಲ್ಲ! ಅವಳ ಹಾಗೆ ವಿರಕ್ತಳಾದ ಹೆಂಗಸು ಅಪರೂಪ!..... ಭಾನುಮತಿಯ ವಿರುದ್ಧ ಅವಳ ಮನಸ್ಸಿನಲ್ಲಿ ಯಾವ ವಿಧದ ಅಸೂಯೆಯೂ ಇಲ್ಲ. ಅವರಿಬ್ಬರು ಪರಸ್ಪರ ಪ್ರೀತಿಸಲು ಕಲಿಯುತ್ತಾರೆ.

ಸೂರತ್ ಸೆರೆಮನೆಯಲ್ಲಿ ಸ್ವಲ್ಪ ಕಾಲ ಕಷ್ಟವನ್ನು ಅನುಭವಿಸಿದ ಮೇಲೆ, ಮಣಿಬೆನ್ ಯರವಾಡ ಸೆರೆಮನೆಗೆ ವರ್ಗಾಯಿಸಲ್ಪಟ್ಟಳು. ಅವಳು ಅಲ್ಲಿದ್ದಾಗ ಅವಳಿಗೊಂದು ಪತ್ರವನ್ನು ಪಟೇಲರು ೧೩.೧೨.ಳಳರಂದು ಬರೆದರು:

> ಈ ಪ್ರಪಂಚದಲ್ಲಿ ನನ್ನ ಕಾಲ ಮುಗಿಯುತ್ತಾ ಬರುತ್ತಿದೆ

ಎನ್ನುವ ಆಲೋಚನೆ ನನ್ನ ಮನಸ್ಸಿಗೆ ಮತ್ತೆ ಮತ್ತೆ ಬರುತ್ತಿದೆ. ಎಷ್ಟು ಕಾಲ ನೀನು ನನ್ನೊಡನೆ ಇರಲು ಸಾಧ್ಯ? ಭವಿಷ್ಯತ್ತಿನ ಬಗೆಗೆ ಆಲೋಚಿಸಿ, ನಿನ್ನ ಆಯ್ಕೆಯ ಕ್ಷೇತ್ರದಲ್ಲಿ ನೀನು ನೆಲೆಯಾಗಿ ನಿಲ್ಲಬೇಡವೆ? ಹಾಗೆ ಮಾಡಿದರೆ, ನಾನು ಹೋದಾಗ ನೀನು ಇದ್ದಕ್ಕಿದ್ದ ಹಾಗೆ ಕಷ್ಟಗಳನ್ನು ಎದುರಿಸಬೇಕಾಗುವುದಿಲ್ಲ.

ವಾರ್ಧಾಕ್ಕೇನೋ ನೀನು ಸ್ವಲ್ಪ ಕಾಲ ಹೋಗಬಹುದು, ಆದರೆ ಶಾಶ್ವತವಾಗಿ ಅಲ್ಲೇ ಇರಲು ಸಾಧ್ಯವಿಲ್ಲ. ಬಾಪು ಎಷ್ಟು ಕಾಲ ಇರಬಹುದು ಎಂಬುದನ್ನು ಯಾರು ಹೇಳಲು ಸಾಧ್ಯ?[೧೪೭]

(ಬಹುಶಃ ಅವಿವಾಹಿತಳಾಗಿ ಉಳಿದ ಮಗಳ ಮುಂದಿನ ಗತಿ ಏನು ಎಂಬ ಚಿಂತೆ ಪಟೇಲರಿಗೆ ಬಂದಿರಬೇಕು. ಸೆರೆಮನೆಯ ಹೊರಗಿದ್ದಾಗ ದಿನದ ೨೪ ಘಂಟೆ ಮತ್ತು ವರ್ಷದ ೩೬೫ ದಿನಗಳೂ ರಾಷ್ಟ್ರ ಚಟುವಟಿಕೆಗಳಲ್ಲಿ ಸದಾ ಮುಳುಗಿರುತ್ತಿದ್ದ ಪಟೇಲರಿಗೆ ಮಗಳ ಮದುವೆಯ ಬಗೆಗಾಗಲಿ ಅಥವಾ ಅವಳ ಜೀವನದ ಬಗೆಗಾಗಲಿ ಯೋಚಿಸಲು ಕಾಲ ದೊರಕಿರಲಿಲ್ಲ! ಅವರ ತಾಯಿ ಮಣಿಯ ವಿವಾಹದ ಬಗೆಗೆ ಪ್ರಸ್ತಾಪಿಸಿದರೂ ಆಗ ಹಾರಿಕೆಯ ಉತ್ತರ ಕೊಟ್ಟಿದ್ದರು ಪಟೇಲರು. ಆದರೆ ಈಗ ನಾಲ್ಕು ಗೋಡೆಗಳ ನಡುವೆ ಯಾವ ಚಟುವಟಿಕೆಯೂ ಇಲ್ಲದ್ದರಿಂದ, ಸದಾ ವಿರಾಮವೇ ಇದ್ದುದರಿಂದ, ತಮಗೆ ವಯಸ್ಸು ೭೦ ಸಮೀಪಿಸಿ ಆರೋಗ್ಯ ಹದಗೆಟ್ಟಿದ್ದರಿಂದ ಪಟೇಲರಿಗೆ ಮಗಳ ಬಗೆಗೆ ಚಿಂತೆ ಆವರಿಸಿರಬೇಕು – ಲೇಖಕ)

ಅಕ್ಟೋಬರ್ ೧೯ಳಳರಲ್ಲಿ ೨೬ ತಿಂಗಳ ಸೆರೆವಾಸದ ನಂತರ ಅವರ ಸಂಬಂಧಿಕರು ಭೇಟಿ ಮಾಡಲು ಅನುಮತಿ ಕೊಡುವುದಾಗಿ ಸರ್ಕಾರವು ತಿಳಿಸಿತು. ಅದನ್ನು ಪಟೇಲರು 'ಮಹಾ ಅನುಗ್ರಹ' ಎಂದು ಕರೆದರು ಮತ್ತು ಅದನ್ನು ಪ್ರತಿಯೊಬ್ಬರೂ ತಿರಸ್ಕರಿಸಿದರು. ಅನುಮತಿ ಕೋರಿ ಅರ್ಜಿ ಸಲ್ಲಿಸಬಾರದೆಂದು ಪಟೇಲರು ಮಗನಿಗೂ ಸೂಚಿಸಿದರು.

* * * *

೧೯ಳಳರ ನವೆಂಬರ್‌ನಲ್ಲಿ ಪಟೇಲ್ ಮತ್ತು ಇತರರಿಗೆ ಅಸಮಧಾನ ಮತ್ತು ಆಕ್ರೋಶವನ್ನು ಉಂಟುಮಾಡುವಂತಹ ಒಂದು ಬೆಳವಣಿಗೆ ಸೆರೆಮನೆಯ ಹೊರಗೆ ನಡೆಯಿತು. ಬೂಲಾಭಾಯ್ ದೇಸಾಯಿ ಕೇಂದ್ರ ಶಾಸನ ಸಭೆಯಲ್ಲಿ ಕಾಂಗ್ರೆಸ್ ನಾಯಕರಾಗಿದ್ದರು. ಅವರು ಕೇಂದ್ರದಲ್ಲಿ ಕಾಂಗ್ರೆಸ್ – ಲೀಗ್ ಸರ್ಕಾರ

ವನ್ನು ರಚಿಸಲು ಪ್ರಯತ್ನ ಆರಂಭಿಸಿ ವೇವೆಲ್ ಮತ್ತು ಗಾಂಧೀಜಿಯನ್ನು ಭೇಟಿ ಮಾಡಲು ಆರಂಭಿಸಿದ್ದರು. ಆ ಸುದ್ದಿಯನ್ನು ಪತ್ರಿಕೆಗಳಲ್ಲಿ ಓದಿದ ಪಟೇಲರಿಗೆ ಆತಂಕ ಉಂಟಾಯಿತು. ಬೂಲಾಭಾಯ್‌ರವರು ಜೂನ್ ೧೯೪೨ರಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯತ್ವಕ್ಕೆ ರಾಜಿನಾಮೆ ನೀಡಿ, 'ಭಾರತ ಬಿಟ್ಟು ತೊಲಗಿ'ಯ ತೀರ್ಮಾನದಿಂದ ದೂರ ಉಳಿದಿದ್ದರು. ಅದರಿಂದ ಪಟೇಲರಿಗೆ ಅವರ ಮೇಲೆ ವಿಶ್ವಾಸವಿರಲಿಲ್ಲ. ನೆಹರುಗೂ ಅವರಲ್ಲಿ ವಿಶ್ವಾಸವಿರಲಿಲ್ಲ. ಅವರು ತಮ್ಮ ದಿನಚರಿಯಲ್ಲಿ ಹೀಗೆ ಬರೆದಿದ್ದಾರೆ:

> ಬೂಲಾಭಾಯ್‌ರವರು ವೈಸ್‌ರಾಯನ್ನು ಮತ್ತೆ ಮತ್ತೆ ಭೇಟಿ ಮಾಡುತ್ತಿರುವುದು ನಮಗೆಲ್ಲ ಆತಂಕ ಉಂಟುಮಾಡಿದೆ. ಅವರು ಒಂದು ಕುಯುಕ್ತಿಯ ಯೋಜನೆಯನ್ನು ಇತ್ಯರ್ಥ ಪಡಿಸುವುದಕ್ಕೆ ಏನೋ ಪ್ರಸ್ತಾವನೆಯನ್ನು ಹೂಡುತ್ತಿದ್ದಾರೆ..... ಬೂಲಾಭಾಯ್ ಕಡೆಯಿಂದ ಏನೇ ಬಂದರೂ– ಇಂತಹುದು ಏನೇ ಬಂದರು ಅದು ಅನುಮಾನಾಸ್ಪದವಾದುದು.[೧೮೮]

ಬೂಲಾಭಾಯ್ ದೇಸಾಯಿಯು ತನ್ನ ಸ್ನೇಹಿತ ಹಾಗೂ ಕೇಂದ್ರ ಶಾಸನ ಸಭೆಯಲ್ಲಿ ಮುಸ್ಲಿಂ ಲೀಗ್‌ನ ಉಪನಾಯಕ ಲಿಯಾಖತ್ ಅಲಿಖಾನ್ ಜೊತೆ ಮಾತನಾಡಿ ಜನವರಿ ೧೧, ೧೯೪೫ರಂದು ಒಂದು ಕರಡು ಒಪ್ಪಂದಕ್ಕೆ ಇಬ್ಬರೂ ಚೋಟಾ ಸಹಿ ಹಾಕಿದರು. ಅವರಿಬ್ಬರ ಮಾತಿಗೆ ಗಾಂಧಿ ಅನುಮತಿ ನೀಡಿದ್ದರು ಮತ್ತು ಯಾವುದೇ ಒಪ್ಪಂದಕ್ಕೆ ಬಂದರೂ ಅದಕ್ಕೆ ಜಿನ್ನಾರವರ ಪೂರ್ವಾನುಮತಿಯನ್ನು ಪಡೆದುಕೊಂಡಿರಬೇಕು – ಎಂದು ಎಚ್ಚರಿಸಿದ್ದರು. ಬೂಲಾಭಾಯ್‌ರವರು ಲಿಯಾಖತ್ ಅಲಿ ಖಾನ್ ಒಡನೆ ಒಪ್ಪಂದ ಮಾಡಿಕೊಂಡ ವಿಷಯವನ್ನು ಗಾಂಧೀಜಿ ಮತ್ತು ವೇವೆಲ್‌ಗೆ ತಿಳಿಸಿದರು. ವೇವೆಲ್ ಅದನ್ನು ಇಂಗ್ಲೆಂಡಿನ ಸರ್ಕಾರಕ್ಕೆ ತಿಳಿಸಿದನು. ಪಾಕಿಸ್ತಾನದ ವಿಷಯವಾಗಿ ಭಿನ್ನಾಭಿಪ್ರಾಯವಿದ್ದರೂ ಸಹ, ಕಾಂಗ್ರೆಸ್ಸಿನಿಂದ ಐವರು ಮಂತ್ರಿಗಳು, ಲೀಗ್‌ನಿಂದ ಐವರು ಮಂತ್ರಿಗಳು ಮತ್ತು ಇತರ ಗುಂಪುಗಳನ್ನು ಪ್ರತಿನಿಧಿಸುವ ಇಬ್ಬರು ಮಂತ್ರಿಗಳು ಇರುವ ಒಂದು ಮಧ್ಯಂತರ ಸರ್ಕಾರವನ್ನು ಕೇಂದ್ರದಲ್ಲಿ ರಚಿಸಬೇಕು ಮತ್ತು ಆ ಸರ್ಕಾರವು ತನ್ನ ಪ್ರಥಮ ಕಾರ್ಯವಾಗಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರನ್ನು ಸೆರೆಮನೆಯಿಂದ ಬಿಡುಗಡೆ ಮಾಡಬೇಕು – ಎನ್ನುವುದು ಅವರಿಬ್ಬರ ನಡುವಣ ಒಪ್ಪಂದ. ಈ ವಿವರವನ್ನು ಆಗಲೆ ಪ್ರಕಟಿಸಲಿಲ್ಲ. ಅದು ಹೊರಕ್ಕೆ ಬಂದದ್ದು ಏಪ್ರಿಲ್‌ನಲ್ಲಿ.

ಸಮಾಚಾರ ಪತ್ರಿಕೆಗಳಿಂದ ವಿಷಯ ತಿಳಿದ ಪಟೇಲ್ ಮತ್ತು ಅವರ ಸಹ

ಖೈದಿಗಳು ಆಕ್ರೋಶಗೊಂಡರು. ತೆರೆಮರೆಯಲ್ಲಿ, ಕಾರ್ಯಕಾರಿ ಸಮಿತಿಯ ಗಮನಕ್ಕೆ ತರದೆ ಅಥವಾ ಅವರ ಒಪ್ಪಿಗೆ ಇಲ್ಲದೆ ಒಂದು ಒಪ್ಪಂದಕ್ಕೆ ಬರುವ ಸಾಧ್ಯತೆ ಅವರಿಗೆಲ್ಲ ಬಹಳ ಕೋಪವನ್ನುಂಟು ಮಾಡಿತು. ಜನವರಿ ೩ನೆ ವಾರದಲ್ಲಿ ಸರ್ಕಾರವು ಪ್ರಫುಲ್ಲ ಘೋಷ್‌ರವರನ್ನು ಅನಾರೋಗ್ಯದ ನಿಮಿತ್ತ ಬಿಡುಗಡೆ ಮಾಡಿತು. ಘೋಷ್‌ರವರು ನೇರವಾಗಿ ವಾರ್ಧಾಕ್ಕೆ ಹೋಗಿ ವಲ್ಲಭಭಾಯ್‌ರವರ ಭಾವನೆಗಳನ್ನು ಗಾಂಧೀಜಿಗೆ ಅರುಹಿದರು.

ಅಷ್ಟರಲ್ಲಿ ಎಲ್ಲವೂ ತಲೆಕೆಳಗಾಯಿತು. ಲಿಯಾಖತ್ ಅಲಿ ಖಾನ್ ತಮ್ಮ ಮತ್ತು ಬೂಲಾಭಾಯ್ ನಡುವೆ ಯಾವ ಒಪ್ಪಂದವೂ ಆಗಿಲ್ಲ – ಎಂದು ಸಾರ್ವಜನಿಕ ಸಭೆಯಲ್ಲಿ ಹೇಳಿದನು. ಅವರಿಬ್ಬರ ನಡುವೆ ಮಾತುಕತೆ ನಡೆದದ್ದು ನನಗೇನು ಗೊತ್ತಿಲ್ಲ – ಎಂದನು ಜಿನ್ನಾ. ಸಹಿ ಮಾಡಿದ ಕರಡು ತಮ್ಮ ಬಳಿ ಇದ್ದರೂ ಬೂಲಾಭಾಯ್ ಲಿಯಾಖತ್ ಖಾನ್‌ನ ಹೇಳಿಕೆಯನ್ನು ನಿರಾಕರಿಸಲಿಲ್ಲ. ಅದಕ್ಕೆ ಕಾರಣ ಅವರವರಿಗೆ ಮಾತ್ರ ಗೊತ್ತು.[೧೮೯] ಒಟ್ಟಿನಲ್ಲಿ ಪ್ರಸವಕ್ಕೆ ಮೊದಲೇ ಸತ್ತ ಮಗುವಾಯಿತು ಬೂಲಾಭಾಯ್ – ಖಾನ್ ಒಪ್ಪಂದ. ಆ ಒಪ್ಪಂದದಲ್ಲಿ ಲೀಗ್‌ಗೆ ಕಾಂಗ್ರೆಸ್ ಒಡನೆ ಸಮಾನ ಸ್ಥಾನ ಕೊಟ್ಟಿದ್ದದ್ದು ಬಹಳ ತಡವಾಗಿ ಏಪ್ರಿಲ್ ತಿಂಗಳಲ್ಲಿ ಹೊರಬಿದ್ದಿತು. ಅದು ಪಟೇಲ್ ಮತ್ತು ಇತರ ಸೆರೆವಾಸಿಗಳಿಗೆ ಭಾರಿ ಅಸಮಾಧಾನವನ್ನು ಉಂಟುಮಾಡಿತು.

ಸೆರೆವಾಸಿಗಳನ್ನು ವಿವಿಧ ಸೆರೆಮನೆಗಳಿಗೆ ವರ್ಗಾಯಿಸುತ್ತಾರೆಂಬ ವದಂತಿ ಮಾರ್ಚ್ ತಿಂಗಳ ಮೂರನೆ ವಾರದಲ್ಲಿ ಬಂದಿತು. ಅವರೆಲ್ಲರು ಚದುರಿ ಹೋಗುವ ಸಂಭವ ಉಂಟಾಯಿತು. ಅದರಿಂದ ಅವರೆಲ್ಲ ನಾಲ್ಕೈದು ಮಧ್ಯಾಹ್ನ 'ಭಾರತ ಬಿಟ್ಟು ತೊಲಗಿ' ಚಳವಳಿಯ ಬಗೆಗೆ ಪರಾಮರ್ಶೆ ನಡೆಸಿದರು. ಆ ಪರಾಮರ್ಶೆಯನ್ನು ಅಧ್ಯಕ್ಷ ಮೌಲಾನ ಆಜ಼ಾದರು ಆರಂಭಿಸಿದರು. ಅವರು 'ಆ ಚಳವಳಿ ನಡೆಸಿದ್ದು ತಪ್ಪು. ಅದು ವಿಫಲವಾಯಿತು, ಹಿಂಸಾಚಾರ ಉಂಟಾಗುವುದಾದರೆ ಅದನ್ನು ಇನ್ನೂ ಹೆಚ್ಚಿನ ಶಿಸ್ತು ಮತ್ತು ವ್ಯವಸ್ಥಿತವಾದ ರೀತಿಯಲ್ಲಿ ರೂಪಿಸಬೇಕಾಗಿತ್ತು. ಬ್ರಿಟಿಷರು ಇನ್ನೂ ಇಲ್ಲೇ ಇದ್ದಾರೆ; ಕಾರ್ಯಕಾರಿ ಸಮಿತಿ ನಾಲ್ಕು ಗೋಡೆಗಳ ಒಳಗೆ ಬಂಧಿಯಾಗಿದೆ: ಜಿನ್ನಾ ಬಲಿಷ್ಠನಾಗಿ ಬೆಳೆದಿದ್ದಾನೆ, ಲೀಗ್ ೧೯೪೨ರಲ್ಲಿ ಸಿಂದ್ ಮತ್ತು ಅಸ್ಸಾಂನಲ್ಲಿ ಮತ್ತು ಒಂದು ವರ್ಷದ ನಂತರ ಬಂಗಾಳ ಹಾಗೂ ವಾಯುವ್ಯ ಗಡಿನಾಡು ಪ್ರಾಂತ್ಯದಲ್ಲಿ ಮಂತ್ರಿಮಂಡಲಗಳನ್ನು ರಚಿಸಿತು' ಎಂದರು. ಅವರ ನಂತರ ಮಾತನಾಡಿದ ನೆಹರು, ಆಜ಼ಾದರ ಅಭಿಪ್ರಾಯವನ್ನು ಒಪ್ಪಿದಂತೆಯೂ, ಒಪ್ಪದೆ ಇದ್ದಂತೆಯೂ ಕಂಡುಬಂದರು. "೧೯೪೨ರ ಆಗಸ್ಟ್

ಪೂರ್ವ ದಿನಗಳ ಗಾಂಧೀಜಿಯ ನಿಲುವು ತಪ್ಪು ಮತ್ತು ಗೊಂದಲಮಯವಾಗಿತ್ತು, ಆದರೆ ಅವರು ಭಾರತದ ಆಲೋಚನಾ ಸಹಿತ ಮತ್ತು ಆಲೋಚನಾ ರಹಿತ ಜನರ ಮನಸ್ಸನ್ನು ಪ್ರತಿನಿಧಿಸುತ್ತಿದ್ದರು..... ನಾನು ಏನು ಮಾಡಿದೆನೊ ಅಥವಾ ಏನು ನಡೆಯಿತೊ ಅದಕ್ಕೆ ವಿಷಾದಿಸುವುದಿಲ್ಲ..... ಬಹಳ ತೊಂದರೆ ಉಂಟಾಗಿದ್ದರೂ, ಬಹಳ ಒಳಿತೂ ಕಾಣಿಸುತ್ತದೆ..... ಮುಂದಿನ ಕಾಲ ಮಾತ್ರ ಅದನ್ನು ತೋರಿಸಲು ಸಾಧ್ಯ" ಎನ್ನುವುದು ನೆಹರು ಅಭಿಪ್ರಾಯವಾಗಿತ್ತು. ಆ ಅಭಿಪ್ರಾಯವನ್ನು ಅವರು ತಮ್ಮ ದಿನಚರಿಯಲ್ಲಿ ಬರೆದಿದ್ದಾರೆ.

ಏಪ್ರಿಲ್ ೧೯೪೨ರಲ್ಲಿ ಕಾರ್ಯಕಾರಿ ಸಮಿತಿಯಲ್ಲಿ ನಡೆದ ಕಲಾಪದ ಬಗ್ಗೆ ಪ್ರಸ್ತಾಪಿಸಿ, ಆಜ಼ಾದರಿಗೆ, "ನೀವು ಅನುಚಿತ ಒತ್ತಡವನ್ನು ತಂದು ಪರಿಸ್ಥಿತಿಯನ್ನು ಸ್ವಲ್ಪ ಸುಧಾರಿಸಿದಿರಿ" ಎಂದರು. 'ನಾನು ಇನ್ನೇನು ಮಾಡಲು ಸಾಧ್ಯವಿತ್ತು?' ಎಂದರು ಆಜ಼ಾದ್.

(ಆ ಸಂದರ್ಭ ಹೀಗೆ: ಹಿಂದೆಯೆ ಬರೆದಿರುವ ಹಾಗೆ, ಏಪ್ರಿಲ್ ೧೯೪೨ರ ಕಾರ್ಯಕಾರಿ ಸಮಿತಿಯ ಸಭೆಗೆ ಗಾಂಧೀಜಿ ಹೋಗಿರಲಿಲ್ಲ. ಆದರೆ 'ಭಾರತ ಬಿಟ್ಟು ತೊಲಗಿ' ಕುರಿತು ಒಂದು ಕರಡು ಮಸೂದೆ ಕಳುಹಿಸಿ, ಅದರಲ್ಲಿ ಸೂಕ್ತ ಮಾರ್ಪಾಡು ಮಾಡಲು ರಾಜೇಂದ್ರ ಪ್ರಸಾದರಿಗೆ ಅಧಿಕಾರ ನೀಡಿದ್ದರು. ನೆಹರು ಸಹ ಒಂದು ಮಸೂದೆಯನ್ನು ಮಂಡಿಸಿದ್ದರು. ಆದರೆ ಅದು ಬಿದ್ದುಹೋಯಿತು. ಗಾಂಧಿ – ಪ್ರಸಾದ್ ಮಸೂದೆ ಏಪ್ರಿಲ್ ೩೦ರ ಬೆಳಗ್ಗೆ ಅವಿರೋಧವಾಗಿ ಅಂಗೀಕಾರವಾಯಿತು. ಆದರೆ ಮಧ್ಯಾಹ್ನ ಆಜ಼ಾದರು ಆ ಮಸೂದೆಯ ಪದಗಳನ್ನು ಬದಲಾಯಿಸಬೇಕೆಂದೂ, ಇಲ್ಲದೆ ಹೋದರೆ ಅಧ್ಯಕ್ಷ ಪದವಿಗೆ ರಾಜಿನಾಮೆ ಕೊಡುವುದಾಗಿ ಹಠ ಹಿಡಿದರು. ಅಂದು ಬೆಳಗ್ಗೆ ಅವರು ಮಸೂದೆಯನ್ನು ವಿರೋಧಿಸದೇ ಇದ್ದುದನ್ನು ನೆನಪಿಸಿದರೂ ಅವರು ಜಗ್ಗಲಿಲ್ಲ. ಕಾಂಗ್ರೆಸ್ಸಿನ ಒಗ್ಗಟ್ಟಿನ ದೃಷ್ಟಿಯಿಂದ ರಾಜೇಂದ್ರ ಪ್ರಸಾದರು ಅಂಗೀಕಾರವಾಗಿದ್ದ ಮಸೂದೆಯನ್ನು ವಾಪಸ್ಸು ಪಡೆದು ನೆಹರು ಮಸೂದೆಯನ್ನು ಒಪ್ಪುವುದಾಗಿ ಹೇಳಿದರು. ಅದು ಅಂಗೀಕಾರವಾಯಿತು. ಎರಡು ಮಸೂದೆಗಳ ಗುರಿ ಒಂದೇ ಆಗಿದ್ದು ಕೆಲವು ಮಾತುಗಳ ಜೋಡಣೆಯಲ್ಲಿ ವ್ಯತ್ಯಾಸವಿತ್ತು ಅಷ್ಟೆ. ಅಹಮದ್ ಕೋಟೆಯಲ್ಲಿ ನಡೆದ ಚರ್ಚೆಯಲ್ಲಿ ನೆಹರು ಅದನ್ನು ಅನವಶ್ಯಕವಾಗಿ ಪ್ರಸ್ತಾಪಿಸಿದ್ದರು. ಅವರ ಉದ್ದೇಶ ಅವರಿಗೆ ಮಾತ್ರ ಗೊತ್ತಿತ್ತು ಎಂದು ಕಾಣುತ್ತದೆ – ಲೇಖಕ.)

'ಆಜ಼ಾದರು ಏಪ್ರಿಲ್ ೧೯೪೨ರಲ್ಲಿ ಪರಿಸ್ಥಿತಿಯನ್ನು ಸ್ವಲ್ಪ ರಕ್ಷಿಸಿದರು' ಅನ್ನುವ ನೆಹರು ಮಾತು ಪಟೇಲರಿಗೆ ನೋವನ್ನುಂಟುಮಾಡಿತು. ಆ ಘಟನೆ ನಡೆದ

ಮೂರು ವರ್ಷಗಳಾಗಿದ್ದರೂ ಆಗ ಉಂಟಾದ ಗಾಯ ಇನ್ನೂ ವಾಸಿಯಾಗಿರಲಿಲ್ಲ – ಎಂದು ಬರೆದಿದ್ದಾರೆ ರಾಜ ಮೋಹನ ಗಾಂಧಿ.

'ಭಾರತ ಬಿಟ್ಟು ತೊಲಗಿ' ಚಳವಳಿಯ ಬಗೆಗಾಗಲಿ, ಸೆರೆವಾಸದ ಬಗೆಗಾಗಲಿ ಪಟೇಲರಿಗೆ ಯಾವ ವಿಷಾದವೂ ಇರಲಿಲ್ಲ. ಅವರೆಂದರು:

> ಮೌಲಾನರವರ ವಿಶ್ಲೇಷಣೆಯನ್ನು ನಾನು ಒಪ್ಪುವುದಿಲ್ಲ ವೆಂದು ಒತ್ತುಕೊಟ್ಟು ಹೇಳಲು ಬಯಸುತ್ತೇನೆ. ಬಾಪುವಿನ ನಿಲುವು ಮತ್ತು ಅವರು ತೆಗೆದುಕೊಂಡ ಕ್ರಮಗಳು ಸರಿಯಾಗಿವೆ ಮತ್ತು ಅವು ಅನಿವಾರ್ಯವಾಗಿದ್ದುವು ಎಂಬ ದೃಢವಾದ ನಂಬಿಕೆ ನನಗಿದೆ. ಬೇರೆ ಯಾವುದೇ ಮಾರ್ಗವನ್ನು ಹಿಡಿದಿದ್ದರೆ ಅದು ಕಾಂಗ್ರೆಸ್ಸನ್ನು ಸ್ವಲ್ಪ ಸ್ವಲ್ಪವಾಗಿ ನಿರ್ನಾಮ ಮಾಡುತ್ತಿತ್ತು. .....
>
> ಅಲಹಾಬಾದ್‌ನ ಘಟನೆಗಳ ಬಗೆಗೆ ನೆಹರು ಆಡಿದ ಮಾತುಗಳ ಬಗೆಗೆ ನಾನು ತೀವ್ರ ಅಸಮಾಧಾನವನ್ನು ವ್ಯಕ್ತಪಡಿಸು ತ್ತೇನೆ. ಆಗ ನಾನು ಮತ್ತು ನನ್ನ ಸಹಚರರದು ತಪ್ಪು ಮತ್ತು ನಮ್ಮ ಪ್ರಸ್ತಾವನೆಗಳು ದೇಶಕ್ಕೆ ಅಪಾಯಕಾರಿಯಾಗಿದ್ದುವು ಎಂದು ತೋರಿಸಲು ಮಾಡುತ್ತಿರುವ ಈ ಪ್ರಯತ್ನವನ್ನು ವಿರೋಧಿಸುತ್ತೇನೆ. ನಾವು ನಮಗೆ ಇಷ್ಟವಿಲ್ಲದ್ದನ್ನು ಬಹಳ ಸಹಿಸಿಕೊಂಡಿದ್ದೇವೆ, ಅನೇಕ ಕಹಿ ಗುಳಿಗೆಗಳನ್ನು ನುಂಗಿದ್ದೇವೆ. ಈಗ ಈ ರೀತಿ ನಮ್ಮ ಬಗ್ಗೆ ಪ್ರಸ್ತಾಪಿಸುವುದು ಮತ್ತು ನಿಂದಿಸುವುದು ಅತ್ಯಂತ ಆಕ್ಷೇಪಣೀಯ.

ಆಜ಼ಾದ್ ಮತ್ತು ನೆಹರು 'ತಮ್ಮ ಅಭಿಪ್ರಾಯವನ್ನು ವಿವರಿಸುವುದೇ ಹೊರತು ನೋವುಂಟು ಮಾಡುವುದು ತಮ್ಮ ಉದ್ದೇಶ ಅಲ್ಲ' ಎಂದು ತಿಳಿಸಲು ಯತ್ನಿಸಿದರು. ಆದರೆ ಅದಕ್ಕೆ ಉತ್ತಮ ಪ್ರತಿಕ್ರಿಯೆ ದೊರಕಲಿಲ್ಲ. ಪಟೇಲ್ ಮತ್ತು ಕೃಪಲಾನಿ ಒಂದು ಪಕ್ಷವಾಗಿ ಆಜ಼ಾದ್ ಮತ್ತು ನೆಹರು ಮತ್ತೊಂದು ಪಕ್ಷವಾಗಿ ಬಿರುಸಿನ ಪ್ರಶ್ನೋತ್ತರಗಳು ನಡೆದುವು. ಮೌಲಾನ ಶಾಂತವಾಗಿ ಮಾತಾಡುತ್ತಾ ಇದ್ದರು. ಆದರೆ ನೆಹರು, ಪಟೇಲ್ ಮತ್ತು ಕೃಪಲಾನಿ ಹಾಗಿರಲಿಲ್ಲ.

ನೆಹರು, 'ಆಡಿದ ಪ್ರತಿ ಮಾತನ್ನು ತಿರುಚುವ ಮತ್ತು ತಪ್ಪಾಗಿ ತಿಳಿಯುವವ ರೊಡನೆ ಇನ್ನು ಮಾತನಾಡಲು ಇಷ್ಟ ಪಡುವುದಿಲ್ಲ' ಎಂದು ಹೇಳುತ್ತಾ ಹೊರ ನಡೆದರು. ಮಾರನೆಯ ದಿನ ಅವರು 'ತಮ್ಮ ತಾಳ್ಮೆಯನ್ನು ಕಳೆದುಕೊಂಡದ್ದಕ್ಕೆ' ಕ್ಷಮೆ ಕೋರಿದರು.

ಚಳವಳಿಯ ಪರಾಮರ್ಶೆ ಮತ್ತೂ ಎರಡು ದಿನ ಮುಂದುವರೆಯಿತು. ಆದರೆ ಒಪ್ಪಿತವಾದ ಯಾವ ತೀರ್ಮಾನಕ್ಕೂ ಬರಲಾಗಲಿಲ್ಲ.[೧೯೦]

* * * *

ಪ್ರಫುಲ್ಲ ಘೋಷ್‌ರವರ ಬಿಡುಗಡೆಗೆ ಮುನ್ನ ಸೈಯದ್ ಮಹಮ್ಮದ್‌ರವರು 'ಚಲೇಜಾವ್ ಚಳವಳಿ'ಯಿಂದ ದೂರ ಸರಿಯುವುದಾಗಿ ವೈಸ್‌ರಾಯ್‌ರವರಿಗೆ ಗುಟ್ಟಾಗಿ ಪತ್ರ ಬರೆದು ಅಕ್ಟೋಬರ್ ೫ರಂದು ಸೆರೆಯಿಂದ ಬಿಡುಗಡೆ ಪಡೆದು ಕೊಂಡಿದ್ದರು. ಉಳಿದಿದ್ದ ೧೦ ಖೈದಿಗಳನ್ನು ಅವರವರ ಪ್ರಾಂತ್ಯಗಳ ಸಿವಿಲ್ ಸೆರೆಮನೆಗಳಿಗೆ ಮಾರ್ಚ್ ಅಂತ್ಯಭಾಗದಲ್ಲಿ ಸರ್ಕಾರವು ವರ್ಗಾವಣೆ ಮಾಡಲು ಆರಂಭಿಸಿತು. ಏಪ್ರಿಲ್ ಮಧ್ಯ ಭಾಗದಲ್ಲಿ ಪಟೇಲ್ ಮತ್ತು ಶಂಕರ್‌ರಾವ್ ದಿಯೊ ಯರವಾಡ ಸೆರೆಮನೆಗೆ ವರ್ಗಾಯಿಸಲ್ಪಟ್ಟರು. ಆ ವರ್ಗಾವಣೆಗೆ ಸ್ವಲ್ಪ ಮುಂಚೆ ಅಮೆರಿಕದ ಅಧ್ಯಕ್ಷ ಎಫ್.ಡಿ. ರೂಸ್‌ವೆಲ್ಟ್ ಏಪ್ರಿಲ್ ೧೨ರಂದು ಗತಿಸಿದ ಸುದ್ದಿ ಅಹಮದ್ ಕೋಟೆ ಸೆರೆಮನೆಗೆ ಬಂದಿತ್ತು. ಅದು ಒಂದು ಆಘಾತದ ಸುದ್ದಿಯಾಗಿತ್ತು. ಏಪ್ರಿಲ್ ೧೪ರಂದು ಪಟೇಲರು ಮಣಿಬೆನ್‌ಗೆ ಹೀಗೆ ಬರೆದರು:

> ಅಧ್ಯಕ್ಷ ರೂಸ್‌ವೆಲ್ಟ್‌ರವರ ಸಾವಿನ ಸುದ್ದಿ ನಿನ್ನೆ ಬಂದಿತು. ಮುಂದಿನ ದಿನಗಳಲ್ಲಿ ಅವರಿಂದ ಬಹಳ ನಿರೀಕ್ಷಿಸಲಾಗಿತ್ತು. ಇಂದಿನ ಸ್ವಾರ್ಥ ಪ್ರಪಂಚದಲ್ಲಿ ಅವರು ಸ್ವಲ್ಪ ಮಟ್ಟಿಗೆ ವಿಶ್ವ ಕಲ್ಯಾಣದಲ್ಲಿ ಆಸಕ್ತರಾದ ಶಕ್ತಿಯುತ ವ್ಯಕ್ತಿಯಾಗಿದ್ದರು..... ದೇವರು ಏನನ್ನು ಬಯಸುತ್ತಾನೋ ಮತ್ತು ಜಗತ್ತನ್ನು ಎಲ್ಲಿಗೆ ಒಯ್ಯಲು ಬಯಸುತ್ತಾನೊ ಯಾರಿಗೂ ತಿಳಿಯದು.[೧೯೧]

೧೯೪೫ರ ಮೇ ೭ರಂದು ಜರ್ಮನಿ ಶರಣಾಗತವಾಯಿತು. ಯೂರೋಪ್‌ನಲ್ಲಿ ಯುದ್ಧ ಮುಕ್ತಾಯವಾಯಿತು. ಇಂಗ್ಲೆಂಡ್ ಮತ್ತು ಅದರ ಮಿತ್ರ ರಾಷ್ಟ್ರಗಳು ಜಯಶಾಲಿ ಆದುವು.

ಪಟೇಲರು ಮೇ ೧೧ರಂದು ಮಗನಿಗೆ ಹೀಗೆ ಬರೆದರು:

> ಯೂರೋಪಿನಲ್ಲಿ ಒಂದು ಭಯಂಕರ ಅಧ್ಯಾಯ ಮುಕ್ತಾಯ ವಾಯಿತು. ಇಡೀ ವಿಶ್ವವನ್ನು ಜಯಿಸಬೇಕೆಂದು ಬಯಸಿದ್ದವರು ದೂಳಿನಲ್ಲಿ ಬೆರೆತು ಹೋಗಿದ್ದಾರೆ. ಈಗ ಮತ್ತೊಂದು ಅಧ್ಯಾಯ ಆರಂಭವಾಗುತ್ತದೆ. .....ವಿಜೇತರಾದವರು ಸ್ವಾರ್ಥಸಾಧಕರಾದರೆ ಮತ್ತು ಗೆಲುವಿನ ಅಮಲಿನಲ್ಲಿ ಮುಳುಗಿದರೆ, ಇಂದು ಸೋತವರ

ಗತಿಯನ್ನೇ ಅವರು ಪಡೆಯುತ್ತಾರೆ.[೧೯೨]

ಯರವಾಡ ಸೆರೆಮನೆ ಅವರಿಗೆ ನವ ಚೈತನ್ಯವನ್ನು ಆರೋಗ್ಯವನ್ನು ನೀಡಿತೆಂದು ಕಾಣುತ್ತದೆ. ಅವರು ಜೂನ್ ೨, ೧೯೪೫ರಂದು ಮಗಳಿಗೆ ಹೀಗೆ ಬರೆದರು:

> ನನ್ನ ಬಗ್ಗೆ ಒಂದು ಚೂರೂ ಯೋಚನೆ ಮಾಡಬೇಡ. ನನ್ನ ತೂಕ, ಶಕ್ತಿ ಇತ್ಯಾದಿ ಹಿಂದೆ ಹೇಗಿತ್ತೋ ಈಗಲೂ ಹಾಗೇ ಇವೆ. ಮನಸ್ಸು ಬಹಳ ಶಾಂತವಾಗಿದೆ. ನಾನು ದೇವರಲ್ಲಿ ನಂಬಿಕೆ ಇಟ್ಟು ಬದುಕುತ್ತಿದ್ದೇನೆ. ಆತಂಕದ ಯಾವ ಕುರುಹು ಇಲ್ಲ. ಆ ಪವಿತ್ರ ಮರದ ಕೆಳಗೆ ಮತ್ತೆ ಆರಾಮವಾಗಿದ್ದೇನೆ. ನನ್ನ ಮನಸ್ಸಿನಿಂದ ಮಹದೇವನನ್ನು ತೆಗೆದು ಹಾಕಲಾರೆ, ಅಷ್ಟೆ. ಅವನು ನನ್ನ ಕನಸಿನಲ್ಲೂ ಬರುತ್ತಾನೆ.

ಯೂರೋಪಿನಲ್ಲಿ ಯುದ್ಧ ಮುಗಿಯುವ ಹೊತ್ತಿಗೆ ವೈಸ್‌ರಾಯ್ ವೇವೆಲ್‌ಗೆ ವಾಸ್ತವತೆಯ ಅರಿವು ಉಂಟಾಯಿತೆಂದು ಕಾಣುತ್ತದೆ. ಭಾರತವನ್ನು ಬಲ ಪ್ರಯೋಗ ದಿಂದ ಹೆಚ್ಚು ಕಾಲ ಹಿಡಿದಿಟ್ಟುಕೊಳ್ಳಲು ಸಾಧ್ಯವಿಲ್ಲ ಎನ್ನುವುದು ಅವನಿಗೆ ಅರ್ಥ ವಾಯಿತು. ಜೊತೆಗೆ, ಪಶ್ಚಿಮ ರಣರಂಗದಲ್ಲಿ ಜರ್ಮನಿ ಶರಣಾಗತವಾಗಿತ್ತೇ ಹೊರತು ಪೂರ್ವ ರಣರಂಗದಲ್ಲಿ ಜಪಾನ್ ಶರಣಾಗತವಾಗಿರಲಿಲ್ಲ. ಅದರೊಡನೆ ಯುದ್ಧ ಮುಕ್ತಾಯವಾಗಲು ಇನ್ನೂ ಒಂದು ಅಥವಾ ಎರಡು ವರ್ಷಗಳು ಬೇಕು ಎನ್ನುವ ಅಂದಾಜು ಇತ್ತು. ಭಾರತೀಯರ ಮುಕ್ತ ಸಹಕಾರ ದೊರೆತರೆ ಯುದ್ಧ ಬೇಗನೆ ಮುಗಿಯಬಹುದೆಂದು ವೈಸ್‌ರಾಯ್ ಆಲೋಚಿಸಿದನು. ಅವನು ಇಂಗ್ಲೆಂಡಿಗೆ ಹೋಗಿ 'ಕಾಂಗ್ರೆಸ್ ಕಾರ್ಯಕಾರಿ ಸದಸ್ಯರನ್ನು ಸೆರೆಮನೆಯಿಂದ ಬಿಡುಗಡೆ ಮಾಡಲು ಮತ್ತು ಪ್ರಾತಿನಿಧಿಕ ಭಾರತೀಯರೊಡನೆ ಮಾತುಕತೆ ನಡೆಸಲು' ಬ್ರಿಟನ್ ಪ್ರಧಾನಿ ಚರ್ಚಿಲ್‌ನ ಅನುಮತಿಯನ್ನು ಕೋರಿದನು. ಮೊದಲು ಚರ್ಚಿಲ್‌ನು ಅನುಮತಿಯನ್ನು ನಿರಾಕರಿಸಿದನು. ನಂತರ ಇಂಡಿಯಾವನ್ನು ಪಾಕಿಸ್ತಾನ, ಹಿಂದೂಸ್ತಾನ ಮತ್ತು ರಾಜರಸ್ತಾನ ಎಂದು ಒಡೆಯುವ ಮಾತನಾಡಿ, ಭಾರತದ ಸಮಸ್ಯೆ ನನ್ನ ಆಧ್ಯತೆಯ ವಿಷಯವಲ್ಲ ಎಂದನು. ವೇವಲ್ಲನು 'ಶಾಂತಿ ಕಾಲದಲ್ಲಿ ಇಂಡಿಯಾದಲ್ಲಿ ದಮನಕಾರಿ ನೀತಿಯನ್ನು ಅನುಸರಿಸುವುದನ್ನು ಬ್ರಿಟಿಷ್ ಮತದಾರ ಮತ್ತು ಬ್ರಿಟಿಷ್ ಸೈನಿಕ ಬೆಂಬಲಿಸಲಾರ ಎನ್ನುವ ಅಭಿಪ್ರಾಯ ವ್ಯಕ್ತಪಡಿಸಿದನು. ಆದಾಗ್ಯೂ ಚರ್ಚಿಲ್ಲನು ವೇವಲ್‌ನನ್ನು ಅನೇಕ ವಾರಗಳ ಕಾಲ ಕಾಯಿಸಿ ಒಪ್ಪಿಗೆ ನೀಡಿದನು. ಭಾರತಕ್ಕೆ ಹಿಂದುರಿಗಿದ ವೇವೆಲ್ ೧೯೪೫ರ ಜೂನ್ ೧೪ರಂದು

ಬಾನುಲಿಯ ಮೂಲಕ ಭಾಷಣ ಮಾಡಿ ಕಾಂಗ್ರೆಸ್ ಕಾರ್ಯಕಾರಿ ಸದಸ್ಯರನ್ನು ೧೫ರಂದು ಬಿಡುಗಡೆ ಮಾಡುವುದಾಗಿ ಮತ್ತು ತನ್ನನ್ನು ೨೫ನೇ ತಾರೀಖು ಸಿಮ್ಲಾದಲ್ಲಿ ಭೇಟಿ ಮಾಡಲು ಭಾರತೀಯ ನಾಯಕರನ್ನು ಆಹ್ವಾನಿಸುವುದಾಗಿ ಪ್ರಕಟಿಸಿದನು.[೧೯೩] ಆದಾಗ್ಯೂ ಅಂದೇ ಕಾಂಗ್ರೆಸ್ ಅಧ್ಯಕ್ಷ ಮೌಲಾನ ಆಜ಼ಾದ್, ನೆಹರು ಮತ್ತು ಇನ್ನು ಕೆಲವರ ಬಿಡುಗಡೆ ಆಯಿತು. ೧೫ರಂದು ಬೆಳಗ್ಗೆ ಯರವಾಡ ಸೆರೆಮನೆಯಿಂದ ಸರ್ದಾರ್ ಮತ್ತು ಶಂಕರ್‌ರಾವ್ ದಿಯೊರವರ ಬಿಡುಗಡೆ ಯಾಯಿತು. ೩೪ ತಿಂಗಳ ವಿಚಾರಣ ರಹಿತ ಸೆರೆವಾಸ ಅನುಭವಿಸಿ ಅವರು ಹೊರಬಂದರು.

೧೩.೧೦ ಏಷ್ಯಾ ಬಿಟ್ಟು ತೊಲಗಿ

ಜೂನ್ ೧೫, ೧೯೪೪ರಂದು ಬೆಳಗ್ಗೆ ೭.೩೦ ಘಂಟೆಗೆ ಸರ್ದಾರ್ ಪಟೇಲರು ಮತ್ತು ಶಂಕರ್‌ರಾವ್ ದಿಯೊ ಯರವಾಡ ಸೆರೆಮನೆಯಿಂದ ಹೊರಬಂದರು. ಸೆರೆಮನೆಯ ದ್ವಾರದಲ್ಲಿ ಅವರಿಗಾಗಿ ಅನೇಕರು ಕಾಯುತ್ತಿದ್ದರು. ಅವರಿಗೆ ಪಟೇಲರು, 'ನನ್ನ ಆರೋಗ್ಯ ಎಷ್ಟು ಚೆನ್ನಾಗಿರಲು ಸಾಧ್ಯವೋ ಅಷ್ಟು ಚೆನ್ನಾಗಿದೆ' ಎಂದರು. ಅಲ್ಲಿಂದ ಮಹಾರಾಷ್ಟ್ರ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಎನ್.ವಿ. ಗಾಡ್ಗಿಲ್ ಮನೆಗೆ ತೆರಳಿದರು. ಅಲ್ಲಿ ಅವರ ಸ್ನೇಹಿತರು ಕಾಯುತ್ತಿದ್ದರು. ಅವರಿಗೆ, "ಸಿದ್ಧವಾಗಿ, ಸ್ವಯಂ ಆಡಳಿತ ತಿರುವಿನಲ್ಲಿರುತ್ತದೆ" ಎಂದರು. ಅಲ್ಲಿ ಒಂದು ಘಂಟೆ ಕಾಲ ಇದ್ದು ಪಂಚಗಣಿಗೆ ಗಾಂಧೀಜಿ ಮತ್ತು ಮಣಿಬೆನ್ ನೋಡಲು ಕಾರಿನಲ್ಲಿ ಹೊರಟರು. ಅಂದು ಗಾಂಧೀಜಿಯ ಮೌನದ ದಿನ. ಅವರು ತಮ್ಮ ಸಂತಸವನ್ನು ಒಂದು ಚೀಟಿಯಲ್ಲಿ ಬರೆದು ತೋರಿಸಿದರು.

ನಾಲ್ಕು ದಿನಗಳ ನಂತರ ಪಟೇಲ್ ಮತ್ತು ಗಾಂಧೀಜಿ ಆಗಾ ಖಾನ್ ಸದನಕ್ಕೆ ಕಾರಿನಲ್ಲಿ ಪ್ರಯಾಣ ಮಾಡಿದರು. ಅಲ್ಲಿ ಕಸ್ತೂರ್ ಬಾ ಮತ್ತು ಮಹದೇವ್‌ರವರ ಪಾರ್ಥಿವ ಶರೀರದ ದಹನ ಸಂಸ್ಕಾರ ಆದ ಸ್ಥಳದ ಮುಂದೆ ಮೌನವಾಗಿ ನಿಂತು ಅವರ ಆತ್ಮಕ್ಕೆ ಶಾಂತಿ ಕೋರಿದರು. ಕೃಪಲಾನಿ ಪೂನಾಕ್ಕೆ ಬಂದು ಅವರನ್ನು ಕೂಡಿಕೊಂಡರು. ಮೂವರು ರೈಲಿನಲ್ಲಿ ಬೊಂಬಾಯಿಗೆ ಪ್ರಯಾಣ ಮಾಡಿದರು. ಅವರ ರೈಲು ಬೊಂಬಾಯಿಯ ವಿಕ್ಟೋರಿಯ ಟರ್ಮಿನಸ್ ನಿಲ್ದಾಣಕ್ಕೆ ಬಂದಾಗ, ಅವರನ್ನು ಸ್ವಾಗತಿಸಲು ಭಾರಿ ಜನಸಮೂಹ ಹರ್ಷೋದ್ಗಾರ ಮಾಡಿದರು. 'ಮಹಾತ್ಮ ಗಾಂಧಿ ಕಿ ಜೈ' 'ವಲ್ಲಭಭಾಯ್ ಪಟೇಲ್ ಕಿ ಜೈ' ಎಂದು ಜಯಕಾರ ಮಾಡಿ ಸ್ವಾಗತಿಸಿದರು. ಅದು, 'ಭಾತರ ಬಿಟ್ಟು ತೊಲಗಿ' ಚಳವಳಿಯನ್ನು ಜನ ಒಪ್ಪಿದ್ದಾರೆನ್ನುವುದರ ಸಂಕೇತವಾಗಿತ್ತು. ಅದರಿಂದ ಪಟೇಲರಿಗೆ

ಆನಂದ ಮತ್ತು ಕಾರ್ಯೋತ್ಸಾಹ ತುಂಬಿ ಬಂದಿತು.[೧೯೪]

ಜೂನ್ ೨೭ರಂದು ಬೊಂಬಾಯಿಯಲ್ಲಿ ಜನರನ್ನು ಕುರಿತು ಹೀಗೆ ನುಡಿದರು:

> (ಆಗಸ್ಟ್ ೯, ೧೯೪೨ರಂದು) ರೈಲಿನಲ್ಲಿ ಹೊರಟಾಗ ಬೊಂಬಾಯಿಗೆ ನಾನು ಶಾಶ್ವತ ವಿದಾಯವನ್ನು ಹೇಳುತ್ತಿದ್ದೇನೆ ಎಂದು ಯೋಚಿಸಿದ್ದೆ. ನನ್ನ ಆರೋಗ್ಯ ಕೆಟ್ಟು ಹೋಗಿತ್ತು. ಮಹಾತ್ಮ ಗಾಂಧಿ ಮತ್ತು ಮಹದೇವ್‌ಗೆ 'ನಾನು ಅವರನ್ನು ಮತ್ತೆ ನೋಡುವ ಭರವಸೆ ಇಲ್ಲ' ಎಂದು ಹೇಳಿದ್ದೆ.
>
> ಹಿಂದಿನ ವೈಸ್‌ರಾಯ್‌ನನ್ನು ಉಚ್ಚಾಟನೆ ಮಾಡಬೇಕು. ಅವನು ನಮ್ಮನ್ನು ವಿಚಾರಣೆಗೆ ಒಳಪಡಿಸಲೇ ಇಲ್ಲ..... ಈಗ ಅವನು ಸ್ವದೇಶಕ್ಕೆ ಹೊರಟು ಹೋಗಿದ್ದಾನೆ..... ಬಂಗಾಳದ ಕ್ಷಾಮವನ್ನು ಮರೆಯಲು ಸಾಧ್ಯವಿಲ್ಲ.
>
> ಈ ಬಾರಿ ನಾಯಿಗಳು ಬೊಗಳಿದುವು ಮತ್ತು ಬಹಳವಾಗಿ ಕಚ್ಚಿದುವು ಕೂಡ ಮುಂದಿನ ಹೋರಾಟದಲ್ಲಿ ಹುಚ್ಚು ರೋಗದ ನಾಯಿಗಳು ಕಚ್ಚುವುದನ್ನು ನೋಡಬೇಕಾಗುತ್ತದೆ. ಈ ಆಕ್ರೋಶದ ಮಾತುಗಳಿಗೆ ವೈಸ್‌ರಾಯ್‌ಯೇ ಜವಾಬ್ದಾರ. ಅವನ ನೀತಿಗಳು ಈ ರೀತಿ ಆಡಲು ಪ್ರೇರೇಪಿಸಿದುವು. ಆಗಸ್ಟ್ ೮ರ ಮಸೂದೆಯನ್ನು ಅಂಗೀಕರಿಸದೆ ಹೋಗಿದ್ದರೆ ಭಾರತ ಸ್ವಾತಂತ್ರ್ಯದ ಪ್ರಶ್ನೆ ಶಾಶ್ವತವಾಗಿ ಕಳೆದುಹೋಗುತ್ತಿತ್ತು..... (ಈಗ) ಸ್ವಾತಂತ್ರ್ಯವು ಭೋರ್ಗರೆಯುವ ಪ್ರವಾಹದಂತೆ, ರಭಸವಾಗಿ ನುಗ್ಗಿ ಬರುತ್ತಿದೆ.[೧೯೫]

ಮೂರು ದಿನಗಳ ನಂತರ ಬೊಂಬಾಯಿಯ ಮತ್ತೊಂದು ಸಭೆಯಲ್ಲಿ ಸರ್ದಾರರು. "ಭಾರತ ಬಿಟ್ಟು ತೊಲಗಿ – ಠರಾವಿನ ಒಂದು ಪದವನ್ನೂ ಅಳಿಸುವ ಹಾಗಿಲ್ಲ – ಅಥವಾ ಬದಲಾಯಿಸುವ ಹಾಗಿಲ್ಲ. ವಾಸ್ತವವಾಗಿ ಮುಂದಿನ ಬಾರಿ ಏನಾದರು ಚಳವಳಿ ನಡೆದರೆ ಅದು – ಏಷ್ಯಾ ಬಿಟ್ಟು ತೊಲಗಿ" ಎಂದು ಗುಡುಗಿದರು.[೧೯೬]

ಭಾರತವನ್ನು ಬಿಟ್ಟು ಹೋಗಬೇಕೆಂಬ ಬ್ರಿಟಿಷರ ಬಯಕೆ ಪ್ರಾಮಾಣಿಕವಾದುದು ಎಂಬ ನಂಬಿಕೆ ಪಟೇಲರಿಗೆ ಬಂದಿತ್ತು. ಬ್ರಿಟಿಷರು ಅನಿವಾರ್ಯತೆಯನ್ನು ವಿಧಿ ಇಲ್ಲದೆ ಒಪ್ಪಿದರು. ಸರ್ಕಾರದ ವಿರುದ್ಧ ಹೋರಾಟದ ಬಗೆಗೆ ಯಾರಾದರು

ಮಾತನಾಡಿದರೆ, ಅವರಿಗೆ ಪಟೇಲರು, "ಸತ್ತ ಕುದುರೆಗೆ ಬಡಿಯುವುದರಿಂದ ಏನೂ ಪ್ರಯೋಜನವಿಲ್ಲ. ಬ್ರಿಟಿಷ್‌ರೊಡನೆಯ ಹೋರಾಟ ಮುಕ್ತಾಯವಾಗಿದೆ. ಅವರು ಹಾಸಿಗೆಯನ್ನು ಸುತ್ತಿ, ಹೊತ್ತು, ಹೊರಡುವ ಕಾಲ ಬಂದಿದೆ. ಈಗ ಇರುವುದು ಮತೀಯ ಅಂಶಗಳ ವಿರುದ್ಧದ, ನಮ್ಮೊಳಗಿನ ದುಷ್ಟ ಶಕ್ತಿಗಳ ವಿರುದ್ಧದ ಹೋರಾಟ. ನಿಜವಾದ ಸಮಸ್ಯೆ ಭಾರತ ಮತ್ತು ಬ್ರಿಟನ್‌ನ ನಡುವಣ ಜಗಳವಲ್ಲ, ಆದರೆ ಭಾರತೀಯ ರಾಷ್ಟ್ರೀಯತೆ ಮತ್ತು ಮುಸ್ಲಿಂ ಮತೀಯತೆ ನಡುವಣ ಗೊಂದಲ. ಅದನ್ನು ಎಷ್ಟು ಬೇಗ ಪರಿಹರಿಸಿದರೆ ಅಷ್ಟೂ ಒಳ್ಳೆಯದು." ಎಂದು ಹೇಳುತ್ತಿದ್ದರು.[೧೯೭]

❖ ◆ ❖

ಗುರು ಮತ್ತು ಶಿಷ್ಯ

ಗಾಂಧೀಜಿ ಮತ್ತು ಪಟೇಲ್

೧೪. ಸ್ವಾತಂತ್ರ್ಯಕ್ಕೆ ಕ್ಷಣಗಣನೆ

೧೪.೧ ಸಿಮ್ಲಾ ಸಮ್ಮೇಳನ

ಸಿಮ್ಲಾ ಹಿಮಾಲಯ ಪರ್ವತದಲ್ಲಿರುವ ಒಂದು ಗಿರಿಧಾಮ. ಈಗ ಅದು ಹಿಮಾಚಲ ಪ್ರದೇಶದ ರಾಜಧಾನಿಯಾಗಿದೆ. ಬ್ರಿಟಿಷರ ಕಾಲದಲ್ಲಿ ಅದು ಇಂಡಿಯಾ ಸರ್ಕಾರದ ಬೇಸಿಗೆಯ ರಾಜಧಾನಿಯಾಗಿತ್ತು. ವೈಸ್‌ರಾಯ್ ವೇವೆಲ್ಲನು ಭಾರತದ ರಾಜಕೀಯ ಸಮಸ್ಯೆಯ ಪರಿಹಾರಕ್ಕಾಗಿ ಅಲ್ಲಿ ಜೂನ್ ೨೫ರಂದು ಭಾರತದ ನಾಯಕರ ಸಭೆಯನ್ನು ನಡೆಸಲು ಉದ್ದೇಶಿಸಿ ೨೧ ಪ್ರಮುಖ ಮಂದಿಯನ್ನು ಆಹ್ವಾನಿಸಿದನು.

ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಬೊಂಬಾಯಿಯಲ್ಲಿ ಸಭೆ ಸೇರಿ ಲಾರ್ಡ್ ವೇವೆಲ್ ಕರೆದಿರುವ ಸಭೆಯಲ್ಲಿ ಭಾಗವಹಿಸಬೇಕೆಂದು ತೀರ್ಮಾನಿಸಿ ಎಲ್ಲ ಹಂತಗಳಲ್ಲು ಸೂಕ್ತ ತೀರ್ಮಾನಗಳನ್ನು ತೆಗೆದುಕೊಳ್ಳುವ ಅಧಿಕಾರವನ್ನು ಗಾಂಧೀಜಿ ಮತ್ತು ಕಾಂಗ್ರೆಸ್ ಅಧ್ಯಕ್ಷ ಮೌಲಾನ ಆಜ಼ಾದ್‌ರಿಗೆ ನೀಡಿತು. ನಂತರ ಗಾಂಧೀಜಿ ಸಿಮ್ಲಾಗೆ ರೈಲಿನಲ್ಲಿ ಪ್ರಯಾಣ ಮಾಡಿದರು. ಅವರೊಡನೆ ಕಾರ್ಯಕಾರಿ ಸಮಿತಿಯ ಎಲ್ಲಾ ಸದಸ್ಯರೂ ಪ್ರಯಾಣ ಮಾಡಿದರು.೧೯೪೧ ಪ್ರತಿ ರೈಲು ನಿಲ್ದಾಣದಲ್ಲು ಅಧಿಕ ಸಂಖ್ಯೆಯಲ್ಲಿ ಜನ ಸೇರಿ ಅವರನ್ನು ಸ್ವಾಗತಿಸುತ್ತಿದ್ದರು ಮತ್ತು ಜೈಕಾರ ಮಾಡುತ್ತಿದ್ದರು. ಸಿಮ್ಲಾ ಸಮ್ಮೇಳನದಲ್ಲಿ ಭಾಗವಹಿಸಲು ಗಾಂಧೀಜಿ ಮತ್ತು ಆಜ಼ಾದ್‌ರಿಗೆ ಮಾತ್ರ ಆಹ್ವಾನವಿತ್ತು. ಆದರೂ ಸಮಾಲೋಚನೆಗೆ ಬೇಕಾಗಬಹುದೆಂದು ಕಾರ್ಯಕಾರಿ ಸಮಿತಿ ಸದಸ್ಯರು ಸಮ್ಮೇಳನ ಮುಗಿಯುವವರೆಗೆ ಸಿಮ್ಲಾದಲ್ಲೇ ಉಳಿದಿದ್ದರು.

ಸಿಮ್ಲಾ ಸಮ್ಮೇಳನವು ೨೫ರಂದು ವೈಸ್‌ರಾಯ್ ಅಧ್ಯಕ್ಷತೆಯಲ್ಲಿ ಆರಂಭವಾಯಿತು. ಅದರಲ್ಲಿ ಮಹಾತ್ಮ ಗಾಂಧೀಜಿ, ಕಾಂಗ್ರೆಸ್ ಅಧ್ಯಕ್ಷ ಮೌಲಾನಾ ಆಜ಼ಾದ್, ಮುಸ್ಲಿಂ ಲೀಗ್ ಅಧ್ಯಕ್ಷ ಜಿನ್ನಾ, ಕೇಂದ್ರ ಶಾಸನ ಸಭೆಯಲ್ಲಿ ಲೀಗ್‌ನ ಉಪನಾಯಕ ಲಿಯಾಕತ್ ಆಲಿ ಖಾನ್, ಸಿಖ್ಖರ ಪ್ರತಿನಿಧಿಯಾಗಿ ಮಾಸ್ಟರ್ ತಾರಾ ಸಿಂಗ್, ಹರಿಜನರ ಪ್ರತಿನಿಧಿಯಾಗಿ ಶಿವರಾಜ್, ಪ್ರಾಂತ್ಯಗಳ ಮಾಜಿ ಪ್ರಧಾನಿಗಳಾದ ರಾಜಾಜಿ, ಜಿ.ಬಿ. ಪಂತ್ ಮೊದಲಾದವರು. ಪಂಜಾಬ್ ಪ್ರಧಾನ ಮಂತ್ರಿ (ಯೂನಿಯನಿಸ್ಟ್ ಪಕ್ಷದ) ಕಿಜ಼ಿರ್ ಹಯಾತ್ ಖಾನ್, ಕೇಂದ್ರ ಶಾಸನ ಸಭೆಯಲ್ಲಿ ಯೂರೋಪಿಯನ್ನರ ಗುಂಪಿನ ನಾಯಕ ಮೊದಲಾದವರು ಆಹ್ವಾನಿಸಲ್ಪಟ್ಟಿದ್ದರು.

ಸಮ್ಮೇಳನವನ್ನು ಆರಂಭಿಸುತ್ತಾ, ವೈಸ್‌ರಾಯ್ ವೇವೆಲ್‌ನು ಭಾರತದ ರಾಜಕೀಯ ಸಮಸ್ಯೆಯ ಪರಿಹಾರಕ್ಕೆ ತನ್ನ ಯೋಜನೆಯನ್ನು ಸಭೆಯ ಮುಂದಿಟ್ಟನು. ಆ ಯೋಜನೆಯ ಪ್ರಕಾರ ವೈಸ್‌ರಾಯ್ ತನ್ನ ಕಾರ್ಯಕಾರಿ ಸಮಿತಿಯನ್ನು ಪುನರ್ರಚಿಸುವನು. ಪುನರ್ರಚಿತ ಸಮಿತಿಯಲ್ಲಿ ವೈಸ್‌ರಾಯ್ ಮತ್ತು ಸೈನ್ಯದ ದಂಡನಾಯಕನನ್ನು ಬಿಟ್ಟರೆ ಉಳಿದವರೆಲ್ಲಾ ಭಾರತೀಯರೆ. ಅದರಿಂದ ಹಣಕಾಸು, ಪೊಲೀಸು, ವಿದೇಶಿ ವ್ಯವಹಾರ ಮೊದಲಾದ ಎಲ್ಲಾ ಇಲಾಖೆಗಳ ಆಡಳಿತವು ಭಾರತೀಯರ ಕೈಗೆ ಬರುವುದು. ವೈಸ್‌ರಾಯ್‌ನು ತನ್ನ ಕಾರ್ಯಕಾರಿ ಸಮಿತಿಗೆ ಭಾರತೀಯ ಸದಸ್ಯರನ್ನು ವಿವಿಧ ಪಕ್ಷಗಳು ನೀಡುವ ಸದಸ್ಯರ ಪಟ್ಟಿಯಿಂದ ನಿಯಮಿಸುವನು. ತಾನೇ ತನಗೆ ಬೇಕಾದವರನ್ನು ನಿಯಮಿಸುವುದಿಲ್ಲ. ಅದಕ್ಕಾಗಿ ವಿವಿಧ ಪಕ್ಷಗಳು ಪಟ್ಟಿಯನ್ನು ಸಲ್ಲಿಸಬೇಕು. ಕಾರ್ಯಕಾರಿ ಸಮಿತಿಯ ತೀರ್ಮಾನಗಳನ್ನು ತಿರಸ್ಕರಿಸುವ 'ವಿಟೋ' ಅಧಿಕಾರವು ವೈಸ್‌ರಾಯ್‌ಗೆ ಇರುವುದು. ಆದರೆ ವೈಸ್‌ರಾಯ್ ಆ 'ವಿಟೋ' ಅಧಿಕಾರವನ್ನು ಅಕಾರಣವಾಗಿ ಚಲಾಯಿಸುವುದಿಲ್ಲವೆಂದು ವಾಗ್ದಾನ ಮಾಡಿದನು. ಅವನ ಮಾತನ್ನು ಎಲ್ಲರೂ ನಂಬಿದರು. ವೇವೆಲ್ಲನು ತನ್ನ ಯೋಜನೆಯ ಪ್ರಕಾರ ವೈಸ್‌ರಾಯ್ ಕಾರ್ಯಕಾರಿ ಸಮಿತಿಯಲ್ಲಿ ಕ್ಯಾಸ್ಟ್ ಹಿಂದೂಗಳಿಗೆ ಮತ್ತು ಮುಸ್ಲಿಮರಿಗೆ ತಲಾ ೫ ಸ್ಥಾನಗಳನ್ನು ನೀಡಿದ್ದನು. ಈ ಸಮಾನತೆಯನ್ನು ಗಾಂಧೀಜಿ ವಿರೋಧಿಸಿದರು. ಕಾಂಗ್ರೆಸ್ ಬಹಳ ಹಳೆಯ ದೊಡ್ಡ ಪಕ್ಷ, ಬಹಳ ದಶಕಗಳಿಂದ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ಪಕ್ಷ. ಮುಸ್ಲಿಂ ಲೀಗ್ ಇತ್ತೀಚೆಗೆ ಅಸ್ತಿತ್ವಕ್ಕೆ ಬಂದ ಚಿಕ್ಕ ಪಕ್ಷ. ಎರಡಕ್ಕೂ ಸಮಾನತೆ ಕಲ್ಪಿಸುವುದನ್ನು ಒಪ್ಪಲು ಸಾಧ್ಯವಿಲ್ಲ – ಎಂದರು ಗಾಂಧೀಜಿ. ಅವರು 'ಕ್ಯಾಸ್ಟ್' ಹಿಂದೂ ಅನ್ನುವ ಪದಕ್ಕೂ ಆಕ್ಷೇಪಣೆ ಎತ್ತಿದರು. ಅಂತಹ ಪದ ಬಳಕೆಯಲ್ಲೇ ಇಲ್ಲ, ಇಡೀ ಕಾಂಗ್ರೆಸ್ಸಿನ ಇತಿಹಾಸವೇ ಕಾಸ್ಟ್ ಮತ್ತು ಔಟ್‌ಕಾಸ್ಟ್ ಹಿಂದೂಗಳ

ನಡುವಣ ವ್ಯತ್ಯಾಸವನ್ನು ತೊಡೆದು ಹಾಕುವುದಾಗಿದೆ' ಎಂದರು. ಆದಾಗ್ಯೂ ಒಂದು ಇತ್ಯರ್ಥಕ್ಕೆ ಬರುವ ದೃಷ್ಟಿಯಿಂದ ಸಮಾನ ಸ್ಥಾನಗಳನ್ನು ಗಾಂಧೀಜಿ ಒಪ್ಪಿದರು.[೧೯೯]

ನಂತರ ವೇವೆಲ್ಲನು ವಿವಿಧ ಪಕ್ಷಗಳಿಂದ ಪಟ್ಟಿಯನ್ನು ಕೇಳಿದನು. ಎಲ್ಲಾ ಪಕ್ಷಗಳು ಪಟ್ಟಿಯನ್ನು ನೀಡಿದುವು ಆದರೆ ಜಿನ್ನಾ ಮಾತ್ರ ನೀಡಲಿಲ್ಲ. ಅವನೊಂದು ತಕರಾರು ತೆಗೆದನು. ಕಾಂಗ್ರೆಸ್ಸು ತನ್ನ ಪಟ್ಟಿಯಲ್ಲಿ ಮೌಲಾನಾ ಆಜ಼ಾದ್ ಮತ್ತು ಆಸಿಫ಼್ ಆಲಿಯವರ ಹೆಸರನ್ನು ಸೇರಿಸಿತ್ತು. ಜಿನ್ನಾ ಅವರಿಬ್ಬರ ಹೆಸರನ್ನು ವಿರೋಧಿಸಿದನು. 'ಎಲ್ಲಾ ಮುಸ್ಲಿಂ ಸದಸ್ಯರ ಹೆಸರನ್ನು ಲೀಗ್ ಮಾತ್ರ ಕೊಡಬೇಕು, ಕಾಂಗ್ರೆಸ್ ಕೊಡುವ ಹಾಗಿಲ್ಲ. ಕಾಂಗ್ರೆಸ್ಸು ಕ್ಯಾಸ್ಟ್ ಹಿಂದುಗಳ ಹೆಸರನ್ನು ಮಾತ್ರ ಕೊಡಬೇಕು' ಎಂದು ಹಠ ಹಿಡಿದನು. ಕಾಂಗ್ರೆಸ್ಸು ಒಂದು ರಾಷ್ಟ್ರೀಯ ಪಕ್ಷ. ಜಿನ್ನಾ ವಾದವನ್ನು ಒಪ್ಪಿದರೆ, ಕಾಂಗ್ರೆಸ್ಸು ಬರೇ 'ಹಿಂದುಗಳ ಪಕ್ಷ' ಎಂದಾಗುತ್ತಿತ್ತು.

ಜಿನ್ನಾನ ವಾದವನ್ನು ವಾಯುವ್ಯ ಗಡಿನಾಡಿನ ಪ್ರಧಾನಮಂತ್ರಿ ಡಾ॥ ಖಾನ್ ಸಾಹೇಬ್, ಪಂಜಾಬಿನ ಪ್ರಧಾನಮಂತ್ರಿ ಖಿಜಿರ್ ಹಯಾತ್ ಖಾನ್ ತಿವಾನ್, ವೈಸ್‌ರಾಯ್ ಕಾರ್ಯಕಾರಿ ಸಮಿತಿಯ ಮಾಜಿ ಸದಸ್ಯ ಸುಲ್ತಾನ್ ಅಹಮದ್ ಮುಂತಾದ ಅನೇಕ ಪ್ರಮುಖ ಮುಸ್ಲಿಂ ನಾಯಕರು ಒಪ್ಪಲಿಲ್ಲ. ಸುಲ್ತಾನ್ ಅಹಮದ್‌ನು ವೇವೆಲ್ ಒಡನೆ ಮಾತಾಡುವಾಗ, 'ಜಿನ್ನಾನ ಕೆಟ್ಟ ನಡವಳಿಕೆ ಮತ್ತು ಅವನು ಎಲ್ಲ ಮುಸ್ಲಿಮರ ಪ್ರತಿನಿಧಿ ತಾನು ಎಂದು ಹೇಳುವುದನ್ನು ಪ್ರಬಲವಾಗಿ ವಿರೋಧಿಸುತ್ತೇನೆ. ಅಷ್ಟು ಬಿಟ್ಟು ಇನ್ನು ಏನೂ ಇಲ್ಲ' ಎಂದನು.

ಈ ಪರಿಸ್ಥಿತಿಯಲ್ಲಿ ಸಮ್ಮೇಳನ ಜುಲೈ ೧೪ರಂದು ಮತ್ತೆ ಸಭೆ ಸೇರಿದಾಗ ವೇವೆಲ್ಲನು ಇದ್ದಕ್ಕಿದ್ದ ಹಾಗೆ ಒಮ್ಮತದ ಕೊರತೆಯಿಂದ ಸಮ್ಮೇಳನವು ಮುರಿದು ಬಿದ್ದಿದೆ ಎಂದು ಪ್ರಕಟಿಸಿ, 'ಇಂಡಿಯಾಗೆ ಹೇಗೆ ಸಹಾಯ ಮಾಡಬಹುದು ಎನ್ನುವುದನ್ನು ಪರಿಶೀಲಿಸುತ್ತೇನೆ' ಎಂದನು. ಹೀಗೆ ಸಮ್ಮೇಳನ ಹಠಾತ್ತಾಗಿ ಏನನ್ನೂ ಸಾಧಿಸದೆ ಮುಕ್ತಾಯವಾಯಿತು.

ವೇವೆಲ್ಲನ ನಡವಳಿಕೆ ಪಟೇಲರನ್ನು ದಿಗ್ಭ್ರಮೆಗೊಳಿಸಿತು. ಅವರ ಕಟುವಾದ ವ್ಯಂಗ್ಯ ನುಡಿ ಇಂತಿತ್ತು: "ನಮ್ಮನ್ನು ಅಷ್ಟೊಂದು ದೂರದಿಂದ ಸಿಮ್ಲಾಗೆ ಕರೆಸಿದ್ದಾದರೂ ಯಾತಕ್ಕಾಗಿ? ಜಿನ್ನಾನ ಸಹಕಾರವಿಲ್ಲದೆ ಏನನ್ನೂ ಸಾಧಿಸಲು ಸಾಧ್ಯವಿಲ್ಲ ಎಂದಷ್ಟೇ ಹೇಳುವುದಕ್ಕೆ? (ಅವನಿಂದ) ಸಹಕಾರ ಸಿಗುವುದಿಲ್ಲ ಎನ್ನುವುದು ಅವರಿಗೆ ಚೆನ್ನಾಗಿ ಗೊತ್ತಿತ್ತಲ್ಲ."[೨೦೦]

(ವೇವೆಲ್ ಏಕೆ ಹೀಗೆ ಮಾಡಿದ? ಜಿನ್ನಾನ ಹಠಕ್ಕೆ ತಲೆಬಾಗಬೇಕಾದ ಅವಶ್ಯಕತೆ ಅವನಿಗೆ ಏನಿತ್ತು? ಜಿನ್ನಾನ ಆಲೋಚನೆಯನ್ನು ಬದಲಾಯಿಸುವುದಕ್ಕೆ ಅವನು ಯಾವ ಪ್ರಯತ್ನವನ್ನೂ ಮಾಡಲಿಲ್ಲವಲ್ಲ. ವೇವೆಲ್ ಆಡಿದ್ದು ಒಂದು ಕಪಟ ನಾಟಕ ಎಂದು ನನಗನ್ನಿಸುತ್ತದೆ – ಲೇಖಕ)

ಜಿನ್ನಾನನ್ನು ಪ್ರವರ್ಧಮಾನಕ್ಕೆ ತರುವುದು, ಆ ಮೂಲಕ ಪಾಕಿಸ್ತಾನದ ಸೃಷ್ಟಿ ವೇವೆಲ್ಲನ ಗುರಿಯಾಗಿತ್ತೆಂದು ಊಹಿಸಲು ಸಾಧ್ಯತೆ ಇದೆ. ಜಿನ್ನಾನ ಮಾತಿಗೆ ಬೆಲೆಕೊಟ್ಟು ಸಮ್ಮೇಳನವನ್ನೇ ಇದ್ದಕ್ಕಿದ್ದ ಹಾಗೆ ಬರಖಾಸ್ತು ಮಾಡಿದ್ದರಿಂದ ಸಾಮಾನ್ಯ ಮುಸ್ಲಿಮರಲ್ಲಿ ಜಿನ್ನಾ ಪ್ರಭಾವ ಹೆಚ್ಚಿತು. ಮುಸ್ಲಿಂ ಲೀಗ್ ಸದಸ್ಯರ ಸಂಖ್ಯೆ ಹೆಚ್ಚಿತು. ಪಾಕಿಸ್ತಾನದ ಸೃಷ್ಟಿಗೆ ಒತ್ತಡ ಹೆಚ್ಚಿತು. ಇದೆಲ್ಲ ನೋಡಿದರೆ ವೇವೆಲ್ ಸಿಮ್ಲಾ ಸಮ್ಮೇಳನವನ್ನು ಕರೆದದ್ದೇ ಜಿನ್ನಾನ ಪ್ರಭಾವವನ್ನು ಹೆಚ್ಚಿಸಿ ಪಾಕಿಸ್ತಾನವನ್ನು ಸೃಷ್ಟಿಸುವ ಉದ್ದೇಶದಿಂದ ಎಂದು ಕಾಣುತ್ತದೆ.

ಕಿಲಾಡಿ ಮತ್ತು ಕೇಡಿ ಜಿನ್ನಾ ಆ ಸಮ್ಮೇಳನವನ್ನು ತನ್ನ ಲಾಭಕ್ಕೆ ಸಂಪೂರ್ಣವಾಗಿ ಬಳಸಿಕೊಂಡ ಎನ್ನುವುದು ಮಾತ್ರ ಸತ್ಯ. ಸಮ್ಮೇಳನ ಮುಕ್ತಾಯವಾದ ಮೇಲೆ ಜಿನ್ನಾನನ್ನು ಒಬ್ಬ ಭಾರತೀಯ ಪತ್ರಿಕೋದ್ಯಮಿ ದುರ್ಗಾದಾಸ್ ಒಂದು ಪ್ರಶ್ನೆ ಕೇಳಿದನು: "ಮುಸ್ಲಿಂ ಲೀಗ್‌ಗೆ ಕಾಂಗ್ರೆಸ್ ಜೊತೆ ಸಮಾನತೆ ದೊರೆತ ಮೇಲೂ ನೀವೇಕೆ ವೇವೆಲ್‌ನ ಯೋಜನೆಯನ್ನು ತಿರಸ್ಕರಿಸಿದಿರಿ?" ಎಂದು ಪ್ರಶ್ನಿಸಿದನು. ಆ ಪ್ರಶ್ನೆಗೆ ಜಿನ್ನಾ ಕೊಟ್ಟ ಉತ್ತರ ಪತ್ರಿಕೋದ್ಯಮಿಯನ್ನು ದಂಗು ಬಡಿಸಿತು. ಜಿನ್ನಾ ಕೊಟ್ಟ ಉತ್ತರ ಹೀಗಿತ್ತು: "ಪಾಕಿಸ್ತಾನವನ್ನು ತಟ್ಟೆಯಲ್ಲಿಟ್ಟು ನನಗೆ ನೀಡುತ್ತಿರುವಾಗ, ಇದನ್ನು (ವೇವೆಲ್ ಯೋಜನೆಯನ್ನು) ಒಪ್ಪಿಕೊಳ್ಳಲು ನಾನೇನು ಮೂರ್ಖನೆ?" ದುರ್ಗಾದಾಸ್ ಮತ್ತಷ್ಟು ಪ್ರಶ್ನೆಗಳಿಗೆ ಜಿನ್ನಾ ಉತ್ತರಿಸುವಂತೆ ಮಾಡಿದಾಗ ನಿಜ ಸಂಗತಿ ಹೊರಬಂದಿತು: "ಲಂಡನ್‌ನಲ್ಲಿರುವ ಬದಲಾವಣೆಯ ವಿರೋಧಿಗಳ ಪರವಾಗಿ ವೈಸ್‌ರಾಯ್ ಕಾರ್ಯಕಾರಿ ಸಮಿತಿಯ ಒಬ್ಬ ಸದಸ್ಯನು 'ಜಿನ್ನಾ ಮಾತುಕತೆಯಿಂದ ಹೊರಬಂದರೆ, ಅವನಿಗೆ ಪಾಕಿಸ್ತಾನದ ಬಹುಮಾನವನ್ನು ನೀಡಲಾಗುವುದು' ಎಂಬ ರಹಸ್ಯ ಸಂದೇಶವನ್ನು ಮುಟ್ಟಿಸಿದ್ದನು."[೨೦೧]

ಭಾರತದಲ್ಲಿ ಸೇವೆ ಸಲ್ಲಿಸುತ್ತಿದ್ದ ಫ್ರಾನ್ಸಿಸ್ ಮುಡೀ, ಒಲಾಫ್ ಕ್ಯಾರೊನಂತಹ ಅನೇಕ ಆಂಗ್ಲ ಅಧಿಕಾರಿಗಳು ಭಾರತದ ವಿರೋಧಿಗಳಾಗಿದ್ದರು. ಆ ವೇಳೆಗೆ ಕನ್ಸರ್ವೇಟಿವ್ ಪಕ್ಷ ಇಂಗ್ಲೆಂಡಿನಲ್ಲಿ ಅಧಿಕಾರ ಕಳೆದುಕೊಂಡಿದ್ದರೂ, ಅಂತಹ ಆಂಗ್ಲ ಅಧಿಕಾರಿಗಳ ಮೂಲಕ ತಮ್ಮ ಬೇಳೆ ಬೇಯಿಸಿಕೊಳ್ಳಲು ಸಾಧ್ಯವಾಗಿತ್ತು.

ವೈಸ್‌ರಾಯ್ ವೇವೆಲ್ಲನು ಗಾಂಧೀಜಿ, ಮೌಲಾನ, ಪ್ರಸಾದ್ ಮತ್ತು ಜವಹರರನ್ನು ಪ್ರತ್ಯೇಕವಾಗಿ ಆಹ್ವಾನಿಸಿ ಔಪಚಾರಿಕ ಮಾತುಕತೆ ನಡೆಸಿದನು. ಆದರೆ. ಸರ್ದಾರರ ಪ್ರಾಮುಖ್ಯತೆ ಅವನಿಗೆ ಗೊತ್ತಿದ್ದರೂ, ಅವರನ್ನು ಔಪಚಾರಿಕ ಮಾತುಕತೆಗೆ ಆಹ್ವಾನಿಸಲಿಲ್ಲ. ಅವನಿಗೆ ಸರ್ದಾರರ ಬಗೆಗೆ ಪೂರ್ವಾಗ್ರಹ ಪೀಡಿತ ಅಭಿಪ್ರಾಯವಿತ್ತು. ಸಮಾಚಾರ ವಾಹಕರು, 'ಕಾಂಗ್ರೆಸ್ಸಿನಲ್ಲಿ ಪಟೇಲ್ ಬಹಳ ಪ್ರಭಾವಶಾಲಿ. ಕಾಂಗ್ರೆಸ್ಸಿನ ಜೋರಿನ ನೀತಿಯ ಹಿಂದಿನ ನಿಜ ಪ್ರೇರಕ ಶಕ್ತಿ, ಎಂದೂ ಜಗ್ಗದ ವ್ಯಕ್ತಿ' ಎಂದು ವೇವೆಲ್ಲನಿಗೆ ಹೇಳಿದ್ದರು. 'ಜಗ್ಗದ' ಎಂದರೆ 'ಹಿಂಸೆಯ' ವ್ಯಕ್ತಿ ಎಂದು ವೇವೆಲ್ಲನ ಅಭಿಪ್ರಾಯ.[೨೦೨]

ಪಟೇಲರು ಎಂದೂ ಮೃದು ಭಾಷಿ ಅಲ್ಲ. ಹಾಗಾಗಿ ಬ್ರಿಟಿಷರ ಬಗೆಗಿನ ಅವರ ಗಡಸು ಮಾತು ಮುಂದುವರೆಯಿತು. ೧೯೪೫, ಆಗಸ್ಟ್ ೯, ೧೯೪೨ರಲ್ಲಿ ಅವರು ದಸ್ತಗಿರಿಯಾದ ವಾರ್ಷಿಕೋತ್ಸವದ ದಿವಸ. ಅದಕ್ಕೆ ಮೂರು ದಿನಗಳ ಮುಂಚೆ ಅಮೆರಿಕ ಸಂಯುಕ್ತ ಸಂಸ್ಥಾನ ಹಿರೋಶಿಮ ಮೇಲೆ ಅಣುಬಾಂಬನ್ನು ಹಾಕಿತ್ತು. ಪಟೇಲರು ನುಡಿದರು:

> ಇಡೀ ನಗರಗಳು, ಮಕ್ಕಳು, ಮುದುಕರು, ಪ್ರಾಣಿಗಳು ಎಲ್ಲಾ ಅಳಿಸಿಹಾಕಲ್ಪಟ್ಟಿವೆ. ಪಾಶ್ಚಿಮಾತ್ಯ ಸಂಸ್ಕೃತಿಯ ಮಿತಿ ಇಲ್ಲದ ಎಂತಹ ಕ್ರೌರ್ಯದ ಪ್ರದರ್ಶನ!

ಬ್ರಿಟಿಷರು ಹಿಂದೂ–ಮುಸ್ಲಿಂ ಜಗಳಗಳ ಕಡೆಗೆ ಬೊಟ್ಟು ತೋರಿಸಿ, ಅದನ್ನು ಇತ್ಯರ್ಥ ಮಾಡದೆ ತಾವು ಭಾರತವನ್ನು ಬಿಟ್ಟು ಹೋಗಲು ಸಾಧ್ಯವಿಲ್ಲ ಎಂದು ಹೇಳುತ್ತಿದ್ದರು. ಆದರೆ, ಹಿಂದು–ಮುಸ್ಲಿಂ ಒಡಕು ಉಂಟುಮಾಡಿದವರು ಬ್ರಿಟಿಷರೇ. ಅದನ್ನು ಕುರಿತು ಪಟೇಲರು ಹೇಳಿದರು:

> ಬ್ರಿಟಿಷರು ಹಿಂದು – ಮುಸ್ಲಿಂ ಜಗಳಗಳ ಬಗ್ಗೆ ಮಾತನಾಡುತ್ತಾರೆ ಆದರೆ ಆ ಕೆಲಸವನ್ನು ಅವರ ಭುಜದ ಮೇಲೆ ಹೊರೆಸಿದವರು ಯಾರು? ಅವರು ಪ್ರಾಮಾಣಿಕರಾಗಿದ್ದರೆ ಅಧಿಕಾರವನ್ನು ಕಾಂಗ್ರೆಸ್‌ಗೆ ಅಥವಾ ಲೀಗ್‌ಗೆ ವಹಿಸಲಿ ಅಥವಾ ಅಂತರರಾಷ್ಟ್ರೀಯ ಮಧ್ಯಸ್ಥಿಕೆಯನ್ನು ಒಪ್ಪಿಕೊಳ್ಳಲಿ.
>
> ನಾನು ಬ್ರಿಟನ್ನನ್ನು ಆಳಲು ಒಂದು ವಾರ ಅವಕಾಶ ಕೊಡಲಿ. ನಾನು ಎಂತಹ ಭಿನ್ನಾಭಿಪ್ರಾಯಗಳನ್ನು ಸೃಷ್ಟಿಸುತ್ತೇನೆಂದರೆ ಇಂಗ್ಲೆಂಡ್, ವೇಲ್ಸ್ ಮತ್ತು ಸ್ಕಾಟ್‌ಲ್ಯಾಂಡ್, ಪರಸ್ಪರ ಶಾಶ್ವತವಾಗಿ ಬಡಿದಾಡುತ್ತಿರುತ್ತವೆ.[೨೦೩]

ಪಟೇಲರ ಮಾತಿಗೆ ಗಾಂಧೀಜಿಯ ಪ್ರತಿಕ್ರಿಯೆ ಹೀಗಿತ್ತು.

ನನಗೆ ನಿಮ್ಮ ಮಾತು ಬಹಳ ಉಗ್ರ ಅನ್ನಿಸುತ್ತದೆ. ಆದರೇನು ಚಿಂತೆಯಿಲ್ಲ. ನಿಮ್ಮ ಒಳಗಿರುವ ಎಲ್ಲಾ ಭಾವನೆಗಳನ್ನು ನೀವು ಹಿಡಿದಿಟ್ಟುಕೊಳ್ಳಲು ಸಾಧ್ಯವಿಲ್ಲ.

ಆ ವೇಳೆಗೆ ಒಂದು ಕಾಲದಲ್ಲಿ ಗಾಂಧೀಜಿಯ ಎಲ್ಲಾ ಅಭಿಪ್ರಾಯ ಮತ್ತು ಕಾರ್ಯಗಳನ್ನು ಕಣ್ಣುಮುಚ್ಚಿಕೊಂಡು ಎನ್ನುವ ಹಾಗೆ ಅನುಮೋದಿಸುತ್ತಿದ್ದ ಪಟೇಲರು ಹಾಗೆ ಮಾಡುವುದು ಸೂಕ್ತವಲ್ಲ ಅನ್ನುವ ಅಭಿಪ್ರಾಯಕ್ಕೆ ಬಂದಿದ್ದರು. ಕಾರ್ಯಕಾರಿ ಸಮಿತಿ ಸೆರೆಮನೆಯಲ್ಲಿದ್ದಾಗ ಗಾಂಧೀಜಿಯವರು ಜಿನ್ನಾ ಮನೆಗೆ ಹದಿನಾಲ್ಕು ಬಾರಿ ಹೋಗಿದ್ದು ಪಟೇಲ್ ಮತ್ತು ಇತರರಿಗೆ ಬುದ್ಧಿವಂತಿಕೆ ಅನ್ನಿಸಿರಲಿಲ್ಲ. ಗಾಂಧೀಜಿಯವರು ಜಿನ್ನಾನ ಮನೆ ಬಾಗಿಲಿಗೆ ಅಷ್ಟೊಂದು ಹೋಗಿದ್ದರಿಂದ ಜಿನ್ನಾನ ಪ್ರತಿಷ್ಠೆ ಹೆಚ್ಚಾಗಿತ್ತು ಮತ್ತು ಅವನಿಗೆ ಒಂದು ಹೊಸ ಮತ್ತು ಹೆಚ್ಚಿದ ಪ್ರಾಮುಖ್ಯತೆ ಬಂದಿತ್ತು. ಪಟೇಲರು ತಮ್ಮ ಅಭಿಪ್ರಾಯವನ್ನು ಗಾಂಧೀಜಿಗೆ ಸ್ಪಷ್ಟವಾಗಿ ಹೇಳಿದರು. ಗಾಂಧೀಜಿ ತಮ್ಮ ಕಾರ್ಯವನ್ನು ಸಮರ್ಥಿಸಿಕೊಂಡರು ಮತ್ತು 'ನಾನು ಬೇರೆ ಏನನ್ನು ಮಾಡುವ ಹಾಗಿರಲಿಲ್ಲ' ಎಂದರು. ಪಟೇಲರು ತಮ್ಮ ಭಿನ್ನಾಭಿಪ್ರಾಯವನ್ನು 'ಮನೆಯ ಛಾವಣಿಯಿಂದ ಸಾರಬಹುದೆಂದರು'– ಗಾಂಧೀಜಿ. ಆದರೆ ಪಟೇಲರು ಹಾಗೆ ಮಾಡಲಿಲ್ಲ. ಅದು ಚೆಲ್ಲಿದ ಹಾಲು. ಅದನ್ನು ಎಲ್ಲಾ ಕಡೆಗೂ ಸಾರುವುದರಿಂದ ಪ್ರಯೋಜನವಿರಲಿಲ್ಲ.[೨೦೪]

ಸಿಮ್ಲಾ ಸಮ್ಮೇಳನ ವಿಫಲವಾದರೂ ಅಲ್ಲಿಯ ಆಹ್ಲಾದಕರ ತಂಪಾದ ವಾತಾವರಣ ಮತ್ತು ನಿಸರ್ಗ ಸೊಬಗು ಪಟೇಲರ ಮೂರು ವರ್ಷಗಳ ಸೆರೆವಾಸದ ಆಯಾಸವನ್ನು ಪರಿಹರಿಸಿತು. ಗಾಂಧೀಜಿಯವರು ಪ್ರಕೃತಿ ಚಿಕಿತ್ಸೆಗೆ ಒಳಗಾಗುವಂತೆ ಸರ್ದಾರರನ್ನು ಒತ್ತಾಯಿಸಿದರು. ಪಟೇಲರು ಒಪ್ಪಿ ಪೂನಾದಲ್ಲಿದ್ದ ಡಾ॥ ದಿನ್‌ಷಾ ಮೆಹ್ತರವರ ಪ್ರಕೃತಿ ಚಿಕಿತ್ಸಾಲಯಕ್ಕೆ ಸೇರಿಕೊಂಡರು. ಅಲ್ಲಿಗೆ ಗಾಂಧೀಜಿಯವರೂ ಸಹ ಪರಿಣತ ಚಿಕಿತ್ಸೆಗಾಗಿ ಭೇಟಿ ನೀಡುತ್ತಿದ್ದರು.

೧೪.೨ ೧೯೪೫ರ ಸಾರ್ವತ್ರಿಕ ಚುನಾವಣೆ

ಯೂರೋಪ್ ಕ್ಷೇತ್ರದಲ್ಲಿ ಯುದ್ಧ ಮುಕ್ತಾಯವಾದನಂತರ ಬ್ರಿಟನ್‌ನಲ್ಲಿ ಜುಲೈ ೫ರಂದು ಸಾರ್ವತ್ರಿಕ ಚುನಾವಣೆಯು ನಡೆದು ಸರ್ ಕ್ಲೆಮೆಂಟ್ ಆಟ್ಲಿಯ ಲೇಬರ್ ಪಕ್ಷವು ೬೦೦ ಸ್ಥಾನಗಳ ಪೈಕಿ ೩೯೩ ಸ್ಥಾನಗಳನ್ನು ಗಳಿಸಿ ಅದ್ಭುತ ಜಯಗಳಿಸಿ ಅಧಿಕಾರಕ್ಕೆ ಬಂದಿತು. ಜುಲೈ ೨೬ರಂದು ಆಟ್ಲಿ ಹೊಸ ಪ್ರಧಾನಮಂತ್ರಿ

ಯಾಗಿ ಅಧಿಕಾರ ವಹಿಸಿಕೊಂಡನು. ಭಾರತ ಸ್ವಾತಂತ್ರ್ಯದ ವಿರೋಧಿಯಾಗಿದ್ದ ಚರ್ಚಿಲ್ ಮತ್ತು ಅವನ ಕನ್ಸರ್ವೆಟಿವ್ ಪಕ್ಷವು ಕೇವಲ ೧೯೭ ಸ್ಥಾನಗಳನ್ನು ಗಳಿಸಿ ಹೀನಾಯ ಸೋಲು ಅನುಭವಿಸಿತು.

ಯುರೋಪಿನಲ್ಲಿ ಯುದ್ಧ ಮುಕ್ತಾಯವಾದರೂ ಅದು ಏಷ್ಯಾದಲ್ಲಿ ಮುಂದುವರೆದಿತ್ತು. ಆದರೆ ಅಮೆರಿಕ ಸಂಯುಕ್ತ ಸಂಸ್ಥಾನವು ಜಪಾನಿನ ಹಿರೋಶಿಮ ಮತ್ತು ನಾಗಸಾಕಿಯ ಮೇಲೆ ೧೯೪೫ರ ಆಗಸ್ಟ್ ೬ ಮತ್ತು ೯ರಂದು ಅಣು ಬಾಂಬನ್ನು ಹಾಕಿದ್ದರ ಫಲವಾಗಿ ಜಪಾನ್ ದೇಶವು ಆಗಸ್ಟ್ ೧೪ರಂದು ಶರಣಾಗತ ವಾಯಿತು. ತಕ್ಷಣ ಬ್ರಿಟನ್ನಿನ ಆಟ್ಲಿ ಸರ್ಕಾರವು 'ಭಾರತದಲ್ಲಿ ಶೀಘ್ರವಾಗಿ ಸ್ವಯಂ-ಸರ್ಕಾರವನ್ನು ಸ್ಥಾಪಿಸಲಾಗುವುದು' ಎಂದು ಪ್ರಕಟಿಸಿತು. ಆ ದಿಕ್ಕಿನಲ್ಲಿ ಪ್ರಥಮ ಹೆಜ್ಜೆಯಾಗಿ ಕೇಂದ್ರ ಮತ್ತು ಪ್ರಾಂತ್ಯ ಶಾಸನ ಸಭೆಗಳಿಗೆ ಚುನಾವಣೆಯನ್ನು ನಡೆಸುವುದಾಗಿ ಸೆಪ್ಟೆಂಬರ್ ೧೯ರಂದು ಪ್ರಕಟಿಸಿತು. ನಂತರ ವೈಸ್‌ರಾಯನು ತನ್ನ ಕಾರ್ಯಕಾರಿ ಸಮಿತಿಯನ್ನು ಚುನಾವಣೆಯ ಫಲಿತಾಂಶದ ಆಧಾರದ ಮೇಲೆ ಪುನರ್ರಚಿಸಲು ಪ್ರಯತ್ನಿಸುವನು ಮತ್ತು ಪ್ರಾಂತ್ಯಗಳಲ್ಲಿ ಚುನಾಯಿತ ಪಕ್ಷದ ಸರ್ಕಾರವನ್ನು ಅಧಿಕಾರಕ್ಕೆ ತಂದು ಪ್ರಾಂತ್ಯಗಳ ಸ್ವಾಯತ್ತತೆಯನ್ನು ಪುನರ್ಸ್ಥಾಪಿಸುವನು. ವೈಸ್‌ರಾಯನು ಚುನಾವಣಾ ಫಲಿತಾಂಶದ ಆಧಾರದ ಮೇಲೆ ಒಂದು ಸಂವಿಧಾನ ರಚನಾ ಸಭೆಯನ್ನು ರಚಿಸುವನು – ಎಂದೂ ಸಹ ಬ್ರಿಟಿಷ್ ಸರ್ಕಾರ ಪ್ರಕಟಿಸಿತು.[೨೦೫]

ಚುನಾವಣೆಯಲ್ಲಿ ಭಾಗವಹಿಸಲು ಕಾಂಗ್ರೆಸ್ ಒಪ್ಪಿತು ಮತ್ತು ಚುನಾವಣೆಗೆ ಸಿದ್ಧತೆಯನ್ನು ಆರಂಭಿಸಿ, ಎಂಟು ಮಂದಿಯ ಒಂದು ಚುನಾವಣಾ ಸಮಿತಿಯನ್ನು ರಚಿಸಿತು. ಕಾಂಗ್ರೆಸ್ ಅಧ್ಯಕ್ಷ ಮೌಲಾನ ಆಜ಼ಾದ್ ಅದರ ಛೇರ್‌ಮನ್ ಆಗಿ, ಪಾರ್ಲಿಮೆಂಟರಿ ಬೋರ್ಡ್‌ನ ಛೇರ್‌ಮನ್ ಸರ್ದಾರ್ ಪಟೇಲರು 'ಮೆಂಬರ್ ಇನ್-ಚಾರ್ಜ್' ಆಗಿ ನಿಯಮಿಸಲ್ಪಟ್ಟರು. ರಾಜೇಂದ್ರ ಪ್ರಸಾದ್, ಕೃಪಲಾನಿ, ಪಂತ್, ಪಟ್ಟಾಭಿ ಸೀತಾರಾಮಯ್ಯ, ಶಂಕರರಾವ್ ದಿಯೋ ಮತ್ತು ಅರುಣಾ ಅಸಫ್ ಆಲಿ ಆ ಸಮಿತಿಯ ಇತರ ಸದಸ್ಯರಾಗಿದ್ದರು. ಒಬ್ಬ ಸಮಾಜವಾದಿ ಕಾಂಗ್ರೆಸ್ಸಿಗ, ಶಾಂತಿಲಾಲ್ ಷಾ ಸಮಿತಿಯ ಕಾರ್ಯದರ್ಶಿಯಾಗಿ ಕೆಲಸ ಮಾಡಿದರು.

ಮೊದಲು ಪಟೇಲರು ಚುನಾವಣಾ ಕೆಲಸವನ್ನು ಪೂನಾದ ಪ್ರಕೃತಿ ಚಿಕಿತ್ಸಾಲಯದಿಂದಲೇ ನಡೆಸಿದರು. ಅದನ್ನು ಗಾಂಧೀಜಿಯವರು 'ಸರ್ದಾರ್‌ನನ್ನು ಸುತ್ತುವರೆದ ದರ್ಬಾರ್' ಎಂದು ಬಣ್ಣಿಸಿದರು. ಆ ನಂತರ ಪಟೇಲರು ಬೊಂಬಾಯಿಯ ಕಾಂಗ್ರೆಸ್ ಕಛೇರಿಯ ಒಂದು ಸಣ್ಣ ಕೊಟಡಿಯಲ್ಲಿ ತಮ್ಮ

ಅನಾರೋಗ್ಯದ ನಡುವೆಯೇ ಕೆಲಸ ನಿರ್ವಹಿಸಿದರು. ಚುನಾವಣೆಗೆ ಹಣ ಸಂಗ್ರಹಣೆ ಮತ್ತು ಅದರ ವಿತರಣೆ, ಟಿಕೆಟ್ ಹಂಚಿಕೆ ಮುಂತಾದವು ಅವರ ಕೆಲಸಗಳಲ್ಲಿ ಪ್ರಮುಖವಾದದ್ದಾಗಿತ್ತು. ಆ ಕೆಲಸವನ್ನು ಅವರು ಬಹಳ ಯಶಸ್ವಿಯಾಗಿ ನಿರ್ವಹಿಸಿದರು.

ಒಮ್ಮೆ ಕಾರ್ಯದರ್ಶಿ ಶಾಂತಿಲಾಲ್ ಷಾಗೆ ಒಬ್ಬ ಕೈಗಾರಿಕಾ ಮಾಲಿಕನಿಂದ ಒಂದು ಪತ್ರ ಬಂದಿತು. 'ಕಾಂಗ್ರೆಸ್ಸಿನ ಚುನಾವಣಾ ನಿಧಿಗೆ ಎರಡು ಲಕ್ಷ ರೂಪಾಯಿಗಳನ್ನು ನೀಡಬಹುದೆ?' ಎಂದು ಅವನು ಕೇಳಿದ್ದನು. ಷಾ ಸರ್ದಾರರ ಒಪ್ಪಿಗೆ ಪಡೆದು ಆ ಹಣ ಸ್ವೀಕರಿಸಲು ಒಪ್ಪಿಗೆ ನೀಡಿದರು. ಆ ಕೈಗಾರಿಕೋದ್ಯಮಿ ಮತ್ತೆ ಪತ್ರ ಬರೆದು, 'ಸರ್ದಾರ್ ಸಾಹೇಬರು ದಯಮಾಡಿ ನನ್ನ ಮನೆಗೆ ಬಂದು ಚಹಾ ಸ್ವೀಕರಿಸಬಹುದೆ? ಅವರು ಬಂದ ಸಮಯದಲ್ಲಿ ಚೆಕ್ ಅನ್ನು ನೀಡುತ್ತೇನೆ,' ಎಂದು ಕೇಳಿದನು.

ಸರ್ದಾರರು ಷಾಗೆ ಹೇಳಿದರು, 'ನಾನೊಬ್ಬ ಭಿಕ್ಷುಕನಲ್ಲ. ಅವನ ಮನೆಗೆ ಬರುವುದಿಲ್ಲ – ಎಂದು ಅವನಿಗೆ ತಿಳಿಸಿ.'

ಸರ್ದಾರರು ಆ ಸಾಹುಕಾರನ ಮನೆಗೆ ಹೋಗಲಿಲ್ಲ. ಆದರೆ ಚೆಕ್ ಬಂದಿತು.

ಒಂದು ಬೆಳಗ್ಗೆ ಉಪಹಾರದ ಸಮಯದಲ್ಲಿ ಪಟೇಲರಿಗೆ ಷಾ, "ಒಬ್ಬ ವ್ಯಕ್ತಿ ಬಂದಿದ್ದ. ಚುನಾವಣೆಯಲ್ಲಿ ಸ್ಪರ್ಧಿಸಲು ಅವನಿಗೆ ಟಿಕೆಟ್ ಕೊಡದೇ ಹೋದರೆ ಊರಿಗೆ ಹೋಗಿ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಬೆದರಿಕೆ ಹಾಕಿದ" ಎಂದರು. ಪಟೇಲರು ಷಾಗೆ ಒಂದು ಚಾಕನ್ನು ಕೊಟ್ಟು ಹೇಳಿದರು, "ಅವನು ಊರಿಗೆ ಹೋಗುವ ಅವಶ್ಯಕತೆ ಇಲ್ಲ. ಇಲ್ಲೇ ತನ್ನನ್ನು ತಾನು ಕೊಂದುಕೊಳ್ಳಬಹುದು ಎಂದು ಹೇಳು" ಎಂದರು. ಸ್ವಲ್ಪ ಸಮಯದ ನಂತರ ಅವರು ಷಾಗೆ ಹೇಳಿದರು, "ಆತ್ಮಹತ್ಯೆ ಮಾಡಿಕೊಳ್ಳಲು ಬಯಸುವವನು ಅನುಮತಿಯನ್ನು ಕೋರುವುದಿಲ್ಲ."[೨೦೬]

ಪಟೇಲರು ತಮ್ಮ ಇಪ್ಪತ್ತೈದು ವರ್ಷಗಳ ಕಾಲದ ಗುಜರಾತ್ ಪ್ರದೇಶ್ ಕಾರ್ಯಕಾರಿ ಸಮಿತಿಯ ಅಧ್ಯಕ್ಷ ಪದವಿಯನ್ನು ತ್ಯಜಿಸಿ ಆ ಸ್ಥಾನವನ್ನು ಕಾಂಜಿ ಭಾಯ್ ದೇಸಾಯಿಯವರಿಗೆ ನೀಡಿದರು. ಆ ಪದವಿಯನ್ನು ವಹಿಸಿಕೊಳ್ಳಲು ಹಿಂದುಮುಂದು ನೋಡಿದ ದೇಸಾಯಿಯವರು ತಮ್ಮ ಮತ್ತು ಪಟೇಲರ ನಡುವಣ ಅಂತರದ ಬಗ್ಗೆ ಮಾತನಾಡಿದರು. ವಲ್ಲಭಭಾಯ್ ಹೇಳಿದರು, "ನಾನು ಬಾಪುವಿನಿಂದ ಆ ಪದವಿಯನ್ನು ತೆಗೆದುಕೊಂಡಾಗ (೧೯೨೦ರಲ್ಲಿ) ಅವರ ಮತ್ತು ನನ್ನ ನಡುವೆ ಇದ್ದ ಅಂತರವು ಈಗ ನೀವು ಮಾತನಾಡುತ್ತಿರುವ ಅಂತರಕ್ಕೂ ಅಧಿಕವಾಗಿತ್ತು."

[ಪಟೇಲರ ಹೊರ ರೂಪದ ಗಡಸಿನ ಒಳಗೆ ಅದ್ಭುತ ವಿನಯ ಅಡಗಿತ್ತೆಂಬುದಕ್ಕೆ ಮತ್ತು ಅವರೆಷ್ಟೇ ಮೇಲಕ್ಕೆ ಏರಿದರೂ ಅವರ ವಿನಯ ಕುಗ್ಗಲಿಲ್ಲ ಎನ್ನುವುದಕ್ಕೆ ಈ ಘಟನೆ ಒಂದು ಸಾಕ್ಷಿ – ಲೇಖಕ]

ಆಗಸ್ಟ್ ಅಂತ್ಯ ಭಾಗದಲ್ಲಿ ಸುಭಾಷ್ ಚಂದ್ರ ಬೋಸ್‌ರವರು ವಿಮಾನ ಅಪಘಾತದಲ್ಲಿ ಅಸು ನೀಗಿದರು ಅನ್ನುವ ಸುದ್ದಿ ಬಂದಿತು. ಅದನ್ನು ಕಾಂಗ್ರೆಸ್ ಆಗಲಿ, ಸರ್ಕಾರವಾಗಲಿ ನಂಬಲಿಲ್ಲ. ಸುಭಾಷರು ಭೂಗತರಾಗಲು ಹೂಡಿರುವ ಹಂಚಿಕೆ ಅದಾಗಿರಬಹುದೆಂದು ಅವರು ಭಾವಿಸಿದರು (ಆದರೆ ಅದರ ಸತ್ಯ ಇನ್ನೂ ಗೊತ್ತಾಗಿಲ್ಲ). ಪಟೇಲರು ಸುಭಾಷರನ್ನು ಸಹ–ಹೋರಾಟಗಾರ ಎಂದು ಭಾವಿಸಿದ್ದರು. ಸುಭಾಷರು ಹಿಡಿದ ಮಾರ್ಗವನ್ನು ಪಟೇಲರು ಒಪ್ಪದೆ ಹೋದರೂ ಅವರ ಧೈರ್ಯ, ಸಾಹಸ ಮತ್ತು ತ್ಯಾಗವನ್ನು ಅಪಾರವಾಗಿ ಮೆಚ್ಚಿದ್ದರು. ಸುಭಾಷರು ಪೂರ್ವ ಏಷ್ಯಾದಲ್ಲಿ ರಚಿಸಿದ್ದ ಇಂಡಿಯನ್ ನ್ಯಾಷನಲ್ ಆರ್ಮಿಯ ಸೈನಿಕರು ಮತ್ತು ಅವರ ಅವಲಂಬಿತರಿಗೆ ಸಹಾಯ ಮಾಡಲು ಮುಂದಾದರು. ಐ.ಎನ್.ಎ.ಯ ಗತಿಸಿದ ಸೈನಿಕರ ಸಂಬಂಧಿಗಳಿಗೆ ನೆರವು ನೀಡಲು ಕಾಂಗ್ರೆಸ್ಸು ಒಂದು ಸಮಿತಿಯನ್ನು ರಚಿಸಿತು. ಆ ಸಮಿತಿಗೆ ಪಟೇಲರು ಅಧ್ಯಕ್ಷರಾಗಿದ್ದರು.

ಐ.ಎನ್.ಎ. ಸೈನಿಕರಿಗೆ ಸಹಾಯ ಮಾಡಿದರೆ ಕಾಂಗ್ರೆಸ್ಸು ತನ್ನ ಅಹಿಂಸಾ ಮಾರ್ಗದಿಂದ ದೂರವಾಯಿತೆಂದು ಅರ್ಥವಲ್ಲ ಎಂದು ಕಾಂಗ್ರೆಸ್ ವಿವರಣೆ ನೀಡಿತು. ಪಟೇಲರು, ಒರಿಸ್ಸಾದ ಮಾಜಿ ಪ್ರಧಾನಿ ವಿಶ್ವನಾಥ್ ದಾಸ್‌ಗೆ ಬರೆದ ಪತ್ರದಲ್ಲಿ ಹೀಗೆ ಹೇಳಿದರು:

> *ಐ.ಎನ್.ಎ. ಸೈನಿಕರ ಧೈರ್ಯ ಮತ್ತು ತ್ಯಾಗವನ್ನು ಕಾಂಗ್ರೆಸ್ಸು ಗುರುತಿಸುತ್ತದೆ. ಹಾಗೆಂದಾಕ್ಷಣಕ್ಕೆ ಅವರ ನಾಯಕ ಅನುಸರಿಸಿದ ಮಾರ್ಗ ಸರಿಯಾಗಿತ್ತೆಂದು ಅರ್ಥವಲ್ಲ..... ಆ ಮಾರ್ಗವನ್ನು ಕಾಂಗ್ರೆಸ್ಸು ಎಂದೂ ಒಪ್ಪಿಲ್ಲ..... ಆದಾಗ್ಯೂ ಸಧ್ಯಕ್ಕೆ ನಾವು ಸ್ವಲ್ಪ ತಾಳ್ಮೆಯನ್ನು ತೋರಬೇಕು.*[೨೦೭]

ಈ ನಡುವೆ ಸರ್ದಾರ್ ಮತ್ತು ಅಜ಼ಾದ್ ನಡುವೆ ಭಿನ್ನಾಭಿಪ್ರಾಯ ಮತ್ತು ತಿಕ್ಕಾಟ ಉದ್ಭವಿಸಿತು. ೧೯೩೭ರ ಚುನಾವಣೆಯಲ್ಲಿ 'ಪಾರ್ಲಿಮೆಂಟರಿ ಬೋರ್ಡ್'ನ ಛೇರ್‌ಮನ್ ಆಗಿ ಸರ್ದಾರರು ಸಂಪೂರ್ಣ ಅಧಿಕಾರವನ್ನು ಹೊಂದಿದ್ದರು ಮತ್ತು ಯಾವ ಅಡೆತಡೆ ಇಲ್ಲದೆ ಯಶಸ್ವಿಯಾಗಿ ಕಾರ್ಯ ನಿರ್ವಹಿಸಿ ಕಾಂಗ್ರೆಸ್ಸಿಗೆ ಅದ್ಭುತ ಜಯ ಗಳಿಸಿಕೊಟ್ಟಿದ್ದರು. ಆದರೆ ೧೯೪೫ರ ಚುನಾವಣೆಯಲ್ಲಿ ಹಾಗಾಗಲಿಲ್ಲ. ಸರ್ದಾರರಿಗೆ ಸಂಪೂರ್ಣ ಅಧಿಕಾರವಿರಲಿಲ್ಲ. ಮೌಲಾನಾ ಆಜ಼ಾದರು ಕಾಂಗ್ರೆಸ್

ಅಧ್ಯಕ್ಷರಾಗಿದ್ದುದರಿಂದ ಅವರು ಪಾರ್ಲಿಮೆಂಟರಿ ಉಪಸಮಿತಿಯ ಅಧ್ಯಕ್ಷರಾಗಿದ್ದರು. ಅವರು ಪಟೇಲರ ಅಧಿಕಾರವನ್ನು ಬೇರೆಯವರಿಗೆ ಮೊಟಕುಗಳಿಸಿದ್ದರು. ೧೯೪೫ರ ನವೆಂಬರ್ ೧೫ರಂದು ಸರ್ದಾರರು ನೆಹರುಗೆ ಪತ್ರ ಬರೆದು, 'ಮೌಲಾನಾ ಅಧಿಕಾರವನ್ನು ಬೇರೆಯವರಿಗೆ ವಹಿಸುವುದಕ್ಕೂ ಇಷ್ಟ ಪಡುವುದಿಲ್ಲ, ಪ್ರಸ್ತಾವನೆಗಳನ್ನು ತಾವೇ ತೀರ್ಮಾನಿಸುವುದೂ ಇಲ್ಲ,' ಎಂದು ತಿಳಿಸಿದ್ದರು.

ಸರ್ದಾರ್ ಮತ್ತು ಅಜ಼ಾದರ ನಡುವೆ ಪ್ರಥಮ ಭಿನ್ನಾಭಿಪ್ರಾಯ ಉಂಟಾದದ್ದು 'ಪಕ್ಷೇತರ ಸಂಸ್ಥೆಗಳಿಗೆ' ಕಾಂಗ್ರೆಸ್ಸು ಬೆಂಬಲ ನೀಡುವ ಬಗೆಗೆ. ಪಟೇಲರು ನವೆಂಬರ್ ೧೦ರಂದು ರಾಜೇಂದ್ರ ಪ್ರಸಾದರಿಗೆ, 'ಮುಸ್ಲಿಂ, ಸಿಖ್ ಮತ್ತು ದಲಿತ ವರ್ಗಗಳ ಸ್ವತಂತ್ರ ಸಂಸ್ಥೆಗಳು ತಮ್ಮದೇ ಪ್ರಾಂತೀಯ ಚುನಾವಣಾ ಸಮಿತಿಗಳನ್ನು ನಡೆಸಲು ಅವಕಾಶ ಕೊಟ್ಟರೆ, ಆ ಸಮಿತಿಗಳ ಮೂಲಕವೇ ಚುನಾವಣೆಗೆ ಅಭ್ಯರ್ಥಿಗಳನ್ನು ನಿಲ್ಲಿಸುವುದಾದರೆ ಮತ್ತು ಕಾಂಗ್ರೆಸ್ಸಿಗರು ಅವರ ಅಧೀನದಲ್ಲಿ ಕೆಲಸ ಮಾಡುವಂತಾದರೆ ಕಾಂಗ್ರೆಸ್ ಪಕ್ಷವನ್ನು ಸಂಪೂರ್ಣವಾಗಿ ಬರಖಾಸ್ತು ಮಾಡಬೇಕಾಗುತ್ತದೆ' ಎಂದು ಬರೆದಿದ್ದರು. ಹಾಗಾದರೆ ಕಾಂಗ್ರೆಸ್ಸಿಗರು ಹೊರನಡೆಯುತ್ತಾರೆ ಎನ್ನುವ ಭಯ ಪಟೇಲರಿಗಿತ್ತು. ಆ ಸಮಯದಲ್ಲಿ ಮಾಸ್ಟರ್ ತಾರಾ ಸಿಂಗ್‌ರವರು ಅಕಾಲಿಗಳಲ್ಲಿ ಅತೃಪ್ತಿ ಹೆಚ್ಚುತ್ತಿರುವ ಬಗೆಗೆ ಸರ್ದಾರರನ್ನು ಸಂಪರ್ಕಿಸಿದರು. ೧೯೪೫ರ ನವೆಂಬರ್ ೧೪ ರಂದು ಆಜ಼ಾದರು ಸರ್ದಾರರಿಗೆ ಒಂದು ಟೆಲಿಗ್ರಾಂ ಕಳುಹಿಸಿ, 'ಅಕಾಲಿಗಳು ನಿಮ್ಮ ಬಳಿಗೆ ಬಂದರೆ ದಯವಿಟ್ಟು ಅವರನ್ನು ನನ್ನ ಬಳಿಗೆ ಕಳುಹಿಸಿ' ಎಂದು ತಿಳಿಸಿದರು. ಮುಂದೆ ೧೯೪೬ ಫೆಬ್ರುವರಿ ೧೪ ರಂದು ಆಜ಼ಾದರು ಪಟೇಲರಿಗೆ, 'ಉಳಿದ ಪ್ರಾಂತ್ಯಗಳಲ್ಲಿ ಅಭ್ಯರ್ಥಿಗಳ ಆಯ್ಕೆಯನ್ನು ಪಾರ್ಲಿಮೆಂಟರಿ ಸಮಿತಿ ವಿಲೇವಾರಿ ಮಾಡಬಹುದು. ಆ ನಂತರ ಮೇಲ್ಮನವಿ ಏನಾದರೂ ಇದ್ದರೆ, ಅದನ್ನು ನಾನು ತೀರ್ಮಾನಿಸುತ್ತೇನೆ' ಎಂದು ತಿಳಿಸಿದರು. ಪಟೇಲರು ನೇರವಾಗಿ ಉತ್ತರಿಸಿ, "ಕೇಂದ್ರ ಸಮಿತಿಯ ತೀರ್ಪಿನ ವಿರುದ್ಧ ಮೇಲ್ಮನವಿ ಇಲ್ಲವೇ ಇಲ್ಲ. ಜೊತೆಗೆ, ಅಂತಹ ಪದ್ಧತಿಯು ಅಶಿಸ್ತು ಮತ್ತು ಮಿತಿಯಿಲ್ಲದ ವಿವಾದಗಳಿಗೆ ಪ್ರೋತ್ಸಾಹ ನೀಡುತ್ತದೆ," ಎಂದರು. ಆದರೆ ಆಜ಼ಾದರು ಅಷ್ಟಕ್ಕೆ ಸುಮ್ಮನಾಗಲಿಲ್ಲ. ಅವರೆಂದರು, "ಏನಾದರೂ ಮೇಲ್ಮನವಿ ಬಂದರೆ, ಅದನ್ನು ನೀವು ನನಗೆ ಕಳುಹಿಸಿ. ನಾನು ಅದನ್ನು ನಿಮ್ಮೊಡನೆ ಸಮಾಲೋಚಿಸಿ, ತೀರ್ಮಾನಿಸುತ್ತೇನೆ." ಪಟೇಲರು ಕಟುವಾಗಿ ಹೇಳಿದರು, "ಅಂತಹ ಅಧಿಕಾರ ನಿಮಗೆ ಇದ್ದಿದ್ದರೆ, ಅದು ಕಾರ್ಯಕಾರಿ ಸಮಿತಿಯ ಠರಾವಿನಲ್ಲಿ ಖಚಿತವಾಗಿ ನಮೂದಿಸಬೇಕಾಗಿತ್ತು. ಅಲ್ಲದೆ, ನೀವೇನಾದರು ಮೇಲ್ಮನವಿ ಸ್ವೀಕರಿಸುವ ಅಧಿಕಾರ ಹೊಂದಿದ್ದರೆ, ಅದೇ ಸಮಯದಲ್ಲಿ ನೀವು ಸಮಿತಿಯ ಚೇರ್‌ಮನ್ ಆಗುವ

ಹಾಗಿಲ್ಲ. ನಿಮ್ಮ ತೀರ್ಮಾನದ ಬಗೆಗೆ ನಿಮಗೇ ಮೇಲ್ಮನವಿ ಸಲ್ಲಿಸುವುದು ಒಂದು ವಿಚಿತ್ರ ಪದ್ಧತಿ" ಎಂದರು.

ಪಟೇಲರು ಅಷ್ಟಕ್ಕೇ ನಿಲ್ಲಿಸಲಿಲ್ಲ, ಆಜ಼ಾದರು ನಿರೀಕ್ಷಿಸದಂತಹ ಪ್ರತಿಕ್ರಿಯೆಯ ಏಟನ್ನು ಕೊಟ್ಟರು. ಅವರೆಂದರು, "ನಿಮ್ಮ ನಿಲವಿನ ಫಲವಾಗಿ, ನಾನು ಕೇಂದ್ರ ಚುನಾವಣಾ ಸಮಿತಿ ಹಾಗೂ ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೆ ಈ ಕ್ಷಣ ರಾಜಿನಾಮೆಯನ್ನು ನೀಡುತ್ತೇನೆ..... ನಾನು ಈ ತೀರ್ಮಾನವನ್ನು ಒಂದು ಬಹಳ ವಿಷಮ ಸಂದರ್ಭದಲ್ಲಿ ಕೊಡಬೇಕಾಗಿ ಬಂದಿರುವುದಕ್ಕೆ ವಿಷಾದಿಸುತ್ತೇನೆ. ಆದರೆ ನನ್ನನ್ನು ನಡೆಸಿಕೊಂಡಿರುವ ರೀತಿ ಅನಿರೀಕ್ಷಿತವಾದುದು ಮತ್ತು ಅನುಚಿತವಾದುದು. ಅದರಿಂದ ನನಗೆ ಅದು ಬಿಟ್ಟರೆ ಬೇರೆ ಮಾರ್ಗವಿಲ್ಲ." ಮಾರನೆಯ ದಿನ ಪಟೇಲರು ಗಾಂಧೀಜಿಗೆ, "ಮೌಲಾನ ಒಡನೆ ವ್ಯವಹರಿಸುವುದು ನನಗೆ ಕಷ್ಟವಾಗುತ್ತಿದೆ. ಅವರು ಸರ್ವಾಧಿಕಾರಿಯಂತೆ ವರ್ತಿಸುತ್ತಿದ್ದಾರೆ..... ನನ್ನನ್ನು ಬಿಡುಗಡೆ ಮಾಡಿ ಎಂದು ನಾನು ಅವರನ್ನು ಕೇಳಿದ್ದೇನೆ," ಎಂದು ತಿಳಿಸಿದರು.

ಆಜ಼ಾದರಿಗೆ ದಿಗಿಲಾಯಿತು. ಕಾಂಗ್ರೆಸ್ ಪಕ್ಷದೊಳಗೆ ಭಾರಿ ಬಿರುಕು ಉಂಟಾಗುತ್ತದೆಂದು ಹೆದರಿದರು. ಅವರು ಫ಼ೆಬ್ರುವರಿ ೨೮ರಂದು ಪಟೇಲರಿಗೆ ಪತ್ರ ಬರೆದು ತಮ್ಮ ವಿಷಾದವನ್ನು ವ್ಯಕ್ತಪಡಿಸಿದರು. ಅವರು ತಮ್ಮ ಪತ್ರದಲ್ಲಿ, 'ನಾನು ಈ ವಿಷಯವನ್ನು ನೀವು ತೆಗೆದುಕೊಂಡ ರೀತಿಯಲ್ಲಿ ಯೋಚಿಸಿರಲಿಲ್ಲ ಎಂದು ಆಶ್ವಾಸನೆ ನೀಡುತ್ತೇನೆ. ಸಮಿತಿಯ ತೀರ್ಮಾನಕ್ಕೆ ವಿರುದ್ಧವಾದ ತೀರ್ಮಾನವನ್ನು ನಾನು ತೆಗೆದುಕೊಳ್ಳುತ್ತಿದ್ದೇನೆ ಎಂಬ ಕಲ್ಪನೆಯೇ ನನಗಿರಲಿಲ್ಲ' ಎಂದು ತಿಳಿಸಿ ಪಟೇಲರ 'ಉದಾರ ಮನೋಭಾವ'ವನ್ನು ಕೋರಿದರು.[೨೦೮]

(ಪಟೇಲರು ಕಾಂಗ್ರೆಸ್ ನಾಯಕತ್ವಕ್ಕೆ ರಾಜಿನಾಮೆ ನೀಡಿ ಹೊರನಡೆದರೆ, ಚುನಾವಣೆಯಲ್ಲಿ ಸ್ಪರ್ಧಿಸಲು ಕಾಂಗ್ರೆಸ್ ಮತ್ತು ಅದರ ಅಧ್ಯಕ್ಷರಿಗೆ ಹಣ ಒದಗಿಸುವವರು ಯಾರು? ಹಣವಿಲ್ಲದೆ ಚುನಾವಣೆ ಗೆಲ್ಲಲು ಸಾಧ್ಯವೇ? ಇದು ಮೌಲಾನಾ ಅಜ಼ಾದರನ್ನು ಚಿಂತೆಗೀಡು ಮಾಡಿರಬೇಕು – ಲೇಖಕ)

ಚುನಾವಣಾ ಮತ್ತು ಅದರ ವೆಚ್ಚ ಗಾಂಧೀಜಿಯನ್ನು ಚಿಂತೆಗೀಡುಮಾಡಿತು. ಅವರು ಚುನಾವಣೆಯಲ್ಲಿ ಕಾಂಗ್ರೆಸ್ಸಿನ ಯಶಸ್ಸನ್ನು ಬಯಸಿದ್ದರು, ಆದರೆ ಅದರ ವೆಚ್ಚದ ಹಣಕ್ಕಾಗಿ ಶ್ರೀಮಂತರನ್ನು ಅವಲಂಬಿಸುವುದು ಅವರಿಗೆ ಇಷ್ಟವಿರಲಿಲ್ಲ. 'ಧನ ಶೇಖರಣೆಯಿಂದ ದೂರವಿರು' ಎಂದು ಗಾಂಧೀಜಿಯವರು ಪಟೇಲರಿಗೆ ಸಲಹೆ ನೀಡಿದರು. ಆದರೆ ಕಾಂಗ್ರೆಸ್ ಅಧ್ಯಕ್ಷರು ಮತ್ತು ಕಾರ್ಯಕಾರಿ ಸಮಿತಿಯು

ಪಟೇಲರು ಧನ ಸಂಗ್ರಹಿಸುವುದನ್ನು ಬಯಸಿತ್ತು. ಜೊತೆಗೆ ಹಣ ಸಂಗ್ರಹಣೆ ಅನಿವಾರ್ಯ. ಅದು ಪಟೇಲರಿಗೆ ತಿಳಿದಿತ್ತು. ಯಾರಾದರು ಆ ಕೆಲಸ ಮಾಡಬೇಕಾಗಿತ್ತು. ಗಾಂಧೀಜಿಯವರ ಸಲಹೆ ಕಾರ್ಯಸಾಧುವಾಗಿರಲಿಲ್ಲ. ಅದರಿಂದ ಪಟೇಲರು ಆ ಕೆಲಸದಲ್ಲಿ ತೊಡಗಿದರು. ಗಾಂಧೀಜಿಯ ಸಲಹೆಯನ್ನು ಪಕ್ಕಕ್ಕಿಟ್ಟರು. ಗಾಂಧೀಜಿಯ ಕಾರ್ಯಶೀಲವಲ್ಲದ ಸಲಹೆಗಳನ್ನು ಬದಿಗಿಟ್ಟು, ಸ್ವತಂತ್ರವಾಗಿ ಆಲೋಚಿಸಿ ಕೆಲಸ ಮಾಡಲು ಆರಂಭಿಸಿದ್ದರು ಪಟೇಲರು.

ಗಾಂಧೀಜಿಯವರು, "ಸರ್ದಾರನು ವರ್ತಕರಿಂದ ಹಣ ಸಂಗ್ರಹಿಸುವುದನ್ನು ನಾನು ಇಷ್ಟಪಡುವುದಿಲ್ಲ" ಎಂದು ಜಿ.ಡಿ. ಬಿರ್ಲಾರವರಿಗೆ ಹೇಳಿದರು. ಬಿರ್ಲಾರವರು ಗಾಂಧೀಜಿಯ ಆ ಮಾತನ್ನು ಪಟೇಲರಿಗೆ ತಿಳಿಸಿದರು. ಅದಕ್ಕೆ ಪಟೇಲರ ಉತ್ತರ ಹೀಗಿತ್ತು:

> ಅದು ಅವರಿಗೆ ಸಂಬಂಧಪಟ್ಟ ವಿಷಯವಲ್ಲ. ಗಾಂಧೀಜಿ ಒಬ್ಬ ಮಹಾತ್ಮ. ನಾನು ಮಹಾತ್ಮನಲ್ಲ. ನಾನು ನನ್ನ ಕೆಲಸವನ್ನು ಮಾಡಬೇಕು.

ಪಟೇಲರ ಬದಲಾದ ದೃಷ್ಟಿಯಿಂದ ಅವರು ಮತ್ತು ಗಾಂಧೀಜಿಯ ನಡುವಣ ಆತ್ಮೀಯ ಸಂಬಂಧಕ್ಕೆ ಯಾವ ಧಕ್ಕೆಯೂ ಬರಲಿಲ್ಲ. ೧೯೪೫ ಅಕ್ಟೋಬರ್ ೩೧ರಂದು ಪಟೇಲರ ಹುಟ್ಟುಹಬ್ಬದಂದು ಗಾಂಧೀಜಿಯವರು "ನನಗೆ ಒಬ್ಬ ಮಗ ಎಷ್ಟು ಪ್ರಿಯನೊ ಅಷ್ಟು ಪ್ರಿಯ ಸರ್ದಾರ" ಎಂದು ವರ್ಣಿಸಿದರು. ಅವರು ೧೯೪೬ರ ಜನವರಿಯಲ್ಲಿ ಪಟೇಲರಿಗೆ ಬರೆದ ಒಂದು ಪತ್ರದಲ್ಲಿ 'ನೀನೊಬ್ಬ ಬಾರ್ಡೋಲಿಯ ಸರ್ದಾರ ಮತ್ತು ಹಾಗೆಯೆ ಭಾರತದ ಸರ್ದಾರ' ಎಂದು ಬರೆದರು.[೨೦೯]

ಡಿಸೆಂಬರ್ ೨೭ರಂದು ಆಗಾಖಾನ್, ಸರ್ದಾರ್ ಪಟೇಲರನ್ನು ಕರೆಯಿಸಿಕೊಂಡು 'ಜಿನ್ನಾ ಒಡನೆ ಒಂದು ಒಪ್ಪಂದಕ್ಕೆ ಬರುವುದು ಉತ್ತಮ' ಎಂದರು. ಆಗಾಖಾನ್‌ರವರು ಮುಸ್ಲಿಮರಲ್ಲಿನ ಒಂದು ಪಂಗಡದ ಪ್ರಭಾವಶಾಲಿ ಶ್ರೀಮಂತ ಮುಖ್ಯಸ್ಥ. ಅವರ ಸಲಹೆಗೆ ಪಟೇಲರ ಪ್ರತಿಕ್ರಿಯೆ ಹೀಗಿತ್ತು:

> ನಾವು, ಅಂದರೆ ಕಾಂಗ್ರೆಸ್ಸಿನವರು, ಅವನೊಡನೆ ಮಾತುಕತೆಯನ್ನು ಉಪಕ್ರಮಿಸುವುದಕ್ಕೆ ಇಷ್ಟ ಪಡುವುದಿಲ್ಲ, ಏಕೆಂದರೆ ಅವನು ವರ್ಷವಿಡೀ ನಮ್ಮನ್ನು ನಿಂದಿಸುತ್ತಿರುತ್ತಾನೆ. ವಾಸ್ತವವಾಗಿ ಅವನು ಇತ್ಯರ್ಥವನ್ನು ಪ್ರಾಮಾಣಿಕವಾಗಿ ಬಯಸುವುದಿಲ್ಲ.

ಆ ಮಾತಿಗೆ ಆಗಾ ಖಾನ್‌ರವರು, 'ಜಿನ್ನಾ ಈಗ ಒಳ್ಳೆಯ ಮನಃಸ್ಥಿತಿಯಲ್ಲಿದ್ದಾನೆ' ಎಂದರು. ಪಟೇಲರು "ನಾನು ಅದನ್ನು ಖಂಡಿತ ನಂಬುವುದಿಲ್ಲ. ಅವನೊಡನೆ ಯಾವುದೇ ಸಂಬಂಧ ಇಟ್ಟುಕೊಳ್ಳಬಾರದೆಂದು ನಾವು ತೀರ್ಮಾನಿಸಿರುವುದರಿಂದ, ನಮ್ಮನ್ನು ತನ್ನ ಬಲೆಗೆ ಬೀಳಿಸಿಕೊಳ್ಳಲು ನಮಗೆ ಆಮಿಷ ಒಡ್ಡುವುದಕ್ಕಾಗಿ ಅವನು ಈ ರೀತಿ ನಾಟಕ ಆಡುತ್ತಿರಬಹುದು. ಆದರೆ, ನಮ್ಮ ಮಟ್ಟಿಗೆ ಹೇಳುವುದಾದರೆ, ಅವನೊಡನೆ ಮಾತುಕತೆ ನಡೆಸುವುದಕ್ಕೆ ಯಾವ ಸುಳಿವನ್ನೂ ನೀಡಬಾರದೆಂದು ತೀರ್ಮಾನಿಸಿದ್ದೇವೆ," ಎಂದರು. ಪಟೇಲರದು ಯಾವಾಗಲೂ ಖಂಡ ತುಂಡ ಮಾತು. ಹಿಂದು ಮುಂದು ನೋಡುವ ಬಾಬತ್ತೇ ಇಲ್ಲ.

ಮಾರನೆಯ ದಿನ ಪಟೇಲರು ಆಗಾ ಖಾನ್ ಜೊತೆ ತಾವು ನಡೆಸಿದ ಸಂಭಾಷಣೆಯನ್ನು ಗಾಂಧೀಜಿಗೆ ಪತ್ರದ ಮೂಲಕ ತಿಳಿಸಿದರು.[೨೧೦]

ಕೇಂದ್ರ ಶಾಸನ ಸಭೆಯ ಚುನಾವಣೆಯು ಡಿಸೆಂಬರ್ ೧೯ಳಿಂದ ಜನವರಿಯಲ್ಲಿ ನಡೆಯಿತು. ಚುನಾವಣೆ ನಡೆದ ೧೦೨ ಸ್ಥಾನಗಳ ಪೈಕಿ ೫೯ ಸ್ಥಾನಗಳಲ್ಲಿ ಕಾಂಗ್ರೆಸ್ಸು, ೩೦ ಸ್ಥಾನಗಳಲ್ಲಿ ಮುಸ್ಲಿಂ ಲೀಗ್ ಜಯಗಳಿಸಿದುವು. ಉಳಿದ ೧೩ ಸ್ಥಾನಗಳ ಪೈಕಿ ಅಕಾಲಿದಳ ೨ ಸ್ಥಾನಗಳನ್ನು, ಸ್ವತಂತ್ರರು ೩ ಸ್ಥಾನಗಳನ್ನು, ಯೂರೋಪಿಯನ್ನರು ೮ ಸ್ಥಾನಗಳನ್ನು ಗಳಿಸಿದರು. ಕಾಂಗ್ರೆಸ್ಸು ಶೇ. ೯೧.೩ ಮುಸ್ಲಿಮೇತರ ಮತಗಳನ್ನು ಪಡೆದರೆ, ಮುಸ್ಲಿಂ ಲೀಗ್ ೮೬.೬೦. ಮುಸ್ಲಿಂ ಮತಗಳನ್ನು ಪಡೆಯಿತು. ಅದು ಮುಸ್ಲಿಮರಿಗೆ ಮೀಸಲಿದ್ದ ಎಲ್ಲಾ ೩೦ ಸ್ಥಾನಗಳನ್ನು ಗಳಿಸಿತು.[೨೧೧]

ಸರ್ದಾರರು ಎಷ್ಟು ಕಷ್ಟದಲ್ಲಿ ಚುನಾವಣಾ ಕೆಲಸಗಳನ್ನು ನಿರ್ವಹಿಸಿದರು ಎನ್ನುವುದು ಅವರು ೧೯ಳಿಂದ ನವೆಂಬರ್ ೬ರಂದು ಜವಹರಲಾಲ್ ನೆಹರುಗೆ ಬರೆದ ಪತ್ರದಿಂದ ತಿಳಿಯುತ್ತದೆ. ಆ ಪತ್ರದ ಒಂದು ಭಾಗ:

> ಕೇಂದ್ರ ಚುನಾವಣಾ ಸಮಿತಿಯ ವಿಷಯದಲ್ಲಿ ನಾನೊಂದು ಪೇಚಿನಲ್ಲಿದ್ದೇನೆ. ಮೌಲಾನಾಗೆ ಆರೋಗ್ಯ ಸರಿಯಿಲ್ಲ. ಅವರು ಕಾರ್ಯಕಾರಿ ಸಮಿತಿಯ ಸಭೆಯನ್ನು ಕಲ್ಕತ್ತದಲ್ಲಿ ಡಿಸೆಂಬರ್ ಅಂತ್ಯದಲ್ಲಿ ನಡೆಸಲು ಉದ್ದೇಶಿಸಿದ್ದಾರೆ. ಅದು ಬಹಳ ತಡವಾಗುತ್ತದೆ. ಆಸಿಫ್ ಆಲಿಯವರು ತಮ್ಮದೇ ಚುನಾವಣಾ ವಿಷಯದಲ್ಲಿ ಮತ್ತು ಇಂಡಿಯನ್ ನ್ಯಾಷನಲ್ ಆರ್ಮಿಯನ್ನು

> ಸಮರ್ಥಿಸುವ ಕೆಲಸದಲ್ಲಿ ಬಿಡುವು ರಹಿತರಾಗಿದ್ದಾರೆ. ರಾಜೆನ್ ಬಾಬು ಮತ್ತು ಪಂತ್‌ರವರು ತಮ್ಮ ತಮ್ಮ ಕೇಂದ್ರ ಶಾಸನ ಸಭಾ ಚುನಾವಣೆ ಮತ್ತು ಇತರ ಪ್ರಮುಖ ಕಾಂಗ್ರೆಸ್ ಕೆಲಸಗಳಿಗಾಗಿ ತಮ್ಮ ತಮ್ಮ ಪ್ರಾಂತ್ಯಗಳಲ್ಲಿ ಸಂಚರಿಸುತ್ತಿದ್ದಾರೆ. ಪ್ರಾಂತ್ಯಗಳಿಂದ ಬರುತ್ತಿರುವ ತುರ್ತು ಪ್ರಸ್ತಾವನೆಗಳನ್ನು ವಿಲೇವಾರಿ ಮಾಡಲು ನನಗೆ ಅಧಿಕಾರವಿಲ್ಲ..... ಸಮಿತಿ ಸಭೆ ಸೇರುತ್ತಿಲ್ಲ.[೨೧೨]

ಇಷ್ಟರ ಜೊತೆಗೆ ಸ್ವತಃ ಪಟೇಲರಿಗೇ ಉತ್ತಮ ಆರೋಗ್ಯವಿರಲಿಲ್ಲ. ಇಷ್ಟಾದರೂ ಅವರು ಕೇಂದ್ರ ಶಾಸನ ಸಭಾ ಚುನಾವಣೆಯಲ್ಲಿ ಭರ್ಜರಿ ಜಯಭೇರಿ ಭಾರಿಸಿದ್ದರು. ಮುಂದೆ ನಡೆದ ಪ್ರಾಂತ್ಯಗಳ ಶಾಸನ ಸಭೆಗಳ ಚುನಾವಣೆಯಲ್ಲೂ ಸಹ ಕಾಂಗ್ರೆಸ್ಸು ಅದ್ಭುತ ಜಯ ಗಳಿಸಿತು.

ಪ್ರಾಂತ್ಯ ಶಾಸನ ಸಭೆಗಳ ಚುನಾವಣೆಯು ೧೯೪೬ರ ಜನವರಿಯಲ್ಲಿ ನಡೆಯಿತು. ಆ ಚುನಾವಣೆಯಲ್ಲಿ ಮುಸ್ಲಿಂ ಮತ್ತು ಸಿಖ್ ಸ್ಥಾನಗಳನ್ನು ಕಾಂಗ್ರೆಸ್ಸು ಗೆಲ್ಲುವ ಭರವಸೆ ಸರ್ದಾರರಿಗೆ ಇರಲಿಲ್ಲ. ಆದರೆ ಇತರ ಪ್ರಾಂತ್ಯಗಳಲ್ಲಿ ಎಲ್ಲಾ ಸಾಮಾನ್ಯ ಸ್ಥಾನಗಳನ್ನು ಗೆಲ್ಲುವ ಭರವಸೆ ಅವರಿಗಿತ್ತು. ಅದರಿಂದ ಅವರು ಹಿಂದೂ ಮಹಾ ಸಭಾದಂತಹ ಇತರ ಪಕ್ಷಗಳೊಡನೆ ಚುನಾವಣಾ ಹೊಂದಾಣಿಕೆ ಮಾಡಿಕೊಳ್ಳುವುದನ್ನು ತಳ್ಳಿ ಹಾಕಿದರು. ಕಾಂಗ್ರೆಸ್ಸು ತನ್ನ ಸ್ವಂತ ಶಕ್ತಿಯಿಂದಲೇ ಎಲ್ಲಾ ಸ್ಥಾನಗಳನ್ನು ಗೆಲ್ಲುವ ಸಾಧ್ಯತೆ ಇರುವಾಗ, ಇತರ ಪಕ್ಷಗಳೊಡನೆ ಹೊಂದಾಣಿಕೆ ಮಾಡಿಕೊಂಡು ಅವರಿಗಷ್ಟು ಸ್ಥಾನಗಳನ್ನು ಬಿಟ್ಟು ಕೊಡುವ ಅವಶ್ಯಕತೆ ಕಾಂಗ್ರೆಸ್ಸಿಗೆ ಇರಲಿಲ್ಲ. ಆದಾಗ್ಯೂ ಹಿಂದೂ ಮಹಾ ಸಭಾ ನಾಯಕ ಶ್ಯಾಂ ಪ್ರಸಾದ್ ಮುಖರ್ಜಿಯವರಿಗೆ ಒಂದು ಸ್ಥಾನ ಬಿಟ್ಟುಕೊಡಲು ಸರ್ದಾರರು ಸಿದ್ಧವಿದ್ದರು. ಶ್ಯಾಂ ಪ್ರಸಾದ್ ಮುಖರ್ಜಿಯವರಿಗೆ ಇಡೀ ಭಾರತದಲ್ಲಿ ಭಾರಿ ಮನ್ನಣೆ ಇತ್ತು. ಸಾಮಾನ್ಯ ಜನರಲ್ಲದೆ ವಿಚಾರವಂತ ವರ್ಗದಲ್ಲು ಅವರು ಜನಪ್ರಿಯತೆಯನ್ನು ಗಳಿಸಿದ್ದರು. ಆದರೆ ಆ ಪಕ್ಷದ ಇತರ ಸದಸ್ಯರು ಕಾಂಗ್ರೆಸ್ ವಿರುದ್ಧ ಗೆಲ್ಲುವ ಸಾಧ್ಯತೆ ಇಲ್ಲ ಎನ್ನುವುದು ಸರ್ದಾರರ ನಿಲುವಾಗಿತ್ತು.[೨೧೩]

ಮದ್ರಾಸ್, ಬೊಂಬಾಯಿ, ಸಂಯುಕ್ತ ಪ್ರಾಂತ್ಯಗಳು, ಬಿಹಾರ, ಮಧ್ಯ ಪ್ರಾಂತ್ಯಗಳು, ಒರಿಸ್ಸ ಮತ್ತು ಅಸ್ಸಾಂನಲ್ಲಿ ಕಾಂಗ್ರೆಸ್ಸು ಅದ್ಭುತ ಯಶಸ್ಸು ಗಳಿಸುವ ನಂಬಿಕೆ ಪಟೇಲರಿಗಿತ್ತು. ಆದರೆ ಪಂಜಾಬ್, ಬಂಗಾಳ, ಸಿಂದ್ ಮತ್ತು ವಾಯುವ್ಯ ಗಡಿನಾಡಿನಲ್ಲಿ ಕಾಂಗ್ರೆಸ್ಸು ಬಹಳ ಕಷ್ಟಪಡಬೇಕಾಗಿತ್ತು. ಮುಸ್ಲಿಂ ಲೀಗ್ ಮತ್ತು ಅದರ ದೇಶ ವಿಭಜನಾ ನೀತಿಯನ್ನು ನಿರಂತರವಾಗಿ ವಿರೋಧಿಸುವುದು ಕಾಂಗ್ರೆಸ್ಸಿನ

ನೀತಿಯಾಗಿತ್ತು. ಅದರ ಜೊತೆಗೆ, ದೇಶದ ಐಕ್ಯತೆಯನ್ನು ಎತ್ತಿಹಿಡಿಯುವುದಕ್ಕಾಗಿ ಪಂಜಾಬಿನ ಯೂನಿಯನಿಸ್ಟ್ ಪಕ್ಷ ಮುಂತಾದ ಪಕ್ಷಗಳಿಗೆ ಬೆಂಬಲ ನೀಡಲು ಕಾಂಗ್ರೆಸ್ ತೀರ್ಮಾನಿಸಿತು. ಯೂನಿಯನಿಸ್ಟ್ ಪಕ್ಷವು ಕಾಂಗ್ರೆಸ್‌ನ ನೀತಿಯ ತರಹದ ನೀತಿಯನ್ನೇ ಅನುಸರಿಸುತ್ತಿತ್ತು. ಅದು ೧೯೨೬ರಿಂದ ಹಿಂದೂ, ಸಿಖ್ ಮತ್ತು ಮುಸ್ಲಿಂ ಮೈತ್ರಿಯ ಸರ್ಕಾರವನ್ನು ನಡೆಸುತ್ತಿತ್ತು. ಆ ಪಕ್ಷದವರಿಗೆ, ಅದರಲ್ಲಿ ಮುಸ್ಲಿಮರೇ ಅಧಿಕವಾಗಿದ್ದರೂ, ಮುಸ್ಲಿಂ ಲೀಗ್ ಮತ್ತು ದೇಶ ವಿಭಜನೆಯ ಬಗೆಗೆ ಒಲವು ಇರಲಿಲ್ಲ.[೨೧೪]

ಪ್ರಾಂತ್ಯ ಶಾಸನ ಸಭೆಗಳ ಚುನಾವಣೆಯಲ್ಲಿ ಪಟೇಲರು ನಿರೀಕ್ಷಿಸಿದ್ದಂತೆಯೇ ಫಲಿತಾಂಶ ಬಂದಿತು. ಒಟ್ಟು ೧೫೮೫ ಸ್ಥಾನಗಳ ಪೈಕಿ ಕಾಂಗ್ರೆಸ್ಸು ೯೨೩ ಸ್ಥಾನಗಳನ್ನು ಮತ್ತು ಮುಸ್ಲಿಂ ಲೀಗ್ ೪೨೫ ಸ್ಥಾನಗಳನ್ನು ಗಳಿಸಿದುವು.

ಕಾಂಗ್ರೆಸ್ಸು ೧೧ ಪ್ರಾಂತ್ಯಗಳ ಪೈಕಿ ೮ ಪ್ರಾಂತ್ಯಗಳಲ್ಲಿ ಅಂದರೆ ಅಸ್ಸಾಂ, ಬಿಹಾರ್, ಸಂಯುಕ್ತ ಪ್ರಾಂತ್ಯಗಳು, ಬಾಂಬೆ, ಮದ್ರಾಸ್, ಮಧ್ಯ ಪ್ರಾಂತ್ಯಗಳು, ಒರಿಸ್ಸ ಮತ್ತು ವಾಯುವ್ಯ ಗಡಿನಾಡು ಪ್ರಾಂತ್ಯಗಳಲ್ಲಿ ಅದ್ಭುತ ಜಯ ಗಳಿಸಿ ಮಂತ್ರಿಮಂಡಲಗಳನ್ನು ರಚಿಸಿತು. ಉಳಿದ ೩ ಪ್ರಾಂತ್ಯಗಳಾದ ಸಿಂದ್, ಪಂಜಾಬ್ ಮತ್ತು ಬಂಗಾಳಗಳಲ್ಲಿ ಕಾಂಗ್ರೆಸ್ ಬೆಂಬಲಿತ ಮಂತ್ರಿಮಂಡಲಗಳನ್ನು ರಚಿಸಲು ಸರ್ದಾರರು ಪ್ರಯತ್ನಿಸಿದರು.

ಸಿಂದ್‌ನ ಶಾಸನ ಸಭಾ ಚುನಾವಣೆಯಲ್ಲಿ ಮುಸ್ಲಿಂ ಲೀಗ್ ೨೭ ಸ್ಥಾನಗಳನ್ನು ಗೆದ್ದಿತ್ತು. ಕಾಂಗ್ರೆಸ್ ೨೨ ಸ್ಥಾನಗಳನ್ನು ಗೆದ್ದಿತ್ತು. ಲೀಗ್‌ನಿಂದ ಹೊರಬಿದ್ದಿದ್ದ ಜಿ.ಎಂ. ಸಯದ್‌ನ ಗುಂಪು ೪ ಸ್ಥಾನಗಳನ್ನು, ರಾಷ್ಟ್ರೀಯ ಮುಸ್ಲಿಮರು ೪ ಸ್ಥಾನಗಳನ್ನು ಗೆದ್ದಿದ್ದರು. ಅಂದರೆ ಮುಸ್ಲಿಂ ಲೀಗ್‌ನ ೨೭ ಸ್ಥಾನಗಳಿಗೆ ವಿರುದ್ಧವಾಗಿ ೩೦ ಸ್ಥಾನಗಳು ಇತರರಿಗೆ ಲಭಿಸಿದ್ದುವು. ಪಟೇಲ್ ಮತ್ತು ಆಜ಼ಾದರು ಸಿಂದ್ ಪ್ರಾಂತ್ಯದ ಕರಾಚಿಗೆ ಜನವರಿ ೩೧ರಂದು ತಲುಪುವ ಕಾರ್ಯಕ್ರಮ ನಿಗದಿಯಾಗಿತ್ತು. ಕಾರ್ಯಕ್ರಮದಂತೆ ಪಟೇಲರು ೩೧ರಂದು ಕರಾಚಿ ತಲುಪಿದರು. ಆದರೆ ಆಜ಼ಾದ್ ಬರಲಿಲ್ಲ. ಅವರು ಫ಼ೆಬ್ರುವರಿ ೩ರಂದು ಬಂದರು. ಆದರೆ ಸರ್ದಾರ್ ಮತ್ತು ಆಜ಼ಾದರ ಗುರಿ ಬೇರೆ ಬೇರೆಯಾಗಿತ್ತು.

ಇತರರೊಡನೆ ಸೇರಿ ಸರ್ಕಾರವನ್ನು ರಚಿಸಿ ಮುಸ್ಲಿಂ ಲೀಗ್ ಸರ್ಕಾರ ರಚಿಸುವುದನ್ನು ತಪ್ಪಿಸಿ, ಅದರ ಪಾಕಿಸ್ತಾನ ರಚನೆಯ ಪ್ರಯತ್ನಕ್ಕೆ ಹಿನ್ನಡೆ ಉಂಟುಮಾಡುವುದು ಸರ್ದಾರರ ಗುರಿಯಾಗಿತ್ತು. ಆದರೆ ಮುಸ್ಲಿಂ ಲೀಗ್ ಒಡನೆಯೆ ಕಾಂಗ್ರೆಸ್ಸು ಸಮ್ಮಿಶ್ರ ಸರ್ಕಾರ ರಚಿಸುವುದು ಕಾಂಗ್ರೆಸ್ ಅಧ್ಯಕ್ಷ ಆಜ಼ಾದರ ಗುರಿಯಾಗಿತ್ತು.

ಆಜ಼ಾದರು ಬರುವ ಮುನ್ನ ಸರ್ದಾರರು ಹಿದಾಯತುಲ್ಲಾ ಜೊತೆ ಮಾತನಾಡಿ, ಅವನನ್ನು ತಮ್ಮ ಕಡೆಗೆ ಸೆಳೆದಿದ್ದರು. ಆಗ ವರದಿಯಾಗಿದ್ದಂತೆ, ಹಿದಾಯಿತುಲ್ಲಾ, ತನ್ನನ್ನು ಪ್ರಧಾನಿ ಮಾಡುವುದಾದರೆ ಕಾಂಗ್ರೆಸ್ ನಾಮಕರಣವನ್ನು ಒಪ್ಪುವುದಲ್ಲದೆ ಪಾಕಿಸ್ತಾನವನ್ನು ಕರಾಚಿಯ ಮಣ್ಣಿನಲ್ಲಿ ಹೂತು ಬಿಡಲು ಪಟೇಲರಿಗೆ ಸಹಾಯ ಮಾಡಲು ಒಪ್ಪಿದನು. ಹಿಂದೂ ನಾಯಕರೂ ಸಹ ಹಿದಾಯತುಲ್ಲಾನ ನಾಯಕತ್ವ ವನ್ನು ಒಪ್ಪುವಂತೆ ಸರ್ದಾರರು ಮಾಡಿದ್ದರು. ಹಿದಾಯತುಲ್ಲಾ ತನ್ನ ಬೆಂಬಲಿಗರನ್ನು ಕರೆತರುವುದರಿಂದ ಮುಸ್ಲಿಂ ಲೀಗ್‌ನ ವಿರುದ್ಧ ಇರುವವರ ಸಂಖ್ಯೆ ೩೫–೩೬ಕ್ಕೆ ಏರುತ್ತಿತ್ತು. ಆದರೆ ಆಜ಼ಾದರು ಬಂದ ಮೇಲೆ ಸರ್ದಾರರ ಪ್ರಯತ್ನವೆಲ್ಲ ವ್ಯರ್ಥ ವಾಯಿತು.

ಆಜ಼ಾದರು ದೆಹಲಿಯಿಂದ ಕರಾಚಿಗೆ ವಿಮಾನದಲ್ಲಿ ಬಂದಾಗ ಸಿಂದ್ ಪ್ರಾಂತ್ಯದ ಮುಸ್ಲಿಂ ಲೀಗ್‌ನ ಅಧ್ಯಕ್ಷ ಎಂ.ಎಚ್. ಗಜ್ದರ್ ಅದೇ ವಿಮಾನದಲ್ಲಿ ಪ್ರಯಾಣ ಮಾಡುತ್ತಿದ್ದನು ಮತ್ತು ಅವರಿಬ್ಬರು ಮಾತುಕತೆ ನಡೆಸಿದ್ದರು. ಕರಾಚಿ ಯನ್ನು ತಲುಪಿದ ಆಜ಼ಾದರು ಪಟೇಲರ ಅಭಿಪ್ರಾಯ ಮತ್ತು ಯೋಜನೆಗಳನ್ನು ಕಡೆಗಣಿಸಿ, ಕಾಂಗ್ರೆಸ್ – ಲೀಗ್ ಸರ್ಕಾರ ರಚನೆಗೆ (ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಒಪ್ಪಿಗೆ ಪಡೆಯದೆ) ಪ್ರಯತ್ನ ಆರಂಭಿಸಿದರು. ಪ್ರಸ್ತಾಪಿತ ಸಮ್ಮಿಶ್ರ ಸರ್ಕಾರದಲ್ಲಿ ಮಂತ್ರಿಯಾಗಲು ಇಬ್ಬರ ಹೆಸರನ್ನು ಸೂಚಿಸುವಂತೆ ಆಜ಼ಾದರು ಮುಸ್ಲಿಂ ಲೀಗ್ ಅನ್ನು ಕೋರಿದ್ದರು. ಆದರೆ ಜಿನ್ನಾ ಆಸಕ್ತಿಯನ್ನೇ ತೋರಲಿಲ್ಲ. ಆಜ಼ಾದರ ಪ್ರಯತ್ನ ವಿಫಲವಾಯಿತು. ಅವರು ಮತ್ತೊಂದು ಪ್ರಸ್ತಾವನೆ ಮುಂದಿಟ್ಟರು. ಹಿದಾಯತುಲ್ಲಾನನ್ನು ಹೊರಗಿಟ್ಟು ಸೈಯದ್ ಮತ್ತು ಮೌಲಾ ಬಕ್ಸ್ ಜೊತೆ ಸೇರಿ ಒಂದು ಸಮ್ಮಿಶ್ರ ಸರ್ಕಾರ ರಚಿಸಿದರು. ಪಟೇಲರು ವಿಧಿಯಿಲ್ಲದೆ ಅದನ್ನು ಒಪ್ಪಬೇಕಾಯಿತು. ಆದರೆ ಅದು ಸಹ ಅಲ್ಪಾಯುವಾಯಿತು. ಅಂತಿಮವಾಗಿ ಗೌರ್ನರ್ ಮುಡೀ, ಯೂರೋಪಿಯನ್ ಸದಸ್ಯರ ಬೆಂಬಲದೊಡನೆ ಹಿದಾಯತುಲ್ಲಾ ನಾಯಕತ್ವದ ಲೀಗ್ ಸರ್ಕಾರವನ್ನು ಸ್ಥಾಪಿಸಿದನು.[೨೧೫]

ಕಾಂಗ್ರೆಸ್‌ಗೆ ಪಂಜಾಬಿನ ಪರಿಸ್ಥಿತಿಯು ಸಿಂದ್‌ನ ಪರಿಸ್ಥಿತಿಗಿಂತ ಉತ್ತಮ ವಾಗಿತ್ತು. ಅಲ್ಲಿ, ಕಾಂಗ್ರೆಸ್‌ಗೆ ಅನುಕೂಲವಾದ ಎರಡು ಅಂಶಗಳಿದ್ದುವು. ಮೊದಲನೆ ಯದಾಗಿ ಅಲ್ಲಿಯ ಗೌರ್ನರ್ ಇವಾನ್ ಜಂಕಿನ್ಸ್ ಯುನಿಯನಿಸ್ಟ್ ಪರವಾದ ಮತ್ತು ಪಾಕಿಸ್ತಾನದ ಪರ ಇಲ್ಲದವನಾಗಿದ್ದನು. ಎರಡನೆಯದಾಗಿ, ಚುನಾವಣೆಯಲ್ಲಿ ಬಹುಮತ ಗೆದ್ದಿದ್ದ ಪ್ರಧಾನಿ ಖಿಜಿರ್ ಲೀಗ್ ವಿರೋಧಿಯಾಗಿದ್ದನು. ಚುನಾವಣಾ ನಂತರದ ಚಟುವಟಿಕೆಗಳಿಗೆ ಸೂಚನೆಗಳನ್ನು ಕೊಡಲು ಆಜ಼ಾದರು ಪಟೇಲರ ಜೊತೆ ಲಾಹೋರ್‌ಗೆ ಹೋಗಬೇಕಾಗಿತ್ತು. ಆದರೆ ಆಜ಼ಾದರು ಪಟೇಲರೊಡನೆ

ನಡೆಸಿದ ದೂರವಾಣಿ ಸಂಭಾಷಣೆಯಿಂದ ಪಟೇಲರು ತಮ್ಮ ಪ್ರಯಾಣವನ್ನು ನಿಲ್ಲಿಸಿದರು. ಅವರು ಆಜ಼ಾದರಿಗೆ ಫ಼ೆಬ್ರುವರಿ ೨೩ರಂದು ಪತ್ರ ಬರೆದು, 'ನಾನು ಲಾಹೋರ್‌ಗೆ ಹೋಗುವುದು ನಿಮಗೆ ಮುಜುಗರ' ಉಂಟುಮಾಡುತ್ತದೆಂಬುದನ್ನು ನಿಮ್ಮೊಡನೆ ಮಾಡಿದ ದೂರವಾಣಿ ಸಂಭಾಷಣೆಯಿಂದ ಅರಿತೆನು. ನಾನು ಅಲ್ಲಿಗೆ ಹೋಗುವುದಿಲ್ಲ" ಎಂದು ತಿಳಿಸಿದರು.

ಮುಸ್ಲಿಮರು ಬಹು ಸಂಖ್ಯಾತರಾಗಿರುವ ಪ್ರಾಂತ್ಯಗಳಲ್ಲಿ ಚುನಾವಣಾ ವಿಷಯಗಳನ್ನು ನಿರ್ವಹಿಸುವ ಕೆಲಸವನ್ನು ಕಾಂಗ್ರೆಸ್‌ನ ಅಧ್ಯಕ್ಷನಾಗಿ ಆಜ಼ಾದರು ತಮಗೇ ಇಟ್ಟುಕೊಂಡಿದ್ದರು. ಪಾಕಿಸ್ತಾನ ರಚನೆಯ ಅಂತಿಮ ತೀರ್ಮಾನದಲ್ಲಿ ಈ ಪ್ರಾಂತ್ಯಗಳು ಪ್ರಮುಖ ಪಾತ್ರ ಹೊಂದಿದ್ದುವು. ಈ ಪ್ರಾಂತ್ಯಗಳಲ್ಲಿ ಚುನಾವಣಾ ವೆಚ್ಚಕ್ಕೆ ಲಕ್ಷಾಂತರ ರೂಪಾಯಿಗಳನ್ನು ಸಂಗ್ರಹಿಸಿಕೊಡಲು ಕಾಂಗ್ರೆಸ್ ಅಧ್ಯಕ್ಷರು ಪಟೇಲರ ಸೇವೆಯನ್ನು ಉಪಯೋಗಿಸಿಕೊಂಡಿದ್ದರು. ಈಗ ಆ ಕೆಲಸ ಮುಗಿದು ಹೋಗಿರುವುದರಿಂದ ಪಟೇಲರ ಸೇವೆ ಅವರಿಗೆ ಬೇಕಿರಲಿಲ್ಲ? ಹೊಳೆ ದಾಟಿದ ಮೇಲೆ ಅಂಬಿಗನ ಹಂಗೇಕೆ? – ಎನ್ನುವ ಹಾಗೆ.

ಪಂಜಾಬ್‌ನಲ್ಲಿ ಯೂನಿಯನಿಸ್ಟರ ನಾಯಕ ಖಿಜಿರ್, ಕಾಂಗ್ರೆಸ್ ಮತ್ತು ಅಕಾಲಿದಳದೊಂದಿಗೆ ಸಮ್ಮಿಶ್ರ ಸರ್ಕಾರ ರಚಿಸಿದ್ದನು. ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕನಾಗಿ ಗೋಪಿಚಂದ್ ಭಾರ್ಗವರವರನ್ನು ಆರಿಸಬೇಕೆಂಬುದು ಸರ್ದಾರರ ಅಭಿಪ್ರಾಯವಾಗಿತ್ತು. ಆದರೆ ಆಜ಼ಾದರು ಭೀಮಸೇನ ಸಾಚಾರ್ ಅವರನ್ನು ಬೆಂಬಲಿಸಿದರು. ಪ್ರಧಾನಿ ಖಿಜ಼ಿರ್‌ಗೆ ಭಾರ್ಗವರವರಲ್ಲಿ ವಿಶ್ವಾಸವಿತ್ತೇ ಹೊರತು ಸಾಚಾರ್ ಅವರಲ್ಲಿ ಇರಲಿಲ್ಲ. ಅಸಿಫ಼್ ಆಲಿ ಪಟೇಲರಿಗೆ ಪತ್ರ ಬರೆದು, 'ಕಾಂಗ್ರೆಸ್ ಜೊತೆ ಒಂದು ಒಪ್ಪಂದಕ್ಕೆ ಬರಲು ಖಿಜಿರ್ ಕಾತರರಾಗಿದ್ದಾರೆ,' ಎಂದು ತಿಳಿಸಿದ್ದರು. ಮೌಲಾನಾ ದಾವೂದ್ ಫ಼ಜ಼್ಮಿ ಜನವರಿ ೪ರಂದು ಪಟೇಲರಿಗೆ ಪತ್ರ ಬರೆದು, "ಯೂನಿಯನಿಸ್ಟರು ಮತ್ತು ಅಕಾಲಿಗಳು ಇಬ್ಬರೂ ತಾವೇ ಅಧಿಕಾರಕ್ಕೆ ಬರುವುದಕ್ಕಾಗಿ ಕಾಂಗ್ರೆಸ್ಸನ್ನು ಬಳಸಿಕೊಳ್ಳಲು ಸಾಹಸಪಡುತ್ತಿದ್ದಾರೆ" ಎಂದು ತಿಳಿಸಿದ್ದನು. ಯೂನಿಯನಿಸ್ಟರು ಮತ್ತು ಅಕಾಲಿಗಳು ಕಾಂಗ್ರೆಸ್ಸನ್ನು ಓಲೈಸುತ್ತಿದ್ದುದರಿಂದ ಅದು ಕಾಂಗ್ರೆಸ್‌ಗೆ ಒಂದು 'ಟ್ರಂಪ್ ಕಾರ್ಡ್' ಆಗಿತ್ತು. ಪಟೇಲರು ಆ ಕಾರ್ಡನ್ನು ಕೌಶಲದಿಂದ ಆಡಿ ಕಾಂಗ್ರೆಸ್ಸಿಗೆ ಪ್ರಯೋಜನ ಮಾಡಿಕೊಳ್ಳಬೇಕೆಂದು ಬಯಸಿದ್ದರು. ಆದರೆ ಕಾಂಗ್ರೆಸ್ಸು ಆ ಮಟ್ಟಕ್ಕೆ ಏರಲಾಗಲಿಲ್ಲ. ಭೀಮಸೇನ ಸಾಚಾರ್ ರವರ ನಾಯಕತ್ವ ದುರ್ಬಲವಾಗಿತ್ತು, ಡೋಲಾಯಮಾನವಾಗಿತ್ತು ಮತ್ತು ಪರಿಣಾಮಕಾರಿಯಾಗಿ ಇರಲಿಲ್ಲ. ರಾಜಕೀಯ ಮುತ್ಸದ್ದಿತನವೂ ಇರಲಿಲ್ಲ. ಪ್ರಧಾನಿ ಖಿಜಿರ್

ಇಂಗ್ಲೆಂಡಿಗೆ ಹೊರಟಾಗ ಸಾಚಾರ್‌ರವರು ಒಬ್ಬ ಮುಸ್ಲಿಂ ಹಂಗಾಮಿ ಪ್ರಧಾನಿಯಾಗಿರಲಿ, ಎಂದರು. ಅದರಿಂದ ಅಕಾಲಿ ದಳದ ಬಲದೇವ ಸಿಂಗ್‌ನ ಹಕ್ಕಿಗೆ ಧಕ್ಕೆಯಾಯಿತು. ಕಾಂಗ್ರೆಸ್ – ಅಕಾಲಿ ನಡುವಣ ಸಂಬಂಧ ಹದಗೆಟ್ಟಿತು.

ಪಂಜಾಬಿನ ಪರಿಸ್ಥಿತಿ ಬಹಳ ಹದಗೆಟ್ಟಿತು. ಸಾಚಾರ್ ರಾಜಿನಾಮೆ ಕೊಡಲು ಮುಂದಾಗಿ ಸರ್ದಾರರಿಗೆ ಬರೆದರು. ಸಾಚಾರರನ್ನು ಅಲ್ಲಿ ಕೂರಿಸಿದವರು ಆಜ಼ಾದ್. ಅದರಿಂದ ಆಜ಼ಾದರ ಒಪ್ಪಿಗೆ ಪಡೆದುಕೊಳ್ಳಿ ಎಂದು ಪಟೇಲರು ತಿಳಿಸಿದರು. ಪಟೇಲರು ನೆಹರುಗೆ ಪತ್ರ ಬರೆದು ಈ ವಿಷಯ ತಿಳಿಸಿ ಸಮ್ಮಿಶ್ರ ಸರ್ಕಾರ ಉರುಳುತ್ತಿದೆ ಎಂದು ಕಾಣುತ್ತದೆ – ಎಂದು ತಿಳಿಸಿದರು.[೨೧೬]

ಪಂಜಾಬಿನಲ್ಲಿ ಖಿಜ಼ಿರ್ ಹಯಾತ್ ಖಾನ್‌ರ ಯೂನಿಯನಿಸ್ಟ್ ಮಂತ್ರಿಮಂಡಲ ಮಾರ್ಚ್ ೨, ೧೯೪೭ರ ವರೆಗೆ, ಮುಸ್ಲಿಂ ಲೀಗ್‌ನ ವಿರೋಧವನ್ನು ಎದುರಿಸಿಯೂ ಕೆಲಸ ಮಾಡಿತು. ಅಂದು ಪ್ರಧಾನಿ ಖಿಜಿರ್ ಹಠಾತ್ತಾಗಿ ರಾಜಿನಾಮೆ ನೀಡಿದರು. ಮುಸ್ಲಿಂ ಲೀಗ್ ನಾಯಕ ಮಾಂದಾತ್ ಖಾನ್‌ನನ್ನು ಹೊಸ ಮಂತ್ರಿಮಂಡಲ ರಚಿಸಲು ಆಹ್ವಾನಿಸಲಾಯಿತಾದರೂ ಹಿಂದೂ ಮತ್ತು ಸಿಖ್‌ರ ಪ್ರಬಲ ವಿರೋಧದ ಫಲವಾಗಿ ಅವನು ಅಧಿಕಾರವಹಿಸಿಕೊಳ್ಳಲು ಆಗಲಿಲ್ಲ. ಅನಂತರ ಪಂಜಾಬ್ ಪ್ರಾಂತ್ಯವು ದೇಶ ವಿಭಜನೆಯವರೆಗೆ ಗೌರ್ನರ್ ಆಡಳಿತದಲ್ಲಿ ಇತ್ತು.[೨೧೭]

ಬಂಗಾಳದಲ್ಲಿ ಚುನಾವಣಾ ಅಭ್ಯರ್ಥಿಗಳ ಆಯ್ಕೆಯ ಅಧಿಕಾರವನ್ನು ಆಜ಼ಾದರು ತಮ್ಮಲ್ಲೇ ಇಟ್ಟುಕೊಂಡಿದ್ದರು. ಬಂಗಾಳ ಶಾಸನ ಸಭೆಯ ಸ್ಪೀಕರ್ ಸೈಯದ್ ನೌಷಾದ್ ಅಲಿಯವರು ಆಜ಼ಾದರಿಗೆ ಪತ್ರ ಬರೆದು ಚುನಾವಣೆಯಲ್ಲಿ ಮುಸ್ಲಿಂ ಸ್ಥಾನಗಳಿಗೆ ಅಭ್ಯರ್ಥಿಗಳು ಕಾಂಗ್ರೆಸ್ ಟಿಕೆಟ್ ಮೇಲೆ ಸ್ಪರ್ಧಿಸಬೇಕು – ಎಂದು ಸಲಹೆ ನೀಡಿದರು. ಪಟೇಲರ ಅಭಿಪ್ರಾಯವೂ ಅದೇ ಆಗಿತ್ತು. ಆದರೆ ಆಜ಼ಾದರು ನೌಷಾದ್ ಅಲಿಯವರ ಸಲಹೆಯಂತೆ ನಡೆಯಲಿಲ್ಲ. ತಮ್ಮದೇ ಮಾರ್ಗವನ್ನು ಹಿಡಿದರು. ಸರ್ದಾರರು ಮಾತ್ರ ಪಕ್ಷಕ್ಕೆ ಮತ್ತು ದೇಶಕ್ಕೆ ತಮ್ಮ ಕರ್ತವ್ಯ ಪಾಲನೆಗಾಗಿ ಆಜ಼ಾದರ ತಪ್ಪು ನಡೆಗಳನ್ನು ಎತ್ತಿ ತೋರಿಸಿ ಪತ್ರ ಬರೆಯುತ್ತಿದ್ದರು. ಆದರೆ ಸರ್ದಾರರ ಆ ದೂರುಗಳಿಗೆ ಆಜ಼ಾದರು ಏನೂ ಬೆಲೆ ಕೊಡಲಿಲ್ಲ. ಪಟೇಲರು ಜನವರಿ ೭ರಂದು ಆಜ಼ಾದರಿಗೆ ಹೀಗೆ ಬರೆದರು:

> 'ನಾನು ಬಿಟ್ಟ ಮೇಲೆ ಒಂದು ಮುಸ್ಲಿಂ ಸಮಿತಿಯನ್ನು ರಚಿಸಿದಿರಿ. ಅದನ್ನು ನನಗೆ ತಿಳಿಸಲಿಲ್ಲ. ಸಮಿತಿಯನ್ನು ರಚಿಸಿದ ತಕ್ಷಣವೇ ಸಮಿತಿಯ ಕಾರ್ಯದರ್ಶಿ ಸಂಶುದ್ದೀನ್ ಮುಸ್ಲಿಂ ಲೀಗ್ ಅನ್ನು ಸೇರಿಕೊಂಡನು. ..... ಕಾಂಗ್ರೆಸ್ ಟಿಕೆಟ್ ಮೇಲೆ

ಸ್ಪರ್ಧಿಸುವುದು ಇಡೀ ಭಾರತದಲ್ಲಿ ಸರಿಯಾದ ಮಾರ್ಗವಾಗಿತ್ತು. ಸ್ವತಂತ್ರವಾಗಿ ಸ್ಪರ್ಧಿಸಿದವರು ಬಂಗಾಳದಲ್ಲಿ ಕಾಂಗ್ರೆಸ್‌ಗೆ ಸ್ಥಾನಗಳನ್ನು ಒದಗಿಸುವುದಿಲ್ಲ. ಆದರೆ, ಈ ವಿಷಯಗಳಲ್ಲಿ ಪಂಜಾಬ್, ಬಂಗಾಳ ಮತ್ತು ಇತರ ಕಡೆ ಯಾವ ಪ್ರಶ್ನೆಯನ್ನೂ ಎತ್ತದೆ ನನ್ನ ಅಭಿಪ್ರಾಯಗಳನ್ನು ನಿಮ್ಮ ಅಭಿಪ್ರಾಯಗಳಿಗೆ ಅಧೀನಗೊಳಿಸಿದ್ದೇನೆ.'[೨೧೮]

ಸಂಶುದ್ದೀನನ ಪಕ್ಷಾಂತರ ಕಾಂಗ್ರೆಸ್‌ಗೆ ಮಾರಕವಾಯಿತು. ಆಜ಼ಾದರು ಕಾಂಗ್ರೆಸ್ಸೇತರ ಅಭ್ಯರ್ಥಿಗಳನ್ನು ನಿಲ್ಲಿಸಿ ಅವರ ಚುನಾವಣೆಗೆ ಲಕ್ಷಾಂತರ ರೂಪಾಯಿ ವೆಚ್ಚ ಮಾಡಿದರು. ಅದೆಲ್ಲ ವ್ಯರ್ಥವಾಯಿತು. ಬಂಗಾಳದಲ್ಲಿ ಮುಸ್ಲಿಂ ಲೀಗ್ ಸರ್ಕಾರ ಅಧಿಕಾರಕ್ಕೆ ಬಂದಿತು.

ಆಜಾದರು ಒಳಗಿಂದೊಳಗೇ ಮುಸ್ಲಿಂ ಲೀಗಿನ ಪರ ಇದ್ದರೆಂದು ಕಾಣುತ್ತದೆ. ಆದರೆ ಅವರು ಪಟೇಲರನ್ನು ಮತೀಯವಾದಿ ಎಂದು ಬಿಂಬಿಸುತ್ತಿದ್ದರು.

ಈ ನಡುವೆ ಮೂವರು ಇಂಡಿಯನ್ ನ್ಯಾಷನಲ್ ಆರ್ಮಿ (ಸುಭಾಷರ ಸೈನ್ಯ)ಯ ಅಧಿಕಾರಿಗಳಾಗಿದ್ದ ಜನರಲ್ ಷಾ ನವಾಜ್ ಖಾನ್, ಕರ್ನಲ್ ಪ್ರೇಮ್ ಸೆಹ್ಗಾಲ್ ಮತ್ತು ಕರ್ನಲ್ ಗುರ್‌ಭಕ್ಷ್ ಸಿಂಗ್ ದಿಲ್ಲಾನ್‌ರವರನ್ನು ಸರ್ಕಾರವು ದೇಶದ್ರೋಹದ ಆಪಾದನೆಯ ಮೇಲೆ ವಿಚಾರಣೆಗೆ ಒಳಪಡಿಸಿತು. ಆ ಮೂವರ ಸಮರ್ಥನೆ ನಡೆಸಬೇಕೆಂದು ಕಾಂಗ್ರೆಸ್ಸು ತೀರ್ಮಾನಿಸಿತು. ಭೂಲಾಭಾಯ್ ದೇಸಾಯಿ ಅದ್ಭುತವಾಗಿ ವಾದ ಮಾಡಿದರು. ಆದರೂ ಮಿಲಿಟರಿ ನ್ಯಾಯಾಲಯವು ಆ ಮೂವರಿಗೆ ಗಡಿಪಾರು ಶಿಕ್ಷೆಯನ್ನು ವಿಧಿಸಿತು. ಆದರೆ ಜನರ ಮತ್ತು ಸೈನಿಕರ ಪ್ರತಿಕ್ರಿಯೆಗೆ ಹೆದರಿ ಆ ಆಪಾದಿತರನ್ನು ಬಿಡುಗಡೆ ಮಾಡಿತು. ಸರ್ಕಾರದ ಈ ಸಡಿಲ ನಿಲುವಿನಿಂದ ಪಟೇಲರು "ಭಾರತದ ಸ್ವಾತಂತ್ರ್ಯ ಹತ್ತಿರವಾಗಿದೆ, ಅದನ್ನು ತೆಗೆದುಕೊಳ್ಳುವುದು ಭಾರತೀಯರಿಗೆ ಬಿಟ್ಟದ್ದು" ಎಂದರು. ಆದಾಗ್ಯೂ, ಸ್ವಾತಂತ್ರ್ಯವು ವಾಸ್ತವವಾಗಿ ದೊರಕುವವರೆಗೆ ಶಾಂತವಾಗಿರಲು ಅವರು ಸಿದ್ಧರಿರಲಿಲ್ಲ. ತಮ್ಮ ೭೦ನೆ ವರ್ಷದ ಹುಟ್ಟು ಹಬ್ಬದ ದಿವಸ 'ಭಾರತ ಬಿಟ್ಟು ತೊಲಗಿ' ಮೊಳಗಿದ ಸ್ಥಳದಲ್ಲಿ ಭಾಷಣ ಮಾಡುತ್ತಾ ಅವರೆಂದರು:

ಚುನಾವಣೆಯ ನಂತರ ಕಾಂಗ್ರೆಸ್ಸು ತೆಪ್ಪಗೆ ಕುಳಿತುಕೊಳ್ಳುವುದಿಲ್ಲ. ಅದು ಭಾರತದ ಸಮಸ್ಯೆಯ ತಕ್ಷಣದ ಮತ್ತು ಅಂತಿಮ ಇತ್ಯರ್ಥಕ್ಕೆ ಆಗ್ರಹಿಸುತ್ತದೆ. ಅದು ಬೇಗನೆ ಆಗದಿದ್ದರೆ ಮತ್ತು ಬ್ರಿಟಿಷ್ ಸರ್ಕಾರವು ಭಾರತದ ಅಭಿವೃದ್ಧಿಯ ಹಾದಿಯಲ್ಲಿ ಮತ್ತಷ್ಟು ಅಡ್ಡಿಗಳನ್ನು ಒಡ್ಡಿದರೆ, ರಾತ್ರಿ ಕಳೆದು ಹಗಲು ಬರುವುದು ಎಷ್ಟು

> ಸತ್ಯವೋ ಅಷ್ಟೇ ಸತ್ಯವಾಗಿ, ಮತ್ತೊಂದು ಹೋರಾಟ ನಡೆಯುವುದು.[೨೧೯]

ವೈಸ್‌ರಾಯ್ ವೇವೆಲ್ಲನು ಪಟೇಲರ ನುಡಿಯನ್ನು ಲಂಡನ್ ಸರ್ಕಾರಕ್ಕೆ ವರದಿಮಾಡಿ 'ಪಟೇಲರು ಬ್ರಿಟಿಷರನ್ನು ಹೊರಗಟ್ಟುವುದಕ್ಕಾಗಿ ಒಂದು ಬಂಡಾಯ ಅಥವಾ ಧಿಡೀರ್ ಕಾರ್ಯಾಚರಣೆಯನ್ನು ರೂಪಿಸುತ್ತಿದ್ದಾರೆ' ಎಂದು ತಿಳಿಸಿದನು. 'ಕಾಂಗ್ರೆಸ್ಸು, ಪಟೇಲ್ ಮತ್ತು ನೆಹರು ನಾಯಕತ್ವದಲ್ಲಿ, ಭಾರತದ ಈಗಿನ ಆಡಳಿತವನ್ನು ಬಲಪ್ರಯೋಗದಿಂದ ಪತನಗೊಳಿಸಲು ಒಂದು ತೀವ್ರ ಪ್ರಯತ್ನವನ್ನು ಮಾಡುವ ಸಾಧ್ಯತೆ ಇದೆ' ಎಂದೂ ಸಹ ವೇವೆಲ್ ವರದಿ ಮಾಡಿದನು.

ವೇವೆಲ್ಲನು ಪಟೇಲರ ಬಗೆಗೆ ಪೂರ್ವಾಗ್ರಹ ಪೀಡಿತನಾಗಿದ್ದನು, ಅವರ ಬಗೆಗೆ ಏನೇನೋ ಕಲ್ಪನೆ ಮಾಡಿಕೊಂಡಿದ್ದನು. ಅದರಿಂದ ಪಟೇಲರನ್ನು ಭೇಟಿಯೇ ಮಾಡಿರಲಿಲ್ಲ. ಕೊನೆಗೆ ೧೯೪೬ರ ಜನವರಿಯಲ್ಲಿ ಅವರಿಬ್ಬರ ಭೇಟಿಯಾಯಿತು. ಆ ಭೇಟಿಯ ನಂತರ ಸರ್ದಾರರ ಬಗೆಗಿನ ವೇವೆಲ್ಲನ ಅಭಿಪ್ರಾಯ ಬದಲಾಯಿತೆಂದು ಕಾಣುತ್ತದೆ. ಆ ಭೇಟಿಯ ಬಗೆಗೆ ಅವನು ತನ್ನ ದಿನಚರಿಯಲ್ಲಿ ಹೀಗೆ ಬರೆದಿದ್ದಾನೆ:

> ನಾನು ಈ ದಿನ ಬೆಳಗ್ಗೆ ವಲ್ಲಭಭಾಯ್‌ರವರನ್ನು ಮೊದಲ ಬಾರಿಗೆ ಭೇಟಿ ಮಾಡಿದೆ. ಆಕರ್ಷಣೀಯವಾದ ವ್ಯಕ್ತಿತ್ವವಲ್ಲದ ಮತ್ತು ರಾಜಿಗೆ ಒಪ್ಪದ ವ್ಯಕ್ತಿ, ಆದರೆ ನಾನು ಭೇಟಿ ಮಾಡಿರುವ ಬಹಳಷ್ಟು ಭಾರತೀಯ ರಾಜಕಾರಣಿಗಳಿಗಿಂತ ಹೆಚ್ಚಿನ ಪೌರುಷದ ವ್ಯಕ್ತಿ..... ಪಟೇಲ್ ತಕ್ಷಣವೇ ಆಪಾದನೆಗಳಿಂದ ಆರಂಭಿಸಿದರು: ಬ್ರಿಟಿಷರು ಜಿನ್ನಾ ಮತ್ತು ಮುಸ್ಲಿಂ ಲೀಗ್‌ಗೆ ಬೆಂಬಲ ನೀಡುತ್ತಿದ್ದಾರೆ, ಸಿಮ್ಲಾ ಸಮ್ಮೇಳನವನ್ನು ಮುರಿಯಲು ಜಿನ್ನಾಗೆ ಅವಕಾಶ ನೀಡಲಾಗಿದೆ, ಆಜ಼ಾದರ ಬಗೆಗೆ ಅವನ ನಡವಳಿಕೆ ಅಸಹನೀಯ ಇತ್ಯಾದಿ ಇತ್ಯಾದಿ.....

ಬ್ರಿಟಿಷರು ಭಾರತದಲ್ಲಿ ಇರುವವರೆಗೆ ಹಿಂದೂ ಮತ್ತು ಮುಸ್ಲಿಮರ ನಡುವೆ ಒಪ್ಪಂದ ಹೇಗೆ ಸಾಧ್ಯ? – ಎಂದು ಅವರು ಕೇಳಿದರು. ಬ್ರಿಟಿಷರು ಭಾರತ ಬಿಟ್ಟು ಹೊರ ಹೋಗಬೇಕು ಮತ್ತು ಸಮಸ್ಯೆಗಳನ್ನು ತಾವೇ ಪರಿಹರಿಸಿಕೊಳ್ಳಲು ಭಾರತೀಯರಿಗೆ ಅವಕಾಶ ಕೊಡಬೇಕು, ಎಂದರು. ನಾವು ಭಾರತವನ್ನು ಅರಾಜಕತೆ ಮತ್ತು ಅಂತರ್ಯುದ್ಧಕ್ಕೆ ಈಡು ಮಾಡಿ ಹೋಗಲು ಸಾಧ್ಯವಿಲ್ಲ, ಏನಾದರು ಒಪ್ಪಂದವಾಗಬೇಕು, ಎಂದು ನಾನು ಹೇಳಿದೆ.

ನಾನು ಪಾಕಿಸ್ತಾನದ ಪ್ರಶ್ನೆಯನ್ನು ಪ್ರಸ್ತಾಪಿಸಲಿಲ್ಲ. ಅವರ ಮಾತಿನ ಧಾಟಿ ಅದಕ್ಕೆ ಪೂರಕವಾಗಿರಲಿಲ್ಲ. ಯಾವುದಾದರು ಹೊಸ ಸರ್ಕಾರದ ಬಗೆಗೆ ಇತ್ಯರ್ಥವಾಗುವವರೆಗೆ ಕಾನೂನು ಮತ್ತು ಶಾಂತಿಯನ್ನು ಕಾಪಾಡುವುದು ನಮ್ಮ ಜವಾಬ್ದಾರಿ, ಎಂದಷ್ಟೇ ಹೇಳಿದೆ. ಅವರು ಅದನ್ನು ಒಪ್ಪಿದರು.[೨೨೦]

೧೪.೩ ಬೊಂಬಾಯಿಗೆ ಬಂದ ಗಂಡಾಂತರ

ಬೊಂಬಾಯಿಯ ಬಂದರಿನಲ್ಲಿದ್ದ ಸುಮಾರು ೩೦೦೦ ಮಂದಿ ನೌಕಾ ಸೈನಿಕರು ತಮ್ಮ ಮತ್ತು ಆಂಗ್ಲ ಸೈನಿಕರ ನಡುವೆ ಕೆಲವು ಆಂಗ್ಲ ಅಧಿಕಾರಿಗಳು ತೋರುತ್ತಿದ್ದ ತಾರತಮ್ಯ ಮತ್ತು ಕಳಪೆ ಆಹಾರದ ಬಗೆಗೆ ಕುಪಿತರಾಗಿ ೧೯೪೬ರ ಫೆಬ್ರುವರಿ ೧೯ರಂದು ಬಂಡಾಯ ಹೂಡಿದರು. ಅವರು ಅಲ್ಲಿದ್ದ ಆಂಗ್ಲ ಅಧಿಕಾರಿಗಳನ್ನು ಓಡಿಸಿ ೨೦ ನೌಕೆಗಳನ್ನು ವಶಪಡಿಸಿಕೊಂಡು ಅವುಗಳ ಮೇಲೆ ಕಾಂಗ್ರೆಸ್ ಮತ್ತು ಲೀಗ್ ಬಾವುಟಗಳನ್ನು ಹಾರಿಸಿದರು.[೨೨೧] ನೌಕಾ ಕೇಂದ್ರ ಮುಷ್ಕರ ಸಮಿತಿ ಯನ್ನು ರಚಿಸಿ ಎಲ್ಲಾ ಕಡೆಗು ವಿಷಯವನ್ನು ರವಾನಿಸಿದರು. ಅರುಣ ಅಸಫ್ ಆಲಿ ಬೊಂಬಾಯಿಯಲ್ಲಿರುವ ವಿಷಯ ತಿಳಿದು ಬಂಡಾಯದ ನಾಯಕರು ಮಾರ್ಗದರ್ಶನಕ್ಕಾಗಿ ಅವರ ಬಳಿಗೆ ಹೋದರು. ಅರುಣ ಅಸಫ್ ಆಲಿಯವರು ೧೯೪೨ರ ಚಳವಳಿಯ ಕಾಲದಲ್ಲಿ ನಡೆಸಿದ ಭೂಗತ ಚಟುವಟಿಕೆಗಳಿಂದ ಪ್ರಸಿದ್ಧ ರಾಗಿದ್ದರು. ಅವರು ಬಂಡಾಯದ ನಾಯಕರಿಗೆ "ಶಾಂತವಾಗಿರಿ ಮತ್ತು ತಮ್ಮ ಬೇಡಿಕೆಗಳ ಬಗೆಗೆ ನೌಕಾ ಪಡೆಯ ಮೇಲಧಿಕಾರಿಗಳನ್ನು ಸಂಪರ್ಕಿಸಿ" ಎಂದು ಸಲಹೆ ನೀಡಿದರು. ಅವರು, ವಲ್ಲಭಭಾಯ್ ಮತ್ತು ಮುಸ್ಲಿಂ ಲೀಗ್‌ನ ಸಲಹೆ ಪಡೆಯುವಂತೆಯೂ ಆ ಬಂಡಾಯ ನಾಯಕರಿಗೆ ಸೂಚಿಸಿದರು. ಫೆಬ್ರುವರಿ ೨೦ರಂದು ಬಂಡಾಯಗಾರರ ಪ್ರತಿನಿಧಿಗಳು 'ರಾಯಲ್ ಇಂಡಿಯನ್ ನೇವಿ'ಯ ಫ್ಲಾಗ್ ಆಫೀಸರ್ ವೈಸ್ ಅಡ್ಮಿರಲ್ ಜೆ.ಹೆಚ್. ಗಾಡ್‌ಫ್ರೇ ಅವರನ್ನು ಭೇಟಿಯಾದರು. ಗಾಡ್‌ಫ್ರೇ ಅವರು, 'ಎಲ್ಲಾ ನೌಕಾ ಸೈನಿಕರು ತಮ್ಮ ತಮ್ಮ ನೌಕೆಗಳಿಗೆ ಮತ್ತು ಕೆಲಸದ ಸ್ಥಳಗಳಿಗೆ ಹಿಂತಿರುಗಬೇಕು' ಎಂದು ಸಲಹೆ ನೀಡಿದರು. ಆದರೆ ಆ ಸೈನಿಕರು ಹಾಗೆ ಮಾಡಲು ಸಿದ್ಧರಿರಲಿಲ್ಲ. ಅವರು, ಕರಾಚಿ, ಮದ್ರಾಸ್ ಮತ್ತು ಕಲ್ಕತ್ತದಲ್ಲಿನ ನೌಕಾ ಸೈನಿಕರು ನಡೆಸಿದ ಸಹಾನುಭೂತಿ ಮುಷ್ಕರದಿಂದ ಉತ್ತೇಜಿತರಾಗಿದ್ದರು. ಫೆಬ್ರುವರಿ ೨೧ರಂದು ರಾಯಲ್ ಇಂಡಿಯನ್ ಏರ್‌ಫೋರ್ಸ್‌ನ ಸುಮಾರು ೧೦೦೦ ನೌಕರರೂ ಸಹ ಸಹಾನುಭೂತಿ ಮುಷ್ಕರವನ್ನು ಹೂಡಿದರು.[೨೨೨]

ಆ ವೇಳೆಗೆ ಬೊಂಬಾಯಿಯ ಕಮ್ಯುನಿಸ್ಟರು ನೌಕಾ ಬಂಡಾಯಗಾರರ

ಬೆಂಬಲಕ್ಕೆ ನಿಂತರು. ಅವರು ಬೇಡಿಕೆಗಳು ಈಡೇರದೇ ಹೋದರೆ ಬೊಂಬಾಯಿ ನಗರದ ಮೇಲೆ ತುಪಾಕಿ ಹಾರಿಸುವಂತೆ ಬಂಡಾಯಗಾರರನ್ನು ಪ್ರಚೋದಿಸಿದರು. ಅವರು 'ನಗರವು ನಾಶವಾದರೆ ಏನಂತೆ? ಸೈನಿಕರು ತಮ್ಮ ರಕ್ತವನ್ನು ಹರಿಸುತ್ತಿದ್ದಾಗ ವರ್ತಕರು ಗಳಿಸಿದ 'ಸಮರ ಲಾಭ'ದಿಂದ ಈ ನಗರವು ಉಬ್ಬಿ ಹೋಗಿದೆ' ಎಂದು ವಾದ ಮಾಡಿದರು. ಅರುಣ ಅಸಫ್ ಆಲಿ, ಅಚ್ಯುತ ಪಟವರ್ಧನ್ ಮತ್ತು ಕೆಲವು ಕಮ್ಯುನಿಸ್ಟರು ಸಹಾನುಭೂತಿ ಮುಷ್ಕರ ಹೂಡುವಂತೆ ಬೊಂಬಾಯಿಯ ಗಿರಣಿ ಕಾರ್ಮಿಕರು ಮತ್ತು ವಿದ್ಯಾರ್ಥಿಗಳನ್ನು ಪ್ರಚೋದಿಸಿದರು. ಪರಿಸ್ಥಿತಿ ವಿಕೋಪಕ್ಕೆ ಹೋಯಿತು. ಬೊಂಬಾಯಿ ನಗರದ ಮೇಲೆ ಗುಂಡು ಹಾರಿಸಲು ಬಂಡಾಯಗಾರರು ತುಪಾಕಿಗಳನ್ನು ಸಿದ್ಧ ಪಡಿಸಿದರು. ಬೊಂಬಾಯಿನಗರ ಛಿದ್ರ ಛಿದ್ರವಾಗುವ ಸ್ಥಿತಿ ಬಂದಿತು.[೨೨೩]

ಅದೃಷ್ಟವಶಾತ್ ಅಂದು ಪಟೇಲರು ಬೊಂಬಾಯಿಯಲ್ಲಿ ಇದ್ದರು. ಅಷ್ಟು ಹೊತ್ತಿಗೆ ಬಂಡಾಯಗಾರರ ಉತ್ಸಾಹ ಮತ್ತು ಶಕ್ತಿ ಉಡುಗಿ ಹೋಗಿತ್ತು. ಅವರ ನಾಯಕರು ಸರ್ದಾರರನ್ನು ಭೇಟಿ ಮಾಡಿದರು. ನಾವಿಕರು ತಮ್ಮ ಕುಂದು ಕೊರತೆಗಳ ಪರಿಹಾರಕ್ಕೆ ಅನುಸರಿಸುತ್ತಿರುವ ಮಾರ್ಗ ಸರಿಯಲ್ಲವೆಂದು ಸರ್ದಾರರು ಅವರಿಗೆ ಸ್ಪಷ್ಟ ಮತ್ತು ನೇರ ನುಡಿಗಳಲ್ಲಿ ಹೇಳಿದರು. ಆ ಮಾರ್ಗದಲ್ಲಿ ಅವರೆಂದೂ ಯಶಸ್ವಿಯಾಗಲು ಸಾಧ್ಯವಿಲ್ಲ ಎಂದು ಸಹ ಅವರು ಎಚ್ಚರಿಸಿದರು. ಅವರ ಬಗೆಗೆ ಕಾಂಗ್ರೆಸ್‌ಗೆ ಸಹಾನುಭೂತಿ ಇದೆ ಎಂದೂ, ಅವರು ಅನುಭವಿಸುತ್ತಿರುವ ತಾರತಮ್ಯ ಮುಕ್ತಾಯವಾಗಬೇಕೆಂದೂ ಅದಕ್ಕಾಗಿ ಕಾಂಗ್ರೆಸ್ಸು ಅವರಿಗೆ ಸಹಾಯ ಮಾಡುವುದೆಂದೂ, ಆದರೆ ಅವರು ಬೇಷರತ್ತಾಗಿ ಶರಣಾಗಬೇಕು ಮತ್ತು ತಮ್ಮ ಸಮಸ್ಯೆಯ ಪರಿಹಾರಕ್ಕೆ ಕಾಂಗ್ರೆಸ್ಸಿನಲ್ಲಿ ವಿಶ್ವಾಸ ಇಡಬೇಕೆಂದೂ, ಅವರಿಗೆ ಅನ್ಯಾಯವಾಗದಂತೆ ತಾವು ನೋಡಿಕೊಳ್ಳುವುದಾಗಿ ಸರ್ದಾರರು ಹೇಳಿದರು. ಬಂಡಾಯದ ನಾಯಕರು ಸರ್ದಾರರ ಸಲಹೆಗೆ ಒಪ್ಪಿದರು. ಅವರಿಗೆ ಸರ್ದಾರರಲ್ಲಿ ಅಂತಹ ನಂಬಿಕೆ ಇತ್ತು.

ಆ ಭೇಟಿಗೆ ಮುಂಚೆಯೇ ಸರ್ದಾರರು ಬೊಂಬಾಯಿಯ ಗಿರಣಿ ಕಾರ್ಮಿಕರು ತಮ್ಮ ಗಿರಣಿಗಳನ್ನು ಬಿಟ್ಟು ಹೊರಬಂದು ಕೆಲಸ ನಿಲ್ಲಿಸಬಾರದೆಂದು ಬುದ್ಧಿ ಹೇಳಿದ್ದರು. ಅವರು ಸರ್ದಾರರ ಮಾತನ್ನು ಆಲಿಸಿ ಮುಷ್ಕರ ಹೂಡಲಿಲ್ಲ.[೨೨೪]

ಆ ವೇಳೆಗೆ NCSC (Naval Central Strike Committee) ಅಧ್ಯಕ್ಷ ಎಂ.ಎಸ್. ಖಾನ್‌ಗೆ ಎದ್ದುನಿಲ್ಲಲೂ ಆಗುತ್ತಿರಲಿಲ್ಲ. ಆ ಸ್ಥಿತಿಗೆ ತಲುಪಿದ್ದನು. ಅವನು ಫೆಬ್ರುವರಿ ೨೨ರಂದು ಸರ್ದಾರರ ಸಂದೇಶವನ್ನು ಬಂಡಾಯಗಾರರಿಗೆ ರವಾನಿಸಿದನು.

ಅದು ಹೀಗಿತ್ತು:

> ಇಂದಿನ ದುರಾದೃಷ್ಟಕರ ಸನ್ನಿವೇಶದಲ್ಲಿ ಆಯುಧಗಳನ್ನು ಕೆಳಗಿಟ್ಟು ಶರಣಾಗತಿಯ ನಿಯಮಗಳನ್ನು ಪಾಲಿಸಬೇಕು ಎನ್ನುವುದು ಕಾಂಗ್ರೆಸ್ಸಿನ ಬುದ್ಧಿವಾದ..... ಯಾವ ರೀತಿಯ ಅನ್ಯಾಯ ಆಗದಂತೆ ಮತ್ತು ನಾವಿಕರ ನ್ಯಾಯಯುತ ಬೇಡಿಕೆಗಳನ್ನು ಸರ್ಕಾರ ಸಾಧ್ಯವಾದಷ್ಟು ಜಾಗ್ರತೆ ಒಪ್ಪುವಂತೆ ಮಾಡಲು ಕಾಂಗ್ರೆಸ್ಸು ತನ್ನ ಶಕ್ತಿ ಮೀರಿ ಪ್ರಯತ್ನಿಸುವುದು. ರಾಷ್ಟ್ರೀಯ ನಾಯಕರ ಮಾರ್ಗದರ್ಶನದಂತೆ ನಡೆಯಲು ಒಪ್ಪಿರುವುದರಿಂದ ಮತ್ತು ಈಗ ಶರಣಾಗಲು ನಿರ್ದೇಶಿಸಲ್ಪಟ್ಟಿರುವುದರಿಂದ, ನಾವು ಹಾಗೆ ಮಾಡಬೇಕು. ನಾವು ಬ್ರಿಟಿಷರಿಗೆ ಶರಣಾಗುತ್ತಿಲ್ಲ. ನಾವು ನಮ್ಮ ಜನರಿಗೇ ಶರಣಾಗುತ್ತಿದ್ದೇವೆ.[೨೨೫]

ಕೆಲವು ಮುಸ್ಲಿಂ ನಾವಿಕರು ಜಿನ್ನಾರವರ ಅಭಿಪ್ರಾಯವನ್ನು ಕೇಳಲು ಬಯಸಿದರು. ಜಿನ್ನಾ ಅಭಿಪ್ರಾಯವೂ ಸಹ ಸರ್ದಾರರ ಅಭಿಪ್ರಾಯದಂತೆಯೇ ಇತ್ತು. ಫೆಬ್ರುವರಿ ೨೨ರಂದು ಬಂಡಾಯ ಮುಕ್ತಾಯವಾಯಿತು.

ಬಂಡಾಯ ಮತ್ತು ಅದಕ್ಕೆ ಸಂಬಂಧಿಸಿದ ಮುಷ್ಕರಗಳಿಗೆ ೨೩೬ ಮಂದಿ ಬಲಿಯಾದರು ಮತ್ತು ೧೧೫೫ ಮಂದಿ ಗಾಯಗೊಂಡರು. 'ಸರ್ದಾರರು ನಾವಿಕರಿಗೆ ಶರಣಾಗುವಂತೆ ಒತ್ತಾಯಿಸಿದ್ದರಿಂದ ಮತ್ತು ನಾವಿಕರಿಗೆ ಸಹಾನುಭೂತಿ ತೋರಲು ಕಾರ್ಮಿಕರು ಮುಷ್ಕರ ಹೂಡುವುದನ್ನು ತಡೆಗಟ್ಟಲು ಶ್ರಮಿಸಿದ್ದರಿಂದ ಮತ್ತು ಅವಮಾನಕರ ಗೂಂಡಾಗಿರಿಯನ್ನು ಮತ್ತೆ ಮತ್ತೆ ಖಂಡಿಸಿದ್ದರಿಂದ ಸಾವು ನೋವಿನ ಪ್ರಮಾಣ ಇಷ್ಟಕ್ಕೇ ನಿಂತಿತು' ಎಂದು ಬೊಂಬಾಯಿ ಸರ್ಕಾರವು ದೆಹಲಿಯ ಸರ್ಕಾರಕ್ಕೆ ತಿಳಿಸಿತು.[೨೨೬]

ಬಂಡಾಯ ನಿಲ್ಲುವುದಕ್ಕೆ ಮುಂಚೆ ಫೆಬ್ರುವರಿ ೨೨ರಂದು ಸರ್ದಾರರು ನೆಹರುಗೆ ಬರೆದ ಪತ್ರದಲ್ಲಿ "ಕಮ್ಯುನಿಸ್ಟರು ಹಾಗೂ ಅಚ್ಯುತ್ ಮತ್ತು ಅರುಣ ನಾಯಕತ್ವದಲ್ಲಿ ಸಮಾಜವಾದಿಗಳು, ನಮ್ಮ ಸಲಹೆಗೆ ವಿರುದ್ಧವಾಗಿ, ಮುಷ್ಕರಕ್ಕೆ ಕರೆ ಕೊಟ್ಟರು. ಹೆಚ್ಚುತ್ತಿರುವ ಹಿಂಸೆಯ ಈ ಸಮಸ್ಯೆಯನ್ನು ನಾವು ನಿಯಂತ್ರಿಸಲೇ ಬೇಕು. ಇಲ್ಲದೆ ಹೋದರೆ ನಮ್ಮ ಇದುವರೆಗಿನ ಹೋರಾಟ ನಾಶವಾಗುತ್ತದೆ," ಎಂದು ಬರೆದಿದ್ದರು. ಆದರೆ ಪಟೇಲರ ಪತ್ರದ ಬಗೆಗೆ ಅಸಂತೋಷಗೊಂಡ ಅರುಣ ಅಸಫ್ ಅಲಿ ಮಧ್ಯೆ ಪ್ರವೇಶಿಸುವಂತೆ ಒತ್ತಾಯಿಸಿ ನೆಹರುಗೆ ತಂತಿ ಕಳುಹಿಸಿದರು. ಜವಹರ್ ಒಬ್ಬರೇ ಆ ಪರಿಸ್ಥಿತಿಯನ್ನು ನಿಭಾಯಿಸಬಲ್ಲ ನಾಯಕ

– ಎಂದು ಅರುಣ 'ಫ್ರೀ ಪ್ರೆಸ್ ಜರ್ನಲ್'ನಲ್ಲಿ ಬರೆದರು. ಜವಹರ್ ಸರ್ದಾರರಿಗೆ ತಂತಿ ಕಳುಹಿಸಿ, ಅವಶ್ಯಕತೆ ಇದ್ದರೆ, ಎಲ್ಲಾ ಮುಖ್ಯ ಕೆಲಸಗಳನ್ನು ಬಿಟ್ಟು ಬರುತ್ತೇನೆ – ಎಂದು ತಿಳಿಸಿದರು. ನೆಹರು ಬರುವ ಅವಶ್ಯಕತೆ ಇಲ್ಲವೆಂದು ಸರ್ದಾರರು ಉತ್ತರಿಸಿದರು. ಆದಾಗ್ಯೂ ನೆಹರು ಬಂದರು. ಅವರು ಬರುವ ಹೊತ್ತಿಗೆ ಬಂಡಾಯ ಮುಕ್ತಾಯವಾಗಿತ್ತು ಮತ್ತು ಹಿಂಸಾಚಾರ ನಿಂತಿತ್ತು.

ಜವಹರ್ ರೈಲಿನಲ್ಲಿ ಬಂದರು. ಸರ್ದಾರರು ಅವರನ್ನು ರೈಲು ನಿಲ್ದಾಣದಲ್ಲೇ ಬರಮಾಡಿಕೊಂಡು ಒಂದು ಸಾರ್ವಜನಿಕ ಸಭೆಗೆ ಕರೆದೊಯ್ದರು. ಅದರ ಬಗೆಗೆ ಬೊಂಬಾಯಿಯ ಗೃಹ ಕಾರ್ಯದರ್ಶಿಯವರು ದೆಹಲಿಯ ಗೃಹಕಾರ್ಯದರ್ಶಿಗೆ ಈ ರೀತಿ ಬರೆದರು:

> ಇಬ್ಬರ ಭಾಷಣದ ನಡುವೆ ನಿಶ್ಚಯವಾದ ವ್ಯತ್ಯಾಸವಿತ್ತು. ಬಂಡಾಯದ ಬಗೆಗೆ ಪಟೇಲರಿಗೆ ಸಹಾನುಭೂತಿ ಇರಲಿಲ್ಲ ಮತ್ತು ಗುಂಪು ಹಿಂಸಾಚಾರವನ್ನು ಬಲವಾಗಿ ಖಂಡಿಸಿದರು, ಆದರೆ ನೆಹರು ಬಂಡಾಯಗಾರರ ಬಗೆಗೆ ಸಹಾನುಭೂತಿಯನ್ನು ಹೊಂದಿದ್ದರು ಮತ್ತು ಹಿಂಸಾಚಾರವನ್ನು ಕೆಟ್ಟ ವಿಧಾನ ಎಂದು ಖಂಡಿಸುವ ಕಡೆಗೆ ಗಮನ ಹರಿಸಿದರು.[೨೨೭]

೧೪.೪ ಕ್ಯಾಬಿನೆಟ್ ಮಿಷನ್

೧೯೪೬ರ ಮಾರ್ಚ್ ೧೫ರಂದು ಬ್ರಿಟನ್ ಪ್ರಧಾನಮಂತ್ರಿ ಲೇಬರ್ ಪಕ್ಷದ ಕ್ಲೆಮೆಂಟ್ ಆಟ್ಲಿಯವರು ಅಲ್ಲಿಯ ಹೌಸ್ ಆಫ್ ಕಾಮನ್ಸ್ (ಸಂಸತ್ತಿನ ಕೆಳಮನೆ)ನಲ್ಲಿ "ಭಾರತವು ಸ್ವಾತಂತ್ರ್ಯವನ್ನು ಆರಿಸಿಕೊಂಡರೆ, ಹಾಗೆ ಮಾಡಲು ಅದಕ್ಕೆ ಹಕ್ಕಿದೆ" ಎಂದು ನುಡಿದನು. ಬ್ರಿಟನ್ನು ಭಾರತವನ್ನು ಬಿಟ್ಟು ಹೊರಡಲು ತೀರ್ಮಾನಿಸಿದೆ – ಎನ್ನುವುದು ಪ್ರಧಾನಿಯ ಮಾತಿನ ಅರ್ಥವಾಗಿತ್ತು. ಆಟ್ಲಿಯವರು, ಭಾರತವು ತನ್ನ ಸಂವಿಧಾನವನ್ನು ತಾನೇ ರಚಿಸುವುದೆಂದೂ, ಅದು ಕಾಮನ್‌ವೆಲ್ತ್‌ನಲ್ಲಿ ಉಳಿಯುವ ಅಥವಾ ಹೊರಹೋಗುವ ಸ್ವಾತಂತ್ರ್ಯವನ್ನು ಹೊಂದಿರುವುದೆಂದೂ, ಭಾರತದ ಅಲ್ಪ ಸಂಖ್ಯಾತರ ಹಕ್ಕುಗಳನ್ನು ರಕ್ಷಿಸಲು ಬ್ರಿಟಿಷ್ ಸರ್ಕಾರಕ್ಕೆ ಕಾತರವಿದ್ದರೂ ಭಾರತದ ಅಭಿವೃದ್ಧಿಗೆ ಅಲ್ಪ ಸಂಖ್ಯಾತರು ಅಡ್ಡಿ ಬರಲು ಅವಕಾಶ ಕೊಡಲು ಸಾಧ್ಯವಿಲ್ಲವೆಂದೂ, ರಾಜರುಗಳು ಭಾರತದ ಅಭಿವೃದ್ಧಿಯನ್ನು ಕುಂಟಿತಗೊಳಿಸುವುದಿಲ್ಲವೆಂದು ತಾವು ನಂಬಿರುವುದಾಗಿಯೂ, ಪ್ರಕಟಿಸಿದರು.[೨೨೮] ಇದ್ದಕ್ಕಿದ್ದ ಹಾಗೆ ಬಂದ ಬ್ರಿಟಿಷ್ ಪ್ರಧಾನಮಂತ್ರಿಯ ಪ್ರಕಟಣೆ ಅಂದಿನ

ಭಾರತೀಯರಿಗೆ ಅಮಿತ ಮತ್ತು ಅನಿರೀಕ್ಷಿತ ಆನಂದವನ್ನು ಕೊಟ್ಟಿರಬೇಕು. ಆದರೆ ಭಾರತಕ್ಕೆ ಸ್ವಾತಂತ್ರ್ಯವಿರಲಿ, ಹೆಚ್ಚಿನ ಅಧಿಕಾರವನ್ನು ಕೊಡುವುದನ್ನೂ ವಿರೋಧಿಸುತ್ತಿದ್ದ ಚರ್ಚಿಲ್‌ನಂತಹ ಬ್ರಿಟಿಷ್ ರಾಜಕಾರಣಿಗಳಿಗೆ ಮತ್ತು ಭಾರತದಲ್ಲಿ ಕೆಲಸ ಮಾಡುತ್ತಿದ್ದ ಆಂಗ್ಲ ಅಧಿಕಾರಿಗಳಿಗೆ ಬಹಳ ಸಂಕಟವಾಗಿರಬೇಕು! ಹೊಟ್ಟೆಯಲ್ಲಿ ಹುಣಸೆಹಣ್ಣು ಕಿವುಚಿದಂತಾಗಿರಬೇಕು.

ತಮ್ಮ ಪ್ರಕಟಣೆಗೆ ಪೂರಕವಾಗಿ ಪ್ರಧಾನಿ ಕ್ಲೆಮೆಂಟ್ ಆಟ್ಲಿಯವರು ಮೂವರು ಮಂತ್ರಿಗಳ ಒಂದು ತಂಡವನ್ನು ಭಾರತಕ್ಕೆ ಕಳುಹಿಸಿದರು. ಆ ಮೂವರ ತಂಡ 'ಕ್ಯಾಬಿನೆಟ್ ಮಿಷನ್' ಎಂದು ಪ್ರಸಿದ್ಧವಾಯಿತು. ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ಇಂಡಿಯಾ ಪೆಥಿಕ್ ಲಾರೆನ್ಸ್ ಆ ತಂಡದ ನಾಯಕರಾಗಿದ್ದರು. ಸರ್ ಸ್ಟಾಫ಼ರ್ಡ್ ಕ್ರಿಪ್ಸ್ ಮತ್ತು ಎ.ವಿ. ಅಲೆಕ್ಸಾಂಡರ್ ಆ ಸಮಿತಿಯ ಇತರ ಸದಸ್ಯರಾಗಿದ್ದರು. ಅಧಿಕಾರ ಹಸ್ತಾಂತರದ ರೀತಿ ನೀತಿಯ ಬಗೆಗೆ ಭಾರತೀಯ ನಾಯಕರೊಡನೆ ಚರ್ಚಿಸಿ ಒಂದು ಒಮ್ಮತದ ಮಾರ್ಗವನ್ನು ರೂಪಿಸುವುದು ಆ ತಂಡದ ಕೆಲಸವಾಗಿತ್ತು.

ಆ ಮೂವರು ಮಂತ್ರಿಗಳ ತಂಡ ೧೯೪೬ರ ಮಾರ್ಚ್ ೨೪ರಂದು ದೆಹಲಿಯನ್ನು ತಲುಪಿತು. ಮಾರನೆಯ ದಿನ ನಾಯಕ ಪೆಥಿಕ್ ಲಾರೆನ್ಸ್ ತಮ್ಮ ಪ್ರಾಮಾಣಿಕತೆಯನ್ನು ಪ್ರಕಟಿಸುತ್ತಾ ಹೀಗೆ ನುಡಿದರು, "ನಮ್ಮ ಸಂಧಾನದ ಪ್ರಕ್ರಿಯೆಯಲ್ಲಿ ಭಾರತದ ಸ್ವಾತಂತ್ರ್ಯಕ್ಕೆ ಹೊಂದಾಣಿಕೆಯಾಗದ ಯಾವುದಕ್ಕೂ ನಾವು ಅವಕಾಶ ಕೊಡುವುದಿಲ್ಲ. ಭಾರತ ಸ್ವಾತಂತ್ರ್ಯ ಸೌಧದ ನಿಖರವಾದ ಮಾರ್ಗ ಇನ್ನೂ ಸ್ಪಷ್ಟವಾಗಿಲ್ಲ. ಆದರೆ ಅದರ ಕಲ್ಪನಾ ರೂಪವು ಸಹಕಾರದ ಹಾದಿಯನ್ನು ಕಂಡು ಹಿಡಿಯುವ ನಮ್ಮ ಪ್ರಯತ್ನದಲ್ಲಿ ನಮ್ಮೆಲ್ಲರಿಗೆ ಸ್ಫೂರ್ತಿ ನೀಡಲಿ." ಅವರು ಅಷ್ಟಕ್ಕೇ ನಿಲ್ಲಸಲಿಲ್ಲ. ಮುಸ್ಲಿಮರ ಆನುಮಾನ ಪರಿಹಾರಕ್ಕೆಂದು ಕಾಣುತ್ತದೆ, ಮುಂದುವರೆದು ಹೀಗೆ ನುಡಿದರು, "ಕಾಂಗ್ರೆಸ್ಸು ಬಹು ಜನರ ಪ್ರತಿನಿಧಿಯಾಗಿದ್ದರೂ ಮುಸ್ಲಿಂ ಲೀಗ್ ಅನ್ನು ಬರೇ ಅಲ್ಪ ಸಂಖ್ಯಾತರ ರಾಜಕೀಯ ಪಕ್ಷ ಎಂದು ಪರಿಗಣಿಸುವುದು ಸರಿಯಲ್ಲ – ಅದು ವಾಸ್ತವವಾಗಿ ಮಹಾ ಮುಸ್ಲಿಂ ಜನಾಂಗದ ಬಹುಮತ ಪ್ರತಿನಿಧಿಗಳಾಗಿದ್ದಾರೆ."[೨೨೯]

(ಪೆಥಿಕ್ ಲಾರೆನ್ಸ್‌ರವರ ಈ ನುಡಿಯಿಂದ ಕಾಂಗ್ರೆಸ್ ಒಡನೆ ಮುಸ್ಲಿಂ ಲೀಗ್‌ಗೆ ಸಮಾನತೆಯನ್ನು ಕಲ್ಪಿಸಿರುವುದು ಕಂಡು ಬರುತ್ತದೆ. ಮೊದಲಿಂದಲೂ ಗಾಂಧೀಜಿಯವರು, 'ಕಾಂಗ್ರೆಸ್ಸು ಬಹು ದೊಡ್ಡ ಪಕ್ಷ, ಹಳೆಯ ಪಕ್ಷ ಮತ್ತು ರಾಷ್ಟ್ರೀಯ ಪಕ್ಷ, ಆದರೆ ಮುಸ್ಲಿಂ ಲೀಗ್ ಇತ್ತೀಚಿನ ಚಿಕ್ಕ ಪಕ್ಷ ಎಂದು ಹೇಳುತ್ತಿದ್ದರೂ,

ಬ್ರಿಟಿಷರು ಕಾಂಗ್ರೆಸ್ಸನ್ನು ಕ್ಯಾಸ್ಟ್ ಹಿಂದೂಗಳ ಪಕ್ಷ ಎಂದೇ ಪರಿಗಣಿಸಿ ಮಾತನಾಡುತ್ತಿದ್ದರು ಮತ್ತು ಎರಡು ಪಕ್ಷಗಳು ಸಮವೆಂದು ಪರಿಗಣಿಸುತ್ತಿದ್ದರು. ಸಿಮ್ಲಾ ಸಮ್ಮೇಳನದಲ್ಲಿ ವೈಸ್‌ರಾಯ್ ವೇವೆಲ್ ಆ ತಪ್ಪು ಮಾಡಿದ್ದರು. ಈಗ ಪೆಥಿಕ್ ಲಾರೆನ್ಸ್ ಸಹ ಅದೇ ತಪ್ಪು ಮಾಡಿದರು – ಲೇಖಕ)

ಹೌಸ್ ಆಫ್ ಕಾಮನ್ಸ್‌ನಲ್ಲಿ ಆಟ್ಲಿಯವರೂ ಸಹ ಹೀಗೆಯೇ ಮಾತನಾಡಿದ್ದರು: ಅವರು, 'ಅಲ್ಪ ಸಂಖ್ಯಾತರ ಹಕ್ಕುಗಳ ಬಗೆಗೆ ಮತ್ತು ಅವರು ನಿರ್ಭೀತಿಯಿಂದ ಬದುಕಬೇಕು ಎನ್ನುವುದರ ಬಗೆಗೆ ನಮ್ಮ ಗಮನವಿದೆ. ಹಾಗೆಯೇ, ಬಹು ಮತೀಯರ ಏಳ್ಗೆಯನ್ನು ಅಲ್ಪ ಸಂಖ್ಯಾತರು ತಡೆಗಟ್ಟುವುದಕ್ಕೆ ಅವಕಾಶ ಕೊಡಲಾರೆವು' ಎಂದಿದ್ದರು.[೨೩೦] ಇದೊಂದು ಅಡ್ಡಗೋಡೆಯ ಮೇಲಿನ ದೀಪದಂತಹ ಮಾತು!

'ಕ್ಯಾಬಿನೆಟ್ ಮಿಷನ್'ನ ಮಾರ್ಗ ಅಷ್ಟು ಸುಲಭವಾಗಿರಲಿಲ್ಲ. ಅವರು ಎತ್ತಿಕೊಂಡಿರುವ ಕಾರ್ಯದಲ್ಲಿ ಅನೇಕ ತೊಡಕುಗಳು ಮತ್ತು ಸಿಕ್ಕುಗಳು ಇದ್ದುವು. ಮೊದಲನೆಯದಾಗಿ ಮುಸ್ಲಿಂ ಲೀಗ್ ಮತ್ತು ಕಾಂಗ್ರೆಸ್ ನಡುವಣ, ಮುಸ್ಲಿಮರು ಮತ್ತು ಹಿಂದೂಗಳ ನಡುವಣ ಅಭಿಪ್ರಾಯದಲ್ಲಿ ಭಾರಿ ವ್ಯತ್ಯಾಸವಿತ್ತು. ಎರಡನೆಯದಾಗಿ ಮುಸ್ಲಿಂ ಲೀಗ್‌ನ ಅಧ್ಯಕ್ಷ ಮಹಮದಾಲಿ ಜಿನ್ನಾ ಮಹಾ ಹಠವಾದಿಯಾಗಿದ್ದನು. ಒಂದು ಕಾಲದಲ್ಲಿ ಹಿಂದೂ – ಮುಸ್ಲಿಂ ಮೈತ್ರಿಯ ಭಾರಿ ಬೆಂಬಲಿಗನಾಗಿದ್ದ ಜಿನ್ನಾ ಭಾರಿ ಹಿಂದೂ ದ್ವೇಷಿಯಾಗಿ ಪರಿವರ್ತನೆಯಾಗಿದ್ದನು.

ಕಾಂಗ್ರೆಸ್ ಮುಖಂಡರು ೧೯೪೨ – ೧೯೪೫ರ ಮೂರು ವರ್ಷಗಳ ಕಾಲ ಸೆರೆವಾಸದಲ್ಲಿದ್ದಾಗ ಜಿನ್ನಾ ವೈಸ್‌ರಾಯ್ ಲಿನ್‌ಲಿತ್‌ಗೊ ಬೆಂಬಲದಿಂದ ಬಹಳ ಬಲಾಢ್ಯನಾಗಿ ಬೆಳೆದಿದ್ದನು. ಅವನ ಪ್ರಭಾವವನ್ನು ತಡೆಯಲು ಸೆರೆಯಲ್ಲಿದ್ದ ಕಾಂಗ್ರೆಸ್‌ಗೆ ಸಾಧ್ಯವಾಗಲಿಲ್ಲ. ೧೯೪೦ರ ಮಾರ್ಚ್ ೨೨ರಿಂದ ೨೪ರ ವರೆಗೆ ಲಾಹೋರ್‌ನಲ್ಲಿ ನಡೆದ ತನ್ನ ವಾರ್ಷಿಕ ಅಧಿವೇಶನದಲ್ಲಿ ಮುಸ್ಲಿಂ ಲೀಗ್ ಪಾಕಿಸ್ತಾನ ಠರಾವನ್ನು ಅಂಗೀಕರಿಸಿ ಮುಸ್ಲಿಮರಿಗೆ ಪ್ರತ್ಯೇಕ ದೇಶ ಬೇಕೆಂದು ತೀರ್ಮಾನಿಸಿತ್ತು. ಅದಾದ ನಾಲ್ಕು ತಿಂಗಳ ನಂತರ ಆಗ ಬ್ರಿಟನ್‌ನಲ್ಲಿದ್ದ ಚರ್ಚಿಲ್‌ನ ಸರ್ಕಾರ 'ಇಂಪೀರಿಯಲ್ ಸ್ಟ್ರಾಟೆಜಿ' ಎನ್ನುವ ನೀತಿಯನ್ನು ಸೃಷ್ಟಿಸಿ ಭಾರತವನ್ನು ಹಿಂದೂ ಮತ್ತು ಮುಸ್ಲಿಮರ ನಡುವೆ ವಿಭಾಗಿಸಲು ತೀರ್ಮಾನಿಸಿತ್ತು.[೨೩೧]

೧೯೩೭ರ ಚುನಾವಣೆಯಲ್ಲಿ ೧೧ ಬ್ರಿಟಿಷ್ ಪ್ರಾಂತ್ಯಗಳ ಪೈಕಿ ೮ ಪ್ರಾಂತ್ಯಗಳಲ್ಲಿ ಕಾಂಗ್ರೆಸ್ ಭರ್ಜರಿ ಜಯಗಳಿಸಿ ಅಧಿಕಾರಕ್ಕೆ ಬಂದಿತ್ತು. ಆದರೆ ಮುಸ್ಲಿಂ ಲೀಗ್ ಒಂದು ಪ್ರಾಂತ್ಯದಲ್ಲೂ ಅಧಿಕಾರಕ್ಕೆ ಬರಲಿಲ್ಲ. ಅದು ಬೆರಳೆಣಿಕೆಯಷ್ಟು ಸ್ಥಾನಗಳನ್ನು ಮಾತ್ರ ಪಡೆದಿತ್ತು. ವೈಸ್‌ರಾಯ್ ಲಿನ್‌ಲಿತ್‌ಗೊ ಕಾಂಗ್ರೆಸ್ ಬೆಳವಣಿಗೆಗೆ

ವಿರುದ್ಧವಾದ ಕಾರ್ಯ ನಡೆಸಬೇಕೆಂದು ಜಿನ್ನಾನನ್ನು ಬಲಗೊಳಿಸಲಾರಂಭಿಸಿದನು. ಅವನು ಅಂದಿನ ಸೆಕ್ರೆಟರಿ ಆಫ್ ಸ್ಟೇಟ್‌ಗೆ, "ಜಿನ್ನಾ ನಮ್ಮ ವ್ಯಕ್ತಿ ನಾವು ಅವನನ್ನು ಎಲ್ಲಾ ಮುಸ್ಲಿಮರ ಪ್ರತಿನಿಧಿಯೆಂದು ಒಪ್ಪಿಕೊಳ್ಳೋಣ" ಎಂದು ಬರೆದನು. ನಂತರ ಅವನು ಜಿನ್ನಾನ ಏಳ್ಗೆಗೆ ಅಡ್ಡವಾಗಿದ್ದ ಪಂಜಾಬ್‌ನ ಪ್ರಧಾನಮಂತ್ರಿ ಸಿಕಂದರ್ ಹಯಾತ್‌ನನ್ನು ಅಧಿಕಾರದಿಂದ ಕೆಳಗಿಳಿಸಲು ಯತ್ನಿಸಿದನು. ಆದರೆ ಅದು ಆಗಲಿಲ್ಲ. ಸಿಕಂದರ್ ಹಯಾತ್ ಯೂನಿಯನಿಸ್ಟ್ ಪಕ್ಷದ ನಾಯಕ. ಯೂನಿಯನಿಸ್ಟ್ ಪಕ್ಷವು ಸರ್‌ಫ಼ಜಲ್ ಹುಸೇನ್, ಸರ್ ಚೋಟು ರಾಮ್ ಮತ್ತು ಸರ್ ಸಿಕಂದರ್ ಹಯಾತ್ ಖಾನ್‌ರಿಂದ ಸ್ಥಾಪಿಸಲ್ಪಟ್ಟಿತ್ತು. ಅದು ಒಂದು ಜಾತ್ಯತೀತ ಪಕ್ಷವಾಗಿತ್ತು. ಅದು ಕಾಂಗ್ರೆಸ್ ಮತ್ತು ಶಿರೋಮಣಿ (ಸಿಕ್) ಅಕಾಲಿ ದಳದೊಡನೆ ಸಮ್ಮಿಶ್ರ ಸರ್ಕಾರವನ್ನು ೧೯೨೬ರಿಂದ ನಡೆಸುತ್ತಿತ್ತು. "ಪಾಕಿಸ್ತಾನ ಅಂದರೆ ಪಂಜಾಬಿನಲ್ಲಿ ಮುಸ್ಲಿಂ ರಾಜ್ಯ – ಎಂದು ಹೇಳುವುದಾದರೆ ನನಗದು ಬೇಡ. ಎಲ್ಲಾ ಕೋಮಿನವರು ಸ್ವಯಂ ಆಡಳಿತದ ಅಧಿಕಾರವನ್ನು ಹಂಚಿಕೊಳ್ಳಬೇಕು" ಎನ್ನುವುದು ಸಿಕಂದರ್ ಹಯಾತ್‌ನ ಧೋರಣೆಯಾಗಿತ್ತು. ೧೯೩೮ರಲ್ಲಿ ಅವನು ಪೆಂಡೆರಲ್ ಮೂನ್‌ಗೆ 'ಪಾಕಿಸ್ತಾನವನ್ನು ಸೃಷ್ಟಿಸುವುದು ಪ್ರತಿಯೊಬ್ಬ ಹಿಂದೂ ಬನಿಯನ ಕತ್ತನ್ನು ಕತ್ತರಿಸಲು ಮುಸ್ಲಿಮರಿಗೆ ಅಹ್ವಾನ ನೀಡಿದಂತೆ. ಪಾಕಿಸ್ತಾನ ಎಂದರೆ ನರಮೇಧ' ಎಂದು ಹೇಳಿದ್ದನು.[೨೩೨] ಅವನು ಗತಿಸಿದ ಮೇಲೆ ಜಿನ್ನಾನ ಹಾದಿ ಸುಗಮವಾಯಿತು.

ಸಿಕಂದರ್ ಹಯಾತ್ ಗತಿಸಿದ ನಂತರ ಪ್ರಧಾನಿಯಾದ ಖಿಜ಼ರ್ ಹಯಾತ್ ಖಾನ್ ತಿವಾನ್ ಸಹ ಜಾತ್ಯಾತೀತನಾಗಿದ್ದನು. ಆದರೆ ಸಿಮ್ಲಾ ಸಮ್ಮೇಳನದ ಸಮಯದಲ್ಲಿ ವೈಸ್‌ರಾಯ್ ವೇವೆಲ್ಲನು ಅವನ ಪಕ್ಷಕ್ಕೆ ತನ್ನ ಕಾರ್ಯಕಾರಿ ಸಮಿತಿಯಲ್ಲಿ ಸ್ಥಾನಕೊಡದೆ ಅವನನ್ನು ದುರ್ಬಲನನ್ನಾಗಿ ಮಾಡಿದನು.

ಜಿನ್ನಾಗೆ ಸರ್ಕಾರದ ಬೆಂಬಲ ಇರುವುದನ್ನು ಗಮನಿಸಿದ ಮುಸ್ಲಿಮರು ಅವನ ಪಕ್ಷಕ್ಕೆ ಹೆಚ್ಚು ಹೆಚ್ಚಾಗಿ ಸೇರಿದರು. ಮುಸ್ಲಿಂ ರಾಜಕಾರಣಿಗಳು ತಾವು ಮುಸ್ಲಿಂ ಲೀಗ್ ಸೇರದೆ ಹೋದರೆ ತಮಗೆ ಭವಿಷ್ಯವಿಲ್ಲ ಎಂದು ಭಾವಿಸಿದರು.

ಈ ನಡುವೆ ೧೯೪೫ರ ಚುನಾವಣೆ ಬಂತು. ಕೇಂದ್ರ ಶಾಸನ ಸಭಾ ಚುನಾವಣೆಯಲ್ಲಿ ಮುಸ್ಲಿಮರಿಗೆ ಮೀಸಲಾಗಿದ್ದ ಎಲ್ಲಾ ೩೦ ಸ್ಥಾನಗಳನ್ನು ಮುಸ್ಲಿಂ ಲೀಗ್ ಬಾಚಿಕೊಂಡಿತು. ಪ್ರಾಂತ್ಯ ಶಾಸನ ಸಭೆಗಳಲ್ಲಿ ಮುಸ್ಲಿಮರಿಗೆ ಮೀಸಲಾಗಿದ್ದ ಒಟ್ಟು ೫೦೭ ಸ್ಥಾನಗಳ ಪೈಕಿ ೪೨೭ ಸ್ಥಾನಗಳನ್ನು ಗಳಿಸಿತು ಮತ್ತು ಪಂಜಾಬ್, ಸಿಂದ್ ಮತ್ತು ಬಂಗಾಳದಲ್ಲಿ ಸರ್ಕಾರ ರಚಿಸಿತು. ಇಂತಹ ಅದ್ಭುತ ಯಶಸ್ಸಿಗೆ ಕಾರಣವೇನು? 'ಇಸ್ಲಾಂ ಅಪಾಯದಲ್ಲಿದೆ' ಎಂಬ ಜಿನ್ನಾ ಕೂಗು, ಕಾಂಗ್ರೆಸ್

ಅಧಿಕಾರಕ್ಕೆ ಬಂದರೆ ಅದು 'ಹಿಂದೂ ರಾಜ್ಯ' ಅನ್ನುವ ಮುಸ್ಲಿಂ ಲೀಗ್‌ನ ಪ್ರಚಾರ, ಮೂರು ವರ್ಷಗಳ ಕಾಲ (ಕಾಂಗ್ರೆಸ್ ನಾಯಕರು ಸೆರೆಯಲ್ಲಿದ್ದುದರಿಂದ) ಮುಸ್ಲಿಂ ಲೀಗ್‌ಗೆ ರಾಜಕೀಯ ಕ್ಷೇತ್ರದಲ್ಲಿ ಮುಕ್ತ ಬೆಳವಣಿಗೆ ದೊರಕಿದ್ದು. ಕಾಂಗ್ರೆಸ್ ಮಂತ್ರಿ ಮಂಡಲಗಳು ರಾಜಿನಾಮೆ ಇತ್ತದ್ದು, ಸಿಮ್ಲಾ ಸಮ್ಮೇಳನದಲ್ಲಿ ವೈಸ್‌ರಾಯ್ ವೇವೆಲ್ಲನು ಜಿನ್ನಾಗೆ ಶರಣಾದದ್ದು, ಗಾಂಧೀಜಿಯವರು ಜಿನ್ನಾ ಮನೆ ಬಾಗಿಲಿಗೆ ಅನೇಕ ಬಾರಿ ಹೋಗಿ ವಿಫಲರಾಗಿ ಬಂದು ಸಾಮಾನ್ಯ ಮುಸ್ಲಿಮರ ದೃಷ್ಟಿಯಲ್ಲಿ ಜಿನ್ನಾನ ಮೇಲಿನ ಗೌರವ ಹೆಚ್ಚಾದದ್ದು – ಹೀಗೆ ಮುಸ್ಲಿಂ ಲೀಗ್‌ನ ಅದ್ಭುತ ಯಶಸ್ಸಿಗೆ ನಾನಾ ಕಾರಣಗಳಿವೆ.

ಈ ಯಶಸ್ಸಿನ ಫಲವಾಗಿ ಜಿನ್ನಾನ ಪ್ರತಿಷ್ಠೆ ಮತ್ತು ಹಠಮಾರಿತನ ಹೆಚ್ಚಿತು. ಅವನಿಗೆ ನೂರು ಆನೆಗಳ ಬಲ ಬಂದಿತ್ತು. ಅವನು ೧೯೪೬ರ ಏಪ್ರಿಲ್‌ನಲ್ಲಿ, ಕ್ಯಾಬಿನೆಟ್ ಮಿಷನ್ ಭಾರತಕ್ಕೆ ಬಂದ ಮೇಲೆ, ನೂತನವಾಗಿ ಚುನಾಯಿತರಾದ ಮುಸ್ಲಿಂ ಲೀಗ್ ಶಾಸಕರ ಸಭೆಯನ್ನು ದೆಹಲಿಯಲ್ಲಿ ಸೇರಿಸಿದನು. ಆ ಸಭೆಯು 'ಪಾಕಿಸ್ತಾನದ ರಚನೆ'ಯಾಗಬೇಕೆಂದು ಆಗ್ರಹಿಸಿ ಮತ್ತೆ ಮಸೂದೆಯನ್ನು ಅಂಗೀಕರಿಸಿತು. ಅದು 'ಪಾಕಿಸ್ತಾನ ಎಂದರೆ ಬಂಗಾಳ, ಅಸ್ಸಾಂ, ಪಂಜಾಬ್, ಸಿಂದ್, ವಾಯುವ್ಯ ಗಡಿನಾಡು ಮತ್ತು ಬಲೂಚಿಸ್ತಾನ' ಎಂದಿತು.

ಅಷ್ಟೇ ಅಲ್ಲ, ಪಾಕಿಸ್ತಾನಕ್ಕೆ ಒಂದು ಮತ್ತು ಭಾರತಕ್ಕೆ ಮತ್ತೊಂದು ಪ್ರತ್ಯೇಕ ಸಂವಿಧಾನ ರಚನಾ ಸಭೆಗಳನ್ನು ರಚಿಸಬೇಕೆಂದಿತು.

ಆದರೆ ಗಾಂಧೀಜಿ ಮತ್ತು ಕಾಂಗ್ರೆಸ್ ದೇಶ ವಿಭಜನೆಯನ್ನು ವಿರೋಧಿಸಿದರು. ಗಾಂಧೀಜಿಯವರಂತೂ 'ನನ್ನ ಹೆಣದ ಮೇಲೆ ದೇಶ ವಿಭಜನೆ ಆಗಬೇಕು' ಎಂದರು. ಆದರೆ ಜಿನ್ನಾ ಪಾಕಿಸ್ತಾನದ ರಚನೆ ಆಗಲೇಬೇಕೆಂದು ಹಠ ಹಿಡಿದನು.

ಇಂತಹ ಸನ್ನಿವೇಶದಲ್ಲಿ ಎರಡು ಪಕ್ಷಗಳೊಡನೆ ಒಮ್ಮತ ಮೂಡಿಸಲು 'ಕ್ಯಾಬಿನೆಟ್ ಮಿಷನ್' ಭಾರತಕ್ಕೆ ಬಂದಿತ್ತು. ಅದು ಎರಡು ಕಾರ್ಯಗಳನ್ನು ನಿರ್ವಹಿಸಬೇಕಾಗಿತ್ತು. ಮೊದಲನೆಯದು, ಸಂವಿಧಾನ ರಚನೆಯ ಸಮಸ್ಯೆಯನ್ನು ಪರಿಹರಿಸುವುದು. ಎರಡನೆಯದು, ವೈಸ್‌ರಾಯ್‌ನ ಕಾರ್ಯಕಾರಿ ಸಮಿತಿಯ ಸ್ಥಾನದಲ್ಲಿ ಭಾರತೀಯರಿರುವ ಪ್ರಾತಿನಿಧಿಕ ಮಧ್ಯಂತರ ಸರ್ಕಾರವನ್ನು ರಚಿಸುವುದು. ಮೊದಲನೆಯದು ದೀರ್ಘ ಕಾಲದಲ್ಲಿ ನಡೆಯಬೇಕಾದದ್ದು. ಎರಡನೆಯದು ತಕ್ಷಣವೇ ಆಗಬೇಕಾದದ್ದು.

ಮೂವರು ಬ್ರಿಟಿಷ್ ಮಂತ್ರಿಗಳೂ ವಿವಿಧ ಪಕ್ಷಗಳ ನಾಯಕರೊಡನೆ ವಿಮಲ

ಚರ್ಚೆ ನಡೆಸಿದರು. ಅವರು ೧೯೪೬ರ ಏಪ್ರಿಲ್ ೧ರಿಂದ ೧೭ರ ವರೆಗೆ ೧೮೨ ಸಭೆಗಳಲ್ಲಿ ೪೭ ಭಾರತೀಯರೊಡನೆ ಸಂದರ್ಶನ ನಡೆಸಿ ಎಲ್ಲರಿಗೂ ಆದಷ್ಟೂ ಒಪ್ಪಿಗೆಯಾಗುವಂತಹ ಸೂತ್ರವನ್ನು ಕಂಡುಹಿಡಿಯಲು ಯತ್ನಿಸಿದರು. ಆದರೆ ಅದು ಸಾಧ್ಯವಾಗಲಿಲ್ಲ. 'ಪಾಕಿಸ್ತಾನ ರಚನೆ'ಯ ಪಟ್ಟನ್ನು ಜಿನ್ನಾ ಸಡಿಲಿಸಲಿಲ್ಲ. ದೇಶ ವಿಭಜನೆಯನ್ನು ಕಾಂಗ್ರೆಸ್ ಒಪ್ಪಲಿಲ್ಲ. ಕೊನೆಗೆ ಮೂವರು ಬ್ರಿಟಿಷ್ ಮಂತ್ರಿಗಳು ತಮ್ಮದೇ ಆದ ಒಂದು ಸೂತ್ರವನ್ನು ೧೯೪೬ ಮೇ ೧೬ರಂದು ಪ್ರಕಟಿಸಿದರು. ಅದು ಮೇ ೧೬ರ ಸೂತ್ರ ಎಂದು ಪ್ರಸಿದ್ಧಿಯಾಯಿತು. ಅದರ ರಚನೆಯಲ್ಲಿ ಬಿ.ಎನ್. ರಾವ್‌ರವರು ಪೆಥಿಕ್ ಲಾರೆನ್ಸ್‌ಗೆ ನೆರವು ನೀಡಿದರು.

ಮೇ ೧೬ರ ಸೂತ್ರ ಪಾಕಿಸ್ತಾನದ ರಚನೆಯ ಸಾಧ್ಯತೆ ಮತ್ತು ಅದರ ಸಾಧಕ ಬಾಧಕಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಪಾಕಿಸ್ತಾನದ ರಚನೆಯನ್ನು ತಿರಸ್ಕರಿಸಿತು. ಉಳಿದಂತೆ ಅದರ ಪ್ರಮುಖ ಅಂಶಗಳು: ಬ್ರಿಟಿಷ್ ಇಂಡಿಯ (ಅಂದರೆ ೧೧ ಬ್ರಿಟಿಷ್ ಪ್ರಾಂತ್ಯಗಳು) ಮತ್ತು ದೇಶೀಯ ರಾಜ್ಯಗಳನ್ನು ಒಳಗೊಂಡ ಭಾರತ ಒಕ್ಕೂಟವನ್ನು ರಚಿಸಬೇಕು. ಅದು ಪ್ರಾಂತ್ಯಗಳು ಮತ್ತು ಪ್ರಾಂತ್ಯಗಳ ಗುಂಪನ್ನು ಒಳಗೊಂಡಿರಬೇಕು. ಅದು ವಿದೇಶಾಂಗ ವ್ಯವಹಾರ, ದೇಶ ರಕ್ಷಣೆ ಮತ್ತು ಸಂಪರ್ಕ ಇಲಾಖೆಗಳನ್ನು ನಿರ್ವಹಿಸಬೇಕು. ಆ ಇಲಾಖೆಗಳಿಗೆ ಬೇಕಾದ ಹಣವನ್ನು ಸಂಗ್ರಹಿಸುವ ಅಧಿಕಾರ ಅದಕ್ಕೆ ಇರಬೇಕು. ಆ ಒಕ್ಕೂಟದಲ್ಲಿ ಕಾರ್ಯಾಂಗ ಮತ್ತು ಶಾಸಕಾಂಗ ಇರಬೇಕು. ಶಾಸನ ಸಭೆಯು ಬ್ರಿಟಿಷ್ ಇಂಡಿಯ ಮತ್ತು ದೇಶೀಯ ರಾಜ್ಯಗಳ ಪ್ರತಿನಿಧಿಗಳನ್ನು ಒಳಗೊಂಡಿರಬೇಕು. ಪ್ರಾಂತ್ಯಗಳ ಗುಂಪುಗಳನ್ನು ರಚಿಸಿಕೊಳ್ಳಲು ಒಕ್ಕೂಟದಲ್ಲಿ ಪ್ರಾಂತ್ಯಗಳಿಗೆ ಸ್ವಾತಂತ್ರ್ಯವಿರಬೇಕು. ಒಂದು ರಾಜ್ಯಾಂಗ ರಚನಾ ಸಭೆಯನ್ನು ರಚಿಸಬೇಕು. ಅದರ ಸದಸ್ಯರನ್ನು ಪ್ರಾಂತ್ಯಗಳ ಶಾಸನ ಸಭೆಗಳ ಸದಸ್ಯರು ಚುನಾಯಿಸಬೇಕು. ಒಂದು ಪ್ರಾತಿನಿಧಿಕ ಮಧ್ಯಂತರ ಸರ್ಕಾರವನ್ನು ರಚಿಸಬೇಕು. ಅದು ಸಂವಿಧಾನ ರಚನೆ ಆಗುವವರೆಗೆ ಅಧಿಕಾರದಲ್ಲಿ ಇರಬೇಕು. ಮಧ್ಯಂತರ ಸರ್ಕಾರದಲ್ಲಿ ಎಲ್ಲಾ ರಾಜಕೀಯ ಪಕ್ಷಗಳ ಪ್ರತಿನಿಧಿಗಳು ಇರಬೇಕು.[೨೩೩]

ಮುಸ್ಲಿಂ ಲೀಗ್ ಯೋಜನೆಯನ್ನು ಸ್ವಾಗತಿಸಿತು. ಆ ಯೋಜನೆಯಲ್ಲಿ ಪ್ರಾಂತ್ಯಗಳ ಗುಂಪಿನ ರಚನೆಗೆ ಅವಕಾಶವಿದ್ದುದರಿಂದ ಮುಸ್ಲಿಂ ಬಹು ಸಂಖ್ಯಾತರಾಗಿರುವ ಪ್ರಾಂತ್ಯಗಳನ್ನು ಸೇರಿಸಿ ಗುಂಪುಗಳನ್ನು ರಚಿಸಬಹುದು. ಅದರಿಂದ ಮುಂದೆ ಪ್ರತ್ಯೇಕ ಪಾಕಿಸ್ತಾನದ ರಚನೆ ಸಾಧ್ಯ ಎಂದು ಅದು ಯೋಚಿಸಿತು.

ಮೇ ೧೬ರ ಸೂತ್ರವು ಪಾಕಿಸ್ತಾನದ ರಚನೆಯನ್ನು ತಿರಸ್ಕರಿಸಿದ್ದು ಸರ್ದಾರ್

ಮತ್ತು ಕಾಂಗ್ರೆಸ್ಸಿಗರಿಗೆ ಸಂತಸವನ್ನು ಉಂಟುಮಾಡಿತು. ಆದರೆ ಇತರ ಅನೇಕ ಅಂಶಗಳು ಅಪಾಯಕಾರಿ ಅನ್ನಿಸಿದುವು. ಅದರಿಂದ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ೪೦ ದಿನಗಳ ಕಾಲ ಅದರ ಬಗೆಗೆ ಕೂಲಂಕುಷ ಪರಿಶೀಲನೆ ನಡೆಸಿತು. ಪಟೇಲರು ಆ ಸೂತ್ರಗಳನ್ನು ಎಚ್ಚರಿಕೆಯಿಂದ ಓದಿದರು. ಅದನ್ನು ಓದಿದಂತೆ ಅದು ದೇಶವನ್ನು ಛಿದ್ರ ಛಿದ್ರವಾಗಿ ಒಡೆಯುತ್ತದೆ ಮತ್ತು ಅದರಲ್ಲಿ ಪಾಕಿಸ್ತಾನದ ಬೀಜ ಅಡಗಿದೆ ಎನ್ನುವುದು ಮನವರಿಕೆಯಾಯಿತು. ಪಂಜಾಬ್, ಸಿಂದ್, ವಾಯುವ್ಯ ಗಡಿನಾಡು ಮತ್ತು ಬಲೂಚಿಸ್ತಾನವನ್ನು ಒಳಗೊಂಡ ಪಶ್ಚಿಮದ ಗುಂಪು ಮತ್ತು ಅಸ್ಸಾಂ – ಬಂಗಾಳವನ್ನು ಒಳಗೊಂಡ ಪೂರ್ವದ ಗುಂಪು ಒಕ್ಕೂಟದಿಂದ ಸಿಡಿದು ಹೋಗುವ ಅಪಾಯವಿತ್ತು. ಜೊತೆಗೆ, ಮೇ ೧೬ರ ಸೂತ್ರದಿಂದ ದುರ್ಬಲ ಕೇಂದ್ರ ಸ್ಥಾಪಿತವಾಗುತ್ತಿತ್ತು. ಜಿನ್ನಾ ಮುಸ್ಲಿಂ ಲೀಗ್ ಪಕ್ಷವು ಭಾರತದ ಎಲ್ಲಾ ಮುಸ್ಲಿಮರ ಪ್ರತಿನಿಧಿ, ಅದರಿಂದ ಮಧ್ಯಂತರ ಸರ್ಕಾರಕ್ಕೆ ತಾನು ಮಾತ್ರ ಮುಸ್ಲಿಂ ಮಂತ್ರಿಗಳ ಹೆಸರನ್ನು ಸೂಚಿಸಬೇಕು, ಕಾಂಗ್ರೆಸ್ಸು ಯಾವ ಮುಸ್ಲಿಂನನ್ನೂ ಸೂಚಿಸುವ ಹಾಗಿಲ್ಲ ಎಂದು ಹಠ ಹಿಡಿದಿದ್ದನು. ಅದಕ್ಕೆ ಒಪ್ಪಿದರೆ ಕಾಂಗ್ರೆಸ್ ಅಧ್ಯಕ್ಷ ಮೌಲಾನ ಆಜ಼ಾದರ ಹೆಸರನ್ನು ಸಹ ಕಾಂಗ್ರೆಸ್ ಸೂಚಿಸುವ ಹಾಗಿರಲಿಲ್ಲ. ಅಲ್ಲದೆ ಕಾಂಗ್ರೆಸ್ ರಾಷ್ಟ್ರೀಯ ಪಕ್ಷವಲ್ಲ, ಅದೊಂದು ಹಿಂದೂಗಳ ಪಕ್ಷ ಎಂದು ಹೇಳುತ್ತಿದ್ದ ಜಿನ್ನಾನ ಮಾತನ್ನು ಕಾಂಗ್ರೆಸ್ಸೇ ಒಪ್ಪಿದಂತಾಗುತ್ತಿತ್ತು. ಈ ಎಲ್ಲಾ ಅಂಶಗಳನ್ನು ಆಲೋಚಿಸಿ ಕಾಂಗ್ರೆಸ್ಸು ಮೇ ೧೬ರ ಸೂತ್ರದ ಸಂವಿಧಾನ ಸಭೆಯ ರಚನಾ ಭಾಗವನ್ನು ಒಪ್ಪಿ ಉಳಿದವನ್ನು ತಿರಸ್ಕರಿಸಲು ತೀರ್ಮಾನಿಸಿತು, ಆದರೆ ಆ ತೀರ್ಮಾನವನ್ನು ಮಿಷನ್‌ಗೆ ತಿಳಿಸುವುದನ್ನು ಮುಂದೂಡಿತು.

ಆದಾಗ್ಯೂ ಕ್ಯಾಬಿನೆಟ್ ಮಿಷನ್ ಮತ್ತು ವೈಸ್‌ರಾಯ್ ವೇವೆಲ್ಲನೊಡನೆಯ ಕಾಂಗ್ರೆಸ್ಸಿನ ಚರ್ಚೆ ಮುಂದುವರೆಯಿತು. ಕಾಂಗ್ರೆಸ್ಸು ಮೇ ೧೬ರ ಸೂತ್ರದ ಪ್ರಕಾರ ಪ್ರಾಂತ್ಯಗಳ ಗುಂಪಿನ ರಚನೆ ಖಡ್ಡಾಯವಲ್ಲ, ಅದು ಐಚ್ಛಿಕ ಎಂದು ಅರ್ಥೈಸಿತು. ಗುಂಪು ರಚನೆ ತಮ್ಮ ಸೂತ್ರಕ್ಕೆ ಅತಿ ಅವಶ್ಯಕ ಮತ್ತು ಕಾಂಗ್ರೆಸ್ ನೀಡಿರುವ ಅರ್ಥ ಮಿಷನ್‌ನ ಆಶಯಕ್ಕೆ ಅನುಗುಣವಾಗಿಲ್ಲವೆಂದು' ಮೇ ೨೫ರಂದು ಮಿಷನ್ ಪ್ರಕಟಿಸಿತು. ಗಾಂಧೀಜಿಯವರು, "ಒಂದು ತೀರ್ಪು ಅಥವಾ ಕಾನೂನನ್ನು ಅದರ ಪಠ್ಯದ ಪ್ರಕಾರ ಅರ್ಥೈಸಬೇಕೆ ಹೊರತು, ಅದನ್ನು ಬರೆದವರ ಆಶಯದ ಪ್ರಕಾರ ಅಲ್ಲ' ಎಂದರು. ಅದರಿಂದ ಪಟೇಲ್‌ಗೆ 'ಗುಂಪು ರಚನೆ'ಯ ಬಗೆಗೆ ಇದ್ದ ಆತಂಕ ಕಡಿಮೆಯಾಯಿತು. ಆದರೆ ದುರ್ಬಲ ಕೇಂದ್ರದ ಬಗೆಗಿನ ಆತಂಕ ಮುಂದುವರೆಯಿತು.

ಮಧ್ಯಂತರ ಸರ್ಕಾರ ರಚಿಸಲು ಮುಂದಾದ ವೈಸ್‌ರಾಯ್ ವೇವೆಲ್ಲನು ಕಾಂಗ್ರೆಸ್‌ನಿಂದ ಐದು ಮಂದಿ (ಒಬ್ಬ ಎಸ್.ಸಿ. ಸೇರಿ), ಮುಸ್ಲಿಂ ಲೀಗ್‌ನಿಂದ ಐದು ಮಂದಿ ಮುಸ್ಲಿಮರು ಮತ್ತು ಇತರ ಅಲ್ಪ ಸಂಖ್ಯಾತರಿಂದ ಇಬ್ಬರು ಒಟ್ಟು ೧೨ ಸದಸ್ಯರಿರುವ ಸರ್ಕಾರದ ಪ್ರಸ್ತಾವನೆಯನ್ನು ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ಮುಂದೆ ಇಟ್ಟನು. ಕಾಂಗ್ರೆಸ್ ಅದನ್ನು ಖಂಡಾತುಂಡವಾಗಿ ತಿರಸ್ಕರಿಸಿತು. ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್‌ಗೆ ಸಮಾನ ಸ್ಥಾನವನ್ನು ಒಪ್ಪಲು ಸಾಧ್ಯವಿಲ್ಲ ಮತ್ತು ಅಷ್ಟೊಂದು ಸ್ಥಾನಗಳಿಗೆ ಮುಸ್ಲಿಂ ಲೀಗ್ ಅರ್ಹರಲ್ಲ, ಎಂದಿತು ಕಾಂಗ್ರೆಸ್. ನಂತರ ವೈಸ್‌ರಾಯ್, ಕಾಂಗ್ರೆಸ್ಸಿನಿಂದ ಐವರು ಹಿಂದೂಗಳು, ಮುಸ್ಲಿಂ ಲೀಗ್‌ನಿಂದ ಐವರು ಮುಸ್ಲಿಮರು, ಕಾಂಗ್ರೆಸ್‌ನ ಒಬ್ಬ ಎಸ್.ಸಿ., ಒಬ್ಬ ಸಿಕ್ ಮತ್ತು ಒಬ್ಬ ಭಾರತೀಯ ಕ್ರಿಶ್ಚಿಯನ್, ಒಟ್ಟು ೧೩ ಮಂದಿಯ ಮಂತ್ರಿಮಂಡಲವನ್ನು ಸೂಚಿಸಿದನು. ಜಿನ್ನಾ ಒಪ್ಪುವ ಇಂಗಿತ ತೋರಿದನು. ಆದರೆ ಪಟೇಲರು ವೇವೆಲ್ಲನಿಗೆ, "ಅದನ್ನು ತಿರಸ್ಕರಿಸಲು ಕಾರ್ಯಕಾರಿ ಸಮಿತಿ ೫ ನಿಮಿಷಗಳನ್ನೂ ತೆಗೆದುಕೊಳ್ಳಲಿಲ್ಲ" ಎಂದು ಹೇಳಿದರು. ಅನಂತರ ಕ್ಯಾಬಿನೆಟ್ ಮಿಷನ್ ಜೂನ್ ೧೬ರಂದು ತನ್ನ ತೀರ್ಪನ್ನು ನೀಡಿತು. ಅದು ೧೪ ಮಂದಿಯ ಸಮಿತಿ ಮತ್ತು ಅವರ ಹೆಸರನ್ನು ಪ್ರಕಟಿಸಿತು. ಅವರು: ಕಾಂಗ್ರೆಸ್ಸಿನ ೬ ಮಂದಿ ಹಿಂದೂಗಳು (ನೆಹರು, ಪಟೇಲ್, ಪ್ರಸಾದ್, ರಾಜಾಜಿ, ಹರೇಕೃಷ್ಣ ಮೆಹ್ತಾಬ್ ಮತ್ತು ಜಗಜೀವನ ರಾಂ), ಮುಸ್ಲಿಂ ಲೀಗ್‌ನಿಂದ ಜಿನ್ನಾ ನಾಯಕತ್ವದಲ್ಲಿ ೫ ಮಂದಿ, ಸಿಖ್ ಜನಾಂಗದ ಬಲ್‌ದೇವ್ ಸಿಂಗ್, ಪಾರ್ಸಿ ಜನಾಂಗದ ಎನ್.ಪಿ. ಇಂಜಿನಿಯರ್ ಮತ್ತು ಕ್ರೈಸ್ತ ಜನಾಂಗದ ಜಾನ್ ಮಥಾಯ್. ಅದನ್ನೂ ಸಹ ತಿರಸ್ಕರಿಸುವಂತೆ ಗಾಂಧೀಜಿ ತಕ್ಷಣವೇ ಹೇಳಿದರು. ಆದರೆ ಕಾರ್ಯಕಾರಿ ಸಮಿತಿಯ ಸದಸ್ಯರು ಸ್ವಲ್ಪ ಅನುಮಾನಿಸಿದರು. ೧೪ ಸ್ಥಾನಗಳಲ್ಲಿ ೫ ಮಾತ್ರ ಮುಸ್ಲಿಂ ಲೀಗ್‌ಗೆ ಹೋಗಿರುವುದರಿಂದ, ಅಲ್ಪ ಸಂಖ್ಯಾತ ಸದಸ್ಯರು ಕಾಂಗ್ರೆಸ್ ಅನ್ನು ಬೆಂಬಲಿಸುತ್ತಾರೆಂದು ಭಾವಿಸಿದರೆ, ಕಾಂಗ್ರೆಸ್‌ಗೆ ಲೀಗ್ ವಿರುದ್ಧ ೯–೫ರ ಬಹುಮತ ಸಿಗುತ್ತಿತ್ತು. ಅದರಿಂದ ಒಪ್ಪಬಹುದೇ ಎನ್ನುವ ಅನುಮಾನ ಉಂಟಾಯಿತು.[೨೩೪]

ಅಷ್ಟರಲ್ಲಿ ಮತ್ತೊಂದು ಬೆಳವಣಿಗೆ ನಡೆಯಿತು. ದಿ ಸ್ಟೇಟ್ಸ್‌ಮನ್ ಪತ್ರಿಕೆಯು ತನ್ನ ಜೂನ್ ೨೦ರ ಸಂಚಿಕೆಯಲ್ಲಿ ಜಿನ್ನಾ ವೈಸ್‌ರಾಯ್‌ಗೆ ಬರೆದ ಒಂದು ಪತ್ರದ ಅಂಶಗಳನ್ನು ಪ್ರಕಟಿಸಿತು. ತನ್ನ ಪತ್ರದಲ್ಲಿ ಜಿನ್ನಾ ಮೂರು ಪ್ರಶ್ನೆಗಳನ್ನು ಕೇಳಿದ್ದನು; ಜಗಜೀವನ ರಾಂ ಆಗಲಿ, ಮಥಾಯ್ ಆಗಲಿ, ಬಲ್‌ದೇವ್ ಸಿಂಗ್ ಆಗಲಿ ಅಥವಾ ಇಂಜಿನಿಯರ್ ಆಗಲಿ ಸಮಿತಿಯನ್ನು ಸೇರಲು ಇಷ್ಟಪಡದೆ ಹೋದರೆ ಅಥವಾ ಅಶಕ್ತರಾದರೆ, ಅವರ ಸ್ಥಾನವನ್ನು ಭರ್ತಿ ಮಾಡುವಾಗ

ನನ್ನೊಡನೆ (ಜಿನ್ನಾ ಒಡನೆ) ಸಮಾಲೋಚಿಸುತ್ತೀರ? ಜೂನ್ ೧೬ರ ಪಟ್ಟಿಯಲ್ಲಿರುವ ಒಬ್ಬ ಹಿಂದೂವಿಗೆ ಬದಲಾಗಿ ಒಬ್ಬ ಮುಸ್ಲಿಂ ಅನ್ನು ಸೇರಿಸಿಕೊಳ್ಳಲು ಕಾಂಗ್ರೆಸ್‌ಗೆ ಅವಕಾಶವಿದೆಯೆ? ಪ್ರತಿಯೊಂದು ಪ್ರಮುಖ ಮತೀಯ ಪ್ರಶ್ನೆಗಳಲ್ಲಿ ತಡೆಹಿಡಿಯುವ ಅಧಿಕಾರ ಲೀಗ್‌ಗೆ ಇದೆಯೆ? – ಇವು ಮೂರು ಜಿನ್ನಾ ಕೇಳಿದ್ದ ಪ್ರಶ್ನೆಗಳು.

ಜಿನ್ನಾನ ಪತ್ರ ಪಟೇಲರಿಗೆ ಬೇಸರ ಉಂಟುಮಾಡಿತು. ಅವರೊಡನೆ ಸಮ್ಮಿಶ್ರ ಸರ್ಕಾರ ನಡೆಸುವುದು ಯೋಗ್ಯವಲ್ಲ ಅನ್ನಿಸಿತು ಅವರಿಗೆ. ಅವರು ಜೂನ್ ೧೬ರ ಪ್ರಸ್ತಾವನೆಯನ್ನು ತಿರಸ್ಕರಿಸುವಂತೆ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯನ್ನು ಒತ್ತಾಯಿಸಿದರು. ಕಾಂಗ್ರೆಸ್ಸು ವೈಸ್‌ರಾಯ್‌ಗೆ ಪತ್ರ ಬರೆದು ಜಿನ್ನಾನಿಂದ ಪತ್ರ ಬಂದಿರುವುದು ಸತ್ಯವೆ ಮತ್ತು ಅದಕ್ಕೆ ವೈಸ್‌ರಾಯ್ ಪ್ರತಿಕ್ರಿಯೆ ಏನು ಎಂದು ಸ್ಪಷ್ಟೀಕರಣವನ್ನು ಕೇಳಿತು. ಜೂನ್ ೨೨ರಂದು ವೈಸ್‌ರಾಯ್‌ನಿಂದ ಉತ್ತರ ಬಂದಿತು. ಜಿನ್ನಾನಿಂದ ಪತ್ರ ಬಂದಿರುವುದು ಸತ್ಯವೆಂದೂ ಮತ್ತು ಜಿನ್ನಾ ಕೇಳಿರುವುದು ಸರಿ ಎಂದೂ ವೈಸ್‌ರಾಯ್ ಬರೆದಿದ್ದನು. ಹಾಗೆಯೆ, ಸಮಿತಿಯಲ್ಲಿ ಒಬ್ಬ ಕಾಂಗ್ರೆಸ್ ಮುಸ್ಲಿಂಗೆ ಸ್ಥಾನವನ್ನು ಕಾಂಗ್ರೆಸ್ಸು ಕೇಳಿತ್ತು. ಅದಕ್ಕೂ ಉತ್ತರ ವೈಸ್‌ರಾಯ್‌ನಿಂದ ಬಂತು. ಅದು ಸಾಧ್ಯವಿಲ್ಲ ಎಂದು ಬರೆದಿದ್ದನು. ಜೂನ್ ೨೨ರಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಜೂನ್ ೧೬ರ ಸೂತ್ರವನ್ನು ತಿರಸ್ಕರಿಸಬೇಕೆಂದು ತೀರ್ಮಾನಿಸಿತು. ಆದರೆ ಆ ತೀರ್ಮಾನವನ್ನು ತಕ್ಷಣವೇ ವೈಸ್‌ರಾಯ್‌ಗೆ ತಿಳಿಸಲಿಲ್ಲ.[೨೩೫]

ಈ ಮಧ್ಯೆ ಜೂನ್ ೧೬ರ ಸೂತ್ರಲ್ಲಿದ್ದ ೮ನೆ ಅಂಶದ ಬಗೆಗೆ ಸರ್ದಾರರು ಯೋಚಿಸಿದರು. ಆ ೮ನೆ ಪ್ಯಾರ ಹೀಗಿತ್ತು:

> ಎರಡು ಪ್ರಮುಖ ಪಕ್ಷಗಳು ಅಥವಾ ಅವುಗಳ ಪೈಕಿ ಒಂದು ಸೂಚಿಸಿರುವ ರೀತಿಯಲ್ಲಿ ಸಮ್ಮಿಶ್ರ ಸರ್ಕಾರವನ್ನು ಸೇರಲು ಇಷ್ಟಪಡದೇ ಹೋದರೆ ಮೇ ೧೬ರ ಸೂತ್ರವನ್ನು ಒಪ್ಪಿರುವವರನ್ನು ಸೇರಿಸಿಕೊಂಡು ಎಷ್ಟು ಪ್ರಾತಿನಿಧಿಕವಾಗಿ ಸಾಧ್ಯವೋ ಅಷ್ಟು ಪ್ರಾತಿನಿಧಿಕವಾಗಿ ಮಧ್ಯಂತರ ಸರ್ಕಾರವನ್ನು ರಚಿಸಲು ಮುಂದುವರೆಯುವುದು ವೈಸ್‌ರಾಯ್‌ನ ಆಶಯವಾಗಿದೆ.

ಈ ೮ನೆ ಅಧಿನಿಯಮವನ್ನು ಸ್ಟಾಫರ್ಡ್ ಕ್ರಿಪ್ಸ್‌ನು ಸೇರಿಸಿದ್ದನು. ಅಧಿಕಾರದ ಪ್ರಲೋಭನೆಯಿಂದ ಪಕ್ಷಗಳು ಮೇ ೧೬ರ ಸೂತ್ರವನ್ನು ಒಪ್ಪಲಿ ಎನ್ನುವುದು ಕ್ರಿಪ್ಸ್‌ನ ಉದ್ದೇಶವಾಗಿತ್ತು. ಆ ೮ನೆ ಕ್ಲಾಸ್ ಅನ್ನು ತೀವ್ರವಾಗಿ ಅವಲೋಕಿಸಿದಾಗ ಸರ್ದಾರರಿಗೆ ಒಂದು ಮುಖ್ಯವಾದ ಅಂಶ ಮನವರಿಕೆ ಆಯಿತು: ಕಾಂಗ್ರೆಸ್ಸು

ಮೇ ೧೬ರ ಸೂತ್ರವನ್ನು ತಿರಸ್ಕರಿಸಲು ತೀರ್ಮಾನಿಸಿತ್ತು. ಆದರೆ ಅದನ್ನು ಇನ್ನೂ ವೈಸ್‌ರಾಯ್‌ಗೆ ತಿಳಿಸಿರಲಿಲ್ಲ. ಆದರೆ ಮುಸ್ಲಿಂ ಲೀಗ್ ಮೇ ೧೬ರ ಸೂತ್ರಕ್ಕೆ ಒಪ್ಪಿಗೆಯನ್ನು ಜೂನ್ ೬ರಂದು ಕ್ಯಾಬಿನೆಟ್ ಮಿಷನ್‌ಗೆ ನೀಡಿತ್ತು ಈಗ ಅದು ಜೂನ್ ೧೬ರ ಸೂತ್ರವನ್ನು ಒಪ್ಪುವ ಸಾಧ್ಯತೆ ಜಾಸ್ತಿ ಇತ್ತು. ಕಾಂಗ್ರೆಸ್ಸು ಜೂನ್ ೧೬ರ ಸೂತ್ರವನ್ನು ತಿರಸ್ಕರಿಸಿದರೆ ೮ನೆ ಕ್ಲಾಸ್ ಪ್ರಕಾರ ಮುಸ್ಲಿಂ ಲೀಗ್ ಸೇರಿಸಿಕೊಂಡು ಕಾಂಗ್ರೆಸ್ಸನ್ನು ಹೊರಗಿಟ್ಟು ಮಧ್ಯಂತರ ಸರ್ಕಾರವನ್ನು ವೈಸ್‌ರಾಯ್ ರಚಿಸಬಹುದಾಗಿತ್ತು. ಮೇ ೧೬ರ ಸೂತ್ರವನ್ನು ಕಾಂಗ್ರೆಸ್ ಒಪ್ಪಿದರೆ ಅದೂ ಸಹ ಸರ್ಕಾರದ ರಚನೆಯಲ್ಲಿ ಪಾತ್ರ ವಹಿಸಬಹುದಾಗಿತ್ತು. ಜೂನ್ ೧೬ರ ಸೂತ್ರವನ್ನು ತಿರಸ್ಕರಿಸುವುದಾದರೆ ಪ್ರಾಂತ್ಯಗಳ ಗುಂಪಿನ ಸಮಸ್ಯೆ ಮತ್ತು ದುರ್ಬಲ ಕೇಂದ್ರದ ಸಮಸ್ಯೆ ಹೇಗಾದರೂ ಇರಲಿ ಎಂದು ಮೇ ೧೬ರ ಸೂತ್ರವನ್ನು ಒಪ್ಪಲೇಬೇಕು, ಒಮ್ಮೆ ಅಧಿಕಾರಕ್ಕೆ ಬಂದರೆ, ಆ ನಂತರ ಕೇಂದ್ರವನ್ನು ಬಲಪಡಿಸಬಹುದು – ಎಂದು ಸರ್ದಾರರು ಆಲೋಚಿಸಿದರು. ಜೂನ್ ೨೦ ಮತ್ತು ೨೩ರ ನಡುವೆ ಒಂದು ದಿನ ಬೆಳಗ್ಗೆ (ಯಾವ ದಿನವೆಂದು ಖಚಿತವಾಗಿ ಗೊತ್ತಿಲ್ಲ) ಬಿ.ಎನ್. ರಾವ್‌ರವರು ಸರ್ದಾರರನ್ನು ಖಾಸಗಿಯಾಗಿ ಭೇಟಿ ಮಾಡಿ, ಮೇ ೧೬ರ ಮತ್ತು ಜೂನ್ ೧೬ರ ಎರಡು ಸೂತ್ರಗಳನ್ನೂ ತಿರಸ್ಕರಿಸುವುದರ ಅಪಾಯವನ್ನು ಮತ್ತು ಮೇ ೧೬ರ ಸೂತ್ರವನ್ನು ಒಪ್ಪುವುದರ ಒಳಿತನ್ನು ಸರ್ದಾರರಿಗೆ ಮನವರಿಕೆ ಮಾಡಿರಬೇಕು. ಜೊತೆಗೆ, ಅಧಿಕಾರ ಪಡೆಯಲು ಇದ್ದದ್ದು ಮೇ ೧೬ರ ಸೂತ್ರವನ್ನು ಒಪ್ಪುವ ಮಾರ್ಗ ಒಂದೇ. ಅದು ಮಧ್ಯಂತರ ಸರ್ಕಾರಕ್ಕೆ ಹೊಸ ಪಟ್ಟಿಯನ್ನು ರಚಿಸುವ ಅಧಿಕಾರವನ್ನೂ ಸಹ ನೀಡುತ್ತಿತ್ತು.[೨೩೬]

ಕ್ರಿಪ್ಸ್ ಮತ್ತು ಪೆಥಿಕ್ ಲಾರೆನ್ಸ್ ಕೂಡ ಇದೇ ಧಾಟಿಯಲ್ಲಿ ಆಲೋಚಿಸಿದ್ದರು. ಅವರು ಮತ್ತು ಪಟೇಲ್ ನಡುವೆ ಜೂನ್ ೨೨ರಿಂದ ೪೮ ಘಂಟೆಗಳ ಅವಧಿಯಲ್ಲಿ ಪ್ರತ್ಯಕ್ಷ ಮತ್ತು ಪರೋಕ್ಷ ಸಂಪರ್ಕ ಉಂಟಾಯಿತು. ಆ ಸಂಪರ್ಕಕ್ಕೆ ಮೊದಲ ಹೆಜ್ಜೆ ಇಟ್ಟವರು ಯಾರು ಎನ್ನುವುದು ಸ್ಪಷ್ಟವಾಗಿ ತಿಳಿಯದು. ಅದು ಪಟೇಲರು ಇರಬಹುದು ಅಥವಾ ಬ್ರಿಟಿಷ್ ಮಂತ್ರಿಗಳೇ ಇರಬಹುದು ಅಥವಾ ಗಾಂಧೀಜಿಯ ಯುವ ಶಿಷ್ಯ ಬಂಗಾಳದ ಸುಧೀರ್ ಘೋಷ್ ಇರಬಹುದು. ಸುಧೀರ್ ಘೋಷ್ ಆ ಕೆಲಸ ಮಾಡಿದ್ದು ತಾವು ಎಂದು ಹೇಳಿಕೊಂಡಿದ್ದಾರೆ. ಅವರು "ನಾನು ಕ್ರಿಪ್ಸ್ ಮತ್ತು ಪೆಥಿಕ್ ಲಾರೆನ್ಸ್‌ಗೆ, ಭಗ್ನಾವಶೇಷದಿಂದ ಏನನ್ನಾದರೂ ಉಳಿಸಲು ನಾನು ಕೊಡಬಹುದಾದ ಏಕಮಾತ್ರ ಸಲಹೆ ಎಂದರೆ ನೀವು ಸರ್ದಾರರೊಡನೆ ಖಾಸಗಿ ಮಾತುಕತೆ ನಡೆಸಬೇಕೆಂಬುದು. ಕಾಂಗ್ರೆಸ್ ನಾಯಕರಲ್ಲಿ ಪಟೇಲ್ ಒಬ್ಬರೇ ಕಾರ್ಯಶೀಲ ರಾಜನೀತಿಜ್ಞ (Practical Statesman)' ಎಂದು ಹೇಳಿದ್ದಾರೆ"

– ಎನ್ನುತ್ತಾರೆ ರಾಜಮೋಹನ ಗಾಂಧಿ. ಯಾರೇ ಅವರ ಭೇಟಿಗೆ ಅವಕಾಶ ಮಾಡಿರಲಿ ಅದು ಮೇ ೧೬ರ ಸೂತ್ರವನ್ನು ಕಾಂಗ್ರೆಸ್ ಒಪ್ಪುವಂತೆ ಮಾಡಿತು.[೨೩೭]

ಸರ್ದಾರ್ ಪಟೇಲರು ತಂಗಿದ್ದ ಬಿರ್ಲಾ ಸದನಕ್ಕೆ ಜೂನ್ ೨೨ರ ರಾತ್ರಿ ಬಂದು ಸುಧೀರ್ ಘೋಷ್ ಪಟೇಲರನ್ನು ಭೇಟಿ ಮಾಡಿದರು. ಮಾರನೆಯ ಬೆಳಗ್ಗೆ ೮ ಘಂಟೆಗೆ ಸುಧೀರ್‌ರವರು ಪಟೇಲರನ್ನು ಪೆಥಿಕ್ ಲಾರೆನ್ಸ್ ಬಳಿಗೆ ಕರೆದುಕೊಂಡು ಹೋದರು. ಅಲ್ಲಿ ಅರ್ಧ ಘಂಟೆ ಮಾತುಕತೆ ನಡೆಯಿತು. ಪಟೇಲರು, "ವೈಸ್‌ರಾಯ್ ವೇವೆಲ್‌ನಿಂದ ಬಂದ ಎರಡು ಪತ್ರಗಳು ವಿಷಯವನ್ನು ಇತ್ಯರ್ಥಪಡಿಸಿವೆ. ಕಾಂಗ್ರೆಸ್ಸು ಜೂನ್ ೧೬ ಸೂತ್ರವನ್ನು ತಿರಸ್ಕರಿಸುತ್ತದೆ" ಎಂದರು. ಪೆಥಿಕ್ ಲಾರೆನ್ಸ್‌ರವರು, "ಹಾಗಾದರೆ ಸರ್ಕಾರ ರಚನೆಗೆ ಸಹಾಯ ಮಾಡಲು ಅಧಿನಿಯಮ ೮ರ ಅಡಿಯಲ್ಲಿ ಜಿನ್ನಾ ಆಹ್ವಾನಿಸಲ್ಪಡುತ್ತಾರೆ ಎಂಬುದು ನಿಮಗೆ ಅರಿವಾಗಿದೆಯೆ?" ಎಂದು ಪ್ರಶ್ನಿಸಿದರು. ಪಟೇಲರು, "ಮೇ ೧೬ರ ಸೂತ್ರವನ್ನು ಕಾಂಗ್ರೆಸ್ ಒಪ್ಪಿದರೆ ಸರ್ಕಾರ ರಚನೆಗೆ ಸಹಾಯ ಮಾಡಲು ಅದಕ್ಕೂ ಆಹ್ವಾನ ನೀಡುತ್ತೀರ?" ಎಂದರು. ಪೆಥಿಕ್ ಲಾರೆನ್ಸ್, "ಆಹ್ವಾನಿಸುತ್ತೇವೆ" ಎಂದರು. ಪೆಥಿಕ್ ಲಾರೆನ್ಸ್‌ರಿಂದ ಬಹು ಮುಖ್ಯವಾದ ಆಶ್ವಾಸನೆ ದೊರೆತ ಮೇಲೆ ಸರ್ದಾರರು, "ಕಾಂಗ್ರೆಸ್ಸು ಮೇ ೧೬ನ್ನು ಒಪ್ಪುತ್ತದೆ" ಎಂದರು. ಪಟೇಲರು, ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಒಪ್ಪಿಗೆ ಪಡೆದಿಲ್ಲದಿದ್ದರೂ, ಸನ್ನಿವೇಶದ ಆವಶ್ಯಕತೆಯನ್ನು ಗಮನಿಸಿ, ತಡಮಾಡದೆ ಒಪ್ಪಿಗೆಯನ್ನು ನೀಡಿದರು.[೨೩೮]

ಪೆಥಿಕ್ ಲಾರೆನ್ಸ್ ಅಂದು ಬೆಳಗ್ಗೆ ೯.೩೦ಕ್ಕೆ ವೇವೆಲ್ಲನನ್ನು ಸಂಧಿಸಿದಾಗ, "ಕಾಂಗ್ರೆಸ್ಸು ಜೂನ್ ೧೬ರ ಸೂತ್ರವನ್ನು ತಿರಸ್ಕರಿಸುತ್ತದೆ, ಆದರೆ ಮೇ ೧೬ರ ಸೂತ್ರವನ್ನು ಒಪ್ಪುತ್ತದೆ," ಎಂದು ತಿಳಿಸಿದರು. ಅದನ್ನು ಕೇಳಿ ವೇವೆಲ್ ಚಕಿತ ಗೊಂಡರು. ಬಹುಶಃ ಜಿನ್ನಾ ಪರವಾದ ಅವನ ಲೆಕ್ಕಾಚಾರ ತಲೆಕೆಳಗು ಆಗಿತ್ತೆಂದು ಕಾಣುತ್ತದೆ.

ಜೂನ್ ೨೫ರಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ ಸೇರಿ, ತೀರ್ಮಾನಿಸಿ, ವೇವೆಲ್ಲನಿಗೆ ಪತ್ರ ಬರೆದು, "ಕಾಂಗ್ರೆಸ್ಸು ಜೂನ್ ೧೬ರ ಸೂತ್ರವನ್ನು ತಿರಸ್ಕರಿಸುತ್ತದೆ ಮತ್ತು ಮೇ ೧೬ರ ಸೂತ್ರವನ್ನು ಅಂಗೀಕರಿಸುತ್ತದೆ" ಎಂದು ತಿಳಿಸಿತು.

ಕಾಂಗ್ರೆಸ್ಸನ್ನು ಅಧಿಕಾರಕ್ಕೆ ತರುವುದು ಮತ್ತು ಮುಸ್ಲಿಂ ಲೀಗ್‌ಗೆ ಅಧಿಕ ಅಧಿಕಾರ ಸಿಕ್ಕುವುದನ್ನು ತಪ್ಪಿಸುವುದು ಪಟೇಲರ ಪ್ರಮುಖ ಗುರಿಯಾಗಿತ್ತು. ಆ ಕೆಲಸದಲ್ಲಿ ಅವರು ಯಶಸ್ವಿಯಾಗಿದ್ದರು. ಪಟೇಲರಿಗೆ ಬರೆದ ಒಂದು ಪತ್ರದಲ್ಲಿ

ರಾಜಾಜಿಯವರು, "ಕಾಂಗ್ರೆಸ್ಸಿನ ಜೂನ್ ೨೫ರ ತೀರ್ಮಾನಕ್ಕೆ ಕಾರಣ ನಿಮ್ಮ ದೃಢ ಮತ್ತು ಆಲೋಚನಾಪೂರ್ಣ ನಿಲವು" ಎಂದು ಹೇಳಿದರು.

ವೇವೆಲ್ಲನು, ವಲ್ಲಭಭಾಯ್ ಮತ್ತು ಕ್ರಿಪ್ಸ್ ಒಟ್ಟಿಗೆ ಸೇರಿ ಜಾಣತನದಿಂದ ತನ್ನನ್ನು ಸೋಲಿಸಿದ್ದಾರೆಂದು ಭಾವಿಸಿದನು. ಆದಾಗ್ಯೂ ಪಟೇಲರ ಶಕ್ತಿಯನ್ನು ಗುರುತಿಸಿದನು ಮತ್ತು ದೊರೆ ಆರನೆ ಜಾರ್ಜ್‌ಗೆ ೮.೭.೪೬ರಂದು ಬರೆದ ಪತ್ರದಲ್ಲಿ ಹೀಗೆ ವರ್ಣಿಸಿದನು:

> ಸರ್ದಾರ್ ವಲ್ಲಭಭಾಯ್ ಪಟೇಲ್ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಬಗ್ಗಿಸಲಾಗದ ಶಕ್ತಿ ಎಂದು ಗುರುತಿಸ ಲ್ಪಟ್ಟಿದ್ದಾರೆ. ಅವರ ಪೈಕಿ ಬಹಳ ಮಟ್ಟಿಗೆ ಅತ್ಯಂತ ದೃಢ ಸಂಕಲ್ಪದ ವ್ಯಕ್ತಿ..... ಗಾಂಧೀಜಿಗೆ ಎದುರಾಗಿ ನಿಲ್ಲುವ ಶಕ್ತಿ ಇರುವವರು ಬಹುಶಃ ಅವರೊಬ್ಬರೇ ಎಂದು ಕಾಣುತ್ತದೆ.[೨೫೯]

ಕಾಂಗ್ರೆಸ್ಸು ಜೂನ್ ೧೬ರ ಸೂತ್ರವನ್ನು ತಿರಸ್ಕರಿಸಿದೆ ಮತ್ತು ಮೇ ೧೬ರ ಸೂತ್ರವನ್ನು ಒಪ್ಪಿದೆ ಎನ್ನುವುದು ತಿಳಿದ ತಕ್ಷಣ ಜಿನ್ನಾನು ಮುಸ್ಲಿಂ ಲೀಗ್ ಜೂನ್ ೧೬ರ ಸೂತ್ರವನ್ನು ಸಹ ಒಪ್ಪಿದೆ ಎಂದು ವೇವೆಲ್ಲನಿಗೆ ತಿಳಿಸಿದನು. ಈಗ ಮುಸ್ಲಿಂ ಲೀಗ್ ಎರಡು ಸೂತ್ರಗಳನ್ನು ಒಪ್ಪಿರುವುದರಿಂದ ಕಾಂಗ್ರೆಸ್ಸು ಒಂದು ಸೂತ್ರವನ್ನು ಮಾತ್ರ ಒಪ್ಪಿರುವುದರಿಂದ. ಸರ್ಕಾರವನ್ನು ರಚಿಸಲು ವೈಸ್‌ರಾಯ್ ತನ್ನನ್ನು ಆಹ್ವಾನಿಸುತ್ತಾನೆ ಎಂದು ಯೋಚಿಸಿ, ಆಹ್ವಾನಕ್ಕಾಗಿ ಜಿನ್ನಾ ಕಾಯುತ್ತಾ ಕುಳಿತನು. ಆದರೆ ವೇವೆಲ್ ಹಾಗೆ ಮಾಡುವ ಹಾಗಿರಲಿಲ್ಲ. ಮೇ ೧೬ರ ಸೂತ್ರವನ್ನು ಎರಡು ಪಕ್ಷಗಳೂ ಒಪ್ಪಿರುವುದರಿಂದ, ಕ್ಲಾಸ್ ೮ರ ಪ್ರಕಾರ ಕಾಂಗ್ರೆಸ್‌ಗಿಂತ ಮುಂಚೆ ಮುಸ್ಲಿಂ ಲೀಗ್‌ಅನ್ನು ಸರ್ಕಾರ ರಚಿಸಲು ಆಹ್ವಾನಿಸುವ ಹಾಗಿರಲಿಲ್ಲ. ಕಾಂಗ್ರೆಸ್ಸು ಕೊನೆ ಘಳಿಗೆಯಲ್ಲಿ ಮೇ ೧೬ರ ಸೂತ್ರವನ್ನು ಒಪ್ಪಿ ಮುಸ್ಲಿಂ ಲೀಗ್‌ಗೆ ಅಧಿಕಾರ ಸಿಕ್ಕುವುದನ್ನು ತಪ್ಪಿಸಿತ್ತು. ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲವಲ್ಲ ಎಂದು ಜಿನ್ನಾ ಪರಿತಪಿಸಿದನು. ಆಕ್ರೋಶ ಮತ್ತು ಆಘಾತಗೊಂಡ ಜಿನ್ನಾ ಕಾಂಗ್ರೆಸ್, ಕ್ರಿಪ್ಸ್, ಲಾರೆನ್ಸ್ ಮತ್ತು ವೇವೆಲ್ಲನನ್ನು ಕಟುವಾಗಿ ದೂಶಿಸಿದನು. ತನಗೆ ಅನ್ಯಾಯವಾಯಿತೆಂದು ಭಾವಿಸಿದನು.

ಕ್ಯಾಬಿನೆಟ್ ಮಿಷನ್‌ನ ಮೂವರು ಬ್ರಿಟಿಷ್ ಮಂತ್ರಿಗಳು ಜೂನ್ ೨೯ರಂದು ಲಂಡನ್‌ಗೆ ಹಿಂತಿರುಗಿದರು. ಹೊರಡುವುದಕ್ಕೆ ಮುನ್ನ ಅವರು ಒಂದು ಪ್ರಕಟಣೆಯನ್ನು ಹೊರಡಿಸಿ, 'ಜೂನ್ ೧೬ರ ಪ್ರಸ್ತಾವನೆಯ ಆಧಾರದ ಮೇಲೆ ಮಧ್ಯಂತರ ಸಮ್ಮಿಶ್ರ ಸರ್ಕಾರವನ್ನು ರಚಿಸಲು ಸಾಧ್ಯವಿಲ್ಲ ಎಂದು ಕಂಡು

ಬಂದಿರುವುದರಿಂದ, ಸ್ವಲ್ಪ ಬಿಡುವಿನ ನಂತರ ಸರ್ಕಾರದ ರಚನೆಗೆ ಮತ್ತೆ ಪ್ರಯತ್ನಿಸಲಾಗುವುದು' ಎಂದು ತಿಳಿಸಿದರು. ಮಧ್ಯಂತರ ಸರ್ಕಾರ ರಚಿಸುವ ಕ್ರಿಯೆಯನ್ನು ವೈಸ್‌ರಾಯ್‌ಗೆ ವಹಿಸಿ ಅವರು ವಿಮಾನ ಹತ್ತಿದರು.

೧೪.೫ ಪಟೇಲರಿಗೆ ತಪ್ಪಿದ ಪ್ರಧಾನಿ ಪದವಿ

ಕಾಂಗ್ರೆಸ್ ಅಧ್ಯಕ್ಷ ಮೌಲಾನಾ ಆಜ಼ಾದರು ಗಾಂಧಿಜಿಯ ಜೊತೆ ಸಮಾಲೋಚಿಸದೆ ಮತ್ತು ಕಾಂಗ್ರೆಸ್ ಕಾರ್ಯಕಾರಿ ಸಮಿತಿಗೂ ತಿಳಿಸದೆ ವೇವೆಲ್‌ಗೆ ಒಂದು ಮತ್ತು ಕ್ಯಾಬಿನೆಟ್ ಮಿಷನ್‌ಗೆ ಮತ್ತೊಂದು ಪತ್ರವನ್ನು ಬರೆದಿದ್ದರು. ಆ ಪತ್ರಗಳಲ್ಲಿ ಅವರು, ಕಾಂಗ್ರೆಸ್ಸಿನ ಪಟ್ಟಿಯಲ್ಲಿ ಯಾವ ಮುಸ್ಲಿಂನ ಹೆಸರು ಇಲ್ಲದಂತೆ ನಾನು ನೋಡಿಕೊಳ್ಳುತ್ತೇನೆ ಮತ್ತು ತಮ್ಮ ಹೆಸರನ್ನು ಸೇರಿಸಿದರೆ ಅದಕ್ಕೆ ತಾವು ಒಪ್ಪುವುದಿಲ್ಲವೆಂದು, ಬರೆದಿದ್ದರು. ಆ ಭರವಸೆಯ ಆಧಾರದ ಮೇಲೆ ಜೂನ್ ೧೬ರ ಸೂತ್ರವನ್ನು ವೇವೆಲ್ ತಯಾರಿಸಿದ್ದನು. ಕಾಂಗ್ರೆಸ್ಸಿನಿಂದ ಮಂತ್ರಿಗಳಾಗುವವರ ಪಟ್ಟಿಯಲ್ಲಿ ಯಾವ ರಾಷ್ಟ್ರೀಯ ಮುಸ್ಲಿಮನ ಹೆಸರೂ ಇರಲಿಲ್ಲ. ಅದರಿಂದ ಆ ಪಟ್ಟಿಯನ್ನು ಕಾಂಗ್ರೆಸ್ ವಿರೋಧಿಸಿತು.

ಜೂನ್ ೨೨ರಂದು ಸುಧೀರ್ ಘೋಷ್‌ರವರು ಕ್ರಿಪ್ಸ್‌ರವರನ್ನು ಭೇಟಿ ಮಾಡಿದಾಗ ಕ್ರಿಪ್ಸ್‌ರವರು ಆಜ಼ಾದರು ಬರೆದಿರುವ ಪತ್ರದ ವಿಷಯ ತಿಳಿಸಿದರು. ಸುಧೀರ್‌ರವರು ಅದನ್ನು ಗಾಂಧೀಜಿಗೆ ಮುಟ್ಟಿಸಿದರು. ಅದನ್ನು ಕೇಳಿ ಗಾಂಧೀಜಿಯ ಮನಸ್ಸಿಗೆ ನೋವಾಯಿತು. ಅವರು, ಕಾಂಗ್ರೆಸ್ಸು ರಾಷ್ಟ್ರೀಯ ಮುಸ್ಲಿಂ ಹೆಸರನ್ನು ಸೂಚಿಸಕೂಡದು ಎನ್ನುವುದನ್ನು ಕಟುವಾಗಿ ವಿರೋಧಿಸಿದ್ದರು. ಹಾಗೆ ಮಾಡಿದರೆ ಕಾಂಗ್ರೆಸ್ಸು ತನ್ನ ರಾಷ್ಟ್ರೀಯ ಪಕ್ಷದ ಸ್ಥಾನವನ್ನು ಕಳೆದುಕೊಂಡು ಬರೇ ಹಿಂದೂಗಳ ಪಕ್ಷ ಎಂದಾಗುತ್ತಿತ್ತು. ಗಾಂಧೀಜಿ ಬೇಸರಗೊಂಡು ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಪದವಿಯಿಂದ ಕೆಳಗಿಳಿಯುವಂತೆ ಆಜ಼ಾದರಿಗೆ ಸೂಚಿಸಿದರು. ಹಾಗೆ ಮಾಡಲು ಆಜ಼ಾದರು ಇಷ್ಟ ಪಡಲಿಲ್ಲ. ಅದಕ್ಕೆ ಕಾರಣ ಮಧ್ಯಂತರ ಸರ್ಕಾರ ರಚಿತವಾದಾಗ ಯಾರು ಕಾಂಗ್ರೆಸ್ಸಿನ ಅಧ್ಯಕ್ಷರಾಗಿರುತ್ತಾರೋ ಅವರು ಪ್ರಧಾನಮಂತ್ರಿ ಆಗುತ್ತಿದ್ದರು. ಆದರೆ ಗಾಂಧೀಜಿಯ ಒತ್ತಾಯಕ್ಕೆ ಆಜ಼ಾದರು ಮಣಿಯಲೇಬೇಕಾಯಿತು. ಆಜ಼ಾದರು ರಾಜಿನಾಮೆ ಕೊಟ್ಟರು.[೨೪೦]

ಕಾಂಗ್ರೆಸ್‌ನ ಮುಂದಿನ ಅಧ್ಯಕ್ಷರು ಯಾರಾಗಬೇಕು? – ಈ ಪ್ರಶ್ನೆ ಉದ್ಭವಿಸಿತು ಮತ್ತು ಅದರ ಉತ್ತರಕ್ಕೆ ಭಾರಿ ಬೆಲೆಯಿತ್ತು, ಏಕೆಂದರೆ ಆಗ ಕಾಂಗ್ರೆಸ್ ಅಧ್ಯಕ್ಷರಾದವರು ಸ್ವತಂತ್ರ ಭಾರತದ ಮೊದಲ ಪ್ರಧಾನಮಂತ್ರಿಯಾಗುವುದು ಖಾತರಿಯಾಗಿತ್ತು.

ಹದಿನೈದು ಪ್ರದೇಶ್ ಕಾಂಗ್ರೆಸ್ ಸಮಿತಿಗಳ ಪೈಕಿ ಹನ್ನೆರಡು ಪ್ರದೇಶ್ ಕಾಂಗ್ರೆಸ್ ಸಮಿತಿಗಳು ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಸರ್ದಾರ್ ಪಟೇಲರ ಹೆಸರನ್ನು ಸೂಚಿಸಿದ್ದುವು. ನೆಹರು ಹೆಸರನ್ನು ಯಾರೂ ಸೂಚಿಸಿರಲಿಲ್ಲ.[೨೪೧] ಅದರಿಂದ ಪಟೇಲರು ಕಾಂಗ್ರೆಸ್ಸಿನ ಅಧ್ಯಕ್ಷರಾಗಿ, ಸ್ವಾತಂತ್ರ್ಯ ಬಂದ ನಂತರ ಮೊದಲ ಪ್ರಧಾನಮಂತ್ರಿ ಆಗಲೇಬೇಕಿತ್ತು. ಆದರೆ ಆಗಲಿಲ್ಲ, ಏಕೆ? ಆ ಗಾದಿ ನೆಹರುಗೆ ಸಿಕ್ಕಿತು, ಅದು ಹೇಗೆ?

* * * *

(ಈ ಬಗೆಗೆ ಮಹಾತ್ಮ ಗಾಂಧೀಜಿಯ ಮೊಮ್ಮಗ ರಾಜಮೋಹನ ಗಾಂಧಿ ಮತ್ತು ಬಾಲ್‌ರಾಜ್ ಕೃಷ್ಣರವರ ವಿವರಣೆಯಲ್ಲಿ ಸ್ವಲ್ಪ ವ್ಯತ್ಯಾಸವಿದೆ. ಓದುಗರ ಅವಗಾಹನೆಗಾಗಿ ನಾನು ಎರಡನ್ನೂ ಕೆಳಗೆ ವಿವರಿಸಿದ್ದೇನೆ – ಲೇಖಕ)

ಶ್ರೀ ರಾಜಮೋಹನ ಗಾಂಧಿಯವರು ತಮ್ಮ ಕೃತಿ Patel –A lifeನಲ್ಲಿ (ಪುಟ ೩೬೯–೩೭೨) ಹೀಗೆ ಬರೆದಿದ್ದಾರೆ:

ಅಧ್ಯಕ್ಷ ಆಜ಼ಾದರ ನಂತರ ಅವರ ಸ್ಥಾನ ಅಲಂಕರಿಸಿದವರು ಮಧ್ಯಂತರ ಸರ್ಕಾರ ರಚನೆಯಾದಾಗ ವಾಸ್ತವವಾಗಿ ಭಾರತದ ಮೊದಲ ಪ್ರಧಾನಿಯಾಗುವುದು ಖಾತರಿಯಾದುದರಿಂದ ಅನೇಕರ ಮನಸ್ಸು ಅದರ ಮೇಲಿತ್ತು. ಆಜ಼ಾದರು ಮತ್ತೆ ಚುನಾಯಿತರಾಗಬೇಕೆಂದು ಬಯಸಿದ್ದರು. ಆ ವಿಷಯ ಅವರ ಆಪ್ತ ಸ್ನೇಹಿತ ಮತ್ತು ಸಹೋದ್ಯೋಗಿ ಜವಹರಲಾಲ್‌ಗೆ ಸಂಕಟ ಉಂಟುಮಾಡಿತ್ತು, ಏಕೆಂದರೆ ಅವರು ತಮ್ಮದೇ ಆದ ನಿರೀಕ್ಷಣೆಯನ್ನು ಇಟ್ಟುಕೊಂಡಿದ್ದರು. ವಲ್ಲಭಭಾಯ್ ಸಹ ಅದರಲ್ಲಿ ಸೇರಿದ್ದರು, ಏಕೆಂದರೆ ಅವರ ಮನಸ್ಸಿನಲ್ಲಿ ಇದ್ದಿರಬಹುದಾದ ವೈಯುಕ್ತಿಕ ನಿರೀಕ್ಷಣೆಯ ಜೊತೆಗೆ ಅನೇಕ ಪ್ರದೇಶ ಕಾಂಗ್ರೆಸ್ ಸಮಿತಿಗಳು ಅವರನ್ನು ನಾಮಕರಣ ಮಾಡಿದ್ದುವು. ಕೃಪಲಾನಿಯವರೂ ಸಹ ನಾಮಕರಣ ಮಾಡಲ್ಪಟ್ಟಿದ್ದರು.

ನಾಮಪತ್ರ ಸಲ್ಲಿಕೆಗೆ ಏಪ್ರಿಲ್ ೨೯ ಕೊನೆಯ ದಿನವಾಗಿತ್ತು. ಏಪ್ರಿಲ್ ೨೦ರಂದು ಗಾಂಧೀಜಿಯವರು ತಮ್ಮ ಆಯ್ಕೆಯನ್ನು ಖಾಸಗಿಯಾಗಿ ಸೂಚಿಸಿದರು, ಅದು ಜವಹರಲಾಲ್. ಒಂದು ಸಮಾಚಾರ ಪತ್ರಿಕೆ ಆಜ಼ಾದ್‌ರವರ ಮರು ಚುನಾವಣೆಯ ಬಗೆಗೆ ವರದಿ ಪ್ರಕಟಿಸಿದಾಗ ಗಾಂಧೀಜಿಯವರು ಆಜ಼ಾದರಿಗೆ ಒಂದು ಸ್ಪಷ್ಟ ಪತ್ರವನ್ನು ಬರೆದರು. ಯುದ್ಧ ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರ ಸೆರೆವಾಸದ ಫಲವಾಗಿ ಅವರ ಅಧ್ಯಕ್ಷ ಪದವಿಯು ೬ ವರ್ಷಗಳವರೆಗೆ ವಿಸ್ತರಿತವಾಗಿತ್ತು.

೨೦.೪.೪೬ರಂದು ಗಾಂಧೀಜಿಯವರು ಆಜ಼ಾದರಿಗೆ ಈ ರೀತಿ ಬರೆದರು:

> ಇದರ ಜೊತೆಯಿರುವ ಪತ್ರಿಕೆಯ ತುಣಕನ್ನು ದಯವಿಟ್ಟು ಓದಿ..... ನನ್ನ ಅಭಿಪ್ರಾಯದ ಬಗೆಗೆ ನಾನು ಯಾರೊಡನೆಯೂ ಮಾತನಾಡಿಲ್ಲ. ಒಬ್ಬರು ಇಬ್ಬರು ಕಾರ್ಯಕಾರಿ ಸಮಿತಿಯ ಸದಸ್ಯರು ನನ್ನನ್ನು ಪ್ರಶ್ನಿಸಿದಾಗ, ಅದೇ ಅಧ್ಯಕ್ಷರು ಮುಂದುವರಿಯುವುದು ಸರಿಯಲ್ಲ ಎಂದು ಹೇಳಿದ್ದೇನೆ. ..... ನಿಮ್ಮ ಅಭಿಪ್ರಾಯವು ಅದೇ ಆಗಿದ್ದರೆ ಪತ್ರಿಕಾ ತುಣುಕಿನ ಬಗೆಗೆ ಒಂದು ಪ್ರಕಟಣೆಯನ್ನು ಹೊರಡಿಸುವುದು ಮತ್ತು ಮತ್ತೆ ಅಧ್ಯಕ್ಷನಾಗಲು ನಿಮಗೆ ಇಷ್ಟವಿಲ್ಲ ಎಂದು ಹೇಳುವುದು ನಿಮಗೆ ಸರಿಯಾದ ಮಾರ್ಗವಿರಬಹುದು..... ಇಂದಿನ ಸನ್ನಿವೇಶದಲ್ಲಿ, ನನ್ನನ್ನು ಕೇಳಿದರೆ, ಜವಹರಲಾಲ್‌ನನ್ನು ಆರಿಸುತ್ತೇನೆ. ಅದಕ್ಕೆ ನನ್ನಲ್ಲಿ ಬಹಳ ಕಾರಣಗಳಿವೆ. ಅದರ ಬಗೆಗೆ ಈಗ ಏಕೆ?

ಜವಹರನನ್ನು ಆರಿಸಲು ಗಾಂಧೀಜಿಗೆ ಕಾರಣಗಳಿದ್ದರೆ, ಪಟೇಲರನ್ನು ಬಯಸಲು ಪಕ್ಷಕ್ಕೂ ಕಾರಣಗಳಿದ್ದುವು. ಪಕ್ಷವು (ಕೃಪಲಾನಿ ಆ ನಂತರ ಹೇಳಿದಂತೆ) ಪಟೇಲರನ್ನು ಪಾದಗಳನ್ನು ನೆಲದ ಮೇಲೆ ಊರಿರುವ ಒಬ್ಬ ಶ್ರೇಷ್ಠ ಕಾರ್ಯ ನಿರ್ವಾಹಕ, ಸಂಘಟಕ ಮತ್ತು ನಾಯಕನನ್ನಾಗಿ ನೋಡಿತ್ತು. ಪಟೇಲರ 'ಭಾರತ ಬಿಟ್ಟು ತೊಲಗಿ' ಚಳವಳಿಯ ಯಶಸ್ವಿ ಶ್ರಮದಾಯಕ ಪ್ರಯತ್ನಗಳನ್ನು ಪಕ್ಷವು ಕಂಡಿತ್ತು. ಆ ಚಳವಳಿಯಲ್ಲಿ ಸರ್ದಾರರ ಶ್ರಮಕ್ಕೆ ಜವಹರರ ಶ್ರಮ ಸಮನಾಗಿರಲಿಲ್ಲ. ೧೯೪೬ರ ಮೊದಲ ಕಾಲು ಭಾಗದಲ್ಲು ಕಾರ್ಯಕಾರಿ ಸಮಿತಿ ಸದಸ್ಯರು ಬಿಡುಗಡೆಯಾಗಿ ವರ್ಷವಾಗುತ್ತಾ ಬಂದಾಗಲೂ, ೧೯೪೨ರಲ್ಲಿನ ವಲ್ಲಭಭಾಯ್‌ರವರ ಪಾತ್ರ ಜನಗಳ ನೆನಪಿನಲ್ಲಿ ಇನ್ನೂ ಹಸಿರಾಗಿತ್ತು. ಇದನ್ನೆಲ್ಲ ಪರಿಗಣಿಸಿ ೧೫ರಲ್ಲಿ ೧೨ ಪ್ರದೇಶ್ ಕಾಂಗ್ರೆಸ್ ಸಮಿತಿಗಳು ಪಟೇಲರನ್ನು ಅಧ್ಯಕ್ಷತೆಗೆ ನಾಮಕರಣ ಮಾಡಿದ್ದುವು.

ನೆಹರುವನ್ನು ಆಯ್ಕೆ ಮಾಡಲು ಗಾಂಧೀಜಿಯವರ ಅನೇಕ ಕಾರಣಗಳ ಪೈಕಿ ಒಂದು ಅವರಿಂದ ಒಂದು ವರ್ಷಗಳ ನಂತರ, ಸಾರ್ವಜನಿಕವಾಗಿ ಪ್ರಕಟಿಸಲ್ಪಟ್ಟಿತು. ಮಹಾತ್ಮ ಹೇಳಿದರು, "ಇಂಗ್ಲಿಷರಿಂದ ಅಧಿಕಾರ ವಹಿಸಿಕೊಳ್ಳುತ್ತಿರುವ ಈ ಸಮಯದಲ್ಲಿ ಜವಹರ್ ಬದಲಾಯಿಸಲ್ಪಡಲು ಸಾಧ್ಯವಿಲ್ಲ. ಒಬ್ಬ ಹ್ಯಾರೊ ಹುಡುಗ, ಕೇಂಬ್ರಿಜ್ ಪದವೀಧರ ಮತ್ತು ಬ್ಯಾರಿಸ್ಟರ್ ಆದ ಅವನು ಇಂಗ್ಲಿಷರೊಡನೆ ಸಂಧಾನ ನಡೆಸುವ ಕಾರ್ಯಕ್ಕಾಗಿ ಬೇಕಾಗಿದ್ದಾನೆ.

(ವಲ್ಲಭಭಾಯ್ ಸಹ ಒಬ್ಬ ಬ್ಯಾರಿಸ್ಟರ್, ಲಂಡನ್‌ನಲ್ಲಿ ಬ್ಯಾರಿಸ್ಟರ್ ಪರೀಕ್ಷೆಯನ್ನು ಪ್ರಥಮ ರಾಂಕ್ ಪಡೆದು ತೇರ್ಗಡೆಯಾದರು, ಭಾರತಕ್ಕೆ ಬಂದ ಮೇಲೆ ಯಶಸ್ವಿ ಮತ್ತು ಪ್ರಸಿದ್ಧ ವಕೀಲ ಆಗಿದ್ದರು. ಆದರೆ ಜವಹರ ಯಶಸ್ವಿ ವಕೀಲರಾಗಿ ಕೆಲಸ ಮಾಡಲೇ ಇಲ್ಲ ಎನ್ನುವುದು ಗಾಂಧೀಜಿಗೆ ಮರೆತು ಹೋದದ್ದು ದೇಶದ ದೌರ್ಭಾಗ್ಯ – ಲೇಖಕ)

ಗಾಂಧೀಜಿಯವರ ಮತ್ತೊಂದು ಕಾರಣ ಏನೆಂದರೆ ನೆಹರುಗೆ ಮುಸ್ಲಿಮರ ಒಂದು ಭಾಗದೊಡನೆಯಾದರೂ ಉತ್ತಮ ಬಾಂಧವ್ಯ ಇದ್ದದ್ದು ಮತ್ತು ಅಂತಹ ಬಾಂಧವ್ಯವನ್ನು ಬೆಳೆಸಿಕೊಳ್ಳಲು ಪಟೇಲರು ಪ್ರಯತ್ನಿಸದೇ ಇದ್ದದ್ದು. ಜವಹರ್ ಎರಡನೆ ಸ್ಥಾನವನ್ನು ಒಪ್ಪಿಕೊಳ್ಳುವುದಿಲ್ಲ, ಹೊರ ದೇಶಗಳಲ್ಲಿ ಅವನು ಸರ್ದಾರರಿಗಿಂತ ಪರಿಚಿತನಾಗಿದ್ದಾನೆ ಮತ್ತು ಅಂತರರಾಷ್ಟ್ರೀಯ ವಲಯದಲ್ಲಿ ಭಾರತ ಪಾತ್ರವಹಿಸುವಂತೆ ಮಾಡುತ್ತಾನೆ – ಎನ್ನುವುದು ಮಹಾತ್ಮನ ಇತರ ಕಾರಣಗಳು. ಅಂತಿಮವಾಗಿ ಜವಹರರನ್ನು ಆಯ್ಕೆ ಮಾಡಿದರೆ ದೇಶಕ್ಕೆ ಪಟೇಲರ ಸೇವೆ ತಪ್ಪಿ ಹೋಗುವುದಿಲ್ಲ ಮತ್ತು ಇಬ್ಬರೂ ಪಾಲುದಾರರಂತೆ ಕೆಲಸ ಮಾಡುತ್ತಾರೆ ಎನ್ನುವುದು ಗಾಂಧೀಜಿಗೆ ಅರಿವಾಗಿತ್ತು. ಅವರಿಬ್ಬರು ಸರ್ಕಾರಿ ಗಾಡಿಗೆ ಕಟ್ಟಿದ ಎರಡು ಎತ್ತುಗಳಂತೆ ಇರುತ್ತಾರೆ. ಒಬ್ಬರಿಗೆ ಮತ್ತೊಬ್ಬರ ಅವಶ್ಯಕತೆ ಇರುತ್ತದೆ ಮತ್ತು ಇಬ್ಬರು ಒಟ್ಟಿಗೇ ಹೋಗುತ್ತಾರೆ. (ಈ ಕಾರಣಗಳನ್ನು ರಾಜಮೋಹನ ಗಾಂಧಿಯವರು ವಿವಿಧ ಮೂಲಗಳಿಂದ ತೆಗೆದುಕೊಂಡಿದ್ದಾರೆ. ಅವರ ಕೃತಿ Patel - A Life ನ ಪುಟ ೩೭೦ ನೋಡಿ)

ಗಾಂಧೀಜಿಯವರು ನೆಹರುವನ್ನು ಅಧ್ಯಕ್ಷನನ್ನಾಗಿ ಮಾಡಲು ಬಯಸಿದ್ದರೂ, ನಾಮಕರಣಕ್ಕೆ ಅಂತಿಮ ದಿನವಾದ ಏಪ್ರಿಲ್ ೨೯ ಬಂದರೂ ಯಾವ ಪ್ರದೇಶ ಕಾಂಗ್ರೆಸ್ ಸಮಿತಿಯೂ ನೆಹರೂರವರ ಹೆಸರನ್ನು ನಾಮಕರಣ ಮಾಡಲಿಲ್ಲ. ಕೃಪಲಾನಿಯವರೇ ಹೇಳಿರುವಂತೆ ಆಗ ಗಾಂಧೀಜಿಯ ಆಶಯಕ್ಕೆ ತಲೆಬಾಗಿ ಕಾಂಗ್ರೆಸ್ ಕಾರ್ಯದರ್ಶಿ ಕೃಪಲಾನಿಯವರು, ದೆಹಲಿಯಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ ಸೇರಿದ್ದಾಗ ನೆಹರು ಹೆಸರನ್ನು ಅಧ್ಯಕ್ಷತೆಗೆ ಸೂಚಿಸಿ ಒಂದು ಕಾಗದವನ್ನು ಎಲ್ಲರಿಗೂ ಮತ್ತು ಅಲ್ಲಿದ್ದ ಕೆಲವು ಸ್ಥಳೀಯ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸದಸ್ಯರಿಗೂ ಕಳುಹಿಸಿದರು. ಎಲ್ಲರೂ ಅದಕ್ಕೆ ಸಹಿ ಮಾಡಿದರು. *(ಮಹಾತ್ಮನ ಆಶಯವನ್ನು ವಿರೋಧಿಸುವ ತಾಕತ್ತು ಅಥವಾ ಇಷ್ಟ ಯಾರಿಗಿತ್ತು? – ಲೇಖಕ)* ಎಲ್ಲರೂ ಸಹಿ ಮಾಡಿದರು ಎಂದರೆ ವಲ್ಲಭಭಾಯ್ ಸಹ ಸಹಿ ಮಾಡಿದರೆಂದು ಊಹಿಸಬಹುದು.

ಜವಹರರ ಹೆಸರನ್ನು ಸೂಚಿಸಿದ ಮೇಲೆ ಕೃಪಲಾನಿ ತಮ್ಮ ಹೆಸರನ್ನು ಹಿಂತೆಗೆದುಕೊಂಡರು. ನಂತರ ಅವರು ಒಂದು ಕಾಗದದ ಚೂರಿನ ಮೇಲೆ ಪಟೇಲರು ಹಿಂತೆಗೆದುಕೊಳ್ಳುವ ಒಕ್ಕಣೆಯನ್ನು ಬರೆದು ಅವರ ಮುಂದಿಟ್ಟರು, ಅವರ ಸಹಿಗಾಗಿ. ಕೃಪಲಾನಿಯವರು 'ನೆಹರುವನ್ನು ಅವಿರೋಧವಾಗಿ ಆರಿಸುವುದಕ್ಕಾಗಿ' ಎಂದು ಬರೆದಿದ್ದರು. ಪಟೇಲರು ಆ ಕಾಗದವನ್ನು ಗಾಂಧೀಜಿಗೆ ತೋರಿಸಿದರು. ಗಾಂಧೀಜಿಯವರು, ತಮಗೆ ನೆಹರು ಆಯ್ಕೆ ಇಷ್ಟವಿದ್ದರೂ ಸಹ, ನೆಹರುರವರು ಪಟೇಲರ ಪರವಾಗಿ ಹಿಂದೆ ಸರಿಯಲು ಒಂದು ಅವಕಾಶ ಕೊಟ್ಟರು. ಅವರು ನೆಹರುಗೆ, "ಯಾವ ಪ್ರದೇಶ್ ಕಾಂಗ್ರೆಸ್ ಸಮಿತಿಯೂ ನಿನ್ನ ಹೆಸರನ್ನು ಸೂಚಿಸಿಲ್ಲ, ಕಾರ್ಯಕಾರಿ ಸಮಿತಿ ಮಾತ್ರ ಸೂಚಿಸಿದೆ" ಎಂದರು. ಆದರೆ ನೆಹರು ಏನೂ ಮಾತಾಡಲಿಲ್ಲ. ಸಂಪೂರ್ಣ ಮೌನ ವಹಿಸಿದರು. ನೆಹರು ಎರಡನೆ ಸ್ಥಾನವನ್ನು ಒಪ್ಪುವುದಿಲ್ಲವೆಂದು ಖಚಿತ ಪಡಿಸಿಕೊಂಡು ಗಾಂಧೀಜಿಯವರು ಕೃಪಲಾನಿ ಬರೆದಿದ್ದ ಕಾಗದದ ಮೇಲೆ ಸಹಿ ಮಾಡುವಂತೆ ಪಟೇಲರಿಗೆ ಹೇಳಿದರು. ತಕ್ಷಣ ಪಟೇಲರು ಸಹಿ ಮಾಡಿದರು. ಅದೇನು ಅವರಿಗೆ ಹೊಸದಲ್ಲ. ಹಿಂದೆ ೧೯೨೯ರಲ್ಲಿ, ೧೯೩೯ರಲ್ಲಿ ತಮ್ಮ ಹೆಸರನ್ನು ಹಿಂತೆಗೆದುಕೊಂಡಿದ್ದರು. {ಎಷ್ಟಾದರು ಸರ್ದಾರರು ಕಾವಿ ಧರಿಸದ ಯೋಗಿ, ಗಾಂಧೀಜಿಯ ಪಟ್ಟ ಶಿಷ್ಯ.}

ರಾಜೇಂದ್ರ ಪ್ರಸಾದ್ ಮತ್ತಿತರರು 'ಗಾಂಧೀಜಿಯವರು ಆಕರ್ಷಣೀಯನಾದ ನೆಹರುಗಾಗಿ ತಮ್ಮ ನೆಚ್ಚಿನ ಭಂಟನನ್ನು ಮತ್ತೊಮ್ಮೆ ತ್ಯಾಗ ಮಾಡಿದ್ದಾರೆ' ಎಂದರು. ಆದರೆ ಪಟೇಲರು ತುಟಿ ಬಿಚ್ಚಲೂ ಇಲ್ಲ, ಮಹಾತ್ಮನನ್ನು ವಿರೋಧಿಸಲೂ ಇಲ್ಲ.[೨೪೨]

* * * *

ಶ್ರೀ ಬಾಲರಾಜ್ ಕೃಷ್ಣರವರು ತಮ್ಮ ಕೃತಿ 'Sardar Vallabhbhai Patel - India's Iron Man'ನಲ್ಲಿ (ಪುಟ. ೨೪೨–೨೪೪) ಹೀಗೆ ಬರೆದಿದ್ದಾರೆ:

> ಮುಂದಿನ ಕಾಂಗ್ರೆಸ್ ಅಧ್ಯಕ್ಷ ಯಾರಾಗಿರಬೇಕು? ೧೮೮೫ರಲ್ಲಿ ಪಕ್ಷ ಸ್ಥಾಪನೆಯಾದ ಮೇಲೆ ೧೯೪೬ರಲ್ಲಿ ಪ್ರಥಮ ಬಾರಿಗೆ ಆ ಪ್ರಶ್ನೆಗೆ ನಿಜವಾದ ಅರ್ಥ ಬಂದಿತ್ತು. ಅಂದು ಅಧ್ಯಕ್ಷರನ್ನು ಚುನಾಯಿಸುವುದು ಎಂದರೆ ಸ್ವತಂತ್ರ ಭಾರತದ ಪ್ರಧಾನಮಂತ್ರಿಯನ್ನು ಆರಿಸುವುದಾಗಿತ್ತು. ೧೫ ಪ್ರದೇಶ್ ಕಾಂಗ್ರೆಸ್ ಸಮಿತಿಗಳ ಪೈಕಿ ೧೨ರ ಭರ್ಜರಿ ಬಹುಮತದ ಆಯ್ಕೆ ಪಟೇಲರಾಗಿದ್ದರೂ ನೆಹರುರವರ ಹೆಸರು ಸೂಚಿಸಲ್ಪಟ್ಟೇ ಇರಲಿಲ್ಲ. ಗಾಂಧೀಜಿಯವರು ಪ್ರಜಾಪ್ರಭುತ್ವದ ಕಾರ್ಯವಿಧಾನವನ್ನು

ಬದಿಗೊತ್ತಿ ನೆಹರು ಪರವಾಗಿ ಪಟೇಲರು ತಮ್ಮ ಹೆಸರನ್ನು ಹಿಂತೆಗೆದುಕೊಳ್ಳುವಂತೆ ಮಾಡಿದರು – ೧೯೨೯ರಿಂದ ಮೂರನೆ ಬಾರಿಗೆ! ತಮ್ಮ ಸತ್ಯಾಗ್ರಹಗಳಿಗೆ ಬಹಳ ನೆರವು ನೀಡಿದ್ದ, ಭದ್ರವಾದ ಪಕ್ಷವನ್ನು ಕಟ್ಟಿದ್ದ ಮತ್ತು ಎಲ್ಲಾ ರಾಜಕೀಯ ಬಿರುಗಾಳಿಗಳನ್ನು ಎದುರಿಸಲು ಅವರಿಗೆ ಶಕ್ತಿ ನೀಡುವುದಕ್ಕಾಗಿ ಬಂಡೆಯಂತೆ ಅವರ ಪಕ್ಕ ಕಳೆದ ಮೂವತ್ತು ವರ್ಷಗಳಿಂದ ನಿಂತಿದ್ದ ಭಂಟನನ್ನು ಅದು ಹೇಗೆ ಗಾಂಧೀಜಿ ಬೆಂಬಲಿಸಲಿಲ್ಲ ಅನ್ನುವುದು ಗೊತ್ತಿಲ್ಲ. ಭಾರತದ ಹಣೆಬರಹವನ್ನೇ ಬದಲಿಸಿದ ಆ ಒಂದು ಘಟನೆಯ ಬಗೆಗೆ ಊಹೆ ಮಾಡಬಹುದು, ಅಷ್ಟೆ. ಜಯಪ್ರಕಾಶ್ ನಾರಾಯಣ್ ಮತ್ತು ಸಮಾಜವಾದಿಗಳು ಪಟೇಲರಿಗೆ ವಿರೋಧಿಗಳಾಗಿದ್ದರು. ಹಾಗೆಯೆ ಆಜ಼ಾದ್ ಮತ್ತು ರಾಷ್ಟ್ರೀಯ ಮುಸ್ಲಿಮರು ಪಟೇಲರ ವಿರೋಧಿಗಳಾಗಿದ್ದರು.

ಆಗ ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿಯಾಗಿದ್ದ ಕೃಪಲಾನಿಯವರು ಹೀಗೆ ಹೇಳಿದ್ದಾರೆ, "ಜವಹರರಿಗೆ ಸ್ಥಾನ ಬಿಟ್ಟುಕೊಡಲೂ ಸಹ ಅಜ಼ಾದರು ರಾಜಿನಾಮೆ ಕೊಡಲು ಇಷ್ಟಪಡಲಿಲ್ಲ ಎನ್ನುವುದು ಲಿಖಿತ ದಾಖಲೆಯಲ್ಲಿದೆ.....ಮತ್ತು ಗಾಂಧೀಜಿಯವರು ಮೌಲಾನಾಗೆ ಬರೆದ ತಮ್ಮ ಪತ್ರದಲ್ಲಿ ಜವಹರಲಾಲರ ಹೆಸರನ್ನು ಸೂಚಿಸಿದ್ದರು ಎನ್ನುವುದು ಸಹ ದಾಖಲಾಗಿದೆ. ಗಾಂಧೀಜಿಯವರು ವ್ಯಕ್ತಪಡಿಸಿದ ಆಶಯದ ಮೇಲೆ ನಾನು ಜವಹರರ ಹೆಸರನ್ನು ಪ್ರಪೋಸ್ ಮಾಡಿ ಒಂದು ಕಾಗದವನ್ನು ಎಲ್ಲರಿಗೂ ಕಳುಹಿಸಿದೆ..... ಜವಹರಲಾಲ್‌ರ ಹೆಸರನ್ನು ಪ್ರಪೋಸ್ ಮಾಡದೆ ಹೋಗಿದ್ದರೆ ಸರ್ದಾರರು ಅಧ್ಯಕ್ಷರಾಗಿ ಚುನಾಯಿತರಾಗುತ್ತಿದ್ದರೆಂಬುದು ಖಂಡಿತ. ನಾನು ಮಧ್ಯೆ ಪ್ರವೇಶಿಸಿದ್ದನ್ನು ಪಟೇಲರು ಇಷ್ಟ ಪಡಲಿಲ್ಲ. ಅಂದಿನಿಂದ ನಾನು, ಪ್ರಧಾನ ಕಾರ್ಯದರ್ಶಿಯಾಗಿ ಗಾಂಧೀಜಿಯ ಅಪೇಕ್ಷೆಗೆ ಅನುಗುಣವಾಗಿ ಜವಹರರ ಹೆಸರನ್ನು ಸೂಚಿಸುವಂತಾಯಿತಲ್ಲ ಎಂದು ಚಿಂತಿಸುತ್ತಿದ್ದೇನೆ..... ಆದರೆ ಮುಂದಾಗುವುದನ್ನು ಯಾರು ಭವಿಷ್ಯ ಹೇಳಲು ಸಾಧ್ಯ? ಅಂತಹ ಸಣ್ಣದು ಎಂದು ಕಂಡು ಬರುವ ಅಪಘಾತಗಳ ಮೇಲೆ ಮನುಜರ ವಿಧಿ ಮತ್ತು ರಾಷ್ಟ್ರಗಳ ವಿಧಿ ಸಹ ಅವಲಂಬಿತವಾಗಿರುತ್ತದೆ."

ಆಜ಼ಾದರ ಆಪ್ತ ಕಾರ್ಯದರ್ಶಿಯಾಗಿದ್ದ ಹುಮಾಯುನ್ ಕಬೀರ್‌ರವರು ಸ್ವಲ್ಪ ಭಿನ್ನವಾದ ವಿವರಣೆ ನೀಡಿದ್ದಾರೆ. ಕಬೀರರ ಪ್ರಕಾರ, "ಗಾಂಧೀಜಿಯವರು ಸರ್ದಾರರು ಕಾಂಗ್ರೆಸ್‌ನ ಮುಂದಿನ ಅಧ್ಯಕ್ಷರಾಗಬೇಕೆಂದು ಯೋಚಿಸಿದ್ದರು. ಅದು ಬಹುತೇಕ ಪಟೇಲರನ್ನು ಭಾರತದ ಪ್ರಥಮ ಪ್ರಧಾನಮಂತ್ರಿಯನ್ನಾಗಿ ಆರಿಸಿದಂತೆ. ಗಾಂಧೀಜಿಯವರು ಪಟೇಲರ ಹೆಸರನ್ನು ಸೂಚಿಸುವುದಕ್ಕೆ ಮುನ್ನ ಮೌಲಾನಾರವರು ನೆಹರು ಹೆಸರನ್ನು ಸೂಚಿಸುವುದರ ಮೂಲಕ ಮಧ್ಯೆ ಪ್ರವೇಶಿಸಿದರು. ಇದು ಪಟೇಲ್ ಮತ್ತು ಆಜ಼ಾದರ ನಡುವೆ ತೀವ್ರ ಬೇಸರ ಉಂಟಾಗುವುದಕ್ಕೆ ಕೊನೆಯ ಮತ್ತು ಅತ್ಯಂತ ಪ್ರಬಲ ಕಾರಣ ಎಂದು ಕಾಣುತ್ತದೆ. ಆಜ಼ಾದರು ಪಟೇಲರ ಅಭಿಪ್ರಾಯಗಳು ಸ್ವಲ್ಪ ಸಂಕುಚಿತ ಎಂದು ಆ ಕಾಲದಲ್ಲಿ ಯೋಚಿಸಿದ್ದರು, ಆದರೆ ಅವರ ಜೀವನದ ಕೊನೆಗಾಲದಲ್ಲಿ ಅವರು ತಮ್ಮ ಅಭಿಪ್ರಾಯಗಳನ್ನು ಬದಲಾಯಿಸಿದ್ದರೆಂದು ನಾನು ಭಾವಿಸಿದ್ದೇನೆ. ನೆಹರುಗಿಂತ ಪಟೇಲರು ಉತ್ತಮ ಪ್ರಧಾನ ಮಂತ್ರಿಯಾಗುತ್ತಿದ್ದರು ಎನ್ನುವ ನಂಬಿಕೆಗೆ ಆಜ಼ಾದರು ಬಂದಿದ್ದರು."[೨೪೩]

* * * *

ಜುಲೈ ಆದಿ ಭಾಗದಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸಭೆ ಬೊಂಬಾಯಿಯಲ್ಲಿ ನಡೆಯಿತು. ಅಲ್ಲಿ ಜವಹರಲಾಲ್ ನೆಹರು ನಾಲ್ಕನೆ ಬಾರಿಗೆ ಕಾಂಗ್ರೆಸ್ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡರು.

೧೪.೬ ಮುಸ್ಲಿಂ ಲೀಗ್‌ನ ಕರಾಳ ಕೃತ್ಯ

ಆಗಲೇ ವಿವರಿಸಿದ ಹಾಗೆ, ಮಧ್ಯಂತರ ಸರ್ಕಾರ ರಚಿಸಲು ವೈಸ್‌ರಾಯ್ ವೇವೆಲ್ ತನಗೆ ಆಹ್ವಾನ ನೀಡುತ್ತಾರೆಂದು ನಿರೀಕ್ಷಿಸಿದ್ದ ಮಹಮ್ಮದಾಲಿ ಜಿನ್ನಾಗೆ ಭಾರಿ ನಿರಾಸೆಯಾಗಿತ್ತು. ಅವನಿಗೆ ಆಕ್ರೋಶವೂ ಉಂಟಾಗಿತ್ತು.

ಅಷ್ಟರಲ್ಲಿ ಸಂವಿಧಾನ ರಚನಾ ಸಭೆಗೆ ಚುನಾವಣೆ ನಡೆದು ಕಾಂಗ್ರೆಸ್ಸು ಭರ್ಜರಿ ಜಯ ಗಳಿಸಿತು. ೨೯೬ ಸ್ಥಾನಗಳ ಪೈಕಿ ಕಾಂಗ್ರೆಸ್ಸು ೨೧೨ ಸ್ಥಾನಗಳನ್ನು ಗೆದ್ದಿತು. ಮುಸ್ಲಿಂ ಲೀಗ್ ೭೩ ಸ್ಥಾನಗಳನ್ನು ಪಡೆಯಿತು. ಸ್ವತಂತ್ರರು ೧೧ ಸ್ಥಾನಗಳನ್ನು ಗಳಿಸಿದರು. ಅಲ್ಪಸಂಖ್ಯಾತರಾದುದರಿಂದ ಮುಸ್ಲಿಮರಿಗೆ ಏನೂ

ಬೆಲೆ ಇಲ್ಲ. ಕಾನೂನುಬದ್ಧ ಮತ್ತು ಶಾಂತಿಯುತ ಮಾರ್ಗವನ್ನು ಬಿಟ್ಟು ಸಾಮೂಹಿಕ ಹಿಂಸಾಚಾರ ನಡೆಸಿದ ಹೊರತೂ ತಮ್ಮ ಮಾತಿಗೆ ಬೆಲೆ ಬರುವುದಿಲ್ಲ ಎಂದು ಜಿನ್ನಾ ಆಲೋಚಿಸಿದನು.[೨೪೪]

ಅಷ್ಟು ಹೊತ್ತಿಗೆ, ಕಾಂಗ್ರೆಸ್ ಅಧ್ಯಕ್ಷನಾಗಿ ನೆಹರು ಆಡಿದ ಕೆಲವು ಮಾತುಗಳು ಜಿನ್ನಾನನ್ನು ಮತ್ತಷ್ಟು ಕೆರಳಿಸಿದುವು.

ಜುಲೈ ೭ರಂದು ಎ.ಐ.ಸಿ.ಸಿ. ಸಭೆಯಲ್ಲಿ ನೆಹರು, "ನಾವು ಸಂವಿಧಾನ ರಚನಾ ಸಭೆಗೆ ಹೋಗಲು ತೀರ್ಮಾನಿಸಿದ್ದೇವೆ ಅನ್ನುವುದನ್ನು ಬಿಟ್ಟು ಬೇರೆ ಯಾವುದೇ ವಿಷಯಕ್ಕು ಬದ್ಧರಾಗಿಲ್ಲ" ಎಂದು ಪ್ರಕಟಿಸಿದರು. ಇದು ಸರಿಯಾದ ನಿಲುವಲ್ಲ. ಕಾಂಗ್ರೆಸ್ ಮೇ ೧೬ರ ಸೂತ್ರವನ್ನು ಒಪ್ಪಿತ್ತು. ಅಂದರೆ ಅದರಲ್ಲಿದ್ದ ೨೪ ಅಂಶಗಳಿಗೂ, (ಪ್ರಾಂತ್ಯಗಳ ಗುಂಪಿನ ರಚನೆಯೂ ಸೇರಿ) ಕಾಂಗ್ರೆಸ್ ಒಪ್ಪಿತೆಂದು ಅರ್ಥ. ಅದರಿಂದ ನೆಹರು ಮಾತು ಒಂದು ಪ್ರಮಾದವಾಗಿತ್ತು.

ಮೂರು ದಿನಗಳ ನಂತರ ಒಂದು ಪತ್ರಿಕಾ ಘೋಷ್ಠಿಯಲ್ಲಿ ನೆಹರು, "ಕಾಂಗ್ರೆಸ್ಸು ಒಪ್ಪಂದಗಳಿಂದ ಸಂಪೂರ್ಣವಾಗಿ ಮುಕ್ತವಾಗಿದೆ" ಎಂದು ಹೇಳಿ. "ಕೇಂದ್ರ ಸರ್ಕಾರವು ಕ್ಯಾಬಿನೆಟ್ ಮಿಷನ್ ಕಲ್ಪಿಸಿಕೊಂಡಿದ್ದಕ್ಕಿಂತ ಹೆಚ್ಚು ಬಲಿಷ್ಠವಾಗಿರುತ್ತದೆ" ಎಂದರು.

(ಇದೂ ಸಹ ಒಂದು ಪ್ರಮಾದವೇ ಏಕೆಂದರೆ ಮೇ ೧೬ರ ಸೂತ್ರ ದುರ್ಬಲ ಕೇಂದ್ರ ಮತ್ತು ಪ್ರಬಲ ಪ್ರಾಂತ್ಯಗಳಿಗೆ ಎಡೆ ಮಾಡಿದ್ದುದರಿಂದಲೇ ಅದನ್ನು ಒಪ್ಪಲು ಕಾಂಗ್ರೆಸ್ ಮೊದಲು ನಿರಾಕರಿಸಿತ್ತು. ಆದರೆ ಕೊನೆಗೆ ವಿಧಿ ಇಲ್ಲದೆ ಮೇ ೧೬ರ ಸೂತ್ರವನ್ನು ಒಪ್ಪಿತ್ತು – ಲೇಖಕ)

ಮುಂದುವರೆದು ನೆಹರು ಗುಂಪು ರಚನೆಯ ಬಗೆಗೆ ಹೀಗೆ ಹೇಳಿದ್ದರು:

> ದೊಡ್ಡ ಸಾಧ್ಯತೆ ಏನೆಂದರೆ..... ಗುಂಪು ರಚನೆಯೇ ಇರಲಾರದು ಎನ್ನುವುದು. ಸೆಕ್ಷನ್ ಎ (ಹಿಂದೂ ಬಹು ಸಂಖ್ಯಾತರಾಗಿರುವ ಪ್ರಾಂತ್ಯಗಳು) ಗುಂಪು ರಚನೆಯ ವಿರೋಧವಾಗಿ ತೀರ್ಮಾನಿಸುತ್ತವೆ. ಪಣ ಒಡ್ಡುವ ಭಾಷೆಯಲ್ಲಿ ಹೇಳುವುದಾದರೆ, ವಾಯುವ್ಯ ಗಡಿನಾಡು ಗುಂಪು ರಚನೆಯ ವಿರುದ್ಧ ತೀರ್ಮಾನಿಸುವುದು ೪ – ೧ ರಷ್ಟು ಖಾತರಿ. ಆಗ ಬಿ ಗುಂಪು ಬಿದ್ದುಹೋಗುತ್ತದೆ. (ಸೆಕ್ಷನ್ ಸಿ ಯ ಬಗೆಗೆ) ಅಂತಿಮವಾಗಿ ಅಲ್ಲಿ ಯಾವ ಗುಂಪು ರಚನೆಯೂ ಇರುವುದಿಲ್ಲ, ಏಕೆಂದರೆ

ಎಂತಹದೇ ಸಂದರ್ಭದಲ್ಲಿ ಅಸ್ಸಾಂ ಅದನ್ನು ಸಹಿಸುವುದಿಲ್ಲ, ಎಂದು ಖಚಿತತೆಯಿಂದ ಮತ್ತು ಆತ್ಮ ವಿಶ್ವಾಸದಿಂದ ಹೇಳಬಲ್ಲೆ.[೨೪೫]

(ಈ ಮಾತುಗಳು ನೆಹರು ಮಾಡಿದ ಅತಿ ದೊಡ್ಡ ಪ್ರಮಾದ, ಏಕೆಂದರೆ ಮೇ ೧೬ರ ಸೂತ್ರವು ಪಾಕಿಸ್ತಾನದ ರಚನೆಯನ್ನು ತಿರಸ್ಕರಿಸಿದ್ದರೂ ಅದನ್ನು ಜಿನ್ನಾ ಒಪ್ಪಿದ್ದು ಅದರಲ್ಲಿ ಗುಂಪು ರಚನೆಗೆ ಅವಕಾಶವಿದೆ, ಅದನ್ನು ಉಪಯೋಗಿಸಿಕೊಂಡು ಬಹು ಸಂಖ್ಯಾತ ಮುಸ್ಲಿಮರಿರುವ ಪ್ರಾಂತ್ಯಗಳ ಗುಂಪು ರಚಿಸಬಹುದು, ಅದು ಪಾಕಿಸ್ತಾನದ ರಚನೆಗೆ ಮೊದಲ ಹೆಜ್ಜೆ ಆಗುತ್ತದೆ ಎಂದು ಲೆಕ್ಕ ಹಾಕಿದ್ದರಿಂದ, ಈಗ ನೆಹರು ಗುಂಪು ರಚನೆಯೇ ಇಲ್ಲ ಎಂದರೆ ಜಿನ್ನಾ ಸುಮ್ಮನೆ ಬಿಟ್ಟಾನೆಯೇ? (ಅಥವಾ ಅವನನ್ನು ನಿಯಂತ್ರಿಸುವ ಶಕ್ತಿ ನೆಹರುಗಿತ್ತೆ?) ನೆಹರುದು ಆತುರದ ಮಾತಾಯಿತು, ಜಾಸ್ತಿ ಮಾತೂ ಆಯಿತು. ಇನ್ನೂ ಎಲ್ಲವೂ ತೀರ್ಮಾನವಾಗಿರಲಿಲ್ಲ. ಸ್ವಾತಂತ್ರ್ಯ ಬಂದೇ ಬರುತ್ತದೆ – ಎನ್ನುವುದೊಂದೇ ಖಚಿತವಾಗಿದ್ದುದು. ಜಿನ್ನಾನ ಮುಂದಿನ ನಡೆಗಳು ಏನು ಅನ್ನುವುದು ಯಾರಿಗೂ ತಿಳಿದಿರಲಿಲ್ಲ. ಎಲ್ಲವೂ ಅನಿಶ್ಚಿತವಾಗಿಯೇ ಇದ್ದುವು. ಅಂತಹ ಸಮಯದಲ್ಲಿ ನೆಹರುವಿನ ಮಾತು ಅನವಶ್ಯಕ ಮಾತಾಯಿತು, ಆತುರದ ಮಾತಾಯಿತು ಮತ್ತು ಜಾಸ್ತಿ ಮಾತಾಯಿತು. ಬಹುಶಃ ಪ್ರಧಾನಮಂತ್ರಿ ಆಗುತ್ತೇನೆಂಬ ಖುಷಿಯಲ್ಲಿ ಭಾವೋದ್ರೇಗಕ್ಕೆ ಒಳಗಾಗಿ ಆ ಮಾತುಗಳಾಡಿರಬಹುದು. ಆದರೆ ರಾಜಕಾರಣಿಯಾದವನು ಮಾತನ್ನು ಸಂಯಮದಿಂದ ಕಡಿಮೆ ಆಡಿದರೆ ಒಳಿತು. ಏಕೆಂದರೆ ಮಾತೇ ಮುತ್ತು, ಮಾತೇ ಮೃತ್ಯು – ಲೇಖಕ)

ನೆಹರುರವರ ಚಟುವಟಿಕೆ ಮತ್ತು ಮಾತುಗಳಿಂದ ಸರ್ದಾರರಿಗೆ ನಿರಾಸೆಯಾಗಿತ್ತು. ಅವರು ೪ರ ಜುಲೈ ೨೯ರಂದು ಮಧ್ಯ ಪ್ರಾಂತ್ಯಗಳ ಪ್ರಮುಖ ಕಾಂಗ್ರೆಸ್ ನಾಯಕ ಮತ್ತು ಮಾಜಿ ಮಂತ್ರಿ ಡಿ.ಪಿ. ಮಿಶ್ರಾರವರಿಗೆ ಬರೆದ ಪತ್ರದಲ್ಲಿ ಹೀಗೆ ಬರೆದರು:

ಅಧ್ಯಕ್ಷರು (ಜವಹರಲಾಲ್ ನೆಹರು) ನಾಲ್ಕನೇ ಬಾರಿಗೆ ಚುನಾಯಿತರಾಗಿದ್ದರೂ ಅನೇಕ ಸಲ ಮಗುವಿನ ಮುಗ್ಧತೆಯಿಂದ ವರ್ತಿಸುತ್ತಾರೆ. ಅದು ನಮ್ಮನ್ನು ಭಾರಿ ಕಷ್ಟಗಳಿಗೆ ಅನಿರೀಕ್ಷಿತವಾಗಿ ಸಿಕ್ಕಿಸುತ್ತದೆ. ಅವರು, ನಮಗೆ ಮುಜುಗರವನ್ನು ಉಂಟು ಮಾಡುವಂತಹ ಅನೇಕ ಕೆಲಸಗಳನ್ನು ಇತ್ತೀಚೆಗೆ ಮಾಡಿದ್ದಾರೆ. ಕಾಶ್ಮೀರದಲ್ಲಿನ ಅವರ ಕಾರ್ಯ, ಸಂವಿಧಾನ ಸಭೆಗೆ ನಡೆದ ಸಿಕ್ಕರ ಚುನಾವಣೆಯಲ್ಲಿ ಅವರು ಮಾಡಿದ ಹಸ್ತಕ್ಷೇಪ, ಎ.ಐ.ಸಿ.ಸಿ.

> ಸಮ್ಮೇಳನ ಆದ ತಕ್ಷಣ ಅವರು ನಡೆಸಿದ ಪತ್ರಿಕಾಘೋಷ್ಠಿ ಅವರ ಭಾವುಕ ಬುದ್ಧಿವಿಕಲ್ಪದ ಚಟುವಟಿಕೆಗಳು, ಪರಿಸ್ಥಿತಿಯನ್ನು ಸರಿಪಡಿಸುವುದಕ್ಕೆ ಅವು ನಮ್ಮ ಮೇಲೆ ಭಾರಿ ಒತ್ತಡವನ್ನು ಹೇರುತ್ತವೆ..... ಇಷ್ಟೆಲ್ಲ ಮುಗ್ಧ ಅವಿವೇಚನೆಗಳಿದ್ದರೂ ಅವರಿಗೆ ಸ್ವಾತಂತ್ರ್ಯಕ್ಕಾಗಿ ಅಸಮಾನ ಉತ್ಸಾಹ ಮತ್ತು ತೀವ್ರ ಬಯಕೆ ಇದೆ. ಅದು ಅವರನ್ನು ಅಶಾಂತನನ್ನಾಗಿ ಮಾಡುತ್ತದೆ ಮತ್ತು ಅಸಹನೆಯ ತುದಿಗೆ ನೂಕುತ್ತದೆ. ಆಗ ಅವರು ತಮ್ಮನ್ನು ತಾವೇ ಮರೆಯುತ್ತಾರೆ. ಅವರೆಲ್ಲ ಚಟುವಟಿಕೆಗಳು ಅವರು ಬಯಸುತ್ತಿರುವ ಗುರಿಯನ್ನು ಅತೀ ಶೀಘ್ರವಾಗಿ ಮುಟ್ಟುವ ಬಯಕೆಯಿಂದ ಪ್ರೇರಿತವಾಗಿವೆ. ಅತಿ ಕೆಲಸ ಮತ್ತು ಒತ್ತಡದಿಂದ ಅವರ ಮನಸ್ಸು ದಣಿದಿದೆ. ಅವರು ಒಂಟಿತನವನ್ನು ಅನುಭವಿಸುತ್ತಿದ್ದಾರೆ ಮತ್ತು ಅವರು ಭಾವನಾತ್ಮಕವಾಗಿ ವರ್ತಿಸುತ್ತಿದ್ದಾರೆ. ಇಂತಹ ಸಮಯದಲ್ಲಿ ನಾನು ಅವರನ್ನು ತಾಳ್ಮೆಯಿಂದ ಸಹಿಸಿಕೊಳ್ಳಬೇಕು.[೨೪೬]

ಆದರೆ, ನೆಹರುರವರ ಮಾತುಗಳಿಂದ ಭಯಂಕರವಾಗಿ ಕೆರಳಿದ ಜಿನ್ನಾ ಕತ್ತಿಯನ್ನು ಜಳಪಿಸುತ್ತಾ ಎದ್ದು ನಿಂತನು. 'ನೆಹರುರವರ ಮಾತು ಮೇ ೧೬ರ ಸೂತ್ರವನ್ನು ನಿರಾಕರಿಸಿದೆ' ಎಂದನು ಜಿನ್ನಾ. 'ಕಾಂಗ್ರೆಸ್ಸು ದೀರ್ಘಾವಧಿ ವ್ಯವಸ್ಥೆಯನ್ನು ಒಪ್ಪಿದೆ ಅನ್ನುವ ಭಾವನೆಯನ್ನು ತೆಗೆದುಹಾಕಿ' ಎಂದು ಸರ್ಕಾರವನ್ನು ಕೇಳಿದನು. ಅವನ ಬೇಡಿಕೆಯನ್ನು ಸರ್ಕಾರ ನಿರಾಕರಿಸಿದಾಗ ಮೇ ೧೬ರ ಸೂತ್ರಕ್ಕೆ ಮುಸ್ಲಿಂ ಲೀಗ್ ನೀಡಿದ್ದ ಒಪ್ಪಿಗೆಯನ್ನು ಹಿಂತೆಗೆದು ಕೊಂಡನು ಮತ್ತು ಪಾಕಿಸ್ತಾನವನ್ನು ಪಡೆಯುವುದಕ್ಕೆ 'ನೇರ ಕ್ರಮ' ತೆಗೆದುಕೊಳ್ಳುವುದಾಗಿ ಗುಡುಗಿದನು. 'ನೇರ ಕ್ರಮ'ದ ಜಾರಿಗೆ ಆಗಸ್ಟ್ ೧೬ನೇ ತಾರೀಖನ್ನು ನಿಗದಿಪಡಿಸಿದನು.

ಆಗಸ್ಟ್ ೧೬ರಂದು 'ನೇರ ಕ್ರಮ'ವನ್ನು ಆಚರಿಸುವಂತೆ ಕರೆ ಕೊಡುತ್ತಾ ಜಿನ್ನಾ ಮುಸ್ಲಿಮರಿಗೆ ಹೀಗೆ ಹೇಳಿದನು:

> ನಾವು ಈ ದಿನ ಸಾಂವಿಧಾನಿಕ ಕ್ರಮಗಳಿಗೆ ವಿದಾಯ ಹೇಳುತ್ತಿದ್ದೇವೆ. ಉದ್ದಕ್ಕೂ ಬ್ರಿಟಿಷ್ ಸರ್ಕಾರ ಮತ್ತು ಕಾಂಗ್ರೆಸ್ಸು ಕೈಯಲ್ಲಿ ಪಿಸ್ತೂಲನ್ನು ಹಿಡಿದಿದ್ದುವು. ಒಬ್ಬರು ಅಧಿಕಾರ ಮತ್ತು ಅಸ್ತ್ರಗಳ ಮತ್ತೊಬ್ಬರು ಸಾಮೂಹಿಕ ಹೋರಾಟ ಮತ್ತು ಅಸಹಕಾರದ ಪಿಸ್ತೂಲನ್ನು ಹಿಡಿದಿದ್ದರು. ಈ ದಿನ ನಾವೂ ಸಹ ಪಿಸ್ತೂಲನ್ನು ಹಿಡಿದಿದ್ದೇವೆ ಮತ್ತು ಅದನ್ನು ಬಳಸುವ ಸ್ಥಿತಿಯಲ್ಲಿ ಇದ್ದೇವೆ.[೨೪೭]

ಮುಸ್ಲಿಂ ಲೀಗ್ ಸಮಿತಿಯು ೧೯೪೬ರ ಜುಲೈ ೨೯ರಂದು ಸಭೆ ಸೇರಿ 'ನೇರಕ್ರಮ'ವನ್ನು ಆರಂಭಿಸಲು ತೀರ್ಮಾನಿಸಿತು ಮತ್ತು ಆಗಸ್ಟ್ ೧೬ನ್ನು 'ನೇರ ಕ್ರಮದ ದಿವಸ' ಎಂದು ಪ್ರಕಟಿಸಿತು. ನಂತರ ಲೀಗ್ ನಾಯಕರು 'ನೇರ ಕ್ರಮ'ಕ್ಕಾಗಿ ಸಿದ್ಧತೆಗಳನ್ನು ಮಾಡಿಕೊಳ್ಳಲು ಆರಂಭಿಸಿದರು. ಲೀಗ್ ನಾಯಕ ಫ಼ಿರೋಜ್ ಖಾನ್ ನೂನ್, 'ಮುಸ್ಲಿಮರು ಉಂಟುಮಾಡುವ ಧ್ವಂಸವು ಚೆಂಗೀಸ್ ಖಾನ್ ಮತ್ತು ಹಲಗು ಖಾನ್ ಮಾಡಿದ ಧ್ವಂಸಗಳನ್ನು ನಾಚಿಸುತ್ತದೆ,' ಎಂದನು. ಬಂಗಾಳದ ಪ್ರಧಾನಮಂತ್ರಿ ಮುಸ್ಲಿಂ ಲೀಗ್‌ನ ಸುಹ್ರವರ್ದಿ ಆಗಸ್ಟ್ ೧೬ನ್ನು ಸಾರ್ವಜನಿಕ ರಜಾ ದಿನ ಎಂದು ಘೋಷಿಸಿದನು. ಅವನು ಮತ್ತು ಅವನ ಸ್ನೇಹಿತರು ಮುಸ್ಲಿಂ ಗೂಂಡಾಗಳನ್ನು ಜಮಾಯಿಸಿ ಅವರಿಗೆ ಪಿಸ್ತೂಲುಗಳನ್ನು ಮತ್ತು ಮಾರಕ ಅಸ್ತ್ರಗಳನ್ನು ಒದಗಿಸಿದರು. ಗೂಂಡಾಗಳನ್ನು ಬೇರೆ ಸ್ಥಳಗಳಿಂದ ಕರೆ ತರಲು ವಾಹನ ವ್ಯವಸ್ಥೆಗಳನ್ನು ಮಾಡಿದರು ಮತ್ತು ಅವರಿಗೆ ೧೦೦ ಗ್ಯಾಲನ್ ಪೆಟ್ರೋಲ್ ಕೂಪನ್‌ಗಳನ್ನು ಒದಗಿಸಿದರು. (೨ನೆ ಮಹಾಯುದ್ಧ ಕಾಲದಲ್ಲಿ ಜಾರಿಗೆ ಬಂದಿದ್ದ ಪೆಟ್ರೋಲ್ ರೇಷನ್ ಪದ್ಧತಿ ಇನ್ನೂ ಮುಂದುವರೆದಿತ್ತು.) ಶಾಂತಿ ವ್ಯವಸ್ಥೆ ಮತ್ತು ಕಾನೂನು ಪಾಲನೆಯನ್ನು ನೋಡಿಕೊಳ್ಳುತ್ತಿದ್ದ ಪ್ರಧಾನ ಮಂತ್ರಿಯೂ ಕಲ್ಕತ್ತದ ೨೪ ಪೊಲೀಸ್ ಠಾಣೆಗಳ ಪೈಕಿ ೨೨ ಠಾಣೆಗಳಿಂದ ಎಲ್ಲಾ ಹಿಂದೂ ಪೊಲೀಸ್ ಅಧಿಕಾರಿಗಳನ್ನು ಬೇರೆಡೆಗೆ ವರ್ಗ ಮಾಡಿ, ಅವರ ಸ್ಥಾನಗಳಲ್ಲಿ ಮುಸ್ಲಿಂ ಅಧಿಕಾರಿಗಳನ್ನು ನಿಯಮಿಸಿದನು. ಇನ್ನೆರಡರಲ್ಲಿ ಆಂಗ್ಲ ಅಧಿಕಾರಿಗಳಿದ್ದರು.[೨೪೮]

ಅದಕ್ಕೆ ಮುಂಚೆ, ಜುಲೈ ೨೨ರಂದು, ಅಂದರೆ ಮುಸ್ಲಿಂ ಲೀಗ್ 'ನೇರ ಕ್ರಮ'ದ ಠರಾವು ಅಂಗೀಕರಿಸುವುದಕ್ಕೆ ಒಂದು ವಾರ ಮುಂಚೆ, ವೈಸ್‌ರಾಯ್ ವೇವೆಲ್ಲನು ಮಧ್ಯಂತರ ಸಮ್ಮಿಶ್ರ ಸರ್ಕಾರವನ್ನು ರಚಿಸಲು ಪ್ರಕ್ರಿಯೆಯನ್ನು ಆರಂಭಿಸಿದ್ದನು. ಅವನು ಜುಲೈ ೨೨ರಂದು ಕಾಂಗ್ರೆಸ್ ಅಧ್ಯಕ್ಷ ಜವಹರಲಾಲ್ ನೆಹರು ಮತ್ತು ಲೀಗ್ ಅಧ್ಯಕ್ಷ ಜಿನ್ನಾಗೆ ಪತ್ರ ಬರೆದು, 'ಮಧ್ಯಂತರ ಸರ್ಕಾರಕ್ಕೆ ಸಾಧ್ಯವಾದಷ್ಟೂ ಹೆಚ್ಚಿನ ಅಧಿಕಾರವನ್ನು ದಿನನಿತ್ಯದ ಆಡಳಿತ ನಡೆಸಲು ಕೊಡುವ' ಆಶ್ವಾಸನೆ ನೀಡಿದನು ಮತ್ತು 'ಕಾಂಗ್ರೆಸ್ಸು ಅಥವಾ ಮುಸ್ಲಿಂ ಲೀಗ್, ಮತ್ತೊಂದು ಸೂಚಿಸಿದ ಹೆಸರಿಗೆ ಆಕ್ಷೇಪಣೆ ಎತ್ತುವಹಾಗಿಲ್ಲ' ಎಂದು ತಿಳಿಸಿದನು. ಅಂದರೆ ಕಾಂಗ್ರೆಸ್ಸು ರಾಷ್ಟ್ರೀಯ ಮುಸ್ಲಿಮರ ಹೆಸರನ್ನು ಸೂಚಿಸಬಹುದು – ಎಂದಾಯಿತು.

ಜವಹರಲಾಲ್ ನೆಹರು ವೈಸ್‌ರಾಯ್‌ಗೆ ಜವಾಬು ಬರೆದು, "ಮಧ್ಯಂತರ ಸರ್ಕಾರದ ಸ್ಥಾನಮಾನ ಮತ್ತು ಅಧಿಕಾರವು ಸ್ಪಷ್ಟವಾದ ಮಾತುಗಳಲ್ಲಿ ತೀರ್ಮಾನ

ಆಗುವವರೆಗೆ' ಸರ್ಕಾರದ ರಚನೆಯಲ್ಲಿ ತಾವು ಸಹಕರಿಸಲು ಸಾಧ್ಯವಿಲ್ಲ ಎಂದು ತಿಳಿಸಿದರು. ಅವರು 'ವೇವೆಲ್ಲನು ನಾಮಮಾತ್ರದ ವೈಸ್‌ರಾಯ್' ಆಗಿರುವ ಭರವಸೆಯನ್ನು ಬಯಸಿದರು.

ಮುಸ್ಲಿಂ ಲೀಗ್‌ನ ನೇರ ಕ್ರಮದ ಘೋಷಣೆ ವೇವೆಲ್ಲನನ್ನು ಆತಂಕಕ್ಕೆ ಈಡು ಮಾಡಿತ್ತು. ಅದರಿಂದ ಕಾಂಗ್ರೆಸ್‌ಗೆ ಅಧಿಕಾರ ವಹಿಸುವುದು ಸೂಕ್ತ ಅನ್ನುವ ತೀರ್ಮಾನಕ್ಕೆ ಬಂದನು. ಆದರೆ, ನೆಹರು ಒಂದು ಷರತ್ತು ಒಡ್ಡಿದರು. ಅದು ವೇವೆಲ್‌ಗೆ ಒಪ್ಪಿಗೆ ಆಗಲಿಲ್ಲ. ಆ ಸಮಯದಲ್ಲಿ ಸರ್ಕಾರದಲ್ಲಿ ಸುಧಾರಣಾ ಕಮಿಷನರ್ ಆಗಿದ್ದ ವಿ.ಪಿ. ಮೆನನ್‌ರವರು 'ಪಟೇಲರ ಅಭಿಪ್ರಾಯವನ್ನು ತಿಳಿದುಕೊಳ್ಳಿ' ಎಂದು ವೇವೆಲ್ಲನಿಗೆ ಸಲಹೆ ನೀಡಿದರು. ದೆಹಲಿಯಲ್ಲಿದ್ದ ಐ.ಸಿ.ಎಸ್. ಅಧಿಕಾರಿ ಕನ್ನಡಿಗ ಹೆಚ್.ವಿ. ಐಯ್ಯಂಗಾರ್ (ಪೂರ್ಣ ಹೆಸರು: ಹೊಳೆನರಸಿಪುರ ವರದರಾಜ ಐಯ್ಯಂಗಾರ್) ಹಿಂದೆ ಬೊಂಬಾಯಿಯಲ್ಲಿ ಗೃಹ ಕಾರ್ಯದರ್ಶಿಯಾಗಿದ್ದರು. ಅದರಿಂದ ಅವರು ಪಟೇಲರಿಗೆ ಪರಿಚಿತರಾಗಿದ್ದರು. ವೈಸ್‌ರಾಯ್‌ರವರ ಸೂಚನೆಯಂತೆ ಅವರು ಬೊಂಬಾಯಿಗೆ ವಿಮಾನದಲ್ಲಿ ಬಂದು ಪಟೇಲರನ್ನು ಆಗಸ್ಟ್ ೨ರ ಸಂಜೆ ಭೇಟಿ ಮಾಡಿ ನೆಹರು ವೈಸ್‌ರಾಯ್‌ಗೆ ಬರೆದಿರುವ ಪತ್ರದ ವಿಷಯವನ್ನು ತಿಳಿಸಿ, ನೆಹರುರವರ ನಿಲುವು ಮಧ್ಯಂತರ ಸರ್ಕಾರದ ರಚನೆಯನ್ನು ಬುಡಮೇಲು ಮಾಡುತ್ತದೆ, ಎಂದರು. ಸ್ವಲ್ಪ ಹೊತ್ತು ಆಲೋಚಿಸಿದ ಪಟೇಲರು ಐಯ್ಯಂಗಾರ್‌ಗೆ "ಮಧ್ಯಂತರ ಸರ್ಕಾರವನ್ನು ರಚಿಸಲು ಕಾಂಗ್ರೆಸ್‌ಗೆ ಆಹ್ವಾನ ಬಂದರೆ, ಕಾಂಗ್ರೆಸ್ಸು ಅದನ್ನು ಒಪ್ಪುವಂತೆ ನಾನು ಒತ್ತಾಯಿಸುತ್ತೇನೆ. ವೈಸ್‌ರಾಯ್‌ನ ಸ್ಥಾನದ ಪ್ರಶ್ನೆಯಿಂದ ಸರ್ಕಾರ ರಚನೆಯನ್ನು ಕೈ ಬಿಡುವುದನ್ನು ವಿರೋಧಿಸುತ್ತೇನೆ. ನನ್ನ ಅಭಿಪ್ರಾಯವನ್ನು ಒಪ್ಪದೇ ಹೋದರೆ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯತ್ವಕ್ಕೆ ರಾಜಿನಾಮೆ ನೀಡುತ್ತೇನೆ. ನೀವು ನಾಳೆಯೆ ದೆಹಲಿಗೆ ತೆರಳಿ" ಎಂದರು.

ಅಯ್ಯಂಗಾರ್ ತಂದ ಆಶಾದಾಯಕ ಸುದ್ದಿಯಿಂದ, ವೈಸ್‌ರಾಯ್ ವೇವೆಲ್ಲನು ಮಧ್ಯಂತರ ಸರ್ಕಾರ ರಚಿಸುವಂತೆ ಆಗಸ್ಟ್ ೬ರಂದು ಕಾಂಗ್ರೆಸ್ಸನ್ನು ಆಹ್ವಾನಿಸಿದನು. ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಆಗಸ್ಟ್ ೮ರಂದು ವಾರ್ಧಾದಲ್ಲಿ ಸಭೆ ಸೇರಿ ನೆಹರು ವೈಸ್‌ರಾಯ್ ಸ್ಥಾನದ ಬಗ್ಗೆ ಬಯಸಿದ್ದ ಆಶ್ವಾಸನೆ ದೊರಕದಿದ್ದರೂ ಸಹ, ಸರ್ಕಾರ ರಚನೆಗೆ ಒಪ್ಪಿಗೆ ನೀಡಿತು.[೨೪೯]

ವೇವೆಲ್ ತಕ್ಷಣವೇ ಸರ್ಕಾರ ರಚಿಸಲು ನೆಹರುವನ್ನು ಕರೆಯದೆ ನಿಧಾನಿಸಿದನು.

ಅಷ್ಟರಲ್ಲಿ ಆಗಸ್ಟ್ ೧೬ ಬಂದಿತು. ಅದು ಮುಸ್ಲಿಂ ಲೀಗ್ ಪಾಕಿಸ್ತಾನದ ರಚನೆಗಾಗಿ 'ನೇರ ಕ್ರಮ'ದ ಆರಂಭಕ್ಕೆ ನಿಗದಿ ಪಡಿಸಿದ್ದ ದಿನ. ಅಂದು ಬೆಳಗ್ಗೆ ಬಂಗಾಳದ ರಾಜಧಾನಿ ಕಲ್ಕತ್ತ ನಗರದಲ್ಲಿ ಲೀಗ್ ಬಾವುಟವನ್ನು ಹಿಡಿದ ಶಸ್ತ್ರಧಾರಿ ಗಳಾದ ಸಾವಿರಾರು ಮುಸ್ಲಿಮರ ಮೆರವಣಿಗೆ ಹೌಡಾದಿಂದ ಕಲ್ಕತ್ತಕ್ಕೆ ಹೊರಟಿತು. ಅವರು 'ಲಡ್ಕೆ ಲೇಂಗೆ ಪಾಕಿಸ್ತಾನ್' (ನಾವು ಹೋರಾಡುತ್ತೇವೆ ಮತ್ತು ಪಾಕಿಸ್ತಾನ ವನ್ನು ತೆಗೆದುಕೊಳ್ಳುತ್ತೇವೆ) ಅನ್ನುವ ಘೋಷಣೆಯನ್ನು ಕಿವಿಗಳನ್ನು ಕಿವುಡುಮಾಡು ವಷ್ಟು ಜೋರಾಗಿ ಕಿರಿಚುತ್ತಿದ್ದರು. ಆ ಮೆರವಣಿಗೆ ಅತಿ ಭಯಾನಕವಾಗಿತ್ತು. ಮೆರವಣಿಗೆಯ ಅಂತ್ಯದಲ್ಲಿ ಭಾರಿ ಸಭೆ ನಡೆಯಿತು. ಪ್ರಧಾನಮಂತ್ರಿ ಸುಹ್ರವರ್ದಿ ಹಿಂದೂಗಳ ವಿರುದ್ಧ (ಕಾಂಗ್ರೆಸ್ ವಿರುದ್ಧ ಅಲ್ಲ) ಭಾರಿ ಪ್ರಚೋದನಾ ಕಾರಿ ಭಾಷಣ ಮಾಡಿದನು. ಮುಸ್ಲಿಂ ಲೀಗ್‌ನವರಿಗೆ ಏನಾದರು ವಿವಾದವಿದ್ದರೆ ಅದು ಕಾಂಗ್ರೆಸ್ ಪಕ್ಷದೊಡನೆ ಇರಬೇಕಾಗಿತ್ತೇ ಹೊರತು ಹಿಂದೂ ಜನರ ಮೇಲೆ ಅಲ್ಲ. ಆದರೆ ಆಗ ಪ್ರಧಾನಿ ಸ್ಥಾನದಲ್ಲಿದ್ದ ಲೀಗ್ ನಾಯಕ ಪ್ರಚೋದಕ ಭಾಷಣ ಮಾಡಿ ಹಿಂದೂ ಜನಗಳ ಮೇಲೆ ಮುಸ್ಲಿಮರನ್ನು ಛೂ ಬಿಟ್ಟನು. ಸರಿ, ಸಭೆ ಮುಗಿದ ತಕ್ಷಣ ಗಲಭೆ, ದಾಂದಲೆ, ಕೊಲೆ, ಲೂಟಿ, ಹೆಂಗಸರ ಮಾನಭಂಗ ಇತ್ಯಾದಿ ಇತ್ಯಾದಿ ಬೀಭತ್ಸ ಕೃತ್ಯಗಳು ಆರಂಭವಾದುವು. ಕಲ್ಕತ್ತ ನಗರದ ರಸ್ತೆ ರಸ್ತೆಗಳಲ್ಲಿ, ಗಲ್ಲಿ ಗಲ್ಲಿಗಳಲ್ಲಿ ಹೆಣಗಳ ರಾಶಿ ಬಿದ್ದುವು. (ಹೆಣಗಳು ಒಂದರ ಮೇಲೆ ಒಂದು ಧಾನ್ಯದ ಮೂಟೆಗಳಂತೆ ಬಿದ್ದುವು – ಎನ್ನುತ್ತಾರೆ ಲೇಖಕ ಬಾಲರಾಜ ಕೃಷ್ಣ.) ರಕ್ತದ ಕಾಲುವೆಯೆ ಹರಿಯಿತು. ಪೊಲೀಸರು ನೊಂದವರ ಸಹಾಯಕ್ಕೆ ಬರಲಿಲ್ಲ. ಹಂತಕರನ್ನು ತಡೆಯಲಿಲ್ಲ. ಅವರ ದಾಂದಲೆಯನ್ನು ಮೌನ ಪ್ರೇಕ್ಷಕರಾಗಿ ವೀಕ್ಷಿಸಿದರು. ಸ್ವತಃ ಪ್ರಧಾನಮಂತ್ರಿ ಪೊಲೀಸ್ ಕಂಟ್ರೋಲ್ ರೂಂನಲ್ಲಿ ಕುಳಿತು ಪೊಲೀಸರು ಯಾರದರು ಹಂತಕರನ್ನು ದಸ್ತಗಿರಿ ಮಾಡಿದರೆ ಅವರ ಬಿಡುಗಡೆಗೆ ಆಜ್ಞೆ ಮಾಡುತ್ತಿದ್ದನು. ಪ್ರಧಾನಮಂತ್ರಿಯ ಈ ಅನಾಗರಿಕ ಕಾನೂನು ಬಾಹಿರ ವರ್ತನೆಯ ವಿರುದ್ಧ ಗೌರ್ನರನಿಗೆ ದೂರು ಕೊಟ್ಟರೆ ಅವನು ದಿವ್ಯ ನಿರ್ಲಕ್ಷ್ಯವನ್ನು ತೋರಿದನು. ಹೀಗೆ ಎರಡು ದಿನಗಳ ಕಾಲ ಅವ್ಯಾಹತವಾಗಿ ಹಿಂದೂಗಳ ಮಾರಣ ಹೋಮ ಆದ ಮೇಲೆ, ಸರ್ಕಾರದಿಂದ ಅಥವಾ ಗೌರ್ನರ ನಿಂದ ಏನೂ ರಕ್ಷಣೆ ದೊರೆಯುವುದಿಲ್ಲವೆನ್ನುವುದು ಖಚಿತವಾದ ಮೇಲೆ ಹಿಂದೂ ಗಳೂ ಮೂರನೆ ದಿನ ಸ್ವ ರಕ್ಷಣೆಗೆ ತೊಡಗಿ ಮುಸ್ಲಿಮರಿಗೆ ತಿರುಗಿಸಿ ಹೊಡೆಯ ಲಾರಂಭಿಸಿದರು. ಯಾವಾಗ ಹಿಂದೂಗಳ ಕೈ ಮೇಲಾಯಿತೊ ತಕ್ಷಣ, ಮುಸ್ಲಿಮರು ಹಿಂದೂಗಳ ಹತ್ಯೆ ಮಾಡುತ್ತಿದ್ದಾಗ ಸುಮ್ಮನಿದ್ದ ಗೌರ್ನರ್, ಮಿಲಿಟರಿಯನ್ನು ಕರೆಸಿದನು. ಆ ಗೌರ್ನರನು ಇಂಗ್ಲೆಂಡಿನ ಲೇಬರ್ ಪಕ್ಷಕ್ಕೆ ಸೇರಿದ್ದವನು! ಆ

ಮೂರು ದಿನಗಳ ಹಾವಳಿಯಲ್ಲಿ ೫೦೦೦ ಗಂಡಸರು, ಹೆಂಗಸರು ಮತ್ತು ಮಕ್ಕಳು ಹತರಾದರು. ೧೫,೦೦೦ ಮಂದಿ ಗಾಯಗೊಂಡರು. ಹೆಣಗಳು ಅನೇಕ ದಿವಸಗಳವರೆಗೆ ರಸ್ತೆಗಳಲ್ಲೇ ಬಿದ್ದಿದ್ದುವು. ಹಿಂದೂಗಳು ಸ್ವರಕ್ಷಣೆಗಾಗಿ ತಿರುಗಿಸಿ ಹತ್ಯೆ ಮಾಡಲು ಆರಂಭಿಸಿದ್ದರಿಂದ ಕಲ್ಕತ್ತ ನಗರದಲ್ಲಿ ಮುಸ್ಲಿಮರ ಲೆಕ್ಕಾಚಾರ ತಲೆಕೆಳಗಾಯಿತು. ಹಿಂದೂಗಳು ಅಷ್ಟೇ ತೀವ್ರವಾಗಿ ಹೊಡೆತ ಕೊಟ್ಟರು. ಹಿಂದೂಗಳಿಗಿಂತಲೂ ಅಧಿಕ ಸಂಖ್ಯೆಯ ಮುಸ್ಲಿಮರು ಹತರಾದರು.[೨೫೦]

ಮಹಾತ್ಮ ಗಾಂಧೀಜಿಯವರು ವೈಸ್‌ರಾಯ್‌ರವರನ್ನು ಆಗಸ್ಟ್ ೨೭ರಂದು ಭೇಟಿ ಮಾಡಿದರು. ಭೇಟಿಯ ನಂತರ ಗಾಂಧೀಜಿಯವರು ವೈಸ್‌ರಾಯ್‌ಗೆ ಒಂದು ಪತ್ರ ಬರೆದರು:

> ಕಳೆದ ಸಂಜೆ ನಿಮ್ಮನ್ನು ಭೇಟಿ ಮಾಡಿದಾಗ ನೀವು, ನೀವೊಬ್ಬ ಸರಳ ವ್ಯಕ್ತಿ, ಸೈನಿಕ ಮತ್ತು ನಿಮಗೆ ಕಾನೂನು ತಿಳಿಯದು ಎಂದು ಹೇಳಿದಿರಿ. ದೊರೆಯ ಪ್ರತಿನಿಧಿಯಾದ ನೀವು ಸೈನ್ಯದ ವ್ಯಕ್ತಿ ಮಾತ್ರ ಆಗಿರುವ ಅಥವಾ ನೀವೇ ಮಾಡಿರುವ ಕಾನೂನನ್ನು ಕಡೆಗಣಿಸುವ ಹಾಗಿಲ್ಲ. ನಿಮ್ಮ ವಿಶ್ವಾಸವನ್ನು ಪಡೆದಿರುವ ಒಬ್ಬ ಕಾನೂನು ತಜ್ಞನ ಸಹಾಯವನ್ನು ನೀವು ಪಡೆಯಬೇಕು.

ಗಾಂಧೀಜಿಯವರು ವೈಸ್‌ರಾಯ್‌ಗೆ ರಾಜಿನಾಮೆ ಕೊಡುವಂತೆ ಸಲಹೆ ನೀಡಿದರು. ಅವರು ಬ್ರಿಟಿಷ್ ಸರ್ಕಾರಕ್ಕೆ ಒಂದು ಟೆಲಿಗ್ರಾಫ್ ಸಂದೇಶ ಕಳುಹಿಸಿ, 'ನನ್ನ ಅಭಿಪ್ರಾಯದಲ್ಲಿ ಬಂಗಾಳದ ದುರಂತದಿಂದ ವೈಸ್‌ರಾಯ್ ಧೈರ್ಯಗುಂದಿದ್ದಾರೆ ಅವರಿಗೆ ಒಬ್ಬ ಶಕ್ತ ಮತ್ತು ಕಾನೂನು ಬಲ್ಲ ಸಹಾಯಕನ ಆವಶ್ಯಕತೆ ಇದೆ. ಇಲ್ಲದೆ ಹೋದರೆ ಬಂಗಾಳದ ದುರಂತ ಪುನರಾವರ್ತನೆಯಾಗುವುದು ಖಂಡಿತ' ಎಂದು ತಿಳಿಸಿದರು.

೧೪.೭ ಮಧ್ಯಂತರ ಸರ್ಕಾರದ ರಚನೆ

ಈ ಮಧ್ಯೆ ಕಲ್ಕತ್ತದ ಹತ್ಯಾಕಾಂಡದ ಸುದ್ದಿ ಬಂದ ತಕ್ಷಣ ಕಾಂಗ್ರೆಸ್ ನಾಯಕರು ವೈಸ್‌ರಾಯ್‌ನನ್ನು ಭೇಟಿ ಮಾಡಿ ನರಮೇಧದ ತಡೆಗೆ ಕ್ರಮ ಕೈಗೊಳ್ಳಲು ಕೋರಿದಾಗ ವೇವೆಲ್ಲನು ೧೯೩೫ರ ಕಾನೂನಿನ ಪ್ರಕಾರ ಪ್ರಾಂತ್ಯಗಳ ವಿಷಯದಲ್ಲಿ ತಾನು ಪ್ರವೇಶಿಸುವ ಹಾಗಿಲ್ಲ – ಎಂದು ಹೇಳಿ ತನ್ನ ಅಸಹಾಯಕತೆಯನ್ನು ವ್ಯಕ್ತಪಡಿಸಿದನು. ಆದಾಗ್ಯೂ ಅವನು ಕಲ್ಕತ್ತದ ರಕ್ತ ಪ್ರವಾಹದಿಂದ ಗಲಿಬಿಲಿಗೊಂಡಿದ್ದನು. ಪರಿಸ್ಥಿತಿಯನ್ನು ನಿಯಂತ್ರಿಸಲು ಜನರ ಸಹಕಾರದಿಂದ

ಮಾತ್ರ ಸಾಧ್ಯವೆಂದು ಯೋಚಿಸಿ ಸರ್ಕಾರವನ್ನು ರಚಿಸಲು ನೆಹರುವನ್ನು ಆಹ್ವಾನಿಸಿದನು. ಅದರ ಜೊತೆಗೆ, "ಸರ್ಕಾರ ರಚನೆಯ ಮುನ್ನ ಜಿನ್ನಾ ಜೊತೆ ಸಮಾಲೋಚಿಸಬೇಕೇ ಅಥವಾ ಬೇಡವೇ ಎನ್ನುವುದು ನಿಮಗೆ ಬಿಟ್ಟಿದ್ದು. ಜಿನ್ನಾ ಜೊತೆ ಒಂದು ಒಮ್ಮತಕ್ಕೆ ಬರಲು ನಿಮಗೆ ಸಾಧ್ಯವಾದರೆ ನನಗೆ ಬಹಳ ಸಂತೋಷವಾಗುತ್ತದೆ" ಎಂದನು. ಆದರೆ ನೆಹರು ಪ್ರಯತ್ನಕ್ಕೆ ಜಿನ್ನಾನಿಂದ ಉತ್ತೇಜಕ ಪ್ರತಿಕ್ರಿಯೆ ಬರಲಿಲ್ಲ. ಹೀಗಾಗಿ ಸೆಪ್ಟೆಂಬರ್ ೨ರಂದು ನೆಹರು ನಾಯಕತ್ವದ ನವ ಸರ್ಕಾರ ಮುಸ್ಲಿಂ ಲೀಗ್ ಇಲ್ಲದೆ, ಅಧಿಕಾರಕ್ಕೆ ಬಂದಿತು. ಹೊಸ ಸರ್ಕಾರವು ವೈಸ್‌ರಾಯ್‌ನ 'ಕಾರ್ಯಕಾರಿ ಸಮಿತಿ' ಎಂದು ಕರೆಯಲ್ಪಟ್ಟಿತು. ಅದರಿಂದ ನೆಹರು ಸ್ಥಾನದ ಹೆಸರು 'ಪ್ರಧಾನ ಮಂತ್ರಿ' ಎಂದಾಗಲಿಲ್ಲ, 'ಉಪಾಧ್ಯಕ್ಷ' ಎಂದಾಯಿತು. ಆ ಸರ್ಕಾರದಲ್ಲಿ ಪಟೇಲರು ಗೃಹ ಸದಸ್ಯರಾದರು ಜೊತೆಗೆ ವಾರ್ತಾ ಮತ್ತು ಪ್ರಸಾರ ಖಾತೆಯನ್ನು ವಹಿಸಿಕೊಂಡರು. ಅವರ ಜೊತೆಗಿನ ಇತರ ಮಂತ್ರಿಗಳು ರಾಜೇಂದ್ರ ಪ್ರಸಾದ್, ರಾಜಾಜಿ, ಶರತ್ ಚಂದ್ರ ಬೋಸ್ (ನೇತಾಜಿ ಸುಭಾಷರ ಸಹೋದರ), ಅಸಫ್ ಆಲಿ, ಜಗಜೀವನ್ ರಾಮ್ (ಎಲ್ಲಾ ಕಾಂಗ್ರೆಸ್ಸಿಗರು), ಅಲ್ ಜಹೀರ್ ಮತ್ತು ಷಫ್ಲತ್ ಅಹ್ಮದ್ ಖಾನ್ (ಕಾಂಗ್ರೆಸ್ಸೇತರ ಮುಸ್ಲಿಮರು), ಬಲದೇವ ಸಿಂಗ್ (ಸಿಖ್), ಜಾನ್ ಮಥಾಯ್ (ಕ್ರೈಸ್ತ) ಮತ್ತು ಸಿ.ಹೆಚ್. ಭಾಭಾ (ಪಾರ್ಸಿ).

ಅಂದು ಪಟೇಲರು ಲಂಡನ್‌ನಲ್ಲಿದ್ದ ಸುಧೀರ್ ಘೋಷ್‌ಗೆ ದೂರವಾಣಿ ಮೂಲಕ ಹೀಗೆ ತಿಳಿಸಿದರು, "ಒಂದಷ್ಟು ಸಂಧಾನ ಮತ್ತು ಚೌಕಾಸಿ ನಡೆದ ಮೇಲೆ ಮುಸ್ಲಿಂ ಲೀಗ್ ಒಳಕ್ಕೆ ಬರುತ್ತದೆ. ದೇಶದಲ್ಲಿ ಪರಿಣಾಮಕಾರಿ ಸರ್ಕಾರ ರಚನೆಯಾಗಿ ಶಾಂತಿ ಸ್ಥಾಪನೆಯಾದ ಮೇಲೆ, ಭಾರತದ ಎಲ್ಲಾ ವರ್ಗದ ಅಭಿಪ್ರಾಯಗಳಿಗೆ ಒಪ್ಪಿಗೆಯಾಗುವಂತಹ ಸಂವಿಧಾನ ರಚಿಸುವುದು ಕಷ್ಟವಾಗುವುದಿಲ್ಲ."[೨೫೧]

ಪ್ರಮಾಣ ವಚನ ಸ್ವೀಕರಿಸಿದ ಮೂರು ದಿನಗಳ ನಂತರ ಪಟೇಲರು ಲಾರ್ಡ್ ವೇವೆಲ್ ಸರ್ಕಾರ ಮತ್ತು ಲೇಡಿ ವೇವೆಲ್ ನೀಡಿದ ಒಂದು ಔತಣಕೂಟದಲ್ಲಿ ಭಾಗವಹಿಸಿದರು. ಅಲ್ಲಿ ಲಾರ್ಡ್ ವೇವೆಲ್ ಸರ್ಕಾರ ಮತ್ತು ಸಂವಿಧಾನ ರಚನಾ ಸಭೆಯಲ್ಲಿ ಮುಸ್ಲಿಂ ಲೀಗ್ ಭಾಗಿಯಾಗುವುದೆಂಬ ಆಶಯವನ್ನು ವ್ಯಕ್ತಪಡಿಸಿದರು. ಪಟೇಲರು, "ಜಿನ್ನಾ ಒಬ್ಬ ಮಾತುಕತೆ ನಡೆಸಲು ಸಾಧ್ಯವಿಲ್ಲದ ವ್ಯಕ್ತಿ" ಎಂದು ಉತ್ತರಿಸಿದರು. ಮತ್ತೆ ವೈಸ್‌ರಾಯ್, "ನೀವು ಲೀಗ್ ಅನ್ನು ತೃಪ್ತಿಪಡಿಸುವುದಿಲ್ಲವೆ?" ಎಂದು ಪ್ರಶ್ನಿಸಿದರು. "ನಿಮ್ಮ ಮಾತಿನ ಅಭಿಪ್ರಾಯ

ಇಷ್ಟವಿಲ್ಲದ ಅಸ್ಸಾಂ ಅನ್ನು ಮುಸ್ಲಿಂ ತಂಡದ ಒಡನೆ ಸೇರಿಸುವುದು ಎನ್ನುವುದಾದರೆ, ಲೀಗ್ ಅನ್ನು ನಾವು ತೃಪ್ತಿಪಡಿಸುವುದಿಲ್ಲ," ಎಂದರು ಪಟೇಲ್.[೨೫೨]

ಭಾರತದಲ್ಲಿದ್ದ ಆಂಗ್ಲ ಐ.ಪಿ.ಎಸ್. ಅಧಿಕಾರಿಗಳ ಒಂದು ಗುಂಪಿಗೆ ಕಾಂಗ್ರೆಸ್ ಸರ್ಕಾರದ ಬೆಳವಣಿಗೆಯಿಂದ ಸಂಕಟವಾಗಿತ್ತು. ಅವರು ಕಾಂಗ್ರೆಸ್ಸಿನ ದ್ವೇಷಿಗಳಾಗಿದ್ದರು. ಮುಸ್ಲಿಂ ಲೀಗ್ ಅನ್ನು ಹೊರಗಿಟ್ಟು ಕಾಂಗ್ರೆಸ್ ಅಧಿಕಾರ ವಹಿಸಿಕೊಂಡಿದ್ದು ಅವರಿಗೆ ಅಸಮಧಾನವನ್ನು ಉಂಟುಮಾಡಿತ್ತು. ಅವರು ಇಂಗ್ಲೆಂಡಿನ ಲೇಬರ್ ಸರ್ಕಾರದ ಕ್ರಮದಿಂದ ಆತಂಕಗೊಂಡಿದ್ದರು. ಅವರು, ಮುಸ್ಲಿಂ ಲೀಗ್ ಅನ್ನು ಸರ್ಕಾರದಿಂದ ಹೊರಗಿಡುವುದು ಅಪಾಯಕಾರಿ, ಎಂದು ವೇವೆಲ್ಲನ ಕಿವಿಯಲ್ಲಿ ಊದಿದರು. ವೇವೆಲ್ಲನು, ಲೀಗ್ ಅನ್ನು ಸರ್ಕಾರದೊಳಕ್ಕೆ ತರುವಂತೆ ಹೆಚ್ಚು ಕಡಿಮೆ ಪ್ರತಿ ದಿನ ನೆಹರುವನ್ನು ಒತ್ತಾಯಿಸಲು ಆರಂಭಿಸಿದನು. ಲಂಡನ್ ಸರ್ಕಾರವು ಹಿಂದೆಯೆ ವೇವೆಲ್ಲನಿಗೆ, "ನೆಹರುವನ್ನು ನಿಜವಾದ ಪ್ರಧಾನಮಂತ್ರಿಯಂತೆ ನಡೆಸಿಕೊಳ್ಳಬೇಕು ಮತ್ತು ಮುಸ್ಲಿಂ ಲೀಗ್ ಅನ್ನು ಸರ್ಕಾರದೊಳಕ್ಕೆ ಕರೆತರುವುದು ನೆಹರುವಿನ ಜವಾಬ್ದಾರಿ" ಎಂದು ಸ್ಪಷ್ಟವಾಗಿ ಹೇಳಿತ್ತು. ಅದರಿಂದ ವೇವೆಲ್ಲನಿಗೂ ಅದಕ್ಕೂ ಸಂಬಂಧವಿರಲಿಲ್ಲ. ಆದಾಗ್ಯೂ, ಲೀಗ್ ಅನ್ನು ಸರ್ಕಾರದೊಳಕ್ಕೆ ತರಬೇಕೆಂಬುದು ಅವನ ಮನಸ್ಸಿಗೆ ಬಂದು ಬಿಟ್ಟಿತ್ತು. ಅವನು ನೆಹರುವನ್ನು ಪೀಡಿಸಲು ಆರಂಭಿಸಿದನು. ಇದು ನೆಹರುಗೆ ಬೇಸರವನ್ನು ಉಂಟುಮಾಡುತ್ತಿತ್ತು. ಬೇಸತ್ತ ನೆಹರು ಒಂದು ದಿನ ತಮ್ಮ ತಾಳ್ಮೆಯನ್ನು ಕಳೆದುಕೊಂಡು, "ನಾನು ಜಿನ್ನಾ ಜೊತೆ ಮಾತನಾಡುವುದಿಲ್ಲ, ನಿಮಗೆ ಅಷ್ಟೊಂದು ಆಸಕ್ತಿ ಇದ್ದರೆ ನೀವೇ ಅವರೊಡನೆ ಮಾತನಾಡಿ" ಅಂದುಬಿಟ್ಟರು. ವೇವೆಲ್ಲನು ಜಿನ್ನಾ ಒಡನೆ ಮಾತನಾಡಬೇಕೆಂದು ನೆಹರುರವರ ಅಪೇಕ್ಷೆ ಅಥವಾ ಇಂಗಿತ ವಾಗಿರಲಿಲ್ಲ. ಕೋಪದ ಭರದಲ್ಲಿ ತಾಳ್ಮೆ ಕಳೆದುಕೊಂಡು ಆ ಮಾತನ್ನು ಆಡಿದ್ದರು. ಆದರೆ ವೇವೆಲ್ಲನಿಗೆ ಅಷ್ಟು ಸಾಕಾಗಿತ್ತು. ಮಾರನೆ ದಿನವೇ ಅವನು ಜಿನ್ನಾ ಜೊತೆ ಮಾತುಕತೆ ಆರಂಭಿಸಿದನು.[೨೫೩] ಆಗಲೇ ನೆಹರುಗೆ ಅರ್ಥವಾಗಿದ್ದು ತಾವು ಮಾಡಿದ ಯಡವಟ್ಟು, ಏಕೆಂದರೆ ನೆಹರುರವರ ಒತ್ತಾಯದ ಮೇಲೆ ಜಿನ್ನಾ ಸರ್ಕಾರವನ್ನು ಸೇರುವುದೇ ಬೇರೆ, ವೈಸ್‌ರಾಯ್ ಒತ್ತಾಯದಿಂದ ಸೇರುವುದೇ ಬೇರೆ. ಎರಡರ ಪರಿಣಾಮಗಳು ಬೇರೆ ಬೇರೆ, ಭಿನ್ನ.

ಜಿನ್ನಾ ಕೂಡ ಸರ್ಕಾರವನ್ನು ಸೇರಲು ಕಾಯುತ್ತಿದ್ದನೆಂದು ಕಾಣುತ್ತದೆ, ಏಕೆಂದರೆ ಕಾಂಗ್ರೆಸ್ಸಿಗೆ ಪೂರ್ಣ ಅಧಿಕಾರ ಸಿಕ್ಕಿ ಬಿಟ್ಟಿತ್ತು. ೧೪ ಮಂತ್ರಿ ಸ್ಥಾನಗಳ ಪೈಕಿ ೧೨ರಲ್ಲಿ ಅವರೇ ಅಲಂಕರಿಸಿ ಪೂರ್ಣ ಸರ್ಕಾರ ನಡೆಸುತ್ತಿದ್ದರು. (ಎರಡು

ಸ್ಥಾನ ಖಾಲಿ ಇತ್ತು) ಮುಸ್ಲಿಂ ಲೀಗ್‌ಗೆ ಏನೂ ದೊರಕಿರಲಿಲ್ಲ. 'ನೇರ ಕ್ರಮ'ವು ಅವರಿಗೆ ಮುಳುವಾಗಿತ್ತು. ಪ್ರಾರಂಭದಲ್ಲಿ ಹಿಂದೂಗಳು ಬಹಳ ಅನುಭವಿಸಿದ್ದರೂ ನಂತರ ಅವರು ತಿರುಗಿ ಬಿದ್ದಾಗ ಮುಸ್ಲಿಮರಲ್ಲೇ ಸಾವಿನ ಸಂಖ್ಯೆ ಅಧಿಕವಾಗಿತ್ತು. ಅದರಿಂದ ಜಿನ್ನಾನ ಮರ್ಯಾದೆಗೆ ಧಕ್ಕೆ ಬಂದಿತ್ತು. ಈಗ ಅದನ್ನು ಸರಿಪಡಿಸಿ ಕೊಳ್ಳಲು ವೇವೆಲ್ಲನು ಅವಕಾಶ ಮಾಡಿಕೊಟ್ಟಿದ್ದನು. ಮಂತ್ರಿ ಮಂಡಲದಲ್ಲಿ ಸೇರಿ, ಹೊರಗಿನ ಹಿಂಸಾತ್ಮಕ ಹೋರಾಟದ ಜೊತೆಗೆ ಒಳಗಿನ ಅಸಹಕಾರದಿಂದ ಸರ್ಕಾರವನ್ನು ಬಗ್ಗುಬಡಿದು ಪಾಕಿಸ್ತಾನವನ್ನು ಬಾಚಿಕೊಳ್ಳುವ ಹೊಂಚು ಜಿನ್ನಾನದ್ದಾಗಿತ್ತು. ಇಷ್ಟಕ್ಕೆಲ್ಲ ಅವಕಾಶ ಮಾಡಿದ್ದು ಜವಹರಲಾಲ್ ನೆಹರು ತಾಳ್ಮೆ ಕಳೆದು ಕೊಂಡದ್ದು! ಕೋಪದಿಂದ ಮಾತಾಡಿದ್ದು! ಸುಧೀರ್ ಘೋಷ್‌ರವರು ನೆಹರು ತಾಳ್ಮೆ ಕಳೆದುಕೊಂಡದ್ದನ್ನು 'A Famous Loss of Temper'ಎಂದು ಕರೆದಿದ್ದಾರೆ.

ಜೂನ್ ೧೨ರ ದಿನಾಂಕದಷ್ಟು ಹಿಂದೆಯೇ ಮುಸ್ಲಿಂ ಲೀಗ್ ಅನ್ನು ಸರ್ಕಾರದಲ್ಲಿ ಸೇರಿಸಿಕೊಳ್ಳುವುದರ ಬಗೆಗೆ ಪಟೇಲರು ವೇವೆಲ್ಲನನ್ನು ಎಚ್ಚರಿಸಿದ್ದರು. ಅವರು ವೇವೆಲ್ಲನಿಗೆ, "ಮಧ್ಯಂತರ ಸರ್ಕಾರದಲ್ಲಿನ ತನ್ನ ಸ್ಥಾನವನ್ನು ಜಿನ್ನಾ ಪೂರ್ಣವಾಗಿ ಮತೀಯ ಮತ್ತು ವಿಧ್ವಂಸಕ ಉದ್ದೇಶಗಳಿಗೆ ಹಾಗೂ ಭಾರತವನ್ನು ಒಡೆಯುವುದಕ್ಕೆ ಉಪಯೋಗಿಸುತ್ತಾನೆ" ಎಂದು ಹೇಳಿದ್ದರು. ಅದಕ್ಕೆ ವೇವೆಲ್ಲನು, "ಜಿನ್ನಾನ ಮನೋಭಾವ ಅದಲ್ಲ ಎನ್ನುವುದು ನನಗೆ ಖಾತ್ರಿಯಾಗಿದೆ. ಜಿನ್ನಾ ಅಥವಾ ಯಾವುದೇ ಪಕ್ಷವು ಮಧ್ಯಂತರ ಸರ್ಕಾರವನ್ನು, ಭಾರತದ ಆಡಳಿತದ ವ್ಯವಸ್ಥೆಗೆ ಬದಲಾಗಿ ಮತೀಯ ರಾಜಕೀಯದ ಸಮರ ಕ್ಷೇತ್ರವನ್ನಾಗಿ ಮಾಡುವುದಕ್ಕೆ ನಾನು ಅವಕಾಶ ಕೊಡುವುದಿಲ್ಲ. ನನ್ನ ಮಾತನ್ನು ನಂಬಿ," ಎಂದು ಹೇಳಿದ್ದನು. ಆದರೆ ಪಟೇಲರಿಗೆ ನಂಬಿಕೆಯಾಗಲಿಲ್ಲ.[೨೫೪]

ಸ್ವಲ್ಪ ದಿನಗಳಲ್ಲೇ ಪಟೇಲರ ಅನುಮಾನ ನಿಜವಾಯಿತು. ಲೀಗ್ ಮಂತ್ರಿಗಳಲ್ಲಿ ಒಬ್ಬನಾದ ಘಜನ್‌ಫರ್ ಆಲಿ ಖಾನ್ ತಾವು ಮಧ್ಯಂತರ ಸರ್ಕಾರವನ್ನು ಸೇರುತ್ತಿರುವುದು ತಮ್ಮ ಉತ್ಕಟ ಬಯಕೆಯ ಗುರಿಯಾದ ಪಾಕಿಸ್ತಾನದ ರಚನೆಗೆ ಹೋರಾಟ ನಡೆಸುವುದಕ್ಕಾಗಿ ಪಾದ ಊರುವಷ್ಟು ಸ್ಥಳ ಪಡೆಯುವುದಕ್ಕೇ ಹೊರತು ನೆಹರುವನ್ನು ಮಂತ್ರಿ ಮಂಡಲದ ನಾಯಕ ಎಂದು ಒಪ್ಪಿಕೊಳ್ಳುವುದಕ್ಕಲ್ಲ. ಲೀಗ್ ಮಂತ್ರಿಗಳು ಲಿಯಾಖತ್ ಅಧ್ಯಕ್ಷತೆಯಲ್ಲಿ ಅನೌಪಚಾರಿಕವಾಗಿ ಮತ್ತು ಕಾಂಗ್ರೆಸ್ ಸಹೋದ್ಯೋಗಿಗಳೊಡನೆ ವೈಸ್‌ರಾಯ್ ಅಧ್ಯಕ್ಷತೆಯಲ್ಲಿ ಔಪಚಾರಿಕವಾಗಿ ಸಭೆಗಳಲ್ಲಿ ಭಾಗವಹಿಸುತ್ತಾರೆ,' ಎಂದನು.[೨೫೫]

೧೯೪೬ರ ಅಕ್ಟೋಬರ್ ೨೬ರಂದು ಮುಸ್ಲಿಂ ಲೀಗ್‌ನ ಐವರು –

ಲಿಯಾಖತ್ ಆಲಿ ಖಾನ್, ಇಬ್ರಾಹಿಂ ಇಸ್ಮಾಯಿಲ್ ಚುಂದ್ರಿಗಲ್, ಘಜನ್‌ಫರ್ ಆಲಿ ಖಾನ್, ಜೋಗೇಂದ್ರನಾಥ್ ಮಂಡಲ್ ಮತ್ತು ಅಬ್ದುರ್ ರಬ್ ನಿಸ್ತಾರ್ – ಮಧ್ಯಂತರ ಸರ್ಕಾರವನ್ನು ಸೇರಿದರು. ಅವರಿಗೆ ಜಾಗ ಒದಗಿಸುವುದಕ್ಕಾಗಿ ಮೂವರು ಕಾಂಗ್ರೆಸ್ ಮಂತ್ರಿಗಳು – ಶರತ್ ಬೋಸ್, ಆಲಿ ಜಹೀರ್ ಮತ್ತು ಅಹ್ಮದ್ ಖಾನ್ – ರಾಜಿನಾಮೆ ಕೊಟ್ಟರು. ಜಿನ್ನಾ ಸರ್ಕಾರದಿಂದ ಹೊರಗುಳಿದನು. ನೆಹರು ಅಧೀನದಲ್ಲಿ ಕೆಲಸ ಮಾಡಲು ಅವನಿಗೆ ಇಷ್ಟವಿರಲಿಲ್ಲ. ಹೊರಗಿದ್ದುಕೊಂಡೆ ಸರ್ಕಾರವನ್ನು ಆಟವಾಡಿಸಲು ಆರಂಭಿಸಿದನು. ಲೀಗ್ ಮಂತ್ರಿಗಳು ಸರ್ಕಾರದ ಕೆಲಸಗಳಲ್ಲಿ ಬಿಕ್ಕಟ್ಟು ಸೃಷ್ಟಿಸಿದರು. ಜವಹರಲಾಲ್ ಕರೆದ ಸಭೆಗಳಲ್ಲಿ ಭಾಗವಹಿಸುತ್ತಿರಲಿಲ್ಲ. ಅವರೇ ಪ್ರತ್ಯೇಕವಾಗಿ ಲಿಯಾಖತ್ ಆಲಿ ಖಾನ್ ನಾಯಕತ್ವದಲ್ಲಿ ಸಭೆ ಸೇರುತ್ತಿದ್ದರು. ಉಪಾಧ್ಯಕ್ಷರಾದ ನೆಹರುಗೆ ಕೊಡಬೇಕಾದ ಮರ್ಯಾದೆಯನ್ನು ಕೊಡುತ್ತಿರಲಿಲ್ಲ. ಸರ್ಕಾರದಲ್ಲಿದ್ದ ಮುಸ್ಲಿಂ ಅಧಿಕಾರಿಗಳು ತಾವು ಮುಸ್ಲಿಂ ಲೀಗ್‌ನ ಕಾವಲುಗಾರರಂತೆ ವರ್ತಿಸುತ್ತಿದ್ದರು ಮತ್ತು ಅವರ ಪರವಾಗಿ ಕೆಲಸ ಮಾಡುತ್ತಿದ್ದರು. ಶಾಸನ ಸಭೆಯಲ್ಲಿ ಲೀಗ್ ಸದಸ್ಯರು ಕಾಂಗ್ರೆಸ್ ಮಂತ್ರಿಗಳನ್ನೇ ಟೀಕಿಸುತ್ತಿದ್ದರು. ಸರ್ಕಾರದ ಮೇಲೆ ಕಾಂಗ್ರೆಸ್ ಹಿಡಿತ ಕುಗ್ಗತೊಡಗಿತು. ಒಟ್ಟಿನಲ್ಲಿ ಮಧ್ಯಂತರ ಸರ್ಕಾರದಲ್ಲಿ ಮುಸ್ಲಿಂ ಲೀಗ್‌ಗೆ ಅವಕಾಶ ಕೊಟ್ಟದ್ದು 'ಬೀದಿಯಲ್ಲಿ ಹೋಗುವ ಮಾರಮ್ಮನನ್ನು ಮನೆ ಹೊಕ್ಕು ಹೋಗು' ಅಂದಹಾಗಾಯಿತು.

೧೯೪೬ರ ನವೆಂಬರ್ ಅಂತ್ಯದಲ್ಲಿ ಕಾಂಗ್ರೆಸ್ ವಾರ್ಷಿಕ ಅಧಿವೇಶನ ಮೀರತ್‌ನಲ್ಲಿ ನಡೆದು ಜೆ.ಬಿ. ಕೃಪಲಾನಿ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟರು. ಆ ಅಧಿವೇಶನವು, ಮುಸ್ಲಿಂ ಲೀಗ್ ಸಂವಿಧಾನ ರಚನಾ ಸಭೆಯನ್ನು ಬಹಿಷ್ಕರಿಸಿದರೆ, ಕಾಂಗ್ರೆಸ್ಸು ಮಧ್ಯಂತರ ಸರ್ಕಾರದಿಂದ ಹೊರಬರಬೇಕೆಂದು ತೀರ್ಮಾನಿಸಿತು. ಪಟೇಲರು 'ಕತ್ತಿಯನ್ನು ಕತ್ತಿಯಿಂದ ಎದುರಿಸಲಾಗುವುದು' ಎಂದು ಗುಡುಗಿದರು.[೨೫೬]

(ಮಹಾತ್ಮ ಗಾಂಧೀಜಿಯ ಅಹಿಂಸೆಯನ್ನು ಬದಿಗೊತ್ತಿ ಪಟೇಲರು ಈ ರೀತಿ ಗುಡುಗಿದ್ದು ಆಗ ಅತ್ಯವಶ್ಯಕವಾಗಿತ್ತು. ಅದು ಅವರ ಕಾರ್ಯಸಾಧು ಮನೋಭಾವಕ್ಕೆ ಸಾಕ್ಷಿ. ಎಲ್ಲಾ ಸಂದರ್ಭಗಳಲ್ಲೂ ಕುರುಡಾಗಿ ಅಹಿಂಸೆಯ ಆಚರಣೆ ಸಾಧ್ಯವಿಲ್ಲ – ಎನ್ನುವುದನ್ನು ಗಮನಿಸಬೇಕು – ಲೇಖಕ).

ಮುಸ್ಲಿಂ ಲೀಗ್ ಅನ್ನು ಮಧ್ಯಂತರ ಸರ್ಕಾರಕ್ಕೆ ಸೇರಿಸಿಕೊಳ್ಳಲು ಮಾತುಕತೆ ನಡೆಯುವಾಗಲೇ ಅವರು ನೇರ ಕ್ರಮವನ್ನು ಕೈಬಿಡಬೇಕೆಂಬ ಶರತ್ತನ್ನು ವೈಸ್‌ರಾಯ್ ಜಿನ್ನಾಗೆ ವಿಧಿಸಬೇಕಾಗಿತ್ತು. ಆದರೆ ವೈಸ್‌ರಾಯ್ ಹಾಗೆ ಮಾಡಲಿಲ್ಲ. ಅದರ

ಫಲವಾಗಿ ಮುಸ್ಲಿಮರು ನೇರ ಕ್ರಮವನ್ನು ಮತ್ತೆ ೧೯೪೬ರ ಅಕ್ಟೋಬರ್ ೧೦ರಂದು ಶುರು ಮಾಡಿದರು.

೧೪.೮ ಮತ್ತೆ ನರಮೇಧ

ಕಲ್ಕತ್ತದಲ್ಲಿ ಆಗಸ್ಟ್ ೧೬ರಂದು ಆರಂಭವಾದ ಹತ್ಯಾಕಾಂಡವನ್ನು ಮುಸ್ಲಿಂ ಲೀಗ್ ಆರಂಭಿಸಿತಾದರೂ ಹಿಂದುಗಳು ಎರಡು ದಿನಗಳ ಹೊಡೆತ ತಿಂದಮೇಲೆ, ಅಪಾರ ಪ್ರಾಣಹಾನಿ, ಮಾನಹಾನಿ, ಆಸ್ತಿ ಹಾನಿ ಅನುಭವಿಸಿದ ಮೇಲೆ ತಿರುಗಿಬಿದ್ದುದರಿಂದ ಅಂತಿಮವಾಗಿ ಜಾಸ್ತಿ ಹೊಡೆತ ಬಿದ್ದದ್ದು ಮುಸ್ಲಿಮರಿಗೇ. ಲೇಖಕ ಬಾಲರಾಜ್ ಕೃಷ್ಣರವರ ಪ್ರಕಾರ (ಪುಟ ೨೫೪) ಹತ್ಯೆಯಾದ ಸುಮಾರು ೬೦೦೦ ಮಂದಿಯ ಪೈಕಿ ೪೫೦೦ ಮಂದಿ ಮುಸ್ಲಿಮರಾಗಿದ್ದರು. ಇತರ ೧೫೦೦ ಮಂದಿ ಹಿಂದೂಗಳಾಗಿದ್ದರು. ಅದರಿಂದ ಬಂಗಾಳ ಪ್ರಧಾನಮಂತ್ರಿ ಸುಹ್ರವರ್ದಿಗೆ ತನ್ನ ಜನಾಂಗದವರ ಮುಂದೆ ಮರ್ಯಾದೆ ಹೋಗಿತ್ತು. ಮುಸ್ಲಿಂ ನಾಯಕರು ಕಲ್ಕತ್ತ ಘಟನೆಗೆ ಪ್ರತಿಯಾಗಿ ಹಿಂದೂಗಳ ಮೇಲೆ ಸೇಡು ತೀರಿಸಿಕೊಳ್ಳಲು ಹಾತೊರೆದರು. ಆದರೆ ಅಂತಹ ಕೆಲಸ ಹಿಂದೂಗಳು ಅಲ್ಪ ಸಂಖ್ಯಾತರಾಗಿರುವ ಸ್ಥಳದಲ್ಲಿ ಮಾತ್ರ ಸಾಧ್ಯ. ಪೂರ್ವ ಬಂಗಾಳದ ನೌಖಾಲಿ ಅಂತಹ ಒಂದು ಸ್ಥಳವಾಗಿತ್ತು. ಅಲ್ಲಿ ಶೇ. ೮೧ರಷ್ಟು ಮುಸ್ಲಿಮರು ಮತ್ತು ಶೇ. ೧೯ರಷ್ಟು ಹಿಂದೂಗಳು ಇದ್ದರು. ಅಲ್ಲಿ ೧೯೪೬ರ ಅಕ್ಟೋಬರ್ ೧೦ರಂದು ಬಹು ಸಂಖ್ಯಾತರಾದ ಮುಸ್ಲಿಮರು ಅಲ್ಪ ಸಂಖ್ಯಾತರಾದ ಹಿಂದೂಗಳ ಮೇಲೆ ಹದ್ದುಗಳಂತೆ ಎರಗಿದರು. ವ್ಯವಸ್ಥಿತವಾದ ಮತ್ತು ಶಸ್ತ್ರಧಾರಿಗಳಾದ ಮುಸ್ಲಿಮರ ಗುಂಪುಗಳು ಹಿಂದೂಗಳ ಮನೆಗಳ ಮೇಲೆ ಆಕ್ರಮಣ ಮಾಡಿ ಹಿಂದೂಗಳನ್ನು ಹತ್ಯೆ ಮಾಡಿದರು. ಮನೆಗಳನ್ನು ಸುಟ್ಟರು, ಮಹಿಳೆಯರ ಮಾನಭಂಗ ಮಾಡಿದರು, ಲೂಟಿ ಮಾಡಿದರು ಮತ್ತು ಬಲಾತ್ಕಾರದಿಂದ ಮತಾಂತರಗೊಳಿಸಿದರು. ಅನೇಕ ಬಾರಿ ಮೌಲಾನಾಗಳು ಮತ್ತು ಮೌಲ್ವಿಗಳು ಸಹ ಜೊತೆಯಲ್ಲಿದ್ದು ಹತ್ಯೆಕಾರರನ್ನು ಪ್ರೇರೇಪಿಸುತ್ತಿದ್ದರು.[೨೫೭] ಗಾಂಧೀಜಿ ಅಲ್ಲಿಗೆ ಧಾವಿಸಿ ಹಿಂದೂ ಮುಸ್ಲಿಂ ಮೈತ್ರಿ ಸ್ಥಾಪಿಸಲು ಯತ್ನಿಸಿದರು.

ಅನೇಕ ಬಿಹಾರಿಗಳು ಬಂಗಾಳದಲ್ಲಿ ಕೆಲಸ ಮಾಡುತ್ತಿದ್ದರು. ಈ ಬಿಹಾರಿಗಳು ತಮ್ಮ ರಾಜ್ಯಕ್ಕೆ ಓಡಿ ಹೋದರು. ಅವರು ಕಲ್ಕತ್ತ ನೌಖಾಲಿ ಮುಂತಾದ ಕಡೆ ನಡೆದ ಹತ್ಯಾಕಾಂಡದ ಸುದ್ದಿಯನ್ನು ಹರಡಿದರು. ಬಂಗಾಳದ ಘಟನೆಗಳಿಂದ ಉದ್ರಿಕ್ತರಾದ ಜನ ಬಿಹಾರದಲ್ಲಿ ಮುಸ್ಲಿಮರ ಮೇಲೆ ಎರಗಿದರು. ಅಲ್ಲಿ ಮುಸ್ಲಿಮರು ಅಲ್ಪ ಸಂಖ್ಯಾತರಾಗಿದ್ದುದರಿಂದ ಭಾರಿ ಕಷ್ಟ ನಷ್ಟ ಪ್ರಾಣಹಾನಿಯನ್ನು ಅನುಭವಿಸಬೇಕಾಯಿತು. ರಾಜಮೋಹನ ಗಾಂಧಿಯವರ ಪ್ರಕಾರ (ಪುಟ ೩೭೮)

ಸುಮಾರು ೭೦೦೦ ಮಂದಿ ಮುಸ್ಲಿಮರು ಹತರಾದರು. ಪಟೇಲ್, ನೆಹರು, ಲಿಯಾಖತ್ ಮತ್ತು ನಿಷ್ತರ್ ಒಟ್ಟಿಗೆ ಬಿಹಾರಕ್ಕೆ ಹಾರಿದರು. ಡಾ॥ ರಾಜೇಂದ್ರ ಪ್ರಸಾದ್ ಮತ್ತು ಕೃಪಲಾನಿಯವರೂ ಸಹ ಬಿಹಾರಕ್ಕೆ ಹೋದರು. ಎಲ್ಲರೂ ಅಲ್ಲಿ ಶಾಂತಿ ಸ್ಥಾಪನೆಗೆ ಯತ್ನಿಸಿದರು. ಮುಂದೆ ಗಾಂಧೀಜಿಯೂ ಅಲ್ಲಿಗೆ ಬಂದರು.

ಆದರೆ ಹಿಂಸಾಚಾರ ಹರಡುವುದು ನಿಲ್ಲಲಿಲ್ಲ. ನವೆಂಬರ್ ೮ರಂದು ಪಶ್ಚಿಮ ಸಂಯುಕ್ತ ಪ್ರಾಂತ್ಯದ (Western U.P.) ಗಡಮುಕ್ತೇಶ್ವರ್‌ನಲ್ಲಿ ಸುಮಾರು ೧೦೦೦ ಮಂದಿ ಮುಸ್ಲಿಮರು ಕೊಲ್ಲಲ್ಪಟ್ಟರು.[೨೫೮]

೧೪.೯ ಕ್ಲೆಮೆಂಟ್ ಆಟ್ಲಿ ಬಿತ್ತಿದ ಬೀಜ

ಸಂವಿಧಾನ ರಚನಾ ಸಭೆಗೆ ಜುಲೈ – ಆಗಸ್ಟ್ ೧೯೪೬ರಲ್ಲಿ ಚುನಾವಣೆ ನಡೆದು ಒಟ್ಟು ೨೯೬ ಸ್ಥಾನಗಳ ಪೈಕಿ ಕಾಂಗ್ರೆಸ್ಸು ೨೦೮ ಸ್ಥಾನಗಳನ್ನು ಮುಸ್ಲಿಂ ಲೀಗ್ ೭೩ ಸ್ಥಾನಗಳನ್ನು ಗಳಿಸಿದುವು. ಅದು ನಡೆದದ್ದು ಕ್ಯಾಬಿನೆಟ್ ಮಿಷನ್‌ನ ಮೇ ೧೬ ಸೂತ್ರದ ಪ್ರಕಾರ. ಮುಸ್ಲಿಂ ಲೀಗ್ ಮೇ ೧೬ರ ಸೂತ್ರವನ್ನು ಮೊದಲು ಒಪ್ಪಿ ಆ ನಂತರ ತನ್ನ ಒಪ್ಪಿಗೆಯನ್ನು ಹಿಂತೆಗೆದುಕೊಂಡಿದ್ದನ್ನು ಹಿಂದೆಯೇ ಹೇಳಿದೆ. ತನ್ನ ಒಪ್ಪಿಗೆಯನ್ನು ಹಿಂತೆಗೆದುಕೊಂಡ ಜಿನ್ನಾ, ಸಂವಿಧಾನ ರಚನಾ ಸಭೆಯನ್ನು 'ಮುಸ್ಲಿಂ ಲೀಗ್' ಬಹಿಷ್ಕರಿಸುವುದೆಂದು ಪ್ರಕಟಿಸಿದನು. ಅದರಿಂದ ವೈಸ್‌ರಾಯ್ ಸಂವಿಧಾನ ರಚನಾ ಸಭೆಯನ್ನು ಕರೆಯಲೇ ಇಲ್ಲ. ಮುಸ್ಲಿಂ ಲೀಗ್ ಮಂತ್ರಿಮಂಡಲವನ್ನು ಸೇರಿದ ಮೇಲೆ, 'ಮೇ ೧೬ರ ಸೂತ್ರಕ್ಕೆ ಒಪ್ಪಿಗೆ ಪಡೆಯಿರಿ' ಎಂದು ಪಟೇಲ್ ಮತ್ತು ನೆಹರು ವೈಸ್‌ರಾಯ್‌ನನ್ನು ಒತ್ತಾಯಿಸ ತೊಡಗಿದರು. ಅದಕ್ಕೆ ಪ್ರತಿಯಾಗಿ ಜಿನ್ನಾನು, ಪ್ರಾಂತ್ಯಗಳ ಖಡ್ಡಾಯ ಗುಂಪು ರಚನೆಗೆ ಕಾಂಗ್ರೆಸ್ಸಿನ ಒಪ್ಪಿಗೆ ಪಡೆಯಿರಿ ಎಂದು ವೈಸ್‌ರಾಯ್‌ನನ್ನು ಒತ್ತಾಯ ಪಡಿಸಿದನು. ಖಡ್ಡಾಯ ಗುಂಪು ರಚನೆಗೆ ಒಪ್ಪಿದರೆ ಅಸ್ಸಾಂನಲ್ಲಿ ಹಿಂದೂಗಳು ಬಹು ಸಂಖ್ಯಾತರಾಗಿದ್ದರು. ಅವರು ಅಲ್ಪ ಸಂಖ್ಯಾತ ಮುಸ್ಲಿಮರ ಅಧೀನಕ್ಕೆ ಒಳಪಡುತ್ತಿದ್ದರು. ಅದರಿಂದ ಕಾಂಗ್ರೆಸ್ಸು ಖಡ್ಡಾಯ ಗುಂಪು ರಚನೆಯನ್ನು ವಿರೋಧಿಸುತ್ತಿತ್ತು. ೧೯೪೬ ನವೆಂಬರ್ ಅಂತ್ಯದಲ್ಲಿ ಮೀರತ್‌ನಲ್ಲಿ ನಡೆದ ಕಾಂಗ್ರೆಸ್ ವಾರ್ಷಿಕ ಅಧಿವೇಶನವು 'ಮುಸ್ಲಿಂ ಲೀಗ್ ಸಂವಿಧಾನ ರಚನಾ ಸಭೆಯನ್ನು ಬಹಿಷ್ಕರಿಸಿದರೆ ಕಾಂಗ್ರೆಸ್ಸು ಮಧ್ಯಂತರ ಸರ್ಕಾರದಿಂದ ಹೊರಬರಬೇಕೆಂದು' ತೀರ್ಮಾನಿಸಿತ್ತು. ಕಾಂಗ್ರೆಸ್ಸು ಸರ್ಕಾರದಿಂದ ಹೊರ ನಡೆದು ಸಂದಿಗ್ಧ ಪರಿಸ್ಥಿತಿ ಉಂಟಾಗುವುದು ಲಂಡನ್ ಸರ್ಕಾರಕ್ಕೆ ಇಷ್ಟವಿರಲಿಲ್ಲ. ಏಕೆಂದರೆ ಅದು ಅಧಿಕಾರವನ್ನು ಹಸ್ತಾಂತರಿಸಿ ಹೊರಡುವುದನ್ನು ಇನ್ನಷ್ಟು ಜಟಿಲವಾಗಿಸುತ್ತಿತ್ತು.[೨೬೦]

ಈ ಬಿಕ್ಕಟ್ಟಿನ ಪರಿಹಾರಕ್ಕಾಗಿ ಲಂಡನ್ ಸರ್ಕಾರವು ವೇವೆಲ್, ನೆಹರು, ಪಟೇಲ್, ಜಿನ್ನಾ, ಲಿಯಾಖತ್ ಆಲಿ ಖಾನ್ ಮತ್ತು ಬಲದೇವ್ ಸಿಂಗ್ ಅವರನ್ನು ಲಂಡನ್‌ಗೆ ಆಹ್ವಾನಿಸಿತು. ಪಟೇಲರು 'ಲಂಡನ್‌ಗೆ ಹೋಗಬೇಡಿ' ಎಂದು ನೆಹರುಗೆ ಹೇಳಿದರು. ಅಲ್ಲಿ ಹೋಗಿ ಸಿಕ್ಕಿಹಾಕಿಕೊಂಡರೆ ಬಲೆಯೊಳಗೆ ಸಿಕ್ಕಿಕೊಂಡಂತಾಗುತ್ತಿತ್ತು. ಆದರೂ ನೆಹರು ಲಂಡನ್‌ಗೆ ಹೋದರು. ಸ್ವತಃ ಆಟ್ಲಿಯವರು ನೆಹರುವನ್ನು ಆಹ್ವಾನಿಸಿದ್ದರಿಂದ ದಾಕ್ಷಿಣ್ಯಕ್ಕೊ ಅಥವಾ ಅಸೌಜನ್ಯತೆ ಆಗಬಾರದೆಂದೊ ನೆಹರು ಹೋದರು.

(ರಾಷ್ಟ್ರದ ಕೆಲಸದಲ್ಲಿ ದಾಕ್ಷಿಣ್ಯ ಅನ್ನುವುದು ಇರಬಾರದು. ಅದಕ್ಕೆ ಬಲಿಯಾದರೆ ಭಾರಿ ಅಪಾಯ. – ಲೇಖಕ)

೧೯೪೬ರ ಡಿಸೆಂಬರ್ ೬ರಂದು ಲಂಡನ್‌ನಲ್ಲಿ ಪ್ರಧಾನಮಂತ್ರಿ ಕ್ಲೆಮೆಂಟ್ ಆಟ್ಲಿ ಯಾರಿಗೂ ಮಾತನಾಡಲು ಅಥವಾ ಅಭಿಪ್ರಾಯವನ್ನು ವ್ಯಕ್ತ ಪಡಿಸಲು ಅವಕಾಶ ಕೊಡದೆ, ನ್ಯಾಯಾಲಯದಲ್ಲಿ ನ್ಯಾಯಾಧೀಶ ತೀರ್ಪು ಪ್ರಕಟಿಸುವ ತರಹ, ತನ್ನ ಮುಂದಿನ ಯೋಜನೆಯನ್ನು ಪ್ರಕಟಿಸಿದನು: ಅದರ ಮುಖ್ಯವಾದ ಎರಡು ಅಂಶಗಳು:

೧. ಅಸ್ಸಾಂ ಮುಸ್ಲಿಂ ಗುಂಪನ್ನು ಸೇರಲು ಇಷ್ಟ ಪಡದೇ ಇದ್ದರೂ, ಬಂಗಾಳವು ಮುಸ್ಲಿಂ ಗುಂಪನ್ನು ಅಸ್ಸಾಂ ಸೇರಬೇಕೆಂದು ಮತ ಚಲಾಯಿಸಿ ತೀರ್ಮಾನಿಸಬಹುದು. ಹಾಗೆಯೆ, ಸಿಂದ್ ಮತ್ತು ವಾಯುವ್ಯ ಗಡಿ ನಾಡುಗಳು ಪಂಜಾಬ್‌ನ ನಾಯಕತ್ವದ ಗುಂಪನ್ನು ಸೇರುವಂತೆ ಬಲಾತ್ಕರಿಸಬಹುದು.

೨. ಭಾರತದ ಜನಸಂಖ್ಯೆಯ ಒಂದು ದೊಡ್ಡ ವಿಭಾಗವು ಪ್ರತಿನಿಧಿಸಿಲ್ಲದ ಸಂವಿಧಾನ ರಚನಾ ಸಭೆ ರಚಿಸಿದ ಸಂವಿಧಾನವನ್ನು ಇಷ್ಟಪಡದ ವಿಭಾಗಗಳ ಮೇಲೆ ಹೇರುವ ಹಾಗಿಲ್ಲ.

ಈ ಎರಡು ಅಂಶಗಳು ಭಾರತೀಯರ ಹಿತಕ್ಕೆ ವಿರುದ್ಧವಾಗಿದ್ದುವು. ಎರಡನೆಯ ಅಂಶವಂತೂ ಪಾಕಿಸ್ತಾನದ ರಚನೆಗೆ ಪ್ರೋತ್ಸಾಹ ನೀಡುತ್ತಿತ್ತು. ಡಿಸೆಂಬರ್ ೧೦ರಂದು ಸರ್ದಾರರು ಹಂಗಾಮಿ ವೈಸ್‌ರಾಯ್ ಕೋಲ್‌ವಿಲ್‌ಗೆ 'ಪಾಕಿಸ್ತಾನದ ರಚನೆಗೆ ನೀಡಿದ ಈ ಪ್ರೋತ್ಸಾಹ ಒಂದು ಮೋಸ ಮತ್ತು ಆಟ್ಲಿಯವರ

ಮಾರ್ಚ್ ೧೯೪೬ರ ಹೇಳಿಕೆಗೆ ವಿರುದ್ಧವಾಗಿದೆ ಎಂದು ತಿಳಿಸಿದರು. ಆಟ್ಲಿಯವರು ಮಾರ್ಚ್ ೧೯೪೬ರಂದು, "ಬಹು ಸಂಖ್ಯಾತರ ಏಳ್ಗೆಗೆ ಅಲ್ಪ ಸಂಖ್ಯಾತರು ತಡೆಯೊಡ್ಡಲು ಅವಕಾಶವನ್ನು ನಾವು ಕೊಡಲು ಸಾಧ್ಯವಿಲ್ಲ" ಎಂದು ಹೇಳಿದ್ದರು. ಮುಂದುವರೆದು ಪಟೇಲರು ಹಂಗಾಮಿ ವೈಸ್‌ರಾಯ್‌ಗೆ ಹೀಗೆ ಹೇಳಿದರು, "ಭಾರತವನ್ನು ಬಿಟ್ಟುಹೋಗಬೇಕೆಂದು ಬ್ರಿಟನ್ನು ನಿಜವಾಗಿಯೂ ಬಯಸಿದ್ದರೆ ಲಂಡನ್ ಸರ್ಕಾರವು ತಾವು ಬಿಟ್ಟುಹೋಗುವುದಕ್ಕೆ ಒಂದು ತಾರೀಖನ್ನು ನಿಗದಿಪಡಿಸಬೇಕು, ಆಗ ಜಿನ್ನಾ ರಾಜಿಮಾಡಿಕೊಳ್ಳಬೇಕಾಗುತ್ತದೆ." ಪಟೇಲರು ೧೯೪೮ರ ಜನವರಿ ೧ನೇ ತಾರೀಖನ್ನು ಸೂಚಿಸಿದರು.[೨೬೧]

ಲಂಡನ್‌ನಲ್ಲಿ ಆಟ್ಲಿ ಪ್ರಶಸ್ತಿ ಪ್ರಕಟಿಸಿದ ಮೂರು ದಿನಗಳ ನಂತರ, ೧೯೪೬ರ ಡಿಸೆಂಬರ್ ೯ರಂದು ಸಂವಿಧಾನ ರಚನಾ ಸಭೆ ತನ್ನ ಮೊದಲ ಅಧಿವೇಶನವನ್ನು ಆರಂಭಿಸಿತು. ಮುಸ್ಲಿಂ ಲೀಗ್ ಅದರಲ್ಲಿ ಭಾಗವಹಿಸಲಿಲ್ಲ. ದೇಶೀಯ ರಾಜ್ಯಗಳ ಅರಸರು ತಮ್ಮ ಸ್ಥಾನಗಳನ್ನು ಭರ್ತಿಮಾಡಿರಲಿಲ್ಲ. ಅವರು ಸ್ವತಂತ್ರವಾಗಿರಲು ಹವಣಿಸಿದ್ದರು. ಲಂಡನ್ ಪ್ರಶಸ್ತಿಯು 'ಸಂವಿಧಾನ ರಚನಾ ಸಭೆಯ ತೀರ್ಮಾನಗಳನ್ನು ದೇಶದ ಇಷ್ಟವಿಲ್ಲದ ಭಾಗಗಳ ಮೇಲೆ ಬಲಾತ್ಕಾರವಾಗಿ ಹೇರುವ ಹಾಗಿಲ್ಲ' ಎಂದು ಸ್ಪಷ್ಟವಾಗಿ ಹೇಳಿತ್ತು. ಆ ಮಾತಿನಿಂದ ಲಂಡನ್ ಸರ್ಕಾರವು ಪಾಕಿಸ್ತಾನ ಮತ್ತು ಸ್ವತಂತ್ರ ಅರಸರ ರಾಜ್ಯಗಳಿಗೆ ಒಪ್ಪಿಗೆ ನೀಡಿದಂತಾಗಿತ್ತು. ನೌಕಾಲಿಯಲ್ಲಿದ್ದ ಗಾಂಧೀಜಿ ಆ ಪ್ರಶಸ್ತಿಯನ್ನು ತಿರಸ್ಕರಿಸುವಂತೆ ಸೂಚಿಸಿದರು. ಆದರೆ ಪಟೇಲ್ ಮತ್ತು ನೆಹರು ಅವರ ಸಲಹೆಯನ್ನು ಒಪ್ಪಲಿಲ್ಲ. ಪ್ರಶಸ್ತಿಯನ್ನು ನಿರಾಕರಿಸಿದರೆ ಕಾಂಗ್ರೆಸ್ಸು ಮಧ್ಯಂತರ ಸರ್ಕಾರ ಮತ್ತು ಸಂವಿಧಾನ ರಚನಾ ಸಭೆಯಲ್ಲಿ ಇರುವ ಹಾಗಿರಲಿಲ್ಲ.

ಲಂಡನ್ ಪ್ರಶಸ್ತಿ ಅವರಿಗೆ ಅನುಕೂಲಕರವಾಗಿ ಬಂದ ಮೇಲೂ ಮುಸ್ಲಿಂ ಲೀಗ್ ಮೇ ೧೬ರ ಸೂತ್ರವನ್ನು ಒಪ್ಪಲು ನಿರಾಕರಿಸಿತು. ಅದರಿಂದ ಪಟೇಲ್ ಮತ್ತು ನೆಹರು ಲೀಗ್ ಮಂತ್ರಿಗಳನ್ನು ವಜಾ ಮಾಡಬೇಕೆಂದು ವೈಸ್‌ರಾಯ್‌ನನ್ನು ಆಗ್ರಹಿಸಿದರು. ವೇವೆಲ್ ಅದಕ್ಕೆ ಒಪ್ಪದೆ ಇದ್ದುದರಿಂದ ಎಲ್ಲಾ ಕಾಂಗ್ರೆಸ್ ಮಂತ್ರಿಗಳು ರಾಜಿನಾಮೆ ನೀಡುವುದಾಗಿ ಸೂಚಿಸಿದರು. ಪಟೇಲ್‌ರವರು ಒಂದು ಪತ್ರಿಕಾ ಗೋಷ್ಠಿಯಲ್ಲಿ "ಲೀಗ್ ಹೊರ ಹೋಗದೆ ಹೋದರೆ ನಾವು ಹೊರ ಹೋಗುತ್ತೇವೆ," ಎಂದು ಪ್ರಕಟಿಸಿದರು.[೨೬೨] ಅಷ್ಟರಲ್ಲೆ ಅವರು ತಮ್ಮ ನಿರ್ಧಾರವನ್ನು ಬದಲಾಯಿಸಬೇಕಾದಂತಹ ಒಂದು ಬೆಳವಣಿಗೆ ನಡೆಯಿತು.

೧೪.೧೦ ಫೆಬ್ರುವರಿ ೨೦ರ ಘೋಷಣೆ

ಎರಡು ಪಕ್ಷಗಳಿಗೂ ಆಘಾತ ಚಿಕಿತ್ಸೆ ಕೊಟ್ಟರೆ ಅವರು ಒಮ್ಮತಕ್ಕೆ ಬರಬಹುದೆಂದು ಭಾವಿಸಿ, ೧೯೪೭ರ ಫೆಬ್ರುವರಿ ೨೦ರಂದು ಬ್ರಿಟನ್ ಪ್ರಧಾನಮಂತ್ರಿ ಕ್ಲೆಮೆಂಟ್ ಆಟ್ಲಿ ಒಂದು ಮಹತ್ತರವಾದ ಘೋಷಣೆಯನ್ನು ಮಾಡಿದರು. ೧೯೪೮ರ ಜೂನ್ ಒಳಗೆ ಬ್ರಿಟನ್ ಭಾರತವನ್ನು ಬಿಟ್ಟು ಹೊರಡುವುದಾಗಿ ಅವರು ಘೋಷಿಸಿದರು. ಅಂದರೆ ದೇಶಕ್ಕೆ ಸ್ವಾತಂತ್ರ್ಯ ಬರುವುದಕ್ಕೆ ಅತಿ ಹೆಚ್ಚು ಅಂದರೆ ೧೬ ತಿಂಗಳು ಮಾತ್ರ ಕಾಯಬೇಕು ಎನ್ನುವುದು ಖಾತರಿಯಾಯಿತು. ಅದರಿಂದ ಭಾರತೀಯರಿಗೆ ಅತಿ ಸಂತೋಷ ಮತ್ತು ರೋಮಾಂಚನ ಉಂಟಾಯಿತು. ಸ್ವಾತಂತ್ರ್ಯವನ್ನು ಗಳಿಸಲು ಇನ್ನೂ ಎಷ್ಟು ಹೋರಾಟಗಳನ್ನು ನಡೆಸಬೇಕೊ ಎಂದು ಅಂದುಕೊಂಡಿದ್ದ ಜನತೆ ಮತ್ತು ನಾಯಕರು ನಿಟ್ಟುಸಿರು ಬಿಟ್ಟರು. ಅವರ ಮುಖದಲ್ಲಿ ತೃಪ್ತಿ ಮತ್ತು ಮಂದಹಾಸ ಮೂಡಿತು.

ಅದು ಒಂದು ಕಡೆಯಾದರೆ, ಮತ್ತೊಂದು ಕಡೆ ಆಟ್ಲಿಯ ಘೋಷಣೆಯ ಮುಂದಿನ ಭಾಗ ಆ ಸಂತೋಷವನ್ನು ಕೊಂಚ ಕಡಿಮೆ ಮಾಡಿತು. ಪ್ರಧಾನಿ ಆಟ್ಲಿಯು, 'ಆ ತಾರೀಖಿನ ಒಳಗೆ (೧೯೪೮ರ ಜೂನ್ ಒಳಗೆ) ಸಂವಿಧಾನವನ್ನು ರಚಿಸಲು ಸಂವಿಧಾನ ರಚನಾ ಸಭೆಯು ವಿಫಲವಾದರೆ ಬ್ರಿಟಿಷ್ ಇಂಡಿಯಾದ ಕೇಂದ್ರ ಸರ್ಕಾರದ ಅಧಿಕಾರಗಳನ್ನು ಯಾರಿಗೆ ಹಸ್ತಾಂತರಿಸಬೇಕು, ಯಾವುದಾದರು ವಿಧದ ಕೇಂದ್ರ ಸರ್ಕಾರಕ್ಕೆ ಪೂರ್ಣ ಹಸ್ತಾಂತರಿಸಬೇಕೆ ಅಥವಾ ಅತ್ಯಂತ ಯುಕ್ತ ಎಂದು ಕಂಡುಬರುವ ಮತ್ತು ಭಾರತೀಯರ ಹಿತದೃಷ್ಟಿಯಿಂದ ಅತ್ಯಂತ ಉತ್ತಮವಾದ ಬೇರೆ ಯಾವುದಾದರೂ ವಿಧಾನದಲ್ಲಿ ಹಸ್ತಾಂತರಿಸಬೇಕೆ – ಅನ್ನುವುದನ್ನು ಪರಿಗಣಿಸಬೇಕಾಗುತ್ತದೆ' ಎಂದು ಪ್ರಕಟಿಸಿದ್ದರು. ಅದರ ಜೊತೆಗೆ, ಲಾರ್ಡ್ ವೇವೆಲ್ಲನ ಸ್ಥಾನದಲ್ಲಿ ಲಾರ್ಡ್ ಮೌಂಟ್‌ಬ್ಯಾಟನ್‌ರವರನ್ನು ಭಾರತದ ವೈಸ್‌ರಾಯ್ ಆಗಿ ನಿಯಮಿಸುವುದಾಗಿ ಆಟ್ಲಿ ಪ್ರಕಟಿಸಿದರು.[೨೬೩]

ಆಟ್ಲಿಯ ಪ್ರಕಟಣೆ 'ಸಂವಿಧಾನ ಸಭೆಯು ಎಲ್ಲಾ ಪ್ರದೇಶಗಳ ಪ್ರತಿನಿಧಿಗಳನ್ನು ಒಳಗೊಂಡು ಕಾರ್ಯನಿರ್ವಹಿಸದೇ ಹೋದರೆ ಆಗ ಯಾವ ಪ್ರದೇಶಗಳ ಪ್ರತಿನಿಧಿಗಳು ಒಟ್ಟಿಗೆ ಕೆಲಸ ಮಾಡಲು ಇಷ್ಟ ಪಡುತ್ತಾರೋ ಆ ಪ್ರದೇಶಗಳು ಕೇಂದ್ರ ಸರ್ಕಾರದ ಅಡಿಯಲ್ಲಿ ಬರುತ್ತವೆ ಮತ್ತು ಉಳಿದ ಪ್ರದೇಶಗಳು ಆಗ ಇರುವ ವಿವಿಧ ಪ್ರಾಂತ್ಯ ಸರ್ಕಾರಗಳಿಗೆ ನೀಡಲ್ಪಡುತ್ತವೆ,' ಎಂದು ಹೇಳಿತ್ತು. ಮುಸ್ಲಿಂ ಲೀಗ್ ತಾನು ಸಂವಿಧಾನ ರಚನಾ ಸಭೆಯಲ್ಲಿ ಭಾಗವಹಿಸುವುದಿಲ್ಲವೆಂದು ಸ್ಪಷ್ಟವಾಗಿ ಹೇಳಿದ್ದುದರಿಂದ, ಬ್ರಿಟನ್‌ನ ಇಂಗಿತ ದೇಶವನ್ನು ವಿಭಜಿಸಿ ಹೋಗುವುದು

ಎನ್ನುವುದನ್ನು ಸೂಚಿಸುತ್ತಿತ್ತು. ಅದರಿಂದ ಮುಸ್ಲಿಂ ಲೀಗ್ ಪಾಕಿಸ್ತಾನಕ್ಕಾಗಿ ತನ್ನ ಹೋರಾಟವನ್ನು ಹೆಚ್ಚಿಸಿತು. – ಇದು ಆಟ್ಲಿಯ ಪ್ರಕಟಣೆ ತಂದ ಗಂಡಾಂತರ.

ಆಟ್ಲಿಯವರು ಭಾರತ ಬಿಟ್ಟು ಹೋಗಲು ಒಂದು ಗಡುವನ್ನು ನಿಗದಿ ಪಡಿಸಿದ್ದು ಮತ್ತು ಅಧಿಕಾರವು ನೇರವಾಗಿ ಆಗಿದ್ದ ಪ್ರಾಂತ್ಯ ಸರ್ಕಾರಗಳಿಗೂ ಹೋಗಬಹುದು ಎಂದು ಪ್ರಕಟಿಸಿದ್ದು ಪ್ರಾಂತ್ಯಗಳಲ್ಲಿ ಸರ್ಕಾರವನ್ನು ಹತೋಟಿಗೆ ತೆಗೆದುಕೊಳ್ಳುವುದಕ್ಕಾಗಿ ಹೋರಾಟವನ್ನು ನಡೆಸುವುದಕ್ಕೆ ಮುಸ್ಲಿಂ ಲೀಗ್‌ಗೆ ಪ್ರೇರಣೆ ನೀಡಿತು. ಜಿನ್ನಾ ಪಾಕಿಸ್ತಾನಕ್ಕೆ ಬೇಕೆಂದು ಕೇಳಿದ್ದ ೬ ಪ್ರಾಂತ್ಯಗಳಲ್ಲಿ ಲೀಗ್ ಗಲಾಟೆಯನ್ನು ಆರಂಭಿಸಿತು. ಅವುಗಳ ಪೈಕಿ ಬಂಗಾಳದಲ್ಲಿ ಮತ್ತು ಸಿಂದ್‌ನಲ್ಲಿ ಮುಸ್ಲಿಂ ಲೀಗ್ ಸರ್ಕಾರಗಳೇ ಇದ್ದುವು. ಬಲೂಚಿಸ್ತಾನದ ಬಗೆಗೆ ಮುಸ್ಲಿಂ ಲೀಗ್‌ಗೆ ಯಾವ ಅನುಮಾನವೂ ಇರಲಿಲ್ಲ. ಆದರೆ ಪಂಜಾಬ್‌ನಲ್ಲಿ ಯೂನಿಯನಿಸ್ಟ್ ಪಕ್ಷದ ಮುಸ್ಲಿಂ, ಹಿಂದೂ ಮತ್ತು ಸಿಖ್ಖರ ಸಮ್ಮಿಶ್ರ ಸರ್ಕಾರವಿತ್ತು. ಅಸ್ಸಾಂ ಮತ್ತು ವಾಯುವ್ಯ ಗಡಿನಾಡಿನಲ್ಲಿ ಕಾಂಗ್ರೆಸ್ ಸರ್ಕಾರವಿತ್ತು. ಈ ಮೂರು ಪ್ರಾಂತ್ಯ ಸರ್ಕಾರಗಳನ್ನು ಉರುಳಿಸಲು ಮುಸ್ಲಿಂ ಸಾಮೂಹಿಕ ಹೋರಾಟವನ್ನು ಆರಂಭಿಸಿತು.

ಪಂಜಾಬ್ ಯೂನಿಯನಿಸ್ಟ್ ಪಕ್ಷದ ಖಿಜ಼ಿರ್ ಹಯಾತ್ ಖಾನ್ ಸಮ್ಮಿಶ್ರ ಸರ್ಕಾರದಲ್ಲಿ ಪ್ರಧಾನಮಂತ್ರಿಯಾಗಿದ್ದನು. ಅವನ ಸರ್ಕಾರ ಉರುಳಿಸಲು ಮುಸ್ಲಿಂ ಲೀಗ್ ಹೋರಾಟ ಆರಂಭಿಸಿತು. ಅದು ಹಯಾತ್ ಖಾನ್‌ನನ್ನು ಇಸ್ಲಾಮಿನ ಶತೃಗಳ ಕೈಗೊಂಬೆ ಎಂದು ಆಪಾದಿಸಿತು. ಲೀಗ್‌ನ ಗಂಡಸರು, ಹೆಂಗಸರು ಮತ್ತು ವಿದ್ಯಾರ್ಥಿಗಳ ಗುಂಪು ದಾಂದಲೆ ನಡೆಸಲು ಆರಂಭಿಸಿದರು. ಅವರು ಸರ್ಕಾರಿ ಕಟ್ಟಡಗಳ ಮುಂದೆ ಪಿಕೆಟಿಂಗ್ ನಡೆಸಿದರು. ಲೀಗ್‌ನ ಬಾವುಟವನ್ನು ಹಾರಿಸಿದರು ಮತ್ತು ರೈಲುಗಳ ಸಂಚಾರವನ್ನು ತಡೆದರು. ಪ್ರಧಾನಿ ಖಿಜ಼ಿರ್‌ನ ಅನೇಕ ಅನುಯಾಯಿಗಳು ಮುಸ್ಲಿಂ ಲೀಗ್ ಸೇರಲು ಆರಂಭಿಸಿದರು. ನಿರಾಶನಾದ ಖಿಜಿರ್ ರಾಜಿನಾಮೆ ಇತ್ತನು. ಮಾರನೆಯ ದಿನ ಪಂಜಾಬಿನ ಗೌರ್ನರ್ ಹೊಸ ಸರ್ಕಾರವನ್ನು ರಚಿಸಲು ಮುಸ್ಲಿಂ ಲೀಗ್‌ನ ನಾಯಕ ಮಾಂದಾತ್ ಖಾನ್‌ರನ್ನು ಆಹ್ವಾನಿಸಿದನು. ಅದರಿಂದ ಅಧಿಕಾರ ಹಸ್ತಾಂತರಕ್ಕೆ ಮುನ್ನ ಮುಸ್ಲಿಂ ಲೀಗ್ ಸರ್ಕಾರವನ್ನು ಕೂರಿಸುವುದಕ್ಕಾಗಿ ಖಿಜ಼ಿರ್ ರಾಜಿನಾಮೆ ಇತ್ತಿದ್ದಾನೆಂದು ಕಾಂಗ್ರೆಸ್ ಮತ್ತು ಅಕಾಲಿ ನಾಯಕರು ಭಾವಿಸಿದರು. ಹಾಗಾದರೆ ತಮಗೆ ಗಂಡಾಂತರ ಎಂದು ಭಾವಿಸಿದ ಹಿಂದೂಗಳು ಮತ್ತು ಸಿಕ್ಖರು ೧೯೪೭ ಮಾರ್ಚ್ ೪ರಂದು ಪಂಜಾಬಿನ ರಾಜಧಾನಿ ಲಾಹೋರ್‌ನಲ್ಲಿ ಪ್ರತಿಭಟನಾ ಮೆರವಣಿಗೆ ಮತ್ತು ಸಭೆಗಳನ್ನು ಕೆಲವು ದಿನಗಳಿಗೆ ಮುಂಚೆ ಮುಸ್ಲಿಂ ಲೀಗ್‌ನವರು ನಡೆಸಿದ್ದ ರೀತಿಯಲ್ಲೇ

ನಡೆಸಿದರು. ಮುಸ್ಲಿಂ ಲೀಗ್‌ನವರು ೩೪ ದಿನಗಳ ಕಾಲ ಮೆರವಣಿಗೆ ಮತ್ತು ಸಭೆ ನಡೆಸಿದಾಗ ಸುಮ್ಮನಿದ್ದ ಪೊಲೀಸರು ಈಗ ಹಿಂದೂ ಮತ್ತು ಸಿಕ್ಖರ ಮೇಲೆ ಗುಂಡು ಹಾರಿಸಿ ಅನೇಕರನ್ನು ಕೊಂದರು ಮತ್ತು ಗಾಯಗೊಳಿಸಿದರು. ಹಿಂದೂಗಳ ಮೇಲೆ ಬೀಳಲು ಸಿದ್ಧರಾಗಿದ್ದ ಮುಸ್ಲಿಂ ಲೀಗ್‌ನವರು ಅಮೃತಸರ, ರಾವಲ್ಪಿಂಡಿ, ಮುಲ್ತಾನ್ ಮುಂತಾದ ನಗರಗಳಲ್ಲಿ ಮತ್ತು ಸುತ್ತಲ ಗ್ರಾಮಗಳಲ್ಲಿ ಬಂದೂಕುಗಳನ್ನು ಹಿಡಿದು ನಿರಾಯುಧರಾದ ಹಿಂದೂಗಳು ಮತ್ತು ಸಿಖ್ಖರ ಮೇಲೆ ಎರಗಿ ಮೃಗಗಳಂತೆ ಕೊಂದರು. ಪಶ್ಚಿಮ ಪಂಜಾಬ್ ಧಗ ಧಗನೆ ಉರಿಯಲಾರಂಭಿಸಿತು. ಪಂಜಾಬ್ ಪ್ರಾಂತ್ಯದ ಮುಖ್ಯ ಕಾರ್ಯದರ್ಶಿ ಎ.ಎ. ಮ್ಯಾಕ್ಡೊನಾಲ್ಡ್ ಪ್ರಕಾರ ಮುಸ್ಲಿಂ ಲೀಗ್ ಮಾಡಿದ ಹತ್ಯಾಕಾಂಡದಿಂದ ಹಿಂದೂಗಳು ಮತ್ತು ಸಿಕ್ಖರು ಒಟ್ಟು ೨೦೪೯ ಮಂದಿ ಸತ್ತರು ಮತ್ತು ೧೧೦೩ ಮಂದಿ ತೀವ್ರವಾಗಿ ಗಾಯಗೊಂಡರು.[೨೬೪]

ಈ ಹಿಂಸಾಚಾರದ ತಡೆಗೆ ಕ್ರಮ ಕೈಗೊಳ್ಳಲು ವೈಸ್‌ರಾಯ್ ವೇವೆಲ್ ನಿರಾಕರಿಸಿದನು. ಗೃಹ ಸದಸ್ಯ ಪಟೇಲರು ಏನೂ ಮಾಡುವ ಹಾಗಿರಲಿಲ್ಲ. ಪ್ರಾಂತ್ಯಗಳು ಅವರ ಅಧೀನದಲ್ಲಿ ಇರಲಿಲ್ಲ. ಈ ಹಿಂಸಾಚಾರ ಯಾವ ಘಳಿಗೆಯಲ್ಲಾದರೂ ಪೂರ್ವ ಪಂಜಾಬ್‌ಗೆ ಹರಡುವ ಪರಿಸ್ಥಿತಿ ಉಂಟಾಗಿತ್ತು. ಗೌರ್ನರ್ ಮತ್ತು ಅಧಿಕಾರಿಗಳು ಲೀಗ್ ಪರವಾಗಿ ವರ್ತಿಸುತ್ತಿದ್ದರು.

ಸರ್ದಾರರು, "ಹಿಂಸಾಚಾರವನ್ನು ತಡೆಗಟ್ಟುವ ಶಕ್ತಿ ಇರುವುದು ಆಂಗ್ಲ ಅಧಿಕಾರಿಗಳಿಗೆ, ಆದರೆ ಆ ಕೆಲಸ ಮಾಡಲು ಅವರಿಗೆ ಮನಸ್ಸಿಲ್ಲ. ಅವರಿಗೆ ಆಡಳಿತದಲ್ಲಿ ಏನೂ ಆಸಕ್ತಿ ಇಲ್ಲ. ಅವರು ತೆಪ್ಪಗೆ ಇದ್ದಾರೆ. ಮಧ್ಯಂತರ ಸರ್ಕಾರದಲ್ಲಿ ಒಮ್ಮತವಿಲ್ಲ. ಕಾಂಗ್ರೆಸ್ ಮತ್ತು ಲೀಗ್ ಸದಸ್ಯರು ಪರಸ್ಪರ ಅನುಮಾನಿಸುತ್ತಾರೆ. ಹಿಂಸಾಚಾರವನ್ನು ತಡೆಗಟ್ಟಲು ಅವರು ಸಂಯುಕ್ತ ಕ್ರಮ ಕೈಗೊಳ್ಳುತ್ತಿಲ್ಲ. ಸರ್ಕಾರದ ಆಡಳಿತ ಕುಸಿದು ಬೀಳುತ್ತಿದೆ" ಎಂದು ಆಲೋಚಿಸಿದರು. ಅನೇಕ ಆಂಗ್ಲ ಅಧಿಕಾರಿಗಳು ಲೀಗ್ ಬಗ್ಗೆ ಸಹಾನುಭೂತಿ ಹೊಂದಿರುವುದನ್ನು ಮತ್ತು ಕಾಂಗ್ರೆಸ್ ಮಂತ್ರಿಗಳ ಆಜ್ಞೆಯನ್ನು ಧಿಕ್ಕರಿಸುವುದನ್ನು, ಅಂತಹವರಿಗೆ ವೈಸ್‌ರಾಯ್‌ನ ರಕ್ಷಣೆ ಇರುವುದನ್ನು ಪಟೇಲರು ಗಮನಿಸಿದರು. ಅದರಿಂದ ಪಟೇಲರು, ದೇಶವನ್ನು ವಿಭಜಿಸಿದ ಹೊರತು ರಕ್ತಪಾತ ಮತ್ತು ಅರಾಜಕತೆಯು ಇಡೀ ದೇಶಕ್ಕೆ ಹರಡುವುದನ್ನು ತಡೆಗಟ್ಟಲು ಸಾಧ್ಯವಿಲ್ಲ ಎನ್ನುವ ಅನಿವಾರ್ಯ ತೀರ್ಮಾನಕ್ಕೆ ಬಂದರು. ಈ ನಿರಾಸಕ್ತ ಆದರೆ ಲೀಗ್‌ಗೆ ಬೆಂಬಲ ನೀಡುವ ಬ್ರಿಟಿಷ್ ಅಧಿಕಾರಿಗಳನ್ನು ಮತ್ತು ರಕ್ತ ಪಿಪಾಸಿಗಳಾದ ಮುಸ್ಲಿಂ ಲೀಗ್‌ರನ್ನು ಎಷ್ಟು ಬೇಗ ಆಚೆಗೆ ತೊಲಗಿಸಿದರೆ ಅಷ್ಟೂ ದೇಶಕ್ಕೆ ಒಳ್ಳೆಯದು ಅನ್ನಿಸಿತು ಅವರಿಗೆ. ಒಂದು

ಬಲಿಷ್ಠ ಕೇಂದ್ರ ಸರ್ಕಾರ ಮಾತ್ರ ಹಿಂಸಾಚಾರವನ್ನು ಹತ್ತಿಕ್ಕಲು ಸಾಧ್ಯ ಎನ್ನುವುದು ಅವರಿಗೆ ಮನವರಿಕೆ ಆಗಿತ್ತು.

ಈ ಪರಿಸ್ಥಿತಿಯ ಪರಿಶೀಲನೆಗೆ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಮಾರ್ಚ್ ೮ರಂದು ದೆಹಲಿಯಲ್ಲಿ ಸಭೆ ಸೇರಿತು. ಗಾಂಧೀಜಿ ದೂರದ ನೌಕಾಲಿಯಲ್ಲಿದ್ದರು. ಆ ವೇಳೆಗೆ, ದೇಶದ ಯಾವುದಾದರೂ ಒಂದು ರೀತಿಯ ವಿಭಜನೆಯಿಲ್ಲದೆ ಹಿಂದೂ ಮತ್ತು ಮುಸ್ಲಿಮರ ನಡುವೆ ಶಾಂತಿ ಸ್ಥಾಪನೆ ಸದ್ಯದಲ್ಲಿ ಸಾಧ್ಯವಿಲ್ಲ – ಎನ್ನುವುದನ್ನು ಸರ್ದಾರ್ ಮತ್ತು ಇತರ ಕಾಂಗ್ರೆಸ್ ನಾಯಕರು ಇಷ್ಟವಿಲ್ಲದ ಮನಸ್ಸಿನಿಂದ ಅರಿತಿದ್ದರು. ಮಾರ್ಚ್ ೮ರ ಸಭೆಯಲ್ಲಿ ಕಾರ್ಯಕಾರಿ ಸಮಿತಿ ಕೆಳಕಂಡ ಠರಾವನ್ನು ಅಂಗೀಕರಿಸಿತು:

ಮೃಗತ್ವ ರೀತಿಯ ಹಿಂಸಾಚಾರ, ಕೊಲೆ ಮತ್ತು ಬಲತ್ಕಾರದ ಮೂಲಕ ರಾಜಕೀಯ ಗುರಿಯನ್ನು ಸಾಧಿಸಲು ನಡೆಸಿದ ಅನೇಕ ಭಯಾನಕ ಕೃತ್ಯಗಳು ಮತ್ತು ದುರಂತಗಳನ್ನು ಭಾರತವು ಕಳೆದ ಏಳು ತಿಂಗಳಿಂದ ಕಂಡಿದೆ.

ಪಂಜಾಬಿನ ಸಮಸ್ಯೆಯನ್ನು ಹಿಂಸಾಚಾರ ಮತ್ತು ಬಲಾತ್ಕಾರದಿಂದ ಇತ್ಯರ್ಥ ಪಡಿಸಲು ಸಾಧ್ಯವಿಲ್ಲ ಮತ್ತು ಬಲಾತ್ಕಾರದ ಆಧಾರದ ಯಾವ ಏರ್ಪಾಟು ಹೆಚ್ಚು ಕಾಲ ಇರುವುದಿಲ್ಲ ಎನ್ನುವುದನ್ನು ದುರಂತಮಯ ಘಟನೆಗಳು ತೋರಿಸಿವೆ. ಆದದ್ದರಿಂದ, ಆ ಸಮಸ್ಯೆಯ ಪರಿಹಾರಕ್ಕೆ ಇನಿತೂ ಬಲಾತ್ಕಾರವಿಲ್ಲದ ಒಂದು ಮಾರ್ಗ ಅವಶ್ಯಕ. ಅದು ಪಂಜಾಬ್ ಅನ್ನು ಎರಡು ಪ್ರಾಂತ್ಯಗಳಾಗಿ ವಿಭಜಿಸುವ ಅವಶ್ಯಕತೆಯನ್ನು ಉಂಟುಮಾಡಿದೆ. ಹಾಗೆ ಮಾಡುವುದರಿಂದ ಅಧಿಕವಾಗಿ ಮುಸ್ಲಿಮರಿರುವ ಭಾಗವನ್ನು ಅಧಿಕವಾಗಿ ಮುಸ್ಲಿಮೇತರರಿರುವ ಭಾಗದಿಂದ ಪ್ರತ್ಯೇಕಿಸಬಹುದು.[೨೬೫]

ಹೀಗೆ ಪಂಜಾಬ್ ಪ್ರಾಂತ್ಯದ ವಿಭಜನೆಗೆ ಕಾರ್ಯಕಾರಿ ಸಮಿತಿ ತೀರ್ಮಾನಿಸಿತು. ಈ ಮಸೂದೆಗೆ ನೆಹರು, ಮೌಲಾನಾ ಆಜ಼ಾದ್, ರಾಜಾಜಿ ಮತ್ತು ರಾಜೇಂದ್ರ ಪ್ರಸಾದ್ ಒಪ್ಪಿಗೆ ಸೂಚಿಸಿದ್ದರೂ, ಆ ಮಸೂದೆಗೆ ಮುಖ್ಯ ಪ್ರೇರಣೆ ಸರ್ದಾರ್ ಪಟೇಲರು.

(ಆ ಮಸೂದೆ ಸೂಚಿಸುತ್ತಿದ್ದುದು ಪಂಜಾಬಿನ ವಿಭಜನೆಯನ್ನೇ ಹೊರತು ಭಾರತದ ವಿಭಜನೆಯನ್ನಲ್ಲ –ಅನ್ನುವುದನ್ನು ಗಮನಿಸಬೇಕು – ಲೇಖಕ)

ಆ ತೀರ್ಮಾನವನ್ನು ಕೇಳಿ ಗಾಂಧೀಜಿಗೆ ಸಿಡಿಲು ಬಡಿದಂತಾಯಿತು. ಅವರು ಮಾರ್ಚ್ ೨೨ರಂದು ಪಟೇಲರಿಗೆ ಎರಡು ಸಾಲಿನ ಪತ್ರ ಬರೆದು,

'ನೀನು ನನಗೆ ನಿಮ್ಮ ಪಂಜಾಬ್ ಮಸೂದೆಯನ್ನು ವಿವರಿಸಲು ಸಾಧ್ಯವಿದ್ದರೆ, ದಯವಿಟ್ಟು ಹಾಗೆ ಮಾಡು. ಅದು ನನಗೆ ಅರ್ಥವಾಗುತ್ತಿಲ್ಲ,' ಎಂದರು.

ಪಟೇಲರು ಮಾರ್ಚ್ ೨೪ರಂದು ಈ ರೀತಿ ಜವಾಬು ಬರೆದರು:

> ಪಂಜಾಬ್ ಮಸೂದೆಯನ್ನು ಒಂದು ಪತ್ರದಲ್ಲಿ ವಿವರಿಸುವುದು ಕಷ್ಟ. ದೀರ್ಘ ವಿಚಾರ ಮಂಥನದ ನಂತರ ಆ ತೀರ್ಮಾನಕ್ಕೆ ಬರಲಾಗಿದೆ, ಆತುರವಾಗಿ ಅಥವಾ ಯೋಚಿಸದೆ ಮಾಡಿಲ್ಲ, ನೀವು ಅದಕ್ಕೆ ವಿರುದ್ಧವಾಗಿ ನಿಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುವುದನ್ನು ಪತ್ರಿಕೆಗಳಿಂದ ತಿಳಿದಿದ್ದೇನೆ. ಯಾವುದು ನಿಮಗೆ ಸರಿ ಅನ್ನಿಸುತ್ತದೊ ಅದನ್ನು ಹೇಳಲು ಮತ್ತು ಮಾಡಲು ನಿಮಗೆ ಹಕ್ಕಿದೆ.[೨೬೬]

ಪಟೇಲರು ಪಂಜಾಬ್ ಮಸೂದೆಯನ್ನು ಸೂಚಿಸುವುದಕ್ಕೆ ಅಥವಾ ಅದಕ್ಕೆ ಪ್ರೇರಣೆ ಕೊಡುವುದಕ್ಕೆ ಒಂದು ಕಾರಣವಿತ್ತು:

೧೯೪೬ರ ಡಿಸೆಂಬರ್‌ನ ಕೊನೆ ವಾರದಲ್ಲಿ ಸರ್ಕಾರದ ಸುಧಾರಣಾ ಕಮಿಷನರ್ ಆಗಿದ್ದ ವಿ.ಪಿ. ಮೆನನ್‌ರವರು ದೇಶ ವಿಭಜನೆ ಮತ್ತು ಡೊಮಿನಿಯನ್ ಸ್ಟೇಟಸ್ ಆಧಾರದ ಮೇಲೆ ಅಧಿಕಾರ ಹಸ್ತಾಂತರದ ಒಂದು ಸೂತ್ರವನ್ನು ಸರ್ದಾರರ ಮುಂದೆ (ಖಾಸಗಿ ಅಥವಾ ಗುಪ್ತವಾಗಿ) ಇಟ್ಟಿದ್ದರು. ಮೆನನ್‌ರವರು ದೇಶ ವಿಭಜನೆಯಿಂದ ದೊರಕಬಹುದಾದ ಕೆಲವು ಅನುಕೂಲಗಳನ್ನು ಸರ್ದಾರರಿಗೆ ವಿವರಿಸಿದ್ದರು. ಮೊದಲನೆಯದಾಗಿ, ದೇಶವು ಅಂತರ್ಯುದ್ಧದ ಕಡೆಗೆ ಸಾಗುವಂತೆ ಮಾಡುವುದಕ್ಕಿಂತ ವಿಭಜನೆ ಮಾಡುವುದು ಉತ್ತಮ, ಎರಡನೆಯದಾಗಿ, ಡೊಮಿನಿಯನ್ ಸ್ಟೇಟಸ್‌ಗೆ ಒಪ್ಪುವುದರಿಂದ ಬ್ರಿಟಿಷರ ವಿಶ್ವಾಸವನ್ನು ಗಳಿಸಬಹುದು. ಅವರು ದೇಶೀಯ ರಾಜರುಗಳನ್ನು ಸೆಳೆಯಲು ಸಹಾಯಮಾಡುತ್ತಾರೆ. ಅದು, ಭಾರತದ ಭೂ, ವಾಯು ಮತ್ತು ನೌಕಾ ಸೈನ್ಯದ ಬ್ರಿಟಿಷ್ ಅಧಿಕಾರಿಗಳ ಸಹಕಾರವನ್ನು ದೊರಕಿಸುತ್ತದೆ. ಮೂರನೆಯದಾಗಿ, ಪಾಕಿಸ್ತಾನದ ಪ್ರದೇಶ ಕಿತ್ತುಕೊಂಡು ಹೋದ ಮೇಲೆ ಉಳಿದ ಭಾಗದಲ್ಲಿ ಒಂದು ಬಲವಾದ ಕೇಂದ್ರ ಸರ್ಕಾರವನ್ನು ಸ್ಥಾಪಿಸಬಹುದು. ಅಂತಿಮವಾಗಿ, ಒಮ್ಮೆ ಪಾಕಿಸ್ತಾನವನ್ನು ಅವರಿಗೆ ಕೊಟ್ಟ ಮೇಲೆ ಭಾರತದ ಉಳಿದ ಭಾಗದಲ್ಲಿ ಕಾಂಗ್ರೆಸ್‌ಗೆ ಅಡೆ ತಡೆ ಒಡ್ಡಲು ಮುಸ್ಲಿಂ ಲೀಗ್‌ಗೆ ಶಕ್ತಿ ಇರುವುದಿಲ್ಲ. ಕಾಂಗ್ರೆಸ್ಸು ಮುಸ್ಲಿಮರ ಪ್ರತ್ಯೇಕ ಚುನಾವಣಾ ಕ್ಷೇತ್ರವನ್ನು ರದ್ದುಪಡಿಸಬಹುದು.

ವಿ.ಪಿ. ಮೆನನ್‌ರ ವಾದ ಸರ್ದಾರರಿಗೆ ಹಿಡಿಸಿತ್ತು. ಮುಸ್ಲಿಂ ಲೀಗ್ ಜೊತೆಯ

ಸಮ್ಮಿಶ್ರ ಸರ್ಕಾರದ ಅನುಭವವೂ ಅವರ ಮೇಲೆ ಪ್ರಭಾವ ಬೀರಿರಬೇಕು. ಬ್ರಿಟಿಷ್ ಸರ್ಕಾರವನ್ನು ಆದಷ್ಟು ಜಾಗ್ರತೆ ತೊಲಗಿಸುವುದು ಸಹ ಅವರ ಮನಸ್ಸಿನಲ್ಲಿತ್ತು. ಕತ್ತರಿಸಿದ ಪಾಕಿಸ್ತಾನವನ್ನು ಜಿನ್ನಾ ತೆಗೆದುಕೊಂಡು ತೊಲಗಿ ಉಳಿದವರು ನೆಮ್ಮದಿಯಿಂದ ಬದುಕುವಂತೆ ಮಾಡುವುದು ಉತ್ತಮವಲ್ಲವೆ ಅನ್ನಿಸಿತು ಪಟೇಲರಿಗೆ. ಪಾಕಿಸ್ತಾನವು ಜಿನ್ನಾನ 'ಹುಚ್ಚು ಕನಸು' ಅನ್ನುತ್ತಿದ್ದ ಪಟೇಲರು ಪಾಕಿಸ್ತಾನವನ್ನು ಒಪ್ಪುವ ಕಡೆಗೆ ವಾಲಲು ಆರಂಭಿಸಿದರು.

ಮೆನನ್ ತಮ್ಮ ಸೂತ್ರವನ್ನು ವಿವರಿಸಿದ ಮೇಲೆ ಸರ್ದಾರರು, "ಅದನ್ನು ಕಾಂಗ್ರೆಸ್ ಒಪ್ಪುವಂತೆ ಮಾಡಲು ನನ್ನ ಪ್ರಭಾವವನ್ನು ಉಪಯೋಗಿಸುತ್ತೇನೆ," ಎಂದಿದ್ದರು. ವಿ.ಪಿ. ಮೆನನ್‌ರವರು ಆ ಸೂತ್ರವನ್ನು ವೇವೆಲ್ಲನಿಗೆ ತಿಳಿಸಿ, ಲಂಡನ್ನಿನ ಸೆಕ್ರೆಟರಿ ಆಫ್ ಸ್ಟೇಟ್ ಫಾರ್ ಇಂಡಿಯಾಗೆ ಕಳುಹಿಸಿದ್ದರು. ಆದರೆ ಆ ಸೂತ್ರಕ್ಕೆ ಪಟೇಲರ ಒಪ್ಪಿಗೆ ಇದೆ ಎಂದು ತಿಳಿಸಿರಲಿಲ್ಲ. ಅದಕ್ಕೆ ಬದಲಾಗಿ, "ಕಾಂಗ್ರೆಸ್ಸು ಅದನ್ನು ಒಪ್ಪುತ್ತದೆ ಎಂದು ನಂಬಲು ನನಗೆ ಕಾರಣಗಳಿವೆ" ಎಂದು ಬರೆದಿದ್ದರು.[೨೬೭] ಅದು ಅಷ್ಟಕ್ಕೇ ನಿಂತು ಹೋಗಿತ್ತು. ಬಹುಶಃ ಸಮಸ್ಯೆಯ ಪರಿಹಾರಕ್ಕೆ ವೇವೆಲ್ಲನ ನಿರಾಸಕ್ತಿ ಅಥವಾ ಅಶಕ್ತತೆ ಅದಕ್ಕೆ ಕಾರಣವಿರಬಹುದು.

ಬ್ರಿಟನ್ನಿನ ಲೇಬರ್ ಸರ್ಕಾರ ಬಯಸಿದಂತೆ ಅಧಿಕಾರದ ಹಸ್ತಾಂತರವನ್ನು ಶೀಘ್ರವಾಗಿ ನೆರವೇರಿಸುವ ಕೆಲಸ ವೇವೆಲ್ಲನಿಂದ ಸಾಧ್ಯವಿರಲಿಲ್ಲ. ಅದಕ್ಕೇ ಇನ್ನೂ ಚುರುಕಾದ, ಉತ್ಸಾಹಿಯಾದ, ಶೀಘ್ರ ತೀರ್ಮಾನ ಕೈಗೊಳ್ಳುವ ವ್ಯಕ್ತಿ ಬೇಕಾಗಿತ್ತು. ಅದೃಷ್ಟವಶಾತ್ ಮೌಂಟ್‌ಬ್ಯಾಟನ್ ಅಂತಹ ವ್ಯಕ್ತಿಯಾಗಿದ್ದರು.

೧೪.೧೧ ಮೌಂಟ್‌ಬ್ಯಾಟನ್‌ರವರ ರಾಯಭಾರ

ಲಾರ್ಡ್ ಮೌಂಟ್‌ಬ್ಯಾಟನ್‌ರವರು ೧೯೪೭ರ ಮಾರ್ಚ್ ೨೨ರಂದು ದೆಹಲಿಯನ್ನು ತಲುಪಿದರು ಮತ್ತು ಮಾರನೆಯ ದಿನ ಪ್ರಮಾಣವಚನ ಸ್ವೀಕರಿಸಿ ಅಧಿಕಾರ ವಹಿಸಿಕೊಂಡರು. ಪ್ರಮಾಣ ವಚನ ಸ್ವೀಕಾರ ಭಾಷಣ ಮಾಡುತ್ತ ಅವರು ತಮ್ಮದು ಮಾಮೂಲಿ ವೈಸ್‌ರಾಯ್ ಪದವಿಯಲ್ಲ, ಎಂದರು. ಹಿಂದಿನ ವೈಸ್‌ರಾಯ್‌ಗಳ ಗುರಿ ಬ್ರಿಟಿಷ್ ಆಡಳಿತವನ್ನು ಮುಂದುವರೆಸುವುದಾಗಿದ್ದರೆ, ತಮ್ಮದು ಬ್ರಿಟಿಷ್ ಆಳ್ವಿಕೆಯನ್ನು ಮುಕ್ತಾಯಗೊಳಿಸುವುದು, ಎಂದರು. ಅವರು ಗಾಂಧಿ ಮತ್ತು ಜಿನ್ನಾರವರನ್ನು ಅನೌಪಚಾರಿಕ ಪರಿಚಯಕ್ಕಾಗಿ ಆಹ್ವಾನಿಸಿದರು.

ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗ್ ನಡುವೆ, ಕ್ಯಾಬಿನೆಟ್ ಮಿಷನ್‌ನ ಸೂತ್ರದ ಅಡಿಯಲ್ಲಿ, ಒಮ್ಮತವನ್ನು ಮೂಡಿಸುವುದು ಅವರ ತಕ್ಷಣದ ಮತ್ತು ಪ್ರಮುಖ

ಕಾರ್ಯವಾಗಿತ್ತು. ಆದರೆ ಅದು ಕಾರ್ಯಸಾಧ್ಯವಲ್ಲ ಎನ್ನುವುದು ಅವರಿಗೆ ಅರ್ಥವಾಗಲು ಹೆಚ್ಚು ಕಾಲ ಬೇಕಾಗಲಿಲ್ಲ. ಅದರಿಂದ ಕ್ಯಾಬಿನೆಟ್ ಮಿಷನ್‌ನ ಸೂತ್ರದಿಂದ ಹೊರಗೆ ಒಂದು ಪರಿಹಾರವನ್ನು ಕಂಡುಹಿಡಿಯಲು ಯೋಚಿಸಿದರು.

ಮೌಂಟ್‌ಬ್ಯಾಟನ್‌ರವರು ನಾಲ್ವರು ಪ್ರಬಲ ನಾಯಕರೊಡನೆ ವ್ಯವಹರಿಸಿ ಒಂದು ಪರಿಹಾರವನ್ನು ಕಂಡುಹಿಡಿಯಬೇಕಾಗಿತ್ತು. ಆ ನಾಲ್ವರು ಮಹಾತ್ಮ ಗಾಂಧಿ, ಜಿನ್ನಾ, ಪಟೇಲ್ ಮತ್ತು ನೆಹರು. ನಾಲ್ವರೂ ನಾಲ್ಕು ರೀತಿಯಲ್ಲಿ ಭಿನ್ನ ವ್ಯಕ್ತಿಗಳು ಅದರಿಂದ ವೈಸ್‌ರಾಯ್ ಬಹಳ ಚಾಕಚಕ್ಯತೆಯಿಂದ, ಜಾಣ್ಮೆಯಿಂದ ಮತ್ತು ವಿವೇಕದಿಂದ ಮುಂದುವರೆಯಬೇಕಾಗಿತ್ತು.

ಬಿಹಾರದಲ್ಲಿದ್ದ ಗಾಂಧೀಜಿ ಮಾರ್ಚ್ ೩೧ರಂದು ದೆಹಲಿಗೆ ಬಂದು ಮೌಂಟ್‌ಬ್ಯಾಟನ್‌ರವರನ್ನು ಭೇಟಿ ಮಾಡಿದರು. ಮೌಂಟ್‌ಬ್ಯಾಟನ್‌ರವರು ಅವರನ್ನು ಭೇಟಿ ಮಾಡುವ ಅಪೇಕ್ಷೆಯನ್ನು ವ್ಯಕ್ತ ಪಡಿಸಿದ್ದರು. ಪಟೇಲ್‌ರವರು ಸಹ, "ನೀವು ಬರುವುದು ಉತ್ತಮವೆಂದು ನನಗೆ ಅನ್ನಿಸುತ್ತಿದೆ" ಎಂದು ಗಾಂಧೀಜಿಗೆ ಬರೆದಿದ್ದರು.

ಮಾರನೆಯ ದಿನ ಏಪ್ರಿಲ್ ೧ರಂದು ಗಾಂಧೀಜಿಯವರು ವೈಸ್‌ರಾಯ್‌ನನ್ನು ಭೇಟಿ ಮಾಡಿದರು. ಆ ಭೇಟಿಯಲ್ಲಿ, ದೇಶ ವಿಭಜನೆಯನ್ನು ತಡೆಯುವುದಕ್ಕೆ ಒಂದು ಹೊಸ ಪರಿಹಾರವನ್ನು ಗಾಂಧೀಜಿ ವೈಸ್‌ರಾಯ್ ಮುಂದಿಟ್ಟರು. ಈಗಿರುವ ಮಧ್ಯಂತರ ಸರ್ಕಾರವನ್ನು ವಿಸರ್ಜಿಸಿ, ತಮ್ಮ ಆಯ್ಕೆಯ ಹೊಸ ಸರ್ಕಾರವನ್ನು ರಚಿಸಲು ಜಿನ್ನಾನನ್ನು ಆಹ್ವಾನಿಸಬೇಕು. ಮುಸ್ಲಿಂ ಲೀಗ್ ನಾಯಕನು ಭಾರತದ ಹಿತದೃಷ್ಟಿಯಿಂದ ಕೆಲಸ ಮಾಡುತ್ತಿದ್ದಾನೆ ಎಂದು ವೈಸ್‌ರಾಯ್‌ಗೆ ಅನ್ನಿಸಿರುವವರೆಗೆ ಕಾಂಗ್ರೆಸ್ಸು ಜಿನ್ನಾ ಜೊತೆ ಸಹಕರಿಸುತ್ತದೆ ಮತ್ತು ಕೇಂದ್ರ ಶಾಸನ ಸಭೆಯಲ್ಲಿ ಆ ಮಂತ್ರಿಮಂಡಲಕ್ಕೆ ಅಡಚಣೆ ಒಡ್ಡಲು ಕಾಂಗ್ರೆಸ್ಸು ತನ್ನ ಬಹು ಮತವನ್ನು ಉಪಯೋಗಿಸುವುದಿಲ್ಲ. ಜಿನ್ನಾ ಇಷ್ಟ ಪಟ್ಟರೆ ಪಾಕಿಸ್ತಾನವನ್ನು ಪ್ರತಿಪಾದಿಸುವುದನ್ನು ಮುಂದುವರೆಸಲೂ ಬಹುದು. ಆದರೆ ಹಿಂಸೆಯನ್ನು ಉಪಯೋಗಿಸುವ ಹಾಗಿಲ್ಲ – ಇದು ಗಾಂಧೀಜಿಯವರ ಹೊಸ ಸೂತ್ರವಾಗಿತ್ತು.[೨೬೮]

ಗಾಂಧೀಜಿಯವರ ಸೂತ್ರವನ್ನು ಕೇಳಿ ಮೌಂಟ್‌ಬ್ಯಾಟನ್‌ರವರಿಗೆ ಆಶ್ಚರ್ಯ ಮತ್ತು ಗಾಬರಿ ಎರಡೂ ಉಂಟಾಗಿರಬೇಕು. ಮೌಂಟ್‌ಬ್ಯಾಟನ್‌ರವರು ಆ ವಿಷಯವನ್ನು ನೆಹರು ಮತ್ತು ಮೌಲಾನಾ ಜೊತೆ, ಅವರು ತಮ್ಮ ಭೇಟಿಗೆ ಬಂದಾಗ ಗುಪ್ತವಾಗಿ ಹಂಚಿಕೊಳ್ಳಲು ಗಾಂಧೀಜಿಯ ಒಪ್ಪಿಗೆ ಪಡೆದುಕೊಂಡರು. (ಪಟೇಲರನ್ನು ಕೇಳುವ ಅವಶ್ಯಕತೆಯೇ ಇರಲಿಲ್ಲ. ಅಂತದ್ದನ್ನೆಲ್ಲಾ ಅವರು ಒಪ್ಪುವುದಿಲ್ಲ ಎನ್ನುವುದು ಚೆನ್ನಾಗಿ ತಿಳಿದಿತ್ತು ಎನ್ನುತ್ತಾರೆ ರಾಜಮೋಹನ ಗಾಂಧಿ)

ಏಪ್ರಿಲ್ ೨ರಂದು ಗಾಂಧೀಜಿ ವೈಸ್‌ರಾಯ್ ಅನ್ನು ಮತ್ತೆ ಭೇಟಿ ಮಾಡಿ ತಮ್ಮ ಸಲಹೆಯನ್ನು ಪುನರುಚ್ಚರಿಸಿದರು. ಅದನ್ನು ಕಾಂಗ್ರೆಸ್ಸು ಒಪ್ಪುವಂತೆ ಮಾಡಲು ತಮ್ಮ ಪ್ರಭಾವವನ್ನು ಉಪಯೋಗಿಸುವುದಾಗಿಯೂ, ಆವಶ್ಯಕತೆ ಬಿದ್ದರೆ ಜನರ ಬೆಂಬಲವನ್ನು ಪಡೆಯುವುದಕ್ಕಾಗಿ ದೇಶದ ಉದ್ದಗಲ ಸಂಚರಿಸುವುದಾಗಿಯೂ ಅವರು ತಿಳಿಸಿದರು. ವೈಸ್‌ರಾಯ್, "ನಿಮ್ಮ ಮುತುವರ್ಜಿಯ ಬಗೆಗೆ ನನಗೆ ವಿಶ್ವಾಸ ಉಂಟಾಗಿದೆ," ಎಂದರು. ಆಗ ಗಾಂಧೀಜಿ, "ನನ್ನ ಯೋಜನೆಯನ್ನು ವೈಸ್‌ರಾಯ್ ಬೆಂಬಲಿಸಿದ್ದಾರೆ ಎಂದು ನನ್ನ ಸಹವರ್ತಿಗಳಿಗೆ ಹೇಳಬಹುದೆ?" ಎಂದು ಪ್ರಶ್ನಿಸಿದರು. "ನಾನು ಬಹಳ ಆಸಕ್ತನಾಗಿದ್ದೇನೆ ಎಂದು ನೀವು ಹೇಳಬಹುದು," ಎಂದು ಉತ್ತರಿಸಿದರು ವೈಸ್‌ರಾಯ್.

ಗಾಂಧೀಜಿ ತೆರಳಿದ ಅರ್ಧ ಘಂಟೆಯ ನಂತರ ಮೌಲಾನಾ ಅವರು ವೈಸ್‌ರಾಯ್ ಅನ್ನು ಭೇಟಿ ಮಾಡಿದರು. ಆ ಭೇಟಿಯ ಬಗೆಗೆ ವೈಸ್‌ರಾಯ್ ಹೀಗೆ ಬರೆದಿದ್ದಾರೆ:

> ನಾನು ಅವರಿಗೆ ನೇರವಾಗಿ ಗಾಂಧೀಜಿಯ ಯೋಜನೆಯನ್ನು ತಿಳಿಸಿದೆ. ಅದು ಅವರಿಗೆ ಅಂದಿನ ಬೆಳಗ್ಗೆಯೇ ಗಾಂಧೀಜಿಯಿಂದ ತಿಳಿದಿತ್ತು. ಅದನ್ನು ಇಡೀ ಕಾಂಗ್ರೆಸ್ಸು ಒಪ್ಪುವಂತೆ ಮತ್ತು ಶ್ರದ್ಧೆಯಿಂದ ಜಾರಿಗೆ ತರುವಂತೆ ಪ್ರಶ್ನಾತೀತವಾದ ಪ್ರಭಾವವನ್ನು ಗಾಂಧೀಜಿ ಬೀರಬಲ್ಲವರಾದುದರಿಂದ, ನನ್ನ ಅಭಿಪ್ರಾಯದಲ್ಲಿ, ಆ ಯೋಜನೆಯು ಪೂರ್ಣವಾಗಿ ಕಾರ್ಯಸಾಧ್ಯವಾದದ್ದಾಗಿದೆ, ಎಂದು ಹೇಳಿ ಅವರು ನನ್ನನ್ನು ಚಕಿತಗೊಳಿಸಿದರು. ಅವರು ಮುಂದುವರೆದು, ನಾನು ಜಿನ್ನಾ ಒಪ್ಪುವಂತೆ ಮಾಡುವ ಅವಕಾಶವಿದೆಯೆಂದೂ ರಕ್ತಪಾತವನ್ನು ನಿಲ್ಲಿಸಲು ಅದು ಅತ್ಯಂತ ಶೀಘ್ರವಾದ ಮಾರ್ಗ ಎಂದೂ, ಹೇಳಿದರು.[೨೬೯]

ಆದರೆ ಆ ಯೋಜನೆ ಜಿನ್ನಾ ಮುಂದೆ ಬರಲೇ ಇಲ್ಲ; ಏಕೆಂದರೆ ವಲ್ಲಭಭಾಯ್ ಪಟೇಲ್, ಜವಹರಲಾಲ್ ನೆಹರು ಮತ್ತಿತರ ಕಾರ್ಯಕಾರಿ ಸಮಿತಿಯ ಸದಸ್ಯರು ಆ ಯೋಜನೆಯನ್ನು ತಿರಸ್ಕರಿಸಿದರು. ವೈಸ್‌ರಾಯ್ ಮುಂದೆ ಆ ಯೋಜನೆಯು ಕಾರ್ಯ ಸಾಧ್ಯ ಎಂದು ಹೇಳಿದ್ದ ಮೌಲಾನಾ ಸಹ ಅದನ್ನು ತಿರಸ್ಕರಿಸಿದರು. ಗಫ್ಫಾರ್ ಖಾನ್ ಮಾತ್ರ ಗಾಂಧೀಜಿ ಪರವಾಗಿ ಇದ್ದರು. ರಾಜಾಜಿಯವರು ತಮ್ಮ ದಿನಚರಿಯಲ್ಲಿ 'ಇಂದಿನ ತೊಂದರೆಗಳ ಪರಿಹಾರಕ್ಕೆ ಗಾಂಧೀಜಿಯವರ ತಪ್ಪು ಕಲ್ಪಿತ ಯೋಜನೆಗೆ ಪ್ರತೀಯೊಬ್ಬರಿಂದಲೂ ಆಕ್ಷೇಪಣೆ

ಬಂದಿತು ಮತ್ತು ಅದು ಬೆಂಕಿಗೆ ಹಾಕಲ್ಪಟ್ಟಿತು" ಎಂದು ಬರೆದರು.

ಗಾಂಧೀಜಿಯವರು ಏಪ್ರಿಲ್ ೧೧ ರಂದು ಮೌಂಟ್‌ಬ್ಯಾಟನ್‌ಗೆ ಪತ್ರ ಬರೆದು, "ಬಾದ್‌ಷಾ ಖಾನ್ ಹೊರತು ಕಾರ್ಯಕಾರಿಯ ಬೇರೆ ಯಾವ ಸದಸ್ಯನ ಬೆಂಬಲವನ್ನು ಪಡೆಯಲು ನಾನು ವಿಫಲನಾದೆ ಎಂದು ತಿಳಿಸಲು ವಿಷಾದಿಸುತ್ತೇನೆ..... ನನ್ನ ಯೋಜನೆಯ ಯುಕ್ತತೆಯ ಬಗೆಗೆ ಅವರಿಗೆ ನಂಬಿಕೆ ಬರಿಸಲು ನನಗೆ ಸಾಧ್ಯವಾಗಲಿಲ್ಲ. ಹೀಗಾಗಿ, ನಿಮ್ಮ ಪರಿಗಣನೆಯಿಂದ ನನ್ನನ್ನು ಕೈ ಬಿಡಬೇಕೆಂದು ನಿಮ್ಮನ್ನು ಕೇಳಬೇಕಾಗಿದೆ," ಎಂದು ತಿಳಿಸಿದರು.

ಮಾರನೆಯ ದಿನ ಗಾಂಧೀಜಿ ಬಿಹಾರದ ಪಾಟ್ನಾಕ್ಕೆ ರೈಲಿನಲ್ಲಿ ಹೊರಟುಬಿಟ್ಟರು. ಪ್ರಯಾಣದಲ್ಲೇ ಏಪ್ರಿಲ್ ೧೩ರಂದು ಪಟೇಲರಿಗೆ ಈ ರೀತಿ ಬರೆದರು:

> ನಮ್ಮ ನಡುವೆ ದೊಡ್ಡ ದೊಡ್ಡ ಅಭಿಪ್ರಾಯ ಭೇದ ಅಡಿಗಡಿಗೆ ಉಂಟಾಗುತ್ತಿದೆ. ಇಂತಹ ಸಂದರ್ಭದಲ್ಲಿ, ನಾನು ವೈಸ್‌ರಾಯನ್ನು, ನನ್ನ ವೈಯುಕ್ತಿಕ ಸ್ಥಾನದಲ್ಲಾದರೂ ಸರಿಯೆ, ಭೇಟಿಯಾಗುವುದು ಅಪೇಕ್ಷಣೀಯವೆ?..... ಅದರ ಬಗೆಗೆ ಉದ್ರೇಕರಹಿತನಾಗಿ ಆಲೋಚಿಸು..... ಕೋಟ್ಯಂತರ ಜನರ ವ್ಯವಹಾರವನ್ನು ನಿರ್ವಹಣೆ ಮಾಡುವಾಗ ನಾನು ಕಾಣಲಾಗದ್ದನ್ನು ನೀನು ಕಾಣುವುದು ಸಾಧ್ಯ. ನಾನು ನಿನ್ನ ಸ್ಥಾನದಲ್ಲಿದ್ದಿದ್ದರೆ ಬಹುಶಃ ನಾನೂ ಸಹ ನಿನ್ನ ಹಾಗೇ ಆಡುತ್ತಿದ್ದೆ ಮತ್ತು ಮಾಡುತ್ತಿದ್ದೆ.[೨೭೦]

ಮೌಂಟ್‌ಬ್ಯಾಟನ್ ಮತ್ತು ಜಿನ್ನಾರವರ ಪ್ರಥಮ ಭೇಟಿ ಒಂದು ತರಹದ ಬಿಗಿ ವಾತಾವರಣದಲ್ಲಿ ಆರಂಭವಾಯಿತು. ಜಿನ್ನಾ ಸಂಭಾಷಣೆಯನ್ನು ಆರಂಭಿಸುತ್ತಾ, "ನಾನು ಒಂದು ಷರತ್ತಿನ ಮೇಲೆ ಮಾತ್ರ ಚರ್ಚೆಯನ್ನು ನಡೆಸುತ್ತೇನೆ," ಎಂದನು. ತಕ್ಷಣ, ವೈಸ್‌ರಾಯ್ ಅವನನ್ನು ಅಲ್ಲೇ ತಡೆದು, ಹೇಳಿದರು, "ಮಿ. ಜಿನ್ನಾ, ನನಗೆ ನಿಮ್ಮ ಪರಿಚಯ ಆಗುವವರೆಗೆ ಮತ್ತು ನಿಮ್ಮ ಬಗೆಗೆ ಹೆಚ್ಚು ತಿಳಿಯುವವರೆಗೆ ಶರತ್ತುಗಳನ್ನು ಚರ್ಚಿಸಲು ಅಥವಾ ವಾಸ್ತವವಾಗಿ, ಇಂದಿನ ಪರಿಸ್ಥಿತಿಯನ್ನು ಚರ್ಚಿಸಲು ನಾನು ಸಿದ್ಧನಿಲ್ಲ." ಆ ಮಾತು ಜಿನ್ನಾನನ್ನು ದಂಗುಬಡಿಸಿತು. ಅವನು ಅಂತಹ ಪ್ರತಿಕ್ರಿಯೆಯನ್ನು ವೈಸ್‌ರಾಯ್‌ನಿಂದ ನಿರೀಕ್ಷಿಸಿರಲಿಲ್ಲ. ಅವನು ತಕ್ಷಣವೇ ಸಡಿಲಗೊಳ್ಳಲಿಲ್ಲ. ಅಂತಿಮವಾಗಿ ವೈಸ್‌ರಾಯ್ ಅಪೇಕ್ಷೆಯಂತೆ ಮುಸ್ಲಿಂ ಲೀಗ್ ಮತ್ತು ತಾನು ಬೆಳೆದು ಬಂದ ಕತೆಯನ್ನು ಹೇಳಿದನು. ಅದನ್ನೆಲ್ಲ ಕೇಳಿದ ನಂತರ ಮೌಂಟ್‌ಬ್ಯಾಟನ್ ಹೇಳಿದರು, ".....

ಇಂದಿನ ಪರಿಸ್ಥಿತಿಗೆ ಒಂದು ಶಸ್ತ್ರ ಚಿಕಿತ್ಸೆಯ ಅವಶ್ಯಕತೆ ಇದೆ. ಶಸ್ತ್ರ ಚಿಕಿತ್ಸೆ ಮಾಡುವ ಮುನ್ನ ಅರಿವಳಿಕೆ ನೀಡಬೇಕು, ಆ ಕೆಲಸ ನನ್ನದು."[೨೭೧]

ಮೌಂಟ್‌ಬ್ಯಾಟನ್‌ರವರ ಶಸ್ತ್ರ ಚಿಕಿತ್ಸೆಯ ಮಾತು ಖಂಡಿತವಾಗಿಯೂ ಜಿನ್ನಾಗೆ ಇಷ್ಟವಾಗಿರುವುದಿಲ್ಲ, ಏಕೆಂದರೆ ಅವನು ಅವಿಭಜಿತ ಪಂಜಾಬ್ ಮತ್ತು ಅವಿಭಜಿತ ಬಂಗಾಳವನ್ನು ಒಳಗೊಂಡು ಪಾಕಿಸ್ತಾನದ ಕನಸು ಕಾಣುತ್ತಿದ್ದನು.

ಪಾಕಿಸ್ತಾನದ ಪ್ರಶ್ನೆ ಭಾರಿ ಆತಂಕಕಾರಿ ಮತ್ತು ಅನಾಹುತಕಾರಿಯಾಗಿತ್ತು. ಬಂಗಾಳದ ಪ್ರಧಾನಮಂತ್ರಿ ಸುಹ್ರವರ್ದಿಯು ವಿಭಜಿತ ಭಾರತದಲ್ಲಿ ಸ್ವಾಯತ್ತವಾದ ಸ್ವತಂತ್ರವಾದ ಮತ್ತು ಅವಿಭಜಿತವಾದ ಬಂಗಾಳದ ರಚನೆಗೆ ಹೊರಟಿದ್ದನು. ಅವನ ಆಶಯಕ್ಕೆ ಬಂಗಾಳದ ಗೌರ್ನರ್ ಮತ್ತು ಆಂಗ್ಲ ಅಧಿಕಾರಿಗಳು ಬೆಂಬಲ ನೀಡಿದ್ದರು. ಸುಹ್ರವರ್ದಿ ಪೂರ್ವ ಬಂಗಾಳದ ಕಾಂಗ್ರೆಸ್ ನಾಯಕರಾದ ಶರತ್ ಚಂದ್ರ ಬೋಸ್ ಮತ್ತು ಕಿರಣ್ ಶಂಕರ್ ರೇ ಅವರ ಬೆಂಬಲವನ್ನು ಗಳಿಸಿಕೊಂಡಿದ್ದನು. ಸುಹ್ರವರ್ದಿ ತನ್ನ ಬಯಕೆಯನ್ನು ಬಲ ಪ್ರಯೋಗದಿಂದ ಈಡೇರಿಸಲು ಸಿದ್ಧನಾಗಿದ್ದನು. ಅವನ ಅಥವಾ ಅವನ ಬೆಂಬಲಿತ 'ಆಜಾದ್ ಪಾಕಿಸ್ತಾನ್' ಎಂಬ ಸಂಸ್ಥೆ ಈ ಬಗೆಗೆ ಅನೇಕ ಕರಪತ್ರಗಳನ್ನು ಹೊರಡಿಸಿತ್ತು. ಅಂತಹ ಒಂದು ಕರಪತ್ರವು ಹೀಗಿತ್ತು: 'ಬಂಗಾಳವು ಸ್ವತಂತ್ರ, ಸ್ವಾಯತ್ತ ಮತ್ತು ಒಂದುಗೂಡಿದ ರಾಷ್ಟ್ರ..... ಅದನ್ನು 'ಆಜಾದ್ ಪಾಕಿಸ್ತಾನ್' ಎಂದು ಕರೆಯಬೇಕು, ಮುಸ್ಲಿಮರು, ತಮ್ಮ ಬಹು ಸಂಖ್ಯಾತ ಸ್ಥಾನದಿಂದ ಪ್ರಬಲ ಶಕ್ತಿಯಾಗಿರುತ್ತಾರೆ. ಅದನ್ನು ಸಂಪಾದಿಸಲು ಮತ್ತು ಆನಂತರ ಸಮರ್ಥಿಸಲು ತಮ್ಮ ಕೊನೆಯ ತೊಟ್ಟು ರಕ್ತವನ್ನು ತ್ಯಾಗ ಮಾಡಲು ಬಂಗಾಳದ ಮುಸ್ಲಿಂ ಯುವಕರು ಸಿದ್ಧವಾಗಿದ್ದಾರೆ. ಅವರು ಅದನ್ನು ಪಾಕಿಸ್ತಾನ ಎಂದು ಕರೆಯುತ್ತಾರೆ'. ಸುಹ್ರವರ್ದಿ ತನ್ನ ಒಂದು ಭಾಷಣದಲ್ಲಿ 'ವಿಭಜನೆಯನ್ನು ಬೆಂಬಲಿಸಿದರೆ ಕಲ್ಕತ್ತವನ್ನು ಧ್ವಂಸ ಮಾಡಲಾಗುವುದು ಮತ್ತು ಸುಟ್ಟು ಹಾಕಲಾಗುವುದು,' ಎಂದು ಗುಡುಗಿದನು.[೨೭೨]

ಈ ಸಮಸ್ಯೆಯ ಪರಿಹಾರ ಪಟೇಲರಿಂದ ಮಾತ್ರ ಸಾಧ್ಯ ಎಂದು ಕೆ.ಸಿ. ನಿಯೋಗಿ, ಶಾಂತ ಪ್ರಸಾದ್ ಮುಖರ್ಜಿ ಮುಂತಾದ ಬಂಗಾಳದ ನಾಯಕರು ಭಾವಿಸಿದರು. ಕೆ.ಸಿ. ನಿಯೋಗಿ ಪಟೇಲರಿಗೆ ಪತ್ರ ಬರೆದು, "ಬಂಗಾಳ ಮತ್ತು ಕಲ್ಕತ್ತವನ್ನು ಸರ್ವನಾಶ ಮತ್ತು ರಕ್ತಪಾತದಿಂದ ಉಳಿಸುವುದಕ್ಕೆ ನಾವೆಲ್ಲ ನಿಮ್ಮ ಕಡೆಗೆ ನೋಡುತ್ತಿದ್ದೇವೆ" ಎಂದು ತಿಳಿಸಿದರು. ಪಟೇಲರು, "ಸ್ವಾಯತ್ತ ಸ್ವತಂತ್ರ ಬಂಗಾಳದ ಕೂಗು ಕಿರಣ್ ಶಂಕರ್, ಶರತ್ ಬಾಬುವನ್ನು ಸೆಳೆಯಲು ಹೂಡಿರುವ ಸಂಚು. ಬಂಗಾಳದ ಹಿಂದೂಗಳನ್ನು ಉಳಿಸಲು ಇರುವ ಏಕಮಾತ್ರ ಮಾರ್ಗವೆಂದರೆ

ಬಂಗಾಳದ ವಿಭಜನೆಗೆ ಒತ್ತಾಯಿಸುವುದು," ಎಂದು ಜವಾಬು ಬರೆದರು.[೨೭೩]

ನಂತರ ಪಟೇಲರು ಕಿರಣ್ ಶಂಕರ್ ರೇ ಮತ್ತು ಶರತ್ ಚಂದ್ರರವರಿಗೆ ಪ್ರತ್ಯೇಕ ಪತ್ರಗಳನ್ನು ಬರೆದು ಸುಹ್ರವರ್ದಿಯ ಸಂಚಿಗೆ ಬಲಿಯಾಗದಂತೆ ಎಚ್ಚರಿಸಿದರು.

ಮೌಂಟ್‌ಬ್ಯಾಟನ್ ಭಾರತಕ್ಕೆ ಬರುವ ಹೊತ್ತಿಗೆ ಮತೀಯ ಹೊಡೆದಾಟ ತುತ್ತತುದಿಯನ್ನು ಮುಟ್ಟಿತ್ತು. ಅದು ವಾಯುವ್ಯ ಗಡಿನಾಡಿಗೂ ಹರಡಿತ್ತು. ಗಲಭೆ ಮೊದಲು ಹಜ಼ಾರ ಜಿಲ್ಲೆಯಲ್ಲಿ ಆರಂಭವಾಯಿತು. ಅಲ್ಲಿದ್ದ ೩೧,೦೦೦ ಮಂದಿ ಹಿಂದೂಗಳ ಪೈಕಿ ೨೦,೦೦೦ ಮಂದಿ ಭಾರತಕ್ಕೆ ಓಡಿಹೋದರು. ಏಪ್ರಿಲ್ ತಿಂಗಳಲ್ಲಿ ದೆಹ್ರ ಇಸ್ಮಾಯಿಲ್ ಖಾನ್ ಪ್ರದೇಶ ಹತ್ತಿ ಉರಿಯಲಾರಂಭಿಸಿತು. ಸಾವಿರಾರು ಮಂದಿ ಹಿಂದೂಗಳು ಕೊಲ್ಲಲ್ಪಟ್ಟರು ಅಥವಾ ಇಸ್ಲಾಂಗೆ ಮತಾಂತರಗೊಳಿಸಲ್ಪಟ್ಟರು. ಮತೀಯ ಗಲಭೆಗಳು ಕಲ್ಕತ್ತ ಮತ್ತು ಬೊಂಬಾಯಿಯಲ್ಲಿ ನಡೆದುವು. ಪಂಜಾಬ್ ಅಂತೂ ಪ್ರಮುಖ ರಣರಂಗವಾಗಿತ್ತು.

ಏಪ್ರಿಲ್ ೧೫ರಂದು ಮೌಂಟ್‌ಬ್ಯಾಟನ್‌ರ ಒತ್ತಾಯದ ಮೇಲೆ ಗಾಂಧೀಜಿ ಮತ್ತು ಜಿನ್ನಾ ಒಂದು ಸಂಯುಕ್ತ ಮನವಿಯನ್ನು ಹೊರಡಿಸಿ ಹಿಂದೂಗಳು ಮತ್ತು ಮುಸ್ಲಿಮರು ಹಿಂಸಾಚಾರವನ್ನು ನಿಲ್ಲಿಸಿ, ವಿವೇಕ ಮತ್ತು ವಿವೇಚನೆಗೆ ಹಿಂದಿರುಗಬೇಕೆಂದು ಮನವಿ ಮಾಡಿದರು. ಆದರೆ ಏನೂ ಪ್ರಯೋಜನವಾಗಲಿಲ್ಲ. ಮತೀಯ ದ್ವೇಷ ಅಂತಹ ಮಟ್ಟವನ್ನು ಮುಟ್ಟಿತ್ತು. ಮೌಂಟ್‌ಬ್ಯಾಟನ್‌ಗೆ ದೇಶವಿಭಜನೆ ಅನಿವಾರ್ಯ ಎನ್ನಿಸಿತು. ಪಂಜಾಬ್ ಮತ್ತು ಬಂಗಾಳದ ವಿಭಜನೆಯ ಆಧಾರದ ಮೇಲೆ ಪಾಕಿಸ್ತಾನವನ್ನು ಜಿನ್ನಾ ಒಪ್ಪಿಕೊಳ್ಳುವನೇ ಎಂದು ವೈಸ್‌ರಾಯ್ ಜಿನ್ನಾನನ್ನು ವಿಚಾರಿಸಿದರು. ಜಿನ್ನಾ ಮೊದಲು ಒಪ್ಪಲಿಲ್ಲ. ಅದು 'ಕೀಟ ತಿಂದ ಪಾಕಿಸ್ತಾನ' ಎಂದ. ಆಮೇಲೆ ಕತ್ತರಿಸಲ್ಪಟ್ಟ ಪಾಕಿಸ್ತಾನವನ್ನೇ ಒಪ್ಪಿದ.[೨೭೪]

ಅಲ್ಲಿಗೆ, ಮೌಂಟ್‌ಬ್ಯಾಟನ್ ಭಾರತಕ್ಕೆ ಬಂದು ೪೦ ದಿನಗಳು ಆಗಿದ್ದುವು. ವಿವಿಧ ನಾಯಕರು ಒಮ್ಮತಕ್ಕೆ ಬರದೇ ಇದ್ದುದರಿಂದ ಅವರು ಅಧಿಕಾರ ಹಸ್ತಾಂತರಕ್ಕೆ ತಮ್ಮದೇ ಆದ ಒಂದು ಸೂತ್ರವನ್ನು ರಚಿಸಿ ೧೯೪೭ರ ಮೇ ೨ರಂದು ತಮ್ಮ ಇಬ್ಬರು ಪ್ರಧಾನ ಸಹಾಯಕರು ಇಸ್‌ಮೇ ಮತ್ತು ಅಬೆಲ್ ಮೂಲಕ ಲಂಡನ್‌ಗೆ ಕಳುಹಿಸಿದರು. ಆ ಸೂತ್ರದ ಪ್ರಕಾರ ಪಂಜಾಬ್ ಮತ್ತು ಬಂಗಾಳವನ್ನು ವಿಭಜಿಸಿ ಅಧಿಕಾರವನ್ನು ನೇರವಾಗಿ ಬ್ರಿಟಿಷ್ ಪ್ರಾಂತ್ಯಗಳು ಮತ್ತು ದೇಶೀಯ ರಾಜ್ಯಗಳಿಗೆ ವರ್ಗಾಯಿಸಲಾಗುವುದು. ಅನಂತರ ಅಧಿಕಾರ ಪಡೆದ ಆ ರಾಜ್ಯಗಳು ಒಂದು ಒಕ್ಕೂಟವನ್ನು ರಚಿಸಿಕೊಳ್ಳಬೇಕೆ ಅಥವಾ ಬೇಡವೆ – ಅನ್ನುವುದನ್ನು

ತೀರ್ಮಾನಿಸಿಕೊಳ್ಳುವುವು.[೨೭೫]

ಇದೊಂದು ಅಪಾಯಕಾರಿ ಸೂತ್ರ. ಇದರಿಂದ ದೇಶ ಛಿದ್ರವಾಗುವುದು ಖಂಡಿತ. ವಿ.ಪಿ. ಮೆನನ್‌ರವರು ಪಟೇಲರಿಗೆ ದೂರವಾಣಿ ಕರೆ ಮಾಡಿ ಈ ಸೂತ್ರವು ಲಂಡನ್‌ಗೆ ಹೋಗಿರುವ ವಿಷಯವನ್ನು ತಿಳಿಸಿದರು. ತಕ್ಷಣ ಸರ್ದಾರರು ಆ ಸೂತ್ರವನ್ನು ನಿಷ್ಫಲಗೊಳಿಸಲು ಯೋಚಿಸಿದರು. ಹಾಗೆ ಮಾಡಬೇಕಾದರೆ ಲಂಡನ್ ಸರ್ಕಾರದ ಬೆಂಬಲ ಅಗತ್ಯ ಎಂಬುದನ್ನು ಗ್ರಹಿಸಿದ ಸರ್ದಾರರು 'ಡೊಮಿನಿಯನ್ ಸ್ಟೇಟಸ್'ಗೆ ತಮ್ಮ ಒಪ್ಪಿಗೆಯನ್ನು ಸೂಚಿಸುವುದು ಅತ್ಯಗತ್ಯ ಎಂದು ತೀರ್ಮಾನಿಸಿದರು. ಅವರು ಎ.ಪಿ.ಎ.ಗೆ ಒಂದು ಸಂದರ್ಶನ ನೀಡಿ, "ಆ ತೀರ್ಮಾನವನ್ನು ಪ್ರಕಟಿಸಿದರು. ಅವರೆಂದರು, "ಡೊಮಿನಿಯನ್ ಸ್ಟೇಟಸ್‌ನಿಂದ ಕೇಂದ್ರ ಸರ್ಕಾರವು ಒಂದು ಬಲಿಷ್ಠ ಕೇಂದ್ರವನ್ನು ನಿರ್ಮಿಸುತ್ತದೆ ಮತ್ತು ಅರಾಜಕತೆಯನ್ನು ಹತ್ತಿಕ್ಕಲು ಬೇಕಾದ ಅಧಿಕಾರ ಅದಕ್ಕೆ ಇರುತ್ತದೆ." ಅವರು ಈ ಅಭಿಪ್ರಾಯಕ್ಕೆ ನೆಹರುರವರ ಬೆಂಬಲವನ್ನು ಪಡೆದುಕೊಂಡರು. ವಿ.ಪಿ. ಮೆನನ್, ಡೊಮಿನಿಯನ್ ಸ್ಟೇಟಸ್‌ಗೆ ಪಟೇಲ್ ಮತ್ತು ನೆಹರು ಒಪ್ಪಿರುವ ವಿಷಯವನ್ನು ವೈಸ್‌ರಾಯ್‌ಗೆ ಮುಟ್ಟಿಸಿದರು. ತಕ್ಷಣ ಮೌಂಟ್‌ಬ್ಯಾಟನ್‌ರವರು ಆ ಸಂತಸದ ಸುದ್ದಿಯನ್ನು ಲಂಡನ್‌ಗೆ ಕೇಬಲ್ ಮೂಲಕ ಕಳುಹಿಸಿದರು.[೨೭೬]

ಲಾರ್ಡ್ಸ್ ಸಭೆಯಲ್ಲಿ ಚರ್ಚಿಲ್ಲನ ಕನ್‌ಸರ್‌ವೇಟಿವ್ ಪಕ್ಷಕ್ಕೆ ಬಹುಮತ ಇದ್ದುದರಿಂದ, ಅದರ ಒಪ್ಪಿಗೆಯನ್ನು ಪಡೆಯಲು ಡೊಮಿನಿಯನ್ ಸ್ಟೇಟಸ್‌ಗೆ ಭಾರತದ ಒಪ್ಪಿಗೆ ಮುಖ್ಯವಾಗಿತ್ತು. ಅದರಿಂದ ಭಾರತ ಕಾಮನ್‌ವೆಲ್ತ್‌ನಲ್ಲಿ ಉಳಿಯುತ್ತಿತ್ತು. ಅದು ಚರ್ಚಿಲ್‌ಗೆ ಸಮಾಧಾನ ತರುತ್ತಿತ್ತು.

ಮೇ ೧೦ರಂದು ಆ ಸೂತ್ರಕ್ಕೆ ಒಪ್ಪಿಗೆಯು ಪ್ರಧಾನಮಂತ್ರಿ ಆಟ್ಲಿಯಿಂದ ಬಂದಿತು. ಅಷ್ಟು ಹೊತ್ತಿಗೆ ವೈಸ್‌ರಾಯ್ ವಿಶ್ರಾಂತಿಗಾಗಿ ಸಿಮ್ಲಾಕ್ಕೆ ತೆರಳಿದ್ದರು. ಅವರ ವಿಶೇಷ ಆಹ್ವಾನದ ಮೇಲೆ ನೆಹರುರವರು ಸಹ ಸಿಮ್ಲಾದಲ್ಲಿ ಇದ್ದರು. ಒಪ್ಪಿಗೆ ದೊರೆತ ಸೂತ್ರವನ್ನು ವೈಸ್‌ರಾಯ್‌ರವರು ನೆಹರುಗೆ ತೋರಿಸಿದರು. ಆ ಸೂತ್ರಕ್ಕೆ ನೆಹರುರವರ ಪ್ರತಿಕ್ರಿಯೆ ಭಯಂಕರವಾಗಿತ್ತು. ಆ ಸೂತ್ರ ದೇಶವನ್ನು ಛಿದ್ರ ಛಿದ್ರ ಮಾಡುತ್ತದೆ. ಅಂತಃಕಲಹವನ್ನು ಪ್ರಚೋದಿಸುತ್ತದೆ ಮತ್ತು ಅರಾಜಕತೆಯನ್ನು ಸೃಷ್ಟಿಸುತ್ತದೆ – ಎಂದರು ನೆಹರು. ಮೌಂಟ್‌ಬ್ಯಾಟನ್‌ಗೆ ದಿಕ್ಕು ತೋಚದಂತಾಯಿತು. ಅವರ ಉತ್ಸಾಹ ಮಾಯವಾಯಿತು. ತಮ್ಮ ಸ್ನೇಹಿತ ನೆಹರು ಇಂತಹ ಬಾಂಬು ಹಾಕುವರೆಂದು ಅವರು ನಿರೀಕ್ಷಿಸಿರಲಿಲ್ಲ.[೨೭೭]

ಆ ಸಮಯದಲ್ಲಿ ಅವರ ನೆರವಿಗೆ ವಿ.ಪಿ. ಮೆನನ್ ಬಂದರು. ತುರ್ತು ಕರೆಯ ಮೇಲೆ ಅವರು ಮೇ ೧೧ರಂದು ವೈಸ್‌ರಾಯ್ ಅನ್ನು ಭೇಟಿ ಮಾಡಿದರು. ಆಗ ವೈಸ್‌ರಾಯ್ ನಿಸ್ತೇಜರಾಗಿ ತಮ್ಮ ಕೊಠಡಿಯಲ್ಲಿ ಶತಪಥ ಹಾಕುತ್ತಿದ್ದರು. ವೈಸ್‌ರಾಯ್ ಕೋರಿಕೆಯ ಮೇಲೆ ಮೆನನ್‌ರವರು ತಾವು ಹಿಂದೆ ವಲ್ಲಭಭಾಯ್‌ರವರ ಒಪ್ಪಿಗೆ ಪಡೆದಿದ್ದ ಆದರೆ ಅದುವರೆವಿಗೆ ಯಾರಿಗೂ ಹೇಳದೆ ಗೋಪ್ಯವಾಗಿ ಇಟ್ಟಿದ್ದ ಸೂತ್ರವನ್ನು ಅವರ ಮುಂದಿಟ್ಟರು. ಉತ್ತೇಜಿತರಾದ ವೈಸ್‌ರಾಯ್ ಆ ಸೂತ್ರಕ್ಕೆ ನೆಹರುರವರ ಪ್ರತಿಕ್ರಿಯೆಯನ್ನು ತಿಳಿಯುವಂತೆ ಮೆನನ್‌ಗೆ ಸೂಚಿಸಿದರು. ಅವರ ಸೂತ್ರಕ್ಕೆ ನೆಹರುರವರ ಪ್ರತಿಕ್ರಿಯೆ ಸಕಾರಾತ್ಮಕವಾಗಿತ್ತು. ಅದನ್ನು ಮೆನನ್‌ರವರು ವೈಸ್‌ರಾಯ್‌ಗೆ ತಿಳಿಸಿದರು ಮತ್ತು ದೂರವಾಣಿ ಮೂಲಕ ಪಟೇಲರಿಗೂ ಸಹ ತಿಳಿಸಿದರು.

ನೆಹರುರವರು ಪಟೇಲ್‌ಗೆ ಕರೆ ಮಾಡಿ ಮೆನನ್ ಸೂತ್ರದ ಸಾರಾಂಶವನ್ನು ತಿಳಿಸಿ ಅವರ ಅಭಿಪ್ರಾಯವನ್ನು ಕೇಳಿದರು. "ಆ ಸೂತ್ರವನ್ನು ಬಿಟ್ಟರೆ ಬೇರೆ ಮಾರ್ಗವಿಲ್ಲ" ಎಂದರು ಪಟೇಲ್. ಪಟೇಲ್ ತಮ್ಮ ಕಡೆಗೆ ಇದ್ದಾರೆಂದು ನೆಹರುಗೆ ಸಮಾಧಾನವಾಯಿತು. ಆದರೆ ಅವರಿಗೆ ಆತಂಕಗಳಿದ್ದುವು: ಕಾರ್ಯಕಾರಿ ಸಮಿತಿ ಅದನ್ನು ಒಪ್ಪುವುದೆ? ಬಾಪು ಏನೆನ್ನಬಹುದು? ಇತ್ಯಾದಿ. ದೂರವಾಣಿಯಲ್ಲಿ ಪಟೇಲ್ ಹೇಳಿದರು, "ಅದನ್ನು ನನಗೆ ಬಿಡಿ. ಅದು ನನ್ನ ಕೆಲಸ." "ಹಾಗಾದರೆ ನಾನು ಮುಂದುವರೆಯಬಹುದೆ?" ಎಂದರು ನೆಹರು. ಪಟೇಲ್ ದೃಢ ಧ್ವನಿಯಲ್ಲಿ ಉತ್ತರಿಸಿದರು," ಖಂಡಿತ ಮುಂದುವರಿಯಬಹುದು."

ನೆಹರು ಮತ್ತು ಪಟೇಲರ ಒಪ್ಪಿಗೆ ಇದೆ ಎಂದು ತಿಳಿದ ಮೇಲೆ ಮೌಂಟ್ ಬ್ಯಾಟನ್‌ರವರು ಮೆನನ್ ಸೂತ್ರ ಅಥವಾ ವಿಭಜನಾ ಸೂತ್ರದ ಬಗೆಗೆ ಮುಂದು ವರೆದರು. ಆ ಸೂತ್ರದ ಪ್ರಕಾರ ಅಧಿಕಾರವು ಎರಡು ಘಟಕಗಳಿಗೆ ಹಸ್ತಾಂತರಿಸಲ್ಪಡು ವುದು. ಈಗ ಇರುವ ಸಂವಿಧಾನ ರಚನಾ ಸಭೆ ಮತ್ತು ಸಿಂದ್, ಬಲೂಚಿಸ್ತಾನ್, ಪಶ್ಚಿಮ ಪಂಜಾಬ್ ಮತ್ತು ಪೂರ್ವ ಬಂಗಾಳದ ಸದಸ್ಯರನ್ನು ಒಳಗೊಂಡು ರಚಿತವಾಗುವ ಇನ್ನೊಂದು ಸಂವಿಧಾನ ರಚನಾ ಸಭೆ ಆ ಎರಡು ಘಟಕಗಳು. ಮೊದಲನೆಯದರ ಮೂಲಕ ಪಾಕಿಸ್ತಾನ ಡೊಮಿನಿಯನ್ ಸ್ಟೇಟಸ್ ಅನ್ನು ಪಡೆಯು ವುದು. ಎರಡು ಡೊಮಿನಿಯನ್‌ಗಳು ಅವು ಬಯಸಿದಾಗ ಕಾಮನ್‌ವೆಲ್ತ್‌ನಿಂದ ಹೊರ ಹೋಗಬಹುದು. ವಾಯುವ್ಯ ಗಡಿನಾಡು ಮತ್ತು ಅಸ್ಸಾಂನ ಸೈಲತ್ ಜಿಲ್ಲೆ ಭಾರತವನ್ನು ಸೇರಬೇಕೆ ಎನ್ನುವುದನ್ನು ಜನಮತ ಸಂಗ್ರಹದ ಮೂಲಕ ತೀರ್ಮಾನಿಸಲಾಗುವುದು. ದೇಶೀಯ ರಾಜ್ಯಗಳಿಗೆ ಭಾರತವನ್ನು ಸೇರುವ ಅಥವಾ

ಪಾಕಿಸ್ತಾನವನ್ನು ಸೇರುವ ಅಥವಾ ಸ್ವಂತಂತ್ರವಾಗಿ ಇರುವ ಹಕ್ಕು ಇರುವುದು. ರಕ್ಷಣಾದಳವನ್ನು ಹಂಚಲಾಗುವುದು. ಪಂಜಾಬ್ ಮತ್ತು ಬಂಗಾಳದಲ್ಲಿ ಗಡಿ ನಿರ್ಧಾರಕ್ಕೆ ಒಂದು ಸಮಿತಿಯನ್ನು ರಚಿಸಲಾಗುವುದು.[೨೭೮]

೧೪.೧೨ ವಿಭಜನಾ ಸೂತ್ರಕ್ಕೆ ಅಸ್ತು

ಸಿಮ್ಲಾದಿಂದ ದೆಹಲಿಗೆ ಹಿಂತಿರುಗಿದ ನಂತರ ಮೌಂಟ್‌ಬ್ಯಾಟನ್‌ರವರು ವಿಭಜನಾ ಸೂತ್ರವನ್ನು ಪಟೇಲ್, ನೆಹರು, ಜಿನ್ನಾ, ಲಿಯಾಖತ್ ಮತ್ತು ಬಲದೇವ್ ಸಿಂಗ್‌ಗೆ ನೀಡಿದರು. ನೆಹರು ಮೇ ೧೭ರಂದು ತಮ್ಮ ಲಿಖಿತ ಒಪ್ಪಿಗೆ ಯನ್ನು ನೀಡಿದರು. ನೆಹರು ತಮ್ಮ ಒಪ್ಪಿಗೆಯಲ್ಲಿ, "ತುಂಬಾ ವಿಷಾದದಿಂದ ಮತ್ತು ಬಹಳಷ್ಟು ಮನೋವ್ಯಾಕುಲದಿಂದ ನಾವು ಈ ಪ್ರಸ್ತಾವನೆಗಳನ್ನು ಒಪ್ಪಿದ್ದೇವೆ..... ನಾನು ಸರ್ದಾರ ಪಟೇಲರೊಡನೆ ಸಮಾಲೋಚಿಸಿದ್ದೇನೆ ಮತ್ತು ಈ ಪತ್ರವು ಸಾಮಾನ್ಯವಾಗಿ ಅವರ ಅಭಿಪ್ರಾಯಗಳನ್ನು ಸಹ ಪ್ರತಿನಿಧಿಸುತ್ತದೆ," ಎಂದು ಬರೆದಿದ್ದರು.[೨೭೯]

ಜಿನ್ನಾ ಸಹಿ ಮಾಡಿದ ಲಿಖಿತ ಒಪ್ಪಿಗೆಯನ್ನು ಕೊಡಲಿಲ್ಲ, ಮೌಂಟ್‌ಬ್ಯಾಟನ್ ರವರು ವಿ.ಪಿ. ಮೆನನ್‌ರವರನ್ನು ಜೊತೆಯಲ್ಲಿ ಕರೆದುಕೊಂಡು ಬ್ರಿಟನ್ ಪ್ರಧಾನಮಂತ್ರಿಯ ಒಪ್ಪಿಗೆ ಪಡೆಯಲು ಲಂಡನ್‌ಗೆ ಪ್ರಯಾಣ ಮಾಡಿದರು.

ವಲ್ಲಭಭಾಯ್ ಪಟೇಲ್ ಮತ್ತು ಅವರ ಮಗಳು ಮಣಿಬೆನ್ ಹಾಗೂ ನೆಹರು ಮತ್ತು ಅವರ ಮಗಳು ಇಂದಿರಾ ಮುಸ್ಸೂರಿಗೆ ಪ್ರಯಾಣ ಮಾಡಿದರು. ಅದಕ್ಕೆ ಮುನ್ನ ಪಟೇಲರು ಪಾಟ್ನಾದಲ್ಲಿದ್ದ ಗಾಂಧೀಜಿಗೆ ಪತ್ರ ಬರೆದು, "ಇಲ್ಲಿಯ ಬೆಳವಣಿಗೆಗಳನ್ನು ಪತ್ರದಲ್ಲಿ ತಿಳಿಸುವುದು ಸುಲಭವಲ್ಲ. ನೀವೂ ಮುಸ್ಸೂರಿಗೆ ಬನ್ನಿ. ನಾವು ಭೇಟಿಯಾದಾಗ ಮಾತನಾಡೋಣ" ಎಂದು ತಿಳಿಸಿದರು. ಆದರೆ ಗಾಂಧೀಜಿ ಮುಸ್ಸೂರಿಗೆ ಹೋಗಲಿಲ್ಲ. "ಮುಸ್ಸೂರಿಗೆ ಬರಲು ನನಗೆ ಯಾವ ಉತ್ಸಾಹವೂ ಇಲ್ಲ," ಎಂದು ಉತ್ತರಿಸಿದರು. ಪಟೇಲ್ ಮತ್ತು ನೆಹರು ದೇಶ ವಿಭಜನೆಗೆ ಒಪ್ಪಿಗೆ ಕೊಟ್ಟದ್ದು ಅವರಿಗೆ ಒಪ್ಪಿಗೆ ಆಗಿರಲಿಲ್ಲ. ಆದರೆ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರು ಪಟೇಲರ ಕಾರ್ಯವನ್ನು ಮೆಚ್ಚಿದರು. ಸರೋಜಿನಿ ನಾಯ್ಡುರವರು ಮೇ ೧೧ರಂದು ಪಟೇಲರನ್ನು "ನಿರ್ಧಾರಗಳ ವ್ಯಕ್ತಿ ಮತ್ತು ಕಾರ್ಯಶೀಲ ವ್ಯಕ್ತಿ" ಎಂದು ಕರೆದರು. ಅದೇ ದಿನ ಕಾಂಗ್ರೆಸ್ ಅಧ್ಯಕ್ಷ ಕೃಪಲಾನಿಯವರು "ನಾವು ಕಗ್ಗಂಟಾದ ಸಮಸ್ಯೆಗಳನ್ನು ಎದುರಿಸಿದಾಗ ಮತ್ತು ಗಾಂಧೀಜಿಯವರ ಸಲಹೆ ಲಭ್ಯವಿಲ್ಲದಿದ್ದಾಗ, ಸರ್ದಾರರನ್ನೇ ನಮ್ಮ ನಾಯಕನೆಂದು ಪರಿಗಣಿಸುತ್ತೇವೆ," ಎಂದರು.[೨೮೦]

ಮಸ್ಸೂರಿಯಲ್ಲಿದ್ದ ಬಿರ್ಲಾ ಸದನದಲ್ಲಿ ಹತ್ತು ದಿನಗಳ ಕಾಲ ವಿಶ್ರಾಂತಿ ಪಡೆದು ಪಟೇಲರು ಮೇ ೨೮ರಂದು ದೆಹಲಿಗೆ ಹಿಂತಿರುಗಿದರು. ಆ ವೇಳೆಗೆ ಗಾಂಧೀಜಿ ದೆಹಲಿಗೆ ಹಿಂತಿರುಗಿದ್ದರು. ಪಟೇಲರು ೨೮ರ ಸಂಜೆ ಭಂಗಿ ಕಾಲೋನಿಯಲ್ಲಿ ತಂಗಿದ್ದ ಗಾಂಧೀಜಿಯನ್ನು ಭೇಟಿ ಮಾಡಿ ಪ್ರತಿ ದಿನ ೯೦ ನಿಮಿಷಗಳ ಕಾಲ ಚರ್ಚಿಸಿದರು. ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆ ಮೇ ೩೧, ಜೂನ್ ೧ ಮತ್ತು ಜೂನ್ ೩ರಂದು ಭಂಗಿ ಕಾಲೋನಿಯಲ್ಲೇ ವಿಭಜನಾ ಸೂತ್ರವನ್ನು ಪರಿಶೀಲಿಸಲು ನಡೆಯಿತು. ಗಾಂಧೀಜಿಯವರು, "ಆ ಸೂತ್ರವನ್ನು ನಾನು ಒಪ್ಪುವುದಿಲ್ಲ, ಆದರೆ ನಿಮ್ಮ ಹಾದಿಯಲ್ಲಿ ಅಡ್ಡ ಬರುವುದಿಲ್ಲ" ಎಂದರು.

ತಮ್ಮ ಮೂರು ದಿನಗಳ ಮಾತುಕತೆಯಲ್ಲಿ ಪಟೇಲರು ಗಾಂಧೀಜಿಗೆ ಏನು ಹೇಳಿದರು ಎನ್ನುವುದು ಯಾರಿಗೂ ಗೊತ್ತಾಗಲಿಲ್ಲ. ಆದರೆ ಪಟೇಲರಿಗೆ ಹತ್ತಿರ ದವರಾಗಿದ್ದ ಹೆಚ್.ಎಂ. ಪಟೇಲರು ಸಂಗ್ರಹಿಸಿದ ವಿಷಯದ ಪ್ರಕಾರ ವಲ್ಲಭ ಭಾಯ್‌ರವರು ಗಾಂಧೀಜಿಗೆ ಸ್ಪಷ್ಟವಾಗಿ ಮತ್ತು ನೇರವಾಗಿ, "ಇದು ಅಂತರ್ಯುದ್ಧ ಅಥವಾ ವಿಭಜನೆಯ ಪ್ರಶ್ನೆ. ಅಂತರ್ಯುದ್ಧ ವಿಷಯ ಹೇಳುವುದಾದರೆ, ಅದು ಎಲ್ಲಿ ಆರಂಭವಾಗುತ್ತದೆ ಮತ್ತು ಎಲ್ಲಿ ಮುಕ್ತಾಯವಾಗುತ್ತದೆ ಎನ್ನುವುದನ್ನು ಯಾರೂ ಹೇಳಲಾಗುವುದಿಲ್ಲ. ನಿಜ, ಹಿಂದೂಗಳು ಅಂತಿಮವಾಗಿ ಗೆಲ್ಲಬಹುದು, ಆದರೆ ಆ ಗೆಲವು ಬರುವುದು ಮೊದಲೇ ಹೇಳಲು ಸಾಧ್ಯವಿಲ್ಲದ ಮತ್ತು ಭಾರಿ ಬೆಲೆಯನ್ನು ತೆತ್ತ ಮೇಲೆ ಮಾತ್ರ," ಎಂದು ಹೇಳಿದರು. ಗಾಂಧೀಜಿ ಇಷ್ಟವಿಲ್ಲದ ಮನಸ್ಸಿನಿಂದ ಸಮ್ಮತಿಸಿದರು.[೨೮೧]

ನೆಹರು, ರಾಜಾಜಿ, ಪ್ರಸಾದ್, ಕೃಪಲಾನಿ ಮತ್ತು ಇತರ ಕಾರ್ಯಕಾರಿ ಸಮಿತಿಯ ಸದಸ್ಯರು ಸಹ ಪಟೇಲರ ರೀತಿಯಲ್ಲೇ ಗಾಂಧೀಜಿಗೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಪೂರ್ವ ಪಂಜಾಬಿನ ಹಿಂದೂಗಳು ಮತ್ತು ಸಿಕ್ಖರು ಹಾಗೂ ಪಶ್ಚಿಮ ಬಂಗಾಳದ ಹಿಂದೂಗಳು ತಮ್ಮ ಪ್ರಾಂತ್ಯಗಳ ವಿಭಜನೆಗೆ ಈಗಾಗಲೇ ಜೋರಾಗಿ ಒತ್ತಾಯ ಮಾಡುತ್ತಿದ್ದರು. ಅದರಿಂದ ಪಟೇಲರ ಪರಿಹಾರಕ್ಕೆ ಜನ ಬೆಂಬಲವಿತ್ತೆಂದೂ ಹೇಳಬಹುದು. ಜೂನ್ ೧೦ರ ತಮ್ಮ ಪ್ರಾರ್ಥನಾ ಸಭೆಯಲ್ಲಿ ಗಾಂಧೀಜಿಯವರು 'ನಾನು ಸಾರ್ವಜನಿಕ ಅಭಿಪ್ರಾಯವನ್ನು ನಿರ್ಭಂದ ಪಡಿಸಲಾರೆ' ಎಂದೂ ಮತ್ತು 'ಮುಸ್ಲಿಮೇತರ ಭಾರತ ಬಹಳವಾಗಿ ವಿಭಜನೆಯ ಪರವಾಗಿ ಇದೆ' ಎಂದೂ ಹೇಳಿದರು.[೨೮೨]

ಲಾರ್ಡ್ ಮೌಂಟ್‌ಬ್ಯಾಟನ್‌ರವರು ಮೇ ೩೦ರ ರಾತ್ರಿ ಲಂಡನ್‌ನಿಂದ ಭಾರತಕ್ಕೆ ಹಿಂತಿರುಗಿದರು. ಅವರು ಲಂಡನ್‌ನಲ್ಲಿ ಇದ್ದಾಗ ಜಿನ್ನಾ ಎರಡು

ಹೊಸ ಬೇಡಿಕೆಗಳನ್ನು ಒಪ್ಪಲು ಒತ್ತಾಯಿಸಿದ್ದನು. ಕಲ್ಕತ್ತ ನಗರ ಆರು ತಿಂಗಳ ಕಾಲ ಸಂಯುಕ್ತ ನಿಯಂತ್ರಣದಲ್ಲಿರಬೇಕೆಂಬುದು ಮೊದಲನೆಯದು. ಪಶ್ಚಿಮ ಪಾಕಿಸ್ತಾನ ಮತ್ತು ಪೂರ್ವ ಪಾಕಿಸ್ತಾನಗಳನ್ನು ಸೇರಿಸಲು ಭಾರತದೊಳಗೆ ೩೦೦ ಮೈಲಿಗಳ ದಾರಿಯನ್ನು ನಿರ್ಮಿಸಬೇಕೆಂಬುದು ಎರಡನೆಯದು. ಮೌಂಟ್ ಬ್ಯಾಟನ್ ರವರು ಜಿನ್ನಾನ ಆ ಎರಡು ಬೇಡಿಕೆಗಳ ಬಗೆಗೆ ಸರ್ದಾರರ ಅಭಿಪ್ರಾಯವನ್ನು ತಿಳಿಯಲು ವಿ.ಪಿ. ಮೆನನ್‌ರವರನ್ನು ಕಳುಹಿಸಿದರು. ಪಟೇಲರು ಮೊದಲನೆಯ ಬೇಡಿಕೆಯ ಬಗೆಗೆ "ಆರು ಘಂಟೆಗಳೂ ಸಾಧ್ಯವಿಲ್ಲ," ಎಂದು ಕಟುವಾಗಿ ಮೊಟಕಾಗಿ ಹೇಳಿದರು. ಎರಡನೆಯ ಬೇಡಿಕೆಯನ್ನು ಅವರು, "ಅದೊಂದು ವಿಚಿತ್ರ ಅರ್ಥಹೀನ ಮಾತು. ಅದನ್ನು ಪರಿಗಣಿಸಬೇಕಾಗಿಯೇ ಇಲ್ಲ" ಎಂದರು. ಅಲ್ಲಿಗೇ ಅವರಡೂ ಬೇಡಿಕೆಗಳು ಸತ್ತು ಹೋದುವು.[೨೮೩]

ಮೌಂಟ್‌ಬ್ಯಾಟನ್‌ರವರು ಜೂನ್ ೨ರಂದು ತಮ್ಮ ನಿವಾಸದಲ್ಲಿ ಒಂದು ಸಭೆ ನಡೆಸಿದರು. ಆ ಸಭೆಯಲ್ಲಿ ಕಾಂಗ್ರೆಸ್ ಪರವಾಗಿ ನೆಹರು, ಪಟೇಲ್ ಮತ್ತು ಕೃಪಲಾನಿ, ಸಿಕ್ಖರ ಪರವಾಗಿ ಬಲದೇವ ಸಿಂಗ್ ಮತ್ತು ಮುಸ್ಲಿಂ ಲೀಗ್ ಪರವಾಗಿ ಜಿನ್ನಾ, ಲಿಯಾಖತ್ ಆಲಿ ಖಾನ್ ಮತ್ತು ಅಬ್ದುರ್ ನಿಸ್ತಾರ್ ಭಾಗವಹಿಸಿದ್ದರು. ವೈಸ್‌ರಾಯ್ ಅವರು ತಮ್ಮ ಆ ಮೂರು ಸೂತ್ರಕ್ಕೆ ತಂಡದವರ ಒಪ್ಪಿಗೆಯನ್ನು ಕಳುಹಿಸುವಂತೆ ಕೋರಿದರು ಮತ್ತು ಮಾರನೆಯ ಸಂಜೆ ಬಾನುಲಿಯ ಮೂಲಕ ಭಾರತದ ಜನರಿಗೆ ತಮ್ಮ ತೀರ್ಮಾನವನ್ನು ಪ್ರಸಾರ ಮಾಡುವುದರಲ್ಲಿ ತಮ್ಮೊಡನೆ ಇರಬೇಕೆಂದು ನೆಹರು, ಜಿನ್ನಾ ಮತ್ತು ಬಲ ದೇವಸಿಂಗ್‌ರವರನ್ನು ಆಹ್ವಾನಿಸಿದರು. ಪಟೇಲರು ನಗುತ್ತಾ ಹೇಳಿದರು, "ನಿಯಮಗಳ ಪ್ರಕಾರ ಪ್ರಸಾರ ಭಾಷಣ ಮಾಡುವುದಕ್ಕೆ ಮುನ್ನ ಅದರ ಕರಡನ್ನು ವಾರ್ತಾ ಮತ್ತು ಪ್ರಸಾರ ಮಂತ್ರಿಗೆ ಒಪ್ಪಿಸಬೇಕು," ಎಂದರು. ಪಟೇಲ್‌ರವರು ವಾರ್ತಾ ಮತ್ತು ಪ್ರಸಾರ ಮಂತ್ರಿಯೂ ಆಗಿದ್ದರು.

ಜೂನ್ ೨ರಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ ವಿಭಜನೆಗೆ ಪಟೇಲ್ ಮತ್ತು ನೆಹರು ನೀಡಿದ್ದ ಒಪ್ಪಿಗೆಯನ್ನು ಅನುಮೋದಿಸಿತು. ನಂತರ ಜೂನ್ ೩ರಂದು ಕೃಪಲಾನಿಯವರು ಕಾಂಗ್ರೆಸ್ಸಿನ ಒಪ್ಪಿಗೆ ಪತ್ರವನ್ನು ವೈಸ್‌ರಾಯ್ ಭವನಕ್ಕೆ ರವಾನಿಸಿದರು. ಬಲದೇವ ಸಿಂಗ್, ಸಿಕ್ಖರ ಪರವಾಗಿ, ಹಾಗೆಯೇ ಮಾಡಿದರು. ಆದರೆ ಜಿನ್ನಾ ವೈಸ್‌ರಾಯ್‌ಅನ್ನು ಭೇಟಿ ಮಾಡಿ, ಒಪ್ಪಿಗೆ ಪತ್ರ ನೀಡಲು ತಮಗೆ ಅಧಿಕಾರವಿಲ್ಲವೆಂದೂ, ಲೀಗ್ ಸಮಿತಿಯಲ್ಲಿ ಚರ್ಚಿಸಬೇಕೆಂದೂ, ಆ ಸಮಿತಿಯ ಸಭೆ ಕರೆಯಲು ಅನೇಕ ದಿವಸಗಳು ಬೇಕೆಂದು ತಕರಾರು

ತೆಗೆದರು. ವೈಸ್‌ರಾಯ್‌ರವರ ಯಾವ ಮಾತಿಗೂ ಜಿನ್ನಾ ಜಗ್ಗಲಿಲ್ಲ. ಕಿರಿಕಿರಿಗೊಂಡ ವೈಸ್‌ರಾಯ್ ಮುಂದಿನ ಸಭೆಯಲ್ಲಿ ತಲೆಯಾಡಿಸಿ ಒಪ್ಪಿಗೆ ಸೂಚಿಸಿದರೆ ಸಾಕು ಎಂದರು. ಜಿನ್ನಾ ಒಪ್ಪಿದ. ಅಂದು ನಡೆದ ಸಭೆಯಲ್ಲಿ ಜಿನ್ನಾ ಹಾಗೇ ಮಾಡಿದ. ಅಂದೇ ಲಂಡನ್‌ನಲ್ಲಿ ಪ್ರಧಾನಿ ಆಟ್ಲಿ ಆ ಸೂತ್ರವನ್ನು ಹೌಸ್ ಆಫ್ ಕಾಮನ್ಸ್ ಮುಂದೆ ಇಟ್ಟರು.[೨೮೪] ಮಾರನೆಯ ದಿನ ಪತ್ರಕರ್ತರೊಡನೆ ಮಾತನಾಡುವಾಗ ಮೌಂಟ್‌ಬ್ಯಾಟನ್ ಪ್ರಾಸಂಗಿಕವಾಗಿ, "ಆಗಸ್ಟ್ ೧೫ರ ಹೊತ್ತಿಗೆ ಅಧಿಕಾರ ಹಸ್ತಾಂತರ ಆಗಬಹುದೆಂದು ಕಾಣುತ್ತದೆ," ಎಂದರು. ಆಟ್ಲಿಯವರು ಅಧಿಕಾರ ಹಸ್ತಾಂತರಕ್ಕೆ ಜೂನ್ ೧೯೪೮ನ್ನು ಅಂತಿಮ ಗಡುವು ಎಂದಿದ್ದರು. ಅದನ್ನು ಮೌಂಟ್‌ಬ್ಯಾಟನ್ ೧೯೪೭ರ ಆಗಸ್ಟ್ ೧೫ಕ್ಕೇ ಹಿಂದಕ್ಕೆ ತಂದರು.

ಕಾಂಗ್ರೆಸ್ ಕಾರ್ಯಕಾರಿ ಸಮಿತಿ ನೀಡಿದ್ದ ಒಪ್ಪಿಗೆಯನ್ನು ಕುರಿತು ಚರ್ಚಿಸಲು ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಜೂನ್ ೧೪ ಮತ್ತು ೧೫ ರಂದು ಸಭೆ ನಡೆಸಿತು. ಗಾಂಧೀಜಿಯವರು ತಮ್ಮ ಅಭಿಪ್ರಾಯ ಎಲ್ಲರಿಗೂ ತಿಳಿದಿದೆ, ಆದರೂ ಕಾರ್ಯಕಾರಿ ಸಮಿತಿಯ ತೀರ್ಮಾನವನ್ನು ಒಪ್ಪಬೇಕೆಂದು ಹೇಳುತ್ತೇನೆ, ಎಂದರು. ಬ್ರಿಟನ್ ಮತ್ತು ಮುಸ್ಲಿಂ ಲೀಗ್ ಜೊತೆ ಕಾಂಗ್ರೆಸ್ ಪರವಾಗಿ ಒಪ್ಪಂದ ಮಾಡಿಕೊಂಡಿರುವ ಹಳೆಯ ಮತ್ತು ನುರಿತ ದೇಶ ಸೇವಕರನ್ನು ಬದಲಾಯಿಸುವುದು ಅಸಾಧ್ಯವಲ್ಲದೇ ಹೋದರೂ, ಅತ್ಯಂತ ಬುದ್ಧಿಹೀನವಾದದ್ದು ಎಂದರು ಗಾಂಧೀಜಿ. ನೆಹರು, ಆಜ಼ಾದ್, ಪಂತ್ ಮತ್ತು ಕೃಪಲಾನಿ ಕಾರ್ಯಕಾರಿ ಸಮಿತಿಯ ಅಭಿಪ್ರಾಯವನ್ನು ಸಮರ್ಥಿಸಿದರು. ಪುರುಷೋತ್ತಮದಾಸ್ ತಂಡನ್ ಮತ್ತು ಸಿಂದ್‌ನ ಚೈತ್ರಮ್ ಗಿದ್ವಾನಿ ಅದನ್ನು ವಿರೋಧಿಸಿ ಭಾವಾವೇಶದಿಂದ ಮಾತನಾಡಿದರು. ರಾಜಕೀಯ ಅನುಕೂಲಕ್ಕಾಗಿ ಮುಸ್ಲಿಂ ಬಹು ಸಂಖ್ಯಾತ ಪ್ರದೇಶಗಳಲ್ಲಿ ಹಿಂದೂಗಳ ಅತ್ಯುನ್ನತ ತ್ಯಾಗದ ಬಗೆಗೆ ಗಿದ್ವಾನಿಯವರು ಮಾತನಾಡಿದಾಗ ಅನೇಕರು ಕಣ್ಣೀರು ಸುರಿಸಿದರು. ಮೌಲಾನ ಹಿಫ಼್ಜ಼ುರ್ ರಹಮಾನ್ ವಿಭಜನೆಯನ್ನು ಕಟುವಾಗಿ ವಿರೋಧಿಸಿದರು. ಡಾ॥ ಸೈಫುದ್ದೀನ್ ಕಿಚ್ಲು ಅದನ್ನು ಮತೀಯತೆಯ ಮುಂದೆ ಮಾಡಿದ ಶರಣಾಗತಿ, ಎಂದರು.[೨೮೫] ಆದರೆ ಅಂದು ಅತ್ಯಂತ ಪ್ರಮುಖ ಭಾಷಣ ಮಾಡಿದವರು ಸರ್ದಾರ್ ಪಟೇಲ್. ಅವರೆಂದರು:

> ಮುಸ್ಲಿಂ ಬಹು ಸಂಖ್ಯಾತ ಪ್ರದೇಶಗಳಿಂದ ಬಂದಿರುವ ನನ್ನ ಸಹೋದರರ ಭಯಗಳನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತೇನೆ. ಭಾರತದ ವಿಭಜನೆಯನ್ನು ಯಾರೂ ಇಷ್ಟಪಡುವುದಿಲ್ಲ ಮತ್ತು ನನ್ನ ಹೃದಯ ಬಹು ಭಾರವಾಗಿದೆ. ಆದರೆ

ಆಯ್ಕೆ ಇರುವುದು ಒಂದು ವಿಭಜನೆ ಮತ್ತು ಅನೇಕ ವಿಭಜನೆಗಳ ನಡುವೆ. ನಾವು ವಾಸ್ತವತೆಯನ್ನು ಎದುರಿಸಬೇಕು. ನಾವು ಭಾವೋದ್ವಿಗ್ನತೆಗೆ ಮತ್ತು ಭಾವಾತಿರೇಕಕ್ಕೆ ಎಡೆಮಾಡಿ ಕೊಡಬಾರದು.

ಕಾರ್ಯಕಾರಿ ಸಮಿತಿಯು ಭಯದಿಂದ ವರ್ತಿಸಿಲ್ಲ. ಆದರೆ ನನಗೆ ಒಂದರ ಬಗೆಗೆ ಭಯವಿದೆ, ಅದೆಂದರೆ ಇಷ್ಟೊಂದು ವರ್ಷಗಳ ಕಾಲ ಮಾಡಿದ ನಮ್ಮ ಎಲ್ಲಾ ಶ್ರಮ ಮತ್ತು ಕಷ್ಟದ ದುಡಿಮೆ ವ್ಯರ್ಥವಾಗಬಹುದು ಅಥವಾ ನಿಷ್ಫಲವಾಗಬಹುದು, ಎನ್ನುವುದು.

ನನ್ನ ಒಂಬತ್ತು ತಿಂಗಳ ಅಧಿಕಾರದ ಅನುಭವವು, ಕ್ಯಾಬಿನೆಟ್ ಮಿಷನ್ನಿನ ಸೂತ್ರದ ಶ್ರೇಷ್ಠತೆ ಎಂದು ಹೇಳಲಾಗಿರುವುದರ ಬಗೆಗೆ ಭ್ರಮನಿರಸನವನ್ನು ಉಂಟುಮಾಡಿದೆ. ಕೆಲವು ಗೌರವಾನ್ವಿತ ಅಪವಾದಗಳನ್ನು ಬಿಟ್ಟರೆ ಮುಸ್ಲಿಂ ನೌಕರರು ಮೇಲಿನವರಿಂದ ಕೆಳಗಿನ ಚಪ್ರಾಸಿಯವರೆಗೆ ಎಲ್ಲರೂ ಲೀಗ್ ಪರವಾಗಿ ಕೆಲಸ ಮಾಡುತ್ತಿದ್ದಾರೆ. ಕ್ಯಾಬಿನೆಟ್ ಮಿಷನ್ ಸೂತ್ರದಲ್ಲಿ ಮುಸ್ಲಿಂ ಲೀಗ್‌ಗೆ ನೀಡಲ್ಪಟ್ಟಿದ್ದ ಮತೀಯ ವೀಟೊ ಭಾರತದ ಪ್ರಗತಿಗೆ ಎಲ್ಲ ಹಂತದಲ್ಲು ಅಡ್ಡಿ ಒಡ್ಡುತ್ತಿದೆ.

ನಾವು ಇಷ್ಟಪಡಲಿ ಅಥವಾ ಇಷ್ಟ ಪಡದಿರಲಿ ಪಂಜಾಬ್ ಮತ್ತು ಬಂಗಾಳದಲ್ಲಿ ಈಗಾಗಲೇ 'ಡಿ ಫ಼ಾಕ್ಟೊ' ಪಾಕಿಸ್ತಾನ ಇದೆ. ಇಂತಹ ಸಂದರ್ಭದಲ್ಲಿ ನಾನು 'ಡಿ ಜ್ಯೂರ್' ಪಾಕಿಸ್ತಾನವನ್ನು ಆಯ್ಕೆ ಮಾಡುತ್ತೇನೆ. ಅದು ಲೀಗನ್ನು ಹೆಚ್ಚು ಜವಾಬ್ದಾರಿಯುತವನ್ನಾಗಿ ಮಾಡಬಹುದು.

ಸ್ವಾತಂತ್ರ್ಯವು ಬರುತ್ತಿದೆ. ನಾವು ಶೇ. ೭೫ರಿಂದ ೮೦ ಭಾಗ ಭಾರತವನ್ನು ಹೊಂದಿರುತ್ತೇವೆ. ಅದನ್ನು ನಾವು ನಮ್ಮ ಪ್ರತಿಭಾ ಸಾಮರ್ಥ್ಯದಿಂದ ಬಲಿಷ್ಠವನ್ನಾಗಿ ಮಾಡಬಹುದು. ಉಳಿದ ಭಾಗವನ್ನು ಲೀಗ್ ಅಭಿವೃದ್ಧಿಗೊಳಿಸಬಹುದು.[೨೮೬]

ವಿಭಜನೆಯ ಪರವಾಗಿ ೧೫೭ ಮತಗಳು, ವಿರೋಧವಾಗಿ ೨೭ ಮತಗಳು ಬಿದ್ದುವು. ೩೨ ಮಂದಿ ತಟಸ್ಥವಾಗಿದ್ದರು. ವಿಭಜನಾ ಠರಾವು ಅಂಗೀಕಾರವಾಯಿತು.

ಈ ವಿಭಜನೆಗೆ ಸಮ್ಮತಿಯನ್ನು ಕಾಂಗ್ರೆಸ್ ನಾಯಕರು ಇಷ್ಟವಿಲ್ಲದ

ಮನಸ್ಸಿನಿಂದ ಕೊಟ್ಟಿದ್ದರು. ನೆಹರು ಪ್ರಕಾರ, ಘಟನೆಗಳ ಒತ್ತಡದಿಂದ ಅವರು ಆ ತೀರ್ಮಾನವನ್ನು ತೆಗೆದುಕೊಂಡಿದ್ದರು. ಸರ್ದಾರರ ಪ್ರಕಾರ, ದೇಶವು ಅರಾಜಕತೆ ಮತ್ತು ಅನಾಯಕತ್ವದ ಕಡೆಗೆ ವೇಗವಾಗಿ ಸರಿಯುತ್ತಿರುವುದನ್ನು ತಡೆಗಟ್ಟುವುದಕ್ಕಾಗಿ ಒಂದು ಬಲಿಷ್ಠ ಕೇಂದ್ರ ಸರ್ಕಾರದ ರಚನೆ ತುರ್ತು ಅಗತ್ಯವಾಗಿತ್ತು. ಅದರ ರಚನೆ ದೇಶ ವಿಭಜನೆಯಿಂದ ಮಾತ್ರ ಸಾಧ್ಯವಿತ್ತು. ಇಡೀ ದೇಹಕ್ಕೆ ಅಪಾಯ ತಂದುಕೊಳ್ಳುವುದಕ್ಕಿಂತ ಕೊಳೆತ ಅಂಗವನ್ನು ತೆಗೆಯುವುದು ಜಾಣತನ – ಅನ್ನುವುದು ಅವರ ಅಭಿಪ್ರಾಯವಾಗಿತ್ತು.

ಅದರ ಬಗೆಗೆ ಅವರು ಹೀಗೆ ಹೇಳಿದ್ದಾರೆ:

> ನಾನು ವಿಭಜನೆಯನ್ನು ಒಂದು ಅಂತಿಮೋಪಾಯವಾಗಿ ಒಪ್ಪಿದೆ, ಇಲ್ಲದೆ ಹೋಗಿದ್ದರೆ ಎಲ್ಲವನ್ನು ಕಳೆದುಕೊಳ್ಳಬೇಕಾಗಿತ್ತು. ಮುಸ್ಲಿಂ ಲೀಗ್‌ನ ಐವರು ದೇಶ ವಿಭಜನೆಯ ಏಕ ಮಾತ್ರ ಉದ್ದೇಶಕ್ಕಾಗಿ ಮಧ್ಯಂತರ ಸರ್ಕಾರದೊಳಗೆ ಮಂತ್ರಿಗಳಾಗಿ ಸೇರಿ ಕೊಂಡಿದ್ದರು. ..... ಪಂಜಾಬ್ ಮತ್ತು ಬಂಗಾಳವನ್ನು ವಿಭಜಿಸಲೇಬೇಕು ಅನ್ನುವ ಶರತ್ತಿನ ಮೇಲೆ ವಿಭಜನೆಯನ್ನು ಒಪ್ಪಬೇಕೆಂದು ನಾವು ತೀರ್ಮಾನಿಸಿದೆವು..... ಜಿನ್ನಾ ತುಂಡರಿಸಲ್ಪಟ್ಟ ಪಾಕಿಸ್ತಾನವನ್ನು ಒಪ್ಪಲಿಲ್ಲ. ಆದರೆ ಅವನು ಅದಕ್ಕೆ ಒಪ್ಪಲೇ ಬೇಕಾಯಿತು. ಎರಡು ತಿಂಗಳ ಒಳಗೆ ಅಧಿಕಾರವನ್ನು ಹಸ್ತಾಂತರಿಸಬೇಕು ಮತ್ತು ಆ ಅವಧಿಯಲ್ಲಿ ಬ್ರಿಟಿಷ್ ಪಾರ್ಲಿಮೆಂಟ್, ಬ್ರಿಟನ್ನು ಭಾರತದ ರಾಜ್ಯಗಳ ವಿಷಯದಲ್ಲಿ ಮಧ್ಯೆ ಪ್ರವೇಶಿಸುವುದಿಲ್ಲ ಅನ್ನುವ ಖಾತರಿ ನೀಡುವ ಮಸೂದೆಯನ್ನು ಅಂಗೀಕರಿಸಬೇಕು – ಎನ್ನುವ ಹೆಚ್ಚುವರಿ ಶರತ್ತುಗಳನ್ನು ನಾನು ಹಾಕಿದೆ. ಆ ಪ್ರಶ್ನೆಯನ್ನು ನಾವು ನೋಡಿಕೊಳ್ಳುತ್ತೇವೆ..... ಸಾರ್ವಭೌಮತ್ವ ಕೊನೆಗಾಣಲಿ![೨೮೭]

ಈ ವಿಷಯವಾಗಿ ಲಾರ್ಡ್ ಮೌಂಟ್‌ಬ್ಯಾಟನ್‌ರವರ ವಿವರಣೆ ಏನು?

೧೯೪೮ರ ಅಕ್ಟೋಬರ್ ೭ರಂದು, ಭಾರತಕ್ಕೆ ಸ್ವಾತಂತ್ರ್ಯ ಬಂದ ಒಂದು ವರ್ಷಗಳ ನಂತರ ಲಂಡನ್‌ನ ರಾಯಲ್ ಎಂಪೈರ್ ಸೊಸೈಟಿಯಲ್ಲಿ ಭಾಷಣ ಮಾಡುತ್ತಾ ಮೌಂಟ್ ಬ್ಯಾಟನ್ ಹೀಗೆ ನುಡಿದರು:

ನನಗೆ ವಹಿಸಲ್ಪಟ್ಟಿದ್ದ ಕಾರ್ಯ ೧೯೪೮ರ ಜೂನ್ ಒಳಗೆ ಬ್ರಿಟನ್ನನ್ನು

ಭಾರತದಿಂದ ಹೊರಕ್ಕೆ ತರುವುದು. ಆ ಕಾಲ ನಿಗಧಿಯನ್ನು ಸಾಧಿಸಬೇಕಾದರೆ ಒಂದು ಪರಿಹಾರವನ್ನು ೧೯೪೭ರ ಅಂತ್ಯದೊಳಗೆ ಸೂಚಿಸಬೇಕಾಗಿತ್ತು. ಹಾಗೆ ಮಾಡಿದರೆ, ಭಾರತದ ಸ್ವಾತಂತ್ರ್ಯಕ್ಕೆ ಅಗತ್ಯವಾದ ಕಾನೂನುಗಳನ್ನು ಜೂನ್ ೧೯೪೮ರ ಒಳಗೆ ಅಂಗೀಕರಿಸಲು ಬ್ರಿಟಿಷ್ ಪಾರ್ಲಿಮೆಂಟಿಗೆ ಸಾಕಷ್ಟು ಕಾಲ ಸಿಗುತ್ತಿತ್ತು. ಆದರೆ, ಸ್ಥಳೀಯ ಪರಿಸ್ಥಿತಿಯನ್ನು ಗಮನಿಸಿದರೆ ಅದು ಬಹಳ ತಡ ಅನ್ನುವುದನ್ನು ನಾನು ಮತ್ತು ನನ್ನ ಸಲಹೆಗಾರರು ಒಪ್ಪಿದೆವು. ೧೯೪೬ರ ಆಗಸ್ಟ್ ೧೬ರಂದು, ಗಲಭೆ ಆರಂಭವಾಗಿತ್ತು. ಅದರ ಹಿಂದೆಯೇ ನೌಕಾಲಿಯಲ್ಲಿ ಹಿಂದೂಗಳ ಸಾಮೂಹಿಕ ಹತ್ಯೆ ಮತ್ತು ಬಿಹಾರದಲ್ಲಿ ಹಿಂದೂಗಳ ಪ್ರತೀಕಾರ ನಡೆದುವು. ನಂತರ ಮುಸ್ಲಿಮರು ಪಂಜಾಬಿನ ರಾವಿಲ್ಪಿಂಡಿಯಲ್ಲಿ ಸಿಖ್ಖರನ್ನು ಕೊಚ್ಚಿ ಹಾಕಿದರು ಮತ್ತು ವಾಯುವ್ಯ ಗಡಿನಾಡಿನಲ್ಲೂ ಗಲಭೆ ಆರಂಭವಾಯಿತು. ಆ ಹೊತ್ತಿಗೆ ನಾನು ಭಾರತವನ್ನು ತಲುಪಿದೆ. ಹತ್ಯಾಕಾಂಡದ ಲೋಲಕ ಹೆಚ್ಚು ಹೆಚ್ಚು ಅಗಲಕ್ಕೆ ತೂಗಾಡುತ್ತಾ ಹೋಗುತ್ತಿರುವುದನ್ನು ಕಂಡೆ. ಅದನ್ನು ನಿಲ್ಲಿಸದೆ ಹೋದರೆ ಇಂಡಿಯಾ ಎಲ್ಲಿ ಮುಕ್ತಾಯವಾಗುತ್ತದೆ ಅನ್ನುವುದನ್ನು ಹೇಳಲು ಸಾಧ್ಯವಿರಲಿಲ್ಲ.

ಬ್ರಿಟಿಷ್ ಪಾರ್ಲಿಮೆಂಟ್ ಮಿಷನ್‌ನ ೧೯೪೬ ಮೇ ೧೬ರ ಸೂತ್ರದ ಅಡಿಯಲ್ಲಿ ಇಂಡಿಯಾವನ್ನು ಒಂದಾಗಿ ಇಡುವುದು ಸರಿಯಾದ ಪರಿಹಾರ ಎನ್ನುವುದು ನನ್ನ ವೈಯುಕ್ತಿಕ ನಂಬಿಕೆಯಾಗಿತ್ತು. ಆದರೆ ಆ ಪರಿಹಾರಕ್ಕೆ ಎಲ್ಲ ಪಕ್ಷಗಳ ಸಹಕಾರ ಮತ್ತು ಸದ್ಭಾವನೆ ಅಗತ್ಯವಾಗಿತ್ತು. ಆರಂಭದಿಂದಲೇ ಜಿನ್ನಾ ತಾನು ಬದುಕಿರುವವರೆಗೆ ಸಂಯುಕ್ತ ಭಾರತವನ್ನು ಒಪ್ಪುವುದಿಲ್ಲ ಅನ್ನುವುದನ್ನು ಬಹಳ ಸ್ಪಷ್ಟವಾಗಿ ಹೇಳುತ್ತಿದ್ದನು. ಅವನು ವಿಭಜನೆಗೆ ಆಗ್ರಹಿಸಿದ್ದನು, ಅವನು ಪಾಕಿಸ್ತಾನವು ಬೇಕೆ ಬೇಕು ಎಂದು ಹಠ ಹಿಡಿದಿದ್ದನು. ಅದಕ್ಕೆ ವಿರುದ್ಧವಾಗಿ ಕಾಂಗ್ರೆಸ್ಸು ಅವಿಭಜಿತ ಇಂಡಿಯಾವನ್ನು ಬಯಸಿತ್ತು. ಆದರೆ ಅವರು ಅಂತರ್ಯುದ್ಧವನ್ನು ತಪ್ಪಿಸುವುದಕ್ಕಾಗಿ ವಿಭಜನೆಗೆ ಒಪ್ಪಿದರು. ಮುಸ್ಲಿಂ ಲೀಗ್ ಹೋರಾಟಕ್ಕೆ ನಿಲ್ಲುವುದೆನ್ನುವುದು ನನಗೆ ಖಚಿತವಾಗಿತ್ತು.

ಆದರೆ ಇಂಡಿಯಾವನ್ನು ವಿಭಜಿಸುವುದು ಹೇಗೆ? ವಿಶಾಲವಾದ ಮುಸ್ಲಿಮೇತರ ಪ್ರದೇಶಗಳು ಪಾಕಿಸ್ತಾನಕ್ಕೆ ಹೋಗುವುದನ್ನು ಕಾಂಗ್ರೆಸ್ಸು ವಿರೋಧಿಸಿತು. ಅಲ್ಲಿಗೆ, ದೊಡ್ಡ ರಾಜ್ಯಗಳಾದ ಪಂಜಾಬ್ ಮತ್ತು ಬಂಗಾಳವನ್ನು ವಿಭಜಿಸಲೇಬೇಕು.

ವಿಭಜನೆಗೆ ಕಾಂಗ್ರೆಸ್ಸಿನ ತಾತ್ಕಾಲಿಕ ಒಪ್ಪಿಗೆ ಸಿಕ್ಕಿದೆ – ಎಂದು
ನಾನು ಜಿನ್ನಾಗೆ ಹೇಳಿದಾಗ ಅವನಿಗೆ ಅಪರಿಮಿತ ಖುಷಿ

ಯಾಯಿತು. ಪಂಜಾಬ್ ಮತ್ತು ಬಂಗಾಳದ ವಿಭಜನೆಯನ್ನು ಅದು ತಾರ್ಕಿಕವಾಗಿ ಒಳಗೊಳ್ಳುತ್ತದೆ ಎಂದು ನಾನು ಹೇಳಿದಾಗ ಗಾಬರಿಗೊಂಡನು. ಆ ಪ್ರಾಂತ್ಯಗಳನ್ನು ಏಕೆ ವಿಭಜಿಸಬಾರದು ಅನ್ನುವುದಕ್ಕೆ ಬಲವತ್ತರವಾದ ವಾದಗಳನ್ನು ಹೂಡಿದನು. ಅವುಗಳಿಗೆ ರಾಷ್ಟ್ರೀಯ ಲಕ್ಷಣಗಳಿವೆ ಮತ್ತು ಅವುಗಳ ವಿಭಜನೆ ಅನಾಹುತಕಾರಿ, ಎಂದನು. ನಾನು ಒಪ್ಪಿದೆ. ನಂತರ ಅದೇ ಕಾರಣಗಳು ಇಡೀ ಭಾರತದ ವಿಭಜನೆಗೆ ಎಷ್ಟು ಜಾಸ್ತಿಯಾಗಿ ಅನ್ವಯಿಸುತ್ತವೆ? ಎಂದು ನಾನು ಕೇಳಿದೆ. ಅವನು ಅದನ್ನು ಇಷ್ಟಪಡಲಿಲ್ಲ. ಭಾರತವನ್ನು ಏಕೆ ವಿಭಜಿಸಬೇಕು ಎನ್ನುವುದನ್ನು ವಿವರಿಸುತ್ತಾ ಹೊರಟನು. ಹೀಗೆ ನಾವು ಗಿಡದ ಸುತ್ತಾ ಸುತ್ತುತ್ತಾ ಹೋದೆವು. ಕೊನೆಗೆ, ಅವಿಭಜಿತ ಪಂಜಾಬ್ ಮತ್ತು ಬಂಗಾಳ ಇರುವ ಸಂಯುಕ್ತ ಭಾರತ ಅಥವಾ ವಿಭಜಿತ ಪಂಜಾಬ್ ಮತ್ತು ಬಂಗಾಳ ಇರುವ ವಿಭಜಿತ ಭಾರತ – ಎರಡರಲ್ಲಿ ಒಂದನ್ನು ಪಡೆಯುವುದು ಮಾತ್ರ ಸಾಧ್ಯ ಎನ್ನುವುದು ಅವನಿಗೆ ಅರ್ಥವಾಯಿತು. ಅವನು ಎರಡನೆಯದನ್ನು ಆರಿಸಿಕೊಂಡನು.[೨೮೮]

(ಜಿನ್ನಾದ್ದು ತನಗೊಂದು ನ್ಯಾಯ ಪರರಿಗೊಂದು ನ್ಯಾಯ – ಎನ್ನುವ ಬುದ್ಧಿ – ಲೇಖಕ)

ಒಟ್ಟಿನಲ್ಲಿ ದೇಶ ವಿಭಜನೆ ಖಚಿತವಾಯಿತು. ೧೯೪೭ರ ಆಗಸ್ಟ್ ೧೫ರಂದು ಅಧಿಕಾರದ ಹಸ್ತಾಂತರ ಎಂದು ಲಾರ್ಡ್ ಮೌಂಟ್‌ಬ್ಯಾಟನ್ (ಜೂನ್ ೩ರಂದು) ಪ್ರಕಟಿಸಿದ್ದೂ ಆಯಿತು. ಅಷ್ಟರೊಳಗೆ ಎಲ್ಲಾ ಏರ್ಪಾಡುಗಳನ್ನು ಮಾಡಿ ಮುಗಿಸಬೇಕಾದ ತುರ್ತು ಸಹ ಉಂಟಾಯಿತು.

೧೪.೧೩ ವಿಭಜನೆಗೆ ಸಿದ್ಧತೆ

ವಿಭಜನೆಯ ಕಾರ್ಯಗಳ ಮೇಲುಸ್ತುವಾರಿಗಾಗಿ ಒಂದು ವಿಭಜನ ಸಮಿತಿಯು ೧೯೪೭ರ ಜೂನ್ ೭ರಂದು ಮೌಂಟ್‌ಬ್ಯಾಟನ್ ಅಧ್ಯಕ್ಷತೆಯಲ್ಲಿ ರಚಿಸಲ್ಪಟ್ಟಿತು. ಸರ್ದಾರ್ ಪಟೇಲ್, ರಾಜೇಂದ್ರ ಪ್ರಸಾದ್, ಲಿಯಾಖತ್ ಆಲಿ ಖಾನ್ ಮತ್ತು ಅಬ್ದುರ್ ನಿಸ್ತಾರ್ ಅದರ ಸದಸ್ಯರಾಗಿದ್ದರು. ಮುಂದೆ ಅದು ವಿಭಜನಾ ಮಂಡಳಿ ಆಗಿ ಪರಿವರ್ತಿತವಾಯಿತು. ಅದರಲ್ಲಿ ಕಾಂಗ್ರೆಸ್‌ನ ಪ್ರತಿನಿಧಿಗಳಾಗಿ ಸರ್ದಾರ್ ಪಟೇಲ್, ರಾಜೇಂದ್ರ ಪ್ರಸಾದ್ ಮತ್ತು ರಾಜಾಜಿ

ಹಾಗೂ ಮುಸ್ಲಿಂ ಲೀಗ್ ಪ್ರತಿನಿಧಿಗಳಾಗಿ ಜಿನ್ನಾ, ಲಿಯಾಖತ್ ಆಲಿಖಾನ್ ಮತ್ತು ಅಬ್ದುರ್ ನಿಸ್ತಾರ್ ಇದ್ದರು. ಆಗಸ್ಟ್ ೧೫ರ ನಂತರವೂ ಆ ಮಂಡಳಿ ಇಬ್ಬರು ಸದಸ್ಯರೊಡನೆ – ಪಟೇಲ್ ಮತ್ತು ಪ್ರಸಾದ್ – ಮುಂದುವರೆಯಿತು.

ವಿಭಜನಾ ಮಂಡಳಿಯಲ್ಲಿ ಭಾರತದ ಪರವಾಗಿ ಪಟೇಲರದು ಪ್ರಮುಖ ಪಾತ್ರವಾಗಿತ್ತು. ಎರಡು ದೇಶಗಳ ನಡುವಣ ಆಸ್ತಿ ಮತ್ತು ಸಾಲದ ವಿಭಾಗ ಮುಂತಾದ ಜವಾಬ್ದಾರಿಯುತ ಕೆಲಸಗಳನ್ನು ಅವರು ನಿರ್ವಹಿಸಬೇಕಾಗಿತ್ತು. ಎಲ್ಲ ವಿಷಯಗಳಲ್ಲಿ ಅವರದೇ ಅಂತಿಮ ತೀರ್ಮಾನವಾಗಿತ್ತು. ನೆಹರೂ ಸಹ ಸಂಪೂರ್ಣವಾಗಿ ಪಟೇಲರ ಮೇಲೆ ಅವಲಂಬಿತರಾಗಿದ್ದರು. ರಕ್ಷಣಾ ದಳದ ವಿಭಜನೆಯ ಯೋಜನೆಯನ್ನು ತಯಾರಿಸುವುದಕ್ಕೆ ಒರಿಸ್ಸದ ಗೌರ್ನರ್ ಆಗಿದ್ದ ಚಂದೂಲಾಲ್ ತ್ರಿವೇದಿಯವರನ್ನು ಮೌಂಟ್‌ಬ್ಯಾಟನ್‌ರವರು ದೆಹಲಿಗೆ ಆಹ್ವಾನಿಸಿದರು. ತ್ರಿವೇದಿಯವರು ದೆಹಲಿಗೆ ಬಂದು ನೆಹರುವನ್ನು ಭೇಟಿ ಮಾಡಿದಾಗ, ಅವರು (ನೆಹರು), "ತಮಗೇನು ಬೇಕು ಎನ್ನುವುದನ್ನು ಸರ್ದಾರರು ಹೇಳುತ್ತಾರೆ" ಎಂದರು. ತ್ರಿವೇದಿಯವರು ಪಟೇಲರನ್ನು ಭೇಟಿ ಮಾಡಿದರು, ಪಟೇಲರು ಅವರಿಗೆ, "ನಾನು ಪರಿಣಿತನಲ್ಲ. ನಾನೊಬ್ಬ ಸಾಮಾನ್ಯ ಮನುಷ್ಯ. ಭಾರತಕ್ಕೆ ನಿರಾಸೆಯಾಗದಂತೆ ನೀವು ನೋಡಿಕೊಳ್ಳಬೇಕೆಂಬುದು ನನ್ನ ಅಪೇಕ್ಷೆ ಎಂದರು.[೨೮೯]

ವಿಭಜನಾ ಮಂಡಳಿಯ ಕೆಲಸ ಮಾಡುವಾಗ ಪಟೇಲರು ಭಾರತದ ಹಿತವನ್ನು ಕಾವಲುಗಾರನಂತೆ ಎಚ್ಚರಿಕೆಯಿಂದ ಕಾಪಾಡುತ್ತಿದ್ದರು. ಅವರು ಶೀಘ್ರವಾಗಿ, ಚುಟುಕಾಗಿ, ಬಿಗಿಯಾಗಿ ಆದರೂ ಹೊಂದಾಣಿಕೆಯಿಂದ ಕೆಲಸ ಮಾಡುತ್ತಿದ್ದರು. ಇತರ ಕೆಲಸಗಾರರು ಅದರಲ್ಲೂ ಐ.ಸಿ.ಎಸ್. ಅಧಿಕಾರಿಗಳು ಆ ತರಹ ಕೆಲಸ ಮಾಡುವಂತೆ ಪ್ರೋತ್ಸಾಹಿಸುತ್ತಿದ್ದರು. ವಿಭಜನಾ ಮಂಡಳಿಯು ಇಬ್ಬರು ಅಧಿಕಾರಿಗಳ ಒಂದು ಮಾರ್ಗದರ್ಶಕ ಸಮಿತಿಯನ್ನು ನಿಯಮಿಸಿತ್ತು. ಅದರಲ್ಲಿ ಐ.ಸಿ.ಎಸ್. ಅಧಿಕಾರಿ ಹೆಚ್.ಎಂ. ಪಟೇಲ್ ಭಾರತವನ್ನು ಮತ್ತು ಮೊಹಮ್ಮದ್ ಆಲಿ ಪಾಕಿಸ್ತಾನವನ್ನು ಪ್ರತಿನಿಧಿಸುತ್ತಿದ್ದರು. ಅವರ ಸಹಾಯಕ್ಕಾಗಿ ಪರಿಣತರ ಹತ್ತು ಸಮಿತಿಗಳು ರಚಿತವಾಗಿದ್ದುವು. ಆ ಸಮಿತಿಗಳು ಆಸ್ತಿ, ಸಾಲ, ದಾಖಲೆಗಳು, ಸಿಬ್ಬಂದಿ, ಕೇಂದ್ರ ವರಮಾನಗಳು, ಕರೆನ್ಸಿ ವಿನಿಮಯ, ಆರ್ಥಿಕ ಹತೋಟಿ, ವಾಣಿಜ್ಯ, ವಿದೇಶಿ ಸಂಬಂಧ, ವಿದೇಶದಲ್ಲಿರುವ ಭಾರತೀಯರ ಪ್ರಶ್ನೆ ಮುಂತಾದ ನಾನಾ ವಿಷಯಗಳ ಬಗೆಗೆ ತೀರ್ಮಾನ ಕೈಗೊಳ್ಳುತ್ತಿದ್ದುವು.

ವಿವಿಧ ಸಮಿತಿಗಳಲ್ಲಿ ಕೆಲಸ ಮಾಡುವ ಸಿವಿಲ್ ಮತ್ತು ಸೈನ್ಯದ ಅಧಿಕಾರಿಗಳಿಗೆ

ಪಟೇಲರು ಸಂಪೂರ್ಣ ಸ್ವಾತಂತ್ರ್ಯವನ್ನು ನೀಡಿದ್ದರು. ಅದರಿಂದ ಅವರು ಪಾಕಿಸ್ತಾನದ ಪ್ರತಿನಿಧಿಗಳೊಡನೆ ವ್ಯವಹರಿಸಿ ಶೀಘ್ರ ಮತ್ತು ತೃಪ್ತಿಕರವಾದ ಕೆಲಸವನ್ನು ಮಾಡಿದರು. ಅವರುಗಳು ತಮ್ಮ ಕೆಲಸವನ್ನು ಆರಂಭಿಸುವುದಕ್ಕೆ ಮೊದಲು ಅವರ ಸಭೆಯನ್ನು ಪಟೇಲರು ತಮ್ಮ ಮನೆಯಲ್ಲಿ ಕರೆದು ಹೇಳಿದರು, "ರಾಷ್ಟ್ರೀಯ ಮಹತ್ವದ ಒಂದು ದೊಡ್ಡ ಕೆಲಸವನ್ನು ನಾವು ನಿಮಗೆ ವಹಿಸುತ್ತಿದ್ದೇವೆ. ಅದನ್ನು ಬಹಳ ಕಡಿಮೆ ಕಾಲದಲ್ಲಿ ಮುಗಿಸಬೇಕು. ನೀವು ಹಿಂದೆಂದೂ ಮಾಡದೇ ಇರುವಷ್ಟು, ಕಷ್ಟ ಪಟ್ಟು ಕೆಲಸ ಮಾಡಬೇಕಾಗುತ್ತದೆ. ನಾನು ನಿಮಗೆ ಹೇಳಬಯಸುವುದೇನೆಂದರೆ, ನಾನು ನನ್ನ ಇಡೀ ಜೀವಮಾನದಲ್ಲಿ ದೇಶಕ್ಕಾಗಿ ಕೆಲಸ ಮಾಡುವುದರಲ್ಲಿ ಸಂತೋಷವನ್ನು ಅನುಭವಿಸಿದ್ದೇನೆ. ಅದೇ ಸಂತೋಷವನ್ನು ಹಂಚಿಕೊಳ್ಳಲು ನಿಮ್ಮನ್ನು ಆಹ್ವಾನಿಸುತ್ತೇನೆ." ಈ ಪುಟ್ಟ ಭಾಷಣವು ಬಿಡುವಿಲ್ಲದೆ ದುಡಿಯಲು ಆ ಅಧಿಕಾರಿಗಳನ್ನು ಪ್ರೇರೇಪಿಸಿತು.[೨೯೦]

ವಿಭಜನಾ ಕೆಲಸದಲ್ಲಿ ಪಟೇಲರು ಎಲ್ಲಾ ವಿಷಯಕ್ಕು ಗಮನ ಹರಿಸುತ್ತಿದ್ದರು. ಭಾರತದ ಹಿತವನ್ನು ಬಿಗಿಯಾಗಿ ಮತ್ತು ದೃಢವಾಗಿ ರಕ್ಷಿಸುತ್ತಿದ್ದರು. ಆದರೂ ಹೊಂದಾಣಿಕೆ ಆವಶ್ಯಕವಾದಾಗ ಪಾಕಿಸ್ತಾನದ ಬಗೆಗೆ ವಿಶಾಲ ಹೃದಯ ಮತ್ತು ಸದ್ಭಾವನೆಯಿಂದ ವರ್ತಿಸುತ್ತಿದ್ದರು. ಅದರಿಂದ ವಿಭಜನಾ ಕಾರ್ಯ ಯಾವ ತಕರಾರು ಇಲ್ಲದೆ ಸುಲಲಿತವಾಗಿ ನಡೆಯಿತು. ವಿಭಜನಾ ಮಂಡಳಿಯ ಅಂತಿಮ ಸಭೆಯಲ್ಲಿ ಪಾಕಿಸ್ತಾನದ ಪ್ರತಿನಿಧಿ ಅಬ್ದುಶ್ ರಬ್ ನಿಸ್ತಾರ್ ಪಟೇಲರ ಮುತ್ಸದ್ದಿತನ ಮತ್ತು ರಚನಾತ್ಮಕ ಮನೋಭಾವವನ್ನು ಎತ್ತಿ ಹೇಳಿ, ಪಾಕ್ ಮಂತ್ರಿಗಳು ಅವರನ್ನು (ಪಟೇಲರನ್ನು) ತಮ್ಮ ಹಿರಿಯ ಅಣ್ಣನಂತೆ ಕಾಣುವುದನ್ನು ಮುಂದುವರೆಸುತ್ತಾರೆ ಎಂದರು.[೨೯೧]

ದೇಶೀಯ ರಾಜ್ಯಗಳ ಪ್ರಶ್ನೆ ಒಂದು ಕಗ್ಗಂಟಾಗಿತ್ತು. ಆಗಸ್ಟ್ ೧೫ರಂದು ದೇಶೀಯ ರಾಜ್ಯಗಳ ಮೇಲಿನ ಬ್ರಿಟನ್ ಸಾರ್ವಭೌಮತ್ವ ಮುಕ್ತಾಯವಾಗುತ್ತದೆಂದೂ, ಅಲ್ಲಿಂದ ಮುಂದೆ ದೇಶೀಯ ರಾಜ್ಯಗಳು ಸ್ವತಂತ್ರವಾದರೂ ಅವು ಭಾರತಕ್ಕಾದರೂ ಸೇರಬಹುದು ಅಥವಾ ಪಾಕಿಸ್ತಾನಕ್ಕಾದರೂ ಸೇರಬಹುದು ಅಥವಾ ಸ್ವತಂತ್ರವಾಗಿ ಬೇಕಾದರೂ ಇರಬಹುದು ಎನ್ನುವುದು ಖಚಿತವಾಗಿತ್ತು. ಅದರಿಂದ ದೇಶೀಯ ರಾಜ್ಯಗಳ ಬಗೆಗೆ ವ್ಯವಹರಿಸಲು ವೈಸ್‌ರಾಯ್ ಮೌಂಟ್‌ಬ್ಯಾಟನ್‌ರವರು ಜೂನ್ ೨೭ರಂದು 'ರಾಜ್ಯಗಳ ಇಲಾಖೆ' ಎನ್ನುವ ಹೊಸ ಇಲಾಖೆಯನ್ನು ರಚಿಸಿ ಅದರ ಮುಖ್ಯಸ್ಥರನ್ನಾಗಿ ಸರ್ದಾರ್ ಪಟೇಲರನ್ನು ನಿಯಮಿಸಿದರು. ಪಟೇಲರು ಈಗಾಗಲೇ ನಿರ್ವಹಿಸುತ್ತಿದ್ದ ಗೃಹಖಾತೆ, ವಾರ್ತಾ ಮತ್ತು ಪ್ರಸಾರ ಖಾತೆಯ ಜೊತೆಗೆ ರಾಜ್ಯಗಳ ಖಾತೆಯನ್ನು ವಹಿಸಿಕೊಂಡರು.

ಮೌಂಟ್‌ಬ್ಯಾಟನ್‌ರವರು ಉದ್ದೇಶಪೂರ್ವಕವಾಗಿಯೇ ರಾಜ್ಯಗಳ ಖಾತೆಯನ್ನು ಪಟೇಲರಿಗೆ ವಹಿಸಿದರೆಂದು ಕಾಣುತ್ತದೆ. ಅವರು ತಮ್ಮ ಅಭಿಪ್ರಾಯವನ್ನು ಹೀಗೆ ದಾಖಲಿಸಿದ್ದಾರೆ:

ಪಟೇಲ್ ಮುಖ್ಯವಾಗಿ ಒಬ್ಬ ವಾಸ್ತವಿಕ ವ್ಯಕ್ತಿ ಮತ್ತು ಬಹಳ ವಿವೇಚನಾಶಾಲಿ. ಆದರೆ ನೆಹರು ಹಾಗಲ್ಲ.

(ರಾಜರುಗಳನ್ನು ಕಂಡರೆ ನೆಹರುಗೆ ಬಹಳ ಅಸಮಾಧಾನ – ರಾಜರನ್ನು ನೆಹರು ದ್ವೇಷಿಸುತ್ತಿದ್ದರೆಂದೇ ಹೇಳಬಹುದು. ರಾಜರುಗಳು ಧರಿಸುತ್ತಿದ್ದ ಚಿನ್ನದ ಒಡವೆಗಳು ಮತ್ತು ಅವರ ವೈಭೋಗದ ಜೀವನವನ್ನು ಕಂಡರೆ, ಸಮಾಜವಾದಿ ಧೋರಣೆಯ ನೆಹರು ಕಿಡಿಕಾರುತ್ತಿದ್ದರು. ಆದರೆ ವಾಸ್ತವಿಕ ನಡೆಯ ಪಟೇಲರು ಹಾಗಿರಲಿಲ್ಲ. ಅದರಿಂದ ರಾಜರೊಡನೆ ವ್ಯವಹರಿಸಲು ಅವರು ಸೂಕ್ತ ವ್ಯಕ್ತಿಯಾಗಿದ್ದರು; ನೆಹರು ಆಗಿರಲಿಲ್ಲ – ಲೇಖಕ)

ಗಾಂಧೀಜಿಯವರೂ ಸಹ ರಾಜ್ಯಗಳ ಖಾತೆಯ ನಿರ್ವಹಣೆಗೆ ಸರ್ದಾರರೇ ಸರಿ ಎಂದು ಭಾವಿಸಿದ್ದರು. ಅವರು ಸರ್ದಾರರಿಗೆ ಹೇಳಿದರು, "ರಾಜ್ಯಗಳ ಸಮಸ್ಯೆ ಎಷ್ಟು ಕಷ್ಟಕರವಾಗಿದೆ ಎಂದರೆ ಅದನ್ನು ನೀವು ಮಾತ್ರ ಬಿಡಿಸಲು ಸಾಧ್ಯ."[೨೯೨] ಆಗ ಸರ್ದಾರರಿಗೆ ೭೧ ವರ್ಷ.

೧೪.೧೪ ಅಂತೂ ಬಂತು ಬಿಡುಗಡೆಯ ಸಮಯ

೧೯೪೭ರ ಜುಲೈ ೫ರಂದು ಬ್ರಿಟನ್ನಿನ ಪಾರ್ಲಿಮೆಂಟು ಪ್ರಧಾನಿ ಆಟ್ಲಿ ಮಂಡಿಸಿದ ಭಾರತ ಸ್ವಾತಂತ್ರ್ಯ ಕಾನೂನು, ೧೯೪೭ನ್ನು ಅಂಗೀಕರಿಸಿತು. ಜುಲೈ ೧೮ರಂದು ಚಕ್ರವರ್ತಿ ಆ ಶಾಸನಕ್ಕೆ ಅನುಮೋದನೆ ನೀಡಿದರು. ಆ ಶಾಸನ ಬ್ರಿಟಿಷ್ ಇಂಡಿಯಾವನ್ನು ಭಾರತ ಮತ್ತು ಪಾಕಿಸ್ತಾನ ಎಂದು ಎರಡು ಡೊಮಿನಿಯನ್ ರಾಷ್ಟ್ರಗಳನ್ನಾಗಿ ವಿಭಾಗಿಸಿತು. ಪಾಕಿಸ್ತಾನವು ೧೯೪೭ರ ಆಗಸ್ಟ್ ೧೪ರಂದು ಮತ್ತು ಸ್ವತಂತ್ರ ಭಾರತವು ೧೯೪೭ರ ಆಗಸ್ಟ್ ೧೫ರಂದು ಅಸ್ತಿತ್ವಕ್ಕೆ ಬರುವುದೆಂದೂ, ಅಂದು ದೇಶೀಯ ರಾಜರುಗಳ ಮೇಲಿನ ಬ್ರಿಟಿಷ್ ಸಾರ್ವಭೌಮತ್ವ ಕೊನೆಗೊಳ್ಳುವುದೆಂದೂ, ಆ ರಾಜರುಗಳು ಭಾರತಕ್ಕೆ ಸೇರಲು ಅಥವಾ ಪಾಕಿಸ್ತಾನಕ್ಕೆ ಸೇರಲು ಅಥವಾ ಸ್ವತಂತ್ರವಾಗಿರಲು ಅಥವಾ ಇತರ ರಾಜ್ಯಗಳೊಡನೆ ವಿಲೀನಗೊಳ್ಳಲು ಸ್ವತಂತ್ರರು ಎಂದು ಶಾಸನ ಸಾರಿತು.

ಸುಮಾರು ೧೯೦ ವರ್ಷಗಳ ಬ್ರಿಟಿಷ್ ಆಳ್ವಿಕೆ ಮುಕ್ತಾಯವಾಗಿ, ಭಾರತೀಯರ ಗುಲಾಮತನ ಅಳಿದು ಸ್ವತಂತ್ರರಾಗುವ, ತಮ್ಮ ಅಭಿವೃದ್ಧಿಯನ್ನು

ಮತ್ತು ಆಡಳಿತವನ್ನು ತಾವೇ ನಿರ್ವಹಿಸಿಕೊಳ್ಳುವ ದಿನದ ನಿಗದಿಯಾಯಿತು. ಜನತೆಗೆ, ದೇಶ ವಿಭಜನೆಯ ನೋವಿನ ನಡುವೆಯೂ, ಸಂತೋಷ ಉಂಟಾಯಿತು.

ಮಧ್ಯಂತರ ಸರ್ಕಾರದ ನಾಯಕರಾಗಿದ್ದ ಪಂಡಿತ್ ಜವಹರಲಾಲ್ ನೆಹರು ಪಟೇಲರೊಡನೆ ಆಗಸ್ಟ್ ೧೫ರಂದು ಬ್ರಿಟಿಷರಿಂದ ಅಧಿಕಾರ ವಹಿಸಿಕೊಳ್ಳಲು ಆಗಬೇಕಾದ ಕೆಲಸಗಳನ್ನು ಕೈಗೊಂಡರು. ಅವರು ಆಗಸ್ಟ್ ೧ರಂದು ಸರ್ದಾರರಿಗೆ ಒಂದು ಟಿಪ್ಪಣಿ ಕಳುಹಿಸಿದರು:

> ಶಿಷ್ಟಾಚಾರವನ್ನು ಸ್ವಲ್ಪ ಮಟ್ಟಿಗಾದರು ಪಾಲಿಸಬೇಕಾಗಿರುವುದರಿಂದ, ಹೊಸ ಮಂತ್ರಿ ಮಂಡಲವನ್ನು ಸೇರುವಂತೆ ನಿಮ್ಮನ್ನು ಆಹ್ವಾನಿಸಲು ಬರೆಯುತ್ತಿದ್ದೇನೆ. ಈ ಬರವಣಿಗೆ ಒಂದು ತರಹದಲ್ಲಿ ಅನವಶ್ಯಕ ಏಕೆಂದರೆ ನೀವು ಮಂತ್ರಿ ಮಂಡಲದ ಅತ್ಯಂತ ಬಲಿಷ್ಠ ಸ್ಥಂಭ (The strongest pillar of the cabinet).[೨೯೩]

ನೆಹರುರವರ ಆಹ್ವಾನಕ್ಕೆ ಪಟೇಲರು ಆಗಸ್ಟ್ ೩ರಂದು ಉತ್ತರ ಬರೆದರು:

> ಒಂದನೆ ದಿನಾಂಕದ ನಿಮ್ಮ ಪತ್ರಕ್ಕೆ ಅನೇಕ ವಂದನೆಗಳು. ನಮ್ಮ ೩೦ ವರ್ಷಗಳ ಕಾಲದ ಸತತವಾದ ಅವಲಂಬನೆ, ಪ್ರೀತಿ ಮತ್ತು ಗೆಳೆತನವು ಯಾವ ಶಿಷ್ಟಾಚಾರಕ್ಕು ಅವಕಾಶ ಕೊಡುವುದಿಲ್ಲ. ನನ್ನ ಉಳಿದ ಜೀವನ ಪೂರ್ತ ನನ್ನ ಸೇವೆ ನಿಮಗೆ ಮುಡಿಪಾಗಿರುತ್ತದೆ ಎಂದು ಆಶಿಸುತ್ತೇನೆ. ಬೇರೆ ಯಾವ ಭಾರತೀಯನೂ ಮಾಡದೇ ಇರುವಷ್ಟು ತ್ಯಾಗವನ್ನು ನೀವು ಯಾವ ಉದ್ದೇಶಕ್ಕಾಗಿ ಮಾಡಿದ್ದೀರೊ ಆ ಉದ್ದೇಶಕ್ಕೆ ನೀವು ನನ್ನಿಂದ ಪ್ರಶ್ನಾತೀತವಾದ ನಿಷ್ಠೆ ಮತ್ತು ಒಲವನ್ನು ಪಡೆಯುತ್ತೀರಿ. ನಮ್ಮ ಜೋಡಿ ಮುರಿಯಲಾಗದ್ದು ಮತ್ತು ಅಲ್ಲಿ ಅಡಗಿದೆ ನಮ್ಮ ಶಕ್ತಿ. ನೀವು ನಿಮ್ಮ ಪತ್ರದಲ್ಲಿ ವ್ಯಕ್ತ ಪಡಿಸಿದ ಭಾವನೆಗಳಿಗೆ ನನ್ನ ವಂದನೆಗಳು.[೨೯೪]

(ಸರ್ದಾರ್ ಪಟೇಲರ ಬಗೆಗೆ ನೆಹರು ಮತ್ತು ನೆಹರು ಬಗೆಗೆ ಸರ್ದಾರರು ವ್ಯಕ್ತ ಪಡಿಸಿರುವ ಭಾವನೆಗಳನ್ನು ಓದಿದರೆ ಖುಷಿಯಾಗುತ್ತದೆ. ಅವರಿಬ್ಬರ ನಡುವೆ ಆ ಕಾಲಘಟ್ಟದಲ್ಲಿ ಇದ್ದ ಪರಸ್ಪರ ಪ್ರೀತಿ ವಿಶ್ವಾಸ ನೈಜ, ಅಮೂಲ್ಯ ಮತ್ತು ಅನುಕರಣೀಯ. ಅದು ಹಾಗೇ ಕೊನೆಯವರೆಗೂ ಇದ್ದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ಅನ್ನಿಸುತ್ತದೆ – ಲೇಖಕ)

ಆ ನಂತರ ಆಗಸ್ಟ್ ೪ರಂದು ನೆಹರುರವರು ಪಟೇಲ್ ಮತ್ತು

ಮೌಂಟ್‌ಬ್ಯಾಟನ್‌ರವರೊಡನೆ ಸಮಾಲೋಚಿಸಿ ಹೊಸ ಮಂತ್ರಿಮಂಡಲದ ಸದಸ್ಯರನ್ನು ನಿರ್ಧರಿಸಿದರು. ಆ ಪಟ್ಟಿ ಹೀಗಿತ್ತು:

> ಜವಹರಲಾಲ್ ನೆಹರು (ಪ್ರಧಾನಮಂತ್ರಿ), ಸರ್ದಾರ್ ವಲ್ಲಭಭಾಯ್ ಪಟೇಲ್ (ಉಪ ಪ್ರಧಾನಮಂತ್ರಿ), ಇತರ ಮಂತ್ರಿಗಳು: ರಾಜೇಂದ್ರ ಪ್ರಸಾದ್, ಮೌಲಾನಾ ಆಜ಼ಾದ್, ಜಾನ್ ಮಥಾಯ್, ಬಲದೇವ ಸಿಂಗ್, ಜಗಜೀವನ ರಾಂ, ಡಾ॥ ಭಾಭಾ (ಮಧ್ಯಂತರ ಸರ್ಕಾರದಲ್ಲಿದ್ದವರು), ರಫಿ಼ ಅಹ್ಮದ್ ಕಿದ್ವಾಯ್, ರಾಜಕುಮಾರಿ ಅಮೃತ್ ಕೌರ್, ಬಿ.ಆರ್. ಅಂಬೇಡ್ಕರ್, ಷನ್ಮುಖಂ ಚೆಟ್ಟಿ, ಶ್ಯಾಮಾ ಪ್ರಸಾದ್ ಮುಖರ್ಜಿ ಮತ್ತು ಎನ್.ವಿ. ಗಾಡ್ಗಿಲ್. (ಹೊಸ ಮಂತ್ರಿಗಳು). ಈ ೧೪ ಮಂತ್ರಿಗಳಲ್ಲಿ ೭ ಮಂದಿ ಮಾತ್ರ ಕಾಂಗ್ರೆಸ್ಸಿನವರು.

ಪಟೇಲರು ಭಾರತ ಸ್ವತಂತ್ರವಾಗುವ ಘಳಿಗೆಗೆ ಕಾತರದಿಂದ ನೋಡುತ್ತಿದ್ದರೆಂದು ಊಹಿಸಬಹುದು. ಕೆಲವು ದಿನ ಮುಂಚೆ ಅವರು ಅಹಮದಾಬಾದ್‌ನ ಒಬ್ಬ ಸ್ನೇಹಿತನಿಗೆ ಬರೆದ ಪತ್ರದಲ್ಲಿ, 'ಗಳನೆಯ ತಾರೀಖು ರಾತ್ರಿ ೧೨ ಘಂಟೆಗೆ ಭಾರತದಲ್ಲಿನ ಬ್ರಿಟಿಷ್ ಆಡಳಿತ ಮುಕ್ತಾಯವಾಗುತ್ತದೆ. ಅನೇಕ ಬಾರಿ ನಾವು ಸೆರೆಮನೆಗೆ ಹೋದೆವು. ನಮ್ಮಲ್ಲಿ ಅನೇಕರು ಶೌರ್ಯದಿಂದ ಪ್ರಾಣ ಅರ್ಪಿಸಿದರು. ಇದು ಅದರ ಫಲ, ದೇವರ ಅಪರಿಮಿತ ದಯೆ, ಈ ದಿನವನ್ನು ನೋಡುವುದಕ್ಕೆ ನಮ್ಮನ್ನು ಜೀವಂತ ಇಟ್ಟಿದೆ' ಎಂದು ಬರೆದರು.[೨೯೫]

೧೪ರಂದು ರಾತ್ರಿ ೧೦ ಘಂಟೆಗೆ ಪಟೇಲರು ಮಣಿಬೆನ್ ಜೊತೆ ರಾಜೇಂದ್ರ ಪ್ರಸಾದ್‌ರವರ ಮನೆಗೆ ಹೋದರು. ಅಲ್ಲಿ ಮಹಿಳೆಯರು ಏರ್ಪಡಿಸಿದ್ದ ಪೂಜೆಗೆ ಅವರು ಆಹ್ವಾನಿಸಲ್ಪಟ್ಟಿದ್ದರು. ಸ್ವಲ್ಪ ಹೊತ್ತಿನಲ್ಲಿ ಪ್ರಸಾದ್‌ರ ಮನೆ ಮತ್ತು ಅಂಗಳದ ತುಂಬ ಜನ ಜಮಾಯಿಸಿದ್ದರು. ಪಟೇಲರು ಬಹಳ ಕಷ್ಟ ಪಟ್ಟು ಮನೆಯಿಂದ ಹೊರಕ್ಕೆ ಬಂದರು. ರಸ್ತೆಗಳು ಜನ ಮತ್ತು ವಾಹನದಿಂದ ಭರ್ತಿಯಾಗಿದ್ದುವು. ಅವರು ಅತಿ ಪ್ರಯಾಸದಿಂದ ರಾಜ್ಯಾಂಗ ರಚನಾ ಸಭೆಯನ್ನು ತಲುಪಿದರು, ಸ್ವಾತಂತ್ರ್ಯ ಸಮಾರಂಭದಲ್ಲಿ ಭಾಗವಹಿಸಲು.

೧೪.೧೫ ಸ್ವಾತಂತ್ರ್ಯೋದಯ

ಆಗಸ್ಟ್ ೧೫, ೧೯೪೭ರಂದು ಭಾರತ ಸ್ವತಂತ್ರವಾಯಿತು. ಸುಮಾರು ಇನ್ನೂರು ವರ್ಷಗಳ ಬ್ರಿಟಿಷ್ ಗುಲಾಮಗಿರಿ ಅಂತ್ಯಗೊಂಡಿತು. ೧೬೦೦ರಲ್ಲಿ

ವ್ಯಾಪಾರೆಕ್ಕೆಂದು ಭಾರತಕ್ಕೆ ಬಂದ ಇಂಗ್ಲಿಷರು ಕ್ರಮೇಣ ಯುದ್ಧದ ಮೂಲಕ, ಹಿಂಸಾಚಾರದ ಮೂಲಕ ಮತ್ತು ಕೃತ್ರಿಮ, ಮೋಸ ಹಾಗೂ ಒಡೆದು ಆಳುವ ನೀತಿಯ ಮೂಲಕ ಇಡೀ ದೇಶವನ್ನು ಆಕ್ರಮಿಸಿಕೊಂಡಿದ್ದರು. ಅಂತಹವರ ವಿರುದ್ಧ ಮುಖ್ಯವಾಗಿ ಗಾಂಧೀಜಿಯವರ ನಾಯಕತ್ವದಲ್ಲಿ ಅಹಿಂಸಾಯುತ ಹೋರಾಟದಿಂದ ದೇಶವು ಸ್ವಾತಂತ್ರ್ಯವನ್ನು ಅಂದು ಗಳಿಸಿತು. ಆ ಗಳಿಕೆಗೆ ಇತರರ ಪಾತ್ರವೂ ಅಪಾರ ಮತ್ತು ಅಮರ.

ಅದೊಂದು ಸಂಭ್ರಮದ, ಸಂತೋಷದ ಪವಿತ್ರವಾದ ದಿನ. ಇಡೀ ದೇಶದಲ್ಲಿ ಸಂಭ್ರಮ ಮತ್ತು ಸಡಗರದಿಂದ ಜನ ಸ್ವಾತಂತ್ರ್ಯೋದಯವನ್ನು ಆಚರಿಸಿ ಆನಂದಿಸಿದರು. ಅಂದು ಪ್ರಧಾನ ಸಮಾರಂಭ ನಡೆದದ್ದು ದೆಹಲಿಯಲ್ಲಿನ ರಾಜ್ಯಾಂಗ ರಚನಾ ಸಭೆಯಲ್ಲಿ. ಅಂದಿನ ಕಲಾಪವನ್ನು ರಾಜ್ಯಾಂಗ ರಚನಾ ಸಭೆಯ ಸದಸ್ಯರಲ್ಲಿ ಒಬ್ಬರಾಗಿದ್ದ ಶ್ರೀ ಕೆ.ಎಂ. ಮುನ್ಷಿಯವರು ದಾಖಲಿಸಿದ್ದಾರೆ.

೧೯೪೬ರ ಸೆಪ್ಟೆಂಬರ್ ತಿಂಗಳಲ್ಲಿ ತಾತ್ಕಾಲಿಕ ಸರ್ಕಾರದ ರಚನೆಯಾಗಿ ಪಂಡಿತ್ ಜವಹರಲಾಲ್ ನೆಹರು ಪ್ರಧಾನ ಮಂತ್ರಿಯಾಗಿ ಒಂದು ಮಂತ್ರಿಮಂಡಲ ರಚಿಸಿದ್ದರು. ಡಿಸೆಂಬರ್ ೯, ೧೯೪೬ರಂದು ಒಂದು ರಾಜ್ಯಾಂಗ ರಚನಾ ಸಭೆ ಪರೋಕ್ಷ ಚುನಾವಣೆ ಮೂಲಕ ರಚಿಸಲ್ಪಟ್ಟಿತು. ಅದರಲ್ಲಿ ೩೮೯ ಸದಸ್ಯರಿದ್ದರು. ಡಾ॥ ಬಾಬು ರಾಜೇಂದ್ರ ಪ್ರಸಾದ್ ಅದರ ಅಧ್ಯಕ್ಷರಾಗಿ ಆಯ್ಕೆ ಆಗಿದ್ದರು. ಕನ್ನಡಿಗ ಐ.ಸಿ.ಎಸ್. ಅಧಿಕಾರಿ ಹೆಚ್.ವಿ.ಆರ್. ಅಯ್ಯಂಗಾರ್ ಆ ಸಭೆಯ ಕಾರ್ಯದರ್ಶಿ ಆಗಿದ್ದರು.

ಜ್ಯೋತಿಷಿಗಳ ಪ್ರಕಾರ ಆಗಸ್ಟ್ ೧೫ ಅಷ್ಟು ಪ್ರಶಸ್ತವಾಗಿಲ್ಲದ ಕಾರಣ ಸ್ವಾತಂತ್ರ್ಯೋತ್ಸವದ ಆರಂಭವನ್ನು ಆಗಸ್ಟ್ ೧೪–೧೫ರ ಮಧ್ಯರಾತ್ರಿಗೆ ಕೊಂಚ ಮುನ್ನ ಆರಂಭಿಸಲಾಯಿತು. ಆ ಸಮಯವನ್ನು ಸರ್ದಾರ್ ಪಣಿಕ್ಕರ್ ಸೂಚಿಸಿದ್ದರು.

ಆ ಮಧ್ಯರಾತ್ರಿಯ ಮುಹೂರ್ತದಲ್ಲಿ ರಾಜ್ಯಾಂಗ ರಚನಾ ಸಭೆಯ ಸಮಾವೇಶವು ರಾತ್ರಿ ೧೧ ಘಂಟೆಗೆ ಸರಿಯಾಗಿ ಆರಂಭವಾಯಿತು. ಮೊಟ್ಟಮೊದಲು ಶ್ರೀಮತಿ ಸುಚೇತ ಕೃಪಲಾನಿಯವರು 'ವಂದೇ ಮಾತರಂ' ಗೀತೆಯನ್ನು ಹಾಡಿದರು. ಅನಂತರ ರಾಜ್ಯಾಂಗ ರಚನಾ ಸಭೆಯ ಅಧ್ಯಕ್ಷರಾದ ಡಾ. ಬಾಬು ರಾಜೇಂದ್ರ ಪ್ರಸಾದ್‌ರವರು ಹಿಂದೂಸ್ಥಾನಿಯಲ್ಲಿ ಭಾಷಣ ಮಾಡಿದರು.

ಅನಂತರ ಪ್ರಧಾನಿ ಜವಹರಲಾಲ್ ನೆಹರು ಕೆಳಕಂಡ ಠರಾವುಗಳನ್ನು ಮಂಡಿಸಿದರು:

೧. ಮಧ್ಯರಾತ್ರಿಯು ಘಂಟೆ ಭಾರಿಸಿದ ಮೇಲೆ, ಇಲ್ಲಿ ಹಾಜರಾಗಿರುವ ರಾಜ್ಯಾಂಗ ರಚನಾ ಸಭೆಯ ಸದಸ್ಯರು ಕೆಳಕಂಡ ಪ್ರತಿಜ್ಞೆಯನ್ನು ಸ್ವೀಕರಿಸಬೇಕು:

'ಭಾರತದ ಜನ, ಸಂಕಟ ಮತ್ತು ತ್ಯಾಗದ ಮೂಲಕ ಸ್ವಾತಂತ್ರ್ಯವನ್ನು ಗಳಿಸಿರುವ ಈ ಪವಿತ್ರ ಕ್ಷಣದಲ್ಲಿ ಭಾರತದ ರಾಜ್ಯಾಂಗ ರಚನಾ ಸಭೆಯ ಸದಸ್ಯನಾದ..... ಎಂಬ ನಾನು, ಭಾರತ ಮತ್ತು ಅದರ ಜನರ ಸೇವೆಗೆ, ಈ ಪುರಾತನ ದೇಶವು ಪ್ರಪಂಚದಲ್ಲಿ ತನ್ನ ನ್ಯಾಯಯುತ ಸ್ಥಾನವನ್ನು ಪಡೆಯಲು ಮತ್ತು ವಿಶ್ವಶಾಂತಿ ಹಾಗೂ ಮಾನವ ಜನಾಂಗದ ಅಭ್ಯುದಯವನ್ನು ಸಾಧಿಸಲು ತನ್ನ ಪೂರ್ಣ ಮತ್ತು ಇಷ್ಟವಿರುವ ಕೊಡುಗೆಯನ್ನು ನೀಡುವ ಗುರಿಯ ಕಡೆಗೆ, ನಾನು ನನ್ನನ್ನು ನನ್ನೆಲ್ಲ ವಿನಯತೆಯಿಂದ ಸಮರ್ಪಿಸಿಕೊಳ್ಳುತ್ತೇನೆ.'

೨. ಈ ಅಧಿವೇಶನದಲ್ಲಿ ಹಾಜರಿಲ್ಲದ ಸದಸ್ಯರು (ಅಧ್ಯಕ್ಷರು ಸೂಚಿಸುವ ಬದಲಾವಣೆಯೊಡನೆ) ತಾವು ಹಾಜರಾಗುವ ಮುಂದಿನ ಅಧಿವೇಶನದಲ್ಲಿ ಪ್ರಮಾಣವನ್ನು ಸ್ವೀಕರಿಸಬೇಕು.

ಆನಂತರ ನೆಹರು ಒಂದು ಚಿಕ್ಕ ಚೊಕ್ಕ ಸೊಗಸಾದ ಭಾಷಣ ಮಾಡಿದರು, ಅದು "Tryst with Destiny" ಭಾಷಣ ಎಂದು ಪ್ರಸಿದ್ಧವಾಯಿತು.

ನೆಹರು ಮಂಡಿಸಿದ ಮಸೂದೆಯನ್ನು ಚೌದರಿ ಖಲಿಕ್ವಜಮನ್ ಅನುಮೋದಿಸಿ ಒಂದು ಸೂಕ್ತವಾದ ಭಾಷಣ ಮಾಡಿದರು (ಆದರೆ ಆ ಭಾಷಣ ವ್ಯಂಗ್ಯವಾಯಿತು ಏಕೆಂದರೆ ಅವರು ಮುಂದೆ ಪಾಕಿಸ್ತಾನಕ್ಕೆ ಹೊರಟು ಹೋದರು.)

ಅಂದಿನ ಕೊನೆಯ ಭಾಷಣ ಡಾ. ಎಸ್. ರಾಧಾಕೃಷ್ಣನ್ ಅವರದು. ಅವರು ತಮ್ಮ ಮಧುರ ಕಂಠದಲ್ಲಿ ಇಂತೆಂದರು:

ನಮಗೆ ದೊರೆತಿರುವ ಅವಕಾಶಗಳು ವಿಪುಲ. ಆದರೆ ನಮ್ಮ ಶಕ್ತಿಗಿಂತ ಅಧಿಕಾರವು ಅಧಿಕವಾದರೆ, ನಾವು ದುರ್ದೆಶೆಗೆ ಒಳಗಾಗುತ್ತೇವೆ ಎಂದು ಎಚ್ಚರಿಸ ಬಯಸುತ್ತೇನೆ. ನಮಗೆ ಈಗ ದೊರೆತಿರುವ ಅವಕಾಶಗಳನ್ನು ಉಪಯೋಗಿಸಿಕೊಳ್ಳಲು ಬೇಕಾದ ಯೋಗ್ಯತೆ ಮತ್ತು ಶಕ್ತಿಯನ್ನು ನಾವು ಬೆಳೆಸಿಕೊಳ್ಳಬೇಕು. ನಾಳೆ

ಬೆಳಗ್ಗೆಯಿಂದ, ಇಂದಿನ ಮಧ್ಯರಾತ್ರಿಯಿಂದಲೇ, ನಾವು ಬ್ರಿಟಿಷರನ್ನು ದೂಷಿಸುವ ಹಾಗಿಲ್ಲ, ನಾವು ಮಾಡುವ ಕಾರ್ಯಗಳಿಗೆ ಜವಾಬ್ದಾರಿಯನ್ನು ನಾವೇ ವಹಿಸಿಕೊಳ್ಳಬೇಕು. ಸ್ವತಂತ್ರ ಭಾರತವು, ಅದು ತನ್ನ ಸಾಮಾನ್ಯ ಜನಗಳ ಹಿತಾಸಕ್ತಿಯ ಸೇವೆಯನ್ನು ಆಹಾರ, ಉಡುಪು, ವಸತಿ ಮತ್ತು ಸಾಮಾಜಿಕ ಚಟುವಟಿಕೆಗಳ ಬಗೆಗೆ ಮಾಡುವ ರೀತಿಯಿಂದ, ಪರೀಕ್ಷಿಸಲ್ಪಡುತ್ತದೆ. ಈ ಮಹಾನ್ ದೇಶದ ಒಳ್ಳೆಯ ಹೆಸರನ್ನು ಹಾಳು ಮಾಡುವ ಭ್ರಷ್ಟಾಚಾರವನ್ನು ನಾಶಮಾಡದ ಹೊರತು, ಸ್ವಜನ ಪಕ್ಷಪಾತ, ಅಧಿಕಾರ ವ್ಯಾಮೋಹ, ಲಾಭಕೋರತನ ಮತ್ತು ಕಾಳಸಂತೆಯನ್ನು ಮೂಲೋತ್ಪಾಟನೆ ಮಾಡಿದ ಹೊರತು ನಾವು ಆಡಳಿತದಲ್ಲಿ ದಕ್ಷತೆಯ ಮಟ್ಟವನ್ನು ಹಾಗೂ ಜೀವನಾವಶ್ಯಕ ವಸ್ತುಗಳ ಉತ್ಪಾದನೆ ಮತ್ತು ವಿತರಣೆಯ ಮಟ್ಟವನ್ನು ಏರಿಸಲು ಸಾಧ್ಯವಿಲ್ಲ.

ವಿಶ್ವ ಶಾಂತಿ ಮತ್ತು ಮಾನವ ಕಲ್ಯಾಣದ ಪ್ರವರ್ತನೆಯ ಕಡೆಗೆ ಈ ದೇಶವು ನೀಡಲಿರುವ ಕೊಡುಗೆಯ ಬಗೆಗೆ ಪಂಡಿತ್ ಜವಹರಲಾಲ್ ನೆಹರು ಪ್ರಸ್ತಾಪಿಸಿದ್ದಾರೆ. ನಮ್ಮ ಧ್ವಜದಲ್ಲಿರುವ ಚಕ್ರ, ಅಶೋಕ ಚಕ್ರವು ನಮಗೆಲ್ಲ ಮಹಾ ತತ್ವವನ್ನು ನೀಡುತ್ತಿದೆ. ನಮ್ಮ ಚಕ್ರವರ್ತಿಗಳ ಪೈಕಿ ಅತ್ಯಂತ ಶ್ರೇಷ್ಠನಾದ ಅಶೋಕನ ಬಗೆಗೆ ಹೆಚ್.ಜಿ. ವೆಲ್ಸ್ ಹೇಳಿರುವ ಮಾತುಗಳನ್ನು ಗಮನಿಸಿ: "ರಾಜರುಗಳು, ಘನತೆವೆತ್ತವರು, ಶ್ರೇಷ್ಠರು, ಪ್ರಶಾಂತರು, ಸಾರ್ವಭೌಮರು – ಇವರೆಲ್ಲರ ನಡುವೆ ಅತ್ಯಂತ ಶ್ರೇಷ್ಠನಾದ ಅಶೋಕನು ಒಂದು ತಾರೆಯಂತೆ ಏಕಾಂಗಿಯಾಗಿ ಶೋಭಿಸುತ್ತಿದ್ದಾನೆ. ವಿರಸಗಳನ್ನು ಶಮನಗೊಳಿಸುವ ಸಂದೇಶವನ್ನು ಅವನು ಬಂಡೆಗಳ ಮೇಲೆ ಕೆತ್ತಿಸಿದ್ದಾನೆ. ಭಿನ್ನಾಭಿಪ್ರಾಯಗಳಿದ್ದರೆ ಅವನ್ನು ಪರಿಹರಿಸುವ ಮಾರ್ಗ ಯಾವುದೆಂದರೆ ಸಾಮರಸ್ಯವನ್ನು ಪ್ರಚೋದಿಸುವುದು. ಭಿನ್ನಾಭಿಪ್ರಾಯಗಳನ್ನು ಹೋಗಲಾಡಿಸುವುದಕ್ಕೆ, ಸಾಮರಸ್ಯವೊಂದೇ ಮಾರ್ಗ, ನಮಗೆ ಇನ್ನಾವ ಮಾರ್ಗವೂ ಇಲ್ಲ.

ಮಧ್ಯರಾತ್ರಿ ಆದ ತಕ್ಷಣ ರಾಜ್ಯಾಂಗ ರಚನಾ ಸಭೆಯ ಸದಸ್ಯರು ಮಸೂದೆಯಲ್ಲಿ ನಮೂದಿಸಿದ್ದ ಪ್ರಮಾಣವನ್ನು ಸ್ವೀಕರಿಸಿದರು. ಅದಾದನಂತರ ಅಧ್ಯಕ್ಷರು ಮಂಡಿಸಿದ ಕೆಳಕಂಡ ನಿರ್ಣಯವನ್ನು ಯಾವ ಚರ್ಚೆಯೂ ಇಲ್ಲದೆ

ಸಭೆಯು ಅಂಗೀಕರಿಸಿತು.

ಅ) ಭಾರತದ ರಾಜ್ಯಾಂಗ ರಚನಾ ಸಭೆಯು ಭಾರತದ ಆಡಳಿತವನ್ನು ನಡೆಸುವ ಅಧಿಕಾರವನ್ನು ವಹಿಸಿಕೊಂಡಿದೆ.

ಆ) ಲಾರ್ಡ್ ಮೌಂಟ್ ಬ್ಯಾಟನ್‌ರವರು ಆಗಸ್ಟ್ ೧೫, ೧೯೪೭ರಿಂದ ಭಾರತದ ಗೌರ್ನರ್ ಜನರಲ್ ಆಗಿರಬೇಕೆಂಬ ಶಿಫಾರಸ್ಸನ್ನು ಭಾರತದ ರಾಜ್ಯಾಂಗ ರಚನಾ ಸಭೆಯು ಒಪ್ಪುತ್ತದೆ.

ಅನಂತರ, ಮೇಲ್ಕಂಡ ಸಂದೇಶವನ್ನು ಲಾರ್ಡ್ ಮೌಂಟ್‌ಬ್ಯಾಟನ್‌ರವರಿಗೆ ತಲುಪಿಸುವ ಕಾರ್ಯವನ್ನು ಡಾ. ರಾಜೇಂದ್ರ ಪ್ರಸಾದ್ ಮತ್ತು ಜವಹರಲಾಲ್ ನೆಹರು ಅವರಿಗೆ ಸಭೆಯು ವಹಿಸಿತು.

ಅದಾದ ನಂತರ ಶ್ರೀಮತಿ ಹಂಸ ಮೆಹ್ತಾರವರು ಭಾರತದ ಮಹಿಳೆಯರ ಪರವಾಗಿ ರಾಷ್ಟ್ರಧ್ವಜವನ್ನು ಅರ್ಪಿಸಿದರು.

ಲಾರ್ಡ್ ಮೌಂಟ್‌ಬ್ಯಾಟನ್‌ರವರ ಭೇಟಿಗೆ ಹೊರಟು ಡಾ. ರಾಜೇಂದ್ರ ಪ್ರಸಾದ್ ಮತ್ತು ಜವಹರಲಾಲ್ ನೆಹರು ಹೊರಬಂದಾಗ, ಅವರು ತಮ್ಮ ಕಾರಿನ ಬಳಿಗೆ ಬರುವುದು ಬಹಳ ಕಷ್ಟವಾಯಿತು. ಅಷ್ಟೊಂದು ಜನ ಅಲ್ಲಿ ಜಮಾಯಿಸಿದ್ದರು. ಆ ಸಂತೋಷಭರಿತವಾದ ಆದರೂ ಶಿಸ್ತಿನಿಂದಿದ್ದ ಜನ ಸಮೂಹ ಹೆಚ್ಚುತ್ತಲೇ ಇತ್ತು. ಸುಮಾರು ಅರ್ಧ ಘಂಟೆ ತಡವಾಗಿ ಇಬ್ಬರು ನಾಯಕರು ಕಾರು ಪ್ರವೇಶಿಸಿ ಹೊರಟರು.[೨೯]

ಹೀಗೆ ಪುರಾತನ ಹಾಗೂ ಸ್ವತಂತ್ರ ಭಾರತದ ನೂತನ ಪಯಣ ಆರಂಭವಾಯಿತು.

೧೫. ನೆಹರು ಜೊತೆ ಸಿಹಿ ಕಹಿ ಸಂಬಂಧ

೧೫.೧ ನಿಲ್ಲದ ಹತ್ಯಾಕಾಂಡ

ದೇಶ ವಿಭಜನೆಗೆ ಒಪ್ಪಿದ ಮೇಲೆ ಮತೀಯ ಹುಚ್ಚಾಟ ತಣ್ಣಗಾಗುತ್ತದೆ ಮತ್ತು ರಕ್ತಪಾತ ನಿಲ್ಲುತ್ತದೆ ಮತ್ತು ಎರಡು ರಾಷ್ಟ್ರಗಳಲ್ಲಿ ಅಲ್ಪ ಸಂಖ್ಯಾತರಿಗೆ ನ್ಯಾಯ ದೊರಕುತ್ತದೆ ಎಂದು ಕಾಂಗ್ರೆಸ್ ನಾಯಕರು ಭಾವಿಸಿದ್ದರು ಮತ್ತು ಆಶಿಸಿದ್ದರು. ಭಾರತವಂತೂ ಜಾತ್ಯಾತೀತ ರಾಷ್ಟ್ರವನ್ನು ನಿರ್ಮಿಸಬೇಕು ಮತ್ತು ಜಾತಿ, ಜನಾಂಗ ಹಾಗೂ ಧರ್ಮದ ಭೇದವಿಲ್ಲದೆ ಎಲ್ಲರಿಗೂ ಸಮಾನತೆ ಮತ್ತು ಸ್ವಾತಂತ್ರ್ಯವನ್ನು ದೊರಕಿಸಬೇಕೆಂದು ನಿರ್ಧರಿಸಿತ್ತು. ಆದರೆ, ಪಾಕಿಸ್ತಾನವು ಧರ್ಮದ ಆಧಾರದ ಮೇಲೆ ಮತ್ತು ಮತೀಯ ದ್ವೇಷದ ಮೇಲೆ ನಿರ್ಮಾಣವಾಗಿತ್ತು. ಅದು ತನ್ನ ಗುರಿ ಸಾಧನೆಗಾಗಿ ಹಿಂಸಾಮಾರ್ಗವನ್ನು ಹಿಡಿಯಿತು. ಮುಸ್ಲಿಂ ಲೀಗ್ ನಾಯಕರು ರಕ್ತಪಾತಕ್ಕೆ ಬೆಂಬಲ ಮತ್ತು ಪ್ರಚೋದನೆ ನೀಡಿದರು. ಆ ಹಿಂಸಾಚಾರ ಸಾಮೂಹಿಕ ಹುಚ್ಚಾಟವಾದಾಗ, ಪಾಕಿಸ್ತಾನಿ ನಾಯಕರು ಅದನ್ನು ತಡೆಯಲಾಗಲಿಲ್ಲ. ಬೆಂಕಿಯನ್ನು ಹಚ್ಚುವುದು ಸುಲಭ, ಅದು ಕಾಡ್ಗಿಚ್ಚಿನಂತೆ ಬೆಳೆದಾಗ ನಂದಿಸುವುದು ಬಹು ಕಷ್ಟ. ಹೀಗಾಗಿ ಪಾಕಿಸ್ತಾನವನ್ನು ಸೃಷ್ಟಿಸಲು ಕಾಂಗ್ರೆಸ್ ನಾಯಕರು ಒಪ್ಪಿದ ಮೇಲೂ ಹತ್ಯಾಕಾಂಡ ಮುಂದುವರೆಯಿತು. ಸೈನ್ಯ ಮತ್ತು ಪೊಲೀಸರು ಅದನ್ನು ಹತ್ತಿಕ್ಕಲು ಆಗಲಿಲ್ಲ. ತಮ್ಮದೇ ಧರ್ಮೀಯರ ಮೇಲೆ ಗುಂಡು ಹಾರಿಸಲು ಅವರು ನಿರಾಕರಿಸಿದರು. ಪಶ್ಚಿಮ ಪಂಜಾಬ್‌ನಲ್ಲಿ ಹಿಂದೂ ಮತ್ತು ಸಿಖ್ ಅಲ್ಪ ಸಂಖ್ಯಾತರು ಭಯ ಭೀತಿಯಿಂದ ಬದುಕುವಂತಾಯಿತು.[೨೯೭]

ಅಷ್ಟು ಹೊತ್ತಿಗೆ ಭಾರತ ಮತ್ತು ಪಾಕಿಸ್ತಾನಗಳ ನಡುವಣ ಗಡಿಯ ನಿರ್ಧಾರಕ್ಕೆ ನೇಮಕವಾಗಿದ್ದ ರಾಡ್‌ಕ್ಲಿಫ್‌ನ ತೀರ್ಮಾನ ಪ್ರಕಟವಾಯಿತು. ರಾಡ್‌ಕ್ಲಿಫ್ ಗುರುದಾಸ್‌ಪುರವನ್ನು ಭಾರತಕ್ಕೆ ನೀಡಿದ್ದನು. ಇದು ಅನ್ಯಾಯ, ರಾಡ್‌ಕ್ಲಿಫ್ ಮತ್ತು ಮೌಂಟ್‌ಬ್ಯಾಟನ್ ನಡುವಣ ಪಿತೂರಿ ಎಂದು ಪಾಕಿಸ್ತಾನೀಯರು ಕಿರುಚಲಾರಂಭಿಸಿದರು. 'ಸೇಡು ತೀರಿಸಿಕೊಳ್ಳೋಣ' ಎಂದಿತು ಜನರ ಗುಂಪು. ಪಶ್ಚಿಮ ಪಂಜಾಬ್‌ನಲ್ಲಿ ರಕ್ತಪಾತ ಆರಂಭವಾಯಿತು. ಹಿಂದೂಗಳು ಮತ್ತು ಸಿಕ್ಖರು ಹಳ್ಳಿಗಳಿಂದ ಪಟ್ಟಣಗಳಿಗೆ ಪಲಾಯನ ಮಾಡಿದರು. ಆದರೆ ಅಲ್ಲಿ ಅವರಿಗೆ ಯಾವ ರಕ್ಷಣೆಯೂ ಸಿಗಲಿಲ್ಲ. ಅವರನ್ನು ಬಹು ಸಂಖ್ಯಾತರು ಲೂಟಿ ಮಾಡಿದರು, ಹಿಂಸಿಸಿದರು ಮತ್ತು ಕೊಚ್ಚಿ ಹಾಕಿದರು. ಈ ಸುದ್ದಿ ಪೂರ್ವ ಪಂಜಾಬ್‌ಗೆ ತಲುಪಿದಾಗ ಅಲ್ಲಿಯ ಬಹು ಸಂಖ್ಯಾತರಾದ ಹಿಂದೂಗಳು ಮತ್ತು ಸಿಕ್ಖರು ಅಲ್ಲಿಯ ಮುಸ್ಲಿಮರ ಮೇಲೆ ಅಷ್ಟೇ ಕ್ರೌರ್ಯದಿಂದ ಮುಗಿಬಿದ್ದರು. ಅದರಿಂದ ಹಿಂದುಗಳು ಮತ್ತು ಸಿಕ್ಖರು ಪಾಕಿಸ್ತಾನವಾಗುವ ಭಾಗದಿಂದ ಭಾರತಕ್ಕೆ ಮತ್ತು ಮುಸ್ಲಿಮರು ಭಾರತದಿಂದ ಪಾಕಿಸ್ತಾನವಾಗುವ ಭಾಗಕ್ಕೆ ಧಾವಿಸಲು ಆರಂಭಿಸಿದರು. ಆದರೆ ಮಾರ್ಗ ಮಧ್ಯದಲ್ಲೇ ಈ ನಿರಾಶ್ರಿತರನ್ನು ಹೊತ್ತು ತರುತ್ತಿದ್ದ ರೈಲುಗಳು ಆಕ್ರಮಣಕ್ಕೆ ಒಳಗಾದುವು. ಪಾಕಿಸ್ತಾನ ಪ್ರದೇಶದಲ್ಲಿ ಚಲಿಸುತ್ತಿದ್ದ ಒಂದು ರೈಲಿನಲ್ಲಿದ್ದ ೨೦೦೦ ಮಂದಿ ಹಿಂದೂಗಳು ಮತ್ತು ಸಿಕ್ಖರು ಕೊಲ್ಲಲ್ಪಟ್ಟರು ಅಥವಾ ತೀವ್ರವಾಗಿ ಗಾಯಗೊಳಿಸಲ್ಪಟ್ಟರು.[೨೯೮]

ಹೀಗೆ ತಮ್ಮೆಲ್ಲ ಆಸ್ತಿ ಪಾಸ್ತಿಗಳನ್ನು ಕಳೆದುಕೊಂಡು ಕೈಗೆ ಸಿಕ್ಕಿದ ಅಲ್ಪವನ್ನು ಎತ್ತಿಕೊಂಡು ಪಾಕಿಸ್ತಾನ ಮತ್ತು ಭಾರತದ ನಡುವೆ ಪಲಾಯನ ಮಾಡುತ್ತಿದ್ದ ನಿರಾಶ್ರಿತರಿಗೆ ರಕ್ಷಣೆಯನ್ನು ತುರ್ತಾಗಿ ಒದಗಿಸಬೇಕಾಗಿತ್ತು. ಈ ನಿರಾಶ್ರಿತರ ಸಾಲು ಕೆಲವೊಮ್ಮೆ ೧೦-೧೨ ಮೈಲಿಗಳ ಉದ್ದವಿರುತ್ತಿತ್ತು. ಹೀಗೆ ಸುಮಾರು ೧೨ ಮಿಲಿಯನ್ ಜನ ಎರಡು ರಾಷ್ಟ್ರಗಳ ನಡುವೆ ವಿನಿಮಯಗೊಂಡರೆಂಬ ಅಂದಾಜು ಇದೆ. ಅದರಲ್ಲಿ ಅರ್ಧಭಾಗದಷ್ಟು ಕೊಲ್ಲಲ್ಪಟ್ಟಿದ್ದರು. ಕೋಟ್ಯಂತರ ರೂಪಾಯಿ ಲೂಟಿಯಾಗಿತ್ತು. ಸಾವಿರಾರು ಮಂದಿ ಮಹಿಳೆಯರು ಅಪಹರಿಸಲ್ಪಟ್ಟರು ಮತ್ತು ಮತಾಂತರಗೊಳಿಸಲ್ಪಟ್ಟರು. ಭಾರತ ಮತ್ತು ಪಾಕಿಸ್ತಾನ ಸಂಯುಕ್ತ ಶಸ್ತ್ರ ಸಜ್ಜಿತ ರಕ್ಷಣೆಯನ್ನು ಪಲಾಯನ ಮಾಡುವವರಿಗೆ ಒದಗಿಸಲು ಒಪ್ಪಿದುವು.[೨೯೯]

ಪಂಜಾಬ್‌ನಿಂದ ಬಂದ ಹಿಂದೂ ಮತ್ತು ಸಿಕ್ ನಿರಾಶ್ರಿತರು ಅಧಿಕ ಸಂಖ್ಯೆಯಲ್ಲಿ ದೆಹಲಿಯನ್ನು ತಲುಪಿದರು. ದೆಹಲಿಯ ಜನಸಂಖ್ಯೆಯಲ್ಲಿ ಕಾಲು ಭಾಗ ಅವರೇ ಆದರು. ಸೆಪ್ಟೆಂಬರ್ ಆದಿಭಾಗದಲ್ಲಿ ದೆಹಲಿಯಲ್ಲಿ ಮತೀಯ

ಹೊಡೆದಾಟ ಆರಂಭವಾಯಿತು. ಗಾಂಧೀಜಿ ಸೆಪ್ಟೆಂಬರ್ ೯ರಂದು ದೆಹಲಿಯನ್ನು ತಲುಪಿದರು. ಅಲ್ಲಿ ಸ್ಮಶಾನಮೌನ ಆವರಿಸಿತ್ತು. ೨೪ ಘಂಟೆಗಳ ಕರ್ಫ್ಯೂ ವಿಧಿಸಲ್ಪಟ್ಟಿತ್ತು. ಪೊಲೀಸರು ಮತ್ತು ಸೈನಿಕರಿಗೆ 'ಗುಂಡಿಟ್ಟು ಕೊಲ್ಲಲು' ಅಪ್ಪಣೆ ನೀಡಲಾಗಿತ್ತು. ಈ ಎಲ್ಲಾ ಏರ್ಪಾಟುಗಳನ್ನು ನಿಯಂತ್ರಿಸುವುದು ಗೃಹಮಂತ್ರಿಯಾದ ಪಟೇಲರ ಜವಾಬ್ದಾರಿಯಾಗಿತ್ತು.[೩೦೦]

ಲಾರ್ಡ್ ಮೌಂಟ್‌ಬ್ಯಾಟನ್ ಅಧ್ಯಕ್ಷತೆಯಲ್ಲಿ ಒಂದು ತುರ್ತು ಸಮಿತಿಯನ್ನು ರಚಿಸಲಾಗಿತ್ತು. ಅದು ಪ್ರತೀ ದಿನ, ಪ್ರತಿ ಘಂಟೆ ಪರಿಸ್ಥಿತಿಯ ಅವಲೋಕನ ನಡೆಸುತ್ತಿತ್ತು. ಸೈನ್ಯ, ಪೊಲೀಸ್, ಮ್ಯಾಜಿಸ್ಟ್ರೇಟರು ಮತ್ತಿತರ ಘಟಕಗಳ ನಡುವೆ ಹೊಂದಾಣಿಕೆ ನಿರ್ವಹಿಸಲು ವಾಣಿಜ್ಯ ಮಂತ್ರಿ ಸಿ.ಹೆಚ್. ಭಾಭಾ ನಾಯಕತ್ವದಲ್ಲಿ ಒಂದು ಸಮಿತಿ ರಚಿತವಾಗಿತ್ತು. ಈ ನಿರಾಶ್ರಿತರು ತಮ್ಮ ಮನ ಕಲಕುವ ಸಂಕಟದ ಕತೆಗಳನ್ನು ದೆಹಲಿಯ ಜನರಿಗೆ ಒರೆದರು. ಅವರು ಒರೆದ ಇಡೀ ಹಳ್ಳೀಗಳ ಸರ್ವನಾಶ, ಮಹಿಳೆಯರ ಮಾನಭಂಗ, ಅಪಹರಣ, ಮತಾಂತರ ಮತ್ತು ಮಾರಾಟ, ಹಸುಳೆಗಳಿಗೆ ಚೂರಿಯ ಇರಿತ, ಅಸಂಖ್ಯಾತ ಕೊಲೆ, ಕಗ್ಗೊಲೆ, ಲೂಟಿ, ಹಲ್ಲೆ, ಮಾರ್ಗ ಮಧ್ಯದಲ್ಲಿ ನಿರಾಶ್ರಿತರ ರೈಲುಗಳ ಮೇಲೆ ದುರಾಕ್ರಮಣ ಮುಂತಾದ ಭೀಕರ ಕತೆಗಳನ್ನು ಕೇಳಿದಾಗ, ಗಂಡನನ್ನು ಕಳೆದುಕೊಂಡ ಹೆಂಡತಿಯರು, ಹೆಂಡತಿಯನ್ನು ಕಳೆದುಕೊಂಡ ಗಂಡಂದಿರು, ತಂದೆ ತಾಯಿಯನ್ನು ಕಳೆದುಕೊಂಡ ಅನಾಥ ಮಕ್ಕಳು, ಮಕ್ಕಳನ್ನು ಕಳೆದುಕೊಂಡ ವೃದ್ಧ ತಂದೆತಾಯಿಯರ ಸಂಕಟವನ್ನು ಕಂಡಾಗ ದೆಹಲಿ ಉದ್ರಿಕ್ತವಾಯಿತು ಮತ್ತು ಅಲ್ಲಿ ಸೆಪ್ಟೆಂಬರ್ ೪ರಂದು ಮತೀಯ ಗಲಭೆ ಆರಂಭವಾಯಿತು. ಭಯಭೀತರಾದ ದೆಹಲಿಯ ಮುಸ್ಲಿಮರು ಪಾಕಿಸ್ತಾನದ ಕಡೆಗೆ ಧಾವಿಸಲಾರಂಭಿಸಿದರು. ಪಾಕಿಸ್ತಾನದ ಹಿಂದೂಗಳು ಮತ್ತು ಸಿಕ್ಖರು ಅನುಭವಿಸಿದ ಸಾವು ನೋವನ್ನು ಇವರೂ ಅನುಭವಿಸಬೇಕಾಯಿತು. ದೆಹಲಿಯಲ್ಲಿ ಮತ್ತು ಉತ್ತರ ಭಾರತದ ಕೆಲವು ಪ್ರದೇಶಗಳಲ್ಲಿ ಮತೀಯ ಹತ್ಯಾಕಾಂಡ ನಡೆಯಿತು. ದೆಹಲಿಯಲ್ಲಿ ಹಿಂದೂ ಮುಸ್ಲಿಮರ ಹೋರಾಟ ತಾರಕಕ್ಕೇರಿತು.

ಮುಸ್ಲಿಮರು ಇಂತಹ ಪರಿಸ್ಥಿತಿಯನ್ನು ನಿರೀಕ್ಷಿಸಿ ಅನೇಕ ಪ್ರದೇಶಗಳಲ್ಲಿ ಶಸ್ತ್ರಾಸ್ತ್ರಗಳನ್ನು ಮದ್ದು ಗುಂಡುಗಳನ್ನು ಶೇಖರಿಸಿದ್ದರು. ಅದರಿಂದ ಪರಿಸ್ಥಿತಿ ಅತಿ ವಿಕೋಪಕ್ಕೆ ಹೋಯಿತು. ಕೆಲವರು ದೆಹಲಿಯನ್ನೇ ವಶಪಡಿಸಿಕೊಳ್ಳುವ ಹಂಚಿಕೆ ಹೂಡಿದ್ದರು. ಪೊಲೀಸರು ಮುಸ್ಲಿಮರ ಮನೆಗಳನ್ನು ಶೋಧಿಸಿದಾಗ ಅಧಿಕ ಪ್ರಮಾಣದಲ್ಲಿ ವಿವಿಧ ಬಗೆಯ ಬಂದೂಕಗಳು, ಫಿರಂಗಿಗಳು ಇತ್ಯಾದಿ ದೊರಕಿದುವು.

ಸರ್ಕಾರವು ಹತ್ಯಾಕಾಂಡವನ್ನು ಹತ್ತಿಕ್ಕಲು ತಕ್ಷಣ ಕ್ರಮಗಳನ್ನು ಕೈಗೊಂಡಿತು. ೨೪ ಘಂಟೆಗಳ ಕರ್ಫ್ಯೂ ವಿಧಿಸಿತು. 'ಗಲಾಟೆಕಾರರನ್ನು ಕಂಡ ತಕ್ಷಣ ಗುಂಡಿಟ್ಟು ಕೊಲ್ಲುವ' ಆಜ್ಞೆಯನ್ನು ಪೊಲೀಸರು ಮತ್ತು ಸೈನಿಕರಿಗೆ ನೀಡಿತು. 'ನಿಯಂತ್ರಣ ಕೊಠಡಿ' ದಿನದ ೨೪ ಘಂಟೆಗಳೂ ಎಚ್ಚರಿಕೆಯಿಂದ ಇರುತ್ತಿತ್ತು. ಶಸ್ತ್ರ ಸಜ್ಜಿತ ಅಧಿಕಾರಿಗಳ ತಂಡ ಸದಾ ಗಸ್ತು ತಿರುಗುತ್ತಿತ್ತು. ಬಹಳ ಸಂಕಟ ಅನುಭವಿಸಿ ನಿರ್ಗತಿಕರಾಗಿ ಬಂದ ನಿರಾಶ್ರಿತರು ಬಹಳ ಕುಪಿತರಾಗಿದ್ದರು. ಅವರು ತಮ್ಮ ಸ್ಥಿತಿಗೆ ಕಾರಣವೆಂದು ಪ್ರತ್ಯೇಕ ಪಾಕಿಸ್ತಾನ ಬೇಡಿದವರ ಮೇಲೆ ಸೇಡು ತೀರಿಸಿಕೊಳ್ಳಲು ಹಾತೊರೆಯುತ್ತಿದ್ದರು. ಮುಸ್ಲಿಮರು ತಮ್ಮ ಪ್ರದೇಶದಲ್ಲಿ ಇದ್ದ ಹಿಂದೂಗಳ ಮೇಲೆ ಆಕ್ರಮಣ ಮಾಡುತ್ತಿದ್ದರು. ಪೊಲೀಸ್ ಮತ್ತು ನ್ಯಾಯಪಾಲನಾ ಇಲಾಖೆಗಳಲ್ಲಿ ಮುಸ್ಲಿಮರೇ ತುಂಬಿದ್ದರು. ಶಸ್ತ್ರ ರಹಿತ ಪೊಲೀಸರಲ್ಲಿ ಶೇ. ೬೦ರಷ್ಟು, ಶಸ್ತ್ರ ಸಹಿತ ಪೊಲೀಸರಲ್ಲಿ ಶೇ. ೮೦ರಷ್ಟು ಮುಸ್ಲಿಮರಿದ್ದರು. ಪರಿಸ್ಥಿತಿಯನ್ನು ನಿಯಂತ್ರಿಸಲು ಪೊಲೀಸರು ಅಸಮರ್ಥರಾಗಿದ್ದರು. ಅದರಿಂದ ಸರ್ದಾರರು ಗೂರ್ಖಾ ಸೈನಿಕ ಪಡೆಯನ್ನು ಮತ್ತು ಬಂಗಾಳ ಮತ್ತು ಮಧ್ಯ ಪ್ರದೇಶದಿಂದ ಹೆಚ್ಚುವರಿ ಸೈನಿಕರನ್ನು ಕರೆಸಿದರು.

ಆಗಸ್ಟ್ ೧೪ರಂದು ಪಾಕಿಸ್ತಾನದ ರಚನೆ ಮತ್ತು ಆಗಸ್ಟ್ ೧೫ರಂದು ಸ್ವತಂತ್ರ ಭಾರತದ ಉದಯವಾದ ಮೇಲೂ ಹಿಂಸಾಚಾರ ನಿಲ್ಲಲೂ ಇಲ್ಲ, ತಗ್ಗಲೂ ಇಲ್ಲ. ಭಾರತದಲ್ಲಿರುವ ಮುಸ್ಲಿಂ ಅಲ್ಪ ಸಂಖ್ಯಾತರ ಮೇಲೆ ಉಂಟಾಗ ಬಹುದಾದ ದುಷ್ಪರಿಣಾಮವನ್ನು ಗಮನಿಸಿ ಪಾಕಿಸ್ತಾನವು ತನ್ನ ಅಲ್ಪ ಸಂಖ್ಯಾತರನ್ನು ರಕ್ಷಿಸುತ್ತದೆ – ಎಂದು ಭಾವಿಸಲಾಗಿತ್ತು. ಆದರೆ ಹಾಗಾಗಲಿಲ್ಲ. ಆಗಸ್ಟ್ ೧೬ರಂದು ಪಾಕಿಸ್ತಾನದ ಪ್ರಧಾನಮಂತ್ರಿ ಲಿಯಾಖತ್ ಆಲೀ ಖಾನ್‌ನು ನೆಹರು, ಪಟೇಲ್ ಮತ್ತು ಮೌಂಟ್‌ಬ್ಯಾಟನ್ ಒಡನೆ ಸಮಾಲೋಚನೆಗಾಗಿ, ದೆಹಲಿಗೆ ಬಂದನು. ಆ ಸಮಯದಲ್ಲಿ ಪಟೇಲರು, 'ದೊಡ್ಡ ಪ್ರಮಾಣದಲ್ಲಿ ಪ್ರಜಾವಿನಿಮಯ ಪಂಜಾಬಿನ ಸಮಸ್ಯೆಗೆ ಇರುವ ಏಕಮಾತ್ರ ಪರಿಹಾರ' ಎಂದರು. ಅದು ಒಂದು ವಾಸ್ತವಿಕ ಸಲಹೆಯಾಗಿತ್ತು. ಆದರೆ ಅದನ್ನು ನೆಹರುವಾಗಲಿ, ಮೌಂಟ್‌ಬ್ಯಾಟನ್ ಆಗಲಿ ಅಥವಾ ಲಿಯಾಖತ್ ಆಗಲಿ ಒಪ್ಪಲಿಲ್ಲ. ಲಿಯಾಖತ್ 'ಪಶ್ಚಿಮ ಪಂಜಾಬ್ ನಲ್ಲಿ ಸಿಕ್ಖರ ಹಕ್ಕುಗಳ ಬೆಂಬಲಕ್ಕೆ ನಾನು ನಿಲ್ಲುತ್ತೇನೆ' ಎಂದನು. ೨೫ ದಿನಗಳ ಮೇಲೆ, ಹಲವಾರು ಸಾವಿರ ಜನರು ಪ್ರಾಣ ತೆತ್ತ ಮೇಲೆ, ಭಾರತ ಸರ್ಕಾರವು, 'ಕಾನೂನು ಮತ್ತು ಶಿಸ್ತು ಪಾಲನೆಗಿಂತ ನಿರಾಶ್ರಿತರ ವರ್ಗಾವಣೆಗೆ ಆದ್ಯತೆ ಕೊಡಬೇಕೆಂದು' ತೀರ್ಮಾನಿಸಿತು. ಒಂದು ತಿಂಗಳ ನಂತರ ಇಂಡಿಯಾ ಮತ್ತು ಪಾಕಿಸ್ತಾನ ತಮ್ಮ ಅಲ್ಪ ಸಂಖ್ಯಾತರ ವಿನಿಮಯಕ್ಕೆ ಒಪ್ಪಿದುವು.

ಆದರೆ ಅಷ್ಟು ಹೊತ್ತಿಗಾಗಲೇ ದೇಶಾಂತರದ ಮಹಾ ವಲಸೆ ಆರಂಭವಾಗಿತ್ತು. ಆದರೆ ಎರಡು ಪಂಜಾಬ್‌ಗಳಲ್ಲೂ ವಲಸೆಯ ಮಾರ್ಗ ಸುರಕ್ಷಿತವಾಗಿರಲಿಲ್ಲ.[೩೦೧]

ಸೆಪ್ಟೆಂಬರ್ ೨ರಂದು ನೆಹರು, ಮತೀಯ ಹುಚ್ಚಾಟದ ವಿರುದ್ಧ ಇಂಡೋ – ಪಾಕ್ ಸಂಯುಕ್ತ ಕಾರ್ಯಾಚರಣೆಯ ಸಾಧ್ಯತೆಯನ್ನು ಪರಿಶೀಲಿಸಲು ಪಾಕಿಸ್ತಾನದ ಲಾಹೋರ್‌ಗೆ ಹೋದರು. ನೆಹರು ಅಲ್ಲಿದ್ದಾಗ ಪಟೇಲರು ಅವರಿಗೊಂದು ಪತ್ರವನ್ನು ಒಬ್ಬ ವ್ಯಕ್ತಿಯ ಮೂಲಕ ಕಳುಹಿಸಿದರು:

> ಬೆಳಗ್ಗೆಯಿಂದ ರಾತ್ರಿಯವರೆಗೆ ನನ್ನ ಕಾಲವು ಪಶ್ಚಿಮ ಪಾಕಿಸ್ತಾನದ ವಿವಿದೆಡೆಗಳಿಂದ ಬಂದ ಹಿಂದೂ ಮತ್ತು ಸಿಕ್ ನಿರಾಶ್ರಿತರ ಅಳಲು ಮತ್ತು ದೌರ್ಜನ್ಯದ ಕತೆಗಳನ್ನು ಆಲಿಸುವುದರಲ್ಲಿ ಕಳೆದು ಹೋಗುತ್ತಿದೆ..... ಪಶ್ಚಿಮ ಪಂಜಾಬಿನಲ್ಲಿ ಪರಿಸ್ಥಿತಿ ಶೀಘ್ರವಾಗಿ ಸುಧಾರಿಸದೆ ಹೋದರೆ, ಇಲ್ಲಿ ಮತ್ತು ಇತರ ಕಡೆ ಪರಿಸ್ಥಿತಿಯು ಹತೋಟಿಯನ್ನು ಮೀರುತ್ತದೆ. ಕಾನೂನು ಬಾಹಿರತೆ ಮತ್ತು ದಾಂದಲೆಯನ್ನು ಉಗ್ರ ಕ್ರಮಗಳಿಂದ ಅಡಗಿಸಬೇಕೆಂದು ಪಾಕಿಸ್ತಾನದ ಸರ್ಕಾರವನ್ನು ಕೇಳಬೇಕು.[೩೦೨]

ಆಗಸ್ಟ್ ೩೧ರಂದು ಪಟೇಲರು ಪೂರ್ವ ಪಂಜಾಬಿನ ಮುಸ್ಲಿಮರನ್ನು ರಕ್ಷಿಸಲು ಮತ್ತು ಅವರನ್ನು ಸ್ಥಳಾಂತರಿಸಲು ಜಲಂದರ್‌ಗೆ ಹೋದರು. ಮಾರನೆಯ ದಿನ ಅವರು ನೆಹರುಗೆ, ಹೋಗುವ ಮತ್ತು ಬರುವ ಎರಡು ಪ್ರಯಾಣಗಳಲ್ಲೂ ಸಟ್ಲೇಜ್ ನದಿಯ ಈ ಕಡೆಯ ತೀರದಲ್ಲಿ ಅನೇಕ ಹಳ್ಳಿಗಳು ಬೆಂಕಿ ಹತ್ತಿ ಉರಿಯುತ್ತಿರುವುದನ್ನು ಕಂಡೆ. ಪೂರ್ವ ಪಂಜಾಬಿನಲ್ಲೂ ಮೃಗತ್ವ ಮತ್ತು ಘೋರ ಕೃತ್ಯಗಳು ನಡೆಯುತ್ತಿವೆ,' ಎಂದು ಬರೆದರು. ಮೂರು ದಿನಗಳ ನಂತರ ಅವರು ಲಾಹೋರ್‌ಗೆ ಹೋದರು. ಅಲ್ಲಿ ಅವರು ನೆಹರು, ಜಿನ್ನಾ ಮತ್ತು ಲಿಯಾಖತ್ ಜೊತೆ ಅಲ್ಲಿಯ ದುಷ್ಕೃತ್ಯಗಳನ್ನು ವೀಕ್ಷಿಸಿದರು.

ಪಂಜಾಬಿನಲ್ಲಿ ಪರಿಸ್ಥಿತಿ ಹಾಗಿದ್ದರೆ, ಕಲ್ಕತ್ತದಲ್ಲಿ ಗಾಂಧೀಜಿ ಶಾಂತಿ ಸ್ಥಾಪನೆಗೆ ಪ್ರಯತ್ನಿಸುತ್ತಿದ್ದರು. ಅಲ್ಲಿ ಅವರು ಸುಹ್ರವರ್ದಿಯ ಜೊತೆ ಒಂದು ತೆರವಾದ ಮನೆಯಲ್ಲಿ ವಾಸಿಸುತ್ತಿದ್ದರು. ೧೯೪೬ ಆಗಸ್ಟ್ ೧೬ರಂದು ಮುಸ್ಲಿಂ ಲೀಗ್‌ನವರು ನೇರ ಕ್ರಮ ಆರಂಭಿಸಿ ಹಿಂದೂಗಳ ಮಾರಣ ಹೋಮಕ್ಕೆ ಪ್ರಚೋದನೆ ನೀಡಿದವನು ಅಂದಿನ ಬಂಗಾಳದ ಪ್ರಧಾನಮಂತ್ರಿ ಸುಹ್ರವರ್ದಿ. ಅದರಿಂದ ಪಟೇಲರು ಒಬ್ಬ ಗೂಂಡಾ ಜೊತೆ ವಾಸಿಸುತ್ತಿರುವುದಕ್ಕೆ ಗಾಂಧೀಜಿಯನ್ನು ತರಾಟೆಗೆ ತೆಗೆದು ಕೊಂಡರು. ಆದಾಗ್ಯೂ ಗಾಂಧೀಜಿಯ ಯತ್ನ ಫಲಕಾರಿಯಾಯಿತು. ಆಗಸ್ಟ್

೧೮ರಂದು ಗಾಂಧೀಜಿ ನಡೆಸಿದ ಪ್ರಾರ್ಥನಾ ಸಭೆಯಲ್ಲಿ ಅಧಿಕ ಸಂಖ್ಯೆಯ ಹಿಂದೂಗಳು, ಸಿಕ್ಖರು ಮತ್ತು ಮುಸ್ಲಿಮರು ಭಾಗವಹಿಸಿದ್ದರು. ಆದಾಗ್ಯೂ ತಿಂಗಳ ಕೊನೆಯಲ್ಲಿ ಹಿಂಸಾಚಾರ ಮತ್ತೆ ಆರಂಭವಾಯಿತು. ಅದರಿಂದ ಸೆಪ್ಟೆಂಬರ್ ೨ರಂದು ಗಾಂಧೀಜಿ ಉಪವಾಸ ಆರಂಭಿಸಿದರು. ನಾಲ್ಕನೆಯ ತಾರೀಖು ಉತ್ತರ ಕಲ್ಕತ್ತದ ೫೦೦ ಮಂದಿ ಪೊಲೀಸರು, ಬ್ರಿಟಿಷ್ ಮತ್ತು ಆಂಗ್ಲೋ – ಇಂಡಿಯನ್ ಅಧಿಕಾರಿಗಳು ಸೇರಿ, ಕೆಲಸದಲ್ಲಿರುವಾಗಲೇ ೨೪ ಘಂಟೆಗಳ ಸಹಾನುಭೂತಿ ಉಪವಾಸ ನಡೆಸಿದರು. ಆ ವೇಳೆಗೆ ನಗರದಲ್ಲಿ ಶಾಂತಿ ನೆಲೆಸಿತು. ೫ನೆ ತಾರೀಖಿನ ರಾತ್ರಿ ಗಾಂಧೀಜಿಯವರು ಸುಹ್ರವರ್ದಿ ನೀಡಿದ ಹಣ್ಣಿನ ರಸವನ್ನು ಕುಡಿದು ತಮ್ಮ ಉಪವಾಸವನ್ನು ಮುಕ್ತಾಯ ಮಾಡಿದರು.[೩೦೩]

ಅಷ್ಟು ಹೊತ್ತಿಗೆ ದೆಹಲಿಯಲ್ಲಿ ಹಿಂಸಾಚಾರ ಆರಂಭವಾಯಿತು. 'ದೆಹಲಿಯು ಮತ್ತೊಂದು ಲಾಹೋರ್ ಆಗುವುದನ್ನು ನಾನು ಸಹಿಸುವುದಿಲ್ಲ' ಎಂದು ಸರ್ದಾರರು ಗುಡುಗಿದರು. ತಾರತಮ್ಯ ಮಾಡುವ ಅಧಿಕಾರಿಗಳನ್ನು ಶಿಕ್ಷಿಸುವುದಾಗಿ ಸಾರ್ವಜನಿಕವಾಗಿ ಪ್ರಕಟಿಸಿದರು. ಅವರ ಸೂಚನೆಯ ಮೇಲೆ ಸೆಪ್ಟೆಂಬರ್ ೭ರಂದು 'ಕಂಡಾಕ್ಷಣ ಗುಂಡುಹಾರಿಸಬೇಕೆನ್ನುವ' ಆಜ್ಞೆಯನ್ನು ಪೊಲೀಸರಿಗೆ ನೀಡಿದರು. ಹಳೆಯ ದೆಹಲಿಯ ರೈಲ್ವೆ ನಿಲ್ದಾಣದಲ್ಲಿ ದಾಂದಲೆಯಲ್ಲಿ ತೊಡಗಿದ್ದ ನಾಲ್ಕು ಮಂದಿ ಹಿಂದೂ ಹಿಂಸಾಚಾರಿಗಳು ಪೊಲೀಸರ ಗುಂಡಿಗೆ ಬಲಿಯಾದರು. ಸೆಪ್ಟೆಂಬರ್ ೯ರ ಬೆಳಗ್ಗೆ ಗಾಂಧೀಜಿ ದೆಹಲಿಯನ್ನು ತಲುಪಿದರು. ಅವರ ಪ್ರಯಾಣ ಮುಂದುವರೆಸಿ ಪಂಜಾಬ್‌ಗೆ ಹೋಗಬೇಕೆಂದಿದ್ದರು. ಆದರೆ ದೆಹಲಿಯ ಹಿಂಸಾಚಾರ ಅವರನ್ನು ಅಲ್ಲೇ ಉಳಿಯುವಂತೆ ಮಾಡಿತು. ಪಟೇಲರು ಗಾಂಧೀಜಿಯನ್ನು ರೈಲ್ವೆ ನಿಲ್ದಾಣದಲ್ಲೇ ಭೇಟಿ ಮಾಡಿ ಅವರನ್ನು ಬಿರ್ಲಾ ಸದನಕ್ಕೆ ಕರೆದುಕೊಂಡು ಹೋದರು. ಭಂಗಿ ಕಾಲೊನಿಯನ್ನು ನಿರಾಶ್ರಿತರು ಸಂಪೂರ್ಣವಾಗಿ ಆವರಿಸಿಕೊಂಡಿದ್ದರು. ಕಾರಿನಲ್ಲಿ ಹೋಗುವಾಗ ಪಟೇಲರು ಗಾಂಧೀಜಿಗೆ ದೆಹಲಿಯ ಪರಿಸ್ಥಿತಿಯನ್ನು ವಿವರಿಸಿದರು.[೩೦೪]

ಮಾರನೆಯ ದಿನ ವಾಣಿಜ್ಯ ಮಂತ್ರಿ ಸಿ.ಹೆಚ್. ಭಾಭಾ ಅಧ್ಯಕ್ಷತೆಯಲ್ಲಿ ದೆಹಲಿ ತುರ್ತು ಸಮಿತಿ ರಚಿಸಲ್ಪಟ್ಟಿತು. ಹೆಚ್.ಎಂ. ಪಟೇಲ್ ಅದರ ಉಪಾಧ್ಯಕ್ಷರು ಮತ್ತು ಯುವಕ ದಕ್ಷ ಅಧಿಕಾರಿಗಳಾದ ಎಲ್.ಕೆ. ಝಾ ಮತ್ತು ಕೆ.ಬಿ. ಲಾಲ್ ಅದರ ಕಾರ್ಯದರ್ಶಿಗಳಾಗಿದ್ದರು. ಅವರ ಜೊತೆಗೆ ಅನೇಕ ಅಧಿಕಾರಿಗಳ ತಂಡ ಅನೇಕ ಮತೀಯ ಗಂಡಸರು ಮತ್ತು ಹೆಂಗಸರ ಸ್ವಯಂಸೇವಕ ತಂಡವು ಇತ್ತು. ಮುಸ್ಲಿಮರ ರಕ್ಷಣೆ, ಹೆದರಿ ಪಲಾಯನ ಮಾಡುತ್ತಿದ್ದ ಮುಸ್ಲಿಮರಿಗೆ ಪಾಕಿಸ್ತಾನದಿಂದ ಬರುತ್ತಿದ್ದ ಹಿಂದೂ ಹಾಗೂ ಸಿಕ್ ನಿರಾಶ್ರಿತರಿಗೆ ಶಿಬಿರಗಳ ಏರ್ಪಾಟು ದೆಹಲಿ

ತುರ್ತು ಸಮಿತಿಯ ಅತಿ ಮುಖ್ಯ ಕೆಲಸಗಳಾಗಿದ್ದುವು.

ಮೌಂಟ್‌ಬ್ಯಾಟನ್‌ರವರ ಯುದ್ಧ ಕಾಲದ ತುರ್ತುಸ್ಥಿತಿಯ ಅನುಭವಗಳು ಅಮೂಲ್ಯವೆಂದು ಭಾವಿಸಿದ ಸರ್ದಾರ್ ಮತ್ತು ನೆಹರು ಒಂದು ಕೇಂದ್ರ ತುರ್ತು ಸಮಿತಿಯನ್ನು ರಚಿಸಿ ಅದರ ಛೇರ್‌ಮನ್ ಆಗಿರಬೇಕೆಂದು ಮೌಂಟ್‌ಬ್ಯಾಟನ್ ರವರನ್ನು ಕೋರಿದರು. ಮೌಂಟ್‌ಬ್ಯಾಟನ್‌ರವರು ಒಪ್ಪಿದರು. ಆ ಸಮಿತಿಯು ತುರ್ತು ಸಮಯದಲ್ಲಿ ಬಹಳ ಉಪಯುಕ್ತವಾದ ಕೆಲಸಗಳನ್ನು ಮಾಡಿತು. ಒಂದೇ ಸಮನೆ ಹರಿದುಬರುತ್ತಿದ್ದ ನಿರಾಶ್ರಿತರಿಗೆ ನೆರವು ನೀಡುವುದು, ಆಹಾರ ಪದಾರ್ಥಗಳ ಸಾಗಣೆ, ಹೆಣಗಳ ವಿಲೇವಾರಿ, ಸಾಂಕ್ರಾಮಿಕ ರೋಗಗಳ ತಡೆ ಮುಂತಾದ ಕಾರ್ಯಗಳನ್ನು ಆ ಸಮಿತಿ ನಿಭಾಯಿಸಿತು.

ದೆಹಲಿಯಲ್ಲಿ ಕೆಲವು ಸಿಕ್ ಮತ್ತು ರಜಪೂತ ಸೈನಿಕರು ಮುಸ್ಲಿಮರನ್ನು ರಕ್ಷಿಸುವುದಕ್ಕೆ ಬದಲಾಗಿ ಅವರ ಮೇಲೆ ತಾವೇ ಆಕ್ರಮಣ ನಡೆಸಿದರು. ಅದರಿಂದ ನೊಂದ ಪಟೇಲರು ದೇವದಾಸ್ ಗಾಂಧಿಗೆ, "ನಮ್ಮ ಸೈನಿಕರ ಮೇಲೇ ನಾವು ಹಿಡಿತವನ್ನು ಕಳೆದುಕೊಂಡಿದ್ದೇವೆ' ಎಂದು ಬರೆದರು. ಅವರು ಕೆಲವು ಸಿಕ್ ಮತ್ತು ರಜಪೂತ ಸೈನಿಕರ ತುಕಡಿಗಳನ್ನು ಹಿಂತೆಗೆದು ಅವರ ಸ್ಥಾನದಲ್ಲಿ ಮದ್ರಾಸ್ ಸೈನ್ಯ ತುಕಡಿಯನ್ನು ನಿಯೋಜಿಸಿದರು.[೩೦೫]

ದೆಹಲಿಯಲ್ಲಿದ್ದ ನಿಜಾಮುದ್ದೀನ್ ಔಲಿಯ ದರ್ಗಾದ ಮೇಲೆ ಆಕ್ರಮಣ ಮಾಡುವ ಬೆದರಿಕೆಗಳು ಬಂದುವು. ಆ ದರ್ಗದ ಬಳಿ ವಾಸವಾಗಿದ್ದ ಮತ್ತು ಆ ದರ್ಗದೊಳಗೆ ರಕ್ಷಣೆ ಪಡೆದಿದ್ದ ನೂರಾರು ಮಂದಿ ಗಂಡಸರು, ಹೆಂಗಸರು ಮತ್ತು ಮಕ್ಕಳು ಭಯಭೀತರಾದರು. ಸರ್ದಾರರಿಗೆ ಅವರ ಸುರಕ್ಷತೆಯ ಬಗೆಗೆ ಆತಂಕ ಉಂಟಾಯಿತು. ಅವರು ತಮ್ಮ ಶಾಲನ್ನು ಕತ್ತಿಗೆ ಕವಿದುಕೊಂಡು, ತಮ್ಮ ಕಾರ್ಯದರ್ಶಿ ಶಂಕರ್‌ರವರನ್ನು ಕರೆದುಕೊಂಡು, ರಹಸ್ಯವಾಗಿ ಆ ದರ್ಗಕ್ಕೆ ಹೋದರು. ಅಲ್ಲಿ ಸುಮಾರು ೪೫ ನಿಮಿಷ ಇದ್ದರು. ಭಕ್ತಿಯಿಂದ ಆ ಪವಿತ್ರ ಸ್ಥಳದ ಪ್ರದಕ್ಷಿಣೆ ಮಾಡಿದರು, ಅಲ್ಲಲ್ಲಿ ಅಲ್ಲಿದ್ದವರನ್ನು ವಿಚಾರಿಸಿದರು ಮತ್ತು ಆ ಪ್ರದೇಶದ ಪೊಲೀಸ್ ಅಧಿಕಾರಿಯನ್ನು ಕರೆಸಿ, "ಇಲ್ಲಿ ಏನೂ ಅವಗಡ ಆಗದಂತೆ ನೋಡಿಕೊಳ್ಳುವುದು ನಿನ್ನ ಜವಾಬ್ದಾರಿ. ಏನಾದರೂ ಅವಗಡ ಸಂಭವಿಸಿದರೆ ನಿನ್ನನ್ನು ವಜಾ ಮಾಡುವೆ," ಎಂದು ತಿಳಿಸಿದರು.[೩೦೬]

ಹಾಗೆಯೇ, ಸರ್ದಾರರು ಮುಸ್ಲಿಮರ ಹುಚ್ಚಾಟವನ್ನೂ ಸಹ ಸಹಿಸುತ್ತಿರಲಿಲ್ಲ. ಸೆಪ್ಟೆಂಬರ್ ೧೩ರಂದು ನಗರ ವೀಕ್ಷಣೆ ನಡೆಸುವಾಗ ಮುಸ್ಲಿಮರು ಅಧಿಕ ಸಂಖ್ಯೆಯಲ್ಲಿ ವಾಸಿಸುತ್ತಿದ್ದ ಫ್ಲಯಾಜ್ ಬಜ಼ಾರ್ ಪ್ರದೇಶದ ಪೊಲೀಸ್ ಠಾಣೆಗೆ

ಬಂದರು. ಅವರು ಅದರ ಹೊರಗೆ ನಿಂತಿದ್ದಾಗ ಒಂದು ಗುಂಡು ಅವರ ಪಕ್ಕದಲ್ಲಿ ರೊಯ್ಯನೆ ಮಿಂಚಿನ ವೇಗದಲ್ಲಿ ಹೋಯಿತು. ಠಾಣೆಯ ಎದುರುಗಡೆಯ ಕಟ್ಟಡ ದಿಂದ ಆ ರೀತಿ ಗುಂಡುಗಳು ಬರುತ್ತಿದ್ದುವು. ಅದರ ಬಗೆಗೆ ಪಟೇಲರು ವಿಚಾರಿಸಿ ದಾಗ ಅಲ್ಲಿಯ ಪೊಲೀಸ್ ಅಧಿಕಾರಿಯು, "ಎದುರುಗಡೆಯ ಆ ಕಟ್ಟಡವನ್ನು ಆಸ್ಫೋಟಿಸಿದರೆ ಮಾತ್ರ ಆ ರಹಸ್ಯ ಗುಂಡಿನ ದಾಳಿಯನ್ನು ನಿಲ್ಲಿಸಲು ಸಾಧ್ಯ" ಎಂದನು. ಸರ್ದಾರರು ತಕ್ಷಣ ಸರಳವಾಗಿ ಹೇಳಿದರು, "ಅದನ್ನು ಆಸ್ಫೋಟಿಸಿ."[೩೦೭] ಸರ್ದಾರರದು ಯಾವಾಗಲೂ ಶೀಘ್ರ, ಖಚಿತ ಮತ್ತು ನಿರ್ಭಯದ ತೀರ್ಮಾನ.

ಸೆಪ್ಟೆಂಬರ್ ತಿಂಗಳ ಅಂತ್ಯಭಾಗದಲ್ಲಿ ಪಂಜಾಬ್‌ನಿಂದ ಪಟೇಲರಿಗೆ ಒಂದು ಆತಂಕಕಾರಿ ವರದಿ ಬಂದಿತು. ಭಾರತದಿಂದ ಪಾಕಿಸ್ತಾನಕ್ಕೆ ಹೋಗುತ್ತಿರುವ ಮುಸ್ಲಿಮರ ತಂಡವನ್ನು ತಡೆಯಲು ಮತ್ತು ಅವರ ಮೇಲೆ ಹಲ್ಲೆ ಮಾಡಲು ಅಮೃತಸರದ ಸಿಕ್ಖರು ನಿರ್ಧರಿಸಿದ್ದಾರೆಂದು ಆ ವರದಿ ತಿಳಿಸಿತು. ಆ ಮುಸ್ಲಿಮರಿಗೆ ಸುರಕ್ಷಿತ ಪ್ರಯಾಣ ಒದಗಿಸುವುದು ಗೃಹಮಂತ್ರಿ ಸರ್ದಾರರ ಜವಾಬ್ದಾರಿಯಾಗಿತ್ತು. ಅದೇ ಸಮಯದಲ್ಲಿ ಹಿಂದೂ ಮತ್ತು ಸಿಕ್ಖರ ತಂಡ ಪಾಕಿಸ್ತಾನದಿಂದ ಭಾರತದ ಕಡೆಗೆ ಬರುತ್ತಿತ್ತು. ಅಮೃತಸರದ ಸಿಕ್ಖರ ಕಾರ್ಯ ಭಾರತಕ್ಕೆ ಬರುತ್ತಿರುವ ಹಿಂದೂ ಮತ್ತು ಸಿಕ್ ನಿರಾಶ್ರಿತರನ್ನು ಅಪಾಯಕ್ಕೆ ಸಿಲುಕಿಸುತ್ತಿತ್ತು. ತಕ್ಷಣ ಪಟೇಲರು ಸೆಪ್ಟೆಂಬರ್ ೩೧ರಂದು ಅಮೃತಸರಕ್ಕೆ ಧಾವಿಸಿ ಅಲ್ಲಿಯ ಸಿಕ್ ನಾಯಕರು ಮತ್ತು ಜಾತೆದಾರರೊಡನೆ ಮಾತುಕತೆ ನಡೆಸಿದರು. ಅವರ ಕೋಪವು ಪಾಕಿಸ್ತಾನಕ್ಕೆ ತೆರಳುತ್ತಿರುವ ಮುಸ್ಲಿಮರ ಸುರಕ್ಷತೆ ಮತ್ತು ಭಾರತಕ್ಕೆ ಬರುತ್ತಿರುವ ಹಿಂದೂ ಮತ್ತು ಸಿಕ್ಖರ ಸುರಕ್ಷತೆಯ ನಡುವೆ ಇರುವ ಸಂಬಂಧವನ್ನು ಕಾಣದಂತೆ ಮಾಡಿದೆ ಎಂದೂ, ಆ ಸಂಬಂಧವನ್ನು ಸಿಕ್ಖರು ಗಮನಿಸಬೇಕೆಂದೂ ಮನವಿ ಮಾಡಿದರು. "ಈ ನಿರಾಶ್ರಿತರ ರಕ್ಷಣೆಗಾಗಿ ಒಂದು ಸ್ವಯಂ ಸೇವಕರ ದಳವನ್ನು ರಚಿಸುವುದು. ನಿಮ್ಮ ಘನತೆ, ನಿಮ್ಮ ಶೌರ್ಯದ ಕೀರ್ತಿ ಮತ್ತು ಆತ್ಮ ಗೌರವಕ್ಕೆ ತಕ್ಕದಾದುದು," ಎಂದರು ಪಟೇಲರು. ನಂತರ ಅವರು ಒಂದು ಕಾರ್ಯ ಸಾಧ್ಯ ಸಲಹೆಯನ್ನು ನೀಡಿದರು: 'ಆಕ್ರಮಣ ಮತ್ತು ಪ್ರತಿ ಆಕ್ರಮಣದಿಂದ ಈ ವಿಷ ವರ್ತುಲವನ್ನು ಒಂದು ವಾರ ಕಾಲವಾದರೂ ನಿಲ್ಲಿಸಿ. ಪಾಕಿಸ್ತಾನಿಯರು ಸಮಾಧಾನಕರವಾಗಿ ಪ್ರತಿಕ್ರಿಯಿಸದೆ ಇದ್ದರೆ ಭಾರತವು ಅವರನ್ನು ತರಾಟೆಗೆ ತೆಗೆದುಕೊಳ್ಳುತ್ತದೆ!' ಅಂತಿಮವಾಗಿ ಪಟೇಲರು ಹೀಗೆಂದರು, "ನೀವು ಸಿಕ್ಖರು ನಿಮ್ಮ ಪ್ರಯತ್ನದಿಂದ ಪಶ್ಚಿಮ ಪಾಕಿಸ್ತಾನದಲ್ಲಿ ಸೃಷ್ಟಿಸಿದ್ದಂತಹ ಸುಂದರ ಸಮೃದ್ಧ ರಾಜ್ಯವನ್ನು, ಪೂರ್ವ ಪಂಜಾಬ್‌ನಲ್ಲೂ ಸೃಷ್ಟಿಸಬಹುದು." ಪಟೇಲರ ಮಾತು ಆ ನಾಯಕರ ಮನಸ್ಸಿನ ಮೇಲೆ ಅದ್ಭುತ ಪರಿಣಾಮವನ್ನು ಬೀರಿತು. ಅವರು, ಕೆಲವೇ ದಿನಗಳಲ್ಲಿ ಅಮೃತ

ಸರದ ಮೂಲಕ ಹಾದುಹೋಗಲಿರುವ ಮುಸ್ಲಿಮರ ಬೃಹತ್ ತಂಡಕ್ಕೆ ರಕ್ಷಣೆಯೊದಗಿಸುವುದು ತಮ್ಮ ಜವಾಬ್ದಾರಿ' ಅನ್ನುವ ಪ್ರತಿಜ್ಞೆಯನ್ನು ಮಾಡಿದರು. ಪಟೇಲರ ಮನಸ್ಸು ನಿರಾಳವಾಯಿತು.[೩೦೮]

ನಿರಾಳವಾದ ಮನಸ್ಸಿನಿಂದ ಪಟೇಲರು ವಿಮಾನ ನಿಲ್ದಾಣಕ್ಕೆ ಹೊರಟರು. ಮಾರ್ಗ ಮಧ್ಯದಲ್ಲಿ ಪಶ್ಚಿಮ ಪಾಕಿಸ್ತಾನದಿಂದ ಬಂದಿದ್ದ ಒಂದು ಬೃಹತ್ ನಿರಾಶ್ರಿತರ ಗುಂಪು ಅವರ ವಾಹನವನ್ನು ತಡೆದು ಪಟೇಲರು ಅವರನ್ನು, ಕುರಿತು ಭಾಷಣ ಮಾಡಬೇಕೆಂದು ಆಗ್ರಹಿಸಿತು. ಅವರ ಕಣ್ಣುಗಳಲ್ಲಿ ಕೋಪದ ರಕ್ತವನ್ನು ಕಂಡ ಕಾರ್ಯದರ್ಶಿ ಶಂಕರ್, 'ಕತ್ತಲಾಗುವ ಮುನ್ನ ನೀವು ವಿಮಾನ ನಿಲ್ದಾಣದಿಂದ ಹೊರಡಬೇಕು ಎಂದು ಅವರಿಗೆ ಹೇಳಬಹುದು' ಎಂದರು. ಆದರೆ ಸರ್ದಾರರು ಸುಮಾರು ಎರಡು ಸಾವಿರ ಮಂದಿ ಇದ್ದ ಆ ಬೃಹತ್ ಗುಂಪನ್ನು ಎದುರಿಸಲು ನಿರ್ಧರಿಸಿದರು. ಅಲ್ಲಿ ಅವರು ತಮ್ಮ ಜೀವಮಾನದ ಒಂದು ಶ್ರೇಷ್ಠ ಭಾಷಣ ಮಾಡಿದರು:

> ಇಲ್ಲಿ, ಇದೇ ನಗರದಲ್ಲಿ, ಜಲಿಯನ್‌ವಾಲಾ ಭಾಗ್ ಹತ್ಯಾಕಾಂಡದಲ್ಲಿ ಹಿಂದೂ, ಸಿಕ್ ಮತ್ತು ಮುಸ್ಲಿಮರ ರಕ್ತ ಬೆರೆತು ಹೋದುವು. ಆದರೆ ಈಗ ಮುಸ್ಲಿಮರು ಅಮೃತಸರದಲ್ಲಿ ಓಡಾಡುವ ಹಾಗಿಲ್ಲ ಮತ್ತು ಒಬ್ಬ ಹಿಂದೂ ಅಥವಾ ಸಿಕ್ಕನೂ ಲಾಹೋರಿನಲ್ಲಿ ವಾಸಿಸುವ ಹಾಗಿಲ್ಲ ಅನ್ನುವ ಸ್ಥಿತಿಗೆ ಬಂದಿರುವುದನ್ನು ಕಂಡು ನನಗೆ ದುಃಖವಾಗಿದೆ.
>
> ಮುಗ್ಧ ಮತ್ತು ಶಸ್ತ್ರ ರಹಿತ ಗಂಡಸರು ಹೆಂಗಸರು ಮತ್ತು ಮಕ್ಕಳ ಕಗ್ಗೊಲೆ ಶೂರರಿಗೆ ವಿಹಿತವಾದುದಲ್ಲ. ನಮ್ಮ ದೇಶವನ್ನು ಶ್ರೇಷ್ಠ ಮತ್ತು ಅಭಿವೃದ್ಧಿ ಹೊಂದಿದ ದೇಶವನ್ನಾಗಿ ಮಾಡುವುದಕ್ಕಾಗಿ ಸ್ವಾಂತಂತ್ರ್ಯವನ್ನು ಗಳಿಸಿದ್ದೇವೆಯೇ ಹೊರತು ವಿದೇಶಿ ಆಡಳಿತವು ನಮಗೆ ನೀಡಿದ್ದನ್ನು ನಾಶಪಡಿಸುವುದಕ್ಕಲ್ಲ. ಲಕ್ಷಾಂತರ ಮಂದಿಯ ಜೀವ ಅಪಾಯದಲ್ಲಿದೆ. ಪ್ರತೀಕಾರ ಮತ್ತು ಸೇಡಿನ ಮನೋಭಾವದ ತೃಪ್ತಿಗಾಗಿ ಅವರ ಜೀವದೊಡನೆ ಜೂಜಾಡಲು ಸಾಧ್ಯವಿಲ್ಲ..... ಮುಸ್ಲಿಂ ನಿರಾಶ್ರಿತರು ಪೂರ್ವ ಪಂಜಾಬ್‌ನಿಂದ ಯಾವ ಹಲ್ಲೆಯೂ ಇಲ್ಲದೆ ಹೋಗಲು ಅವಕಾಶ ನೀಡಿ ಎಂದು ನಿಮಗೆ ಮನವಿ ಮಾಡುತ್ತೇನೆ. ಭಾರತದ ಹಿತವು ಗಡಿಯ ಆಚೆಗಿರುವ ನಮ್ಮ ಎಲ್ಲಾ ಗಂಡಸರು ಮತ್ತು ಹೆಂಗಸರನ್ನು ಕರೆಸಿಕೊಳ್ಳುವುದರಲ್ಲಿ

ಮತ್ತು ಪೂರ್ವ ಪಂಜಾಬ್‌ನಿಂದ ಎಲ್ಲಾ ಮುಸ್ಲಿಮರನ್ನು ಹೊರಕ್ಕೆ ಕಳುಹಿಸುವುದರಲ್ಲಿ ಅಡಗಿದೆ ಎನ್ನುವುದು ನನಗೆ ಖಚಿತವಾಗಿದೆ.

ನಾನು ಒಂದು ನಿರ್ದಿಷ್ಟ ಮನವಿಯೊಡನೆ ಇಲ್ಲಿಗೆ ಬಂದಿದ್ದೇನೆ. ಈ ನಗರವನ್ನು ದಾಟುತ್ತಿರುವ ಮುಸ್ಲಿಂ ನಿರಾಶ್ರಿತರ ರಕ್ಷಣೆಗೆ ಶಪಥ ಮಾಡಿ. ಯಾವುದೇ ಅಡ್ಡಿ ಅಥವಾ ಅಡಚಣೆಗಳು ಈಗಾಗಲೇ ಕಷ್ಟಗಳನ್ನು ಅಸಾಧಾರಣ ಸಹನೆಯಿಂದ ಸಹಿಸುತ್ತಿರುವ ನಮ್ಮ ನಿರಾಶ್ರಿತರ ಪರಿಸ್ಥಿತಿಯನ್ನು ಮತ್ತಷ್ಟು ಹದಗೆಡಿಸುತ್ತವೆ.

ನಾವು ಕಾದಾಡಬೇಕಾದರೆ ಶುದ್ಧವಾದ ರೀತಿಯಲ್ಲಿ ಕಾದಾಡಬೇಕು. ಅಂತಹ ಹೋರಾಟ ನಡೆಸಲು ಸೂಕ್ತ ಕಾಲ ಮತ್ತು ಸನ್ನಿವೇಶಕ್ಕೆ ಕಾಯಬೇಕು. ನಿಮ್ಮ ರಣಾಂಗಣವನ್ನು ಆಯ್ಕೆ ಮಾಡುವುದರಲ್ಲಿ ನೀವು ಎಚ್ಚರಿಕೆಯನ್ನು ವಹಿಸಬೇಕು. ನಿರಾಶ್ರಿತರ ವಿರುದ್ಧ ಕಾದಾಡುವುದು ಕಾದಾಟವೇ ಅಲ್ಲ. ಮಾನವೀಯತೆಯ ಅಥವಾ ಗೌರವಾನ್ವಿತ ವ್ಯಕ್ತಿಗಳ ನಡುವಣ ಸಮರದ ಯಾವ ನಿಯಮಗಳೂ ಆಸರೆ ಮತ್ತು ರಕ್ಷಣೆ ಬಯಸಿ ಬಂದವರ ಕೊಲೆಗೆ ಒಪ್ಪಿಗೆ ನೀಡುವುದಿಲ್ಲ.

ಮೂರು ತಿಂಗಳ ಕಾಲ ಕದನ ವಿರಾಮ ಉಂಟಾಗಲಿ. ಆ ಕಾಲದಲ್ಲಿ ಎರಡು ಕಡೆಯವರೂ ನಿರಾಶ್ರಿತರನ್ನು ವಿನಿಮಯ ಮಾಡಿಕೊಳ್ಳಬಹುದು. ಇಂತಹ ಕದನ ವಿರಾಮಕ್ಕೆ ಸಮರ ನಿಯಮಗಳಲ್ಲೂ ಅವಕಾಶ ಉಂಟು. ಆಕ್ರಮಣ ಮತ್ತು ಪ್ರತಿ ಆಕ್ರಮಣದ ಈ ವಿಷ ವರ್ತುಲವನ್ನು ಮುರಿಯುವುದರಲ್ಲಿ ನಾವು ಮೊದಲ ಹೆಜ್ಜೆಯನ್ನು ಇಡೋಣ.

ಒಂದು ವಾರ ಕಾಲ ನಿಮ್ಮ ಕೈಗಳನ್ನು ತಡೆ ಹಿಡಿಯಿರಿ, ಏನಾಗುತ್ತದೆ ಎನ್ನುವುದನ್ನು ನೋಡಿ. ನಿಮ್ಮ ಸ್ವಯಂ ಸೇವಕದಳದ ಮೂಲಕ ನಿರಾಶ್ರಿತರಿಗೆ ದಾರಿ ಬಿಡಿ. ಸ್ವಯಂಸೇವಕರು ನಿರಾಶ್ರಿತರನ್ನು ಗಡಿಯಲ್ಲಿ ಸುರಕ್ಷಿತವಾಗಿ ದಾಟಿಸಲಿ.

ಸರ್ದಾರರ ಮಾತು ಜನರ ಮನವನ್ನು ಮುಟ್ಟಿತು. ಆ ನಂತರ ಯಾವ ನಿರಾಶ್ರಿತರ ತಂಡದ ಮೇಲೂ ಹಲ್ಲೆ ನಡೆಯಲಿಲ್ಲ.[೩೦೯] ಅವರು ಸುರಕ್ಷಿತವಾಗಿ ಪಾಕಿಸ್ತಾನಕ್ಕೆ ತೆರಳಿದರು.

ಮಾರನೆಯ ತಿಂಗಳು ಪಟಿಯಾಲದಲ್ಲಿ ಸಿಕ್ಖರ ಒಂದು ಬೃಹತ್ ಸಭೆಯಲ್ಲಿ ಪಟೇಲರು ಭಾಷಣ ಮಾಡಿ ಮತ್ತೆ ಭಾವಪೂರ್ಣ ಮನವಿಯನ್ನು ಮಾಡಿದರು. ಅವರೆಂದರು:

> ಆತುರದ ತೀರ್ಮಾನಗಳ ವಿರುದ್ಧ ನಿಮ್ಮನ್ನು ಎಚ್ಚರಿಸುತ್ತೇನೆ. ವಿಧಿ ನಿಮಗೆ ಕೊಟ್ಟ ಹೊಡೆತಗಳ ಫಲವಾಗಿ ನಿಮ್ಮ ಕಲಕಿದ ಮನಃಸ್ಥಿತಿ ಮತ್ತು ಹೃದಯಗಳನ್ನು ಆವರಿಸಿರುವ ಕೋಪ ನನಗೆ ಅರ್ಥವಾಗಿದೆ. ಆದರೆ ನೀವು ಒಂದು ಶೂರ ಜನಾಂಗ. ನೀವು ಪರಿಸ್ಥಿತಿಯನ್ನು ಶೂರರಂತೆ ಎದುರಿಸಬೇಕು. ಮುಗ್ಧರ ರಕ್ತವನ್ನು ಚೆಲ್ಲಿ ತಮ್ಮ ಜನಾಂಗ ಮತ್ತು ರಾಷ್ಟ್ರದ ಗೌರವವನ್ನು ಶಂಕೆಗೆ ಈಡುಮಾಡುವುದು ಶೂರರಿಗೆ ಯೋಗ್ಯವಾದುದಲ್ಲ..... ನೀವು ನಿಮ್ಮ ನಷ್ಟಗಳನ್ನು ಪ್ರತೀಕಾರದ ಮೂಲಕ ಸರಿದೂಗಿಸಲು ಸಾಧ್ಯವಿಲ್ಲ. ಕತ್ತಿಯನ್ನು ಉಪಯೋಗಿಸಿದರೆ ಸಾಲದು ಅದನ್ನು ಹೇಗೆ ಉಪಯೋಗಿಸಬೇಕೆನ್ನುವುದನ್ನು ತಿಳಿದಿರಬೇಕು.

ಪಟೇಲರ ಮಾತಿಗೆ ಸಿಕ್ ನಾಯಕರು ಉತ್ತಮವಾಗಿ ಪ್ರತಿಕ್ರಿಯಿಸಿದರು. ಅವರೆಂದರು:

> ಪಾಕಿಸ್ತಾನಕ್ಕೆ ಹೋಗಬಯಸುವ ಪ್ರತಿಯೊಬ್ಬ ಮುಸ್ಲಿಮನು ನಿರಾತಂಕವಾಗಿ ಹೋಗಲಿ. ಪಾಕಿಸ್ತಾನಕ್ಕೆ ಹೋಗುವ ಪ್ರತಿ ಮುಸ್ಲಿಮನು ಪಾಕಿಸ್ತಾನಕ್ಕೆ ಒಂದು ಋಣ ಮತ್ತು ಭಾರತಕ್ಕೆ ನೆಮ್ಮದಿ. ಆದರೆ ಗಡಿಯಲ್ಲಿ ಕೊಲ್ಲಲ್ಪಟ್ಟ ಪ್ರತಿ ಮುಸ್ಲಿಮನು ಭಾರತಕ್ಕೆ ಒಂದು ಋಣವಾಗುತ್ತಾನೆ. ಅದು ಪಾಕಿಸ್ತಾನದಲ್ಲಿರುವ ಹಿಂದೂಗಳ ಜೀವವನ್ನು ಅಪಾಯಕ್ಕೆ ಈಡು ಮಾಡುತ್ತದೆ.

ಸರದಾರರ ವಾಸ್ತವಿಕ ದೃಷ್ಟಿ ಮತ್ತು ಭಾವಪೂರ್ಣ ಮನವಿಗಳು ಗಡಿಭಾಗದ ಕ್ರೌರ್ಯ ಕೃತ್ಯಗಳನ್ನು ತಡೆಗಟ್ಟುವುದರಲ್ಲಿ ಬಹಳ ಪರಿಣಾಮಕರವಾಗಿ ಕೆಲಸ ಮಾಡಿದುವು.[೩೧೦]

ಎರಡು ಪಂಜಾಬ್‌ಗಳ ಅಲ್ಪ ಸಂಖ್ಯಾತರ ವಿನಿಮಯದ ಅನಿವಾರ್ಯತೆಯನ್ನು ನೆಹರು ಒಪ್ಪಿದರು. ಪಾಕಿಸ್ತಾನದ ಪ್ರಧಾನಿ ಲಿಯಾಖತ್ ಆಲಿ ಖಾನ್‌ನು, "ವಲ್ಲಭಭಾಯ್‌ರವರ ಅಮೃತಸರದ ಭಾಷಣದ ಅರ್ಥ ಪೂರ್ವ ಪಂಜಾಬ್ ಅಲ್ಲದೆ ಇತರ ಪ್ರದೇಶಗಳಿಂದಲೂ ಮುಸ್ಲಿಮರನ್ನು ಓಡಿಸಬೇಕೆಂದು ಭಾರತ

ಬಯಸುತ್ತದೆ ಎಂದೆ?" ಎಂದು ವಿಚಾರಿಸಿದನು. "ಮುಸ್ಲಿಮೇತರ ಪ್ರದೇಶಗಳನ್ನು ವಿಸ್ತರಿಸುವುದು ಸಾಧ್ಯವಿಲ್ಲದ ಪ್ರಸ್ತಾವನೆ" ಎಂದು ಪ್ರಧಾನಿ ಉತ್ತರಿಸಿದರು. 'ಮುಸ್ಲಿಮರು ಪಾಕಿಸ್ತಾನಕ್ಕೆ ಹೊರಟು ಹೋಗುವ ಅಭಿಪ್ರಾಯಕ್ಕೆ ಪಟೇಲರು ಪ್ರೋತ್ಸಾಹ ನೀಡುತ್ತಿದ್ದಾರೆ' ಎನ್ನುವ ವರದಿ ಗಾಂಧೀಜಿಗೆ ಬಂದಿತು. ಅವರು ಪಟೇಲರನ್ನು ಪ್ರಶ್ನಿಸಿದರು. ಪಟೇಲರು ಅದನ್ನು ಬಲವಾಗಿ ಅಲ್ಲಗಳೆದರು. ನಂತರ, "ಭಾರತಕ್ಕೆ ನಿಷ್ಠಾವಂತರಲ್ಲದವರು ಬಿಟ್ಟುಹೋಗಬೇಕು. ಬಹು ಸಂಖ್ಯಾತ ಮಂದಿ ನಿಷ್ಠರಾಗಿಲ್ಲ ಎನ್ನುವುದು ನನ್ನ ಅನುಮಾನ" ಎಂದು ಗಾಂಧೀಜಿಗೆ ಹೇಳಿದರು.[೩೧೧]

ಪಂಜಾಬ್‌ನ ಹಿಂದೂ – ಮುಸ್ಲಿಂ ವಿನಿಮಯ ಗಾಂಧೀಜಿಗೆ ಆಘಾತವನ್ನು ಉಂಟುಮಾಡಿತು. ಅದನ್ನು ತಡೆಗಟ್ಟಲು ಅವರು ಬಯಸಿದ್ದರು. ಆದರೆ ಅದು ಸಾಧ್ಯವಾಗಲಿಲ್ಲ. ಅದರಿಂದ ಅವರು ವ್ಯಾಕುಲಗೊಂಡರು ಮತ್ತು ತಮ್ಮನ್ನು ತಾವೇ ನಿಂದಿಸಿಕೊಂಡರು.

ಅಕ್ಟೋಬರ್ ೨ರಂದು ಗಾಂಧೀಜಿಯವರ ೭೮ನೆ ಹುಟ್ಟುಹಬ್ಬ. ಅಂದು ವಲ್ಲಭಭಾಯ್ ಮತ್ತು ಮಣಿಬೆನ್ ಅವರ ಭೇಟಿಗೆ ಹೋದರು. ಗಾಂಧೀಜಿಯವರು, "ನಾನು ಮಾಡಿದ ಪಾಪದ ಫಲವಾಗಿ ನನ್ನ ಸುತ್ತಲೂ ನಡೆಯುತ್ತಿರುವ ಹಿಂಸೆಯನ್ನು ನೋಡಲು ಬದುಕಿದ್ದೇನೆ," ಎನ್ನುವುದರ ಬಗೆಗೆ ಮಾತನಾಡಿದರೇ ಹೊರತು ಬೇರೆ ಯಾವ ವಿಷಯದ ಬಗೆಗೂ ಮಾತನಾಡಲಿಲ್ಲ. ಕೇವಲ ಎರಡು ದಿನಗಳ ಹಿಂದೆ ನಡೆದಿದ್ದ ಅಮೃತಸರದ ಘಟನೆಯನ್ನು ಪ್ರಸ್ತಾಪಿಸಲಿಲ್ಲ. ಪಟೇಲ್ ಮತ್ತು ಅವರ ಮಗಳು ಭಾರವಾದ ಹೃದಯದಿಂದ ಹಿಂತಿರುಗಿದರು.[೩೧೨]

ಅಕ್ಟೋಬರ್ ೯ರಂದು ವಲ್ಲಭಭಾಯ್ ಪಟೇಲ್‌ರವರು ತಮ್ಮ ಮಗಳೊಡನೆ ಗುರುಗಾವ್ ಜಿಲ್ಲೆಯಲ್ಲಿದ್ದ ಪಟೌಡಿಯ ನವಾಬನ ಭೇಟಿಗೆ ಹೋದರು. ಭೂಪಾಲದ ನವಾಬನಿಗೆ ತನ್ನ ಮಗಳು ಮತ್ತು ಅಳಿಯನ ಸುರಕ್ಷತೆಯ ಬಗೆಗೆ ಚಿಂತೆ ಉಂಟಾಗಿತ್ತು. ಅದರಿಂದ ಪಟೇಲರು ಪಟೌಡಿಯ ನವಾಬನ ಭೇಟಿಗೆ ಹೋದರು. ಆಲಿಂಗನದ ನಂತರ ಪಟೇಲರು ನವಾಬನನ್ನು, "ನೀವು ದೆಹಲಿಗೆ ಬರಲು ಬಯಸುತ್ತೀರ?" ಎಂದು ಪ್ರಶ್ನಿಸಿದರು. ನವಾಬನು, "ನನ್ನ ಸ್ಥಳ ನನ್ನ ಪ್ರಜೆಗಳ ನಡುವೆ" ಎಂದು ಉತ್ತರಿಸಿದನು. ಅವನ ಪತ್ನಿ ಸಜೀದ, "ನನ್ನ ಸ್ಥಳ ನನ್ನ ಗಂಡ ಇರುವೆಡೆ" ಎಂದಳು. ಪಟೇಲರು ನೆರೆಯ ಹಳ್ಳಿಗಳ ಹಿಂದೂ ಮುಖಂಡರನ್ನು ಕರೆಸಿ ಪಟೌಡಿ ಕುಟುಂಬ ಮತ್ತು ಅಲ್ಲಿರುವ ಮುಸ್ಲಿಮರ ಸುರಕ್ಷತೆ ಮತ್ತು ಕ್ಷೇಮದ ಬಗೆಗೆ ಆ ಮುಖಂಡರಿಂದ ಪ್ರತಿಜ್ಞೆ ಮಾಡಿಸಿದರು. ದೆಹಲಿಗೆ ಹಿಂತಿರುಗಿದ ನಂತರ ಭೋಪಾಲದ ನವಾಬನಿಗೆ 'ಪರಿಸ್ಥಿತಿ ಹಿಡಿತದಲ್ಲಿದೆ. ನೀವು ಯಾವ

ಆತಂಕವನ್ನು ಪಡಬೇಡಿ' ಎಂದು ತಂತಿ ಕಳುಹಿಸಿದರು.[೩೧೩]

ದೆಹಲಿಯ ಗುಜರಾತಿಗಳು ಮಹಾತ್ಮನ ಹರಿಜನ ನಿಧಿಗೆ ಹಣ ಅರ್ಪಿಸಲು ಬಯಸಿದರು. ಅಕ್ಟೋಬರ್ ೧೧ರಂದು ಪಟೇಲರು ಗಾಂಧೀಜಿಯನ್ನು ಗುಜರಾತಿಗಳ ಸಭೆಗೆ ಕರೆದುಕೊಂಡು ಹೋದರು. ಆಗ ಗಾಂಧೀಜಿಗೆ ಅನಾರೋಗ್ಯ ಮತ್ತು ಕೆಮ್ಮಲು. ಆದರೂ ಬಂದು ನಿಧಿಯನ್ನು ಸ್ವೀಕರಿಸಿದರು. ಸಭೆಯಲ್ಲಿದ್ದವರು ಭಾಷಣ ಮಾಡುವಂತೆ ಪಟೇಲರನ್ನು ಕೋರಿದರು. ಪಟೇಲರು ಪ್ರತಿಭಟಿಸಿದರು. 'ನಿಧಿ ಈಸಿಕೊಳ್ಳುವವರು ಅವರು; ಭಾಷಣ ಮಾಡುವವನು ನಾನು – ಇದು ಪರಮ ಅನ್ಯಾಯ' ಎಂದರು ಅವರು. ಮುಂದುವರೆದು, "ನೋಡಿ, ನಿಮ್ಮಿಂದ ಹಣ ಪಡೆಯುವುದಕ್ಕೆ ಮುದುಕ ಎಷ್ಟು ಶೀಘ್ರವಾಗಿ ಚೇತರಿಸಿಕೊಂಡಿದ್ದಾನೆ" ಎಂದರು. "ಸರ್ದಾರನು ನೇಣುಗಂಬದ ಕೆಳಗೂ ನಗುತ್ತಾನೆ" ಎಂದು ಉದ್ಗರಿಸಿದರು ಗಾಂಧೀಜಿ.

ಅಕ್ಟೋಬರ್ ೩೧ ಪಟೇಲರ ಹುಟ್ಟುಹಬ್ಬದ ದಿನ. ಅವರು ಗಾಂಧೀಜಿ ತಂಗಿದ್ದ ಬಿರ್ಲಾ ಸದನಕ್ಕೆ ಹೋದರು. ಆದರೆ ಗಾಂಧೀಜಿಗೆ ಆ ದಿನದ ವಿಶೇಷತೆ ನೆನಪಾಗಲಿಲ್ಲ. ಮಾರನೆ ದಿನ ಅವರು ಪಟೇಲರಿಗೆ ಈ ರೀತಿ ಬರೆದು ಕಳುಹಿಸಿದರು, "ನಿನ್ನೆಯ ದಿನ ನೀನು ಬಂದು ನನ್ನನ್ನು ಭೇಟಿ ಮಾಡಿದೆ. ಆದರೆ ಆಗ ಅದು ನಿನ್ನ ಹುಟ್ಟಿದ ದಿನ ಎನ್ನುವುದು ನೆನಪಾಗಲಿಲ್ಲ. ಅದರಿಂದ ನಾನು ನನ್ನ ಶುಭಾಶಯಗಳನ್ನು ಅಲ್ಲಿಯೇ ನೀಡಲಾಗಲಿಲ್ಲ. ಅಂತಹುದು ನನ್ನ ದುರವಸ್ಥೆ."[೩೧೪]

೧೫.೨ ವಿಷಬೀಜದ ಬಿತ್ತನೆ

ಪಟೇಲ್ ಮತ್ತು ನೆಹರುರವರ ಮನೋಭಾವ ಮತ್ತು ದೃಷ್ಟಿಕೋನಗಳಲ್ಲಿ ಬಹಳ ಭಿನ್ನತೆ ಇತ್ತು. ಇದು ಸಹಜವೆ. ಇಬ್ಬರೂ ಬೆಳೆದು ಬಂದ ರೀತಿಗಳೇ ಅದಕ್ಕೆ ಕಾರಣ. ಅಲ್ಲದೆ ಎಲ್ಲಾ ಜನರು ಒಂದೇ ತರಹ ಇರಲು, ಒಂದೇ ತರಹ ಆಲೋಚಿಸಲು ಸಾಧ್ಯವಿಲ್ಲ – ಎನ್ನುವುದು ಎಲ್ಲರಿಗೂ ಗೊತ್ತು. ಇರಲಿ, ಪಟೇಲ್ ಮತ್ತು ನೆಹರು, ತಮ್ಮ ನಡುವೆ ಭಿನ್ನತೆ ಇದ್ದರೂ, ಪರಸ್ಪರ ಜೊತೆಯಾಗಿ ಕೆಲಸ ಮಾಡುತ್ತಿದ್ದರು. ಅದಕ್ಕೆ ಕಾರಣ ಇಬ್ಬರಿಗೂ ಇದ್ದ ಅಮಿತ ದೇಶಪ್ರೇಮ. ಆದರೆ ಕೆಲವರು ಸ್ವಹಿತಾಸಕ್ತರು, ಇವರ ಬಾಂಧವ್ಯದಲ್ಲಿ ಬಿರುಕು ಉಂಟುಮಾಡಲು ಹೊರಟರು.

ಕಾಂಗ್ರೆಸ್ ಪಕ್ಷದಲ್ಲಿ ಎರಡು ಬಗೆಯ ಮುಸ್ಲಿಮರಿದ್ದರು. ರಫಿ ಅಹ್ಮದ್ ಕಿದ್ವಾಯ್‌ರವರಂತಹವರು ಜಾತ್ಯತೀತರಾಗಿದ್ದರು. ಅವರು ಯಾವಾಗಲೂ ತಾವು

ಭಾರತೀಯರು ಎಂದು ಭಾವಿಸಿದ್ದರು. ಅವರಿಗೆ ಹಿಂದೂ ಮತ್ತು ಮುಸ್ಲಿಂ ಅನ್ನುವುದರಲ್ಲಿ ಯಾವ ರಾಜಕೀಯ ವ್ಯತ್ಯಾಸವೂ ಇರಲಿಲ್ಲ. ಆದರೆ ಮೌಲಾನಾ ಅಜ಼ಾದರಂತಹವರು ತಾವೊಂದು ಅಲ್ಪ ಸಂಖ್ಯಾತ ಮುಸ್ಲಿಮರು ಎಂದೂ, ಅದರಿಂದ ಮೀಸಲು ಮುಂತಾದ ಸೌಲಭ್ಯಗಳನ್ನು ಪಡೆಯಬೇಕೆಂದೂ ಭಾವಿಸಿದ್ದರು. ಈ ಇಸ್ಲಾಂ ಅನುಯಾಯಿಗಳು ಸರ್ದಾರರು ಮುಸ್ಲಿಂ–ವಿರೋಧಿ ಎಂದು ಗಾಂಧೀಜಿಯವರಲ್ಲಿ ವಿಷ ಬೀಜ ಬಿತ್ತಲು ಯತ್ನಿಸಿದರು. ಆದರೆ, ಪಟೇಲರನ್ನು ೩೦ ವರ್ಷಗಳಿಂದ ನೋಡಿದ್ದ ಗಾಂಧೀಜಿ, 'ಪಟೇಲರಿಗೆ ಅಂತಹ ಭಾವನೆಗಳಿಲ್ಲ' ಎಂಬ ಆಶ್ವಾಸನೆಯನ್ನು ಆ ಮುಸ್ಲಿಮರಿಗೆ ನೀಡಿದರು. ಗಾಂಧೀಜಿಯ ಮುಂದೆ ತಮ್ಮ ಆಟ ನಡೆಯದಿದ್ದುದರಿಂದ ಅವರು ನೆಹರು ಬಳಿ ಹೋಗಿ ಸರ್ದಾರರ ವಿರುದ್ಧ ದೂರಿದರು. ಸರ್ದಾರರ ಭಾಷಣಗಳಿಂದ ತುಣುಕುಗಳನ್ನು ಹೊರತೆಗೆದು, ಆ ಮಾತುಗಳನ್ನಾಡಿದ ಸಂದರ್ಭದಿಂದ ಬೇರ್ಪಡಿಸಿ, ನೆಹರು ಕಿವಿಗೆ ಊದಿದರು. ಅವರು, "ಸರ್ದಾರರು ಮುಸ್ಲಿಮರ ಪ್ರಾಮಾಣಿಕತೆಯನ್ನು ಶಂಕಿಸುತ್ತಾರೆ ಮತ್ತು ಮುಸ್ಲಿಮರನ್ನು ಹಿಂಸಿಸಲು ರಾಷ್ಟ್ರೀಯ ಸ್ವಯಂಸೇವಕ ದಳದವರಿಗೆ ಅವಕಾಶ ಮಾಡುತ್ತಿದ್ದಾರೆ" ಎಂದು ದೂರಿದರು. ನೆಹರು ಸಹ ಸರ್ದಾರರನ್ನು ೨೫ ವರ್ಷಗಳಿಂದ ಬಲ್ಲವರಾಗಿದ್ದರು. ಆದರೆ ಅವರು ವಾಸ್ತವಿಕ ವ್ಯಕ್ತಿಯಲ್ಲ. ಭಾವಜೀವಿ, *(ಜೊತೆಗೆ, ಅವರದು ಹಿತ್ತಾಳೆ ಕಿವಿಯೆಂದು ಕಾಣುತ್ತದೆ – ಲೇಖಕ)* ಮುಸ್ಲಿಮರ ದೂರು ಅವರ ಕಿವಿಯ ಒಳಕ್ಕೆ ಹೋಯಿತು, ವಿಷ ಬೀಜದ ಬಿತ್ತನೆಯಾಯಿತು.[೩೧೫]

ಮೌಲಾನಾ ಆಜ಼ಾದ್ ಮತ್ತು ಪಟೇಲರ ನಡುವೆ ಸ್ನೇಹಭಾವ ಹೊರಟು ಹೋಗಿತ್ತು. ಆಜ಼ಾದರು ಪಟೇಲರನ್ನು, ಪಟೇಲರು ಆಜ಼ಾದರನ್ನು ಮತೀಯವಾದಿ ಎಂದು ಕರೆಯುತ್ತಿದ್ದರು. ಆಜ಼ಾದರು; 'ಪಟೇಲರು ದೇಶವಿಭಜನೆಗೆ ಬೆಂಬಲವಿತ್ತರು ಮತ್ತು ಗಾಂಧೀಜಿ ಅದಕ್ಕೆ ಸಮ್ಮತಿಸುವಂತೆ ಮಾಡಿದರು' ಎಂದು ಆಪಾದಿಸುತ್ತಿದ್ದರು. ಪಟೇಲರು, "ಪಂಜಾಬ್‌ನಲ್ಲಿ ಅಧಿಕ ಸಂಖ್ಯೆಯಲ್ಲಿ ಮುಸ್ಲಿಮರು ಮುಸ್ಲಿಂ ಲೀಗ್ ಸೇರುವುದನ್ನು ತಡೆಯಲು ಆಜ಼ಾದರು ಅಶಕ್ತರಾದರೆಂದು" ಎತ್ತಿ ಆಡುತ್ತಿದ್ದರು. ಮೌಲಾನಾ ಆಜ಼ಾದರು ಇಸ್ಲಾಂ ವಿಷಯದಲ್ಲಿ ಮಹಾ ಪಂಡಿತರಾಗಿದ್ದರು. ಅದರಿಂದ ಅವರು ಮುಸ್ಲಿಮರ ಅಪಾರ ಗೌರವ ಮತ್ತು ಬೆಂಬಲವನ್ನು ಸಂಪಾದಿಸಿದ್ದರು ಮತ್ತು ಮುಸ್ಲಿಮರ ನಾಯಕರಾಗಿದ್ದರು. ಆದರೆ ಸ್ವಾತಂತ್ರ್ಯ ಬಂದು ದೇಶ ವಿಭಜನೆಯಾದಾಗ ದೇಶದಲ್ಲಿ ಮುಸ್ಲಿಮರ ಸಂಖ್ಯೆ ಕಡಿಮೆಯಾಗಿದ್ದರಿಂದ ಆಜ಼ಾದರ ಪ್ರಭಾವ ಇಳಿಮುಖವಾಯಿತು. ಆದರೆ, ಪಟೇಲರ ಪ್ರಭಾವ ಏರುತ್ತಾ ಹೋಯಿತು. ಇದನ್ನು ಆಜ಼ಾದರು ಸಹಿಸದಾದರು ಎಂದು ಕಾಣುತ್ತದೆ. ವಲ್ಲಭಭಾಯ್ ಮೇಲೆ ಇಲ್ಲ ಸಲ್ಲದ ಆಪಾದನೆಗಳನ್ನು ಮಾಡಲು ಆರಂಭಿಸಿದರು.[೩೧೬] *(ಅವರ ಕೃತಿ*

India Wins Freedom ನಲ್ಲಿ ಅದನ್ನು ಕಾಣಬಹುದು – ಲೇಖಕ)

ಆಜ಼ಾದರು ನೆಹರುಗೆ ಬಹಳ ಹತ್ತಿರವಾಗಿದ್ದರು. ಅವರಿಬ್ಬರ ನಡುವೆ ಭಾರಿ ಆತ್ಮೀಯತೆ ಮತ್ತು ಸ್ನೇಹ ಇತ್ತು. ದೆಹಲಿಯ ಜಿಲ್ಲಾಧಿಕಾರಿ ಎಂ.ಎಸ್. ರಾಂಧವ ಬಗೆಗೆ ಒಂದು ವಿವಾದವಿತ್ತು. ರಾಂಧವ ಒಬ್ಬ ಸಿಕ್. 'ಅವರ ಬಗೆಗೆ ಮುಸ್ಲಿಮರಿಗೆ ವಿಶ್ವಾಸವಿಲ್ಲ, ಅವರನ್ನು ವರ್ಗ ಮಾಡಬೇಕು' ಎಂದು ಆಜ಼ಾದ್ ಮತ್ತು ನೆಹರು ಪಟೇಲರಿಗೆ ತಿಳಿಸಿದರು. ಪಟೇಲರು ನೆಹರುಗೆ, "ನೀವು ನಿಮ್ಮ ಅಪೇಕ್ಷೆಯನ್ನು ತಿಳಿಸಿದರೆ ಮಾತ್ರ ಸಾಕು. ಅದನ್ನು ಕಾರ್ಯಗತ ಮಾಡುತ್ತೇನೆ. ಆದರೆ ಅದು ತೀವ್ರ ಪರಿಣಾಮಗಳಿಗೆ ಎಡೆಮಾಡುತ್ತದೆ," ಎಂದರು. ನೆಹರು, "ನೇರ ಮಾಹಿತಿಯ ಮೂಲ ನಿಮಗೆ ಹೆಚ್ಚಾಗಿರುವುದರಿಂದ ತೀರ್ಮಾನ ನಿಮ್ಮದು" ಎಂದರು. ತಮ್ಮ ಮೊದಲ ಸೂಚನೆಯಿಂದ ಹಿಂದೆ ಸರಿದರು. ಆಜ಼ಾದರೂ ಸಹ ಹಿಂದೆ ಸರಿದರು. ಆದರೆ ಪಟೇಲರ ಅಮೃತಸರದ ಭಾಷಣದ ನಂತರ ಮೌಲಾನಾ ಆಜ಼ಾದರು ಗಾಂಧೀಜಿಯ ಮುಂದೆ ಪಟೇಲರ ಜೊತೆ ಚರ್ಚಿಸುವ ಪ್ರಸ್ತಾವನೆಯನ್ನು ಮುಂದಿಟ್ಟರು. ಅಕ್ಟೋಬರ್ ೭ರಂದು ಮೂವರೂ ಗಾಂಧೀಜಿಯ ಮುಂದೆ ೭೫ ನಿಮಿಷಗಳ ಕಾಲ ಚರ್ಚಿಸಿದರೂ ಪ್ರಯೋಜನವಾಗಲಿಲ್ಲ.[೩೧೭]

ಡಿಸೆಂಬರ್ ೨೪ರಂದು ಗಾಂಧೀಜಿ ಸಮ್ಮುಖದಲ್ಲಿ ನೆಹರು, ಆಜ಼ಾದ್ ಮತ್ತು ಇತರ ಐವರು ಮುಸ್ಲಿಮರು ಪಟೇಲ್‌ರವರ ಜೊತೆ ಚರ್ಚಿಸಿದರು. ಆದರೆ ಪಟೇಲ್ ಮತ್ತು ಆಜ಼ಾದರ ನಡುವಣ ಭಿನ್ನಾಭಿಪ್ರಾಯ ತಗ್ಗಲಿಲ್ಲ. ಆ ಸಭೆಯಲ್ಲೂ ರಾಂಧವರವರ ಪ್ರಶ್ನೆ ಪ್ರಸ್ತಾಪಿತವಾಯಿತು. ನೆಹರು, ಆಜ಼ಾದ್ ಮತ್ತು ಐವರು ಮುಸ್ಲಿಮರು ರಾಂಧವರವರ ವರ್ಗಾವಣೆಯನ್ನು ಬಯಸಿದರು. ಪಟೇಲರು ಹೇಳಿದರು, "ನೀವೆ ಏಕೆ ಅಧಿಕಾರವನ್ನು ವಹಿಸಿಕೊಳ್ಳಬಾರದು? ನಾನು ಈ ತರಹ ಕೆಲಸ ಮಾಡಲಾರೆ." ದೆಹಲಿಯ ಪೊಲೀಸ್ ಇಲಾಖೆಯಲ್ಲಿ ಬಹಳ ಮಂದಿ ಹಿಂದೂ ಅಥವಾ ಸಿಕ್ ಪಂಜಾಬಿಗಳು ಇದ್ದರು. ಅವರಲ್ಲಿ ಅನೇಕರು ಪಂಜಾಬ್‌ನಿಂದ ಬಂದ ನಿರಾಶ್ರಿತರಾಗಿದ್ದರು. ಅವರಲ್ಲಿ ಬಹಳ ಮಂದಿ ತಮ್ಮ ಆಪ್ತರನ್ನು ಕಳೆದುಕೊಂಡು ಬಂದಿದ್ದರು. ಮುಸ್ಲಿಮರಿಗೆ ಸಹಾನುಭೂತಿಯನ್ನು ತೋರಿಸುವುದು ಅವರಿಗೆ ಕಷ್ಟದ ಕೆಲಸವಾಗಿತ್ತು. ಸಹಾನುಭೂತಿ ತೋರಿಸುವಂತೆ ಅವರನ್ನು ಪಟೇಲರು ಒತ್ತಾಯಿಸುತ್ತಿರಲಿಲ್ಲ. ಸರ್ದಾರರು ಅವರ ಮೇಲೆ ಹೆಚ್ಚಿನ ಒತ್ತಡ ಹೇರಿ ಅವರ ವಿಧೇಯತೆಯನ್ನು ಕಳೆದುಕೊಳ್ಳುವ ಸ್ಥಿತಿಯಲ್ಲಿರಲಿಲ್ಲ.[೩೧೮]

ಗಾಂಧೀಜಿಗೆ ಇದು ಅರ್ಥವಾಯಿತು. ಆದರೆ, 'ನೀವು ನಿರೀಕ್ಷಿಸುವ ಸಹಾನುಭೂತಿಗೆ ಒಂದು ಮಿತಿ ಇದೆ' ಎಂದು ಮುಸ್ಲಿಮರಿಗೆ ಹೇಳುವುದು

ಅವರಿಗೆ ಕಷ್ಟವಾಯಿತು. ಪಟೇಲರು ಮಂತ್ರಿ ಮಂಡಲದಿಂದ ಹೊರ ಬರುವುದು ಆ ಸಮಸ್ಯೆಗೆ ಒಂದು ಪರಿಹಾರವಾಗಬಹುದು, ಆದರೆ ಅದು ಕಷ್ಟಕರವಾದ ಪರಿಹಾರ, ಅನ್ನಿಸಿತು ಗಾಂಧೀಜಿಗೆ. ಕೊನೆಗೆ ಅವರು ಡಿಸೆಂಬರ್ ಅಂತ್ಯದಲ್ಲಿ (೨೯ ಅಥವಾ ೩೦ರಂದು) ಪಟೇಲರಿಗೆ, "ನೀವು ಸರ್ಕಾರವನ್ನು ನಡೆಸಬೇಕು ಅಥವಾ ನೆಹರು ನಡೆಸಬೇಕು" ಎಂದರು. ಪಟೇಲ್‌ರವರು, "ನನಗೆ ದೈಹಿಕ ಸಾಮರ್ಥ್ಯವಿಲ್ಲ. ಅವರು ನನಗಿಂತ ಚಿಕ್ಕವರು. ಅವರೇ ನಡೆಸಲಿ. ನಾನು ಹೊರಗಿನಿಂದ ಸಾಧ್ಯವಾದಷ್ಟು ಸಹಾಯ ಮಾಡುತ್ತೇನೆ," ಎಂದರು. ಗಾಂಧೀಜಿಯವರು ತಮ್ಮ ತೀರ್ಮಾನವನ್ನು ಮುಂದೂಡಿದರು.[೩೧೯]

ಮಂತ್ರಿ ಮಂಡಲವನ್ನು ಬಿಡುವುದರಲ್ಲಿ ಪಟೇಲರಿಗೇನೂ ಸಂತೋಷ ವಿರಲಿಲ್ಲ. ನೆಹರುಗೆ, ಸಚಿವ ಸಂಪುಟಕ್ಕೆ ಮತ್ತು ದೇಶಕ್ಕೆ ತಮ್ಮ ಸೇವೆಯ ಅಗತ್ಯ ಇದೆ ಎಂದು ಅವರು ತಿಳಿದಿದ್ದರು. ಆದರೆ ದೆಹಲಿಯ ಆಡಳಿತದಲ್ಲಿ ಆಜ಼ಾದರು ಮೂಗು ತೂರಿಸುವುದನ್ನು ಸಹಿಸಲು ಅವರು ಸಿದ್ಧರಿರಲಿಲ್ಲ. ದೆಹಲಿಯ ನಿರ್ವಹಣೆ ಗೃಹ ಸಚಿವಾಲಯದ ಕರ್ತವ್ಯವಾಗಿತ್ತು. ಹಾಗೆಯೇ, ಪ್ರಧಾನಿಯ ಪಾತ್ರದ ಬಗೆಗೆ ನೆಹರುರವರ ಅಭಿಪ್ರಾಯವನ್ನು ಪಟೇಲರು ಒಪ್ಪಲು ಸಿದ್ಧರಿರಲಿಲ್ಲ. ಅದಕ್ಕೆ ಬದಲಾಗಿ ರಾಜಿನಾಮೆ ಕೊಡುವುದೇ ಸೂಕ್ತ ಎನ್ನಿಸಿತು ಪಟೇಲರಿಗೆ. ನೆಹರು ಮತ್ತು ಆಜ಼ಾದರು ತಾವು ಹೊರ ಹೋಗುವುದನ್ನು ಬಯಸುತ್ತಿದ್ದಾರೆ ಮತ್ತು ಗಾಂಧೀಜಿಯ ಕಿವಿಗೆ ತಮ್ಮ ವಿರುದ್ಧ ವಿಷ ಸುರಿಯಲಾಗಿದೆ ಎನ್ನುವುದು ಪಟೇಲರಿಗೆ ಡಿಸೆಂಬರ್ ೨೪ರ ಸಭೆಯಿಂದ ಖಚಿತವಾಗಿತ್ತು. ಅವರು ರಾಜಿನಾಮೆ ನೀಡಿ, ಗಾಂಧೀಜಿಯ ಆಣತಿಗೆ ಕಾಯಲಾರಂಭಿಸಿದರು. ಅದು ಬರುತ್ತದೆ ಅನ್ನುವ ನಂಬಿಕೆ ಅವರಿಗಿತ್ತು.[೩೨೦]

ಪಟೇಲರ ಈ ನಿರ್ಧಾರಕ್ಕೆ ಇನ್ನೂ ಕೆಲವು ಕಾರಣಗಳಿದ್ದುವು:

ಪಟೇಲರ ಅಧಿಕಾರ ವ್ಯಾಪ್ತಿಯಲ್ಲಿದ್ದ ಕಾಶ್ಮೀರವನ್ನು ನೆಹರು ತಾವೇ ವಹಿಸಿ ಕೊಂಡು, ನಂತರ ಗೋಪಾಲಸ್ವಾಮಿಯವರಿಗೆ ವಹಿಸಿದ್ದರು. ಅದು ಪಟೇಲರ ಆತ್ಮ ಗೌರವಕ್ಕೆ ಪೆಟ್ಟು ಕೊಟ್ಟಿತ್ತು. ಡಿಸೆಂಬರ್ ೩ನೇ ವಾರದಲ್ಲಿ ಕೇಂದ್ರಾಡಳಿತಕ್ಕೆ ಒಳಪಟ್ಟಿದ್ದ ಅಜ್ಮೀರ್‌ನಲ್ಲಿ ಗಲಭೆ ನಡೆಯಿತು. ಅಲ್ಲಿದ್ದ ಮುಸ್ಲಿಮರ ಪೈಕಿ ಸಾವಿರಾರು ಮಂದಿ ಅಲ್ಲಿಂದ ಪಲಾಯನ ಮಾಡಿದರು. ಅಲ್ಲಿಗೆ ಭೇಟಿ ಕೊಡಲು ಪ್ರಧಾನಿ ನೆಹರು ಹೊರಟು ಜೈಪುರ ತಲುಪಿದರು. ಅವರ ಜೊತೆ ಅವರ ಪ್ರಧಾನ ಆಪ್ತ ಕಾರ್ಯದರ್ಶಿ ಹೆಚ್. ವಿ. ಆರ್. ಅಯ್ಯಂಗಾರ್ ಇದ್ದರು. ನೆಹರು ಜೈಪುರದಲ್ಲಿದ್ದಾಗ ಅವರ ಹತ್ತಿರದ ಸಂಬಂಧಿ ಗತಿಸಿದ ಸುದ್ದಿ ಬಂದದ್ದರಿಂದ ಅವರು ದೆಹಲಿಗೆ ಹಿಂತಿರುಗಿ ಹೆಚ್. ವಿ. ಆರ್. ಅಯ್ಯಂಗಾರ್‌ರವರನ್ನು ಅಜ್ಮೀರ್‌ಗೆ ಕಳುಹಿಸಿದರು.

ಆದರೆ ಆ ವಿಷಯವನ್ನು ಪಟೇಲರಿಗಾಗಲಿ ಅಥವಾ ಇಲಾಖೆಗಾಗಲಿ ತಿಳಿಸಲಿಲ್ಲ. ಅಯ್ಯಂಗಾರ್‌ರವರು ಚೀಫ್ ಕಮಿಷನರಿಗೆ ದೂರವಾಣಿಯ ಮೂಲಕ 'ಘಟನೆಗಳನ್ನು ನೋಡಲು' ತಾವು ಬರುತ್ತಿರುವುದಾಗಿ ತಿಳಿಸಿದರು. ಅದರ ಹಿಂದಿನ ದಿನ ಪಟೇಲರು ಅಜ್ಮೀರ ಗಲಭೆಯ ಬಗೆಗೆ ವಿವರವಾದ ವರದಿಯನ್ನು ನೆಹರುಗೆ ಕಳುಹಿಸಿದ್ದರು ಮತ್ತು ಪತ್ರಿಕೆಗಳಿಗೂ ವಿವರವನ್ನು ನೀಡಿದ್ದರು. ಆಕಾಶವಾಣಿಯ ಸಂಜೆ ಸುದ್ದಿಯಲ್ಲಿ ಅದರ ಸಾರಾಂಶ ಬಿತ್ತರವಾಗಿತ್ತು. ಪಟೇಲರು ತಮ್ಮ ವರದಿಯನ್ನು ಅಜ್ಮೀರದ ಚೀಫ್ ಕಮಿಷನರ್ ಶಂಕರ್ ಪ್ರಸಾದ್ ನೀಡಿದ ಮಾಹಿತಿಗಳ ಮೇಲೆ ತಯಾರಿಸಿದ್ದರು. ಶಂಕರ್ ಪ್ರಸಾದ್ ಒಬ್ಬ ಅತಿ ದಕ್ಷ, ಪ್ರಾಮಾಣಿಕ ಮತ್ತು ನಿಷ್ಪಕ್ಷಪಾತ ಮನೋಭಾವದ ಅಧಿಕಾರಿಯಾಗಿದ್ದರು. ಅವರು ಹೆಚ್.ವಿ.ಆರ್. ಅಯ್ಯಂಗಾರರಗಿಂತ ಬಹಳ ಹಿರಿಯ ಅಧಿಕಾರಿ. ಚೀಫ್ ಕಮಿಷನರ್ ಆಗಿ ಅವರ ಸ್ಥಾನ ಒಂದು ರಾಜ್ಯದ ಮುಖ್ಯಸ್ಥನಿಗೆ ಸಮನಾದುದು. ತಾವು ತೆಗೆದುಕೊಂಡ ಕ್ರಮಗಳ ಮತ್ತು ತಾವು ನೀಡಿದ ಮಾಹಿತಿಗಳ ಪ್ರಾಮಾಣಿಕತೆಯ ತಪಾಸಣೆಗಾಗಿ ಅಯ್ಯಂಗಾರ್ ಬರುತ್ತಿದ್ದಾರೆಂದು ಲೆಕ್ಕ ಹಾಕಿದ ಶಂಕರ್ ಪ್ರಸಾದ್‌ಗೆ ಅಸಮಾಧಾನ ಉಂಟಾಯಿತು. ಅದು ತಮ್ಮ ಸ್ಥಾನಕ್ಕೆ ಅಗೌರವ ಎಂದು ಭಾವಿಸಿ ಪಟೇಲರಿಗೆ ಪತ್ರ ಬರೆದರು. ಆ ಪತ್ರ ಬಂದಾಗಲೇ ಅಯ್ಯಂಗಾರ್ ಅಜ್ಮೀರಕ್ಕೆ ಹೋಗಿದ್ದ ವಿಷಯ ಸರ್ದಾರರಿಗೆ ತಿಳಿದದ್ದು.[೩೧೧]

ಸರ್ದಾರರಿಗೆ ಅಸಮಾಧಾನವಷ್ಟೇ ಅಲ್ಲ, ಭಾರಿ ಆಘಾತವಾಯಿತು. ತಾವು ನೀಡಿದ ವರದಿಯ ಸತ್ಯಾಸತ್ಯತೆಯ ಪರೀಕ್ಷೆಗಾಗಿ ತಮ್ಮ ಅಧೀನದ ಒಬ್ಬ ಅಧಿಕಾರಿಯನ್ನು ನೆಹರು ಕಳುಹಿಸಿದ್ದಾರೆ. ಹಾಗೆ ಕಳುಹಿಸುವುದಾದರೆ ಯಾರಾದರೂ ಒಬ್ಬ ಮಂತ್ರಿಯನ್ನು ಕಳುಹಿಸಬೇಕಾಗಿತ್ತು. ಪ್ರಧಾನಿಗೆ ತಮ್ಮ ಮೇಲೆ ನಂಬಿಕೆ ಇಲ್ಲ – ಎಂದು ಪಟೇಲರು ಭಾವಿಸಿ ಆ ಬಗೆಗೆ ನೆಹರುಗೆ ಡಿಸೆಂಬರ್ ೨೩ರಂದು ಪತ್ರ ಬರೆದರು. ನೆಹರು ಅದೇ ದಿನ ಜವಾಬು ಬರೆದು, ತಮ್ಮ ಸಂಬಂಧಿಯ ಸಾವಿನ ದೆಸೆಯಿಂದ ತಾವು ಅಜ್ಮೀರಕ್ಕೆ ಹೋಗಲು ಆಗಲಿಲ್ಲವೆಂದು, ತಮ್ಮ ಭೇಟಿಯ ಪ್ರಕಟಣೆ ಆಗಿದ್ದುದರಿಂದ ತಾವು ಹೋಗದೆ ಇರುವುದು ಕೆಟ್ಟ ಪರಿಣಾಮ ಬೀರುತ್ತದೆಂದು ಭಾವಿಸಿ, ಜನಗಳಿಗೆ ತಮ್ಮ ವಿಷಾದವನ್ನು ವೈಯುಕ್ತಿಕವಾಗಿ ವ್ಯಕ್ತಪಡಿಸುವುದಕ್ಕಾಗಿ ಅಯ್ಯಂಗಾರರನ್ನು ಕಳುಹಿಸಿದರೇ ಹೊರತು ಅವರನ್ನು ತಪಾಸಣೆಗಾಗಿ ಕಳುಹಿಸಿರಲಿಲ್ಲ ಎಂದು ತಿಳಿಸಿದರು ಮತ್ತು ಶಂಕರ್ ಪ್ರಸಾದ್ ಬಗೆಗೆ ಮೆಚ್ಚುಗೆಯ ಮಾತುಗಳನ್ನು ಬರೆದರು.

ಮುಂದುವರೆದು ಅವರು:

"ನನಗೆ ಅವಶ್ಯಕತೆ ಎನಿಸಿದಾಗ ತಪಾಸಣೆಗೆ ಅಥವಾ ಭೇಟಿಗೆ ಅಥವಾ ಅಂತಹ ಕಾರ್ಯಕ್ಕೆ ಕ್ರಮ ತೆಗೆದುಕೊಳ್ಳದಂತೆ ನಾನು ನಿರ್ಬಂಧಿಸಲ್ಪಡಬೇಕೆ?..... ಒಬ್ಬ ವೈಯುಕ್ತಿಕ ಪ್ರತಿನಿಧಿಯನ್ನು ಖಾಸಗಿ ವಿಚಾರಣೆ ಅಥವಾ ಸಂದೇಶ ರವಾನೆಗೆ ನಾನು ಕಳುಹಿಸುವ ಹಾಗಿಲ್ಲವೆ? ಅದು ನನ್ನನ್ನು ಒಬ್ಬ ಬಂಧಿಯನ್ನಾಗಿ ಮಾಡುತ್ತದೆ..... ಪ್ರಧಾನಮಂತ್ರಿಯಾಗಿ ನಾನು ಮುಂದುವರೆಯ ಬೇಕಾದರೆ ನನ್ನ ಸ್ವಾತಂತ್ರ್ಯವನ್ನು ಮೊಟಕುಗೊಳಿಸಿಕೊಳ್ಳಲು ಸಾಧ್ಯವಿಲ್ಲ..... ನಿರ್ದೇಶನಗಳನ್ನು ನೀಡಲು ನನಗೆ ಅಧಿಕಾರ ವಿರಬೇಕು. ಇಲ್ಲದೆ ಹೋದರೆ ನಾನು ನಿವೃತ್ತನಾಗುವುದೇ ಒಳ್ಳೆಯದು..... ನಾನು ಯಾವುದೇ ಆತುರದ ಕ್ರಮವನ್ನು ತೆಗೆದುಕೊಳ್ಳಲು ಬಯಸುವುದಿಲ್ಲ, ನೀವೂ ಸಹ ಆತುರದ ಕ್ರಮ ತೆಗೆದುಕೊಳ್ಳಲು ಇಷ್ಟ ಪಡುವುದಿಲ್ಲ. ಆದ್ದರಿಂದ ನಾವು ಉದ್ಭವ ವಾಗಿರುವ ಸನ್ನಿವೇಶದ ಬಗೆಗೆ ಸಂಪೂರ್ಣವಾಗಿ ಆಲೋಚಿಸ ಬೇಕು. ಹಾಗಾದರೆ ನಮ್ಮ ತೀರ್ಮಾನವು, ಇಷ್ಟೊಂದು ವರ್ಷ ನಾವು ಸೇವೆ ಸಲ್ಲಿಸಿಕೊಂಡು ಬರುತ್ತಿರುವ ದೇಶಕ್ಕೆ ಒಳ್ಳೆಯದನ್ನು ಉಂಟುಮಾಡುತ್ತದೆ. ದುರಾದೃಷ್ಟವಶಾತ್ ನೀವಾಗಲಿ ಅಥವಾ ನಾನಾಗಲಿ ಸರ್ಕಾರದಿಂದ ಹೊರ ಹೋಗಬೇಕಾದರೆ ಆ ಕಾರ್ಯವು ಘನತೆ ಮತ್ತು ಸದ್ಭಾವನೆಯಿಂದ ನಡೆಯಲಿ. ನನ್ನ ವಿಷಯಕ್ಕೆ ಹೇಳುವುದಾದರೆ ನಾನು ಸಂತೋಷದಿಂದ ರಾಜಿನಾಮೆ ನೀಡುತ್ತೇನೆ ಮತ್ತು ಅಧಿಕಾರವನ್ನು ನಿಮ್ಮ ಕೈಗೆ ಕೊಡುತ್ತೇನೆ.[೩೨೨]

(ಪಟೇಲರ ಅಭಿಪ್ರಾಯವನ್ನು ನೆಹರು ತಪ್ಪಾಗಿ ಗ್ರಹಿಸಿದಂತೆ ಕಾಣುತ್ತದೆ. ತಪಾಸಣೆ ಮತ್ತಿತರ ಕೆಲಸಕ್ಕೆ ಒಬ್ಬ ಪ್ರತಿನಿಧಿಯನ್ನು ಕಳುಹಿಸುವ ಪ್ರಧಾನಿಯ ಅಧಿಕಾರವನ್ನು ಪಟೇಲರು ಪ್ರಶ್ನಿಸಲಿಲ್ಲ. ಆ ಕೆಲಸಕ್ಕೆ ಒಬ್ಬ ಮಂತ್ರಿಯನ್ನು ಕಳುಹಿಸದೆ ಒಬ್ಬ ಅಧಿಕಾರಿಯನ್ನು ಕಳುಹಿಸಿದ್ದನ್ನು ಪಟೇಲರು ಒಪ್ಪಲಿಲ್ಲ, ಅಷ್ಟೆ – ಲೇಖಕ)

ನೆಹರುರವರ ಪತ್ರಕ್ಕೆ ಪಟೇಲರು ಡಿಸೆಂಬರ್ ೨೪ರಂದು ಉತ್ತರ ಬರೆದರು. ಅದರ ಆಯ್ದ ಭಾಗ:

.....ಯಾವುದೇ ತರಹದ ನಿರ್ದೇಶನಗಳನ್ನು ಕೊಡುವ ನಿಮ್ಮ ಸ್ವಾತಂತ್ರ್ಯವನ್ನು ನಿರ್ಬಂಧಿಸುವ ಬಯಕೆ ನನಗಿಲ್ಲ, ಅಂತಹ

ಕೆಲಸವನ್ನು ನಾನು ಹಿಂದೆಯೂ ಮಾಡಿಲ್ಲ. ಯಾವುದೇ ರೀತಿಯಲ್ಲಿ ನಿಮ್ಮನ್ನು ದಬ್ಬುವುದು ಅಥವಾ ನಿಮಗೆ ಮುಜುಗರ ಉಂಟು ಮಾಡುವುದು ನನ್ನ ಬಯಕೆಯಲ್ಲ. ಆದರೆ ನಮ್ಮ ಜವಾಬ್ದಾರಿ, ಅಧಿಕಾರ ಮತ್ತು ಕಾರ್ಯ ಕ್ಷೇತ್ರಗಳಲ್ಲಿ ನಮ್ಮಿಬ್ಬರ ನಡುವೆ ಅಷ್ಟೊಂದು ಮೂಲಭೂತ ಅಭಿಪ್ರಾಯ ಭೇದ ಇರುವಾಗ, ನಾವಿಬ್ಬರೂ ಒಟ್ಟಿಗೇ ಮುಂದುವರೆಯುವುದು ನಾವು ಸೇವೆ ಮಾಡಲು ಬಯಸುತ್ತಿರುವ ಕ್ಷೇತ್ರಕ್ಕೆ ಹಿತವಲ್ಲ.

.....ನಿಮ್ಮ ರಾಜಿನಾಮೆಯು ಅಥವಾ ನಿಮ್ಮ ಕಾರ್ಯಗಳನ್ನು ನೀವು ತ್ಯಜಿಸುವ ಪ್ರಶ್ನೆ ಉದ್ಭವವಾಗುವುದೇ ಇಲ್ಲ. ತೀರ್ಮಾನವನ್ನು ಘನತೆ ಮತ್ತು ಸದ್ಭಾವನೆಯಿಂದ ತೆಗೆದುಕೊಳ್ಳಬೇಕು ಎನ್ನುವ ನಿಮ್ಮ ಅಭಿಪ್ರಾಯವನ್ನು ನಾನೂ ಒಪ್ಪುತ್ತೇನೆ. ಹಾಗೆ ಮಾಡಲು ಶ್ರಮ ವಹಿಸಿ ನಿಮಗೆ ಸಹಾಯ ಮಾಡುತ್ತೇನೆ. ಆದರೆ ನಾನು ಪರಿಣಾಮಕಾರಿಯಲ್ಲದ ಸಹೋದ್ಯೋಗಿಯಾಗಿ ಮುಂದುವರೆಯುವುದನ್ನು ನೀವು ಇಷ್ಟ ಪಡುವುದಿಲ್ಲ ಎನ್ನುವುದು ನನಗೆ ಖಚಿತವಾಗಿ ಗೊತ್ತು. ನೀವು ಕಾನೂನು ಬದ್ಧವಾದುದು ಎಂದು ಪರಿಗಣಿಸಿರುವ ಮಂತ್ರಿ ಪದವಿಯ ನಿರ್ಬಂಧತೆಗಳ ನಡುವೆ..... ಕೆಲಸ ಮಾಡಲು ನನಗೆ ಸಾಧ್ಯವಿಲ್ಲ.[೩೨೩]

ಈ ನಡುವೆ ಶಂಕರ್ ಪ್ರಸಾದ್‌ರವರು ಪಟೇಲರ ಆಪ್ತ ಕಾರ್ಯದರ್ಶಿ ವಿ. ಶಂಕರ್‌ರವರಿಗೆ ಡಿಸೆಂಬರ್ ೨೯ರಂದು ಒಂದು ಪತ್ರ ಬರೆದರು. ಅದನ್ನು ಶಂಕರ್‌ರವರು ಪಟೇಲರಿಗೆ ತೋರಿಸಿದರು. ಶಂಕರ್ ಪ್ರಸಾದ್‌ರವರು ತಮ್ಮ ಪತ್ರದಲ್ಲಿ ಐಯ್ಯಂಗಾರ್ ಭೇಟಿಯ ಪರಿಣಾಮಗಳನ್ನು ವಿವರಿಸಿದ್ದರು. ಐಯ್ಯಂಗಾರ್ ರವರ ವಿಚಾರಣೆಯಿಂದ 'ಶಂಕರ್ ಪ್ರಸಾದರು ಸನ್ನಿವೇಶವನ್ನು ತಿಳಿಗೊಳಿಸುವುದರಲ್ಲಿ ವಿಫಲರಾಗಿದ್ದಾರೆ. ಆದರೆ ಅನುಮಾನಾಸ್ಪದವಾದ ಅಂಕಿಅಂಶಗಳನ್ನು ನೀಡಿ ಬಹುಶಃ ಸರ್ಕಾರವನ್ನು ದಾರಿ ತಪ್ಪಿಸಿದ್ದಾರೆ' ಎನ್ನುವ ಭಾವನೆ ಸಾರ್ವಜನಿಕರಲ್ಲಿ ಹರಡಿತ್ತು. ಅದರಿಂದ ಶಂಕರ ಪ್ರಸಾದರಿಗೆ ಭಾರಿ ಅವಮಾನವಾಗಿತ್ತು.

ತಕ್ಷಣ ಶಂಕರ್‌ರವರು ಪಟೇಲರ ಸೂಚನೆಯಂತೆ ಶಂಕರ್ ಪ್ರಸಾದ್‌ಗೆ ಪತ್ರ ಬರೆದು ಪ್ರಧಾನಿಯವರು ಐಯ್ಯಂಗಾರರನ್ನು ಅಜ್ಮೀರಕ್ಕೆ ಕಳುಹಿಸಿದ ಸಂದರ್ಭ ಮತ್ತು ಉದ್ದೇಶವನ್ನು ವಿವರಿಸಿ, ಸರ್ಕಾರಕ್ಕೆ ನಿಮ್ಮ ಮೇಲೆ ಪೂರ್ಣ

ವಿಶ್ವಾಸವಿದೆಯೆಂದೂ, ನೀವು ಕಷ್ಟಕರವಾದ ಸನ್ನಿವೇಶವನ್ನು ವಿವೇಕ, ಕುಶಲತೆ ಮತ್ತು ನಿಸ್ಪಕ್ಷಪಾತತೆಯಿಂದ ನಿರ್ವಹಿಸಿದ್ದೀರೆಂದು ಸರ್ಕಾರ ಭಾವಿಸಿರುವುದಾಗಿ ನಿಮಗೆ ತಿಳಿಸಬೇಕೆಂದು ಗೃಹ ಮಂತ್ರಿಯವರು ಸೂಚಿಸಿದ್ದಾರೆ – ಎಂದು ತಿಳಿಸಿದರು.[೩೪೪]

ಜನವರಿ ೬ರಂದು ಜವಹರಲಾಲ್ ನೆಹರು ಅಂದಿನ ವಿದ್ಯಮಾನ, ತಮ್ಮ ಹಾಗೂ ಪಟೇಲರ ನಡುವಣ ಭಿನ್ನಾಭಿಪ್ರಾಯಗಳು ಮತ್ತು ಪ್ರಧಾನಮಂತ್ರಿಯ ಸ್ಥಾನದ ಬಗೆಗೆ ತಮ್ಮ ನಿಲುವು ಮೊದಲಾದುವನ್ನು ವಿವರಿಸಿ ಒಂದು ದೀರ್ಘ ಟಿಪ್ಪಣಿಯನ್ನು ಗಾಂಧೀಜಿಗೆ ಕಳುಹಿಸಿ, ತಮ್ಮಿಬ್ಬರ ಭಿನ್ನಾಭಿಪ್ರಾಯದ ಬಗೆಗೆ ಗಾಂಧೀಜಿಯವರ ಮಧ್ಯಸ್ಥಿಕೆಯನ್ನು ಬಯಸಿದರು. ಆ ಟಿಪ್ಪಣಿಯ ಒಂದು ಪ್ರತಿಯನ್ನು ಪಟೇಲರಿಗೂ ಕಳುಹಿಸಿದರು. ಅದೇ ರೀತಿ ಪಟೇಲರೂ ಸಹ ತಮ್ಮ ನಿಲುವನ್ನು ಸ್ಪಷ್ಟ ಪಡಿಸಿ ಗಾಂಧೀಜಿಗೆ ಒಂದು ಟಿಪ್ಪಣಿಯನ್ನು ಜನವರಿ ೧೨ರಂದು ಕಳುಹಿಸಿ ಅದರ ಪ್ರತಿಯನ್ನು ಜವಹರರಿಗೆ ಕಳುಹಿಸಿದರು. ಹೀಗೆ ಇಬ್ಬರೂ ಗಾಂಧೀಜಿಯ ತೀರ್ಮಾನಕ್ಕೆ ಕಾದರು.

ಇಬ್ಬರೂ 'ನಾನು ಹೋಗಲು ಸಿದ್ಧ, ನಾನು ಹೋಗಲು ಸಿದ್ಧ' ಎಂದು ಸ್ಪಷ್ಟವಾಗಿ ಹೇಳಿದ್ದರು. ಯಾರೊಬ್ಬರೂ ಅಧಿಕಾರಕ್ಕೆ ಅಂಟಿಕೊಳ್ಳುವ ಭಾವನೆಯನ್ನು ಪ್ರದರ್ಶಿಸಲಿಲ್ಲ. ಇಬ್ಬರ ನಿಲುವೂ ಸ್ಪಷ್ಟವಾಗಿತ್ತು: 'ಒಬ್ಬ ವೈಯುಕ್ತಿಕ ಪ್ರತಿನಿಧಿಯನ್ನು ನಾನು ಎಲ್ಲಿಗೂ ಕಳುಹಿಸುವ ಹಾಗಿಲ್ಲವೆ? ಅದು ನನ್ನನ್ನು ಒಬ್ಬ ಬಂಧಿಯನ್ನಾಗಿ ಮಾಡುತ್ತದೆ' – ಎನ್ನುವುದು ನೆಹರು ಪ್ರಶ್ನೆ, "ಈ ಕ್ರಮ ಅಥವಾ ಆ ಕ್ರಮವನ್ನು ತೆಗೆದುಕೊಳ್ಳುವ ಹಕ್ಕು ಪ್ರಧಾನಿಗೆ ಇಲ್ಲವೆ? – ಅನ್ನುವುದಲ್ಲ ಪ್ರಶ್ನೆ. ಅದಕ್ಕೆ ಬದಲಾಗಿ, ಮಂತ್ರಿಯಾಗಿ ನಾನು ಪ್ರಧಾನಮಂತ್ರಿಗೆ ಅವರು ತೆಗೆದುಕೊಂಡ ಕ್ರಮ ಸೂಕ್ತವಲ್ಲ ಎಂದು ಹೇಳುವುದು ತಪ್ಪೆ?" - ಇದು ಪಟೇಲರ ಉತ್ತರ. "ನಾನು ಕಂಡಂತೆ ಪ್ರಧಾನಿಯ ಕಾರ್ಯಗಳು ಏನು ಅನ್ನುವುದನ್ನು ಒಪ್ಪದೆ ಹೋದರೆ ನಮಗೆ ಇರುವ ಏಕಮಾತ್ರ ಹಾದಿಯೆಂದರೆ ನಾನಾಗಲಿ ಸರ್ದಾರರಾಗಲಿ ಸಚಿವ ಸಂಪುಟದಿಂದ ಹೊರ ಹೋಗುವುದು. ಯಾರಾದರೊಬ್ಬರು ಹೋಗಬೇಕಾದರೆ, ನಾನು ಹೋಗಲು ಬಯಸುತ್ತೇನೆ," ಎಂದರು ನೆಹರು. ಅದಕ್ಕೆ ಪಟೇಲರ ಪ್ರತಿಕ್ರಿಯೆ:

> ಯಾರಾದರು ಹೋಗಬೇಕಾದರೆ ನಾನು ಹೋಗಬೇಕು. ನನಗೆ ಚುರುಕಿನ ಸೇವೆಯ ವಯಸ್ಸು ಬಹಳ ಹಿಂದೆಯೆ ಕಳೆದು ಹೋಗಿದೆ. ಪ್ರಧಾನ ಮಂತ್ರಿಯು ರಾಷ್ಟ್ರ ಒಪ್ಪಿರುವ ನಾಯಕ ಮತ್ತು ನನಗಿಂತ ಚಿಕ್ಕವರು. ನನ್ನ ಮತ್ತು ಅವರ ನಡುವಣ

> ಆಯ್ಕೆಯಲ್ಲಿ ಅವರ ಪರವಾಗಿ ತೀರ್ಮಾನವಾಗಬೇಕು ಅನ್ನುವುದರಲ್ಲಿ ನನಗೆ ಅನುಮಾನವೇ ಇಲ್ಲ. ಆದದ್ದರಿಂದ ಅವರು ಅಧಿಕಾರವನ್ನು ಬಿಡುವ ಪ್ರಶ್ನೆಯೇ ಇಲ್ಲ.[೩೨೫]

ಒಟ್ಟಿನಲ್ಲಿ ಎರಡು ದಿಗ್ಗಜಗಳು ಅಧಿಕಾರ ತ್ಯಾಗಕ್ಕೆ ಸಿದ್ಧವಾದುವು. ಗಾಂಧೀಜಿಯ ತೀರ್ಮಾನಕ್ಕೆ ಕಾದುಕುಳಿತುವು.

೧೫.೩ ವಿದಾಯದ ಪ್ರವಾಸ

ಪಟೇಲರು ಡಿಸೆಂಬರ್ ೨೩ರಂದೇ ತಮ್ಮ ರಾಜಿನಾಮೆಯನ್ನು ಪ್ರಧಾನಿಗೆ ಕಳುಹಿಸಿದ್ದರು. ತಮ್ಮನ್ನೇ ಅಧಿಕಾರ ತ್ಯಜಿಸಿ ಎಂದು ಗಾಂಧಿ ಹೇಳುತ್ತಾರೆ – ಎಂದು ಅವರು ನಂಬಿದ್ದರು. ಹೋಗುವಾಗ ಉತ್ಸಾಹದಿಂದಲೇ ಹೋಗಬೇಕೆಂದು, ಹೋಗುವ ಮುನ್ನ ಗಾಂಧೀಜಿಯವರ ಬಹು ಕಾಲದ ಒಂದು ಅಪೇಕ್ಷೆಯನ್ನು ಪೂರ್ಣಗೊಳಿಸಬೇಕೆಂದು ಅವರು ತೀರ್ಮಾನಿಸಿದರು. ಆ ಆಸೆ ಕಾಥ್ಯೆವಾಡದ ಏಕೀಕರಣ. ಅದು ಅವರು ಗಾಂಧೀಜಿಗೆ ಅರ್ಪಿಸುವ ಬೀಳ್ಕೊಡುಗೆಯ ಉಡುಗೊರೆ.

ಪಟೇಲರು ಡಿಸೆಂಬರ್ ೨೩ರಂದು ಜವಹರ್‌ಗೆ ರಾಜಿನಾಮೆ ಪತ್ರ ಕಳುಹಿಸಿದ ನಂತರ ಸಂಚಾರ ಕೈಗೊಂಡರು ಮತ್ತು ಜನಸ್ತೋಮವನ್ನು ಕುರಿತು ವಿದಾಯದ ಭಾಷಣ ಮಾಡಲು ಆರಂಭಿಸಿದರು. ಡಿಸೆಂಬರ್ ೨೮ರಂದು ಜಾಮ್ ಸಾಹೇಬರೊಡನೆ ಅವರ ವಿಮಾನದಲ್ಲಿ ಜಮ್ಮುಗೆ ಬಂದಿಳಿದರು. ಅಲ್ಲಿ ಮಹಾರಾಜ ಮತ್ತು ಮಹಾರಾಣಿಯೊಡನೆ ಮೂರು ಘಂಟೆಗಳನ್ನು ಕಳೆದರು. ನೆಹರು, 'ಪಟೇಲರು ಜಮ್ಮುಗೆ ಹೋಗುವ ವಿಷಯವನ್ನಾಗಲಿ, ಅವರ ಜೊತೆ ಜಾಮ್ ಸಾಹೇಬರನ್ನು ಕರೆದುಕೊಂಡು ಹೋಗುವ ವಿಷಯವನ್ನಾಗಲಿ ತಮಗೆ ತಿಳಿಸಲೇ ಇಲ್ಲ," ಎಂದು ಗಾಂಧೀಜಿಯ ಬಳಿ ದೂರಿದರು. ಜನವರಿ ೨ರಂದು ಪಟೇಲರು ಷಿಲಾಂಗ್‌ಗೆ ಹೋದರು. ಅಲ್ಲಿ ಒಂದು ಭಾಷಣದಲ್ಲಿ, "ಅಸ್ಸಾಂ ಪ್ರಾಂತ್ಯದ ಮುಸ್ಲಿಮರು ಪಾಕಿಸ್ತಾನದ ಸೃಷ್ಟಿಗೆ ಕೊಟ್ಟ ಬೆಂಬಲವನ್ನು ಅಸ್ಸಾಂನ ಜನ ಕ್ಷಮಿಸಿರುವುದು ಮತ್ತು ಮರೆತಿರುವುದು ಸಂತೋಷದ ವಿಷಯ. ಪಾಕಿಸ್ತಾನದೊಡನೆ ಯುದ್ಧ ನಡೆದರೆ ಅಸ್ಸಾಂನ ಮುಸ್ಲಿಮರು ಭಾರತಕ್ಕೆ ಬೆಂಬಲ ನೀಡಬೇಕು" ಎಂದರು.

ಅಲ್ಲಿಂದ ಅವರು ಕಲ್ಕತ್ತಕ್ಕೆ ಹೋದರು. ಅಲ್ಲಿ ಗೌರ್ನರ್ ರಾಜಾಜಿಯೊಡನೆ ಸಂತೋಷವಾಗಿ ಕಾಲ ಕಳೆದರು. ಜನವರಿ ೩ರಂದು ಕಲ್ಕತ್ತ ಮೈದಾನದಲ್ಲಿ ಸುಮಾರು ೫ ಲಕ್ಷ ಜನ ಸೇರಿದ್ದ ಬೃಹತ್ ಸಭೆಯನ್ನು ಉದ್ದೇಶಿಸಿ ಭಾಷಣ ಮಾಡಿದರು. 'ನಾವು ವೃದ್ಧರು ನಮ್ಮ ಜೀವನೋದ್ದೇಶವನ್ನು ಪೂರ್ಣಗೊಳಿಸಿದ್ದೇವೆ'

ಎಂದು ಹೇಳಿ ತಾವು ಅಧಿಕಾರ ಬಿಡುತ್ತಿರುವುದನ್ನು ಪರೋಕ್ಷವಾಗಿ ಸೂಚಿಸಿದರು. ಅನಂತರ ಹೀಗೆ ನುಡಿದರು:

> ಜಾತ್ಯತೀತತೆ ಮತ್ತು ಹಿಂದೂ ರಾಜ್ಯದ ನಡುವಣ ವಿವಾದದ ವಿಷಯದಲ್ಲಿ ಹಿಂದೂ ರಾಜ್ಯದ ಬಗೆಗೆ ಗಂಭೀರ ಚರ್ಚೆಯೇ ಸಾಧ್ಯವಿಲ್ಲ. ಆದರೆ ಒಂದು ವಿಷಯ ಮಾತ್ರ ನಿರ್ವಿವಾದ. ಭಾರತದಲ್ಲಿ ಈಗ ನಾಲ್ಕುವರೆ ಕೋಟಿ ಮುಸ್ಲಿಮರಿದ್ದಾರೆ. ಅವರಲ್ಲಿ ಅನೇಕರು ಪಾಕಿಸ್ತಾನದ ಸೃಷ್ಟಿಗೆ ಸಹಾಯ ಮಾಡಿದ್ದಾರೆ. ಅವರು ಒಂದೇ ರಾತ್ರಿಯಲ್ಲಿ ಬದಲಾಗಿದ್ದಾರೆಂದು ನಂಬುವುದಾದರೂ ಹೇಗೆ?
>
> ತಾವು ರಾಷ್ಟ್ರದ ನಿಷ್ಠಾವಂತ ನಾಗರಿಕರು, ಅದರಿಂದ ತಮ್ಮ ಪ್ರಾಮಾಣಿಕತೆಯನ್ನು ಯಾರಾದರೂ ಏಕೆ ಶಂಕಿಸಬೇಕು? – ಎಂದು ಮುಸ್ಲಿಮರು ಕೇಳುತ್ತಾರೆ. ಅವರಿಗೆ ನಾನು 'ನೀವೇಕೆ ನಮ್ಮನ್ನು ಕೇಳುತ್ತೀರಿ? ನಿಮ್ಮ ಆತ್ಮಸಾಕ್ಷಿಯನ್ನು ಶೋಧಿಸಿಕೊಳ್ಳಿ' ಎಂದು ಹೇಳುತ್ತೇನೆ.[೩೨೬]

ಅನೇಕ ಮುಸ್ಲಿಮರು ಮುಸ್ಲಿಂ ಲೀಗ್‌ನ ದ್ವಿರಾಷ್ಟ್ರ ಸಿದ್ಧಾಂತದ ಪರವಾಗಿ ಹೋರಾಡಿದ್ದರು. ಹಿಂದೂಗಳದು ಮತ್ತು ಮುಸ್ಲಿಮರದು ಭಿನ್ನ ರಾಷ್ಟ್ರೀಯತೆ. ಅವರಿಬ್ಬರ ನಡುವೆ ಸಮಾನ ರಾಷ್ಟ್ರೀಯತೆ ಬೆಳೆಯಲು ಸಾಧ್ಯವೇ ಇಲ್ಲ. ಅದರಿಂದ ಮುಸ್ಲಿಮರಿಗೆ ಪ್ರತ್ಯೇಕ ಮಾತೃಭೂಮಿ ಬೇಕು ಎಂದು ಆಗ್ರಹಿಸಿದ್ದರು. ಅವರಿಬ್ಬರು ಕೂಡಿ ಬಾಳಲು ಸಾಧ್ಯವಿಲ್ಲ – ಎಂದಿದ್ದರು. ಹಾಗೆ ವಾದ ಮಾಡಿದ ಅನೇಕರು ಪಾಕಿಸ್ತಾನದ ಸೃಷ್ಟಿಯಾದ ಮೇಲೆ ಅಲ್ಲಿಗೆ ಹೋಗದೆ ಭಾರತದಲ್ಲೇ ಉಳಿದಿದ್ದರು ಮತ್ತು ಭಾರತಕ್ಕೆ ತಮ್ಮ ನಿಷ್ಠೆ ಎಂದು ಹೇಳುತ್ತಿದ್ದರು. ತಮ್ಮ ನಂಬಿಕೆಯನ್ನು ಒಂದೇ ರಾತ್ರಿಯಲ್ಲಿ ಬದಲಾಯಿಸಿದ ಈ ಪರಿವರ್ತಿತರನ್ನು ಭಾರತ ನಂಬುವುದು ಹೇಗೆ? – ಎನ್ನುವುದು ಸರ್ದಾರರ ಅಭಿಪ್ರಾಯವಾಗಿತ್ತು.[೩೨೭]

ಮುಂದುವರೆದು ಪಟೇಲರು ಎಡ ಪಂಥ ಮತ್ತು ಬಲ ಪಂಥದ ಬಗೆಗೆ ಹೀಗೆ ನುಡಿದರು:

> ನಾನು ರಾಜರ, ಬಂಡವಾಳಗಾರರ ಮತ್ತು ಜಮೀನ್ದಾರರ ಸ್ನೇಹಿತ ಎಂದು ಆಪಾದಿಸಲ್ಪಟ್ಟಿದ್ದೇನೆ. ಆದರೆ ನಾನು ಕಾರ್ಮಿಕರ ಮತ್ತು ಬಡವರ ಸ್ನೇಹಿತ ಎಂದು ಒತ್ತಿ ಹೇಳುತ್ತೇನೆ. ನಾನು

ಗಾಂಧೀಜಿಯ ಅನುಯಾಯಿಯಾದಾಗ ಸ್ವಂತ ಆಸ್ತಿಯನ್ನು ಮಾಡಬಾರದೆಂದು ನಿರ್ಧರಿಸಿದೆ. ನನ್ನಲ್ಲಿ ಏನೂ ಆಸ್ತಿ ಇಲ್ಲ..... ಆದರೆ ನಾನು ನಾಯಕನಂತೆ ಕಾಣಿಸಿಕೊಳ್ಳುವ ಈಗಿನ ಫ್ಲ್ಯಾಷನ್‌ಗೆ ಅಥವಾ ರಾಜರು ಮತ್ತು ಬಂಡವಾಳಗಾರರನ್ನು ನಿಂದಿಸಿ ನಾಯಕತ್ವ ಪಡೆಯುವ ಪ್ರಯತ್ನಕ್ಕೆ ಬಲಿ ಬೀಳಲಾರೆ.

ಪಾಕಿಸ್ತಾನದೊಡನೆ ಆಸ್ತಿ ಹಂಚಿಕೆಯ ಬಗೆಗೆ ಪಟೇಲರು ಹೀಗೆ ಹೇಳಿದರು:

ಆಸ್ತಿಯ ಹಂಚಿಕೆಯಲ್ಲಿ ನಾವು ಪಾಕಿಸ್ತಾನವನ್ನು ಉದಾರವಾಗಿ ನಡೆಸಿಕೊಂಡೆವು. ಆದರೆ ಪಾಕಿಸ್ತಾನವು ನಮ್ಮ ಮೇಲೆ ಗುಂಡು ಹಾರಿಸುವುದಕ್ಕೆ ಒಂದು ಪೈಸೆ ವೆಚ್ಚ ಮಾಡುವುದನ್ನೂ ನಾವು ಸಹಿಸಲು ಸಾಧ್ಯವಿಲ್ಲ. ಆಸ್ತಿ ಮೇಲಿನ ಇತ್ಯರ್ಥವು ಸಮ್ಮತಿ ನ್ಯಾಯಾಜ್ಞೆಯ ಹಾಗೆ. ಉಳಿದಿರುವ ಎಲ್ಲಾ ಅಂಶಗಳು ತೃಪ್ತಿಕರವಾಗಿ ಇತ್ಯರ್ಥವಾದ ಮೇಲೆ ಆ ನ್ಯಾಯಾಜ್ಞೆಯನ್ನು ನೆರವೇರಿಸಲಾಗುವುದು.

ಲಕ್ನೋ, ಅವರ ಪ್ರಯಾಣದ ಮುಂದಿನ ಸ್ಥಳ. ಅದು ಪಾಕಿಸ್ತಾನ ರಚನೆಗೆ ಪುಷ್ಟಿ ಕೊಟ್ಟ ಸ್ಥಳ. ಅಲ್ಲಿ ಡೋಲಾಯ ಮನಸ್ಸಿನ ಮುಸ್ಲಿಮರೂ ಇದ್ದರು. ಉಗ್ರಗಾಮಿ ಹಿಂದೂಗಳೂ ಇದ್ದರು. ಪಟೇಲರು ಆ ಮುಸ್ಲಿಮರಿಗೆ ಹೀಗೆ ಹೇಳಿದರು:

ಮುಸ್ಲಿಂ ಲೀಗ್‌ನವರು ಗಾಂಧೀಜಿಯನ್ನು ತಮ್ಮ ಶತ್ರು ನಂಬರ್ ಒನ್ ಎಂದು ಕರೆಯುತ್ತಿದ್ದರು. ಈಗ ಅವರು ಗಾಂಧೀಜಿಯನ್ನು ತಮ್ಮ ಸ್ನೇಹಿತ ಎಂದು ಭಾವಿಸುತ್ತಾರೆ ಮತ್ತು ಅವರ ಸ್ಥಳದಲ್ಲಿ ನನ್ನನ್ನು ಕೂರಿಸಿದ್ದಾರೆ, ಏಕೆಂದರೆ ನಾನು ಸತ್ಯವನ್ನು ನುಡಿಯುತ್ತೇನೆ. ತಮಗೆ ಪಾಕಿಸ್ತಾನ ದೊರೆತರೆ ತಾವು ಮುಸ್ಲಿಮರಿಗೆ ಪೂರ್ಣ ರಕ್ಷಣೆಯನ್ನು ಖಾತರಿ ಪಡಿಸಬಹುದು ಎಂದು ಅವರು ನಂಬಿದ್ದರು. ಆದರೆ ಅವರು ಭಾರತದಲ್ಲಿರುವ ಮುಸ್ಲಿಮರ ಬಗೆಗೆ ಎಂದಾದರು ಸಹಾನುಭೂತಿ ತೋರಿದ್ದಾರೆಯೆ?

ನಾನು ಭಾರತೀಯ ಮುಸ್ಲಿಮರನ್ನು ಒಂದೇ ಒಂದು ಪ್ರಶ್ನೆ ಕೇಳುತ್ತೇನೆ. ಕಾಶ್ಮೀರ ವಿಷಯದಲ್ಲಿ ನೀವೇಕೆ ಬಾಯಿ ತೆರೆಯಲಿಲ್ಲ? ಪಾಕಿಸ್ತಾನದ ಕಾರ್ಯವನ್ನು ನೀವೇಕೆ ಖಂಡಿಸಲಿಲ್ಲ?..... ಒಂದೇ ದೋಣಿಯಲ್ಲಿ ಯಾನ ಮಾಡುವುದು ಮತ್ತು ಒಟ್ಟಿಗೆ

ಮುಳುಗುವುದು ಅಥವಾ ತೇಲುವುದು ಈಗ ನಿಮ್ಮ ಕರ್ತವ್ಯ. ನೀವು ಎರಡು ಕುದುರೆಗಳ ಮೇಲೆ ಸವಾರಿ ಮಾಡಲು ಸಾಧ್ಯವಿಲ್ಲ ಎಂದು ಸ್ಪಷ್ಟವಾಗಿ ಹೇಳಲು ಬಯಸುತ್ತೇನೆ. ಒಂದು ಕುದುರೆಯನ್ನು ಆರಿಸಿಕೊಳ್ಳಿ. ಪಾಕಿಸ್ತಾನಕ್ಕೆ ಹೋಗಲು ಬಯಸುವವರು ಅಲ್ಲಿಗೆ ಹೋಗಬಹುದು ಮತ್ತು ನೆಮ್ಮದಿಯಿಂದ ಬದುಕಬಹುದು. ನಾವು ಶಾಂತಿಯಿಂದ ಬದುಕೋಣ ಮತ್ತು ನಮಗಾಗಿ ದುಡಿಯೋಣ.

ಯಾರು ನಿಷ್ಠಾವಂತರಲ್ಲವೋ ಅವರು, ಯಾರು ಎರಡು ಕುದುರೆಗಳ ಮೇಲೆ ಸವಾರಿ ಮಾಡುವರೋ ಅವರು ಹಿಂದೂಸ್ಥಾನ ಬಿಟ್ಟು ಹೋಗಬೇಕಾಗುತ್ತದೆ.[೩೨೮]

ಅನಂತರ ಪಟೇಲರು ಉಗ್ರಗಾಮಿ ಹಿಂದೂಗಳಿಗೆ ಹೀಗೆ ಹೇಳಿದರು:

ಕಾಂಗ್ರೆಸ್ಸನ್ನು ಸೇರಿ ಎಂದು ನಾನು ಹಿಂದೂ ಮಹಾಸಭಾದವರಿಗೆ ಮನವಿ ಮಾಡುತ್ತೇನೆ..... ಹಿಂದೂ ಧರ್ಮದ ರಕ್ಷಕರು ನೀವು ಮಾತ್ರ ಎಂದು ಭಾವಿಸಿದ್ದರೆ, ಅದು ತಪ್ಪು. ಹಿಂದೂ ಧರ್ಮವು ಒಂದು ವಿಶಾಲ ಮನೋಭಾವವನ್ನು ಬೋಧಿಸುತ್ತದೆ. ದುಡುಕಬೇಡಿ, ವ್ಯವಹಾರ ಚತುರತೆ ಇಲ್ಲದವರಾಗಬೇಡಿ, ಆಕ್ರಮಣಕಾರರಾಗಬೇಡಿ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದವರಿಗೆ ಮನವಿ ಮಾಡುತ್ತೇನೆ.

ಪಟೇಲರು ಜನವರಿ ೭ರಂದು ದೆಹಲಿಗೆ ಹಿಂತಿರುಗಿದರು.

೧೫.೪ ಮಹಾತ್ಮನ ಅನಿರ್ದಿಷ್ಟ ಉಪವಾಸ

ಪಟೇಲರ ಲಕ್ನೋ ಭಾಷಣದಿಂದ ನೆಹರುಗೆ ಅಸಮಾಧಾನ ಉಂಟಾಯಿತು. (ಅಸಮಾಧಾನ ಪಡಬೇಕಾದ ಅಂಶ ಅಲ್ಲಿ ಏನೂ ಇರಲಿಲ್ಲ. ಆದರೂ ಅವರಿಗೆ ಅಸಮಾಧಾನವಾಯಿತು. ಬಹುಶಃ ಮುಸ್ಲಿಮರು ನೀಡಿದ್ದ ದೂರಿನ ಪ್ರಭಾವವಿರಬಹುದು – ಲೇಖಕ).

ಅವರು ಗಾಂಧೀಜಿಯ ಬಳಿ ಹೋಗಿ ಪ್ರತಿಭಟಿಸಿದರು. ಅಷ್ಟೆ. ಅವರು ಇನ್ನೇನು ಮಾಡುವ ಹಾಗಿರಲಿಲ್ಲ. ಮಂತ್ರಿ ಮಂಡಲದಲ್ಲಿ ಬಹಳ ಮಂತ್ರಿಗಳು, ಕಾರ್ಯಕಾರಿ ಸಮಿತಿಯ ಸದಸ್ಯರು ಮತ್ತು ಅಖಿಲ ಭಾರತ ಕಾಂಗ್ರೆಸ್ ಸಮಿತಿ

ಸದಸ್ಯರು ಪಟೇಲರ ಬೆಂಬಲಕ್ಕಿದ್ದರು. ಹಾಗೆಂದು ಪಟೇಲರು ತಾವೇ ಪ್ರಧಾನಿಯಾಗಲು ಬಯಸಲಿಲ್ಲ. ನೆಹರುರವರ ಅಂತರರಾಷ್ಟ್ರೀಯ ವರ್ಚಸ್ಸು ಭಾರತಕ್ಕೆ ಒಂದು ದೊಡ್ಡ ಆಸ್ತಿ ಎಂದು ಅವರು ನಂಬಿದ್ದರು. ಅದರಿಂದ ನೆಹರು ಇಲ್ಲದ ಸಚಿವ ಸಂಪುಟವನ್ನು ರಚಿಸಲು ಅವರು ಇಷ್ಟಪಡಲಿಲ್ಲ. ಅವರು ನೆಹರುಗೆ ಸಂಪೂರ್ಣ ಬೆಂಬಲ ನೀಡಲು ಉದ್ದೇಶಿಸಿದ್ದರು. ಆದರೆ ಮುಸ್ಲಿಮರ ದೂರುಗಳ ಬಗೆಗೆ ನೆಹರು ಹೆಚ್ಚು ವಾಸ್ತವಿಕವಾಗಬೇಕೆಂದು ಬಯಸಿದ್ದರು. ನೆಹರುರವರ ಆದರ್ಶತೆಯು ವಾಸ್ತವಿಕತೆಯಿಂದ ದೂರವಾಗಿದೆ, ಅದರಿಂದ ಅನೇಕ ಮುಸ್ಲಿಮರ ಮುಖವಾಡದ ಹಿಂದೆ ಅಡಗಿರುವ ಅಪಾಯ ಅವರಿಗೆ ಅರ್ಥವಾಗುತ್ತಿಲ್ಲ ಎನ್ನುವುದು ಅವರ ಚಿಂತೆಯಾಗಿತ್ತು. ಆದರೆ ನೆಹರು ದೇಶದ ಜನರ ಕಣ್ಮಣಿಯಾಗಿದ್ದರು. ಅದರಿಂದ ದೇಶದ ಹಿತ ದೃಷ್ಟಿಯಿಂದ ಸರ್ದಾರರು ಅವರಿಗೆ ಪೂರ್ಣ ಬೆಂಬಲವನ್ನು ನೀಡುತ್ತಿದ್ದರು.[೩೨] ಅವರಿಗೆ ತಮ್ಮ ಸ್ಥಾನ ಮುಖ್ಯವಾಗಿರಲಿಲ್ಲ. ದೇಶದ ಹಿತ ಮುಖ್ಯವಾಗಿತ್ತು.

ಪಟೇಲರ ಲಕ್ನೋ ಭಾಷಣದ ವಿರುದ್ಧ ಕಾಂಗ್ರೆಸ್ಸಿನ ಮುಸ್ಲಿಮರು ಮೌಲಾನಾ ಆಜ಼ಾದರ ಮೂಲಕ, ನೆಹರು ಮತ್ತು ಗಾಂಧೀಜಿಗೆ ದೂರು ಸಲ್ಲಿಸಿದರು. ಸರ್ದಾರರು 'ಬಡ ಮುಸ್ಲಿಮರನ್ನು ಭಾರತದಿಂದ ಹೊರಕ್ಕೆ ಅಟ್ಟಲು ಬಯಸಿದ್ದಾರೆ ಮತ್ತು ಉಗ್ರಗಾಮಿ ಹಿಂದೂಗಳು ಮುಸ್ಲಿಮರಿಗೆ ಹಿಂಸೆ ಮತ್ತು ಕಿರುಕುಳ ಕೊಡುತ್ತಿದ್ದಾರೆ' ಎಂದು ಗಾಂಧೀಜಿಯ ಮುಂದೆ ಗೋಳಾಡಿದರು.

ಆ ವೇಳೆಗೆ ದೆಹಲಿಯಲ್ಲಿ ಮತೀಯ ಹಿಂಸಾಚಾರ ನಿಂತಿದ್ದರೂ ಅದು ಯಾವ ಘಳಿಗೆಯಲ್ಲಾದರೂ ಮತ್ತೆ ಆರಂಭವಾಗಬಹುದಾಗಿತ್ತು. ಜನರಲ್ಲಿ ಆತಂಕ ಮತ್ತು ಭಯ ಹಾಗೇ ಇತ್ತು. ಆ ಶಾಂತಿಯನ್ನು ಗಾಂಧೀಜಿ ಪೊಲೀಸ್ ಮತ್ತು ಸೈನಿಕರ ಭಯದಿಂದ ಬಂದ ಶಾಂತಿ, ನಿಜವಾದ ಶಾಂತಿಯಲ್ಲ, ಎಂದರು. ಅವರು ಬಯಸಿದ್ದದ್ದು ಹಿಂದೂ ಮತ್ತು ಮುಸ್ಲಿಮರ ಹೃದಯಗಳ ಮಿಲನ. ಅದು ಆಗಿರಲಿಲ್ಲ. ಆಗುವ ಸೂಚನೆಯೂ ಇರಲಿಲ್ಲ.

ಗಾಂಧೀಜಿಯವರ ಈ ಭಾವನೆಗೆ ಮತ್ತೊಂದು ಕಾರಣವಿತ್ತು:

> ಜನವರಿ ೧೧ರಂದು ಒಬ್ಬ ರಾಷ್ಟ್ರೀಯ ಮನೋಭಾವದ ದೆಹಲಿಯ ಮೌಲಾನಾ ಗಾಂಧೀಜಿಯನ್ನು ಭೇಟಿ ಮಾಡಿ, "ಪಾಕಿಸ್ತಾನದ ರಚನೆಗೆ ವಿರೋಧಿಸಿದ ನಮ್ಮಂತಹವರು ಪಾಕಿಸ್ತಾನಕ್ಕೆ ಹೋಗುವ ಹಾಗಿಲ್ಲ. ಆದರೆ ದೆಹಲಿಯಲ್ಲಿ ಉಳಿಯಲು ಹಿಂದೂಗಳು ಬಿಡುತ್ತಿಲ್ಲ. ನಮ್ಮನ್ನು ಇಂಗ್ಲೆಂಡಿಗೆ ಕಳುಹಿಸಲು

ಏಕೆ ವಿರ್ಪಾಟು ಮಾಡಬಾರದು?" ಎಂದು ಕೇಳಿದ್ದರು. ಅದುವರೆವಿಗೆ ಗಾಂಧೀಜಿ ಪಶ್ಚಿಮ ಪಾಕಿಸ್ತಾನಕ್ಕೆ ಹೋಗಿ ಅಲ್ಲಿಯ ಹಿಂದೂಗಳು ಮತ್ತು ಸಿಕ್ಖರಿಗೆ ಸಾಂತ್ವಾನ ಹೇಳಲು ಬಯಸಿದ್ದರು. ಆದರೆ ಈಗ ದೆಹಲಿಯ ಮುಸ್ಲಿಮರ ದುಸ್ಥಿತಿಯ ಬಗೆಗೆ ಆ ರಾಷ್ಟ್ರೀಯ ಮೌಲಾನ ಹೇಳಿದ ಮಾತುಗಳನ್ನು ಕೇಳಿದ ಮೇಲೆ ಪಾಕಿಸ್ತಾನಕ್ಕೆ ಹೋಗಿ ಸಾಂತ್ವಾನ ಹೇಳುವ ಅರ್ಹತೆ ತಮಗಿಲ್ಲ ಎಂದು ಯೋಚಿಸಿದರು ಮತ್ತು ಪರಿಸ್ಥಿತಿಯ ಸುಧಾರಣೆಗಾಗಿ ಅನಿರ್ಧಿಷ್ಟ ಉಪವಾಸ ಕೈಗೊಳ್ಳಬೇಕೆಂದು ತೀರ್ಮಾನಿಸಿದರು. ಆದರೆ ಆ ತೀರ್ಮಾನವನ್ನು ಜನವರಿ ೧೨ರಂದು ತಮ್ಮನ್ನು ಭೇಟಿ ಮಾಡಿದ ಪಟೇಲರಿಗಾಗಲಿ ಅಥವಾ ಬೇರೆಯವರಿಗಾಗಲಿ ತಿಳಿಸದೆ ಅಂದು ಸಂಜೆ ತಮ್ಮ ಪ್ರಾರ್ಥನಾ ಸಭೆಯಲ್ಲಿ ಹೃದಯಗಳ ಪುನರ್ಮಿಲನ ಆಗುವವರೆಗೆ ಅನಿರ್ಧಿಷ್ಟಾವಧಿ ಉಪವಾಸವನ್ನು ಮಾರನೆಯ ಬೆಳಗ್ಗೆ (ಜನವರಿ ೧೩) ಆರಂಭಿಸುವುದಾಗಿ ಪ್ರಕಟಿಸಿದರು.[೩೩೦]

ಈ ಮಧ್ಯೆ ಮತ್ತೊಂದು ಸಮಸ್ಯೆ ಉದ್ಭವಿಸಿತ್ತು. ಅವಿಭಜಿತ ಭಾರತದ ಆಸ್ತಿಯನ್ನು ಹಂಚುವಾಗ ೫೫ ಕೋಟಿ ರೂಪಾಯಿಗಳನ್ನು ಭಾರತವು ಪಾಕಿಸ್ತಾನಕ್ಕೆ ವರ್ಗಾಯಿಸಬೇಕೆಂದು ಎರಡು ರಾಷ್ಟ್ರಗಳು ೧೯೪೭ರ ನವೆಂಬರ್‌ನಲ್ಲಿ ಒಪ್ಪಿದ್ದುವು. ಆ ಒಪ್ಪಂದವಾದ ಎರಡು ಘಂಟೆಗಳ ಒಳಗೆ, ಪಟೇಲರ ಸೂಚನೆಯ ಮೇಲೆ, ಆ ಒಪ್ಪಂದವನ್ನು ಕಾರ್ಯರೂಪಕ್ಕೆ ತರುವುದು ಕಾಶ್ಮೀರ ಸಮಸ್ಯೆಯ ಇತ್ಯರ್ಥವನ್ನು ಅವಲಂಬಿಸುತ್ತದೆ – ಎಂದು ಭಾರತವು ಪಾಕಿಸ್ತಾನಕ್ಕೆ ತಿಳಿಸಿತು. ಪಾಕಿಸ್ತಾನವು ಈ ಸೂಚನೆಗೆ ಯಾವ ಪ್ರತಿಕ್ರಿಯೆಯನ್ನೂ ತೋರದೆ, ಮೌನವನ್ನು ತಾಳಿತು. ಆದರೆ ಜನವರಿಯಲ್ಲಿ ಆ ಹಣದ ಪಾವತಿಯನ್ನು ಪಾಕಿಸ್ತಾನವು ಕೇಳಿತು.

೧೯೪೮ರ ಜನವರಿ ೭ರಂದು ದೆಹಲಿಯಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಆ ವಿಷಯ ಚರ್ಚಿಸಲ್ಪಟ್ಟಿತು. ಪಟೇಲರು ತಕ್ಷಣದ ಪಾವತಿಯನ್ನು ಕಟುವಾಗಿ ವಿರೋಧಿಸಿದರು. 'ಪಾಕಿಸ್ತಾನವು ಆರ್ಥಿಕವಾಗಿ ದುಸ್ಥಿತಿಯಲ್ಲಿದೆಯೆಂದು ಖಚಿತವಾದ ಮಾಹಿತಿ ನಮಗೆ ಬಂದಿದೆ. ಈಗ ಹಣ ಪಾವತಿಸಿದರೆ, ಆ ಹಣವನ್ನು ನಮ್ಮ ಮೇಲೆ ಯುದ್ಧ ಮಾಡಲು ಯುದ್ಧ ಸಾಮಾಗ್ರಿಗಳನ್ನು ಖರೀದಿಸಲು ಪಾಕಿಸ್ತಾನವು ಉಪಯೋಗಿಸುತ್ತದೆ. ಅದರಿಂದ ಈಗ, ಒಂದು ಪೈಸೆಯನ್ನೂ ಕೊಡಬಾರದು, ಎನ್ನುವುದು ಸ್ಪಷ್ಟ' ಎಂದು ಪಟೇಲರು ವಾದಮಾಡಿದರು. ಶ್ಯಾಂಪ್ರಸಾದ್ ಮುಖರ್ಜಿ, ಗಾಡ್ಗಿಲ್ ಮತ್ತು ಅಂಬೇಡ್ಕರ್‌ರವರು ಪಟೇಲರನ್ನು

ಬೆಂಬಲಿಸಿದರು. ನೆಹರು ಸಹ ಸಂಪೂರ್ಣ ಸಮ್ಮತಿಯನ್ನು ಸೂಚಿಸಿದರು. ಸಚಿವ ಸಂಪುಟವು ಹಣ ಪಾವತಿಯನ್ನು ತಡೆ ಹಿಡಿಯಬೇಕೆಂದು ಸರ್ವಾನುಮತದಿಂದ ತೀರ್ಮಾನಿಸಿತು.

ಜನವರಿ ೧೨ರಂದು ಬೆಳಗ್ಗೆ ಪಟೇಲರು ಪತ್ರಿಕಾ ಗೋಷ್ಠಿಯಲ್ಲಿ, 'ಹಣ ಪಾವತಿಯ ವಿಷಯದ ತೀರ್ಮಾನವನ್ನು, ಇತರ ವಿಷಯಗಳ ತೀರ್ಮಾನದಿಂದ ಬೇರ್ಪಡಿಸುವ ಹಾಗಿಲ್ಲ. ಎಲ್ಲವನ್ನೂ ಏಕ ಕಾಲದಲ್ಲಿ ಕಾರ್ಯಗತ ಗೊಳಿಸಬೇಕು' ಎಂದು ಪ್ರಕಟಿಸಿದರು. ಪಟೇಲರು ಪತ್ರಿಕಾ ಗೋಷ್ಠಿಯಿಂದ ಗಾಂಧೀಜಿ ತಂಗಿದ್ದ ಬಿರ್ಲಾ ಸದನಕ್ಕೆ ಹೋಗಿ ಅವರನ್ನು ಭೇಟಿ ಮಾಡಿದರು. ಆದರೆ ಆಗ ಗಾಂಧೀಜಿ ತಮ್ಮ ಉಪವಾಸದ ವಿಷಯವನ್ನು ಅವರಿಗೆ ತಿಳಿಸಲಿಲ್ಲ.[೩೩೧]

ಜನವರಿ ೧೨ರಂದು ರಾತ್ರಿ ೭.೧೫ ಘಂಟೆ. ಗಾಂಧೀಜಿಯವರ ವೈದ್ಯೆ ಮತ್ತು ಸಹಾಯಕಿ ಸುಶೀಲ ನಯ್ಯಾರ್‌ರವರು ಪಟೇಲರ ಮನೆಗೆ ಓಡುತ್ತಾ ಬಂದು ಗಾಂಧೀಜಿಯವರು ಮಾರನೆಯ ದಿನದಿಂದ ಅನಿರ್ಧಿಷ್ಟ ಉಪವಾಸ ಮಾಡುವುದಾಗಿ ಪ್ರಕಟಿಸಿರುವ ವಿಷಯವನ್ನು ತಿಳಿಸಿದರು. ಬಹಳ ಆತಂಕಗೊಂಡ ಪಟೇಲ್ ಮಾರನೆಯ ಬೆಳಗ್ಗೆ ಬಿರ್ಲಾ ಸದನಕ್ಕೆ ಹೋಗಿ ಗಾಂಧೀಜಿಯನ್ನು ಭೇಟಿ ಮಾಡಿದರು. ಗಾಂಧೀಜಿಯವರು, "ಪಾಕಿಸ್ತಾನಕ್ಕೆ ೫೫ ಕೋಟಿ ರೂಪಾಯಿ ನೀಡದಿರುವುದು ಅನೈತಿಕತೆ" ಎಂದರು. "ಹಾಗೆಂದು ಯಾರು ಹೇಳುತ್ತಾರೆ?" ಪ್ರಶ್ನಿಸಿದರು ಪಟೇಲ್. "ಮೌಂಟ್‌ಬ್ಯಾಟನ್," ಎಂದರು ಗಾಂಧೀಜಿ. ಹಿಂದಿನ ಸಂಜೆ ಗಾಂಧೀಜಿಯವರು ತಮ್ಮ ಉಪವಾಸದ ವಿಷಯವನ್ನು ಪ್ರಕಟಿಸಿದ ನಂತರ ಮೌಂಟ್‌ಬ್ಯಾಟನ್‌ರವರ ಭೇಟಿಗೆ ಹೋಗಿದ್ದರು. ಅವರು ಮೌಂಟ್‌ಬ್ಯಾಟನ್‌ರವರನ್ನು "೫೫ ಕೋಟಿ ರೂಪಾಯಿ ಹಣವನ್ನು ತಡೆ ಹಿಡಿಯುವ ಬಗೆಗೆ ನಿಮ್ಮ ಅಭಿಪ್ರಾಯವೇನು?" ಎಂದು ವಿಚಾರಿಸಿದ್ದರು. ಮೌಂಟ್‌ಬ್ಯಾಟನ್, "ಹಣವನ್ನು ತಡೆಹಿಡಿಯುವುದು ಮುತ್ಸದ್ದಿತನವಲ್ಲ ಮತ್ತು ಬುದ್ಧಿವಂತಿಕೆಯಲ್ಲ ಮತ್ತು ಭಾರತದ ಮೊದಲನೆಯ ಅವಮರ್ಯಾದೆಯ ಕಾರ್ಯ" ಎಂದಿದ್ದರು.[೩೩೨]

ಸರ್ದಾರರು ನೇರವಾಗಿ ಮೌಂಟ್‌ಬ್ಯಾಟನ್ ಬಳಿಗೆ ಹೋದರು ಮತ್ತು ಅವರನ್ನು ತರಾಟೆಗೆ ತೆಗೆದುಕೊಂಡರು. "ಸಾಂವಿಧಾನಿಕ ಗೌರ್ನರ್ ಜೆನೆರಲ್ ಆಗಿ ನನ್ನ ಬೆನ್ನ ಹಿಂದೆ ನೀವು ಹೀಗೇಕೆ ಮಾಡಿದಿರಿ? ನಿಮಗೆ ಸತ್ಯಾಂಶಗಳು ಗೊತ್ತೆ? ಈಗ ಜನ ಉಪವಾಸವನ್ನು ೫೫ ಕೋಟಿ ರೂಪಾಯಿಯೊಡನೆ ಸಂಬಂಧ ಕಲ್ಪಿಸುತ್ತಾರೆ. ಆಸ್ತಿಗಳ ಬಗೆಗೆ ಒಪ್ಪಂದ ಆದ ಎರಡು ಘಂಟೆಗಳ ಒಳಗೆ, ಅದರ ಪರಿಪಾಲನೆಯು ಕಾಶ್ಮೀರ ಸಮಸ್ಯೆಯ ಇತ್ಯರ್ಥವನ್ನು ಅವಲಂಬಿಸಿದೆ ಎನ್ನುವ

ಸ್ಪಷ್ಟವಾದ ಎಚ್ಚರಿಕೆಯನ್ನು ಭಾರತವು ನೀಡಿರುವುದನ್ನು ನಿಮಗೆ ನೆನಪಿಸುತ್ತೇನೆ," ಎಂದರು. ಮೌಂಟ್‌ಬ್ಯಾಟನ್‌ರವರು, "ಅವಮರ್ಯಾದೆಯ ಕಾರ್ಯ ಎನ್ನುವ ಪದವನ್ನು ಹಿಂತೆಗೆದುಕೊಳ್ಳುತ್ತೇನೆ, ಆದರೆ ಇತರ ಗುಣವಾಚಕಗಳನ್ನಲ್ಲ," ಎಂದು ಉತ್ತರಿಸಿದರು. ಮತ್ತು ಗಾಂಧೀಜಿಗೆ ತಮ್ಮ ಬದಲಾದ ಅಭಿಪ್ರಾಯವನ್ನು ಕಳುಹಿಸಿದರು. ಪಟೇಲರು ಮತ್ತೆ ನೇರವಾಗಿ ಗಾಂಧೀಜಿಯ ಬಳಿ ಬಂದರು ಮತ್ತು "೫೫ ಕೋಟಿ ರೂಪಾಯಿಯ ಬಗೆಗೆ ನೆಹರು ಜೊತೆ ಮಾತನಾಡಿದ್ದೀರ?" ಎಂದು ವಿಚಾರಿಸಿದರು. "ಅದು ಸಚಿವ ಸಂಪುಟದ ತೀರ್ಮಾನ, ನಿಮಗೆ ತಿಳಿದಿರಲಿ," ಎಂದರು. ಗಾಂಧೀಜಿ, "ಈಗ ತಾನೆ ನೆಹರು ಜೊತೆ ಮಾತನಾಡಿದೆ. ಅವರು ಹೌದು, ಅದು ಸಚಿವ ಸಂಪುಟದಲ್ಲಿ ಅಂಗೀಕಾರವಾಯಿತು ಆದರೆ ಕಾನೂನು ನಮ್ಮ ಪರವಾಗಿಲ್ಲ. ಅದು ಕಾನೂನಿನ ತಿರುಚುವಿಕೆ – ಎಂದರು" ಎಂದು ಉತ್ತರಿಸಿದರು.[೩೩೦]

೧೪ನೆ ತಾರೀಖಿನ ಬೆಳಗ್ಗೆ ಪಟೇಲ್, ನೆಹರು, ಅರ್ಥಮಂತ್ರಿ ಷಣ್ಮುಗಂ ಚೆಟ್ಟಿ ಮತ್ತು ಮತ್ತೋರ್ವ ಮಂತ್ರಿ ಜಾನ್ ಮಥಾಯ್ ಗಾಂಧೀಜಿಯೊಡನೆ ೫೫ ಕೋಟಿ ರೂಪಾಯಿ ವಿಷಯ ಚರ್ಚಿಸಿದರು. ಗಾಂಧೀಜಿಯ ಕಣ್ಣಿನಲ್ಲಿ ನೀರು ಬಂತು. ಪಟೇಲರು ಹೇಳಿರುವ ಹಾಗೆ ಅವರು (ಪಟೇಲರು), ಬಹಳ ಕಠಿಣವಾದ ಮಾತುಗಳನ್ನಾಡಿದ್ದರು. ಅಂದು ಮಧ್ಯಾಹ್ನ ಸಂಪುಟ ಸಭೆ ಸೇರಿ ೫೫ ಕೋಟಿ ಹಣ ಬಿಡುಗಡೆ ಮಾಡಲು ತೀರ್ಮಾನಿಸಿತು. ಆ ಸಭೆಯಲ್ಲಿ ಪಟೇಲರು ಅತ್ತುಬಿಟ್ಟರು. ಅವರ ಮನಸ್ಸಿಗೆ ಬಹಳ ನೋವಾಗಿತ್ತು. ಅವರೆಂದರು, "ನಾವು ಸರ್ವಾನುಮತದಿಂದ ಒಪ್ಪಿದ್ದೆವು. ಆದರೆ ಈಗ ಪ್ರಧಾನಮಂತ್ರಿಯವರು ಅದನ್ನು ಕಾನೂನಿನ ತಿರಿಚುವಿಕೆ ಎನ್ನುತ್ತಾರೆ. ಇದು ನನ್ನ ಕೊನೆಯ ಸಭೆ," ಎಂದರು. ಆದಾಗ್ಯೂ ಹಣದ ಬಿಡುಗಡೆಗೆ ಒಪ್ಪಿದರು. ಮಾರನೆಯ ಬೆಳಗ್ಗೆ ಅವರು ಭಾವನಗರ ಮತ್ತು ರಾಜ್‌ಕೋಟ್‌ಗೆ ಹೊರಟಿದ್ದರು. ಅಲ್ಲಿ ಅವರು ಸಂಯುಕ್ತ ಕಾಥ್ಯೆವಾಡ ರಚಿಸಲಿದ್ದರು. ಅದು ಗಾಂಧೀಜಿಗೆ ಅವರ ಉಡುಗೊರೆಯಾಗಿತ್ತು. ಕಾಥ್ಯೆವಾಡಕ್ಕೆ ಹೊರಡುವ ಮುನ್ನ ಅವರು ಗಾಂಧೀಜಿಗೆ ಪತ್ರ ಬರೆದು ತಮ್ಮ ನೋವನ್ನು ತೋಡಿಕೊಂಡರು:

> ನಾನು ಈ ದಿನ ಕಾಥ್ಯೆವಾಡಕ್ಕೆ ಹೊರಡಬೇಕು. ಹೋಗುವುದು ಸಹಿಸಲಾಗದಷ್ಟು ಸಂಕಟದ ಸಂಗತಿ..... ನಿನ್ನೆಯ ದಿನದ ನಿಮ್ಮ ಯಾತನೆಯ ನೋಟ ನನ್ನನ್ನು ದುಃಖಿಯನ್ನಾಗಿ ಮಾಡಿದೆ. ಅದು, ನಾನು ತೀವ್ರವಾಗಿ ಆಲೋಚಿಸುವಂತೆ ಮಾಡಿದೆ. ಕೆಲಸದ ಒತ್ತಡ ಎಷ್ಟು ಭಾರವಾಗಿದೆಯೆಂದರೆ ನಾನು ಅದರ

ಅಡಿಯಲ್ಲಿ ಜಜ್ಜಿ ಹೋಗುತ್ತೇನೊ ಅನ್ನಿಸುತ್ತಿದೆ.

ಜವಹರಲಾಲ್‌ದು ನನಗಿಂತಲೂ ಹೆಚ್ಚಿನ ಭಾರ. ದುಃಖ ದಿಂದ ಅವರ ಹೃದಯ ಭಾರವಾಗಿದೆ. ವಯಸ್ಸಿನಿಂದ ನಾನು ಕ್ಷೀಣಿಸಿರಬಹುದು. ಒಬ್ಬ ಸಹಚರನಂತೆ ಅವರ ಬೆಂಬಲಕ್ಕೆ ನಿಲ್ಲಲು ಮತ್ತು ಅವರ ಭಾರವನ್ನು ಹಗುರಮಾಡಲು ಇನ್ನು ಮುಂದೆ ನಾನು ಅಪ್ರಯೋಜಕ. ಮೌಲಾನಾಗು ನಾನು ಮಾಡುತ್ತಿರುವ ಕೆಲಸದಿಂದ ಅಸಮಾಧಾನವಾಗಿದೆ. ನೀವು ಮತ್ತೆ ಮತ್ತೆ ನನ್ನ ಪರವಾಗಿ ಬಡಿಗೆಯನ್ನು ಹಿಡಿಯಬೇಕಾಗಿದೆ. ಇದೂ ಸಹ ನನಗೆ ದುಃಖ ಉಂಟುಮಾಡಿದೆ.

ಈಗ ನಾನು ಅಧಿಕಾರವನ್ನು ತ್ಯಜಿಸಲು ನೀವು ಅನುಮತಿ ನೀಡಿದರೆ ಬಹುಶಃ ನನಗೆ ಹಾಗೂ ದೇಶಕ್ಕೆ ಒಳ್ಳೆಯದು. ನಾನು ನನ್ನ ರೀತಿಯಲ್ಲಿ ಮಾತ್ರ ಕೆಲಸ ಮಾಡಬಲ್ಲೆ. ಆ ಮೂಲಕ ನಾನು ನನ್ನ ಆಜೀವ ಪರ್ಯಂತದ ಸಹಚರರಿಗೆ ಭಾರವಾದರೂ ಮತ್ತು ನಿಮಗೆ ಸಂಕಟದ ಮೂಲವಾದರೂ, ಅಧಿಕಾರಕ್ಕೆ ಅಂಟಿ ಕೊಂಡರೆ ನಾನು ಅಧಿಕಾರ ದಾಹದಿಂದ ಕುರುಡ ನಾದಂತಾಗುತ್ತದೆ.....

ನೀವು ಉಪವಾಸವನ್ನು ನಿಲ್ಲಿಸಬೇಕೆಂದೂ ಮತ್ತು ಈ ಪ್ರಶ್ನೆಯನ್ನು ಜಾಗ್ರತೆಯಿಂದ ಇತ್ಯರ್ಥಗೊಳಿಸಬೇಕೆಂದೂ ನಿಮ್ಮನ್ನು ಕಳಕಳಿಯಿಂದ ಕೋರುತ್ತೇನೆ. ನೀವು ಉಪವಾಸ ಮಾಡುವಂತೆ ಪ್ರೇರೇಪಿಸಿದ ಕಾರಣವನ್ನು ಹೋಗಲಾಡಿಸಲು ಅದು ಸಹಾಯ ಮಾಡಬಹುದು.[೩೩೪]

ಮೌಂಟ್‌ಬ್ಯಾಟನ್‌ರವರು ಬೆನ್ನ ಹಿಂದೆ ಮಾಡಿದ ದೋಷಾರೋಪಣೆ ಮತ್ತು ಜವಹರರು ತೋರಿದ ಅಪ್ರಮಾಣಿಕ ನಡವಳಿಕೆಯಿಂದ ಪಟೇಲರ ಮನಸ್ಸಿಗೆ ಬಹಳ ನೋವಾಗಿತ್ತು. ೫೫ ಕೋಟಿ ಹಣದ ಬಗೆಗಿನ ಗಾಂಧೀಜಿಯ ಅಭಿಪ್ರಾಯ ಅವರಿಗೆ ಬೇಸರ ತಂದಿತ್ತು. ಗಾಂಧೀಜಿಯವರ ಉಪವಾಸದ ಸಮಯವು ಸಂಪೂರ್ಣ ತಪ್ಪು ಎಂದು ಅವರು ಭಾವಿಸಿದ್ದರು. ಆದರೂ ಅದನ್ನೆಲ್ಲ ಬದಿಗಿಟ್ಟು ಗಾಂಧೀಜಿಯ ಸಂಕಟ ಮತ್ತು ಕಾಥೈವಾಡದ ಬಗೆಗೆ ತಮ್ಮ ಕರ್ತವ್ಯವನ್ನು ಮಾತ್ರ ನೆನೆದರು. ಕಾಥೈವಾಡಕ್ಕೆ ಹೊರಡುವ ಮುನ್ನ ಒಂದು ಪತ್ರಿಕಾ ಹೇಳಿಕೆಯನ್ನು ನೀಡಿದರು:

ಗಾಂಧೀಜಿಯವರನ್ನು ಅವರ ಮಾನಸಿಕ ಮತ್ತು ದೈಹಿಕ ಸಂಕಟದಿಂದ ಬಿಡುಗಡೆ ಮಾಡುವ ಏಕಮಾತ್ರ ಸಂಗತಿ ಏನೆಂದರೆ ಶಾಂತಿಯ ವಾತಾವರಣವನ್ನು ಸೃಷ್ಟಿಸುವುದು ಮತ್ತು ಅಪನಂಬಿಕೆ ಹಾಗೂ ಕಹಿ ಭಾವನೆಗಳನ್ನು ಹೋಗಲಾಡಿಸುವುದು.

ಪಟೇಲರ ಬಗೆಗೆ ವಿರೋಧ ಭಾವನೆಯನ್ನು ಹೊಂದಿದ್ದ ಮೌಲಾನಾ ಆಜ಼ಾದರು ಗಾಂಧೀಜಿಯವರ ಉಪವಾಸವು ಸರ್ದಾರರ ವಿರುದ್ಧ ಎಂದು ಭಾವಿಸಿದ್ದರು. ಒಬ್ಬ ಪತ್ರಿಕಾ ವರದಿಗಾರ, "ಉಪವಾಸದ ಉದ್ದೇಶ ಸರ್ದಾರರ ಮನೋಭಾವದಲ್ಲಿ ಬದಲಾವಣೆಯನ್ನು ತರಬೇಕೆನ್ನುವುದೆ? ಹಾಗಾದರೆ ಅದು ಗೃಹ ಸಚಿವಾಲಯದ ಖಂಡನೆಯೆ?" ಎಂದು ಗಾಂಧೀಜಿಯನ್ನು ಪ್ರಶ್ನಿಸಿದನು. ಗಾಂಧೀಜಿಯು, "ಜವಹರಲಾಲ್ ನೆಹರು ಮತ್ತು ನನ್ನಿಂದ ಸರ್ದಾರರನ್ನು ಬೇರ್ಪಡಿಸುವುದು ತಪ್ಪು ಎನ್ನುವುದನ್ನು ಟೀಕಾಕಾರರಿಗೆ ಮನದಟ್ಟು ಮಾಡಿದ್ದೇನೆ..... ಜೀವಮಾನದ ಉದ್ದಕ್ಕೂ ಇದ್ದ ಮತ್ತು ವಿಧೇಯನಾದ ಸಹಚರನನ್ನು ಅನ್ಯಾಯದ ದೂಷಣೆಯಿಂದ ವಿಮುಕ್ತಗೊಳಿಸುವುದಕ್ಕಾಗಿ ಉದ್ದೇಶಪೂರ್ವಕವಾಗಿಯೇ ನಾನು ಹೇಳಿಕೆಯನ್ನು ನೀಡಿದ್ದೇನೆ..... ಸರ್ದಾರನು ಎಂದೂ ನಂಬಿಕೆಗೆ ದ್ರೋಹ ಬಗೆಯುವುದಿಲ್ಲ ಅಥವಾ ಅಪಮಾನಗೊಳಿಸುವುದಿಲ್ಲ ಎನ್ನುವುದು ನನಗೆ ಗೊತ್ತು..... ಈ ಹೇಳಿಕೆಯ ನಂತರವೂ, ಈ ಉಪವಾಸವು ಗೃಹ ಸಚಿವಾಲಯದ ದೂಷಣೆಗಾಗಿ ಎಂದು ಹೇಳುವ ಧೈರ್ಯವನ್ನು ಯಾರೂ ಮಾಡಲಾರರು..... ನಾನು ಸರಳ ಮಾತುಗಳಲ್ಲಿ ಹೇಳಿರುವ ಹಾಗೆ ನನ್ನ ಉಪವಾಸವು ಅನುಮಾನವಿಲ್ಲದೆ ಭಾರತ ಒಕ್ಕೂಟದಲ್ಲಿರುವ ಮುಸ್ಲಿಂ ಅಲ್ಪ ಸಂಖ್ಯಾತರ ಪರವಾಗಿ. ಅದರಿಂದ ಇದು ಭಾರತ ಒಕ್ಕೂಟದ ಹಿಂದೂಗಳ ಹಾಗೂ ಸಿಕ್ಖರ ಮತ್ತು ಪಾಕಿಸ್ತಾನದ ಮುಸ್ಲಿಮರ ವಿರುದ್ಧವಾಗಿ" ಎಂದು ಉತ್ತರಿಸಿದರು.[೩೩೫]

ಗಲಭೆಗಳಿಗೆ ಗೃಹ ಸಚಿವಾಲಯವನ್ನು ದೂಷಿಸುವಹಾಗಿರಲಿಲ್ಲ. ಅದು ಗಲಭೆ ಮಾಡಿದ ಹಿಂದೂಗಳನ್ನು ಶಿಕ್ಷಿಸದೆ ಬಿಟ್ಟಿರಲಿಲ್ಲ. ಮುಸ್ಲಿಮರ ಆಸ್ತಿಯನ್ನು ಲೂಟಿ ಮಾಡಿದ್ದಕ್ಕಾಗಿ ಅನೇಕ ಹಿಂದೂಗಳು ಪೊಲೀಸರ ಗುಂಡಿಗೆ ಆಹುತಿಯಾಗಿದ್ದರು. ಆದರೆ ಹೃದಯಗಳ ಮಿಲನ ಅವರ ಕೈಯಲ್ಲಿರಲಿಲ್ಲ. ಅದನ್ನು ಎಲ್ಲಾ ಧರ್ಮಗಳ ನಾಯಕರು ಒಟ್ಟಿಗೆ ಸೇರಿ ಸಾಧಿಸಬೇಕಾಗಿತ್ತು. ಆದರೂ ಸಹ ಕೆಲವು ಸ್ವಹಿತಾಸಕ್ತರು ಮತ್ತು ಪಟೇಲರ ವಿರೋಧಿಗಳು ಗೃಹ ಸಚಿವಾಲಯದ ಮೇಲೆ ಗೂಬೆ ಕೂರಿಸುತ್ತಿದ್ದರು. ಅದು ಪಟೇಲರಿಗೆ ಬೇಸರವನ್ನು ತಂದಿತ್ತು. ಈಗ ಪತ್ರಿಕಾ ವರದಿಗಾರನಿಗೆ ಗಾಂಧೀಜಿ ನೀಡಿದ ವಿವರಣೆ ಪಟೇಲರ ಅವರ

ಮನಸ್ಸಿಗೆ ನಿರಾಳತೆಯನ್ನು ತಂದಿತು.

ಇಡೀ ದೇಶದಲ್ಲಿ ಗಾಂಧೀಜಿಯವರ ಉಪವಾಸದ ಬಗೆಗೆ ಆತಂಕ ಉಂಟಾಗಿತ್ತು. ೭೮ನೆ ವಯಸ್ಸಿನ ಅವರ ಕೃಶ ಶರೀರ ಉಪವಾಸವನ್ನು ಸಹಿಸುವುದೆ? – ಎನ್ನುವ ಚಿಂತೆ ಎಲ್ಲರಿಗೂ ಇತ್ತು. ಅವರ ಜೀವವನ್ನು ಉಳಿಸಲು ತುರ್ತು ಕ್ರಮದ ಆವಶ್ಯಕತೆ ಇತ್ತು. ಕಾಂಗ್ರೆಸ್ ಅಧ್ಯಕ್ಷ ರಾಜೇಂದ್ರ ಪ್ರಸಾದ್‌ರವರು ತಮ್ಮ ಮನೆಯಲ್ಲಿ ವಿವಿಧ ಧರ್ಮಗಳ ನಾಯಕರ ಸಭೆಯನ್ನು ಕರೆದು, ವಿವಿಧ ಧರ್ಮೀಯರ ಶಾಂತಿಯುತ ಸಹಬಾಳ್ವೆಗೆ ತಮ್ಮೆಲ್ಲ ಪ್ರಾಣ, ಆಸ್ತಿ ಮತ್ತು ನಂಬಿಕೆಯನ್ನು ಮುಡಿಪಾಗಿಡುವ ಪ್ರತಿಜ್ಞೆ ಕೈಗೊಳ್ಳುವ ಸಂಯುಕ್ತ ಹೇಳಿಕೆಯನ್ನು ಹೊರಡಿಸುವಂತೆ ಪ್ರೇರೇಪಿಸಿದರು. ಪೊಲೀಸರ ಅಥವಾ ಸೈನಿಕರ ನೆರವಿಲ್ಲದೆ ಸ್ವಪ್ರಯತ್ನದಿಂದ ತಮ್ಮ ಗುರಿಯನ್ನು ಮುಟ್ಟಲು ತಮ್ಮ ಕೈಲಾದ ಎಲ್ಲವನ್ನು ಮಾಡುವುದಾಗಿ ಆ ನಾಯಕರು ಗಾಂಧೀಜಿಗೆ ಆಶ್ವಾಸನೆ ನೀಡಿದರು. ಆ ನಾಯಕರು ತಮ್ಮ ಪ್ರತಿಜ್ಞೆಯನ್ನು ನೆರವೇರಿಸುವರು ಎನ್ನುವ ಆಶ್ವಾಸನೆಯನ್ನು ರಾಜೇಂದ್ರ ಪ್ರಸಾದ್‌ರವರು ಗಾಂಧೀಜಿಗೆ ನೀಡಿದರು. ರಾಜೇಂದ್ರ ಪ್ರಸಾದ್ ಮತ್ತು ಆಜ಼ಾದ್ ದೆಹಲಿಯ ನಾಗರಿಕರಿಂದ ಪ್ರತಿಜ್ಞೆಗಳನ್ನು ಸಂಗ್ರಹಿಸಿದರು. ಹಿಂದೂ ಮತ್ತು ಸಿಕ್ ನಿರಾಶ್ರಿತರ ಪ್ರತಿನಿಧಿಗಳು, ಹಿಂದೂ ಮಹಾ ಸಭಾ ಮತ್ತು ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರತಿನಿಧಿಗಳು ಮುಸ್ಲಿಮೇತರರು ಆಕ್ರಮಿಸಿಕೊಂಡಿರುವ ಮಸೀದಿಗಳನ್ನು ತೆರವುಗೊಳಿಸುವುದಾಗಿ, ಮುಸ್ಲಿಮರಿಗೆ ನಿಗದಿಯಾಗಿರುವ ಸ್ಥಳಗಳನ್ನು ತಾವು ಆಕ್ರಮಿಸಿಕೊಳ್ಳುವುದಿಲ್ಲ ಎಂಬುದಾಗಿ ಆಶ್ವಾಸನೆ ನೀಡಿದರು. ದೆಹಲಿಗೆ ಹಿಂತಿರುಗಲು ಬಯಸುವ ಮುಸ್ಲಿಮರು ಹಾಗೆ ಮಾಡಬಹುದೆಂದೂ ಅವರು ಆಶ್ವಾಸನೆ ನೀಡಿದರು.

೧೭ರಂದು ಮಧ್ಯಾಹ್ನ ೧೨–೪೫ಕ್ಕೆ ಗಾಂಧೀಜಿಯವರು ಆಜ಼ಾದ್ ನೀಡಿದ ಕಿತ್ತಲೆ ಹಣ್ಣಿನ ರಸವನ್ನು ಕುಡಿದು ತಮ್ಮ ಉಪವಾಸವನ್ನು ಮುಕ್ತಾಯಗೊಳಿಸಿದರು. ಎಲ್ಲರಿಗೂ ಸಂತಸವಾಯಿತು. ನೆಹರು ಸಹ ಅಲ್ಲಿದ್ದರು. ಹಿಂದಿನ ದಿನದಿಂದ ಅವರೂ ಸಹ ಉಪವಾಸ ಮಾಡುತ್ತಿದ್ದರು. ಪಟೇಲರು ದೇವರಿಗೆ ವಂದಿಸಿ ಬಾಂಬೆಯಿಂದ ಟೆಲಿಗ್ರಾಂ ಕಳುಹಿಸಿದರು.

ಆದರೆ ಎಲ್ಲರ ಹೃದಯಗಳೂ ಪರಿವರ್ತನೆ ಆಗಲಿಲ್ಲ. ಜನವರಿ ೨೦ರಂದು ಗಾಂಧೀಜಿಯವರ ಪ್ರಾರ್ಥನಾ ಸಭೆಯಲ್ಲಿ ಒಂದು ಬಾಂಬು ಆಸ್ಫೋಟಿಸಿತು. ಅದೃಷ್ಟವಶಾತ್ ಗಾಂಧೀಜಿಗೆ ಏನೂ ಅಪಾಯವಾಗಲಿಲ್ಲ. ಆದರೆ ಆವರಣ ಗೋಡೆಯ ಸ್ವಲ್ಪ ಭಾಗ ಜಕಂ ಆಯಿತು. ಆ ಬಾಂಬ್ ಸ್ಫೋಟದ ಸಂಬಂಧವಾಗಿ ಮದನ್‌ಲಾಲ್ ಎನ್ನುವವನು ದಸ್ತಗಿರಿ ಮಾಡಲ್ಪಟ್ಟನು. ಆದರೆ ಅವನ ಸಂಗಡಿಗರು

ಸಿಕ್ಕಲಿಲ್ಲ. ಗಾಂಧೀಜಿ ಹತ್ಯೆಗೆ ದೆಹಲಿ ಮತ್ತು ಬೊಂಬಾಯಿಯಲ್ಲಿ ಒಂದು ಪಿತೂರಿ ನಡೆಯುತ್ತಿದೆ ಎಂದು ಮದನ್‌ಲಾಲ್‌ನಿಂದ ಪೊಲೀಸರಿಗೆ ತಿಳಿಯಿತು.

ಈ ನಡುವೆ ಕಾಥೈವಾಡದ ಕೆಲಸವನ್ನು ಮುಗಿಸಿ ಪಟೇಲರು ಜನವರಿ ೧೬ರಂದು ಬೊಂಬಾಯಿಗೆ ಬಂದು ಬಿರ್ಲಾ ಸದನದಲ್ಲಿ ತಂಗಿದರು. ಪ್ರತಿ ದಿನ ಬೆಳಗ್ಗೆ ಮತ್ತು ಸಾಯಂಕಾಲ ದೂರವಾಣಿ ಮೂಲಕ ಗಾಂಧೀಜಿಯವರು ಹೇಗಿದ್ದಾರೆಂದು ವಿಚಾರಿಸಿಕೊಳ್ಳುತ್ತಿದ್ದರು. ಘಂಟೆಗಳು ಮತ್ತು ದಿನಗಳು ಉರುಳಿದಂತೆ ನೆಹರು ಮತ್ತು ಗಾಂಧೀಜಿ ಬಗೆಗಿನ ಅವರ ಉದ್ವಿಗ್ನ ಭಾವನೆಗಳು ಮೆಲುವಾಗುತ್ತಾ ಹೋದುವು. 'ಕಳೆದ ೧೦ ತಿಂಗಳುಗಳಲ್ಲಿ ನೆಹರುಗೆ ೧೦ ವರ್ಷಗಳ ವಯಸ್ಸು ಆಗಿದೆ' ಎಂದರು. 'ಶಿಶಿ ಕೋಟಿ ರೂಪಾಯಿಯ ಪಾವತಿ ಗಾಂಧೀಜಿಗೆ ಒಂದಷ್ಟು ಮಾನಸಿಕ ಸಮಾಧಾನವನ್ನು ತರುವುದಾದರೆ ನಾವೇಕೆ ಆಕ್ಷೇಪಿಸಬೇಕು?' ಎಂದು ಆಲೋಚಿಸಿದರು. 'ನಮ್ಮದು ಸಮೀಪ ದೃಷ್ಟಿ, ಗಾಂಧೀಜಿಯದು ದೂರ ದೃಷ್ಟಿ' ಎಂದೂ ಸಹ ಅವರು ಆಲೋಚಿಸಿದರು.[೩೩೬]

ಜನವರಿ ೧೬ರಂದು ಬಾಂಬೆ ಮುನಿಸಿಪಲ್ ಕಾರ್ಪೊರೇಷನ್ ನೀಡಿದ ಪೌರ ಸನ್ಮಾನಕ್ಕೆ ಉತ್ತರಿಸುತ್ತಾ ಹೀಗೆ ನುಡಿದರು:

> ನಾನು ಅನೇಕ ಬಾರಿ ಸೆರೆಮನೆಗೆ ಹೋಗಿದ್ದನ್ನು ಮಾತ್ರ ಹೇಳಿದಿರಿ. ಹಾಗೆ ಮಾಡಿದ ಸಾವಿರಾರು ಮಂದಿಗಳ ಪೈಕಿ ನಾನೂ ಒಬ್ಬ..... ಸ್ಪಷ್ಟವಾಗಿ ಹೇಳುವುದಾದರೆ, ಕೇಂದ್ರದಲ್ಲಿ ನಾನು ಮಾಡುತ್ತಿರುವ ಕೆಲಸಗಳ ಫಲವಾಗಿ ನನಗೆ ಸೆರೆವಾಸ ದೊರೆತರೆ ನಾನು ಅದನ್ನು ಸ್ವಾಗತಿಸುತ್ತೇನೆ, ಏಕೆಂದರೆ ಸೆರೆವಾಸ ಬಹಳ ಸವಿ ಎನ್ನುವುದನ್ನು ನಾನು ಅನುಭವದಿಂದ ಕಂಡುಕೊಂಡಿದ್ದೇನೆ.
>
> ಸ್ವಾತಂತ್ರ್ಯವನ್ನು ಸಂಪಾದಿಸಿದರೂ ಸಹ ನಿಜವಾದ ಹಿಂದೂ – ಮುಸ್ಲಿಂ ಐಕ್ಯತೆ ಸಾಧಿಸಲು ಗಾಂಧೀಜಿಯವರು ಉಪವಾಸ ಮಾಡಬೇಕಾಯಿತೆಂದರೆ ಅದು ನಮಗೆಲ್ಲ ಶಾಶ್ವತ ಅವಮಾನ.
>
> ಮುಸ್ಲಿಮರನ್ನು ಇಂಡಿಯಾದಿಂದ ಹೊರಹಾಕಬೇಕು ಎನ್ನುವ ಕೂಗನ್ನು ನಾವು ಈಗ ತಾನೆ ಕೇಳಿದ್ದೇವೆ. ಹಾಗೆ ಹೇಳುವವರು ಕೋಪದಿಂದ ಹುಚ್ಚರಾಗಿದ್ದಾರೆ. ನಾನೊಬ್ಬ ನೇರ ಮನುಷ್ಯ. ನಾನು ಕಹಿ ಮಾತುಗಳನ್ನು ಹಿಂದೂಗಳು ಮತ್ತು ಮುಸ್ಲಿಮರು ಇಬ್ಬರಿಗೂ ಒಂದೇ ತರಹ ಆಡುತ್ತೇನೆ. ಅದೇ ಸಮಯದಲ್ಲಿ ನಾನೊಬ್ಬ

ಮುಸ್ಲಿಮರ ಸ್ನೇಹಿತ ಎನ್ನುವುದನ್ನು ನಿರ್ವಹಿಸುತ್ತೇನೆ.

> ಅವರಲ್ಲಿ ಕೆಲವರು ಗಾಂಧೀಜಿ ಬಳಿಗೆ ಹೋಗಿ ನನ್ನ ಲಕ್ನೋ ಭಾಷಣದ ವಿರುದ್ಧ ದೂರು ಸಲ್ಲಿಸಿದರು..... ಗಾಂಧೀಜಿಯವರು ನನ್ನನ್ನು ಸಮರ್ಥಿಸಿಕೊಳ್ಳಬೇಕಾಯಿತು. ಅದೂ ಸಹ ನನಗೆ ನೋವುಂಟು ಮಾಡಿತು, ಏಕೆಂದರೆ ನಾನು ಬೇರೆಯವರಿಂದ ಸಮರ್ಥಿಸಲ್ಪಡಲು ಬಯಸುವಂತಹ ನಿಶ್ಯಕ್ತನಲ್ಲ.[೩೩೭]

ಜನವರಿ ೧೭ರಂದು ಗಾಂಧೀಜಿ ಉಪವಾಸವನ್ನು ಮುಕ್ತಾಯ ಮಾಡಿದಾಗ ಪಟೇಲರು ಬೊಂಬಾಯಿಯಿಂದ ದೇವರಿಗೆ ವಂದಿಸುವ ಟೆಲಿಗ್ರಾಂ ಕಳುಹಿಸಿದ್ದರು. ಅವರು ಬೊಂಬಾಯಿಯಿಂದ ಅಹಮದಾಬಾದ್‌ಗೆ ವಿಮಾನದಲ್ಲಿ ಹೋಗಿ ಕಾಯಿಲೆಯಾಗಿದ್ದ ತಮ್ಮ ಆಪ್ತ ಸ್ನೇಹಿತ ಡಾ॥ ಕನುಗಾರವರನ್ನು ನೋಡಿಕೊಂಡು ೨೩ರಂದು ದೆಹಲಿಗೆ ಹಿಂತಿರುಗಿದರು.

ಅಷ್ಟು ಹೊತ್ತಿಗೆ ಜನವರಿ ೨೦ರಂದು ಗಾಂಧೀಜಿಯವರ ಪ್ರಾರ್ಥನಾ ಸಭೆಯಲ್ಲಿ ಒಂದು ಬಾಂಬ್ ಆಸ್ಫೋಟಿಸಲ್ಪಟ್ಟ ಘಟನೆ ನಡೆದಿತ್ತು. ಪಟೇಲರು ಬಿರ್ಲಾ ಸದನದಲ್ಲಿ ಪೊಲೀಸರ ಸಂಖ್ಯೆಯನ್ನು ಹೆಚ್ಚಿಸಿದರು. ಸಮವಸ್ತ್ರ ಧರಿಸಿದ ೧೯ ಮಂದಿ ಪೊಲೀಸರ ಜೊತೆಗೆ ಏಳು ಮಂದಿ ಸಾಮಾನ್ಯ ಉಡುಪು ಧರಿಸಿದ ಬಂದೂಕುದಾರಿ ಪೊಲೀಸರು ಬಾಪು ಪ್ರಾರ್ಥನಾ ಸಭೆಯಲ್ಲಿ ಜನರ ಮಧ್ಯೆ ಬೆರೆಯುವಂತೆ ಆಜ್ಞಾಪಿಸಿದರು ಸರ್ದಾರರು.

ಘನಶ್ಯಾಂದಾಸ್ ಬಿರ್ಲಾರವರು ತಮ್ಮ ಸದನದಲ್ಲಿ ಗಾಂಧೀಜಿಯ ವಿರೋಧವಿದ್ದರೂ ಪೊಲೀಸರು ಇರುವುದರ ಬಗೆಗೆ ವಲ್ಲಭಭಾಯ್‌ಗೆ ದೂರಿತ್ತರು. ವಲ್ಲಭಭಾಯ್ ಗುಡುಗಿದರು:

> ನಿಮಗೇಕೆ ಚಿಂತೆ? ಇದು ನಿಮ್ಮ ಕೆಲಸವಲ್ಲ. ಆ ಜವಾಬ್ದಾರಿ ನನ್ನದು. ನನಗೆ ಬಿಟ್ಟಿದ್ದರೆ ಬಿರ್ಲಾ ಸದನವನ್ನು ಪ್ರವೇಶಿಸುವ ಪ್ರತಿ ವ್ಯಕ್ತಿಯನ್ನು ತಪಾಸಣೆ ಮಾಡಿಸುತ್ತಿದ್ದೆ. ಆದರೆ ಗಾಂಧಿ ಒಪ್ಪುತ್ತಿಲ್ಲ.[೩೩೮]

ಜನವರಿ ೨೩ರ ಮಧ್ಯಾಹ್ನ ಪಟೇಲರು ಗಾಂಧೀಜಿಯನ್ನು ಭೇಟಿ ಮಾಡಿ, ಅವರ ಭೇಟಿಗೆ ಬರುವ ಅಥವಾ ಅವರ ಪ್ರಾರ್ಥನಾ ಸಭೆಗೆ ಬರುವ ಪ್ರತಿಯೊಬ್ಬರನ್ನು ತಪಾಸಣೆ ಮಾಡಲು ಅನುಮತಿ ಕೋರಿದರು. ಆದರೆ ಬಾಪು ನಿರಾಕರಿಸಿದರು. ಅದೇ ಸಮಯದಲ್ಲಿ ಗಾಂಧೀಜಿಯವರು ನೆಹರು ಮತ್ತು ಪಟೇಲ್ ಪೈಕಿ ಒಬ್ಬರು

ಸರ್ಕಾರದಿಂದ ಹೊರ ಬರಬೇಕು ಎನ್ನುವ ತಮ್ಮ ಅಭಿಪ್ರಾಯವನ್ನು ಬದಲಾಯಿಸಿರುವುದಾಗಿ ಸರ್ದಾರರಿಗೆ ತಿಳಿಸಿದರು. ಆದರೆ ಸರ್ದಾರರು ತಾವು ಗಾಂಧೀಜಿಯೊಡನೆ ಮಾತನಾಡಬೇಕಾದ ವಿಷಯ ಬಹಳವಿದೆ ಎಂದರು. ಅವರು ೨೫ರಂದು ಆಗ್ರ ಮತ್ತು ಪಾಟ್ನಾಕ್ಕೆ ಹೊರಟು ೨೭ರಂದು ಹಿಂತಿರುಗುತ್ತಿದ್ದರು. ೩೦ನೆ ತಾರೀಖು ಸಂಜೆ ಗಾಂಧೀಜಿಯ ಪ್ರಾರ್ಥನಾ ಸಭೆಗೆ ಒಂದು ಘಂಟೆ ಮುನ್ನ ಸರ್ದಾರರು ಗಾಂಧಿಯನ್ನು ಭೇಟಿಯಾಗಬೇಕೆಂದು ತೀರ್ಮಾನವಾಯಿತು.[೩೩೯]

೧೫.೫ ಆ ದುರದೃಷ್ಟ ಶುಕ್ರವಾರ

ಜನವರಿ ೩೦ರಂದು ಸುಕ್ರವಾರ ಸಂಜೆ ೪ ಘಂಟೆಗೆ ಸರ್ದಾರರು ಬಿರ್ಲಾ ಸದನಕ್ಕೆ ಮಗಳೊಡನೆ ಹೋದರು. ಅವರು ಮತ್ತು ಗಾಂಧೀಜಿ ಮನಃಪೂರ್ವಕ ಚರ್ಚೆ ನಡೆಸಿದರು. ಮಣಿಬೆನ್ ಸ್ವಲ್ಪ ದೂರದಲ್ಲಿ ಕುಳಿತು ಅವರ ಮಾತುಗಳನ್ನು ಆಲಿಸಿದರು. ಸರ್ದಾರರು ತಮ್ಮ ಮನದಾಳದ ಸಂಕಟಗಳನ್ನೆಲ್ಲಾ ವಿವರವಾಗಿ ಗಾಂಧೀಜಿಗೆ ಅರುಹಿದರು ಮತ್ತು ಮಂತ್ರಿ ಪದವಿಯಿಂದ ಹೊರ ಹೋಗಲು ಮತ್ತೆ ಅನುಮತಿ ಕೋರಿದರು. ಅವರು, 'ಮೌಲಾನಾ ಆಜ಼ಾದ್ ಸೇರಿ ಅನೇಕ ಆಸಕ್ತರು ತಮ್ಮ ಮತ್ತು ನೆಹರು ನಡುವಣ ಭಿನ್ನಾಭಿಪ್ರಾಯಗಳ ಕಂದಕವನ್ನು ದೊಡ್ಡದು ಮಾಡಿ ಲಾಭ ಪಡೆಯಲು ಆಟವಾಡುತ್ತಿದ್ದಾರೆ. ಮಂತ್ರಿಮಂಡಲದ ಮೇಲೂ ತಮ್ಮ ಪ್ರಭಾವವನ್ನು ತಗ್ಗಿಸಿ ನೆಹರುವನ್ನು ತಮಗೆ ಬೇಕಾದ ಹಾಗೆ ಉಪಯೋಗಿಸಿಕೊಳ್ಳಲು ಯತ್ನಿಸುತ್ತಿದ್ದಾರೆ ಎಂದು ವಿವರಿಸಿದರು. ಗಾಂಧೀಜಿಯವರು ಸರ್ದಾರರ ಮಾತುಗಳನ್ನು ಸಾವಧಾನವಾಗಿ ಆಲಿಸಿ, ಆ ನಂತರ ತಮ್ಮ ಹೃದಯವನ್ನು ತೆರೆದರು. ತಾವು ಈ ವಿಷಯವನ್ನು ಎಚ್ಚರಿಕೆಯಿಂದ ಪರಿಶೀಲಿಸುತ್ತಿರುವುದಾಗಿಯೂ, ಈ ಸನ್ನಿವೇಶದಲ್ಲಿ ಮಂತ್ರಿ ಮಂಡಲದಲ್ಲಿ ಸರ್ದಾರ್ ಮತ್ತು ನೆಹರು ಇಬ್ಬರ ಇರುವಿಕೆಯು ಅತ್ಯವಶ್ಯಕವೆಂದೂ, ಈ ಮಾತನ್ನು ತಾವು ನೆಹರೂಗು ಸಹ ಹೇಳಿರುವುದಾಗಿಯೂ, ಇಬ್ಬರ ನಡುವಣ ಭೇದ ದೇಶಕ್ಕೆ ಗಂಡಾಂತರವೆಂದೂ, ಆ ಮಾತನ್ನು ಅಂದು ಪ್ರಾರ್ಥನಾ ಸಭೆಯ ಭಾಷಣದಲ್ಲಿ ವ್ಯಕ್ತಪಡಿಸುವುದಾಗಿಯೂ ಗಾಂಧೀಜಿ ತಿಳಿಸಿದರು. ದೇಶದ ಹಿತದೃಷ್ಟಿಯಿಂದ ನೆಹರು ಮತ್ತು ಸರ್ದಾರ್ ಇಬ್ಬರೂ ಮಂತ್ರಿಮಂಡಲದಲ್ಲಿ ಇರುವಂತೆ ಮಾಡಬೇಕೆಂದು, ಲಾರ್ಡ್ ಮೌಂಟ್‌ಬ್ಯಾಟನ್ ತಮ್ಮನ್ನು ಒತ್ತಾಯಿಸಿದ್ದಾರೆಂದೂ, ಆಕಾಶದಲ್ಲಿ ವಿಹರಿಸುವ ಅಸಹನೆಯ ಆದರ್ಶವಾದಿಯು ಪಾದವನ್ನು ನೆಲದ ಮೇಲೆ ಭದ್ರವಾಗಿ ಊರಿ ನಡೆಯುವವನೊಡನೆ ಜೊತೆ ಜೊತೆಯಾಗಿ ಕೈ ಹಿಡಿದು ಕೆಲಸ ಮಾಡಬೇಕೆನ್ನುವುದು ಮೌಂಟ್‌ಬ್ಯಾಟನ್‌ರವರ ಅಭಿಪ್ರಾಯವೆಂದೂ,

ಗಾಂಧೀಜಿ ತಿಳಿಸಿದರು. ಹಿಂದೆ ತಾವು, ನೆಹರು ಅಥವಾ ಪಟೇಲ್ ಮಂತ್ರಿ ಮಂಡಲದಿಂದ ಹೊರಬರಬೇಕೆಂದು ಹೇಳಿದ್ದುದಾಗಿ, ಆ ನಂತರ ಇಬ್ಬರ ಇರುವಿಕೆಯೂ ಅನಿವಾರ್ಯ ಎನ್ನುವ ದೃಢವಾದ ತೀರ್ಮಾನಕ್ಕೆ ಬಂದಿರುವುದಾಗಿ ಅವರು ತಿಳಿಸಿ, ಅವರಿಬ್ಬರ ಸ್ಥಾನದಲ್ಲಿ ಯಾವುದೇ ವ್ಯತ್ಯಾಸ ದೇಶಕ್ಕೆ ಅನಾಹುತಕಾರಿ ಎಂದರು ಗಾಂಧೀಜಿ. ಸರ್ದಾರರು ಮಂತ್ರಿ ಮಂಡಲದಲ್ಲಿರಲು ಒಪ್ಪಿದರು ಮತ್ತು 'ನೆಹರುಗೆ ಹಿಂದೆ ಬೆಂಬಲ ನೀಡಿದ್ದೇನೆ. ಮುಂದೆಯೂ ನೀಡುತ್ತೇನೆ' ಎಂದು ಗಾಂಧೀಜಿಗೆ ಆಶ್ವಾಸನೆ ನೀಡಿದರು. ಇಬ್ಬರಿಗೂ ಮನಸ್ಸು ನಿರಾಳವಾಯಿತು. ನಂತರ ಇಬ್ಬರೂ ಹೊರಟರು. ಗಾಂಧೀಜಿ ತಮ್ಮ ಪ್ರಾರ್ಥನಾ ಸಭೆಗೆ, ಸರ್ದಾರರು ಔರಂಗಜೇಬ್ ರಸ್ತೆಯ ತಮ್ಮ ನಿವಾಸಕ್ಕೆ. ಆಗ ಸಂಜೆ ೫ ಘಂಟೆ ೧೦ ನಿಮಿಷ.[೩೪೦]

ಮೂರು ನಿಮಿಷಗಳಲ್ಲಿ ಪಟೇಲ್ ಮತ್ತು ಅವರ ಮಗಳು ಔರಂಗಜೇಬ್ ರಸ್ತೆಯ ಒಂದನೇ ಸಂಖ್ಯೆಯ ತಮ್ಮ ನಿವಾಸವನ್ನು ತಲುಪಿದರು. ಬಾಗಿಲಲ್ಲಿ ಒಬ್ಬ ಮಹಿಳೆ ಮತ್ತು ಒಬ್ಬ ಅಂಧ ಅವರಿಗಾಗಿ ಕಾಯುತ್ತಿದ್ದರು. ಅವರ ಅಹವಾಲನ್ನು ವಿಚಾರಿಸಲು ಮಣಿಬೆನ್ ಅಲ್ಲೆ ನಿಂತರು. ಸರ್ದಾರರು ಒಳಗೆ ಹೋಗಿ ಕುರ್ಚಿಯ ಮೇಲೆ ಕುಳಿತು ಸಮಾಚಾರ ಪತ್ರಿಕೆಯನ್ನು ಕೈಗೆತ್ತಿಕೊಂಡರು. ಅಷ್ಟರಲ್ಲಿ ಒಂದು ಕಾರು ವೇಗವಾಗಿ ಬಂದು ಬ್ರೇಕ್ ಹಾಕಿದ ರಭಸಕ್ಕೆ ಕಾರು ಕ್ರೀಚ್ ಎಂದು ಶಬ್ದ ಮಾಡಿತು. ಅದು ಗಾಂಧೀಜಿಯ ಒಬ್ಬ ಸಹಚರ ಬ್ರಿಜ್ ಕೃಷ್ಣ. ಅವರು ಜೋರಾಗಿ, "ಸರ್ದಾರ್ ಎಲ್ಲಿ? ಬಾಪುಗೆ ಗುಂಡೇಟು ಬಿದ್ದಿದೆ, ಬಾಪು ಸತ್ತಿದ್ದಾರೆ," ಎಂದು ಕಿರುಚಿದರು. ಮಣಿಬೆನ್ ಮನೆಯ ಒಳಕ್ಕೆ ಓಡಿ ಹೋಗಿ ತಂದೆಗೆ, "ನಾವು ಬಿರ್ಲಾ ಸದನಕ್ಕೆ ಹೋಗಬೇಕು. ಬ್ರಿಜ್ ಕೃಷ್ಣ ಬಂದಿದ್ದಾರೆ. ಬಾಪು ಗುಂಡಿಟ್ಟು ಕೊಲ್ಲಲ್ಪಟ್ಟಿದ್ದಾರೆ ಎಂದು ಹೇಳುತ್ತಿದ್ದಾರೆ," ಎಂದರು. ತಕ್ಷಣ ಪಟೇಲ್ ಮತ್ತು ಮಣಿಬೆನ್ ಕೃಷ್ಣರವರ ಕಾರಿನಲ್ಲೇ ಬಿರ್ಲಾ ಸದನಕ್ಕೆ ದೌಡಾಯಿಸಿದರು.

ಮಹಾತ್ಮನನ್ನು ನೆಲದ ಮೇಲೆ ಒಂದು ಕಾರ್ಪೆಟ್ ಮೇಲೆ ಮಲಗಿಸಿದ್ದರು. ಗೀತಾ ಪಠಣ ನಡೆಯುತ್ತಿತ್ತು. ಬಾಪುವಿನ ಮುಖ ಶಾಂತವಾಗಿದೆ ಅನ್ನಿಸಿತು ಪಟೇಲರಿಗೆ. ಬಾಪುವಿನ ಮುಂಗೈ ಹಿಡಿದು ನಾಡಿ ನೋಡಲು ಹೊರಟರು. ಅಲ್ಲಿದ್ದ ಒಬ್ಬ ವೈದ್ಯರು, 'ಅದು ಭ್ರಮೆ' ಎಂದರು. ಪಟೇಲ್ ಬಾಪುವಿನ ಪಾದದ ಬಳಿ ಕುಳಿತರು. ಅವರ ಹಿಂದೆ ಮಣಿಬೆನ್ ನಿಂತರು. ಕೆಲವು ನಿಮಿಷಗಳಲ್ಲಿ ನೆಹರು ಬಂದರು. ಬಾಪುವಿನ ತಲೆಯ ಪಕ್ಕ ತಮ್ಮ ತಲೆಯನ್ನು ಇಟ್ಟರು. ಮಕ್ಕಳಂತೆ ಗಳಗಳನೆ ಅತ್ತರು. ಅನಂತರ ತಮ್ಮ ತಲೆಯನ್ನು ಸರ್ದಾರರ ತೊಡೆಯ ಮೇಲೆ ಇಟ್ಟರು. ದೇವದಾಸ್ ಗಾಂಧಿ ಬಂದರು. ತಮ್ಮ ತಂದೆಯ ಕಿವಿಯಲ್ಲಿ, "ಮಾತಾಡಿ, ಬಾಪೂಜಿ, ಮಾತಾಡಿ," ಎಂದು ಗೋಗರೆದರು. ಮೌಂಟ್‌ಬ್ಯಾಟನ್, ಸೈನ್ಯದ

ದಂಡನಾಯಕ ಜೆನೆರಲ್ ರಾಯ್ ಬುಚರ್ ಮತ್ತು ಮಂತ್ರಿಮಂಡಲದ ಸದಸ್ಯರು ಬಂದರು. ದೆಹಲಿಯ ಜನರೆಲ್ಲ ಕೊಠಡಿ ಮತ್ತು ಆವರಣದಲ್ಲಿ ತುಂಬಿ ಹೋದರು. ಪಟೇಲರು ಧೈರ್ಯವಹಿಸಿ ಎದ್ದರು. ಎಲ್ಲರಿಗೂ ಸಾಂತ್ವಾನ ಹೇಳಿದರು. ಬುಚರ್ ಮತ್ತು ಪೊಲೀಸ್ ಮುಖ್ಯಸ್ಥನಿಗೆ ಇಡೀ ಭಾರತದಲ್ಲಿ ಬಿಗಿ ಭದ್ರತಾ ಕ್ರಮಗಳನ್ನು ತೆಗೆದುಕೊಳ್ಳುವಂತೆ ಮತ್ತೆ ಕೊಲೆಪಾತಕ ಒಬ್ಬ ಹಿಂದೂ ಎಂದು ಹೇಳಲು ಹಿಂಜರಿಯದಂತೆ ಸೂಚಿಸಿದರು. ಮೌಂಟ್‌ಬ್ಯಾಟನ್‌ರವರು 'ಗಾಂಧೀಜಿಯವರು ತಮ್ಮ ಅತ್ಯಂತ ಪ್ರಿಯವಾದ ಬಯಕೆ ನೆಹರು ಮತ್ತು ಪಟೇಲ್ ನಡುವೆ ಸಂಪೂರ್ಣ ಹೊಂದಾಣಿಕೆಯನ್ನು ತರುವುದು ಎಂದು ನನಗೆ ಹೇಳಿದ್ದರು," ಎಂದರು. ಆ ಮಾತನ್ನು ಕೇಳಿ ಪಟೇಲ್ ಮತ್ತು ನೆಹರು ಪರಸ್ಪರ ಆಲಂಗಿಸಿಕೊಂಡರು.

ಅಂದು ರಾತ್ರಿ ನೆಹರು ಮತ್ತು ಪಟೇಲ್ ರಾಷ್ಟ್ರವನ್ನು ಉದ್ದೇಶಿಸಿ ಮಾತನಾಡಿದರು. ನೆಹರು ಹಿಂದಿ ಮತ್ತು ಇಂಗ್ಲಿಷ್‌ನಲ್ಲಿ ಮಾತನಾಡಿದರು. ಪಟೇಲರು ಹಿಂದಿಯಲ್ಲಿ ಮಾತ್ರ ಮಾತನಾಡಿದರು. ಅವರೆಂದರು:

> ಈಗ ತಾನೆ ನನ್ನ ಪ್ರಿಯ ಸಹೋದರ ಪಂಡಿತ್ ಜವಹರ ಲಾಲ್ ನೆಹರು ನಿಮ್ಮನ್ನು ಕುರಿತು ಮಾತನಾಡಿದ್ದಾನೆ. ನನ್ನ ಹೃದಯ ಯಾತನಾಮಯವಾಗಿದೆ. ನಾನು ನಿಮಗೆ ಏನು ಹೇಳಲಿ? ನನ್ನ ನಾಲಿಗೆ ಕಟ್ಟಿ ಹೋಗಿದೆ. ಇದು ಭಾರತಕ್ಕೆ ದುಃಖ, ಅವಮಾನ ಮತ್ತು ನೋವಿನ ದಿವಸ. ಈ ದಿನ ಸಂಜೆ ಸುಮಾರು ೪ ಘಂಟೆಗೆ ನಾನು ಗಾಂಧೀಜಿಯವರಲ್ಲಿಗೆ ಹೋಗಿದ್ದೆ ಮತ್ತು ಸುಮಾರು ಒಂದು ಘಂಟೆ ಕಾಲ ಅವರೊಡನೆ ಇದ್ದೆ.....
>
> ನಾನು ಮನೆಯನ್ನು ತಲುಪುತ್ತಿದ್ದ ಹಾಗೆ ಒಬ್ಬರು ಪ್ರಾರ್ಥನಾ ಆವರಣದಲ್ಲಿ ಗಾಂಧೀಜಿಯವರ ಮೇಲೆ ಒಬ್ಬ ಹಿಂದೂ ಯುವಕ ಮೂರು ಬಾರಿ ಗುಂಡು ಹಾರಿಸಿದ್ದಾನೆ ಎನ್ನುವ ಭಯಂಕರ ಸುದ್ದಿಯನ್ನು ಅರುಹಿದರು. ತಕ್ಷಣ ನಾನು ಬಿರ್ಲಾ ಸದನಕ್ಕೆ ವಾಪಸ್ಸು ಬಂದೆ ಮತ್ತು ಗಾಂಧೀಜಿ ಬಳಿ ಹೋದೆ. ಅವರ ಕಣ್ಣುಗಳು ಮುಚ್ಚಿದ್ದುವು ಆದರೆ ಅವರ ಮುಖ ಹಿಂದಿನಂತೆಯೆ ಪ್ರಶಾಂತ ಮತ್ತು ಪ್ರಸನ್ನವಾಗಿತ್ತು. ಅವರ ಕ್ಷೀಣಿಸುತ್ತಿದ್ದ ಮುಖದಲ್ಲಿ ನಾನು ಅನುಕಂಪ ಮತ್ತು ಕ್ಷಮೆಯ ಒಂದು ರೇಖೆಯನ್ನು ಸಹ ಕಂಡೆ.....

ಸ್ನೇಹಿತರೇ, ನಾವು ಈ ಸನ್ನಿವೇಶದಲ್ಲಿ ಪ್ರದರ್ಶಿಸಬೇಕಾದುದು ಕೋಪವನ್ನಲ್ಲ, ಆದರೆ ನಮ್ಮ ಹೃದಯಗಳನ್ನು ಕಳಕಳಿಯಿಂದ ಶೋಧನೆ ಮಾಡಬೇಕು. ನಾವು ನಮ್ಮ ಅರ್ಥಗರ್ಭಿತ ಕೋಪದ ಪ್ರದರ್ಶನ ಮಾಡಿದರೆ, ನಮ್ಮ ಪ್ರೀತಿಯ ನಾಯಕನ ಬೋಧನೆಗಳನ್ನು ಅವನು ಗತಿಸಿದ ಅಲ್ಪ ಕಾಲದಲ್ಲೇ ಮರೆತಂತಾಗುತ್ತದೆ. ಅಷ್ಟೇ ಅಲ್ಲ, ಅವನ ಜೀವಿತ ಕಾಲದಲ್ಲೂ ನಾವು ನಮ್ಮ ನಾಯಕನನ್ನು ಬಿಟ್ಟು ಬಿಟ್ಟು ಹಿಂಬಾಲಿಸಿದ್ದೇವೆ ಎಂದು ಹೇಳಲು ಬಯಸುತ್ತೇನೆ.

ಇತ್ತೀಚಿನ ದಿವಸಗಳಲ್ಲಿ ಭಾರತವು ಹೊರಬೇಕಾಗಿ ಬಂದ ಭಾರ ಅಗಾಧವಾದದ್ದು. ಆ ಶ್ರೇಷ್ಠ ಪುರುಷನ ಬೆಂಬಲ ಇಲ್ಲದೇ ಹೋಗಿದ್ದರೆ ಅದು ನಮ್ಮ ಬೆನ್ನನ್ನು ಮುರಿದುಬಿಡುತ್ತಿತ್ತು. ಆ ಬೆಂಬಲ ಈಗ ಹೊರಟು ಹೋಗಿದೆ, ಆದರೆ ಗಾಂಧೀಜಿ ನಮ್ಮ ಹೃದಯದಲ್ಲಿ ಸದಾ ಇರುತ್ತಾರೆ..... ನಾಳೆಯ ದಿನ ಸಂಜೆ ೪ ಘಂಟೆಗೆ ಅವರ ಶರೀರವು ಬೂದಿಯಾಗಿ ಪರಿವರ್ತಿತವಾಗುತ್ತದೆ, ಆದರೆ ಅವರ ಅಳಿವಿಲ್ಲದ ಬೋಧನೆಗಳು ನಮ್ಮೊಡನೆ ಇರುತ್ತವೆ.

ಅವರನ್ನು ಕೊಂದ ಹುಚ್ಚ ಯುವಕನು ಆ ಮೂಲಕ ಅವರ ಉದಾತ್ತ ಜೀವನ ಧ್ಯೇಯವನ್ನು ನಾಶಪಡಿಸುತ್ತೇನೆಂದು ತಿಳಿದಿದ್ದರೆ ಅದು ತಪ್ಪು. ಬಹುಶಃ ಗಾಂಧೀಜಿಯವರ ಜೀವನೋದ್ದೇಶವು ಅವರ ಸಾವಿನ ಮೂಲಕ ಪೂರ್ಣಗೊಳ್ಳಬೇಕು ಮತ್ತು ವಿಸ್ತಾರಗೊಳ್ಳಬೇಕು ಎಂದು ಭಗವಂತ ಆಶಿಸಿದ್ದನೆಂದು ಕಾಣುತ್ತದೆ.[೩೪೧]

ಮಾರನೆಯ ದಿನ ಗಾಂಧೀಜಿಯವರ ಅಂತಿಮ ಯಾತ್ರೆ. ಅವರ ಪಾರ್ಥಿವ ಶರೀರವನ್ನು ಹೊತ್ತ ವಾಹನ ರಾಜ್‌ಘಾಟ್ ಕಡೆಗೆ ನಿಧಾನವಾಗಿ ಚಲಿಸಿತು. ಲಕ್ಷಾಂತರ ಮಂದಿ ರಸ್ತೆಗಳ ಇಕ್ಕೆಲದಲ್ಲಿ ನೆರೆದಿದ್ದರು. ಶವವನ್ನು ಹೊತ್ತ ವಾಹನದಲ್ಲಿ ಇತರ ನಾಯಕರ ಜೊತೆ ಪಟೇಲರು ಚಿಂತಾಕ್ರಾಂತ ಮುಖ ಹೊತ್ತು ಕುಳಿತಿದ್ದರು. ರಾಜ್‌ಘಾಟ್‌ನಲ್ಲಿ ಶವ ದಹನದ ಸಮಯ ಬಂದಾಗ ಮನು ಗಾಂಧಿ ಸರ್ದಾರರ ತೊಡೆಯ ಮೇಲೆ ಮುಖವನ್ನು ಹುದುಗಿಸಿ ಬಿಕ್ಕಿ ಬಿಕ್ಕಿ ಅತ್ತಳು. ಅವಳು ಮುಖವನ್ನು ಎತ್ತಿದಾಗ, ಸರ್ದಾರರು ಇದ್ದಕ್ಕಿದ್ದ ಹಾಗೆ ಬಹಳ ವಯಸ್ಸಾದವರಂತೆ ಕಂಡರು.

೧೫.೬ ಮತ್ತೆ ಒಂದಾದ ದಿಗ್ಗಜಗಳು

ಗಾಂಧೀಜಿಯವರ ಹತ್ಯೆ ಪಟೇಲರ ವಿರೋಧಿಗಳಿಗೆ ಒಂದು ಅಸ್ತ್ರ ಸಿಕ್ಕಿದಂತಾಯಿತು. ಅದನ್ನು ಅತ್ಯಂತ ಉತ್ಸಾಹದಿಂದ ಪ್ರಯೋಗಿಸಲಾರಂಭಿಸಿದರು.

ಫೆಬ್ರುವರಿ ೩ನೆ ತಾರೀಖಿನ 'ದಿ ಸ್ಟೇಟ್ಸ್‌ಮನ್' ಪತ್ರಿಕೆಯಲ್ಲಿ ಪ್ರಕಟವಾದ ಒಂದು ಪತ್ರವು, "ಮಹಾತ್ಮ ಗಾಂಧಿಯನ್ನು ರಕ್ಷಿಸಲು ಅವರ ರಕ್ಷಣಾ ವಿಭಾಗವು ವಿಫಲವಾದುದಕ್ಕೆ ಸರ್ದಾರ್ ಪಟೇಲರು ರಾಜಿನಾಮೆ ನೀಡಬೇಕು. ಪ್ರಾರ್ಥನಾ ಸಭೆಯಲ್ಲಿ ಬಾಂಬು ಎಸೆಯಲ್ಪಟ್ಟಾಗ, ಗಾಂಧೀಜಿಯ ವಿರುದ್ಧ ದ್ವೇಷ ಉದ್ಭವಿಸುತ್ತಿರುವುದರ ಬಗೆಗೆ ಅಪಾರ ಮುನ್ನೆಚ್ಚರಿಕೆ ದೊರೆತಿತ್ತು," ಎಂದಿತು. ಸಮಾಜವಾದಿಗಳು, "ಮತೀಯ ದ್ವೇಷದ ನಿಷ್ಠೆ ಮತ್ತು ಸಂಸ್ಥೆಗಳನ್ನು ನಿಗ್ರಹಿಸಲು ಶಕ್ತನಾದ ಮತ್ತು ಮನಸ್ಸು ಇರುವ ಹೊಸ ಗೃಹಮಂತ್ರಿ ಬೇಕು," ಎಂದರು. ಸಮಾಜವಾದಿ ಜಯಪ್ರಕಾಶ್ ನಾರಾಯಣ್‌ರವರು, "೩೦ ವರ್ಷದ ವ್ಯಕ್ತಿಗೂ ಸಹ ನಿರ್ವಹಿಸಲು ಕಷ್ಟಕರವಾದ ಇಲಾಖೆಗಳನ್ನು ೭೪ ವರ್ಷದ ವ್ಯಕ್ತಿಯು ಪಡೆದಿದ್ದಾನೆ" ಎಂದರು.[೩೪೨] ಇದರಿಂದ ಅವಮಾನಿತರಾದ ಪಟೇಲರು ತಮ್ಮ ಮಂತ್ರಿ ಪದವಿಗೆ ರಾಜಿನಾಮೆ ಪತ್ರವನ್ನು ಬರೆದರು. ಅವರು ಈ ಹಿಂದೆಯೇ, ಡಿಸೆಂಬರ್ ೨೩ರಂದು ಒಂದು ರಾಜಿನಾಮೆ ಪತ್ರವನ್ನು ನೆಹರುಗೆ ಕಳುಹಿಸಿರುವ ವಿಷಯವನ್ನು ನೆನಪಿಸಿದ ನಂತರ ಹೀಗೆ ಬರೆದರು:

> 'ದಿ ಸ್ಟೇಟ್ಸ್‌ಮನ್' ಪತ್ರಿಕೆಯ ವರದಿಗಾರನು ಒಂದು ಸಾಂವಿಧಾನಿಕ ನಿಲುವು ತೆಗೆದುಕೊಂಡಿದ್ದಾನೆ. ನನಗೆ ಅದು ಸರಿ ಅನ್ನಿಸುತ್ತಿದೆ. ನನ್ನ ರಾಜಿನಾಮೆಗೆ ಇದೊಂದು ಹೆಚ್ಚುವರಿ ಕಾರಣ..... ಈ ಸಂದಿಗ್ಧ ಸಮಯದಲ್ಲಿ ನಿಮಗೆ ಮುಜುಗರ ಉಂಟಾಗುವಂತಹ ಯಾವ ಕೆಲಸವನ್ನು ಮಾಡಲು ನಾನು ಬಯಸುವುದಿಲ್ಲ, ಆದರೆ ನ್ಯಾಯವಾದ ಸಾರ್ವಜನಿಕ ಆಗ್ರಹ ಎದ್ದಾಗ, ನನಗೆ ಸಹಾಯ ಮಾಡಿ ಎಂದು ನಿಮ್ಮನ್ನು ಮತ್ತೆ ವಿನಂತಿಸಬೇಕು ಅನ್ನಿಸುತ್ತಿದೆ.

ಮಣಿಬೆನ್‌ರವರು ಆ ಪತ್ರವನ್ನು ನೆಹರುಗೆ ರವಾನಿಸಲು ಕಾರ್ಯದರ್ಶಿ ವಿ. ಶಂಕರ್‌ರವರಿಗೆ ಕೊಟ್ಟರು. ಆದರೆ ಶಂಕರ್‌ರವರು ಆ ರಾಜಿನಾಮೆ ಪತ್ರವನ್ನು ಕಳುಹಿಸಲಿಲ್ಲ. ಅದನ್ನು ತಡೆ ಹಿಡಿಯುವಂತೆ ಸರ್ದಾರರನ್ನು ಒತ್ತಾಯಿಸಿದರು. ಅವರು, ವಿಧಿಯ ಆಟಕ್ಕೆ ಗೃಹ ಸಚಿವಾಲಯ ಹೊಣೆ ಅಲ್ಲವೆಂದೂ, ಆ ಪತ್ರವು ಸರ್ದಾರರ ಶತೃಗಳ ಆಟಕ್ಕೆ ಕುಮ್ಮಕ್ಕು ಕೊಡುವುದೆಂದೂ, ದೇಶಕ್ಕೆ ಅಗತ್ಯವಾದ

ಸಂಯುಕ್ತ ನಾಯಕತ್ವವನ್ನು ತಪ್ಪಿಸುವುದೆಂದೂ, ವಾದಿಸಿದರು. ಪಟೇಲರು ಅವರ ವಾದವನ್ನು ಅಂಗೀಕರಿಸಿದರು.[೩೪೩]

ಅಷ್ಟು ಹೊತ್ತಿಗೆ ಪ್ರಧಾನಿ ನೆಹರುರವರಿಂದ ಪಟೇಲರಿಗೆ ಒಂದು ಪತ್ರ ಬಂದಿತು. ಫೆಬ್ರುವರಿ ೩, ೧೯೪೮ನೆ ತಾರೀಖಿನ ಆ ಪತ್ರದ ಪೂರ್ಣಪಾಠ ಹೀಗಿದೆ:

> ಬಾಪು ಬದುಕಿದ್ದಾಗ ನಾವು ಒಟ್ಟಿಗೆ ಅವರನ್ನು ಭೇಟಿ ಮಾಡಬೇಕು ಮತ್ತು ನಮಗೆ ಒಂದು ತರಹ ತೊಂದರೆ ಕೊಡುತ್ತಿದ್ದ ಅನೇಕ ವಿಷಯಗಳನ್ನು ಚರ್ಚಿಸಬೇಕು ಎಂದು ಆಶಿಸಿದ್ದೆವು. ನಮ್ಮ ಪತ್ರ ವಿನಿಮಯ ನಿಮಗೆ ನೆನಪಿರಬಹುದು. ನನ್ನ ಕೊನೆಯ ಪತ್ರದಲ್ಲಿ ಅಭಿಪ್ರಾಯ ಮತ್ತು ಮನೋಭಾವಗಳಲ್ಲಿ ಭಿನ್ನತೆ ಇದ್ದರೂ, ಹಿಂದೆ ಅಷ್ಟೊಂದು ಕಾಲ ಮಾಡಿದ್ದಂತೆ ಒಟ್ಟಿಗೇ ಕೆಲಸ ಮಾಡುವುದನ್ನು ಮುಂದುವರಿಸಬೇಕು ಎಂಬ ಆಶಯವನ್ನು ನಾನು ವ್ಯಕ್ತ ಪಡಿಸಿದ್ದೆ. ಅದೇ ಬಾಪುರವರ ಅಂತಿಮ ಅಭಿಪ್ರಾಯ ಎನ್ನುವುದನ್ನು ಕಂಡು ಸಂತೋಷವಾಯಿತು.
>
> ಈಗ ಬಾಪುವಿನ ಸಾವಿನೊಡನೆ ಎಲ್ಲವೂ ಬದಲಾಗಿದೆ. ನಾವು ಭಿನ್ನವಾದ ಮತ್ತು ಹೆಚ್ಚು ಕಷ್ಟಕರವಾದ ಪ್ರಪಂಚವನ್ನು ಎದುರಿಸಬೇಕಾಗಿದೆ. ಹಳೆಯ ವಿವಾದಗಳು ಬಹಳಷ್ಟು ಪ್ರಾಧಾನ್ಯತೆಯನ್ನು ಕಳೆದುಕೊಂಡಿವೆ. ನಾವೆಲ್ಲ ಆದಷ್ಟೂ ಒಟ್ಟಾಗಿ ಮತ್ತು ಪರಸ್ಪರ ಸಹಕಾರದಿಂದ ಕೆಲಸ ಮಾಡುವುದು ಈ ಸಮಯದ ತುರ್ತು ಅವಶ್ಯಕತೆ ಎಂದು ನನಗೆ ಅನ್ನಿಸುತ್ತದೆ. ವಾಸ್ತವವಾಗಿ ಬೇರೆ ಯಾವ ಮಾರ್ಗವೂ ಇಲ್ಲ.
>
> ನಿಮ್ಮ ಮತ್ತು ನನ್ನ ನಡುವೆ ಇರಬಹುದಾದ ಯಾವುದೇ ಭಿನ್ನಾಭಿಪ್ರಾಯವನ್ನು ಇತಿಮಿತಿ ಇಲ್ಲದೆ ಅತಿಯಾಗಿ ದೊಡ್ಡದು ಮಾಡುವ ಒಂದೇ ಸಮನೆ ನಡೆಯುತ್ತಿರುವ ಪಿಸು ಮಾತುಗಳು ಮತ್ತು ವದಂತಿಗಳಿಂದ ನನಗೆ ಬಹಳ ಬೇಗುದಿ ಉಂಟಾಗಿದೆ. ಇದು ವಿದೇಶಿ ರಾಯಭಾರಿಗಳ ಮತ್ತು ವಿದೇಶಿ ವರದಿಗಾರರವರೆಗೂ ಹಬ್ಬಿದೆ. ತಂಟೆಕೋರರು ಅದರ ಲಾಭವನ್ನು ಪಡೆದುಕೊಳ್ಳುತ್ತಾರೆ ಮತ್ತು ಅದಕ್ಕೆ ಮತ್ತಷ್ಟು ಸೇರಿಸುತ್ತಾರೆ. ಅದು ಅಧಿಕಾರಿವರ್ಗದ ಮೇಲೂ ಸಹ ಪರಿಣಾಮ ಉಂಟುಮಾಡುತ್ತಿದೆ. ಅದು

ಅಪಾಯಕಾರಿ. ಈ ಕಿಡಿಗೇಡಿತನವನ್ನು ನಾವು ತಡೆಹಿಡಿಯಲೇ ಬೇಕು.

ನಾವು ಕಾಲು ಶತಮಾನದಿಂದ ಪರಸ್ಪರ ಸಾಮಿಪ್ಯದಿಂದ ಕೆಲಸ ಮಾಡುತ್ತಾ ಬಂದಿದ್ದೇವೆ, ಅನೇಕ ಬಿರುಗಾಳಿಗಳನ್ನು ಮತ್ತು ಅಪಾಯಗಳನ್ನು ಒಟ್ಟಿಗೆ ಎದುರಿಸಿದ್ದೇವೆ. ಈ ಅವಧಿಯಲ್ಲಿ ನಿಮ್ಮ ಬಗೆಗೆ ನನ್ನ ಪ್ರೀತಿ ಮತ್ತು ಗೌರವ ಹೆಚ್ಚುತ್ತಾ ಹೋಗಿವೆ ಎಂದು ನಾನು ಪೂರ್ಣ ಪ್ರಾಮಾಣಿಕತೆಯಿಂದ ಹೇಳಬಲ್ಲೆ. ಅವನ್ನು ಯಾವುದೂ ಕಡಿಮೆ ಮಾಡಲಾರದು ಎಂದು ಭಾವಿಸಿದ್ದೇನೆ. ನಮ್ಮ ನಡುವಣ ಭಿನ್ನತೆಗಳೂ ಸಹ ನಮ್ಮ ನಡುವೆ ಇರುವ ಅಧಿಕ ಒಪ್ಪಿಗೆಯ ಅಂಶಗಳನ್ನು ಮತ್ತು ನಾವು ಪರಸ್ಪರ ತೋರುತ್ತಿರುವ ಗೌರವವನ್ನು ಹೊರ ಸೂಸಿವೆ. ಭಿನ್ನವಾಗಿರಲು ಒಪ್ಪುವುದನ್ನು ಆದಾಗ್ಯೂ ಒಟ್ಟಿಗೆ ಕೆಲಸ ಮಾಡುವುದನ್ನು ಕಲಿತಿದ್ದೇವೆ.

ಬಾಪು ಗತಿಸಿದ ನಂತರ ನಾವು ಎದುರಿಸಬೇಕಾಗಿರುವ ಈ ವಿಷಮ ಪರಿಸ್ಥಿತಿಯಲ್ಲಿ, ಅದನ್ನು ನಾವು ಸ್ನೇಹಿತರಂತೆ ಮತ್ತು ಸಹೋದ್ಯೋಗಿಗಳಂತೆ ಒಟ್ಟಿಗೆ ಎದುರಿಸುವುದು ನನ್ನ ಕರ್ತವ್ಯ ವೆಂದೂ, ನಾನು ಧೈರ್ಯಮಾಡಿ ಹೇಳುವುದಾದರೆ ನಿಮ್ಮದೂ ಸಹ ಎಂದು, ಯೋಚಿಸಿದ್ದೇನೆ. ಅದು ಮೇಲ್ಪದರದಲ್ಲಷ್ಟೇ ಅಲ್ಲ, ಪರಸ್ಪರ ಪೂರ್ಣ ವಿಧೇಯತೆ ಮತ್ತು ವಿಶ್ವಾಸದಿಂದ ನಡೆಯಬೇಕು. ಅದನ್ನು ನೀವು ನನ್ನಿಂದ ಪಡೆಯುವ ಆಶ್ವಾಸನೆ ನೀಡುತ್ತೇನೆ. ನನಗೇನಾದರೂ ಅನುಮಾನ ಅಥವಾ ಕಷ್ಟ ಕಂಡುಬಂದರೆ ಅದನ್ನು ಮುಚ್ಚುಮರೆಯಿಲ್ಲದೆ ನಿಮ್ಮ ಮುಂದೆ ಇಡುತ್ತೇನೆ. ನೀವೂ ಸಹ ಹಾಗೆ ಮಾಡುವಿರೆಂದು ಆಶಿಸುತ್ತೇನೆ.

ನಿಮ್ಮೊಡನೆ ಒಂದು ದೀರ್ಘ ಮಾತುಕತೆ ನಡೆಸಬೇಕೆಂದು ಬಯಸಿದ್ದೆ. ಆದರೆ ನಮ್ಮಿಬ್ಬರಿಗೂ ಕಾಲದ ಅಭಾವ ಎಷ್ಟಿದೆ ಯೆಂದರೆ ನಾವು ಪರಸ್ಪರ ಖಾಸಗಿಯಾಗಿ ಹೆಚ್ಚು ಕಾಲ ನೋಡಲು ಆಗುತ್ತಿಲ್ಲ. ಯಾವಾಗಲಾದರೂ ಆದಷ್ಟು ಜಾಗ್ರತೆ ನಾವು ಮಾತಾಡೋಣ. ಇರಬಹುದಾದ ಯಾವುದೇ ತಪ್ಪು ಗ್ರಹಿಕೆ ಮತ್ತು ತಪ್ಪು ಅಂಜಿಕೆಗಳನ್ನು ಹೋಗಲಾಡಿಸೋಣ. ಅಂತಹ ಸಂಭಾಷಣೆ ಯನ್ನು ಆಗಾಗ್ಗೆ ನಡೆಸುವುದು ಆವಶ್ಯಕ. ಆದರೆ ಈ ಮಧ್ಯೆ ಈ

ಸಂಭಾಷಣೆಗೆ ಕಾಯಲು ನನಗೆ ಇಷ್ಟವಿಲ್ಲ, ಅದರಿಂದಲೇ ನಿಮಗೆ ನನ್ನ ಪ್ರೀತಿ ಮತ್ತು ಸ್ನೇಹವನ್ನು ಹೊತ್ತು ತರುತ್ತಿರುವ ಈ ಪತ್ರ.[೩೪೪]

ಜವಹರಲಾಲ್ ನೆಹರುರವರ ಪತ್ರಕ್ಕೆ ಪಟೇಲರು ಫೆಬ್ರುವರಿ ೫ರಂದು ಜವಾಬು ಬರೆದರು. ಅದರ ಪೂರ್ಣಪಾಠ:

ನಿಮ್ಮ ಫೆಬ್ರುವರಿ ೩ರ ಪತ್ರ ತಂದ ನಿಮ್ಮ ಪ್ರೀತಿ ಮತ್ತು ಸದ್ಭಾವನೆ ನನ್ನ ಹೃದಯವನ್ನು ತೀವ್ರವಾಗಿ ತಟ್ಟಿದೆ, ವಾಸ್ತವವಾಗಿ ನನ್ನನ್ನು ಭಾವಪರವಶನನ್ನಾಗಿ ಮಾಡಿದೆ. ನೀವು ಅಷ್ಟೊಂದು ಭಾವನಾತ್ಮಕವಾಗಿ ಹೇಳಿರುವ ಭಾವನೆಗಳನ್ನು ನಾನು ಪೂರ್ಣವಾಗಿ ಮತ್ತು ಮನಃಪೂರ್ವಕವಾಗಿ ನಿಮಗೂ ಸಲ್ಲಿಸುತ್ತೇನೆ.

ಒಂದು ಸಮಾನ ಉದ್ದೇಶಕ್ಕಾಗಿ ನಾವಿಬ್ಬರೂ ಜೀವನ ಪರ್ಯಂತ ಸಹಚರರಾಗಿದ್ದೇವೆ. ನಮ್ಮಲ್ಲಿದ್ದ ದೃಷ್ಟಿಕೋನ ಮತ್ತು ಮನೋಭಾವದ ಭಿನ್ನತೆಗಳನ್ನು ಮೀರಿದ ದೇಶದ ಪರಮ ಹಿತ ಮತ್ತು ನಮ್ಮಿಬ್ಬರ ಪರಸ್ಪರ ಪ್ರೀತಿ ಮತ್ತು ಗೌರವ ನಮ್ಮನ್ನು ಒಟ್ಟಿಗೆ ಬೆಸೆದಿದೆ. ನಾವಿಬ್ಬರೂ ತೀವ್ರಾಸಕ್ತಿಯಿಂದ ನಮ್ಮ ನಮ್ಮ ದೃಷ್ಟಿಕೋನ ಅಥವಾ ಕೆಲಸ ಮಾಡುವ ವಿಧಾನಕ್ಕೆ ತೀವ್ರವಾಗಿ ಅಂಟಿಕೊಂಡಿದ್ದೇವೆ. ಆದಾಗ್ಯೂ ನಾವು ಹೃದಯದ ಏಕತೆಯನ್ನು ಯಾವಾಗಲೂ ಉಳಿಸಿಕೊಂಡಿದ್ದೇವೆ. ಅದು ಅನೇಕ ಒತ್ತಡ ಮತ್ತು ಪ್ರಯಾಸಗಳನ್ನು ಮೆಟ್ಟಿ ನಿಂತಿದೆ. ನಾವು ಕಾಂಗ್ರೆಸ್ಸು ಹಾಗೂ ಸರ್ಕಾರದಲ್ಲಿ ಒಟ್ಟಾಗಿ ಕೆಲಸ ಮಾಡಲು ಶಕ್ತರನ್ನಾಗಿ ಮಾಡಿದೆ.

ಇತ್ತೀಚಿನ ಘಟನೆಗಳು ನನ್ನನ್ನು ಬಹಳ ದುಃಖಿಯನ್ನಾಗಿ ಮಾಡಿದ್ದುವು. ನಾನು ಬೊಂಬಾಯಿಗೆ ಹೋಗುವಾಗ ನನ್ನನ್ನು ಬಿಡುಗಡೆ ಮಾಡಿ ಎಂದು ಮನವಿ ಮಾಡಿ ಪತ್ರವನ್ನು ಬಾಪುಗೆ ಬರೆದಿದ್ದೆ, ಆದರೆ ಅವರ ಸಾವು ಎಲ್ಲವನ್ನು ಬದಲಾಯಿಸಿದೆ. ನಮ್ಮನ್ನು ಆವರಿಸಿರುವ ವಿಷಮ ಪರಿಸ್ಥಿತಿಯು ನಾವಿಬ್ಬರೂ ಒಟ್ಟಿಗೆ ಎಷ್ಟೊಂದು ಸಾಧಿಸಿದ್ದೇವೆ ಎನ್ನುವುದನ್ನು ಮತ್ತು ನಮ್ಮ ದುಃಖಿತಪ್ತ ದೇಶದ ಹಿತಕ್ಕಾಗಿ ಮತ್ತಷ್ಟು ಸಂಯುಕ್ತ ಪ್ರಯತ್ನಗಳ ಆವಶ್ಯಕತೆಯ ಅರಿವನ್ನು ನಮ್ಮಲ್ಲಿ ಹೊಸದಾಗಿ ಉತ್ತೇಜಿಸಲಿ.

ಅವರ ಸಾವಿಗೆ ಕೊಂಚ ಮುಂಚೆ ಅವರೊಡನೆ ಒಂದು

ಘಂಟೆ ಕಾಲ ಒಂದು ಕೊನೆಯ ಸಂಭಾಷಣೆ ನಡೆಸುವ ಒಳ್ಳೆಯ ಅದೃಷ್ಟ ನನಗೆ ಸಿಕ್ಕಿತ್ತು. ನಿಮ್ಮ ಮತ್ತು ಅವರ ನಡುವೆ ನಡೆದ ಮಾತುಕತೆಯನ್ನು ಹಾಗೂ ಅವರು ಲಾರ್ಡ್ ಮೌಂಟ್‌ಬ್ಯಾಟನ್ ಜೊತೆ ನಡೆಸಿದ ಸಂಭಾಷಣೆಯನ್ನು ನನಗೆ ತಿಳಿಸಿದರು. ಮಾರನೆಯ ದಿನ ನಮ್ಮಿಬ್ಬರನ್ನೂ ಭೇಟಿ ಮಾಡಲು ಸಮಯವನ್ನು ನಿಗದಿ ಪಡಿಸಿದ್ದರು. ಅವರ ಅಭಿಪ್ರಾಯವು ಸಹ ನಮ್ಮಿಬ್ಬರನ್ನು ಬಂಧಿಸಿದೆ. ನನ್ನ ಜವಾಬ್ದಾರಿಗಳು ಮತ್ತು ಹೊಣೆಗಾರಿಕೆಗಳನ್ನು ಈ ಮನೋ ಭಾವದಲ್ಲಿ ನಿರ್ವಹಿಸಬೇಕೆಂದು ನಾನು ನಿರ್ಣಯಿಸಿದ್ದೇನೆ ಎಂದು ನಿಮಗೆ ಆಶ್ವಾಸನೆ ನೀಡುತ್ತೇನೆ.

ಪರಸ್ಪರ ಸಮಾಲೋಚನೆಗೆ ನಾವು ಹೆಚ್ಚು ಕಾಲವನ್ನು ವಿನಿಯೋಗಿಸಬೇಕು ಎನ್ನುವ ನಿಮ್ಮ ಮಾತನ್ನು ಒಪ್ಪುತ್ತೇನೆ. ಹಾಗೆ ಮಾಡುವುದರಿಂದ ನಾವು ಪರಸ್ಪರ ವಿಷಯ ವಿನಿಮಯ ಮಾಡಬಹುದು ಮತ್ತು ಏನು ನಡೆಯುತ್ತಿದೆ ಎನ್ನುವುದನ್ನು ತಿಳಿಯ ಬಹುದು. ಉದ್ಭವವಾಗುವ ಭಿನ್ನಾಭಿಪ್ರಾಯಗಳನ್ನು ಆ ಮೂಲಕ ಪರಿಹರಿಸಬಹುದು.

ನಾವು ಒಂದು ದೀರ್ಘ ಮಾತುಕತೆ ನಡೆಸಲು ಸಹ ಶೀಘ್ರವೆ ಅವಕಾಶವನ್ನು ಕಲ್ಪಿಸಿಕೊಳ್ಳಬೇಕು ಮತ್ತು ನಮ್ಮ ಮನಸ್ಸಿನಲ್ಲಿರ ಬಹುದಾದ ಅನುಮಾನಗಳು ಮತ್ತು ತೊಂದರೆಗಳನ್ನು ಪರಿಹರಿಸಿ ಕೊಳ್ಳಬೇಕು. ನಮ್ಮ ಭಿನ್ನಾಭಿಪ್ರಾಯಗಳನ್ನು ಸಾರ್ವಜನಿಕವಾಗಿ ಅಥವಾ ಖಾಸಗಿಯಲ್ಲಿ ಸದಾ ಆಡುತ್ತಿರುವುದು ನಮಗೆ ಕೆಟ್ಟದ್ದು, ಅಧಿಕಾರಶಾಹಿಗೆ ಕೆಟ್ಟದ್ದು ಮತ್ತು ದೇಶಕ್ಕೆ ಕೆಟ್ಟದ್ದು. ಅದನ್ನು ಸಂಪೂರ್ಣವಾಗಿ ಎಷ್ಟು ಬೇಗ ನಿವಾರಿಸಿದರೆ ಮತ್ತು ಈ ಕತ್ತಲುಗವಿದ ಪರಿಸರವನ್ನು ಸ್ವಚ್ಛಗೊಳಿಸಿದರೆ ಅಷ್ಟೂ ಒಳ್ಳೆಯದು.[೩೪೫]

ಅಲ್ಲಿಗೆ ಇಬ್ಬರ ಹೃದಯಗಳು ನಿರಾಳವಾದುವು.

೧೫.೭ ಸರ್ದಾರರ ಸಮರ್ಥನೆ

ಸರ್ದಾರರು ಫ಼ೆಬ್ರುವರಿ ೪ರಂದು ಸಂವಿಧಾನ ರಚನಾ ಸಭೆಯ ಕಾಂಗ್ರೆಸ್ ಪಕ್ಷದ ಸದಸ್ಯರನ್ನು ಉದ್ದೇಶಿಸಿ ಭಾಷಣ ಮಾಡುತ್ತಾ ನೆಹರುವನ್ನು ಪ್ರಥಮ

ಬಾರಿಗೆ 'ನನ್ನ ನಾಯಕ' ಎಂದು ಕರೆದು[೩೪೬] ನುಡಿದರು:

> ಎಲ್ಲಾ ರಾಷ್ಟ್ರೀಯ ಸಮಸ್ಯೆಗಳ ವಿಷಯದಲ್ಲಿ ನಾನು ಪ್ರಧಾನಮಂತ್ರಿಯ ಜೊತೆ ಒಂದಾಗಿದ್ದೇನೆ. ಕಾಲು ಶತಮಾನಕ್ಕೂ ಹೆಚ್ಚು ಕಾಲ ನಾವಿಬ್ಬರು ನಮ್ಮ ಮಾಸ್ಟರ್‌ನ ಪದತಳದಲ್ಲಿ ಕುಳಿತೆವು ಮತ್ತು ಭಾರತದ ಸ್ವಾತಂತ್ರ್ಯಕ್ಕಾಗಿ ಒಟ್ಟಿಗೆ ಹೋರಾಡಿದೆವು. ಈ ದಿನ ಮಹಾತ್ಮ ಇಲ್ಲದಿರುವಾಗ ನಾವು ಜಗಳವಾಡಬಹುದು ಎಂದು ಆಲೋಚಿಸಲೂ ಸಾಧ್ಯವಿಲ್ಲ.

ಅದೇ ಸಭೆಯಲ್ಲಿ ಅವರು ತಮ್ಮ ಮೇಲಿನ ಆಪಾದನೆಗಳ ಬಗೆಗೂ ಮಾತನಾಡಿದರು. ಅವರೆಂದರು:

> ನಾನು ಮಹಾತ್ಮನನ್ನು ರಕ್ಷಿಸಲು ವಿಫಲನಾದೆ ಎಂದು ಸಮಾಜವಾದಿಗಳು ಹೇಳುತ್ತಾರೆ..... ಬಾಂಬ್ ಆಸ್ಫೋಟದ ಘಟನೆಯ ನಂತರ ಹೆಚ್ಚು ಕಡಿಮೆ ಪ್ರತಿ ಕೊಠಡಿಯಲ್ಲೂ ಒಬ್ಬ ಪೊಲೀಸ್ ಅಧಿಕಾರಿ ಇದ್ದನು. ಮಹಾತ್ಮ ಗಾಂಧಿಗೆ ಅದು ಇಷ್ಟವಾಗಲಿಲ್ಲ ಎನ್ನುವುದು ನನಗೆ ಗೊತ್ತಿತ್ತು. ಅವರು ನನ್ನೊಡನೆ ಅನೇಕ ಸಲ ವಾದ ಮಾಡಿದರು. ಪ್ರಾರ್ಥನೆಯಲ್ಲಿ ಭಾಗವಹಿಸಲು ಬರುವವರನ್ನು ಶೋಧಿಸಲು ಯಾವ ಸಂದರ್ಭದಲ್ಲೂ ನಾನು ಅನುಮತಿ ನೀಡಬಾರದೆಂದು ನನ್ನನ್ನು ಕಟುವಾಗಿ ಒತ್ತಾಯಿಸಿದ್ದರು.
>
> ಕೊಲೆಪಾತಕನು ಗಾಂಧೀಜಿಯ ಮುಂದೆ ಮಂಡಿಯೂರಿದನು. ಏಳುವಾಗ ಅವನು ಒಂದು ಪಿಸ್ತೂಲನ್ನು ಹೊರತೆಗೆದನು ಮತ್ತು ಯಾರಾದರು ಅವನನ್ನು ತಡೆಯುವ ಮುನ್ನವೆ ಗುಂಡು ಹಾರಿಸಿದನು. ಅದು ಒಂದು ತಡೆಯಲಾಗದ ಅನಾಹುತಕಾರಿ ದುರದೃಷ್ಟ.

ನಂತರ ಪಟೇಲರು ಸಮಾಜವಾದಿಗಳ ಸಹಕಾರ ಪಡೆಯಲು ತಾವು ಮಾಡಿದ ಪ್ರಯತ್ನಗಳನ್ನು ವಿವರಿಸಿದರು. ಯಾವ ಅಡೆತಡೆಯೂ ಇಲ್ಲದೆ ತಮ್ಮ ಪ್ರಯೋಗಗಳನ್ನು ನಡೆಸಲು ಅವರಿಗೆ ಒಂದು ಪ್ರಾಂತ್ಯವನ್ನೇ ಕೊಡುವುದಾಗಿ ತಾವು ಹೇಳಿದ್ದನ್ನು ಸಭೆಗೆ ತಿಳಿಸಿದರು. ನಂತರ ಅವರು, "ಈ ದಿನ ರಾಷ್ಟ್ರದ ಅತ್ಯಂತ ದೊಡ್ಡ ದುರದೃಷ್ಟ ಮತ್ತು ಅನಾಹುತವನ್ನು ಸಮಾಜವಾದಿಗಳು ಪಕ್ಷದ ಲಾಭಕ್ಕೆ ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ," ಎಂದರು. ಮುಂದಕ್ಕೆ ಅವರಿಗೆ

ಮಾತನಾಡಲಾಗಲಿಲ್ಲ. ಭಾವಪರವಶರಾಗಿ ಒಂದು ನಿಮಿಷ ಹಾಗೇ ನಿಂತರು. ನಂತರ ತಮ್ಮ ಪತ್ರ ಮತ್ತು ಕಾಗದಗಳನ್ನು ಎತ್ತಿಕೊಂಡು ಹೊರನಡೆದರು.[೩೪೭]

ಸಂಸತ್ತಿನಲ್ಲಿ ಅನಂತ ಶಯನಂ ಐಯ್ಯಂಗಾರ್‌ರವರ ಪ್ರಶ್ನೆಗೆ ಉತ್ತರ ನೀಡುತ್ತ ಪಟೇಲರು ಮಹಾತ್ಮ ಗಾಂಧೀಜಿಯ ಸುರಕ್ಷತೆಗೆ ಕೈಗೊಂಡಿದ್ದ ಕ್ರಮಗಳನ್ನು ವಿವರಿಸಿದರು:

> ಬಾಂಬ್ ಆಸ್ಫೋಟಕ್ಕೆ ಮುಂಚೆ ಗಾಂಧೀಜಿ ತಂಗಿದ್ದ ಬಿರ್ಲಾ ಸದನದ ಕಾವಲು ಒಬ್ಬ ಹೆಡ್ ಕಾನ್‌ಸ್ಟೇಬಲ್ ಮತ್ತು ನಾಲ್ಕು ಮಂದಿ ಕಾನ್‌ಸ್ಟೇಬಲ್‌ಗಳನ್ನು ಒಳಗೊಂಡಿತ್ತು. ಬಾಂಬ್ ಆಸ್ಫೋಟನೆ ಆದಮೇಲೆ ಬಿರ್ಲಾ ಸದನದಲ್ಲಿ ಒಬ್ಬ ಅಸಿಸ್ಟೆಂಟ್ ಪೊಲೀಸ್ ಸಬ್‌ಇನ್‌ಸ್ಪೆಕ್ಟರ್, ಇಬ್ಬರು ಹೆಡ್ ಕಾನ್‌ಸ್ಟೇಬಲ್‌ಗಳು ಮತ್ತು ೧೬ ಮಂದಿ ಕಾನ್‌ಸ್ಟೇಬಲ್‌ಗಳು ಸದನದ ದ್ವಾರದಲ್ಲಿ, ಮುಖ್ಯ ಕಟ್ಟಡದ ಸಮೀಪ ವಿವಿಧ ಸ್ಥಳಗಳಲ್ಲಿ ನಿಯೋಜಿಸಲ್ಪಟ್ಟರು. ಅನುಮಾನಾಸ್ಪದವಾಗಿ ಕಂಡುಬಂದವರನ್ನು ತಡೆಯುವಂತೆ ಅವರಿಗೆ ಸೂಚನೆ ನೀಡಲಾಗಿತ್ತು.
>
> ಸಾದಾ ಉಡುಗೆಯ ಬಂದೂಕು ಹೊಂದಿರುವ ಒಬ್ಬ ಸಬ್ ಇನ್‌ಸ್ಪೆಕ್ಟರ್, ನಾಲ್ವರು ಹೆಡ್ ಕಾನ್‌ಸ್ಟೇಬಲ್‌ಗಳು ಮತ್ತು ಇಬ್ಬರು ಕಾನ್‌ಸ್ಟೇಬಲ್‌ಗಳು ವೈಯುಕ್ತಿಕ ರಕ್ಷಣೆಗೆ ನಿಯಮಿಸ ಲ್ಪಟ್ಟಿದ್ದರು. ಪ್ರಾರ್ಥನಾ ಸಭೆಯಲ್ಲಿ ಅನುಮಾನಾಸ್ಪದವಾಗಿ ಕಂಡು ಬರುವವರಿಗಾಗಿ ಗಮನಹರಿಸುವುದು ಮತ್ತು ಏನಾದರೂ ತೊಂದರೆ ಅಥವಾ ಜೀವಕ್ಕೆ ಅಪಾಯದ ಸೂಚನೆ ಕಂಡುಬಂದಲ್ಲಿ ತಕ್ಷಣ ಕ್ರಮ ಜರುಗಿಸುವುದು ಅವರ ಕರ್ತವ್ಯವಾಗಿತ್ತು. ಅವರು ಪ್ರಾರ್ಥನಾ ಸಭೆಯಲ್ಲಿ ಜನರ ಗುಂಪಿನ ಮಧ್ಯೆ ಮಿಳಿತವಾಗಿರು ತ್ತಿದ್ದರು.
>
> ಪ್ರಧಾನ ಕಟ್ಟಡದಿಂದ ಪ್ರಾರ್ಥನಾ ಸ್ಥಳಕ್ಕೆ ಹೋಗುವ ಹಾದಿಯಲ್ಲಿ ಮೂವರು ಸಾದಾ ಉಡುಪಿನ ಪೊಲೀಸರು ನಿಯೋಜಿತರಾಗಿದ್ದರು. ಅನುಮಾನಾಸ್ಪದ ವ್ಯಕ್ತಿಗಳ ಮೇಲೆ ಕಣ್ಣು ಇಡುವುದು, ಗಾಂಧೀಜಿ ಬರುವಾಗ ಮತ್ತು ಹೋಗುವಾಗ ಜನರ ಯಾವ ಗುಂಪು ಅವರ ಮೇಲೆ ಬೀಳದಂತೆ ತಡೆಯುವುದು ಅವರ ಕರ್ತವ್ಯವಾಗಿತ್ತು.

ಒಬ್ಬ ನಾನ್ – ಕಮಿಷನ್ಡ್ ಆಫೀಸರ್ ಮತ್ತು ೨೦ ಸೈನಿಕರಿರುವ ಒಂದು ಸಣ್ಣ ತುಕಡಿಯನ್ನು ಕಾಂಪೌಂಡ್ ಸುತ್ತ ಗಸ್ತು ತಿರುಗಲು ಮತ್ತು ಜನ ಕಾಂಪೌಂಡ್ ಹಾರಿ ಒಳಗೆ ಬರುವುದನ್ನು ತಡೆಯಲು ನಿಯೋಜಿಸಲಾಗಿತ್ತು.

ಈ ಕ್ರಮಗಳನ್ನು ಪರಿಣಾಮಕಾರಿಯನ್ನಾಗಿ ಮಾಡಬೇಕಾದರೆ ಒಳಗೆ ಬರುವ ಪ್ರತಿ ವ್ಯಕ್ತಿಯನ್ನು ಶೋಧಿಸಬೇಕು ಎಂದು ಪೊಲೀಸರು ಪರಿಗಣಿಸಿದರು. ನವದೆಹಲಿಯ ಪೊಲೀಸ್ ಸೂಪರಿನ್‌ಟೆಂಡೆಂಟ್‌ರವರು ಆ ಸಲಹೆಯನ್ನು ಗಾಂಧೀಜಿಯ ಸಿಬ್ಬಂದಿ ಮುಂದೆ ಇಟ್ಟರು. 'ಗಾಂಧೀಜಿ ಅದನ್ನು ಒಪ್ಪುವುದಿಲ್ಲ' ಎನ್ನುವ ಉತ್ತರ ಬಂದಿತು. ನಂತರ ಡಿ.ಐ.ಜಿ.ಯವರು ಪ್ರಯತ್ನಿಸಿ ವಿಫಲರಾದರು. ಡಿ.ಐ.ಜಿ.ಯವರು ಗಾಂಧೀಜಿಯವರನ್ನು ತಾವೇ ಭೇಟಿ ಮಾಡಿ ಅಪಾಯವಿದೆ, ಪೊಲೀಸರು ವಿನಂತಿಸಿದ ಸೌಲಭ್ಯಗಳನ್ನು ಕೊಡಿ, ಇಲ್ಲದೆ ಹೋದರೆ ಏನಾದರು ಆಗಬಾರದ್ದು ಆದರೆ ಪೊಲೀಸರಿಗೆ ಕೆಟ್ಟ ಹೆಸರು ಬರುತ್ತದೆ – ಎಂದು ವಿನಂತಿಸಿದರು. ಆದರೆ ಗಾಂಧೀಜಿ ಒಪ್ಪಲಿಲ್ಲ. ಅವರು, "ನನ್ನ ಪ್ರಾಣ ದೇವರ ಕೈಯಲ್ಲಿ ಇದೆ. ನಾನು ಸಾಯಬೇಕೆಂದಿದ್ದರೆ ಯಾವ ಮುನ್ನೆಚ್ಚರಿಕೆಯೂ ನನ್ನನ್ನು ಕಾಪಾಡಲಾರದು. ಪ್ರಾರ್ಥನೆಗೆ ಬರುವ ಯಾರನ್ನೇ ಆಗಲಿ ನಿರ್ಬಂಧಿಸುವುದನ್ನು ಅಥವಾ ಪ್ರೇಕ್ಷಕರು ಮತ್ತು ನನ್ನ ಮಧ್ಯೆ ಮತ್ತೊಬ್ಬರು ಬರುವುದನ್ನು ನಾನು ಒಪ್ಪುವುದಿಲ್ಲ" ಎಂದರು. ನಿಮ್ಮ ರಕ್ಷಣೆಯ ವಿಷಯದಲ್ಲಿ ಪೊಲೀಸರು ತಮ್ಮ ಕರ್ತವ್ಯವನ್ನು ಮಾಡಲು ಅವಕಾಶ ಕೊಡಿ ಎಂದು ನಾನೇ ಗಾಂಧೀಜಿಯವರನ್ನು ಬೇಡಿದೆ, ಆದರೆ ಯಶಸ್ಸು ಸಿಕ್ಕಲಿಲ್ಲ. ನನಗೆ ಭಾರಿ ಪಶ್ಚಾತ್ತಾಪ ಮತ್ತು ವಿಪರೀತ ದುಃಖವಾಗುವಂತೆ ಮತ್ತು ನಮಗೆ, ರಾಷ್ಟ್ರಕ್ಕೆ ಮತ್ತು ವಿಶ್ವಕ್ಕೆ, ತುಂಬಲಾಗದ ನಷ್ಟ ಆಗುವಂತೆ, ನಾನು ಮತ್ತು ಪೊಲೀಸರು ಹೆದರಿದ್ದ ದುರ್ಬಲ ಸ್ಥಾನವನ್ನು ಪ್ರಾಣ ಹಂತಕನು ಮೋಸದಿಂದ ಮತ್ತು ಯಶಸ್ವಿಯಾಗಿ ದುರುಪಯೋಗಪಡಿಸಿಕೊಂಡನು. 'ನಾನು ಸಾಯಬೇಕೆಂದಿದ್ದರೆ ಯಾವ ಮುನ್ನೆಚ್ಚರಿಕೆಯು ನನ್ನನ್ನು ಉಳಿಸಲಾರದು' ಎನ್ನುವ ಗಾಂಧೀಜಿಯ ಭವಿಷ್ಯವಾಣಿಯು ನಿಜವಾಯಿತು.[೩೪೮]

ಪಟೇಲರ ಈ ಹೇಳಿಕೆಯು ಅವರು (ಪಟೇಲರು) ಮತ್ತು ಪೊಲೀಸರು ಸಾಧ್ಯವಾದ ಎಲ್ಲಾ ಕ್ರಮಗಳನ್ನು ತೆಗೆದುಕೊಂಡಿದ್ದಾರೆ ಎನ್ನುವ ಸಮಾಧಾನವನ್ನು ದೇಶದ ಜನರಿಗೆ ತಂದಿತು.

೧೫.೮ ಹೃದಯಾಘಾತ

ಗಾಂಧೀಜಿಯವರ ಹತ್ಯೆಯಿಂದ ಪಟೇಲರು ಬಹಳ ಸಂಕಟಕ್ಕೆ ಈಡಾಗಿದ್ದರು. ತಾವು ಗಾಂಧೀಜಿಯನ್ನು ರಕ್ಷಿಸಲಾಗಲಿಲ್ಲವಲ್ಲ ಅನ್ನುವ ಕೊರಗು ಅವರಿಗಿತ್ತು. ಅದು ಅವರ ಆರೋಗ್ಯದ ಮೇಲೆ ದುಷ್ಪರಿಣಾಮವನ್ನು ಬೀರಿತು.

ಗಾಂಧಿ ಹತ್ಯೆಯಾದ ೫ ವಾರಗಳಲ್ಲಿ ೧೯೪೮ರ ಮಾರ್ಚ್ ೫ರಂದು ಮಧ್ಯಾಹ್ನ ೧–೧೦ರ ಸಮಯ ಅವರು ಊಟ ಮಾಡುತ್ತಿದ್ದಾಗ ಹೃದಯಾಘಾತವಾಯಿತು. ಆಗ ಅವರ ಜೊತೆಯಲ್ಲಿ ಮಣಿ ಬೆನ್, ಶಂಕರ್ ಮತ್ತು ಸುಶೀಲ ನಾಯರ್ ಇದ್ದರು. ಪಟೇಲರು ಆಗ ತಾನೆ ಒಂದು ಚಮಚ ಸೂಪ್ ಕುಡಿದಿದ್ದರು. ಇದ್ದಕ್ಕಿದ್ದ ಹಾಗೆ ತಮ್ಮ ಬಲಗೈಯನ್ನು ಹೃದಯದ ಮೇಲೆ ಇಟ್ಟು ಮೌನವಾದರು. ಇದನ್ನು ಗಮನಿಸಿದ ಸುಶೀಲ ನಯಾರ್, "ಏನಾಗುತ್ತಿದೆ?" ಎಂದರು. ಪಟೇಲರು, "ನೋಯುತ್ತಿದೆ" ಎಂದರು. ಅವರಿಗೆ ಹೃದಯಾಘಾತವಾಗಿರ ಬಹುದೆಂದು ಊಹಿಸಿದ ಸುಶೀಲ ತಕ್ಷಣ ವೈದ್ಯರಿಗೆ ಕರೆ ಮಾಡುವಂತೆ ಶಂಕರ್‌ಗೆ ಹೇಳಿದರು ಮತ್ತು ಪಟೇಲರನ್ನು ಹಾಸಿಗೆಯ ಮೇಲೆ ಮಲಗಿಸಿದರು. ಪ್ರಧಾನಿ ನೆಹರೂಗು ದೂರವಾಣಿ ಮೂಲಕ ತಿಳಿಸಲಾಯಿತು. ೧೫ ನಿಮಿಷಗಳಲ್ಲಿ ಡಾ॥ ಧಂಡ ಬಂದರು ಮತ್ತು ಮಾರ್ಫಿನ್ ಚುಚ್ಚುಮದ್ದು ನೀಡಿದರು. ೨.೧೫ಕ್ಕೆ ನೆಹರು, ಇಂದಿರ ಮತ್ತು ಫ್ಲೆರೋಜ್ ಒಡನೆ ಬಂದರು. ಅಷ್ಟು ಹೊತ್ತಿಗೆ ಪಟೇಲರಿಗೆ ಪೂರ್ಣ ಔಷಧಿ ನೀಡಲಾಗಿತ್ತು. ಅವರು ಆಗಾಗ್ಗೆ ಸ್ವಲ್ಪ ಕಣ್ಣು ತೆರೆದು ಕಣ್ಣು ಮುಚ್ಚುತ್ತಿದ್ದರು. ೪ ಘಂಟೆಗೆ ಕಣ್ಣು ತೆರೆದು ಮೊದಲ ಬಾರಿಗೆ ಮಾತನಾಡಿದರು. "ನಾನು ಬಾಪುವಿನೊಡನೆ ಹೋಗಬೇಕು. ಅವರು ಒಬ್ಬರೇ ಹೋಗಿದ್ದಾರೆ," ಎಂದರು. ಮಾತನಾಡುವಾಗ ಕಣ್ಣೀರು ಹರಿಯಿತು.

ಮಾರನೆಯ ದಿನ ಬೊಂಬಾಯಿಯಿಂದ ಮಗ ದಹ್ಯ ಭಾಯ್, ಸೊಸೆ ಭಾನುಮತಿ ಮತ್ತು ಒಂದು ವರ್ಷದ ಮೊಮ್ಮಗ ಗೌತಮ್ ಬಂದರು. ಮೊಮ್ಮಗನ ಶಬ್ಧ ಕೇಳಿ ಅವನನ್ನು ನೋಡಲು ಬಯಸಿದರು. ಮಗುವನ್ನು ಅವರ ಕಣ್ಣಿನ ಮುಂದೆ ತರಲಾಯಿತು. ಡಾಕ್ಟರು ಮತ್ತು ತಮ್ಮನ್ನು ನೋಡಲು ಬಂದ ಘನಶ್ಯಾಂದಾಸ್ ಬಿರ್ಲಾಗೆ ಪಟೇಲರು, "ಕೆಲಸದ ಒತ್ತಡದಿಂದ ಮಾತ್ರ ಆಘಾತ

ಉಂಟಾಗಲಿಲ್ಲ. ಬಾಪು ಸಾವಿನ ಹೊಡೆತ ಅಷ್ಟು ಭಾರಿ," ಎಂದರು. ಅಂದು ಮಧ್ಯಾಹ್ನ ಸುಶೀಲ ನಯ್ಯಾರ್‌ಗೆ ಹೇಳಿದರು, "ಬಾಪುವಿಗೆ ಗೊತ್ತಾದರೆ ಅವರು ನಿನ್ನನ್ನು ಬಯ್ಯುತ್ತಾರೆ. ನಾನು ಬಾಪುವಿನ ಜೊತೆ ಇರಲು ಹೊರಟಿದ್ದೆ. ನೀನು ತಡೆದುಬಿಟ್ಟೆ. ನಾನು ಸಾಕಷ್ಟು ಎಚ್ಚರಿಕೆ ತೆಗೆದುಕೊಳ್ಳಲಿಲ್ಲವೆಂದು – ಎಲ್ಲರೂ ಹೇಳುತ್ತಾರೆ. ಬ್ರಿಜ್ ಕೃಷ್ಣನೂ ಹಾಗೆ ಯೋಚಿಸುತ್ತಾನೆ." ಗಾಂಧೀಜಿಯವರ ಮಗ ದೇವ್‌ದಾಸ್ ಅವರನ್ನು ನೋಡಲು ಮಾರ್ಚ್ ೮ರಂದು ಬಂದರು. ಅವರಿಗೆ, "ಹೃದಯದೊಳಗೆ ತುಂಬಿಹೋಗಿದ್ದ ದುಃಖದ ಪರಿಣಾಮವಾಗಿ ಘಾತವಾಯಿತು," ಎಂದರು. ನಂತರ ಕಣ್ಣಿನಲ್ಲಿ ತುಂಟನೋಟ ಬೀರುತ್ತಾ, "ಆದರೆ ಈಗಲೂ ತಡವಾಗಿಲ್ಲ. ಬಾಪುವಿಗೆ ಪತ್ರ ಬರೆದಿದ್ದರೆ ಕೊಡು, ತೆಗೆದುಕೊಂಡು ಹೋಗುತ್ತೇನೆ," ಎಂದರು.[೩೪೯]

ಅದೃಷ್ಟವಶಾತ್ ಪಟೇಲರು ಹೃದಯಾಘಾತದಿಂದ ಬದುಕಿ ಉಳಿದರು. ಆದರೆ ಪೂರ್ಣ ಗುಣವಾಗಲು ಅವರು ನಾಲ್ಕು ತಿಂಗಳ ಕಾಲ ವಿಶ್ರಾಂತಿ ಪಡೆಯಬೇಕಾಯಿತು. ಆ ನಾಲ್ಕು ತಿಂಗಳ ಕಾಲ ದೆಹಲಿ, ಮುಸ್ಸೂರಿ ಮತ್ತು ಡೆಹ್ರಾಡೂನ್‌ನಲ್ಲಿ ವಿಶ್ರಾಂತಿ ಪಡೆದರು. ಆರಂಭದಲ್ಲಿ ಅವರು ಮಲಗೇ ಇರಬೇಕಾಗಿತ್ತು. ೨೪ ಘಂಟೆಗಳೂ ಒಬ್ಬ ವೈದ್ಯ ಮತ್ತು ಶುಶ್ರೂಷಕಿ ಜೊತೆಯಲ್ಲೇ ಇರುತ್ತಿದ್ದರು. ಸುಶೀಲ ನಯ್ಯಾರ್, ಮಣಿಬೆನ್ ಮತ್ತು ಶಂಕರ್ ಸಹ ಜೊತೆಯಲ್ಲೇ ಇರುತ್ತಿದ್ದರು. ಕ್ರಮೇಣ ಪಟೇಲರು ಗಾಲಿ ಕುರ್ಚಿಯಲ್ಲಿ ಕುಳಿತು ಚಲಿಸುವಂತಾದರು. ನಂತರ ನಡೆಯುವಂತಾದರು. ಆಗ ಅವರನ್ನು ಗಿರಿಧಾಮಕ್ಕೆ ಕರೆದೊಯ್ಯಲಾಯಿತು.

ಅವರು ದೆಹಲಿಯಲ್ಲಿ ಇದ್ದಾಗ, ಅಮೆರಿಕದಲ್ಲಿ ವ್ಯಾಸಂಗ ಮಾಡುತ್ತಿದ್ದ ಅವರ ಹಿರಿಯ ಮೊಮ್ಮಗ ೨೧ ವರ್ಷದ ಬಿಪಿನ್ ಬಂದನು. ಅವನಿಗೆ ಎರಡು ಬುದ್ಧಿವಾದಗಳನ್ನು ಹೇಳಿದರು: ಮೊದಲನೆಯದು: 'ನಾನು ಕುರ್ಚಿಯಲ್ಲಿ (ಮಂತ್ರಿ ಸ್ಥಾನದಲ್ಲಿ) ಇರುವವರೆಗೆ, ನನಗೆ ಅನಾರೋಗ್ಯವಾಗಿ ನೀನು ನನ್ನನ್ನು ನೋಡಲೇಬೇಕಾದ ಹೊರತೂ, ದೆಹಲಿಗೆ ಬರಬೇಡ.' ಎರಡನೆಯದು: 'ಎಲ್ಲಾ ತರಹದ ಜನ ನಿನ್ನನ್ನು ಸಂಪರ್ಕಿಸುತ್ತಾರೆ, ಎಚ್ಚರಿಕೆಯಿಂದಿರು.'[೩೫೦]

ಮುಸ್ಸೂರಿ ಮತ್ತು ಡೆಹ್ರಾಡೂನ್‌ಗಳಲ್ಲಿ ಘನಶ್ಯಾಂದಾಸ್ ಬಿರ್ಲಾರವರ ಸದನಗಳಿದ್ದುವು. ಪಟೇಲರು ಬಿರ್ಲಾ ಅತಿಥಿಯಾಗಿ ಅಲ್ಲಿ ತಂಗಿದರು. ನೆಹರು ಅವರೊಡನೆ ಸತತ ಸಂಪರ್ಕದಲ್ಲಿರುತ್ತಿದ್ದರು. ಇತರ ಮಂತ್ರಿಗಳೂ ದೂರವಾಣಿ ಕರೆ ಮಾಡುತ್ತಿದ್ದರು. ಮೌಂಟ್‌ಬ್ಯಾಟನ್‌ರವರು ಹೈದರಾಬಾದ್‌ನ ಬೆಳವಣಿಗೆಗಳನ್ನು ತಿಳಿಸುತ್ತಿದ್ದರು. ಶಂಕರ್ ಜೊತೆಯಲ್ಲೇ ಇದ್ದರು. ಮೆನನ್ ಪ್ರತಿದಿನ ವರದಿ

ಒಪ್ಪಿಸುತ್ತಿದ್ದರು. ಪಟೇಲರು ಅಲ್ಲಿಂದಲೇ ದೂರವಾಣಿಯಲ್ಲಿ ಕಾರ್ಯದರ್ಶಿಗಳಿಗೆ ಸೂಚನೆಗಳನ್ನು ಕೊಡುತ್ತಿದ್ದರು. ಪತ್ರಗಳನ್ನು ಬರೆಸುತ್ತಿದ್ದರು. ಅವರು ಇದ್ದೆಡೆಯೇ ಕಛೇರಿ ನಡೆಸುತ್ತಿದ್ದರು. ನೈಜ ಕರ್ಮಯೋಗಿಯಾಗಿದ್ದರು.

೧೫.೯ ಹೊಸ ಗೌರ್ನರ್ ಜೆನೆರಲ್

ಸ್ವತಂತ್ರ ಭಾರತದ ಮೊದಲ ಗೌರ್ನರ್ ಜೆನೆರಲ್ ಆಗಿ ಭಾರತದಲ್ಲೇ ಮುಂದುವರೆದಿದ್ದ ಲಾರ್ಡ್ ಮೌಂಟ್‌ಬ್ಯಾಟನ್‌ರವರು ೧೯೪೮ರ ಜೂನ್ ತಿಂಗಳಲ್ಲಿ ಇಂಗ್ಲೆಂಡಿಗೆ ವಾಪಸ್ಸು ತೆರಳುವವರಿದ್ದರು. ಅದರಿಂದ ಅವರ ಸ್ಥಾನಕ್ಕೆ ಒಬ್ಬರನ್ನು ಆರಿಸಬೇಕಾಯಿತು. ಮಾರ್ಚ್ ತಿಂಗಳ ಅಂತ್ಯ ಭಾಗದಲ್ಲಿ ನೆಹರು ಮತ್ತು ಪಟೇಲ್ ಚರ್ಚಿಸಿ ರಾಜಾಜಿಯವರು ಮುಂದಿನ ಗೌರ್ನರ್ ಜೆನೆರಲ್ ಆಗಬೇಕೆಂದು ತೀರ್ಮಾನಿಸಿದರು. ರಾಜಾಜಿಯವರು ಆಗ ಬಂಗಾಳದ ಗೌರ್ನರ್ ಆಗಿದ್ದರು. ೧೯೪೭ರ ನವೆಂಬರ್‌ನಲ್ಲಿ ಮೌಂಟ್‌ಬ್ಯಾಟನ್‌ರವರು ತಮ್ಮ ಸೋದರ ಸಂಬಂಧಿ ಫಿಲಿಪ್ ಮೌಂಟ್‌ಬ್ಯಾಟನ್ ಮತ್ತು ರಾಜಕುಮಾರಿ ಎಲಿಜಬೆತ್‌ರವರ ವಿವಾಹಕ್ಕಾಗಿ ಇಂಗ್ಲೆಂಡಿಗೆ ತೆರಳಿದಾಗ ರಾಜಾಜಿಯವರು ಅವರ ಸ್ಥಾನದಲ್ಲಿ ಹಂಗಾಮಿ ಗೌರ್ನರ್ ಜೆನೆರಲ್ ಆಗಿದ್ದರು. ಅವರು ಗೌರ್ನರ್ ಜೆನೆರಲ್ ಪದವಿಯನ್ನು ಒಪ್ಪಿಕೊಳ್ಳಲಿಲ್ಲ. ಅದಕ್ಕೆ ಬದಲಾಗಿ, ನೆಹರು ಗೌರ್ನರ್ ಜೆನೆರಲ್ ಆಗಲಿ, ಪಟೇಲರು ಪ್ರಧಾನಮಂತ್ರಿ ಯಾಗಲಿ. ಅದು ಅಂತರರಾಷ್ಟ್ರೀಯ ವಲಯದಲ್ಲಿ ದೇಶಕ್ಕೆ ಭಾರಿ ಗೌರವವನ್ನು ತರುತ್ತದೆ ಮತ್ತು ಆಂತರಿಕ ವಿಷಯಗಳಲ್ಲಿ ಧಕ್ಷ ಏರ್ಪಾಡು ಆಗುತ್ತದೆ – ಎಂದು ನೆಹರುಗೆ ಪತ್ರ ಬರೆದು ತಿಳಿಸಿದರು. ನೆಹರು ಆ ಸಲಹೆಯನ್ನು ಒಪ್ಪಲಿಲ್ಲ. ರಾಜಾಜಿ ಯವರು ಗೌರ್ನರ್ ಜೆನೆರಲ್ ಆಗಿ, ಬಂಗಾಳದಿಂದ ದೆಹಲಿಗೆ ಬರಬೇಕೆಂದು ಒತ್ತಾಯಿಸಿದರು. ಪಟೇಲರು ಸಹ ಒತ್ತಾಯಿಸಿದರು. ಅವರು ರಾಜಾಜಿಗೆ ಪತ್ರ ಬರೆದು, "ಬಾಪು ಸಾವಿನ ನಂತರ ಅವರ ಒಳ ವೃತ್ತದವರ ಪೈಕಿ ಉಳಿದಿರುವವರು ಒಂದು ಗೂಡಿ ಕೆಲಸ ಮಾಡಬೇಕಾದುದು ಅತ್ಯವಶ್ಯಕ" ಎಂದರು. ಅವರ ಮಾತನ್ನು ಒಪ್ಪಿ ರಾಜಾಜಿಯವರು ೧೯೪೭ರ ಜೂನ್ ೨೧ರಂದು ಗೌರ್ನರ್ ಜೆನೆರಲ್ ಆಗಿ ಅಧಿಕಾರ ವಹಿಸಿಕೊಂಡರು.[೩೫೧]

೧೫.೧೦ ನೆಹರು ಬಗೆಗೆ ಬದಲಾದ ಧೋರಣೆ

ದಿನಗಳು ಕಳೆದಂತೆ ನೆಹರು ಸರ್ದಾರರಿಗಿಂತ ಹೆಚ್ಚು ಜನಪ್ರಿಯ ಆಗತೊಡಗಿದರು. ಪಟೇಲರು ಕಾಂಗ್ರೆಸ್ಸಿನಲ್ಲಿ ಶಿಸ್ತು ಇರಬೇಕೆಂದು ಒತ್ತಾಯಿಸುತ್ತಿದ್ದರು, ಕಾರ್ಖಾನೆಗಳಲ್ಲಿ ಕಾರ್ಮಿಕರು ಮತ್ತು ಜಮೀನುಗಳಲ್ಲಿ ರೈತರು ಹೆಚ್ಚು ಹೆಚ್ಚು

ದುಡಿಯಬೇಕೆಂದು ಹೇಳುತ್ತಿದ್ದರು. ಆದರೆ ನೆಹರು ಜಮೀನ್ದಾರರ ಮತ್ತು ಬಂಡವಾಳ ಗಾರರ ಮೇಲೆ ಆಕ್ರಮಣ ಮಾಡುತ್ತಿದ್ದರು. ನೆಹರು ಕರೆ ಆಕರ್ಷಣೀಯವಾಗಿತ್ತು. ಆದರೆ ಸರ್ದಾರರ ದುಡಿತದ ಶಿಸ್ತಿನ ಕರೆ ಆಕರ್ಷಣೀಯವಾಗಿರಲಿಲ್ಲ! ಅದರಿಂದ ನೆಹರುರವರ ಜನಪ್ರಿಯತೆ ಹೆಚ್ಚುತ್ತಾ ಹೋಯಿತು. ಜೊತೆಗೆ ನೆಹರು ಅಂತರರಾಷ್ಟ್ರೀಯ ವೇದಿಕೆಯಲ್ಲಿ ಹೆಸರು ಗಳಿಸಿದ್ದರು. ಶಾಂತಿ ದೂತ ಎಂದು ಹೊಗಳಲ್ಪಟ್ಟಿದ್ದರು. ಆದರೆ ಪಟೇಲರಿಗೆ ಭಾರತವೇ ವಿಶ್ವವಾಗಿತ್ತು.

ಹಾಗೆಂದಾಕ್ಷಣಕ್ಕೆ ಜನರು ಪಟೇಲರನ್ನು ಮರೆತರೆಂದು ಅರ್ಥವಲ್ಲ. ಹೈದರಾಬಾದಿನ ಸೇರ್ಪಡೆ ಆದಮೇಲೆ ಅವರ ಗೌರವ ಹೆಚ್ಚಿತು. ರಾಜಾಜಿಯವರು, "ಭಾರತದಲ್ಲಿ ಪ್ರತಿಯೊಬ್ಬರೂ ನಿಮ್ಮ ಬಗೆಗೆ ಹರ್ಷೋಲ್ಲಾಸದಿಂದಿದ್ದಾರೆ" ಎಂದು ಬರೆದರು. ಹೈದರಾಬಾದ್‌ನ ನಿಜಾಮ ಶರಣಾಗತರಾದ ಆರು ವಾರಗಳ ನಂತರ ಪಟೇಲರ ಹುಟ್ಟು ಹಬ್ಬ ಬಂದಿತು. ಆಗ ನೆಹರು ೫ ವಾರಗಳ ವಿದೇಶಿ ಪ್ರವಾಸ ದಲ್ಲಿದ್ದುದರಿಂದ ಪಟೇಲರೇ ಹಂಗಾಮಿ ಪ್ರಧಾನಿಯಾಗಿದ್ದರು. ಸರ್ದಾರರು ತಮ್ಮ ಹುಟ್ಟು ಹಬ್ಬದ ದಿನವನ್ನು ಬೊಂಬಾಯಿಯಲ್ಲಿ ತಮ್ಮ ಮಗನ ಅಪಾರ್ಟ್‌ಮೆಂಟ್‌ನಲ್ಲಿ ಕಳೆದರು. ನೂರಾರು ಶುಭಾಶಯ ಟೆಲಿಗ್ರಾಂಗಳು ಬಂದುವು. ನೆಹರು ಸಹ ವಿದೇಶದಿಂದ ಕೇಬಲ್ ಕಳುಹಿಸಿದರು. ಪಟೇಲರನ್ನು ಕಾಣಲು ಬಂದವರಿಗೆ ಮತ್ತು ಅವರಿಗೆ ಬಂದ ದೂರವಾಣಿ ಕರೆಗೆ ಲೆಕ್ಕವೇ ಇಲ್ಲ. ಕೆಲವು ಅನಾರೋಗ್ಯ ಪೀಡಿತ ಸ್ನೇಹಿತರು ನೇರವಾಗಿ ಆಸ್ಪತ್ರೆಯಿಂದಲೇ ಬಂದಿದ್ದರು. ನಿಜಾಮನ ಮಗನೂ ಬಂದು ತನ್ನ ಗೌರವಗಳನ್ನು ಅರ್ಪಿಸಿದನು. ಬೊಂಬಾಯಿ ಸರ್ಕಾರವು ಸೆಕ್ರೆಟರಿಯೆಟ್‌ನಲ್ಲಿ ಗೌರವ ಸಮಾರಂಭ ಏರ್ಪಡಿಸಿತು. ಬಾಂಬೆ ಪ್ರದೇಶ ಕಾಂಗ್ರೆಸ್ ಸಮಿತಿಯು ಬಾಪುವಿನ ಎದೆ ಮಟ್ಟದ ಬೆಳ್ಳಿಯ ವಿಗ್ರಹವನ್ನು ನೀಡಿತು. ಹೆಸರು ಹೊರಗೆಡಹದ ಸ್ನೇಹಿತರ ಒಂದು ಗುಂಪು ಅಶೋಕ ಸ್ಥಂಬದ ಸ್ವರ್ಣ ಪ್ರತಿರೂಪ ವನ್ನು ನೀಡಿತು. ಒಬ್ಬ ಅಭಿಮಾನಿ ಅವರ ವರ್ಣ ಚಿತ್ರ ರಚಿಸಿ ಅರ್ಪಿಸಿದನು. ತಮ್ಮ ಹಳೆಯ ಆಪ್ತ ಸ್ನೇಹಿತ ದಂಪತಿ – ಕನುಗಾ ದಂಪತಿಯನ್ನು ನೆನೆದು ಅಹಮದಾಬಾದ್‌ಗೆ ದೂರವಾಣಿ ಕರೆ ಮಾಡಿ ನಂದು ಬೆಹೆನ್ ಒಡನೆ ಮಾತನಾಡಿ ಸಂತಸ ಪಟ್ಟರು.[೩೫೨]

ಮುಂದೆ ಪಂಜಾಬ್, ನಾಗಪುರ ಮತ್ತು ಉಸ್ಮಾನಿಯ ವಿಶ್ವವಿದ್ಯಾಲಯಗಳು ಪಟೇಲರಿಗೆ ಗೌರವ 'ಡಾಕ್ಟರ್ ಆಫ್ ಲಾಸ್' ಪದವಿಯನ್ನು ನೀಡಿ ಗೌರವಿಸಿದುವು. ಹಣವಿಲ್ಲದ್ದರಿಂದ ವಿಶ್ವವಿದ್ಯಾನಿಲಯವನ್ನು ಸೇರಲಾಗದೆ ಹೋದ ರೈತನ ಮಗನನ್ನು ಮೂರು ಗೌರವ ಡಾಕ್ಟರೇಟ್‌ಗಳು ಹುಡುಕಿಕೊಂಡು ಬಂದುವು![೩೫೩]

ಪಟೇಲರು ಇಂತಹ ಯಶಸ್ಸು, ಕೀರ್ತಿ, ಜನಪ್ರಿಯತೆ, ಗೌರವ, ವೈಭವ ಮತ್ತು ಔನ್ನತ್ಯದ ಗಿರಿಯನ್ನೇರಿದ ಸಮಯದಲ್ಲಿ ನಿವೃತ್ತರಾಗಬಿಡಬಹುದಾಗಿತ್ತು. ಅವರ ಜೀವನದ ಎರಡು ಬಯಕೆಗಳು – ದೇಶದ ಸ್ವಾತಂತ್ರ್ಯ ಮತ್ತು ಏಕೀಕರಣ – ಈಡೇರಿದ್ದುವು. ಅವರ ಸ್ವಂತಕ್ಕೆ ಸ್ವಾರ್ಥಕ್ಕೆ ಆಗಬೇಕಾದುದೇನೂ ಇರಲಿಲ್ಲ. ನಿವೃತ್ತನಾಗುವುದರಿಂದ ನೆಹರು ಅಧೀನತೆಯೂ ತಪ್ಪುತ್ತಿತ್ತು. ಆದರೆ ಅವರು ಹಾಗೆ ಮಾಡಲಿಲ್ಲ. ಮಹಾತ್ಮ ಗಾಂಧಿಯೊಡನೆ ಅವರು ನಡೆಸಿದ ಅಂತಿಮ ಭೇಟಿಯಲ್ಲಿ ಮಹಾತ್ಮ "ನೀನು ಜವಹರನ ಪಕ್ಕ ಇರಬೇಕು" ಎಂದಿದ್ದರು. ಪಟೇಲರೂ ಒಪ್ಪಿದ್ದರು. ಆ ಮಾತನ್ನು ಅವರು ಮುರಿಯುವ ಹಾಗಿರಲಿಲ್ಲ. ರಾಷ್ಟ್ರದ ಹಿತವೂ ಅದನ್ನು ಬಯಸುತ್ತಿತ್ತು. ದೇಶದಲ್ಲಿ ಆಗಬೇಕಾದ ಕೆಲಸ ಇನ್ನೂ ಇತ್ತು. ಸಂವಿಧಾನ ರಚನೆಯ ಕೆಲಸ ಪೂರ್ಣವಾಗಿರಲಿಲ್ಲ. ಜೊತೆಗೆ ನೆಹರುಗೆ ಅವರ ಅವಶ್ಯಕತೆ ಇತ್ತು. ಬಿಟ್ಟು ಹೋಗಿ ಆರಾಮವಾಗಿರುವ ಆಕರ್ಷಣೆಯನ್ನು ಬಿಸುಟು ಅಧಿಕಾರದಲ್ಲಿ ಮುಂದುವರಿಯಲು ತೀರ್ಮಾನಿಸಿದರು. ೧೯೪೯ರ ಫೆಬ್ರುವರಿಯಲ್ಲಿ ಅವರು ಇಂತೆಂದರು:

> ಹಿಂದೂಸ್ತಾನದ ಸೇವೆಯಲ್ಲಿ ನಾನೊಬ್ಬ ಸೈನಿಕ ಎಂದು ನಾನು ಭಾವಿಸಿದ್ದೇನೆ. ಸೇವೆಯ ಈ ಹಾದಿಯಿಂದ ನಾನು ವಿಮುಖನಾದಾಗ ನನ್ನ ಬದುಕಿನ ಅಂತ್ಯ.[೫೫೪]

ಮುಂದೆ ನೆಹರು ಬಗೆಗೆ ತಮ್ಮ ನಡವಳಿಕೆ ಹೇಗಿರಬೇಕು? – ಎಂದು ಆಲೋಚಿಸಿ ಒಂದು ತೀರ್ಮಾನಕ್ಕೆ ಬಂದರು, ಪಟೇಲ್. ಅದು ಸ್ಪಷ್ಟತೆ ಮತ್ತು ವಿಧೇಯತೆಯ ಸಂಗಮ. ಅವರು ನೆಹರು ಮಾತನ್ನು ಉಲ್ಲಂಘಿಸುವುದನ್ನು ನಿಲ್ಲಿಸಬೇಕೆಂದು, ನೆಹರು ಸೂಚಿಸಿ ನಂತರ ನಿರ್ಧರಿಸಲ್ಪಟ್ಟ ಯಾವುದೇ ನೀತಿ ಮಾರ್ಗದ ವಿರುದ್ಧ ತಾವು ನಿಲ್ಲಬಾರದೆಂದು, ಆದರೆ ತಮ್ಮ ಅಭಿಪ್ರಾಯವನ್ನು ನೆಹರುಗೆ ಸ್ಪಷ್ಟವಾಗಿ ತಿಳಿಸಬೇಕೆಂದು ನಿರ್ಧರಿಸಿದರು.[೫೫೫]

ಎಷ್ಟಾದರೂ ನೆಹರು ಪ್ರಧಾನ ಮಂತ್ರಿ ಮತ್ತು ತಮಗಿಂತ ಹೆಚ್ಚಿನ ಅಧಿಕಾರ ಅವರದು – ಅನ್ನುವುದು ಸರ್ದಾರರ ಮನಸ್ಸಿನಲ್ಲಿತ್ತು.

(ಜವಹರಲಾಲ್ ನೆಹರುರವರಿಗೂ ಸಹ ಪಟೇಲರ ಆವಶ್ಯಕತೆಯ ಅರಿವಿತ್ತು ಎನ್ನಿಸುತ್ತದೆ, ಅವರ ಅನೇಕ ಹೇಳಿಕೆಗಳನ್ನು ಗಮನಿಸಿದರೆ – ಲೇಖಕ)

೧೯೪೮ರ ಡಿಸೆಂಬರ್ ವೇಳೆಗೆ ಸಮಾಜವಾದಿಗಳು ಕಾಂಗ್ರೆಸ್ಸನ್ನು ತೊರೆದಿದ್ದರು. ರಾಷ್ಟ್ರೀಯ ಸ್ವಯಂಸೇವಕ ಸಂಘವು ಸರ್ಕಾರದ ವಿರುದ್ಧ ಅಖಿಲ

ಭಾರತ ಹೋರಾಟ ನಡೆಸುತ್ತಿತ್ತು. ಹೈದರಾಬಾದ್‌ನಲ್ಲಿ ಕಮ್ಯುನಿಸ್ಟರು ಹಿಂಸಾಚಾರದಲ್ಲಿ ತೊಡಗಿದ್ದರು. ಪಂಜಾಬ್‌ನಲ್ಲಿ ಅಕಾಲಿಗಳು ಅಸಮಾಧಾನಗೊಂಡಿದ್ದರು. ಸಂಸತ್ತಿನಲ್ಲಿ, "ನನ್ನ ಮಗನು ತನ್ನ ಚಟುವಟಿಕೆಗಳಿಂದ ದೇಶದ ಸ್ವಾತಂತ್ರ್ಯಕ್ಕೆ ಏನಾದರೂ ಭಂಗ ತಂದರೆ ಅವನನ್ನು ಬಡಿದುಹಾಕುವುದಕ್ಕೆ ಒಂದು ಕ್ಷಣವೂ ಯೋಚಿಸುವುದಿಲ್ಲ," ಎಂದು ನುಡಿದಿದ್ದರು ಪಟೇಲರು. ಆ ವೇಳೆಗೆ ನೆಹರು – ಪಟೇಲ್ ಸಂಬಂಧ ತೃಪ್ತಿಕರವಾಗಿತ್ತು. "ಪಟೇಲರ ಪ್ರೀತಿ ಮತ್ತು ಸಲಹೆಗಳು ಇಲ್ಲದೆ ಹೋಗಿದ್ದರೆ, ನಾನು ಸರ್ಕಾರವನ್ನು ನಡೆಸಲು ಆಗುತ್ತಿರಲಿಲ್ಲ," ಎಂದು ನೆಹರು ನುಡಿದಿದ್ದರು. ೧೯೪೯ರ ಫೆಬ್ರುವರಿಯಲ್ಲಿ ಸಿಕ್ಖರ ಧಾರ್ಮಿಕ ಗುರು ಮತ್ತು ಬಲಿಷ್ಠ ರಾಜಕೀಯ ನಾಯಕ ಮಾಸ್ಟರ್ ತಾರಾಸಿಂಗ್ ಪ್ರತ್ಯೇಕ ಪಂಜಾಬಿ ರಾಜ್ಯಕ್ಕೆ ಒತ್ತಾಯಿಸಿ ಅಕಾಲಿ ದಳದ ಜಾತಾ ತನ್ನ ನಾಯಕತ್ವದಲ್ಲಿ ದೆಹಲಿಗೆ ಹೋಗುವುದೆಂದು ಪ್ರಕಟಿಸಿದನು. ಸರ್ದಾರ್‌ರವರು ದೆಹಲಿಗೆ ೧೭ ಮೈಲಿಗಳ ದೂರದ ರೈಲ್ವೆ ನಿಲ್ದಾಣದಲ್ಲೆ ಮಾಸ್ಟರ್ ತಾರಾಸಿಂಗ್‌ರವರನ್ನು ಬಂಧಿಸಿಸಿದರು. ಅಕಾಲಿ ದಳದ ಜಾತಾವನ್ನು ತಡೆಹಿಡಿಸಿದರು. ಹದಿನೈದು ದಿನಗಳ ನಂತರ ಅವರು, "ತಾರಾಸಿಂಗ್‌ರವರನ್ನು ಬಂಧಿಸುವುದು ನನಗೆ ಅತ್ಯಂತ ಹೆಚ್ಚಿನ ನೋವು ಮತ್ತು ಸಂಕಟವನ್ನು ಕೊಟ್ಟಿತು. ಆದರೆ ಬೇರೆ ದಾರಿಯೇ ಇರಲಿಲ್ಲ. ಅವರ ನೀತಿಯಲ್ಲಿ ನಾವು ಆಶಿಸಿರುವ ಭಾರತದ ಅಂತ್ಯ ಅಡಗಿತ್ತು," ಎಂದರು. ಪಟೇಲರಲ್ಲದೆ ಮತ್ತಾರಿಗೂ ಮಾಸ್ಟರ್ ತಾರಾಸಿಂಗ್‌ರವರನ್ನು ಹಿಡಿದಿಡುವ ಧೈರ್ಯ ಬರುತ್ತಿರಲಿಲ್ಲ.[೩೫೬]

❖ ◆ ❖

ತ್ರಿಮೂರ್ತಿಗಳು : ನೆಹರು, ಗಾಂಧಿ, ಪಟೇಲ್

೧೬. ಅಪಘಾತಗಳ ಸುಳಿಯಲ್ಲಿ

೧೬.೧ ಅಂತರಿಕ್ಷದಲ್ಲಿ ಅರಿವಿಗೆ ಬಾರದ ಅವಗಢ

೧೯೪೯ರ ಫೆಬ್ರುವರಿ ೨೧ರ ಬೆಳಗ್ಗೆ ದೆಹಲಿಯ ಸಫ್ದರ್ ಜಂಗ್ ವಿಮಾನ ನಿಲ್ದಾಣದಿಂದ ಮದರಾಸಿನ ಮೀನಂಬಾಕಂ ನಿಲ್ದಾಣಕ್ಕೆ ಒಂದು ವಿಮಾನ ಹೊರಟಿತು. ಅದು ಮೈಸೂರು ಸರ್ಕಾರದ ಒಂದು ಡಕೋಟ ವಿಮಾನ. ಕ್ಯಾಪ್ಟನ್ ಸುಂದರಂ (೧೯೧೬–೯೭) ಅದರ ಚಾಲಕ. ಅವರು ಭಾರತ ವಿಮಾನಯಾನದ ಆದ್ಯ ಪ್ರವರ್ತಕರಲ್ಲಿ ಒಬ್ಬರು. ಒಬ್ಬ ಅತಿ ಮುಖ್ಯ ಪ್ರಯಾಣಿಕ (VIP) ಆ ವಿಮಾನದಲ್ಲಿದ್ದರು. ಅವರು ಭಾರತದ ಅಂದಿನ ಉಪಪ್ರಧಾನಮಂತ್ರಿ ಮತ್ತು ಗೃಹಮಂತ್ರಿ ಆಗಿದ್ದ ಸರ್ದಾರ್ ವಲ್ಲಭಭಾಯ್ ಪಟೇಲ್. ಅವರ ಜೊತೆಯಲ್ಲಿ ಅವರ ಮಗಳು ಮಣಿಬೆನ್ ಮತ್ತು ಅವರ ಆಪ್ತ ಕಾರ್ಯದರ್ಶಿ ವಿ. ಶಂಕರ್ ಇದ್ದರು. ಅವರ ವಿಮಾನ ಮಧ್ಯಾಹ್ನದ ನಂತರ ನಾಗಪುರವನ್ನು ತಲುಪಿತು. ಅಲ್ಲಿ ಗೌರ್ನರ್ ಒಡನೆ ಭೋಜನ ಸ್ವೀಕರಿಸಿದ ನಂತರ ಸಂಜೆ ೫ ಘಂಟೆಗೆ ಅವರ ಪ್ರಯಾಣ ಮುಂದುವರೆಯಿತು. ಸೂರ್ಯ ಮುಳುಗುವ ಹೊತ್ತಿಗೆ ಆ ವಿಮಾನ ಅರ್ಧ ದಾರಿಯನ್ನು ಕ್ರಮಿಸಿದಾಗ ಮದ್ರಾಸ್ ಒಡನೆ ವೈರ್‌ಲೆಸ್ ಸಂಪರ್ಕ ಸಿಕ್ಕಿತು. ಮದ್ರಾಸ್ ತಲುಪುವ ಅಂದಾಜು ಸಮಯವನ್ನು ಮದ್ರಾಸ್ ನಿಲ್ದಾಣ ಕೇಳಿತು. 'ರಾತ್ರಿ ೭.೫೫' ಎಂದು ಉತ್ತರಿಸಿದರು ಕ್ಯಾಪ್ಟನ್ ಸುಂದರಂ. ವೈರ್‌ಲೆಸ್ ಸಂದೇಶ ಮತ್ತೆ ಬಂದಿತು. "ಮದರಾಸಿನ ಘನತೆವೆತ್ತ ಗೌರ್ನರ್‌ರವರು ಉಪಪ್ರಧಾನ ಮಂತ್ರಿಯವರಿಗೆ ತಮ್ಮ ಗೌರವವನ್ನು ಕಳುಹಿಸಿದ್ದಾರೆ. ಭೋಜನವನ್ನು ೮.೩೦ಕ್ಕೆ ಏರ್ಪಡಿಸಿದೆ. ಇದು ಅವರಿಗೆ ಅನುಕೂಲವೆ?" "ಆಗಬಹುದು" ಎನ್ನುವ ಮರು ಸಂದೇಶ ವಿಮಾನದಿಂದ ರವಾನೆಯಾಯಿತು.

ವಿಮಾನ ಮುಂದುವರೆದು ಮದ್ರಾಸ್‌ಗೆ ಇನ್ನು ೨೦೦ ಮೈಲಿ ಉಳಿಯಿತು. ಆಗ ಎಡಭಾಗದ ಎಂಜಿನ್‌ನ ಶಾಖ ತೋರಿಸುವ ಘಟಕ ೨೭೦ ಡಿಗ್ರಿ ಸೆಂಟಿಗ್ರೇಡನ್ನು ತೋರಿಸಿತು. ಅದು ಮಾಮೂಲಿಗಿಂತ ಹೆಚ್ಚಿನ ಶಾಖ. ತಕ್ಷಣ ಕ್ಯಾಪ್ಟನ್ ಸುಂದರಂ ರವರು ತೈಲ ಪ್ರಮಾಣವನ್ನು ಪರೀಕ್ಷಿಸಿದರು. ಅದು ಸುರಕ್ಷತಾ ಮಟ್ಟಕ್ಕಿಂತ ಕೆಳಕ್ಕೆ ಇಳಿದಿತ್ತು ಮತ್ತು ತೈಲದ ಶಾಖ ೧೨೦ ಡಿಗ್ರಿಗೆ ಏರಿತ್ತು. ಅದು ಎಂಜಿನ್ ನಿಂತು ಹೋಗುವ ಸನ್ನಿವೇಶವನ್ನು ಸೂಚಿಸಿತು. ಸುಂದರಂ ಪ್ರೊಪೆಲ್ಲರ್ ಅನ್ನು ಗಮನಿಸಿದರು. ಅದು ತಿರುಗುವುದು ನಿಂತುಹೋಗಿತ್ತು. ಈಗ ಬಲಗಡೆಯ ಯಂತ್ರದಿಂದ ಮಾತ್ರ ವಿಮಾನ ಚಲಿಸಬೇಕಾಯಿತು. ವಿಮಾನ ಸುಲಲಿತವಾಗಿ ಚಲಿಸುತ್ತಿತ್ತು. ಆದರೆ ಅದರ ವೇಗ ಗಂಟೆಗೆ ೧೩೦ ಮೈಲಿಗೆ ಇಳಿದಿತ್ತು. ಮದರಾಸ್‌ಗೆ ವೈರ್‌ಲೆಸ್ ಕರೆ ಮಾಡಿ ಬದಲಾದ 'ತಲುಪುವ ಅಂದಾಜು ಸಮಯ'ವನ್ನು ತಿಳಿಸಲಾಯಿತು.

ಕ್ಯಾಪ್ಟನ್ ಸುಂದರಂ ಗಾಬರಿಗೊಳ್ಳಲಿಲ್ಲ. ಆದರೆ ಒಂದೇ ಒಂದು ಎಂಜಿನ್ ಎಷ್ಟು ಕಾಲ ಕೆಲಸ ಮಾಡಬಹುದು ಎನ್ನುವ ಚಿಂತೆ ಉಂಟಾಗಿತ್ತು. ಕ್ಯಾಬಿನ್‌ನಲ್ಲಿದ್ದ ಪ್ರಯಾಣಿಕರಿಗೆ ಪರಿಸ್ಥಿತಿಯನ್ನು ತಿಳಿಸಲಿಲ್ಲ, ಅವರಿಗೆ ಗೊಂದಲ ಉಂಟುಮಾಡ ಬಾರದೆಂದು. ಮದ್ರಾಸ್ ವಿಮಾನ ನಿಲ್ದಾಣಕ್ಕೂ ತಿಳಿಸಲಿಲ್ಲ, ಅಲ್ಲಿ ಭೀತಿ ಮತ್ತು ಆತಂಕದ ಸನ್ನಿವೇಶ ಉಂಟಾಗುವುದೆಂದು.

ಬಲಭಾಗದ ಒಂದು ಎಂಜಿನ್ ಮಾತ್ರ ಕೆಲಸ ಮಾಡುತ್ತಿದ್ದುದರಿಂದ ಅದರ ಕೆಲಸದ ಒತ್ತಡ ಹೆಚ್ಚಾಗಿ, ಅದರ ಶಾಖ ಏರುತ್ತಿತ್ತು. ಆದರೆ ಇನ್ನೂ ಸುರಕ್ಷತೆಯ ಮಟ್ಟವನ್ನು ಮೀರಿರಲಿಲ್ಲ. ವಿಮಾನ ೯೦೦೦ ಅಥವಾ ೧೦,೦೦೦ ಅಡಿ ಎತ್ತರದಲ್ಲಿ ಹಾರುತ್ತಿದ್ದರೆ ಹೊರಗಿನ ಗಾಳಿಯ ಶಾಖ ಸುಮಾರು ೫೫ ಡಿಗ್ರಿ ಸೆಂಟಿಗ್ರೇಡ್ ಇರುತ್ತಿತ್ತು. ಆದರೆ ವಿಮಾನ ೩೦೦೦ ಅಡಿ ಎತ್ತರದಲ್ಲಿ ಹಾರುತ್ತಿದ್ದುದರಿಂದ ಗಾಳಿಯಿಂದ ತಂಪಾಗುವ ಯಂತ್ರದ ಶಾಖ ಏರುತ್ತಿತ್ತು. ಹೀಗೆ ಶಾಖ ಏರಿದರೆ ಯಂತ್ರದಲ್ಲಿ ಏನೋ ಭಾರಿ ತೊಂದರೆ ಇದೆಯೆಂದು ಅರ್ಥ. ಜೊತೆಗೆ ವಿಮಾನವು ನೇರವಾಗಿ ಚಲಿಸುವಂತೆ ಇಟ್ಟಿರುವುದಕ್ಕಾಗಿ ಚುಕ್ಕಾಣಿಯ ಮೇಲೆ ಪಾದದಿಂದ ಒತ್ತಿ ಕುಳಿತಿದ್ದುದರಿಂದ ಸುಂದರಂರವರ ಕಾಲುಗಳು ನೋಯಲು ಶುರುವಾಗಿತ್ತು. ಆಗ ಅವರಿಗೆ ಒಬ್ಬ ಅನುಭವಸ್ಥ ಸಹಚಾಲಕ ಇದ್ದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ಅನ್ನಿಸಿತು.

ವಿಮಾನ ಪುಲಿಕಾಟಿಗೆ ಬಂದಿತು. ಮದ್ರಾಸ್‌ಗೆ ಇನ್ನು ೫೦ ಮೈಲಿಗಳು ಮಾತ್ರ ಉಳಿದಿತ್ತು. ನಗರದ ವಿದ್ಯುದ್ದೀಪಗಳ ಬೆಳಕು ಕಾಣಲಾರಂಭಿಸಿತು. ವಿಮಾನ ನಿಲ್ದಾಣಕ್ಕೆ ದೂರವಾಣಿ ಕರೆಯ ಮೂಲಕ ಇಪ್ಪತ್ತು ನಿಮಿಷಗಳಲ್ಲಿ ಇಳಿಯುವುದಾಗಿ

ಸುಂದರಂ ತಿಳಿಸಿದರು. ಸುಂದರಂ ಮದ್ರಾಸ್ ಟವರ್ ಅನ್ನು ಸಂಪರ್ಕಿಸಿದರು. ಎಲ್ಲವೂ 'ಕ್ಲಿಯರ್' ಆಗಿದೆ ಎಂಬ, ಇಳಿಯಲು ಅವರ ವಿಮಾನವೇ ಪ್ರಥಮ ಎನ್ನುವ, ಸಂದೇಶ ದೊರಕಿತು. ಈಗ ವಿಮಾನ ನಿಲ್ದಾಣದ ರನ್‌ವೇಯ ಸಾಲು ದೀಪಗಳು ಕಾಣಿಸಿದುವು. ಸುಂದರಂ ತಾವು ವಿಮಾನವನ್ನು ಇಳಿಸಲು ಆರಂಭಿಸುವುದಾಗಿ ನಿಯಂತ್ರಣ ಗೋಪುರಕ್ಕೆ ತಿಳಿಸಿ, ಅವರಿಂದ ಒಪ್ಪಿಗೆ ಪಡೆದು ಇಳಿಯಲು ಆರಂಭಿಸಿದರು. ಬಹಳ ಎಚ್ಚರಿಕೆಯಿಂದ ನಿಧಾನವಾಗಿ ಇಳಿದು ವಿಮಾನ ರನ್‌ವೇ ನಲ್ಲಿ ಸಾಗಿ ನಿಂತಿತು. ಸುಂದರಂ ನಿಟ್ಟುಸಿರು ಬಿಟ್ಟರು. ಆಗ ಘಂಟೆ ರಾತ್ರಿ ೮.

ಉಪಪ್ರಧಾನಮಂತ್ರಿ ಕೆಳಗೆ ಇಳಿದರು. ಅವರನ್ನು ಗೌರ್ನರ್ ಭಾವನಗರದ ಮಹಾರಾಜರು ಮತ್ತು ಮುಖ್ಯಮಂತ್ರಿ ಪಿ. ರಾಮಸ್ವಾಮಿ ರೆಡ್ಡಿ ಹಾರ ಹಾಕಿ ಸ್ವಾಗತಿಸಿದರು. ಭಾರಿ ಸಂಖ್ಯೆಯ ಗಣ್ಯರೂ ಅಲ್ಲಿ ನೆರೆದಿದ್ದರು. ಸುಂದರಂರವರ ಪತ್ನಿ ಉಷ ಸಹ ಇದ್ದರು.

ಎಲ್ಲರೂ ತೆರಳಿದ ಮೇಲೆ ಸುಂದರಂ ಮತ್ತು ಅವರ ಸಹಾಯಕ ಕ್ರಿಸ್ಟೋಫರ್ ವಿಮಾನದ ಬಳಿ ಹೋಗಿ ಪರೀಕ್ಷಿಸಿದರು. ಎಂಜಿನ್‌ನ ಹೊದಿಕೆಗಳು ಸುಟ್ಟು ಹೋಗಿ ಭಾಗಶಃ ಕರಗಿ ಹೋಗಿದ್ದುವು. ಗಾಳಿ ಹೊರಹೋಗುವ ನಳಿಕೆಯ ಹೊರಸುತ್ತು ಮುರಿದು ಹೋಗಿತ್ತು. ಕಾರ್ಬುರೇಟರ್ ಸುಟ್ಟು ಹೋಗಿ ಭಾಗಶಃ ಕರಗಿ ಹೋಗಿತ್ತು. ಅಂದರೆ ಬೆಂಕಿಯ ಜ್ವಾಲೆ ಅಲ್ಲಿಗೆ ಹರಡಿತ್ತು. ಬೆಂಕಿ ಮುಂದಕ್ಕೆ ಹರಡಿ ಎಂಜಿನ್‌ಗೆ ಹಬ್ಬದೇ ಇದ್ದುದು ನಿಜವಾಗಿಯೂ ಒಂದು ಪವಾಡವಾಗಿತ್ತು.

ಮಾರನೆಯ ದಿನ 'ಹಿಂದೂ' ಪತ್ರಿಕೆಯಲ್ಲಿ ಉಪಪ್ರಧಾನಮಂತ್ರಿ ಸರ್ದಾರ್ ಪಟೇಲರ ಆಗಮನದ ಬಗ್ಗೆ ವರದಿ ಪ್ರಕಟವಾಗಿತ್ತು. ಆದರೆ ಸಂಭವಿಸಬಹುದಾಗಿದ್ದ ಅಪಘಾತದ ಬಗ್ಗೆ ಏನೂ ಇರಲಿಲ್ಲ. ಕ್ಯಾಪ್ಟನ್ ಸುಂದರಂ ಆ ವಿಷಯವನ್ನು ಹೊರಗೆಡಹಿರಲಿಲ್ಲ.

ಸುಂದರಂ ಸ್ಥಳೀಯವಾಗಿ ಬಿಡಿಭಾಗಗಳನ್ನು ತಂದು ರಿಪೇರಿ ಮಾಡಿ, ಪೂರ್ಣ ತಪಾಸಣೆಗಾಗಿ ವಿಮಾನವನ್ನು ಬೆಂಗಳೂರಿನ ವಿಮಾನ ಕಾರ್ಖಾನೆಗೆ ಕಳುಹಿಸಿದರು. ಸುಟ್ಟು ಹೋದ ಕೌಲಿಂಗ್‌ಗಳನ್ನು ಅವರ ಪತ್ನಿ ಉಷ ಮನೆಗೆ ಕೊಂಡೊಯ್ದರು, ನೆನಪಿನ ವಸ್ತುವಾಗಿ ಇಟ್ಟುಕೊಳ್ಳಲು.[೩೫೭]

೧೬.೨ ರಾಷ್ಟ್ರಕ್ಕೆ ಎರಗಿದ ಆತಂಕದ ಕ್ಷಣಗಳು

೧೯೪೯ರ ಮಾರ್ಚ್ ೨೯ರ ರಾತ್ರಿ ೯ ಘಂಟೆಗೆ ಆಲ್ ಇಂಡಿಯಾ ರೇಡಿಯೊ ಸರ್ದಾರರು ಪ್ರಯಾಣಿಸುತ್ತಿದ್ದ ವಿಮಾನ ಸಂಪರ್ಕ ಕಡಿದು ಹೋಗಿದೆ ಎಂದು

ಪ್ರಕಟಿಸಿತು. ಇಡೀ ದೇಶ ಆತಂಕ, ಗಾಬರಿ, ಚಿಂತೆ ಮತ್ತು ದುಃಖದಲ್ಲಿ ಮುಳುಗಿತು. ರಾಷ್ಟ್ರದ ಗತಿಯೇನು? – ಅನ್ನುವ ಚಿಂತೆ ಅವರನ್ನು ಆವರಿಸಿತು.

ಅಂದು ಸಂಜೆ ೫.೩೨ ಘಂಟೆಗೆ ಎರಡು ಇಂಜಿನ್‌ಗಳ ಆರ್.ಐ.ಎಫ್. ಡವ್ ವಿಮಾನದಲ್ಲಿ ಸರ್ದಾರರು ದೆಹಲಿಯಿಂದ ೧೫೮ ಮೈಲಿಗಳ ದೂರದ ಜೈಪುರಕ್ಕೆ ವಿಶಾಲ ರಾಜಸ್ತಾನ್ ರಾಜ್ಯದ ಉದ್ಘಾಟನೆಗಾಗಿ ಹೊರಟಿದ್ದರು. ಅವರೊಡನೆ ಮಣಿಬೆನ್, ಜೋದ್‌ಪುರದ ಮಹಾರಾಜ ಮತ್ತು ಶಂಕರ್ ಇದ್ದರು. ದೆಹಲಿಯಿಂದ ಜೈಪುರಕ್ಕೆ ಸುಮಾರು ಒಂದು ಘಂಟೆ ಕಾಲದ ಪ್ರಯಾಣ. ಅದು ಒಂದು ಚಿಕ್ಕ ವಿಮಾನ. ಅದು ವೇಗವಾಗಿ ಮೇಲೇರಲೂ ಇಲ್ಲ, ವೇಗವಾಗಿ ಮುಂದಕ್ಕೆ ಚಲಿಸಲೂ ಇಲ್ಲ, ನಿಧಾನಗತಿಯಲ್ಲಿತ್ತು. ಆದರೂ ಪೈಲಟ್ ಫ್ಲೈಟ್ ಲೆಫ್ಟಿನೆಂಟ್ ಭೀಮ್‌ರಾವ್‌ಗೆ ಯಾವ ಚಿಂತೆಯೂ ಉಂಟಾಗಲಿಲ್ಲ. ಸರ್ದಾರರ ಆರೋಗ್ಯದ ದೃಷ್ಟಿಯಿಂದ ೩೦೦೦ ಅಡಿಗಳಿಗಿಂತ ಮೇಲಕ್ಕೆ ಹೋಗಬಾರದೆಂಬ ಸೂಚನೆಯನ್ನು ಅವರಿಗೆ ಕೊಡಲಾಗಿತ್ತು. ಆದರೆ ೬ ಘಂಟೆಗೆ ಒಂದು ಎಂಜಿನ್ ಕೆಲಸ ಮಾಡುತ್ತಿಲ್ಲ ಅನ್ನುವುದನ್ನು ಜೋದ್‌ಪುರದ ಮಹಾರಾಜ ಗಮನಿಸಿದರು ಮತ್ತು ಸರ್ದಾರರಿಗೆ ಹೇಳಿದರು. ಅವರಿಗೆ ವಿಮಾನ ಚಾಲಕನ ಲೈಸೆನ್ಸ್ ಇತ್ತು. ಅಷ್ಟರಲ್ಲೆ ರೇಡಿಯೊ ನಿಂತು ಹೋಯಿತು. ವಿಮಾನ ಎತ್ತರವನ್ನು ಕಳೆದುಕೊಳ್ಳ ತೊಡಗಿತು. ಕೆಳಗಿನ ಭೂಮಿ ಒಂದು ಬೆಟ್ಟ ಪ್ರದೇಶ. ತಮ್ಮ ಅಂತ್ಯ ಬಂದಿತೆಂದು ಭಾವಿಸಿದರು ಮಣಿಬೆನ್. ಅವರ ಹೃದಯದ ಬಡಿತ ಹೆಚ್ಚಿತು. ಆದರೆ ಪಟೇಲರು ಗಾಬರಿ ಆದಂತೆ ಕಾಣಲಿಲ್ಲ.

ವಿಮಾನವು ಜೈಪುರದಿಂದ ಉತ್ತರಕ್ಕೆ ೩೦ ಮೈಲಿಗಳ ದೂರದಲ್ಲಿದ್ದಾಗ ಚಾಲಕನು ಬಲವಂತದ ಭೂ ಸ್ಪರ್ಷ ಮಾಡಬೇಕೆಂದು ತೀರ್ಮಾನಿಸಿದನು. ಅವನು, 'ವಿಮಾನವು ಭೂಸ್ಪರ್ಷವಾದಾಗ, ಪ್ರಯಾಣಿಕರು ಒಳಗೆ ಬರುವ ದ್ವಾರ 'ಜಾಮ್' ಆಗಬಹುದು. ಅದರಿಂದ ಅವರು ಹೊರ ಬರಲು ತುರ್ತು ದ್ವಾರವನ್ನು ಉಪಯೋಗಿಸಬೇಕು. ಅದು ಛಾವಣಿಯಲ್ಲಿದೆ. ಪ್ರಯಾಣಿಕರು ಜಾಗ್ರತೆಯಾಗಿ ಹೊರ ಬರಬೇಕು, ಏಕೆಂದರೆ ವಿಮಾನದ ಇಂಧನ ಟ್ಯಾಂಕ್ ಬೆಂಕಿ ಹತ್ತಿಕೊಳ್ಳುವ ಸಂಭವವಿದೆ,' ಎಂದು ಪ್ರಕಟಿಸಿದನು. ತುರ್ತುದ್ವಾರ ಅಗಲವಾಗಿರಲಿಲ್ಲ. ಆದರೆ ಮಹಾರಾಜ ದಪ್ಪಗಿದ್ದರು. ಶಂಕರ್, "ಮಹಾರಾಜರು ಕೊನೆಯಲ್ಲಿ ಹೊರಬರಲಿ. ಅವರೇನಾದರೂ ಸಿಕ್ಕಿಕೊಂಡರೆ, ಬೇರೆ ಯಾರೂ ಹೊರಗೆ ಹೋಗಲಾಗುವುದಿಲ್ಲ," ಎಂದರು. ಅವರ ಮಾತು ಕೇಳಿ ಪಟೇಲರು ಜೋರಾಗಿ ನಕ್ಕರು. ಸಾವಿನ ಎದುರಿಗೂ ನಗು! ೬–೨೦ಕ್ಕೆ ಚಾಲಕನು 'ಎಲ್ಲರೂ ಆಸನದ ಬೆಲ್ಟ್‌ಗಳನ್ನು ಭದ್ರವಾಗಿ ಹಾಕಿಕೊಳ್ಳಿ' ಎಂದನು. ಐದು ನಿಮಿಷಗಳ ನಂತರ ವಿಮಾನವನ್ನು ಒಂದು ನದಿ ದಡದಲ್ಲಿ

ಸುರಕ್ಷಿತವಾಗಿ ಇಳಿಸಿದನು. ಬೆಂಕಿ ಹತ್ತಿಕೊಳ್ಳಲಿಲ್ಲ. ಬಾಗಿಲು 'ಜಾಮ್' ಆಗಲಿಲ್ಲ. ಎಲ್ಲರು ಸುರಕ್ಷಿತವಾಗಿ ಹೊರಬಂದರು.[೩೫೮] *(ಮಣಿಬೆನ್‌ರವರಿಗೆ ಹೋದ ಜೀವ ಬಂದಂತಾಗಿರಬೇಕು – ಲೇಖಕ)*

ವಿಮಾನವನ್ನು ಕಂಡು ಒಬ್ಬ ಕುರಿ ಕಾಯುವವನು ಓಡಿ ಬಂದನು. ಅವನಿಂದ ಅವರಿಗೆ ತಾವು ಷಾಪುರ್ ಅನ್ನುವ ಗ್ರಾಮದ ಬಳಿ ಇರುವುದು ತಿಳಿಯಿತು. ಅವನು ಹೋಗಿ ಇತರೆ ಮೂವರು ಕುರಿ ಕಾಯುವವರೊಡನೆ ಮತ್ತೆ ಬಂದನು. ಹಳ್ಳಿಯಿಂದ ಹೆಚ್ಚು ಜನ ಬಂದರು. ಹಾಲು, ನೀರು, ಹಗ್ಗದ ಮಂಚ ತಂದರು. ಇಬ್ಬರು ಪೈಲ್ವಾನರು ತಮ್ಮ ಕೌಶಲದ ಪ್ರದರ್ಶನ ತೋರಿದರು. ಜೋದ್‌ಪುರದ ಮಹಾರಾಜ ಮತ್ತು ವಿಮಾನದ ರೇಡಿಯೊ ಅಧಿಕಾರಿ ಪಟೇಲರು ಸುರಕ್ಷಿತವೆಂಬುದನ್ನು ಯಾರಿಗಾದರು ತಿಳಿಸಲು, ಹತ್ತಿರದ ರಸ್ತೆಯನ್ನು ಪತ್ತೆ ಮಾಡಲು ಮತ್ತು ಯಾವುದಾದರು ವಾಹನ ಸಿಗುವುದೇ ಅನ್ನುವುದನ್ನು ನೋಡಲು ಹೊರಟರು. ಅವರು ದಾರಿಯಲ್ಲಿ ಸಿಕ್ಕಿದ ಕೆಲವು ಹಳ್ಳಿಯವರಿಗೆ ಪಟೇಲರು ಕ್ಷೇಮ ಎನ್ನುವ ವಿಷಯವನ್ನು ತಿಳಿಸಿದರು, ಆದರೆ ಯಾವ ವಾಹನವು ಸಿಗದೆ ವಾಪಸ್ಸು ಬಂದರು. ಅಷ್ಟು ಹೊತ್ತಿಗೆ ಸೂರ್ಯ ಮುಳುಗಿದ್ದುದರಿಂದ ಬೆಂಕಿಯನ್ನು ಉರಿಸಲಾಯಿತು. ಕೆಲವು ಘಂಟೆಗಳು ಕಳೆದ ನಂತರ ಎಲ್ಲರೂ ಬೆಳೆ ನಿಂತಿರುವ ಹೊಲಗಳಲ್ಲಿ ಅರ್ಧ ಮೈಲಿ ನಡೆದು ಒಂದು ರಸ್ತೆಯ ಪಕ್ಕದ ಬಯಲು ಪ್ರದೇಶಕ್ಕೆ ಬಂದು ನಿಂತರು. ಅಷ್ಟು ಹೊತ್ತಿಗೆ, ಸಮೀಪದಲ್ಲಿದ್ದ ಕೆ.ಬಿ. ಲಾಲ್ ಎಂಬ ಅಧಿಕಾರಿಗೆ 'ಪಟೇಲರು ಇದ್ದ ವಿಮಾನ ಷಾಪುರ್‌ನಲ್ಲಿ ಇಳಿದಿರುವ ಸುದ್ದಿ' ತಿಳಿಯಿತು. ಅವನು ತನ್ನ ಕಾರನ್ನು ತೆಗೆದುಕೊಂಡು ಬಂದನು. ಪಟೇಲರು ವಿಮಾನದಿಂದ ಹೊರ ತೆಗೆದ ಒಂದು ಕುರ್ಚಿಯ ಮೇಲೆ ಕುಳಿತಿದ್ದರು. ಅವರು ಲಾಲ್‌ನನ್ನು ನೋಡಿ ನಕ್ಕರು. ಆದರೆ ಅಪಘಾತದ ಬಗೆಗೆ ಏನೂ ಮಾತನಾಡಲಿಲ್ಲ. ಅವರ ಮನಸ್ಸೆಲ್ಲಾ ಜೈಪುರವನ್ನು ತಲುಪುವುದರ ಕಡೆಗೆ ಇತ್ತು. "ನನ್ನ ಕಾರಿನಲ್ಲಿ ಕುಳಿತುಕೊಳ್ಳಿ," ಎಂದರು ಲಾಲ್. ಪಟೇಲರು, "ನೀವೇನು ಮಾಡುತ್ತೀರಿ? ನಿಮ್ಮ ತಂಡದ ಕತೆ ಏನು? ನನ್ನ ತಂಡದವರ ಕತೆ ಏನು? ಅದರಲ್ಲೂ ನನ್ನೊಡನೆ ಇರುವ ಮಹಾರಾಜರ ಬಗೆಗೆ?" ಎಂದು ಪ್ರಶ್ನಿಸಿದರು.[೩೫೯]

ಅವರೆಲ್ಲರು ಜೈಪುರವನ್ನು ತಲುಪುವ ಹೊತ್ತಿಗೆ ರಾತ್ರಿ ಹನ್ನೊಂದು ಘಂಟೆಯಾಗಿತ್ತು. ಶಂಕರ್ ಪ್ರಧಾನಮಂತ್ರಿಗೆ ಕರೆ ಮಾಡಿದರು. ನೆಹರುರವರು ಆತಂಕ ಮತ್ತು ಚಿಂತೆಯಿಂದ ಅತ್ತಿಂದಿತ್ತ ಇತ್ತಿಂದತ್ತ ಹೆಜ್ಜೆ ಹಾಕುತ್ತಿದ್ದರು. ಶಂಕರ್ ಅವರಿಗೆ 'ಎಲ್ಲರೂ ಕ್ಷೇಮವಾಗಿದ್ದಾರೆ' ಎಂದು ತಿಳಿಸಿದರು. ನಂತರ ಪಟೇಲರು ನೆಹರು ಒಡನೆ ಮಾತನಾಡಿ ನಡೆದ ಘಟನೆಯ ಬಗೆಗೆ ತಮಾಷೆ ಮಾಡಿದರು.

ಅಂದು ವಿ.ಪಿ. ಮೆನನ್‌ರವರು ಪಟೇಲರಿಗಿಂತ ಮುಂಚೆ ಜೈಪುರಕ್ಕೆ ಹೋಗಿದ್ದರು. ಪಟೇಲರ ವಿಮಾನ ನಾಪತ್ತೆ ಅನ್ನುವ ಸಮಾಚಾರ ಬಂದ ಮೇಲೆ ಪ್ರಧಾನಿ ನೆಹರು ಅವರನ್ನು ವಾಪಸ್ಸು ದೆಹಲಿಗೆ ಕರೆಯಿಸಿಕೊಂಡಿದ್ದರು. ಮಾರನೆಯ ಬೆಳಗ್ಗೆ ಮೆನನ್ ಮತ್ತೆ ಜೈಪುರಕ್ಕೆ ಬಂದರು. ಅವರನ್ನು ಸರ್ದಾರರು, "ನೀವೇಕೆ ದೆಹಲಿಗೆ ಹಾರಿದಿರಿ? ನನಗೇನು ಆಗುವುದಿಲ್ಲವೆಂಬುದು ನಿಮಗೆ ತಿಳಿದಿಲ್ಲವೆ?" ಎಂದು ಪ್ರಶ್ನಿಸಿದರು. ನಂತರ ಅವರನ್ನು ಆತ್ಮೀಯತೆಯಿಂದ ಆಲಂಗಿಸಿದರು. ಇಬ್ಬರೂ ಭಾವುಕರಾಗಿದ್ದರು.

ಪಟೇಲರು ೩೧ರಂದು ದೆಹಲಿಗೆ ಹಿಂತಿರುಗಿದರು. ಅವರನ್ನು ಸ್ವಾಗತಿಸಲು ದೆಹಲಿಯ ಪಾಲಂ ವಿಮಾನ ನಿಲ್ದಾಣದಲ್ಲಿ ಅಧಿಕ ಸಂಖ್ಯೆಯಲ್ಲಿ ಜನ ಸೇರಿದ್ದರು. ಅಂದು ಅವರು ಸಂಸತ್ತನ್ನು ಪ್ರವೇಶಿಸಿದಾಗ ಎಲ್ಲಾ ಶಾಸಕರು ಎದ್ದು ನಿಂತು, ಮೇಜನ್ನು ಕುಟ್ಟಿ ಅವರಿಗೆ ದೀರ್ಘಾಯುಸ್ಸನ್ನು ಕೋರುವ ಘೋಷಣೆಯನ್ನು ಗಟ್ಟಿಯಾಗಿ ಮಾಡಿದರು. ಆ ಹರ್ಷೋದ್ಗಾರ ಪೂರ್ಣ ಮೂರು ನಿಮಿಷಗಳ ಕಾಲ ನಡೆಯಿತು. ಸರ್ದಾರರು ತಮ್ಮ ಕೈಗಳನ್ನು ಮೇಲೆತ್ತಿ ಅದು ಸಾಕು ಎಂದು ಸೂಚಿಸಿದ ಮೇಲೆಯೇ ಆ ಹರ್ಷೋದ್ಗಾರ ನಿಂತದ್ದು. ಸದಸ್ಯರ ಪ್ರೀತಿ ಮತ್ತು ಹಾರೈಕೆ ಪಟೇಲರ ಹೃದಯವನ್ನು ಕಲಕಿತು. ಅವರು ಗದ್ಗದಿತರಾಗಿ ನುಡಿದರು:

> ಇಂದು ನಾನು ಕಂಡ ಪ್ರೀತಿ ಮತ್ತು ವಾತ್ಸಲ್ಯದ ಪ್ರದರ್ಶನ ನನ್ನ ನೆನಪಿನಲ್ಲಿ ಸದಾ ಇರುತ್ತದೆ. ನದಿ ದಡದಲ್ಲಿ ನಾನು ಕಳೆದ ಮೂರು ಅಥವಾ ನಾಲ್ಕು ಘಂಟೆಗಳ ಕಾಲವೂ ನನ್ನ ದೇಶ ಬಾಂಧವರಿಗೆ ಉಂಟಾದ ಆತಂಕದ ಯೋಚನೆಯಿಂದ ತುಂಬಿತ್ತು.[೩೬೦]

ವಾರದ ನಂತರ, ಒಂದು ಸಂಜೆ ಸಂಸದರು ಸಂಸತ್ ಭವನದ ಹುಲ್ಲುಗಾವಲಿನಲ್ಲಿ ಪಟೇಲರು ಕ್ಷೇಮವಾಗಿ ಬಂದುದರ ಸಂತೋಷಾರ್ಥ ಒಂದು ಸಂತೋಷಕೂಟವನ್ನು ಏರ್ಪಡಿಸಿದರು. ಆ ಸಂದರ್ಭದಲ್ಲಿ, ಪಟೇಲರು ಪ್ರಯಾಣ ಮಾಡಿದ್ದ ಡವ್ ವಿಮಾನದ ಒಂದು ಪ್ರತಿಕೃತಿಯನ್ನು ನೆಹರು ಕೈಲಿ ಸರ್ದಾರರಿಗೆ ಕೊಡಿಸಿದರು. "ಅದು ದೇವರಿಗೆ ತಮ್ಮ ಕೃತಜ್ಞತೆಯ ಮತ್ತು (ಪಟೇಲರಿಗೆ) ತಮ್ಮ ಪ್ರೀತಿಯ ಸಂಕೇತ," ಎಂದರು ಅವರು. ಪಟೇಲರ ಹೃದಯ ಮತ್ತೆ ಭಾವುಕವಾಯಿತು. ಅವರು ಆ ಪ್ರತಿಕೃತಿಯನ್ನು ಉಡುಗೊರೆಯಾಗಿ ಆರ್ ಐ ಎ ಎಫ್‌ಗೆ ನೀಡುವುದಾಗಿ ಪ್ರಕಟಿಸಿದರು.

❖ ◆ ❖

೧೭. ಮಹಾನ್ ಆಡಳಿತಗಾರ

ಸ್ವಾತಂತ್ರ್ಯ ಬರುವ ತಕ್ಷಣದ ಪೂರ್ವ ಕಾಲದಲ್ಲಿ ಮತ್ತು ಸ್ವಾತಂತ್ರ್ಯಾನಂತರದ ತಕ್ಷಣದ ಕಾಲದಲ್ಲಿ ಭಾರತ ಅನೇಕ ಗಂಭೀರವಾದ ಸಮಸ್ಯೆಗಳನ್ನು ಎದುರಿಸ ಬೇಕಾಯಿತು. ಮತೀಯ ಗಲಭೆ, ನಿರಾಶ್ರಿತರ ಸಮಸ್ಯೆ, ಗಾಂಧೀಜಿ ಹತ್ಯೆಯ ಪರಿಣಾಮ, ರಾಜ್ಯಗಳ ಸೇರ್ಪಡೆಯ ಸಮಸ್ಯೆ, ಅಧಿಕಾರಿಗಳ ಕೊರತೆ ಇತ್ಯಾದಿ ಇತ್ಯಾದಿ ಸಮಸ್ಯೆಗಳು ದೇಶದ ಆಂತರಿಕ ಭದ್ರತೆ ಮತ್ತು ಏಕತೆಗೆ ಅಪಾಯವನ್ನು ಒಡ್ಡಿದ್ದುವು. ಶಾಂತಿಯನ್ನು ಕದಡಿದ್ದುವು. ಇಂತಹ ಅಪಾಯಕಾರಿ ಮತ್ತು ಗಂಡಾಂತರದ ಸಮಯದಲ್ಲಿ ಸರ್ದಾರರು ಗೃಹ ಮಂತ್ರಿಯಾಗಿದ್ದುದು ದೇಶದ ಜನರ ಪುಣ್ಯ. ಅವರೊಬ್ಬ ಸಹಜ ಮತ್ತು ಸಮರ್ಥ ಆಡಳಿತಗಾರ. ರಾಷ್ಟ್ರ ನೌಕೆಯನ್ನು ಪ್ರಕ್ಷುಬ್ಧ ಸಾಗರದಲ್ಲಿ ಯಶಸ್ವಿಯಾಗಿ ನಡೆಸಿ ಸುರಕ್ಷಿತವಾಗಿ ದಡವನ್ನು ತಲುಪಿಸಿದರು. ಅಷ್ಟೇ ಅಲ್ಲ, ರಾಷ್ಟ್ರದ ಮುಂದಿನ ಹಾದಿಯನ್ನು ಸುಗಮಗೊಳಿಸಲು ಬೇಕಾದ ಕ್ರಮಗಳನ್ನು ಸಹ ಕೈಗೊಂಡರು.

ಗೃಹಮಂತ್ರಿಯಾಗಿ ಅವರು ಕೈಗೊಂಡ ಮೊದಲ ಹೆಜ್ಜೆಗಳಲ್ಲಿ ಒಂದು – ಆಡಳಿತ ಸುಧಾರಣೆ. ಸರ್ಕಾರ ನಡೆಯುವುದು ಅದರ ಅಧಿಕಾರಿಗಳ ಮೂಲಕ. ಬ್ರಿಟಿಷರ ಕಾಲದಲ್ಲಿ ಇಂಡಿಯನ್ ಸಿವಿಲ್ ಸರ್ವಿಸ್, ಅಧಿಕಾರಿಗಳನ್ನು 'ಉಕ್ಕಿನ ಚೌಕಟ್ಟು' ಎಂದು ಕರೆಯುತ್ತಿದ್ದರು. ಆ ಅಧಿಕಾರಿಗಳು ಸರ್ಕಾರದ ಬೆನ್ನೆಲುಬಾಗಿದ್ದರು. ಸ್ವಾತಂತ್ರ್ಯ ಬಂದ ಮೇಲೆ ಆ ಅಧಿಕಾರಿಗಳಲ್ಲಿ ಶೇ ೫೫ರಷ್ಟು ಇದ್ದ ಆಂಗ್ಲ ಅಧಿಕಾರಿಗಳು ರಾಜಿನಾಮೆ ಇತ್ತು ಇಂಗ್ಲೆಂಡಿಗೆ ಹಿಂತಿರುಗುತ್ತಾರೆ ಮತ್ತು ಮುಸ್ಲಿಂ ಅಧಿಕಾರಿಗಳು ಪಾಕಿಸ್ತಾನಕ್ಕೆ ತೆರಳುತ್ತಾರೆ ಎಂದು ಪಟೇಲರು ಲೆಕ್ಕ ಹಾಕಿದರು.

ಯುದ್ಧ ಕಾಲದಲ್ಲಿ ಅಧಿಕಾರಿಗಳ ನೇಮಕಾತಿ ನಡೆದಿರಲಿಲ್ಲ. ಅದರಿಂದ ದೇಶದಲ್ಲಿ ಉನ್ನತ ಮಟ್ಟದ ಅಧಿಕಾರಿಗಳ ಕೊರತೆ ಉಂಟಾಗುವುದನ್ನು ಸರಿಪಡಿಸಲು ಸರ್ದಾರರು ತಕ್ಷಣ ಕ್ರಮ ಕೈಗೊಂಡರು.

ಮಧ್ಯಂತರ ಸರ್ಕಾರದಲ್ಲಿ ಗೃಹಮಂತ್ರಿಯಾದ ಕೆಲವೇ ವಾರಗಳಲ್ಲಿ ಎಲ್ಲಾ ಪ್ರಾಂತ್ಯಗಳ ಮುಖ್ಯಮಂತ್ರಿಗಳನ್ನು (ಆಗ ಅವರನ್ನು ಪ್ರಧಾನಮಂತ್ರಿ ಎಂದು ಕರೆಯುತ್ತಿದ್ದರು) ಒಂದು ಸಂಯುಕ್ತ ಸಮಾಲೋಚನೆಗಾಗಿ ದೆಹಲಿಗೆ ಕರೆಸಿದರು. ಅವರ ಮುಂದೆ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಅವಶ್ಯಕತೆಗಳ ಪೂರೈಕೆಗಾಗಿ ಮತ್ತು ಕೇಂದ್ರ ಮತ್ತು ರಾಜ್ಯಗಳ ನಡುವಣ ಬೆಸುಗೆಯಾಗಿ, ರಾಷ್ಟ್ರ ಮನೋಭಾವದ ತರಬೇತಿಯನ್ನು ಪಡೆದಿರುವ 'ಭಾರತ ಆಡಳಿತ ಸೇವೆ'ಯನ್ನು ಆರಂಭಿಸುವ ಪ್ರಸ್ತಾವನೆಯನ್ನು ಇಟ್ಟರು. ಕೆಲವು ಪ್ರಭಾವಿ ಮುಖ್ಯಮಂತ್ರಿಗಳು ಅದಕ್ಕೆ ಒಪ್ಪದೆ ಸಂಪೂರ್ಣವಾಗಿ ತಮ್ಮ ಹಿಡಿತದಲ್ಲಿರುವ ರಾಜ್ಯ ಆಡಳಿತ ಸೇವೆ ಸ್ಥಾಪಿಸಲು ಬಯಸಿದರು. ಆದರೆ ದೂರದೃಷ್ಟಿಯ ಮತ್ತು ದೃಢ ನಿರ್ಧಾರದ ಸರ್ದಾರರು ಅದಕ್ಕೆ ಆಸ್ಪದ ಕೊಡದೆ ತಮ್ಮ ಪ್ರಸ್ತಾವನೆಗೆ ಮುಖ್ಯಮಂತ್ರಿಗಳು ಒಪ್ಪುವಂತೆ ಮಾಡಿದರು. ನಂತರ ಅಕ್ಟೋಬರ್ ೧೦, ೧೯೪೯ರಂದು ಸಂವಿಧಾನ ರಚನಾ ಸಭೆಯಲ್ಲಿ 'ತನ್ನ ಅಭಿಪ್ರಾಯವನ್ನು ಸ್ಪಷ್ಟವಾಗಿ ಹೇಳುವ ಸ್ವಾತಂತ್ರ್ಯವಿರುವ ಒಳ್ಳೆಯ ಅಖಿಲ ಭಾರತ ಸೇವಾ ವರ್ಗ ಇಲ್ಲದೆ ಹೋದರೆ, ಒಕ್ಕೂಟವೂ ಹೋಗುತ್ತದೆ, ಸಂಯುಕ್ತ ಭಾರತವೂ ಇರುವುದಿಲ್ಲ' ಎಂದು ಹೇಳಿ, ಅದು 'ಅಖಿಲ ಭಾರತ ಸೇವೆಯ' ಪರಿಕಲ್ಪನೆಯನ್ನು ಒಪ್ಪುವಂತೆ ಮಾಡಿದರು.

ಐ.ಎ.ಎಸ್. ನ ತರಬೇತಿಯ ಮೊದಲ ತಂಡದ ಅಭ್ಯರ್ಥಿಗಳನ್ನು ಕುರಿತು ಪಟೇಲರು ಹೀಗೆ ನುಡಿದರು:

> ಹಳೆಯ ವಿಧಾನದ ಐಸಿಎಸ್ ನವರ ಕಾಲ ಮುಗಿಯುತ್ತಾ ಬಂದಿದೆ. ಅದರ ಸ್ಥಾನದಲ್ಲಿ ಐ.ಎ.ಎಸ್.ನ ರಚನೆಯು ಮಹತ್ವಪೂರ್ಣ ಮತ್ತು ನವ ಯುಗದ ಆರಂಭ..... ಅಧಿಕಾರಿ ವರ್ಗದವರು ಯಜಮಾನರಾಗಿದ್ದ ಕಾಲ ಮುಗಿಯಿತು..... ಭಾರತೀಯ ನಾಗರಿಕ ಸೇವೆ (ಇಂಡಿಯನ್ ಸಿವಿಲ್ ಸರ್ವಿಸ್) ಎನ್ನುವುದು ಭಾರತೀಯವೂ ಅಲ್ಲ, ನಾಗರಿಕವೂ ಅಲ್ಲ, ಅವರಲ್ಲಿ ಸೇವಾ ಮನೋಭಾವವೂ ಇಲ್ಲ – ಅನ್ನುವ ಮಾತನ್ನು ನೀವು ಕೇಳಿರಬಹುದು..... ನಿಮ್ಮ ಹಿಂದಿನವರು ಒಂದು ವಿದೇಶಿ ಆಡಳಿತದ ಏಜೆಂಟರಾಗಿ ಕೆಲಸ ಮಾಡಬೇಕಾಗಿತ್ತು. ಕೆಲವೊಮ್ಮೆ

> ತಮ್ಮ ಉತ್ತಮ ತೀರ್ಮಾನಕ್ಕೆ ವಿರುದ್ಧವಾಗಿ ತಮ್ಮ ವಿದೇಶಿ ಯಜಮಾನರ ಆಜ್ಞೆಗಳನ್ನು ಪಾಲಿಸಬೇಕಾಗಿತ್ತು..... ಒಬ್ಬ ನಾಗರಿಕ ಅಧಿಕಾರಿ ರಾಜಕೀಯದಲ್ಲಿ ಭಾಗವಹಿಸಲು ಸಾಧ್ಯವಿಲ್ಲ, ಭಾಗವಹಿಸ ಕೂಡದು. ಮತೀಯ ವಾಗ್ವಾದಗಳಲ್ಲೂ ಅವನು ಸೇರಬಾರದು. ಈ ಎರಡರಲ್ಲಿ ಯಾವುದೇ ವಿಷಯದಲ್ಲಿ ಅವನು ಅಪ್ರಮಾಣಿಕ ನಾದರೆ ಸಾರ್ವಜನಿಕ ಸೇವೆಯನ್ನು ಅವಮಾನಗೊಳಿಸಿದಂತೆ ಮತ್ತು ಅದರ ಘನತೆಯನ್ನು ತಗ್ಗಿಸಿದಂತೆ.[೩೬೧]

ಸ್ವಾತಂತ್ರ್ಯ ಬಂದ ಕಾಲದ ಪರಿಸ್ಥಿತಿಯನ್ನು ಉಪಯೋಗಿಸಿಕೊಂಡು ಅನೇಕ ಸಮಾಜ ಘಾತಕ ಶಕ್ತಿಗಳು ತಲೆ ಎತ್ತಿದ್ದುವು. ಪಟೇಲರು ಕಮ್ಯುನಿಸ್ಟರು ಮತ್ತು ಮತೀಯವಾದಿಗಳನ್ನು ಎದುರಿಸಲು ಸಿದ್ಧರಿರುವಂತೆ ಮುಖ್ಯಮಂತ್ರಿಗಳನ್ನು ಎಚ್ಚರಿಸಿದರು. ಪೊಲೀಸ್ ಇಲಾಖೆಯನ್ನು ಬಲ ಪಡಿಸುವಂತೆ ಸೂಚನೆ ಇತ್ತರು.

ಸ್ವಾತಂತ್ರ್ಯಾನಂತರ ದೇಶದಲ್ಲಿ ಉಳಿದ ಐ.ಸಿ.ಎಸ್. ಅಧಿಕಾರಿಗಳ ಬಗೆಗೆ, ಅವರ ಹಿಂದಿನ ಬ್ರಿಟಿಷರ ಕಾಲದ ಧೋರಣೆಗಳ ಫಲವಾಗಿ, ನೆಹರು ಮತ್ತು ಎಡ ಪಂಥದ ಪರವಿದ್ದ ಕಾಂಗ್ರೆಸ್ ನಾಯಕರಿಗೆ ವಿಶ್ವಾಸವಿರಲಿಲ್ಲ. ವಿರೋಧಿ ಭಾವನೆಯೂ ಇತ್ತು. ಅವರು ಆ ಅಧಿಕಾರಿಗಳನ್ನು ಅನುಮಾನದಿಂದ ನೋಡುತ್ತಿದ್ದರು. ಅದರಿಂದ ಆ ಅಧಿಕಾರಿಗಳು ಸಂಕಷ್ಟಕ್ಕೆ ಒಳಗಾಗಿದ್ದರು.

ಆದರೆ ಪಟೇಲರು ಹಾಗಿರಲಿಲ್ಲ. ಅವರು ಸಂಪೂರ್ಣ ವಾಸ್ತವವಾದಿ. ಅವರ ತಲೆಯಲ್ಲಿ ವಿವೇಕ ಮತ್ತು ಹೃದಯದಲ್ಲಿ ಧಾರಾಳತೆ ತುಂಬಿತ್ತು. ಈ ಅಧಿಕಾರಿಗಳ ಪಾತ್ರ ಹಿಂದೆ ಏನೇ ಇರಲಿ ಈಗ ಅವರು ಸ್ವತಂತ್ರ ಭಾರತದಲ್ಲಿ ದೇಶಪ್ರೇಮದಿಂದ ಸರಿಯಾಗಿ ಕೆಲಸ ಮಾಡಿದರೆ ಸರಿ – ಅನ್ನುವುದು ಅವರ ಅಭಿಪ್ರಾಯವಾಗಿತ್ತು. ದೇಶದಲ್ಲಿ ಉಂಟಾಗಬಹುದಾದ ಅರಾಜಕತೆ ತಡೆಯಲು ಮತ್ತು ಸರ್ಕಾರ ಯಶಸ್ವಿಯಾಗಿ ನಡೆಯಲು ಅವರ ಸೇವೆ, ನಿಷ್ಠಾವಂತ ಸೇವೆ, ಅತ್ಯಗತ್ಯ ಎನ್ನುವುದನ್ನು ಪಟೇಲರು ಅರಿತಿದ್ದರು. ಈ ಅಧಿಕಾರಿ ವರ್ಗ ದೇಶದ ಭದ್ರತೆಗೆ ಮೂಲಾಧಾರ ಎಂದು ತಿಳಿದಿದ್ದರು. ಆಡಳಿತದ ಸಮಸ್ಯೆಗಳ ಪರಿಹಾರಕ್ಕೆ ನಾಗರಿಕ ಅಧಿಕಾರಿಗಳು ಮಾತ್ರ ತಮ್ಮ ಪ್ರತಿನಿಧಿಗಳಂತೆ ವರ್ತಿಸಲು ಸಾಧ್ಯ, ರಾಜಕಾರಣಿಗಳಲ್ಲ, ಎನ್ನುವುದನ್ನು ಪಟೇಲರು ಗ್ರಹಿಸಿದ್ದರು.

ಅದರಿಂದ ಅವರು, ತಮ್ಮ ಉದಾರತೆ ಮತ್ತು ವಿವೇಕದಿಂದ ಆ ಅಧಿಕಾರಿಗಳ ಭಯ ಮತ್ತು ಅಭದ್ರ ಮನೋಭಾವವನ್ನು ಹೋಗಲಾಡಿಸಿ, ಅವರು ರಾಷ್ಟ್ರಕ್ಕಾಗಿ ಮನಸಾರ ಸೇವೆ ಸಲ್ಲಿಸುವಂತೆ ಮಾಡಿದರು. ೧೯೪೭ರ ಆರಂಭದಲ್ಲಿ ಸುಮಾರು

೩೦-೪೦ ಹಿರಿಯ ನಾಗರಿಕ ಅಧಿಕಾರಿಗಳನ್ನು ತಮ್ಮ ಮನೆಗೆ ಆಹ್ವಾನಿಸಿ, ಅವರೊಡನೆ ಮಂತ್ರಿ ಮತ್ತು ಅಧಿಕಾರಿಗಳು ಅನ್ನುವ ಭಾವನೆಯನ್ನು ತೊರೆದು ಅನೌಪಚಾರಿಕವಾಗಿ ಮಾತುಕತೆ ನಡೆಸಿದರು. ಹಿಂದೆ ಯಾರೂ ಅಧಿಕಾರಿಗಳನ್ನು ಹಾಗೆ ನಡೆಸಿಕೊಂಡಿರಲಿಲ್ಲ. ಅದರಿಂದ ಅಧಿಕಾರಿಗಳಿಗೆ ಆಶ್ಚರ್ಯವೇ ಆಯಿತು. ಅವರಿಗೆ ಪಟೇಲರು ತಾವು ಮತ್ತು ತಮ್ಮ ಸಹಚರರು ದೇಶ ಸೇವೆಯ ಏಕಮಾತ್ರ ಉತ್ಕಟ ಬಯಕೆಯಿಂದ ಅಷ್ಟೊಂದು ವರ್ಷಗಳು ಕೆಲಸ ಮಾಡಿದ್ದೇವೆ – ಎಂದು ತಿಳಿಸಿ, ಆ ಅಧಿಕಾರಿಗಳೂ ಸಹ ಅದೇ ಮಟ್ಟಕ್ಕೆ ದೇಶ ಸೇವೆಗೆ ತಮ್ಮನ್ನು ಅರ್ಪಿಸಿಕೊಳ್ಳಬೇಕೆಂದು ಹೇಳಿದರು. ಅಂತಹ ನಿಷ್ಕಾವಂತ ಸೇವೆಯಿಂದ ತಾವು ಮತ್ತು ತಮ್ಮ ಸಹಚರರು ಯಾವ ಆನಂದವನ್ನು ಪಡೆದರೋ ಅದನ್ನು ಅಧಿಕಾರಿಗಳೂ ಸಹ ಪಡೆಯುವರು, ಎಂದರು.[೩೬೨]

ಪಟೇಲರು ಐ.ಸಿ.ಎಸ್. ಮತ್ತು ಐ.ಎ.ಎಸ್. ಅಧಿಕಾರಿಗಳನ್ನು 'ಆಡಳಿತ ಕಾರ್ಯದಲ್ಲಿ ತಮ್ಮ ಪಾಲುಗಾರರು' ಎಂದು ಭಾವಿಸಿದ್ದರು.

ಆಡಳಿತಗಾರನಾಗಿ ಪಟೇಲರದು ಒಂದು ವಿಶಿಷ್ಟ ವಿಧಾನ. ಅವರು ಕಡತಗಳನ್ನು ಓದುತ್ತಿರಲಿಲ್ಲ. ಮನೆಯಿಂದಲೇ ಕೆಲಸ ಮಾಡುತ್ತಿದ್ದರು. ಅವರ ಕಾರ್ಯದರ್ಶಿಗಳು ಒದಗಿಸುವ ಸಂಕ್ಷಿಪ್ತ ಮಾಹಿತಿಯ ಮೇಲೆ ತಮ್ಮ ಆಜ್ಞೆ ಅಥವಾ ತೀರ್ಮಾನವನ್ನು ಬಾಯಿಮಾತಿನಲ್ಲೇ ನೀಡುತ್ತಿದ್ದರು. ಬಾಯಿಮಾತಿನ ಆಜ್ಞೆಯಾದರೂ ಎಂದಿಗೂ ಮರೆಯುತ್ತಿರಲಿಲ್ಲ, ಅದಕ್ಕೆ ಬದ್ಧರಾಗಿರುತ್ತಿದ್ದರು.

ಕನ್ನಡಿಗ ಹೆಚ್.ವಿ.ಆರ್. ಐಯ್ಯಂಗಾರ್ ಪಟೇಲರ ಗೃಹ ಇಲಾಖಾ ಕಾರ್ಯದರ್ಶಿಯಾಗಿದ್ದರು. ಒಂದು ದಿನ ಒಬ್ಬ ರಾಜಕೀಯ ನಾಯಕ ತನ್ನ ಶರತ್ತುಗಳನ್ನು ತಕ್ಷಣವೇ ಒಪ್ಪಿಕೊಳ್ಳದಿದ್ದರೆ ಆಮರಣಾಂತ ಉಪವಾಸ ಮಾಡುವುದಾಗಿ ಮತ್ತು ಅದರಿಂದ ಭಯಂಕರ ಪರಿಣಾಮ ಉಂಟಾಗುವುದಾಗಿ ಪತ್ರವನ್ನು ಪಟೇಲರಿಗೆ ಬರೆದಿದ್ದನು. ಕಾರ್ಯದರ್ಶಿ ಐಯ್ಯಂಗಾರರು ಅದರ ಬಗೆಗೆ ಚರ್ಚಿಸಲು ಸರ್ದಾರರ ಬಳಿಗೆ ಬರುವಾಗ, ಸರ್ದಾರರು ಓದಲು ಬಯಸಬಹುದೆಂದು ಯೋಚಿಸಿ, ಕಾಗದವನ್ನು ತಮ್ಮ ಜೋಬಿನಲ್ಲಿ ಇಟ್ಟುಕೊಂಡಿದ್ದರು. ಕಾರ್ಯದರ್ಶಿಯವರ ಬಾಯಿಮಾತಿನ ವಿವರಣೆಯಿಂದಲೇ ಸರ್ದಾರರು ಆ ಕಾಗದದ ಬಗೆಗೆ ತೀರ್ಮಾನ ತೆಗೆದುಕೊಂಡರು. ಆ ಕಾಗದವನ್ನು ಅವರು ಓದುವ ಆಸಕ್ತಿಯನ್ನು ತೋರಲೇ ಇಲ್ಲ. ಐಯ್ಯಂಗಾರರಿಗೆ ಆಶ್ಚರ್ಯವಾಯಿತು. ಕುತೂಹಲದಿಂದ ಅವರು ಕೇಳಿದರು, "ಪತ್ರವನ್ನು ನೀವು ಓದುವುದಿಲ್ಲವೆ?" ಪಟೇಲರು ಅವರ ಕಡೆ ತಿರುಗಿ, "ನೀವು ಪತ್ರದಲ್ಲಿರುವುದನ್ನೆಲ್ಲ

ಹೇಳಿದ್ದೀರ? ಹೇಳದೆ ಮರೆತಿರುವ ಅಂಶಗಳೇನಾದರು ಇವೆಯೆ?" ಎಂದು ಪ್ರಶ್ನಿಸಿದರು. "ಇಲ್ಲಾ," ಎಂದರು ಅಯ್ಯಂಗಾರ್. "ಹಾಗಾದರೆ ಅದನ್ನು ನಾನು ಓದಬೇಕಾಗಿಲ್ಲ" ಎಂದರು ಪಟೇಲ್.[೫೬೩]

ಪಟೇಲರು ತೀರ್ಮಾನಗಳನ್ನು ಚರ್ಚಿಸಿ ತೆಗೆದುಕೊಳ್ಳುತ್ತಿದ್ದರು. ಏಕ ಪಕ್ಷೀಯವಾಗಿ ತೆಗೆದುಕೊಳ್ಳುತ್ತಿರಲಿಲ್ಲ. 'ನಾನು ಮಂತ್ರಿ, ತೀರ್ಮಾನ ನನ್ನ ಹಕ್ಕು' ಅನ್ನುವ ಭಾವ ಅವರಿಗಿರಲಿಲ್ಲ. ಒಂದು ದಿನ ಪಟೇಲರು, ಒಬ್ಬ ಹಿರಿಯ ಕಾಂಗ್ರೆಸ್ಸಿಗ ರಾಜಕಾರಣಿಯ ಬಗೆಗೆ 'ನಿಮ್ಮ ಅಭಿಪ್ರಾಯ ಏನು?' ಎಂದು ಅಯ್ಯಂಗಾರರನ್ನು ಪ್ರಶ್ನಿಸಿದರು. ಅಯ್ಯಂಗಾರರಿಗೆ ಮುಜುಗರವಾಯಿತು. ಅವರು, "ಆ ವ್ಯಕ್ತಿಯ ಬಗೆಗೆ ಅಧಿಕಾರಿ ವರ್ಗದವರಿಗಿಂತ ನಿಮಗೇ ಹೆಚ್ಚು ವಿಷಯ ತಿಳಿದಿದ್ದರೂ ನನ್ನ ಅಭಿಪ್ರಾಯವನ್ನು ಕೇಳುತ್ತಿರುವುದು ನನಗೆ ತಮಾಷೆಯಾಗಿ ಕಾಣುತ್ತಿದೆ," ಎಂದು ವಿನಯವಾಗಿ ಉತ್ತರಿಸಿದರು. ಪಟೇಲರು ಅವರ ಕಡೆಗೆ ತಿರುಗಿ ಗಂಭೀರವಾಗಿ ಹೇಳಿದರು, "ನೀವು ತಪ್ಪು ಮಾಡುತ್ತಿದ್ದೀರಿ. ನಾನು ಅವರೊಡನೆ ಬಹಳ ವ್ಯವಹರಿಸಬಹುದು. ಆದರೆ ನನ್ನ ಅನಿಸಿಕೆ ಪೂರ್ವಾಗ್ರಹ ಪೀಡಿತವಲ್ಲ ಎಂದು ನನಗೆ ತಿಳಿಯುವುದು ಹೇಗೆ? ಅವರ ಬಗೆಗೆ ನಿಮ್ಮ ಅಥವಾ ನಿಮ್ಮ ಅಧಿಕಾರಿಗಳ ಭಾವನೆಯನ್ನು ತಿಳಿಯುವುದು ನನಗೆ ಅತ್ಯಂತ ಪ್ರಯೋಜನಕಾರಿ. ಆ ವ್ಯಕ್ತಿಯ ಬಗೆಗೆ ನಿಮ್ಮ ಮೆಚ್ಚುಗೆ ವಾಸ್ತವ ಸಂಗತಿಗಳ ಆಧಾರದ ಮೇಲೆ ಇರಬಹುದು. ಆ ಸಂಗತಿಗಳು ನನಗೆ ತಿಳಿದಿಲ್ಲದೆ ಇರಬಹುದು. ನನ್ನ ತಿಳವಳಿಕೆ ಮತ್ತು ನೀವು ಹೇಳುವ ಮಾತುಗಳಿಂದ ನಾನು ಒಂದು ಸಮತೂಕದ ಅಭಿಪ್ರಾಯಕ್ಕೆ ಬರಬಹುದು."[೫೬೪]

ಪಟೇಲರದು ಪ್ರಜಾಸತ್ತೆಯ ಮನೋಭಾವ. ಅವರು, ಅಧಿಕಾರಿಗಳು ಯಾವ ಭಯ ಅಥವಾ ಅಡೆತಡೆಯೂ ಇಲ್ಲದೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಸ್ವಾತಂತ್ರ್ಯವನ್ನು ನೀಡಿದ್ದರು. ಅಧಿಕಾರಿಗಳು ತಮ್ಮ ಜವಾಬ್ದಾರಿಯಿಂದ ನುಣುಚಿ ಕೊಳ್ಳದೆ, ತಮ್ಮ ಜ್ಞಾನ ಮತ್ತು ಶಕ್ತಿಗೆ ಅನುಗುಣವಾಗಿ, ಸ್ವತಂತ್ರವಾಗಿ ಅಲೋಚಿಸಬೇಕು ಮತ್ತು ಕೆಲಸ ಮಾಡಬೇಕು – ಎಂದು ಅವರು ನಿರೀಕ್ಷಿಸುತ್ತಿದ್ದರು. ಒಮ್ಮೆ ಅವರು ಹೀಗೆ ಹೇಳಿದರು:

> ನನ್ನ ಕಾರ್ಯದರ್ಶಿ ನನ್ನ ಅಭಿಪ್ರಾಯಕ್ಕೆ ವಿರುದ್ಧವಾದ ಟಿಪ್ಪಣಿಗಳನ್ನು ಬರೆಯಬಹುದು. ನಾನು ನನ್ನೆಲ್ಲ ಕಾರ್ಯದರ್ಶಿಗಳಿಗೆ ಆ ಸ್ವಾತಂತ್ರ್ಯವನ್ನು ನೀಡಿದ್ದೇನೆ. ನಾನು ಅವರಿಗೆ ಹೇಳಿದ್ದೇನೆ, 'ನಿಮ್ಮ ಮಂತ್ರಿಗೆ ಅಸಮಾಧಾನ ಆಗಬಹುದು ಅನ್ನುವ ಭಯಕ್ಕೆ

ನೀವು ನಿಮ್ಮ ಪ್ರಾಮಾಣಿಕ ಅಭಿಪ್ರಾಯವನ್ನು ಕೊಡದೆ ಇರುವುದಾದರೆ, ನೀವು ದಯವಿಟ್ಟು ಹೊರಟು ಹೋಗುವುದು ಒಳ್ಳೆಯದು. ನಾನು ಮತ್ತೊಬ್ಬ ಕಾರ್ಯದರ್ಶಿಯನ್ನು ತರುತ್ತೇನೆ.' ಮರೆಮಾಚದೆ ವ್ಯಕ್ತಪಡಿಸಿದ ಅಭಿಪ್ರಾಯಕ್ಕೆ ನಾನೆಂದೂ ಅಸಮಾಧಾನಗೊಳ್ಳುವುದಿಲ್ಲ, ಏಕೆಂದರೆ ಈ ವ್ಯಕ್ತಿಗಳು ಸಾಧನಗಳು. ಅವನ್ನು ತೆಗೆದುಬಿಟ್ಟರೆ ದೇಶದಲ್ಲೆಲ್ಲ ಅರಾಜಕತೆಯಲ್ಲದೆ ಬೇರೇನು ಇರುವುದಿಲ್ಲ.[೩೬೫]

ಒಂದು ದಿನ ಪಟೇಲರು ಕಾನೂನು ಕಾರ್ಯದರ್ಶಿ ಶಾವಾಕ್ಸ್ ಎ. ಲಾಲ್ ರವರ ಅಭಿಪ್ರಾಯವನ್ನು ವೈಸ್‌ರಾಯ್ ಮೌಂಟ್‌ಬ್ಯಾಟನ್ ಎತ್ತಿದ್ದ ಒಂದು ವಿಷಯದ ಬಗೆಗೆ ಕೇಳಿದರು. ಲಾಲ್‌ರವರು ಇತ್ತೀಚೆಗೆ ಒಂದು ಅಹಿತಕರ ಅನುಭವ ವನ್ನು ಪಡೆದಿದ್ದರು. ಅವರು ಮತ್ತೊಬ್ಬ ಮಂತ್ರಿಗೆ ನೇರವಾದ ಆದರೆ ಅಹಿತಕರವಾದ ಅಭಿಪ್ರಾಯವನ್ನು ಕೊಟ್ಟದ್ದಕ್ಕೆ ಆ ಮಂತ್ರಿಯ ಅಸಮಧಾನಕ್ಕೆ ತುತ್ತಾಗಿದ್ದರು. ಅದರಿಂದ ಅವರು ಪಟೇಲರನ್ನು 'ನಿಮಗೆ ನನ್ನ ಪ್ರಾಮಾಣಿಕ ಅಭಿಪ್ರಾಯ ಬೇಕೆ?' ಎಂದು ಕೇಳಿದರು. ಪಟೇಲರು ಕೋಪದಿಂದ ಗುಡುಗಿದರು, "ಸರ್ಕಾರವು ನಿಮಗೆ ತಿಂಗಳಿಗೆ ನಾಲ್ಕು ಸಾವಿರ ರೂಪಾಯಿಗಳನ್ನು ನಿಮ್ಮ ಅಪ್ರಮಾಣಿಕ ಅಭಿಪ್ರಾಯಗಳಿಗಾಗಿ ಕೊಡುತ್ತದೆಯೆ?" ಪ್ರಾಮಾಣಿಕ ಅಭಿಪ್ರಾಯವನ್ನು ಕೊಡುವುದು ನಿಮ್ಮ ಕರ್ತವ್ಯ. ಅದನ್ನು ಒಪ್ಪುವುದು, ಬಿಡುವುದು ನನಗೆ ಸೇರಿದ್ದು."

ಆ ನಂತರ ಪಟೇಲರು ಕೇಳಿದಾಗಲೆಲ್ಲ ತಮ್ಮ ಪ್ರಾಮಾಣಿಕ ಅಭಿಪ್ರಾಯ ವ್ಯಕ್ತಪಡಿಸಲು ಲಾಲ್‌ರವರು ಹಿಂಜರಿಯುತ್ತಿರಲಿಲ್ಲ.[೩೬೬]

ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಭಾಷಾವಾರು ಆಂಧ್ರ ರಾಜ್ಯ ರಚನೆ ಮಾಡಬೇಕೆಂಬ ಠರಾವನ್ನು ಅಂಗೀಕರಿಸಿ ಅದನ್ನು ಜಾರಿಗೆ ತರಲು ಗೃಹ ಇಲಾಖೆಗೆ ಕಳುಹಿಸಿತು. ಆ ತರಹ ಭಾಷಾವಾರು ರಾಜ್ಯ ರಚನೆ ಸೂಕ್ತವಲ್ಲ ಅನ್ನುವುದು ಗೃಹ ಕಾರ್ಯದರ್ಶಿ ಐಯ್ಯಂಗಾರ್ಯರದಾಗಿತ್ತು. ಅದರಿಂದ ಅವರು ಪೇಚಿಗೆ ಸಿಲುಕಿದರು. ಅವರು ಪಟೇಲರ ಬಳಿ ಹೋಗಿ, "ಸರ್, ಈ ಠರಾವನ್ನು ಅಂಗೀಕರಿಸಿದ ಮಹನೀಯರಲ್ಲಿ ಜವಹರಲಾಲ್ ನೆಹರು, ಮೌಲಾನಾ ಆಜಾದ್, ಡಾ॥ ರಾಜೇಂದ್ರ ಪ್ರಸಾದ್ ಮತ್ತು ನೀವೂ ಸಹ ಇದ್ದೀರಿ. ನೀವೆಲ್ಲರೂ ಕ್ಯಾಬಿನೆಟ್ ಮಂತ್ರಿಗಳು ಮತ್ತು ಈ ತೀರ್ಮಾನವನ್ನು ತೆಗೆದುಕೊಂಡಿದ್ದೀರಿ. ಅದರ ಬಗೆಗೆ ನಾನು ಏನು ಮಾಡಬೇಕೆಂದು ನಿರೀಕ್ಷಿಸಿದ್ದೀರಿ?" ಎಂದು ಕೇಳಿದರು. ಒಂದು ಕ್ಷಣವೂ ವಿಳಂಬ ಮಾಡದೆ ಸರ್ದಾರರು ಮರು ಪ್ರಶ್ನೆ ಕೇಳಿದರು, "ನೀವು ಗೃಹಕಾರ್ಯದರ್ಶಿ

ಹೌದೋ ಅಲ್ಲವೋ?" "ಹೌದು" ಎಂದರು ಅಯ್ಯಂಗಾರ್. "ಹಾಗಾದರೆ, ಗೃಹ ಕಾರ್ಯದರ್ಶಿಯಾಗಿ ನಿಮ್ಮ ಕರ್ತವ್ಯವನ್ನು ನೀವು ಮಾಡಿ. ಒಂದು ಟಿಪ್ಪಣಿಯನ್ನು ರಚಿಸಿ ಸಚಿವ ಸಂಪುಟಕ್ಕೆ ಸಲ್ಲಿಸಿ. ಅದರಲ್ಲಿ ನಿಮ್ಮ ಅಭಿಪ್ರಾಯದ ಪ್ರಕಾರ ಆ ಪ್ರಸ್ತಾವನೆಯ ತೊಡಕುಗಳೇನು ಮತ್ತು ಅವನ್ನು ಹೇಗೆ ಮತ್ತಷ್ಟು ವಿಶ್ಲೇಷಿಸಬೇಕು ಎನ್ನುವುದನ್ನು ಕರಾರುವಾಕ್ಕಾಗಿ ಬರೆಯಿರಿ. ಕಾರ್ಯಕಾರಿ ಸಮಿತಿ ಮಸೂದೆಯನ್ನು ಅಂಗೀಕರಿಸಿರುವವರು ಯಾರು ಅನ್ನುವುದನ್ನು ನೀವು ನೋಡಬೇಕಾಗಿಲ್ಲ. ನೀವು ಇಡೀ ಸಮಸ್ಯೆಯನ್ನು ಸ್ಪಷ್ಟವಾಗಿ ಏನನ್ನೂ ಮರೆ ಮಾಚದೆ ವಿಶ್ಲೇಷಿಸಬೇಕು," ಎಂದರು ಪಟೇಲರು. ಅಯ್ಯಂಗಾರ್‌ರವರು ಹಾಗೆಯೆ ಮಾಡಿದರು. ಪಟೇಲರು ಮತ್ತು ಇತರರು ತೆಗೆದುಕೊಂಡಿದ್ದ ತೀರ್ಮಾನವನ್ನು ನಿಷ್ಪಕ್ಷಪಾತ ಒರೆಗೆ ಹಚ್ಚಿದರು. ಅದರ ಫಲವಾಗಿ, ಸಂವಿಧಾನವು ಜಾರಿಗೆ ಬರುವುದಕ್ಕೆ ಮುನ್ನವೇ ಆಂಧ್ರ ಪ್ರದೇಶವನ್ನು ರಚಿಸಲು ಮಾಡಿದ್ದ ಪ್ರಸ್ತಾವನೆಯು ಮುಂದೂಡಲ್ಪಟ್ಟಿತು. ಸಚಿವ ಸಂಪುಟದ ಸಭೆಯ ನಂತರ ಅಯ್ಯಂಗಾರ್‌ರವರು ಪಟೇಲರನ್ನು ಭೇಟಿ ಮಾಡಿ, "ಕಾರ್ಯಕಾರಿ ಸಮಿತಿಯ ಸದಸ್ಯ ಸರ್ದಾರ್ ಪಟೇಲ್ ಆಗಿ ನೀವು ತೆಗೆದುಕೊಂಡಿದ್ದ ತೀರ್ಮಾನವನ್ನು ಗೃಹ ಮಂತ್ರಿಯಾಗಿ ತಳ್ಳಿಹಾಕುವಂತೆ ಮಾಡುವುದರಲ್ಲಿ ನಾನು ಯಶಸ್ವಿಯಾದೆ," ಎಂದು ಲಘು ಹಾಸ್ಯದಿಂದ ನುಡಿದರು. ಭಾಷಾವಾರು ಪ್ರಾಂತ್ಯಗಳ ರಚನೆ ಖಂಡಿತವಾಗಿಯೂ ನಮ್ಮ ಅಭಿವೃದ್ಧಿಯನ್ನು ಕುಂಟಿತಗೊಳಿಸುತ್ತದೆ. ನಮ್ಮ ಆಡಳಿತಾತ್ಮಕ, ಆರ್ಥಿಕ ಮತ್ತು ಹಣಕಾಸಿನ ವ್ಯವಸ್ಥೆಯನ್ನು ಹದೆಗೆಡಿಸುತ್ತದೆ, ರಾಷ್ಟ್ರ ಘಾತಕ ಮತ್ತು ರಾಷ್ಟ್ರವನ್ನು ದುರ್ಬಲಗೊಳಿಸುವ ಶಕ್ತಿಗಳನ್ನು ಬಿಡುಗಡೆ ಮಾಡುತ್ತದೆ – ಎನ್ನುವುದು ಪಟೇಲರ ಅಭಿಪ್ರಾಯವಾಗಿತ್ತು. ಅದರಿಂದ ಅವರು ಬದುಕಿರುವವರೆಗೂ ಆಂಧ್ರಪ್ರದೇಶದ ರಚನೆಗೆ ಅವಕಾಶ ಕೊಡಲಿಲ್ಲ. ಆದರೆ ನೆಹರು ಒತ್ತಡವನ್ನು ತಡೆಯಲಾಗದೆ ೧೯೫೨ರಲ್ಲಿ ಭಾಷಾವಾರು ಆಂಧ್ರ ಪ್ರದೇಶ ರಚನೆಗೆ ಅವಕಾಶ ಮಾಡಿದರು.[೩೬೭]

ಪಟೇಲರು ತಮ್ಮ ಕಾರ್ಯದರ್ಶಿಗಳಿಗೆ ಬಹಳ ಗೌರವದ ಸ್ಥಾನವನ್ನು ನೀಡಿದ್ದರು. ಒಂದು ದಿನ ಐಯ್ಯಂಗಾರ್‌ರವರು ಪಟೇಲರೊಡನೆ ಇದ್ದಾಗ ಪಟಿಯಾಲದ ಮಹಾರಾಜರು ಬಂದರು. ಅವರು ಪೆಪ್ಸು ಪ್ರಾಂತ್ಯದ ರಾಜಪ್ರಮುಖರಾಗಿದ್ದುದರಿಂದ, ಪಟೇಲ್ ಮತ್ತು ಮಹಾರಾಜರ ನಡುವಣ ಮಾತುಕತೆ ಮುಗಿಯುವವರೆಗೆ ತಾವು ಹೊರಗೆ ವರಾಂಡದಲ್ಲಿ ಕಾಯುವುದಾಗಿ ಐಯ್ಯಂಗಾರ್ ಹೇಳಿದರು. ಆದರೆ ಪಟೇಲ್ ಒಪ್ಪಲಿಲ್ಲ, ಮಹಾರಾಜರನ್ನು ತಮ್ಮ ಮಲಗುವ ಕೊಠಡಿಗೇ ಆಹ್ವಾನಿಸಿದರು ಮತ್ತು ಅವರಿಗೊಂದು ಕುರ್ಚಿಯನ್ನು ನೀಡಿ ತಮ್ಮ ಕೆಲಸ ಐಯ್ಯಂಗಾರ್ ಒಡನೆ ಮುಗಿಯುವವರೆಗೆ ಕುಳಿತಿರುವಂತೆ

ಸೂಚಿಸಿದರು. ಮಾರನೆಯ ದಿನ, ಐಯ್ಯಂಗಾರ್‌ರವರು 'ನನಗೇಕೆ ಅಷ್ಟೊಂದು ವಿಶೇಷವಾದ ಸೌಜನ್ಯತೆಯನ್ನು ತೋರಿದಿರಿ?" ಎಂದು ಕೇಳಿದರು. "ಅದರಲ್ಲಿ ವೈಯುಕ್ತಿಕವಾದುದೇನು ಇಲ್ಲ. ಭಾರತ ಸರ್ಕಾರದ ಕಾರ್ಯದರ್ಶಿಯ ಸ್ಥಾನ ಬಹಳ ಉನ್ನತವಾದುದು. ಅದನ್ನು ಸಾರ್ವಜನಿಕರ ಮುಂದೆ ಹಾಗೆಯೇ ನಡೆಸಿಕೊಂಡು ಹೋಗಬೇಕು" ಎಂದರು ಪಟೇಲ್.[೩೬೮] ಎಂತಹ ಆದರ್ಶ!

ಸರ್ದಾರರು ಎಂದೂ ಅಧಿಕಾರಶಾಹಿ ಜಂಭ ಅಥವಾ ಮನೋಭಾವವನ್ನು ತೋರುತ್ತಿರಲಿಲ್ಲ. ಅವರು ವಾಸ್ತವಿಕ, ನ್ಯಾಯಬದ್ಧ ಮತ್ತು ನಿಸ್ಪಕ್ಷಪಾತ ದೃಷ್ಟಿಯಿಂದ ವ್ಯವಹರಿಸುತ್ತಿದ್ದರು. ಸಾರ್ವಜನಿಕರ ದೂರುಗಳ ಬಗೆಗೆ ಉದಾರತೆಯ ಮತ್ತು ಸಹಾಯಕ ಮನೋಭಾವ ತೋರುತ್ತಿದ್ದರು. ಅಹವಾಲು ಅಥವಾ ಕಷ್ಟಗಳನ್ನು ತಾಳ್ಮೆಯಿಂದ ಶಾಂತವಾಗಿ ಆಲಿಸುತ್ತಿದ್ದರು. ರಾಜಸ್ತಾನದಲ್ಲಿ ಕಾಂಗ್ರೆಸ್ ಮಂತ್ರಿಮಂಡಲ ಅಧಿಕಾರಕ್ಕೆ ಬಂದ ಮೇಲೆ ಬಿಕನೀರ್‌ನ ಜಾಗೀರ್‌ದಾರರು ಕೆಲವು ವಿಷಮ ಸಮಸ್ಯೆಗಳನ್ನು ಎದುರಿಸಬೇಕಾಯಿತು. ರಾಜಸ್ತಾನ ಸರ್ಕಾರದಿಂದ ಅವರಿಗೆ ಪರಿಹಾರ ಸಿಗಲಿಲ್ಲ. ಅದರಿಂದ ಠಾಕೂರ್ ಜಸ್ವಂತ್ ಸಿಂಗ್ ನಾಯಕತ್ವದಲ್ಲಿ ಜಾಗೀರ್‌ದಾರರ ಒಂದು ನಿಯೋಗವು ಪಟೇಲರ ಭೇಟಿಗೆ ದೆಹಲಿಗೆ ಬಂದಿತು. ಆದರೆ ಅವರು ಅನೇಕ ವಾರಗಳು ಕಾದರೂ ಸರ್ದಾರರನ್ನು ಭೇಟಿ ಮಾಡಲಾಗಲಿಲ್ಲ. ಅವರು ಸರ್ದಾರರ ನಿವಾಸಕ್ಕೆ ಬಂದಾಗಲೆಲ್ಲ ಸರ್ದಾರರ ಆಪ್ತ ಕಾರ್ಯದರ್ಶಿ ವಿ. ಶಂಕರ್‌ರವರು, 'ಸರ್ದಾರರಿಗೆ ಬಿಡುವಿಲ್ಲ' ಎನ್ನುತ್ತಿದ್ದರು. ರಾಜಾಸ್ತಾನ ಸರ್ಕಾರವು ಠಾಕೂರ್ ತಂಡಕ್ಕೆ ಸರ್ದಾರರ ಭೇಟಿಗೆ ಅವಕಾಶ ಕೊಡಬಾರದೆಂದು ಶಂಕರ್ ಮತ್ತು ಮಣಿಬೆನ್‌ರವರನ್ನು ಒತ್ತಾಯಿಸಿತ್ತು. ಜಸ್ವಂತ್ ಸಿಂಗ್ ಸಂವಿಧಾನ ರಚನಾ ಸಭೆಯ ಸದಸ್ಯರಾಗಿದ್ದರು. ಆದರೂ ಸರ್ದಾರರನ್ನು ನೇರವಾಗಿ ಭೇಟಿ ಮಾಡಲು ಅವರಿಗೆ ಬಹಳ ಭಯ. ಕಡೆಗೆ ಒಂದು ದಿನ ಧೈರ್ಯ ಮಾಡಿ ಸರ್ದಾರರನ್ನು ಸಂಸತ್ತಿನ ಮೊಗಸಾಲೆಯಲ್ಲಿ ಸಂಧಿಸಿದರು. ಅದನ್ನು ಕಂಡ ತಕ್ಷಣ ಶಂಕರ್‌ರವರು ಅವರ ಬಳಿ ಬಂದು 'ಸರ್ದಾರ್ ಸಾಹೇಬರಿಗೆ ಕೆಲವು ದಿನಗಳ ಕಾಲ ಬಿಡುವಿರುವುದಿಲ್ಲ' ಎಂದರು. ಜಸ್ವಂತ್ ಸಿಂಗ್‌ರವರು ಸರ್ದಾರರ ಮುಖದ ಕಡೆಗೆ ನೋಡಿದರು. ಸರ್ದಾರರು ಸಹಾನುಭೂತಿಯಿಂದ, 'ನಿಮ್ಮ ನಿಯೋಗವನ್ನು ನಾಳೆ ಭೇಟಿ ಮಾಡುತ್ತೇನೆ' ಎಂದರು. ಆಗಲೂ ಶಂಕರ್ ಮಧ್ಯ ಬಾಯಿ ಹಾಕಿ, 'ನಾಳೆಯ ದಿನ ಪೂರ್ತಾ ಸರ್ದಾರರ ಕಾರ್ಯಕ್ರಮ ನಿಗದಿಯಾಗಿದೆ' ಎಂದರು. ಸರ್ದಾರರು ಠಾಕೂರರಿಗೆ, 'ಅದರ ಬಗೆಗೆ ಚಿಂತಿಸಬೇಡಿ' ಎಂದರು.

ಮಾರನೆಯ ದಿನ ಠಾಕೋರ್‌ಗೆ ದೂರವಾಣಿ ಕರೆ ಬಂದಿತು. ಅವರ

ನಿಯೋಗವನ್ನು ಸರ್ದಾರರು ಮಧ್ಯಾಹ್ನ ೩ ಘಂಟೆಗೆ ಭೇಟಿ ಮಾಡುವುದಾಗಿ ಆ ಕರೆ ತಿಳಿಸಿತು. ಅಂದು ಜಸ್ವಂತರ ನಿಯೋಗ ಸರ್ದಾರರ ನಿವಾಸಕ್ಕೆ ಹೋದಾಗ, ಶಂಕರ್, "ನಿಮ್ಮ ಭೇಟಿಗೆ ೧೫ ನಿಮಿಷಗಳ ಕಾಲ ನಿಗದಿಯಾಗಿದೆ. ಸರ್ದಾರರ ಅನಾರೋಗ್ಯ ಮತ್ತು ಅವರ ಇತರ ಕಾರ್ಯಕ್ರಮಗಳ ದೃಷ್ಟಿಯಿಂದ ನೀವು ಹೆಚ್ಚು ಕಾಲ ತೆಗೆದುಕೊಳ್ಳುವ ಹಾಗಿಲ್ಲ" ಎಂದು ಎಚ್ಚರಿಸಿದರು. ಠಾಕೂರ್‌ರವರನ್ನು ಒಳಕ್ಕೆ ಬಿಟ್ಟಾಗ ಸರ್ದಾರರ ಜೊತೆ ಮಣಿಬೆನ್ ಮತ್ತು ಶಂಕರ್ ಇದ್ದರು. ಠಾಕೂರ್‌ರವರು ಬಾಯಿ ತೆರೆಯುವುದಕ್ಕೆ ಮುನ್ನವೇ ಮಣಿಬೆನ್, ಜಾಗಿರ್‌ದಾರರು ಮತ್ತು ರಾಜರು ಎಸಗಿರುವ ಅಕೃತ್ಯಗಳ ಬಗೆಗೆ ಮಾತನಾಡಲು ಆರಂಭಿಸಿದರು. ಅವರ ಮಾತು ಮುಗಿಯುವ ಮುನ್ನವೇ ೧೫ ನಿಮಿಷಗಳು ಕಳೆದುಹೋದುವು. ಶಂಕರ್‌ರವರು ಠಾಕೂರ್‌ಗೆ 'ನಿಮ್ಮ ಕಾಲ ಮುಗಿಯಿತು. ಡಾಕ್ಟರು ಮತ್ತು ಇತರರು ಕಾಯುತ್ತಿದ್ದಾರೆ,' ಎಂದರು. ಠಾಕೂರರು ಮೂಕರಾದರು. ಅಷ್ಟರಲ್ಲಿ ಸರ್ದಾರರು ಸಹಾನುಭೂತಿ ಮತ್ತು ಮಮತೆಯಿಂದ ಠಾಕೂರ್‌ಗೆ, "ಡಾಕ್ಟರು ಮತ್ತು ಇತರರ ಬಗ್ಗೆ ಯೋಚಿಸಬೇಡಿ. ಅವರು ಸ್ವಲ್ಪ ಕಾಯಲಿ. ನೀವು ಬಂದ ಕಾರಣವನ್ನು ನನಗೆ ಹೇಳೇ ಇಲ್ಲ. ನಿಮಗೆ ಬೇಕಾದಷ್ಟು ಕಾಲ ತೆಗೆದುಕೊಳ್ಳಿ," ಎಂದರು. ಶಂಕರ್ ಮತ್ತು ಮಣಿಬೆನ್‌ಗೆ ಮುಜುಗರ ಉಂಟಾಯಿತು. ಠಾಕೂರ್ ನಿಯೋಗದವರು ತಮ್ಮ ಕಷ್ಟಗಳನ್ನೆಲ್ಲ ಒಂದು ಘಂಟೆ ಕಾಲ ತೋಡಿಕೊಂಡರು. ಸರ್ದಾರರು ತಾಳ್ಮೆಯಿಂದ ಆಲಿಸಿದರು. ಸ್ವಲ್ಪ ದಿನಗಳಲ್ಲಿ ನಿಯೋಗದವರಿಗೆ ಪರಿಹಾರ ದೊರಕಿತು.[೩೬೯]

ಪಟೇಲರು ಗೃಹ ಇಲಾಖೆಯನ್ನು ವಹಿಸಿಕೊಂಡಾಗ ಆಡಳಿತವು, ವಿಭಜನಾ ಅನಾಹುತ ಮತ್ತು ಮಧ್ಯಂತರ ಸರ್ಕಾರದ ಗೊಂದಲಗಳ ಫಲವಾಗಿ, ಮುರಿದು ಬೀಳುವುದರಲ್ಲಿತ್ತು. ಅಧಿಕಾರಿಗಳ ಸಂಖ್ಯೆಯನ್ನು ಹೆಚ್ಚಿಸುವುದಲ್ಲದೆ ಅವರ ಮನೋಭಾವವನ್ನು ಬದಲಾಯಿಸಬೇಕೆಂದು ಸರ್ದಾರರು ಆಲೋಚಿಸಿದರು. ಬ್ರಿಟಿಷರ ಕಾಲದಲ್ಲಿ ಅಧಿಕಾರಿಗಳ ಕೆಲಸ ತೆರಿಗೆ ವಸೂಲಿ ಮತ್ತು ಕಾನೂನು ಹಾಗೂ ಸರ್ಕಾರದ ಶಾಂತಿ ಪಾಲನೆ ಮಾತ್ರ ಆಗಿತ್ತು. ಸ್ವಾತಂತ್ರ್ಯ ಬಂದ ಮೇಲೆ ಕಾಂಗ್ರೆಸ್ ಗುರಿ ಕಲ್ಯಾಣ ರಾಜ್ಯ ಸ್ಥಾಪನೆಯಾಗಿತ್ತು. ಅಧಿಕಾರಿಗಳು ತಮ್ಮ ಹಳೆಯ ಘನತೆ ಮತ್ತು ಅಧಿಕಾರದ ಭಾವನೆಗಳನ್ನು ಬಿಟ್ಟು ಜನರಿಗಾಗಿ ಕೆಲಸ ಮಾಡುವುದನ್ನು ಕಲಿಯಬೇಕಾಗಿತ್ತು. ಸರಿಯಾದ ಮಾರ್ಗದರ್ಶನ ನೀಡಿದರೆ ಅಧಿಕಾರಿಗಳು ಸುಲಭವಾಗಿ ನವ ಮಾರ್ಗಕ್ಕೆ ಪರಿವರ್ತನೆಯಾಗುತ್ತಾರೆಂಬುದು ಪಟೇಲರ ಅಭಿಪ್ರಾಯವಾಗಿತ್ತು. ಅಧಿಕಾರಿಗಳಲ್ಲೂ ರಾಷ್ಟ್ರ ಪ್ರೇಮ ಇದೆ ಎಂದು ಅವರು ತಿಳಿದಿದ್ದರು. ಅವರು ಹಿರಿಯ ಅಧಿಕಾರಿಗಳನ್ನು ಕರೆಯಿಸಿ ಅವರು ತಮ್ಮ ಕರ್ತವ್ಯ

ಮತ್ತು ಕೆಲಸಗಳನ್ನು ಪ್ರಾಮಾಣಿಕತೆಯಿಂದ ಸರಿಯಾದ ರೀತಿಯಲ್ಲಿ ನಿರ್ವಹಿಸಿದರೆ ನ್ಯಾಯವಾದ ಮತ್ತು ಸರಿಯಾದ ರೀತಿಯಲ್ಲಿ ನಡೆಸಿಕೊಳ್ಳಲಾಗುವುದು ಎನ್ನುವ ಆಶ್ವಾಸನೆಯನ್ನು, ಬ್ರಿಟಿಷರ ಕಾಲದಲ್ಲಿ ಅವರಿಗಿದ್ದ ಸೌಲಭ್ಯಗಳು ಮುಂದುವರೆಯುವುವು ಎನ್ನುವ ಆಶ್ವಾಸನೆಯನ್ನು ನೀಡಿದರು. ಈ ಸುದ್ದಿ ಶೀಘ್ರವೇ ಹರಡಿ ಅಧಿಕಾರಿಗಳಲ್ಲಿದ್ದ ಆತಂಕ ಮತ್ತು ಭಯ ನಿವಾರಣೆಯಾಗಿ ಅವರು ಹೆಚ್ಚಿನ ಶ್ರದ್ಧೆ ಮತ್ತು ಸಂತಸದಿಂದ ಕೆಲಸ ಮಾಡುವಂತಾಯಿತು.

ಸರ್ದಾರರದು ವಿಶಾಲ ಹೃದಯ. ಅಧಿಕಾರಿಗಳು ಅಕಸ್ಮಾತ್ತಾಗಿ ಮಾಡಿದ ತಪ್ಪುಗಳಿಗೆ ಅವರನ್ನು ದಂಡಿಸುತ್ತಿರಲಿಲ್ಲ. ಅನೇಕ ಅಧಿಕಾರಿಗಳು ತಪ್ಪಿಗೆ ಶಿಕ್ಷೆಯಾದೀತು ಅನ್ನುವ ಭಯದಿಂದ ತೀರ್ಮಾನಗಳನ್ನೇ ತೆಗೆದುಕೊಳ್ಳುವುದಿಲ್ಲ. ಸರ್ದಾರರು ದಂಡನೆಯ ಭಯವಿಲ್ಲದೆ ಧೈರ್ಯವಾಗಿ ಕೆಲಸ ಮಾಡುವಂತೆ ಅಧಿಕಾರಿಗಳನ್ನು ಪ್ರೋತ್ಸಾಹಿಸುತ್ತಿದ್ದರು.

ಒಮ್ಮೆ ಒಬ್ಬ ಹಿರಿಯ ಅಧಿಕಾರಿ, ಒಬ್ಬ ಅರಸನಿಗೆ ಕೆಲವು ವಿಶೇಷ ರಿಯಾಯಿತಿಗಳನ್ನು ನೀಡಿದನು. ಆನಂತರ ಪಟೇಲರು ಏನನ್ನುವರೋ ಅನ್ನುವ ಭಯ ಅವನನ್ನು ಆವರಿಸಿತು. ಅವನು ಪಟೇಲರ ಬಳಿ ತಾನು ಮಾಡಿರುವ ಕೆಲಸವನ್ನು ವರದಿ ಮಾಡಿದನು. ಅವನು ಅರಸನಿಗೆ ಸ್ವಲ್ಪ ಜಾಸ್ತಿ ಉದಾರತೆ ತೋರಿಸಿಬಿಟ್ಟಿದ್ದನು. ಪಟೇಲರು, "ನೀನು ಬರವಣಿಗೆಯಲ್ಲಿ ಅದನ್ನು ನೀಡಿದ್ದೀಯ?" ಎಂದು ವಿಚಾರಿಸಿದರು. ಅವನು "ಹೌದು" ಎಂದನು. ಪಟೇಲರ ಮುಖ ಒಂದು ಕ್ಷಣ ಗಂಭೀರವಾಯಿತು. ಅಷ್ಟೊಂದು ಸವಲತ್ತು ಕೊಟ್ಟಿದ್ದು ಅತಿಯಾಗಿತ್ತು. ತಪ್ಪಾಗಿತ್ತು. ಮರು ಕ್ಷಣವೇ ಪಟೇಲರು ಸಮಾಧಾನವಾಗಿ ಹೇಳಿದರು, "ನೀನು ತಪ್ಪು ಮಾಡಿದ್ದೀಯ. ಆದರೆ ತಪ್ಪು ಮಾಡಿದ್ದಕ್ಕೆ ನಾನೇಕೆ ನಿನ್ನನ್ನು ಬೈಯ್ಯಬೇಕು? ನಾನೂ ಸಹ ಒಂದಲ್ಲ ಒಂದು ತಪ್ಪು ಮಾಡಬಹುದು. ನಾನು ನಿನ್ನನ್ನು ಬೆಂಬಲಿಸುತ್ತೇನೆ. ಧೈರ್ಯವಾಗಿರು," ಎಂದರು. ಆ ಅಧಿಕಾರಿ ನೆಮ್ಮದಿಯ ಉಸಿರು ಬಿಟ್ಟನು. ಪಟೇಲರ ರಕ್ಷಣೆಯಿಂದ ಪ್ರಭಾವಿತನಾಗಿ ಕೊನೆಯವರೆಗೂ ಶ್ರದ್ಧಾವಂತ ಅಧಿಕಾರಿಯಾಗಿದ್ದನು.[೩೭೦]

ಪಟೇಲರು ಎಂದೂ ತಮ್ಮ ಅಧಿಕಾರಿಗಳ ಕೈ ಬಿಡುತ್ತಿರಲಿಲ್ಲ. ಅವರ ಬೆಂಬಲಕ್ಕೆ ಯಾವಾಗಲೂ ನಿಲ್ಲುತ್ತಿದ್ದರು. ಆದರೆ ಅಧಿಕಾರಿ ಪ್ರಾಮಾಣಿಕತೆಯಿಂದ ಶ್ರದ್ಧೆಯಿಂದ ಕೆಲಸ ಮಾಡಬೇಕು. ಹಾಗಿಲ್ಲದೆ ಹೋದರೆ ಅವನನ್ನು ಕಳುಹಿಸಿಬಿಡುತ್ತಿದ್ದರು.

ಒಮ್ಮೆ ಪಟೇಲರು ಇಲ್ಲದೆ ಇದ್ದಾಗ, ಪ್ರಧಾನಿಯೂ ಸೇರಿ ಇತರ ಹಿರಿಯ ಮಂತ್ರಿಗಳೂ ದೆಹಲಿಯಲ್ಲಿ ಇಲ್ಲದೆ ಇದ್ದಾಗ, ಪಟೇಲರ ಕಾರ್ಯದರ್ಶಿ

ಅಯ್ಯಂಗಾರ್‌ರವರು ಒಂದು ಮುಖ್ಯವಾದ ತುರ್ತು ತೀರ್ಮಾನವನ್ನು ತೆಗೆದುಕೊಳ್ಳಬೇಕಾಯಿತು. ತೀರ್ಮಾನ ತೆಗೆದುಕೊಳ್ಳುವುದನ್ನು ಮುಂದೂಡುವ ಹಾಗಿರಲಿಲ್ಲ. ಅಯ್ಯಂಗಾರ್ ಅಲೋಚಿಸಿ ಒಂದು ತೀರ್ಮಾನವನ್ನು ತೆಗೆದು ಕೊಂಡರು. ಆನಂತರ ಪಟೇಲರು ದೆಹಲಿಗೆ ಬಂದ ಮೇಲೆ ತಾವು ಮಾಡಿದ ಕೆಲಸವನ್ನು ತಿಳಿಸಿದರು. ಪಟೇಲರು ಅವರ ತೀರ್ಮಾನ ಸರಿಯಲ್ಲವೆಂದು ತಲೆಯಾಡಿಸಿದರು. "ನೀನು ಮೊದಲೇ ಹೇಳಿದ್ದರೆ ನಾನು ಬೇರೆ ತೀರ್ಮಾನ ತೆಗೆದುಕೊಳ್ಳುತ್ತಿದ್ದೆ," ಎಂದರು ಪಟೇಲ್. ಪಟೇಲರು ತಮ್ಮ ತೀರ್ಮಾನಕ್ಕೆ ಕಾರಣ ಗಳನ್ನೂ ತಾಳ್ಮೆಯಿಂದ ನೀಡಿದರು. ತಮ್ಮ ತಪ್ಪು ಅರಿವಾಗಿ ಅಯ್ಯಂಗಾರ್‌ರವರ ಮುಖ ಕಪ್ಪಿಟ್ಟಿತು. ಅವರಿಗೆ ಬಹಳ ಸಂಕಟವೂ ಆಯಿತು. ಆದರೆ ಪಟೇಲರು, "ಚಿಂತಿಸಬೇಡ, ಎಲ್ಲ ಮನುಷ್ಯರೂ ತಪ್ಪು ಮಾಡುತ್ತಾರೆ" ಎಂದರು. ಮುಂದೆ ಸಚಿವ ಸಂಪುಟದ ಸಭೆಯಲ್ಲಿ ಆ ತೀರ್ಮಾನ ಚರ್ಚೆಗೆ ಬಂದಾಗ ಪಟೇಲರು, 'ಆ ತೀರ್ಮಾನ ನನ್ನದು' ಎಂದರು. ಅಲ್ಲಿಗೆ ಚರ್ಚೆ ಮುಕ್ತಾಯವಾಯಿತು. ಆ ಘಟನೆ ಐಯ್ಯಂಗಾರ್ ಮೇಲೆ ಭಾರಿ ಪ್ರಭಾವವನ್ನು ಬೀರಿತು.[೩೭೧]

ರಾಜಕಾರಣಿಗಳು, ಶಾಸಕರು ಮತ್ತು ಕಾಂಗ್ರೆಸ್ ನಾಯಕರು ಆಡಳಿತದ ವಿಷಯದಲ್ಲಿ ತಲೆ ಹಾಕಲು ಪಟೇಲರು, ಅವಕಾಶ ಕೊಡುತ್ತಿರಲಿಲ್ಲ. "ಆಡಳಿತದಲ್ಲಿ ಮಧ್ಯೆ ಪ್ರವೇಶಿಸುವುದು ಪ್ರಜಾಪ್ರಭುತ್ವದಲ್ಲಿ ಅತ್ಯಂತ ಅಪಾಯಕಾರಿ," ಎಂದು ಅವರು ಹೇಳುತ್ತಿದ್ದರು. ಅದರಿಂದ ಅಧಿಕಾರಿಗಳು ಮತ್ತು ಅಧಿಕಾರೇತರರನ್ನು ಪರಸ್ಪರ ದೂರವಿಟ್ಟರು. ಆದರೆ ಅಧಿಕಾರೇತರರು ತಮ್ಮ ನ್ಯಾಯವಾದ ಸಮಸ್ಯೆಗಳ ಪರಿಹಾರಕ್ಕೆ ಸರ್ದಾರರ ಬಳಿಗೆ ಹೋಗಬಹುದಾಗಿತ್ತು.

ಸರ್ದಾರರು ತಮ್ಮ ಸಹಾನುಭೂತಿ, ಜಾಣ್ಮೆ, ತಿಳವಳಿಕೆ, ಬೆಂಬಲ ಮತ್ತು ಸದ್ಭಾವನೆಯಿಂದ ಅಧಿಕಾರಿಗಳ ಮನೋಭಾವ ಮತ್ತು ಕಾರ್ಯಶೈಲಿಯ ಮೇಲೆ ಪ್ರಭಾವ ಬೀರಿದರು. ಅಧಿಕಾರಿಗಳು ತಾವು ಸರ್ಕಾರದ ಒಂದು ಅವಿಭಾಜ್ಯ ಅಂಗ ಎಂದು ಭಾವಿಸಿ ಕೆಲಸ ಮಾಡಲಾರಂಭಿಸಿದರು. ೧೯೪೯ರಲ್ಲಿ ಸರ್ಕಾರದಲ್ಲಿ ಆರ್ಥಿಕ ಮುಗ್ಗಟ್ಟು ಉಂಟಾದಾಗ ಸರ್ದಾರರು ಒಂದು ಸುಳಿವು ಕೊಟ್ಟ ತಕ್ಷಣ ಅಧಿಕಾರಿ ವರ್ಗ ಸ್ವಯಂ ಪ್ರೇರಿತರಾಗಿ ತಮ್ಮ ಸಂಬಳದಲ್ಲಿ ಶೇ. ೧೦ರಷ್ಟನ್ನು ಕಡಿತಗೊಳಿಸಿಕೊಂಡರು.[೩೭೨]

ಪಟೇಲರು ಮತ್ತು ಅವರ ಅಧಿಕಾರಿಗಳ ನಡುವೆ ಒಂದು ಭಾವನಾತ್ಮಕ ಬಂಧನ ಮತ್ತು ಆತ್ಮೀಯತೆ ಬೆಳೆದಿತ್ತು. ಪಟೇಲರ ಕಾರ್ಯದರ್ಶಿ ಹೆಚ್.ವಿ. ಆರ್. ಅಯ್ಯಂಗಾರ್ ಅದರ ಬಗೆಗೆ ಹೀಗೆ ಹೇಳಿದ್ದಾರೆ:

"ಸರ್ದಾರ್ ಪಟೇಲರು ಆಡಳಿತ ಕಲೆಯಲ್ಲಿ ಒಬ್ಬ ವಿಭೂತಿ (genius). ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಮುಂಚೆ ಆಲಿಸುವ – ಸಹನೆಯಿಂದ ಮತ್ತು ಎಚ್ಚರಿಕೆಯಿಂದ ಆಲಿಸುವ – ಅದ್ಭುತ ಶಕ್ತಿ ಅವರಿಗಿತ್ತು. ಆ ನಂತರ ಅವರೊಂದು ಬಂಡೆ. ಆಲಿಸಿ, ಆಲೋಚಿಸಿ ನಿರ್ಧಾರ ಮಾಡಿದ ಮೇಲೆ ಕಾರ್ಯೋನ್ಮುಖರಾಗಿ ದೃಢ ಹೆಜ್ಜೆ ಇಡುವ ಬೃಹದಾಕೃತಿ ಅವರು."[೩೭೩]

ಪಟೇಲರ ಬಗೆಗೆ ಕೇಂದ್ರ ಸರ್ಕಾರದ ಸೆಕ್ರೆಟರಿ – ಜೆನರಲ್ ಆಗಿದ್ದ ಹಿರಿಯ ಐ.ಸಿ.ಎಸ್. ಅಧಿಕಾರಿ ಗಿರಿಜಾ ಶಂಕರ್ ಬಾಜಪೇಯಿಯವರ ಅಭಿಪ್ರಾಯ ಹೀಗಿದೆ:

ಆ ವಿನಾಶಿಕಾರಿ ಮಾಸಗಳಲ್ಲಿ ನಮ್ಮ ಹೊಸ ರಾಷ್ಟ್ರದ ವಿಧಿಲಿಖಿತ ನೇತಾಡುತ್ತಲಿತ್ತು..... ಒಂದಷ್ಟು ತೂಗಾಟದ ನಂತರ ತಕ್ಕಡಿ ಸ್ಥಿರವಾಗಿ ನಿಂತಿತು. ಅದಕ್ಕೆ ನಮ್ಮ ಜನರಿಗೆ ತಮ್ಮ ನಾಯಕರಲ್ಲಿದ್ದ ನಂಬಿಕೆಯಷ್ಟೇ ಕಾರಣವಲ್ಲ, ನಮ್ಮ ಹೊಸ ಗೃಹಮಂತ್ರಿ – ಸರ್ದಾರ್ ಪಟೇಲರ ದೃಢ ಮನಸ್ಸು ಮತ್ತು ಬಲವಾದ ಕೈ ಕಾರಣ.[೩೭೪]

❖ ◆ ❖

ಪಟೇಲ್ ಮತ್ತು ನೆಹರು

ಭಾಗ – ನಾಲ್ಕು

ಒಕ್ಕೂಟ ನಿರ್ಮಾಪಕ

೧೮. ಭಾರತ ಒಕ್ಕೂಟದ ಅಸ್ತಿಭಾರ

ಪಟೇಲರಿಗೆ ಜೀವನದಲ್ಲಿ ಎರಡು ಗುರಿಗಳಿದ್ದುವು. ಒಂದು, ಭಾರತದ ಸ್ವಾತಂತ್ರ್ಯ ಸಂಪಾದನೆ. ಎರಡು, ಭಾರತದ ಏಕೀಕರಣ. ೧೯೩೦ರಷ್ಟು ಹಿಂದೆಯೇ ಅವರು, "ಭೂಪಟದ ಮೇಲಿನ ಕೆಂಪು ಮತ್ತು ಬಿಳಿ ಬಣ್ಣಗಳು ಒಂದು ಬಣ್ಣವಾಗಿ ಬೆರೆತು ಹೋಗಬೇಕು, ಅದಾದ ಹೊರತು, ಸ್ವಾತಂತ್ರ್ಯವನ್ನು ಪಡೆಯಲು ಸಾಧ್ಯವಿಲ್ಲ," ಎಂದು ಹೇಳಿದ್ದರು.೧

ಆ ಕಾಲದಲ್ಲಿ ಭಾರತ ಉಪಖಂಡದಲ್ಲಿ ಎರಡು ತರಹದ ಪ್ರದೇಶಗಳು ಇದ್ದುವು: ಬ್ರಿಟಿಷ್ ಇಂಡಿಯ ಮತ್ತು ದೇಶೀಯ ರಾಜರ ಇಂಡಿಯ. ಬ್ರಿಟಿಷ್ ಇಂಡಿಯದಲ್ಲಿ ೧೭ ಪ್ರಾಂತ್ಯಗಳಿದ್ದುವು. ಅವು, ಅಜ್ಮೀರ್ – ಮಾರ್ವಾಡ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳು, ಅಸ್ಸಾಂ, ಬಲೂಚಿಸ್ತಾನ್, ಬಂಗಾಳ, ಬಿಹಾರ, ಬಾಂಬೆ, ಮಧ್ಯಪ್ರಾಂತ್ಯಗಳು ಮತ್ತು ಬೆರಾರ್, ಕೊಡಗು, ದೆಹಲಿ, ಮದ್ರಾಸ್, ವಾಯುವ್ಯ ಗಡಿನಾಡು, ಪಂತ್–ಪಿಪ್ಲೋಡ, ಒಡಿಸ್ಸ, ಪಂಜಾಬ್, ಸಿಂದ್ ಮತ್ತು ಸಂಯುಕ್ತ ಪ್ರಾಂತ್ಯಗಳು. ಇವುಗಳ ಆಡಳಿತಕ್ಕೆ ಗೌರ್ನರ್ ಅಥವಾ ಲೆಫ್ಟಿನೆಂಟ್ ಗೌರ್ನರ್ ಅಥವಾ ಚೀಫ್ ಕಮಿಷನರ್, ಅವುಗಳ ವಿಸ್ತಾರದ ಆಧಾರದ ಮೇಲೆ, ನೇಮಿಸಲ್ಪಡುತ್ತಿದ್ದರು. ಅವರೆಲ್ಲ ಐರೋಪ್ಯ ಐ.ಸಿ.ಎಸ್. ಅಧಿಕಾರಿಗಳಾಗಿರುತ್ತಿದ್ದರು.

ದೇಶಕ್ಕೆ ಸ್ವಾತಂತ್ರ್ಯ ಬಂದು ಬ್ರಿಟಿಷ್ ಇಂಡಿಯ ಭಾರತ ಡೊಮಿನಿಯನ್ ಮತ್ತು ಪಾಕಿಸ್ತಾನ ಡೊಮಿನಿಯನ್ ಎಂದು ಎರಡು ವಿಭಾಗವಾದಾಗ ಬಲೂಚಿಸ್ತಾನ, ವಾಯುವ್ಯ ಗಡಿನಾಡು ಪ್ರಾಂತ್ಯ ಮತ್ತು ಸಿಂದ್ ಪ್ರಾಂತ್ಯ ಪಾಕಿಸ್ತಾನಕ್ಕೆ

ಹೋದುವು. ಉಳಿದ ಪ್ರಾಂತ್ಯಗಳು ಭಾರತಕ್ಕೆ ಸೇರಿದುವು. ಆದರೆ ಬಂಗಾಳ, ಪಂಜಾಬ್ ಮತ್ತು ಅಸ್ಸಾಂ ಎರಡು ಡೊಮಿನಿಯನ್‌ಗಳಿಗೂ ಹಂಚಿಕೆಯಾದುವು. ಈ ಮೂರು ಪ್ರಾಂತ್ಯಗಳಲ್ಲಿ ಹಿಂದೂಗಳು ಹೆಚ್ಚು ಇದ್ದ ಪ್ರದೇಶಗಳು ಭಾರತಕ್ಕೆ, ಮುಸ್ಲಿಮರು ಹೆಚ್ಚು ಇದ್ದ ಪ್ರದೇಶಗಳು ಪಾಕಿಸ್ತಾನಕ್ಕೆ ಸೇರಿದುವು.

ಸ್ವಾತಂತ್ರ್ಯ ಬಂದಾಗ ೫೬೫ ದೇಶೀಯ ರಾಜರ ರಾಜ್ಯಗಳು ಇದ್ದುವು. ಅವು ಇಡೀ ಭಾರತ ಉಪಖಂಡದಲ್ಲಿ ದಕ್ಷಿಣದ ತಿರುವನಂತಪುರದಿಂದ ಉತ್ತರದ ಕಾಶ್ಮೀರದವರೆಗೆ, ಪೂರ್ವದ ತ್ರಿಪುರದಿಂದ ಪಶ್ಚಿಮದ ಕಲತ್‌ವರೆಗೆ ಹರಡಿದ್ದುವು. ಅವುಗಳ ಪೈಕಿ ಅತ್ಯಂತ ದೊಡ್ಡ ರಾಜ್ಯವಾದ ಹೈದರಾಬಾದ್ ೮೨,೦೦೦ ಚದರ ಮೈಲುಗಳ ವಿಸ್ತಾರವಿದ್ದರೆ ಅತ್ಯಂತ ಚಿಕ್ಕ ರಾಜ್ಯ ನಾಲ್ಕು ಎಕರೆಗಳ ವಿಸ್ತೀರ್ಣವನ್ನು ಹೊಂದಿತ್ತು. ಅವುಗಳ ರಾಜರು ಅಥವಾ ಆಡಳಿತಗಾರರು ಹೆಸರಿಗೆ ಸ್ವತಂತ್ರರಾಗಿದ್ದರೇ ಹೊರತು ನಿಜವಾದ ಅರ್ಥದಲ್ಲಲ್ಲ. ಅವರೆಲ್ಲ ಇಂಗ್ಲೆಂಡಿನ ಬ್ರಿಟಿಷ್ ಸಾಮ್ರಾಜ್ಯದ ಅಧೀನಕ್ಕೆ ಒಳಪಟ್ಟಿದ್ದರು. ಬ್ರಿಟಿಷ್ ಸಾಮ್ರಾಜ್ಯಕ್ಕೆ ಅವರ ಮೇಲಿದ್ದ ಹತೋಟಿಯನ್ನು ಸಾರ್ವಭೌಮತ್ವ ಎಂದು ಕರೆಯುತ್ತಿದ್ದರು. ರಾಜ್ಯಗಳ ಅಥವಾ ರಾಜ್ಯಗಳ ಗುಂಪುಗಳಿಗೆ ರೆಸಿಡೆಂಟ್ ಅಥವಾ ಪೊಲಿಟಿಕಲ್ ಏಜೆಂಟರನ್ನು ನಿಯಮಿಸುವುದರ ಮೂಲಕ ಆ ಸಾರ್ವಭೌಮತ್ವವನ್ನು ಬ್ರಿಟಿಷ್ ಸರ್ಕಾರ ಚಲಾಯಿಸುತ್ತಿತ್ತು. ಬ್ರಿಟಿಷ್ ಇಂಡಿಯದ ವೈಸ್‌ರಾಯ್ ರಾಜರುಗಳ ರಾಜ್ಯಕ್ಕೆ ಸಾರ್ವಭೌಮನ ಪ್ರತಿನಿಧಿ ಕೆಲಸ ನಿರ್ವಹಿಸುತ್ತಿದ್ದರು. ಅವರ ಸಹಾಯಕ್ಕೆ ಒಂದು 'ರಾಜಕೀಯ ಇಲಾಖೆ' ಇತ್ತು.

೧೯೪೭ರ ಆಗಸ್ಟ್ ೧೫ರಂದು ಸ್ವಾತಂತ್ರ್ಯ ಬರುವುದಕ್ಕೆ ಮುನ್ನವೆ ೧೯೪೬ರ ಸೆಪ್ಟೆಂಬರ್ ೨ರಂದು ನೆಹರು ನಾಯಕತ್ವದಲ್ಲಿ ಮಧ್ಯಂತರ ಸರ್ಕಾರ ರಚಿತವಾದದ್ದನ್ನು ಆ ಸರ್ಕಾರದಲ್ಲಿ ಸರ್ದಾರ್ ಪಟೇಲರು ಗೃಹ ಇಲಾಖೆ ಹಾಗೂ ವಾರ್ತಾ ಮತ್ತು ಸಂಪರ್ಕ ಇಲಾಖೆಯ ಸದಸ್ಯ (ಮಂತ್ರಿ) ಆದದ್ದನ್ನು ಹಿಂದೆಯೇ ಹೇಳಿದೆ. ಗೃಹಮಂತ್ರಿಯಾದ ಪಟೇಲರಿಗೆ 'ರಾಜಕೀಯ ಇಲಾಖೆ'ಯು ರಾಜ್ಯಗಳನ್ನು ಒಡೆಯಲು ಯೋಜನೆ ತಯಾರಿಸುತ್ತಿದೆ ಎನ್ನುವುದು ತಿಳಿಯಿತು. ಆದರೆ ಆಗ ಅವರು ನಿಸ್ಸಹಾಯಕರಾಗಿದ್ದರು. ಏಕೆಂದರೆ ರಾಜರುಗಳು ಸಂಪೂರ್ಣವಾಗಿ ವೈಸ್‌ರಾಯ್ ಅಧೀನಕ್ಕೆ ಒಳಪಟ್ಟಿದ್ದರು.[೨]

೧೯೪೭ರ ಜೂನ್ ೩ರಂದು ವೈಸ್‌ರಾಯ್ ಒಂದು ಪ್ರಕಟಣೆ ಹೊರಡಿಸಿ, 'ದೇಶೀಯ ರಾಜರುಗಳ ರಾಜ್ಯಗಳು ಆಗಸ್ಟ್ ೧೫ರಂದು ಸಾರ್ವಭೌಮತ್ವದ ಹಿಡಿತದಿಂದ ಬಿಡುಗಡೆ ಮಾಡಲ್ಪಡುವುವು. ಅಂದು ರಾಜರು ತಮ್ಮ ಹಣೆಬರಹವನ್ನು

ತಾವೇ ನಿರ್ಧರಿಸುವುದಕ್ಕೆ ಸ್ವತಂತ್ರರು. ಅವರು ತಮಗೆ ಇಷ್ಟ ಬಂದ ಹಾಗೆ ಯಾವುದೇ ಡೊಮಿನಿಯನ್‌ಗೆ ಸೇರಬಹುದು ಅಥವಾ ಸ್ವತಂತ್ರವಾಗಿ ಉಳಿಯಬಹುದು, ಸಮಾನ ಆಸಕ್ತಿಯ ವಿಷಯಗಳಾದ ರೈಲ್ವೆ, ಅಂಚೆ ಮುಂತಾದುವುಗಳ ಬಗೆಗೆ ಸಾರ್ವಭೌಮ ಮತ್ತು ರಾಜ್ಯಗಳ ನಡುವಣ ಎಲ್ಲಾ ಒಪ್ಪಂದಗಳು ಮತ್ತು ಆಡಳಿತಾತ್ಮಕ ಏರ್ಪಾಡುಗಳು ಸಹ ಕೊನೆಗೊಳ್ಳುವುವು. ಯಾವುದೇ ಡೊಮಿನಿಯನ್ ಒಡನೆ ಹೊಸ ಒಪ್ಪಂದ ಮಾಡಿಕೊಳ್ಳಲು ರಾಜರು ಸ್ವತಂತ್ರರು,' ಎಂದು ಪ್ರಕಟಿಸಿದರು. ದೀರ್ಘಕಾಲದಿಂದ ತಾವು ಕನಸು ಕಾಣುತ್ತಿದ್ದ ಸಂಪೂರ್ಣ ಸ್ವಾಯತ್ತತೆಯು ನನಸಾಗುವ ಕಾಲ ಬಂತೆಂದು ಆಕಾಂಕ್ಷಿಗಳಾದ ರಾಜರು ಹರ್ಷಿತರಾದರು. ಅಕ್ಕ ಪಕ್ಕದ ಸಣ್ಣ ರಾಜ್ಯಗಳನ್ನು ಕಬಳಿಸಬಹುದು – ಎಂದೂ ಸಹ ಅವರು ಯೋಚಿಸಲಾರಂಭಿಸಿದರು.[೩]

ಈ ಮಧ್ಯೆ ಒಂದು ಆಕಸ್ಮಿಕ ಘಟನೆ ನಡೆಯಿತು. ಗೃಹಮಂತ್ರಿ ಪದವಿಯನ್ನು ವಹಿಸಿಕೊಂಡ ಮೇಲೆ ಕಡತಗಳನ್ನು ತಿರುವಿಹಾಕುವಾಗ ಒಂದು ಕಡತ ಅಕಸ್ಮಾತ್ತಾಗಿ ಪಟೇಲರ ಗಮನವನ್ನು ಸೆಳೆಯಿತು. ಅದು ಬಸ್ತಾರ್‌ಗೆ ಸಂಬಂಧಿಸಿದ ಕಡತ. ಬಸ್ತಾರ್‌ನ ರಾಜ ಒಬ್ಬ ಅಪ್ರಾಪ್ತ ಮತ್ತು ದುರ್ಬಲ. ಅವನ ಪ್ರಧಾನಮಂತ್ರಿ ಒಬ್ಬ ವಿದೇಶೀಯ. ಬಸ್ತಾರ್ ರಾಜ್ಯದಲ್ಲಿ ಖನಿಜ ಮತ್ತು ಇತರ ಸಂಪತ್ತಿನ ಮೂಲಗಳು ಅಧಿಕವಾಗಿದ್ದುವು. ಆ ರಾಜ್ಯವನ್ನು ಹೈದರಾಬಾದ್ ಸಂಸ್ಥಾನಕ್ಕೆ ದೀರ್ಘಕಾಲದ ಭೋಗ್ಯದ ಮೇಲೆ ನೀಡುವ ಪ್ರಸ್ತಾವನೆ ಆ ಕಡತದಲ್ಲಿತ್ತು. ಅದರಿಂದ ಭಾರತಕ್ಕೆ ನಷ್ಟವಾಗುತ್ತಿತ್ತು. ಅದರ ಬಗೆಗೆ ಪಟೇಲರು ಕೇಳಿದ ಪ್ರಶ್ನೆಗಳಿಗೆ 'ರಾಜಕೀಯ ಇಲಾಖೆ'ಯವರ ಉತ್ತರ ಸಮರ್ಪಕವಾಗಿರಲಿಲ್ಲ. ಆ ಅಧಿಕಾರಗಳು, "ಬಸ್ತಾರ್‌ನ ರಾಜ ಅಪ್ರಾಪ್ತನಾದುದರಿಂದ 'ರಾಜಕೀಯ ಇಲಾಖೆ'ಯ ಮುಖ್ಯಸ್ಥರು ಅವನ ಪೋಷಕರು. ಅಪ್ರಾಪ್ತನ ಹಿತದೃಷ್ಟಿಯಿಂದ ಒಪ್ಪಂದವನ್ನು ಮಾಡಿಕೊಳ್ಳುವ ಅಧಿಕಾರ ಅವರಿಗುಂಟು" ಎಂದರು. ಪಟೇಲರು ಅವರಿಗೆ, "ಈಗ ನೀವು ಹೊರಟು ಹೋಗುತ್ತಿದ್ದೀರಿ. ನೀವು ನಿಮ್ಮ ಪೋಷಕನ ಬಗೆಗೆ ಚಿಂತಿಸಬೇಕಾಗಿಲ್ಲ. ಬಸ್ತಾರ್ ರಾಜರ ಮೇಲಿನ ನಿಮ್ಮ ಪೋಷಕತ್ವ ನಮಗೆ ವರ್ಗವಾಗುತ್ತಿದೆ. ನಮ್ಮ ಒಪ್ಪಿಗೆ ಇಲ್ಲದೆ ನೀವು ಏನನ್ನೂ ಮಾಡುವ ಹಾಗಿಲ್ಲ ಮತ್ತು ಜನರ ಹಿತಕ್ಕೆ ವಿರುದ್ಧವಾದುದನ್ನು ಮಾಡುವ ಹಾಗಿಲ್ಲ" ಎಂದರು.

ನಂತರ ಪಟೇಲರು ಬಸ್ತಾರ್ ರಾಜನನ್ನು ದೆಹಲಿಗೆ ಕರೆಸಿದರು. ಅವನೆಷ್ಟು ಎಳೆಯ ಮತ್ತು ಅನನುಭವಿ ಎನ್ನುವುದನ್ನು ನೋಡಿದಾಗ, ಅಂತಹ ಒಪ್ಪಂದಕ್ಕೆ ಅವನು ಸಹಿ ಹಾಕುವಂತೆ ಮಾಡುವುದು ಮಹಾ ಪಾಪ ಎನ್ನಿಸಿತು, ಪಟೇಲರಿಗೆ.

'ರಾಜಕೀಯ ಇಲಾಖೆ'ಯ ಮೂಲಕ ನಮ್ಮ ದೇಶಕ್ಕೆ ಅಹಿತಕಾರಿಯಾದ ಕ್ರಮಗಳನ್ನು ಹೇಗೆ ತೆಗೆದುಕೊಳ್ಳಲಾಗುತ್ತಿದೆ ಎನ್ನುವುದು ಅವರ ಅರಿವಿಗೆ ಬಂದಿತು. ಈ ಜನಗಳಿಂದ ಎಷ್ಟು ಬೇಗ ಬಿಡುಗಡೆ ಪಡೆದರೆ ದೇಶಕ್ಕೆ ಅಷ್ಟು ಒಳ್ಳೆಯದು ಎನ್ನುವ ತೀರ್ಮಾನಕ್ಕೆ ಅವರು ಬಂದರು. ರಾಜಕೀಯ ಇಲಾಖೆಯ ಅಧಿಕಾರಿಗಳ ಮುಖ್ಯ ಉದ್ದೇಶ ತಮ್ಮ ಹಿತವನ್ನು ಕಾಯ್ದುಕೊಳ್ಳುವುದು ಮತ್ತು ಭಾರತಕ್ಕೆ ಎಷ್ಟು ಹಾನಿ ಮಾಡಲು ಸಾಧ್ಯವೋ ಅಷ್ಟನ್ನೂ ಮಾಡುವುದು –ಎನ್ನುವುದು ಪಟೇಲರಿಗೆ ತಿಳಿಯಿತು. ಅದರಿಂದ ಅವರು ದೇಶದ ವಿಭಜನೆಯಾದರೂ ಸರಿಯೆ ಈ ವಿದೇಶೀಯರನ್ನು ಆದಷ್ಟು ಬೇಗ ಹೊರಕ್ಕೆ ಅಟ್ಟುವುದು ಅತ್ಯಂತ ಉತ್ತಮವಾದ ಕೆಲಸ ಎಂದು ನಿರ್ಧರಿಸಿದರು. ಹಾಗೆಯೆ, ದೇಶವನ್ನು ಸುರಕ್ಷಿತ ಮತ್ತು ಬಲಿಷ್ಠವನ್ನಾಗಿ ಮಾಡಲು ಇರುವುದೊಂದೇ ಮಾರ್ಗ: ಅದು ಉಳಿದ ಭಾರತದ ಏಕೀಕರಣ – ಎಂದೂ ಸಹ ತೀರ್ಮಾನಿಸಿದರು.[೪]

ಆ ಏಕೀಕರಣವನ್ನು ಸಾಧಿಸಲು ಅನುಕೂಲವಾದ ಅವಕಾಶ ಮತ್ತು ಅಧಿಕಾರ ಅವರಿಗೆ ಅಷ್ಟರಲ್ಲೆ ಸಿಕ್ಕಿತು:

೧೯೪೭ರ ಜೂನ್ ೨೭ರಂದು ವೈಸ್‌ರಾಯ್ ಲಾರ್ಡ್ ಮೌಂಟ್‌ಬ್ಯಾಟನ್‌ರು 'ರಾಜ್ಯಗಳ ಇಲಾಖೆ' ಎನ್ನುವ ಹೊಸ ಇಲಾಖೆಯನ್ನು ರಚಿಸಿ ಅದನ್ನು ಸರ್ದಾರ್ ಪಟೇಲರಿಗೆ, ಅವರಿಗೆ ಈಗಾಗಲೇ ಇದ್ದ ಗೃಹ ಖಾತೆ ಹಾಗೂ ಸಮಾಚಾರ ಮತ್ತು ಪ್ರಚಾರ ಖಾತೆಗಳ ಜೊತೆಗೆ, ವಹಿಸಿದರು. ಮೌಂಟ್‌ಬ್ಯಾಟನ್ ರವರು ಹೊಸ ಖಾತೆಯನ್ನು ಪ್ರಧಾನಿ ನೆಹರುಗೆ ವಹಿಸದೆ ಪಟೇಲರಿಗೆ ವಹಿಸಿದ್ದಕ್ಕೆ ಕಾರಣಗಳು ಇದ್ದುವು. ಗೃಹ ಮಂತ್ರಿಯಾಗಿ ಪಟೇಲರು ತೋರುತ್ತಿದ್ದ ವಾಸ್ತವಿಕತೆ ಮತ್ತು ಜಾಣ್ಮೆಯನ್ನು ವೈಸ್‌ರಾಯ್ ಗಮನಿಸಿದ್ದರು. ನೆಹರು ರಾಜರುಗಳ ವಿರೋಧಿಯಾಗಿದ್ದರು. ಅಷ್ಟೇ ಅಲ್ಲ ಅವರ ಬಗೆಗೆ ನಿಕೃಷ್ಟ ಭಾವವೇ ಅವರಿಗಿತ್ತು. ಆದರೆ ಪಟೇಲರು ಹಾಗಿರಲಿಲ್ಲ. ಅವರಿಗೆ ರಾಜರ ಬಗ್ಗೆ ಸಹಾನುಭೂತಿ ಇತ್ತು ಮತ್ತು ಅವರಿಗೆ ವಿಶಾಲ ಹೃದಯವಿತ್ತು. ಅದರಿಂದ ರಾಜರೊಡನೆ ವ್ಯವಹರಿಸಲು ಅವರೇ ಸೂಕ್ತ ವ್ಯಕ್ತಿಯಾಗಿದ್ದರು. ಮೌಂಟ್‌ಬ್ಯಾಟನ್‌ರು, 'ಪಟೇಲ್, ಪ್ರಮುಖವಾಗಿ ಒಬ್ಬ ವಾಸ್ತವಿಕ ವ್ಯಕ್ತಿ ಮತ್ತು ವಿವೇಕಿ' ಎಂದು ಸಮಾಧಾನ ವ್ಯಕ್ತ ಪಡಿಸಿದರು. ಗಾಂಧೀಜಿ ಸಹ 'ರಾಜ್ಯಗಳ ಸಮಸ್ಯೆ ಎಷ್ಟು ಕಷ್ಟಕರವಾದು ದೆಂದರೆ ನೀನು ಮಾತ್ರ ಅದನ್ನು ಪರಿಹರಿಸಲು ಸಾಧ್ಯ' ಎಂದು ಪಟೇಲರಿಗೆ ಹೇಳಿದರು.[೫]

ವಾಸ್ತವವಾಗಿ ಪಟೇಲರು ಹೊಸ ಇಲಾಖೆ ಸೃಷ್ಟಿಯಾಗಿ ಅದನ್ನು ವಹಿಸಿಕೊಳ್ಳುವುದಕ್ಕೆ ಮುಂಚೆಯೇ ರಾಜರುಗಳೊಡನೆ ಸಂಪರ್ಕ ಬೆಳೆಸಲು ಆರಂಭಿಸಿ

ದ್ದರು. ರಾಜರು ಅಥವಾ ಅವರ ದಿವಾನರನ್ನು ತಮ್ಮ ಔರಂಗಜೇಬ್ ರಸ್ತೆಯ ಒಂದನೆ ಸಂಖ್ಯೆಯ ನಿವಾಸಕ್ಕೆ ಕರೆಯಿಸಿಕೊಂಡು ಮಾತುಕತೆ ಆಡಲು ಆರಂಭಿಸಿದ್ದರು. ಜೋದ್‌ಪುರದ ಮಹಾರಾಜರು ಅವರೊಡನೆ ಭೋಜನಕ್ಕೆ ಮೇ ೫ರಂದು ಬಂದರು. ಮೇ ೧೧ರಂದು ನವ ನಗರದ ಜಾಮ್ ಸಾಹೇಬ ಮತ್ತು ಅವರ ಪತ್ನಿ ಬಂದರು. ಪಟಿಯಾಲದ ಮಹಾರಾಜ ಮೇ ೧೬ರಂದು ಬಂದರು. ನವನಗರದ ಜಾಮ್ ಸಾಹೇಬ ಮತ್ತು ಪಟೇಲರ ನಡುವೆ ವಿಶ್ವಾಸವಿರಲಿಲ್ಲ. ೧೯೩೯ರಲ್ಲಿ ರಾಜ್‌ಕೋಟ್‌ನಲ್ಲಿ ಪಟೇಲರ ಹತ್ಯೆಗೆ ನಡೆದ ಪ್ರಯತ್ನದಲ್ಲಿ ಜಾಮ್ ಸಾಹೇಬನ ಪಾತ್ರವಿತ್ತು – ಎಂಬ ಅನುಮಾನ ಪಟೇಲರಿಗೆ ಇದ್ದದ್ದರಿಂದ ಅವರು ಜಾಮ್ ಸಾಹೇಬರಿಂದ ದೂರವಾಗಿಯೇ ಇದ್ದರು. ಆದರೂ ಸಹ ಅವರು ಗೃಹಮಂತ್ರಿಯಾಗಿ ರಾಜರುಗಳನ್ನು ಸೆಳೆಯಬೇಕಾದುದರಿಂದ ತಮ್ಮ ಅನುಮಾನ ಮತ್ತು ಅಸಮಧಾನವನ್ನು ಬದಿಗಿಟ್ಟು ಜಾಮ್ ಸಾಹೇಬನ ಸಹಕಾರ ಸಂಪಾದಿಸಲು ಕ್ರಮ ಕೈಗೊಂಡರು. (ಅವರಿಗೆ ದೇಶ ಮೊದಲು, ಮಿಕ್ಕವು ನಂತರ – ಲೇಖಕ) ಕಾಥೈವಾಡದ ಇತರ ಸಣ್ಣ ಪುಟ್ಟ ಅರಸರ ಮೇಲೆ ಜಾಮ್ ಸಾಹೇಬನ ಪ್ರಭಾವ ಬಹಳವಿತ್ತು. ಆ ಅರಸರು ಜಾಮ್ ಸಾಹೇಬನನ್ನು 'ಚಿಕ್ಕಪ್ಪ' ಎಂದು ಕರೆಯುತ್ತಿದ್ದರು. ಜಾಮ್ ಸಾಹೇಬರ ಒಬ್ಬ ಸಹೋದರ ಕರ್ನಲ್ ಹಿಮತ್‌ಸಿಂಗ್‌ಜಿ ದೆಹಲಿಯಲ್ಲಿ ಭಾರತದ ಸೈನ್ಯದಲ್ಲಿ ಇದ್ದರು. ಅವರ ಮೂಲಕ ಪಟೇಲರು ಜಾಮ್ ಸಾಹೇಬರನ್ನು ತಮ್ಮ ನಿವಾಸಕ್ಕೆ ಆಹ್ವಾನಿಸಿದರು. ಜಾಮ್ ಸಾಹೇಬರು ತಮ್ಮ ಮಹಾರಾಣಿಯೊಡನೆ ವಿಮಾನದಲ್ಲಿ ದೆಹಲಿಗೆ ಬಂದರು. ಪಟೇಲರು, ಹಳೆಯದನ್ನು ಮರೆತು ಅವರನ್ನು ಮನೆಯ ಬಾಗಿಲಲ್ಲೇ ನಗುತ್ತಾ ಸ್ವಾಗತಿಸಿದರು. ನಂತರ ಪಟೇಲರೊಡನೆ ಜಾಮ್ ಸಾಹೇಬ್ ದಂಪತಿಗಳು ೯೦ ನಿಮಿಷ ಕಳೆದರು. ಜಾಮ್ ಸಾಹೇಬರು ರಾಜರುಗಳನ್ನು ಸೆಳೆಯುವ ಕಾರ್ಯದಲ್ಲಿ ಸಹಾಯ ಮಾಡುವುದಾಗಿ ವಚನ ನೀಡಿದರು. ಅಂದು ಪಟೇಲ್ ಮತ್ತು ಜಾಮ್ ಸಾಹೇಬರ ನಡುವೆ ಪ್ರೀತಿ ಮತ್ತು ಸ್ನೇಹ ಮತ್ತೆ ಗಟ್ಟಿಯಾಯಿತು.[೬]

ಪಟೇಲರು ತಮ್ಮ ಹೊಸ ಇಲಾಖೆ – ರಾಜ್ಯಗಳ ಇಲಾಖೆ – ಯ ಕೆಲಸವನ್ನು ಆರಂಭಿಸುವುದಕ್ಕೆ ಮುನ್ನ ಆ ಇಲಾಖೆಯ ಕಾರ್ಯದರ್ಶಿ ಮತ್ತಿತರ ಅಧಿಕಾರಿಗಳನ್ನು ನಿಯಮಿಸುವುದು ಅತಿ ಮುಖ್ಯವಾಗಿತ್ತು. ಅವರು ವೈಸ್‌ರಾಯ್‌ರ ಸಂವಿಧಾನ ಸಲಹೆಗಾರರಾಗಿದ್ದ ವಿ.ಪಿ. ಮೆನನ್‌ರವರನ್ನು ಕಾರ್ಯದರ್ಶಿ ಸ್ಥಾನಕ್ಕೆ ಸೂಕ್ತವ್ಯಕ್ತಿ ಎಂದು ಆಲೋಚಿಸಿದರು. ಅವರು ಮೆನನ್‌ರನ್ನು ೧೯೪೬ರ ಆಗಸ್ಟ್ ೨೧ರಂದು ಪ್ರಥಮ ಬಾರಿಗೆ ಭೇಟಿಯಾಗಿದ್ದರು. ಆನಂತರ ಗೃಹಮಂತ್ರಿ ಆದ ಮೇಲೆ ಮೆನನ್‌ರವರ ಕಾರ್ಯವನ್ನು ಗಮನಿಸಿದ್ದರು. ಅವರು ಮೆನನ್‌ರವರನ್ನು

ಕರೆಯಿಸಿ ಅವರಿಗೆ ರಾಜ್ಯಗಳ ಇಲಾಖೆಯ ಕಾರ್ಯದರ್ಶಿ ಸ್ಥಾನವನ್ನು ನೀಡುವುದಾಗಿ ಹೇಳಿದರು. ಮೆನನ್‌ರವರು ಪಟೇಲರಿಗೆ, "ನಾನು ಸಂಪಾದಿಸಿರುವ ಎಲ್ಲಾ ರಜಾದಿನಗಳನ್ನು ಉಪಯೋಗಿಸಿಕೊಂಡು ಆಗಸ್ಟ್ ೧೫ರ ನಂತರ ನಿವೃತ್ತನಾಗಬೇಕೆಂದು ಬಯಸಿದ್ದೇನೆ. ೧೯೧೭ರಿಂದಲೂ ಸಂವಿಧಾನ ಸುಧಾರಣೆಯ ವಿಷಯವನ್ನು ನಿರ್ವಹಿಸುತ್ತಾ ಬಂದಿದ್ದೇನೆ. ನನ್ನ ಜೀವಮಾನದಲ್ಲಿ ಸ್ವಾತಂತ್ರ್ಯವನ್ನು ಕಾಣುತ್ತೇವೆ ಅನ್ನುವ ನಿರೀಕ್ಷೆಯನ್ನು ಹೊಂದಿರಲಿಲ್ಲ. ಅದು ನನಸಾಗಿರುವುದರಿಂದ ನನ್ನ ಜೀವಮಾನದ ಬಯಕೆ ಪೂರ್ಣವಾಗಿದೆ. ಜೊತೆಗೆ, ನಾನು ಅತಿಯಾಗಿ ದುಡಿದಿದ್ದೇನೆ. ಅದರ ದೆಸೆಯಿಂದ ದಣಿವು ಉಂಟಾಗಿದೆ. ಬಹಳ ವರ್ಷಗಳಿಂದ ನಾನು ವಿಶ್ರಾಂತಿಯನ್ನೇ ತೆಗೆದುಕೊಂಡಿಲ್ಲ" ಎಂದರು. ಪಟೇಲರು, "ದೇಶದಲ್ಲಿರುವ ಅಸ್ವಾಭಾವಿಕ ಪರಿಸ್ಥಿತಿಯಿಂದ ನಿಮ್ಮಂತಹವರು ವಿಶ್ರಾಂತಿ ಅಥವಾ ನಿವೃತ್ತಿಯ ಬಗೆಗೆ ಯೋಚಿಸಬಾರದು. ನೀವು ಅಧಿಕಾರ ಹಸ್ತಾಂತರ ವಿಷಯದಲ್ಲಿ ಪ್ರಮುಖ ಪಾತ್ರ ವಹಿಸಿದ್ದೀರಿ. ಸ್ವಾತಂತ್ರ್ಯವನ್ನು ಭದ್ರಗೊಳಿಸಲು ಕೆಲಸ ಮಾಡುವುದು ನೀವು ನಿರ್ವಹಿಸಬೇಕಾದ ಕರ್ತವ್ಯ," ಎಂದರು. ಆ ಮಾತನ್ನು ಆಲಿಸಿದ ಮೇಲೆ ದೇಶದ ಹಿತ ವೈಯುಕ್ತಿಕ ಹಿತಕ್ಕಿಂತ ಮುಖ್ಯ ಎಂದು ಆಲೋಚಿಸಿ ಮೆನನ್‌ರವರು ಕಾರ್ಯದರ್ಶಿಯಾಗಲು ಒಪ್ಪಿದರು.[೭]

ವಿ.ಪಿ. ಮೆನನ್‌ರವರು ವೈಸ್‌ರಾಯ್‌ಗೆ ಸಂವಿಧಾನ ಸುಧಾರಣಾ ಸಲಹೆಗಾರನಾಗಿದ್ದುದರಿಂದ ಈ ವಿಷಯವನ್ನು ಮೌಂಟ್‌ಬ್ಯಾಟನ್‌ರವರಿಗೆ ತಿಳಿಸಿದರು. ಮೌಂಟ್‌ಬ್ಯಾಟನ್, "ನಿಮ್ಮನ್ನು ಒಂದು ಪ್ರಮುಖ ಪ್ರಾಂತ್ಯದ ಗೌರ್ನರ್ ಮಾಡುವ ಆಲೋಚನೆಯಲ್ಲಿದ್ದೆ" ಎಂದರು. "ದೇಶದ ಹಿತದೃಷ್ಟಿಯಿಂದ ನಾನು ಕೇಂದ್ರ ಸರ್ಕಾರದ ಜೊತೆ ಇರಬೇಕೆಂಬ ಭಾವನೆಯನ್ನು ಪಟೇಲರು ವ್ಯಕ್ತ ಪಡಿಸಿದ್ದಾರೆ" ಎಂದರು ಮೆನನ್. ಮೌಂಟ್‌ಬ್ಯಾಟನ್‌ರವರು ಮೆನನ್ ಕಾರ್ಯದರ್ಶಿಯಾಗಲು ಸಮ್ಮತಿಸಿದರು.[೮]

ಮಾರನೆಯ ದಿನ ಮೆನನ್‌ರವರು ಪಟೇಲರನ್ನು ಭೇಟಿಯಾಗಿ ಕಾರ್ಯದರ್ಶಿಯಾಗಲು ಒಪ್ಪಿಗೆ ನೀಡಿದರು ಮತ್ತು ಅನೇಕ ವಿಷಯಗಳ ಬಗೆಗೆ ಮುಕ್ತವಾಗಿ ಚರ್ಚಿಸಿದರು. ಅಧಿಕಾರ ಹಸ್ತಾಂತರದ ಸಂದರ್ಭದಲ್ಲಿ ಮೆನನ್‌ರವರು ಪಟೇಲರನ್ನು ಅನೇಕ ಬಾರಿ ಭೇಟಿಯಾಗಿ ಅವರಿಂದ ಸಲಹೆ ಪಡೆದಿದ್ದರು. ಆದರೆ ಅವರು ಪಟೇಲರಿಗೆ ಅಧೀನವಾಗಿರಲಿಲ್ಲ. ಈಗ ಪಟೇಲರಿಗೆ ಕಾರ್ಯದರ್ಶಿ ಆದ ಮೇಲೆ ಸಂಬಂಧ ಹೇಗಿರುತ್ತದೋ ಅನ್ನುವ ಅನುಮಾನ ಮೆನನ್‌ಗೆ ಇತ್ತು. ಅವರು ತಮ್ಮ ಅನುಮಾನವನ್ನು ಪಟೇಲರ ಮುಂದೆ ಇಟ್ಟರು. ಪಟೇಲರು "ಆ ಪ್ರಶ್ನೆ ಉದ್ಭವವಾಗುವುದೇ ಇಲ್ಲ" ಎಂದರು. ನಂತರ ಮೆನನ್, 'ಕಾಂಗ್ರೆಸ್ ನಾಯಕರು

ಖಾಯಂ ಅಧಿಕಾರಿ ವರ್ಗದವರನ್ನು ಅನುಮಾನದಿಂದ ನೋಡುತ್ತಾರೆ ಅನ್ನುವ ಭಾವನೆ ಇದೆಯಲ್ಲ' ಎಂದರು. "ನಿಮ್ಮ ಭಯ ನಿರಾಧಾರವಾದುದು. ಅಧಿಕಾರಿ ವರ್ಗದವರ ಬಗೆಗೆ ರಾಜಕಾರಣಿಗಳ ಮನೋಭಾವ ಹಿಂದೆ ಏನೇ ಇರಲಿ, ಮುಂದೆ ಎಲ್ಲರೂ ತಮ್ಮ ತಮ್ಮ ಪಾತ್ರವನ್ನು ನಿರ್ವಹಿಸಬೇಕು. ನನ್ನ ಮಟ್ಟಿಗೆ ಹೇಳುವುದಾದರೆ, ಸಚಿವ ಸಂಪುಟ ಮತ್ತು ಅಧಿಕಾರಿ ವರ್ಗದ ನಡುವೆ ಸೌಹಾರ್ದಯುತ ಸಂಬಂಧ ಮೂಡಿಸಲು ನನಗೆ ಸಾಧ್ಯವಾದುದನ್ನೆಲ್ಲಾ ಮಾಡುತ್ತೇನೆ," ಎಂದರು.[೯]

ಪಟೇಲರು ಜುಲೈ ೫ರಂದು ರಾಜ್ಯಗಳ ಇಲಾಖೆಯನ್ನು ಆರಂಭಿಸಿದರು. ಅಂದೇ ಮೆನನ್‌ರವರು ಅದರ ಕಾರ್ಯದರ್ಶಿಯಾಗಿ ಅಧಿಕಾರ ವಹಿಸಿಕೊಂಡರು ಮತ್ತು ವೈಸ್‌ರಾಯ್‌ರವರ ಸಂವಿಧಾನ ಸಲಹೆಗಾರನಾಗಿಯೂ ಮುಂದುವರೆದರು. ಅಲ್ಲಿ ಅವರು ಮಾಡಿ ಮುಗಿಸಬೇಕಾದ ಕೆಲಸಗಳು ಇನ್ನೂ ಇದ್ದುವು. ಹಿರಿಯ ಐ.ಸಿ.ಎಸ್. ಅಧಿಕಾರಿ ಸಿ.ಸಿ. ದೇಸಾಯಿಯವರು ಅಡಿಷನಲ್ ಕಾರ್ಯದರ್ಶಿಯಾಗಿ ನಿಯಮಿಸಲ್ಪಟ್ಟರು.

ಪಟೇಲರ ಕಾರ್ಯ ರೀತಿಯ ಬಗೆಗೆ ಮೆನನ್ ಹೀಗೆ ಹೇಳಿದ್ದಾರೆ:

> ತಮ್ಮ ಅಧಿಕಾರಿಗಳನ್ನು ಆರಿಸಿಕೊಂಡ ಮೇಲೆ ತಮ್ಮ ನೀತಿಯನ್ನು ಜಾರಿಗೆ ತರುವ ವಿಷಯದಲ್ಲಿ ಅವರನ್ನು ಪಟೇಲರು ಸಂಪೂರ್ಣವಾಗಿ ನಂಬುತ್ತಿದ್ದರು. ಸರ್ದಾರರು ತಮಗೆಲ್ಲವೂ ಗೊತ್ತು ಅನ್ನುವ ಭಾವವನ್ನು ಎಂದೂ ತಳೆಯುತ್ತಿರಲಿಲ್ಲ ಮತ್ತು ಸಂಪೂರ್ಣ ಹಾಗೂ ಸ್ಪಷ್ಟ ಸಮಾಲೋಚನೆ ಇಲ್ಲದೆ ಯಾವ ನೀತಿಯನ್ನು ತೀರ್ಮಾನಿಸುತ್ತಿರಲಿಲ್ಲ. ನಾವು ಸಮಾಲೋಚನೆಗೆ ತೊಡಗಿದಾಗ, ಮಂತ್ರಿ ಮತ್ತು ಕಾರ್ಯದರ್ಶಿಯಂತೆ ವರ್ತಿಸದೆ ವೈಯುಕ್ತಿಕ ಸ್ನೇಹಿತರಂತೆ ಚರ್ಚಿಸುತ್ತಿದ್ದೆವು.[೧೦]

ಜುಲೈ ೫ರಿಂದ ೪೫ ದಿನಗಳಲ್ಲಿ ರಾಜರ ಮೇಲಿನ ಬ್ರಿಟಿಷ್ ಸಾರ್ವಭೌಮತ್ವ ಮುಕ್ತಾಯವಾಗುತ್ತಿತ್ತು. ಅಷ್ಟರಲ್ಲಿ ರಾಜರುಗಳನ್ನು ಒಂದುಗೂಡಿಸಬೇಕಾಗಿತ್ತು ಮತ್ತು ಒಕ್ಕೂಟಕ್ಕೆ ಸೇರುವಂತೆ ಮಾಡಬೇಕಾಗಿತ್ತು. ರಾಜರುಗಳನ್ನು ಸೆಳೆಯಲು ಸಹಾಯ ಮಾಡುವಂತೆ ಮೌಂಟ್‌ಬ್ಯಾಟನ್‌ರವರನ್ನು ಪಟೇಲರು ಮತ್ತು ನೆಹರು ಕೋರಿದರು. ಮೌಂಟ್‌ಬ್ಯಾಟನ್ ರಾಜವಂಶದವರಾದುದರಿಂದ ಅವರ ಮಾತು ಭಾರತದ ರಾಜರ ಮೇಲೆ ಪ್ರಭಾವ ಬೀರುತ್ತದೆ ಎಂದು ಅವರು ಯೋಚಿಸಿದರು. ಮೌಂಟ್‌ಬ್ಯಾಟನ್ ಸಂತೋಷದಿಂದ ಒಪ್ಪಿದರು.

ಪಟೇಲರು ಜುಲೈ ೫ರಂದು ತಮ್ಮ ಹೊಸ ಇಲಾಖೆಯನ್ನು ಆರಂಭಿಸಿ ಒಂದು ನೀತಿ ನಿರೂಪಣಾ ಹೇಳಿಕೆಯನ್ನು ಪ್ರಕಟಿಸಿದರು:

> ರಾಜರಲ್ಲಿ ಕೆಲವರು ನನ್ನ ವೈಯುಕ್ತಿಕ ಸ್ನೇಹಿತರು ಎಂದು ಹೇಳಲು ನನಗೆ ಸಂತೋಷವಾಗುತ್ತಿದೆ.
>
> ದೇಶವು ರಾಜಕೀಯವಾಗಿ ಚೂರುಚೂರಾಗಿದ್ದುದರಿಂದ ಮತ್ತು ಒಗ್ಗಟ್ಟಿನಿಂದ ಇರಲು ವಿಫಲವಾಗಿದ್ದರಿಂದ ಒಬ್ಬರಾದ ಮೇಲೆ ಒಬ್ಬರಂತೆ ಬಂದ ಆಕ್ರಮಣಕಾರರಿಗೆ ನಾವು ತುತ್ತಾಗಬೇಕಾಯಿತು – ಎನ್ನುವುದು ಇತಿಹಾಸದ ಪಾಠ. ನಮ್ಮವರ ಪರಸ್ಪರ ಹೋರಾಟಗಳು, ವಿಧ್ವಂಸಕ ಕಲಹಗಳು ಮತ್ತು ಅಸೂಯೆಗಳು ಹಿಂದೆ ನಮ್ಮ ಅಧಃಪತನಕ್ಕೆ ಮತ್ತು ನಮ್ಮ ಮೇಲೆ ವಿದೇಶೀಯರ ಪ್ರಾಬಲ್ಯಕ್ಕೆ ಕಾರಣವಾಗಿವೆ. ಆ ತಪ್ಪುಗಳಿಗೆ ಅಥವಾ ಕುತಂತ್ರಗಳಿಗೆ ನಾವು ಮತ್ತೆ ಬಲಿಯಾಗಬಾರದು. ನಾವೀಗ ಸ್ವಾತಂತ್ರ್ಯದ ಹೊಸ್ತಿಲಲ್ಲಿದ್ದೇವೆ..... ರಾಜ್ಯಗಳ ಹಾಗೂ ಭಾರತದ ಸುರಕ್ಷತೆಗೆ ಮತ್ತು ಭದ್ರತೆಗೆ ದೇಶದ ವಿವಿಧ ಭಾಗಗಳ ನಡುವಣ ಒಗ್ಗಟ್ಟು ಮತ್ತು ಪರಸ್ಪರ ಸಹಕಾರ ಅತ್ಯಗತ್ಯ.
>
> ಬ್ರಿಟಿಷ್ ಸಾರ್ವಭೌಮತ್ವ ಜಾರಿಯಲ್ಲಿದ್ದಾಗ, ಸಹಕಾರಕ್ಕಿಂತ ಅಧೀನತೆಯೇ ಜಾಸ್ತಿ ಇತ್ತು. ಈಗ ಬ್ರಿಟಿಷ್ ಆಡಳಿತ ಮುಕ್ತಾಯವಾಗುತ್ತಿರುವುದರಿಂದ, ರಾಜ್ಯಗಳು ತಮ್ಮ ಸ್ವಾತಂತ್ರ್ಯವನ್ನು ಮತ್ತೆ ಪಡೆಯಬೇಕು ಎನ್ನುವ ಆಗ್ರಹವು ಮಾಡಲ್ಪಟ್ಟಿದೆ..... ಆದರೆ ಬ್ರಿಟಿಷ್ ಮೇಲ್ಸವಾರಿಯಿಂದ ಬಿಡುಗಡೆಯಾಗಿ ಪಡೆದ ಸ್ವಾತಂತ್ರ್ಯವನ್ನು ಭಾರತದ ಸಮಾನ ಹಿತಕ್ಕೆ ಮಾರಕವಾಗುವಂತೆ ಅಥವಾ ಜನ ಸಾಮಾನ್ಯರ ಹಿತ ಮತ್ತು ಕಲ್ಯಾಣದ ಸಾರ್ವಭೌಮತ್ವಕ್ಕೆ ವಿರುದ್ಧವಾದ ರೀತಿಯಲ್ಲಿ ಅಥವಾ ಕಳೆದ ಒಂದು ಶತಮಾನದಲ್ಲಿ ಬ್ರಿಟಿಷ್ ಇಂಡಿಯಾ ಮತ್ತು ರಾಜ್ಯಗಳ ನಡುವೆ ಬೆಳೆದು ಬಂದಿರುವ ಪರಸ್ಪರ ಉಪಯೋಗಕಾರಿ ಸಂಬಂಧವನ್ನು ನಾಶ ಪಡಿಸುವ ರೀತಿಯಲ್ಲಿ ಬಳಸುವುದು ರಾಜರ ಬಯಕೆ ಅಲ್ಲ ಎಂದು ನಾನು ಭಾವಿಸಿದ್ದೇನೆ.[೧೧]

ಈಗಾಗಲೇ ರಾಜ್ಯಗಳು ಮೂಲ ತತ್ವಗಳಾದ ರಕ್ಷಣೆ, ವಿದೇಶಿ ವ್ಯವಹಾರ ಮತ್ತು ಸಂಪರ್ಕಗಳ ವಿಷಯಗಳಲ್ಲಿ ಭಾರತ

ಒಕ್ಕೂಟವನ್ನು ಸೇರಲು ಒಪ್ಪಿವೆ. ದೇಶದ ಎಲ್ಲರ ಹಿತ ಅಡಗಿರುವ ಈ ಮೂರು ವಿಷಯಗಳಲ್ಲಿ ಭಾರತದೊಡನೆ ಸೇರಬೇಕೆಂದು ಮಾತ್ರ ಅವರನ್ನು ಕೋರುತ್ತೇವೆ.

ಈ ದೇಶ ಮತ್ತು ಅದರಲ್ಲಿರುವ ವ್ಯವಸ್ಥೆಗಳು ಅಲ್ಲಿ ವಾಸಿಸುವ ಜನರ ಹೆಮ್ಮೆಯ ಪರಂಪರಾಗತ ಆಸ್ತಿ. ರಾಜ್ಯಗಳಲ್ಲಿ ಕೆಲವರು ಮತ್ತು ಬ್ರಿಟಿಷ್ ಇಂಡಿಯಾದಲ್ಲಿ ಕೆಲವರು ವಾಸಿಸುವುದು ಒಂದು ಆಕಸ್ಮಿಕ, ಆದರೆ ಎಲ್ಲರೂ ಒಂದೇ ತರಹ ಅದರ ಸಂಸ್ಕೃತಿ ಮತ್ತು ಲಕ್ಷಣಗಳಲ್ಲಿ ಭಾಗಿಗಳಾಗುತ್ತಾರೆ. ನಾವೆಲ್ಲ ಸ್ವಹಿತದ ಭಾವನೆಯಲ್ಲದೆ ರಕ್ತ ಬಂಧನದಿಂದಲೂ ಒಟ್ಟಿಗೆ ಬೆಸೆಯಲ್ಪಟ್ಟಿದ್ದೇವೆ. ನಮ್ಮನ್ನು ಯಾರೂ (ಸಣ್ಣ ಸಣ್ಣ) ಭಾಗಗಳಾಗಿ ವಿಭಜಿಸಲು ಸಾಧ್ಯವಿಲ್ಲ. ನಮ್ಮ ನಡುವೆ ಯಾವುದೇ ದುರ್ಗಮ ಅಡೆ ತಡೆಗಳನ್ನು ನಿರ್ಮಿಸಲು ಸಾಧ್ಯವಿಲ್ಲ. ಆದದ್ದರಿಂದ ನಾವು ಸ್ನೇಹಿತರಂತೆ ಒಟ್ಟಿಗೆ ಕುಳಿತು ಕಾನೂನುಗಳನ್ನು ರಚಿಸುವುದು ಪರದೇಶದವರಂತೆ ಒಪ್ಪಂದ ಮಾಡಿಕೊಳ್ಳುವುದಕ್ಕಿಂತ ಉತ್ತಮ ಎಂದು ನಾನು ಸಲಹೆ ನೀಡುತ್ತೇನೆ. ನಮ್ಮ ಮಾತೃಭೂಮಿಗೆ ಸಮಾನ ನಿಷ್ಠೆಯಿಂದ ಸ್ಫೂರ್ತಿಗೊಂಡು ನಮ್ಮೆಲ್ಲರ ಸಮಾನ ಒಳಿತಿಗಾಗಿ ಸ್ನೇಹ ಮತ್ತು ಸಹಕಾರದ ಮನೋಭಾವದಿಂದ ಭಾಗವಹಿಸಲು ನನ್ನ ಸ್ನೇಹಿತರಾದ ರಾಜರನ್ನು ಮತ್ತು ಅವರ ಪ್ರಜೆಗಳನ್ನು ರಾಜ್ಯಾಂಗ ರಚನಾ ಸಭೆಗೆ ಆಹ್ವಾನಿಸುತ್ತೇನೆ.

ಕಾಂಗ್ರೆಸ್ಸು ರಾಜಮನೆತನಗಳ ಶತೃವಲ್ಲ. ಅದಕ್ಕೆ ಬದಲಾಗಿ ಅವರು ರಾಜರು ಮತ್ತು ಅವರ ಜನರಿಗೆ ಸಮಸ್ತ ಏಳಿಗೆ, ತೃಪ್ತಿ ಮತ್ತು ಸಂತೋಷವನ್ನು ಹಾರೈಸುತ್ತಾರೆ. ರಾಜ್ಯಗಳೊಡನೆ ಹೊಸ ಇಲಾಖೆಯ ಸಂಬಂಧವನ್ನು ಒಬ್ಬರ ಮೇಲೆ ಒಬ್ಬರು ಸವಾರಿ ಮಾಡುವ ರೀತಿಯಲ್ಲಿ ನಡೆಸುವುದು ನನ್ನ ನೀತಿ ಆಗಿರುವುದಿಲ್ಲ. ಏನಾದರು ಸವಾರಿ ಮಾಡುವ ಮನೋಭಾವ ಇದ್ದರೆ ಅದು ಪರಸ್ಪರ ಹಿತ ಮತ್ತು ಕಲ್ಯಾಣದಲ್ಲಿ.

ನಾವು ಈಗ ಭಾರತದ ಇತಿಹಾಸದಲ್ಲಿ ಒಂದು ಮಹತ್ವ ಪೂರ್ಣ ಘಟ್ಟದಲ್ಲಿ ಇದ್ದೇವೆ. ಸಮಾನ ಪ್ರಯತ್ನದಿಂದ ನಾವು ನಮ್ಮ ದೇಶವನ್ನು ಒಂದು ಹೊಸ ಶ್ರೇಷ್ಠತೆಗೆ ಏರಿಸಬಹುದು.

ಆದರೆ ಒಗ್ಗಟ್ಟಿನ ಕೊರತೆ ನಮ್ಮನ್ನು ಹೊಸ ಅನಾಹುತಗಳಿಗೆ ಈಡುಮಾಡುತ್ತದೆ. ಎಲ್ಲರ ಹಿತಕ್ಕಾಗಿ ನಾವು ಸಹಕರಿಸಬೇಕು ಮತ್ತು ಎಲ್ಲರಿಗೂ ಸಮಾನವಾದ ಕನಿಷ್ಠ ಮಿತಿ ವಿಷಯಗಳಲ್ಲಿ ಒಟ್ಟಿಗೆ ಕೆಲಸ ಮಾಡದೆ ಹೋದರೆ ಅರಾಜಕತೆ ಮತ್ತು ಗೊಂದಲವು ದೊಡ್ಡ ಹಾಗೂ ಸಣ್ಣ ರಾಜ್ಯಗಳೆಲ್ಲವನ್ನೂ ನುಂಗುವುದು, ಎನ್ನುವುದನ್ನು ಭಾರತದ ರಾಜ್ಯಗಳು ನೆನಪಿನಲ್ಲಿಟ್ಟುಕೊಳ್ಳುತ್ತವೆ ಎಂದು ಆಶಿಸುತ್ತೇನೆ.[೧೨] ಅವಕಾಶ ದೊರೆತರೂ ಅದನ್ನು ನಮ್ಮ ಅನುಕೂಲಕ್ಕೆ ಉಪಯೋಗಿಸಿಕೊಳ್ಳಲು ವಿಫಲವಾದುದಕ್ಕೆ ಮುಂದಿನ ತಲೆಮಾರಿನವರು ನಮ್ಮನ್ನು ಶಪಿಸದಿರಲಿ. ಅದಕ್ಕೆ ಬದಲಾಗಿ, ಈ ಪವಿತ್ರ ಭೂಮಿಯನ್ನು ವಿಶ್ವ ರಾಷ್ಟ್ರಗಳ ನಡುವೆ ತನ್ನ ಸ್ಥಾನಕ್ಕೆ ಏರಿಸುವ ಮತ್ತು ಅದನ್ನು ಶಾಂತಿ ಮತ್ತು ಅಭಿವೃದ್ಧಿಯ ಆಗರವನ್ನಾಗಿ ಪರಿವರ್ತಿಸುವಂತಹ ಪರಸ್ಪರ ಅನುಕೂಲಕರ ಸಂಬಂಧದ ಪರಂಪರೆಯನ್ನು ಮುಂದಿನ ಪೀಳಿಗೆಯವರಿಗೆ ಬಿಡುವ ಹೆಮ್ಮೆಯ ಸುಯೋಗವು ನಮ್ಮದಾಗಲಿ.[೧೩]

ಈ ಹೇಳಿಕೆಗೆ ದೇಶೀಯ ಮತ್ತು ವಿದೇಶೀಯ ಪತ್ರಿಕೆಗಳಲ್ಲಿ ಒಳ್ಳೆಯ ಪ್ರತಿಕ್ರಿಯೆ ಪ್ರಕಟವಾದುವು. ಅನೇಕ ರಾಜರು ಪಟೇಲರಿಗೆ ಅಭಿನಂದನೆಗಳನ್ನು ಕಳುಹಿಸಿದರು. ಬಿಕನೀರ್‌ನ ಮಹಾರಾಜನು ಪಟೇಲರ ಹೇಳಿಕೆಗೆ ಅಭಿನಂದಿಸಿ ಒಂದು ಧೀರ್ಘ ಪತ್ರವನ್ನೇ ಬರೆದು, ".....ಭವಿಷ್ಯತ್ತಿನ ಭಾರತ ಒಕ್ಕೂಟ ರಚನೆಯಲ್ಲಿ ನಮ್ಮ ಹೃದಯ ಪೂರ್ವಕ ಬೆಂಬಲ ನೀಡಲು ನಾವೆಲ್ಲ ಹೆಮ್ಮೆ ಪಡುತ್ತೇವೆ," ಎಂದನು.[೧೪]

ಮೌಂಟ್‌ಬ್ಯಾಟನ್‌ರವರು ಜುಲೈ ೨೫ರಂದು ರಾಜರುಗಳೊಡನೆ ತಮ್ಮ ಅಂತಿಮ ಸಮ್ಮೇಳನವನ್ನು ನಡೆಸಿದರು. ಅಲ್ಲಿ ಅವರು ಭಾಷಣ ಮಾಡುತ್ತಾ ಹೀಗೆಂದರು:

ಭಾರತದಲ್ಲಿ ರಾಜ್ಯಗಳ ಇಲಾಖೆಯು ಸರ್ದಾರ್ ವಲ್ಲಭ ಭಾಯ್ ಪಟೇಲ್‌ರವರ ಪ್ರಶಂಸನೀಯ ಮಾರ್ಗದರ್ಶನ ದಲ್ಲಿದೆ..... ನನ್ನ ಮನಸ್ಸಿಗೆ ಎಷ್ಟು ನಿರಾಳವಾಗಿದೆ ಎನ್ನುವುದನ್ನು ನೀವು ಊಹಿಸಬಹುದು. ಪಟೇಲರು ರಾಜ್ಯಗಳ ಇಲಾಖೆಯನ್ನು ವಹಿಸಿಕೊಂಡು, ರಾಜ್ಯಗಳು ಮತ್ತು ಇಂಡಿಯಾ ಡೊಮೆನಿಯನ್ ನಡುವಣ ಒಮ್ಮತದ ಸಾಧನೆಗೆ ಅತ್ಯವಶ್ಯಕವಾದ ಅಂಶಗಳೇನು

ಎನ್ನುವುದರ ಬಗೆಗೆ ಒಂದು ಅತ್ಯಂತ ಶ್ರೇಷ್ಠ ಮುತ್ಸದ್ದಿತನದ ಹೇಳಿಕೆಯನ್ನು ನೀಡಿದಾಗ ನಿಮಗೂ ಸಹ ಮನಸ್ಸು ಅಷ್ಟೇ ನಿರಾಳವಾಯಿತು ಎಂದು ನನಗೆ ಖಂಡಿತ ಗೊತ್ತು.[೧೫]

ಪಟೇಲರು, ಪಟಿಯಾಲ ಮತ್ತು ಗ್ವಾಲಿಯರ್ ಮಾಹಾರಾಜರು ಸೇರಿದಂತೆ ಅನೇಕ ರಾಜರನ್ನು ತಮ್ಮ ನಿವಾಸಕ್ಕೆ ಜುಲೈ ೧೦ರಂದು ಬರುವಂತೆ ಆಹ್ವಾನಿಸಿದರು. ಅದಾದ ೧೫ ದಿನಗಳ ನಂತರ ರಾಜರು ಮತ್ತು ಅವರ ಮಂತ್ರಿಗಳ ಒಂದು ದೊಡ್ಡ ಗುಂಪೇ ಪಟೇಲರ ನಿವಾಸಕ್ಕೆ ಬಂದಿತ್ತು. ಅವರೆಲ್ಲ ಭಾರತವನ್ನು ಸೇರಲು ಅಭಿಲಾಷೆಯನ್ನು ವ್ಯಕ್ತಪಡಿಸಿದರು.

ಮಾರನೆಯ ದಿನ ಮೌಂಟ್‌ಬ್ಯಾಟನ್‌ರವರು ಸಾರ್ವಭೌಮನ ಪ್ರತಿನಿಧಿಯಾಗಿ ಪೂರ್ಣ ಸಮವಸ್ತ್ರ ಧರಿಸಿ ಒಂದು ವರ್ಣ ರಂಜಿತ ಸಮಾರಂಭದಲ್ಲಿ ರಾಜರನ್ನು ಭೇಟಿ ಮಾಡಿದರು. ರಾಜರು ಸಹ ತಮ್ಮ ಹೊಳೆಯುವ ಒಡವೆಗಳು ಮತ್ತು ವೈಭವದ ಉಡುಪಿನೊಡನೆ ಬಂದಿದ್ದರು. ಅವರನ್ನು ಕುರಿತು ಮೌಂಟ್ ಬ್ಯಾಟನ್‌ರವರು ಬರವಣಿಗೆಯ ಸಹಾಯವಿಲ್ಲದೆ ಆಶುಭಾಷಣ ಮಾಡಿದರು:

ಭಾರತ ಸ್ವಾತಂತ್ರ್ಯ ಶಾಸನವು ಆಗಸ್ಟ್ ೧೫ರಂದು ಸಾರ್ವಭೌಮತ್ವದ ಬಗೆಗೆ ನಿಮಗಿರುವ ಜವಾಬ್ದಾರಿಗಳಿಂದ ನಿಮ್ಮನ್ನು ಬಿಡುಗಡೆ ಮಾಡುತ್ತದೆ. ದೇಶೀಯ ರಾಜ್ಯಗಳು ಸಂಪೂರ್ಣ ಸ್ವಾತಂತ್ರ್ಯವನ್ನು ಪಡೆಯುತ್ತವೆ – ತಾಂತ್ರಿಕವಾಗಿ ಮತ್ತು ಕಾನೂನಿನ ಪ್ರಕಾರ ಅವರು ಸ್ವತಂತ್ರರು. ಆದರೆ ಬ್ರಿಟಿಷರ ಆಡಳಿತದ ಕಾಲದಿಂದ ಇಂಡಿಯಾ ಉಪಖಂಡವು ಒಂದೇ ಆರ್ಥಿಕ ಘಟಕವಾಗಿ ಕೆಲಸ ಮಾಡುವ ವ್ಯವಸ್ಥೆ ಬೆಳೆದುಬಂದಿದೆ.

ಈಗ ಆ ಸಂಬಂಧ ಮುರಿಯುವುದರಲ್ಲಿದೆ. ಅದರ ಜಾಗದಲ್ಲಿ ಬೇರೆ ವ್ಯವಸ್ಥೆಯನ್ನು ತರದೆ ಹೋದರೆ ಅರಾಜಕತೆ ಉದ್ಭವಿಸುತ್ತದೆ. ಆ ಅರಾಜಕತೆ ಮೊದಲು ರಾಜ್ಯಗಳಿಗೆ ಅಪಾಯವನ್ನು ಉಂಟು ಮಾಡುತ್ತದೆ.

ರಾಜ್ಯಗಳು ತಾವು ಅಪೇಕ್ಷಿಸುವ ಯಾವುದೇ ಡೊಮಿನಿಯನ್ ಒಡನೆ ತಮ್ಮ ಭವಿಷ್ಯ ರೂಪಿಸಿಕೊಳ್ಳಲು ತಾತ್ವಿಕವಾಗಿ ಸ್ವತಂತ್ರರು. ಆದರೆ ತಪ್ಪಿಸಿಕೊಳ್ಳಲಾಗದ ಕೆಲವು ಭೌಗೋಳಿಕ ಕಡ್ಡಾಯಗಳು ಇವೆ ಎನ್ನುವುದನ್ನು ನಾನು ನಿಮಗೆ ತೋರಿಸಬಹುದೆ? ಇರುವ

ಸುಮಾರು ೫೬೫ ರಾಜ್ಯಗಳ ಪೈಕಿ ಬಹು ಸಂಖ್ಯಾತ ರಾಜ್ಯಗಳು ಬಿಡಿಸಿಕೊಳ್ಳಲಾಗದ ರೀತಿಯಲ್ಲಿ ಇಂಡಿಯಾ ಡೊಮಿನಿಯನ್ ಒಡನೆ ಭೌಗೋಳಿಕ ಸಂಬಂಧವನ್ನು ಹೊಂದಿವೆ. ನಿಮ್ಮ ಸೌಕರ್ಯ ಮತ್ತು ಅನುಕೂಲಕ್ಕಾಗಿ ಮೂರು ವಿಷಯಗಳು ಒಂದು ದೊಡ್ಡ ಸಂಘಟನೆಯಿಂದ ನಿರ್ವಹಿಸಲ್ಪಡಬೇಕು ಎನ್ನುವುದನ್ನು ನೀವು ಒಪ್ಪುತ್ತೀರಿ ಎಂದು ನನಗೆ ಖಚಿತವಾಗಿದೆ.

ಒಕ್ಕೂಟವನ್ನು ರಾಜ್ಯಗಳು ಮೂರು ವಿಷಯಗಳಲ್ಲಿ ಮಾತ್ರ ಸೇರಲು ಅಧಿಕಾರ ಹಸ್ತಾಂತರ ಒಪ್ಪಂದದ ಕರಡು ಅವಕಾಶ ಮಾಡಿದೆ. ಬೇರೆ ಯಾವುದೇ ವಿಷಯದಲ್ಲಿ ಕೇಂದ್ರ ಸರ್ಕಾರಕ್ಕೆ ಅಧಿಕಾರವಿಲ್ಲ ಎನ್ನುವ ಸ್ಪಷ್ಟವಾದ ನಿಬಂಧನೆಯನ್ನು ಅದು ಒಳಗೊಂಡಿದೆ.

(ಬ್ರಿಟನ್‌ನಿಂದ ಭಾರತಕ್ಕೆ) ಅಧಿಕಾರ ಹಸ್ತಾಂತರದ ದಿನ ಬಹಳ ಹತ್ತಿರದಲ್ಲಿದೆ ಎಂಬುದನ್ನು ನೆನಪಿಡಿ. ನೀವು ಭಾರತವನ್ನು ಸೇರಲು ಸಿದ್ಧವಿದ್ದರೆ, ಆಗಸ್ಟ್ ೧೫ರ ಒಳಗೆ ಸೇರಬೇಕು.[೧೬]

ಲಾರ್ಡ್ ಮೌಂಟ್‌ಬ್ಯಾಟನ್‌ರವರ ಈ ಆಶುಭಾಷಣ ಪರಿಣಾಮಕಾರಿಯಾಗಿತ್ತು. (*ಅದು ನೈಜ ಸ್ಥಿತಿಗೆ ರಾಜರ ಕಣ್ಣುಗಳನ್ನು ತೆರೆಯಿಸಿತು – ಲೇಖಕ*) ಅದರ ಜೊತೆಗೆ ಮೌಂಟ್‌ಬ್ಯಾಟನ್‌ರವರ ಮತ್ತೊಂದು ಕಾರ್ಯ ಸರ್ದಾರರ ಕೈಗಳನ್ನು ಬಲಪಡಿಸಿತು. ಇಂಡಿಯಾದ ದೇಶೀಯ ರಾಜ್ಯಗಳಿಗೆ ಕಾಮನ್‌ವೆಲ್ತ್‌ನ ಸದಸ್ಯತ್ವವನ್ನು ಕೊಡಬಾರದು – ಅನ್ನುವ ತೀರ್ಮಾನವನ್ನು ಇಂಗ್ಲೆಂಡಿನ ಸರ್ಕಾರ ತೆಗೆದುಕೊಳ್ಳುವಂತೆ ಮೌಂಟ್‌ಬ್ಯಾಟನ್ ಮಾಡಿದ್ದರು. ಅದರಿಂದ ಸರ್ದಾರರು ಪ್ರತಿಯೊಬ್ಬ ರಾಜನೊಡನೆ ಸಂಧಾನ ನಡೆಸಲು ಅನುಕೂಲವಾಯಿತು. ನಿರಾಸೆಗೊಂಡ ಭೋಪಾಲ್‌ನ ನವಾಬನು ಛೇಂಬರ್ ಆಫ್ ಪ್ರಿನ್ಸಸ್ ಸಂಘದ ತನ್ನ ಚಾನ್ಸಲರ್ ಪದವಿಗೇ ರಾಜಿನಾಮೆ ಕೊಟ್ಟನು. ಮುಂದೆ ಛೇಂಬರ್ ಸಂಘವೇ ಮುಕ್ತಾಯಗೊಂಡಿತು. ರಾಜ್ಯಗಳಲ್ಲಿದ್ದ ಬ್ರಿಟಿಷ್ ರೆಸಿಡೆಂಟರು ಮತ್ತು ಏಜೆಂಟರ ದಬ್ಬಾಳಿಕೆಯೂ ಕೊನೆಗೊಂಡಿತು. ಅದು ಪಟೇಲರಿಗೆ ದೊರೆತ ಮೊದಲ ವಿಜಯ.

ಇದಕ್ಕೆ ಮುಂಚೆ, ಆಗಸ್ಟ್ ೧೫ರ ನಂತರ ಸ್ವತಂತ್ರ ಭಾರತದ ಗೌರ್ನರ್ ಜನರಲ್ ಆಗಿ ಇರಬೇಕೆಂದು ಮೌಂಟ್‌ಬ್ಯಾಟನ್‌ರವರನ್ನು ನೆಹರು ಮತ್ತು ಪಟೇಲ್ ಕೋರಿದ್ದರು. ಮೌಂಟ್‌ಬ್ಯಾಟನ್ ಒಪ್ಪಿದ್ದರು. ಆದರೆ ಪಾಕಿಸ್ತಾನದ ಗೌರ್ನರ್ ಜನರಲ್ ಆಗಿ ಮೌಂಟ್‌ಬ್ಯಾಟನ್ ತಮಗೆ ಬೇಕಿಲ್ಲವೆಂದು ಜಿನ್ನಾ ಹೇಳಿದ್ದನು.

ಅದರಿಂದ ಮೌಂಟ್‌ಬ್ಯಾಟನ್‌ಗೆ ಬೇಸರವಾಯಿತು. ಆದರೆ ಅವರು ಸಂತೋಷ ಮತ್ತು ಚುರುಕಿನಿಂದ ಭಾರತದ ಪರ ಕೆಲಸ ಮಾಡಲು ಅದು ಪ್ರೇರೇಪಿಸಿತು..

ರಾಜ್ಯಗಳ ಇಲಾಖೆಯು ಮುಸ್ಲಿಂ ಲೀಗ್‌ನ ದ್ವೇಷದ ಪರಿಸರದಲ್ಲಿ ಕೆಲಸ ನಿರ್ವಹಿಸಬೇಕಾಗಿತ್ತು. (ಆಗಿನ್ನೂ ಸ್ವಾತಂತ್ರ್ಯ ಬಂದು ಪಾಕಿಸ್ತಾನ ರಚಿತವಾಗಿ ಮುಸ್ಲಿಂ ಲೀಗ್ ಪ್ರಭಾವ ಮುಕ್ತಾಯ ಆಗಿರಲಿಲ್ಲ) ಒಕ್ಕೂಟದೊಡನೆ ರಾಜ್ಯಗಳ ಸೇರ್ಪಡೆಯನ್ನು ಜಿನ್ನಾ ವಿರೋಧಿಸಿದ್ದನು. ಆದಾಗ್ಯೂ ಗಡಿಯ ರಾಜ್ಯಗಳು ಪಾಕಿಸ್ತಾನದೊಡನೆ ಒಪ್ಪಂದಗಳನ್ನು ಮಾಡಿಕೊಳ್ಳುವಂತೆ ಪ್ರೇರೇಪಿಸಲು ಶಕ್ತಿ ಮೀರಿ ಪ್ರಯತ್ನಿಸುತ್ತಿದ್ದನು. ಉದಾಹರಣೆಗೆ, ಜೋಧ್‌ಪುರದ ಮತ್ತು ಜೈಸಲ್ಮೀರ್‌ನ ಮಹಾರಾಜರನ್ನು ಆಹ್ವಾನಿಸಿ, ಮಾತುಕತೆಯ ನಡುವೆ ಒಂದು ಖಾಲಿ ಹಾಳೆಗೆ ತನ್ನ ಸಹಿ ಹಾಕಿ ಜೋದ್‌ಪುರದ ಮಹಾರಾಜನಿಗೆ ಕೊಟ್ಟು, "ನಿಮ್ಮ ಎಲ್ಲಾ ಶರತ್ತುಗಳನ್ನು ಇದರಲ್ಲಿ ಭರ್ತಿ ಮಾಡಿಕೊಳ್ಳಿ," ಎಂದನು. ಅದರಿಂದ ಜೋಧ್‌ಪುರದ ಮಹಾರಾಜನಿಗೆ ಆಸೆ ಉಂಟಾಯಿತು. ಅವನು ಜೈಸಲ್ಮೀರ್‌ನ ಮಹಾರಾಜನ ಕಡೆಗೆ ತಿರುಗಿ ನೋಡಿದನು. ಜೈಸಲ್ಮೀರ್‌ನ ಮಹಾರಾಜನು ಜಿನ್ನಾಗೆ, " ನಮ್ಮ ರಾಜ್ಯಗಳ ಹಿಂದೂಗಳು ಮತ್ತು ಮುಸ್ಲಿಮರ ನಡುವೆ ವಿವಾದ ಉಂಟಾದರೆ, ನಾನು ಹಿಂದೂಗಳಿಗೆ ವಿರುದ್ಧವಾಗಿ ಮುಸ್ಲಿಮರಿಗೆ ಬೆಂಬಲ ನೀಡುವುದಿಲ್ಲ," ಎಂದನು. ಅದು ಜಿನ್ನಾನ ಬಾಯಿಯನ್ನು ಮುಚ್ಚಿಸಿತು. ಇಬ್ಬರು ಅರಸರೂ ತಮ್ಮ ರಾಜ್ಯಗಳಿಗೆ ಹಿಂದಿರುಗಿದರು. ಅಲ್ಲಿ, ಪಾಕಿಸ್ತಾನದೊಡನೆ ಯಾವುದೇ ಒಪ್ಪಂದ ಮಾಡಿಕೊಳ್ಳುವುದನ್ನು ಜಮೀನ್ದಾರರು ಮತ್ತು ಇತರರು ತೀವ್ರವಾಗಿ ವಿರೋಧಿಸುವುದನ್ನು ಕಂಡರು. ಕೆಲವು ದಿನಗಳ ನಂತರ ಜೋಧ್‌ಪುರದ ಮಹಾರಾಜನು ಮೌಂಟ್‌ಬ್ಯಾಟನ್‌ರವರನ್ನು ಭೇಟಿಯಾದನು. ಮೌಂಟ್‌ಬ್ಯಾಟನ್‌ರವರು ಪಾಕಿಸ್ತಾನದೊಡನೆ ಜೋಧ್‌ಪುರ ಸೇರುವುದು ದೇಶ ವಿಭಜನೆಯ ನೀತಿಗೆ ವಿರುದ್ಧವಾದುದೆಂದೂ, ಜನರ ತೀವ್ರ ಆಕ್ರೋಶ ಮತ್ತು ದಂಗೆಯನ್ನು ಅವನು ಎದುರಿಸಬೇಕಾಗುತ್ತದೆಂದೂ ಎಚ್ಚರಿಸಿದರು. ಜೋಧ್‌ಪುರದ ಮಹಾರಾಜ ಭಾರತಕ್ಕೆ ಸೇರಿಕೊಂಡನು.[೧೭]

ಭಾರತ ಡೊಮಿನಿಯನ್ ಸೇರಲು ಬಯಸುವ ರಾಜರು ಎರಡು ದಾಖಲೆಗಳಿಗೆ ಸಹಿ ಮಾಡಬೇಕಾಗಿತ್ತು. ಅವು 'ಸೇರ್ಪಡೆಯ ಒಪ್ಪಂದ' ಮತ್ತು 'ಸ್ಥಾಯಿ ಒಪ್ಪಂದ.' ಮೊದಲನೆಯದು ರಕ್ಷಣೆ. ವಿದೇಶಿ ವ್ಯವಹಾರ ಮತ್ತು ಸಂಪರ್ಕ ವಿಷಯಗಳಲ್ಲಿ ಅಧಿಕಾರವನ್ನು ರಾಜರು ಕೇಂದ್ರ ಸರ್ಕಾರಕ್ಕೆ ವರ್ಗಾಯಿಸುವ ದಾಖಲೆ. ಎರಡನೆಯದು ಬ್ರಿಟನ್ ಸಾರ್ವಭೌಮ ಮತ್ತು ರಾಜರುಗಳ ನಡುವೆ ಹಿಂದೆ ಏರ್ಪಟ್ಟಿದ್ದ ಒಪ್ಪಂದಗಳನ್ನು ಮತ್ತು ಆಡಳಿತಾತ್ಮಕ ವಿರ್ಪಾಡುಗಳನ್ನು,

ರಾಜರು ಮತ್ತು ಕೇಂದ್ರ ಸರ್ಕಾರದ ನಡುವೆ ಹೊಸ ಏರ್ಪಾಟುಗಳು ಆಗುವವರೆಗೆ ಮುಂದುವರೆಸುವ ದಾಖಲೆ. ಅವೆರಡು ದಾಖಲೆಗಳ ಸಹಿಯೇ ಭಾರತದ ಏಕೀಕರಣವಲ್ಲ. ಅದು ಮೊದಲನೆ ಹೆಜ್ಜೆ, ಅಷ್ಟೆ.

೫೬೫ ರಾಜ್ಯಗಳ ಪೈಕಿ ಕೇವಲ ಕೆಲವು ರಾಜ್ಯಗಳನ್ನು ಬಿಟ್ಟರೆ ಉಳಿದ ಕಡೆ ಸರಿಯಾದ ಆಡಳಿತಾತ್ಮಕ ವ್ಯವಸ್ಥೆಯಾಗಲಿ, ಪ್ರಜಾಪ್ರಭುತ್ವ ಸಂಕೇತವಾಗಲಿ ಇರಲಿಲ್ಲ. ಆಗಸ್ಟ್ ೧೫ರಂದು ಬ್ರಿಟನ್ನಿನ ಸಾರ್ವಭೌಮತ್ವದಿಂದ ಬಿಡುಗಡೆಯಾದ ಮೇಲೆ ಆ ರಾಜ್ಯಗಳಲ್ಲಿ ಒಂದು ಶೂನ್ಯ ಸೃಷ್ಟಿಯಾಗುತ್ತಿತ್ತು. ಅಲ್ಲೇನಾದರು ಗಲಭೆಗಳು ಆರಂಭವಾದರೆ (ಅವನ್ನು ಆರಂಭಿಸಲು ಕೆಲವರು ಕಾಯ್ದುಕೊಂಡಿದ್ದರು) ಅವನ್ನು ಹತ್ತಿಕ್ಕುವ ಶಕ್ತಿ ಅಲ್ಲಿಯ ಆಡಳಿತಗಾರರಿಗಿರಲಿಲ್ಲ. ಅಲ್ಲಿಗೆ ಕೇಂದ್ರ ಸರ್ಕಾರ ಪ್ರವೇಶಿಸಬೇಕಾದರೆ ಅದಕ್ಕೆ ಇರಬೇಕಾದ ಅಧಿಕಾರವನ್ನು ಮೊದಲನೆಯ ದಾಖಲೆ, 'ಸೇರ್ಪಡೆಯ ಒಪ್ಪಂದ' ನೀಡುತ್ತಿತ್ತು.

ರಾಜರು ಮತ್ತು ಬ್ರಿಟಿಷ್ ಸಾರ್ವಭೌಮನ ನಡುವೆ ರೈಲ್ವೆ, ಅಂಚೆ, ಸುಂಕ, ನೀರಾವರಿ, ಬಂದರು ಮುಂತಾದ ವಾಣಿಜ್ಯ ಮತ್ತು ಆರ್ಥಿಕ ವಿಷಯಗಳ ಬಗೆಗೆ ಅನೇಕ ಒಪ್ಪಂದಗಳು ಆಗಿದ್ದುವು. ಆಗಸ್ಟ್ ೧೫ರಂದು ಸಾರ್ವಭೌಮತ್ವ ಕೊನೆಗೊಂಡ ಮೇಲೆ ಈ ಸಾರ್ವಜನಿಕ ವ್ಯವಸ್ಥೆಗಳ ನಿರ್ವಹಣೆ ಗೊಂದಲಮಯವಾಗುತ್ತಿತ್ತು. ಆ ಗೊಂದಲವನ್ನು ಸರಿಪಡಿಸಲು ಎರಡನೆಯ ದಾಖಲೆ, 'ಸ್ಥಾಯಿ ಒಪ್ಪಂದ' ಅಗತ್ಯವಾಗಿತ್ತು.

ರಾಜರುಗಳಿಂದ ಈ ಎರಡು ದಾಖಲೆಗಳಿಗೆ ಒಪ್ಪಿಗೆ ಮತ್ತು ಸಹಿ ಪಡೆದು ಅವರನ್ನು ಭಾರತ ಒಕ್ಕೂಟದ ತೆಕ್ಕೆಗೆ ಮೊದಲು ಒಳಪಡಿಸಿಕೊಳ್ಳಬೇಕು. ಆ ನಂತರ ಒಬ್ಬೊಬ್ಬ ಅರಸನೊಡನೆ ಸಂಧಾನ ನಡೆಸಿ ರಾಜ್ಯಗಳನ್ನು ಒಕ್ಕೂಟದಲ್ಲಿ ವಿಲೀನಗೊಳಿಸಬೇಕು. ಆಗ ಭಾರತ ಏಕೀಕರಣ ಪೂರ್ಣವಾಗುತ್ತದೆ – ಎನ್ನುವುದು ಸರ್ದಾರರ ಯೋಜನೆಯಾಗಿತ್ತು. ಆಗಸ್ಟ್ ೧೫ರ ಒಳಗೆ ರಾಜರುಗಳನ್ನು ಎಳೆಯದೇ ಹೋದರೆ ಅವರನ್ನು ಪಾಕಿಸ್ತಾನ ಸೆಳೆಯುವ ಅಪಾಯವೂ ಇತ್ತು. ಅದರಿಂದ ಸರ್ದಾರರು, ಅವರಿಗೆ ೭೨ ವರ್ಷ ವಯಸ್ಸಾಗಿದ್ದರೂ, ಆರೋಗ್ಯ ಉತ್ತಮವಾಗಿಲ್ಲದಿದ್ದರೂ, ಉತ್ಸಾಹ ಮತ್ತು ಶ್ರಮದಿಂದ ತಮ್ಮ ಗುರಿಯ ಕಡೆಗೆ ಧಾವಿಸತೊಡಗಿದರು.

ಸರ್ದಾರರಿಗೆ ಮತ್ತೊಂದು ಗುರಿ ಇತ್ತು. ಕೇವಲ ಕೆಲವು ರಾಜ್ಯಗಳಲ್ಲಿ ಬಿಟ್ಟರೆ, ಉಳಿದಕಡೆ ಪ್ರಜಾಪ್ರಭುತ್ವದ ಕುರುಹೇ ಇರಲಿಲ್ಲ. ಎಲ್ಲಾ ಕಡೆಯು ನಿರಂಕುಶ ಪ್ರಭುತ್ವವಿತ್ತು. ಆ ರಾಜ್ಯಗಳ ಪಕ್ಕದ ಪ್ರಾಂತ್ಯಗಳಲ್ಲಿ ಪ್ರಜಾಪ್ರಭುತ್ವವಿತ್ತು. ಅದನ್ನು ಕಂಡ ರಾಜ್ಯದ ಜನರು ಜವಾಬ್ದಾರಿ ಸರ್ಕಾರಕ್ಕಾಗಿ ಹಾತೊರೆಯುತ್ತಿದ್ದರು. ರಾಜರ

ನಿರಂಕುಶ ದಬ್ಬಾಳಿಕೆಯ ವಿರುದ್ಧ ಹೋರಾಟದ ಸೂಚನೆಗಳು ಕಂಡು ಬರುತ್ತಿದ್ದುವು. ರಾಜ್ಯಗಳಲ್ಲಿ ಗಲಭೆ, ಗಲಾಟೆಗಳಿಗೆ ಆಸ್ಪದ ಕೊಡದೆ ಶಾಂತಿಯುತವಾಗಿ ಸಮಸ್ಯೆಯನ್ನು ಪರಿಹರಿಸಬೇಕೆಂಬುದು, ಆಡಳಿತದ ಅಧಿಕಾರವನ್ನು ನಿರಂಕುಶ ಪ್ರಭುಗಳಿಂದ ಜನರಿಗೆ ಹಸ್ತಾಂತರಿಸಿ, ರಾಜ್ಯಗಳಲ್ಲಿ ಜವಾಬ್ದಾರಿ ಸರ್ಕಾರಗಳನ್ನು ರಚಿಸಬೇಕೆಂಬುದು ಸರ್ದಾರರ ಗುರಿಯಾಗಿತ್ತು.[೧೮]

ಪಟೇಲರು ರಾಜರಿಗೆ 'ರಾಜ್ಯಗಳಲ್ಲಿ ಜನಾಭಿಪ್ರಾಯವೇ ನಿರ್ಧಾರಕ ಶಕ್ತಿ..... ಏರಿ ಬರುತ್ತಿರುವ ಪ್ರವಾಹವನ್ನು ನೋಡಿ, ಅದರಲ್ಲಿ ಕೊಚ್ಚಿ ಹೋಗುವ ಮುನ್ನ ಕ್ರಮ ಕೈಗೊಳ್ಳಿ,' ಎಂದು ಬುದ್ಧಿವಾದ ಹೇಳಿದರು. ರಾಜರ ಮುಂದಿರುವುದು ಎರಡೇ ಆಯ್ಕೆ: ಜವಾಬ್ದಾರಿ ಸರ್ಕಾರಗಳನ್ನು ಸ್ಥಾಪಿಸಿ ಸಾಂವಿಧಾನಿಕ ಮುಖ್ಯಸ್ಥನ ಸ್ಥಾನಕ್ಕೆ ತೃಪ್ತಿ ಪಟ್ಟುಕೊಳ್ಳುವುದು ಅಥವಾ ಕ್ರಾಂತಿಯನ್ನು ಎದುರಿಸುವುದು. ಹಿಂದೆ ಅವರು ಸಾರ್ವಭೌಮತ್ವ ನೀಡುವ ರಕ್ಷಣೆಯ ಮೇಲೆ ಅವಲಂಬಿತರಾಗಿದ್ದರು. ಈಗ ಅದು ಇಲ್ಲ. ಅವರ ನಿರಂಕುಶ ಆಡಳಿತದ ರಕ್ಷಣೆಗೆ ಭಾರತ ಸರ್ಕಾರ ಬರುವುದಿಲ್ಲ. ಆದರೆ ಶಾಂತಿ ಮತ್ತು ಕಾನೂನಿನ ಪಾಲನೆ ಎಷ್ಟು ಪ್ರಧಾನ ಮತ್ತು ಅತ್ಯಗತ್ಯವೆಂದರೆ ಆಂತರಿಕ ಭದ್ರತೆ ಮತ್ತು ಶಾಂತಿಗೆ ಭಂಗ ತರುವಂತಹ ಯಾವುದೇ ರಾಜ್ಯದ ವಿಷಯದಲ್ಲಿ ಕೇಂದ್ರ ಸರ್ಕಾರವು ಪ್ರವೇಶಿಸುವುದು ಮತ್ತು ಅದರ ಆಡಳಿತವನ್ನು ವಹಿಸಿಕೊಳ್ಳುವುದು.

ಸರ್ದಾರರ ಈ ಎಚ್ಚರಿಕೆಯಿಂದ ರಾಜರು ಯೋಚಿಸತೊಡಗಿದರು. ಎದುರಿಸ ಬೇಕಾಗಿರುವ ಆಪತ್ತಿನ ಅರಿವು ಅವರಿಗೆ ಉಂಟಾಯಿತು. ಪ್ರಜೆಗಳ ಆಕ್ರೋಶದ ವಿರುದ್ಧ ತಮ್ಮನ್ನು ರಕ್ಷಿಸುವವರಾರು? ಜವಾಬ್ದಾರಿ ಸರ್ಕಾರವನ್ನು ರಚಿಸಿದರೆ ತಾವು ಹೆಸರಿಗೆ ಮಾತ್ರ (ನಾಮಕಾವಸ್ತೆ) ಮುಖ್ಯಸ್ಥರಾಗಬೇಕಾಗುತ್ತದೆ. ಆ ಪ್ರಜಾ ಸರ್ಕಾರ ಅವರ ಭತ್ಯ ಮತ್ತು ಸೌಲಭ್ಯಗಳನ್ನು ಕಡಿತಗೊಳಿಸಬಹುದು ಎಂದು ಅಲೋಚಿಸಿದರು. ಅಷ್ಟು ಹೊತ್ತಿಗೆ ಸರ್ದಾರರು ತಮ್ಮ ಆಡಳಿತ ನಡೆಸುವ ಹಕ್ಕನ್ನು ಒಪ್ಪಿಸಿದ ಅರಸರಿಗೆ ರಾಜಧನ, ಖಾಸಗಿ ಆಸ್ತಿಯ ಮಾಲಿಕತ್ವ, ಅವರು ವೈಯುಕ್ತಿಕ ವಾಗಿ ಅನುಭವಿಸುತ್ತಿದ್ದ ಸವಲತ್ತುಗಳು ಮತ್ತು ಗೌರವಗಳನ್ನು ಖಾತ್ರಿಯಾಗಿ ಕೊಡುವ ಭರವಸೆಯನ್ನು ನೀಡಿದರು. ಜೊತೆಗೆ ಅವರು, 'ಒಂದುಗೂಡಿದ ಭಾರತದ ನಿರ್ಮಾಣಕ್ಕಾಗಿ ನನ್ನೊಡನೆ ಕೈ ಜೋಡಿಸಿ' ಎಂದು ರಾಜರಿಗೆ ಮನವಿ ಮಾಡಿದರು.[೧೯]

ಅಷ್ಟೇ ಅಲ್ಲ, ಪಟೇಲರು, 'ಆಗಸ್ಟ್ ೧೫ರ ನಂತರ ಸರ್ಕಾರದ ಶರತ್ತುಗಳು ಕಠಿಣವಾಗುತ್ತವೆ, ರಾಜವರ್ಗದವರ ಶತೃಗಳನ್ನು ತಡೆ ಹಿಡಿಯುವ ನನ್ನ ಶಕ್ತಿಗೆ ಒಂದು ಮಿತಿ ಇದೆ,' ಎಂದೂ ರಾಜರಿಗೆ ತಿಳಿಸಿದರು.[೨೦]

ಒಟ್ಟಿನಲ್ಲಿ ಸರ್ದಾರರ ಬುದ್ಧಿವಾದ, ಮನವಿ, ಎಚ್ಚರಿಕೆ ಮತ್ತು ವಿಷಯ ವಿಶ್ಲೇಷಣೆ, ಮೌಂಟ್‌ಬ್ಯಾಟನ್‌ರವರ ಮಾತು ಮತ್ತು ಕೃತಿ ಹಾಗೂ ಮೆನನ್‌ರವರ ತೆರೆಮರೆಯ ಕಾರ್ಯಗಳ ಫಲವಾಗಿ ರಾಜರು 'ಸೇರ್ಪಡೆಯ ಒಪ್ಪಂದ' ಮತ್ತು 'ಸ್ಥಾಯಿ ಒಪ್ಪಂದ'ಗಳಿಗೆ ಸಹಿ ಮಾಡಲು ಮುಂದಾದರು.

ಭಾರತಕ್ಕೆ ಸೇರ್ಪಡೆಯಾಗುವುದಾಗಿ ಗ್ವಾಲಿಯರ್ ಸಂಸ್ಥಾನ ಮೊದಲು ಪ್ರಕಟಿಸಿತು. ಆ ಸಂಸ್ಥಾನದ ಮಹಾರಾಜ ಸರ್ ಜೀವಾಜಿರಾವ್ ಸಿಂಧ್ಯಾ ಪರವಾಗಿ ಅವರ ದಿವಾನ ಎಂ.ಎ. ಶ್ರೀನಿವಾಸನ್ ಆ ಪ್ರಕಟಣೆಯನ್ನು ಮಾಡಿದರು. ಆದರೆ ಸೇರ್ಪಡೆಯ ಒಪ್ಪಂದಕ್ಕೆ ಮೊದಲು ಸಹಿ ಹಾಕಿದವರು ಬರೋಡಾದ ಗಾಯಕ್‌ವಾಡ್ ಸರ್ ಪ್ರತಾಪ್ ಸಿಂಗ್. ಗ್ವಾಲಿಯರ್‌ನ ಮಹಾರಾಜರು ಇತರ ಅನೇಕ ರಾಜರುಗಳ ಮೇಲೂ ಪ್ರಭಾವ ಬೀರಿದರು ಮತ್ತು ಮಾತುಕತೆಯ ಸಮಯ ಬಹಳ ಸಹಾಯ ಮಾಡಿದರು ಆದರೆ ಅವರಿಬ್ಬರಿಗಿಂತಲೂ ಹೆಚ್ಚಿನ ಪ್ರಶಂಸೆ ಸಲ್ಲಬೇಕಾದದ್ದು ಬಿಕನೀರ್‌ನ ಮಹಾರಾಜರಾಗಿದ್ದ ಸರ್ ಸಾದುಲ್ ಸಿಂಗ್‌ಗೆ ಮತ್ತು ಪಟಿಯಾಲದ ಮಹಾರಾಜ ಸರ್ ಯಾದವೇಂದ್ರ ಸಿಂಗ್‌ಗೆ. ಇಬ್ಬರೂ ಮಹಾ ದೇಶಭಕ್ತರು. ಇಬ್ಬರೂ ಆರಂಭದಿಂದಲೂ ಸರ್ದಾರರಿಗೆ ಬೆಂಬಲ ನೀಡಿದರು ಮತ್ತು ತಮ್ಮ ಹಿತದೃಷ್ಟಿಯಿಂದ ಭಾರತಕ್ಕೆ ಸೇರುವುದು ಒಳ್ಳೆಯದು ಎನ್ನುವ ನಂಬಿಕೆಯನ್ನು ಅನೇಕ ರಾಜರಿಗೆ ಬರಿಸಿದರು. ನವನಗರದ ಜಾಮ್ ಸಾಹೇಬ್ ಸಹ ಭಾರಿ ಬೆಂಬಲ ನೀಡಿದರು. ದೇಶಭಕ್ತಿಯಿಂದ ಕೂಡಿದ ಸಹಕಾರವನ್ನು ತೋರಿದ ಇವರು ಮತ್ತು ಇತರ ರಾಜರನ್ನು ಎಂದಿಗೂ ಮರೆಯಲು ಸಾಧ್ಯವಿಲ್ಲ – ಎನ್ನುತ್ತಾರೆ ವಿ.ಪಿ. ಮೆನನ್. ಸ್ವತಃ ಸರ್ದಾರರೇ ಇವರನ್ನು 'ಸ್ವತಂತ್ರ ಮತ್ತು ಸಂಯುಕ್ತ ಭಾರತದ ಸಹ ಶಿಲ್ಪಿಗಳು' ಎಂದು ಕರೆದಿದ್ದಾರೆ.[೨೧] ಆದಾಗ್ಯೂ ಎಲ್ಲಾ ರಾಜರು ಬಹಳ ಸಲೀಸಾಗಿ ಮತ್ತು ಶೀಘ್ರವಾಗಿ ಸೇರ್ಪಡೆ ಒಪ್ಪಂದಕ್ಕೆ ಸಹಿ ಹಾಕಲಿಲ್ಲ. ಸ್ವಲ್ಪ ತಕರಾರು ಮಾಡಿ ನಂತರ ಸಹಿ ಮಾಡಿದವರೂ ಉಂಟು. ಅವರ ಬಗೆಗೆ ಮುಂದೆ ನೋಡೋಣ.

ಆಗಸ್ಟ್ ೧೫ರ ವೇಳೆಗೆ ಜುನಾಘಡ್ ಮತ್ತೆರಡು ಕಾಥೈವಾಡದ ಸಣ್ಣ ಮುಸ್ಲಿಂ ರಾಜರ ರಾಜ್ಯಗಳ ಹೊರತಾಗಿ, ಹೆಚ್ಚು ಕಡಿಮೆ ಎಲ್ಲಾ ರಾಜ್ಯಗಳು ಸೇರ್ಪಡೆ ಒಪ್ಪಂದ ಮತ್ತು ಸ್ಥಾಯಿ ಒಪ್ಪಂದಗಳಿಗೆ ಸಹಿ ಮಾಡಿದ್ದುವು. ಆದರೆ ಹೈದರಾಬಾದ್ ಸಹಿ ಮಾಡಿರಲಿಲ್ಲ. ಅದರ ವಿಶೇಷ ಸ್ಥಾನ ಮತ್ತು ಸಮಸ್ಯೆಯ ದೃಷ್ಟಿಯಿಂದ ಆಗಸ್ಟ್ ೧೫ರ ನಂತರವೂ ನಿಜಾಮನೊಡನೆ ಮಾತುಕತೆ ಮುಂದುವರಿಸಬೇಕೆಂದು ಮೌಂಟ್‌ಬ್ಯಾಟನ್‌ರವರನ್ನು ನೆಹರು ಮತ್ತು ಪಟೇಲ್

ವಿನಂತಿಸಿದರು. ಆಗಸ್ಟ್ ೧೨ರಂದು, ಮೌಂಟ್‌ಬ್ಯಾಟನ್‌ರವರು 'ಸೇರ್ಪಡೆ ಒಪ್ಪಂದಕ್ಕೆ ಸಹಿ ಹಾಕುವ ಅವಕಾಶವನ್ನು ಹೈದರಾಬಾದ್ ವಿಷಯದಲ್ಲಿ ಎರಡು ತಿಂಗಳ ಕಾಲ ವಿಸ್ತರಿಸಲಾಗಿದೆ,' ಎಂದು ಪ್ರಕಟಿಸಿದರು.

ಕಾಶ್ಮೀರದ ವಿಷಯವಾಗಿ ಅದರ ರಾಜನನ್ನು 'ರಾಜ್ಯಗಳ ಇಲಾಖೆ' ಸಂಪರ್ಕಿಸಲೇ ಇಲ್ಲ. ಆದಾಗ್ಯೂ ಮೌಂಟ್‌ಬ್ಯಾಟನ್‌ರವರು ಸ್ವಯಂ ಪ್ರೇರಿತರಾಗಿ ಜುಲೈ ಆರಂಭದಲ್ಲಿ ಕಾಶ್ಮೀರಕ್ಕೆ ಹೋಗಿ ಭಾರತ ಅಥವಾ ಪಾಕಿಸ್ತಾನವನ್ನು ಸೇರಲು ತಮ್ಮ ಹಳೆಯ ಸ್ನೇಹಿತನಾದ ಅಲ್ಲಿಯ ರಾಜನಿಗೆ ತಿಳಿಸಿದರು.

ಒಟ್ಟಿನಲ್ಲಿ ಆಗಸ್ಟ್ ೧೫ರ ಹೊತ್ತಿಗೆ ದೇಶವು ಛಿದ್ರವಾಗುವುದು ತಪ್ಪಿ ಇಡೀ ದೇಶ ಒಂದು ರಾಜಕೀಯ ವ್ಯವಸ್ಥೆಗೆ ಒಳಪಟ್ಟಿತು. ಅದನ್ನು ಸರ್ದಾರರು ಸೇರ್ಪಡೆಯ ನೀತಿಯನ್ನು ಅಳವಡಿಸಿ ಮೌಂಟ್‌ಬ್ಯಾಟನ್ ಮತ್ತು ಮೆನನ್‌ರವರ ಸಹಾಯದಿಂದ ಸಾಧಿಸಿದ್ದರು. ಸೇರ್ಪಡೆಯ ನೀತಿ ದೇಶದ ಮೂಲಭೂತ ಏಕತೆಯನ್ನು ಭದ್ರಗೊಳಿಸಿತು. ಭಾರತ ಒಂದು ಒಕ್ಕೂಟ ಆಯಿತು. ಪ್ರಾಂತ್ಯಗಳು ಮತ್ತು ದೇಶೀಯ ರಾಜ್ಯಗಳು ಅದರ ಅವಿಭಾಜ್ಯ ಅಂಗಗಳಾದುವು.

❖ ◆ ❖

ಲಾರ್ಡ್ ಮೌಂಟ್‌ಬ್ಯಾಟನ್

೧೯. ತಕರಾರು ತೆಗೆದ ರಾಜ್ಯಗಳು

ಜುಲೈ ೨೮ರಂದು ಲಾರ್ಡ್ ಮೌಂಟ್‌ಬ್ಯಾಟನ್‌ರವರು ವೈಸ್‌ರಾಯ್ ಭವನದಲ್ಲಿ ಸುಮಾರು ೫೦ ರಾಜರ ಮತ್ತು ೧೦೦ ರಾಜ್ಯ ಪ್ರತಿನಿಧಿಗಳ ಗೌರವಾರ್ಥ ಒಂದು ವರ್ಣರಂಜಿತ ಸತ್ಕಾರ ಕೂಟವನ್ನು ಏರ್ಪಡಿಸಿದರು. ಆದರೆ ಅನೇಕ ರಾಜರು ಆ ಕೂಟದಲ್ಲಿ ಭಾಗವಹಿಸಲಿಲ್ಲ. ಅವರೆಲ್ಲರು ಸೇರ್ಪಡೆ ಯೋಜನೆಗೆ ವಿರೋಧಿಗಳಾದವರು ಅಥವಾ ಅಡ್ಡಗೋಡೆಯ ಮೇಲೆ ಕುಳಿತವರು. ಅವರ ಮನೋಭಾವ ಸರ್ದಾರರಿಗೆ ಸ್ವಲ್ಪ ಆತಂಕವನ್ನು ಉಂಟುಮಾಡಿತು.

ಈ ಮಧ್ಯೆ ಮುಸ್ಲಿಂ ಲೀಗ್ ನಾಯಕರು ಕೆಲವು ರಾಜರೊಡನೆ ಹೆಚ್ಚು ಕಡಿಮೆ ಪ್ರತಿದಿನ ಸಭೆ ನಡೆಸುತ್ತಿದ್ದರು ಮತ್ತು ಪಾಕಿಸ್ತಾನವನ್ನು ಸೇರುವಂತೆ ಮಾಡಲು ಆಕರ್ಷಣೀಯ ರಿಯಾಯಿತಿಗಳನ್ನು ನೀಡುತ್ತಿದ್ದರು. ಈ ಮುಸ್ಲಿಂ ಲೀಗ್ ನಾಯಕರು ಪ್ರಧಾನವಾಗಿ ಗಡಿ ಸಮೀಪದ ರಾಜ್ಯಗಳ ಮೇಲೆ ಕಣ್ಣಿಟ್ಟಿದ್ದರು.

ಲಾರ್ಡ್ ಮೌಂಟ್‌ಬ್ಯಾಟನ್‌ರವರು ಮತ್ತೆ ಆಗಸ್ಟ್ ೧ರಂದು ಅನೇಕ ಪ್ರಮುಖ ರಾಜರ ಗೌರವಾರ್ಥ ಒಂದು ಸತ್ಕಾರ ಕೂಟ ಏರ್ಪಡಿಸಿದರು. ಅಲ್ಲಿ ಭಾಗವಹಿಸಿದ್ದ ವರಲ್ಲಿ ಅನೇಕರು ಕೊನೆಘಳಿಗೆಯವರೆಗೂ ಡೋಲಾಯಮಾನವಾಗಿ ಇರುವವರು. ಅವರು ಸ್ಥಾಯಿ ಒಪ್ಪಂದಕ್ಕೆ ಸಹಿ ಮಾಡಲು ಸಿದ್ಧವಿದ್ದರು. ಆದರೆ ಸೇರ್ಪಡೆ ಒಪ್ಪಂದಕ್ಕೆ ಸಹಿ ಮಾಡಲು ಮೀನಾಮೇಷ ಎಣಿಸುತ್ತಿದ್ದರು. ಅಂತಹವರನ್ನು ಗುರಿಯಿಟ್ಟು ಸೇರ್ಪಡೆ ಒಪ್ಪಂದಕ್ಕೆ ಸಹಿ ಮಾಡಿದವರು ಮಾತ್ರ ಸ್ಥಾಯಿ ಒಪ್ಪಂದಕ್ಕೆ ಸಹಿ ಮಾಡಬಹುದು ಎನ್ನುವ ಶರತ್ತನ್ನು ಪ್ರಕಟಿಸಬೇಕಾಯಿತು.

ರಾಜ್ಯಾಂಗ ರಚನಾ ಸಭೆಗೆ ಕೆಲವು ಅರಸರು ಪ್ರತಿನಿಧಿಗಳನ್ನು ಕಳುಹಿಸಿದ್ದರು. ಅಂತಹವರಿಂದ ಸೇರ್ಪಡೆ ಒಪ್ಪಂದಕ್ಕೆ ಸಹಿ ಪಡೆಯುವುದು ಕಷ್ಟವಾಗಲಿಲ್ಲ. ಇತರರಿಂದ ಸಹಿ ಪಡೆಯಲು ಅನೇಕ ಬಾರಿ ಮಾತುಕತೆ ನಡೆಸಬೇಕಾಯಿತು, ವಿವರಣೆ ಕೊಡಬೇಕಾಯಿತು ಮತ್ತು ಅನುಮಾನಗಳನ್ನು ಪರಿಹರಿಸಬೇಕಾಯಿತು. ಇದು ಒತ್ತಡ ಮತ್ತು ಆತಂಕವನ್ನು ಉಂಟುಮಾಡುತ್ತಿತ್ತು. ಅಂತೂ ಇಂತೂ ಸರ್ದಾರ್ ಮತ್ತು ಅವರ ತಂಡದವರು ಅವರಿಂದ ಸಹಿ ಪಡೆಯಲು ಯಶಸ್ವಿಯಾದರು.[೨೨]

ಅ) ಟ್ರಾವಂಕೂರ್ (ತಿರುವನಂತಪುರ)

ದಕ್ಷಿಣ ಭಾರತದ ತುದಿಯಲ್ಲಿ ನೈರುತ್ಯ ಭಾಗದಲ್ಲಿ ಮಲಬಾರ್ ಎಂದು ಕರೆಯಲ್ಪಡುವ ಪ್ರದೇಶದಲ್ಲಿ ಎರಡು ರಾಜ್ಯಗಳಿದ್ದುವು. ಒಂದು ಟ್ರಾವಂಕೂರು. ಮತ್ತೊಂದು ಕೊಚಿನ್. ಭಾರತಕ್ಕೆ ಸ್ವಾತಂತ್ರ್ಯ ಬರುವ ಸಮಯದಲ್ಲಿ ಟ್ರಾವಂಕೂರಿನ ರಾಜನಾಗಿದ್ದವರು ಸುಮಾರು ೩೫ ವರ್ಷ ವಯಸ್ಸಿನ ಸರ್ ರಾಮ ವರ್ಮ. ಸರ್ ಸಿ.ಪಿ. ರಾಮಸ್ವಾಮಿ ಐಯ್ಯರ್ ಅದರ ದಿವಾನರು. ಆ ಸಮಯದಲ್ಲಿ ಕೊಚಿನ್ ರಾಜ್ಯದ ಮಹಾರಾಜರಾಗಿದ್ದವರು ಬಹಳ ವೃದ್ಧರಾಗಿದ್ದ ಸರ್ ರಾಮ ವರ್ಮರವರು. ಎರಡೂ ರಾಜ್ಯಗಳು ಹಿಂದೂ ರಾಜ್ಯಗಳು.

ಕೊಚಿನ್ ಮಹಾರಾಜರು ೧೯೪೭ರ ಏಪ್ರಿಲ್ ೨೭ರಷ್ಟು ಹಿಂದೆಯೆ, "ಭಾರತದ ರಾಜ್ಯಗಳು ಬಲಿಷ್ಠ ಶಕ್ತಿಯ ಅಧೀನದಲ್ಲಿರುವ ನಿರಂಕುಶ ಪ್ರಭುತ್ವಗಳು. ಅವು ಪ್ರಬಲ ಶಕ್ತಿಯ ಮತ್ತು ಬಲಿಷ್ಠ ಶಕ್ತಿಯ ಮುಂದೆ ನಿಸ್ಸಹಾಯಕರು. ಅದರಿಂದ ರಾಜರು ಸಂವಿಧಾನಾತ್ಮಕ ಆಡಳಿತಗಾರರ ಪಾತ್ರವನ್ನು ಸ್ವಯಂ ಇಷ್ಟದಿಂದ ವಹಿಸಿ ಕೊಂಡು ರಾಷ್ಟ್ರದ ಭವಿಷ್ಯತ್ತಿನಲ್ಲಿ ಉಪಯುಕ್ತ ಪಾತ್ರ ನಿರ್ವಹಿಸಬೇಕೆಂದು" ಇತರ ರಾಜರಿಗೆ ಸಲಹೆ ನೀಡಿದ್ದರು. ಆಗಲೇ ಸರ್ದಾರರು ಅವರನ್ನು ತಮ್ಮ ಕಡೆಗೆ ಸೆಳೆದಿದ್ದರು.[೨೩]

ಆದರೆ ಟ್ರಾವಂಕೂರು ಅದಕ್ಕೆ ವಿರುದ್ಧ ಮಾರ್ಗವನ್ನು ಹಿಡಿಯಿತು. ಅದು ಒಕ್ಕೂಟಕ್ಕೆ ಸಡ್ಡು ಹೊಡೆದ ಮೊದಲ ರಾಜ್ಯವಾಯಿತು. ಸಿ.ಪಿ. ಎಂದು ಪ್ರಸಿದ್ಧರಾಗಿದ್ದ ಅದರ ದಿವಾನರಾದ ಸಿ.ಪಿ. ರಾಮಸ್ವಾಮಿ ಐಯ್ಯರ್‌ರವರು ಪ್ರಸಿದ್ಧ ಮತ್ತು ಮೇಧಾವಿ ವಕೀಲ, ಆಡಳಿತಗಾರ ಮತ್ತು ರಾಜಕಾರಣಿಯಾಗಿದ್ದರೂ ಸಹ ಗರ್ವಿಷ್ಠರಾಗಿದ್ದರು. ಅವರು ಭೋಪಾಲ್‌ನ ಸುಲ್ತಾನ ಮತ್ತು ರಾಜ್ಯ ಇಲಾಖೆಯ ಕಾರ್ಯದರ್ಶಿ ಕಾರ್‌ಫೀಲ್ಡ್ ಪ್ರಭಾವಕ್ಕೆ ಒಳಗಾಗಿದ್ದರು. ೧೯೪೭ರ ಮೇ ೯ರಂದು 'ದಿ ಹಿಂದೂ' ಪತ್ರಿಕೆಗೆ ನೀಡಿದ ಸಂದರ್ಶನದಲ್ಲಿ ಅವರು, 'ರಾಷ್ಟ್ರವನ್ನು ವಿಭಜಿಸದೆ ಇರಲು ಮತ್ತು ಇಡೀ ರಾಷ್ಟ್ರಕ್ಕೆ ಒಂದು ಸಂವಿಧಾನವನ್ನು ರಚಿಸಲು ಸಾಧ್ಯವಾಗದೇ

ಹೋದರೆ, ಟ್ರಾವಂಕೂರು ತಾನೊಂದು ಮುಕ್ತ ಮತ್ತು ಸ್ವತಂತ್ರ ರಾಜ್ಯ ಎಂದು ಘೋಷಿಸಿಕೊಳ್ಳದೆ ಬೇರೆ ಮಾರ್ಗವೇ ಇಲ್ಲ' ಎಂದು ಹೇಳಿದ್ದರು.[೨೪] ಅಂತಹ ಹೇಳಿಕೆ, ದೇಶೀಯ ರಾಜ್ಯಗಳು ಒಂದುಗೂಡಿ ಮೂರನೇ ಶಕ್ತಿಯನ್ನು ಸ್ಥಾಪಿಸಿ ಕೊಳ್ಳಬೇಕೆಂದು ಕನಸು ಕಾಣುತ್ತಿದ್ದ ಅರಸರಿಗೆ ಭಾರಿ ಪ್ರೋತ್ಸಾಹ ಮತ್ತು ಬಲವನ್ನು ನೀಡುತ್ತಿತ್ತು. ಅದರಿಂದ ಅದನ್ನು ಆರಂಭದಲ್ಲೇ ಚಿವುಟಿಹಾಕಬೇಕೆಂದು ಮತ್ತು ಸಿ.ಪಿ.ಯವರನ್ನು ತಮ್ಮ ಕಡೆಗೆ ಸೆಳೆಯಬೇಕೆಂದು ಸರ್ದಾರರು ಯೋಚಿಸಿದರು.

ಸಿ.ಪಿ.ಯವರು ೧೯೪೭ರ ಜೂನ್ ೧ರಂದು ವೈಸ್‌ರಾಯ್ ಭೇಟಿಗೆ ದೆಹಲಿಗೆ ಬರುವವರಿದ್ದರು. ಮೇ ೩೧ರಂದು ಪಟೇಲರು ಅವರಿಗೊಂದು ಪುಟ್ಟ ಆದರೆ ಮಧುರ ಪತ್ರವನ್ನು ಬರೆದರು. ಅದು ಹೀಗಿತ್ತು:

> ಸ್ನೇಹರಹಿತರಿಗೆ ಸ್ನೇಹಿತನಾಗುವುದು ನನ್ನ ಸ್ವಭಾವ. ನೀವು ಅಂತಹವರಾಗಲು ಆಯ್ಕೆ ಮಾಡಿಕೊಂಡಿದ್ದೀರಿ. ನಾಳೆ ಮಧ್ಯಾಹ್ನ ಒಂದು ಘಂಟೆಗೆ ನೀವು ಬಂದು ನನ್ನೊಡನೆ ಭೋಜನ ಸ್ವೀಕರಿಸಿದರೆ ನನಗೆ ಬಹಳ ಸಂತೋಷವಾಗುವುದು.

ಸಿ.ಪಿ.ಯವರಿಗೆ ಬ್ರಿಟಿಷ್ ಸರ್ಕಾರದೊಡನೆ ವೈಯುಕ್ತಿಕ ಸ್ನೇಹವಿತ್ತು. ಟ್ರಾವಂಕೂರಿನ ಯುವ ಮಹಾರಾಜ ಅವರಿಗೆ ಪೂರ್ಣ ಸ್ವಾತಂತ್ರ್ಯ ಕೊಟ್ಟು ಅವರು ಹೇಳಿದ ಹಾಗೆ ಕೇಳುತ್ತಿದ್ದನು. ಅದರಿಂದ ಸಿ.ಪಿ.ಯವರು ಅಹಂಕಾರ ಭೂಷಿತರಾಗಿ ಯಾರೊಡನೆಯೂ ಬೆರೆಯುತ್ತಿರಲಿಲ್ಲ. ಅದಕ್ಕೇ ಪಟೇಲರು ಅವರನ್ನು 'ಆಯ್ಕೆಯಿಂದ ಸ್ನೇಹರಹಿತರು' ಎಂದು ಕರೆದಿದ್ದುದು. ಅದು ಹೇಗೆ ಇರಲಿ, ಅವರು ಜೂನ್ ೧ರ ಬೆಳಗ್ಗೆ ಪಟೇಲರಿಗೆ ಜವಾಬು ಬರೆದರು. ಅದು ಹೀಗಿತ್ತು:

> ನಿಮ್ಮ ಪತ್ರ ಮತ್ತು ಅದರಲ್ಲಿರುವ ಮಧುರ ಭಾವನೆಗಳನ್ನು ನಾನು ಮೆಚ್ಚುತ್ತೇನೆ. ಆದಾಗ್ಯೂ, ನೀವು ಸೂಚಿಸಿರುವ 'ಸ್ನೇಹರಹಿತ ವ್ಯಕ್ತಿ'ಯು ಈ ದಿನ ಮತ್ತೊಬ್ಬ ವ್ಯಕ್ತಿಯೊಡನೆ ಭೋಜನಕ್ಕೆ ಒಪ್ಪಿ ಕೊಂಡಿದ್ದಾನೆ. ಅದರಿಂದ ಅವನು ನಿಮ್ಮ ಉದಾರ ಆಹ್ವಾನ ವನ್ನು ಒಪ್ಪಿಕೊಳ್ಳಲು ಆಗುತ್ತಿಲ್ಲ. ಮುಂದೊಂದು ದಿನ ಹೆಚ್ಚಿನ ಅದೃಷ್ಟ ಬರಬಹುದೆಂದು ಆಶಿಸುತ್ತೇನೆ ಮತ್ತು ನೀವು ತೋರಿದ ಸ್ನೇಹಭಾವಕ್ಕೆ ವಂದನೆಗಳನ್ನು ಸಲ್ಲಿಸುತ್ತೇನೆ.[೨೫]

ಜೂನ್ ೩ರಂದು ವೈಸ್‌ರಾಯ್ ಒಡನೆ ನಡೆದ ಸಭೆಯಲ್ಲಿ ಸಿ.ಪಿ.ಯವರು, ಅಧಿಕಾರದ ಹಸ್ತಾಂತರಕ್ಕೆ ಮುಂಚೆಯೆ ಸಾರ್ವಭೌಮತ್ವವನ್ನು ಮುಕ್ತಾಯ ಗೊಳಿಸಬೇಕು ಅಥವಾ ಸಡಿಲಗೊಳಿಸಬೇಕು. ಅದರಿಂದ ಎರಡು ಡೊಮಿನಿಯನ್

ಗಳ ಜೊತೆ ರಾಜ್ಯಗಳು ಸಮಾನತೆಯ ಮಟ್ಟದಲ್ಲಿ ಚರ್ಚೆ ನಡೆಸಬಹುದು – ಎಂದು ಕೋರಿದರು. (ಅದಕ್ಕೆ ಮುಂಚೆ, ಅಧಿಕಾರ ಹಸ್ತಾಂತರದ ದಿನ ಸಾರ್ವ ಭೌಮತ್ವವು ಮುಕ್ತಾಯವಾಗುವುದು – ಎಂದು ವೈಸ್‌ರಾಯ್ ಪ್ರಕಟಿಸಿದ್ದರು) ಸಿ.ಪಿ.ಯವರ ಕೋರಿಕೆಗೆ, ವೈಸ್‌ರಾಯ್‌ರವರು ಪರಿಶೀಲಿಸುವುದಾಗಿ ಉತ್ತರಿಸಿದರು. ಅದರಿಂದ ಸಿ.ಪಿ.ಯವರು ಉಬ್ಬಿಹೋದರು.

ಟ್ರಾವಂಕೂರು ರಾಜ್ಯವು ಬ್ರಿಟನ್ ಸಾರ್ವಭೌಮತ್ವ ಮುಕ್ತಾಯವಾದ ನಂತರ ಒಂದು ಸ್ವತಂತ್ರ ಸ್ವಾಯತ್ತತೆಯ ರಾಜ್ಯವಾಗಿ ನಿರ್ವಹಿಸಲು ತೀರ್ಮಾನಿಸಿದೆ ಯೆಂದು ಸರ್ ಸಿ.ಪಿ.ಯವರು ಜೂನ್ ೧೧ರಂದು ಪ್ರಕಟಿಸಿದರು.

ಸಿ.ಪಿ.ಯವರು 'ಜನರು ಸಾವು ಬದುಕಿನ ಈ ವಿಷಯದಲ್ಲಿ ಮಹಾರಾಜರ ಬೆಂಬಲಕ್ಕೆ ಭದ್ರವಾಗಿ ನಿಲ್ಲಬೇಕು,' ಎಂದು ಕರೆ ಕೊಟ್ಟರು. ಅವರು ಟ್ರಾವಂಕೂರಿನ ಶ್ರೇಷ್ಠ ಸಂಪ್ರದಾಯಗಳು, ಪರಂಪರೆ, ಇತಿಹಾಸ ಮತ್ತು ದೇಶಭಕ್ತಿಯ ಕಡೆಗೆ ಜನರ ಗಮನವನ್ನು ಸೆಳೆದು, "ನೀವು ನಿಮ್ಮ ಸ್ವಾತಂತ್ರ್ಯ ಮತ್ತು ಸ್ವಾಯತ್ತತೆಯನ್ನು ಪ್ರೀತಿಸಬೇಕೋ ಅಥವಾ ಭಾರತ ಡೊಮಿನಿಯನ್‌ನಲ್ಲಿ ಬೆರೆತು ಹೋಗಿ ಅದರ ಒಂದು ಭಾಗವಾಗಿರಬೇಕೋ ಅಥವಾ ಒಂದು ವಸಾಹತು ಅಥವಾ ಅಧೀನ ಭಾಗವಾಗಿರಬೇಕೋ ಅನ್ನುವುದನ್ನು ಯೋಚಿಸಿ ನಿರ್ಧರಿಸಿ," ಎಂದರು. 'ಟ್ರಾವಂಕೂರು ದಕ್ಷಿಣ ಭಾರತದ ರಕ್ಷಕ ಆಗಬೇಕಾಗಿದೆ' ಎಂದರು. 'ಟ್ರಾವಂಕೂರಿನವರಿಗಾಗಿ ಟ್ರಾವಂಕೂರು' ಅನ್ನುವ ಘೋಷಣೆಯನ್ನು ಮೊಳಗಿದರು. ಅವರು ತಮ್ಮ ವಾಗ್ಝರಿಯನ್ನು ಮುಂದುವರೆಸಿ," ಮಹಾರಾಜರು ನಿರಂಕುಶ ಪ್ರಭುವಿನಂತೆ ಆಡಿಲ್ಲ, ಆಡುವುದೂ ಇಲ್ಲ..... ನಾನು ಮಹಾರಾಜರ ಪರವಾಗಿ ಅವರ ಅನುಮತಿ ಪಡೆದು, ಅವರು ಪ್ರತಿನಿಧಿಸುವ ವಂಶಾವಳಿಯ ಪರವಾಗಿ ಮನವಿ ಮಾಡುತ್ತಿದ್ದೇನೆ..... ಟ್ರಾವಂಕೂರು ಸಂವಿಧಾನ ರಚನಾ ಸಭೆಯನ್ನು ಪ್ರವೇಶಿಸುವ ಪ್ರಶ್ನೆಯೇ ಇಲ್ಲ. ಟ್ರಾವಂಕೂರು ಭಾರತ ಒಕ್ಕೂಟವನ್ನು ಸೇರುವ ಪ್ರಶ್ನೆಯೇ ಇಲ್ಲ. ಅದು ಆಗಸ್ಟ್ ೧೫ರಿಂದ ಸ್ವತಂತ್ರ ರಾಜ್ಯವಾಗಿ ಕೆಲಸ ಮಾಡುತ್ತದೆ. .....೧೫ನೆ ತಾರಿಖಿನಿಂದ ಟ್ರಾವಂಕೂರು ಒಂದು ಅಂತರರಾಷ್ಟ್ರೀಯ ಘಟಕವಾಗುತ್ತದೆ. ತಾತ್ಕಾಲಿಕವಾಗಿ ಜನ ನಮ್ಮನ್ನು ನೋಡಿ ನಗಬಹುದು, ಹಾಸ್ಯ ಮಾಡಬಹುದು ಆದರೆ ವಿಶ್ವದ ಯಾವುದೇ ರಾಷ್ಟ್ರ ಇರುವ ರೀತಿಯಲ್ಲೇ ನಾವು ಇರುತ್ತೇವೆ. ಸ್ವಿಟ್ಸರ್‌ಲ್ಯಾಂಡ್, ನಾರ್ವೆ, ಸ್ವೀಡನ್, ಡೆನ್ಮಾರ್ಕ್‌ಗಳು, ಅವುಗಳ ವಿಸ್ತೀರ್ಣ ಚಿಕ್ಕದಾದರೂ ಅವುಗಳ ಜನಸಂಖ್ಯೆ ಕಡಿಮೆ ಇದ್ದರೂ, ಅವುಗಳ ಆದಾಯ ಅಲ್ಪವಾದರೂ ಸ್ವತಂತ್ರವಾಗಿರುವಾಗ, ಟ್ರಾವಂಕೂರು ಏಕೆ ಸ್ವತಂತ್ರವಾಗಿ ಇರಬಾರದು?'--- ಹೀಗೆ ಮುಂದುವರೆಯಿತು ಅವರ ಮಾತಿನ, ವಾದದ ಓಘ.[೨೬]

ಮಾರನೆ ದಿನ ಹೈದರಾಬಾದ್‌ನ ನಿಜಾಮನ ಪರವಾಗಿ ಅದೇ ತರಹದ ಪ್ರಕಟಣೆ ಮಾಡಲ್ಪಟ್ಟಿತು. ಇತರ ರಾಜ್ಯಗಳು ಇವರನ್ನು ಅನುಸರಿಸಿ ಭಾರತವು ಛಿದ್ರ ಛಿದ್ರವಾಗಿ ಒಡೆಯಲ್ಪಡುವುದೇನೋ ಅನ್ನುವ ಭಯ ಮತ್ತು ಆತಂಕ ಎಲ್ಲರಲ್ಲೂ ಉದ್ಭವಿಸಿತು. ಜೂನ್ ೧೪ರಂದು ದೆಹಲಿಯಲ್ಲಿ ಸೇರಿದ್ದ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸಭೆಯಲ್ಲಿ ಉಗ್ರವಾದ ಭಾಷಣಗಳು ಮಾಡಲ್ಪಟ್ಟವು. ಆ ಸಭೆಯು ಸಾರ್ವಭೌಮತ್ವದ ಮುಕ್ತಾಯವು ರಾಜ್ಯಗಳ ಸ್ವಾತಂತ್ರ್ಯಕ್ಕೆ ದಾರಿ ಮಾಡುವುದಿಲ್ಲ ಎಂದು ಹೇಳಿ, ಸ್ವಾತಂತ್ರ್ಯವನ್ನು ಘೋಷಿಸಿ ಭಾರತ ಒಕ್ಕೂಟದಿಂದ ಹೊರಗೆ ಪ್ರತ್ಯೇಕವಾಗಿ ಇರುವ ಹಕ್ಕು ಯಾವ ರಾಜ್ಯಕ್ಕೂ ಇಲ್ಲ – ಎಂದಿತು.

ಆದರೆ ಜಿನ್ನಾ ಕಾಂಗ್ರೆಸ್ಸಿನ ಈ ಅಭಿಪ್ರಾಯವನ್ನು ವಿರೋಧಿಸಿದನು. ಅವನು ಸಾರ್ವಭೌಮತ್ವ ಅಳಿದ ತಕ್ಷಣ ರಾಜ್ಯಗಳು ಸ್ವತಂತ್ರ ಮತ್ತು ಅವರಿಗೆ ಇಷ್ಟವಾದ ಮಾರ್ಗ ಅನುಸರಿಸಲು ಅವರಿಗೆ ಸ್ವಾತಂತ್ರ್ಯ ಉಂಟು, ಎಂದನು!

ರಾಜ್ಯಗಳ ಇಲಾಖೆಯು ರಾಜರ ಮತ್ತು ರಾಜ್ಯಗಳ ಪ್ರತಿನಿಧಿಗಳ ಸಭೆಯನ್ನು ಜುಲೈ ೨೫ರಂದು ದೆಹಲಿಯಲ್ಲಿ ನಡೆಸಲು ತೀರ್ಮಾನಿಸಿ ರಾಜರುಗಳಿಗೆ ಆಮಂತ್ರಣವನ್ನು ಕಳುಹಿಸಿತು. ಸರ್ ಸಿ.ಪಿ. ಆಮಂತ್ರಣವನ್ನು ಒಪ್ಪಿಕೊಳ್ಳಲಿಲ್ಲ. ಅವರು, 'ಟ್ರಾವಂಕೂರು ರಾಜ್ಯವು ಭಾರತಕ್ಕೆ ಸೇರಬಾರದು ಎಂದು ತೀರ್ಮಾನಿಸಿರುವುದರಿಂದ ಅದರ ಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸುವುದರಲ್ಲಿ ಅರ್ಥವಿಲ್ಲ,' ಎಂದು ಉತ್ತರಿಸಿದರು. ಅದರಿಂದ ಆಕ್ರೋಶಗೊಂಡ ಟ್ರಾವಂಕೂರು ರಾಜ್ಯ ಕಾಂಗ್ರೆಸ್ ಆಗಸ್ಟ್ ೧ರಿಂದ ಪ್ರತಿಭಟನೆ ನಡೆಸುವುದಾಗಿ ಪ್ರಕಟಿಸಿತು. ಕಾಂಗ್ರೆಸ್ ಪರವಾದ ಪತ್ರಿಕೆಗಳು ಸಿ.ಪಿ.ಯವರನ್ನು ಟೀಕಿಸಿದುವು. ಪತ್ರಿಕೆಗಳಲ್ಲಿ ಸಿ.ಪಿ. ಮತ್ತು ಕಾಂಗ್ರೆಸ್ ನಡುವೆ ವಾಗ್ವಾದ ನಡೆಯಿತು. ಅದು ಆರೋಗ್ಯಕರವಾದ ಬೆಳವಣಿಗೆಯಾಗಿರಲಿಲ್ಲ.[೨೭]

ಅದರಿಂದ ಮೌಂಟ್‌ಬ್ಯಾಟನ್‌ರವರು ಸಿ.ಪಿ.ಯನ್ನು ದೆಹಲಿಗೆ ಆಹ್ವಾನಿಸಿದರು. ಸಿ.ಪಿ. ಬಂದರು. ಜುಲೈ ೨೦ರಂದು ವಿ.ಪಿ. ಮೆನನ್‌ರವರು ಸಿ.ಪಿ. ಜೊತೆ ಮಾತುಕತೆ ನಡೆಸಿ ಟ್ರಾವಂಕೂರು ಭಾರತದೊಡನೆ ಸೇರುವುದರಿಂದ ಅವರಿಗೆ (ಟ್ರಾವಂಕೂರಿಗೆ) ದೊರಕುವ ಲಾಭಗಳನ್ನು ವಿವರಿಸಿದರು. ರಾಜ್ಯಗಳ ಇಲಾಖೆಯು ರಾಜ್ಯಗಳಿಂದ ಕೇಳುತ್ತಿರುವುದು ರಕ್ಷಣೆ, ವಿದೇಶಿ ವ್ಯವಹಾರ ಮತ್ತು ಸಂಪರ್ಕ ವಿಷಯಗಳಲ್ಲಿ ಕಾರ್ಯಾಂಗ ಮತ್ತು ಶಾಸಕಾಂಗದ ಅಧಿಕಾರವನ್ನು ಮಾತ್ರ – ಎನ್ನುವುದನ್ನು ಮೆನನ್ ವಿವರಿಸಿದರು. ಸಿ.ಪಿ.ಯವರು ಸಂವಿಧಾನ ರಚನಾ ಸಭೆಯ ಒಕ್ಕೂಟ ಸಲಹಾ ಸಮಿತಿಯು ತಂದಿರುವ 'ಸುಂಕ ಹಾಗೂ ಆಮದು ಮತ್ತು ರಫ್ತು ತೆರಿಗೆಯನ್ನು ಕೇಂದ್ರಕ್ಕೆ ವರ್ಗಾಯಿಸಬೇಕು' ಅನ್ನುವ ಪ್ರಸ್ತಾವನೆಯನ್ನು

ಪ್ರಸ್ತಾಪಿಸಿ "ಟ್ರಾವಂಕೂರು ಸಮುದ್ರ ತೀರ ಇರುವ ರಾಜ್ಯ. ರಾಜ್ಯದ ಶೇ ೫೦ ಭಾಗ ಆದಾಯ ಈ ಮೂರು ಬಾಬುಗಳಿಂದ ಬರುತ್ತಿದೆ. ಟ್ರಾವಂಕೂರು ಭಾರತಕ್ಕೆ ಸೇರ್ಪಡೆಯಾದರೆ ಈ ಮೂರು ಆದಾಯಗಳು ನಿಂತು ಹೋಗಿ ರಾಜ್ಯ ಕೆಳಮಟ್ಟಕ್ಕೆ ಕುಸಿಯುತ್ತದೆ," ಎಂದು ತಮ್ಮ ಆತಂಕವನ್ನು ವ್ಯಕ್ತ ಪಡಿಸಿದರು. ಮೆನನ್‌ರವರು, "ಈಗಿನ ಸೇರ್ಪಡೆ ಯೋಜನೆಗೂ ಹೊಸ ಸಂವಿಧಾನಕ್ಕೂ ಸಂಬಂಧವಿಲ್ಲ. ನಾವು ಕೇಳುತ್ತಿರುವುದು ಆರ್ಥಿಕ ಅಥವಾ ಬೇರೆ ಯಾವುದೇ ಬಾಧ್ಯತೆ ಇಲ್ಲದ, ೧೯೩೫ರ ಇಂಡಿಯಾ ಸರ್ಕಾರದ ಕಾನೂನಿನ ಆಧಾರದಲ್ಲಿ ಮೂರು ವಿಷಯಗಳಲ್ಲಿ ಸೇರ್ಪಡೆಯನ್ನು ಮಾತ್ರ ಎಂದು ಆಶ್ವಾಸನೆ ನೀಡಿದರು. 'ಈ ವಿಷಯ ನನಗೆ ತಿಳಿದಿರಲಿಲ್ಲ' ಎಂದರು ಸಿ.ಪಿ. ನಂತರ ಮೆನನ್‌ರವರು, "ಆಗಸ್ಟ್ ೧೫ರಂದು ರಾಜ್ಯಗಳು ವಾಸ್ತವವಾಗಿ ಕೇಂದ್ರದಿಂದ ಬಿಡುಗಡೆ ಪಡೆಯುತ್ತವೆ. ಅದರಿಂದ ಅವರಿಗೆ ಕೇಂದ್ರದೊಡನೆ ಅಥವಾ ಪರಸ್ಪರ ಇತರ ರಾಜ್ಯಗಳೊಡನೆ ಯಾವುದೇ ಸಂಪರ್ಕ ಇರುವುದಿಲ್ಲ. ಇದು ಅಪಾಯಕಾರಿಯಾದ ಪರಿಸ್ಥಿತಿ. ಈ ಬದಲಾವಣೆಯ ಕಾಲವನ್ನು ಸುರಕ್ಷಿತಗೊಳಿಸದೆ ಹೋದರೆ, ಸಂಪೂರ್ಣ ಅರಾಜಕತೆ ಉಂಟಾಗ ಬಹುದು. ಪರಿವರ್ತನೆಗಳು ಯಾವಾಗಲೂ ಅಪಾಯಕಾರಿ. ವಿಶೇಷವಾಗಿ ಭಾರತ ದಲ್ಲಿ ಸಮಾಜ ಘಾತಕ ಶಕ್ತಿಗಳು ತಲೆ ಎತ್ತುವ ಅಪಾಯವಿದೆ. ಆತಂಕವನ್ನು ಉಂಟುಮಾಡುವ ಒಂದು ಅಂಶವೆಂದರೆ ಕಮ್ಯುನಿಸ್ಟರ ಕಾಟ. ಅದರ ವಿರುದ್ಧ ಏಕಮಾತ್ರ ಪರಿಹಾರವೆಂದರೆ ಆ ಸಿದ್ಧಾಂತವನ್ನು ಹತ್ತಿಕ್ಕುವಂತಹ ಸಮಗ್ರವಾದ ಆರ್ಥಿಕ ಮತ್ತು ರಾಜಕೀಯ ವ್ಯವಸ್ಥೆಯನ್ನು ನಿರ್ಮಿಸುವುದು" ಎಂದು ವಿವರಿಸಿದರು. ತಮ್ಮ ಮಾತನ್ನು ಮುಂದುವರೆಸಿ ಮೆನನ್‌ರವರು, "ನಿಮ್ಮ ವಾಸ್ತವಿಕ ಮನೋಭಾವ ಮತ್ತು ನೀವು ಹಿಂದೆ ಮಾಡಿರುವ ಸಾಧನೆಗಳ ಬಗೆಗೆ ನನಗೆ ಬಹಳ ಗೌರವವಿದೆ. ಭಾರತದ ವಿಷಮ ಸಮಯದಲ್ಲಿ, ಒಂದುಗೂಡಿದ ಭಾರತವನ್ನು ನಿರ್ಮಾಣ ಮಾಡುವ ಶಕ್ತಿ ಇದ್ದರೂ ಸಹ, ಒಕ್ಕೂಟದ ನಿರ್ಮಾಣಕ್ಕೆ ನೀವು ನಿಮ್ಮ ಕೊಡುಗೆಯನ್ನು ಭಾರತದ ವಿಷಮ ಪರಿಸ್ಥಿತಿಯಲ್ಲಿ ನೀಡಲಿಲ್ಲ – ಎಂದು ಹೇಳುವಂತಾಗ ಬಾರದು. ಅವಸರದ ಯಾವ ಕ್ರಮವನ್ನು ತೆಗೆದುಕೊಳ್ಳಬೇಡಿ ಎಂದು ನಾನು ನಿಮ್ಮನ್ನು ಕೋರುತ್ತೇನೆ. ಕಾಂಗ್ರೆಸ್ಸಿನ ವಿರುದ್ಧ ನಿಮಗೆ ಏನೇ ಅಸಮಾಧಾನವಿದ್ದರೂ, ಕಾಂಗ್ರೆಸ್ ನಾಯಕರ ಮಾತುಗಳ ಫಲವಾಗಿ, ಟ್ರಾವಂಕೂರ್ ರಾಜ್ಯದ ಮತ್ತು ಇಡೀ ಭಾರತದ ಹಿತಕ್ಕೆ ಯಾವುದು ಒಳ್ಳೆಯದು ಎಂದು ನೀವು ಭಾವಿಸುತ್ತೀರೋ ಅದರಿಂದ ನೀವು ವಿಮುಖರಾಗಬಾರದು" ಎಂದರು. ಸಿ.ಪಿ. ಯವರು, "ನಿಮ್ಮ ಮಾತುಗಳಿಗೆ ನಾನು ಈಗಲೇ ಉತ್ತರ ಕೊಡಲಾರೆ. ಆದರೆ ನನ್ನ ಮತ್ತು ನನ್ನ ರಾಜ್ಯದ ಪ್ರಾಮಾಣಿಕ ಹಿತೈಷಿಯಾದ ನಿಮ್ಮ ಮಾತುಗಳನ್ನು ತೀವ್ರವಾಗಿ

ಪರಿಗಣಿಸುತ್ತೇನೆ," ಎಂದರು.

ಸಿ.ಪಿ.ಯವರು ಮೌಂಟ್‌ಬ್ಯಾಟನ್‌ರವರನ್ನು ಜುಲೈ ೨೧ರಂದು ಭೇಟಿ ಮಾಡಿದರು. ಮೌಂಟ್‌ಬ್ಯಾಟನ್‌ರವರು ಅವರಿಗೆ ಇಂಡಿಯಾ ಡೊಮಿನಿಯನ್ ಅನ್ನು ಸೇರಬೇಕೆಂದೂ ಮಿಕ್ಕೆಲ್ಲ ವಿಷಯಗಳನ್ನು ಆನಂತರ ಚರ್ಚೆ ಮತ್ತು ಒಪ್ಪಂದಗಳ ಮೂಲಕ ಸರಿಪಡಿಸಿಕೊಳ್ಳಬಹುದೆಂದು ಸಲಹೆ ನೀಡಿದರು. ಅವರು ಮುಂದುವರೆದು, "ತನ್ನ ಪಾತ್ರವನ್ನು ನಿರ್ವಹಿಸುವುದಕ್ಕೆ ಟ್ರಾವಂಕೂರಿಗೆ ಈಗ ಸುವರ್ಣಾವಕಾಶ ದೊರೆತಿದೆ. ಟ್ರಾವಂಕೂರಿನ ಸೇರ್ಪಡೆಯು ಶ್ರೇಷ್ಠ ಮುತ್ಸದ್ದೀತನದ ಕ್ರಿಯೆ ಎಂದು ಇಡೀ ಭಾರತದಲ್ಲಿ ಹೊಗಳಲ್ಪಡುತ್ತದೆ. ರಾಜ್ಯಕ್ಕೆ ಯಾವ ಆರ್ಥಿಕ ನಷ್ಟವೂ ಇಲ್ಲ. ಅದಕ್ಕೆ ಬದಲಾಗಿ, ಅದರ ಪ್ರತಿನಿಧಿಗಳು ಡೊಮಿನಿಯನ್ ಶಾಸನ ಸಭೆಯಲ್ಲಿ ಭಾಗವಹಿಸಿ ಭಾರತದ ಮುಂದಿನ ಗುರಿಯನ್ನು ರೂಪಿಸುವುದರಲ್ಲಿ ಪ್ರಮುಖವಾದ ಪಾತ್ರವನ್ನು ವಹಿಸಬಹುದು," ಎಂದರು. ಸಿ.ಪಿ.ಯವರು, "ನಾನು ಸೇರ್ಪಡೆಗೆ ಒಪ್ಪುವುದಿಲ್ಲ, ಆದರೆ ಮೂರು ವಿಷಯಗಳ ಬಗೆಗೆ ಯಾವುದಾದರೂ ಒಪ್ಪಂದಕ್ಕೆ ಬರಬಹುದು," ಎಂದು ಉತ್ತರಿಸಿದರು.

ಮುಂದೆ ನಡೆದ ಮತ್ತೊಂದು ಭೇಟಿಯಲ್ಲಿ ವಿ.ಪಿ. ಮೆನನ್‌ರವರು ಮೂರು ವಿಷಯಗಳಲ್ಲಿ ಒಪ್ಪಂದಕ್ಕೆ ಬಂದರೆ ಇತರ ಅರಸರೂ ಅದನ್ನೇ ಕೇಳಬಹುದು. ಅದರಿಂದ ಸೇರ್ಪಡೆಯ ಒಪ್ಪಂದಕ್ಕೇ ಸಹಿ ಮಾಡಬೇಕು ಅನ್ನುವುದನ್ನು ಸಿ.ಪಿ. ಯವರಿಗೆ ಸ್ಪಷ್ಟಪಡಿಸಿದರು. ಆದರೂ ಸಿ.ಪಿ. ತಮ್ಮ ಹಠವನ್ನು ಬಿಡಲಿಲ್ಲ. ಮೌಂಟ್ ಬ್ಯಾಟನ್‌ರವರೊಡನೆ ಮತ್ತೊಂದು ಭೇಟಿ ಆದ ನಂತರ ಅವರು ತಗ್ಗಿದರು. ಸೇರ್ಪಡೆ ಒಪ್ಪಂದಕ್ಕೆ ಸಹಿ ಮಾಡುವುದರ ಅನಿವಾರ್ಯತೆಯನ್ನು ಒಪ್ಪಿ ದಾಖಲೆಗಳ ಕರಡು ಪ್ರತಿಯನ್ನು ತೆಗೆದುಕೊಂಡು ಹೋದರು. ಜುಲೈ ೨೫ರ ನಂತರ ಬರುವುದಾಗಿ ಹೇಳಿದರು.

ಈ ಮಧ್ಯೆ ಪಟೇಲರು ಮಹಾರಾಜರನ್ನು ದೂರವಾಣಿ ಮೂಲಕ ನೇರವಾಗಿ ಸಂಪರ್ಕಿಸಿದರು. ಯುವ ಮಹಾರಾಜನಿಗೆ ಸಿ.ಪಿ.ಯವರನ್ನು ಮೀರುವ ಶಕ್ತಿ ಇರಲಿಲ್ಲ. ಪಟೇಲರು ಮಹಾರಾಜನನ್ನು ಮೃದುವಾದ ಆದರೆ ದೃಢವಾದ ಸ್ಪಷ್ಟವಾದ ಧ್ವನಿಯಲ್ಲಿ ಕೇಳಿದರು, "ನಿಮಗೆ ಯಾರು ಅಡ್ಡ ಬರುತ್ತಿದ್ದಾರೆ?"

ಅಷ್ಟರಲ್ಲಿ ಒಂದು ದುರ್ಘಟನೆ ನಡೆಯಿತು. ಜುಲೈ ೨೫ರಂದು ಸಿ.ಪಿ.ಯವರು ಒಂದು ಸಾಂಸ್ಕೃತಿಕ ಸಮಾರಂಭದಲ್ಲಿ ಭಾಗವಹಿಸಿದ್ದಾಗ ರಾಜ್ಯದ ಕಮ್ಯುನಿಸ್ಟರು ಅವರ ಮೇಲೆ ಆಕ್ರಮಣ ಮಾಡಿದರು. ಸಿ.ಪಿ.ಯವರು ಗಾಯಗೊಂಡರೂ ಬದುಕಿ ಉಳಿದರು. ಘಟನೆಯಿಂದ ಅವರು ನಡುಗಿ ಹೋದರು ಮತ್ತು ತಮ್ಮ ದಿವಾನಗಿರಿಗೆ

ರಾಜಿನಾಮೆ ಇತ್ತರು.

ಮಹಾರಾಜರು ದೆಹಲಿಗೆ ಟೆಲಿಗ್ರಾಂ ಕಳುಹಿಸಿ ಭಾರತ ಡೊಮಿನಿಯನ್ ಸೇರಲು ಒಪ್ಪಿರುವುದಾಗಿ ತಿಳಿಸಿದರು.[೨೮]

ದಿವಾನಗಿರಿ ಬಿಟ್ಟ ಮೇಲೆ ಸಿ.ಪಿ.ಯವರು ನವೆಂಬರ್ ೧೧ರಂದು ಉದಕ ಮಂಡಲದಿಂದ (ಊಟಿ) ಸರ್ದಾರರಿಗೆ ಒಂದು ಪತ್ರ ಬರೆದರು. ಅವರು ತಮ್ಮ ಪತ್ರದಲ್ಲಿ, "ಇಂದಿನ ವಿಷಮ ಪರಿಸ್ಥಿತಿಯಲ್ಲಿ ಮತ್ತು ಮಹತ್ವಪೂರ್ಣ ನಿರ್ಧಾರಗಳ ಕಾಲದಲ್ಲಿ ನೀವು ತೆಗೆದುಕೊಂಡ ಮತ್ತು ಪಾಲಿಸಿಕೊಂಡು ಬಂದ ಮುಚ್ಚುಮರೆಯಿಲ್ಲದ ಮತ್ತು ಸ್ಪಷ್ಟ ನೀತಿಯ ಬಗೆಗೆ ನನ್ನ ಪ್ರಾಮಾಣಿಕ ಅಭಿನಂದನೆ ಗಳನ್ನು ಈ ಮೂಲಕ ಸಲ್ಲಿಸುತ್ತೇನೆ. ನಿಮ್ಮನ್ನು ನಾನು ಅನೇಕ ಸಂದರ್ಭಗಳಲ್ಲಿ ವಿರೋಧಿಸಿದ್ದೇನೆ. ಆದರೆ ಈ ಸನ್ನಿವೇಶದಲ್ಲಿ ನೀವು ಮತ್ತು ಜವಹರಲಾಲ್ ತೋರಿದ ನಾಯಕತ್ವದ ದೋಷರಹಿತ ಪ್ರತಿಭೆಗಳಿಗೆ ನನ್ನ ಗೌರವವನ್ನು ಅರ್ಪಿಸದೆ ಇರಲಾರೆ" ಎಂದು ಬರೆದರು. ಪಟೇಲರು ತಮ್ಮ ಉದಾರ ಸ್ವಭಾವಕ್ಕೆ ಅನುಗುಣವಾಗಿ ಹೀಗೆ ಉತ್ತರಿಸಿದರು: "ಹಿಂದೆ ನಾವು ಪರಸ್ಪರ ಎಷ್ಟು ವಿರೋಧಿಸಿದ್ದೆವು ಎನ್ನುವುದು ನಮ್ಮಿಬ್ಬರಿಗೂ ಗೊತ್ತು. ಆದರೆ, ಅಷ್ಟೊಂದು ಭಿನ್ನತೆ ಇದ್ದರೂ, ನಿಮ್ಮ ನಿಸ್ಸಂದೇಹ ಪ್ರತಿಭೆಗಳನ್ನು ಕಾರ್ಯ ಚಟುವಟಿಕೆಗಳ ವಿಶಾಲ ಕ್ಷೇತ್ರದಲ್ಲಿ ಉಪಯೋಗಿಸಿಕೊಳ್ಳಲು ಆಗಲಿಲ್ಲವಲ್ಲ ಎಂದು ನಾನು ಯಾವಾಗಲೂ ವಿಷಾದಿಸುತ್ತೇನೆ."

ಹಳೆಯದನ್ನು ಮರೆತು ಸಿ.ಪಿ.ಯವರ ಪ್ರಭಾವ ಮತ್ತು ಶಕ್ತಿಯನ್ನು ಉಪಯೋಗಿಸಿಕೊಳ್ಳಬೇಕೆಂದು ಯೋಚಿಸಿ ಸರ್ದಾರರು, ಅವರನ್ನು ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಭಾರತದ ರಾಯಭಾರಿಯನ್ನಾಗಿ ನಿಯಮಿಸಬಹುದೆಂದು ನೆಹರುಗೆ ಸಲಹೆ ನೀಡಿದರು. ಆದರೆ ನೆಹರು ಹಳೆಯದನ್ನು ಮರೆಯಲೂ ಇಲ್ಲ, ಅದನ್ನು ಹಿಂದೆ ಬಿಟ್ಟು ಮೇಲೇರಲೂ ಇಲ್ಲ. ಸರ್ದಾರರ ಸಲಹೆಯನ್ನು ಒಪ್ಪಲಿಲ್ಲ.[೨೯]

ಆ) ಭೋಪಾಲ್:

ಭೋಪಾಲ್ ಮಧ್ಯ ಭಾರತದ ಒಂದು ಬಹು ಸಂಖ್ಯಾತ ಹಿಂದೂಗಳಿರುವ ರಾಜ್ಯ. ಅದರ ರಾಜ ನವಾಬ್ ಹಮೀದುಲ್ಲಾ ಖಾನ್ ಒಬ್ಬ ಮುಸ್ಲಿಂ. ಆ ರಾಜ್ಯ ವಿಸ್ತಾರದಲ್ಲಾಗಲಿ, ಜನಸಂಖ್ಯೆಯಲ್ಲಾಗಲಿ ಅಥವಾ ಆದಾಯದಲ್ಲಾಗಲಿ ದೊಡ್ಡದಾಗಿರಲಿಲ್ಲ. ಆದರೂ ಅದು ಅನೇಕ ದೊಡ್ಡ ರಾಜ್ಯಗಳಿಗಿಂತಲೂ ಹೆಚ್ಚಿನ ಸ್ಥಾನವನ್ನು ಪಡೆದಿತ್ತು ಮತ್ತು ಪ್ರಭಾವವನ್ನು ಬೀರುತ್ತಿತ್ತು. ಅದಕ್ಕೆ ಕಾರಣ ಅದರ ನವಾಬ ಹಮೀದುಲ್ಲಾ ಖಾನ್. ಅವನು ಶ್ರೇಷ್ಠ ನವಾಬನಾಗಿರಲಿಲ್ಲ, ಆದರೆ

ಕುಟಿಲ ತಂತ್ರದ, ಕುಯುಕ್ತಿಯ, ಮೋಸಗಾರಿಕೆಯ, ಹಿಂದೂ ದ್ವೇಷದ, ಚುರುಕುತನದ ಮತ್ತು ದುರಾಸೆಯ ವ್ಯಕ್ತಿಯಾಗಿದ್ದನು. ಅದರಿಂದ ಅವನು ಪಟೇಲರಿಗೆ ಭಾರಿ ತಲೆ ನೋವಾಗಿದ್ದನು.

ಅವನಿಗೆ ಎರಡು ಗುರಿಗಳಿದ್ದುವು ಮತ್ತು ಇಬ್ಬರ ಕೈಗೊಂಬೆ ಅಥವಾ ಹಿಂಬಾಲಕ ಆಗಿದ್ದನು. ಬ್ರಿಟಿಷ್ ಸರ್ಕಾರದ ರಾಜಕೀಯ ಇಲಾಖೆಯ ದುಷ್ಟ ಸಲಹೆಗಾರ ಸರ್ ಕೊನ್ರಾಡ್ ಕೋರ್‌ಫೀಲ್ಡ್ ಮತ್ತು ಮುಸ್ಲಿಂ ಲೀಗ್‌ನ ಅಧ್ಯಕ್ಷ ಮಹಮದಾಲಿ ಜಿನ್ನಾನ ಪರವಾಗಿ ಕೆಲಸ ಮಾಡುತ್ತಿದ್ದನು. ಇಬ್ಬರ ಬೆಂಬಲವೂ ಅವನಿಗಿತ್ತು. ಕೋರ್‌ಫೀಲ್ಡ್‌ನ ಸೂಚನೆಯಂತೆ ರಾಜರುಗಳನ್ನು ಒಟ್ಟುಗೂಡಿಸಿ ಮೂರನೆ ಶಕ್ತಿಯನ್ನು ರಚಿಸುವುದು ಅವನ ಒಂದು ಗುರಿ. ಜಿನ್ನಾನ ಅಪೇಕ್ಷೆಯಂತೆ, ಹಿಂದೂ ರಾಜ್ಯಗಳನ್ನು ಸಧ್ಯಕ್ಕೆ ಭಾರತದಿಂದ ಹೊರಗಿಟ್ಟು ಮುಂದೆ ಪಾಕಿಸ್ತಾನದಲ್ಲಿ ವಿಲೀನಗೊಳಿಸುವುದು ಅವನ ಮತ್ತೊಂದು ಗುರಿ.[೩೦] ಅದಕ್ಕೆ ಬೇಕಾದ ಶಕುನಿ ಬುದ್ಧಿ ಅವನಲ್ಲಿ ಬೇಕಾದಷ್ಟಿತ್ತು. ಆದರೆ ಪಟೇಲರ ಮುಂದೆ ಆತನ ಆಟ ನಡೆಯಲಿಲ್ಲ. ಕೊನೆಯಲ್ಲಿ ಅವಮಾನದ ಮಣ್ಣು ಮುಕ್ಕಬೇಕಾಯಿತು. ಅದು ಸಾಧಿತವಾಗುವವರೆಗೆ ಪಟೇಲರು ಆತಂಕ ಪಡಬೇಕಾಯಿತು.

ಭೋಪಾಲದ ನವಾಬನು ವೇಗವಾಗಿ ಆದರೆ ರಹಸ್ಯವಾಗಿ ರಾಜ್ಯದಿಂದ ರಾಜ್ಯಕ್ಕೆ ಚಲಿಸಿ ಭಾರತ ಒಕ್ಕೂಟವನ್ನು ನಿರ್ಮಿಸುವ ಪಟೇಲರ ಕನಸನ್ನು ಭಗ್ನ ಮಾಡುವ ಕಾರ್ಯದಲ್ಲಿ ತನ್ನೊಡನೆ ಕೈ ಜೋಡಿಸುವಂತೆ ರಾಜರುಗಳನ್ನು ಪ್ರೇರೇಪಿಸಲು ಆರಂಭಿಸಿದನು. ಅವನಿಗೆ ರಾಜಕೀಯ ಇಲಾಖೆಯ ಮತ್ತು ಅದರ ಮುಖ್ಯಸ್ಥ ಕೋರ್‌ಫೀಲ್ಡ್‌ನ ಪೂರ್ಣ ಬೆಂಬಲವಿತ್ತು. ಅದರ ಜೊತೆಗೆ ಜಿನ್ನಾನ ಪೂರ್ಣ ಸಹಕಾರ ಮತ್ತು ಮಾರ್ಗದರ್ಶನವಿತ್ತು. ರಾಜ್ಯಗಳಲ್ಲಿದ್ದ ಬ್ರಿಟಿಷ್ ರೆಸಿಡೆಂಟರು ಮತ್ತು ಏಜೆಂಟರ ಸಹಾಯವೂ ಸಹ ಅವನಿಗಿತ್ತು. ರೆಸಿಡೆಂಟರ ಮತ್ತು ಏಜೆಂಟರ ಮೂಲಕ ಸಣ್ಣ ಪುಟ್ಟ ಮತ್ತು ಮಧ್ಯಮ ವರ್ಗದ ರಾಜರುಗಳ ಮೇಲೆ ಪ್ರಭಾವ ಬೀರುವುದು ನವಾಬನಿಗೆ ಸುಲಭವಾಗಿತ್ತು. ಹೆದರುವ ಬೆದರುವ ಈ ರಾಜರುಗಳನ್ನು ರೊಪ್ಪದಲ್ಲಿ ಕುರಿಗಳನ್ನು ಕೂಡುವಂತೆ, ಕೂಡಬಹುದು ಅನ್ನುವ ಭರವಸೆಯು ಅವನಿಗಿತ್ತು.[೩೧] ಭೂಪಾಲದ ನವಾಬನಿಗೆ ಇನ್ನೂ ಒಂದು ಗುರಿ ಅಥವಾ ಆಸೆ ಇತ್ತು: ಭಾರತದಲ್ಲಿ ತನ್ನ ಗುರಿಯನ್ನು ಸಾಧಿಸಿದ ಮೇಲೆ ಪಾಕಿಸ್ತಾನಕ್ಕೆ ಹೋಗಿ ನೆಲೆಸಿ ಅಲ್ಲಿಯ ರಾಜಕಾರಣದಲ್ಲಿ ಭಾಗಿಯಾಗುವ, ಜಿನ್ನಾ ನಂತರ ಪಾಕಿಸ್ತಾನದ ಗೌರ್ನರ್ ಜೆನೆರಲ್ ಆಗುವ ಕನಸನ್ನೂ ಅವನು ಕಾಣುತ್ತಿದ್ದನು.[೩೨]

ಭೋಪಾಲದ ನವಾಬನಿಗೆ ಮತ್ತೊಂದು ಅನುಕೂಲವಿತ್ತು. ಅವನು ಚೇಂಬರ್ ಆಫ್ ಪ್ರಿನ್ಸ್‌ನ ಚಾನ್ಸಲರ್ ಆಗಿದ್ದನು. (ಚೇಂಬರ್ ಆಫ್ ಪ್ರಿನ್ಸ್ ಎನ್ನುವುದು ದೇಶೀಯ ರಾಜರುಗಳ ಸಂಘ. ಚಾನ್ಸಲರ್ ಅಂದರೆ ಅದರ ಅಧ್ಯಕ್ಷ.) ಅದರ ಕಾರ್ಯಾಲಯದಲ್ಲಿ ಪಾಕಿಸ್ತಾನದ ಪರವಾದ ಮುಸ್ಲಿಮರನ್ನೇ ತುಂಬಿದ್ದನು. ಸಂವಿಧಾನ ರಚನಾ ಸಭೆಯನ್ನು ನಿಗದಿಯಾದ ದಿನದ ಒಳಗೆ ಸೇರಬೇಕೆಂದು ರಾಜ್ಯಗಳ ನೆಗೋಷಿಯೇಟಿಂಗ್ ಸಮಿತಿಯ ಸಭೆಗಳಲ್ಲಿ ಒತ್ತಾಯಿಸಿದರೆ ರಕ್ತಪಾತ ಮತ್ತು ಅರಾಜಕತೆ ಉಂಟಾಗುವುದೆಂದು ದುರ್ಬಲ ಮನಸ್ಸಿನ ಮತ್ತು ಅನುಮಾನದಲ್ಲಿದ್ದ ರಾಜರನ್ನು ಅವನು ಹೆದರಿಸುತ್ತಿದ್ದನು.

ಅವನ ಈ ಆಟಗಳಿಗೆ ವಿರುದ್ಧವಾಗಿ ಪಟೇಲರು ಬಿಕನೀರ್ ಮತ್ತು ಪಟಿಯಾಲದ ಮಹಾರಾಜರ ಬೆಂಬಲವನ್ನು ಪಡೆದುಕೊಂಡರು. ಈ ಇಬ್ಬರು ಮಹಾರಾಜರು ಇತರ ರಾಜರನ್ನು ಸಂಪರ್ಕಿಸಿ ಭಾರತ ಡೊಮಿನಿಯನ್‌ನನ್ನು ಸೇರುವಂತೆ ಪ್ರೇರೇಪಿಸಿದರು. ಉದಯಪುರದ ದಿವಾನ ವಿ.ಟಿ. ಕೃಷ್ಣಮಾಚಾರಿ, ಬಿಕನೀರ್‌ನ ದಿವಾನ ಪಣಿಕ್ಕರ್ ಮತ್ತು ಬರೋಡಾದ ದಿವಾನ ಬಿ.ಎಲ್. ಮಿಟ್ಟರ್ ಸಹ ಚೇಂಬರ್‌ನ ಒಳಗೆ ಮತ್ತು ಹೊರಗೆ ನವಾಬನ ಕುತಂತ್ರಕ್ಕೆ ವಿರೋಧವನ್ನು ಬೆಳೆಸಿದರು. ಆದರೂ ಸಹ ನವಾಬನು ತನ್ನ ಆಟವನ್ನು ಬಿಡಲಿಲ್ಲ.[೩೩]

ಭೋಪಾಲದ ನವಾಬನು ಹೂಡಿದ ಮತ್ತೊಂದು ಕುತಂತ್ರವನ್ನು ಕೆ.ಎಂ. ಪಣಿಕ್ಕರ್ ತಮ್ಮ ಆತ್ಮಕಥೆಯಲ್ಲಿ ಬರೆದಿರುವುದನ್ನು ಬಾಲರಾಜ್ ಕೃಷ್ಣರವರು ನಿರೂಪಿಸಿದ್ದಾರೆ: ನವಾಬ ಮತ್ತು ಹೈದರಾಬಾದ್ ನಿಜಾಮ ಒಂದು ರಹಸ್ಯ ಒಪ್ಪಂದ ಮಾಡಿಕೊಂಡಿದ್ದರು. ನವಾಬನು 'ಪ್ರಿನ್ಸ್ ಚೇಂಬರ್' ಅನ್ನು ಉಪಯೋಗಿಸಿಕೊಂಡು ಹಿಂದೂ ರಾಜರುಗಳನ್ನು ಸೆಳೆದು ಭಾರತದಲ್ಲಿ ಹಿಂದೂ ಶಕ್ತಿಯನ್ನು ಕುಗ್ಗಿಸುವುದು. ಆ ಯೋಜನೆಗೆ ಹೈದರಾಬಾದ್ ಹಣ ಒದಗಿಸುವುದು. ಕಾಂಗ್ರೆಸ್ ಬಗೆಗೆ ಹಿಂದೂ ರಾಜರ ಹಗೆತನದ ಪರಿಣಾಮ ದುರ್ಬಲವಾದ ಭಾರತ ಸರ್ಕಾರವು ಮುಸ್ಲಿಂ ಜನಾಭಿಪ್ರಾಯವನ್ನು ವಿರೋಧಿಸಲು ಮತ್ತು ಹೈದರಾಬಾದ್‌ನ ನಿಜಾಮನ ಮೇಲೆ ತನ್ನ ಅಭಿಲಾಷೆಯನ್ನು ಚೆಲಾಯಿಸಲು ಹೆದರುವುದು. ಅದರಿಂದ ಹೈದರಾಬಾದ್ ಸ್ವತಂತ್ರ ರಾಜ್ಯವಾಗಿ ಉಳಿಯುವುದು. ಅದರ ಜೊತೆಯಲ್ಲಿ ಭೋಪಾಲ್ ಸಹ ಸ್ವತಂತ್ರವಾಗಿ ಉಳಿಯಬಹುದು. ಆದರೆ ಬ್ರಿಟಿಷ್ ಸರ್ಕಾರವು ಅಧಿಕಾರದ ಹಸ್ತಾಂತರವನ್ನು ಜೂನ್ ೧೯೪೮ರಿಂದ ೧೯೪೭ರ ಆಗಸ್ಟ್ ೧೫ಕ್ಕೆ ಹಿಂದಕ್ಕೆ ತಂದದ್ದರಿಂದ ನವಾಬನ ಈ ರಹಸ್ಯ ಯೋಜನೆ ಬುಡಮೇಲಾಯಿತು.[೩೪]

ಜೂನ್ ೩ರ ಯೋಜನೆಯು ಪ್ರಕಟವಾದ ತಕ್ಷಣ ನವಾಬನು ಚೇಂಬರ್ ಆಫ್ ಪ್ರಿನ್ಸಸ್‌ನ ಚಾನ್ಸಲರ್ ಪದವಿಗೆ ರಾಜಿನಾಮೆ ಇತ್ತನು. ಸಾರ್ವಭೌಮತ್ವವನ್ನು ಸರ್ಕಾರವು ವಾಪಸ್ಸು ತೆಗೆದುಕೊಂಡ ತಕ್ಷಣ ಭೋಪಾಲ್ ರಾಜ್ಯವು ಸ್ವತಂತ್ರ ಸ್ಥಾನವನ್ನು ವಹಿಸಿಕೊಳ್ಳುವುದರಿಂದ ಚೇಂಬರ್‌ಗೆ ರಾಜಿನಾಮೆ ಕೊಡುತ್ತಿರುವುದಾಗಿ ಅವನು ಪ್ರಕಟಿಸಿದನು. ಭೋಪಾಲ್ ರಾಜ್ಯವು ಎರಡೂ ಡೊಮಿನಿಯನ್‌ಗಳ ಒಡನೆ ನೇರವಾಗಿ ವ್ಯವಹರಿಸುವುದು ಎಂದೂ ಸಹ ಅವನು ಹೇಳಿದನು. ಲಾರ್ಡ್ ಮೌಂಟ್‌ಬ್ಯಾಟನ್‌ರವರು ಸಾರ್ವಭೌಮನ ಪ್ರತಿನಿಧಿಯಾಗಿ ಜುಲೈ ೨೫ರಂದು ಕರೆದಿದ್ದ ರಾಜರುಗಳ ಸಭೆಯಲ್ಲೂ ಅವನು ಭಾಗವಹಿಸಲಿಲ್ಲ.

ರಾಜರುಗಳ ಸೇರ್ಪಡೆ ಒಪ್ಪಂದ ಮತ್ತು ಸ್ಥಾಯಿ ಒಪ್ಪಂದಕ್ಕೆ ಸಹಿ ಹಾಕಲು ನಿಗದಿಯಾಗಿದ್ದ ಅಂತಿಮ ದಿನಾಂಕ ಆಗಸ್ಟ್ ೧೫ ಹತ್ತಿರವಾದಂತೆ ಹೆಚ್ಚು ಹೆಚ್ಚಾಗಿ ರಾಜರುಗಳು ಬಂದು ಸಹಿ ಮಾಡಿದರು. ಆಗಸ್ಟ್ ೧೫ ಹತ್ತಿರವಾದಂತೆ ತನ್ನ ಆಟ ಮುಗಿಯಿತೆಂಬುದು ನವಾಬನಿಗೆ ಅರಿವಾಯಿತು. ಆಗಲೂ ಅವನು ಪೂರ್ಣ ತಗ್ಗಲಿಲ್ಲ. ಅವನು ಮೌಂಟ್‌ಬ್ಯಾಟನ್‌ರವರನ್ನು ಸಂಪರ್ಕಿಸಿ 'ಸೇರ್ಪಡೆಯಾಗದೆ ಸ್ಥಾಯಿ ಒಪ್ಪಂದಕ್ಕೆ ಮಾತ್ರ ಸಹಿ ಹಾಕಬಹುದೆ?' ಎಂದು ವಿಚಾರಿಸಿದನು. 'ಸಾಧ್ಯವಿಲ್ಲ' ಎಂದರು ಮೌಂಟ್‌ಬ್ಯಾಟನ್. ಆಗಸ್ಟ್ ೧೧ರಂದು ಅವನು ಮೌಂಟ್‌ಬ್ಯಾಟನ್ ರವರನ್ನು ಭೇಟಿ ಮಾಡಿ ಒಂದಷ್ಟು ಮರ್ಯಾದೆ ಉಳಿಸಿಕೊಳ್ಳಲು ಯತ್ನಿಸಿ, ತಾನು ಸೇರ್ಪಡೆಯಾದ ವಿಷಯವನ್ನು ಸ್ವಾತಂತ್ರ್ಯ ಬಂದ ಹತ್ತು ದಿನಗಳ ನಂತರ, ಅಂದರೆ ಆಗಸ್ಟ್ ೨೫ರಂದು, ಪ್ರಕಟಿಸಬೇಕೆಂದು ಕೋರಿದನು. ಮೌಂಟ್‌ಬ್ಯಾಟನ್‌ರವರು ತಮ್ಮ ಅಸಹಾಯಕತೆಯನ್ನು ವ್ಯಕ್ತ ಪಡಿಸಿ, ಪಟೇಲರು ಒಪ್ಪಿದರೆ ಆಗಬಹುದು ಎಂದರು. ಪಟೇಲರು, ನವಾಬ್‌ನ ಕೋರಿಕೆಗೆ, ಉದಾರವಾಗಿ ಒಪ್ಪಿದರು. ಅದರಂತೆ ಭೋಪಾಲ್‌ನ ಸೇರ್ಪಡೆಯನ್ನು ಆಗಸ್ಟ್ ೨೫ರಂದು ಪ್ರಕಟಿಸಲಾಯಿತು.[೩೫]

ಆಗಸ್ಟ್ ೨೬ರಂದು ನವಾಬನು ಪಟೇಲರಿಗೆ ಒಂದು ಪತ್ರ ಬರೆದನು. ಪತ್ರ ಹೀಗಿತ್ತು:

> ಹೋರಾಟ ನಡೆಯುತ್ತಿದ್ದಾಗ ನನ್ನ ರಾಜ್ಯದ ಸ್ವಾತಂತ್ರ್ಯ ಮತ್ತು ತಟಸ್ಥತೆಯನ್ನು ಕಾಪಾಡಲು ನನ್ನ ಶಕ್ತಿಯಲ್ಲಿದ್ದ ಎಲ್ಲಾ ಮಾರ್ಗಗಳನ್ನು ಅನುಸರಿಸಿದೆ ಎನ್ನುವುದನ್ನು ನಾನು ಮುಚ್ಚಿಡುವುದಿಲ್ಲ. ನಾನೀಗ ಸೋಲನ್ನು ಒಪ್ಪಿಕೊಂಡಿರುವಾಗ, ನಾನು ಎಷ್ಟು ಬೇರೂರಿದ ವಿರೋಧಿಯಾಗಿದ್ದೆನೊ ಅಷ್ಟೇ ಗಾಢ ಸ್ನೇಹಿತನಾಗಿರ

ಬಲ್ಲೆ ಎನ್ನುವುದನ್ನು ನೀವು ಕಾಣುವಿರಿ ಎಂದು ಆಶಿಸುತ್ತೇನೆ. ನಾನು ಯಾರ ಬಗೆಗೂ ಕೆಟ್ಟ ಭಾವನೆಯನ್ನು ಇಟ್ಟುಕೊಳ್ಳುವುದಿಲ್ಲ. ಏಕೆಂದರೆ ಉದ್ದಕ್ಕೂ ನಿಮ್ಮ ಕಡೆಯಿಂದ ಪರಾಮರ್ಶಿತ ನಡವಳಿಕೆಯನ್ನು, ಸಹಾನುಭೂತಿಯನ್ನು ಹಾಗೂ ಸೌಜನ್ಯವನ್ನು ಪಡೆದಿದ್ದೇನೆ. ನೀವು ಈಗಾಗಲೇ ತೋರಿರುವ ಹಾಗೆ ದೇಶದಲ್ಲಿನ ಘಾತಕ ಶಕ್ತಿಗಳ ವಿರುದ್ಧದ ನಿಮ್ಮ ಈಗಿನ ದೃಢ ನಿಲವನ್ನು ನೀವು ಎಲ್ಲಿಯವರೆಗೆ ನಡೆಸಿಕೊಂಡು ಬರುತ್ತೀರೋ ಮತ್ತು ರಾಜ್ಯಗಳಿಗೆ ಮಿತ್ರನಾಗಿ ಮುಂದುವರೆಯುತ್ತೀರೋ ಅಲ್ಲಿಯವರೆಗೆ ನಾನು ನಿಮ್ಮ ನಮ್ರ ಮತ್ತು ವಿಧೇಯ ಬೆಂಬಲಿಗನಾಗಿರುತ್ತೇನೆ. ಮತೀಯ ಸೌಹಾರ್ದತೆಯನ್ನು ಕಾಪಾಡಲು ನನ್ನ ನೆರವು ಯಾವಾಗಲಾದರು ನಿಮಗೆ ಬೇಕಾದರೆ, ನೀವು ಒಂದು ಮಾತು ಹೇಳಿದರೆ ಸಾಕು, ನಿಮಗೆ ಸಹಾಯ ಮಾಡಲು ನನ್ನ ಶಕ್ತಿಯಲ್ಲಿರುವುದನ್ನೆಲ್ಲ ಮಾಡುತ್ತೇನೆ.

ಪಟೇಲರು ಈ ರೀತಿ ಉತ್ತರಿಸಿದರು:

ಬಿಚ್ಚು ಮನಸ್ಸಿನಿಂದ ಹೇಳುವುದಾದರೆ, ಇಂಡಿಯನ್ ಡೊಮಿನಿಯನ್‌ಗೆ ನಿಮ್ಮ ರಾಜ್ಯದ ಸೇರ್ಪಡೆಯನ್ನು ನಮ್ಮ ಗೆಲುವು ಎಂದಾಗಲಿ ಅಥವಾ ನಿಮ್ಮ ಸೋಲು ಎಂದಾಗಲಿ ನಾನು ಪರಿಗಣಿಸುವುದಿಲ್ಲ. ಅಂತಿಮವಾಗಿ ಜಯಗಳಿಸಿರುವುದು ನೈತಿಕತೆ ಮತ್ತು ಔಚಿತ್ಯತೆ. ಆ ಜಯದಲ್ಲಿ ನೀವು ಮತ್ತು ನಾವು ನಮ್ಮ ನಮ್ಮ ಪಾತ್ರಗಳನ್ನು ನಡೆಸಿದ್ದೇವೆ. ನಮ್ಮ ನಿಲುವಿನ ಭದ್ರತೆಯನ್ನು ಗುರುತಿಸಿದ್ದಕ್ಕೆ ಮತ್ತು ನಿಮ್ಮ ಹಿಂದಿನ ನಿಲವನ್ನು ತೊರೆದ ನಿಮ್ಮ ಧೈರ್ಯ, ಪ್ರಾಮಾಣಿಕತೆ ಮತ್ತು ಸ್ಥೈರ್ಯಕ್ಕೆ ಪೂರ್ಣ ಮೆಚ್ಚುಗೆಗೆ ನೀವು ಅರ್ಹರು. ನಮ್ಮ ಪ್ರಕಾರ, ನಿಮ್ಮ ಹಿಂದಿನ ನಿಲುವು ಭಾರತಕ್ಕೆ ಎಷ್ಟು ವಿರುದ್ಧವಾದುದಾಗಿತ್ತೋ ಅಷ್ಟೇ ನಿಮ್ಮ ರಾಜ್ಯಕ್ಕೂ ವಿರುದ್ಧವಾದುದಾಗಿತ್ತು. ಡೊಮಿನಿಯನ್ ಸರ್ಕಾರದ ನಿಷ್ಠಾವಂತರಲ್ಲದವರ ವಿರುದ್ಧದ ಹೋರಾಟದಲ್ಲಿ, ಜಾತಿ ಧರ್ಮ ಅಥವಾ ಸಿದ್ಧಾಂತದ ಪರಿಗಣನೆಯಿಲ್ಲದೆ ಬೆಂಬಲ ನೀಡುವ ನಿಮ್ಮ ಆಶ್ವಾಸನೆಯನ್ನು ಮತ್ತು ನೀವು ನೀಡಿರುವ ನಿಷ್ಠಾವಂತ ಮತ್ತು ವಿಧೇಯ ಮೈತ್ರಿಯನ್ನು ನಾನು ಸಂತಸದಿಂದ ಗಮನಿಸಿದ್ದೇನೆ.[೩೬]

ಇ) ಇಂದೋರ್:

ಭೋಪಾಲ್ ರಾಜ್ಯದ ತರಹ ಇಂದೋರ್ ಸಹ ಮಧ್ಯ ಭಾರತದ ಒಂದು ರಾಜ್ಯ. ಆದರೆ ಅದು ಹಿಂದೂ ರಾಜನ ಆಳ್ವಿಕೆಯ ಹಿಂದೂ ರಾಜ್ಯ. ಅದರ ಮಹಾರಾಜ ಮತ್ತು ಭೋಪಾಲ್‌ನ ನವಾಬ ಪರಮ ಮಿತ್ರರಾಗಿದ್ದರು. ಭೋಪಾಲ್ ನವಾಬನಂತೆ ಇಂದೋರ್‌ನ ಮಹಾರಾಜನು ಸೇರ್ಪಡೆ ಒಪ್ಪಂದಕ್ಕೆ ಸಹಿ ಹಾಕಲು ಮುಂದೆ ಬರಲಿಲ್ಲ. ಅವನು, ಮೌಂಟ್‌ಬ್ಯಾಟನ್‌ರವರು ಜುಲೈ ೨೫ರಂದು ನಡೆಸಿದ ರಾಜರುಗಳ ಸಭೆಗೂ ಬರಲಿಲ್ಲ, ಅವನಿಗೆ ನೀಡಿದ ಆಹ್ವಾನಕ್ಕೆ ಒಂದು ಉತ್ತರವನ್ನೂ ಬರೆಯಲಿಲ್ಲ.

ಜುಲೈ ೩೦ರಂದು, ಮೌಂಟ್‌ಬ್ಯಾಟನ್‌ರವರ ಸೂಚನೆಯ ಮೇಲೆ, ಬರೋಡದ ಗಾಯಕವಾಡ್ ಸರ್ ಪ್ರತಾಪ್ ಸಿಂಗ್ ನಾಯಕತ್ವದಲ್ಲಿ ಆರು ಮಂದಿ ಮರಾಟ ರಾಜರುಗಳ ಒಂದು ತಂಡ ಇಂದೋರ್ ರಾಜನನ್ನು ಭೇಟಿ ಮಾಡಲು ಇಂದೋರ್‌ಗೆ ಹೋಯಿತು. ಭಾರತವನ್ನು ಸೇರುವುದರ ಔಚಿತ್ಯತೆಯನ್ನು ಇಂದೋರು ಮಹಾರಾಜನಿಗೆ ಮನದಟ್ಟು ಮಾಡುವುದು ಅವರ ಉದ್ದೇಶವಾಗಿತ್ತು. ಆದರೆ ಮಹಾರಾಜನು ಅವರನ್ನು ಮಾತನಾಡಿಸಲೇ ಇಲ್ಲ. ಆರು ಮಂದಿ ರಾಜರು ಅರಮನೆಯ ಹಜಾರದಲ್ಲಿ ಅವನಿಗಾಗಿ ಕಾಯುತ್ತಾ ಕುಳಿತಿದ್ದಾಗ ಹೊರಗಿನಿಂದ ಬಂದ ಮಹಾರಾಜನು ಅವರನ್ನು ಸ್ವಾಗತಿಸಲೂ ಇಲ್ಲ, ಮಾತನಾಡಿಸಲೂ ಇಲ್ಲ. ಸೀದ ಮಹಡಿ ಮೆಟ್ಟಿಲುಗಳನ್ನು ಹತ್ತಿ ಹೊರಟು ಹೋದನು. ಅಹಂಕಾರದಿಂದ ಅಷ್ಟು ಅನಾಗರಿಕವಾಗಿ ನಡೆದುಕೊಂಡನು. ಆದರೆ ಅಷ್ಟರಲ್ಲೇ ಅವನು ಮಣ್ಣು ಮುಕ್ಕಬೇಕಾಯಿತು!

ತನ್ನ ಮಿತ್ರ ಭೋಪಾಲದ ನವಾಬನು ತನಗೆ ಸಾಧ್ಯವಿದ್ದ ಎಲ್ಲಾ ಆಟಗಳನ್ನು ಆಡಿ ಕೊನೆಗೆ ಸೋತು ಸುಣ್ಣವಾಗಿ ಸೇರ್ಪಡೆ ದಾಖಲೆಗಳಿಗೆ ಸಹಿ ಹಾಕಿದಾಗ, ತನಗೆ ಉಳಿಗಾಲವಿಲ್ಲ ಎನ್ನುವುದು ಇಂದೋರಿನ ಮಹಾರಾಜನಿಗೆ ಅರಿವಾಯಿತು. ಅವನು ಆಗಸ್ಟ್ ೪ರಂದು ಭೋಪಾಲದ ನವಾಬನೊಡನೆ ಮೌಂಟ್‌ಬ್ಯಾಟನ್ ರವರನ್ನು ಭೇಟಿ ಮಾಡಿ, ಅವರ ಕೈಲಿ ಛೀಮಾರಿ ಹಾಕಿಸಿಕೊಂಡನು. ಆದಾಗ್ಯೂ ಖಚಿತವಾದ ಆಶ್ವಾಸನೆ ಅಥವಾ ಒಪ್ಪಿಗೆ ನೀಡದೆ ಹಿಂತಿರುಗಿದನು. ಆದರೆ ಎಲ್ಲ ರಾಜರೂ ಭಾರತದೊಡನೆ ಸೇರುತ್ತಿರುವಾಗ ಅವನೂ ಸಹ ಸೇರದೆ ಬೇರೆ ದಾರಿಯೇ ಇರಲಿಲ್ಲ.

ಕೆಲವು ದಿನಗಳ ನಂತರ ಅವನಿಂದ ರಾಜ್ಯಗಳ ಇಲಾಖೆಗೆ ಸಾಧಾರಣ ಅಂಚೆಯಲ್ಲಿ ಒಂದು ಲಕೋಟೆ ಬಂದಿತು. ಅದರಲ್ಲಿ ಅವನು ಸಹಿ ಮಾಡಿದ

ಸೇರ್ಪಡೆ ಒಪ್ಪಂದ ಮತ್ತು ಸ್ಥಾಯಿ ಒಪ್ಪಂದಗಳು ಮಾತ್ರ ಇದ್ದುವು. ಜೊತೆಯಲ್ಲಿ ಯಾವ ಪತ್ರವೂ ಇರಲಿಲ್ಲ. ಆಗಲೂ ಅಸೌಜನ್ಯತೆ![೩೭]

ಈ) ಜೋಧ್‌ಪುರ:

ಜೋಧ್‌ಪುರ, ರಾಜಪುಟಾಣದ ಮೂರು ಪ್ರಮುಖ ರಾಜ್ಯಗಳಲ್ಲಿ ಒಂದು. ಅದರ ಮಹಾರಾಜನು ರಜಪೂತರ ರಾಥೋಡ್ ಬಣದ ಮುಖ್ಯಸ್ಥ. ಆ ರಾಜ್ಯ ೧೪೫೯ರಲ್ಲಿ ಸ್ಥಾಪಿಸಲ್ಪಟ್ಟು ೧೮೧೮ರಲ್ಲಿ ಬ್ರಿಟಿಷರ ಸಹಾಯಕ ಸೈನ್ಯ ಪದ್ಧತಿಗೆ ಒಳಪಟ್ಟಿತ್ತು.

ಹಿಂದೂಗಳು ಬಹು ಸಂಖ್ಯಾತರಾಗಿರುವ ಪ್ರದೇಶ ಹಿಂದೂಸ್ಥಾನಕ್ಕೆ ಮತ್ತು ಮುಸ್ಲಿಮರು ಬಹು ಸಂಖ್ಯಾತರಾಗಿರುವ ಪ್ರದೇಶ ಪಾಕಿಸ್ತಾನಕ್ಕೆ ಅನ್ನುವ ತತ್ವದ ಮೇಲೆ ಪಾಕಿಸ್ತಾನವು ರಚನೆಯಾಗಿದ್ದರೂ, ಜಿನ್ನಾ ಆ ತತ್ವವನ್ನು ಕಡೆಗಣಿಸಿ ಅನೇಕ ಹಿಂದೂ ರಾಜ್ಯಗಳನ್ನು ಪಾಕಿಸ್ತಾನಕ್ಕೆ ಸೆಳೆಯಲು ಪ್ರಯತ್ನಿಸುತ್ತಿದ್ದನು.

ಸಂವಿಧಾನ ರಚನಾ ಸಭೆಗೆ ಪ್ರತಿನಿಧಿಗಳನ್ನು ಕಳುಹಿಸಿದ ಮೊದಲ ರಾಜ್ಯಗಳಲ್ಲಿ ಜೋಧ್‌ಪುರವೂ ಒಂದು. ಅದರ ಪ್ರತಿನಿಧಿಗಳು ೨೮, ಏಪ್ರಿಲ್ ೧೯೪೭ರಂದು ಸಂವಿಧಾನ ರಚನಾ ಸಭೆಯಲ್ಲಿ ಆಸನಗಳನ್ನು ಅಲಂಕರಿಸಿದರು. ಅದರ ಮಹಾರಾಜ ಉದಮ್ ಸಿಂಗ್ ಪಟೇಲರ ಸ್ನೇಹಿತನಾಗಿದ್ದನು ಮತ್ತು ಭಾರತವನ್ನು ಸೇರುವ ವಿಷಯದಲ್ಲಿ ಸ್ಪಷ್ಟವಾಗಿದ್ದನು. ದುರದೃಷ್ಟವಶಾತ್ ಮಹಾರಾಜನು ಜೂನ್ ೧೯೪೭ರಲ್ಲಿ ಇದ್ದಕ್ಕಿದ್ದ ಹಾಗೆ ಗತಿಸಿ ಅವನ ಮಗ ಹನವಂತ ಸಿಂಗ್‌ನು ರಾಜನಾದನು. ಅವನು ತನ್ನ ಪಟ್ಟಾಭಿಷೇಕದ ಸಮಯದಲ್ಲಿ ಜೂನ್ ೨೧ರಂದು ಜೋಧ್‌ಪುರವು ಸಂವಿಧಾನ ಸಭೆಯಲ್ಲಿ ಭಾಗವಹಿಸುವುದನ್ನು ಮುಂದುವರೆಸುವುದೆಂದೂ, ಭಾರತ ಒಕ್ಕೂಟ ರಚನೆಗೆ ಮನಃಪೂರ್ವಕವಾಗಿ ಯತ್ನಿಸುವುದೆಂದೂ ಪ್ರಕಟಿಸಿದನು. ಆದರೆ ಅವನು ದುಡುಕು, ಒರಟು ಮತ್ತು ಹಠಮಾರಿ ಸ್ವಭಾವದ ಬೇಜವಾಬ್ದಾರಿ ಮಾತಿನ ಯುವಕನಾಗಿದ್ದನು. ಜಿನ್ನಾನ ಹದ್ದಿನ ಕಣ್ಣು ಅವನ ಮೇಲೆ ಬಿತ್ತು. ಅವನನ್ನು ಪಾಕಿಸ್ತಾನಕ್ಕೆ ಸೆಳೆಯಲು ಉಪಾಯ ಯೋಚಿಸಿ, ಭೋಪಾಲದ ಸುಲ್ತಾನ ನವಾಬ ಹಮೀದುಲ್ಲಾ ಖಾನ್‌ನನ್ನು ಆ ಕೆಲಸಕ್ಕೆ ನಿಯೋಜಿಸಿದನು. ಕರಾಚಿ – ಜೋಧ್‌ಪುರ – ಭೋಪಾಲ್ ಸಂಘಟನೆಯನ್ನು ರೂಪಿಸುವುದು ಜಿನ್ನಾನ ಗುರಿಯಾಗಿತ್ತು. ಅದನ್ನು ಪಟೇಲರು 'ಭಾರತದ ಎದೆಗೇ ಚೂರಿ' ಎಂದು ವರ್ಣಿಸಿದ್ದಾರೆ.[೩೮]

ಭೋಪಾಲದ ಸುಲ್ತಾನನು ಹನವಂತ್ ಸಿಂಗ್‌ನನ್ನು ಅಭಿನಂದಿಸುವ

ನೆಪದಲ್ಲಿ ಜೋಧ್‌ಪುರಕ್ಕೆ ಹೋಗಿ, ಮಹಾರಾಜನನ್ನು ಸೆಳೆದು ಅವನನ್ನು ದೆಹಲಿಯಲ್ಲಿನ ಜಿನ್ನಾ ಮನೆಗೆ ರಹಸ್ಯವಾಗಿ ಕರೆ ತಂದನು. ಹೀಗೆ ದೆಹಲಿಯಲ್ಲಿ ಕೆಲವು ಭೇಟಿಗಳು ನಡೆದುವು. ಆ ಸಮಯದಲ್ಲಿ ಭೋಪಾಲ್‌ನ ಸುಲ್ತಾನ ಮತ್ತು ಅವನ ಕಾನೂನು ಸಲಹೆಗಾರ ಮಹಮದ್ ಜಫ್ರುಲ್ಲ ಇದ್ದು, ಜಿನ್ನಾನಿಗೆ ನೆರವು ನೀಡುತ್ತಿದ್ದನು.

ಜೋಧ್‌ಪುರದ ಮಹಾರಾಜನು ಜಿನ್ನಾನನ್ನು ಒಂಟಿಯಾಗಿ ಭೇಟಿ ಮಾಡಲು ಇಷ್ಟಪಡದೆ ತನ್ನೊಡನೆ ತನ್ನ ಎ.ಡಿ.ಸಿ. ಕರ್ನಲ್ ಥಾಕೂರ್ ಕೇಸರಿ ಸಿಂಗ್ ಮತ್ತು ಜೈಸಲ್ಮೀರ್‌ನ ಮಹಾರಾಜಕುಮಾರನನ್ನು ಕರೆದುಕೊಂಡು ಹೋಗಿದ್ದನು. ಜಿನ್ನಾ ಜೋಧ್‌ಪುರದ ಮಹಾರಾಜನಿಗೆ ಐದು ಆಮಿಷಗಳನ್ನು ಒಡ್ಡಿ ಅವನನ್ನು ಸೆಳೆಯಲು ಯತ್ನಿಸಿದನು. ಜೋಧ್‌ಪುರವು ಕರಾಚಿ ಬಂದರನ್ನು ಉಚಿತವಾಗಿ ಉಪಯೋಗಿಸಿಕೊಳ್ಳಲು ಅವಕಾಶ, ಆಯುಧಗಳ ಮುಕ್ತ ಆಮದಿಗೆ ಅವಕಾಶ, ತನ್ನ ರಾಜ್ಯದಲ್ಲಿ ಸ್ಫೋಟಕ ಶಸ್ತ್ರಾಸ್ತ್ರಗಳ ತಯಾರಿಕೆಗೆ ಅವಕಾಶ, ಜೋಧ್‌ಪುರ ಮತ್ತು ಸಿಂಧ್ ಪ್ರಾಂತ್ಯದ ಹೈದರಾಬಾದ್ ನಡುವಣ ರೈಲು ಹಾದಿಯ ಮೇಲೆ ಹಿಡಿತ ಮತ್ತು ಕ್ಷಾಮದ ಸಮಯದಲ್ಲಿ ಅಪಾರ ಧಾನ್ಯದ ಸರಬರಾಜಿನ ಆಸೆಯನ್ನು ಹನವಂತ್ ಸಿಂಗ್‌ನಿಗೆ ಜಿನ್ನಾ ತೋರಿಸಿದನು. ಜಿನ್ನಾನ ಕೊಡುಗೆಗಳಿಂದ ಹನವಂತ ಸಿಂಗ್‌ನಿಗೆ ಸಂತಸವಾದಂತೆ ಕಂಡುಬಂದಿತು. ಅವನು ಉದಯಪುರದ ಮಹಾರಾಜನನ್ನೂ ಆ ಯೋಜನೆಗೆ ಸೇರಿಕೊಳ್ಳಲು ಆಹ್ವಾನಿಸಿದನು. ಆದರೆ ಉದಯಪುರದ ಮಹಾರಾಜ ಒಪ್ಪಲಿಲ್ಲ. ಅವನು, "ನಾನು ನನ್ನ ಪೂರ್ವೀಕರನ್ನು ಅನುಸರಿಸುತ್ತೇನೆ. ಅವರು ತಪ್ಪು ಹಾದಿ ಹಿಡಿದಿದ್ದರೆ ಹೈದರಾಬಾದ್‌ನಷ್ಟು ವಿಸ್ತಾರವಾದ ರಾಜ್ಯವನ್ನು ನಮಗೆ ಬಿಡಬಹುದಾಗಿತ್ತು. ಆದರೆ ಅವರು ಹಾಗೆ ಮಾಡಲಿಲ್ಲ. ನಾನೂ ಮಾಡುವುದಿಲ್ಲ. ನಾನು ಭಾರತದ ಜೊತೆ," ಎಂದನು.[೫೯]

ಜಿನ್ನಾ, ಕೈಗೆ ಸಿಕ್ಕಿದ ಮಿಕ ಜಾರಿಹೋಗದಿರಲೆಂದು, ಒಂದು ಖಾಲಿ ಹಾಳೆಯನ್ನು ತೆಗೆದುಕೊಂಡು ಅದರಲ್ಲಿ ತಾನು ಸಹಿ ಮಾಡಿ, ನಿಮಗೆ ಬೇಕಾದ ಶರತ್ತುಗಳನ್ನು ಬರೆದು ನಿಮ್ಮ ಸಹಿ ಮಾಡಿ ಎಂದು ಹನವಂತ ಸಿಂಗ್‌ನಿಗೆ ತನ್ನ ಪೆನ್ನನ್ನು ಕೊಟ್ಟನು.

ಹನವಂತ ಸಿಂಗ್‌ನು, "ನೀನೂ ಸಹಿ ಮಾಡುತ್ತೀಯ?" ಎಂದು ಜೈಸಲ್ಮೀರ್‌ನ ರಾಜನನ್ನು ಕೇಳಿದನು. ಜೈಸಲ್ಮೀರ್‌ನ ರಾಜನು ಒಂದು ಶರತ್ತು ವಿಧಿಸಿದನು. 'ನನ್ನ ರಾಜ್ಯದಲ್ಲಿ ಹಿಂದೂಗಳ ಮತ್ತು ಮುಸಲ್ಮಾನರ ನಡುವೆ ಏನಾದರೂ ತಕರಾರು ಶುರುವಾದರೆ ನಾನು ಹಿಂದೂಗಳ ಪರ ಇರುತ್ತೇನೆ. ಮುಸ್ಲಿಮರ ಪರ ಇರುವುದಿಲ್ಲ," ಎಂದನು. ಜೈಸಲ್ಮೀರ್ ರಾಜನ ಮಾತು ಹನವಂತ್ ಸಿಂಗ್‌ನನ್ನು ವಿಚಲಿತನನ್ನಾಗಿ

ಮಾಡಿತು. ಅವನು ಸಹಿ ಮಾಡಲು ಹಿಂದು ಮುಂದು ನೋಡಿದನು. ಆ ಸಮಯವನ್ನು ಉಪಯೋಗಿಸಿಕೊಂಡು ಎಡಿಸಿ ಕರ್ನಲ್ ಥಾಕೂರ್ ಕೇಸರಿ ಸಿಂಗ್‌ನು ಮಹಾರಾಜನ ಕಿವಿಯಲ್ಲಿ, "ಮಹಾಸ್ವಾಮಿ, ಸಹಿ ಮಾಡುವುದಕ್ಕೆ ಮುನ್ನ ನೀವು ನಿಮ್ಮ ತಾಯಿಯವರನ್ನು ಕೇಳಬೇಕು," ಎಂದನು. ಮಹಾರಾಜನಿಗೆ ತನ್ನ ತಾಯಿಯಲ್ಲಿ ಬಹಳ ಗೌರವವಿತ್ತು. ಅವನ ತಾಯಿ ಶಕ್ತಿವಂತೆ, ಗುಣವಂತೆ ಮತ್ತು ಪ್ರಭಾವಶಾಲಿ ಆಗಿದ್ದರು. ಮಹಾರಾಜನು ಮಾರನೆಯ ದಿನ ಮತ್ತೆ ಬರುವುದಾಗಿ ಜಿನ್ನಾನಿಗೆ ತಿಳಿಸಿ ಜೋಧ್‌ಪುರಕ್ಕೆ ಹಿಂತಿರುಗಿದನು.

ಅರಮನೆಯಲ್ಲಿ ಈ ವಿಷಯವಾಗಿ ಗುಸುಗುಸ ಪಿಸಿಪಿಸಿ ಶುರುವಾಗಿ ಅದು ಪ್ರಧಾನಮಂತ್ರಿ ಸಿ.ಎಸ್. ವೆಂಕಟಾಚಾರ್ ಅವರ ಕಿವಿಗೆ ಬಿತ್ತು. ತಕ್ಷಣ ಅವರು 'ಭಾರತದ ಭದ್ರತೆಗೆ ಧಕ್ಕೆ ಬಂದಿದೆ. ಮಹಾರಾಜನನ್ನು ಜಿನ್ನಾ ಸಂಪರ್ಕಿಸಿ ಭಾರತ ಡೊಮಿನಿಯನ್‌ನಿಂದ ಹೊರಗಿರುವಂತೆ ಒತ್ತಾಯಿಸುತ್ತಿದ್ದಾನೆ' ಎಂದು ಸ್ವಹಸ್ತಾಕ್ಷರದಲ್ಲಿ ಬರೆದ ಚೀಟಿಯನ್ನು ಗೃಹ ಕಾರ್ಯದರ್ಶಿ ಹೆಚ್.ವಿ.ಆರ್. ಐಯ್ಯಂಗಾರ್‌ಗೆ ಕಳುಹಿಸಿದರು. ವೆಂಕಟಾಚಾರ್ ಸಹ ಐ.ಸಿ.ಎಸ್. ಅಧಿಕಾರಿಯಾಗಿದ್ದರು. ಅಯ್ಯಂಗಾರ್‌ರವರು ಆ ಚೀಟಿಯನ್ನು ಸರ್ದಾರರಿಗೆ ತೋರಿಸಿದರು.

ಪರಿಸ್ಥಿತಿಯ ವಿಷಮತೆ ಪಟೇಲರಿಗೆ ಅರಿವಾಯಿತು. ಜೋಧ್‌ಪುರವನ್ನು ಸೆಳೆಯುವುದರಲ್ಲಿ ಜಿನ್ನಾ ಯಶಸ್ವಿಯಾದರೆ ಇನ್ನೂ ಕೆಲವು ಮಧ್ಯ ಭಾರತದ ರಾಜ್ಯಗಳು ಭೋಪಾಲ್ ಒಡನೆ ಸೇರಿ ಒಂದು ಒಕ್ಕೂಟವನ್ನು ಸಧ್ಯಕ್ಕೆ ರಚಿಸಿಕೊಂಡು ಮುಂದೆ ಪಾಕಿಸ್ತಾನದೊಡನೆ ವಿಲೀನವಾಗುವ ಅಪಾಯವಿತ್ತು. ಅದರಿಂದ ಜೋದ್‌ಪುರ ಪಾಕಿಸ್ತಾನದ ಕಡೆಗೆ ಹೋಗದಂತೆ ತಕ್ಷಣವೇ ತಡೆಯಬೇಕಾಗಿತ್ತು. ಆದರೆ ಆಗಿನ್ನೂ ಅಧಿಕಾರ ಹಸ್ತಾಂತರವಾಗಿಲ್ಲದೇ ಇರುವುದರಿಂದ ರಾಜ್ಯಗಳ ವಿಷಯದಲ್ಲಿ ಸರ್ದಾರರು ಪ್ರವೇಶಿಸುವ ಹಾಗಿರಲಿಲ್ಲ. ಸಾರ್ವಭೌಮನ ಪ್ರತಿನಿಧಿಯಾಗಿ ಲಾರ್ಡ್ ಮೌಂಟ್‌ಬ್ಯಾಟನ್ ಮಾತ್ರ ಕ್ರಮ ತೆಗೆದುಕೊಳ್ಳಬಹುದಾಗಿತ್ತು. ಅವರು ಭೋಪಾಲದ ಸುಲ್ತಾನನನ್ನು ಸಂಪರ್ಕಿಸಿ, "ನೀವು ಜೋಧ್‌ಪುರದ ಮಹಾರಾಜನನ್ನು ಸಂಪರ್ಕಿಸಿ ಅವನನ್ನು ಜಿನ್ನಾ ಬಳಿಗೆ ಬರುವಂತೆ ಪುಸಲಾಯಿಸಿದ್ದೀರಿ, ಆ ಭೇಟಿಯಲ್ಲಿ, ಭಾರತದೊಡನೆ ಸೇರ್ಪಡೆ ಒಪ್ಪಂದಕ್ಕೆ ಮಹಾರಾಜರು ಸಹಿ ಹಾಕದಂತೆ ಮಾಡುವುದಕ್ಕಾಗಿ ಅವರಿಗೆ ಜಿನ್ನಾ ಅನೇಕ ಆಮಿಷಗಳನ್ನು ಒಡ್ಡಿದ್ದಾರೆ ಎನ್ನುವ ಸುದ್ದಿ ಪಟೇಲರಿಗೆ ಬಂದಿದೆ" ಎಂದು ತಿಳಿಸಿದರು. ಭೋಪಾಲದ ಸುಲ್ತಾನನು ನುಣುಚಿಕೊಳ್ಳುವುದಕ್ಕೊಂದು ಕಥೆ ಹೇಳಿದನು. ಮೌಂಟ್‌ಬ್ಯಾಟನ್‌ಗೂ ಸುಲ್ತಾನನಿಗೂ ಉತ್ತಮ ಸ್ನೇಹವಿತ್ತು. ಅವರು

ಸುಲ್ತಾನನಿಗೆ, "ನೀವು ಒಂದು ಸಂಪೂರ್ಣ ಹಿಂದೂ ರಾಜ್ಯವನ್ನು ಪಾಕಿಸ್ತಾನಕ್ಕೆ ಸೇರಿಸಲು ಪ್ರೇರೇಪಿಸಿ ಸರ್ಕಾರಕ್ಕೆ ವಿರೋಧವಾಗಿ ಕೆಲಸ ಮಾಡಿದಿರಿ ಎಂದು ಭಾರತದ ಮುಂದಿನ ಸರ್ಕಾರವು ಆಲೋಚಿಸಿದರೆ, ನಿಮ್ಮನ್ನು, ನಿಮ್ಮ ರಾಜ್ಯವನ್ನು, ನಿಮ್ಮ ರಾಜ್ಯದ ಮುಂದಿನ ಆಡಳಿತಗಾರನನ್ನು, ನಮಗೆ ನಿಮಗೆ ಎಷ್ಟೇ ಸ್ನೇಹವಿದ್ದರೂ, ನಾನು ರಕ್ಷಿಸಲು ಸಾಧ್ಯವಿಲ್ಲ," ಎಂದು ಎಚ್ಚರಿಕೆ ನೀಡಿದರು.[೪೦]

ಜಿನ್ನಾನಿಗೆ, ಮಾರನೆ ದಿನ ಬರುವುದಾಗಿ ಹೇಳಿ ಹೋದ ಜೋಧ್‌ಪುರದ ಮಹಾರಾಜನು ಮೂರು ದಿನಗಳ ನಂತರ ದೆಹಲಿಗೆ ಬಂದು ಜಿನ್ನಾನನ್ನು ಭೇಟಿ ಮಾಡಿದನು. ಅಷ್ಟು ಹೊತ್ತಿಗೆ ಅವನ ಉತ್ಸಾಹ ಕರಗಿ ಹೋಗಿತ್ತು. ಅವನ ತಾಯಿ ಅವನಿಗೆ ವಿವೇಕ ಹೇಳಿರಬೇಕು. ಒಂದು ವರದಿಯ ಪ್ರಕಾರ ಒಬ್ಬ ಸ್ವಾಮಿ. ಅವರು ಅವನ ಗುರು, " ಮುಸ್ಲಿಂ ರಾಜ್ಯವಾದ ಪಾಕಿಸ್ತಾನವನ್ನು ಹಿಂದೂ ರಾಜ್ಯವಾದ ಜೋಧ್‌ಪುರವು ಹೇಗೆ ಸೇರಲು ಸಾಧ್ಯ?" ಎಂದು ಪ್ರಶ್ನಿಸಿದರು. ಆದಾಗ್ಯೂ ವಿ.ಪಿ. ಮೆನನ್‌ಗೆ ಆತಂಕವಿತ್ತು. ತಕ್ಷಣವೇ ಮಹಾರಾಜನನ್ನು ಸಂಭಾಳಿಸುವುದು ಉತ್ತಮ ಅನ್ನಿಸಿತು, ಅವರಿಗೆ. ಅವರು ಮಹಾರಾಜನನ್ನು ಮೌಂಟ್‌ಬ್ಯಾಟನ್ ಬಳಿಗೆ ಕರೆದುಕೊಂಡು ಹೋದರು. ಮೌಂಟ್‌ಬ್ಯಾಟನ್‌ರವರು ಮಹಾರಾಜನಿಗೆ, "ಜೋಧ್‌ಪುರವು ಪಾಕಿಸ್ತಾನವನ್ನು ಸೇರುವುದಕ್ಕೆ ಕಾನೂನಿನ ಪ್ರಕಾರ ಯಾವ ಅಡ್ಡಿಯೂ ಇಲ್ಲ, ಆದರೆ ನಿಮ್ಮದು ಪ್ರಧಾನವಾಗಿ ಒಂದು ಹಿಂದೂ ರಾಷ್ಟ್ರ ಎನ್ನುವುದನ್ನು ಕಡೆಗಣಿಸಬೇಡಿ. ನೀವು ಪಾಕಿಸ್ತಾನಕ್ಕೆ ಸೇರಿದರೆ ಅದು ದೇಶ ವಿಭಜನೆಯ ಮುಸ್ಲಿಂ ಬಹುಮತದ ಪ್ರದೇಶ ಮತ್ತು ಮುಸ್ಲಿಮೇತರ ಬಹುಮತದ ಪ್ರದೇಶ ಅನ್ನುವ ತತ್ವಕ್ಕೆ ವಿರುದ್ಧವಾಗುತ್ತದೆ. ಅದರ ಫಲವಾಗಿ ರಾಜ್ಯದೊಳಗೆ ತೀವ್ರವಾದ ಮತೀಯ ಗಲಭೆಗೆ ಅವಕಾಶವಾಗಬಹುದು," ಎಂದರು.[೪೧]

ಮೌಂಟ್‌ಬ್ಯಾಟನ್‌ರವರ ಮಾತಿನಿಂದ ಮಹಾರಾಜನು ಕಂಪಿಸಿದನೇ ಹೊರತು, ಭಾರತಕ್ಕೆ ಸೇರಲು ನಿರ್ಧರಿಸಲಿಲ್ಲ. ಅವನು ಮೌಂಟ್‌ಬ್ಯಾಟನ್‌ರವರಿಗೆ ಅಸಾಧ್ಯವಾದ ಅನೇಕ ಶರತ್ತುಗಳನ್ನು ಒಡ್ಡಿದನು. 'ಮಹಾರಾಜರು ಜೋಧ್‌ಪುರಕ್ಕೆ ಹಿಂತಿರುಗುವ ಮುನ್ನ ಪಟೇಲರೊಡನೆ ಅವರ ಭೇಟಿ ಮಾಡಿಸಿ' ಎಂದು ಮೌಂಟ್‌ಬ್ಯಾಟನ್ ಮೆನನ್‌ರವರಿಗೆ ಸೂಚಿಸಿದರು.

ಪಟೇಲರು ಮಹಾರಾಜರನ್ನು ಬಹಳ ಸೌಜನ್ಯ ಮತ್ತು ಸಭ್ಯತೆಯಿಂದ ನಡೆಸಿಕೊಂಡರು. ಆದರೆ ಧ್ವನಿಯಲ್ಲಿ ಬಿಗಿಯಾಗಿದ್ದರು. ಅವರು, "ಮಹಾರಾಜರು ಇಷ್ಟಪಟ್ಟರೆ, (ಭಾರತದಿಂದ) ಹೊರಗಿರಲು ಸ್ವತಂತ್ರರು. ಆದರೆ ನಿಮ್ಮ ತೀರ್ಮಾನದ ಫಲವಾಗಿ ನಿಮ್ಮ ರಾಜ್ಯದಲ್ಲಿ ಏನಾದರೂ ತೊಂದರೆ ಉದ್ಭವವಾದರೆ ನಿಮಗೆ

ಭಾರತ ಸರ್ಕಾರದಿಂದ ಒಂದು ಚೂರೂ ಬೆಂಬಲ ದೊರಕುವುದಿಲ್ಲ" ಎಂದರು. ಅವರ ರಾಜ್ಯದಲ್ಲಿ ತೊಂದರೆ ಖಂಡಿತವಾಗಿಯೂ ಉದ್ಭವವಾಗುವುದು ಅನ್ನುವ ಎಚ್ಚರಿಕೆ ಮತ್ತು ಜಿನ್ನಾನ ನಡೆ ಭಾರತಕ್ಕಲ್ಲದೆ ಸ್ವತಃ ಮಹಾರಾಜನಿಗೆ ಅಪಾಯಕಾರಿ ಅನ್ನುವ ಎಚ್ಚರಿಕೆ ಪಟೇಲರ ಧ್ವನಿಯಲ್ಲಿ ಇತ್ತು. ನಂತರ ಪಟೇಲರು ಮೃದು ಧ್ವನಿಯಲ್ಲಿ ಮಹಾರಾಜರಿಗೆ ಹೇಳಿದರು, "ನನ್ನ ಸ್ನೇಹಿತರಾಗಿದ್ದ ನಿಮ್ಮ ತಂದೆ ನಿಮ್ಮನ್ನು ನನ್ನ ಪಾಲಿತನನ್ನಾಗಿ ಬಿಟ್ಟು ಹೋಗಿದ್ದಾರೆ. ನೀವು ನಡೆದುಕೊಳ್ಳಬೇಕಾದ ರೀತಿಯಲ್ಲಿ ನಡೆದುಕೊಳ್ಳದಿದ್ದರೆ ನಿಮ್ಮ ಪಾಲಕನಾಗಿ ನಾನು ನಿಮ್ಮನ್ನು ಶಿಸ್ತಿಗೆ ಒಳಪಡಿಸಬೇಕಾಗುತ್ತದೆ," ಎಂದರು. ಮಹಾರಾಜ ನಡುಗಿ ಹೋದನು. ಅವನು, "ಸರಿ ಸರ್, ನಾನು ಮೌಂಟ್‌ಬ್ಯಾಟನ್ ಬಳಿಗೆ ಹಿಂತಿರುಗಿ ಹೋಗಿ ಸೇರ್ಪಡೆಯ ಒಪ್ಪಂದಕ್ಕೆ ಸಹಿ ಹಾಕಲು ತೀರ್ಮಾನಿಸಿದ್ದೇನೆ" ಎಂದನು.

ಜೋಧ್‌ಪುರದ ಮಹಾರಾಜನ ಪರಿವರ್ತನೆಯಿಂದ ಒಂದು ದೊಡ್ಡ ಅನಾಹುತ ತಪ್ಪಿತು. ಮುಂದೆ ಮಹಾರಾಜನು ಪಟೇಲರನ್ನು ಬಹಳ ಗೌರವದಿಂದ ನಡೆಸಿಕೊಂಡನು. ಅವನು ತನ್ನ ವಿಮಾನದಲ್ಲಿ ರಾಜ್ಯದಿಂದ ರಾಜ್ಯಕ್ಕೆ ಹಾರಿ ಪಟೇಲರ ಪರವಾಗಿ ರಾಜರನ್ನು ಒಲಿಸುವ ಕಾರ್ಯ ಮಾಡಿದನು. ಪಟೇಲರ ಆಶ್ರಯದಲ್ಲಿ ಅವನ ದೇಶಭಕ್ತಿ ಮತ್ತು ಧೈರ್ಯ ಹೊರಹೊಮ್ಮಿತು.[೪೨]

ಉ) ಜುನಾಗಡ:

ಜುನಾಗಡ ಪಶ್ಚಿಮ ಭಾರತದ ಒಂದು ರಾಜ್ಯ. ಕಾಥೈವಾಡದ ರಾಜ್ಯಗಳ ಪೈಕಿ ಅದು ಒಂದು. ಅದರ ನವಾಬ ಮಹಮದ್ ಖಾನ್ ಒಬ್ಬ ಮುಸ್ಲಿಂ. ಆದರೆ ಶೇ.೮೦ರಷ್ಟು ಪ್ರಜೆಗಳು ಹಿಂದೂಗಳು. ದೇಶ ವಿಭಜನೆಯ ತತ್ವ ಮತ್ತು ಕಾನೂನಿನ ಪ್ರಕಾರ ಅದು ಪಾಕಿಸ್ತಾನವನ್ನು ಸೇರುವ ಹಾಗಿರಲಿಲ್ಲ. ಜೊತೆಗೆ, ಸರ್ದಾರರು ಕಾಥೈವಾಡದ ರಾಜ್ಯಗಳನ್ನೆಲ್ಲ ಒಂದುಗೂಡಿಸಿ ಒಂದು ದೊಡ್ಡ ರಾಜ್ಯ ಸ್ಥಾಪಿಸಲು ಪ್ರಯತ್ನಿಸುತ್ತಿದ್ದರು.

೧೯೪೭ರ ಏಪ್ರಿಲ್ ೧೧ರಂದು ಜುನಾಗಡದ ನವಾಬನು, ಜುನಾಗಡವು ಪ್ರಮುಖವಾಗಿ ಕಾಥೈವಾಡದ ಐಕ್ಯತೆಯನ್ನು ಪ್ರತಿಪಾದಿಸುತ್ತದೆ ಮತ್ತು ಕಾಥೈವಾಡ ರಾಜ್ಯಗಳ ಸಮೂಹದ ರಚನೆಯನ್ನು ಸ್ವಾಗತಿಸುತ್ತದೆ,' ಎಂದು ಹೇಳಿಕೆ ನೀಡಿದನು. ಅಂದಿನ ಅವನ ದಿವಾನ ಅಬ್ದುಲ್ ಖಾದರ್ ಮಹಮ್ಮದ್ ಹುಸೇನನು ಏಪ್ರಿಲ್ ೨೨ರಂದು 'ಜುನಾಗಡವು ಪಾಕಿಸ್ತಾನವನ್ನು ಸೇರಲು ಯೋಚಿಸುತ್ತಿದೆ' ಎಂಬ ಆಪಾದನೆಯನ್ನು ಖಡಾಖಂಡಿತವಾಗಿ ಅಲ್ಲಗಳೆದನು. ಜುಲೈ ೨೫ರಂದು ಮೌಂಟ್‌ಬ್ಯಾಟನ್‌ರವರು ನಡೆಸಿದ ರಾಜರ ಸಭೆಯಲ್ಲಿ ನವಾಬನು ಭಾಗವಹಿಸದೇ

ಇದ್ದರೂ, ಅವನ ಪ್ರತಿನಿಧಿ ನಭಿ ಭಕ್ಷನು ಭಾಗವಹಿಸಿ, 'ಭಾರತದಲ್ಲಿ ವಿಲೀನಗೊಳ್ಳುವಂತೆ ಸಲಹೆಯನ್ನು ನವಾಬನಿಗೆ ನೀಡುವ ಉದ್ದೇಶ ತನಗಿದೆಯೆಂದು' ತಿಳಿಸಿದನು. ಅಷ್ಟೇ ಅಲ್ಲದೆ ಸರ್ದಾರ್ ಪಟೇಲರನ್ನು ಮತ್ತು ತನ್ನ ಸ್ನೇಹಿತ ನವನಗರದ ಜಾಮ್ ಸಾಹೇಬನನ್ನು ಭೇಟಿ ಮಾಡಿದಾಗಲೂ ಅದೇ ಅಭಿಪ್ರಾಯ ಬರುವಂತೆ ಮಾತನಾಡಿದ್ದನು. ಅದೆಲ್ಲ ಒಂದು ನಾಟಕ ಅನ್ನುವುದು ಸರ್ದಾರರಿಗೆ ಆಮೇಲೆ ತಿಳಿಯಿತು.[೪೩]

೧೯೪೭ರ ಮೇ ತಿಂಗಳಲ್ಲಿ ಸರ್ ಷಾ ನವಾಜ್ ಭುಟ್ಟೊ ಜುನಾಗಡದ ದಿವಾನನಾದನು. ಅವನೊಬ್ಬ ಸಿಂದ್ ಪ್ರಾಂತ್ಯದ ಮುಸ್ಲಿಂ ಲೀಗ್ ರಾಜಕಾರಣಿ. ಅವನು ಜಿನ್ನಾ ಒಡನೆ ಸಂಪರ್ಕದಲ್ಲಿದ್ದನು ಮತ್ತು ಜಿನ್ನಾನ ಸಲಹೆಯಂತೆ ಆಗಸ್ಟ್ ೧೫ರವರೆಗೆ ನಾಟಕವಾಡುತ್ತಿದ್ದನು. ಅನಂತರ ಆಗಸ್ಟ್ ೧೪ರಂದು ಪಾಕಿಸ್ತಾನ ರಾಷ್ಟ್ರ ಉದಯವಾದ ಮೇಲೆ ಜುನಾಗಡವು ಪಾಕಿಸ್ತಾನದೊಡನೆ ಸೇರ್ಪಡೆ ಆಗಿರುವುದಾಗಿ ಪ್ರಕಟಿಸಿದನು.

ಈ ವಿಷಯ ಪತ್ರಿಕೆಗಳ ಮೂಲಕ ಆಗಸ್ಟ್ ೧೭ರಂದು ಸರ್ದಾರರಿಗೆ ತಿಳಿಯಿತು. ಸರ್ದಾರರು 'ಜುನಾಗಡದ ಸೇರ್ಪಡೆಯನ್ನು ಪಾಕಿಸ್ತಾನವು ಅಂಗೀಕರಿಸುವುದೆ' ಎನ್ನುವುದನ್ನು ತಿಳಿಯುವಂತೆ ನೆಹರು ಅಧೀನದಲ್ಲಿದ್ದ ವಿದೇಶ ವ್ಯವಹಾರಗಳ ಇಲಾಖೆಗೆ ಸೂಚಿಸಿದರು. ಪಾಕಿಸ್ತಾನ ಸರ್ಕಾರವು ಉತ್ತರ ನೀಡಲು ಒಂದು ತಿಂಗಳು ಸತಾಯಿಸಿ ಕೊನೆಗೆ ಸೆಪ್ಟೆಂಬರ್ ೧೩ರಂದು ಟೆಲಿಗ್ರಾಂ ಮೂಲಕ 'ಸೇರ್ಪಡೆಯನ್ನು ಅಂಗೀಕರಿಸಲಾಗಿದೆ' ಎಂದು ತಿಳಿಸಿತು.[೪೪]

ಜುನಾಗಡದ ಈ ಕ್ರಮ ಎಲ್ಲರಿಗೂ, ಅದರಲ್ಲೂ ಕಾಥೈವಾಡದ ರಾಜ್ಯಗಳಿಗೆ ಆಘಾತವನ್ನುಂಟು ಮಾಡಿತು. ಜುನಾಗಡ ಒಂದು ಮುಖ್ಯವಾದ ಕಡಲತೀರದ ರಾಜ್ಯ. ಅದು ಕಾಥೈವಾಡದ ಇತರ ರಾಜ್ಯಗಳೊಡನೆ ಆರ್ಥಿಕ, ಸಾಂಸ್ಕೃತಿಕ, ಭೌಗೋಳಿಕ ಮತ್ತು ಸಂಪರ್ಕ ಮುಂತಾದ ಸಂಬಂಧಗಳನ್ನು ಹೊಂದಿತ್ತು. ಆ ರಾಜ್ಯದಲ್ಲಿ ಐತಿಹಾಸಿಕವಾಗಿ ಪ್ರಮುಖವಾದ ಸೋಮನಾಥ ದೇವಾಲಯ ಮತ್ತು ಇತರ ಅನೇಕ ಹಿಂದೂ ಮತ್ತು ಜೈನ ದೇವಾಲಯಗಳು ಇದ್ದುವು. ಎಲ್ಲಕ್ಕಿಂತ ಮುಖ್ಯವಾಗಿ ಆ ರಾಜ್ಯದ ೬.೭ ಲಕ್ಷ ಪ್ರಜೆಗಳ ಪೈಕಿ ಶೇ ೮೦ರಷ್ಟು ಹಿಂದೂಗಳು ಇದ್ದರು ಮತ್ತು ಆ ರಾಜ್ಯದ ಸುತ್ತ ಇತರ ಕಾಥೈವಾಡ ರಾಜ್ಯಗಳು ಹರಡಿದ್ದುವು. ಆ ರಾಜ್ಯಕ್ಕೆ ಪಾಕಿಸ್ತಾನದೊಡನೆ ಭೂ ಸಂಪರ್ಕವೇ ಇರಲಿಲ್ಲ. ೩೦೦ ಮೈಲಿಗಳ ಸಮುದ್ರ ಮಾರ್ಗ ಮಾತ್ರ ಇತ್ತು.[೪೫]

ಜುನಾಗಡ ಪಾಕಿಸ್ತಾನಕ್ಕೆ ಸೇರುವುದರಿಂದ ಮತ್ತೊಂದು ಸಮಸ್ಯೆ

ಉದ್ಭವವಾಗುತ್ತಿತ್ತು. ಪಾಕಿಸ್ತಾನಕ್ಕೆ ಭಾರತದ ಒಳಗೆ ಪಾದ ಊರಲು ಮತ್ತು ಕಿತಾಪತಿ ಮಾಡಲು ಸೌಲಭ್ಯ ಸಿಗುತ್ತಿತ್ತು. ಪಾಕಿಸ್ತಾನವು ಸಮುದ್ರ ಮಾರ್ಗದಿಂದ ಸೈನ್ಯವನ್ನು ತಂದು ಜುನಾಗಡದಲ್ಲಿ ಇಟ್ಟರೆ ಅದನ್ನು ಅಲ್ಲಿಂದ ಎತ್ತಿಸುವುದು ಕಷ್ಟವಾಗುತ್ತಿತ್ತು. ಜುನಾಗಡದ ನವಾಬ ಮತ್ತು ದಿವಾನ ಸೇರಿ ಹಿಂದೂ ಬಹುಮತವಿರುವ ಆ ರಾಜ್ಯವನ್ನು ಪಾಕಿಸ್ತಾನಕ್ಕೆ ಒಪ್ಪಿಸಬಹುದಾದರೆ ಹೈದರಾಬಾದ್‌ನ ನಿಜಾಮನು ಹಾಗೆ ಏಕೆ ಮಾಡಬಾರದು? – ಅನ್ನುವ ಪ್ರಶ್ನೆ ಏಳುತ್ತಿತ್ತು. ಹೈದರಾಬಾದ್‌ಗೆ ಪ್ರೋತ್ಸಾಹ ಸಿಗುತ್ತಿತ್ತು. ಕಾಥೈವಾಡ ಪ್ರದೇಶದ ಹಿಂದೂಗಳು ಜುನಾಗಡದ ನವಾಬನ ಮೇಲೆ ಮತ್ತು ಮುಸ್ಲಿಮರ ಮೇಲೆ ಪ್ರತೀಕಾರದ ಭಾವನೆಯನ್ನು ತಾಳಬಹುದಾಗಿತ್ತು. ಅದರಿಂದ ಆ ಪ್ರದೇಶದ ಶಾಂತಿ ಕದಡುತ್ತಿತ್ತು. ಕಾಥೈವಾಡದ ರಾಜ್ಯಗಳಿಗೆ ಕೇಂದ್ರ ಸರ್ಕಾರದ ಶಕ್ತಿಯ ಮೇಲೇ ಸಂದೇಹ ಬರುತ್ತಿತ್ತು.[೪೬] ಅದರಿಂದ ಸರ್ದಾರರು ಜುನಾಗಡವು ಪಾಕಿಸ್ತಾನವನ್ನು ಸೇರುವುದನ್ನು ತಡೆಗಟ್ಟಲು ದೃಢ ನಿರ್ಧಾರ ಮಾಡಿದರು.

ಜುನಾಗಡದ ವಿಷಯವಾಗಿ ಪಾಕಿಸ್ತಾನದೊಡನೆ ವಿದೇಶ ವ್ಯವಹಾರಗಳ ಮಂತ್ರಿ ನೆಹರು ಮಾತ್ರ ವ್ಯವಹರಿಸಬಹುದಾಗಿತ್ತು. ಆದರೆ ಜುನಾಗಡದೊಡನೆ ನೇರ ವ್ಯವಹಾರ ನಡೆಸಲು ರಾಜ್ಯಗಳ ಮಂತ್ರಿಯಾಗಿ ಸರ್ದಾರರಿಗೆ ಅಧಿಕಾರವಿತ್ತು. ಅವರು ತಮ್ಮೆಲ್ಲ ಪ್ರಮುಖ ನಡವಳಿಕೆಗಳ ಬಗೆಗೆ ಪ್ರಧಾನಮಂತ್ರಿ ಮತ್ತು ಸಚಿವ ಸಂಪುಟದ ಒಪ್ಪಿಗೆಯನ್ನು ಪಡೆದು ಮುಂದುವರೆದರು. ಪ್ರಧಾನಿ ಜವಹರಲಾಲ್ ನೆಹರು, 'ಜುನಾಗಡ್ ವಿಷಯವನ್ನು ಬ್ರಿಟಿಷ್ ಸರ್ಕಾರದ ಗಮನಕ್ಕೆ ತರುವುದು ಒಳ್ಳೆಯದು' ಎಂದರು. ಸರ್ದಾರರು, 'ಈ ಘಟ್ಟದಲ್ಲಿ ಬ್ರಿಟಿಷ್ ಸರ್ಕಾರಕ್ಕೆ ಏನನ್ನಾದರೂ ತಿಳಿಸಬೇಕೆ ಅನ್ನುವುದು ನನಗೆ ಖಾತರಿ ಇಲ್ಲ,' ಎಂದು ಸೌಮ್ಯವಾಗಿ ನುಡಿದು ನೆಹರುರವರ ಸಲಹೆಯನ್ನು ತಳ್ಳಿ ಹಾಕಿದರು.[೪೭]

(ಆಗಸ್ಟ್ ೧೫ರ ನಂತರ ನಾವು ಸ್ವತಂತ್ರ ರಾಷ್ಟ್ರ. ನಮ್ಮ ಹಿಂದಿನ ಆಡಳಿತಗಾರರ ಗಮನಕ್ಕೆ ತರುವ ಅವಶ್ಯಕತೆ ಏನಿದೆ? – ಎನ್ನುವುದು ಸರ್ದಾರರ ಅಭಿಪ್ರಾಯ ಎಂದು ಕಾಣುತ್ತದೆ – ಲೇಖಕ)

ಜಿನ್ನಾ ಕೇಳದೆ ಇದ್ದರೂ ಸಹ ಲಾರ್ಡ್ ಮೌಂಟ್‌ಬ್ಯಾಟನ್‌ರವರು ಜುನಾಗಡದ ವಿಷಯವನ್ನು ವಿಶ್ವಸಂಸ್ಥೆಗೆ ಕೊಂಡೊಯ್ಯುವ ಅಥವಾ ಜನಮತಕ್ಕೆ ಹಾಕುವ ಪ್ರಸ್ತಾಪ ಮುಂದಿಟ್ಟರು, ಪಟೇಲರು ವಿಶ್ವಸಂಸ್ಥೆಗೆ ಕೊಂಡೊಯ್ಯುವ ಪ್ರಸ್ತಾಪವನ್ನಂತೂ ದೃಢವಾಗಿ ವಿರೋಧಿಸಿದರು. ಆದರೆ ಇಷ್ಟವಿಲ್ಲದ ಮನಸ್ಸಿನಿಂದ ಜನಮತಕ್ಕೆ ಒಪ್ಪಿಗೆ ನೀಡಿದರು.[೪೭]

ಆದರೂ ಜುನಾಗಡವನ್ನು ಮಣಿಸಲು ತಮ್ಮದೇ ಆದ ಕಾರ್ಯಕ್ರಮ ರೂಪಿಸಿಕೊಂಡಿದ್ದರು. ಜುನಾಗಡದ ಶೇ ೮೦ ರಷ್ಟು ಇದ್ದ ಹಿಂದೂಗಳನ್ನು ಪಾಕಿಸ್ತಾನದ ವಶಕ್ಕೆ ಒಪ್ಪಿಸಲು ಅವರು ಸಿದ್ಧರಿರಲಿಲ್ಲ. ಜುನಾಗಡದ ಸೇರ್ಪಡೆ ಒಂದು ಅಪಾಯಕಾರಿ ಪೂರ್ವ ಉದಾಹರಣೆ (precedent) ಆಗಬಹುದೆಂಬ ಆತಂಕ ಪಟೇಲರಿಗಿತ್ತು.

ಈ ಮಧ್ಯೆ ಧ್ರಂಗಾಧ್ರ ರಾಜ್ಯದ ಮಹಾರಾಜನು ಜುನಾಗಡದ ನವಾಬನಿಗೆ ಒಂದು ವೈಯುಕ್ತಿಕ ಪತ್ರ ಬರೆದು, 'ಜುನಾಗಡವು ಪಾಕಿಸ್ತಾನಕ್ಕೆ ಸೇರುವುದು ಭೌಗೋಳಿಕ ಕಾರಣಗಳಿಗೆ ವಿರುದ್ಧವಾಗಿರುವುದರಿಂದ ಮತ್ತು ಜನಾಭಿಪ್ರಾಯಗಳಿಗೆ ವಿರುದ್ಧವಾಗಿರುವುದರಿಂದ ನಿರ್ಧಾರವನ್ನು ಪುನರ್ಪರಿಶೀಲನೆ ಮಾಡಬೇಕೆಂದೂ, ಹಾಗೆ ಮಾಡಲು ವಿಫಲನಾದರೆ ಕಾಥೈವಾಡದ ಭಂಗ ಆಗುವುದೆಂದೂ' ತಿಳಿಸಿದನು. ನವಾಬನು ಮಹಾರಾಜನಿಗೆ, 'ಸೇರ್ಪಡೆಯ ಮುಂಚೆ ರಾಜನು ತನ್ನ ಪ್ರಜೆಗಳೊಡನೆ ಸಮಾಲೋಚಿಸಬೇಕೆಂದು ಇಂಡಿಯಾ ಇಂಡಿಪೆಂಡೆನ್ಸ್ ಆಕ್ಟ್‌ನಲ್ಲಿ ಹೇಳಿಲ್ಲ, ಹೇಳುವುದೂ ಇಲ್ಲ. ಭೌಗೋಳಿಕ ಸಂಪರ್ಕದ ಬಗೆಗೆ ಅನವಶ್ಯಕ ಒತ್ತನ್ನು ನೀಡಲಾಗುತ್ತಿದೆ ಎಂದು ನನಗೆ ಅನ್ನಿಸುತ್ತಿದೆ. ಆದಾಗ್ಯೂ, ಜುನಾಗಡಕ್ಕೆ ಅನೇಕ ಬಂದರುಗಳಿರುವ ಸಮುದ್ರ ತೀರ ಇರುವುದರಿಂದ ಸಂಪರ್ಕವನ್ನು ಹೊಂದಬಹುದು,' ಎಂದು ಉತ್ತರಿಸಿದನು.

ನವನಗರದ ಜಾಮ್ ಸಾಹೇಬನು ದೆಹಲಿಗೆ ಧಾವಿಸಿ ಪಟೇಲರಿಗೆ, 'ಪಾಕಿಸ್ತಾನ ಭಾರತದ ಪ್ರದೇಶವನ್ನು ಕಬಳಿಸಲು ಮಾಡುತ್ತಿರುವ ಪ್ರಯತ್ನದ ಬಗೆಗೆ ಕಾಥೈವಾಡದ ರಾಜರು ಮತ್ತು ಜನರು ಆಕ್ರೋಶಗೊಂಡಿದ್ದಾರೆ. ಪ್ರತೀಕಾರದ ಕ್ರಮಗಳನ್ನು ತೆಗೆದುಕೊಳ್ಳದಂತೆ ಕಾಥೈವಾಡದ ಜನರನ್ನು ತಡೆಯುವುದು ಕಷ್ಟ. ಭಾರತ ಸರ್ಕಾರವು ತಕ್ಷಣದ ಮತ್ತು ಪರಿಣಾಮಕಾರಿಯಾದ ಕ್ರಮಗಳನ್ನು ತೆಗೆದುಕೊಳ್ಳದಿದ್ದರೆ, ಭಾರತದೊಡನೆ ತಮ್ಮ ಸೇರ್ಪಡೆಯಿಂದ ಉದ್ಭವಿಸುವ ಜವಾಬ್ದಾರಿಗಳನ್ನು ನಿರ್ವಹಿಸುವ ಭಾರತ ಸರ್ಕಾರದ ಶಕ್ತಿ ಮತ್ತು ಅಭಿಲಾಷೆಯಲ್ಲಿ ಕಾಥೈವಾಡದ ರಾಜ್ಯಗಳು ನಂಬಿಕೆಯನ್ನು ಕಳೆದುಕೊಳ್ಳುತ್ತವೆ' ಎಂದು ಎಚ್ಚರಿಸಿದರು.[೪೯]

ಸೆಪ್ಟೆಂಬರ್ ೧೯ರಂದು ಸರ್ದಾರರು ಮೆನನ್‌ರವರನ್ನು ಜುನಾಗಡಕ್ಕೆ ಕಳುಹಿಸಿದರು. ಮೆನನ್ ನವಾಬನನ್ನು ಭೇಟಿಯಾಗಲು ಸಾಧ್ಯವಾಗಲಿಲ್ಲ. ದಿವಾನನನ್ನು ಮಾತ್ರ ಭೇಟಿ ಮಾಡಲು ಸಾಧ್ಯವಾಯಿತು. ದಿವಾನ್ ಭುಟ್ಟೋ 'ಮುಂದಿನ ಚರ್ಚೆಯನ್ನು ನೀವು ಪಾಕಿಸ್ತಾನದೊಡನೆ ನಡೆಸಬೇಕು' ಎಂದನು.

ಸೆಪ್ಟೆಂಬರ್ ೨೪ರಂದು ಪಟೇಲರ ಸೂಚನೆಯ ಮೇಲೆ ಕಾಥೈವಾಡ ರಾಜ್ಯಗಳ

ಭಾರತೀಯ ಸೈನ್ಯದ ಒಂದು ತಂಡ ಜುನಾಗಡದ ಗಡಿಯಲ್ಲಿ ಬೀಡು ಬಿಟ್ಟಿತು. ಸೆಪ್ಟೆಂಬರ್ ೨೫ರಂದು ಜುನಾಗಡ ಮತ್ತು ಕಾಥೈವಾಡದ ಇತರ ರಾಜ್ಯಗಳ ಪ್ರತಿನಿಧಿಗಳು ಬೊಂಬಾಯಿಯಲ್ಲಿ ಸಭೆ ಸೇರಿ ಜುನಾಗಡದ ವಿಷಯದಲ್ಲಿ ಜನರೂ ಸಹ ಕ್ರಮ ತೆಗೆದುಕೊಳ್ಳಬೇಕೆಂದು ತೀರ್ಮಾನಿಸಿದರು. ಅವರು, ಪಟೇಲರಿಗೆ ತಿಳಿದಂತೆ, ಮಹಾತ್ಮ ಗಾಂಧಿಯ ಸಂಬಂಧಿ ಶ್ಯಾಮಲದಾಸ್ ಗಾಂಧಿಯವರ ಅಧ್ಯಕ್ಷತೆಯಲ್ಲಿ ಜುನಾಗಡದ ತಾತ್ಕಾಲಿಕ ಸರ್ಕಾರ, 'ಆರ್ಜಿ ಹುಕ್‌ಮತ್' ಅನ್ನು ರಚಿಸಿ, ರಾಜ್‌ಕೋಟ್ ಅನ್ನು ಅದರ ಪ್ರಧಾನ ಕಾರ್ಯಸ್ಥಳವನ್ನಾಗಿ ಆರಿಸಿದರು.

ಪಾಕಿಸ್ತಾನವು ಜುನಾಗಡದ ಸೇರ್ಪಡೆಯನ್ನು ರದ್ದುಪಡಿಸುವುದೆ ಅಥವಾ ಜನಮತ ಪಡೆಯಲು ಕ್ರಮ ತೆಗೆದುಕೊಳ್ಳುವುದೆ – ಎಂದು ಪಟೇಲರು ಕಾಯುತ್ತಿದ್ದರು. ಪಾಕಿಸ್ತಾನ ಎರಡನ್ನೂ ಮಾಡದಿದ್ದರೆ ಜುನಾಗಡಕ್ಕೆ ಸೈನ್ಯವನ್ನು ಕಳುಹಿಸಲು ಅವರು ತೀರ್ಮಾನಿಸಿದ್ದರು. ಮೌಂಟ್‌ಬ್ಯಾಟನ್‌ರವರು ಪಟೇಲರ ಆ ನಿರ್ಧಾರದ ವಿರುದ್ಧ ವಾದ ಮಾಡಿದರು. ಅವರಿಗೆ ಭಾರತ – ಪಾಕಿಸ್ತಾನದ ನಡುವೆ ಸಮರ ಶುರುವಾದೀತೆಂಬ ಆತಂಕವಿತ್ತು. ಆದರೆ ಪಟೇಲರು ಜಗ್ಗಲಿಲ್ಲ. ಮೌಂಟ್‌ಬ್ಯಾಟನ್‌ರವರು ಸೈನ್ಯಕ್ಕೆ ಬದಲಾಗಿ ಕೇಂದ್ರ ರಿಸರ್ವ್ ಪೊಲೀಸರನ್ನು ಕಳುಹಿಸುವಂತೆ ಸಲಹೆ ನೀಡಿದರು. ಅದನ್ನೂ ಸಹ ಪಟೇಲರು ತಳ್ಳಿ ಹಾಕಿದರು. ಅವರು ಯಾವುದೇ ಅಳುಕು ಅಥವಾ ಸಂದೇಹಕ್ಕೆ ಎಡೆಮಾಡಲು ಸಿದ್ಧರಿರಲಿಲ್ಲ. ಯಾವ 'ರಿಸ್ಕ್' ತೆಗೆದುಕೊಳ್ಳಲೂ ಸಿದ್ಧರಿರಲಿಲ್ಲ.[೫೦]

ಜುನಾಗಡದ ನೆರೆಯಲ್ಲಿ ಮನವದರ್, ಮಂಗ್ರೋಲ್ ಮತ್ತು ಬಾಬರಿಯವಾಡ್ ಎಂಬ ಮೂರು ಪುಟಾಣಿ ರಾಜ್ಯಗಳಿದ್ದುವು. ಅವುಗಳ ಮೇಲೆ ಜುನಾಗಡದ ನವಾಬನಿಗೆ ಹತೋಟಿ ಇತ್ತು. ಆಗಸ್ಟ್ ೧೫ರಂದು ಬ್ರಿಟಿಷ್ ಸಾರ್ವಭೌಮತ್ವ ಅಳಿದಾಗ ಆ ಮೂರು ರಾಜ್ಯಗಳೂ ಸ್ವತಂತ್ರವಾದುವು. ಅವುಗಳ ಪೈಕಿ ಮನವದರ್‌ನ ಖಾನನು ರಾಜ್ಯದ ಬಹು ಸಂಖ್ಯಾತರಾದ ಹಿಂದೂಗಳೊಡನೆ ಸಮಾಲೋಚಿಸದೆ ಪಾಕಿಸ್ತಾನವನ್ನು ಸೇರಲು ಅರ್ಜಿ ಸಲ್ಲಿಸಿದ್ದನು. ಮಂಗ್ರೋಲ್‌ನ ಶೇಖ್‌ನು ತಕ್ಷಣವೇ ಭಾರತಕ್ಕೆ ಸೇರಿಕೊಂಡಿದ್ದನು. ಬಾಬರಿಯವಾಡ್ ಸಹ ಹಾಗೆಯೆ ಮಾಡಿತ್ತು. ಜುನಾಗಡದ ನವಾಬನು ಮಂಗ್ರೋಲ್ ಮತ್ತು ಬಾಬರಿಯವಾಡ್‌ಗಳು ಭಾರತಕ್ಕೆ ಸೇರಿದ್ದನ್ನು ಒಪ್ಪದೆ, ಆ ರಾಜ್ಯಗಳಿಗೆ ತನ್ನ ಸೈನ್ಯವನ್ನು ನುಗ್ಗಿಸಿ ಆಕ್ರಮಿಸಿಕೊಂಡನು. ಅದು ಅವನು ಮಾಡಿದ ಪೆದ್ದ ಕೆಲಸ, ಏಕೆಂದರೆ ಅವನು ಭಾರತದ ಪ್ರದೇಶವನ್ನು ಆಕ್ರಮಣ ಮಾಡಿದಂತಾಯಿತು. ಅದೇ ಸಮಯಕ್ಕೆ ಮನವದರ್‌ನ ಖಾನನು ತನ್ನ ಹಿಂದೂ ಪ್ರಜೆಗಳನ್ನು ಹಿಂಸಿಸತೊಡಗಿದನು. ತಕ್ಷಣ ಪಟೇಲರು ಕ್ರಮ ಕೈಗೊಂಡರು. ಅಕ್ಟೋಬರ್ ೨೨ರಂದು ಪೊಲೀಸ್ ಡಿ.ಐ.ಜಿ. ನೇತೃತ್ವದ ಸಣ್ಣ

ತಂಡ ಮನವದರ್‌ನನ್ನು ಪ್ರವೇಶಿಸಿ ವಶಪಡಿಸಿಕೊಂಡಿತು. ನವೆಂಬರ್ ೧ರಂದು ಬಾಬರಿಯವಾಡ್ ಮತ್ತು ಮಂಗ್ರೋಲ್‌ಗಳನ್ನು ನಮ್ಮ ಸೈನ್ಯ ವಶಪಡಿಸಿಕೊಂಡಿತು.[೫೧]

ಈ ನಡುವೆ ಆರ್ಜಿ ಹುಕ್‌ಮತ್ ಸ್ವಯಂಸೇವಕರು ಜುನಾಗಡ್ ರಾಜ್ಯವನ್ನು ಪ್ರವೇಶಿಸಿದರು. ಅಕ್ಟೋಬರ್ ೨೫ರಂದು ನವಾಬನು ರಾಜ್ಯದ ಆಡಳಿತವನ್ನು ದಿವಾನನಿಗೆ ವಹಿಸಿ ತನ್ನ ಹೆಂಡತಿ ಮಕ್ಕಳು ಮತ್ತು ನಾಯಿಗಳೊಡನೆ ವಿಮಾನದಲ್ಲಿ ಕರಾಚಿಗೆ ಪಲಾಯನ ಮಾಡಿದನು. ಅವನ ಮನೆಯಲ್ಲಿದ್ದ ಒಡವೆ ಮತ್ತು ಖಜಾನೆಯಲ್ಲಿದ್ದ ಹಣವನ್ನೆಲ್ಲವನ್ನು ಎತ್ತಿಕೊಂಡು ಓಡಿಹೋದನು. ಅಕ್ಟೋಬರ್ ೨೭ರಂದು ಭುಟ್ಟೋ ಜಿನ್ನಾಗೆ ಒಂದು ಪತ್ರ ಬರೆದನು:

> ಆದಾಯ ತಳಮಟ್ಟವನ್ನು ಮುಟ್ಟಿದೆ. ಆಹಾರದ ಕೊರತೆ ಚಿಂತಾಜನಕವಾಗಿದೆ. ಮಹಾರಾಜರು ಮತ್ತು ಅವರ ಕುಟುಂಬ ಇಲ್ಲಿಂದ ಹೋಗಬೇಕಾಯಿತು..... ಮುಸ್ಲಿಮರು ಸಹ ಪಾಕಿಸ್ತಾನದ ವಿರುದ್ಧ ತಿರುಗಿ ಬಿದ್ದಿದ್ದಾರೆ. ಜವಾಬ್ದಾರಿಯುತ ಮುಸ್ಲಿಮರು ಮತ್ತು ಇತರರು ನನ್ನನ್ನು ಭೇಟಿ ಮಾಡಿ ಈ ವಿವಾದವನ್ನು ಪರಿಹರಿಸುವಂತೆ ಒತ್ತಾಯಿಸುತ್ತಿದ್ದಾರೆ.

ನವೆಂಬರ್ ೨ರಂದು ಆರ್ಜಿ ಹುಕ್‌ಮತ್ ನವಗಡ್ ಪಟ್ಟಣವನ್ನು ವಶಪಡಿಸಿ ಕೊಂಡಿತು. ನವೆಂಬರ್ ೫ರಂದು ಭುಟ್ಟೋ ಜುನಾಗಡ್ ರಾಜ್ಯ ಪರಿಷತ್ತಿನ ಸಭೆಯನ್ನು ಕರೆದನು. ಆ ಪರಿಷತ್ತು ಪರಿಸ್ಥಿತಿಯನ್ನು ಅವಲೋಕಿಸಿ ಆರ್ಥಿಕ ದಿಗ್ಬಂಧನ, ಅಂತರ ರಾಜ್ಯ ಗೊಂದಲ, ರಾಜ್ಯದ ಹೊರಗಿನ ಗಲಾಟೆ ಮತ್ತು ಸ್ಥಳೀಯ ಆಡಳಿತದ ತೊಂದರೆಗಳಿಂದ ಉದ್ಭವವಾಗುವ ಪರಿಸ್ಥಿತಿಯಿಂದ ರಾಜ್ಯದ ನೀತಿಯನ್ನು ಸಂಪೂರ್ಣ ಬದಲಾಯಿಸಬೇಕು ಮತ್ತು ಪಾಕಿಸ್ತಾನಕ್ಕೆ ಸೇರುವ ಮೊದಲಿನ ನಿರ್ಧಾರವನ್ನು ಬದಲಿಸಬೇಕಾಗಿ ಬಂದರೂ ಎರಡೂ ಡೊಮಿನಿಯನ್‌ಗಳ ಒಡನೆಯ ಸಂಬಂಧವನ್ನು ಮರು ಹೊಂದಾಣಿಕೆ ಮಾಡಬೇಕು – ಎಂದು ತೀರ್ಮಾನಿಸಿತು. ಈ ತೀರ್ಮಾನಕ್ಕೆ ಅನುಗುಣವಾಗಿ ಅಧಿಕಾರವನ್ನು ಹಸ್ತಾಂತರಿಸಲು ಭುಟ್ಟೋ ಶ್ಯಾಮಲದಾಸ್ ಬಳಿಗೆ ನವೆಂಬರ್ ೭ರಂದು ಹಾರ್ವೆ ಜೋನ್ಸ್‌ರವರನ್ನು ಕಳುಹಿಸಿದನು. ಮಾರನೆಯ ದಿನ ಮನಸ್ಸು ಬದಲಾಯಿಸಿ, ಕಾಥ್ಯೆವಾಡದಲ್ಲಿದ್ದ ಭಾರತ ಸರ್ಕಾರದ ಪ್ರಾದೇಶಿಕ ಕಮಿಷನರ್ ಎನ್.ಎಂ. ಬೂಚ್‌ರವರನ್ನು ಆಡಳಿತವನ್ನು ವಹಿಸಿಕೊಳ್ಳುವಂತೆ ಭುಟ್ಟೋ ಕೋರಿದನು. ಶ್ಯಾಮಲದಾಸ್ ಸಹ ಒಪ್ಪಿದರು. ಬೂಚ್ ಮತ್ತು ಭಾರತೀಯ ಸೈನ್ಯದ ಅಧಿಕಾರಿ ಬ್ರಿಗೇಡಿಯರ್ ಗುರುದಯಾಳ್ ಸಿಂಗ್ ನವೆಂಬರ್ ೮ರ ಮಧ್ಯಾಹ್ನ ಕ್ಯಾಪ್ಟನ್ ಹಾರ್ವೆ ಜೋನ್ಸ್

ನಾಯಕತ್ವದ ಸೈನ್ಯದ ತುಕಡಿಯೊಡನೆ ಜುನಾಗಡವನ್ನು ಪ್ರವೇಶಿಸಿ ರಾಜ್ಯದ ಸೈನಿಕರನ್ನು ನಿಶ್ಶಸ್ತ್ರೀಕರಣಗೊಳಿಸಿ ಅಧಿಕಾರವನ್ನು ವಹಿಸಿಕೊಂಡರು. ಭುಟ್ಟೋ ಹಿಂದಿನ ಸಂಜೆಯೇ ಪಾಕಿಸ್ತಾನದ ಕರಾಚಿಗೆ ಹೊರಟು ಹೋಗಿದ್ದನು.

ಜುನಾಗಡ್ ಶರಣಾಗತವಾದ ನಾಲ್ಕು ದಿನಗಳ ನಂತರ ಪಟೇಲರು ಅಲ್ಲಿಗೆ ಬಂದರು. ಅಲ್ಲಿಯ ಬಹಾಲುದ್ದೀನ್ ಕಾಲೇಜು ಮೈದಾನದಲ್ಲಿ ಸೇರಿದ್ದ ಭಾರಿ ಜನ ಸಮೂಹವನ್ನು ಕುರಿತು ಮಾತನಾಡಿ, 'ಭುಟ್ಟೋ ಮತ್ತು ಜೋನ್ಸ್‌ರವರ ವಾಸ್ತವಿಕ ಮನೋಭಾವಕ್ಕೆ ಮೆಚ್ಚುಗೆ ಸೂಚಿಸಿದರು. ಹಾಗೆಯೆ ಭಾರತದ ಸ್ನೇಹ ತೋರಿದ ಸಂಯಮವನ್ನು ಹೊಗಳಿದರು. ಅನಂತರ ಹೈದರಾಬಾದ್ ಬಗೆಗೆ ಪ್ರಸ್ತಾಪಿಸಿ, ಗೋಡೆಯ ಮೇಲಿನ ಬರಹವನ್ನು ಹೈದರಾಬಾದ್ ಗಮನಿಸದೆ ಹೋದರೆ, ಅದೂ ಸಹ ಜುನಾಗಡದ ಹಾದಿಯನ್ನೇ ಹಿಡಿಯಬೇಕಾಗುತ್ತದೆ' ಎಂದರು.

ಸರ್ದಾರರು ಭಾರತ ಸರ್ಕಾರವು ಜುನಾಗಡದ ಜನರ ಅಭಿಪ್ರಾಯಕ್ಕೆ ಬದ್ಧವಾಗಿರುವುದು ಎಂದು ಹೇಳಿ, ಅವರು ಭಾರತಕ್ಕೆ ಸೇರಲು ಬಯಸುತ್ತಾರೋ ಅಥವಾ ಪಾಕಿಸ್ತಾನಕ್ಕೋ ಎಂದು, ನೆರೆದಿದ್ದವರನ್ನು ಕೇಳಿದರು. ತಕ್ಷಣ ಸಾವಿರಾರು ಜನ ತಮ್ಮ ಕೈಗಳನ್ನು ಮೇಲೆತ್ತಿದರು. ಅದನ್ನು ನೋಡಿ ಪಟೇಲರು "ಜನರ ಈ ತೀರ್ಮಾನವನ್ನು ಯಾವ ಹೊರ ಶಕ್ತಿ ಅಥವಾ ಅಂತರರಾಷ್ಟ್ರೀಯ ನ್ಯಾಯಾಲಯವು ಬದಲಾಯಿಸಲಾರದು" ಎಂದರು.

ಅಲ್ಲಿಗೆ ಜನರ ಅಭಿಮತವನ್ನು ಪಡೆದಂತಾಯಿತು. ಆದಾಗ್ಯೂ ೧೯ಳಲರ ಫೆಬ್ರುವರಿ ೨೦ರಂದು ಸೇರ್ಪಡೆಯ ಬಗೆಗೆ ಜನಮತ ಪ್ರಕ್ರಿಯೆ ನಡೆಯಿತು. ಅದರ ವೀಕ್ಷಣೆಗೆ ಬಂದಿದ್ದ ಲಂಡನ್‌ನ 'ಡೈಲಿ ಟೆಲಿಗ್ರಾಫ್' ಮತ್ತು 'ಸಂಡೇ ಟೈಮ್ಸ್'ನ ವರದಿಗಾರರು ಮತ ಚಲಾವಣೆ ಪ್ರಕ್ರಿಯೆ ಸರಿಯಾಗಿ ನಡೆಸಲ್ಪಟ್ಟಿತು ಎಂದು ವರದಿ ಮಾಡಿದರು. ನೋಂದಣಿ ಮಾಡಿಸಿದ ೨,೦೧,೪೫೭ ಮತದಾರರ ಪೈಕಿ ೧,೯೦,೮೭೦ ಮಂದಿ ಮತ ಚಲಾಯಿಸಿದರು. ಅವರ ಪೈಕಿ ಕೇವಲ ೯೧ ಮಂದಿ ಮಾತ್ರ ಪಾಕಿಸ್ತಾನದ ಪರವಾಗಿ ಮತ ಚಲಾಯಿಸಿದ್ದರು. ಅದೇ ದಿನ ಅದೇ ಸಮಯದಲ್ಲಿ ಮನವದರ್, ಮಂಗ್ರೋಲ್ ಮತ್ತು ಬಾಬರಿಯವಾಡ್‌ನಲ್ಲೂ ಜನಮತ ನಡೆಯಿತು. ಚಲಾವಣೆಯಾದ ೩೧,೪೩೪ ಮತಗಳ ಪೈಕಿ ಕೇವಲ ೩೯ ಮಾತ್ರ ಪಾಕಿಸ್ತಾನದ ಪರವಾಗಿದ್ದುವು.[೫೨]

೨೦. ಸುಭದ್ರ ಭಾರತ ಸೌಧದ ನಿರ್ಮಾಣ

ರಕ್ಷಣೆ, ವಿದೇಶಿ ವ್ಯವಹಾರ ಮತ್ತು ಸಂಪರ್ಕ – ಈ ಮೂರು ವಿಷಯಗಳಲ್ಲಿ ರಾಜ್ಯಗಳು ಭಾರತವನ್ನು ಸೇರುವಂತೆ ಮತ್ತು ರಾಜ್ಯಾಂಗ ರಚನಾ ಸಭೆಗೆ ತಮ್ಮ ಪ್ರತಿನಿಧಿಗಳನ್ನು ಕಳುಹಿಸುವಂತೆ ಮಾಡಿದ್ದು ಸರ್ದಾರರು ಭಾರತ ಒಕ್ಕೂಟ ನಿರ್ಮಾಣಕ್ಕೆ ತೆಗೆದುಕೊಂಡ ಮೊದಲ ಹೆಜ್ಜೆ. ಅದು ಅವರು ಭಾರತ ಒಕ್ಕೂಟಕ್ಕೆ ಹಾಕಿದ ಅಸ್ತಿಭಾರ. ಆ ಅಸ್ತಿಭಾರದ ಮೇಲೆ ಸುಭದ್ರ ಭಾರತ ಸೌಧವನ್ನು ನಿರ್ಮಿಸುವುದು ಅವರ ಎರಡನೆಯ ಮತ್ತು ಅಂತಿಮ ಹೆಜ್ಜೆ. ಅದು ಆದ ಮೇಲೆ ಅವರ ಜೀವನದ ಆಕಾಂಕ್ಷೆ ಮತ್ತು ಗುರಿ ಪೂರ್ಣವಾಗುತ್ತಿತ್ತು. ಅವರು ಆ ಕಡೆಗೆ ತಮ್ಮ ಗಮನವನ್ನು ಹರಿಸಿದರು.

ಈ ಎರಡನೆಯ ಹಂತದಲ್ಲಿ ಅವರು ಎರಡು ಕೆಲಸಗಳನ್ನು ಸಾಧಿಸಬೇಕಾಗಿತ್ತು. ಒರಿಸ್ಸ, ಚತ್ತೀಸ್‌ಗರ್, ಕಾಥೈವಾಡ ಮುಂತಾದ ಪ್ರದೇಶಗಳು ಅನೇಕ ಸಣ್ಣ ಸಣ್ಣ ರಾಜ್ಯಗಳಾಗಿ ಅಥವಾ ಜಮೀನ್ದಾರಿಗಳಾಗಿ ಛಿದ್ರವಾಗಿದ್ದುವು. ಈ ಘಟಕಗಳು ತಮ್ಮ ಪ್ರದೇಶದ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಅಭಿವೃದ್ಧಿ ಸಾಧಿಸಲು ಮತ್ತು ತಮ್ಮ ಪ್ರಜೆಗಳಿಗೆ ಆಸ್ಪತ್ರೆ, ಶಾಲೆ, ರಸ್ತೆ, ಬಾವಿ, ನೀರಾವರಿ ಮುಂತಾದ ಸೌಲಭ್ಯಗಳನ್ನು ಒದಗಿಸಲು ಶಕ್ತರಾಗಿರಲಿಲ್ಲ. ಅದರಿಂದ ಅವುಗಳನ್ನು ಪಕ್ಕದ ದೊಡ್ಡ ಪ್ರಾಂತ್ಯಗಳ ಒಡನೆ ಸೇರಿಸುವ ಅಥವಾ ಹಲವಾರು ಸಣ್ಣ ರಾಜ್ಯಗಳನ್ನು ಸೇರಿಸಿ ಒಂದು ದೊಡ್ಡ ರಾಜ್ಯವನ್ನಾಗಿ ಪರಿವರ್ತಿಸುವ ಆ ನಂತರ ಕೇಂದ್ರ ಸರ್ಕಾರದ ಸಂಪೂರ್ಣ ಅಧೀನಕ್ಕೆ ಒಳಪಡಿಸುವ ಮತ್ತು ಭಾರತದೊಡನೆ ವಿಲೀನಗೊಳಿಸಿ ಅದರ ಅವಿಭಾಜ್ಯ ಅಂಗವನ್ನಾಗಿ ಮಾಡುವ ಯೋಜನೆಯನ್ನು ಪಟೇಲರು ರೂಪಿಸಿದರು. ಅದು

ಅಷ್ಟು ಸುಲಭದ ಕೆಲಸವಾಗಿರಲಿಲ್ಲ. ಏಕೆಂದರೆ ಈ ಸಣ್ಣ ಸಣ್ಣ ರಾಜ್ಯಗಳ ನಡುವೆ ಆಂತರಿಕ ಪೈಪೋಟಿ, ಕಚ್ಚಾಟ ಮತ್ತು ವೈಮನಸ್ಸು ಇತ್ತು. ಅವರೆಲ್ಲರ ಮನಸ್ಸನ್ನು ಪರಿವರ್ತಿಸಿ, ಒಲಿಸಿ ಮತ್ತು ಅವರಲ್ಲಿ ಒಮ್ಮತ ಮೂಡಿಸಿ ಒಟ್ಟಿಗೆ ಸೇರಿಸಬೇಕಾಗಿತ್ತು. ಬ್ರಿಟಿಷರ ಆಳ್ವಿಕೆ ಇದ್ದಾಗ ರಾಜರು ಪ್ರಜಾಂದೋಲನವನ್ನು ಬ್ರಿಟಿಷ್ ಸೈನ್ಯದ ಸಹಾಯದಿಂದ ಹತ್ತಿಕ್ಕಬಹುದಾಗಿತ್ತು. ಆದರೆ ಬ್ರಿಟಿಷ್ ಸಾರ್ವಭೌಮತ್ವ ಅಳಿದ ಮೇಲೆ ಆ ಸೌಲಭ್ಯ ಇಲ್ಲವಾಯಿತು. ಆ ನಂತರದ ಕೇಂದ್ರ ಸರ್ಕಾರ ಜನರ ಸರ್ಕಾರ. ಅದು ರಾಜರ ನೆರವಿಗೆ ಹೋಗುವುದಿಲ್ಲ. ಅದರಿಂದ ರಾಜರ ಮತ್ತು ಪ್ರಜೆಗಳ ನಡುವಣ ಘರ್ಷಣೆಯನ್ನು ಶೀಘ್ರವಾಗಿ ಪರಿಹರಿಸುವುದು ಸರ್ದಾರರಿಗೆ ಅನಿವಾರ್ಯವಾಯಿತು. ಅವರು ತಮ್ಮ ಅಧಿಕಾರವನ್ನು ಜನರಿಗೆ ಹಸ್ತಾಂತರಿಸುವಂತೆ ಮನ ಒಲಿಸಬೇಕಾಗಿತ್ತು. ಇದು ಸರ್ದಾರರು ಕೈಗೊಳ್ಳಬೇಕಾಗಿದ್ದ ಒಂದು ಕಾರ್ಯ. ಮತ್ತೊಂದು ಕಾರ್ಯ, ದೊಡ್ಡ ಪ್ರಾಂತ್ಯಗಳ ಅರಸರ ಮನ ಒಲಿಸಿ ಅವರು ಜವಾಬ್ದಾರಿ ಸರ್ಕಾರವನ್ನು ರಚಿಸುವಂತೆ ಮಾಡಿ ಅವರನ್ನು ಭಾರತ ಒಕ್ಕೂಟದಲ್ಲಿ ಪೂರ್ಣವಾಗಿ ಲೀನಗೊಳಿಸುವುದಾಗಿತ್ತು.

ಈ ಕಾರ್ಯಗಳ ಯಶಸ್ವಿ ನಿರ್ವಹಣೆಗೆ ಸರ್ದಾರರಿಗೆ ಒಬ್ಬ ಧಕ್ಷ ಕಾರ್ಯದರ್ಶಿ – ವಿ.ಪಿ. ಮೆನನ್ – ಸಿಕ್ಕಿದ್ದರು. ಮೆನನ್‌ರವರು ಸರ್ದಾರರನ್ನು ಪ್ರತಿ ದಿನ ಕೊನೆಯ ಪಕ್ಷ ಎರಡು ಬಾರಿ ಭೇಟಿ ಮಾಡುತ್ತಿದ್ದರು. ಬೆಳಗ್ಗೆ ಭೇಟಿ ಮಾಡಿ ಅಂದು ನಿರ್ವಹಿಸಬೇಕಾದ ಕೆಲಸಗಳ ಬಗೆಗೆ ಸರ್ದಾರರ ಅಭಿಪ್ರಾಯ ಮತ್ತು ತೀರ್ಮಾನಗಳನ್ನು ಪಡೆದುಕೊಳ್ಳುತ್ತಿದ್ದರು. ಸಂಜೆ ಮತ್ತೆ ಭೇಟಿ ಮಾಡಿ ಆ ತೀರ್ಮಾನಗಳನ್ನು ಜಾರಿ ಮಾಡಿದ ಬಗೆಗೆ ವರದಿ ಒಪ್ಪಿಸುತ್ತಿದ್ದರು. ಇಷ್ಟರ ಜೊತೆಗೆ ಪಟೇಲರು ಎಲ್ಲೇ ಇದ್ದರೂ ಪ್ರತಿ ರಾತ್ರಿ ೯–೩೦ರಿಂದ ೧೦ ಘಂಟೆಯ ಒಳಗೆ ಮೆನನ್‌ರವರಿಗೆ ದೂರವಾಣಿ ಕರೆ ಮಾಡುತ್ತಿದ್ದರು. 'ರಾಜ್ಯಗಳ ಕ್ಷೇತ್ರದಲ್ಲಿ ಎಲ್ಲವೂ ಶಾಂತವಾಗಿದೆ' ಅನ್ನುವ ರೀತಿಯಲ್ಲಿ ಅವರಿಗೆ ವಿವರಣೆಯನ್ನು ಮೆನನ್ ಕೊಡಬೇಕಾಗಿತ್ತು. ಆ ನಂತರವೇ ಅವರು ನಿದ್ರಿಸಲು ಸಾಧ್ಯವಿದ್ದುದು.

ಮೆನನ್‌ರವರು ಸರ್ದಾರರ ಸೂಚನೆಯಂತೆ ವಿವಿಧ ರಾಜ್ಯಗಳಿಗೆ ಭೇಟಿ ಮಾಡಿ, ರಾಜರೊಡನೆ ಚರ್ಚೆ, ವಿಷಯ ವಿಶ್ಲೇಷಣೆ, ಅನುಮಾನ ಪರಿಹಾರ ಮುಂತಾದ ಕಾರ್ಯಗಳನ್ನು ಬಹಳ ಸಂತೋಷ ಮತ್ತು ಆಸ್ಥೆಯಿಂದ ಮಾಡುತ್ತಿದ್ದರು. ಪಟೇಲರು ಸಹ ಅವರನ್ನು ಬಹಳ ಪ್ರೀತಿಯಿಂದ ಮತ್ತು ವಿಶ್ವಾಸದಿಂದ ಕಾಣುತ್ತಿದ್ದರು.

ಪಟೇಲ್ ಮತ್ತು ಮೆನನ್ ಹಗಲಿರುಳು ದುಡಿದರು. ಪಟೇಲರು ಈ ಕೆಲಸದ ಜೊತೆಗೆ ಗೃಹ ಮಂತ್ರಿಯಾಗಿ, ವಾರ್ತಾ ಪ್ರಸಾರ ಮಂತ್ರಿಯಾಗಿ ಮತ್ತು ದೇಶ

ವಿಭಜನಾ ಉಸ್ತುವಾರಿಯ ಭಾರತದ ಪ್ರತಿನಿಧಿಯಾಗಿ ಬಹಳ ಗಂಭೀರ ಮತ್ತು ಗುರುತರವಾದ ಕೆಲಸಗಳನ್ನು ಸಹ ಏಕಕಾಲದಲ್ಲಿ ನಿರ್ವಹಿಸಬೇಕಾಗಿತ್ತು.

(ಆದಾಗ್ಯೂ ಭಾರತ ಒಕ್ಕೂಟ ನಿರ್ಮಾಣದ ಕೈಂಕರ್ಯವನ್ನು ತಾಳ್ಮೆಯಿಂದ, ಆಸ್ಥೆಯಿಂದ ಶ್ರಮವಹಿಸಿ ಯಶಸ್ವಿಯಾಗಿ ಅವರು ನಿರ್ವಹಿಸಿದರು. ಆ ಸಂದಿಗ್ಧ ಕಾಲದಲ್ಲಿ ಪಟೇಲ್‌ರಂತಹ ದೃಢ ಮನಸ್ಸಿನ ಚಾಣಾಕ್ಷ ಶ್ರಮಜೀವಿ ಮುತ್ಸದ್ದಿಯನ್ನು ಪಡೆದಿದ್ದುದು ದೇಶದ ಜನರ ಪುಣ್ಯ – ಲೇಖಕ)

ಪಟೇಲರು ರಾಜ್ಯಗಳ ಏಕೀಕರಣ ಮತ್ತು ಭದ್ರೀಕರಣ ಅಥವಾ ಗಟ್ಟೀಕರಣವನ್ನು ಒರಿಸ್ಸ ಮತ್ತು ಚತ್ತೀಸ್‌ಗಡದ ರಾಜ್ಯಗಳಿಂದ ಆರಂಭಿಸಿದರು.

ಅ) ಒಡಿಸ್ಸ ಮತ್ತು ಚತ್ತೀಸ್‌ಗಡ ರಾಜ್ಯಗಳು

ಒಡಿಸ್ಸ ಪ್ರಾಂತ್ಯದ ಸುತ್ತ ಮುತ್ತ ಎ ವರ್ಗದ ೧೧, ಬಿ ವರ್ಗದ ೧೨ ಮತ್ತು ಸಿ ವರ್ಗದ ೩ – ಒಟ್ಟು ೨೬ ರಾಜ್ಯಗಳಿದ್ದುವು. ಅವುಗಳ ಪೈಕಿ ಅತ್ಯಂತ ದೊಡ್ಡದು ೪೦೦೦ ಚದರ ಮೈಲಿ ವಿಸ್ತೀರ್ಣದ ಸುಮಾರು ೧೦ ಲಕ್ಷ ಜನಸಂಖ್ಯೆಯ ಮಯೂರ್ ಭಂಜ್. ಅತ್ಯಂತ ಚಿಕ್ಕದು ತಿಗಿರಿಯ. ಅದರ ವಿಸ್ತೀರ್ಣ ಕೇವಲ ೪೬ ಚದರ ಮೈಲಿ ಮತ್ತು ಜನಸಂಖ್ಯೆ ಸುಮಾರು ೨೦,೦೦೦.

ಸೆಂಟ್ರಲ್ ಪ್ರಾವಿನ್ಸಸ್ ಪ್ರಾಂತ್ಯದ (ಈಗಿನ ಮಧ್ಯಪ್ರದೇಶ) ಪಕ್ಕದಲ್ಲಿದ್ದ ರಾಜ್ಯಗಳ ಸಂಖ್ಯೆ ೧೫. ಅವನ್ನು ಚತ್ತೀಸ್‌ಗರ್ ರಾಜ್ಯಗಳು ಎಂದು ಕರೆಯುತ್ತಿದ್ದರು. ಅವುಗಳಲ್ಲಿ ದೊಡ್ಡದು ಬಸ್ತಾರ್. ಅದರ ವಿಸ್ತೀರ್ಣ ೧೩,೦೦೦ ಚದರ ಮೈಲಿ ಮತ್ತು ಜನಸಂಖ್ಯೆ ಸುಮಾರು ೫ ಲಕ್ಷ. ಆ ರಾಜ್ಯಗಳ ಪೈಕಿ ಅತ್ಯಂತ ಚಿಕ್ಕದು ೧೩೮ ಚದರ ಮೈಲಿ ವಿಸ್ತೀರ್ಣದ ಮತ್ತು ಸುಮಾರು ಒಂದು ಲಕ್ಷ ಪ್ರಜಾಸಂಖ್ಯೆಯ ಸಾಕ್ತಿ.

ಅಲ್ಲಿಯ ಕೆಲವು ರಾಜ್ಯಗಳಲ್ಲಿ ರಾಜ ಮತ್ತು ಪ್ರಜೆಗಳ ನಡುವೆ ತೊಂದರೆ ಇದೆ, ಕೇಂದ್ರ ಸರ್ಕಾರ ಮಧ್ಯೆ ಪ್ರವೇಶಿಸಬೇಕು – ಎಂದು, ಒರಿಸ್ಸ ಮತ್ತು ಸೆಂಟ್ರಲ್ ಪ್ರಾವಿನ್ಸಸ್‌ನ ಪ್ರಧಾನ ಮಂತ್ರಿಗಳಿಂದ ಒತ್ತಾಯ ಬರುತ್ತಿತ್ತು. ಆದರೆ ಸ್ವಾತಂತ್ರ್ಯ ಬಂದ ಮೇಲೆ ನಿರಾಶ್ರಿತರ ಸಮಸ್ಯೆ, ಜುನಾಗಡ ಸಮಸ್ಯೆ, ಕಾಶ್ಮೀರ ಸಮಸ್ಯೆ ಮೊದಲಾದ ತುರ್ತು ಸಮಸ್ಯೆಗಳನ್ನು ನಿಭಾಯಿಸಬೇಕಾಗಿ ಬಂದು ಕಾಲಾವಕಾಶವಿಲ್ಲದ್ದರಿಂದ ಸರ್ದಾರರು ಆ ಕಡೆ ಗಮನ ಹರಿಸಲಾಗಲಿಲ್ಲ. ಆದಾಗ್ಯೂ ಆ ರಾಜ್ಯಗಳೊಡನೆ ಸಂಪರ್ಕ ಕಲ್ಪಿಸುವುದಕ್ಕಾಗಿ, ಮೊದಲನೆಯ ಹೆಜ್ಜೆಯಾಗಿ ಒರಿಸ್ಸ ರಾಜ್ಯಗಳಿಗೆ ಸಂಬಲ್ಪುರದಲ್ಲಿ ಒಬ್ಬ ರೀಜನಲ್ ಕಮಿಷನರ್‌ನನ್ನು ಮತ್ತು

ಚತ್ತೀಸ್‌ಗರ್ ರಾಜ್ಯಗಳಿಗೆ ರಾಯಪುರದಲ್ಲಿ ಒಬ್ಬ ಡೆಪ್ಯುಟಿ ರೀಜನಲ್ ಕಮಿಷನರ್‌ನನ್ನು ನಿಯಮಿಸಿದರು.

ನಂತರ, ಡಿಸೆಂಬರ್ ೧೩ರಂದು ಪಟೇಲರು ತಮ್ಮ ಕಾರ್ಯದರ್ಶಿ ವಿ.ಪಿ. ಮೆನನ್ ಒಡನೆ ಒರಿಸ್ಸದ ಕಟಕ್‌ಗೆ ಹೋದರು. ಒರಿಯ ಭಾಷೆಯ ಜನರ ರಾಜ್ಯಗಳನ್ನು ಒರಿಸ್ಸ ಪ್ರಾಂತ್ಯದೊಡನೆ ವಿಲೀನಗೊಳಿಸಲು ಅವರು ಆಲೋಚಿಸಿದ್ದರು. ಅದೇ ಉತ್ತಮವಾದ ಹಾದಿಯಾಗಿತ್ತು. ಆದರೆ ಅಲ್ಲೊಂದು ತೊಡಕು ಇತ್ತು. ಅವರು ಜುಲೈ ೫ರಂದು ರಾಜ್ಯಗಳ ಇಲಾಖಾ ಮಂತ್ರಿಯಾಗಿ ಅಧಿಕಾರ ವಹಿಸಿ ಕೊಂಡು ನೀಡಿದ ಪ್ರಕಟಣೆಯಲ್ಲಿ 'ರಕ್ಷಣೆ, ವಿದೇಶಿ ವ್ಯವಹಾರ ಮತ್ತು ಸಂಪರ್ಕದ ಮೂರು ವಿಷಯಗಳಲ್ಲಿ ಮಾತ್ರ ರಾಜ್ಯಗಳು ಭಾರತದೊಡನೆ ಸೇರ್ಪಡೆಯಾಗ ಬೇಕೆಂದೂ, ಮಿಕ್ಕ ವಿಷಯಗಳಲ್ಲಿ ಭಾರತ ಸರ್ಕಾರವು ಅವರ ಸ್ವಾತಂತ್ರ್ಯವನ್ನು ಗೌರವಿಸುವುದೆಂದೂ' ಆಶ್ವಾಸನೆ ನೀಡಿದ್ದರು. ಅದು ಜುಲೈನಲ್ಲಿ. ಅದಾದ ಕೇವಲ ಐದು ತಿಂಗಳಲ್ಲಿ ಡಿಸೆಂಬರ್‌ನಲ್ಲಿ 'ನೀವು ನೆರೆಯ ಪ್ರಾಂತ್ಯದೊಡನೆ ವಿಲೀನವಾಗಿ ಎಂದು ಹೇಳಿದರೆ ಅವರ ಪೂರ್ಣ ಅಧಿಕಾರವೇ ಹೊರಟುಹೋಗುವುದರಿಂದ, ಹಾಗೆ ಹೇಳುವುದು ನ್ಯಾಯವೆ? ಎನ್ನುವ ಪ್ರಶ್ನೆ ಎದ್ದಿತು. ಆದರೆ ಜನರ ಆಕ್ರೋಶ ದಿಂದ ಆ ರಾಜರನ್ನು ರಕ್ಷಿಸಬೇಕಾದರೆ ವಿಲೀನ ಒಂದೇ ಮಾರ್ಗ. ಅದರಿಂದ ಪಟೇಲರು ರಾಜ್ಯ ಕಳೆದುಕೊಳ್ಳುವ ಎಲ್ಲಾ ಅರಸರಿಗೆ ವಂಶಪಾರಂಪರ್ಯವಾಗಿ ತೆರಿಗೆರಹಿತ ರಾಜಧನ, ಖಾಸಗಿ ಆಸ್ತಿ ಮತ್ತು ವೈಯುಕ್ತಿಕ ಸವಲತ್ತು ಕೊಡಲು ತೀರ್ಮಾನಿಸಿದರು.

ಮೊದಲು ಒರಿಸ್ಸ ಪ್ರಾಂತ್ಯದ ಗೌರ್ನರ್ ಮತ್ತು ಮಂತ್ರಿಗಳ ಒಡನೆ ಕಟಕ್‌ನಲ್ಲಿ ಸಭೆ ನಡೆಸಿ ತಮ್ಮ ಯೋಜನೆಯನ್ನು ಮೆನನ್‌ರವರು ವಿವರಿಸಿದರು. ಆ ಸಭೆಯಲ್ಲಿ, ಒರಿಸ್ಸ ಪ್ರಾಂತ್ಯದೊಡನೆ ಬಿ ಮತ್ತು ಸಿ ವರ್ಗದ ಸಣ್ಣ ರಾಜ್ಯಗಳನ್ನು ವಿಲೀನಗೊಳಿಸು ವುದಲ್ಲದೆ ಎ ವರ್ಗದ ದೊಡ್ಡ ರಾಜ್ಯಗಳನ್ನೂ ಸಹ ಅದೇ ರೀತಿ ವಿಲೀನಗೊಳಿಸಲು ಪ್ರಯತ್ನಿಸಬೇಕೆಂದು ತೀರ್ಮಾನಿಸಲಾಯಿತು.

ಪಟೇಲರು ೧೯೪೭ರ ಡಿಸೆಂಬರ್ ೧೪ರಂದು ೧೦ ಘಂಟೆಗೆ ಬಿ ಮತ್ತು ಸಿ ವರ್ಗದ ರಾಜರೊಡನೆ ಸಭೆಯನ್ನು ಪ್ರಾರಂಭಿಸುತ್ತ ಒಂದು ಮನಮುಟ್ಟುವ ಭಾಷಣ ಮಾಡಿದರು. ಅವರು ರಾಜರನ್ನು ಕುರಿತು, "ಒರಿಸ್ಸದಲ್ಲಿ ರಾಜರ ಹಾಗೂ ಅವರ ಪ್ರಜೆಗಳ ಸುರಕ್ಷತೆ ಅಪಾಯದಲ್ಲಿದೆ. ಅದಕ್ಕೆ ಪರಿಹಾರವನ್ನು ತಕ್ಷಣ ಕಂಡುಹಿಡಿಯಬೇಕಾಗಿದೆ. ಸ್ನೇಹಪೂರ್ಣ ಸಲಹೆಯನ್ನು ನೀಡಲು ನಾನು ಕಟಕ್‌ಗೆ ಬಂದಿದ್ದೇನೆ. ಹಿಂದಿನ ಸಾರ್ವಭೌಮತ್ವ ಅಥವಾ ಬೇರೆ ಯಾವುದೇ ವಿದೇಶಿ

ಶಕ್ತಿಯ ಪರವಾಗಿ ಬಂದಿಲ್ಲ, ಆದರೆ ಕುಟುಂಬದ ಸಮಸ್ಯೆಯನ್ನು ಪರಿಹರಿಸುವುದಕ್ಕೆ ಕುಟುಂಬದ ಸದಸ್ಯನಾಗಿ ಬಂದಿದ್ದೇನೆ. ಒರಿಸ್ಸವು, ಒಟ್ಟಾಗಿ ಸೇರಿದ ಮತ್ತು ಅಚ್ಚುಕಟ್ಟಾದ ಪೂರ್ಣವಾಗಿದ್ದರೆ, ವಿವಿಧ ವ್ಯಾಪ್ತಿ ಮತ್ತು ಅಧಿಕಾರಗಳಲ್ಲಿ ಹರಿದು ಅತ್ತ ಇತ್ತ ಹಂಚಿ ಹೋಗಿಲ್ಲದಿದ್ದರೆ, ಮುಂದುವರೆಯುವುದು ಮತ್ತು ಅಭಿವೃದ್ಧಿ ಹೋಂದುವುದು. ಈ ರಾಜ್ಯಗಳಲ್ಲಿ ಸಂಪನ್ಮೂಲಗಳಿರಲಿಲ್ಲ, ಮಾನವಶಕ್ತಿ ಇರಲಿಲ್ಲ ಮತ್ತು ಸುಭದ್ರವಾದ ಸರ್ಕಾರವನ್ನು ಕಟ್ಟಲು ಬೇಕಾದ ಯಾವ ಸಾಧನವೂ ಇರಲಿಲ್ಲ. ಅದರಿಂದ ಅವರು ಜವಾಬ್ದಾರಿ ಸರ್ಕಾರವನ್ನು ನಡೆಸಲು ಸಾಧ್ಯವಿರಲಿಲ್ಲ. ಇತ್ತೀಚೆಗೆ ಭಾರತದ ರಾಜ್ಯಗಳಲ್ಲಿ ಜವಾಬ್ದಾರಿ ಸರ್ಕಾರದ ರಚನೆಗೆ ಗಿಣಿ ಕೂಗು ಕೇಳಿಬರುತ್ತಿದೆ. ಕೆಲವು ರಾಜರು ತಮ್ಮ ಸ್ಥಾನವನ್ನು ರಕ್ಷಿಸಿಕೊಳ್ಳುವುದಕ್ಕಾಗಿ ಜನಸಂಖ್ಯೆಯ ಒಂದು ವರ್ಗವನ್ನು ಮತ್ತೊಂದು ವರ್ಗದ ಮೇಲೆ ಎತ್ತಿಕಟ್ಟುತ್ತಿದ್ದಾರೆ. ಪುಟಾಣಿ ರಾಜ್ಯಗಳಲ್ಲಿ ಜವಾಬ್ದಾರಿ ಸರ್ಕಾರಕ್ಕೆ ಯಾವ ಅರ್ಥವೂ ಇಲ್ಲ" ಎಂದರು.

ಅನಂತರ ಪಟೇಲರು ರಾಜರಿಗೆ, "ಈ ತೊಂದರೆಗಳ ಕಾಲದಲ್ಲಿ ನಿಮ್ಮನ್ನು ನೀವೆ ಅಪಾಯಕ್ಕೆ ಒಡ್ಡುವುದನ್ನು ನಿಲ್ಲಿಸಿ ಮತ್ತು ನಿಮ್ಮ ಅಧಿಕಾರವನ್ನು ತೊರೆಯಿರಿ. ಅದಕ್ಕೆ ಪ್ರತಿಯಾಗಿ ಭಾರತ ಸರ್ಕಾರವು ನಿಮ್ಮ ಸವಲತ್ತುಗಳು, ಗೌರವ ಮತ್ತು ಘನತೆಯ ಖಾತರಿಯನ್ನು ನೀಡುತ್ತದೆ. ಹೆಚ್ಚುತ್ತಿರುವ ಜನಗಳ ಅತೃಪ್ತಿಯು ತಕ್ಷಣದ ಪರಿಹಾರಕ್ಕಾಗಿ ಕೂಗುತ್ತಿದೆ," ಎಂದು ಬುದ್ಧಿವಾದ ಹೇಳಿದರು.

ಪಟೇಲರು ಕೊನೆಯಲ್ಲಿ, "ನೀವು ನನ್ನ ಮಾತಿಗೆ ಕಿವಿ ಕೊಡದಿದ್ದರೆ, ಜನರು ನಿಮ್ಮನ್ನು ಓಡಿಸಿ, ಕೊನೆಗೆ ನೀವು ದೆಹಲಿಗೆ ಬರುತ್ತೀರಿ. ಅಷ್ಟು ಹೊತ್ತಿಗೆ ಪರಿಸ್ಥಿತಿ ಎಷ್ಟು ಕೈಮೀರಿರುತ್ತದೆಂದರೆ ನಾನು ನಿಮಗೆ ಏನೂ ಸಹಾಯ ಮಾಡುವ ಸ್ಥಿತಿಯಲ್ಲಿ ಇರುವುದಿಲ್ಲ," ಎಂದು ರಾಜರನ್ನು ಎಚ್ಚರಿಸಿದರು.

ಅನಂತರ ವಿಲೀನ ಒಪ್ಪಂದದ ಕರಡನ್ನು ರಾಜರಿಗೆ ನೀಡಲಾಯಿತು. ಒಂದಷ್ಟು ಅವ್ಯವಸ್ಥಿತ ಚರ್ಚೆ ನಡೆಯಿತು. ರಾಂಪುರದ ಯುವಕ ರಾಜನು, 'ನಾನು ಈಗಾಗಲೇ ಜವಾಬ್ದಾರಿ ಸರ್ಕಾರವನ್ನು ನೀಡಿದ್ದೇನೆ' ಎಂದನು. "ಅಷ್ಟು ಪುಟಾಣಿ ರಾಜ್ಯದಲ್ಲಿ ಜವಾಬ್ದಾರಿ ಸರ್ಕಾರ ಎಂತು ಸಾಧ್ಯ?" ಎಂದರು ಪಟೇಲ್. ನಂತರ ಆ ರಾಜನು, "ಒರಿಸ್ಸ ಶಾಸನ ಸಭಾ ಚುನಾವಣೆಯಲ್ಲಿ ನಾನು ಸ್ಪರ್ಧಿಸಬಹುದೆ?" ಎಂದು ಪ್ರಶ್ನಿಸಿದನು. "ಸ್ಪರ್ಧಿಸಬಹುದು," ಎಂದುತ್ತರಿಸಿದರು ಪಟೇಲ್. ನಂತರ, "ಸಣ್ಣ ಬಾವಿಯಲ್ಲಿ ಮುಳುಗುವುದಕ್ಕೆ ಬದಲಾಗಿ ಸಾಗರದಲ್ಲಿ ಈಜುವ ಹಕ್ಕು ನಿಮಗಿದೆ" ಎಂದರು ಅವರು. ಕೆಲವು ರಾಜರು ರಾಜಧನವನ್ನು ಹೆಚ್ಚಿಸುವಂತೆ ಕೋರಿದರು. ಪಟೇಲರು ರಾಜಧನವನ್ನು ನಿಗದಿ ಮಾಡುವ ವಿಧಾನವನ್ನು ವಿವರಿಸಿ,

"ರಾಜಧನವನ್ನು ವಂಶಪಾರಂಪರ್ಯವಾಗಿ ಕೊಡಬೇಕಾದರೆ ಅದು ಟೀಕೆಗೆ ತುತ್ತಾಗುವಷ್ಟು ಜಾಸ್ತಿ ಇರಬಾರದು ಎಂದರು. ಕೆಲವರು ಒಪ್ಪಂದದ ಕರಡಿನ ಬಗೆಗೆ ಕಾಲಾವಕಾಶವನ್ನು ಕೋರಿದರು. ತಾವೇನಾದರೂ ಅಧಿಕಾರದಲ್ಲಿ ಮುಂದುವರಿಯಬೇಕಾದರೆ ಜನರ ಬೆಂಬಲ ಮತ್ತು ಕೇಂದ್ರ ಸರ್ಕಾರದ ಬೆಂಬಲವೆರಡೂ ಇರಬೇಕು. ಆದರೆ ಅವೆರಡೂ ತಮಗೆ ಇಲ್ಲ ಎನ್ನುವುದು ರಾಜರಿಗೆ ಅರ್ಥವಾಗಿತ್ತು. ಈಗ ಕೇಂದ್ರ ಸರ್ಕಾರ ರಾಜಧನ ಮತ್ತು ಇತರ ಸವಲತ್ತುಗಳನ್ನು ಖಾತರಿ ಮಾಡಿದೆ. ಮುಂದೆ ಜನರ ಚಳವಳಿಯ ಫಲವಾಗಿ ಕೇಂದ್ರ ಸರ್ಕಾರವು ತಮ್ಮ ರಾಜ್ಯವನ್ನು ವಶಪಡಿಸಿಕೊಂಡರೆ, ಅದೂ ಸಿಗುವುದಿಲ್ಲ – ಎನ್ನುವುದೂ ಸಹ ಅವರಿಗೆ ಅರ್ಥವಾಯಿತು. ಅಂದು ಸಂಜೆ ಮತ್ತೆ ಸಭೆ ಸೇರಿದಾಗ ಸರ್ದಾರರು ಭಾಗವಹಿಸಲಿಲ್ಲ. ೧೫ ಅರಸರ ಪೈಕಿ ೧೨ ಮಂದಿ ಒಪ್ಪಂದಕ್ಕೆ ಸಹಿ ಮಾಡಿದರು. ಮೂವರು ಅನಾರೋಗ್ಯದಿಂದ ಬಂದಿರಲಿಲ್ಲ.

ಮಧ್ಯಾಹ್ನ ಭೋಜನದ ನಂತರ 'ಎ' ವರ್ಗದ ರಾಜ್ಯಗಳ ಅರಸರೊಡನೆ ಸರ್ದಾರರ ಸಭೆ ನಡೆಯಿತು. ಸರ್ದಾರರು ಬೆಳಗಿನ ಸಭೆಯಲ್ಲಿ ವಿವರಿಸಿದಂತೆಯೇ ಇಲ್ಲೂ ವಿವರಿಸಿದರು. ಕೊನೆಯಲ್ಲಿ 'ಒರಿಸ್ಸ ರಾಜ್ಯಗಳು ಶರೀರದಲ್ಲಿನ ಹುಣ್ಣುಗಳಂತೆ. ಅವನ್ನು ಗುಣಪಡಿಸಬೇಕು, ಇಲ್ಲಾ ಕತ್ತರಿಸಿ ಹಾಕಬೇಕು. ನೀವು ನನ್ನ ಮಾತನ್ನು ಕೇಳಿದರೆ ಗುಣಪಡಿಸಬಹುದು, ಇಲ್ಲದೆ ಹೋದರೆ ಅವರು ಜನರಿಂದ ಎತ್ತಿ ಎಸೆಯಲ್ಪಡುವರು," ಎಂದರು. ರಾಜರು ಅನೇಕ ಪ್ರಶ್ನೆಗಳನ್ನು ಕೇಳಿದರು. ಎಲ್ಲಕ್ಕೂ ತಾಳ್ಮೆಯಿಂದ ಉತ್ತರ ನೀಡಲಾಯಿತು. ಆದಾಗ್ಯೂ, 'ಎ' ವರ್ಗದ ಅರಸರು ವಿಲೀನಕ್ಕೆ ಒಪ್ಪಲಿಲ್ಲ. ಬೇಸರದಿಂದ ಸರ್ದಾರರು ರಾಜರಿಗೆ, "ಸ್ನೇಹಭಾವದಿಂದ ನಾನು ಹೇಳಿದ ಬುದ್ಧಿವಾದವನ್ನು ನೀವು ಆಲಿಸದಿದ್ದರೆ, ಸಮಸ್ಯೆಯು ಹಾಗೆಯೇ ಉಳಿಯುತ್ತದೆ. ಅದರ ಪರಿಣಾಮ ಏನು ಅನ್ನುವುದನ್ನು ನಾನು ಹೇಳಲಾರೆ," ಎಂದರು. ಆಗ ಮೆನನ್‌ರವರು ರಾಜರಿಗೆ, "ಕರಡು ಒಪ್ಪಂದವನ್ನು ನೀವು ಕೆಲವು ಘಂಟೆಗಳ ಕಾಲ ಪರಿಶೀಲಿಸಿ. ನಾವು ಮತ್ತೆ ರಾತ್ರಿ ೧೦ ಘಂಟೆಗೆ ಸೇರೋಣ" ಎಂದರು.

ಅಂದು ರಾತ್ರಿ ಎ ವರ್ಗದ ಎಂಟು ಮಂದಿ ರಾಜರು ಮೆನನ್‌ರವರನ್ನು ಭೇಟಿ ಮಾಡಿದರು. ಸರ್ದಾರರು ಭಾಗವಹಿಸಲಿಲ್ಲ. ರಾಜರ ಅನುಮಾನಗಳನ್ನು ಮತ್ತು ತಕರಾರುಗಳನ್ನು ಪರಿಹರಿಸಲು ಮೆನನ್ ಪ್ರಯತ್ನಿಸಿದರು. ಆದರೂ ರಾಜರು ತಮ್ಮ ಮನಸ್ಸು ಬದಲಾಯಿಸಲಿಲ್ಲ. ರಾತ್ರಿ ೧೨ ಘಂಟೆಯಾದದ್ದರಿಂದ ಸಭೆಯನ್ನು ಮಾರನೆ ಬೆಳಗ್ಗೆಗೆ ಮುಂದೂಡಲಾಯಿತು.

ಒರಿಸ್ಸದಲ್ಲಿ ಸಂಪೂರ್ಣ ಯಶಸ್ವಿಯಾಗುವುದು ಸರ್ದಾರ್ ಮತ್ತು ಮೆನನ್‌ರವರಿಗೆ ಅತ್ಯಾವಶ್ಯಕವಾಗಿತ್ತು. ಇಲ್ಲಿಯ ಫಲಿತಾಂಶ ಪೂರ್ವ ನಿದರ್ಶನ ಆಗುತ್ತಿತ್ತು. ಅದರಿಂದ ಇಲ್ಲಿ ವಿಫಲವಾದರೆ ಇತರ ರಾಜ್ಯಗಳಲ್ಲೂ ವಿಫಲರಾಗುವ ಸಂಭವ ಜಾಸ್ತಿ ಇತ್ತು. ಅದರಿಂದ ಮೆನನ್‌ಗೆ ಚಿಂತೆಯಾಯಿತು. ಅವರು ಡೆಂಕನಾಲ್‌ನ ರಾಜನನ್ನು ತಮ್ಮ ವಿಶ್ವಾಸಕ್ಕೆ ತೆಗೆದುಕೊಂಡರು. ಅವನೊಬ್ಬ ಪ್ರಮುಖ ರಾಜ. ಆದರೆ ಅವನ ರಾಜ್ಯದಲ್ಲಿ ಪ್ರಜಾಮಂಡಲದ ಚಳವಳಿ ಜೋರಾಗಿತ್ತು. ಕೇಂದ್ರದ ನೆರವಿಲ್ಲದೆ ಅವನಿಗೆ ಉಳಿಗಾಲವಿರಲಿಲ್ಲ. ಮೆನನ್‌ರವರು, 'ನೀವು ವಿಲೀನಕ್ಕೆ ಒಪ್ಪಿದರೆ ನಿಮ್ಮ ಎಲ್ಲಾ ನ್ಯಾಯ ಅನ್ನಿಸಬಹುದಾದ ಬೇಡಿಕೆಗಳನ್ನು ಪೂರೈಸಲಾಗುವುದು' ಎಂದರು. ತಕ್ಷಣ ಅವನು, ತನ್ನ ರಾಜ್ಯವನ್ನು ಒರಿಸ್ಸ ಪ್ರಾಂತ್ಯದೊಡನೆ ವಿಲೀನ ಮಾಡಲು ಒಪ್ಪಿದನು. ಮೆನನ್‌ರವರು ಆ ರಾಜನನ್ನು, "ಈಗ ನೀವು ಪಾಟ್ನ ರಾಜ ಮತ್ತು ಇತರ ರಾಜರ ಬಳಿಗೆ ಹೋಗಿ ನಿಮ್ಮ ರಾಜ್ಯವನ್ನು ಒರಿಸ್ಸ ಪ್ರಾಂತ್ಯದೊಡನೆ ವಿಲೀನ ಮಾಡಲು ನೀವು ತೆಗೆದುಕೊಂಡಿರುವ ತೀರ್ಮಾನವನ್ನು ತಿಳಿಸಿ. ನಿಮ್ಮಂತೆ ಅವರೂ ಸಹ ಮಾಡದೆ ಹೋದರೆ ಒರಿಸ್ಸ ರಾಜ್ಯಗಳಲ್ಲಿ ಈಗಿರುವ ಪರಿಸ್ಥಿತಿಯಲ್ಲಿ ಭಾರತ ಸರ್ಕಾರವು ನಿಮ್ಮ ರಾಜ್ಯಗಳ ಆಡಳಿತವನ್ನು ವಹಿಸಿಕೊಳ್ಳಬೇಕಾಗುತ್ತದೆ – ಎಂದು ಅವರಿಗೆ ಹೇಳಿ," ಎಂದು ಮನವಿ ಮಾಡಿದರು.

ಡೆಂಕನಾಲ್ ರಾಜನು ಹಾಗೇ ಮಾಡಿದನೆಂದು ಕಾಣುತ್ತದೆ. ಪಾಟ್ನ ಮಹಾರಾಜನು ಮಾರನೆ ಬೆಳಗ್ಗೆ ಮೆನನ್ ಬಳಿಗೆ ಬಂದನು. ಅವರಿಬ್ಬರ ನಡುವೆ ಮನ ಬಿಚ್ಚಿದ ಮಾತುಗಳು ನಡೆದುವು. ಮೆನನ್ ಹೇಳಿದರು:

> ಡೆಂಕನಾಲ್‌ನಲ್ಲಿ ಕಾನೂನು ಮತ್ತು ಶಿಸ್ತು ಸಂಪೂರ್ಣವಾಗಿ ಮುರಿದು ಬಿದ್ದಿದೆ. ಇತರ ರಾಜ್ಯಗಳು ಅಪಾಯದ ಅಂಚಿನಲ್ಲಿವೆ. ಸದ್ಯಕ್ಕೆ ನಿಮ್ಮ ರಾಜ್ಯದಲ್ಲಿ ಯಾವ ಗಲಾಟೆಯೂ ಇಲ್ಲ. ಆದರೆ ಅದು ನಿಮ್ಮ ರಾಜ್ಯದಲ್ಲೂ ಹರಡುವ ಕಾಲ ದೂರವಿಲ್ಲ. ಅಂತಹ ಸಮಯದಲ್ಲಿ ಸಮಾಜ ಘಾತಕ ಶಕ್ತಿಗಳ ಕೈ ಬಲವಾಗುತ್ತದೆ. ಉತ್ತರ ಭಾರತದ ಪರಿಸ್ಥಿತಿ ನಿಮಗೆ ತಿಳಿಯದೇ ಇದ್ದುದಲ್ಲ. ರಾಜರು ತಮ್ಮ ಜವಾಬ್ದಾರಿಯನ್ನು ಅರಿತುಕೊಳ್ಳದೆ ಹೋದರೂ ಭಾರತ ಸರ್ಕಾರವು ತನ್ನ ಜವಾಬ್ದಾರಿಯನ್ನು ಮರೆಯುವ ಹಾಗಿಲ್ಲ. ರಾಜ್ಯಗಳಲ್ಲಿ ಶಾಂತಿ ಕೆಡಲು ಬಿಡುವುದಕ್ಕೆ ಬದಲಾಗಿ ಕೇಂದ್ರ ಸರ್ಕಾರವು ರಾಜ್ಯಗಳ ಆಡಳಿತವನ್ನು ವಹಿಸಿಕೊಳ್ಳುವ ಮಟ್ಟಕ್ಕೂ

ಹೋಗುತ್ತದೆ. ಶಾಂತಿಯು ಈ ಕ್ಷಣದ ಅತ್ಯಾವಶ್ಯಕತೆ.

ಪಾಟ್ನಾದ ಮಹಾರಾಜನು, "ರಾಜ್ಯಗಳ ಆಡಳಿತವನ್ನು ಸರ್ಕಾರವು ನಿಜವಾಗಿಯೂ ವಹಿಸಿಕೊಳ್ಳುವುದೇ? ಹಾಗೆಂದು ಬರೆದುಕೊಡುತ್ತೀರ?" ಎಂದು ಕೇಳಿದನು. ಮೆನನ್‌ರವರು, " ನಾನು ವಿವರಿಸಿದ ಸಂದರ್ಭದಲ್ಲಿ, ರಾಜ್ಯಗಳ ಆಡಳಿತವನ್ನು ತಾನೇ ವಹಿಸಿಕೊಳ್ಳದೆ ಅನ್ಯಮಾರ್ಗವೇ ಇಲ್ಲ. ಅಷ್ಟನ್ನು ನಾನು ಖಂಡಿತವಾಗಿಯೂ ಬರೆದುಕೊಡುತ್ತೇನೆ," ಎಂದರು.

ಆನಂತರ ಪಾಟ್ನ ಮಹಾರಾಜನು ಇತರ ರಾಜರನ್ನೂ ಕರೆತಂದನು. ಮತ್ತೆ ಚರ್ಚೆ ನಡೆಯಿತು. ಒಪ್ಪಂದದ ಪ್ರತಿ ಅಂಶವನ್ನು ಓದಿ ಚರ್ಚಿಸಲಾಯಿತು. ಪಾಟ್ನ, ಸೆರ್ಕೆಕೇಲ, ಗಂಗಾಪುರ್ ಮತ್ತು ಸೋನೆಪುರ್‌ನ ರಾಜರು ತಮ್ಮ ಬೇಡಿಕೆಗಳ ಒಂದು ಮನವಿಯನ್ನು ನೀಡಿದರು. ಮೆನನ್ ಅದನ್ನು ಸ್ವೀಕರಿಸಿ, ಅವರ ಎಲ್ಲಾ ಬೇಡಿಕೆಗಳನ್ನೂ ಒಪ್ಪುವುದು ಕಷ್ಟ – ಎಂದರು. ಆನಂತರ ರಾಜರು ತಮ್ಮ ಖಾಸಗಿ ಆಸ್ತಿ, ವೈಯುಕ್ತಿಕ ಹಕ್ಕುಗಳು ಮತ್ತು ತಮ್ಮ ಹಿಂದಿನ ನಡವಳಿಕೆಗೆ ಅಧಿಕಾರಿಗಳು ತೊಂದರೆ ಕೊಡದಂತೆ ರಕ್ಷಣೆ ಬಗೆಗೆ ಪ್ರಶ್ನಿಸಿದರು. ಕರಡು ಒಪ್ಪಂದಕ್ಕೆ ರಾಜರು ಸೂಚಿಸಿದ ಕೆಲವು ತಿದ್ದುಪಡಿಗಳನ್ನು ಮೆನನ್ ಒಪ್ಪಿದರು. ಆ ರಾಜರ ಸಮ್ಮುಖದಲ್ಲಿ ಒರಿಸ್ಸ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಒಂದು ಪತ್ರವನ್ನು ಮೆನನ್ ಬರೆದು ರಾಜರ ಬೇಡಿಕೆಗಳನ್ನು ಆದಷ್ಟೂ ಪೂರೈಸಬೇಕೆಂದು ಭಾರತ ಸರ್ಕಾರ ಬಯಸುತ್ತದೆ, ಎಂದು ತಿಳಿಸಿದರು. ಅಲ್ಲಿಗೆ ರಾಜರಿಗೆ ಸಮಾಧಾನವಾಯಿತು. ಅವರು ವಿಲೀನ ಒಪ್ಪಂದಕ್ಕೆ ಸಹಿ ಹಾಕಿದರು. ಅದನ್ನು ತೆಗೆದುಕೊಂಡು ಹೋಗಿ ರೈಲ್ವೆ ನಿಲ್ದಾಣದಲ್ಲಿ ತಮಗಾಗಿ ಕಾಯುತ್ತಿದ್ದ ಸರ್ದಾರರಿಗೆ ಕೊಟ್ಟರು. ಸರ್ದಾರರಿಗೆ ಬಹಳ ಸಂತೋಷವಾಯಿತು. ಮೆನನ್‌ರವರ ಯಶಸ್ಸಿಗೆ ಉಡುಗೊರೆಯಾಗಿ ಒಂದು ಬೆಳ್ಳಿ ಸಿಗರೇಟ್ ಕೇಸ್ ಅನ್ನು ಒರಿಸ್ಸ ಪ್ರಧಾನಮಂತ್ರಿ ಹರೇ ಕೃಷ್ಣ ಮೆಹತಾಬ್ ನೀಡಿದರು.

ಸರ್ದಾರರು ಮತ್ತು ಅವರ ತಂಡದವರು ನಾಗಪುರಕ್ಕೆ ಪ್ರಯಾಣ ಮಾಡಿದರು. ಅಲ್ಲಿ ಡಿಸೆಂಬರ್ ೧೫ರಂದು ಮಧ್ಯಾಹ್ನ ೪.೩೦ ಘಂಟೆಗೆ ಚತ್ತೀಸ್‌ಗರ್ ರಾಜ್ಯಗಳ ರಾಜರು ಮತ್ತು ಅವರನ್ನು ಪ್ರತಿನಿಧಿಸುವ ದಿವಾನರ ಸಭೆ ನಡೆಸಿದರು. ಆ ಸಭೆಯಲ್ಲಿ ಸೆಂಟ್ರಲ್ ಪ್ರಾವಿನ್ಸಸ್ ಪ್ರಾಂತ್ಯದ ಗೌರ್ನರ್ ಮಂಗಲ್‌ದಾಸ್ ಪಕ್ವಾಸ, ಪ್ರಧಾನಮಂತ್ರಿ ಆರ್.ಎಸ್. ಶುಕ್ಲ ಮತ್ತು ಅರ್ಥಮಂತ್ರಿ ಡಿ.ವಿ. ಮಿಶ್ರ ಸಹ ಭಾಗವಹಿಸಿದರು. ಸರ್ದಾರರು ಸಭೆಯನ್ನು ಆರಂಭಿಸಿ ಕಟಕ್‌ನಲ್ಲಿ ನಡೆದ

ವಿದ್ಯಾಮಾನಗಳನ್ನು ವಿವರಿಸಿ, ವಿಲೀನದ ಒಪ್ಪಂದಕ್ಕೆ ಎಲ್ಲ ರಾಜರು ಒಪ್ಪಿ ಸಹಿ ಹಾಕಬೇಕೆಂದು, ಆ ಮೂಲಕ ತಮ್ಮ ಸಂಕಟ ಮತ್ತು ಚಿಂತೆಗಳ ಭಾರವನ್ನು ಪ್ರಾಂತ್ಯ ಸರ್ಕಾರಕ್ಕೆ ಹೊರೆಸಬೇಕೆಂದು ಕೋರಿದರು. ಕವರ್ಧ ರಾಜ್ಯದ ಅರಸನು, "ಹಿಂದೆ ಬ್ರಿಟಿಷರು ನಮ್ಮನ್ನು ರಕ್ಷಿಸಿದಂತೆ ನೀವು ನಮ್ಮನ್ನು ರಕ್ಷಿಸಿ, ಡೊಮಿನಿಯನ್ ಸರ್ಕಾರದ ಸಾರ್ವಭೌಮತ್ವವನ್ನು ಒಪ್ಪಿಕೊಳ್ಳಲು ನಾನು ಸಿದ್ಧನಿದ್ದೇನೆ," ಎಂದನು. ಪಟೇಲರು, "ಆಂತರಿಕ ವಿಷಯಗಳಲ್ಲೂ ರಾಜ್ಯಗಳು ಕೇಂದ್ರ ಸರ್ಕಾರದೊಡನೆ ವಿಲೀನವಾಗದ ಹೊರತು, ಕೇಂದ್ರ ಸರ್ಕಾರವು ರಾಜ್ಯಗಳ ಆಂತರಿಕ ವಿಷಯದಲ್ಲಿ ಪ್ರವೇಶಿಸುವ ಹಾಗಿಲ್ಲ. (ಅದುವರೆವಿಗೆ ರಾಜ್ಯಗಳು ಮೂರು ವಿಷಯಗಳಲ್ಲಿ ಮಾತ್ರ ಭಾರತ ಸರ್ಕಾರದೊಡನೆ ಸೇರ್ಪಡೆಯಾಗಿದ್ದುವು) ಸಾರ್ವಭೌಮತ್ವವನ್ನು ಮತ್ತೆ ಪುನರುಜ್ಜೀವನಗೊಳಿಸುವುದು ನ್ಯಾಯವಲ್ಲ, ಏಕೆಂದರೆ ಸ್ವತಂತ್ರ ಭಾರತದಲ್ಲಿ ಎಲ್ಲರೂ ಸಮಾನರು ಮತ್ತು ಒಬ್ಬ ವ್ಯಕ್ತಿ ಮತ್ತೊಬ್ಬ ವ್ಯಕ್ತಿಯ ಮೇಲೆ ಸಾರ್ವಭೌಮತ್ವವನ್ನು ಚಲಾಯಿಸುವ ಹಾಗಿಲ್ಲ," ಎಂದು ಉತ್ತರಿಸಿದರು.

ರಾಜಧನ, ಖಾಸಗಿ ಆಸ್ತಿಯ ವಿಂಗಡಣೆ, ಸಂವಿಧಾನದಲ್ಲಿ ರಾಜರ ಸ್ಥಾನ, ರಾಜರ ಹಕ್ಕು ಮತ್ತು ಸವಲತ್ತು ಮುಂತಾದ ವಿಷಯಗಳಲ್ಲಿ ರಾಜರು ಕೇಳಿದ ಪ್ರಶ್ನೆಗಳಿಗೆ ಉತ್ತರ ನೀಡಲಾಯಿತು. ಆದಾಗ್ಯೂ, ಕರಡಿನ ಪರಿಶೀಲನೆಗೆ ಇನ್ನಷ್ಟು ಕಾಲವನ್ನು ರಾಜರು ಕೇಳಿದರು. ಸರ್ದಾರರು, "ಒಪ್ಪಂದ ಬಹಳ ಸರಳವಾದ ದಾಖಲೆ. ಅದರ ಬಗೆಗೆ ವಕೀಲರ ಸಲಹೆಗಿಂತ ರಾಜರ ನಿರ್ಧಾರ ಮುಖ್ಯ" ಎಂದರು. ಆಗ ಮೆನನ್‌ರವರು ರಾಜರು ಕೆಲವು ಘಂಟೆಗಳ ಕಾಲ ಕರಡನ್ನು ಪರಿಶೀಲಿಸಿದ ಮೇಲೆ ರಾತ್ರಿ ೧೦ ಘಂಟೆಗೆ ಮತ್ತೆ ಸಭೆ ಸೇರಬಹುದು – ಎಂದು ಸಲಹೆ ನೀಡಿದರು. ಅದರಂತೆ ಸಭೆಯನ್ನು ಮುಂದೂಡಲಾಯಿತು.

ಮತ್ತೆ ಸಭೆ ಸೇರಿದಾಗ ಕೊರಿಯ ರಾಜ್ಯದ ರಾಜನು, "ರಾಜಧನವು ವಂಶ ಪಾರಂಪರ್ಯವಾಗಿ ಬರುವಂತೆ, ಮುಂದೆ ಬರುವ ಸರ್ಕಾರ ಅದನ್ನು ಬದಲಾಯಿಸದಂತೆ ನಿಗದಿಯಾಗಬೇಕು. ಅದು ಸಂವಿಧಾನದಲ್ಲಿ ಸೇರಿಸಲ್ಪಡಬೇಕು, ಹಾಗಾದರೆ ಅದರ ಜಾರಿಗೆ ಒಕ್ಕೂಟದ ನ್ಯಾಯಾಲಯದ ಮೊರೆ ಹೋಗಬಹುದು," ಎಂದನು. ರಾಜಧನದ ಬಗೆಗೆ ರಾಜರಿಗೆ ಆತಂಕವಿರುವುದು ಸರ್ದಾರರಿಗೆ ಅರ್ಥವಾಯಿತು. ಅವರು, "ರಾಜರು ಇಂದು ಸಹಿ ಮಾಡುತ್ತಿರುವ ಒಪ್ಪಂದದಲ್ಲಿ ಭಾರತ ಸರ್ಕಾರವು ನೀಡಿರುವ ಖಾತರಿ ಸೇರಿಸಲ್ಪಟ್ಟಿದೆ ಮತ್ತು ಅದನ್ನು ಸಂವಿಧಾನದಲ್ಲಿ ಸೇರಿಸುವ ಅಭಿಪ್ರಾಯವೂ ಇದೆ," ಎಂದು ಆಶ್ವಾಸನೆ ನೀಡಿದರು.

ಆ ಆಶ್ವಾಸನೆಯ ನಂತರ ಅಲ್ಲಿ ಹಾಜರಿದ್ದ ಹತ್ತು ಮಂದಿ ರಾಜರು

ವಿಲೀನ ಒಪ್ಪಂದಕ್ಕೆ ಸಹಿ ಮಾಡಿದರು. ಮಾರನೆ ದಿನ ಸರ್ದಾರರು ದೆಹಲಿಗೆ ಹಿಂತಿರುಗಿದ ನಂತರ ಪೂರ್ವ ಭಾರತದ ರಾಜ್ಯಗಳ ವಿಲೀನದ ಹಿನ್ನಲೆ ಮತ್ತು ಉದ್ದೇಶವನ್ನು ಕುರಿತು ಒಂದು ಹೇಳಿಕೆಯನ್ನು ನೀಡಿದರು. ಅವರ ಸೂಚನೆಯಂತೆ ಮೆನನ್‌ರವರು ಗಾಂಧೀಜಿ ಮತ್ತು ನೆಹರುರವರನ್ನು ಭೇಟಿ ಮಾಡಿ ಪೂರ್ಣ ವಿವರಣೆಯನ್ನು ನೀಡಿದರು. ಗಾಂಧೀಜಿ, 'ಆ ವಿಲೀನವನ್ನು ಒಪ್ಪಿದ್ದೇನೆ' ಎಂದರು. ಆದರೆ ನೆಹರು ಮೆನನ್‌ರವರ ವಿವರಣೆಯನ್ನು ಆಲಿಸಿದರು. ಏನೂ ಪ್ರತಿಕ್ರಿಯೆ ನೀಡಲಿಲ್ಲ. ಮುಂದೆ ಸಚಿವ ಸಂಪುಟದ ಸಭೆ ಸರ್ದಾರರ ಕ್ರಮವನ್ನು ಯಾವ ಚರ್ಚೆಯೂ ಇಲ್ಲದೆ ಒಪ್ಪಿತು.[೫೩]

ಸರ್ದಾರರು ಒರಿಸ್ಸಕ್ಕೆ ಪ್ರಯಾಣ ಮಾಡಿದಾಗ ಸಣ್ಣ ರಾಜ್ಯಗಳಾದ ಬಿ ಮತ್ತು ಸಿ ವರ್ಗದ ರಾಜ್ಯಗಳನ್ನು ಪಕ್ಕದ ಪ್ರಾಂತ್ಯಗಳೊಡನೆ ವಿಲೀನಗೊಳಿಸುವ ಉದ್ದೇಶವಿತ್ತು. ಅದನ್ನು ಅವರು ಪ್ರಧಾನಿಗೆ ತಿಳಿಸಿರಬಹುದು. ಅಲ್ಲಿಗೆ ಹೋದಮೇಲೆ ಎ ವರ್ಗದ ರಾಜ್ಯಗಳನ್ನೂ ಸಹ ತಕ್ಷಣವೇ ವಿಲೀನಗೊಳಿಸುವ ಆವಶ್ಯಕತೆ ಕಂಡುಬಂದಿತು. ಆ ಕಾರ್ಯವನ್ನೂ ಅವರು ಆಗಲೇ ಮಾಡಿದರು. ಆದರೆ ಅದು ನೆಹರುಗೆ ಒಪ್ಪಿಗೆ ಆದಂತೆ ಕಾಣುತ್ತಿಲ್ಲ, ಏಕೆಂದರೆ ಅವರು ಗಾಂಧೀಜಿ ಬಳಿ ಹೋಗಿ ದೂರಿದರು. ಅವರೆಂದರು:

> ರಾಜ್ಯಗಳ ಸಚಿವಾಲಯವು ಸಚಿವ ಸಂಪುಟಕ್ಕೆ ತಿಳಿಸದೆ ಅನೇಕ ತೀರ್ಮಾನಗಳನ್ನು ತೆಗೆದುಕೊಂಡಿದೆ. ನಾನು ಆ ತೀರ್ಮಾನಗಳನ್ನು ಒಪ್ಪುತ್ತೇನೆ, ಆದರೆ ಸಂಪುಟ ಅಥವಾ ಪ್ರಧಾನಮಂತ್ರಿಯ ಗಮನಕ್ಕೆತರದೆ ಆ ತೀರ್ಮಾನಗಳನ್ನು ತೆಗೆದುಕೊಂಡದ್ದು ತಪ್ಪು ಮಾರ್ಗ ಎಂದು ನನಗೆ ಅನ್ನಿಸುತ್ತದೆ.[೫೪]

ಅದು ಹೇಗೇ ಇರಲಿ, ತಮ್ಮ ಪ್ರಥಮ ಪ್ರಯತ್ನದಲ್ಲೇ ಯಶಸ್ಸು ಸಿಕ್ಕಿದ್ದರಿಂದ, ಇತರ ಪ್ರದೇಶಗಳ ರಾಜ್ಯಗಳನ್ನು ಒಂದುಗೂಡಿಸುವ ಮತ್ತು ಪ್ರಾಂತ್ಯಗಳನ್ನು ವಿಲೀನಗೊಳಿಸುವ ಕಾರ್ಯವನ್ನು ಮುಂದುವರೆಸಲು ಸರ್ದಾರರಿಗೆ ಉತ್ಸಾಹ ಮತ್ತು ಆತ್ಮವಿಶ್ವಾಸ ದೊರಕಿತು. ಅವರು, ಒರಿಸ್ಸ ಮತ್ತು ಚತ್ತೀಸ್‌ಗರ್‌ನ ೪೧ ರಾಜ್ಯಗಳ ವಿಲೀನದ ನಂತರ ಕಾಥೈವಾಡದ ರಾಜ್ಯಗಳ ಒಂದುಗೂಡುವಿಕೆಗೆ ಪ್ರಯತ್ನ ಆರಂಭಿಸಿದರು.

ಆ) ಕಾಥೈವಾಡ ರಾಜ್ಯಗಳು

ಕಾಥೈವಾಡ ಪ್ರದೇಶದಲ್ಲಿ ತುಪಾಕಿ ಗೌರವ ಇರುವ ೧೪ ಪ್ರಧಾನ ರಾಜ್ಯಗಳು,

ತುಪಾಕಿ ಗೌರವ ಇಲ್ಲದ ೧೭ ರಾಜ್ಯಗಳು ಮತ್ತು ೧೯೧ ಸಣ್ಣ ಪುಟ್ಟ ತುಂಡು ತುಂಡು ರಾಜ್ಯಗಳು, ಒಟ್ಟು ೨೨೨ ರಾಜ್ಯಗಳು ಇದ್ದುವು. ಜುನಾಗಡ, ನವನಗರ, ಭಾವನಗರ, ಧ್ರಂಗಾಧ್ರ, ಪೋರ್‌ಬಂದರ್, ಮೊರ್ವಿ, ಗೊಂದಾಲ್, ಜಫ್ರಬಾದ್, ವಾಂಕನೀರ್, ಪಾಲಿಟಾನ್, ಧ್ರೋಲ್, ಲಿಂಬ್ಡಿ, ರಾಜ್‌ಕೋಟ್ ಮತ್ತು ವಾದ್ಧಾನ್ ಪ್ರಧಾನ ರಾಜ್ಯಗಳು. ಕೆಲವು ರಾಜ್ಯಗಳ ಭೂ ವ್ಯಾಪ್ತಿ ಕತ್ತರಿಸಲ್ಪಟ್ಟು ತಮ್ಮ ಗಡಿಯ ಹೊರಗೆ ಅನೇಕ ಕಡೆ ಚದುರಿಹೋಗಿದ್ದುವು. ಉದಾಹರಣೆಗೆ ನವನಗರ ಮತ್ತು ಗೊಂದಾಲ್ ೯ ಮತ್ತು ೧೮ ಪ್ರತ್ಯೇಕ ಭಾಗಗಳನ್ನು ಹೊಂದಿದ್ದುವು. ಅದರಿಂದ ವಾಸ್ತವಿಕವಾಗಿ ಕಾಥೈವಾಡ ಪ್ರದೇಶ ೮೬೦ ವ್ಯಾಪ್ತಿಗಳಾಗಿ ವಿಭಾಗವಾಗಿತ್ತು.

ಕಾಥೈವಾಡದ ಪೋರ್‌ಬಂದರ್ ಮಹಾತ್ಮ ಗಾಂಧಿಯ ಜನ್ಮಸ್ಥಳ. ಭಕ್ತ ಕವಿ ನರಸೀ ಮೆಹ್ತ ಇದ್ದದ್ದು ಜುನಾಗಡದಲ್ಲಿ. ಶ್ರೀ ಕೃಷ್ಣನ ದ್ವಾರಕ ನಗರ ಇದ್ದದ್ದೂ ಕಾಥೈವಾಡ ಪ್ರದೇಶದಲ್ಲಿ. ಹನ್ನೆರಡು ಜ್ಯೋತಿರ್ಲಿಂಗಗಳ ಪೈಕಿ ಮೊದಲನೆಯದಾದ ಸೋಮನಾಥ ದೇವಾಲಯವೂ ಇಲ್ಲೇ ಇರುವುದು.

ಕಾಥೈವಾಡದ ಕೆಲವು ರಾಜ್ಯಗಳು ಈಗಾಗಲೇ ಪ್ರಜಾಪ್ರಭುತ್ವದ ಕಡೆಗೆ ಚಲಿಸುತ್ತಿದ್ದುವು. ಗಾಂಧೀಜಿ ಮತ್ತು ಸರ್ದಾರರ ಚಳವಳಿಗಳ ಫಲವಾಗಿ ಅಲ್ಲಿ ರಾಜಕೀಯ ಪ್ರಜ್ಞೆ ಬೆಳೆದಿತ್ತು. ಸರ್ದಾರರು ತಮ್ಮ ತ್ಯಾಗ, ಅರ್ಪಣೆ ಮತ್ತು ಸತತ ಶ್ರಮದಿಂದ ಗುಜರಾತ್ ಮತ್ತು ಕಾಥೈವಾಡದಲ್ಲಿ ಒಂದು ಪ್ರಭಾವಿ ಸ್ಥಾನವನ್ನು ಗಳಿಸಿದ್ದರು. ಸಹಜವಾಗಿಯೆ, ಆ ಪ್ರದೇಶಗಳಲ್ಲಿ ಪ್ರಜಾಪ್ರಭುತ್ವ ಚಳವಳಿಯ ನಾಯಕರು ಮಾರ್ಗದರ್ಶನಕ್ಕೆ ಸರ್ದಾರರ ಕಡೆಗೆ ನೋಡುತ್ತಿದ್ದರು.

ಬ್ರಿಟಿಷರಿಂದ ಭಾರತಕ್ಕೆ ಅಧಿಕಾರ ಹಸ್ತಾಂತರ ಮತ್ತು ಬ್ರಿಟಿಷ್ ಸಾರ್ವಭೌಮತ್ವದ ಮುಕ್ತಾಯವಾದ ಮೇಲೆ ಕಾಥೈವಾಡದಲ್ಲಿ 'ಕಾಥೈವಾಡ್ ರಾಜಕೀಯ ಪರಿಷದ್'ನ ಬೆಂಬಲದಿಂದ ಜವಾಬ್ದಾರಿ ಸರ್ಕಾರದ ಸ್ಥಾಪನೆಗೆ ಆಗ್ರಹ ಜೋರಾಯಿತು. ಅದರಿಂದ ಕಾನೂನು ಮತ್ತು ಶಿಸ್ತು ಹದೆಗೆಟ್ಟಿತು. ಹಿಂದೆ ರಾಜರು, ಅದರಲ್ಲೂ ಸಣ್ಣ ರಾಜ್ಯಗಳ ರಾಜರು, ಬ್ರಿಟಿಷ್ ಸರ್ಕಾರದ ಮೇಲೆ ಅವಲಂಬಿತರಾಗಿದ್ದರು. ಈಗ ಆ ಆಸರೆ ಇಲ್ಲವಾಗಿತ್ತು. ಜನರಿಗೆ ಈಗ ತಮ್ಮ ಸ್ವಂತ ಶಕ್ತಿಯ ಜೊತೆಗೆ ದೇಶದ ಇತರ ಭಾಗಗಳ ಬೆಂಬಲವೂ ಸೇರಿಕೊಂಡಿತ್ತು, ಅದರಿಂದ ರಾಜರು ತಮ್ಮ ರಾಜ್ಯಗಳಲ್ಲಿ ಶಾಂತಿ ಕಾಪಾಡಲು ಅಸಮರ್ಥರಾಗಿದ್ದರು. ಉದಾಹರಣೆಗೆ, ಸಣ್ಣ ರಾಜ್ಯ ಮೂಲಿಯಲ್ಲಿ ಚಳವಳಿಗಾರರು ಸರ್ಕಾರಿ ಕಟ್ಟಡಗಳು ಮತ್ತು ಸೆರೆಮನೆಯನ್ನು ವಶಪಡಿಸಿಕೊಂಡಿದ್ದರು. ರೀಜನಲ್ ಕಮಿಷನರನು ಮಧ್ಯೆ ಪ್ರವೇಶಿಸಬೇಕಾಯಿತು. ಕಮಿಷನರ್ ಸೂಚಿಸಿದವರನ್ನು ರಾಜನು ದಿವಾನನ್ನಾಗಿ

ನಿಯಮಿಸಿ ಅವನಿಗೆ ಪೂರ್ಣ ಅಧಿಕಾರವನ್ನು ನೀಡಬೇಕಾಯಿತು. ಪ್ರಗತಿಪರ ರಾಜನಿದ್ದ ಧ್ರಂಗಾಧ್ರದಲ್ಲೂ ಚಳವಳಿಗಾರರು ಅರಮನೆಗೆ ನುಗ್ಗುವ ಬೆದರಿಕೆಯನ್ನು ಒಡ್ಡಿದ್ದರು.[೫೫]

ಅದರಿಂದ ಭಾರತ ಸರ್ಕಾರ ಶಾಂತಿ ಮತ್ತು ಸುವ್ಯವಸ್ಥೆಗೆ ಕ್ರಮ ತೆಗೆದುಕೊಳ್ಳಲೇಬೇಕಾಗಿತ್ತು. ಆದರೆ ಸಣ್ಣ ರಾಜ್ಯಗಳಲ್ಲಿ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸಲು ಸಾಧ್ಯವಿರಲಿಲ್ಲ. ಅದಕ್ಕೆ ಬೇಕಾದ ಸಾಧನ ಸಂಪತ್ತು ಅವರಲ್ಲಿ ಇರಲಿಲ್ಲ. ಅದರಿಂದ ಸರ್ದಾರರು ಕಾಥೈವಾಡದ ಎಲ್ಲ ಸಣ್ಣ ಮತ್ತು ದೊಡ್ಡ ರಾಜ್ಯಗಳನ್ನು ಒಟ್ಟಿಗೆ ಬೆಸೆದು ಕಾಥೈವಾಡ ಸಂಯುಕ್ತ ರಾಜ್ಯವನ್ನು ರಚಿಸುವುದೊಂದೇ ಸೂಕ್ತವಾದ ಮಾರ್ಗ ಎಂದು ಆಲೋಚಿಸಿದರು. ಅಷ್ಟೇ ಅಲ್ಲ, ಜನರಿಂದ ಚುನಾಯಿತವಾದ ಒಂದು ಸಂವಿಧಾನ ರಚನಾ ಸಭೆಯನ್ನು ರಚಿಸಿ ಜವಾಬ್ದಾರಿ ಸರ್ಕಾರವನ್ನು ರಚಿಸಬೇಕು ಎಂದು ಆಲೋಚಿಸಿದರು. ಅದಕ್ಕೆ ತಮ್ಮ ಅಧಿಕಾರವನ್ನು ಬಿಟ್ಟು ಕೊಡಲು ರಾಜರನ್ನು ಒಪ್ಪಿಸಬೇಕಾಗಿತ್ತು. ಅಷ್ಟು ಹೊತ್ತಿಗೆ ಜನರ ಒತ್ತಡವನ್ನು ತಡೆಯಲಾರದೆ ಭಾವನಗರದ ಮಹಾರಾಜನು ಜವಾಬ್ದಾರಿ ಸರ್ಕಾರ ರಚಿಸಲು ಗಾಂಧೀಜಿಯವರ ಮಾರ್ಗದರ್ಶನವನ್ನು ಕೋರಿದನು. ಗಾಂಧೀಜಿಯವರು ಆ ಮಹಾರಾಜನನ್ನು ಪಟೇಲರ ಬಳಿಗೆ ಕಳುಹಿಸಿದರು. ಸರ್ದಾರರು, ರಾಜ್ಯದ ಪ್ರಜಾ ಮಂಡಲದ ನಾಯಕರಾದ ಬಲವಂತರಾಯ ಮೆಹ್ತರವರನ್ನು ಪ್ರಥಮ ಪ್ರಧಾನಮಂತ್ರಿಯನ್ನಾಗಿ ಮಾಡುವಂತೆ ಸಲಹೆ ನೀಡಿದರು. ಮಹಾರಾಜನು ಇನ್ನೂ ಮುಂದುವರೆದು ತನ್ನ ರಾಜ್ಯವನ್ನು ಬರಖಾಸ್ತು ಮಾಡಿ ಸಂಯುಕ್ತ ಕಾಥೈವಾಡ ರಾಜ್ಯದಲ್ಲಿ ವಿಲೀನ ಮಾಡಲು ಮತ್ತು ಗಾಂಧೀಜಿ ನಿಗದಿಪಡಿಸಿದ ಎಷ್ಟೇ ರಾಜಧನವನ್ನು ಸ್ವೀಕರಿಸಲು ತಾನು ಸಿದ್ಧ ಎಂದು ಪ್ರಕಟಿಸಿದನು. ಅಷ್ಟು ಹೊತ್ತಿಗೆ ಸರ್ದಾರರು ಕಾಥೈವಾಡದಲ್ಲಿ ಒಂದುಗೂಡಿದ ರಾಜ್ಯ ಮತ್ತು ಪ್ರಜಾಪ್ರಭುತ್ವ ಸ್ಥಾಪನೆ ಮಾಡುವ ಗುರಿಯನ್ನು ರೂಪಿಸಿಕೊಂಡಿದ್ದರು. ಅದಕ್ಕೆ ಪೂರಕವಾಗಿ ಭಾವನಗರದ ಮಹಾರಾಜನು ತನ್ನ ರಾಜ್ಯದಲ್ಲಿ ಹೊಸ ಸರ್ಕಾರವನ್ನು ೧೯೪೮ರ ಜನವರಿ ೧೫ರಂದು ಉದ್ಘಾಟಿಸುವಂತೆ ಸರ್ದಾರರನ್ನು ಕೋರಿದಾಗ ಒಪ್ಪಿದರು.[೫೬]

ಸರ್ದಾರರು, ಕಾಥೈವಾಡದ ಇತರ ರಾಜರನ್ನು ಭೇಟಿ ಮಾಡಿ ಸಂಯುಕ್ತ ಕಾಥೈವಾಡ ರಾಜ್ಯ ಸ್ಥಾಪನೆಯ ಬಗೆಗೆ ಸಮಾಲೋಚಿಸುವಂತೆ ಮೆನನ್‌ಗೆ ಸೂಚಿಸಿದರು. ತಮ್ಮ ಆ ಯೋಜನೆಗೆ ಗಾಂಧೀಜಿಯವರ ಪೂರ್ವ ಆಶೀರ್ವಾದವನ್ನು ಪಡೆದುಕೊಂಡಿದ್ದರು. ಆ ಸಮಾಲೋಚನೆಗಳಲ್ಲಿ ತಾವು ಭಾಗವಹಿಸದೆ ಮೆನನ್‌ರವರೇ ನಿಭಾಯಿಸುವಂತೆ ಸೂಚಿಸಿದರು. ಜನವರಿ

೧೫ರಂದು ಭಾವನಗರಕ್ಕೆ ಹೋಗಿ ಅಲ್ಲಿ ಹೊಸ ಸರ್ಕಾರವನ್ನು ಉದ್ಘಾಟಿಸಿ, ಅಲ್ಲಿಂದ ರಾಜ್‌ಕೋಟ್‌ಗೆ ಹೋದರು. ಅಲ್ಲೊಂದು ಭರ್ಜರಿ ಭಾಷಣ ಮಾಡಿದರು. ಅಲ್ಲಿ ಅವರ ಭೇಟಿಗೆ ಅನೇಕ ರಾಜರು ಬಂದಿದ್ದರು. ಅವರೊಡನೆ ಪಟೇಲರು ಸಂಯುಕ್ತ ರಾಜ್ಯ ಸ್ಥಾಪನೆಯನ್ನು ನೇರವಾಗಿ ಪ್ರಸ್ತಾಪಿಸಲಿಲ್ಲ, ಆದರೆ, 'ಸಣ್ಣ ಸಣ್ಣ ಹಳ್ಳಗಳಿದ್ದರೆ ನೀರು ನಿಂತು ವ್ಯರ್ಥವಾಗುತ್ತದೆ. ಅದೇ ಹಳ್ಳಗಳೆಲ್ಲ ಸೇರಿ ಒಂದು ದೊಡ್ಡ ಕೆರೆಯಾದರೆ ಎಲ್ಲರಿಗೂ ಪ್ರಯೋಜನವಾಗುತ್ತದೆ,' ಎಂದಿದ್ದರು. ಅಲ್ಲಿಗೆ ಮೆನನ್‌ರವರೂ ಸಹ ಬಂದಿದ್ದರು. ಅವರನ್ನು ರಾಜರೊಡನೆ ಮಾತನಾಡುವುದಕ್ಕೆ ಬಿಟ್ಟು ಶುಭಾಶಯವನ್ನು ಹೇಳಿ ಸರ್ದಾರರು ಬೊಂಬಾಯಿಗೆ ಪ್ರಯಾಣ ಮಾಡಿದರು.

ಮೆನನ್‌ರವರು ಐದು ದಿನಗಳ ಕಾಲ ರಾಜರೊಡನೆ ಮಾತುಕತೆ ನಡೆಸಿದರು. ಈ ರಾಜರು ಒರಿಸ್ಸದ ರಾಜರಂತಿರಲಿಲ್ಲ. ಇವರು ಅವರಿಗಿಂತ ಬಹಳ ಭಿನ್ನವಾಗಿದ್ದರು. ಇವರಿಗೆ ಸಂಪತ್ತಿನ ಮತ್ತು ಮನೆತನದ ಹೆಮ್ಮೆ ಇತ್ತು. ಕೆಲವರಿಗೆ ತಾವು ಕ್ರೀಡಾಪಟು ಅನ್ನುವ ವಿಶೇಷತೆ ಇತ್ತು. ಕೆಲವರಿಗೆ ವಿಶ್ವ ಸಂಪರ್ಕವಿತ್ತು. ಎಲ್ಲರಿಗು ವೈಭವ ಮತ್ತು ಪ್ರತಿಷ್ಠೆಯ ಪರಂಪರೆ ಇತ್ತು. ಅದರಿಂದ ಅವರನ್ನು ಬೆದರಿಕೆಯಿಂದ ಬಗ್ಗಿಸಲು ಸಾಧ್ಯವಿರಲಿಲ್ಲ. ಅವರನ್ನು ಮೆನನ್‌ರವರು ಚಾಕಚಕ್ಯತೆಯಿಂದ ತರ್ಕದಿಂದ ತಮ್ಮ ಕಡೆಗೆ ಸೆಳೆಯಬೇಕಾಗಿತ್ತು. ಮೆನನ್ ರಾಜರಿಗೆ ಹೇಳಿದರು:

> ಪ್ರಜಾಸತ್ತಾತ್ಮಕ ಆಡಳಿತದ ಸೆಳೆತವನ್ನು ತಡೆಯಲಾಗುವುದಿಲ್ಲ. ಕಾಥ್ಯೆವಾಡದ ರಾಜ್ಯಗಳ ಚುನಾಯಿತ ಶಾಸನ ಸಭೆಗಳು ಬೊಂಬಾಯಿ ಒಡನೆ ವಿಲೀನ ಅಥವಾ ಸಂಯುಕ್ತ ಕಾಥ್ಯೆವಾಡದ ರಚನೆಗೆ ಖಂಡಿತ ಆಗ್ರಹಿಸುತ್ತವೆ. ಅಂತಹ ಬೇಡಿಕೆಯನ್ನು ಭಾರತ ಸರ್ಕಾರ ತಳ್ಳಿಹಾಕಲು ಸಾಧ್ಯವಿಲ್ಲ. ಆದರೆ ರಾಜರು ಚುನಾಯಿತ ಪ್ರತಿನಿಧಿಗಳೊಡನೆ ವ್ಯವಹರಿಸುವುದಕ್ಕಿಂತ ಭಾರತ ಸರ್ಕಾರದೊಡನೆ ವ್ಯವಹರಿಸಿದರೆ ಒಳ್ಳೆಯ ರಿಯಾಯಿತಿಗಳನ್ನು ಪಡೆಯಬಹುದು.
>
> ಈಗಾಗಲೇ ಭಾವನಗರದ ಮಹಾರಾಜರು ಸಂಯುಕ್ತ ಕಾಥ್ಯೆವಾಡ ರಾಜ್ಯವನ್ನು ತಾವು ಬೆಂಬಲಿಸುವುದಾಗಿ ಪ್ರಕಟಿಸಿದ್ದಾರೆ. ಸರ್ದಾರರು ಹೇಳಿದ 'ದೊಡ್ಡ ಕೆರೆ ಫಲ ನೀಡುತ್ತದೆ ಮತ್ತು ಸಣ್ಣ ಹಳ್ಳಗಳು ಕೊಳೆತು ನಾರುತ್ತವೆ' ಅನ್ನುವ ರೂಪಕವನ್ನು ನಾನು ನಿಮ್ಮ ನೆನಪಿಗೆ ತರಬಹುದು.

> ೨೨೨ ರಾಜ್ಯಗಳು ತಮ್ಮ ಪ್ರತ್ಯೇಕ ಅಸ್ತಿತ್ವವನ್ನು ಹೆಚ್ಚು ಕಾಲ ಮುಂದುವರೆಸಲು ಸಾಧ್ಯವಿಲ್ಲ. ಪ್ರತ್ಯೇಕ ಅಸ್ತಿತ್ವದ ರದ್ದತಿ ಹಿತಕರವಲ್ಲ, ಆದರೆ ಕಾಲ ಮಿಂಚುವ ಮುನ್ನ, ಕಾಥೈವಾಡದ ಸ್ಥಿತಿಯನ್ನು ಭದ್ರಪಡಿಸಲು ಏನನ್ನಾದರು ಮಾಡದೆ ಹೋದರೆ, ಘಟನೆಗಳ ಸರಣಿಯು ಅದಕ್ಕಿಂತಲೂ ಅಹಿತಕರವಾದ ಫಲಿತಾಂಶವನ್ನು ತರುತ್ತದೆ.[೫೭]

ಮೆನನ್‌ರವರ ಮಾತಿನ ಬಾಣ ರಾಜರ ಮನವನ್ನು ಮುಟ್ಟಿತೆಂದು ಕಾಣುತ್ತದೆ. ಧ್ರಂಗಾಧ್ರದ ತರುಣ ರಾಜನು ಭಾವನಗರದ ಮಹಾರಾಜನನ್ನು ಅನುಸರಿಸುವೆ ಎಂದನು. ಆದಾಗ್ಯೂ ಎಲ್ಲವೂ ನವನಗರದ ಮಹಾರಾಜ ಜಾಮ್ ಸಾಹೇಬ್‌ರ ನಿರ್ಧಾರದ ಮೇಲೆ ಅವಲಂಬಿತವಾಗಿತ್ತು. ರಾಜರು ಮುಖ್ಯವಾಗಿ ಅವರನ್ನು ಅವಲಂಬಿಸುತ್ತಿದ್ದರು. ಅದರಿಂದ ಮೆನನ್‌ರವರು ಜಾಮ್ ಸಾಹೇಬರೊಡನೆ ಪ್ರತ್ಯೇಕ ಮಾತುಕತೆ ನಡೆಸಿ, ಮೊದಲ ಬಾರಿಗೆ ಅವರಿಗೊಂದು ವಿಷಯವನ್ನು ಹೊರಗೆಡಹಿದರು. ಅವರೆಂದರು:

> ಕಾಥೈವಾಡದ ಸಂಯುಕ್ತ ರಾಜ್ಯವನ್ನು ರಚಿಸುವುದು ಸಾಧ್ಯವಾಗದೇ ಹೋದರೆ, ಭಾರತ ಸರ್ಕಾರವು ಜುನಾಗಡ ಮತ್ತು ಎಲ್ಲಾ ಸಣ್ಣ ಸಣ್ಣ ರಾಜ್ಯಗಳನ್ನು ಬೊಂಬಾಯಿ ಪ್ರಾಂತ್ಯಕ್ಕೆ ಸೇರಿಸಬಹುದು. ಅಂತಹ ಕ್ರಮದಲ್ಲಿ ಕೆಲವು ಆಡಳಿತಾತ್ಮಕ ತೊಂದರೆಗಳಿದ್ದರೂ ಸಹ ಭಾರತ ಸರ್ಕಾರವು ಆ ಕ್ರಮವನ್ನು ತೆಗೆದುಕೊಳ್ಳಬಹುದು. ಭಾವಾನಗರದ ಮಹಾರಾಜರು ತಮ್ಮ ರಾಜ್ಯದಲ್ಲಿ ಜವಾಬ್ದಾರಿ ಸರ್ಕಾರವನ್ನು ರಚಿಸುವುದರಿಂದ ಜಾಮ್ ಸಾಹೇಬರು ಸಹ ತಮ್ಮ ರಾಜ್ಯದಲ್ಲಿ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸಲೇಬೇಕಾಗುತ್ತದೆ..... ಆನಂತರ ಪ್ರಜಾ ಸರ್ಕಾರವು ನಿಮ್ಮ ರಾಜ್ಯವನ್ನು ಕಾಥೈವಾಡಕ್ಕೆ ಸೇರಿಸಬೇಕೆಂದು ತೀರ್ಮಾನಿಸಿದರೆ, ನೀವು ಒಪ್ಪಬೇಕಾಗುತ್ತದೆ. ಆಗ ಅದರ ಕೀರ್ತಿ ಜಾಮ್ ಸಾಹೇಬರಿಗೆ ಬರದೆ ಪ್ರಜಾ ಸರ್ಕಾರಕ್ಕೆ ಬರುತ್ತದೆ.[೫೮]

ಜಾಮ್ ಸಾಹೇಬರಿಗೆ ಪರಿಸ್ಥಿತಿಯ ನೈಜತೆ ಅರಿವಾಯಿತು. ಯಾವುದಾದರು ರೀತಿಯಲ್ಲಿ ರಾಜರ ಅಧಿಕಾರ ಉಳಿಸಬೇಕೆಂಬುದು ಅವರ ಆಶಯವಾಗಿತ್ತು. ಆದರೆ ಅದು ಅಸಾಧ್ಯ ಎನ್ನುವುದು ಅವರಿಗೆ ಅರಿವಾಯಿತು. ಮೆನನ್‌ರವರ ಸಲಹೆಯಂತೆ ನಡೆದುಕೊಳ್ಳುವುದಾಗಿ ತಿಳಿಸಿದರು.

ಮತ್ತೆ ಸಭೆ ಸೇರಿದಾಗ ಮೆನನ್‌ರವರು ರಾಜರಿಗೆ ತಾವು ಜಾಮ್ ಸಾಹೇಬರಿಗೆ ಹೇಳಿದ್ದ ಹಾಗೆಯೇ ವಿವರಿಸಿದರು. ಜಾಮ್ ಸಾಹೇಬರೂ ರಾಜರೊಡನೆ ಮಾತನಾಡಿದ್ದರೆಂದು ಕಾಣುತ್ತದೆ. ಸಂಜೆಯ ಹೊತ್ತಿಗೆ ರಾಜರು ಸಂಯುಕ್ತ ಕಾಥೈವಾಡ ರಾಜ್ಯ ರಚನೆಗೆ ಒಪ್ಪಿದರು. ಆ ವಿಷಯದ ಬಗೆಗೆ ದಾಖಲೆ ರಚಿಸಿ ಪತ್ರಿಕೆಗಳಿಗೆ ಬಿಡುಗಡೆ ಮಾಡಲಾಯಿತು. ಮುಂದೆ ಆ ತೀರ್ಮಾನವನ್ನು ಸಣ್ಣ ರಾಜ್ಯಗಳ ರಾಜರೂ ಒಪ್ಪಿದರು. ಜನವರಿ ೨೨ರಂದು ಒಡಂಬಡಿಕೆಯ ದಾಖಲೆಗೆ ಎಲ್ಲಾ ರಾಜರು ಸಹಿ ಮಾಡಿದರು. ರಾಜರು ತಮ್ಮ ಪಾರಂಪರಿಕ ಅಧಿಕಾರವನ್ನು ಬಿಟ್ಟುಕೊಟ್ಟ ಆ ದೃಶ್ಯವನ್ನು ಮೆನನ್ ಹೀಗೆ ವರ್ಣಿಸಿದ್ದಾರೆ:

> ಯಾವ ರಾಜನೂ, ತಾನು ತನ್ನ ರಾಜ್ಯ ಮತ್ತು ಅಧಿಕಾರವನ್ನು ಅಷ್ಟು ಬೇಗ ಬಿಟ್ಟುಕೊಡಬೇಕಾಗುತ್ತದೆಂದು ಒಂದು ತಿಂಗಳ ಹಿಂದೆಯೂ ಭಾವಿಸಿರಲಿಲ್ಲ. ಅವರ ಕುಟುಂಬದಲ್ಲಿ ತಲೆಮಾರುಗಳಿಂದ ಇದ್ದದ್ದು ಮತ್ತು ಅವರು ಪರಮ ಪವಿತ್ರ ಎಂದು ತಿಳಿದಿದ್ದದ್ದು ಕಣ್ಣು ಮಿಟುಕಿಸುವಷ್ಟರಲ್ಲಿ ಮಾಯವಾಗಿತ್ತು. ಅವರೆಲ್ಲರೂ ಧೈರ್ಯದ ಮುಖವಾಡವನ್ನು ಧರಿಸಿದ್ದರೂ, ಅವರು ಅನುಭವಿಸುತ್ತಿದ್ದ ಮಾನಸಿಕ ವೇದನೆ ಮುಖದ ಮೇಲೆ ಸ್ಪಷ್ಟವಾಗಿ ಕಾಣುತ್ತಿತ್ತು..... ಮೋರ್ವಿಯ ವೃದ್ಧ ರಾಜ ನನ್ನ ಬಳಿಗೆ ಬಂದು, ತಾವು ಸಿಂಹಾಸನವನ್ನು ತ್ಯಜಿಸಿ, ತಮ್ಮ ನಂತರ ಅಧಿಕಾರಕ್ಕೆ ಬರುವ ಮಗನು ಸಹಿ ಮಾಡಲು ಭಾರತ ಸರ್ಕಾರವು ಒಪ್ಪುವುದೆ? – ಎಂದು ವಿಚಾರಿಸಿದರು.

ಮಹಾರಾಜರ ಭಾವವನ್ನು ಅರಿತ ನಾನು ತಕ್ಷಣ ಅವರ ಬೇಡಿಕೆಗೆ ಒಪ್ಪಿದೆ. ಮೋರ್ವಿ ಒಳ್ಳೆಯ ಆಡಳಿತವನ್ನು ಪಡೆದಿದ್ದ ರಾಜ್ಯ ಮತ್ತು ಆ ರಾಜ್ಯ ಕೇವಲ ೮೨೦ ಚದರ ಮೈಲಿ ವಿಸ್ತೀರ್ಣವಿದ್ದರೂ ಮಹಾರಾಜನು ಅತ್ಯಂತ ಹೆಚ್ಚು ನಗದನ್ನು ಬಿಟ್ಟುಕೊಟ್ಟಿದ್ದನು – ಎನ್ನುವುದನ್ನು ನಾನಿಲ್ಲಿ ಹೇಳಬೇಕು.[೫೯]

ಸಂಯುಕ್ತ ಕಾಥೈವಾಡ ರಾಜ್ಯವನ್ನು ಸರ್ದಾರರು ಫೆಬ್ರುವರಿ ೧೫ರಂದು ಜಾಮ್ ನಗರದಲ್ಲಿ ಉದ್ಘಾಟಿಸಿದರು. ಜಾಮ್ ಸಾಹೇಬರು ರಾಜ ಪ್ರಮುಖನಾಗಿ ಪ್ರಮಾಣವಚನ ಸ್ವೀಕರಿಸಿದರು. ಕಾಂಗ್ರೆಸ್ ನಾಯಕ, ಯು.ಎನ್. ದೇಬರ್‌ರವರು ಪ್ರಧಾನಮಂತ್ರಿಯಾಗಿ ಆಯ್ಕೆಯಾಗಿದ್ದು ಅಂದು ಅಧಿಕಾರ ವಹಿಸಿಕೊಂಡರು.

ಆ ಉದ್ಘಾಟನಾ ಸಮಾರಂಭದಲ್ಲಿ ಜಾಮ್ ಸಾಹೇಬರು ಮಾಡಿದ ಭಾಷಣ ಅರ್ಥಪೂರ್ಣವಾಗಿತ್ತು. ಅವರೆಂದರು:

> ಕಾಥ್ಯೆವಾಡದ ರಾಜರ ಪರವಾಗಿ ನಾನು ಹೇಳಬೇಕಾದ ಮಾತು ಇದು: ನಾವು ಸಂಯುಕ್ತ ರಾಜ್ಯವನ್ನು ಸ್ಥಾಪಿಸಿರುವುದು ನಾವು ದಣಿದ ಅರಸರು ನಮಗೆ ವಿಶ್ರಾಂತಿ ಬೇಕಾಗಿದೆಯಂದಲ್ಲ, ಹೆದರಿಸಿ ಬೆದರಿಸಿ ನಾವು ಒಪ್ಪಿಗೆಗೆ ನೂಕಲ್ಪಟ್ಟಿದ್ದೇವೆಂದಲ್ಲ, ನಾವು ನಮ್ಮ ಸ್ವಂತ ಮುಕ್ತ ಒಪ್ಪಿಗೆಯ ಮೇಲೆ ನಮ್ಮ ಸ್ವಾಯತ್ತೆಗಳನ್ನು ಒಟ್ಟುಗೂಡಿಸಿದ್ದೇವೆ ಮತ್ತು ಈ ಹೊಸ ರಾಜ್ಯದ ಸೃಷ್ಟಿಗೆ ಒಪ್ಪಿದ್ದೇವೆ. ಈಗ ಎಲ್ಲರೂ ಯಾವ ತರಹದ ಸರ್ಕಾರವನ್ನು ಒಪ್ಪಿದ್ದಾರೊ ಆ ತರಹದ ಸರ್ಕಾರವನ್ನು ಜನರು ಪಡೆಯಲಿ ಅನ್ನುವುದಕ್ಕಾಗಿ ಈ ಹೊಸ ರಾಜ್ಯದ ಸೃಷ್ಟಿಗೆ ಒಪ್ಪಿದ್ದೇವೆ. ಇದು ಜನರಿಗೆ ಫಲದಾಯಕವಾಗಲಿ ಎಂದು ಆಶಿಸುತ್ತೇನೆ ಮತ್ತು ಪ್ರಾರ್ಥಿಸುತ್ತೇನೆ.[೬೦]

ಹೀಗೆ, ೧೯೪೯ರ ಫೆಬ್ರುವರಿ ಮಧ್ಯಭಾಗದ ವೇಳೆಗೆ ಅಂದರೆ ಸ್ವಾತಂತ್ರ್ಯ ಬಂದ ಆರು ತಿಂಗಳಲ್ಲಿ ಸರ್ದಾರ್ ಪಟೇಲ್ ಮತ್ತು ಅವರ ಕಾರ್ಯದರ್ಶಿ ವಿ.ಪಿ. ಮೆನನ್ ಎರಡು ಸಾಧನೆಗಳನ್ನು ರಾಜ್ಯಗಳ ವಿಷಯದಲ್ಲಿ ಮಾಡಿದ್ದರು. ಪೂರ್ವದಲ್ಲಿ ೪೧ ರಾಜ್ಯಗಳನ್ನು ಪಕ್ಕದ ಪ್ರಾಂತ್ಯಗಳಲ್ಲಿ ವಿಲೀನ ಮಾಡಿದ್ದರು. ಪಶ್ಚಿಮದಲ್ಲಿ ೨೨೨ ರಾಜ್ಯಗಳನ್ನು ಒಂದುಗೂಡಿಸಿ ಒಂದು ಸಂಯುಕ್ತ ರಾಜ್ಯವನ್ನು ರಚಿಸಿದ್ದರು. ಅದು ನಿಜಕ್ಕೂ ಅದ್ಭುತ ಸಾಧನೆ.

ಇ) ರಜಪುಟಾಣ ರಾಜ್ಯಗಳು

ರಾಜಸ್ಥಾನ ಪ್ರದೇಶದಲ್ಲಿ ೨೨ ರಾಜ್ಯಗಳಿದ್ದುವು. ಅವನ್ನು ರಜಪುಟಾಣ ರಾಜ್ಯಗಳು ಎಂದು ಕರೆಯುತ್ತಿದ್ದರು. ಅವುಗಳ ಏಕೀಕರಣವನ್ನು ೫ ಹಂತಗಳಲ್ಲಿ ಮಾಡಲಾಯಿತು. ಮೊದಲ ಹಂತದಲ್ಲಿ ಅಲ್ವಾರ್, ಭರತ್‌ಪೂರ್, ಧೋಲ್‌ಪುರ್ ಮತ್ತು ಕರೌಳಿ ರಾಜ್ಯಗಳನ್ನು ಸೇರಿಸಿ ಮತ್ಸ್ಯ ಒಕ್ಕೂಟವನ್ನು ರಚಿಸಲಾಯಿತು. ಎರಡನೆ ಹಂತದಲ್ಲಿ ಬನ್‌ಸ್ವಾರ್, ಬುಂದಿ, ಡುಂಗರ್‌ಪುರ್, ಚಲ್ವಾರ್, ಕಿಸನ್‌ಗಡ, ಕೋಟಾ, ಪ್ರತಾಬ್‌ಗಡ, ಷಹಾಪುರ ಮತ್ತು ಟೋಂಕ್‌ಗಳನ್ನು ಸೇರಿಸಿ ಪ್ರಥಮ ರಾಜಸ್ಥಾನ ಒಕ್ಕೂಟವನ್ನು ರಚಿಸಲಾಯಿತು. ಮೂರನೆ ಹಂತದಲ್ಲಿ ಉದಯಪುರವನ್ನು ರಾಜಸ್ಥಾನ ಒಕ್ಕೂಟದಲ್ಲಿ ಸೇರಿಸಲಾಯಿತು. ನಾಲ್ಕನೆ ಹಂತದಲ್ಲಿ ರಾಜಸ್ಥಾನ ಒಕ್ಕೂಟಕ್ಕೆ ಜೈಪುರ, ಜೋಧ್‌ಪುರ, ಬಿಕನೀರ್ ಮತ್ತು ಜೈಸಲ್ಮೇರ್‌ಗಳನ್ನು ಸೇರಿಸಲಾಯಿತು. ಐದನೆ ಹಂತದಲ್ಲಿ ಮತ್ಸ್ಯ ಒಕ್ಕೂಟವನ್ನು ರಾಜಸ್ಥಾನ್ ಒಕ್ಕೂಟದಲ್ಲಿ ವಿಲೀನ ಮಾಡಲಾಯಿತು.[೬೧]

ರಾಜಸ್ಥಾನದ ರಾಜ್ಯಗಳನ್ನು ಒಂದುಗೂಡಿಸುವುದು ಬಹಳ ಕಠಿಣವಾದ ಕೆಲಸವಾಗಿತ್ತು. ಆ ರಾಜ್ಯಗಳ ಒಳಗೆ ಪ್ರವೇಶಿಸುವುದು ಸುಲಭವಾಗಿರಲಿಲ್ಲ. ಅದಕ್ಕೆ ಕಾರಣ ಅಲ್ಲಿಯ ರಾಜರ ಮನೋಭಾವ. ಅವರು ತಮ್ಮ ದಂತ ಗೋಪುರದಲ್ಲಿ ಪ್ರತ್ಯೇಕವಾಗಿ ಉಳಿದಿದ್ದರು. ಅವರಿಗೆ ತಮ್ಮ ಸ್ಥಾನ, ಸವಲತ್ತುಗಳು, ವಂಶಾವಳಿ ಮತ್ತು ಭೂ ಪ್ರದೇಶಗಳ ಬಗೆಗೆ ಬಹಳ ಹೆಮ್ಮೆ ಇತ್ತು. ಬ್ರಿಟಿಷ್ ಸರ್ಕಾರ ಅವರಿಗೆ ನೀಡಿದ್ದ ಕೋವಿ – ಗೌರವದ ಬಗೆಗಂತೂ ಅವರಿಗೆ ಹೆಮ್ಮೆ ಬಹಳ ಇತ್ತು. ಆದರೆ ಅವರು ಬ್ರಿಟಿಷ್ ರೆಸಿಡೆಂಟ್‌ನ ಅಧೀನ ಅನ್ನುವುದನ್ನು ಮರೆತಿದ್ದರು. ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಬದಲಾದ ನೈಜತೆಯ ಅರಿವು ಅವರಿಗಿರಲಿಲ್ಲ. ಅದರಿಂದ ಪಟೇಲರು ಅವರ ಬಗೆಗೆ ಆತುರ ಪಡದೆ ಸರಿಯಾದ ಸಮಯಕ್ಕಾಗಿ ಕಾಯುತ್ತಿದ್ದರು.[೬] ಅಂತಹ ಅವಕಾಶ ತಾನಾಗಿ ಬಂದಿತು.

ದೇಶ ವಿಭಜನೆಯ ನಂತರ ಉಂಟಾದ ಮತೀಯ ಹತ್ಯಾಕಾಂಡ ಅಲ್ವಾರ್ ಮತ್ತು ಭರತಪುರದ ಮೇಲೆ ಪರಿಣಾಮ ಉಂಟುಮಾಡಿತು. ಅಲ್ವಾರ್‌ನಲ್ಲಿ ಮಿಯಾಗಳು ಅನ್ನುವ ಒಂದು ಮುಸ್ಲಿಂ ಜನಾಂಗ ಇತ್ತು. ಅವರು ಅಲ್ಲಿಯ ರಾಜನಿಗೆ ತಲೆನೋವಾಗಿದ್ದರು. ದೇಶ ವಿಭಜನೆಗೆ ಸ್ವಲ್ಪ ಮುನ್ನ ಈ ಮಿಯಾಗಳು ಚುರುಕಾದರು. ಅಲ್ವಾರ್‌ನಲ್ಲಿ ಆರಂಭವಾದ ಮತೀಯ ಗಲಭೆ ಭರತಪುರಕ್ಕೂ ಹಬ್ಬಿತು. ಪತ್ರಿಕೆಗಳು ಆ ಗಲಭೆಗಳನ್ನು ದೊಡ್ಡದು ಮಾಡಿ ಬರೆದುವು. ಅಲ್ವಾರ್‌ನ ಪ್ರಧಾನಮಂತ್ರಿ ಡಾ॥ ಎನ್.ಬಿ. ಖರೆ ಹಿಂದೆ ಮಧ್ಯ ಪ್ರಾಂತ್ಯಗಳಲ್ಲಿ ಕಾಂಗ್ರೆಸ್ ಪ್ರಧಾನಮಂತ್ರಿ, ಅನಂತರ ಹಿಂದೂ ಮಹಾ ಸಭಾದ ಅಧ್ಯಕ್ಷರಾಗಿದ್ದವರು. ಅವರು ಮಿಯಾಗಳನ್ನು ರಾಜ್ಯದಿಂದ ಹೊರಕ್ಕೆ ಅಟ್ಟುತ್ತಿದ್ದಾರೆ ಮತ್ತು ಮಸೀದಿಗಳನ್ನು ಕೆಡವುತ್ತಿದ್ದಾರೆ – ಎನ್ನುವ ಆಪಾದನೆಗಳು ಮಾಡಲ್ಪಟ್ಟಿದ್ದುವು. ಕೆಲವು ಪತ್ರಿಕೆಗಳು ಅದನ್ನು ಉತ್ಪ್ರೇಕ್ಷೆ ಮಾಡಿ ಬರೆದಿದ್ದುವು.

ಗಡಿ ಭಾಗದ ಕೆಲವು ರಾಜ್ಯಗಳಲ್ಲೂ ಮತೀಯ ಗಲಭೆಯ ಆತಂಕವಿತ್ತು. ಸರ್ದಾರರು ೧೯೪೭ರ ಅಕ್ಟೋಬರ್‌ನಲ್ಲಿ ಸಂಬಂಧ ಪಟ್ಟ ರಾಜ್ಯಗಳ ಮತ್ತು ಪ್ರಾಂತ್ಯಗಳ ಪ್ರತಿನಿಧಿಗಳ ಸಭೆಯನ್ನು ದೆಹಲಿಯಲ್ಲಿ ಕರೆದರು. ಅಲ್ವಾರ್ ಮತ್ತು ಭರತಪುರದ ರಾಜರು ಮತ್ತು ಡಾ॥ ಖರೆಯವರನ್ನೂ ಸಹ ಅದಕ್ಕೆ ಆಹ್ವಾನಿಸಿದರು. ಸಭೆಯಲ್ಲಿ ಸರ್ದಾರರು 'ದೇಶದ ಅತಿ ಪ್ರಧಾನ ಅವಶ್ಯಕತೆ ಮತೀಯ ಶಾಂತಿಯನ್ನು ಕಾಪಾಡುವುದು' ಎನ್ನುವುದನ್ನು ಒತ್ತಿ ಹೇಳಿ, 'ಮತೀಯ ಗಲಭೆಯನ್ನು ಪ್ರಚೋದಿಸುವವರು ದೇಶದ ಪರಮ ಶತ್ರುಗಳು,' ಎಂದರು. ಸಭೆಯಲ್ಲಿ ಭಾಗವಹಿಸಿದ್ದವರು ಸರ್ದಾರರಿಗೆ ಸಂಪೂರ್ಣ ಬೆಂಬಲ ಮತ್ತು ಸಹಕಾರವನ್ನು

ನೀಡುವುದಾಗಿ ಆಶ್ವಾಸನೆ ಇತ್ತರು. ಆದರೆ ಡಾ॥ ಖರೆಯವರು 'ಅಲ್ವಾರ್‌ನ ಆಂತರಿಕ ಆಡಳಿತದಲ್ಲಿ ಭಾರತ ಸರ್ಕಾರ ತಲೆ ಹಾಕುತ್ತಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು. ಅಲ್ವಾರ್ ಮತ್ತು ಭರತಪುರದ ಮೇಲಿನ ದೂರುಗಳು ಹೆಚ್ಚುತ್ತಾ ಹೋದುವು. ಆ ದೂರುಗಳು ಉತ್ಪ್ರೇಕ್ಷೆಯಾದರೂ ಮತೀಯ ಪರಿಸ್ಥಿತಿ ಹದೆಗೆಟ್ಟಿದೆ ಎನ್ನುವುದು ಸ್ಪಷ್ಟವಾಗಿತ್ತು.[೬೩]

ಅಷ್ಟು ಹೊತ್ತಿಗೆ ಮಹಾತ್ಮ ಗಾಂಧೀಜಿಯವರ ಹತ್ಯೆಯಾಯಿತು. ಅದು ಭಯದ ವಾತಾವರಣವನ್ನು ಸೃಷ್ಟಿಸಿತು. ಅಲ್ವಾರ್ ರಾಜ್ಯವು ರಾಷ್ಟ್ರೀಯ ಸ್ವಯಂಸೇವಕ ಸಂಘದ ಒಂದು ಮುಖ್ಯ ತರಬೇತಿ ಮತ್ತು ಪ್ರಚಾರ ಕೇಂದ್ರ ಅನ್ನುವ ಆಪಾದನೆಗಳು ಬಂದುವು. ಗಾಂಧೀಜಿಯ ಹತ್ಯೆಯ ಪಿತೂರಿಗಾರರು ಕೆಲವರು ಅಲ್ವಾರ್‌ನಲ್ಲಿ ಆಶ್ರಯ ಪಡೆದಿದ್ದಾರೆ ಅನ್ನುವ, ಗಾಂಧೀಜಿ ಹತ್ಯೆಗೆ ಅಲ್ವಾರ್‌ನಲ್ಲಿ ಸಿಹಿ ಹಂಚಿ ಸಂಭ್ರಮಿಸಲಾಯಿತು ಅನ್ನುವ ವರದಿಗಳು ಬಂದುವು.[೬೪] ಅದರಿಂದ ಪಟೇಲರ ಮನಸ್ಸಿಗೆ ನೋವಾಯಿತು. ಅವರು ಪರಿಸ್ಥಿತಿಯನ್ನು ಸುಧಾರಿಸುವುದಕ್ಕಾಗಿ ಅಲ್ವಾರ್ ರಾಜ್ಯದ ಆಡಳಿತವನ್ನು ಭಾರತ ಸರ್ಕಾರವು ತಕ್ಷಣ ವಹಿಸಿಕೊಳ್ಳಬೇಕು ಮತ್ತು ಅವರ ಮೇಲಿನ ಆಪಾದನೆಗಳ ವಿಚಾರಣೆ ಮುಗಿಯುವವರೆಗೆ ಅಲ್ವಾರ್ ಮಹಾರಾಜ ಮತ್ತು ಪ್ರಧಾನಮಂತ್ರಿ ದೆಹಲಿಯಲ್ಲೇ ಇರಬೇಕೆಂದು ತೀರ್ಮಾನಿಸಿದರು. ಅದರಂತೆ ಆದೇಶ ಹೊರಡಿಸಲಾಯಿತು ಮತ್ತು ಜಾರಿಗೆ ತರಲಾಯಿತು.

ಭರತಪುರದಲ್ಲೂ ಪರಿಸ್ಥಿತಿ ಸರಿಯಾಗಿರಲಿಲ್ಲ. ಮತೀಯ ಪರಿಸ್ಥಿತಿ ಹದಗೆಟ್ಟಿರುವುದರ ಜೊತೆಗೆ, ರೈಲುಗಾಡಿಗಳು ಲೂಟಿಯಾದ ವರದಿಗಳೂ ಬಂದಿದ್ದುವು. ಅಲ್ಲಿ ತೆಗೆದುಕೊಳ್ಳಬೇಕಾದ ಕ್ರಮದ ಬಗ್ಗೆ ಯೋಚಿಸುತ್ತಿರುವಾಗ ಸ್ವತಃ ಭರತಪುರದ ಮಹಾರಾಜನು ತನ್ನ ಬಾಲ್ಯ ಸ್ನೇಹಿತ ಗ್ವಾಲಿಯರ್‌ನ ಮಹಾರಾಜನೊಡನೆ ದೆಹಲಿಗೆ ಬಂದು, ಮೆನನ್‌ರವರನ್ನು ಭೇಟಿ ಮಾಡಿ, ತನ್ನ ರಾಜ್ಯದ ಪರಿಸ್ಥಿತಿಯನ್ನು ಹೇಗೆ ನಿಭಾಯಿಸಬೇಕೊ ಅರ್ಥವಾಗುತ್ತಿಲ್ಲ ಎಂದು ಹೇಳಿ, ತಾನು ಏನು ಮಾಡಬೇಕೆನ್ನುವುದರ ಬಗೆಗೆ ಅವರ ಸಲಹೆಯನ್ನು ಕೋರಿದನು. ಮೆನನ್‌ರವರು ರಾಜ್ಯದ ಆಡಳಿತವನ್ನು ಭಾರತ ಸರ್ಕಾರಕ್ಕೇ ವಹಿಸಿಬಿಡುವಂತೆ ಸಲಹೆ ನೀಡಿದರು. ಮಹಾರಾಜನು ತಕ್ಷಣವೇ ಒಪ್ಪಿದನು. ಅದರ ಪ್ರಕಾರ ಭಾರತ ಸರ್ಕಾರವು ಅವನ ರಾಜ್ಯದ ಆಡಳಿತವನ್ನು ವಹಿಸಿಕೊಂಡಿತು.[೬೫]

ವಿಚಾರಣೆಯಿಂದ ಅಲ್ವಾರ್ ಮತ್ತು ಭರತಪುರದ ಮಹಾರಾಜರು ಮತ್ತು ಡಾ॥ ಖರೆ ನಿರ್ದೋಷಿಗಳು ಎನ್ನುವುದು ಸಾಬೀತಾಯಿತು. ಆದರೆ ಮುಂದೇನು? – ಎನ್ನುವ ಪ್ರಶ್ನೆ ಉಳಿದೇ ಇತ್ತು.

ಪಟೇಲರು ಫೆಬ್ರುವರಿ ೨೫ರಂದು ಅಲ್ವಾರ್‌ಗೆ ಭೇಟಿ ಕೊಟ್ಟರು. ಅಲ್ಲಿ ಸಾರ್ವಜನಿಕ ಸಭೆಯಲ್ಲಿ ' ಸಣ್ಣ ಪುಟ್ಟ ರಾಜ್ಯಗಳು ಇನ್ನು ಮುಂದೆ ಸ್ವತಂತ್ರ ಘಟಕಗಳಾಗಿ ಉಳಿಯಲು ಸಾಧ್ಯವಿಲ್ಲ. ಹಾಗೆ ಉಳಿದರೆ ಭಾರತದ ಏಕತೆಗೆ ಅಪಾಯ..... ಅನೇಕ ರಾಜರು ತಮ್ಮ ಜವಾಬ್ದಾರಿಯನ್ನು ಅರಿತುಕೊಂಡು ತಮ್ಮ ರಾಜ್ಯವನ್ನು ದೊಡ್ಡ ರಾಜ್ಯಗಳೊಡನೆ ವಿಲೀನಗೊಳಿಸಿದ್ದಾರೆ. ರಾಜಸ್ಥಾನವು ಕಾಲದೊಡನೆ ಮುನ್ನಡೆಯಬೇಕು' ಎಂದರು. ಮುಂದುವರೆದು, ರಾಜಸ್ಥಾನಿಯರ ದೇಶ ಭಕ್ತಿ ಮತ್ತು ಹೆಮ್ಮೆಯನ್ನು ಉದ್ದೀಪನಗೊಳಿಸುವ ಮಾತುಗಳನ್ನು ಆಡಿದರು. ಅವರು, "ಕತ್ತಿಯನ್ನು ಹಿಡಿಯುವುದು ನಿಮ್ಮ ಹಕ್ಕು ಮತ್ತು ಕರ್ತವ್ಯ. ಕತ್ತಿಯಿಂದ ಬಲಹೀನರನ್ನು ಹಿಂಸಿಸದೆ ಅವರನ್ನು ರಕ್ಷಿಸುವುದೂ ಸಹ ಅಷ್ಟೇ ನಿಮ್ಮ ಜವಾಬ್ದಾರಿ. ನೀವು ಒಂದು ಪುರಾತನ ಸಂಸ್ಕೃತಿಯ ವಾರಸುದಾರರು ಮತ್ತು ರಾಜಸ್ಥಾನದ ಆದರ್ಶ ವೀರತನದ ನೈಜ ಸಂಪ್ರದಾಯಕ್ಕೆ ನಿಷ್ಠರಾಗಿದ್ದೀರಿ – ಎಂದು ಪ್ರಪಂಚವೇ ಹೇಳುವ ಹಾಗೆ ಕತ್ತಿಯನ್ನು ಪ್ರಯೋಗಿಸಬೇಕು" ಎಂದರು.[೬೬]

ಅಲ್ವಾರ್, ಭರತಪುರ, ಧೋಲ್ಪುರ ಮತ್ತು ಕರೌಲಿ ರಾಜ್ಯಗಳು ಭೌಗೋಳಿಕವಾಗಿ ಒಂದಕ್ಕೊಂದು ಸೇರಿಕೊಂಡಿರುವುದರಿಂದ, ಅವುಗಳ ನಡುವೆ ಸಮಾನ ಜನಾಂಗ ಮತ್ತು ಆರ್ಥಿಕ ಹೊಂದಾಣಿಕೆ ಇರುವುದರಿಂದ ಆ ನಾಲ್ಕು ರಾಜ್ಯಗಳನ್ನು ಒಂದು ಗೂಡಿಸಿ ಒಂದು ರಾಜ್ಯವನ್ನಾಗಿ ಮಾಡಬೇಕೆಂದು ಸರ್ದಾರರು ಯೋಚಿಸಿ, ನಾಲ್ಕು ರಾಜ್ಯಗಳ ಅರಸರನ್ನೂ ದೆಹಲಿಗೆ ಕರೆಸಿ, ಅವರ ಮುಂದೆ ಒಕ್ಕೂಟದ ಪ್ರಸ್ತಾವನೆ ಇಟ್ಟರು. ಎಲ್ಲರೂ ಒಪ್ಪಿದರು. ನಾಲ್ಕು ರಾಜ್ಯಗಳು ಸೇರಿದರೂ ಅದು ಚಿಕ್ಕ ರಾಜ್ಯವೇ ಆಗಿರುವುದರಿಂದ ಅವರು ಮುಂದೆ ರಾಜಸ್ಥಾನ ಅಥವಾ ಸಂಯುಕ್ತ ಪ್ರಾಂತ್ಯವನ್ನು ಸೇರಬೇಕಾಗಬಹುದೆಂದೂ ಸಹ ಅವರಿಗೆ ತಿಳಿಸಲಾಯಿತು. ವಿಲೀನ ಒಪ್ಪಂದಕ್ಕೆ ೧೯೪೮ರ ಫೆಬ್ರುವರಿ ೨೮ರಂದು ಸಹಿ ಹಾಕಲಾಯಿತು. ಒಕ್ಕೂಟವನ್ನು ಮತ್ಸ್ಯ ಒಕ್ಕೂಟ ಎಂದು ಕರೆಯಲಾಯಿತು. ಅದು ಮಹಾಭಾರತದ ಪ್ರಕಾರ ಆ ಪ್ರದೇಶದ ಹಿಂದಿನ ಹೆಸರಾಗಿತ್ತು. ಮತ್ಸ್ಯ ಒಕ್ಕೂಟವನ್ನು ಮಾರ್ಚ್ ೧೮ರಂದು ಕೇಂದ್ರ ಮಂತ್ರಿ ಎನ್.ವಿ. ಗಾಡ್ಗಿಲ್ ಉದ್ಘಾಟಿಸಿದರು.

ಮತ್ಸ್ಯ ಒಕ್ಕೂಟದ ರಚನೆಯ ಸಮಯದಲ್ಲೇ ರಜಪುಟಾಣದ ಇನ್ನೂ ಕೆಲವು ಚಿಕ್ಕ ರಾಜ್ಯಗಳಾದ ಬನಸ್ವಾರ, ಬುಂದಿ, ಶಹಪೂರ್, ಜಲವಾರ್, ಕಿಶನ್‌ಘಡ, ಕೋಟಾ, ಪ್ರತಾಪ್‌ಗಡ, ಡುಂಗರ್‌ಪೂರ್ ಮತ್ತು ಟೊಂಕಗಳನ್ನು ಒಂದು ಗೂಡಿಸಲು ಮಾತುಕತೆ ನಡೆಯುತ್ತಿತ್ತು. ಅವುಗಳ ಪೈಕಿ ಟೊಂಕ ಮಾತ್ರ ಮುಸ್ಲಿಂ ರಾಜ್ಯವಾಗಿತ್ತು. ಈ ಒಕ್ಕೂಟ ರಚನೆಗೆ ಪ್ರಸ್ತಾಪ ಬಂದಿದ್ದು ಕೋಟಾ, ಜಲವಾರ್ ಮತ್ತು

ದುಂಗರ್‌ಪುರ್ ರಾಜ್ಯಗಳಿಂದ. ಈ ಚಿಕ್ಕ ರಾಜ್ಯಗಳು ತಮಗೆ ಭವಿಷ್ಯವಿಲ್ಲವೆಂದು ಒಂದುಗೂಡಲು ಮುಂದಾಗಿ ರಾಜ್ಯಗಳ ಸಚಿವಾಲಯವನ್ನು ಸಂಪರ್ಕಿಸಿದುವು. ಜಲವಾರ್‌ನ ಮಹಾರಾಜ ರಾಣ ಒಕ್ಕೂಟ ರಚನೆಯಾಗುವವರೆಗೆ ಕಾಯಲೇ ಇಲ್ಲ. ಅವನು ತನ್ನ ರಾಜ್ಯವನ್ನು ಕೇಂದ್ರ ಸರ್ಕಾರಕ್ಕೆ ವಹಿಸಿ ವಿದೇಶಿ ವ್ಯವಹಾರಗಳ ಇಲಾಖೆಯಲ್ಲಿ ಉದ್ಯೋಗಕ್ಕೆ ಸೇರಿಕೊಂಡನು. ಮೆನನ್‌ರವರು ಒಂದು ವಿಲೀನ ಒಪ್ಪಂದವನ್ನು ತಯಾರಿಸಿ, ಎಲ್ಲ ರಾಜರೊಡನೆ ಸಮಾಲೋಚಿಸಿ, ಅವರ ಸಹಿ ಪಡೆದರು. ಈ ರಾಜಸ್ಥಾನ ಒಕ್ಕೂಟಕ್ಕೆ ಉದಯಪುರವೂ ಸೇರಿದರೆ ಒಳ್ಳೆಯದೆಂದು ಮೆನನ್‌ರವರು ಉದಯಪುರದ ದಿವಾನ ಎನ್.ವಿ. ರಾಮಮೂರ್ತಿಯವರನ್ನು ಸಂಪರ್ಕಿಸಿದರು. ರಾಮಮೂರ್ತಿಯವರು ಎಲ್ಲ ರಾಜ್ಯಗಳು ಉದಯಪುರದೊಡನೆ ವಿಲೀನವಾಗಲಿ – ಎಂದರು. ಅದರಿಂದ ಉದಯಪುರವನ್ನು ಬಿಟ್ಟು ಮಿಕ್ಕವರು ರಾಜಸ್ಥಾನ್ ಒಕ್ಕೂಟವನ್ನು ರಚಿಸಿಕೊಂಡರು. ಒಕ್ಕೂಟದ ಉದ್ಘಾಟನೆ ಮಾರ್ಚ್ ೨೫ಕ್ಕೆ ನಿಗದಿಯಾಯಿತು. ಮಾರ್ಚ್ ೨೩ರಂದು ಉದಯಪುರದ ಮಹಾರಾಣನು ಮನಸ್ಸನ್ನು ಬದಲಾಯಿಸಿ, ಒಕ್ಕೂಟವನ್ನು ಸೇರುವ ಇಂಗಿತವನ್ನು ವ್ಯಕ್ತ ಪಡಿಸಿದನು. ಆದರೆ ೨೫ನೇ ತಾರೀಖಿನ ಉದ್ಘಾಟನಾ ಸಮಾರಂಭಕ್ಕೆ ಎಲ್ಲಾ ಏರ್ಪಾಟುಗಳು ಮುಗಿದಿದ್ದರಿಂದ, ಅದನ್ನು ಮುಂದೂಡಲಾಗಲಿಲ್ಲ. ಮಾರ್ಚ್ ೨೫ರಂದು ರಾಜಸ್ಥಾನ್ ಒಕ್ಕೂಟದ ಉದ್ಘಾಟನೆ ನಡೆಯಿತು.

ಆ ನಂತರ ಮೆನನ್ ಮತ್ತೆ ಎಲ್ಲಾ ಅರಸರೊಡನೆ ಸಮಾಲೋಚಿಸಿ, ಹೊಸ ವಿಲೀನ ಒಪ್ಪಂದವನ್ನು ರಚಿಸಿ, ಒಕ್ಕೂಟದಲ್ಲಿ ಉದಯಪುರವನ್ನೂ ಸೇರಿಸಿದರು. ಹೊಸ ಒಕ್ಕೂಟವನ್ನು ೧೯೪೮ರ ಏಪ್ರಿಲ್ ೧೮ರಂದು ಪ್ರಧಾನಿ ಜವಹರಲಾಲ್ ನೆಹರು ಉದ್ಘಾಟಿಸಿದರು.[೬೭]

ಅಲ್ಲಿಗೆ ನಾಲ್ಕು ರಜಪೂತ ರಾಜ್ಯಗಳು ಮಾತ್ರ ಒಕ್ಕೂಟದಿಂದ ಹೊರ ಉಳಿದಿದ್ದುವು. ಅವು ಜೈಪುರ, ಜೋಧ್‌ಪುರ, ಬಿಕನೀರ್ ಮತ್ತು ಜೈಸಲ್ಮೀರ್. ಜೈಪುರ, ಜೋಧ್‌ಪುರ ಮತ್ತು ಬಿಕನೀರ್‌ನ ರಾಜರು ತಮ್ಮ ರಾಜ್ಯಗಳ ಅಸ್ತಿತ್ವವನ್ನು ಉಳಿಸಿಕೊಳ್ಳಲು ಬಯಸಿದ್ದರು. ಆದರೆ ಆ ರಾಜ್ಯಗಳಿಗಿಂತಲೂ ದೊಡ್ಡದಾದ ಅನೇಕ ರಾಜ್ಯಗಳನ್ನು ನೆರೆಯ ಪ್ರಾಂತ್ಯಗಳೊಡನೆ ಸೇರಿಸಲಾಗಿತ್ತು ಅಥವಾ ಒಕ್ಕೂಟವಾಗಿ ಒಟ್ಟಿಗೆ ಸೇರಿಸಲಾಗಿತ್ತು. ಅದರಿಂದ ಆ ಮೂರು ರಾಜ್ಯಗಳನ್ನು ಹಾಗೇ ಬಿಡುವ ಹಾಗಿರಲಿಲ್ಲ.

ನಾಲ್ಕು ರಾಜ್ಯಗಳನ್ನೂ ರಾಜಸ್ಥಾನ್ ಒಕ್ಕೂಟದಲ್ಲಿ ಸೇರಿಸಿ ವಿಶಾಲ ರಾಜಸ್ಥಾನವನ್ನು ರಚಿಸುವುದು ಪಟೇಲರ ಅಭಿಪ್ರಾಯವಾಗಿತ್ತು. ಅವರು

ಉದಯಪುರಕ್ಕೆ ೧೯೪೯ರ ಜನವರಿ ೧೪ರಂದು ಭೇಟಿ ನೀಡುವವರಿದ್ದರು. ಆ ಭೇಟಿಯ ಸಮಯದಲ್ಲಿ ವಿಶಾಲ ರಾಜಸ್ಥಾನದ ಉಗಮವನ್ನು ಪ್ರಕಟಿಸುವ ಅಪೇಕ್ಷೆ ಅವರದಾಗಿತ್ತು. ಅವರು ಸಂಬಂಧಪಟ್ಟ ರಾಜರನ್ನು ಸಂಪರ್ಕಿಸುವಂತೆ ಮೆನನ್‌ರವರಿಗೆ ಸೂಚಿಸಿದರು. ಮೆನನ್‌ರವರು ಜನವರಿ ೧೧ರಂದು ಜೈಪುರಕ್ಕೆ ಹೋಗಿ ಅದರ ಮಹಾರಾಜರೊಡನೆ ಮತ್ತು ದಿವಾನ ವಿ.ಟಿ. ಕೃಷ್ಣಮಾಚಾರಿಯವರೊಡನೆ ಮಾತುಕತೆ ನಡೆಸಿದರು. ವಿಲೀನಕ್ಕೆ ಮಹಾರಾಜರು ಒಪ್ಪಿದರು, ಆದರೆ ಜೈಪುರವೇ ರಾಜಧಾನಿಯಾಗಬೇಕೆಂಬ ಶರತ್ತನ್ನು ಒಡ್ಡಿದರು. ಸಧ್ಯಕ್ಕೆ ವಿಲೀನದ ಬಗೆಗೆ ತೀರ್ಮಾನಿಸೋಣ, ವಿವರಗಳನ್ನು ಮುಂದೆ ಚರ್ಚಿಸೋಣ ಎಂದರು ಮೆನನ್. ನಂತರ ಅವರು ಒಂದು ಕರಡು ವಿಲೀನ ಒಪ್ಪಂದವನ್ನು ರಚಿಸಿದರು. ಅದನ್ನು ಮಹಾರಾಜರು ಮತ್ತು ದಿವಾನರು ಒಪ್ಪಿದರು. ನಂತರ ಮೆನನ್ ಆ ಕರಡನ್ನು ಟೆಲಿಗ್ರಾಂ ಮೂಲಕ ಬಿಕನೀರ್ ಮತ್ತು ಜೋಧ್‌ಪುರದ ಮಹಾರಾಜರಿಗೆ ಕಳುಹಿಸಿದರು. ಸಂಜೆಯ ವೇಳೆಗೆ ಇಬ್ಬರು ಮಹಾರಾಜರಿಂದ ಒಪ್ಪಿಗೆಯ ಟೆಲಿಗ್ರಾಂಗಳು ಬಂದುವು.

ಜನವರಿ ೧೪ರಂದು ಸರ್ದಾರರು ಉದಯಪುರದಲ್ಲಿ ಸಾರ್ವಜನಿಕ ಸಭೆಯಲ್ಲಿ ಜೈಪುರ, ಜೋಧ್‌ಪುರ, ಬಿಕನೀರ್ ಮತ್ತು ಜೈಸಲ್ಮೀರ್ ರಾಜ್ಯಗಳ ರಾಜರು ರಾಜಸ್ಥಾನ್ ಒಕ್ಕೂಟದಲ್ಲಿ ವಿಲೀನವಾಗಲು ತತ್ವಶಃ ಒಪ್ಪಿದ್ದಾರೆಂದು ಪ್ರಕಟಿಸಿದರು. ಇಡೀ ದೇಶ ಅದನ್ನು ಸ್ವಾಗತಿಸಿತು.[೬೮]

ವಿಶಾಲ ರಾಜಸ್ಥಾನ ಒಕ್ಕೂಟದ ಉದ್ಘಾಟನೆಯನ್ನು ೧೯೪೯ ಮಾರ್ಚ್ ೩೦ರಂದು ಜೈಪುರದಲ್ಲಿ ಸರ್ದಾರ್ ಪಟೇಲರು ನೆರವೇರಿಸಬೇಕೆಂದು ನಿಗದಿಯಾಯಿತು. ಸರ್ದಾರರು ಮಾರ್ಚ್ ೨೯ರ ಸಂಜೆ ವಿಮಾನದಲ್ಲಿ ದೆಹಲಿಯಿಂದ ಜೈಪುರಕ್ಕೆ ಹೊರಟರು. ಆದರೆ ಮಾರ್ಗಮಧ್ಯದಲ್ಲಿ ವಿಮಾನದ ಎಂಜಿನ್‌ಗಳು ಸ್ಥಗಿತಗೊಂಡು ಸಂಪರ್ಕ ಕಡಿದು ಹೋಗಿ ಇಡೀ ರಾಷ್ಟ್ರ ಆತಂಕಕ್ಕೆ ಒಳಗಾಯಿತು. ಅದೃಷ್ಟವಶಾತ್ ಚಾಲಕನು ಒಂದು ನದಿ ದಡದಲ್ಲಿ ಜೋಪಾನವಾಗಿ ವಿಮಾನವನ್ನು ಇಳಿಸಿದನು. ಅಲ್ಲಿಂದ ಪಟೇಲರು ಪ್ರಯಾಸ ಪಟ್ಟು ರಾತ್ರಿ ೧೧ ಘಂಟೆಗೆ ಜೈಪುರವನ್ನು ತಲುಪಿದರು. ಮಾರನೆಯ ದಿನ ವಿಶಾಲ ರಾಜಸ್ಥಾನವನ್ನು ಉದ್ಘಾಟಿಸಿದರು. (ಈ ಘಟನೆಯನ್ನು ಹಿಂದೆಯೇ ವಿವರಿಸಿದೆ.)

ಉದ್ಘಾಟನಾ ಭಾಷಣ ಮಾಡುತ್ತ ಸರ್ದಾರರು ಹೀಗೆ ನುಡಿದರು:

> .....ರಾಜ್ಯಗಳ ವಲಯದಲ್ಲಿ ನಾನು ಏನು ಮಾಡಲು ಸಾಧ್ಯವಾಯಿತೋ ಅದಕ್ಕೆ ನನ್ನನ್ನು ಹೊಗಳುತ್ತಿದ್ದಾರೆ ಮತ್ತು

ಅಭಿನಂದಿಸುತ್ತಿದ್ದಾರೆ. ಆದರೆ ಆ ಎಲ್ಲಾ ಅಭಿನಂದನೆಗಳು ಮತ್ತು ಹೊಗಳಿಕೆಗಳಿಗೆ ಅರ್ಹರಾದವರು, ದೇಶಕ್ಕಾಗಿ ಅಷ್ಟೊಂದು ತ್ಯಾಗ ಮಾಡಿರುವ, ರಾಜರು. ಅವರು ನಮಗೆ ಆತ್ಮ ಸಂತೋಷದಿಂದ ಬೆಂಬಲ ನೀಡದೆ ಹೋಗಿದ್ದರೆ, ನಾವು ಈಗ ಮಾಡುತ್ತಿರುವ ಹಾಗೆ, ಈ ದೇಶದ ಇತಿಹಾಸವನ್ನು ಬದಲಾಯಿಸಲು ಎಂದಿಗೂ ಸಾಧ್ಯವಾಗುತ್ತಿರಲಿಲ್ಲ.[೬೯]

(ಸರ್ದಾರರೆಂದರೆ ವಿನಯ, ವಿನಯವೆಂದರೆ ಸರ್ದಾರರು, ಅಲ್ಲವೇ? – ಲೇಖಕ)

ಮುಂದೆ, ಮೆನನ್‌ರವರು ಮತ್ಸ್ಯ ಒಕ್ಕೂಟದ ಮಂತ್ರಿಗಳೊಡನೆ ಸಮಾಲೋಚಿಸಿದರು. ೧೯೪೯ರ ಮೇ ೧೫ರಂದು ಮತ್ಸ್ಯ ಒಕ್ಕೂಟವು ರಾಜಸ್ಥಾನದಲ್ಲಿ ವಿಲೀನವಾಯಿತು.

ಈ) ದಖನ್ ಮತ್ತು ಗುಜರಾತ್ ರಾಜ್ಯಗಳು

ಇಡೀ ಭಾರತ ಒಂದು, ಪ್ರಜೆಗಳೇ ಸಾರ್ವಭೌಮರು, ಎಲ್ಲೆಡೆ ಜವಾಬ್ದಾರಿ ಸರ್ಕಾರ ಇರಬೇಕು. ಆದರೆ ಸಣ್ಣ ರಾಜ್ಯಗಳಲ್ಲಿ ಅದು ಸಾಧ್ಯವಿಲ್ಲ ಏಕೆಂದರೆ ಅದಕ್ಕೆ ಬೇಕಾದ ಆರ್ಥಿಕ ಸಂಪತ್ತು ಮತ್ತು ಮಾನವ ಸಂಪತ್ತು ಅವರಲ್ಲಿ ಇಲ್ಲ. ಅದರಿಂದ ಅವನ್ನು ಒಟ್ಟಿಗೆ ಸೇರಿಸಿ ಒಂದು ರಾಜ್ಯ ಮಾಡಿ ಭಾರತದಲ್ಲಿ ವಿಲೀನಗೊಳಿಸಬೇಕು ಅಥವಾ ಪ್ರಾಂತ್ಯಗಳೊಡನೆ ಬೆಸೆಯಬೇಕು, ಆ ಮೂಲಕ ಸ್ವತಂತ್ರ ಪ್ರಜಾಸತ್ತಾತ್ಮಕ ಭಾರತ ಒಕ್ಕೂಟವನ್ನು ಸ್ಥಾಪಿಸಬೇಕು – ಅನ್ನುವ ತತ್ವವನ್ನು ರೂಪಿಸಿ ಒರಿಸ್ಸ ಮತ್ತು ಜಾರ್ಖಂಡ್ ಪ್ರದೇಶಗಳ, ಕಾಥೈವಾಡ ಪ್ರದೇಶದ ಮತ್ತು ರಾಜಸ್ಥಾನ ಪ್ರದೇಶದ ರಾಜ್ಯಗಳು ಭಾರತ ಒಕ್ಕೂಟದಲ್ಲಿ ವಿಲೀನವಾಗುವಂತೆ ಮಾಡಿದ ಮೇಲೆ, ಸರ್ದಾರರು ತಮ್ಮ ಕಾರ್ಯದರ್ಶಿ ಮೆನನ್‌ರವರ ಸಹಕಾರದಿಂದ ಭಾರತದ ಇತರ ಭಾಗಗಳಲ್ಲಿದ್ದ ಸಣ್ಣ ಸಣ್ಣ ರಾಜ್ಯಗಳನ್ನೂ ಭಾರತ ಒಕ್ಕೂಟದಲ್ಲಿ ಸೇರಿಸಿದರು. ಕೆಲವೊಮ್ಮೆ ರಾಜ್ಯಗಳೇ ವಿಲೀನವಾಗಲು ಮುಂದೆ ಬಂದುವು. ಒರಿಸ್ಸ ಮತ್ತು ಚತ್ತೀಸ್‌ಗರ್ ರಾಜ್ಯಗಳ ವಿಲೀನ ಈ ರಾಜ್ಯಗಳಿಗೆ ಸ್ಫೂರ್ತಿ ನೀಡಿತ್ತು. ಅವುಗಳೊಡನೆ ಚರ್ಚಿಸಿ, ಸೂಕ್ತವಾದ ರೀತಿಯಲ್ಲಿ ವಿಲೀನಗೊಳಿಸಲಾಯಿತು.

ದಖನ್ ಪ್ರದೇಶದಲ್ಲಿದ್ದ ಕೊಲಾಪುರ, ಅಕಲ್ ಕೋಟ್, ಜತ್, ಮುಧೋಳ, ಫಲ್ತಾನ್, ಸಾವಂತ್‌ವಾಡಿ, ಔಂದ್, ಭೋರ್, ಸಾಂಗ್ಲಿ, ವಾಡಿ, ರಾಮ್‌ದುರ್ಗ, ಜಮಖಂಡಿ, ಮೀರಜ್ ಸೀನಿಯರ್, ಮೀರಜ್ ಜ್ಯೂನಿಯರ್, ಕುರುಂದವಾಡ್

ಸೀನಿಯರ್ ಮತ್ತು ಕುರುಂದವಾಡ್ ಜ್ಯೂನಿಯರ್ ಎಂಬ ೧೭ ಮರಾಠಿ ಮತ್ತು ಕನ್ನಡ ರಾಜ್ಯಗಳು ಬೊಂಬಾಯಿ ಪ್ರಾಂತ್ಯಕ್ಕೆ ಸೇರಿಸಲ್ಪಟ್ಟುವು.[೨೦] ಗುಜರಾತ್ ಪ್ರದೇಶದಲ್ಲಿ ೧೭ ಪೂರ್ಣ ವ್ಯಾಪ್ತಿ ಮತ್ತು ವ್ಯಾಪ್ತಿ ರಹಿತ ಘಟಕಗಳು ಇದ್ದುವು. ಮೆನನ್‌ರವರು ೧೯೪೮ರ ಮಾರ್ಚ್ ೧೭ರಂದು ಬೊಂಬಾಯಿಗೆ ಹೋಗಿ ೧೭ ಪೂರ್ಣ ವ್ಯಾಪ್ತಿ ರಾಜ್ಯಗಳೊಡನೆ ರಾಜ್‌ಪಿಪ್ಲದ ಮಹಾರಾಜನ ಸದನದಲ್ಲಿ ಮಾತುಕತೆ ನಡೆಸಿದರು. ಆ ಗುಜರಾತ್ ರಾಜ್ಯಗಳಿಗೆ ಮೂರು ಆಯ್ಕೆಗಳಿದ್ದುವು: ಬಾಂಬೆ ಪ್ರಾಂತ್ಯದಲ್ಲಿ ವಿಲೀನವಾಗುವುದು, ತಾವೇ ಒಂದುಗೂಡಿ ಒಂದು ರಾಜ್ಯವಾಗುವುದು ಮತ್ತು ಬರೋಡ ರಾಜ್ಯದೊಡನೆ ಸೇರಿ ಒಂದು ಒಕ್ಕೂಟವನ್ನು ರಚಿಸುವುದು. ಮೊದಲನೆಯದನ್ನು ರಾಜರೇ ಒಪ್ಪಲಿಲ್ಲ. ಎರಡನೆಯದನ್ನು ಮೆನನ್ ಸೂಕ್ತವಲ್ಲ ಎಂದರು. ಮೂರನೆಯದಕ್ಕೆ ಬೊಂಬಾಯಿಯಲ್ಲೇ ಇದ್ದ ಬರೋಡ ರಾಜನನ್ನು ಗುಜರಾತ್ ರಾಜ್ಯಗಳ ರಾಜರು ಭೇಟಿ ಮಾಡಿದರು. ಅವರೊಡನೆ ಸೇರುವುದಕ್ಕೆ ಬರೋಡ ರಾಜನು ನಿರಾಕರಿಸಿದನು. ಮೂರು ದಿನಗಳ ದೀರ್ಘ ಚರ್ಚೆ ನಡೆದು ಎಲ್ಲಾ ರಾಜ್ಯಗಳು ಬಾಂಬೆ ಪ್ರಾಂತ್ಯದಲ್ಲಿ ವಿಲೀನವಾಗಬೇಕೆಂದು ತೀರ್ಮಾನವಾಯಿತು. ನಂತರ ರಾಜ್‌ಪಿಪ್ಲದ ಮಹಾರಾಜನು ಕೆಳಕಂಡ ಹೇಳಿಕೆ ನೀಡಿದನು:

> ಇಡೀ ಭಾರತದ ಹಿತದೃಷ್ಟಿಯಿಂದ ಎಲ್ಲಾ ತ್ಯಾಗಗಳನ್ನು ಮಾಡಬೇಕೆಂದು ದೇಶ ಮಾತೆ ಅದರಲ್ಲೂ ಗುಜರಾತ್ ಮಾತೆ ನಮ್ಮ ಕಡೆಗೆ ನೋಡುತ್ತಿದ್ದಾಳೆ ಎಂದು ನಾವು ಗುಜರಾತ್ ರಾಜ್ಯಗಳ ಆಡಳಿತಗಾರರು, ನಂಬಿದ್ದೇವೆ ಎಂದು ತಿಳಿಸಲು ಸಂತೋಷಪಡುತ್ತೇನೆ. ಆದದ್ದರಿಂದ ಕರ್ತವ್ಯದ ಕರೆಗೆ ನಾವು ಸಂತೋಷದಿಂದ ಪ್ರತಿಸ್ಪಂದಿಸುತ್ತಿದ್ದೇವೆ ಮತ್ತು ನಮ್ಮ ರಾಜ್ಯಗಳನ್ನು ಬಾಂಬೆ ಪ್ರಾಂತ್ಯದ ಜೊತೆಗೆ ವಿಲೀನಗೊಳಿಸುವುದರ ಮೂಲಕ ಮಹಾ ಗುಜರಾತ್ ಪ್ರಾಂತ್ಯ ರಚನೆಗೆ ಮೊದಲನೆ ಹೆಜ್ಜೆಯನ್ನು ಇಡಲು ತೀರ್ಮಾನಿಸಿದ್ದೇವೆ. ನಮ್ಮ ತೀರ್ಮಾನಕ್ಕೆ ದೇವರ ಆಶೀರ್ವಾದವನ್ನು ಬೇಡುತ್ತೇವೆ.

ಆ ನಂತರ ವಿಲೀನ ಒಪ್ಪಂದಗಳಿಗೆ ರಾಜರು ಸಹಿ ಹಾಕಿದರು. ೧೯೪೯ರ ಜೂನ್ ೧೦ರಂದು ಬಾಂಬೆ ಪ್ರಾಂತ್ಯಗಳೊಡನೆ ಗುಜರಾತ್ ರಾಜ್ಯಗಳ ವಿಲೀನ ಜಾರಿಗೆ ಬಂದಿತು.[೨೧]

ಉ) ವಿಂಧ್ಯ ಪರ್ವತ ರಾಜ್ಯಗಳು

ಬಂದೇಲ್‌ಖಂಡ್ ಮತ್ತು ಬಗೇಲ್‌ಖಂಡ್‌ನಲ್ಲಿ ರೇವ ಸೇರಿ ೩೫ ಸಣ್ಣ ರಾಜ್ಯಗಳಿದ್ದುವು. ಅವು ಬಹಳ ಹಿಂದುಳಿದ ಪ್ರದೇಶಗಳು. ಅವುಗಳ ಅಭಿವೃದ್ಧಿಗೆ ಇದ್ದ ಏಕಮಾತ್ರ ಮಾರ್ಗ ರೇವ ಸಹಿತ ಎಲ್ಲಾ ರಾಜ್ಯಗಳನ್ನು ಸೇರಿಸಿ ಒಂದು ರಾಜ್ಯ ಮಾಡುವುದು. ಆದರೆ ಅಲ್ಲಿ ಒಂದು ತೊಂದರೆಯಿತ್ತು. ರೇವ ರಾಜ್ಯ ಒಂದು 'ನಿರ್ವಹಿಸಬಲ್ಲ ರಾಜ್ಯ' ಎಂದು ಘೋಷಿಸಲ್ಪಟ್ಟಿತ್ತು. 'ನಿರ್ವಹಿಸಬಲ್ಲ ರಾಜ್ಯ' ಎಂದರೆ ಬೇರೆ ರಾಜ್ಯಗಳೊಡನೆ ಅಥವಾ ಪ್ರಾಂತ್ಯದೊಡನೆ ಸೇರದೆ ಒಂಟಿಯಾಗಿ ಇರಬಹುದಾದಷ್ಟು ವಿಸ್ತಾರ ಮತ್ತು ಸಂಪನ್ಮೂಲ ಹೊಂದಿರುವ ರಾಜ್ಯ. ಲಾರ್ಡ್ ಮೌಂಟ್‌ಬ್ಯಾಟನ್‌ರವರು ರಾಜರ ಸಮ್ಮೇಳನದಲ್ಲಿ ವಿಲೀನದ ತತ್ವವನ್ನು 'ನಿರ್ವಹಿಸ ಬಲ್ಲ' ರಾಜ್ಯಗಳಿಗೆ ಅನ್ವಯಿಸುವುದಿಲ್ಲ – ಎಂದು ಆಶ್ವಾಸನೆ ನೀಡಿದ್ದರು. ಅಷ್ಟು ಹೊತ್ತಿಗೆ ರೇವ ರಾಜನ ಪರವಾಗಿ ಒಂದು ನಿಯೋಗವು ದೆಹಲಿಗೆ ಬಂದು 'ಕೆಲವು ಶರತ್ತುಗಳಿಗೆ ಒಪ್ಪುವುದಾದರೆ ರೇವ ರಾಜ್ಯವು ಒಂದುಗೂಡಲು ಸಿದ್ಧ' ಎಂದು ಹೇಳಿತು. ಅದರಿಂದ ಹಾದಿ ಸುಗಮವಾಯಿತು.

ಮೆನನ್‌ರವರು ಸರ್ದಾರರೊಡನೆ ಸಮಾಲೋಚಿಸಿ ೧೯೪೮ರ ಮಾರ್ಚ್ ೧೧ರಂದು ರೇವಾಕ್ಕೆ ಹೋಗಿ ಅಲ್ಲಿಯ ರಾಜ ಮತ್ತು ನಾಯಕರು ಹಾಗೂ ಬಂದೇಲ್‌ಖಂಡ್ ಮತ್ತು ಬಗೇಲ್‌ಖಂಡ್‌ದ ಜನನಾಯಕರನ್ನು ಭೇಟಿ ಮಾಡಿ ದೀರ್ಘ ಸಮಾಲೋಚನೆ ನಡೆಸಿ ಎಲ್ಲರನ್ನು ಒಪ್ಪಿಸಿ ಒಂದು ಒಕ್ಕೂಟವನ್ನು ರಚಿಸಿದರು. ಕೇಂದ್ರ ಮಂತ್ರಿ ಎನ್.ವಿ. ಗಾಡ್ಗಿಲ್ ೧೯೪೮ರ ಏಪ್ರಿಲ್ ೧ರಂದು ಅದನ್ನು ಉದ್ಘಾಟಿಸಿದರು. ಆದರೆ ಒಂದು ವರ್ಷದ ಒಳಗೆ ವಿಪರೀತ ಲಂಚ, ಪಕ್ಷಪಾತ, ಒಳಜಗಳ ಮತ್ತು ಅದಕ್ಷತೆಯ ಫಲವಾಗಿ ಆಡಳಿತ ಕುಸಿದು ಬಿತ್ತು. ಸಮರ್ಪಕವಾಗಿ ಆಡಳಿತ ನಡೆಸುವ ಶಕ್ತಿ ಇರುವ ಜನ ಅಲ್ಲಿರಲಿಲ್ಲ.

ಪಟೇಲರು ರೇವಾ ಒಕ್ಕೂಟವನ್ನು ವಿಭಜಿಸಿ ಮಧ್ಯ ಪ್ರಾಂತ್ಯ ಮತ್ತು ಸಂಯುಕ್ತ ಪ್ರಾಂತ್ಯದ (ಈಗಿನ ಮಧ್ಯ ಪ್ರದೇಶ ಮತ್ತು ಉತ್ತರ ಪ್ರದೇಶ) ನಡುವೆ ಹಂಚುವ ಯೋಚನೆ ಮಾಡಿ ಮೆನನ್‌ರವರನ್ನು ೧೯೪೯ರ ಡಿಸೆಂಬರ್ ೧೭ರಂದು ರೇವಾಕ್ಕೆ ಕಳುಹಿಸಿದರು. ಅಲ್ಲಿ ಜನ ಮೆನನ್‌ರವರನ್ನು ಅಡ್ಡಹಾಕಿ ರಾಜನ ಅರಮನೆಗೇ ಹೋಗದಂತೆ ತಡೆದರು. ರಾಜನೇ ಅದನ್ನು ಏರ್ಪಡಿಸಿದ್ದನೆಂದು ಕಾಣುತ್ತದೆ. ಅವನಿಗೆ ಒಕ್ಕೂಟವನ್ನು ಒಡೆದು ಹಂಚುವುದು ಇಷ್ಟವಿರಲಿಲ್ಲ.

ಆಗ ವಿಧಿ ಇಲ್ಲದೆ ಸರ್ದಾರರು ಒಕ್ಕೂಟವನ್ನು ಕೇಂದ್ರ ಸರ್ಕಾರಕ್ಕೆ ವಹಿಸಿಕೊಂಡು ಅದರ ಆಡಳಿತಕ್ಕೆ ಒಬ್ಬ ಲೆಫ್ಟಿನೆಂಟ್ ಗೌರ್ನರ್‌ನನ್ನು ನಿಯಮಿಸಿ,

ಒಂದು ಶಾಸನ ಸಭೆ ಮತ್ತು ಅದಕ್ಕೆ ಜವಾಬ್ದಾರಿಯಾದ ಮಂತ್ರಿ ಮಂಡಲವನ್ನು ರಚಿಸಿದರು.[೨೨]

ಊ) ಮಧ್ಯ ಭಾರತ ರಾಜ್ಯಗಳು

ಭಾರತದ ಮಧ್ಯ ಭಾಗದಲ್ಲಿ, ಮಾಳ್ವ ಪ್ರಸ್ಥಭೂಮಿಯಲ್ಲಿ ೨೫ ರಾಜ್ಯಗಳಿದ್ದುವು. ಅವುಗಳ ಪೈಕಿ ಮರಾಠ ರಾಜ್ಯಗಳಾದ ಗ್ವಾಲಿಯರ್ ಮತ್ತು ಇಂದೋರ್ ಪ್ರಮುಖವಾದುವು. ಅವೆರಡು ಕ್ರಮವಾಗಿ ಸಿಂದಿಯ ಮತ್ತು ಹೋಲ್ಕರ್ ಕುಟುಂಬಕ್ಕೆ ಸೇರಿದ್ದುವು. ಈ ಎರಡು ರಾಜ್ಯಗಳ ನಡುವೆ ಹಿಂದಿನಿಂದಲೂ ಪೈಪೋಟಿ ಮತ್ತು ಹಗೆತನ ಇತ್ತು. ಆ ಎರಡು ರಾಜ್ಯಗಳು 'ವಯಬಲ್' ಅಂದರೆ 'ನಿರ್ವಹಿಸಬಲ್ಲ' ರಾಜ್ಯಗಳೆಂದು ಘೋಷಿಸಲ್ಪಟ್ಟಿದ್ದುವು. ಧಾರ್, ದೇವಾಸ್, ರತ್ಲಂ, ಅಲಿರಾಜಪುರ್, ಬರ್ವಾನಿ, ಜಬೂವ, ಖಿಲ್ಚಿಪುರ್, ನರಸಿಂಹಗಡ, ಸೈಲಾನ, ಸಿತಾಮ್‌ವ್, ಜೋಬಾತ್, ಕಥಿವಾರೆ, ಮಥವಾರೆ, ರಾಜ್‌ಗಲ್, ನಿಂಖೇರ, ಜಾಮ್ನಿಯ ಮತ್ತು ಪಿಪ್ಲೋಡ ಅಲ್ಲಿದ್ದ ಇತರ ರಾಜ್ಯಗಳು. ಇವಲ್ಲದೆ ಜವೋರ, ಕುರ್ವೆ, ಮಹಮದ್‌ಗಡ್ ಮತ್ತು ಪದಾರಿ ಎಂಬ ನಾಲ್ಕು ಮುಸ್ಲಿಂ ರಾಜ್ಯಗಳೂ ಇದ್ದುವು.

ಈ ರಾಜ್ಯಗಳನ್ನು ಒಟ್ಟಿಗೆ ಸೇರಿಸುವುದು ಅನಿವಾರ್ಯವಾಗಿತ್ತು. ಆದರೆ ಗ್ವಾಲಿಯರ್ ಮತ್ತು ಇಂದೋರ್ ವಯಬಲ್ ರಾಜ್ಯಗಳಾದುದರಿಂದ ಅವನ್ನು ಮುಟ್ಟುವ ಹಾಗಿರಲಿಲ್ಲ. ಅವೆರಡನ್ನೂ ಬಿಟ್ಟು ಮಿಕ್ಕ ರಾಜ್ಯಗಳನ್ನು ಮಾತ್ರ ಸೇರಿಸುವುದು ಅಸಾಧ್ಯವಾಗಿತ್ತು. ಏಕೆಂದರೆ ಅವು ಚದುರಿಹೋಗಿದ್ದುವು ಮತ್ತು ವಯಬಲ್ ಆಗುತ್ತಿರಲಿಲ್ಲ. ಅದರಿಂದ ಗ್ವಾಲಿಯರ್ ಮತ್ತು ಇಂದೋರ್ ಸೇರಿ ಎಲ್ಲಾ ರಾಜ್ಯಗಳ ಒಕ್ಕೂಟದ ರಚನೆ ಸೂಕ್ತ ಎನ್ನುವುದು ಸರ್ದಾರರ ಅಭಿಪ್ರಾಯವಾಗಿತ್ತು.

ಮೆನನ್‌ರವರು ೧೯೪೮ರ ಫೆಬ್ರುವರಿಯಲ್ಲಿ ಗ್ವಾಲಿಯರ್ ಮಹಾರಾಜನನ್ನು ಭೇಟಿ ಮಾಡಿ ಒಕ್ಕೂಟದ ವಿಷಯವನ್ನು ಪ್ರಸ್ತಾಪಿಸಿದರು. ಆ ಸಲಹೆಗೆ ಗ್ವಾಲಿಯರ್ ಮಹಾರಾಜರು ದಿಗ್ಭ್ರಾಂತರಾದರು. ಆದರೂ ಮೆನನ್‌ರವರು ಅವರಿಗೆ ಪರಿಸ್ಥಿತಿಯನ್ನು ವಿವರಿಸಿದರು. ಅವರು ಮಹಾರಾಜರಿಗೆ, 'ಸಣ್ಣ ರಾಜ್ಯಗಳನ್ನು ಸೇರಿಸಿ ಒಕ್ಕೂಟದ ಸ್ಥಾಪನೆ ಸಾಧ್ಯವಿಲ್ಲ. ನೀವು ಒಪ್ಪದೇ ಹೋದರೆ ಇಂದೋರ್ ಸುತ್ತ ಒಕ್ಕೂಟ ಸ್ಥಾಪಿಸಬೇಕಾಗುತ್ತದೆ. ಇಂದೋರ್ ಮಹಾರಾಜರು ನಿರಾಕರಿಸುವುದಿಲ್ಲ. ಆಗ ಗ್ವಾಲಿಯರ್ ದುರ್ಬಲವಾಗುತ್ತದೆ' ಎಂದು ಹೇಳಿದರು. ಅವರ ವಾದ ಮಹಾರಾಜರ ಮನಸ್ಸಿಗೆ ನಾಟಿತು.

ಮೆನನ್‌ರವರು ಮಾರ್ಚ್ ಮಧ್ಯ ಭಾಗದಲ್ಲಿ ಬೊಂಬಾಯಿಯಲ್ಲಿ ಗ್ವಾಲಿಯರ್, ಇಂದೋರ್ ಮತ್ತು ದೇವಾಸ್ ರಾಜ್ಯಗಳ ಮಹಾರಾಜರು ಮತ್ತು ಪ್ರಜಾ ಮಂಡಲಗಳ ಪ್ರತಿನಿಧಿಗಳ ಸಭೆಯನ್ನು ನಡೆಸಿದರು. ಧೀರ್ಘ ಚರ್ಚೆಯ ನಂತರ ಗ್ವಾಲಿಯರ್ ಮತ್ತು ಇಂದೋರ್ ಮತ್ತು ಇತರ ಮಾಳ್ವ ರಾಜ್ಯಗಳನ್ನು ಸೇರಿಸಿ ಒಂದು ಸಂಯುಕ್ತ ರಾಜ್ಯ ರಚಿಸಲು ತತ್ವಶಃ ಎಲ್ಲರೂ ಒಪ್ಪಿದರು. ವಿಲೀನ ಒಪ್ಪಂದಕ್ಕೆ ೧೯೪೮ರ ಏಪ್ರಿಲ್ ೨೨ರಂದು ಸಹಿ ಹಾಕಲಾಯಿತು. ಆದರೆ ರಾಜಧಾನಿಯ ಬಗೆಗೆ ಒಮ್ಮತ ಮೂಡಲಿಲ್ಲ. ಗ್ವಾಲಿಯರ್ ಮತ್ತು ಇಂದೋರ್ ಮಹಾರಾಜರು ತಮ್ಮ ತಮ್ಮ ನಗರವೇ ರಾಜಧಾನಿ ಆಗಬೇಕೆಂದು ಒತ್ತಾಯಿಸಿದರು. ಕೊನೆಗೆ ನೆಹರುರವರ ಸೂಚನೆಯ ಮೇರೆ, ಸಧ್ಯಕ್ಕೆ ಗ್ವಾಲಿಯರ್ ಆರೂವರೆ ತಿಂಗಳ ಕಾಲ ಮತ್ತು ಇಂದೋರ್ ಐದುವರೆ ತಿಂಗಳ ಕಾಲ ರಾಜಧಾನಿ ಆಗಿರಬೇಕೆಂದು ನಿರ್ಧಾರ ವಾಯಿತು.

೧೯೪೮ರ ಮೇ ೨೮ರಂದು ಪ್ರಧಾನಿ ನೆಹರುರವರು 'ಮಧ್ಯ ಭಾರತ್ ಯೂನಿಯನ್' ಅನ್ನು ಉದ್ಘಾಟಿಸಿದರು. ಆ ಯೂನಿಯನ್ ೪೭,೦೦೦ ಚದರ ಮೈಲಿ ಭೂ ಪ್ರದೇಶ ೭೦ ಲಕ್ಷ ಪ್ರಜಾ ಸಂಖ್ಯೆ ಮತ್ತು ವಾರ್ಷಿಕ ವರಮಾನ ಎಂಟು ಕೋಟಿ ರೂಪಾಯಿಗಳನ್ನು ಒಳಗೊಂಡು ಸರ್ದಾರರು ರಚಿಸಿದ ಒಕ್ಕೂಟಗಳಲ್ಲಿ ಅತ್ಯಂತ ದೊಡ್ಡದಾಯಿತು.[೭೩]

ಖ) ಪೂರ್ವ ಪಂಜಾಬ್ ರಾಜ್ಯಗಳು

ಪೂರ್ವ ಪಂಜಾಬ್ ಪ್ರದೇಶದಲ್ಲಿ ಆರು ರಾಜ್ಯಗಳಿದ್ದುವು. ಅವುಗಳ ಪೈಕಿ ಪಟಿಯಾಲ, ನಭ, ಜಿಂದ್ ಮತ್ತು ಫರೀದ್ ಕೋಟ್ ಸಿಕ್ಕರ ರಾಜ್ಯಗಳು. ಕಪುರ್ತಲ ಮತ್ತು ಮಲೇರ್ ಕೋಟ್ಲ ಉಳಿದ ಎರಡು ರಾಜ್ಯಗಳು.

ದೇಶ ವಿಭಜನೆಯಾಗಿ ಪಶ್ಚಿಮ ಪಂಜಾಬ್ ಪಾಕಿಸ್ತಾನಕ್ಕೆ ಸೇರಿದ್ದರಿಂದ ಪಂಜಾಬಿನ ಸಿಕ್ಕರಿಗೆ ಬಹಳ ನಷ್ಟವಾಗಿತ್ತು. ಅವರು ಶ್ರಮಪಟ್ಟು ಪಶ್ಚಿಮ ಪಂಜಾಬ್ ಪ್ರದೇಶವನ್ನು ಅಭಿವೃದ್ಧಿಗೆ ತಂದಿದ್ದರು. ಈಗ ಅವರು ಪೂರ್ವ ಪಂಜಾಬ್‌ನಲ್ಲೂ ಅಭಿವೃದ್ಧಿ ಸಾಧಿಸಲು ಕಾತರರಾದರು. ಕೆಲವು ಸಿಖ್ ನಾಯಕರು ಪಂಜಾಬ್ ರಾಜ್ಯಗಳನ್ನು ಪೂರ್ವ ಪಂಜಾಬ್ ಒಡನೆ ಸೇರಿಸುವ ಆಲೋಚನೆ ಮಾಡಿದರು. ಆಗ ವಿವಿಧ ಅಭಿಪ್ರಾಯಗಳು ಬರಲಾರಂಭಿಸಿದುವು. ಈ ಚರ್ಚೆ ನಡೆಯುತ್ತಿರುವಾಗ ಫರೀದ್‌ಕೋಟ್‌ನ ರಾಜನು ರಾಜಕೀಯ ಖೈದಿಗಳನ್ನು ಮತ್ತು ಮುಸ್ಲಿಂ ನಿರಾಶ್ರಿತರನ್ನು ಹಿಂಸಿಸುತ್ತಿದ್ದಾನೆ ಎನ್ನುವ ಆಪಾದನೆಗಳು ಮಾಡಲ್ಪಟ್ಟವು. ರಾಜ್ಯಗಳ ಸಚಿವಾಲಯ ಮಧ್ಯೆ ಪ್ರವೇಶಿಸಬೇಕಾಯಿತು. ಮೆನನ್ ಸರ್ದಾರರ ಜೊತೆ ಚರ್ಚಿಸಿ,

ಆ ನಂತರ ಅವರ ಸೂಚನೆಯಂತೆ ಮೌಂಟ್‌ಬ್ಯಾಟನ್‌ರವರನ್ನು ಭೇಟಿ ಮಾಡಿದರು. ಮೌಂಟ್‌ಬ್ಯಾಟನ್‌ರವರು ಫ಼ರೀದ್‌ಕೋಟ್ ರಾಜನ ಮೇಲೆ ಕ್ರಮ ಜರುಗಿಸುವ ಮುನ್ನ ಕೆಲವು ಪ್ರಮುಖ ರಾಜರೊಡನೆ ಸಮಾಲೋಚಿಸುವುದು ಒಳ್ಳೆಯದು ಎಂದರು. ಅದರಂತೆ ಮೌಂಟ್‌ಬ್ಯಾಟನ್‌ರವರ ಅಧ್ಯಕ್ಷತೆಯಲ್ಲಿ ಗ್ವಾಲಿಯರ್, ಬಿಕನೀರ್, ಪಟಿಯಾಲ ಮತ್ತು ನವನಗರದ ರಾಜರ ಸಭೆ ನಡೆಯಿತು. ಆ ಸಭೆಯ ಅಭಿಪ್ರಾಯದಂತೆ ಕೇಂದ್ರ ಸರ್ಕಾರವು ಫ಼ರೀದ್‌ಕೋಟ್‌ನ ಆಡಳಿತವನ್ನು ವಹಿಸಿಕೊಂಡಿತು.

ಈ ಮಧ್ಯೆ ಪಂಜಾಬ್ ರಾಜ್ಯಗಳನ್ನು ಒಂದು ಗೂಡಿಸುವುದಕ್ಕೆ ಬೇಡಿಕೆಗಳು ಹೆಚ್ಚಾದುವು. ರಾಜ್ಯಗಳ ಸಚಿವಾಲಯ ಆ ಕಡೆ ಗಮನ ಕೊಡಬೇಕಾಯಿತು. ಪಂಜಾಬ್ ರಾಜ್ಯಗಳಲ್ಲಿ ಅತಿ ಮುಖ್ಯವಾದುದು ಪಟಿಯಾಲ. ಮೆನನ್‌ರವರು ಪಟಿಯಾಲ ಮಹಾರಾಜನ ಬಳಿ ವಿಷಯ ಪ್ರಸ್ತಾಪಿಸಿದರು. ಅವರು ಮಹಾರಾಜರಿಗೆ, "ನೀವು ಯೂನಿಯನ್ ಅನ್ನು ಸೇರದೆ ಹೋದರೆ, ಇತರ ರಾಜ್ಯಗಳನ್ನು ಸೇರಿಸಿ ಯೂನಿಯನ್ನನ್ನು ರಚಿಸಬೇಕಾಗುತ್ತದೆ ಅಥವಾ ಆ ರಾಜ್ಯಗಳನ್ನು ಪೂರ್ವ ಪಂಜಾಬ್ ಪ್ರಾಂತ್ಯದೊಡನೆ ಸೇರಿಸಬೇಕಾಗುತ್ತದೆ. ಯಾವುದನ್ನೇ ಮಾಡಿದರೂ ಪಟಿಯಾಲ ಪ್ರತ್ಯೇಕವಾಗಿ ಹೆಚ್ಚು ಕಾಲ ಇರಲು ಸಾಧ್ಯವಿಲ್ಲ," ಎಂದು ವಿವರಿಸಿದರು. ಮಹಾರಾಜನು, ಪಟಿಯಾಲ ಸೇರಿ ಪೂರ್ವ ಪಂಜಾಬ್ ರಾಜ್ಯಗಳ ಯೂನಿಯನ್ ಸ್ಥಾಪನೆಗೆ ತತ್ವಶಃ ಒಪ್ಪಿದನು.

ಮೆನನ್‌ರವರು ಡೆಹ್ರಾಡೂನ್‌ಗೆ ಹೋಗಿ ಅಲ್ಲಿ ವಿಶ್ರಾಂತಿ ಪಡೆಯುತ್ತಿದ್ದ ಸರ್ದಾರರಿಗೆ ವಿಷಯವನ್ನು ತಿಳಿಸಿದರು. ಸರ್ದಾರರಿಗೆ ಸಂತಸವಾಯಿತು. ಮೆನನ್‌ರವರು ಎಲ್ಲ ರಾಜರು ಮತ್ತು ಅವರ ಸಲಹೆಗಾರರನ್ನು ಭೇಟಿ ಮಾಡಿ ಮುಂದಿನ ಕ್ರಮ ಜರುಗಿಸುವಂತೆ ಸರ್ದಾರರು ಸೂಚಿಸಿದರು. ಅದರಂತೆಯೇ ಮೆನನ್‌ರವರು ಆರು ಮಂದಿ ರಾಜರನ್ನು ಮತ್ತು ಅವರ ಸಲಹೆಗಾರರನ್ನು ಮೇ ೨ರಂದು ಭೇಟಿ ಮಾಡಿದರು. ಎಲ್ಲರೂ ಯೂನಿಯನ್ ಸ್ಥಾಪನೆಗೆ ಒಪ್ಪಿದರು. ಪಟಿಯಾಲದ ಮಹಾರಾಜರು ಪ್ರಥಮ ರಾಜಪ್ರಮುಖ್ ಮತ್ತು ಕಪೂರ್ತಲದ ಮಹಾರಾಜರು ಪ್ರಥಮ ಉಪರಾಜ ಪ್ರಮುಖ್ ಆಗಬೇಕೆಂದು ತೀರ್ಮಾನ ವಾಯಿತು, ಯೂನಿಯನ್ನನ್ನು ತಾತ್ಕಾಲಿಕವಾಗಿ 'ಪಟಿಯಾಲ ಮತ್ತು ಈಸ್ಟ್ ಪಂಜಾಬ್ ಸ್ಟೇಟ್ಸ್ ಯೂನಿಯನ್' (ಚಿಕ್ಕದಾಗಿ, ಪೆಪ್ಸು – PEPSU) ಎಂದು ಕರೆಯಬೇಕೆಂದು ತೀರ್ಮಾನವಾಯಿತು. ಈ ಆರು ರಾಜ್ಯಗಳ ಜೊತೆಗೆ ಕಲ್ಸಿಯ ಮತ್ತು ನಳಗರ್ ರಾಜ್ಯಗಳೂ ಯೂನಿಯನ್ನನ್ನು ಸೇರಿಕೊಂಡುವು. ಮೇ ೫ರಂದು ಎಂಟು ರಾಜ್ಯಗಳ ರಾಜರು ವಿಲೀನ ಒಪ್ಪಂದಕ್ಕೆ ಸಹಿ ಮಾಡಿದರು.

೧೯೪೮ರ ಜುಲೈ ೧೫ರಂದು ಸರ್ದಾರ್ ಪಟೇಲರು ಪಟಿಯಾಲದಲ್ಲಿ ಪೆಪ್ಸು ಯೂನಿಯನ್ನನ್ನು ಉದ್ಘಾಟಿಸಿದರು.[೭೪]

ಎ) ಟ್ರಾವಂಕೂರ್ – ಕೊಚಿನ್

ಇವೆರಡು ದಕ್ಷಿಣ ಭಾರತದ ತುದಿಯಲ್ಲಿ ಪಶ್ಚಿಮ ಘಟ್ಟಗಳ ಪಶ್ಚಿಮಕ್ಕೆ ಇರುವ ರಾಜ್ಯಗಳು. ಬ್ರಿಟನ್ ಸಾರ್ವಭೌಮತ್ವ ಮುಕ್ತಾಯವಾದ ತಕ್ಷಣ ಸೇರ್ಪಡೆ ಒಪ್ಪಂದ ಮತ್ತು ಸ್ಥಾಯಿ ಒಪ್ಪಂದಕ್ಕೆ ಕೊಚಿನ್ ಮಹಾರಾಜರು ಸ್ವಯಂ ಪ್ರೇರಣೆಯಿಂದ ಸಲೀಸಾಗಿ ಸಹಿ ಹಾಕಿದ್ದರು. ಆದರೆ ಟ್ರಾಂವಕೂರ್‌ನ ಮಹಾರಾಜರು, ಅವರ ದಿವಾನ ಸರ್. ಸಿ.ಪಿ. ರಾಮಸ್ವಾಮಿ ಐಯ್ಯರ್‌ರವರ ಕುಟಿಲ ನೀತಿಯ ಫಲವಾಗಿ, ತಡವಾಗಿ ಆ ದಾಖಲೆಗಳಿಗೆ ಸಹಿ ಹಾಕಿದ್ದರು. (ಅದನ್ನು ಹಿಂದೆಯೇ ವಿವರಿಸಿದೆ) ಎರಡೂ ಹಿಂದೂ ರಾಜ್ಯಗಳು. ಎರಡೂ ರಾಜ್ಯಗಳ ಜನರ ಭಾಷೆ, ಸಂಸ್ಕೃತಿ, ಪರಂಪರೆ ಒಂದೇ ಆಗಿತ್ತು. ಸಣ್ಣ ರಾಜ್ಯಗಳನ್ನು ಸೇರಿಸಿ 'ವಯಬಲ್' ರಾಜ್ಯವನ್ನಾಗಿ ಮಾಡುವ ತತ್ವದ ಮೇಲೆ ಅವೆರಡನ್ನೂ ಸೇರಿಸುವುದು ಅಗತ್ಯವಾಗಿತ್ತು. ಆದರೆ ಅವೆರಡು ರಾಜ್ಯಗಳ ನಡುವೆ ಬಹಳ ಹಿಂದಿನಿಂದ ವೈರತ್ವವಿತ್ತು.

ಕೊಚಿನ್‌ನಲ್ಲಿ ೧೯೨೫ರಿಂದಲೂ ಚುನಾಯಿತ ಸದಸ್ಯರಿಂದ ಕೂಡಿದ ಶಾಸನ ಪರಿಷತ್ತು ಇತ್ತು. ಅದು, ೧೯೪೬ರಲ್ಲಿ ಭಾರತದ ಸಂವಿಧಾನ ರಚನಾ ಸಭೆಗೆ ಚುನಾಯಿತ ಪ್ರತಿನಿಧಿಗಳನ್ನು ಕಳುಹಿಸಿದ ಮೊದಲ ರಾಜ್ಯವಾಗಿತ್ತು. ಅದಾದನಂತರ ಅಲ್ಲಿ ಮಹಾರಾಜರು ಪೂರ್ಣ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸಿದ್ದರು. ಟ್ರಾವಂಕೂರ್‌ನಲ್ಲೂ ಶಾಸನಸಭೆ ಇತ್ತು. ಆದರೆ ಅದರ ಅಧಿಕಾರ ಸೀಮಿತವಾಗಿತ್ತು. ಎರಡು ರಾಜ್ಯಗಳಲ್ಲೂ ಕಾಂಗ್ರೆಸ್ಸು ಸುಭದ್ರವಾದ ಪಕ್ಷವಾಗಿತ್ತು.

ಮೊದಲು ಮೆನನ್‌ರವರು ೧೯೪೯ರ ಮಾರ್ಚ್ ೫ರಂದು ಟ್ರಾವಂಕೂರ್‌ಗೆ ಭೇಟಿ ನೀಡಿ ಎರಡೂ ರಾಜ್ಯಗಳ ಭವಿಷ್ಯತ್ತಿನ ಬಗೆಗೆ ಅಲ್ಲಿಯ ಪ್ರಧಾನಮಂತ್ರಿ ಟಿ.ಕೆ. ನಾರಾಯಣ ಪಿಳ್ಳೈ ಮತ್ತು ಇತರ ಮಂತ್ರಿಗಳ ಅಭಿಪ್ರಾಯವನ್ನು ಪಡೆದುಕೊಂಡರು. ಮಾರನೆ ದಿನ ಕೊಚಿನ್‌ನಿಂದ ಬಂದ ಅಲ್ಲಿಯ ಪ್ರಧಾನಮಂತ್ರಿ ಇ. ಇಕ್ಕಂದ ವಾರಿಯರ್ ಮತ್ತು ಅವರ ಮಂತ್ರಿಗಳೊಡನೆ ಸಮಾಲೋಚಿಸಿದರು. ಅವರು ಎರಡು ರಾಜ್ಯಗಳ ವಿಲೀನಕ್ಕೆ ಸಲೀಸಾಗಿ ಒಪ್ಪಿದರು. ನಂತರ ಮೆನನ್‌ರವರು ಸ್ಥಳೀಯ ಕಾಂಗ್ರೆಸ್ ನಾಯಕರನ್ನು ಭೇಟಿ ಮಾಡಿದರು. ಅವರೂ ಸಹ ವಿಲೀನವೇ ಉತ್ತಮ ಮಾರ್ಗ ಎಂದರು.

ಅಂತಿಮವಾಗಿ ಮೆನನ್ ಟ್ರಾವಂಕೂರ್ ಮಹಾರಾಜರನ್ನು ಭೇಟಿ ಮಾಡಿದರು. ಮಹಾರಾಜರು, 'ಸಧ್ಯಕ್ಕೆ ಎರಡು ರಾಜ್ಯಗಳು ಪ್ರತ್ಯೇಕವಾಗಿ ಮುಂದುವರಿಯುವುದನ್ನು ತಾವು ಒಪ್ಪುವುದಾಗಿ' ಹೇಳಿದರು. ಮೆನನ್‌ರವರು, "ದೇಶದಲ್ಲಿ ಎಲ್ಲಾ ರಾಜ್ಯಗಳನ್ನು ಒಂದು ಗೂಡಿಸಲಾಗಿದೆ. ಟ್ರಾವಂಕೂರ್ ಮತ್ತು ಕೊಚ್ಚಿನ್‌ಗಳನ್ನು ಪ್ರತ್ಯೇಕವಾಗಿ ಇರಲು ಬಿಟ್ಟರೆ ಖಂಡಿತವಾಗಿಯೂ ಟೀಕೆಗಳಿಗೆ ಅವಕಾಶವಾಗುತ್ತದೆ. ಚಳವಳಿಗಳೂ ಆರಂಭವಾಗಬಹುದು. ಆ ಚಳವಳಿಗಳ ಫಲವಾಗಿ ಎರಡೂ ರಾಜ್ಯಗಳನ್ನು ವಿಲೀನಗೊಳಿಸಲೇ ಬೇಕಾಗಿ ಬಂದರೆ, ಮಹಾರಾಜರ ಸ್ಥಾನದ ಮೇಲೆ ಅಡ್ಡ ಪರಿಣಾಮ ಉಂಟಾಗುತ್ತದೆ. ಅದಕ್ಕೆ ಬದಲಾಗಿ ಸಮಸ್ಯೆಯನ್ನು ಈಗಲೇ ನಿಭಾಯಿಸಿದರೆ ಮಹಾರಾಜರಿಗೆ ಕ್ಷೇಮ" ಎಂದು ವಿವರಿಸಿದರು. ನಂತರ ಟ್ರಾವಂಕೂರ್ ಮಹಾರಾಜರು, 'ನಾನೂ ಮತ್ತು ಕೊಚಿನ್ ಮಹಾರಾಜರು ಹೊಂದಾಣಿಕೆಯಿಂದ ಹೋಗುವುದು ಕಷ್ಟ." ನಾನು ರಾಜ್ಯವನ್ನು ಭಗವಾನ್ ಶ್ರೀ ಪದ್ಮನಾಭನ ಪರವಾಗಿ ಮತ್ತು ಅವನ ಸೇವಕನಾಗಿ ಆಳುತ್ತಿದ್ದೇನೆ. ಆ ಸ್ಥಾನಕ್ಕೆ ನಾನು ಬಹಳ ಪ್ರಾಮುಖ್ಯತೆಯನ್ನು ಕೊಟ್ಟಿದ್ದೇನೆ. ಈ ವಿಷಯಕ್ಕೆ ಸಮಾಧಾನಕರ ಪರಿಹಾರ ಸಿಕ್ಕದಿದ್ದರೂ ಸಹ ಭಾರತ ಸರ್ಕಾರವು ಎರಡು ರಾಜ್ಯಗಳನ್ನು ವಿಲೀನಗೊಳಿಸಲೇಬೇಕೆಂದು ಒತ್ತಾಯ ಮಾಡಿದರೆ, ನಾನು ನನ್ನ ನಂಬಿಕೆಗಳಿಗೆ ವಿರುದ್ಧವಾಗಿ ಹೋಗುವುದಕ್ಕಿಂತ ಸಿಂಹಾಸನವನ್ನು ತ್ಯಾಗಮಾಡುತ್ತೇನೆ" ಎಂದರು. ಮೆನನ್‌ರವರು, 'ಮಹಾರಾಜರು ಅಷ್ಟೊಂದು ನಿರಾಶಾ ಮನೋಭಾವವನ್ನು ತಾಳಬೇಕಾಗಿಲ್ಲ. ಮನುಷ್ಯನ ಬುದ್ಧಿವಂತಿಕೆ ಪರಿಹರಿಸಲಾಗದ ಸಮಸ್ಯೆ ಯಾವುದೂ ಇಲ್ಲ" ಎಂದರು. ಅಂದು ಅವರ ಮಾತುಕತೆ ಅಪೂರ್ಣವಾಯಿತು.

ಮೆನನ್‌ರವರು ಮಾರ್ಚ್ ೧೦ರಂದು ಕೊಚಿನ್ ರಾಜ್ಯದ ರಾಜಧಾನಿ ಎರ್ನಾಕುಲಂಗೆ ಪ್ರಯಾಣ ಮಾಡಿದರು. ಅಲ್ಲಿ ಅವರು 'ಐಕ್ಯ ಕೇರಳ ಸಮಿತಿ'ಯನ್ನು ಭೇಟಿ ಮಾಡಿದರು. ಆ ಸಮಿತಿಯನ್ನು 'ಸಂಯುಕ್ತ ಕೇರಳ ಪ್ರಾವಿನ್ಸ್' ಸ್ಥಾಪಿಸುವ ಉದ್ದೇಶದಿಂದ ಅಲ್ವಯೆ ಪಟ್ಟಣದಲ್ಲಿ ಇತ್ತೀಚೆಗೆ ಏರ್ಪಾಟಾಗಿದ್ದ ಸಮಾವೇಶವು ನಿಯಮಿಸಿತ್ತು. ಆ ಸಮಿತಿಯು 'ಸಂಯುಕ್ತ ಕೇರಳ ಸ್ಥಾಪನೆಯ ಮೊದಲ ಹೆಜ್ಜೆಯಾಗಿ ಟ್ರಾವಂಕೂರ್ ಮತ್ತು ಕೊಚಿನ್ ರಾಜ್ಯಗಳನ್ನು ವಿಲೀನಗೊಳಿಸಬೇಕು' ಅನ್ನುವ ಠರಾವಿನ ಪತ್ಯವನ್ನು ಮೆನನ್‌ಗೆ ನೀಡಿತು. ಮೆನನ್‌ರವರು, 'ನಿಮ್ಮ ಅಭಿಪ್ರಾಯಗಳನ್ನು ಸರ್ದಾರರ ಮುಂದೆ ಇಡುತ್ತೇನೆ' ಎಂದು ಆಶ್ವಾಸನೆ ನೀಡಿದರು.

(ಆಗ ಕೇರಳದ ಮತ್ತೊಂದು ಭಾಗವಾದ ಮಲಬಾರ್ ಮದ್ರಾಸ್ ಪ್ರಾಂತ್ಯದ ಒಂದು ಭಾಗವಾಗಿತ್ತು. ಅದೂ ಸೇರಿದರೆ ಪೂರ್ಣ ಕೇರಳವಾಗುತ್ತಿತ್ತು – ಲೇಖಕ)

ಮಾರ್ಚ್ ೧೦ರಂದು ಮೆನನ್‌ರವರು ಇಬ್ಬರು ಪ್ರಧಾನಮಂತ್ರಿಗಳಿಗೂ ಪತ್ರ ಬರೆದು, ತಮ್ಮ ರಾಜ್ಯಗಳ ಭವಿಷ್ಯತ್ತಿನ ಬಗೆಗೆ ಅವರ ಖಚಿತ ಶಿಫಾರಸ್ಸನ್ನು ಲಿಖಿತ ರೂಪದಲ್ಲಿ ತಿಳಿಸಬೇಕೆಂದು ಕೋರಿದರು. ೧೨ನೇ ತಾರೀಖು ಇಬ್ಬರ ಜವಾಬು ಬಂದಿತು. ಇಬ್ಬರೂ ತಮ್ಮ ಮಂತ್ರಿಗಳು ಮತ್ತು ಶಾಸನ ಸಭೆಯ ಕಾಂಗ್ರೆಸ್ ಸದಸ್ಯರೊಡನೆ ಸಮಾಲೋಚಿಸಿ ಪತ್ರ ಬರೆದಿದ್ದರು. ಅವರು ತಮ್ಮ ಎರಡು ರಾಜ್ಯಗಳ ಶೀಘ್ರ ವಿಲೀನಕ್ಕೆ ಒಪ್ಪಿಗೆಯನ್ನು ಸೂಚಿಸಿದ್ದರು.

ಮಾರ್ಚ್ ೧೨ರಂದು ಮೆನನ್‌ರವರು ಕೊಚಿನ್ ಮಹಾರಾಜರನ್ನು ಭೇಟಿ ಮಾಡಿ, ಅದುವರೆಗಿನ ಬೆಳವಣಿಗೆಗಳನ್ನು ವಿವರಿಸಿದರು.

ಮೆನನ್‌ರವರು ದೆಹಲಿಗೆ ಹಿಂದಿರುಗಿ, ಜನಾಭಿಪ್ರಾಯವು ಎರಡು ರಾಜ್ಯಗಳನ್ನು ವಿಲೀನಗೊಳಿಸುವ ಕಡೆಗೆ ಇದೆ ಎಂದು ಪಟೇಲರಿಗೆ ತಿಳಿಸಿ ಎಲ್ಲವನ್ನೂ ವಿವರಿಸಿದರು. ೧೯೪೯ರ ಏಪ್ರಿಲ್ ೧ರಂದು ಎರಡೂ ರಾಜ್ಯಗಳ ಮಂತ್ರಿಗಳು ಮತ್ತು ಸ್ಥಳೀಯ ಕಾಂಗ್ರೆಸ್‌ನವರನ್ನು ಪ್ರತಿನಿಧಿಸುವ ಒಂದು ನಿಯೋಗವು ಸರ್ದಾರರನ್ನು ಭೇಟಿ ಮಾಡಿ ಎರಡೂ ರಾಜ್ಯಗಳನ್ನು ವಿಲೀನಗೊಳಿಸಬೇಕೆಂಬ ತಮ್ಮ ಅಪೇಕ್ಷೆಯನ್ನು ವ್ಯಕ್ತಪಡಿಸಿತು. ಏಪ್ರಿಲ್ ೨ರಂದು ಕೇಂದ್ರ ಸರ್ಕಾರವು ಒಂದು ಪತ್ರಿಕಾ ಪ್ರಕಟಣೆ ಹೊರಡಿಸಿ ಅವರ ಪ್ರಸ್ತಾವನೆಯನ್ನು ಒಪ್ಪಲಾಗಿದೆ ಎಂದು ತಿಳಿಸಿತು.

ಏಪ್ರಿಲ್ ೪ರಂದು ರಾಜ್ಯಗಳ ವಿಲೀನ ಪ್ರಕ್ರಿಯೆ ಬಗೆಗೆ ಒಂದು ವರದಿಯನ್ನು ತಯಾರಿಸಲು ಐ.ಸಿ.ಎಸ್. ಅಧಿಕಾರಿ ಎನ್.ಎಂ. ಬೂಚ್ ನಾಯಕತ್ವದಲ್ಲಿ ಒಂದು ಸಮಿತಿಯನ್ನು ರಚಿಸಲಾಯಿತು. ಟ್ರಾವಂಕೂರ್ ಮಂತ್ರಿ ವಿ.ಓ. ಮಾರ್ಕೋಸ್ ಮತ್ತು ಕೊಚಿನ್ ಮಂತ್ರಿ ಪಾನಂಪಳ್ಳಿ ಗೋವಿಂದ ಮೆನನ್ ಆ ಸಮಿತಿಯ ಸದಸ್ಯರಾಗಿದ್ದರು.

ಕೆಲವು ಗೊಂದಲಗಳು, ಮುಖ್ಯವಾಗಿ ಟ್ರಾವಂಕೂರ್ ಮಹಾರಾಜರ ನಂಬಿಕೆ, ಇದ್ದುವು. ಸರ್ದಾರರು ಮತ್ತೆ ಟ್ರಾವಂಕೂರ್‌ಗೆ ಭೇಟಿ ನೀಡುವಂತೆ ಮೆನನ್‌ಗೆ ಸೂಚಿಸಿದರು. ಮೆನನ್‌ರವರು ಮೇ ೨೧ರಂದು ಟ್ರಾವಂಕೂರ್‌ಗೆ ಹೋಗಿ ದೀರ್ಘ ಚರ್ಚೆ ನಡೆಸಿ ಎಲ್ಲ ಸಮಸ್ಯೆಗಳನ್ನು ಪರಿಹರಿಸಿದರು. ಅಷ್ಟೇ ಅಲ್ಲ ಇಬ್ಬರು ಮಹಾರಾಜರು ಭೇಟಿಯಾಗುವಂತೆ ಮಾಡಿದರು. ಆನಂತರ ವಿಲೀನ ಒಪ್ಪಂದಕ್ಕೆ ಇಬ್ಬರು ಮಹಾರಾಜರು ಮತ್ತು ಪ್ರಧಾನ ಮಂತ್ರಿಗಳು ಸಹಿ ಮಾಡಿದರು.

೧೯೪೯ರ ಜುಲೈ ೧ರಂದು ಟ್ರಾವಂಕೂರ್ – ಕೊಚಿನ್ ಸಂಯುಕ್ತ ರಾಜ್ಯದ

ಉದ್ಘಾಟನೆಯಾಯಿತು. ಉದ್ಘಾಟನೆಗೆ ಬರಲು ಸರ್ದಾರರಿಗೂ ಬಿಡುವಿರಲಿಲ್ಲ. ನೆಹರುರವರಿಗೂ ಬಿಡುವಿರಲಿಲ್ಲ. ಸರ್ದಾರರ ಸೂಚನೆಯ ಮೇರೆ ಮೆನನ್‌ರವರೇ ಉದ್ಘಾಟಿಸಿದರು.[೭೫]

ಏ) ಹಿಮಾಚಲ ಪ್ರದೇಶ

ಹಿಮಾಲಯ ಪ್ರದೇಶದಲ್ಲಿ ೨೧ ಸಣ್ಣ ರಾಜ್ಯಗಳಿದ್ದುವು. ಅವನ್ನು 'ಪಂಜಾಬ್ ಹಿಲ್ ಸ್ಟೇಟ್ಸ್' ಎಂದು ಕರೆಯುತ್ತಿದ್ದರು. ಅವುಗಳ ಪೈಕಿ ಕೋವಿ – ಗೌರವದ ರಾಜ್ಯಗಳ ಸಂಖ್ಯೆ ೫. ೧೩ ರಾಜ್ಯಗಳ ವಿಸ್ತೀರ್ಣ ೧೦೦ ಚದರ ಮೈಲಿ. ೩ ರಾಜ್ಯಗಳ ವಿಸ್ತೀರ್ಣ ೧೦ ಚದರ ಮೈಲಿಗೂ ಕಡಿಮೆ. ಅವು ಪರ್ವತ ಪ್ರದೇಶ. ಜನ ಬಡವರು. ನಾಗರಿಕ ಸೌಲಭ್ಯಗಳು ಏನೇನೂ ಇಲ್ಲ.

ಅಧಿಕಾರ ಹಸ್ತಾಂತರವಾದ ಮೇಲೆ ಈ ರಾಜ್ಯಗಳಲ್ಲಿ ನಾಗರಿಕ ಸೌಲಭ್ಯ ಮತ್ತು ಜವಾಬ್ದಾರಿ ಸರ್ಕಾರಕ್ಕಾಗಿ ಚಳವಳಿಗಳು ಆರಂಭವಾದುವು. ಆ ಚಳವಳಿಯನ್ನು ನಿಭಾಯಿಸಲಾರದ ಸುಕೆತ್ ಮತ್ತು ಬಲ್ಸನ್ ರಾಜ್ಯಗಳ ರಾಜರು ಆಡಳಿತವನ್ನು ಭಾರತ ಸರ್ಕಾರಕ್ಕೆ ವಹಿಸಿಬಿಟ್ಟರು.

ಮೆನನ್‌ರವರು ೧೯೪೮ರ ಮಾರ್ಚ್ ೨ರಂದು ಈ ಗಿರಿ ರಾಜ್ಯಗಳ ರಾಜರನ್ನು ದೆಹಲಿಗೆ ಕರೆಯಿಸಿ ಮಾತುಕತೆ ನಡೆಸಿದರು. ಆ ರಾಜರು ಎಲ್ಲ ರಾಜ್ಯಗಳನ್ನು ಸೇರಿಸಿ ಒಂದು ರಾಜ್ಯ ಸ್ಥಾಪಿಸುವ ಪ್ರಸ್ತಾವನೆ ಮುಂದಿಟ್ಟರು. ಆದರೆ ಮೆನನ್‌ರವರು, "ಆಗಬೇಕಾದ ಮುಖ್ಯ ಕೆಲಸವೆಂದರೆ ಶತ ಶತಮಾನಗಳಿಂದ ಹಿಂದುಳಿದ ಆ ಭಾಗವನ್ನು ಅಭಿವೃದ್ಧಿ ಪಡಿಸುವುದು. ಅದಕ್ಕೆ ಬೇಕಾದ ಹಣ ಅವರಲಿಲ್ಲ. ಆ ಕೆಲಸವನ್ನು ಕೇಂದ್ರ ಸರ್ಕಾರ ಮಾತ್ರ ಮಾಡಲು ಸಾಧ್ಯ. ಅದರಿಂದ ಆ ರಾಜ್ಯಗಳನ್ನು ಒಂದು ಗೂಡಿಸಿ ಒಂದು ಘಟಕವನ್ನಾಗಿ ಮಾಡಿ ಅದರ ಆಡಳಿತವನ್ನು ಒಬ್ಬ ಚೀಫ್ ಕಮಿಷನರ್ ಅಥವಾ ಲೆಫ್ಟಿನೆಂಟ್ ಗೌರ್ನರ್ ಮೂಲಕ ನಡೆಸಬೇಕು" ಎಂದರು. ಅದಕ್ಕೆ ಅವರೆಲ್ಲ ಒಪ್ಪಿದರು. ಆದರೆ ಅವರ ವಕ್ತಾರನಾಗಿದ್ದ ಮಂಡಿಯ ರಾಜನು 'ಹೊಸ ಪ್ರಾಂತ್ಯದ ಆಡಳಿತದಲ್ಲಿ ನಮ್ಮ ಧ್ವನಿಗೂ ಅವಕಾಶವಿರಬೇಕು' ಎಂದನು. ಅದರಿಂದ ಮೂವರು ಅರಸರ ಒಂದು ಸಲಹಾ ಸಮಿತಿಯ ರಚನೆಗೆ ಒಪ್ಪಲಾಯಿತು. ಅದೇ ಪ್ರಕಾರ ಒಂದು ಒಪ್ಪಂದವನ್ನು ರಚಿಸಿ ಅದಕ್ಕೆ ಎಲ್ಲಾ ರಾಜರು ೧೯೪೮ರ ಮಾರ್ಚ್ ೧೫ರಂದು ಸಹಿ ಹಾಕಿದರು. ಹೊಸ ರಾಜ್ಯವನ್ನು 'ಹಿಮಾಚಲ್ ಪ್ರದೇಶ' ಎಂದು ಕರೆಯಲಾಯಿತು. ಏಪ್ರಿಲ್ ೧೫ರಂದು ಅದು ಚೀಫ್ ಕಮಿಷನರ್‌ನ ರಾಜ್ಯವಾಗಿ ಅಸ್ತಿತ್ವಕ್ಕೆ ಬಂದಿತು. ಮುಂದೆ ಅದರ ಸ್ಥಾನವನ್ನು ಲೆಫ್ಟಿನೆಂಟ್ ಗೌರ್ನರ್ ಸ್ಥಾನಕ್ಕೆ ಏರಿಸಿ, ಒಂದು ಶಾಸನಸಭೆ ಮತ್ತು ಮಂತ್ರಿ

ಮಂಡಲವನ್ನು ಸೇರಿಸಲಾಯಿತು. ಅದು ೧೯೭೧ರ ಜನವರಿ ೨೫ರಿಂದ ಒಂದು ರಾಜ್ಯವಾಗಿದೆ.[೨೬]

ಐ) ಚೀಫ್ ಕಮಿಷನರ್ ಆಡಳಿತದ ರಾಜ್ಯಗಳು

ಕೆಲವು ರಾಜ್ಯಗಳನ್ನು ವಿಶೇಷ ಕಾರಣಗಳಿಗಾಗಿ ಪಕ್ಕದ ರಾಜ್ಯ ಅಥವಾ ಪ್ರಾಂತ್ಯಗಳಿಗೆ ಸೇರಿಸಲು ಸಾಧ್ಯವಿಲ್ಲದ್ದರಿಂದ ಅವನ್ನು ಕೇಂದ್ರ ಸರ್ಕಾರವೇ ವಹಿಸಿಕೊಂಡು, ಅದರ ಆಡಳಿತಕ್ಕೆ ಚೀಫ್ ಕಮಿಷನರ್‌ನನ್ನು ನಿಯಮಿಸಿತು.

ಬಿಲಾಸ್‌ಪುರ ಪಂಜಾಬ್‌ನ ಗಿರಿ ರಾಜ್ಯಗಳ ಪೈಕಿ ಒಂದು. ಆದರೆ ಅಲ್ಲಿ ಸಟ್ಲೆಜ್ ನದಿಗೆ ಅಡ್ಡಲಾಗಿ ಬೃಹತ್ತಾದ ಬಾಕ್ರಾ ನಂಗಲ್ ಅಣೆಕಟ್ಟು ನಿರ್ಮಾಣವಾಗಬೇಕಾಗಿದ್ದುದರಿಂದ ಅಲ್ಲಿಯ ರಾಜನೊಡನೆ ಚರ್ಚಿಸಿ ೧೯೪೮ರ ಆಗಸ್ಟ್ ೧೫ರಂದು ಅದರ ಆಡಳಿತವನ್ನು ಕೇಂದ್ರ ಸರ್ಕಾರ ವಹಿಸಿಕೊಂಡು ಚೀಫ್ ಕಮಿಷನರ್‌ನನ್ನು ನೇಮಕ ಮಾಡಿತು.

ಕಚ್ ಪಶ್ಚಿಮ ಭಾರತದಲ್ಲಿ ಕಾಥೈವಾಡ ರಾಜ್ಯಗಳ ಪೈಕಿ ಒಂದು. ಆದರೆ ಅದು ಪಾಕಿಸ್ತಾನದ ಗಡಿ ಭಾಗದ ರಾಜ್ಯವಾದುದರಿಂದ ಕೇಂದ್ರ ಸರ್ಕಾರದ ಅಧೀನದಲ್ಲಿರುವುದು ಆವಶ್ಯಕ ಎಂದು ೧೯೪೮ರ ಮೇ ೪ರಂದು ಕೇಂದ್ರ ಸರ್ಕಾರ ಅಲ್ಲಿಯ ರಾಜ ಮಹಾರಾವ್‌ನಿಂದ ವಹಿಸಿಕೊಂಡು ಚೀಫ್ ಕಮಿಷನರ್‌ನನ್ನು ನೇಮಕ ಮಾಡಿತು.

ತ್ರಿಪುರ ಪೂರ್ವ ಪಾಕಿಸ್ತಾನದ ಗಡಿಯಲ್ಲಿದ್ದು ಅಲ್ಲಿಂದ ಬಹಳ ನಿರಾಶ್ರಿತರು ಬರುತ್ತಿದ್ದುದರಿಂದ ಮತ್ತು ತ್ರಿಪುರದಿಂದ ಭಾರತದ ಪ್ರಧಾನ ಭೂ ಭಾಗಕ್ಕೆ ರಸ್ತೆ ಮಾರ್ಗವಿಲ್ಲದೆ ಅಲ್ಲಿಗೆ ಬೇಕಾದ ಸಾಮಾಗ್ರಿಗಳನ್ನು ವಿಮಾನದ ಮೂಲಕ ಸರಬರಾಜು ಮಾಡಬೇಕಾಗಿದ್ದುದರಿಂದ ಅದನ್ನು ಕೇಂದ್ರ ಸರ್ಕಾರ ೧೯೪೯ರ ಸೆಪ್ಟೆಂಬರ್ ೯ರಂದು ವಹಿಸಿಕೊಂಡಿತು.

ಮಣಿಪುರವು ಗಡಿರಾಜ್ಯವಾದುದರಿಂದ ಮತ್ತು ಬಹಳ ಹಿಂದುಳಿದಿದ್ದುದರಿಂದ ಕೇಂದ್ರ ಸರ್ಕಾರವು ಅದನ್ನು ೧೯೪೯ರ ಅಕ್ಟೋಬರ್ ೧೫ರಂದು ವಹಿಸಿಕೊಂಡಿತು[೨೭].

ಒ) ಆರು ಪುಟ್ಟ ರಾಜ್ಯಗಳು

ಪುದುಕ್ಕೊಟ್ಟೈ, ಬಂಗನಪಲ್ಲೆ ಮತ್ತು ಸಂದೂರು ದಕ್ಷಿಣ ಭಾರತದ ಮೂರು ಸಣ್ಣ ರಾಜ್ಯಗಳು. ಅದರ ಅರಸರು ಮದ್ರಾಸ್ ಪ್ರಾಂತ್ಯವನ್ನು ಸೇರಲು ಸಲೀಸಾಗಿ

ಒಪ್ಪಿದರು. ಅದರಂತೆ ರಾಜರು ಒಪ್ಪಂದಗಳಿಗೆ ಸಹಿ ಮಾಡಿ ೧೯೪೮ರ ಫೆಬ್ರುವರಿ ೩ರಂದು ಮತ್ತು ಸಂದೂರು ೧೯೪೮ರ ಏಪ್ರಿಲ್ ೧ರಂದು ಮದ್ರಾಸ್ ಪ್ರಾಂತ್ಯದೊಡನೆ ವಿಲೀನವಾದುವು.

ದುಜಾನ, ಲೊಹಾರು ಮತ್ತು ಪಟೌಡಿ ಪೂರ್ವ ಪಂಜಾಬ್‌ನ ಮೂರು ಪುಟ್ಟ ಮುಸ್ಲಿಂ ರಾಜ್ಯಗಳು. ದುಜಾನ ೧೦೦ ಚದರ ಮೈಲಿ ವಿಸ್ತೀರ್ಣವಿತ್ತು. ಅದರ ನವಾಬನು ಮತೀಯ ಹತ್ಯಾಕಾಂಡದ ಸಮಯದಲ್ಲಿ ಸಾಧ್ಯವಾದಷ್ಟು ಚರಾಸ್ತಿಗಳನ್ನು ಎತ್ತಿಕೊಂಡು ಪಾಕಿಸ್ತಾನಕ್ಕೆ ಓಡಿಹೋದನು. ಅದರಿಂದ ಸರ್ದಾರರು ದುಜಾನ ರಾಜ್ಯವನ್ನು ಪೂರ್ವ ಪಂಜಾಬ್ ಒಡನೆ ವಿಲೀನಗೊಳಿಸಿದರು.

ಲೊಹಾರು ರಾಜ್ಯದ ನವಾಬನು ಮತೀಯ ಹತ್ಯಾಕಾಂಡದ ಸಮಯದಲ್ಲಿ ತನ್ನ ರಾಜ್ಯದಿಂದ ಹೊರಹೋಗಬೇಕಾಯಿತು. ಮುಂದೆ ೧೯೪೮ರ ಫೆಬ್ರುವರಿ ೧೭ರಂದು ಅವನು ವಿಲೀನ ಒಪ್ಪಂದಕ್ಕೆ ಸಹಿ ಹಾಕಿದನು. ಆ ರಾಜ್ಯವನ್ನು ಪೂರ್ವ ಪಂಜಾಬ್ ಒಡನೆ ವಿಲೀನ ಗೊಳಿಸಲಾಯಿತು.

ಪಟೌಡಿಯ ನವಾಬನು ಹೆಸರಾಂತ ಕ್ರಿಕೆಟ್ ಆಟಗಾರ ಮತ್ತು ಕ್ರೀಡಾಪಟು. ಅವನು ಮತೀಯ ಸಹಿಷ್ಣುತೆಯನ್ನು ಬೋಧಿಸಿದವನು ಮತ್ತು ಪಾಲಿಸಿದವನು. ಅವನು ದೆಹಲಿಗೆ ಬಂದು ತನ್ನ ರಾಜ್ಯ ವನ್ನು ಪೂರ್ವ ಪಂಜಾಬ್ ಒಡನೆ ವಿಲೀನ ಗೊಳಿಸುವ ಅಪೇಕ್ಷೆಯನ್ನು ಸ್ವಯಂ ಇಚ್ಛೆಯಿಂದ ವ್ಯಕ್ತ ಪಡಿಸಿ ೧೯೪೮ರ ಮಾರ್ಚ್ ೧೮ರಂದು ವಿಲೀನ ಒಪ್ಪಂದಕ್ಕೆ ಸಹಿ ಮಾಡಿದನು. ಪಟೌಡಿಯನ್ನು ಪೂರ್ವ ಪಂಜಾಬ್ ಒಡನೆ ವಿಲೀನಗೊಳಿಸಲಾಯಿತು.[೭೮]

೪) ಭೋಪಾಲ್

ಭೋಪಾಲದ ನವಾಬ ಸರ್ ಹಮೀದುಲ್ಲಾ ಖಾನ್ ತಕರಾರು ಮಾಡಿ ಆ ನಂತರ ಸೇರ್ಪಡೆ ಒಪ್ಪಂದ ಮತ್ತು ಸ್ಥಾಯಿ ಒಪ್ಪಂದಗಳಿಗೆ ಸಹಿ ಹಾಕಿದುದನ್ನು ಹಿಂದೆಯೇ ಹೇಳಿದೆ. ಮುಂದೆ ಅವನ ರಾಜ್ಯದಲ್ಲಿ ಜವಾಬ್ದಾರಿ ಸರ್ಕಾರಕ್ಕಾಗಿ ಚಳವಳಿ ಆರಂಭವಾಗಿ ಇಡೀ ರಾಜ್ಯವನ್ನು ಆವರಿಸಿತು. ನವಾಬನು ೧೯೪೮ರ ಏಪ್ರಿಲ್‌ನಲ್ಲಿ ರಾಜ್ಯ ಪ್ರಜಾಮಂಡಲದೊಡನೆ ಒಪ್ಪಂದ ಮಾಡಿಕೊಂಡು, ಜನಪ್ರಿಯ ನಾಯಕರಿರುವ ಒಂದು ಮಂತ್ರಿ ಮಂಡಲವನ್ನು ರಚಿಸಿದನು. ಆದರೆ ಸಮಸ್ಯೆ ಅಷ್ಟಕ್ಕೆ ಮುಗಿಯಲಿಲ್ಲ. ಭೋಪಾಲ್ ರಾಜ್ಯವನ್ನು ಮಧ್ಯ ಭಾರತದೊಡನೆ ವಿಲೀನ ಗೊಳಿಸಬೇಕೆಂದು ಚಳವಳಿ ಆರಂಭವಾಯಿತು. ನವಾಬನು ೧೯೪೯ರ ಜನವರಿ ೭ರಂದು ಸರ್ದಾರರಿಗೆ ಪತ್ರ ಬರೆದು ಅವರ ಸಲಹೆಯನ್ನು ಕೋರಿದನು. ಹಲವು

ಪತ್ರಗಳ ವಿನಿಮಯದ ನಂತರ ಸರ್ದಾರರು ಮೆನನ್‌ರವರನ್ನು ಭೋಪಾಲ್‌ಗೆ ಕಳುಹಿಸಿದರು. ಮೆನನ್‌ರವರು ೧೯೪೯ರ ಜನವರಿ ೨೪ರಂದು ಭೋಪಾಲ್ ತಲುಪಿ, ನವಾಬ, ಅವನ ಮಂತ್ರಿಗಳು ಮತ್ತು ಇತರ ಜನಪ್ರಿಯ ನಾಯಕರೊಡನೆ ಹಲವು ಸುತ್ತಿನ ಮಾತುಕತೆ ನಡೆಸಿದರು

ಸರ್ದಾರರು ಒಪ್ಪಬೇಕು ಅನ್ನುವ ಶರತ್ತಿನ ಮೇಲೆ, ಭೋಪಾಲ್ ವಿಷಯದಲ್ಲಿ ಸಮಾಧಾನಕರ ಪರಿಹಾರ ಕಂಡು ಬರುತ್ತಿರುವುದರಿಂದ ವಿಲೀನದ ಪರ ಮತ್ತು ವಿರೋಧದ ಚಳವಳಿಯನ್ನು ನಿಲ್ಲಿಸಬೇಕೆಂದು ಕೋರುವ ಪತ್ರಿಕಾ ಪ್ರಕಟನೆಯನ್ನು ಹೊರಡಿಸಬೇಕು, ಮಂತ್ರಿ ಮಂಡಲ ರಾಜಿನಾಮೆ ಕೊಟ್ಟು ನವಾಬನೇ ಆಡಳಿತ ವಹಿಸಿಕೊಳ್ಳಬೇಕು ಮತ್ತು ಕೇಂದ್ರದೊಡನೆ ಮಾತುಕತೆ ನಡೆಸಬೇಕು – ಅನ್ನುವ ತೀರ್ಮಾನಕ್ಕೆ ಮೆನನ್ ಮತ್ತು ನವಾಬ ಬಂದರು. ಮೆನನ್ ದೆಹಲಿಗೆ ಹಿಂತಿರುಗಿದರು.

ಇವರ ತಾತ್ಕಾಲಿಕ ತೀರ್ಮಾನವನ್ನು ಸರ್ದಾರರು ಒಪ್ಪಿದರು. ಪತ್ರಿಕಾ ಪ್ರಕಟಣೆ ಹೊರಡಿಸಲಾಯಿತು. ಮಂತ್ರಿಮಂಡಲ ರಾಜಿನಾಮೆ ನೀಡಿತು. ನವಾಬನು ತಾನೇ ಆಡಳಿತವನ್ನು ವಹಿಸಿಕೊಂಡು ಕೇಂದ್ರ ಸರ್ಕಾರದೊಡನೆ ಮಾತುಕತೆ ಮುಂದುವರೆಸಿದನು. ಮೆನನ್ ಭೋಪಾಲ್‌ಗೆ ಅನೇಕ ಬಾರಿ ಬರಬೇಕಾಯಿತು. ಮೆನನ್ ಭೋಪಾಲ್‌ಗೆ ಹೊರಟಾಗಲೆಲ್ಲ ಸರ್ದಾರರು 'ತೀರ್ಥಯಾತ್ರೆ' ಎಂದು ಹಾಸ್ಯ ಮಾಡುವ ಮಟ್ಟಕ್ಕೆ ಬಂದಿತು. ಆದಾಗ್ಯೂ ಮಧ್ಯ ಭಾರತವನ್ನು ಸೇರಬೇಕೆ ಅಥವಾ ಬೇಡವೆ ಅನ್ನುವ ಪ್ರಶ್ನೆಯ ಉತ್ತರವನ್ನು ತಾತ್ಕಾಲಿಕವಾಗಿ ಮುಂದೂಡಿ, ರಾಜ್ಯವನ್ನು ಚೀಫ್ ಕಮಿಷನರ್‌ನ ರಾಜ್ಯವನ್ನಾಗಿ ಕೇಂದ್ರ ವಹಿಸಿಕೊಳ್ಳಬೇಕೆಂದು ತೀರ್ಮಾನವಾಯಿತು.

ಅದರಂತೆ ಚರ್ಚೆ ಮುಂದುವರೆದು ಕೇಂದ್ರ ಸರ್ಕಾರ ಮತ್ತು ನವಾಬನ ನಡುವೆ ಒಪ್ಪಂದವಾಗಿ, ವಿಲೀನ ಒಪ್ಪಂದಕ್ಕೆ ನವಾಬನು ೧೯೪೯ರ ಏಪ್ರಿಲ್ ೩೦ರಂದು ಸಹಿ ಮಾಡಿದನು. ರಾಜ್ಯವು ಜೂನ್ ೧ರಂದು ಚೀಫ್ ಕಮಿಷನರ್‌ನ ರಾಜ್ಯವಾಯಿತು.[೭೯]

೫) ಬರೋಡ

ಬರೋಡ ಗುಜರಾತ್ ಪ್ರದೇಶದ ಒಂದು ರಾಜ್ಯ. ಬರೋಡ ರಾಜ್ಯವನ್ನು ೧೮೭೫ರಿಂದ ೧೯೩೯ರ ವರೆಗೆ ದೀರ್ಘ ೬೪ ವರ್ಷಗಳ ಕಾಲ ಆಳಿದ ಸಯಾಜಿರಾವ್ ಗಾಯಕ್‌ವಾಡ್ ಒಬ್ಬ ಶ್ರೇಷ್ಠ ಮತ್ತು ಪುರೋಗಾಮಿ ಅರಸ ಆಗಿದ್ದರು. ಅವರು ಆಧುನಿಕ ಬರೋಡದ ನಿರ್ಮಾಪಕರು. ಜನರಿಗೆ ನಾನಾ

ಸೌಲಭ್ಯಗಳನ್ನು ಒದಗಿಸಿದ್ದಲ್ಲದೆ ರಾಜ್ಯವನ್ನು ಸಂಪದ್ಭರಿತವನ್ನಾಗಿ ಮಾಡಿದ್ದರು. ಅವರ ನಂತರ ಸಿಂಹಾಸನಕ್ಕೆ ಬಂದ ಅವರ ಮೊಮ್ಮಗ ಪ್ರತಾಪ್ ಸಿಂಗ್ ಗಾಯಕ್‌ವಾಡ್‌ನು ಅವರಿಗೆ ತದ್ವಿರುದ್ಧ. ರಾಜ್ಯಾಡಳಿತವನ್ನು ಹದೆಗೆಡಿಸಿದ್ದಲ್ಲದೆ ತಾತ ಮಾಡಿದ್ದ ಅಪಾರ ಸಂಪತ್ತನ್ನು ಸ್ವಂತಕ್ಕೆ ಕರಗಿಸಿದನು. ಅಮೂಲ್ಯವಾದ ವಜ್ರ, ವೈಡೂರ್ಯ ಮತ್ತು ರತ್ನಗಳ ಹಾರ ಮೊದಲಾದುವುಗಳನ್ನು ಲಂಡನ್‌ಗೆ ಸಾಗಿಸಿದನು. ಅಲ್ಲಿ ಅವನ್ನೆಲ್ಲ ಏನು ಮಾಡಿದನೊ ಯಾರಿಗೂ ತಿಳಿಯಲಿಲ್ಲ. ಅವನು ಹೈದರಾಬಾದ್‌ನ ನಿಜಾಮನನ್ನು ಅನುಕರಿಸಿ ಸ್ವತಂತ್ರವಾಗಿರಲು ಬಯಸಿದನು. ೧೯೪೭ರ ಸೆಪ್ಟೆಂಬರ್ ೨ರಂದು ಸ್ವಹಸ್ತಾಕ್ಷರದಲ್ಲಿ ಸರ್ದಾರರಿಗೆ ಪತ್ರ ಬರೆದು, ಅವನ ದಿವಾನನಿಂದ ಜುನಾಗಡದ ವಿಷಯ ತಿಳಿಯಿತೆಂದೂ, ಕೆಲವು ಶರತ್ತುಗಳ ಮೇಲೆ ಇಡೀ ಕಾಥೈವಾಡ ಮತ್ತು ಗುಜರಾತ್‌ನಲ್ಲಿ ಶಾಂತಿ ಮತ್ತು ಕಾನೂನನ್ನು ನಿರ್ವಹಿಸುವ ಜವಾಬ್ದಾರಿಯನ್ನು ವಹಿಸಿಕೊಳ್ಳಲು ಬರೋಡವು ಸಿದ್ಧವಿದೆ ಎಂದು ತಿಳಿಸಿದನು. ಅವನು ಸೂಚಿಸಿದ್ದ ಶರತ್ತುಗಳು ಅವನ ಎಲ್ಲೆಯನ್ನು ಮೀರಿದ್ದುವು. ಸರ್ದಾರರು ಭಾರತ ಸರ್ಕಾರಕ್ಕೆ ಅವನ ಸಹಾಯದ ಅಗತ್ಯತೆ ಇಲ್ಲವೆಂದು ತಿಳಿಸಿ ಅವನ ಭೂದಾಹ ಅವವನ್ನು ಅಧಃಪತನಕ್ಕೆ ನೂಕುವುದೆಂದು ಎಚ್ಚರಿಸಿದರು.

ಸ್ವಾತಂತ್ರ್ಯ ಬಂದ ಮೇಲೆ ಬರೋಡದಲ್ಲಿ ಜವಾಬ್ದಾರಿ ಸರ್ಕಾರದ ಬೇಡಿಕೆ ಜೋರಾಯಿತು. ೧೯೪೮ರ ಜನವರಿಯಲ್ಲಿ ಅದು ತಾರಕಕ್ಕೆ ಏರಿತು. ಮೆನನ್‌ರವರು ಬೊಂಬಾಯಿಗೆ ಹೋಗಿ ಪ್ರತಾಪ್ ಸಿಂಗ್ ಮತ್ತು ಕಾಂಗ್ರೆಸ್ ಪಕ್ಷದ ಪ್ರತಿನಿಧಿ ದರ್ಬಾರ್ ಗೋಪಾಲ್ ದಾಸ್ ಒಡನೆ ಚರ್ಚೆ ನಡೆಸಿದರು. ರಾಜ್ಯಕ್ಕೆ ಒಂದು ಸಂವಿಧಾನವನ್ನು ರಚಿಸುವುದಕ್ಕಾಗಿ ಒಂದು ಸಂವಿಧಾನ ರಚನಾ ಸಭೆಯನ್ನು ರಚಿಸಲು ಮಹಾರಾಜನು ಒಪ್ಪಿದನು. ಒಂದು ಮಧ್ಯಂತರ ಪ್ರಜಾ ಸರ್ಕಾರವನ್ನು ರಚಿಸಲೂ ಸಹ ಅವನು ಒಪ್ಪಿದನು. ಆದರೆ ಅದನ್ನು ಈಡೇರಿಸಲು ನಾಲ್ಕು ತಿಂಗಳು ತೆಗೆದುಕೊಂಡನು. ಆನಂತರ ಡಾ॥ ಜೀವ್‌ರಾಜ್ ಮೆಹ್ತರವರನ್ನು ಮಧ್ಯಂತರ ಸರ್ಕಾರದ ಮುಖ್ಯಸ್ಥನನ್ನಾಗಿ ನಿಯಮಿಸಿ ಲಂಡನ್‌ಗೆ ಹೊರಟು ಹೋದನು.

ಜೀವರಾಜ್ ಮೆಹ್ತ ಅಧಿಕಾರ ವಹಿಸಿಕೊಂಡ ಮೇಲೆ ಮಹಾರಾಜನು ಸರ್ಕಾರದ ಬೊಕ್ಕಸದಿಂದ ಅಪಾರ ಹಣವನ್ನು ಮತ್ತು ಒಡವೆಗಳನ್ನು ತೆಗೆದುಕೊಂಡಿರುವುದನ್ನು ಗಮನಿಸಿ, ಅದನ್ನು ಶಾಸನ ಸಭೆಯ ಮುಂದೆ ಇಟ್ಟರು. ಮಹಾರಾಜನ ಮೇಲೆ ಕ್ರಮ ಜರುಗಿಸಲು ಶಾಸನ ಸಭೆಗೆ ಅಧಿಕಾರವಿರಲಿಲ್ಲ.

ಅದರಿಂದ ಶಾಸನ ಸಭಾ ಸದಸ್ಯರು ಪ್ರತ್ಯೇಕವಾಗಿ ಸಭೆ ಸೇರಿ, ಎರಡು ಠರಾವುಗಳನ್ನು ಅಂಗೀಕರಿಸಿದರು. ಮೊದಲನೆಯದರಲ್ಲಿ ಮಹಾರಾಜನು ಜನರ ವಿಶ್ವಾಸ ಕಳೆದುಕೊಂಡಿರುವುದರಿಂದ ಅವನು ತನ್ನ ಹಿರಿಯ ಮಗನ ಪರವಾಗಿ ಸಿಂಹಾಸನ ತ್ಯಾಗ ಮಾಡಬೇಕೆಂದು ಆಗ್ರಹಿಸಿದರು. ಎರಡನೆಯದರಲ್ಲಿ, ಸುಮಾರು ೩.೫ ಕೋಟಿ ರೂಪಾಯಿ ಮಾಯವಾಗಿರುವುದರಿಂದ, ಸೂಕ್ತವಾದ ಕ್ರಮವನ್ನು ತೆಗೆದುಕೊಳ್ಳಲು ಒಂದು ಸಮಿತಿಯನ್ನು ರಚಿಸಬೇಕೆಂದು ಕೇಂದ್ರ ಸರ್ಕಾರವನ್ನು ಕೋರಿದರು. ಈ ವಿಷಯ ತಿಳಿದ ತಕ್ಷಣ ಮಹಾರಾಜನು ಲಂಡನ್‌ನಿಂದ ಓಡಿ ಬಂದು ಸರ್ದಾರರನ್ನು ಭೇಟಿ ಮಾಡಿ ಪೂರ್ಣ ಜವಾಬ್ದಾರಿ ಸರ್ಕಾರವನ್ನು ರಚಿಸುವುದಾಗಿ ಮತ್ತು ಹಣವನ್ನು ಖಜಾನೆಗೆ ಮರು ಪಾವತಿ ಮಾಡುವುದಾಗಿ ಆಶ್ವಾಸನೆ ನೀಡಿದನು.

ಭಾರತ ಸರ್ಕಾರವು ಲೆಕ್ಕ ತನಿಖೆಗೆ ಒಬ್ಬ ಹಿರಿಯ ಅಧಿಕಾರಿಯನ್ನು ನಿಯಮಿಸಿತು. ಆದರೆ ಪ್ರತಾಪ್ ಸಿಂಗನು ಅವರೊಡನೆ ಸಹಕರಿಸಲಿಲ್ಲ. ಹೊಸ ಮಂತ್ರಿಮಂಡಲದೊಡನೆಯೂ ಮಹಾರಾಜನ ಸಂಬಂಧ ಸರಿಯಿರಲಿಲ್ಲ. ಸರ್ದಾರರಿಗೆ ಮೇಲಿಂದ ಮೇಲೆ ದೂರುಗಳು ಬರುತ್ತಿದ್ದುವು. ೧೯೪೯ರ ಜನವರಿಯಲ್ಲಿ ಸರ್ದಾರರೇ ಬರೋಡಕ್ಕೆ ಹೊರಟರು. ಅದಕ್ಕೆ ಮೊದಲು ಅವರು ಮೆನನ್‌ರವರಿಗೆ, "ಮಹಾರಾಜನನ್ನು ನೀವು ಸಂಪರ್ಕಿಸಿ ರಾಜ್ಯವನ್ನು ಬಾಂಬೆ ಪ್ರಾಂತ್ಯದೊಡನೆ ವಿಲೀನಗೊಳಿಸಲು ಒಪ್ಪಿಸಿ, ಆ ವಿಷಯವನ್ನು ನಾನು ಬರೋಡದಲ್ಲಿ ಪ್ರಕಟಿಸುತ್ತೇನೆ" ಎಂದರು. ಮೆನನ್‌ರವರು ಮಹಾರಾಜನನ್ನು ದೆಹಲಿಗೆ ಕರೆಸಿ ಮಾತನಾಡಿದರು. ಸರ್ದಾರರೂ ಅವರೊಡನೆ ಮಾತನಾಡಿದರು. ಮಹಾರಾಜರೊಡನೆ ಮೆನನ್‌ರವರೂ ಬರೋಡಕ್ಕೆ ಹೋದರು. ಅಲ್ಲಿ ಮೆನನ್, ಪ್ರತಾಪ್ ಸಿಂಗ್ ಮತ್ತು ಅವರ ಕಾನೂನು ಸಲಹೆಗಾರ ಕೆ.ಕೆ. ಷಾ ವಿಷಯವನ್ನು ಚರ್ಚಿಸಿದರು.

ಮೆನನ್ ಮಹಾರಾಜರ ಮುಂದೆ ಎರಡು ಆಯ್ಕೆಗಳನ್ನು ಇಟ್ಟರು. ಮೊದಲನೆಯದು, ರಾಜ್ಯವನ್ನು ಬಾಂಬೆ ಪ್ರಾಂತ್ಯದೊಡನೆ ವಿಲೀನಗೊಳಿಸುವುದು. ಇನ್ನೊಂದು, ಬರೋಡ ರಾಜ್ಯದ ಸಾಂವಿಧಾನಿಕ ಮುಖ್ಯಸ್ಥನಾಗಿರುವುದು. ಪ್ರತಾಪ್ ಸಿಂಗ್‌ನು ಮೊದಲನೆಯದನ್ನೇ ಆರಿಸಿಕೊಂಡನು. ಸರ್ದಾರರು ಬರೋಡಕ್ಕೆ ಭೇಟಿ ನೀಡಿದಾಗ ಬಾಂಬೆ ಒಡನೆ ರಾಜ್ಯದ ವಿಲೀನದ ವಿಷಯವನ್ನು ಅವರು ಪ್ರಕಟಿಸಬಾರದು ಎಂದು ಕೋರಿದನು. ಸರ್ದಾರರು ಒಪ್ಪಿದರು. ಆನಂತರ ಪ್ರತಾಪ್ ಸಿಂಗ್‌ನು ಆ ವಿಷಯವನ್ನು ತನ್ನ ಮಂತ್ರಿಗಳ ಸಭೆಯಲಿ ಪ್ರಕಟಿಸಿದನು. ಮಂತ್ರಿ

ಮಂಡಲವು ಅದನ್ನು ಒಪ್ಪಿ ೧೯೪೯ರ ಜನವರಿ ೨೮ರಂದು ಒಂದು ಠರಾವನ್ನು ಅಂಗೀಕರಿಸಿತು. ೩೧ನೇ ತಾರೀಖು ಮಹಾರಾಜನು ಆ ವಿಷಯವನ್ನು ಒಂದು ಪತ್ರಿಕಾ ಪ್ರಕಟಣೆಯ ಮೂಲಕ ಹೊರಗೆಡಹಿದನು.

ಆ ನಂತರ ಮೆನನ್‌ರವರು ಚರ್ಚಿಸಿ ಮಹಾರಾಜರ ರಾಜಧನ ಮೊದಲಾದುವನ್ನು ಇತ್ಯರ್ಥ ಪಡಿಸಿದರು. ಮಾರ್ಚ್ ೨೧ರಂದು ವಿಲೀನ ಒಪ್ಪಂದದ ಪ್ರಕ್ರಿಯೆ ಮುಕ್ತಾಯವಾಯಿತು. ಮೇ ೩೧ರಂದು ಒಂದು ಸಾರ್ವಜನಿಕ ಸಮಾರಂಭದಲ್ಲಿ ಬೊಂಬಾಯಿ ಸರ್ಕಾರವು ಬರೋಡದ ಆಡಳಿತವನ್ನು ವಹಿಸಿಕೊಂಡಿತು.

ಮಾರನೆಯ ದಿನ ಮಹಾರಾಜ ಪ್ರತಾಪ ಸಿಂಗ್‌ನು ರಾಜ್ಯದ ಜನರಿಗೆ ವಿದಾಯದ ಸಂದೇಶವನ್ನು ನೀಡಿದನು.[೮೦]

ಕ) ಮೈಸೂರು

ಸಣ್ಣ ರಾಜ್ಯಗಳ ಒಕ್ಕೂಟ ರಚನೆ ಅಥವಾ ಪಕ್ಕದ ಪ್ರಾಂತ್ಯದೊಡನೆ ವಿಲೀನ ತತ್ವದಿಂದ ಹೊರಗೆ ಪ್ರತ್ಯೇಕ ಘಟಕವಾಗಿ ಉಳಿದದ್ದು ಎರಡು ರಾಜ್ಯಗಳು ಮಾತ್ರ. ಅವು ಮೈಸೂರು ಮತ್ತು ಹೈದರಾಬಾದ್. ಹಾಗೆ ಉಳಿಯಲು ಕಾರಣ ಅವುಗಳ ವಿಸ್ತಾರ, ಜನಸಂಖ್ಯೆ, ಆರ್ಥಿಕ ಸಂಪನ್ಮೂಲಗಳು ಮತ್ತು ಭೌಗೋಳಿಕ ನೆಲೆ.

ಮೈಸೂರು ರಾಜ್ಯವು ದಕ್ಷಿಣ ಭಾರತದ ರಾಜ್ಯ. ಅದನ್ನು ೧೩೯೯ರಲ್ಲಿ ಯದುರಾಯ ಒಡೆಯರ್ ಸ್ಥಾಪಿಸಿದ್ದಾಗಿನಿಂದ ಒಡೆಯರ್ ವಂಶದವರು ಆಳುತ್ತಿದ್ದರು. ಮಧ್ಯದಲ್ಲಿ ೧೭೬೧ರಲ್ಲಿ ಹೈದರ್ ಆಲಿ ಒಡೆಯರ ಸಿಂಹಾಸನವನ್ನು ಕಸಿದುಕೊಂಡು ೧೭೯೯ರಲ್ಲಿ ಅವನ ಮಗ ಟಿಪ್ಪು ಸುಲ್ತಾನ ನಾಲ್ಕನೆ ಮೈಸೂರು ಯುದ್ಧದಲ್ಲಿ ಸಾಯುವವರೆಗೆ ೩೮ ವರ್ಷಗಳ ಕಾಲ ಅದು ಒಡೆಯರ ಸಂತತಿಯ ಕೈ ತಪ್ಪಿಹೋಗಿತ್ತು. ಮತ್ತೆ ಬ್ರಿಟಿಷ್ ಸರ್ಕಾರವು ೧೮೩೧ರಲ್ಲಿ ರಾಜ್ಯದ ಆಡಳಿತವನ್ನು ವಹಿಸಿಕೊಂಡು ೧೮೮೧ರಲ್ಲಿ ಒಡೆಯರ್ ವಂಶದ ಚಾಮರಾಜೇಂದ್ರ ಒಡೆಯರ್‌ರವರಿಗೆ ವಾಪಸ್ಸು ವಹಿಸಿತು. ಅವರ ನಂತರ ಅವರ ಮಗ ನಾಲ್ವಡಿ ಕೃಷ್ಣರಾಜ ಒಡೆಯರು ೧೮೯೪ರಿಂದ ೧೯೪೦ರ ವರೆಗೆ ೪೬ ವರ್ಷಗಳ ಕಾಲ ಜನಪರವಾಗಿ, ಅಭಿವೃದ್ಧಿಗಾಗಿ ಉತ್ತಮವಾಗಿ ಆಳಿ ರಾಜರ್ಷಿ ಎನಿಸಿಕೊಂಡರು. ಅವರ ನಂತರ ೧೯೪೦ರಲ್ಲಿ ಜಯಚಾಮರಾಜ ಒಡೆಯರ್ ರಾಜರಾದರು. ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಅವರು ಅರಸರಾಗಿದ್ದರು. ಇಡೀ ಭಾರತದ ಇತಿಹಾಸದಲ್ಲಿ ೫೦೦ ವರ್ಷಗಳಿಗೂ ಹೆಚ್ಚು ಕಾಲ ಅಸ್ತಿತ್ವದಲ್ಲಿದ್ದ ಎರಡು ರಾಜ್ಯಗಳ

ಪೈಕಿ ಮೈಸೂರು ಒಂದು. ಅಸ್ಸಾಂನ ಅಹೋಯ್ ರಾಜ್ಯ ಮತ್ತೊಂದು.

ಮೈಸೂರು ಅರಸರು ಸರ್ವಾಧಿಕಾರಿಗಳಂತೆ ಅಥವಾ ನಿರಂಕುಶ ಪ್ರಭುಗಳಂತೆ ವರ್ತಿಸುತ್ತಿರಲಿಲ್ಲ. ೧೮೮೧ರಲ್ಲೇ ಅವರು ಪ್ರಜಾಪ್ರತಿನಿಧಿ ಸಭೆಯನ್ನು ರಚಿಸಿದ್ದರು. ನಾಲ್ವಡಿ ಕೃಷ್ಣರಾಜ ಒಡೆಯರು ೧೯೦೭ರಲ್ಲಿ ಮೇಲ್ಮನೆಯನ್ನು ಅದಕ್ಕೆ ಸೇರಿಸಿದ್ದರು ಮತ್ತು ೧೯೨೩ರ ಪ್ರಜಾಪ್ರತಿನಿಧಿ ಸಭೆಯ ಕಲಾಪಗಳನ್ನು ವಿಸ್ತರಿಸಿದ್ದರು. ಅಷ್ಟೇ ಅಲ್ಲದೆ ಅವರು ನೀರಾವರಿ, ಕೈಗಾರಿಕೆ, ವಿದ್ಯಾಭ್ಯಾಸ, ಆಡಳಿತ, ಆರೋಗ್ಯ ಮುಂತಾದ ಕ್ಷೇತ್ರಗಳಲ್ಲಿ ಜನಹಿತ ಕಾರ್ಯಗಳನ್ನು ಅಪಾರವಾಗಿ ಎಸಗಿದ್ದರು. ಆಡಳಿತದಲ್ಲಿ ಹಿಂದುಳಿದವರಿಗೆ ಮೀಸಲಾತಿಯನ್ನೂ ಜಾರಿಗೆ ತಂದಿದ್ದರು. ಗಾಂಧೀಜಿಯವರನ್ನು ಅಪಾರವಾಗಿ ಗೌರವಿಸುತ್ತಿದ್ದರು.

೧೯೪೭ರ ಆಗಸ್ಟ್‌ನಲ್ಲಿ ಆಗ ಮಹಾರಾಜರಾಗಿದ್ದ ಜಯಚಾಮರಾಜ ಒಡೆಯರ್‌ರವರು ಭಾರತ ಸರ್ಕಾರದೊಡನೆ ಸೇರ್ಪಡೆ ಒಪ್ಪಂದ ಮತ್ತು ಸ್ಥಾಯಿ ಒಪ್ಪಂದಗಳಿಗೆ, ಸಹಿ ಹಾಕಿದರು. ಆದಾಗ್ಯೂ ಸ್ವಾತಂತ್ರ್ಯ ಬಂದ ಮೇಲೆ ಮೈಸೂರು ರಾಜ್ಯದಲ್ಲಿ ರಾಜತ್ವ ಹೋಗಿ ಸಂಪೂರ್ಣ ಜವಾಬ್ದಾರಿ ಸರ್ಕಾರ ಸ್ಥಾಪನೆಯಾಗಬೇಕೆಂದು ಜನ ಬಯಸಿದರು. ಮಹಾರಾಜರಾಗಿದ್ದ ಜಯಚಾಮರಾಜ ಒಡೆಯರ್‌ರಿಗೂ ಅದು ಒಪ್ಪಿಗೆ ಇತ್ತೆಂಬ ಮಾತೂ ಇದೆ. ಆದರೆ ಆಗ ದಿವಾನರಾಗಿದ್ದ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್‌ರವರು ಅದಕ್ಕೆ ಆಸ್ಪದ ಕೊಡಲಿಲ್ಲ.[೮೧]

ಸ್ವಾತಂತ್ರ್ಯ ಸಮರ ಕಾಲದಲ್ಲೇ ಮೈಸೂರು ರಾಜ್ಯದಲ್ಲಿ ಮೈಸೂರ್ ಕಾಂಗ್ರೆಸ್ ಸಂಸ್ಥೆ ಸ್ಥಾಪನೆಯಾಗಿತ್ತು. ೧೯೪೭ರಲ್ಲಿ ಅದರ ಅಧ್ಯಕ್ಷರಾಗಿದ್ದವರು ಕೆ.ಸಿ. ರೆಡ್ಡಿಯವರು. ಅವರ ನಾಯಕತ್ವದಲ್ಲಿ ಜವಾಬ್ದಾರಿ ಸರ್ಕಾರದ ಈಡೇರಿಕೆಗಾಗಿ 'ಮೈಸೂರು ಚಲೋ' ಚಳವಳಿ ಆರಂಭವಾಯಿತು. ರಾಜ್ಯದ ನಾನಾ ಭಾಗಗಳಿಂದ ಮೈಸೂರು ನಗರದ ಕಡೆಗೆ ಜಾತಾಗಳು ಹೊರಟವು. ಎಲ್ಲೆಲ್ಲೂ ಸಭೆ, ಮೆರವಣಿಗೆಗಳು ನಡೆದುವು. ವಿದ್ಯಾರ್ಥಿಗಳು ಶಾಲಾ ಕಾಲೇಜು ಬಿಟ್ಟು ಚಳವಳಿಯಲ್ಲಿ ಭಾಗವಹಿಸಿದರು. ಕೆಲವು ವಿದ್ಯಾರ್ಥಿಗಳು ಗುಂಡಿಗೆ ಹತರಾದರು. ಸರ್ಕಾರವು ಚಳವಳಿಗಾರರನ್ನು ಬಂಧಿಸಿತು. ಆದರೆ ಅದು ಜನರ ಒತ್ತಡವನ್ನು ತಡೆಯಲಾಗಲಿಲ್ಲ. ಮಹಾರಾಜರು ಅಕ್ಟೋಬರ್ ೨೪ರಂದು ಜವಾಬ್ದಾರಿ ಸರ್ಕಾರಕ್ಕೆ ಒಪ್ಪಿಗೆ ನೀಡಿದರು. ದಿವಾನರು ರಾಜಿನಾಮೆ ಕೊಟ್ಟರು. ೧೯೪೭ರ ಅಕ್ಟೋಬರ್ ೨೫ರಂದು ಪ್ರಥಮ ಮುಖ್ಯಮಂತ್ರಿಯಾಗಿ ಕೆ.ಸಿ. ರೆಡ್ಡಿಯವರು ಅಧಿಕಾರ ವಹಿಸಿಕೊಂಡು ಮಂತ್ರಿ ಮಂಡಲ ರಚಿಸಿದರು. ಮೈಸೂರು ರಾಜ್ಯದಲ್ಲಿ ರಾಜಪ್ರಭುತ್ವ ಅಳಿದು ಪ್ರಜಾಪ್ರಭುತ್ವ ಸ್ಥಾಪನೆಯಾಯಿತು. ಮಹಾರಾಜ ಜಯಚಾಮರಾಜ ಒಡೆಯರ್‌ರವರು

ಸಾಂವಿಧಾನಿಕ ಮುಖ್ಯಸ್ಥರಾಗಿ ಮುಂದುವರೆದರು.[೮೨]

೧೯೪೭ರ ಅಕ್ಟೋಬರ್ ೨೯ರಂದು ಮೈಸೂರು ರಾಜ್ಯಕ್ಕೆ ಒಂದು ಸಂವಿಧಾನವನ್ನು ರಚಿಸಲು ಸಂವಿಧಾನ ರಚನಾ ಸಭೆಯನ್ನು ರಚಿಸಿದರು. ಆ ಸಭೆಯು ಒಂದು ಠರಾವಿನ ಮೂಲಕ 'ಭಾರತ ಒಕ್ಕೂಟವು ರಚಿಸುವ ಸಂವಿಧಾನವನ್ನು ಮೈಸೂರು ಪ್ರಾಂತ್ಯದಲ್ಲೂ ಅಳವಡಿಸಿಕೊಳ್ಳಬೇಕು' ಎಂದು ತೀರ್ಮಾನಿಸಿತು. ಹೀಗೆ ರಾಜ್ಯವು ಭಾರತ ಸರ್ಕಾರದೊಡನೆ ಸಂಬಂಧವನ್ನು ಕಲ್ಪಿಸಿಕೊಂಡಿತು. ಆದರೆ ಮಹಾರಾಜರ ರಾಜಧನ ಮತ್ತು ಖಾಸಗಿ ಆಸ್ತಿಗಳ ಪ್ರಶ್ನೆ ಹಾಗೆಯೇ ಉಳಿದಿತ್ತು. ಒಂದು ದಿನ ಬೆಳಗ್ಗೆ ಮಾಮೂಲಿಗಿಂತ ಮುಂಚೆ ಸರ್ದಾರರು ಮೆನನ್‌ರವರನ್ನು ತಮ್ಮ ಮನೆಗೆ ಕರೆಸಿ, 'ಮೈಸೂರು ಮಹಾರಾಜರ ರಾಜಧನ ಮತ್ತು ಖಾಸಗಿ ಆಸ್ತಿಗಳ ಪ್ರಶ್ನೆ ಉಳಿದು ಹೋಗಿದೆ. ಅದರಿಂದ ನನಗೆ ಚಿಂತೆಯಾಗಿದೆ' ಎಂದರು. ಆಗ ಪಟೇಲರ ಆರೋಗ್ಯ ಅಷ್ಟು ಚೆನ್ನಾಗಿರಲಿಲ್ಲ. ಮೈಸೂರು ಮಹಾರಾಜರ ಪ್ರಶ್ನೆಯನ್ನು ಅವರು ಇದ್ದಕ್ಕಿದ್ದ ಹಾಗೆ ಏಕೆ ಎತ್ತಿದರು – ಎನ್ನುವುದು ಮೆನನ್‌ಗೆ ಅರ್ಥವಾಗಲಿಲ್ಲ. ಆದರೂ ಶೀಘ್ರವೇ ಮೈಸೂರಿಗೆ ಪ್ರಯಾಣ ಮಾಡಿ, ಅಲ್ಲಿ ಮೂರು ದಿನಗಳು ಮಹಾರಾಜರು ಮತ್ತು ಮಂತ್ರಿಗಳೊಡನೆ ಚರ್ಚಿಸಿ ಮಹಾರಾಜರ ರಾಜಧನ ಮತ್ತು ಖಾಸಗಿ ಆಸ್ತಿಗಳನ್ನು ನಿಗದಿಪಡಿಸಿದರು. ಮುಂದೆ ಭಾರತ ಸರ್ಕಾರ ಮತ್ತು ಮಹಾರಾಜರ ನಡುವೆ ಒಪ್ಪಂದಕ್ಕೆ ಸಹಿ ಹಾಕಲಾಯಿತು.[೮೩]

ಖ) ಹೈದರಾಬಾದ್

ಹೈದರಾಬಾದ್, ಭಾರತದೊಡನೆ ಸೇರುವ ವಿಷಯದಲ್ಲಿ ಸರ್ದಾರರಿಗೆ ಅತ್ಯಂತ ಹೆಚ್ಚಿನ ತೊಂದರೆ ಕೊಟ್ಟ ರಾಜ್ಯ. ಅದು ಭಾರತದ ಮಧ್ಯಭಾಗದಲ್ಲಿದ್ದ ೮೨,೦೦೦ ಚ.ಮೈ. ವಿಸ್ತಾರದ ರಾಜ್ಯ. ಅದರ ಉತ್ತರಕ್ಕೆ ಮಧ್ಯ ಪ್ರಾಂತ್ಯ, ಪಶ್ಚಿಮಕ್ಕೆ ಬೊಂಬಾಯಿ ಪ್ರಾಂತ್ಯ, ದಕ್ಷಿಣ ಮತ್ತು ಪೂರ್ವಕ್ಕೆ ಮದರಾಸ್ ಪ್ರಾಂತ್ಯ ಇದ್ದುವು. ಸರ್ದಾರರು, "ಹೈದರಾಬಾದ್ ಭಾರತ ಶರೀರದ ಉದರದಂತಿದೆ. ಅದನ್ನು ಕತ್ತರಿಸಿ ತೆಗೆದರೆ ಶರೀರ ಉಸಿರಾಡುವುದು ಹೇಗೆ?" ಎಂದಿದ್ದರು.[೮೪]

ಹೈದರಾಬಾದ್‌ನ ಸುಮಾರು ೧೬ ದಶಲಕ್ಷ ಜನಸಂಖ್ಯೆಯಲ್ಲಿ ಕೇವಲ ಶೇ ೧೫ರಷ್ಟು ಮಾತ್ರ ಮುಸ್ಲಿಮರು. ಆದಾಗ್ಯೂ ಅದರ ಅರಸ ನಿಜಾಮ ಮೀರ್ ಉಸ್ಮಾನ್ ಅಲೀಖಾನ್ ಬಹದ್ದೂರನಿಗೆ ಅದನ್ನು ಮುಸ್ಲಿಂ ರಾಜ್ಯ ಮಾಡುವ ಚಪಲ. ಅವನಿಗೆ ಎರಡು ಮಹತ್ವಾಕಾಂಕ್ಷೆಗಳಿದ್ದುವು. ಆದಷ್ಟೂ ಹೆಚ್ಚು ಹೆಚ್ಚು ಅಧಿಕಾರವನ್ನು ತನ್ನಲ್ಲಿ ಕೇಂದ್ರೀಕರಿಸಿಕೊಳ್ಳುವುದು ಅವನ ಒಂದು ಆಸೆ. ಮತ್ತೊಂದು

ಅವನ ಹಣದ ಮೋಹ. ಅವನು ವಜ್ರ ಚಿನ್ನ ಬೆಳ್ಳಿ ಮತ್ತು ಹಣವನ್ನು ಅಪಾರವಾಗಿ ಸಂಗ್ರಹಿಸಿದ್ದನು. ಅವನಲ್ಲಿದ್ದ ಸಂಪತ್ತಿನ ಮೌಲ್ಯದ ಅಂದಾಜು ಆ ಕಾಲದಲ್ಲಿ ೧೦೦ ಕೋಟಿಯಿಂದ ೩೦೦ ಕೋಟಿಯ ವರೆಗೆ ಇತ್ತು. ಆ ಅಪಾರ ನಗ ನಾಣ್ಯ ವಜ್ರ ವೈಡೂರ್ಯಗಳನ್ನು ನೋಡಿ ನೋಡಿ ಸಂತೋಷ ಪಡುತ್ತಿದ್ದನೇ ಹೊರತು ಅವನ್ನು ಬಳಸಿ, ಧರಿಸಿ, ಅನುಭವಿಸಿ ಸಂತೋಷ ಪಡುತ್ತಿರಲಿಲ್ಲ. ಅತ್ಯಂತ ಸರಳ ಜೀವನ ನಡೆಸುತ್ತಿದ್ದನು. ಸದಾ ಹಳೆಯ ಮತ್ತು ಕೊಳಕಾದ ಬಟ್ಟೆ ಧರಿಸುತ್ತಿದ್ದನು. ೧೯೧೮ನೆ ಇಸವಿಯ ಒಂದು ಹಳೇ ಕಾರಿನಲ್ಲಿ ಓಡಾಡುತ್ತಿದ್ದನು. ಜಿಪುಣರ ಸಾಮ್ರಾಟ![೮೫]

ಹೈದರಾಬಾದನ್ನು ಸ್ವತಂತ್ರ ಮುಸ್ಲಿಂ ರಾಷ್ಟ್ರ ಮಾಡುವುದು ಅವನ ಉತ್ಕಟ ಬಯಕೆ. ತನ್ನ ಪ್ರಜೆಗಳ ಮೇಲೆ ಆಳಲು ದೇವರು ತನ್ನನ್ನು ಕಳುಹಿಸಿದ್ದಾನೆ ಮತ್ತು ತನ್ನ ಅಭಿಪ್ರಾಯವೇ ನಡೆಯಬೇಕು – ಅನ್ನುವುದು ಅವನ ದೃಢ ನಂಬಿಕೆ.[೮೬] ಅದರಿಂದ ಪ್ರಜಾಪ್ರಭುತ್ವವನ್ನು ಒಪ್ಪುತ್ತಿರಲಿಲ್ಲ. ಆದಾಗ್ಯೂ ಬ್ರಿಟಿಷ್ ಸರ್ಕಾರದ ಮೆಚ್ಚುಗೆಗಾಗಿ ೧೩೨ ಸದಸ್ಯರ ಒಂದು ಶಾಸನ ಸಭೆಯನ್ನು ರಚಿಸಿದ್ದನು. ಆದರೆ ಅದರಲ್ಲಿ ಹಿಂದೂಗಳಿಗಿಂತ ಮುಸ್ಲಿಮರೇ ಅಧಿಕವಾಗಿರುವಂತೆ ನೋಡಿಕೊಂಡಿದ್ದನು. ಸರ್ಕಾರಿ ಸೇವೆ, ಪೋಲೀಸ್ ಮತ್ತು ಸೈನ್ಯದಲ್ಲಿ ಅಲ್ಪ ಸಂಖ್ಯಾತರಾದ ಮುಸ್ಲಿಮರನ್ನೇ ತುಂಬಿದ್ದನು.[೮೭] ಅವನೊಬ್ಬ ಹಿಂದೂ ದ್ವೇಷಿ!

ಬ್ರಿಟಿಷ್ ಸರ್ಕಾರದ ೧೯೪೭ರ ಪ್ರಕಟಣೆ ಹೊರಬಿದ್ದ ತಕ್ಷಣ ನಿಜಾಮನು ಒಂದು ಆಜ್ಞೆಯನ್ನು ಹೊರಡಿಸಿ ಪಾಕಿಸ್ತಾನ ಅಥವಾ ಇಂಡಿಯಾದ ಸಂವಿಧಾನ ರಚನಾ ಸಭೆಗೆ ಪ್ರತಿನಿಧಿಗಳನ್ನು ಕಳುಹಿಸುವ ಅಭಿಪ್ರಾಯವಿಲ್ಲವೆಂದೂ, ಆಗಸ್ಟ್ ೧೫ರಂದು ತನ್ನ ರಾಜ್ಯವನ್ನು ಸ್ವತಂತ್ರ ಸ್ವಾಯತ್ತ ರಾಜ್ಯವನ್ನಾಗಿ ಘೋಷಿಸುವ ಹಕ್ಕು ತನಗಿದೆ ಎಂದೂ ಪ್ರಕಟಿಸಿದನು. ಬ್ರಿಟಿಷ್ ಸಾರ್ವಭೌಮತ್ವ ಮುಕ್ತಾಯವಾದಾಗ ಹೈದರಾಬಾದ್‌ಗೆ ಡೊಮಿನಿಯನ್ ಸ್ಥಾನ ಮತ್ತು ಬ್ರಿಟಿಷ್ ಕಾಮನ್‌ವೆಲ್ತ್‌ನಲ್ಲಿ ಸ್ಥಾನ ಸಿಗುವುದೆಂದು ಅವನು ಬಯಸಿದ್ದನು ಮತ್ತು ನಿರೀಕ್ಷಿಸಿದ್ದನು. ಆದರೆ ಇಂಡಿಯನ್ ಇಂಡಿಪೆಂಡೆನ್ಸ್ ಆಕ್ಟ್ ಪ್ರಕಾರ ಅದು ದೊರಕಲಿಲ್ಲ. ಅವನಿಗೆ ಭಾರಿ ನಿರಾಸೆ ಮತ್ತು ಸಂಕಟವಾಯಿತು.

ನಿಜಾಮನು ಜುಲೈ ೧೧ರಂದು ಪ್ರಧಾನಮಂತ್ರಿ ಚಾತ್ರಿ ನವಾಬನ ನಾಯಕತ್ವದಲ್ಲಿ ಒಂದು ನಿಯೋಗವನ್ನು ಮೌಂಟ್‌ಬ್ಯಾಟನ್ ಬಳಿಗೆ ಮಾತುಕತೆಗೆ ಕಳುಹಿಸಿದನು. ಆ ನಿಯೋಗವು ಬೆರಾರ್ ರಾಜ್ಯವನ್ನು ವಾಪಸ್ಸು ಹೈದರಾಬಾದಿಗೆ ಕೊಡಿಸಬೇಕು ಮತ್ತು ಹೈದರಾಬಾದಿಗೆ ಡೊಮಿನಿಯನ್ ಸ್ಥಾನ ಕೊಡಬೇಕು

ಎಂದು ಕೋರಿತು. ಎರಡನ್ನೂ ಮೌಂಟ್‌ಬ್ಯಾಟನ್ ತಳ್ಳಿ ಹಾಕಿದರು. ನಂತರ ಅವರು ಹೈದರಾಬಾದ್ ಭಾರತಕ್ಕೆ ಸೇರಿದರೆ ಪರಸ್ಪರ ಇಬ್ಬರಿಗೂ ಲಾಭ ಎಂದು ವಿವರಿಸಿದರು. ಆದರೆ ನಿಯೋಗವು, 'ಹೈದರಾಬಾದ್‌ನ ಸ್ವಾಯತ್ತತೆಗೆ ಭಂಗ ಬರುವುದರಿಂದ ಅದನ್ನು ಒಪ್ಪಲು ನಿಜಾಮರಿಗೆ ಬಹಳ ಕಷ್ಟ. ನೀವೇನಾದರು ಒತ್ತಾಯ ಮಾಡಿದರೆ, ಪಾಕಿಸ್ತಾನವನ್ನು ಸೇರುವುದರ ಬಗೆಗೆ ನಿಜಾಮರು ಪರಿಗಣಿಸ ಬಹುದು' ಎಂದಿತು. ಮೌಂಟ್‌ಬ್ಯಾಟನ್‌ರವರು, "ಹಾಗೆ ಮಾಡಲು ಕಾನೂನಿನ ಪ್ರಕಾರ ನಿಜಾಮರಿಗೆ ಅಧಿಕಾರವಿದೆ ಅನ್ನುವುದರಲ್ಲಿ ಯಾವ ಅನುಮಾನವೂ ಇಲ್ಲ, ಆದರೆ ಹಾಗೆ ಮಾಡಲು ಇರುವ ಭೌಗೋಳಿಕ ತೊಂದರೆ ನಿಜವಾದುದು. ಈಗ ಸಿಕ್ಕಿರುವ ಅವಕಾಶವೇ ಬಹುಶಃ ಕೊನೆಯ ಅವಕಾಶ. ಅದನ್ನು ತಕ್ಷಣವೇ ಉಪಯೋಗಿಸಿಕೊಳ್ಳದಿದ್ದರೆ ಅಂತಹ ಅವಕಾಶ ಮತ್ತೆ ಸಿಗಲಾರದು. ನನ್ನ ಸಲಹೆಯನ್ನು ಒಪ್ಪದೇ ಹೋದರೆ ೫ ಅಥವಾ ೧೦ ವರ್ಷಗಳಲ್ಲಿ ರಾಜ್ಯ ತೊಂದರೆಗೆ ಸಿಲುಕಬಹುದು," ಎಂದು ಉತ್ತರಿಸಿದರು.[೮೮] ನಿಯೋಗ ಹಿಂತಿರುಗಿತು.

ನಿಯೋಗವು ಮತ್ತೆ ಬಂದಾಗ 'ಸೇರ್ಪಡೆ ಒಪ್ಪಂದ'ಕ್ಕೆ ಸಹಿ ಹಾಕದೆ 'ಸ್ಥಾಯಿ ಒಪ್ಪಂದ'ಕ್ಕೆ ಸಹಿ ಹಾಕುವುದಾಗಿ ಹೇಳಿತು. ವಿ.ಪಿ. ಮೆನನ್ ಅದು ಸಾಧ್ಯವಿಲ್ಲ – ಎಂದು ತಿಳಿಸಿದರು. ನಿಜಾಮನು ಆಗಸ್ಟ್ ೧೫ರ ಒಳಗೆ ಭಾರತವನ್ನು ಸೇರುವಂತೆ ಮಾಡಲು ಸಾಧ್ಯವಿಲ್ಲ – ಎನ್ನುವುದು ಮೌಂಟ್‌ಬ್ಯಾಟನ್‌ಗೆ ಅರಿವಾಯಿತು. ಹಾಗೆಂದು ಮಾತುಕತೆಯನ್ನು ನಿಲ್ಲಿಸುವುದೂ ಅವರಿಗೆ ಇಷ್ಟವಿರಲಿಲ್ಲ. ಅದರಿಂದ ಹೈದರಾಬಾದ್‌ಗೆ ಎರಡು ತಿಂಗಳ ಹೆಚ್ಚುವರಿ ಕಾಲಾವಕಾಶ ನೀಡಬೇಕೆಂದು ಅವರು ಸಲಹೆ ಮಾಡಿದರು. ಮಂತ್ರಿ ಮಂಡಲ ಒಪ್ಪಿತು.

ಸೇರ್ಪಡೆಯ ಒಪ್ಪಂದ ಎರಡು ಪಕ್ಷಗಳ ನಡುವಣ ವಿವಾದದ ವಿಷಯ ವಾಗಿತ್ತು. ಸೇರ್ಪಡೆಯ ಒಪ್ಪಂದಕ್ಕೆ ಸಹಿ ಹಾಕಲು ಸಾಧ್ಯವಿಲ್ಲ, ಏಕೆಂದರೆ ಅದು ತನ್ನ ಸ್ವಾಯತ್ತತೆಯನ್ನು ಭಂಗಪಡಿಸುತ್ತದೆ, ಅದಕ್ಕೆ ಬದಲಾಗಿ ಒಬ್ಬ ಸ್ವತಂತ್ರ ಸ್ವಾಯತ್ತ ರಾಜನಂತೆ ಭಾರತ ಸರ್ಕಾರದೊಡನೆ ರಕ್ಷಣೆ, ವಿದೇಶಿ ವ್ಯವಹಾರ ಮತ್ತು ಸಂಪರ್ಕ ವಿಷಯದಲ್ಲಿ ಒಂದು ಒಪ್ಪಂದಕ್ಕೆ ಬರಲಾಗುವುದು – ಎನ್ನುವುದು ನಿಜಾಮನ ಅಭಿಪ್ರಾಯವಾಗಿತ್ತು. ಆದರೆ, 'ಹೈದರಾಬಾದ್ ಭಾರತವನ್ನು ಸೇರುವ ವಿಷಯದಲ್ಲಿ' ಜನಮತವನ್ನು ಪಡೆಯಲೇಬೇಕು – ಎನ್ನುವುದು ಸರ್ದಾರರ ಅಭಿಪ್ರಾಯ. ಆದರೆ ಪಾಕಿಸ್ತಾನದಿಂದ ಪ್ರಚೋದಿತನಾದ ನಿಜಾಮನು ಅದಕ್ಕೆ ಒಪ್ಪುತ್ತಿರಲಿಲ್ಲ.[೮೯]

ಲಾರ್ಡ್ ಮೌಂಟ್‌ಬ್ಯಾಟನ್‌ರವರ ಸ್ನೇಹಿತ ಸರ್ ವಾಲ್ಟರ್ ಮಾಂಕ್ಟನ್

ನಿಜಾಮನಿಗೆ ಸಂವಿಧಾನ ಸಲಹೆಗಾರನಾಗಿದ್ದನು. ಅವನನ್ನು ಮೌಂಟ್‌ಬ್ಯಾಟನ್ ರವರೇ ನಿಜಾಮನಿಗೆ ಶಿಫಾರಸ್ಸು ಮಾಡಿದ್ದರು. ಮಾಂಕ್ಟನ್ ಒಂದು ಒಪ್ಪಂದವನ್ನು ಸಿದ್ಧಪಡಿಸಿದನು. ನಿಜಾಮರು ಅದಕ್ಕೆ ಸಹಿ ಮಾಡಿದರು. ಆದರೆ ಅದನ್ನು ವಿರೋಧಿಸಲು ಇತೆಹಡ್‌ಗೆ ಅವನೇ ಪ್ರಚೋದಿಸಿದನು. ಆಗಸ್ಟ್ ೨೭ರಂದು ಹೈದರಾಬಾದ್ ನಿಯೋಗವು ನಿಜಾಮರ ಸಹಿ ಹಾಕಿದ ಒಪ್ಪಂದದೊಡನೆ ದೆಹಲಿಗೆ ಹೊರಡಬೇಕಾಗಿತ್ತು. ಆದರೆ ನಿಯೋಗದ ಸದಸ್ಯರ ಮನೆಗಳನ್ನು ರಜ಼ಾಕರರು ಸುತ್ತುವರೆದು ಅವರು ದೆಹಲಿಗೆ ಹೋಗದಂತೆ ತಡೆದರು. ರಜ್ಜಿಯು ನಿಜಾಮ ತಮ್ಮ ಸಲಹೆಗಾರರನ್ನು ಬದಲಾಯಿಸಿದರೆ ಭಾರತದಿಂದ ಉತ್ತಮವಾದ ನಿಬಂಧನೆಗಳನ್ನು ಪಡೆಯಬಹುದೆಂದು ಒತ್ತಾಯಿಸಿದನು. ಆ ವೇಳೆಗೆ ಕಾಶ್ಮೀರದ ಮೇಲೆ ಪಾಕಿಸ್ತಾನದ ಬುಡಕಟ್ಟಿನ ಜನ ಎಂದು ಹೇಳಲ್ಪಟ್ಟವರು ಆಕ್ರಮಣ ಮಾಡಿದ್ದರು. ಭಾರತ ಅದರಿಂದ ದುರ್ಬಲವಾಗಿರುತ್ತದೆ ಮತ್ತು ಹೈದರಾಬಾದ್‌ನ ಶರತ್ತುಗಳಿಗೆ ಒಪ್ಪುತ್ತದೆ ಅನ್ನುವುದು, ರಜ್ಜಿಯ ಸಲಹೆಯಾಗಿತ್ತು. ಅವನ ಒತ್ತಡಕ್ಕೆ ಮಣಿದು ನಿಜಾಮನು ನಿಯೋಗದ ಸದಸ್ಯರನ್ನು ಬದಲಾಯಿಸಿ ರಜ್ಜಿಯನ್ನು ಮತ್ತು ಅವನ ಕಡೆಯವರಾದ ಮೊಯಿನ್ ನವಾಜ್ ಜಂಗ್, ಅಬ್ದುಲ್ ರಹಿಂ ಮತ್ತು ಪಿಂಗಲ್ ರೆಡ್ಡಿಯನ್ನು ನಿಯೋಗದಲ್ಲಿ ಸೇರಿಸಿದನು. ಹಾಗೆಯೆ ಚಾತ್ರಿ ನವಾಬನ ಸ್ಥಾನದಲ್ಲಿ ಲಾಯ್ಕ್ ಆಲಿ ಖಾನ್‌ನನ್ನು ಪ್ರಧಾನಮಂತ್ರಿ ಮಾಡಿದನು.[೯೦]

ಸೈಯದ್ ಖಾಸಿಂ ರಜ್ಜಿ ರಜ಼ಾಕರರ ನಾಯಕ. ಅವನು ಇಸ್ಲಾಮಿಕ್ ಮಜ್ಲಿಸ್ – ಇ – ಇತೆಹಡ್ ಅಥವಾ ಸಂಕ್ಷಿಪ್ತವಾಗಿ ಇತೆಹಡ್‌ನ ಅಧ್ಯಕ್ಷ (೧೯೪೬ – ೪೮) ಅವನೊಬ್ಬ ಉಗ್ರ ಮುಸ್ಲಿಂ. ಇತೆಹಡ್, ನಿಜಾಮನ ಆಡಳಿತವನ್ನು ಬೆಂಬಲಿಸುವ ಒಂದು ಖಾಸಗಿ ಮುಸ್ಲಿಂ ಸಂಸ್ಥೆ. ರಜ಼ಾಕರರು ಅದರ ಮಿಲಿಟರಿ ಅಂಗ. ನಿಜಾಮನು ಖಾಸಿಂ ರಜ್ಜಿ ಮತ್ತು ರಜ಼ಾಕರರ ಕೈಗೊಂಬೆಯಾಗಿದ್ದನು. ರಜ಼ಾಕರರು ಈ ಕಾಲದ ರಕ್ಕಸರು. ಅವರು ಸಾವಿರಾರು ಮಂದಿ ಹಿಂದೂಗಳ ಹತ್ಯೆ ಮಾಡಿದ್ದರು. ಹಿಂದೂಗಳ ಹತ್ಯೆ, ಮತಾಂತರ, ಮಹಿಳೆಯರ ಮಾನಭಂಗ, ಲೂಟಿಯ ಮೂಲಕ ಮತ್ತು ಭಾರತದ ವಿವಿಧ ಭಾಗಗಳಿಂದ ಮುಸ್ಲಿಮರು ಹೈದರಾಬಾದ್‌ಗೆ ಬಂದು ನೆಲೆಸುವಂತೆ ಮಾಡುವುದರ ಮೂಲಕ ಮುಸ್ಲಿಮರ ಸಂಖ್ಯೆಯನ್ನು ಹೆಚ್ಚಿಸುವುದು ಮತ್ತು ಹೈದರಾಬಾದನ್ನು ಪಾಕಿಸ್ತಾನಕ್ಕೆ ಸೇರಿಸುವುದು ಅವರ ಗುರಿಯಾಗಿತ್ತು. ನಿಜಾಮನು ಅವರ ದುಷ್ಟ ಕೃತ್ಯಗಳಿಗೆ ಪೂರ್ಣ ಸ್ವಾತಂತ್ರ್ಯ ಹಾಗೂ ಸಹಾಯ ನೀಡುತ್ತಿದ್ದನು.

ರಜ್ಜಿಯು ದೆಹಲಿಯಲ್ಲಿ ಸರ್ದಾರರನ್ನು ಭೇಟಿ ಮಾಡಿದಾಗ ಪ್ರಶ್ನಿಸಿದನು:

"ನೀವೇಕೆ ಹೈದರಾಬಾದ್ ಸ್ವತಂತ್ರವಾಗಿರಲು ಬಿಡುತ್ತಿಲ್ಲ?"

"ನಾನು ನನ್ನ ಮಿತಿಗಿಂತ ಮುಂದೆ ಹೋಗಿದ್ದೇನೆ. ಬೇರೆ ರಾಜ್ಯಗಳಿಗೆ ನಾನು ಒಪ್ಪದ್ದನ್ನು ಹೈದರಾಬಾದ್‌ಗೆ ಒಪ್ಪಿದ್ದೇನೆ," ಪಟೇಲರ ಉತ್ತರ.

"ನೀವು ಹೈದರಾಬಾದ್‌ನ ಕಷ್ಟಗಳನ್ನು ಅರ್ಥಮಾಡಿ ಕೊಳ್ಳಬೇಕೆಂದು ನಾನು ಬಯಸುತ್ತೇನೆ"

"ನೀವು ಪಾಕಿಸ್ತಾನದೊಡನೆ ಏನಾದರೂ ಒಪ್ಪಂದ ಮಾಡಿಕೊಂಡಿದ್ದರ ಹೊರತು, ಯಾವ ಕಷ್ಟವೂ ನನಗೆ ಕಾಣುತ್ತಿಲ್ಲ."

"ನೀವು ನಮ್ಮ ಕಷ್ಟಗಳನ್ನು ನೋಡದೆ ಹೋದರೆ, ನಾವು ಬಗ್ಗುವುದಿಲ್ಲ. ನಾವು ಹೈದರಾಬಾದ್‌ಗಾಗಿ ಕೊನೆಯವರೆಗೂ ಹೋರಾಡಿ ಸಾಯುತ್ತೇವೆ."

"ನೀವು ಆತ್ಮಹತ್ಯೆ ಮಾಡಿಕೊಳ್ಳಲು ಬಯಸಿದರೆ ನಾನು ನಿಮ್ಮನ್ನು ತಡೆಯುವುದು ಹೇಗೆ? ತೀರ ತಡವಾಗುವುದಕ್ಕೆ ಮುನ್ನ ಸೂರ್ಯನನ್ನು ನೋಡಿ ಎಂದು ನಾನು ಸಲಹೆ ನೀಡುತ್ತೇನೆ. ಇನ್ನೂ ಬೆಳಕಿರುವಾಗಲೇ ಕತ್ತಲೆಗೆ ದುಮುಕಬೇಡಿ."

ಅಲ್ಲಿಗೆ ಸಂದರ್ಶನ ಮುಗಿಯಿತು.

ರಜ್ಜಿಯು ಹೈದರಾಬಾದ್‌ಗೆ ಹಿಂತಿರುಗಿದ ಮೇಲೆ ರಜ಼ಾಕರರ ಒಂದು ಸಭೆಯಲ್ಲಿ ಸರದಾರರ ಒಡನೆಯ ತನ್ನ ಸಂಭಾಷಣೆಯನ್ನು ವಿವರಿಸಿ ಹೇಳಿದನು, "ನಾನು ಸರ್ದಾರ್ ಪಟೇಲರನ್ನು ಭೇಟಿ ಮಾಡಿದೆ. ಸರ್ದಾರರೇ ಕಾಂಗ್ರೆಸ್ಸು – ಎಂದು ನಾನು ಹೇಳಿದರೆ ತಪ್ಪಲ್ಲ."[೯೧]

ಇಷ್ಟೆಲ್ಲ ಆರ್ಭಟ ತೋರಿಸಿಯೂ ೧೯೪೭ರ ನವೆಂಬರ್ ೨೯ರಂದು ನಿಜಾಮನು ಸ್ಥಾಯಿ ಒಪ್ಪಂದಕ್ಕೆ ಸಹಿ ಹಾಕಿದನು. ನೆಹರು ಮತ್ತು ಮೌಂಟ್‌ಬ್ಯಾಟನ್‌ರವರು ನಿಜಾಮನು ಭಾರತದ ಸಮೀಪಕ್ಕೆ ಬರುತ್ತಿದ್ದಾನೆ ಎಂದು ಭಾವಿಸಿದರು. ಆದರೆ ಪಟೇಲರು ಹಾಗೆ ಭಾವಿಸಲಿಲ್ಲ. ವಾಸ್ತವವಾಗಿ ನಿಜಾಮನು ಸದ್ಭಾವನೆಯಿಂದ ಸ್ಥಾಯಿ ಒಪ್ಪಂದಕ್ಕೆ ಸಹಿ ಹಾಕಿರಲಿಲ್ಲ. ಭಾರತದ ವಿರುದ್ಧವಾಗಿ ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಲು ಕಾಲಾವಕಾಶ ಪಡೆಯಲು ಹಾಗೆ ಮಾಡಿದ್ದನು. ಆದಾಗ್ಯೂ ಅದು, ಭಾರತವು ಹೈದರಾಬಾದ್‌ನಲ್ಲಿ ಒಬ್ಬ ಏಜೆಂಟ್ ಜೆನೆರಲ್‌ನನ್ನು

ನಿಯಮಿಸಲು ಅನುಕೂಲ ಮಾಡಿತು. ಸರ್ದಾರರು ಪ್ರಮುಖ ವಕೀಲ ಮತ್ತು ರಾಜಕಾರಣಿ ಕೆ.ಎಂ. ಮುನ್ಷಿಯವರನ್ನು ಏಜೆಂಟ್ ಜೆನೆರಲ್ ಆಗಿ ನಿಯಮಿಸಿದರು. ಕೆ.ಎಂ. ಮುನ್ಷಿಯವರು ಹೈದರಾಬಾದ್‌ಗೆ ಹೋಗಿ ಅಧಿಕಾರ ವಹಿಸಿಕೊಂಡರು. ಸ್ಥಾಯಿ ಒಪ್ಪಂದದ ಸಹಿ ಆದ ಮೇಲೆ ರಜ಼ಾಕರರ ಹಾವಳಿ ಇನ್ನೂ ಹೆಚ್ಚಾಯಿತು. ಅವರು ಭಾರತದ ನೆರೆಯ ರಾಜ್ಯಗಳ ಗಡಿಯ ಒಳಗೆ ನುಗ್ಗಿ ಹಳ್ಳಿಗಳ ಮೇಲೆ ದಾಳಿ ಮಾಡಿ ಲೂಟಿ, ಬೆಂಕಿ ಹಚ್ಚುವುದು, ಹತ್ಯೆ ಮುಂತಾದ ದುಷ್ಟ ಕೃತ್ಯಗಳನ್ನು ಎಸಗುತ್ತಿದ್ದರು. ಅವರ ಜೊತೆಗೆ ಕಮ್ಯುನಿಸ್ಟರು ಕೈ ಜೋಡಿಸಿದ್ದರು.

೧೯೪೮ರ ಜನವರಿ ತಿಂಗಳ ಅಂತ್ಯಭಾಗದಲ್ಲಿ ದೆಹಲಿಯಲ್ಲಿ ಪಟೇಲರು ಲಾಯ್ಕ್ ಆಲಿಗೆ 'ಹೈದರಾಬಾದ್ ಭಾರತಕ್ಕೆ ಸೇರುವ ವಿಷಯಕ್ಕಿಂತ ಹೈದರಾಬಾದ್‌ನ ಒಳಗೆ ಪರಿಸ್ಥಿತಿಯನ್ನು ಸುಧಾರಿಸುವುದು ನನಗೆ ಮುಖ್ಯ' ಎಂದು ಹೇಳಿದರು. 'ಹೈದರಾಬಾದ್‌ನಲ್ಲಿ ಹಿಂದೂಗಳಿಗೆ ರಕ್ಷಣೆ ಇಲ್ಲ. ಪ್ರಜಾಮಂಡಲದ ಸದಸ್ಯರೂ ಸೇರಿ ಬಹಳ ಮಂದಿ ಸೆರೆಮನೆಯಲ್ಲಿ ಇದ್ದಾರೆ,' ಎಂದು ಹೇಳಿ ಪಟೇಲರು ಆಲಿಗೆ, 'ಭಾರತಕ್ಕೆ ಸೇರಿ, ಇಲ್ಲ ಪ್ರಜಾಪ್ರಭುತ್ವ ಸರ್ಕಾರವನ್ನು ರಚಿಸಿ' ಎಂದರು. ಆದರೆ ನಿಜಾಮನಿಗೆ ಪ್ರಜಾಪ್ರಭುತ್ವವು ಭಾರತಕ್ಕೆ ಸೇರ್ಪಡೆಯಷ್ಟೇ ಕಹಿ ವಿಷಯವಾಗಿತ್ತು.

ಮದರಾಸು, ಬೊಂಬಾಯಿ ಮತ್ತು ಮಧ್ಯಪ್ರದೇಶದ ಮುಖ್ಯ ಮಂತ್ರಿಗಳು ೧೯೪೮ರ ಫ಼ೆಬ್ರುವರಿ ೨೧ರಂದು ದೆಹಲಿಯಲ್ಲಿ ಸರ್ದಾರರನ್ನು ಭೇಟಿ ಮಾಡಿ ಗಡಿ ಭಾಗದಲ್ಲಿ ಸೈನ್ಯದ ರಕ್ಷಣೆಯನ್ನು ಒದಗಿಸಬೇಕೆಂದು ಕೋರಿದರು.[೯೨]

ರಜ಼ಾಕರರು ಮತ್ತು ಕಮ್ಯುನಿಸ್ಟರು ಕಾನೂನನ್ನು ತಮ್ಮ ಕೈಗೆ ಎತ್ತಿಕೊಂಡಿದ್ದರು. ಪ್ರಾರಂಭದಲ್ಲಿ ಅವರಿಗೆ ಪ್ರೋತ್ಸಾಹ ನೀಡಿದ ನಿಜಾಮನು ಈಗ ಅವರನ್ನು ಹತೋಟಿಯಲ್ಲಿ ಇಡಲು ವಿಫಲನಾಗಿದ್ದನು. ರಜ಼ಾಕರರು ಭಾರತದ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಆಯುಧಗಳನ್ನು ಜಲಪಿಸುತ್ತಾ ರಸ್ತೆಗಳಲ್ಲಿ ತಿರುಗುತ್ತಿದ್ದರು, ಹಿಂದೂಗಳನ್ನು ಭಯಭೀತರನ್ನಾಗಿ ಮಾಡುತ್ತಿದ್ದರು. ಅವರು ಭಾರತದ ಪರವಾಗಿದ್ದ ಮುಸ್ಲಿಮರನ್ನೂ ಹತ್ಯೆ ಮಾಡುತ್ತಿದ್ದರು. ನಿಜಾಮನು ಶಸ್ತ್ರಾಸ್ತ್ರಗಳನ್ನು ರಹಸ್ಯವಾಗಿ ಸಂಗ್ರಹಿಸುತ್ತಿದ್ದನು. ಸಿಡ್ನಿ ಕಾಟನ್ ಎನ್ನುವ ಒಬ್ಬ ಆಸ್ಟ್ರೇಲಿಯದ ಪ್ರಜೆ ಕರಾಚಿ ಮೂಲಕ ವಿಮಾನದಲ್ಲಿ ಅವನ್ನು ನಿಜಾಮನಿಗೆ ಪೂರೈಸುತ್ತಿದ್ದನು. ಆ ಶಸ್ತ್ರಗಳು ರಜ಼ಾಕರರಿಗೆ ತಲುಪುತ್ತಿದ್ದುವು.

ಈ ಮಧ್ಯೆ ಸ್ಥಾಯಿ ಒಪ್ಪಂದವನ್ನು ಉಲ್ಲಂಘಿಸಿ ನಿಜಾಮನು ಎರಡು ಸುಗ್ರೀವಾಜ್ಞೆಗಳನ್ನು ಹೊರಡಿಸಿ ಹೈದರಾಬಾದ್‌ನಿಂದ ಅಮೂಲ್ಯ ರತ್ನಗಳ ರಫ಼್ತನ್ನು

ತಡೆಗಟ್ಟಿದನು ಮತ್ತು ಭಾರತದ ಹಣದ ಚಲಾವಣೆಯನ್ನು ಹೈದರಾಬಾದ್ ಪ್ರಾಂತ್ಯದಲ್ಲಿ ನಿಷೇಧಿಸಿದನು. ಭಾರತದ ರಾಜ್ಯ ಇಲಾಖೆಯ ಕಾರ್ಯದರ್ಶಿ ವಿ.ಪಿ. ಮೆನನ್ ಮಾರ್ಚ್ ೨೬ರಂದು ನಿಜಾಮನ ಸರ್ಕಾರಕ್ಕೆ ಪತ್ರ ಬರೆದು ನಿಜಾಮನ ಸರ್ಕಾರವು ಸ್ಥಾಯಿ ಒಪ್ಪಂದದಲ್ಲಿ ಮಾಡಿರುವ ಉಲ್ಲಂಘನೆಗಳನ್ನು ವಿವರವಾಗಿ ಗಮನಕ್ಕೆ ತಂದರು. ಇದರಿಂದ ಕುಪಿತನಾದ ಹೈದರಾಬಾದ್‌ನ ಪ್ರಧಾನಮಂತ್ರಿಯು "ನಿಜಾಮನು ಹುತಾತ್ಮನಂತೆ ಸಾಯಲು ಸಿದ್ಧವಿದ್ದಾನೆ ಮತ್ತು ಅವನಿಗಾಗಿ ಸಾಯಲು ೨ ಲಕ್ಷ ಮುಸ್ಲಿಮರು ಸಿದ್ಧವಿದ್ದಾರೆ" ಎಂದನು.[೬೩]

ರಜ಼ಾಕರರು ಇನ್ನೂ ಉಗ್ರರಾದರು. ಮಾರ್ಚ್ ೩೧ರಂದು ರಜ್ಜಿಯು 'ಆಯುಧಗಳ ಸಪ್ತಾಹ'ವನ್ನು ಉದ್ಘಾಟಿಸುತ್ತಾ ಗುಡುಗಿದನು:

> ಹೈದರಾಬಾದ್ ಒಂದು ಇಸ್ಲಾಮಿ ರಾಜ್ಯ..... ಭಾರತ ಒಕ್ಕೂಟವು ನಮ್ಮ ಮೇಲೆ ಆಕ್ರಮಣ ಮಾಡಿದ ತಕ್ಷಣ ಇಂಡಿಯಾದ ನಾಲ್ಕುವರೆ ಕೋಟಿ ಮುಸ್ಲಿಮರು ದಂಗೆಯ ಬಾವುಟವನ್ನು ಹಾರಿಸುತ್ತಾರೆ.....
>
> ಪ್ರತಿ ಮುಸ್ಲಿಮನು ಒಬ್ಬ ಯೋಧ. ಅವನು ಪ್ರಥಮ ದರ್ಜೆಯ ಹೋರಾಟಗಾರ. ಈ ದಿನ ಇಂಡಿಯಾ ಸ್ವತಂತ್ರವಾಗಿದ್ದರೆ ಅದು ಮುಸ್ಲಿಮರ ಕತ್ತಿ ಮತ್ತು ಬಂದೂಕದ ಫಲ ಅನ್ನುವುದನ್ನು ನೆನಪಿಡಿ..... ನಿಮ್ಮ ಗುರಿಯನ್ನು ಸಾಧಿಸುವವರೆಗೆ ನಿಮ್ಮ ಕತ್ತಿಗಳನ್ನು ಒರೆಗೆ ಹಿಂತಿರುಗಿಸಬೇಡಿ. ನೀವು ನಿಮ್ಮ ಗುರಿಯನ್ನು ತಲುಪುವವರೆಗೆ ನಿಲ್ಲದಿರಿ. (ಡೆಲ್ಲಿ ಚಲೋ..... ಕೂಗು)
>
> ನಾವು ಅಲ್ಲಾಹನನ್ನು ನಂಬಿದ್ದೇವೆ. ಈ ಇಸ್ಲಾಮಿ ರಾಜ್ಯವನ್ನು ಸೃಷ್ಟಿಸಿರುವ ಮತ್ತು ನಮ್ಮನ್ನು ಎಂದೂ ಕೈ ಬಿಡದಿರುವ ಅಲ್ಲ ಬಿಟ್ಟು ಬೇರೆ ಯಾವ ಸ್ನೇಹಿತನೂ ನಮಗಿಲ್ಲ. ಒಂದು ಕೈಯಲ್ಲಿ ಕುರಾನ್, ಮತ್ತೊಂದು ಕೈಯಲ್ಲಿ ಕತ್ತಿ ಹಿಡಿದು ಮುಂದೆ ನುಗ್ಗೋಣ, ನಮ್ಮ ಶತ್ರುಗಳನ್ನು ತುಂಡು ತುಂಡಾಗಿ ಕತ್ತರಿಸೋಣ ಮತ್ತು ನಮ್ಮ ಇಸ್ಲಾಮಿ ಪರಮಾಧಿಕಾರವನ್ನು ಸ್ಥಾಪಿಸೋಣ.....
>
> ಒಬ್ಬ ಹಿಂದು ಶಿಲೆ ಮತ್ತು ಮಂಗಗಳನ್ನು ಪೂಜಿಸುವ ಕಾಫ಼ಿರ (ನಗು). ಅವನು ಧರ್ಮದ ಹೆಸರಿನಲ್ಲಿ ಹಸುವಿನ ಗಂಜಲ ಕುಡಿಯುತ್ತಾನೆ ಮತ್ತು ಹಸುವಿನ ಸಗಣಿ ತಿನ್ನುತ್ತಾನೆ (ಮತ್ತಷ್ಟು

ನಗು). ಅವನೊಬ್ಬ ಅನಾಗರಿಕ ಮತ್ತು ನಮ್ಮನ್ನು ಆಳಲು ಬಯಸುತ್ತಾನೆ! ಎಂತಹ ಆಸೆ ಮತ್ತು ಎಂತಹ ಹಗಲುಗನಸು..... ಅವರಿಗೆ ಒಂದೇ ಉತ್ತರ ಅಂದರೆ ಹಿರಿದ ಕತ್ತಿ![೯೪]

ರಜ್ಜಿಯ ಈ ಭಾಷಣ ಪತ್ರಿಕೆಗಳಲ್ಲಿ ಬಂದಾಗ ಮಾಂಕ್ಟನ್ ದೆಹಲಿಯಲ್ಲಿದ್ದನು. ಭಾರತ ಸರ್ಕಾರ ಅವನನ್ನು ತರಾಟೆಗೆ ತೆಗೆದುಕೊಂಡಾಗ, ಅವನು ರಜ್ಜಿಯನ್ನು ದಸ್ತಗಿರಿ ಮಾಡಲು ನಿಜಾಮರಿಗೆ ಸಲಹೆ ನೀಡುತ್ತೇನೆ ಎಂದನು. ಅವನು ವಾಪಸ್ಸು ಹೋದಮೇಲೆ, ರಜ್ಜಿ ಆ ಭಾಷಣವನ್ನು ಮಾಡೇ ಇಲ್ಲವೆಂದು ಟೆಲಿಗ್ರಾಂ ಮೂಲಕ ಏಪ್ರಿಲ್ ೧೧ರಂದು ತಿಳಿಸಿದನು.

ಮಾರನೆಯ ದಿನ 'ಬಂಗಾಳ ಕೊಲ್ಲಿಯ ಅಲೆಗಳು ನಮ್ಮ ಅರಸನ ಪಾದಗಳನ್ನು ತೊಳೆಯುವ ಕಾಲ ದೂರವಿಲ್ಲ,' ಎಂಬ ರಜ್ಜಿಯ ಮತ್ತೊಂದು ಹೇಳಿಕೆ ಪತ್ರಿಕೆಗಳಲ್ಲಿ ಪ್ರಕಟವಾಯಿತು.

ಏಪ್ರಿಲ್ ೧೫ರಂದು ಲಾಯ್ಕ್ ಆಲಿ ದೆಹಲಿಗೆ ಬಂದನು. ಸರ್ದಾರರಿಗೆ ಹೃದಯಾಘಾತವಾಗಿ ಸುಧಾರಿಸಿಕೊಳ್ಳುತ್ತಿದರೂ ಲಾಯ್ಕ್ ಆಲಿಯನ್ನು ಕರೆಸಿ ಹೇಳಿದರು: "ಹೈದರಾಬಾದ್‌ನಲ್ಲಿ ಅಧಿಕಾರ ಯಾರ ಕೈಲಿ ಇದೆ ಎನ್ನುವುದು ನಿಮಗೂ ಗೊತ್ತು ನನಗೂ ಗೊತ್ತು. ಹೈದರಾಬದ್‌ನಲ್ಲಿ ಪ್ರಭಾವಿಯಾಗಿರುವ ವ್ಯಕ್ತಿಯು, 'ಇಂಡಿಯನ್ ಡೊಮಿನಿಯನ್ ಹೈದರಾಬಾದ್‌ಗೆ ಬಂದರೆ, ಅದು ಒಂದೂವರೆ ಕೋಟಿ ಹಿಂದೂಗಳ ಬೂದಿ ಮತ್ತು ಮೂಳೆಗಳನ್ನಲ್ಲದೆ ಬೇರೇನನ್ನೂ ನೋಡುವುದಿಲ್ಲ' ಎಂದು ಹೇಳಿರುವುದು ನಿಖರವಾಗಿ ನನಗೆ ಗೊತ್ತಿದೆ. ಪರಿಸ್ಥಿತಿಯು ಹೀಗಾದರೆ, ಅದು ನಿಜಾಮ ಮತ್ತು ಅವನ ವಂಶದ ಭವಿಷ್ಯವನ್ನು ತೀವ್ರವಾಗಿ ದುರ್ಬಲಗೊಳಿಸುತ್ತದೆ" ಎಂದರು.

ನಂತರ, 'ನಮ್ಮ ರಕ್ತ ಮತ್ತು ಶ್ರಮದಿಂದ ನಾವು ನಿರ್ಮಿಸಿರುವ ಒಕ್ಕೂಟವನ್ನು ನಾಶ ಪಡಿಸುವ ಒಂದು ಪ್ರತ್ಯೇಕ ತಾಣವನ್ನು ಭಾರತವು ಸಹಿಸುವುದಿಲ್ಲ. ನೀವು ವಾಪಸ್ಸು ಹೋಗಿ, ನಿಜಾಮರೊಡನೆ ಸಮಾಲೋಚಿಸಿ ಒಂದು ಅಂತಿಮ ತೀರ್ಮಾನಕ್ಕೆ ಬನ್ನಿ. ಆಗ ಇಬ್ಬರಿಗೂ ಅರಿವಾಗುತ್ತದೆ ಅವರವರ ನಿಲವು ಏನೆಂಬುದು." ಸರ್ದಾರರ ಸ್ಪಷ್ಟ ಮಾತುಗಳಿಂದ ಆಲಿ ಆಘಾತಗೊಂಡನು. ಮೌಂಟ್‌ಬ್ಯಾಟನ್ ಮತ್ತು ನೆಹರುರವರ ಮಾತು ಹೀಗಿರಲಿಲ್ಲ. ಸರ್ದಾರರಿಗೆ ಅವನು ಏನೂ ಉತ್ತರ ಕೊಡಲಾರದಾದನು.

ಕೊನೆಗೆ, ನಿಜಾಮನು ಕೊನೆಯ ಪಕ್ಷ ನಾಲ್ಕು ಕೆಲಸಗಳನ್ನು ವರ್ಷದ

ಅಂತ್ಯದೊಳಗೆ ಮಾಡಲೇಬೇಕು ಎಂದು ಲಾಯ್ಕ್ ಆಲಿ ಮತ್ತು ಮಾಂಕ್ಟನ್‌ಗೆ ತಿಳಿಸಲಾಯಿತು. ರಜ಼ಾಕರರನ್ನು ಹತೋಟಿಯಲ್ಲಿಟ್ಟುಕೊಳ್ಳುವುದು, ಪ್ರಜಾ ಮಂಡಲದ ನಾಯಕರನ್ನು ಬಿಡುಗಡೆ ಮಾಡುವುದು, ಸರ್ಕಾರದೊಳಕ್ಕೆ ಹೆಚ್ಚು ಹಿಂದೂಗಳನ್ನು ಸೇರಿಸಿಕೊಳ್ಳುವುದು ಮತ್ತು ಸಂವಿಧಾನ ರಚನಾ ಸಭೆಯನ್ನು ರಚಿಸುವುದು, ಆ ನಾಲ್ಕು ಕೆಲಸಗಳು.

ಆದರೆ ನಿಜಾಮನು ಅದಾವುದನ್ನೂ ಮಾಡಲಿಲ್ಲ.[೯೫]

ರಜ಼ಾಕರರು ಧಾರ್ಮಿಕ ಸಮರಗಾರರಂತೆ ವರ್ತಿಸತೊಡಗಿದರು. ಜೂನ್‌ನಲ್ಲಿ ೩೦,೦೦೦ವಿದ್ದ ಅವರ ಸಂಖ್ಯೆ ಜುಲೈನಲ್ಲಿ ಒಂದು ಲಕ್ಷಕ್ಕೆ, ಆನಂತರ ಎರಡು ಲಕ್ಷ ಏರಿತು. ಅವರ ಸಂಸ್ಥೆ ದ್ವೇಷದ ಆಧಾರದ ಮೇಲೆ ನಿರ್ಮಾಣವಾಗಿ ಹಿಂದೂಗಳಿಗೆ ಮಾರಕವಾಗಿತ್ತು.

ಜೂನ್ ೩ರಂದು ವಾಲ್ಟರ್ ಮಾಂಕ್ಟನ್ ಮತ್ತೆ ಮಾತುಕತೆಗೆ ದೆಹಲಿಗೆ ಬಂದನು. ಮಾತುಕತೆಯನ್ನು ಸ್ಥಗಿತಗೊಳಿಸುವುದು ಸರ್ದಾರರ ಪ್ರಥಮ ಪ್ರತಿಕ್ರಿಯೆಯಾಗಿತ್ತು. ಮಾತುಕತೆಯಿಂದ ಏನೂ ಪ್ರಯೋಜನವಿಲ್ಲ – ಅನ್ನುವ ತೀರ್ಮಾನಕ್ಕೆ ಅವರು ಬಂದಿದ್ದರು. ಆದರೆ ಮೌಂಟ್‌ಬ್ಯಾಟನ್ ಇನ್ನೂ ಭರವಸೆ ಇಟ್ಟುಕೊಂಡಿದ್ದರು. ಒಂದು ಕರಡು ಒಪ್ಪಂದವನ್ನು ನಿಯೋಗವು ತಯಾರಿಸಿತು. ಆದರೆ ೯ ದಿನಗಳ ನಂತರ ನಿಜಾಮನು ಅದನ್ನು ಬದಲಾಯಿಸಿದನು. ಅದನ್ನೂ ಸರ್ದಾರರು ಒಪ್ಪಿದರು. ನಿಜಾಮನು ಮತ್ತೆ ಮಾತು ಬದಲಾಯಿಸಿದನು. ಅವನಿಗೆ ಒಂದು ಶಾಶ್ವತ ಪರಿಹಾರ ಬೇಕಿರಲಿಲ್ಲ. ಜೂನ್ ೨೧ರಂದು ಲಾರ್ಡ್ ಮೌಂಟ್‌ಬ್ಯಾಟನ್ ತಮ್ಮ ಪದವಿಗೆ ವಿದಾಯ ಹೇಳಿ ಇಂಗ್ಲೆಂಡಿಗೆ ಹೊರಟರು. ಅವರು ತಮ್ಮ ಅಧಿಕಾರದ ಅವಧಿಯಲ್ಲೇ ಹೈದರಾಬಾದ್ ಸಮಸ್ಯೆ ಪರಿಹರಿಸಿ ಪೂರ್ಣ ಯಶಸ್ಸಿನೊಡನೆ ಹಿಂತಿರುಗಬೇಕೆಂದಿದ್ದರು. ಆದರೆ ಅದು ಆಗಲಿಲ್ಲ. ಹೊರಡುವ ಮುನ್ನ ಅವರು ಕೆ.ಎಂ. ಮುನ್ಷಿಗೆ ಹೇಳಿದರು, "ಮುನ್ಷಿ, ಜೀವನದಲ್ಲಿ ನಾನು ಅನೇಕ ಆಘಾತಗಳನ್ನು ಅನುಭವಿಸಿದ್ದೇನೆ. ಆದರೆ ಹೈದರಾಬಾದ್‌ನ ಜನ ಕೊಟ್ಟಂತಹ ಆಘಾತವನ್ನು ನಾನು ಎಂದೂ ಪಡೆದಿರಲಿಲ್ಲ."[೯೬]

ಮೌಂಟ್‌ಬ್ಯಾಟನ್ ತೆರಳಿದ ನಂತರ ಸರ್ದಾರರು ಹೈದರಾಬಾದ್ ಸಮಸ್ಯೆಯನ್ನು ಸಂಪೂರ್ಣವಾಗಿ ತಾವೇ ವಹಿಸಿಕೊಂಡರು.

ಸರ್ದಾರರು ಹೃದಯಾಘಾತದ ನಂತರ ಡೆಹರಡೂನ್‌ನಲ್ಲಿ ವಿಶ್ರಾಂತಿ ಪಡೆಯುತ್ತಿದ್ದರೂ ಹೈದರಾಬಾದ್‌ನ ಆಗುಹೋಗುಗಳನ್ನು ಗಮನಿಸುತ್ತಿದ್ದರು.

ಅಲ್ಲಿಂದಲೇ ಅವರು ಮೇ ತಿಂಗಳ ಮಧ್ಯಭಾಗದಲ್ಲಿ ಮಿಲಿಟರಿ ಕಾರ್ಯಾಚರಣೆಗೆ ಸಿದ್ಧತೆ ಮಾಡಿಕೊಳ್ಳುವಂತೆ ಸಚಿವ ಸಂಪುಟವನ್ನು ಒತ್ತಾಯಿಸಿದರು. ಸೈನ್ಯವನ್ನು ಹೈದರಾಬಾದ್‌ಗೆ ಕಳುಹಿಸಿದರೆ, ಕಾಶ್ಮೀರದ ಕಾರ್ಯಾಚರಣೆಗೆ ತೊಂದರೆಯಾಗುತ್ತದೆ ಎಂದರು ನೆಹರು. ಭೂ ಸೈನ್ಯ, ನೌಕಾದಳ ಮತ್ತು ವಾಯುದಳದ ಮುಖ್ಯಸ್ಥರು 'ಅದು ಕಷ್ಟಕರವಾದ ಸೈನಿಕ ಜೂಜು' ಎಂದರು ಆ ಮೂವರೂ ಆಂಗ್ಲರು. ಭಾರತದ ಹಿರಿಯ ಅಧಿಕಾರಿಗಳು, 'ಹೈದರಾಬಾದ್ ಮೇಲಿನ ಕಾರ್ಯಾಚರಣೆಗೆ ಮಾನ್‌ಸೂನ್ ಮುಗಿಯುವವರೆಗೆ ಕಾಯಬೇಕು" ಎಂದರು. ರಕ್ಷಣಾ ಮುಖ್ಯಸ್ಥರು, 'ಹೈದರಾಬಾದ್‌ಗೆ ಸೈನ್ಯವನ್ನು ಕಳುಹಿಸಿದರೆ ಆಂತರಿಕ ರಕ್ಷಣಾ ಕಾರ್ಯಕ್ಕೆ ಸೈನಿಕರ ಕೊರತೆ ಉಂಟಾಗುತ್ತದೆ' ಅನ್ನುವ ಭಯವನ್ನು ವ್ಯಕ್ತಪಡಿಸಿದರು. ಇದಾವುದಕ್ಕೂ ಪಟೇಲರು ಜಗ್ಗಲಿಲ್ಲ. ವಿ.ಪಿ. ಮೆನನ್ ಮೂಲಕ ಒಂದು ಟಿಪ್ಪಣಿಯನ್ನು ಸಚಿವ ಸಂಪುಟದ ರಕ್ಷಣಾ ಸಮಿತಿಗೆ ಕಳುಹಿಸಿದರು.

ದೇಶದಲ್ಲಿ ಕಾನೂನು ಪಾಲನೆ ಮತ್ತು ಶಿಸ್ತು ನೆಲೆಗೊಳ್ಳುವುದು ಒಂದು ಸೈನ್ಯ ನಡೆಸುವ ಕಾರ್ಯಾಚರಣೆಯಿಂದಲ್ಲ – ಕಳೆದ ಆಗಸ್ಟ್‌ನಲ್ಲಿ ಪಂಜಾಬ್‌ನಲ್ಲಿ ಆದದ್ದನ್ನು ನೋಡಿ: ೫೫,೦೦೦ ಸೈನಿಕರು ಕಗ್ಗೊಲೆಯನ್ನು ನಿಲ್ಲಿಸಲಾಗಲಿಲ್ಲ. ಸೈನ್ಯದ ಬೆಂಬಲದಿಂದ ಕೂಡಿದ ಸರ್ಕಾರದ ಪ್ರತಿಷ್ಠೆಯು ಜನರು ಕಾನೂನು ಮತ್ತು ಸುವ್ಯವಸ್ಥೆಯನ್ನು ಪಾಲಿಸುವಂತೆ ಮಾಡುತ್ತದೆ. ಈಗ ಆ ಪ್ರತಿಷ್ಠೆಯು ಹೈದರಾಬಾದ್ ಮೇಲೆ ಕಾರ್ಯಾಚರಣೆ ಮತ್ತು ಇತರ ಕಡೆ ಸುವ್ಯವಸ್ಥೆಯ ಪಾಲನೆ ಎರಡನ್ನೂ ಏಕಕಾಲದಲ್ಲಿ ಮಾಡುವಷ್ಟು ಹೆಚ್ಚಾಗಿ ಇದೆ. ಆದರೆ ಸರ್ಕಾರವು ಹೈದರಾಬಾದ್‌ನ ವಿರುದ್ಧ ಕಾರ್ಯಾಚರಣೆಯನ್ನು ಇನ್ನೂ ವಿಳಂಬ ಮಾಡಿದರೆ ಅದರ ಪ್ರತಿಷ್ಠೆ ಎಷ್ಟು ಕೆಳಗಿಳಿಯುತ್ತದೆಂದರೆ ಎಷ್ಟು ಸಂಖ್ಯೆಯ ಸೈನ್ಯವೂ ಆಂತರಿಕ ಭದ್ರತೆಗೆ ಸಾಲದಾಗುತ್ತದೆ.

ಪಟೇಲರ ಸಂದೇಶದಿಂದ ಪ್ರಭಾವಿತವಾದ ಸಚಿವ ಸಂಪುಟದ ರಕ್ಷಣಾ ಸಮಿತಿಯು ಸೈನಿಕ ಸಿದ್ಧತೆಯನ್ನು ಆರಂಭಿಸಬೇಕೆಂದು ಮೇ ೧೩ರಂದು ತೀರ್ಮಾನಿಸಿತು. ಆದಾಗ್ಯೂ ಪ್ರಧಾನಿ ನೆಹರುರವರು, "ಹೈದರಾಬಾದ್ ರಾಜ್ಯದೊಳಗೆ ಸಾಮೂಹಿಕ ಹತ್ಯೆಯಂತಹ ಘಟನೆ ನಡೆಯುವವರೆಗೂ ಸೈನಿಕ ಕಾರ್ಯಾಚರಣೆಯ ಆರಂಭಕ್ಕೆ ಆದೇಶ ನೀಡುವುದಿಲ್ಲ, ಅಂತಹ ಘಟನೆಯಿಂದ ಮಾತ್ರ ಭಾರತ ಸರ್ಕಾರದ ಕಾರ್ಯವು ವಿಶ್ವದ ಕಣ್ಣಿಗೆ ನ್ಯಾಯ ಸಮ್ಮತವಾಗಿ ಕಾಣುತ್ತದೆ' ಎಂದರು. ಆದರೆ ಪಟೇಲರಿಗೆ ನಿಜಾಮನ ಇಬ್ಬಗೆಯ ನಡವಳಿಕೆಯೇ ಸೈನ್ಯದ ಕಾರ್ಯಾಚರಣೆಗೆ ಸಾಕಾಗಿತ್ತು. ಸರ್ದಾರರು ಗುಣಮುಖರಾಗಿ ಜುಲೈ ೫ರಂದು ದೆಹಲಿಗೆ

ಹಿಂತಿರುಗಿದರು. ಅವರ ನಿಲುವನ್ನು ಬಲಪಡಿಸುವಂತಹ ಕೆಲವು ಕಾರ್ಯಗಳನ್ನು ನಿಜಾಮನು ಮಾಡಿದನು. ಅವನು ನಿಯಮಿಸಿದ ಬಂದೂಕು ಕಳ್ಳ ಸಾಗಣೆದಾರರು ರಾತ್ರಿಯ ವೇಳೆ ಪಾಕಿಸ್ತಾನದ ವಿಮಾನ ನಿಲ್ದಾಣಗಳಿಂದ ಹೊರಟು ಹೈದರಾಬಾದ್‌ನ ಬೀದರ್ ಮತ್ತು ವಾರಂಗಲ್‌ನಲ್ಲಿ ವಿಮಾನಗಳಲ್ಲಿದ್ದ ಬಂದೂಕು ಮತ್ತು ಮದ್ದುಗಳನ್ನು ಇಳಿಸುತ್ತಿದ್ದರು. ರಜಾಕರರು ಮತ್ತು ಕಮ್ಯುನಿಸ್ಟರು ಒಂದಾಗಿ, ಗಡಿ ಭಾಗದ ಗ್ರಾಮಗಳಲ್ಲಿ ಹಗಲು ರಜಾಕರರು ಮತ್ತು ರಾತ್ರಿಯ ವೇಳೆ ಕಮ್ಯುನಿಸ್ಟರು ಹಾವಳಿ ನಡೆಸುತ್ತಿದ್ದರು. ಅನೇಕ ಹಿಂದೂಗಳು ರಾಜ್ಯದಿಂದ ಪಲಾಯನ ಮಾಡುತ್ತಿದ್ದರು. ಹೈದರಾಬಾದ್ ಮೂಲಕ ಹಾದು ಹೋಗುವ ಭಾರತದ ರೈಲುಗಳ ಮೇಲೆ ಆಕ್ರಮಣವಾದ ವರದಿಗಳು ಮತ್ತು ರಜಾಕರರು ವಿದೇಶಿ ಮಿಷನರಿಗಳ ಮೇಲೆ ಹಲ್ಲೆ ಮಾಡಿದ ಮತ್ತು ಕ್ರೈಸ್ತ ಸನ್ಯಾಸಿನಿಯರ ಮೇಲೆ ಅತ್ಯಾಚಾರ ಮಾಡಿದ ಆಪಾದನೆಗಳೂ ಸಹ ಹೊರಬಂದುವು."

ಅದಕ್ಕೆ ವಿರುದ್ಧವಾಗಿ, ಲಾಯ್ಕ್ ಆಲಿಯು ಭಾರತವು ಆರ್ಥಿಕ ದಿಗ್ಬಂದನ ಉಂಟುಮಾಡಿದೆ ಎಂದೂ, ಭಾರತದ ಸೈನ್ಯ ಹೈದರಾಬಾದ್ ಗಡಿಯನ್ನು ಅತಿಕ್ರಮಿಸುತ್ತಿದೆ ಎಂದು ದೂರಿದನು. ಆಗಸ್ಟ್ ೧೭ರಂದು ನಿಜಾಮನು ವಿಶ್ವಸಂಸ್ಥೆಯ ಮೊರೆ ಹೋಗಿ, ಭಾರತವು ಸ್ಥಾಯಿ ಒಪ್ಪಂದವನ್ನು ಉಲ್ಲಂಘಿಸಿದೆಯೆಂದು ದೂರಿದನು. ಅವನು, ಮಧ್ಯಸ್ಥಿಕೆ ವಹಿಸಬೇಕೆಂದು ಅಮೆರಿಕ ಸಂಯುಕ್ತ ಸಂಸ್ಥಾನದ ಅಧ್ಯಕ್ಷನನ್ನೂ ಸಹ ಕೋರಿದನು. ಆದರೆ ಅಧ್ಯಕ್ಷನು ನಿರಾಕರಿಸಿದನು.[೯೭]

ಪಟೇಲರು ಹೈದರಾಬಾದ್ ಮೇಲಿನ ಕಾರ್ಯಾಚರಣೆಗೆ ಒತ್ತಾಯಿಸಿದರು. ನೆಹರು ಅದನ್ನು ತಡೆಗಟ್ಟಲು ಅಥವಾ ಮುಂದೂಡಲು ಪ್ರಯತ್ನಿಸಿದರು. ಮಿಲಿಟರಿ ಕಾರ್ಯಾಚರಣೆಗೆ ಅವರ ವಿರೋಧವಿತ್ತು. ಆದರೆ ಮಂತ್ರಿ ಮಂಡಲ ಪಟೇಲರ ಕಡೆಗಿತ್ತು. ಹೊಸ ಗೌರ್ನರ್ ಜೆನೆರಲ್ ರಾಜಗೋಪಾಲಾಚಾರಿಯವರೂ ಸಹ ಪಟೇಲರನ್ನು ಬೆಂಬಲಿಸಿದರು. ನೆಹರು ಸ್ವಲ್ಪ ತಗ್ಗಿದರು, ಆದರೆ ಅವರು, 'ರಾಜಾಜಿಯವರು ನಿಜಾಮನಿಗೆ ಪತ್ರ ಬರೆದು, ರಜಾಕರರನ್ನು ನಿಷೇಧಿಸುವಂತೆ ಮತ್ತು ರಾಜ್ಯದಲ್ಲಿ ಶಾಂತಿ ಸ್ಥಾಪನೆಗಾಗಿ ಭಾರತದ ಸೈನ್ಯವನ್ನು ಆಹ್ವಾನಿಸುವಂತೆ ಸೂಚಿಸಬೇಕು' ಎಂದರು. ಅದರಂತೆ ಗೌರ್ನರ್ ಜೆನೆರಲ್ ರಾಜಾಜಿಯವರು ನಿಜಾಮನಿಗೆ ಆಗಸ್ಟ್ ೩೧ರಂದು ಪತ್ರ ಬರೆದರು. ನಿಜಾಮನ ಜವಾಬು ಟೆಲಿಗ್ರಾಂ ಮೂಲಕ ಫೆಬ್ರುವರಿ ೫ರಂದು ಬಂದಿತು. 'ರಜಾಕರರನ್ನು ನಿಷೇಧಿಸುವುದು ಕಾರ್ಯಸಾಧ್ಯವಿಲ್ಲದ ಕ್ರಿಯೆ. ಭಾರತದ ಸೈನ್ಯವನ್ನು ನನ್ನ ರಾಜ್ಯದೊಳಕ್ಕೆ ಬಿಡುವ ಪ್ರಶ್ನೆಯೇ ಇಲ್ಲ' ಎಂದು ನಿಜಾಮನು ಉತ್ತರಿಸಿದ್ದನು.

ಸೆಪ್ಟೆಂಬರ್ ೮ರಂದು ಸಚಿವ ಸಂಪುಟದ ಸಭೆ ನಡೆಯಿತು. 'ನಾವು ಹೈದರಾಬಾದನ್ನು ಆಕ್ರಮಿಸಿಕೊಂಡು ಅಲ್ಲಿಯ ಅರಾಜಕತೆಯನ್ನು ಮುಕ್ತಾಯಗೊಳಿಸಬೇಕು' ಎಂದು ಪಟೇಲರು ಒತ್ತಾಯಿಸಿದರು. ಪ್ರಧಾನಮಂತ್ರಿಯವರು ಅದನ್ನು ಬಲವಾಗಿ ವಿರೋಧಿಸಿದರು ಮತ್ತು ರಾಜ್ಯಗಳ ಸಚಿವಾಲಯದ ಮನೋಭಾವವನ್ನು ಟೀಕಿಸಿದರು. ಸರ್ದಾರರು ಮಧ್ಯದಲ್ಲೇ ಎದ್ದು ಹೊರಟು ಹೋದರು. ಗೌರ್ನರ್ ಜೆನೆರಲ್‌ರವರು ಅಂದು ಮಧ್ಯಾಹ್ನ ತಮ್ಮ ಕೊಠಡಿಯಲ್ಲಿ ಒಂದು ಸಭೆ ನಡೆಸಿದರು. ಅದರಲ್ಲಿ ಗೌರ್ನರ್ ಜೆನೆರಲ್, ನೆಹರು, ಪಟೇಲ್ ಮತ್ತು ವಿ.ಪಿ. ಮೆನನ್ ಭಾಗವಹಿಸಿದ್ದರು. ಅಲ್ಲಿ, ಹೈದರಾಬಾದನ್ನು ಆಕ್ರಮಿಸಿಕೊಳ್ಳಬೇಕೆಂದು ತೀರ್ಮಾನಿಸಲಾಯಿತು.[೯೮]

ಹೈದರಾಬಾದನ್ನು ಆಕ್ರಮಿಸಿಕೊಂಡರೆ ಪ್ರತಿಕೂಲ ಅಂತರರಾಷ್ಟ್ರೀಯ ಪರಿಣಾಮ ಉಂಟಾಗಬಹುದೆಂಬ ಭಯ ಸಂಪುಟದ ಕೆಲವರು ಸಚಿವರಿಗೆ ಮತ್ತು ನೆಹರೂಗೆ ಇತ್ತು. ಹೈದರಾಬಾದ್, ತನಗೆ ಇಡೀ ಭಾರತದ ಮುಸ್ಲಿಮರ ಬೆಂಬಲ ಇದೆ, ಭಾರತವು ಅತಿಕ್ರಮಣ ಮಾಡಿದರೆ ಭಾರತದಾದ್ಯಂತ ಮತೀಯ ಗಲಭೆ ಉಂಟಾಗುವುದು ಎನ್ನುವ ಕಲ್ಪಿತ ಕಥೆಯನ್ನು ಸೃಷ್ಟಿಸಿತ್ತು. ಅಷ್ಟೇ ಅಲ್ಲದೆ, ದೆಹಲಿ, ಬಾಂಬೆ, ಅಹಮದಾಬಾದ್ ಮತ್ತು ಇತರ ನಗರಗಳನ್ನು ನಾಶಪಡಿಸುವಂತಹ ಬಾಂಬುಗಳು ತಮ್ಮಲ್ಲಿ ಅಧಿಕವಾಗಿ ಇವೆ ಎನ್ನುವ ಸುದ್ದಿಯನ್ನೂ ಹೈದರಾಬಾದ್ ಹರಡಿತ್ತು. ರಜ್ಜಿಯು, 'ನಮ್ಮ ಇರುವಿಕೆಗೆ ಧಕ್ಕೆ ಬಂದರೆ ನಾವು ಬೇರೆಯವರನ್ನು ಉಳಿಸುವುದಿಲ್ಲ' ಎಂದು ಗುಡುಗಿದ್ದನು. ಆದರೂ ಸಹ ಸರ್ದಾರರು ಹೈದರಾಬಾದನ್ನು ಆಕ್ರಮಿಸಿಕೊಳ್ಳಲು ದೃಢ ನಿಶ್ಚಯ ಮಾಡಿದ್ದರು.[೯೯]

ಸೆಪ್ಟೆಂಬರ್ ೯ರಂದು ಸಂಪುಟದ ರಕ್ಷಣಾ ಸಮಿತಿಯು ದಕ್ಷಿಣ ವಲಯದ ಸೈನ್ಯದ ಕಮಾಂಡ್‌ನ ಮುಖ್ಯಸ್ಥ ಲೆಫ್ಟಿನೆಂಟ್ – ಜೆನೆರಲ್ ರಾಜೇಂದ್ರಸಿನ್ಹ್‌ಜಿ ಒಡನೆ ಸಮಾಲೋಚಿಸಿ ಸೈನ್ಯವು ೧೩ನೆ ತಾರೀಖು ಸೂರ್ಯೋದಯಕ್ಕೆ ಮುನ್ನ ಗಡಿಯನ್ನು ದಾಟಬೇಕೆಂದು ತೀರ್ಮಾನಿಸಿತು. ೧೨ನೆ ತಾರೀಖು ರಾತ್ರಿ ಕರಾಚಿಯಲ್ಲಿ ಜಿನ್ನಾ ಅಸುನೀಗಿದನು. ಆದರೆ ಅದಕ್ಕೂ ನಮ್ಮ ಕಾರ್ಯಾಚರಣೆಗೂ ಸಂಬಂಧವಿರಲಿಲ್ಲ. ಸೈನಿಕ ಕಾರ್ಯಾಚರಣೆ ಶುರುವಾಗುವುದಕ್ಕೆ ಕೆಲವು ಘಂಟೆಗಳು ಇರುವಾಗ ೧೨–೧೩ನೆ ತಾರೀಖಿನ ಮಧ್ಯ ರಾತ್ರಿ ೩ ಘಂಟೆಯಲ್ಲಿ ಭಾರತದ ಕಮಾಂಡರ್ – ಇನ್–ಚೀಫ್ ಜೆನೆರಲ್ ಬುಚರ್‌ನು ರಕ್ಷಣಾ ಕಾರ್ಯದರ್ಶಿ ಹೆಚ್.ಎಂ. ಪಟೇಲರಿಗೆ ದೂರವಾಣಿ ಕರೆ ಮಾಡಿ, 'ಹೈದರಾಬಾದ್ ಕೆಲವು ಭಾರಿ ವಿಮಾನಗಳನ್ನು ಪಡೆದುಕೊಂಡಿದೆ ಮತ್ತು ಅವು ಬಾಂಬುಗಳನ್ನು ಎಸೆಯುವ ವಿಮಾನಗಳಿರಬಹುದು ಅನ್ನುವ ಸುದ್ದಿ ನಂಬಲರ್ಹವಾದ ಮೂಲಗಳಿಂದ ಬಂದಿದೆ.

ಅದರ ಸತ್ಯಾಸತ್ಯತೆಯನ್ನು ಪರಿಶೀಲಿಸುವ ತನಕ ಸೈನಿಕ ಕಾರ್ಯಾಚರಣೆಯನ್ನು ಕೆಲವು ಘಂಟೆಗಳ ಕಾಲ ಮುಂದೂಡಬೇಕು" ಎಂದು ಸಲಹೆ ನೀಡಿದನು. ಆದರೆ ಹೆಚ್.ಎಂ. ಪಟೇಲರು ಒಪ್ಪಲಿಲ್ಲ.[೧೦೦]

ನಿಗದಿಯಾದಂತೆ ೧೯೪೮ರ ಸೆಪ್ಟೆಂಬರ್ ೧೩ರಂದು ಸೂರ್ಯೋದಯಕ್ಕೆ ಮುನ್ನ ಹೈದರಾಬಾದ್ ಮೇಲೆ ಸೈನಿಕ ಕಾರ್ಯಾಚರಣೆ ಆರಂಭವಾಯಿತು. ಅದನ್ನು 'ಆಪರೇಷನ್ ಪೋಲೊ' ಎಂದು ಕರೆಯಲಾಗಿತ್ತು. ಲೆಫ್ಟಿನೆಂಟ್ ಜೆನೆರಲ್ ರಾಜೇಂದ್ರ ಸಿನ್ಹ್ಹಜಿಯವರ ಮಾರ್ಗದರ್ಶನದಲ್ಲಿ ಮೇಜರ್ ಜೆನೆರಲ್ ಜೆ.ಎನ್. ಚೌದರಿಯವರು ಸೈನ್ಯವನ್ನು ಮುನ್ನೆಡೆಸಿದರು. ಭಾರತದ ಸೈನ್ಯ ಎರಡು ಮಾರ್ಗವಾಗಿ ಹೊರಟಿತು. ಮುಖ್ಯ ದಳ ೧೮೬ ಮೈಲಿಗಳ ಶೋಲಾಪುರ – ಹೈದರಾಬಾದ್ ಮಾರ್ಗದಲ್ಲಿ ಪೂರ್ವ ದಿಕ್ಕಿಗೆ ಚಲಿಸಿತು. ಮತ್ತೊಂದು ಸಣ್ಣ ತುಕಡಿಯು ೧೬೦ ಮೈಲಿಗಳ ಬೆಜವಾಡ – ಹೈದರಾಬಾದ್ ಮಾರ್ಗದಲ್ಲಿ ಪೂರ್ವದ ಕಡೆಗೆ ಚಲಿಸಿತು. ಎರಡು ದಳಗಳೂ ಪೂರ್ವ ದಿಕ್ಕಿಗೇ ಚಲಿಸಿ ಶತೃ ಸೈನ್ಯಕ್ಕೆ ಗೊಂದಲವನ್ನುಂಟು ಮಾಡಿದುವು. ಮುಖ್ಯ ದಳ ಹೈದರಾಬಾದ್ ಗಡಿಯನ್ನು ಪ್ರವೇಶಿಸಿ, ೧೨ ಮೈಲಿಗಳ ಒಳಗಿದ್ದ ನಲದುರ್ಗ ಸೇತುವೆಯನ್ನು ಹಾದು ಮುಂದೆ ಬಂದಾಗ ಎದುರಿಂದ ಬರುತ್ತಿದ್ದ ಒಂದು ಜೀಪನ್ನು ವಶಪಡಿಸಿಕೊಂಡಿತು. ಆ ಜೀಪ್‌ನ ತುಂಬ ಸಿಡಿಮದ್ದು ಗಳಿದ್ದುವು. ಅದನ್ನು ನಿಜಾಮನ ಬಳಿ ಕೆಲಸಕ್ಕಿದ್ದ ಒಬ್ಬ ಬ್ರಿಟಿಷ್ ಪ್ರಜೆ ಲೆಫ್ಟಿನೆಂಟ್ ಟಿ.ಟಿ. ಮೂರ್ ನಲದುರ್ಗ ಮತ್ತು ಇತರ ಸೇತುವೆಗಳನ್ನು ಧ್ವಂಸ ಮಾಡುವುದಕ್ಕಾಗಿ ತೆಗೆದುಕೊಂಡು ಹೋಗುತ್ತಿದ್ದನು. ಕಾರ್ಯಾಚರಣೆಯ ಆರಂಭವನ್ನು ನಮ್ಮ ಸೈನ್ಯ ತಡಮಾಡಿದ್ದಿದ್ದರೆ ನಲದುರ್ಗ ಸೇತುವೆ ಧ್ವಂಸವಾಗಿ ಬಿಟ್ಟಿರುತ್ತಿತ್ತು ! ಸೈನ್ಯ ಕಾರ್ಯಾಚರಣೆಯ ಯಶಸ್ಸಿಗೆ ಹೆಚ್ಚು ಕಾಲ ಬೇಕಾಗುತ್ತಿತ್ತು!

ಮೊದಲೆರಡು ದಿನ ಭಾರತದ ಸೈನ್ಯಕ್ಕೆ ಸ್ವಲ್ಪ ಪ್ರತಿರೋಧ ಕಂಡುಬಂದಿತು. ಆ ನಂತರ ಯಾವ ಅಡೆತಡೆಯೂ ಇಲ್ಲದೆ ಸೈನ್ಯ ಮುಂದುವರೆಯಿತು. ನಮ್ಮ ಕಡೆಯ ಸಾವು ನೋವು ಅತಿ ಅಲ್ಪ. ಆದರೆ ಸುಮಾರು ೮೦೦ ಮಂದಿ ರಜ಼ಾಕರರು ಮತ್ತು ಹೈದರಾಬಾದ್ ಸೈನಿಕರು ಹತರಾದರು. ೧೭ನೆ ತಾರೀಖಿನ ಸಂಜೆ ಹೈದರಾಬಾದ್‌ನ ಸೈನ್ಯ ಶರಣಾಗತವಾಯಿತು. ೧೮ನೆ ತಾರೀಖು ಮೇಜರ್ ಜೆನೆರಲ್ ಚೌದರಿ ತಮ್ಮ ದಳದೊಡನೆ ಹೈದರಾಬಾದ್ ನಗರವನ್ನು ಪ್ರವೇಶಿಸಿದರು. ಇಡೀ ಸೈನ್ಯ ಕಾರ್ಯಾಚರಣೆ ಕೇವಲ ೧೦೮ ಘಂಟೆಗಳಲ್ಲಿ ಸುಗಮವಾಗಿ ಮುಕ್ತಾಯ ವಾಗಿತ್ತು.[೧೦೧]

ಹಿಂದಿನ ದಿನ ೧೭ನೆ ತಾರೀಖು ಲಾಯ್ಕ್ ಆಲಿ ಮತ್ತು ಅವನ ಸಂಪುಟ

ರಾಜೀನಾಮೆ ನೀಡಿತ್ತು. ಕಾರ್ಯಾಚರಣೆ ಆರಂಭವಾದಾಗಿನಿಂದ ಗೃಹ ಬಂಧನದಲ್ಲಿದ್ದ ಕೆ.ಎಂ. ಮುನ್ಷಿ ಬಿಡುಗಡೆ ಮಾಡಲ್ಪಟ್ಟರು. ನಿಜಾಮನು ಮುನ್ಷಿಯವರನ್ನು ಕರೆಸಿ, "ಶರಣಾಗುವಂತೆ ಸೈನ್ಯಕ್ಕೆ ಆದೇಶ ನೀಡಿದ್ದೇನೆ. ಹೊಸ ಸರ್ಕಾರವನ್ನು ರಚಿಸುತ್ತೇನೆ ಮತ್ತು ರಜ಼ಾಕರರನ್ನು ನಿಷೇಧಿಸುತ್ತೇನೆ" ಎಂದು ತಿಳಿಸಿದನು. ಮುನ್ಷಿ ಅದನ್ನು ಭಾರತ ಸರ್ಕಾರಕ್ಕೆ ರವಾನಿಸಿದರು. ರಾಜ್ಯಗಳ ಸಚಿವಾಲಯವು ಮುನ್ಷಿಯವರಿಗೆ 'ಸೈನ್ಯದ ಕಮಾಂಡರ್ ಆಡಳಿತವನ್ನು ನಿರ್ವಹಿಸುತ್ತಾರೆ, ಹೊಸ ಸರ್ಕಾರವನ್ನು ರಚಿಸುವ ಪ್ರಶ್ನೆ ಉದ್ಭವಿಸುವುದೇ ಇಲ್ಲ' ಎಂದು ತಿಳಿಸಿತು.

ಮೇಜರ್–ಜೆನೆರಲ್ ಚೌದರಿಯವರು ಮಿಲಿಟರಿ ಗೌರ್ನರ್ ಆಗಿ ಸೆಪ್ಟೆಂಬರ್ ೧೮ರಂದು ಅಧಿಕಾರ ವಹಿಸಿಕೊಂಡರು. ಲೆಫ್ಟಿನೆಂಟ್ ಜೆನರಲ್ ರಾಜೇಂದ್ರಸಿನ್ಹ್ಜಿ ಯವರು ಒಂದು ಘೋಷಣೆ ಹೊರಡಿಸಿ ಜನರು ಗಾಬರಿಯಾಗದೆ ಶಾಂತವಾಗಿರ ಬೇಕೆಂದು, ಮಿಲಿಟರಿ ಗೌರ್ನರ್‌ನ ಆಡಳಿತದೊಡನೆ ಸಹಕರಿಸಬೇಕೆಂದು, ಎಲ್ಲರಿಗೂ ಶಾಂತಿ ಮತ್ತು ರಕ್ಷಣೆಯನ್ನು ಒದಗಿಸಲಾಗುವುದೆಂದು ಪ್ರಕಟಿಸಿದರು.

ಲಾಯ್ಕ್ ಆಲಿ ಮತ್ತು ಅವನ ಸಂಪುಟದವರನ್ನು ಗೃಹ ಬಂಧನದಲ್ಲಿ ಇಡಲಾಯಿತು. ಪ್ರಮುಖ ರಜ಼ಾಕರರನ್ನು ದಸ್ತಗಿರಿ ಮಾಡಲಾಯಿತು. ಹೈದರಾಬಾದ್‌ನಿಂದ ಹೊರಗೆ ತನ್ನ ಭಾವಮೈದುನನ ಮನೆಯಲ್ಲಿ ಅಡಗಿದ್ದ ಖಾಸಿಂ ರಜ್ವಿಯು ೧೯ರಂದು ದಸ್ತಗಿರಿ ಮಾಡಲ್ಪಟ್ಟನು. ನಿಜಾಮನು ೨೩ರಂದು ವಿಶ್ವಸಂಸ್ಥೆಗೆ ಒಂದು ಕೇಬಲ್ ಕಳುಹಿಸಿ ತಾನು ಸಲ್ಲಿಸಿದ್ದ ದೂರನ್ನು ವಾಪಸ್ಸು ಪಡೆದನು.[೧೦೨]

ಶೀಘ್ರ ಮತ್ತು ಯಶಸ್ವಿ ಕಾರ್ಯಾಚರಣೆಯಿಂದ ಇಡೀ ದೇಶದಲ್ಲಿ ಸಂತಸದ ಹೊನಲು ಹರಿಯಿತು. ಹೈದರಾಬಾದ್‌ನ ಹಿಂದೂಗಳಿಗಂತೂ ಬಿಡುಗಡೆ ದೊರೆತಂತಾಯಿತು. ದೇಶದ ಉದ್ದಗಲದಲ್ಲಿ ಎಲ್ಲೂ ಒಂದೂ ಮತೀಯ ಘಟನೆ ನಡೆಯಲಿಲ್ಲ.

ಸೋತ ನಂತರ ನಿಜಾಮನು ಭಾರತಕ್ಕೆ ಸೇರಿಕೊಂಡನು. ತನ್ನ ಸ್ಥಿತಿ ಏನಾಗುವುದೋ ಎಂದು ಅವನು ಹೆದರಿದ್ದನು. ಆದರೆ ಸರ್ದಾರರು ಅವನನ್ನು ಗೌರವದಿಂದಲೇ ನಡೆಸಿಕೊಂಡರು. ಸರ್ಕಾರವು ಅವನನ್ನು ರಾಜ್ಯದ ಸಾಂವಿಧಾನಿಕ ಮುಖ್ಯಸ್ಥನನ್ನಾಗಿ ಮಾಡಿತು. (ಅವನು ಹಿಂದೂಗಳನ್ನು ಹಿಂಸಿಸಿದ, ಹತ್ಯೆ ಮಾಡಿದ ಮತ್ತು ದ್ವೇಷ ಮಾಡಿದ ರೀತಿಗೆ ಈ ಗೌರವ ಸಿಕ್ಕಿದ್ದು ಅವನ ಅದೃಷ್ಟ ! ಶತೃಗಳನ್ನು ಕ್ಷಮಿಸುವ ಜೌದಾರ್ಯ ಬೇರೆ ಯಾರಿಗೂ ಇರಲಿಲ್ಲ. ಸಿ.ಪಿ. ರಾಮಸ್ವಾಮಿ ಐಯ್ಯರ್‌ರ ಘಟನೆಯನ್ನೂ ಇಲ್ಲಿ ನೆನೆಯಬಹುದು – ಲೇಖಕ)

೧೯೪೯ರ ಫೆಬ್ರುವರಿಯಲ್ಲಿ ಸರ್ದಾರರು ಹೈದರಾಬಾದ್‌ಗೆ ಭೇಟಿ ನೀಡಿದರು. ಅವರನ್ನು ಸ್ವಾಗತಿಸಲು ಸ್ವತಃ ನಿಜಾಮನೇ ವಿಮಾನ ನಿಲ್ದಾಣಕ್ಕೆ ಹೋಗಿದ್ದನು. ಇಬ್ಬರೂ ಮಾತುಕತೆಗೆ ಕುಳಿತಾಗ ಸರ್ದಾರರು ಮನಬಿಚ್ಚಿ ಮಾತನಾಡಿದರು. ನಿಜಾಮನು ತನ್ನ ಹಿಂದಿನ ನಡವಳಿಕೆಗೆ ವಿಷಾದವನ್ನೂ ಮತ್ತು ಭಾರತ ಸರ್ಕಾರಕ್ಕೆ ತನ್ನ ನೈಜ ನಿಷ್ಠೆಯನ್ನೂ ವ್ಯಕ್ತ ಪಡಿಸಿದನು.

ದೆಹಲಿಗೆ ವಾಪಸ್ಸು ಬಂದ ಮೇಲೆ ಸರ್ದಾರರು ನಿಜಾಮರಿಗೆ ಪತ್ರ ಬರೆದರು:

ಪ್ರಿಯ ಅತ್ಯುನ್ನತ ಅರಸರೆ,

ನಿಮ್ಮನ್ನು ಭೇಟಿ ಮಾಡಿ ನಿಮ್ಮ ಪರಿಚಯ ಮಾಡಿಕೊಂಡಿದ್ದಕ್ಕೆ ನನಗೆ ಬಹಳ ಸಂತೋಷವಾಗಿದೆ..... ನೀವು ಬದಲಾದ ಸನ್ನಿವೇಶಗಳಿಗೆ ಅಷ್ಟೊಂದು ಶೀಘ್ರವಾಗಿ ಹೊಂದಿಕೊಂಡಿದ್ದೀರಿ. ನಾನು ನಿಮಗೆ ಹೇಳಿದ ಹಾಗೆ, ತಪ್ಪು ಮಾಡುವುದು ಮಾನವನ ವೈಫಲ್ಯತೆಯಾದರೆ, ಮರೆಯುವುದು ಮತ್ತು ಕ್ಷಮಿಸುವುದು ದೈವ ನಿಯಮವಾದರೆ ಪ್ರಾಮಾಣಿಕ ಪಶ್ಚಾತ್ತಾಪದಿಂದ ಈ ಕಾರ್ಯಾಚರಣೆಗೆ ತಮ್ಮ ಪಾಲನ್ನು ನೀಡುವುದು ಮಾನವರ ಕರ್ತವ್ಯ. ಈ ಬುದ್ಧಿವಾದವನ್ನು ಮತ್ತೊಮ್ಮೆ ಉಚ್ಚರಿಸಲು ಬಯಸುತ್ತೇನೆ. ಇದು ಪ್ರಾಮಾಣಿಕವಾಗಿ ಸ್ನೇಹಭಾವದಿಂದ ನೀಡಲ್ಪಟ್ಟಿದೆ.[೧೦೩]

"ಸರ್ದಾರರು ಸಾಧಿಸಿದ ಭಾರತ ಏಕತೆಯ ಸಾಹಸಗಾಥೆಯು ಸುವರ್ಣಾಕ್ಷರಗಳಲ್ಲಿ ಬರೆಯಲ್ಪಡುತ್ತದೆ" ಎನ್ನುತ್ತಾರೆ ಸರ್ದಾರರ ಆಪ್ತ ಕಾರ್ಯದರ್ಶಿಯಾಗಿದ್ದ ವಿ. ಶಂಕರ್‌ರವರು. ಮುಂದುವರೆದು ಅವರು ಹೀಗೆ ಹೇಳಿದ್ದಾರೆ:

ಎಲ್ಲರೂ ಮನಸ್ಸಿನಲ್ಲಿ ಇಡಬೇಕಾದ ಮುಖ್ಯ ಅಂಶವೇನೆಂದರೆ ಆ ಪವಾಡವು ಇತಿಹಾಸಕ್ಕೆ ಸಡ್ಡು ಹೊಡೆದು, ಸಂಪ್ರದಾಯಕ್ಕೆ ವಿರುದ್ಧವಾಗಿ, ಅನೇಕ ಪ್ರತಿಕೂಲ ಸನ್ನಿವೇಶಗಳನ್ನು ಮತ್ತು ಪ್ರಭಾವಿ ಶಕ್ತಿಗಳನ್ನು ಎದುರಿಸಿ ಮತ್ತು ಎರಡು ವರ್ಷಗಳ ಅಲ್ಪ ಅವಧಿಯಲ್ಲಿ ಸಾಧಿಸಲ್ಪಟ್ಟಿತು ಎನ್ನುವುದು. ಪ್ರಪಂಚದ ಚರಿತ್ರೆಯಲ್ಲಿ ಇದಕ್ಕೆ ಸಮಾನಾಂತರವಾದ ಘಟನೆ ಮತ್ತೊಂದಿಲ್ಲ.[೧೦೪]



೨೧. ಜಮ್ಮು ಮತ್ತು ಕಾಶ್ಮೀರದ ಸೇರ್ಪಡೆ

ಭಾರತ ಸ್ವತಂತ್ರವಾದಾಗ ಇದ್ದ ೫೬೫ ರಾಜ್ಯಗಳ ಪೈಕಿ ಮೂರು ರಾಜ್ಯಗಳಲ್ಲಿ ಒಂದು ವಿಚಿತ್ರ ಪರಿಸ್ಥಿತಿ ಇತ್ತು: ಆ ರಾಜ್ಯಗಳು ಜುನಾಗಡ್, ಹೈದರಾಬಾದ್ ಮತ್ತು ಕಾಶ್ಮೀರ. ಜುನಾಗಡ್ ಮತ್ತು ಹೈದರಾಬಾದ್‌ನಲ್ಲಿ ಶೇ. ೮೦ಕ್ಕೂ ಹೆಚ್ಚು ಪ್ರಜೆಗಳು ಹಿಂದೂಗಳು, ಆದರೆ ಅರಸ ಮುಸ್ಲಿಂ. ಜೊತೆಗೆ ಅವೆರಡು ರಾಜ್ಯಗಳು ಭಾರತದ ಒಳ ಭಾಗದಲ್ಲಿದ್ದುವು. ಅವುಗಳ ಸುತ್ತ ಭಾರತದ ರಾಜ್ಯಗಳಿದ್ದುವೇ ಹೊರತು, ಅವು ಪಾಕಿಸ್ತಾನದೊಡನೆ ಗಡಿಯನ್ನು ಹಂಚಿಕೊಂಡಿರಲಿಲ್ಲ. ಅದರಿಂದ ಪಟೇಲರು ಭಾರತದಲ್ಲಿ ಅವೆರಡು ರಾಜ್ಯಗಳ ವಿಲೀನತೆಯನ್ನು ದೃಢ ಮನಸ್ಸಿನಿಂದ ಸಾಧಿಸಿದ್ದರು. ಕಾಶ್ಮೀರದಲ್ಲಿ ಶೇ. ೭೫ರಷ್ಟು ಪ್ರಜೆಗಳು ಮುಸ್ಲಿಮರು, ಆದರೆ ಅರಸ ಹಿಂದೂ ಹರಿಸಿಂಗ್. ಅಲ್ಲದೆ, ಕಾಶ್ಮೀರವು ಪಾಕಿಸ್ತಾನ ಮತ್ತು ಭಾರತ ಎರಡು ರಾಜ್ಯಗಳೊಡನೆ ಗಡಿಯನ್ನು ಹಂಚಿಕೊಂಡಿತ್ತು. ಅದರಿಂದ ಪಟೇಲರು ಕಾಶ್ಮೀರವನ್ನು ಭಾರತಕ್ಕೆ ಸೇರಿಸಿಕೊಳ್ಳುವ ಪ್ರಯತ್ನವನ್ನು ಆರಂಭದಲ್ಲಿ ಮಾಡಲಿಲ್ಲ.

ಕಾಶ್ಮೀರದ ಅರಸ ಹರಿಸಿಂಗ್ ಎರಡು ಡೊಮಿನಿಯನ್‌ಗಳಿಗೂ ಸೇರದೆ ಸ್ವತಂತ್ರವಾಗಿರುವ ಆಲೋಚನೆ ಮಾಡಿದ್ದನೆಂದು ಕಾಣುತ್ತದೆ. ಅಲ್ಲಿಯ ಅಂದಿನ ಪ್ರಧಾನಮಂತ್ರಿ ರಾಮಚಂದ್ರ ಕಾಕ್ ದೆಹಲಿಗೆ ಬಂದಿದ್ದಾಗ, ವಿ.ಪಿ. ಮೆನನ್‌ರವರು ಅವರನ್ನು, 'ಇಂಡಿಯಾ ಅಥವಾ ಪಾಕಿಸ್ತಾನಕ್ಕೆ ಸೇರುವ ವಿಷಯದಲ್ಲಿ ನಿಮ್ಮ ಮಹಾರಾಜರ ಇಂಗಿತವೇನು?" ಎಂದು ಕೇಳಿದ್ದಕ್ಕೆ ಅವರು ಹಾರಿಕೆಯ ಉತ್ತರ ಕೊಟ್ಟಿದ್ದರು. ಕಾಶ್ಮೀರದಲ್ಲಿ ನಾಲ್ಕು ಭಾಗಗಳಿದ್ದುವು. ಅವು ಮುಸ್ಲಿಮರು ಬಹು ಸಂಖ್ಯಾತರಾಗಿರುವ ಕಾಶ್ಮೀರ ಖಣಿವೆ ಮತ್ತು ಗಿಲ್ಜಿತ್ ಪ್ರದೇಶ, ಹಿಂದೂಗಳು

ಅಧಿಕ ಸಂಖ್ಯಾತರಾದ ಜಮ್ಮು ಹಾಗೂ ಬೌದ್ಧರು ಅಧಿಕವಾಗಿರುವ ಲಡಖ್.

ಲಾರ್ಡ್ ಮೌಂಟ್‌ಬ್ಯಾಟನ್‌ಗೆ ರಾಜ ಹರಿಸಿಂಗ್ ಚೆನ್ನಾಗಿ ಪರಿಚಯವಿದ್ದರು. ೧೯೨೧-೨೨ರಲ್ಲಿ ರಾಜಕುಮಾರ ವೇಲ್ಸ್‌ನು ಭಾರತದ ಪ್ರವಾಸ ಕೈಗೊಂಡಾಗ ಅವನ ಸಿಬ್ಬಂದಿಯಲ್ಲಿ ಮೌಂಟ್‌ಬ್ಯಾಟನ್ ಮತ್ತು ಹರಿಸಿಂಗ್ ಒಟ್ಟಿಗೆ ಕೆಲಸ ಮಾಡಿದ್ದರು. ಮೌಂಟ್‌ಬ್ಯಾಟನ್‌ರವರನ್ನು ಹರಿಸಿಂಗ್ ಬಹಳ ಹಿಂದೆಯೆ ಕಾಶ್ಮೀರಕ್ಕೆ ಆಹ್ವಾನಿಸಿದ್ದರು. ಈಗ ಮತ್ತೆ ಆಹ್ವಾನಿಸಿದರು. ಮೌಂಟ್‌ಬ್ಯಾಟನ್‌ರವರು ೧೯೪೭ರ ಜೂನ್ ೩ನೆ ವಾರದಲ್ಲಿ ಕಾಶ್ಮೀರಕ್ಕೆ ಭೇಟಿ ನೀಡಿ, ನಾಲ್ಕು ದಿನಗಳು ಇದ್ದರು. ಆ ಸಮಯದಲ್ಲಿ ಅವರು ಹರಿಸಿಂಗ್‌ಗೆ, "ನನ್ನ ಅಭಿಪ್ರಾಯದಲ್ಲಿ ಸ್ವತಂತ್ರವಾಗಿರುವುದು ಸೂಕ್ತ ಕ್ರಮವಲ್ಲ" ಎಂದರು. "ಕಾಶ್ಮೀರವನ್ನು ಒಂದು ಡೊಮಿನಿಯನ್ ಎಂದು ಬ್ರಿಟನ್ ಸರ್ಕಾರ ಪರಿಗಣಿಸುವುದಿಲ್ಲ, ಎರಡರಲ್ಲಿ ಒಂದು ಡೊಮಿನಿಯನ್‌ಗೆ ನೀವು ಸೇರಿಕೊಂಡರೆ, ನಿಮ್ಮನ್ನು ಆ ಡೊಮಿನಿಯನ್ ರಕ್ಷಿಸುತ್ತದೆ, ಆಗಸ್ಟ್ ೧೫ರವರೆಗೂ ಯಾವ ತೊಂದರೆಯೂ ಇಲ್ಲ, ಆದರೆ ಆ ನಂತರ ತೊಂದರೆ ಆರಂಭವಾಗುತ್ತದೆ," ಎಂದು ವಿವರಿಸಿ ಮೌಂಟ್‌ಬ್ಯಾಟನ್‌ರವರು, "ನೀವು ಪಾಕಿಸ್ತಾನಕ್ಕೆ ಸೇರಿಕೊಂಡರೆ ಅದನ್ನು ಭಾರತವು ತಪ್ಪಾಗಿ ತಿಳಿಯುವುದಿಲ್ಲ. ಆ ಬಗೆಗೆ ಸ್ವತಃ ಸರದಾರರೇ ನನಗೆ ಆಶ್ವಾಸನೆ ನೀಡಿದ್ದಾರೆ ಎಂದರೇ ಹೊರತು, ನೆಹರು ಆಶ್ವಾಸನೆ ನೀಡಿದ್ದಾರೆ ಎನ್ನಲಿಲ್ಲ. ನೆಹರು, ಕಾಶ್ಮೀರವು ಭಾರತವನ್ನು ಸೇರುವುದನ್ನು ಬಯಸಿದ್ದರು, ಏಕೆಂದರೆ ಅವರ ಪೂರ್ವಿಕರು ಕಾಶ್ಮೀರದಿಂದ ಬಂದವರು. ಮತ್ತು ಅವರ ಸ್ನೇಹಿತ ಶೇಖ್ ಅಬ್ದುಲ್ಲಾ ಅಲ್ಲಿ ಜನನಾಯಕರಾಗಿದ್ದರು. ಮೌಂಟ್‌ಬ್ಯಾಟನ್‌ರವರು 'ರಾಜ್ಯದ ಜನರ ಅಭಿಪ್ರಾಯವನ್ನು ಸಹ ಪರಿಗಣಿಸಬೇಕಾಗುತ್ತದೆ,' ಎಂದು ಹರಿಸಿಂಗ್‌ಗೆ ಹೇಳಿದ್ದರು.[೧೦೫]

ಆದರೆ ರಾಜ ಹರಿಸಿಂಗ್ ಅಷ್ಟು ಸುಲಭವಾಗಿ ತೀರ್ಮಾನಿಸುವ ಹಾಗಿರಲಿಲ್ಲ. ಪಾಕಿಸ್ತಾನವನ್ನು ಸೇರುವುದು, ಭಾರತವನ್ನು ಸೇರುವುದು ಅಥವಾ ಸ್ವತಂತ್ರವಾಗಿರುವುದು – ಈ ಮೂರು ಆಯ್ಕೆಯಲ್ಲೂ ಒಂದಲ್ಲ ಒಂದು ತೊಂದರೆ ಇತ್ತು. ಪಾಕಿಸ್ತಾನಕ್ಕೆ ಸೇರಿದರೆ ಮುಸ್ಲಿಮೇತರರಿಗೆ ಮತ್ತು 'ನ್ಯಾಷನಲ್ ಕಾನ್‌ಫೆರೆನ್ಸ್' ಪಕ್ಷದ ಅಧಿಕ ಮುಸ್ಲಿಮರಿಗೆ ಅಸಮಾಧಾನವಾಗುತ್ತಿತ್ತು. ಭಾರತಕ್ಕೆ ಸೇರಿದರೆ ಗಿಲ್ಗಿತ್‌ನ ಮುಸ್ಲಿಮರಿಗೆ ಮತ್ತು ಪಾಕಿಸ್ತಾನಕ್ಕೆ ಅಸಮಾಧಾನವಾಗುತ್ತಿತ್ತು. ಪಾಕಿಸ್ತಾನವನ್ನು ಅಸಮಾಧಾನಗೊಳಿಸುವ ಹಾಗಿರಲಿಲ್ಲ, ಏಕೆಂದರೆ ಕಾಶ್ಮೀರಕ್ಕೆ ಆಗ ಭೂಮಾರ್ಗ ಸಂಪರ್ಕವಿದ್ದುದು ಪಾಕಿಸ್ತಾನದೊಡನೆ ಮಾತ್ರ. ರಾಜ್ಯಕ್ಕೆ ಸರಕುಗಳು ಆ ಮಾರ್ಗವಾಗಿಯೇ ಬರಬೇಕಾಗಿತ್ತು. ಸ್ವತಂತ್ರವಾಗಿರಲು ಸಾಧ್ಯವಿಲ್ಲವೆನ್ನುವುದನ್ನು

ಮೌಂಟ್‌ಬ್ಯಾಟನ್ ವಿವರಿಸಿದ್ದರು. ಹೀಗಾಗಿ ಹರಿಸಿಂಗ್ ಪೇಚಿಗೆ ಸಿಲುಕಿದರು.

ಶೇಖ್ ಅಬ್ದುಲ್ಲಾರವರ 'ನ್ಯಾಷನಲ್ ಕಾನ್‌ಫ್ಲೆರನ್ಸ್' ಪಕ್ಷದಲ್ಲಿ ಮುಸ್ಲಿಮರು, ಹಿಂದೂಗಳು ಮತ್ತು ಸಿಕ್ಖರು ಇದ್ದರು. ಅದು ಆಗ ಮುಸ್ಲಿಂ ಮತಾಂಧತೆಯ ಪಕ್ಷವಾಗಿರಲಿಲ್ಲ. ಶೇಖ್ ಅಬ್ದುಲ್ಲಾ, ಮತಾಂಧತೆಯನ್ನು ಪ್ರತಿಪಾದಿಸದೆ, ಸ್ನೇಹವನ್ನು ಪ್ರತಿಪಾದಿಸುವುದಕ್ಕಾಗಿ, ೧೯೩೨ರಲ್ಲಿ ತಾವೇ ಸ್ಥಾಪಿಸಿದ್ದ ಆಲ್ – ಜಮ್ಮು ಕಾಶ್ಮೀರ್ ಮುಸ್ಲಿಂ ಕಾನ್‌ಫ್ಲೆರನ್ಸ್‌ನ್ನು ತೊರೆದು ಹೊರಬಂದು ೧೯೩೮ರಲ್ಲಿ ನ್ಯಾಷನಲ್ ಕಾನ್‌ಫ್ಲೆರೆನ್ಸ್ ಅನ್ನು ಸ್ಥಾಪಿಸಿದ್ದರು. ನ್ಯಾಷನಲ್ ಕಾನ್‌ಫ್ಲೆರೆನ್ಸ್ ಸಾರ್ವತ್ರಿಕ ಚುನಾವಣೆಯ ಆಧಾರದ ಪ್ರಜಾಪ್ರಭುತ್ವ ಸರ್ಕಾರ ಸ್ಥಾಪಿಸಬೇಕೆಂದು ಮಹಾರಾಜನನ್ನು ಆಗ್ರಹಿಸಿತು. ಭಾರತದಲ್ಲಿ ಕಾಂಗ್ರೆಸ್ ಪಕ್ಷ ಇದ್ದಂತೆ ಕಾಶ್ಮೀರದಲ್ಲಿ ನ್ಯಾಷನಲ್ ಕಾನ್‌ಫ್ಲೆರೆನ್ಸ್ ಬಲಿಷ್ಠ ಪಕ್ಷವಾಯಿತು. ಷೇಕ್ ಅಬ್ದುಲ್ಲಾ ಜನಪ್ರಿಯ ನಾಯಕನಾದನು ಮತ್ತು ಅನೇಕ ಬಾರಿ ಸೆರೆಮನೆಗೆ ನೂಕಲ್ಪಟ್ಟನು. ೧೯೩೯ರ ಹೊತ್ತಿಗೆ ನೆಹರು ಮತ್ತು ಷೇಕ್ ಅಬ್ದುಲ್ಲಾ ಭಾರಿ ಸ್ನೇಹಿತರಾದರು. ೧೯೪೬ರಲ್ಲಿ ಷೇಕ್ ಅಬ್ದುಲ್ಲಾ ಮಹಾರಾಜರ ವಿರುದ್ಧ 'ಕ್ವಿಟ್ ಕಾಶ್ಮೀರ್' ಚಳವಳಿ ಆರಂಭಿಸಿದ್ದರಿಂದ ದಸ್ತಗಿರಿಯಾಗಿ, ೩ ವರ್ಷ ಸೆರೆವಾಸ ವಿಧಿಸಲ್ಪಟ್ಟನು. ಕೋಪಗೊಂಡ ಜವಹರಲಾಲ್ ನೆಹರು ತಮ್ಮ ಸ್ನೇಹಿತನ ರಕ್ಷಣೆಗಾಗಿ ಕಾಶ್ಮೀರಕ್ಕೆ ಧಾವಿಸಿದರು. ಆದರೆ ಮಹಾರಾಜನ ಪೊಲೀಸರು ಅವರನ್ನು ಗಡಿಯಲ್ಲೇ ತಡೆದು ಹಿಂದಕ್ಕೆ ಕಳುಹಿಸಿದರು. ವಾಪಸ್ಸು ಬಂದ ನೆಹರು, ಆ ನಂತರ ಮಹಾರಾಜನ ಅನುಮತಿ ಪಡೆದು ಶ್ರೀನಗರಕ್ಕೆ ಹೋಗಿ ಸೆರೆಮನೆಯಲ್ಲಿದ್ದ ಶೇಖ್ ಅಬ್ದುಲ್ಲಾನನ್ನು ಭೇಟಿ ಮಾಡಿದರು. ಆದರೆ ಮಹಾರಾಜ ಶೇಖ್ ಅಬ್ದುಲ್ಲಾನನ್ನು ಬಿಡುಗಡೆ ಮಾಡಲಿಲ್ಲ. ಅದು ತಮಗೆ ಮಾಡಿದ ಅಪವಾನ ಎಂದು, ನೆಹರು ಅಸಮಾಧಾನಗೊಂಡರು. ಅವರಿಗೆ ಮಹಾರಾಜನ ಮೇಲಿನ ಕೋಪ ಮತ್ತಷ್ಟು ಜಾಸ್ತಿಯಾಯಿತು.

೧೯೪೭ರ ಆಗಸ್ಟ್ ೧೫ ಬಂದರೂ ಹರಿಸಿಂಗ್‌ನು ತೀರ್ಮಾನ ಕೈಗೊಳ್ಳಲಿಲ್ಲ. ಅವರು ಪಾಕಿಸ್ತಾನ ಮತ್ತು ಭಾರತ ಎರಡರೊಡನೆಯೂ ಸ್ಥಾಯಿ ಒಪ್ಪಂದಕ್ಕೆ ಸಹಿ ಹಾಕಲು ಮುಂದಾದರು. ಪಾಕಿಸ್ತಾನ ಒಪ್ಪಿ ಸಹಿ ಹಾಕಿತು. ಆದರೆ ಭಾರತ ಸಹಿ ಹಾಕಲಿಲ್ಲ. ನಿಧಾನ ಮಾಡಿತು. ತೀರ್ಮಾನಕ್ಕೆ ಬರಲು ಭಾರತಕ್ಕೆ ಕಾಲಾವಕಾಶ ಬೇಕಾಗಿತ್ತು. ಆತುರ ಪಡಲು ಸರ್ದಾರರು ಸಿದ್ಧರಿರಲಿಲ್ಲ. ಕಾಶ್ಮೀರದ ವಿಷಯದಲ್ಲಿ ಅವರು ಅಷ್ಟು ಉತ್ಸುಕರಾಗಿರಲಿಲ್ಲ. ಅದು ಬಹು ಸಂಖ್ಯಾತ ಮುಸ್ಲಿಮರ ದೇಶವಾದದ್ದರಿಂದ ಅದನ್ನು ಭಾರತಕ್ಕೆ ಸೆಳೆಯುವುದು ಸರಿಯಲ್ಲ – ಎನ್ನುವುದು ಅವರ ಅಭಿಪ್ರಾಯವಾಗಿತ್ತೆಂದು ಕಾಣುತ್ತದೆ.

ಆದರೆ ಸೆಪ್ಟೆಂಬರ್ ೧೩ರಂದು ಜುನಾಗಡದ ಸೇರ್ಪಡೆಯನ್ನು ಒಪ್ಪಲಾಗಿದೆ ಎಂದು ಪಾಕಿಸ್ತಾನವು ಭಾರತಕ್ಕೆ ತಿಳಿಸಿದ ಮೇಲೆ, ಸರ್ದಾರರ ಅಭಿಪ್ರಾಯ ಕಾಶ್ಮೀರದ ಬಗೆಗೆ ಬದಲಾಯಿತು. "ಶೇ. ೮೫ರಷ್ಟು ಹಿಂದೂಗಳಿರುವ ಜುನಾಗಡವನ್ನು ಅದರ ಮುಸ್ಲಿಂ ರಾಜ ಕೇಳಿದನೆಂದು ಪಾಕಿಸ್ತಾನ ಸೇರಿಸಿಕೊಳ್ಳುವುದಾದರೆ ಹಿಂದೂ ಮಹಾರಾಜ ಆಳುವ ಮುಸ್ಲಿಂ ಜನಸಂಖ್ಯೆ ಜಾಸ್ತಿ ಇರುವ ಕಾಶ್ಮೀರವನ್ನು ಭಾರತ ಏಕೆ ಸೇರಿಸಿಕೊಳ್ಳಬಾರದು?" – ಎಂದು ಅವರು ತರ್ಕಿಸಿದರು.[೧೦೬]

ತಕ್ಷಣ ಸರ್ದಾರರು ಕಾರ್ಯಪ್ರವೃತ್ತರಾದರು. ಅಮೃತಸರ ಮತ್ತು ಜಮ್ಮು ನಡುವೆ ಟೆಲಿಗ್ರಾಫ್ ಸಂಪರ್ಕಕ್ಕೆ ಹಾಗೂ ಪಠಾನ್‌ಕೋಟ್ ಮತ್ತು ಜಮ್ಮು ನಡುವೆ ಟೆಲಿಗ್ರಾಫ್ ಮತ್ತು ಟೆಲಿಫೋನ್ ಸಂಪರ್ಕಕ್ಕೆ ಉಪಕರಣಗಳ ಜೋಡಣೆಗೆ ಕ್ರಮ ಕೈಗೊಂಡರು. ದೇಶ ವಿಭಜನೆಯಾದ ಮೇಲೆ ಕಾಶ್ಮೀರ ಮತ್ತು ಭಾರತದ ನಡುವೆ ರಸ್ತೆ ಸಂಪರ್ಕ ಇರಲಿಲ್ಲ. ಸಂಪರ್ಕ ಮಂತ್ರಿ ರಫಿ ಅಹ್ಮದ್ ಕಿದ್ವಾಯ್‌ರವರು ಸರ್ದಾರರ ಕೋರಿಕೆಯ ಮೇರೆ ಪಠಾನ್‌ಕೋಟ್ ಮತ್ತು ಜಮ್ಮು ನಡುವೆ ಶೀಘ್ರವಾಗಿ ಸಕಲ ಹವಾಗುಣದ ರಸ್ತೆಯನ್ನು ನಿರ್ಮಿಸಿದರು. ಜೊತೆಗೆ ಜಮ್ಮು ಮತ್ತು ಶ್ರೀನಗರದ ನಡುವಣ ರಸ್ತೆಯ ಅಗಲವನ್ನು ವಿಸ್ತರಿಸಿ ಉತ್ತಮ ಪಡಿಸಬೇಕಾಗಿತ್ತು. ಆ ಕಾರ್ಯಕ್ಕೆ ಮಾಧೋಪುರ್‌ನಲ್ಲಿ ರಾವಿ ನದಿಗೆ ಅಡ್ಡಲಾಗಿ ಸೇತುವೆಯ ನಿರ್ಮಾಣ ಆಗಬೇಕಾಗಿತ್ತು. ಅದನ್ನು ಸಹ ಶೀಘ್ರವಾಗಿ ಮಾಡುವಂತೆ ಕಾಮಗಾರಿ ಮಂತ್ರಿ ಎನ್.ವಿ. ಗಾಡ್ಗಿಲ್‌ಗೆ ಪಟೇಲ್ ಸೂಚಿಸಿದರು.

ಸರ್ದಾರರು ಮತ್ತೊಂದು ಕೆಲಸ ಮಾಡಿದರು. ೧೯೪೭ರ ಆಗಸ್ಟ್ ೧೫ಕ್ಕೆ ಸ್ವಲ್ಪ ಮುಂಚೆ ಮಹಾರಾಜ ಹರಿಸಿಂಗ್‌ನು ಪ್ರಧಾನಮಂತ್ರಿ ರಾಮಚಂದ್ರ ಕಾಕ್‌ನ ಬದಲಿಗೆ ಮೇಜರ್ ಜೆನೆರಲ್ ಜನಕ್ ಸಿಂಗ್‌ನನ್ನು ಅವರ ಸ್ಥಾನದಲ್ಲಿ ನಿಯಮಿಸಿದನು. ಕೆಲವೇ ದಿನಗಳಲ್ಲಿ ಅವರನ್ನೂ ತೆಗೆದು ಪಂಜಾಬ್ ಉಚ್ಚ ನ್ಯಾಯಾಲಯದ ಒಬ್ಬ ನ್ಯಾಯಾಧೀಶರಾಗಿದ್ದ ಮೆಹರ್ ಚಂದ್ ಮಹಾಜನ್‌ರವರನ್ನು ಪ್ರಧಾನಿಯಾಗುವಂತೆ ಕೋರಿದನು. ಪಟೇಲರು ಅವರಿಗೆ ಎಂಟು ತಿಂಗಳ ರಜೆ ನೀಡಿ ಶ್ರೀನಗರಕ್ಕೆ ಹೋಗುವಂತೆ ಮಾಡಿದರು ಮತ್ತು ಅಲ್ಲಿ ಅವರು ಮಾಡಬೇಕಾದ ಕೆಲಸಗಳ ಬಗೆಗೆ ಸೂಕ್ತ ಸೂಚನೆಗಳನ್ನು ನೀಡಿದರು.

ಪಟೇಲರು ೪೭ರ ಸೆಪ್ಟೆಂಬರ್ ೨೧ರಂದು ಹರಿ ಸಿಂಗ್‌ರವರಿಗೆ ಪತ್ರ ಬರೆದು, "ನ್ಯಾಯಮೂರ್ತಿ ಮೆಹರ್ ಚಂದ್‌ರವರು ಅವರ ಮತ್ತು ನನ್ನ ನಡುವೆ ಕಾಶ್ಮೀರದ ಹಿತಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳ ಬಗೆಗೆ ನಡೆದ ಸಂಭಾಷಣೆಯ ಸಾರವನ್ನು ಸ್ವತಃ ಅವರೇ ನಿಮಗೆ ತಿಳಿಸುತ್ತಾರೆ. ನಾನು ಅವರಿಗೆ ಪೂರ್ಣ

ಬೆಂಬಲ ಮತ್ತು ಸಹಕಾರದ ವಾಗ್ದಾನ ನೀಡಿದ್ದೇನೆ," ಎಂದು ತಿಳಿಸಿದರು.[೧೦೭]

ಸೆಪ್ಟೆಂಬರ್ ೨೭ರಂದು ನೆಹರುರವರು ಪಟೇಲರಿಗೆ ಪತ್ರ ಬರೆದು, "ಸಹಜವಾಗಿಯೇ ನಿಮ್ಮ ಮಾತು ಮಹಾರಾಜ ಮತ್ತು ಮಹಾಜನ್ ಬಳಿ ನಡೆಯುತ್ತದೆ..... ಸರಿಯಾಗಿ ಉಪಯೋಗಿಸಿಕೊಂಡರೆ ನ್ಯಾಷನಲ್ ಕಾನ್‌ಫ್ಲೆರೆನ್ಸ್ ಒಂದು ನಿಜವಾದ ಆಸ್ತಿ. ಅದನ್ನು ಕಳೆದುಕೊಂಡರೆ ಬಹಳ ಅನ್ಯಾಯವಾಗುತ್ತದೆ. ನಮ್ಮೊಡನೆ ಸಹಕರಿಸುವ, ಪಾಕಿಸ್ತಾನವನ್ನು ವಿರೋಧಿಸುವ ಮತ್ತು ನಮ್ಮ ಸಲಹೆಯ ಪ್ರಕಾರ ನಡೆಯುವ ಆಶ್ವಾಸನೆಯನ್ನು ಶೇಖ್ ಅಬ್ದುಲ್ಲಾ ನಮಗೆ ಮತ್ತೆ ಮತ್ತೆ ಕೊಟ್ಟಿದ್ದಾರೆ," ಎಂದು ತಿಳಿಸಿದರು. ಪಟೇಲರ ಸಲಹೆಯ ಮೇರೆ ಶೇಖ್ ಅಬ್ದುಲ್ಲಾ ಸೆಪ್ಟೆಂಬರ್ ೨೯ರಂದು ಬಿಡುಗಡೆ ಮಾಡಲ್ಪಟ್ಟರು. ಬಿಡುಗಡೆಯ ಮುಂಚೆಯೆ ಶೇಖ್ ಅಬ್ದುಲ್ಲಾ ಸೆರೆಮನೆಯಿಂದ ಮಹಾರಾಜರಿಗೆ ಪತ್ರ ಬರೆದು ತಮ್ಮ ಮತ್ತು ತಮ್ಮ ಪಕ್ಷದ ಬೆಂಬಲ ಮತ್ತು ವಿಧೇಯತೆಯ ಆಶ್ವಾಸನೆಯನ್ನು ನೀಡಿದ್ದರು. ಆದರೆ ಅದು ಒಂದು ನಾಟಕ. ನೆಹರು ಸಹಾಯದಿಂದ ಕಾಶ್ಮೀರದ ಪ್ರಧಾನಿಯಾಗುವುದು ಅವರ ಹಂಚಿಕೆ. ಪ್ರಧಾನಿಯಾದ ಮೇಲೆ ಬಲಿಷ್ಠನಾಗಿ ತಮ್ಮ 'ಕ್ವಿಟ್ ಕಾಶ್ಮೀರ್' ಚಳವಳಿಯನ್ನು ಆರಂಭಿಸುತ್ತಾರೆ, ಎಂದು ಮಹಾರಾಜರು ಮಹಾಜನ್‌ಗೆ ಹೇಳಿದ್ದರು. ಆದರೂ ಪಟೇಲರ ಸಲಹೆಗೆ ಬೆಲೆ ಕೊಟ್ಟು ಅಬ್ದುಲ್ಲಾರವರನ್ನು ಬಿಡುಗಡೆ ಮಾಡಿದ್ದರು.[೧೦೮]

ಈ ಮಧ್ಯೆ, ಕಾಶ್ಮೀರ ಸರ್ಕಾರ ಬ್ರಿಟಿಷ್ ಪ್ರಧಾನಿಗೆ ದೂರು ನೀಡಿದರೂ ಏನೂ ಪ್ರಯೋಜನ ಆಗಿರಲಿಲ್ಲ. ಸರಕಿನ ಕೊರತೆಯಿಂದ ಕಾಶ್ಮೀರಿಗಳು ತೊಂದರೆಗೆ ಸಿಲುಕಿದರು. ಜೊತೆಗೆ ೪೫೦ ಮೈಲಿ ಗಡಿ ರೇಖೆಯ ಉದ್ದಕ್ಕೂ ಪಾಕಿಸ್ತಾನಿ ಸೈನಿಕರು ಕಾಶ್ಮೀರದೊಳಕ್ಕೆ ನುಗ್ಗಿ ತೊಂದರೆ ಕೊಡಲಾರಂಭಿಸಿದರು. ಅದರಿಂದ ಕಾಶ್ಮೀರ ಸರ್ಕಾರ ತನ್ನ ಸೈನಿಕರನ್ನು ಗಡಿಯ ಉದ್ದಕ್ಕೂ ಹರಡಬೇಕಾಯಿತು. ಕಾಶ್ಮೀರವು ಪಾಕಿಸ್ತಾನವನ್ನು ಸೇರುವಂತೆ ಒತ್ತಾಯಿಸಲು ಪಾಕಿಸ್ತಾನ ಈ ಕ್ರಮಗಳನ್ನು ಕೈಗೊಂಡಿತ್ತು.[೧೦೯]

೧೯೪೭ರ ಸೆಪ್ಟೆಂಬರ್ ಅಂತ್ಯದಲ್ಲಿ ಪ್ರಧಾನಿ ನೆಹರು ತಮಗೆ ಬಂದ ಕೆಲವು ವರದಿಗಳನ್ನು ಪಟೇಲರಿಗೆ ಕಳುಹಿಸಿದರು. 'ಬಹಳ ಸಂಖ್ಯೆಯಲ್ಲಿ ಕಾಶ್ಮೀರವನ್ನು ಪ್ರವೇಶಿಸಲು ಪಾಕಿಸ್ತಾನವು ಸಿದ್ಧತೆ ಮಾಡಿಕೊಳ್ಳುತ್ತಿದೆ' ಎಂದು ಆ ವರದಿ ತಿಳಿಸಿತು. 'ಈಗ ಕಾಶ್ಮೀರದೊಳಕ್ಕೆ ನುಸುಳಿ ಮುಂದೆ ಚಳಿಗಾಲ ಬಂದು ಕಾಶ್ಮೀರವು ಹೆಚ್ಚು ಕಡಿಮೆ ಸಂಪರ್ಕರಹಿತ ಸ್ಥಿತಿಗೆ (isolation) ಬಂದಾಗ ಏನಾದರು ಭಾರಿ ಕಾರ್ಯಾಚರಣೆ ನಡೆಸುವುದು ಪಾಕಿಸ್ತಾನದ ಯೋಜನೆ' ಎಂದು ನೆಹರು

ತಿಳಿದಿದ್ದರು. ಶೇಖ್ ಅಬ್ದುಲ್ಲಾರವರ ಸಹಕಾರದಿಂದ ಆದಷ್ಟು ಶೀಘ್ರವಾಗಿ ಕಾಶ್ಮೀರವನ್ನು ಭಾರತಕ್ಕೆ ಸೇರಿಸಿಕೊಳ್ಳುವುದು, ಅದಕ್ಕೆ ಪರಿಹಾರ ಎಂದು ನೆಹರು ಆಲೋಚಿಸಿದರು. ನೆಹರುರವರ ಈ ವಿಚಾರಧಾರೆಯನ್ನು ಪಟೇಲರು ಒಪ್ಪಿದರು, ಆದರೆ ಅವರಿಗೆ ಶೇಖ್ ಅಬ್ದುಲ್ಲಾರವರ ಬಗೆಗಿನ ನೆಹರುರವರ ಅಭಿಪ್ರಾಯ ಒಪ್ಪಿಗೆಯಾಗಿರಲಿಲ್ಲ.

ಅಕ್ಟೋಬರ್ ೨ರಂದು ಪಟೇಲರು ಹರಿಸಿಂಗ್‌ಗೆ ಪತ್ರ ಬರೆದು, "ಶೇಖ್ ಅಬ್ದುಲ್ಲಾ ಸಧ್ಯದಲ್ಲೇ ದೆಹಲಿಗೆ ಬರುತ್ತಿದ್ದಾರೆ. ಅವರಿಂದ ನಿಮಗಿರುವ ತೊಂದರೆಗಳ ಬಗೆಗೆ ಒಂದು ಸಮಾಧಾನಕರ ಪರಿಹಾರಕ್ಕೆ ಬರಲು ಪ್ರಯತ್ನಿಸುತ್ತೇವೆ. ಆನಂತರ, ನಾವು ಮುಂದೇನು ಮಾಡಬಹುದು ಎನ್ನುವುದನ್ನು ತಿಳಿಸುತ್ತೇನೆ," ಎಂದು ತಿಳಿಸಿದರು. ಶೇಖ್ ಅಬ್ದುಲ್ಲಾ ಜೊತೆ ಬಹಳ ಸುತ್ತು ಚರ್ಚಿಸಿದ ಮೇಲೆ ಅಕ್ಟೋಬರ್ ೨೧ರಂದು ಸರ್ದಾರರು ಕಾಶ್ಮೀರ ಪ್ರಧಾನಿ ಮಹಾಜನ್‌ಗೆ ಪತ್ರ ಬರೆದು, "ಹೊರಗಿನ ಅಪಾಯಗಳನ್ನು ಎದುರಿಸುವ ವಿಷಯದಲ್ಲಿ ಸಹಕರಿಸಲು ಶೇಖ್ ಅಬ್ದುಲ್ಲಾ ನಿಜವಾಗಿಯು ಕಾತರರಾಗಿದ್ದಾರೆ ಅನ್ನಿಸುತ್ತಿದೆ..... ಅವರು ಏನಾದರು ಗಟ್ಟಿಯಾದುದನ್ನು ಮಾಡಬೇಕಾದರೆ ಅವರ ಕೈಗಳನ್ನು ತಕ್ಷಣ ಬಲಪಡಿಸಬೇಕು ಅನ್ನುತ್ತಾರೆ..... ಅದೂ ಸರಿಯೆ..... ಆದದ್ದರಿಂದ ಮಹಾರಾಜರ ಸ್ಥಾನಕ್ಕೆ ಚ್ಯುತಿ ಬರದಂತೆ, ಅವರು ಮತ್ತು ಶೇಖ್ ನಡುವೆ ಅಧಿಕಾರದ ಹಂಚಿಕೆ ಮಾಡುವುದು," ಎಂದು ತಿಳಿಸಿದರು. ಆದರೆ ಪತ್ರ ಮಹಾಜನ್‌ರವರ ಕೈ ಸೇರುವ ಮುನ್ನವೇ ಕಾಶ್ಮೀರದ ಮೇಲೆ ಪಾಕಿಸ್ತಾನದ ಆಕ್ರಮಣ ನಡೆಯಿತು.[೧೧೦]

೧೯೪೭ರ ಅಕ್ಟೋಬರ್ ೨೨ರಂದು, ಪಾಕಿಸ್ತಾನದಿಂದ ೫೦೦೦ ಮಂದಿ ಶಸ್ತ್ರಧಾರಿಗಳಾದ ಬುಡಕಟ್ಟಿನ ಜನರು ೩೦೦ ಲಾರಿಗಳಲ್ಲಿ ವಾಯುವ್ಯದ ಕಡೆಯಿಂದ ಕಾಶ್ಮೀರದೊಳಕ್ಕೆ ನುಗ್ಗಿದರು. ಅವರು ತಮ್ಮ ಜೊತೆಯಲ್ಲಿ ಹೆಚ್ಚಿನ ಆಯುಧಗಳು ಮತ್ತು ಮದ್ದುಗುಂಡುಗಳನ್ನೂ ಸಹ ತಂದಿದ್ದರು. ಕಾಶ್ಮೀರವನ್ನು ಚೆನ್ನಾಗಿ ಬಲ್ಲ ಪಾಕಿಸ್ತಾನಿ ಸೈನ್ಯದ ಅಧಿಕಾರಿಗಳು ಅದರ ಮುಖಂಡತ್ವ ವಹಿಸಿದ್ದರು. ಅವರು ವಾಯುವ್ಯ ಗಡಿನಾಡಿನ ಅಬೋಟಾಬಾದ್ – ಜೀಲಂ ಖಣಿವೆಯ ರಸ್ತೆಯಲ್ಲಿ ಬಂದು ಘಾರ್ಹಿ ಮತ್ತು ಡೊಮೆಲ್ ಅನ್ನು ವಶಪಡಿಸಿಕೊಂಡು ಮುಜಫರ್‌ಬಾದ್‌ನ ಬಾಗಿಲನ್ನು ತಲುಪಿದರು. ಮುಜಫರ್‌ಬಾದ್‌ನಲ್ಲಿದ್ದ ಕಾಶ್ಮೀರದ ಸೈನ್ಯದಲ್ಲಿ ಮುಸ್ಲಿಂ ಮತ್ತು ಡೋಗ್ರಾ ಸೈನಿಕರಿದ್ದರು. ಅವರ ನಾಯಕ ಲೆಫ್ಟಿನೆಂಟ್ ಕರ್ನಲ್ ನಾರಾಯಣ್ ಸಿಂಗ್. ಆ ಸೈನ್ಯದಲ್ಲಿದ್ದ ಮುಸ್ಲಿಂ ಸೈನಿಕರು ಸೈನ್ಯವನ್ನು ಪರಿತ್ಯಜಿಸಿ ತಮ್ಮ ನಾಯಕ ಮತ್ತು ಇತರರನ್ನು ಕೊಂದು, ಆಕ್ರಮಣಕಾರರಿಗೆ ತಾವೇ ಮುಂದಾಳುಗಳಾಗಿ

ಹೊರಟರು. ಕೆಲವೇ ದಿನಗಳಿಗೆ ಮುಂಚೆ ಮಹಾರಾಜ ಹರಿಸಿಂಗರು ಲೆಫ್ಟಿನೆಂಟ್ ಕರ್ನಲ್ ನಾರಾಯಣ್ ಸಿಂಗ್‌ರವರನ್ನು 'ನಿಮ್ಮ ಪಡೆಯಲ್ಲಿ ಅರ್ಧ ಮುಸ್ಲಿಂ ಸೈನಿಕರಿದ್ದಾರೆ. ಅವರ ನಿಷ್ಠೆಯ ಮೇಲೆ ನೀವು ವಿಶ್ವಾಸ ಇಡಬಹುದೆ?" ಎಂದು ಕೇಳಿದ್ದರು. ನಾರಾಯಣ್ ಸಿಂಗ್‌ರವರು ಒಂದಿಷ್ಟೂ ಅನುಮಾನಿಸದೆ, "ಡೋಗ್ರಾ ಸೈನಿಕರಿಗಿಂತ ಹೆಚ್ಚಾಗಿ" ಎಂದು ಉತ್ತರಿಸಿದ್ದರು.[೧೧೧] ಆದರೆ ಆ ಮುಸ್ಲಿಂ ಸೈನಿಕರು ಈಗ ನಿಷ್ಠೆ ತೊರೆದು ವೈರಿಗಳ ಕಡೆಗೆ ಸೇರಿದ್ದರು.

ದಾಳಿಕಾರರು ಶ್ರೀನಗರಕ್ಕೆ ಹೋಗುವ ರಸ್ತೆಯಲ್ಲಿರುವ ಬಾರಾಮೂಲ ಕಡೆಗೆ ಚಲಿಸಿದರು. ಅವರ ಮುಂದಲ ಗುರಿ ಯೂರಿ. ಅಷ್ಟು ಹೊತ್ತಿಗೆ ರಾಜ್ಯ ಸೈನ್ಯದ ಎಲ್ಲಾ ಮುಸ್ಲಿಂ ಸೈನಿಕರು ಸೈನ್ಯವನ್ನು ಪರಿತ್ಯಜಿಸಿ ಓಡಿಹೋಗಿ ಆಕ್ರಮಣಕಾರರನ್ನು ಸೇರಿಕೊಂಡಿದ್ದರು. ಆ ವಿಷಯ ಮತ್ತು ಆಕ್ರಮಣಕಾರರು ಯೂರಿಗೆ ಬರುತ್ತಿರುವ ವಿಷಯ ತಿಳಿದ ತಕ್ಷಣ ಸೈನ್ಯದ ದಂಡನಾಯಕ ಬ್ರಿಗೇಡಿಯರ್ ರಾಜೀಂದರ್ ಸಿಂಗ್ ೧೫೦ ಮಂದಿ ಸೈನಿಕರನ್ನು ಸಂಗ್ರಹಿಸಿ ಯೂರಿಯ ಕಡೆಗೆ ಧಾವಿಸಿದರು. ಅದೃಷ್ಟವಶಾತ್ ಅವರು ಯೂರಿಯನ್ನು ಆಕ್ರಮಣಕಾರರಿಗಿಂತ ಮುಂಚೆ ತಲುಪಿ ಅಲ್ಲಿಯ ಸೇತುವೆಯನ್ನು ನಾಶಪಡಿಸಿದರು ಮತ್ತು ಆಕ್ರಮಣಕಾರರನ್ನು ಎರಡು ದಿನಗಳ ಕಾಲ ತಡೆದರು. ಕೊನೆಗೆ ಅವರೆಲ್ಲರು ಹತರಾದರು. ಅವರು ಹಾಗೆ ತಡೆಯದೇ ಹೋಗಿದ್ದರೆ ಶ್ರೀನಗರದಲ್ಲಿ ಭಾರಿ ಅನಾಹುತ ಆಗುತ್ತಿತ್ತು.

ದಾಳಿಕಾರರು ೨೪ರಂದು ಶ್ರೀನಗರಕ್ಕೆ ವಿದ್ಯುಚ್ಛಕ್ತಿ ಸರಬರಾಜು ಮಾಡುವ ಮಹುರಾ ವಿದ್ಯುಚ್ಛಕ್ತಿ ಘಟಕವನ್ನು ವಶಪಡಿಸಿಕೊಂಡರು. ಶ್ರೀನಗರ ಕತ್ತಲಲ್ಲಿ ಮುಳುಗಿತು. ಧಾಳಿಕಾರರು ಶ್ರೀನಗರವನ್ನು ೨೬ರಂದು ತಲುಪಿ, ಅಲ್ಲಿಯ ಮಸೀದಿಯಲ್ಲಿ ಈದ್ ಆಚರಿಸುವುದಾಗಿ ಪ್ರಕಟಿಸಿದರು.

ಅಕ್ಟೋಬರ್ ೨೪ರ ಸಂಜೆ ಮಹಾರಾಜರು ತುರ್ತು ನೆರವು ನೀಡುವಂತೆ ಭಾರತ ಸರ್ಕಾರಕ್ಕೆ ಮನವಿ ಮಾಡಿದರು. ಅದೇ ಸಮಯಕ್ಕೆ ಭಾರತ ಸೈನ್ಯದ ಸುಪ್ರೀಂ ಕಮಾಂಡರ್‌ನಿಂದಲೂ ಕಾಶ್ಮೀರದ ಆಕ್ರಮಣದ ವಿಷಯ ಸರ್ಕಾರಕ್ಕೆ ಬಂದಿತು. ಅಕ್ಟೋಬರ್ ೨೫ರ ಬೆಳಗ್ಗೆ ಲಾರ್ಡ್ ಮೌಂಟ್‌ಬ್ಯಾಟನ್ ಅಧ್ಯಕ್ಷತೆಯಲ್ಲಿ ರಕ್ಷಣಾ ಸಮಿತಿಯ ಸಭೆ ನಡೆಸಿ, ಕಾಶ್ಮೀರದ ಮಹಾರಾಜರ ತುರ್ತು ಸಹಾಯದ ಬೇಡಿಕೆಯನ್ನು ಪರಿಗಣಿಸಿತು. ಸರ್ದಾರರು ಮಹಾರಾಜರಿಗೆ ಸಹಾಯವನ್ನು ಕಳುಹಿಸಲು ಬೆಂಬಲಿಸಿದರು. ನೆಹರು, 'ರಕ್ಷಣಾ ಏರ್ಪಾಟಲ್ಲಿ ಮಹಾರಾಜರು ಶೇಖ್ ಅಬ್ದುಲ್ಲಾರನ್ನು ಸೇರಿಸಿಕೊಳ್ಳಬೇಕು' ಎಂದರು. ಅವರಿಗೆ ಖಾಸಗಿ ದೋಸ್ತಿಯ ಭಾವನೆಯೇ ಪ್ರಧಾನವಾಯಿತು. ಆದರೆ ಸಮಿತಿಯ ಅಧ್ಯಕ್ಷ ಮೌಂಟ್‌ಬ್ಯಾಟನ್‌ರವರು

"ಪೂರ್ಣ ವಿಷಯ ತಿಳಿಯುವವರೆಗೆ ಯಾವ ದುಡುಕಿನ ಕ್ರಮವನ್ನು ತೆಗೆದುಕೊಳ್ಳಬಾರದು" ಎಂದರು. ಅದರಿಂದ ಪರಿಸ್ಥಿತಿಯನ್ನು ತಿಳಿದು ಬರಲು ವಿ.ಪಿ. ಮೆನನ್‌ರವರನ್ನು ಶ್ರೀನಗರಕ್ಕೆ ಕಳುಹಿಸಬೇಕೆಂದು ತೀರ್ಮಾನವಾಯಿತು.[೧೧೨]

ತಕ್ಷಣ, ಮೆನನ್‌ರವರು ಭೂ ಸೈನ್ಯ ಮತ್ತು ವಾಯು ಸೈನ್ಯದ ಅಧಿಕಾರಿಗಳು ಮತ್ತು ದ್ವಾರಕಾನಾಥ ಕಬ್ರು ಒಡನೆ ವಿಮಾನದಲ್ಲಿ ಶ್ರೀನಗರಕ್ಕೆ ಹೊರಟರು. ದ್ವಾರಕಾನಾಥ ಕಬ್ರು ನೆಹರು ಮತ್ತು ಶೇಖ್ ಅಬ್ದುಲ್ಲಾರವರ ನಿಕಟವರ್ತಿ ಮತ್ತು ಅಖಿಲ ಭಾರತ ರಾಜ್ಯಗಳ ಜನರ ಸಮಾವೇಶದ ಕಾರ್ಯದರ್ಶಿಯಾಗಿದ್ದರು. ಮೆನನ್ ಮತ್ತು ಅವರ ತಂಡ ಶ್ರೀನಗರದ ವಿಮಾನ ನಿಲ್ದಾಣದಲ್ಲಿ ಇಳಿದಾಗ ಸ್ಮಶಾನ ಮೌನ ಆವರಿಸಿತ್ತು. ಅಲ್ಲಿಂದ ಅವರು ನೇರವಾಗಿ ಪ್ರಧಾನಮಂತ್ರಿ ಮಹಾಜನ್ ನಿವಾಸಕ್ಕೆ ಹೋದರು. ಮಾರ್ಗದಲ್ಲಿ ಎಲ್ಲೂ ಪೊಲೀಸರು ಕಾಣಿಸಲೇ ಇಲ್ಲ. ನ್ಯಾಷನಲ್ ಕಾನ್‌ಫರೆನ್ಸ್‌ನ ಸ್ವಯಂಸೇವಕರು ಲಾಠಿ ಹಿಡಿದು ಜನರನ್ನು ತನಿಖೆ ಮಾಡುತ್ತಿದ್ದರು. ಜನರೂ ಸಹ ಬಹಳ ಕಡಿಮೆ ಇದ್ದರು. ಪ್ರಧಾನಮಂತ್ರಿ ಅಲ್ಲಿಯ ಪರಿಸ್ಥಿತಿಯನ್ನು ವಿವರಿಸಿ ತುರ್ತು ಸಹಾಯಕ್ಕಾಗಿ ಬೇಡಿದರು. ಮೆನನ್‌ರವರು ಅಲ್ಲಿಂದ ಹೊರಟು ಮಹಾರಾಜರನ್ನು ಭೇಟಿ ಮಾಡಿದರು. ಅಷ್ಟು ಹೊತ್ತಿಗೆ ಆಕ್ರಮಣಕಾರರು ಶ್ರೀನಗರದಿಂದ ೪೦ ಮೈಲಿ ದೂರದಲ್ಲಿರುವ ಬಾರಾಮುಲ್ಲದ ಹೊರಭಾಗ ತಲುಪಿದ್ದರು. ಇನ್ನು ಒಂದು ಅಥವಾ ಎರಡು ದಿನಗಳಲ್ಲಿ ಅವರು ಶ್ರೀನಗರ ತಲುಪುತ್ತಿದ್ದರು. ಮಹಾರಾಜ ನಿಸ್ಸಹಾಯಕನಾಗಿದ್ದರು. ಅವರ ಬಳಿ ಸೈನ್ಯವೂ ಇರಲಿಲ್ಲ, ಪೊಲೀಸರೂ ಇರಲಿಲ್ಲ. ಎಲ್ಲರೂ ಅವರನ್ನು ತೊರೆದು ಪಲಾಯನ ಮಾಡಿದ್ದರು. ಮೆನನ್‌ರವರು ಮಹಾರಾಜರಿಗೆ ತಕ್ಷಣ ಆದಷ್ಟೂ ಅಮೂಲ್ಯ ವಸ್ತುಗಳನ್ನು ತೆಗೆದುಕೊಂಡು ಕುಟುಂಬದವರನ್ನೂ ಕರೆದುಕೊಂಡು ಜಮ್ಮುವಿಗೆ ಹೋಗುವಂತೆ ಸಲಹೆ ನೀಡಿದರು. ಹಾಗೆ ಸಲಹೆ ನೀಡುವಂತೆ ಪಟೇಲರು ಅವರಿಗೆ ತಿಳಿಸಿದ್ದರು. ಮೆನನ್ ಆದಷ್ಟು ವಿಷಯ ಸಂಗ್ರಹಿಸಿ ಮಾರನೆ ಬೆಳಗ್ಗೆ (ಅಕ್ಟೋಬರ್ ೨೬) ದೆಹಲಿಗೆ ವಾಪಸ್ಸು ಬಂದರು. ಅವರೊಡನೆ ಮಹಾಜನ್ ಸಹ ಬಂದರು. ಶೇಖ್ ಅಬ್ದುಲ್ಲಾ ದೆಹಲಿಯಲ್ಲೇ ಇದ್ದರು. ಅವರು ಮತ್ತು ನೆಹರು ಹಿಂದಿನ ರಾತ್ರಿ ಸರ್ದಾರರ ಒಡನೆ ಮಾತನಾಡಿದ್ದರು. ಮೆನನ್‌ರವರು ವಿಮಾನ ನಿಲ್ದಾಣದಿಂದ ನೇರವಾಗಿ ರಕ್ಷಣಾ ಸಮಿತಿಯ ಸಭೆಗೆ ಹೋದರು. ಅಲ್ಲಿ, ಕಾಶ್ಮೀರವನ್ನು ಧಾಳಿಕಾರರಿಂದ ಉಳಿಸಬೇಕಾದರೆ ತಕ್ಷಣ ಸಹಾಯವನ್ನು ಕಳುಹಿಸಬೇಕೆಂದು ತಮ್ಮ ಅಭಿಪ್ರಾಯ ತಿಳಿಸಿದರು.

ಮೌಂಟ್‌ಬ್ಯಾಟನ್‌ರವರು, 'ಕಾಶ್ಮೀರವು ಪಾಕಿಸ್ತಾನಕ್ಕಾಗಲಿ ಅಥವಾ

ಇಂಡಿಯಾಕ್ಕಾಗಲಿ ಇನ್ನೂ ಸೇರಿಲ್ಲದಿರುವುದರಿಂದ ಅದೊಂದು ಸ್ವತಂತ್ರ ದೇಶ. ಒಂದು ಸ್ವತಂತ್ರ ದೇಶದೊಳಕ್ಕೆ ಭಾರತದ ಸೈನ್ಯವನ್ನು ಕಳುಹಿಸುವುದು ಸೂಕ್ತ ಕ್ರಮವಲ್ಲ, ಮಹಾರಾಜರಿಗೆ ಭಾರತಕ್ಕೆ ಸೇರಿಕೊಳ್ಳಲು ಇಷ್ಟವಿದ್ದರೆ, ಆಗ ಕಾಶ್ಮೀರವು ಭಾರತದ ಒಂದು ಭಾಗವಾಗುತ್ತದೆ, ಆಗ ಮಾತ್ರ ಸೈನ್ಯವನ್ನು ಕಳುಹಿಸಬಹುದು. ಆದರೆ ಧಾಳಿಕಾರರನ್ನು ಅಟ್ಟಿದ ಮೇಲೆ ಜನಮತವನ್ನು ಪ್ಲೆಬಿಸೈಟ್ ಮೂಲಕ ತೆಗೆದುಕೊಳ್ಳುವ ಶರತ್ತಿನ ಮೇಲೆ ಕಾಶ್ಮೀರವನ್ನು ಈಗ ಸೇರಿಸಿಕೊಳ್ಳಬೇಕು," ಎಂದರು. ಇದಾವುದು ಸರ್ದಾರರಿಗೆ ಒಪ್ಪಿಗೆ ಆಗಲಿಲ್ಲ. ಧಾಳಿಕಾರರು ಕಾಶ್ಮೀರದ ಮೇಲೆ ಆಕ್ರಮಣ ಮಾಡಿರುವುದಷ್ಟೇ ಅವರಿಗೆ ಸಾಕಾಗಿತ್ತು ಸೈನ್ಯವನ್ನು ಕಳುಹಿಸಲು. ಆದರೆ ಮೌಂಟ್‌ಬ್ಯಾಟನ್‌ರವರ ಮಾತನ್ನು ತೆಗೆದು ಹಾಕಿ ಅವರ ಆತ್ಮಗೌರವಕ್ಕೆ ಭಂಗ ತರಬಾರದು. ಭಾರತ ಮತ್ತು ಪಾಕಿಸ್ತಾನ ಎರಡೂ ರಾಷ್ಟ್ರಗಳ ಸೈನ್ಯಗಳಲ್ಲಿ ಅನೇಕ ಆಂಗ್ಲರು ಇನ್ನೂ ಅಧಿಕಾರಿಗಳಾಗಿದ್ದರು. ಜೊತೆಗೆ ನೆಹರುರವರು ಮೌಂಟ್‌ಬ್ಯಾಟನ್ ಅಭಿಪ್ರಾಯದಿಂದ ಪ್ರಭಾವಿತರಾಗಿದ್ದರು. ಅದರಿಂದ ಪಟೇಲರು ಮೌಂಟ್‌ಬ್ಯಾಟನ್‌ರವರ ಸಲಹೆಯನ್ನು ಸ್ವೀಕರಿಸಿದರು.[೧೧೩]

ರಕ್ಷಣಾ ಸಮಿತಿಯ ಸಭೆ ಮುಗಿದ ತಕ್ಷಣ ವಿ.ಪಿ. ಮೆನನ್‌ರವರು ಜಮ್ಮುವಿಗೆ ಪ್ರಯಾಣ ಮಾಡಿದರು. ಅವರು ಜಮ್ಮುವನ್ನು ತಲುಪುವ ಹೊತ್ತಿಗೆ, ಶ್ರೀನಗರದಿಂದ ಹೊರಟ ಮಹಾರಾಜರು ಇಡೀ ರಾತ್ರಿ ಪ್ರಯಾಣ ಮಾಡಿ ಜಮ್ಮುವನ್ನು ತಲುಪಿ ಮಲಗಿದ್ದರು. ಅವರನ್ನು ಎಬ್ಬಿಸಿ ಮೆನನ್‌ರವರು ದೆಹಲಿಯಲ್ಲಿ ನಡೆದ ವಿದ್ಯಮಾನ ಗಳನ್ನು ತಿಳಿಸಿದರು. ತಕ್ಷಣ ಮಹಾರಾಜರು ಮೆನನ್ ತಂದಿದ್ದ ಸೇರ್ಪಡೆ ಒಪ್ಪಂದಕ್ಕೆ ಸಹಿ ಹಾಕಿದರು. ಅವರು ಗೌರ್ನರ್ ಜೆನೆರಲ್‌ಗೆ ಒಂದು ಪತ್ರ ಬರೆದು ಕೊಟ್ಟರು. ಅದರಲ್ಲಿ ಕಾಶ್ಮೀರದ ಶೋಚನೀಯ ಪರಿಸ್ಥಿತಿಯನ್ನು ವಿವರಿಸಿ, ಸೈನ್ಯದ ಸಹಾಯ ವನ್ನು ಕಳುಹಿಸುವಂತೆ ಮತ್ತೆ ಬೇಡಿದ್ದರು ಮತ್ತು ಶೇಖ್ ಅಬ್ದುಲ್ಲಾರವರನ್ನು ಮಹಾಜನ್‌ರವರ ಜೊತೆ ಆಡಳಿತದ ಮುಖ್ಯಸ್ಥರನ್ನಾಗಿ ನಿಯಮಿಸುವುದಾಗಿ, ತಿಳಿಸಿದ್ದರು.

ಸೇರ್ಪಡೆ ಒಪ್ಪಂದ ಮತ್ತು ಮಹಾರಾಜರ ಪತ್ರವನ್ನು ತೆಗೆದುಕೊಂಡು ಮೆನನ್ ತಕ್ಷಣ ದೆಹಲಿಗೆ ಹಿಂತಿರುಗಿದರು. ಪಟೇಲರು ಅವರಿಗಾಗಿ ವಿಮಾನ ನಿಲ್ದಾಣದಲ್ಲೇ ಕಾಯುತ್ತಿದ್ದರು. ಇಬ್ಬರೂ ನೇರವಾಗಿ ರಕ್ಷಣಾ ಸಮಿತಿ ಸಭೆಗೆ ಹೋದರು. ದೀರ್ಘ ಚರ್ಚೆಯ ನಂತರ, ರಾಜ್ಯದಲ್ಲಿ ಕಾನೂನು ಮತ್ತು ಶಿಸ್ತು ಸುಧಾರಿಸಿದ ಮೇಲೆ ಜನಮತವನ್ನು ತೆಗೆದುಕೊಳ್ಳಬೇಕು ಎನ್ನುವ ಶರತ್ತಿನ ಮೇಲೆ ಕಾಶ್ಮೀರದ ಸೇರ್ಪಡೆಯನ್ನು ಒಪ್ಪಿಕೊಳ್ಳಬೇಕು ಮತ್ತು ಮಾರನೆಯ ದಿನ ಕಾಲಾಳು

ಸೈನ್ಯದ ಒಂದು ತುಕಡಿಯನ್ನು ವಿಮಾನದ ಮೂಲಕ ಶ್ರೀನಗರಕ್ಕೆ ಕಳುಹಿಸಬೇಕು ಎಂದು ತೀರ್ಮಾನಿಸಲಾಯಿತು. ಆ ತೀರ್ಮಾನಕ್ಕೆ ಮುಂಚೆ ಆ ಸಭೆಯಲ್ಲಿ ಒಂದು ಚಕಮಕಿ ನಡೆಯಿತು:

ಆ ಸಭೆ ನಡೆದದ್ದು ನೆಹರುರವರ ನಿವಾಸದಲ್ಲಿ. ಸಭೆಯಲ್ಲಿ ನೆಹರು, ಪಟೇಲ್, ಮೆನನ್, ಮಹಾಜನ್ ಮತ್ತು ಕಾಶ್ಮೀರದ ಉಪಪ್ರಧಾನಿ ಬಾದ್ರ ಇದ್ದರು. ಮಹಾಜನ್‌ರವರು ಗಂಭೀರ ಮತ್ತು ಆತಂಕದಿಂದ 'ಸೈನ್ಯ ಸಹಾಯವನ್ನು ತಕ್ಷಣವೇ ನೀಡಿ ಶ್ರೀನಗರವನ್ನು ಲೂಟಿ ಮತ್ತು ಸರ್ವನಾಶದಿಂದ, ಏನೇ ಆಗಲಿ, ಉಳಿಸಲೇ ಬೇಕು" ಎಂದಾಗ ನೆಹರುರವರು "ಗುಡ್ಡಗಾಡಿನ ಜನ ಶ್ರೀನಗರವನ್ನು ವಶಪಡಿಸಿ ಕೊಂಡರೂ, ಅದನ್ನು ಮರುವಶಪಡಿಸಿಕೊಳ್ಳುವಷ್ಟು ಬಲಶಾಲಿಯಾಗಿದೆ ಭಾರತ," ಎಂದರು. ಮಹಾಜನ್‌ರವರು ಸೈನ್ಯ ಸಹಾಯವನ್ನು ಬೇಗನೆ ಕಳುಹಿಸ ಬೇಕೆಂದು ಮತ್ತೆ ಒತ್ತಾಯಿಸಿದರು. ನೆಹರುರವರು ಒರಟಾಗಿ ಮುಖಕ್ಕೆ ಹೊಡೆದಂತೆ, "ನಿಂತ ನಿಲುವಿನಲ್ಲಿ ಸೈನ್ಯವನ್ನು ಕಳುಹಿಸುವುದು ಸುಲಭವಲ್ಲ. ಅಂತಹ ಕಾರ್ಯಾ ಚರಣೆಗೆ ಸಾಕಷ್ಟು ಸಿದ್ಧತೆ ಮತ್ತು ಏರ್ಪಾಟುಗಳು ಬೇಕು. ಆಗಬೇಕಾದ ಪರಿಶೀಲನೆ ಇಲ್ಲದೆ, ಬರೇ ಬೇಡಿಕೆಯಷ್ಟಕ್ಕೇ ಸೈನ್ಯವನ್ನು ಕಳುಹಿಸಲು ಸಾಧ್ಯವಿಲ್ಲ," ಎಂದರು. ಬಹುಶಃ ಅವರು ಮೌಂಟ್‌ಬ್ಯಾಟನ್‌ರವರೊಡನೆ ಸಮಾಲೋಚಿಸ ಬೇಕೆಂದುಕೊಂಡಿ ದ್ದರೆಂದು ಕಾಣುತ್ತದೆ. ಆದರೆ ಮಹಾಜನ್‌ಗೆ ದಾಳಿಕೋರರು, ಶ್ರೀನಗರವನ್ನು ತಲುಪಿಬಿಟ್ಟರೆ, ಅವರು ಎಸಗುವ ಲೂಟಿ, ಹತ್ಯೆ, ಅಪಹರಣ ಮೊದಲಾದುವುಗಳ ಬಗೆಗೆ ಭಯವಿತ್ತೆಂದು ಕಾಣುತ್ತದೆ. ಅವರು ಖಾರವಾಗಿ, "ನಮಗೆ ಬೇಕಾದ ಸೈನ್ಯವನ್ನು ಕೊಡಿ. ಸೇರ್ಪಡೆ ಮಾಡಿಕೊಳ್ಳಿ, ಯಾವ ಅಧಿಕಾರವನ್ನು ಬೇಕಾದರೂ (ಅಬ್ದುಲ್ಲಾರವರ) ಜನಪ್ರಿಯ ಪಕ್ಷಕ್ಕೆ ಕೊಟ್ಟುಕೊಳ್ಳಿ. ಶ್ರೀನಗರವನ್ನು ಉಳಿಸುವುದಕ್ಕೆ ಸೈನ್ಯವು ಈ ಸಂಜೆ ವಿಮಾನದಲ್ಲಿ ಹೊಗಲೇಬೇಕು, ಇಲ್ಲದೇ ಹೋದರೆ ನಾನು ಲಾಹೋರ್‌ಗೆ ಹೋಗುತ್ತೇನೆ," ಎಂದರು. ನೆಹರು ಥಟ್ಟನೆ ಕೆರಳಿ, 'ಮಹಾಜನ್, ಹೊರಟು ಹೋಗಿ,' ಎಂದರು. ಮಹಾಜನ್ ತಮ್ಮ ಆಸನದಿಂದ ಏಳಲು ಆರಂಭಿಸಿದರು. ತಕ್ಷಣ ಪಟೇಲರು ಅವರನ್ನು ತಡೆದು, "ಇಲ್ಲ, ಮಹಾಜನ್, ನೀವು ಪಾಕಿಸ್ತಾನಕ್ಕೆ ಹೋಗುವ ಹಾಗಿಲ್ಲ" ಎಂದರು. ಆ ಕ್ಷಣದಲ್ಲಿ ನೆಹರು ಕೈಗೆ ಒಂದು ಚೀಟಿ ಬಂದಿತು. ಅಬ್ದುಲ್ಲಾ ಒಳಗಡೆ ಕೊಠಡಿಯಲ್ಲಿ ಕುಳಿತುಕೊಂಡು ಅಲ್ಲಿ ನಡೆಯುತ್ತಿರುವುದನ್ನು ಕೇಳಿಸಿಕೊಳ್ಳುತ್ತಿದ್ದರು. ಅವರು ನೆಹರುಗೆ ಒಂದು ಚೀಟಿಯನ್ನು ಕಳುಹಿಸಿದ್ದರು. ಆ ಚೀಟಿಯನ್ನು ಓದಿದ ತಕ್ಷಣ ನೆಹರುರವರ ಮುಖಭಾವ ಬದಲಾವಣೆಯಾಯಿತು. ಅವರೆಂದರು, "ಶೇಖ್ ಸಾಹೇಬರೂ ಅದನ್ನೇ ಹೇಳುತ್ತಾರೆ."[೧೧೪] ಸೈನ್ಯವನ್ನು ತಕ್ಷಣವೇ ಕಳುಹಿಸಲು ನೆಹರು ಒಪ್ಪಿದರು.

ಕಾಶ್ಮೀರಕ್ಕೆ ಸೈನ್ಯವನ್ನು ಕಳುಹಿಸಲು ತೀರ್ಮಾನಿಸಿದ ಮೇಲೂ ಲಾರ್ಡ್ ಮೌಂಟ್‌ಬ್ಯಾಟನ್ ಮತ್ತು ಭೂ, ನೌಕಾ ಮತ್ತು ವಾಯು ಸೈನ್ಯದ ಆಂಗ್ಲ ಮುಖ್ಯಸ್ಥರು ಆ ಕಾರ್ಯಕ್ರಮದಲ್ಲಿರುವ ಅಪಾಯವನ್ನು ಎತ್ತಿ ತೋರಿದರು. ಆದರೆ ನೆಹರು ಮನಸ್ಸನ್ನು ಬದಲಾಯಿಸಲಿಲ್ಲ. ಅವರು, 'ಸೈನ್ಯವನ್ನು ಕಳುಹಿಸದೇ ಹೋದರೆ ಉಳಿದಿರುವ ಏಕೈಕ ಮಾರ್ಗವೆಂದರೆ ಶ್ರೀನಗರದ ಧ್ವಂಸಕ್ಕೆ ಅವಕಾಶ ನೀಡುವುದು. ಶ್ರೀನಗರದ ಹತ್ಯಾಕಾಂಡವಾದರೆ ಭಾರತದಲ್ಲಿ ಮತೀಯ ಗಲಭೆ ಜೋರಾಗಿ ಆರಂಭವಾಗುವುದು. ಶ್ರೀನಗರದಲ್ಲಿರುವ ಬ್ರಿಟಿಷ್ ನಿವಾಸಿಗಳೂ ಕೊಲ್ಲಲ್ಪಡುವರು' ಎಂದರು.

ತೀರ್ಮಾನ ತೆಗೆದುಕೊಂಡ ತಕ್ಷಣವೇ ಪಟೇಲರು ದೇಶದಲ್ಲಿ ಖಾಸಗಿ ವಿಮಾನಯಾನ ಸಂಸ್ಥೆಗಳ ಬಳಿ ಇರುವ ಎಲ್ಲಾ ವಿಮಾನಗಳನ್ನು ಒದಗಿಸುವಂತೆ ಆಕಾಶವಾಣಿ ಮೂಲಕ ಪ್ರಕಟಿಸಿದರು. ಅಂದು ಇಡೀ ರಾತ್ರಿ ನಾಗರಿಕ ಮತ್ತು ಸೈನಿಕ ಅಧಿಕಾರಿಗಳು ಮತ್ತು ನೌಕರರು, ಬ್ರಿಟಿಷ್ ಅಧಿಕಾರಿಗಳೂ ಸೇರಿ, ವಿಮಾನಗಳು, ನೌಕರರು, ಯುದ್ಧ ಸಾಮಾಗ್ರಿಗಳು, ಆಹಾರ ಪದಾರ್ಥಗಳು ಮೊದಲಾದುವನ್ನು ಸಂಗ್ರಹಿಸಲು ಶ್ರಮಿಸಿದರು. ರಕ್ಷಣಾ ಕಾರ್ಯಗಳ ಜವಾಬ್ದಾರಿಯನ್ನು ಹೊತ್ತು ಹೆಚ್.ಎಂ. ಪಟೇಲ್ ಇಡೀ ರಾತ್ರಿ ಶ್ರಮಿಸಿದರು. ೨೭ರ ಬೆಳಗಿನ ಹೊತ್ತಿಗೆ ಸ್ವಲ್ಪ ಮುಂಚೆ, ನೂರಕ್ಕೂ ಹೆಚ್ಚು ವಿಮಾನಗಳು ಸೈನಿಕರು ಮತ್ತು ಸಾಮಾಗ್ರಿಗಳನ್ನು ಹೊತ್ತು ಒಂದರ ನಂತರ ಒಂದರಂತೆ ದೆಹಲಿಯಿಂದ ಶ್ರೀನಗರದ ಕಡೆಗೆ ಹಾರಿದುವು. ಆ ವಿಮಾನಗಳ ಸಮೂಹದಲ್ಲಿ ಖಾಸಗಿ ಹಾಗೂ ವಾಯುದಳದ ವಿಮಾನಗಳಿದ್ದುವು. ಲೆಫ್ಟಿನೆಂಟ್ ಕರ್ನಲ್ ರಂಜಿತ್ ರಾಯ್ ನಾಯಕತ್ವದಲ್ಲಿ ಸಿಖ್ ರೆಜಿಮೆಂಟಿನ ಮೊದಲ ತುಕಡಿಯ ೩೨೯ ಸೈನಿಕರು ಹೊರಟರು.

ಮೊದಲ ವಿಮಾನದಲ್ಲಿ ರಂಜಿತ್ ರಾಯ್ ಶ್ರೀನಗರವನ್ನು ತಲುಪಿದಾಗ ವಿಮಾನ ನಿಲ್ದಾಣ ಶತ್ರುಗಳ ವಶವಾಗಿರುತ್ತದೊ ಅಥವಾ ಮುಕ್ತವಾಗಿರುತ್ತದೊ ಅನ್ನುವ ಅನುಮಾನವಿತ್ತು. ಅದರಿಂದ ಶ್ರೀನಗರ ವಿಮಾನ ನಿಲ್ದಾಣದ ಮೇಲೆ ಚಕ್ರಾಕಾರವಾಗಿ ಸುತ್ತಿ, ಅನುಮಾನ ಬಂದರೆ ಅಲ್ಲಿ ಇಳಿಯದೆ ಜಮ್ಮುವಿಗೆ ಹೋಗಬೇಕು – ಎನ್ನುವ ಸೂಚನೆಯನ್ನು ನೀಡಲಾಗಿತ್ತು. ಅದರಿಂದ ದೆಹಲಿಯಲ್ಲಿ ಎಲ್ಲರೂ ಕಾತರದಿಂದ ಕಾಯುತ್ತಿದ್ದರು. ಬೆಳಗಿನ ೧೦.೩೦ಕ್ಕೆ ವಿಮಾನವು ಶ್ರೀನಗರ ವಿಮಾನ ನಿಲ್ದಾಣದಲ್ಲೇ ಭೂಸ್ಪರ್ಶ ಮಾಡಿದ ಸುದ್ದಿ ಬಂತು. ವಿಮಾನ ನಿಲ್ದಾಣ ನಮ್ಮ ವಶದಲ್ಲೇ ಇರುವುದು ತಿಳಿದು ಎಲ್ಲರಿಗೂ ಮನಸ್ಸು ನಿರಾಳವಾಯಿತು.

ದಿನಾಂಕ ೨೭ ಮತ್ತು ಆ ನಂತರದ ದಿನಗಳಲ್ಲಿ ವಿಮಾನಗಳು ಬೆಳಗ್ಗೆಯಿಂದ

ಸಂಜೆಯವರೆಗೆ ಸೈನಿಕರು ಮತ್ತು ಸಾಮಾಗ್ರಿಗಳನ್ನು ಸಾಗಿಸಲು ಹಾರಾಡಿದುವು. ಸಂಪರ್ಕ ಸಾಧನಗಳಿಲ್ಲದ್ದರಿಂದ ಶತ್ರು ಸೈನಿಕರ ಸಂಖ್ಯೆ ಮತ್ತು ಚಲನಗಳನ್ನು ತಿಳಿಯಲಾಗದ ಕಷ್ಟ ಸನ್ನಿವೇಶದಲ್ಲಿ ಶ್ರೀನಗರದಂತಹ ಪರ್ವತ ಪ್ರದೇಶಕ್ಕೆ ಸೈನಿಕರನ್ನು ಯಾವ ಮುನ್ಸೂಚನೆಯೂ ಇಲ್ಲದೆ ಇದ್ದಕ್ಕಿದ್ದ ಹಾಗೆ 'ವೈಮಾನಿಕ ರವಾನೆ' (Airlift) ಮಾಡಿದ್ದು ಒಂದು ಅದ್ಭುತ ಸಾಧನೆ. ಹಿಂದೆ ಆಗ್ನೇಯ ಏಷ್ಯದಲ್ಲಿ ಸುಪ್ರೀಂ ಅಲೈಡ್ ಕಮಾಂಡರ್ ಆಗಿದ್ದ ಲಾರ್ಡ್ ಮೌಂಟ್‌ಬ್ಯಾಟನ್, 'ಅಲ್ಪ ಕಾಲದ ಸೂಚನೆಯಲ್ಲಿ ನಡೆದ ಇಂತಹ ವೈಮಾನಿಕ ಸೈನ್ಯ ರವಾನೆಯನ್ನು ನಾನು ಕೇಳಿಯೇ ಇಲ್ಲ' ಎಂದರು ಮತ್ತು ಸಂಬಂಧಪಟ್ಟ ಎಲ್ಲರಿಗೂ ಅಭಿನಂದನೆಯನ್ನು ಸಲ್ಲಿಸಿದರು.[೧೧೫]

ಶ್ರೀನಗರವನ್ನು ತಲುಪಿದ ಲೆಫ್ಟಿನೆಂಟ್ ಕರ್ನಲ್ ರಂಜಿತ್ ರಾಯ್ ದಾಳಿಕಾರರನ್ನು ತಡೆಯುವುದಕ್ಕಾಗಿ ಬಾರಾಮೂಲ ಕಡೆಗೆ ಸೈನ್ಯದೊಡನೆ ಹೊರಟರು. ಬಾರಾಮೂಲ ಸಮೀಪವಾದಾಗ ದಾಳಿಕಾರರನ್ನು ನುರಿತ ಕಮಾಂಡರ್‌ಗಳು ಮುನ್ನಡೆಸುತ್ತಿರುವುದು, ಅವರ ಬಳಿ ಆಧುನಿಕ ಶಸ್ತ್ರ ಇರುವುದು ಮತ್ತು ಅವರ ಸಂಖ್ಯೆ ಅಧಿಕವಾಗಿರುವುದು ಗಮನಕ್ಕೆ ಬಂದಿತು. ಅದರಿಂದ ಸೈನಿಕರನ್ನು ಶ್ರೀನಗರದಿಂದ ೧೭ ಮೈಲಿಗಳ ದೂರದಲ್ಲಿರುವ ಪಟಾನ್‌ಗೆ ಹಿಂತಿರುಗಿಸಿದರು. ಆ ಹಿಂತಿರುಗುವ ಸಮಯದಲ್ಲಿ ಅವರು ಹತರಾದರು. ಮುಂದೆ ಸರ್ಕಾರ ಅವರಿಗೆ ಮರಣೋತ್ತರ 'ಮಹಾವೀರ ಚಕ್ರ' ಪ್ರಶಸ್ತಿಯನ್ನು ನೀಡಿತು.[೧೧೬]

ಕಾಶ್ಮೀರದ ಮೇಲೆ ಆಕ್ರಮಣ ಮಾಡಲು ಗುಡ್ಡಗಾಡಿನ ಜನರಿಗೆ ಪಾಕಿಸ್ತಾನ ಸರ್ಕಾರವೇ ಸಹಾಯ ಮಾಡಿತ್ತು. ಅದು ಬಂದೂಕು, ಮದ್ದು ಮತ್ತು ಇತರ ಪದಾರ್ಥಗಳನ್ನು ದಾಳಿಕಾರರಿಗೆ ಒದಗಿಸಿತ್ತಲ್ಲದೆ ಸಮವಸ್ತ್ರ ಧರಿಸದ ಕಮಾಂಡರ್‌ಗಳನ್ನು ಅವರ ಮಾರ್ಗದರ್ಶನಕ್ಕೆ ನೀಡಿತ್ತು. ಸರ್ಕಾರದ ಸಹಾಯವಿಲ್ಲದೆ ಅಷ್ಟೊಂದು ಗುಡ್ಡಗಾಡಿನ ಜನರ ಜಮಾವಣೆ ಹೇಗೆ ಸಾಧ್ಯ? ಅವರಿಗೆ ಅಷ್ಟೊಂದು ಲಾರಿಗಳು ಮತ್ತು ಬಂದೂಕುಗಳು ಎಲ್ಲಿಂದ ಬಂದುವು? ಅದೆರಡಕ್ಕಿಂತಲೂ ದೊಡ್ಡ ಪುರಾವೆ ಮತ್ತೊಂದು ಇದೆ. ಅಧ್ಯಕ್ಷ ಜಿನ್ನಾ, ಗುಡ್ಡಗಾಡಿನ ಜನ ಶ್ರೀನಗರವನ್ನು ವಶಪಡಿಸಿಕೊಂಡ ತಕ್ಷಣ ವಿಜಯೋತ್ಸಾಹದಿಂದ ಶ್ರೀನಗರವನ್ನು ಪ್ರವೇಶಿಸುವುದಕ್ಕಾಗಿ ಕರಾಚಿಯಿಂದ ಲಾಹೋರ್ ತಲುಪಿ ಕಾಯುತ್ತಿದ್ದನು. ವಿಜಯದ ಸಮಾಚಾರ ಬರುವುದಕ್ಕೆ ತಡವಾಗುತ್ತಿರುವುದರಿಂದ ಅವನಿಗೆ ಅಸಹನೆ ಉಂಟಾಗಿತ್ತು. ಅವನ ಲೆಕ್ಕಾಚಾರದ ಪ್ರಕಾರ ಎರಡು ದಿನ ಹಿಂದೆಯೇ ಶ್ರೀನಗರ ವಶವಾಗಬೇಕಿತ್ತು. ಆ ತಡಕ್ಕೆ ಕಾರಣ, ಗುಡ್ಡಗಾಡಿನ ಜನ ಮಾರ್ಗ ಮಧ್ಯದಲ್ಲಿ ತಮ್ಮ ಗುರಿಯನ್ನು

ಮರೆತು ಜನರ ಲೂಟಿ, ಹತ್ಯೆ ಮತ್ತು ಮಹಿಳೆಯರ ಅತ್ಯಾಚಾರದಲ್ಲಿ ತೊಡಗಿದ್ದು. ಹಿಂದೂಗಳು ಮತ್ತು ಮುಸ್ಲಿಮರಿಬ್ಬರೂ ಅವರ ದುರಾಸೆಗೆ ಬಲಿಯಾಗಿದ್ದರು. ಅದರಿಂದ ದಾಳಿಕಾರರು ಮುಂದುವರೆಯುವುದು ತಡವಾಗಿದ್ದರಿಂದ ಶ್ರೀನಗರದ ಜನರಿಗೆ ಒಳಿತಾಯಿತು. ಇಲ್ಲದೆ ಹೋಗಿದ್ದರೆ ಭಾರತದ ಸೈನ್ಯ ತಲುಪುವ ಮುಂಚೆ ಶ್ರೀನಗರವು ದಾಳಿಕಾರರ ವಶವಾಗಿರುತ್ತಿತ್ತು. ಅಲ್ಲಿಯ ಜನ ಚಿತ್ರಹಿಂಸೆಗೆ ಬಲಿಯಾಗಿರುತ್ತಿದ್ದರು.

ಲಾಹೋರ್‌ನಲ್ಲಿ ವಿಜಯದ ಸುದ್ದಿಗಾಗಿ ಕಾಯುತ್ತಿದ್ದ ಜಿನ್ನಾಗೆ ಅಕ್ಟೋಬರ್ ೨೭ರ ಮಧ್ಯಾಹ್ನ ಕಾಶ್ಮೀರ ಮಹಾರಾಜರು ಕಾಶ್ಮೀರವನ್ನು ಭಾರತಕ್ಕೆ ಸೇರ್ಪಡಿಸಿದ ಮತ್ತು ಭಾರತದ ಸೈನ್ಯ ಶ್ರೀನಗರವನ್ನು ತಲುಪಿರುವ ವಿಷಯ ತಿಳಿಯಿತು. ತಕ್ಷಣ ಅವನು ಸೈನ್ಯವನ್ನು ಜಾಗ್ರತೆ ಕಾಶ್ಮೀರಕ್ಕೆ ಕಳುಹಿಸುವಂತೆ ಪಾಕಿಸ್ತಾನ್ ಸೈನ್ಯದ ಹಂಗಾಮಿ ದಂಡನಾಯಕ ಜೆನೆರಲ್ ಗ್ರೇಸಿಗೆ ಆದೇಶ ನೀಡಿದನು. ಆದರೆ ಗ್ರೇಸಿ ತಕ್ಷಣ ಆ ಆದೇಶ ಪಾಲಿಸಲಿಲ್ಲ. ಅವನು, 'ಸುಪ್ರೀಂ ಕಮಾಂಡರ್ ಫ್ಹೀಲ್ಡ್ ಮಾರ್ಷಲ್ ಆಷಿನ್‌ಲೆಕ್‌ರವರ ಅನುಮತಿ ಇಲ್ಲದೆ ನಾನು ಸೈನ್ಯಕ್ಕೆ ಯಾವ ಆದೇಶವನ್ನೂ ನೀಡುವ ಹಾಗಿಲ್ಲ' ಎಂದನು. ಅಕ್ಟೋಬರ್ ೨೮ರ ಬೆಳಗ್ಗೆ ಆಷಿನ್‌ಲೆಕ್ ಲಾಹೋರ್‌ಗೆ ಬಂದರು. ಅವರು ಜಿನ್ನಾಗೆ 'ಈಗ ಕಾನೂನಿನ ಪ್ರಕಾರ ಭಾರತದ ಭಾಗವಾಗಿರುವ ಕಾಶ್ಮೀರವನ್ನು ಪಾಕಿಸ್ತಾನದ ಸೈನಿಕರು ಪ್ರವೇಶಿಸಿದರೆ ಪಾಕಿಸ್ತಾನದ ಸೈನ್ಯದಲ್ಲಿರುವ ಪ್ರತಿಯೊಬ್ಬ ಬ್ರಿಟಿಷ್ ಅಧಿಕಾರಿಯು ತಾನೇ ತಾನಾಗಿ ಮತ್ತು ತಕ್ಷಣವೇ ಹಿಂದಕ್ಕೆ ತೆಗೆದುಕೊಳ್ಳಲ್ಪಡುತ್ತಾನೆ' ಎಂದು ವಿವರಿಸಿದರು. ಜಿನ್ನಾ ತನ್ನ ಆದೇಶವನ್ನು ಹಿಂದಕ್ಕೆ ತೆಗೆದುಕೊಂಡನು.

ನಂತರ ಜಿನ್ನಾ, ಕಾಶ್ಮೀರ ಸಮಸ್ಯೆಯ ಚರ್ಚೆಗಾಗಿ ಲಾಹೋರ್‌ಗೆ ಬರುವಂತೆ ಲಾರ್ಡ್ ಮೌಂಟ್‌ಬ್ಯಾಟನ್ ಮತ್ತು ಜವಹರಲಾಲ್ ನೆಹರುಗೆ ಆಷಿನ್‌ಲೆಕ್ ಮೂಲಕ ಆಮಂತ್ರಣ ಕಳುಹಿಸಿದನು. ಮೌಂಟ್‌ಬ್ಯಾಟನ್ ಆಮಂತ್ರಣವನ್ನು ಸ್ವೀಕರಿಸಿ ತಾವು ಮತ್ತು ನೆಹರು ಲಾಹೋರ್‌ಗೆ ಹೋಗಲು ತವಕಿಸಿದರು. ಆದರೆ ಪಟೇಲರು ಮೌಂಟ್‌ಬ್ಯಾಟನ್ ಆಗಲಿ ಅಥವಾ ನೆಹರುವಾಗಲಿ ಲಾಹೋರ್‌ಗೆ ಹೋಗುವುದನ್ನು ಬಲವಾಗಿ ವಿರೋಧಿಸಿದರು. ಅವರು, "ಈ ಘಟನೆಯಲ್ಲಿ ಪಾಕಿಸ್ತಾನ ಆಕ್ರಮಣಕಾರನಾದದ್ದರಿಂದ ಜಿನ್ನಾ ಹಿಂದೆ ಓಡಿಹೋಗಿ ಅವನನ್ನು ಓಲೈಸುವ ನೀತಿಯನ್ನು ಅನುಸರಿಸುವುದು ಸರಿಯಲ್ಲ. ಆ ವಿಷಯವನ್ನು ಚರ್ಚಿಸಲು ಜಿನ್ನಾ ಬಯಸಿದರೆ ಅವನು ದೆಹಲಿಗೆ ಬರಬೇಕು," ಎಂದರು. 'ನಾವು ಬಲಶಾಲಿಯಾಗಿರುವಾಗ ಮತ್ತು ಸರಿಯಾದ ಮಾರ್ಗದಲ್ಲಿರುವಾಗ ಜಿನ್ನಾ ಬಳಿಗೆ ಪ್ರಧಾನಿಯವರು ತೆವಳಿ

ಕೊಂಡು ಹೋಗುವುದನ್ನು ಭಾರತದ ಜನ ಎಂದಿಗೂ ಕ್ಷಮಿಸುವುದಿಲ್ಲ' ಎಂದರು ಪಟೇಲರು. ಆದರೆ ನೆಹರು ಮೌಂಟ್‌ಬ್ಯಾಟನ್ ಕಡೆಗೆ ವಾಲಿದರು. ಅವರು, "ಭೂಪ್ರದೇಶದ ವಿಸ್ತರಣೆಗಾಗಿ ನಾವು ಕಾಶ್ಮೀರಕ್ಕೆ ಹೋಗಿಲ್ಲ. ಸಮಸ್ಯೆಗೆ ಒಂದು ಶಾಂತಿಯುತ ಪರಿಹಾರ ಸಿಕ್ಕುವುದಾದರೆ, ನಾವು ಪ್ರತಿಷ್ಠೆಯ ಮೇಲೆ ನಿಲ್ಲಬಾರದು" ಎಂದು ವಾದ ಮಾಡಿದರು.[೧೧೭]

ವಿಷಯ ಗಾಂಧೀಜಿಯ ಮಧ್ಯಸ್ತಿಕೆಗೆ ಹೋಯಿತು. ಅಷ್ಟು ಹೊತ್ತಿಗೆ ನೆಹರುಗೆ ತೀವ್ರ ಜ್ವರ ಬಂದಿತು. ಅದರಿಂದ ಮೌಂಟ್‌ಬ್ಯಾಟನ್ ಒಬ್ಬರೇ ಲಾಹೋರ್‌ಗೆ ಹೋದರು. ಅಲ್ಲಿ ಅವರು ಕಾಶ್ಮೀರದಲ್ಲಿ 'ಪ್ಲೆಬಿಸೈಟ್' ನಡೆಸುವ ಪ್ರಸ್ತಾವನೆಯನ್ನು ಅನವಶ್ಯಕವಾಗಿ ಜಿನ್ನಾ ಮುಂದಿಟ್ಟರು. ಮುಂದೆ ಅದು ಭಾರತದ ಕೊರಳಿಗೆ ಉರುಳಾಯಿತು.

ಅಕ್ಟೋಬರ್ ಕೊನೆಯ ಹೊತ್ತಿಗೆ ಭಾರತದ ೨೦೦೦ ಸೈನಿಕರು ಶ್ರೀನಗರ ತಲುಪಿದ್ದರು ಮತ್ತು ಬ್ರಿಗೇಡಿಯರ್ ಎಲ್.ಪಿ. ಸೆನ್ ಕಾಶ್ಮೀರದಲ್ಲಿ ಭಾರತ ಸೈನ್ಯದ ಹೊಸ ಕಮಾಂಡರ್ ಆಗಿದ್ದರು. ನವೆಂಬರ್ ೩ರಂದು ಸುಮಾರು ೭೦೦ ಮಂದಿ ಧಾಳಿಕಾರರು ಶ್ರೀನಗರ ವಿಮಾನ ನಿಲ್ದಾಣದ ಮೇಲೆ ಗುಟ್ಟಾಗಿ ಎರಗಲು ಪ್ರಯತ್ನಿಸಿದರು. ಅವರನ್ನು ಹಿಮ್ಮೆಟ್ಟಿಸಲಾಯಿತು. ಆದರೂ ಶ್ರೀನಗರಕ್ಕೆ ಅಪಾಯದ ಭಯ ತಪ್ಪಿರಲಿಲ್ಲ. ಜನ ಭಯಭೀತರಾಗಿದ್ದರು.

ನವೆಂಬರ್ ೪ರಂದು ಸ್ವತಃ ೭೨ ವರ್ಷದ ಪಟೇಲರೇ ಶ್ರೀನಗರಕ್ಕೆ ಬಂದರು. ಆಗ ಶ್ರೀನಗರದಲ್ಲಿ ಕೊರೆಯುವ ಚಳಿ ಮತ್ತು ಹಿಮ. ಮಾರ್ಗದಲ್ಲಿ ಬೆಳಕು ಕಡಿಮೆ. ಚಾಲಕನಿಗೆ ದಾರಿ ಕಾಣದೆ ವಿಮಾನ ಪಾಕಿಸ್ತಾನ ಪ್ರದೇಶಕ್ಕೆ ಸರಿಯುವ ಅಪಾಯವಿತ್ತು. ಭಾರತ ಸೈನ್ಯದ ದಂಡನಾಯಕ ರಾಯ್ ಬುಚರ್ ಅಪಾಯಗಳನ್ನು ಪಟೇಲರಿಗೆ ವಿವರಿಸಿ, ಅವರ ಪ್ರಯಾಣವನ್ನು ವಿರೋಧಿಸಿದನು. ಆದರೆ ಪಟೇಲರು ಸರಳವಾಗಿ, "ನನಗೊಂದು ವಿಮಾನ ಸಿದ್ಧ ಪಡಿಸಿ," ಎಂದರು. ಬುಚರ್ ಹಾಗೆಯೆ ಮಾಡಿದರು. ಪಟೇಲರು ತಮ್ಮ ಜೊತೆಯಲ್ಲಿ ರಕ್ಷಣಾ ಮಂತ್ರಿ ಬಲದೇವ ಸಿಂಗ್, ತಮ್ಮ ಮಗಳು ಮಣಿಬೆನ್ ಮತ್ತು ಕೆಲವು ಸಿಬ್ಬಂದಿಯನ್ನು ಕರೆದುಕೊಂಡು ಶ್ರೀನಗರಕ್ಕೆ ಪ್ರಯಾಣ ಮಾಡಿದರು.

ಶ್ರೀನಗರ ತಲುಪಿದ ತಕ್ಷಣ ಪಟೇಲರು ಸೈನ್ಯದ ಕಾರ್ಯಾಲಯಕ್ಕೆ ಹೋದರು. ಬ್ರಿಗೇಡಿಯರ್ ಸೆನ್ ಅಲ್ಲಿಯ ಪರಿಸ್ಥಿತಿಯನ್ನು ವಿವರಿಸಿದರು. ಪಟೇಲರು ಅವರು ಹೇಳಿದ್ದನ್ನೆಲ್ಲ ಕಣ್ಣು ಮುಚ್ಚಿ ಆಲಿಸಿದರು. ಸೆನ್, ಪಟೇಲರು ಪ್ರಯಾಣದ ಆಯಾಸ ದಿಂದ ನಿದ್ರಿಸುತ್ತಿರಬಹುದೆಂದು ಭಾವಿಸಿದರು. ಆದರೆ ಪಟೇಲರು ಎಲ್ಲವನ್ನು

ಎಚ್ಚರಿಕೆಯಿಂದ ಆಲಿಸಿದ್ದರು. ಕಣ್ಣು ಮುಚ್ಚಿದ್ದರು, ಅಷ್ಟೆ. ಕೊನೆಯಲ್ಲಿ ಸೆನ್, "ನಾನು ಏನು ಮಾಡಬೇಕು? ಶ್ರೀನಗರದ ಹಣೆಬರಹ ಏನಾದರೂ ಆಗಲಿ ಎಂದು ಅದನ್ನು ಬಿಟ್ಟು, ಧಾಳಿಕಾರರನ್ನು ಕಣಿವೆಯಿಂದ ಆಚೆಗೆ ಅಟ್ಟಬೇಕೆ? ಅಥವಾ ಶ್ರೀನಗರವನ್ನು ರಕ್ಷಿಸಬೇಕೆ?" ಎಂದು ಕೇಳಿದರು. ತಕ್ಷಣ ಸರ್ದಾರರು, "ಶ್ರೀನಗರವನ್ನು ಉಳಿಸಬೇಕು" ಎಂದರು. "ಹಾಗಾದರೆ ನನಗೆ ಇನ್ನೂ ಹೆಚ್ಚು ಸೈನಿಕರು ಬೇಕು, ಶೀಘ್ರವಾಗಿ. ಸಾಧ್ಯವಾದರೆ ಫಿರಂಗಿ ದಳವೂ ಬೇಕು," ಎಂದರು ಸೆನ್.

ಸರ್ದಾರರು ಎದ್ದರು. "ನಾನು ಈಗಲೇ ದೆಹಲಿಗೆ ಹಿಂತಿರುಗುತ್ತೇನೆ. ನಿಮಗೆ ಏನು ಬೇಕೊ ಅದನ್ನು ಬೇಗ ಕಳುಹಿಸುತ್ತೇನೆ" ಎಂದರು. ಸೆನ್ ತಮ್ಮ ಜೀಪನ್ನು ತರುವುದಕ್ಕೆ ಆದೇಶ ನೀಡಿ, ಪಟೇಲರಿಗೆ "ನಿಮ್ಮನ್ನು ವಿಮಾನ ನಿಲ್ದಾಣಕ್ಕೆ ಬಿಡುತ್ತೇನೆ," ಎಂದರು. ಪಟೇಲರು, "ಬೇಡ ಬ್ರಿಗೇಡಿಯರ್, ನನ್ನನ್ನು ಬೀಳ್ಕೊಡು ವುದಕ್ಕೆ ನೀವು ವಿಮಾನ ನಿಲ್ದಾಣಕ್ಕೆ ಬರುವುದು ಬೇಡ. ಅದಕ್ಕೆ ಕಾಲ ವ್ಯರ್ಥ ಮಾಡುವುದಕ್ಕಿಂತ ಮುಖ್ಯವಾದ ಕೆಲಸಗಳು ನಿಮಗೆ ಇಲ್ಲಿ ಇವೆ," ಎಂದರು. ನಂತರ ತಾವು ಬಂದ ವಾಹನದಲ್ಲೇ ಕುಳಿತು ಹೊರಟುಬಿಟ್ಟರು. ಸಾಯಂಕಾಲಕ್ಕೆ ಸೆನ್‌ಗೆ, "ಎರಡು ಕಾಲಾಳುಗಳ ದಳಗಳು, ರಕ್ಷಿತ ಕಾರುಗಳ ಒಂದು ದಳ ಮತ್ತು ಒಂದು ಫಿರಂಗಿಗಳ ದಳ ಭೂ ಮಾರ್ಗವಾಗಿ ಹೊರಟಿವೆ" ಎನ್ನುವ ಸಂದೇಶ ಬಂದಿತು. ಪಟೇಲರು ಕಾರ್ಯಶಾಲಿ ವ್ಯಕ್ತಿ ಅನ್ನುವುದಕ್ಕೆ ಅದು ಮತ್ತೊಂದು ನಿದರ್ಶನ.[೧೧೮]

ಸರ್ದಾರರ ಕಾರ್ಯ ಕಾಶ್ಮೀರ ಮತ್ತು ಶ್ರೀನಗರವನ್ನು ಕಾಪಾಡಿತು. ಅವರು ತಮ್ಮ ಇಳಿ ವಯಸ್ಸಿನಲ್ಲಿ ಚಳಿಯನ್ನು ಲೆಕ್ಕಿಸದೆ ಹಿಮವನ್ನೂ ಲೆಕ್ಕಿಸದೆ, ಅಪಾಯ ವನ್ನೂ ಕಡೆಗಣಿಸಿ ತಾವೇ ಶ್ರೀನಗರಕ್ಕೆ ಬಂದು ಪರಿಸ್ಥಿತಿಯ ವಾಸ್ತವಿಕ ಆವಶ್ಯಕತೆ ಯನ್ನು ತಿಳಿದು ಹೆಚ್ಚಿನ ಸೈನ್ಯವನ್ನು ಕಳುಹಿಸದೆ ಹೋಗಿದ್ದರೆ ಭಾರಿ ಅನಾಹುತ ವಾಗುತ್ತಿತ್ತು. ಪುಣ್ಯವಶಾತ್ ಆ ಸಮಯದಲ್ಲಿ ಅವರು ಇನ್ನೂ ರಾಜ್ಯಗಳ ಖಾತೆಯ ಸಚಿವರಾಗಿದ್ದರು. ಪಟೇಲರನ್ನು ಸದಾ ಟೀಕಿಸುವ ಶೇಖ್ ಅಬ್ದುಲ್ಲಾ, "ವಲ್ಲಭ ಭಾಯ್‌ರವರ ಶ್ರೀನಗರ ಭೇಟಿಯ ನಂತರ ಪರಿಸ್ಥಿತಿ ಸುಧಾರಿಸಿತು," ಎಂದನು.

ಅಂದು ಪಟೇಲರು ದೆಹಲಿಗೆ ಹಿಂತಿರುಗಿದ ತಕ್ಷಣ ರಕ್ಷಣಾ ಸಮಿತಿಗೆ ಶ್ರೀನಗರದಲ್ಲಿನ ಪರಿಸ್ಥಿತಿಯನ್ನು ವಿವರಿಸಿ ಅಲ್ಲಿ ಹೆಚ್ಚಿನ ಸೈನ್ಯದ ಆವಶ್ಯಕತೆಯನ್ನು ಮನದಟ್ಟು ಮಾಡಿದರು. ಸಮಿತಿಯು ಅವರ ಅಭಿಪ್ರಾಯವನ್ನು ಒಪ್ಪಿ ಶ್ರೀನಗರದಲ್ಲಿ ಒಂದು ಹೊಸ ವಿಭಾಗೀಯ ಸೈನ್ಯ ಕೇಂದ್ರವನ್ನು ಸ್ಥಾಪಿಸಬೇಕೆಂದು ತೀರ್ಮಾನಿಸಿ

ಆ ಕೇಂದ್ರದ ಮುಖ್ಯಸ್ಥನನ್ನಾಗಿ ಮೇಜರ್ – ಜೆನೆರಲ್ ಕಲ್ವಂತ್ ಸಿಂಗ್‌ರವರನ್ನು ನಿಯಮಿಸಿತು. ಬಾರಾಮೂಲವನ್ನು ವಶಪಡಿಸಿಕೊಳ್ಳಬೇಕೆಂದು ಕಲ್ವಂತ್ ಸಿಂಗ್‌ಗೆ ಸೂಚಿಸಿತು.

ಮೇಜರ್ – ಜೆನೆರಲ್ ಕಲ್ವಂತ್ ಸಿಂಗ್ ಮಾರನೆ ದಿನವೆ ಶ್ರೀನಗರಕ್ಕೆ ಪ್ರಯಾಣ ಮಾಡಿದರು. ನವೆಂಬರ್ ೮ರಂದು ಅವರ ಸೈನ್ಯ ಬಾರಾಮೂಲವನ್ನು ವಶಪಡಿಸಿಕೊಂಡಿತು. ೧೧ರ ದಿನಾಂಕದ ಹೊತ್ತಿಗೆ ನಮ್ಮ ಸೈನ್ಯ ಯೂರಿಯನ್ನು ತಲುಪಿತು. ಧಾಳಿಕಾರರು ಹಿಮ್ಮೆಟ್ಟಲು ಎಷ್ಟು ಕಾತುರರಾಗಿದ್ದರೆಂದರೆ ನಮ್ಮ ಸೈನ್ಯವು ಒಂದು ಗುಂಡನ್ನೂ ಹಾರಿಸದೆ ತಾಂಗ್‌ಮಾರ್ಗ್ ಮತ್ತು ಗುಲ್‌ಮಾರ್ಗ್‌ಅನ್ನು ವಶಪಡಿಸಿಕೊಂಡಿತು

ಈ ಮಧ್ಯೆ ಮತ್ತೊಂದು ಬೆಳವಣಿಗೆ ನಡೆಯಿತು. ಮಹರಾಜ ಹರಿಸಿಂಗ್‌ರ ಸೆರೆಮನೆಯಿಂದ ಶೇಖ್ ಅಬ್ದುಲ್ಲಾನನ್ನು, ನೆಹರುರವರ ಕೋರಿಕೆಯ ಮೇರೆ, ಸರ್ದಾರರು ಬಿಡುಗಡೆ ಮಾಡಿಸಿದ್ದನ್ನು ಹಿಂದೆಯೇ ಹೇಳಿದೆ. ಆ ಶೇಖ್ ಅಬ್ದುಲ್ಲಾ ಸೆರೆಮನೆಯಲ್ಲಿದ್ದಾಗ, ಬಿಡುಗಡೆಯನ್ನು ಕೋರಿ ಮಹಾರಾಜರಿಗೆ ಪತ್ರ ಬರೆದಾಗ, ಮಹಾರಾಜರಿಗೆ ತನ್ನ ಮತ್ತು ತನ್ನ ಸಂಸ್ಥೆಯ ಸಂಪೂರ್ಣ ಮತ್ತು ವಿಧೇಯ ಬೆಂಬಲದ ಆಶ್ವಾಸನೆಯನ್ನು ನೀಡಿದ್ದನ್ನೂ ಹಿಂದೆಯೇ ಹೇಳಿದೆ. ಬಿಡುಗಡೆಯಾದ ಮೇಲೆ ಅಬ್ದುಲ್ಲಾ ಕಾಶ್ಮೀರದ ಮೇಲೆ ಗುಡ್ಡಗಾಡಿನ ಜನರ ಧಾಳಿಯನ್ನು ಅಡಗಿಸಲು ಜನರ ಬೆಂಬಲವನ್ನು ಮಹಾರಾಜರಿಗೆ ದೊರಕಿಸುವ ನೆಪದಲ್ಲಿ ಕಾಶ್ಮೀರದ ಆಡಳಿತದಲ್ಲಿ ಸ್ವಲ್ಪ ಜಾಗ ಪಡೆದುಕೊಂಡನು. ಆ ವಿಷಯದಲ್ಲಿ ನೆಹರು ಅಬ್ದುಲ್ಲಾನಿಗೆ ಭಾರಿ ಬೆಂಬಲ ನೀಡಿದರು. ನೆಹರುಗೆ ಅಬ್ದುಲ್ಲಾ ಮೇಲೆ ಭಾರಿ ಪ್ರೀತಿ, ನಂಬಿಕೆ ಮತ್ತು ವಿಶ್ವಾಸವಿತ್ತು.

ಅಧಿಕಾರವನ್ನು ವಹಿಸಿಕೊಂಡ ಶೇಖ್ ಅಬ್ದುಲ್ಲಾ ಶೀಘ್ರವೇ ತನ್ನ ನಿಜ ಬಣ್ಣವನ್ನು ಬಯಲು ಮಾಡಿದನು. ಅವನು ಎರಡು ಕಚಡ ಮತ್ತು ಕೃತಘ್ನ ಕಾರ್ಯದಲ್ಲಿ ತೊಡಗಿದನು. ಮಹಾರಾಜನನ್ನು ರಾಜ್ಯದಿಂದಲೇ ಓಡಿಸಲು ಮತ್ತು ತಾನೊಬ್ಬ ಸರ್ವಾಧಿಕಾರಿಯಾಗಲು ಯಶಸ್ವಿಯಾದನು. ಎರಡನೆಯದಾಗಿ, ನೆಹರು ಮತ್ತು ಸರ್ದಾರರ ನಡುವೆ ಬಿರುಕನ್ನು ದೊಡ್ಡದು ಮಾಡಿ ನೆಹರು ಕಾಶ್ಮೀರದ ವಿಷಯವನ್ನು ಸರ್ದಾರರಿಂದ ಪ್ರತ್ಯೇಕಿಸಿ ತಾವೇ ವಹಿಸಿಕೊಳ್ಳುವಂತೆ ಮಾಡಿದನು.

ಡಿಸೆಂಬರ್ ೨ರಂದು ನೆಹರು ಮಹಾರಾಜರಿಗೆ ಪತ್ರ ಬರೆದು ಹೀಗೆ ತಿಳಿಸಿದರು:

ಶೇಖ್ ಅಬ್ದುಲ್ಲಾ ಪ್ರಧಾನಮಂತ್ರಿಯಾಗಿರಬೇಕು. ಮಂತ್ರಿ ಮಂಡಲ ರಚಿಸಲು ಅವರಿಗೆ ಅವಕಾಶ ಕೊಡಬೇಕು. ಮಹಾಜನ್ ರವರು ಮಂತ್ರಿಗಳ ಪೈಕಿ ಒಬ್ಬರಾಗಿರಬಹುದು ಮತ್ತು ಔಪಚಾರಿಕವಾಗಿ ಮಂತ್ರಿಮಂಡಲದ ಸಭೆಯ ಅಧ್ಯಕ್ಷತೆ ವಹಿಸಬಹುದು..... ನೀವು ಸಾಂಪ್ರದಾಯಿಕ ಮುಖ್ಯಸ್ಥರಾಗಿರುತ್ತೀರಿ.

ಆ ಪತ್ರದೊಡನೆ ಕಾಶ್ಮೀರದ ವ್ಯವಹಾರ ನೆಹರು ಕೈಗೆ ಬಂದಿತು. ಕಾಶ್ಮೀರದ ಭವಿಷ್ಯ ಅಬ್ದುಲ್ಲಾ ಮೇಲಿದೆ ಮತ್ತು ಅಬ್ದುಲ್ಲಾರನ್ನು ಸರ್ದಾರರು ಸರಿಯಾಗಿ ನಡೆಸಿಕೊಳ್ಳುವುದಿಲ್ಲ – ಎಂದು ಆಲೋಚಿಸಿ ನೆಹರು ಕಾಶ್ಮೀರವನ್ನು ಸರ್ದಾರರಿಂದ ತೆಗೆದು ತಾವೇ ವಹಿಸಿಕೊಂಡರು.[೧೧೯]

(ಮತ್ತು ಹಾಳು ಮಾಡಿದರು, ಮುಂದಿನ ಬೆಳವಣಿಗೆಗಳು ಸೂಚಿಸುವಂತೆ – ನೆಹರುರವರಿಗೆ ಕಷ್ಟಕಾಲದಲ್ಲಿ ಬೆಂಬಲಕ್ಕೆ ನಿಲ್ಲುತ್ತಿದ್ದ ಸರ್ದಾರರಿಗಿಂತ ಮೋಸಗಾರ ಅಬ್ದುಲ್ಲಾ ಮುಖ್ಯವಾಗಿದ್ದನು. ಅಬ್ದುಲ್ಲಾನ ಗೋಸುಂಬೆ ಬಣ್ಣವನ್ನು ದೂರದೃಷ್ಟಿಯಿಲ್ಲದ ನೆಹರು ಅರ್ಥಮಾಡಿಕೊಳ್ಳಲಾಗಲಿಲ್ಲ – ಲೇಖಕ)

ಕಾಶ್ಮೀರವನ್ನು ತಾವೇ ನಿರ್ವಹಿಸಲು ನೆಹರು ತೀರ್ಮಾನಿಸಿದಾಗ, ಪಟೇಲರು ಪಕ್ಕಕ್ಕೆ ಸರಿದು ಬಿಟ್ಟರು. ಕಾಶ್ಮೀರ ವಿಷಯದಲ್ಲಿ ತಮಗೆ ಸಹಾಯ ಮಾಡಲೆಂದು ನೆಹರುರವರು ಎನ್. ಗೋಪಾಲಸ್ವಾಮಿ ಅಯ್ಯಂಗಾರ್‌ರವರನ್ನು ಖಾತೆರಹಿತ ಮಂತ್ರಿಯನ್ನಾಗಿ, ಸರ್ದಾರರೊಡನೆ ಸಮಾಲೋಚಿಸದೆ, ತಂದರು. ಕಾಶ್ಮೀರದ ವಿಷಯವನ್ನು ತಮ್ಮ ಪರವಾಗಿ ನಿರ್ವಹಿಸುವುದಕ್ಕೆ ಅಯ್ಯಂಗಾರ್‌ರನ್ನು ತರಲಾಗಿದೆ ಎಂದು ನೆಹರುರವರು ಪಟೇಲರಿಗೆ ಹೇಳಲಿಲ್ಲ. ನೆಹರುರವರೇ ಕಾಶ್ಮೀರವನ್ನು ನಿರ್ವಹಿಸುತ್ತಾರೆ ಎಂದು ಪಟೇಲರು ತಿಳಿದಿದ್ದರು. ಅದರ ಫಲವಾಗಿ ಒಂದು ದೊಡ್ಡ ಗೊಂದಲವೇ ಉಂಟಾಯಿತು.

ಡಿಸೆಂಬರ್ ತಿಂಗಳ ಮೊದಲಾರ್ಧದಲ್ಲಿ ಗೋಪಾಲಸ್ವಾಮಿ ಐಯ್ಯಂಗಾರರ ಕಾಶ್ಮೀರದ ಎರಡು ಭೇಟಿಗೆ ನೆಹರು ಸರ್ದಾರರ ಒಪ್ಪಿಗೆಯನ್ನು ಪಡೆದುಕೊಂಡಿದ್ದರು. ಅದರಿಂದ ನೆಹರುರವರ ಆಲೋಚನೆ ಪಟೇಲರಿಗೆ ತಿಳಿಯುವುದು ಸಾಧ್ಯವಿರಲಿಲ್ಲ. ಆದರೆ ಅದು ಪಟೇಲರಿಗೆ ಅರಿವಾಗುವಂತೆ ಆದದ್ದು ಗೋಪಾಲಸ್ವಾಮಿಯವರು ೧೫೦ ಮೋಟಾರು ವಾಹನಗಳನ್ನು ಕಾಶ್ಮೀರಕ್ಕೆ ಬಿಡುಗಡೆ ಮಾಡುವಂತೆ ಪೂರ್ವ ಪಂಜಾಬ್‌ನ ಪ್ರಧಾನಿಗೆ ಟೆಲಿಗ್ರಾಂ ಕಳುಹಿಸಿದ್ದರಿಂದ. ಪಟೇಲರು ಗೋಪಾಲಸ್ವಾಮಿಯವರಿಗೆ ಪತ್ರ ಬರೆದು, 'ಈ ಪತ್ರವನ್ನು ರಾಜ್ಯಗಳ ಸಚಿವಾಲಯಕ್ಕೆ ಬರೆಯಬೇಕಾಗಿತ್ತು. ಆ ಸಚಿವಾಲಯ ಅದನ್ನು ನಿರ್ವಹಿಸಬೇಕಾಗಿತ್ತು. ಅದಕ್ಕೆ ಸಂಬಂಧ

ಪಟ್ಟ ದಾಖಲೆಗಳನ್ನು ಈ ಸಚಿವಾಲಯಕ್ಕೆ ವರ್ಗಾಯಿಸಿ, ಇನ್ನು ಮುಂದೆ ಈ ಸಚಿವಾಲಯದೊಡನೆ ವ್ಯವಹರಿಸುವಂತೆ ಕಾಶ್ಮೀರದ ಆಡಳಿತಕ್ಕೆ ಸೂಚಿಸುವುದು' ಎಂದು ಬರೆದರು. ಗೋಪಾಲಸ್ವಾಮಿಯವರು ಪಟೇಲರಿಗೆ, "ನಾನು ಖಾತೆ ಇರುವ ಸಚಿವಾಲಯ ಮತ್ತು ವ್ಯಕ್ತಿ ಹಾಗೂ ಪ್ರಾಧಿಕಾರಗಳ ನಡುವೆ ಅಂಚೆ ಕಛೇರಿಯಂತೆ ವರ್ತಿಸಲು ಇಷ್ಟಪಡುವುದಿಲ್ಲ. ನಾನು 'ಕೋರಿಕೆಯ ಮೇಲೆ' ಕಾಶ್ಮೀರಕ್ಕೆ ಎರಡು ಭೇಟಿ ಕೊಟ್ಟಿದ್ದೆ. ಆದಾಗ್ಯೂ, ಸರ್ದಾರರ ಪತ್ರಗಳ ಸಲುವಾಗಿ ಕಾಶ್ಮೀರಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳೊಡನೆ ನನ್ನ ಸಂಬಂಧವನ್ನು ಕಡಿದುಕೊಳ್ಳುತ್ತೇನೆ," ಎಂದು ಜವಾಬು ಬರೆದರು. ಪಟೇಲರು ಡಿಸೆಂಬರ್ ೨೩ರಂದು ಗೋಪಾಲಸ್ವಾಮಿಯವರಿಗೆ ಪತ್ರ ಬರೆದು, 'ನಿಮಗೆ ಕಸಿವಿಸಿ ಉಂಟು ಮಾಡುವುದಕ್ಕಿಂತ, ನಾನು ಪತ್ರವನ್ನು ವಾಪಸ್ಸು ಪಡೆದು ನೀವು ನಿಮಗೆ ತೋರಿದ ರೀತಿಯಲ್ಲಿ ಈ ವಿಷಯದ ಬಗೆಗೆ ವ್ಯವಹರಿಸಲು ಅನುವು ಮಾಡುತ್ತೇನೆ," ಎಂದು ತಿಳಿಸಿದರು.

ಈ ಪತ್ರ ತಲುಪುವ ಹೊತ್ತಿಗೆ ಗೋಪಾಲ ಸ್ವಾಮಿಯವರು ಪಟೇಲರ ಹಿಂದಿನ ಪತ್ರದ ಪ್ರತಿಯನ್ನು ನೆಹರುಗೆ ಕಳುಹಿಸಿಬಿಟ್ಟಿದ್ದರು. ಸರ್ದಾರರ ಪತ್ರಕ್ಕೆ ನೆಹರು ಅಸಮಾಧಾನಗೊಂಡು ಅವರಿಗೆ ಸ್ವಲ್ಪ ಒರಟಾದ ಪತ್ರವನ್ನು ಬರೆದರು:

> ಗೋಪಾಲಸ್ವಾಮಿ ಅಯ್ಯಂಗಾರ್‌ರವರನ್ನು ಪ್ರಮುಖವಾಗಿ ಕಾಶ್ಮೀರ ವಿಷಯದಲ್ಲಿ ಸಹಾಯ ಮಾಡಲು ಕೋರಲಾಗಿದೆ. ಈ ಕಾರಣಕ್ಕಾಗಿ ಮತ್ತು ಕಾಶ್ಮೀರ ವಿಷಯದಲ್ಲಿ ಅವರಿಗಿರುವ ಜ್ಞಾನ ಮತ್ತು ಅನುಭವಕ್ಕಾಗಿ ಅವರಿಗೆ ಪೂರ್ಣ ಸ್ವಾತಂತ್ರ್ಯವನ್ನು ನೀಡಬೇಕು..... ತೆಗೆದುಕೊಂಡ ಕ್ರಮಗಳನ್ನು ರಾಜ್ಯಗಳ ಸಚಿವಾಲಯಕ್ಕೆ ತಿಳಿಸಬೇಕು ಅನ್ನುವುದರ ಹೊರತು ಆ ಸಚಿವಾಲಯಕ್ಕೆ ಈ ವಿಷಯದಲ್ಲಿ ಏನು ಪಾತ್ರವಿದೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ.
>
> ಇವೆಲ್ಲವು ನನ್ನ ಸೂಚನೆಯ ಮೇಲೆ ಮಾಡಲ್ಪಟ್ಟಿವೆ. ಯಾವ ವಿಷಯಗಳಿಗೆ ನಾನು ಜವಾಬ್ದಾರ ಎಂದು ಭಾವಿಸಿದ್ದೇನೋ ಆ ವಿಷಯಗಳ ಬಗೆಗೆ ನನ್ನ ಕರ್ತವ್ಯಗಳನ್ನು ತೊರೆಯುವ ಉದ್ದೇಶ ನನಗಿಲ್ಲ. ಗೋಪಾಲಸ್ವಾಮಿಯವರ ಬಗೆಗೆ ವ್ಯವಹರಿಸಿದ ರೀತಿ, ಒಬ್ಬ ಸಹೋದ್ಯೋಗಿಗೆ ತೋರಿಸಬೇಕಾದ ಸೌಜನ್ಯತೆಗೆ ತಕ್ಕದ್ದಾಗಿ ಇಲ್ಲ ಎಂದು ನಾನು ಹೇಳಬಹುದೆ?

(ಇಲ್ಲಿ ಗೋಪಾಲಸ್ವಾಮಿ ಅಯ್ಯಂಗಾರ್‌ರವರದ್ದು ಏನೂ ತಪ್ಪಿಲ್ಲ, ಪಟೇಲರ ತಪ್ಪೂ ಇಲ್ಲ. ಈ ಗೊಂದಲಕ್ಕೆ ಕಾರಣ ನೆಹರುರವರೆ. ಅವರು ಗೋಪಾಲಸ್ವಾಮಿಯವರನ್ನು ತಂದಿರುವ ಉದ್ದೇಶ ಮತ್ತು ಅವರ ಕೆಲಸ ಕಾರ್ಯಗಳು ಏನು ಅನ್ನುವುದನ್ನು ಪಟೇಲರಿಗೆ ಹೇಳಲಿಲ್ಲ. ಗೋಪಾಲಸ್ವಾಮಿಯವರು ಕಾಶ್ಮೀರಕ್ಕೆ ಭೇಟಿಕೊಡುವುದಕ್ಕೆ ಎರಡು ಬಾರಿ ಪಟೇಲರ ಸಮ್ಮತಿಯನ್ನೂ ಪಡೆದುಕೊಂಡಿದ್ದರು. ಈಗ ಈ ಸೌಜನ್ಯತೆರಹಿತ ಪತ್ರವನ್ನು ಬರೆದಿದ್ದಾರೆ. ನೆಹರು ಹೀಗೇಕೆ ಮಾಡಿದರು? – ಹೇಳುವುದು ಕಷ್ಟ. ಬಹುಶಃ ನೆಹರುರವರ ಡೋಲಾಯಮಾನತೆ ಇದಕ್ಕೆ ಕಾರಣ. ಅತ್ತ ಕಡೆ ಶೇಖ್ ಅಬ್ದುಲ್ಲಾನನ್ನು ಪಟೇಲರ ಹಿಡಿತಕ್ಕೆ ಬಿಡಲೂ ಇಷ್ಟವಿಲ್ಲ, ಇತ್ತ ಕಡೆ 'ಕಾಶ್ಮೀರವನ್ನು ನಾನು ನಿರ್ವಹಿಸುತ್ತೇನೆ ಅದರ ಗೊಡವೆ ಇನ್ನು ನಿಮಗೆ ಬೇಡ' ಎಂದು ಪಟೇಲರಿಗೆ ಸ್ಪಷ್ಟವಾಗಿ ಹೇಳುವ ಮನಸ್ಸೂ ಇಲ್ಲ. ಅದರಿಂದ ಇಂತಹ ಕಹಿ ವಾತಾವರಣ ಸೃಷ್ಟಿಯಾಯಿತು ಅನ್ನಿಸುತ್ತದೆ. – ಲೇಖಕ)

ನೆಹರು ಬರೆದಂತಹ ಪತ್ರಕ್ಕೆ ಸರ್ದಾರರಂತಹ ಅಧಿಕಾರದ ಆಸೆ ರಹಿತ ಸ್ವಾಭಿಮಾನಿ ಹಿರಿಯ ಏನು ಉತ್ತರ ಬರೆಯುತ್ತಾನೊ ಅಂತಹ ಉತ್ತರವನ್ನು, ಡಿಸೆಂಬರ್ ೨೩ರಂದೇ ಸರ್ದಾರರು ಬರೆದರು:

> ನಿಮ್ಮ ಈ ಪತ್ರ ಈಗ ತಾನೆ ಒಂದು ಘಂಟೆಗೆ ನನ್ನ ಕೈ ಸೇರಿತು. ತಕ್ಷಣವೇ ನಿಮಗೆ ಇದನ್ನು ತಿಳಿಸಲು ಬರೆಯುತ್ತಿದ್ದೇನೆ. ಇದು ನನಗೆ ಸಾಕಷ್ಟು ನೋವನ್ನು ಉಂಟುಮಾಡಿದೆ..... ನಾನು ಸರ್ಕಾರದ ಸದಸ್ಯನಾಗಿ ಮುಂದುವರೆಯಕೂಡದು ಅಥವಾ ಮುಂದುವರಿಯಲು ಸಾಧ್ಯವಿಲ್ಲ ಅನ್ನುವುದನ್ನು ನಿಮ್ಮ ಪತ್ರ ನನಗೆ ಸ್ಪಷ್ಟ ಪಡಿಸಿದೆ. ಅದರಿಂದ ನಾನು ಈ ಮೂಲಕ ನನ್ನ ರಾಜಿನಾಮೆಯನ್ನು ಸಲ್ಲಿಸುತ್ತಿದ್ದೇನೆ. ಗಣನೀಯ ಒತ್ತಡದಿಂದ ಕೂಡಿದ್ದ ನನ್ನ ಅಧಿಕಾರದ ಅವಧಿಯಲ್ಲಿ ನೀವು ತೋರಿದ ಸೌಜನ್ಯತೆ ಮತ್ತು ಸಹೃದಯತೆಗಳಿಗೆ ನಾನು ಕೃತಜ್ಞನಾಗಿದ್ದೇನೆ.

ಅದೇ ರಾತ್ರಿ ನೆಹರುರವರಿಂದ ಉತ್ತರ ಬಂದಿತು:

> ನಾನು ಬರೆದದ್ದು ನಿಮಗೆ ನೋವು ಕೊಟ್ಟಿದ್ದಕ್ಕೆ ವಿಷಾದಿಸುತ್ತೇನೆ. ಘಟನೆಗಳ ರೀತಿ ಮತ್ತು ನಮ್ಮ ನಿಮ್ಮ ನಡುವೆ ಉದ್ಭವವಾಗಿರುವ ತೊಂದರೆಗಳ ಬಗೆಗೆ ನನಗೇ ಬಹಳ ಅಸಂತೋಷವಾಗಿದೆ. ನಾವಿಬ್ಬರೂ ಪರಸ್ಪರ ಎಷ್ಟೇ ಗೌರವಿಸಿದರೂ ಸಮಸ್ಯೆಗಳನ್ನು ಬಗೆಹರಿಸುವ ರೀತಿ ಭಿನ್ನವೆಂದು ಕಾಣುತ್ತದೆ. ನಾನು

> ಪ್ರಧಾನಮಂತ್ರಿಯಾಗಿ ಮುಂದುವರೆಯಬೇಕಾದರೆ, ನನ್ನ ಸ್ವಾತಂತ್ರ್ಯವನ್ನು ಮೊಟಕುಮಾಡಿಕೊಳ್ಳಲಾರೆ. ಸೂಚನೆಗಳನ್ನು ನೀಡುವ ಸ್ವಾತಂತ್ರ್ಯ ನನಗೆ ಸಾಕಷ್ಟು ಇರಬೇಕು. ಇಲ್ಲದೇ ಹೋದರೆ ನಾನು ನಿವೃತ್ತನಾಗುವುದೇ ಉತ್ತಮ. ದುರಾದೃಷ್ಟವಶಾತ್ ನೀವು ಅಥವಾ ನಾನು ಭಾರತ ಸರ್ಕಾರವನ್ನು ಬಿಡಬೇಕಾಗಿ ಬಂದರೆ, ಅದು ಗಾಂಭೀರ್ಯ ಮತ್ತು ಸದ್ಭಾವನೆಯಿಂದ ನಡೆಯಲಿ. ನನ್ನ ಮಟ್ಟಿಗೆ ಹೇಳುವುದಾದರೆ, ನಾನು ಸಂತೋಷವಾಗಿ ರಾಜಿನಾಮೆ ನೀಡುತ್ತೇನೆ ಮತ್ತು ಅಧಿಕಾರವನ್ನು ನಿಮಗೆ ಹಸ್ತಾಂತರಿಸುತ್ತೇನೆ.

ಆ ಪತ್ರಕ್ಕೆ ಜವಾಬನ್ನು ಪಟೇಲರು ಮಾರನೆಯ (೨೪.೧೨.೧೯೪೭) ಮಧ್ಯಾಹ್ನ ಕಳುಹಿಸಿದರು:

> ನಿರ್ದೇಶನ ನೀಡುವ ನಿಮ್ಮ ಸ್ವಾತಂತ್ರ್ಯವನ್ನು ತಡೆಯುವ ಬಯಕೆ ನನಗೆ ಇಲ್ಲವೂ ಇಲ್ಲ, ನಾನು ಹಿಂದೆ ಯಾವಾಗಲೂ ಆ ತರಹ ಮಾಡಿಯೂ ಇಲ್ಲ. ನೀವು ರಾಜಿನಾಮೆ ಕೊಡುವ ಅಥವಾ ನಿಮ್ಮ ಕರ್ತವ್ಯಗಳನ್ನು ತೊರೆಯುವ ಪ್ರಶ್ನೆ ಉದ್ಭವಿಸುವುದೇ ಇಲ್ಲ. ನಿರ್ಧಾರವನ್ನು ಗಾಂಭೀರ್ಯ ಮತ್ತು ಸದ್ಭಾವನೆಯಿಂದ ತೆಗೆದುಕೊಳ್ಳಬೇಕು ಎನ್ನುವ ನಿಮ್ಮ ಮಾತನ್ನು ನಾನು ಒಪ್ಪುತ್ತೇನೆ. ನೀವು ಹಾಗೆ ಮಾಡಲು ಶ್ರಮವಹಿಸಿ ಸಹಾಯ ಮಾಡುತ್ತೇನೆ, ಆದರೆ ನಾನು ಪರಿಣಾಮಕಾರಿಯಲ್ಲದ ಸಹೋದ್ಯೋಗಿಯಾಗಿ ಹೆಚ್ಚು ಕಾಲ ಮುಂದುವರೆಯುವುದನ್ನು ನೀವು ಇಷ್ಟಪಡುವುದಿಲ್ಲ ಎನ್ನುವುದು ನನಗೆ ಖಚಿತವಾಗಿ ಗೊತ್ತು.

ದೆಹಲಿಯ ಮುಸ್ಲಿಮರ ಸುರಕ್ಷತೆಯ ಬಗೆಗೆ ಮಾತನಾಡಲು, ಅಂದು ಸಂಜೆ ೫ ಘಂಟೆಗೆ ಸರ್ದಾರರು ಗಾಂಧೀಜಿಯ ಭೇಟಿಗೆ ಹೋದರು. ಅಲ್ಲಿ, ನೆಹರು, ಆಜ಼ಾದ್ ಮತ್ತು ಇತರ ಐದು ಮಂದಿ ಅವರನ್ನು ಕೂಡಿಕೊಂಡರು. ಅದಾದ ಮೇಲೆ ಸರ್ದಾರರೊಬ್ಬರೇ ಗಾಂಧೀಜಿಯೊಡನೆ ಮಾತನಾಡಿದರು. ಗಾಂಧಿ – ನೆಹರು ಚರ್ಚೆಯು ಸಹ ನಡೆಯಿತು. ಅದರ ಪರಿಣಾಮ ಮಹಾತ್ಮ ಮಧ್ಯಸ್ಥಿಕೆದಾರನಾದರು. ತಮ್ಮ ತಮ್ಮ ಅಭಿಪ್ರಾಯಗಳನ್ನು ಗಾಂಧೀಜಿಗೆ ಕೊಡಲು ಪಟೇಲ್ ಮತ್ತು ನೆಹರು ಒಪ್ಪಿದರು. ಆದಾಗ್ಯೂ ಅವರಿಬ್ಬರಲ್ಲಿ ಒಬ್ಬರು ಸರ್ಕಾರದಿಂದ ವಿರಮಿಸಬೇಕಾಗುತ್ತದೆ – ಎನ್ನುವುದು ಕಂಡು ಬಂದಿತು. ಪಟೇಲರಿಗೆ ಅದು ತಾವೇ ಅನ್ನಿಸಿತು.

ಈ ನಡುವೆ ಮೌಂಟ್‌ಬ್ಯಾಟನ್‌ರವರು ಕಾಶ್ಮೀರ ಸಮಸ್ಯೆಯನ್ನು ವಿಶ್ವಸಂಸ್ಥೆಗೆ ಕೊಂಡೊಯ್ಯುವಂತೆ ನೆಹರುವನ್ನು ಒತ್ತಾಯಿಸಲಾರಂಭಿಸಿದರು. ಪಟೇಲರು ಅದನ್ನು ವಿರೋಧಿಸಿದರು ಮತ್ತು ಕಾಶ್ಮೀರದಲ್ಲಿ ಸಕಾಲಿಕವಾದ ಕ್ರಮ ತೆಗೆದುಕೊಳ್ಳಬೇಕು ಎಂದರು. ಆದರೆ ಈಗ ಕಾಶ್ಮೀರ ಅವರ ಶಿಶುವಲ್ಲ. ತೀರ್ಮಾನ ಅವರ ಕೈಯಲ್ಲಿ ಇರಲಿಲ್ಲ. ನೆಹರುರವರು ಮೌಂಟ್‌ಬ್ಯಾಟನ್‌ರವರ ಒತ್ತಾಯಕ್ಕೆ ಮಣಿದು ೧೯೪೮ರ ಜನವರಿ ೧ರಂದು ವಿಶ್ವಸಂಸ್ಥೆಯ ಸಹಾಯವನ್ನು ಕೋರಿದರು.

ವಿಶ್ವಸಂಸ್ಥೆಯಲ್ಲಿ ನೆಹರು ಆಶಿಸಿದಂತೆ ನಡೆಯಲಿಲ್ಲ. ಪಾಕಿಸ್ತಾನದ ಪ್ರತಿನಿಧಿ ಜಫ್ರುಲ್ಲ ಖಾನ್‌ನ ಅದ್ಭುತ ವಾದದ ಮುಂದೆ ನಮ್ಮ ಪ್ರತಿನಿಧಿ ಗೋಪಾಲಸ್ವಾಮಿ ಅಯ್ಯಂಗಾರ್‌ರವರ ವಾದ ಕಳಪೆಯಾಯಿತು. (ಪಟೇಲರು ವಿಶ್ವಸಂಸ್ಥೆಗೆ ಸಿ.ಪಿ. ರಾಮಸ್ವಾಮಿ ಅಯ್ಯಂಗಾರ್‌ರವರನ್ನು ಕಳುಹಿಸಲು ಸಲಹೆ ಮಾಡಿದ್ದರು, ಆದರೆ ನೆಹರು ಒಪ್ಪಲಿಲ್ಲ. ರಾಮಸ್ವಾಮಿಯವರಿಗೆ ಅಮೆರಿಕ ಮತ್ತು ಇಂಗ್ಲೆಂಡಿನಲ್ಲಿ ಸ್ನೇಹಿತರಿದ್ದರು. ಅದು ಉಪಯೋಗಕ್ಕೆ ಬರುತ್ತಿತ್ತು. ರಾಮಸ್ವಾಮಿ ಮಹಾ ಮೇಧಾವಿಯೂ ಆಗಿದ್ದರು) ವಿಶ್ವಸಂಸ್ಥೆಯ ಭದ್ರತಾ ಮಂಡಲಿ ಜನವರಿ ಮತ್ತು ಫೆಬ್ರುವರಿಯಲ್ಲಿ ಅನೇಕ ಸಭೆಗಳನ್ನು ನಡೆಸಿತು. ಜಫ್ರುಲ್ಲಾ ಖಾನ್ ಕಾಶ್ಮೀರದ ಸಮಸ್ಯೆಯನ್ನು ದೇಶ ವಿಭಜನೆಯ ಮುಂದಿನ ಭಾಗ ಮತ್ತು ಪೂರ್ವ ಪಂಜಾಬ್‌ನಲ್ಲಿ ನಡೆದ ಮುಸ್ಲಿಂ ಹತ್ಯಾಕಾಂಡದ ಫಲ ಎಂದು ವಾದಿಸಿದನು. (ಪಶ್ಚಿಮ ಪಂಜಾಬ್‌ನಲ್ಲಿ ಹಿಂದೂ ಮತ್ತು ಸಿಕ್ ಹತ್ಯಾಕಾಂಡ ಅವನ ನೆನಪಿಗೆ ಬರಲಿಲ್ಲ – ಲೇಖಕ) ಬ್ರಿಟಿಷ್ ಪ್ರತಿನಿಧಿ ನೊಯಲ್ ಬೇಕರ್‌ನ ಪಾಕಿಸ್ತಾನ್ ಪರವಾದ ಪಕ್ಷಪಾತವೂ ಕೆಲಸ ಮಾಡಿತು. ಭದ್ರತಾ ಸಮಿತಿಯು ಕಾರ್ಯಕ್ರಮ ಪಟ್ಟಿಯಲ್ಲಿ 'ಜಮ್ಮು – ಕಾಶ್ಮೀರ ಪ್ರಶ್ನೆ' ಎಂದು ಇದ್ದದ್ದನ್ನು 'ಇಂಡಿಯಾ – ಪಾಕಿಸ್ತಾನ್ ಪ್ರಶ್ನೆ' ಎಂದು ಬದಲಾಯಿಸಿಬಿಟ್ಟಿತು.[೧೨೧] ಜುನಾಗಡ್‌ದ ವಿಷಯದಲ್ಲಿ ಪ್ಲೆಬಿಸೈಟನ್ನು ವಿರೋಧಿಸಿದ್ದ ಪಾಕಿಸ್ತಾನ ಕಾಶ್ಮೀರದಲ್ಲಿ ಪ್ಲೆಬಿಸೈಟಿನ ಪ್ರಸ್ತಾವನೆಯನ್ನು ಮುಂದಿಟ್ಟಿತು. ಅದಕ್ಕಾಗಿ ಸೈನ್ಯವನ್ನು ಹಿಂತೆಗೆದುಕೊಳ್ಳಬೇಕು ಎಂದಿತು. ಭಾರತ, ನ್ಯಾಷನಲ್ ಕಾನ್‌ಫೆರೆನ್ಸ್ ಆಡಳಿತದ ಅಧೀನದಲ್ಲಿ ಇಡೀ ರಾಜ್ಯದಲ್ಲಿ ಪ್ಲೆಬಿಸೈಟ್ ನಡೆಯಬೇಕು ಎಂದಿತು, ಅದನ್ನು ಪಾಕಿಸ್ತಾನ ಒಪ್ಪಲಿಲ್ಲ.

ಈ ನಡುವೆ ಚಳಿಗಾಲ ಬಂದಾಗ ನಮ್ಮ ಸೈನ್ಯ ಮುನ್ನುಗ್ಗುವುದನ್ನು ನಿಲ್ಲಿಸಬೇಕಾಯಿತು. ಮತ್ತೆ ಬೇಸಿಗೆ ಬಂದಾಗ ಸೈನ್ಯ ಕಾರ್ಯಾಚರಣೆ ಪುನಃ ಆರಂಭವಾಯಿತು. ವಿಶ್ವಸಂಸ್ಥೆಯ ಭದ್ರತಾ ಸಮಿತಿ ೧೯೪೯ರ ಏಪ್ರಿಲ್ ೨೧ರಂದು ಕದನ ನಿಲುಗಡೆ ಮಾಡುವಂತೆ ಠರಾವನ್ನು ಅಂಗೀಕರಿಸಿತು. ಪ್ರಧಾನಿ ನೆಹರು ಅದನ್ನು ಒಪ್ಪಿ ಸೈನ್ಯ ಕಾರ್ಯಾಚರಣೆಯನ್ನು ನಿಲ್ಲಿಸುವಂತೆ ಆದೇಶಿಸಿದರು.

ಆದರೆ ಆ ವೇಳೆಗೆ ಕಾಶ್ಮೀರದ ಪೂರ್ಣ ಭಾಗ ವೈರಿ ಮುಕ್ತವಾಗಿರಲಿಲ್ಲ. ಅದರಿಂದ ಪಾಕಿಸ್ತಾನ ವಶದಲ್ಲಿದ್ದ ಭಾಗ ಅವರ ವಶದಲ್ಲೇ ಉಳಿದುಬಿಟ್ಟಿದೆ. ಯುದ್ಧ ಗೆದ್ದರೂ ಉಪಯೋಗವಿಲ್ಲವಾಗಿದೆ.

ಒಟ್ಟಿನಲ್ಲಿ ಮೌಂಟ್‌ಬ್ಯಾಟನ್ ಮಾತು ಕೇಳಿ ವಿಶ್ವಸಂಸ್ಥೆಗೆ ಹೋದದ್ದು ಭಾರತಕ್ಕೆ ಭಾರಿ ತೊಂದರೆ ತಂದಿದೆ. ಕಾಶ್ಮೀರ ಸಮಸ್ಯೆ ಇನ್ನೂ ಪರಿಹಾರವಾಗಿಲ್ಲ. ೭೦ ವರ್ಷಗಳ ನಂತರವೂ ಪರಿಹಾರವಾಗುವ ಸೂಚನೆಯೂ ಕಾಣುತ್ತಿಲ್ಲ.

ನೆಹರುರವರು ಶೇಖ್ ಅಬ್ದುಲ್ಲಾನನ್ನು ತೃಪ್ತಿ ಪಡಿಸುವುದಕ್ಕಾಗಿ ಕಾಶ್ಮೀರವನ್ನು ಸರ್ದಾರ್ ಪಟೇಲರ ರಾಜ್ಯಗಳ ಸಚಿವಾಲಯದ ವ್ಯಾಪ್ತಿಯಿಂದ ಬಿಡಿಸಿ, ಅದನ್ನು ತಾವೇ ತೆಗೆದುಕೊಂಡು, ಗೋಪಾಲಸ್ವಾಮಿ ಅಯ್ಯಂಗಾರ್‌ರವರಿಗೆ ವಹಿಸಿದ್ದು, ಆ ನಂತರ ಮೌಂಟ್‌ಬ್ಯಾಟನ್ ಒತ್ತಡಕ್ಕೆ ಮಣಿದು ಕಾಶ್ಮೀರ ಪ್ರಶ್ನೆಯನ್ನು ವಿಶ್ವಸಂಸ್ಥೆಗೆ ತೆಗೆದುಕೊಂಡು ಹೋಗಿದ್ದು ಎರಡು ದೊಡ್ಡ ಪ್ರಮಾದಗಳಾದುವು. ಸ್ವತಃ ನೆಹರುರವರೆ ತಮ್ಮ ಕಾರ್ಯಕ್ಕೆ ಪಶ್ಚಾತಾಪ ಪಟ್ಟರು. ಅವರು ೧೯೪೮ರ ಅಕ್ಟೋಬರ್ ೨೭ರಂದು ಪ್ಯಾರಿಸ್‌ನಿಂದ ಪಟೇಲರಿಗೆ ಬರೆದ ಒಂದು ಪತ್ರದಲ್ಲಿ ಕಾಶ್ಮೀರದ ಬಗೆಗೆ ವಿದೇಶಿಯರ ಮನೋಭಾವದ ಬಗೆಗೆ ಬೇಸರ ವ್ಯಕ್ತ ಪಡಿಸಿ, "ಕಾಶ್ಮೀರವು ಪ್ರಧಾನವಾಗಿ ಮುಸ್ಲಿಂ ಪ್ರದೇಶ, ಅದರಿಂದ ಅಲ್ಲಿಯ ಮುಸ್ಲಿಮರು ಪಾಕಿಸ್ತಾನದ ಪರ ಹೋಗುತ್ತಾರೆ – ಅನ್ನುವ ಭಾವನೆಯನ್ನು (ವಿದೇಶಿ) ಜನ ತಮ್ಮ ತಲೆಯಿಂದ ಆಚೆಗೆ ಹಾಕುವುದೇ ಇಲ್ಲ," ಎಂದರು.[೧೨೨]

ಗೋಪಾಲಸ್ವಾಮಿ ಐಯ್ಯಂಗಾರ್‌ರವರು ೧೯೪೮ರ ಜೂನ್ ೫ರಂದು ಪಟೇಲರಿಗೆ ಬರೆದ ಪತ್ರದಲ್ಲಿ 'ಭದ್ರತಾ ಸಮಿತಿಯ ರೀತಿ ವಿಚಿತ್ರವಾಗಿದೆ. ಕಾಶ್ಮೀರ ಪ್ರಶ್ನೆಯ ಬಗೆಗೆ ಅದು ವರ್ತಿಸುತ್ತಿರುವ ರೀತಿ ನನಗೂ ಆಶ್ಚರ್ಯವನ್ನು ಉಂಟು ಮಾಡಿದೆ..... ನೀವು ಹೇಳುವ ಹಾಗೆ, ವಿಷಯವನ್ನು ನೇರವಾಗಿ ನೋಡದ ವ್ಯಕ್ತಿಗಳ ಬಲೆಗೆ ನಮ್ಮನ್ನು ನಾವೇ ಸಿಕ್ಕಿಸಿಕೊಂಡು ಬಿಟ್ಟಿದ್ದೇವೆ.[೧೨೩]

ವಿಶ್ವಸಂಸ್ಥೆಗೆ ಹೋಗಿದ್ದಕ್ಕೆ ತೀವ್ರ ಪಶ್ಚಾತ್ತಾಪ ಪಟ್ಟ ನೆಹರುರವರು ಮೌಂಟ್‌ಬ್ಯಾಟನ್‌ಗೆ, ".....ಸಂಪೂರ್ಣವಾಗಿ ಅಮೆರಿಕನ್ನರಿಂದ ನಡೆಸಲ್ಪಡುತ್ತಿರುವ ಸಂಸ್ಥೆಯ ನಿಯಂತ್ರಣವನ್ನು ನೈತಿಕತೆಯು ನಿರ್ವಹಿಸದೆ ರಾಜಕಾರಣವು ನಿರ್ವಹಿಸುವುದನ್ನು ನೋಡಿ ನನಗೆ ದಿಗ್ಭ್ರಾಂತಿಯಾಗಿದೆ" ಎಂದರು.[೧೨೪]

ಜುನಾಗಡದ ವಿಷಯದಲ್ಲೂ ವಿಶ್ವಸಂಸ್ಥೆಗೆ ಹೋಗುವಂತೆ ಮೌಂಟ್‌ಬ್ಯಾಟನ್ ರವರು ಸಲಹೆ ನೀಡಿದ್ದರು, ಒತ್ತಾಯವನ್ನೂ ಮಾಡಿದ್ದರು. ಆದರೆ ಜುನಾಗಡ

ಪಟೇಲರ ಅಧಿಕಾರ ವ್ಯಾಪ್ತಿಯಲ್ಲಿತ್ತು. ಪಟೇಲರು ಮೌಂಟ್‌ಬ್ಯಾಟನ್ನರ ಸಲಹೆಗೆ ಕಿವಿಗೊಡದೆ ಸೈನ್ಯ ಕಳುಹಿಸಿ ಜುನಾಗಡವನ್ನು ಭಾರತದಲ್ಲಿ ವಿಲೀನಗೊಳಿಸಿದ್ದರು. ಆದರೆ ಈಗ ಮೌಂಟ್‌ಬ್ಯಾಟನ್ನರ ಮಾತಿಗೆ ಮಣಿದು ನೆಹರು ಕೈ ಸುಟ್ಟುಕೊಂಡಿದ್ದರು.

ಅಷ್ಟೇ ಅಲ್ಲ, ಯಾವ ಶೇಖ್ ಅಬ್ದುಲ್ಲಾನಲ್ಲಿ ನೆಹರು ಸಂಪೂರ್ಣ ನಂಬಿಕೆ ಇಟ್ಟಿದ್ದರೋ ಮತ್ತು ಅವನಿಗೆ ಅನುಕೂಲ ಮಾಡಲು ಪಟೇಲರನ್ನು ದೂರ ಮಾಡಿದ್ದರೋ ಮತ್ತು ಮಹಾರಾಜ ಹರಿಸಿಂಗನನ್ನು ನಯಾನಾಜೂಕಿಲ್ಲದ ರೀತಿಯಲ್ಲಿ ಅಧಿಕಾರದಿಂದ ಕೆಳಗಿಳಿಸಿದ್ದಲ್ಲದೆ ರಾಜ್ಯದಿಂದಲೇ ಹೊರಕ್ಕೆ ಅಟ್ಟಿದ್ದರೋ ಮತ್ತು ಯಾವ ಶೇಖ್ ಅಬ್ದುಲ್ಲಾನನ್ನು ಕಾಶ್ಮೀರದ ಪ್ರಧಾನಮಂತ್ರಿ ಮಾಡಿದ್ದರೋ ಆ ಶೇಖ್ ಅಬ್ದುಲ್ಲಾನೇ ನೆಹರುಗೆ ವಿಶ್ವಾಸಘಾತಕತನ ಮಾಡಿದನು. ಕಾಶ್ಮೀರವನ್ನು ಭಾರತದಿಂದ ಬೇರ್ಪಡಿಸುವ ಬಗೆಗೆ ಆಲೋಚಿಸಲು ಶುರು ಮಾಡಿದನು. ೧೯೫೦ ಮೇ ೧೦ರಂದು ನೆಹರು ತಮ್ಮ ತಂಗಿ ವಿಜಯಲಕ್ಷ್ಮಿ ಪಂಡಿತ್‌ರವರಿಗೆ ಬರೆದ ಪತ್ರದಲ್ಲಿ, "ಶೇಖ್ ಅಬ್ದುಲ್ಲಾ ಅತ್ಯಂತ ಬೇಜವಾಬ್ದಾರಿ ರೀತಿಯಲ್ಲಿ ವರ್ತಿಸುತ್ತಿದ್ದಾರೆ ಎಂದು ಹೇಳಲು ವಿಷಾದಿಸುತ್ತೇನೆ. ಜೀವನದಲ್ಲಿ ಅತ್ಯಂತ ಕಷ್ಟಕರವಾದ ವಿಷಯ ಏನೆಂದರೆ ಸ್ನೇಹಿತರ ಬಗೆಗೆ ಏನು ಮಾಡಬೇಕು – ಎನ್ನುವುದು ಎಂದು ಬರೆದರು.[೧೨೫]

(ಮಾಡಿದ್ದುಣ್ಣೋ ಮಹಾರಾಯ – ಅದು ಸರಿ, ಆದರೆ ಅದು ದೇಶವನ್ನೇ ಮುಳುಗಿಸಿತು. – ಲೇಖಕ)

❖ ◆ ❖

ವಿ.ಪಿ.ಮೆನನ್

೨೨. ಸಂವಿಧಾನ ರಚನೆಯಲ್ಲಿ ಸರ್ದಾರರ ಪಾತ್ರ

ರಾಜ್ಯಗಳ ಖಾತೆಯ ಮಂತ್ರಿಯಾಗಿ ಅರಸರ ರಾಜ್ಯಗಳನ್ನು ಒಕ್ಕೂಟದಲ್ಲಿ ಸೇರಿಸಿ ಮತ್ತು ಗೃಹಮಂತ್ರಿಯಾಗಿ ಉತ್ತಮ ಆಡಳಿತ ವ್ಯವಸ್ಥೆಯನ್ನು ರೂಪಿಸಿದ ಹಾಗೆ ಸಂವಿಧಾನ ರಚನೆಯಲ್ಲೂ ಸಕ್ರಿಯವಾಗಿ ಭಾಗವಹಿಸಿ ತಮ್ಮ ಪಾತ್ರವನ್ನು ಯಶಸ್ವಿಯಾಗಿ ನಿರ್ವಹಿಸಿ ಸರ್ದಾರ್ ವಲ್ಲಭಭಾಯ್ ಪಟೇಲರು ಭಾರತ ಒಕ್ಕೂಟವನ್ನು ಸುಭದ್ರಗೊಳಿಸಿದರು.

ದೇಶಕ್ಕೆ ಒಂದು ಸಂವಿಧಾನವನ್ನು ರಚಿಸಲು ಸಂವಿಧಾನ ರಚನಾ ಸಭೆಯು ಚುನಾವಣೆಯ ಮೂಲಕ ರಚಿಸಲ್ಪಟ್ಟಿತು. ಆ ಚುನಾವಣೆಯು ಜುಲೈ ೧೯೪೬ರಲ್ಲಿ ನಡೆದು ಒಟ್ಟು ೨೯೬ ಸ್ಥಾನಗಳ ಪೈಕಿ ಕಾಂಗ್ರೆಸ್‌ಗೆ ೨೧೨ ಸ್ಥಾನಗಳು, ಮುಸ್ಲಿಂ ಲೀಗ್‌ಗೆ ೭೩ ಸ್ಥಾನಗಳು ಮತ್ತು ಸ್ವತಂತ್ರವಾಗಿ ಸ್ಪರ್ಧಿಸಿದವರಿಗೆ ೧೧ ಸ್ಥಾನಗಳು ಲಭಿಸಿದುವು. ಸಂವಿಧಾನ ರಚನಾ ಸಭೆಯ ಪ್ರಥಮ ಅಧಿವೇಶನ ೧೯೪೬ರ ಡಿಸೆಂಬರ್ ೯ರಂದು ಆರಂಭವಾಯಿತು. ಅದರಲ್ಲಿ ಭಾಗವಹಿಸಲು ಆರಂಭದಲ್ಲಿ ಮುಸ್ಲಿಂ ಲೀಗ್ ನಿರಾಕರಿಸಿದರೂ ಆನಂತರ ಭಾಗವಹಿಸಿತು. ಅದರಲ್ಲಿ ಭಾಗವಹಿಸುವುದರ ಬಗೆಗೆ ದೇಶೀಯ ರಾಜ್ಯಗಳು ಇನ್ನೂ ತೀರ್ಮಾನ ಕೈಗೊಂಡಿರಲಿಲ್ಲ. ಆದಾಗ್ಯೂ ಅಂದು ೨೦೫ ಮಂದಿ ಭಾಗವಹಿಸಿ ಆ ಸಭೆಯ ಸ್ವಾಯತ್ತತೆಯನ್ನು ಮತ್ತು ಸಂವಿಧಾನ ರಚಿಸುವ ತಮ್ಮ ಹಕ್ಕನ್ನು ಎತ್ತಿ ಹಿಡಿದರು.

ಸಂವಿಧಾನ ರಚನೆ ಬಹಳ ಗುರುತರವಾದ ಮತ್ತು ಜವಾಬ್ದಾರಿಯ ಮತ್ತು ಪಾಂಡಿತ್ಯದ ಕೆಲಸ. ಅದರಿಂದ ನೆಹರು ಮತ್ತು ಪಟೇಲರು, ಪ್ರಮುಖವಾಗಿ ಪಟೇಲರು, ಕಾಂಗ್ರೆಸ್ಸೇತರರಾದರೂ ಕಾನೂನು ವಿಷಯದಲ್ಲಿ ಶ್ರೇಷ್ಠರಾದವರು

ಸಂವಿಧಾನ ಸಭೆಗೆ ಆಯ್ಕೆಯಾಗುವಂತೆ ನೋಡಿಕೊಂಡರು. ಬಿ.ಆರ್. ಅಂಬೇಡ್ಕರ್, ಅಲ್ಲಾಡಿ ಕೃಷ್ಣಸ್ವಾಮಿ ಅಯ್ಯರ್ ಮತ್ತು ಎನ್. ಗೋಪಾಲ ಸ್ವಾಮಿ ಐಯ್ಯಂಗಾರ್ ಅಂತವರಲ್ಲಿ ಕೆಲವರು. ಕಾಂಗ್ರೆಸ್ ಪಕ್ಷದ ಸದಸ್ಯರಾದ ಖ್ಯಾತ ವಕೀಲ ಕೆ.ಎಂ. ಮುನ್ಷಿಯವರೂ ಆಯ್ಕೆಯಾಗಿದ್ದರು. ಇವರಲ್ಲದೆ ವಾಣಿಜ್ಯ ಉದ್ಯಮಿ ಮತ್ತು ಆರ್ಥಿಕ ತಜ್ಞ ಜಾನ್ ಮಥಾಯ್, ಹಿಂದೂ ಮಹಾ ಸಭಾದ ಶ್ಯಾಂ ಪ್ರಸಾದ್ ಮುಖರ್ಜಿ, ವಾಣಿಜ್ಯ ಮತ್ತು ಬ್ಯಾಂಕಿಂಗ್ ವಲಯದ ಕೂವರ್ಜಿ ಭಾಭಾ ಸಂವಿಧಾನ ಸಭೆಯಲ್ಲಿದ್ದರು.[೧೨೬] ಮುಂದೆ ರಾಜರುಗಳ ಪ್ರತಿನಿಧಿಗಳೂ ಆ ಸಭೆಗೆ ಬಂದರು.

ಡಾ॥ ಬಾಬು ರಾಜೇಂದ್ರ ಪ್ರಸಾದ್‌ರವರು ಸಂವಿಧಾನ ರಚನಾ ಸಭೆಯ ಅಧ್ಯಕ್ಷರಾಗಿ ಆಯ್ಕೆಯಾದರು. ೧೯೪೭ರ ಆಗಸ್ಟ್ ೨೯ರಂದು ಸಂವಿಧಾನದ ಕರಡನ್ನು ರಚಿಸಲು ಏಳು ಮಂದಿಯ ಕರಡು ರಚನಾ ಸಮಿತಿಯನ್ನು ಡಾ॥ ಅಂಬೇಡ್ಕರ್‌ರವರ ಅಧ್ಯಕ್ಷತೆಯಲ್ಲಿ ರಚಿಸಲಾಯಿತು. ಕೆ.ಎಂ. ಮುನ್ಷಿ, ಅಲ್ಲಾಡಿ ಕೃಷ್ಣಸ್ವಾಮಿ ಐಯ್ಯರ್, ಎನ್. ಗೋಪಾಲಸ್ವಾಮಿ ಐಯ್ಯಂಗಾರ್, ಬಿ.ಎಲ್. ಮಿತ್ತರ್, ಮಹಮದ್ ಸಾದುಲ್ಲಾ ಮತ್ತು ಡಿ.ಪಿ.ಖೈತಾನ್ ಆ ಸಮಿತಿಯ ಇತರ ಸದಸ್ಯರಾಗಿದ್ದರು. ಮುಂದೆ ಮಿತ್ತರ್ ರಾಜಿನಾಮೆ ಕೊಟ್ಟಿದ್ದರಿಂದ ಅವರ ಸ್ಥಾನದಲ್ಲಿ ದಿವಾನ್ ಮಾಧವರಾವ್ ಮತ್ತು ಡಿ.ಪಿ. ಖೈತಾನ್ ಗತಿಸಿದ್ದರಿಂದ ಅವರ ಸ್ಥಾನದಲ್ಲಿ ಟಿ.ಟಿ. ಕೃಷ್ಣಮಾಚಾರಿ ನೇಮಕವಾದರು. ಬಿ.ಎನ್. ರಾವ್ ಸಮಿತಿಗೆ ಸಂವಿಧಾನ ಸಲಹೆಗಾರರಾಗಿ ನೇಮಕವಾದರು. ಅವರು ಆರಂಭದ ಕರಡನ್ನು ರಚಿಸಿದರು.

ಸಂವಿಧಾನ ರಚನಾ ಸಭೆಯು ಕೇಂದ್ರ ಶಾಸನ ಸಭೆಯಾಗಿಯೂ ಕೆಲಸ ನಿರ್ವಹಿಸಿತು. ಅದು ಸಂವಿಧಾನದ ಕೆಲಸ ಮಾಡುವಾಗ ಡಾ॥ ರಾಜೇಂದ್ರ ಪ್ರಸಾದ್ ಅದರ ಅಧ್ಯಕ್ಷರಾಗಿರುತ್ತಿದ್ದರು. ಅದು ಶಾಸನ ಸಭೆಯ ಕಲಾಪ ನಡೆಸುವಾಗ, ಜಿ.ವಿ. ಮಾವಲಂಕರ್‌ರವರು ಸಭಾಪತಿ ಸ್ಥಾನ ಅಲಂಕರಿಸುತ್ತಿದ್ದರು.

ನೆಹರು ಮತ್ತು ಪಟೇಲ್ ಇಬ್ಬರೂ ಸಂವಿಧಾನ ರಚನಾ ಸಭೆಯಲ್ಲಿ ಬಹಳ ಕ್ರಿಯಾಶೀಲರಾಗಿದ್ದರು. ಅವರು ಅನೇಕ ಸಮಿತಿಗಳ ಅಧ್ಯಕ್ಷರಾಗಿದ್ದರು ಮತ್ತು ಸಭೆಯ ಚರ್ಚೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಸರ್ದಾರರು ಎರಡು ಅತಿ ಮುಖ್ಯ ಸಮಿತಿಗಳ ಚೇರ್‌ಮನ್ ಆಗಿದ್ದರು. ಅವು ಮೂಲಭೂತ ಹಕ್ಕುಗಳ ಮತ್ತು ಅಲ್ಪ ಸಂಖ್ಯಾತರ ಸಲಹಾ ಸಮಿತಿ ಮತ್ತು ಪ್ರಾಂತ್ಯಗಳ ಸಂವಿಧಾನ ಸಮಿತಿ. ಈ ಎರಡು ಸಮಿತಿಗಳ ಕಲಾಪಗಳಲ್ಲಿ ಅಲ್ಲದೆ, ಸಂವಿಧಾನದ ತುರ್ತು ನಿಬಂಧನೆಗಳ ರಚನೆ, ಭಾಷಾ ನೀತಿ, ರಾಜ್ಯಗಳ ಸೇರ್ಪಡೆಯಿಂದ ಕೇಂದ್ರ ಸರ್ಕಾರಕ್ಕೆ ಉದ್ಭವಿಸಿದ ಜವಾಬ್ದಾರಿಗಳು, ಅಧಿಕಾರಶಾಹಿ ಕಡೆಗಿನ ಜವಾಬ್ದಾರಿಗಳು,

ಜಮ್ಮು ಮತ್ತು ಕಾಶ್ಮೀರಕ್ಕೆ ಸಂಬಂಧಿಸಿದ ವಿಶೇಷ ನಿಬಂಧನೆಗಳು ಮತ್ತು ಭಾಷಾವಾರು ಪ್ರಾಂತ್ಯಗಳ ಸಮಸ್ಯೆಯ ಬಗೆಗೆ ಅವರು ವಿಶೇಷ ಆಸಕ್ತಿಯನ್ನು ವಹಿಸಿದರು ಮತ್ತು ನಿರ್ಧಾರಿತ ಪಾತ್ರವನ್ನು ವಹಿಸಿದರು. ಭಾಷಾವಾರು ಪ್ರಾಂತ್ಯಗಳ ವಿಷಯದಲ್ಲಿ ಅವರು ಪ್ರಸಿದ್ಧವಾದ ಜೆ.ವಿ.ಪಿ. ಸಮಿತಿಯ (JVP committee) ಸದಸ್ಯರಾಗಿದ್ದರು. ಜೆ.ವಿ.ಪಿ. ಸಮಿತಿ ಅನ್ನುವುದು ಜವಹರಲಾಲ್ ನೆಹರು, ವಲ್ಲಭಭಾಯ್ ಪಟೇಲ್ ಮತ್ತು ಪಟ್ಟಾಭಿ ಸೀತಾರಾಮಯ್ಯ ಸಮಿತಿಯ ಹ್ರಸ್ವರೂಪ. ಆ ಸಮಿತಿಯು ಭಾಷಾವಾರು ಪ್ರಾಂತ್ಯಗಳ ರಚನೆಯನ್ನು ಆಗಲೇ ಮಾಡಬಾರದೆಂದು ಶಿಫಾರಸ್ಸು ಮಾಡಿತು.[೧೨೭]

ಮೂಲಭೂತ ಹಕ್ಕುಗಳ ವಿಷಯ ಚರ್ಚೆಗೆ ಬಂದಾಗ ಎರಡು ವಿಧದ ಅಭಿಪ್ರಾಯಗಳು ಮಂಡಿಸಲ್ಪಟ್ಟವು. ನಾಗರಿಕ ರಾಷ್ಟ್ರಗಳಲ್ಲಿ ಸಾಮಾನ್ಯವಾಗಿ ಒಪ್ಪಿಗೆಯಾಗಿರುವ ಮೂಲಭೂತ ಹಕ್ಕುಗಳನ್ನು ನಮ್ಮ ಸಂವಿಧಾನದ ಮೂಲಭೂತ ಹಕ್ಕುಗಳ ಪಟ್ಟಿಯಲ್ಲಿ ಸೇರಿಸಬೇಕು ಮತ್ತು ಆ ಹಕ್ಕುಗಳನ್ನು ನ್ಯಾಯಾಲಯಗಳ ಮೂಲಕ ರಕ್ಷಿಸಬೇಕು – ಎಂದು ಕೆಲವರು ಅಭಿಪ್ರಾಯ ಪಟ್ಟರು. ಇನ್ನು ಕೆಲವರು, ಆ ಹಕ್ಕುಗಳನ್ನು ಮೊಟಕುಗೊಳಿಸಬೇಕು, ಎಂದರು. ಮೂಲಭೂತ ಹಕ್ಕುಗಳು ಸಾಮಾಜಿಕ ಸುರಕ್ಷತೆ ಮತ್ತು ಭದ್ರತೆಯನ್ನು ಕಾಪಾಡುವುದಕ್ಕೆ ಅನುಗುಣವಾಗಿ ಇರಬೇಕೆನ್ನುವುದು ಪಟೇಲರ ಅಭಿಪ್ರಾಯವಾಗಿತ್ತು. ತೆಲಂಗಾಣ ಮತ್ತಿತರ ಪ್ರದೇಶಗಳಲ್ಲಿ ನಡೆಯುತ್ತಿದ್ದ ಕಾನೂನುಬಾಹಿರ ಚಟುವಟಿಕೆಗಳಿಂದ ಸರ್ದಾರರು ಈ ಅಭಿಪ್ರಾಯಕ್ಕೆ ಬಂದಿದ್ದರು. ರಾಷ್ಟ್ರ ಘಾತಕ ಶಕ್ತಿಗಳನ್ನು ನಿಯಂತ್ರಿಸಲು ಬೇಕಾಗುವಷ್ಟು ಅಧಿಕಾರ ಸರ್ಕಾರಕ್ಕೆ ಇರಬೇಕು, ಆದರೆ ರಾಜ್ಯ ಸರ್ಕಾರಗಳು ಪ್ರಜೆಗಳ ನ್ಯಾಯಬದ್ಧ ಹಕ್ಕುಗಳನ್ನು ದಮನಮಾಡುವಂತಿರಬಾರದು, ಎಂದು ಸರ್ದಾರರು ವಾದಿಸಿದರು.

ಆಸ್ತಿ ಹಕ್ಕುಗಳ ವಿಷಯದಲ್ಲಂತೂ ಭಾರಿ ಚರ್ಚೆ ನಡೆಯಿತು. ಆಸ್ತಿ ಹಕ್ಕುಗಳ ರಕ್ಷಣೆಗೆ ಸರ್ದಾರರು ಬದ್ಧರಾಗಿದ್ದರು. ಒಬ್ಬ ರೈತನಾಗಿ ಜಮೀನಿನ ಮಾಲೀಕತ್ವದ ಹಕ್ಕು ಅವರಿಗೆ ಬಹಳ ಪವಿತ್ರ ಮತ್ತು ಪ್ರಧಾನವಾಗಿತ್ತು. ಆ ಹಕ್ಕನ್ನು ಸರ್ಕಾರ ರಕ್ಷಿಸಬೇಕು, ಆದಾಗ್ಯೂ ನ್ಯಾಯವಾದ ಸಾರ್ವಜನಿಕ ಉದ್ದೇಶಕ್ಕಾಗಿ ಆಸ್ತಿಯನ್ನು ಸರ್ಕಾರ ಸ್ವಾಧೀನಪಡಿಸಿಕೊಳ್ಳಬಹುದು, ಆದರೆ ನ್ಯಾಯವಾದ ಪರಿಹಾರವನ್ನು ನೀಡಬೇಕು – ಎನ್ನುವುದು ಪಟೇಲರ ಅಭಿಪ್ರಾಯವಾಗಿತ್ತು. ಆದರೆ ನೆಹರು ನಾಯಕತ್ವದ ಸಮಾಜವಾದಿಗಳ ಗುಂಪಿಗೆ ಅದು ಒಪ್ಪಿಗೆ ಇರಲಿಲ್ಲ. ಅವರು, ಆಸ್ತಿ ಹಕ್ಕಿನ ಪೂರ್ಣ ರಕ್ಷಣೆಯಿಂದ ಸಮಾಜವಾದದ ಏಳಿಗೆ ಕುಂಠಿತವಾಗುತ್ತದೆ. ಭೂ ಸುಧಾರಣೆಯು ಕಾಂಗ್ರೆಸ್ಸಿನ ಒಂದು ಘೋಷಿತ ಗುರಿ. ಜಮೀನ್ದಾರರ

ಹಕ್ಕುಗಳನ್ನು ಮೊಟಕುಗಳಿಸದೇ ಹೋದರೆ ಭೂ ಸುಧಾರಣೆಯನ್ನು ಸಾಧಿಸಲು ಸಾಧ್ಯವಿಲ್ಲ, ನ್ಯಾಯಾಲಯಗಳು ನಿಗದಿ ಪಡಿಸಿದಂತೆ ಭೂ ಮಾಲೀಕರಿಗೆ ಪೂರ್ಣ ಪರಿಹಾರವನ್ನು ನೀಡಿದರೆ ಸುಧಾರಣೆಯ ವೆಚ್ಚ ಅಧಿಕವಾಗಿ ಸುಧಾರಣೆಯು ಕುಂಠಿತವಾಗುತ್ತದೆ, ಅದರಿಂದ ಪರಿಹಾರವನ್ನು ಶಾಸನ ಸಭೆ ನಿರ್ಧರಿಸಬೇಕು – ಎನ್ನುವುದು ನೆಹರು ಗುಂಪಿನವರ ವಾದವಾಗಿತ್ತು.

ಆದರೆ ಪಟೇಲರು ಈ ವಾದವನ್ನು ಒಪ್ಪಲಿಲ್ಲ. ನ್ಯಾಯವಾದ ಪರಿಹಾರವನ್ನು ಕೊಡದೆ ಹೋದರೆ, ಅದು ಒಂದು ದರೋಡೆ ಮತ್ತು ಲೂಟಿ. ಅದು ಹಿಂಸಾಚಾರಕ್ಕೆ ಅವಕಾಶ ಮಾಡುತ್ತದೆ. ಅಹಿಂಸೆ ಕಾಂಗ್ರೆಸ್ಸಿನ ಮೂಲಭೂತ ತತ್ವ – ಎಂದರು ಅವರು. ೧೯೪೫ರ ಚುನಾವಣಾ ಪ್ರಣಾಳಿಕೆಯು ಭೂ ಮಾಲೀಕರಿಗೆ ನ್ಯಾಯವಾದ ಪರಿಹಾರದ ಆಶ್ವಾಸನೆಯನ್ನು ನೀಡಿರುವುದನ್ನು ಪಟೇಲರು ಎತ್ತಿ ತೋರಿಸಿದರು. ಅರ್ಥಮಂತ್ರಿ ಡಾ॥ ಜಾನ್ ಮಥಾಯ್ ಪಟೇಲರನ್ನು ಬೆಂಬಲಿಸಿದರು ಮತ್ತು ತಮ್ಮ ಅಭಿಪ್ರಾಯವನ್ನು ಒಪ್ಪದೆ ಹೋದರೆ ರಾಜಿನಾಮೆ ನೀಡುವುದಾಗಿ ಬೆದರಿಸಿದರು.

ಈ ವಿಷಯದಲ್ಲಿ ಕಾಂಗ್ರೆಸ್ಸು ಇಬ್ಭಾಗವಾಯಿತು. ಬಿಸಿ ಬಿಸಿ ಚರ್ಚೆಗಳು ನಡೆದುವು. ಸರ್ದಾರರು ಜಗ್ಗಲಿಲ್ಲ. ಅಂತಿಮವಾಗಿ ಸಂವಿಧಾನ ಸಭೆಯು, ಆಸ್ತಿಯ ಹಕ್ಕು ಸಂವಿಧಾನದಿಂದ ರಕ್ಷಿಸಲ್ಪಡಬೇಕು ಮತ್ತು ಪರಿಹಾರದ ಮೊತ್ತವು ನ್ಯಾಯಾಲಯಗಳ ವಿಮರ್ಶೆಗೆ ಒಳಪಡಬೇಕು – ಎಂದು ತೀರ್ಮಾನಿಸಿತು.[೧೨೮]

(ಮುಂದಿನ ಸರ್ಕಾರಗಳು ಸಂವಿಧಾನಕ್ಕೆ ಒಂದರ ಮೇಲೆ ಒಂದರಂತೆ ತಿದ್ದುಪಡಿ ತಂದು ಆಸ್ತಿ ಹಕ್ಕನ್ನು ಮೊಟಕುಗಳಿಸಿವೆ ಮತ್ತು ಅದನ್ನು ಶಾಸಕಾಂಗದ ಅಧೀನಕ್ಕೆ ಒಳಪಡಿಸಿವೆ. – ಲೇಖಕ)

ಅಲ್ಪ ಸಂಖ್ಯಾತರ ಉಪ ಸಮಿತಿಯ ಛೇರ್‌ಮನ್ ಆಗಿ ಪಟೇಲರ ಸಾಧನೆ ಮಹತ್ವವಾದುದು. ಸರ್ದಾರರಿಗೆ ಅಲ್ಪ ಸಂಖ್ಯಾತರ ಬಗೆಗೆ ಭಾರಿ ಸಹಾನುಭೂತಿ ಇತ್ತು. ಅವರ ಸಾಮಾಜಿಕ ಮತ್ತು ಆರ್ಥಿಕ ಪುನರುಜ್ಜೀವನಕ್ಕೆ ಯತ್ನಿಸಿದ್ದರು. ಮುಂದುವರೆದವರ ಮಟ್ಟಕ್ಕೆ ಅವರೂ ಏರಬೇಕೆಂಬುದು ಪಟೇಲರ ಅಭಿಪ್ರಾಯ ವಾಗಿತ್ತು. ಆದರೆ ಅಲ್ಪಸಂಖ್ಯಾತರ ರಾಜಕೀಯ ಪ್ರತ್ಯೇಕತೆಯನ್ನು ಒಪ್ಪುತ್ತಿರಲಿಲ್ಲ. ಬ್ರಿಟಿಷರು ತಮ್ಮ ಉಳಿವಿಗಾಗಿ ಒಡೆದು ಆಳುವ ನೀತಿಯನ್ನು ಅನುಸರಿಸಿ ಭಾರತದ ಅಲ್ಪ ಸಂಖ್ಯಾತರನ್ನು ರಾಜಕೀಯ ವೇದಿಕೆಗೆ ತಂದಿದ್ದರು ಮತ್ತು ಏರುತ್ತಿದ್ದ ರಾಷ್ಟ್ರೀಯ ಪ್ರಜ್ಞೆಯನ್ನು ತಡೆಗಟ್ಟುವುದಕ್ಕಾಗಿ ಅವರನ್ನು ಬಳಸಿಕೊಂಡಿದ್ದರು. ಕಾಂಗ್ರೆಸ್ಸಿನಲ್ಲಿರುವ ಪ್ರಭಾವಿ ಬಹು ಸಂಖ್ಯಾತರ ವಿರುದ್ಧ ಅಲ್ಪ ಸಂಖ್ಯಾತರಿಗೆ

ವಿಶೇಷ ರಕ್ಷಣೆ ಬೇಕೆಂದು ಹೇಳಿ, ಅವರಿಗೆ ವಿಶೇಷ ಸವಲತ್ತು ಮತ್ತು ರಿಯಾಯಿತಿಗಳನ್ನು ನೀಡಿ ಅವರನ್ನು ಒಂದು ರಾಜಕೀಯ ಪಗಡೆ ಆಟದ ದಾಳವನ್ನಾಗಿ ಮಾಡಿ ತಾವು ಲಾಭ ಪಡೆದುಕೊಂಡಿದ್ದರೇ ಹೊರತು ಆ ಅಲ್ಪ ಸಂಖ್ಯಾತರಿಗೆ ಏನೂ ಪ್ರಯೋಜನವಾಗಿರಲಿಲ್ಲ.

ಉದಾಹರಣೆಗೆ ಬ್ರಿಟಿಷರು ಮುಸ್ಲಿಂ ಅಲ್ಪ ಸಂಖ್ಯಾತರಿಗೆ ಪ್ರತ್ಯೇಕ ಚುನಾವಣಾ ಕ್ಷೇತ್ರ ಸೌಲಭ್ಯ ನೀಡಿದ್ದರು. ಅದರಿಂದ ಮುಸ್ಲಿಮರಿಗೆ ದೊರಕಿದ ಲಾಭವೇನು? ಮುಸ್ಲಿಮರು ಮತ್ತು ಇತರ ಮತೀಯರ ನಡುವೆ ಅನುಮಾನ, ಅಪನಂಬಿಕೆ, ದ್ವೇಷ ಮತ್ತು ಗಲಭೆ! ಬಹು ಸಂಖ್ಯಾತರಿಂದ ಮುಸ್ಲಿಮರ ಬೇರ್ಪಡೆ! ಅದರಿಂದ ಸರ್ದಾರರು ಮುಸ್ಲಿಮರ ಬಗೆಗೆ ಸಹಾನುಭೂತಿ ಮತ್ತು ಅನುಕಂಪವನ್ನು ಹೊಂದಿದ್ದರು. ಪಟೇಲರು ಈ ಪ್ರತ್ಯೇಕ ಚುನಾವಣಾ ಪದ್ಧತಿಯನ್ನು ಹೊಸ ಸಂವಿಧಾನದಲ್ಲಿ ರದ್ದು ಮಾಡುವಂತೆ ಒತ್ತಾಯಿಸಿದರು. ಅಲ್ಪ ಸಂಖ್ಯಾತರ ಉಪ ಸಮಿತಿಯು ದೊಡ್ಡ ಬಹುಮತದಿಂದ ಪ್ರತ್ಯೇಕ ಚುನಾವಣಾ ಕ್ಷೇತ್ರವನ್ನು ರದ್ದು ಮಾಡಿತು ಮತ್ತು ಅಲ್ಪ ಸಂಖ್ಯಾತ ಸಮುದಾಯಗಳಿಗೆ ೧೦ ವರ್ಷಗಳ ಕಾಲ ಮಾತ್ರ ಅವರ ಜನಸಂಖ್ಯೆಯ ಆಧಾರದ ಮೇಲೆ ಸ್ಥಾನಗಳ ಮೀಸಲಾತಿಯನ್ನು ನೀಡಬೇಕೆಂದು ತೀರ್ಮಾನಿಸಿತು. ನಂತರ ಅಂತಹ ಅಲ್ಪ ಸಂಖ್ಯಾತ ಸಮುದಾಯಗಳನ್ನು ಗುರುತಿಸಲು ಆರಂಭಿಸಿತು.

ಪಟೇಲರು ಅಲ್ಪಸಂಖ್ಯಾತ ಸಮುದಾಯಗಳ ಪ್ರತಿನಿಧಿಗಳನ್ನು ಪ್ರತ್ಯೇಕ ಪ್ರತ್ಯೇಕವಾಗಿ ಭೇಟಿ ಮಾಡಿ ಮಾತುಕತೆ ನಡೆಸಿದರು. ಅವರು ಮೊದಲು ಭೇಟಿಯಾದ ಸಮುದಾಯ ಭಾರತೀಯ ಕ್ರೈಸ್ತರ ಪ್ರತಿನಿಧಿಗಳು. ಅವರಲ್ಲಿ ಮೀಸಲಾತಿ ಬೇಕು ಎನ್ನುವ ಅಭಿಪ್ರಾಯ ಬಲವಾಗಿ ಇತ್ತು. ಅದರಿಂದ ಉಪ ಸಮಿತಿಯು ಅವರ ಅಭಿಪ್ರಾಯವನ್ನು ಒಪ್ಪಿಕೊಂಡಿತು. ಆದರೆ ಆ ವಿಷಯ ಸಂವಿಧಾನ ಸಭೆಯಲ್ಲಿ ಚರ್ಚೆಗೆ ಬಂದಾಗ ಆ ಜನಾಂಗದ ಮುಖಂಡರಿಗೆ ತಮ್ಮ ನಿಲುವನ್ನು ಬದಲಾಯಿಸುವಂತೆ ಪಟೇಲರು ಮನವಿ ಮಾಡಿದರು. ಆಗ ಕ್ರೈಸ್ತರ ನಾಯಕರಾಗಿದ್ದ ಡಾ॥ ಹೆಚ್.ಸಿ. ಮುಖರ್ಜಿಯವರು ತಮ್ಮ ಜನಾಂಗದವರಿಗೆ, ಅಲ್ಪ ಸಂಖ್ಯಾತರಾಗಿ ವಿಶೇಷ ರಿಯಾಯಿತಿ ಬೇಕಿಲ್ಲ – ಎಂದರು. ತಮ್ಮ ಜನಾಂಗಕ್ಕೆ ಸೀಟುಗಳ ಮೀಸಲಾತಿಯನ್ನು ವಿರೋಧಿಸಿದರು.

ಸರ್ದಾರರು ಕೈಗೆತ್ತಿಕೊಂಡ ಮುಂದಿನ ಅಲ್ಪ ಸಂಖ್ಯಾತರು ಪಾರ್ಸಿಗಳು. ಪಾರ್ಸಿಗಳು ಮುಂದುವರೆದ ಜನಾಂಗವಾದದ್ದರಿಂದ ಅವರಿಗೆ ಮೀಸಲಾತಿ ಬೇಕಿಲ್ಲ, ಎನ್ನುವುದು ಸರ್ದಾರರ ಅಭಿಪ್ರಾಯವಾಗಿತ್ತು. ಸರ್ ಹೋಮಿ ಮೋದಿ ಪಾರ್ಸಿಗಳ

ಪ್ರತಿನಿಧಿ. ಅವರು ತಮ್ಮ ಜನಾಂಗ ಅಲ್ಪ ಸಂಖ್ಯಾತರ ಪಟ್ಟಿಯಲ್ಲಿ ಇರಬೇಕೆಂದೂ ಆದರೆ ಅವರಿಗೆ ಕಾನೂನುಬದ್ಧ ಮೀಸಲಾತಿ ಬೇಕಿಲ್ಲವೆಂದು ಒಪ್ಪಿದರು.

ಮುಂದಿನ ಜನಾಂಗ ಆಂಗ್ಲೊ – ಇಂಡಿಯನ್ನರು. ಅವರ ನಾಯಕ ಫ್ರಾಂಕ್ ಆಂಥೋನಿ. ಅವರ ಜನಸಂಖ್ಯೆ ಅತಿ ಅಲ್ಪ. ಒಟ್ಟು ಜನಸಂಖ್ಯೆಯ ಶೇ. ೦.೦೪ರಷ್ಟು. ಅದರಿಂದ ಸರ್ದಾರರು, ಆ ಜನಾಂಗಕ್ಕೆ ಮೀಸಲಾತಿ ಬೇಡ, ಆದರೆ ಶಾಸನ ಸಭೆಯಲ್ಲಿ ಅವರಿಗೆ ಸರಿಯಾದ ಪ್ರಾತಿನಿಧ್ಯ ದೊರಕದೆ ಹೋದಾಗ, ರಾಷ್ಟ್ರಾಧ್ಯಕ್ಷರು ಮತ್ತು ಗೌರ್ನರ್ ಆ ಜನಾಂಗದಿಂದ ಒಬ್ಬರನ್ನು ನಾಮಕರಣ ಮಾಡುವ ಸೂತ್ರವನ್ನು ಅವರು ಒಪ್ಪುವಂತೆ ಮಾಡಿದರು.

ನಂತರ ಸಿಕ್ಕರು. ಆ ಜನಾಂಗದ ಉಜ್ಜಲ್ ಸಿಂಗ್ ಮತ್ತು ಸರ್ದಾರ್ ಬಲದೇವ್ ಸಿಂಗ್‌ರವರು, ಸರ್ದಾರರ ಮನವಿಯ ಮೇರೆ, ತಮ್ಮ ಜನಾಂಗದವರು ಮೀಸಲಾತಿಯನ್ನು ತಿರಸ್ಕರಿಸುವಂತೆ ಮಾಡಿದರು.

ಮುಂದಿನ ಅಲ್ಪ ಸಂಖ್ಯಾತರು ಮುಸ್ಲಿಮರು. ಅವರು ೧೯೦೭ರಿಂದಲೂ ಪ್ರತ್ಯೇಕ ಮತದಾರ ಸಮುದಾಯದ ಸೌಲಭ್ಯ (seperate electorate) ಪಡೆದಿದ್ದರು. ಅದನ್ನು ಬ್ರಿಟಿಷ್ ಸರ್ಕಾರವು ಭಾರತದ ಸಮಾಜವನ್ನು ಒಡೆಯುವುದಕ್ಕಾಗಿ ಜಾರಿಗೆ ತಂದಿತ್ತು, ಆದರೆ ಅದರಿಂದ ಮುಸ್ಲಿಮರಿಗೆ ಏನೂ ಪ್ರಯೋಜನವಾಗಿರಲಿಲ್ಲ. ವಿಶೇಷ ಚುನಾವಣಾ ಕ್ಷೇತ್ರಗಳಿಂದ ಆರಿಸಲ್ಪಟ್ಟ ಅಲ್ಪ ಸಂಖ್ಯೆಯ ಸದಸ್ಯರು ಶಾಸನ ಸಭೆಗಳಲ್ಲಿ ಯಾವ ಪ್ರಭಾವವನ್ನು ಬೀರಿರಲಿಲ್ಲ. ಆದಾಗ್ಯೂ ಅಲ್ಪ ಸಂಖ್ಯಾತರ ಉಪ ಸಮಿತಿಯ ಸಭೆಯಲ್ಲಿ ಮೌಲಾನಾ ಆಜಾದರ ಬೆಂಬಲದಿಂದ ರಾಷ್ಟ್ರೀಯವಾದಿ ಮುಸ್ಲಿಮರು ತಮಗೆ ಮೀಸಲಾತಿ ಬೇಕೆಂದು ಒತ್ತಾಯಿಸಿದರು. ಅದರಿಂದ ಸಮಿತಿಯು ಒಪ್ಪಿ, ಜನಸಂಖ್ಯಾ ಆಧಾರಿತ ಮೀಸಲಾತಿಗೆ ಶಿಫಾರಸ್ಸು ಮಾಡಿತು. ಆದರೆ ಆ ವಿಷಯ ಸಂವಿಧಾನ ಸಭೆಯಲ್ಲಿ ಚರ್ಚೆಗೆ ಬಂದಾಗ, ಸರ್ದಾರರು, "ಇಡೀ ದೇಶದಲ್ಲಿ ಪ್ರವಹಿಸುತ್ತಿರುವ ರಾಷ್ಟ್ರೀಯ ಐಕ್ಯತೆಯ ಪ್ರವಾಹವನ್ನು ತಡೆಯಲು ಮುಸ್ಲಿಮರು ಯತ್ನಿಸಬಾರದು, ಇತರ ಎಲ್ಲಾ ಜನಾಂಗಗಳು ಈಗಾಗಲೇ ರಾಷ್ಟ್ರದೊಡನೆ ಐಕ್ಯವಾಗಲು ಒಪ್ಪಿರುವಾಗ, ಪ್ರತ್ಯೇಕವಾಗಿ ಉಳಿದು ಮುಸ್ಲಿಮರು ಏನನ್ನು ಸಾಧಿಸಬಹುದು?" ಎಂದರು.[೧೨೯] ಅವರು, "ಇತಿಹಾಸದ ಮಾರ್ಗವನ್ನು ಬದಲಾಯಿಸಲು ಎಲ್ಲಾ ಅಲ್ಪ ಸಂಖ್ಯಾತರ ಒಪ್ಪಿಗೆಯನ್ನು ನಾನು ಬಯಸುತ್ತೇನೆ..... ಮುಸ್ಲಿಮರಿಗೆ ಪ್ರತ್ಯೇಕ ರಾಷ್ಟ್ರ ಪಡೆದಿದ್ದಕ್ಕೆ ಲಾಭವೇನೇ ಇರಲಿ, ಬಡ ಮುಸ್ಲಿಮರು ಪಟ್ಟ ಪಾಡನ್ನು ಮರೆಯಲಾರೆ..... ಎರಡು ರಾಷ್ಟ್ರ ಅನ್ನುವ ತತ್ವದಲ್ಲಿ ನಂಬಿಕೆ ಇರುವವರಿಗೆ 'ನೀವು ದಯವಿಟ್ಟು

ಹೋಗಿ, ನಿಮ್ಮ ಸ್ವಾತಂತ್ರ್ಯದ ಫಲವನ್ನು ಅನುಭವಿಸಿ ಮತ್ತು ನಾವು ಇಲ್ಲಿ ಶಾಂತಿಯಿಂದಿರಲು ಬಿಡಿ' ಎಂದು ಗೌರವದಿಂದ ಕೋರುತ್ತೇನೆ....." ಎಂದರು.[೧೩೦]

ಮುಸ್ಲಿಂ ಪ್ರತಿನಿಧಿ ಬೇಗಮ್ ಐಜಾಜ್ ರಸೂಲ್‌ರವರು 'ಮುಸ್ಲಿಂ ಸಮುದಾಯಕ್ಕೆ ಸ್ಥಾನಗಳ ಮೀಸಲಾತಿ ಬೇಕಿಲ್ಲ' ಎಂದು ಧೈರ್ಯವಾಗಿ ಪ್ರಕಟಿಸಿದರು. ಅದನ್ನು ಸಭೆ ಅವಿರೋಧವಾಗಿ ಅಂಗೀಕರಿಸಿತು.

ನಂತರ ಪರಿಶಿಷ್ಟ ಗುಂಪಿನವರು. ಪೂನಾ ಒಪ್ಪಂದದ ಪ್ರಕಾರ ಅವರಿಗೆ ಮೀಸಲಾತಿ ಸೌಲಭ್ಯ ಇತ್ತು. ಅದನ್ನು ೧೦ ವರ್ಷಗಳಿಗೆ ಮುಂದುವರೆಸಬೇಕೆಂದು ಉಪಸಮಿತಿ ಹಾಗೂ ಸಂವಿಧಾನ ಸಭೆ ತೀರ್ಮಾನಿಸಿತು. ಆ ಸಮುದಾಯ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದಿದ್ದುದರಿಂದ ಅವರಿಗೆ ವಿಶೇಷ ರಕ್ಷಣೆ ಆವಶ್ಯಕವಾಗಿತ್ತು. ಸರ್ದಾರರು ಯಾವಾಗಲೂ ಅಸ್ಪೃಶ್ಯತಾ ನಿವಾರಣೆಗೆ ಒತ್ತಾಯಿಸಿದ್ದರು. ಅವರು ಸಂವಿಧಾನ ಸಭೆಯಲ್ಲಿ ಅಸ್ಪೃಶ್ಯತೆಯ ರದ್ದತಿಗೆ ಐತಿಹಾಸಿಕ ಠರಾವನ್ನು ಮಂಡಿಸಿ ಅದರ ಆಚರಣೆ ಶಿಕ್ಷಾರ್ಹ ಅಪರಾಧವಾಗಬೇಕೆಂದರು. ಅದು ಅಂಗೀಕಾರವಾಯಿತು. ಪರಿಶಿಷ್ಟ ಪಂಗಡದವರಿಗೆ, ದೇವಾಲಯಗಳ, ಹೊಟೆಲ್‌ಗಳ ಮತ್ತು ಸಾರ್ವಜನಿಕ ಸ್ಥಳಗಳ ಪ್ರವೇಶದಲ್ಲಿ ಮತ್ತು ಕೆರೆ ಹಾಗೂ ಬಾವಿಗಳ ಉಪಯೋಗದಲ್ಲಿ ಸಂಪೂರ್ಣ ಸಮಾನತೆಯನ್ನು ಸಂವಿಧಾನದಲ್ಲಿ ಸೇರಿಸಲಾಯಿತು.[೧೩೧]

ದೇಶದ ಐಕ್ಯತೆಯನ್ನು ಕಾಪಾಡಬೇಕಾದರೆ ಬಲಶಾಲಿ ಕೇಂದ್ರ ಸರ್ಕಾರ ಆವಶ್ಯಕ – ಅನ್ನುವುದು ಸರ್ದಾರರ ದೃಢ ನಿಲುವು ಆಗಿತ್ತು. ಅದಕ್ಕಾಗಿ ಸಂವಿಧಾನದಲ್ಲಿ ಆರ್ಟಿಕಲ್ ೩೫೫ ಮತ್ತು ೩೫೬ನ್ನು ಸೇರಿಸುವಂತೆ ಮಾಡಿದರು. ಆರ್ಟಿಕಲ್ ೩೫೫, ರಾಜ್ಯ ಸರ್ಕಾರಗಳು ಸಂವಿಧಾನದ ಪ್ರಕಾರ ನಡೆಯುವಂತೆ ಮಾಡುವುದು ರಾಷ್ಟ್ರಾಧ್ಯಕ್ಷರ ಜವಾಬ್ದಾರಿ, ಎನ್ನುತ್ತದೆ. ಆರ್ಟಿಕಲ್ ೩೫೬, ರಾಜ್ಯ ಸರ್ಕಾರದ ಆಡಳಿತವನ್ನು ವಹಿಸಿಕೊಳ್ಳಲು ರಾಷ್ಟ್ರಾಧ್ಯಕ್ಷರಿಗೆ ಅಧಿಕಾರ ನೀಡುತ್ತದೆ.

ಸರ್ದಾರರಿಗೆ ಸ್ವತಂತ್ರ ಮತ್ತು ಶಕ್ತಿಯುತ ನ್ಯಾಯಾಂಗದಲ್ಲಿ ಭಾರಿ ನಂಬಿಕೆ ಇತ್ತು. ನ್ಯಾಯಾಂಗವು ಕಾರ್ಯಾಂಗದಿಂದ ಸ್ವತಂತ್ರವಾಗಿಲ್ಲದಿದ್ದರೆ ಅದು ಪ್ರಜೆಗಳ ಮೂಲಭೂತ ಹಕ್ಕುಗಳನ್ನು ರಕ್ಷಿಸಲು ಸಾಧ್ಯವಿಲ್ಲ. ಅದರಿಂದ ರಾಜ್ಯಗಳ ಹೈಕೋರ್ಟ್‌ಗಳನ್ನು ಪ್ರಾಂತ್ಯ ಸರ್ಕಾರಗಳ ಹಿಡಿತದಿಂದ ಬಿಡಿಸಿ ಸುಪ್ರೀಂ ನ್ಯಾಯಾಲಯದ ಅಧೀನತೆಗೆ ಸೇರಿಸಿದರು.

ರಾಷ್ಟ್ರಾಧ್ಯಕ್ಷರ ಚುನಾವಣಾ ವಿಧಾನದ ಬಗೆಗೆ ನೆಹರುರವರ ಅಧ್ಯಕ್ಷತೆಯ 'ಒಕ್ಕೂಟ ಅಧಿಕಾರ ಸಮಿತಿ' ಮತ್ತು ಪಟೇಲರ ಅಧ್ಯಕ್ಷತೆಯ 'ಪ್ರಾಂತ್ಯ ಸಂವಿಧಾನ ಸಮಿತಿ'ಯ ನಡುವೆ ಜಿಜ್ಞಾಸೆ ಉದ್ಭವಿಸಿತು. ಒಕ್ಕೂಟ ಅಧಿಕಾರ ಸಮಿತಿಯು ರಾಷ್ಟ್ರಾಧ್ಯಕ್ಷರು ಸಂಸತ್ತಿನಿಂದ ಚುನಾಯಿಸಲ್ಪಡಬೇಕು – ಎಂದು ಶಿಫಾರಸ್ಸು ಮಾಡಿತ್ತು. ಹಾಗಾದರೆ ಅಧ್ಯಕ್ಷರನ್ನು ಪ್ರಧಾನಮಂತ್ರಿ ನಾಮಕರಣ ಮಾಡಿದಂತಾಗುತ್ತಿತ್ತು. ಪ್ರಾಂತ್ಯ ಸಂವಿಧಾನ ಸಮಿತಿಯು ಅದನ್ನು ಒಪ್ಪಲಿಲ್ಲ. ರಾಷ್ಟ್ರಾಧ್ಯಕ್ಷರು ಕೇಂದ್ರದ ವಿರುದ್ಧವಾಗಿ ರಾಜ್ಯಗಳ ಹಕ್ಕುಗಳನ್ನೂ ಮತ್ತು ರಾಜ್ಯ – ರಾಜ್ಯಗಳ ನಡುವಿನ ಹಕ್ಕುಗಳನ್ನೂ ರಕ್ಷಿಸಬೇಕು. ಅದರಿಂದ ಅವರು ಕೇಂದ್ರ ಶಾಸಕಾಂಗದಿಂದ ಮಾತ್ರ ಆರಿಸಲ್ಪಡುವುದು ಸೂಕ್ತವಲ್ಲ – ಎಂದಿತು ಪ್ರಾಂತ್ಯ ಸಂವಿಧಾನ ಸಮಿತಿ. ಸರ್ದಾರರು, ಆ ವಿವಾದದ ಪರಿಹಾರಕ್ಕೆ ಎರಡು ಸಮಿತಿಗಳ ಸಂಯುಕ್ತ ಸಭೆ ನಡೆಸಲು ಸಲಹೆ ಮಾಡಿದರು. ಆ ಸಂಯುಕ್ತ ಸಭೆಯಲ್ಲಿ, ರಾಷ್ಟ್ರಾಧ್ಯಕ್ಷರು ಕೇಂದ್ರ ಸಂಸತ್ತಿನ ಮತ್ತು ಪ್ರಾಂತ್ಯಗಳ ಶಾಸನ ಸಭೆಗಳ ಚುನಾಯಿತ ಪ್ರತಿನಿಧಿಗಳಿಂದ ಆರಿಸಲ್ಪಡಬೇಕು ಎಂದು ತೀರ್ಮಾನಿಸಿತು.[೧೩೨]

ರಾಜರು ಒಕ್ಕೂಟದೊಡನೆ ವಿಲೀನವಾಗುವಾಗ ಅವರ ರಾಜಧನದ ವಿಷಯವನ್ನು ಸಂವಿಧಾನದಲ್ಲಿ ಅಳವಡಿಸಿ, ಅದು ವಂಶಪಾರಂಪರ್ಯವಾಗಿ ನಿಶ್ಚಯವಾಗಿ ಬರುವಂತೆ ಮಾಡುವುದಾಗಿ ಸರ್ದಾರರು ರಾಜರಿಗೆ ಆಶ್ವಾಸನೆ ನೀಡಿದ್ದರು. ಆ ವಿಷಯ ಸಭೆಯಲ್ಲಿ ಚರ್ಚೆಗೆ ಬಂದಾಗ ನೆಹರುರವರು, "ಮುಂದಿನ ಎಲ್ಲಾ ಸರ್ಕಾರಗಳ ಮೇಲೆ ಆ ಹೊಣೆಯನ್ನು ಹೊರಸುವುದು ಸರಿಯೆ?" ಎಂದು ಪ್ರಶ್ನಿಸಿದರು. ಸರ್ದಾರರು, "ಹಾಗೆ ಮಾಡದೆ ಇರುವುದು ನಂಬಿಕೆ ದ್ರೋಹ," ಎಂದರು. ನೆಹರು ಒಪ್ಪಿದರು. ಸಂವಿಧಾನದಲ್ಲಿ ಆರ್ಟಿಕಲ್ ೧೬೭ ಅಳವಡಿಸಿ ರಾಜಧನದ ಖಾತರಿಯನ್ನು ಭದ್ರಗೊಳಿಸಲಾಯಿತು.

ರಾಜಧನದ ಪಾವತಿಗಾಗಿ ತಗಲುವ ವೆಚ್ಚ ವರ್ಷಕ್ಕೆ ನಾಲ್ಕು ಕೋಟಿ ರೂಪಾಯಿಗಳು ಎಂದು ಹೇಳಿ ಸರ್ದಾರರು ಹೀಗೆ ನುಡಿದರು:

ರಾಜಧನವನ್ನು ನೀಡಿರುವುದು ರಾಜರು ಆಡಳಿತದ ತಮ್ಮ ಎಲ್ಲಾ ಅಧಿಕಾರಗಳನ್ನು ಬಿಟ್ಟುಕೊಟ್ಟಿದ್ದಕ್ಕೆ ಮತ್ತು ಪ್ರತ್ಯೇಕ ಘಟಕವಾಗಿದ್ದ ತಮ್ಮ ರಾಜ್ಯವನ್ನು ಬರಖಾಸ್ತು ಮಾಡಿದ್ದಕ್ಕೆ ಪ್ರತಿಫಲವಾಗಿ..... ನಮ್ಮ ಕೋಟ್ಯಂತರ ಜನರ ಜೀವನದ ಮೇಲೆ ಪರಿಣಾಮ ಬೀರಿದ ಈ ರಕ್ತರಹಿತ ಕ್ರಾಂತಿಗೆ ಪಾವತಿಸುವ ಈ ಸಣ್ಣ ಬೆಲೆಯನ್ನು – ಉದ್ದೇಶಪೂರ್ವಕವಾಗಿಯೇ ನಾನು ಸಣ್ಣ ಅನ್ನುವ ಪದವನ್ನು ಬಳಸಿದ್ದೇನೆ – ನಾವು ಆಕ್ಷೇಪಿಸಬೇಕೆ?[೧೩೩]

(ಮುಂದೆ ಇಂದಿರಾಗಾಂಧಿಯವರು ಪ್ರಧಾನಮಂತ್ರಿಯಾಗಿದ್ದಾಗ ಸಂವಿಧಾನಕ್ಕೆ ತಿದ್ದುಪಡಿ ತಂದು ರಾಜಧನವನ್ನು ಸಂಪೂರ್ಣವಾಗಿ ರದ್ದು ಮಾಡಿ ದೇಶದ ಪ್ರಥಮ ಸರ್ಕಾರ ರಾಜರಿಗೆ ನೀಡಿದ್ದ ಪವಿತ್ರ ವಾಗ್ದಾನವನ್ನು ಮುರಿದು ಅನೀತಿಯುತ ಮಾರ್ಗ ಹಿಡಿದರು ಮತ್ತು ಸರ್ಕಾರದ ವಚನವನ್ನು ಅಪವಿತ್ರಗೊಳಿಸಿದರು – ಲೇಖಕ)

ಸರ್ಕಾರದ ಅಧಿಕಾರಿಗಳ ಸೇವಾ ವಿಷಯಕ್ಕೆ ಸಂಬಂಧಿಸಿದ ಆರ್ಟಿಕಲ್ ೩೧೧ ಮತ್ತು ೩೧೪ರ ವಿಷಯದಲ್ಲಿ ಸರ್ದಾರರು ಬಲವಾಗಿ ಪ್ರತಿಪಾದಿಸಬೇಕಾಯಿತು. ಆರ್ಟಿಕಲ್ ೩೧೧ ಸರ್ಕಾರಿ ನೌಕರರಿಗೆ ರಾಜಕಾರಣಿಗಳಿಂದ ರಕ್ಷಣೆ ನೀಡುತ್ತದೆ. ಆರ್ಟಿಕಲ್ ೩೧೪, ಇಂಡಿಯನ್ ಸಿವಿಲ್ ಸರ್ವಿಸ್ ಅಧಿಕಾರಿಗಳಿಗೆ, ಅವರ ಸೇವಾ ಅವಧಿ ಮತ್ತು ಸವಲತ್ತುಗಳ ಮುಂದುವರಿಕೆಗೆ ಪಟೇಲರು ನೀಡಿದ್ದ ಖಾತರಿಯನ್ನು ಒಪ್ಪುವ ವಿಷಯಕ್ಕೆ ಸಂಬಂಧಿಸಿದ್ದು. ಎರಡು ಆರ್ಟಿಕಲ್‌ಗಳನ್ನು ಸದಸ್ಯರು ಬಲವಾಗಿ ಟೀಕಿಸಿದರು. ಬ್ರಿಟಿಷರ ಆಡಳಿತ ಕಾಲದಲ್ಲಿ ಇಂಡಿಯನ್ ಸಿವಿಲ್ ಸರ್ವೀಸ್ ಅಧಿಕಾರಿಗಳು ಬ್ರಿಟಿಷ್ ಸರ್ಕಾರದ ಪರವಾಗಿದ್ದರು. ಅನೇಕ ಸ್ವಾತಂತ್ರ್ಯ ಹೋರಾಟಗಾರರನ್ನು ಸೆರೆಮನೆಗೆ ನೂಕಿದ್ದರು. ಹಾಗೆ ಸೆರೆಮನೆ ಸೇರಿದವರಲ್ಲಿ ಅನೇಕರು ಸಂವಿಧಾನ ರಚನಾ ಸಭೆಯ ಸದಸ್ಯರಾಗಿದ್ದರು. ಅವರಿಗೆ ಆ ಅಧಿಕಾರಿಗಳ ಮೇಲೆ ಸೇಡಿನ ಮನೋಭಾವವಿತ್ತು. ಆದರೆ ಈ ಎರಡು ಆರ್ಟಿಕಲ್‌ಗಳು ಆ ಅಧಿಕಾರಿಗಳನ್ನು ರಕ್ಷಿಸುತ್ತಿದ್ದುವು. ಅದರಿಂದ ಆ ಆರ್ಟಿಕಲ್‌ಗೆ ಟೀಕೆಗಳು ಬಂದುವು. ಆ ಟೀಕಾಕಾರರ ಪೈಕಿ ಅನಂತಶಯನಂ ಐಯ್ಯಂಗಾರ್ ಒಬ್ಬರು. ಅವರು ಕಾಂಗ್ರೆಸ್ಸಿನ ಒಬ್ಬ ಹಿರಿಯ ನಾಯಕ (ಮುಂದೆ ಬಹಳ ವರ್ಷ ಲೋಕಸಭಾ ಸ್ಪೀಕರ್ ಆದರು). ಅವರು ಸಂವಿಧಾನದ ೩೧೪ನೇ ಆರ್ಟಿಕಲ್ ಬಗೆಗೆ, "ಇದು ಒಂದು ಅತಿ ವಿಶೇಷವಾದ ಖಾತರಿ..... ಇನ್ನೂ ಸೇವೆಯಲ್ಲಿರುವ ಈ ನಾಲ್ಕುನೂರು ಅಧಿಕಾರಿಗಳು ಎಸಗಿರುವ ಅತಿರೇಕಗಳನ್ನು ಮರೆಯಬೇಕೆಂದು ಈ ಆರ್ಟಿಕಲ್ ಹೇಳುತ್ತದೆ" ಎಂದರು. ಅದರಿಂದ ಅಸಮಾಧಾನಗೊಂಡ ಪಟೇಲರು ಅನಂತಶಯನಂ ಐಯ್ಯಂಗಾರ್‌ರವರನ್ನು ತರಾಟೆಗೆ ತೆಗೆದುಕೊಂಡು ೧೯೪೯ರ ಅಕ್ಟೋಬರ್ ೧೦ರಂದು ಹೀಗೆ ನುಡಿದರು:

ಶ್ರೀ ಅಯ್ಯಂಗಾರ್‌ರಂತಹ ಹಿರಿಯ ನಾಯಕರು, ಇಂಡಿಯನ್ ಸಿವಿಲ್ ಸರ್ವಿಸ್ ಅಧಿಕಾರಿಗಳು ನಮ್ಮ ದೇಶದ ಶತ್ರುಗಳು ಎಂದು ಪರಿಭಾವಿಸುವುದನ್ನು ಮತ್ತು ಹಾಗೆಂದು ಅಭಿಪ್ರಾಯ ವ್ಯಕ್ತಪಡಿಸುವುದನ್ನು ಕೇಳಿ ನನಗೆ ಬೇಸರವಾಗಿದೆ.

ಹಾಗಿದ್ದರೆ ಅವರ ಸೇವೆಯನ್ನು ಮುಕ್ತಾಯಗೊಳಿಸಲು ಮತ್ತು ಆಡಳಿತವನ್ನು ಶೂನ್ಯದಲ್ಲಿ ನಡೆಸಲು ಐಯ್ಯಂಗಾರ್‌ರವರು ಒಂದು ಠರಾವನ್ನು ಮಂಡಿಸಬೇಕಾಗಿತ್ತು.

ಕಳೆದ ಎರಡು ಅಥವಾ ಮೂರು ವರ್ಷಗಳಲ್ಲಿ ಈ ಸೇವೆಯ ಬಹುತೇಕ ಮಂದಿ ದೇಶಭಕ್ತಿಯಿಂದ ಮತ್ತು ನಿಷ್ಠೆಯಿಂದ ವರ್ತಿಸದೇ ಇದ್ದಿದ್ದರೆ ಒಕ್ಕೂಟವು ಪತನವಾಗುತ್ತಿತ್ತು –ಎನ್ನುವುದನ್ನು ಈ ಸದನದ ಮುಂದೆ ದಾಖಲು ಮಾಡಲು ನಾನು ಇಷ್ಟ ಪಡುತ್ತೇನೆ.

ನಿಮಗೆ ಅವರು (ಆ ಅಧಿಕಾರಿಗಳು) ಬೇಕಿಲ್ಲದೇ ಹೋದರೆ ಮತ್ತು ಅವರ ಸೇವೆಯನ್ನು ಮುಕ್ತಾಯ ಮಾಡಲು ನೀವು ತೀರ್ಮಾನಿಸಿದರೆ ನಾನು ಅವರನ್ನು ನನ್ನೊಡನೆ ಕರೆದುಕೊಂಡು ಹೊರಟುಹೋಗುತ್ತೇನೆ. ಅವರು ತಮ್ಮ ಅನ್ನವನ್ನು ಸಂಪಾದಿಸಿ ಕೊಳ್ಳುತ್ತಾರೆ. ಅವರಿಗೆ ಆ ಶಕ್ತಿ ಇದೆ.

ಈ ದಿನ ನನ್ನ ಕಾರ್ಯದರ್ಶಿಯು ನನ್ನ ಅಭಿಪ್ರಾಯಕ್ಕೆ ವಿರುದ್ಧವಾದ ಟಿಪ್ಪಣಿಯನ್ನು ಬರೆಯಬಹುದು. ನಾನು ನನ್ನೆಲ್ಲ ಕಾರ್ಯದರ್ಶಿಗಳಿಗೆ ಆ ಸ್ವಾತಂತ್ರ್ಯವನ್ನು ನೀಡಿದ್ದೇನೆ. ನಾನು ಅವರಿಗೆ, 'ನೀವು ನಿಮ್ಮ ಪ್ರಾಮಾಣಿಕ ಅಭಿಪ್ರಾಯವನ್ನು ನೀಡದೇ ಇರುವುದಾದರೆ ನೀವು ದಯವಿಟ್ಟು ಹೊರಟುಹೋಗುವುದು ಒಳ್ಳೆಯದು' ಎಂದು ಹೇಳಿದ್ದೇನೆ.

ಒಂದು ಬೆತ್ತವನ್ನು ಹಿಡಿದು, 'ನಾವು ಒಂದು ಪರಮೋಚ್ಚ ಪಾರ್ಲಿಮೆಂಟು' ಎಂದು ಹೇಳಬೇಡಿ. ನಿಮ್ಮ ವಚನವನ್ನು ಮುರಿಯಲು ನಿಮಗೆ ಪರಮೋಚ್ಚತೆ ಇದೆಯೆ?[೧೩೪]

ಸರ್ದಾರರ ಈ ಗುಡುಗಿಗೆ ಎಲ್ಲರೂ ತೆಪ್ಪಗಾದರು. ಅಧಿಕಾರಿಗಳು ತಮ್ಮ ಕರ್ತವ್ಯವನ್ನು ಪ್ರಾಮಾಣಿಕವಾಗಿ ನೆರವೇರಿಸಬೇಕು ಅಥವಾ ಕೆಲಸ ಬಿಟ್ಟು ಹೋಗಬೇಕು. ಇಂಡಿಯನ್ ಸಿವಿಲ್ ಸರ್ವಿಸ್ ಅಧಿಕಾರಿಗಳು ಬ್ರಿಟಿಷರ ಕಾಲದಲ್ಲಿ ತಮ್ಮ ಅಂದಿನ ಕರ್ತವ್ಯ ನೆರವೇರಿಸಿದರು, ಸ್ವಾತಂತ್ರ್ಯ ಬಂದ ಮೇಲೆ ತಮ್ಮ ಇಂದಿನ ಕರ್ತವ್ಯವನ್ನು ಪ್ರಾಮಾಣಿಕವಾಗಿ ನಿರ್ವಹಿಸುತ್ತಿದ್ದಾರೆ. ಅಧಿಕಾರಿಗಳಿಲ್ಲದೆ ಸರ್ಕಾರ ನಡೆಯದು, ಅವರ ಈಗಿನ ಪ್ರಾಮಾಣಿಕ ಸೇವೆಯನ್ನು ಮೆಚ್ಚಿ ಅವರನ್ನು ಪ್ರೋತ್ಸಾಹಿಸಬೇಕೇ ಹೊರತು, ಅವರ ಮೇಲೆ ಸೇಡಿನ ಮನೋಭಾವ ತೋರಿ,

ಅವರ ಸೇವೆಯನ್ನು ಹಾಳುಗೆಡಹಬಾರದು – ಎನ್ನುವುದು ಪಟೇಲರ ಅಭಿಮತವಾಗಿತ್ತು.

ಪಟೇಲರು ತಮ್ಮ ಅಧಿಕಾರಿಗಳನ್ನು ನಂಬಿಕೆ ಮತ್ತು ವಿಶ್ವಾಸದಿಂದ ನಡೆಸಿಕೊಳ್ಳುತ್ತಿದ್ದರು, ಅವರ ತಪ್ಪನ್ನು ಕ್ಷಮಿಸುತ್ತಿದ್ದರು, ಅಧಿಕಾರಿಗಳು ಹೇಳುವುದನ್ನು ತಾಳ್ಮೆಯಿಂದ ಆಲಿಸುತ್ತಿದ್ದರು, ಮಾತು ಕಡಿಮೆ ಆಡುತ್ತಿದ್ದರು, ಆಡಿದ ಮಾತನ್ನು ಸ್ಪಷ್ಟವಾಗಿ ಆಡುತ್ತಿದ್ದರು, ಶೀಘ್ರ ತೀರ್ಮಾನ ತೆಗೆದುಕೊಳ್ಳುತ್ತಿದ್ದರು, ತೀರ್ಮಾನ ಬದಲಿಸುತ್ತಿರಲಿಲ್ಲ, ಅಧಿಕಾರಿಗಳಿಗೆ ಸ್ವಾತಂತ್ರ್ಯ ನೀಡಿದ್ದರು, ಜವಾಬ್ದಾರಿ ತೆಗೆದು ಕೊಂಡು ಅಧಿಕಾರಿಗಳನ್ನು ರಕ್ಷಿಸುತ್ತಿದ್ದರು. ಅವರೊಬ್ಬ ಆದರ್ಶ ಮಂತ್ರಿಯಾಗಿದ್ದರು. ಅಧಿಕಾರಿಗಳು ಅವರನ್ನು 'ಪೋಷಕ ಸಂತ' (Patron Saint) ಎಂದು ಕರೆಯುತ್ತಿದ್ದರು.[೧೩೫]

ಸಂವಿಧಾನ ರಚನಾ ಸಭೆಯ ಕಾರ್ಯ ಮುಕ್ತಾಯವಾದಮೇಲೆ ತಮ್ಮ ಅಂತಿಮ ಭಾಷಣವನ್ನು ಸರ್ದಾರರು ಈ ಮಾತುಗಳಿಂದ ಮುಕ್ತಾಯ ಮಾಡಿದರು:

ಈಗ ದೇವರ ದಯೆಯಿಂದ ಮತ್ತು ದೇವರ ಆಶೀರ್ವಾದದಿಂದ, ಎಲ್ಲರಿಗೂ ಸಮಾನ ಹಕ್ಕು ಮತ್ತು ಸಮಾನ ಅವಕಾಶ ಇರುವ ಒಂದು ನಿಜ ಜಾತ್ಯತೀತ ಪ್ರಜಾಪ್ರಭುತ್ವದ ರಾಷ್ಟ್ರಕ್ಕೆ ಬುನಾದಿಯನ್ನು ಹಾಕುತ್ತಿದ್ದೇವೆ.[೧೩೬]

ಸಂವಿಧಾನ ರಚನಾ ಸಭೆಯು ನೂತನ ಸಂವಿಧಾನವನ್ನು ೧೯೪೯ರ ನವೆಂಬರ್ ೨೬ರಂದು ಅಂಗೀಕರಿಸಿತು. ಸಂವಿಧಾನ ರಚನಾ ಸಭೆಯ ಅಧ್ಯಕ್ಷರಾದ ಡಾ॥ ರಾಜೇಂದ್ರ ಪ್ರಸಾದ್‌ರವರು ಅದರಲ್ಲಿ ಸಹಿ ಮಾಡಿದಮೇಲೆ ಪಟೇಲ್ ಮತ್ತು ನೆಹರು ಪರಸ್ಪರ ಕೈ ಹಿಡಿದುಕೊಂಡು ನಗುತ್ತಾ ಅಧ್ಯಕ್ಷರ ಬಳಿಗೆ ಹೋಗಿ ಹಸ್ತಲಾಘವ ನೀಡಿದರು. ಅವರ ನಂತರ ಅಂಬೇಡ್ಕರ್‌ರವರು ಅಧ್ಯಕ್ಷರ ಬಳಿಗೆ ಹೋಗಿ ಹಸ್ತಲಾಘವ ನೀಡಿದರು. ಆನಂತರ ಮೂವರೂ, ನೆಹರು, ಪಟೇಲ್ ಮತ್ತು ಅಂಬೇಡ್ಕರ್, ಒಟ್ಟಿಗೆ ಹಿಂತಿರುಗಿದರು. ಭಾರತದ ಇತಿಹಾಸದಲ್ಲಿ ಅದೊಂದು ಅಮೂಲ್ಯ ಘಳಿಗೆ.[೧೩೭]

ಈ ಹೊಸ ಸಂವಿಧಾನವು ೧೯೫೦ರ ಜನವರಿ ೨೬ರಂದು ಅನುಷ್ಠಾನಕ್ಕೆ ಬಂದಿತು. ಅಂದು ಭಾರತ ಒಂದು ಗಣರಾಜ್ಯವಾಯಿತು. ಡಾ॥ ಬಾಬು ರಾಜೇಂದ್ರ ಪ್ರಸಾದ್‌ರವರು ಭಾರತ ಗಣರಾಜ್ಯದ ಪ್ರಥಮ ರಾಷ್ಟ್ರಾಧ್ಯಕ್ಷರಾದರು.

❖ ◆ ❖

೨೩. ಪ್ರಥಮ ರಾಷ್ಟ್ರಾಧ್ಯಕ್ಷರ ಆಯ್ಕೆ

ಹೊಸ ಸಂವಿಧಾನವು ೧೯೫೦ ಜನವರಿ ೨೬ರಂದು ಜಾರಿಗೆ ಬಂದು ಭಾರತವು ಒಂದು ಗಣರಾಜ್ಯವಾಗುತ್ತಿದ್ದುದರಿಂದ ಒಬ್ಬರು ರಾಷ್ಟ್ರಾಧ್ಯಕ್ಷರನ್ನು ಆರಿಸ ಬೇಕಾಗಿತ್ತು. ಅದುವರೆವಿಗೆ ಗೌರ್ನರ್ ಜೆನರಲ್ ಆಗಿದ್ದ ಸಿ. ರಾಜಗೋಪಾಲಾ ಚಾರಿಯವರನ್ನು ರಾಷ್ಟ್ರಾಧ್ಯಕ್ಷರನ್ನಾಗಿ ಮುಂದುವರೆಸಬೇಕೆಂದು ಜವಹರ್‌ಲಾಲ್ ನೆಹರು ಬಯಸಿದ್ದರು. ಜೂನ್ ೧೯೪೯ರಲ್ಲಿ ನೆಹರುರವರು ತಮ್ಮ ಈ ಅಭಿಪ್ರಾಯವನ್ನು ಲೋಕಾಭಿರಾಮವಾಗಿ ಮಾತನಾಡುವಾಗ ಪಟೇಲರಿಗೆ ತಿಳಿಸಿದರು. ಪಟೇಲರು 'ಬೇಡ' ಅನ್ನಲಿಲ್ಲ. ರಾಜಾಜಿಯವರು ಪಟೇಲರ ಒಬ್ಬ ಹಳೆಯ ಸ್ನೇಹಿತ ಮತ್ತು ಸಹಕೆಲಸಗಾರ. ಆ ವೇಳೆಗೆ ರಾಜಾಜಿ ಮತ್ತು ನೆಹರು ನಡುವೆ ಮಧುರ ಬಾಂಧವ್ಯ ಬೆಳೆದಿತ್ತು.

ಪ್ರಥಮ ರಾಷ್ಟ್ರಾಧ್ಯಕ್ಷರನ್ನು ಚುನಾಯಿಸುವ ಅಧಿಕಾರ ಇದ್ದುದು ಸಂವಿಧಾನ ರಚನಾ ಸಭೆಯ ಸದಸ್ಯರಿಗೆ. ಆ ಸದಸ್ಯರ ಒಲವು ಡಾ॥ ರಾಜೇಂದ್ರ ಪ್ರಸಾದ್‌ರವರ ಕಡೆಗೆ ಇತ್ತು. ಪ್ರಸಾದರು ಸಂವಿಧಾನ ರಚನಾ ಸಭೆಯ ಅಧ್ಯಕ್ಷರಾಗಿ ಚೆನ್ನಾಗಿ ಕಾರ್ಯ ನಿರ್ವಹಿಸಿದ್ದರು. ಆದಾಗ್ಯೂ, ನೆಹರು ಮತ್ತು ಪಟೇಲ್ ಇಬ್ಬರೂ ಒತ್ತಾಯಿಸಿದ್ದರೆ ಪ್ರಸಾದರು ಒಪ್ಪಿ, ರಾಜಾಜಿ ಅವರಿಗೆ ಆ ಸ್ಥಾನ ಬಿಟ್ಟುಕೊಡು ತ್ತಿದ್ದರೇನೊ. ನೆಹರುರವರು ಈ ವಿಷಯದಲ್ಲಿ ಪಟೇಲರ ಸಹಾಯವನ್ನು ಕೋರಿದ್ದರೆ ಅವರು ಸಹಕರಿಸುತ್ತಿದ್ದರು. ಆದರೆ ನೆಹರುಗೆ ಆತುರ ಮತ್ತು ಅತಿಯಾದ ಆತ್ಮ ವಿಶ್ವಾಸ. ಅವರು ಆ ಕೆಲಸ ಮಾಡಲಿಲ್ಲ. ಅವರು ೧೯೪೯ರ ಅಕ್ಟೋಬರ್ ಮೊದಲ ವಾರದಲ್ಲಿ ವಿದೇಶಿ ಪ್ರವಾಸಕ್ಕೆ ಹೋಗುತ್ತಿದ್ದರು. ಅದರೊಳಗೆ ರಾಜಾಜಿ

ಅವರ ಆಯ್ಕೆಯ ಬಗೆಗೆ ಒಪ್ಪಿಗೆ ಪಡೆಯಲು ಬಯಸಿದರು. ಸೆಪ್ಟೆಂಬರ್ ತಿಂಗಳಲ್ಲಿ ಪಟೇಲರು ವೈದ್ಯರ ಸಲಹೆಗಾಗಿ ಹೆಚ್ಚು ದಿವಸ ಬೊಂಬಾಯಿಯಲ್ಲಿ ತಂಗಬೇಕಾಯಿತು. ಕಾಂಗ್ರೆಸ್ ಪಕ್ಷದ ಚೀಫ್ ವಿಪ್ ಆಗಿದ್ದ ಸತ್ಯನಾರಯಣ ಸಿನ್ಹರವರು ಸೆಪ್ಟೆಂಬರ್ ೧೦ರಂದು ನೆಹರುಗೆ 'ಪಟೇಲರ ಸಹಾಯವಿಲ್ಲದೆ ರಾಜಾಜಿಯವರನ್ನು ಅಧ್ಯಕ್ಷರನ್ನಾಗಿ ಮಾಡುವುದು ಅಸಾಧ್ಯ' ಎಂದು ಸಲಹೆ ನೀಡಿದರು. ಆ ಸಲಹೆ ನೆಹರುಗೆ ಇಷ್ಟವಾಗಲಿಲ್ಲವೆಂದು ಕಾಣುತ್ತದೆ. ಅವರು ಪಟೇಲರಿಗೆ ಪತ್ರವನ್ನು ಬರೆಯಲೂ ಇಲ್ಲ, ದೂರವಾಣಿಯ ಮೂಲಕ ಮಾತನಾಡಲೂ ಇಲ್ಲ. ನೇರವಾಗಿ ಪ್ರಸಾದರಿಗೆ ಸೆಪ್ಟೆಂಬರ್ ೧೦ರಂದು ಪತ್ರ ಬರೆದರು:

> ನಾನು ಈ ವಿಷಯವನ್ನು ವಲ್ಲಭಭಾಯ್ ಒಡನೆ ಚರ್ಚಿಸಿದ್ದೇನೆ. ಅತ್ಯಂತ ಸುರಕ್ಷಿತ ಮತ್ತು ಉತ್ತಮ ಮಾರ್ಗವೆಂದರೆ ಈಗಿರುವ ಏರ್ಪಾಟನ್ನೆ ಮುಂದುವರಿಸಿವುದು ಎಂದು ನಮಗೆ ಅನ್ನಿಸಿದೆ..... ಅಂದರೆ ರಾಜಾಜಿಯವರೇ ಅಧ್ಯಕ್ಷರಾಗಿ ಮುಂದುವರಿಯುವುದು..... ಅಧ್ಯಕ್ಷರಾಗಿ ನಿಮ್ಮ ಆಯ್ಕೆಯು ಸ್ವಾಗತಾರ್ಹವೆ. ಆದರೆ ಅದಕ್ಕೆ ಬದಲಾವಣೆ ಮತ್ತು ಅದರ ಫಲವಾಗಿ ಮರು ಏರ್ಪಾಟು ಅವಶ್ಯಕವಾಗುತ್ತದೆ..... ನೀವು ಒಪ್ಪುತ್ತೀರಿ ಎಂದು ಆಶಿಸುತ್ತೇನೆ. ಈ ವಿಷಯುದಲ್ಲಿ, ಬೇರೆ ಯಾರಾದರು ಸೂಚಿಸುವದಕ್ಕಿಂತ ನೀವೇ ಸೂಚಿಸುವುದು ಸೂಕ್ತವಾದುದು.

ನೆಹರುಗೆ ಪ್ರಸಾದ್ ಉತ್ತರ ಹೀಗಿತ್ತು:

> ಅದು ನನಗೆ ನಿಕಟವಾಗಿ ಸಂಬಂಧಿಸಿದ್ದಾದರೂ ಸಹ ನನ್ನೊಡನೆ ಸಮಾಲೋಚಿಸುವ ಸೌಜನ್ಯತೆಯನ್ನೂ ಸಹ ತೋರಿಸದೆ ತೆಗೆದುಕೊಂಡ ನಿರ್ಧಾರವನ್ನು ನಾನು ಒಪ್ಪಬೇಕು ಮತ್ತು ಅದರಂತೆ ವರ್ತಿಸಬೇಕೆಂದು ನೀವು ಬಯಸಿದ್ದೀರಿ..... ನಾನು ಸಭೆಯ ಸದಸ್ಯತ್ವಕ್ಕೆ ರಾಜಿನಾಮೆ ನೀಡುತ್ತೇನೆ ಮತ್ತು ನೀವು ತೆಗೆದುಕೊಂಡಿರುವ ತೀರ್ಮಾನವನ್ನು ಜಾರಿಗೆ ತರಲು ಸ್ವತಂತ್ರನಾಗುತ್ತೇನೆ. ನಾನು ಇದಕ್ಕಿಂತ ಉತ್ತಮವಾದ ನಿರ್ಗಮನಕ್ಕೆ ಅರ್ಹನಾಗಿದ್ದೆ.[೧೩೮]

ಬೊಂಬಾಯಿಯಲ್ಲಿದ್ದ ಪಟೇಲರಿಗೆ ಪ್ರಸಾದ್ ಮತ್ತು ನೆಹರು – ಇಬ್ಬರೂ ಪತ್ರ ಬರೆದರು. ಪ್ರಸಾದರು ನ್ಯಾಯಕ್ಕಾಗಿ ಬರೆದರು, ನೆಹರು ಸಹಾಯಕ್ಕಾಗಿ ಬರೆದರು.

ಪ್ರಸಾದರು ಸೆಪ್ಟೆಂಬರ್ ೧೩ರಂದು ದೂರವಾಣಿ ಮೂಲಕ ಮಾತನಾಡಿದಾಗ ಪಟೇಲರು 'ನೀವು ಹಿಡಿದಿರುವ ಮಾರ್ಗವನ್ನು ಬಿಡಬೇಡಿ' ಎಂದು ಸಲಹೆ ನೀಡಿದರು. ನೆಹರುಗೆ ಪತ್ರ ಬರೆದು, 'ಪರಿಸ್ಥಿತಿ ಸಂಕೀರ್ಣವಾಗಿದೆ. ಬಹಳ ಜಾಣ್ಮೆ ಮತ್ತು ಎಚ್ಚರಿಕೆಯಿಂದ ವ್ಯವಹರಿಸಬೇಕು' ಎಂದರು.

ಪಟೇಲರು ಸೆಪ್ಟೆಂಬರ್ ಕೊನೆಯಲ್ಲಿ ದೆಹಲಿಗೆ ಹಿಂತಿರುಗಿದರು. ರಾಜಾಜಿಯವರ ನಾಮಕರಣವನ್ನು ತೀರ್ಮಾನಿಸುವುದಕ್ಕೆ ಪಕ್ಷದ ಸದಸ್ಯರ ಸಭೆ ಕರೆಯಲು ನೆಹರು ಬಯಸಿದರು. ಸದಸ್ಯರು ರಾಜಾಜಿಯವರನ್ನು ನಾಮಕರಣ ಮಾಡುವ ಮನೋಭಾವದಲ್ಲಿ ಇಲ್ಲ ಎಂದು ಪಟೇಲರು ಎಚ್ಚರಿಸಿದರೂ ಸಹ ನೆಹರು ಅಕ್ಟೋಬರ್ ೫ರ ಸಂಜೆಗೆ ಸಭೆಯನ್ನು ಕರೆದರು. ಮಾರನೆ ಬೆಳಗ್ಗೆ ಅವರು ಲಂಡನ್‌ಗೆ ಪ್ರಯಾಣ ಮಾಡುವವರಿದ್ದರು. ಸಭೆಯಲ್ಲಿ ನೆಹರು ರಾಜಾಜಿಯವರ ಹೆಸರನ್ನು ಸೂಚಿಸಿದರು. ಸದಸ್ಯರು ಪ್ರಧಾನಿಯ ಭಾಷಣದ ಮಧ್ಯೆಮಧ್ಯೆ ಬಾಯಿ ಹಾಕಿ ಗದ್ದಲ ಮಾಡಿದರು. ತಮ್ಮ ಸೂಚನೆ ಅಂಗೀಕಾರವಾಗುವುದಿಲ್ಲವೆಂದು ಅರ್ಥ ಮಾಡಿಕೊಂಡ ನೆಹರು, ದಿಗ್ಭ್ರಾಂತರಾಗಿ ಸರ್ದಾರರ ಸಹಾಯಕ್ಕಾಗಿ ತಿರುಗಿದರು. ಆದರೆ ಸರ್ದಾರರು ಅವರ ಸಹಾಯಕ್ಕೆ ಹೋಗಲಿಲ್ಲ. ನೆಹರು ಕುಳಿತುಬಿಟ್ಟರು. ಆಗ ಸದಸ್ಯರು ಒಬ್ಬರಾದ ಮೇಲೆ ಒಬ್ಬರು ನೆಹರು ಸೂಚನೆಯ ಬಗೆಗೆ ಕಠಿಣ ಮಾತುಗಳನ್ನು ಆಡಿದರು. ಕೊನೆಗೆ ಪಟೇಲರು ಎದ್ದು ನಿಂತರು. ನೆಹರು ಬಗೆಗೆ ಸದಸ್ಯರು ಬಳಸಿದ ಧ್ವನಿಗೆ ಅವರನ್ನು ತರಾಟೆಗೆ ತೆಗೆದುಕೊಂಡರು, ಅವರ ಅಭಿಪ್ರಾಯಗಳನ್ನು ಜವಹರಲಾಲ್ ನೆಹರು ಕಡೆಗಣಿಸುವುದಿಲ್ಲ ಅನ್ನುವ ಆಶ್ವಾಸನೆ ನೀಡಿದರು ಮತ್ತು ರಾಜಾಜಿಯವರೋ ಅಥವಾ ಪ್ರಸಾದ್‌ರವರೋ ಅನ್ನುವ ತೀರ್ಮಾನವನ್ನು ಪ್ರಧಾನಿ ವಿದೇಶದಿಂದ ಬಂದ ಮೇಲೆ ಮಾಡೋಣ – ಎಂದರು, ಸಭೆಯನ್ನು ಮುಂದೂಡಿದರು.[೧೩೯]

ತಮ್ಮ ಮಾತು ವೇದ ವಾಕ್ಯ, ಎಲ್ಲರೂ ತಮ್ಮ ಮಾತನ್ನು ಕೇಳುತ್ತಾರೆ ಎಂದು ಭಾವಿಸಿದ್ದ ನೆಹರುಗೆ ಭ್ರಮನಿರಸನವಾಗಿತ್ತು. ಅಂದು ರಾತ್ರಿ ಅವರು ಸ್ವಹಸ್ತಾಕ್ಷರದಲ್ಲಿ ಬರೆದ ಪತ್ರದ ಮೂಲಕ, 'ನನ್ನ ಪ್ರವಾಸದ ನಂತರ ರಾಜಿನಾಮೆ ನೀಡುತ್ತೇನೆ. ನನ್ನ ನಾಯಕತ್ವ ತಿರಸ್ಕರಿಸಲ್ಪಟ್ಟಿದೆ ಅನ್ನಿಸುತ್ತಿದೆ. ನಾಯಕತ್ವವನ್ನು ವಹಿಸಿಕೊಳ್ಳುವುದಕ್ಕೆ ಸರ್ದಾರರನ್ನು ಆಹ್ವಾನಿಸಿ ಎಂದು ಗೌರ್ನರ್ ಜೆನರಲ್‌ಗೆ ಸಲಹೆ ನೀಡುತ್ತೇನೆ' ಎಂದು ತಿಳಿಸಿದರು.

ನೆಹರು ಕೈಲಿ ಅಧಿಕಾರ ತ್ಯಾಗ ಮಾಡಿಸುವುದು ಸರ್ದಾರರ ಉದ್ದೇಶವಾಗಿರಲಿಲ್ಲ. ನೆಹರುವಿನ 'ತನ್ನ ಬಯಕೆಯೇ ಕಾನೂನು' ಅನ್ನುವ ಭಾವನೆ

ತಪ್ಪು ಎನ್ನುವುದನ್ನು ಅವರಿಗೆ ಮನದಟ್ಟು ಮಾಡಿಸುವುದು ಮಾತ್ರ ಅವರ ಉದ್ದೇಶವಾಗಿತ್ತು. ಮಾರನೆ ಬೆಳಗ್ಗೆ ನೆಹರುವನ್ನು ಬೀಳ್ಕೊಡುವಾಗ ಪಟೇಲರು, 'ಅಧಿಕಾರವನ್ನು ತ್ಯಾಗ ಮಾಡುವ ಆಲೋಚನೆಯನ್ನು ಕೈಬಿಡಿ. ಬ್ರಿಟನ್ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ, ಏನೂ ನಡೆದೇ ಇಲ್ಲವೊ ಅನ್ನುವ ಹಾಗೆ ಪ್ರವಾಸ ಮಾಡಿ ಬನ್ನಿ' ಎಂದು ಹೇಳಿದರು. ಎಂತಹ ಔದಾರ್ಯ![೧೪೦]

ಐದು ವಾರಗಳ ನಂತರ ನೆಹರು ವಾಪಸ್ಸು ಬಂದಮೇಲೆ ರಾಜಿನಾಮೆ ವಿಷಯ ಮತ್ತೆ ಎತ್ತಲೇ ಇಲ್ಲ. ಆದರೆ ರಾಜೇಂದ್ರ ಪ್ರಸಾದರು ಹಿಂದಕ್ಕೆ ಸರಿಯುವಂತೆ ಮಾಡಲು ನಾನಾ ಪ್ರಯತ್ನ ಮಾಡಿದರು. ಪ್ರಸಾದರಿಗೆ ನೆಹರು ಹೊಸ ಯೋಜನಾ ಆಯೋಗದ ಛೇರ್ಮನ್‌ಗಿರಿ ಕೊಡುವುದಾಗಿ ಹೇಳಿದರು. ಪ್ರಸಾದರು ಒಪ್ಪದೆ ಇದ್ದಾಗ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಸ್ಥಾನದ ಆಮಿಷ ಒಡ್ಡಿದರು. ಆದರೆ ಪ್ರಸಾದರು ಯಾವುದಕ್ಕೂ ಜಗ್ಗಲಿಲ್ಲ. ತಾವು ಹಿಂದೆ ಸರಿದರೆ ತಮ್ಮ ಸ್ನೇಹಿತರು ಅದನ್ನು 'ದ್ರೋಹ' ಅನ್ನುತ್ತಾರೆ ಎಂದರು ಪ್ರಸಾದರು. ಆಗ ರಾಜಾಜಿಯವರು ತಮ್ಮ ನಿವೃತ್ತಿಯನ್ನು ಪ್ರಕಟಿಸಿದರು. ರಾಜೇಂದ್ರ ಪ್ರಸಾದರು ಆಯ್ಕೆ ಆದರು.

೧೯೫೦ರ ಜನವರಿ ೨೬ರ ಬೆಳಗ್ಗೆ ರಾಜೇಂದ್ರ ಪ್ರಸಾದ್‌ರವರು ತಮ್ಮ ಪತ್ನಿ ಮತ್ತು ಸಹೋದರಿಯ ಜೊತೆ ಪಟೇಲರ ನಿವಾಸಕ್ಕೆ ಬಂದರು. ಅಲ್ಲಿಂದ ಪಟೇಲರು ಮತ್ತು ಮಣಿಬೆನ್‌ರನ್ನು ಕರೆದುಕೊಂಡು ಎಲ್ಲರೂ ರಾಜ್‌ಘಾಟ್‌ಗೆ ಹೋದರು. ಅಂದು ಬೆಳಗ್ಗೆ ಭಾರತವು ಗಣರಾಜ್ಯವೆಂದು ಘೋಷಿತವಾಯಿತು. ಪ್ರಸಾದರು ಭಾರತ ಗಣರಾಜ್ಯದ ಪ್ರಥಮ ಅಧ್ಯಕ್ಷರಾಗಿ ಪ್ರಮಾಣವಚನ ಸ್ವೀಕರಿಸಿದರು.

ಮಾರನೆಯ ದಿನ ಬೆಳಗ್ಗೆ ೭ ಘಂಟೆಗೆ ರಾಜಾಜಿಯವರು ದೆಹಲಿಯಿಂದ ಮದ್ರಾಸ್‌ಗೆ ಪ್ರಯಾಣ ಮಾಡಿದರು. ಅವರನ್ನು ಬೀಳ್ಕೊಡುವಾಗ ಸರ್ದಾರರು ಅವರನ್ನು ಆಲಂಗಿಸಿದರು. ಇಬ್ಬರ ಕಣ್ಣುಗಳೂ ಹನಿಗೂಡಿದುವು.[೧೪೧]

❖ ◆ ❖

ಭಾಗ – ಐದು

ಸಾರ್ಥಕ ಜೀವನ

೨೪. ನೆಹರು ಬೆಂಬಲಕ್ಕೆ ಧಾವಿಸಿದ ಪಟೇಲ್

೧೯೫೦ರ ಜನವರಿಯಲ್ಲಿ ಪೂರ್ವ ಪಾಕಿಸ್ತಾನದ ರಾಜಧಾನಿ ಢಾಕದಲ್ಲಿ ಹೊಸದಾಗಿ ಮತೀಯ ಗಲಭೆ ಆರಂಭವಾಯಿತು. ಸ್ವತಃ ಪೊಲೀಸರೆ ಹಿಂದೂಗಳ ಮೇಲೆ ಹಲ್ಲೆ ಮಾಡಿದರು. ಅದರಿಂದ ಉತ್ತೇಜಿತರಾದ ಸ್ಥಳೀಯ ರೌಡಿಗಳು ಹಿಂದೂಗಳ ಮನೆಗಳ ಮೇಲೆ ಆಕ್ರಮಣ ಮಾಡಿದರು. ಅದರ ಬಗೆಗೆ ಭಾರತದ ವಿದೇಶಿ ವ್ಯವಹಾರಗಳ ಕಾರ್ಯದರ್ಶಿ ಎಸ್. ದತ್‌ರವರ ದಾಖಲೆ ಹೀಗಿದೆ:

> "ಅವರು ಮನೆಗಳನ್ನು ಲೂಟಿ ಮಾಡಿದರು, ಬೆಂಕಿ ಹಚ್ಚಿದರು ಮತ್ತು ಗಂಡಸರು, ಹೆಂಗಸರು ಹಾಗೂ ಮಕ್ಕಳ ಮೇಲೆ ಹಲ್ಲೆ ಮಾಡಿದರು. ಹಿಂದೂ ಮಹಿಳೆಯರನ್ನು ಅಪಹರಿಸಿ ಇಸ್ಲಾಂಗೆ ಬಲಾತ್ಕಾರವಾಗಿ ಪರಿವರ್ತಿಸಿದರು. ಹಿಂದೂ ದೇವಾಲಯಗಳನ್ನು ಅಪವಿತ್ರಗೊಳಿಸಿದರು".೧

ಢಾಕ ಘಟನೆಗಳಿಗೆ ಪ್ರತಿಕ್ರಿಯೆಯಾಗಿ ಕಲ್ಕತ್ತದಲ್ಲಿ ಹಿಂದೂಗಳು ಮತೀಯ ಗಲಭೆ ಆರಂಭಿಸಿದರು. ಆದರೆ ಅದು ಸಾಮೂಹಿಕ ಕೃತ್ಯವಾಗಿರಲಿಲ್ಲ, ಅಲ್ಲಲ್ಲೇ ನಡೆದ ಘಟನೆಗಳು. ಸರ್ಕಾರವು ಬಲವಾದ ಕ್ರಮ ತೆಗೆದುಕೊಂಡು ಅವನ್ನೂ ಸಹ ಹತ್ತಿಕ್ಕಿತು. ಆದಾಗ್ಯೂ ಢಾಕಾದಲ್ಲಿ ಹಿಂದೂಗಳ ಮೇಲಿನ ಹಲ್ಲೆ ಮುಂದುವರೆಯಿತು. ೧೯೫೦ರ ಫೆಬ್ರುವರಿ ೧೦ರಂದು ಮುಸ್ಲಿಮರ ಒಂದು ಭಾರಿ ಗುಂಪು ಹಿಂದೂಗಳ ಮೇಲೆ ಹಲ್ಲೆ ಮಾಡಿತು. ೨೦೦೦ ಮಂದಿ ಹಿಂದೂಗಳು ಪ್ರಾಣ ತೆತ್ತರು. ಸಾವಿರಾರು ಮಂದಿ ಗಾಯಗೊಂಡರು. ಆ ಆಕ್ರಮಣ ಢಾಕದಿಂದ

ಇತರ ನಗರಗಳಿಗೆ ಹರಡಿತು. ಹಿಂದೂಗಳು ಶತಮಾನಗಳಿಂದ ತಾವು ಇದ್ದ ಸ್ಥಳಗಳನ್ನು ಬಿಟ್ಟು ಗಡಿ ದಾಟಿ ಭಾರತಕ್ಕೆ ನಿರಾಶ್ರಿತರಾಗಿ ಓಡಿಬಂದರು.

ಪೂರ್ವ ಪಾಕಿಸ್ತಾನದಿಂದ ಭಾರತಕ್ಕೆ ಬರುತ್ತಿದ್ದ ಹಿಂದೂ ನಿರಾಶ್ರಿತರ ಸಂಖ್ಯೆಯು ಭಾರತದಿಂದ ಪೂರ್ವ ಪಾಕಿಸ್ತಾನಕ್ಕೆ ಹೋಗುತ್ತಿದ್ದ ಮುಸ್ಲಿಂ ನಿರಾಶ್ರಿತರ ಸಂಖ್ಯೆಗಿಂತ ಬಹಳ ಜಾಸ್ತಿ ಇತ್ತು. ಅದು ಪಶ್ಚಿಮ ಬಂಗಾಳದ ಆರ್ಥಿಕ ಪರಿಸ್ಥಿತಿಯ ಮೇಲೆ ಅಡ್ಡ ಪರಿಣಾಮ ಬೀರುತ್ತಿತ್ತು. ಅದರಿಂದ ೧೯೪೮ರ ಡಿಸೆಂಬರ್‌ನಲ್ಲಿ ಜೈಪುರದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಪಟೇಲರು ಪಾಕಿಸ್ತಾನವು ಹಿಂದೂ ನಿರಾಶ್ರಿತರನ್ನು ವಾಪಸ್ಸು ಕರೆಯಿಸಿಕೊಂಡು ಅವರಿಗೆ ಪುನರ್ವಸತಿ ಕಲ್ಪಿಸಬೇಕು ಅಥವಾ ಪಶ್ಚಿಮ ಬಂಗಾಳಕ್ಕೆ ಹೊಂದಿದಂತಹ ಸಾಕಷ್ಟು ಪ್ರದೇಶವನ್ನು ಭಾರತಕ್ಕೆ ಬಿಟ್ಟು ಕೊಡಬೇಕು ಎಂದು ಆಗ್ರಹಿಸಿದರು. ಅದಕ್ಕೆ ಮುಂಚೆ ಅವರು ನೆಹರುಗೆ ಪತ್ರ ಬರೆದು ಮತ್ತೊಂದು ಪರಿಹಾರವನ್ನು ಸೂಚಿಸಿದ್ದರು. ಹಿಂದೂ ನಿರಾಶ್ರಿತರು ಬರುವುದು ಮುಂದುವರೆದರೆ ಅಷ್ಟೇ ಸಂಖ್ಯೆಯ ಮುಸ್ಲಿಮರನ್ನು ಭಾರತದಿಂದ ಪೂರ್ವ ಪಾಕಿಸ್ತಾನಕ್ಕೆ ಕಳುಹಿಸಬೇಕಾಗುತ್ತದೆ ಎಂದು ಪಾಕಿಸ್ತಾನದ ಸರ್ಕಾರಕ್ಕೆ ಸ್ಪಷ್ಟ ಸೂಚನೆಯನ್ನು ನೀಡಬೇಕು' ಎನ್ನುವುದು ಸರ್ದಾರರು ಸೂಚಿಸಿದ ಮೂರನೆಯ ಪರಿಹಾರ. ಆದರೆ ಅದನ್ನು ನೆಹರು ಒಪ್ಪಲಿಲ್ಲ. ಅದು ಜಾರಿಗೆ ತರಲು ಸಾಧ್ಯವಿಲ್ಲದ್ದು, ಎಂದರು ಅವರು. ಪಟೇಲರು ನೆಹರುರವರ ಅಭಿಪ್ರಾಯವನ್ನು ಒಪ್ಪಿದರು. ಮಹಾತ್ಮ ಗಾಂಧೀಜಿಯವರ ಹತ್ಯೆಯ ನಂತರ, ನೆಹರುಗೆ ಮುಜುಗರವನ್ನು ಉಂಟುಮಾಡಬಾರದು ಎಂದು ಪಟೇಲರು ತೀರ್ಮಾನಿಸಿದ್ದರು.[೨]

ಆದರೆ ಅಷ್ಟು ಹೊತ್ತಿಗೆ, ಹಿಂದೂ ನಿರಾಶ್ರಿತರ ಆಗಮನಕ್ಕೆ ನೆಹರುರವರ ಪ್ರತಿಕ್ರಿಯೆಯ ಬಗೆಗೆ ಕಾಂಗ್ರೆಸ್ ಪಕ್ಷದಲ್ಲಿ ಮತ್ತು ಸಚಿವ ಸಂಪುಟದಲ್ಲಿ ಅಸಮಾಧಾನ ಹೊಗೆಯಾಡುತ್ತಿತ್ತು. ಆ ಸನ್ನಿವೇಶವನ್ನು ಬಳಸಿಕೊಂಡು ಪಟೇಲರು ತಮ್ಮ ಪ್ರಾಬಲ್ಯವನ್ನು ಹೆಚ್ಚಿಸಿಕೊಳ್ಳಬಹುದಾಗಿತ್ತು. ಆದರೆ ಅವರು ಹಾಗೆ ಮಾಡಲು ನಿರಾಕರಿಸಿದರು. ಅವರು ದೇಶಸೇವೆಗಾಗಿ ಅಧಿಕಾರದಲ್ಲಿದ್ದರೇ ಹೊರತು ಅಧಿಕಾರ ದಾಹದಿಂದ ಅಧಿಕಾರದಲ್ಲಿ ಇರಲಿಲ್ಲ.

೧೯೫೦ರ ಫೆಬ್ರುವರಿ ಅಂತ್ಯಭಾಗದಲ್ಲಿ ನೆಹರು ತಮ್ಮ ಬಗೆಗೆ ಗೊಣಗಾಟ ಹೆಚ್ಚಿದ್ದನ್ನು ಗಮನಿಸಿ ತಮ್ಮ ಸ್ಥಾನವನ್ನು ಪಟೇಲರಿಗೆ ಬಿಟ್ಟುಕೊಡುವುದಾಗಿ ಹೇಳಿದರು. ಅವರು ಪ್ರಧಾನಮಂತ್ರಿ ಪದವಿಗೆ ರಾಜಿನಾಮೆ ಕೊಟ್ಟು, ಮಹಾತ್ಮ ಗಾಂಧೀಜಿ ಮಾಡಿದ್ದ ಹಾಗೆ ಪೂರ್ವ ಬಂಗಾಳದಲ್ಲಿ ಸಂಚರಿಸಬೇಕೆಂದು ಆಲೋಚಿಸಿದರು. ಅವರು ಪಟೇಲರಿಗೆ ಒಂದು ಪತ್ರ ಬರೆದು, "ನಾನು ದೆಹಲಿಯಲ್ಲಿ ನನ್ನ

ಉಪಯೋಗವನ್ನು ಬಹಳವಾಗಿ ಮುಗಿಸಿಬಿಟ್ಟಿದ್ದೇನೆ ಎನ್ನುವ ಭಾವನೆ ನನಗೆ ಬಂದಿದೆ. ..... ನನ್ನ ಆಲೋಚನೆಯು ಪ್ರತಿಯೊಂದು ದೃಷ್ಟಿಕೋನದಲ್ಲೂ ಸೂಕ್ತವಾಗಿದೆ ಎಂದು ಅನ್ನಿಸುತ್ತಿದೆ..... ಹೇಗಿದ್ದರೂ ಯಾವುದೇ ಸಂದರ್ಭದಲ್ಲೂ ಅವರಿಗೆ ಮಾರ್ಗದರ್ಶನ ನೀಡಲು ನೀವು ಇದ್ದೀರಲ್ಲ" ಎಂದು ತಿಳಿಸಿದರು.

ಪಟೇಲರು, ಒಂದು ಕ್ಷಣವೂ ತಡಮಾಡದೆ, ನೆಹರುರವರ ಪ್ರಸ್ತಾವನೆಯನ್ನು ತಿರಸ್ಕರಿಸಿದರು. ನೆಹರುರವರ ನಾಯಕತ್ವದಲ್ಲಿ ಏನೇ ಕೊರತೆಗಳಿದ್ದರೂ, ಅದು ವೈಯುಕ್ತಿಕವಾಗಿ ತಮಗೆ ಎಷ್ಟೇ ಕಿರಿ ಕಿರಿ ಉಂಟುಮಾಡುತ್ತಿದ್ದರೂ ನೆಹರು ನಾಯಕತ್ವವು ದೇಶಕ್ಕೆ ಅತ್ಯಗತ್ಯವಾಗಿದೆ – ಎಂದು ಪಟೇಲರು ಭಾವಿಸಿದ್ದರು. ಅವರು ನೆಹರುರವರ ಪ್ರಸ್ತಾವನೆಯನ್ನು ನಿರಾಕರಿಸಿ, ಅವರಿಗೆ ತಮ್ಮ ಬೆಂಬಲದ ಆಶ್ವಾಸನೆಯನ್ನು ಮತ್ತೆ ಉಚ್ಚರಿಸಿದರು. ನೆಹರು ತಮ್ಮ ಪ್ರಸ್ತಾವನೆಯನ್ನು ಮಂಡಿಸಿದಷ್ಟು ವೇಗವಾಗಿಯೆ ವಾಪಸ್ಸು ಪಡೆದರು.[೩]

ನಂತರ ನೆಹರು ಮತ್ತು ಪಟೇಲರು ಪರಸ್ಪರ ಸಮಾಲೋಚಿಸಿ ಪಾಕಿಸ್ತಾನದ ಪ್ರಧಾನಿ ಲಿಯಾಕತ್ ಅಲಿಖಾನ್‌ರವರನ್ನು ಮಾತುಕತೆಗೆ ದೆಹಲಿಗೆ ಆಹ್ವಾನಿಸಿದರು. ಏಪ್ರಿಲ್ ಆರಂಭದಲ್ಲಿ ಲಿಯಾಖತ್ ದೆಹಲಿಗೆ ಬಂದು ಒಂದು ವಾರಕಾಲ ನೆಹರು ಒಡನೆ ಮಾತುಕತೆ ನಡೆಸಿದರು. ಅವರು ಪಟೇಲರನ್ನೂ ಭೇಟಿ ಮಾಡಲು ಬಯಸಿದರು. ಆದರೆ ಪಟೇಲರು ಆಸಕ್ತಿ ತೋರಲಿಲ್ಲ. ಹಿಂದಿನ ಮೂರು ತಿಂಗಳಲ್ಲಿ ಪೂರ್ವ ಪಂಜಾಬ್‌ನಿಂದ ಎರಡು ಲಕ್ಷದ ಐವತ್ತು ಸಾವಿರ ಹಿಂದೂಗಳು ಭಾರತಕ್ಕೆ ಬಂದಿದ್ದರು. ಅದರಿಂದ ಪಟೇಲರಿಗೆ ಭಾರಿ ಅಸಮಾಧಾನವಿತ್ತು. ಆದರೆ ನೆಹರು ಸರ್ದಾರರನ್ನು ಬಹಳವಾಗಿ ಒತ್ತಾಯಿಸಿದ್ದರಿಂದ ಏಪ್ರಿಲ್ ೫ರಂದು ಸರ್ದಾರ್ – ಲಿಯಾಖತ್ ಭೇಟಿ ನಡೆಯಿತು. ಆ ಭೇಟಿಯಲ್ಲಿ ಪಟೇಲರು ಲಿಯಾಖತ್‌ಗೆ, "ಮುಸ್ಲಿಮರ ಹಕ್ಕುಗಳಿಗಾಗಿ ಜವಹರ್ ಹಗಲು ರಾತ್ರಿ ಶ್ರಮಿಸುತ್ತಿದ್ದಾರೆ. ಗಾಂಧೀಜಿಗೆ ಆದಂತೆಯೆ ನೆಹರೂಗು ಆಗಬಹುದು ಅನ್ನುವ ಚಿಂತೆಯಿಂದ ರಾತ್ರಿಯ ವೇಳೆ ನನಗೆ ನಿದ್ರೆಯೆ ಬಾರದು," ಎಂದು ತಿಳಿಸಿದರು.

ಮೌಲಾನ ಆಜಾದರು, ಅಲ್ಪ ಸಂಖ್ಯಾತರ ವಿಷಯಕ್ಕಾಗಿ ಎರಡು ಬಂಗಾಳಗಳಲ್ಲೂ ಮಂತ್ರಿಗಳನ್ನು ನಿಯಮಿಸಬೇಕು – ಅನ್ನುವ ಸಲಹೆಯನ್ನು ಮುಂದಿಟ್ಟರು. ಲಿಯಾಖತ್‌ರವರು ಆ ತತ್ವವನ್ನು ಎರಡು ರಾಷ್ಟ್ರಗಳಿಗೂ ಅನ್ವಯಿಸಬೇಕೆ ಹೊರತು ಎರಡು ಬಂಗಾಳಗಳಿಗಲ್ಲ – ಎಂದರು. ಪಟೇಲರು ಅದನ್ನು ನಿರಾಕರಿಸಿದರು. ಅವರೆಂದರು:

> ಕಾಂಗ್ರೆಸ್ ಪಕ್ಷ ಅದನ್ನು ಒಪ್ಪುವುದಿಲ್ಲ. ದೇಶವು ಈ ಕಹಿ ಗುಳಿಗೆಯನ್ನು ನುಂಗುವುದಿಲ್ಲ. ನಾವು ಈಗಾಗಲೇ ಒಂದು ಪಾಕಿಸ್ತಾನವನ್ನು ಕೊಟ್ಟಾಗಿದೆ. ಅಷ್ಟು ಸಾಕು.[೪]

ನೆಹರು ಮತ್ತು ಲಿಯಾಖತ್ ಒಂದು ಒಪ್ಪಂದಕ್ಕೆ ಸಹಿ ಹಾಕಿದರು. ಹಿಂದೂಗಳು ಮತ್ತು ಮುಸ್ಲಿಮರಿಗೆ ಸಮಾನ ನಾಗರಿಕ ಹಕ್ಕುಗಳನ್ನು ನೀಡಲು, ಅಲ್ಪ ಸಂಖ್ಯಾತರ ಆಯೋಗ ಮತ್ತು ಹಿಂಸಾಚಾರ ವಿಚಾರಣಾ ಆಯೋಗಗಳನ್ನು ರಚಿಸಲು ಮತ್ತು ಎರಡು ಬಂಗಾಳ ಹಾಗೂ ಅಸ್ಸಾಂನ ಸರ್ಕಾರಗಳಲ್ಲಿ ಅಲ್ಪ ಸಂಖ್ಯಾತರ ಪ್ರತಿನಿಧಿಗಳ ಸ್ಥಾನ ಕಲ್ಪಿಸಲು, ಎರಡು ರಾಷ್ಟ್ರಗಳೂ ಒಪ್ಪಿದುವು. ಆದರೆ ಆ ಒಪ್ಪಂದದ ಮೂಲಕ ಸರ್ಕಾರವು ಅಲ್ಪ ಸಂಖ್ಯಾತರ ಓಲೈಕೆ ಮಾಡುತ್ತಿದೆ – ಎಂದು ಆಪಾದಿಸಿ ಮಂತ್ರಿಗಳಾದ ಶ್ಯಾಂಪ್ರಸಾದ್ ಮುಖರ್ಜಿ ಮತ್ತು ಕೆ.ಸಿ. ನಿಯೋಗಿಯವರು ತಮ್ಮ ಮಂತ್ರಿ ಸ್ಥಾನಗಳಿಗೆ ರಾಜಿನಾಮೆ ಇತ್ತರು. ಮುಖರ್ಜಿಯವರು ಪಶ್ಚಿಮ ಬಂಗಾಳಕ್ಕೆ ಬಂದಾಗ ಅವರಿಗೆ ಭಾರಿ ಸ್ವಾಗತ ದೊರೆಯಿತು. ಇಡೀ ಬಂಗಾಳ ಆ ಒಪ್ಪಂದವನ್ನು ವಿರೋಧಿಸಿತು. ನೆಹರು ತೊಂದರೆಗೆ ಸಿಲುಕಿದರು. ಅವರು ರಾಜಿನಾಮೆ ಕೊಡಲೂ ಆಲೋಚಿಸಿದರು. ಆಗ ಪಟೇಲರು ನೆಹರೂರವರ ಬೆಂಬಲಕ್ಕೆ ನಿಂತರು. ಅವರು ದೇಶದ ಹಿತದೃಷ್ಟಿಯಿಂದ ನೆಹರುಗೆ ಬೆಂಬಲವಾಗಿ ಸದಾ ಇರುವುದಾಗಿ ಗಾಂಧೀಜಿಗೆ ಮಾತು ಕೊಟ್ಟಿದ್ದರು. ಆ ಮಾತನ್ನು ಅವರು ಪಾಲಿಸಿದರು.

ಅಷ್ಟು ಹೊತ್ತಿಗೆ ಲಾರ್ಡ್ ಮೌಂಟ್‌ಬ್ಯಾಟನ್‌ರವರು ಸಹ ಪಟೇಲರ ಸಹಾಯವನ್ನು ಕೋರಿದರು. ಅವರು ಏಪ್ರಿಲ್ ೧೬ರಂದು ಪಟೇಲರಿಗೆ ಪತ್ರ ಬರೆದರು:

> ನೀವು ಬಹಳ ವರ್ಷಗಳಿಂದ ಭಾರತದ ಬಲಶಾಲಿ ವ್ಯಕ್ತಿ ಆಗಿದ್ದೀರಿ. ನಿಮ್ಮ ಬೆಂಬಲವಿದ್ದರೆ ಜವಹರಲಾಲ್ ನೆಹರು ವಿಫಲರಾಗಲಾರರು. ನೀವು ಮನಸ್ಸು ಮಾಡಿದಾಗ ನಿಮಗೆ ಎದುರಾಗಿ ನಿಲ್ಲುವ ವ್ಯಕ್ತಿ ಈ ದೇಶದಲ್ಲಿ ಯಾರೂ ಇಲ್ಲ ಎಂದು ನಾನು ನಂಬಿದ್ದೇನೆ. ಆದದ್ದರಿಂದ ಅವರಿಗೆ ಬೆಂಬಲ ನೀಡಲು ನಿಮಗಿರುವ ಸ್ಥಾನವು ಅಂತರರಾಷ್ಟ್ರೀಯವಾಗಿ ಅತ್ಯಂತ ಮುಖ್ಯವಾದುದು.[೫]

ಮೊದಲು, ಸರ್ದಾರರು ಸಂಸತ್ತಿನ ಸದಸ್ಯರಿಗೆ ಕಳಕಳಿಯ ಮನವಿ ಮಾಡಿದರು. ಒಪ್ಪಂದವನ್ನು ಯಶಸ್ವಿಗೊಳಿಸುವುದಕ್ಕೆ ಮತ್ತು ಪ್ರಧಾನಮಂತ್ರಿಯ ನಿಲುವನ್ನು ಸಮರ್ಥಿಸುವುದಕ್ಕೆ ತಮ್ಮೆಲ್ಲ ಶಕ್ತಿಯನ್ನು ಬಳಸುವುದಾಗಿ ಅವರು ಪ್ರತಿಜ್ಞೆ ಮಾಡಿದರು. ದೇಶಭಕ್ತಿಯ ಹೆಸರಿನಲ್ಲಿ ಎಲ್ಲಾ ಸಂಸದರು ಸಹ ಅದೇ

ರೀತಿ ಮಾಡಬೇಕೆಂದು ಮನವಿ ಮಾಡಿದರು. ನಂತರ ಅವರು ಏಪ್ರಿಲ್ ೧೬ರಂದು ೫ ದಿನಗಳ ಭೇಟಿಗಾಗಿ ಕಲ್ಕತ್ತಕ್ಕೆ ಪ್ರಯಾಣ ಮಾಡಿದರು. ಅಲ್ಲಿ ಪತ್ರಿಕಾ ಸಂಪಾದಕರು, ಪಶ್ಚಿಮ ಬಂಗಾಳದ ಮಂತ್ರಿ ಮಂಡಲ, ಪ್ರದೇಶ ಕಾಂಗ್ರೆಸ್ ಸಮಿತಿ ಸದಸ್ಯರು, ಶಾಸನ ಸಭಾ ಸದಸ್ಯರು, ಹಿಂದೂ ಮಹಾಸಭಾ ನಾಯಕರು, ಕಾಂಗ್ರೆಸ್ಸಿನ ಮುಸ್ಲಿಂ ನಾಯಕರು, ವಿದ್ಯಾರ್ಥಿಗಳು, ನಿರಾಶ್ರಿತರು ಮತ್ತು ಅಸ್ಸಾಂನ ಒಂದು ನಿಯೋಗವನ್ನು ಭೇಟಿ ಮಾಡಿ ಒಪ್ಪಂದವನ್ನು ನೇರವಾಗಿ ನಿರಾಕರಿಸದೆ ಅದನ್ನು ಜಾರಿಗೆ ತಂದು ಅದರ ಸಾಧಕ – ಬಾಧಕಗಳನ್ನು ಪರೀಕ್ಷಿಸಬೇಕೆಂದು ಕೋರಿದರು.

ಕಲ್ಕತ್ತದಲ್ಲಿ ೧೬ನೆ ತಾರೀಖಿನಂದೇ ನಡೆಸಿದ, ಪತ್ರಿಕಾಗೋಷ್ಠಿಯಲ್ಲಿ ಪಟೇಲರು ಒಪ್ಪಂದವನ್ನು 'ಭಾರತದ ಮತ್ತು ಬಂಗಾಳದ ಜನರ ಪರವಾಗಿ ನೀಡಿದ ಒಂದು ಪವಿತ್ರ ವಚನ' ಎಂದು ವರ್ಣಿಸಿ, 'ಅದನ್ನು ಅನುಷ್ಠಾನಕ್ಕೆ ತರಲು ಪ್ರಾಮಾಣಿಕ ಪ್ರಯತ್ನ ಮಾಡುವುದು ನಮ್ಮ ಆದ್ಯ ಕರ್ತವ್ಯ ಮತ್ತು ಜವಾಬ್ದಾರಿ,' ಎಂದರು. "ಅದನ್ನು ನಾವು, ದೇವರು ಮತ್ತು ಜನರ ಮುಂದೆ ನಿಂತು 'ನಾವು ನಮ್ಮ ಕರ್ತವ್ಯವನ್ನು ನೆರವೇರಿಸಿದ್ದೇವೆ' ಎಂದು ಹೇಳಲು ಶಕ್ತರಾಗುವ ರೀತಿಯಲ್ಲಿ ನೆರವೇರಿಸಬೇಕು" ಎಂದು ಸಹ ನುಡಿದರು. ಅವರ ಈ ಮಾತು ಎಲ್ಲರ ಮೇಲೂ ಭಾರಿ ಪರಿಣಾಮ ಬೀರಿತು.

ಪಟೇಲರು ಆಡಿದ ಇತರ ಮಾತುಗಳು:

> ನೆಹರು ಮತ್ತು ನಾನು, ಬಂಗಾಳದ ಸಂಕಟಗಳ ಬಗೆಗೆ ಅನೇಕ ಆತಂಕದ ಹಗಲು ಮತ್ತು ರಾತ್ರಿಗಳನ್ನು ಕಳೆದಿದ್ದೇವೆ. .....ಬಂಗಾಳ ಅಳಿದರೆ, ಭಾರತವು ಅಳಿಯುತ್ತದೆ ಮತ್ತು ಬಂಗಾಳವಿಲ್ಲದೆ ಭಾರತ ಬದುಕಲಾರದು – ಎನ್ನುವುದನ್ನು ನಾವು ಅರಿತಿದ್ದೇವೆ. ಈ ಭಾವನೆಯಿಂದ ಮತ್ತು ಬಂಗಾಳಕ್ಕೆ ನಮ್ಮ ಕರ್ತವ್ಯವನ್ನು ಪೂರ್ಣವಾಗಿ ಗ್ರಹಿಸಿ ನಾವು ಈ ಒಪ್ಪಂದವನ್ನು ಮಾಡಿಕೊಂಡಿದ್ದೇವೆ..... ಈ ಮನೋಭಾವದಿಂದ ಒಪ್ಪಂದದ ಪರಿಣಾಮಗಳನ್ನು ನೀವು ಪರಿಗಣಿಸಬೇಕೆಂದು ನಾನು ಬಯಸುತ್ತೇನೆ. ಪಾಕಿಸ್ತಾನದ ಪ್ರತಿಜ್ಞಾ ವಚನವನ್ನು ನಂಬುವುದು ನನಗೂ ಕಷ್ಟವಾಯಿತು. ಆದರೆ ಪಾಕಿಸ್ತಾನದ ಪ್ರಧಾನಮಂತ್ರಿಯೊಡನೆ ಮಾತನಾಡಿದ ಮೇಲೆ, ಅವರ ಮಾತಿನ ಹಿಂದೆ ಬೇರೆಯ ಮನೋಭಾವವಿದೆ, ನಾವು, ಎರಡು ರಾಷ್ಟ್ರಗಳನ್ನು ಹಾಳುಗೆಡಹುವ ಒಂದು ಭಾರಿ ಅನಾಹುತವನ್ನು ತಡೆಗಟ್ಟಬೇಕಾದರೆ ಈ

> ಒಪ್ಪಂದವನ್ನು ಮಾಡಿಕೊಳ್ಳಬೇಕು ಅನ್ನುವ ತೀರ್ಮಾನಕ್ಕೆ ಬಂದೆ. ಈ ಒಂದು ಕೊನೆಯ ಅವಕಾಶವನ್ನು ತೆಗೆದುಕೊಂಡು ನೋಡೋಣ – ಎಂದು ಆಲೋಚಿಸಿದೆ.[೬]

ಪತ್ರಿಕಾಗೋಷ್ಠಿಯ ಆರಂಭದಲ್ಲಿ ಎಲ್ಲರೂ ಒಪ್ಪಂದಕ್ಕೆ ಭಾರಿ ವಿರೋಧಿಗಳಾಗಿದ್ದರು. ಅವರಿಗೆ ಪಾಕಿಸ್ತಾನದ ಮಾತಿನಲ್ಲಿ ಸ್ವಲ್ಪವೂ ನಂಬಿಕೆ ಇರಲಿಲ್ಲ. ಪತ್ರಿಕಾಗೋಷ್ಠಿ ಮುಗಿಯುವ ಹೊತ್ತಿಗೆ ಇಬ್ಬರು ಹೊರತು ಮಿಕ್ಕವರು ಬದಲಾಗಿದ್ದರು. ಪಟೇಲರು ಆ ವಿಷಯವನ್ನು ನೆಹರುಗೆ ಪತ್ರ ಬರೆದು ತಿಳಿಸಿದರು.

ಪಟೇಲರು ಏಪ್ರಿಲ್ ೨೧ರಂದು ಕಲ್ಕತ್ತದ ಆಲ್-ಇಂಡಿಯಾ-ರೇಡಿಯೊ ಮೂಲಕ ಭಾಷಣ ಮಾಡಿ 'ಪಾಕಿಸ್ತಾನದೊಡನೆ ನಮ್ಮ ಸಂಬಂಧವನ್ನು ದುರಾದೃಷ್ಟವ ಶಾತ್ ಕೆಡಿಸಿರುವ ಹಿಂದಿನ ಗಾಯಗಳನ್ನು ವಾಸಿಮಾಡುವ ಮತ್ತು ತಪ್ಪು ತಿಳುವಳಿಕೆ ಹಾಗೂ ಕಹಿ ಭಾವನೆಯ ರೀತಿಯನ್ನು ಹೋಗಲಾಡಿಸುವ ವಿಶಾಲ ಹೃದಯದ ಈ ಪ್ರಯತ್ನಕ್ಕೆ ಜನರ ಸಹಕಾರವನ್ನು ಕೋರಿದರು:

ಜವಹರ್ ಲಾಲ್ ನೆಹರು ಪಟೇಲರ ಪಾತ್ರವನ್ನು ಮೆಚ್ಚುಗೆಯಿಂದ ಸಾರ್ವಜನಿಕವಾಗಿ ಸ್ಮರಿಸಿದರು. ಅವರೆಂದರು:

> ವಿಷಮ ಮತ್ತು ಕಷ್ಟದ ಕ್ಷಣದಲ್ಲಿ ಅವರು ಮಾಡಿರುವ ಎಲ್ಲಾ ಕಾರ್ಯಗಳಿಗೆ ನಾನು ಭಾರಿ ಕೃತಜ್ಞನಾಗಿದ್ದೇನೆ. ಒಪ್ಪಂದದ ಪೂರ್ಣ ಅನುಷ್ಠಾನಕ್ಕೆ ಅವರಷ್ಟು ಶ್ರಮಿಸಿದವರು ಮತ್ತೊಬ್ಬರಿಲ್ಲ.[೭]

❖ ◆ ❖

ನೆಹರು, ರಾಜಾಜಿ ಮತ್ತು ಪಟೇಲ್

೨೫. ಟಿಬೆಟ್ ಮತ್ತು ಚೀನಾ ಪ್ರಸಂಗ

ಪಟೇಲರು ತಮ್ಮ ಖಾತೆ ಬಿಟ್ಟು ಇತರ ಖಾತೆಗಳ ವ್ಯವಹಾರದಲ್ಲಿ ಮೂಗು ತೂರಿಸುತ್ತಿರಲಿಲ್ಲ. ಆದರೆ ಸದಾ ಎಚ್ಚರಿಕೆಯಿಂದ ಇದ್ದು ಎಲ್ಲೆಡೆ ನಡೆಯುವ ಬೆಳವಣಿಗೆಗಳನ್ನು ಗಮನಿಸಿ, ನಮ್ಮ ದೇಶದ ಹಿತಕ್ಕೆ ಆವಶ್ಯಕವಿದ್ದರೆ ಪ್ರಧಾನಿ ನೆಹರುವಿಗೆ ಸಲಹೆ ನೀಡುತ್ತಿದ್ದರು. ಅವರ ಪ್ರಧಾನ ಗಮನ ನಮ್ಮ ದೇಶದ ಹಿತದ ಕಡೆಗೆ. ಅದಕ್ಕಾಗಿಯೇ ಅಪರಿಮಿತ ಎಚ್ಚರ!

ಕಮ್ಯುನಿಸ್ಟರು ಚೀನಾ ದೇಶವನ್ನು ಸಂಪೂರ್ಣವಾಗಿ ಆವರಿಸಿಕೊಳ್ಳುವುದಕ್ಕೆ ಮುಂಚೆಯೆ ೧೯೪೯ರ ಜೂನ್ ೪ ರಂದು ಪಟೇಲರು ನೆಹರುಗೆ ಪತ್ರ ಬರೆದು ಟಿಬೆಟ್ ಬಗೆಗೆ ಎಚ್ಚರಿಸಿದ್ದರು; ಅದಕ್ಕೊಂದು ಕಾರಣವೂ ಇತ್ತು. ಚೀನಾದಲ್ಲಿ ಮಾವೋ ಬಲಗೊಳ್ಳುತ್ತಿರುವುದರಿಂದ ಹಾಂಗ್‌ಕಾಂಗ್ ಎದುರಿಸಬೇಕಾಗಿ ಬಂದ ಕಷ್ಟಗಳನ್ನು ಕುರಿತು ಬ್ರಿಟನ್ ಪ್ರಧಾನಿ ಕ್ಲೆಮೆಂಟ್ ಆಟ್ಲಿಯವರು ನೆಹರುಗೆ ಒಂದು ಪತ್ರ ಬರೆದಿದ್ದರು. ಅದನ್ನು ನೆಹರು ಸರ್ದಾರರ ಗಮನಕ್ಕೆ ತಂದಿದ್ದರು. ಹಾಂಗ್‌ಕಾಂಗ್ ಆಗ ಬ್ರಿಟನ್‌ನ ಕಾಲೋನಿಯಾಗಿತ್ತು.

ಪಟೇಲರು, ನೆಹರುಗೆ ಬರೆದ ತಮ್ಮ ಜೂನ್ ೪, ೧೯೪೯ರ ಪತ್ರದಲ್ಲಿ ಹೀಗೆ ಹೇಳಿದ್ದರು:

> ಸಿಕ್ಕಿಂ ಹಾಗೂ ಟಿಬೆಟ್‌ನಲ್ಲಿ ನಾವು ನಮ್ಮ ಸ್ಥಾನವನ್ನು ಬಲಪಡಿಸಿಕೊಳ್ಳಬೇಕು. ಕಮ್ಯುನಿಸ್ಟ್ ಶಕ್ತಿಯನ್ನು ನಾವು ದೂರವಿಟ್ಟಷ್ಟೂ ಒಳ್ಳೆಯದು. ಬಹಳ ಕಾಲದಿಂದ ಟಿಬೆಟ್ಟು

ಚೀನಾದಿಂದ ಬೇರೆಯಾಗಿದೆ. ಕಮ್ಯುನಿಸ್ಟರು ಚೀನದ ಇತರ ಭಾಗಗಳಲ್ಲಿ ಬೇರೂರಿದ ತಕ್ಷಣ ಟಿಬೆಟ್‌ನ ಸ್ವತಂತ್ರ ಅಸ್ತಿತ್ವವನ್ನು ನಾಶಪಡಿಸಲು ಯತ್ನಿಸುತ್ತಾರೆಂದು ನಾನು ನಿರೀಕ್ಷಿಸಿದ್ದೇನೆ. ಅಂತಹ ಸಂದರ್ಭದಲ್ಲಿ ನೀವು ಟಿಬೆಟ್ ಬಗೆಗೆ ನಿಮ್ಮ ನೀತಿಯನ್ನು ಎಚ್ಚರಿಕೆಯಿಂದ ಪರಿಶೀಲಿಸಬೇಕಾಗುತ್ತದೆ. ಅಂತಹ ಅನಿವಾರ್ಯತೆಗೆ ನಾವು ಈಗಿನಿಂದಲೇ ಸಿದ್ಧವಾಗಬೇಕು.

ಆಟ್ಲಿಯವರು ನಿಮಗೆ ಬರೆದ ಪತ್ರದ ಬಗೆಗೆ, ನಿಮ್ಮ ಉತ್ತರದ ಕರಡನ್ನು, ಅದನ್ನು ಲಂಡನ್‌ಗೆ ಕಳುಹಿಸುವುದಕ್ಕೆ ಮುನ್ನ, ನೀವು ನನಗೆ ಕಳುಹಿಸಬಹುದು. ನಾನು ನಿಮಗೆ ಕೆಲವು ಉಪಯುಕ್ತ ಸಲಹೆಗಳನ್ನು ಕೊಡಲು ಸಾಧ್ಯವಾಗಬಹುದು..... ಸಮಸ್ಯೆ ಬಹಳ ಕಠಿಣವಾದುದು. ಒಂದು ಕಡೆ ಖಂಡಿತವಾಗಿ ಹಾಂಕ್‌ಕಾಂಗ್‌ನ ಸಾಮ್ರಾಜ್ಯಶಾಹಿ ಚರಿತ್ರೆ ಇದೆ. ಮತ್ತೊಂದು ಕಡೆ ಚೀನಾದಲ್ಲಿ ಬೆಳೆಯುತ್ತಿರುವ ಕಮ್ಯುನಿಸ್ಟ್ ಉಪದ್ರವವನ್ನು ನಾವು ಗಮನಿಸಬೇಕು!

(ಪಟೇಲರು ಚೆನ್ನಾಗಿ ಬರೆದಿದ್ದಾರೆ! ನೆಹರುಗೆ ಕಮ್ಯುನಿಸ್ಟ್ ರಷ್ಯ ಮತ್ತು ಕಮ್ಯುನಿಸ್ಟ್ ಚೀನಾ ಎಂದರೆ ಪಂಚಪ್ರಾಣ. ಅವರಿಗೇ ಕಮ್ಯುನಿಸಂ ಒಂದು ಉಪದ್ರವ ಎಂದು ಬರೆದಿದ್ದಾರೆ! ಎಂತಹ ವಿಪರ್ಯಾಸ! – ಲೇಖಕ)

೫ ಜೂನ್, ೧೯೫೦ರಂದು ನೆಹರು ಪಟೇಲರಿಗೆ ಹೀಗೆ ಉತ್ತರಿಸಿದರು:

ಹಾಂಗ್‌ಕಾಂಗ್ ಬಗೆಗೆ ಆಟ್ಲಿಯವರಿಗೆ ಜವಾಬನ್ನು ಈಗಾಗಲೇ ಕಳುಹಿಸಿಯಾಗಿದೆ..... ಅದನ್ನು ನಿಮಗೆ ಖಂಡಿತ ಕಳುಹಿಸುತ್ತೇನೆ. ಈ ಮಧ್ಯೆ, ಚೀನದಲ್ಲಿ ಕಮ್ಯುನಿಸ್ಟರು ವಿದೇಶಿಯರ ಬಗೆಗೆ ಬಹಳ ಸರಿಯಾಗಿ ನಡೆದುಕೊಳ್ಳುತ್ತಿದ್ದಾರೆ. ವಾಣಿಜ್ಯವೂ ಸಹ ಸ್ವಲ್ಪ ಮಟ್ಟಿಗೆ ಮುಂದುವರೆದಿದೆ.

ಟಿಬೆಟ್ ಬಗೆಗೆ ಸರ್ದಾರರ ಸಲಹೆಯನ್ನು ನೆಹರು ಕಡೆಗಣಿಸಿದರು.

ಆರು ತಿಂಗಳ ನಂತರ ೬, ಡಿಸೆಂಬರ್ ೧೯೫೦ರಂದು ಪಟೇಲರು ನೆಹರುಗೆ ಹೀಗೆ ಬರೆದರು, ಅಷ್ಟು ಹೊತ್ತಿಗೆ ಸಂಪೂರ್ಣ ಚೀನದಲ್ಲಿ ಕಮ್ಯುನಿಸ್ಟ್ ಸರ್ಕಾರ ಸ್ಥಾಪಿತವಾಗಿತ್ತು :

ವಿಶ್ವಸಂಸ್ಥೆಯ ಅಧಿವೇಶನ ಮುಕ್ತಾಯವಾದ ಕೂಡಲೇ, ಇತರ ದೇಶಗಳು ಚೀನವನ್ನು ಮಾನ್ಯ ಮಾಡಲು ಇನ್ನೂ ಸಿದ್ಧವಾಗಿಲ್ಲದಿದ್ದರೂ ಅಥವಾ ಮಾನ್ಯ ಮಾಡಲು ಸಿದ್ಧರಿಲ್ಲದಿದ್ದರೂ, ಚೀನಕ್ಕೆ ಮಾನ್ಯತೆ ನೀಡುವುದು ನಿಮ್ಮ ಉದ್ದೇಶ ಎಂದು ಕಾಣುತ್ತದೆ. ಇತರರಿಗಿಂತ ಮುಂಚೆ ಮಾನ್ಯತೆ ನೀಡುವುದರಿಂದ ನಮಗೆ ಲಾಭವೇನೂ ಇಲ್ಲ ಎನ್ನುವುದು ನನ್ನ ಭಾವನೆ.

ಆದಾಗ್ಯೂ, ನಾವು ಚೀನಾವನ್ನು ಇತರರಿಗಿಂತ ಮುಂಚೆ ಮಾನ್ಯ ಮಾಡಬೇಕೆಂದು ನಿಮಗೆ ಅನ್ನಿಸಿದರೆ, ಸಚಿವ ಸಂಪುಟ ಸಭೆಯಲ್ಲಿ ಅದನ್ನು ಚರ್ಚಿಸಬಹುದು.

೬, ಡಿಸೆಂಬರ್ ೪೯ರಂದೇ ನೆಹರು ಪಟೇಲರಿಗೆ ಉತ್ತರಿಸಿದರು:

ಚೀನಾವನ್ನು ಕಾಮನ್‌ವೆಲ್ತ್ ಮಾನ್ಯ ಮಾಡಿದ ಮೇಲೆ ನಾವು ಮಾನ್ಯ ಮಾಡುವುದು ಖಂಡಿತವಾಗಿಯು ಅಪಾಯಕಾರಿ ಎನ್ನುವುದು ನಮ್ಮ ಸಲಹೆಗಾರರ ಅಭಿಪ್ರಾಯ..... ನಾವು ಹಾಗೆ ಮಾಡಿದರೆ, ನಮಗೆ ಒಂದು ಸ್ವಂತ ನೀತಿಯಿಲ್ಲ, ಇತರರು ಮಾಡಿದ್ದನ್ನು ಅನುಕರಿಸುತ್ತೇವೆ ಅನ್ನುವ ಅಭಿಪ್ರಾಯ ಉಂಟಾಗುತ್ತದೆ. ನೀವು ಬಯಸಿದರೆ, ಅದನ್ನು ಸಚಿವ ಸಂಪುಟದ ಮುಂದೆ ಇಡುತ್ತೇನೆ. ಆದರೆ ಮಾನ್ಯತೆ ನೀಡುವ ದಿನಾಂಕವನ್ನು ನನ್ನ ನಿರ್ಧಾರಕ್ಕೆ ಬಿಡಬೇಕು.

ಭಾರತವನ್ನಾಳುತ್ತಿದ್ದ ಬ್ರಿಟಿಷ್ ಸರ್ಕಾರವು ಟಿಬೆಟ್ ಒಡನೆ ಮಾಡಿಕೊಂಡ ಒಪ್ಪಂದದಿಂದ ಟಿಬೆಟ್ ಮತ್ತು ಭಾರತದ ನಡುವಣ ಗಡಿ ರೇಖೆಯು ನಿರ್ಧಾರವಾಗಿತ್ತು. ಟಿಬೆಟ್ ಅನೇಕ ಶತಮಾನಗಳಿಂದ ಸ್ವತಂತ್ರ ಘಟಕವಾಗಿ ವ್ಯವಹರಿಸುತ್ತಿತ್ತು. ಭಾರತ ಮತ್ತು ಟಿಬೆಟ್ ನಡುವೆ ಒಂದು ವಾಣಿಜ್ಯ ಒಪ್ಪಂದವಿತ್ತು. ಅದರಂತೆ ವಾಣಿಜ್ಯ ವ್ಯವಹಾರ ನಡೆಯುತ್ತಿತ್ತು. ಟಿಬೆಟ್‌ನಲ್ಲಿ ಭಾರತಕ್ಕೆ ಒಂದು ವಿಶೇಷ ರಾಜತಾಂತ್ರಿಕ ಸ್ಥಾನವಿತ್ತು. ಟಿಬೆಟ್‌ನ ವಿಸ್ತಾರ, ಎತ್ತರ ಮತ್ತು ಸ್ವತಂತ್ರ ಸ್ಥಾನವು ಉತ್ತರಭಾಗದಲ್ಲಿ ಒಂದು ಸುರಕ್ಷತಾ ಭಾವನೆಯನ್ನು ಭಾರತಕ್ಕೆ ನೀಡಿತ್ತು. ಆದಾಗ್ಯೂ ಒಂದು ಆತಂಕ ಇದ್ದೇ ಇತ್ತು. ಚೀನಾ ತನಗೆ ಟಿಬೆಟ್ ಮೇಲೆ ಅಧಿಕಾರವಿದೆ ಎಂದು ಹೇಳುತ್ತಲೇ ಇತ್ತು. ಆದರೆ ಅದು ಅಸ್ಪಷ್ಟವಾಗಿತ್ತು. ಬಹಳ ದೀರ್ಘಕಾಲದಿಂದ ಟಿಬೆಟ್ ಬಗೆಗೆ ಚೀನಾ ನಿರಾಸಕ್ತಿಯನ್ನು ತೋರುತ್ತಾ ಬಂದಿತ್ತು. ೧೯೪೯ರಲ್ಲಿ

ಚೀನಾದಲ್ಲಿ ಬಲಶಾಲಿ ಮತ್ತು ಜೋರತ್ತಿನ ಸ್ವಭಾವದ ನಾಯಕರು ಅಧಿಕಾರಕ್ಕೆ ಬಂದರು. ಅದರಿಂದ ಪಟೇಲರಿಗೆ ಆತಂಕ ಉಂಟಾಯಿತು. ಅದರಿಂದಲೇ ಅವರು ನೆಹರುವನ್ನು ಎಚ್ಚರಿಸಿದ್ದು. ಟಿಬೆಟ್‌ಅನ್ನು ಚೀನಾ ಆಕ್ರಮಿಸಿಕೊಳ್ಳದಂತೆ ಎಚ್ಚರಿಕೆ ವಹಿಸಬೇಕು, ಅದಕ್ಕಾಗಿ ಅಮೆರಿಕ ಮತ್ತು ಬ್ರಿಟನ್‌ನ ಸಹಾಯವನ್ನು ತೆಗೆದುಕೊಳ್ಳುವುದು ತಪ್ಪಲ್ಲ – ಎನ್ನುವುದು ಅವರ ಅಭಿಪ್ರಾಯವಾಗಿತ್ತು.

ಆದರೆ ನೆಹರುಗೆ ಯಾವ ಆತಂಕವೂ ಇರಲಿಲ್ಲ. ಅವರಿಗೆ ನವ ಚೀನಾ ನಾಯಕರಾದ ಮಾವೊ ತ್ಸೆ ತುಂಗ್ ಮತ್ತು ಚೌ ಎನ್ ಲಾಯ್ ಮೇಲೆ ಭಾರಿ ಪ್ರೀತಿ ಹಾಗೂ ವಿಶ್ವಾಸವಿತ್ತು. ಕಮ್ಯುನಿಸ್ಟ್ ಚೀನಾಕ್ಕೆ ಅಮೆರಿಕ ಸಂಯುಕ್ತ ಸಂಸ್ಥಾನ ಮತ್ತು ಐರೋಪ್ಯ ರಾಷ್ಟ್ರಗಳು ಮಾನ್ಯತೆ ನೀಡಿರಲಿಲ್ಲ. ವಿಶ್ವಸಂಸ್ಥೆಯಲ್ಲಿ ಸದಸ್ಯತ್ವವನ್ನೂ ನೀಡಿರಲಿಲ್ಲ. ನೆಹರುರವರು ಚೀನಾ ಮತ್ತು ಪಶ್ಚಿಮದ ನಡುವೆ ಸ್ನೇಹವನ್ನು ಕುದುರಿಸಲು ಮತ್ತು ವಿಶ್ವಸಂಸ್ಥೆಯ ಸದಸ್ಯತ್ವವನ್ನು ಚೀನಾಕ್ಕೆ ದೊರಕಿಸಲು ಶ್ರಮಿಸುತ್ತಿದ್ದರು. ಅದರಿಂದ ಅವರಿಗೆ ಬರಲಿರುವ ಅಪಾಯದ ಅರಿವು ಸ್ವಲ್ಪವೂ ಇರಲಿಲ್ಲ.

೧೯೫೦ರ ಆಗಸ್ಟ್‌ನಲ್ಲಿ ಚೀನಾದಿಂದ ಭಾರತಕ್ಕೆ ಒಂದು ಟಿಪ್ಪಣಿ ಬಂದಿತು. ಚೀನಾ, ತಾನು ಶಾಂತಿ ಮತ್ತು ಸ್ನೇಹ ಮಾರ್ಗದಿಂದ ಟಿಬೆಟನ್ನು ಬಿಡುಗಡೆಗೊಳಿಸುವುದಾಗಿ ಬರೆದಿತ್ತು. ಅದರಿಂದ ನೆಹರುಗೆ ಖುಷಿಯಾಯಿತು. ೧೯೫೦ರ ಸೆಪ್ಟೆಂಬರ್‌ನಲ್ಲಿ ಅಮೆರಿಕದಲ್ಲಿ ಭಾರತದ ರಾಯಭಾರಿ ತಮ್ಮ ತಂಗಿ ವಿಜಯಲಕ್ಷ್ಮಿ ಪಂಡಿತ್‌ಗೆ 'ಚೀನಾ ನಮ್ಮ ಮಾತನ್ನು ಕೇಳುತ್ತಿದೆ' ಎಂದು ಬರೆದರು.

ಒಂದು ತಿಂಗಳ ನಂತರ ಚೈನಾ ಟಿಬೆಟ್‌ನ ಬಿಡುಗಡೆಗೆ ಸೈನಿಕ ಕಾರ್ಯಾಚರಣೆಯನ್ನು ಪ್ರಕಟಿಸಿತು. ಭಾರತದ ವಿಷಾದ ಮತ್ತು ವಿಸ್ಮಯವನ್ನು ವ್ಯಕ್ತಪಡಿಸುವ ಒಂದು ಸಹಿರಹಿತ ಟಿಪ್ಪಣಿಯನ್ನು ಚೀನಾದಲ್ಲಿ ಭಾರತದ ರಾಯಭಾರಿ ಪಣಿಕ್ಕರ್‌ರವರು ಚೀನಾ ವಿದೇಶಿ ವ್ಯವಹಾರ ಕಛೇರಿಗೆ ನೀಡಿದರು. ಅದಕ್ಕೆ ಪ್ರತಿಕ್ರಿಯೆಯಾಗಿ ಚೀನಾ, 'ಭಾರತದ ಟಿಪ್ಪಣಿಯು ಟಿಬೆಟ್‌ನಲ್ಲಿರುವ ಚೀನಾ ವಿರೋಧಿ ಪ್ರಭಾವಗಳಿಂದ ಪ್ರೇರಿತವಾಗಿದೆ' ಎಂದಿತು.

ಆಗಲೂ ನೆಹರು ಎಚ್ಚೆತ್ತುಕೊಳ್ಳಲಿಲ್ಲ. "ಚೀನಾದೊಡನೆ ಸ್ನೇಹ ಸಂಬಂಧ ನಮ್ಮ ನೀತಿಯ ಮೂಲಾಧಾರ," ಎಂದರು ಅವರು.

೧೯೫೦ರ ಅಕ್ಟೋಬರ್ ಅಂತ್ಯದ ಹೊತ್ತಿಗೆ, ಟಿಬೆಟ್ ಭಾರತದ ರಾಜತಾಂತ್ರಿಕ ಸಹಾಯವನ್ನು ಕೋರಿತು. ನೆಹರುರವರು, 'ಟಿಬೆಟ್‌ನ ಚಿತ್ರ ಅಸ್ಪಷ್ಟವಾಗಿದೆ'

ಎಂದರು. ಅವರು, ಕಮ್ಯುನಿಸ್ಟ್ ಚೀನಾ ವಿರುದ್ಧ ಟಿಬೆಟ್‌ನಲ್ಲಿ ನಡೆಯುತ್ತಿರುವ ಪಿತೂರಿಯ ಬಗೆಗೆ, ಅದು ಎಷ್ಟೇ ನಿರಾಧಾರವಾಗಿದ್ದರೂ ಕೂಡ, ಚೀನಾ ಮತ್ತು ರಷ್ಯಕ್ಕೆ ಇರುವ ಭಯವನ್ನು ನಾವು ಅರ್ಥಮಾಡಿಕೊಳ್ಳಬೇಕು ಎಂದರು. ಟಿಬೆಟ್‌ನ ಜನಾಂಗ ಬೌದ್ಧ ಮತೀಯರು. ಅವರ ಆಧ್ಯಾತ್ಮಿಕ ಮತ್ತು ಐಹಿಕ ಅಧಿಪತಿ ದಲೈಲಾಮ. ಅಂದು ದಲೈಲಾಮ ಆಗಿದ್ದವರಿಗೆ ೧೫ ವರ್ಷ ವಯಸ್ಸು. ಅಕ್ಟೋಬರ್ ೩೧, ಪಟೇಲರ ಹುಟ್ಟುಹಬ್ಬದ ದಿನ. ಅಂದು ಅವರು ಅಹಮದಾಬಾದ್‌ನಲ್ಲಿ ಇದ್ದರು. ಅವರು ಸಾರ್ವಜನಿಕ ಸಭೆಯಲ್ಲಿ ಚೀನಾ ಮೇಲೆ ಆಕ್ರಮಣದ ಆಪಾದನೆ ಹೊರೆಸಿದರು. ಟಿಬೆಟ್ಟನ್ನು ಒಂದು 'ದೇಶ' ಎಂದು ಕರೆದರು. ಅವರು ದೆಹಲಿಗೆ ವಾಪಸ್ಸು ಬಂದ ಮೇಲೆ ರಾಜಾಜಿಯವರು ನೆಹರುರವರ ಚೀನಾ ನೀತಿಯನ್ನು ಸಚಿವ ಸಂಪುಟದ ಸಭೆಯಲ್ಲಿ ಟೀಕಿಸಿದ ವಿಷಯ ತಿಳಿಯಿತು. ಆ ವೇಳೆಗೆ ರಾಜಾಜಿಯವರು ಖಾತೆರಹಿತ ಮಂತ್ರಿಯಗಿ ಮಂತ್ರಿ ಮಂಡಲ ಸೇರಿದ್ದರು.

ನವೆಂಬರ್ ೪ರಂದು ಸಮಾಚಾರ ಪತ್ರಿಕೆಗಳು ಟಿಬೆಟ್ಟನ್ನು ಚೀನ ವಶಪಡಿಸಿ ಕೊಂಡಿರುವ ಸುದ್ದಿಯನ್ನು ಪ್ರಕಟಿಸಿದುವು. (ಅದು ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರ ಬಿಟ್ಟಂತೆ ಆಯಿತು – ಲೇಖಕ) ಪಟೇಲರು, ಟಿಬೆಟ್ ಮತ್ತು ಚೀನದ ಬಗೆಗೆ ತಮ್ಮ ಅಭಿಪ್ರಾಯಗಳನ್ನು ದಾಖಲಿಸುವುದು ಸೂಕ್ತ ಎಂದು ಭಾವಿಸಿ, ನೆಹರುರವರಿಗೆ ಒಂದು ಪತ್ರವನ್ನು ೧೯೫೦ರ ನವೆಂಬರ್ ೭ರಂದು ಬರೆದರು:

> ವಿದೇಶಿ ವ್ಯವಹಾರಗಳ ಸಚಿವಾಲಯ ಮತ್ತು ಪೀಕಿಂಗ್‌ನಲ್ಲಿ ನಮ್ಮ ರಾಯಭಾರಿ ಮತ್ತು ಅವರ ಮೂಲಕ ಚೀನಾ ಸರ್ಕಾರದ ನಡುವಣ ಪತ್ರ ವ್ಯವಹಾರವನ್ನು ನಾನು ಎಚ್ಚರಿಕೆಯಿಂದ ಓದಿದ್ದೇನೆ.
>
> ಚೀನಾ ಸರ್ಕಾರವು ಶಾಂತಿಯುತ ಉದ್ದೇಶಗಳನ್ನು ತೋರಿಸುವ ಮೂಲಕ ನಮ್ಮನ್ನು ವಂಚಿಸಲು ಪ್ರಯತ್ನಿಸುತ್ತಿದೆ. ಈ ಪತ್ರಗಳ ವಿನಿಮಯ ನಡೆದ ಅವಧಿಯಲ್ಲಿ ಚೀನಾ ಟಿಬೆಟ್‌ನ ಮೇಲೆ ಎರಗಲು ತನ್ನ ಗಮನವನ್ನು ಕೇಂದ್ರೀಕರಿಸಬೇಕು ಎನ್ನುವುದರಲ್ಲಿ ಅನುಮಾನವಿಲ್ಲ. ಅವರ ಅಂತಿಮ ಕಾರ್ಯಾಚರಣೆ ವಿಶ್ವಾಸಘಾತಕತನಕ್ಕೆ ಏನೂ ಕಡಿಮೆಯಲ್ಲ.
>
> ದುರಂತವೇನೆಂದರೆ ಟಿಬೆಟಿಯನ್ನರು ನಮ್ಮ ಮೇಲೆ ವಿಶ್ವಾಸ ಇಟ್ಟಿದ್ದರು ಮತ್ತು ನಮ್ಮ ಮಾರ್ಗದರ್ಶನದಲ್ಲಿ ನಡೆಯುವುದನ್ನು ಆಯ್ಕೆ ಮಾಡಿಕೊಂಡಿದ್ದರು. ಆದರೆ ನಾವು ಚೀನಾದ ವ್ಯವಹಾರ ತಂತ್ರ ಅಥವಾ ಪ್ರಭಾವದಿಂದ ಅವರನ್ನು ರಕ್ಷಿಸಲು ಅಶಕ್ತರಾದೆವು.

ಆಂಗ್ಲ – ಅಮೆರಿಕ ತಂತ್ರಗಾರಿಕೆಯಿಂದ ಚೀನಾಕ್ಕೆ ಅಪಾಯ ವಿತ್ತು ಅನ್ನುವುದನ್ನು ಪ್ರಜ್ಞಾವಂತರಾದವರು ಯಾರೂ ಊಹಿಸಲೂ ಸಾಧ್ಯವಿಲ್ಲ. ಇದರಲ್ಲಿ ಚೀನಿಯರು ನಂಬಿಕೆ ಇಟ್ಟಿದ್ದರೆ ಅವರು ನಮ್ಮನ್ನೂ ಅಪನಂಬಿಕೆಯಿಂದ ನೋಡುತ್ತಿರಬೇಕು. ಅವರು ನಮ್ಮನ್ನು ಆಂಗ್ಲೊ – ಅಮೆರಿಕನ್ ರಾಜತಾಂತ್ರಿಕತೆಯ ಉಪಕರಣ ಗಳು ಅಥವಾ ಕೈಗೊಂಬೆಗಳು ಎಂದು ಭಾವಿಸಿರಬೇಕು. ಅವರೊಡನೆ ನಿಮ್ಮ ನೇರ ಸಂಪರ್ಕದ ಹೊರತಾಗಿಯೂ, ಅವರು ಆ ರೀತಿ ನಿಜವಾಗಿಯೂ ಭಾವಿಸಿದ್ದರೆ, ಅದು, ನಾವು ನಮ್ಮನ್ನು ಚೀನಾದ ಸ್ನೇಹಿತರು ಎಂದು ಭಾವಿಸಿದ್ದರೂ ಸಹ ಚೀನಿಯರು ಮಾತ್ರ ನಮ್ಮನ್ನು ತಮ್ಮ ಸ್ನೇಹಿತರು ಎಂದು ಭಾವಿಸಿಲ್ಲ ಎಂಬುದನ್ನು ಸೂಚಿಸುತ್ತದೆ.

ಟಿಬೆಟ್ ನಮಗೆ ಸ್ನೇಹಿತನಾಗಿತ್ತು. ಅದು ನಮಗೆ ಯಾವ ತೊಂದರೆಯನ್ನೂ ಕೊಟ್ಟಿರಲಿಲ್ಲ. ಟಿಬೆಟ್ಟಿಯನ್ನರ ಸ್ವತಂತ್ರತೆಯ ಫಲವಾಗಿ ಅವರೊಡನೆ ಸ್ವತಂತ್ರ ಒಪ್ಪಂದಗಳನ್ನು ಮಾಡಿ ಕೊಂಡಿದ್ದೆವು..... ಚೀನಿಯರು ತಮಗೆ ಟಿಬೆಟ್ ಮೇಲೆ ಅಧಿಕಾರ ವಿದೆ ಎನ್ನುತ್ತಿರುವುದು (ನಮ್ಮ ಭಾವನೆಗಿಂತ) ಭಿನ್ನವಾಗಿದೆ. ಅದರಿಂದ, ನಾವು ಟಿಬೆಟ್ ಒಡನೆ ಹಿಂದೆ ಮಾಡಿಕೊಂಡಿರುವ ಎಲ್ಲಾ ಒಪ್ಪಂದಗಳನ್ನು ಚೀನಾ ನಿರಾಕರಿಸುತ್ತದೆ ಎಂದು ನಾವು ಊಹಿಸಬಹುದು. (ಗಡಿ ರೇಖೆಯ ಅಸ್ಪಷ್ಟತೆ ಮತ್ತು ನಮ್ಮ ಭಾಗ ದಲ್ಲಿರುವ ಜನ ಟಿಬೆಟಿಯನ್ನರೊಡನೆ ಅಥವಾ ಚೀನಿಯರೊಡನೆ ನಿಕಟ ಸಾಮ್ಯವನ್ನು ಹೊಂದಿರುವುದು ಚೀನ ಮತ್ತು ನಮ್ಮ ನಡುವೆ ವಿವಾದಗಳಿಗೆ ಕಾರಣವಾಗುವ ಸಾಧ್ಯತೆ ಇದೆ.)

ಅನೇಕ ಶತಮಾನಗಳ ನಂತರ ಮೊದಲಬಾರಿಗೆ ಭಾರತದ ರಕ್ಷಣಾ ಕಾರ್ಯ ಏಕಕಾಲದಲ್ಲಿ ಎರಡು ಕಡೆ ಕೇಂದ್ರೀಕೃತವಾಗ ಬೇಕಾಗಿದೆ..... ನನ್ನ ಲೆಕ್ಕಾಚಾರದಲ್ಲಿ, (ಪಾಕಿಸ್ತಾನವಲ್ಲದೆ) ಉತ್ತರ ಮತ್ತು ಈಶಾನ್ಯದಲ್ಲಿ ಕಮ್ಯುನಿಸ್ಟ್ ಚೀನವನ್ನು ಶತ್ರುವೆಂದು ಪರಿಗಣಿಸಬೇಕಾಗಿದೆ.

(ಪಟೇಲರ ಭವಿಷ್ಯವಾಣಿ ಮುಂದೆ ನಿಜವಾದದ್ದು ಎಲ್ಲರಿಗೂ ತಿಳಿದ ವಿಷಯ – ಲೇಖಕ)

ಪಟೇಲರು ಬರೇ ಸಮಸ್ಯೆಯನ್ನು ಮಾತ್ರ ತಮ್ಮ ಪತ್ರದಲ್ಲಿ ನಿರೂಪಿಸಲಿಲ್ಲ. ಅದರ ಪರಿಹಾರಕ್ಕೆ ತೆಗೆದುಕೊಳ್ಳಬೇಕಾದ ಕ್ರಮಗಳನ್ನೂ ಸಹ ಸೂಚಿಸಿದರು. ಅವು:

> ಚೀನಾ ದೇಶ ಒಡ್ಡಿರುವ ಅಪಾಯದ ಬಗೆಗೆ ಸೈನಿಕ ಮತ್ತು ಗುಪ್ತ ಮಾಹಿತಿ ಸಂಗ್ರಹಣೆಯ ಅವಶ್ಯಕತೆಯ ಅರಿವು. ದೀರ್ಘಾವಧಿ ರಕ್ಷಣಾ ಆವಶ್ಯಕತೆಗಳ ಆಲೋಚನೆ, ಚೀನಾವನ್ನು ವಿಶ್ವಸಂಸ್ಥೆಗೆ ಸೇರಿಸುವುದರ ಪುನರ್ವಿಮರ್ಶೆ, ನಮ್ಮ ಉತ್ತರ ಮತ್ತು ಈಶಾನ್ಯ ಗಡಿಯನ್ನು ಭದ್ರ ಪಡಿಸಲು ರಾಜಕೀಯ ಮತ್ತು ಆಡಳಿತಾತ್ಮಕ ಕ್ರಮಗಳು, ಗಡಿ ಭಾಗದಲ್ಲಿ ಆಂತರಿಕ ಭದ್ರತೆಗೆ ಕ್ರಮ, ಆ ಪ್ರದೇಶದಲ್ಲಿ ಮತ್ತು ಗಡಿ ರಾಜ್ಯಗಳಲ್ಲಿ ಸಂಪರ್ಕ ವ್ಯವಸ್ಥೆಯನ್ನು ಉತ್ತಮಪಡಿಸುವುದು ಮತ್ತು ಗಡಿ ಠಾಣೆಗಳ ಕಾವಲು ಮತ್ತು ಗುಪ್ತ ಮಾಹಿತಿ ಸಂಗ್ರಹ ವ್ಯವಸ್ಥೆಯನ್ನು ಬಲಪಡಿಸುವಿಕೆ.

ಪಟೇಲರು ಪತ್ರವನ್ನು ಮುಕ್ತಾಯ ಮಾಡುತ್ತಾ, 'ನಾವು ಶೀಘ್ರವಾಗಿ ಭೇಟಿಯಾಗೋಣ. ತಕ್ಷಣವೇ ಆಗಬೇಕಾದ ಕಾರ್ಯಗಳ ಬಗೆಗೆ ತೀರ್ಮಾನಿಸೋಣ' ಎಂದು ಬರೆದರು.

ಆದರೆ ಅಂತಹ ಭೇಟಿಯೂ ನಡೆಯಲಿಲ್ಲ. ಸರ್ದಾರರ ಪತ್ರಕ್ಕೆ ನೆಹರು ಜವಾಬನ್ನು ಬರೆಯಲೂ ಇಲ್ಲ. ಆದರೆ ಅವರು ಒಂದು ಟಿಪ್ಪಣಿಯನ್ನು ತಯಾರಿಸಿ ಅದರ ಪ್ರತಿಯನ್ನು ಪಟೇಲರಿಗೆ ಕಳುಹಿಸಿದರು: ೧೯೫೦ರ ನವೆಂಬರ್ ೧೮ರಂದು ನೆಹರು ಬರೆದ ಟಿಪ್ಪಣಿ:

> ಚೀನಾ ಇಡೀ ಟಿಬೆಟ್ಟನ್ನು ವಶಕ್ಕೆ ತೆಗೆದುಕೊಳ್ಳುತ್ತದೆ ಎನ್ನುವುದು ಖಚಿತ. ಟಿಬೆಟ್ಟು ಅದನ್ನು ಪ್ರತಿರೋಧಿಸುವ ಅಥವಾ ತಡೆಗಟ್ಟುವ ಯಾವ ಸಾಧ್ಯತೆಯೂ ಇಲ್ಲ, ಯಾವುದೇ ವಿದೇಶಿ ಶಕ್ತಿ ಅದನ್ನು ತಡೆಯುವ ಸಾಧ್ಯತೆಯೂ ಇಲ್ಲ. ನಾವೂ ಸಹ ಆ ಕೆಲಸ ಮಾಡಲಾಗುವುದಿಲ್ಲ.
>
> ಚೀನಾ ಕಡೆಯಿಂದ ನಾವು ಸೈನಿಕ ಆಕ್ರಮಣವನ್ನು ಎದುರಿಸಬೇಕಾಗುತ್ತದೆ ಎನ್ನುವುದು ಪೂರಾ ಅಸಂಭವ ಎಂದು ನಾನು ಭಾವಿಸಿದ್ದೇನೆ..... ಚೀನಾವು ತನ್ನ ಸೈನ್ಯ ಮತ್ತು ಬಲವನ್ನು ಜನ ವಾಸಿಸಲಾಗದ ಟಿಬೆಟ್ಟಿನ ಭೂಪ್ರದೇಶದ ಮೂಲಕ ಕಳುಹಿ

ಸುತ್ತದೆ ಮತ್ತು ಹಿಮಾಲಯದ ಒಂದು ಕಡೆಯಿಂದ ಮತ್ತೊಂದು ಕಡೆಗೆ ಕಳುಹಿಸುವ ಭಯಂಕರ ಸಾಹಸವನ್ನು ಕೈಗೊಳ್ಳುತ್ತದೆ – ಎಂದು ಊಹಿಸಲೂ ಸಾಧ್ಯವಿಲ್ಲ. ..... ಹೀಗೆ ಭಾರತದ ಮೇಲೆ ಚೀನಾ ಯಾವುದೇ ಭಾರಿ ಆಕ್ರಮಣ ಮಾಡುವುದನ್ನು ನಾನು ತಳ್ಳಿಹಾಕುತ್ತೇನೆ.

ನಾವು ಟಿಬೆಟ್ಟನ್ನು ಉಳಿಸಲು ಸಾಧ್ಯವಿಲ್ಲ..... ಟಿಬೆಟ್ಟು ತನ್ನ ಸ್ವಾಯತ್ತತೆಯ ಹೆಚ್ಚಿನ ಭಾಗವನ್ನು ಬಳಸಿಕೊಳ್ಳಲು ನಾವು ಸಹಾಯ ಮಾಡಬಹುದೇನೊ..... ಅದನ್ನು ರಾಯಭಾರ ಮಟ್ಟದಲ್ಲಿ ಮಾತ್ರ ಮಾಡಲು ಸಾಧ್ಯ.

ಯಾವುದೇ ಸಂದರ್ಭದಲ್ಲಿ ಟಿಬೆಟ್ಟಿನ ಮನವಿಯನ್ನು ನಾವು ವಿಶ್ವಸಂಸ್ಥೆಯಲ್ಲಿ ಮಂಡಿಸುವ ಹಾಗಿಲ್ಲ. ಟಿಬೆಟ್ಟಿನ ಮನವಿ ವಿಶ್ವಸಂಸ್ಥೆಯಲ್ಲಿ ಬಂದರೆ, ಆಗ ಏನು ಮಾಡಬೇಕು? ನಮ್ಮ ಪ್ರತಿನಿಧಿಯು ನಮ್ಮ ಅಭಿಪ್ರಾಯವನ್ನು ಸಾಧ್ಯವಾದಷ್ಟು ಸೌಮ್ಯವಾಗಿ ನಿರೂಪಿಸಬೇಕೆಂದು ನಾನು ಸಲಹೆ ನೀಡುತ್ತೇನೆ.[೮]

(ಚೀನಾದ ಉದ್ದೇಶ ಅಥವಾ ಅದರ ಮುಂದಿನ ಕ್ರಮದ ಬಗೆಗೆ ನೆಹರು ಮತ್ತು ಪಟೇಲ್ ೧೯೫೦ರ ಅಭಿಪ್ರಾಯಗಳನ್ನು ಹೋಲಿಸಿದರೆ, ನೆಹರು ಎಷ್ಟು ಅವಾಸ್ತವಿಕವಾಗಿದ್ದರು ಮತ್ತು ಪಟೇಲರು ಎಷ್ಟು ವಾಸ್ತವಿಕವಾಗಿದ್ದರು – ಎನ್ನುವುದು ಸ್ಪಷ್ಟವಾಗುತ್ತದೆ. ನೆಹರು ಭಾರತದ ಮೇಲೆ ಚೀನಾ ಆಕ್ರಮಣ ಮಾಡುವುದು ಸಾಧ್ಯವೇ ಇಲ್ಲ. ಅದನ್ನು ಊಹಿಸಲೂ ಸಾಧ್ಯವಿಲ್ಲ ಎಂದು ೧೯೫೦ರಲ್ಲಿ ಖಚಿತವಾಗಿ ಬರೆದಿದ್ದರು. ಆದರೆ ಚೀನಾ ೧೯೬೨ರಲ್ಲಿ, ನೆಹರು ಇನ್ನೂ ಪ್ರಧಾನಿಯಾಗಿರುವಾಗಲೇ, ಕ್ರೂರ ಮತ್ತು ಅನಾಗರಿಕ ಆಕ್ರಮಣ ಮಾಡಿ ನೆಹರುರವರ ತೇಜೋವಧೆ ಮಾಡಿತು ಮತ್ತು ಅಂತರರಾಷ್ಟ್ರೀಯ ವಲಯದಲ್ಲಿ ನೆಹರು ಮರ್ಯಾದೆಗೆ ಧಕ್ಕೆ ತಂದಿತು – ಲೇಖಕ)

❖ ◆ ❖

೨೬. ಎಡ ಮತ್ತು ಬಲ ಪಂಥದೊಡನೆ ಸಂಬಂಧ

೨೬.೧ ಎಡಪಂಥದೊಡನೆ ಘರ್ಷಣೆ

ಸ್ವಾತಂತ್ರ್ಯ ಹೋರಾಟದ ಕಾಲದಿಂದಲೂ ಎಡಪಂಥೀಯರು ಸರ್ದಾರರ ವಿರೋಧಿಗಳಾಗಿದ್ದರು.

೧೯೩೪ರಲ್ಲಿ ಕಾಂಗ್ರೆಸ್ ಒಳಗೆ ಕಾಂಗ್ರೆಸ್ ಸಮಾಜವಾದಿ ಪಕ್ಷ ಆರಂಭವಾಯಿತು. ಜಯಪ್ರಕಾಶ್ ನಾರಾಯಣ್, ಅಚ್ಯುತ ಪಟವರ್ಧನ್, ರಾಮಮನೋಹರ್ ಲೋಹಿಯ, ಮೀನೂಮಸಾನಿ ಮೊದಲಾದವರು ಅದರ ಸದಸ್ಯರು, ಅವರು ಜವಹರಲಾಲ್ ನೆಹರು ತಮ್ಮ ನಾಯಕ ಎಂದು ಪರಿಗಣಿಸಿದ್ದರು. ಆದರೆ ನೆಹರು ಆ ಸ್ಥಾನ ಒಪ್ಪಿರಲಿಲ್ಲ. ಆದಾಗ್ಯೂ ನೆಹರುರವರು ೧೯೨೭ರಲ್ಲಿ ಸೋವಿಯಟ್ ರಷ್ಯಕ್ಕೆ ಹೋಗಿ ಬಂದಾಗಿನಿಂದ ತಮ್ಮ ಭಾಷಣ ಮತ್ತು ಬರವಣಿಗೆಯಲ್ಲಿ ಸಮಾಜವಾದದ ಪ್ರತಿಪಾದಕರಾಗಿದ್ದರು. ೧೯೨೯ರಲ್ಲಿ ನೆಹರು ಕಾಂಗ್ರೆಸ್ ಅಧ್ಯಕ್ಷರಾದ ಮೇಲೆ ಸಮಾಜವಾದಿಗಳು ಹಾಗೂ ಕಮ್ಯುನಿಸ್ಟರು ಕಾಂಗ್ರೆಸ್ ಪಕ್ಷದ ಆಡಳಿತವನ್ನು ವಶಪಡಿಸಿಕೊಳ್ಳುವ ಕನಸು ಕಾಣಲಾರಂಭಿಸಿದರು.[೯] ಈ ಬೆಳವಣಿಗೆ ಹಳೆಯ ತಲೆಮಾರಿನ ನಾಯಕರಾದ ರಾಜೇಂದ್ರ ಪ್ರಸಾದ್, ವಲ್ಲಭಭಾಯ್ ಪಟೇಲ್, ಕೃಪಲಾನಿಯಂತಹವರಿಗೆ ಆತಂಕ ಉಂಟುಮಾಡಿತು, ಏಕೆಂದರೆ ನೆಹರುರವರು ತಮ್ಮ ಕಾರ್ಯಕಾರಿ ಸಮಿತಿಯಲ್ಲಿ ಸಮಾಜವಾದಿಗಳಾದ ಜಯಪ್ರಕಾಶ್ ನಾರಾಯಣ್, ನರೇಂದ್ರ ದೇವ್ ಮತ್ತು ಅಚ್ಯುತ ಪಟವರ್ಧನ್ ಮುಂತಾದವರನ್ನು ಸೇರಿಸಿದ್ದರು. ಹಳೆ ತಲೆಮಾರಿನ ನಾಯಕರು ಗಾಂಧೀಜಿಗೆ "ಕಾಂಗ್ರೆಸ್ಸು ಸಮಾಜವಾದವನ್ನು ಇನ್ನೂ ಅಂಗೀಕರಿಸದೆ ಇರುವಾಗ, ಈ ಹಂತದಲ್ಲಿ

ಕಾಂಗ್ರೆಸ್ ಅಧ್ಯಕ್ಷರು ಮತ್ತು ಕಾರ್ಯಕಾರಿ ಸಮಿತಿಯ ಸಮಾಜವಾದಿ ಸದಸ್ಯರು ಸಮಾಜವಾದವನ್ನು ಬೋಧಿಸುವುದು ಮತ್ತು ಅದಕ್ಕೆ ಒತ್ತುಕೊಡುವುದು ದೇಶದ ಹಿತಕ್ಕೆ ಮತ್ತು ರಾಷ್ಟ್ರೀಯ ಸ್ವಾತಂತ್ರ್ಯ ಸಮರದ ಯಶಸ್ಸಿಗೆ ಮಾರಕವಾದುದು," ಎಂದು ಹೇಳಿದರು.[೧೦]

ಕಾಂಗ್ರೆಸ್ ಸಮಾಜವಾದಿಗಳು ಕಮ್ಯುನಿಸ್ಟ್ ಪಕ್ಷದ ಪಡಿನೆರಳಾಗುತ್ತಿರುವುದನ್ನು ಸ್ವಲ್ಪ ಕಾಲದಲ್ಲೇ ಸರ್ದಾರರು ಗಮನಿಸಿದರು. ಅವರು ಕಾಂಗ್ರೆಸ್ ಸಮಾಜವಾದಿಗಳನ್ನು ಕಮ್ಯುನಿಸ್ಟ್ ಪಕ್ಷದ 'ಸುರಂಗ ತೋಡಿ ಮದ್ದು ಇಡುವ ಸೈನಿಕರು' (sappers and minors) ಎಂದು ವರ್ಣಿಸಿದರು. ಆ ಸಮಯದಲ್ಲಿ ಸರ್ಕಾರವು ಕಮ್ಯುನಿಸ್ಟ್ ಪಕ್ಷವನ್ನು ನಿಷೇಧಿಸಿತ್ತು. ಕಮ್ಯುನಿಸ್ಟರು, ತಮ್ಮ ಪಕ್ಷ ಸರ್ಕಾರದಿಂದ ನಿಷೇಧಿಸಲ್ಪಟ್ಟಿರುವುದರಿಂದ ಕಾಂಗ್ರೆಸ್ ಸಮಾಜವಾದಿಗಳ ಮೂಲಕ ಕಾಂಗ್ರೆಸ್ ಪ್ರವೇಶಿಸಲು ಹೊರಟಿದ್ದಾರೆ – ಎಂದು ಪಟೇಲರು ಸರಿಯಾಗಿ ಲೆಕ್ಕ ಹಾಕಿದರು. ಏಕೆಂದರೆ ಕಮ್ಯುನಿಸ್ಟರು ಮತ್ತು ಸಮಾಜವಾದಿಗಳು ಸೇರಿ ಒಂದು 'ಯುನೈಟೆಡ್ ಫ್ರಂಟ್' ಅನ್ನು ಸ್ಥಾಪಿಸಿಕೊಂಡಿದ್ದರು.

ಪಟೇಲರ ಟೀಕೆ ಕಾಂಗ್ರೆಸ್ ಸಮಾಜವಾದಿಗಳಿಗೆ ಕಿರಿ ಕಿರಿ ಉಂಟು ಮಾಡುತ್ತಿತ್ತು. ಅವರೂ ಸಹ ಸಿಕ್ಕಿದ ಪ್ರತಿಯೊಂದು ಅವಕಾಶವನ್ನು ಸರ್ದಾರರ ಮೇಲೆ ಆಪಾದನೆ ಹೊರಿಸಲು ಉಪಯೋಗಿಸಿಕೊಳ್ಳುತ್ತಿದ್ದರು.

ಗಾಂಧೀಜಿಯನ್ನು ರಕ್ಷಿಸಲು ಪಟೇಲರು ವಿಫಲರಾದರು, ಎಂದು ಸಮಾಜವಾದಿಗಳು ಆಪಾದಿಸಿದರು. ಪಟೇಲರು, ಸಂವಿಧಾನ ರಚನಾ ಸಭೆಯ ಕಾಂಗ್ರೆಸ್ ಸದಸ್ಯರ ಸಭೆಯಲ್ಲಿ ಸಮಾಜವಾದಿಗಳಿಗೆ ಸರಿಯಾದ ಉತ್ತರವನ್ನು ನೀಡಿದರು. ಗಾಂಧೀಜಿಯವರ ರಕ್ಷಣೆಗೆ ತಾವು ತೆಗೆದುಕೊಂಡ ಕ್ರಮಗಳು ಮತ್ತು ಗಾಂಧೀಜಿ ಹೇಗೆ ಸಹಕರಿಸಲಿಲ್ಲ ಎಂಬುದನ್ನು ವಿವರಿಸಿದ ನಂತರ ಪಟೇಲರು, "ಈ ದಿನ ಅವರು (ಸಮಾಜವಾದಿಗಳು) ರಾಷ್ಟ್ರದ ಅತ್ಯಂತ ದೊಡ್ಡ ದುರಾದೃಷ್ಟ ಮತ್ತು ಅನಾಹುತವನ್ನು ಸಮಾಜವಾದಿ ಬಣದ ಲಾಭಕ್ಕಾಗಿ ದುರುಪಯೋಗ ಪಡಿಸಿಕೊಳ್ಳುತ್ತಿದ್ದಾರೆ," ಎಂದರು.[೧೧]

ಅಶೋಕ್ ಮೆಹ್ತ ಸಮಾಜವಾದಿಗಳ ಪೈಕಿ ಒಬ್ಬರು. ಆದರೂ ಅವರು ೧೯೪೯ರ ಜುಲೈನಲ್ಲಿ ಸ್ವಾತಂತ್ರ್ಯ ಹೋರಾಟ ಮತ್ತು ರಾಷ್ಟ್ರ ಒಕ್ಕೂಟ ರಚನೆಯಲ್ಲಿ ಸರ್ದಾರರ ಪಾತ್ರವನ್ನು ಒಪ್ಪಿಕೊಂಡು ಅವರು (ಪಟೇಲರು) ಇತಿಹಾಸ ನಿರ್ಮಾಣದ ಶಕ್ತಿಯನ್ನು ಪಡೆದಿರುವಂತಹವರು ಎಂದು ಬರೆದರು. ಆದರೆ ಅವರನ್ನು ಟೀಕಿಸುವುದನ್ನು ಮಾತ್ರ ಬಿಡಲಿಲ್ಲ. ಅವರೆಂದರು:

ಸರ್ದಾರರ ಆರ್ಥಿಕ ನೀತಿಗಳು ದೇಶವನ್ನು ಅನಾಹುತದ ಕಡೆಗೆ ಒಯ್ಯುತ್ತಿವೆ..... ಬಿರ್ಲಾ ದುಂಬಿಗಳ ಮತ್ತು ದಾಲ್ಮಿಯ ಹಸುಗಳ ಪೋಷಣೆಯು ನಮ್ಮ ಹಸಿದ ಜನಗಳಿಗೆ ಸ್ವಲ್ಪವೂ ಮಧು ಅಥವಾ ಹಾಲನ್ನು ತಂದಿಲ್ಲ. ಅವರ (ಪಟೇಲರ) ಬಂಡವಾಳಶಾಹಿ ಸ್ನೇಹಿತರು ಮತ್ತು ಸಲಹೆಗಾರರು ಅವರನ್ನು ತಪ್ಪು ದಾರಿಗೆ ಕೊಂಡೊಯ್ಯುತ್ತಿದ್ದಾರೆ. .....ನಮಗೊಬ್ಬ ಆರ್ಥಿಕ ಮಾಂತ್ರಿಕ ಬೇಕಾಗಿದ್ದಾರೆ. ಆದರೆ ಅಂತಹ ವ್ಯಕ್ತಿ ಆಡಳಿತ ಪಕ್ಷದಲ್ಲೂ ಇಲ್ಲ, ಸರ್ದಾರರ ಬೆಳಗಿನ ನಡೆಯಲ್ಲಿ ಅವರನ್ನು ಸುತ್ತುವರಿಯುವವರಲ್ಲೂ ಇಲ್ಲ.[೧೨]

(ನಿಜ, ಪಟೇಲರಿಗೆ ಶ್ರೀಮಂತರೊಡನೆ ಸ್ನೇಹವಿತ್ತು, ತಮ್ಮ ಜೊತೆ ವಾಕಿಂಗ್‌ಗೆ ಬರಲು ಅವರಿಗೆ ಅವಕಾಶ ಕೊಟ್ಟಿದ್ದರು, ಅವರ ಆತಿಥ್ಯವನ್ನು ಸ್ವೀಕರಿಸುತ್ತಿದ್ದರು ಮತ್ತು ಅವರನ್ನು ದೂಷಿಸುತ್ತಿರಲಿಲ್ಲ. ಆದರೆ ಅವರು ಬಹಳ ಸರಳವಾದ ಜೀವನ ನಡೆಸುತ್ತಿದ್ದರು ಮತ್ತು ಆ ಶ್ರೀಮಂತರ ಸ್ನೇಹವನ್ನು ಸ್ವಂತಕ್ಕಾಗಿ ಎಂದೂ ಬಳಸಿ ಕೊಳ್ಳಲಿಲ್ಲ. ಅವರು ಗತಿಸಿದಾಗ ಅವರ ಬಳಿ ಇದ್ದದ್ದು ಎರಡು ಜೊತೆ ಖಾದಿ ಉಡುಪು ಮತ್ತು ಚಪ್ಪಲಿ. ಅವರು ಗತಿಸಿದ ಮೇಲೆ ಅವರ ಅವಿವಾಹಿತ ಮಗಳು ಅಹಮದಾಬಾದ್‌ನಲ್ಲಿ ವಾಸಿಸಿದ್ದು ಒಂದು ಕೊಠಡಿಯ ಅಪಾರ್ಟ್‌ಮೆಂಟ್‌ನಲ್ಲಿ. – ಲೇಖಕ)

ಬಿರ್ಲಾಗಳು ಮತ್ತು ವಾಲ್‌ಚಂದರು ತಮ್ಮಿಂದ ಹಣ ಪಡೆದು ತಮ್ಮನ್ನೇ ದೂಷಿಸುವ ಸಮಾಜವಾದಿಗಳನ್ನು ಗೌರವಿಸುವುದಕ್ಕಿಂತ ಹೆಚ್ಚಾಗಿ ಪಟೇಲರನ್ನು ಗೌರವಿಸುತ್ತಿದ್ದರು – ಎನ್ನುತ್ತಾರೆ ರಾಜಮೋಹನ ಗಾಂಧಿಯವರು.[೧೩]

೩೦ ವರ್ಷಗಳು ಕಳೆಯುವ ಹೊತ್ತಿಗೆ ಸರ್ದಾರರ ಬಗೆಗೆ ಅಶೋಕ್ ಮೆಹ್ತರವರ ಅಭಿಪ್ರಾಯ ಬದಲಾಯಿತು. ಅವರು ೧೯೮೦ರಲ್ಲಿ ಹೀಗೆ ಹೇಳಿದರು:

ಸರ್ದಾರರು ರಾಜರ ಪರವಾಗಿರಲಿಲ್ಲ. ಅವರು ರಾಜರಿಗೆ ಒಳ್ಳೆಯ ಸವಲತ್ತುಗಳನ್ನು ಕೊಟ್ಟರು, ಆದರೆ ಸಮಸ್ಯೆಯನ್ನು ಪರಿಹರಿಸಿದರು..... ಅವರು ಜಮೀನ್ದಾರರನ್ನು ಬೆಂಬಲಿಸುತ್ತಿರಲಿಲ್ಲ. ಸ್ವತಃ ಅವರೇ ಗಟ್ಟಿ ರೈತವರ್ಗಕ್ಕೆ ಸೇರಿದ್ದರು..... ಬಂದವಾಳಶಾಹಿಗಳ ಬಗೆಗೆ ಹೇಳುವುದಾದರೆ, ಅವರು ಆವಶ್ಯಕ ಎಂದು (ಪಟೇಲರು) ನಿಜವಾಗಿ ನಂಬಿದ್ದರು. ತಾವು ಅವರನ್ನು ಹಿಡಿತದಲ್ಲಿಡಬಹುದು ಮತ್ತು ಎಲ್ಲರ ಹಿತದೃಷ್ಟಿಯಿಂದ ತಾವು

ಅವರ ಆದಾಯುವನ್ನು ಮಿತಗೊಳಿಸಬಹುದು ಎಂದು ಭಾವಿಸಿದ್ದರು.

ಹಿಂತಿರುಗಿ ನೋಡಿದರೆ, ಪ್ರಾಯಶಃ ಆ ಕಷ್ಟದ ವರ್ಷಗಳಲ್ಲಿ, ೧೯೪೬-೪೭-೪೮ರಲ್ಲಿ ಅವರು ಮಾಡಿದ್ದು ಸರಿ. ಅದು ಭಾರತ ಉಳಿಯುವ ಅಥವಾ ಅಳಿಯುವ ಪ್ರಶ್ನೆಯಾಗಿತ್ತು. ..... ಆ ವಿಷಯವನ್ನು ಗಮನಕ್ಕೆ ತೆಗೆದುಕೊಳ್ಳಲು ನಾವು, ಕೊನೆಯ ಪಕ್ಷ ನಾನು , ವಿಫಲನಾದೆನು.[೧೪]

ಸ್ವಾತಂತ್ರ್ಯ ಬಂದ ಮೇಲೆ ಸಮಾಜವಾದಿಗಳ ಸ್ನೇಹ ಮತ್ತು ಸಹಕಾರ ಪಡೆಯಲು ಸರ್ದಾರರು ಪ್ರಯತ್ನಿಸಿದ್ದರು. 'ನಾವು ಅನುಸರಿಸಬೇಕೆಂದು ನೀವು ಬಯಸುವ ಏನಾದರು ಗೊತ್ತಾದ ಕಾರ್ಯಕ್ರಮಗಳು ನಿಮ್ಮಲ್ಲಿ ಇದ್ದರೆ ತಿಳಿಸಿ' ಎಂದು ಆಗಸ್ಟ್ ಅಥವಾ ಸೆಪ್ಟೆಂಬರ್ ೧೯೪೭ರಲ್ಲಿ ಪಟೇಲರು ಸಮಾಜವಾದಿಗಳ ನಾಯಕ ಜಯಪ್ರಕಾಶ್ ನಾರಾಯಣ್‌ರವರಿಗೆ ಹೇಳಿದರು. ಜಯಪ್ರಕಾಶ್‌ರವರು ಇತರ ಸಮಾಜವಾದಿಗಳೊಡನೆ ಚರ್ಚಿಸಿ ಒಂದು ಕಾರ್ಯಕ್ರಮ ಪಟ್ಟಿ ತಯಾರಿಸಿಕೊಟ್ಟರು. ಆದರೆ ಅದು ಸರ್ದಾರರಿಗೆ ಜಾರಿಗೆ ತರಲಾಗದ್ದು ಮತ್ತು ಬರೇ ತಾತ್ವಿಕವಾದುದು ಎನ್ನಿಸಿತು. ಮುಂದೆ ಜಯಪ್ರಕಾಶ್ 'ಅದು ಗ್ರಂಥಸ್ತ (bookish) ಸಮಾಜವಾದ' ಎಂದು ತಾವಾಗೇ ಒಪ್ಪಿಕೊಂಡರು.

ಸರ್ದಾರರು ಸಮಾಜವಾದಿಗಳಿಗೆ, 'ಒಂದು ಪ್ರಾಂತ್ಯವನ್ನು ಆರಿಸಿಕೊಂಡು ಅದನ್ನು ನಿಮ್ಮ ಸಮಾಜವಾದಿ ತತ್ವಗಳ ಮೇಲೆ ನಡೆಸಿ, ಅದು ಯಶಸ್ವಿಯಾಗಿ ನಡೆದರೆ ಇಡೀ ದೇಶವನ್ನೇ ನಿಮಗೆ ಸಂತೋಷವಾಗಿ ಒಪ್ಪಿಸುತ್ತೇವೆ,' ಎಂದು ಆಶ್ವಾಸನೆ ನೀಡಿದರು. ಆದರೆ ಜಯಪ್ರಕಾಶ್ ನಾರಾಯಣ್, ರಾಮ್ ಮನೋಹರ್ ಲೋಹಿಯ ಮತ್ತಿತರ ಸಮಾಜವಾದಿಗಳು ಅದಕ್ಕೆ ಪ್ರತಿಕ್ರಿಯಿಸಲಿಲ್ಲ.[೧೫]

ಪಟೇಲರು ತಮ್ಮ ಬಂಡವಾಳಶಾಹಿ ಸ್ನೇಹಿತರ ಶಕ್ತಿ ಮತ್ತು ಸಾಹಸವನ್ನು ಗುರುತಿಸಿದ್ದರು. ಬ್ರಿಟಿಷರ ಆಡಳಿತದ ಕಾಲದಲ್ಲಿ ಈ ಬಂಡವಾಳಗಾರರು ಕಾಂಗ್ರೆಸ್ ಚಳವಳಿಯನ್ನು ಬೆಂಬಲಿಸಿ ಎದುರಿಸಿದ ಅಪಾಯವನ್ನು ಪಟೇಲರು ಗುರುತಿಸಿದ್ದರು. ಅದರಿಂದ ಅವರು ಅರ್ಥಮಂತ್ರಿ ಜಾನ್ ಮೆಥಾಯ್‌ಗೆ 'ಕಾಂಗ್ರೆಸ್ಸಿನ ಶ್ರೀಮಂತ ಸ್ನೇಹಿತರು ಸ್ವಾತಂತ್ರ್ಯಾನಂತರ ಕಾನೂನು ಉಲ್ಲಂಘನೆ ಮಾಡಿದ ಅಪರಾಧಗಳಿಗೆ ಶಿಕ್ಷೆ ನೀಡಿ, ಆದರೆ ಅವರ ಸ್ವಾತಂತ್ರ್ಯ ಪೂರ್ವದ ತಪ್ಪುಗಳನ್ನು ಕಡೆಗಣಿಸಿ' ಎಂದು ಸಲಹೆ ನೀಡಿದ್ದರು.[೧೬]

ಸರ್ದಾರರಿಗೆ ನಿಜವಾದ ಚಿಂತೆ ಇದ್ದದ್ದು ಸಮಾಜವಾದಿಗಳ ಬಗೆಗೆ ಅಲ್ಲ, ಕಮ್ಯುನಿಸ್ಟರ ಬಗೆಗೆ. ಅವರು ಸಮಾಜವಾದಿಗಳನ್ನು ಅನನುಭವಿಗಳಾದ ಮತ್ತು ತಪ್ಪು ಹಾದಿಗೆ ದೂಡಲ್ಪಟ್ಟ ಯುವ ಸ್ನೇಹಿತರು ಎಂದು ಭಾವಿಸಿದ್ದರೇ ಹೊರತು, ವೈರಿಗಳು ಎಂದು ಭಾವಿಸಿರಲಿಲ್ಲ. ಆದರೆ ಕಮ್ಯುನಿಸ್ಟರ ಮೇಲೆ ಅವರಿಗೆ ಭಾರಿ ಆಕ್ರೋಷವಿತ್ತು. ಏಕೆಂದರೆ ಕಮ್ಯುನಿಸ್ಟರಿಗೆ ಗಾಂಧೀಜಿಯ ಅಹಿಂಸಾ ತತ್ವದಲ್ಲಿ ನಂಬಿಕೆ ಇರಲಿಲ್ಲ, ಕಮ್ಯುನಿಸ್ಟರು ಮುಷ್ಕರ ಮತ್ತು ವಿಧ್ವಂಸಕ ಕಾರ್ಯಗಳ ಮೂಲಕ ಸಮಾಜದಲ್ಲಿ ಅತೃಪ್ತಿ ಮತ್ತು ಅಶಾಂತಿಯನ್ನು ಉದ್ರೇಕಿಸುತ್ತಿದ್ದರು. ಹಿಂಸಾಚಾರದ ಮೂಲಕ ಭಯ ಭೀತಿ ಬಿತ್ತುತ್ತಿದ್ದರು. ಪಟೇಲರು, "ಹಳ್ಳಿಗಳ ಬಡ ಜನರ ಮೇಲಿನ ಹಲ್ಲೆ, ಕೊಲೆ ಮತ್ತು ಲೂಟಿ ಕಮ್ಯುನಿಸಂ ಅನ್ನು ತರುವ ಮಾರ್ಗವಲ್ಲ, ಅದು ಕಮ್ಯುನಿಸಂಗೆ ಒಂದು ಕಳಂಕ. ಅಂತಹ ಜನರನ್ನು ನಾನು ಮೂಲೋತ್ಪಾಟನೆ ಮಾಡುತ್ತೇನೆ ಎಂದು ಹಿಂದೆಯೆ ಹೇಳಿದ್ದೇನೆ ಮತ್ತು ಈಗ ಪುನಃ ಎಚ್ಚರಿಕೆ ನೀಡುತ್ತಿದ್ದೇನೆ," ಎಂದು ಗುಡುಗಿದರು. ಅವರು 'ಕಮ್ಯುನಿಸ್ಟರು ಪರ ದೇಶಕ್ಕೆ ನಿಷ್ಠರಾಗಿದ್ದಾರೆ ಮತ್ತು ಸ್ವದೇಶಕ್ಕೆ ಮೋಸ ಮಾಡುತ್ತಿದ್ದಾರೆ' ಎಂದು ಆಪಾದಿಸಿದರು.[೧೭]

ಅಖಿಲ ಭಾರತ ಕಾರ್ಮಿಕ ಸಂಘಗಳ ಕಾಂಗ್ರೆಸ್ಸು ಗಾಂಧೀಜಿಯವರ ಆಶೀರ್ವಾದಗಳೊಡನೆ ೧೯೨೦ರಲ್ಲಿ ಸ್ಥಾಪಿಸಲ್ಪಟ್ಟಿತ್ತು, ೧೯೨೪ರಲ್ಲಿ ಕಲ್ಕತ್ತದಲ್ಲಿ ನಡೆದ ಅದರ ಅಧಿವೇಶನವನ್ನು ಕಮ್ಯುನಿಸ್ಟರು ಪ್ರತಿನಿಧಿಗಳಾಗಿ ಪ್ರವೇಶ ಪಡೆದು ಕಮ್ಯುನಿಸಂ ಘೋಷಣೆಯನ್ನು ಕೂಗಿ ಅಧಿವೇಶನದಲ್ಲಿ ಅರಾಜಕತೆ ಉಂಟುಮಾಡಿದರು. ಅವರು ೧೯೨೭ರ ಕಾನ್ಪುರ ಅಧಿವೇಶನವನ್ನು ಕಾಂಗ್ರೆಸ್ಸಿನಲ್ಲಿನ ತೀವ್ರಗಾಮಿ ಶಕ್ತಿಗಳ ಸಹಾಯದಿಂದ ತಮ್ಮ ಹಿಡಿತಕ್ಕೆ ತೆಗೆದುಕೊಂಡು ತಮ್ಮ ಪಕ್ಷದ ಅಭ್ಯರ್ಥಿ ಕಾರ್ಯದರ್ಶಿಯಾಗಿ ಚುನಾಯಿತನಾಗುವಂತೆ ಮಾಡಿದರು. ಮೇ ೧ರಂದು ಕಾರ್ಮಿಕ ದಿನಾಚರಣೆ ಆಚರಿಸಿದರು. ಆಗ ತಾನೆ ರಷ್ಯಾಕ್ಕೆ ಭೇಟಿ ಕೊಟ್ಟು ಹಿಂತಿರುಗಿದ್ದ ನೆಹರುರವರ ಬೆಂಬಲ ಅವರಿಗೆ ಸಿಕ್ಕಿತು. ನಂತರ ಕಮ್ಯುನಿಸ್ಟರು ಕಾಂಗ್ರೆಸ್ ಸಮಾಜವಾದಿ ಪಕ್ಷದ ಮಹಾ ಕಾರ್ಯದರ್ಶಿಯಾಗಿದ್ದ ಜಯಪ್ರಕಾಶ್ ನಾರಾಯಣ್‌ರವರನ್ನು ಸೆಳೆದು ೧೯೩೬ರಲ್ಲಿ ಸಮಾಜವಾದಿಗಳು ಮತ್ತು ಕಮ್ಯುನಿಸ್ಟರ ಯುನೈಟೆಡ್ ಫ್ರಂಟನ್ನು ಸ್ಥಾಪಿಸಿದರು. ಆ ಮೂಲಕ ಕಾಂಗ್ರೆಸ್ಸಿನ ದ್ವಾರ ಅವರಿಗೆ ತೆರೆಯಿತು. ಕಮ್ಯುನಿಸ್ಟರು ಸರ್ದಾರರಂತಹ ನಾಯಕರನ್ನು ಬಲಪಂಥದ ಪ್ರತಿಗಾಮಿಗಳೆಂದು ದೂರಿದರು ಮತ್ತು ನೆಹರುವನ್ನು ಹೊಗಳಿದರು.[೧೮]

ಆ ವೇಳೆಗೆ ಕಮ್ಯುನಿಸ್ಟರ ಪ್ರವೇಶದ ಅಪಾಯವನ್ನು ಮಿನೂ ಮಸಾನಿಯವರು

ಅರಿತರು ಮತ್ತು ೧೯೩೯ರಲ್ಲಿ ಕಾಂಗ್ರೆಸ್ ಸಮಾಜವಾದಿ ಪಕ್ಷಕ್ಕೆ ರಾಜೀನಾಮೆ ನೀಡಿದರು. ೧೯೪೦ರ ಹೊತ್ತಿಗೆ ಜಯಪ್ರಕಾಶ್ ನಾರಾಯಣ್‌ರವರಿಗೂ ತಮ್ಮ ತಪ್ಪಿನ ಅರಿವಾಯಿತು. ಆದರೆ ಅಷ್ಟು ಹೊತ್ತಿಗೆ ಬಹಳ ತಡವಾಗಿತ್ತು. ಕಮ್ಯುನಿಸ್ಟರು ಅಖಿಲ ಭಾರತ ವಿದ್ಯಾರ್ಥಿ ಫೆಡೆರೇಶನ್ ಮತ್ತು ಅಖಿಲ ಭಾರತ ಕಿಸಾನ್ ಸಭಾವನ್ನು ಒಡೆದು ಬಹು ಸಂಖ್ಯಾತ ಸದಸ್ಯರನ್ನು ತಮ್ಮ ಕಡೆಗೆ ಎಳೆದುಕೊಂಡಿದ್ದರು. ಸಮಾಜವಾದಿ ಪಕ್ಷ ದುರ್ಬಲಗೊಂಡಿತು.

ಆದರೆ ಪಟೇಲರು ತೆಪ್ಪಗೆ ಕೂರಲಿಲ್ಲ. ಕಮ್ಯುನಿಸ್ಟರಿಗೆ ವಿರುದ್ಧವಾಗಿ ೧೯೩೮ರಲ್ಲಿ ಹಿಂದೂಸ್ಥಾನ್ ಮಜದೂರ್ ಸೇವಕ ಸಂಘವನ್ನು ಸ್ಥಾಪಿಸಿ ತಾವೇ ಅದರ ಛೇರ್‌ಮನ್ ಆದರು. ೧೯೩೯ರಲ್ಲಿ ಎರಡನೆ ವಿಶ್ವ ಸಮರ ಆರಂಭವಾಗಿ ರಷ್ಯ ಮತ್ತು ಬ್ರಿಟನ್ ಪರಸ್ಪರ ವಿರೋಧಿಗಳಾಗಿದ್ದಾಗ, ಕಮ್ಯುನಿಸ್ಟರು ಬ್ರಿಟನ್ ಸರ್ಕಾರದ ವಿರುದ್ಧ ಕಾಂಗ್ರೆಸ್ ಜೊತೆಗೆ ಇದ್ದರು. ಆದರೆ ರಷ್ಯ, ಬ್ರಿಟನ್ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನ ಸೇರಿ ಒಂದು ಬಣವಾದಾಗ, ಅವರು ತಮ್ಮ ಬಣ್ಣ ಬದಲಾಯಿಸಿ ಬ್ರಿಟನ್ ಬೆಂಬಲಿಸಿ ಕಾಂಗ್ರೆಸ್ಸನ್ನು ವಿರೋಧಿಸಿದರು. ಅಷ್ಟು ಹೊತ್ತಿಗೆ ಚಲೇ ಜಾವ್ ಚಳವಳಿಯ ಫಲವಾಗಿ ಕಾಂಗ್ರೆಸ್ ನಾಯಕರು ಸೆರೆಮನೆ ಸೇರಿದ್ದರು. ಕಮ್ಯುನಿಸ್ಟರು ನಿರಾತಂಕವಾಗಿ ಬೆಳೆದರು.

೧೯೪೫ರಲ್ಲಿ ಸೆರೆಮನೆಯಿಂದ ಬಿಡುಗಡೆಯಾದ ಮೇಲೆ ಸರ್ದಾರರು ಎರಡು ಕೆಲಸ ಮಾಡಿದರು. ಅಖಿಲ ಭಾರತ ಕಾಂಗ್ರೆಸ್ ಸಮಿತಿಯಲ್ಲಿ ಸದಸ್ಯರಾಗಿ ಎಂಟು ಮಂದಿ ಕಮ್ಯುನಿಸ್ಟರಿದ್ದರು. ಅವರ ಕಾಂಗ್ರೆಸ್ ವಿರೋಧಿ ಚಟುವಟಿಕೆಗಳ ತನಿಖೆಗೆ ನೆಹರು, ಗೋವಿಂದ ವಲ್ಲಭ ಪಂತ್ ಮತ್ತು ಪಟೇಲರು ಇರುವ ಸಮಿತಿಯನ್ನು ರಚಿಸಲಾಯಿತು. ಅದರ ವರದಿಯ ಆಧಾರದ ಮೇಲೆ ಆ ಎಂಟು ಮಂದಿಯನ್ನು ಕಾಂಗ್ರೆಸ್ ಪಕ್ಷದಿಂದ ಹೊರಹಾಕಲಾಯಿತು. ಎಲ್ಲಾ ಕಮ್ಯುನಿಸ್ಟರು ಪಕ್ಷದ ಸದಸ್ಯತ್ವಕ್ಕೆ ರಾಜೀನಾಮೆ ಕೊಟ್ಟರು. ಪಟೇಲರು, ಕಮ್ಯುನಿಸ್ಟರ ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್‌ನ ಕಾರ್ಮಿಕ ವಿರೋಧಿ ಮತ್ತು ರಾಷ್ಟ್ರ ವಿರೋಧಿ ಚಟುವಟಿಕೆಗಳಿಗೆ ವಿರುದ್ಧವಾಗಿ ಇಂಡಿಯನ್ ನ್ಯಾಷನಲ್ ಟ್ರೇಡ್ ಯೂನಿಯನ್ ಕಾಂಗ್ರೆಸ್ ಅನ್ನು ೧೯೪೭ರ ಮೇ ೩ರಂದು ಸ್ಥಾಪಿಸಿದರು. ಅದರ ಪ್ರಥಮ ಸಮಾವೇಶ ನವ ದೆಹಲಿಯಲ್ಲಿ ಮೇ ೩ ಮತ್ತು ೪ರಂದು ಪಟೇಲರ ಅಧ್ಯಕ್ಷತೆಯಲ್ಲಿ ನಡೆಯಿತು. ಅಂದಿನ ಕಾಂಗ್ರೆಸ್ ಅಧ್ಯಕ್ಷ ಜೆ.ಬಿ. ಕೃಪಲಾನಿಯವರು ಅಧಿವೇಶನವನ್ನು ಉದ್ಘಾಟಿಸಿದರು.[೧೯]

ದೇಶದ ನಾನಾ ರಾಜ್ಯಗಳಲ್ಲಿ ಸೆರೆಮನೆಯಲ್ಲಿದ್ದ ಸುಮಾರು ೨೦೦೦ ಮಂದಿ

ಕಮ್ಯುನಿಸ್ಟರನ್ನು ವಿವಿಧ ರಾಜ್ಯಗಳ ಉಚ್ಚ ನ್ಯಾಯಾಲಯಗಳು ೧೯೫೦ರ ಆದಿ ಭಾಗದಲ್ಲಿ ಬಿಡುಗಡೆ ಮಾಡಿದುವು. ಬಿಡುಗಡೆಯಾದ ಕಮ್ಯುನಿಸ್ಟರನ್ನು ಅಪಾಯಕಾರಿಗಳು ಎಂದು ಪರಿಗಣಿಸಿದ ಪಟೇಲರು ಪ್ರಿವೆಂಟಿವ್ ಡಿಟೆನ್‌ಷನ್ ಕಾಯಿದೆಯನ್ನು ಸಂಸತ್ತು ಅಂಗೀಕರಿಸುವಂತೆ ಮಾಡಿದರು. ಆ ಸಂದರ್ಭದಲ್ಲಿ ಅವರು ಸಂಸತ್ತಿನಲ್ಲಿ ಆಡಿದ ಮಾತು:

> ನಮ್ಮ ಹೋರಾಟ ಕಮ್ಯುನಿಸಂ ವಿರುದ್ಧವೂ ಅಲ್ಲ ಅಥವಾ ಕಮ್ಯುನಿಸಂ ತತ್ವದಲ್ಲಿ ನಂಬಿಕೆ ಇಟ್ಟಿರುವವರ ವಿರುದ್ಧವೂ ಅಲ್ಲ, ಆದರೆ ಕಾನೂನಿನ ರೀತ್ಯಾ ರಚಿತವಾದ ಸರ್ಕಾರವನ್ನು ಹಿಂಸಾಚಾರದ ಮೂಲಕ ಉರುಳಿಸುವ ಗುರಿಯನ್ನು ಹೊಂದಿರುವರ ವಿರುದ್ಧ ಮತ್ತು ಯಾರ ಏಕಮಾತ್ರ ಗುರಿ ಸಂಪರ್ಕ ವ್ಯವಸ್ಥೆಯನ್ನು ನಾಶಪಡಿಸುವುದಾಗಿರುವುದೊ ಅವರ ವಿರುದ್ಧ..... ಅನೇಕರ ನಾಗರಿಕ ಸ್ವಾತಂತ್ರ್ಯಗಳ ರಕ್ಷಣೆಗಾಗಿ ಕೆಲವರ ಅಪರಾಧಿ ಸ್ವಾತಂತ್ರ್ಯಗಳನ್ನು ಮೊಟಕುಗೊಳಿಸಬೇಕು.

ಈ ಕಾಯಿದೆಯನ್ನು ತರುವ ಬಗೆಗೆ ನಾನು ಎರಡು ನಿದ್ರಾರಹಿತ ರಾತ್ರಿಗಳನ್ನು ಕಳೆದಿದ್ದೇನೆ – ಎಂದು ಹೇಳಿದ ಪಟೇಲರು ತಮ್ಮ ಮಾತಿನ ಕೊನೆಯಲ್ಲಿ ಕಮ್ಯುನಿಸ್ಟ್ ಪಕ್ಷದ ಎರಡು ಕರ ಪತ್ರಗಳನ್ನು ನಾಟಕೀಯವಾಗಿ ಪ್ರದರ್ಶಿಸಿದರು. ಆ ಕರ ಪತ್ರಗಳು ಬಸ್ಸುಗಳನ್ನು ಸುಡಲು, ರೈಲು ಕಂಬಿಗಳನ್ನು ಕೀಳಲು, ಸೆರೆಮನೆ ಮತ್ತು ಕಾಂಗ್ರೆಸ್ ಕಛೇರಿಗಳ ಮೇಲೆ ಧಾಳಿ ಮಾಡಲು ಜನರನ್ನು ಪ್ರಚೋದಿಸುತ್ತಿದ್ದುವು. ಐದು ಘಂಟೆಗಳ ಚರ್ಚೆಯ ನಂತರ ಆ ಮಸೂದೆ ಅಂಗೀಕಾರವಾಯಿತು.[೨೦]

೨೬.೨ ಬಲಪಂಥದ ಬಗೆಗೆ ಮಿಶ್ರ ಭಾವ

ರಾಷ್ಟ್ರೀಯ ಸ್ವಯಂಸೇವಕ ಸಂಘ ಅದರ ಹೆಸರೇ ಹೇಳುವ ಹಾಗೆ ಒಂದು ಸ್ವಯಂಸೇವಕ ಸಂಘ. ಅದನ್ನು ಕೇಶವ ಬಲಿರಾಮ್ ಹೆಡ್ಗೆವಾರ್‌ರವರು ೧೯೨೫ರ ಸೆಪ್ಟೆಂಬರ್ ೨೭ರಂದು ನಾಗಪುರದಲ್ಲಿ ಸ್ಥಾಪಿಸಿದರು. ರಾಷ್ಟ್ರಸೇವೆ ಮತ್ತು ಹಿಂದೂಗಳ ಪುನರುತ್ಥಾನ ಅದರ ಗುರಿ. ಅದರ ಸದಸ್ಯರು ದೇಶಭಕ್ತಿಗೆ ಮತ್ತೊಂದು ಹೆಸರು. ಅದು ಬಲಪಂಥೀಯ ಸಂಸ್ಥೆ. ೧೯೪೭ರ ಹೊತ್ತಿಗೆ ಅದು ಮಧ್ಯ ಮತ್ತು ಉತ್ತರ ಭಾರತದಲ್ಲಿ ಬಹಳ ಹರಡಿತ್ತು.

ಈ ರಾಷ್ಟ್ರೀಯ ಸ್ವಯಂ ಸೇವಕ ಸಂಸ್ಥೆಯ ಬಗೆಗೆ ನೆಹರು ಮತ್ತು ಪಟೇಲರ ಅಭಿಪ್ರಾಯ ಭಿನ್ನವಾಗಿತ್ತು. ದೇಶ ವಿಭಜನೆಯ ನಂತರ ರಾಷ್ಟ್ರೀಯ ಸ್ವಯಂ

ಸೇವಕ ಸಂಸ್ಥೆಯ ಬಗೆಗೆ ಸರ್ಕಾರದ ಧೋರಣೆ ಏನಿರಬೇಕು ಅನ್ನುವುದರ ಕಾರಣವಾಗಿ ನೆಹರು ಮತ್ತು ಪಟೇಲರ ನಡುವೆ ಕಂದಕ ಉಂಟಾಯಿತು.

ರಾಷ್ಟ್ರೀಯ ಸ್ವಯಂ ಸೇವಕ ಸಂಸ್ಥೆ ಗಾಂಧೀಜಿಯ ಅಹಿಂಸಾ ತತ್ವವನ್ನು ಒಪ್ಪಲಿಲ್ಲ. ಆ ಅಹಿಂಸಾ ತತ್ವ ದುರ್ಬಲತೆ ಮತ್ತು ಹತಾಶೆಯ ಫಲ ಎಂದು ಅವರು ನಂಬಿದ್ದರು. ಹಿಂದೂ – ಮುಸ್ಲಿಂ ಮೈತ್ರಿಯ ಮಾತು ಒಂದು ಐತಿಹಾಸಿಕ ವಿಫಲತೆ ಎಂದೂ ಅವರು ನಂಬಿದ್ದರು. ದೇಶ ವಿಭಜನೆಯ ನಂತರ ನಡೆದ ಹತ್ಯಾಕಾಂಡದ ಸಂದರ್ಭದಲ್ಲಿ ಅವರು ಪಂಜಾಬ್‌ನಲ್ಲಿ ಹಿಂದೂಗಳ ರಕ್ಷಣೆಗೆ ಅಮೂಲ್ಯ ಸೇವೆ ಸಲ್ಲಿಸಿದ್ದರು. ಹಿಂದೂಗಳ ಮೇಲಿನ ಮುಸ್ಲಿಂ ಆಕ್ರಮಣ ತಡೆಗಟ್ಟಬೇಕಾದರೆ, ಅದಕ್ಕೆ ಪ್ರತಿಯಾಗಿ ತಾವೂ ಸಹ ಹಾಗೇ ಮಾಡಬೇಕು ಎಂದು ಅವರು ನಂಬಿದ್ದರು. ಒಮ್ಮೊಮ್ಮೆ ಉತ್ಸಾಹದ ಭರದಲ್ಲಿ ಅವರ ಕಾರ್ಯ ಅತಿರೇಕಕ್ಕೆ ಹೋಗುತ್ತಿತ್ತು ಅಥವಾ ಎಲ್ಲೆಯನ್ನು ಮೀರುತ್ತಿತ್ತು. ಅದರ ಬಗೆಗೆ ಪಟೇಲರ ಮತ್ತು ನೆಹರುರವರ ಧೋರಣೆ ಬೇರೆ ಬೇರೆಯಾಗಿತ್ತು. ಭಾವೋದ್ರೇಕ ಏರಿರುವಾಗ ಕೊಲೆ, ಲೂಟಿ ಮತ್ತು ಅಪಹರಣದ ಕಥೆಗಳು ಸಲೀಸಾಗಿ ಹಬ್ಬುತ್ತಿರುವಾಗ ಗುಂಪು ಹುಚ್ಚಾಟ ಅಥವಾ ಆಕ್ರೋಶವನ್ನು ತಡೆಯುವುದು ಕಷ್ಟ ಎನ್ನುವುದು ಸರ್ದಾರರ ಅಭಿಪ್ರಾಯವಾಗಿತ್ತು. ಅದರಿಂದ ಅವರು ರಾಷ್ಟ್ರೀಯ ಸ್ವಯಂ ಸೇವಕ ಸಂಸ್ಥೆಯ ಸ್ವಯಂ ಸೇವಕರನ್ನು 'ಕ್ರಿಮಿನಲ್‌ಗಳು' ಎಂದು ಕರೆಯಲು ಸಿದ್ಧರಿರಲಿಲ್ಲ. ಅದಕ್ಕೆ ಬದಲಾಗಿ ಅವರನ್ನು 'ತಪ್ಪು ಹಾದಿ ತೋರಿಸಲ್ಪಟ್ಟ ದೇಶಭಕ್ತರು' ಎಂದು ಕರೆದರು. ಪಟೇಲರು ಅವರ ಶಿಸ್ತು ಮತ್ತು ಸೇವೆಯನ್ನು ಗಮನಿಸಿದ್ದರು. ಸಹಾನುಭೂತಿ ಮತ್ತು ಅಭಿಪ್ರಾಯ ಗ್ರಹಿಕೆಯಿಂದ ಅವರನ್ನು ಅವರ ಮಾರ್ಗದಿಂದ ಹೊರಸೆಳೆದು, ದೇಶದಲ್ಲಿ ಶಾಂತಿ ನೆಲೆಸುವ ಕಾರ್ಯದಲ್ಲಿ ಸರ್ಕಾರದ ಕೈಗಳನ್ನು ಬಲಪಡಿಸಲು ಅವರನ್ನು ಉಪಯೋಗಿಸಿಕೊಳ್ಳಬೇಕೆಂದು, ಪಟೇಲರು ಬಯಸಿದ್ದರು. ೧೯೪೮ರ ಜನವರಿ ೬ರಂದು ಲಕ್ನೋದಲ್ಲಿ ಮಾಡಿದ ಒಂದು ಪ್ರಮುಖ ಭಾಷಣದಲ್ಲಿ ಅವರು ಹೀಗೆ ನುಡಿದಿದ್ದರು:

> ನಿಮ್ಮ ಬುದ್ಧಿವಂತಿಕೆ ಮತ್ತು ಕಾರ್ಯವನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸಿ ಎಂದು ನಾನು ರಾಷ್ಟ್ರೀಯ ಸ್ವಯಂ ಸೇವಕ ಸಂಸ್ಥೆಗೆ ಮನವಿ ಮಾಡುತ್ತೇನೆ. ದುಡುಕಬೇಡಿ, ಸಮಯ ಜಾಣ್ಮೆರಹಿತರಾಗಬೇಡಿ, ಆಕ್ರಮಣ ಮತ್ತು ಸೇಡಿನ ಭಾವವ ಬಿಡಿ ಎಂದು ಅವರನ್ನು ಕೋರುತ್ತೇನೆ.

ಅಧಿಕಾರದಲ್ಲಿರುವ ಕಾಂಗ್ರೆಸ್ ಪಕ್ಷದ ಸದಸ್ಯರು ತಮ್ಮ

> ಅಧಿಕಾರ ಬಲದಿಂದ ರಾಷ್ಟ್ರೀಯ ಸ್ವಯಂ ಸೇವಕ ಸಂಸ್ಥೆಯನ್ನು ನಜ್ಜುಗುಜ್ಜು ಮಾಡಬಹುದೆಂದು ನಂಬಿದ್ದಾರೆ. ದಂಡವನ್ನು ಬಳಸಿ ಯಾವ ಸಂಸ್ಥೆಯನ್ನೂ ನೀವು ಅದುಮಿಡಲು ಸಾಧ್ಯವಿಲ್ಲ. ಅದಕ್ಕಿಂತಲೂ ಮುಖ್ಯವಾಗಿ, ದಂಡ ಇರುವುದು ಕಳ್ಳರು ಮತ್ತು ಡಾಕುಗಳ ಮೇಲೆ ಪ್ರಯೋಗಿಸುವುದಕ್ಕಾಗಿ. ಅದರ ಬಳಕೆ ಹೆಚ್ಚು ಫಲ ನೀಡುವುದಿಲ್ಲ. ಅಲ್ಲದೆ, ಆರ್.ಎಸ್.ಎಸ್.ನವರು ಕಳ್ಳರಲ್ಲ ಮತ್ತು ದರೋಡೆಗಾರರಲ್ಲ. ಅವರು ತಮ್ಮ ದೇಶವನ್ನು ಪ್ರೀತಿಸುತ್ತಾರೆ. ಅವರ ಆಲೋಚನಾ ವಿಧಾನ ಮಾತ್ರ ಬೇರೆ ಕಡೆಗೆ ತಿರುಗಿದೆ. ಕಾಂಗ್ರೆಸ್‌ನವರು ಅವರನ್ನು ಪ್ರೀತಿಯಿಂದ ಗೆಲ್ಲಬೇಕು.[೨೧]

ರಾಷ್ಟ್ರೀಯ ಸ್ವಯಂ ಸೇವಕ ಸಂಸ್ಥೆಯ ಉತ್ಸಾಹವನ್ನು ಉಪಯುಕ್ತ ಹಾದಿಗೆ ತಿರುಗಿಸುವ ಆಶಯ ಪಟೇಲರಿಗೆ ಇತ್ತು. ಆಗ ಮುಸ್ಲಿಮರ ವ್ಯವಸ್ಥಿತ ಹಿಂಸಾಚಾರದ ವಿರುದ್ಧ ಹಿಂದೂಗಳಿಗೆ ರಕ್ಷಣೆ ನೀಡುವ ಕೆಲಸವನ್ನು ರಾಷ್ಟ್ರೀಯ ಸ್ವಯಂ ಸೇವಕ ಸಂಸ್ಥೆಯ ಸ್ವಯಂ ಸೇವಕರು ಮಾಡುತ್ತಿದ್ದರು. ಈ ಗಲಭೆ ಗಲಾಟೆ ನಿಲ್ಲುವವರೆಗೆ ಯಾವ ಕ್ರಮವನ್ನೂ ತೆಗೆದುಕೊಳ್ಳಲು ಸರ್ದಾರರು ಇಷ್ಟಪಡಲಿಲ್ಲ. ಆದರೆ, ಯಾವುದೇ ಸಂದರ್ಭದಲ್ಲೂ ರಾಷ್ಟ್ರೀಯ ಸ್ವಯಂ ಸೇವಕ ಸಂಸ್ಥೆ ಅಥವಾ ಬೇರೆ ಯಾವುದೇ ಸಂಸ್ಥೆಯು ಕಾನೂನನ್ನು ಕೈಗೆತ್ತಿಕೊಳ್ಳಲು ಅವಕಾಶ ನೀಡಲು ಅವರು ಸಿದ್ಧರಿರಲಿಲ್ಲ. ಶಾಂತಿ ಮತ್ತು ಕಾನೂನು ಪಾಲನೆ ಸರ್ಕಾರದ ಕರ್ತವ್ಯ ಮತ್ತು ಅಧಿಕಾರ. ಅದನ್ನು ಬೇರೆ ಯಾರೂ ಅತಿಕ್ರಮಿಸುವ ಹಾಗಿರಲಿಲ್ಲ. ಅಂತಹ ಅತಿಕ್ರಮಣವನ್ನು ಸರ್ದಾರರು ಸಹಿಸುತ್ತಿರಲಿಲ್ಲ.

ಆದರೆ ರಾಷ್ಟ್ರೀಯ ಸ್ವಯಂ ಸೇವಕ ಸಂಸ್ಥೆಯ ಬಗೆಗೆ ನೆಹರು ಧೋರಣೆ ತದ್ವಿರುದ್ಧವಾಗಿತ್ತು. ಅವರು ಆ ಸಂಘವನ್ನು ಅಪನಂಬಿಕೆಯಿಂದ ನೋಡುತ್ತಿದ್ದರು ಮತ್ತು ಇಷ್ಟಪಡುತ್ತಿರಲಿಲ್ಲ. ಸಂಘದ ಆಕ್ರಮಣಕಾರಿ ಹಿಂದೂತ್ವದ ಬಗೆಗೆ ನೆಹರುಗೆ ಸಹಾನುಭೂತಿ ಇರಲಿಲ್ಲ. ಅವರನ್ನು ಅವರ ಮಾರ್ಗದಿಂದ ಹೊರಕ್ಕೆ ಎಳೆಯಬೇಕು ಅನ್ನುವ ಸರ್ದಾರರ ನಿಲುವಿನಲ್ಲೂ ಅವರಿಗೆ (ನೆಹರುಗೆ) ನಂಬಿಕೆ ಇರಲಿಲ್ಲ.[೨೨]

ರಾಷ್ಟ್ರೀಯ ಸ್ವಯಂ ಸೇವಕ ಸಂಸ್ಥೆಯ ನಾಯಕರು ದೆಹಲಿ ಅಥವಾ ಬೇರೆ ಕಡೆ ನಡೆದ ಕೊಲೆಗಳ ಬಗೆಗೆ ತಮ್ಮ ಪಾತ್ರವನ್ನು ನಿರಾಕರಿಸಿದರು. ತಮ್ಮ ಸಂಸ್ಥೆಯ ಗುರಿ ಹಿಂದೂಗಳ ರಕ್ಷಣೆಯೇ ಹೊರತು ಮುಸ್ಲಿಮರ ಕೊಲೆಯಲ್ಲ – ಎಂದರವರು. ಅವರು 'ಶಾಂತಿ ಸ್ಥಾಪನೆಗೆ ನಾವು ಬದ್ಧರು' ಎಂದು ಗಾಂಧೀಜಿಗೆ ಹೇಳಿದರು ಮತ್ತು ಭಂಗಿ ಕಾಲೋನಿಯಲ್ಲಿ ನಡೆಯುವ ತಮ್ಮ ಮೇಳಕ್ಕೆ ಬರಬೇಕೆಂದು

ಅವರನ್ನು ಆಹ್ವಾನಿಸಿದರು. ಗಾಂಧೀಜಿ ಒಪ್ಪಿದರು. ಮೇಳದಲ್ಲಿ ಅವರನ್ನು ರಾಷ್ಟ್ರೀಯ ಸ್ವಯಂ ಸೇವಕ ಸಂಸ್ಥೆಯವರು 'ಹಿಂದೂ ಧರ್ಮ ಸೃಷ್ಟಿಸಿರುವ ಶ್ರೇಷ್ಠ ವ್ಯಕ್ತಿ' ಎಂದು ಸ್ವಾಗತಿಸಿದರು.[೨೩]

ರಾಷ್ಟ್ರೀಯ ಸ್ವಯಂ ಸೇವಕ ಸಂಸ್ಥೆಯ ಪರಮೋಚ್ಚ ನಾಯಕ ಎಂ.ಎಸ್. ಗೋಲ್ವಾಲ್ಕರ್‌ರವರು ಪಟೇಲರಿಗೆ ಪತ್ರ ಬರೆದು, ಎರಡೂ ಪಕ್ಷಗಳ ಸಮಾನ ಶತ್ರು – ಕಮ್ಯುನಿಸ್ಟರ – ವಿರುದ್ಧ ಹೋರಾಡಲು ಸಹಾಯ ಹಸ್ತ ನೀಡುವುದಾಗಿ ತಿಳಿಸಿದರು. "ನಿಮ್ಮ ಸರ್ಕಾರದ ಬಲವನ್ನು ಮತ್ತು ನಮ್ಮ ಸಂಸ್ಥೆಯ ಸಾಂಸ್ಕೃತಿಕ ಶಕ್ತಿಯನ್ನು ಬಳಸಿದರೆ ಈ ಕೆಂಪು (ಕಮ್ಯುನಿಸ್ಟ್) ಉಪಟಳದಿಂದ ಶೀಘ್ರವೇ ಬಿಡುಗಡೆ ಪಡೆಯಬಹುದು," ಎಂದು ಅವರು ಪತ್ರದಲ್ಲಿ ಬರೆದಿದ್ದರು.[೨೪]

ಅಷ್ಟರಲ್ಲಿ ೧೯೪೮ರ ಜನವರಿ ೩೦ರಂದು ನಾಥುರಾಮ್ ವಿನಾಯಕ್ ಗೋಡ್ಸೆ ಎನ್ನುವ ಮಹಾರಾಷ್ಟ್ರದ ಬ್ರಾಹ್ಮಣನು ಗಾಂಧೀಜಿಯ ಎದೆಗೆ ಗುಂಡು ಹಾರಿಸಿ ಹತ್ಯೆ ಮಾಡಿದ ಮತ್ತು ಶರಣಾದ. ಅವನನ್ನು ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಪಡಿಸಿ ನ್ಯಾಯಾಲಯದ ತೀರ್ಪಿನಂತೆ ನೇಣುಗಂಭಕ್ಕೆ ಏರಿಸಲಾಯಿತು. ಅವನು ನ್ಯಾಯಾಲಯದಲ್ಲಿ ತನ್ನ ಕೃತ್ಯವನ್ನು ಸಮರ್ಥಿಸಿಕೊಂಡು ಮುಸ್ಲಿಮರ ದುರುದ್ದೇಶಗಳಿಗೆ ಮಹಾತ್ಮನ ಸತತ ಮತ್ತು ಸ್ಥಿರವಾದ ಉತ್ತೇಜನ ನನ್ನ ಕೃತ್ಯಕ್ಕೆ ಪ್ರಚೋದನೆ. ಮುಸ್ಲಿಂ ಪರವಾದ ಅವರ ಕೊನೆಯ (ಆಮರಣಾಂತ) ಉಪವಾಸವು ಗಾಂಧೀಜಿಯ ಅಸ್ಥಿತ್ವವನ್ನು ತಕ್ಷಣವೇ ಮುಕ್ತಾಯಕ್ಕೆ ತರಬೇಕು ಎಂದು ನಾನು ನಿರ್ಧರಿಸುವಂತೆ ಮಾಡಿತು' ಎಂದನು.[೨೫]

ರಾಷ್ಟ್ರೀಯ ಸ್ವಯಂ ಸೇವಕ ಸಂಸ್ಥೆಯು ಮಹಾತ್ಮನ ಹತ್ಯೆಯಲ್ಲಿ ನೇರ ಭಾಗಿ ಅಲ್ಲದಿದ್ದರೂ ಆ ಸಂಸ್ಥೆಯು ಪಂಜಾಬ್‌ನ ಹಿಂಸಾಚಾರದ ಸಮಯದಲ್ಲಿ ಬಹಳ ಸಕ್ರಿಯವಾಗಿದ್ದುದರಿಂದ ಮತ್ತು ರಾಷ್ಟ್ರೀಯ ಸ್ವಯಂ ಸೇವಕ ಸಂಸ್ಥೆಯವರು ಮಹಾತ್ಮನ ಹತ್ಯೆಗೆ ಸಿಹಿ ಹಂಚಿ ಸಂಭ್ರಮಿಸಿದರೆಂದು ವದಂತಿಗಳು ಹರಡಿದ್ದರಿಂದ, ಸರ್ಕಾರವು ಆ ಸಂಸ್ಥೆಯನ್ನು ಫೆಬ್ರುವರಿ ಪ್ರಾರಂಭದಲ್ಲಿ ನಿಷೇಧಿಸಿತು ಮತ್ತು ಅದರ ಸಾವಿರಾರು ಕಾರ್ಯಕರ್ತರನ್ನು ಬಂಧಿಸಿತು.[೨೬]

ನೆಹರು ಆ ಸಂಸ್ಥೆಯವರನ್ನು ಫ಼ಾಸಿಸ್ಟರು ಎಂದು ಕರೆದಿದ್ದರೆ, ಪಟೇಲರು ತಪ್ಪು ಹಾದಿಗೆ ಎಳೆಯಲ್ಪಟ್ಟ ದೇಶಭಕ್ತರು ಎಂದು ನಂಬಿದ್ದರು. ಆದರೆ ಕೆಲವು ಸ್ಥಳಗಳಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಸ್ಥೆಯವರು ಗಾಂಧೀಜಿಯ ಹತ್ಯೆಗೆ ಸಂಭ್ರಮಿಸಿದ ವರದಿ ಬಂದಾಗ ಪಟೇಲರು 'ಆ ಸಂಸ್ಥೆಯವರು ಅಪಾಯಕಾರಿ ಚಟುವಟಿಕೆಯಲ್ಲಿ ತೊಡಗಿದ್ದಾರೆ' ಎಂದು ತೀರ್ಮಾನಿಸಿ, ಆ ಸಂಸ್ಥೆಯ ನಿಷೇಧಕ್ಕೆ

ಒಪ್ಪಿಗೆ ನೀಡಿದ್ದರು. ಆದಾಗ್ಯೂ, ನೆಹರು ಮತ್ತು ಪಟೇಲ್ ನಡುವಣ ಭಿನ್ನಾಭಿಪ್ರಾಯ ಮುಂದುವರೆಯಿತು. ಫೆಬ್ರುವರಿ ತಿಂಗಳ ೨೭ರಂದು ನೆಹರು ಪಟೇಲರಿಗೆ 'ಬಾಪುವಿನ ಕೊಲೆ ಒಂದು ಪ್ರತ್ಯೇಕಿತವಾದ ಘಟನೆಯಲ್ಲ, ರಾಷ್ಟ್ರೀಯ ಸ್ವಯಂ ಸೇವಕ ಸಂಸ್ಥೆ ಹೆಣೆದ ದೊಡ್ಡ ಜಾಲದ ಒಂದು ಭಾಗ' ಎನ್ನುವ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಆದರೆ ಸರ್ದಾರರು ಆ ಅಭಿಪ್ರಾಯವನ್ನು ಒಪ್ಪಲಿಲ್ಲ. ಅವರೆಂದರು:

> ಬಾಪುವಿನ ಹತ್ಯೆಯ ಕೇಸಿನ ತನಿಖೆಯ ಬೆಳವಣಿಗೆಯ ಬಗೆಗೆ ನಾನು ಪ್ರತಿನಿತ್ಯ ವಿಚಾರಿಸಿಕೊಳ್ಳುತ್ತಿದ್ದೇನೆ. ದೆಹಲಿಯ ಪೊಲೀಸ್ ಇನ್‌ಸ್ಪೆಕ್ಟರ್ ಜೆನರಲ್ ಸಂಜೀವ್ ಒಡನೆ ಚರ್ಚಿಸುವುದಕ್ಕೆ ಮತ್ತು ಸೂಚನೆಗಳನ್ನು ಕೊಡುವುದಕ್ಕೆ ಸಂಜೆಯ ವೇಳೆ ಬಹಳ ಕಾಲವನ್ನು ವಿನಿಯೋಗಿಸುತ್ತಿದ್ದೇನೆ.
>
> ಆಪಾದಿತರೆಲ್ಲರೂ ದೀರ್ಘವಾದ ಮತ್ತು ವಿವರವಾದ ಹೇಳಿಕೆಗಳನ್ನು ನೀಡಿದ್ದಾರೆ. ಅವುಗಳಿಂದ, ರಾಷ್ಟ್ರೀಯ ಸ್ವಯಂ ಸೇವಕ ಸಂಸ್ಥೆ ಭಾಗಿಯಾಗಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಪಿತೂರಿಯನ್ನು ಹೂಡಿ ಜಾರಿಗೆ ತಂದದ್ದು ಹಿಂದೂ ಮಹಾಸಭಾದ ಒಂದು ಧರ್ಮಾಂಧತೆಯ ಭಾಗ.[೨೭]

ಪಟೇಲರು ಹಿಂದೂ ಆಡಳಿತದ ಪ್ರತಿಪಾದಕರಾಗಿರಲಿಲ್ಲ. ೧೯೪೯ರ ಫೆಬ್ರುವರಿಯಲ್ಲಿ ಅವರು 'ಹಿಂದೂರಾಜ್ಯ' ಅನ್ನುವುದು ಒಂದು 'ಹುಚ್ಚು ಅಭಿಪ್ರಾಯ' ಎಂದಿದ್ದರು. ಅದಕ್ಕೆ ೧೦ ವಾರಗಳಿಗೆ ಮುಂಚೆ ಅವರು 'ಪ್ರತಿಯೊಬ್ಬ ನಿಷ್ಠಾವಂತ ಮುಸ್ಲಿಮನನ್ನು ಸಹೋದರನಂತೆ ಕಾಣಬೇಕು' ಎಂದಿದ್ದರು. ರಾಷ್ಟ್ರೀಯ ಸ್ವಯಂ ಸೇವಕ ಸಂಸ್ಥೆಯ ಶಿಸ್ತು ಮತ್ತು ಸಂಖ್ಯೆಯನ್ನು ಅವರು ಮೆಚ್ಚಿದ್ದರು. ೧೯೪೭ರ ಹತ್ಯಾಕಾಂಡದಲ್ಲಿ ರಾಷ್ಟ್ರೀಯ ಸ್ವಯಂ ಸೇವಕ ಸಂಸ್ಥೆಯವರು ಅನೇಕ ಹಿಂದೂ ಮತ್ತು ಸಿಕ್ಖರ ಪ್ರಾಣವನ್ನು ಉಳಿಸಿದ್ದು ಅವರ ಮನಸ್ಸಿನಲ್ಲಿತ್ತು. ಅದರಿಂದ ಅವರ ಬಗೆಗೆ ಸಕಾರಾತ್ಮಕ ಭಾವವನ್ನು ಹೊಂದಿದ್ದರು. ಅವರು ರಾಷ್ಟ್ರೀಯ ಸ್ವಯಂ ಸೇವಕ ಸಂಸ್ಥೆಯನ್ನು ನಿಷೇಧಿಸಿದ ಒಂದು ವರ್ಷದ ನಂತರ ನಿಷೇಧವನ್ನು ರದ್ದು ಪಡಿಸಲು ನೆಹರು ಒಡನೆ ಸಮಾಲೋಚಿಸಿದರು. ರಾಷ್ಟ್ರೀಯ ಸ್ವಯಂಸೇವಕ ಸಂಘದ ಮೇಲಿನ ನಿಷೇಧ ಮತ್ತು ಅದರ ಕಾರ್ಯಕರ್ತರ ವಿಚಾರಣೆ ಇಲ್ಲದ ಸೆರೆವಾಸ ಧೀರ್ಘಕಾಲ ನಡೆಯಲು ಸಾಧ್ಯವಿಲ್ಲ – ಎನ್ನುವುದನ್ನು ನೆಹರು ಸಹ ಒಪ್ಪಿದರು. ೧೯೪೯ರ ಜುಲೈನಲ್ಲಿ ಗೋಲ್‌ವಾಲ್ಕರ್‌ರವರು ಪಟೇಲರ ಶರತ್ತುಗಳನ್ನು ಒಪ್ಪಿದರು. ಅವರು ಮತ್ತು ಅವರ ಕಾರ್ಯಕರ್ತರು ಬಿಡುಗಡೆ ಮಾಡಲ್ಪಟ್ಟರು.

ಆ ಸಂಸ್ಥೆಯ ನಿಷೇಧವನ್ನು ಸರ್ಕಾರ ಹಿಂತೆಗೆದುಕೊಂಡಿತು. ರಾಷ್ಟ್ರೀಯ ಸ್ವಯಂಸೇವಕ ಸಂಸ್ಥೆ ಒಂದು ಲಿಖಿತ ಮತ್ತು ಪ್ರಕಟಿತ ಸಂವಿಧಾನವನ್ನು ಅಂಗೀಕರಿಸ ಬೇಕು, ತನ್ನನ್ನು ಸಾಂಸ್ಕೃತಿಕ ಚಟುವಟಿಕೆಗಳಿಗೆ ಸೀಮಿತಗೊಳಿಸಿಕೊಳ್ಳಬೇಕು, ಹಿಂಸೆ ಮತ್ತು ರಹಸ್ಯವನ್ನು ತ್ಯಜಿಸುವ ಪ್ರಮಾಣ ಮಾಡಬೇಕು, ಭಾರತದ ಧ್ವಜ ಮತ್ತು ಸಂವಿಧಾನಕ್ಕೆ ನಿಷ್ಠೆಯನ್ನು ತೋರಬೇಕು ಮತ್ತು ಪ್ರಜಾಸತ್ತಾತ್ಮಕ ವ್ಯವಸ್ಥೆಗೆ ಅವಕಾಶ ಮಾಡಬೇಕು – ಇವು ಗೋಲ್‌ವಾಲ್ಕರ್ ಒಪ್ಪಿದ ಶರತ್ತುಗಳು.[೨೮]

ನಿಷೇಧವನ್ನು ಹಿಂತೆಗೆದುಕೊಳ್ಳುವಾಗ ಪಟೇಲರು ರಾಷ್ಟ್ರೀಯ ಸ್ವಯಂ ಸೇವಕ ಸಂಸ್ಥೆಯವರಿಗೆ, 'ಕಾಂಗ್ರೆಸ್ಸು ತಪ್ಪು ಹಾದಿಯಲ್ಲಿ ನಡೆಯುತ್ತಿದೆ ಎಂದು ನೀವು ಭಾವಿಸಿದರೆ, ನಿಮಗಿರುವ ಏಕೈಕ ಮಾರ್ಗವೆಂದರೆ ಕಾಂಗ್ರೆಸ್ಸನ್ನು ಒಳಗಿನಿಂದ ಸುಧಾರಣೆ ಗೊಳಿಸುವುದು,' ಎಂದು ಬುದ್ಧಿವಾದ ಹೇಳಿದರು.[೨೯]

೨೬.೩ ಬದಲಾದ ವಿರೋಧಿ

ಜಯಪ್ರಕಾಶ್ ನಾರಾಯಣ್‌ರವರು ಸಮಾಜವಾದಿ ನಾಯಕರ ಪೈಕಿ ಒಬ್ಬರು. ನೆಹರು ೧೯೨೭ರಲ್ಲಿ ರಷ್ಯಾಕ್ಕೆ ಹೋಗಿ ಬಂದ ಮೇಲೆ ಕಮ್ಯುನಿಸಂನಿಂದ ಪ್ರಭಾವಿತರಾಗಿ ಅದನ್ನು ಮೆಚ್ಚಿ ಮಾತನಾಡಲಾರಂಭಿಸಿದಾಗ ಜಯಪ್ರಕಾಶ್ ನಾರಾಯಣ್‌ರವರು ಅವರ ಆರಾಧಕರಾದರು. ಸಮಾಜವಾದದಿಂದ ಮಾತ್ರ ದೇಶದ ಸ್ವಾತಂತ್ರ್ಯ ಸಂಪಾದನೆ ಮತ್ತು ಅಭಿವೃದ್ಧಿ ಎಂದು ಇತರ ಸಮಾಜವಾದಿ ಗಳಂತೆ ಜಯಪ್ರಕಾಶ್ ನಾರಾಯಣ್‌ರವರು ಸಹ ನಂಬಿದ್ದರು ಮತ್ತು ಪ್ರಚಾರ ಮಾಡುತ್ತಿದ್ದರು. ಅದರಿಂದ ಸರ್ದಾರ್ ವಲ್ಲಭಭಾಯ್ ಪಟೇಲರು ಅವರನ್ನು ಕಟುವಾಗಿ ಟೀಕಿಸುತ್ತಿದ್ದರು. ಜಯಪ್ರಕಾಶ್ ನಾರಾಯಣ್‌ರವರು ಸಹ ಸರ್ದಾರರನ್ನು ಟೀಕಿಸುತ್ತಿದ್ದರು. ಅವರಿಗೆ ಸರ್ದಾರರ ಬಗೆಗೆ ಗೌರವವಿತ್ತು. ಆದಾಗ್ಯೂ ಅವರನ್ನು 'ಬಂಡವಾಳಗಾರರ ಕೈಗೊಂಬೆ,' 'ಬಂಡವಾಳಗಾರರ ಆಜ್ಞಾಪಾಲಕ' ಎಂದು ಟೀಕಿಸುತ್ತಿದ್ದರು.

೧೯೪೨ರ ಚಲೇಜಾವ್ ಚಳವಳಿಯ ಸಮಯದಲ್ಲಿ ಬಂಧಿತರಾಗಿದ್ದ ಜಯಪ್ರಕಾಶ್ ನಾರಾಯಣ್ ಹಜಾರಿಬಾಗ್ ಸೆರೆಮನೆಯ ಎತ್ತರವಾದ ಗೋಡೆಯನ್ನು ಹಾರಿ ಪಲಾಯನ ಮಾಡಿ ಪೊಲೀಸರ ಕೈಗೆ ಸಿಕ್ಕದೆ ನಡೆಸಿದ ಭೂಗತ ಚಟುವಟಿಕೆಗಳಿಂದ ಅವರು ನಾಡಿನ ಜನತೆಗೆ ವೀರ (Hero) ಆಗಿದ್ದರು. ಸುಮಾರು ಆರು ತಿಂಗಳು ಬೇಕಾಯಿತು ಪೊಲೀಸರು ಅವರನ್ನು ಪತ್ತೆ ಮಾಡಿ ಮತ್ತೆ ಬಂಧಿಸುವುದಕ್ಕೆ. ನಾಲ್ಕು ವರ್ಷಗಳ ನಂತರ ೧೯೪೬ರ ಏಪ್ರಿಲ್ ೨೨ರಂದು ಆಗ್ರ ಸೆಂಟ್ರಲ್ ಸೆರೆಮನೆಯಿಂದ ಅವರ ಬಿಡುಗಡೆಯಾಯಿತು. ತಕ್ಷಣ ಅವರು

ದೆಹಲಿಗೆ ಧಾವಿಸಿ ಭಂಗಿ ಕಾಲೊನಿಯಲ್ಲಿದ್ದ ಗಾಂಧೀಜಿಯವರನ್ನು ಭೇಟಿ ಮಾಡಿ, ನಂತರ ಪಟೇಲರ ಭೇಟಿಗಾಗಿ ನೇರವಾಗಿ 'ಬಿರ್ಲಾ ಸದನ'ಕ್ಕೆ ಹೋದರು. ಸರ್ದಾರರು ಅಲ್ಲಿ ತಂಗಿದ್ದರು. ಜಯಪ್ರಕಾಶ್ ನಾರಾಯಣ್‌ರವರನ್ನು ಕಂಡ ತಕ್ಷಣ ಸರ್ದಾರರು ಅವರನ್ನು ಆತ್ಮೀಯತೆಯಿಂದ ಸ್ವಾಗತಿಸುತ್ತಾ ಹೇಳಿದರು, "೧೯೪೨ರ ಚಳವಳಿಯಲ್ಲಿನ ನಿಮ್ಮ ಪಾತ್ರವು ನನ್ನ ಮತ್ತು ನಿಮ್ಮ ನಡುವಣ ಭಿನ್ನಾಭಿಪ್ರಾಯಗಳನ್ನು ತೊಡೆದು ಹಾಕಿದೆ." ಇಬ್ಬರೂ ಪ್ರೀತಿಯಿಂದ ತಬ್ಬಿಕೊಂಡರು. ಅವರ ಆಲಿಂಗನ ಐದು ನಿಮಿಷಗಳ ಕಾಲ ನಡೆಯಿತು. ಭಾವಾವೇಶದಿಂದ ಇಬ್ಬರ ಬಾಯಲ್ಲೂ ಸ್ವಲ್ಪ ಕಾಲ ಮಾತೇ ಹೊರಡಲಿಲ್ಲ.

* * * *

ಮುಂದೆ ಸರ್ದಾರರು ೫೬೫ ದೇಶೀಯ ರಾಜರುಗಳನ್ನು ಜಾಣ್ಮೆಯಿಂದ ಒಲಿಸಿ ಭಾರತ ಒಕ್ಕೂಟವನ್ನು ಸ್ಥಾಪಿಸಿದ ಅದ್ಭುತ ರೀತಿಯನ್ನು ನೋಡಿ ಜಯಪ್ರಕಾಶ್ ನಾರಾಯಣ್‌ರವರು ಸರ್ದಾರರ ಬಗೆಗೆ ತಮ್ಮ ಹಿಂದಿನ ನಿಲುವನ್ನು ಸಂಪೂರ್ಣವಾಗಿ ಬದಲಾಯಿಸಿಕೊಂಡರು. ಅಷ್ಟೇ ಅಲ್ಲ, 'ನಾನು ಸರ್ದಾರರಿಗೆ ಅನ್ಯಾಯ ಮಾಡಿದೆ' ಎಂದು ಪಶ್ಚಾತ್ತಾಪ ಪಟ್ಟರು. ಕೇರಳದ ಕೊಚ್ಚಿಯಲ್ಲಿ ೧೯೭೭ರ ಅಕ್ಟೋಬರ್ ೩೧ರಂದು ಆರಂಭವಾದ 'ಸರ್ದಾರ್ ಪಟೇಲ್ ಸಭಾಗೃಹ'ದ ನೆನಪಿನ ಸಂಚಿಕೆಗೆ ಬರೆದ ವಿಶೇಷ ಲೇಖನದಲ್ಲಿ ಸರ್ದಾರರ ದೂರದೃಷ್ಟಿ ಮತ್ತು ಪರಿಣತೆಯನ್ನು ಮುಕ್ತ ಕಂಠದಿಂದ ಹೊಗಳಿದರು.

ಆ ಸಂಚಿಕೆಯಲ್ಲಿ ಅವರು ಪ್ರಸ್ತಾಪಿಸಿದ ಮತ್ತೊಂದು ಸಂಗತಿ ಹೀಗಿತ್ತು:

ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ನೆಹರುವನ್ನು ವಿದೇಶ ವ್ಯವಹಾರಗಳಲ್ಲಿ ಪರಿಣಿತ ಎಂದು ಎಲ್ಲರೂ ಭಾವಿಸಿದ್ದರು. ೧೯೫೦ರ ನವೆಂಬರ್ ೭ರಂದು ಆಗ ಗೃಹಮಂತ್ರಿ ಹಾಗೂ ಉಪಪ್ರಧಾನಮಂತ್ರಿ ಆಗಿದ್ದ ಪಟೇಲರು ಜವಹರಲಾಲ್ ನೆಹರುಗೆ ಟಿಬೆಟ್ ಮತ್ತು ಚೀನಾ ಬಗೆಗೆ ಒಂದು ದೀರ್ಘ ಪತ್ರವನ್ನು ಬರೆದು ಎಚ್ಚರಿಸಿದ್ದರು. ಆ ಪತ್ರವು ಭವನ್ಸ್ ಜರ್ನಲ್‌ನ ಒಂದು ಸಂಚಿಕೆಯಲ್ಲಿ ಮುದ್ರಿತವಾಗಿತ್ತು. ಅದನ್ನು ಓದಿದ ಮೇಲೆ 'ಸರ್ದಾರರ ಶ್ರೇಷ್ಠತೆ ಅರಿವಾಯಿತು' ಎಂದು ಜಯಪ್ರಕಾಶ್ ನಾರಾಯಣ್‌ರವರು ಆ ವಿಶೇಷ ಸಂಚಿಕೆಯಲ್ಲಿ ಬರೆದಿದ್ದರು. ಮುಂದುವರೆದು ಅವರು ಹೀಗೆ ಬರೆದರು:

"ಯಾವ ವಿಷಯಗಳಲ್ಲಿ ಪಟೇಲರು ಪರಿಣಿತ ಅಲ್ಲವೆಂದು
ಭಾವಿಸಲಾಗಿತ್ತೊ ಆ ವಿಷಯುಗಳಲ್ಲೂ ಅವರಿಗೆ ಇದ್ದ

> ಸರಿಸಾಟಿಯಿಲ್ಲದ ಪ್ರಭುತ್ವವು ನನ್ನನ್ನು ಬೆರಗುಗೊಳಿಸಿತು. ಕಳೆದ ಕೆಲವು ವರ್ಷಗಳ ಚರಿತ್ರೆಯನ್ನು ಅವಲೋಕಿಸಿದರೆ ಜವಹರಲಾಲ್ ನೆಹರು ಸರ್ದಾರರ ಸಲಹೆಯನ್ನು ಪಾಲಿಸಿದ್ದರೆ, ಚೀನಾ ದೇಶವು ಈಗ ನಮಗೆ ಆಗಿರುವಂತೆ ಒಂದು ಉಪದ್ರವ ಆಗಿರುತ್ತಿರಲಿಲ್ಲ ಎಂಬುದು ಮನವರಿಕೆಯಾಗಿದೆ."[೩೦]

೨೬.೪ ಸರ್ದಾರರ ಶ್ರೀಮಂತ ಆಪ್ತ

ಸರ್ದಾರರಿಗೆ ಅನೇಕ ಶ್ರೀಮಂತರು ಆಪ್ತರಾಗಿದ್ದರು. ಅವರಲ್ಲಿ ಘನಶ್ಯಾಂದಾಸ್ ಬಿರ್ಲಾ ಪ್ರಮುಖರು. ಅವರಿಬ್ಬರ ನಡುವೆ ಒಂದು ವಿಶೇಷವಾದ ಬಾಂಧವ್ಯವಿತ್ತು. ೧೯೨೦ರ ದಶಕದಲ್ಲಿ ಪಟೇಲರೊಡನೆ ಬಿರ್ಲಾರವರ ಸಂಬಂಧ ಆರಂಭವಾಯಿತು. ೧೯೩೦ರ ಹೊತ್ತಿಗೆ ಅವರು ಪಟೇಲರಿಗೆ ಬಹಳ ಆತ್ಮೀಯರಾಗಿ ಬೆಳೆದಿದ್ದರು. ಪಟೇಲರ ಕುಟುಂಬದಲ್ಲಿ ಅವರು ನಿಕಟ ಪರಿಚಯಸ್ಥರಾಗಿದ್ದರು. ಪಟೇಲರು ಅವರ ಮೇಲೆ ಅವಲಂಬಿಸಬಹುದಾಗಿತ್ತು. ಆ ಸಂಬಂಧದ ಬಗ್ಗೆ ಬಿರ್ಲಾ ಹೀಗೆ ಬರೆದಿದ್ದಾರೆ:

"ಸರ್ದಾರರಿಂದ ನನಗೆ ಟೆಲಿಗ್ರಾಂ ಬರುವುದು. ಕೆಲವೊಮ್ಮೆ 'ತಕ್ಷಣ ಬಾ' ಎಂಬ ಎರಡೇ ಪದಗಳಿರುವುವು. ಅವರಲ್ಲಿಗೆ ನಾನು ಹೋದಾಗ ನಾನು ಮಾಡಬೇಕಾದ ಕೆಲಸವನ್ನು ಹೇಳುವರು. ಧನ ಸಂಗ್ರಹಣದ ಪ್ರಶ್ನೆ ಅನಿವಾರ್ಯವಾಗಿ ಉದ್ಭವಿಸುವುದು. ಗಾಂಧೀಜಿ ನನಗೆ ಹೇಳಿದ್ದ 'ಸರ್ದಾರನು ವಾಣಿಜ್ಯೋದ್ಯಮಿಗಳಿಂದ ಹಣ ಸಂಗ್ರಹಿಸುವುದನ್ನು ನಾನು ಇಷ್ಟ ಪಡುವುದಿಲ್ಲ' ಎಂಬ ಮಾತನ್ನು ಒಮ್ಮೆ ಸರ್ದಾರರಿಗೆ ಹೇಳಿದೆ. ಅವರ ವಿಶಿಷ್ಟ ಗುಣಕ್ಕೆ ತಕ್ಕಂತೆ ಅವರ ಉತ್ತರ ಹೀಗಿತ್ತು, 'ಇದು ಅವರಿಗೆ (ಗಾಂಧೀಜಿಗೆ) ಸಂಬಂಧಿಸಿದ್ದಲ್ಲ. ಅವರು ಒಬ್ಬ ಮಹಾತ್ಮ, ನಾನಲ್ಲ. ನಾನು ನನ್ನ ಕೆಲಸವನ್ನು ನೆರವೇರಿಸಬೇಕಿದೆ'".

ರಾಷ್ಟ್ರೀಯ ನಾಯಕರು ದೆಹಲಿಗೆ ಬಂದಾಗಲೆಲ್ಲಾ 'ಬಿರ್ಲಾ ಹೌಸ್' ನಲ್ಲಿ ತಂಗುತ್ತಿದ್ದರು. ಅವರಿಗೆ ಬಿರ್ಲಾರವರ ಮನೆಯ ಬಾಗಿಲು ಸದಾ ತೆರೆದಿರುತ್ತಿತ್ತು. ಗಾಂಧೀಜಿಯು ದೆಹಲಿಗೆ ಬಂದಾಗ ಅಲ್ಲಿ ತಂಗಲು ಆರಂಭಿಸಿದರು. ಅದರ ಫಲವಾಗಿ ಇತರ ನಾಯಕರು ಅಲ್ಲಿ ತಂಗಲು ಆರಂಭಿಸಿದರು. ಇದರಿಂದ ಅವರ ಮತ್ತು ಬಿರ್ಲಾ ನಡುವಣ ಬಾಂಧವ್ಯ ಬೆಳೆಯುತ್ತಾ ಹೋಯಿತು. ಬಿರ್ಲಾರವರ ದೆಹಲಿ ಸದನವಲ್ಲದೆ ಬೊಂಬಾಯಿ, ಕಲ್ಕತ್ತ, ರಾಂಚಿ, ಮುಸ್ಸೋರಿ ಮತ್ತು ಸಿಮ್ಲಾಗಳಲ್ಲಿ ಇದ್ದ ಬಿರ್ಲಾರವರ ಸದನಗಳಲ್ಲೂ ರಾಷ್ಟ್ರ ನಾಯಕರು ತಂಗುತ್ತಿದ್ದರು. ೧೯೩೯ರ

ಅಕ್ಟೋಬರ್‌ನಲ್ಲಿ ವೈಸ್‌ರಾಯ್ ಲಾರ್ಡ್ ಲಿನ್‌ಲಿತ್‌ಗೊ ಒಡನೆ ಸಮಾಲೋಚನೆಗೆ ಗಾಂಧೀಜಿ ದೆಹಲಿಗೆ ಬಂದಾಗ 'ಬಿರ್ಲಾ ಹೌಸ್' ನಲ್ಲಿ ತಂಗಿದ್ದರು. ಕ್ರಿಪ್ಸ್ ಮಿಷನ್ ಸಮಯದಲ್ಲಿ ಗಾಂಧೀಜಿ ಮತ್ತು ಇತರ ನಾಯಕರು ಸಮಾಲೋಚಿಸುತ್ತಿದ್ದುದು ದೆಹಲಿಯ 'ಬಿರ್ಲಾ ಹೌಸ್' ನಲ್ಲಿ. ೧೯೪೨ರಲ್ಲಿ ' 'ಭಾರತ ಬಿಟ್ಟು ತೊಲಗಿ' ಚಳುವಳಿಯ ಆರಂಭಕ್ಕಾಗಿ ಗಾಂಧೀಜಿ ಬೊಂಬಾಯಿಗೆ ಬಂದಾಗ ಅವರು ತಂಗಿದ್ದು ಅಲ್ಲಿಯ 'ಬಿರ್ಲಾ ಹೌಸ್'ನಲ್ಲಿ. ಗಾಂಧೀಜಿ ದಸ್ತಗಿರಿಯಾಗಿದ್ದೂ ಸಹ ಆ ಮನೆಯಲ್ಲೆ. ೧೯೪೬ರ ಸಿಮ್ಲಾ ಸಮಾವೇಶದ ಸಮಯದಲ್ಲಿ ಬಹಳಷ್ಟು ಮಂದಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರು ತಂಗಿದ್ದುದು ಸಿಮ್ಲಾದಲ್ಲಿದ್ದ 'ಬಿರ್ಲಾ ಹೌಸ್' ನಲ್ಲಿ. ಹಿಂದೆ ಮೋತಿಲಾಲ್ ನೆಹರುರವರ ಅಲಹಾಬಾದ್‌ನ ಆನಂದ ಭವನ ಹೇಗೆ ಕಾಂಗ್ರೆಸ್ ಚಟುವಟಿಕೆಗಳ ಕೇಂದ್ರವಾಗಿತ್ತೋ ಹಾಗೆ ದೆಹಲಿಯ 'ಬಿರ್ಲಾ ಹೌಸ್' ಕಾಂಗ್ರೆಸ್ ಚಟುವಟಿಕೆಗಳ ಕೇಂದ್ರವಾಗಿತ್ತು. ಅದು ಎಷ್ಟರ ಮಟ್ಟಿಗೆ ಕಾಂಗ್ರೆಸ್ ಚಟುವಟಿಕೆಗಳ ಕೇಂದ್ರವಾಗಿತ್ತೆಂದರೆ, ವೈಸ್‌ರಾಯ್‌ನ ಆಪ್ತ ಕಾರ್ಯದರ್ಶಿ ಗಿಲ್ಬರ್ಟ್ ಲೈತ್‌ವೈಟ್, "ಇಂಡಿಯಾದ ನಿಜವಾದ ರಾಜಧಾನಿ ಯಾವುದೆಂದರೆ ನವದೆಹಲಿ ಮಾತ್ರವಲ್ಲ, ಮಹಾತ್ಮ ಗಾಂಧಿ ಮತ್ತು ಇತರ ಕಾಂಗ್ರೆಸ್ ನಾಯಕರು ತಂಗುವ ಮತ್ತು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಸಭೆ ಸೇರುವ ಮತ್ತು ಪ್ರಮುಖ ರಾಜಕೀಯ ತೀರ್ಮಾನಗಳನ್ನು ತೆಗೆದುಕೊಳ್ಳುವ 'ಬಿರ್ಲಾ ಹೌಸ್' ಸಹ ಆಗಿದೆ," ಎಂದು ಹೇಳಿದ್ದಾರೆ. ಗಾಂಧೀಜಿಯ ಹತ್ಯೆ ಆದದ್ದೂ ಸಹ ಈ ದೆಹಲಿಯ 'ಬಿರ್ಲಾ ಹೌಸ್'ನಲ್ಲಿ ಮತ್ತು ಸರ್ದಾರರು ಗತಿಸಿದ್ದು ಬೊಂಬಾಯಿಯ 'ಬಿರ್ಲಾ ಹೌಸ್'ನಲ್ಲಿ.

ಬಿರ್ಲಾ–ಪಟೇಲ್ ಸಂಬಂಧ ರಾಜಕೀಯ ಹಾಗೂ ವೈಯುಕ್ತಿಕ – ಎರಡೂ ಆಗಿತ್ತು. ಅನೇಕ ವಿಷಯ ಮತ್ತು ಸಮಸ್ಯೆಗಳ ಬಗೆಗೆ ಇಬ್ಬರದೂ ಒಂದೇ ಅಭಿಪ್ರಾಯ ವಾಗಿರುತ್ತಿತ್ತು. ಅದರಿಂದ, ವರ್ಷಗಳು ಉರುಳಿದಂತೆ ಇಬ್ಬರೂ ಹೆಚ್ಚು ಹೆಚ್ಚು ಹತ್ತಿರಕ್ಕೆ ಬರುತ್ತಾ ಹೋದರು. ಗಾಂಧೀಜಿಯ ಒಡನೆ ಬಿರ್ಲಾಗೆ ಇದ್ದ ಸಾಮೀಪ್ಯ ಮತ್ತು ಸಂಬಂಧದ ಫಲವಾಗಿ ಕಾಂಗ್ರೆಸ್ ವರಿಷ್ಠರ ಎಲ್ಲಾ ಒಳ ವ್ಯವಹಾರಗಳು, ಚಟುವಟಿಕೆಗಳು ಮತ್ತು ಅಭಿಪ್ರಾಯಗಳು ಬಿರ್ಲಾಗೆ ಗೊತ್ತಾಗುತ್ತಿದ್ದವು. ಕಾಂಗ್ರೆಸ್ಸನ್ನು ಎಡ ಪಂಥದ ಕಡೆಗೆ ನಡೆಸುವ ನೆಹರೂರವರ ಪ್ರಯತ್ನವನ್ನು ತಡೆಗಟ್ಟಲು ಪಟೇಲ್ ಮತ್ತು ಇತರ ಬಲ ಪಂಥೀಯರು ಮಾಡುತ್ತಿದ್ದ ಪ್ರಯತ್ನಗಳನ್ನು ಬಿರ್ಲಾ ಗಮನಿಸುತ್ತಿದ್ದರು ಮತ್ತು ಪಟೇಲರ ಕೈ ಬಲಪಡಿಸಲು ಪ್ರಯತ್ನಿಸುತ್ತಿದ್ದರು. ಬಲಿಷ್ಠ ಕೇಂದ್ರ ಸರ್ಕಾರ, ಬಲಿಷ್ಠ ಮಿಲಿಟರಿ ಮತ್ತು ಅಂತರ್‌ರಾಷ್ಟ್ರೀಯ ವಲಯದಲ್ಲಿ ಭಾರತಕ್ಕೆ ಸರಿಯಾದ ಸ್ಥಾನ–ಮಾನದ ವಿಷಯದಲ್ಲಿ ಇಬ್ಬರಿಗೂ ನಂಬಿಕೆ ಇತ್ತು.

ಭಾರತವು ಶೀತಲ ಸಮರ ಯುಗದಲ್ಲಿ ಕಮ್ಯುನಿಸ್ಟ್ ಆಡಳಿತಗಳಿಗೆ ವಿರುದ್ಧವಾಗಿ ಪಶ್ಚಿಮದ ಮಿತ್ರನಾಗಬೇಕೆಂದೂ ಸಹ ಅವರು ನಂಬಿದ್ದರು. ಸ್ವಾತಂತ್ರ್ಯ ಪೂರ್ವ ಮತ್ತು ಸ್ವಾತಂತ್ರ್ಯಾನಂತರ ದೇಶವು ಎದುರಿಸಿದ ಮುಸ್ಲಿಮ್ ಸಮಸ್ಯೆ, ನಿರಾಶ್ರಿತರ ಸಮಸ್ಯೆ ಮುಂತಾದವುಗಳ ಪರಿಹಾರದಲ್ಲೂ ಇಬ್ಬರದು ಒಂದೇ ಅಭಿಪ್ರಾಯವಾಗಿತ್ತು.

ಸರ್ದಾರ್ ಪಟೇಲರು ತಮ್ಮ ಜನ್ಮ ರಾಜ್ಯ ಗುಜರಾತ್‌ನಲ್ಲಿ ಗ್ರಾಮಾಂತರ ಅಭಿವೃದ್ಧಿಯ ಒಂದು ಸಮಗ್ರ ಯೋಜನೆಯನ್ನು ಜಾರಿಗೆ ತರಬೇಕೆಂಬ ಅಭಿಲಾಶೆಯನ್ನು ಬಹಳ ವರ್ಷಗಳಿಂದ ಹೊಂದಿದ್ದರು. ಆ ಮೂಲಕ ಹಳ್ಳಿಗಳಲ್ಲಿ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಪ್ರಗತಿ ಆಗಬೇಕೆಂದು ಅವರು ಬಯಸಿದ್ದರು. ಅದರ ಅಂಗವಾಗಿ ಬಿರ್ಲಾರವರು 'ಬಿರ್ಲಾ ವಿಶ್ವಕರ್ಮ ಮಹಾವಿದ್ಯಾಲಯ' ದ ಸ್ಥಾಪನೆಗೆ ಪಟೇಲರಿಗೆ ನೆರವು ನೀಡಿದರು. ಅದರ ಆರಂಭೋತ್ಸವವನ್ನು ೧೯೪೮ರ ಜೂನ್‌ನಲ್ಲಿ ಲಾರ್ಡ್ ಮತ್ತು ಲೇಡಿ ಮೌಂಟ್‌ಬ್ಯಾಟನ್ ನೆರವೇರಿಸಿದರು.

ಅದಕ್ಕೆ ಮುಂಚೆ, ೧೯೪೭ರ ದೀಪಾವಳಿ ಸಮಯದಲ್ಲಿ ಪಟೇಲ್‌ರವರು ಸೌರಾಷ್ಟ್ರದಲ್ಲಿರುವ ಪುರಾತನವೂ, ಪವಿತ್ರವೂ, ಪ್ರಸಿದ್ಧವೂ ಆದ ಸೋಮನಾಥ ದೇವಾಲಯಕ್ಕೆ ಭೇಟಿ ಕೊಟ್ಟಿದ್ದರು. ಹಿಂದೂಗಳಿಗೆ ಅದೊಂದು ಬಹು ಮುಖ್ಯ ಯಾತ್ರಾಸ್ಥಳ. ಅದು ೧೨ ಜ್ಯೋತಿರ್ಲಿಂಗಗಳ ಪೈಕಿ ಒಂದು. ಆದರೆ ೧೦೬೫ರಲ್ಲಿ ಮಹ್ಮದ್ ಘಜ್ನಿ ಅದರ ಮೇಲೆ ಆಕ್ರಮಣ ಮಾಡಿ ನಾಶ ಪಡಿಸಿದ್ದನು. ನಂತರ ಅದನ್ನು ಮತ್ತೆ ನಿರ್ಮಿಸಲಾಗಿತ್ತು. ಅದು ಮತ್ತೆ ಆಕ್ರಮಣಕ್ಕೆ ತುತ್ತಾಯಿತು. ಹೀಗೆ ಅದು ಏಳು ಬಾರಿ ಆಕ್ರಮಣಕ್ಕೆ ತುತ್ತಾಗಿ, ಏಳು ಬಾರಿಯೂ ಮತ್ತೆ ಮತ್ತೆ ನಿರ್ಮಿಸಲ್ಪಟ್ಟಿತ್ತು. ಪಟೇಲರ ಭೇಟಿಯ ಸಮಯದಲ್ಲಿ ಅದು ನಾಶವಾಗಿತ್ತು. ಸ್ಥಳೀಯರ ಬೇಡಿಕೆಯ ಮೇರೆ ಪಟೇಲರು ಆ ದೇವಾಲಯನ್ನು ಪುನರ್ನಿರ್ಮಾಣ ಮಾಡುವುದಾಗಿ ಪ್ರತಿಜ್ಞೆ ಮಾಡಿದರು. ಅದರ ಧಾರ್ಮಿಕ ವಿಧಿಯ ಭಾಗವಾಗಿ ಸಮುದ್ರದ ನೀರನ್ನು ಆ ಸ್ಥಳದಲ್ಲಿ ಪ್ರೋಕ್ಷಿಸಿದರು. ಮುಂದೆ ಆ ದೇವಾಲಯದ ಪುನರ್ನಿರ್ಮಾಣಕ್ಕೆ ಒಂದು ಸಮಿತಿಯನ್ನು ರಚಿಸಿ, ಧನ ಸಂಗ್ರಹಿಸಿ ಅದನ್ನು ಕಟ್ಟಲಾಯಿತು. ಆ ಸಮಿತಿಯಲ್ಲಿ ಬಿರ್ಲಾರವರ ತಮ್ಮ ಬ್ರಜ್‌ಮೋಹನ್ ಬಿರ್ಲಾ ಇದ್ದರು. ಅದರ ನಿರ್ಮಾಣ ಕಾರ್ಯದಲ್ಲಿ ಬಿರ್ಲಾ ಕುಟುಂಬ ಭಾರಿ ಜವಾಬ್ದಾರಿಯನ್ನು ವಹಿಸಿತು. ದೇವಾಲಯದ ಪವಿತ್ರೋತ್ಸವವನ್ನು ಮೇ ೧೧, ೧೯೫೧ರಂದು ಅಂದಿನ ರಾಷ್ಟ್ರಪತಿ ರಾಜೇಂದ್ರ ಪ್ರಸಾದ್ ನೆರವೇರಿಸಿದರು. ಆದರೆ ದುರಾದೃಷ್ಟವಶಾತ್ ಆ ವೇಳೆಗೆ ಸರ್ದಾರ್ ಪಟೇಲರು ಗತಿಸಿದ್ದರು.

೧೯೪೯ರ ಬೇಸಿಗೆಯಲ್ಲಿ ಬಿರ್ಲಾ ಬ್ರಿಟನ್ ಮತ್ತು ಅಮೆರಿಕ ಸಂಯುಕ್ತ ಸಂಸ್ಥಾನಕ್ಕೆ ಭೇಟಿ ಕೊಟ್ಟು ಅನೇಕ ರಾಜಕೀಯ ಮತ್ತು ವಾಣಿಜ್ಯ ನಾಯಕರೊಡನೆ ಭಾರತ ಎದುರಿಸುತ್ತಿರುವ ಸಮಸ್ಯೆಗಳ ಬಗೆಗೆ ಚರ್ಚಿಸಿದರು. ಅದು ಖಾಸಗಿ ಭೇಟಿಯಾಗಿದ್ದರೂ ಸಹ ಆ ಎರಡು ರಾಷ್ಟ್ರಗಳಲ್ಲಿ ಅವರಿಗೆ ದೊರೆತ ಸ್ವಾಗತ ಅವರು ಗಳಿಸಿದ್ದ ಗೌರವದ ಸೂಚಕವಾಗಿತ್ತು. ಅವರು ತಾವು ಮಾಡಿದ ಭೇಟಿಗಳ ಬಗೆಗೆ ಸರ್ದಾರರಿಗೆ ಪತ್ರ ಬರೆದು ವಿವರಣೆ ನೀಡುತ್ತಿದ್ದರು. ಅವರು ಸರ್ದಾರರ ಖಾಸಗಿ ನಿಯೋಗಿಯಾಗಿದ್ದರು.

ಪಟೇಲರ ನಿಯೋಗಿಯಾಗಿ ಬ್ರಿಟನ್ ಮತ್ತು ಅಮೆರಿಕದ ನಾಯಕರಿಗೆ ಬಿರ್ಲಾರವರ ಸಂದೇಶ ಸ್ಪಷ್ಟವಾಗಿತ್ತು, ಭಾರತಕ್ಕೆ ಕೈಗಾರಿಕಾಕರಣಕ್ಕಾಗಿ ಆರ್ಥಿಕ ಮತ್ತು ತಾಂತ್ರಿಕ ಸಹಾಯ ಮತ್ತು ಕಾಶ್ಮೀರದ ಸಂಬಂಧ ಪಾಕಿಸ್ತಾನವನ್ನು ಎದುರಿಸುವುದಕ್ಕಾಗಿ ಮಿಲಿಟರಿ ಉಪಕರಣಗಳು ಬೇಕು ಎಂಬುದು ಆ ಸಂದೇಶವಾಗಿತ್ತು. ಅಮೆರಿಕದಲ್ಲಿ ವಿಶ್ವ ಬ್ಯಾಂಕ್, ಆಮದು-ರಫ್ತು ಬ್ಯಾಂಕ್ ಮತ್ತು ವಾಣಿಜ್ಯ ವಲಯದ ನಾಯಕರೊಡನೆ ಆರ್ಥಿಕ ಸಹಾಯ ಪಡೆಯುವ ದಿಕ್ಕಿನಲ್ಲಿ ಬಿರ್ಲಾ ಚರ್ಚಿಸಿದರು.

ವಿದೇಶದಲ್ಲಿದ್ದರೂ ಬಿರ್ಲಾಗೆ ಪಟೇಲ್‌ರವರ ಆರೋಗ್ಯದ್ದೇ ಚಿಂತೆಯಾಗಿತ್ತು. ಪಟೇಲ್‌ರವರ ಕಾರ್ಯದರ್ಶಿ ವಿದ್ಯಾಶಂಕರ್ ಮತ್ತು ತಮ್ಮ ಕುಟುಂಬದ ಸದಸ್ಯರಿಂದ ಪಟೇಲರ ಆರೋಗ್ಯದ ಸ್ಥಿತಿಯನ್ನು ದೂರವಾಣಿಯ ಮೂಲಕ ತಿಳಿಯುತ್ತಿದ್ದರು. ೧೯೪೮ರ ಮಾರ್ಚ್‌ನಲ್ಲಿ ಪಟೇಲರಿಗೆ ಹೃದಯಾಘಾತವಾದ ಮೇಲೆ ಅವರಿಗೊಂದು ಡಕೋಟ ವಿಮಾನವನ್ನು ಬಿರ್ಲಾ ಏರ್ಪಡಿಸಿದ್ದರು. ಈಗ ಪಟೇಲರಿಗೆ ಹೃದಯದ ತೊಂದರೆಯ ಜೊತೆಗೆ ಸಣ್ಣ ಕರುಳಿನಲ್ಲೂ ತೊಂದರೆ ಕಾಣಿಸಿತ್ತು. ವಿದೇಶಕ್ಕೆ ಹೋಗುವಾಗ ಪಟೇಲರ ಕ್ಷ-ಕಿರಣ ಮತ್ತು ಇತರ ವೈದ್ಯಕೀಯ ದಾಖಲೆಗಳನ್ನು ಅವರು ತೆಗೆದುಕೊಂಡು ಹೋಗಿದ್ದರು, ವಿದೇಶೀ ಪರಿಣಿತರ ಅಭಿಪ್ರಾಯವನ್ನು ಪಡೆಯುವುದಕ್ಕಾಗಿ

ಇಂಗ್ಲೆಂಡ್ ಮತ್ತು ಅಮೆರಿಕ ಭೇಟಿ ಮುಗಿಸಿ ಭಾರತಕ್ಕೆ ಹಿಂದಿರುಗಿದ ಮೇಲೆ, ಪಟೇಲ್ ಮತ್ತು ನೆಹರು ನಡುವೆ ಬಿರುಕು ದೊಡ್ಡದಾಗಿರುವುದನ್ನು ಬಿರ್ಲಾ ಕಂಡರು. ಅದು ಅವರಿಗೆ ಬಹಳ ಸಂಕಟವನ್ನುಂಟು ಮಾಡಿತು. ಆದರೆ, ನೆಹರು ಮತ್ತು ಪಟೇಲ್ ಇಬ್ಬರಿಗೂ ಅವರು ಆಪ್ತರಾಗಿದ್ದರೂ ಸಹ ಏನೂ ಮಾಡುವ ಹಾಗಿರಲಿಲ್ಲ.

❖ ◆ ❖

೨೭. ವಿವಿಧ ಸಂದರ್ಭಗಳಲ್ಲಿ ಸರ್ದಾರರು

೨೭.೧ ನೆಹರು ರಾಜೀನಾಮೆ ಬೆದರಿಕೆ

೧೯೪೮ರ ಅಕ್ಟೋಬರ್‌ನಲ್ಲಿ ಪುರುಷೋತ್ತಮ ದಾಸ್ ಟಂಡನ್‌ರವರನ್ನು ಸೋಲಿಸಿ ಪಟ್ಟಾಭಿ ಸೀತಾರಾಮಯ್ಯ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಚುನಾಯಿತರಾದರು. ನೆಹರು ಮತ್ತು ಪಟೇಲ್ ತಟಸ್ಥವಾಗಿದ್ದು ಯಾರ ಬೆಂಬಲಕ್ಕೂ ಹೋಗಲಿಲ್ಲ. ಆದಾಗ್ಯೂ, ನೆಹರು ಒಲವು ಪಟ್ಟಾಭಿಯವರ ಕಡೆಗೆ ಮತ್ತು ಪಟೇಲರ ಒಲವು ಟಂಡನ್‌ಕಡೆಗೆ ಇತ್ತು ಎನ್ನುವುದು ಎಲ್ಲರಿಗೂ ತಿಳಿದಿತ್ತು.

೧೮ ತಿಂಗಳ ನಂತರ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಮತ್ತೆ ಚುನಾವಣೆ ನಡೆಯಿತು. ಚುನಾವಣಾ ಕಣದಲ್ಲಿ ಉತ್ತರ ಪ್ರದೇಶದ ಪುರುಷೋತ್ತಮ ದಾಸ್ ಟಂಡನ್ ಮತ್ತು ಮಹರಾಷ್ಟ್ರದ ಶಂಕರರಾವ್ ಡಿಯೊ ಇದ್ದರು. ನೆಹರುಗೆ ಟಂಡನ್ ಅಧ್ಯಕ್ಷರಾಗುವುದು ಇಷ್ಟವಿರಲಿಲ್ಲ. ಆ ವಿಷಯವನ್ನು ಪಟೇಲರಿಗೆ ಡೆಹ್ರಡೂನ್‌ನಲ್ಲಿ ಅವರನ್ನು ಜುಲೈ ೫ರಂದು ಭೇಟಿ ಮಾಡಿದಾಗ ತಿಳಿಸಿದ್ದರು. ಅದಕ್ಕೆ ಕಾರಣವನ್ನು ಕೊಟ್ಟಿದ್ದರು. ನೆಹರುರವರು ಪಟೇಲರಿಗೆ, 'ಟಂಡನ್ ಬಗೆಗೆ ತಮಗೆ ಪ್ರೀತಿಯಿದೆ ಯೆಂದೂ, ಆದರೆ ಗಡ್ಡದ ಮುಖದ ಟಂಡನ್ ಮತೀಯ ವಾದದ ಚಿಹ್ನೆ ಆಗಿರುವುದರಿಂದ ಮತ್ತು ಹಿಂದೀ ಭಾಷೆಯ ಕಟ್ಟಾ ಬೆಂಬಲಿಗರಾದುದರಿಂದ ಅವರಿಗೆ ತಾವು ಬೆಂಬಲ ನೀಡಲು ಸಾಧ್ಯವಿಲ್ಲ' ಎಂದು ತಿಳಿಸಿದ್ದರು. ಟಂಡನ್‌ರವರು ಒಂದು ನಿರಾಶ್ರಿತರ ಸಮಾವೇಶದಲ್ಲಿ ಭಾಗವಹಿಸಿದ್ದು, ಅದರ ಅಧ್ಯಕ್ಷರಾಗಿದ್ದುದು ಮತ್ತು ನೆಹರು ಪ್ರಕಾರ, ಕೆಲವು ಆಕ್ಷೇಪಣಾರ್ಹ ನಿರ್ಧಾರಗಳನ್ನು ತೆಗೆದುಕೊಂಡದ್ದು

ನೆಹರುರವರ ವಿರೋಧಕ್ಕೆ ಇತರ ಕಾರಣಗಳಾಗಿದ್ದುವು. ಪಟೇಲರಿಗೆ ಶಂಕರರಾವ್ ಡಿಯೊ ಬಗೆಗೆ ಒಲವು ಇರಲಿಲ್ಲ. ಡಿಯೊರವರು ಭಾಷಾವಾರು ಪ್ರಾಂತ್ಯಗಳ ರಚನೆಯ ಬೆಂಬಲಿಗರಾಗಿದ್ದುದರಿಂದ ಮತ್ತು ಒಂದು ವಿಶಾಲ ಮರಾಠಿ ಭಾಷಿಕ ಪ್ರಾಂತ್ಯ ರಚನೆಗೆ ಉತ್ಸುಕರಾಗಿದ್ದುದರಿಂದ ಸರ್ದಾರರು ಅವರನ್ನು ಬೆಂಬಲಿಸಲಿಲ್ಲ. ಅದರಿಂದ ನೆಹರು ಮತ್ತು ಪಟೇಲರು ಬೇರೆ ಅನೇಕ ವ್ಯಕ್ತಿಗಳ ಹೆಸರನ್ನು ಪರಿಶೀಲಿಸಿದರು. ಆದರೆ ಯಾರೂ ಒಪ್ಪಿಗೆ ಆಗಲಿಲ್ಲ. ಅಷ್ಟಕ್ಕೇ ಅಂದು ಮಾತು ನಿಂತಿತು.

ಟಂಡನ್‌ರವರ ಚುನಾವಣೆಯನ್ನು ತಡೆಗಟ್ಟುವುದಕ್ಕೆ ನೆಹರು ಎರಡು ಕ್ರಮಗಳನ್ನು ತೆಗೆದುಕೊಂಡರು. ದೆಹಲಿಯಲ್ಲಿದ್ದ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸದಸ್ಯರನ್ನು ಮೌಲಾನ ಆಜಾದ್ ಮನೆಗೆ ಕರೆಯಿಸಿ, ಟಂಡನ್ ತಮಗೆ ಒಪ್ಪಿಗೆ ಇಲ್ಲ ಎಂದು ತಿಳಿಸಿದರು. ಪಟೇಲರು ಆ ಸಭೆಯಲ್ಲಿ ಭಾಗವಹಿಸಲಿಲ್ಲ. ನೆಹರುರವರ ಎರಡನೆಯ ಕ್ರಮ: ಟಂಡನ್‌ಗೆ ಒಂದು ಪತ್ರ ಬರೆದು, 'ನಿಮ್ಮ ಚುನಾವಣೆಯು, ನಾನು ಅಪಾಯಕಾರಿ ಎಂದು ಭಾವಿಸಿರುವ ಕೆಲವು ಶಕ್ತಿಗಳಿಗೆ ಪ್ರೋತ್ಸಾಹವನ್ನು ನೀಡುತ್ತದೆ' ಎಂದು ನೇರವಾಗಿ ತಿಳಿಸಿದರು.

ನೆಹರುಗೆ ಹಿರಿಯರಾದ ಟಂಡನ್ ತಮ್ಮ ನಾಮಪತ್ರವನ್ನು ಹಿಂತೆಗೆದುಕೊಳ್ಳಲು ನಿರಾಕರಿಸಿದರು. ಅವರು ನೆಹರುಗೆ ಪತ್ರ ಬರೆದು, 'ನಿರಾಶ್ರಿತರ ಸಮಾವೇಶದ ಅಧ್ಯಕ್ಷನಾಗಿ ಅವರ ಧ್ವನಿಯನ್ನು ನಾನು ಸೌಮ್ಯಗೊಳಿಸಿದ್ದೇನೆ, ಹಿಂದೂ – ಮುಸ್ಲಿಂ ಮದುವೆಗಳನ್ನು ಬಹಿರಂಗವಾಗಿ ಪ್ರೋತ್ಸಾಹಿಸಿದ್ದೇನೆ ಮತ್ತು ಜಾತಿ ಹಾಗೂ ಸಂಪ್ರದಾಯ ನನ್ನ ಜೀವನದಲ್ಲಿ ಎಂದೂ ಪಾತ್ರವಹಿಸಿಲ್ಲ' ಎಂದು ತಿಳಿಸಿ ಹೀಗೆ ಬರೆದರು:

> ನೀವು ಮತ್ತು ನಾನು ಅನೇಕ ಬಹು ಮುಖ್ಯ ಸಮಸ್ಯೆಗಳ ಬಗೆಗೆ ಒಮ್ಮತದ ಅಭಿಪ್ರಾಯವನ್ನು ಹೊಂದಿದ್ದೇವೆ ಮತ್ತು ಒಟ್ಟಿಗೆ ಕೆಲಸ ಮಾಡಿದ್ದೇವೆ, ನಮ್ಮಿಬ್ಬರ ಅಭಿಪ್ರಾಯ ಒಂದೇ ಆಗದ ಕೆಲವು ವಿಷಯಗಳೂ ಇವೆ–ಹಿಂದಿಯನ್ನು ರಾಷ್ಟ್ರಭಾಷೆಯಾಗಿ ಅಂಗೀಕರಿಸುವುದು ಮತ್ತು ದೇಶ ವಿಭಜನೆ ಅವುಗಳ ಪೈಕಿ ಮುಖ್ಯವಾದುವು.
>
> ನೀವು ನನ್ನ ವಿರುದ್ಧ ಬಳಸುವ ಅತ್ಯಂತ ಕಹಿ ಭಾಷೆಯು ನನ್ನಲ್ಲಿ ಕಹಿ ಭಾವನೆಯನ್ನು ಉಂಟುಮಾಡುವುದಿಲ್ಲ. ನಿಮ್ಮ ಮೇಲೆ ನನಗಿರುವ ವೈಯುಕ್ತಿಕ ಪ್ರೀತಿಯನ್ನು ಕಡಿಮೆ ಮಾಡುವುದಿಲ್ಲ. ಬಾಯಿ ಬಿಟ್ಟು ಹೇಳದೇ ಇದ್ದರೂ, ಇಷ್ಟೊಂದು ವರ್ಷಗಳು ನಾನು ನಿಮ್ಮನ್ನು ಕಿರಿಯ ಸಹೋದರನಂತೆ ಪ್ರೀತಿಸಿದ್ದೇನೆ.

ಇಷ್ಟಾದರೂ ಟಂಡನ್ ಬಗೆಗೆ ನೆಹರು ಭಾವನೆಗಳು ಬದಲಾಗಲಿಲ್ಲ. 'ಟಂಡನ್ ಸೋಲಲಿ ಎಂದು ಬಯಸುತ್ತೇನೆ' ಎಂದು ಅವರು ಎಲ್ಲರಿಗೂ ಹೇಳುತ್ತಿದ್ದರು. ಆದಾಗ್ಯೂ, ಟಂಡನ್‌ರವರ ಆಲೋಚನೆಗಳನ್ನು ಒಪ್ಪದೇ ಇದ್ದವರೂ ಸಹ, ಅವರ ಉತ್ಕಟ ಪ್ರಾಮಾಣಿಕತೆಗಾಗಿ ಅವರಿಗೆ ಮತ ನೀಡಲು ಸಿದ್ಧವಾಗಿದ್ದರು. ಅದರಲ್ಲೂ ಅಧಿಕ ಮತಗಳಿರುವ ಹಿಂದೀ ರಾಜ್ಯಗಳಲ್ಲಿ ಅವರು ಪ್ರಬಲರಾಗಿದ್ದರು. ನೆಹರುರವರಿಗೆ ಪಕ್ಷದ ವಿಷಯವಾಗಿ ಪ್ರಮುಖ ಸಲಹೆಗಾರರಾಗಿದ್ದ ರಫಿ ಅಹಮದ್ ಕಿದ್ವಾಯ್ ರವರು ಟಂಡನ್ ವಿರುದ್ಧ ಶಂಕರರಾವ್ ಡಿಯೊ ಗೆಲ್ಲಲಾರರೆಂದು ಊಹಿಸಿ, 'ಟಂಡನ್ ವಿರುದ್ಧ ಕೃಪಲಾನಿಯವರು ಉತ್ತಮ ಸ್ಪರ್ಧಿಯಾಗುತ್ತಾರೆ' ಎಂದು ನೆಹರುಗೆ ಸಲಹೆ ನೀಡಿದರು. ಕೃಪಲಾನಿಯವರು ಬಿಹಾರ ಮತ್ತು ಗುಜರಾತ್‌ನಲ್ಲಿ ಶಿಕ್ಷಕರಾಗಿದ್ದವರು ಮತ್ತು ಉತ್ತರ ಪ್ರದೇಶದಲ್ಲಿ ವಾಸಿಸಿದ್ದವರು. ನೆಹರು – ಕೃಪಲಾನಿ ಭೇಟಿ ನಡೆದು, ಕೃಪಲಾನಿಯು ಸ್ಪರ್ಧಿಸಿದರು. ಇದರಿಂದ ಸರ್ದಾರರಿಗೆ ಆಶ್ಚರ್ಯವಾಯಿತು, ಏಕೆಂದರೆ ಡೆಹ್ರಡೂನ್‌ನಲ್ಲಿ ಜುಲೈ ೫ರಂದು ಚರ್ಚಿಸಿದಾಗ ನೆಹರು ಮತ್ತು ಪಟೇಲ್ ಇಬ್ಬರೂ ಕೃಪಲಾನಿಯವರನ್ನು ಒಪ್ಪಿರಲಿಲ್ಲ. ನೆಹರು ತಮ್ಮ ಬೆಂಬಲವನ್ನು ಡಿಯೊಯಿಂದ ಕೃಪಲಾನಿಯವರಿಗೆ ವರ್ಗಾಯಿಸಿದ್ದನ್ನು ತಮ್ಮಿಂದ ಮುಚ್ಚಿಟ್ಟರೆಂದು ರಾಜಾಜಿಯವರಿಗೂ ಅಸಮಾಧಾನವಾಯಿತು.

ಸರ್ದಾರರು ಒಮ್ಮತ ಮೂಡಿಸಿ ಸ್ಪರ್ಧೆಯನ್ನು ತಪ್ಪಿಸಲು ಪ್ರಯತ್ನಿಸಲಿಲ್ಲ. ಪಟೇಲರಿಗೆ ತಾವು ಸಚಿವ ಸಂಪುಟದ ವಿದೇಶಿ ವ್ಯವಹಾರಗಳ ಸಮಿತಿಯ ಸದಸ್ಯರಾಗಿದ್ದರೂ, ವಿದೇಶಿ ವ್ಯವಹಾರಗಳ ವಿಷಯದಲ್ಲಿ ನೆಹರು ತಮ್ಮನ್ನು ಹೊರಗಿಟ್ಟಿದ್ದಾರೆ, ಅನ್ನುವ ಭಾವನೆಯಿತ್ತು. ಪಟೇಲರ ಗೃಹ ಮತ್ತು ರಾಜ್ಯಗಳ ಸಚಿವಾಲಯದ ಕಾರ್ಯ ನಿರ್ವಹಣೆಯ ಬಗೆಗೆ ನೆಹರುರವರ ಟೀಕಾತ್ಮಕ ಆಸಕ್ತಿ ಹೆಚ್ಚಾಗಿತ್ತು. ಅದರಿಂದ ಅವರು ನೆಹರು ಸಹಾಯಕ್ಕೆ ಹೋಗಲಿಲ್ಲ ಎಂದು ಕಾಣುತ್ತದೆ.

ಟಂಡನ್‌ರವರನ್ನು ಸೋಲಿಸುವುದು ನೆಹರುರವರ ಆದ್ಯತೆಯಾಗಿತ್ತು. ಚುನಾವಣೆಗೆ ನಾಲ್ಕು ದಿನ ಮುಂಚೆ ಕಿದ್ವಾಯ್‌ರವರು ನೆಹರು, ಕೃಪಲಾನಿ ಭೇಟಿ ಏರ್ಪಡಿಸಿದರು. ಅದರಿಂದ ಕೃಪಲಾನಿಯವರು ನೆಹರು ಅಭ್ಯರ್ಥಿ ಎಂದು ಎಲ್ಲರಿಗೂ ಅರ್ಥವಾಯಿತು. ಟಂಡನ್ – ಕೃಪಲಾನಿ ಸ್ಪರ್ಧೆಯನ್ನು ಎಲ್ಲರೂ ಪಟೇಲ್ – ನೆಹರು ಸ್ಪರ್ಧೆ ಎಂದೇ ಭಾವಿಸಿದರು. ಪಟೇಲರಿಗಿಂತ ವಯಸ್ಸಿನಲ್ಲಿ ಚಿಕ್ಕವರೂ ಆರೋಗ್ಯವಂತರೂ ಆದ ಕಿದ್ವಾಯ್ ಚುರುಕಾಗಿದ್ದರು. ಮೃದಲಾ ಸಾರಾಬಾಯ್ ಕೂಡ ಅವರಿಗೆ ಬೆಂಬಲ ನೀಡಿದರು. ಅವರು, ಕೃಪಲಾನಿಯ ಪರವಾಗಿ ಸ್ಪರ್ಧೆಯಿಂದ ಹಿಂದೆ ಸರಿಯುವಂತೆ ಡಿಯೊರವರನ್ನು ಒತ್ತಾಯಿಸಿದರು.

ಆದರೆ ಡಿಯೊ ಒಪ್ಪಲಿಲ್ಲ. ಪಟೇಲರು ತಮ್ಮ ಬೆಂಬಲಿಗರೊಡನೆ ದೂರವಾಣಿ ಮೂಲಕ ಮಾತನಾಡಿದರು.

ಟಂಡನ್‌ರವರ ಗೆಲುವಿನ ಸಂಭವವನ್ನು ಅರಿತ ನೆಹರುರವರು ಪಟೇಲರಿಗೆ, "ಟಂಡನ್‌ರವರ ಚುನಾವಣೆಯನ್ನು ನಾನು ನನ್ನ ವಿರುದ್ಧದ ಅವಿಶ್ವಾಸ ಮತ ಎಂದು ಪರಿಗಣಿಸುತ್ತೇನೆ. ಟಂಡನ್ ಗೆದ್ದರೆ ನಾನು ಕಾರ್ಯಕಾರಿ ಸಮಿತಿಯ ಸದಸ್ಯನಾಗಿರುವುದೂ ಇಲ್ಲ, ಪ್ರಧಾನಮಂತ್ರಿಯಾಗಿ ಮುಂದುವರೆಯುವುದೂ ಇಲ್ಲ" ಎಂದು ಆಗಸ್ಟ್ ೨೫ರಂದು ಲಿಖಿತ ರೂಪದಲ್ಲಿ ತಿಳಿಸಿದರು. ಟಂಡನ್‌ರವರು ನಿವೃತ್ತರಾಗುವಂತೆ ಸರ್ದಾರರು ಮಾಡಲಿ, ಹಾಗೆ ಮಾಡುವ ಶಕ್ತಿ ಅವರಿಗಿದೆ ಅನ್ನುವುದು ನೆಹರುರವರ ಅಭಿಪ್ರಾಯವಾಗಿತ್ತೇನೊ. ಆದರೆ ಆ ಕೊನೆಗಳಿಗೆಯಲ್ಲಿ ಚುನಾವಣೆಯಿಂದ ಹಿಂದೆ ಸರಿಯುವಂತೆ ಟಂಡನ್‌ರವರಿಗೆ ಹೇಳಲು ಅಥವಾ ಟಂಡನ್ ವಿರುದ್ಧ ಮತ ಚಲಾಯಿಸಿ ಎಂದು ಕಾಂಗ್ರೆಸ್ಸಿಗರಿಗೆ ಹೇಳಲು ಸರ್ದಾರರಿಗೆ ಮನಸ್ಸು ಬರಲಿಲ್ಲ. ಅವರು ಮಾಡಲು ಸಾಧ್ಯವಿದ್ದದ್ದನ್ನು ಮಾತ್ರ ಮಾಡಿದರು. ಅವರು ನೆಹರುಗೆ, 'ನಿಮ್ಮ ಬೆದರಿಕೆಯನ್ನು ಕಾರ್ಯಗತ ಮಾಡಬೇಡಿ' ಎಂದರು.

ಆಗಸ್ಟ್ ೨೯ರಂದು ಮತದಾನ ನಡೆಯಿತು. ಟಂಡನ್‌ರವರಿಗೆ ೧೩೦೬ ಮತಗಳು, ಕೃಪಲಾನಿಯವರಿಗೆ ೧೦೯೨ ಮತಗಳು ಮತ್ತು ಡಿಯೊರವರಿಗೆ ೨೦೨ ಮತಗಳು ಬಂದಿದ್ದುವು. ಕೃಪಲಾನಿ ಗುಜರಾತ್‌ನಲ್ಲಿ ಬಹಳ ವರ್ಷ ಕೆಲಸ ಮಾಡಿದ್ದರು ಮತ್ತು ಅಲ್ಲಿ ಅವರಿಗೆ ಅನೇಕ ಸ್ನೇಹಿತರಿದ್ದರು. ಆದರೂ ಅಲ್ಲಿ ಅವರಿಗೆ ಒಂದೇ ಒಂದು ಮತವೂ ಬೀಳಲಿಲ್ಲ. ಅಂತಹದ್ದು ಗುಜರಾತ್‌ನಲ್ಲಿ ಸರ್ದಾರರ ವರ್ಚಸ್ಸು ಮತ್ತು ಪ್ರಭಾವ. ನೆಹರುರವರ ಜನ್ಮ ರಾಜ್ಯ ಉತ್ತರ ಪ್ರದೇಶದಲ್ಲಿ ಟಂಡನ್‌ರವರಿಗೆ ಕೃಪಲಾನಿಯವರಿಗಿಂತ ಹೆಚ್ಚು ಮತಗಳು ಬಂದುವು. ಟಂಡನ್ ಕಾಂಗ್ರೆಸ್ ಅಧ್ಯಕ್ಷರಾದರು.

ಫಲಿತಾಂಶದ ನಂತರ ಭೇಟಿಯಲ್ಲಿ ಪಟೇಲರು ರಾಜಾಜಿಯವರನ್ನು, "ಜವಹರಲಾಲ್ ನೆಹರುರವರ ರಾಜಿನಾಮೆ ಪತ್ರವನ್ನು ತಂದಿದ್ದೀರಾ?" ಎಂದು ಕೇಳಿದರು. ಆದರೆ ಅವರು ನೆಹರುರವರ ರಾಜಿನಾಮೆ ಪತ್ರವನ್ನು ನಿರೀಕ್ಷಿಸಿಯೂ ಇರಲಿಲ್ಲ. ನೆಹರು ರಾಜಿನಾಮೆಯನ್ನು ಕೊಡಲೂ ಇಲ್ಲ. ಅವರು ತಮ್ಮ ನಿರ್ಧಾರವನ್ನು ಬದಲಿಸಿದ್ದರು.[೩೧]

೨೭.೨ ಸರ್ದಾರರ ವಿವಿಧ ಮುಖಗಳು

ಸರ್ದಾರರಿಗೆ ಹೃದಯಾಘಾತವಾದ ಮೇಲೆ ಅವರ ದೈನಂದಿನ ಜೀವನದಲ್ಲಿ

ಕೆಲವು ಬದಲಾವಣೆಗಳಾದುವು.

ಹೃದಯಾಘಾತಕ್ಕೆ ಮುಂಚೆ ಅವರು ಬೆಳಗಿನ ವೇಳೆ 'ವೇಗದ ನಡಿಗೆ' (Brisk walk) ನಡೆಸುತ್ತಿದ್ದರು. ಹೃದಯಾಘಾತವಾದ ಮೇಲೆ ಅದನ್ನು ನಿಲ್ಲಿಸಿ ತಮ್ಮ ನಿವಾಸದ ಆವರಣದ ಒಳಗೇ ನಡೆಯಲು ಅಥವಾ ಕುತುಬ್ ಮಿನಾರ್‌ಗೆ ಕಾರಿನಲ್ಲಿ ಹೋಗಲು ಆರಂಭಿಸಿದರು. ಮಧ್ಯಾಹ್ನ ಊಟದ ನಂತರ ಸ್ವಲ್ಪ ಸಮಯ ಮಲಗುತ್ತಿದ್ದರು. 'ನಾರ್ತ್ ಬ್ಲಾಕ್'ನ ತಮ್ಮ ಕಛೇರಿಯಲ್ಲಿ ಇರುವ ಕಾಲವನ್ನು ಕಡಿಮೆ ಮಾಡಿದರು. ಮನೆಯಲ್ಲೇ ಎಲ್ಲವನ್ನು ನಿರ್ವಹಿಸಲು ಆರಂಭಿಸಿದರು.

ಜವಹರಲಾಲ್ ನೆಹರು ವಿದೇಶಿ ಪ್ರವಾಸ ಮಾಡಿ ಹಿಂತಿರುಗಿದಾಗಲೆಲ್ಲಾ ಅವರ ಆರೋಗ್ಯ ಉತ್ತಮವಾಗಿರುವುದನ್ನು ಗಮನಿಸಿದ ರಾಜಾಜಿಯವರು ಪಟೇಲರನ್ನು ೧೯೪೯ರಲ್ಲಿ 'ಸ್ವಲ್ಪ ಕಾಲ ಇಂಗ್ಲೆಂಡ್‌ಗೆ ಹೋಗಿ ಬನ್ನಿ' ಎಂದು ಒತ್ತಾಯಿಸಿದರು. ಆ ಸಲಹೆಯನ್ನು ಒಪ್ಪದೆ ಪಟೇಲರು, "ನಮ್ಮ ಜೀವನಕ್ರಮವೇ ಬೇರೆ, ನಾವು ಕೆಲಸ ಮಾಡಲು ಶಕ್ತರಾಗಿರಬೇಕು" ಎಂದರು.[೩೨]

* * * *

೧೯೪೯ರ ಅಕ್ಟೋಬರ್‌ನಲ್ಲಿ ಅವರ ಅತಿ ಆತ್ಮೀಯ ಸ್ನೇಹಿತ ಡಾ॥ ಕನುಗಾ ಗತಿಸಿದರು. ಪಟೇಲರು ಅಹಮದಾಬಾದ್‌ನಲ್ಲಿದ್ದಾಗ ಡಾ॥ ಕನುಗಾ ದಂಪತಿಗಳ ಮನೆಯಲ್ಲಿ ಅನೇಕ ಆನಂದದ ಕ್ಷಣಗಳನ್ನು ಕಳೆದಿದ್ದರು. ಅಲ್ಲಿ ಊಟ ಮಾಡುತ್ತಿದ್ದರು, ಹರಟೆ ಹೊಡೆಯುತ್ತಿದ್ದರು, ಇತ್ಯಾದಿ. ಅವರ ಸಾವು ಪಟೇಲರಿಗೆ ಬಹಳ ನೋವನ್ನುಂಟುಮಾಡಿತು. ಅವರು ೧೯೪೯ರ ಅಕ್ಟೋಬರ್ ೧೮ರಂದು ಕನುಗಾರವರ ಪತ್ನಿ ನಂದೂ ಬೆಹೆನ್‌ಗೆ ಸ್ವಹಸ್ತಾಕ್ಷರದಲ್ಲಿ ಸಾಂತ್ವಾನ ಪತ್ರ ಬರೆದರು:

> ಅನೇಕ ತಿಂಗಳುಗಳ ನಂತರ ಪೆನ್ನನ್ನು ಬಲವಾಗಿ ಹಿಡಿದು ಬರೆಯುತ್ತಿದ್ದೇನೆ..... ಡಾಕ್ಟರು ಹೊರಟು ಹೋದರು. ಸಹಿಸಲಾಗದ ಸಂಕಟದಿಂದ ಅವರನ್ನು ಬಿಡುಗಡೆ ಮಾಡಬೇಕೆಂದು ನಾವು ಭಗವಂತನನ್ನು ಪ್ರಾರ್ಥಿಸುತ್ತಿದ್ದೆವು..... ನೀವು ಮಾಡಬಹುದಾದ ದ್ದನ್ನೆಲ್ಲಾ ಮಾಡಿದ್ದೀರಿ. ನಿಮಗೆ ಅಲ್ಲಿರಲು ಆಗದಿದ್ದರೆ, ಕರ್ಮಾಂತರ ಗಳೆಲ್ಲಾ ಮುಗಿದ ಮೇಲೆ ಇಲ್ಲಿ ಬಂದು ನಮ್ಮೊಡನೆ ಇರಿ.

ಆರು ತಿಂಗಳ ನಂತರ ನಂದೂ ಬೆಹೆನ್ ಗತಿಸಿದರು. ಅವರ ಮಗನಿಗೆ ಪಟೇಲರು, 'ನಂದೂ ಬೆಹೆನ್ ಸಾವಿಗೆ ದುಃಖಿಸಬೇಡ, ಡಾಕ್ಟರ್ ಸಾವಿನ ನಂತರ ಅವರು (ನಂದೂ ಬೆಹೆನ್) ಹೆಚ್ಚು ಕಾಲ ಬದುಕಿರುವುದಿಲ್ಲ ಎನ್ನುವುದು ನನಗೆ

ಖಚಿತವಾಗಿತ್ತು,' ಎಂದು ಬರೆದರು. ಆದರೆ ಸ್ವತಃ ಪಟೇಲರಿಗೆ, ಕನುಗಾ ದಂಪತಿಗಳ ಸಾವಿನಿಂದ, ಒಂಟಿತನ ಮುಸುಕಿತು.[೩೩]

೧೯೫೦ರ ಅಕ್ಟೋಬರ್ ಅಂತ್ಯದಲ್ಲಿ ಪಟೇಲರು ಅಹಮದಾಬಾದ್‌ಗೆ ಭೇಟಿ ಕೊಟ್ಟಾಗ, ಕನುಗಾರವರ ಮನೆಗೆ ಹೋಗಿ ಅಲ್ಲಿ ಸ್ವಲ್ಪ ಹೊತ್ತು ಇದ್ದರು.

* * * *

ದೆಹಲಿಯಲ್ಲಿ ಪಟೇಲರ ಸಾಧನೆ ಚರಿತ್ರಾರ್ಹ ಮತ್ತು ಅದ್ಭುತವಾಗಿದ್ದರೂ, ಅದು ಅವರಿಗೆ ಪ್ರಿಯವಾದ 'ಮನೆ' ಆಗಿರಲಿಲ್ಲ. ಅಲ್ಲಿ ಅವರಿಗೆ ಜೊತೆಗಾರರಿದ್ದರೇ ಹೊರತು ಸ್ನೇಹಿತರಿರಲಿಲ್ಲ. ೧೯೧೮ರ ಖೇಡಾ ಸತ್ಯಾಗ್ರಹದ ಪ್ರವರ್ತಕರ ಪೈಕಿ ಒಬ್ಬರಾಗಿದ್ದ ಶಂಕರ್‌ಲಾಲ್ ಪರೀಖ್‌ರವರಿಗೆ ಪಟೇಲರು, "ನಿಮ್ಮಂತಹ ಆತ್ಮೀಯ ಸ್ನೇಹಿತರು ನನ್ನ ಆಲೋಚನೆಯಲ್ಲಿ ಬರುತ್ತಿರುತ್ತಾರೆ," ಎಂದು ಬರೆದರು.

ದೆಹಲಿಯಲ್ಲಿ ಸ್ನೇಹಿತರು ಇಲ್ಲದ ಶೂನ್ಯತೆಯನ್ನು ಅವರ ಬಳಿ ಕೆಲಸ ಮಾಡಿದ ಅಧಿಕಾರಗಳಾದ ವಿ.ಪಿ. ಮೆನನ್, ಹೆಚ್.ಎಂ. ಪಟೇಲ್, ಹೆಚ್.ವಿ.ಆರ್. ಅಯ್ಯಂಗಾರ್ ಮತ್ತು ವಿ. ಶಂಕರ್‌ರವರ ನಿಷ್ಠೆ ಮತ್ತು ಪ್ರೀತಿ ಬಹಳ ಮಟ್ಟಿಗೆ ಕಡಿಮೆ ಮಾಡಿತು. ಅನೇಕ ವೇಳೆ ಅವರು ಪಟೇಲರು ತಮ್ಮ ಕಳೆದ ಜೀವನದ ಬಗೆಗೆ ಮಾತನಾಡುವಂತೆ ಮಾಡಿ, ಕುತೂಹಲದಿಂದ ಆಲಿಸುತ್ತಿದ್ದರು. ಅದು ಪಟೇಲರಿಗೆ ಸಂತಸವನ್ನು ನೀಡುತ್ತಿತ್ತು. ಅವರು, ತಮ್ಮ ಮೇಲೆ ಪಟೇಲರು ಇರಿಸಿದ್ದ ನಂಬಿಕೆ ಮತ್ತು ತಮಗೆ ನೀಡಿದ್ದ ಘನತೆಯನ್ನು ಮರೆಯುವ ಹಾಗಿರಲಿಲ್ಲ. 'ಕೆಲವು ವೇಳೆ ತಮ್ಮ ಅಭಿಪ್ರಾಯವನ್ನು ಪಟೇಲರು ಒಪ್ಪದೇ ಹೋದರೂ, ತಾವು ತೆಗೆದುಕೊಂಡ ತೀರ್ಮಾನವನ್ನು ಪಟೇಲರು ಅಂಗೀಕರಿಸಿದ್ದಾರೆ. ಅವರು ಹಾಗೆ ಮಾಡಿದ್ದು, ಗೃಹ ಸಚಿವಾಲದಲ್ಲಿ ತಮ್ಮ ಪ್ರಧಾನ ಅಧಿಕಾರಿಯ ಗೌರವವನ್ನು ಕಾಪಾಡುವುದಕ್ಕಾಗಿ,' ಎಂದು ಹೆಚ್.ವಿ.ಆರ್. ಅಯ್ಯಂಗಾರ್ ಹೇಳಿದ್ದಾರೆ.[೩೪]

ಪಟೇಲರು, ತಾವು ಗೃಹಮಂತ್ರಿ ಮತ್ತು ಉಪಪ್ರಧಾನಮಂತ್ರಿ, ಅವರೆಲ್ಲ ತಮ್ಮ ಅಧೀನದ ಅಧಿಕಾರಿಗಳು ಅನ್ನುವ ಅಹಂಕಾರದ ಭಾವವನ್ನು ಎಂದೂ ತೋರಲಿಲ್ಲ. ಅಧಿಕಾರ ಅವರಿಗೆ ದೇಶ ಸೇವೆಯ ಒಂದು ಮಾರ್ಗವಾಗಿತ್ತೇ ಹೊರತು, ಪ್ರತಿಷ್ಠೆಯ ಸಾಧನವಾಗಿರಲಿಲ್ಲ. ಅಧಿಕಾರಿಗಳು ಅವರಿಗೆ ಸ್ನೇಹಿತರು ಅಥವಾ ಸಹೋದರದರಾಗಿದ್ದರೇ ಹೊರತು ಕೈಕೆಳಗಿನ ಕೆಲಸಗಾರರಾಗಿರಲಿಲ್ಲ. ಅದರಿಂದಲೇ ಅವರಿಬ್ಬರ ನಡುವೆ ಅಷ್ಟೊಂದು ಆತ್ಮೀಯತೆ ಬೆಳೆದಿತ್ತು.

* * * *

ಪಟೇಲರು ಅಧಿಕಾರಿಗಳನ್ನಷ್ಟೇ ಅಲ್ಲ ಕಾಂಗ್ರೆಸ್ ಕಾರ್ಯಕರ್ತರನ್ನೂ ಅಷ್ಟೇ ಪ್ರೀತಿಸುತ್ತಿದ್ದರು. ತಾವು ಅಹಮದಾಬಾದ್ ಮತ್ತು ಬೊಂಬಾಯಿಯನ್ನು ಬಿಟ್ಟು ದೆಹಲಿಗೆ ಬಂದಿದ್ದರೂ ಪಕ್ಷದ ಹಿಂದಿನ ಕಾರ್ಯಕರ್ತರನ್ನು ಮರೆಯಲಿಲ್ಲ. 'ಸರ್ದಾರರು ಪಕ್ಷದ ಕಾರ್ಯಕರ್ತರಿಗೆ ಹಣ ನೀಡುತ್ತಿದ್ದರು ಮತ್ತು ಅವರ ವೈದ್ಯಕೀಯ ಆವಶ್ಯಕತೆಗಳು ಇತ್ಯಾದಿಗಳನ್ನು, ಕಾರ್ಯಕರ್ತರು ಅವರನ್ನು ಕೇಳುವುದಕ್ಕೆ ಮುಂಚೆಯೇ, ನೋಡಿಕೊಳ್ಳುತ್ತಿದ್ದರು," ಎಂದಿದ್ದಾರೆ ಮೊರಾರ್ಜಿ ದೇಸಾಯಿ. ಆ 'ಇತ್ಯಾದಿ' ಬಹಳವನ್ನು ಒಳಗೊಂಡಿತ್ತು.[೩೫]

* * * *

ಪಟೇಲರು ೧೯೨೦ರಲ್ಲಿ ಗುಜರಾತ್ ಪ್ರದೇಶ ಕಾಂಗ್ರೆಸ್ ಸಮಿತಿಯ ಪ್ರಥಮ ಅಧ್ಯಕ್ಷರಾದರು. ಅವರು ಆ ಸ್ಥಾನದಲ್ಲಿ, ೧೯೪೬ರ ವರೆಗೂ ಇದ್ದರು. ೧೯೪೬ರಲ್ಲಿ ಅವರು ಮಧ್ಯಂತರ ಸರ್ಕಾರದಲ್ಲಿ ಗೃಹಮಂತ್ರಿಯಾದಾಗ ಕಂಜೂಭಾಯ್ ದೇಸಾಯಿಯವರು ಗುಜರಾತ್ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದರು. ಅವರ ಮಗನಿಗೆ ಪಟೇಲರು ಸೆಪ್ಟೆಂಬರ್ ೧೯೪೮ರಲ್ಲಿ, "ಹಿತೂ, ನಾನು ನಿನಗೆ ಕೊನೆ ಎಚ್ಚರಿಕೆ ನೀಡುತ್ತಿದ್ದೇನೆ. ನೀನೊಂದು ಹುಡುಗಿಯನ್ನು ಹುಡುಕಿಕೊಳ್ಳದೆ ಹೋದರೆ, ನಾನು ಹುಡುಕಿದ ಹುಡುಗಿಯನ್ನು ನೀನು ಮದುವೆ ಆಗಬೇಕಾಗುತ್ತದೆ," ಎಂದರು. ಅಂತಹದು ಅವರ ಪಿತೃ ಸದೃಶ ಪ್ರೀತಿ. ಅಂತಹ ಪ್ರೀತಿಯನ್ನು ಅವರು ತಮ್ಮ ಬಗೆಗೆ ಇತರರಲ್ಲಿಯೂ ಉಜ್ಜೀವಿಸುತ್ತಿದ್ದರು. ಭಾವ ನಗರದ ಮಹಾರಾಜರು, "ನಾನು ಸರ್ದಾರರನ್ನು ಭೇಟಿ ಮಾಡಿದಾಗಲೆಲ್ಲಾ ನಾನು ನನ್ನ ತಂದೆಯನ್ನು ಭೇಟಿ ಮಾಡಿದಂತಾಗುತ್ತಿತ್ತು," ಎಂದು ಪದೇ ಪದೇ ಹೇಳುತ್ತಿದ್ದರು.[೩೬]

* * * *

ಟೆಲಿಫೋನ್ ಸರ್ದಾರರ ಸಂಪರ್ಕ ಸೇತು. ಅವರ ರಾಜಕೀಯ ಚಟುವಟಿಕೆಗಳಲ್ಲಿ ಅವರಿಗೆ ಬೆಂಬಲಿಗರಾದ ಉತ್ತರ ಪ್ರದೇಶದ ಗೋವಿಂದ ವಲ್ಲಭ ಪಂತ್ ಮತ್ತು ಚಂದ್ರ ಭಾನು ಗುಪ್ತ, ಮಧ್ಯಪ್ರಾಂತ್ಯಗಳ ಡಿ.ಪಿ. ಮಿಶ್ರ ಮತ್ತು ರವಿಶಂಕರ್ ಶುಕ್ಲ, ಬೊಂಬಾಯಿಯ ಎಸ್.ಕೆ. ಪಾಟಿಲ್, ಪಂಜಾಬ್‌ನ ಗೋಪಿಚಂದ್ ಭಾರ್ಗವ, ಮೈಸೂರಿನ ಕೆ.ಸಿ. ರೆಡ್ಡಿ..... ಹೀಗೆ ಎಲ್ಲರೊಡನೆಯೂ ದೂರವಾಣಿಯ ಮೂಲಕವೇ ಸಂಪರ್ಕ ಇಟ್ಟುಕೊಂಡಿರುತ್ತಿದ್ದರು. ವೈಯುಕ್ತಿಕ ಭೇಟಿ ಕಡಿಮೆ. ಅಧಿಕಾರಿಗಳೂ ಸಹ ಅವರಿಗೆ ದೂರವಾಣಿಯಲ್ಲೇ ವರದಿಯನ್ನು ನೀಡುತ್ತಿದ್ದರು. ಮಣಿಬೆನ್ ನಂತರ ದೂರವಾಣಿಯೇ ಅವರ ಜೀವನಾಧಾರ.

ಆದರೆ ಅವರು ದೂರವಾಣಿಯ ವೆಚ್ಚದ ಹಣವನ್ನು ತಮ್ಮ ಸಂಬಳದಿಂದ ಕೊಡುತ್ತಿದ್ದರು. ಕಾಂಗ್ರೆಸ್ ನಾಯಕರಿಗೆ ದೂರವಾಣಿ ಕರೆ ಮಾಡಿದ್ದನ್ನೂ ಕಾಂಗ್ರೆಸ್ಸಿನ ಲೆಕ್ಕದಿಂದ ಕೊಡುತ್ತಿರಲಿಲ್ಲ. ದೂರವಾಣಿ ವೆಚ್ಚದ ಲೆಕ್ಕವನ್ನು ಮಣಿಬೆನ್ ನಿರ್ವಹಿಸುತ್ತಿದ್ದರು.[೩೭]

* * * *

ಪಟೇಲರ ಮಗ ದಹ್ಯಾ ಭಾಯ್ ಮತ್ತು ಅವನ ಪಾಲುದಾರ ೧೯೪೫ರಲ್ಲಿ ಒಂದು ಕರಾಚಿಯ ಕಂಪೆನಿಯನ್ನು ಪಡೆದುಕೊಂಡಿದ್ದರು. ೧೯೪೭ರಲ್ಲಿ ದೇಶ ವಿಭಜನೆಯಾದಾಗ ಅದು ಪಾಕಿಸ್ತಾನಕ್ಕೆ ಸೇರಿ ಹೋಯಿತು. ೧೯೫೦ರಲ್ಲಿ ದೆಹಲಿಗೆ ತಮ್ಮ ತಂದೆಯ ಬಳಿ ಬಂದರು. ದೇಶ ವಿಭಜನೆಯಾದಾಗ ಪಾಕಿಸ್ತಾನಕ್ಕೆ ಓಡಿಹೋದ ಬೊಂಬಾಯಿಯ ಒಬ್ಬ ಮುಸ್ಲಿಮನ ಭೂಮಿ ಮತ್ತು ಕರಾಚಿಯಲ್ಲಿ ತಾವು ಪಡೆದುಕೊಂಡಿದ್ದ ಕಂಪೆನಿಯ ಭೂಮಿಯನ್ನು ಅದಲು ಬದಲು ಮಾಡಿಕೊಳ್ಳುವುದು ಅವರ ಭೇಟಿಯ ಉದ್ದೇಶವಾಗಿತ್ತು. ತಮ್ಮ ಮಗ ಒಂದು ಅನುಕೂಲ ಅಥವಾ ಲಾಭ ಪಡೆದುಕೊಳ್ಳುವುದಕ್ಕಾಗಿ ರಾಜಧಾನಿಗೆ ಬಂದಿರುವುದು ತಿಳಿದ ತಕ್ಷಣ ಪಟೇಲರಿಗೆ ಅಸಾಧ್ಯ ಕೋಪ ಬಂದಿತು. ಅವನು ತಕ್ಷಣವೇ ಬೊಂಬಾಯಿಗೆ ಹಿಂತಿರುಗುವಂತೆ ಆಜ್ಞಾಪಿಸಿದರು. 'ನೀನು ನನ್ನನ್ನು ಇಲ್ಲಿಂದ ಎತ್ತಂಗಡಿ ಮಾಡುತ್ತೀಯೆ,' ಎಂದು ಗುಡುಗಿದರು. ದೇಶ ವಿಭಜನೆಯಾದ ಮೇಲೆ ಕರಾಚಿಯ ಆ ಕಂಪೆನಿಗೆ ಬೆಲೆ ಇಲ್ಲವಾಯಿತು. ದಹ್ಯಾ ಭಾರಿ ನಷ್ಟ ಅನುಭವಿಸಬೇಕಾಯಿತು.[೩೮]

* * * *

ವಿವಿಧ ಜವಾಬ್ದಾರಿಗಳಿಗೆ ವ್ಯಕ್ತಿಗಳನ್ನು ಆರಿಸುವಾಗ ಸರ್ದಾರರು ಆ ವ್ಯಕ್ತಿಯ ಯೋಗ್ಯತೆ, ದಕ್ಷತೆ ಮತ್ತು ರಾಷ್ಟ್ರಕ್ಕೆ ಉಪಯುಕ್ತತೆಯನ್ನು ನೋಡುತ್ತಿದ್ದರೇ ಹೊರತು, ಆ ವ್ಯಕ್ತಿಯ ಬಗೆಗೆ ತಮಗಿರುವ ಪೂರ್ವ ಕಲ್ಪಿತ ಅಭಿಪ್ರಾಯವನ್ನಾಗಲಿ ಅಥವಾ ಆ ವ್ಯಕ್ತಿ ತಮಗೆ ವಿರೋಧಿಯಾಗಿದ್ದ ಅನ್ನುವುದನ್ನಾಗಲಿ ಗಮನಕ್ಕೆ ತೆಗೆದುಕೊಳ್ಳುತ್ತಿರಲಿಲ್ಲ. ಒಬ್ಬ ವ್ಯಕ್ತಿ ತಮಗೆ ತೊಂದರೆ ಕೊಟ್ಟಿದ್ದರೂ, ಆ ವ್ಯಕ್ತಿಯಿಂದ ರಾಷ್ಟ್ರಕ್ಕೆ ಉಪಯೋಗವಾಗುವುದಾದರೆ ಅವನನ್ನು ಉಪಯೋಗಿಸಿಕೊಳ್ಳುತ್ತಿದ್ದರು. ಬಿಂಕ ಅಥವಾ ಬಿಗುಮಾನಕ್ಕೆ ಆಸ್ಪದ ಕೊಡುತ್ತಿರಲಿಲ್ಲ. ಉದಾಹರಣೆಗೆ ತಿರವಾಂಕೂರು ದಿವಾನರಾಗಿದ್ದ ಸರ್ ಸಿ.ಪಿ. ರಾಮಸ್ವಾಮಿ ಐಯ್ಯರ್‌ರವರು ರಾಜ್ಯಗಳ ವಿಲೀನದ ವಿಷಯದಲ್ಲಿ ಪಟೇಲರ ವಿರುದ್ಧ ತಿರುಗಿಬಿದ್ದ ಮೊದಲನೆ ದಿವಾನ. ಅದರಿಂದ ಪಟೇಲರ ಯೋಜನೆಗೆ ಆರಂಭದಲ್ಲೇ ಆಘಾತ ಉಂಟಾಗಿತ್ತು.

ಆದಾಗ್ಯೂ ಸರ್ದಾರರು ಅವರನ್ನು ಸಂವಿಧಾನ ರಚನೆಯ ಒಂದು ಉಪ ಸಮಿತಿಗೆ ಅಧ್ಯಕ್ಷನನ್ನಾಗಿ ಮಾಡಿದರು. ಏಕೆಂದರೆ ಅವರು ಮಹಾಜ್ಞಾನಿ, ಬುದ್ಧಿವಂತ ಮತ್ತು ದಕ್ಷ ಆಗಿದ್ದರು. ಸರ್ದಾರರ ಸಹೋದ್ಯೋಗಿಗಳಲ್ಲಿ ಕೆಲವರು ಸಿ.ಪಿ.ಯವರ ಹಿಂದಿನ ನಡವಳಿಕೆಯನ್ನು ಎತ್ತಿ ಹೇಳಿ, ಅಂತಹವರನ್ನು ನಿಯಮಿಸುವುದರ ಬಗೆಗೆ ಅನುಮಾನ ವ್ಯಕ್ತಪಡಿಸಿದರು. ಪಟೇಲರು, 'ಸಿ.ಪಿ.ಯವರಂತಹ ಶಕ್ತರು ದೇಶದಲ್ಲಿ ಹೆಚ್ಚು ಮಂದಿ ಇಲ್ಲ. ಅವರ ಪ್ರತಿಭೆಯನ್ನು ಸರಿಯಾದ ಮಾರ್ಗದಲ್ಲಿ ಉಪಯೋಗಿಸಿಕೊಂಡರೆ, ಅವರಿಗೂ ಲಾಭ ರಾಷ್ಟ್ರಕ್ಕೂ ಲಾಭ," ಎಂದರು. ಸಿ.ಪಿ. ಯಿಂದ ತಮಗಾಗಿದ್ದ ತೊಂದರೆ ಮತ್ತು ಆತಂಕವನ್ನು ಮನಸಿನಲ್ಲಿ ಇಟ್ಟುಕೊಳ್ಳಲಿಲ್ಲ.[೩೯]

* * * *

ಪಟೇಲರು ಸಂಸತ್ತನ್ನು ಗಂಭೀರವಾಗಿ ಪ್ರವೇಶಿಸುವರು. ತಕ್ಷಣ ನಿಶ್ಯಬ್ಧ ಆವರಿಸುವುದು. ಹೊಗಳಿಕೆಗಾಗಲಿ ತೆಗಳಿಕೆಗಾಗಲಿ ಅವರ ಮುಖದ ಮೇಲೆ ಯಾವ ಪ್ರತಿಕ್ರಿಯೆಯೂ ಕಂಡುಬರುತ್ತಿರಲಿಲ್ಲ. ೧೯೪೯ರ ಮಾರ್ಚ್‌ನಲ್ಲಿ ಸಂಸತ್ತಿನಲ್ಲಿ ಅವರು ಹೀಗೆ ಹೇಳಿದರು:

> ನಾನು ಮಾತನಾಡಬೇಕಾದಾಗ ನಡುಕ ಉಂಟಾಗುತ್ತದೆ
> ಏಕೆಂದರೆ ತಪ್ಪು ಮಾತು ಹೊರಬರುವ ಭಯ ನನಗಿರುತ್ತದೆ.
> ಅದರಿಂದ ನಾನು ಅಪರೂಪವಾಗಿ ಮಾತನಾಡುತ್ತೇನೆ.

ಅವರು ಅಪರೂಪವಾಗಿ ಮಾತನಾಡುತ್ತಿದ್ದುದರಿಂದ, ಚರ್ಚೆಗಳ ನಡುವೆ ಪ್ರವೇಶಿಸಿ ಅವರಾಡುವ ಮಾತಿಗೆ ಭಾರಿ ಬೆಲೆಯಿತ್ತು. ಅವರ ಮಾತಿನ ಸರದಿ ಬಂದಾಗ ಸದಸ್ಯರು ಕಾತರದಿಂದ ನಿರೀಕ್ಷಿಸುತ್ತಾ ಕುಳಿತುಕೊಳ್ಳುವರು, ಖಾಲಿ ಆಸನಗಳು ಬೇಗನೆ ಭರ್ತಿಯಾಗುವುವು. ಪಟೇಲರು ಗಂಭೀರವಾಗಿ ಎದ್ದು ನಿಂತು, ಗಂಟಲನ್ನು ಸರಿಪಡಿಸಿಕೊಂಡು ತಮ್ಮ ಮಾತು ಆರಂಭಿಸುವರು. ಅವರ ಧ್ವನಿಯಲ್ಲಿ ಏರಿಳಿತವಿರುತ್ತಿರಲಿಲ್ಲ, ಕೈ ಅಥವಾ ತಲೆ ಆಡಿಸುವುದು ಇರುತ್ತಿರಲಿಲ್ಲ ಮತ್ತು ಅವರು ಬಳಸುವ ಪದಗಳು ಸ್ಪಷ್ಟ. ಟೀಕಾಕಾರರಿಗೆ ತಿರಸ್ಕಾರ ಮತ್ತು ಅಪಹಾಸ್ಯದ ನುಡಿಗಳು ಧಾರಾಳವಾಗಿ ಸಿಗುತ್ತಿದ್ದುವು.

ಪ್ರಶ್ನೋತ್ತರ ಕಾಲದಲ್ಲಿ ಅವರ ಉತ್ತರ ಸಾಮಾನ್ಯವಾಗಿ ಒಂದೇ ಒಂದು ಪದಗುಚ್ಚದಿಂದ ಕೂಡಿರುತ್ತಿತ್ತು ಅಥವಾ ಚುಟುಕಾಗಿರುತ್ತಿತ್ತು. 'ಓ ಆಗಬಹುದು,' 'ನಾ ಹೇಳಲಾರೆ,' 'ಗೊತ್ತಿಲ್ಲ' ಇತ್ಯಾದಿ. ಉತ್ತರಗಳು ಸಾಮಾನ್ಯವಾಗಿರುತ್ತಿದ್ದುವು.

ಉದಾಹರಣೆ:

ರಾಮನಾರಾಯಣ ಸಿಂಗ್: ತೀರ್ಮಾನಗಳನ್ನು ಮಾಡುವಾಗ (ರಾಜರಿಗೆ ತೆರಿಗೆರಹಿತ ರಾಜಧನ) ಜನರ ಅಭಿಪ್ರಾಯಗಳನ್ನು ತೆಗೆದುಕೊಳ್ಳಲಾಗಿದೆಯೆ?

ಪಟೇಲರು : ಹೌದು, ಸಾಮಾನ್ಯವಾಗಿ (ನಗು)

ರಾ. ಸಿಂಗ್ : ಯಾವ ವಿಧಾನದಲ್ಲಿ?

ಪಟೇಲರು : ಮಾಮೂಲಿ ವಿಧಾನದಲ್ಲಿ (ಮತ್ತಷ್ಟು ನಗು)[೪೦]

* * * *

ಸರ್ದಾರರು, ಆವಶ್ಯಕತೆ ಬಿದ್ದರೆ, ಕಠಿಣವಾಗಿ ಮಾತನಾಡಲು ಹಿಂಜರಿಯುತ್ತಿರಲಿಲ್ಲ. ಹೇಳಬೇಕೆನಿಸಿದ್ದನ್ನು ಸ್ಪಷ್ಟವಾಗಿ ಹಿಂದು ಮುಂದು ನೋಡದೆ ಹೇಳುತ್ತಿದ್ದರು. ಅದರಿಂದ ಎಲ್ಲರೂ ಅವರ ಮಾತಿಗೆ ಹೆದರುತ್ತಲೂ ಇದ್ದರು, ಗೌರವವನ್ನೂ ತೋರುತ್ತಿದ್ದರು. ಹೀರಾಲಾಲ್ ಶಾಸ್ತ್ರಿ ರಾಜಸ್ತಾನದಲ್ಲಿ ಪ್ರಧಾನಮಂತ್ರಿಯಾಗಿದ್ದರು. ಜೈನಾರಾಯಣ್ ವ್ಯಾಸ್ ರಾಜಸ್ತಾನ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿದ್ದರು. ಅವರು, 'ಹೀರಾಲಾಲ್ ಶಾಸ್ತ್ರಿ ಮತ್ತು ಅವರ ಮಂತ್ರಿಮಂಡಲ ರಾಜಿನಾಮೆ ಕೊಡಬೇಕು' ಎನ್ನುವ ಠರಾವನ್ನು ಪ್ರದೇಶ ಕಾಂಗ್ರೆಸ್ ಸಮಿತಿ ಅಂಗೀಕರಿಸುವಂತೆ ಮಾಡಿದರು. ಪಟೇಲರಿಗೆ ಅಸಾಧ್ಯ ಕೋಪ ಬಂದಿತು. ವ್ಯಾಸರನ್ನು ತರಾಟೆಗೆ ತೆಗೆದುಕೊಂಡು ಹೇಳಿದರು, "ಪ್ರಧಾನಮಂತ್ರಿಯಾಗಿ ಹೀರಾಲಾಲ್ ಶಾಸ್ತ್ರಿಯು ಪ್ರದೇಶ ಕಾಂಗ್ರೆಸ್ ಸಮಿತಿಗೆ ಜವಾಬ್ದಾರನಲ್ಲ – ಅನ್ನುವುದನ್ನು ನೀನು ಅರ್ಥಮಾಡಿಕೊಳ್ಳಬೇಕು. ಪ್ರದೇಶ ಕಾಂಗ್ರೆಸ್ ಸಮಿತಿಯು ಶಾಸಕಾಂಗದ ಜವಾಬ್ದಾರಿಗಳನ್ನು ತನ್ನ ವಶಕ್ಕೆ ತೆಗೆದುಕೊಳ್ಳಲು ಸಾಧ್ಯವಿಲ್ಲ. ಅವನು (ಹೀರಾಲಾಲ್) ಪ್ರಧಾನಮಂತ್ರಿಯಾಗಿರುವುದು ನಾಯಕನಾಗಿ ಚುನಾಯಿತನಾಗಿರುವುದರಿಂದಲ್ಲ ಅಥವಾ ಪ್ರದೇಶ ಕಾಂಗ್ರೆಸ್ ಸಮಿತಿಯ ಸೂಚನೆಯಿಂದಲ್ಲ, ನಾನು ನಿಮ್ಮೆಲ್ಲರ ಸರ್ವಾನುಮತದ ಬೇಡಿಕೆಯ ಫಲವಾಗಿ, ನಾಯಕನನ್ನಾಗಿ ಆರಿಸಿರುವುದರಿಂದ. ನೀನು ಸತತ ಅನುಸರಿಸುತ್ತಿರುವ ಅನಪೇಕ್ಷಣೀಯ ಮತ್ತು ಅಪಾಯಕಾರಿ ಮಾರ್ಗ ನಿನ್ನ ಕುತ್ತಿಗೆಗೇ ಉರುಳಾಗುತ್ತದೆ – ಎಂದು ಎಚ್ಚರಿಸುತ್ತಿದ್ದೇನೆ."[೪೧]

* * * *

ಇಳಿಮುಖವಾಗುತ್ತಿದ್ದ ಕಾನೂನು ಮತ್ತು ಶಾಂತಿಯ ಪರಿಸ್ಥಿತಿಯ ಬಗೆಗೆ ವೈಸ್‌ರಾಯ್ ಮೌಂಟ್‌ಬ್ಯಾಟನ್‌ಗೆ ಒಮ್ಮೆ ಸರ್ದಾರರು ಹೀಗೆ ಹೇಳಿದರು, "ನೀವು

ಬಂದ ಮೇಲೆ ಇಲ್ಲಿ ಪರಿಸ್ಥಿತಿ ಬಹಳ ಹದೆಗೆಟ್ಟಿದೆ. ಒಂದು ಅಂತರ್ಯುದ್ಧವೆ ನಡೆಯುತ್ತಿದೆ. ಆದರೆ ಅದನ್ನು ನಿಲ್ಲಿಸಲು ನೀವು ಏನೂ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ, ನೀವೂ ಕ್ರಮ ತೆಗೆದುಕೊಳ್ಳುವುದಿಲ್ಲ, ಕ್ರಮ ತೆಗೆದುಕೊಳ್ಳುವುದಕ್ಕೆ ಕೇಂದ್ರ ಸರ್ಕಾರಕ್ಕೂ ಅವಕಾಶ ಕೊಡುವುದಿಲ್ಲ. ಈ ರಕ್ತಪಾತದ ಜವಾಬ್ದಾರಿಯಿಂದ ನೀವು ತಪ್ಪಿಸಿಕೊಳ್ಳಲಾರಿರಿ."[೪೨]

* * * *

ಬ್ರಿಟನ್ನಿನ ಮಾಜಿ ಪ್ರಧಾನಿ ವಿನ್‌ಸ್ಟನ್ ಚರ್ಚಿಲ್, ಭಾರತಕ್ಕೆ ಸ್ವಾತಂತ್ರ್ಯ ಬಂದ ಹತ್ತು ತಿಂಗಳಾದರೂ ಸಂಕಟ ಪಡುವುದನ್ನು ಬಿಡಲಿಲ್ಲ. ಅವರು ೧೯೪೮ರ ಜೂನ್‌ನಲ್ಲಿ ಬ್ರಿಟನ್ನಿನ ಅರಸನಿಗಿದ್ದ 'ಇಂಡಿಯಾ ಚಕ್ರವರ್ತಿ' ಅನ್ನುವ ಬಿರುದು ಹೊರಟುಹೋದುದರ ಬಗೆಗೆ, ದುಃಖ ವ್ಯಕ್ತಪಡಿಸುತ್ತಾ, "ಇಂಡಿಯಾ ಸರ್ಕಾರವನ್ನು ಹುಲು ವ್ಯಕ್ತಿಗಳಿಗೆ ವಹಿಸಲಾಗಿದೆ" ಎನ್ನುವ ಅವಮಾನಕಾರಿ ಮಾತನ್ನು ದುರಹಂಕಾರದಿಂದ ಆಡಿದರು. ಅದಕ್ಕೆ ಉತ್ತರವಾಗಿ ಪಟೇಲರು ಚರ್ಚಿಲ್‌ರನ್ನು, "ಸಾಮ್ರಾಜ್ಯಶಾಹಿ ಅವಸಾನವಾಗುತ್ತಿರುವ ಕಾಲದಲ್ಲಿ ನಾಚಿಕೆಗೆಟ್ಟ ಸಾಮ್ರಾಜ್ಯವಾದಿ" ಎಂದು ಕರೆದು, "ಭಾರತವು ಬ್ರಿಟನ್ ಒಡನೆ ಸ್ನೇಹ ಸಂಬಂಧವನ್ನು ಇಟ್ಟುಕೊಳ್ಳಬೇಕೆಂದು ಬ್ರಿಟನ್ ಬಯಸಿದರೆ, ಇಂತಹ ದ್ವೇಷದ ಮತ್ತು ವಿಷಪೂರಿತ ಆಕ್ರಮಣಕ್ಕೆ ಭಾರತ ತುತ್ತಾಗದಂತೆ ಮತ್ತು ಬ್ರಿಟಿಷ್ ರಾಜತಂತ್ರಜ್ಞರು ಹಾಗೂ ಇತರರು ಈ ದೇಶದ ಬಗೆಗೆ ಸ್ನೇಹ ಪಾತ್ರ ಸದ್ಭಾವನೆಯಿಂದ ಮಾತನಾಡುವಂತೆ ಅದು ನೋಡಿಕೊಳ್ಳಬೇಕು – ಎಂದು ನಾನು ಮಹಾರಾಜರ ಸರ್ಕಾರಕ್ಕೆ ತಿಳಿಸಲು ಬಯಸುತ್ತೇನೆ," ಎಂದರು.[೪೩]

* * * *

ಪಟೇಲರದು ಕಡಿಮೆ ಮಾತು ಮತ್ತು ಶೀಘ್ರ ನಿರ್ಧಾರ. ಸ್ವತಂತ್ರ ಭಾರತದ ಪ್ರಥಮ ಫೀಲ್ಡ್ ಮಾರ್ಷಲ್ ಸ್ಯಾಮ್ ಮಾನೇಕ್ ಷಾರವರು ೧೯೪೭ರಲ್ಲಿ ಬ್ರಿಗೆಡಿಯರ್ ಆಗಿದ್ದರು ಮತ್ತು ಉತ್ತರ ವಲಯದ ಮಿಲಿಟರಿ ಕಾರ್ಯಾಚರಣೆಯ ಮುಖ್ಯಸ್ಥರಾಗಿದ್ದರು.

೧೯೪೭ರ ಅಕ್ಟೋಬರ್ ೨೬ರಂದು ಕಾಶ್ಮೀರದ ಅರಸ ಹರಿಸಿಂಗ್ ಭಾರತದೊಡನೆ ಸೇರ್ಪಡೆ ಒಪ್ಪಂದಕ್ಕೆ ಸಹಿ ಹಾಕಿದ ಮೇಲೆ ಕಾಶ್ಮೀರವನ್ನು ಆಕ್ರಮಿಸಿದ್ದ ಪಾಕಿಸ್ತಾನದ ಗುಡ್ಡಗಾಡು ಜನರನ್ನು ಹಿಂದಕ್ಕೆ ಅಟ್ಟಲು ಸೈನ್ಯಕ್ಕೆ ಆಣತಿ ನೀಡುವ ಸಂದರ್ಭದಲ್ಲಿ ಬ್ರಿಗೇಡಿಯರ್ ಸ್ಯಾಮ್ ಮಾನೇಕ್ ಷಾಗೆ

ಪ್ರಧಾನಿ ನೆಹರುರವರು ಕಾಶ್ಮೀರದ ಸೇರ್ಪಡೆ ಮತ್ತು ವಿಶ್ವಸಂಸ್ಥೆಯ ಬಗೆಗೆ ಒಂದು ದೀರ್ಘ ವಿವರಣೆ ಕೊಡಲು ಆರಂಭಿಸಿದರು. ಅಸಹನೆಗೊಂಡ ಪಟೇಲರು ನೆಹರು ಮಾತನ್ನು ತಡೆದು, "ಜವಹರ್, ನಿಮಗೆ ಕಾಶ್ಮೀರ ಬೇಕೊ? ಬೇಡವೊ?" ಎಂದರು. "ಹೌದು, ಬೇಕು," ಎಂದು ಗುಡುಗಿದರು ನೆಹರು. ಪಟೇಲರು ಬ್ರಿಗೇಡಿಯರ್ ಕಡೆಗೆ ತಿರುಗಿ ಹೇಳಿದರು, "ನೀವು ಹೋಗಿ, ನಿಮಗೆ ಆಣತಿ ಸಿಕ್ಕಿತಲ್ಲ," ಎಂದರು.[೪೪]

* * * *

೨೭.೩ ಕೆಲವು ಗಮನಾರ್ಹ ಘಟನೆಗಳು

ಅ) ಪ್ರಚಂಡ ಧೈರ್ಯ

ಪಟೇಲ್‌ರವರು ಫ್ಲೀಡರ್ ಪರೀಕ್ಷೆಗೆ ಮನೆಯಲ್ಲೇ ವ್ಯಾಸಂಗ ಮಾಡುತ್ತಿದ್ದಾಗ, ಪ್ರಶಾಂತ ಸ್ಥಳ ಬೇಕೆಂದು ಇಬ್ಬರು ಸ್ನೇಹಿತರು – ಕಾಶಿಭಾಯ್ ದೇಸಾಯಿ ಮತ್ತು ಚೋಟಾಭಾಯ್ ಜೊತೆ ಬರೋಡ ಪ್ರದೇಶಕ್ಕೆ ಸೇರಿದ ಬಕ್ರೋಲ್ ಎಂಬ ಹಳ್ಳಿಯಲ್ಲಿದ್ದ ಕಾಶಿಭಾಯಿಯ ಸಂಬಂಧಿಕರ ಹವೇಲಿಯಲ್ಲಿ ತಂಗಿದ್ದಾಗ ಅವರ ಕಂಕುಳಲ್ಲಿ ಒಂದು ಕುರು ಎದ್ದಿತು. ಆಗಿನ ಕಾಲದ ಪದ್ಧತಿಯಂತೆ ಆ ಕುರುವನ್ನು ಚುಚ್ಚಿ ಕೀವು ತೆಗೆದು ವಾಸಿ ಮಾಡುವುದಕ್ಕಾಗಿ ಹಳ್ಳಿಯ ಕ್ಷೌರಿಕ ಮಾಧವರಾತ್‌ನನ್ನು ಕರೆಸಿದರು. ಅವನು ಕಬ್ಬಿಣದ ಸಲಾಕೆಯನ್ನು ಬೆಂಕಿಯಲ್ಲಿ ಕೆಂಪಗೆ ಕಾಯಿಸಿದನು. ಆದರೆ ಅದನ್ನು ಪಟೇಲರ ಕಂಕುಳಿಗೆ ಚುಚ್ಚುವುದಕ್ಕೆ ಹೆದರಿಬಿಟ್ಟನು. ಪಟೇಲ್ ಅವನ ಅಂಜಿಕೆಗೆ ಹಾಸ್ಯಮಾಡಿ ತಾವೇ ಕಾದ ಸರಳನ್ನು ಎತ್ತಿಕೊಂಡು ಕಂಕುಳಿಗೆ ನಿರ್ಭಯವಾಗಿ ಚುಚ್ಚಿಕೊಂಡರು. ಅಂತಹುದು ಅವರ ಪ್ರಚಂಡ ಧೈರ್ಯ ಮತ್ತು ನೋವನ್ನು ಸಹಿಸುವ ಶಕ್ತಿ. ಆಗ ಅವರ ವಯಸ್ಸು ೨೫.[೪೫]

ಆ) ಪಶ್ಚಾತ್ತಾಪದ ನುಡಿ

ಜಯಪ್ರಕಾಶ್ ನಾರಾಯಣ್ ಕಾಂಗ್ರೆಸ್ ಸಮಾಜವಾದಿ ಪಕ್ಷದ ಕಾರ್ಯದರ್ಶಿ. ಅವರ ಪತ್ನಿ ಪ್ರಭಾವತಿಯವರು ಕಾಂಗ್ರೆಸ್ ನಾಯಕ ಬ್ರಿಜ್ ಕಿಶೋರ್ ಪ್ರಸಾದ್‌ರವರ ಮಗಳು. ಅವರು ಮತ್ತು ಮಣಿ ಬೆನ್ ಗಾಂಧೀಜಿಯ ಆಶ್ರಮದಲ್ಲಿ ಸ್ನೇಹಿತೆಯರಾದರು. ೧೯೩೫ರಲ್ಲಿ ಉತ್ತರ ಪ್ರದೇಶದ ತಮ್ಮ ಒಂದು ಪ್ರವಾಸದ ಸಮಯದಲ್ಲಿ ವಲ್ಲಭಭಾಯ್‌ರವರು ಜಯಪ್ರಕಾಶ್ ನಾರಾಯಣ್ ಬಗೆಗೆ ಒಂದು ತಮಾಷೆಯ ಮಾತನ್ನು ಆಡಿದರು. ಅದಕ್ಕೆ ಒಂದಷ್ಟು ಬಣ್ಣ ಕಟ್ಟಿದ ಉಪ್ಪು ಸೇರಿಸಿದ ರೂಪ ಜಯಪ್ರಕಾಶರ ಕಿವಿಗಳಿಗೆ ಮುಟ್ಟಿ, ಅವರ ಮನಸ್ಸಿಗೆ

ನೋವಾಯಿತು. ನೊಂದ ಜಯಪ್ರಕಾಶರು ವಲ್ಲಭಭಾಯ್‌ರವರಿಗೆ ಒಂದು ಪತ್ರ ಬರೆದರು. ಅದನ್ನು ಓದಿದ ತಕ್ಷಣ ಪಟೇಲರು ಅದಕ್ಕೊಂದು ಜವಾಬು ಬರೆದರು:

> ನಿಮ್ಮ ಮೇ ೧೮ ಪತ್ರ ಈ ದಿನ ಕೈ ಸೇರಿತು. ನಿಮ್ಮ ಮದುವೆಯ ಬಗೆಗೆ ನಾನು ಆಡಿದ ತಮಾಷೆಯ ಮಾತು ಯಾವ ಭಯ ಅಥವಾ ಹಿಂಜರಿಕೆಯಿಲ್ಲದೆಯೆ ನಿಮ್ಮ ಮುಂದೆಯೆ ನಾನು ಆಡಬಹುದಾಗಿದ್ದ ಮಾತು. ಆದರೆ ನಿಮ್ಮ ಮನಸ್ಸಿಗೆ ಎಷ್ಟು ನೋವಾಗಿದೆ ಎನ್ನುವುದು ನಿಮ್ಮ ಕಿರು ಪತ್ರದಿಂದ ತಿಳಿಯಿತು. ಅದರಿಂದ ಇನ್ನು ಮುಂದೆ, ಯಾರ ಅಭಿಪ್ರಾಯಗಳನ್ನು ನಾನು ಒಪ್ಪುವುದಿಲ್ಲವೊ ಆ ಸ್ನೇಹಿತರ ಬಗೆಗೆ, ತಮಾಷೆಯ ನುಡಿಗಳನ್ನು ಅದು ಎಷ್ಟೇ ಮುಗ್ಧವಾಗಿರಲಿ, ಆಡಬಾರದೆಂದು ತೀರ್ಮಾನಿಸಿದ್ದೇನೆ.
>
> ನಿಮ್ಮ ಮನಸ್ಸಿಗೆ ನೋವಾಗಿದೆ. ನಿಮ್ಮ ಕ್ಷಮೆಯನ್ನು ಬಯಸುತ್ತೇನೆ. ಪ್ರಭಾ ನನಗೆ ಮಗಳಿದ್ದ ಹಾಗೆ. ಅವಳು, ಯಾರು ನನಗೆ ನಿಜ ಸಹೋದರನಂತೆ ಇದ್ದಾರೊ ಮತ್ತು ಯಾರ ಸಾತ್ವಿಕ ಜೀವನದ ಬಗೆಗೆ ನನಗೆ ಬಹಳ ಗೌರವವಿದೆಯೊ ಅವರ (ಬ್ರಿಜ್ ಕಿಶೋರ್ ಪ್ರಸಾದ್) ಮಗಳು. ನಿಮ್ಮ ಖಾಸಗಿ ಜೀವನದ ಬಗೆಗೂ ಸಹ ನನಗೆ ಬಹಳ ಗೌರವವಿದೆ. ನಾನು ಕಾರಣವಿಲ್ಲದೆ ನಿಮಗೆ ಅದು ಹೇಗೆ ನೋವುಂಟುಮಾಡಿದೆನೊ ನನಗೆ ತಿಳಿಯದು. ನಿಮ್ಮ ಕ್ಷಮೆಯನ್ನು ಕೋರುತ್ತೇನೆ.[೪೬]

ಇ) ಬಂದೇ ಬರುವುದು ಜಮೀನು

ಬ್ರಿಟಿಷ್ ಪಾರ್ಲಿಮೆಂಟು ೧೯೩೫ರ ಭಾರತ ಸರ್ಕಾರದ ಕಾನೂನನ್ನು ಅಂಗೀಕರಿಸಿದ ಕೆಲವು ತಿಂಗಳ ನಂತರ ಬೊಂಬಾಯಿ ಪ್ರಾಂತ್ಯದ ಗೌರ್ನರ್ ಸರ್ ರೋಜರ್ ಲುಮ್ಲೆರವರು ಪಟೇಲರೊಡನೆ ಒಂದು ಖಾಸಗಿ ಭೇಟಿಯನ್ನು ಬಯಸಿದರು. ಅಷ್ಟು ಹೊತ್ತಿಗೆ ಪಟೇಲರು ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡ್‌ನ ಛೇರ್‌ಮನ್ ಆಗಿದ್ದರು. ಆ ಭೇಟಿಯ ಸಮಯದಲ್ಲಿ ಲುಮ್ಲೆಯವರು, ಕಾಂಗ್ರೆಸ್ಸು ಅಧಿಕಾರವನ್ನು ವಹಿಸಿಕೊಳ್ಳುವ ಬಗೆಗೆ ಪಟೇಲರ ಮನಸ್ಸನ್ನು ತಿಳಿಯುವುದಕ್ಕಾಗಿ, "ನೀವು ಬೊಂಬಾಯ್ ಪ್ರಾಂತ್ಯದ ಪ್ರಧಾನಿಯಾಗುತ್ತೀರಿ ಅನ್ನುವುದರಲ್ಲಿ ನನಗೆ ಅನುಮಾನವೇ ಇಲ್ಲ,"ಎಂದರು. "ನಾನು ಆಗುವುದಿಲ್ಲ, ಅದನ್ನು ನಿಮಗೆ ಬರವಣಿಗೆಯಲ್ಲಿ ಬೇಕಾದರೆ ಕೊಡುತ್ತೇನೆ," ಎಂದರು ಪಟೇಲರು. ನಂತರ ಪಟೇಲರು

ತಮಗೆ ಪ್ರಧಾನವಾಗಿದ್ದ ಒಂದು ಪ್ರಶ್ನೆಯನ್ನು ಎತ್ತಿದ್ದರು. ಅದು ಸರ್ಕಾರವು ವಶಪಡಿಸಿಕೊಂಡಿರುವ ರೈತರ ಜಮೀನುಗಳನ್ನು ಹಿಂತಿರುಗಿಸುವ ವಿಷಯ. "ಆ ಜಮೀನುಗಳನ್ನು ಎಂದಾದರು ಹೇಗೆ ಹಿಂತಿರುಗಿಸಲು ಸಾಧ್ಯ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ," ಎಂದರು ಸರ್ ರೋಜರ್ ಲುಮ್ಲೆ. "ನಾನು ನಿಮಗೆ ಬರೆದು ಕೊಡುತ್ತೇನೆ. ಆ ಜಮೀನುಗಳು ಅವುಗಳ ನ್ಯಾಯಯುತ ಹಿಂದಿನ ಮಾಲೀಕರಿಗೆ ವಾಪಸ್ಸು ಬಂದೇ ಬರುತ್ತದೆ," ಎಂದರು ಕಟುವಾಗಿ ಪಟೇಲರು.

ಮುಂದೆ ಪಟೇಲರ ಮಾತು ನಿಜವಾಯಿತು. ಗೌರ್ನರ್ ಮಾತು ಸುಳ್ಳಾಯಿತು. ಚುನಾವಣೆಯಲ್ಲಿ ಸ್ಪರ್ಧಿಸಿ, ಗೆದ್ದು ಮಂತ್ರಿಮಂಡಲ ರಚಿಸಿದ ಕಾಂಗ್ರೆಸ್ ಪಕ್ಷ ಆ ಜಮೀನುಗಳನ್ನು ಅವುಗಳ ಹಿಂದಿನ ಮಾಲೀಕರಿಗೆ ವಾಪಸ್ಸು ವಹಿಸಿತು.[೪೭]

ಈ) ಅತಿಥಿಯಾದ ಗಾಂಧೀಜಿ

ಬಾರ್ಡೋಲಿ ಆಶ್ರಮದಲ್ಲಿ ಪಟೇಲರು ಒಂದು ಕುಟೀರ ಕಟ್ಟಿಸಿ ಅಲ್ಲಿ ವಾಸಿಸುತ್ತಿದ್ದರು. ಅದರ ಸುತ್ತ ಬಾಳೆ, ಮಾವು, ದ್ರಾಕ್ಷಿ ಮುಂತಾದ ಹಣ್ಣುಗಳ ಮತ್ತು ನಾನಾ ಹೂವುಗಳ ಗಿಡಗಳನ್ನು ಬೆಳೆಸುತ್ತಿದ್ದರು. ಸಾಮಾನ್ಯವಾಗಿ ತಂಪು ಹವೆಯ ಕಾಲದಲ್ಲಿ ಆ ಕುಟೀರದಲ್ಲಿರಲು ಅವರು ಬಯಸುತ್ತಿದ್ದರು.

ಗಾಂಧೀಜಿಯವರು ಆ ಆಶ್ರಮಕ್ಕೆ ಬಂದಾಗ ಅವರ ಜೊತೆ ಒಂದು ದೊಡ್ಡ ಗುಂಪು ಇರುತ್ತಿತ್ತು. ಪಟೇಲರು ತಮ್ಮ ಕೈಗಾರಿಕೋದ್ಯಮಿ ಮಿತ್ರ ವಾಲ್‌ಚಂದ್ ಹೀರಾಚಂದ್ ಸೇಟ್‌ರವರಿಗೆ, "ಗಾಂಧೀಜಿಯವರು ಇಲ್ಲಿ ವಾಸ್ತವ್ಯ ಹೋಡಲಿದ್ದಾರೆ" ಎಂದು ಸಮಾಚಾರ ಕಳುಹಿಸುವರು. ಸೇಟ್‌ರವರು ತಕ್ಷಣ ಆವಶ್ಯಕವಾದದ್ದನ್ನೆಲ್ಲಾ ರವಾನಿಸುವರು.

ಒಮ್ಮೆ ಗಾಂಧೀಜಿ ಮತ್ತು ಅವರ ಸ್ನೇಹಿತರು ಬಾರ್ಡೋಲಿಯಲ್ಲಿ ತಂಗಿದ್ದಾಗ ಸೇಟ್ ವಾಲ್‌ಚಂದ್‌ರವರೇ ಬಂದರು. ಪಟೇಲರು, ಆಶ್ರಮದ ವ್ಯವಸ್ಥಾಪಕ ಉತ್ತಮ್ ಚಂದ್‌ಷಾರವರಿಗೆ 'ಸೇಟ್‌ರವರಿಗೆ ಊಟದಲ್ಲಿ ಯತೇಚ್ಚವಾಗಿ ಜಿಲೇಬಿ ಬಡಿಸುವಂತೆ ಮತ್ತು ಒಳ್ಳೆಯ ಭೋಜನ ತಯಾರಿಸುವಂತೆ' ಸೂಚಿಸಿದರು. ಆಶ್ರಮದ ನಿಯಮದ ಪ್ರಕಾರ ತಾರತಮ್ಯ ಮಾಡುವ ಹಾಗಿರಲಿಲ್ಲ. ಅದರಿಂದ ಅಂದು ಎಲ್ಲರಿಗೂ ಭರ್ಜರಿ ಭೋಜನ ದೊರಕಿತು. ಈ ದುಂದುವೆಚ್ಚದ ಸುದ್ದಿ ಗಾಂಧೀಜಿಯನ್ನು ತಲುಪಿತು. ಅವರು ವ್ಯವಸ್ಥಾಪಕ ಷಾ ನನ್ನು ಕರೆಯಿಸಿ, 'ಈ ದಿನ ನೀವೊಂದು ಭೋಜನ ಮಂದಿರವನ್ನು ನಡೆಸಿದಿರಂತೆ' ಎಂದರು. ಷಾ, 'ಬಾಪೂಜಿ, ಇಲ್ಲಿ ನೀವು ಒಬ್ಬ ಅತಿಥಿ. ಸರ್ದಾರರು ಅತಿಥೇಯ, ನಾನು ಅತಿಥಿಯ

ಮಾತು ಕೇಳಬೇಕೊ? ಅಥವಾ ಅತಿಥೇಯನ ಮಾತು ಕೇಳಬೇಕೊ?,' ಎಂದರು. ಬಾಪೂಜಿ ಜೋರಾಗಿ ನಕ್ಕುಬಿಟ್ಟರು.[೪೮]

ಊ) ತಾಯಿಯ ಭೇಟಿ

ಬೋರ್ಸದ್ ಸತ್ಯಾಗ್ರಹ ಮುಕ್ತಾಯವಾದ ನಂತರ ಜನವರಿ ೧೯ರಂದು ವಲ್ಲಭಭಾಯ್‌ರವರು ತಮ್ಮ ತಾಯಿಯ ಭೇಟಿಗಾಗಿ ತಮ್ಮ ಸ್ವಗ್ರಾಮ ಕರಮ್‌ಸದ್‌ಗೆ ಹೋದರು. ಅವರ ತಾಯಿ ಲಾಡ್‌ಬಾಗೆ ಆಗ ಸುಮಾರು ೭೭ ವರ್ಷ. ಅವರೂ ಸಹ ಗಾಂಧೀಜಿಯ ಪ್ರಭಾವಕ್ಕೆ ಒಳಗಾಗಿ ಖಾದಿ ಧರಿಸುತ್ತಿದ್ದರು ಮತ್ತು ಚರಕದಿಂದ ನೂಲು ತೆಗೆಯುತ್ತಿದ್ದರು. ಅವರು ಪಟೇಲರ ಅಹಮದಾಬಾದ್‌ನ ಮನೆಗೆ ಅಪರೂಪಕ್ಕೆ ಹೋದಾಗಲೂ ಚರಕದಿಂದ ನೂಲು ತೆಗೆಯುತ್ತಿದ್ದರು.

ವಲ್ಲಭಭಾಯ್ ಕರಮ್‌ಸದ್ ಮನೆಗೆ ಬಂದಾಗ ಲಾಡ್‌ಬಾರವರು ಮಣಿಯ ವಿಷಯವನ್ನು ಪ್ರಸ್ತಾಪಿಸಿದರು. ಈಗಾಗಲೇ ಮಣಿಗೆ ಮದುವೆಯ ವಯಸ್ಸು ಮೀರಿತ್ತು. ಮುಂದಿನ ಏಪ್ರಿಲ್‌ಗೆ ೨೦ ವರ್ಷ ತುಂಬುತ್ತಿತ್ತು. ಆಗ ಅವಳು ಗುಜರಾತ್ ವಿದ್ಯಾಪೀಠದಲ್ಲಿ ಗುಜರಾತಿ ಸಾಹಿತ್ಯ, ಇಂಗ್ಲಿಷ್ ಮತ್ತು ಬೆಂಗಾಲಿಯನ್ನು ವ್ಯಾಸಂಗ ಮಾಡುತ್ತಿದ್ದಳು. ಮಣಿಯ ಮದುವೆ ಪ್ರಸ್ತಾಪ ಮಾಡಿದ ತಾಯಿಗೆ ವಲ್ಲಭಭಾಯ್, "ಏನು ಆಗಬೇಕೆಂದು ವಿಧಿಬರಹ ಇದೆಯೋ ಅದು ಆಗುತ್ತದೆ," ಎಂದರು. "ಮಣಿಯ ಮದುವೆಯನ್ನು ನೋಡುವುದಕ್ಕಾಗಿಯೇ ಭಗವಂತ ನನ್ನನ್ನು ಜೀವಂತ ಇಟ್ಟಿದ್ದಾನೆಂದು ಅನ್ನಿಸುತ್ತದೆ," ಎಂದರು ತಾಯಿ. ವಲ್ಲಭಭಾಯ್ ಮಾತನಾಡಲಿಲ್ಲ, ಮೌನ ತಾಳಿದರು. ಅವರು ಮಣಿಯು ಮದುವೆಯಾಗಲು ಬಯಸುತ್ತಾಳೆಯೆ ಎಂದು ಅವಳನ್ನು ವಿಚಾರಿಸಿಯೂ ಇರಲಿಲ್ಲ. ಅವಳಿಗೊಂದು ವರನನ್ನು ಹುಡುಕಲು ತೊಡಗಿಯೂ ಇರಲಿಲ್ಲ. ಅವರ ಮತ್ತು ಮಗಳ ನಡುವೆ ಇದ್ದ ಸಂಕೋಚ ಮತ್ತು ಅವರು ಸದಾ ಪುರಸಭೆಯ ಕೆಲಸ ಅಥವಾ ಹೋರಾಟಗಳು ಅಥವಾ ಕಾಂಗ್ರೆಸ್ಸಿನ ಕೆಲಸಗಳಲ್ಲಿ ಮುಳುಗಿರುತ್ತಿದ್ದುದು ಅದಕ್ಕೆ ಕಾರಣ. ಅದರಿಂದ ವಲ್ಲಭಭಾಯ್ ಮೌನದ ಮೊರೆ ಹೊಕ್ಕಿದ್ದರು.

ನಂತರ ಲಾಡ್‌ಬಾ ತಮ್ಮ ಮಗನನ್ನು ಕೇಳಿದರು, "ನಿನ್ನ ಮಕ್ಕಳು ಈಗ ಏನು ವ್ಯಾಸಂಗ ಮಾಡುತ್ತಿದ್ದಾರೆ?" ಸರ್ಕಾರದ ಪ್ರಶ್ನೆಗಳಿಗೆ ಕಟು ಉತ್ತರವನ್ನು ಕೊಡುತ್ತಿದ್ದ ಪಟೇಲ್, ತಾಯಿಯ ಪ್ರಶ್ನೆಗೆ ಉತ್ತರ ಕೊಡದೆ ತಪ್ಪಿಸಿಕೊಂಡರು. ವಲ್ಲಭಭಾಯ್ ಭೇಟಿಯನ್ನು ಮುಗಿಸಿ ಅಲ್ಲಿಂದ ಹೊರಟಾಗ ಅವರ ತಾಯಿ ಮತ್ತೆ ಮಣಿಯ ಪ್ರಸ್ತಾಪ ಮಾಡಿದರು. ಮಗ ತಾಯಿಗೆ, 'ನೀವು ಸುಮ್ಮನೆ ಪೀಡಿಸುತ್ತಿದ್ದೀರಿ' ಎಂದರು. ತಾಯಿ ಉತ್ತರಿಸಿದರು, "ನೀನು ಹೇಳುವುದು ಸರಿ.

ತನ್ನ ಮಕ್ಕಳು ಏನು ವ್ಯಾಸಂಗ ಮಾಡುತ್ತಿದ್ದಾರೆ ಎನ್ನುವುದೂ ಸಹ ಗೊತ್ತಿಲ್ಲದ ತಂದೆ ಅಳಿಯನನ್ನು ಹುಡುಕುವುದಿಲ್ಲ."[೪೯]

ಊ) ಅವರು ಡಕಾಯಿತರು

ಗಾಂಧೀಜಿ ಮತ್ತು ವಲ್ಲಭಭಾಯ್ ಪಟೇಲರು ಯರವಾಡ ಸೆರೆಮನೆಯಲ್ಲಿ ಒಟ್ಟಿಗೆ ಇದ್ದಾಗ ಒಂದು ದಿನ (೫.೬.೩೨ರಂದು) ಗಾಂಧೀಜಿಯನ್ನು ಪರೀಕ್ಷಿಸಲು ಬಂದ ವೈದ್ಯರು, "ಭಾರತೀಯರು ಭಿಕ್ಷುಕನಿಗೆ ಊಟ ಹಾಕಲು ಮತ್ತು ದಾನ ನೀಡಲು ದಿನಕ್ಕೆ ೧೬ ಲಕ್ಷ ರೂಪಾಯಿಗಳನ್ನು ವೆಚ್ಚ ಮಾಡುತ್ತಾರೆ ಎಂದು ವೈಸ್‌ರಾಯ್ ಲಾರ್ಡ್ ರೀಡಿಂಗ್‌ರವರು ಅಂದಾಜು ಮಾಡಿ, ಆ ಹಣವನ್ನು ಅದಕ್ಕಿಂತ ಉತ್ತಮ ಕಾರ್ಯಕ್ಕೆ ಉಪಯೋಗಿಸಬಾರದೆ? – ಎಂದು ಕೇಳಿದ್ದಾರೆ," ಎಂದರು. ತಕ್ಷಣ ವಲ್ಲಭಭಾಯ್‌ರವರು, "ಹೌದು, ಆದರೆ ನಾವು ಅದಕ್ಕಿಂತ ಹೆಚ್ಚಿನ ಹಣವನ್ನು ಡಕಾಯಿತರ ಮೇಲೆ ವೆಚ್ಚ ಮಾಡುತ್ತಿದ್ದೇವೆ," ಎಂದರು. "ಅದು ಹೇಗೆ? ಅರ್ಥವಾಗುತ್ತಿಲ್ಲವಲ್ಲ," ಎಂದರು ವೈದ್ಯರು. ಪಟೇಲ್ ಹೇಳಿದರು, "ಮೈ ಗುಡ್ ಸರ್, ಇಲ್ಲಿರುವ ಈ ಎಲ್ಲಾ ಬ್ರಿಟಿಷ್ ಜನರು ಡಕಾಯಿತರು ಎನ್ನುವುದು ನಿಮಗೆ ಅರಿವಾಗಿಲ್ಲವೆ? ಅವರು ಡಕಾಯಿತರಿಗಿಂತ ಯಾವ ರೀತಿ ಉತ್ತಮವಾಗಿದ್ದಾರೆ?"[೫೦]

ಋ) ಸರ್ದಾರರು ಜೈಲಿನಲ್ಲೂ ಸರ್ದಾರರೆ

೧೯೪೧ರಲ್ಲಿ ಸರ್ದಾರ್ ವಲ್ಲಭಭಾಯ್ ಪಟೇಲ್‌ರವರು ಯರವಾಡ ಜೈಲಿನಲ್ಲಿ ರಾಜಕೀಯ ಖೈದಿಯಾಗಿದ್ದರು. ಅವರ ಜೊತೆಯಲ್ಲಿ ಕೆ.ಎಂ. ಮುನ್ಷಿ, ಬಿ.ಜಿ. ಖೇರ್, ಭೂಲಾಭಾಯ್ ದೇಸಾಯಿ, ಮಂಗಲದಾಸ್ ಪಕ್ವಾಸ ಮುಂತಾದ ಅನೇಕ ರಾಜಕೀಯ ಖೈದಿಗಳೂ ಇದ್ದರು. ಎಲ್ಲಿದ್ದರೂ ಎಂತಿದ್ದರೂ ಸರ್ದಾರರು ಸರ್ದಾರರೆ! ಜೈಲಿನಲ್ಲೂ ಅವರೇ ನಾಯಕರು. ಗಾಂಧೀಜಿ ಇದ್ದರೆ ಮಾತ್ರ ಬೇರೆಯಾಗಿರುತ್ತಿತ್ತು. ಸರ್ದಾರರ ವರ್ಚಸ್ಸು ಅಂತಹುದು. ಎಲ್ಲರೂ ಅವರಿಗೆ ಹೆದರುತ್ತಿದ್ದರು, ಅವರನ್ನು ಗೌರವಿಸುತ್ತಿದ್ದರು. ಆಗ ಇನ್‌ಸ್ಪೆಕ್ಟರ್ ಜೆನೆರಲ್ ಆಫ್ ಪ್ರಿಸನ್ಸ್ ಆಗಿದ್ದ ಭಂಡಾರಿಯವರಂತೂ ಪಟೇಲರನ್ನು ಕಂಡರೆ ಗಡಗಡ ನಡುಗುತ್ತಿದ್ದರು.

೧೯೪೧ರ ಜನವರಿಯ ಒಂದು ಸಂಜೆ ಜೈಲಿನ ಅಧಿಕಾರಿ ರಾಜಕೀಯ ಖೈದಿಗಳ ಬಳಿಗೆ ಬಂದು "ಸೊಳ್ಳೆ ಪರದೆಗಳು ಹರಿದು ಹೋಗಿವೆ, ಇಂದಿನ ರಾತ್ರಿಗೆ ಅವು ದೊರಕುವುದಿಲ್ಲ" ಎಂದು ತಿಳಿಸಿದ. ಒಡನೆ ಸರ್ದಾರರು, "ಪೇಟೆಗೆ

ಹೋಗಿ ಹೊಸತನ್ನು ಕೊಂಡು ತಾ" ಎಂದು ಗುಡುಗಿದರು. "ಹೊಸ ಸೊಳ್ಳೆ ಪರದೆಗಳಿಗೆ ಆರ್ಡರ್ ಮಾಡಲಾಗಿದೆ, ಆದರೆ ಅವು ಇನ್ನೂ ಬಂದಿಲ್ಲ," ಎಂದು ಜೈಲರ್ ಉತ್ತರಿಸಿದ. ಸರ್ದಾರರು ಅವನಿಗೆ ದೃಢವಾಣಿಯಲ್ಲಿ ಹೇಳಿದರು, "ಹೋಗಿ ನಿಮ್ಮ ಭಂಡಾರಿಗೆ ಹೇಳು. ನಾವಾಗಿ ಇಲ್ಲಿಗೆ ಬಂದಿಲ್ಲ. ಅವನು ನಮ್ಮನ್ನು ಇಲ್ಲಿಗೆ ಕರೆ ತಂದಿದ್ದಾನೆ. ಸೊಳ್ಳೆ ಪರದೆಗಳನ್ನು ಕೊಡಲು ಅವನಿಗೆ ಸಾಧ್ಯವಿಲ್ಲದಿದ್ದರೆ, ಜೈಲಿನ ಬಾಗಿಲನ್ನು ತೆಗೆಯಲಿ. ನಾವು ಹೊರಗೆ ಹೋಗುತ್ತೇವೆ. ಸೊಳ್ಳೆ ಪರದೆಗಳು ಬಂದ ಮೇಲೆ ವಾಪಸ್ಸು ಬರುತ್ತೇವೆ."

ಬೇರೆ ಯಾರಾದರೂ ಈ ಮಾತು ಆಡಿದ್ದರೆ ಅದು ಒಂದು ಹಾಸ್ಯ ಅಥವಾ ಮೂರ್ಖತನದ ಮಾತೆಂದು ಪರಿಗಣಿತವಾಗುತ್ತಿತ್ತು. ಆದರೆ ಸರ್ದಾರರ ಮಾತು ಹಾಗಲ್ಲ. ಅದಕ್ಕೆ ಒಂದು ಗತ್ತು, ಅಧಿಕಾರ ಮತ್ತು ಬೆಲೆ ಇತ್ತು. ಆ ಜೈಲರ್ ಒಡನೆ ಹೋಗಿ ಇನ್‌ಸ್ಪೆಕ್ಟರ್ ಜೆನೆರಲ್ ಆಫ್ ಪ್ರಿಸನ್ಸ್‌ರವರಿಗೆ ವರದಿ ಮಾಡಿದ. ಒಂದು ಘಂಟೆಯೊಳಗೆ ಹೊಸ ಸೊಳ್ಳೆ ಪರದೆಗಳು ಬಂದವು.[೫೧]

೩೦) ವಿಭಜನೆಯ ಅನಿವಾರ್ಯತೆ

೧೯೪೭ರಲ್ಲಿ ನಡೆದ ಭಾರತದ ವಿಭಜನೆಯು ಎಂದೆಂದಿಗೂ ವಾಸಿಯಾಗದ ಒಂದು ಗಾಯ. ಅಂದಿನ ಕಾಂಗ್ರೆಸ್ ನಾಯಕರೇಕೆ ದೇಶ ವಿಭಜನೆಗೆ ಒಪ್ಪಿದರು? ಎನ್ನುವ ಜಿಜ್ಞಾಸೆ ಹಿಂದೆಯೂ ನಡೆಯಿತು, ಈಗಲೂ ನಡೆಯುತ್ತಿದೆ ಮತ್ತು ಮುಂದೆಯೂ ನಡೆಯುತ್ತದೆ.

ಒಮ್ಮೆ ಗಾಂಧೀಜಿ ಹೇಳಿದ್ದರು, "ನನ್ನ ಹೆಣದ ಮೇಲೆ ಮಾತ್ರ ವಿಭಜನೆ ಸಾಧ್ಯ." ಸರ್ದಾರ್ ಪಟೇಲರೂ ಸಹ ದೇಶ ವಿಭಜನೆಯನ್ನು ವಿರೋಧಿಸಲು ತೀರ್ಮಾನಿಸಿದ್ದರು. ಕೆ.ಎಂ. ಮುನ್ಷಿಯವರಂತೂ ೧೯೪೧ರಲ್ಲಿ ಕಾಂಗ್ರೆಸ್ಸನ್ನು ತೊರೆದು 'ಅಖಂಡ ಹಿಂದೂಸ್ತಾನ್ ಚಳವಳಿ'ಯನ್ನು ಆರಂಭಿಸಿದ್ದರು. ಮೌಲಾನ ಅಬುಲ್ ಕಲಂ ಆಜಾದ್‌ರವರು ತಮ್ಮ ಜೀವನಪೂರ 'ಏಕರಾಷ್ಟ್ರ' ತತ್ವವನ್ನು ಪ್ರತಿಪಾದಿಸಿದ್ದರು. ಆದರೂ ಸಹ ದೇಶ ವಿಭಜನೆ ಆಯಿತು. ಏಕೆ?....ಏಕೆ?

೧೯೪೭ರಲ್ಲಿ ಸರ್ದಾರ್ ಪಟೇಲ್ ಮತ್ತು ಕೆ.ಎಂ. ಮುನ್ಷಿಯವರು ನವದೆಹಲಿಯಲ್ಲಿ ಜಿ.ಡಿ. ಬಿರ್ಲಾರವರ ಅತಿಥಿಯಾಗಿದ್ದರು. ಒಂದು ದಿನ ಸಂಭಾಷಿಸುತ್ತಿರುವಾಗ, ಸರ್ದಾರರು ಕೆ.ಎಂ. ಮುನ್ಷಿಯವರನ್ನು ಚುಡಾಯಿಸಲು ಹೀಗೆಂದರು, "ಸರಿ, ಅಖಂಡ ಹಿಂದೂಸ್ತಾನೀ, ನಾವೀಗ ದೇಶವನ್ನು ವಿಭಜಿಸಲು ಹೊರಟಿದ್ದೇವೆ." ಆಗ ತಾನೇ ಸರ್ದಾರರು ಯಾವುದೋ ಸಭೆಯಲ್ಲಿ ಭಾಗವಹಿಸಿ

ಬಂದಿದ್ದರು. ಈ ಮಾತು ಮುನ್ಷಿಯವರಿಗೆ ಆಘಾತವನ್ನು ಉಂಟುಮಾಡಿತು, ಏಕೆಂದರೆ ಸರ್ದಾರರು ದೇಶ ವಿಭಜನೆಯನ್ನು ಉದ್ದಕ್ಕೂ ಬಹಳ ಬಲವಾಗಿ ವಿರೋಧಿಸಿಕೊಂಡು ಬಂದಿದ್ದರು ಮತ್ತು ವಿಭಜನೆಯ ಪರವಾಗಿ ಇದ್ದ ರಾಜಾಜಿ ಯವರನ್ನು ಬಹಳ ಕಟುವಾಗಿ ಟೀಕಿಸುತ್ತಿದ್ದರು. ಅಂತಹ ಪಟೇಲರ ಬಾಯಿಂದ ಎಂತಹ ಮಾತು! ಮುನ್ಷಿಯವರಿಗೆ ಆಘಾತ ಆಶ್ಚರ್ಯ ಎರಡೂ ಆಯಿತು. ಅನಂತರ ಪಟೇಲರು ವಿಭಜನೆಯನ್ನು ಸಮರ್ಥಿಸಲು ಕಾರಣಗಳನ್ನು ನೀಡಲು ಆರಂಭಿಸಿದರು. ಅವರು ಪ್ರಮುಖವಾಗಿ ಎರಡು ಕಾರಣಗಳನ್ನು ನೀಡಿದರು. ಭಾರತ ರಾಷ್ಟ್ರೀಯ ಕಾಂಗ್ರೆಸ್ಸು ಅಹಿಂಸಾ ತತ್ವಕ್ಕೆ ಬದ್ಧವಾಗಿರುವುದರಿಂದ, ವಿಭಜನೆ ಯನ್ನು ತಡೆಗಟ್ಟಲು, ಕಾಂಗ್ರೆಸ್‌ಗೇ ಸಾಧ್ಯವಿಲ್ಲ. ವಿಭಜನೆಯನ್ನು ತಡೆಗಟ್ಟುವುದೆಂದರೆ ಕಾಂಗ್ರೆಸ್‌ನ ಅಂತ್ಯ ಮತ್ತು ಮುಸ್ಲಿಂ ಲೀಗ್ ಒಡನೆ ಹಿಂಸಾಚಾರದ ಭಾರಿ ಹೋರಾಟ ಮತ್ತು ಬ್ರಿಟಿಷ್ ಸರ್ಕಾರ, ತನ್ನ ಪೊಲೀಸ್ ಮತ್ತು ಸೈನ್ಯದ ಬಲದಿಂದ ಭಾರತದಲ್ಲಿ ಮುಂದುವರೆಯುವುವಿಕೆ. ಎರಡನೆಯ ಕಾರಣವೇನೆಂದರೆ ವಿಭಜನೆಯನ್ನು ಒಪ್ಪದೇ ಹೋದರೆ ನಗರಗಳಲ್ಲಿ ಮತ್ತು ಕೆಲವು ಗ್ರಾಮಾಂತರ ಪ್ರದೇಶಗಳಲ್ಲಿ ದೀರ್ಘಕಾಲದ ಮತೀಯ ಹೋರಾಟ ನಡೆಯುವುದು. ಪೊಲೀಸ್ ಮತ್ತು ಸೈನ್ಯದಲ್ಲಿಯೂ ಮತೀಯ ವಿಭಜನೆ ಉಂಟಾಗುವುದು. ಅಂತಹ ಕಾದಾಟ ಉಂಟಾದರೆ ಹೆಚ್ಚು ಅವ್ಯವಸ್ಥಿತರಾದ ಮತ್ತು ಕಡಿಮೆ ಅಂಧಾಭಿಮಾನಿಗಳಾದ ಹಿಂದೂಗಳು, ಸರಿಯಾದ ವ್ಯವಸ್ಥೆ ಇಲ್ಲದ್ದರಿಂದ, ಬಹಳ ಕಷ್ಟ ನಷ್ಟಗಳನ್ನು ಅನುಭವಿಸಬೇಕಾಗಬಹುದು.

ಅದಕ್ಕೆ ಬದಲಾಗಿ, ಇಡೀ ದೇಶದಲ್ಲಿ ಹರಡಿರುವ ಎರಡು ಧರ್ಮೀಯ ಜನರ ನಡುವಣ ಸಂಬಂಧಕ್ಕಿಂತ ಎರಡು ಸರ್ಕಾರಗಳ ನಡುವಣ ಸಂಬಂಧದ ಆಧಾರದ ಮೇಲೆ ಎರಡು ಜನಾಂಗಗಳು ಒಂದನ್ನೊಂದು ಸಂಬಾಳಿಸುವುದು ಸುಲಭ.

ಸರ್ದಾರರ ಈ ವಿವರಣೆ ಮುನ್ಷಿಯವರನ್ನು ಯೋಚನೆಗೆ ಹಚ್ಚಿತು. ಅವರು ಅನೇಕ ನಿದ್ರಾರಹಿತ ರಾತ್ರಿಗಳನ್ನು ಕಳೆಯುವಂತಾಯಿತು. ಆ ವೇಳೆಗಾಗಲೇ, ಹಿಂದೂ–ಮುಸ್ಲಿಂ ಹೋರಾಟ, ಮುಸ್ಲಿಮರ ಪರವಾದ ಬ್ರಿಟಿಷ್ ಅಧಿಕಾರಿಗಳ ಸಹಾನುಭೂತಿ ಮತ್ತು ಅದರಿಂದ ಹಿಂದೂಗಳಿಗೆ ಆಗುವ ಅನಾಹುತದ ಕಹಿ ಅನುಭವ ಮುನ್ಷಿಯವರಿಗೆ ಆಗಿತ್ತು. ದೇಶೀಯ ರಾಜರುಗಳ ಸೈನ್ಯಕ್ಕೂ ಸಹ ಹಿಂದೂ ಮುಸ್ಲಿಂ ಕಲಹವನ್ನು ತಡೆಗಟ್ಟುವ ಶಕ್ತಿ ಇಲ್ಲವೆನ್ನುವುದು ಉದಯಪುರದ ಸೈನ್ಯದ ಘಟನೆಯಿಂದ ಮುನ್ಷಿಯವರಿಗೆ ಅರಿವಾಗಿತ್ತು.

ಸರ್ದಾರ್ ಪಟೇಲರ ಈ ವಿವರಣೆಯ ಬಗ್ಗೆ ಯೋಚಿಸುತ್ತಾ ನಿಷ್ಕಾವಂತ

ಅಖಂಡವಾದಿಯಾಗಿದ್ದ ಕೆ.ಎಂ. ಮುನ್ಷಿಯವರಿಗೆ ದೇಶ ವಿಭಜನೆಯ ಅನಿವಾರ್ಯತೆಯ ಅರಿವಾಯಿತು. ಸರ್ದಾರರ ಅಭಿಪ್ರಾಯಗಳ ವಿವೇಕವು ಮನದಟ್ಟಾಗಲು ಆರಂಭಿಸಿತು.

ಆಗ ಮುನ್ಷಿಯವರಿಗೆ ಮತ್ತೊಂದು ಆಲೋಚನೆಯು ಹೊಳೆಯಿತು: ದೇಶ ವಿಭಜನೆ ಇಲ್ಲದೇ ಹೋದರೆ ಕ್ಯಾಬಿನೆಟ್ ಮಿಷನ್‌ನ ಯೋಜನೆಯ ಪ್ರಕಾರ ರೂಪಿತವಾಗುವ ರಾಜ್ಯಾಂಗ ರಚನಾ ಸಭೆಯು ವ್ಯರ್ಥವಾಗಬಹುದು. ಮತೀಯ ಕಾರ್ಯಾಚರಣೆಗಳು ಹೀಗೆ ಮುಂದುವರಿದರೆ ರಾಜ್ಯಾಂಗ ರಚನಾ ಸಭೆಯು ಯಶಸ್ವಿಯಾಗಿ ಕಾರ್ಯ ನಿರ್ವಹಿಸುವುದು ಕಷ್ಟವಾಗಬಹುದು. ರಾಜ್ಯಾಂಗ ರಚನಾ ಸಭೆಯು ಅಸಂಖ್ಯಾತ ಹಿಂದೂಗಳನ್ನು ಮುಸ್ಲಿಂ ಪ್ರಭುತ್ವದಡಿಯಲ್ಲಿ ಸಿಲುಕಿಸದಂತೆ ಮಾಡಲು ಜಾಣ್ಮೆಯಿಂದ ವರ್ತಿಸಬೇಕಾಗುತ್ತದೆ. ಆದದ್ದರಿಂದ ರಾಜ್ಯಾಂಗ ರಚನಾ ಸಭೆಯ ನಿಯಮಗಳನ್ನು ರೂಪಿಸುವಾಗಲೇ, ಮುಖ್ಯವಾದ ವಿಷಯಗಳು ಬಹುಮತದ ತೀರ್ಮಾನದ ಸಾಮಾನ್ಯ ಸಭೆಯ ಮುಂದೆ ಬರುವಂತೆ ಮತ್ತು ವಲಯ ಸಮಿತಿಗಳ ಮುಂದೆ ಬರದೇ ಇರುವಂತೆ ಪ್ರಯತ್ನಿಸಬೇಕು, ಎಂದು ಮುನ್ಷಿಯವರು ಆಲೋಚಿಸಿದರು. ಅಷ್ಟು ಹೊತ್ತಿಗೆ ಮುಸ್ಲಿಂ ಲೀಗ್ ರಾಜ್ಯಾಂಗ ರಚನಾ ಸಭೆಯನ್ನು ಸೇರದೇ ಇರಲು ತೀರ್ಮಾನಿಸಿತು. ಆಗ ಮುನ್ಷಿ ಮತ್ತಿತರರು ಸಮಾಧಾನದ ನಿಟ್ಟುಸಿರನ್ನು ಬಿಟ್ಟರು.[೫೨]

(ಇಂದು ದೇಶ ವಿಭಜನೆಯ ಬಗ್ಗೆ, ಅದರ ಪರ ಅಥವಾ ವಿರೋಧವಾಗಿ, ಮಾತನಾಡುವವರು, ದೇಶವಿಭಜನೆಗಾಗಿ ಯಾರು ಯಾರನ್ನೋ ದೂಷಿಸುವವರು ಮೇಲೆ ಹೇಳಿರುವ ಸರ್ದಾರ್ ಪಟೇಲರ ಮತ್ತು ಕೆ.ಎಂ. ಮುನ್ಷಿಯವರ ಅಭಿಪ್ರಾಯಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳುವುದು ಒಳಿತು. – ಲೇಖಕ)

ಎ) ಮೃದು ಮನಸ್ಸು

ಹೊರ ನೋಟಕ್ಕೆ ಸರ್ದಾರರು ಬಹಳ ಗಡಸು. ಆದರೆ ಅವರ ಒಳ ಮನಸ್ಸು ಬಹಳ ಮೃದು. ಎಲ್ಲರ ಬಗೆಗೂ ಅವರು ಮಾತೃ ಹೃದಯವನ್ನು ತೋರುತ್ತಿದ್ದರು. ಅವರ ಈ ಗುಣದ ಬಗೆಗೆ ಕೆ.ಎಂ. ಮುನ್ಷಿಯವರು ಈ ರೀತಿ ಬರೆಯುತ್ತಾರೆ. (ಕುಲಪತಿಯ ಪತ್ರ ಸಂಖ್ಯೆ ೪೧ರಲ್ಲಿ)

"೧೯೪೦ರಲ್ಲಿ ನಾವಿಬ್ಬರು ಯರವಾಡ ಕಾರಾಗೃಹದಲ್ಲಿ ಒಟ್ಟಿಗೆ ಇದ್ದಾಗ ಅವರ ಮಾನವೀಯ ಮುಖವನ್ನು ಕಂಡೆ. ಅವರು ನಗುವರು, ಜೋಕುಗಳನ್ನು ಹೇಳುವರು, ನಮಗೆ ಟೀ ತಯಾರಿಸುವರು ಮತ್ತು ಆಹಾರ ಮತ್ತು ಇತರ

ವ್ಯವಸ್ಥೆಗಳನ್ನು ನೋಡಿಕೊಳ್ಳುವರು. ಮಾರ್ಚ್ ೧೯೪೧ರಲ್ಲಿ ನಾನು ತೀವ್ರ ಖಾಯಿಲೆಯಿಂದ ಹಾಸಿಗೆ ಹಿಡಿದು ಮಲಗಿದಾಗ ನನ್ನನ್ನು ತಾಯಿಯ ಮಮತೆಯಿಂದ ಉಪಚರಿಸಿದರು. ಮುಂದೆ ನನ್ನ ಸ್ಥಿತಿ ಗಂಭೀರವಾಗಿ, ನನ್ನನ್ನು ಸ್ಟ್ರೆಚರ್ ಮೇಲೆ ಹೊರಗೆ ಕೊಂಡೊಯ್ಯುವಾಗ ಆ ಅಜೇಯನ ಕಣ್ಣಂಚಿನಲ್ಲಿ ಹನಿಗಳನ್ನು ಕಂಡೆ."[೫೩]

ಏ) ಸರ್ದಾರರ ಆ ಒಂದು ಆದೇಶ

ಬ್ರಿಟಿಷರ ಆಡಳಿತದ ಕಾಲದಲ್ಲಿ ಒಂದು ಕೇಂದ್ರ ಶಾಸನ ಸಭೆಯು ರಚಿತವಾಗಿತ್ತು. ಶ್ರೀ ಜಿ.ವಿ. ಮಾವಲಂಕರ್ ಅದರ ಕೊನೆಯ ಸಭಾಪತಿ. ಅವರು ಆ ಸ್ಥಾನಕ್ಕೆ ೧೯೪೬ರಲ್ಲಿ ಚುನಾಯಿತರಾದರು. ೧೯೪೭ರ ಆಗಸ್ಟ್ ೧೫ರಂದು ದೇಶಕ್ಕೆ ಸ್ವಾತಂತ್ರ್ಯ ಬಂದ ದಿನ ಆ ಶಾಸನ ಸಭೆಯ ಅಸ್ಥಿತ್ವ ಕೊನೆಗೊಂಡಿತು. ಆ ವೇಳೆಗಾಗಲೇ ರಾಜ್ಯಾಂಗ ರಚನಾ ಸಭೆಯು ರೂಪಿತವಾಗಿ ೧೯೪೬ರ ಡಿಸೆಂಬರ್ ೯ರಿಂದ ಸಂವಿಧಾನ ರಚನೆಯ ಕಾರ್ಯವನ್ನು ಆರಂಭಿಸಿತ್ತು. ಡಾ॥ ರಾಜೇಂದ್ರ ಪ್ರಸಾದ್ ಅದರ ಅಧ್ಯಕ್ಷರಾಗಿ ಚುನಾಯಿತರಾಗಿದ್ದರು. ಆದರೆ ಆ ರಾಜ್ಯಾಂಗ ರಚನಾ ಸಭೆಗೆ ಶಾಸನ ಸಭೆಯ ಅಧಿಕಾರವಿರುವುದೇ – ಎನ್ನುವ ಪ್ರಶ್ನೆ ಉದ್ಭವವಾಯಿತು. ಆ ಪ್ರಶ್ನೆಯ ಪರಿಹಾರಕ್ಕೆ ಶ್ರೀ ಜಿ.ವಿ. ಮಾವಲಂಕರ್‌ರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಯಿತು. ರಾಜ್ಯಾಂಗ ರಚನಾ ಸಭೆಯು, ಶಾಸನ ಸಭೆಯಾಗಿ ಕೆಲಸ ಮಾಡುವಾಗ, ಅದರ ಅಧ್ಯಕ್ಷತೆಯನ್ನು ವಹಿಸಲು ಒಬ್ಬ ಸಭಾಪತಿಯನ್ನು ಆರಿಸಬೇಕೆಂದು ಆ ಸಮಿತಿಯು ಸಲಹೆ ನೀಡಿತು. ಅದರಂತೆ ಶ್ರೀ ಜಿ.ವಿ. ಮಾವಲಂಕರ್‌ರವರು ಸಭಾಪತಿಯಾಗಿ ಚುನಾಯಿತರಾದರು. ಅಂದರೆ, ರಾಜ್ಯಾಂಗ ರಚನಾ ಸಭೆಯು ಸಂವಿಧಾನ ರಚನೆಯ ಕೆಲಸ ಮಾಡುವಾಗ ಡಾ॥ ಬಾಬು ರಾಜೇಂದ್ರ ಪ್ರಸಾದ್ ಅದರ ಅಧ್ಯಕ್ಷತೆ ವಹಿಸುತ್ತಿದ್ದರು ಮತ್ತು ಅದು ಶಾಸನ ಸಭೆಯ ಕರ್ತವ್ಯಗಳನ್ನು ನಿರ್ವಹಿಸುವಾಗ ಸಭಾಪತಿ ಶ್ರೀ. ಜಿ.ವಿ. ಮಾವಲಂಕರ್ ಅದರ ಅಧ್ಯಕ್ಷತೆ ವಹಿಸುತ್ತಿದ್ದರು.

ಹೊಸ ರಾಜ್ಯಾಂಗವು ರಚನೆಯಾಗಿ ಅದು ೧೯೫೦ ಜನವರಿ ೨೬ರಿಂದ ಜಾರಿಗೆ ಬಂದಿತು. ಅಂದಿನಿಂದ ಭಾರತವು ಒಂದು ಗಣರಾಜ್ಯ ಆಯಿತು. ಡಾ॥ ಬಾಬು ರಾಜೇಂದ್ರ ಪ್ರಸಾದ್‌ರವರು ಭಾರತದ ಪ್ರಥಮ ರಾಷ್ಟ್ರಪತಿ ಆದರು. ರಾಜ್ಯಾಂಗ ರಚನಾ ಸಭೆಯು ತಾತ್ಕಾಲಿಕ ಸಂಸತ್ತು ಆಗಿ ಪರಿವರ್ತಿತವಾಯಿತು. ಶ್ರೀ ಮಾವಲಂಕರ್ ಅದರ ಸಭಾಪತಿಯಾಗಿ ಮುಂದುವರಿದರು. ೧೯೫೨ರಲ್ಲಿ ಪ್ರಥಮ ಚುನಾವಣೆಯು ನಡೆದು ಲೋಕಸಭೆ ಮತ್ತು ರಾಜ್ಯಸಭೆ ಎಂಬ ಎರಡು ಸಂಸತ್ ಸದನಗಳು ರೂಪಿತವಾದುವು. ೧೯೫೨ರಂದು ಶ್ರೀ. ಜಿ.ವಿ. ಮಾವಲಂಕರ್

ರವರು ಲೋಕಸಭೆಯ ಸಭಾಪತಿಯಾಗಿ ಚುನಾಯಿತರಾದರು. ಶ್ರೀ ಎಂ. ಅನಂತಶಯನಂ ಐಯ್ಯಂಗಾರ್ ಉಪಸಭಾಪತಿಯಾಗಿ ಚುನಾಯಿತರಾದರು.

೧೯೫೦ರ ಜನವರಿ ೨೬ರಂದು ತಾತ್ಕಾಲಿಕ ಸಂಸತ್ತು ಕಾರ್ಯನಿರ್ವಹಿಸಲು ಆರಂಭಿಸಿದ ಪ್ರಾರಂಭದಲ್ಲಿಯೆ ಒಂದು ಸಮಸ್ಯೆ ಉದ್ಭವಿಸಿತು. ಈ ಸಂಸತ್ತಿಗೆ ಒಂದು ಕಾರ್ಯಾಲಯ ಇತ್ತು. ಅದು ಬ್ರಿಟಿಷರ ಕಾಲದ ಕೇಂದ್ರ ಶಾಸನ ಸಭೆಯಿಂದ ಮುಂದುವರಿದು ಬಂದಿತ್ತು. ಈಗ ಕೇಂದ್ರ ಗೃಹ ಮತ್ತು ಹಣಕಾಸಿನ ಇಲಾಖೆಗಳು ಈ ಕಾರ್ಯಾಲಯದ ಸ್ವಾಯತ್ತತೆಯನ್ನು ಪ್ರಶ್ನಿಸಿದುವು. ಸಂಸತ್ ಕಾರ್ಯಾಲಯ ಮತ್ತು ಅದರ ಅಧಿಕಾರಿಗಳು ಹಾಗೂ ಇತರ ನೌಕರರು ಕಾರ್ಯಾಂಗದ ಅಧೀನ ದಲ್ಲಿರಬೇಕೆಂದೂ, ಕೇಂದ್ರ ಸರ್ಕಾರವು ಆಗಾಗ್ಗೆ ನೀಡುವ ಆದೇಶಗಳಂತೆ ಕೆಲಸ ನಿರ್ವಹಿಸಬೇಕೆಂದೂ ಕೇಂದ್ರ ಗೃಹ ಮತ್ತು ಹಣಕಾಸಿನ ಇಲಾಖೆಗಳು ಸೂಚಿಸಿದುವು.

ಈ ಸೂಚನೆಯನ್ನು ಶ್ರೀ. ಜಿ.ವಿ. ಮಾವಲಂಕರ್ ಅನುಮೋದಿಸಲಿಲ್ಲ. ಸಭಾಪತಿಯ ಸ್ವಾಯತ್ತತೆ ಮತ್ತು ಸಂಸತ್ ಕಾರ್ಯಾಲಯದ ಸ್ವಾಯತ್ತತೆಯು, ಸಂಸತ್ತಿನ ಎರಡು ಸಭೆಗಳು ಪ್ರಜಾಪ್ರಭುತ್ವದ ನೈಜ ಅಂಗಗಳಾಗಿ ಕೆಲಸ ನಿರ್ವಹಿಸಲು ಅತಿ ಅವಶ್ಯಕ ಎಂಬುದು ಅವರ ಅಭಿಪ್ರಾಯವಾಗಿತ್ತು. ಅಲ್ಲದೆ ವಾಕ್ ಸ್ವಾತಂತ್ರ್ಯ, ಅಭಿಪ್ರಾಯ ಸ್ವಾತಂತ್ರ್ಯ ಮತ್ತು ಮುಕ್ತ ಚರ್ಚೆಗಳಿಗೂ ಈ ಸ್ವಾಯತ್ತತೆ ಅತ್ಯವಶ್ಯಕ ವಾಗಿತ್ತು. ಮಾವಲಂಕರ್‌ರವರು ಒಂದು ಸೂಚನಾಪತ್ರವನ್ನು ಬರೆದು ಸಂಸತ್ತಿನ ಕಾರ್ಯಾಲಯವು ಕಾರ್ಯಾಂಗದ ಮತ್ತು ಸರ್ಕಾರದ ಅಧಿಕಾರಿಗಳ ಅಧೀನದಲ್ಲಿ ಕೆಲಸ ನಿರ್ವಹಿಸುವುದು ಸ್ವತಂತ್ರ ಸಂಸತ್ತಿನ ಸ್ಥಾನಕ್ಕೆ ಅವಮಾನಕರವಾದುದು ಎಂದು ಸೂಚಿಸಿದರು.

ಈ ವಿಷಯವು ಅಂದಿನ ಗೃಹಮಂತ್ರಿ ಸರ್ದಾರ್ ಪಟೇಲರ ಬಳಿಗೆ ಹೋಯಿತು. ಅವರು ಪ್ರಧಾನಮಂತ್ರಿ ನೆಹರು ಒಡನೆ ಸಮಾಲೋಚಿಸಿ ಸಂಸತ್ತಿನ ಕಾರ್ಯಾಲಯದ ಸ್ವಾಯತ್ತತೆಯನ್ನು ಎತ್ತಿಹಿಡಿದರು. ಸಂಸತ್ ಕಾರ್ಯಾಲಯವು ಸಭಾಪತಿಯವರ ಅಧೀನದಲ್ಲಿ ಸ್ವತಂತ್ರವಾಗಿ ಕೆಲಸ ನಿರ್ವಹಿಸಬೇಕೆಂದು ಆದೇಶ ಹೊರಡಿಸಿದರು.

ಸರ್ದಾರರ ಈ ಒಂದು ಆದೇಶವು ಭಾರತದಲ್ಲಿ ಸಂಸತ್ತಿನ ಬೆಳವಣಿಗೆಯು ಸರಿಯಾದ ರೀತಿಯಲ್ಲಿ ಆಗಲು ಸಹಾಯ ಮಾಡಿತು. ಸಂಸತ್ತಿನ ಅಧಿಕಾರಿಗಳು ಮತ್ತು ನೌಕರರು ತಮ್ಮ ಕರ್ತವ್ಯ ಮತ್ತು ಕೆಲಸಗಳನ್ನು, ಸರ್ಕಾರದ ಸೂಚನೆಗಳನ್ನು ಪಾಲಿಸಬೇಕೆಂಬ ನಿರ್ಬಂಧವಿಲ್ಲದೆ, ಸ್ವತಂತ್ರವಾಗಿ ಸರಿಯಾದ ರೀತಿಯಲ್ಲಿ ನಿರ್ವಹಿಸಲು ಅವಕಾಶವಾಯಿತು. ಅದರಿಂದ ಯುಕ್ತವಾದ ಪದ್ಧತಿಗಳು,

ನಡವಳಿಕೆಗಳು ಮತ್ತು ನಿಯಮಗಳು ಬೆಳೆದು ಶಾಸಕಾಂಗದ ಘನತೆ ಮತ್ತು ಗೌರವ ಹೆಚ್ಚಿತು. ದೇಶದಲ್ಲಿ ಪ್ರಜಾಪ್ರಭುತ್ವ ಬೇರೂರಿತು.[೫೪]

ಐ) ಬೆದರಿಕೆಗೆ ಬಗ್ಗದ ಸರ್ದಾರ

ಬಿಹಾರದಲ್ಲಿನ ಜಮ್‌ಷಡ್‌ಪುರದ ಟಾಟಾ ಕರ್ಮಿಕರ ಸಂಘ ಬಹಳ ಬಲಿಷ್ಠವಾಗಿತ್ತು. ೧೯೪೭ರಲ್ಲಿ ಆ ಸಂಘವು ಬಿಹಾರ ಶಾಸನ ಸಭೆಯಿಂದ ಮೈಕೆಲ್ ಜಾನ್‌ರವರನ್ನು ವಾಪಸ್ಸು ಕರೆಯಿಸಿ, ಅವರ ಸ್ಥಾನದಲ್ಲಿ ಪ್ರೊ. ಅಬ್ದುಲ್ ಬಾರಿಯವರನ್ನು ಚುನಾಯಿಸಿ ಅವರನ್ನು ಮಂತ್ರಿ ಮಾಡಬೇಕೆಂದು ಬಿಹಾರದ ಕಾಂಗ್ರೆಸ್ ಪಕ್ಷವನ್ನು ಆಗ್ರಹಿಸಿತು. ಅವರ ಬೇಡಿಕೆಯನ್ನು ಬಿಹಾರ ಕಾಂಗ್ರೆಸ್ ತಿರಸ್ಕರಿಸಿತು. ಕಾರ್ಮಿಕರ ಸಂಘವು ಈ ನಿರಾಕರಣೆಯನ್ನು ಪ್ರತಿಭಟಿಸಿ, ಸರ್ದಾರರಿಗೆ ದೂರು ಸಲ್ಲಿಸಿತು. ಅವರಿಗೆ ಕಳುಹಿಸಿದ ಟೆಲಿಗ್ರಾಂನಲ್ಲಿ 'ತಮ್ಮ ಬೇಡಿಕೆಯನ್ನು ಈಡೇರಿಸದಿದ್ದರೆ ಉಪವಾಸ ಸತ್ಯಾಗ್ರಹ'ದ ಬೆದರಿಕೆಯನ್ನು ಒಡ್ಡಿತು.

ಶೀಘ್ರವೆ ಸರ್ದಾರರಿಂದ ಉತ್ತರ ಬಂದಿತು. "ಉಪವಾಸದಲ್ಲಿ ನಾನು ಪರಿಣಿತನಲ್ಲ. ಅದರ ಸಿದ್ಧಾಂತ ನನಗೆ ಅರ್ಥವಾಗಿಲ್ಲ. ಆದರೆ ಕೆಲವು ದಿವಸಗಳ ಉಪವಾಸ ನಿಮ್ಮ ಮಾನಸಿಕ ಸಮತೋಲನವನ್ನು ಹೆಚ್ಚಿಸುವುದು ಮತ್ತು ನಿಮ್ಮ ಆರೋಗ್ಯಕ್ಕೂ ಒಳ್ಳೆಯದಾಗುವುದು ಎಂದು ನನಗನಿಸುತ್ತದೆ. ಅದರಿಂದ, ಬಿಹಾರ ಕಾಂಗ್ರೆಸ್ ಮೇಲಿನ ನಿಮ್ಮ ಅಸಮಧಾನವನ್ನು ನೀವು ಬದಿಗಿಟ್ಟರೂ, ಕೆಲವು ದಿವಸ ನೀವು ಉಪವಾಸ ಮಾಡುವುದು ಒಳ್ಳೆಯದು" ಎಂದು ಸರ್ದಾರರು ತಿಳಿಸಿದರು.[೫೫]

ಒ) ಧೈರ್ಯದ ನಿರ್ಧಾರ

೧೯೪೬ರಲ್ಲಿ ಮಧ್ಯಕಾಲೀನ ಸರ್ಕಾರ ಆರಂಭವಾದ ತರುಣದಲ್ಲಿ ಸರ್ದಾರರ ಬಲಗೈ ಭಂಟ ಆಗಿದ್ದ ವಿ.ಪಿ. ಮೆನನ್‌ರವರು ಮಾನೆಕ್‌ಷಾರವರನ್ನು ಸರ್ದಾರರಿಗೆ ಪರಿಚಯಿಸಿದರು. ಆಗ ದೆಹಲಿಯಲ್ಲಿ ಗಲಭೆಯನ್ನು ನಿಯಂತ್ರಿಸಲು ಸೈನ್ಯವನ್ನು ನಿಯೋಜಿಸಲಾಗಿತ್ತು. ಸರ್ದಾರರು ಮಾನೆಕ್‌ಷಾರವರನ್ನು ನೇರವಾಗಿ ಕೇಳಿದರು, "ಈಗ ಸೈನ್ಯದಲ್ಲಿ ಏನು ಮಾಡುತ್ತಿದ್ದೀರಿ?"

"ನಾನು ಮಿಲಿಟರಿ ಕಾರ್ಯಾಚರಣೆ ನಿರ್ದೇಶನಾಲಯದಲ್ಲಿದ್ದೇನೆ. ಇತರ ಕರ್ತವ್ಯಗಳ ಜೊತೆಗೆ ಕಾನೂನು ಮತ್ತು ಶಾಂತಿಯನ್ನು ಖಚಿತ ಪಡಿಸುವುದು ನನ್ನ ಜವಾಬ್ದಾರಿ," ಉತ್ತರಿಸಿದರು ಷಾ.

ಹಾಗಾದರೆ ನೀವು ಒಳ್ಳೆಯ ಕೆಲಸವನ್ನು ಮಾಡುತ್ತಿಲ್ಲ, ನೀವು ವಿಫಲರಾಗಿದ್ದೀರಿ," ತೀರ್ಪು ನೀಡಿದರು ಪಟೇಲ್. ಅವರ ಮುಖ ಗಂಭೀರವಾಗಿತ್ತು. ಅದು

ಹಿಂದೂ ಮುಸ್ಲಿಂ ಗಲಭೆಗಳ ಕಾಲ.

ಆ ಮಾತಿಗೆ ಮಾನೆಕ್‌ಷಾ ಕೋಪಗೊಳ್ಳಲಿಲ್ಲ. ಸೌಮ್ಯ ಧ್ವನಿಯಲ್ಲೇ ಉತ್ತರಿಸಿದರು, "ಸರ್, ಪ್ರಜಾಪ್ರಭುತ್ವದಲ್ಲಿ ಯಾವುದೇ ವಿಫಲತೆ ಸಚಿವರದು, ಅಧಿಕಾರಿಗಳದ್ದಲ್ಲ. ಗೃಹಮಂತ್ರಿ ವಿಫಲರಾದಾಗ ಮಾತ್ರ ಕಾನೂನು ಮತ್ತು ಶಾಂತಿಯನ್ನು ಸ್ಥಾಪಿಸಲು ಸೈನ್ಯ ಬರುತ್ತದೆ."

ಸರ್ದಾರರು ನಕ್ಕರು, ಬಹುಷಃ ಮಾನೇಕ್‌ಷಾರವರ ದಿಟ್ಟತನಕ್ಕೆ. ಅದು ಮಾನೆಕ್‌ಷಾಗೆ ಖಚಿತವಾಗಿ ತಿಳಿಯಲಿಲ್ಲ. ನಂತರ ಸರ್ದಾರ್ ಹೇಳಿದರು, "ಸರಿ, ನಾವಿಬ್ಬರೂ ಈಗ ಒಟ್ಟಿಗೇ ಕೆಲಸ ಮಾಡಬಹುದೆಂದು ನನಗೆ ಅನ್ನಿಸುತ್ತಿದೆ."

ಆ ಮಾತನ್ನು ಒರೆ ಹಚ್ಚುವ ಸಂದರ್ಭ ಬೇಗನೇ ಬಂದಿತು.

ಸ್ವಾತಂತ್ರ್ಯ ಬಂದ ಆರಂಭದಲ್ಲಿ ಕಲ್ಕತ್ತದಲ್ಲಿ ರಕ್ತದ ಕಾಲುವೆಯೇ ಹರಿಯಲಾರಂಭಿಸಿತು. ಅದನ್ನು ನಿಯಂತ್ರಿಸಲು ಸ್ವತಃ ಸರ್ದಾರರೇ ಕಲ್ಕತ್ತಕ್ಕೆ ಧಾವಿಸಿದರು ಅಲ್ಲಿಂದ ಭಾರತ ಸೈನ್ಯದ ಆಂಗ್ಲ ದಂಡನಾಯಕನಿಗೆ 'ಕರ್ನಲ್ ಮಾನೆಕ್‌ಷಾನನ್ನು ತಕ್ಷಣವೇ ಕಲ್ಕತ್ತಕ್ಕೆ ಕಳುಹಿಸಿ' ಎಂದು ತುರ್ತು ಸಂದೇಶವನ್ನು ಕಳುಹಿಸಿದರು.

ಮಾನೇಕ್‌ಷಾ ಕಲ್ಕತ್ತ ತಲುಪಿದಾಗ, ಔಪಚಾರಿಕ ನಮಸ್ಕಾರಕ್ಕೂ ಕಾಯದೆ, ಸರ್ದಾರರು ಕೇಳಿದರು, "ಕರ್ನಲ್ ಮಾನೇಕ್‌ಷಾ, ಕಾನೂನು ಮತ್ತು ಶಾಂತಿಯನ್ನು ಪುನರ್‌ಸ್ಥಾಪಿಸಲು ನೀವು ಎಷ್ಟು ಬೆಂಗಾಳಿಗಳನ್ನು ಕೊಲ್ಲಬೇಕಾಗುತ್ತದೆ?" ಸ್ವಲ್ಪ ಹೊತ್ತು ಅನುಮಾನಿಸಿ ಕರ್ನಲ್ ಉತ್ತರಿಸಿದರು,

"ಸುಮಾರು ನೂರು ಮಂದಿ, ಸರ್,"

"ಮತ್ತೆ ಎಷ್ಟು ದಿವಸ?"

"ಸುಮಾರು ಏಳು ದಿವಸ ಸರ್."

ತಕ್ಷಣ ಸರ್ದಾರರು ಬಂಗಾಳದ ಮುಖ್ಯಮಂತ್ರಿ ಬಿ.ಸಿ. ರಾಯ್ ಕಡೆಗೆ ತಿರುಗಿ ಹೇಳಿದರು, "ಬಿದನ್, ಈಗಾಗಲೇ ನಾವು ೧೦೦೦ ಮಂದಿಯನ್ನು ತ್ಯಾಗ ಮಾಡಿದ್ದೇವೆ. ಆದರೆ ಪರಿಹಾರವೇ ಕಾಣುತ್ತಿಲ್ಲ. ಅದರಿಂದ ಕಲ್ಕತ್ತವನ್ನು ಮಾನೇಕ್‌ಷಾನ ಹುಡುಗರಿಗೆ ವಹಿಸೋಣವೆಂದು ಯೋಚಿಸಿದ್ದೇನೆ. ಅವನ ೧೦೦ ಮಂದಿಯ ಸಾವಿಗೆ ಒಪ್ಪುವುದು ಉತ್ತಮವೆಂದು ಕಾಣುತ್ತದೆ. ಇಲ್ಲದೆ ಹೋದರೆ ನಾವು ಮುಂದಿನ ಹತ್ತು ದಿನಗಳಲ್ಲಿ ೧೦೦೦ ಜೀವಗಳನ್ನು ಕಳೆದುಕೊಳ್ಳಬೇಕಾಗುತ್ತದೆ, ಯಾವ ಸಕಾರಾತ್ಮಕ ಫಲಿತಾಂಶವೂ ಇಲ್ಲದೆ."

ಅದೃಷ್ಟವಶಾತ್ ಮಾನೆಕ್‌ಷಾ ಯಾವ ಪ್ರಾಣಹಾನಿಯೂ ಇಲ್ಲದೆ ಪರಿಸ್ಥಿತಿಯನ್ನು ಹತೋಟಿಗೆ ತರಲು ಸಾಧ್ಯವಾಯಿತು. ಬರೇ ಬಲ ಪ್ರದರ್ಶನ ಮತ್ತು ತಪ್ಪಿತಸ್ಥರು ಎಷ್ಟೇ ಉನ್ನತ ಸ್ಥಾನದಲ್ಲಿರಲಿ ಅಥವಾ ಉನ್ನತ ಸಂಪರ್ಕವನ್ನು ಹೊಂದಿರಲಿ, ಅವರನ್ನು ಉಗ್ರ ಶಿಕ್ಷೆಗೆ ಗುರಿಪಡಿಸಲಾಗುವುದು ಎಂಬ ಸ್ಪಷ್ಟ ಘೋಷಣೆಯಷ್ಟರಿಂದಲೇ ಮಾನೆಕ್‌ಷಾ ಪರಿಸ್ಥಿತಿಯನ್ನು ಹತೋಟಿಗೆ ತಂದರು. ಅದನ್ನು ಅವರು ಯಾವ ಪ್ರಾಣಹಾನಿಯೂ ಇಲ್ಲದೆ ಎರಡೇ ದಿವಸದಲ್ಲಿ ಸಾಧಿಸಿದರು.[೫೬]

ಓ) ಪಟೇಲರ ದೂರ ದೃಷ್ಟಿ

೧೯೪೭ರಲ್ಲಿ ಸ್ವಾತಂತ್ರ್ಯ ಬಂದಾಗ ಭಾರತ ಹಾಗೂ ಜಮ್ಮು ಕಾಶ್ಮೀರದ ನಡುವೆ ಸಮರ್ಪಕ ರಸ್ತೆ ಸಂಪರ್ಕವಿರಲಿಲ್ಲ. ಅದರಿಂದ ಮುಂದಾಗಬಹುದಾದ ತೊಂದರೆಯನ್ನು ಲೆಕ್ಕ ಹಾಕಿದ ಸರ್ದಾರರು ೧೯೪೭ರ ಅಕ್ಟೋಬರ್ ಅಂತ್ಯದಲ್ಲಿ ಒಂದು ದಿನ ಕಾಮಗಾರಿಗಳ ಮಂತ್ರಿ ಎನ್.ವಿ. ಗಾಡ್ಗಿಲ್‌ಗೆ ಭೂಪಟದಲ್ಲಿ ಜಮ್ಮು – ಪಠಾಣ್‌ಕೋಟ್ ಪ್ರದೇಶವನ್ನು ತೋರಿಸಿ, "ಈ ಎರಡು ಪಟ್ಟಣಗಳ ನಡುವಣ ೬೫ ಮೈಲಿಗಳ ರಸ್ತೆಯನ್ನು ಜುಲೈ ೧೯೪೮ರ ಒಳಗೆ ಅಂದರೆ ಎಂಟು ತಿಂಗಳಲ್ಲಿ ಸೈನ್ಯದ ಭಾರಿ ಸಲಕರಣೆಗಳನ್ನು ಸಾಗಿಸಲು ಸಾಧ್ಯವಾಗುವಂತಹ ರಸ್ತೆಯನ್ನಾಗಿ ಮಾಡಬೇಕು. ಆ ಕೆಲಸ ಆಗುವಂತೆ ನೀವು ನೋಡಿಕೊಳ್ಳಬೇಕು," ಎಂದರು. ಗಾಡ್ಗಿಲ್‌ರವರು, "ಅಲ್ಲಿರುವ ನದಿಗಳು, ತೊರೆಗಳು, ಬೆಟ್ಟಗಳು ಮತ್ತು ಪರ್ವತಗಳನ್ನು ನೀವು ಗಮನಿಸಿಲ್ಲವೆಂದು ಕಾಣುತ್ತದೆ. ಇದು ಭಾರತದ ಪರ್ವತ ಪ್ರದೇಶಗಳಲ್ಲೊಂದು. ಜೊತೆಗೆ ಅಲ್ಲಿ ಅನೇಕ ನದಿಗಳು ಹರಿಯುತ್ತವೆ. ಇದು ರಕ್ಷಣಾ ಸಚಿವಾಲಯದ ಕೆಲಸ. ಅವರು ಅದನ್ನು ಮಾಡಬೇಕು," ಎಂದರು. ಸರ್ದಾರರೆಂದರು, "ಈ ಕೆಲಸವನ್ನು ನಾವು ಸೈನ್ಯಕ್ಕೆ ವಹಿಸುತ್ತಿಲ್ಲ. ಅದನ್ನು ನಿಮ್ಮ ಇಲಾಖೆ ಮಾಡಬೇಕು." "ಹಾಗೆ ಆಗಲಿ. ನೀವು ಹೇಳಿದ ಮೇಲೆ, ಆ ಕೆಲಸ ಆಯಿತು," ಎಂದುತ್ತರಿಸಿದರು ಗಾಡ್ಗಿಲ್.

ಎರಡು ವಾರದ ಒಳಗೆ ಬೇಕಾದ ಎಲ್ಲಾ ಉಕ್ಕಿನ ಸಲಕರಣೆಗಳನ್ನು ಮತ್ತು ಕೆಲಸಗಾರರನ್ನು ಎಪ್ಪತ್ತು ವಿಶೇಷ ರೈಲುಗಳಲ್ಲಿ ಪಠಾನ್‌ಕೋಟ್‌ಗೆ ಸಾಗಿಸಲಾಯಿತು. ೪೦ ಸಾವಿರ ಕೆಲಸಗಾರರು ಹಗಲು – ರಾತ್ರಿ ಕೆಲಸ ಮಾಡಿದರು. ೮ ತಿಂಗಳಲ್ಲಿ ೫೪ ಮೈಲಿಗಳ ರಸ್ತೆ ಮತ್ತು ಒಟ್ಟು ೧೧ ಮೈಲಿಗಳ ಸೇತುವೆಗಳು ನಿರ್ಮಾಣವಾದುವು. ಪ್ರಧಾನಿ ನೆಹರು ಅದನ್ನು ೧೯೪೮ರ ಜುಲೈ ೭ರಂದು ಉದ್ಘಾಟಿಸಿದರು.

ಮಿಲಿಟರಿ ಇಂಜಿನಿಯರಿಂಗ್ ಸರ್ವೀಸಸ್‌ನ ಮುಖ್ಯಸ್ಥ ಮೇಜರ್ – ಜನರಲ್ ವಿಲಿಯಮ್ಸ್‌ನು ಗಾಡ್ಗಿಲ್‌ಗೆ ಹೇಳಿದನು, "ನಿಮ್ಮ ಜನ ಈ ಕೆಲಸ ಮಾಡಿ ಮುಗಿಸಿದ್ದಾರೆ. ಅವರು ಅಸಾಧ್ಯವಾದುದನ್ನು ಮಾಡಿದ್ದಾರೆ. ನಿಗದಿಯಾದ ಕಾಲದಲ್ಲಿ ಈ ಕೆಲಸ ಮುಗಿಯುವುದಿಲ್ಲ ಎಂದು ನಾನು ಹೇಳಿದ್ದೆ, ನನ್ನ ಮಾತನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ."

ಪಟೇಲರು ಲೆಕ್ಕ ಹಾಕಿದ್ದಂತೆ ಆಯಿತು. ಪಾಕಿಸ್ತಾನದ ಗುಡ್ಡಗಾಡಿನ ಜನ ಕಾಶ್ಮೀರದ ಮೇಲೆ ನುಗ್ಗಿದಾಗ ಅವರನ್ನು ಹಿಮ್ಮೆಟ್ಟಿಸಲು ನಮ್ಮ ಸೈನ್ಯ ಮತ್ತು ಸಲಕರಣೆ ಹೋಗಬೇಕಾಯಿತು. ಆಗ ಈ ರಸ್ತೆ ಮತ್ತು ಸೇತುವೆಗಳು ಉಪಯೋಗವಾದುವು.[೫೭]

ಔ) ವೈಸ್‌ರಾಯ್‌ಗೆ ತೀಕ್ಷ್ಣ ಉತ್ತರ

ಇಂಡಿಯನ್ ಸಿವಿಲ್ ಸರ್ವೀಸ್ ಮತ್ತು ಇಂಡಿಯಾ ಪೊಲೀಸ್ ಅಧಿಕಾರಿಗಳಿಗೆ ೧೯೪೫ರಲ್ಲಿ ೨೫ ವರ್ಷಗಳ ಸೇವೆಯ ಆಶ್ವಾಸನೆಯನ್ನು ಬ್ರಿಟಿಷ್ ಸರ್ಕಾರವು ನೀಡಿತ್ತು. ಭಾರತಕ್ಕೆ ಸ್ವಾತಂತ್ರ್ಯ ಬರುವುದು ಖಚಿತವಾದಾಗ ವೈಸ್‌ರಾಯ್ ಲಾರ್ಡ್ ವೇವೆಲ್ಲನು ಆಶ್ವಾಸನೆಯ ವಿಷಯವನ್ನು ಸರ್ದಾರ್ ಪಟೇಲರೊಡನೆ ಪ್ರಸ್ತಾಪಿಸಿ, 'ಅಧಿಕಾರ ಹಸ್ತಾಂತರವಾದಾಗ ಭಾರತ ಬಿಟ್ಟು ಹೋಗಲು ತೀರ್ಮಾನಿಸಿದ ಅಥವಾ ಬಿಟ್ಟು ಹೋಗುವಂತೆ ಆದೇಶಿಸಲ್ಪಟ್ಟ ಅಧಿಕಾರಿಗಳಿಗೆ ಉಂಟಾಗುವ ಸೇವಾ ನಷ್ಟಕ್ಕೆ ಭಾರತವು ಪರಿಹಾರ ನೀಡಬೇಕು' ಎಂದನು. ಪಟೇಲರು, "ಬ್ರಿಟಿಷರು ಅಧಿಕಾರ ಹಸ್ತಾಂತರಿಸಿ ಸದ್ಯದಲ್ಲೇ ಭಾರತವನ್ನು ಬಿಟ್ಟು ಹೋಗುವುದು ಸ್ಪಷ್ಟವಾಗಿದ್ದ ೧೯೪೫ರಲ್ಲಿ ಅಂತಹ ಆಶ್ವಾಸನೆಯನ್ನು ನೀಡಬಾರದಾಗಿತ್ತು. ಈಗ, ನೀಡಬಾರದಾಗಿದ್ದ ಆಶ್ವಾಸನೆಯಿಂದ ಉಂಟಾದ ನಷ್ಟಕ್ಕೆ ಭಾರತದ ಹಣದಿಂದ ಪರಿಹಾರ ನೀಡಬೇಕೆನ್ನುವುದು ಅನ್ಯಾಯ ಮತ್ತು ಅಕ್ರಮ. ಪರಿಹಾರವನ್ನು ಕೊಡಬೇಕೆನ್ನಿಸಿದರೆ ಇಂಗ್ಲೆಂಡಿನ ಸರ್ಕಾರವೇ ಕೊಡಬೇಕು, ಭಾರತದ ಮುಂದಿನ ಸರ್ಕಾರ ಕೊಡುವುದಿಲ್ಲ," ಎಂದು ಕಟುವಾಗಿ ನುಡಿದರು.

ಲಾರ್ಡ್ ಮೌಂಟ್‌ಬ್ಯಾಟನ್ ೧೯೪೭ರಲ್ಲಿ ವೈಸ್‌ರಾಯ್ ಆಗಿ ಬಂದ ಮೇಲೆ ಮತ್ತೆ ಆ ಪರಿಹಾರದ ಪ್ರಶ್ನೆಯನ್ನು ಸರ್ದಾರರಲ್ಲಿ ಪ್ರಸ್ತಾಪಿಸಿದರು. ಸರ್ದಾರರು ಹಿಂದೆ ತಾವು ಲಾರ್ಡ್ ವೇವೆಲ್‌ಗೆ ಕೊಟ್ಟಿದ್ದ ಉತ್ತರವನ್ನೇ ಮತ್ತೆ ಮೌಂಟ್‌ಬ್ಯಾಟನ್‌ಗೂ ಕೊಟ್ಟರು. ಆಗ ಮೌಂಟ್‌ಬ್ಯಾಟನ್, "ಇಂಗ್ಲೆಂಡ್ ಸರ್ಕಾರದಿಂದ ಪರಿಹಾರ ಪಡೆದ ಭಾರತೀಯ ಅಧಿಕಾರಿಗಳ ಬಗೆಗೆ ಏನು ಮಾಡುತ್ತೀರಿ?" ಎಂದರು. ತಕ್ಷಣ ಪಟೇಲರು, "ಅವರನ್ನು ನಾವು ಕೆಲಸಕ್ಕೆ ಎಂದಿಗೂ ಸೇರಿಸಿಕೊಳ್ಳುವುದಿಲ್ಲ," ಎಂದರು.[೫೮]

ಅಂ) ನೇರದೃಷ್ಟಿ

ಒಮ್ಮೆ ಮಹಾರಾಷ್ಟ್ರದಲ್ಲಿ (ಆಗಿನ ಬೊಂಬಾಯಿ ಪ್ರಾಂತ್ಯದಲ್ಲಿ) ಸರ್ದಾರ್ ವಲ್ಲಭಭಾಯಿ ಪಟೇಲರು ಅಧ್ಯಕ್ಷತೆ ವಹಿಸಿದ್ದ ಒಂದು ಸಭೆಯಲ್ಲಿ ಅಸ್ಪೃಶ್ಯತೆಯ ಬಗೆಗೆ ಒಂದು ಮಸೂದೆ ಚರ್ಚೆಗೆ ಬಂದಿತು. ಆ ಮಸೂದೆಯಲ್ಲಿ "ಅಸ್ಪೃಶ್ಯತೆಯು ಹಿಂದೂ ಧರ್ಮದ ಒಂದು ದೊಡ್ಡ ಕಳಂಕ" ಎಂದಿತ್ತು. ಚರ್ಚೆ ಆರಂಭವಾದ ತಕ್ಷಣ ಅನೇಕ ಸದಸ್ಯರು ಆ ವಾಕ್ಯದ ವಿರುದ್ಧವಾಗಿ ವಾದ ಮಾಡಲು ಆರಂಭಿಸಿದರು. ಚರ್ಚೆಯು ಬಹಳ ಆವೇಶದಿಂದ ನಡೆಯಿತು. ಹಿಂದೂ ಧರ್ಮದ ಉದಾರತೆಯ ಬಗೆಗೆ ಅನೇಕ ಸಂಸ್ಕೃತ ಶ್ಲೋಕಗಳು ಉದ್ಧರಿಸಲ್ಪಟ್ಟವು. ಎಲ್ಲವನ್ನು ಶಾಂತವಾಗಿ ಆಲಿಸುತ್ತಿದ್ದ ಪಟೇಲರು ಕೊನೆಗೆ ಎದ್ದು ನಿಂತು, "ನಿಮಗೆ ಈ ವಾಕ್ಯ ಇಷ್ಟವಾಗದೇ ಹೋದರೆ, ಅದನ್ನು ಬದಲಾಯಿಸಲು ನಾನು ಸಿದ್ಧನಿದ್ದೇನೆ. 'ಅಸ್ಪೃಶ್ಯತೆಯು ಇಸ್ಲಾಂ ಅಥವಾ ಕ್ರೈಸ್ತ ಧರ್ಮದ ಒಂದು ದೊಡ್ಡ ಕಳಂಕ' ಎಂದು ಬದಲಾಯಿಸೋಣವೇ?" ಎಂದರು. ಮರುಕ್ಷಣವೆ ಎಲ್ಲಾ ವಾದಗಳು ಸ್ತಬ್ಧವಾದುವು.

ಸರ್ದಾರರು ಯಾವಾಗಲೂ ಸಮಸ್ಯೆಗಳನ್ನು ನೇರ ದೃಷ್ಟಿಯಿಂದ ನೋಡುತ್ತಿದ್ದರು. ಸುತ್ತೂ ಬಳಸು, ಮುಚ್ಚು ಮರೆ ಅವರಿಗೆ ಹಿಡಿಸುತ್ತಿರಲಿಲ್ಲ.[೫೯]

ಅಃ) ಮಲಿನ ವಾತಾವರಣ

ಸರ್ದಾರ್ ವಲ್ಲಭಭಾಯಿ ಪಟೇಲ್ ಭಾರತ ಕಂಡ ಒಬ್ಬ ಮಹೋನ್ನತ ನಾಯಕ. ಹೊರನೋಟಕ್ಕೆ ಬಹಳ ಗಡುಸಾಗಿ ಕಂಡರೂ ಕೋಮಲ ಹೃದಯದ ವ್ಯಕ್ತಿ. ಕನಸಿನ ಲೋಕದಲ್ಲಿ ವ್ಯರ್ಥ ವಿಹರಿಸುವ ವ್ಯಕ್ತಿಯಲ್ಲ. ಗರಿಗೆದರಿ ಆಗಸದಲ್ಲಿ ಹಾರಾಡುವ ಹಕ್ಕಿಯಲ್ಲ. ನಿಜ ಜೀವನದ ಪರಿಸ್ಥಿತಿಗೆ ಹೊಂದಿಕೊಂಡು ಸಾಧ್ಯವಾದುದನೆಲ್ಲ ಬಿಡದೆ ಸಾಧಿಸುವ ಛಲದಂಕಮಲ್ಲ. ಅವರು ಸ್ವತಂತ್ರ ಭಾರತದ ಗೃಹಮಂತ್ರಿಯಾಗಿದ್ದಾಗ ವಿ.ಪಿ. ಮೆನನ್‌ರವರು ಅವರಿಗೆ ಕಾರ್ಯದರ್ಶಿ ಹಾಗೂ ಸಲಹೆಗಾರರಾಗಿದ್ದರು.

ಒಮ್ಮೆ ಮೆನನ್‌ರವರು ಸರ್ದಾರರ ಮನೆಗೆ ಹೋದಾಗ, ಅವರಿಗೆ ಆಮ್ಲಜನಕದ ಉಪಕರಣವನ್ನು ಅಳವಡಿಸಿದ್ದರು. ಅದರಿಂದ ಮೆನನ್‌ರವರು ಕೊಠಡಿಯ ಹೊರಗೆ ಸಿಗರೇಟ್ ಸೇದುತ್ತಾ ನಿಂತರು. ಮೆನನ್ ಹೊರಗಿರುವುದನ್ನು ಗಮನಿಸಿದ ಸರ್ದಾರರು ಆಮ್ಲಜನಕದ ಉಪಕರಣವನ್ನು ತೆಗೆಯಿಸಿ, ಅವರನ್ನು ಒಳಬರಮಾಡಿಕೊಂಡು, "ಅದೇಕೆ ಹೊರ ನಿಂತಿರಿ?" ಎಂದರು. "ಈ ಹೊಗೆಯಿಂದ ಗಾಳಿಯನ್ನು ಮಲಿನ ಮಾಡಬಾರದೆಂದು ಹೊರಗೆ ನಿಂತೆ" ಎಂದರು ಮೆನನ್. "ಅದರ ಬಗ್ಗೆ ಏಕೆ ಚಿಂತೆ ಮಾಡುತ್ತೀರಿ? ಇಡೀ ದೆಹಲಿಯ ವಾಯು ಮಲಿನವಾಗಿದೆ" ಎಂದರು

ಸರ್ದಾರರು ವೇದನೆಯಿಂದ. ಆ ಮಾತು ಆಡಿದಾಗ ದೆಹಲಿಯ ರಾಜಕೀಯ ಮತ್ತು ಮತೀಯ ವಾತಾವರಣ ಅವರ ಮನಸ್ಸಿನಲ್ಲಿತ್ತು.[೬೦]

ಕ) ನೆಹರುಗೆ ಸರ್ದಾರರ ಸಲಹೆ

೧೯೪೭ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಭಾರತವು ಬ್ರಿಟಿಷ್ ಕಾಮನ್‌ವೆಲ್ತನ್ನು ಸೇರಬೇಕೆ ಅಥವಾ ಸೇರುವುದು ಬೇಡವೇ ಅನ್ನುವ ಪ್ರಶ್ನೆ ಉದಯಿಸಿತು. ಆಗಿನ ಪ್ರಧಾನ ಮಂತ್ರಿ ಜವಹರಲಾಲ್ ಆ ಪ್ರಶ್ನೆಯ ಬಗೆಗೆ ಗೊಂದಲಕ್ಕೆ ಈಡಾದರು ಮತ್ತು ಒಂದು ಖಚಿತ ತೀರ್ಮಾನಕ್ಕೆ ಬರಲು ವಿಫಲರಾದರು. ಅವರು ೧೯೪೯ರ ಏಪ್ರಿಲ್‌ನಲ್ಲಿ ಕಾಮನ್‌ವೆಲ್ತ್ ರಾಷ್ಟ್ರಗಳ ಸಮ್ಮೇಳನದಲ್ಲಿ ಭಾಗವಹಿಸಲು ಲಂಡನ್‌ಗೆ ಹೋದರು. ಆದರೆ, ಆಗಲೂ ಒಂದು ಸ್ಪಷ್ಟ ನಿಲುವಿಗೆ ಬರಲು ಅವರಿಗೆ ಸಾಧ್ಯವಾಗಲಿಲ್ಲ. ಅದರಿಂದ ಅವರು ಏಪ್ರಿಲ್ ೨೨, ೧೯೪೯ರಂದು ಸರ್ದಾರ್ ಪಟೇಲರಿಗೆ ಒಂದು ಕೇಬಲ್ ಕಳುಹಿಸಿ ಅವರ ಅಭಿಪ್ರಾಯ ಮತ್ತು ಸಲಹೆಯನ್ನು ಕೋರಿದರು.

ಮಾರನೆಯ ದಿನವೇ ಅಂದರೆ, ಏಪ್ರಿಲ್ ೨೩ರಂದು ಸರ್ದಾರರು ನೆಹರುಗೆ ಉತ್ತರ ಕಳುಹಿಸಿದರು. ಯಾವ ಹಿಂಜರಿಕೆ ಅಥವಾ ಅನುಮಾನವೂ ಇಲ್ಲದೆ ಭಾರತವು ಕಾಮನ್‌ವೆಲ್ತ್ ಕೂಟವನ್ನು ಸೇರಬೇಕೆಂದು ಸಲಹೆ ನೀಡಿದರು. ತಮ್ಮ ಆ ಅಭಿಪ್ರಾಯಕ್ಕೆ ಕಾರಣವನ್ನು ನೀಡಿದರು. ಭಾರತ ಸ್ವತಂತ್ರ ಪ್ರಜಾಪ್ರಭುತ್ವ ವಾದುದರಿಂದ ಕಾಮನ್‌ವೆಲ್ತ್ ಕೂಟದ ಸದಸ್ಯತ್ವವನ್ನು ನಾವು ಅಪೇಕ್ಷೆ ಪಡುವವರೆಗೆ ಅಥವಾ ನಮ್ಮ ದೇಶದ ಹಿತಕ್ಕೆ ಅನುಕೂಲವಾಗಿರುವವರೆಗೆ ಆ ಕೂಟದಲ್ಲಿರಬಹುದು. ಆ ಸದಸ್ಯತ್ವ ಫಲಪ್ರದವಲ್ಲ – ಎಂದು ಅನ್ನಿಸಿದಾಗ ಸದಸ್ಯತ್ವವನ್ನು ಹಿಂತೆಗೆದುಕೊಳ್ಳ ಬಹುದು – ಎಂದು ಸಲಹೆ ನೀಡಿದರು. ನೆಹರುರವರು ಸರ್ದಾರರ ಸಲಹೆಯಂತೆ ಕಾಮನ್‌ವೆಲ್ತ್ ಕೂಟ ಸೇರಲು ತೀರ್ಮಾನಿಸಿದರು.[೬೧]

ಖ) ಸರ್ದಾರರ ವರ್ಚಸ್ಸು

೧೯೩೯ರಲ್ಲಿ ಎರಡನೆ ವಿಶ್ವ ಸಮರ ಆರಂಭವಾದಾಗ ಆಂಗ್ಲ ಸರ್ಕಾರವು ಭಾರತೀಯರ ಸಹಾಯ ಮತ್ತು ಬೆಂಬಲವನ್ನು ಬಯಸಿತು. ಮಹಾತ್ಮ ಗಾಂಧೀಜಿ ಸರ್ಕಾರಕ್ಕೆ ಸಹಾಯ ನೀಡುವುದನ್ನು ವಿರೋಧಿಸಿದರು. ಆದರೆ ನೆಹರು ಮತ್ತು ಇನ್ನು ಕೆಲವು ನಾಯಕರು ಶರತ್ತುಬದ್ಧ ಸಹಾಯ ನೀಡಲು ಸಿದ್ಧರಿದ್ದರು. ಈ ವಿರುದ್ಧಾಭಿಪ್ರಾಯಗಳು ಕಾಂಗ್ರೆಸ್ ಪಕ್ಷದಲ್ಲಿ ಗೊಂದಲವನ್ನುಂಟುಮಾಡಿತು. ಅದರಿಂದ ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿಯ ಸಭೆಯನ್ನು ದೆಹಲಿಯಲ್ಲಿ ಕರೆಯಲಾಯಿತು.

ಸಭೆಯ ದಿವಸ, ಸಭೆ ಆರಂಭವಾಗುವುದಕ್ಕೆ ಮುಂಚೆ, ಗಾಂಧೀಜಿ ಮತ್ತು ನೆಹರು ನಡುವೆ ಒಂದು ವಾಗ್ವಾದ ಆರಂಭವಾಯಿತು. ಅವರ ವಾಗ್ವಾದ ಬಹಳ ಕಾಲ ನಡೆಯಿತು. ಆ ವಾದದ ನಡುವೆ ಗಾಂಧೀಜಿಯವರು ತಾವು ಕಾಂಗ್ರೆಸ್ಸನ್ನು ಬಿಡುವುದಾಗಿ ಹೇಳಿದರು. ನೆಹರು ತಾವೂ ಸಹ ಕಾಂಗ್ರೆಸ್ಸನ್ನು ಬಿಡುವುದಾಗಿ ಹೇಳಿದರು. ಇಬ್ಬರೂ ಹೇಳಿದ್ದನ್ನೇ ಹೇಳುತ್ತಿದ್ದರು. ಅದರಿಂದ ಸಭೆ ಆರಂಭ ವಾಗುವುದು ತಡವಾಯಿತು.

ಕೊನೆಗೆ ಸರ್ದಾರ್ ಪಟೇಲರು ಮಧ್ಯೆ ಪ್ರವೇಶಿಸಿ ಗಾಂಧೀಜಿಯನ್ನು ಕೇಳಿದರು, "ನೀವು ಕಾಂಗ್ರೆಸ್ಸನ್ನು ಬಿಡಲು ನಿಜವಾಗಿಯೂ ಸಿದ್ಧವಿದ್ದೀರ?" ಗಾಂಧೀಜಿ "ಹೌದು" ಎಂದು ಉತ್ತರಿಸಿದರು. ಸರ್ದಾರರು ನೆಹರೂರವರನ್ನು, "ನೀವೂ ಸಹ ಹಾಗೆಯೇ ತೀರ್ಮಾನಿಸಿದ್ದೀರ?" ಎಂದು ಕೇಳಿದರು. ನೆಹರು, "ಹೌದು, ನಾನೂ ಸಹ" ಎಂದು ಉತ್ತರಿಸಿದರು.

ನಂತರ ಸರ್ದಾರ್ ಹೇಳಿದರು, "ಸರಿ, ನಿಮ್ಮ ಹಾಗೆ ಕಾಂಗ್ರೆಸ್‌ನಿಂದ ದೂರ ವಾಗಬೇಕೆನ್ನುವವರು ಇನ್ನೂ ಅನೇಕರಿದ್ದಾರೆ. ಆದರೆ ನೀವು ಹೊರಹೋಗು ವುದರಿಂದ ಕಾಂಗ್ರೆಸ್‌ನಲ್ಲಿ ಮತ್ತು ದೇಶದಲ್ಲಿ ಏನಾಗಬಹುದು ಎಂಬುದನ್ನು ಯಾವಾಗಲಾದರು ಯೋಚಿಸಿದ್ದೀರ? ಬಾಪು, ನೀವು ಮೂರ್ಖ ನಂಬರ್ ಒಂದು ಮತ್ತು ಜವಹರ್, ನೀವು ಮೂರ್ಖ ನಂಬರ್ ಎರಡು. ಈ ಉಪಯೋಗ ವಿಲ್ಲದ ಮಾತುಗಳನ್ನು ನಿಲ್ಲಿಸಿ."

ಸರ್ದಾರರ ಮಾತು ಆಲಿಸಿ ಗಾಂಧಿ ಮತ್ತು ನೆಹರು ಮಾತು ನಿಲ್ಲಿಸಿದರು. ನಂತರ ಸಭೆ ಸಮಾಧಾನಕರವಾಗಿ ನಡೆಯಿತು.[೬]

ಸರ್ದಾರರ ವ್ಯಕ್ತಿತ್ವ ಅಷ್ಟು ಪ್ರಭಾವಶಾಲಿಯಾಗಿತ್ತು.

ಗ) ನೀತಿ ಮತ್ತು ರೀತಿ

೧೯೪೭ರಲ್ಲಿ ಬ್ರಿಟಿಷರು ಭಾರತ ಬಿಟ್ಟು ಹೊರಟ ಮೇಲೆ ಫ್ರೆಂಚರು ತಮ್ಮ ವಸಾಹತುಗಳಾದ ಪಾಂಡಿಚೆರಿ, ಕಾರೈಕಲ್ ಮತ್ತು ಮಾಹೆಯನ್ನು ಸ್ವತಂತ್ರಗೊಳಿಸಲು ಒಪ್ಪಿದರು. ಆದರೆ ಪೋರ್ಚುಗೀಸರು ಮಾತ್ರ ತಮ್ಮ ವಸಾಹತುಗಳಾದ ಗೋವಾ, ಡಯು ಮತ್ತು ಡಾಮನ್‌ಗಳಿಗೆ ಅಂಟಿಕೊಂಡೇ ಇದ್ದರು. ಪೋರ್ಚುಗೀಸರು ಈ ವಸಾಹತುಗಳನ್ನು ಬಿಟ್ಟು ಹೋಗುವಂತೆ ಮಾಡಲು ಕೈಗೊಳ್ಳಬಹುದಾದ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಲು ಮಂತ್ರಿ ಮಂಡಲದ ವಿದೇಶಾಂಗ ವ್ಯವಹಾರಗಳ ಸಮಿತಿಯು ೧೯೫೧ರಲ್ಲಿ ಸಭೆ ಸೇರಿತು. ವಿದೇಶಾಂಗ ಕಾರ್ಯದರ್ಶಿಯಾಗಿದ್ದ

ಕೆ.ಪಿ.ಎಸ್. ಮೆನನ್, ಗೃಹ ಇಲಾಖಾ ಕಾರ್ಯದರ್ಶಿ ಮತ್ತು ವಾಣಿಜ್ಯ ಕಾರ್ಯದರ್ಶಿ ಆ ಸಭೆಯಲ್ಲಿದ್ದರು. ಅವರು ಗೋವಾದ ಆಡಳಿತಗಾರರ ಮೇಲೆ ಒತ್ತಡ ತರುವುದಕ್ಕಾಗಿ ಗೋವಾದಿಂದ ಭಾರತಕ್ಕೆ ಹಣ ರವಾನಿಸುವುದರ ಮೇಲೆ ನಿರ್ಬಂಧ, ಗೋವಾದವರಿಗೆ ಭಾರತದಲ್ಲಿ ಉದ್ಯೋಗ ನೀಡುವುದರ ಕಡಿತ ಮುಂತಾದ ಕ್ರಮಗಳನ್ನು ಸೂಚಿಸಿದರು. ಪ್ರಧಾನಿ ನೆಹರು ಈ ಸಲಹೆಗಳನ್ನು ಒಪ್ಪುವ ಇಂಗಿತವನ್ನು ತೋರಿಸಿದರು. ಆದರೆ ರಾಜಾಜಿಯವರು ಒಪ್ಪಲಿಲ್ಲ. "ಗೋವಾದವರು ನಮ್ಮ ಸಹೋದರರು, ಅವರಿಗೆ ಹಿಂಸೆಯಾಗುವ ಯಾವ ಕ್ರಮವನ್ನೂ ತೆಗೆದುಕೊಳ್ಳಬಾರದು, ಪ್ರೀತಿಯಿಂದ ಅವರ ಮನಸ್ಸನ್ನು ಗೆಲ್ಲಬೇಕು" – ಎಂದರು ರಾಜಾಜಿ. ಚರ್ಚೆ ಹೀಗೆಯೇ ಮುಂದುವರಿಯುತ್ತಾ ಹೋಯಿತು. ಗೃಹಮಂತ್ರಿ ಸರ್ದಾರ್ ಪಟೇಲರು ಅರೆ ಕಣ್ಣು ಮುಚ್ಚಿ ನಿರಾಸಕ್ತರಂತೆ ಕುಳಿತಿದ್ದವರು, ಇದ್ದಕ್ಕಿದ್ದ ಹಾಗೆ ಕಣ್ಣು ತೆರೆದು, "ನಾವು ಒಳಕ್ಕೆ ನುಗ್ಗೋಣವೇ? ಕೇವಲ ಎರಡು ಘಂಟೆಗಳ ಕೆಲಸ," ಎಂದರು. ಆ ಸಲಹೆಯನ್ನು ಕೇಳಿ ನೆಹರು ಗಾಬರಿಗೊಂಡರು. ಅವರೆಂದರು, "ಸೈನ್ಯ ಕಾರ್ಯಾಚರಣೆಯನ್ನು ಯಾವಾಗಲೂ ಖಂಡಿಸುತ್ತಿರುವ ಮತ್ತು ಎಲ್ಲಾ ಅಂತರ ರಾಷ್ಟ್ರೀಯ ಸಮಸ್ಯೆಗಳನ್ನು ಶಾಂತಿಯುತ ಮಾರ್ಗದಲ್ಲಿ ಪರಿಹರಿಸಬೇಕು ಎಂದು ಹೇಳುತ್ತಿರುವ ನಾವು ಗೋವಾದಲ್ಲಿ ಸೈನ್ಯವನ್ನು ಉಪಯೋಗಿಸುವುದು ಹೇಗೆ ಸಾಧ್ಯ?" ಸರ್ದಾರರು ಮೌನಕ್ಕೆ ಮತ್ತೆ ಮುಳುಗಿದರು. ತಮ್ಮ ಸಲಹೆಯನ್ನು ಸ್ವೀಕರಿಸಬೇಕೆಂದು ಒತ್ತಾಯಿಸಲಿಲ್ಲ.

ಗೋವಾ ಪೋರ್ಚುಗೀಸರ ಕಾಲೋನಿಯಾಗಿಯೇ ಇನ್ನೂ ಒಂದು ದಶಕದ ಕಾಲ ಮುಂದುವರೆಯಿತು. ಆ ನಂತರ ೧೯೬೧ರಲ್ಲಿ ಸೈನ್ಯ ಕಾರ್ಯಾಚರಣೆಯ ಮೂಲಕವೇ ನೆಹರುರವರ ಕಾಲದಲ್ಲೇ ಭಾರತದೊಡನೆ ಲೀನವಾಯಿತು. ಸರ್ದಾರರ ಸಲಹೆಯನ್ನು ನೆಹರು ಮೊದಲೇ ಒಪ್ಪಿದ್ದರೆ ಹತ್ತು ವರ್ಷ ಮುಂಚೆಯೇ ಗೋವಾ ರಾಜ್ಯದ ಬಿಡುಗಡೆ ಆಗುತ್ತಿತ್ತು.

೧೯೫೦ರಲ್ಲಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಭಾಗವಹಿಸುವ ಭಾರತೀಯ ನಿಯೋಗದ ಸದಸ್ಯರನ್ನು ಆರಿಸುವ ಸಂದರ್ಭ ಉಂಟಾಯಿತು. ಸ್ಥಳೀಯ ರಾಜ್ಯಗಳ ಮಂತ್ರಿಯಾಗಿದ್ದ ಸರ್ದಾರರು ರಾಜರುಗಳ ಪ್ರತಿನಿಧಿಯಾಗಿ ನವನಗರದ ಜಾಮ್ ಸಾಹೇಬರ ಹೆಸರನ್ನು ಶಿಫಾರಸ್ಸು ಮಾಡಿದರು. ಕಾರ್ಯದರ್ಶಿ ಕೆ.ಪಿ.ಎಸ್. ಮೆನನ್ ಈ ಶಿಫಾರಸ್ಸನ್ನು ನೆಹರು ಮುಂದೆ ತಂದರು. ನೆಹರು ಹಿಂಜರಿದರು. "ಅವರನ್ನು ವಿಶ್ವಸಂಸ್ಥೆಗೆ ಕಳುಹಿಸಿದರೆ ನಾನೊಬ್ಬ ಮೂರ್ಖನಾಗುತ್ತೇನೆ. ಅವರು ಮತ್ತು ಅವರ ವಜ್ರದ ಗುಂಡಿಗಳು!" ಎಂದರು

ನೆಹರು. ಈ ಉದ್ಗಾರವು ರಾಜರುಗಳ ವೈಭವ ಮತ್ತು ದೌಲತ್ತಿನ ಬಗೆಗೆ ನೆಹರುಗೆ ಇದ್ದ ತಿರಸ್ಕಾರವನ್ನು ಸೂಚಿಸುತ್ತದೆ. ಮೆನನ್‌ರವರು ಸರ್ದಾರರ ಬಳಿಗೆ ಹೋಗಿ ಬೇರೆ ಹೆಸರನ್ನು ಸೂಚಿಸುವಂತೆ ಕೇಳಬೇಕೆಂದು – ನೆಹರು ಮೆನನ್‌ರವರಿಗೆ ಸೂಚಿಸಿದರು. ಅದರಂತೆ ಮೆನನ್ ಸರ್ದಾರರನ್ನು ಭೇಟಿ ಮಾಡಿ ನೆಹರುರವರ ಸೂಚನೆಯನ್ನು ತಿಳಿಸಿದರು. ಸರ್ದಾರರು ಹೇಳಿದರು, "ನಾನು ಹೆಸರನ್ನು ಸೂಚಿಸಿದ್ದೇನೆ ಮತ್ತು ಅದಕ್ಕೆ ಬದ್ಧನಾಗಿದ್ದೇನೆ." ನೆಹರು ಒಪ್ಪಿಕೊಂಡರು.

ಗೋವಾ ವಿಷಯದಲ್ಲಿ ಪಟೇಲರು ಒತ್ತಾಯ ಮಾಡಲಿಲ್ಲ, ಏಕೆಂದರೆ ಅದು ವಿದೇಶಾಂಗ ವ್ಯವಹಾರ ಖಾತೆಗೆ ಸಂಬಂಧಿಸಿದ್ದು. ಆ ಖಾತೆ ನೆಹರು ಅಧೀನದಲ್ಲಿತ್ತು. ಆದರೆ ತಮ್ಮ ಖಾತೆಯ ವಿಷಯ ಬಂದಾಗ ಸ್ವಲ್ಪವೂ ಜಗ್ಗಲಿಲ್ಲ, ಅದು ಸರ್ದಾರರ ನೀತಿ ಮತ್ತು ರೀತಿ.[೬೩]

❖ ◆ ❖

ಮೊಮ್ಮಗ ಗೌತಮ್‌ರೊಡನೆ

೨೮. ಜೀವನ ಸಂಧ್ಯಾ

೨೮.೧. ಅನಾರೋಗ್ಯದ ದಿನಗಳು ಮತ್ತು ಅಂತ್ಯ

ಗಾಂಧೀಜಿಯ ಹಾಗೆ ಪಟೇಲರಿಗೂ ದೇವರಲ್ಲಿ ಮತ್ತು ದೇವರ ನಿರ್ಧಾರದಲ್ಲಿ ಅಪಾರ ನಂಬಿಕೆ ಇತ್ತು. ಒಮ್ಮೆ ಪಟೇಲರು ಹೀಗೆ ಹೇಳಿದ್ದರು:

> "ಹಿಂದೆ ಮತಾಂಧ ಮುಸ್ಲಿಮರಿಂದ ಮತ್ತು ಇತರ ಆಸಕ್ತರಾದ ವ್ಯಕ್ತಿಗಳಿಂದ ನನ್ನ ಹತ್ಯೆಗೆ ಪ್ರಯತ್ನಗಳು ನಡೆದಿವೆ. ಆದರೆ ದೇವರ ದಯೆಯಿಂದ ನಾನು ಉಳಿದುಕೊಂಡಿದ್ದೇನೆ..... ಯಾವುದೇ ವ್ಯಕ್ತಿಯ ಪ್ರಾಣವನ್ನು ತೆಗೆಯುವುದು ಒಬ್ಬ ವ್ಯಕ್ತಿಯ ಕೈಯಲ್ಲಿ ಅಥವಾ ವ್ಯಕ್ತಿಗಳ ಗುಂಪಿನ ಕೈಯಲ್ಲಿ ಇಲ್ಲ. ಅದು ದೇವರ ಕೈಯಲ್ಲಿದೆ. ಈ ಪ್ರಪಂಚದಲ್ಲಿ ನನ್ನ ಕೆಲಸ ಮುಗಿದಿದ್ದರೆ ಮತ್ತು ನಾನು ಬೇರೆ ಕಡೆ ಬೇಕಾಗಿದ್ದರೆ ನನ್ನ ಜೀವನ ಮುಕ್ತಾಯವಾಗುತ್ತದೆ. ಆದರೆ ಅದು ಮುಕ್ತಾಯವಾಗುವುದು, ಪೂರ್ವ ನಿರ್ಧಾರಿತವಾದ ರೀತಿಯಲ್ಲೇ ಹೊರತು ಬೇರೆ ಯಾವ ರೀತಿಯಲ್ಲೂ ಅಲ್ಲ."[೬೪]

ದೇಶದ ಸ್ವಾತಂತ್ರ್ಯ ಸಂಪಾದನೆ ಮತ್ತು ಒಕ್ಕೂಟ ಸ್ಥಾಪನೆಯಾಗಿ ಇಡೀ ಭರತಖಂಡ, ಇತಿಹಾಸದಲ್ಲಿ ಪ್ರಥಮ ಬಾರಿಗೆ, ಒಂದೇ ಕಾನೂನು ವ್ಯಾಪ್ತಿಗೆ ಒಳಪಟ್ಟ ಮೇಲೆ ಪಟೇಲರು ತಮ್ಮ ಜೀವನದ ಪರಮೋದ್ದೇಶ ಪೂರ್ಣವಾಯಿತೆಂದು ಭಾವಿಸಿದರು.

ಹಾಗೆಂದು ಅವರು ಸನ್ಯಾಸಿಯಂತೆ ಮನೆಯಲ್ಲಿ ಕುಳಿತುಕೊಳ್ಳಲಿಲ್ಲ. ದೇಶದಲ್ಲಿ ಆಗಬೇಕಾದ ಇನ್ನೂ ಅನೇಕ ಕೆಲಸಗಳಿದ್ದುವು. ಸಾಯುವವರೆಗೂ ದೇಶ ಸೇವೆಯಲ್ಲಿ

ನಿರತರಾಗಿರುವುದು ಅವರ ಸಂಕಲ್ಪವಾಗಿತ್ತು. ಅದರಿಂದಲೇ ಅವರು ತಮ್ಮ ಶಿಥಿಲವಾದ ಆರೋಗ್ಯದಲ್ಲೂ ಕಲ್ಕತ್ತಕ್ಕೆ ಹೋಗಿ ಹತ್ತು ದಿನಗಳು ಶ್ರಮಿಸಿ ನೆಹರು – ಲಿಯಾಖತ್ ಒಪ್ಪಂದಕ್ಕೆ ಬಂಗಾಳಿಗಳ ಬೆಂಬಲ ದೊರಕುವಂತೆ ಮಾಡಿದ್ದು. ಆದರೆ ಅದರಿಂದ ಅವರ ಆರೋಗ್ಯ ಮತ್ತಷ್ಟು ಹದಗೆಟ್ಟಿತು. ವೈದ್ಯರು ಸಮುದ್ರ ಪ್ರಯಾಣವನ್ನು ಅವರಿಗೆ ಸಲಹೆ ಮಾಡಿದರು. ಪಟೇಲರು ೧೯೫೦ ಮೇ ತಿಂಗಳ ಆದಿ ಭಾಗದಲ್ಲಿ ಬಾಂಬೆಯಿಂದ ಕನ್ಯಾಕುಮಾರಿಗೆ ಐಎನ್‌ಎಸ್ ಡೆಲ್ಲಿ ಎಂಬ ನೌಕೆಯಲ್ಲಿ ಪ್ರಯಾಣ ಮಾಡಿದರು. ಆದರೆ ಅದರಿಂದೇನು ಅವರ ಆರೋಗ್ಯ ಉತ್ತಮವಾಗಲಿಲ್ಲ. ಕನ್ಯಾಕುಮಾರಿಯಲ್ಲಿ ಅವರು ಶಂಕರ್‌ಗೆ ಹೇಳಿದರು:

> ನೀನು ಭಾರತಮಾತೆಯ ಪಾದಗಳ ಮುಂದೆ ಇದ್ದೀಯ,
> ಕೆಲವು ನಿಮಿಷ ಕಣ್ಣುಗಳನ್ನು ಮುಚ್ಚಿ ಇಲ್ಲಿಂದ ಹಿಮಾಲಯದವರೆಗೆ
> ಏನೇನಿದೆ ಮತ್ತು ಅವೆಲ್ಲ ಹೇಗೆ ಒಂದೇ ರಚನೆಯಾಗಿ ನೇಯಲ್ಪಟ್ಟಿವೆ
> ಎನ್ನುವುದನ್ನು ಏಕಚಿತ್ತದಿಂದ ಆಲೋಚಿಸು.[೬೫]

ಪಟೇಲರು ತಮ್ಮ ಜೀವನದಲ್ಲಿ ಹೋರಾಟ ಮತ್ತು ರಾಜಕೀಯ ಬಿಟ್ಟು ಬೇರೆ ಯಾವುದರ ಕಡೆಗೂ ಕಣ್ಣು ಹಾಯಿಸಿರಲಿಲ್ಲ ಮತ್ತು ಕಿವಿಯನ್ನು ಕೊಟ್ಟಿರಲಿಲ್ಲ. ಪ್ರಕೃತಿ ಸೌಂದರ್ಯ ಅಥವಾ ಕಲಾ ಸೌಂದರ್ಯ ವೀಕ್ಷಣೆ ಅಥವಾ ಮಧುರ ಗಾನದ ಆಲಿಕೆಯನ್ನು ಬಯಸಿರಲಿಲ್ಲ. ಸೆರೆಮನೆಯಿಂದ ಹೊರಗೆ ಪುಸ್ತಕಗಳ ಓದೂ ಇರಲಿಲ್ಲ. ಆದಾವುದಕ್ಕೂ ಅವರಿಗೆ ಕಾಲವಿರಲಿಲ್ಲ. ೧೯೫೦ರ ಆಗಸ್ಟ್ ೧೫ರಂದು ಅವರು 'ಈಗ ನಾನು ಕಾಲವೇ ಪ್ರಧಾನವಾದ ಹಂತವನ್ನು ತಲುಪಿದ್ದೇನೆ' ಎಂದರು. ಆದಾಗ್ಯೂ ಅಕ್ಟೋಬರ್‌ನಲ್ಲಿ ಎಲ್ಲೋರ ಮತ್ತು ಅಜಂತವನ್ನು ನೋಡಲು ಒಪ್ಪಿದರು. ಅವರು ಅಲ್ಲಿಗೆ ಮಣಿಬೆನ್ ಜೊತೆ ಹೋದರು. ಅವರನ್ನು ಕುರ್ಚಿಯಲ್ಲಿ ಕೂರಿಸಿ ವಿವಿಧ ಗುಹೆಗಳಿಗೆ ಕರೆದೊಯ್ಯಲಾಯಿತು. ಅಲ್ಲಿಯ ವರ್ಣ ಚಿತ್ರಕಲೆಯನ್ನು ವೀಕ್ಷಿಸಿ ಪುರಾತನ ಭಾರತದ ಕಲಾ ಉಜ್ವಲತೆ ಮತ್ತು ಕೌಶಲ್ಯದ ಬಗೆಗೆ ಆಶ್ಚರ್ಯ ವ್ಯಕ್ತಪಡಿಸಿದರು.[೬೬]

ಅಕ್ಟೋಬರ್ ತಿಂಗಳ ಕೊನೆಗೆ ಅವರು ಅಹಮದಾಬಾದ್‌ಗೆ ಹೋಗಿ ೫ ದಿನಗಳು ಇದ್ದರು. ಆ ಸಮಯದಲ್ಲಿ ಅವರ ೭೫ನೆ ವರ್ಷದ ಹುಟ್ಟುಹಬ್ಬ ಅಕ್ಟೋಬರ್ ೩೧ರಂದು ನಡೆಯಿತು. ಅದೇ ಸಮಯದಲ್ಲಿ ನರಹರಿ ಪರೀಖ್‌ರವರು ಬರೆದ ಪಟೇಲರ ಜೀವನ ಚರಿತ್ರೆ ಮುದ್ರಣಾಲಯದಿಂದ ಹೊರಬಂದಿತು. ಆದರೆ ಅವರ ಅತ್ಯಂತ ಆಪ್ತರಾಗಿದ್ದ ಡಾ॥ ಕನುಗಾ ದಂಪತಿಗಳು ಇಲ್ಲದ್ದು ಅವರಿಗೆ ನೋವನ್ನು ಉಂಟುಮಾಡಿತು. ಆ ದಂಪತಿಗಳು ಬದುಕಿದ್ದಾಗ ವಾಸಿಸುತ್ತಿದ್ದ

ಮನೆಗೆ ಭೇಟಿ ಕೊಟ್ಟರು. ಆ ಮನೆಯಲ್ಲಿ ಪಟೇಲರು ಅನೇಕ ಆನಂದದ ಕ್ಷಣಗಳನ್ನು ಕಳೆದಿದ್ದರು. ಸಬರಮತಿ ಆಶ್ರಮಕ್ಕೆ ಹೋಗಿ ಗಾಂಧೀಜಿಯ ಕೊಠಡಿಗೆ ಭೇಟಿ ನೀಡಿದರು. ಅವರ ಆತ್ಮೀಯ ಮತ್ತು ಹಳೆಯ ಸಹಚರರಾದ ರವಿಶಂಕರ್ ಮಹರಾಜ್, ಶಂಕರ್‌ಲಾಲ್ ಪರೀಖ್ ಮೊದಲಾದವರು ಬಂದು ಭೇಟಿ ಮಾಡಿದರು. ಕರಮ್‌ಸದ್ ಗ್ರಾಮದ ಜನ ತಮ್ಮ ಮಣ್ಣಿನ ಮಗನನ್ನು ನೋಡಲು ಬಂದರು. ಪಟೇಲರೊಡನೆ ಇರಲು ಅವರ ಮಗ ದಹ್ಯಾಭಾಯ್, ಸೊಸೆ ಭಾನುಮತಿ ಮತ್ತು ಮೊಮ್ಮಗ ಗೌತಮ್ ಬಂದರು.

ಪಟೇಲರ ಹುಟ್ಟುಹಬ್ಬದ ದಿನ ಅವರಿಗೊಂದು ಆಶ್ಚರ್ಯ ಕಾದಿತ್ತು. ಮೂವರು ರಾಜ ಪ್ರಮುಖರು – ಪಟಿಯಾಲದ ಮಹಾರಾಜ, ಜೈಪುರದ ಮಹಾರಾಜ ಮತ್ತು ಗ್ವಾಲಿಯರ್‌ನ ಮಹಾರಾಜ – ಬಂದರು. ಅವರು ಭಾರತದ ರಾಜ್ಯಗಳು ಸರ್ದಾರರಿಗೆ ಶರಣಾದುದರ ಶ್ವೇತ ಪತ್ರವನ್ನು ಸುಂದರವಾಗಿ ಬೈಂಡ್ ಮಾಡಿಸಿ ಅದರ ಮೇಲೆ ಕೆತ್ತನೆ ಕೆಲಸ ಮಾಡಿಸಿದ ಕೃತಿಯನ್ನು ಪಟೇಲರಿಗೆ ಉಡುಗೊರೆಯಾಗಿ ನೀಡಿದರು. ಆ ಮೂಲಕ ಅವರು ಪಟೇಲರಿಗೆ ತಮ್ಮ ಗೌರವ ಮತ್ತು ಕೃತಜ್ಞತೆಯನ್ನು ಅರ್ಪಿಸಲು ಬಂದಿದ್ದರು. ಅವರೊಡನೆ ವಿ.ಪಿ. ಮೆನನ್‌ರವರೂ ಸಹ ವಿಮಾನದಲ್ಲಿ ಬಂದಿದ್ದರು.[೪೪] ಕೆಲವು ಸರ್ಕಾರಿ ಅಧಿಕಾರಿಗಳು ಮತ್ತು ಪಕ್ಷದ ಕಾರ್ಯಕರ್ತರೂ ಸಹ ಹುಟ್ಟುಹಬ್ಬದಲ್ಲಿ ಭಾಗವಹಿಸಿದರು. ಮೊರಾರ್ಜಿ ದೇಸಾಯಿ ಮತ್ತು ಕಾಂಜಿಭಾಯ್ ಸಹ ಭಾಗವಹಿಸಿದ್ದರು. ಅಂಬಾಲಾಲ್ ಭೋಜನ ಏರ್ಪಡಿಸಿದ್ದರು.

ಅಹಮದಾಬಾದ್‌ಗೆ ಪಟೇಲರ ಭೇಟಿಯ ಉದ್ದೇಶ ಹಳೆಯ ಸ್ನೇಹಿತರ ಭೇಟಿ ಮತ್ತು ಸಂತೋಷ ಕೂಟ ಮಾತ್ರ ಆಗಿರಲಿಲ್ಲ. ಆ ಸಮಯದಲ್ಲಿ ಅವರು ಆನಂದ್ ಹಾಲಿನ ಕೇಂದ್ರ ಮತ್ತು ವಿದ್ಯಾನಗರದ ಶೈಕ್ಷಣಿಕ ಯೋಜನೆಗಳಿಗೆ ಸಹಾಯ ಹಸ್ತ ನೀಡಿದರು. ಅವೆರಡರ ಸ್ಥಾಪನೆಯಲ್ಲಿ ಅವರ ಪಾತ್ರವಿತ್ತು. ಸಾರ್ವತ್ರಿಕ ಚುನಾವಣೆಗೆ ಹಣ ಸಂಗ್ರಹಿಸಿ ಮೊರಾರ್ಜಿ ದೇಸಾಯಿಯವರಿಗೆ ಹಸ್ತಾಂತರ ಮಾಡಿದರು. ಅನೇಕ ಸಭೆಗಳನ್ನು ನಡೆಸಿದರು.

ಪಟೇಲರು ನವೆಂಬರ್ ೨ರಂದು ದೆಹಲಿಗೆ ಹಿಂತಿರುಗಿದರು. ಅಷ್ಟು ಹೊತ್ತಿಗೆ ಅಕ್ಟೋಬರ್‌ನಲ್ಲಿ ಚೀನ ಟಿಬೆಟ್ ಮೇಲೆ ಆಕ್ರಮಣ ಮಾಡಿತ್ತು. ಅಕ್ಟೋಬರ್ ೩೦ರಂದು ಟಿಬೆಟ್ ಭಾರತದ ಸಹಾಯವನ್ನು ಕೋರಿತ್ತು. ನವೆಂಬರ್ ೯ರಂದು ಸ್ವಾಮಿ ದಯಾನಂದರ ಬಗೆಗೆ ಬರೆಯಲಾದ ಒಂದು ಪುಸ್ತಕದ ಬಿಡುಗಡೆ ಸಮಾರಂಭದಲ್ಲಿ ಆಶುಭಾಷಣ ಮಾಡುತ್ತ ಪಟೇಲರು ಟಿಬೆಟ್‌ನ ವಿಷಯ ಪ್ರಸ್ತಾಪಿಸಿ ಹೀಗೆ ನುಡಿದರು:

> ಒಂದು ಶಾಂತಿಯುತ ದೇಶವು ಆಕ್ರಮಣ ಮಾಡಲ್ಪಟ್ಟಿದೆ. ಇನ್ನು ಅದು ಉಳಿಯಲಾರದು. ಹೀಗಾಗುವುದೆಂದು ನಾವು ನಿರೀಕ್ಷಿಸಿರಲಿಲ್ಲ. .....ಆದರೆ ಚೀನ ನಮ್ಮ ಸಲಹೆಯನ್ನು ಒಪ್ಪಲಿಲ್ಲ. ಟಿಬೆಟ್‌ನ ಕಡೆಯಿಂದ ಯಾವ ಆಕ್ರಮಣವೂ ಆಗಿರಲಿಲ್ಲ. ಆದರೆ ಅಧಿಕಾರದ ಅಹಂಕಾರ ನೆತ್ತಿಗೇರಿದಾಗ ತಾವೇನು ಮಾಡುತ್ತಿದ್ದೇವೆ ಎನ್ನುವುದು ಅರಿವಿಗೆ ಬರುವುದಿಲ್ಲ.[೬೭]

ಅದಾದ ಸ್ವಲ್ಪ ದಿನಕ್ಕೆ ಪಟೇಲರ ಆರೋಗ್ಯ ಕುಸಿಯಿತು. ಮೆಲ್ಲನೆ ಮಾತು ಕೇಳಿಸದಂತಾಯಿತು. ನೆನಪಿನ ಶಕ್ತಿ ಕಡಿಮೆಯಾಯಿತು. ನಾಡಿ ಬಡಿತ ಏರಿತು. ಹೃದಯ, ಕರುಳಿನ ನೋವು ಮತ್ತೆ ಬಂದಿತು.

ಅಷ್ಟು ಹೊತ್ತಿಗೆ, ರಾಜ್ಯಗಳ ರಾಜರಿಗೆ ಸಂಬಂಧಿಸಿದ ಕೆಲವು ಪ್ರಶ್ನೆಗಳ ಪರಿಶೀಲನೆಗೆ ಒಂದು ಸಚಿವ ಸಮಿತಿಯನ್ನು ನೆಹರು ರಚಿಸಬೇಕೆಂದಿರುವರು – ಅನ್ನುವ ವರದಿ ಬಂದಿತು. ಅದು ಪಟೇಲರಿಗೆ ನೋವನ್ನು ಉಂಟುಮಾಡಿತು. ಅವರು ತಮ್ಮ ಅಧಿಕಾರವನ್ನು ಮೊಟಕುಗೊಳಿಸಲಾಗುತ್ತಿದೆ ಮತ್ತು ತಮ್ಮ ತೀರ್ಮಾನಗಳನ್ನು ಪ್ರಶ್ನಿಸಲಾಗುತ್ತಿದೆ – ಎಂದು ಭಾವಿಸಿದರು. ಅಧಿಕಾರಿಗಳ ಬಗೆಗೂ ಪರಿಶೀಲಿಸಲಾಗುವುದು ಎನ್ನುವ ಮತ್ತೊಂದು ವರದಿಯಿಂದ, ತಮಗೆ ವಿಧೇಯರಾಗಿದ್ದ ಅಧಿಕಾರಿಗಳ ಅದರಲ್ಲೂ ಮೆನನ್ ಮತ್ತು ಶಂಕರ್‌ರವರ ಭವಿಷ್ಯತ್ತಿನ ಬಗೆಗೆ ಅವರಿಗೆ ಚಿಂತೆಯಾಯಿತು.[೬೮]

ಅದಕ್ಕೆ ಮುಂಚೆ, ಅಕ್ಟೋಬರ್ ತಿಂಗಳಲ್ಲಿ ಪಟೇಲರು ರಾಜಾಜಿಯವರಿಗೆ, "ನಾನು ನೆಹರುವನ್ನು ವಿರೋಧಿಸುತ್ತಿದ್ದೆ ಮತ್ತು ಅವರೊಡನೆ ಹೋರಾಡುತ್ತಿದ್ದೆ. ಈಗ ಅದನ್ನು ಬಿಟ್ಟುಬಿಟ್ಟಿದ್ದೇನೆ. ನಾನು ಮತ್ತು ನೆಹರು ಒಟ್ಟಿಗೆ ಕೆಲಸ ಮಾಡಬೇಕು ಅನ್ನುವ ಗಾಂಧೀಜಿಯವರ ಕೊನೆಯ ಬಯಕೆಯ ದೃಷ್ಟಿಯಿಂದ. ನೇರ ಟೀಕೆ ಕೆಟ್ಟದ್ದಾಗಿ ಕಾಣುತ್ತದೆ. ಆದರೆ ಜವಹರ್ ದೇಶಕ್ಕೆ ಸರಿಪಡಿಸಲಾಗದಂತಹ ಕೆಡುಕನ್ನು ಮಾಡುತ್ತಿರುವುದು ಕಂಡುಬಂದರೆ ನಾನು ಮೌನವಾಗಿ ಇರಲಾರೆ," ಎಂದರು. "ಅಹಂಭಾವದ ಸರ್ವಾಧಿಕಾರಿ ಮನೋಭಾವದ ನೆಹರು ಅಧಿಕಾರಿಗಳ ಮುಂದೆ ನನ್ನನ್ನು ಅವಮಾನಿಸಿದ್ದಾರೆ" – ಎಂದೂ ಸಹ ರಾಜಾಜಿ ಮುಂದೆ ಅವರು ಆಪಾದಿಸಿದರು. ಆದರೆ ಎಲ್ಲಿ ಮತ್ತು ಯಾವಾಗ ಅನ್ನುವುದನ್ನು ಹೇಳಲಿಲ್ಲ.[೬೯]

ನವೆಂಬರ್ ೧೪, ನೆಹರುರವರ ಹುಟ್ಟು ಹಬ್ಬದ ದಿನ. ತಾವು ಬಹಳ ನಿಶ್ಶಕ್ತರಾಗಿದ್ದರೂ, ತೀರ ಅನಾರೋಗ್ಯದಲ್ಲಿದ್ದರೂ ಪಟೇಲರು ಕಷ್ಟ ಪಟ್ಟು ಸ್ವಹಸ್ತಾಕ್ಷರದಲ್ಲಿ ನೆಹರುಗೆ ಶುಭಾಶಯ ಪತ್ರವನ್ನು ಕಳುಹಿಸಿದರು. ನವೆಂಬರ್

೨೩ರಂದು ಪಟೇಲರನ್ನು ನೋಡಲು ನೆಹರು ಬಂದರು. ಅವರಿಗೆ ಪಟೇಲರು, "ನನಗೆ ಸ್ವಲ್ಪ ಶಕ್ತಿ ಬಂದ ಮೇಲೆ ಮತ್ತು ಆಯಾಸವನ್ನು ತಡೆದುಕೊಳ್ಳುವ ಶಕ್ತಿ ಬಂದ ಮೇಲೆ ನಾನು ನಿಮ್ಮೊಡನೆ ಪ್ರತ್ಯೇಕವಾಗಿ ಮಾತನಾಡಬೇಕು. ನೀವು ನನ್ನ ಮೇಲಿನ ನಂಬಿಕೆಯನ್ನು ಕಳೆದುಕೊಳ್ಳುತ್ತಿದ್ದೀರಿ ಎಂದು ನನಗೆ ಅನ್ನಿಸುತ್ತದೆ," ಎಂದು ಹೇಳಿದರು. ನೆಹರು ನಕ್ಕು, "ನಾನು ನನ್ನ ಮೇಲೇ ನಂಬಿಕೆಯನ್ನು ಕಳೆದುಕೊಳ್ಳುತ್ತಿದ್ದೇನೆ," ಎಂದು ಉತ್ತರಿಸಿದರು.

ಅದಕ್ಕೆ ಎರಡು ದಿನ ಮುಂಚೆ ಪಟೇಲರ ಹಾಸಿಗೆ ಮೇಲೆ ರಕ್ತದ ಕಲೆಗಳನ್ನು ಮಣಿಬೆನ್ ಕಂಡರು. ರಾತ್ರಿ ಮತ್ತು ಹಗಲಿಗೆ ಪ್ರತ್ಯೇಕವಾಗಿ ಇಬ್ಬರು ಶುಶ್ರೂಷಕರನ್ನು ನಿಯಮಿಸಲಾಯಿತು. ಪ್ರಸಾದ್, ರಾಜಾಜಿ, ನೆಹರು, ಆಜಾದ್ ಮತ್ತಿತರರು ಪಟೇಲರೊಡನೆ ಸಮಾಲೋಚನೆಗಾಗಿ ಆಗಾಗ್ಗೆ ಬರುತ್ತಿದ್ದರು. ಡಿಸೆಂಬರ್ ೬ನೆ ತಾರೀಖು ರಾಜೇಂದ್ರ ಪ್ರಸಾದ್‌ರವರು ಬಂದು ಪಟೇಲರ ಪಕ್ಕ ಹತ್ತು ನಿಮಿಷಗಳ ಕಾಲ ಕುಳಿತರು. ಆದರೆ ಪಟೇಲರು ಒಂದು ಮಾತೂ ಆಡಲಾಗಲಿಲ್ಲ. ಡಿಸೆಂಬರ್ ೮ರಂದು ಪಶ್ಚಿಮ ಬಂಗಾಳದ ಪ್ರಧಾನಮಂತ್ರಿ ಡಾ॥ ಬಿ.ಸಿ. ರಾಯ್‌ರವರು ಬಂದರು. ಅವರು ಒಬ್ಬ ಪ್ರಸಿದ್ಧ ವೈದ್ಯರೂ ಆಗಿದ್ದರು. ಪಟೇಲರು ಅವರನ್ನು, "ಬದುಕುವುದೊ ಅಥವಾ ಹೋಗುವುದೊ" ಎಂದು ಪ್ರಶ್ನಿಸಿದರು. "ಅದು ಹೋಗುವ ಕೇಸ್ ಆಗಿದ್ದರೆ ನಾನೇಕೆ ಬರುತ್ತಿದ್ದೆ?" ಮರು ಪ್ರಶ್ನೆ ಕೇಳಿದರು ರಾಯ್. ಮಾರನೆ ದಿನ ಪಟೇಲರು ಕೆಲವು ಭಕ್ತಿಗೀತೆಗಳ ಸಾಲನ್ನು ಆಗಾಗ್ಗೆ ಉಚ್ಚರಿಸುತ್ತಿದ್ದರು. ಕೇಶವ್‌ರವರ "ನನ್ನ ಜೀವ ನಿನ್ನ ಕೈಗಳಲ್ಲಿದೆ" ಸಾಲನ್ನು ಮತ್ತು ಕಬೀರರ "ವಿರಕ್ತಿಯ ಬಯಸುತಿದೆ ನನ್ನ ಹೃದಯ" ಅನ್ನುವ ಸಾಲನ್ನು ಉಚ್ಚರಿಸುತ್ತಿದ್ದರು. ಮಣಿಬೆನ್‌ಗೆ ಹೃದಯ ಒಡೆದು ಹೋಯಿತು, ಆದರೆ ಅವರು ಅದನ್ನು ಹೊರಗೆ ತೋರಿಸಿಕೊಳ್ಳಲಿಲ್ಲ. "ಮಂಗಳ ಮಂದಿರದ ಬಾಗಿಲ ತೆರೆ, ದಯಾಮಯ," ಅನ್ನುವುದನ್ನು ಅವರು ಉಚ್ಚರಿಸಿದಾಗ ಜಿ.ಡಿ. ಬಿರ್ಲಾ ಇದ್ದರು. ಮಣಿಬೆನ್ ಬಿರ್ಲಾರವರಿಗೆ, "ನಾನು ಹೆದರಿರುವ ದಿನ ಹತ್ತಿರ ಬರುತ್ತಿದೆ" ಎಂದರು. ಅವರ ಕಣ್ಣಿಂದ ಹನಿ ಉದುರಿತು.[೭೦]

ಪಟೇಲರನ್ನು ಬಹಳ ವರ್ಷಗಳಿಂದ ನೋಡಿಕೊಳ್ಳುತ್ತಿದ್ದ ಬೊಂಬಾಯಿಯ ಡಾ॥ ನಾಥುಭಾಯ್ ಪಟೇಲ್, ಡಾ॥ ಗಿಲ್ಡರ್ ಹಾಗೂ ದೆಹಲಿಯ ಡಾ॥ ಧಂಡ ಅವರನ್ನು ನೋಡಿಕೊಳ್ಳುವ ವೈದ್ಯರ ತಂಡದಲ್ಲಿದ್ದರು. ಡಿಸೆಂಬರ್ ೧೦ರಂದು ನಾಥುಭಾಯ್ ಸೂಜಿಮದ್ದು ಕೊಡಲು ಬಂದಾಗ ಪಟೇಲರು, "ನನಗೆ ಆ ಸೂಜಿಮದ್ದು ಕೊಡಬೇಡಿ. ಅದು ನನ್ನ ಹೊಟ್ಟೆ ನೋವನ್ನು ಹೆಚ್ಚು ಮಾಡುತ್ತದೆ,"

ಎಂದರು. ಡಾ॥ ನಾಥುಭಾಯ್‌ರವರು ಪಟೇಲರಿಗೆ ಬಾಣಗಳ ಹಾಸಿಗೆ ಮೇಲೆ ಮಲಗಿದ್ದ ಭೀಷ್ಮನ ದೃಢ ಮನಸ್ಸನ್ನು ನೆನಪಿಸಿದರು.

ದೆಹಲಿಯ ಹವಾಗುಣಕ್ಕಿಂತ ಬೊಂಬಾಯಿಯ ಹವಾಗುಣ ಪಟೇಲರಿಗೆ, ಉತ್ತಮವೆಂದು ವೈದ್ಯರು ಅವರನ್ನು ಬೊಂಬಾಯಿಗೆ ೧೨ರಂದು ಸ್ಥಳಾಂತರಿಸಲು ತೀರ್ಮಾನಿಸಿದರು. ಡಿಸೆಂಬರ್ ೧೧ರಂದು ಬೆಳಗ್ಗೆ ತಮ್ಮನ್ನು ನೋಡಲು ಬಂದ ಆಪ್ತ ಸ್ನೇಹಿತ ಮತ್ತು ಮಂತ್ರಿ ಎನ್.ವಿ. ಗಾಡ್ಗಿಲ್ ಅವರಿಗೆ ಪಟೇಲರು, 'ನಾನು ಬದುಕುವುದಿಲ್ಲ. ನನಗೊಂದು ವಚನ ಕೊಡು' ಎಂದರು. ಗಾಡ್ಗಿಲ್ 'ಆಗಲಿ' ಎಂದಾಗ ಸರ್ದಾರರು ಅವರ ಕೈಯನ್ನು ತಮ್ಮ ಕೈಯಲ್ಲಿ ಇಟ್ಟು ಹೇಳಿದರು, "ಪಂಡಿತ್‌ಜಿ ಜೊತೆ ನಿನ್ನ ಭಿನ್ನಾಭಿಪ್ರಾಯ ಏನೇ ಇರಲಿ ಅವರ ಕೈ ಬಿಡಬೇಡ' ಎಂದರು.[೭೧]ಎಂತಹ ಹೃದಯ ವೈಶಾಲ್ಯತೆ ! ಅಂದು ರಾತ್ರಿ ಅವರನ್ನು ನೋಡಲು ನೆಹರು ಬಂದರು. ಅವರು ಪಟೇಲರಿಗೆ, "ಇಲ್ಲಿ ನೋಡಿ, ನಾವು ಮನ ಬಿಚ್ಚಿ ಮಾತನಾಡಬೇಕಾಗಿದೆ. ಆದರೆ ನೀವು ಚಿಂತಿಸಬೇಡಿ. ನೀವು ನಿಮ್ಮ ಬಗೆಗೆ ಎಚ್ಚರಿಕೆ ವಹಿಸಬೇಕು ಮತ್ತು ಜಾಗ್ರತೆಯಿಂದ ಗುಣಮುಖರಾಗಬೇಕು," ಎಂದರು.

ಡಿಸೆಂಬರ್ ೧೨ನೆ ತಾರೀಖು ಬೆಳಗ್ಗೆ ಒಂದು ಪಿಎಎಫ್ ಡಕೋಟ ವಿಮಾನದಲ್ಲಿ ದೆಹಲಿಯ ವಿಲ್ಲಿಂಗ್‌ಡನ್ ವಿಮಾನ ನಿಲ್ದಾಣದಿಂದ ಪಟೇಲರು ಪ್ರಯಾಣ ಮಾಡಿದರು. ಅವರನ್ನು ಬೀಳ್ಕೊಡಲು ವಿಮಾನ ನಿಲ್ದಾಣಕ್ಕೆ ರಾಜೇಂದ್ರ ಪ್ರಸಾದ್, ನೆಹರು, ರಾಜಾಜಿ, ಗಾಡ್ಗಿಲ್, ಘನಶ್ಯಾಂದಾಸ್ ಬಿರ್ಲಾ ಮತ್ತು ವಿ.ಪಿ. ಮೆನನ್ ಬಂದಿದ್ದರು. ಪಟೇಲರನ್ನು ಕುರ್ಚಿಯಲ್ಲಿ ಕೂರಿಸಿ ವಿಮಾನದ ಒಳಕ್ಕೆ ಕರೆತರಲಾಯಿತು. ವಿಮಾನದ ಬಾಗಿಲಿನಿಂದ ಅವರು ಎಲ್ಲರಿಗೂ ನಮಸ್ಕಾರ ಸಲ್ಲಿಸಿ ಒಳಗೆ ಹೋದರು. ಮಣಿಬೆನ್ ಮತ್ತು ಬೊಂಬಾಯಿಯ ಇಬ್ಬರು ವೈದ್ಯರು ಅವರೊಡನೆ ಇದ್ದರು. ವಿಮಾನ ನೈಋತ್ಯ ದಿಕ್ಕಿಗೆ ಹಾರಿತು.

ಬೊಂಬಾಯಿಯಲ್ಲಿ ಅವರನ್ನು ಸ್ವಾಗತಿಸಲು ಪ್ರಧಾನಮಂತ್ರಿ ಖೇರ್, ಮಂತ್ರಿ ಮೊರಾರ್ಜಿ ದೇಸಾಯಿ ಮತ್ತಿತರರು ಜುಹು ಏರ್‌ಫೀಲ್ಡ್‌ಗೆ ಬಂದಿದ್ದರು. ಆದರೆ ಪಟೇಲರು ಒಂದು ಮಾತನ್ನೂ ಆಡುವ ಸ್ಥಿತಿಯಲ್ಲಿರಲಿಲ್ಲ. ನಾಲ್ಕುವರೆ ಘಂಟೆಗಳ ಕಾಲದ ಪ್ರಯಾಣ ಅವರನ್ನು ಅತಿ ಆಯಾಸಗೊಳಿಸಿತ್ತು. ರಾಜಭವನದ ಒಂದು ಕಾರಿನಲ್ಲಿ ಅವರನ್ನು ಮಲಬಾರ್ ಹಿಲ್‌ನಲ್ಲಿದ್ದ 'ಬಿರ್ಲಾ ಹೌಸ್'ಗೆ ಕರೆದೊಯ್ಯ ಲಾಯಿತು. ಅಲ್ಲಿ ಅವರಿಗೆ ಆಮ್ಲಜನಕವನ್ನು ನೀಡಲಾಯಿತು ಮತ್ತು ವೈದ್ಯೋಪಚಾರವನ್ನು ಮುಂದುವರೆಸಲಾಯಿತು. ಆದರೆ ಅವರ ಸ್ಥಿತಿ ಉತ್ತಮವಾಗಲಿಲ್ಲ. ಅವರು ನೋವಿನಿಂದ ಮತ್ತು ಸಂಕಟದಿಂದ ನರಳುವುದು

ಮತ್ತು ಹೊರಳುವುದು ಮುಂದುವರೆಯಿತು. ಅವರ ಸಂಕಟವನ್ನು ನೋಡಲಾರದೆ ಮಣಿಬೆನ್ ದೇವರನ್ನು, "ಅವರನ್ನು ಗುಣ ಪಡಿಸು, ಅದು ಸಾಧ್ಯವಿಲ್ಲದಿದ್ದರೆ ದಯವಿಟ್ಟು ಕರೆದುಕೊ" ಎಂದು ಪ್ರಾರ್ಥಿಸಿದರು. ಹೀಗೆಯೆ ಮೂರು ದಿನ ಕಳೆಯಿತು. ೧೫ನೆ ತಾರೀಖು ಶುಕ್ರವಾರ ಬೆಳಗಿನ ಜಾವ ೨ ಘಂಟೆ ಸಮಯದಲ್ಲಿ ಅವರಿಗೆ ಹೃದಯಾಘಾತವಾಗಿ ಪ್ರಜ್ಞೆ ತಪ್ಪಿತು. ನಾಲ್ಕು ಘಂಟೆಗಳ ನಂತರ ಪ್ರಜ್ಞೆ ಬಂದು ನೀರು ಕೇಳಿದರು. ಮಣಿಬೆನ್ ಗಂಗಾಜಲಕ್ಕೆ ಜೇನು ಬೆರೆಸಿ ಚಮಚದಲ್ಲಿ ಕುಡಿಸಿದರು. "ಇದು ಸಿಹಿಯಾಗಿದೆ" ಅಂದರು ಪಟೇಲರು. ಅದೇ ಅವರ ಕೊನೆಯ ಮಾತು. ಆನಂತರ ಮತ್ತೆ ಪ್ರಜ್ಞೆ ತಪ್ಪಿತು. ಬೆಳಗ್ಗೆ ೯.೩೭ಕ್ಕೆ ಅವರ ಪ್ರಾಣಪಕ್ಷಿ ಹಾರಿಹೋಯಿತು. ದೇಶಕ್ಕಾಗಿ ಸತತ ದುಡಿದು ಬಳಲಿದ ಜನನಾಯಕನು ಚಿರ ನಿದ್ರೆಗೆ ಜಾರಿದನು. ಮಣಿ ಬೆನ್, ದಹ್ಯಾಭಾಯ್, ಭಾನುಮತಿ, ಬಿಪಿನ್, ಶಂಕರ್, ರಾಮೇಶ್ವರದಾಸ್ ಬಿರ್ಲಾ ಮತ್ತು ಬಿರ್ಲಾ ಕುಟುಂಬದ ಇತರ ಸದಸ್ಯರು ಪಕ್ಕದಲ್ಲೇ ಇದ್ದರು.

ಸರ್ದಾರರ ಸಾವಿನ ಸುದ್ದಿ ತಿಳಿಯುತ್ತಿದ್ದಂತೆ ಇಡೀ ದೇಶ ದಿಗ್ಭ್ರಮೆಗೊಂಡಿತು. ವಿಷಣ್ಣ ಭಾವ ಎಲ್ಲೆಡೆ ಆವರಿಸಿತು. ರೈತರ ಮತ್ತು ರಾಜರ, ಬಡವರ ಮತ್ತು ಶ್ರೀಮಂತರ ಬಂಧು ಈ ಜಗತ್ತಿನಿಂದ ನಿರ್ಗಮಿಸಿದ್ದರು. ಬೊಂಬಾಯಿಯಲ್ಲಿ ಎಲ್ಲಾ ವಾಣಿಜ್ಯ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು ಸ್ತಬ್ಧವಾದುವು. ಜನಸಾಗರ ಬಿರ್ಲಾ ಸದನದ ಕಡೆಗೆ ಧಾವಿಸಿತು.

ದೆಹಲಿಯಿಂದ ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದ್, ಪ್ರಧಾನಿ ನೆಹರು, ಜಿ.ಡಿ. ಬಿರ್ಲಾ, ಕೇಂದ್ರ ಮಂತ್ರಿಗಳು ಬೊಂಬಾಯಿಗೆ ಧಾವಿಸಿದರು. 'ರಾಷ್ಟ್ರಾಧ್ಯಕ್ಷರಾಗಿ ನೀವು ದೆಹಲಿಯಲ್ಲಿ ಇರಬೇಕು' ಎಂದು ನೆಹರು ಸಲಹೆ ನೀಡಿದ್ದರೂ ರಾಜೇಂದ್ರ ಪ್ರಸಾದರು ಬಂದರು.[೭೨] ಹೊರಡುವುದಕ್ಕೆ ಮುನ್ನ ಪ್ರಧಾನಿಯವರು ಪಾರ್ಲಿಮೆಂಟಿನಲ್ಲಿ ಸುದ್ಧಿಯನ್ನು ಪ್ರಕಟಿಸಿ ಮನ ಮಿಡಿಯುವ ಮಾತುಗಳಲ್ಲಿ ಪಟೇಲರ ಗುಣಗಾನ ಮಾಡಿದರು. ಅವರೆಂದರು:

> ಇಂದು ಬೆಳಗ್ಗೆ ಅವರಿಗೆ ಮತ್ತೆ ಹೃದಯಾಘಾತವಾಯಿತು ಮತ್ತು ಅವರ ಮಹಾನ್ ಜೀವನದ ಕಥೆ ಅಂತ್ಯಗೊಂಡಿತು. ನಿಮಗೆಲ್ಲ ತಿಳಿದಿರುವ ಹಾಗೆ, ಇಡೀ ದೇಶಕ್ಕೇ ತಿಳಿದಿರುವ ಹಾಗೆ, ಅದೊಂದು ಮಹಾನ್ ಕಥೆ. ಅದನ್ನು ಇತಿಹಾಸವು ಅನೇಕ ಪುಟಗಳಲ್ಲಿ ದಾಖಲಿಸುತ್ತದೆ ಮತ್ತು ಅವರನ್ನು ನವಭಾರತ ನಿರ್ಮಾಪಕ ಮತ್ತು ಏಕೀಕರಣ ಸಾಧಕ ಎಂದು ಕರೆಯುತ್ತದೆ.

ಅವರ ಬಗೆಗೆ ಅನೇಕ ಮಾತುಗಳನ್ನು ಆಡುತ್ತದೆ. ಆದರೆ, ನಮ್ಮಲ್ಲಿ ಅನೇಕರಿಗೆ ಸ್ವಾತಂತ್ರ್ಯ ಸೈನ್ಯದ ಮಹಾ ದಂಡನಾಯಕನಾಗಿ ಮತ್ತು ತೊಂದರೆಗಳ ಕಾಲದಲ್ಲಿ ಹಾಗೂ ವಿಜಯದ ಕ್ಷಣದಲ್ಲಿ ಒಬ್ಬ ಸ್ನೇಹಿತನಾಗಿ ಮತ್ತು ಸಹೋದ್ಯೋಗಿಯಾಗಿ ನಮಗೆ ಯೋಗ್ಯ ಬುದ್ಧಿವಾದ ನೀಡಿದವರಾಗಿ, ನಾವು ತೊಂದರೆಯಲ್ಲಿದ್ದಾಗ ಡೋಲಾಯಮಾನ ಹೃದಯಗಳನ್ನು ಪುನಶ್ಚೇತನ ಗೊಳಿಸುವ ಶಕ್ತಿಸ್ತಂಭವಾಗಿ ನೆನಪಿನಲ್ಲಿ ಉಳಿಯುತ್ತಾರೆ. ಎಲ್ಲಕ್ಕಿಂತಲೂ ಹೆಚ್ಚಾಗಿ, ನಾವು ಅವರನ್ನು ಸ್ನೇಹಿತನಾಗಿ, ಸಹೋದ್ಯೋಗಿಯಾಗಿ ಮತ್ತು ನೆಚ್ಚಿನ ಸಂಗಾತಿಯಾಗಿ ನೆನೆಯುತ್ತೇವೆ. ಇಲ್ಲಿ ಈ ಬೆಂಚಿನ ಮೇಲೆ ಅಕ್ಕ ಪಕ್ಕ ಅನೇಕ ವರ್ಷಗಳ ಕಾಲ ಅವರೊಡನೆ ಕುಳಿತ ನಾನು ಹತಾಶಭಾವವನ್ನು ಅನುಭವಿಸುತ್ತಿದ್ದೇನೆ. ಈ ಖಾಲಿ ಆಸನವನ್ನು ನೋಡಿದಾಗ ನನ್ನಲ್ಲೂ ಶೂನ್ಯ ಭಾವ ನುಸುಳುತ್ತದೆ.

ನಮ್ಮ ಮೇಲೆ ಅನೇಕ ಅನಾಹುತಗಳು ಎರಗಿ ನಮ್ಮ ಜನರಿಗೆ ಬೇಗುದಿಯನ್ನು ತಂದಿವೆ ಆದರೆ, ವ್ಯಕ್ತಿಗಳ ಪೈಕಿ ಉನ್ನತೋನ್ನತವಾದ ವ್ಯಕ್ತಿ ನಮ್ಮನ್ನಗಲಿದ್ದು ಆ ಅನಾಹುತಗಳ ಮತ್ತು ಸಂಕಟಗಳ ಪೈಕಿ ಬಹಳ ದೊಡ್ಡದು. ಸರ್ದಾರ್ ವಲ್ಲಭಭಾಯ್ ಪಟೇಲರು ಸ್ವಾತಂತ್ರ್ಯ ಹೋರಾಟದ ಶೌರ್ಯದ ದಿನಗಳಲ್ಲಿ ಒಬ್ಬ ಪ್ರೀತಿಯು ಮತ್ತು ಪೌಲ್ಯಯುತ ಸಂಗಾತಿಯಾಗಿದ್ದರು. ಅವರು ಬುದ್ಧಿವಂತಿಕೆಯ ಮತ್ತು ದೃಢ ಮನದ ಬಂಡೆಯಾಗಿದ್ದರು. ನಾವೆಲ್ಲರು ಮಾರ್ಗದರ್ಶನಕ್ಕಾಗಿ ಸಹಜ ಪ್ರೇರಣೆಯಿಂದ ಹೋಗುತ್ತಿದ್ದ ಸಹನಾಶಕ್ತಿಯು ಬಂಡೆಯಾಗಿದ್ದರು. ಆನಂತರ ನಾವು ಸರ್ಕಾರದ ಆಸನಗಳನ್ನು ಅಲಂಕರಿಸಿದಾಗ ಅನಿವಾರ್ಯವಾಗಿ ಭಾರಿ ಜವಾಬ್ದಾರಿಗಳ ಪೈಕಿ ಕೆಲವು ಅವರ ಮೇಲೆ ಬಿದ್ದುವು. ಆ ಕರ್ತವ್ಯವನ್ನು ಅವರು ಹೇಗೆ ನಿಭಾಯಿಸಿದರೆಂಬುದನ್ನು ಇತಿಹಾಸವು ದಾಖಲಿಸುತ್ತದೆ.

ತಮ್ಮ ಭಾಷಣವನ್ನು ಮುಕ್ತಾಯ ಮಾಡುತ್ತಾ ನೆಹರು ನುಡಿದರು:

ಸ್ವಾತಂತ್ರ್ಯ ಸಮರದ ಮಹಾನಾಯಕನಾಗಿ ಅಲ್ಲದೆ, ನವ ಭಾರತ ನಿರ್ಮಾಪಕರಾಗಿ, ಏಕೀಕರಣದ ಕರ್ತರಾಗಿ ಮತ್ತು ಒಗ್ಗೂಡಿಸಿದವರಾಗಿ ಅವರ ಹೆಸರು ಶಾಶ್ವತವಾಗಿ ನೆನೆಯಲ್ಪಡುತ್ತದೆ.

ಅದಕ್ಕೆ ಅವರು ಸಂಪೂರ್ಣವಾಗಿ ಅರ್ಹರಾಗಿದ್ದರು ಮತ್ತು ಅದು ಅವರ ಹೆಮ್ಮೆಯ ಹಕ್ಕು.[೭೩]

ಪ್ರಧಾನಿ ಭಾಷಣದ ನಂತರ ಪಾರ್ಲಿಮೆಂಟು ಪಟೇಲರ ಗೌರವಾರ್ಥ ತನ್ನ ಅಂದಿನ ಕಲಾಪವನ್ನು ಮಾರನೆಗೆ ಮುಂದೂಡಿತು.

ಬೊಂಬಾಯಿಗೆ ಸಿ. ರಾಜಗೋಪಾಲಾಚಾರಿ, ಎನ್.ವಿ. ಗಾಡ್ಗಿಲ್, ಕೆ.ಎಂ. ಮುನ್ಷಿ, ಪುರುಷೋತ್ತಮದಾಸ್ ಟಂಡನ್, ಗೌರ್ನರರು, ಮುಖ್ಯಮಂತ್ರಿಗಳು, ಭೂ, ವಾಯು ಮತ್ತು ನೌಕಾದಳದ ದಂಡನಾಯಕರು ಸರ್ದಾರ್ ಪಟೇಲರಿಗೆ ಅಂತಿಮ ಗೌರವವನ್ನು ಸಲ್ಲಿಸಲು ಬಂದರು.[೭೪]

೨೮.೨ ಅಂತ್ಯ ಸಂಸ್ಕಾರ

ಮಗ ದಹ್ಯಾಭಾಯ್ ಪಟೇಲರ ಕಳೇಬರಕ್ಕೆ ಸ್ನಾನ ಮಾಡಿಸಿ, ಧೋತಿ, ಕುರ್ತಾ ಮತ್ತು ವೈಸ್ಟ್ ಕೋಟು ತೊಡಿಸಿ, ಹಾಸಿಗೆಯ ಮೇಲೆ ಮಲಗಿಸಿದರು. ೧೯೪೦ರಲ್ಲಿ ವಲ್ಲಭಭಾಯ್‌ರವರು ಚರಕದಲ್ಲಿ ತೆಗೆದ ನೂಲಿನಿಂದ ತಯಾರಾದ ಖಾದಿ ಬಟ್ಟೆಯನ್ನು ಸರ್ದಾರರಿಗೆ ಹೊದೆಸಿದರು. ಅದನ್ನು ಮಣಿಬೆನ್ ಪಟೇಲರಿಗೆ ಕುರ್ತಾ ಹೊಲಿಸಲೆಂದು ಬೊಂಬಾಯಿಗೆ ತಂದಿದ್ದರು.

ಮಧ್ಯಾಹ್ನ ಒಂದು ಘಂಟೆಗೆ ವರಾಂಡದಲ್ಲಿ ಪುಷ್ಪಾಲಂಕೃತವಾದ ವೇದಿಕೆಯ ಮೇಲೆ ಪಟೇಲರನ್ನು ಮಲಗಿಸಲಾಯಿತು. ಮಣಿಬೆನ್ ತಮ್ಮ ತಂದೆಯ ಹಣೆಗೆ ಕುಂಕುಮವಿಟ್ಟು ತಾವೇ ಚರಕದಲ್ಲಿ ನೂಲಿದ್ದ ನೂಲಿನ ಹಾರವನ್ನು ಹಾಕಿ ತಮ್ಮ ಅಂತಿಮ ಗೌರವವನ್ನು ಅರ್ಪಿಸಿದರು. ಸರ್ದಾರರ ಮುಖದಲ್ಲಿ ಪ್ರಶಾಂತತೆ ತಾಂಡವವಾಡುತ್ತಿತ್ತು. ಎರಡು ತುಟಿಗಳ ನಡುವೆ ಇದ್ದ ಹಸಿರು ತುಳಸಿ ದಳ ಮಾತ್ರ ಅವರ ಸಾವನ್ನು ಸೂಚಿಸುತ್ತಿತ್ತು. ಅವರ ಪಕ್ಕದಲ್ಲಿ ಹೊಸ ಹೂವುಗಳು ಮತ್ತು ತೆರೆದ ಭಗವದ್ಗೀತೆ ಇದ್ದುವು.

ನಂತರ ಬಿರ್ಲಾ ಹೌಸ್‌ನ ಬಾಗಿಲುಗಳನ್ನು ತೆರೆಯಲಾಯಿತು. ಜನ ಒಳಗೆ ಪ್ರವೇಶಿಸಿ ತಮ್ಮ ಗೌರವ ಅರ್ಪಿಸಲಾರಂಭಿಸಿದರು.[೭೫]

ದಹನ ಸಂಸ್ಕಾರವನ್ನು ಚೌಪಾತಿಯಲ್ಲಿ ನೆರವೇರಿಸುವ ಸಲಹೆ ಬಂದಿತು. ಆದರೆ ಮಣಿಬೆನ್‌ರವರು, ತಮ್ಮ ತಂದೆಯ ಬಯಕೆ ಸಾಮಾನ್ಯ ವ್ಯಕ್ತಿಯಂತೆ ತಮ್ಮ ಹೆಂಡತಿ ಮತ್ತು ಅಣ್ಣ ವಿಠ್ಠಲ್‌ಭಾಯ್ ರವರ ದಹನ ಆಗಿರುವ ಸ್ಥಳದಲ್ಲಿ ತಮ್ಮ ದಹನವೂ ಆಗಬೇಕು, ಎನ್ನುವುದಾಗಿತ್ತು ಎಂದು ತಿಳಿಸಿದರು. ಅದರಿಂದ

ಕ್ವೀನ್ಸ್ ರಸ್ತೆಯಲ್ಲಿರುವ ಸಾರ್ವಜನಿಕ ಸ್ಮಶಾನದಲ್ಲಿ ಅಂತ್ಯಕ್ರಿಯೆ ನಡೆಸಬೇಕೆಂದು ತೀರ್ಮಾನಿಸಲಾಯಿತು.

ಬೊಂಬಾಯಿಯ ಪ್ರಮುಖ ರಸ್ತೆಗಳಲ್ಲಿ ಪಟೇಲರ ಶವಯಾತ್ರೆ ಸಾಗಿದಾಗ ಲಕ್ಷಾಂತರ ಮಂದಿ ತಮ್ಮ ಪ್ರೀತಿಯ ನಾಯಕನ ಅಂತಿಮ ದರ್ಶನ ಪಡೆಯಲು ರಸ್ತೆಗಳ ಇಕ್ಕೆಲಗಳಲ್ಲಿ ನೆರೆದು ಕಣ್ಣೀರು ಸುರಿಸಿದರು. ದಹನಕ್ರಿಯೆ ಸ್ಥಳದಲ್ಲೂ ಅಧಿಕ ಸಂಖ್ಯೆಯ ಜನ ನೆರೆದಿದ್ದರು.

ದಹನಕ್ರಿಯೆ ಸಮಯದಲ್ಲಿ ನೆಹರು, ರಾಜಾಜಿ ಮತ್ತು ಪ್ರಸಾದ್ ಬಿಕ್ಕಿ ಬಿಕ್ಕಿ ಅಳುತ್ತಿದ್ದರು. ಶೋಕಾಧಿಕ್ಯದಿಂದ ಕುಸಿದಿದ್ದ ನೆಹರು ಮಾತನಾಡಲಾಗಲಿಲ್ಲ. ಸಿ. ರಾಜಗೋಪಾಲಾಚಾರಿ ಮತ್ತು ಪ್ರಸಾದ್ ಮಾತನಾಡಿದರು. ರಾಜಗೋಪಾಲಾಚಾರಿಯವರು ಆಡಿದ ಮಾತು:

> ೩೨ ವರ್ಷಗಳ ಹಿಂದೆ ಮದ್ರಾಸ್‌ನಲ್ಲಿ ಗಾಂಧೀಜಿ ನನ್ನೊಡನೆ ಇದ್ದಾಗ, ಒಂದು ಬೆಳಗ್ಗೆ "ನೀವು ವಲ್ಲಭಭಾಯ್‌ನನ್ನು ಭೇಟಿ ಮಾಡಿದ್ದೀರ? ನಾನು ಅವರಲ್ಲಿ ಅತ್ಯಂತ ನಂಬಿಕಸ್ಥ, ಅಚಲ ಮತ್ತು ಧೈರ್ಯಶಾಲಿಯನ್ನು ಕಂಡಿದ್ದೇನೆ. ನೀವು ಅವರನ್ನು ಭೇಟಿ ಮಾಡಬೇಕು," ಎಂದರು. ಸ್ವಲ್ಪ ಕಾಲಾನಂತರ ನಾನು ಅವರನ್ನು ಭೇಟಿ ಮಾಡಿದೆ. .....ಇಂದು ಬೆಳಗ್ಗೆ ನಮ್ಮಿಂದ ಹೊರಟುಹೋದ ವಲ್ಲಭಭಾಯ್ ಏನು ವ್ಯಕ್ತಿ ..... ಏನು ಸ್ಫೂರ್ತಿ, ಧೈರ್ಯ, ವಿಶ್ವಾಸ ಮತ್ತು ಶಕ್ತಿಯ ಮೂರ್ತ ಸ್ವರೂಪರಾಗಿದ್ದರವರು.... ಅಂತಹವರನ್ನು ನಾವು ಮತ್ತೆ ಕಾಣುವುದಿಲ್ಲ.[೨೬]

> ರಾಜೇಂದ್ರ ಪ್ರಸಾದ್‌ರವರು, "ಸರ್ದಾರರ ಶರೀರ ಬೆಂಕಿಯಿಂದ ದಹಿಸಲ್ಪಡುತ್ತಿದೆ. ಆದರೆ ಅವರ ಖ್ಯಾತಿಯನ್ನು ಯಾವ ಬೆಂಕಿಯೂ ದಹಿಸಲಾರದು. ನಾವು ನಮಗಾಗಿ ದುಃಖ ಪಡುತ್ತೇವೆ, ಅವರಿಗಾಗಿ ಅಲ್ಲ" ಎಂದರು.[೨೭]

ನಂತರ ದಹ್ಯಾಭಾಯ್ ಪಟೇಲರ ಕಳೇಬರಕ್ಕೆ ಅಗ್ನಿಸ್ಪರ್ಷ ಮಾಡಿದರು. ಜ್ವಾಲೆ ಮೇಲೇರಿದಂತೆ ನೆರೆದ ಜನ ಕಣ್ಣೀರ ಹೊಳೆ ಹರಿಸಿದರು.

ನಿಜ ಸೂರ್ಯನ ಜೊತೆ ಭಾರತದ ಸೂರ್ಯನೂ ಮರೆಯಾದನು.



೨೯. ಗೌರವಾರ್ಪಣೆ ಮತ್ತು ಸ್ಮಾರಕ

೨೯.೧ ಗಣ್ಯರ ನುಡಿ

ಸರ್ದಾರರ ನಿಧನಕ್ಕೆ ಸಂತಾಪ ಸೂಚಕ ಸಂದೇಶಗಳು ಮತ್ತು ಸರ್ದಾರರಿಗೆ ಗೌರವ ಸೂಚಕಗಳು ಭಾರತದ ಒಳಗೆ ಮತ್ತು ಹೊರಗೆ ವ್ಯಕ್ತವಾದುವು.

ವಿಶ್ವಸಂಸ್ಥೆಯ ಮಹಾ ಕಾರ್ಯದರ್ಶಿ (ನಾರ್ವೆಯ) ಟ್ರಿಗ್ವಿ ಲೈರವರು, 'ಇಂಡಿಯಾ ಒಬ್ಬ ಮಹಾನ್ ನಾಯಕನನ್ನು ಮತ್ತು ವಿಶ್ವ ಸಂಸ್ಥೆ ಒಬ್ಬ ಬಲಶಾಲಿ ಸ್ನೇಹಿತನನ್ನು ಕಳೆದುಕೊಂಡಿದೆ,' ಎಂದರು. ಲಾರ್ಡ್ ಮೌಂಟ್‌ಬ್ಯಾಟನ್, "ಅವರ ಆತ್ಮ ಇಂಡಿಯಾದಲ್ಲಿ ಶಾಶ್ವತವಾಗಿ ಇರುತ್ತದೆ. ೧೯೪೭ ಮತ್ತು ೧೯೪೮ರಲ್ಲಿ ರಾಜ್ಯಗಳ ಸಚಿವಾಲಯದ ಉಸ್ತುವಾರಿಯಾಗಿ ಅವರ ಕೆಲಸ ಇತಿಹಾಸದಲ್ಲಿ ಚಿರಸ್ಮರಣೀಯ, ಏಕೆಂದರೆ ಯಾವುದೇ ಮುತ್ಸದ್ದಿಯು ಎದುರಿಸದೇ ಇದ್ದಂತಹ ಮತ್ತು ಅತ್ಯಂತ ಕಷ್ಟಕರವಾದ ಸಮಸ್ಯೆಯನ್ನು ಇಂಡಿಯಾದ ರಾಜರುಗಳ ಬಗೆಗೆ ಅತ್ಯುನ್ನತ ಸದ್ಭಾವನೆ ಮತ್ತು ಗೌರವದಿಂದ ಅವರು ನಿಭಾಯಿಸಿದರು," ಎಂದರು.

'ಲಂಡನ್ ಟೈಮ್ಸ್' ಪತ್ರಿಕೆಯು, "ಭಾರತದ ರಾಜ್ಯಗಳನ್ನು ಒಂದುಗೂಡಿಸಿದ ಅವರ ಸಾಧನೆಯು ಬಿಸ್ಮಾರ್ಕ್‌ನ ಸಾಧನೆಗೆ ಸಮ ಅಥವಾ ಅದಕ್ಕಿಂತಲೂ ಹೆಚ್ಚು" ಎಂದು ಬರೆಯಿತು.

'ದಿ ಮ್ಯಾಂಚೆಸ್ಟರ್ ಗಾರ್ಡಿಯನ್' ಪತ್ರಿಕೆಯು ಬರೆದದ್ದು ಹೀಗೆ:

ಪಟೇಲ್ ಇಲ್ಲದೆಇದ್ದಿದ್ದರೆ, ಗಾಂಧೀಜಿಯ ತತ್ವ ಕಡಿಮೆ

ಕಾರ್ಯಶೀಲ ಪ್ರಭಾವವನ್ನು ಪಡೆಯುತ್ತಿತ್ತು ಮತ್ತು ನೆಹರುರವರ ಆದರ್ಶ ಕಡಿಮೆ ವ್ಯಾಪ್ತಿಯನ್ನು ಪಡೆಯುತ್ತಿತ್ತು. ಪಟೇಲರು ಸ್ವಾತಂತ್ರ್ಯ ಹೋರಾಟದ ಸಂಘಟಕರಷ್ಟೇ ಅಲ್ಲ, ಹೋರಾಟ ಮುಗಿದ ಮೇಲೆ ನವ ರಾಷ್ಟ್ರದ ಶಿಲ್ಪಿ. ಒಬ್ಬನೇ ವ್ಯಕ್ತಿ ಯಶಸ್ವಿ ಬಂಡಾಯಗಾರ ಮತ್ತು ರಾಜನೀತಿಜ್ಞ ಆಗಿರುವುದು ವಿರಳ. ಸರದಾರ್ ಪಟೇಲ್ ಒಂದು ಅಪವಾದವಾಗಿದ್ದರು.[೭೮]

ಬೊಂಬಾಯಿಯ ಗೌರ್ನರ್ ರಾಜ ಸರ್ ಮಹರಾಜ್ ಸಿಂಗ್ ನುಡಿದದ್ದು ಹೀಗೆ: ಅಗಲಿದ ನಮ್ಮ ನಾಯಕ ಮತ್ತು ಸ್ನೇಹಿತ ನಿಜವಾಗಿಯೂ ಒಬ್ಬ ದೈತ್ಯ.

ಮೌಲಾನಾ ಆಜಾದ್‌ರವರು, 'ಪಟೇಲರ ಶೌರ್ಯ ಪರ್ವತಗಳೆಷ್ಟು ಎತ್ತರವೋ ಅಷ್ಟು ಎತ್ತರ, ಅವರ ದೃಢತೆ, ಉಕ್ಕು ಎಷ್ಟು ಗಟ್ಟಿಯೊ ಅಷ್ಟು ಗಟ್ಟಿ' ಎಂದರು.

ಲಂಡನ್‌ನ 'ದಿ ಟೈಮ್ಸ್' ಪತ್ರಿಕೆ ತನ್ನ ಸಂಪಾದಕೀಯದಲ್ಲಿ ಹೀಗೆ ಬರೆಯಿತು:

ತನ್ನ ದೇಶದ ಹೊರಗೆ ಅಷ್ಟಾಗಿ ಗೊತ್ತಿಲ್ಲದ 'ಸರ್‌ದಾರ್‌ಜಿ' ಗಾಂಧೀಜಿ ಮತ್ತು ನೆಹರು ಸಾಧಿಸಿದ ಅಂತರರಾಷ್ಟ್ರೀಯ ಖ್ಯಾತಿಯನ್ನು ಬಯಸಲೂ ಇಲ್ಲ, ಪಡೆಯಲೂ ಇಲ್ಲ. ಆದಾಗ್ಯೂ ಇಂದಿನ ಭಾರತವನ್ನು ರೂಪಿಸಿದ ತ್ರಿಮೂರ್ತಿಗಳಲ್ಲಿ ಒಬ್ಬರಾಗಿದ್ದರು. ರಾಷ್ಟ್ರೀಯ ಹೋರಾಟದ ಯಶಸ್ಸಿಗೆ ಅವರ (ಪಟೇಲರ) ಕೆಲಸ ಅವರದಕ್ಕಿಂತ (ಗಾಂಧಿ ಮತ್ತು ನೆಹರುದಕ್ಕಿಂತ) ಕಡಿಮೆ ಅನಿವಾರ್ಯವಾದದ್ದಾಗಿರಲಿಲ್ಲ. ಅವರು ಹೆಚ್ಚು ಕಾಲ ಸಮಿತಿಯ ಕೊಠಡಿಯಲ್ಲಿ ದೃಶ್ಯಗಳ ಹಿಂದಿದ್ದರು, ವೇದಿಕೆಯ ಮೇಲಿರಲಿಲ್ಲ. ಅವರು ಮೊದಲು ಕಾಂಗ್ರೆಸ್ ಪಕ್ಷವನ್ನು ರಾಜಕೀಯ ಶಕ್ತಿಯ ಶಿಸ್ತಿನ ಯಂತ್ರವಾಗಿ ರೂಪಿಸಿದರು. ಅಸಂತರ ತಮ್ಮ ಸಹಚರರು ಭಾರತದ ಜನರು ಬಯಸುವಂತೆ ಗುರಿಯ ಕಡೆಗೆ ಅದನ್ನು (ಕಾಂಗ್ರೆಸ್ ಪಕ್ಷವನ್ನು) ನಿರ್ದಾಕ್ಷಿಣ್ಯವಾಗಿ ಮತ್ತು ಒಂದೇ ಮನಸ್ಸಿನ ನಿರ್ಧಾರದಿಂದ ನಡೆಸಿದರು. ಅವರು ಮಹಾ ಸಂಘಟನಾ ಕೌಶಲ, ಅದ್ಭುತ ಧೈರ್ಯ, ಗುರಿ ಮತ್ತು ಅಚಲತೆಯನ್ನು ಹೊಂದಿದ್ದರು.

ವಿದೇಶಿ ವರದಿಗಾರ ಓ.ಎಂ. ಗ್ರೀನ್, ಪಟೇಲರ ಸಾವಿಗೆ ಈ ರೀತಿ ಬರೆದರು:

ಪಟೇಲರಿಗೆ ಅವರಂತಹ ಉತ್ತರಾಧಿಕಾರಿ ಇಲ್ಲ. ಅವರಂತಹ ವ್ಯಕ್ತಿ ಪ್ರತಿ ದಿನ ಜನಿಸುವುದಿಲ್ಲ.

ಈ ಎಲ್ಲಾ ಗೌರವದ ಮಾತುಗಳಿಗಿಂತ ಮಿಗಿಲಾಗಿ ಅತ್ಯಂತ ಹೆಚ್ಚಿನ ಪ್ರೀತಿ, ಕೃತಜ್ಞತೆ ಮತ್ತು ಗೌರವದಿಂದ ಅಗಲಿದ ಸರ್ದಾರ್ ಪಟೇಲರನ್ನು ಸ್ಮರಿಸಿದವರು ದೆಹಲಿಯ ಇಂಡಿಯನ್ ಸಿವಿಲ್ ಸರ್ವೀಸ್ ಅಧಿಕಾರಿಗಳು.

೧೯೫೦ರ ಡಿಸೆಂಬರ್ ೧೬ರಂದು ದೆಹಲಿಯಲ್ಲಿದ್ದ ಎಲ್ಲಾ ಸಿವಿಲ್ ಸರ್ವಿಸ್ ಅಧಿಕಾರಿಗಳು ಐಸಿಎಸ್ ಸಂಘದ ಆಶ್ರಯದಲ್ಲಿ ಸಭೆ ಸೇರಿ ಸರ್ದಾರರ ಅಗಲಿಕೆಗೆ ಸಂತಾಪ ವ್ಯಕ್ತ ಪಡಿಸಿದರು. ಅಂತಹ ಸಭೆ ನಡೆದದ್ದು ಐಸಿಎಸ್ ಇತಿಹಾಸದಲ್ಲೇ ಪ್ರಥಮ ಮತ್ತು ಕೊನೆ. ಅಧ್ಯಕ್ಷತೆ ವಹಿಸಿದ್ದ ಅತ್ಯಂತ ಹಿರಿಯ ಅಧಿಕಾರಿ ಗಿರಿಜ ಶಂಕರ್ ಬಾಜ್‌ಪಾಯಿರವರು ಇಂತು ನುಡಿದರು:

> ಈ ದಿನ ನಾವು ಒಬ್ಬ ಮಹಾನ್ ದೇಶಭಕ್ತ, ಮಹಾನ್ ಆಡಳಿತಗಾರ ಮತ್ತು ಮಹಾನ್ ವ್ಯಕ್ತಿಯ ಅಗಲಿಕೆಗೆ ಶೋಕಿಸಲು ಮತ್ತು ಅವರಿಗೆ ಗೌರವ ಸಲ್ಲಿಸಲು ಸಭೆ ಸೇರಿದ್ದೇವೆ. ಸರ್ದಾರ್ ವಲ್ಲಭಭಾಯ್ ಪಟೇಲರು ಈ ಮೂರೂ ಆಗಿದ್ದರು. ಯಾವುದೇ ಐತಿಹಾಸಿಕ ಕಾಲದಲ್ಲಿ ಮತ್ತು ಯಾವುದೇ ದೇಶದಲ್ಲಿ ಇದು ಒಂದು ಅಪರೂಪದ ಸೇರಿಕೆ. ಸಮಾಜದ ಎರಡು ಅಡಿಪಾಯಗಳಾದ ಭದ್ರತೆ ಮತ್ತು ಶಿಸ್ತಿನ ಕಡೆಗೆ ಗಮನದ ಕೊರತೆಯಾದದ್ದರಿಂದ ಸ್ವಾತಂತ್ರ್ಯದ ಫಲಗಳು ವ್ಯರ್ಥವಾದ ಉದಾಹರಣೆಗಳು ಚರಿತ್ರೆಯಲ್ಲಿ ಇವೆ. ಪಟೇಲರು ಆ ಭದ್ರತೆ ಮತ್ತು ಶಿಸ್ತು ಎರಡನ್ನೂ ದೇಶಕ್ಕೆ ನೀಡಿದರು.

ನಂತರ ಬಾಜಪೇಯಿಯವರು, "ಸರ್ದಾರರು ಮತ್ತು ಅಧಿಕಾರಿಗಳ ನಡುವಣ ಸಂಬಂಧವನ್ನು ಮತ್ತು ಅಧಿಕಾರಿಗಳ ಯೋಗಕ್ಷೇಮದ ಬಗೆಗೆ ಅವರು ತೋರುತ್ತಿದ್ದ ವೈಯುಕ್ತಿಕ ಆಸಕ್ತಿಯ ತೀವ್ರತೆ ಮತ್ತು ಪ್ರೀತಿಯನ್ನು ಪ್ರಸ್ತಾಪಿಸಿ "ಅವರು ಒಬ್ಬ ಸಣ್ಣ ಮನಸ್ಸಿನ ವ್ಯಕ್ತಿಯಾಗಿದ್ದಿದ್ದರೆ ತಮ್ಮ ಮತ್ತು ವಿದೇಶಿ ಆಡಳಿತದಲ್ಲಿ ಸೇವೆ ಸಲ್ಲಿಸಿದವರ ನಡುವೆ ಅನುಮಾನದ ಪರದೆಯನ್ನು ಎಳೆದುಬಿಡುತ್ತಿದ್ದರು," ಎಂದರು. ತಮ್ಮ ಭಾಷಣವನ್ನು ಮುಕ್ತಾಯ ಮಾಡುತ್ತಾ, "ನಮ್ಮ ಕಾಲದಲ್ಲಿ ನಮ್ಮ ದೇಶಕ್ಕೆ ಸ್ವಾತಂತ್ರ್ಯವನ್ನು ಸಂಪಾದಿಸಿಕೊಟ್ಟವರು ಮತ್ತು ಅದರ ಬಾಳಿಕೆಗೆ ಬೇಕಾದ ಸ್ಥಿರವಾದ ಪರಿಸ್ಥಿತಿ ಮತ್ತು ಆಡಳಿತದ ಬಲದ ಮೇಲೆ ಯಶಸ್ವಿ ಪ್ರಭಾವ ಬೀರಿದ ಪಟೇಲರ ಅಗಲಿಕೆಗೆ ಅಶ್ರುತರ್ಪಣ ಅರ್ಪಿಸುವುದು ಸಹಜ" ಎಂದರು.[೭೯]

೨೯.೨ ಬಿರ್ಲಾ ರಚಿಸಿದ ಸ್ಮಾರಕ

ಪಟೇಲರ ನೆನಪನ್ನು ಶಾಶ್ವತಗೊಳಿಸಲು ಒಂದು ಸ್ಮಾರಕವನ್ನು ಏರ್ಪಡಿಸುವುದು ತಮ್ಮ ಕರ್ತವ್ಯ ಎಂದು ಜಿ. ಡಿ. ಬಿರ್ಲಾ ಭಾವಿಸಿದರು. ಕಾಂಗ್ರೆಸ್ಸಾಗಲಿ, ಸರ್ಕಾರವಾಗಲಿ ಈ ದಿಕ್ಕಿನಲ್ಲಿ ಸಾಕಷ್ಟು ಮಾಡಿಲ್ಲವೆಂದು ಪಟೇಲರ ಅನೇಕ ಸಹಚರರಿಗೆ ಅನ್ನಿಸಿತ್ತು. ಬಿರ್ಲಾಗೂ ಸಹ ಹಾಗೇ ಅನ್ನಿಸಿತ್ತು. ಅದರಿಂದ ಬಿರ್ಲಾ ಆ ದಿಕ್ಕಿನಲ್ಲಿ ಕಾರ್ಯಪ್ರವೃತ್ತರಾದರು. ಆದರೆ ಪ್ರಧಾನಿ ನೆಹರು ತಮ್ಮ ಮುಂದೆ ತರಲ್ಪಟ್ಟ ಸಲಹೆಗಳ ಬಗೆಗೆ ಉತ್ಸಾಹ ತೋರಲಿಲ್ಲ. ಕೊನೆಗೆ ಪಟೇಲರ ಅನುಯಾಯಿಗಳಲ್ಲಿ ಒಬ್ಬ ಪ್ರಮುಖರಾದ ಎಸ್. ಕೆ. ಪಾಟೀಲ್ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಲ್ಲಿ ಒಂದು ಠರಾವನ್ನು ಮಂಡಿಸಿ ಅದನ್ನು ಕಾರ್ಯಕಾರಿ ಸಮಿತಿಯು ಒಪ್ಪುವಂತೆ ಮಾಡಿದರು. ಪಟೇಲರ ಸ್ಮಾರಕಕ್ಕೆ ಒಂದು ಕೋಟಿ ರೂಪಾಯಿಯನ್ನು ಸಂಗ್ರಹಿಸಬೇಕೆಂಬುದು ಆ ಠರಾವಿನ ವಿಷಯವಾಗಿತ್ತು. ಆ ಠರಾವನ್ನು ಜಾರಿಗೆ ತರಲು ಮೇ ೮, ೧೯೫೧ರಂದು ಕೈಗಾರಿಕೋದ್ಯಮಿಗಳ ಸಭೆಯನ್ನು ನೆಹರು ಕರೆದರು. ಆ ಸಭೆಯಲ್ಲಿ ಕೈಗಾರಿಕಾ ವಲಯದಿಂದ ಐವತ್ತು ಲಕ್ಷ ರೂಪಾಯಿ ಸಂಗ್ರಹಿಸಬೇಕೆಂದು ತೀರ್ಮಾನಿಸಲಾಯಿತು. ಅದಕ್ಕಾಗಿ ಒಂದು ಸಮಿತಿಯನ್ನು ರಚಿಸಿ ಬಿರ್ಲಾರವರನ್ನು ಅದರ ಚೇರ್ಮನ್ ಆಗಿ ಆರಿಸಿದರು.

ಬಿರ್ಲಾರವರು ದಾಖಲೆ ಕಾಲದಲ್ಲಿ ೫೦ ಲಕ್ಷ ರೂಪಾಯಿಯನ್ನು ಸಂಗ್ರಹಿಸಿದರು. ಆದರೆ ಕಾಂಗ್ರೆಸ್ ಪಕ್ಷ ಶೇಖರಿಸಿದ ಹಣ ಅಲ್ಪವಾಗಿತ್ತು. ಈಗ ಆ ಹಣವನ್ನು ಸರ್ದಾರರ ಸ್ಮಾರಕಕ್ಕಾಗಿ ಹೇಗೆ ಉಪಯೋಗಿಸಬೇಕು ಎನ್ನುವ ಪ್ರಶ್ನೆ ಎದ್ದಿತು. ಸಮಿತಿಯ ಅಧ್ಯಕ್ಷರಾದ ನೆಹರು, ಪಟೇಲರು ಮುಖ್ಯವಾಗಿ ಕೃಷಿಕನಾಗಿದ್ದುದರಿಂದ, ಹಳ್ಳಿಗಳಲ್ಲಿ ಬಾವಿಗಳನ್ನು ತೋಡುವುದು ಮತ್ತು ಗ್ರಾಮಾಂತರ ಅಭಿವೃದ್ಧಿಯ ಯೋಜನೆಗಳನ್ನು ಕೈಗೊಳ್ಳುವುದು ಅವರಿಗೆ ಸೂಕ್ತವಾದ ಸ್ಮಾರಕ – ಎಂದು ಸೂಚಿಸಿದರು. ಆದರೆ ಪಟೇಲರ ಅನುಯಾಯಿಗಳು ಅದನ್ನು ತಿರಸ್ಕರಿಸಿದರು. "ಅದು ರಾಷ್ಟ್ರೀಯ ಸ್ಮಾರಕ ಆಗುವುದಿಲ್ಲ," ಎಂದರವರು. "ಬಾವಿಗಳನ್ನು ತೋಡುವುದು, ರಸ್ತೆಗಳನ್ನು ನಿರ್ಮಿಸುವುದು ಸರ್ಕಾರದ ಸಾಮಾನ್ಯ ಕೆಲಸ," ಎಂದು ಅವರು ವಾದ ಮಾಡಿದರು. "ಕೊನೆಯ ಪಕ್ಷ ಒಂದು ಪ್ರತಿಮೆಯನ್ನಾದರೂ ಒಂದು ಪ್ರಮುಖ ಸ್ಥಳದಲ್ಲಿ ನಿಲ್ಲಿಸಬೇಕು", ಎಂದರವರು. ಆ ಕೆಲಸಕ್ಕೆ ಅವರು ಸೂಚಿಸಿದ 'ವಿಜಯ ಚೌಕ'ವು ತಿರಸ್ಕರಿಸಲ್ಪಟ್ಟಿತು. ಪ್ರತಿಮೆಯ ಸ್ಥಾಪನೆಗೆ ಸರ್ದಾರ್ ಸ್ಮಾರಕ ನಿಧಿಯಿಂದ ಹಣವು ಬಿಡುಗಡೆಯಾಗಲಿಲ್ಲ. ಕೊನೆಗೆ ಸರ್ದಾರರ ಅನುಯಾಯಿಗಳು ಎಸ್. ಕೆ. ಪಾಟೀಲರ ನಾಯಕತ್ವದಲ್ಲಿ ಮತ್ತೆ

೧೦ ಲಕ್ಷ ರೂಪಾಯಿಗಳನ್ನು ಸಂಗ್ರಹಿಸಿ ನವ ದೆಹಲಿಯ ಸಂಸತ್ ಭವನದ ರಸ್ತೆಯಲ್ಲಿ ಸರ್ದಾರರ ಪ್ರತಿಮೆಯನ್ನು ಸ್ಥಾಪಿಸಿದರು. ಆ ಸ್ಥಳ ಮುಂದೆ 'ಪಟೇಲ್ ಚೌಕ್' ಎಂದು ಹೆಸರಾಯಿತು.

ಇಷ್ಟರಿಂದಲೇ ಬಿರ್ಲಾಗೆ ಸಮಾಧಾನವಾಗಲಿಲ್ಲ. "ಸರ್ದಾರರನ್ನು ಸರಿಯಾಗಿ ಗೌರವಿಸಿಲ್ಲ" ಎನ್ನಿಸಿತು ಅವರಿಗೆ. ಅದರಿಂದ ತಮ್ಮ ಕುಟುಂಬದ 'ಶ್ರೀ ಕೃಷ್ಣಾರ್ಪಣ್ ಚಾರಿಟಿ ಟ್ರಸ್ಟ್'ನಿಂದ ವಿ. ಪಿ ಮೆನನ್‌ರವರಿಗೆ ನಾಲ್ಕು ಸಾವಿರ ರೂಪಾಯಿಗಳನ್ನು ಕೊಡಿಸಿ ರಾಜ್ಯಗಳ ವಿಲೀನದ ಬಗೆಗೆ ಒಂದು ಗ್ರಂಥವನ್ನು ಬರೆಯುವಂತೆ ಮಾಡಿದರು. ವಿ. ಪಿ. ಮೆನನ್‌ರವರು ಸರ್ದಾರರ ಕಾರ್ಯದರ್ಶಿ ಆಗಿದ್ದವರು. ರಾಜ್ಯಗಳ ವಿಲೀನದ ಸಾಧನೆಯಲ್ಲಿ ಸರ್ದಾರರಿಗೆ ಬಲಗೈಯಂತೆ ಇದ್ದವರು.

ಕೆಲವು ವರ್ಷಗಳ ನಂತರ ಬಿರ್ಲಾರವರು ಪಟೇಲರ ಜೀವನ ಚರಿತ್ರೆಯನ್ನು ಬರೆಸುವ ಆಲೋಚನೆಯನ್ನು ಮಾಡಿದರು. ಪಟೇಲರ ಅತಿ ಆಪ್ತ ಬೆಂಬಲಿಗರಾಗಿದ್ದ ಮೊರಾರ್ಜಿ ದೇಸಾಯಿಯವರೊಡನೆ ಸಮಾಲೋಚಿಸಿ, ಆ ಕೆಲಸವನ್ನು ಲಂಡನ್ ನಿವಾಸಿ ಪತ್ರಕರ್ತ ತಹ್ಮಂಕರ್ ಅವರಿಗೆ ವಹಿಸಿದರು. ತಹ್ಮಂಕರ್ ಅವರು ಪೂನಾದ 'ಕೇಸರಿ' ಮತ್ತು ಬೆಂಗಳೂರಿನ 'ಡೆಕ್ಕನ್ ಹೆರಾಲ್ಡ್' ದಿನ ಪತ್ರಿಕೆಗಳಲ್ಲಿ ಕೆಲಸ ಮಾಡಿದ್ದವರು. ಪಟೇಲರ ಜೀವನ ಚರಿತ್ರೆಯನ್ನು ಬರೆಯುವುದಕ್ಕೆ ಅವರಿಗೆ ಬಿರ್ಲಾ ೧೫೦೦ ಪೌಂಡ್‌ಗಳನ್ನು ನೀಡಿದರು. ಇತರ ಎಲ್ಲಾ ವೆಚ್ಚಗಳನ್ನು ತಮ್ಮ ಕುಟುಂಬದ 'ಶ್ರೀ ಕೃಷ್ಣಾರ್ಪಣ್ ಚಾರಿಟಿ ಟ್ರಸ್ಟ್' ವಹಿಸಿಕೊಳ್ಳುವಂತೆ ಏರ್ಪಡಿಸಿದರು.

ಪಟೇಲರ ಜೀವನ ಚರಿತ್ರೆಯನ್ನು ಬರೆಯಲು ತಹ್ಮಂಕರ್‌ಗೆ ಬಹಳ ದೀರ್ಘ ಕಾಲ ಬೇಕಾಯಿತು. ಅದು ಬಿರ್ಲಾರವರ ಸಹನೆಯನ್ನು ಪರೀಕ್ಷಿಸಿತು. ಗ್ರಂಥವು ೧೯೭೦ರಲ್ಲಿ ಸಿದ್ಧವಾಯಿತು. ಅದರ ಶೀರ್ಷಿಕೆ: 'ಸರ್ದಾರ್ ಪಟೇಲ್'. ಅದಕ್ಕೆ ಲಾರ್ಡ್ ಮೌಂಟ್‌ಬ್ಯಾಟನ್‌ರವರಿಂದ ಮುನ್ನುಡಿಯನ್ನು ಬಿರ್ಲಾ ಬರೆಸಿದರು. 'ಸರ್ದಾರ್ ಪಟೇಲರೊಡನೆ ಅವರ ಜೀವನ ಪರ್ಯಂತ ಬಿರ್ಲಾರವರಿಗಿದ್ದ ಸ್ನೇಹ ಮತ್ತು ಸ್ವಾತಂತ್ರ ಚಳವಳಿಗೆ ಅವರ ಉದಾರ ಸಹಾಯ'ದ ಗಣನೆಗಾಗಿ ಆ ಗ್ರಂಥವನ್ನು ತಹ್ಮಂಕರ್‌ರವರು ಬಿರ್ಲಾರವರಿಗೆ ಅರ್ಪಿಸಿದರು. ಆ ಗ್ರಂಥವನ್ನು ಲಂಡನ್ನಿನ ಪ್ರಸಿದ್ಧ ಪ್ರಕಾಶಕರಾದ 'ಜಾರ್ಜ್ ಅಲೆನ್ ಅಂಡ್ ಅನ್ವಿನ್' ಪ್ರಕಟಿಸಿದರು. ಆ ಗ್ರಂಥದಲ್ಲಿ ತಹ್ಮಂಕರ್‌ರವರು ಸರ್ದಾರ್ ಪಟೇಲರನ್ನು 'ಭಾರತ ಚರಿತ್ರೆಯ ಪೆರಿಕಲ್ಸ್' ಎಂದು ಕರೆದಿದ್ದಾರೆ. ಪೆರಿಕಲ್ಸ್, ವಿಲಿಯಂ ಶೇಕ್ಸ್‌ಪಿಯರನ ಚಾರಿತ್ರಿಕ ನಾಟಕ 'Pericles, the Prince of Tyre'ನ ನಾಯಕ.

ಈ ಜೀವನ ಚರಿತ್ರೆಯ ಪ್ರಕಟಣೆಯಿಂದ ಪಟೇಲರ ಸಾಧನೆಗಳನ್ನು ಮುಂದಿನ ಪೀಳಿಗೆಗೆ ಪರಿಚಯಿಸಲು ತಮ್ಮ ಕೈಲಾದುದನ್ನು ಮಾಡಿದ ಸಮಾಧಾನ ಬಿರ್ಲಾರವರಿಗೆ ದೊರಕಿತು.[೮೦]

೨೯.೩ ಭಾವಚಿತ್ರ ಅನಾವರಣ

ಮೌಲಾನಾ ಆಜಾದರು ೧೯೫೪ರಲ್ಲಿ ಗತಿಸಿದರು. ಶೀಘ್ರವೇ ಪ್ರಧಾನಿ ನೆಹರು ಆಜಾದರ ಭಾವಚಿತ್ರವನ್ನು ಸಂಸತ್ತಿನ ಸಭಾ ಭವನದಲ್ಲಿ ಅನಾವರಣ ಮಾಡಲು ಕ್ರಮ ಕೈಗೊಂಡರು. ಆಜಾದರ ಭಾವಚಿತ್ರಕ್ಕಾಗಿ ವಂತಿಗೆಯನ್ನು ನೀಡುವಂತೆ ಸಂಸದರಿಗೆ ಪತ್ರ ಬರೆಯಲು ಸಂಸತ್ ಕಲಾಪ ಮಂತ್ರಿಗೆ ನೆಹರು ಸೂಚಿಸಿದರು. ಆದರೆ ಅವರಿಗೆ ಉಪಪ್ರಧಾನಿಯಾಗಿದ್ದ, ಭಾರತ ಒಕ್ಕೂಟವನ್ನು ನಿರ್ಮಿಸಿದ ವಲ್ಲಭಭಾಯ್ ಪಟೇಲರ ಭಾವಚಿತ್ರವನ್ನು ಸಂಸತ್ ಭವನದಲ್ಲಿ ಹಾಕಬೇಕೆಂಬುದು ಹೊಳೆಯಲಿಲ್ಲವೊ ಅಥವಾ ಬೇಕೆಂದೇ ಬಿಟ್ಟರೋ ಅಥವಾ ಮತ್ತಾವ ಕಾರಣಕ್ಕೆ ಬಿಟ್ಟರೋ ತಿಳಿಯದು. ಆದರೆ ಗ್ವಾಲಿಯರ್‌ನ ಮಹಾರಾಜ ಜೀವಾಜಿರಾವ್ ಸಿಂಧ್ಯರವರಿಗೆ, ಪಟೇಲರ ಭಾವಚಿತ್ರವನ್ನು ಸಂಸತ್ ಸಭಾಭವನದಿಂದ ಹೊರತು ಪಡಿಸಿರುವುದರಿಂದ ಕಿರಿಕಿರಿಯಾಯಿತು. ಅವರೊಂದು ಭಾವಚಿತ್ರವನ್ನು ತಯಾರು ಮಾಡಿಸಿ ಸಂಸತ್ತಿಗೆ ನೀಡಿದರು. ಅದರ ಅನಾವರಣವನ್ನು ರಾಷ್ಟ್ರಾಧ್ಯಕ್ಷ ಬಾಬು ರಾಜೇಂದ್ರ ಪ್ರಸಾದ್‌ರವರು ಮಾಡಿದರು. ಆ ಸಂದರ್ಭದಲ್ಲಿ ಗ್ವಾಲಿಯರ್ ಮಹಾರಾಜ ಸಿಂಧ್ಯರವರು ಹೆಮ್ಮೆ ಮತ್ತು ಕೃತಜ್ಞತೆಯಿಂದ ಹೀಗೆ ನುಡಿದರು:

> ಒಂದು ಕಾಲದಲ್ಲಿ ನನ್ನಿಂದ ದ್ವೇಷಿಸಲ್ಪಡುತ್ತಿದ್ದ ವ್ಯಕ್ತಿ ಇಲ್ಲಿದ್ದಾರೆ; ಯಾರ ಬಗೆಗೆ ನಾನು ಹೆದರುತ್ತಿದ್ದೆನೋ ಆ ವ್ಯಕ್ತಿ ಇಲ್ಲಿದ್ದಾರೆ, ಯಾರನ್ನು ನಾನು ಮೆಚ್ಚುತ್ತೇನೋ ಮತ್ತು ಪ್ರೀತಿಸುತ್ತೇನೋ ಆ ವ್ಯಕ್ತಿ ಇಲ್ಲಿದ್ದಾರೆ.

ಆನಂತರ ಅವರು ಜೆನರಲ್ ಥೋರಬ್‌ಗೆ ಹೇಳಿದರು:

> 'ನಾವು ಮಹಾರಾಜರು ನಮ್ಮ ಕತ್ತುಗಳನ್ನು ಮತ್ತೆ ಕತ್ತರಿಸಿಕೊಳ್ಳಬೇಕಾಗಿ ಬಂದರೆ, ಆ ಕೆಲಸ ಮಾಡುವುದಕ್ಕೆ ಸರ್ದಾರ್ ಮತ್ತು ವಿ.ಪಿ. ಮೆನನ್‌ರವರ ಹೆಸರನ್ನು ಅನುಮಾನವಿಲ್ಲದೆ ಆರಿಸುತ್ತೇವೆ.'[೮೧]

೨೯.೪ ತಡವಾಗಿ ಬಂದ ನಾಗರಿಕ ಪ್ರಶಸ್ತಿ

೧೯೫೪ರಲ್ಲಿ ಭಾರತ ಸರ್ಕಾರವು ಪದ್ಮಶ್ರೀ, ಪದ್ಮಭೂಷಣ, ಪದ್ಮವಿಭೂಷಣ ಮತ್ತು ಭಾರತರತ್ನ ನಾಗರಿಕ ಪ್ರಶಸ್ತಿಗಳನ್ನು ನೀಡುವುದನ್ನು ಆರಂಭಿಸಿತು. ಆ ನಾಲ್ಕು ಪ್ರಶಸ್ತಿಗಳಲ್ಲಿ ಅತ್ಯಂತ ಹೆಚ್ಚಿನದು 'ಭಾರತರತ್ನ' ಪ್ರಶಸ್ತಿ. ಆರಂಭಿಕ ವರ್ಷ ೧೯೫೪ರಲ್ಲಿ ಅದು ಸರ್ ಸಿ.ವಿ. ರಾಮನ್, ಡಾ॥ ಎಸ್. ರಾಧಾಕೃಷ್ಣನ್ ಮತ್ತು ಚಕ್ರವರ್ತಿ ರಾಜಗೋಪಾಲಾಚಾರಿಯವರಿಗೆ ನೀಡಲ್ಪಟ್ಟಿತು. ಮಾರನೆಯ ವರ್ಷ ೧೯೫೫ರಲ್ಲಿ ಡಾ॥ ಎಂ. ವಿಶ್ವೇಶ್ವರಯ್ಯ, ಪಂಡಿತ್ ಜವಹರಲಾಲ್ ನೆಹರು ಮತ್ತು ಡಾ॥ ಭಗವಾನ್ ದಾಸ್‌ರವರಿಗೆ ಅದು ಲಭ್ಯವಾಯಿತು. ಅಂದರೆ ೧೯೫೫ರಲ್ಲಿ ಪ್ರಧಾನಮಂತ್ರಿ ಜವಹರಲಾಲ್ ನೆಹರುರವರು ತಮಗೆ ತಾವೇ ಪ್ರಶಸ್ತಿಯನ್ನು ಕೊಟ್ಟುಕೊಂಡಂತಾಯಿತು. ಮುಂದೆ ೧೯೭೧ರಲ್ಲಿ ಇಂದಿರಾಗಾಂಧಿಯವರಿಗೆ ಅದನ್ನು ನೀಡಲಾಯಿತು. ಅಂದರೆ ೧೯೭೧ರಲ್ಲಿ ಪ್ರಧಾನಮಂತ್ರಿ ಇಂದಿರಾಗಾಂಧಿಯವರು ತಮಗೆ ತಾವೇ 'ಭಾರತರತ್ನ' ಪ್ರಶಸ್ತಿಯನ್ನು ಕೊಟ್ಟುಕೊಂಡರು! ನೆಹರುಗಾಗಲಿ, ಇಂದಿರಾಗಾಂಧಿಗಾಗಲಿ ಸರ್ದಾರರ ನೆನಪೇ ಬರಲಿಲ್ಲ. ಅವರ ನಂತರ ಬಂದ ಯಾವ ಪ್ರಧಾನಮಂತ್ರಿಗೂ ಸರ್ದಾರರ ನೆನಪೇ ಬರಲಿಲ್ಲ. ಸಧ್ಯ, ಆ ಪ್ರಧಾನಮಂತ್ರಿಗಳೂ ಸಹ ತಮಗೆ ತಾವೇ ಆ ಪ್ರಶಸ್ತಿಯನ್ನು ಕೊಟ್ಟುಕೊಳ್ಳಲಿಲ್ಲ. ಕೊನೆಗೆ, ೧೯೯೧ರಿಂದ ೧೯೯೬ರವರೆಗೆ ಒಂಬತ್ತನೆ ಪ್ರಧಾನಮಂತ್ರಿಯಾಗಿದ್ದ ಪಿ.ವಿ. ನರಸಿಂಹ ರಾವ್‌ರವರು, ಪಟೇಲರು ಗತಿಸಿದ ೪೧ ವರ್ಷಗಳ ನಂತರ ಮತ್ತು ಭಾರತರತ್ನ ಪ್ರಶಸ್ತಿಯನ್ನು ರೂಢಿಗೆ ತಂದ ೩೭ ವರ್ಷಗಳ ನಂತರ ೧೯೯೧ರಲ್ಲಿ ಸರ್ದಾರ್ ಪಟೇಲರಿಗೆ ಭಾರತರತ್ನವನ್ನು ಪ್ರಕಟಿಸಿದರು. ಅವರ ಜೊತೆ ರಾಜೀವ್ ಗಾಂಧಿ ಮತ್ತು ಮೊರಾರ್ಜಿ ದೇಸಾಯಿಯವರಿಗೂ ಅದನ್ನು ನೀಡಲಾಯಿತು.

(ಅಂತೂ, ಸರ್ಕಾರದ ದೃಷ್ಟಿಯಲ್ಲಿ ವಲ್ಲಭಭಾಯ್ ಪಟೇಲ್‌ರವರೂ 'ಭಾರತರತ್ನ' ಆದರು. ಆದರೆ ಜನ ನೀಡಿರುವ 'ಸರ್ದಾರ್' ಬಿರುದು ಅವರಿಗೆ ಭಾರತರತ್ನಕ್ಕಿಂತ ಶ್ರೇಷ್ಠ, ಏಕೆಂದರೆ ಭಾರತದಲ್ಲಿ ಭಾರತರತ್ನರು ಅನೇಕರಿದ್ದಾರೆ, ಆದರೆ 'ಸರ್ದಾರ್' ಬಿರುದು ಪಡೆದವರು ಅವರೊಬ್ಬರೇ. ಭಾರತಕ್ಕೆ ಮತ್ತೊಬ್ಬ ಸರ್ದಾರ ಇಲ್ಲ! – ಲೇಖಕ)

೨೯.೫ ರಾಷ್ಟ್ರೀಯ ಏಕತಾ ದಿವಸ ಮತ್ತು ಏಕತಾ ಪ್ರತಿಮೆ

ಇಂದಿನ ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರ ಸರ್ಕಾರವು ಪಟೇಲರ

ಹುಟ್ಟು ಹಬ್ಬದ ದಿನವಾದ ಅಕ್ಟೋಬರ್ ೩೧ನ್ನು 'ರಾಷ್ಟ್ರೀಯ ಏಕತಾ ದಿವಸ'ವನ್ನಾಗಿ ಆಚರಿಸಬೇಕೆಂದು ತೀರ್ಮಾನಿಸಿ ೨೦೧೬ರ ಅಕ್ಟೋಬರ್ ೩೧ರಿಂದ ಜಾರಿಗೆ ತಂದಿದೆ. ಅದರ ಜೊತೆಗೆ ನರೇಂದ್ರ ಮೋದಿಯವರ ಮಾರ್ಗದರ್ಶನದಲ್ಲಿ ಗುಜರಾತ್ ಸರ್ಕಾರವು ಸರ್ದಾರರ ಜನ್ಮರಾಜ್ಯವಾದ ಗುಜರಾತ್‌ನಲ್ಲಿ ಸರ್ದಾರ್ ಪಟೇಲರ ೧೮೨ ಮೀಟರ್ ಎತ್ತರದ ಪ್ರತಿಮೆಯನ್ನು ನಿಲ್ಲಿಸಲು ಕ್ರಮ ಕೈಗೊಂಡಿದೆ. ಅದರ ಭೂಮಿ ಪೂಜಾ ಸಮಾರಂಭ ೨೦೧೬ರ ಸೆಪ್ಟೆಂಬರ್ ೧೯ರಂದು ನೆರವೇರಿದೆ.

ಅದು ಸರ್ದಾರ್ ಪಟೇಲರ ನೆನಪನ್ನು ಶಾಶ್ವತಗೊಳಿಸುವ ಸ್ಮಾರಕ. ಸರ್ದಾರರ ಸಾಧನೆಗಳಲ್ಲಿ ಅತ್ಯಂತ ಪ್ರಮುಖವಾದುದು ಭಾರತ ಒಕ್ಕೂಟ ಸ್ಥಾಪನೆ. ಅದರಿಂದ ಆ ಪ್ರತಿಮೆಯನ್ನು 'ಏಕತಾ ಪ್ರತಿಮೆ' (Statue of Unity) ಎಂದು ಕರೆಯಲಾಗಿದೆ. ಗುಜರಾತ್ ಸರ್ಕಾರವು ಈ ಉದ್ದೇಶಕ್ಕಾಗಿಯೇ ವಿಶೇಷವಾಗಿ ಸ್ಥಾಪಿಸಿರುವ 'ಸರ್ದಾರ್ ವಲ್ಲಭಭಾಯ್ ಪಟೇಲ್ ರಾಷ್ಟ್ರೀಯ ಏಕತಾ ಟ್ರಸ್ಟ್' (SVPRET) ಈ ಸ್ಮಾರಕವನ್ನು ಸ್ಥಾಪಿಸುತ್ತಿದೆ. ಈ ಪ್ರತಿಮೆಯು ಗುಜರಾತ್ ಪ್ರಾಂತ್ಯದ ನರ್ಮದ ಜಿಲ್ಲೆಯಲ್ಲಿ ನರ್ಮದ ನದಿಗೆ ಅಡ್ಡಲಾಗಿ ನಿರ್ಮಿತವಾಗಿರುವ 'ಸರ್ದಾರ್ ಸರೋವರ್ ಡ್ಯಾಂ' ಸಮೀಪ ನಿರ್ಮಿತವಾಗುತ್ತಿದೆ. ಇದು ವಿಂದ್ಯಾ ಮತ್ತು ಸಾತ್ಪುರ ಪರ್ವತ ಶ್ರೇಣಿಗಳ ನಡುವೆ ಇರುವುದರಿಂದ ರಮಣೀಯವಾದ ಪ್ರವಾಸಿ ತಾಣವಾಗುತ್ತದೆ.

ಇದು ಒಂದು ವಿನೂತನ ಯೋಜನೆ. ಒಂದು ಮೌನ ಪ್ರತಿಮೆಯನ್ನು ನಿಲ್ಲಿಸುವುದು ಈ ಯೋಜನೆಯ ಗುರಿಯಲ್ಲ. ಒಂದು ನಳನಳಿಸುವ ಜೀವಂತ ಅಭಿವೃದ್ಧಿಪರ ಚಟುವಟಿಕೆಗಳ ತಾಣವನ್ನಾಗಿ ಅಭಿವೃದ್ಧಿ ಪಡಿಸುವುದು ಪ್ರಮುಖ ಗುರಿ. ಅಲ್ಲಿ ಪಟೇಲರ ಉದ್ದೀಶ್ಯಗಳಾದ ಐಖ್ಯತೆ, ರಾಷ್ಟ್ರಭಕ್ತಿ, ದಕ್ಷ ಆಡಳಿತ, ಸಾಮಾಜಿಕ – ಆರ್ಥಿಕ ಅಭಿವೃದ್ಧಿ ಮುಂತಾದುವನ್ನು ಉದ್ದೀಪನಗೊಳಿಸುವ ಚಟುವಟಿಕೆಗಳನ್ನು ಏರ್ಪಡಿಸಲಾಗುವುದು. ಅದಕ್ಕಾಗಿ ಉತ್ತಮ ಸಂಪರ್ಕ, ಆರೋಗ್ಯ ರಕ್ಷಣೆ, ಶಿಕ್ಷಣ, ಪರಿಸರ ರಕ್ಷಣೆ, ಉದ್ಯೋಗ ಸೃಷ್ಟಿ, ವ್ಯವಸಾಯ ಅಭಿವೃದ್ಧಿಯ ಸಂಶೋಧನೆ ಮತ್ತು ಬುಡಕಟ್ಟಿನ ಜನರ ಅಭಿವೃದ್ಧಿಗೆ ಬೇಕಾದ ಕಾರ್ಯಚಟುವಟಿಕೆಗಳಿಗೆ ಇಲ್ಲಿ ಅವಕಾಶ ಮಾಡಲಾಗುವುದು.

ಈ ಪ್ರತಿಮೆಯು ೧೨ ಕಿ.ಮೀ.ವರೆಗೆ ಸುತ್ತ ವ್ಯಾಪಿಸಿರುವ ಮಾನವ – ನಿರ್ಮಿತ ಸರೋವರದ ಮಧ್ಯ ಭಾಗದಲ್ಲಿ ಇರುವುದು. ಸರೋವರದ ದಡದಿಂದ ಪ್ರತಿಮೆಯ ಬಳಿಗೆ ಹೋಗುವುದಕ್ಕೆ ಸೇತುವೆ ಇರುವುದು. ಇದು ಒಂದು ಉತ್ತಮ

ಪ್ರವಾಸೀ ತಾಣವೂ ಆಗುವುದು. ಇಲ್ಲಿ ಬ್ಯಾಂಕು, ಹೋಟೆಲ್, ವಾಹನ ನಿಲುಗಡೆಯ ಸ್ಥಳ, ವಾಸ್ತವ್ಯ ಸೌಕರ್ಯ, ಸಂಶೋಧನಾ ಕ್ಷೇತ್ರ, ಮ್ಯೂಸಿಯಂ ಮುಂತಾದುವು ಇರುವುವು. ನರ್ಮದ ಜಿಲ್ಲೆಯು ಬುಡಕಟ್ಟಿನ ಜನರ ಜಿಲ್ಲೆಯಾದುದರಿಂದ ಇಲ್ಲಿ ಅವರಿಗೆ ಶಾಲಾ ಕಾಲೇಜು ಮತ್ತು ವಿಶ್ವವಿದ್ಯಾನಿಲಯಗಳನ್ನು ಸ್ಥಾಪಿಸಲಾಗುವುದು. ಒಟ್ಟಿನಲ್ಲಿ ಇದೊಂದು ಅದ್ಭುತ ಪರಿಕಲ್ಪನೆ.

ಪಟೇಲರ ಜೀವನ ಮತ್ತು ಸಾಧನೆಯನ್ನು ಬಿಂಬಿಸುವ ಶ್ರವಣ ಮತ್ತು ದೃಶ್ಯ ಪ್ರದರ್ಶನದ ವ್ಯವಸ್ಥೆ ಇಲ್ಲಿಯ ಒಂದು ವಿಶೇಷ.

ಪ್ರಧಾನಮಂತ್ರಿ ಶ್ರೀ ನರೇಂದ್ರ ಮೋದಿಯವರು ಪ್ರತಿಮೆಯ ಬಗೆಗೆ ಹೀಗೆ ಹೇಳಿದ್ದಾರೆ:

> ಪ್ರತಿಮೆಯು ಮೀಟರುಗಳು ಮತ್ತು ಅಡಿಗಳಲ್ಲಿ ಮಾತ್ರ ಎತ್ತರವಾಗಿ ನಿಲ್ಲುವುದಿಲ್ಲ, ಅದಕ್ಕಿಂತಲೂ ಹೆಚ್ಚಾಗಿ ಶೈಕ್ಷಣಿಕ, ಐತಿಹಾಸಿಕ, ರಾಷ್ಟ್ರೀಯ ಮತ್ತು ಆಧ್ಯಾತ್ಮಿಕ ಮೌಲ್ಯಗಳಲ್ಲೂ ಎತ್ತರವಾಗಿ ನಿಲ್ಲುತ್ತದೆ. ಮುಂದೆ ಬರುವ ಶತಮಾನಗಳಿಗೆ ಸ್ಫೂರ್ತಿಯ ನೆಲೆಯನ್ನಾಗಿ ಈ ತಾಣವನ್ನು ಅಭಿವೃದ್ಧಿ ಪಡಿಸುವುದು ನನ್ನ ಪರಿಕಲ್ಪನೆ.

೧೮೨ ಮೀಟರ್ ಎತ್ತರದ ಸರ್ದಾರರ ಈ ಪ್ರತಿಮೆಯು ಜಗತ್ತಿನಲ್ಲೇ ಅತ್ಯಂತ ಎತ್ತರದ ಪ್ರತಿಮೆ. ಅದು ಅಮೆರಿಕದ ನ್ಯೂಯಾರ್ಕ್‌ನಲ್ಲಿರುವ 'ಸ್ವಾತಂತ್ರ್ಯ ಪ್ರತಿಮೆ' (Statue of Liberty)ಯ ಎರಡರಷ್ಟು ಎತ್ತರವಾಗಿದೆ.

ಅದರ ನಿರ್ಮಾಣ ಕಾರ್ಯ ಭರದಿಂದ ಸಾಗುತ್ತಿದೆ. ಅದು ೨೦೧೮ರ ಅಕ್ಟೋಬರ್ ೩೧ರಂದು ಪಟೇಲರ ೧೪೩ನೆ ಜನ್ಮದಿನದಂದು ಅನಾವರಣ ವಾಗುತ್ತದೆ.[೮೨]

(ಇಂತಹ ಅದ್ಭುತ, ಅಭಿವೃದ್ಧಿಪರ, ವಿನೂತನ ಮತ್ತು ಭವ್ಯ ಸ್ಮಾರಕವನ್ನು ಸರ್ದಾರರ ನೆನಪಿಗಲ್ಲದೆ ಮತ್ತಾರ ನೆನಪಿಗೆ ನಿರ್ಮಿಸಬೇಕು? ಸರ್ದಾರ್ ಪಟೇಲರ ಉದಾತ್ತ ಮತ್ತು ಮೌಲ್ಯಯುತ ಜೀವನವು ಇಂತಹ ಸ್ಮಾರಕದ ನಿರ್ಮಾಣಕ್ಕೆ ಸ್ಫೂರ್ತಿಯನ್ನು ನೀಡಿದೆ – ಲೇಖಕ)

೩೦. ಪರಿಸಮಾಪ್ತಿ

ಸರ್ದಾರ್ ವಲ್ಲಭಭಾಯ್ ಪಟೇಲರ ಜೀವನ ಮತ್ತು ಸಾಧನೆ, ಅವರ ಉದಾತ್ತ ಭಾವನೆಗಳು ಮತ್ತು ಧೋರಣೆಗಳು, ಸ್ವಾತಂತ್ರ್ಯ ಸಮರದಲ್ಲಿ ಅವರ ಧೀರ ನಿಲುವು ಮತ್ತು ಸ್ವಾತಂತ್ರ್ಯಾನಂತರ ಬಡವರ ಬಗೆಗಿನ ಒಲವು, ಅವರ ವಾಸ್ತವಿಕತೆ ಮತ್ತು ಜಾತ್ಯಾತೀತತೆ, ದೇಶ ಕಟ್ಟುವ ಆತುರ ಮತ್ತು ಕಾತರ, ಅವರ ಕಷ್ಟ ಸಹಿಷ್ಣುತೆ, ತ್ಯಾಗ, ಸಹನೆ ಹಾಗೂ ಹಾಸ್ಯ ಪ್ರವೃತ್ತಿ, ರೈತರ ಚಳವಳಿಗಳನ್ನು ಯಶಸ್ವಿಯಾಗಿ ನಡೆಸಿದ ಆನಂತರ ಅದರ ಯಶಸ್ಸಿನ ಕೀರ್ತಿಯನ್ನು ರೈತರಿಗೇ ಅರ್ಪಿಸಿದ ರೀತಿ, ಗಾಂಧೀಜಿಯ ಬಗೆಗೆ ಅವರು ತೋರಿದ ಉದಾರ ವಿಧೇಯತೆ, ಅನಾರೋಗ್ಯದಲ್ಲೂ ಒಕ್ಕೂಟ ಸ್ಥಾಪನೆಗಾಗಿ ಹಗಲಿರುಳು ದುಡಿದ ವಿಧಾನ, ತಮ್ಮ ಅಧಿಕಾರಿಗಳನ್ನು ನಡೆಸಿಕೊಂಡ ಅವರಿಂದ ದೇಶಕ್ಕೆ ಉತ್ತಮ ಸೇವೆ ಸಿಗುವಂತೆ ಮಾಡಿದ ಅವರ ದಕ್ಷತೆ, ದೇಶಕ್ಕಾಗಿ ಮಾಡಿದ ಸರ್ವತ್ಯಾಗ ಇತ್ಯಾದಿ ಇತ್ಯಾದಿ ಅಂಶಗಳು ಚೇತೋಹಾರಿಯಷ್ಟೇ ಅಲ್ಲ, ಸ್ಫೂರ್ತಿದಾಯಕವಾದುವು. ನಮ್ಮ ಜನ ರಾಮಾಯಣವನ್ನು ಪಾರಾಯಣ ಮಾಡುವಂತೆ ವಲ್ಲಭಾಯಣವನ್ನು ಪಾರಾಯಣ ಮಾಡಬೇಕು ಮತ್ತು ಅವರ ಹಾದಿಯಲ್ಲಿ ಸಾಗಬೇಕು. ಆಗಲೇ ಜನಜೀವನ ಹಸನಾಗುವುದು.

ಸರ್ದಾರರ ಮಗಳು ಮಣಿಬೆನ್‌ರವರ ಸ್ನೇಹಿತೆ ಶ್ರೀಮತಿ ಸುಸನ ಹೆರಡಿಯರವರು ತಮ್ಮ ಕೃತಿ `A Patriot For Me'ಯನ್ನು ಮುಕ್ತಾಯ ಮಾಡುತ್ತಾ ಸರ್ದಾರರ ಬಗೆಗೆ ವ್ಯಕ್ತಪಡಿಸಿರುವ ಅಭಿಪ್ರಾಯ ಅತ್ಯಂತ ಸೂಕ್ತವಾಗಿದೆ:

'ಸರ್ದಾರರಿಗೆ ನೆಹರುರವರ ಶ್ರೀಮಂತಿಕೆಯ ಹಿನ್ನಲೆ ಇರಲಿಲ್ಲ, ಲೋಕಮಾನ್ಯ ತಿಲಕರ ವಿದ್ವತ್ತು ಇರಲಿಲ್ಲ, ರಾಜಗೋಪಾಲಾಚಾರಿಯವರ ಬೌದ್ಧಿಕ ಸೂಕ್ಷ್ಮತೆ ಇರಲಿಲ್ಲ, ಗಾಂಧೀಜಿಯವರ ಸಂತತನ ಇರಲಿಲ್ಲ ಮತ್ತು ಸುಭಾಷ್ ಚಂದ್ರ ಬೋಸ್‌ರ ಭಾವ ಪ್ರಚೋದಕ ಶಕ್ತಿ ಇರಲಿಲ್ಲ. ಆದರೆ ಅವರ ಮಜಬೂತು ವಾಸ್ತವಿಕತೆ, ಅಚಲ ನಿರ್ಧಾರ, ಸಂಘಟನಾ ಪ್ರತಿಭೆ, ನಾಯಕತ್ವದ ಗುಣ, ಅಧಿಕಾರ ನಿಯೋಜನಾ ಶಕ್ತಿ, ಇವೆಲ್ಲಕ್ಕೂ ಮಿಗಿಲಾಗಿ ತೀವ್ರ ದೇಶಭಕ್ತಿ ಮತ್ತು ಸ್ವಾರ್ಥ ಲಾಭದಿಂದ ವಿಮುಕ್ತತೆ ಅವರನ್ನು ಇತರರಿಗಿಂತ ಉನ್ನತ ಸ್ಥಾನದಲ್ಲಿ ಇರಿಸಿದೆ. ಒಗ್ಗೂಡಿದ ಭಾರತವು ಅವರು ಬಿಟ್ಟು ಹೋಗಿರುವ ಶಾಶ್ವತ ಸ್ಮಾರಕ. ಅದು ಅವರಿಗೆ ಭಾರತದ ಚರಿತ್ರೆಯಲ್ಲಿ ಒಂದು ಶಾಶ್ವತ ಸ್ಥಾನವನ್ನು ಭದ್ರಗೊಳಿಸಿದೆ.'

ಗುಜರಾತ್ ಪ್ರಾಂತ್ಯದಲ್ಲಿ ನಿರ್ಮಾಣವಾಗುತ್ತಿರುವ ೧೮೨ಮೀ ಎತ್ತರದ ಏಕತಾ ಪ್ರತಿಮೆ

ಅನುಬಂಧಗಳು

ಲೇಖಕನ ಅನಿಸಿಕೆ

ಸರ್ದಾರ್ ಪಟೇಲರ ಜೀವನ ಮತ್ತು ಸಾಧನೆಗಳನ್ನು ಅಧ್ಯಯನ ಮಾಡಿ ಅವರ ಜೀವನ ಚರಿತ್ರೆಯನ್ನು ನನ್ನ ಮಾತೃ ಭಾಷೆ ಕನ್ನಡದಲ್ಲಿ ಸುವಿವರವಾಗಿ ರಚಿಸಿದ ಮೇಲೆ ನನಗನ್ನಿಸಿದ್ದು ಹೀಗೆ:

ಅನಿಸಿಕೆ ಒಂದು:

ಸರ್ದಾರ್ ಪಟೇಲರು ಆಧುನಿಕ ಭಾರತ ಕಂಡ ಅತ್ಯಂತ ದೊಡ್ಡ, ಆದರೆ ಅತ್ಯಂತ ಅನ್ಯಾಯಕ್ಕೆ ಒಳಗಾದ ದೇಶಭಕ್ತ ಮತ್ತು ನಾಯಕ.

ಗಾಂಧೀಜಿಗೆ ಅವರ ಅಹಿಂಸಾತತ್ವವೇ ಮುಖ್ಯ, ಮಿಕ್ಕವು ನಂತರ. ನೆಹರುಗೆ ಅಂತರ ರಾಷ್ಟ್ರೀಯ ಅಭಿಪ್ರಾಯಗಳೇ ಮುಖ್ಯ. ಆದರೆ ಪಟೇಲರಿಗೆ 'ಭಾರತವೇ ಮೊದಲು, ಭಾರತವೇ ಕೊನೆ'. ಅದು ಬಿಟ್ಟು ಅವರಿಗೆ ಮತ್ತಾವುದೂ ಮುಖ್ಯವಲ್ಲ. ಅಷ್ಟೇ ಅಲ್ಲ, ಅವರು ಅತ್ಯಂತ ಕ್ರಿಯಾತ್ಮಕ (Practical) ದೇಶಭಕ್ತ.

ಗಾಂಧೀಜಿ ಮತ್ತು ನೆಹರು ಶ್ರೇಷ್ಠರು, ಅಲ್ಲವೆಂದಲ್ಲ. ಆದರೆ ಪಟೇಲರು ಅವರಿಗಿಂತಲೂ ಒಂದು ಕೈ ಮಿಗಿಲು. ಹೇಗೆ? ನನ್ನ ಕಾರಣ ಹೀಗಿದೆ:

ಮೊದಲು ಗಾಂಧೀಜಿ. ಭಾರತ ದೇಶದ ಸ್ವಾತಂತ್ರ್ಯ ಸಂಪಾದನೆಗೆ ಮಹಾತ್ಮನ

ಕಾಣಿಕೆ ಚಿರಸ್ಮರಣೀಯ, ಅಮರ. ಅವರ ಅಹಿಂಸಾತ್ಮಕ ಸಾಮೂಹಿಕ ಸತ್ಯಾಗ್ರಹದ ಕರೆ ಇಡೀ ಭಾರತವನ್ನು ಬ್ರಿಟಿಷರ ವಿರುದ್ಧ ಬಡಿದೆಬ್ಬಿಸಿತು. ಪಟ್ಟಣ ಮತ್ತು ನಗರವಾಸಿಗಳಿಗೆ ಅದರಲ್ಲೂ ವಿದ್ಯಾವಂತರಿಗೆ ಮಾತ್ರ ತಲುಪಿದ್ದ ಸ್ವಾತಂತ್ರ್ಯದ ಕಲ್ಪನೆ ಮತ್ತು ಆಶಯವನ್ನು ಹಳ್ಳಿ ಹಳ್ಳಿಗೂ ಪಸರಿಸಿದವರು ಗಾಂಧೀಜಿ. ಜಡವಾಗಿದ್ದ ಜನ ಮೈ ಚಳಿಯನ್ನು ಕೊಡವಿ ಎದ್ದು ಹೋರಾಡುವಂತೆ ಮಾಡಿದವರು ಗಾಂಧೀಜಿ. ಒಲೆ ಹತ್ತಿ ಉರಿದರೆ ನಿಲಬಹುದಲ್ಲದೆ, ಧರೆ ಹತ್ತಿ ಉರಿದರೆ ನಿಲ್ಲಲಾದೀತೆ? ಆಂಗ್ಲರು ಬೆದರಿದರು, ಬೆಚ್ಚಿದರು ಕೊನೆಗೆ ಅಧಿಕಾರ ತ್ಯಜಿಸಿ ನಡೆದರು. ಅದೆಲ್ಲ ಸತ್ಯ, ಆದರೆ ಸಾವಿರಾರು ಜನರನ್ನು ಅಹಿಂಸಾಮಾರ್ಗದಲ್ಲಿ ಮುನ್ನಡೆಸಲು ಭಾರತದಲ್ಲೂ ಸಾಧ್ಯ – ಎನ್ನುವುದನ್ನು ತೋರಿಸಿ, ಗಾಂಧೀಜಿಯವರು ಅಹಿಂಸಾತ್ಮಕ ಸತ್ಯಾಗ್ರಹವನ್ನು ಹೂಡಲು ಹಾದಿ ಮಾಡಿದವರು ಪಟೇಲರು, ತಮ್ಮ ಕೈರಾ, ಬೋರ್ಸದ್ ಮತ್ತು ಬಾರ್ಡೋಲಿ ರೈತರ ಚಳವಳಿಗಳ ಮೂಲಕ. ಶ್ರೀ ರಾಮನಿಗೆ ಹನುಮಂತ ಹೇಗೆ ಸಹಾಯ, ಸೇವೆ ಮತ್ತು ಬೆಂಬಲವನ್ನು ನೀಡಿದನೋ ಹಾಗೆ ಪಟೇಲರು ಗಾಂಧೀಜಿಯವರಿಗೆ ನೀಡಿದರು.

ಆದರೆ ಅದಕ್ಕೆ ಪ್ರತಿಯಾಗಿ ಗಾಂಧೀಜಿಯವರು ಪಟೇಲರಿಗೆ ನೀಡಿದ್ದು ಏನು? ಮೂರು ಬಾರಿ ಪಟೇಲರು ಒಳ್ಳೆಯ ಸಮಯದಲ್ಲಿ ಕಾಂಗ್ರೆಸ್ ಅಧ್ಯಕ್ಷ ಆಗುವುದನ್ನು ತಪ್ಪಿಸಿದರು. ಅದಕ್ಕಿಂತಲೂ ಮುಖ್ಯವಾಗಿ ಪಟೇಲರು ಸ್ವತಂತ್ರ ಭಾರತದ ಪ್ರಥಮ ಪ್ರಧಾನಮಂತ್ರಿಯಾಗುವ ಚರಿತ್ರಾರ್ಹ ಅವಕಾಶವನ್ನು ತಪ್ಪಿಸಿದರು. ಬೇರೆ ಯಾರೇ ಆಗಿದ್ದರೂ, ನೆಹರು ಆಗಿದ್ದರೂ, ಗಾಂಧೀಜಿಗೆ ತಿರುಗಿ ಬೀಳುತ್ತಿದ್ದರು. ಆದರೆ ಪಟೇಲರು ಗಾಂಧೀಜಿಯ ಮಾತಿಗೆ ಮರುಮಾತಾಡದೆ ತಲೆ ಬಾಗಿದರು. ಅಷ್ಟೇ ಅಲ್ಲ, ದೇಶದ ಹಿತದ ದೃಷ್ಟಿಯಿಂದ ನೆಹರು ಕೈ ಕೆಳಗೆ ಕೆಲಸ ಮಾಡಿದರು ಮತ್ತು ಅನೇಕ ಅವಮಾನಗಳನ್ನೂ ಸಹಿಸಿದರು. ಅಂತಹ ನಿಷ್ಕಾಮ ಕರ್ಮಿ, ತ್ಯಾಗ ಜೀವಿ, ಸಮಾಧಾನ ಚಿತ್ತ, ಶಿಸ್ತಿನ ವ್ಯಕ್ತಿ ಮತ್ತು ದೇಶಭಕ್ತ ಪಟೇಲರು. ಅವರು ಗಾಂಧೀಜಿಯ ಬಗೆಗೆ ಸ್ವಲ್ಪವೂ ಬೇಸರ ತೋರಲಿಲ್ಲ. ಯಾರು ಮಿಗಿಲು? ಗುರುವೋ? ಶಿಷ್ಯನೋ? – ನೀವೇ ಹೇಳಿ.

ನೆಹರುಗಿಂತ ಪಟೇಲರು ಹೇಗೆ ಮಿಗಿಲು? ಎಲ್ಲ ಅಂಶಗಳನ್ನು ಇಲ್ಲಿ ಹೇಳುವ ಅಗತ್ಯವಿಲ್ಲ. ಈ ಕೃತಿ ಓದಿದರೆ ತಾನೇ ಅರ್ಥವಾಗುತ್ತದೆ. ಒಂದೆರಡು ವಿಷಯ ಪ್ರಸ್ತಾಪಿಸಿದರೆ ಸಾಕು. ನೆಹರು ಪ್ರಧಾನಮಂತ್ರಿಯಾಗಲು ಅವಕಾಶ ಬಿಟ್ಟು ಕೊಟ್ಟವರೇ ಪಟೇಲರು. ಪ್ರಧಾನಿಯಾಗುವ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ೧೫ ಪ್ರದೇಶ ಕಾಂಗ್ರೆಸ್ ಸಮಿತಿಗಳ ಪೈಕಿ ೧೨ ಸಮಿತಿಗಳು ಪಟೇಲರ ಹೆಸರನ್ನು

ಸೂಚಿಸಿದ್ದುವು. ನೆಹರು ಹೆಸರನ್ನು ಒಂದು ಸಮಿತಿಯೂ ಸೂಚಿಸಿರಲಿಲ್ಲ. ಆದರೂ ನೆಹರು ಆರಿಸಲ್ಪಟ್ಟಿದ್ದು ಹೇಗೆ? ಗಾಂಧೀಜಿಯ ತಂತ್ರದಿಂದ. ಆಗಲೂ ಪಟೇಲರು ಹೆಸರನ್ನು ಹಿಂತೆಗೆದುಕೊಳ್ಳುವುದಿಲ್ಲವೆಂದು ಕುಳಿತಿದ್ದರೆ ಅವರೇ ಪ್ರಧಾನಮಂತ್ರಿ ಆಗುತ್ತಿದ್ದರು. ಆದರೆ ಅವರಿಗೆ ಅಧಿಕಾರದ ಆಸೆ ಇರಲಿಲ್ಲ. ದೇಶಸೇವೆಗೆ ಒಂದು ಜಾಗ ಬೇಕಾಗಿತ್ತು ಅಷ್ಟೆ. ಅವರು ಗಾಂಧೀಜಿಯ ಆಶಯಕ್ಕೆ ತಲೆ ಬಾಗಿ ಮರುಮಾತಾಡದೆ ತಮ್ಮ ಹೆಸರನ್ನು ಹಿಂತೆಗೆದುಕೊಂಡರು. ಜವಹರ್ ಪ್ರಧಾನಮಂತ್ರಿಯಾದರು.

ಸ್ವಾತಂತ್ರ್ಯ ಬಂದು ಮಂತ್ರಿಮಂಡಲ ರಚನೆಯಾದ ಮೇಲೆ ಉಪ ಪ್ರಧಾನಿ, ಗೃಹಮಂತ್ರಿ ಮತ್ತು ರಾಜ್ಯಗಳ ಮಂತ್ರಿಯಾಗಿ ತಮ್ಮ ಅನಾರೋಗ್ಯವನ್ನೂ ಲೆಕ್ಕಿಸದೆ ಅದ್ಭುತ ಸಾಧನೆ ಮಾಡಿದರು ಪಟೇಲರು. ಆತುರಗಾರ ನೆಹರು ಎಡವಟ್ಟು ಮಾಡಿಕೊಂಡ ಸಂದರ್ಭಗಳಲೆಲ್ಲ ಅವರ ನೆರವಿಗೆ ಧಾವಿಸಿದರು. ಸಂದಿಗ್ಧ ಸಮಯಗಳಲ್ಲಿ ನೆಹರೂಗೆ ಸೂಕ್ತ ಮಾರ್ಗದರ್ಶನ ನೀಡಿದರು. ಮಂತ್ರಿಮಂಡಲದಲ್ಲಿ ನೆಹರೂಗೆ ವಿರೋಧ ಹೆಚ್ಚಿದಾಗ ಅವರನ್ನು ತಳ್ಳಿ ಪಟೇಲರೇ ಪ್ರಧಾನಿ ಆಗಬಹುದಾಗಿತ್ತು. ಆದರೆ ಅವರು ಆ ಕೆಲಸ ಮಾಡಲಿಲ್ಲ. ಸ್ವತಃ ನೆಹರೂ ಅನೇಕ ಸಲ ಪ್ರಧಾನಿ ಪದವಿಗೆ ರಾಜಿನಾಮೆ ನೀಡಲು ಮುಂದಾದಾಗ ಅವರಿಗೆ ಸಮಾಧಾನ ಹೇಳಿ ತಡೆದರು. ಪಟೇಲರಿಗೆ ಅಧಿಕಾರ ಮುಖ್ಯವಾಗಿರಲಿಲ್ಲ. ದೇಶ ಸೇವೆ ಮುಖ್ಯವಾಗಿತ್ತು. ಆದರೆ ನೆಹರು? ಪಾರ್ಶ್ವವಾಯು ಎರಗಿ ಆರೋಗ್ಯ ಶಿಥಿಲವಾದರೂ ಸಾಯುವವರೆಗೆ ಅಧಿಕಾರಕ್ಕೇ ಅಂಟಿಕೊಂಡಿದ್ದರು. ಅದಕ್ಕಿಂತಲೂ ಹೆಚ್ಚಾಗಿ, ನಿಷ್ಠೆಯಿಂದ ಸೇವೆ ಸಲ್ಲಿಸಿದ ಪಟೇಲರನ್ನು, ೫೦೦ಕ್ಕೂ ಹೆಚ್ಚು ದೇಶೀಯ ರಾಜ್ಯಗಳನ್ನು ಒಗ್ಗೂಡಿಸಿ ಪ್ರಧಾನಿ ನೆಹರು ನಿರಾತಂಕವಾಗಿ ಕೆಲಸ ಮಾಡಲು ಅವಕಾಶ ಮಾಡಿದ ಪಟೇಲರನ್ನು ನೆಹರು ಸರಿಯಾಗಿ ನಡೆಸಿಕೊಳ್ಳಲಿಲ್ಲ. ಅವರಿಗೆ ಸಲ್ಲಬೇಕಾದ ಗೌರವವನ್ನು ಸಲ್ಲಿಸಲಿಲ್ಲ. ಪಟೇಲರು ಗತಿಸಿದ ಮೇಲೆ ಸೂಕ್ತ ಸ್ಮಾರಕ ನಿರ್ಮಿಸಲಿಲ್ಲ, ಇತ್ಯಾದಿ..... ಏಕೆ? ಏಕೆ?

ಇದೆಲ್ಲವನ್ನು ಗಮನಿಸಿದಾಗ ಪಟೇಲರ ವ್ಯಕ್ತಿತ್ವ ನೆಹರು ವ್ಯಕ್ತಿತ್ವವನ್ನು ಮೀರಿಸಿದ್ದು ಎಂದು ಯಾರಿಗಾದರೂ ಅನ್ನಿಸುತ್ತದೆ. ಹಾಗೆಂದಾಕ್ಷಣಕ್ಕೆ ನೆಹರು ಏನೇನು ಅಲ್ಲ – ಎಂದು ತಿಳಿಯಬಾರದು. ಅವರೂ ಸಹ ಒಬ್ಬ ಮಹಾನ್ ವ್ಯಕ್ತಿ. ಅಪಾರ ತ್ಯಾಗ ಮಾಡಿದವರು. ವಿದ್ಯಾವಂತ. ಜನರನ್ನು ಅಯಸ್ಕಾಂತದಂತೆ ಆಕರ್ಷಿಸುತ್ತಿದ್ದರು ಇತ್ಯಾದಿ ಇತ್ಯಾದಿ. ಆದರೆ ಅವರಲ್ಲಿ ಅನೇಕ ನ್ಯೂನತೆಗಳೂ ಸಹ ಇದ್ದುವು. ಆದರೆ ಪಟೇಲರು ಹಾಗಿರಲಿಲ್ಲ.

ಅನಿಸಿಕೆ ಎರಡು:

ನೆಹರು ಮತ್ತು ಪಟೇಲ್ ಇಬ್ಬರೂ ಮಹಾನ್ ದೇಶಭಕ್ತರು ಮತ್ತು ದೇಶಕ್ಕಾಗಿ ಮಹತ್ತರ ತ್ಯಾಗ ಮಾಡಿದವರು. ಆದರೆ ಅವರಂತಹ, ಅವರಷ್ಟೇ ದೇಶಭಕ್ತರು ಮತ್ತು ತ್ಯಾಗಿಗಳು ದೇಶದ ಉದ್ದಗಲ ಅಸಂಖ್ಯಾತ ಮಂದಿ ಇದ್ದರು ಎನ್ನುವುದನ್ನು ನಾವು ಮರೆಯಬಾರದು. ಅಲ್ಲದೆ ರಾಜೇಂದ್ರ ಪ್ರಸಾದ್, ಸಿ. ರಾಜಗೋಪಾಲಾಚಾರಿ, ಜೆ.ಬಿ. ಕೃಪಲಾನಿ, ಕೆ. ಎಂ. ಮುನ್ಷಿ, ಸುಭಾಷ್ ಚಂದ್ರ ಬೋಸ್, ಸರೋಜಿನಿ ನಾಯ್ಡು ಮುಂತಾದ ದಿಗ್ಗಜರೂ ಇದ್ದರು. ಆದಾಗ್ಯೂ ಪಟೇಲ್ ಮತ್ತು ನೆಹರು ಮಾತ್ರ ಇತರರಿಗಿಂತ ಮುಂಚೂಣಿಗೆ ಬಂದರು. ಅದಕ್ಕೆ ಕಾರಣವೇನು?

ನೆಹರು ಮುಂಚೂಣಿಗೆ ಬರಲು ಮುಖ್ಯ ಕಾರಣ ಅವರ ಜನಾಕರ್ಷಣೆ. ಅವರು ದೇಶಾದ್ಯಂತ ಪದೇ ಪದೇ ಸುತ್ತಿ ಜನ ಸಂಪರ್ಕವನ್ನು ಗಳಿಸಿದರು. ಅವರ ಭಾಷಣಕ್ಕೆ ಸಾವಿರಾರು ಮಂದಿ ಜಮಾಯಿಸುತ್ತಿದ್ದರು. ಜೊತೆಗೆ ಅವರ ಆಕರ್ಷಕ ಸ್ಫುರದ್ರೂಪ, ವಿದೇಶಿ ವಿದ್ಯಾಭ್ಯಾಸ, ಗ್ರಂಥರಚನೆ, ಶ್ರೀಮಂತಿಕೆಯ ಹಿನ್ನಲೆ, ಸಮಾಜವಾದದ ಪ್ರತಿಪಾದನೆ ಜನರನ್ನು ಅವರೆಡೆಗೆ ನೂಕಿತು. ಅಷ್ಟೇ ಅಲ್ಲದೆ, ಭಾರಿ ಶ್ರೀಮಂತ ವಕೀಲ ಮತ್ತು ರಾಜಕಾರಣಿ ಮೋತಿಲಾಲ್ ನೆಹರು ಮಗ ಎನ್ನುವುದು ಮತ್ತು ಗಾಂಧೀಜಿಯವರು ಹೋದಕಡೆಯಲ್ಲೆಲ್ಲಾ 'Jewel of India' ಎಂದು ಸಾರಿದ್ದು ಹಾಗೂ ತಮ್ಮ ಉತ್ತರಾಧಿಕಾರಿ ಎಂದು ಹೆಸರಿಸಿದ್ದು ಜವಹರ್‌ಗೆ ಭಾರಿ ಅನುಕೂಲವಾಯಿತು.

ಪಟೇಲರಿಗೆ ಕುಟುಂಬದ ಹಿನ್ನಲೆಯಾಗಲಿ ಅಥವಾ ಶ್ರೀಮಂತಿಕೆಯ ಬೆಂಬಲವಾಗಲಿ ಇರಲಿಲ್ಲ. ಅವರು ಸಂಪೂರ್ಣವಾಗಿ ಸ್ವಸಾಧನೆಯಿಂದ ಮುಂಚೂಣಿಗೆ ಬಂದರು. ಕೈರಾ ಸತ್ಯಾಗ್ರಹ, ಬೋರ್ಸದ್ ಸತ್ಯಾಗ್ರಹ, ಬಾರ್ಡೋಲಿ ಸತ್ಯಾಗ್ರಹ, ನಾಗಪುರದ ಧ್ವಜ ಸತ್ಯಾಗ್ರಹ, ಅಹಮದಾಬಾದ್ ಮತ್ತು ಹರಿಹರಪುರದಲ್ಲಿ ಕಾಂಗ್ರೆಸ್ ಅಧಿವೇಶನಗಳ ಅದ್ಭುತ ಏರ್ಪಾಟು, ಅಹಮದಾಬಾದ್ ಪುರಸಭೆಯ ಅಧ್ಯಕ್ಷನಾಗಿ ಒಳ್ಳೆಯ ಕೆಲಸ, ಚುನಾವಣೆಗಳ ಮೇಲುಸ್ತುವಾರಿ ಇತ್ಯಾದಿ ಇತ್ಯಾದಿ ಅದ್ಭುತ ಸಾಧನೆಗಳ ಫಲವಾಗಿ ಮುಂಚೂಣಿಗೆ ಬಂದರು. ಸ್ವಾತಂತ್ರ್ಯ ಬಂದ ಮೇಲಂತೂ ಚಿರಸ್ಮರಣೀಯ ಸಾಧನೆಗಳನ್ನು ಮಾಡಿದರು.

ಅನಿಸಿಕೆ ಮೂರು:

ಸರ್ದಾರರದು ಅಸಾಧಾರಣ ಧೈರ್ಯ ಮತ್ತು ಕಾರ್ಯಶೀಲತೆ. ಮಾತು ಕಡಿಮೆ ಹೆಚ್ಚು ದುಡಿಮೆ. ಹೊರನೋಟಕ್ಕೆ ಗಡಸು. ಆದರೆ ಒಳಗೆ ಮೃದು

ಮನಸು. ಬಾಲ್ಯದಿಂದಲೂ ತ್ಯಾಗಜೀವಿ, ಪರಿಶುದ್ಧ ಕೈ ಬಾಯಿ, ಮಹಾ ಸಹನೆ. ಅವರು ಹುಟ್ಟು ನಾಯಕ – ಇಂತಹ ನಾಯಕನನ್ನು ಪಡೆದದ್ದು ಈ ದೇಶದ ಭಾಗ್ಯ.

ಪಟೇಲರು ಅನೇಕ ಸದ್ಗುಣಗಳ ಆಗರವಾಗಿದ್ದರು. ದೇಶಭಕ್ತಿ, ದೈವಭಕ್ತಿ, ಅದ್ಭುತ ಧೈರ್ಯ, ಅಸಾಧಾರಣ ತ್ಯಾಗ, ಸರಳತೆ, ಕಾರ್ಯಶೀಲತೆ, ಶೀಘ್ರ ನಿರ್ಧಾರ, ದೃಢ ಸಂಕಲ್ಪ, ಮಿತ ಮಾತು, ತಮಗೆ ದ್ರೋಹ ಬಗೆದವರಿಗೂ ಕ್ಷಮೆ ಮತ್ತು ಸಹಾಯ, ಸಹ ಕಾರ್ಯಕರ್ತರ ಯೋಗಕ್ಷೇಮ, ಖಂಡ ತುಂಡ ಮಾತು, ತೀಕ್ಷ್ಣಮತಿ, ದೂರದೃಷ್ಟಿ, ಸಾವಧಾನದ ಆಲೋಚನೆ, ಅಹಿಂಸಾ ದೀಕ್ಷೆ, ವಿರೋಧಿಗಳ ಮೇಲೆ ದ್ವೇಷ ಸಾಧಿಸದೆ ಅವರ ಪ್ರತಿಭೆಯನ್ನು ರಾಷ್ಟ್ರ ಹಿತಕ್ಕೆ ಉಪಯೋಗಿಸಿಕೊಳ್ಳುವ ಮನೋಭಾವ ಇತ್ಯಾದಿ ಇತ್ಯಾದಿ ಗುಣಗಳು ಅವರನ್ನು ಉತ್ತಮೋತ್ತಮ ನಾಯಕನನ್ನಾಗಿ ಮಾಡಿದ್ದವು. ಯಾವ ನಾಯಕರೂ ಇವರ ಎತ್ತರಕ್ಕೆ ಏರಲಾರದಾದರು.

ಅನಿಸಿಕೆ ನಾಲ್ಕು:

ಪಟೇಲರು ಸರ್ವಾದರಣೀಯ ಮತ್ತು ಅನುಕರಣೀಯ ವ್ಯಕ್ತಿ. ಮಗನಾಗಿ, ಸಹೋದರನಾಗಿ, ವಿದ್ಯಾರ್ಥಿ ನಾಯಕನಾಗಿ, ವಿದೇಶದಲ್ಲಿ ವಿದ್ಯಾರ್ಥಿಯಾಗಿ, ವಕೀಲನಾಗಿ, ರೈತನಾಯಕನಾಗಿ, ಪುರಸಭೆಯ ಅಧ್ಯಕ್ಷನಾಗಿ, ಧ್ವಜ ಸತ್ಯಾಗ್ರಹದ ರೂವಾರಿಯಾಗಿ, ಸ್ವಾತಂತ್ರ್ಯ ಹೋರಾಟಗಾರನಾಗಿ, ಕಾರಾಗೃಹ ವಾಸಿಯಾಗಿ, ಗೃಹಮಂತ್ರಿಯಾಗಿ, ರಾಜ್ಯಗಳ ಮಂತ್ರಿಯಾಗಿ, ನೆಹರುಗೆ ಸಹೋದ್ಯೋಗಿಯಾಗಿ, ಗಾಂಧೀಜಿಯ ಶಿಷ್ಯನಾಗಿ, ದೇಶಭಕ್ತನಾಗಿ, ಸಮಾಜ ಸೇವಕನಾಗಿ, ಅಧಿಕಾರಿಗಳಿಗೆ ಮಾರ್ಗದರ್ಶಕನಾಗಿ ಮತ್ತು ಭಾರತ ಒಕ್ಕೂಟ ನಿರ್ಮಾಪಕನಾಗಿ ಅವರ ನಡವಳಿಕೆ ಮತ್ತು ಸಾಧನೆ simply superb, ಅದ್ಭುತ, ಅದ್ಭುತ ಮತ್ತು ಸಂಪೂರ್ಣ ದೋಷ ಮುಕ್ತ.

ಇಂತಹ ನಾಯಕನ ಜೀವನದಿಂದ ನಮ್ಮ ಯುವಕ ಯುವತಿಯರು ಸ್ಫೂರ್ತಿ ಪಡೆದರೆ ಅವರು ರಾಷ್ಟ್ರ ನಿರ್ಮಾಪಕರಾಗುತ್ತಾರೆ ಮತ್ತು ಇಂದಿನ ರಾಷ್ಟ್ರ ಘಾತಕ ಚಟುವಟಿಕೆಗಳು ಶಮನವಾಗುತ್ತವೆ.

ಅಂತಹ ಪಟೇಲರನ್ನು ಜನಮಾನಸದಿಂದ ವ್ಯವಸ್ಥಿತವಾಗಿ ಮರೆಮಾಡ ಲಾಗಿತ್ತು. ಶಾಲಾ ಪಠ್ಯ ಪುಸ್ತಕಗಳಲ್ಲಿ ಅವರ ಬಗೆಗೆ ಪಾಠಗಳನ್ನು ಇಡಲಿಲ್ಲ. ಇತರ ಕೆಲವು ನಾಯಕರ ಹುಟ್ಟು ಹಬ್ಬಗಳನ್ನು ಅದ್ದೂರಿಯಾಗಿ ಆಚರಿಸಿದರೆ

ಇವರನ್ನು ಹುಟ್ಟು ಹಬ್ಬದ ದಿನ ನೆನಪಿಸಿಕೊಳ್ಳಲೂ ಇಲ್ಲ. ಇವರ ಬಗೆಗೆ ಕೃತಿಗಳನ್ನು ಹೊರತರಲಿಲ್ಲ, ಇತ್ಯಾದಿ. ಇದಕ್ಕೆ ಕಾರಣವೇನು? ಕಾರಣರಾರು? ಯಾರೆಂಬುದು ಸ್ಪಷ್ಟ. ನಾನು ಹೇಳಬೇಕಾಗಿಲ್ಲ. ಪಟೇಲರ ಹೆಸರು ಹೊರಬಂದರೆ, ಅವರ ಸಾಧನೆ ಜನರಿಗೆ ಸಂಪೂರ್ಣವಾಗಿ ತಿಳಿದರೆ ತಮ್ಮ ಘನತೆ, ಗೌರವ ಜನರ ದೃಷ್ಟಿಯಲ್ಲಿ ಕುಗ್ಗಿಹೋಗುತ್ತದೆ ಎಂದು ಅವರು ಭಾವಿಸಿರಬೇಕು ಮತ್ತು ಭಯ ಪಟ್ಟಿರಬೇಕು. ಇಲ್ಲದೆ ಹೋದರೆ ಹೀಗೇಕೆ ಮಾಡುತ್ತಿದ್ದರು? ಎಂತಹ ಹಿರಿಯ ಗಣ್ಯ ವ್ಯಕ್ತಿಗಳೂ ಕೆಲವೊಮ್ಮೆ ಸಣ್ಣತನ ತೋರಿಸುತ್ತಾರೆ ಅನ್ನಿಸುತ್ತದೆ. ಒಟ್ಟಿನಲ್ಲಿ ಪಟೇಲರ ಸಾಧನೆಗಳನ್ನು ಮತ್ತು ದೇಶಕ್ಕೆ ಅವರ ಅಮೂಲ್ಯ ಸೇವೆಯನ್ನು ಪ್ರಚಾರವಾಗದಂತೆ ಮುಚ್ಚಿಡಲಾಯಿತು.

ಆದರೆ ಕಸ್ತೂರಿಯ ಪರಿಮಳವನ್ನು ಎಷ್ಟು ದಿನ ಮುಚ್ಚಿಡಲು ಸಾಧ್ಯ? ಅದು ಹೊರ ಬರಲೇ ಬೇಕು. ಈಗ ಹೊರಬರುತ್ತಿದೆ.

ಅನಿಸಿಕೆ ಐದು:

೧೯೪೭ರ ಭಾರತ ವಿಭಜನೆ ಒಂದು ದೊಡ್ಡ ದುರಂತ. ಇದಕ್ಕೆ ಕಾರಣರಾರು? ಕಾರಣವೇನು? – ಇವು ಈಗಲೂ ಜನರನ್ನು ಕಾಡುತ್ತಿರುವ ಪ್ರಶ್ನೆಗಳು. ದೇಶ ವಿಭಜನೆಗೆ ಗಾಂಧೀಜಿ ಕಾರಣರಲ್ಲ, ನೆಹರು ಮತ್ತು ಪಟೇಲರೂ ಕಾರಣರಲ್ಲ. ಅದಕ್ಕೆ ಕಾರಣ ಬ್ರಿಟಿಷ್ ವೈಸ್‌ರಾಯರ ಒಡೆದು ಆಳುವ ನೀತಿ ಮತ್ತು ಜಿನ್ನಾನಿಗೆ ಇದ್ದ ಅಧಿಕಾರ ದಾಹ. ೧೯೦೯ರಷ್ಟು ಹಿಂದೆಯೇ ಮುಸ್ಲಿಮರಿಗೆ ಪ್ರತ್ಯೇಕ ಚುನಾವಣಾ ಪದ್ಧತಿಯನ್ನು (Seperate electorate system) ಜಾರಿಗೆ ತಂದು ಬ್ರಿಟಿಷರು ವಿಷಬೀಜ ಬಿತ್ತಿದರು. ಹಿಂದೂ ಮತ್ತು ಮುಸ್ಲಿಮರು ಬೇರೆ ಬೇರೆ ಅನ್ನುವ ಭಾವನೆಯನ್ನು ಮುಸ್ಲಿಮರಲ್ಲಿ ಹುಟ್ಟುಹಾಕಿದರು. ಆ ನಂತರ ೧೯೪೩ರ ಅಕ್ಟೋಬರ್ ೧ರಿಂದ ೧೯೪೭ರ ಫೆಬ್ರುವರಿ ೨೧ರವರೆಗೆ ವೈಸ್‌ರಾಯ್ ಆಗಿದ್ದ ವೇವೆಲ್ಲನು ಜಿನ್ನಾನಿಗೆ ಪ್ರತ್ಯಕ್ಷ ಮತ್ತು ಪರೋಕ್ಷ ಬೆಂಬಲ ನೀಡಿ, ಅವನು (ಜಿನ್ನಾ) ಪಾಕಿಸ್ತಾನದ ಸೃಷ್ಟಿಗೇ ಬಲವಾಗಿ ಅಂಟಿಕೊಳ್ಳುವ ಹಾಗೆ ಮಾಡಿದನು. ವಿವರಗಳಿಗೆ ಈ ಕೃತಿಯನ್ನು ಓದಿ.

ಅನಿಸಿಕೆ ಆರು:

ಸರ್ದಾರ್ ಪಟೇಲರು ಮುಸ್ಲಿಂ ವಿರೋಧಿ ಎಂದು ಕೆಲವರು ಗಾಂಧೀಜಿ ಮತ್ತು ನೆಹರು ಮುಂದೆ ಚಾಡಿ ಹೇಳಿದ್ದರು ಮತ್ತು ಆ ಭಾವನೆಯನ್ನು ಪ್ರಚಾರ ಮಾಡಿದರು. ಅದು ಒಂದು ಕುತಂತ್ರವೇ ಹೊರತು ಸತ್ಯ ಸಂಗತಿಯಲ್ಲ. ನೆಹರು

ಮತ್ತು ಪಟೇಲರ ನಡುವೆ ಕಂದಕವನ್ನು ದೊಡ್ಡದು ಮಾಡಿ ತಮ್ಮ ಬೇಳೆ ಬೇಯಿಸಿಕೊಳ್ಳುವುದಕ್ಕಾಗಿ ಕೆಲವರು ಹೂಡಿದ ಕುತಂತ್ರ ಅದು. ಪಟೇಲರ ಜೀವನ ಚರಿತ್ರೆಯನ್ನು ಓದಿದರೆ ಅವರು ಮುಸ್ಲಿಂ ದ್ವೇಷಿಯಾಗಿರಲಿಲ್ಲ ಎನ್ನುವುದು ಸ್ಪಷ್ಟವಾಗುತ್ತದೆ. ಪಾಕಿಸ್ತಾನಕ್ಕೆ ಪಲಾಯನ ಮಾಡುತ್ತಿದ್ದ ಮುಸ್ಲಿಮರ ಮೇಲೆ ಪೂರ್ವ ಪಂಜಾಬಿನ ಸಿಕ್ಖರು ಹಲ್ಲೆ ಮಾಡುತ್ತಾರೆಂಬ ವರದಿ ಬಂದ ತಕ್ಷಣ ಪಟೇಲರು ಪೂರ್ವ ಪಂಜಾಬಿಗೆ ಧಾವಿಸಿ ಸಿಕ್ಖರ ಮನವೊಲಿಸಿ ಮುಸ್ಲಿಮರು ಸುರಕ್ಷಿತವಾಗಿ ಗಡಿ ದಾಟುವಂತೆ ಮಾಡಿದ್ದನ್ನು ಇಲ್ಲಿ ಸ್ಮರಿಸಬಹುದು. (ಈ ಕೃತಿಯ ೪೬ನಿಂದ ೪೭ನೇ ವರೆಗಿನ ಪುಟಗಳನ್ನು ಓದಿ)

ಅನಿಸಿಕೆ ಏಳು:

ವಸ್ತುನಿಷ್ಠತೆ ಸರ್ದಾರರ ಪ್ರಧಾನ ಗುಣ. ಅವರು ಗರಿಗೆದರಿ ಕಲ್ಪನಾ ಗಗನದಲ್ಲಿ ಹಾರಾಡುವ ಹಕ್ಕಿಯಲ್ಲ. ಮಣ್ಣಿನ ನೆಲದ ಮೇಲೆ ಪಾದ ಊರಿ ವಾಸ್ತವ ಜಗತ್ತನ್ನು ಎದುರಿಸುವ ವ್ಯಕ್ತಿ ಅವರು. ಅದರಿಂದಲೇ ಅವರು ಬರೇ ಕನಸು ಕಾಣದೆ ಕಲ್ಪನಾ ಲೋಕದಲ್ಲಿ ವಿಹರಿಸದೆ, ವಾಸ್ತವ ಪರಿಹಾರಗಳನ್ನು ಕಂಡು ಹಿಡಿದು ಸಮಸ್ಯೆಗಳನ್ನು ಪರಿಹರಿಸಿ ದೇಶವನ್ನು ಸುಭದ್ರಗೊಳಿಸಿದರೇ ಹೊರತು ಭಾವಾವೇಶಕ್ಕೆ ಒಳಗಾಗಿ ಸಮಸ್ಯೆಗಳನ್ನು ಜಟಿಲಗೊಳಿಸಿ ದೇಶಕ್ಕೆ ಅಭದ್ರತೆಯನ್ನು ಉಂಟು ಮಾಡಲಿಲ್ಲ. ಅದಕ್ಕೆ ಉದಾಹರಣೆಗಳು ಅವರ ಜೀವನದಲ್ಲಿ ವಿಪುಲವಾಗಿ ಸಿಗುತ್ತವೆ.

ಇವು ನನ್ನ ಪ್ರಾಮಾಣಿಕ ಅನಿಸಿಕೆಗಳು. ಈ ಅನಿಸಿಕೆಗಳನ್ನು ಎಲ್ಲಾ ಓದುಗರು ಒಪ್ಪಬೇಕೆಂದೇನಿಲ್ಲ. ಪ್ರತೀಯೊಬ್ಬರಿಗೂ ತಮ್ಮದೇ ಆದ ಅಭಿಪ್ರಾಯ ಇಟ್ಟುಕೊಳ್ಳುವ ಸ್ವಾತಂತ್ರ್ಯ ಉಂಟು.

ಸರ್ದಾರ್ ಪಟೇಲರ ಜೀವನ ಮತ್ತು ಸಾಧನೆ ಹಿಮಾಲಯದಷ್ಟು ಎತ್ತರ ಮತ್ತು ಸಾಗರದಷ್ಟು ವಿಸ್ತಾರ. ಆ ಮಹಾ ನಾಯಕನಿಗೆ ನನ್ನ ಕೋಟಿ ಕೋಟಿ ನಮಸ್ಕಾರಗಳು.

❖ ◆ ❖

ಅಭಿಪ್ರಾಯಗಳು

ಅಭಿಪ್ರಾಯ : ೧

"ಭಾರತ ಒಕ್ಕೂಟದ ನಿರ್ಮಾಪಕ, ಉಕ್ಕಿನ ಮನುಷ್ಯ ಸರ್ದಾರ್ ವಲ್ಲಭ ಭಾಯ್ ಪಟೇಲ್" ಮ.ಸು.ಮ. ಅವರ ಲೇಖನಿಯಿಂದ ಕನ್ನಡ ಸಾಹಿತ್ಯಲೋಕಕ್ಕೆ ಬರುತ್ತಿರುವ ಅಮೂಲ್ಯ ಕೊಡುಗೆ. ಇತ್ತೀಚಿನ ದಿನಗಳಲ್ಲಿ ರಾಷ್ಟ್ರವಾದದ ಬಗೆಗೆ ಬಹಿರಂಗವಾಗಿ ಹಾಗೂ ಮುಕ್ತವಾಗಿ ಚರ್ಚೆ ಮಾಡಲೂ ಸಹ ಹಿಂದೆಮುಂದೆ ನೋಡಬೇಕಾದ ಪರಿಸ್ಥಿತಿ ಉದ್ಭವವಾಗಿರುವಾಗ, ಮ.ಸು.ಮ ಅವರ ರಾಷ್ಟ್ರ ನಿರ್ಮಾತೃಗಳ ಜೀವನ ಚರಿತ್ರೆಯ ಸರಮಾಲೆ ನಿಜಕ್ಕೂ ಒಂದು ಅಭಿನಂದನೀಯ ಪ್ರಯತ್ನ. ಇದರಡಿಯಲ್ಲಿ ಬಂದಿರುವ ಸರ್ದಾರ್ ಪಟೇಲರ ಜೀವನ ಚರಿತ್ರೆ ಈವರೆಗಿನ ಅವರ ಎಲ್ಲ ಕೃತಿಗಳಿಗೆ ಕಳಶಪ್ರಾಯದಂತಿದೆ.

ಈ ಜೀವನ ಚರಿತ್ರೆಯ ಕಥಾವಸ್ತು ಭಾರತದ ಇತಿಹಾಸದಲ್ಲೇ ಅಪ್ರಮೇಯ ರೆನಿಸಿ, ಭಾರತದ ಬಿಸ್ಮಾರ್ಕ್ ಎಂದು ಪ್ರಸಿದ್ಧರಾಗಿರುವ ಗಾಂಧೀಜಿಯ ಕಟ್ಟಾ ಅನುಯಾಯಿಯೆಂದೇ ಗುರುತಿಸಲ್ಪಡುವ ಸರ್ದಾರ್ ಪಟೇಲ್ ಅವರು. ಇಂಥಹ ಅದ್ವಿತೀಯ ನಾಯಕನ ಜೀವನ ಚರಿತ್ರೆಯನ್ನು ಕೈಗೆ ತೆಗೆದುಕೊಂಡಾಗ ಓದುಗನ ನಿರೀಕ್ಷೆ ಸ್ವಾಭಾವಿಕ ವಾಗಿಯೇ ಉನ್ನತ ಸ್ತರದ್ದಾಗಿ ಇರುತ್ತದೆ ಮತ್ತು ಪಟೇಲರ ಸಾರ್ವಜನಿಕ ಜೀವನಕ್ಕೆ ಸಂಬಂಧಿಸಿದಂತೆ ಬಲು ಪ್ರಚಲಿತ ಪ್ರಶ್ನೆಗಳಿಗೆ ಪ್ರಕಾಶನವಾಗುವ ಪ್ರತಿ ಕೃತಿಯಲ್ಲೂ ಉತ್ತರರೂಪದಲ್ಲಿ ಸ್ವಲ್ಪ ಹೊಸದೇನನ್ನೋ ಓದುಗ ಹುಡುಕುವುದೂ ಕೂಡ ಅಷ್ಟೇ ಸಹಜ ಹಾಗೂ ಸ್ವಾಭಾವಿಕ ಆಗಿರುತ್ತದೆ.

ಉದಾಹರಣೆಗೆ, ಪಟೇಲರು ಭಾರತದ ಮೊದಲ ಪ್ರಧಾನಿ ಏಕೆ ಆಗಲಿಲ್ಲ. ಪಟೇಲ್ ಮತ್ತು ನೆಹರು ಮಧ್ಯೆ ಇದ್ದವೆನ್ನಲಾದ ಸೈದ್ಧಾಂತಿಕ ಘರ್ಷಣೆಗಳು ಸ್ವಾತಂತ್ರ್ಯೋತ್ತರ ಭಾರತದ ಮೇಲೆ ಎಷ್ಟರ ಮಟ್ಟಿಗೆ ಹಾಗೂ ಯಾವ ರೀತಿಯಲ್ಲಿ ಪರಿಣಾಮ ಬೀರಿದುವು. ಇಂಥಹ ಹಲವಾರು ಪ್ರಶ್ನೆಗಳು ಓದುಗರ ಮನಸ್ಸಿನಲ್ಲೇಳುವುದು ಸಹಜ. ಮ.ಸು.ಮ ಅವರ ಕೃತಿ ಈ ಯಾವುದೇ ವಿಷಯಗಳಲ್ಲೂ ಓದುಗನ ನಿರೀಕ್ಷೆಯನ್ನು ಸುಳ್ಳು ಮಾಡುವುದಿಲ್ಲ.

ಪುಸ್ತಕವನ್ನು ಕೈಗೆತ್ತಿಕೊಂಡಾಗ ಅದರ ಗಾತ್ರವನ್ನು ನೋಡಿ ಮೊದಲು ಸ್ವಲ್ಪ ಅಳುಕೆನಿಸಿದರೂ,ಅತ್ಯಂತ ಸುಂದರವಾದ ನಿರೂಪಣೆ, ಪ್ರೌಢತಮ ಭಾಷೆಯ ಪ್ರಯೋಗ ಹಾಗೂ ನಮ್ಮ ದೇಶದ ಸ್ವಾತಂತ್ರ್ಯದ ಹೋರಾಟದ ಬಗ್ಗೆ ಸಿಗುವ ಅನೇಕಾನೇಕ ಒಳ ಮಾಹಿತಿಗಳು ಪುಸ್ತಕವನ್ನು ಬಹಳ ಸುಲಭವಾಗಿ ಓದಿಸಿಕೊಂಡು ಹೋಗುತ್ತವೆ.

ಸರ್ದಾರ್ ವಲ್ಲಭಭಾಯ್ ಪಟೇಲರ ಜೀವನಕಾಲ ಹಾಗೂ ಅವರು ಸ್ವಾತಂತ್ರ್ಯ ಹೋರಾಟದಲ್ಲಿ ನಿರ್ವಹಿಸಿದ ಭೂಮಿಕೆಯನ್ನು ಗಮನದಲ್ಲಿಟ್ಟು ಕೊಂಡಾಗ, ಪಟೇಲರ ಜೀವನ ಚರಿತ್ರೆ, ಸ್ವಾತಂತ್ರ್ಯ ಹೋರಾಟದ ಇತಿಹಾಸದ ಒಂದು ಪ್ರಮುಖ ಭಾಗ ಎಂದೆನಿಸದೇ ಇರಲಾರದು. ಪ್ರಸ್ತುತ ಕೃತಿಯಲ್ಲೂ ಸ್ವಾತಂತ್ರ್ಯ ಹೋರಾಟದ ಮಾಹಿತಿ ಸವಿಸ್ತಾರವಾಗಿ ಪುಸ್ತಕದುದ್ದಕ್ಕೂ ಕಂಡುಬಂದರೂ ಸಹ ಅದು ನಿರೂಪಣೆಯ ಅವಿಭಾಜ್ಯ ಅಂಗವಾಗಿ ಹೊರಹೊಮ್ಮಿದೆಯೇ ಹೊರತು ಎಲ್ಲೂ ಅದು ಅನಗತ್ಯ ವಿವರಗಳಂತೆ ಭಾಸವಾಗುವುದಿಲ್ಲ. ಕಾಂಗ್ರೆಸ್ ಪಕ್ಷದ ಬೆಳವಣಿಗೆ, ಹೋರಾಟದ ಮುಂಚೂಣಿಯಲ್ಲಿ ಅದರ ಪಾತ್ರ, ಬ್ರಿಟಿಷ್ ಆಡಳಿತದೊಂದಿಗಿನ ಅದರ ನಿರಂತರ ಬದಲಾಗುತ್ತಿದ್ದ ಸಂಬಂಧ, ಮುಸ್ಲಿಂ ಲೀಗ್ ನೊಂದಿಗಿನ ಕಡೆಯವರೆಗೂ ನಡೆದ ಗುದ್ದಾಟ ಎಲ್ಲವೂ ಸವಿಸ್ತಾರವಾಗಿ ಪ್ರಸ್ತುತವಾಗಿವೆ. ಈ ಎಲ್ಲದರಲ್ಲೂ ಸಹ ಸರ್ದಾರ್ ಪಟೇಲರ ಸ್ವಾರ್ಥರಹಿತ ರಾಷ್ಟ್ರಹಿತದ ಧೋರಣೆ, ನಿರ್ಭೀತ ಮನೋಭಾವ, ಅದಮ್ಯ ಹುಮ್ಮಸ್ಸು, ಹೋರಾಟ ಮನೋಭಾವ, ಅತ್ಯಂತ ನಿಖರ ಹಾಗೂ ಸ್ಪಷ್ಟವಾದ ಯೋಚನಾಲಹರಿ ಹಾಗೂ ಅಷ್ಟೇ ನಿಖರ ಹಾಗೂ ಸ್ಪಷ್ಟವಾದ ಮಾತುಗಳು ಎದ್ದು ಕಾಣಿಸುತ್ತಿವೆ. ಪಟೇಲರ ಈ ಅನುಪಮ ವ್ಯಕ್ತಿತ್ವ ಅವರನ್ನು ಗಾಂಧೀಜಿಯವರನ್ನು ಹೊರತುಪಡಿಸಿ ಅಂದಿನ ಉಳಿದೆಲ್ಲಾ ನಾಯಕರುಗಳಿಗಿಂತ ಬಹು ಎತ್ತರದ ಮಟ್ಟಕ್ಕೆ ಏರಿಸುತ್ತದೆ.

ದೇಶದ ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಬೇರೆ ಬೇರೆ ನಾಯಕರುಗಳ ನಡುವೆ ಇದ್ದ ಸೈದ್ಧಾಂತಿಕ, ವೈಯಕ್ತಿಕ ತಿಕ್ಕಾಟಗಳು ಹೇಗೆ ಸ್ವಾತಂತ್ರ್ಯ ಹೋರಾಟಕ್ಕೆ

ಹೊಸ ಹೊಸ ತಿರುವುಗಳನ್ನು ಕೊಟ್ಟು ಅದರ ಅಂತಿಮ ಫಲಿತಾಂಶವನ್ನೇ ಬದಲಿಸಿತು ಎನ್ನುವುದು ಸ್ವಲ್ಪ ಮಟ್ಟಿಗೆ ಸಾರ್ವಜನಿಕ ಮಾಹಿತಿ ಆಗಿದ್ದರೂ ಸಹ ಪ್ರಸ್ತುತ ಪುಸ್ತಕದಲ್ಲಿ ಅದು ಬಹಳ ನಿಖರತೆಯಿಂದ, ವಿವರವಾಗಿ ವಸ್ತುನಿಷ್ಠವಾಗಿ ಪ್ರಚುರವಾಗಿದೆ. ಹೆಚ್ಚು ಪ್ರಚಲಿತವಿಲ್ಲದ ಸಾಕಷ್ಟು ಹೊಸ ವಿಷಯಗಳೂ ಕಂಡು ಬರುತ್ತವೆ. ಕಾಂಗ್ರೆಸ್ ನಾಯಕ ಕೆ.ಎಫ್.ನಾರಿಮನ್ ಬೊಂಬಾಯಿ ಪ್ರಾಂತ್ಯದ ಪ್ರಧಾನಮಂತ್ರಿ ಆಗಲು ಮಾಡುವ ಕಸರತ್ತು ಹಾಗೂ ಅದು ನೆರವೇರದಿದ್ದಾಗ ಪಟೇಲರ ವಿರುದ್ಧ ಮಾಡಿದ ಮಿಥ್ಯಾರೋಪ ಎಲ್ಲವೂ ಈಗಿನ ರಾಜಕೀಯ ಕೆಸರಾಟದ ಪೀಠಿಕೆ ಎನಿಸಿದರೆ ಆಶ್ಚರ್ಯವಿಲ್ಲ. ಅದೇ ರೀತಿ ನೆಹರು ಮತ್ತು ಪಟೇಲರ ನಡುವಣ ಸಂಬಂಧದ ವಿವಿಧ ಆಯಾಮಗಳು ಪುಸ್ತಕದುದ್ದಕ್ಕೂ ಕಂಡು ಬರುತ್ತವೆ. ಬಹಳಷ್ಟು ವಿಷಯಗಳಲ್ಲಿ ಮೂಲಭೂತ ಮತಬೇಧಗಳಿದ್ದರೂ ಸಹ ಹೇಗೆ ಈ ಇಬ್ಬರೂ ಮಹಾನ್ ನಾಯಕರು ಅತೀವ ದೇಶಭಕ್ತಿ ಹಾಗೂ ರಾಜಕೀಯ ಮುತ್ಸದ್ದಿತನದ ಮೂಲಕ ಮಹಾತ್ಮಾ ಗಾಂಧೀಜಿಯವರ ನೇತೃತ್ವದಲ್ಲಿ ತಮ್ಮನ್ನು ತಾವು ದೇಶಸೇವೆಗೆ, ಸ್ವಾತಂತ್ರ್ಯ ಹೋರಾಟಕ್ಕೆ ಹಾಗೂ ನಂತರ ರಾಷ್ಟ್ರಸಂಘಟನೆಗೆ ಸಂಪೂರ್ಣವಾಗಿ ಸಮರ್ಪಿಸಿಕೊಳ್ಳುತ್ತಾರೆ ಅನ್ನುವುದು ಬಹಳ ಸಮರ್ಪಕವಾಗಿ ಹೊರಬಂದಿದೆ. ಬಾಪೂಜಿಯವರ ಬರ್ಬರ ಹತ್ಯೆಯ ಬೆನ್ನಲ್ಲೇ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಈ ರಾಷ್ಟ್ರನಾಯಕರಿಬ್ಬರ ನಡುವೆ ಅನಗತ್ಯ ಸಂಶಯ ಹುಟ್ಟುಹಾಕಿ ವಿಷಬೀಜವನ್ನು ಬಿತ್ತಲು ಪ್ರಯತ್ನಿಸಿದಾಗ ಈ ಮಹನೀಯರು ನಡೆದುಕೊಂಡ ರೀತಿ ಈಗಿನ ರಾಜಕೀಯ ನಾಯಕರಿಗೆ ಮಾದರಿಯಾಗಿದೆ. ಈ ಸಂದರ್ಭದಲ್ಲಿ ಜವಹರಲಾಲ್ ನೆಹರು ಪಟೇಲರಿಗೆ ಬರೆದ ಪತ್ರದಲ್ಲಿ "..ನಾವು ಕಾಲು ಶತಮಾನದಿಂದ ಪರಸ್ಪರ ಸಾಮೀಪ್ಯದಿಂದ ಕೆಲಸ ಮಾಡುತ್ತ ಬಂದಿದ್ದೇವೆ. ಅನೇಕ ಬಿರುಗಾಳಿಗಳನ್ನು ಮತ್ತು ಅಪಾಯಗಳನ್ನು ಒಟ್ಟಿಗೆ ಎದುರಿಸಿದ್ದೇವೆ. ಈ ಅವಧಿಯಲ್ಲಿ ನಿಮ್ಮ ಬಗೆಗೆ ಪ್ರೀತಿ ಮತ್ತು ಗೌರವ ಹೆಚ್ಚುತ್ತಾ ಹೋಗಿವೆ ಎಂದು ನಾನು ಪೂರ್ಣ ಪ್ರಮಾಣಿಕತೆಯಿಂದ ಹೇಳಬಲ್ಲೆ. ಅವನ್ನು ಯಾವುದೂ ಕಡಿಮೆ ಮಾಡಲಾರದು ಎಂದು ಭಾವಿಸಿದ್ದೇನೆ. ನಮ್ಮ ನಡುವಣ ಭಿನ್ನತೆಗಳೂ ಸಹ ನಮ್ಮ ನಡುವೆ ಇರುವ ಅಧಿಕ ಒಪ್ಪಿಗೆಯ ಅಂಶಗಳನ್ನು ಮತ್ತು ನಾವು ಪರಸ್ಪರ ತೋರುತ್ತಿರುವ ಗೌರವವನ್ನು ಹೊರಸೂಸಿವೆ....." ಎನ್ನುತ್ತಾರೆ. ಇದಕ್ಕುತ್ತರವಾಗಿ ಸರ್ದಾರ್ ಪಟೇಲರು "ಒಂದು ಸಾಮಾನ್ಯ ಉದ್ದೇಶಕ್ಕಾಗಿ ನಾವಿಬ್ಬರೂ ಜೀವನ ಪರ್ಯಂತ ಸಹಚರರಾಗಿದ್ದೇವೆ. ನಮ್ಮಲ್ಲಿದ್ದ ದೃಷ್ಟಿಕೋನ ಮತ್ತು ಮನೋಭಾವದ ಭಿನ್ನತೆಗಳನ್ನು ಮೀರಿದ ದೇಶದ ಪರಮಹಿತ ಮತ್ತು ನಮ್ಮಿಬ್ಬರ ಪರಸ್ಪರ ಪ್ರೀತಿ ಮತ್ತು ಗೌರವ ನಮ್ಮನ್ನು ಒಟ್ಟಿಗೆ ಬೆಸೆದಿದೆ. ನಾವಿಬ್ಬರೂ ತೀವ್ರಾಸಕ್ತಿಯಿಂದ

ನಮ್ಮ ನಮ್ಮ ದೃಷ್ಟಿಕೋನ ಅಥವಾ ಕೆಲಸ ಮಾಡುವ ವಿಧಾನಕ್ಕೆ ತೀವ್ರವಾಗಿ ಅಂಟಿಕೊಂಡಿದ್ದೇವೆ. ಆದಾಗ್ಯೂ ನಾವು ಹೃದಯದ ಏಕತೆಯನ್ನು ಯಾವಾಗಲೂ ಉಳಿಸಿಕೊಂಡಿದ್ದೇವೆ. ಅದು ಅನೇಕ ಒತ್ತಡ ಮತ್ತು ಪ್ರಯಾಸಗಳನ್ನು ಮೆಟ್ಟಿ ನಿಂತಿದೆ. ನಾವು ಕಾಂಗ್ರೆಸ್ಸು ಹಾಗೂ ಸರ್ಕಾರದಲ್ಲಿ ಒಟ್ಟಿಗೆ ಕೆಲಸ ಮಾಡಲು ಶಕ್ತರನ್ನಾಗಿ ಮಾಡಿದೆ" ಎನ್ನುತ್ತಾರೆ. ಪುಸ್ತಕದುದ್ದಕ್ಕೂ ಇಂಥವೇ ಉದಾತ್ತ ಭಾವನೆಗಳನ್ನು ಸೂಸುವ ಹಾಗೂ ವಿಷಯ ಪ್ರಖರತೆಯನ್ನು ಪ್ರತಿ ಬಿಂಬಿಸುವ ಹಲವಾರು ಪತ್ರಗಳು ಮ.ಸು.ಮ ಅವರ ಪ್ರೌಢ ಭಾಷಾ ಪ್ರಯೋಗದ ಮೂಲಕ ಅತ್ಯಂತ ಸೊಗಸಾಗಿ ಮೂಡಿ ಬಂದಿವೆ. ಸರ್ದಾರ್ ಪಟೇಲರ ಪತ್ರಗಳ ಸಂಗ್ರಹವೇ ಪ್ರಸ್ತುತ ಕೃತಿಯನ್ನು ಸಂಗ್ರಹಯೋಗ್ಯವಾಗಿಸುತ್ತದೆ ಎಂದರೆ ಅದು ಸ್ವಲ್ಪವೂ ಅತಿಶಯೋಕ್ತಿಯಲ್ಲ.

ಸರ್ದಾರ್ ಪಟೇಲ್ ಭಾರತ ಒಕ್ಕೂಟದ ನಿರ್ಮಾಪಕನೆಂದೇ ಹೆಚ್ಚು ಪರಿಚಿತ. ಇವತ್ತು ಭಾರತ ವಿಶ್ವದ ಅಗ್ರಮಾನ್ಯ ಹಾಗೂ ಸಶಕ್ತ ರಾಷ್ಟ್ರಗಳಲ್ಲೊಂದಾಗಿ ಗಣಿಸಲ್ಪಡುತ್ತಿದೆ ಎಂದರೆ ಅದಕ್ಕೆ ಪ್ರಮುಖ ಕಾರಣಕರ್ತೃಗಳಲ್ಲಿ ಸರ್ದಾರ್ ಪಟೇಲ್ ಅಗ್ರಗಣ್ಯರು. ತಮ್ಮ ಅನಾರೋಗ್ಯವನ್ನು ಸಂಪೂರ್ಣವಾಗಿ ಕಡೆಗಣಿಸಿ ಅಂದು ನೂರಾರು ಭಾಗಗಳಾಗಿದ್ದ ಭಾರತವನ್ನು ಒಂದುಗೂಡಿಸುವಲ್ಲಿ ಅವರು ನಿರ್ವಹಿಸಿದ ಪಾತ್ರ ಅದ್ವಿತೀಯ. ಪ್ರಸಕ್ತ ಪುಸ್ತಕದಲ್ಲಿ ಪ್ರತಿಯೊಂದು ಪ್ರಾಂತ್ಯಗಳನ್ನು ಒಕ್ಕೂಟಕ್ಕೆ ಸೇರಿಸುವಲ್ಲಿ ಉದ್ಭವಿಸಿದ ಸಮಸ್ಯೆಗಳನ್ನು ಪ್ರತ್ಯೇಕವಾಗಿ ಹಾಗೂ ಸವಿಸ್ತಾರವಾಗಿ ಚರ್ಚಿಸಿರುವುದು ಓದುಗರಿಗೆ ಒಂದು ವಿಶೇಷ ಕೊಡುಗೆಯಾಗಿ ಬಂದಿದೆ. ಈ ಕಾರ್ಯಕ್ಕೆ ಹಾಗೂ ಪುಸ್ತಕ ಹೊರತರುವಲ್ಲಿ ನಡೆಸಿರುವ ಅಸಾಧಾರಣ ಸಂಶೋಧನಾ ಕಾರ್ಯಕ್ಕೆ ಮ.ಸು.ಮ ಅವರು ಸ್ತುತ್ಯಾರ್ಹರು.

ಕೊನೆಯದಾಗಿ ಹೇಳುವುದಾದರೆ "ಭಾರತ ಒಕ್ಕೂಟದ ನಿರ್ಮಾಪಕ, ಉಕ್ಕಿನ ಮನುಷ್ಯ ಸರ್ದಾರ್ ವಲ್ಲಭಭಾಯಿ ಪಟೇಲ್" ಒಂದು ಅತ್ಯಮೂಲ್ಯ ಕೃತಿಯಾಗಿ ಹೊರಬಂದಿದ್ದು ಪಟೇಲರ ಜೀವನದ ಬಗೆಗಿನ ಸಮಗ್ರ ಚಿತ್ರಣ ನೀಡುತ್ತದೆ. ಕೃತಿ ಅಷ್ಟಕ್ಕೇ ಸೀಮಿತವಾಗದೆ ಪುಸ್ತಕ ಓದಿದ ನಂತರವೂ ಈ ಧೀಮಂತನಾಯಕನ ಚಿತ್ರ ಮನಸ್ಸಿನಾಳದಲ್ಲಿ ಅಚ್ಚಳಿಯದೆ ಉಳಿಯುವಂತೆ ಮಾಡಲು ಸಂಪೂರ್ಣವಾಗಿ ಯಶಸ್ವಿಯಾಗುತ್ತದೆ. ಮ.ಸು.ಮ ಅವರಿಗೆ ಅವರ ಈ ಅಮೋಘ ಕಾಣಿಕೆಗೆ ಹಾರ್ದಿಕ ಅಭಿನಂದನೆಗಳು.

ಎ. ಚಂದ್ರಶೇಖರ್
ಉಪ ಮಹಾ ನಿರ್ದೇಶಕರು. (ವಿಶ್ರಾಂತ)
ಸೇನಾ ಮುಖ್ಯಾಲಯ, ರಕ್ಷಣಾ ಮಂತ್ರಾಲಯ, ನವದೆಹಲಿ.

ಅಭಿಪ್ರಾಯ ೨

ಮ.ಸು.ಮನ್ನಾರ್ ಕೃಷ್ಣರಾವ್ ಅವರು ಉತ್ತಮ ಜ್ಞಾನಿಗಳು, ಅಧ್ಯಯನಶೀಲರು ಮತ್ತು ಒಳ್ಳೆಯ ಲೇಖಕರು. ಅವರ ಈ ಹಿಂದಿನ ಎಲ್ಲಾ ಕೃತಿಗಳನ್ನೂ ನಾನು ಓದಿದ್ದೇನೆ, ಓದಿ ಮೆಚ್ಚಿದ್ದೇನೆ. ಅವರ ಭಾಷಾ ಶೈಲಿ, ನಿರೂಪಣಾ ತಂತ್ರ, ಓದುಗನನ್ನು ಮುದಗೊಳಿಸುತ್ತದೆ. ಅದರಲ್ಲಿಯೂ ಜೀವನ ಚರಿತ್ರೆ ಬರೆಯುವಾಗ ಅವರ ತಾದಾತ್ಮಕತೆ ಓದುಗನನ್ನು ಮಂತ್ರಮುಗ್ಧಗೊಳಿಸುತ್ತದೆ. ಕಣ್ಣಿಗೆ ಕಟ್ಟುವಂತೆ ವಿಷಯ ನಿರೂಪಿಸುವಲ್ಲಿ ಅವರು ಹೆಸರುವಾಸಿ. ಈ ಹಿಂದೆ ಪ್ರಕಟವಾದ ಜಿ.ಡಿ.ಬಿರ್ಲಾ, ಜೆ.ಎನ್.ಟಾಟಾ, ಜೆ.ಆರ್.ಡಿ ಟಾಟಾ ಅವರ ಜೀವನಚರಿತ್ರೆಗಳು ಸಂಗ್ರಹ ಯೋಗ್ಯವಾಗಿದ್ದು, ಅಧ್ಯಯನಶೀಲರಿಗೆ ಮಾಗದರ್ಶಿಯಾಗಿವೆ. ಈ ಸಾಲಿನಲ್ಲಿ ಸೇರುವ ಮತ್ತೊಂದು ಕೃತಿ ಸರ್ದಾರ್ ವಲ್ಲಭಬಾಯಿ ಪಟೇಲ್ ಅವರ ಜೀವನಚರಿತ್ರೆ. ಶ್ರೀಯುತರು ಕಳುಹಿಸಿದ ಬೆರಳಚ್ಚಿನ ಕೃತಿಯನ್ನು ಒಂದಲ್ಲಾ ಎರಡು ಬಾರಿ ಓದಿದ್ದೇನೆ. ಓದುಗರ ಕುತೂಹಲವನ್ನು ಹೆಚ್ಚಿಸುತ್ತಾ ಪಟೇಲರ ಜೀವನ ವೃತ್ತಾಂತವನ್ನು ಅತಿ ಸೊಗಸಾಗಿ ಮನ್ನಾರ್ ಅವರು ಈ ಕೃತಿಯಲ್ಲಿ ನಿರೂಪಿಸಿದ್ದಾರೆ.

ವಲ್ಲಭಭಾಯ್ ಪಟೇಲರದ್ದು ಮೇರು ವ್ಯಕ್ತಿತ್ವ, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅವರ ಪಾತ್ರ ಮಹಾತ್ಮ ಗಾಂಧಿಯವರ ಪಾತ್ರದಷ್ಟೇ ಪ್ರಮುಖವಾದುದು. ಓರ್ವ ರೈತನ ಮಗನಾಗಿ ಜನಿಸಿದ ಪಟೇಲ್ ಭಾರತ ಮಾತೆಯ ಸುಪುತ್ರನಾದದ್ದು ಒಂದು ಮಹತ್ವದ ಸಂಗತಿ. ಅವರ ಮಾತುಗಳನ್ನು ಜನ ಮಂತ್ರ ಮುಗ್ಧವಾಗಿ ಕೇಳಿಸಿ ಕೊಳ್ಳುತ್ತಿದ್ದರು. ಸ್ವದೇಶಿ ಚಳವಳಿ, ಅಸ್ಪೃಶ್ಯತಾ ನಿವಾರಣೆ, ಭಾರತದ ಒಕ್ಕೂಟ ರಚನೆಯಲ್ಲಿ ಅವರ ಪಾತ್ರವನ್ನು ಮನ್ನಾರ್ ಕೃಷ್ಣರಾಯರು ಅತ್ಯಂತ ಮೋಹಕವಾಗಿ ನಿರೂಪಿಸಿದ್ದಾರೆ. ಈ ಗ್ರಂಥವನ್ನು ಓದಲು ಪ್ರಾರಂಭಿಸಿದರೆ, ಕಾಲದ ಪರಿವೆಯೇ ಇಲ್ಲದೆ ಓದಬೇಕೆನ್ನಿಸುತ್ತದೆ. ಅಷ್ಟು ಸ್ವಾರಸ್ಯಕರವಾಗಿ ಲೇಖಕರು ಚಿತ್ರಿಸಿದ್ದಾರೆ. ಇಡೀ ದೇಶ ಪಟೇಲರ ಬಗ್ಗೆ ಅತಿಯಾದ ಪ್ರೀತಿ ಮತ್ತು ಗೌರವವನ್ನು ಹೊಂದಿರುವುದರಿಂದ ಅವರ ಬಗ್ಗೆ ತಿಳಿದುಕೊಳ್ಳಲು ಓದುಗರು ಉತ್ಸುಕರಾಗಿರುವುದು ಸಹಜ. ಹೀಗಾಗಿ ಕೃಷ್ಣರಾಯರು, ಪಟೇಲರ ಬಗ್ಗೆ ಬರೆಯುವ ಮುನ್ನ ಪಟೇಲರಿಗೆ ಸಂಬಂಧಿಸಿದ ಹಲವಾರು ಕೃತಿಗಳನ್ನು ಅಧ್ಯಯನ ಮಾಡಿ, ಇತಿಹಾಸಕ್ಕೆ ಅಪಚಾರವಾಗದಂತೆ ಬರೆದಿರುವುದು ಈ ಕೃತಿಯ ವೈಶಿಷ್ಟ್ಯವಾಗಿದೆ.

ಸರ್ದಾರ್ ಪಟೇಲರು ಯಾವುದೇ ತೀರ್ಮಾನ ಕೈಗೊಳ್ಳುವ ಮುನ್ನ ಸಹನೆಯಿಂದ ಮತ್ತು ಎಚ್ಚರಿಕೆಯಿಂದ ಆಲಿಸುವ ಕಲೆ ಹೊಂದಿದ್ದ ಬಗ್ಗೆ ಹಲವಾರು ನಿದರ್ಶನಗಳನ್ನು ಲೇಖಕರು ನೀಡಿದ್ದಾರೆ. ಜನರು ಅವರ ಬಗ್ಗೆ ಇಟ್ಟಿದ್ದ ಪ್ರೀತಿಯನ್ನು

ಅರ್ಥವತ್ತಾಗಿ ನಿರೂಪಿಸಿದ್ದಾರೆ. ಗೃಹ ಮಂತ್ರಿಗಳಾಗಿ ಅವರು ಮಾಡಿದ ಸಾಧನೆಗಳನ್ನು ತಿಳಿದಂತೆಲ್ಲಾ ನಾವೂ ಸಹ ಪಟೇಲರ ಅಭಿಮಾನಿಗಳಾಗುತ್ತೇವೆ. ನಮ್ಮ ಮನಸ್ಸಿನಲ್ಲಿ ಅವರ ಬಗ್ಗೆ ಇದ್ದ ಗೌರವ ಭಾವ ನೂರ್ಮಡಿಯಾಗುತ್ತದೆ. ಒಕ್ಕೂಟ ನಿರ್ಮಾಪಕರಾಗಿ ನಮ್ಮ ದೇಶದ ಇತಿಹಾಸದಲ್ಲಿ ಅಚ್ಚಳಿಯದ ಛಾಪು ಮೂಡಿಸಿರುವ ಈ ಉಕ್ಕಿನ ಮನುಷ್ಯ ನಮ್ಮ ದೇಶದ ಪ್ರತಿಷ್ಠೆಯ ಸಂಕೇತವಾಗಿದ್ದಾರೆ. ಇಂತಹ ಮಹಾಪುರುಷನ ವಿವರವಾದ ಜೀವನ ಚರಿತ್ರೆಯನ್ನು ಯಾವುದೇ ಉತ್ಪ್ರೇಕ್ಷೆಯಿಲ್ಲದೆ, ಯಥಾವತ್ತಾಗಿ ಮತ್ತು ಸ್ವಾರಸ್ಯಕರವಾಗಿ ನಿವೇದಿಸಿರುವ ಮನ್ನಾರ್ ಕೃಷ್ಣರಾವ್ ಎಲ್ಲರ ಗೌರವಾದರಗಳಿಗೆ ಪಾತ್ರರಾಗಿದ್ದಾರೆ. ರಾಜಧನ ನೀಡುವ ಬಗ್ಗೆ ಪಟೇಲರ ನಿಲುವಿಗೂ, ಅದನ್ನು ರದ್ದುಗೊಳಿಸಿದ ಇಂದಿರಾಗಾಂಧಿಯವರ ನಿಲುವಿಗೂ ಅದೆಷ್ಟು ವ್ಯತ್ಯಾಸ! ತಮ್ಮೆಲ್ಲ ಅಧಿಕಾರಗಳನ್ನು ಬಿಟ್ಟುಕೊಟ್ಟಿದ್ದಕ್ಕೆ ಹಾಗೂ ಒಂದು ರೀತಿಯ ರಕ್ತರಹಿತ ಕ್ರಾಂತಿಗೆ ಸರ್ಕಾರ ಪಾವತಿಸುವ ಸಣ್ಣಬೆಲೆ ಎಂದು ಪಟೇಲರು ಭಾವಿಸಿದರೆ, ರಾಜಧನ ರದ್ದತಿ ಮಾಡಿ ರಾಜರಿಗೆ ನೀಡಿದ ವಾಗ್ದಾನವನ್ನು ಮುರಿದು ಅನೀತಿಯುತ ಮಾರ್ಗವವನ್ನು ಇಂದಿರಾಗಾಂಧಿ ಹಿಡಿದರು ಎಂದು ಲೇಖಕರು ಅಭಿಪ್ರಾಯ ಪಡುತ್ತಾರೆ. ಇಂತಹ ಲೇಖಕರ ಕೆಲ ಅಭಿಪ್ರಾಯಗಳೂ ಸಹ ಅಲ್ಲಲ್ಲಿ ಕಂಡು ಬರುತ್ತವೆ. ಇವು ಕೇವಲ ಲೇಖಕರದ್ದಾಗಿರದೆ, ಸಾಮಾನ್ಯರು ಯೋಚಿಸುವ ಮನದಾಳದ ಮಾತುಗಳಾಗಿವೆ.

ಒಟ್ಟಿನಲ್ಲಿ ವಲ್ಲಭಭಾಯ್ ಪಟೇಲರ ಜೀವನ ವೃತ್ತಾಂತವನ್ನು ಓದಿದಾಗ, ಅವರ ಜೀವನ ಸಾಧನೆ, ಧೋರಣೆಗಳು, ನಿಲುವುಗಳು, ತ್ಯಾಗಬುದ್ಧಿ, ಸರಳತೆ ಮತ್ತು ಸಜ್ಜನಿಕೆ, ಇವೆಲ್ಲ ನಮ್ಮ ಜನ ಸ್ಮರಿಸುವಂತೆ ಮಾಡಿವೆ. ಇಂತಹ ಒಂದು ಅಪೂರ್ವ ಗ್ರಂಥವನ್ನು ರಚಿಸಿ ಕನ್ನಡಿಗರಿಗೆ ನೀಡಿರುವ ಮನ್ನಾರ್ ಕೃಷ್ಣರಾವ್ ಅವರ ಹೆಸರು ಪಟೇಲರ ಹೆಸರು ಅಜರಾಮರವಾಗಿರುವವರೆಗೂ ಶಾಶ್ವತವಾಗಿರುತ್ತದೆ ಎಂಬುದರಲ್ಲಿ ಎರಡು ಮಾತಿಲ್ಲ.

ಎಂ.ಎನ್.ಸುಂದರ ರಾಜ್
ನಿವೃತ್ತ ಇಂಗ್ಲಿಷ್ ಪ್ರಾಧ್ಯಾಪಕರು ಮತ್ತು ಲೇಖಕರು
ಶಿವಮೊಗ್ಗ

ಅಭಿಪ್ರಾಯ ೩

ಈಗಾಗಲೇ ಅನೇಕ ಜೀವನ ಚರಿತ್ರೆಗಳನ್ನು ಬರೆಯುವುದರ ಮೂಲಕ ತಮ್ಮದೇ ಆದ ಹೆಸರು ಮಾಡಿರುವ ಮನ್ನಾರ್ ಕೃಷ್ಣರಾವ್ ಅವರದು ಅಪರಿಮಿತ ವಾದ ಉತ್ಸಾಹ. ಅವರ ದಣಿವರಿಯದ ಪ್ರವೃತ್ತಿ ಮನೋಭಾವವು ಅವರನ್ನು ಮಹಾನ್ ನಾಯಕರೆನಿಸಿದ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಜೀವನ ಚರಿತ್ರೆಯನ್ನು ಬರೆಯಲು ಪ್ರೇರೇಪಿಸಿದೆ. ವಲ್ಲಭಭಾಯಿ ಪಟೇಲರ ಜೀವನಾದರ್ಶ, ಅವರು ಉಕ್ಕಿನ ಮನುಷ್ಯನಂತೆ ನಿಂತು ದೇಶವನ್ನು ಕಟ್ಟಿದ, ಸಂರಕ್ಷಣೆ ಮಾಡಿದ ಕಾರ್ಯಗಳನ್ನು ಓದುಗರಿಗೆ ತಿಳಿಸಿಕೊಡುವುದು ಅಗತ್ಯವೆಂದು ಅವರು ಭಾವಿಸಿದ ಪರಿಣಾಮ ಈ ಕೃತಿ ಹೊರ ಬಂದಿದೆ.

ಈಗ ನಾವಿರುವ ಕಾಲಮಾನವು ನಿರ್ವಸಾಹತೀಕರಣಗೊಳ್ಳುತ್ತಿರುವ (ಡಿಕಾಲೊನೈಸಿಂಗ್) ಆಗುತ್ತಿರುವ ಯುಗ. ಇದು ಒಂದು ಬಗೆಯ ಶುದ್ಧೀಕರಣದ ಕ್ರಿಯೆಯಂತೆ ಕಂಡರೂ ಒಳಗಿನ ಬಗ್ಗಡವನ್ನೆಲ್ಲ ಕೈಹಾಕಿ ತಿರುಗಿಸಿದಂತೆ. ಈ ಹೊತ್ತು ದೇಶದ ಯಾವುದೇ ನಾಯಕನ, ಸ್ವಾತಂತ್ರ್ಯ ಹೋರಾಟಗಾರನ ಚರಿತ್ರೆಯನ್ನು ನಾವು ಮುಕ್ತವಾಗಿ ಓದಲಾರದಂತಾಗಿದೆ. ಅನೇಕ ಬಗೆಯ ಐಡಿಯಾಲಾಜಿಗಳ ಹೆಸರಿನಲ್ಲಿ ನಿರ್ನಿಮಿತ್ತವಾಗಿ ಚಾರಿತ್ರ್ಯಗಳನ್ನು ವಧೆ ಮಾಡುವ ಪ್ರವೃತ್ತಿ ಹೆಚ್ಚಾಗುತ್ತಿದ್ದು, ಯಾವ ವ್ಯಕ್ತಿತ್ವದ ಉದಾತ್ತತೆಯನ್ನೂ ಅರಿಯಲಾಗದಂತಾಗಿದೆ. ಇದನ್ನು ಲೇಖಕರು ತಮ್ಮ ನುಡಿಯಲ್ಲಿ ತೋಡಿಕೊಂಡಿದ್ದಾರೆ. ಅಲ್ಲದೆ ತಾವು ಈ ಜೀವನ ಚರಿತ್ರೆಯನ್ನು ಯಾವುದೇ ಪಕ್ಷ ವಹಿಸದೆ ಬರೆಯಬೇಕೆಂಬ ಅಪೇಕ್ಷೆಯುಳ್ಳವರಾಗಿದ್ದೇನೆ ಎಂಬುದನ್ನು ಮೊದಲೇ ತಿಳಿಸಿದ್ದಾರೆ ಅಂತೆಯೇ ಇಡೀ ಕೃತಿಯಲ್ಲಿ ಎಲ್ಲಿಯೂ ಓರೆಯಾಗದಂತೆ ಎಚ್ಚರ ವಹಿಸಿದ್ದಾರೆ. ಒಂದೆಡೆ ವಾಲುವ ದೃಷ್ಟಿಕೋನಗಳಿಂದ ಪಾರಾಗಿ ಇಂತಹ ಕೃತಿಯನ್ನು ರಚಿಸುವುದು ಕಷ್ಟಸಾಧ್ಯ. ಆದರೆ ಅದನ್ನು ಮನ್ನಾರ್ ಕೃಷ್ಣರಾವ್ ಅವರು ತುಂಬ ಸಮತೂಕದಲ್ಲಿ ಸಾಧಿಸಿದ್ದಾರೆ ಎನ್ನುವುದು ಹರ್ಷ ವನ್ನುಂಟು ಮಾಡುತ್ತದೆ.

ವಲ್ಲಭಭಾಯಿ ಪಟೇಲ್ ಅವರ ವ್ಯಕ್ತಿತ್ವದ ಬಗ್ಗೆ ತಿಳಿದಿರುವುದಕ್ಕಿಂತ ತಿಳಿಯ ದಿರುವುದೇ ಹೆಚ್ಚು. ಏಕೆಂದರೆ ಅವರು ಗಾಂಧಿ ಬಂದ ಗುಜರಾತಿನಿಂದ ಬಂದವರು. ಒಂದು ಆಲದ ಮರದ ಕೆಳಗೆ ಇನ್ನೊಂದು ಗಿಡ ಹುಟ್ಟುವುದು ಕಷ್ಟ. ಗಾಂಧಿಯಂತಹ ಧೀಮಂತ ವ್ಯಕ್ತಿತ್ವದ ಅಡಿಯಲ್ಲಿ ತಮ್ಮದೇ ಆದ ವ್ಯಕ್ತಿತ್ವ ಬೆಳೆಸಿಕೊಳ್ಳುವ ಸವಾಲನ್ನು ಪಟೇಲರು ಎದುರಿಸಿದರು. ಅವರಿಗೆ ಗಾಂಧಿಯವರ ಸಾಮೀಪ್ಯದಿಂದ ಕೆಲವು ಆಧ್ಯಾತ್ಮಿಕ ಪ್ರಯೋಜನಗಳಾದವು; ಗಾಂಧಿಯವರಿಂದ ಹೇಗೆ ವ್ಯಕ್ತಿತ್ವವನ್ನು ಸಾಣೆ

ಹಿಡಿಯಬಹುದು ಎನ್ನುವುದನ್ನು ಪಟೇಲರು ಕಲಿತರು ಹಾಗೆಯೇ ಪಾಲಿಸಿದರು. ಆದರೆ ಗಾಂಧಿಯವರಿಂದ ಅವರಿಗೆ ಲೌಕಿಕ ಪ್ರಯೋಜನಗಳು ಸಿಕ್ಕಿದ್ದು ಕಡಿಮೆ. ಅನೇಕ ಬಾರಿ ಅಧಿಕಾರವನ್ನು, ನಾಯಕತ್ವದ ಚುಕ್ಕಾಣಿಯನ್ನು ತ್ಯಜಿಸುವಂತೆ ಅವರಿಗೆ ಗಾಂಧಿಯವರಿಂದ ಆದೇಶ ಬಂದಿತು. ಇದು ತುಂಬ ಸೂಕ್ಷ್ಮವಾದ ಸಂಗತಿ. ಗಾಂಧಿಯವರಿಗೆ ಪಟೇಲರ ಮೇಲೆ ಇದ್ದ ನಂಬಿಕೆ ಅಪಾರವಾಗಿದ್ದರೂ ಡಿಪ್ಲೊಮ್ಯಾಟ್ ಆಗಿದ್ದ ನೆಹರೂ ದೇಶದ ವ್ಯವಹಾರಗಳನ್ನು ನಿರ್ವಹಿಸಲು ಸೂಕ್ತ ಎಂದು ಅವರಿಗೆ ಅನ್ನಿಸಿತ್ತೇನೊ. ವಲ್ಲಭಭಾಯಿ ಅವರದು 'ವಜ್ರಾದಪಿ ಕಠೋರಾನಿ.. ..' ಎನ್ನುವ ಸ್ವಭಾವ. ಅವರ ನಿಷ್ಠುರತೆ ಅವರಿಗರಿವಿಲ್ಲದಂತೆ ಅವರನ್ನು ಲೋಕ ವಿರೋಧಿ ಸ್ಥಾನಕ್ಕೆ ನೂಕಿತ್ತು ಎನ್ನಿಸುತ್ತದೆ. ಎಲ್ಲಕ್ಕಿಂತ ಮಿಗಿಲಾಗಿ ಗಾಂಧಿಯವರಿಗೆ ವಲ್ಲಭಭಾಯಿ ಗುಜರಾತಿನವರೇ ಆದುದರಿಂದ ಅವರ ಹೆಸರನ್ನು ಹೇಳಿದರೆ ಸ್ವಜನ ಪಕ್ಷಪಾತವಾದೀತೊ ಎನ್ನುವ ನೈತಿಕ ಭಯವೂ ಇತ್ತೇನೊ. ಈ ಎಲ್ಲ ಕಾರಣಗಳೂ ವಲ್ಲಭಭಾಯಿ ಅವರನ್ನು ಭಾರತದ ಅಧಿಕಾರ ರಾಜಕಾರಣದ ಲಾಭಗಳಿಂದ ದೂರ ಉಳಿಯುವಂತೆ ಮಾಡಿದವು ಎಂದು ಊಹಿಸಬಹುದು. ವಲ್ಲಭಭಾಯಿ ಅವರನ್ನು ಕುರಿತ ಈ ಕೃತಿಯಲ್ಲಿ ಗಾಂಧಿಗೂ ಅವರಿಗೂ ಇರುವ ಸಂಬಂಧ, ವ್ಯಕ್ತಿತ್ವ ವೈರುಧ್ಯಗಳು ದೇಶದ ಚಾರಿತ್ರಿಕ ಭಿತ್ತಿಯ ಹಿನ್ನೆಲೆಯಲ್ಲಿ ಬಹಳ ಚೆನ್ನಾಗಿ ಮೂಡಿಬಂದಿದೆ. ಆಡೆನ್ ಕವಿ ಯೇಟ್ಸ್ ಸತ್ತ ನಂತರ ಬರೆದ ಪದ್ಯದಲ್ಲಿ ಕಾಲ ಎನ್ನುವುದು ಮಹಾಕವಿ, ಕ್ಷುಲ್ಲಕ ಕವಿಗಳಿಬ್ಬರನ್ನೂ ಒಂದೇ ತಕ್ಕಡಿಯಲ್ಲಿ ತೂಗುತ್ತದೆ ಎನ್ನುವಾರ್ಥದಲ್ಲಿರುವ ಸಾಲುಗಳನ್ನು ಬರೆಯುತ್ತಾನೆ. ಯೇಟ್ಸ್‌ನಂತಹ ಮಹಾಕವಿ ಹಾಗು ಕಿಪ್ಲಿಂಗ್‌ನಂತಹ ಸಾಧಾರಣ ಕವಿ ಇಬ್ಬರೂ ಇಲ್ಲಿ ಒಂದೇ ಆಗುತ್ತಾರೆ. ಹಾಗೆಯೇ ವಲ್ಲಭಭಾಯಿಯವರು ನೆಹರೂ ಅವರುಗಳನ್ನು ಕಾಲ ಒಂದೇ ತಕ್ಕಡಿಯಲ್ಲಿ ಹಾಕಿಬಿಟ್ಟಿದೆ. ಇಂದು ವಲ್ಲಭಭಾಯಿ ಅವರು ದೇಶದ ಒಳಿತಿಗಾಗಿ ಎತ್ತಿಕೊಂಡ ಕಾರ್ಯಕ್ರಮಗಳ ಮಹತ್ವದ ಮೇಲೆ ಧೂಳು ಮುಸುಕಿದೆ. ಇದನ್ನು ಅರ್ಥ ಮಾಡಿಸುವಲ್ಲಿ ಕೃತಿ ಸಾಕಷ್ಟು ಸಹಾಯ ಮಾಡುತ್ತದೆ ಎಂದು ನಾನು ಭಾವಿಸುವೆ.

ನಾನು ಇತ್ತೀಚೆಗೆ ಆತ್ಮ ಚರಿತ್ರೆಗಳನ್ನೂ ಜೀವನ ಚರಿತ್ರೆಗಳನ್ನೂ ಇಷ್ಟಪಟ್ಟು ಓದಲಾರಂಭಿಸಿರುವೆ. ಅಂತಹ ಸಮಯದಲ್ಲಿ ಕೃಷ್ಣರಾವ್ ಅವರ ವಲ್ಲಭಭಾಯಿ ಅವರ ಜೀವನ ಚರಿತ್ರೆ ಸಿಕ್ಕು ನನಗೆ ಓದಿನ ಸಂತೋಷವನ್ನು ಕೊಟ್ಟಿದೆ. ಇದಕ್ಕಾಗಿ ನಾನು ಅವರನ್ನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

–ಆರ್.ತಾರಿಣಿ ಶುಭದಾಯಿನಿ,
ಇಂಗ್ಲಿಷ್ ಪ್ರಾಧ್ಯಾಪಕರು ಮತ್ತು ಲೇಖಕಿ, ಚಿತ್ರದುರ್ಗ

ಅಭಿಪ್ರಾಯ ೪

ತಮ್ಮ ವಿರಚಿತ ಜೀವನ ಚರಿತ್ರೆಗಳಲ್ಲಿ ಇದು ನಾಲ್ಕನೆಯದು ಹಾಗೂ ಅತಿ ದೊಡ್ಡ ಕೃತಿ. ಪ್ರಸ್ತುತ ದೇಶದ ಪರಿಸ್ಥಿತಿಯಲ್ಲಿ, ತಾವೇ ಹೇಳಿರುವ ಹಾಗೆ "ಸರ್ದಾರರು ಬದುಕಿದ ಬಗೆ ಪ್ರತಿಯೊಬ್ಬರಿಗೂ ತಿಳಿಯುವುದು ದೇಶದ ಹಿತದೃಷ್ಟಿಯಿಂದ ಅವಶ್ಯಕ". ಅದರಲ್ಲೂ ಈಗಿನ ಯುವಜನತೆಗೆ ಇದು ಅತ್ಯಾವಶ್ಯಕ.

ಸರ್ದಾರ್ ಪಟೇಲರ ವ್ಯಕ್ತಿತ್ವ ಬೆಳೆಯುವುದನ್ನು ಸರಳ ಹಾಗೂ ಸಂದರ್ಭಗಳೊಂದಿಗೆ ನಿರೂಪಿಸಲಾಗಿದೆ. ಕೃತಿಯ ವಿಂಗಡನೆ, ಸರ್ದಾರರ ಬಹುಮುಖ ಪ್ರತಿಭೆ, ಸ್ವದೇಶಾಭಿಮಾನ, ತಮ್ಮ ಜನರ ಬಗ್ಗೆ ಇದ್ದ ಪ್ರೀತಿ, ಅನುಕಂಪ ಹಾಗೂ ಕಾಳಜಿಯನ್ನು ಉತ್ತಮವಾಗಿ ಬಿಂಬಿಸುತ್ತದೆ. ಇದರಿಂದಾಗಿ ಕೃತಿ ಓದುಗನನ್ನು ಹಿಡಿದು ನಡೆಸಿಕೊಂಡು ಹೋಗುತ್ತದೆ.

ಜನತೆಯ ಬೆಂಬಲವಿದ್ದರೂ, ಗಾಂಧೀಜಿಯವರ ಮಾತಿಗೆ ಶಿರಬಾಗಿ, ಸ್ಥಾನಮಾನಗಳಿಗೆ ಹೋರಾಡದೆ, ರಾಷ್ಟ್ರದ ಹಾಗೂ ಜನತೆಯ ಹಿತಕ್ಕಾಗಿ ದುಡಿದು, ತಮ್ಮ ಸಮಕಾಲೀನ ನಾಯಕರಿಗಿಂತ ಅತಿ ಎತ್ತರ ಬೆಳೆದವರು ಸರ್ದಾರರು.

ಅಂತಿಮ ಭಾಗದಲ್ಲಿ ಬರುವ "ಗೌರವಾರ್ಪಣೆ ಮತ್ತು ಸ್ಮಾರಕ" ಅತಿ ಸೂಕ್ತ. ಇದು ನಮ್ಮ ದೇಶದ ನಾಯಕರ ಮನಸ್ಥಿತಿಯನ್ನು ಪ್ರತಿಬಿಂಬಿಸುತ್ತದೆ ಹಾಗೂ ಸರ್ದಾರರ ಸ್ಮಾರಕದ ಸೂಕ್ತತೆಯನ್ನು ಪ್ರತಿಪಾದಿಸುತ್ತದೆ.

ಮಹಾನ್ ವ್ಯಕ್ತಿಯ ಪರಿಚಯಿಸಲು ರಚಿಸಿದ ಈ ಕೃತಿ, ನಮ್ಮ ನಾಡಿನ ಜನರಿಗೆ ಉತ್ತಮ ಕೊಡುಗೆಯಾಗಿದೆ. ಪುಸ್ತಕಗಳನ್ನು ಓದುವ ಹವ್ಯಾಸ ಕ್ಷೀಣಿಸುತ್ತಿರುವ ಈ ಕಾಲದಲ್ಲಿ ಕೃತಿಯ ಗಾತ್ರ ಯುವ ಓದುಗರನ್ನು ದೂರವಿಡುತ್ತದೆಯೇನೋ ಎಂಬುದೇ ನನ್ನ ಕಾಳಜಿ. ತಮ್ಮ ಈ ಕೃತಿ ಅನೇಕ ಓದುಗರ ಕೈ ಸೇರಿ, ಸರ್ದಾರರಿಂದ ಪ್ರೇರಿತರಾಗಲಿ ಎಂದು ಆಶಿಸುತ್ತೇನೆ. ಮತ್ತೊಮ್ಮೆ ವಿಳಂಬಕ್ಕಾಗಿ ಕ್ಷಮೆಯಾಚಿಸಿ ತಾವು ನನಗೆ ನೀಡಿದ ಈ ಅವಕಾಶಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಡಾ॥ ಎಮ್.ಎಸ್. ರಾಜಮೂರ್ತಿ
ಇಂಡಿಪೆಂಡೆಂಟ್ ಕನ್ಸಲ್ಟೆಂಟ್
ಫ್ಲೈಟ್ ಮೆಕಾನಿಕ್ಸ್, ಫ್ಲೈಟ್ ಸೇಫ್ಟಿ ಅಂಡ್ ಫ್ಲೈಟ್ ಟೆಸ್ಟಿಂಗ್
ಜಯನಗರ, ಬೆಂಗಳೂರು.

ಅಭಿಪ್ರಾಯ ೫

ಉಕ್ಕಿನ ಮನುಷ್ಯ ಎಂದೇ ಪ್ರಸಿದ್ಧರಾಗಿದ್ದ ಸರ್ದಾರ್ ಪಟೇಲರ ಜೀವನ ಚರಿತ್ರೆಯ ಕನ್ನಡ ಪುಸ್ತಕ ಅದೂ ಸ್ನೇಹಿತನ ಪೂಜ್ಯ ತಂದೆಯವರು ಬರೆದಿದ್ದು ಎಂದರೆ ನನಗೆ ವಿಶೇಷ ಕುತೂಹಲವೆನಿಸಿದ್ದು ನಿಜ. ಕನ್ನಡ ಕೂಟದ ಅದರಲ್ಲೂ ನಮ್ಮ 'ಸಾಹಿತ್ಯ ಸಂಪದ' ಸಮೂಹಕ್ಕೆ ಗುರುಗಳ ಸಮಾನರಾದ ಶ್ರೀ ಮ.ಸು. ಮನ್ನಾರ್ ಕೃಷ್ಣರಾವ್ ಅವರ ಅಪೂರ್ವ ಕೃತಿಯ ಬಗ್ಗೆ ನನ್ನ ಅಲ್ಪ ಬುದ್ಧಿಗೆ ತಿಳಿದಷ್ಟು ಮಟ್ಟದಲ್ಲಿ ನನ್ನ ಅನಿಸಿಕೆಯನ್ನು ಹಂಚಿಕೊಳ್ಳುತ್ತಿರುವುದು ನನಗೆ ಬಹಳ ಸಂತಸದ ವಿಷಯ.

ಗುರುಗಳು ಮಹಾನ್ ವ್ಯಕ್ತಿಯೊಬ್ಬರ ಜೀವನ ಚರಿತ್ರೆಯನ್ನು ಚಿತ್ರಿಸುವ ಕೃತಿಗೆ ಸಂಪೂರ್ಣ ನ್ಯಾಯ ಒದಗಿಸಲು ಬಹುಶಃ ಸಾವಿರಾರು ವಿದ್ಯಾರ್ಥಿಗಳನ್ನು ಕಂಡು ಅವರನ್ನು ಹತ್ತಿರದಿಂದ ಅರ್ಥೈಸಿಕೊಂಡು ಬೋಧನೆಯಲ್ಲಿ ನಿರತರಾಗಿದ್ದರು ಎನ್ನುವುದು ಸಹಕಾರಿಯಾಗಿರಬಹುದು. ಕೃತಿಯ ಮೊದಲ ಪುಟಗಳಲ್ಲೇ 'ಯಾವುದೇ ಪೂರ್ವಾಗ್ರಹ ಪೀಡಿತರಾಗದೆ ಕೃತಿಯನ್ನು ಓದಬೇಕು' ಎನ್ನುವ ಅವರ ಮನವಿ ಓದುಗನಿಗೆ ಇರಬೇಕಾದ ಪ್ರಾಥಮಿಕ ಗುಣಕ್ಕೆ ಒತ್ತು ಕೊಡುತ್ತದೆ. ಇದು ಗುರುಗಳ ಕೃತಿಯು ಪ್ರಾಮಾಣಿಕ ಪ್ರಯತ್ನ ಎನ್ನುವುದನ್ನು ಬಿಂಬಿಸುತ್ತದೆ.

ಜೀವನ ಚರಿತ್ರೆ ವಿವರವಾಗದೆ ಇದ್ದರೆ ಬಿಂಬಿಸಿದ ವ್ಯಕ್ತಿಯ ಪೂರ್ಣ ಚಿತ್ರಣ ಅಸಾಧ್ಯ ಎನ್ನುವ ಗುರುಗಳ ಪ್ರಾರಂಭಿಕ ಮಾತು ಸರ್ದಾರರ ಈ ಜೀವನ ಚರಿತ್ರೆಯನ್ನು ಓದಿದ ಯಾರಿಗಾದರೂ ಕೂಡಲೇ ಅರ್ಥವಾಗುತ್ತದೆ. ಸರ್ದಾರರ ಜೀವನದ ವಿವಿಧ ಆಯಾಮಗಳನ್ನು ಹಲವಾರು ಗ್ರಂಥಾಧಾರಗಳನ್ನು ಉಪಯೋಗಿಸಿ ಚಿತ್ರಿಸಿರುವುದು ಸರ್ದಾರರನ್ನು ಹಂತ ಹಂತವಾಗಿ ಅರ್ಥ ಮಾಡಿಕೊಳ್ಳುವಲ್ಲಿ ಬಹಳ ಸಹಾಯಕವಾಗಿದೆ.

ಬಾಲ್ಯ, ಪ್ರಾಥಮಿಕ ವಿದ್ಯಾಭ್ಯಾಸ, ಉನ್ನತ ವ್ಯಾಸಂಗ ಮತ್ತು ಪ್ರಾರಂಭಿಕ ವಕೀಲಿ ವೃತ್ತಿ ಜೀವನಗಳಲ್ಲಿ 'ಭಾರತದ ಬಿಸ್ಮಾರ್ಕ್' ಕ್ರಮೇಣ ರೂಪುಗೊಳ್ಳುವುದನ್ನು ಗುರುಗಳು ಮನಮುಟ್ಟುವಂತೆ ಉಲ್ಲೇಖಿಸಿದ್ದಾರೆ. ಬಾಲ್ಯದಿಂದಲೇ ಅನ್ಯಾಯವನ್ನು ನಿರ್ಭಯವಾಗಿ ಎದುರಿಸುವ ಮತ್ತು ಅನ್ಯಾಯವನ್ನು ಎಷ್ಟೇ ಪ್ರಭಾವಶಾಲಿ ವ್ಯಕ್ತಿ ಮಾಡಿದ್ದರೂ ಅವರನ್ನು ಎದುರಿಸಿ ನಿಲ್ಲುವ ಎದೆಗಾರಿಕೆ ಸರದಾರ್‌ರಲ್ಲಿ ರೂಪುಗೊಳ್ಳುತ್ತಿದ್ದದನ್ನು ಪ್ರಾರಂಭಿಕ ಅಧ್ಯಾಯಗಳಲ್ಲಿ ಚಿತ್ರಿಸಲಾಗಿದೆ. ಒರಟುತನಕ್ಕೆ ತಮಗೆ ಕೊಟ್ಟ ಶಿಕ್ಷೆಯನ್ನು ಅನುಭವಿಸಿದರೂ ಶಿಕ್ಷಕರು ನೀಡಿದ ಹೆಚ್ಚುವರಿ ಶಿಕ್ಷೆಯನ್ನು ವಿರೋಧಿಸಿದ ಸರ್ದಾರರ ಬಾಲ್ಯದಲ್ಲೇ ಕಂಡ ನ್ಯಾಯಪರತೆಯ ನಿದರ್ಶನ.

ಇವರು ಪರಿಶ್ರಮಿ ವಿದ್ಯಾರ್ಥಿಯಾಗಿದ್ದರು ಎನ್ನುವಂತಹ ಹಲವು ಘಟನೆಗಳನ್ನು ಪ್ರಾಥಮಿಕ ಅಧ್ಯಾಯಗಳಲ್ಲಿ ಚಿತ್ರಿಸಲಾಗಿದೆ. ಅದನ್ನು ಸರದಾರರು ತಮ್ಮ ಲಂಡನ್ನಿನ ಕಾನೂನು ಶಾಸ್ತ್ರ ವಿದ್ಯಾಭ್ಯಾಸದ ಸಮಯದಲ್ಲೂ ಪಾಲಿಸಿದ್ದರು ಎನ್ನುವುದು ಇಂದಿನ ವಿದ್ಯಾರ್ಥಿಗಳಿಗೂ ಒಂದು ಪಾಠ. ದಿನಕ್ಕೆ ಹದಿನಾರು ಗಂಟೆಗಳ ಕಾಲ ಓದುತ್ತಿದ್ದರು ಎಂದರೆ ಎಂತಹ ಪರಿಶ್ರಮಿ ವಿದ್ಯಾರ್ಥಿಯಾಗಿದ್ದರು ಎನ್ನುವುದು ವಿದಿತವಾಗುತ್ತದೆ.

ಇಂಗ್ಲೆಂಡಿನಿಂದ ಬ್ಯಾರಿಸ್ಟರ್ ಆಗಿ ಹಿಂತಿರುಗಿದ ಸರದಾರರು ಅಹ್ಮದಾಬಾದ್ ನಲ್ಲಿ ವಕೀಲಿ ವೃತ್ತಿ ಪ್ರಾರಂಭಿಸಿದರು. ಮೊದಲಿನಿಂದಲೂ ಸರದಾರರು ಗಾಂಧೀಜಿಯಿಂದ ಬಹಳ ಪ್ರಭಾವಿತರಾಗಿದ್ದರು ಎಂಬ ನನ್ನ ಈವರೆಗಿನ ಅರಿವು ಸುಳ್ಳೆಂದು ತಿಳಿದದ್ದು, ಜೀವನ ಚರಿತ್ರೆಯ ೩.೨ನೆ ಅಧ್ಯಾಯದಿಂದ. ಚಂಪಾರಣ್ಯ ಪ್ರಕರಣದಿಂದ ಬಹಳ ಪ್ರಭಾವಿತರಾಗಿ ಗಾಂಧೀಜಿಯ ಎದೆಗಾರಿಕೆ, ಅನ್ಯಾಯದ ವಿರುದ್ಧ ಸಿಡಿದೇಳುವ ಗುಣವನ್ನು ಸರದಾರರು ಮೆಚ್ಚಿದ್ದಂತೆ. ಗಾಂಧೀಜಿಯವರನ್ನು ಹತ್ತಿರದಿಂದ ಕಂಡು ವ್ಯವಹರಿಸಿ ಅವರ ಸ್ವಭಾವ ಗುಣಗಳನ್ನು ಪೂರ್ಣ ಅರಿತುಕೊಳ್ಳುವ ಕೈಡಾ ಚಳವಳಿ ಸಂದರ್ಭವನ್ನು ಪುಸ್ತಕದ ೪.೧ನೆ ಅಧ್ಯಾಯದಲ್ಲಿ ಕಣ್ಮುಂದೆ ನಡೆದ ಘಟನೆಯಂತೆ ಲೇಖಕರು ಬಣ್ಣಿಸಿದ್ದಾರೆ. ಚಳವಳಿ ನಂತರ ಸಭೆಯಲ್ಲಿ ಸರದಾರರು ನುಡಿದ ಮಾತುಗಳನ್ನು ಓದುಗರ ಮುಂದೆ ಪ್ರಸ್ತುತಪಡಿಸಿದ್ದು ಸರದಾರರು ಮತ್ತು ಗಾಂಧೀಜಿ ನಡುವಿನ ಸಂಬಂಧಗಳನ್ನು ಅರಿತು ಕೊಳ್ಳುವುದರಲ್ಲಿ ನನ್ನಂತೆ ಎಲ್ಲರಿಗೂ ಸಹಕಾರಿಯಾಗುತ್ತದೆ ಎಂದುಕೊಳ್ಳುತ್ತೇನೆ.

ಸರದಾರರಿಗೆ ಬರ್ದೋಲಿ ಸತ್ಯಾಗ್ರಹದ ಯಶಸ್ಸಿನ ನಂತರ ಬಂದ ಹಲವಾರು ಸಮ್ಮೇಳನಾಧ್ಯಕ್ಷತೆ ಕೋರಿಕೆಗಳು ಅವರ ಜನಪ್ರಿಯತೆಯನ್ನು ಹೆಚ್ಚಿಸಿದ್ದವು. ಭಾಷಣಗಳ ಬಗ್ಗೆ ಅವರಿಗಿದ್ದ ಅನಾಸಕ್ತಿ ಮತ್ತು ಕಾರ್ಯತತ್ಪರತೆ ಯಲ್ಲಿ ಅವರಿಗಿದ್ದ ನಂಬಿಕೆಗಳನ್ನು ಬಹಳ ಚೆನ್ನಾಗಿ ವಿವರಿಸುತ್ತಾ ಸರದಾರರು ಹೇಳಿದ ಮಾತುಗಳು ನನಗೆ ಪ್ರಿಯವೆನಿಸಿದವು. ಪುಸ್ತಕದ ೧೦.೨ನೆ ಅಧ್ಯಾಯದಲ್ಲಿ ಸರ್ದಾರರ ಮಾತು 'ಎಲ್ಲದಕ್ಕೂ ಮೊದಲು ವಿನಯತೆ ಮತ್ತು ಹೊಗಳಿಕೆ ನಡುವಿನ ವ್ಯತ್ಯಾಸವನ್ನು ಗುರುತಿಸುವುದನ್ನು ಕಲಿಯಿರಿ' ಎಂದು ಜನತೆಗೆ ನೀಡಿದ ಕರೆ ಅವರ ನಿಷ್ಕಲ್ಮಶ ಮನಸ್ಸಿಗೆ ಹಿಡಿದ ಕೈಗನ್ನಡಿ. ಮಾತಿಗಿಂತ ಕಾರ್ಯದಲ್ಲಿ ಹೆಚ್ಚು ನಂಬಿಕೆಯಿದ್ದ ಸರದಾರರಿಗೆ ಭಾಷಣವೆಂದರೆ ಅಷ್ಟಕ್ಕಷ್ಟೇ ಎನ್ನುವುದು ಚೆನ್ನಾಗಿ ಬಿಂಬಿತವಾಗಿದೆ ಅದಕ್ಕೆ ಇದ್ದಿರಬಹುದು ಅಂದು ಅವರು 'ವಿಪರೀತ ಮಾತು ಒಳಿತಿಗಿಂತ ಕೆಡುಕನ್ನೇ ಉಂಟು ಮಾಡುತ್ತದೆ' ಎಂದಿದ್ದರು.

ಸಮಯಪ್ರಜ್ಞೆ, ರಾಜರುಗಳೊಂದಿಗೆ ಚಾಣಕ್ಯ ನೀತಿಯಿಂದ ವ್ಯವಹರಿಸಿದ್ದು; ಏಕೀಕರಣದ ಕಾರ್ಯಭಾರ ಹೊತ್ತ ಸರ್ದಾರರ ರಾಜನೀತಿ ಆಯಾಮಗಳನ್ನು ದರ್ಶಿಸುವ ಹದಿನೆಂಟನೆ ಅಧ್ಯಾಯದ ವರೆಗೂ ಸರ್ದಾರ್ ಜೀವನದ ಹಲವಾರು ಹಂತಗಳನ್ನು ಬಹಳ ಮನೋಜ್ಞವಾಗಿ ಗುರುಗಳು ಉಲ್ಲೇಖಿಸಿದ್ದಾರೆ. ಬಹಳ ಸುದೀರ್ಘ ಜೀವನ ಚರಿತ್ರೆಯ ಪ್ರತಿ ಆಯಾಮವನ್ನು ಚೆನ್ನಾಗಿ ಮನನ ಮಾಡಿಕೊಳ್ಳಲು ಮತ್ತೊಮ್ಮೆ ಓದಲೇಬೇಕಾದ ಪುಸ್ತಕವಿದು ಎನಿಸುತ್ತದೆ. ಒಂದು ಮಾಹಿತಿಭರಿತ ಮತ್ತು ನಿಷ್ಪಕ್ಷಪಾತಿ ವಿಶ್ಲೇಷಣೆಯ ಸರಳ ಸುಂದರ ಜೀವನ ಚರಿತ್ರೆ ಅದರಲ್ಲೂ ಉಕ್ಕಿನ ಮನುಷ್ಯ ಸರ್ದಾರರದ್ದು ಎನ್ನುವುದು ಈ ಪುಸ್ತಕವನ್ನು ಎಂಥವರಿಗೂ ಓದಬೇಕು ಎನಿಸದೇ ಇರದು. ಇಂತಹ ಅಮೂಲ್ಯ ಕೃತಿಯ ಕರ್ತೃವಾದ ಗುರುಗಳಿಗೆ ನಮಿಸಿ, ಅಭಿನಂದಿಸಿ ನನ್ನ ಈ ಪುಟ್ಟ ಅನಿಸಿಕೆಯನ್ನು ಅರ್ಪಿಸುವೆ.

ಡಾ॥ ಆಜ಼ಾದ್ ಐ.ಎಸ್.
ರೀಸರ್ಚ್ ಸೈನ್ಟಿಸ್ಟ್
ಕುವೈತ್ ಇನ್‌ಸ್ಟಿಟ್ಯೂಟ್ ಆಫ್ ಸೈಂಟಿಫಿಕ್ ರೀಸರ್ಚ್ (KISR)
ಕುವೈತ್

ಅಭಿಪ್ರಾಯ – ೬

ಸರ್ದಾರ್ ಪಟೇಲರ ಜೀವನ ಚರಿತ್ರೆ ಓದುವುದೆಂದರೆ ಭಾರತೀಯ ಸ್ವಾತಂತ್ರ್ಯ ಚಳವಳಿಯನ್ನು ಹತ್ತಿರದಿಂದ ನೋಡಿದ ಹಾಗೆಯೆ. ಭಾರತೀಯತೆ, ದೇಶಪ್ರೇಮ, ಅಸಮಾನ್ಯ ನಾಯಕತ್ವವೆಂದಾಕ್ಷಣ ನಮ್ಮೆಲ್ಲರ ಮನಗಳಲ್ಲಿ ಮೊಟ್ಟಮೊದಲು ಗೋಚರಿಸುವ ಹೆಸರು ಸರ್ದಾರ್ ವಲ್ಲಭ್ ಭಾಯ್ ಪಟೇಲರದ್ದು.

ಶ್ರೀ ಮನ್ನಾರ್ ಕೃಷ್ಣ ರಾಯರು, ತಮ್ಮ ಇಳಿವಯಸ್ಸಿನಲ್ಲಿ ಎಂಟು ನೂರಮೂವತ್ತಾರು ಪುಟಗಳಷ್ಟು ದೊಡ್ಡದಾದ ಸರ್ದಾರ್ ಪಟೇಲರ ಜೀವನ ಚರಿತ್ರೆ ಕನ್ನಡಲ್ಲಿ ಬರೆದು ಆರು ಕೋಟಿ ಕನ್ನಡಿಗರ ಮುಂದಿಟ್ಟಿದ್ದಾರೆ. ಇಷ್ಟು ವಿವರವಾಗಿ ಪಟೇಲರ ಜೀವನ ಚರಿತ್ರೆಯನ್ನು ಕನ್ನಡದಲ್ಲಿ ನನಗೆ ತಿಳಿದ ಮಟ್ಟಿಗೆ ಇದುವರೆಗೂ ಯಾರು ಬರೆದಿಲ್ಲ. ಕೇವಲ ಇಳಿವಯಸ್ಸಿನಲ್ಲಿ ಬರೆದಿರುವುದಕ್ಕಾಗಿ ಓದಿ ಎಂದು ಹೇಳಿದರೆ ತಪ್ಪಾಗುತ್ತದೆ. ಕರ್ತೃವಿನ ಹೊರತಾಗಿಯೂ ಕೃತಿ ಮೆಚ್ಚುವಂತಹದ್ದು! ನಮ್ಮ ನಿಮ್ಮೆಲ್ಲರ ಕರ್ತವ್ಯ ಇಂತಹ ಪ್ರಯತ್ನವನ್ನು ಹೆಗಲು ಕೊಟ್ಟು ಮುನ್ನೆಡೆಸುವುದು.

- ಕೊಂಡು ಓದಿ (ನಿಮ್ಮ ವೈಯುಕ್ತಿಕತನವನ್ನು ಹೆಚ್ಚಿಸಿಕೊಳ್ಳಬಹುದು),
- ನಿಮ್ಮ ಮನೆಯ ಶುಭ ಕಾರ್ಯಗಳಲ್ಲಿ ತಾಂಬೂಲದೊಂದಿಗೆ ಈ ಪುಸ್ತಕವನ್ನು ನೀಡಿ (ಪ್ರಚಾರ ಹಾಗು ಆರ್ಥಿಕ ಈ ಎರಡೂ ಮಜಲುಗಳನ್ನು ಮುಟ್ಟಬಹುದು)
- ಪುಸ್ತಕದ ಬಗ್ಗೆ ಸಾಮಾಜಿಕ ತಾಣಗಳಲ್ಲಿ ಬರೆಯಿರಿ (ಒಳ್ಳೆಯ ಪುಸ್ತಕಗಳಿಗೆ ಪ್ರಚಾರ ಬಹಳ ಮುಖ್ಯ)

ಪುಸ್ತಕದಲ್ಲಿ ಹಲವಾರು ಕಡೆ ಸರ್ದಾರರ ವೈಯುಕ್ತಿಕ ಜೀವನದ ತ್ಯಾಗಮಯ ನಿರ್ಣಯಗಳನ್ನು ಉಲ್ಲೇಖಿಸಲಾಗಿದೆ. ಅಂತಹುದರಲ್ಲಿ ನನ್ನ ಮನಸ್ಸಿಗೆ ತಟ್ಟಿದ್ದು ಪಟೇಲರ ಭ್ರಾತೃ ಪ್ರೇಮ – ತಮಗೆ ದೊರೆತ ಇಂಗ್ಲೆಂಡ್ ಗೆ ಹೋಗಿ ಓದುವ ಅವಕಾಶವನ್ನು ತ್ಯಾಗ ಮಾಡಿ ಅಣ್ಣನಿಗೆ ಅರ್ಪಿಸಿದ್ದು ಹಾಗೂ ಅಣ್ಣನ ಕುಟುಂಬದ ಸಂಪೂರ್ಣ ಜವಾಬ್ದಾರಿ ಹೊತ್ತಿದ್ದು.

ಎಲ್ಲಕ್ಕಿಂತ ಮಿಗಿಲಾಗಿ ನೂರಾರು ಸಣ್ಣ ಸಣ್ಣ ಪ್ರಾಂತಗಳಾಗಿ ಶಕ್ತಿಹೀನವಾಗಬಹುದಾಗಿದ್ದಂತಹ ಭಾರತವನ್ನು ಒಂದುಗೂಡಿಸಿ ಬಲವಾದ ಬುನಾದಿ ಹಾಕಿಕೊಟ್ಟ ರೂವಾರಿ ಪಟೇಲರು.

ಚಳವಳಿಗಾರರ ಬಲಿದಾನ ಅವರ ಜೀವನದ ಪ್ರತಿಯೊಂದು ನೆಲೆಗಟ್ಟಿನಲ್ಲೂ ಕಾಣಬಹುದಾಗಿತ್ತು –ವೈಯುಕ್ತಿಕ, ಕೌಟುಂಬಿಕ, ಆರ್ಥಿಕ, ಔದ್ಯೋಗಿಕ – ಹೀಗೆ ಯಾವ ದಿಕ್ಕಿನಲ್ಲಿ ನೋಡಿದರು ದೇಶಪ್ರೇಮಕ್ಕಾಗಿ ಮಾಡಿದ ತ್ಯಾಗಗಳನ್ನು ನೋಡಬಹುದಾಗಿತ್ತು.

"Those who cannot remember the past are condemned to repeat it."

ಯಾರು ಇತಿಹಾಸವನ್ನು ಮರೆಯುವರೊ ಅವರು ಮತ್ತದೇ ತಪ್ಪುಗಳನ್ನು ಮಾಡುತ್ತಾರೆ. ಈ ಕಠೋರ ಸತ್ಯವನ್ನು ನಾವಿಂದು ಅರಿತು ನಮ್ಮ ಇತಿಹಾಸವನ್ನು ಅದರಲ್ಲಿ ಅಡಗಿರುವಂತಹ ಹೋರಾಟಗಳು, ಬಲಿದಾನಗಳ ಮೂಲಕವಷ್ಟೇ ನೆನೆದರೆ ಸಾಲದು, ಇತಿಹಾಸದಲ್ಲಿನ ಗೆಲುವುಗಳೂ ಸಹ ಅಷ್ಟೇ ಮುಖ್ಯವಾಗುತ್ತವೆ. ಅಂತಹ ಬಹಳಷ್ಟು ಗೆಲುವುಗಳು ಈ ಪುಸ್ತಕದಲ್ಲಿ ನಿಮಗೆ ಸಿಗುತ್ತವೆ, ಓದಿ, ಪ್ರೇರಿತರಾಗಿ, ಅಳವಡಿಸಿ!

ಸಮಕಾಲೀನ ಭಾರತೀಯ ರಾಜಕೀಯ, ಸಾಮಾಜಿಕ ಸ್ಥಿತಿ ನೋಡುತ್ತಿದ್ದರೆ ಒಂದಂಶವಂತೂ ಸ್ಪಷ್ಟ – ಸ್ವಾತಂತ್ರ್ಯ ಚಳವಳಿಯ ಬೆಲೆ ಬಹುತೇಕ ಭಾರತೀಯರು ಮರೆತ ಹಾಗಿದೆ.ಈ ಕೃತಿ ನಮ್ಮೆಲ್ಲರ ಮರೆವನ್ನು ಕಡಿಮೆ ಮಾಡುವ ನಿಟ್ಟಿನಲ್ಲಿ ಖಂಡಿತವಾಗಿಯೂ ಉಪಯುಕ್ತ.

ದೀಪಕ್ ಎಸ್. ಕಂಚಿ, ಎ.ಸಿ.ಎ.
ಫೈನಾನ್ಸ್ ಡೈರೆಕ್ಟರ್,
ಕೆ.ಜಿ.ಎಲ್. ಹೋಲ್ಡಿಂಗ್ ಕೆ.ಎಸ್.ಸಿ.ಸಿ.
ಕುವೈತ್

❖ ◆ ❖

ಆಧಾರ ಕೃತಿಗಳು

1. Patel, A Life - Rajmohan Gandhi
2. India's Iron Man - Balraj Krishna
3. India's Bismark - B. Krishna
4. The Indomitable Sardar - K.L. Punjabi
5. A Patriot For Me - Smt. Susana Heredia
6. Gandhi – His Life and Thought - J.B. Kripalani
7. The Life of Mahatma Gandhi - Louis Fischer
8. Integration of The Indian States - V.P. Menon
9. Sardar Patel – Select Correspondence Vol. 1 - Edited by V. Shankar
10. Sardar Patel – Select Correspondence Vol. 2 - Edited by V. Shankar
11. Nehru – Patel (Letters & Speeches) - Edited by Neeraj Singh
12. Gandhi – Patel (Letters & Speeches) - Edited by Neeraj Singh
13. The Indian Triumvirate - V.B. Kulkarni
14. The Partition of India - Anita Inder Singh
15. Bhavan's Journal (Several Issues) - Bharatiya Vidya Bhavan
16. Gandhi's Emissary - Sudhir Ghosh

ಆಧಾರ ಸೂಚಿಗಳು

ಭಾಗ ೧ : ಜನನ ಮತ್ತು ವಿಕಸನ

೧.	Patel, A Life	ಪುಟ – ೦೩
೨.	A Patriot For Me	ಪುಟಗಳು – ೨–೪
೩.	A Patriot For Me	ಪುಟಗಳು – ೫–೬
೪.	A Patriot For Me	ಪುಟಗಳು – ೬–೭
೫.	India's Bismark	ಪುಟ – ೦೨
೬.	Patel, A Life	ಪುಟ – ೦೭
೭.	The Indomitable Sardar	ಪುಟ – ೦೭
೮.	The Indomitable Sardar	ಪುಟ – ೦೬
೯.	The Indomitable Sardar	ಪುಟ – ೦೮
೧೦.	Patel, A Life	ಪುಟ – ೦೮
೧೧.	Patel, A Life	ಪುಟ – ೧೦
೧೨.	Patel, A Life	ಪುಟ – ೧೦
೧೩.	India's Bismark	ಪುಟ – ೦೪
೧೪.	Patel, A Life	ಪುಟ – ೧೦
೧೫.	Patel, A Life	ಪುಟ – ೧೧
೧೬.	Patel, A Life	ಪುಟ – ೧೧
೧೭.	The Indomitable Sardar	ಪುಟ – ೧೦
೧೮.	Patel, A Life	ಪುಟ – ೧೩
೧೯.	Patel, A Life	ಪುಟ – ೧೯
೨೦.	Patel, A Life	ಪುಟ – ೧೬
೨೧.	The Indomitable Sardar	ಪುಟ – ೧೩
೨೨.	Patel, A Life	ಪುಟ – ೧೯
೨೩.	Patel, A Life	ಪುಟ – ೧೯
೨೪.	The Indomitable Sardar	ಪುಟ – ೧೩
	Patel, A Life	ಪುಟ – ೨೦
೨೫.	Patel, A Life	ಪುಟ – ೨೩

೨೬.	Patel, A Life	ಪುಟ – ೨೩
೨೭.	The Indomitable Sardar	ಪುಟ – ೧೬
೨೮.	Patel, A Life	ಪುಟಗಳು – ೨೫–೨೬
೨೯.	Patel, A Life	ಪುಟ – ೨೮
೩೦.	The Indomitable Sardar	ಪುಟ – ೧೭
೩೧.	Patel, A Life	ಪುಟಗಳು – ೩೦–೩೧
೩೨.	The Indomitable Sardar	ಪುಟ – ೧೭
೩೩.	Patel, A Life	ಪುಟ – ೩೨
೩೪.	A Patriot For Me	ಪುಟ – ೧೯
೩೫.	The Indomitable Sardar	ಪುಟ – ೧೯
೩೬.	Patel, A Life	ಪುಟ – ೩೬
೩೭.	Patel, A Life	ಪುಟ – ೩೩
೩೮.	Patel, A Life	ಪುಟ – ೩೫
೩೯.	Patel, A Life	ಪುಟ – ೩೭
೪೦.	Gandhi, His Life and Thought	ಪುಟಗಳು– ೫೮–೭೦
೪೧.	The Indomitable Sardar	ಪುಟ – ೨೩
೪೨.	Patel, A Life	ಪುಟ – ೩೯
೪೩.	Patel, A Life	ಪುಟಗಳು – ೪೦–೪೧
೪೪.	The Indomitable Sardar	ಪುಟ – ೨೩
೪೫.	Patel, A Life	ಪುಟಗಳು –೪೧–೪೨
೪೬.	A Patriot For Me	ಪುಟ – ೨೬
೪೭.	The Indomitable Sardar	ಪುಟಗಳು –೨೮–೨೯
೪೮.	SVP - India's Iron Man	ಪುಟಗಳು –೩೩–೩೭
೪೯.	The Indian Triumvirate	ಪುಟ – ೨೭೬
೫೦.	SVP - India's Iron Man	ಪುಟಗಳು –೩೭–೩೮
೫೧.	The Indian Triumvirate	ಪುಟ – ೨೮೨
೫೨.	Patel, A Life	ಪುಟ – ೪೩

ಭಾಗ ೨ : ರೈತ ನಾಯಕ

೧. The Indian Triumvirate ಪುಟ – ೨೮೬

೨. India's Bismark ಪುಟ – ೧೩

೩. Patel, A Life ಪುಟ – ೪೩–೪೫

೪. Patel, A Life ಪುಟ – – ೪೫–೪೬

೫. Patel, A Life ಪುಟ – ೫೪–೫೫

೬. The Indian Triumvirate ಪುಟ – ೨೯೦

೭. SVP India's Iron Man ಪುಟ – ೫೫

೮. SVP India's Iron Man ಪುಟ – ೫೬

೯. SVP India's Iron Man ಪುಟ – ೫೭–೫೮

Patel, A Life ಪುಟ – ೫೯–೬೦

೧೦. Patel, A Life ಪುಟ – ೬೦

೧೧. Patel, A Life ಪುಟ – ೬೨

೧೨. SVP India's Iron Man ಪುಟ – ೫೯

೧೩. Patel, A Life ಪುಟ – ೬೨–೬೩

೧೪. Patel, A Life ಪುಟ – ೬೪

೧೫. SVP India's Iron Man ಪುಟ – ೬೩

೧೬. SVP India's Iron Man ಪುಟ – ೬೪

೧೭. SVP India's Iron Man ಪುಟ – ೬೫

೧೮. SVP India's Iron Man ಪುಟ – ೬೬–೬೭

೧೯. SVP India's Iron Man ಪುಟ – ೬೭

೨೦. SVP India's Iron Man ಪುಟ – ೬೯

೨೧. SVP India's Iron Man ಪುಟ – ೭೦

೨೨. SVP India's Iron Man ಪುಟ – ೭೧

೨೩. Patel, A Life ಪುಟ – ೭೨

೨೪. Gandhi, His Life and Thought ಪುಟ – ೮೦

೨೫. Patel, A Life ಪುಟ – ೭೫

೨೬. Patel, A Life ಪುಟ – ೭೬

೨೭. Gandhi, His Life and Thought ಪುಟ – ೮೧

೨೮. The Indomitable Sardar ಪುಟ – ೩೮

೨೯. The Indomitable Sardar ಪುಟ – ೩೮

೩೦. Patel, A Life ಪುಟ – ೭೬–೭೭

೩೧. The Indian Triumvirate ಪುಟ – ೨೯೬–೨೯೭

೩೨. Patel, A Life ಪುಟ – ೭೭–೭೮

೩೩. The Indomitable Sardar ಪುಟ – ೪೦

೩೪. The Indomitable Sardar ಪುಟ – ೪೧

೩೫. Patel, A Life ಪುಟ – ೮೨

೩೬. Patel, A Life ಪುಟ – ೮೫

೩೭. Patel, A Life ಪುಟ – ೮೫

೩೮. Patel, A Life ಪುಟ – ೮೬

೩೯. Patel, A Life ಪುಟ – ೮೬

೪೦. Gandhi, His Life and Thought ಪುಟ – ೮೯–೯೧

೪೧. Patel, A Life ಪುಟ – ೮೭

೪೨. Patel, A Life ಪುಟ – ೮೭–೮೮

೪೩. Patel, A Life ಪುಟ – ೮೯

೪೪. Patel, A Life ಪುಟ – ೯೦

೪೫. Patel, A Life ಪುಟ – ೯೧

೪೬. Patel, A Life ಪುಟ – ೯೧–೯೨

೪೭. Patel, A Life ಪುಟ – ೯೨

೪೮. Patel, A Life ಪುಟ – ೯೩

೪೯. Patel, A Life ಪುಟ – ೯೩–೯೪

೫೦. Patel, A Life ಪುಟ – ೯೬

೫೧. Patel, A Life ಪುಟ – ೯೭

೫೨. Patel, A Life ಪುಟ – ೯೮

೫೩. The Indomitable Sardar ಪುಟ – ೩೦–೩೧

೫೪. The Indomitable Sardar ಪುಟ – ೩೧

೫೫. SVP India's Iron Man ಪುಟ – ೭೬

೫೬. SVP India's Iron Man ಪುಟ – ೭೬–೭೭

೫೭. The Indomitable Sardar ಪುಟ – ೪೪

೫೮. A Patriot For Me ಪುಟ – ೪೩

೫೯. SVP India's Iron Man ಪುಟ – ೭೭–೭೮

೬೦. SVP India's Iron Man ಪುಟ – ೭೩–೭೪

೬೧. The Indomitable Sardar ಪುಟ – ೪೫

೬೨. The Indian Triumvirate ಪುಟ – ೧೨೭

೬೩. Patel, A Life ಪುಟ – ೧೦೪

೬೪. Patel, A Life ಪುಟ – ೧೦೪

೬೫. The Indian Triumvirate ಪುಟ – ೧೨೮

೬೬. The Indomitable Sardar ಪುಟ – ೪೯–೫೦

೬೭. Patel, A Life ಪುಟ – ೧೦೯

೬೮. The Indomitable Sardar ಪುಟ – ೫೦

೬೯. Patel, A Life ಪುಟ – ೧೧೦

೭೦. Patel, A Life ಪುಟ – ೧೧೦

೭೧. Patel, A Life ಪುಟ – ೧೧೧

೭೨. The Indomitable Sardar ಪುಟ – ೫೨–೫೩

೭೩. Patel, A Life ಪುಟ – ೧೧೨

೭೪. Patel, A Life ಪುಟ – ೧೧೩

೭೫. Patel, A Life ಪುಟ – ೧೧೪

೭೬. The Indomitable Sardar ಪುಟ – ೫೪

೭೭. The Indian Triumvirate ಪುಟ – ೨೯೯

೭೮. SVP India's Iron Man ಪುಟ – ೭೯

೭೯. SVP India's Iron Man ಪುಟ – ೮೦

೮೦. Patel, A Life ಪುಟ – ೧೧೪

೮೧. The Indomitable Sardar ಪುಟ – ೫೫–೫೬

೮೨. Patel, A Life ಪುಟ – ೧೧೫
೮೩. Patel, A Life ಪುಟ – ೧೧೫
೮೪. The Indomitable Sardar ಪುಟ – ೫೬
೮೫. SVP India's Iron Man ಪುಟ – ೮೧
೮೬. SVP India's Iron Man ಪುಟ – ೮೨
೮೭. SVP India's Iron Man ಪುಟ – ೮೩
೮೮. SVP India's Iron Man ಪುಟ – ೮೪–೮೭
೮೯. SVP India's Iron Man ಪುಟ – ೮೭
೯೦. Patel, A Life ಪುಟ – ೧೧೮
೯೧. Patel, A Life ಪುಟ – ೧೧೮
೯೨. Patel, A Life ಪುಟ – ೧೧೯
೯೩. The Indomitable Sardar ಪುಟ – ೫೮
೯೪. Patel, A Life ಪುಟ – ೧೨೦
೯೫. Patel, A Life ಪುಟ – ೧೨೧
೯೬. Patel, A Life ಪುಟ – ೧೨೧–೧೨೨
೯೭. Patel, A Life ಪುಟ – ೧೨೨
೯೮. SVP India's Iron Man ಪುಟ – ೯೫
೯೯. SVP India's Iron Man ಪುಟ – ೯೬
೧೦೦. SVP India's Iron Man ಪುಟ – ೯೭
೧೦೧. SVP India's Iron Man ಪುಟ – ೯೮
೧೦೨. The Indomitable Sardar ಪುಟ – ೫೨
೧೦೩. Patel, A Life ಪುಟ – ೧೩೪–೧೩೫
೧೦೪. Patel, A Life ಪುಟ – ೧೩೫
೧೦೫. Patel, A Life ಪುಟ – ೧೩೬
೧೦೬. Patel, A Life ಪುಟ – ೧೩೭
೧೦೭. Patel, A Life ಪುಟ – ೧೩೭–೧೩೮
೧೦೮. Patel, A Life ಪುಟ – ೧೩೮–೧೪೧

೧೧೦. Patel, A Life ಪುಟ – ೧೪೧–೧೪೨
೧೧೧. SVP India's Iron Man ಪುಟ – ೧೦೭–೧೦೮
೧೧೨. Patel, A Life ಪುಟ – ೧೫೦
೧೧೩. Patel, A Life ಪುಟ – ೧೫೧
೧೧೪. SVP India's Iron Man ಪುಟ – ೧೧೩–೧೧೪
೧೧೫. Patel, A Life ಪುಟ – ೧೫೩
೧೧೬. Patel, A Life ಪುಟ – ೧೫೪
೧೧೭. SVP India's Iron Man ಪುಟ – ೧೧೬–೧೧೭
೧೧೮. Patel, A Life ಪುಟ – ೧೫೪
೧೧೯. Patel, A Life ಪುಟ – ೧೫೫
೧೨೦. Patel, A Life ಪುಟ – ೧೫೫
೧೨೧. Patel, A Life ಪುಟ – ೧೫೬
೧೨೨. Patel, A Life ಪುಟ – ೧೫೮
೧೨೩. Patel, A Life ಪುಟ – ೧೫೮
೧೨೪. Patel, A Life ಪುಟ – ೧೫೮
೧೨೫. Patel, A Life ಪುಟ – ೧೫೮
೧೨೬. Patel, A Life ಪುಟ – ೧೫೯
೧೨೭. Patel, A Life ಪುಟ – ೧೫೯–೧೬೦
೧೨೮. Patel, A Life ಪುಟ – ೧೬೧–೧೬೨
೧೨೯. Patel, A Life ಪುಟ – ೧೬೨
೧೩೦. SVP India's Iron Man ಪುಟ – ೧೧೯
೧೩೧. SVP India's Iron Man ಪುಟ – ೧೨೧–೧೨೨
೧೩೨. SVP India's Iron Man ಪುಟ – ೧೨೫–೧೨೬
೧೩೩. SVP India's Iron Man ಪುಟ – ೧೧೮
೧೩೪. SVP India's Iron Man ಪುಟ – ೧೨೭
೧೩೫. SVP India's Iron Man ಪುಟ – ೧೨೭
೧೩೬. SVP India's Iron Man ಪುಟ – ೧೨೮
೧೩೭. SVP India's Iron Man ಪುಟ – ೧೨೯

೧೩೮. SVP India's Iron Man ಪುಟ – ೧೨೯–೧೩೦
೧೩೯. Patel, A Life ಪುಟ – ೧೬೯
೧೪೦. Patel, A Life ಪುಟ – ೧೭೦

ಭಾಗ ೩: ರಾಷ್ಟ್ರ ನಾಯಕ

೧. Patel, A Life ಪುಟ – ೧೭೧
೨. Gandhi, His Life and Thought ಪುಟ – ೧೧೧
೩. Patel, A Life ಪುಟ – ೧೭೧
೪. Patel, A Life ಪುಟ – ೧೭೩
೫. A Patriot For Me ಪುಟ – ೬೪–೬೬
೬. A Patriot For Me ಪುಟ – ೬೬–೬೭
೭. A Patriot For Me ಪುಟ – ೬೭–೬೮
೮. Patel, A Life ಪುಟ – ೧೭೯–೧೮೦
೯. Patel, A Life ಪುಟ – ೧೮೦
೧೦. Patel, A Life ಪುಟ – ೧೮೦
೧೧. Patel, A Life ಪುಟ – ೧೮೧
೧೨. Patel, A Life ಪುಟ – ೧೮೨
೧೩. Patel, A Life ಪುಟ – ೧೮೪
೧೪. Patel, A Life ಪುಟ – ೧೮೫
೧೫. Gandhi, His Life and Thought ಪುಟ – ೧೨೭–೧೨೮
೧೬. Patel, A Life ಪುಟ – ೧೮೮
೧೭. SVP India's Iron Man ಪುಟ – ೧೩೮–೧೩೯
೧೮. Patel, A Life ಪುಟ – ೧೮೭
೧೯. Patel, A Life ಪುಟ – ೧೮೮
೨೦. SVP India's Iron Man ಪುಟ – ೧೩೫
೨೧. SVP India's Iron Man ಪುಟ – ೧೩೫–೧೩೬

೨೩. Patel, A Life ಪುಟ – ೧೮೮

೨೪. Patel, A Life ಪುಟ – ೧೮೯

೨೫. Patel, A Life ಪುಟ – ೧೮೯

೨೬. SVP India's Iron Man ಪುಟ – ೧೪೦

೨೭. SVP India's Iron Man ಪುಟ – ೧೪೧

೨೮. Patel, A Life ಪುಟ – ೧೯೦

೨೯. Patel, A Life ಪುಟ – ೧೯೧

೩೦. SVP India's Iron Man ಪುಟ – ೧೪೦–೧೪೧

೩೧. SVP India's Iron Man ಪುಟ – ೧೩೫

೩೨. SVP India's Iron Man ಪುಟ – ೧೪೨

೩೩. SVP India's Iron Man ಪುಟ – ೧೪೧–೧೪೩

೩೪. SVP India's Iron Man ಪುಟ – ೧೪೪–೧೪೫

೩೫. Patel, A Life ಪುಟ – ೧೯೨–೧೯೪

೩೬. Patel, A Life ಪುಟ – ೧೯೧

೩೭. Patel, A Life ಪುಟ – ೧೯೪

೩೮. Patel, A Life ಪುಟ – ೧೯೪–೧೯೫

೩೯. Patel, A Life ಪುಟ – ೧೯೫

೪೦. Patel, A Life ಪುಟ – ೧೯೬–೧೯೯

೪೧. The Life of Mahatma Gandhi ಪುಟ – ೩೪೬–೩೪೭

೪೨. Gandhi - His Life and Thought ಪುಟ – ೧೩೧

೪೩. Patel, A Life ಪುಟ – ೧೯೯–೨೦೧

The Life of Mahatma Gandhi ಪುಟ – ೩೪೬–೩೫೦

೪೪. SVP India's Iron Man ಪುಟ – ೧೪೮

೪೫. SVP India's Iron Man ಪುಟ – ೧೪೯

೪೬. SVP India's Iron Man ಪುಟ – ೧೪೯–೧೫೦

೪೭. The Indomitable Sardar ಪುಟ – ೮೭

೪೮. SVP India's Iron Man ಪುಟ – ೧೫೦–೧೫೧

೪೯. SVP India's Iron Man ಪುಟ – ೧೫೧

೫೦. SVP India's Iron Man ಪುಟ – ೧೫೧

೫೧. SVP India's Iron Man ಪುಟ – ೧೫೨

೫೨. SVP India's Iron Man ಪುಟ – ೧೫೨–೧೫೩

೫೩. SVP India's Iron Man ಪುಟ – ೧೫೪

೫೪. The Indomitable Sardar ಪುಟ – ೮೭

೫೫. The Indomitable Sardar ಪುಟ – ೮೭–೮೯

೫೬. Patel, A Life ಪುಟ – ೨೦೪

೫೭. Patel, A Life ಪುಟ – ೨೦೯

೫೮. The Indomitable Sardar ಪುಟ – ೮೯

೫೯. The Indomitable Sardar ಪುಟ – ೯೦

೬೦. SVP India's Iron Man ಪುಟ – ೧೫೬–೧೫೭

೬೧. The Indomitable Sardar ಪುಟ – ೯೨–೯೩

೬೨. The Indomitable Sardar ಪುಟ – ೯೫

೬೩. The Indomitable Sardar ಪುಟ – ೯೬

೬೪. Patel, A Life ಪುಟ – ೨೨೪

೬೫. Patel, A Life ಪುಟ – ೨೨೫–೨೨೬

೬೬. SVP India's Iron Man ಪುಟ – ೧೫೮–೧೬೦

೬೭. Patel, A Life ಪುಟ – ೨೨೭–೨೨೮

೬೮. Patel, A Life ಪುಟ – ೨೨೮–೨೨೯

೬೯. Patel, A Life ಪುಟ – ೨೨೯

೭೦. Patel, A Life ಪುಟ – ೨೩೦

೭೧. Patel, A Life ಪುಟ – ೨೩೧–೨೩೨

೭೨. Patel, A Life ಪುಟ – ೨೩೩

೭೩. Patel, A Life ಪುಟ – ೨೩೫

೭೪. Patel, A Life ಪುಟ – ೨೩೬–೨೩೭

೭೫. Patel, A Life ಪುಟ – ೨೩೮

೭೬. Patel, A Life ಪುಟ – ೨೪೧–೨೪೨

೭೭. Patel, A Life ಪುಟ – ೨೪೫

೭೮. SVP India's Iron Man ಪುಟ – ೫೬–೫೭

೭೯. Gandhi - His Life and Thought ಪುಟ – ೧೬೨–೧೬೩

೮೦. Patel, A Life ಪುಟ – ೨೪೬

೮೧. Patel, A Life ಪುಟ – ೨೪೭

೮೨. A Patriot For Me ಪುಟ – ೮೩

೮೩. Patel, A Life ಪುಟ – ೨೫೦

೮೪. Patel, A Life ಪುಟ – ೨೫೧

೮೫. Patel, A Life ಪುಟ – ೨೫೩

The Indomitable Sardar ಪುಟ – ೧೦೫

೮೬. SVP India's Iron Man ಪುಟ – ೧೬೮

೮೭. Gandhi - His Life and Thought ಪುಟ – ೧೬೯–೧೭೦

೮೮. Patel, A Life ಪುಟ – ೨೫೪–೨೫೫

೮೯. SVP India's Iron Man ಪುಟ – ೬೧–೬೨

೯೦. SVP India's Iron Man ಪುಟ – ೬೨

೯೧. Patel, A Life ಪುಟ – ೨೫೫

೯೨. Patel, A Life ಪುಟ – ೨೫೫

೯೩. SVP India's Iron Man ಪುಟ – ೬೩

೯೪. Patel, A Life ಪುಟ – ೨೫೭

೯೫. Patel, A Life ಪುಟ – ೨೫೭–೨೫೮

೯೬. India's Struggle for Freedom ಪುಟ – ೩೧೭–೩೧೯

೯೭. Patel, A Life ಪುಟ – ೨೫೮–೨೫೯

೯೮. A Patriot For Me ಪುಟ – ೮೧

೯೯. Patel, A Life ಪುಟ – ೨೫೯

೧೦೦. Patel, A Life ಪುಟ – ೨೫೯–೨೬೦

೧೦೧. The Indomitable Sardar ಪುಟ – ೧೧೧

೧೦೨. Patel, A Life ಪುಟ – ೨೬೦

೧೦೩. SVP India's Iron Man ಪುಟ – ೧೭೯

೧೦೪. The Indomitable Sardar ಪುಟ – ೧೧೨

೧೦೫. The Indomitable Sardar ಪುಟ – ೧೧೩
೧೦೬. Patel, A Life ಪುಟ – ೨೬೦
೧೦೭. Patel, A Life ಪುಟ – ೨೬೧
೧೦೮. The Indomitable Sardar ಪುಟ – ೧೧೮
೧೦೯. Patel, A Life ಪುಟ – ೨೬೬
೧೧೦. Patel, A Life ಪುಟ – ೨೬೭
೧೧೧. Patel, A Life ಪುಟ – ೨೬೭
೧೧೨. The Indomitable Sardar ಪುಟ – ೧೨೦
೧೧೩. Bhavan's Journal, Feb, 28, 2001
Vol. ೪೭, No. ೧೪ ಪುಟ – ೪೬–೫೭
೧೧೪. Patel, A Life ಪುಟ – ೨೬೪–೨೬೫
೧೧೫. Patel, A Life ಪುಟ – ೨೭೨
೧೧೬. Patel, A Life ಪುಟ – ೨೭೨–೨೭೩
೧೧೭. Patel, A Life ಪುಟ – ೨೭೩–೨೭೪
೧೧೮. Patel, A Life ಪುಟ – ೨೭೪
೧೧೯. Patel, A Life ಪುಟ – ೨೭೪–೨೭೫
೧೨೦. Patel, A Life ಪುಟ – ೨೭೫
೧೨೧. Patel, A Life ಪುಟ – ೨೭೬
೧೨೨. Patel, A Life ಪುಟ – ೨೭೬
೧೨೩. Patel, A Life ಪುಟ – ೨೭೭
೧೨೪. Patel, A Life ಪುಟ – ೨೭೭
೧೨೫. Patel, A Life ಪುಟ – ೨೬೮–೨೬೯
೧೨೬. Patel, A Life ಪುಟ – ೨೭೦
೧೨೭. Patel, A Life ಪುಟ – ೨೬೩
Bhavan's Journal, April, 18,1971 ಪುಟ – ೪೪–೪೫
೧೨೮. Patel, A Life ಪುಟ – ೨೬೩
೧೨೯. Patel, A Life ಪುಟ – ೨೭೭–೨೮೦
೧೩೦. The Indomitable Sardar ಪುಟ – ೧೨೨

೧೩೧. Patel, A Life ಪುಟ – ೩೮೧
೧೩೨. The Indomitable Sardar ಪುಟ – ೧೨೪
೧೩೩. Patel, A Life ಪುಟ – ೨೮೩–೨೮೪
೧೩೪. Patel, A Life ಪುಟ – ೨೮೪
೧೩೫. SVP India's Iron Man ಪುಟ – ೧೯೪
೧೩೬. SVP India's Iron Man ಪುಟ – ೧೯೪–೧೯೫
೧೩೭. Patel, A Life ಪುಟ – ೨೮೯
೧೩೮. Patel, A Life ಪುಟ – ೨೯೦
೧೩೯. Patel, A Life ಪುಟ – ೨೮೪
೧೪೦. The Indomitable Sardar ಪುಟ – ೧೨೬–೧೨೭
೧೪೧. The Indomitable Sardar ಪುಟ – ೧೨೭
೧೪೨. India's Struggle for Independence ಪುಟ – ೪೫೧
೧೪೩. The Life of Mahatma Gandhi ಪುಟ – ೪೪೧
೧೪೪. The Indomitable Sardar ಪುಟ – ೧೨೯
೧೪೫. Patel, A Life ಪುಟ – ೨೯೪
೧೪೬. The Indomitable Sardar ಪುಟ – ೧೩೦
೧೪೭. Patel, A Life ಪುಟ – ೨೯೬
೧೪೮. Patel, A Life ಪುಟ – ೨೯೭
೧೪೯. Patel, A Life ಪುಟ – ೨೯೮
೧೫೦. Patel, A Life ಪುಟ – ೨೯೮
೧೫೧. Patel, A Life ಪುಟ – ೩೦೦
೧೫೨. The Indomitable Sardar ಪುಟ – ೧೩೧
೧೫೩. The Indomitable Sardar ಪುಟ – ೧೩೨
೧೫೪. Patel, A Life ಪುಟ – ೩೦೧
೧೫೫. The Life of Mahatma Gandhi ಪುಟ – ೪೪೬–೪೪೭
೧೫೬. Patel, A Life ಪುಟ – ೩೦೫
೧೫೭. The Life of Mahatma Gandhi ಪುಟ – ೪೪೮–೪೪೯
೧೫೮. Patel, A Life ಪುಟ – ೩೦೫–೩೦೬

೧೫೯. The Life of Mahatma Gandhi ಪುಟ – ೪೪೮
೧೬೦. Patel, A Life ಪುಟ – ೩೦೬
೧೬೧. The Indomitable Sardar ಪುಟ – ೧೩೩
೧೬೨. Gandhi - His Life and Thought ಪುಟ – ೧೯೬–೧೯೭
೧೬೩. A Patriot For Me ಪುಟ – ೯೯
೧೬೪. The Indomitable Sardar ಪುಟ – ೧೩೩
೧೬೫. Patel, A Life ಪುಟ – ೩೦೭
೧೬೬. Patel, A Life ಪುಟ – ೩೦೯
೧೬೭. Patel, A Life ಪುಟ – ೩೦೯
೧೬೮. Patel, A Life ಪುಟ – ೩೧೦
೧೬೯. Patel, A Life ಪುಟ – ೩೧೧
೧೭೦. Patel, A Life ಪುಟ – ೩೧೨
೧೭೧. Patel, A Life ಪುಟ – ೩೧೨
೧೭೨. Patel, A Life ಪುಟ – ೩೧೩
೧೭೩. Patel, A Life ಪುಟ – ೩೧೩
೧೭೪. SVP India's Iron Man ಪುಟ – ೨೦೪
೧೭೫. Patel, A Life ಪುಟ – ೩೧೫
೧೭೬. Patel, A Life ಪುಟ – ೩೧೫–೩೧೬
SVP India's Iron Man ಪುಟ – ೨೧೦
೧೭೭. Gandhi - His Life and Thought ಪುಟ – ೨೦೫
೧೭೮. Gandhi - His Life and Thought ಪುಟ – ೨೦೪
೧೭೯. Gandhi - His Life and Thought ಪುಟ – ೨೦೯–೨೧೦
೧೮೦. Patel, A Life ಪುಟ – ೩೧೯–೩೨೦
೧೮೧. Patel, A Life ಪುಟ – ೩೨೧
೧೮೨. Patel, A Life ಪುಟ – ೩೨೨
೧೮೩. Patel, A Life ಪುಟ – ೩೨೪
೧೮೪. Patel, A Life ಪುಟ – ೩೨೯
೧೮೫. Patel, A Life ಪುಟ – ೩೩೦

೧೮೬. Patel, A Life ಪುಟ – ೩೩೧
೧೮೭. Patel, A Life ಪುಟ – ೩೩೪
೧೮೮. Patel, A Life ಪುಟ – ೩೩೭
೧೮೯. Patel, A Life ಪುಟ – ೩೩೭–೩೩೮
೧೯೦. Patel, A Life ಪುಟ – ೩೩೫–೩೩೭
೧೯೧. Patel, A Life ಪುಟ – ೩೩೯
೧೯೨. Patel, A Life ಪುಟ – ೩೩೯
೧೯೩. Patel, A Life ಪುಟ – ೩೪೩
೧೯೪. Patel, A Life ಪುಟ – ೩೪೪
೧೯೫. Patel, A Life ಪುಟ – ೩೪೪
೧೯೬. Patel, A Life ಪುಟ – ೩೪೪
೧೯೭. The Indomitable Sardar ಪುಟ – ೧೪೧
೧೯೮. Gandhi - His Life and Thought ಪುಟ – ೨೨೫
೧೯೯. The Life of Mahatma Gandhi ಪುಟ – ೫೦೯–೫೧೦
೨೦೦. SVP India's Iron Man ಪುಟ – ೨೨೩
೨೦೧. SVP India's Iron Man ಪುಟ – ೨೨೫
೨೦೨. Patel, A Life ಪುಟ – ೩೪೫
೨೦೩. Patel, A Life ಪುಟ – ೩೪೫–೩೪೬
೨೦೪. Patel, A Life ಪುಟ – ೩೪೭
೨೦೫. The Life of Mahatma Gandhi ಪುಟ – ೫೧೧
೨೦೬. Patel, A Life ಪುಟ – ೩೪೭
೨೦೭. Patel, A Life ಪುಟ – ೩೪೮
೨೦೮. SVP India's Iron Man ಪುಟ – ೨೨೮–೨೨೯
೨೦೯. Patel, A Life ಪುಟ – ೩೫೦
೨೧೦. Patel, A Life ಪುಟ – ೩೫೧
SVP India's Iron Man ಪುಟ – ೨೩೩
೨೧೧. Sardar's Correspondence Vol. 1 ಪುಟ – ೮
೨೧೨. Sardar's Correspondence Vol. 1 ಪುಟ – ೯

೨೧೩. Sardar's Correspondence Vol. 1 ಪುಟ – ೧೦

೨೧೪. Sardar's Correspondence Vol. 1 ಪುಟ – ೧೦–೧೧

೨೧೫. SVP India's Iron Man ಪುಟ – ೨೩೧–೨೩೪

೨೧೬. SVP India's Iron Man ಪುಟ – ೨೩೫–೨೩೮

೨೧೭. Sardar's Correspondence Vol. 1 ಪುಟ – ೧೯

೨೧೮. SVP India's Iron Man ಪುಟ – ೨೪೦

೨೧೯. Patel, A Life ಪುಟ – ೩೫೨–೩೫೩

೨೨೦. Patel, A Life ಪುಟ – ೩೫೩

೨೨೧. The Indomitable Sardar ಪುಟ – ೧೪೩

೨೨೨. Patel, A Life ಪುಟ – ೩೫೪

೨೨೩. The Indomitable Sardar ಪುಟ – ೧೪೩

೨೨೪. The Indomitable Sardar ಪುಟ – ೧೪೩

೨೨೫. Patel, A Life ಪುಟ – ೩೫೫

೨೨೬. Patel, A Life ಪುಟ – ೩೫೫

೨೨೭. Patel, A Life ಪುಟ – ೩೫೬

೨೨೮. Gandhi - His Life and Thought ಪುಟ – ೨೨೮

೨೨೯. SVP India's Iron Man ಪುಟ – ೨೪೬

೨೩೦. SVP India's Iron Man ಪುಟ – ೨೪೬

೨೩೧. SVP India's Iron Man ಪುಟ – ೨೧೪

೨೩೨. SVP India's Iron Man ಪುಟ – ೨೧೯–೨೨೦

೨೩೩. The Indomitable Sardar ಪುಟ – ೧೪೪–೧೪೫

೨೩೪. Patel, A Life ಪುಟ – ೩೬೩

೨೩೫. Patel, A Life ಪುಟ – ೩೬೪

೨೩೬. Patel, A Life ಪುಟ – ೩೬೫

೨೩೭. Patel, A Life ಪುಟ – ೩೬೫–೩೬೬

೨೩೮. Patel, A Life ಪುಟ – ೩೬೬

೨೩೯. Patel, A Life ಪುಟ – ೩೬೪

೨೪೦. SVP India's Iron Man ಪುಟ – ೨೪೧–೨೪೨

೨೪೧. SVP India's Iron Man ಪುಟ – ೨೪೩

೨೪೨. Patel, A Life ಪುಟ – ೩೯೯–೪೭೧

೨೪೩. SVP India's Iron Man ಪುಟ – ೨೪೨–೨೪೩

೨೪೪. The Indomitable Sardar ಪುಟ – ೧೪೫

೨೪೫. Patel, A Life ಪುಟ – ೪೭೨

೨೪೬. SVP India's Iron Man ಪುಟ – ೨೪೪

೨೪೭. Patel, A Life ಪುಟ – ೪೭೩

೨೪೮. Gandhi - His Life and Thought ಪುಟ – ೨೫೨

೨೪೯. Patel, A Life ಪುಟ – ೪೭೪

೨೫೦. Gandhi - His Life and Thought ಪುಟ – ೨೫೨–೨೫೪

೨೫೧. Gandhi's Emissary ಪುಟ – ೧೫

೨೫೨. Patel, A Life ಪುಟ – ೪೭೬

೨೫೩. Gandhi's Emissary ಪುಟ – ೧೪

೨೫೪. SVP India's Iron Man ಪುಟ – ೨೫೪

೨೫೫. Patel, A Life ಪುಟ – ೪೭೪

೨೫೬. SVP India's Iron Man ಪುಟ – ೨೫೪

೨೫೭. Gandhi - His Life and Thought ಪುಟ – ೨೫೪–೨೫೯

೨೫೮. Patel, A Life ಪುಟ – ೪೭೪

೨೬೦. SVP India's Iron Man ಪುಟ – ೨೫೪

೨೬೧. Patel, A Life ಪುಟ – ೪೪೧–೪೪೨

೨೬೨. Patel, A Life ಪುಟ – ೪೪೪–೪೪೫

೨೬೩. Patel, A Life ಪುಟ – ೪೪೫

೨೬೪. SVP India's Iron Man ಪುಟ – ೨೪೪

೨೬೫. The Indomitable Sardar ಪುಟ – ೧೫೩

೨೬೬. Patel, A Life ಪುಟ – ೩೯೦

೨೬೭. Patel, A Life ಪುಟ – ೪೪೫–೪೪೬

೨೬೮. Patel, A Life ಪುಟ – ೩೯೨

೨೬೯. Patel, A Life ಪುಟ – ೩೯೨

೨೭೦. Patel, A Life ಪುಟ – ೩೯೩

೨೭೧. SVP India's Iron Man ಪುಟ – ೨೮೨–೨೮೩

೨೭೨. SVP India's Iron Man ಪುಟ – ೨೮೪–೨೮೫

೨೭೩. SVP India's Iron Man ಪುಟ – ೨೮೫

೨೭೪. The Indomitable Sardar ಪುಟ – ೧೫೪

೨೭೫. Patel, A Life ಪುಟ – ೩೯೮

೨೭೬. Patel, A Life ಪುಟ – ೩೯೮

೨೭೭. SVP India's Iron Man ಪುಟ – ೨೮೬

೨೭೮. Patel, A Life ಪುಟ – ೩೯೮–೩೯೯

೨೭೯. Patel, A Life ಪುಟ – ೩೯೯

೨೮೦. Patel, A Life ಪುಟ – ೪೦೦

೨೮೧. Patel, A Life ಪುಟ – ೪೦೧

೨೮೨. Patel, A Life ಪುಟ – ೪೦೧

೨೮೩. Patel, A Life ಪುಟ – ೪೦೨

೨೮೪. Patel, A Life ಪುಟ – ೪೦೩

೨೮೫. Patel, A Life ಪುಟ – ೪೦೩

೨೮೬. Patel, A Life ಪುಟ – ೪೦೩–೪೦೪

೨೮೭. The Indomitable Sardar ಪುಟ – ೧೫೫

೨೮೮. The Life of Mahatma Gandhi ಪುಟ – ೫೭೫–೫೭೭

೨೮೯. SVP India's Iron Man ಪುಟ – ೨೯೨

೨೯೦. SVP India's Iron Man ಪುಟ – ೨೯೩

೨೯೧. SVP India's Iron Man ಪುಟ – ೨೯೩

೨೯೨. Patel, A Life ಪುಟ – ೪೦೬

೨೯೩. Sardar Patel-Select Correspondence
Volume 1 ಪುಟ – ೧೪೨

೨೯೪. Sardar Patel-Select Correspondence
Volume 1 ಪುಟ – ೧೪೩

೨೯೫. Patel, A Life ಪುಟ – ೪೨೧

೨೯೬. Bhavan's Journal, July 31, 1997
Vol. 43. Number: ೨೪ ಪುಟ – ೩೪–೩೬

೨೯೭. The Indomitable Sardar ಪುಟ – ೧೫೮

೨೯೮. The Indomitable Sardar ಪುಟ – ೧೫೯

೨೯೯. The Indomitable Sardar ಪುಟ – ೧೫೯

೩೦೦. The Indomitable Sardar ಪುಟ – ೧೬೦

೩೦೧. Patel, A Life ಪುಟ – ೪೨೫

೩೦೨. Patel, A Life ಪುಟ – ೪೨೭

೩೦೩. Patel, A Life ಪುಟ – ೪೨೮

೩೦೪. Patel, A Life ಪುಟ – ೪೨೮

೩೦೫. Patel, A Life ಪುಟ – ೪೨೯

೩೦೬. Patel, A Life ಪುಟ – ೪೨೯–೪೩೦

೩೦೭. Patel, A Life ಪುಟ – ೪೩೦

೩೦೮. Patel, A Life ಪುಟ – ೪೩೦

೩೦೯. Patel, A Life ಪುಟ – ೪೩೧
The Indomitable Sardar ಪುಟ – ೨೨೯

೩೧೦. The Indomitable Sardar ಪುಟ – ೨೫೦

೩೧೧. Patel, A Life ಪುಟ – ೪೩೧

೩೧೨. Patel, A Life ಪುಟ – ೪೩೨

೩೧೩. Patel, A Life ಪುಟ – ೪೩೩

೩೧೪. Patel, A Life ಪುಟ – ೪೩೩

೩೧೫. The Indomitable Sardar ಪುಟ – ೧೬೭–೧೬೮

೩೧೬. Patel, A Life ಪುಟ – ೪೩೨

೩೧೭. Patel, A Life ಪುಟ – ೪೩೨

೩೧೮. Patel, A Life ಪುಟ – ೪೫೮

೩೧೯. Patel, A Life ಪುಟ – ೪೫೮

೩೨೦. Patel, A Life ಪುಟ – ೪೫೮

೩೨೧. Patel, A Life ಪುಟ – ೪೫೮-೪೫೯

೩೨೨. Neharu-Patel select Doc. & Corr ಪುಟ – ೨೬೫-೬೭

೩೨೩. Neharu-Patel select Doc. & Corr ಪುಟ – ೨೬೮-೨೬೯

೩೨೪. Neharu-Patel select Doc. & Corr ಪುಟ – ೨೭೦-೨೭೨

೩೨೫. Patel, A Life ಪುಟ – ೪೬೦

೩೨೬. The Indomitable Sardar ಪುಟ – ೧೬೮

೩೨೭. The Indomitable Sardar ಪುಟ – ೧೬೮

೩೨೮. The Indomitable Sardar ಪುಟ – ೧೬೯

೩೨೯. The Indomitable Sardar ಪುಟ – ೧೬೯-೧೭೦

೩೩೦. Patel, A Life ಪುಟ – ೪೬೨

೩೩೧. Patel, A Life ಪುಟ – ೪೬೨

೩೩೨. Patel, A Life ಪುಟ – ೪೬೨

೩೩೩. Patel, A Life ಪುಟ – ೪೬೩

೩೩೪. Patel, A Life ಪುಟ – ೪೬೩

೩೩೫. The Indomitable Sardar ಪುಟ – ೧೭೧

೩೩೬. Patel, A Life ಪುಟ – ೪೬೪

೩೩೭. Patel, A Life ಪುಟ – ೪೬೫

೩೩೮. Patel, A Life ಪುಟ – ೪೬೬

೩೩೯. Patel, A Life ಪುಟ – ೪೬೬

೩೪೦. Patel, A Life ಪುಟ – ೪೬೭

The Indomitable Sardar ಪುಟ – ೧೭೬

೩೪೧. Patel, A Life ಪುಟ – ೪೬೮

೩೪೨. Patel, A Life ಪುಟ – ೪೬೯

೩೪೩. Patel, A Life ಪುಟ – ೪೬೯

೩೪೪. Sardar Patel Sele. Corr. Vol. II ಪುಟ – ೨೦೩-೨೦೪

೩೪೫. Sardar Patel Sele. Corr. Vol. II ಪುಟ – ೨೦೫-೨೦೬

೩೪೬. Patel, A Life ಪುಟ – ೪೭೦

೩೪೭. Patel, A Life ಪುಟ – ೪೭೧

೩೪೮. The Indomitable Sardar ಪುಟ – ೧೭೭–೧೭೯
೩೪೯. Patel, A Life ಪುಟ – ೪೭೨
೩೫೦. Patel, A Life ಪುಟ – ೪೭೩
೩೫೧. Patel, A Life ಪುಟ – ೪೭೪
೩೫೨. Patel, A Life ಪುಟ – ೪೮೯
೩೫೩. Patel, A Life ಪುಟ – ೪೯೨
೩೫೪. Patel, A Life ಪುಟ – ೪೯೨
೩೫೫. Patel, A Life ಪುಟ – ೪೯೨
೩೫೬. Patel, A Life ಪುಟ – ೪೯೩
೩೫೭. Bhavan's Journal, Sept 30, 1999
Volume 46, Num. ೧೪ ಪುಟ – ೭೩–೮೧
೩೫೮. Patel, A Life ಪುಟ – ೪೯೪
೩೫೯. Patel, A Life ಪುಟ – ೪೯೫
೩೬೦. Patel, A Life ಪುಟ – ೪೯೫
೩೬೧. SVP India's Iron Man ಪುಟ – ೪೫೮–೪೬೦
೩೬೨. SVP India's Iron Man ಪುಟ – ೪೬೧
೩೬೩. SVP India's Iron Man ಪುಟ – ೪೬೨–೪೬೩
೩೬೪. SVP India's Iron Man ಪುಟ – ೪೬೩
೩೬೫. SVP India's Iron Man ಪುಟ – ೪೬೪
೩೬೬. SVP India's Iron Man ಪುಟ – ೪೬೪
೩೬೭. SVP India's Iron Man ಪುಟ – ೪೬೪–೪೬೫
೩೬೮. SVP India's Iron Man ಪುಟ – ೪೬೬
೩೬೯. SVP India's Iron Man ಪುಟ – ೪೬೮
೩೭೦. The Indomitable Sardar ಪುಟ – ೧೯೪
೩೭೧. SVP India's Iron Man ಪುಟ – ೪೬೫
೩೭೨. The Indomitable Sardar ಪುಟ – ೧೯೬
೩೭೩. The Indomitable Sardar ಪುಟ – ೪೭೩
೩೭೪. The Indomitable Sardar ಪುಟ – ೪೬೦

ಭಾಗ ೪: ಒಕ್ಕೂಟ ನಿರ್ಮಾಪಕ

೧.	SVP India's Iron Man	ಪುಟ – ೨೯೫
೨.	SVP India's Iron Man	ಪುಟ – ೨೯೫
೩.	The Indomitable Sardar	ಪುಟ – ೨೦೦
೪.	SVP India's Iron Man	ಪುಟ – ೨೯೭
೫.	Patel, A Life	ಪುಟ – ೪೦೬
೬.	Patel, A Life	ಪುಟ – ೪೦೪
೭.	Integration of Indian States	ಪುಟ – ೪೫
೮.	Integration of Indian States	ಪುಟ – ೪೬
೯.	Integration of Indian States	ಪುಟ – ೪೬
೧೦.	Patel, A Life	ಪುಟ – ೪೧೦
೧೧.	SVP India's Iron Man	ಪುಟ – ೩೦೭–೩೦೪
೧೨.	Integration of Indian States	ಪುಟ – ೯೧–೯೨
೧೩.	SVP India's Iron Man	ಪುಟ – ೩೦೯
೧೪.	SVP India's Iron Man	ಪುಟ – ೩೦೯
೧೫.	SVP India's Iron Man	ಪುಟ – ೩೧೦
೧೬.	Patel, A Life	ಪುಟ – ೪೧೧–೪೧೨
೧೭.	The Indomitable Sardar	ಪುಟ – ೨೦೨–೨೦೩
೧೪.	The Indomitable Sardar	ಪುಟ – ೨೦೩–೨೦೪
೧೯.	The Indomitable Sardar	ಪುಟ – ೨೦೪
೨೦.	Patel, A Life	ಪುಟ – ೪೧೧
೨೧.	The Integration of Indian States	ಪುಟ – ೧೧೧
೨೨.	The Integration of Indian States	ಪುಟ – ೧೦೩–೧೦೪
೨೩.	SVP India's Iron Man	ಪುಟ – ೩೫೭
೨೪.	SVP India's Iron Man	ಪುಟ – ೩೫೭
೨೫.	India's Bismark	ಪುಟ – ೯೯
೨೬.	SVP India's Iron Man	ಪುಟ – ೩೫೯–೩೬೦
೨೭.	The Integration of Indian States	ಪುಟ – ೪೩

೨೮. The Integration of Indian States ಪುಟ – ೧೦೫–೧೦೬

೨೯. SVP India's Iron Man ಪುಟ – ೩೬೩

೩೦. SVP India's Iron Man ಪುಟ – ೩೬೬

೩೧. SVP India's Iron Man ಪುಟ – ೩೬೬

೩೨. SVP India's Iron Man ಪುಟ – ೩೭೧

೩೩. SVP India's Iron Man ಪುಟ – ೩೬೭

೩೪. SVP India's Iron Man ಪುಟ – ೩೬೮

೩೫. SVP India's Iron Man ಪುಟ – ೩೬೯

೩೬. SVP India's Iron Man ಪುಟ – ೩೭೦

೩೭. The Integration of Indian States ಪುಟ – ೧೦೮–೧೦೯

೩೮. SVP India's Iron Man ಪುಟ – ೩೧೨

೩೯. India's Bismark ಪುಟ – ೧೦೬

೪೦. India's Bismark ಪುಟ – ೧೦೭

೪೧. India's Bismark ಪುಟ – ೧೦೭

೪೨. India's Bismark ಪುಟ – ೧೦೮–೧೦೯

೪೩. Bhavan's Journal, April 30, 1972 ಪುಟ – ೧೯–೨೧

೪೪. Patel, A Life ಪುಟ – ೪೩೫

೪೫. The Indomitable Sardar ಪುಟ – ೨೦೮

೪೬. Patel, A Life ಪುಟ – ೪೩೫

೪೭. India's Bismark ಪುಟ – ೧೨೪

೪೮. India's Bismark ಪುಟ – ೧೨೪

೪೯. India's Bismark ಪುಟ – ೧೨೪

೫೦. Patel, A Life ಪುಟ – ೪೩೬

೫೧. The Indomitable Sardar ಪುಟ – ೨೦೯

೫೨. Patel, A Life ಪುಟ – ೪೩೮

೫೩. The Integration of Indian States ಪುಟ – ೧೩೮ - ೧೫೪

೫೪. Patel, A Life ಪುಟ – ೪೫೪

೫೫. The Integration of Indian States ಪುಟ – ೧೬೧–೧೬೪

೫೬. Patel, A Life ಪುಟ – ೪೫೫

೫೭. Patel, A Life ಪುಟ – ೪೫೬

೫೮. The Integration of Indian States ಪುಟ – ೧೭೦

೫೯. The Integration of Indian States ಪುಟ – ೧೭೭

೬೦. The Integration of Indian States ಪುಟ – ೧೮೦

೬೧. The Integration of Indian States ಪುಟ – ೨೨೭–೨೨೮

೬೨. SVP India's Iron Man ಪುಟ – ೪೦೭

೬೩. The Integration of Indian States ಪುಟ – ೨೨೯

೬೪. SVP India's Iron Man ಪುಟ – ೪೦೯

೬೫. The Integration of Indian States ಪುಟ – ೨೩೦

೬೬. SVP India's Iron Man ಪುಟ – ೪೦೯–೪೧೦

೬೭. The Integration of Indian States ಪುಟ – ೨೩೪–೨೩೭

೬೮. The Integration of Indian States ಪುಟ – ೨೩೯

೬೯. SVP India's Iron Man ಪುಟ – ೪೧೫

೭೦. The Integration of Indian States ಪುಟ – ೧೮೨

೭೧. The Integration of Indian States ಪುಟ – ೧೮೮ -೧೯೦

೭೨. The Integration of Indian States ಪುಟ – ೨೦೨

೭೩. The Integration of Indian States ಪುಟ – ೨೦೩ -೨೧೭

೭೪. The Integration of Indian States ಪುಟ – ೨೨೬

೭೫. The Integration of Indian States ಪುಟ – ೨೪೯ -೨೬೨

೭೬. The Integration of Indian States ಪುಟ – ೨೬೮–೨೬೯

೭೭. The Integration of Indian States ಪುಟ – ೨೭೦ -೨೭೩

೭೮. The Integration of Indian States ಪುಟ – ೨೭೮

೭೯. The Integration of Indian States ಪುಟ – ೨೭೪ -೨೭೬

೮೦. The Integration of Indian States ಪುಟ – ೩೭೭ – ೩೮೨

೮೧. The Integration of Indian States ಪುಟ – ೨೬೬

೮೨. ವಿವಿಧ ಮೂಲಗಳು

೮೩. The Integration of Indian States ಪುಟ – ೨೬೭

೮೪. SVP India's Iron Man ಪುಟ – ೩೧೧

೮೫. The Indomitable Sardar ಪುಟ – ೨೧೧

೮೬. The Indomitable Sardar ಪುಟ – ೨೧೧

೮೭. The Integration of Indian States ಪುಟ – ೨೮೬

೮೮. The Integration of Indian States ಪುಟ – ೨೮೬ – ೨೮೭

೮೯. The Indomitable Sardar ಪುಟ – ೨೧೨

೯೦. The Indomitable Sardar ಪುಟ – ೨೧೩

೯೧. The Indomitable Sardar ಪುಟ – ೨೧೩–೨೧೪

೯೨. The Indomitable Sardar ಪುಟ – ೨೧೪–೨೧೫

೯೩. The Indomitable Sardar ಪುಟ – ೨೧೬

೯೪. The Indomitable Sardar ಪುಟ – ೨೧೬–೨೧೭

೯೫. Patel, A Life ಪುಟ – ೪೭೭–೪೭೮

೯೬. The Indomitable Sardar ಪುಟ – ೨೧೭

೯೭. Patel, A Life ಪುಟ – ೪೮೦–೪೮೧

೯೮. Patel, A Life ಪುಟ – ೪೮೧–೪೮೨

೯೯. The Indomitable Sardar ಪುಟ – ೨೨೦

೧೦೦. Patel, A Life ಪುಟ – ೪೮೨

೧೦೧. Integration of Indian States ಪುಟ – ೩೩೯–೩೪೦

೧೦೨. Integration of Indian States ಪುಟ – ೩೪೦

೧೦೩. Patel, A Life ಪುಟ – ೪೮೪

೧೦೪. Sardar Patel Sele. Corre. Vol. 1 ಪುಟ – ೫೭೦

೧೦೫. Integration of Indian States ಪುಟ – ೩೫೪–೩೫೫

೧೦೬. Patel, A Life ಪುಟ – ೪೩೯

೧೦೭. Patel, A Life ಪುಟ – ೪೩೯

೧೦೮. SVP India's Iron Man ಪುಟ – ೩೮೩–೩೮೪

೧೦೯. Integration of Indian States ಪುಟ – ೩೫೬

೧೧೦. Patel, A Life ಪುಟ – ೪೪೦

೧೧೧. Integration of Indian States ಪುಟ – ೩೫೬–೩೫೭

೧೧೨. Patel, A Life ಪುಟ – ೪೪೨

೧೧೩. Patel, A Life ಪುಟ – ೪೪೨-೪೪೩

Integration of Indian States ಪುಟ – ೩೫೮-೩೫೯

೧೧೪. SVP India's Iron Man ಪುಟ – ೩೮೪

೧೧೫. Integration of Indian States ಪುಟ – ೩೬೦

೧೧೬. Integration of Indian States ಪುಟ – ೩೬೨

೧೧೭. Integration of Indian States ಪುಟ – ೩೬೩

೧೧೮. SVP India's Iron Man ಪುಟ – ೩೭೩-೩೭೪

೧೧೯. Patel, A Life ಪುಟ – ೪೪೬

೧೨೦. Patel, A Life ಪುಟ – ೪೪೬ -೪೪೮

೧೨೧. India After Gandhi ಪುಟ – ೭೨

೧೨೨. SVP India's Iron Man ಪುಟ – ೪೦೩

೧೨೩. SVP India's Iron Man ಪುಟ – ೪೦೩

೧೨೪. India After Gandhi ಪುಟ – ೭೩

೧೨೫. India After Gandhi ಪುಟ – ೨೪೪

೧೨೬. Sardar Patel Sele. Corre. Vol. II ಪುಟ – ೪೬೩ –೪೬೪

೧೨೭. Sardar Patel Sele. Corre. Vol. II ಪುಟ – ೪೬೪-೪೬೫

೧೨೮. The Indomitable Sardar ಪುಟ – ೨೮೨-೧೮೪

೧೨೯. The Indomitable Sardar ಪುಟ – ೨೮೬

೧೩೦. Patel, A Life ಪುಟ – ೫೧೩

೧೩೧. The Indomitable Sardar ಪುಟ – ೧೮೭

೧೩೨. The Indomitable Sardar ಪುಟ – ೧೮೮

೧೩೩. Patel, A Life ಪುಟ – ೫೦೧

೧೩೪. Patel, A Life ಪುಟ – ೫೦೧

೧೩೫. Patel, A Life ಪುಟ – ೫೦೨

೧೩೬. Patel, A Life ಪುಟ – ೫೦೪

೧೩೭. Patel, A Life ಪುಟ – ೫೦೪

೧೩೮. Patel, A Life ಪುಟ – ೫೦೫

೧೩೯. Patel, A Life ಪುಟ – ೫೦೬
೧೪೦. Patel, A Life ಪುಟ – ೫೦೬
೧೪೧. Patel, A Life ಪುಟ – ೫೦೭

ಭಾಗ ೫: ಸಾರ್ಥಕ ಜೀವನ

೧. SVP India's Iron Man ಪುಟ – ೪೮೩
೨. Patel, A Life ಪುಟ – ೪೯೭
೩. Patel, A Life ಪುಟ – ೪೯೮
೪. Patel, A Life ಪುಟ – ೪೯೮
೫. SVP India's Iron Man ಪುಟ – ೪೮೫
೬. SVP India's Iron Man ಪುಟ – ೪೮೫
೭. SVP India's Iron Man ಪುಟ – ೪೮೬
೮. Patel, A Life ಪುಟ – ೫೦೯ – ೫೧೩
೯. SVP India's Iron Man ಪುಟ – ೧೬೮
೧೦. SVP India's Iron Man ಪುಟ – ೧೭೨
೧೧. Patel, A Life ಪುಟ – ೪೭೧
೧೨. Patel, A Life ಪುಟ – ೪೯೦
೧೩. Patel, A Life ಪುಟ – ೪೯೦
೧೪. Patel, A Life ಪುಟ – ೪೯೧
೧೫. Patel, A Life ಪುಟ – ೪೯೧
೧೬. Patel, A Life ಪುಟ – ೪೯೧
೧೭. SVP India's Iron Man ಪುಟ – ೪೫೦–೪೫೧
೧೮. SVP India's Iron Man ಪುಟ – ೪೫೧–೪೫೨
೧೯. SVP India's Iron Man ಪುಟ – ೪೫೪
೨೦. Patel, A Life ಪುಟ – ೫೧೮
೨೧. The Indomitable Sardar ಪುಟ – ೧೬೩–೧೬೪
೨೨. The Indomitable Sardar ಪುಟ – ೧೬೪

೨೩. The Indomitable Sardar ಪುಟ – ೧೬೫

೨೪. India After Gandhi ಪುಟ – ೯೯

೨೫. India After Gandhi ಪುಟ – ೨೨

೨೬. India After Gandhi ಪುಟ – ೯೮

೨೭. Patel, A Life ಪುಟ – ೪೭೧-೪೭೨

೨೮. Patel, A Life ಪುಟ – ೪೯೭

೨೯. India After Gandhi ಪುಟ – ೯೮

೩೦. Bhavan's Journal, Sept. ೪, ೧೯೭೯
Vol. ೨೬. Number: ೦೭ ಪುಟ – ೧೫ -೧೮

೩೧. Patel, A Life ಪುಟ – ೫೨೧ -೫೨೪

೩೨. Patel, A Life ಪುಟ – ೫೧೪

೩೩. Patel, A Life ಪುಟ – ೫೧೪

೩೪. Patel, A Life ಪುಟ – ೫೧೫

೩೫. Patel, A Life ಪುಟ – ೫೧೫

೩೬. Patel, A Life ಪುಟ – ೫೧೬

೩೭. Patel, A Life ಪುಟ – ೫೧೬

೩೮. A Patriot For Me ಪುಟ – ೧೬೪

೪೦. Patel, A Life ಪುಟ – ೫೧೯

೪೧. SVP India's Iron Man ಪುಟ – ೪೬೯

೪೨. SVP India's Iron Man ಪುಟ – ೨೮೦-೮೧

೪೩. SVP India's Iron Man ಪುಟ – ೪೭೩

೪೪. India's Bismark ಪುಟ – ೧೫೭

೪೫. Patel, A Life ಪುಟ – ೧೪

೪೬. Patel, A Life ಪುಟ – ೨೪೯-೨೫೦

೪೭. Patel, A Life ಪುಟ – ೨೫೧

೪೮. Patel, A Life ಪುಟ – ೨೯೧

೪೯. Patel, A Life ಪುಟ – ೧೨೫-೧೨೬

೫೦. Gandhi - Patel Letters & Speeches ಪುಟ – ೭೫

೫೧. Bhavan's Journal, Oct 31st, ೧೯೭೧
Vol. ೨೮, No. ೭ ಪುಟ – ೧೯

೫೨. Bhavan's Journal, Feb ೨, ೧೯೬೪,
Vol. ೧೬, No. ೧೪ ಪುಟ – ೯–೧೦

೫೩. Bhavan's Journal, Nov ೧೯, ೧೯೬೭,
Vol. ೧೫, No. ೮ ಪುಟ – ೧೫ & ೨೯

೫೪. Bhavan's Journal, Nov ೧೬, ೧೯೮೮,
Vol. ೩೫, No. ೮ ಪುಟ – ೨೫–೨೭

೫೫. Bhavan's Journal, May ೧೩, ೧೯೭೩,
Vol. ೧೯, No. ೨೧ ಪುಟ – ೭೫

೫೬. Bhavan's Journal, Oct ೨೬, ೧೯೭೫
Vol. ೨೨, No. ೭ ಪುಟ – ೧೨೧–೧೨೯

೫೭. SVP India's Iron Man ಪುಟ – ೩೭೭

೫೮. Patel, A Life ಪುಟ – ೩೯೧

೫೯. Bhavan's Journal, April ೩೦, ೧೯೮೯,
Vol. ೩೫, No. ೧೮ ಪುಟ – ೮೬–೮೭

೬೦. Bhavan's Journal, Nov ೭, ೧೯೬೫,
Vol. ೧೨, No. ೮ ಪುಟ – ೩೯

೬೧. Bhavan's Journal, Nov ೩೦, ೨೦೧೦,
Vol. ೫೭, No. ೯ ಪುಟ – ೨೯

೬೨. Bhavan's Journal, Nov ೩೦, ೨೦೧೦,
Vol. ೫೭, No. ೯ ಪುಟ – ೨೭–೨೯

೬೩. Memories & Musings
by K.P.S. Menon ಪುಟ – ೪೫–೪೭

೬೪. SVP India's Iron Man ಪುಟ – ೪೯೨

೬೫. Patel, A Life ಪುಟ – ೫೧೪

೬೬ Patel, A Life ಪುಟ – ೫೨೮

೬೭. Patel, A Life ಪುಟ – ೫೨೯

೬೮. Patel, A Life ಪುಟ – ೫೩೦

೬೯. Patel, A Life ಪುಟ – ೫೩೪

೭೦. Patel, A Life ಪುಟ – ೫೩೦–೫೩೧

೭೧. Patel, A Life ಪುಟ – ೫೩೨

೭೨. Patel, A Life ಪುಟ – ೫೩೨–೫೩೩

೭೩. SVP India's Iron Man ಪುಟ – ೪೯೫–೪೯೬

೭೪. The Indomitable Sardar ಪುಟ – ೨೪೪

೭೫. SVP India's Iron Man ಪುಟ – ೪೯೫

೭೬. Patel, A Life ಪುಟ – ೪೩೮

೭೭. Patel, A Life ಪುಟ – ೪೩೮

೭೮. The Indomitable Sardar ಪುಟ – ೨೪೫

೭೯. SVP India's Iron Man ಪುಟ – ೪೭೫

೮೦. Life and Times of G.D. Birla ಪುಟ – ೨೮೯–೨೯೦

೮೧. SVP India's Iron Man ಪುಟ – ೪೧೨

೮೨. www.wikipedia.org & www.statue of unity.in

❖ ◆ ❖

ಮ.ಸು. ಮನ್ನಾರ್ ಕೃಷ್ಣ ರಾವ್ ರವರ ಇತರ ಕೃತಿಗಳು

ಗಂಗಾ-ತುಂಗಾ	–	ಕವನ ಸಂಕಲನ
ರವಿ-ಕವಿ	–	ಕವನ ಸಂಕಲನ
ಪರಿಸರ ಪದಗಳು	–	ಕವನ ಸಂಕಲನ
ಗಾಂಧೀಜಿಯನು ಕುರಿತು	–	ಕವನ ಸಂಕಲನ
ಗಿರಿಶಿಖರಗಳು	–	ಕವನ ಸಂಕಲನ
ತುಡಿತ-ಮಿಡಿತ	–	ಕವನ ಸಂಕಲನ
ಅಣಕವಾಡುಗಳು	–	ಕವನ ಸಂಕಲನ
ಬೆಣ್ಣೆ ಮತ್ತು ಬೆಂಕಿ	–	ಕವನ ಸಂಕಲನ
ಪಂಚಾಮೃತ	–	ಕವನ ಸಂಕಲನ
ಒಲವು-ನಲಿವು	–	ಕೌಟುಂಬಿಕ ಕವನ ಸಂಕಲನ
ಆಂಗ್ಲ ಕುಸುಮಗಳು	–	ಅನುವಾದಿತ ಕವನ ಸಂಕಲನ
ನೂರೆಂಟು ಸಾನೆಟ್ಟುಗಳು	–	ಸ್ವರಚಿತ ಸಾನೆಟ್ಟುಗಳ ಸಂಕಲನ
ತುಂತುರು ಹನಿ	–	ಚುಟುಕುಗಳ ಸಂಕಲನ
ನವಿಲಿನ ನರ್ತನ ಮತ್ತು ಕೋಗಿಲೆಯ ಗಾನ	–	ಮಕ್ಕಳ ಕವನಗಳ ಸಂಕಲನ
ಮಾತೆ ಕಾವೇರಿ	–	ನೀಳ್ಗವನ
ಬದುಕು-ಬೆಳಕು	–	ರೋಚಕ, ರಂಜಕ, ಬೋಧಕ ಮತ್ತು ಪ್ರೇರಕ ಸತ್ಯ ಘಟನೆಗಳ ಗದ್ಯ ಕೃತಿಗಳು ಭಾಗ-೧ ರಿಂದ ಭಾಗ-೮
ಅದ್ವಿತೀಯ ಭಾರತೀಯ ಜಿ.ಡಿ. ಬಿರ್ಲಾ	–	ಜೀವನ ಚರಿತ್ರೆ
ಅಸಮಾನ ಭಾರತೀಯ ಜೆ.ಎನ್. ಟಾಟಾ	–	ಜೀವನ ಚರಿತ್ರೆ
ಅನನ್ಯ ಭಾರತೀಯ ಜೆ.ಆರ್.ಡಿ ಟಾಟಾ	–	ಜೀವನ ಚರಿತ್ರೆ

ಬರಲಿರುವ ಕೃತಿಗಳು

ಬದುಕು-ಬೆಳಕು ಭಾಗ – ೯	–	ಪ್ರೇರಕ ಸತ್ಯ ಘಟನೆಗಳು
ನೂರೆಂಟು ಅಷ್ಟಷಟ್ಪದಿಗಳು	–	ಸ್ವರಚಿತ ಸಾನೆಟ್ಟುಗಳ ಸಂಗ್ರಹ
ಅಲ್ಲಿಂದ ಇಲ್ಲಿಂದ ತಂದ ಕಥೆಗಳು	–	ಪುಟ್ಟ ಪುಟ್ಟ ಕಥೆಗಳು.

ಮ. ಸು. ಮನ್ನಾರ್ ಕೃಷ್ಣ ರಾವ್ ಮಂಡ್ಯ ನಗರದ ಮೈಷುಗರ್ ಪ್ರೌಢಶಾಲೆಯಲ್ಲಿ ಶಿಕ್ಷಕ ಮತ್ತು ಮುಖ್ಯ ಶಿಕ್ಷಕರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಇದುವರೆವಿಗೆ ಅವರ 14 ಕವನ ಸಂಕಲನಗಳು, 8 ಸತ್ಯ ಘಟನೆಗಳ ಗದ್ಯ ಕೃತಿಗಳು ಮತ್ತು 'ಅದ್ವಿತೀಯ ಭಾರತೀಯ ಜಿ. ಡಿ. ಬಿರ್ಲಾ', 'ಅಸಮಾನ ಭಾರತೀಯ ಜೆ.ಎನ್. ಟಾಟಾ' ಮತ್ತು 'ಅನನ್ಯ ಭಾರತೀಯ ಜೆ.ಆರ್.ಡಿ. ಟಾಟಾ' ಎಂಬ ಜೀವನ ಚರಿತ್ರೆಗಳು ಪ್ರಕಟಣೆಯಾಗಿವೆ.

ಸರ್ದಾರ್ ಪಟೇಲರ ಬಗೆಗೆ

'ಸರ್ದಾರರಿಗೆ ನೆಹರುರವರ ಶ್ರೀಮಂತಿಕೆಯ ಹಿನ್ನಲೆ ಇರಲಿಲ್ಲ, ಲೋಕಮಾನ್ಯ ತಿಲಕರ ವಿದ್ವತ್ತು ಇರಲಿಲ್ಲ, ರಾಜಗೋಪಾಲಾಚಾರಿಯವರ ಬೌದ್ಧಿಕ ಸೂಕ್ಷ್ಮತೆ ಇರಲಿಲ್ಲ, ಗಾಂಧೀಜಿಯವರ ಸಂತತನ ಇರಲಿಲ್ಲ ಮತ್ತು ಸುಭಾಷ್ ಚಂದ್ರ ಬೋಸ್‌ರ ಭಾವ ಪ್ರಚೋದಕ ಶಕ್ತಿ ಇರಲಿಲ್ಲ. ಆದರೆ ಅವರ ಮಜಬೂತು ವಾಸ್ತವಿಕತೆ, ಅಚಲ ನಿರ್ಧಾರ, ಸಂಘಟನಾ ಪ್ರತಿಭೆ, ನಾಯಕತ್ವದ ಗುಣ, ಅಧಿಕಾರ ನಿಯೋಜನಾ ಶಕ್ತಿ, ಇವೆಲ್ಲಕ್ಕೂ ಮಿಗಿಲಾಗಿ ತೀವ್ರ ದೇಶಭಕ್ತಿ ಮತ್ತು ಸ್ವಾರ್ಥ ಲಾಭದಿಂದ ವಿಮುಕ್ತತೆ ಅವರನ್ನು ಇತರರಿಗಿಂತ ಉನ್ನತ ಸ್ಥಾನದಲ್ಲಿ ಇರಿಸಿದೆ. ಒಗ್ಗೂಡಿದ ಭಾರತವು ಅವರು ಬಿಟ್ಟು ಹೋಗಿರುವ ಶಾಶ್ವತ ಸ್ಮಾರಕ. ಅದು ಅವರಿಗೆ ಭಾರತದ ಚರಿತ್ರೆಯಲ್ಲಿ ಒಂದು ಶಾಶ್ವತ ಸ್ಥಾನವನ್ನು ಭದ್ರಗೊಳಿಸಿದೆ.'

ಸೂಸಾನ ಹೆರೆದಿಯ
A Patriot for Me ಕೃತಿಯಲ್ಲಿ

ಕೃತಿಯನ್ನು ಕುರಿತು

ಶ್ರೀ ಮನ್ನಾರ್ ಕೃಷ್ಣ ರಾವ್ ಅವರು ಈ ಕೃತಿಯನ್ನು ಬರೆಯಲು ತಮಗಿದ್ದ ಉದ್ದೇಶವನ್ನು ತಮ್ಮ 'ನಿವೇದನೆ'ಯಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ತಮ್ಮ ಆಕರಗಳನ್ನೂ ತಿಳಿಸಿದ್ದಾರೆ. ಪಟೇಲರ ಜೀವನವನ್ನು ಈ ಪುಸ್ತಕದಷ್ಟು ವಿವರವಾಗಿ ನಿಷ್ಪಕ್ಷವಾಗಿ ಕನ್ನಡದಲ್ಲಿ ಬೇರೆ ಯಾರೂ ಬರೆದಿಲ್ಲ. ಅವರ ಜೀವನದ ಎಲ್ಲ ಮುಖಗಳನ್ನು ಇವರು ಸಾಕಷ್ಟು ವಿವರವಾಗಿ ಬರೆದಿದ್ದಾರೆ. ಇದರ ಓದುಗರಿಗೆ ಸ್ವಾತಂತ್ರ್ಯ ಚಳವಳಿಯ ಒಂದು ಮುಖ್ಯ ಹಾಗೂ ಒಳನೋಟವು ದೊರೆಯುತ್ತದೆ. ಇದನ್ನು ಪ್ರತಿಯೊಬ್ಬ ಕನ್ನಡಿಗರೂ ಓದಿ ಪ್ರಯೋಜನ ಪಡೆಯುತ್ತಾರೆಂದು ನಂಬಿದ್ದೇನೆ.

ಡಾ॥ ಎಸ್. ಎಲ್. ಭೈರಪ್ಪ
(ಮುನ್ನುಡಿಯಿಂದ).

₹ 700/-

ವಿದ್ಯಾಶ್ರೀ ಪ್ರಕಾಶನ
984/1, 'ಮಾತೃಶ್ರೀ', 11ನೇ 'ಎ' ಮುಖ್ಯ ರಸ್ತೆ, 3ನೇ ವಿಭಾಗ,
ರಾಜಾಜಿ ನಗರ, ಬೆಂಗಳೂರು–560 010